॥ ಸಚ್ಚಿದಾನಂದೇಶ್ವರಾಯ ನಮೋ ನಮಃ ॥

# ಸತ್ಯಾರ್ಥ ಪ್ರಕಾಶ

## ಪ್ರಥಮ ಸಮುಲ್ಲಾಸಃ

ಓಂ ಶನ್ನೋ ಮಿತ್ರಃ ಶಂ ವರುಣಃ ಶನ್ನೋಭವತ್ವರ್ಯಮಾ ।
ಶನ್ನ ಇಂದ್ರೋ ಬೃಹಸ್ಪತಿಃ ಶಂನೋ ವಿಷ್ಣು ರುರುಕ್ರಮಃ ॥
ನಮೋ ಬ್ರಹ್ಮಣೇ ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ।
ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ।
ತನ್ಮಾಮವತು ತದ್ವಕ್ತಾರಮವತು ಅವತು ಮಾಮವತು ವಕ್ತಾರಮ್ ॥

ಓಂ ಶಾಂ ತಿ ಶ್ಯಾಂ ತಿ ಶ್ಯಾಂ ತಿಃ ॥ ೧ ॥

*(ತೈತ್ತಿರೀಯ ಉಪನಿಷತ್ - 1)*

**ಅರ್ಥ:** (ಓಂ) ಈ ಓಂಕಾರವೆಂಬ ಶಬ್ದ ಪರಮೇಶ್ವರನ ಸರ್ವೋತ್ತಮ ನಾಮವಾಗಿದೆ. ಏಕೆಂದರೆ, ಇದರಲ್ಲಿ ಯಾವ ಅ, ಉ, ಮ, ಎಂಬ ಮೂರು ಅಕ್ಷರಗಳು ಸೇರಿ ಒಂದು (ಓಂ) ಸಮುದಾಯವಾಗಿದೆಯೋ, ಈ ಒಂದು ಹೆಸರಿನಿಂದ ಪರಮೇಶ್ವರನ ಬಹಳ ಹೆಸರುಗಳು ಬರುತ್ತವೆ. ಹೇಗೆಂದರೆ, ಅಕಾರದಿಂದ ವಿರಾಟ್, ಅಗ್ನಿ, ವಿಶ್ವ ಮೊದಲಾದುವುಗಳ, ಉಕಾರದಿಂದ ಹಿರಣ್ಯಗರ್ಭ, ವಾಯು ಮತ್ತು ತೈಜಸ ಮೊದಲಾದುವುಗಳ, ಮಕಾರದಿಂದ ಈಶ್ವರ, ಆದಿತ್ಯ ಮತ್ತು ಪ್ರಾಜ್ಞ - ಮೊದಲಾದ ಹೆಸರುಗಳ ವಾಚನ ಮತ್ತು ಗ್ರಹಿಕೆಯಾಗುತ್ತದೆ. ವೇದಾದಿ ಸತ್ಯಶಾಸ್ತ್ರಗಳಲ್ಲಿ, ಪ್ರಕರಣಾನುಕೂಲ ಈ ಎಲ್ಲಾ ಹೆಸರುಗಳೂ ಪರಮೇಶ್ವರನಿಗೇ ಅನ್ವಯಿಸುತ್ತವೆ. ಎಂದು ಸ್ಪಷ್ಟವಾಗಿ ವ್ಯಾಖ್ಯಾನ ಮಾಡಲ್ಪಟ್ಟಿದೆ.

**ಪ್ರಶ್ನೆ:** ಪರಮೇಶ್ವರನಿಂದ ಬೇರೆಯಾದ ಅರ್ಥಗಳನ್ನು ವಿರಾಟ್ ಮೊದಲಾದ ಹೆಸರುಗಳು ಅದೇಕೆ ಸೂಚಿಸುವುದಿಲ್ಲ? ಬ್ರಹ್ಮಾಂಡ, ಪೃಥಿವೀ ಮೊದಲಾದ ಭೂತಗಳು ಇಂದ್ರಾದಿ ದೇವತೆಗಳು ಮತ್ತು ವೈದ್ಯಕ ಶಾಸ್ತ್ರಗಳಲ್ಲಿ ಶುಂಠಿ ಮೊದಲಾದ ಓಷಧಿಗಳಿಗೂ ಈ ಹೆಸರುಗಳು ಸಲ್ಲುತ್ತವೋ ಇಲ್ಲವೋ?

**ಉತ್ತರ:** ಸಲ್ಲುತ್ತವೆ, ಆದರೆ, ಪರಮಾತ್ಮನಿಗೂ ಸಲ್ಲುತ್ತವೆ.

**ಪ್ರಶ್ನೆ:** ಕೇವಲ ದೇವತೆಗಳನ್ನೇ ಈ ಹೆಸರುಗಳಿಂದ ಗ್ರಹಿಸುತ್ತೀರೋ, ಇಲ್ಲವೋ?

**ಉತ್ತರ:** ತಾವು ಹಾಗೆ ಗ್ರಹಿಸಲು ಪ್ರಮಾಣವೇನಿದೆ?

**ಪ್ರಶ್ನೆ:** ದೇವತೆಗಳೆಲ್ಲಾ ಪ್ರಸಿದ್ಧರು; ಮತ್ತು ಅವರು ಉತ್ತಮರೂ ಆಗಿದ್ದಾರೆ. ಆದುದರಿಂದ, ನಾನು ಅವರನ್ನು ಗ್ರಹಿಸುತ್ತೇನೆ.

**ಉತ್ತರ:** ಪರಮೇಶ್ವರನು ಅಪ್ರಸಿದ್ಧನೇನು? ಮತ್ತು ಅವನಿಗಿಂತ ಉತ್ತಮನೂ ಯಾವನಾದರೂ ಇದ್ದಾನೇನು? ಮತ್ತೆ, ಈ

ಹೆಸರುಗಳನ್ನು ಪರಮೇಶ್ವರನದೂ ಅಹುದೆಂದು ಒಪ್ಪುವುದಿಲ್ಲವೇಕೆ? ಪರಮೇಶ್ವರನು ಅಪ್ರಸಿದ್ಧನಲ್ಲ: ಮತ್ತು ಅವನಿಗೆ ಸಮನಾದವನೂ ಯಾವನೂ ಇಲ್ಲವಾಗಿರುವಲ್ಲಿ, ಅವನಿಗಿಂತ ಯಾವನಾದರೂ ಉತ್ತಮನು ಆಗಬಲ್ಲನಾದರೂ ಹೇಗೆ? ಆದುದರಿಂದ ತಮ್ಮ ಈ ಕಥನ ಸತ್ಯವಲ್ಲ. ಏಕೆಂದರೆ, ತಮ್ಮ ಈ ಹೇಳಿಕೆಯಲ್ಲಿ ಬಹಳ ದೋಷಗಳೂ ಬರುತ್ತವೆ. ಹೇಗೆಂದರೆ **"ಉಪಸ್ಥಿತಂ ಪರಿತ್ಯಜ್ಯಾನುಪಸ್ಥಿತಂ ಯಾಚತ ಇತಿ ಬಾಧಿತನ್ಯಾಯಃ"** ಯಾವನೋ ಒಬ್ಬನು ಇನ್ನೊಬ್ಬನಿಗಾಗಿ ಭೋಜನ ಪದಾರ್ಥವನ್ನು ಸಿದ್ಧಪಡಿಸಿಟ್ಟು, "ತಾವು ಊಟ ಮಾಡಿರಿ" ಎಂದಾಗ, ಅವನು ಅದನ್ನು ಬಿಟ್ಟು, ಭೋಜನಕ್ಕಾಗಿ ಎಲ್ಲೆಲ್ಲಿಯೋ ಸುತ್ತಾಡಿದರೆ, ಅವನನ್ನು ಬುದ್ಧಿವಂತನೆಂದು ತಿಳಿಯಬಾರದು. ಏಕೆಂದರೆ ಅವನು ಉಪಸ್ಥಿತವಾದ, ಎಂದರೆ ಹತ್ತಿರವೇ ಲಭಿಸಿದ ಪದಾರ್ಥವನ್ನು ಬಿಟ್ಟು ಅನುಪಸ್ಥಿತ, ಎಂದರೆ ಸಿಕ್ಕದ ಭೋಜನದ ಪ್ರಾಪ್ತಿಗಾಗಿ ಶ್ರಮಿಸುತ್ತಾನೆ. ಆದ ಕಾರಣ ಅವನು ಬುದ್ಧಿವಂತನಲ್ಲ. ಅದೇ ರೀತಿ, ತಮ್ಮ ಹೇಳಿಕೆಯೂ ಆಯಿತು. ಏಕೆಂದರೆ, ತಾವು ವಿರಾಟ್ ಮೊದಲಾದ ಆ ಹೆಸರುಗಳಿಂದ, ಪ್ರಸಿದ್ಧವೂ, ಪ್ರಮಾಣ ಸಿದ್ಧವೂ ಆದ ಪರಮೇಶ್ವರ ಮತ್ತು ಬ್ರಹ್ಮಾಂಡ ಮೊದಲಾದ ಸಮೀಪಸ್ಥವಾದ ಅರ್ಥಗಳನ್ನು ಪರಿತ್ಯಜಿಸಿ, ಅಸಂಭವವೂ ಹಾಗೂ ಅನುಪಸ್ಥಿತವೂ ಆದ ದೇವ ಮೊದಲಾದುವನ್ನು ಗ್ರಹಿಸಲು ಶ್ರಮಿಸುತ್ತೀರಿ. ಇದಕ್ಕೆ ಯಾವ ಪ್ರಮಾಣ ಅಥವಾ ಯುಕ್ತಿಯೂ ಇಲ್ಲ. ಒಂದು ವೇಳೆ ತಾವು, ಎಲ್ಲಿ ಯಾವುದರ ಪ್ರಕರಣವಿದೆಯೋ ಅಲ್ಲಿ ಅದನ್ನೇ ಗ್ರಹಿಸುವುದು ಯೋಗ್ಯ ಎಂದರೆ ಸರಿ. ಉದಾಹರಣೆಗೆ, ಯಾವನೋ ಒಬ್ಬನು, ಇನ್ನೊಬ್ಬನಿಗೆ **"ಹೇ ಭೃತ್ಯ ಸೈಂಧವಮಾನಯ"** ಎಂದರೆ "ನೀನು ಸೈಂಧವವನ್ನು ತೆಗೆದುಕೊಂಡು ಬಾ" ಎಂದು ಹೇಳಿದನು; ಆಗ ಅವನು ಸಮಯ ಎಂದರೆ ಪ್ರಕರಣದ ಯೋಚನೆ ಮಾಡುವುದು ಆವಶ್ಯಕ. ಏಕೆಂದರೆ, ಸೈಂಧವ – ಎಂಬುದು, ಒಂದನೆಯದಾಗಿ ಕುದುರೆ ಮತ್ತು ಎರಡನೆಯದಾಗಿ ಉಪ್ಪು ಹೀಗೆ ಎರಡು ಪದಾರ್ಥಗಳ ಹೆಸರಾಗಿದೆ. ಅದು ತನ್ನ ಯಜಮಾನನ ನಿರ್ಗಮನದ ಸಮಯವಾಗಿದ್ದರೆ ಕುದುರೆಯನ್ನೂ, ಭೋಜನದ ಸಮಯವಾಗಿದ್ದರೆ ಉಪ್ಪನ್ನೂ ತರುವುದು ಉಚಿತ. ನಿರ್ಗಮನ ಸಮಯದಲ್ಲಿ ಉಪ್ಪನ್ನೂ, ಭೋಜನ ಸಮಯದಲ್ಲಿ ಕುದುರೆಯನ್ನೂ ತಂದು ನಿಲ್ಲಿಸಿದರೆ, ಅವನ ಯಜಮಾನನು ಅವನ ಮೇಲೆ ಕೋಪಗೊಂಡು "ನೀನು ಬುದ್ಧಿಹೀನ ಪುರುಷ. ನಿರ್ಗಮನ ಸಮಯದಲ್ಲಿ ಉಪ್ಪನ್ನೂ ಮತ್ತು ಭೋಜನಕಾಲದಲ್ಲಿ ಕುದುರೆಯನ್ನೂ ತರುವುದರ ಪ್ರಯೋಜನವೇನಿತ್ತು? ನೀನು ಪ್ರಕರಣಜ್ಞನಲ್ಲ. ಅಲ್ಲದಿದ್ದರೆ ಯಾವ ಕಾಲದಲ್ಲಿ ಯಾವುದನ್ನು ತರಬೇಕಾಗಿದ್ದಿತೋ, ಆಗ ಅದನ್ನೇ ತರುತ್ತಿದ್ದೆ. ಪ್ರಕರಣದ ಆಲೋಚನೆ ಮಾಡುವುದು ನಿನಗೆ ಆವಶ್ಯಕವಾಗಿತ್ತು; ನೀನು ಅದನ್ನು ಮಾಡಲಿಲ್ಲ. ಈ ಕಾರಣದಿಂದ, ನೀನು ಮೂರ್ಖ. ನೀನು ನನ್ನ ಬಳಿಯಿಂದ ಹೊರಟುಹೋಗು" ಎಂದು ಹೇಳುವನು. ಇದರಿಂದ ಸಿದ್ಧವಾದುದೇನು? ಎಲ್ಲಿ ಯಾವುದನ್ನು ಗ್ರಹಿಸುವುದು ಉಚಿತವೋ, ಅಲ್ಲಿ ಆ ಅರ್ಥವನ್ನೇ ಗ್ರಹಿಸಬೇಕು ಎಂದು ಹೇಳುವಿರಾದರೆ, ಅದೇ ರೀತಿ ನಾವು ಮತ್ತು ತಾವು ಎಲ್ಲರೂ ಒಪ್ಪಿಕೊಳ್ಳಬೇಕು; ಮತ್ತು ಹಾಗೆಯೇ ವರ್ತಿಸಲೂಬೇಕು.

## ಅಥ ಮಂತ್ರಾರ್ಥಃ

**ಓಂ ಖಂ ಬ್ರಹ್ಮ ॥ ೧ ॥** (ಯಜುರ್ವೇದ-೪೦-೧೭)

ನೋಡಿರಿ ಇಂತಿಂತಹ ಪ್ರಕರಣಗಳಲ್ಲಿ, ವೇದಗಳಲ್ಲಿ "ಓಂ" ಮೊದಲಾದ ಪರಮೇಶ್ವರನ ಹೆಸರುಗಳು ಕಂಡುಬರುತ್ತವೆ.

**ಓಮಿತ್ಯೇತದಕ್ಷರಮುದ್ಗೀಥಮುಪಾಸೀತ ॥ ೨ ॥** (ಛಾಂದೋಗ್ಯೋಪನಿಷತ್- ೧-೧೧)
**ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಮ್ ॥ ೩ ॥** (ಮಾಂಡೂಕ್ಯ-೧)
**ಸರ್ವೇ ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ ।**
**ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇಪದಂ**
**ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥ ೪ ॥** (ಕಠ : ೨-೧೫)
**ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೋರಪಿ ।**
**ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತಂ ಪುರುಷಂ ಪರಮ್ ॥ ೫ ॥**
**ಏತ ಮಗ್ನಿಂ ವದಂತ್ಯೇಕೇ ಮನುಮನ್ಯೇ ಪ್ರಜಾಪತಿಮ್ ।**
**ಇಂದ್ರಮೇಕೇ ಪರೇ ಪ್ರಾಣಮಪರೇ ಬ್ರಹ್ಮಶಾಶ್ವತಮ್ ॥೬॥** (ಮನು: – ೧೨, ೧೨೨-೧೨೩)
**ಸ ಬ್ರಹ್ಮಾ ಸ ವಿಷ್ಣುಃ ಸ ರುದ್ರಸ್ಸ ಶಿವಸ್ಸೋಽಕ್ಷರಸ್ಸ ಪರಮಃ ಸ್ವರಾಟ್ ।**
**ಸ ಇಂದ್ರಃ ಸ ಕಾಲಾಗ್ನಿಸ್ಸ ಚಂದ್ರಮಾಃ ॥ ೭॥** (ಕೈವಲ್ಯೋಪನಿಷತ್ – ೮)

**ಇಂದ್ರಂ ಮಿತ್ರಂ ವರುಣಮಗ್ನಿ ಮಾಹುರಥೋ ದಿವ್ಯ ಃ ಸ ಸುಪರ್ಣೋ ಗುರುತ್ಮಾನ್।**
**ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂಯಮಂ ಮಾತರಿಶ್ವಾನಮಾಹುಃ ॥ ೮॥** (ಋಗ್ವೇದ :-೧-೧೬೪-೪೬)

**ಭೂರಸಿ ಭೂಮಿರಸ್ಯದಿತರಸಿ ವಿಶ್ವಧಾಯಾ ವಿಶ್ವಸ್ಯ ಭುವನಸ್ಯ ಧರ್ತ್ರೀ ।**
**ಪೃಥಿವೀಂ ಯಚ್ಛ ಪೃಥಿವೀಂ ದೃಗ್ಂಹ ಪೃಥಿವೀಂ ಮಾಹಿಗ್ಂಸೀಃ ॥ ೯ ॥** (ಯಜು: - ೧೩-೧೮)

**ಇಂದ್ರೋ ಮಹ್ನಾ ರೋದಸೀ ಪಪ್ರಥಚ್ಛವ ಇಂದ್ರಃ ಸೂರ್ಯಮರೋಚಯತ್ ।**
**ಇಂದ್ರೇಹ ವಿಶ್ವಾ ಭುವನಾನಿ ಯೇಮಿರ ಇಂದ್ರೇ ಸ್ವಾನಾಸ ಇಂದವಃ ॥ ೧೦॥** (ಸಾಮ:- ೭,೮-೨)

**ಪ್ರಾಣಾಯ ನ ಮೋ ಯಸ್ಯಸರ್ವಮಿದಂ ವಶೇ ।**
**ಯೋಭೂತಃ ಸರ್ವಸ್ಯೇಶ್ವರೋ ಯಸ್ಮಿಂತ್ಸರ್ವಂ ಪ್ರತಿಷ್ಠಿತಮ್ ॥ ೧೧ ॥** (ಅಥರ್ವ: - ೧೧-೪-೧)

**ಅರ್ಥ:** ಇಲ್ಲಿ ಈ ಪ್ರಮಾಣಗಳನ್ನು ಬರೆಯುವಲ್ಲಿ ಇಂತಿಂತಹ ಪ್ರಮಾಣಗಳಲ್ಲಿ ಓಂಕಾರ ಮೊದಲಾದ ಹೆಸರುಗಳಿಂದ ಪರಮಾತ್ಮನನ್ನು ಗ್ರಹಿಸಲಾಗುತ್ತದೆ ಎಂಬುದೇ ತಾತ್ಪರ್ಯ; ಇದನ್ನೇ ಬರೆದಿದ್ದೇವೆ ಮತ್ತು ಪರಮೇಶ್ವರನ ಯಾವ ಹೆಸರೂ, ಲೋಕದಲ್ಲಿ ದರಿದ್ರನಿಗೂ ಧನಪತಿ ಮೊದಲಾದ ಹೆಸರುಗಳಿರುವಂತೆ, ಅನರ್ಥಕವಲ್ಲ. ಇದರಿಂದ, ಹಲವೆಡೆ ಗುಣಕ್ಕೆ ಸಂಬಂಧಿಸಿದ, ಹಲವೆಡೆ ಕರ್ಮಕ್ಕೆ ಅನುಸಾರ ಮತ್ತು ಹಲವೆಡೆ ಸ್ವಭಾವಕ್ಕೆ ಅನುಗುಣವಾದ ಅರ್ಥಗಳನ್ನು ವ್ಯಕ್ತಪಡಿಸುತ್ತವೆ ಎಂಬುದು ಸಿದ್ಧವಾಯಿತು.

(೧) ಓಂ (೨) ಖಂ (೩) ಬ್ರಹ್ಮ

ಓಂ–ಮೊದಲಾದ ಹೆಸರುಗಳು ಸಾರ್ಥಕವಾಗಿವೆ. ಹೇಗೆಂದರೆ – (ಓಂ ಖಂ) **"ಅವತೀತ್ಯೋಂ, ಆಕಾಶಮಿವ ವ್ಯಾಪಕತ್ವಾತ್ ಖಂ, ಸರ್ವೇಭ್ಯೋ ಬೃಹತ್ತ್ವಾದ್ಬ್ರಹ್ಮ"** ರಕ್ಷಣೆ ಮಾಡುವುದರಿಂದ **'ಓಂ'**, ಆಕಾಶದಂತೆ ವ್ಯಾಪಕನಾಗಿರುವುದರಿಂದ **'ಖಂ'** ಮತ್ತು ಸರ್ವರಿಗಿಂತ ದೊಡ್ಡವನಾದುದರಿಂದ **'ಬ್ರಹ್ಮ'** ಈಶ್ವರನ ಹೆಸರುಗಳಾಗಿವೆ. (೧)

**"ಓಮಿತ್ಯೇ..."** ಯಾವನ ಹೆಸರು **ಓಂ** – ಎಂದಾಗಿದೆಯೋ ಮತ್ತು ಯಾವನು ಎಂದಿಗೂ ನಾಶಹೊಂದನೋ, ಅವನ ಉಪಾಸನೆಯನ್ನು ಮಾತ್ರ ಮಾಡುವುದು ಯೋಗ್ಯವು; ಬೇರೆಯವನದನ್ನಲ್ಲ. (೨)

**"ಓಮಿತ್ಯೇತ..."** ಸಮಸ್ತ ವೇದಾದಿಸತ್ಯಶಾಸ್ತ್ರಗಳಲ್ಲಿ ಪರಮೇಶ್ವರನ ಪ್ರಧಾನವಾದ ಮತ್ತು ಅವನದೇ ಆದ ಹೆಸರು **"ಓಂ"** ಎಂದು ಹೇಳಿದೆ; ಬೇರೆಯವೆಲ್ಲಾ ಗುಣಗಳಿಗೆ ಸಂಬಂಧಿಸಿದುವಾಗಿವೆ. (೩)

**"ಸರ್ವವೇದಾ..."** ಸಮಸ್ತವೇದಗಳೂ, ಧರ್ಮಾನುಷ್ಠಾನರೂಪದ ಸರ್ವತಪಶ್ಚರಣಗಳೂ ಯಾವನ ವರ್ಣನೆಯನ್ನೂ, ಸಮ್ಮಾನವನ್ನೂ ಮಾಡುತ್ತವೋ, ಮತ್ತು ಯಾವನ ಪ್ರಾಪ್ತಿಯನ್ನು ಇಚ್ಛಿಸಿ, ಬ್ರಹ್ಮಚರ್ಯಾಶ್ರಮವನ್ನು ನಿರ್ವಹಿಸುತ್ತಾರೋ, ಅವನ ಹೆಸರು **" ಓಂ"** ಎಂದಾಗಿದೆ. (೪)

**"ಪ್ರಶಾಸಿತಾರಂ..."** ಯಾವನು ಸರ್ವರಿಗೂ ಶಿಕ್ಷಣ ಕೊಡುವವನಾಗಿದ್ದಾನೋ, ಸೂಕ್ಷ್ಮಕ್ಕಿಂತಲೂ ಸೂಕ್ಷ್ಮ ಸ್ವಪ್ರಕಾಶ ಸ್ವರೂಪ ನಾಗಿದ್ದಾನೋ, ಯಾವನು ಸಮಾಧಿಸ್ಥಿತ ಬುದ್ಧಿಯಿಂದ ತಿಳಿಯಲರ್ಹನಾಗಿದ್ದಾನೋ, ಅವನನ್ನು ಪರಮ ಪುರುಷನೆಂದು ತಿಳಿಯಬೇಕು. (೫)ಮತ್ತು ಸ್ವ ಪ್ರಕಾಶನಾಗಿರುವುದರಿಂದ **'ಅಗ್ನಿ'**, ವಿಜ್ಞಾನಸ್ವರೂಪನಾಗಿರುವುದರಿಂದ **'ಮನು'**,

(೪) **ಪ್ರಜಾಪತಿ** : ಸರ್ವರನ್ನೂ ಪಾಲಿಸುವುದರಿಂದ **'ಪ್ರಜಾಪತಿ'** ಮತ್ತು ಪರಮೈಶ್ವರ್ಯವಂತನಾಗಿರುವುದರಿಂದ **'ಇಂದ್ರ'**.

(೫) **ಪ್ರಾಣ** : ಎಲ್ಲರ ಜೀವನಕ್ಕೂ ಮೂಲನಾಗಿರುವುದರಿಂದ **'ಪ್ರಾಣ'** ಮತ್ತು ನಿರಂತರವ್ಯಾಪಕನಾಗಿರುವುದರಿಂದ ಪರಮೇಶ್ವರನ ಹೆಸರು **'ಬ್ರಹ್ಮ'** ಎಂದಾಗಿದೆ. (೬)

**"ಸ ಬ್ರಹ್ಮಾ ಸ ವಿಷ್ಣುಃ..."** ಸರ್ವಜಗತ್ತನ್ನೂ ರಚಿಸಿರುವುದರಿಂದ **'ಬ್ರಹ್ಮಾ'**, ಸರ್ವತ್ರವ್ಯಾಪಕನಾಗಿರುವುದರಿಂದ **'ವಿಷ್ಣು'**, ದುಷ್ಟರನ್ನು ದಂಡಿಸಿ ಅಳಿಸುವುದರಿಂದ **'ರುದ್ರ'**, ಮಂಗಳಮಯನೂ, ಸರ್ವಕಲ್ಯಾಣಕರ್ತೃವೂ ಆಗಿರುವುದರಿಂದ **'ಶಿವ'**; **"ಯಃ ಸರ್ವಮಶ್ನುತೇ, ನ ಕ್ಷರತಿ, ನ ವಿನಶ್ಯತಿ, ತದಕ್ಷರಂ"**. (೧) **"ಯಃ ಸ್ವಯಂ ರಾಜತೇ ಸ ಸ್ವರಾಟ್"** (೨) **"ಯೋಗ್ನಿರಿವ ಕಾಲಃ ಕಲಯಿತಾ ಪ್ರಲಯಕರ್ತಾ ಸ ಕಾಲಾಗ್ನಿರೀಶ್ವರಃ"** (೩)

(೬) **ಅಕ್ಷರ :** ಸರ್ವತ್ರವ್ಯಾಪ್ತವಿನಾಶರಹಿತನು

(೭) **ಸ್ವರಾಟ್:** ಸ್ವಯಂ ಪ್ರಕಾಶಸ್ವರೂಪನು, ಮತ್ತು

(೮) **ಕಾಲಾಗ್ನಿಃ :** ಪ್ರಳಯದಲ್ಲಿ ಸರ್ವಕ್ಕೂ **'ಕಾಲ'** (ಮೃತ್ಯು) ಮತ್ತು ಕಾಲಕ್ಕೂ ಕಾಲನಾಗಿರುವುದರಿಂದ, ಪರಮೇಶ್ವರನ ಹೆಸರು **'ಕಾಲಾಗ್ನಿ'** ಎಂದಾಗಿದೆ. (೭) **"ಇಂದ್ರಂ ಮಿತ್ರಂ...."** ಯಾವ ಒಂದು ಅದ್ವಿತೀಯ ಸತ್ಯ ಬ್ರಹ್ಮವೆಂಬ ವಸ್ತುವಿದೆಯೋ, ಅದಕ್ಕೇ ಇಂದ್ರ ಮೊದಲಾದ ಸಮಸ್ತ ಹೆಸರುಗಳೂ ಅನ್ವಯಿಸುತ್ತವೆ. **"ದ್ಯುಷು ಶುದ್ಧೇಷು ಪದಾರ್ಥೇಷು ಭವಃ ದಿವ್ಯಃ"**; **" ಶೋಭನಾನಿ ಪರ್ಣಾನಿ ಪಾಲನಾನಿ, ಪೂರ್ಣಾನಿ ಕರ್ಮಾಣಿ ವಾ ಯಸ್ಯ ಸ ಸುಪರ್ಣಃ"**; **"ಯೋ ಗುರ್ವಾತ್ಮಾ ಸ ಗರುತ್ಮಾನ್"** ; **"ಯೋ ಮಾತರಿಶ್ವಾ ವಾಯುರಿವ ಬಲವಾನ್ ಸ ಮಾತರಿಶ್ವಾ"**.

(೯) **ದಿವ್ಯ :** ಪ್ರಕೃತಿ ಮೊದಲಾದ ದಿವ್ಯ ಪದಾರ್ಥಗಳಲ್ಲಿ ವ್ಯಾಪ್ತನಾಗಿರುವವನು;

(೧೦) **ಸುಪರ್ಣ:** ಉತ್ತಮಪಾಲನಕರ್ತೃವು ಮತ್ತು ಪೂರ್ಣಕರ್ಮಕಾರಿಯು;

(೧೧) **ಗರುತ್ಮಾನ್:** ಮಹತ್ತಾಗಿರುವ ಆತ್ಮ, ಎಂದರೆ ಸ್ವರೂಪವುಳ್ಳವನು;

(೧೨) **ಮಾತರಿಶ್ವಾ :** ವಾಯುವಿನಂತೆ ಬಲಶಾಲಿಯು; ಈ ಕಾರಣದಿಂದ ಪರಮಾತ್ಮನಿಗೆ **'ದಿವ್ಯ, ಸುಪರ್ಣ, ಗರುತ್ಮಾನ್** ಮತ್ತು **ಮಾತರಿಶ್ವಾ'** ಎಂಬ ಹೆಸರುಗಳಿವೆ. ಉಳಿದ ಹೆಸರುಗಳ ಅರ್ಥವನ್ನು ಮುಂದೆ ಬರೆಯುವೆವು. (೮)

(೧೩) **ಭೂಮಿ :** "ಭೂಮಿರಸಿ...." – **"ಭವಂತಿ ಭೂತಾ ನಿಯಸ್ಯಾಂ ಸಾ ಭೂಮಿಃ"** – ಸಮಸ್ತಭೂತಗಳೂ, ಪ್ರಾಣಿಗಳೂ ಅವನಲ್ಲಿಯೇ ಇರುವುದರಿಂದ, **ಭೂಮಿ** – ಎಂಬುದು ಈಶ್ವರನ ಹೆಸರು. ಉಳಿದ ಹೆಸರುಗಳ ಅರ್ಥವನ್ನು ಮುಂದೆ ಬರೆಯುವೆವು. (೯)

**"ಇಂದ್ರೋ ಮಹ್ನಾ..."** ಈ ಮಂತ್ರದಲ್ಲಿ **'ಇಂದ್ರ'** ಎಂಬುದು ಪರಮೇಶ್ವರನ ಹೆಸರೇ ಆಗಿರುವುದರಿಂದ ಈ ಪ್ರಮಾಣವನ್ನು ಬರೆದಿದ್ದೇವೆ. (೧೦)

**"ಪ್ರಾಣಾಯ...."** ಹೇಗೆ ಸಮಸ್ತಶರೀರಗಳೂ, ಇಂದ್ರಿಯಗಳೂ ಪ್ರಾಣದ ವಶದಲ್ಲಿಯೇ ಇರುತ್ತವೋ ಹಾಗೆ ಪರಮೇಶ್ವರನ ವಶದಲ್ಲಿ ಸಮಸ್ತ ಜಗತ್ತೂ ಇರುತ್ತದೆ. (೧೧)

ಈ ಮೊದಲಾದ ಪ್ರಮಾಣಗಳ ಸರಿಸರಿಯಾದ ಅರ್ಥಗಳನ್ನು ತಿಳಿದುಕೊಳ್ಳುವುದರಿಂದ, ಈ ಹೆಸರುಗಳಿಂದ ಪರಮೇಶ್ವರನೇ ಗ್ರಾಹ್ಯನಾಗಿದ್ದಾನೆ. ಓಂ ಮತ್ತು ಅಗ್ನಿ ಮೊದಲಾದ ಹೆಸರುಗಳ ಮುಖ್ಯಾರ್ಥದಿಂದ ಪರಮೇಶ್ವರನದೇ ಗ್ರಹಿಕೆಯಾಗುತ್ತದೆ. ವ್ಯಾಕರಣ, ನಿರುಕ್ತ, ಬ್ರಾಹ್ಮಣ, ಸೂತ್ರಗಳು ಮೊದಲಾದ ಋಷಿ–ಮುನಿಗಳ ವ್ಯಾಖ್ಯಾನಗಳಿಂದ ಪರಮೇಶ್ವರನೇ ಗ್ರಾಹ್ಯನೆಂಬುದು ಕಂಡುಬರುವಂತೆ, ಅದೇ ರೀತಿ ಗ್ರಹಿಸುವುದು ಸರ್ವರಿಗೂ ಯೋಗ್ಯವಾಗಿದೆ. ಆದರೆ 'ಓಂ' ಎಂಬುದಂತೂ ಕೇವಲ ಪರಮಾತ್ಮನ ಹೆಸರೇ ಆಗಿದೆ; ಮತ್ತು ಅಗ್ನಿ ಮೊದಲಾದ ಹೆಸರುಗಳಿಂದ ಪರಮೇಶ್ವರನನ್ನು ಗ್ರಹಿಸಲು ಪ್ರಕರಣ ಮತ್ತು ವಿಶೇಷಣಗಳು ನಿಯಮ ಕಾರಕಗಳಾಗಿರುತ್ತವೆ. ಇದರಿಂದ ನಿಷ್ಕರ್ಷೆಯಾಗುವುದು – ಎಲ್ಲಿ ಎಲ್ಲಿ ಸ್ತುತಿ, ಪ್ರಾರ್ಥನೆ, ಉಪಾಸನೆಗಳ ಪ್ರಕರಣ ವಿರುವುದೋ ಮತ್ತು **ಸರ್ವಜ್ಞ, ವ್ಯಾಪಕ, ಶುದ್ಧ, ಸನಾತನ** ಮತ್ತು **ಸೃಷ್ಟಿಕರ್ತೃ** – ಮೊದಲಾದ ವಿಶೇಷಣಗಳು ಉಲ್ಲಿಖಿತವಾಗಿರುವವೋ, ಅಲ್ಲಿ ಅಲ್ಲಿ ಮಾತ್ರ ಈ ಹೆಸರುಗಳಿಂದ ಪರಮೇಶ್ವರನನ್ನು ಗ್ರಹಿಸಲಾಗುತ್ತದೆ ಎಂಬುದೇ ಆಗಿದೆ. ಮತ್ತು ಎಲ್ಲಿ ಎಲ್ಲಿ:

ತತೋ ವಿರಾಡಜಾಯತ ವಿರಾಜೋ ಅಧಿಪೂರುಷಃ ॥೧॥ (ಯಜು : - ೩೧-೫)

ಶ್ರೋತ್ರಾದ್ವಾಯುಶ್ಚ ಪ್ರಾಣಶ್ಚ ಮುಖಾದಗ್ನಿರಜಾಯತ ॥೨॥ (ಯಜು: - ೩೧-೧೨)

ತೇನ ದೇವಾ ಅಯಜಂತ ॥ ೩॥ (ಯಜು :- ೩೧-೯)

ಪಶ್ಚಾದ್ಭೂಮಿಮಥೋ ಪುರಃ ॥ ೪ ॥ (ಯಜು:- ೩೧ -೫)

**ತಸ್ಮದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ। ಆಕಾಶಾದ್ವಾಯುಃ। ವಾಯೋರಗ್ನಿಃ । ಆಗ್ನೇರಾಪಃ । ಅದ್ಭ್ಯಃ ಪೃಥಿವೀ। ಪೃಥಿವ್ಯಾಓಷಧಯಃ । ಓಷಧಿಭ್ಯೋಽನ್ನಂ। ಅನ್ನಾದ್ರೇತಃ। ರೇತಸಃ ಪುರುಷಃ। ಸ ವಾ ಏಷ ಪುರುಷೋಽನ್ನರಸಮಯಃ॥**

ಇದು ತೈತ್ತಿರೀಯೋಪನಿಷತ್ತಿನ ವಚನ. ಎಲ್ಲಿ ಎಲ್ಲಿ ಈ ಬಗೆಯ ಪ್ರಕರಣಗಳು ಇರುತ್ತವೋ, ಅಲ್ಲಿ ಅಲ್ಲಿ. ಇಂತಹ ಪ್ರಮಾಣ ಗಳಿಂದ ವಿರಾಟ್, ಪುರುಷ, ದೇವ, ಆಕಾಶ, ವಾಯು, ಅಗ್ನಿ, ಜಲ, ಭೂಮಿ ಮೊದಲಾದ ಲೌಕಿಕ ಪದಾರ್ಥಗಳ ಹೆಸರಾಗಿರುತ್ತವೆ. ಏಕೆಂದರೆ ಎಲ್ಲಿ ಎಲ್ಲಿ ಉತ್ಪತ್ತಿ, ಸ್ಥಿತಿ, ಪ್ರಳಯ, ಅಲ್ಪಜ್ಞತ್ವ, ಜಡತ್ವ, ದೃಶ್ಯತ್ವ ಮೊದಲಾದ ವಿಕೃತಿಗಳೂ, ವಿಶೇಷಣಗಳೂ ಬರೆಯಲ್ಪಟ್ಟಿವೆಯೋ, ಆಯಾ ಸ್ಥಳಗಳಲ್ಲಿ ಪರಮೇಶ್ವರನನ್ನು ಗ್ರಹಿಸಲಾಗುವುದಿಲ್ಲ. ಅವನು ಉತ್ಪತ್ತಿ ಮೊದಲಾದ ವ್ಯವಹಾರಗಳಿಂದ ಬೇರೆಯಿದ್ದಾನೆ ಮತ್ತು ಮೇಲೆ ಹೇಳಿದ ಮಂತ್ರಗಳಲ್ಲಿ ಉತ್ಪತ್ತಿ ಮೊದಲಾದ ವ್ಯವಹಾರಗಳಿವೆ. ಅದೇ ಕಾರಣದಿಂದ ಈ ಸ್ಥಳದಲ್ಲಿ ವಿರಾಟ್ ಮೊದಲಾದ ಹೆಸರುಗಳಿಂದ ಪರಮಾತ್ಮನು ಗ್ರಾಹ್ಯನಾಗದೆ, ಲೌಕಿಕ ಪದಾರ್ಥಗಳೇ ಗ್ರಹಿಸಲ್ಪಡುತ್ತವೆ. ಮತ್ತು ಸರ್ವಜ್ಞ ಮೊದಲಾದ ವಿಶೇಷಣಗಳಿರುವ ಎಡೆಗಳಲ್ಲಿ ಮಾತ್ರ ಪರಮಾತ್ಮನ ಹಾಗೂ ಇಚ್ಛಾ, ದ್ವೇಷ, ಪ್ರಯತ್ನ, ಸುಖ, ದುಃಖ, ಅಲ್ಪಜ್ಞತ್ವ ಮೊದಲಾದ ವಿಶೇಷಣ ಸೂಚ್ಯ ಶಬ್ದಗಳಿರುವ ಕಡೆ ಜೀವನ ಗ್ರಹಿಕೆಯಾಗುತ್ತದೆ. ಹೀಗೆ ಸರ್ವತ್ರ ತಿಳಿಯಬೇಕು. ಏಕೆಂದರೆ ಪರಮೇಶ್ವರನ ಜನನ ಮರಣಗಳು ಎಂದಿಗೂ ಆಗುವುದಿಲ್ಲ. ಈ ಕಾರಣದಿಂದ ವಿರಾಟ್ ಮೊದಲಾದ ಸಂಜ್ಞೆಗಳಿಂದಲೂ, ಜನ್ಮ ಮೊದಲಾದ ವಿಶಿಷ್ಟ ಸ್ಥಿತಿಸೂಚಕ ಪದಗಳಿಂದಲೂ, ಜಡ ಮತ್ತು ಜೀವ ಮೊದಲಾದ ಪದಾರ್ಥಗಳನ್ನು ಗ್ರಹಿಸುವುದು ಉಚಿತ; ಪರಮೇಶ್ವರನನ್ನು ಗ್ರಹಿಸುವುದಲ್ಲ.

ಈಗ ವಿರಾಟ್ ಮೊದಲಾದ ಸಂಜ್ಞೆಗಳಿಂದ ಪರಮೇಶ್ವರನನ್ನು ಗ್ರಹಿಸುವುದು ಹೇಗೆ- ಎಂಬುದನ್ನು ಕೆಳಕಂಡಂತೆ ತಿಳಿದುಕೊಳ್ಳಿರಿ.

(೧೪) **ವಿರಾಟ್ :- ಓಂಕಾರದ ಅರ್ಥ:-** 'ವಿ' ಉಪಸರ್ಗಪೂರ್ವಕ 'ರಾಜೃದೀಪ್ತೌ' ಈ ಧಾತುವಿನಿಂದ '**ಕ್ವಿಪ್**' ಪ್ರತ್ಯಯದ ಪ್ರಯೋಗದಿಂದ 'ವಿರಾಟ್' ಎಂಬ ಶಬ್ದವು ನಿಷ್ಪನ್ನವಾಗುತ್ತದೆ. **"ಯೋ ವಿವಿಧಂ ನಾಮ ಚರಾಚರಂ ಜಗದ್ರಾಜಯತಿ, ಪ್ರಕಾಶಯತಿ, ಸ ವಿರಾಟ್"**- ಎಂದರೆ, ವಿವಿಧವಾದ ರೀತಿಯಲ್ಲಿ, ಅನೇಕ ಪ್ರಕಾರದಿಂದ ಜಗತ್ತನ್ನು ಪ್ರಕಾಶಪಡಿಸುವ ಕಾರಣ, **ವಿರಾಟ್** ಎಂಬ ಸಂಜ್ಞೆಯಿಂದ ಪರಮೇಶ್ವರನು ಗ್ರಾಹ್ಯನಾಗುತ್ತಾನೆ.

(೧೫) **ಅಗ್ನಿ :** "ಅಂಚುಗತಿಪೂಜನಯೋಃ" 'ಅಗ, ಅಗಿ, ಇಣ್' ಗತ್ಯರ್ಥಕ ಧಾತುವಾಗಿದೆ. ಇವುಗಳಿಂದ 'ಅಗ್ನಿ' ಎಂಬ ಶಬ್ದ ಸಿದ್ಧವಾಗುತ್ತದೆ. **"ಗತೇಸ್ತ್ರಯೋಽರ್ಥಾಃ ಜ್ಞಾನಂ, ಗಮನಂ, ಪ್ರಾಪ್ತಿಶ್ಚೇತಿ, ಪೂಜನಂ ನಾಮ ಸತ್ಕಾರಃ". "ಯೋಽಂಚತಿ, ಅಚ್ಯತೇಽಗತ್ಯಂಗತ್ಯೇತಿ ವಾ ಸೋಽಯಮಗ್ನಿಃ"** - ಜ್ಞಾನ ಸ್ವರೂಪನೂ, ಸರ್ವಜ್ಞನೂ, ತಿಳಿಯುವುದಕ್ಕೂ, ಸಾಕ್ಷಾತ್ಕರಿಸಿಕೊಳ್ಳುವುದಕ್ಕೂ ಮತ್ತು ಪೂಜಿಸುವುದಕ್ಕೂ ಯೋಗ್ಯನೂ, ಆಗಿರುವುದರಿಂದ ಪರಮೇಶ್ವರನ ಹೆಸರು **'ಅಗ್ನಿ'**ಯಾಗಿದೆ.

(೧೬) **ವಿಶ್ವ :** "ವಿಶ ಪ್ರವೇಶನೇ"-ಈ ಧಾತುವಿನಿಂದ 'ವಿಶ್ವ' ಶಬ್ದ ಸಿದ್ಧವಾಗುತ್ತದೆ. **"ವಿಶಂತಿ, ಪ್ರವಿಷ್ಟಾನಿ ಸರ್ವಾಣ್ಯಾಕಾಶಾದೀನಿ ಭೂತಾನಿ ಯಸ್ಮಿನ್, ಯೋವಾಽಕಾಶಾದಿಷು ಸರ್ವೇಷು ಭೂತೇಷು ಪ್ರವಿಷ್ಟಃ, ಸ ವಿಶ್ವ ಈಶ್ವರಃ"** ಯಾವನಲ್ಲಿ ಆಕಾಶ ಮೊದಲಾದ ಸರ್ವಭೂತಗಳೂ ಪ್ರವೇಶಿಸುತ್ತಿವೆಯೋ, ಅಥವಾ ಯಾವನು ಇವುಗಳಲ್ಲಿ ವ್ಯಾಪ್ತನಾಗಿ ಪ್ರವಿಷ್ಟನಾಗುತ್ತಿದ್ದಾನೋ, ಅದೇ ಕಾರಣದಿಂದ, ಆ ಪರಮೇಶ್ವರನ ಹೆಸರು **'ವಿಶ್ವ'** ಎಂದಾಗಿದೆ. ಈ ಮೊದಲಾದ ಹೆಸರುಗಳೆಲ್ಲಾ 'ಅಕಾರ' ಮಾತ್ರೆಯಿಂದ ಗ್ರಹಿಸಲ್ಪಡುತ್ತವೆ.

(೧೭) **ಹಿರಣ್ಯಗರ್ಭ: "ಜ್ಯೋತಿರ್ವೈ ಹಿರಣ್ಯಂ, ತೇಜೋ ವೈ ಹಿರಣ್ಯಂ ಇತ್ಯೈತರೇಯೇ ಶತಪಥೇ ಚ ಬ್ರಾಹ್ಮಣೇ"; "ಯೋ ಹಿರಣ್ಯನಾಂ ಸೂರ್ಯಾದೀನಾಂ ತೇಜಸಾಂ ಗರ್ಭ ಉತ್ಪತ್ತಿನಿಮಿತ್ತಂ, ಅಧಿಕರಣಂ ಸ ಹಿರಣ್ಯಗರ್ಭಃ"** ಸೂರ್ಯನೇ ಮೊದಲಾದ

ತೇಜೋಮಯ ಲೋಕಗಳು ಯಾವನಲ್ಲಿ ಉದ್ಭವಿಸಿ, ಯಾವನ ಆಧಾರದ ಮೇಲಿರುತ್ತವೋ ಅಥವಾ ಯಾವನು ಸೂರ್ಯ ಮೊದಲಾದ ತೇಜಃ ಸ್ವರೂಪ ಪದಾರ್ಥಗಳ ಗರ್ಭ ಎಂದರೆ ಉತ್ಪತ್ತಿ ಮತ್ತು ನಿವಾಸಸ್ಥಾನವಾಗಿದ್ದಾನೋ, ಆ ಪರಮೇಶ್ವರನ ಹೆಸರು **'ಹಿರಣ್ಯಗರ್ಭ'** ಎಂದಾಗಿದೆ. ಇದಕ್ಕೆ ಯಜುರ್ವೇದದ ಮಂತ್ರದ ಪ್ರಮಾಣವೂ ಇದೆ:

ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ।
ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ ॥ (ಯಜು.೧೩-೪)

ಈ ಮೊದಲಾದ ಸ್ಥಾನಗಳಲ್ಲಿ ಹಿರಣ್ಯಗರ್ಭವೆಂಬ ಶಬ್ದದಿಂದ ಪರಮೇಶ್ವರನೇ ಗ್ರಾಹ್ಯನಾಗಿದ್ದಾನೆ.

(೧೮) **ವಾಯು : "**ವಾ ಗತಿಗಂಧನಯೋ**"** ಈ ಧಾತುವಿನಿಂದ ವಾಯುವೆಂಬ ಶಬ್ದ ಸಿದ್ಧವಾಗುತ್ತದೆ. (ಗಂಧನಂ ಹಿಂಸನಂ) **"ಯೋ ವಾತಿ ಚರಾಚರಂ ಜಗದ್ಧರತಿ ಬಲಿನಾಂ ಬಲಿಷ್ಠಃ ಸ ವಾಯುಃ"** "ಯಾವನು ಚರಾಚರ ಜಗತ್ತಿನ ಧಾರಣ, ಜೀವನ ಮತ್ತು ಪ್ರಳಯ ಮಾಡುವವನೂ, ಬಲಶಾಲಿಗಳಿಗಿಂತ ಮಹಾಬಲಿಷ್ಠನೂ ಆಗಿದ್ದಾನೋ, ಆ ಈಶ್ವರನ ಹೆಸರು ಅದೇ ಕಾರಣದಿಂದ **ವಾಯು.**

(೧೯) **ತೈಜಸ್ : "**ತಿಜ ನಿಶಾನೇ**"** ಎಂಬ ಧಾತುವಿನಿಂದ 'ತೇಜಸ್' ಎಂಬ ಶಬ್ದವೂ, ಅದಕ್ಕೆ ತದ್ಧಿತ ರೂಪವನ್ನು ಕೊಡುವುದರಿಂದ 'ತೈಜಸ' ಶಬ್ದವೂ ಸಿದ್ಧಿಸುತ್ತದೆ. ಯಾವನು ಸ್ವತಃ ಸ್ವಯಂಪ್ರಕಾಶನೂ, ಹಾಗು ಸೂರ್ಯನೇ ಮೊದಲಾದ ಲೋಕಗಳ ಪ್ರಕಾಶಕನೂ ಆಗಿದ್ದಾನೋ, ಆ ಈಶ್ವರನ ಹೆಸರು ಅದೇ ಕಾರಣದಿಂದ **'ತೈಜಸ'** ಎಂದಾಗಿದೆ. ಈ ಮೊದಲಾದ ನಾಮಾರ್ಥಗಳು 'ಉಕಾರ ' ದ ಮಾತ್ರೆಯಿಂದ ಗ್ರಹಿಸಲ್ಪಡುತ್ತವೆ.

(೨೦) **ಈಶ್ವರ : "**ಈಶ ಐಶ್ವರ್ಯೇ**"** ಎಂಬ ಧಾತುವಿನಿಂದ 'ಈಶ್ವರ' ಎಂಬ ಶಬ್ದ ನಿಷ್ಪನ್ನವಾಗುತ್ತದೆ. **"ಯ ಈಷ್ಟೇ, ಸರ್ವೈಶ್ವರ್ಯವಾನ್ ವರ್ತತೇ, ಸ ಈಶ್ವರಃ"** ಸತ್ಯ ವಿಚಾರಶೀಲಜ್ಞಾನ ಮತ್ತು ಅನಂತ ಐಶ್ವರ್ಯ ಯಾವನದೋ, ಆ ಪರಮಾತ್ಮನ ಹೆಸರು ಅದೇ ಕಾರಣದಿಂದ **'ಈಶ್ವರ'** ಎಂದಾಗಿದೆ.

(೨೧) **ಆದಿತ್ಯ : "**ದೋ ಅವಖಂಡನೇ**"** ಈ ಧಾತುವಿನಿಂದ 'ಅದಿತಿ' ಶಬ್ದವೂ, ಅದಕ್ಕೆ ತದ್ಧಿತ ರೂಪ ಕೊಡುವುದರಿಂದ 'ಆದಿತ್ಯ' ಶಬ್ದವೂ ಸಿದ್ಧವಾಗುತ್ತವೆ. **"ನ ವಿದ್ಯತೇ ವಿನಾಶೋ ಯಸ್ಯ, ಸೋಽಯಮದಿತಿಃ; ಅದಿತಿರೇವ ಆದಿತ್ಯಃ"** ಯಾವನ ವಿನಾಶವು ಎಂದಿಗೂ ಆಗದೋ, ಆ ಈಶ್ವರನ ಹೆಸರು 'ಆದಿತ್ಯ' .

(೨೨)**ಪ್ರಾಜ್ಞ : "**ಜ್ಞಾ ಅವಬೋಧನೇ**"** ಈ ಧಾತುವಿನಿಂದ ಪ್ರಉಪಸರ್ಗಪೂರ್ವಕ 'ಪ್ರಜ್ಞ' ಶಬ್ದವೂ, ಅದಕ್ಕೆ ತದ್ಧಿತ ರೂಪ ಕೊಡುವುದರಿಂದ **'ಪ್ರಾಜ್ಞ'** ಶಬ್ದವೂ ಸಿದ್ಧವಾಗುತ್ತದೆ. **"ಯಃ ಪ್ರಕೃಷ್ಟತಯಾ ಚರಾಚರಸ್ಯ ಜಗತೋ ವ್ಯವಹಾರಂ ಜಾನಾತಿ, ಸ ಪ್ರಜ್ಞಃ ; ಪ್ರಜ್ಞ ಏವ ಪ್ರಾಜ್ಞಃ"** ಯಾವನು ನಿರ್ಭ್ರಾಂತಜ್ಞಾನಯುಕ್ತನಾಗಿ ಸಮಸ್ತ ಚರಾಚರ ಜಗತ್ತಿನ ವ್ಯವಹಾರವನ್ನು ಯಥಾವತ್ತಾಗಿ ತಿಳಿಯುತ್ತಾನೋ, ಆ ಈಶ್ವರನ ಹೆಸರು ಅದೇ ಕಾರಣದಿಂದ **'ಪ್ರಾಜ್ಞ'** ಎಂದಾಗಿದೆ. ಈ ಮೊದಲಾದ ನಾಮಾರ್ಥಗಳು **'ಮಕಾರ'** ದಿಂದ ಗೃಹೀತವಾಗುತ್ತವೆ. ಇಲ್ಲಿ ಹೇಗೆ ಒಂದೊಂದು ಮಾತ್ರೆಯಿಂದ ಮೂರು ಮೂರು ಅರ್ಥಗಳ ವ್ಯಾಖ್ಯಾನವನ್ನು ಮಾಡಿದ್ದೇವೋ, ಹಾಗೆಯೇ ಬೇರೆ ನಾಮಾರ್ಥಗಳೂ ಕೂಡ ಓಂಕಾರದಿಂದ ತಿಳಿಯಲ್ಪಡುತ್ತವೆ.

**"ಶನ್ನೋ ಮಿತ್ರಃ ಶಂ ವರುಣಃ"** ಎಂಬ ಮಂತ್ರದಲ್ಲಿ ಮಿತ್ರ ಮೊದಲಾದ ಯಾವ ಸಂಜ್ಞೆಗಳಿವೆಯೋ, ಅವೂ ಪರಮೇಶ್ವರನವೇ ಆಗಿವೆ; ಏಕೆಂದರೆ, ಸ್ತುತಿ – ಪ್ರಾರ್ಥನೋಪಾಸನೆಗಳು ಶ್ರೇಷ್ಠನಾಗಿರುವವನದೇ ಮಾಡಲ್ಪಡುತ್ತವೆ. ಯಾವನು ಗುಣ–ಕರ್ಮ–ಸ್ವಭಾವಗಳಲ್ಲಿ ಮತ್ತು ಸತ್ಯಾಸತ್ಯ ವ್ಯವಹಾರಗಳಲ್ಲಿ ಸರ್ವೋತ್ತಮನಾಗಿರುತ್ತಾನೋ, ಅವನನ್ನೇ ಶ್ರೇಷ್ಠನೆಂದು ಹೇಳುತ್ತಾರೆ. ಆ ಸರ್ವಶ್ರೇಷ್ಠರಲ್ಲಿಯೂ ಯಾವನು ಅತ್ಯಂತ ಶ್ರೇಷ್ಠನಾಗಿರುತ್ತಾನೋ, ಅವನನ್ನು ಪರಮೇಶ್ವರನೆನ್ನುತ್ತಾರೆ. ಅವನಿಗೆ ಸಮನಾದವನು ಹಿಂದೆ ಯಾವನೂ ಹುಟ್ಟಲಿಲ್ಲ; ಈಗ ಇಲ್ಲ; ಮುಂದೆ ಹುಟ್ಟುವುದೂ ಇಲ್ಲ. ಸಮನೇ ಇಲ್ಲದಾಗ, ಅವನಿಗಿಂತ ಉತ್ತಮನು ಹೇಗೆ ತಾನೇ ಆಗಬಲ್ಲನು? ಹೇಗೆ ಪರಮಾತ್ಮನಲ್ಲಿ ಸತ್ಯ, ನ್ಯಾಯ, ದಯೆ, ಸರ್ವಸಾಮರ್ಥ್ಯ ಮತ್ತು ಸರ್ವಜ್ಞತ್ವ ಮೊದಲಾದ ಅನಂತ ಗುಣಗಳಿವೆಯೋ, ಹಾಗೆ ಬೇರೆ ಯಾವ ಜಡ ಪದಾರ್ಥದಲ್ಲಿಯೂ ಅಥವಾ ಜೀವನಲ್ಲಿಯೂ ಇಲ್ಲ. ಯಾವ ಪದಾರ್ಥ ಸತ್ಯವೋ, ಅದರ ಗುಣ–ಕರ್ಮ–ಸ್ವಭಾವಗಳೂ ಸತ್ಯವೇ ಆಗಿರುತ್ತವೆ. ಆದುದರಿಂದ, ಕೇವಲ ಪರಮೇಶ್ವರನ ಸ್ತುತಿ–

ಪ್ರಾರ್ಥನೋಪಾಸನೆಗಳನ್ನು ಮಾಡುವುದು ಅವನಿಂದ ಬೇರೆಯಾದವನದನ್ನು ಎಂದಿಗೂ ಮಾಡದಿರುವುದು ಮಾನವರಿಗೆ ಯೋಗ್ಯವಾಗಿದೆ. ಏಕೆಂದರೆ ಬ್ರಹ್ಮಾ, ವಿಷ್ಣು, ಮಹಾದೇವ ಎಂಬ ಹೆಸರುಗಳನ್ನುಳ್ಳ ಪೂರ್ವಜರಾದ ಮಹಾಶಯವಿದ್ವಾಂಸರೂ, ದೈತ್ಯ, ದಾನವ ಮೊದಲಾದ ನಿಕೃಷ್ಟಮಾನವರೂ ಮತ್ತು ಇತರ ಸಾಧಾರಣ ಮಾನವರೂ ಕೂಡ, ಪರಮೇಶ್ವರನಲ್ಲಿಯೇ ನಂಬಿಕೆಯಿಟ್ಟು, ಅವನ ಸ್ತುತಿ ಪ್ರಾರ್ಥನೋಪಾಸನೆಗಳನ್ನೇ ಮಾಡಿದರು; ಅವನಿಂದ ಬೇರೆಯಾದವನದನ್ನು ಮಾಡಲಿಲ್ಲ. ಹಾಗೆಯೇ ಮಾಡುವುದು ನಮ್ಮೆಲ್ಲರಿಗೂ ಯೋಗ್ಯವಾಗಿದೆ. ಇದರ ವಿಶೇಷ ವಿಮರ್ಶೆ ಮುಕ್ತಿ ಮತ್ತು ಉಪಾಸನೆಯ ಪ್ರಸಂಗದಲ್ಲಿ ಮಾಡಲ್ಪಡುವುದು.

**ಪ್ರಶ್ನೆ :** ಮಿತ್ರ ಮೊದಲಾದ ನಾಮಗಳಿಂದ ಸ್ನೇಹಿತ ಮತ್ತು ಇಂದ್ರ ಮೊದಲಾದ ದೇವತೆಗಳ ಪ್ರಸಿದ್ಧ ವ್ಯವಹಾರ ಕಂಡು ಬರುವುದರಿಂದ, ಅವರುಗಳನ್ನೇ ಗ್ರಹಿಸಬೇಕು.

**ಉತ್ತರ :** ಈ ಸ್ಥಾನದಲ್ಲಿ ಅವರನ್ನು ಗ್ರಹಿಸುವುದು ಯೋಗ್ಯವಲ್ಲ. ಏಕೆಂದರೆ – ಯಾವ ಮನುಷ್ಯನು ಯಾವನೋ ಒಬ್ಬನಿಗೆ ಮಿತ್ರನಾಗಿದ್ದಾನೋ, ಅವನೇ ಇನ್ನೊಬ್ಬನಿಗೆ ಶತ್ರುವೂ ಮತ್ತು ಮತ್ತಾವನೋ ಒಬ್ಬನ ವಿಷಯದಲ್ಲಿ ಉದಾಸೀನನೂ ಆಗಿರುವುದು ಕಂಡುಬರುತ್ತದೆ. ಈ ಕಾರಣದಿಂದ ಮುಖ್ಯವಾದ ಅರ್ಥದಲ್ಲಿ ಸಖಾ ಮೊದಲಾದವರನ್ನು ಗ್ರಹಿಸಲಾಗುವುದಿಲ್ಲ. ಆದರೆ ಪರಮೇಶ್ವರನು ಸಮಸ್ತ ಜಗತ್ತಿನ ನಿಶ್ಚಿತ ಮಿತ್ರನಾಗಿರುವಂತೆ, ಯಾವನಿಗೂ ಶತ್ರುವಲ್ಲದಿರುವಂತೆ ಮತ್ತು ಯಾರ ಬಗೆಗೂ ಉದಾಸೀನನಾಗದಿರುವಂತೆ, ಈ ಭಗವಂತನನ್ನುಳಿದು ಬೇರೆ ಯಾವ ಜೀವನೂ ಅವನ ಹಾಗೆ ಎಂದಿಗೂ ಆಗಲಾರನು. ಆದುದರಿಂದ, ಈ ಸ್ಥಳದಲ್ಲಿ ಪರಮಾತ್ಮನೇ ಗ್ರಾಹ್ಯನಾಗಿದ್ದಾನೆ. ಅಹುದು; ಗೌಣಾರ್ಥದಲ್ಲಿ ಮಿತ್ರ ಮೊದಲಾದ ಶಬ್ದಗಳಿಂದ ಸ್ನೇಹಿತ ಮೊದಲಾದ ಮನುಷ್ಯರನ್ನು ಗ್ರಹಿಸಬಹುದು.

(೨೩) **ಮಿತ್ರಃ :** "ಞಿಮಿದಾ ಸ್ನೇಹನೇ"– ಈ ಧಾತುವಿನಿಂದ, ಔಣಾದಿಕ **'ಕ್ತ್ರ'** ಪ್ರತ್ಯಯ ಪ್ರಯೋಗದಿಂದ ಮಿತ್ರಶಬ್ದ ರೂಪಗೊಳ್ಳುತ್ತದೆ. **"ಮೇದ್ಯತಿ, ಸ್ನಿಹ್ಯತಿ ಸ್ನಿಹ್ಯತೇ ವಾ ಸ ಮಿತ್ರಃ"** – ಎಲ್ಲರಿಗೂ ಸ್ನೇಹ ತೋರುವುದರಿಂದ, ಸರ್ವರೂ ಪ್ರೀತಿ ತೋರಿಸಲು ಅರ್ಹನಾದುದರಿಂದ, ಪರಮೇಶ್ವರನ ಹೆಸರು **'ಮಿತ್ರ'** ಎಂದಾಗಿದೆ.

(೨೪) **ವರುಣಃ: –** "ವೃಞ್ ವರಣೇ, ರವ ಈಪ್ಸಾಯಾಂ" – ಈ ಧಾತುಗಳಿಂದ, ಉಣಾದಿ 'ಉನಸ್' ಪ್ರತ್ಯಯ ಪ್ರಯೋಗ ದಿಂದ 'ವರುಣ' ಶಬ್ದ ಸಿದ್ಧವಾಗುತ್ತದೆ. **"ಯಃ ಸರ್ವಾನ್ ಶಿಷ್ಟಾನ್ ಮುಮುಕ್ಷೂನ್ ಧರ್ಮಾತ್ಮನೋ ವೃಣೋತ್ಯಥವಾ ಯಃ ಶಿಷ್ಟೈರ್ಮುಮುಕ್ಷುಭಿರ್ಧರ್ಮಾತ್ಮ ಭಿರ್ವ್ರಿಯತೇ, ವರ್ಯತೇ ವಾ ಸ ವರುಣಃ ಪರಮೇಶ್ವರಃ"** – ಯಾವನು ಆತ್ಮ ಯೋಗಿಗಳೂ, ವಿದ್ವಾಂಸರೂ, ಮೋಕ್ಷಾಭಿಲಾಷಿಗಳೂ, ಮುಕ್ತರೂ ಮತ್ತು ಧರ್ಮಾತ್ಮರೂ ಆಗಿರುವವರನ್ನು ಸ್ವೀಕರಿಸುತ್ತಾನೋ, ಅಥವಾ ಯಾವನು ಶಿಷ್ಟರೂ, ಮುಮುಕ್ಷುಗಳೂ, ಮುಕ್ತರೂ ಮತ್ತು ಧರ್ಮಾತ್ಮರೂ ಆಗಿರುವವರಿಂದ ಸ್ವೀಕರಿಸಲ್ಪಡುತ್ತಾನೋ, ಆ ಈಶ್ವರನು **'ವರುಣ'** ಎಂಬ ಹೆಸರಿನವನಾಗಿರುತ್ತಾನೆ ಅಥವಾ **"ವರುಣೋ ನಾಮ ವರಃ ಶ್ರೇಷ್ಠಃ"** ಸರ್ವಶ್ರೇಷ್ಠನಾಗಿರುವು ದರಿಂದಲೇ ಪರಮೇಶ್ವರನ ಹೆಸರು **'ವರುಣ'** ಎಂದಾಗಿದೆ.

(೨೫) **ಅರ್ಯಮಾ :** **"ಋ ಗತಿಪ್ರಾಪಣಯೋಃ"** ಈ ಧಾತುವಿನಿಂದ 'ಯತ್' ಪ್ರತ್ಯಯ ಪ್ರಯೋಗದಿಂದ 'ಅರ್ಯ' ಶಬ್ದ ಸಿದ್ಧವಾಗುತ್ತದೆ. 'ಅರ್ಯ'ವನ್ನು ಮೊದಲಿಗೆ ಇಟ್ಟುಕೊಂಡು, **"ಮಾಙ್ ಮಾನೇ"** ಎಂಬ ಧಾತುವಿಗೆ **'ಕನಿನ್'** ಪ್ರತ್ಯಯವನ್ನು ಪ್ರಯೋಗ ಮಾಡುವುದರಿಂದ 'ಅರ್ಯಮಾ' ಶಬ್ದ ಸಿದ್ಧವಾಗುತ್ತದೆ. **"ಯೋಽರ್ಯಾನ್ ಸ್ವಾಮಿನೋ ನ್ಯಾಯಾಧೀಶಾನ್ ಮಿಮೀತೇ, ಮಾನ್ಯಾನ್ ಕರೋತಿ ಸೋಽರ್ಯಮಾ"**. ನ್ಯಾಯ ಮಾಡುವ ಮಾನವರೆಲ್ಲರನ್ನೂ ಮಾನ್ಯರನ್ನಾಗಿ ಮಾಡುವುದರಿಂದ ಮತ್ತು ಪಾಪ ಹಾಗೂ ಪುಣ್ಯ ಮಾಡುವವರಿಗೆ ಪಾಪ ಮತ್ತು ಪುಣ್ಯಗಳ ಫಲಗಳು ಯಥಾವತ್ತಾಗಿ ಲಭಿಸುವ ಹಾಗೆ ಸತ್ಯ – ಸತ್ಯವಾದ ನಿಯಮಗಳನ್ನು ರಚಿಸುವವನಾಗಿರುವುದರಿಂದ ಆ ಪರಮೇಶ್ವರನ ಹೆಸರು, **'ಅರ್ಯಮಾ'** ಎಂದಾಗಿದೆ.

(೨೬) **ಇಂದ್ರ :** "ಇದಿ ಪರಮೈಶ್ವರ್ಯೇ" – ಈ ಧಾತುವಿನಿಂದ, 'ರನ್' ಪ್ರತ್ಯಯ ಪ್ರಯೋಗದಿಂದ 'ಇಂದ್ರ' ಶಬ್ದ ಸಿದ್ಧವಾಗುತ್ತದೆ. **"ಯ ಇಂದತಿ, ಪರಮೈಶ್ವರ್ಯವಾನ್ ಭವತಿ, ಸ ಇಂದ್ರಃ ಪರಮೇಶ್ವರಃ"**– ಸಕಲೈಶ್ವರ್ಯಯುಕ್ತನಾಗಿರುವ ಕಾರಣದಿಂದಲೇ ಪರಮಾತ್ಮನ ಹೆಸರು **'ಇಂದ್ರ'** ಎಂದಾಗಿದೆ.

(೨೭) **ಬೃಹಸ್ಪತಿ: –** **"**ಬೃಹತ್**"** ಶಬ್ದಪೂರ್ವಕ 'ಪಾ' ಎಂಬ ಧಾತುವಿನಿಂದ 'ಡತಿ' ಪ್ರತ್ಯಯ ಪ್ರಯೋಗಮಾಡಿ, 'ಬೃಹತ್' ಶಬ್ದದ ತಕಾರಲೋಪವಾಗಿ, ಸುಡಾಗಮವಾಗುವುದರಿಂದ 'ಬೃಹಸ್ಪತಿ' ಶಬ್ದ ವ್ಯುತ್ಪನ್ನವಾಗುತ್ತದೆ. **"ಯೋ ಬೃಹತಾಂ**

**ಆಕಾಶಾದೀನಾಂ ಪತಿಃ ಸ್ವಾಮೀ, ಪಾಲಯಿತಾ ಸ ಬೃಹಸ್ಪತಿಃ"** ದೊಡ್ಡವರೆಲ್ಲರಿಗಿಂತಲೂ ದೊಡ್ಡವನೂ, ಮತ್ತು ಮಹಾನ್ ಆಕಾಶವೇ ಮೊದಲಾದ ಬ್ರಹ್ಮಾಂಡದ ಸ್ವಾಮಿಯೂ ಆಗಿರುವುದರಿಂದ ಆ ಪರಮೇಶ್ವರನ ಹೆಸರು, **'ಬೃಹಸ್ಪತಿ'** ಎಂದಾಗಿದೆ.

(೨೮) **ವಿಷ್ಣು :** "ವಿಷ್ಲೃವ್ಯಾಪ್ತೌ" ಎಂಬ ಧಾತುವಿನಿಂದ, 'ನು' ಪ್ರತ್ಯಯದ ಸೇರಿಕೆಯಿಂದ 'ವಿಷ್ಣು' ಎಂಬ ಶಬ್ದ ಸಿದ್ಧವಾಗಿದೆ. **"ವೇವೇಷ್ಟಿ ವ್ಯಾಪ್ನೋತಿ ಚರಾಚರಂ ಜಗತ್ ಸ ವಿಷ್ಣುಃ"** ಚರ ಮತ್ತು ಅಚರರೂಪವಾದ ಜಗತ್ತಿನಲ್ಲಿ ವ್ಯಾಪಕನಾಗಿರುವುದರಿಂದ ಪರಮಾತ್ಮನ ಹೆಸರು **'ವಿಷ್ಣು'** ಎಂದಾಗಿದೆ.

(೨೯) **ಉರುಕ್ರಮ : "ಉರುರ್ಮಹಾನ್ ಕ್ರಮಃ ಪರಾಕ್ರಮೋ ಯಸ್ಯ ಸ ಉರುಕ್ರಮಃ"**– ಅನಂತಪರಾಕ್ರಮಯುಕ್ತನಾಗಿರುವುದರಿಂದ ಪರಮಾತ್ಮನ ಹೆಸರು **'ಉರುಕ್ರಮ'** – ಎಂದಾಗಿದೆ.

ಯಾವ ಪರಮಾತ್ಮನು, (ಉರುಕ್ರಮಃ) ಮಹಾಪರಾಕ್ರಮಯುಕ್ತನೂ, (ಮಿತ್ರಃ) ಸರ್ವರ 'ಸುಹೃತ್', ಅವಿರೋಧಿಯೂ ಆಗಿದ್ದಾನೋ, ಅವನು, (ಶಂ) ಸುಖಕಾರಕನೂ, ಅವನು, (ವರುಣಃ) ಸರ್ವೋತ್ತಮನೂ, (ಶಂ) ಅವನು ಸುಖ ಸ್ವರೂಪನೂ, (ಅರ್ಯಮಾ) ಅವನು ನ್ಯಾಯಾಧೀಶನೂ, (ಶಂ) ಅವನು ಸುಖ ಪ್ರಚಾರಕನೂ, (ಇಂದ್ರಃ) ಅವನು ಸಕಲೈಶ್ವರ್ಯವಂತನೂ (ಶಂ) ಸಕಲೈಶ್ವರ್ಯದಾಯಕನೂ, (ಬೃಹಸ್ಪತಿಃ) ಅವನು ಸರ್ವರಿಗೂ ಅಧಿಷ್ಠಾತೃವೂ, (ಶಂ) ವಿದ್ಯಾಪ್ರದನೂ ಆಗಿದ್ದಾನೆ. ಮತ್ತು (ವಿಷ್ಣುಃ) ಯಾವನು ಎಲ್ಲದರಲ್ಲಿಯೂ ವ್ಯಾಪಕನಾದ ಪರಮೇಶ್ವರನಾಗಿದ್ದಾನೋ, ಅವನು, (ನಃ) ನಮಗೆ (ಭವತು) ಕಲ್ಯಾಣಕಾರಕನಾಗಲಿ,

"ವಾಯೋ ತೇ ಬ್ರಹ್ಮಣೇ ನಮಃ ಅಸ್ತು". "ಬೃಹ, ಬೃಹಿ ವೃದ್ಧೌ" ಎಂಬ ಧಾತುಗಳಿಂದ 'ಬ್ರಹ್ಮ' ಶಬ್ದ ಸಿದ್ಧವಾಗುತ್ತದೆ. ಯಾವನು ಎಲ್ಲರಿಗಿಂತ ಉಚ್ಚನಾಗಿ ವಿರಾಜಿಸುವ, ಎಲ್ಲರಿಗಿಂತ ದೊಡ್ಡ, ಅನಂತಬಲಯುಕ್ತನಾದ ಪರಮಾತ್ಮನೋ, ಆ ಬ್ರಹ್ಮಕ್ಕೆ ನಾವು ನಮಸ್ಕಾರ ಮಾಡುತ್ತೇವೆ. ಹೇ ಪರಮೇಶ್ವರ! (ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ) ನೀನೇ ಅಂತರ್ಯಾಮಿರೂಪದಿಂದ ಪ್ರತ್ಯಕ್ಷ ಬ್ರಹ್ಮವಾಗಿದ್ದೀಯೆ. (ತ್ವಾಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ.) ನಾನು ನಿನ್ನನ್ನೇ ಪ್ರತ್ಯಕ್ಷಬ್ರಹ್ಮವೆನ್ನುವೆನು. ಏಕೆಂದರೆ, ನೀನು ಎಲ್ಲೆಡೆಯೂ ವ್ಯಾಪ್ತವಾಗಿ, ಸರ್ವರಿಗೂ ಸದಾ ಪ್ರಾಪ್ತನಾಗಿದ್ದೀಯೆ. (ಋತಂ ವದಿಷ್ಯಾಮಿ) ವೇದಗಳಲ್ಲಿ ನಿನ್ನ ಯಾವ ಯಥಾರ್ಥವಾದ ಆಜ್ಞೆಯಿದೆಯೋ, ಅದನ್ನೇ ನಾನು ಸರ್ವರಿಗೂ ಉಪದೇಶಿಸುವೆನು; ಅದಕ್ಕೆ ಅನುಸಾರ ಆಚರಣೆಯನ್ನು ಕೂಡ ಮಾಡುವೆನು. (ಸತ್ಯಂ ವದಿಷ್ಯಾಮಿ) ಸತ್ಯವನ್ನು ಹೇಳುವೆನು; ಸತ್ಯವನ್ನು ಅಂಗೀಕರಿಸುವೆನು ಮತ್ತು ಸತ್ಯವನ್ನೇ ಅನುಷ್ಠಾನಕ್ಕೆ ತರುವೆನು. (ತನ್ಮಾಮವತು) ಆ ನೀನು ನನ್ನನ್ನು ರಕ್ಷಿಸು. (ತದ್ವಕ್ತಾರಮವತು) ಆ ನೀನು ಆಪ್ತ ಸತ್ಯೋಪದೇಶಕವಾದ ನನ್ನನ್ನು ರಕ್ಷಿಸು. ಆ ರೀತಿ, ನಿನ್ನ ಆಜ್ಞೆಯಲ್ಲಿ ನನ್ನ ಬುದ್ಧಿ ಸ್ಥಿರವಾಗಿ, ಎಂದಿಗೂ ವಿರುದ್ಧವಾಗದಿರಲಿ, ಏಕೆಂದರೆ– ಯಾವುದು ನಿನ್ನ ಆಜ್ಞೆಯೋ, ಅದೇ ಧರ್ಮ ಮತ್ತು ಯಾವುದು ಅದಕ್ಕೆ ವಿರುದ್ಧವೋ, ಅದೇ ಅಧರ್ಮ. (ಅವತು ಮಾಮವತು ವಕ್ತಾರಂ) ಎರಡನೆಯ ಸಾರಿ ಈ ಉಕ್ತಿ ಅಧಿಕಾರ್ಥಕ್ಕಾಗಿ ಇದೆ. ಉದಾಹರಣೆಗೆ **"ಕಶ್ಚಿನ್ ಕಂಚಿತ್ ಪ್ರತಿವದತಿ ತ್ವಂ ಗ್ರಾಮಂ ಗಚ್ಛ ಗಚ್ಛ".** – ಈ ವಾಕ್ಯದಲ್ಲಿ ಎರಡು ಸಾರಿ ಕ್ರಿಯೆಯ ಉಚ್ಚಾರಣೆಯಿಂದ, ನೀನು ಬೇಗನೇ ಗ್ರಾಮಕ್ಕೆ ಹೋಗು– ಎಂದು ಸಿದ್ಧವಾಗುತ್ತದೆ. ಇದೇ ರೀತಿ, ಈ ಸ್ಥಾನದಲ್ಲಿ– ನೀನು ನನ್ನನ್ನು ಅವಶ್ಯವಾಗಿಯೂ ರಕ್ಷಿಸು; ಎಂದರೆ– ಧರ್ಮದ ಬಗೆಗೆ ಸುನಿಶ್ಚಿತನಾಗಿ, ಅಧರ್ಮದ ಬಗೆಗೆ ಸದಾ ತಿರಸ್ಕಾರ ಮಾಡುವ ಹಾಗೆ ನನ್ನ ಮೇಲೆ ಕೃಪೆಮಾಡು; ನಾನು ನಿನ್ನ ಉಪಕಾರವನ್ನು ದೊಡ್ಡದೆಂದು ಅಂಗೀಕರಿಸುವೆನು – ಎಂಬ ಭಾವವಿದೆ. (ಓಂ ಶಾಂತಿಃ ಶಾಂತಿಃ ಶಾಂತಿಃ) ಇದರಲ್ಲಿ ಮೂರು ಸಾರಿ ಶಾಂತಿಪಾಠ ಮಾಡುವುದರ ಪ್ರಯೋಜನವೇನೆಂದರೆ – ತ್ರಿವಿಧ ತಾಪಗಳು, ಎಂದರೆ, ಜಗತ್ತಿನಲ್ಲಿ ಮೂರು ಬಗೆಯ ದುಃಖಗಳಿವೆ. ಒಂದು **'ಆಧ್ಯಾತ್ಮಿಕ'** – ಆತ್ಮನಿಗೆ ಶರೀರದಲ್ಲಿ ಅವಿದ್ಯೆ, ರಾಗ, ದ್ವೇಷ, ಮೂರ್ಖತ್ವ ಮತ್ತು ಜ್ವರ– ನೋವು ಮೊದಲಾದುವು ಉಂಟಾಗುತ್ತವೆ. ಎರಡನೆಯದು **'ಆಧಿಭೌತಿಕ'** ಇದು ಶತ್ರುಗಳಿಂದಲೂ, ವ್ಯಾಘ್ರ, ಸರ್ಪ ಮೊದಲಾದುವುಗಳಿಂದಲೂ ಉದ್ಭವಿಸುತ್ತದೆ. ಮೂರನೆಯದು **'ಆಧಿದೈವಿಕ'** ಎಂದರೆ– ಅತಿವೃಷ್ಟಿ, ಅತಿಶೀತ, ಅತಿಉಷ್ಣತೆ, ಮನ ಮತ್ತು ಇಂದ್ರಿಯಗಳ ಅಶಾಂತಿಯಿಂದ ಉಂಟಾಗುತ್ತದೆ. ಈ ಮೂರು ಬಗೆಯ ಕ್ಲೇಶಗಳಿಂದಲೂ ನಮ್ಮನ್ನು ದೂರವಿಟ್ಟು, ಕಲ್ಯಾಣಕಾರಕ ಕರ್ಮಗಳಲ್ಲಿ ನಮ್ಮನ್ನು ಸದಾ ಪ್ರವೃತ್ತರನ್ನಾಗಿ ಮಾಡು. ಏಕೆಂದರೆ – ನೀನೇ ಕಲ್ಯಾಣ ಸ್ವರೂಪನೂ, ಸರ್ವಜಗತ್ತಿಗೂ ಕಲ್ಯಾಣಕರ್ತೃವೂ ಮತ್ತು ಧಾರ್ಮಿಕ ಮುಮುಕ್ಷುಗಳಿಗೆ ಕಲ್ಯಾಣಪ್ರದನೂ ಆಗಿದ್ದೀಯೆ. ಆದುದರಿಂದ, ನೀನು ಸ್ವತಃ ನಿನ್ನ ಕರುಣೆಯಿಂದ, ಸಮಸ್ತ ಜೀವರೂ ಧರ್ಮದ ಆಚರಣ (ಮಾಡುತ್ತಾ) ಮತ್ತು ಅಧರ್ಮವನ್ನು ಬಿಟ್ಟು ಪರಮಾನಂದವನ್ನು ಹೊಂದುವಂತೆ ಮತ್ತು ದುಃಖಗಳಿಂದ ದೂರವಿರುವಂತೆ, ಸರ್ವಜೀವರ ಹೃದಯಗಳಲ್ಲಿಯೂ ಪ್ರಕಾಶಿತನಾಗು.

## “ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ”

(೩೦) **ಸೂರ್ಯ:** ಈ ಯಜುರ್ವೇದದ ವಚನದಿಂದ (೭-೪೨) **‘ಜಗತ್ತು’** ಎಂದರೆ ಪ್ರಾಣಯುಕ್ತ ಚೇತನ ಮತ್ತು ಜಂಗಮ ಎಂದರೆ ಓಡಾಡುವ ಜೀವರುಗಳ, **‘ತಸ್ಥುಷಃ’** ಎಂದರೆ ನಿಷ್ಪ್ರಾಣವಾದ, ಸ್ಥಾವರವಾದ ಜಡ ಎಂದರೆ ಪೃಥಿವೀ ಮೊದಲಾದುವು ಗಳೆಲ್ಲದರ ಆತ್ಮನಾಗಿರುವುದರಿಂದ ಮತ್ತು ಸ್ವಪ್ರಕಾಶರೂಪನಾಗಿದ್ದು ಸರ್ವವನ್ನೂ ಪ್ರಕಾಶಪಡಿಸುವುದರಿಂದ ಪರಮೇಶ್ವನ ಹೆಸರು **‘ಸೂರ್ಯ’** ಎಂದಾಗಿದೆ.

(೩೧) **ಆತ್ಮಾ :** “ಅತಸಾತತ್ಯಗಮನೇ” ಈ ಧಾತುವಿನಿಂದ ‘ಆತ್ಮಾ’ ಎಂಬ ಶಬ್ದ ನಿಷ್ಪನ್ನವಾಗುತ್ತದೆ. **“ಯೋऽತತಿ ವ್ಯಾಪ್ನೋತಿ ಸ ಆತ್ಮಾ”**. ಜೀವರೇ ಮೊದಲಾದ ಸಮಸ್ತ ಜಗತ್ತಿನಲ್ಲಿ ನಿರಂತರ ವ್ಯಾಪಕನಾಗಿರುವನು ಆತ್ಮಾ. **“ಪರಶ್ಚಾಸಾವಾತ್ಮಾಚ ಯ ಆತ್ಮಭ್ಯೋ ಜೀವೇಭ್ಯಃ ಸೂಕ್ಷ್ಮೇಭ್ಯಃ ಪರೋऽತಿ ಸೂಕ್ಷ್ಮಃ ಸ ಪರಮಾತ್ಮಾ”**, ಜೀವರೇ ಮೊದಲಾದ ಸರ್ವರಿಗಿಂತ ಉತ್ಕೃಷ್ಟನೂ, ಮತ್ತು ಜೀವ, ಪ್ರಕೃತಿ ಮತ್ತು ಆಕಾಶಕ್ಕಿಂತಲೂ ಅತಿ ಸೂಕ್ಷ್ಮನೂ ಮತ್ತು ಜೀವರೆಲ್ಲರ ಅಂತರ್ಯಾಮೀ ಆತ್ಮನೂ ಆಗಿರುವುದರಿಂದ ಈಶ್ವರನ ಹೆಸರು **‘ಪರಮಾತ್ಮಾ’**- ಎಂದಾಗಿದೆ.

**ಪರಮೇಶ್ವರ** : ಸಾಮರ್ಥ್ಯವಂತನ ಹೆಸರು ಈಶ್ವರ. **“ಯ ಈಶ್ವರೇಷು ಸರ್ವೇಷು ಪರಮಃ ಶ್ರೇಷ್ಠಃ ಸ ಪರಮೇಶ್ವರಃ”** ಯಾವನು ಈಶ್ವರರಲ್ಲೆಲ್ಲಾ ಸಮರ್ಥರಲ್ಲೆಲ್ಲಾ ಸಮರ್ಥನೋ, ಯಾವನಿಗೆ ಸಮನಾದವನು ಯಾವನೂ ಇಲ್ಲವೋ, ಅವನ ಹೆಸರು **‘ಪರಮೇಶ್ವರ’** – ಎಂದಾಗಿದೆ.

(೩೨) **ಸವಿತಾ :** “ಷು ಞ್ ಅಭಿಷವೇ, ಷೂ ಞ್ ಪ್ರಾಣಿಗರ್ಭವಿಮೋಚನೇ” – ಈ ಧಾತುಗಳಿಂದ ‘ಸವಿತಾ’ ಎಂಬ ಶಬ್ಧ ಸಿದ್ಧವಾಗುತ್ತದೆ. **“ಅಭಿಷವಃ ಪ್ರಾಣಿಗರ್ಭವಿಮೋಚನಂ ಚೋತ್ಪಾದನಂ. ಯಶ್ಚಚರಾಚರಂ ಜಗತ್ಸುನೋತಿ, ಸೂತೇ, ವೋತ್ಪಾದಯತಿ, ಸ ಸವಿತಾ ಪರಮೇಶ್ವರಃ”** ಸಮಸ್ತ ಜಗತ್ತಿನ ಉತ್ಪತ್ತಿಯನ್ನು ಮಾಡುವುದರಿಂದ, ಪರಮೇಶ್ವರನ ಹೆಸರು **‘ಸವಿತಾ’** ಎಂದಾಗಿದೆ.

(೩೩) **ದೇವ :** “ದಿ ವು ಕ್ರೀಡಾವಿಜಿಗೀಷಾವ್ಯವಹಾರದ್ಯುತಿಸ್ತುತಿಮೋದಮದಸ್ವಪ್ನ ಕಾಂತಿಗತಿಷು” ಈ ಧಾತುವಿನಿಂದ ದೇವಶಬ್ದ ಉತ್ಪನ್ನವಾಗುತ್ತದೆ. (ಕ್ರೀಡಾ) ಶುದ್ಧನೂ, ಜಗತ್ತಿನ ಆಟವಾಡಿಸುವವನೂ, (ವಿಜಿಗೀಷಾ) ಧಾರ್ಮಿಕರನ್ನು ಗೆಲ್ಲಿಸುವ ಇಚ್ಛೆಯುಳ್ಳವನೂ, (ವ್ಯವಹಾರ) ಸಮಸ್ತ ಕ್ರಿಯೆಗಳ ಸಾಧನೋಪಸಾಧನಗಳನ್ನು ಕೊಡುವವನೂ, (ದ್ಯುತಿ) ಸ್ವಯಂಪ್ರಕಾಶ ಸ್ವರೂಪನೂ, ಸರ್ವಪ್ರಕಾಶಕನೂ, (ಸ್ತುತಿ) ಪ್ರಶಂಸಾಯೋಗ್ಯನೂ, (ಮೋದ) ಸ್ವತಃ ಆನಂದಸ್ವರೂಪನೂ, ಮತ್ತು ಅನ್ಯರಿಗೆ ಆನಂದದಾಯಕನೂ, (ಮದ) ಮದೋನ್ಮತ್ತರನ್ನು ದಂಡಿಸುವವನೂ (ಸ್ವಪ್ನ) ಜೀವರ ನಿದ್ರೆಗಾಗಿ ರಾತ್ರಿಯನ್ನೂ, ಪ್ರಳಯವನ್ನೂ ಮಾಡುವವನೂ, (ಕಾಂತಿ) ಕಾಮನಾಯೋಗ್ಯನೂ ಮತ್ತು (ಗತಿ) ಜ್ಞಾನಸ್ವರೂಪನೂ ಆಗಿರುವುದರಿಂದ ಪರಮೇಶ್ವರನ ಹೆಸರು **‘ದೇವ’** ಎಂದಾಗಿದೆ ಅಥವಾ **“ಯೋ ದೀವ್ಯತಿ, ಕ್ರೀಡತಿ, ಸ ದೇವಃ”** ಯಾವನು ತನ್ನ ಸ್ವರೂಪದಲ್ಲಿ ಆನಂದಿಂದ ತಾನೇ ರಮಿಸುತ್ತಾನೋ, ಅಥವಾ ಅನ್ಯರ ಸಹಾಯವಿಲ್ಲದೆ, ಆಟದಂತೆ, ಸಹಜಸ್ವಭಾವದಿಂದ ಸರ್ವಜಗತ್ತನ್ನೂ ನಿರ್ಮಿಸುತ್ತಾನೋ, ಅಥವಾ ಕ್ರೀಡೆಗಳಿಗೆಲ್ಲಾ ಆಧಾರವಾಗಿದ್ದಾನೋ, **“ವಿಜಿಗೀಷತೇ ಸ ದೇವಃ”** ಯಾವನು ಸರ್ವವಿಜಯಿ ಯಾಗಿದ್ದಾನೋ, ಸ್ವತಃ ಅಜೇಯ – ಎಂದರೆ ಯಾವನನ್ನು ಯಾವನೂ ಗೆಲ್ಲಲಾರನೋ, **“ವ್ಯವಹಾರಯತಿ ಸ ದೇವಃ”** ಯಾವನು ನ್ಯಾಯಾ ನ್ಯಾಯ ರೂಪ ವ್ಯವಹಾರಗಳನ್ನು ಬಲ್ಲವನೂ, ಉಪದೇಶಮಾಡುವವನೂ ಆಗಿದ್ದಾನೋ, **“ಯಶ್ಚರಾಚರಂಜಗತ್ ದ್ಯೋತಯತಿ”** – ಯಾವನು ಎಲ್ಲದರ ಪ್ರಕಾಶಕನಾಗಿದ್ದಾನೋ, **“ಯಃ ಸ್ತೂಯತೇ ಸ ದೇವಃ”** – ಯಾವನು ಮಾನವರೆಲ್ಲರ ಪ್ರಶಂಸೆಗೆ ಯೋಗ್ಯನಾಗಿದ್ದಾನೋ, ಯಾವನು ನಿಂದೆಗೆ ಯೋಗ್ಯನಲ್ಲವೋ.“ **ಯೋ ಮೋದಯತಿ ಸ ದೇವಃ”** – ಯಾವನು ಸ್ವತಃ ಆನಂದಸ್ವರೂಪನಾಗಿದ್ದು, ಅನ್ಯರಿಗೂ ಆನಂದ ನೀಡುತ್ತಾನೋ, ಯಾವನಿಗೆ ಲೇಶಮಾತ್ರವೂ ದುಃಖವಿಲ್ಲವೋ, **“ಯೋ ಮಾದ್ಯತಿ, ಸ ದೇವಃ”** ಯಾವನು ಸದಾ ಹರ್ಷಿತನೂ, ಶೋಕರಹಿತನೂ ಆಗಿದ್ದು, ಅನ್ಯರನ್ನು ಹರ್ಷಿತರನ್ನಾಗಿ ಮಾಡುವವನೂ ಮತ್ತು ದುಃಖಗಳಿಂದ ದೂರವಿಡುವವನೂ ಆಗಿದ್ದಾನೋ, **“ಯಃ ಸ್ವಾಪಯತಿ, ಸ ದೇವಃ”** – ಯಾವನು ಪ್ರಳಯಕಾಲದಲ್ಲಿ ಅವ್ಯಕ್ತದಲ್ಲಿ ಜೀವರನ್ನೆಲ್ಲಾ ನಿದ್ರಿತರನ್ನಾಗಿ ಮಾಡುತ್ತಾನೋ, **“ಯಃ ಕಾಮಯತೇ ಕಾಮ್ಯತೇ ವಾ ಸ ದೇವಃ”** ಯಾವ ಕಾಮನೆ ಗಳೆಲ್ಲಾ ಸತ್ಯವೋ ಮತ್ತು ಯಾವನ ಪ್ರಾಪ್ತಿಯ ಕಾಮನೆಯನ್ನು ಶಿಷ್ಟರೆಲ್ಲರೂ ಮಾಡುತ್ತಾರೋ, ಮತ್ತು– **“ಯೋ ಗಚ್ಛತಿ ಗಮ್ಯತೇ ವಾ ಸ ದೇವಃ”** ಯಾವನು ಎಲ್ಲದರಲ್ಲಿಯೂ ವ್ಯಾಪ್ತನಾಗಿದ್ದಾನೋ ಮತ್ತು ತಿಳಿಯಲರ್ಹನಾಗಿದ್ದಾನೋ, ಆ ಪರಮೇಶ್ವರನು ಈ ಎಲ್ಲಾ ಕಾರಣಗಳಿಂದ **‘ದೇವ’** ಎಂಬ ಹೆಸರನ್ನು ಹೊಂದಿದ್ದಾನೆ.

(೩೪) **ಕುವೇರ:** 'ಕುವಿ ಆಚ್ಛಾದನೇ' ಈ ಧಾತುವಿನಿಂದ 'ಕುವೇರ' ಶಬ್ದ ಸಿದ್ಧವಾಗುತ್ತದೆ. **"ಯಃ ಸರ್ವಂ ಕುವತಿ ಸ್ವವ್ಯಾಪ್ತ್ಯಾಽಚ್ಛಾದಯತಿ ಸ ಕುವೇರೋ ಜಗದೀಶ್ವರಃ"** ತನ್ನ ವ್ಯಾಪ್ತಿಯಿಂದ ಎಲ್ಲವನ್ನೂ ಆಚ್ಛಾದಿಸುವುದರಿಂದ ಆ ಪರಮೇಶ್ವರನ ಹೆಸರು **'ಕುವೇರ'**[೧] ಎಂದಾಗಿದೆ.

(೩೫) **ಪೃಥಿವೀ :** 'ಪ್ರಥ ವಿಸ್ತಾರೇ' ಈ ಧಾತುವಿನಿಂದ 'ಪೃಥಿವೀ' ಶಬ್ದ ವ್ಯುತ್ಪನ್ನವಾಗುತ್ತದೆ. **"ಯಃ ಪ್ರಥತೇ ಸರ್ವಜಗದ್ವಿಸ್ತೃಣಾತಿ ಸ ಪೃಥಿವಿ"** ಸಮಸ್ತ ವಿಸ್ತೃತ ಜಗತ್ತಿನ ವಿಸ್ತಾರ ಮಾಡುವವನಾದ ಕಾರಣ, ಆ ಪರಮೇಶ್ವರನ ಹೆಸರು **'ಪೃಥಿವೀ'** ಎಂದಾಗಿದೆ.

(೩೬) **ಜಲ :** "ಜಲಘಾತನೇ" ಎಂಬ ಧಾತುವಿನಿಂದ 'ಜಲ' ಶಬ್ದವ್ಯುತ್ಪನ್ನವಾಗಿದೆ. **"ಜಲತಿ ಘಾತಯತಿ ದುಷ್ಟಾನ್, ಸಂಘಾತಯತಿ ಅವ್ಯಕ್ತಪರಮಾಣ್ವಾದೀನ್ ತದ್ಬ್ರಹ್ಮ ಜಲಂ"** ದುಷ್ಟರನ್ನು ದಂಡಿಸುವವನೂ, ಅವ್ಯಕ್ತಪರಮಾಣು ಮೊದಲಾದುವುಗಳಲ್ಲಿ ಪರಸ್ಪರ ಸಂಯೋಗ–ವಿಯೋಗಗಳನ್ನು ಉಂಟುಮಾಡುವವನೂ ಆದ ಪರಮಾತ್ಮ **"ಜಲ"** ಎಂಬ ಸಂಜ್ಞೆಯುಳ್ಳವನಾಗಿದ್ದಾನೆ.

(೩೭) **ಆಕಾಶ :** "ಕಾಶೃದೀಪ್ತೌ" ಈ ಧಾತುವಿನಿಂದ 'ಆಕಾಶ' ಶಬ್ದವ್ಯುತ್ಪನ್ನವಾಗುತ್ತದೆ. **"ಯಃ ಸರ್ವತಃ ಸರ್ವಂ ಜಗತ್ ಪ್ರಕಾಶಯತಿ, ಸ ಆಕಾಶಃ"** ಎಲ್ಲೆಡೆಯಿಂದಲೂ ಜಗತ್ತಿನ ಪ್ರಕಾಶಕನಾಗಿರುವುದರಿಂದ ಆ ಪರಮಾತ್ಮನ ಹೆಸರು **"ಆಕಾಶ"** ಎಂದಾಗಿದೆ.

(೩೮) **ಅನ್ನ,** (೩೯) **ಅನ್ನಾದ,** (೪೦) **ಅತ್ತಾ**

"ಅದ ಭಕ್ಷಣೇ" – ಈ ಧಾತುವಿನಿಂದ 'ಅನ್ನ' ಶಬ್ದ ಸಿದ್ಧವಾಗುತ್ತದೆ.

**ಅದ್ಯತೇಽತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತೇ ॥ ೧ ॥**

**ಅಹಮನ್ನ ಮಹಮನ್ನ ಮಹಮನ್ನಂ। ಅಹಮನ್ನಾದೋಽಹ ಮನ್ನಾದೋಽಹಮನ್ನಾದಃ ॥ ೨॥** (ತೈತ್ತಿರೀಯ ಉಪ. ೨–೧೦)

**ಅತ್ತಾ ಚರಾಚರಗ್ರಹಣಾತ್ ॥೩॥** (ವೇದಾಂತ ದರ್ಶನ; ೧–೨–೯)

ಇದು ವ್ಯಾಸಮುನಿಕೃತ ಶಾರೀರಿಕಸೂತ್ರ. ಸರ್ವರೂ ತಮ್ಮ ಅಂತರದಲ್ಲಿಟ್ಟುಕೊಳ್ಳಲು, ಸರ್ವರೂ ಸ್ವೀಕರಿಸಲು ಯೋಗ್ಯನೂ, ಚರಾಚರ ಜಗತ್ತನ್ನು ಗ್ರಹಿಸುವವನೂ ಆಗಿರುವುದರಿಂದ ಈಶ್ವರನಿಗೆ 'ಅನ್ನ', 'ಅನ್ನಾದ' ಮತ್ತು 'ಅತ್ತಾ' ಎಂಬ ಹೆಸರುಗಳಿವೆ. ಇದರಲ್ಲಿ ಮೂರು ಸಾರಿ ಪುನರುಕ್ತವಾಗಿರುವುದು ಅದರಕ್ಕೋಸ್ಕರ. ಉದಾಹರಣೆಗೆ, ಅತ್ತಿಯ ಹಣ್ಣಿನಲ್ಲಿ ಕೃಮಿಗಳು ಹುಟ್ಟಿ, ಅದರಲ್ಲಿ ಇರುತ್ತವೆ: ಅದರಲ್ಲಿಯೇ ನಾಶವನ್ನೂ ಹೊಂದುತ್ತವೆ. ಪರಮೇಶ್ವರನಲ್ಲಿ ಸಂಪೂರ್ಣ ಜಗತ್ತಿನ ಸ್ಥಿತಿಯಾದರೂ ಹಾಗೆಯೇ ಇದೆ.

(೪೧) **ವಸು :** "ವಸ ನಿವಾಸೇ" ಎಂಬ ಧಾತುವಿನಿಂದ 'ವಸು' ಶಬ್ದ ಸಿದ್ಧವಾಗಿದೆ. **"ವಸಂತಿ ಭೂತಾನಿ ಯಸ್ಮಿನ್, ಅಥವಾ ಯಃ ಸರ್ವೇಷು ವಸತಿ ಸ ವಸುರೀಶ್ವರಃ"** ಆಕಾಶ ಮೊದಲಾದ ಸರ್ವಭೂತಗಳೂ ಅವನಲ್ಲಿಯೇ ನೆಲೆಸಿರುವುದರಿಂದ, ಅಥವಾ ಅವನು ಸರ್ವದರಲ್ಲಿಯೂ ವ್ಯಾಪಿಸುತ್ತಿರುವುದರಿಂದ ಆ ಪರಮೇಶ್ವರನ ಹೆಸರು **'ವಸು'** ಎಂದಾಗಿದೆ.

(೪೨) **ರುದ್ರ:** **"ರುಧಿರ್ ಅಶ್ರುವಿಮೋಚನೇ"** ಈ ಧಾತುವಿನಿಂದ 'ಣಿಚ್[೧]' ಪ್ರತ್ಯಯ ಪ್ರಯೋಗದಿಂದ 'ರುದ್ರ' ಶಬ್ದ ಸಿದ್ಧವಾಗುತ್ತದೆ. **"ಯೋ ರೋದಯತ್ಯನ್ಯಾಯಕಾರಿಣೋ ಜನಾನ್ ಸ ರುದ್ರಃ"** ದುಷ್ಟ ಕರ್ಮ ಮಾಡುವವರನ್ನು ಅಳಿಸುವವನಾದ ಕಾರಣ ಆ ಪರಮೇಶ್ವರನಿಗೆ **'ರುದ್ರ'** ಎಂಬ ಹೆಸರಿದೆ.

**ಯನ್ಮನಸಾ ಧ್ಯಾಯತಿ ತದ್ವಾಚಾ ವದತಿ,ಯದ್ವಾಚಾ ವದತಿ, ತತ್ಕರ್ಮಣಾ ಕರೋತಿ ಯತ್ಕರ್ಮಣಾ ಕರೋತಿ, ತದಭಿಸಂಪದ್ಯತೇ ।**

ಇದು ಯಜುರ್ವೇದ ಬ್ರಾಹ್ಮಣದ ವಚನ. ಜೀವನು ಮನಸ್ಸಿನಿಂದ ಯಾವುದನ್ನು ಧ್ಯಾನಿಸುತ್ತಾನೋ, ಅದನ್ನು ನಾಲಗೆಯಿಂದ ಆಡುತ್ತಾನೆ. ಯಾವುದನ್ನು ನಾಲಗೆಯಿಂದಾಡುತ್ತಾನೋ, ಅದನ್ನು ಕರ್ಮತಃ ಮಾಡುತ್ತಾನೆ. ಮತ್ತು ಕರ್ಮರೂಪವಾಗಿ ಯಾವುದನ್ನು ಮಾಡುತ್ತಾನೋ, ಅದನ್ನೇ ಪಡೆದುಕೊಳ್ಳುತ್ತಾನೆ. ಇದರಿಂದ ಸಿದ್ಧವಾದುದಾದರೂ ಏನು? ಯಾವ ಜೀವನು ಎಂತಹ ಕರ್ಮ ಮಾಡುತ್ತಾನೋ, ಅವನು ಅಂತಹ ಫಲವನ್ನು ಹೊಂದುತ್ತಾನೆ–ಎಂಬುದೇ. ಯಾವಾಗ

1. ಧಾತು ಪಾಠ ೧,೯೦. ಪವರ್ಗಾಂತರ್ಗತ ಪ್ರಕರಣದಲ್ಲಿ ಪಾಠವಿರುವುದರಿಂದ 'ಕುಬಿ' ಎಂಬ ಪಾಠ ನಿಶ್ಚಿತವಾಗಿದೆ. 'ಕುಮ್ಬೇರ್ನಲೋಪಶ್ಚ' ಉಣಾದಿ ಸೂತ್ರ [೧,೫೯] ನಲ್ಲೂ ಸಹ 'ಬ' ಸಾರ್ವತ್ರಿಕ ಪಾಠವಾಗಿದೆ. ದಂತ್ಯೋಷ್ಠ್ಯ 'ವಕಾರ' ಯುಕ್ತ 'ಕುವೇರ' ಪಾಠವು ಉಚ್ಚಾರಣಾ ದೋಷಜ ಭ್ರಷ್ಟಪಾಠವಾಗಿದೆ.

–ಯು.ಮೀ

ದುಷ್ಟಕರ್ಮ ಮಾಡುವ ಜೀವರು, ಈಶ್ವರನ ನ್ಯಾಯರೂಪೀ ವ್ಯವಸ್ಥೆಯಿಂದ, ದುಃಖರೂಪವಾದ ಫಲವನ್ನು ಪಡೆದುಕೊಳ್ಳುತ್ತಾರೋ, ಆಗ ಅಳುತ್ತಾರೆ. ಮತ್ತು ಇದೇ ರೀತಿ ಈಶ್ವರನು ಅವರನ್ನು ಅಳಿಸುತ್ತಾನೆ. ಈ ಕಾರಣದಿಂದ ಪರಮೇಶ್ವರನ ಹೆಸರು **'ರುದ್ರ'** – ಎಂದಾಗಿದೆ.

(೪೩) **ನಾರಾಯಣ : ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈನರಸೂನವಃ ।**
**ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥** (ಮನು :- ೧-೧೦)

ಜಲಕ್ಕೂ, ಮತ್ತು ಜೀವರಿಗೂ 'ನಾರಾ' ಎಂಬ ಹೆಸರಿದೆ. ಅದು, ಅವರು (ಜಲ ಮತ್ತು ಜೀವರು) ಅವನಿಗೆ 'ಅಯನ' ಎಂದರೆ ನಿವಾಸಸ್ಥಾನವಾಗಿರುವ ಕಾರಣ, ಸರ್ವಜೀವರಲ್ಲಿಯೂ ವ್ಯಾಪಕನಾದ ಆ ಪರಮಾತ್ಮನ ಹೆಸರು **'ನಾರಾಯಣ'** ಎಂದಾಗಿದೆ.

(೪೪) **ಚಂದ್ರ :** "ಚದಿ ಆಹ್ಲಾದೇ"–ಈ ಧಾತುವಿನಿಂದ 'ಚಂದ್ರ' ಶಬ್ದ ಸಿದ್ಧವಾಗಿದೆ. **"ಯಶ್ಚಂದತಿ, ಚಂದಯತಿ ವಾ ಸ ಚಂದ್ರಃ"** ಆನಂದಸ್ವರೂಪನೂ, ಸರ್ವರಿಗೂ ಆನಂದ ಕೊಡುವವನೂ ಆದ ಕಾರಣ ಈಶ್ವರನಿಗೆ **'ಚಂದ್ರ'** ಎಂಬ ಹೆಸರಿದೆ.

೦೦೦೦೦

(೪೬) **ಬುಧ** :– **"**ಬುಧ ಅವಗಮನೇ**"**– ಈ ಧಾತುವಿನಿಂದ 'ಬುಧ' ಶಬ್ದ ಸಿದ್ಧವಾಗುತ್ತದೆ. **"ಯೋ ಬುಧ್ಯ ತೇ, ಬೋಧಯತಿ ವಾ ಸ ಬುಧಃ"** ತಾನು ಸ್ವತಃ ಬೋಧಸ್ವರೂಪನೂ, ಮತ್ತು ಜೀವರೆಲ್ಲರ ಬೋಧಕ್ಕೆ ಕಾರಣನೂ ಆಗಿರುವುದರಿಂದ, ಆ ಪರಮೇಶ್ವರನಿಗೆ **'ಬುಧ'**– ಎಂಬ ಹೆಸರಿದೆ.

"ಬೃಹಸ್ಪತಿ" ಶಬ್ದದ ಅರ್ಥವನ್ನು ಹೇಳಿಯೇ ಇದ್ದೇವೆ.

(೪೭) **ಶುಕ್ರ** :– **"**ಈಶುಚಿರ್ ಪೂತಿಭಾವೇ**"** – ಈ ಧಾತುವಿನಿಂದ 'ಶುಕ್ರ' ಶಬ್ದ ಸಿದ್ಧವಾಗಿದೆ. **"ಯಃ ಶುಚ್ಯತಿ, ಶೋಚಯತಿ ವಾ ಸ ಶುಕ್ರಃ"** ಸ್ವತಃ ಅತ್ಯಂತ ಪವಿತ್ರನಾಗಿರುವುದರಿಂದ, ಮತ್ತು ಅವನ ಸಂಗದಿಂದ ಜೀವನೂ ಪವಿತ್ರನಾಗಿ ಹೋಗುವುದರಿಂದ ಈಶ್ವರನಿಗೆ **'ಶುಕ್ರ'** ಎಂಬ ಹೆಸರಿದೆ.

(೪೮) **ಶನೈಶ್ಚರ :** "ಚರ ಗತಿಭಕ್ಷಣಯೋಃ" – ಈ ಧಾತುವಿನಿಂದ, 'ಶನೈಸ್' ಎಂಬ ಅವ್ಯಯೋಪ ಪದದ ಸಂಯೋಜನದಿಂದ "ಶನೈಶ್ಚರ" ಶಬ್ದ ಸಿದ್ಧವಾಗಿದೆ. **"ಯಃ ಶನೈಶ್ಚರತಿ ಸ ಶನೈಶ್ಚರಃ"** ಸರ್ವರಲ್ಲಿಯೂ ಸಹಜವಾಗಿಯೇ ವ್ಯಾಪಕನಾಗಿ, ಧೈರ್ಯವಂತ[೨] ನಾಗಿರುವುದರಿಂದ ಆ ಪರಮೇಶ್ವರನಿಗೆ **"**ಶನೈಶ್ಚರ**"**– ಎಂಬ ಹೆಸರಿದೆ.

(೪೯) **ರಾಹು** : "ರಹತ್ಯಾಗೇ" ಈ ಧಾತುವಿನಿಂದ 'ರಾಹು' ಶಬ್ದ ಸಿದ್ಧವಾಗುತ್ತದೆ. **"ಯೋ ರಹತಿ ಪರಿತ್ಯಜತಿ ದುಷ್ಟಾನ್, ರಾಹಯತಿ ತ್ಯಾಜಯತಿ ವಾ ಸ ರಾಹುರೀಶ್ವರಃ"** – ಏಕಾಂತಸ್ವರೂಪನಾಗಿರುವುದರಿಂದ, ಅವನ ಸ್ವರೂಪದಲ್ಲಿ ಬೇರೆ ಪದಾರ್ಥ ಸಂಯುಕ್ತವಾಗದಿರುವುದರಿಂದ, ದುಷ್ಟರನ್ನು ತ್ಯಜಿಸುವವನೂ, ಅನ್ಯರನ್ನು ಬಿಡಿಸುವವನೂ ಆಗಿರುವುದರಿಂದ ಪರಮೇಶ್ವರನ ಹೆಸರು **"ರಾಹು"** ಎಂದಾಗಿದೆ.

(೫೦) **ಕೇತು** : **"**ಕಿತ ನಿವಾಸೇ ರೋಗಾಪನಯನೇ ಚ**"**. ಈ ಧಾತುವಿನಿಂದ 'ಕೇತು' ಶಬ್ದ ಸಿದ್ಧವಾಗುತ್ತದೆ. **"ಯಃ ಕೇತಯತಿ ಚಿಕಿತ್ಸತಿ ವಾ ಸ ಕೇತುರೀಶ್ವರಃ"** ಜಗತ್ತೆಲ್ಲದರ ನಿವಾಸಸ್ಥಾನವೂ, ಸರ್ವರೋಗರಹಿತನೂ, ಮತ್ತು ಮುಮುಕ್ಷುಗಳನ್ನು ಮುಕ್ತಿ ಸಮಯದಲ್ಲಿ ಸರ್ವರೋಗಗಳಿಂದ ಬಿಡುಗಡೆಮಾಡುವವನೂ ಆಗಿರುವುದರಿಂದ ಆ ಪರಮಾತ್ಮನ ಹೆಸರು **'ಕೇತು'**ವಾಗಿದೆ.

(೫೧) **ಯಜ್ಞ** : "ಯಜ ದೇವಪೂಜಾ ಸಂಗತಿಕರಣದಾನೇಷು." ಈ ಧಾತುವಿನಿಂದ 'ಯಜ್ಞ' ಶಬ್ದ ಸಿದ್ಧವಾಗುತ್ತದೆ. **"**ಯಜ್ಞೋ ವೈ ವಿಷ್ಣುಃ**"**[೩] – ಇದು ಬ್ರಾಹ್ಮಣ ಗ್ರಂಥದ ವಚನವಾಗಿದೆ. **"ಯೋ ಯಜತಿ, ವಿದ್ವದ್ಭಿರಿಜ್ಯತೇ ವಾ ಸ ಯಜ್ಞಃ"** –ಸರ್ವ ಜಗತ್ತಿನ ಪದಾರ್ಥಗಳನ್ನೂ ಸಂಯುಕ್ತಗೊಳಿಸುತ್ತಾನೆ; ವಿದ್ವಾಂಸರೆಲ್ಲರಿಗೂ ಪೂಜ್ಯನಾಗಿದ್ದಾನೆ; ಮತ್ತು ಬ್ರಹ್ಮನಿಂದ ಹಿಡಿದು ಸಮಸ್ತ ಋಷಿ–ಮುನಿಗಳಿಗೂ ಪೂಜ್ಯನಾಗಿದ್ದಾನೆ; ಆಗಿದ್ದಾನೆ ಮತ್ತು ಆಗಿರುವನು. ಆದುದರಿಂದ ಮತ್ತು ಅವನು ಸರ್ವತ್ರವ್ಯಾಪಕನಾಗಿರುವುದರಿಂದ ಆ ಪರಮಾತ್ಮನ ಹೆಸರು **'ಯಜ್ಞ'**ವಾಗಿದೆ.

---

೨. ಹೆಚ್ಚು ಕಡಿಮೆಯಿಲ್ಲದೆ, ಸದಾ ಒಂದೇ ರೀತಿಯಲ್ಲಿ ವರ್ತಿಸುವವನು. ಸಹಜವಾಗಿ ಏಕಪ್ರಕಾರ ಕ್ರಿಯಾಶಾಲಿ, –ಅನು
೩. ಶತಪಥ: ೧.೧.೮೮ –ಅನು

(೫೨) **ಹೋತಾ : "**ಹು ದಾನಾದನಯೋಃ: ಆದಾನೇ ಚೇತ್ಯೇಕೇ**"**. ಈ ಧಾತುವಿನಿಂದ '**ಹೋತಾ**' ಶಬ್ದ ಸಿದ್ಧವಾಗಿದೆ. **"ಯೋ ಜುಹೋತಿ, ಸ ಹೋತಾ"**. ಜೀವರಿಗೆ ಕೊಡಲು ಯೋಗ್ಯವಾದ ಪದಾರ್ಥಗಳ ದಾತೃವೂ, ಮತ್ತು ಗ್ರಹಿಸಲು ಯೋಗ್ಯವಾದುವುಗಳ ಗ್ರಾಹಕನೂ ಆಗಿರುವುದರಿಂದ, ಆ ಈಶ್ವರನ ಹೆಸರು **"ಹೋತಾ"** ಎಂದಾಗಿದೆ.

(೫೩) **ಬಂಧು :** "ಬಂಧ ಬಂಧನೇ" ಇದರಿಂದ 'ಬಂಧು' ಶಬ್ದ ಸಿದ್ಧವಾಗುತ್ತದೆ. **"ಯಃ ಸ್ವಸ್ಮಿನ್ ಚರಾಚರಂ ಜಗತ್ ಬಧ್ನಾತಿ, ಬಂಧುವದ್ಧರ್ಮಾತ್ಮನಾಂ ಸುಖಾಯ ಸಹಾಯೋ ವರ್ತತೇ ಸ ಬಂಧುಃ"** ಅವನು ತನ್ನಲ್ಲಿಯೇ ಸಮಸ್ತ ಲೋಕಲೋಕಾಂತರ ಗಳನ್ನೂ ನಿಯಮಗಳಿಂದ ಬದ್ಧವಾಗಿಟ್ಟಿದ್ದಾನೆ; ಮತ್ತು ಸೋದರನಂತೆ ಸಹಾಯಕನಾಗಿದ್ದಾನೆ. ಇದೇ ಕಾರಣದಿಂದ ಲೋಕ ಲೋಕಾಂತರಗಳು ತಮ್ಮ ತಮ್ಮ ಪರಿಧಿಗಳನ್ನು ಅಥವಾ ನಿಯಮಗಳನ್ನು ಉಲ್ಲಂಘಿಸಲಾರವು. ಸೋದರನು ಸೋದರರಿಗೆ ಸಹಾಯಕಾರಿಯಾಗಿರುವಂತೆ, ಪರಮೇಶ್ವರನೂ ಕೂಡ ಪೃಥಿವೀ–ಮೊದಲಾದ ಲೋಕಗಳನ್ನು ಧರಿಸಿರುವುದರಿಂದ, ರಕ್ಷಿಸುವುದರಿಂದ ಮತ್ತು ಸುಖ ಕೊಡುವುದರಿಂದ **"ಬಂಧು"** ಎಂಬ ಹೆಸರನ್ನು ಹೊಂದಿದ್ದಾನೆ.

(೫೪) **ಪಿತಾ :** "ಪಾ ರಕ್ಷಣೇ" ಈ ಧಾತುವಿನಿಂದ 'ಪಿತಾ' ಶಬ್ದ ಸಿದ್ಧವಾಗುತ್ತದೆ. **"ಯಃ ಪಾತಿ ಸರ್ವಾನ್ ಸ ಪಿತಾ"–** ತಂದೆಯು ತನ್ನ ಮಕ್ಕಳ ಬಗೆಗೆ ಸದಾ ಕೃಪಾಳುವಾಗಿ ಅವರ ಉನ್ನತಿಯನ್ನೇ ಬಯಸುವ ಹಾಗೆಯೇ, ಸರ್ವರ ರಕ್ಷಕನಾದ ಪರಮೇಶ್ವರನು ಸಮಸ್ತ ಜೀವರ ಉನ್ನತಿಯನ್ನು ಬಯಸುತ್ತಾನೆ. ಈ ಕಾರಣದಿಂದ ಅವನ ಹೆಸರು **"ಪಿತಾ"** ಆಗಿದೆ.

**ಪಿತಾಮಹ : "ಯಃ ಪಿತೄಣಾಂ ಪಿತಾ ಸ ಪಿತಾಮಹಃ"** ಅವನು ಪಿತೃಗಳಿಗೂ ಪಿತೃವಾಗಿದ್ದಾನೆ. ಈ ಕಾರಣದಿಂದ ಆ ಪರಮೇಶ್ವರನ ಹೆಸರು **"ಪಿತಾಮಹ"** ಎಂದಾಗಿದೆ.

**ಪ್ರಪಿತಾಮಹ : "ಯಃ ಪಿತಾಮಹಾನಾಂ ಪಿತಾ ಸ ಪ್ರಪಿತಾಮಹಃ"** ಅವನು ಪಿತಾಮಹರಿಗೂ ಪಿತೃವಾಗಿರುವುದರಿಂದ ಆ ಪರಮೇಶ್ವರನ ಹೆಸರು **"ಪ್ರಪಿತಾಮಹ"** ಎಂದಾಗಿದೆ.

(೫೫) **ಮಾತಾ: "ಯಃ ಮಿಮೇತೇ, ಮಾನಯತಿ ಸರ್ವಾನ್ ಜೀವಾನ್ ಸ ಮಾತಾ"** ಪೂರ್ಣಕೃಪಾಯುಕ್ತಳಾದ ಜನನಿಯು ತನ್ನ ಮಕ್ಕಳ ಸುಖ ಮತ್ತು ಉನ್ನತಿಯನ್ನು ಬಯಸುವಂತೆ, ಪರಮೇಶ್ವರನೂ ಕೂಡ, ಜೀವರೆಲ್ಲರ ವೃದ್ಧಿಯನ್ನು ಬಯಸುತ್ತಾನೆ. ಆದುದರಿಂದ ಪರಮೇಶ್ವರನ ಹೆಸರು **"ಮಾತಾ"** ಎಂದಾಗಿದೆ.

(೫೬) **ಆಚಾರ್ಯ: "ಚರ ಗತಿಭಕ್ಷಣಯೋಃ"**, '**ಆಜ್**' ಪೂರ್ವಕವಾದ ಈ ಧಾತುವಿನಿಂದ "ಆಚಾರ್ಯ" ಶಬ್ದ ಸಿದ್ಧವಾಗುತ್ತದೆ. **"ಯ ಆಚಾರಂ ಗ್ರಾಹಯತಿ, ಸರ್ವವಿದ್ಯಾ ಬೋಧಯತಿ ಸ ಆಚಾರ್ಯ ಈಶ್ವರಃ"** – ಸತ್ಯಮಯವಾದ ಆಚಾರವನ್ನು ಉಂಟುಮಾಡುವವನೂ ಹಾಗೂ ಸಮಸ್ತ ವಿದ್ಯೆಗಳ ಪ್ರಾಪ್ತಿಗೆ ಕಾರಣನಾಗಿ, ಸರ್ವವಿದ್ಯೆಗಳನ್ನೂ ಪ್ರಾಪ್ತ ಮಾಡಿಸುವವನೂ ಆಗಿರುವ ಕಾರಣ, ಪರಮೇಶ್ವರನ ಹೆಸರು **"ಆಚಾರ್ಯ"** ಎಂದಾಗಿದೆ.

(೫೭) **ಗುರು :** "ಗೃಶಬ್ದೇ" ಈ ಧಾತುವಿನಿಂದ 'ಗುರು' ಶಬ್ದ ನಿಷ್ಪನ್ನವಾಗಿದೆ **"ಯೋ ಧರ್ಮ್ಯಾನ್ ಶಬ್ದಾನ್ ಗೃಣಾತ್ಯುಪದಿಶತಿ ಸ ಗುರುಃ"**

**ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ ।** (ಯೋಗಸೂತ್ರ:– ೧–೨೬)

**ಗುರು :** ಇದು ಯೋಗಸೂತ್ರ. ಅವನು ಸತ್ಯಧರ್ಮಪ್ರತಿಪಾದಕವಾದ ಸಕಲ ವಿದ್ಯಾಯುಕ್ತ ವೇದಗಳನ್ನು ಉಪದೇಶಿ ಸುತ್ತಾನೆ: ಸೃಷ್ಟಿಯ ಪ್ರಾರಂಭದಲ್ಲಿ ಅಗ್ನಿ, ವಾಯು, ಆದಿತ್ಯ, ಅಂಗಿರಾ ಹಾಗೂ ಬ್ರಹ್ಮ – ಮೊದಲಾದ ಗುರುಗಳಿಗೂ ಗುರು ವಾಗಿದ್ದಾನೆ ಮತ್ತು ಅವನು ಎಂದಿಗೂ ನಾಶ ಹೊಂದುವುದಿಲ್ಲ. ಆದುದರಿಂದ ಆ ಪರಮೇಶ್ವರನ ಹೆಸರು **'ಗುರು'** ಎಂದಾಗಿದೆ.

(೫೮)**ಅಜ :** "ಅಜ ಗತಿಕ್ಷೇಪಣಯೋಃ", **"**ಜನೀ ಪ್ರಾದುರ್ಭಾವೇ**"** ಈ ಧಾತುಗಳಿಂದ 'ಅಜ' ಶಬ್ದ ರೂಪಗೊಳ್ಳುತ್ತದೆ. **"ಯೋಽಜತಿ ಸೃಷ್ಟಿಂ ಪ್ರತಿ ಸರ್ವಾನ್ ಪ್ರಕೃತ್ಯಾದೀನ್ ಪದಾರ್ಥಾನ್ ಪ್ರಕ್ಷಿಪತಿ, ಜಾನಾತಿ ವಾ, ಕದಾಚಿನ್ನಜಾಯತೇ ಸೋಽಜಃ"** ಪ್ರಕೃತಿಯ ಸಮಸ್ತ ಅವಯವಗಳಾದ ಆಕಾಶ ಮೊದಲಾದ ಭೂತಗಳನ್ನೂ, ಪರಮಾಣುಗಳನ್ನೂ ಯೋಗ್ಯ ಕ್ರಮದಲ್ಲಿ ಸೇರಿಸುತ್ತಾನೆ; ಶರೀರಗಳೊಂದಿಗೆ ಜೀವರ ಸಂಬಂಧವನ್ನುಂಟುಮಾಡಿ ಜನ್ಮಕೊಡುತ್ತಾನೆ ಹಾಗೂ ಸ್ವತಃ ಎಂದಿಗೂ ಜನ್ಮವೆತ್ತುವುದಿಲ್ಲ. ಈ ಕಾರಣದಿಂದ ಆ ಈಶ್ವರನ ಹೆಸರು **'ಅಜ'** ಎಂದಾಗಿದೆ.

**ಬ್ರಹ್ಮಾ:** “ಬೃಹ ಬೃಹಿ ವೃದ್ಧೌ” ಈ ಧಾತುಗಳಿಂದ “ಬ್ರಹ್ಮಾ” ಎಂಬ ಶಬ್ದ ಸಿದ್ಧವಾಗುತ್ತದೆ. **“ಯೋಽಖಿಲಂ ಜಗನ್ನಿರ್ಮಾಣೇನ ಬೃಂಹತಿ, ವರ್ಧಯತಿ ಸ ಬ್ರಹ್ಮಾ”** ಸಂಪೂರ್ಣ ಜಗತ್ತನ್ನು ರಚಿಸಿ, ವರ್ಧಿಸುತ್ತಾನೆ: ಆದ ಕಾರಣ ಪರಮೇಶ್ವರನ ಹೆಸರು **“ಬ್ರಹ್ಮಾ”** ಎಂದಾಗಿದೆ.

(೫೯) **ಸತ್ಯ : “ಸತ್ಯಂ ಜ್ಞಾನಮನಂತಂ ಬ್ರಹ್ಮ”** ಇದು ತೈತ್ತಿರೀಯೋಪನಿಷದ್ವಚನ.[೪] (ಬ್ರಹ್ಮ-೧) **“ಸಂತೀತಿ ಸಂತಸ್ತೇಷು ಸತ್ಸು ಸಾಧು ತತ್ಸತ್ಯಂ. ಯಜ್ಞಾನಾತಿ ಚರಾಚರಂ ಜಗತ್ತಜ್ಞಾನಂ ನ ವಿದ್ಯತೇಽತೋವಧಿರ್ಮರ್ಯಾದಾ ಯಸ್ಯ ತದನಂತಂ. ಸರ್ವೇಭ್ಯೋ ಬೃಹತ್ತ್ವಾದ್ಬ್ರಹ್ಮ”** ಇರುವ ವಸ್ತುಗಳನ್ನು ‘ಸತ್’ ಎನ್ನುತ್ತಾರೆ. ಅವುಗಳಲ್ಲಿ ಸಾಧುವಾಗಿರುವುದರಿಂದ, ಪರಮೇಶ್ವರನ ಹೆಸರು **“ಸತ್ಯ”** ಎಂದಿದೆ.

(೬೦) **ಜ್ಞಾನ** : ಸಮಸ್ತ ಜಗತ್ತನ್ನೂ ತಿಳಿಯುತ್ತಾನೆ; ಆದಕಾರಣ ಪರಮೇಶ್ವರನ ಹೆಸರು **‘ಜ್ಞಾನ’**ವಾಗಿದೆ.

(೬೧) **ಅನಂತ:** – ಯಾವನಿಗೆ ಅಂತ, ಅವಧಿ, ಮರ್ಯಾದೆ, ಎಂದರೆ ‘ಇಷ್ಟು ಉದ್ದ , ಅಗಲ, ಚಿಕ್ಕವನು, ದೊಡ್ಡವನು – ಎನ್ನುವ ಪರಿಮಾಣವಿಲ್ಲವೋ, ಆ ಪರಮೇಶ್ವರನ ಹೆಸರು **‘ಅನಂತ’** ಎಂದಾಗಿದೆ.

(೬೨) **ಅನಾದಿ** : “ಡುದಾಞ್ ದಾನೇ” ಈ ಧಾತುವಿನಿಂದ ‘ಆಙ್ ‘ಪೂರ್ವಕವಾಗಿ ‘ಆದಿ’ ಶಬ್ದವೂ ಹಾಗೂ ‘ನಞ್’ ಪೂರ್ವಕ ‘ಅನಾದಿ’ ಶಬ್ದವೂ ಸಿದ್ಧವಾಗುತ್ತದೆ. **“ಯಸ್ಮಾತ್ ಪೂರ್ವಂ ನಾಸ್ತಿ, ಪರಂ ಚಾಸ್ತಿ, ಸ ಆದಿರಿತ್ಯುಚ್ಯತೇ”**. (ಮಹಾಭಾಷ್ಯ:- ೧-೧-೨೧) **“ನ ವಿದ್ಯತೇ ಆದಿಃ ಕಾರಣಂ ಯಸ್ಯ ಸೋಽನಾದಿರೀವಶ್ವರಃ”** ಯಾವುದಕ್ಕಿಂತ ಮೊದಲು ಏನೂ ಇಲ್ಲವೋ ಮತ್ತು ಆ ಮೇಲೆ (ಏನಾದರೂ) ಇರುವುದೋ, ಅದನ್ನು **“ಆದಿ”** ಎನ್ನುತ್ತಾರೆ. ಅವನಿಗೆ ಆದಿ ಕಾರಣ ಯಾವುದೂ ಇಲ್ಲ. ಆದ ಕಾರಣ ಪರಮಾತ್ಮನ ಹೆಸರು **‘ಅನಾದಿ’** ಎಂದಾಗಿದೆ.

(೬೩) **ಆನಂದ** : “ಟುನದಿ ಸಮೃದ್ಧೌ” ‘ಆಙ್’ ಪೂರ್ವಕವಾದ ಈ ಧಾತುವಿನಿಂದ ‘ಆನಂದ’ ಶಬ್ದ ಉತ್ಪನ್ನವಾಗುತ್ತದೆ. **“ಆನಂದಂತಿ ಸರ್ವೇ ಮುಕ್ತಾ ಯಸ್ಮಿನ್, ಯದ್ವಾ ಯಃ ಸರ್ವಾನ್ ಜೀವಾನಾನಂದಯತಿ, ಸ ಆನಂದಃ”** ಯಾವನು ಆನಂದ ಸ್ವರೂಪನಾಗಿದ್ದನೋ, ಯಾವನಲ್ಲಿ ಸಮಸ್ತ ಮುಕ್ತಜೀವರೂ ಆನಂದವನ್ನು ಗಳಿಸುತ್ತಾರೋ ಮತ್ತು ಯಾವನು ಧರ್ಮಾತ್ಮರಾದ ಜೀವರನ್ನು ಆನಂದಯುಕ್ತರನ್ನಾಗಿ ಮಾಡುತ್ತಾನೋ, ಆ ಈಶ್ವರನ ಹೆಸರು **‘ಆನಂದ’** ಎಂದಾಗಿದೆ.

(೬೪) **ಸ ತ್:** “ಅಸ್ ಭುವಿ” ಈ ಧಾತುವಿನಿಂದ, ‘ಸತ್’ ಶಬ್ದ ಸಿದ್ಧವಾಗುತ್ತದೆ. **“ಯದಸ್ತಿ ತ್ರಿಷು ಕಾಲೇಷು, ನ ಬಾಧ್ಯತೇ, ತತ್ಸತ್ ಬ್ರಹ್ಮ”**. ಯಾವನು ಸದಾ ಇರುತ್ತಾನೋ, ಎಂದರೆ- ಭೂತ- ಭವಿಷ್ಯತ್- ವರ್ತಮಾನ ಕಾಲಗಳಲ್ಲಿ ಯಾವನಿಗೆ ‘ಬಾಧ’ (ವಿಚ್ಛೇದ, ಇರದಿರುವಿಕೆ) ಇಲ್ಲವೋ, ಆ ಪರಮೇಶ್ವರನನ್ನು **‘ಸ ತ್’** ಎನ್ನುತ್ತಾರೆ.

(೬೫) **ಚಿತ್:** “ಚಿತೀ ಸಂಜ್ಞಾನೇ”- ಈ ಧಾತುವಿನಿಂದ ‘ಚಿತ್’ ಶಬ್ದ ಸಿದ್ಧವಾಗುತ್ತದೆ. **“ಯಶ್ಚೇತತಿ, ಚೇತಯತಿ, ಸಂಜ್ಞಾಪಯತಿ ಸರ್ವಾನ್ ಸಜ್ಜನಾನ್ ಯೋಗಿನಸ್ತಚ್ಚಿತ್ಪರಂ ಬ್ರಹ್ಮ”** – ಅವನು ಚೇತನಸ್ವರೂಪನೂ, ಸಮಸ್ತ ಜೀವರನ್ನೂ ಎಚ್ಚರಿಸುವವನೂ, ಮತ್ತು ಸತ್ಯಾಸತ್ಯಗಳನ್ನು ತಿಳಿಸುವವನೂ ಆಗಿದ್ದಾನೆ. ಆದುದರಿಂದ ಆ ಪರಮಾತ್ಮನ ಹೆಸರು **‘ಚಿ ತ್’** ಎಂದಾಗಿದೆ. ಈ ಮೂರು ಶಬ್ದಗಳ ವಿಶೇಷಣಗಳಿರುವುದರಿಂದ ಪರಮೇಶ್ವರನನ್ನು **“ಸಚ್ಚಿದಾನಂದಸ್ವರೂಪ”** ಎನ್ನುತ್ತಾರೆ.

(೬೬) **ನಿತ್ಯ : “ಯೋ ನಿತ್ಯೋ ಧ್ರುವೋಽಚಲೋಽವಿನಾಶೀ ಸ ನಿತ್ಯಃ”** ಯಾವನು ನಿಶ್ಚಲನೂ, ಅವಿನಾಶಿಯೂ ಆಗಿದ್ದಾನೋ, ಆ ಈಶ್ವರನು **“ನಿತ್ಯ”** ಎಂಬ ಶಬ್ದದಿಂದ ನಿರ್ದಿಷ್ಟನಾಗಿದ್ದಾನೆ.

(೬೭) **ಶುದ್ಧ** : “ಶುಂಧ ಶುದ್ಧೌ” ಎಂಬುದರಿಂದ ‘ಶುದ್ಧ’ ಶಬ್ದ ಸಿದ್ಧವಾಗುತ್ತದೆ. **“ಯಃ ಶುಂಧತಿ ಸರ್ವಾನ್, ಶೋಧಯತಿ ವಾ, ಸ ಶುದ್ಧ ಈಶ್ವರಃ”** ಯಾವನು ಸ್ವತಃ ಪವಿತ್ರನೂ, ಸಮಸ್ತ ಅಶುದ್ಧಿಗಳಿಂದ ಬೇರೆಯಿರುವವನೂ ಮತ್ತು ಎಲ್ಲರನ್ನೂ ಶುದ್ಧಗೊಳಿಸುವವನೂ ಆಗಿದ್ದಾನೋ, ಆ ಈಶ್ವರನ ಹೆಸರು **‘ಶುದ್ಧ’** ಎಂದಾಗಿದೆ.

(೬೮) **ಬುದ್ಧ** : “ಬುಧ ಅವಗಮನೇ” ಈ ಧಾತುವಿನಿಂದ, ‘ಕ್ತ’ ಪ್ರತ್ಯಯ ಪ್ರಯೋಗದಿಂದ **‘ಬುದ್ಧ’** ಎಂಬ ಶಬ್ದ ಸಿದ್ಧವಾಗುತ್ತದೆ. **“ಯೋ ಬುದ್ಧವಾನ್, ಸದೈವ ಜ್ಞಾತಾಸ್ತಿ ಸ ಬುದ್ಧೋ ಜಗದೀಶ್ವರಃ”** ಸದಾ ಸರ್ವಜ್ಞನಾಗಿರುವುದರಿಂದ, ಈಶ್ವರನ

---

೪. ಬ್ರಹ್ಮಾನಂದವಲ್ಲೀ-೧ -ಅನು ಮಹಾಭಾಷ್ಯ: ೧-೧-೨೧

ಹೆಸರು **"ಬುದ್ಧ"** ಎಂದಾಗಿದೆ.

(೧೯) **ಮುಕ್ತ :** **"ಮುಚ್ಛ್ಲೃಮೋಚನೇ"** – ಈ ಧಾತುವಿನಿಂದ, **'ಮುಕ್ತ'** ಶಬ್ದ ಸಿದ್ಧವಾಗುತ್ತದೆ. **"ಯೋ ಮುಂಚತಿ, ಮೋಚಯತಿ ವಾ ಮುಮುಕ್ಷೂನ್, ಸ ಮುಕ್ತೋ ಜಗದೀಶ್ವರಃ"** ಯಾವನು ಸರ್ವದಾ ಅಶುದ್ಧಿಗಳಿಂದ ಬೇರೆಯಾಗಿರುತ್ತಾನೋ, ಮತ್ತು ಸರ್ವ ಮುಮುಕ್ಷುಗಳನ್ನೂ ಕ್ಲೇಶದಿಂದ ಬಿಡುಗಡೆ ಮಾಡುತ್ತಾನೋ, ಆ ಪರಮಾತ್ಮನ ಹೆಸರು **"ಮುಕ್ತ"** ಎಂದಾಗಿದೆ. **"ಅತ ಏವ ನಿತ್ಯಶುದ್ಧಬುದ್ಧಮುಕ್ತ ಸ್ವಭಾವೋ ಜಗದೀಶ್ವರಃ"** ಇದೇ ಕಾರಣದಿಂದ ಪರಮೇಶ್ವರನ ಸ್ವಭಾವ ನಿತ್ಯ ಶುದ್ಧ ಬುದ್ಧ– ಮುಕ್ತವಾಗಿದೆ.

(೨೦) **ನಿರಾಕಾರ :** 'ನಿರ್' ಹಾಗೂ 'ಆಙ್' ಪೂರ್ವಕವಾಗಿ **"ಡುಕೃಞ್ ಕರಣೇ"** ಈ ಧಾತುವಿನಿಂದ 'ನಿರಾಕಾರ' ಶಬ್ದ ಸಿದ್ಧವಾಗುತ್ತದೆ. **"ನಿರ್ಗತ ಆಕಾರಾತ್ ಸ ನಿರಾಕಾರಃ"** ಯಾವನಿಗೆ ಯಾವುದೇ ಆಕಾರವೂ ಇಲ್ಲವೋ, ಮತ್ತು ಯಾವನು ಎಂದಿಗೂ ಶರೀರ ಧಾರಣ ಮಾಡುವುದಿಲ್ಲವೋ, ಆ ಪರಮೇಶ್ವರನ ಹೆಸರು **'ನಿರಾಕಾರ'**ವಾಗಿದೆ.

(೨೧) **ನಿರಂಜನ :** "ಅಂಜೂ ವ್ಯಕ್ತಿಮ್ಲಕ್ಷಣಕಾಂತಿಗತಿಷು" ಈ ಧಾತುವಿನಿಂದ 'ಅಂಜನ' ಶಬ್ದವೂ ಮತ್ತು 'ನಿರ್' ಉಪಸರ್ಗದ ಯೋಗದಿಂದ 'ನಿರಂಜನ' ಶಬ್ದವೂ ಸಿದ್ಧವಾಗುತ್ತದೆ. **"ಅಂಜನಂ ವ್ಯಕ್ತಿಃ ಮ್ಲಕ್ಷಣಂ ಕುಕಾಮಃ, ಇಂದ್ರಿಯೈಃ ಪ್ರಾಪ್ತಿಃ ಚೇತಿ ಅಸ್ಮಾದ್ಯೋ ನಿರ್ಗತಃ ಪೃಥಗ್ಭೂತಃ ಸ ನಿರಂಜನಃ"**– ವ್ಯಕ್ತಿಃ – ಎಂದರೆ ಆಕೃತಿ, ಮ್ಲೇಚ್ಛಾಚಾರ, ದುಷ್ಟಕಾಮನೆ ಮತ್ತು ನೇತ್ರ ಮೊದಲಾದ ಇಂದ್ರಿಯಗಳ ವಿಷಯಗಳ ಪಥದಿಂದ ಬೇರೆಯಿದ್ದಾನೆ; ಆದುದರಿಂದ ಈಶ್ವರನ ಹೆಸರು **"ನಿರಂಜನ"**– ಎಂದಾಗಿದೆ.

(೨೨) **ಗಣೇಶ :** "ಗಣ ಸಂಖ್ಯಾನೇ" ಈ ಧಾತುವಿನಿಂದ 'ಗಣ' ಶಬ್ದ ಸಿದ್ಧವಾಗುತ್ತದೆ. ಮತ್ತು ಇದರ ಮುಂದೆ 'ಈಶ' ಹಾಗೂ 'ಪತಿ' ಶಬ್ದವನ್ನು ಇಡುವುದರಿಂದ 'ಗಣೇಶ' ಮತ್ತು 'ಗಣಪತಿ' ಶಬ್ದಗಳು ಸಿದ್ಧವಾಗುತ್ತವೆ. **"ಯೇ ಪ್ರಕೃತ್ಯಾದಯೋ ಜಡಾ ಜೀವಾಶ್ಚ ಗಣ್ಯಂತೇ ಸಂಖ್ಯಾಯಂತೇ ತೇಷಾಮೀಶಃ ಸ್ವಾಮೀ ಪತಿಃ ಪಾಲಕೋ ವಾ"** ಯಾವ ಪ್ರಕೃತಿ ಮೊದಲಾದ ಜಡಗಳಿವೆಯೋ, ಅವುಗಳ ಮತ್ತು ಸಮಸ್ತ ಜೀವರೆಂಬ ಪ್ರಖ್ಯಾತ ಪದಾರ್ಥಗಳೆಲ್ಲದರ ಸ್ವಾಮಿಯೂ ಮತ್ತು ಪಾಲನಮಾಡುವವನೂ ಆಗಿರುವುದರಿಂದ ಆ ಈಶ್ವರನ ಹೆಸರು **'ಗಣೇಶ'** ಮತ್ತು **'ಗಣಪತಿ'** ಎಂದಾಗಿದೆ.

(೨೩) **ವಿಶ್ವೇಶ್ವರ :** **"ಯೋ ವಿಶ್ವಮೀಷ್ಟೇ ಸ ವಿಶ್ವೇಶ್ವರಃ"** ಜಗತ್ತಿನ ಅಧಿಷ್ಠಾತೃವಾಗಿರುವುದರಿಂದ ಆ ಪರಮೇಶ್ವರನ ಹೆಸರು **'ವಿಶ್ವೇಶ್ವರ'** ಎಂದಾಗಿದೆ.

(೨೪) **ಕೂಟಸ್ಥ :** **"ಯಃ ಕೂಟೇಽನೇಕವಿಧವ್ಯವಹಾರೇ ಸ್ವಸ್ವ ರೂಪೇಣೈವ ತಿಷ್ಠತಿ, ಸ ಕೂಟಸ್ಥಃ ಪರಮೇಶ್ವರ"** ಸರ್ವ ವ್ಯವಹಾರಗಳಲ್ಲಿಯೂ ವ್ಯಾಪ್ತನೂ ಮತ್ತು ಸಮಸ್ತವ್ಯವಹಾರಗಳಿಗೂ ಆಧಾರನೂ ಆಗಿದ್ದರೂ ಕೂಡ, ಯಾವ ವ್ಯವಹಾರ ದಲ್ಲಿಯೂ ತನ್ನ ಸ್ವರೂಪವನ್ನು ಪರಿವರ್ತಿಸಿಕೊಳ್ಳುವುದಿಲ್ಲವಾದುದರಿಂದ ಪರಮೇಶ್ವರನ ಹೆಸರು **'ಕೂಟಸ್ಥ'** ಎಂದಾಗಿದೆ.

**ದೇವೀ :** 'ದೇವ' ಶಬ್ದಕ್ಕೆ ಎಷ್ಟು ಅರ್ಥಗಳನ್ನು ಬರೆದಿದ್ದೇವೋ, ಅಷ್ಟೇ ಅರ್ಥಗಳು **'ದೇವೀ'** ಶಬ್ದಕ್ಕೂ ಇವೆ.

ಪರಮೇಶ್ವರನ ಹೆಸರುಗಳು ಮೂರು ಲಿಂಗಗಳಲ್ಲಿಯೂ ಇವೆ. ಉದಾಹರಣೆಗೆ "ಬ್ರಹ್ಮಚಿತಿರೀಶ್ವರಶ್ಚೇತಿ". ಈಶ್ವರನ ಹೆಸರು ವಿಶೇಷಣವಾದಾಗ **'ದೇವ'** ಎಂದೂ, 'ಚಿತಿ'ಯ ವಿಶೇಷಣವಾದಾಗ **'ದೇವೀ'** ಎಂದೂ ಆಗುತ್ತದೆ. ಆದುದರಿಂದ ಈಶ್ವರನ ಹೆಸರು **'ದೇವೀ'** ಎಂದಾಗಿದೆ.

(೨೫) **ಶಕ್ತಿ :** **"ಶಕ್ಲೃ ಶಕ್ತೌ"** – ಈ ಧಾತುವಿನಿಂದ **'ಶಕ್ತಿ'** ಶಬ್ದ ಉಂಟಾಗುತ್ತದೆ. **"ಯಃ ಸರ್ವಂ ಜಗತ್ ಕರ್ತುಂಶಕ್ನೋತಿ ಸ ಶಕ್ತಿಃ"**–ಸಮಸ್ತ ಜಗತ್ತನ್ನೂ ನಿರ್ಮಿಸುವುದರಲ್ಲಿ ಸಮರ್ಥನಾಗಿದ್ದಾನೆ; ಆದುದರಿಂದ ಆ ಪರಮೇಶ್ವರನ ಹೆಸರು **'ಶಕ್ತಿ'** ಎಂದಾಗಿದೆ.

(೨೬) **ಶ್ರೀ :** **"ಶ್ರಿ ಇಞ್ ಸೇವಾಯಾಂ"**– ಈ ಧಾತುವಿನಿಂದ **"ಶ್ರೀ"** ಶಬ್ದ ಸಿದ್ಧವಾಗುತ್ತದೆ. **"ಯಃ ಶ್ರೀಯತೇ ಸೇವ್ಯತೇ ಸರ್ವೇಣ ಜಗತಾ ವಿದ್ವದ್ಭಿರ್ಯೋಗಿಭಿಶ್ಚ ಸ ಶ್ರೀರೀಶ್ವರಃ"** ಯಾವನ ಸೇವನವನ್ನು (ಭಕ್ತಿಭಾವದಿಂದ ಭಜನವನ್ನು) ಸಮಸ್ತ ಜಗತ್ತೂ, ವಿದ್ವಾಂಸರೂ ಮತ್ತು ಯೋಗಿಜನರೂ ಮಾಡುತ್ತಾರೋ, ಆ ಪರಮಾತ್ಮನ ಹೆಸರು **"ಶ್ರೀ"** ಎಂದಾಗಿದೆ.

(೨೭) **ಲಕ್ಷ್ಮೀ :** "ಲಕ್ಷ ದರ್ಶನಾಂಕನಯೋಃ" ಈ ಧಾತುವಿನಿಂದ ಲಕ್ಷ್ಮೀ ಶಬ್ದ ಸಿದ್ಧವಾಗುತ್ತದೆ. **"ಯೋ ಲಕ್ಷಯತಿ ಪಶ್ಯತ್ಯಂಕತೇ ಚಿಹ್ನಯತಿ ಚರಾಚರಂ ಜಗದಥವಾ ವೇದೈರಾಪ್ತೈರ್ಯೋಗಿಭಿಶ್ಚ ಯೋ ಲಕ್ಷ್ಯತೇ ಸ ಲಕ್ಷ್ಮೀಃ ಸರ್ವಪ್ರಿಯೇಶ್ವರಃ"** ಯಾವನು ಸಮಸ್ತ ಚರಾಚರ ಜಗತ್ತನ್ನೂ ನೋಡುತ್ತಾನೋ, ಅದನ್ನು ಚಿಹ್ನಿತವಾಗಿ, ಎಂದರೆ, ಶರೀರಕ್ಕೆ ಕಣ್ಣು, ಮೂಗು ಮತ್ತು ವೃಕ್ಷಕ್ಕೆ ಎಲೆ, ಹೂವು, ಹಣ್ಣು, ಬೇರು, ಪೃಥಿವೀ ಮತ್ತು ಜಲಕ್ಕೆ ಕಪ್ಪು, ಕೆಂಪು, ಬಿಳಿ, ಮಣ್ಣು, ಕಲ್ಲು, ಚಂದ್ರ, ಸೂರ್ಯ ಮೊದಲಾದ

ಚಿಹ್ನೆಗಳನ್ನು ರಚಿಸುವಂತೆ, ದೃಶ್ಯವನ್ನಾಗಿ ಮಾಡುತ್ತಾನೋ ಮತ್ತು ಎಲ್ಲವನ್ನೂ ನೋಡುತ್ತಾನೋ, ಯಾವನು ಸೌಂದರ್ಯವೆಲ್ಲದಕ್ಕೂ ಸೌಂದರ್ಯವಾಗಿದ್ದಾನೋ, ಹಾಗು ಯಾವನು ವೇದಾದಿ ಶಾಸ್ತ್ರಗಳಿಗೂ, ಮತ್ತು ಧಾರ್ಮಿಕರೂ, ವಿದ್ವಾಂಸರೂ ಆದ ಯೋಗಿಗಳಿಗೂ ಲಕ್ಷ್ಯ– ಎಂದರೆ ನೋಡಲರ್ಹನಾಗಿದ್ದಾನೋ, ಆ ಪರಮೇಶ್ವರನ ಹೆಸರು **"ಲಕ್ಷ್ಮೀ"** ಎಂದಾಗಿದೆ.

(೭೮) **ಸರಸ್ವತೀ :** "ಸೃ ಗತೌ"– ಈ ಧಾತುವಿನಿಂದ 'ಸರಸ್', ಅದಕ್ಕೆ 'ಮತುಪ್' ಮತ್ತು 'ಙೀಪ್' ಪ್ರತ್ಯಯ ಪ್ರಯೋಗದಿಂದ 'ಸರಸ್ವತೀ' ಶಬ್ದ ಸಿದ್ಧವಾಗುತ್ತದೆ. **"ಸರೋ ವಿವಿಧಂ ಜ್ಞಾನಂ ವಿದ್ಯತೇ ಯಸ್ಯಾಂ ಚಿತೌ ಸಾ ಸರಸ್ವತೀ."** ಅವನಿಗೆ ವಿವಿಧ ವಿಜ್ಞಾನಗಳು, ಎಂದರೆ– ಶಬ್ದ – ಅರ್ಥ–ಸಂಬಂಧ– ಪ್ರಯೋಗಜ್ಞಾನವು ಯಥಾವತ್ತಾಗಿರುವುದರಿಂದ ಆ ಪರಮೇಶ್ವರನ ಹೆಸರು **'ಸರಸ್ವತೀ'** ಎಂದಾಗಿದೆ.

(೭೯) **ಸರ್ವಶಕ್ತಿಮಾನ್ : "ಸರ್ವಾಃಶಕ್ತಯೋ ವಿದ್ಯಂತೇ ಯಸ್ಮಿನ್, ಸ ಸರ್ವಶಕ್ತಿಮಾನೀಶ್ವರಃ"**– ಅವನು ತನ್ನ ಕಾರ್ಯ ಮಾಡುವಲ್ಲಿ ಬೇರೆ ಯಾವನ ಸಹಾಯವನ್ನೂ ಇಚ್ಛಿಸುವುದಿಲ್ಲ; ತನ್ನದೇ ಸಾಮರ್ಥ್ಯದಿಂದ ತನ್ನ ಎಲ್ಲ ಕಾರ್ಯಗಳನ್ನೂ ಪೂರ್ತಿಮಾಡಿಕೊಳ್ಳುತ್ತಾನೆ; ಆದುದರಿಂದ ಆ ಪರಮಾತ್ಮನ ಹೆಸರು **'ಸರ್ವಶಕ್ತಿಮಾನ್'** ಎಂದಾಗಿದೆ.

(೮೦) **ನ್ಯಾಯಕಾರಿ :** "ಣೀಞ್ ಪ್ರಾಪಣೇ" – ಈ ಧಾತುವಿನಿಂದ 'ನ್ಯಾಯ' ಶಬ್ದ ಸಿದ್ಧವಾಗುತ್ತದೆ. **"ಪ್ರಮಾಣೈರರ್ಥ ಪರೀಕ್ಷಣಂ ನ್ಯಾಯಃ"** ಇದು ನ್ಯಾಯಸೂತ್ರಗಳ ಮೇಲೆ ವಾತ್ಸ್ಯಾಯನಮುನಿಗಳು ಬರೆದ ಭಾಷ್ಯ ವಚನವಾಗಿದೆ. **"ಪಕ್ಷಪಾತ ರಾಹಿತ್ಯಾಚರಣಂ ನ್ಯಾಯಃ"** ಯಾವುದು ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳ ಪರೀಕ್ಷೆಯಿಂದ ಕೇವಲ ಸತ್ಯವೆಂದು ಸಿದ್ಧವಾಗುವುದೋ, ಮತ್ತು ಯಾವುದು ಪಕ್ಷಪಾತರಹಿತವೂ, ಧರ್ಮರೂಪವೂ ಆದ ಆಚರಣವಾಗಿದೆಯೋ, ಅದೇ ನ್ಯಾಯವೆನಿಸುತ್ತದೆ. **"ನ್ಯಾಯಂ ಕರ್ತುಂ ಶೀಲಮಸ್ಯ ಸ ನ್ಯಾಯಕಾರೀಶ್ವರಃ"** – ನ್ಯಾಯ– ಎಂದರೆ ಪಕ್ಷಪಾತರಹಿತವಾದ ಕರ್ಮವನ್ನು ವ್ಯವಹರಿಸುವುದೇ ಅವನ ಸ್ವಭಾವವಾಗಿರುವುದರಿಂದ ಆ ಈಶ್ವರನ ಹೆಸರು **"ನ್ಯಾಯಕಾರೀ"** ಎಂದಾಗಿದೆ.

(೮೧) **ದಯಾಳು :** "ದಯ ದಾನಗತಿರಕ್ಷಹಿಂಸಾದಾನೇಷು"– ಈ ಧಾತುವಿನಿಂದ "ದಯಾ" ಶಬ್ದ ಸಿದ್ಧವಾಗುತ್ತದೆ. **"ದಯತೇ ದದಾತಿ ಜಾನಾತಿ ಗಚ್ಛತಿ ರಕ್ಷತಿ ಹಿನಸ್ತಿ ಯಯಾ, ಸಾ ದಯಾ; ಬಹ್ವೀ ದಯಾ ವಿದ್ಯತೇ ಯಸ್ಯ, ಸ ದಯಾಲುಃ ಪರಮೇಶ್ವರಃ"** – ಅವನು ಅಭಯದಾತೃವೂ, ಸತ್ಯಸತ್ಯವಾಗಿ ಸರ್ವವಿದ್ಯೆಗಳನ್ನೂ ತಿಳಿಯುವವನೂ, ಸಕಲಸಜ್ಜನರನ್ನೂ ರಕ್ಷಿಸುವವನೂ ಮತ್ತು ದುಷ್ಟರಿಗೆ ತಕ್ಕುದಾದ ರೀತಿಯಲ್ಲಿ ಶಿಕ್ಷೆಕೊಡುವವನೂ ಆಗಿದ್ದಾನೆ; ಈ ಕಾರಣದಿಂದ ಪರಮಾತ್ಮನ ಹೆಸರು **"ದಯಾಳು"**– ಎಂದಾಗಿದೆ.

(೮೨) **ಅದ್ವೈತ : "ದ್ವಯೋರ್ಭಾವೋ ದ್ವಾಭ್ಯಾಮಿತಂ ಸಾ ದ್ವಿತಾ । ದ್ವೀತಂ ವಾ ಸೈವ – ತದೇವ ವಾ ದ್ವೈತಂ । ನ ವಿದ್ಯತೇ ದ್ವೈ ತಂ ದ್ವಿತೀಯೇಶ್ವರಭಾವೋ ಯಸ್ಮಿನ್ ತದದ್ವೈತಮ್"** – ಎಂದರೆ **"ಸಜಾತೀಯ ವಿಜಾತೀಯಸ್ವಗತಭೇದಶೂನ್ಯಂ ಬ್ರಹ್ಮ"**. ಎರಡರ ಇರುವಿಕೆ ಅಥವಾ ಎರಡರಿಂದ ಕೂಡಿರುವಿಕೆ ದ್ವಿತಾ, ಅಥವಾ ದ್ವೀತ ಅಥವಾ ದ್ವೈತ. ಇದರಿಂದ ರಹಿತನಾದವನು, ಸಜಾತೀಯ – ಎಂದರೆ ಒಬ್ಬ ಮನುಷ್ಯನಿಗೆ ಇನ್ನೊಬ್ಬ ಮನುಷ್ಯನು ಸಜಾತೀಯನು; ವಿಜಾತೀಯ ಎಂದರೆ – ಮನುಷ್ಯನಿಗೆ ಮನುಷ್ಯೇತರವಾದ ಜಾತಿಯ ವೃಕ್ಷ, ಪಾಷಾಣ ಮೊದಲಾದವು ವಿಜಾತೀಯವಾದುವು. ಸ್ವಗತ – ಎಂದರೆ ಶರೀರದಲ್ಲಿ ಕಣ್ಣು, ಮೂಗು, ಕಿವಿ ಮೊದಲಾದ ಅವಯವಗಳ ಭೇದ ತನ್ನಲ್ಲೇ ಇರುವಂತಹುದು. ಹಾಗೆಯೇ ತನ್ನಿಂದ ಬೇರೆಯಾದ ಸ್ವಜಾತೀಯ[೫] ಈಶ್ವರನಾಗಲಿ, ವಿಜಾತೀಯ[೬] ಈಶ್ವರನಾಗಲಿ, ಅಥವಾ ತನ್ನ ಆತ್ಮನಲ್ಲಿಯೇ ಬೇರೆ ತತ್ವ್ತಗಳಾದ ವಸ್ತುಗಳಾಗಲಿ[೭] ಇಲ್ಲದೆ, ಒಬ್ಬನೇ ಪರಮೇಶ್ವರನಿದ್ದಾನೆ. ಈ ಕಾರಣದಿಂದ ಪರಮಾತ್ಮನ ಹೆಸರು **"ಅದ್ವೈತ"** ಎಂದಾಗಿದೆ.

(೮೩) **ನಿರ್ಗುಣ: "ಗುಣ್ಯಂತೇ ಯೇ ತೇ ಗುಣಾ ವಾ ಯೈರ್ಗಣಯಂತಿ ತೇ ಗುಣಾಃ ಯೋ ಗುಣೇಭ್ಯೋ ನಿರ್ಗತಃ, ಸ ನಿರ್ಗುಣ ಈಶ್ವರಃ"** ಸತ್ವ, ರಜಸ್ಸು, ತಮಸ್ಸು, ರೂಪ, ರಸ ಸ್ಪರ್ಶ, ಗಂಧ, (ಶಬ್ದ) ಮೊದಲಾದ ಜಡದ ಗುಣಗಳು; ಅವಿದ್ಯೆ, ಅಲ್ಪಜ್ಞತೆ, ರಾಗ,

೫. "ಸಜಾತೀಯ" – ಎಂದರೆ, ಒಂದು ಸಜಾತೀಯವನು; ಸ್ವಜಾತೀಯ ಎಂದರೆ ತನ್ನ ಸಜಾತೀಯರು, ಮೂರು ಭೇದಗಳನ್ನು ಬಣ್ಣಿಸುವಲ್ಲಿ ಮಹರ್ಷಿಗಳು ಸಜಾತೀಯ–ಎಂದು, ಈ ಚಿಹ್ನೆವಿರುವಡೆ ಸ್ವಜಾತೀಯ ಎಂದಿದ್ದಾರೆ. ಶಬ್ಧದಲ್ಲಿ ಅಲ್ಪ ಭೇದವಿದ್ದರೂ ಅರ್ಥಮಾತ್ರ ಒಂದೇ. ಅನ್ಯರು ಭಗವದ್ವಿಷಯ ವಿಸ್ತರಿಸುವಾಗ, ಪರಮಾತ್ಮ ಸಜಾತೀಯ ಭೇದ ರಹಿತ ಎನ್ನುತ್ತಾರೆ. ಅದು ಸ್ವೋಕ್ತಿ. ಪರಮಾತ್ಮನಂತಹ ಅನ್ಯ ಪರಮಾತ್ಮನಿಲ್ಲ– ಇದೇ ಸಿದ್ಧಾಂತ. –ಅನು.

೬. 'ವಿಜಾತೀಯ' – ಎಂದರೆ, ಬೇರೆ ಜಾತಿ ಅಥವಾ ವಿಧದವನು. ಪರಮಾತ್ಮನ ಗುಣ–ಧರ್ಮ–ಸ್ಬಭಾವಗಳಿಗೆ ವಿರುದ್ಧವಾದ ಗುಣ–ಕರ್ಮ–ಸ್ಬಭಾವಗಳನ್ನುಳ್ಳ ಮತ್ತೊಬ್ಬ ಪರಮಾತ್ಮನೂ ಇಲ್ಲ– ಅನು

೭. ಪರಮಾತ್ಮನಲ್ಲಿಯೇ ಜೀವರೂ, ಜಡವಸ್ತುಗಳೂ, ಇರುವುವಾದರೂ, ಅವು ಪರಮಾತ್ಮನ ಅಂಗಗಳಲ್ಲ.; ಅಂಶಗಳಲ್ಲ. ಅವುಗಳ ಮಿಶ್ರಣ ಪರಮಾತ್ಮನಲ್ಲ. ಅವು ತಮ್ಮದೇ ಆದ ಅಸ್ತಿತ್ವಹೊಂದಿರುವ ಸರ್ವಥಾ ಬೇರೆಯಾದ ವಸ್ತುಗಳು –ಎಂಬ ಭಾವನೆ ಇಲ್ಲಿ ಗ್ರಾಹ್ಯ. –ಅನು.

ದ್ವೇಷ ಮತ್ತು ಅವಿದ್ಯೆಯೇ ಮೊದಲಾದ ಕ್ಲೇಶಗಳು ಜೀವನ ಗುಣಗಳು. ಅವೆಲ್ಲವುಗಳಿಂದಲೂ ಬೇರೆಯಾಗಿರುವನು ಈಶ್ವರನು. ಇದಕ್ಕೆ **"ಅಶಬ್ದಮಸ್ಪರ್ಶಮರೂಪ ಮವ್ಯಯಂ"** (ಕಠ: ೩.೧೫) ಮೊದಲಾದ ಉಪ ನಿಷತ್ತುಗಳ ಪ್ರಮಾಣವಿದೆ. ಶಬ್ದ, ಸ್ಪರ್ಶ, ರೂಪ ಮೊದಲಾದ ಗುಣಗಳಿಂದ ರಹಿತನಾಗಿದ್ದಾನೆ; ಈ ಕಾರಣದಿಂದ ಪರಮಾತ್ಮನ ಹೆಸರು **"ನಿರ್ಗುಣ"** – ಎಂದಾಗಿದೆ.

(೮೪) **ಸಗುಣ : "ಯೋ ಗುಣೈಃ ಸಹ ವರ್ತತೇ ಸ ಸಗುಣಃ"** ಎಂದು ಸರ್ವಜ್ಞಾನ, ಸರ್ವಸುಖ, ಪವಿತ್ರತೆ, ಅನಂತಬಲ– ಮೊದಲಾದ ಗುಣಗಳಿಂದ ಯುಕ್ತನಾಗಿದ್ದಾನೆ. ಈ ಕಾರಣದಿಂದ ಪರಮೇಶ್ವರನ ಹೆಸರು **"ಸಗುಣ"** ಎಂದಾಗಿದೆ.

ಹೇಗೆ ಪೃಥಿವಿಯು ಗಂಧ ಮೊದಲಾದ ಗುಣಗಳಿಂದ ಸಗುಣವೂ, ಇಚ್ಛೆ, ಮೊದಲಾದ ಗುಣಗಳಿಂದ ರಹಿತವಾಗಿರುವುದರಿಂದ ನಿರ್ಗುಣವೂ ಆಗಿದೆಯೋ, ಹಾಗೆಯೇ ಜಗತ್ತು ಮತ್ತು ಜೀವನ ಗುಣಗಳಿಂದ ಬೇರೆಯಿರುವುದರಿಂದ ಪರಮೇಶ್ವರನು ನಿರ್ಗುಣನೂ ಹಾಗೂ ಸರ್ವಜ್ಞತ್ವ – ಮೊದಲಾದ ಗುಣಗಳಿಂದ ಯುಕ್ತನಾಗಿರುವುದರಿಂದ ಸಗುಣನೂ ಆಗಿದ್ದಾನೆ. ಅಂದರೆ– ಸಗುಣತ್ವ– ನಿರ್ಗುಣತ್ವಗಳಿಂದ ಬೇರೆಯಾಗಿರುವ ಯಾವ ಪದಾರ್ಥವೂ ಇಲ್ಲ. ಹೇಗೆ ಚೇತನನ ಗುಣಗಳಿಂದ ಬೇರೆಯಿರುವುದರಿಂದ ಜಡಪದಾರ್ಥವು ನಿರ್ಗುಣವೂ, ತನ್ನ ಗುಣಗಳಿಂದ ಯುಕ್ತವಾಗಿರುವುದರಿಂದ ಸಗುಣವೂ ಆಗಿರುತ್ತದೋ, ಹಾಗೆಯೇ ಜಡದ ಗುಣಗಳಿಂದ ಬೇರೆಯಿರುವುದರಿಂದ ಜೀವನು ನಿರ್ಗುಣನೂ, ಮತ್ತು ಇಚ್ಛೆ ಮೊದಲಾದ ತನ್ನ ಗುಣಗಳಿಂದ ಯುಕ್ತನಾಗಿರುವುದರಿಂದ ಸಗುಣನೂ ಆಗಿದ್ದಾನೆ. ಹೀಗೆಯೇ ಪರಮೇಶ್ವರನ ವಿಷಯದಲ್ಲಿಯೂ ತಿಳಿಯಬೇಕು.

(೮೫) **ಅಂತರ್ಯಾಮಿ : "ಅಂತರ್ಯಂತುಂ ನಿಯಂತುಂ ಶೀಲಂ ಯಸ್ಯ, ಸೋಽಯಮಂತರ್ಯಾಮೀ"** ಸಮಸ್ತ ಪ್ರಾಣಿ ಮತ್ತು ಅಪ್ರಾಣಿರೂಪ ಜಗತ್ತಿನಲ್ಲಿ ವ್ಯಾಪಕನಾಗಿದ್ದು, ಎಲ್ಲದರ ನಿಯಮನವನ್ನು ಮಾಡುತ್ತಾನೆ; ಆದ ಕಾರಣ ಆ ಪರಮೇಶ್ವರನ ಹೆಸರು **"ಅಂತರ್ಯಾಮಿ"** ಎಂದಾಗಿದೆ.

(೮೬) **ಧರ್ಮರಾಜ : "ಯೋ ಧರ್ಮೇ ರಾಜತೇ, ಸ ಧರ್ಮರಾಜಃ"** ಅವನು ಧರ್ಮದಲ್ಲಿಯೇ ಪ್ರಕಾಶಮಾನನಾಗಿದ್ದಾನೆ; ಮತ್ತು ಅಧರ್ಮರಹಿತನಾಗಿ ಧರ್ಮವನ್ನೇ ಪ್ರಕಾಶಪಡಿಸುತ್ತಾನೆ. ಈ ಕಾರಣದಿಂದ ಆ ಪರಮೇಶ್ವರನ ಹೆಸರು **"ಧರ್ಮರಾಜ"** ಎಂದಾಗಿದೆ.

(೮೭) **ಯಮ :** "ಯಮು ಉಪ ರಮೇ" ಈ ಧಾತುವಿನಿಂದ 'ಯಮ' ಶಬ್ದ ಸಿದ್ಧವಾಗುತ್ತದೆ. **"ಯಃ ಸರ್ವಾನ್ ಪ್ರಾಣಿನೋ ನಿಯಚ್ಛತಿ ಸ ಯಮಃ"** ಅವನು ಎಲ್ಲಾ ಪ್ರಾಣಿಗಳ ಕರ್ಮಗಳಿಗೂ ಫಲಗಳನ್ನು ಕೊಡುವ ವ್ಯವಸ್ಥೆಮಾಡುತ್ತಾನೆ ಮತ್ತು ಅನ್ಯಾಯಗಳೆಲ್ಲದರಿಂದಲೂ ಬೇರೆಯಿರುತ್ತಾನೆ. ಆದುದರಿಂದ ಪರಮಾತ್ಮನ ಹೆಸರು **"ಯಮ"** ಎಂದಾಗಿದೆ.

(೮೮) **ಭಗವಾನ್:** "ಭಜ ಸೇವಾಯಾಂ"–ಈ ಧಾತುವಿನಿಂದ 'ಭಗ' ಶಬ್ದವೂ, ಇದಕ್ಕೆ 'ಮತುಪ್' ಪ್ರತ್ಯಯ ಹಚ್ಚುವುದರಿಂದ "ಭಗವಾನ್" ಶಬ್ದವೂ ಸಿದ್ಧವಾಗುತ್ತದೆ. **"ಭಗಃ ಸಕಲೈಶ್ವರ್ಯಂ ಸೇವನಂ ವಾ ವಿದ್ಯತೇ ಯಸ್ಯ ಸ ಭಗವಾನ್ "** – ಅವನು ಸಮಗ್ರ ಐಶ್ವರ್ಯ ಯುಕ್ತನೂ ಮತ್ತು ಭಜಿಸಲು ಯೋಗ್ಯನೂ ಆಗಿರುವುದರಿಂದಲೇ ಆ ಈಶ್ವರನ ಹೆಸರು **"ಭಗವಾನ್"** – ಎಂದಾಗಿದೆ.

(೮೯) **ಮನು : "ಮನ್ ಜ್ಞಾನೇ"** – ಈ ಧಾತುವಿನಿಂದ 'ಮನು' ಶಬ್ದವಾಗುತ್ತದೆ. **"ಯೋ ಮನ್ಯತೇ, ಸ ಮನುಃ"** ಅವನು ಮನು– ಎಂದರೆ ವಿಜ್ಞಾನಶೀಲನೂ, ಮತ್ತು ಆಂಗೀಕಾರಯೋಗ್ಯನೂ ಆಗಿದ್ದಾನೆ. ಆದುದರಿಂದ ಆ ಈಶ್ವರನ ಹೆಸರು **"ಮನು"**.

(೯೦) **ಪುರುಷ : "ಪೃ ಪಾಲನಪೂರಣಯೋಃ"** – ಈ ಧಾತುವಿನಿಂದ 'ಪುರುಷ' ಶಬ್ದ ಸಿದ್ಧವಾಗಿದೆ. **"ಯಃ ಸ್ವವ್ಯಾಪ್ತ್ಯಾ ಚರಾಚರಂ ಜಗತ್ಪೃಣಾತಿ, ಪೂರಯತಿ ವಾ ಸ ಪುರುಷಃ"** – ಸಮಸ್ತ ಜಗತ್ತಿನಲ್ಲಿಯೂ ಪೂರ್ಣನಾಗಿದ್ದಾನೆ; ಆದುದರಿಂದ ಆ ಪರಮೇಶ್ವರನ ಹೆಸರು **"ಪುರುಷ"** ಎಂದಾಗಿದೆ.

(೯೧) **ವಿಶ್ವಂಭರ : "ಡುಭೃಞ್ ಧಾರಣಪೋಷಣಯೋಃ"** – **"ವಿಶ್ವ"** ಪೂರ್ವಕವಾಗಿ ಈ ಧಾತುವಿನಿಂದ "ವಿಶ್ವಂಭರ" ಎಂಬ ಶಬ್ದ ಸಿದ್ಧವಾಗುತ್ತದೆ. **"ಯೋ ವಿಶ್ವಂ ಬಿಭರ್ತಿ, ಧರತಿ, ಪುಷ್ಣಾತಿ ವಾ ಸ ವಿಶ್ವಂಭರೋ ಜಗದೀಶ್ವರಃ"** ಅವನು ಜಗತ್ತಿನ ಧಾರಣ ಮತ್ತು ಪೋಷಣವನ್ನು ಮಾಡುತ್ತಾನೆ; ಆದುದರಿಂದ ಆ ಪರಮೇಶ್ವರನ ಹೆಸರು **"ವಿಶ್ವಂಭರ"** ಎಂದಾಗಿದೆ.

(೯೨) **ಕಾಲ : "ಕಲಸಂಖ್ಯಾನೇ"** ಈ ಧಾತುವಿನಿಂದ 'ಕಾಲ' ಶಬ್ದ ಉಂಟಾಗಿದೆ. **"ಕಲಯತಿ ಸಂಖ್ಯಾತಿ ಸರ್ವಾನ್ ಪದಾರ್ಥಾನ್ ಸ ಕಾಲಃ"** ಅವನು ಜಗತ್ತಿನ ಸರ್ವ ಪದಾರ್ಥಗಳ ಮತ್ತು ಜೀವರ ಸಂಖ್ಯೆಯನ್ನಿಡುತ್ತಾನೆ. ಆದುದರಿಂದ ಆ

ಪರಮೇಶ್ವರನ ಹೆಸರು **"ಕಾಲ"** ಎಂದಾಗಿದೆ.

(೯೩) **ಶೇಷ :** **"ಶಿಷ್ಲೃ ವಿಶೇಷಣೇ"** – ಈ ಧಾತುವಿನಿಂದ **"ಶೇಷ"** ಶಬ್ದ ಸಿದ್ಧವಾಗುತ್ತದೆ. **"ಯಃ ಶಿಷ್ಯತೇ ಸ ಶೇಷಃ"** ಅವನು ಉತ್ಪತ್ತಿ ಮತ್ತು ಪ್ರಳಯದಿಂದ 'ಶೇಷ' ಎಂದರೆ ಉಳಿದಿರುತ್ತಾನೆ; ಆದುದರಿಂದ ಆ ಪರಮಾತ್ಮನ ಹೆಸರು **"ಶೇಷ"** – ಎಂದಾಗಿದೆ.

(೯೪) **ಆಪ್ತ :** "ಆಪ್ಲೃವ್ಯಾಪ್ತೌ" ಈ ಧಾತುವಿನಿಂದ 'ಆಪ್ತ' ಶಬ್ದ ಸಿದ್ಧವಾಗುತ್ತದೆ. **"ಯಃ ಸರ್ವಾನ್ ಧರ್ಮಾತ್ಮನ ಆಪ್ನೋತಿ ವಾ ಸರ್ವೈರ್ಧರ್ಮಾತ್ಮಭಿರಾಪ್ಯತೇ ಛಲಾದಿ ರಹಿತಃ ಸ ಆಪ್ತಃ"** ಅವನು ಸತ್ಯೋಪದೇಶಕನು; ಸಕಲವಿದ್ಯಾಯುಕ್ತನು; ಸಮಸ್ತ ಧರ್ಮಾತ್ಮರಿಗೂ ಪ್ರಾಪ್ತನಾಗುತ್ತಾನೆ ಮತ್ತು ಧರ್ಮಾತ್ಮರುಗಳಿಂದ ಪ್ರಾಪ್ತಮಾಡಿಕೊಳ್ಳಲು ಯೋಗ್ಯನಾಗಿದ್ದಾನೆ; ಛಲ–ಕಪಟ ಮೊದಲಾದವುಗಳಿಂದ ರಹಿತನಾಗಿದ್ದಾನೆ. ಆದುದರಿಂದ ಆ ಪರಮಾತ್ಮನ ಹೆಸರು **"ಆಪ್ತ"** ಎಂದಾಗಿದೆ.

(೯೫) **ಶಂಕರ:** **"ಡುಕೃಞ್ ಕರಣೇ"**– **"ಶಂ"** ಪೂರ್ವಕವಾಗಿ ಈ ಧಾತುವಿನಿಂದ "ಶಂಕರ" ಶಬ್ದಸಿದ್ಧವಾಗಿದೆ. **"ಯಃ ಶಂ ಕಲ್ಯಾಣಂ ಸುಖಂ ಕರೋತಿ, ಸ ಶಂಕರಃ "** – ಅವನು ಕಲ್ಯಾಣವನ್ನು, ಎಂದರೆ ಸುಖವನ್ನು ಉಂಟುಮಾಡುವವನಾಗಿದ್ದಾನೆ. ಆದುದರಿಂದ ಆ ಈಶ್ವರನ ಹೆಸರು **"ಶಂಕರ"** ಎಂದಾಗಿದೆ.

(೯೬) **ಮಹಾದೇವ :** "ಮಹತ್" ಶಬ್ದಪೂರ್ವಕ 'ದೇವ' ಶಬ್ದದಿಂದ "ಮಹಾದೇವ" ಶಬ್ದ ಸಿದ್ಧವಾಗುತ್ತದೆ. **"ಯೋ ಮಹತಾಂ ದೇವಃ ಸ ಮಹಾದೇವಃ"** ಅವನು ಮಹಾನ್ ದೇವ ಜನರ ದೇವನು, ಎಂದರೆ ವಿದ್ವಾಂಸರಿಗೂ ವಿದ್ವಾಂಸನು; ಸೂರ್ಯ ಮೊದಲಾದ ಪದಾರ್ಥಗಳ ಪ್ರಕಾಶಕನೂ ಆಗಿದ್ದಾನೆ. ಆದುದರಿಂದ ಆ ಪರಮಾತ್ಮನ ಹೆಸರು **"ಮಹಾದೇವ"** ಎಂದಾಗಿದೆ.

(೯೭) **ಪ್ರಿಯ:** "ಪ್ರೀಞ್" ತರ್ಪಣೇ ಕಾಂತೌ ಚ" – ಈ ಧಾತುವಿನಿಂದ "ಪ್ರಿಯ" ಶಬ್ದ ಸಿದ್ಧವಾಗುತ್ತದೆ. **"ಯಃ ಪೃಣಾತಿ, ಪ್ರೀಯತೇ ವಾ ಸ ಪ್ರಿಯಃ"** – ಅವನು ಸಮಸ್ತ ಧಾರ್ಮಿಕರನ್ನೂ, ಮುಮುಕ್ಷುಗಳನ್ನೂ ಮತ್ತು ಶಿಷ್ಟರನ್ನೂ ಪ್ರಸನ್ನಗೊಳಿಸುತ್ತಾನೆ ಮತ್ತು ಸರ್ವರಿಗೂ ಕಾಮನಾಯೋಗ್ಯನಾಗಿದ್ದಾನೆ. ಆದುದರಿಂದ ಆ ಈಶ್ವರನ ಹೆಸರು **"ಪ್ರಿಯ"** ಎಂದಾಗಿದೆ.

(೯೮) **ಸ್ವಯಂಭೂ:** – "ಭೂ ಸತ್ತಾಯಾಂ" – 'ಸ್ವಯಂ' ಪೂರ್ವಕವಾದ ಈ ಧಾತುವಿನಿಂದ "ಸ್ವಯಂಭೂ" ಶಬ್ದ ಸಿದ್ಧವಾಗುತ್ತದೆ. – **"ಯಃ ಸ್ವಯಂ ಭವತಿ ಸ ಸ್ವಯಂಭೂರೀಶ್ವರಃ"** ಅವನು ಸ್ವತಃ ತಾನೇ ಇದ್ದಾನೆ. ಯಾರಿಂದಲೂ, ಯಾವಾಗಲೂ ಹುಟ್ಟಿಲ್ಲ. ಆದುರಿಂದ ಆ ಪರಮಾತ್ಮನ ಹೆಸರು **"ಸ್ವಯಂಭೂ"**– ಎಂದಾಗಿದೆ.

(೯೯) **ಕವಿ:** – **"ಕು ಶಬ್ದೇ "**– ಈ ಧಾತುವಿನಿಂದ 'ಕವಿ' ಶಬ್ದ ಸಿದ್ಧವಾಗುತ್ತದೆ. **"ಯಃ ಕೌತಿ, ಶಬ್ದಯತಿ ಸರ್ವಾವಿದ್ಯಾಃ ಸ ಕವಿರೀಶ್ವರಃ"** – ಅವನು ವೇದಗಳ ಮೂಲಕ ಸಮಸ್ತ ವಿದ್ಯೆಗಳ ಉಪದೇಶಕನೂ ಮತ್ತು ತಿಳಿಯುವವನೂ ಆಗಿದ್ದಾನೆ. ಆದುದರಿಂದ ಆ ಪರಮೇಶ್ವರನ ಹೆಸರು **"ಕವಿ"** – ಎಂದಾಗಿದೆ.

(೧೦೦) **ಶಿವ :** – **"ಶಿವು ಕಲ್ಯಾಣೇ"**– ಈ ಧಾತುವಿನಿಂದ 'ಶಿವ' ಶಬ್ದ ಸಿದ್ಧವಾಗುತ್ತದೆ. **"ಬಹುಲಮೇತನ್ನಿದರ್ಶನಂ"**[೮] ಇದರಿಂದ ಶಿವು ಧಾತು ಅಂಗೀಕರಿಸಲ್ಪಡುತ್ತದೆ. ಅವನು ಕಲ್ಯಾಣಸ್ವರೂಪನು ಮತ್ತು ಕಲ್ಯಾಣವನ್ನುಂಟುಮಾಡುವವನು; ಆದುದರಿಂದ ಆ ಪರಮೇಶ್ವರನ ಹೆಸರು **"ಶಿವ"**– ಎಂದಾಗಿದೆ.

ಪರಮೇಶ್ವರನ ಈ ನೂರು ಹೆಸರುಗಳನ್ನು[೯] ಬರೆದಿದ್ದೇವೆ. ಆದರೆ ಇವುಗಳಿಂದ ಬೇರೆಯಾದ ಅಸಂಖ್ಯ ನಾಮಗಳು ಪರಮಾತ್ಮನಿಗಿವೆ. ಏಕೆಂದರೆ, ಪರಮೇಶ್ವರನ ಗುಣ–ಕರ್ಮ–ಸ್ವಭಾವಗಳು ಹೇಗೆ ಅನಂತವಾಗಿವೆಯೋ, ಹಾಗೆ ಅವನ ಹೆಸರುಗಳೂ ಕೂಡ ಅನಂತವಾಗಿವೆ. ಅವುಗಳಲ್ಲಿ ಪ್ರತಿಯೊಂದು ಗುಣ, ಕರ್ಮ ಮತ್ತು ಸ್ವಭಾವಕ್ಕೂ ಒಂದೊಂದು ಹೆಸರಿದೆ. ಆದಕಾರಣ, ನಾನು ಬರೆದಿರುವ ಹೆಸರುಗಳು ಸಮುದ್ರದ ಮುಂದೆ ಬಿಂದುವಿನ ಹಾಗೆ ಇವೆ. ಏಕೆಂದರೆ–ವೇದಗಳೇ ಮೊದಲಾದ ಶಾಸ್ತ್ರಗಳಲ್ಲಿ ಪರಮಾತ್ಮನ ಅನಂತಗುಣ ಕರ್ಮಸ್ವಭಾವಗಳು ವಿಶದೀಕರಿಸಲ್ಪಟ್ಟಿವೆ. ಅವುಗಳನ್ನು ಓದುವುದರಿಂದಲೂ ಓದಿಸುವುದರಿಂದಲೂ ಜ್ಞಾನ ಉಂಟಾಗಬಲ್ಲುದು. ಕೇವಲ ವೇದಗಳೇ ಮೊದಲಾದ ಶಾಸ್ತ್ರಗಳನ್ನು ಓದುವವರಿಗೆ ಮಾತ್ರ ಬೇರೆ

---

೮. ವ್ಯಾಕರಣ ಮಹಾಭಾಷ್ಯ–[೩.೩.೧] –ಅನು

೯. ಮಹರ್ಷಿ ದಯಾನಂದರು 'ನಾಮ' ಎಂಬ ಶಬ್ದ ಪ್ರಯೋಗಿಸಿದ್ದಾರೆ. ನಾವು ಅದನ್ನು "ಹೆಸರು" ಎಂದು ಕನ್ನಡಿಸಿದ್ದೇವೆ. ಇವುಗಳನ್ನು ಕನಿಷ್ಠ ಪಕ್ಷ ಇವುಗಳ ಬಹ್ವಂಶವನ್ನು "ವಿಶೇಷಣಗಳು" ಎಂದು ಗ್ರಹಿಸಬಹುದಾಗಿದೆ. ಏಕೆಂದರೆ ಇವು ಗುಣವಾಚಕವಾಗಿವೆ. –ಅನು.

ಪದಾರ್ಥಗಳ ಜ್ಞಾನವೂ ಪೂರ್ಣತಃ ಲಭಿಸಬಲ್ಲದು.

**ಪ್ರಶ್ನೆ :** ಬೇರೆ ಗ್ರಂಥಕಾರರು ಮೊದಲು, ನಡುವೆ ಮತ್ತು ಕೊನೆಯಲ್ಲಿ ಮಂಗಳಾಚರಣೆ ಮಾಡುವಂತೆ, ತಾವು ಏನನ್ನೂ ಬರೆಯಲಿಲ್ಲವಲ್ಲ ; (ಮಂಗಳಾಚರಣ) ಮಾಡಲಿಲ್ಲವಲ್ಲ!

**ಉತ್ತರ :** ಹಾಗೆ ಮಾಡುವುದು ನಮಗೆ ಯೋಗ್ಯವಲ್ಲ. ಏಕೆಂದರೆ, ಆರಂಭ, ಮಧ್ಯ ಮತ್ತು ಅಂತ್ಯದಲ್ಲಿ ಮಂಗಳವನ್ನು ಮಾಡುವನಾದರೆ, ಅವನ ಗ್ರಂಥದ ಮೊದಲು – ನಡುವುಗಳ ಮತ್ತು ನಡುವು – ಕಡೆಗಳ ಮಧ್ಯೆ ಏನೇನು ಬರೆಹವಿರುವುದೋ, ಅದೆಲ್ಲಾ ಅಮಂಗಳವಾಗಿಯೇ ಉಳಿದುಹೋಗುವುದು. **"ಮಂಗಲಾಚರಣಂ ಶಿಷ್ಟಾಚಾರತ್ ಫಲದರ್ಶನಾತ್ ಶ್ರುತಿತಶ್ಚೇತಿ"**– ಎಂಬ ಸಾಂಖ್ಯಶಾಸ್ತ್ರದ (೫.೧.) ವಚನವಿದೆ; ನ್ಯಾಯವೂ, ಪಕ್ಷಪಾತ ರಹಿತವೂ, ಸತ್ಯವೂ ಆದ, ವೇದೋಕ್ತ ಈಶ್ವರನ ಆಜ್ಞೆಯನ್ನೇ ಯಥಾವತ್ತಾಗಿ, ಸರ್ವತ್ರ ಮತ್ತು ಸರ್ವದಾ ಆಚರಿಸುವುದೇ ಮಂಗಳಾಚರಣವೆನ್ನಿಸುತ್ತದೆ – ಎನ್ನುವುದು ಇದರ ಅಭಿಪ್ರಾಯವಾಗಿದೆ. ಗ್ರಂಥದ ಆರಂಭದಿಂದ ಹಿಡಿದು ಸಮಾಪ್ತಿಯವರೆಗೆ ಸತ್ಯಾಚಾರವನ್ನೇ ನಿರೂಪಿಸುವುದು ಮಂಗಳಾಚರಣವಾಗಿದೆ; ಎಲ್ಲೋ ಒಂದೆಡೆ ಮಂಗಳವನ್ನೂ, ಮತ್ತೆಲ್ಲೋ ಇನ್ನೊಂದೆಡೆ ಅಮಂಗಳವನ್ನೂ ಬರೆಯುವುದು (ಮಂಗಳಾಚರಣ) ಅಲ್ಲ, ಮಹಾಶಯರೇ! ನೋಡಿರಿ ಮಹರ್ಷಿಗಳ ಲೇಖನವನ್ನು :

**ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ ನೋ ಇತರಾಣಿ ॥**

ಇದು ತೈತ್ತಿರೀಯೋಪನಿಷತ್ತಿನ (೧.೧೧) ವಚನ "ಓ ಮಕ್ಕಳೇ! ಯಾವ 'ಅನವದ್ಯ' ವಾದ ಅನಿಂದನೀಯವಾದ, ಎಂದರೆ – ಧರ್ಮಾಯುಕ್ತವಾದ ಕರ್ಮಗಳಿವೆಯೋ, ನೀವು ಅದನ್ನೇ ಮಾಡುವುದು ಯೋಗ್ಯ. ಅಧರ್ಮಯುಕ್ತ ವಾದುವನ್ನಲ್ಲ". ಆದುದರಿಂದ, ಆಧುನಿಕ ಗ್ರಂಥಗಳಲ್ಲಿ ಕಂಡುಬರುವ **"ಶ್ರೀಗಣೇಶಾಯ ನಮಃ", "ಸೀತಾ ರಾಮಾಭ್ಯಾಂ ನಮಃ" "ರಾಧಾಕೃಷ್ಣಾಭ್ಯಾಂ ನಮಃ", "ಶ್ರೀಗುರುಚರಣಾರವಿಂದಾಭ್ಯಾಂ ನಮಃ", "ಹನುಮತೇ ನಮಃ", "ದುರ್ಗಾಯೈ ನಮಃ", "ವಟುಕಾಯ ನಮಃ", "ಭೈರವಾಯ ನಮಃ", "ಶಿವಾಯ ನಮಃ", "ಸರಸ್ವತ್ಯೈ ನಮಃ", "ನಾರಾಯಣಾಯ ನಮಃ"** ಮೊದಲಾದ ಲೇಖನಗಳನ್ನು ಬುದ್ಧಿವಂತರಾದ ಜನರು, ವೇದಗಳಿಗೆ ಮತ್ತು (ಅನ್ಯ) ಶಾಸ್ತ್ರಗಳಿಗೆ ವಿರುದ್ಧವಾಗಿರುವುದರಿಂದ ಮಿಥ್ಯೆ– ಎಂದೇ ತಿಳಿಯುತ್ತಾರೆ. ಏಕೆಂದರೆ, ವೇದಗಳಲ್ಲಿ ಮತ್ತು ಋಷಿ–ಮುನಿಗಳ ಗ್ರಂಥಗಳಲ್ಲಿ ಇಂತಹ ಮಂಗಳಾಚರಣ ಎಲ್ಲಿಯೂ ಕಂಡುಬರುವುದಿಲ್ಲ. ಮತ್ತು ಆರ್ಷಗ್ರಂಥಗಳಲ್ಲಿ "ಓಂ" ಮತ್ತು "ಅಥ" ಶಬ್ದವೇನೋ ಕಂಡುಬರುತ್ತದೆ. ನೋಡಿರಿ:

**"ಅಥ ಶಬ್ದಾನುಶಾಸನಮ್"– "ಅಥೇತ್ಯಯಂ ಶಬ್ದೋऽಧಿಕಾರಾರ್ಥಃ ಪ್ರಯುಜ್ಯತೇ"** – ಇದು ವ್ಯಾಕರಣ ಮಹಾಭಾಷ್ಯದ ವಚನ.

**"ಅಥಾತೋ ಧರ್ಮಜಿಜ್ಞಾಸಾ"–"ಅಥೇತ್ಯಾನಂತರ್ಯೇ ವೇದಾಧ್ಯಯನಾನಂತರಮ್"** – ಇದು ಪೂರ್ವಮೀಮಾಂಸಾ ವಚನ.

**"ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ" – "ಅಥೇತಿ ಧರ್ಮಕಥನಾನಂತರಂ ಧರ್ಮ ಲಕ್ಷಣಂ ವಿಶೇಷೇಣ ವ್ಯಾಖ್ಯಾಸ್ಯಾಮಃ"** ಇದು ವೈಶೇಷಿಕ ದರ್ಶನದ ವಚನ.

**"ಅಥಯೋಗಾನುಶಾಸನಮ್". "ಅಥೇತ್ಯಯಮಧಿಕಾರಾರ್ಥಃ"** – ಇದು ಯೋಗ ಶಾಸ್ತ್ರದ ವಚನ.

**"ಅಥ ತ್ರಿವಿಧ ದುಃಖಾತ್ಯಂತ ನಿವೃತ್ತಿರತ್ಯಂತ ಪುರುಷಾರ್ಥಃ". "ಸಾಂಸರಿಕವಿಷಯ ಭೋಗಾನಂತರಂ ತ್ರಿವಿಧದುಃಖಾತ್ಯಂತ ನಿವೃತ್ತ್ಯರ್ಥಃ ಪ್ರಯತ್ನಃ ಕರ್ತವ್ಯಃ"** – ಇದು ಸಾಂಖ್ಯಾಶಾಸ್ತ್ರದ ವಚನ.

**"ಅಥಾತೋ ಬ್ರಹ್ಮಜಿಜ್ಞಾಸಾ". – "ಚತುಷ್ಟಯಸಾಧನಸಂಪತ್ತ್ಯನಂತರಂ ಬ್ರಹ್ಮ ಜಿಜ್ಞಾಸ್ಯಂ"**– ಇದು ವೇದಾಂತ ಸೂತ್ರ.

**"ಓಮಿತ್ಯೇತದಕ್ಷರಮುದ್ಗೀಥಮುಪಾಸೀತ"**. ಇದು ಛಾಂದೋಗ್ಯೋಪನಿಷತ್ತಿನ ವಚನವಾಗಿದೆ.

**"ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಮ್"** – ಇದು ಮಾಂಡೂಕ್ಯೋಪನಿಷತ್ತಿನ ಪ್ರಾರಂಭದ ವಚನ.

ಹೀಗೆಯೇ ಬೇರೆ ಋಷಿ–ಮುನಿಗಳ ಗ್ರಂಥಗಳಲ್ಲಿಯೂ **"ಓಂ"** ಮತ್ತು **"ಅಥ"** ಶಬ್ದಗಳನ್ನು ಬರೆಯಲಾಗಿದೆ. ಅದೇ ರೀತಿ, **"ಅಗ್ನಿ, ಇಟ್, ಅಗ್ನಿ, ಯೇತ್ರಿಷಪ್ತಾಃ ಪರಿಯಂತಿ"** – ಈ ಶಬ್ದಗಳನ್ನು ನಾಲ್ಕು ವೇದಗಳ ಪ್ರಾರಂಭದಲ್ಲಿ ಬರೆಯಲಾಗಿದೆ. **"ಶ್ರೀಗಣೇಶಾಯ ನಮಃ"** – ಈ ಮೊದಲಾದ ಶಬ್ದಗಳೂ ಎಲ್ಲಿಯೂ ಇಲ್ಲ ಮತ್ತು ವೈದಿಕ ಜನರು ವೇದಗಳ ಆರಂಭದಲ್ಲಿ **"ಹರಿಃ ಓಂ"** – ಎಂದು ಬರೆಯುವುದನ್ನೂ ಮತ್ತು ಓದುವುದನ್ನೂ ಪೌರಾಣಿಕರ ಮತ್ತು ತಾಂತ್ರಿಕ ಜನರ ಮಿಥ್ಯಾಕಲ್ಪನೆಯಿಂದ

ಕಲಿತಿದ್ದಾರೆ. ವೇದಗಳೇ ಮೊದಲಾದ ಶಾಸ್ತ್ರಗಳಲ್ಲಿ **'ಹರಿ'** ಎಂಬ ಶಬ್ದವು ಪ್ರಾರಂಭದಲ್ಲಿ ಎಲ್ಲಿಯೂ ಇಲ್ಲ. ಆದುದರಿಂದ **"ಓಂ"** ಅಥವಾ **"ಅಥ"** ಎಂಬ ಶಬ್ದವನ್ನೇ ಗ್ರಂಥದ ಪ್ರಾರಂಭದಲ್ಲಿ ಬರೆಯಬೇಕು. ಹೀಗೆ ಕಿಂಚಿನ್ಮಾತ್ರ ಈಶ್ವರನ ವಿಷಯದಲ್ಲಿ ಬರೆದಿದ್ದೇನೆ. ಇನ್ನು ಮುಂದೆ ಶಿಕ್ಷಣದ ವಿಷಯದಲ್ಲಿ ಬರೆಯಲ್ಪಡುವುದು.

**ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**
**ಸುಭಾಷಾವಿಭೂಷಿತ ಈಶ್ವರನಾಮವಿಷಯೇ**
**ಪ್ರಥಮಃ ಸಮುಲ್ಲಾಸಃ ಸಂಪೂರ್ಣಃ**

# ದ್ವಿತೀಯ ಸಮುಲ್ಲಾಸಃ

## ಅಥ ಶಿಕ್ಷಾಂ ಪ್ರವಕ್ಷ್ಯಾಮಃ

### ಮಾತೃಮಾನ್ ಪಿತೃಮಾನಾಚಾರ್ಯವಾನ್ ಪುರುಷೋ ವೇದ.

ಇದು ಶತಪಥ ಬ್ರಾಹ್ಮಣದ ವಚನ. ವಸ್ತುತಃ ಯಾವಾಗ ಮೂವರು ಉತ್ತಮ ಶಿಕ್ಷಕರು, ಎಂದರೆ ಮೊದಲಾಗಿ ಮಾತೆ, ಎರಡನೆಯವನಾಗಿ ಪಿತೃ ಮತ್ತು ಮೂರನೆಯದಾಗಿ ಆಚಾರ್ಯ – ಇವರು ಲಭಿಸುತ್ತಾರೋ, ಆಗಲೇ ಮಾನವನು ಜ್ಞಾನವಂತನಾಗುತ್ತಾನೆ. ಯಾವನ ತಾಯಿ ಮತ್ತು ತಂದೆ ಧಾರ್ಮಿಕರಾಗಿರುತ್ತಾರೋ, ಅವನ ಕುಲ ಧನ್ಯ; ಆ ಸಂತತಿ ಮಹಾಭಾಗ್ಯಶಾಲಿ. ಮಾತೆಯಿಂದ ಮಕ್ಕಳಿಗೆ ಎಷ್ಟು ಉಪದೇಶ ಮತ್ತು ಉಪಕಾರ ಲಭಿಸುತ್ತದೋ, ಅಷ್ಟು ಇನ್ನಾರಿಂದಲೂ ಲಭಿಸದು. ಹೇಗೆ ಮಾತೆ ಮಕ್ಕಳ ಮೇಲೆ ಪ್ರೇಮವನ್ನು ತೋರುತ್ತಾಳೋ ಮತ್ತು ಅವರ ಹಿತವನ್ನು ಮಾಡಲು ಇಚ್ಛಿಸುತ್ತಾಳೋ, ಅಷ್ಟು, ಹಾಗೆ, ಬೇರಾವನೂ ಮಾಡುವುದಿಲ್ಲ. ಆದುದರಿಂದಲೇ, **"ಮಾತೃಮಾನ್"**, ಎಂದರೆ, **"ಪ್ರಶಸ್ತಾ ಧಾರ್ಮಿಕೀ ಮಾತಾ ವಿದ್ಯತೇ ಯಸ್ಯ ಸ ಮಾತೃ ಮಾನ್"** ಎಂದರೆ ಗರ್ಭಾಧಾನದಿಂದ ಹಿಡಿದು, ವಿದ್ಯೆಯು ಪೂರ್ಣತಃ ಎಲ್ಲಿಯವರೆಗೆ ಲಭಿಸದೋ, ಅಲ್ಲಿಯವರೆಗೆ ಸುಶೀಲತೆಯ ಉಪದೇಶ ಮಾಡುವ ಮಾತೆ ಧನ್ಯೆ.

ಗರ್ಭಾಧಾನಕ್ಕೆ ಮುನ್ನ, ನಡುವೆ ಮತ್ತು ಆ ಮೇಲೆ, ಮಾದಕದ್ರವ್ಯಗಳು, ದುರ್ಗಂಧಯುಕ್ತವಾದುದು, ರೂಕ್ಷ ಮತ್ತು ಬುದ್ಧಿನಾಶಕವಾದ ಪದಾರ್ಥಗಳನ್ನು ಬಿಟ್ಟು, ಯಾವುದು ಶಾಂತಿ, ಆರೋಗ್ಯ, ಬುದ್ಧಿ, ಪರಾಕ್ರಮ ಹಾಗೂ ಸುಶೀಲತ್ವದಿಂದ ಸಭ್ಯತೆಯನ್ನುಂಟುಮಾಡುವುದೋ, ಯಾವುದರಿಂದ ರಜೋವೀರ್ಯಗಳೂ ಕೂಡ ದೋಷಗಳಿಂದ ರಹಿತವಾಗಿ ಅತ್ಯುತ್ತಮ ಗುಣಯುಕ್ತವಾಗುವವೋ, ಅಂತಹ ತುಪ್ಪ, ಹಾಲು, ಮಿಷ್ಟ, ಅನ್ನ, ಪಾನ – ಮೊದಲಾದ ಶ್ರೇಷ್ಠ ಪದಾರ್ಥಗಳನ್ನು ಸೇವಿಸುವುದು ಮಾತಾಪಿತೃಗಳಿಗೆ ಅತಿ ಉಚಿತವಾಗಿದೆ. ಋತುಗಮನದ ವಿಧಿ ಹೇಗಿದೆಯೋ, ಹಾಗೆ, ಎಂದರೆ, ರಜೋದರ್ಶನದ ನಂತರ ಐದನೆಯ ದಿನದಿಂದ ಹಿಡಿದು ಹದಿನಾರನೆಯ ದಿನದವರೆಗೆ ಋತುದಾನ ಮಾಡುವ ಸಮಯವಿರುತ್ತದೆ. ಅವುಗಳಲ್ಲಿ ಮೊದಲ ನಾಲ್ಕು ದಿನಗಳು ತ್ಯಾಜ್ಯ. ಹನ್ನೆರಡು ದಿನಗಳು ಉಳಿದವು. ಅವುಗಳಲ್ಲಿ ಏಕಾದಶೀ[೧] ಮತ್ತು ತ್ರಯೋದಶಿ[೧]ಗಳನ್ನು ಬಿಟ್ಟು, ಉಳಿದ ಹತ್ತು ರಾತ್ರಿಗಳಲ್ಲಿ ಗರ್ಭಾಧಾನಮಾಡುವುದು ಉತ್ತಮ ಮತ್ತು ರಜೋದರ್ಶನದ ದಿನದಿಂದ ಹಿಡಿದು ಹದಿನಾರನೆಯ ರಾತ್ರಿಯಾದ ನಂತರ ಸಮಾಗಮಮಾಡಬಾರದು. ಪುನಃ ಎಲ್ಲಿಯವರೆಗೆ ಪೂರ್ವೋಕ್ತ ಋತುದಾನದ ಸಮಯ ಬರುವುದಿಲ್ಲವೋ, ಅಲ್ಲಿಯವರೆಗೆ ಮತ್ತು ಗರ್ಭಸ್ಥಾಪನೆಯಾದ ಮೇಲೆ ಒಂದು ವರ್ಷದವರೆಗೆ ಸಂಯುಕ್ತರಾಗಬಾರದು. ಯಾವಾಗ ಇಬ್ಬರ ಶರೀರಗಳಲ್ಲಿಯೂ ಆರೋಗ್ಯ, ಪರಸ್ಪರ ಪ್ರಸನ್ನತೆಯಿರುವುದೋ ಯಾವುದೇ ವಿಧದ ಶೋಕವಿರುವುದಿಲ್ಲವೋ, ಆಗ, ಹೇಗೆ ಚರಕ ಮತ್ತು ಸುಶ್ರುತದಲ್ಲಿ ಭೋಜನ–ಆಚ್ಛಾದನಗಳ ವಿಧಾನವಿದೆಯೋ ಮತ್ತು ಹೇಗೆ ಮನುಸ್ಮೃತಿಯಲ್ಲಿ ಸ್ತ್ರೀ–ಪುರುಷರ ಪ್ರಸನ್ನತೆಯ ರೀತಿ ಬರೆಯಲ್ಪಟ್ಟಿದೆಯೋ, ಅದೇ ರೀತಿ ಮಾಡಬೇಕು ಮತ್ತು ನಡೆದುಕೊಳ್ಳಬೇಕು. ಗರ್ಭಾಧಾನದ ನಂತರ ಸ್ತ್ರೀ ಬಹಳ ಎಚ್ಚರಿಕೆಯಿಂದ ಭೋಜನ–ಛಾದನಗಳನ್ನು ಮಾಡಬೇಕು. ಆ ಮೇಲೆ ಒಂದು ವರ್ಷದ ಪರ್ಯಂತ ಸ್ತ್ರೀಯು ಪುರುಷನ

೧. ಇವು ತಿಥಿಗಳ ಹೆಸರಲ್ಲ. ದಿನಗಳ ಎಣಿಕೆ.

ಸಂಗಮಾಡಬಾರದು. ಎಂದಿನವರೆಗೆ ಸಂತತಿಯ ಜನನವಾಗುವುದಿಲ್ಲವೋ, ಅದುವರೆಗೆ ಸ್ತ್ರೀಯು ಬುದ್ಧಿ, ಬಲ, ರೂಪ, ಆರೋಗ್ಯ, ಪರಾಕ್ರಮ, ಶಾಂತಿ – ಮೊದಲಾದ ಗುಣಕಾರಕ ದ್ರವ್ಯಗಳನ್ನೇ ಸೇವಿಸುತ್ತಿರಬೇಕು.

ಯಾವಾಗ ಜನನವಾಗುವುದೋ, ಆಗ ಮಗುವಿಗೆ ಉತ್ತಮವಾದ ಸುಗಂಧಿ ಯುಕ್ತ ಜಲದಿಂದ ಸ್ನಾನವನ್ನೂ, ನಾಡೀಛೇದನವನ್ನೂ ಮಾಡಿಸಿ, ಸುಗಂಧಿಯುಕ್ತವಾದ ತುಪ್ಪ– ಮೊದಲಾದುವುಗಳ ಹೋಮ[೨]ವನ್ನೂ ಮತ್ತು ಶಿಶುವಿನ ಹಾಗೂ ಸ್ತ್ರೀಯ ಶರೀರ ಕ್ರಮಶಃ ಆರೋಗ್ಯಶಾಲಿಯೂ, ಪುಷ್ಟವೂ ಆಗುತ್ತಾ ಹೋಗುವಂತೆ ಸ್ತ್ರೀಗೂ ಸಹ ಸ್ನಾನ– ಭೋಜನ ಮೊದಲಾದುವುಗಳ ಯೋಗ್ಯವಾದ ವ್ಯವಸ್ಥೆಯನ್ನೂ ಮಾಡಬೇಕು. ಹಾಲಿನಲ್ಲಿಯೂ ಕೂಡ ಉತ್ತಮ ಗುಣಗಳುಂಟಾಗುವಂತಹ ಪದಾರ್ಥಗಳನ್ನು ಅದರ ಮಾತೆ ಅಥವಾ ದಾದಿ ಸೇವಿಸಬೇಕು. ಬಾಣಂತಿಯ ಹಾಲನ್ನು ಆರು ದಿನಗಳವರೆಗೆ ಮಗುವಿಗೆ ಕುಡಿಸಬೇಕು. ಆ ಮೇಲೆ ದಾದಿಯು ಕುಡಿಸುತ್ತಾ ಹೋಗಬೇಕು.[೩] ಆದರೆ ಮಾತಾಪಿತೃಗಳು ದಾದಿಗೆ ಉತ್ತಮ ಪದಾರ್ಥಗಳ ಭಕ್ಷಣ–ಪಾನವನ್ನು ಮಾಡಿಸಬೇಕು. ಯಾರಾದರೂ ಬಡವರಾಗಿದ್ದರೆ ಮತ್ತು ದಾದಿಯನ್ನು ನೇಮಿಸಲು ಶಕ್ತಿಯಿಲ್ಲವಾದರೆ, ಬುದ್ಧಿ, ಪರಾಕ್ರಮ, ಆರೋಗ್ಯ – ಇವನ್ನು ಕೊಡಬಲ್ಲ ಉತ್ತಮ ಔಷಧಿಗಳನ್ನು ಶುದ್ಧವಾದ ಜಲದಲ್ಲಿ ನೆನೆಯಿಸಿ, ಮರಳಿಸಿ, ಶೋಧಿಸಿ, ಹಾಲಿಗೆ ಸಮಪ್ರಮಾಣದಲ್ಲಿ ನೀರನ್ನು ಬೆರೆಯಿಸಿ, ಹಸುವಿನ ಅಥವಾ ಆಡಿನ ಹಾಲನ್ನು ಶಿಶುವಿಗೆ ಕುಡಿಸಬೇಕು. ಜನನವಾದ ಮೇಲೆ ಮಗುವನ್ನು ಮತ್ತು ಅದರ ಮಾತೆಯನ್ನು, ಎಲ್ಲಿಯ ವಾಯು ಶುದ್ಧವಾಗಿರುವುದೋ, ಅಂತಹ, ಬೇರೆ ಸ್ಥಳದಲ್ಲಿ ಇಡಬೇಕು; ಅಲ್ಲಿ ಸುಗಂಧಯುಕ್ತವೂ, ದರ್ಶನೀಯವೂ ಆದ ಪದಾರ್ಥಗಳನ್ನೂ ಇಡಬೇಕು. ಮತ್ತು ಎಲ್ಲಿಯ ವಾಯು ಶುದ್ಧವಾಗಿರುವುದೋ, ಅಂತಹ ಸ್ಥಳದಲ್ಲಿ ಸುತ್ತಾಡಿಸುವುದು ಯುಕ್ತವಾಗಿರುತ್ತದೆ ಮತ್ತು ದಾದಿ ಅಥವಾ ಹಸು, ಮೇಕೆ ಮೊದಲಾದುವುಗಳ ಹಾಲು ಸಿಕ್ಕಲಾರದಾದರೆ, ಹೇಗೆ ಉಚಿತವೆಂದು ತಿಳಿಯುವರೋ, ಹಾಗೆಯೇ ಮಾಡಲಿ, ಏಕೆಂದರೆ ಬಾಣಂತಿಯಾದ ಸ್ತ್ರೀಯ ಶರೀರದ ಅಂಶದಿಂದ ಮಗುವಿನ ಶರೀರ ಉದ್ಭವಿಸುತ್ತದೆ. ಈ ಕಾರಣದಿಂದಲೇ ಸ್ತ್ರೀಯು ಪ್ರಸವ ಕಾಲದಲ್ಲಿ ನಿರ್ಬಲಳಾಗುತ್ತಾಳೆ. ಆದುದರಿಂದ ಬಾಣಂತಿಯಾದ ಸ್ತ್ರೀ ಹಾಲನ್ನು ಕುಡಿಸಬಾರದು. ಹಾಲನ್ನು ತಡೆಯಲು ಸ್ತನದ ತೊಟ್ಟಿನ ಮೇಲೆ ಯಾವುದರಿಂದ ಹಾಲು ಸ್ರವಿಸುವುದಿಲ್ಲವೋ, ಆ ಔಷಧಿಯನ್ನು ಲೇಪಿಸಬೇಕು. ಹೀಗೆ ಮಾಡುವುದರಿಂದ (ಸ್ತ್ರೀ) ಪುನಃ ಯುವತಿಯಾಗಿ ಹೋಗುತ್ತಾಳೆ. ಆವರೆಗೆ ಪುರುಷನು ಬ್ರಹ್ಮಚರ್ಯದಿಂದ ವೀರ್ಯದ ನಿಗ್ರಹವನ್ನು ಮಾಡಬೇಕು. ಹೀಗೆ ಯಾವ ಸ್ತ್ರೀ ಮತ್ತು ಪುರುಷರು ಮಾಡುವರೋ, ಅವರ ಎಲ್ಲ ಮಕ್ಕಳೂ ಉತ್ತಮರೂ, ಬಲ– ಪರಾಕ್ರಮಯುಕ್ತರೂ, ದೀರ್ಘಾಯುಗಳೂ, ಧಾರ್ಮಿಕರೂ ಆಗುವಂತೆ, ಅವರಿಗೆ ಉತ್ತಮ ಸಂತತಿಯೂ, ದೀರ್ಘವಾದ ಆಯಸ್ಸೂ, ಬಲ–ಪರಾಕ್ರಮಗಳ ವೃದ್ಧಿಯೂ ಆಗುತ್ತಲೇ ಇರುವುದು. ಸ್ತ್ರೀಯು ಯೋನಿ–ಸಂಕೋಚನ ಮತ್ತು ಶೋಧವನ್ನೂ, ಪುರುಷನು, ವೀರ್ಯದ ಸ್ತಂಭನವನ್ನೂ ಮಾಡಬೇಕು. ಪುನಃ ಮಕ್ಕಳು ಎಷ್ಟಾಗುವವೋ ಅವೂ ಕೂಡ ಎಲ್ಲವೂ ಉತ್ತಮವೇ ಆಗುವುವು.

ಮಕ್ಕಳು ಸಭ್ಯರಾಗುವಂತೆ ಮತ್ತು ಯಾವುದೇ ಅಂಗದಿಂದಲೂ ಕುಚೇಷ್ಟೆ ಮಾಡಲು ಅವಕಾಶವಿಲ್ಲದಂತೆ, ಮಕ್ಕಳ ತಾಯಿ ಸದಾ ಉತ್ತಮ ಶಿಕ್ಷಣ ಕೊಡಬೇಕು. ಯಾವಾಗ ಮಾತಾನಾಡಲು ಆರಂಭಿಸುವುದೋ, ಆಗ ಅದರ ತಾಯಿ, ಯಾವ ಅಕ್ಷರದ ಸ್ಥಾನವಾವುದು, ಪ್ರಯತ್ನವಾವುದು, ಎಂದರೆ, 'ಪ' ಎಂಬಕ್ಷರದ ಸ್ಥಾನ ತುಟಿ ಮತ್ತು ಸ್ಪೃಷ್ಟ ಪ್ರಯತ್ನ; ಎರಡೂ ತುಟಿಗಳನ್ನು ಸೇರಿಸಿ ಹೇಳಬೇಕು; ಹ್ರಸ್ವ, ದೀರ್ಘ, ಪ್ಲುತ ಅಕ್ಷರಗಳನ್ನು ಸರಿಸರಿಯಾಗಿ ಹೇಳುವ ಶಕ್ತಿ; ಮಧುರ, ಗಂಭೀರ, ಸುಂದರ, ಸ್ವರ, ಅಕ್ಷರ, ಮಾತ್ರೆ, ಪದ, ವಾಕ್ಯ, ಸಂಹಿತಾ, ಅವಸಾನಗಳು ಬೇರೆ – ಬೇರೆ ಕೇಳಿಸಬೇಕು – ಈ ಮೊದಲಾದುವನ್ನು ಕಲಿಸಿ, ಯಾವ ರೀತಿ ಶಿಶುವಿನ ನಾಲಗೆ ಕೋಮಲವಾಗಿ, ಸ್ಪಷ್ಟವಾಗಿ ಉಚ್ಚರಿಸಲು ಸಮರ್ಥವಾಗುವುದೋ, ಆ ಉಪಾಯವನ್ನು ಮಾಡಬೇಕು. ಯಾವಾಗ ಅದು ಸ್ವಲ್ಪ ಸ್ವಲ್ಪ ಮಾತಾನಾಡಲೂ ಮತ್ತು ತಿಳಿದುಕೊಳ್ಳಲು ಆರಂಭಿಸುವುದೋ, ಆಗ, ಅದರಿಂದ ಎಲ್ಲಿಯೂ ಅಯೋಗ್ಯವಾದ ವ್ಯವಹಾರವಾಗದೆ, ಎಲ್ಲೆಡೆಯೂ ಗೌರವ ಲಭಿಸುವಂತೆ, ಸುಂದರವಾದ ವಾಣಿಯ, ಮತ್ತು ಹಿರಿಯರು– ಕಿರಿಯರು, ಮಾನ್ಯರು, ಪಿತೃ, ಮಾತೆ, ರಾಜ, ವಿದ್ವಾಂಸ – ಇವರೊಂದಿಗೆ ಸಂಭಾಷಣೆ, ಅವರೊಂದಿಗೆ ವರ್ತನೆ ಮತ್ತು ಅವರ ಹತ್ತಿರ ಕುಳಿತುಕೊಳ್ಳುವುದು – ಮೊದಲಾದವುಗಳ ಶಿಕ್ಷಣವನ್ನು ಕೊಡಬೇಕು. ಮಕ್ಕಳು ಜಿತೇಂದ್ರಿಯರೂ, ವಿದ್ಯಾಪ್ರಿಯರೂ ಆಗುವಂತೆ ಮತ್ತು ಸತ್ಸಂಗದಲ್ಲಿ ಅಭಿರುಚಿ ಹೊಂದುವಂತೆ, ವ್ಯರ್ಥವಾದ ಆಟ, ರೋದನ, ಹಾಸ್ಯ, ಹೋರಾಟ, ಹರ್ಷ, ಶೋಕ,

---

೨. ಶಿಶು– ಜನನ ಸಮಯದಲ್ಲಿ ಜಾತಕರ್ಮ ಸಂಸ್ಕಾರವು ನಡೆಯುತ್ತದೆ. ಅದರಲ್ಲಿ ಹವನವೇ ಮೊದಲಾದ ವೇದೋಕ್ತ ಕರ್ಮಗಳು ನಡೆಯುತ್ತವೆ. ಅವುಗಳನ್ನು ಸ್ವಾಮೀಜೀ ಯವರು 'ಸಂಸ್ಕಾರ ವಿಧಿಯಲ್ಲಿ' ವಿಸ್ತಾರ ಪೂರ್ವಕವಾಗಿ ಬರೆದಿದ್ದಾರೆ. –ಸಮರ್ಥದಾನ

೩. ಇದು ಬಾಣಂತಿ ಅತಿ ನಿರ್ಬಲೆಯಾಗಿರುವ ಸ್ಥಿತಿಯಲ್ಲಿ ಮಾತ್ರ – ಎಂದು ತಿಳಿಯಬೇಕು. –ಅನು. ಈ ಬಗ್ಗೆ ಚರಕ–ಸುಶ್ರುತ ಆಯುರ್ವೇದ ಗ್ರಂಥಗಳಲ್ಲಿ ಪ್ರಮಾಣವಿದೆ.

ಯಾವುದಾದರೂ ಪದಾರ್ಥದಲ್ಲಿ ಲೋಲುಪತೆ, ಈರ್ಷ್ಯೆ, ದ್ವೇಷ ತೋರದಂತೆ, ಉಪಸ್ಥೇಂದ್ರಿಯದ ಸ್ಪರ್ಶದಿಂದ ಮತ್ತು ಮರ್ದನದಿಂದ, ವೀರ್ಯದ ಕ್ಷೀಣತೆ, ನಪುಂಸಕತೆ (ಉಂಟಾಗುವುದು ಮತ್ತು) ಕೈಯಲ್ಲಿ ದುರ್ವಾಸನೆಯೂ ಉಂಟಾಗುವುದು; ಆದುದರಿಂದ ಅದನ್ನು ಮುಟ್ಟಬಾರದು- ಎಂದು ಶಿಕ್ಷಣವಿತ್ತು, ಪ್ರಯತ್ನಿಸುತ್ತಾ ಇರಬೇಕು. ಹೇಗೆ ಸದಾ ಸತ್ಯಭಾಷಣ, ಶೌರ್ಯ, ಧೈರ್ಯ, ಪ್ರಸನ್ನವದನತ್ವ ಮೊದಲಾದ ಗುಣಗಳ ಪ್ರಾಪ್ತಿಯಾಗುವುದೋ, ಹಾಗೆ ಮಾಡಿಸಬೇಕು.

ಯಾವಾಗ ಬಾಲಕ-ಬಾಲಿಕೆಯರು ಐದು-ಐದು ವರ್ಷಗಳವರಾಗುತ್ತಾರೋ ಆಗ, ದೇವನಾಗರೀ ಅಕ್ಷರಗಳ, ಬೇರೆ ದೇಶೀಯ ಭಾಷೆಗಳ ಅಕ್ಷರಗಳ ಅಭ್ಯಾಸವನ್ನೂ ಕೂಡ ಮಾಡಿಸಬೇಕು. ಆಮೇಲೆ, ಉತ್ತಮ ಶಿಕ್ಷಣ, ವಿದ್ಯೆ, ಧರ್ಮ, ಪರಮೇಶ್ವರ, ಮಾತೆ, ಪಿತೃ, ಆಚಾರ್ಯ, ವಿದ್ವಾಂಸ, ಅತಿಥಿ, ರಾಜ, ಪ್ರಜೆ, ಕುಟುಂಬ, ಬಂಧು, ಭಗಿನೀ, ಭೃತ್ಯ ಮೊದಲಾದವರೊಂದಿಗೆ ಹೇಗೆ ಹೇಗೆ ವರ್ತಿಸಬೇಕು - ಎಂಬ ವಿಷಯಗಳ ಮಂತ್ರ, ಶ್ಲೋಕ, ಸೂತ್ರ, ಪದ್ಯಗಳನ್ನೂ ಕೂಡ ಮಕ್ಕಳು ಯಾವನೇ ಧೂರ್ತನ ದುಷ್ಪ್ರೇರಣೆಗೆ ಸಿಕ್ಕದಂತೆ, ಅರ್ಥಸಹಿತವಾಗಿ ಬಾಯಿಪಾಠ ಮಾಡಿಸಬೇಕು. ಮತ್ತು ವಿದ್ಯಾ-ಧರ್ಮವಿರುದ್ಧವಾದ ಭ್ರಾಂತಿಜಾಲದಲ್ಲಿ ಕೆಡಹುವ ಯಾವ ಯಾವ ವ್ಯವಹಾರಗಳಿವೆಯೋ, ಅವುಗಳ ಪರಿಚಯವನ್ನೂ ಕೂಡ, ಭೂತ - ಪ್ರೇತ ಮೊದಲಾದ ಮಿಥ್ಯಾ ವಿಷಯಗಳಲ್ಲಿ ನಂಬಿಕೆ ಉಂಟಾಗದಂತೆ ಮಾಡಿಸಿಬಿಡಬೇಕು.

**ಗುರೋಃ ಪ್ರೇತಸ್ಯ ಶಿಷ್ಯಸ್ತು ಪಿತೃಮೇಧಂ ಸಮಾಚರನ್ ।**

**ಪ್ರೇತಹಾರೈಃ ಸಮಂ ತತ್ರ ದಶರಾತ್ರೇಣ ಶುಧ್ಯತಿ ॥** (ಮನು: ೫. ೬೨)

**ಅರ್ಥ:** - ಗುರುವಿನ ಪ್ರಾಣದ ಕೊನೆಯಾದಾಗ, ಪ್ರೇತ - ಎಂಬ ಹೆಸರುಳ್ಳ ಮೃತಕ ಶರೀರದ ದಹನಮಾಡುವ ಶಿಷ್ಯನು, ಪ್ರೇತಹಾರರು - ಎಂದರೆ ಮೃತಕನನ್ನು ಹೊರುವವನೊಂದಿಗೆ ಹತ್ತನೆಯ ದಿನ ಶುದ್ಧನಾಗುತ್ತಾನೆ.

ಮತ್ತು, ಯಾವಾಗ ಆ ಶರೀರದ ದಹನವಾಗಿ ಹೋಯಿತೋ, ಆಗ ಅವನ ಹೆಸರು **'ಭೂತ'** ಎಂದಾಗುತ್ತದೆ. ಅಂದರೆ-ಇಂತಹ ಹೆಸರಿನ ಪುರುಷ 'ಇದ್ದನು'. ಎಷ್ಟು ಮಂದಿ ಉತ್ಪನ್ನರಾಗುತ್ತಾರೋ ಮತ್ತು ವರ್ತಮಾನ (ಕಾಲ) ಕ್ಕೆ ಬಂದು 'ಇಲ್ಲ' ವಾದರೋ, ಅವರೆಲ್ಲಾ ಭೂತಸ್ಥರಾದ ಕಾರಣ, ಅವರ ಹೆಸರು 'ಭೂತ' ಎಂದಾಗುತ್ತದೆ. ಬ್ರಹ್ಮನಿಂದ ಹಿಡಿದು ಈ ವರೆಗಿನ ವಿದ್ವಾಂಸರ ಸಿದ್ಧಾಂತ ಹೀಗಿದೆ. ಆದರೆ, ಯಾವನಿಗೆ ಸಂದೇಹ, ದುಃಸಂಗ ಮತ್ತು ದುಷ್ಟಸಂಸ್ಕಾರವಾಗಿರುತ್ತದೋ, ಅವನಿಗೆ ಭಯ ಮತ್ತು ಸಂಶಯವೆಂಬ ಭೂತ, ಪ್ರೇತ, ಶಾಕಿನೀ, ಡಾಕಿನೀ ಮೊದಲಾದ ಅನೇಕ ಭ್ರಮಜಾಲಗಳು ದುಃಖದಾಯಕವಾಗುತ್ತವೆ.

ನೋಡಿರಿ. ಯಾವಾಗ ಯಾವನಾದರೂ ಪ್ರಾಣವಂತನು ಸಾಯುತ್ತಾನೋ, ಆಗ ಅವನು ಜೀವನು ಪಾಪ-ಪುಣ್ಯಗಳಿಗೆ ವಶನಾಗಿ, ಪರಮೇಶ್ವರನ ವ್ಯವಸ್ಥೆಯಿಂದ, ಸುಖ-ದುಃಖಗಳ ಫಲಗಳನ್ನು ಅನುಭವಿಸುವುದಕ್ಕಾಗಿ ಬೇರೊಂದು ಜನ್ಮವನ್ನು ಎತ್ತುತ್ತಾನೆ. ಈ ಅವಿನಾಶೀ ಪರಮೇಶ್ವರನ ವ್ಯವಸ್ಥೆಯನ್ನು ಯಾವನಾದರೂ ನಾಶಮಾಡಬಲ್ಲನೇನು? ಅಜ್ಞಾನಿಗಳಾದ ಜನರು ವೈದ್ಯಕಶಾಸ್ತ್ರ ಹಾಗೂ ಪದಾರ್ಥವಿದ್ಯೆಯ ಪಠನ, ಶ್ರವಣ ಮತ್ತು ಆಲೋಚನೆಯಿಂದ ರಹಿತರಾಗಿ, ಸನ್ನಿಪಾತ ಜ್ವರ ಮೊದಲಾದ ಶಾರೀರಿಕ ಮತ್ತು ಉನ್ಮಾದ ಮೊದಲಾದ ಮಾನಸರೋಗಗಳಿಗೆ ಭೂತ, ಪ್ರೇತ, ಮೊದಲಾದ ಹೆಸರುಗಳನ್ನು ಇಟ್ಟುಬಿಡುತ್ತಾರೆ. ಅವಕ್ಕೆ ಔಷಧ - ಸೇವನ ಮತ್ತು ಪಥ್ಯ ಮೊದಲಾದ ಯುಕ್ತ ವ್ಯವಹಾರಗಳನ್ನು ಮಾಡದೆ, ಪಾಖಂಡಿಗಳೂ, ಮಹಾ ಮೂರ್ಖರೂ, ಅನಾಚಾರಿಗಳೂ, ಸ್ವಾರ್ಥಿಗಳೂ ಆದವರ, ಜಲಗಾರರು, ಚಮ್ಮಾರರು, ಶೂದ್ರರು, ಮ್ಲೇಚ್ಛರು- ಮೊದಲಾದವರ ಮೇಲೂ ಕೂಡ ನಂಬಿಕೆಯುಳ್ಳವರಾಗಿ, ಅನೇಕ ಬಗೆಯ ಆಡಂಬರ, ಛಲ, ಕಪಟ ಮತ್ತು ಎಂಜಲನ್ನು ತಿನ್ನುವುದು, ದಾರ, ಸೂತ್ರ - ಮೊದಲಾದ ಮಿಥ್ಯಾ ಮಂತ್ರ-ತಂತ್ರಗಳನ್ನು ಕಟ್ಟುತ್ತಾ, ಕಟ್ಟಿಸುತ್ತಾ ತಿರುಗಾಡುತ್ತಾರೆ, ತಮ್ಮ ಹಣದ ನಾಶ, ಸಂತತಿ ಮೊದಲಾದವರಿಗೆ ದುಃಸ್ಥಿತಿಯನ್ನೂ, ಮತ್ತು ರೋಗವೃದ್ಧಿಯನ್ನೂ ಮಾಡಿ, ದುಃಖವನ್ನುಂಟುಮಾಡುತ್ತಾ ಇರುತ್ತಾರೆ. ಯಾವಾಗ ಕಣ್ಣಿನಿಂದ ಕುರುಡರೂ, ಗಂಟಿನಿಂದ ತುಂಬಿದವರೂ ಆದವರು, ಆ ದುರ್ಬುದ್ಧಿಗಳೂ, ಪಾಪಿಗಳೂ ಆದ ಸ್ವಾರ್ಥಿಗಳ ಬಳಿಹೋಗಿ "ಮಹಾಸ್ವಾಮಿ! ಈ ಹುಡುಗನಿಗೆ, ಹುಡುಗಿಗೆ, ಸ್ತ್ರೀಪುರುಷರಿಗೆ ಏನಾಗಿದೆಯೋ ತಿಳಿಯದು" ಎಂದು ತೋಡಿಕೊಳ್ಳುತ್ತಾರೆ. ಆಗ ಆವರು - 'ಇವನ ಶರೀರದಲ್ಲಿ ಮಹಾಭೂತ, ಪ್ರೇತ, ಭೈರವ, ಶೀತಲಾ ಮೊದಲಾದ ದೇವತೆ ಅವಿಷ್ಟವಾಗಿದೆ, ಎಲ್ಲಿಯವರೆಗೆ ನೀವು ಇದಕ್ಕೆ ಉಪಾಯಮಾಡುವುದಿಲ್ಲವೋ, ಅಲ್ಲಿಯವರೆಗೆ ಇವು ಬಿಟ್ಟುಹೋಗುವುದಿಲ್ಲ; ಮತ್ತು ಪ್ರಾಣಗಳನ್ನೂ ತೆಗೆದುಕೊಂಡು ಬಿಡುವುವು. ನೀವು ಮಿಷ್ಟಾನ್ನ, ಅಥವಾ ಇಷ್ಟು ಕಾಣಿಕೆಗಳನ್ನು ಕೊಟ್ಟರೆ, ನಾವು ಮಂತ್ರ-ಜಪ-ಪುರಶ್ಚರಣದಿಂದ ಒದರಿ, ಇವನ್ನು ಅಟ್ಟಿಬಿಡುತ್ತೇವೆ" ಎನ್ನುತ್ತಾರೆ. ಆಗ ಆ ಅಂಧರೂ ಮತ್ತು ಅವರ

ಸಂಬಂಧಿಕರೂ – "ಮಹಾಸ್ವಾಮಿ! ಬೇಕಾದರೆ ನಮ್ಮ ಸರ್ವಸ್ವವೂ ಹೊರಟು ಹೋಗಲಿ, ಆದರೆ – ಇವನನ್ನು ಸ್ವಸ್ಥರನ್ನಾಗಿ ಮಾಡಿರಿ" ಎಂದು ಹೇಳುತ್ತಾರೆ, ಆಗಲಂತೂ ಅವರ ಇಷ್ಟ ಸಿದ್ಧವಾಗುತ್ತದೆ. ಆ ಧೂರ್ತರೂ – "ಒಳ್ಳೆಯದು; ತನ್ನಿರಿ ಇಷ್ಟು ಸರಕುಗಳನ್ನು, ಇಷ್ಟು ದಕ್ಷಿಣೆಯನ್ನು, ದೇವತೆಗೆ ಕಾಣಿಕೆಯನ್ನೂ ಮತ್ತು ಗ್ರಹ – ದಾನವನ್ನೂ ಒಪ್ಪಿಸಿರಿ" – ಎನ್ನುತ್ತಾರೆ. ಜಾಗಟೆ, ಮೃದಂಗ, ಢೋಲು, ತಟ್ಟೆ ತೆಗೆದುಕೊಂಡು ಅವರೆದುರಿಗೆ ಬಾರಿಸುತ್ತಾರೆ, ಹಾಡುತ್ತಾರೆ. ಮತ್ತು ಅವರಲ್ಲಿ ಒಬ್ಬ ಪಾಖಂಡಿಯು ಉನ್ಮತ್ತನಾಗಿ ಕುಣಿದು – ಕುಪ್ಪಳಿಸಿ, "ನಾನು ಇವನ ಪ್ರಾಣಗಳನ್ನೇ ತೆಗೆದುಕೊಂಡು ಬಿಡುವೆನು". – ಎಂದು ಹೇಳುತ್ತಾನೆ. ಆಗ ಆ ಅಂಧರು, ಆ ಜಲಗಾರನೋ, ಚಮ್ಮಾರನೋ, ಆದ ನೀಚನ ಪಾದಕ್ಕೆರಗಿ– "ತಮಗೆ ಏನು ಬೇಕೋ ತೆಗೆದುಕೊಳ್ಳಿರಿ. ಇವನನ್ನು ರಕ್ಷಿಸಿರಿ."–ಎಂದು ಹೇಳಿಕೊಳ್ಳುತ್ತಾರೆ. ಆಗ ಅವರ ಬಯಕೆ ಕೈಗೂಡುತ್ತದೆ. ಆ ಧೂರ್ತನು ಆಗ – "ನಾನು ಹನುಮಂತ. ತನ್ನಿರಿ ಗಟ್ಟಿ ಮಿಠಾಯಿಯನ್ನು; ಎಣ್ಣೆ, ಕುಂಕುಮ ಒಂದೂಕಾಲು ಮಣ ರೊಟ್ಟಿ ಮತ್ತು ಕೆಂಪು ಕೌಪೀನವನ್ನು". – ಎನ್ನುತ್ತಾನೆ. "ನಾನು ದೇವಿ ಅಥವಾ ಭೈರವ, ತನ್ನಿ ಐದು ಬುರುಡೆ ಹೆಂಡ, ಇಪ್ಪತ್ತು ಕೋಳಿಗಳು, ಐದು ಹೋತಗಳು, ಮಿಠಾಯಿ ಹಾಗೂ ಬಟ್ಟೆಯನ್ನು" – ಎಂದು ಕೂಗುತ್ತಾನೆ, ಅವರು "ಏನು ಬೇಕೋ, ತೆಗೆದುಕೋ" – ಎಂದಾಗಲಂತೂ, ಆ ಉನ್ಮತ್ತ ಬಹಳ ಕುಣಿಯಲೂ, ಕುಪ್ಪಳಿಸಲೂ ಆರಂಭಿಸುತ್ತಾನೆ. ಆದರೆ–ಯಾವನಾದರೂ ಬುದ್ಧಿಶಾಲಿಯು ಐದು ಚಪ್ಪಲಿಗಳನ್ನೋ, ಕೋಲುಗಳನ್ನೋ, ಕೈಪೆಟ್ಟುಗಳನ್ನೋ, ಒದೆಗಳನ್ನೋ ಬಿಗಿದರೆ, ಅವನ ಹನುಮಂತ, ದೇವಿ ಮತ್ತು ಭೈರವ ಕೂಡಲೇ ಪ್ರಸನ್ನರಾಗಿ ಓಡಿಹೋಗುತ್ತಾರೆ. ಏಕೆಂದರೆ ಧನವೇ ಮೊದಲಾದುವನ್ನು ಕಸಿದುಕೊಳ್ಳಲು ಅದೆಲ್ಲಾ ಅವರ ನಟನೆ ಮಾತ್ರ ಆಗಿರುತ್ತದೆ.

ಮತ್ತು ಯಾವಾಗ ಅವರು ಗ್ರಹಗ್ರಸ್ತನೂ, ಗ್ರಹರೂಪನೂ ಆದ ಯಾವನೋ ಜ್ಯೋತಿರ್ವಿದಾಭಾಸನ ಬಳಿ ಹೋಗಿ –"ಮಹಾಸ್ವಾಮಿ! ಇವನಿಗೆ ಆಗಿರುವುದು ಏನು?" – ಎಂದು ಕೇಳುತ್ತಾರೋ, ಆಗ ಅವನು – "ಇವನ ಮೇಲೆಸೂರ್ಯ ಮೊದಲಾದ ಕ್ರೂರಗ್ರಹಗಳು ಏರಿಬಂದಿವೆ. ಅವಕ್ಕೆ ಶಾಂತಿ, ಪಾಠ, ಪೂಜೆ, ದಾನ ಮಾಡಿಸಿದರೆ, ಇವನಿಗೆ ಸುಖವಾಗುವುದು. ಇಲ್ಲವಾದರೆ ತುಂಬಾ ಪೀಡೆಗೆ ಸಿಕ್ಕಿಕೊಳ್ಳುವನು, ಮತ್ತು ಸತ್ತು ಹೋದರೋ ಆಶ್ಚರ್ಯವಿಲ್ಲ" – ಎಂದು ನುಡಿಯುತ್ತಾನೆ.

**ಉತ್ತರ :** – ಹೇಳಿರಿ ಜ್ಯೋತಿಷಿಗಳೇ! ಹೇಗೆ ಈ ಭೂಮಿ ಜಡವೋ, ಹಾಗೆಯೇ ಸೂರ್ಯನೇ ಮೊದಲಾದ ಲೋಕಗಳೂ ಕೂಡ. ಅವು ತಾಪ ಹಾಗೂ ಪ್ರಕಾಶ ಮೊದಲಾದುವುಗಳಿಂದ ಬೇರೆಯಾದುದೇನನ್ನೂ ಮಾಡಲಾರವು. ಕ್ರೋಧಿತವಾಗಿ ದುಃಖವನ್ನೂ, ಮತ್ತು ಶಾಂತವಾಗಿ ಸುಖವನ್ನೂ ಕೊಡಲು ಸಮರ್ಥವಾಗಲು ಅವೇನು ಚೇತನಗಳೇ?

**ಪ್ರಶ್ನೆ :** – ಈ ಜಗತ್ತಿನಲ್ಲಿ ರಾಜರೂ, ಪ್ರಜೆಗಳೂ, ಸುಖಿಗಳೂ, ದುಃಖಿಗಳೂ ಆಗುತ್ತಿರುವುದು ಗ್ರಹಗಳ ಫಲವಲ್ಲವೇನು?

**ಉತ್ತರ:** – ಅಲ್ಲ. ಇವೆಲ್ಲಾ ಪಾಪ–ಪುಣ್ಯಗಳ ಫಲಗಳು.

**ಪ್ರಶ್ನೆ :** – ಹಾಗಾದರೆ, ಜ್ಯೋತಿಶಾಸ್ತ್ರ ಸುಳ್ಳೇನು?

**ಉತ್ತರ:** – ಅಲ್ಲ. ಅದರಲ್ಲಿ ಯಾವ ಅಂಕ, ಬೀಜ ಹಾಗೂ ರೇಖಾಗಣಿತದ ವಿದ್ಯೆಯಿದೆಯೋ, ಅದೆಲ್ಲವೂ ಸತ್ಯ; ಯಾವ ಫಲದ ಲೀಲೆಯಿದೆಯೋ, ಅದೆಲ್ಲಾ ಸುಳ್ಳು.

**ಪ್ರಶ್ನೆ :** – ಈ ಜನ್ಮಪತ್ರ (ಜಾತಕ) ವಾವುದಿದೆಯೋ, ಅದು ನಿಷ್ಫಲವೇನು?

**ಉತ್ತರ:** – ಹೌದು, ಅದು ಜನ್ಮಪತ್ರವಲ್ಲ; ಅದಕ್ಕೆ 'ಶೋಕ ಪತ್ರ' ಎಂದು ಹೆಸರಿಡಬೇಕು. ಏಕೆಂದರೆ, ಸಂತತಿ ಜನಿಸಿದಾಗ, ಎಲ್ಲರಿಗೂ ಆನಂದವಾಗುತ್ತದೆ. ಆದರೆ, ಈ ಆನಂದ ಜನ್ಮಪತ್ರ ರಚಿತವಾಗಿ, ಗ್ರಹಗಳ ಫಲವನ್ನು ಕೇಳದೇ ಇರುವವರೆಗೆ ಇರುತ್ತದೆ. ಪುರೋಹಿತನು ಜನ್ಮ – ಪತ್ರ ರಚಿಸಬೇಕೆಂದು ಹೇಳಿದಾಗ, ಮಗುವಿನ ಮಾತಾಪಿತೃಗಳು ಪುರೋಹಿತನಿಗೆ – "ಸ್ವಾಮಿ! ತಾವು ಅತ್ಯುತ್ತಮವಾದ ಜನ್ಮಪತ್ರ ರಚಿಸಿರಿ" ಎಂದು ಹೇಳುತ್ತಾರೆ. ಧನಾಢ್ಯನಾಗಿದ್ದಲ್ಲಿ ಬಹಳ ಕೆಂಪು – ಹಳದಿ ಗೆರೆಗಳಿಂದ ಚಿತ್ರ–ವಿಚಿತ್ರವಾದ ಮತ್ತು ನಿರ್ಧನನಾಗಿದ್ದಲ್ಲಿ ಸಾಧಾರಣವಾದ ರೀತಿಯಲ್ಲಿ ಜನ್ಮ– ಪತ್ರ ರಚಿಸಿ, ಓದಿ ಹೇಳಲು ಬರುತ್ತಾನೆ. ಆಗ ಮಗುವಿನ ಮಾತಾಪಿತೃಗಳು ಜ್ಯೋತಿಷಿಯ ಮುಂದೆ ಕುಳಿತು – "ಇವನ ಜನ್ಮಪತ್ರ ಚೆನ್ನಾಗಿದೆ ತಾನೇ?" ಎಂದು ಕೇಳುತ್ತಾರೆ. ಜ್ಯೋತಿಷಿಯು – "ಏನಿದೆಯೋ ಅದನ್ನು ಓದಿ ಹೇಳಿ ಬಿಡುತ್ತೇನೆ. ಇವನ ಜನ್ಮಗ್ರಹಗಳು ಬಹಳ ಒಳ್ಳೆಯವು; ಮತ್ತು ಮಿತ್ರಗ್ರಹಗಳೂ ಕೂಡ (ಬಹಳ) ಒಳ್ಳೆಯವಾಗಿವೆ. ಅವುಗಳ ಫಲವಾಗಿ (ಶಿಶು) ಧನಾಢ್ಯನೂ ಮತ್ತು ಪ್ರತಿಷ್ಠಾವಂತನೂ ಆಗುವನು. ಯಾವ ಸಭೆಯಲ್ಲಿ ಹೋಗಿ ಕುಳಿತುಕೊಳ್ಳುವನೋ, ಅಲ್ಲಿ ಎಲ್ಲರ ಮೇಲೂ ಇವನ ವರ್ಚಸ್ಸು ಬೀಳುವುದು. ಶರೀರದಿಂದ ಸ್ವಸ್ಥನೂ, ರಾಜ್ಯದಿಂದ ಗೌರವಾನ್ವಿತನೂ ಆಗುವನು". ಎಂದು ಮೊದಲಾಗಿ ಹೇಳುವನು. ಈ ಮಾತುಗಳನ್ನು ಕೇಳಿ,

ತಂದೆಯೇ ಮೊದಲಾದವರು – "ಭಲೇ, ಭಲೇ, ಜೋಯಿಸರೇ! ತಾವು ತುಂಬಾ ಒಳ್ಳೆಯವರು" ಎನ್ನುತ್ತಾರೆ. ಈ ಮಾತುಗಳಿಂದ ಕಾರ್ಯ ಸಿದ್ಧಿಸುವುದಿಲ್ಲವೆಂದು ಜ್ಯೋತಿಷಿಗಳು ತಿಳಿದುಕೊಳ್ಳುತ್ತಾರೆ. ಆಗ ಜ್ಯೋತಿಷಿಗಳು – "ಈ ಗ್ರಹಗಳೇನೋ ಬಹಳ ಒಳ್ಳೆಯವು. ಆದರೆ ಈ ಗ್ರಹಗಳು ಕ್ರೂರವಾಗಿದೆ. ಅಂದರೆ – ಇಂತಿಂತಹ ಗ್ರಹಗಳ ಯೋಗದಿಂದ ಎಂಟು ವರ್ಷದಲ್ಲಿ ಇವನಿಗೆ ಮೃತ್ಯುಯೋಗವಿದೆ." ಎಂದು ಸಾರುತ್ತಾರೆ. ಇದನ್ನು ಕೇಳಿ ಮಾತಾಪಿತೃಗಳು ಪುತ್ರ – ಜನ್ಮದ ಆನಂದವನ್ನು ಬಿಟ್ಟು, ಶೋಕಸಾಗರದಲ್ಲಿ ಮುಳುಗಿ, ಜ್ಯೋತಿಷಿಯನ್ನು–"ಮಹಾಸ್ವಾಮಿಗಳೇ! ಈಗ ನಾವೇನು ಮಾಡೋಣ"? – ಎಂದು ಕೇಳುತ್ತಾರೆ. ಜ್ಯೋತಿಷಿಗಳು – "ಉಪಾಯ ಮಾಡಿರಿ"– ಎನ್ನುತ್ತಾರೆ. ಗೃಹಸ್ಥರು "ಏನು ಉಪಾಯ ಮಾಡೋಣ?"– ಎಂದು ಕೇಳಿದರೆ, ಜ್ಯೋತಿಷಿಗಳು–"ಇಂತಿಂತಹ ದಾನ ಮಾಡಿರಿ ಗ್ರಹಗಳ ಮಂತ್ರದ ಜಪಮಾಡಿಸಿರಿ. ಮತ್ತು ದಿನವೂ ಬ್ರಾಹ್ಮಣರಿಗೆ ಸಂತರ್ಪಣೆಮಾಡಿಸಿರಿ. ಹೀಗೆ ಮಾಡಿದರೆ, ಪ್ರಾಯಶಃ ನವಗ್ರಹಗಳ ವಿಘ್ನ ಹರಿದುಹೋಗಬಹುದು" – ಎಂದು ಪ್ರಸ್ತಾಪಿಸತೊಡಗುತ್ತಾರೆ. "ಪ್ರಾಯಶಃ" – ಎಂಬ ಮಾತು ಈ ಉದ್ದೇಶ್ಯಕ್ಕಾಗಿ. ತೀರಿಯೇಹೋದರೆ– "ನಾವೇನು ಮಾಡೋಣ? ಪರಮೇಶ್ವರನಿಗಿಂತ ಮೇಲೆ ಯಾರೂ ಇಲ್ಲ. ನಾವೇನೋ ಬಹಳ ಯತ್ನಮಾಡಿದೆವು; ಮತ್ತು ನೀವು ಮಾಡಿಸಿದಿರಿ. ಅವನ ಕರ್ಮಗಳು ಹೀಗೆಯೇ ಇದ್ದವು." ಎನ್ನಬಹುದು. ಮತ್ತು ಉಳಿದುಕೊಂಡರೆ – "ನೋಡಿ, ನಮ್ಮ ಮಂತ್ರಗಳ, ದೇವತೆಗಳ ಹಾಗೂ ಬ್ರಾಹ್ಮಣರ ಶಕ್ತಿ ಹೇಗಿದೆ? ನಿಮ್ಮ ಹುಡುಗನನ್ನು ಉಳಿಸಿಬಿಟ್ಟೆವು."– ಎನ್ನುವರು. ಈ ಸಂದರ್ಭದಲ್ಲಿ ಹೀಗೆ ಮಾಡಬೇಕು; ಇವರ ಜಪ–ಪಾಠಗಳಿಂದ ಏನೂ ಆಗದಿದ್ದರೆ, ಈ ಧೂರ್ತರಿಂದ ಎರಡು–ಮೂರು ಪಟ್ಟು ರೂಪಾಯಿಗಳನ್ನು ಕಿತ್ತುಕೊಳ್ಳಬೇಕು. ಮತ್ತು, ಉಳಿದುಕೊಂಡರೂ ಕೂಡ ತೆಗೆದುಕೊಂಡು ಬಿಡಬೇಕು. ಏಕೆಂದರೆ, ಜ್ಯೋತಿಷಿಗಳೇ ಹೇಳಿದಂತೆ. "ಇವನು ತನ್ನ ಕರ್ಮ ಮತ್ತು ಪರಮೇಶ್ವರನ ನಿಯಮದಿಂದ ಉಳಿದನೇ ಹೊರತು, ನಿಮ್ಮ ಕ್ರಿಯಾಕಾಂಡದಿಂದ ಅಲ್ಲ". – ಎಂದೆನ್ನಬೇಕು.

ಮತ್ತು, ಮೂರನೆಯದಾಗಿ, ಗುರು ಮೊದಲಾದವರೂ ಕೂಡ ಪುಣ್ಯದಾನ ಮಾಡಿಸಿ, ತಾನೇ ತೆಗೆದುಕೊಂಡರೆ, ಅವರಿಗೂ ಕೂಡ ಜ್ಯೋತಿಷಿಗಳಿಗೆ ಕೊಟ್ಟಂತಹ ಉತ್ತರವನ್ನೇ ಕೊಡಬೇಕು.

ಇನ್ನು ಉಳಿದುದು ಶೀತಲಾ ಮತ್ತು ಮಂತ್ರ–ತಂತ್ರ–ಯಂತ್ರ ಮೊದಲಾದುವು. ಇವರೂ ಕೂಡಾ ಇಂತಹ ಬೂಟಾಟಿಕೆಯನ್ನೇ ಮಾಡುತ್ತಾರೆ. ಯಾವನೋ ಒಬ್ಬನು "ನಾವು ಮಂತ್ರ ಉಚ್ಚರಿಸಿ, ಹಾರ ಅಥವಾ ಯಂತ್ರವನ್ನು ಕಟ್ಟಿದಲ್ಲಿ, ನಮ್ಮ ದೇವತೆಗಳು ಮತ್ತು ಪೀರರು ಆ ಮಂತ್ರ – ಯಂತ್ರದ ಪ್ರತಾಪದಿಂದ, ಅವನಿಗೆ ಯಾವ ವಿಘ್ನವನ್ನೂ ಆಗಗೊಡುವುದಿಲ್ಲ". ಎಂದು ಹೇಳುತ್ತಾನೆ. ಅವರಿಗೆ – "ನೀವು ಮೃತ್ಯು, ಪರಮೇಶ್ವರನ ನಿಯಮ ಮತ್ತು ಕರ್ಮಫಲದಿಂದಲೂ ದೂರವಿಟ್ಟು ರಕ್ಷಿಸಬಲ್ಲಿರೇನು? ನೀವು ಈ ರೀತಿ ಮಾಡಿದರೂ ಕೂಡ ಎಷ್ಟೋ ಮಕ್ಕಳು ಸತ್ತುಹೋಗುತ್ತಾರೆ. ಮತ್ತು, ನಿಮ್ಮ ಮನೆಯಲ್ಲಿಯೂ ಸಾಯುತ್ತಾರೆ. ಮತ್ತು, ನೀವು ಸಾವಿನಿಂದ ಪಾರಾಗಬಲ್ಲಿರೇನು?"– ಎಂಬ ಅದೇ ಉತ್ತರವನ್ನು ಕೊಡಬೇಕು. ಆಗ ಅವರು ಏನನ್ನೂ ಹೇಳಲಾರರು. ಮತ್ತು ಆ ಧೂರ್ತರೂ – "ಇಲ್ಲಿ ನಮ್ಮ ಬೇಳೆ ಬೇಯುವುದಿಲ್ಲ" –ಎಂದು ತಿಳಿದುಕೊಳ್ಳುತ್ತಾರೆ. ಆದುದರಿಂದ, ಈ ಸಮಸ್ತ ಮಿಥ್ಯಾವ್ಯವಹಾರಗಳನ್ನೂ ಬಿಟ್ಟು, ಧಾರ್ಮಿಕರೂ, ಸಮಸ್ತ ದೇಶಗಳಿಗೂ ಉಪಕಾರ ಮಾಡುವವರೂ, ನಿಷ್ಕಪಟತ್ವದಿಂದ ಸರ್ವರಿಗೂ ವಿದ್ಯೆ ಕಲಿಸುವವರೂ ಆದ ವಿದ್ವಜ್ಜನರಿಗೆ, ಅವರು ಜಗತ್ತಿಗೆ ಉಪಕಾರ ಮಾಡುವಂತೆಯೇ, ಪ್ರತ್ಯುಪಕಾರ ಮಾಡಬೇಕು. ಈ ಕಾರ್ಯವನ್ನು ಎಂದಿಗೂ ಬಿಡಬಾರದು. ಮತ್ತು ಯಾರು ರಸಾಯನ, ಮಾರಣ, ಮೋಹನ, ಉಚ್ಚಾಟನ, ವಶೀಕರಣ ಮೊದಲಾದ ಎಷ್ಟೋ ಲೀಲೆಗಳ ಅನುಷ್ಠಾನವನ್ನು ಬಣ್ಣಿಸುತ್ತಾರೋ, ಅವರನ್ನೂ ಕೂಡ ಮಹಾ ಪಾಮರರೆಂದು ತಿಳಿಯಬೇಕು. ಈ ಮೊದಲಾದ ಸುಳ್ಳು ವಿಷಯಗಳ ಪರಿಚಯವನ್ನೂ ಕೂಡ, ತಮ್ಮ ಸಂತತಿ ಯಾವನ ಭ್ರಮಜಾಲದಲ್ಲಿಯೂ ಬಿದ್ದು ದುಃಖ ಹೊಂದದ ಹಾಗೆ ಬಾಲ್ಯಾವಸ್ಥೆಯಲ್ಲಿಯೇ ಮಕ್ಕಳು ಹೃದಯಗಳಲ್ಲಿ ನಾಟಿ ಬಿಡಬೇಕು.

ಮತ್ತು ವೀರ್ಯದ ರಕ್ಷಣೆಯಿಂದ ಆನಂದ, ಹಾಗೂ ನಾಶಮಾಡಿಕೊಳ್ಳುವುದರಿಂದ ದುಃಖಪ್ರಾಪ್ತಿ ಆಗುವುದನ್ನು ತಿಳಿಸಿಬಿಡಬೇಕು, ಹೇಗೆಂದರೆ, "ನೋಡಿರಿ. ಯಾವನ ಶರೀರದಲ್ಲಿ ಸುರಕ್ಷಿತವಾದ ವೀರ್ಯವಿರುತ್ತದೋ ಆಗ ಅವನಿಗೆ ಆರೋಗ್ಯ, ಬುದ್ಧಿ, ಬಲ, ಪರಾಕ್ರಮಗಳು ಹೆಚ್ಚಿ, ಬಹಳ ಸುಖವೂ ಲಭಿಸುತ್ತದೆ. ಇದರ ರಕ್ಷಣೆಯ ವಿಧಾನ ಇದೇ ಆಗಿದೆ:– ವಿಷಯಗಳ ಕಥೆ, ವಿಷಯಾಸಕ್ತ ಜನರ ಸಂಗ, ವಿಷಯಗಳ ಧ್ಯಾನ, ನಾರಿಯ ದರ್ಶನ, ಏಕಾಂತಸೇವನ, ಸಂಭಾಷಣ, ಮತ್ತು ಸ್ಪರ್ಶ – ಮೊದಲಾದ ಕರ್ಮದಿಂದ ಬ್ರಹ್ಮಚಾರಿಗಳು ಬೇರೆಯಿದ್ದು, ಉತ್ತಮ ಶಿಕ್ಷಣ ಮತ್ತು ಪೂರ್ಣವಿದ್ಯೆಯನ್ನು ಗಳಿಸಬೇಕು. ಯಾವನ ಶರೀರದಲ್ಲಿ ವೀರ್ಯವಿರುವುದಿಲ್ಲವೋ, ಅವನು ನಪುಂಸಕನೂ ಮಹಾ ಅವಲಕ್ಷಣವುಳ್ಳವನೂ ಆಗುತ್ತಾನೆ. ಯಾವನಿಗೆ ಪ್ರಮೇಹ ರೋಗ ಹತ್ತುವುದೋ ಅವನು ದುರ್ಬಲನೂ, ನಿಸ್ತೇಜನೂ, ಬುದ್ಧಿಹೀನನೂ, ಉತ್ಸಾಹ–ಸಾಹಸ–ಧೈರ್ಯ–ಬಲ ಪರಾಕ್ರಮ ಮೊದಲಾದ ಗುಣಗಳಿಂದ ರಹಿತನೂ ಆಗಿ, ನಾಶಹೊಂದುತ್ತಾನೆ. ನೀವುಗಳು ಸುಶಿಕ್ಷಣ, ಮತ್ತು

ವಿದ್ಯಾಗ್ರಹಣ, ವೀರ್ಯ ರಕ್ಷಣಮಾಡುವುದರಲ್ಲಿ ಈಗ ತಪ್ಪುವಿರಾದರೆ, ಪುನಃ ಈ ಜನ್ಮದಲ್ಲಿ ನಿಮಗೆ ಈ ಅಮೂಲ್ಯವಾದ ಆವಕಾಶ ಸಿಕ್ಕಲಾರದು. ಗೃಹಕೃತ್ಯಗಳನ್ನು ನಿರ್ವಹಿಸುವ ನಾವುಗಳು ಜೀವಿಸುತ್ತಿರುವಾಗಲೇ, ನೀವು ವಿದ್ಯಾಗ್ರಹಣ ಮಾಡಬೇಕು ಮತ್ತು ಶರೀರದ ಬಲವನ್ನು ಹೆಚ್ಚಿಸಿಕೊಳ್ಳಬೇಕು." ಇದೇ ರೀತಿ ಬೇರೆ ಬೇರೆ ಶಿಕ್ಷಣಗಳನ್ನೂ ಕೂಡ ತಾಯಿ ಮತ್ತು ತಂದೆ ಕೊಡಬೇಕು. ಈ ಕಾರಣದಿಂದಲೇ ಮೇಲೆ ಹೇಳಿದ ವಚನದಲ್ಲಿ 'ಮಾತೃಮಾನ್-ಪಿತೃಮಾನ್' ಎಂಬ ಶಬ್ದಗಳನ್ನು ಗ್ರಹಿಸಲಾಗಿದೆ. ಎಂದರೆ, ಜನನದಿಂದ ಐದನೆಯ ವರ್ಷದವರೆಗೆ ಮಕ್ಕಳಿಗೆ ಮಾತೆಯೂ ಆರನೆಯ ವರ್ಷದಿಂದ ಎಂಟನೆಯ ವರ್ಷದವರೆಗೆ ಪಿತನೂ ಶಿಕ್ಷಣಕೊಡಬೇಕು ಮತ್ತು ಒಂಭತ್ತನೆಯ ವರ್ಷದ ಆರಂಭದಲ್ಲಿ ದ್ವಿಜರು ತಮ್ಮ ಮಕ್ಕಳಿಗೆ ಉಪನಯನಮಾಡಿಸಿ, ಆಚಾರ್ಯಕುಲಕ್ಕೆ, ಎಂದರೆ ಎಲ್ಲಿ ಪೂರ್ಣವಿದ್ವಾಂಸರೂ ಮತ್ತು ಪೂರ್ಣ ವಿದುಷಿಯರಾದ ಸ್ತ್ರೀಯರೂ ವಿದ್ಯಾದಾನ ಮಾಡುವವರಾಗಿರುತ್ತಾರೋ, ಅಲ್ಲಿಗೆ ಬಾಲಕರನ್ನೂ, ಬಾಲಿಕೆಯರನ್ನೂ ಕಳುಹಿಸಬೇಕು. ಮತ್ತು ಶೂದ್ರರೇ ಮೊದಲಾದ ವರ್ಣದವರು[೪] ಉಪನಯನ ಮಾಡಿಸದೆ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಿಬಿಡಬೇಕು.

ಯಾರು ಓದಿಸುವಲ್ಲಿ ಮಕ್ಕಳನ್ನು ಎಂದಿಗೂ ಮುದ್ದಿಸುವುದಿಲ್ಲವೋ, ಆದರೆ ತಾಡನವನ್ನೇ ಮಾಡುತ್ತಾರೋ, ಅವರ ಮಕ್ಕಳೇ ವಿದ್ವಾಂಸರೂ, ಸಭ್ಯರೂ ಮತ್ತು ಸುಶಿಕ್ಷಿತರೂ ಆಗುತ್ತಾರೆ. ಇದಕ್ಕೆ ವ್ಯಾಕರಣಮಹಾಭಾಷ್ಯದ ಪ್ರಮಾಣವಿದೆ :

**ಸಾಮೃತೈಃ ಪಾಣಿಭಿರ್ಘ್ನಂತಿ ಗುರವೋ ನ ವಿಷೋಕ್ಷಿತೈಃ ।**

**ಲಾಲನಾಶ್ರಯಿಣೋ ದೋಷಾಸ್ತಾಡನಾಶ್ರಯಿಣೋ ಗುಣಾಃ ॥** (ಮಹಾಭಾಷ್ಯ : ೮.೧.೮)

**ಅರ್ಥ:** – ಯಾವ ಮಾತಾ – ಪಿತೃಗಳೂ, ಮತ್ತು ಆಚಾರ್ಯರೂ ಸಂತತಿ ಮತ್ತು ಶಿಷ್ಯರನ್ನು ತಾಡಿಸುತ್ತಾರೋ, ಅವರು ತಮ್ಮ ಸಂತತಿ ಮತ್ತು ಶಿಷ್ಯರಿಗೆ ತಮ್ಮ ಕೈಯಿಂದ ಅಮೃತಪಾನ ಮಾಡಿಸುತ್ತಾರೆ ಮತ್ತು ಯಾರು ಸಂತತಿ ಮತ್ತು ಶಿಷ್ಯರನ್ನು ಮುದ್ದಿಸುತ್ತಾರೋ, ಅವರು ತಮ್ಮ ಸಂತತಿ ಮತ್ತು ಶಿಷ್ಯರಿಗೆ ವಿಷಕುಡಿಸಿ ಸರ್ವಥಾ ಹಾಳು ಮಾಡಿಬಿಡುತ್ತಾರೆ – ಎಂದೇ ತಿಳಿಯಿರಿ. ಏಕೆಂದರೆ – ಮುದ್ದಿನಿಂದ ಸಂತತಿ ಮತ್ತು ಶಿಷ್ಯರು ದೋಷಯುಕ್ತರೂ ಮತ್ತು ತಾಡನದಿಂದ ಗುಣಯುಕ್ತರೂ ಆಗುತ್ತಾರೆ. ಮತ್ತು ಮಕ್ಕಳೂ ಹಾಗೂ ಶಿಷ್ಯರೂ ಕೂಡ ಸದಾ ತಾಡನದಿಂದ ಪ್ರಸನ್ನರೂ ಮತ್ತು ಮುದ್ದಿನಿಂದ ಅಪ್ರಸನ್ನರೂ ಆಗುವ ರೂಢಿಯಿಟ್ಟುಕೊಳ್ಳಬೇಕು. ಆದರೆ ಮಾತೆ, ಪಿತೃ ಮತ್ತು ಅಧ್ಯಾಪಕರುಗಳು ಈರ್ಷ್ಯಾ-ದ್ವೇಷಗಳಿಂದ ತಾಡಿಸಬಾರದು. ಆದರೆ ಮೇಲೆ ಮೇಲೆ ಭಯಪ್ರದಾನ ಮಾಡಬೇಕು ಮತ್ತು ಒಳಗಿನಿಂದ ಕೃಪಾದೃಷ್ಟಿಯನ್ನಿಡಬೇಕು.

ಹೇಗೆ ಅನ್ಯ ಶಿಕ್ಷಣ ಕೊಟ್ಟರೋ, ಹಾಗೆಯೇ ಕಳ್ಳತನ, ವ್ಯಭಿಚಾರ, ಆಲಸ್ಯ ಪ್ರಮಾದ, ಮಾದಕದ್ರವ್ಯ, ಮಿಥ್ಯಾಭಾಷಣ, ಹಿಂಸೆ, ಕ್ರೌರ್ಯ, ಈರ್ಷ್ಯೆ, ದ್ವೇಷ, ಮೋಹ ಮೊದಲಾದ ದೋಷಗಳನ್ನು ಬಿಡುವ ಮತ್ತು ಸತ್ಯಾಚಾರವನ್ನು ಗ್ರಹಿಸುವ ಶಿಕ್ಷಣವನ್ನೂ ಕೊಡಬೇಕು. ಏಕೆಂದರೆ – ಯಾವ ಪುರುಷನು, ಯಾವನ ಮುಂದೆ ಒಂದು ಸಾರಿ ಕಳವು, ಹಾದರ, ಸುಳ್ಳಾಟಿಕೆ ಮೊದಲಾದ ಕಾರ್ಯಗಳನ್ನು ಮಾಡಿದನೋ, ಅವನಿಗೆ ಗೌರವ ಅವನು ಮುಂದೆ ಸಾಯುವವರೆಗೂ ಸಿಕ್ಕುವುದಿಲ್ಲ. ಪ್ರತಿಜ್ಞೆಯನ್ನು ಸುಳ್ಳಾಗಿಸುವವನಿಗೆ ಎಂತಹ ಹಾನಿಯುಂಟಾಗುವುದೋ, ಅಂತಹದು ಬೇರೆ ಯಾವನಿಗೂ ಉಂಟಾಗುವುದಿಲ್ಲ. ಆದುದರಿಂದ, ಯಾವನ ಸಂಗಡ ಎಂತಹ ಪ್ರತಿಜ್ಞೆ ಮಾಡುತ್ತಾನೋ, ಅವನೊಂದಿಗೆ ಹಾಗೆಯೇ ಅದನ್ನು ಪೂರ್ತಿಮಾಡಬೇಕು. ಎಂದರೆ, ಯಾವನಾದರೊಬ್ಬನು ಇನ್ನೊಬ್ಬನಿಗೆ "ನಾನು ನಿನ್ನನ್ನು ಅಥವಾ ನೀನು ನನ್ನನ್ನು ಇಂತಹ ವೇಳೆ ಸಂಧಿಸಬೇಕು; ಅಥವಾ ಸಂಧಿಸು. ಇಲ್ಲವೇ, ಇಂತಹ ವಸ್ತುವನ್ನು ಇಂತಹ ವೇಳೆಯಲ್ಲಿ ನಾನು ನಿನಗೆ ಕೊಡುವೆನು" ಎಂದು ಹೇಳಿದರೆ, ಅದನ್ನು ಹಾಗೆಯೇ ಪೂರ್ಣಗೊಳಿಸಬೇಕು. ಇಲ್ಲವಾದರೆ ಅವನನ್ನು ಯಾವನೂ ನಂಬುವುದಿಲ್ಲ. ಆದುದರಿಂದ ಎಲ್ಲರೂ, ಯಾವಾಗಲೂ ಸತ್ಯಭಾಷಣಯುಕ್ತರೂ, ಸತ್ಯ ಪ್ರತಿಜ್ಞಾಯುಕ್ತರೂ ಆಗಿರಬೇಕು. ಯಾವನೂ ಅಭಿಮಾನಮಾಡಬಾರದು. ಛಲ, ಕಪಟ ಅಥವಾ ಕೃತಘ್ನತೆಯಿಂದ ತನ್ನ ಹೃದಯವೇ ದುಃಖಿತವಾಗುತ್ತದೆ; ಇನ್ನು ಬೇರೆಯವನ ಕಥೆಯನ್ನಾದರೂ ಏನು ಹೇಳಬೇಕು? ಒಳಗೊಂದು – ಹೊರಗೊಂದು ಇಟ್ಟುಕೊಂಡು. ಬೇರೆಯವನನ್ನು ಮೋಹಕ್ಕೆ ಸಿಕ್ಕಿಸಿ, ಮತ್ತು ಬೇರೆಯವನ ಹಾನಿಯ ಕಡೆ ಗಮನಕೊಡದೆ, ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವುದನ್ನೇ ಛಲ ಮತ್ತು ಕಪಟ ಎನ್ನುತ್ತಾರೆ. ಯಾವನಾದರೂ

೪. ಮಹರ್ಷಿಗಳು ಗುಣ ಕರ್ಮ ಸ್ವಭಾವಾಶ್ರಿತವಾದ ನಾಲ್ಕೇ ವರ್ಣಗಳನ್ನು ಅಂಗೀಕರಿಸಿದ್ದಾರೆ. ಆಧುನಿಕ ಸಮಾಜ ಜನ್ಮಗತ ಜಾತಿಗಳನ್ನು ಒಪ್ಪಿದರೂ, ದ್ವಿಜರ – ಎಂದರೆ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರನಿಸಿಕೊಳ್ಳುವವರಲ್ಲಿ ಉಪನಯನ ಪದ್ಧತಿಯಿದೆ. ಶೂದ್ರ ಹಾಗೂ ಅಂತ್ಯಜ ಮೊದಲಾದ ಹೆಸರುಗಳನ್ನುಳ್ಳವರಲ್ಲಿ ಈ ಪದ್ಧತಿಯಿಲ್ಲದ ಕಾರಣ ಹೀಗೆಂದಿದ್ದಾರೆ. ವೇದೋಕ್ತ ವರ್ಣವ್ಯವಸ್ಥೆ ಒಪ್ಪಿದರೂ ಶೂದ್ರರಿಗೆ ಈ ನಿಯಮ ಅನ್ವಯಿಸುವುದು ನಿಜ. –ಅನು.

ಮಾಡಿದ ಉಪಕಾರವನ್ನು ಒಪ್ಪಿಕೊಳ್ಳದಿರುವುದನ್ನೇ ಕೃತಘ್ನತೆ – ಎನ್ನುತ್ತಾರೆ. ಕ್ರೋಧ ಮೊದಲಾದ ದೋಷ ಮತ್ತು ಕಟುವಚನವನ್ನು ಬಿಟ್ಟು, ಶಾಂತ ಹಾಗೂ ಮಧುರ ವಚನವನ್ನೇ ಆಡಬೇಕು ಮತ್ತು ಹೆಚ್ಚು ಹರಟಬಾರದು. ಎಷ್ಟು ಮಾತನ್ನಾಡಬೇಕೋ, ಅದಕ್ಕಿಂತ ಕಡಿಮೆಯಾಗಿ ಅಥವಾ ಹೆಚ್ಚಾಗಿ ಮಾತನಾಡಬಾರದು. ಹಿರಿಯರಿಗೆ ಮನ್ನಣೆ ಕೊಡಬೇಕು; ಅವರ ಮುಂದೆ ಎದ್ದುಹೋಗಿ, ಉನ್ನತವಾದ ಆಸನದ ಮೇಲೆ ಕೂಡಿಸಬೇಕು; ಮೊದಲು ನಮಸ್ತೇ ಮಾಡಬೇಕು. ಅವರ ಮುಂದೆ ಉತ್ತಮಾಸನದ ಮೇಲೆ ಕೂಡಬಾರದು. ಸಭೆಯಲ್ಲಿ ತನ್ನ ಯೋಗ್ಯತೆಗೆ ತಕ್ಕ ಮತ್ತು ಬೇರೆ ಯಾವನೂ ಎಬ್ಬಿಸಲು ಎಡೆಯಿಲ್ಲದ ಸ್ಥಳದಲ್ಲಿ ಕುಳಿತುಕೊಳ್ಳಬೇಕು. ಯಾವನೊಂದಿಗೂ ವಿರೋಧ ಕಟ್ಟಿಕೊಳ್ಳಬಾರದು. ಸಂಪನ್ನವಾಗಿ ಗುಣಗಳ ಗ್ರಹಣವನ್ನೂ, ದೋಷಗಳ ತ್ಯಾಗವನ್ನೂ ಮಾಡಬೇಕು. ಸಜ್ಜನರ ಸಂಗವನ್ನೂ ಹಾಗೂ ದುಷ್ಟರ ತ್ಯಾಗವನ್ನೂ, ತನು–ಮನ–ಧನವೇ ಮೊದಲಾದ ಉತ್ತಮೋತ್ತಮ ವಸ್ತುಗಳಿಂದ ಪ್ರೀತಿಪೂರ್ವಕವಾಗಿ ತನ್ನ ತಾಯಿ, ತಂದೆ ಮತ್ತು ಆಚಾರ್ಯರ ಸೇವೆಯನ್ನೂ ಮಾಡಬೇಕು.

**ಯಾನ್ಯಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ ।** (ತೈತ್ತಿರೀಯ–೧–೧೧)

ತಾಯಿ, ತಂದೆ ಮತ್ತು ಆಚಾರ್ಯರು ತಮ್ಮ ಮಕ್ಕಳಿಗೆ ಮತ್ತು ಶಿಷ್ಯರಿಗೆ ಸದಾ ಸತ್ಯದ ಉಪದೇಶವನ್ನೇ ಮಾಡಬೇಕು ಮತ್ತು ನಮ್ಮ ಯಾವ ಧರ್ಮಯುಕ್ತ ಕರ್ಮಗಳಿವೆಯೋ ಅವುಗಳನ್ನು ಮಾತ್ರ ಗ್ರಹಿಸಿರಿ; ಯಾವ ಯಾವ ದುಷ್ಟ ಕರ್ಮ ಗಳಿವೆಯೋ ಅವುಗಳನ್ನು ತ್ಯಜಿಸುತ್ತಾ ಹೋಗಿರಿ – ಎಂದು ಕೂಡ ಹೇಳಬೇಕು – ಎಂಬುದು ಇದರ ಅಭಿಪ್ರಾಯವಾಗಿದೆ. ಯಾವ ಯಾವುದನ್ನು ಸತ್ಯವೆಂದು ತಿಳಿಯುತ್ತೀರೋ, ಅವುಗಳ ಪ್ರಕಾಶನವನ್ನೂ ಹಾಗೂ ಪ್ರಚಾರವನ್ನೂ ಮಾಡಬೇಕು. ಯಾವನೇ ಪಾಖಂಡಿಯಾದ, ದುಷ್ಟಾಚಾರಿಯಾದ ಮನುಷ್ಯನನ್ನೂ ನಂಬಬಾರದು. ಮತ್ತು ಯಾವ ಯಾವ ಉತ್ತಮ ಕರ್ಮಕ್ಕೆ ತಾಯಿ, ತಂದೆ ಮತ್ತು ಆಚಾರ್ಯರು ಅಪ್ಪಣೆಮಾಡುತ್ತಾರೋ, ಅವುಗಳನ್ನು ಯಥೇಷ್ಟವಾಗಿ ಪಾಲಿಸಬೇಕು. ಹೇಗೆ ಮಾತಾಪಿತೃಗಳು ಧರ್ಮ, ವಿದ್ಯೆ, ಸದಾಚರಣಗಳ ಶ್ಲೋಕ, ನಿಘಂಟು, ನಿರುಕ್ತ, ಅಷ್ಟಾಧ್ಯಾಯೀ ಅಥವಾ ಬೇರೆ ಸೂತ್ರಗಳನ್ನು ಇಲ್ಲವೇ ವೇದಮಂತ್ರಗಳನ್ನು ಬಾಯಿಪಾಠ ಮಾಡಿಸಿದ್ದಾರೋ ಹಾಗೆಯೇ ಅವುಗಳ ಅರ್ಥವನ್ನು ಪುನಃ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಹೇಗೆ ಪ್ರಥಮ ಸಮುಲ್ಲಾಸದಲ್ಲಿ ಪರಮೇಶ್ವರನ (ಬಗೆಗೆ) ವ್ಯಾಖ್ಯಾನಮಾಡಿದ್ದೇವೋ, ಅದಕ್ಕನುಸಾರವಾಗಿಯೇ ತಿಳಿದು, ಅವನ ಉಪಾಸನೆಯನ್ನು ಮಾಡಬೇಕು. ಯಾವ ರೀತಿ ಆರೋಗ್ಯ, ವಿದ್ಯಾ ಮತ್ತು ಬಲ ಲಭಿಸುವುದೋ, ಅದೇ ರೀತಿಯ ಭೋಜನ, ಛಾದನ ಮತ್ತು ವ್ಯವಹಾರಗಳನ್ನು ಮಾಡಬೇಕು; ಮಾಡಿಸಬೇಕು. ಅಂದರೆ – ಹಸಿವೆ ಎಷ್ಟಿದೆಯೋ ಅದಕ್ಕಿಂತ ಸ್ವಲ್ಪ ಕಡಿಮೆ ಊಟಮಾಡಬೇಕು. ಮದ್ಯ–ಮಾಂಸ ಮೊದಲಾದವುಗಳ ಸೇವನದಿಂದ ದೂರವಿರಬೇಕು. ಗೊತ್ತಿಲ್ಲದ, ಆಳವಾದ ನೀರಿನಲ್ಲಿ ಪ್ರವೇಶಿಸಬಾರದು; ಏಕೆಂದರೆ – ಜಲಜಂತುಗಳಿಂದ, ಅಥವಾ ಬೇರೆ ವಸ್ತುಗಳಿಂದ ದುಃಖವುಂಟಾಗಬಹುದು; ಮತ್ತು ಈಜಲು ಬಾರದಿದ್ದರೆ ಮುಳುಗಿಯೂ ಹೋಗಬಹುದು. **"ನಾವಿಜ್ಞಾತೇ ಜಲಾಶಯೇ"** – ಇದು ಮನುವಿನ ವಚನ,[೫] ತಿಳಿಯದ ಜಲಾಶಯದಲ್ಲಿಳಿದು ಸ್ನಾನ–ಮೊದಲಾದುವನ್ನು ಮಾಡಬಾರದು.

**ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಜಲಂ ಪಿಬೇತ್ ।**

**ಸತ್ಯಪೂತಾಂ ವದೇದ್ವಾಚಂ ಮನಃ ಪೂತಂ ಸಮಾಚರೇತ್ ॥** (ಮನು – ೬– ೪೬)

**ಅರ್ಥ:** – ದೃಷ್ಟಿಯನ್ನು ಕೆಳಗಿಟ್ಟು , ಉಚ್ಚ–ನೀಚ ಸ್ಥಾನಗಳನ್ನು ನೋಡಿ, ನಡೆಯಬೇಕು ; ನೀರನ್ನು ವಸ್ತ್ರದಿಂದ ಶೋಧಿಸಿ ಕುಡಿಯಬೇಕು; ಸತ್ಯದಿಂದ ಪವಿತ್ರಗೊಳಿಸಿ ಮಾತನ್ನಾಡಬೇಕು; ಮನಸ್ಸಿನಿಂದ ಆಲೋಚಿಸಿ, ಆಚರಣೆ ಮಾಡಬೇಕು.

**ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ ।**

**ನ ಶೋಭತೇ ಸಭಾಮಧ್ಯೇ ಹಂಸಮಧ್ಯೇ ಬಕೋ ಯಥಾ ॥**[೬]

ಇದು ಯಾವನೋ ಒಬ್ಬ ಕವಿಯ ವಚನ. ಯಾರು ಮಕ್ಕಳಿಗೆ ವಿದ್ಯೆಯನ್ನು ಕಲಿಸಿಕೊಡಲಿಲ್ಲವೋ, ಆ ಮಾತಾಪಿತೃಗಳು ತಮ್ಮ ಮಕ್ಕಳ ಪೂರ್ಣ ಶತ್ರುಗಳು. ಆ ಮಕ್ಕಳು, ಹೇಗೆ ಹಂಸಗಳ ಮಧ್ಯೆ ಕೊಕ್ಕರೆ (ತಿರಸ್ಕೃತವಾಗುವುದೋ), ಹಾಗೆ ವಿದ್ವಾಂಸರ ಸಭೆಯಲ್ಲಿ ತಿರಸ್ಕೃತರಾಗುತ್ತಾರೆ.

---

೫. ಮನು. ೪.೧೭೯– ಸಂ.

೬. ಚಾಣಕ್ಯನೀತಿ ೨.೧೧– ಸಂ.

ತಮ್ಮ ಮಕ್ಕಳನ್ನು ತನು - ಮನ - ಧನಗಳಿಂದ ವಿದ್ಯಾ, ಧರ್ಮ, ಸಭ್ಯತೆ ಮತ್ತು ಉತ್ತಮ ಶಿಕ್ಷಣದಿಂದ ಯುಕ್ತರನ್ನಾಗಿ ಮಾಡುವುದೇ ಮಾತಾ-ಪಿತೃಗಳ ಕರ್ತವ್ಯ ಕರ್ಮವೂ, ಪರಮ ಧರ್ಮವೂ ಮತ್ತು ಕೀರ್ತಿಕಾರಕ ಕಾರ್ಯವೂ ಆಗಿದೆ. ಹೀಗೆ ಬಾಲ ಶಿಕ್ಷಣದ ಬಗೆಗೆ ಸ್ವಲ್ಪ ಬರೆದೆವು. ಇಷ್ಟರಿಂದಲೇ ಬುದ್ಧಿವಂತರಾದ ಜನರು ಬಹಳ ತಿಳಿದುಕೊಳ್ಳುವರು.

**ಇತಿ ಶ್ರೀಮದ್ದಯಾನಂದಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ಬಾಲಾಶಿಕ್ಷಾವಿಷಯೇ**

**ದ್ವಿತೀಯಃ ಸಮುಲ್ಲಾಸಃ ಸಂಪೂರ್ಣಃ ॥ ೨ ॥**

# ಅಥ ತೃತೀಯ ಸಮುಲ್ಲಾಸಃ

## ಅಥಾಧ್ಯಯನಾಧ್ಯಾಪನವಿಧಿಂ

## ವ್ಯಾಖ್ಯಾಸ್ಯಾಮಃ

ಈಗ ಮೂರನೆಯ ಸಮುಲ್ಲಾಸದಲ್ಲಿ ಓದುವ-ಓದಿಸುವ ವಿಧಾನವನ್ನು ಬರೆಯುತ್ತೇವೆ. ಮಕ್ಕಳಿಗೆ ಉತ್ತಮ ವಿದ್ಯೆ, ಶಿಕ್ಷಣ, ಗುಣ, ಕರ್ಮ ಮತ್ತು ಸ್ವಭಾವವೆಂಬ ಒಡವೆಗಳನ್ನು ತೊಡಿಸುವುದು ತಾಯಿ, ತಂದೆ, ಆಚಾರ್ಯ ಮತ್ತು ಸಂಬಂಧಿಕರ ಮುಖ್ಯ ಕಾರ್ಯವಾಗಿದೆ. ಚಿನ್ನ, ಬೆಳ್ಳಿ, ಮಾಣಿಕ್ಯ, ಮುತ್ತು, ಪಚ್ಚೆ ಮೊದಲಾದ ರತ್ನಗಳಿಂದ ಕೂಡಿದ ಒಡವೆಗಳನ್ನು ತೊಡಿಸುವುದರಿಂದ ಮಾನವನ ಆತ್ಮ ಎಂದಿಗೂ ಸುಭೂಷಿತವಾಗಲಾರದು. ಏಕೆಂದರೆ - ಒಡವೆಗಳನ್ನು ಧರಿಸುವುದರಿಂದ ಕೇವಲ ದೇಹಾಭಿಮಾನ, ವಿಷಯಾಸಕ್ತಿ ಮತ್ತು ಕಳ್ಳರೇ ಮೊದಲಾದವರ ಭಯ ಉಂಟಾಗುತ್ತದೆ. ಮತ್ತು ಸಾವಿನ ಸಂಭವವೂ ಉಂಟು. ಒಡವೆಗಳ ತೊಡಿಕೆಯಿಂದ ಬಾಲಕರೇ[೧] ಮೊದಲಾದವರ ಮರಣ ದುಷ್ಟರ ಕೈಯಿಂದ ಆಗುವುದು ಜಗತ್ತಿನಲ್ಲಿ ಕಂಡುಬರುತ್ತದೆ.

**ವಿದ್ಯಾ ವಿಲಾಸಮನಸೋ ಧೃತಿಶೀಲಶಿಕ್ಷಾಃ ಸತ್ಯ ವ್ರತಾ ರಹಿತಮಾನಮಲಾಪಹಾರಾಃ ।**

**ಸಂಸಾರದುಃಖದಲನೇನ ಸುಭೂಷಿತಾ ಯೇ ಧನ್ಯಾ ನರಾ ವಿಹಿತಕರ್ಮಪರೋಪಕಾರಾಃ ॥** [೨]

ಯಾವ ಪುರುಷರ (ಮತ್ತು ಸ್ತ್ರೀಯರ) ಮನಸ್ಸು ವಿದ್ಯಾವಿಲಾಸದಲ್ಲಿ ತತ್ಪರವಾಗಿರುತ್ತದೋ, (ಯಾರು) ಸುಂದರ ಶೀಲ ಸ್ವಭಾವಯುಕ್ತರೂ, ಸತ್ಯಭಾಷಣ ಮೊದಲಾದ ನಿಯಮಗಳ ಪಾಲನದಲ್ಲಿ ಯುಕ್ತರೂ ಮತ್ತು ಅಭಿಮಾನ -ಅಪವಿತ್ರತೆಯಿಂದ ರಹಿತರೂ, ಅನ್ಯರ ಮಲಿನತೆಯ ನಾಶಕರೂ, ಸತ್ಯೋಪದೇಶ - ವಿದ್ಯಾದಾನದಿಂದ ಸಾಂಸಾರಿಕ ಜನರ ದುಃಖಗಳನ್ನು ದೂರೀಕರಿಸುವುದರಿಂದ ಸುಭೂಷಿತರೂ, ವೇದವಿಹಿತ ಕರ್ಮಗಳಿಂದ ಪರೋಪಕಾರ ಮಾಡುವುದರಲ್ಲಿ ತತ್ಪರರೂ ಆಗಿರುತ್ತಾರೋ, ಆ ನರ-ನಾರಿಯರು ಧನ್ಯರು. ಆದುದರಿಂದ ಎಂಟು ವರ್ಷದವರಾದಾಗಲೇ, ಹುಡುಗರನ್ನು ಹುಡುಗರ ಮತ್ತು ಹುಡುಗಿಯರನ್ನು ಹುಡುಗಿಯರ ಪಾಠಶಾಲೆಗೆ ಕಳುಹಿಸಬೇಕು. ಯಾವ ಅಧ್ಯಾಪಕರು-ಪುರುಷರಾಗಲೀ, ಸ್ತ್ರೀಯ ರಾಗಲೀ, ದುರಾಚಾರಿಗಳಾಗಿರುತ್ತಾರೋ, ಅವರಿಂದ ಶಿಕ್ಷಣ ಕೊಡಿಸಬಾರದು. ಆದರೆ ಯಾರು ಪೂರ್ಣವಿದ್ಯಾಯುಕ್ತರೂ, ಧಾರ್ಮಿಕರೂ ಆಗಿರುತ್ತಾರೋ ಅವರೇ ಓದಿಸಲೂ ಮತ್ತು ಶಿಕ್ಷಣಕೊಡಲೂ ಅರ್ಹರಾಗಿರುತ್ತಾರೆ. ದ್ವಿಜರು ತಮ್ಮ ಮನೆಯಲ್ಲಿ ಹುಡುಗರಿಗೆ ಯಜ್ಞೋಪವೀತ ಸಂಸ್ಕಾರವನ್ನು ಮತ್ತು ಕನ್ಯೆಯರಿಗೂ ಕೂಡ ಯಥಾಯೋಗ್ಯವಾದ ಸಂಸ್ಕಾರವನ್ನು[೩] ಮಾಡಿ, ಮೊದಲು ಹೇಳಿದಂತಹ ಆಚಾರ್ಯ ಕುಲಕ್ಕೆ , ಅಂದರೆ - ಅವರವರ ಪಾಠಶಾಲೆಗಳಿಗೆ ಕಳುಹಿಸಬೇಕು.

---

೧. ಇದರಿಂದ ಸ್ತ್ರೀಯರಿಗೇ ಹೆಚ್ಚು ಅಪಾಯ, ಮೋಸ ಮೊದಲಾದುವು ಕಂಡು ಬಂದಿವೆ.- ಸಂ

೨. ಈ ಶ್ಲೋಕ ಗ್ರಂಥಕರ್ತರ ಸ್ವರಚನೆ, ಎಂದು ತಿಳಿದು ಬರುತ್ತದೆ. -ಸಂ.

೩. ಕನ್ಯೆಯರಿಗೂ ಕೂಡ ಯೋಗ್ಯವಾದುದು ಯಜ್ಞೋಪವೀತ ಸಂಸ್ಕಾರ ಅಥವಾ ಉಪನಯನ-ಎಂದು ತಿಳಿಯಬೇಕು. ಸ್ತ್ರೀಯರಿಗೆ ಉಪನಯನವಿಲ್ಲವೆಂದು ತಿಳಿದಿರುವ ಈ ಕಾಲದ ಮಂದಿಗೆ ಸ್ಪಷ್ಟವದ ಅರಿವಾಗಲಿ ಎಂದೇ ಮಹರ್ಷಿಗಳು ಪ್ರತ್ಯೇಕಿಸಿ ಹೇಳಿದ್ದಾರೆ. -ಅನು.

ವಿದ್ಯೆ ಕಲಿಯುವ ಸ್ಥಾನ ಏಕಾಂತ ಪ್ರದೇಶದಲ್ಲಿರಬೇಕು, ಮತ್ತು ಬಾಲಕರ ಹಾಗೂ ಬಾಲಿಕೆಯರ ಪಾಠಶಾಲೆಗಳು ಒಂದರಿಂದ ಒಂದು, ಮೂರು ಮೈಲಿನಷ್ಟು ದೂರವಿರಬೇಕು. ಅಲ್ಲಿ ಯಾವ ಅಧ್ಯಾಪಿಕೆಯರು ಮತ್ತು ಅಧ್ಯಾಪಕರುಗಳೊಂದಿಗೆ ಭೃತ್ಯರು, ಅನುಚರರು ಇರುತ್ತಾರೋ, ಅವರು ಕನ್ಯೆಯರ ಪಾಠಶಾಲೆಯಲ್ಲಿ ಎಲ್ಲರೂ ಸ್ತ್ರೀಯರೂ, ಮತ್ತು ಪುರುಷರ ಪಾಠಶಾಲೆಗಳಲ್ಲಿ ಎಲ್ಲರೂ ಪುರುಷರೂ ಆಗಿರಬೇಕು. ಸ್ತ್ರೀಯರ ಪಾಠಶಾಲೆಯಲ್ಲಿ ಐದು ವರ್ಷದ ಹುಡುಗನೂ ಮತ್ತು ಪುರುಷರ ಪಾಠಶಾಲೆಯಲ್ಲಿ ಐದು ವರ್ಷದ ಹುಡುಗಿಯೂ ಕೂಡ ಹೋಗುವಂತಿರಬಾರದು. ಅಂದರೆ, ಯಾವ ಕಾಲದವರೆಗೆ ಅವರು ಬ್ರಹ್ಮಚಾರಿಗಳೂ, ಬ್ರಹ್ಮಚಾರಿಣಿಯರೂ ಆಗಿರುತ್ತಾರೋ, ಅವರಿಗೆ ಸ್ತ್ರೀಯರ ಅಥವಾ ಪುರುಷರ ದರ್ಶನ, ಸ್ಪರ್ಶನ, ಏಕಾಂತಸೇವನ, ಭಾಷಣ, ವಿಷಯಾಲಾಪ, ಪರಸ್ಪರ ಕ್ರೀಡೆ, ವಿಷಯ-ಚಿಂತನ ಮತ್ತು ಸಂಗ - ಎಂಬ ಈ ಎಂಟು ಬಗೆಯ ಮೈಥುನಗಳಿಂದ ಬೇರೆಯಾಗಿರಬೇಕು. ಮತ್ತು ಅಧ್ಯಾಪಕರುಗಳು, ಉತ್ತಮ ವಿದ್ಯೆ, ಶಿಕ್ಷಣ, ಶೀಲ, ಸ್ವಭಾವ, ಶರೀರ ಮತ್ತು ಆತ್ಮ ನಿಂದ ಶಕ್ತಿಯುಕ್ತರಾಗಿ ಆನಂದವನ್ನು ದಿನದಿನವೂ ಹೆಚ್ಚಿಸಿಕೊಳ್ಳುವಂತೆ,ಅವರನ್ನು ಈ ವಿಷಯಗಳಿಂದ ದೂರವಿಟ್ಟು ರಕ್ಷಿಸಬೇಕು. ಪಾಠಶಾಲೆಗಳಿಂದ ಒಂದು ಯೋಜನ, ಎಂದರೆ ಆರು ಮೈಲಿ ದೂರದಲ್ಲಿ ಗ್ರಾಮ ಅಥವಾ ನಗರವಿರಬೇಕು. ಅವರು ರಾಜಕುಮಾರರು ಅಥವಾ ರಾಜಕುಮಾರಿಯರಾಗಿರಲಿ, ಅಥವಾ ಬಡವರ ಮಕ್ಕಳಾಗಿರಲಿ, ಎಲ್ಲರಿಗೂ ಒಂದೇ ಸಮನಾದ ವಸ್ತ್ರಗಳೂ, ಭೋಜನ-ಪಾನೀಯಗಳೂ, ಆಸನಗಳೂ ಕೊಡಲ್ಪಡಬೇಕು. ಎಲ್ಲರೂ ತಪಸ್ವಿಗಳಾಗಿರಬೇಕು. ಅವರು ಸಾಂಸಾರಿಕ ಚಿಂತೆಯಿಂದ ರಹಿತರಾಗಿ, ಕೇವಲ ವಿದ್ಯಾವರ್ಧನದ ಚಿಂತೆಯನ್ನು ಮಾತ್ರ ಇಟ್ಟುಕೊಳ್ಳುವಂತೆ, ಅವರ ತಂದೆ-ತಾಯಿಗಳು ತಮ್ಮ ಮಕ್ಕಳನ್ನೂ, ಅಥವಾ ಮಕ್ಕಳು ತಮ್ಮ ತಂದೆ ತಾಯಿಗಳನ್ನೂ ಸಂಧಿಸುವುದಕ್ಕೂ, ಅಥವಾ ಯಾವ ರೀತಿಯ ಪರಸ್ಪರ ಪತ್ರವ್ಯವಹಾರ ಮಾಡುವುದಕ್ಕೂ ಅವಕಾಶ ಕೊಡಬಾರದು. ಅವರು ಯಾವಾಗ ತಿರುಗಾಡಲು ಹೋಗುವರೋ, ಆಗ, ಅವರು ಯಾವದೇ ರೀತಿಯ ಕುಚೇಷ್ಟೆಯನ್ನೂ ಮಾಡಲಾಗದಂತೆ ಮತ್ತು ಆಲಸ್ಯ- ಪ್ರಮಾದವನ್ನೂ ಮಾಡದಂತೆ, ಅವರ ಸಂಗಡ ಅಧ್ಯಾಪಕರೂ ಇರಬೇಕು.

**ಕನ್ಯಾನಾಂ ಸಂಪ್ರದಾನಾಂ ಚ ಕುಮಾರಾಣಾಂ ಚ ರಕ್ಷಣಮ್ ॥** (ಮನು: ೭-೧೫೨)

ಇದರ ಅಭಿಪ್ರಾಯವೇನೆಂದರೆ- ಐದನೆಯ ಅಥವಾ ಆರನೆಯ ವರ್ಷವಾದ ಮೇಲೆ, ಯಾರೂ ತಮ್ಮ ಹುಡುಗರನ್ನು ಅಥವಾ ಹುಡುಗಿಯರನ್ನು ಮನೆಯಲ್ಲಿಟ್ಟುಕೊಳ್ಳಲಾಗದಂತೆ, ಅಗತ್ಯವಾಗಿ ಪಾಠಶಾಲೆಗೆ ಕಳುಹಿಸುವಂತೆ, ಯಾವನು ಕಳುಹಿಸುವುದಿಲ್ಲವೋ, ಅವನು ದಂಡನೀಯನಾಗುವಂತೆ, ಶಿಕ್ಷಣವಿಷಯದಲ್ಲಿ ರಾಜನಿಯಮ ಅಥವಾ ಜಾತಿ೧ ನಿಯಮವಿರಬೇಕು.[೪] ಮೊದಲು ಬಾಲಕರ[೫] ಯಜ್ಞೋಪವೀತ ಸಂಸ್ಕಾರ ಮನೆಯಲ್ಲಾಗಬೇಕು ಮತ್ತು ಎರಡನೆಯದಾಗಿ ಪಾಠಶಾಲೆಯಲ್ಲಿ, ಆಚಾರ್ಯಕುಲದಲ್ಲಿ ಆಗಬೇಕು. ತಂದೆ ತಾಯಿ ಅಥವಾ ಆಚಾರ್ಯನು ತಮ್ಮ- ಬಾಲಕ-ಬಾಲಿಕೆಯರಿಗೆ ಅರ್ಥಸಹಿತವಾಗಿ ಗಾಯತ್ರೀ ಮಂತ್ರದ ಉಪದೇಶವನ್ನು ಮಾಡಬೇಕು. ಆ ಮಂತ್ರವಿದು:-

**ಓಂ ಭೂರ್ಭುವಃ ಸ್ವಃ । ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।**
**ಧಿಯೋ ಯೋ ನಃ ಪ್ರಚೋದಯಾತ್ ॥**

(ಯಜುರ್ವೇದ : 36-3)

ಈ ಮಂತ್ರದಲ್ಲಿ ಮೊದಲು ಇರುವ **"ಓಂ"** ಎಂಬುದರ ಅರ್ಥವನ್ನು ಪ್ರಥಮ ಸಮುಲ್ಲಾಸದಲ್ಲಿ ಹೇಳಿದ್ದೇವೆ. ಅಲ್ಲಿಂದಲೇ ತಿಳಿದುಕೊಳ್ಳಬೇಕು. ಈಗ ಮೂರು ಮಹಾವ್ಯಾಹೃತಿಗಳ ಅರ್ಥವನ್ನು ಸಂಕ್ಷೇಪವಾಗಿ ಬರೆಯುತ್ತೇವೆ. **"ಭೂರಿತಿ ವೈ ಪ್ರಾಣಃ"** - **"ಯಃ ಪ್ರಾಣಯತಿ ಚರಾಚರಂ ಜಗತ್ ಸ ಭೂಃ ಸ್ವಯಂಭೂರೀಶ್ವರಃ"** - ಯಾವನು ಸಮಸ್ತ ಜಗತ್ತಿನ ಜೀವನಕ್ಕೆ ಆಧಾರನೂ, ಪ್ರಾಣಕ್ಕಿಂತ ಪ್ರಿಯನೂ, ಹಾಗೂ ಸ್ವಯಂಭುವೂ ಆಗಿದ್ದಾನೋ ಆ ಪರಮೇಶ್ವರನು ಪ್ರಾಣ - ಎಂಬ ಶಬ್ದದ ಮೂಲಕ ಸೂಚಿತನಾಗಿ **'ಭೂ'** ಎಂಬ ಹೆಸರನ್ನು ಹೊಂದಿದ್ದಾನೆ. **"ಭುವರಿತ್ಯಪಾನಃ"** - **"ಯಃ ಸರ್ವಂ ದುಃಖಮಪಾನ ಯತಿ, ಸೋಽಪಾನಃ"** - ಯಾವನು ಸರ್ವದುಃಖ ರಹಿತನೋ, ಯಾವನ ಸಂಗದಿಂದ ಜೀವರು ಸಮಸ್ತ ದುಃಖಗಳಿಂದಲೂ ಬಿಡುಗಡೆ ಹೊಂದುತ್ತಾರೋ, ಆ ಪರಮೇಶ್ವರನ ಹೆಸರು **"ಭುವಃ"** ಎಂದಾಗಿದೆ. **"ಸ್ವರಿತಿ ವ್ಯಾನಃ"**- **"ಯೋ ವಿವಿಧಂ ಜಗದ್ವ್ಯಾನಯತಿ ವ್ಯಾಪ್ನೋತಿ, ಸ ವ್ಯಾನಃ"** - ಯಾವನು ನಾನಾ ವಿಧವಾದ ಜಗತ್ತಿನಲ್ಲಿ ವ್ಯಾಪಕನಾಗಿ, ಸರ್ವವನ್ನೂ ಧರಿಸುತ್ತಿದ್ದಾನೋ, ಆ

೪. ಜಾತಿ- ಎಂದರೆ ಸಮಾಜ ಅಥವಾ ರಾಷ್ಟ್ರ -ಎಂದರಿಯಬೇಕು.

೫. ಇದರಿಂದಲೇ **"ಬಾಲಿಕೆಯರ"** ಎಂಬರ್ಥವೂ ಗ್ರಾಹ್ಯ; ಮುಂದಿನ ವಾಕ್ಯದ 'ಗಾಯತ್ರೀ ಉಪದೇಶ'ದಿಂದ ಇದು ಸ್ಪಷ್ಟ. -ಅನು.

ಪರಮೇಶ್ವರನ ಹೆಸರು **'ವ್ಯಾನ'** ಎಂದಾಗಿದೆ. ಈ ಮೂರು ವಚನಗಳು ತೈತ್ತಿರೀಯ ಅರಣ್ಯಕದವಾಗಿವೆ. (೭-೫) **"ಸವಿತುಃ" "ಯಃ ಸುನೋತ್ಯುತ್ಪಾದಯತಿ ಸರ್ವಂ ಜಗತ್ ಸ ಸವಿತಾ, ತಸ್ಯ"** – ಯಾವನು ಸರ್ವಜಗತ್ತಿನ ಉತ್ಪಾದಕನೋ ಮತ್ತು ಸರ್ವೈಶ್ವರ್ಯ ಪ್ರದಾಯಕನೋ, **"ದೇವಸ್ಯ"– "ಯೋ ದೀವತ್ಯ, ದೀವ್ಯತೇ ವಾ ಸ ದೇವಃ"** – ಯಾವನು ಸುಖಗಳನ್ನು ಕೊಡುವವ ನಾಗಿದ್ದಾನೋ ಮತ್ತು ಯಾವನ ಪ್ರಾಪ್ತಿಯನ್ನು ಎಲ್ಲರೂ ಬಯಸುತ್ತಾರೋ, ಆ ಪರಮಾತ್ಮನ **"ವ ರೇಣ್ಯಂ"** – **"ವರ್ತುಮರ್ಹಂ"** – ಯಾವ ಸ್ವೀಕರಣೀಯವಾದ, ಅತಿ ಶ್ರೇಷ್ಠವಾದ **"ಭರ್ಗಃ" "ಶುದ್ಧ ಸ್ವರೂಪಂ"**– ಶುದ್ಧಸ್ವರೂಪವಿದೆಯೋ, ಎಲ್ಲರನ್ನೂ ಪವಿತ್ರಗೊಳಿಸುವ ಚೇತನ _ ಬ್ರಹ್ಮಸ್ವರೂಪವಿದೆಯೋ, **"ತತ್"** ಅದೇ ಪರಮಾತ್ಮನ ಸ್ವರೂಪವನ್ನು ನಾವುಗಳು, **"ಧೀಮಹಿ" – "ಧರೇಮಹಿ"** _ ಧಾರಣಮಾಡೋಣ, ಯಾವ ಉದ್ದೇಶ್ಯಕ್ಕಾಗಿ _ ಎಂದರೆ, **"ಯಃ"** _ ಯಾವ ಜಗದೀಶ್ವರನು, ಸವಿತೃದೇವ ಪರಮಾತ್ಮನಿದ್ದಾನೋ, (ಅವನು) **"ನಃ" – "ಅಸ್ಮಾಕಂ"** _ ನಮ್ಮ, **"ಧಿಯಃ"= "ಬುದ್ಧೀಃ"** _ ಬುದ್ಧಿಗಳನ್ನು **"ಪ್ರಚೋದಯಾತ್" – "ಪ್ರೇರಯೇತ್"** – ಪ್ರೇರಿಸಲಿ, ಎಂದರೆ – ದುಷ್ಕರ್ಮಗಳಿಂದ ಬಿಡಿಸಿ, ಸತ್ಕರ್ಮಗಳಲ್ಲಿ ಪ್ರವೃತ್ತಗೊಳಿಸಲಿ.

ಹೇ ಪರಮೇಶ್ವರ! ಹೇ ಸಚ್ಚಿದಾನಂದಸ್ವರೂಪ! ಹೇ ನಿತ್ಯಶುದ್ಧಬುದ್ಧಮುಕ್ತ ಸ್ವಭಾವ! ಹೇ ಅಜ ನಿರಂಜನ ನಿರ್ವಿಕಾರ! ಹೇ ಸರ್ವಾಂತರ್ಯಾಮಿನ್! ಹೇ ಸರ್ವಾಧಾರ ಜಗತ್ಪತೇ! ಸಕಲಜಗದುತ್ಪಾದಕ! ಹೇ ಅನಾದೇ! ವಿಶ್ವಂಭರ! ಸರ್ವವ್ಯಾಪಿನ್! ಹೇ ಕರುಣಾಮೃತವಾರಿಧೇ! ಸವಿತುರ್ದೇವಸ್ಯ ತವ ಯದೋಂ ಭೂರ್ಭುವಃ ಸ್ವರ್ವರೇಣ್ಯಂ ಭರ್ಗೋಽಸ್ತಿ ತದ್ವಯಂ ಧೀಮಹಿ ದಧೀಮಹಿ ಧರೇಮಹಿ ಧ್ಯಾಯೇಮ ವಾ. ಕಸ್ಮೈ ಪ್ರಯೋಜನಾಯೇತ್ಯತ್ರಾಹ, ಹೇ ಭಗವಾನ್! ಯಃ ಸವಿತಾ ದೇವಃ ಪರಮೇಶ್ವರೋ ಭವಾನಸ್ಮಾಕಂ ಧಿಯಃ ಪ್ರಚೋದಯಾತ್, ಸ ಏವಾಸ್ಮಾಕಂ ಪೂಜ್ಯ ಉಪಾಸನೀಯ ಇಷ್ಟ ದೇವೋ ಭವತು. ನಾತೋಽನ್ಯಂ ಭವತ್ತುಲ್ಯಂ ಭವತೋಽಧಿಕಂ ಚ ಕಂಚಿತ್ಕದಾ ಚಿನ್ಮನ್ಯಾಮಹೇ.

ಮಾನವರೇ! ಯಾವನು ಸರ್ವಸಮರ್ಥರಲ್ಲಿಯೂ ಸಮರ್ಥನೂ, ಸಚ್ಚಿದಾನಂದಾನಂತಸ್ವರೂಪನೂ, ನಿತ್ಯಶುದ್ಧ– ನಿತ್ಯಬುದ್ಧ – ನಿತ್ಯಮುಕ್ತ ಸ್ವಭಾವವುಳ್ಳವನೂ, ಕೃಪಾಸಾಗರನೂ, ಸರಿಸರಿಯಾದ ನ್ಯಾಯವನ್ನೇ ಮಾಡುವವನೂ, ಜನನ ಮರಣ ಮೊದಲಾದ ಕ್ಲೇಶಗಳಿಂದ ರಹಿತನೂ, ಆಕಾರರಹಿತನೂ, ಸರ್ವರ ಘಟಘಟ ಗಳನ್ನೂ ತಿಳಿಯುವವನೂ, ಸರ್ವಾಧಾರಕನಾದ ತಂದೆಯೂ, ಉತ್ಪಾದಕನೂ,[೬] ಆಹಾರ ಮೊದಲಾದವುಗಳಿಂದ ವಿಶ್ವದ ಪೋಷಣ ಮಾಡುವವನೂ, ಸಕಲೈಶ್ವರ್ಯಯುಕ್ತನೂ, ಜಗನ್ನಿರ್ಮಾಣಕರ್ತೃವೂ,[೭] ಶುದ್ಧ ಸ್ವರೂಪನೂ ಆಗಿದ್ದಾನೋ ಮತ್ತು ಯಾವನು ಪ್ರಾಪ್ತಿಯ ಕಾಮನೆಗೆ ಯೋಗ್ಯನೋ, ಆ ಪರಮಾತ್ಮನ ಯಾವ ಶುದ್ಧ ಚೇತನಸ್ವರೂಪವಿದೆಯೋ, ಅದನ್ನೇ ನಾವು ಧರಿಸೋಣ, ಏತಕ್ಕೆಂದರೆ – ಆ ಪರಮೇಶ್ವರನು, ನಮ್ಮ ಆತ್ಮಗಳ ಮತ್ತು ಬುದ್ಧಿಗಳ ಅಂತರ್ಯಾಮಿ ಸ್ವರೂಪನು; ನಮ್ಮನ್ನು ದುರಾಚಾರ– ಅಧರ್ಮಯುಕ್ತ ಮಾರ್ಗದಿಂದ ದೂರ ಸರಿಸಿ, ಶ್ರೇಷ್ಠಾಚಾರ – ಸತ್ಯಮಾರ್ಗದಲ್ಲಿ ನಡೆಯಿಸಲಿ, ಅವನನ್ನು ಬಿಟ್ಟು ಬೇರೆ ಯಾವದೇ ವಸ್ತುವಿನ ಧ್ಯಾನವನ್ನೂ ನಾವು ಮಾಡದಿರೋಣ, ಏಕೆಂದರೆ – ಯಾವನೂ ಅವನಿಗೆ ಸಮಾನನಿಲ್ಲ; ಹಾಗೂ ಅಧಿಕನೂ ಇಲ್ಲ. ಅವನೇ ನಮ್ಮ ತಂದೆ, ರಾಜ, ನ್ಯಾಯಾಧೀಶ ಮತ್ತು ಸರ್ವಸುಖದಾತೃವಾಗಿದ್ದಾನೆ.

ಈ ರೀತಿ ಗಾಯತ್ರೀ ಮಂತ್ರದ ಉಪದೇಶವನ್ನು ಮಾಡಿ, ಸ್ನಾನ,[೮] ಆಚಮನ ಪ್ರಾಣಾಯಾಮ ಮೊದಲಾದ, ಸಂಧ್ಯೋಪಾಸನೆಗೆ ಸಂಬಂಧಿಸಿದ ಯಾವ ಕ್ರಿಯೆಗಳಿವೆಯೋ, ಅವುಗಳನ್ನು ಕಲಿಸಬೇಕು. ಮೊದಲು ಸ್ನಾನವೇಕೆಂದರೆ, ಅದರಿಂದ ಶರೀರದ ಬಾಹ್ಯ ಅವಯವಗಳ ಶುದ್ಧಿಯೂ, ಹಾಗೂ ಆರೋಗ್ಯ ಮೊದಲಾದುವೂ ಸಿದ್ಧಿಸುತ್ತವೆ. ಇದಕ್ಕೆ ಪ್ರಮಾಣ:

**ಅದ್ಭಿರ್ಗಾತ್ರಾಣಿ ಶುಧ್ಯಂತಿ ಮನಃ ಸತ್ಯೇನ ಶುಧ್ಯತಿ ।**

**ವಿದ್ಯಾತಪೋಭ್ಯಾಂ ಭೂತಾತ್ಮಾ ಬುದ್ಧಿರ್ಜ್ಞಾನೇನ ಶುಧ್ಯತಿ ॥** (ಮನುಸ್ಮೃತಿಯ – ೧.೧೦೯)

ನೀರಿನಿಂದ ಶರೀರದ ಹೊರ ಅವಯವಗಳೂ, ಸತ್ಯಾಚರಣದಿಂದ ಮನಸ್ಸೂ, ವಿದ್ಯೆಯಿಂದ ಮತ್ತು ತಪಸ್ಸಿನಿಂದ–ಎಂದರೆ, ಸರ್ವ ವಿಧದ ಕಷ್ಟಗಳನ್ನೂ ಸಹಿಸಿ, ಧರ್ಮದ ಅನುಷ್ಠಾನವನ್ನೇ ಮಾಡುವುದರಿಂದ ಜೀವಾತ್ಮನೂ, ಜ್ಞಾನ – ಎಂದರೆ, ಪೃಥಿವಿಯಿಂದ ಹಿಡಿದು ಪರಮಾತ್ಮನವರೆಗಿನ ಪದಾರ್ಥಗಳ ವಿವೇಕದಿಂದ ಬುದ್ಧಿಯೂ – ದೃಢನಿಶ್ಚಯ[೯]ವೂ ಪವಿತ್ರವಾಗುತ್ತವೆ.

---

೬. ಉತ್ಪಾದಕ= ಪ್ರಕೃತಿಗೆ ಸ್ಥೂಲರೂಪವನ್ನು ಕೊಡುವವನು -ಅನು

೭. ಜಗನ್ನಿರ್ಮಾಣಕರ್ತೃ -ಗತಿಯುಕ್ತವಾದ ಪ್ರಪಂಚದ ವಸ್ತುಗಳಿಗೆ ನಿಶ್ಚಿತರೂಪಗಳನ್ನು ಕೊಡುವವನು. -ಅನು.

೮. ಸ್ನಾನವು ಸಂಧ್ಯೋಪಾಸನೆಯ ಅಂಗವಲ್ಲ; ಅದರ ಪೂರ್ವಭಾವೀ ಸನ್ನಾಹದ ಕ್ರಿಯೆ. –ಅನು.

ಆದುದರಿಂದ, ಸ್ನಾನವನ್ನು ಭೋಜನಕ್ಕೆ ಮೊದಲು ಅವಶ್ಯವಾಗಿ ಮಾಡಬೇಕು. ಎರಡನೆಯದು ಪ್ರಾಣಾಯಾಮ ಇದಕ್ಕೆ ಪ್ರಮಾಣ :

**ಯೋಗಾಂಗಾನುಷ್ಠಾನಾದಶುದ್ಧಿಕ್ಷಯೇ ಜ್ಞಾನದೀಪ್ತಿರಾವಿವೇಕಖ್ಯಾತೇಃ ॥** **(ಯೋಗಸೂತ್ರ-೨.೨೮)**[೧೦]

ಯಾವಾಗ ಮಾನವನು ಪ್ರಾಣಾಯಾಮ ಮಾಡುತ್ತಾನೋ, ಆಗ ಪ್ರತಿಕ್ಷಣವೂ ಮುಂದು - ಮುಂದಿನ ಕಾಲದಲ್ಲಿ ಅಶುದ್ಧಿಯ ನಾಶವೂ, ಮತ್ತು ಜ್ಞಾನದ ಪ್ರಕಾಶವೂ ಆಗುತ್ತಾ ಹೋಗುತ್ತದೆ. ಎಲ್ಲಿಯವರೆಗೆ ಮುಕ್ತಿಯಾಗುವುದಿಲ್ಲವೋ, ಅಲ್ಲಿಯವರೆಗೆ ಅವನ ಆತ್ಮನ ಜ್ಞಾನವು ಸರಿಸರಿಯಾಗಿ ಹೆಚ್ಚುತ್ತಾ ಹೋಗುತ್ತದೆ.

**ದಹ್ಯಂತೇ ಧ್ಯಾಯಮಾನಾನಾಂ ಧಾತೂನಾಂ ಹಿ ಯಥಾ ಮಲಾಃ ।**
**ತಥೇಂದ್ರಿಯಾಣಾಂ ದಹ್ಯಂತೇ ದೋಷಾಃ ಪ್ರಾಣಸ್ಯ ನಿಗ್ರಹಾತ್ ॥** (ಮನು -೩. ೭೨)

ಹೇಗೆ ಬೆಂಕಿಯಲ್ಲಿ ಕಾಯಿಸುವುದರಿಂದ ಚಿನ್ನ ಮೊದಲಾದ ಧಾತುಗಳ ಕೊಳೆ ನಾಶವಾಗಿ ಅವು ಶುದ್ಧವಾಗುತ್ತವೋ, ಹಾಗೆ ಪ್ರಾಣಾಯಾಮ ಮಾಡಿದರೆ ಮನಸ್ಸೇ ಮೊದಲಾದ ಇಂದ್ರಿಯಗಳ ದೋಷಗಳು ಕ್ಷೀಣವಾಗಿ, ಅವು ನಿರ್ಮಲವಾಗಿ ಹೋಗುತ್ತವೆ.

## ಪ್ರಾಣಾಯಾಮದ ವಿಧಿ

**ಪ್ರಚ್ಛರ್ದವಿಧಾರಣಾಭ್ಯಾಂ ವಾ ಪ್ರಾಣಸ್ಯ ॥** (ಯೋಗಸೂತ್ರ, ಸಮಾಧಿಪಾದ-೩೪)

ಅನ್ನ-ನೀರು ಹೇಗೆ ಅತ್ಯಂತ ವೇಗದಿಂದ ವಾಂತಿಯಾಗಿ ಹೊರಕ್ಕೆ ಹೊರಟು ಹೋಗುತ್ತದೋ, ಹಾಗೆ ಉಸಿರನ್ನು ಬಲಪೂರ್ವಕ ಹೊರಕ್ಕೆ ಒಗೆದು, ಹೊರಗೆಯೇ ಶಕ್ತಿಯಿರುವಷ್ಟು (ಕಾಲ) ತಡೆದು ಇಡಬೇಕು. ಯಾವಾಗ (ಉಸಿರನ್ನು) ಹೊರಕ್ಕೆ ಬಿಡಲು ಬಯಸುತ್ತಾನೋ, ಆಗ ಮೂಲೇಂದ್ರಿಯವನ್ನು ಮೇಲಕ್ಕೆಳೆದು ನಿಲ್ಲಿಸಬೇಕು. ಆವರೆಗೂ ಉಸಿರು ಹೊರಗಿರುತ್ತದೆ. ಈ ಕ್ರಮದಿಂದಲೇ ಉಸಿರು ಹೆಚ್ಚು ಕಾಲ ಹೊರಗೆ ನಿಲ್ಲಬಲ್ಲದು. ಯಾವಾಗ ಕಸಿವಿಸಿಯಾಗುವುದೋ, ಆಗ, ನಿಧಾನವಾಗಿ ಒಳಕ್ಕೆ ಗಾಳಿಯನ್ನು ತೆಗೆದುಕೊಂಡು, (ಸ್ವಲ್ಪ ಕಾಲ ಒಳಗೆ ನಿಲ್ಲಿಸಿ, ಮತ್ತೆ ಹೊರಗೆ ಹಾಕಬೇಕು) ಇನ್ನೂ ಕೂಡ ಸಾಮರ್ಥ್ಯವಿರುವಷ್ಟು ಹಾಗೂ ಇಚ್ಛೆಯಿರುವಷ್ಟು ಅದೇ ರೀತಿ ಮಾಡುತ್ತಾ ಹೋಗಬೇಕು. ಮತ್ತು ಮನಸ್ಸಿನಲ್ಲಿ **"ಓಂ"** - ಎಂಬುದನ್ನು ಜಪಿಸುತ್ತಾ ಹೋಗಬೇಕು. ಹೀಗೆ ಮಾಡುವುದರಿಂದ, ಆತ್ಮನ ಮತ್ತು ಮನಸ್ಸಿನ ಪವಿತ್ರತೆ ಮತ್ತು ಸ್ಥಿರತೆ ಸಿದ್ಧಿಸುತ್ತವೆ. ಒಂದು - **'ಬಾಹ್ಯ ವಿಷಯ'** - ಎಂದರೆ ಹೊರಗೆಯೇ ಹೆಚ್ಚು ತಡೆಯುವುದು. ಎರಡನೆಯದು **'ಆಭ್ಯಂತರ ವಿಷಯ'** - ಎಂದರೆ, ಒಳಗೆ ಎಷ್ಟು ಉಸಿರನ್ನು ತಡೆಯಲು ಸಾಧ್ಯವೋ, ಅಷ್ಟು ತಡೆದಿಡುವುದು. ಮೂರನೆಯದು **"ಸ್ತಂಭವೃತ್ತಿ"**- ಎಂದರೆ, ಒಂದೇ ಸಲ ಉಸಿರು ಎಲ್ಲಿರುವುದೋ ಅಲ್ಲಿಯೇ ಶಕ್ತಿಯಿದ್ದಷ್ಟು ನಿಲ್ಲಿಸಿಬಿಡುವುದು. ನಾಲ್ಕನೆಯದು **"ಬಾಹ್ಯಾಭ್ಯಂತರಾಕ್ಷೇಪೀ"** - ಎಂದರೆ, ಯಾವಾಗ ಪ್ರಾಣವು ಒಳಗಿನಿಂದ ಹೊರಕ್ಕೆ ಹೊರಡಲಾರಂಭಿಸುವುದೋ, ಆಗ, ಅದಕ್ಕೆ ವಿರುದ್ಧವಾಗಿ, ಅದನ್ನು ಹೊರಹೋಗಬಿಡದೇ ಇರುವುದಕ್ಕಾಗಿ, ಹೊರಗಿನಿಂದ ಒಳಕ್ಕೆ ತೆಗೆದು ಕೊಳ್ಳಬೇಕು. ಮತ್ತು ಯಾವಾಗ ಹೊರಗಿನಿಂದ ಒಳಕ್ಕೆ ಬರಲಾರಂಭಿಸುವುದೋ, ಆಗ, ಒಳಗಿನಿಂದ ಹೊರಗಡೆಗೆ ಪ್ರಾಣವನ್ನು ನೂಕಿ ತಡೆಯುತ್ತಾ ಹೋಗಬೇಕು. ಹೀಗೆ ಒಂದಕ್ಕೊಂದು ವಿರುದ್ಧವಾದ ಕ್ರಿಯೆಯನ್ನು ಮಾಡಿದರೆ, ಎರಡರ (ಉಚ್ಛ್ವಾಸ - ನಿಃಶ್ವಾಸ) ಚಲನೆಯೂ ನಿಂತು ಪ್ರಾಣವು ತನ್ನ ವಶದಲ್ಲಿರುವುದರಿಂದ ಮನಸ್ಸು ಮತ್ತು ಇಂದ್ರಿಯಗಳೂ ಕೂಡ ಸ್ವಾಧೀನವಾಗುತ್ತವೆ. ಬಲ-ಪುರುಷಾರ್ಥಗಳು ವರ್ಧಿಸಿ, ಬುದ್ಧಿಯು ಅತಿಕಠಿಣವೂ, ಮತ್ತು ಸೂಕ್ಷ್ಮವೂ ಆದ ವಿಷಯವನ್ನೂ ಕೂಡ ಶೀಘ್ರವೇ ಗ್ರಹಿಸುವ ಹಾಗೆ ತೀವ್ರವೂ, ಸೂಕ್ಷ್ಮ ರೂಪವೂ ಆಗುವುದು. ಇದರಿಂದ ಮಾನವ ಶರೀರದಲ್ಲಿ ವೀರ್ಯವು ವೃದ್ಧಿಯನ್ನು ಹೊಂದಿ, ಸ್ಥಿರವಾದ ಬಲ, ಪರಾಕ್ರಮ (ಮತ್ತು) ಜಿತೇಂದ್ರಿಯತ್ವವನ್ನು (ಪಡೆದುಕೊಂಡು), ಸರ್ವಶಾಸ್ತ್ರಗಳನ್ನೂ ಅಲ್ಪ ಕಾಲದಲ್ಲಿಯೇ ತಿಳಿದು ಕರಗತವಾಗಿ ಮಾಡಿಕೊಳ್ಳುವನು. ಸ್ತ್ರೀಯೂ ಕೂಡ ಇದೇ ರೀತಿ ಯೋಗಾಭ್ಯಾಸ ಮಾಡಬೇಕು.

---

೯. ಮಹರ್ಷಿಗಳು ದೃಢ ನಿಶ್ಚಯವೆಂಬುದು "ಬುದ್ಧಿಗೆ" ಪರ್ಯಾಯವಾಚಕವೆಂದು ಹೇಳಿದ್ದಾರೆ. ಅಥವಾ ನಿಃಸಂದೇಹವಾಗಿ ಎಂಬುದರ ದ್ಯೋತಕ 'ದೃಢ ನಿಶ್ಚಯ' ಆಗಿರಬಹುದು. -ಅನು.

೧೦. ಯೋಗದರ್ಶನ [೨.೨೮]ದಲ್ಲಿ, ಯೋಗಾಂಗಾನುಷ್ಠಾನಾದಶುದ್ಧಿಕ್ಷಯೇ ಜ್ಞಾನಃ ದೀಪ್ತಿರಾವಿವೇಕಖ್ಯಾತೇ॥ ಎಂದಿದೆ. -ಯು.ಮೀ.

ಊಟ, ಉಡಿಗೆ, ಕುಳಿತುಕೊಳ್ಳುವುದು, ಏಳುವುದು ಮಾತಾನಾಡುವುದು. ವ್ಯವಹರಿಸುವುದು, ಹಿರಿಯರು– ಕಿರಿಯರೂಂದಿಗೆ ತಕ್ಕ ರೀತಿಯಲ್ಲಿ ನಡೆದುಕೊಳ್ಳುವುದು – ಇವುಗಳ ಉಪದೇಶವನ್ನೂ ಮಾಡಬೇಕು.

ಸಂಧ್ಯೋಪಾಸನವನ್ನು ಬ್ರಹ್ಮಯಜ್ಞವೆಂದೂ ಕೂಡ ಕರೆಯುತ್ತಾರೆ. ಕಂಠದಿಂದ ಹೃದಯದವರೆಗೆ ತಲುಪುವಷ್ಟು ನೀರನ್ನು ಅಂಗೈಯಲ್ಲಿ ತಗೆದುಕೊಂಡು, ಅದರ ಮೂಲ ಮತ್ತು ಮಧ್ಯಕ್ಕೆ ತುಟಿಗಳನ್ನು ತಗುಲಿಸಿ 'ಆಚಮನ' ಮಾಡಬೇಕು; ನೀರು ಅದಕ್ಕಿಂತ ಹೆಚ್ಚೂ ಇರಬಾರದು; ಕಡೆಮೆಯೂ ಇರಬಾರದು, ಅದರಿಂದ ಕಂಠದಲ್ಲಿನ ಶ್ಲೇಷ್ಮ ಮತ್ತು ಪಿತ್ತದ ಸ್ವಲ್ಪಮಟ್ಟಿನ ನಿವಾರಣೆಯಾಗುತ್ತದೆ. ಆ ಮೇಲೆ 'ಮಾರ್ಜನ' ಎಂದರೆ ನಡುಬೆರಳು ಮತ್ತು ಉಂಗುರದ ಬೆರಳಿನ ಅಗ್ರಭಾಗದಿಂದ ಕಣ್ಣು ಮೊದಲಾದ ಅಂಗಗಳ ಮೇಲೆ ನೀರನ್ನು ಚಿಮುಕಿಸಬೇಕು. ಅದರಿಂದ ಆಲಸ್ಯ ದೂರವಾಗುತ್ತದೆ. ಆಲಸ್ಯ ಮತ್ತು ಜಲವಿಲ್ಲದಾಗ, ಮಾಡಬೇಕಾಗಿಲ್ಲ. ಮತ್ತೆ ಮಂತ್ರ ಸಹಿತವಾದ ಪ್ರಾಣಾಯಾಮ, ಮನಸ್ಸಿನಿಂದ ಪರಿಕ್ರಮಣ, ಉಪಸ್ಥಾನಗಳನ್ನೂ,[೧೧] ಅದರ ಹಿಂದೆ ಪರಮೇಶ್ವರನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಯ ರೀತಿಯನ್ನೂ[೧೨] ಕಲಿಸಬೇಕು. ಆಮೇಲೆ 'ಅಘಮರ್ಷಣ' – ಎಂದರೆ ಪಾಪಮಾಡುವ ಇಚ್ಛೆಯನ್ನೂ ಕೂಡ ಎಂದಿಗೂ ಮಾಡಬಾರದು. ಈ ಸಂಧ್ಯೋಪಾಸನವನ್ನು ಏಕಾಂತಸ್ಥಳದಲ್ಲಿ, ಏಕಾಗ್ರವಾದ ಚಿತ್ತದಿಂದ ಮಾಡಬೇಕು.[೧೩]

**ಅಪಾಂ ಸಮೀಪೇ ನಿಯತೋ ನೈತ್ಯಕಂ ವಿಧಿಮಾಶ್ರಿತಃ ।**

**ಸಾವಿತ್ರೀಮಪ್ಯಧೀಯೀತ ಗತ್ವಾಽರಣ್ಯಂ ಸಮಾಹಿತಃ ॥** (ಮನುಸ್ಮೃತಿಯ – ೨.೧೦೪)

ವನಕ್ಕೆ, ಅಂದರೆ ಏಂಕಾಂತ ಸ್ಥಾನಕ್ಕೆ ಹೋಗಿ, ಸಾವಧಾನವಾಗಿ ನೀರಿನ ಬಳಿ ನಿಂತು, ನಿತ್ಯಕರ್ಮವನ್ನು ಮಾಡುತ್ತಾ ಸಾವಿತ್ರೀ – ಎಂದರೆ ಗಾಯತ್ರೀಮಂತ್ರದ ಉಚ್ಚಾರಣವನ್ನೂ, ಅದರ ಅರ್ಥದ ಜ್ಞಾನವನ್ನೂ ಮತ್ತು ಅದಕ್ಕೆ ಅನುಸಾರವಾಗಿ ತನ್ನ ನಡೆನುಡಿಗಳನ್ನೂ ಸಾಧಿಸಬೇಕು. ಆದರೆ ಈ ಜಪವನ್ನು ಮನಸ್ಸಿನಲ್ಲಿ[೧೪] ಮಾಡುವುದು ಉತ್ತಮ.

ಎರಡನೆಯದು ದೇವಯಜ್ಞ. ಅದು ಅಗ್ನಿಹೋತ್ರ ಮತ್ತು ವಿದ್ವಾಂಸರ ಸಂಗ–ಸೇವೆ ಮೊದಲಾದುದರಿಂದ ಸಿದ್ಧಿಸುತ್ತದೆ . ಸಂಧ್ಯಾ ಮತ್ತು ಅಗ್ನಿಹೋತ್ರ ಸಂಜೆ ಮತ್ತು ಬೆಳಿಗ್ಗೆ ಎರಡೇ ಹೊತ್ತು ಮಾಡಬೇಕು. ಹಗಲು–ಇರುಳುಗಳ ಸಂಧಿ ವೇಳೆ ಎರಡೇ ಇದೆ; ಬೇರೆಯಿಲ್ಲ. ಕನಿಷ್ಠ ಪಕ್ಷ ಒಂದು ಗಂಟೆ ಧ್ಯಾನವನ್ನು ಅವಶ್ಯವಾಗಿ ಮಾಡಬೇಕು. ಹೇಗೆ ಸಮಾಧಿಸ್ಥರಾದ ಯೋಗಿಜನರು ಪರಮಾತ್ಮನ ಧ್ಯಾನಮಾಡುತ್ತಾರೋ, ಹಾಗೆಯೇ ಸಂಧ್ಯೋಪಾಸನಾ ಕ್ರಿಯೆಯನ್ನು ಮಾಡಬೇಕು. ಮತ್ತು ಸೂರ್ಯೋದಯದ ನಂತರ ಹಾಗೂ ಸೂರ್ಯಾಸ್ತಕ್ಕೆ ಮೊದಲು ಅಗ್ನಿಹೋತ್ರಮಾಡುವ ಕಾಲವಿರುತ್ತದೆ. ಅದಕ್ಕೆ, ಯಾವುದಾದರೂ ಧಾತುವಿನದಾಗಲಿ; ಅಥವಾ ಮಣ್ಣಿನ ನೆಲದ ಮೇಲೆ ಹನ್ನೆರಡು ಅಥವಾ ಹದಿನಾರು ಚದುರ ಅಂಗುಲದ, ಅಷ್ಟೇ ಆಳವಾದ, ತಳದಲ್ಲಿ ಮೂರು ಅಥವಾ ನಾಲ್ಕು ಚದುರ ಅಂಗುಲದ, ಅಳತೆಯ ವೇದಿಯನ್ನು ಹೀಗೆ ರಚಿಸಬೇಕು. ಎಂದರೆ ಮೇಲೆ ಎಷ್ಟು ಅಗಲವಿರುತ್ತದೋ, ಅದರ ಕಾಲುಭಾಗ ಅಗಲ ತಳದಲ್ಲಿರಬೇಕು. ಚಂದನ, ಮುತ್ತುಗ ಮತ್ತು ಮಾವು – ಮೊದಲಾದ ಶ್ರೇಷ್ಠವಾದ ಕಾಷ್ಠಗಳ ತುಂಡುಗಳನ್ನು, ಅದೇ ವೇದಿಯ ಅಳತೆಗೆ ತಕ್ಕಂತೆ ದೊಡ್ಡದಾಗಿಯೋ, ಚಿಕ್ಕದಾಗಿಯೋ ಮಾಡಿಕೊಂಡು ಅದರಲ್ಲಿಡಬೇಕು. ಅದರ ಮಧ್ಯೆ ಅಗ್ನಿಯನ್ನಿಟ್ಟು, ಪುನಃ ಅದರ ಮೇಲೆ ಸಮಿತ್ತು – ಎಂದರೆ ಮೊದಲು ಹೇಳಲ್ಪಟ್ಟ ಕಟ್ಟಿಗೆಯನ್ನಿಡಬೇಕು. ಒಂದು ಪ್ರೋಕ್ಷಣೀಪಾತ್ರೆಯನ್ನೂ,[೧೫] ಒಂದು ಪ್ರಣೀತಾ ಪಾತ್ರೆಯನ್ನೂ[೧೬] ಒಂದು ಘೃತಪಾತ್ರೆಯನ್ನೂ[೧೭],

---

೧೧. ಉಚ್ಛ್ವಾಸ–ನಿಶ್ವಾಸ– ಅನು

೧೨. ಸಂಧ್ಯೋಪಾಸನೆ ವಿಧಿಯನ್ನು ಮಹರ್ಷಿ ದಯಾನಂದರು ರಚಿಸಿರುವ "ಪಂಚಮಹಾಯಜ್ಞವಿಧಿ"ಯಲ್ಲಿ ಕೊಡಲಾಗಿದೆ. –ಸಂ.

೧೩. ಇಲ್ಲಿ "ವಿಶ್ವಾನಿ ದೇವ"ದಿಂದಾರಂಭಿಸಿ, "ಅಗ್ನೇ ನಯ" ಎಂಬ ಮಂತ್ರದವರೆಗಿನ ಎಂಟು ಮಂತ್ರಗಳು ಎಂಬುದು ಮಹರ್ಷಿಗಳ ಆಶಯವಲ್ಲ. "ಗಾಯತ್ರೀ" ಮತ್ತು "ಹೇ ಈಶ್ವರ" ಎಂಬ ಮಹರ್ಷಿಕೃತ ವಾಕ್ಯವೇ ಗ್ರಾಹ್ಯ– ಎಂದು ತೋರುತ್ತದೆ. -ಅನು

೧೩. ಈ ಬಗ್ಗೆ ಇನ್ನಷ್ಟು ನಿರ್ದೇಶವು ಮುಂದೆ 'ದೇವ ಯಜ್ಞ'ದ ವಿಧಿಯಲ್ಲಿ ಕೊಡಲಾಗಿದೆ. –ಸಂ.

೧೪. ಮೂಲ ಗ್ರಂಥದಲ್ಲಿ 'ಜನ್ಮದಿಂದ' ಎಂಬ ಪದವಿದೆ. ಎಂದರೆ, ವೇದಾರಂಭ ಸಂಸ್ಕಾರದಿಂದ ದ್ವಿಜನಾದ ಮೇಲೆ ಎಂದರ್ಥ. ಈ ರೀತಿ ಶಾಸ್ತ್ರಗಳಲ್ಲಿ ವಿಶಿಷ್ಟಾರ್ಥದ್ಯೋತಕ ವಚನಗಳು ಕಂಡು ಬರುತ್ತವೆ. -ಯು.ಮೀ.

೧೫. ಚಿಮುಕಿಸುವ ನೀರನ್ನು ಇಡುವ ಪಾತ್ರೆ

೧೬. ಕೈತೊಳೆಯಲು ಬೇಕಾದ ಜಲದ ಪಾತ್ರೆ

೧೭. ತುಪ್ಪನಿಡುವ ಪಾತ್ರೆ

ಮತ್ತು ಒಂದು ಆಜ್ಯಸ್ಥಾಲೀ[೧೮] ಎಂದರೆ ಸಟ್ಟುಗವನ್ನೂ ಮಾಡಿಸಿಟ್ಟಿರಬೇಕು. ಚಿನ್ನದ, ಬೆಳ್ಳಿಯ ಇಲ್ಲವೇ ಕಾಷ್ಠದ ಪ್ರಣೀತಾ ಮತ್ತು ಪ್ರೋಕ್ಷಣಿಯಲ್ಲಿ ನೀರನ್ನೂ ಮತ್ತು ಘೃತಪಾತ್ರದಲ್ಲಿ ತುಪ್ಪವನ್ನೂ ಇಟ್ಟು, ತುಪ್ಪವನ್ನು ಕರಗಿಸಿಕೊಳ್ಳಬೇಕು. ಪ್ರಣೀತಾ ನೀರನ್ನಿಡುವ ಸಲುವಾಗಿ; ಮತ್ತು ಪ್ರೋಕ್ಷಣೀ ಏತಕ್ಕೆಂದರೆ – ಅದರಿಂದ ಕೈತೊಳೆಯಲು ನೀರನ್ನು ತೆಗೆದುಕೊಳ್ಳುವುದು ಸುಲಭವಾಗುತ್ತದೆ. ಆ ಮೇಲೆ ಆ ತುಪ್ಪವನ್ನು ಚೆನ್ನಾಗಿ ಶೋಧಿಸಬೇಕು. ಮತ್ತೆ ಈ ಮಂತ್ರಗಳಿಂದ ಹೋಮ ಮಾಡಬೇಕು.

**ಓಂ ಭೂರಗ್ನಯೇ ಪ್ರಾಣಾಯ ಸ್ವಾಹಾ ॥**

**ಓಂ ಭುವರ್ವಾಯವೇಽಪಾನಾಯ ಸ್ವಾಹಾ ॥**

**ಓಂ ಸ್ವರಾದಿತ್ಯಾಯ ವ್ಯಾನಾಯ ಸ್ವಾಹಾ ॥**

**ಓಂ ಭೂರ್ಭುವಃ ಸ್ವರಗ್ನಿವಾಯ್ವಾದಿತ್ಯೇಭ್ಯಃ ಪ್ರಾಣಾಪಾನವ್ಯಾನೇಭ್ಯಃ ಸ್ವಾಹಾ ॥**

ಈ ಮೊದಲಾದ ಅಗ್ನಿಹೋತ್ರದ ಪ್ರತಿಯೊಂದು ಮಂತ್ರವನ್ನೂ ಪಠಿಸಿ, ಒಂದೊಂದು ಆಹುತಿಯನ್ನು ಕೊಡಬೇಕು. ಮತ್ತು ಹೆಚ್ಚು ಆಹುತಿ ಕೊಡಬೇಕಾದರೆ –

[illegible]

[illegible] [illegible]

ಈ ಮಂತ್ರದಿಂದಲೂ ಮತ್ತು ಮೊದಲು ಹೇಳಿದ ಗಾಯತ್ರೀ ಮಂತ್ರದಿಂದಲೂ ಆಹುತಿ ಕೊಡಬೇಕು.

"ಓಂ ಭೂಃ" ಮತ್ತು "ಪ್ರಾಣ" ಮೊದಲಾದುವೆಲ್ಲವೂ ಪರಮೇಶ್ವರನ ಹೆಸರುಗಳಾಗಿವೆ. ಇವುಗಳ ಅರ್ಥವನ್ನು ಹೇಳಿಯೇ ಇದ್ದೇವೆ. ಎಂತಹ ಜ್ಞಾನ ಆತ್ಮನಲ್ಲಿ ಇರುತ್ತದೋ, ಅಂತಹದನ್ನೇ ನಾಲಿಗೆಯಿಂದಾಡುವುದು; ವಿರುದ್ಧವಾಗಿ ಆಡದಿರುವುದು "ಸ್ವಾಹಾ" ಶಬ್ದದ ಅರ್ಥ. ಹೀಗೆ ಪರಮೇಶ್ವರನು ಸಮಸ್ತ ಪ್ರಾಣಯುಕ್ತರ ಸುಖಕ್ಕೋಸ್ಕರ ಈ ಜಗತ್ತಿನ ವಸ್ತುಗಳನ್ನು ರಚಿಸಿದ್ದಾನೋ, ಹಾಗೆ ಮಾನವರೂ ಕೂಡ ಪರೋಪಕಾರವನ್ನು ಮಾಡಬೇಕು.

**ಪ್ರಶ್ನೆ :** – ಹೋಮದಿಂದ ಏನು ಉಪಕಾರವಾಗುತ್ತದೆ?

**ಉತ್ತರ:** – ದುರ್ಗಂಧಯುಕ್ತವಾದ ವಾಯು ಮತ್ತು ಜಲದಿಂದ ರೋಗವೂ, ರೋಗದಿಂದ ಪ್ರಾಣಯುಕ್ತರಿಗೆ ದುಃಖವೂ ಮತ್ತು ಸುಗಂಧಿತವಾದ ವಾಯು ಮತ್ತು ಜಲದಿಂದ ಆರೋಗ್ಯವೂ ಮತ್ತು ರೋಗದ ನಾಶವಾಗುವುದರಿಂದ ಸುಖವೂ ಪ್ರಾಪ್ತವಾಗುತ್ತವೆ– ಎಂಬುದನ್ನು ಎಲ್ಲ ಜನರೂ ತಿಳಿದಿದ್ದಾರೆ.

**ಪ್ರಶ್ನೆ :** ಚಂದನ ಮೊದಲಾದುವನ್ನು ತೇದು ಯಾವನಿಗಾದರೂ ಹಚ್ಚಿದರೆ, ಅಥವಾ ತುಪ್ಪ ಮೊದಲಾದುದನ್ನು ತಿನ್ನಲು ಕೊಟ್ಟರೆ, ದೊಡ್ಡ ಉಪಕಾರವಾದೀತು. ಬೆಂಕಿಯಲ್ಲಿ ಹಾಕಿ, ವ್ಯರ್ಥವಾಗಿ ಹಾಳುಮಾಡುವುದು ಬುದ್ಧಿವಂತರ ಕೆಲಸವಲ್ಲ.

**ಉತ್ತರ :** – ನೀವು ಪದಾರ್ಥವಿದ್ಯೆಯನ್ನು ತಿಳಿದಿದ್ದರೆ, ಎಂದಿಗೂ ಇಂತಹ ಮಾತನ್ನಾಡುತ್ತಿರಲಿಲ್ಲ. ಏಕೆಂದರೆ– ಯಾವುದೇ ದ್ರವ್ಯದ ಅಭಾವವೂ ಉಂಟಾಗುವುದಿಲ್ಲ. ನೋಡಿರಿ, ಎಲ್ಲಿ ಹೋಮವಾಗುವುದೋ, ಅಲ್ಲಿಂದ ದೂರದ ಸ್ಥಳದಲ್ಲಿರುವ ಪುರುಷನ ಮೂಗಿನಿಂದ ಸುಗಂಧ ಗ್ರಹಿಸಲ್ಪಡುತ್ತದೆ; ಹಾಗೆಯೇ ದುರ್ಗಂಧವೂ ಕೂಡ, ಇಷ್ಟರಿಂದಲೇ, ಅಗ್ನಿಯಲ್ಲಿ ಹಾಕಲ್ಪಟ್ಟ ಪದಾರ್ಥವು ಸೂಕ್ಷ್ಮವಾಗಿ, ಹರಡಿ, ವಾಯುವಿನೊಂದಿಗೆ ದೂರವಾದ ಸ್ಥಳಕ್ಕೆ ಹೋಗಿ, ದುರ್ಗಂಧವನ್ನು ನಿವಾರಿಸುತ್ತದೆ – ಎಂದು ತಿಳಿದುಕೊಳ್ಳಿರಿ.

**ಪ್ರಶ್ನೆ :** ಹೀಗೆಯೇ ಆಗಿರುವುದಾದರೆ, ಕೇಸರಿ, ಕಸ್ತೂರಿ, ಸುಗಂಧಿತ ಪುಷ್ಪಗಳು ಮತ್ತು ಅತ್ತರು – ಮೊದಲಾದುವನ್ನು ಮನೆಯಲ್ಲಿಡುವುದರಿಂದ ವಾಯು ಸುಗಂಧಿತವಾಗಿ ಸುಖಕಾರಕವಾಗುವುದು.

---

೧೮. ತುಪ್ಪವನ್ನು ಆಹುತಿಕೊಡಲು ಉಪಯೋಗಿಸುವ ಚಿಕ್ಕ ಸೌಟು ಅಥವಾ ಚಮಚೆ

**ಉತ್ತರ :** ಆ ಸುಗಂಧದಲ್ಲಿ ಮನೆಯಲ್ಲಿರುವ ವಾಯುವನ್ನು ಹೊರಹೊರಡಿಸಿ, ಶುದ್ಧ ವಾಯುವನ್ನು ಪ್ರವೇಶ ಗೊಳಿಸಬಲ್ಲ ಸಾಮರ್ಥ್ಯವಿಲ್ಲ. ಏಕೆಂದರೆ, ಅದರಲ್ಲಿ ಭೇದಕಶಕ್ತಿಯಿಲ್ಲ. ಮತ್ತು ಕೇವಲ ಅಗ್ನಿಗೆ ಮಾತ್ರ ಆ ವಾಯುವನ್ನು ಮತ್ತು ದುರ್ಗಂಧಯುಕ್ತ ಪದಾರ್ಥಗಳನ್ನು ಭಿನ್ನ- ಭಿನ್ನವಾಗಿ ಮತ್ತು ಹಗುರವಾಗಿ ಮಾಡಿ, ಹೊರಗೋಡಿಸಿ, ಪವಿತ್ರ ವಾಯುವನ್ನು ಪ್ರವೇಶಗೊಳಿಸುವ ಸಾಮರ್ಥ್ಯವಿದೆ.

**ಪ್ರಶ್ನೆ :** – ಹಾಗಾದರೆ, ಮಂತ್ರಪಠನಮಾಡುತ್ತಾ ಹೋಮ ಮಾಡುವುದರ ಪ್ರಯೋಜನವೇನು?

**ಉತ್ತರ:** – ಯಾವುದರಿಂದ ಹೋಮ ಮಾಡುವುದರ ಲಾಭ ತಿಳಿದುಬರುತ್ತದೋ, ಆ ವ್ಯಾಖ್ಯಾನವು ಮಂತ್ರಗಳಲ್ಲಿದೆ. ಮತ್ತು ಮಂತ್ರಗಳ ಆವೃತ್ತಿಯಾಗುವುದರಿಂದ, ಅವು ಕಂಠಸ್ಥವಾಗುತ್ತವೆ. ವೇದಗ್ರಂಥಗಳ ಪಠನ-ಪಾಠನವೂ ಮತ್ತು ರಕ್ಷಣೆಯೂ ಕೂಡ ಆಗುವುದು.

**ಪ್ರಶ್ನೆ :** – ಹೋಮಮಾಡದೇ ಹೋದರೆ, ಪಾಪವಾಗುವುದೇ?

**ಉತ್ತರ:** – ಹೌದು, ಏಕೆಂದರೆ, ಯಾವ ಮನುಷ್ಯನ ಶರೀರದಿಂದ ಎಷ್ಟು ದುರ್ಗಂಧ ಉತ್ಪನ್ನವಾಗಿ, ವಾಯು ಮತ್ತು ಜಲವನ್ನು ಕೆಡಿಸಿ,ರೋಗೋತ್ಪತ್ತಿಗೆ ಕಾರಣಭೂತನಾಗಿ ಪ್ರಾಣವಂತರಿಗೆ ದುಃಖವನ್ನುಂಟುಮಾಡುತ್ತಾನೋ, ಅಷ್ಟೇ ಪಾಪ ಆ ಮನುಷ್ಯನಿಗೆ ಉಂಟಾಗುತ್ತದೆ. ಆದುದರಿಂದ, ಆ ಪಾಪದ ನಿವಾರಣೆಗಾಗಿ ಅಷ್ಟು ಸುಗಂಧವನ್ನು, ಅಥವಾ ಅದಕ್ಕಿಂತ ಹೆಚ್ಚಾಗಿ, ವಾಯು ಮತ್ತು ಜಲದಲ್ಲಿ ಹರಡಬೇಕು. ಮತ್ತು ತಿನ್ನಿಸುವುದರಿಂದ-ಕುಡಿಸುವುದರಿಂದ ಆ ಒಂದು ವ್ಯಕ್ತಿಗೆ ಸುಖವು ವಿಶೇಷವಾಗುತ್ತದೆ. ಎಷ್ಟು ಘೃತ ಮತ್ತು ಸುಗಂಧ ಮೊದಲಾದ ಪದಾರ್ಥಗಳನ್ನು ಒಬ್ಬ ಮಾನವನು ತಿನ್ನುತ್ತಾನೋ, ಅಷ್ಟು ದ್ರವ್ಯದ ಹೋಮದಿಂದ ಲಕ್ಷಾಂತರ ಮಾನವರಿಗೆ ಉಪಕಾರವಾಗುತ್ತದೆ . ಆದರೆ, ಜನರು ತುಪ್ಪ ಮೊದಲಾದ ಉತ್ತಮ ಪದಾರ್ಥಗಳನ್ನು ತಿನ್ನದಿದ್ದರೆ, ಅವರ ಶರೀರದ ಮತ್ತು ಆತ್ಮನ ಬಲದ ಉನ್ನತಿಯಾಗಲಾರದು. ಈ ಕಾರಣದಿಂದ ಒಳ್ಳೆಯ ಪದಾರ್ಥಗಳನ್ನು ತಿನ್ನಿಸಲೂ-ಕುಡಿಸಲೂ ಬೇಕು, ಆದರೆ, ಅದಕ್ಕಿಂತ ಹೋಮವನ್ನು ಹೆಚ್ಚಾಗಿ ಮಾಡುವುದು ಉಚಿತ. ಆದುದರಿಂದ ಹೋಮಮಾಡುವುದು ಅತ್ಯಾವಶ್ಯಕವಾಗಿದೆ.

**ಪ್ರಶ್ನೆ :**- ಪ್ರತಿಯೊಬ್ಬ ಮಾನವನೂ ಎಷ್ಟು ಆಹುತಿಗಳನ್ನು ಕೊಡಬೇಕು ಮತ್ತು ಒಂದೊಂದು ಆಹುತಿಯ ಪರಿಮಾಣವೆಷ್ಟು?

**ಉತ್ತರ:**- ಪ್ರತಿಯೊಬ್ಬ ಮಾನವನೂ ಹದಿನಾರು – ಹದಿನಾರು ಆಹುತಿ ಕೊಡಬೇಕು ಮತ್ತು ಆರು-ಆರು ಮಾಶದಷ್ಟು ತುಪ್ಪ ಮೊದಲಾದುದು ಒಂದೊಂದು ಆಹುತಿಯ ಕನಿಷ್ಠಪಕ್ಷದ ಪರಿಮಾಣವಾಗಿರಬೇಕು. ಮತ್ತು ಇದಕ್ಕಿಂತ ಹೆಚ್ಚು ಮಾಡಿದರೆ, ಬಹಳ ಒಳ್ಳೆಯದು. ಈ ಕಾರಣದಿಂದ ಆರ್ಯವರಶಿರೋಮಣಿ ಮಹಾಶಯರಾದ ಋಷಿ-ಮಹರ್ಷಿಗಳೂ, ರಾಜ-ಮಹಾರಾಜರುಗಳೂ ಬಹಳ ಹೋಮವನ್ನು ಮಾಡುತ್ತಿದ್ದರು ಮತ್ತು ಮಾಡಿಸುತ್ತಿದ್ದರು. ಎಂದಿನವರೆಗೆ ಈ ಹೋಮಮಾಡುವ ಪ್ರಚಾರವಿದ್ದಿತೋ, ಅಂದಿನವರೆಗೆ ಆರ್ಯಾವರ್ತದೇಶವು ರೋಗಗಳಿಂದ ರಹಿತವಾಗಿ ಮತ್ತು ಸುಖಗಳಿಂದ ಪೂರಿತವಾಗಿ ಇದ್ದಿತು. ಈಗಲೂ ಪ್ರಚಾರವಾದರೆ, ಹಾಗೆಯೇ ಆದೀತು. ಈ ಎರಡು ಯಜ್ಞಗಳು, ಎಂದರೆ – ಓದುವುದು-ಓದಿಸುವುದು, ಸಂಧ್ಯೋಪಾಸನ, ಈಶ್ವರನ ಸ್ತುತಿ-ಪ್ರಾರ್ಥನಾ-ಉಪಾಸನೆ ಮಾಡುವುದು **ಬ್ರಹ್ಮಯಜ್ಞ**, ಎರಡನೆಯದು – ಅಗ್ನಿಹೋತ್ರ ದಿಂದಾರಂಭಿಸಿ, ಅಶ್ವಮೇಧದವರೆಗೆ ಯಜ್ಞ ಮಾಡುವುದು ಮತ್ತು ವಿದ್ವಾಂಸರ ಸೇವೆ-ಸಂಗಮಾಡುವುದು **ದೇವಯಜ್ಞ**. ಆದರೆ, ಬ್ರಹ್ಮಚರ್ಯದಲ್ಲಿ ಕೇವಲ ಬ್ರಹ್ಮಯಜ್ಞ ಮತ್ತು ಅಗ್ನಿಹೋತ್ರ ಮಾತ್ರ ಮಾಡಬೇಕಾಗಿರುತ್ತದೆ.

**ಬ್ರಾಹ್ಮಣಸ್ತ್ರಯಾಣಾಂ ವರ್ಣಾನಾಮುಪನಯನಂ ಕರ್ತುಮರ್ಹತಿ । ರಾಜ ನ್ಯೋ ದ್ವಯಸ್ಯ । ವೈಶೋ ವೈಶ್ಯಸ್ಯೈವೇತಿ । ಶೂದ್ರಮಪಿ ಕುಲಗುಣಸಂಪನ್ನಂ ಮಂತ್ರ ವರ್ಜಮನುಪನೀತಮಧ್ಯಾಪಯೇದಿತ್ಯೇಕೇ ।** ಇದು ಸುಶ್ರುತನ ಸೂತ್ರಸ್ಥಾನದ ಎರಡನೆಯ ಅಧ್ಯಾಯದ ವಚನ.

ಬ್ರಾಹ್ಮಣನು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರು ವರ್ಣಗಳಿಗೂ, ಕ್ಷತ್ರಿಯನು, ಕ್ಷತ್ರಿಯ ಮತ್ತು ವೈಶ್ಯರಿಗೂ ಹಾಗೂ ವೈಶ್ಯನು ಏಕಮಾತ್ರ ವೈಶ್ಯ ವರ್ಣಕ್ಕೂ ಉಪನಯನ ಮಾಡಿಸಿ, ಓದಿಸಬಹುದು. ಮತ್ತು ಕುಲೀನನೂ, ಶುಭಲಕ್ಷಣಯುಕ್ತನೂ ಆದ ಶೂದ್ರನಿದ್ದರೆ, ಅವನಿಗೆ ಮಂತ್ರಸಂಹಿತೆಯನ್ನು ಬಿಟ್ಟು ಎಲ್ಲ ಶಾಸ್ತ್ರಗಳನ್ನೂ ಓದಿಸಬಹುದು ಮತ್ತು ಶೂದ್ರನು ಓದಬಹುದು. ಆದರೆ, ಅವನಿಗೆ ಉಪನಯನಮಾಡಬಾರದು – ಎಂಬುದು ಅನೇಕ ಆಚಾರ್ಯರ ಅಭಿಪ್ರಾಯವಾಗಿದೆ.[೧೯] ಈ ವಿಧಿಯ

೧೯. ಮಹರ್ಷಿಗಳ ಅಭಿಪ್ರಾಯ ವರ್ಣವ್ಯವಸ್ಥಾಪ್ರಕರಣದಲ್ಲಿ ವ್ಯಕ್ತವಾಗುವುದು.

ನಂತರ ಐದನೆಯ ಅಥವಾ ಎಂಟನೆಯ ವರ್ಷದಿಂದ ಹುಡುಗರು ಹುಡುಗರ ಪಾಠಶಾಲೆಗೂ, ಹುಡುಗಿಯರು ಹುಡುಗಿಯರ ಪಾಠಶಾಲೆಗೂ ಹೋಗಬೇಕು. ಮತ್ತು ಕೆಳಗೆ ಬರೆದ ನಿಯಮಾನುಸಾರವಾಗಿ ಅಧ್ಯಯನವನ್ನು ಆರಂಭಿಸಬೇಕು:–

**ಷಟ್ ತ್ರಿಂಶದಾಬ್ದಿಕಂ ಚರ್ಯಂ ಗುರೌ ತ್ರೈವೇದಿಕಂ ವ್ರತಮ್ ।**

**ತದರ್ಧಿಕಂ ಪಾದಿಕಂ ವಾ ಗ್ರಹಣಾಂತಿಕಮೇವ ವಾ ॥** (ಮನು: ೩.೧)

**ಅರ್ಥ:–** ಎಂಟನೆಯ ವರ್ಷದ ಮುಂದೆ ಮೂವತ್ತಾರನೆಯ ವರ್ಷದವರೆಗೆ,ಎಂದರೆ– ಒಂದೊಂದು ವೇದವನ್ನು ಸಾಂಗೋಪಾಂಗವಾಗಿ ಓದಲು ಹನ್ನೆರಡು–ಹನ್ನೆರಡು ವರ್ಷದಂತೆ, ಒಟ್ಟು ಮೂವತ್ತಾರು[೨೦] ಮತ್ತು ಎಂಟು ಸೇರಿ ನಾಲ್ವತ್ತನಾಲ್ಕು ಅಥವಾ ಹದಿನೆಂಟು ವರ್ಷಗಳ ಬ್ರಹ್ಮಚರ್ಯ ಹಾಗೂ ಮೊದಲಿನ ಎಂಟು ಸೇರಿ ಇಪ್ಪತ್ತಾರು ವರ್ಷ ಅಥವಾ ಒಂಬತ್ತು ವರ್ಷ ಮತ್ತು ವಿದ್ಯೆಯನ್ನು ಎಂದಿನವರೆಗೆ ಪೂರ್ಣವಾಗಿ ಗ್ರಹಿಸನೋ, ಆ ವರೆಗೆ ಬ್ರಹ್ಮಚರ್ಯವನ್ನು ಪಾಲಿಸಬೇಕು.

**ಪುರುಷೋ ವಾವ ಯಜ್ಞಸ್ತಸ್ಯ ಯಾನಿ ಚತುರ್ವಿಂಶತಿ ವರ್ಷಾಣಿ ತತ್ಪ್ರಾತಃ ಸವನಂ. ಚತುರ್ವಿಂಶತ್ಯಕ್ಷರಾ ಗಾಯತ್ರೀ ಗಾಯತ್ರಂ ಪ್ರಾತಃ ಸವನಂ, ತದಸ್ಯವಸವೋऽನ್ವಾಯತ್ತಾಃ ಪ್ರಾಣಾ ವಾವ ವಸವ ಏತೇ ಹೀದಂ ಸರ್ವಂ ವಾಸಯಂತಿ. (೧)**

**ತಂ ಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ ಸ ಬ್ರೂಯಾತ್ ಪ್ರಾಣಾ ವಸವ ಇದಂ ಮೇ ಪ್ರಾತಃಸವನಂ. ಮಾಧ್ಯಂದಿನಂ ಸವನಮನು ಸಂತನುತೇತಿ ಮಾಹಂ ಪ್ರಾಣಾನಾಂ ವಸೂನಾಂ ಮಧ್ಯೇ ಯಜ್ಞೋ ವಿಲೋಪ್ಸೀಯೇತುದ್ಧೈವ ತತ ಏತ್ಯಗದೋ ಹ ಭವತಿ. (೨)**

**ಅಥ ಯಾನಿ ಚತುಶ್ಚತ್ವಾರಿಂಶದ್ವರ್ಷಾಣಿ ತನ್ಮಾಧ್ಯಂದಿನಂ ಸವನಂ ಚತುಶ್ಚತ್ವಾರಿಂ ಶದಕ್ಷರಾ ತ್ರೈಷ್ಟುಪ್, ತ್ರೈಷ್ಟುಭಂ ಮಾಧ್ಯಂದಿನಂ ಸವನಂ. ತದಸ್ಯ ರುದ್ರಾ ಅನ್ವಾಯತ್ತಾಃ ಪ್ರಾಣಾ ವಾವ ರುದ್ರಾ ಏತೇ ಹೀದಂ ಸರ್ವಂ ರೋದಯಂತಿ. (೩)**

**ತಂ ಚೇದೇತಸ್ಮಿನ್ ವಯಸಿ ಕಿಂಚಿದುಪತಪೇತ್ಸ ಬ್ರೂಯಾತ್ ಪ್ರಾಣಾ ರುದ್ರಾ ಇದಂ ಮೇ ಮಾಧ್ಯಂದಿನಂ ಸವನಮನು ಸಂತನುತೇತಿ ಮಾಹಂ ಪ್ರಾಣಾನಾಂ ರುದ್ರಾಣಾಂ ಮಧ್ಯೇ ಯಜ್ಞೋ ವಿಲೋಪ್ಸೀಯೇತ್ಯುದ್ಧೈವ ತತ ಏತ್ಯಗದೋ ಹ ಭವತಿ. (೪)**

**ಅಥ ಯಾನ್ಯಷ್ಟಾಚತ್ವಾರಿಂಶದ್ವರ್ಷಾಣಿ ತತ್ತೃತೀಯ ಸವನಮಾಷ್ಟಾಚತ್ವಾರಿಂಶದಕ್ಷರಾ ಜಗತೀ. ಜಾಗತಂ ತೃತೀಯಸವನಂ. ತದಸ್ಯಾದಿತ್ಯಾನ್ವಾಯತ್ತಾಃ ಪ್ರಾಣಾ ವಾ ವಾದಿತ್ಯಾ, ಏತೇ ಹೀದಂ ಸರ್ವಮಾದದತೇ. (೫)**

**ತಂಚೇದೇತಸ್ಮಿನ್ವಯಸಿ ಕಿಂಚಿದುಪ ತಪೇತ್ಸ ಬ್ರೂಯಾತ್ ಪ್ರಾಣಾ ಆದಿತ್ಯಾ ಇದಂ ಮೇ ತೃತೀಯಸವನಮಾಯುರನು ಸಂತನುತೇತಿ. ಮಾಹಂ ಪ್ರಾಣಾನಾಮಾದಿತ್ಯಾನಾಂ ಮಧ್ಯೇ ಯಜ್ಞೋ ವಿಲೋಪ್ಸೀಯೇತ್ಯುದ್ಧೈವ ತತ ಏತ್ಯಗದೋ ಹೈವ ಭವತಿ. (೬)**

ಇದು ಛಾಂದೋಗ್ಯೋಪನಿಷತ್ತಿನ (ಪ್ರಪಾಠಕ–೩, ಖಂಡ–೧೬) ವಚನವಾಗಿದೆ.

ಬ್ರಹ್ಮಚರ್ಯ ಮೂರು ಬಗೆಯದಿದೆ – **ಕನಿಷ್ಠ, ಮಧ್ಯಮ** ಮತ್ತು **ಉತ್ತಮ**; ಅವುಗಳಲ್ಲಿ ಕನಿಷ್ಠವಾದುದು ಹೀಗಿರುತ್ತದೆ. ಪುರುಷನು, ಅನ್ನರಸಮಯವಾದ ದೇಹ ಪುರ; 'ಪುರಿ' ಎಂದರೆ ದೇಹದಲ್ಲಿ ಶಯನ ಮಾಡುವ ಜೀವಾತ್ಮನು, ಯಜ್ಞ– ಎಂದರೆ ಅತ್ಯಂತ ಶುಭಗುಣಗಳಿಂದ ಸಂಗತನೂ ಮತ್ತು ಸತ್ಕಾರಾರ್ಹನೂ ಆಗಬೇಕು. ಅವನು ೨೪ ವರ್ಷಗಳ ಪರ್ಯಂತ ಜಿತೇಂದ್ರಿಯನಾಗಿ, ಎಂದರೆ ಬ್ರಹ್ಮಚಾರಿಯಾಗಿದ್ದು ವೇದ – ಮೊದಲಾದ ವಿದ್ಯೆಗಳನ್ನೂ ಮತ್ತು ಸುಶಿಕ್ಷಣವನ್ನೂ ಗ್ರಹಿಸಬೇಕು ಮತ್ತು ವಿವಾಹ ಮಾಡಿಕೊಂಡರೂ ವಿಷಯಲೋಲುಪನಾಗದಿರಬೇಕು – ಇದು ಅವನಿಗೆ ಆವಶ್ಯಕ. ಹೀಗೆ ಮಾಡಿದರೆ, ಅವನ ಶರೀರದಲ್ಲಿ ಪ್ರಾಣವು ಬಲಯುಕ್ತವಾಗಿ ಸಮಸ್ತ ಶುಭಗುಣಗಳನ್ನೂ ನೆಲೆಗೊಳಿಸುವಂತಹವಾಗುತ್ತವೆ. (೧)

ಈ ಪ್ರಥಮ ವಯಸ್ಸಿನಲ್ಲಿ, ಅವನಿಗೆ ವಿದ್ಯಾಭ್ಯಾಸದಲ್ಲಿ ಏನಾದರೂ ಸಂತಾಪ ಉಂಟಾದರೆ ಮತ್ತು, ಆಚಾರ್ಯನೂ ಅವನಿಗೆ ಅನುಕೂಲವಾದ ಉಪದೇಶವನ್ನೇ ಕೊಡುತ್ತಾ ಹೋಗಬೇಕು– ಮತ್ತು ಬ್ರಹ್ಮಚಾರಿಯು, ನಾನು ಪ್ರಥಮ ಸ್ಥಿತಿಯಲ್ಲಿ ಸರಿ

---

೨೦. ಒಂದು ವೇದಕ್ಕೆ ೧೨ ವರ್ಷದಂತೆ ೩೬ ವರ್ಷಗಳು, ಎಂದರೆ ಇರುವುದು ಮೂರೇ ವೇದ ಎಂದು ತಿಳಿಯಬಾರದು. ಜ್ಞಾನ–ಕರ್ಮ–ಉಪಸನಾ ಎಂಬ ಮೂರು ವಿದ್ಯೆಗಳನ್ನು ಗ್ರಹಿಸಬೇಕು. –ಅನು.

ನಾಲ್ಕು ವೇದಗಳಲ್ಲಿನ ಮಂತ್ರ ಶೈಲಿ ಮೂರು ವಿಧ–ಋಕ್, ಯಜು, ಮತ್ತು ಸಾಮ ಎಂದು. ಮೂರು ವೇದಗಳೆಂದರೆ, ಶೈಲಿಗತ ಅಭಿಪ್ರಾಯದಿಂದಲೂ ಗ್ರಾಹ್ಯ. –ಸಂ.

ಸರಿಯಾಗಿ ಬ್ರಹ್ಮಚಾರಿಯಾಗಿರುವೆನಾದಲ್ಲಿ ನನ್ನ ಶರೀರ ಮತ್ತು ಆತ್ಮ ಆರೋಗ್ಯಯುಕ್ತವೂ, ಬಲಿಷ್ಠವೂ ಆಗಿ, ನನ್ನ ಪ್ರಾಣಗಳು ಶುಭಗುಣಗಳನ್ನು ನೆಲೆಗೊಳಿಸುವಂತಹವಾಗುವುವು – ಎಂಬ ನಿರ್ಧಾರವನ್ನು ಮಾಡಿಕೊಳ್ಳಬೇಕು. ಹಾಗೂ, "ಮಾನವರೇ! ನಾನು ಬ್ರಹ್ಮಚರ್ಯಕ್ಕೆ ಲೋಪ ತಾರದ ಹಾಗೆ ಸುಖಗಳನ್ನು ವಿಸ್ತರಿಸಿರಿ. ೨೪ ವರ್ಷಗಳ ನಂತರ ಗೃಹಾಶ್ರಮವನ್ನು ಸ್ವೀಕರಿಸುವೆನಾದರೆ, ನಾನು ರೋಗರಹಿತನಾಗಿರುವೆನು ಮತ್ತು ನನ್ನ ಆಯಸ್ಸೂ ಕೂಡ ೭೦ ಅಥವಾ ೮೦ ವರ್ಷಗಳವರೆಗೂ ಇರುವುದು – ಎಂದು ಪ್ರಸಿದ್ಧವಾಗಿದೆ"– ಎಂದು ಹೇಳಬೇಕು. (೨)

ಮಧ್ಯಮ ಬ್ರಹ್ಮಚರ್ಯವಿದು : ಯಾವ ಮಾನವನು ೪೪ ವರ್ಷಗಳವರೆಗೆ ಬ್ರಹ್ಮಚಾರಿಯಾಗಿದ್ದು ವೇದಾಭ್ಯಾಸ ಮಾಡುತ್ತಾನೋ, ಅವನ ಪ್ರಾಣಗಳೂ, ಇಂದ್ರಿಯಗಳೂ, ಅಂತಃಕರಣಗಳೂ ಮತ್ತು ಆತ್ಮನೂ ಬಲಯುಕ್ತವಾಗಿ ಎಲ್ಲ ದುಷ್ಟರನ್ನೂ ಅಳಿಸುವವೂ ಮತ್ತು ಶ್ರೇಷ್ಠರನ್ನು ಪಾಲಿಸುವವೂ ಆಗುತ್ತವೆ. (೩)

ನಾನು ಈ ಪ್ರಥಮ ವಯಸ್ಸಿನಲ್ಲೇ ತಾವು ಹೇಳುವಂತೆ ಸ್ವಲ್ಪ ತಪಶ್ಚರ್ಯೆಯನ್ನು ಮಾಡಿದರೆ, ನನ್ನ ರುದ್ರರೂಪವಾದ ಪ್ರಾಣಗಳುಳ್ಳ ಈ ಮಧ್ಯಮ ಬ್ರಹ್ಮಚರ್ಯವು ಸಿದ್ಧಿಸುವುದು. ಓ ಬ್ರಹ್ಮಚಾರಿಗಳೇ! ಹೇಗೆ ನಾನು ಈ ಬ್ರಹ್ಮಚರ್ಯಕ್ಕೆ ಲೋಪ ತಾರದೆ ಯಜ್ಞಸ್ವರೂಪ ನಾಗುತ್ತೇನೋ ಮತ್ತು ಅದೇ ಆಚಾರ್ಯಕುಲದಿಂದ ಬರುತ್ತೇನೋ ಮತ್ತು ರೋಗರಹಿನಾಗಿರುತ್ತೇನೋ, ಹಾಗೆಯೇ ನೀವುಗಳೂ ಈ ಬ್ರಹ್ಮಚರ್ಯವನ್ನೂ ವರ್ಧಿಸಿರಿ. ಹೇಗೆ ಈ ಬ್ರಹ್ಮಚಾರಿ ಒಳ್ಳೆಯ ಕೆಲಸ ಮಾಡುತ್ತಾನೋ, ಹಾಗೆ ನೀವೂ ಮಾಡುತ್ತಾ ಹೋಗಿರಿ. (೪)

ಉತ್ತಮ ಬ್ರಹ್ಮಚರ್ಯವು ೪೮ ವರ್ಷಗಳವರೆಗಿನದು ಮೂರನೆಯ ಬಗೆಯದು. ಜಗತೀ ಛಂದಸ್ಸಿನಲ್ಲಿ ೪೮ ಅಕ್ಷರಗಳಿರುವ ಹಾಗೆ, ಯಾವನು ೪೮ ವರ್ಷಗಳ ಪರ್ಯಂತ ಯಥಾರ್ಥವಾಗಿ ಬ್ರಹ್ಮಚರ್ಯವನ್ನು ಪಾಲಿಸುತ್ತಾನೋ, ಅವನ ಪ್ರಾಣಗಳು ಅನುಕೂಲವಾಗಿ ಸಮಸ್ತ ವಿದ್ಯೆಗಳನ್ನೂ ಗ್ರಹಿಸುತ್ತವೆ. (೫)

ಆಚಾರ್ಯರೂ, ಮತ್ತು ಮಾತಾ ಪಿತೃಗಳೂ ತಮ್ಮ ಮಕ್ಕಳನ್ನು ಪ್ರಥಮ ವಯಸ್ಸಿನಲ್ಲಿ ವಿದ್ಯೆ ಮತ್ತು ಗುಣಗ್ರಹಣಕ್ಕಾಗಿ ತಪಸ್ವಿಗಳನ್ನಾಗಿ ಮಾಡಿ ಮತ್ತು ಅದರ ಉಪದೇಶವನ್ನೇ ಮಾಡಿದರೆ ಹಾಗೂ ಮಕ್ಕಳು ತಾವೇ ಸ್ವತಃ ಅಖಂಡಿತ ಬ್ರಹ್ಮಚರ್ಯಪಾಲನದಿಂದ ಮೂರನೆಯ ಉತ್ತಮ ಬ್ರಹ್ಮಚರ್ಯವನ್ನು ಸಾಧಿಸಿದರೆ, ಪೂರ್ಣವಾಗಿ, ಎಂದರೆ ನಾಲ್ಕುನೂರು ವರ್ಷಗಳವರೆಗೂ ಆಯಸ್ಸನ್ನು ವರ್ಧಿಸಿಕೊಳ್ಳುವರು. ಹಾಗೆಯೇ, ನೀವೂ ವರ್ಧಿಸಿಕೊಳ್ಳಿರಿ. ಏಕೆಂದರೆ– ಯಾವ ಮಾನವರು ಈ ಬ್ರಹ್ಮಚರ್ಯವನ್ನು ಪಡೆದು ಅದಕ್ಕೆ ಲೋಪವನ್ನುಂಟುಮಾಡರೋ, ಅವರು ಎಲ್ಲ ವಿಧದ ರೋಗಗಳಿಂದಲೂ ರಹಿತವಾಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವನ್ನು ಪಡೆದುಕೊಳ್ಳುತ್ತಾರೆ. (೬)

## (ಶರೀರದ ನಾಲ್ಕು ಅವಸ್ಥೆಗಳು)

**ಚತಸ್ರೋऽವಸ್ಥಾಃ ಶರೀರಸ್ಯ ವೃದ್ಧಿರ್ಯೌವನಂ ಸಂಪೂರ್ಣತಾ ಕಿಂಚಿತ್ಪರಿ ಹಾಣಿಶ್ಚೇತಿ । ಆಷೋಡಶಾದ್ವೃದ್ಧಿಃ । ಆಪಂಚವಿಂಶತೇರ್ಯೌವನಂ ಆಚತ್ವಾರಿಂಶತಃ ಸಂಪೂರ್ಣತಾ । ತತಃ ಕಿಂಚಿತ್ಪರಿಹಾಣಿಶ್ಚೇತಿ ॥**

**ಪಂಚವಿಂಶೋ ತತೋ ವರ್ಷೇ ಪುಮಾನ್ನಾರೀ ತು ಷೋಡಶೇ ।**

**ಸಮತ್ವಾಗತವೀರ್ಯೌ ತೌ ಜಾನೀಯಾತ್ಕುಶಲೋ ಭಿಷಕ್ ॥** ಸುಶ್ರುತನ ಸೂತ್ರಸ್ಥಾನದ (ಅ–೩೫)

**ಶರೀರದ ಅವಸ್ಥೆಗಳು ನಾಲ್ಕು ಇವೆ : –**

ಮೊದಲನೆಯದು (ವೃದ್ಧಿ) ೧೬ನೆಯ ವರ್ಷದಿಂದ ಹಿಡಿದು ೨೫ನೆಯ ವರ್ಷದವರೆಗೆ ಸಮಸ್ತ ಧಾತುಗಳೂ ವರ್ಧಿಸುತ್ತವೆ.

ಎರಡನೆಯದು (ಯೌವನ) ೨೫ನೆಯ ವರ್ಷದ ಕೊನೆ ಮತ್ತು ೨೬ನೆಯ ವರ್ಷದ ಆರಂಭದಲ್ಲಿ ಯುವಾವಸ್ಥೆಯ ಆರಂಭವಾಗುತ್ತದೆ.

ಮೂರನೆಯದು (ಸಂಪೂರ್ಣತ್ವ) ೨೫ನೆಯದರಿಂದ ಹಿಡಿದು ೪೦ನೆಯ ವರ್ಷದವರೆಗೆ ಎಲ್ಲ ಧಾತುಗಳಿಗೂ ಪುಷ್ಟಿಯುಂಟಾಗುತ್ತದೆ.

ನಾಲ್ಕನೆಯ (ಕಿಂಚಿತ್ಪರಿಹಾಣಿ) ಯಾವಾಗ ಸಾಂಗೋಪಾಂಗವಾಗಿ ಶರೀರದಲ್ಲಿನ ಸಕಲ ಧಾತುಗಳೂ ಪುಷ್ಟವಾಗಿ ಪೂರ್ಣತ್ವವನ್ನು ಹೊಂದುತ್ತವೋ, ಆ ಕಾಲದ ನಂತರ ಯಾವ ಧಾತು ಹೆಚ್ಚುವುದೋ, ಅದು ಶರೀರದಲ್ಲಿ ಉಳಿಯುವುದಿಲ್ಲ: ಆದರೆ,ಕನಸು, ಬೆವರು– ಮೊದಲಾದುವುಗಳ ಮೂಲಕ ಹೊರಕ್ಕೆ ಹೊರಟು ಹೋಗುತ್ತದೆ. ಆ ೪೦ ನೆಯ ವರ್ಷವೇ ವಿವಾಹಕ್ಕೆ ಉತ್ತಮವಾದ ಸಮಯ. ಅಂದರೆ–ಉತ್ತಮೋತ್ತಮವಂತೂ ನಾಲ್ವತ್ತೆಂಟನೆಯ ವರ್ಷದಲ್ಲಿ ವಿವಾಹ ಮಾಡುವುದೇ ಆಗಿದೆ.

**ಪ್ರಶ್ನೆ :** – ಬ್ರಹ್ಮಚರ್ಯದ ಈ ನಿಯಮ ಸ್ತ್ರೀ ಮತ್ತು ಪುರುಷರಿಗೆ ಇಬ್ಬರಿಗೂ ಸಮವೇ ಏನು?

**ಉತ್ತರ:** – ಅಲ್ಲ. ಪುರುಷನು ೨೫ ನೆಯ ವರ್ಷಗಳವರೆಗೆ ಬ್ರಹ್ಮಚರ್ಯಪಾಲಿಸಿದರೆ, ಕನ್ಯೆ ೧೬ ವರ್ಷಗಳವರೆಗೆ, ಪುರುಷ ೩೦ ವರ್ಷ ಪರ್ಯಂತ ಬ್ರಹ್ಮಚಾರಿಯಾಗಿದ್ದರೆ, ಸ್ತ್ರೀ ೧೭ ವರ್ಷ, ಪುರುಷನು ೩೬ ವರ್ಷಗಳವರೆಗೆ ಇದ್ದರೆ, ಸ್ತ್ರೀ ೧೮ ವರ್ಷ; ಪುರುಷನು ೪೦ ವರ್ಷಗಳವರೆಗೆ ಬ್ರಹ್ಮಚರ್ಯ ಪಾಲಿಸಿದರೆ, ಸ್ತ್ರೀ ೨೦ ವರ್ಷ; ಪುರುಷನು ೪೪ ವರ್ಷಗಳ ಪರ್ಯಂತ, ಬ್ರಹ್ಮಚರ್ಯ ಪಾಲಿಸಿದರೆ, ಸ್ತ್ರೀ ೨೨ ವರ್ಷ; ಪುರುಷನು ೪೮ ವರ್ಷ ಬ್ರಹ್ಮಚರ್ಯ ಪಾಲಿಸಿದರೆ, ಸ್ತ್ರೀ ೨೪ ವರ್ಷ ಪರ್ಯಂತ ಬ್ರಹ್ಮಚರ್ಯವನ್ನು ಸೇವಿಸಬೇಕು. ಎಂದರೆ, ೪೮ನೆಯ ವರ್ಷದ ನಂತರ ಪುರುಷನೂ ಮತ್ತು ೨೪ನೆಯ ವರ್ಷದ ನಂತರ ಸ್ತ್ರೀಯೂ ಬ್ರಹ್ಮಚರ್ಯವನ್ನೂ ಪಾಲಿಸಬೇಕಾಗಿಲ್ಲ. ಆದರೆ ಈ ನಿಯಮ ವಿವಾಹ ಮಾಡಿಕೊಳ್ಳುವ ಪುರುಷರಿಗೆ ಮತ್ತು ಸ್ತ್ರೀಯರಿಗೆ ಮಾತ್ರ. ಮತ್ತು ಯಾರು ವಿವಾಹ ಮಾಡಿಕೊಳ್ಳಲು ಇಚ್ಛಿಸುವುದೇ ಇಲ್ಲವೋ, ಅವರು ಮರಣ ಪರ್ಯಂತ ಬ್ರಹ್ಮಚಾರಿಗಳಾಗಿರಲು ಸಾಧ್ಯವಿದ್ದರೆ, ಸಂತೋಷದಿಂದ ಹಾಗೆಯೇ ಇರಲಿ. ಆದರೆ, ಈ ಕಾರ್ಯ ಪೂರ್ಣ ವಿದ್ವಾಂಸರೂ, ಜಿತೇಂದ್ರಿಯರೂ ಮತ್ತು ನಿರ್ದೋಷ ಯೋಗಿಗಳೂ ಆದ ಸ್ತ್ರೀಯರದು ಮತ್ತು ಪುರುಷರದಾಗಿದೆ. ಕಾಮದ ವೇಗವನ್ನು ತಡೆದಿಟ್ಟು, ಇಂದ್ರಿಯಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳುವುದು ಮಹಾ ಕಠಿಣಕಾರ್ಯ.

## (ಓದುವವರ – ಓದಿಸುವವರ ನಿಯಮಗಳು)

**ಋತಂ ಚ ಸ್ವಾಧ್ಯಾಯಪ್ರವಚನೇ ಚ । ಸತ್ಯಂ ಚ ಸ್ವಾಧ್ಯಾಯಪ್ರವಚನೇ ಚ । ತಪಶ್ಚ ಸ್ವಾಧ್ಯಾಯಪ್ರವಚನೇ ಚ । ದಮಶ್ಚ ಸ್ವಾಧ್ಯಾಯಪ್ರವಚನೇ ಚ । ಶಮಶ್ಚ ಸ್ವಾಧ್ಯಾಯಪ್ರವಚನೇ ಚ । ಆಗ್ನಯಶ್ಚ ಸ್ವಾಧ್ಯಾಯಪ್ರವಚನೇ ಚ । ಅಗ್ನಿ ಹೋತ್ರಂ ಚ ಸ್ವಾಧ್ಯಾಯಪ್ರವಚನೇ ಚ । ಅತಿಥಿಯಶ್ಚ ಸ್ವಾಧ್ಯಾಯಪ್ರವಚನೇ ಚ । ಮಾನುಷಂ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜಾ ಚ ಸ್ವಾಧ್ಯಾಯಪ್ರವಚನೇ ಚ । ಪ್ರಜನಶ್ಚ ಸ್ವಾಧ್ಯಾಯಪ್ರವಚನೇ ಚ । ಪ್ರಜಾತಿಶ್ಚ ಸ್ವಾಧ್ಯಾಯಪ್ರವಚನೇ ಚ।**

ಇದು ತೈತ್ತಿರೀಯೋಪನಿಷತ್ತಿನ ವಚನವಾಗಿದೆ. (ಶಿಕ್ಷಾವಲ್ಲಿ ಪ್ರ-೭ ಅನು-೯) ಇವು ಓದುವವರ–ಓದಿಸುವವರ ನಿಯಮಗಳಾಗಿವೆ.

**ಅರ್ಥ :** (ಋತಂ) ಯಥಾರ್ಥವಾದ ಆಚರಣದಿಂದ ಓದಬೇಕು; ಓದಿಸಬೇಕು; (ಸತ್ಯಂ) ಸತ್ಯಾಚಾರದಿಂದ ಸತ್ಯವಿದ್ಯೆ ಗಳನ್ನು ಓದಬೇಕು; ಓದಿಸಬೇಕು. (ತಪಃ) ತಪಸ್ವಿಗಳಾಗಿ, ಎಂದರೆ ಧರ್ಮಾನುಷ್ಠಾನ ಮಾಡುತ್ತಾ ವೇದ ಮೊದಲಾದ ಶಾಸ್ತ್ರಗಳನ್ನು ಓದಬೇಕು; ಓದಿಸಬೇಕು. (ದಮಃ) ಬಾಹ್ಯ ಇಂದ್ರಿಯಗಳನ್ನು ದುರಾಚರಣಗಳಿಂದ ತಡೆದು ಓದಬೇಕು; ಓದಿಸುತ್ತಾ ಹೋಗಬೇಕು. (ಶಮಃ) ಮನಸ್ಸಿನ ವೃತ್ತಿಯನ್ನು ಎಲ್ಲ ಬಗೆಯ ದೋಷಗಳಿಂದ ದೂರವಿಟ್ಟು ಓದುತ್ತಾ–ಓದಿಸುತ್ತಾ ಹೋಗಬೇಕು. (ಅಗ್ನಯಃ) ಅಹವನೀಯ ಮೊದಲಾದ ಅಗ್ನಿಗಳನ್ನೂ ಮತ್ತು ವಿದ್ಯುತ್ತು ಮೊದಲಾದವನ್ನೂ ತಿಳಿದು, ಓದುತ್ತಾ ಓದಿಸುತ್ತಾ ಹೋಗಬೇಕು. (ಆಗ್ನಿಹೋತ್ರಂ) ಅಗ್ನಿಹೋತ್ರ ಮಾಡುತ್ತಾ ಪಠನ–ಪಾಠಗಳನ್ನು ಮಾಡುತ್ತಾ – ಮಾಡಿಸುತ್ತಾ ಹೋಗಬೇಕು. (ಅತಿಥಿಯಃ) ಅತಿಥಿಗಳ ಸೇವೆ ಮಾಡುತ್ತಾ, ಓದಬೇಕು ಮತ್ತು ಓದಿಸಬೇಕು. (ಮಾನುಷಂ) ಮಾನವಸಂಬಂಧೀ ವ್ಯವಹಾರಗಳನ್ನು ಯಥಾಯೋಗ್ಯವಾಗಿ ಮಾಡುತ್ತಾ ಓದುತ್ತಾ – ಓದಿಸುತ್ತಾ ಇರಬೇಕು (ಪ್ರಜಾ) ಸಂತತಿಯನ್ನೂ, ರಾಜ್ಯವನ್ನೂ ಪಾಲಿಸುತ್ತಾ. ಓದುತ್ತಾ–ಓದಿಸುತ್ತಾ ಹೋಗಬೇಕು. (ಪ್ರಜನಃ) ವೀರ್ಯದ ರಕ್ಷಣೆಯನ್ನೂ ಮತ್ತು ವೃದ್ಧಿಯನ್ನೂ ಮಾಡುತ್ತಾ, ಓದುತ್ತಾ– ಓದಿಸುತ್ತಾ ಹೋಗಬೇಕು. (ಪ್ರಜಾತಿಃ) ತಮ್ಮ ಸಂತಾನವನ್ನೂ, ಮತ್ತು ಶಿಷ್ಯರನ್ನೂ ಪಾಲನೆ ಮಾಡುತ್ತಾ, ಓದುತ್ತಾ – ಓದಿಸುತ್ತಾ ಹೋಗಬೇಕು.

## (ಯಮನಿಯಮಗಳನ್ನು ಎಲ್ಲರೂ ಪಾಲಿಸಬೇಕು)

**ಯಮಾನ್ ಸೇವೇತ ಸತತಂ ನ ನಿಯಮಾನ್ ಕೇವಲಾನ್ಬುಧಃ ।**
**ಯಮಾನ್ಪ ತತ್ಯಕುರ್ವಾಣೋ ನಿಯಮಾನ್ ಕೇವಲಾನ್ ಭಜನ್ ॥** (ಮನು: – ೪. ೨೦೪)

ಯಮಗಳು ಐದು ರೀತಿಯವಿವೆ:–

**ತತ್ರಾಹಿಂಸಾಸತ್ಯಾಸ್ತೇಯ ಬ್ರಹ್ಮಚರ್ಯಾಪರಿಗ್ರಹಾ ಯಮಾಃ ।** (ಯೋಗ ಸೂತ್ರ :– ಸಾಧನಪಾದ – ೩೦)

ಅಂದರೆ, **(ಅಹಿಂಸಾ)** ವೈರತ್ಯಾಗ **(ಸತ್ಯ)** ಇರುವಿಕೆಯನ್ನು ಒಪ್ಪುವುದು,ಮಾತನಾಡುವುದು, ಮತ್ತು ವಸ್ತುಸ್ಥಿತಿಯನ್ನೇ ಅನುಷ್ಠಾನ ಮಾಡುವುದು, **(ಅಸ್ತೇಯ)** ಮನ – ವಚನ – ಕರ್ಮಗಳಿಂದ ಕಳ್ಳತನವನ್ನು ತ್ಯಜಿಸುವುದು, **(ಬ್ರಹ್ಮಚರ್ಯ)** ಎಂದರೆ ಉಪಸ್ಥೇಂದ್ರಿಯದ ಸಂಯಮ, **(ಅಪರಿಗ್ರಹ)** ಅತ್ಯಂತ ಲೋಲುಪತ್ವ– ಸ್ವತ್ವಾಭಿಮಾನ ರಹಿತನಾಗುವುದು. ಈ ಐದು ಯಮಗಳ ಸೇವನವನ್ನು ಸದಾ ಮಾಡಬೇಕು. ಕೇವಲ ನಿಯಮಗಳನ್ನೇ ಪಾಲಿಸುವುದು, ಎಂದರೆ–

**ಶೌಚ ಸಂತೋಷತಪಃ ಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ ।** (ಯೋಗ ಸೂತ್ರ ಸಾಧನಪಾದ – ೩೨)

**(ಶೌಚ)** ಸ್ನಾನ ಮೊದಲಾದುದರಿಂದ ಪವಿತ್ರತೆ, **(ಸಂತೋಷ)** ಒಳಿತಾಗಿ ಪ್ರಸನ್ನನಾಗಿದ್ದು, ನಿರುದ್ಯಮನಾಗಿರುವುದು ಸಂತೋಷವಲ್ಲ; ಆದರೆ ಎಷ್ಟು ಪುರುಷಾರ್ಥ ಮಾಡಲಾಗುವುದೋ, ಅಷ್ಟು ಮಾಡುವುದು; ನಷ್ಟ ಅಥವಾ ಲಾಭ ಆದಾಗ ಶೋಕ ಅಥವಾ ಹರ್ಷ ಹೊಂದದೇ ಇರುವುದು. **(ತಪಃ)** ಎಂದರೆ ಕಷ್ಟವನ್ನು ಅನುಭವಿಸಿದರೂ ಕೂಡ ಧರ್ಮಯುಕ್ತ ವಾದ ಕರ್ಮಗಳ ಅನುಷ್ಠಾನ **(ಸ್ವಾಧ್ಯಾಯ)** ಓದುವುದು – ಓದಿಸುವುದು **(ಈಶ್ವರಪ್ರಣಿದಾನ)** ಈಶ್ವರನಲ್ಲಿ, ಭಕ್ತಿವಿಶೇಷದೊಂದಿಗೆ ಆತ್ಮನನ್ನು ಅರ್ಪಿತನನ್ನಾಗಿಡುವುದು – ಈ ಐದೂ ನಿಯಮಗಳೆನಿಸುತ್ತವೆ. ಯಮಗಳನ್ನು ಬಿಟ್ಟು, ಕೇವಲ ಈ ನಿಯಮಗಳನ್ನು ಪಾಲಿಸಬಾರದು; ಆದರೆ–ಇವೆರಡನ್ನೂ ಪಾಲಿಸುವ ಪರಿಪಾಟಿಯಿಡಬೇಕು. ಯಾವನು ಯಮಗಳನ್ನು ಸೇವಿಸದೆ, ಕೇವಲ ನಿಯಮಗಳನ್ನು ಸೇವಿಸುತ್ತಾನೋ, ಅವನು ಉನ್ನತಿ ಹೊಂದುವುದಿಲ್ಲ; ಆದರೆ ಅಧೋಗತಿ (ಹೊಂದುತ್ತಾನೆ) – ಎಂದರೆ ಸಂಸಾರದಲ್ಲಿ ಬಿದ್ದಿರುತ್ತಾನೆ.

**ಕಾಮಾತ್ಮತಾ ನ ಪ್ರಶಸ್ತಾ ನ ಚೈವೇಹಾಸ್ತ್ಯ ಕಾಮತಾ ।**

**ಕಾಮ್ಯೋಹಿ ವೇದಾಧಿಗಮಃ ಕರ್ಮಯೋಗಶ್ಚ ವೈದಿಕಃ ॥** (ಮನು:–೨.೨)

**ಅರ್ಥ:** ಅತ್ಯಂತ ಕಾಮಾತುರತೆ ಮತ್ತು ನಿಷ್ಕಾಮತೆ ಯಾವನೊಬ್ಬನಿಗೂ ಶ್ರೇಷ್ಠವಲ್ಲ; ಏಕೆಂದರೆ – ಕಾಮನೆಯನ್ನೇ ಮಾಡದಿದ್ದರೆ, ವೇದಗಳ ಜ್ಞಾನ ಮತ್ತು ವೇದವಿಹಿತ ಕರ್ಮ ಮೊದಲಾದ ಉತ್ತಮ ಕಾರ್ಯಗಳು ಯಾವನಿಂದಲೂ ಆಗಲಾರವು. ಆದುದರಿಂದ:–

**ಸ್ವಾಧ್ಯಾಯೇನ ವ್ರತೈರ್ಹೋಮೈಸ್ತ್ರೈ ವಿದ್ಯೇನೇಜ್ಯಯಾ ಸುತೈ ಃ ।**

**ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನು ಃ ॥** (ಮನು:– ೨. ೨೮)

**ಅರ್ಥ: – (ಸ್ವಾಧ್ಯಾಯ)** ಸಕಲ ವಿದ್ಯೆಯನ್ನೂ ಓದುವುದರಿಂದ– ಓದಿಸುವುದರಿಂದ, **(ವ್ರತ)** ಬ್ರಹ್ಮಚರ್ಯ, ಸತ್ಯಭಾಷಣ – ಮೊದಲಾದ ನಿಮಯಗಳನ್ನು ಪಾಲಿಸುವುದರಿಂದ, **(ಹೋಮ)** ಅಗ್ನಿಹೋತ್ರ ಮೊದಲಾದ ಹೋಮಗಳು, ಸತ್ಯದ ಅಂಗೀಕಾರ, ಅಸತ್ಯದ ಪರಿತ್ಯಾಗ ಮತ್ತು ಸತ್ಯವಿದ್ಯಾದಾನ, **(ತ್ರೈವಿದ್ಯೇನ)** ವೇದದಲ್ಲಿರುವ ಕರ್ಮ, ಉಪಾಸನಾ, ಜ್ಞಾನ, ವಿದ್ಯಾಸ್ವೀಕಾರ, **(ಇಜ್ಯಯಾ)** ಪಕ್ಷೇಷ್ಟಿ – ಮೊದಲಾದುವು, **(ಸುತೈಃ)** ಸಂತಾನೋತ್ಪತ್ತಿ, **(ಮಹಾಯಜ್ಞೈಃ)** ಬ್ರಹ್ಮ, ದೇವ, ಪಿತೃ, ವೈಶ್ವದೇವ ಮತ್ತು ಅತಿಥಿಗಳ ಸೇವೆ – ಎಂಬ ಐದು ಯಜ್ಞಗಳು ಮತ್ತು, **(ಯಜ್ಞೈಃ)** ಅಗ್ನಿಷ್ಟೋಮ – ಮೊದಲಾದ ಹಾಗೂ ಶಿಲ್ಪವಿದ್ಯಾ– ವಿಜ್ಞಾನವೇ ಮೊದಲಾದ ಯಜ್ಞಗಳ ಅನುಷ್ಠಾನದಿಂದ, ಈ ಶರೀರವನ್ನು **'ಬ್ರಾಹ್ಮ'** ಎಂದರೆ ವೇದ ಮತ್ತು ಪರಮೇಶ್ವರನೇ ಮೊದಲಾದವುಗಳ ಭಕ್ತಿಗೆ ಆಧಾರರೂಪವಾದ ಬ್ರಾಹ್ಮಣಶರೀರವಾಗಿ ಮಾಡಲಾಗುತ್ತದೆ. ಇಷ್ಟು ಸಾಧನಗಳಿಲ್ಲದಿದ್ದರೆ, ಬ್ರಾಹ್ಮಣಶರೀರವಾಗಲಾರದು.

**ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು ।**
**ಸಂಯಮೇ ಯತ್ನಮಾತಿಷ್ಠೇದ್ವಿದ್ವಾನ್ ಯಂತೇವ ವಾಜಿನಾಮ್ ॥** (ಮನು:–೨.೮೮)

**ಅರ್ಥ:** – ಹೇಗೆ ವಿದ್ವಾನ್ ಸಾರಥಿ ಕುದುರೆಗಳನ್ನು ನಿಯಮದಲ್ಲಿಡುತ್ತಾನೋ, ಹಾಗೆ ಮನಸ್ಸನ್ನು ಮತ್ತು ಆತ್ಮನನ್ನು ದುಷ್ಕರ್ಮಗಳತ್ತ ಸೆಳೆಯುವ, ವಿಷಯಗಳಲ್ಲಿ ವಿಹರಿಸುತ್ತಿರುವ ಇಂದ್ರಿಯಗಳ ನಿಗ್ರಹದಲ್ಲಿ ಎಲ್ಲ ರೀತಿಯಿಂದಲೂ ಪ್ರಯತ್ನ ಮಾಡಬೇಕು. ಏಕೆಂದರೆ–

**ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತ್ಯಸಂಶಯಮ್ ।**

**ಸಂ ನಿಯಮ್ಯತು ತಾನ್ಯೇವ ತತಃ ಸಿದ್ಧಿಂ ನಿಯಚ್ಛತಿ॥** (ಮನು:–೨.೯೩)

**ಅರ್ಥ:** – ಜೀವಾತ್ಮನು ಇಂದ್ರಿಯಗಳಿಗೆ ವಶವಾಗಿ, ನಿಜವಾಗಿಯೂ ದೊಡ್ಡ ದೊಡ್ಡ ದೋಷಗಳಿಗೆ ಈಡಾಗುತ್ತಾನೆ ಮತ್ತು ಯಾವಾಗ ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತಾನೋ, ಆಗಲೇ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ.

**ವೇದಾಸ್ತ್ಯಾ ಗಶ್ಚ ಯಜ್ಞಾ ಶ್ಚ ನಿಯಮಾಶ್ಚ ತಪಾಂಸಿ ಚ ।**

**ನ ವಿಪ್ರದುಷ್ಟಭಾವಸ್ಯ ಸಿದ್ಧಿಂ ಗಚ್ಛಂತಿ ಕರ್ಹಿಚಿತ್ ॥** (ಮನು:–೨.೯೭)

ಯಾವನು ದುಷ್ಟಾಚಾರಿಯೂ, ಅಜಿತೇಂದ್ರಿಯನೂ ಆದ ಪುರುಷನಾಗಿದ್ದಾನೋ, ಅವನ ವೇದ, ತ್ಯಾಗ, ಯಜ್ಞ, ನಿಯಮ ಮತ್ತು ತಪಸ್ಸು, ಹಾಗೆಯೇ ಬೇರೆ ಒಳ್ಳೆಯ ಕೆಲಸಗಳು ಎಂದಿಗೂ ಸಿದ್ಧಿಯನ್ನೂ ಪಡೆದುಕೊಳ್ಳಲಾರವು.

**ವೇದೋಪಕರಣೇ ಚೈವ ಸ್ವಾಧ್ಯಾಯೇ ಚೈವ ನೈತ್ಯಕೇ ।**

**ನಾನುರೋಧೋಽಸ್ತ್ಯ ನಧ್ಯಾಯೇ ಹೋಮಮಂತ್ರೇಷು ಚೈ ವ ಹಿ ॥**

**ನೈತ್ಯಿಕೇ ನಾಸ್ತ್ಯ ನಧ್ಯಾಯೋ ಬ್ರಹ್ಮಸತ್ರಂ ಹಿ ತತ್ ಸ್ಮೃತಮ್ ।**

**ಬ್ರಹ್ಮಾಹುತಿಹುತಂ ಪುಣ್ಯ ಮನಧ್ಯಾಯವಷಟ್ ಕೃತಮ್ ॥** (ಮನು:– ೨, ೧೦೫–೧೦೬)

ವೇದಗಳನ್ನು ಓದುವುದು – ಓದಿಸುವುದರಲ್ಲಿಯೂ, ಸಂಧ್ಯೋಪಾಸನಾದಿ ಪಂಚ ಮಹಾಯಜ್ಞಗಳನ್ನು ಮಾಡುವುದರಲ್ಲಿಯೂ ಮತ್ತು ಹೋಮಮಂತ್ರಗಳಲ್ಲಿಯೂ, ಅನಧ್ಯಾಯವಿಷಯಕವಾದ ಅನುರೋಧವಿಲ್ಲ.[೨೧] ಏಕೆಂದರೆ– ನಿತ್ಯಕರ್ಮದಲ್ಲಿ ಅನಧ್ಯಾಯವಿಲ್ಲ. ಹೇಗೆ ಶ್ವಾಸ – ಪ್ರಶ್ವಾಸಗಳು ಸದಾ ತೆಗೆದುಕೊಳ್ಳಲ್ಪಡುತ್ತವೋ, ತಡೆಯಲು ಸಾಧ್ಯವಾಗುವುದಿಲ್ಲವೋ, ಹಾಗೆ ನಿತ್ಯಕರ್ಮವನ್ನು ಪ್ರತಿದಿನವೂ ಮಾಡಬೇಕು; ಯಾವ ದಿನವೂ ಬಿಡಬಾರದು. ಏಕೆಂದರೆ – ಅನಧ್ಯಾಯದಲ್ಲಿ ಮಾಡಲ್ಪಟ್ಟ ಆಗ್ನಿಹೋತ್ರವೇ ಮೊದಲಾದ ಉತ್ತಮ ಕರ್ಮವು ಪುಣ್ಯರೂಪವಾಗಿರುತ್ತದೆ. ಹೇಗೆ ಸುಳ್ಳಾಡುವುದರಲ್ಲಿ ಸದಾ ಪಾಪವೂ ಮತ್ತು ನಿಜ ಹೇಳುವುದರಲ್ಲಿ ಸದಾ ಪುಣ್ಯವೂ ಉಂಟಾಗುತ್ತದೋ, ಹಾಗೆಯೇ ದುಷ್ಕರ್ಮ ಮಾಡುವುದರಲ್ಲಿ ಸದಾ ಅನಧ್ಯಾಯವೂ ಮತ್ತು ಸತ್ಕರ್ಮ ಮಾಡುವುದರಲ್ಲಿ ಸದಾ ಸ್ವಾಧ್ಯಾಯವೂ ಆಗುತ್ತದೆ.

**ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।**

**ಚತ್ವಾರಿ ತಸ್ಯ ವರ್ಧಂತ ಆಯುರ್ವಿದ್ಯಾಯಶೋಬಲಮ್ ॥** (ಮನು :–೨. ೧೨೧)

ಯಾವನು ಸದಾ ನಮ್ರನಾಗಿ, ಸುಶೀಲರಾದ ವಿದ್ವಾಂಸರಿಗೆ ಮತ್ತು ವೃದ್ಧರಿಗೆ ಸೇವೆ ಮಾಡುತ್ತಾನೋ, ಅವನ ಆಯಸ್ಸು, ವಿದ್ಯೆ, ಕೀರ್ತಿ ಮತ್ತು ಬಲ – ಈ ನಾಲ್ಕೂ ಸದಾ ಹೆಚ್ಚುತ್ತವೆ ಮತ್ತು ಯಾರು ಹೀಗೆ ಮಾಡುವುದಿಲ್ಲವೋ, ಅವರ ಆಯಸ್ಸು ಮೊದಲಾದ ನಾಲ್ಕೂ ಹೆಚ್ಚುವುದಿಲ್ಲ.

**ಅಹಿಂಸಯೈವ ಭೂತಾನಾಂ ಕಾರ್ಯಂ ಶ್ರೇಯೋಽನುಶಾಸನಮ್ ।**

**ವಾಕ್ಚೈವ ಮಧುರಾ ಶ್ಲಕ್ಷ್ಣಾ ಪ್ರಯೋಜ್ಯಾ ಧರ್ಮಮಿಚ್ಛತಾ ॥** (ಮನು : ೨. ೧೫೯)

---

೨೧. ಅಧ್ಯಾಯವೆಂದರೆ ಸ್ವಾಧ್ಯಾಯ. ಅನಧ್ಯಾಯವೆಂದರೆ ಸ್ವಾಧ್ಯಾಯದಿಂದ ಬಿಡುವು. ಈಗಿನ ಶೈಲಿಯಲ್ಲಿ ಶಿಕ್ಷಣ ಪಡೆಯುವ ಕಾಲಾವಧಿ ಶಿಕ್ಷಣ ಪಡೆಯುವುದರಿಂದ ಬಿಡುವ.

**ಯಸ್ಯ ವಾಙ್ಮನಸೀ ಶುದ್ಧೇ ಸಮ್ಯಗ್ಗುಪ್ತೇ ಚ ಸರ್ವದಾ ।**

**ಸ ವೈ ಸರ್ವಮವಾಪ್ನೋತಿ ವೇದಾಂತತೋಪಗತಂ ಫಲಮ್ ॥** (ಮನು: ೨.೧೬೦.)

ವಿದ್ವಾಂಸರಿಗೆ ಮತ್ತು ವಿದ್ಯಾರ್ಥಿಗಳಿಗೆ ಯೋಗ್ಯವಾದುದೇನೆಂದರೆ– ವೈರಬುದ್ಧಿಯನ್ನು ಬಿಟ್ಟು, ಎಲ್ಲ ಮಾನವರಿಗೂ ಕಲ್ಯಾಣಮಾರ್ಗದ ಉಪದೇಶವನ್ನು ಮಾಡಬೇಕು. ಮತ್ತು ಉಪದೇಶಮಾಡುವವನು ಸದಾ ಮಧುರವೂ, ಸುಶೀಲತಾಯುಕ್ತವೂ ಆದ ವಾಣಿಯನ್ನೇ ಪ್ರಯೋಗಿಸಬೇಕು. ಯಾವನು ಧರ್ಮದ ಉನ್ನತಿಯನ್ನು ಬಯಸುತ್ತಾನೋ, ಅವನು ಸದಾ ನಿತ್ಯದಲ್ಲಿಯೇ ನಿಷ್ಠನಾಗಿ ವರ್ತಿಸಬೇಕು ಮತ್ತು ಸತ್ಯವನ್ನೇ ಉಪದೇಶಿಸಬೇಕು. (೧)

ಯಾವ ಮಾನವನ ವಾಣಿ ಮತ್ತು ಮನಸ್ಸು ಸದಾ ಶುದ್ಧವೂ ಮತ್ತು ಸುರಕ್ಷಿತವೂ ಆಗಿರುತ್ತವೋ, ಅವನೇ ಸಮಸ್ತ ವೇದಾಂತದ, ಎಂದರೆ ಸಮಸ್ತ ವೇದಗಳ ಸಿದ್ಧಾಂತವೆಂಬ ಫಲವನ್ನು ಪಡೆದುಕೊಳ್ಳುತ್ತಾನೆ. (೨)

**ಸಮ್ಮಾನಾದ್ಬ್ರಾಹ್ಮಣೋ ನಿತ್ಯಮುದ್ವಿಜೇತ ವಿಷಾದಿವ ।**

**ಅಮೃತಸ್ಯೈವ ಚಾಕಾಂಕ್ಷೇದವಮಾನಸ್ಯ ಸರ್ವದಾ ॥** (ಮನು : ೨.೧೬೨)

ಯಾವನು ಪ್ರತಿಷ್ಠೆಯಿಂದ ಸರ್ವದಾ ವಿಷವೋ– ಎಂಬಂತೆ ಹೆದರುತ್ತಾನೋ ಮತ್ತು ಅಪಮಾನವನ್ನು ಅಮೃತವೋ – ಎಂಬಂತೆ ಇಚ್ಛಿಸುತ್ತಾನೋ, ಆ ಬ್ರಾಹ್ಮಣನೇ ಸಂಪೂರ್ಣ ವೇದಗಳನ್ನು ಮತ್ತು ಪರಮಾತ್ಮನನ್ನು ತಿಳಿದುಕೊಳ್ಳುತ್ತಾನೆ.

**ಅನೇನ ಕ್ರಮಯೋಗೇನ ಸಂಸ್ಕೃತಾತ್ಮಾ ದ್ವಿಜಃ ತನೈಃ ।**

**ಗುರೌ ವಸನ್ ಸಂಚಿನುಯಾದ್ಬ್ರಹ್ಮಾ ಧಿಗಮಿಕಂ ತಪಃ ॥** (ಮನು : ೨.೧೬೪)

ಇದೇ ಕ್ರಮದಿಂದ ಉಪನಯನ ಮಾಡಲ್ಪಟ್ಟ ದ್ವಿಜ ಬ್ರಹ್ಮಚಾರೀ ಕುಮಾರನೂ ಮತ್ತು ಬ್ರಹ್ಮಚಾರಿಣೀ ಕನ್ಯೆಯೂ ನಿಧಾನ – ನಿಧಾನವಾಗಿ ವೇದಾರ್ಥದ ಜ್ಞಾನವೆಂಬ ಉತ್ತಮ ತಪಸ್ಸನ್ನು ಬೆಳೆಸಿಕೊಳ್ಳುತ್ತಾ ಹೋಗಬೇಕು.

**ಯೋಽನಧೀತ್ಯ ದ್ವಿಜೋ ವೇದಮನ್ಯತ್ರ ಕುರುತೇ ಶ್ರಮಮ್ ।**

**ಸ ಜೀವನ್ನೇವ ಶೂದ್ರತ್ವಮಾಶು ಗಚ್ಛತಿ ಸಾನ್ವಯಃ ॥** (ಮನು: ೨.೧೬೮)

ಯಾವನು ವೇದವನ್ನು ಓದದೆ, ಅನ್ಯತ್ರ ಶ್ರಮಿಸುತ್ತಾ ಹೋಗುತ್ತಾನೋ, ಅವನು ತನ್ನ ಪುತ್ರ ಪೌತ್ರರ ಸಹಿತ ಶೂದ್ರತ್ವವನ್ನು ಶೀಘ್ರವಾಗಿಯೇ ಹೊಂದುತ್ತಾನೆ.

**ವರ್ಜಯೇನ್ಮಧು ಮಾಂಸಂಚ ಗಂಧಂ ಮಾಲ್ಯಂರಸಾನ್ ಸ್ತ್ರಿಯಃ ।**

**ಶುಕ್ತಾನಿ ಯಾನಿ ಸರ್ವಾಣಿ ಪ್ರಾಣಿನಾಂ ಚೈವ ಹಿಂಸನಮ್ ॥ ೧ ॥**

**ಅಭ್ಯಂಗಮಂಜನಂ ಚಾಕ್ಷ್ಣೋ ರುಪಾನಚ್ಛತ್ರಧಾರಣಮ್ ।**

**ಕಾಮಂ ಕ್ರೋಧಂಚ ಲೋಭಂಚ ನರ್ತನಂ ಗೀತವಾದನಮ್ ॥ ೨ ॥**

**ದ್ಯೂತಂಚ ಜನವಾದಂಚ ಪರಿವಾದಂ ತಥಾನೃತಮ್ ।**

**ಸ್ತ್ರೀಣಾಂಚ ಪ್ರೇಕ್ಷಣಾಲಂಭಮುಪಘಾತಂ ಪರಸ್ಯಚ ॥ ೩॥**

**ಏಕಃ ಶಯೀತ ಸರ್ವತ್ರ ನ ರೇತಃ ಸ್ಕಂದಯೇತ್ಕ್ವಚಿತ್ ।**

**ಕಾಮಾದ್ಧಿ ಸ್ಕಂದಯನ್ ರೇತೋ ಹಿನಸ್ತಿ ವ್ರತಮಾತ್ಮನಃ ॥ ೪ ॥** (ಮನು: ೨.೧೭೭–೧೮೦)

ಬ್ರಹ್ಮಚಾರಿಗಳೂ, ಬ್ರಹ್ಮಚಾರಿಣಿಯರೂ, ಮದ್ಯ, ಮಾಂಸ, ಗಂಧ, ಹಾರ, ಸ್ತ್ರೀ ಪುರುಷರ ಸಂಗ, ಎಲ್ಲ ಹುಳಿ ವಸ್ತುಗಳು, ಪ್ರಾಣಿಗಳ ಹಿಂಸೆ (೧).

ಅಂಗಮರ್ದನ, ಕಾರಣವಿಲ್ಲದೆ ಗುಹ್ಯೇಂದ್ರಿಯ ಸ್ಪರ್ಶ, ಕಣ್ಣುಗಳಿಗೆ ಅಂಜನ, ಪಾದರಕ್ಷೆ ಮತ್ತು ಕೊಡೆಯ ಧಾರಣ, ಕಾಮ, ಕ್ರೋಧ, ಲೋಭ, ಮೋಹ, ಭಯ, ಶೋಕ, ಈರ್ಷ್ಯೆ, ದ್ವೇಷ, ನರ್ತನ, ಗಾನ ಹಾಗೂ ವಾದ್ಯವಾದನ (೨).

ದ್ಯೂತ, ಕಂಡಕಂಡವರ ಕಥೆ, ನಿಂದೆ, ಮಿಥ್ಯಾಭಾಷಣ, ಸ್ತ್ರೀಯರ (ಅಥವಾ ಪುರುಷರ) ದರ್ಶನ, ಆಶ್ರಯ, ಅನ್ಯರಿಗೆ ಹಾನಿಯುಂಟುಮಾಡುವುದು ಮೊದಲಾದ ಕುಕರ್ಮಗಳನ್ನು ಎಲ್ಲವನ್ನೂ ಬಿಟ್ಟುಬಿಡಬೇಕು (೩).

ಎಲ್ಲೆಡೆಯೂ ಏಕಾಕಿಗಳಾಗಿ ನಿದ್ರಿಸಬೇಕು. ವೀರ್ಯವನ್ನೆಂದಿಗೂ ಸ್ಖಲಿತವಾಗಿಸಬಾರದು. ಕಾಮನಾಪೂರ್ವಕ ವೀರ್ಯ ಸ್ಖಲನಮಾಡಿಕೊಂಡರೆ, ತಮ್ಮ ಬ್ರಹ್ಮಚರ್ಯವ್ರತವನ್ನು ನಾಶಮಾಡಿಕೊಂಡೆವು- ಎಂದು ತಿಳಿದುಕೊಳ್ಳಬೇಕು. (೪).

**(೪೯) ವೇದಮನೂಚ್ಯಾಚಾರ್ಯೋಽಂತೇವಾಸಿನಮನುಶಾಸ್ತಿ-ಸತ್ಯಂವದ, ಧರ್ಮಂಚರ, ಸ್ವಾಧ್ಯಾಯಾನ್ಮಾಪ್ರಮದಃ। ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾವ್ಯವಚ್ಛೇತ್ಸೀಃ ಸತ್ಯಾನ್ನ ಪ್ರಮದಿತವ್ಯಮ್। ಧರ್ಮಾನ್ನ ಪ್ರಮದಿತವ್ಯಮ್। ಕುಶಲಾನ್ನ ಪ್ರಮದಿತವ್ಯಮ್। ಭೂತ್ಯೈ ನ ಪ್ರಮದಿತವ್ಯಂ। ಸ್ವಾಧ್ಯಾಯ - ಪ್ರವಚನಾಭ್ಯಾಂ ನ ಪ್ರಮದಿತವ್ಯಮ್ ।॥ ೧ ॥**

**ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಮ್। ಮಾತೃದೇವೋ ಭವ। ಪಿತೃದೇವೋ ಭವ। ಆಚಾರ್ಯದೇವೋ ಭವ। ಅತಿಥಿದೇವೋ ಭವ। ಯಾನ್ಯನವದ್ಯಾನಿ ಕರ್ಮಾಣಿ। ತಾನಿ ಸೇವಿತವ್ಯಾನಿ, ನೋ ಇತರಾಣಿ। ಯಾನ್ಯಸ್ಮಾಕಗ್ಂ ಸುಚರಿತಾನಿ, ತಾನಿ ತ್ವಯೋಪಾಸ್ಯಾನಿ, ನೋ ಇತರಾಣಿ।॥ ೨ ॥**

**ಯೇ ಕೇ ಚಾಸ್ಮಚ್ಛ್ರೇಯಾಂಸೋ ಬ್ರಾಹ್ಮಣಾ ಸ್ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಮ್। ಶ್ರದ್ಧಯಾ ದೇಯಮ್। ಅಶ್ರದ್ಧಯಾ ದೇಯಮ್। ಶ್ರಿಯಾ ದೇಯಮ್। ಹ್ರಿಯಾ ದೇಯಮ್। ಭಿಯಾ ದೇಯಮ್। ಸಂವಿದಾ ದೇಯಮ್ ॥ ೩॥**

**ಅಥ ಯದಿ ತೇ ಕರ್ಮವಿಚಿಕಿತ್ಸಾ ವಾ ವೃತ್ತಿವಿಚಿಕಿತ್ಸಾ ವಾ ಸ್ಯಾತ್, ಯೇ ತತ್ರ ಬ್ರಾಹ್ಮಣಾಃ ಸಮ್ಮರ್ಶಿನೋ ಯುಕ್ತಾ ಅಯುಕ್ತಾ ಅಲೂಕ್ಷಾ ಧರ್ಮಕಾಮಾಃಸ್ಯುರ್ಯಥಾ ತೇ ತತ್ರ ವರ್ತೇರನ್, ತಥಾ ತತ್ರ ವರ್ತೇಥಾಃ. ಏಷ ಆದೇಶ ಏಷ ಉಪದೇಶ ಏಷಾ ವೇದೋಪನಿಷತ್। ಏತದನುಶಾಸನಮ್। ಏವಮುಪಾಸಿತವ್ಯಂ ಏವಮು ಚೈತದುಪಾಸ್ಯಮ್ ॥ ೪ ॥** (ತೈತ್ತಿರೀಯ: ೭.೧೧.೧-೪)

ಆಚಾರ್ಯನು ಅಂತೇವಾಸಿ - ಎಂದರೆ ತನ್ನ ಶಿಷ್ಯರಿಗೆ ಮತ್ತು ಶಿಷ್ಯೆಯರಿಗೆ ಈ ರೀತಿ ಉಪದೇಶ ಮಾಡಬೇಕು :- ನೀನು ಸದಾ ಸತ್ಯವನ್ನು ಹೇಳು. ಧರ್ಮಾಚರಣವನ್ನು ಮಾಡು. ಪ್ರಮಾದರಹಿತನಾಗಿ ಓದು-ಓದಿಸು. ಪೂರ್ಣಬ್ರಹ್ಮಚರ್ಯದಿಂದ ಸಮಸ್ತವಿದ್ಯೆಗಳನ್ನೂ ಗ್ರಹಿಸು ಮತ್ತು ಆಚಾರ್ಯನಿಗೆ ಪ್ರಿಯವಾದ ಧನವನ್ನಿತ್ತು, ವಿವಾಹಿತನಾಗಿ, ಸಂತಾನೋತ್ಪಾದನವನ್ನು ಮಾಡು. ಪ್ರಮಾದದಿಂದ ಸತ್ಯವನ್ನು ಎಂದಿಗೂ ಬಿಡಬೇಡ. ಪ್ರಮಾದದಿಂದ ಧರ್ಮವನ್ನು ತ್ಯಜಿಸಬೇಡ. ಪ್ರಮಾದದಿಂದ ಆರೋಗ್ಯವನ್ನು ಮತ್ತು ಚಾತುರ್ಯವನ್ನು ಬಿಡಬೇಡ. ಪ್ರಮಾದದಿಂದ ಉತ್ತಮ ಐಶ್ವರ್ಯದ ವೃದ್ಧಿಯನ್ನು ವರ್ಜಿಸಬೇಡ . ಪ್ರಮಾದದಿಂದ ಓದುವುದನ್ನು ಓದಿಸುವುದನ್ನು ಎಂದಿಗೂ ಬಿಡಬೇಡ. (೧)

ದೇವಜನರು, (ಅಂದರೆ) ವಿದ್ವಾಂಸರ ಮತ್ತು ಮಾತಾಪಿತೃಗಳೇ ಮೊದಲಾದವರ ಸೇವೆಯಲ್ಲಿ ಪ್ರಮಾದ ಮಾಡಬೇಡ. ವಿದ್ವಾಂಸನಿಗೆ ಸತ್ಕಾರಮಾಡುವಂತೆಯೇ, ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿಯ ಸೇವೆಯನ್ನು ಯಾವಾಗಲೂ ಮಾಡುತ್ತಿರು. ಯಾವ ಅನಿಂದಿತವಾದ ಧರ್ಮಯುಕ್ತವಾದ ಕರ್ಮಗಳಿವೆಯೋ, ಆ ಸತ್ಯಭಾಷಣವೇ ಮೊದಲಾದುವನ್ನು ಮಾಡುತ್ತಿರು; ಅವುಗಳಿಂದ ಬೇರೆಯಾದ ಮಿಥ್ಯಾಭಾಷಣ- ಮೊದಲಾದುವನ್ನು ಎಂದಿಗೂ ಮಾಡಬೇಡ. ನಮ್ಮ ಸುಚರಿತ್ರಗಳು, ಎಂದರೆ ಧರ್ಮಯುಕ್ತ ಕರ್ಮಗಳು ಯಾವುವು ಇವೆಯೋ, ಅವನ್ನು ಗ್ರಹಿಸು, ಮತ್ತು ನಮ್ಮ ಪಾಪಾಚರಣಗಳು ಯಾವುವು ಇವೆಯೋ, ಅವನ್ನು ಎಂದಿಗೂ ಮಾಡಬೇಡ. (೨)

ನಮ್ಮ ನಡುವೆ ಯಾವ ಉತ್ತಮ ವಿದ್ವಾಂಸರೂ, ಧರ್ಮಾತ್ಮರೂ ಆದ ಬ್ರಾಹ್ಮಣರಿದ್ದಾರೋ, ಅವರ ಸಮೀಪದಲ್ಲಿಯೇ ಕುಳಿತುಕೋ ಮತ್ತು ಅವರಲ್ಲಿಯೇ ನಂಬಿಕೆಯನ್ನಿಡುತ್ತಿರು. ಶ್ರದ್ಧೆಯಿಂದ ಕೊಡಬೇಕು. ಅಶ್ರದ್ಧೆಯಿಂದ ಕೊಡಬೇಕು. ಚಂದವಾದ ರೀತಿಯಲ್ಲಿ ಕೊಡಬೇಕು. ಲಜ್ಜೆಯಿಂದ ಕೊಡಬೇಕು. ಭಯದಿಂದ ಕೊಡಬೇಕು ಮತ್ತು ಪ್ರತಿಜ್ಞೆಯಿಂದಲೂ ಕೊಡಬೇಕು. ಯಾವಾಗಲಾದರೂ ನಿನಗೆ ಕರ್ಮದ ಅಥವಾ ಶೀಲದ ಬಗೆಗೆ, ಹಾಗೂ ಉಪಾಸನಾ-ಜ್ಞಾನಗಳ ಬಗೆಗೆ ಯಾವುದಾದರೂ ಬಗೆಯ ಸಂಶಯ ಉಂಟಾದರೆ, (೩)

ಯಾರೂ ವಿಚಾರಶೀಲರೂ, ಪಕ್ಷಪಾತರಹಿತರೂ, ಯೋಗಿಗಳೂ, ಅಯೋಗಿಗಳೂ,[೨೨] ಆರ್ದ್ರಚಿತ್ತರೂ, ಧರ್ಮದ ಕಾಮನೆಮಾಡುವ ಧರ್ಮಾತ್ಮರೂ ಆದ ಪುರುಷರಿದ್ದಾರೋ, ಅವರು ಹೇಗೆ ಧರ್ಮಮಾರ್ಗದಲ್ಲಿ ವರ್ತಿಸುತ್ತಾರೋ, ಹಾಗೆ ನೀನೂ ಕೂಡ ಆ ವಿಷಯದಲ್ಲಿ ವರ್ತಿಸುತ್ತಿರು. ಇದೇ ಆದೇಶ, ಆಜ್ಞೆ; ಇದೇ ಉಪದೇಶ; ಇದೇ ವೇದದ ಉಪನಿಷತ್ತು; ಮತ್ತು ಇದೇ ಶಿಕ್ಷಣ. ಇದೇ ರೀತಿ ವರ್ತಿಸಬೇಕು ಮತ್ತು ನಿನ್ನ ನಡೆ-ನುಡಿಗಳನ್ನು ಸುಧಾರಿಸಿಕೊಳ್ಳಬೇಕು. (೪)

**ಅಕಾಮಸ್ಯ ಕ್ರಿಯಾ ಕಾಚಿದ್ದೃಶ್ಯತೇ ನೇಹ ಕರ್ಹಿಚಿತ್ ।**

**ಯದ್ಯದ್ಧಿ ಕ್ರಿಯಾತೇ ಕಿಂಚಿತ್ತತ್ತತ್ಕಾಮಸ್ಯ ಚೇಷ್ಟಿತಮ್ ॥** (ಮನು: ೨.೪)

ನಿಷ್ಕಾಮನಾದ ಪುರುಷನಲ್ಲಿ ಕಣ್ಣುಗಳ ಮುಚ್ಚುವಿಕೆ - ತೆರೆಯುವಿಕೆಯಾಗುವುದೂ ಕೂಡ ಸರ್ವಥಾ ಅಸಂಭವ - ಎಂಬುದನ್ನು ಮಾನವರು ನಿಶ್ಚಯಿಸಿಕೊಳ್ಳಬೇಕು. ಇದರಿಂದ (ಮಾನವನು) ಏನೇನು ಮಾಡುತ್ತಾನೋ, ಆಯಾ ಕ್ರಿಯೆಗಳು ಕಾಮನೆಯಿಲ್ಲದೆ ನಡೆಯವು-ಎಂಬುದು ಸಿದ್ಧವಾಗುತ್ತದೆ.

**ಆಚಾರಃ ಪರಮೋ ಧರ್ಮಃ ಶ್ರುತ್ಯುಕ್ತಃಸ್ಮಾರ್ತ ಏವ ಚ ।**

**ತಸ್ಮಾದಸ್ಮಿನ್ ಸದಾ ಯುಕ್ತೋ ನಿತ್ಯಂ ಸ್ಯಾದಾತ್ಮವಾನ್ ದ್ವಿಜಃ ॥ ೧ ॥**

**ಆಚಾರಾದ್ವಿಚ್ಯುತೋ ವಿಪ್ರೋ ನ ವೇದಫಲಮಶ್ನುತೇ ।**

**ಆಚಾರೇಣ ತು ಸಂಯುಕ್ತಃ ಸಂಪೂರ್ಣಫಲಭಾಗ್ಭವೇತ್ ॥ ೨ ॥** (ಮನು: ೧. ೧೦೮. ೧೦೯)

ಮಾತನಾಡುವುದರ, ಆಲಿಸುವುದರ, ಕೇಳಿಸುವುದರ, ಓದುವುದರ ಮತ್ತು ಓದಿಸುವುದರ ಫಲ ವೇದಗಳಲ್ಲಿ ಮತ್ತು ವೇದಾನುಕೂಲವಾದ ಸ್ಮೃತಿಗಳಲ್ಲಿ ಪ್ರತಿಪಾದಿತವಾದ ಧರ್ಮವನ್ನು ಆಚರಿಸುವುದೇ ಆಗಿದೆ. ಆದುದರಿಂದ ಧರ್ಮಾಚಾರದಲ್ಲಿ ಸದಾ ಯುಕ್ತನಾಗಿರಬೇಕು. (೧)

ಏಕೆಂದರೆ, ಯಾವನು ಧರ್ಮಾಚರಣದಿಂದ ರಹಿತನಾಗಿರುತ್ತಾನೋ, ಅವನು ವೇದಪ್ರತಿಪಾದಿತವಾದ ಧರ್ಮದಿಂದ ಹುಟ್ಟುವ ಸುಖವೆಂಬ ಫಲವನ್ನು ಪಡೆದುಕೊಳ್ಳಲಾರನು. ಮತ್ತು ಯಾವನು ವಿದ್ಯೆ ಕಲಿತು ಧರ್ಮಾಚರಣಮಾಡುತ್ತಾನೋ, ಅವನೇ ಸಂಪೂರ್ಣ ಸುಖವನ್ನು ಹೊಂದುತ್ತಾನೆ. (೨)

**ಯೋಽವಮನ್ಯೇತ ತೇ ಮೂಲೇ ಹೇತುಶಾಸ್ತ್ರಾಶ್ರಯಾದ್ದ್ವಿಜಃ ।**

**ಸ ಸಾಧುಭಿರ್ಬಹಿಷ್ಕಾರ್ಯೋ ನಾಸ್ತಿಕೋ ವೇದನಿಂದಕಃ ॥** (ಮನು : ೨.೧೧)

ಯಾವನು ವೇದಗಳ ಮತ್ತು ವೇದಾನುಕೂಲವಾದ, ಆಪ್ತಪುರುಷರಿಂದ ರಚಿತವಾದ ಶಾಸ್ತ್ರಗಳ ಅಪಮಾನವನ್ನು ಮಾಡುತ್ತಾನೋ, ಆ ವೇದನಿಂದಕನಾದ ನಾಸ್ತಿಕನನ್ನು ಜಾತಿ, ಪಂಕ್ತಿ ಮತ್ತು ದೇಶದಿಂದ ಹೊರಗಿಡಬೇಕು. ಏಕೆಂದರೆ-

**ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।**

**ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಮ್ ॥** (ಮನು:-೨.೧೨)

ವೇದ ಸ್ಮೃತಿ, ವೇದಾನುಕೂಲವಾದ, ಆಪ್ತೋಕ್ತವಾದ ಮನುಸ್ಮೃತಿ - ಮೊದಲಾದ ಶಾಸ್ತ್ರಗಳು, ಸನಾತನ- ಎಂದರೆ, ವೇದಗಳ ಮೂಲಕ ಪರಮೇಶ್ವರನಿಂದ ಪ್ರತಿಪಾದಿತವಾದ ಕರ್ಮವಾಗಿರುವ ಸತ್ಪುರುಷರ ಆಚಾರ ಮತ್ತು ತನ್ನ ಆತ್ಮನಿಗೆ ಪ್ರಿಯವಾದುದು - ಎಂದರೆ, ಯಾವುದನ್ನು ತನ್ನ ಆತ್ಮನು ಇಚ್ಛಿಸುತ್ತಾನೋ, ಅದು - ಉದಾಹರಣೆಗೆ ಸತ್ಯಭಾಷಣ - ಈ ನಾಲ್ಕೂ ಧರ್ಮದ ಲಕ್ಷಣಗಳಾಗಿವೆ. ಎಂದರೆ-ಇವುಗಳಿಂದಲೇ ಧರ್ಮಾಧರ್ಮಗಳ ನಿಶ್ಚಯವಾಗುತ್ತದೆ. ಪಕ್ಷಪಾತರಹಿತವಾದ, ನ್ಯಾಯ-ಸತ್ಯಗಳ ಸ್ವೀಕಾರ ಮತ್ತು ಅಸತ್ಯದ ಸರ್ವಥಾ ಪರಿತ್ಯಾಗವೆಂಬ ಯಾವ ಆಚಾರವಿದೆಯೋ, ಅದರ ಹೆಸರೇ ಧರ್ಮ ಮತ್ತು ಇದಕ್ಕೆ ವಿರುದ್ಧವಾಗಿ, ಯಾವ ಪಕ್ಷಪಾತಸಹಿತವಾದ ಅಸತ್ಯಾಚರಣ,ಸತ್ಯದ ತ್ಯಾಗ ಮತ್ತು ಅಸತ್ಯದ ಸ್ವೀಕಾರವೆಂಬ ಕರ್ಮವಿದೆಯೋ, ಅದನ್ನೇ ಅಧರ್ಮವೆನ್ನುತ್ತಾರೆ.

೨೨. ಅಯೋಗಿಗಳು- ಎಂದರೆ ಸಾಂಸಾರಿಕರಾಗಿದ್ದರೂ ಅಲಿಪ್ತರಾಗಿರುವವರು. -ಅನು

**ಅರ್ಥಕಾಮೇಷ್ವಸಕ್ತಾನಾಂ ಧರ್ಮಜ್ಞಾನಂ ವಿಧೀಯತೇ ।**

**ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ॥** (ಮನು : ೨.೧೩)

ಯಾವ ಪುರುಷರು (ಅರ್ಥ) ಚಿನ್ನ ಮೊದಲಾದ ರತ್ನಗಳಲ್ಲಿ ಮತ್ತು (ಕಾಮ) ಸ್ತ್ರೀ ಸೇವನೆ ಮೊದಲಾದವುಗಳಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲವೋ, ಅವರಿಗೆ ಮಾತ್ರ ಧರ್ಮದ ಜ್ಞಾನ ಲಭಿಸುತ್ತದೆ. ಯಾರು ಧರ್ಮದ ಜ್ಞಾನದ ಇಚ್ಛೆಯನ್ನು ಮಾಡುತ್ತಾರೋ, ಅವರು ವೇದದ ಮೂಲಕ ಧರ್ಮದ ನಿಶ್ಚಯಮಾಡಬೇಕು. ಏಕೆಂದರೆ– ಧರ್ಮಾಧರ್ಮಗಳ ನಿಶ್ಚಯವು ವೇದವಿಲ್ಲದೆ ಸರಿಸರಿಯಾಗಿ ಆಗಲಾರದು.

ಈ ರೀತಿ ಆಚಾರ್ಯನು ತನ್ನ ಶಿಷ್ಯನಿಗೆ ಉಪದೇಶಮಾಡಬೇಕು. ಮತ್ತು ವಿಶೇಷವಾಗಿ ರಾಜನು ಅನ್ಯಕ್ಷತ್ರಿಯರು, ವೈಶ್ಯರು ಮತ್ತು ಉತ್ತಮ ಶೂದ್ರ ಜನರಿಗೂ ಕೂಡ ವಿದ್ಯೆಯ ಅಭ್ಯಾಸವನ್ನು ಮಾಡಿಸಬೇಕು. ಏಕೆಂದರೆ, ಕೇವಲ ಬ್ರಾಹ್ಮಣರಾಗಿರುವವರೇ ವಿದ್ಯಾಭ್ಯಾಸಮಾಡಿ, ಕ್ಷತ್ರಿಯರೇ ಮೊದಲಾದವರು ಮಾಡದೇ ಇದ್ದರೆ ವಿದ್ಯೆ, ಧರ್ಮ,ರಾಜ್ಯ ಮತ್ತು ಧನ ಮೊದಲಾದವುಗಳ ವೃದ್ಧಿ ಎಂದಿಗೂ ಆಗಲಾರದು. ಏಕೆಂದರೆ – ಬ್ರಾಹ್ಮಣರೇನೋ ಕೇವಲ ಓದುವುದರಿಂದ – ಓದಿಸುವುದರಿಂದ ಮತ್ತು ಕ್ಷತ್ರಿಯರೇ ಮೊದಲಾದುದರಿಂದ ಅಜೀವಿಕೆ ಪಡೆದು ಜೀವನ ನಿರ್ವಾಹಮಾಡಬಲ್ಲರು. ಅಜೀವಿಕೆಗೆ ಅಧೀನರಾಗಿ, ಮತ್ತು ಕ್ಷತ್ರಿಯರೇ ಮೊದಲಾದವರು ಆಜ್ಞೆಮಾಡುವವರೂ ಮತ್ತು ಯಥಾವತ್ತಾಗಿ ಪರೀಕ್ಷಕರೂ, ದಂಡದಾತೃಗಳೂ ಆಗದಿರುವುದರಿಂದ, ಬ್ರಾಹ್ಮಣ ಮೊದಲಾದ ಸಮಸ್ತ ವರ್ಣಗಳೂ ಪಾಖಂಡ (ತೋರಿಕೆಯ ಕರ್ಮಕಲಾಪ)ದಲ್ಲಿಯೇ ಸಿಕ್ಕಿಕೊಳ್ಳುತ್ತವೆ, ಮತ್ತು ಯಾವಾಗ ಕ್ಷತ್ರಿಯರೇ ಮೊದಲಾದವರು ವಿದ್ವಾಂಸರಾಗಿರುತ್ತಾರೋ, ಆಗ ಬ್ರಾಹ್ಮಣರೂ ಕೂಡ ಅಧಿಕ ವಿದ್ಯಾಭ್ಯಾಸಮಾಡುತ್ತಾರೆ ಮತ್ತು ಧರ್ಮಮಾರ್ಗದಲ್ಲಿ ನಡೆಯುತ್ತಾರೆ. ಮತ್ತು ಆ ಕ್ಷತ್ರಿಯರೇ ಮೊದಲಾದ ವಿದ್ವಾಂಸರೆದುರಿಗೆ ಪಾಖಂಡ[೨೩] ಅಸತ್ಯ ವ್ಯವಹಾರಗಳನ್ನೂ ಕೂಡ ಮಾಡಲಾರರು. ಮತ್ತು ಕ್ಷತ್ರಿಯರು – ಮೊದಲಾದವರು ಅವಿದ್ವಾಂಸರಾಗಿದ್ದರೆ, ಅವರು ತಮ್ಮ ಮನಸ್ಸಿಗೆ ಹೇಗೆ ಬರುತ್ತದೋ ಹಾಗೆಯೇ ಮಾಡುತ್ತಾರೆ – ಮಾಡಿಸುತ್ತಾರೆ. ಆದುದರಿಂದ, ಬ್ರಾಹ್ಮಣರೂ ಕೂಡ ತಮ್ಮ ಕಲ್ಯಾಣವನ್ನು ಬಯಸುವರಾದರೆ, ಕ್ಷತ್ರಿಯರೇ ಮೊದಲಾದವರಿಗೆ ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಅಭ್ಯಾಸವನ್ನು ಅಧಿಕಪ್ರಯತ್ನದಿಂದ ಮಾಡಿಸಬೇಕು. ಏಕೆಂದರೆ– ಕ್ಷತ್ರಿಯರು ಮೊದಲಾದವರೇ ವಿದ್ಯೆ, ಧರ್ಮ, ರಾಜ್ಯ ಮತ್ತು ಲಕ್ಷ್ಮಿಯ (ಸಂಪತ್ತು ಮತ್ತು ಸೌಂದರ್ಯ) ವೃದ್ಧಿಯನ್ನುಂಟುಮಾಡುವವರಾಗಿರುತ್ತಾರೆ. ಅವರು ಎಂದಿಗೂ ಭಿಕ್ಷಾವೃತ್ತಿಯನ್ನು ಅವಲಂಬಿಸುವುದಿಲ್ಲ. ಆದುದರಿಂದ ಅವರು ವಿದ್ಯಾವ್ಯವಹಾರದಲ್ಲಿ ಪಕ್ಷಪಾತಿಗಳೂ ಆಗಲಾರರು. ಮತ್ತು ಎಲ್ಲ ವರ್ಣಗಳಲ್ಲಿಯೂ ಯಾವಾಗ ವಿದ್ಯೆ–ಸುಶಿಕ್ಷಣಗಳು ಇರುತ್ತವೋ, ಆಗ ಯಾವನೂ ಪಾಖಂಡರೂಪವಾದ ಅಧರ್ಮಯುಕ್ತ ವಾದ ಮಿಥ್ಯಾವ್ಯವಹಾರಗಳನ್ನು ನಡೆಯಿಸಲಾರನು. ಇದರಿಂದ ಸಿದ್ಧವಾಗುವುದೇನು? ಕ್ಷತ್ರಿಯರೇ ಮೊದಲಾದವರನ್ನು ನಿಯಮಾನುಸಾರ ನಡೆಯಿಸುವವರು ಬ್ರಾಹ್ಮಣರು ಮತ್ತು ಸಂನ್ಯಾಸಿಗಳು. ಹಾಗು ಬ್ರಾಹ್ಮಣರು ಮತ್ತು ಸಂನ್ಯಾಸಿಗಳನ್ನು ಉತ್ತಮ ನಿಯಮಾನುಸಾರ ನಡೆಯಿಸುವವರು ಕ್ಷತ್ರಿಯರು – ಎಂಬುದೇ. ಈ ಕಾರಣದಿಂದ ಸಮಸ್ತ ವರ್ಣಗಳ ಸ್ತ್ರೀ–ಪುರುಷರಲ್ಲಿಯೂ ವಿದ್ಯೆ ಮತ್ತು ಧರ್ಮದ ಪ್ರಚಾರ ಅವಶ್ಯವಾಗಿ ಆಗಬೇಕು.

ಇನ್ನು ಯಾವಯಾವದನ್ನು ಓದಲೂ–ಓದಿಸಲೂ ಬೇಕೋ, ಅದನ್ನೆಲ್ಲಾ ಚೆನ್ನಾಗಿ ಪರೀಕ್ಷಿಸಿ (ಮಾಡುವುದು) ಯೋಗ್ಯವಾಗಿದೆ. ಪರೀಕ್ಷೆ ಐದು ಬಗೆಯದಿರುತ್ತದೆ :–

ಮೊದಲನೆಯದಾಗಿ – ಯಾವ ಯಾವದು ಈಶ್ವರನ ಗುಣ–ಕರ್ಮ–ಸ್ವಭಾವಗಳಿಗೆ ಮತ್ತು ವೇದಗಳಿಗೆ. ಅನುಕೂಲ ವಾಗಿರುವುದೋ, ಅದೆಲ್ಲವೂ ಸತ್ಯ ಮತ್ತು ಅದಕ್ಕೆ ವಿರುದ್ಧವಾದುದು ಅಸತ್ಯ.

ಎರಡನೆಯದಾಗಿ – ಯಾವಯಾವದು ಸೃಷ್ಟಿಕ್ರಮಕ್ಕೆ ಅನುಕೂಲವಾಗಿರುವುದೋ ಅದೆಲ್ಲವೂ ಸತ್ಯ ಮತ್ತು ಯಾವ ಯಾವದು ಸೃಷ್ಟಿಕ್ರಮಕ್ಕೆ ವಿರುದ್ಧವಾಗಿದೆಯೋ, ಅದೆಲ್ಲವೂ ಅಸತ್ಯ. ಉದಾಹರಣೆಗೆ– ಮಾತಾಪಿತೃಗಳ ಸಂಯೋಗವಿಲ್ಲದೆಯೇ ಹುಡುಗನು ಹುಟ್ಟಿದನು ಎಂದು ಯಾವನಾದರೂ ಹೇಳಿದರೆ, ಇಂತಹ ಕಥನ ಸೃಷ್ಟಿಕ್ರಮಕ್ಕೆ ವಿರುದ್ಧವಾಗಿರುವುದರಿಂದ ಸರ್ವಥಾ ಅಸತ್ಯ.

---

೨೩. ತೋರಿಕೆಯ ಕರ್ಮಕಲಾಪ. –ಅನು

ಮೂರನೆಯದಾಗಿ – **'ಅಪ್ತರು'** ಎಂದರೆ, ಧಾರ್ಮಿಕರೂ, ವಿದ್ವಾಂಸರೂ, ಸತ್ಯವಾದಿಗಳೂ, ನಿಷ್ಕಪಟರೂ ಆದವರ ಸಂಗ ಮತ್ತು ಉಪದೇಶಕ್ಕೆ ಯಾವುದು ಅನುಕೂಲವಾಗಿದೆಯೋ, ಅದೆಲ್ಲವೂ ಗ್ರಾಹ್ಯ ಮತ್ತು ಯಾವಯಾವದು ವಿರುದ್ಧವಾಗಿದೆಯೋ, ಅದೆಲ್ಲವೂ ಅಗ್ರಾಹ್ಯವಾಗಿರುತ್ತದೆ.

ನಾಲ್ಕನೆಯದಾಗಿ – ಯಾವುದು ತನ್ನ ಆತ್ಮನ ಪವಿತ್ರತೆ (ಮತ್ತು) ವಿದ್ಯೆಗೆ ಅನುಕೂಲವಾಗಿದೆಯೋ ಅದು ಗ್ರಾಹ್ಯ; ಅಂದರೆ– ಹೇಗೆ ತನಗೆ ಸುಖವು ಪ್ರಿಯವೂ ಮತ್ತು ದುಃಖವು ಅಪ್ರಿಯವೂ ಆಗಿದೆಯೋ, ಹಾಗೆಯೇ ಎಲ್ಲೆಡೆಯೂ, ನಾನು ಯಾವನಿಗಾದರೂ ದುಃಖವನ್ನು ಅಥವಾ ಸುಖವನ್ನು ಕೊಡುವೆನಾದರೆ, ಅವನೂ ಅಪ್ರಸನ್ನನು ಇಲ್ಲವೇ ಪ್ರಸನ್ನನಾಗುವನು – ಎಂದು ತಿಳಿದುಕೊಳ್ಳಬೇಕು. ಮತ್ತು

ಐದನೆಯದಾಗಿ – ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಐತಿಹ್ಯ, ಅರ್ಥಾಪತ್ತಿ, ಸಂಭವ ಮತ್ತು ಅಭಾವ – ಎಂಬ ಎಂಟು ಪ್ರಮಾಣಗಳು ಇರುತ್ತವೆ.

## (ಪ್ರತ್ಯಕ್ಷಾದಿ ಎಂಟು ಪ್ರಮಾಣಗಳ ಲಕ್ಷಣ)

ಇವುಗಳಲ್ಲಿ, ಪ್ರತ್ಯಕ್ಷ – ಮೊದಲಾದುವುಗಳ ಯಾವ ಸೂತ್ರಗಳನ್ನು ಕೆಳಗೆ ಬರೆಯುವೆವೋ, ಅವುಗಳೆಲ್ಲವೂ ನ್ಯಾಯಶಾಸ್ತ್ರದ ಮೊದಲನೆಯ ಮತ್ತು ಎರಡನೆಯ ಅಧ್ಯಾಯದವು– ಎಂದು ತಿಳಿದುಕೊಳ್ಳಿರಿ.

**ಇಂದ್ರಿಯಾರ್ಥಸನ್ನಿಕರ್ಷೋತ್ಪನ್ನಂ ಜ್ಞಾನಮವ್ಯಪದೇಶ್ಯಮವ್ಯಭಿಚಾರಿ ವ್ಯವಸಾಯಾತ್ಮಕಂ ಪ್ರತ್ಯಕ್ಷಮ್** ॥ (ನ್ಯಾಯ:–೧.೧.೪)

ಯಾವ ಶ್ರೋತ್ರ, ಚರ್ಮ, ಚಕ್ಷು, ಜಿಹ್ವೆ ಮತ್ತು ನಾಸಿಕದ, ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧದೊಂದಿಗೆ ಅವ್ಯವಹಿತವಾದ, ಎಂದರೆ ಆವರಣ ರಹಿತವಾದ ಸಂಬಂಧವಾಗುವುದೋ, ಇಂದ್ರಿಯಗಳೊಂದಿಗೆ ಮನಸ್ಸಿನ ಮತ್ತು ಮನಸ್ಸಿನೊಂದಿಗೆ ಆತ್ಮನ ಸಂಯೋಗದಿಂದ ಜ್ಞಾನ ಉತ್ಪನ್ನವಾಗುವುದೋ, ಅದನ್ನು ಪ್ರತ್ಯಕ್ಷವೆನ್ನುತ್ತಾರೆ. ಆದರೆ, ಯಾವುದು **ವ್ಯಪದೇಶ್ಯ** ಅಂದರೆ **ಸಂಜ್ಞಾ–ಸಂಜ್ಞೀ** ಸಂಬಂಧದಿಂದ ಉತ್ಪನ್ನವಾಗುತ್ತದೋ, ಆ ಜ್ಞಾನವಾಗಿರಬಾರದು. ಉದಾಹರಣೆಗೆ,– ಯಾವನಾದರೂ ಒಬ್ಬನು, ಯಾವನೋ ಒಬ್ಬನಿಗೆ – **"ನೀನು ನೀರನ್ನು ತೆಗೆದುಕೊಂಡು ಬಾ"** – ಎಂದನು. ಅವನು ತಂದು, ಅವನ ಬಳಿಯಿಟ್ಟು, 'ಇದು ನೀರು' – ಎಂದನು. ಆದರೆ ಅಲ್ಲಿ 'ನೀರು' ಎಂಬ ಈ ಎರಡಕ್ಷರಗಳ **'ಸಂಜ್ಞೆ'** (ಪದ) ವನ್ನು ತರುವವನು ಅಥವಾ ತರಿಸುವವನು ನೋಡಲಾರನು. ಆದರೆ ಯಾವ ಪದಾರ್ಥದ ಹೆಸರು 'ನೀರು' ಆಗಿದೆಯೋ, ಅದೇ **'ಪ್ರತ್ಯಕ್ಷ'** ವಾಗುತ್ತದೆ. ಮತ್ತು ಶಬ್ದದಿಂದ ಉತ್ಪನ್ನವಾಗುವ ಜ್ಞಾನವು ಶಬ್ದ ಪ್ರಮಾಣದ ವಿಷಯ. ಅದು **'ಅವ್ಯಭಿಚಾರಿ'** ಯಾಗಿರಬೇಕು. ಉದಾಹರಣೆಗೆ, ಯಾವನೋ ರಾತ್ರಿಯಲ್ಲಿ ಕಂಬವನ್ನು ನೋಡಿ 'ಪುರುಷ' ಎಂಬ ನಿಶ್ಚಯ ಮಾಡಿಕೊಂಡನು. ಮತ್ತು ಹಗಲಿನಲ್ಲಿ ನೋಡಿದರೆ, ರಾತ್ರಿಯ 'ಪುರುಷ'ನೆಂಬ ಜ್ಞಾನವು ನಾಶವಾಗಿ, 'ಕಂಬ' ಎಂಬ ಜ್ಞಾನ ಉಳಿಯಿತು. ಇಂತಹ ವಿನಾಶಯುಕ್ತ ಜ್ಞಾನದ ಹೆಸರು **'ವ್ಯಭಿಚಾರಿ'** ಎಂದಾಗಿದೆ. (ಇಂತಹದು ಪ್ರತ್ಯಕ್ಷವೆನ್ನಿಸದು) ಅದು ವ್ಯವಸಾಯಾತ್ಮಕವಾಗಿರಬೇಕು. ಉದಾಹರಣೆಗೆ ಯಾವನೋ ದೂರದಿಂದ ನದಿಯ ಮರಳನ್ನು ನೋಡಿ, "ಅಲ್ಲಿ ಬಟ್ಟೆಗಳು ಒಣಗುತ್ತಿವೆ; ನೀರಾಗಿದೆ; ಅಥವಾ ಮತ್ತೇನೋ ಆಗಿದೆ". – ಎಂದುಕೊಳ್ಳುತ್ತಾನೆ. "ಅಲ್ಲಿ ದೇವದತ್ತ ನಿಂತಿದ್ದಾನೋ, ಯಜ್ಞದತ್ತನೋ!" ಎಂದು ಮತ್ತೊಬ್ಬ ತರ್ಕಿಸುತ್ತಾನೆ. ಒಂದು ನಿಶ್ಚಿತವಾಗುವವರೆಗೆ, ಅದು ಪ್ರತ್ಯಕ್ಷಜ್ಞಾನವಲ್ಲ. ಆದರೆ ಯಾವುದು ಅವ್ಯಪದೇಶ್ಯವೂ, ಅವ್ಯಭಿಚಾರಿಯೂ ಮತ್ತು ನಿಶ್ಚಯಾತ್ಮಕವೂ ಆದ ಜ್ಞಾನವಾಗಿದೆಯೋ, ಅದನ್ನೇ ಪ್ರತ್ಯಕ್ಷವೆನ್ನುತ್ತಾರೆ.

ಎರಡನೆಯದು ಅನುಮಾನ :

**ಅಥ ತತ್ಪೂರ್ವಕಂ ತ್ರಿವಿಧಮನುಮಾನಂ ಪೂರ್ವವಚ್ಛೇಷವತ್ಸಾಮಾನ್ಯ ತೋ ದೃಷ್ಟಂ ಚ ॥** (ನ್ಯಾಯ : ೧.೧.೫)

ಯಾವುದು ಪ್ರತ್ಯಕ್ಷಪೂರ್ವಕವಾಗಿರುತ್ತದೋ, ಎಂದರೆ ಯಾವುದಾದರೂ ಒಂದು ತತ್ತ್ವದ ಯಾವುದಾದರೂ ಒಂದು ದೇಶ (ಭಾಗ) ಅಥವಾ ಸಂಪೂರ್ಣ ದ್ರವ್ಯದ ಪ್ರತ್ಯಕ್ಷವು ಯಾವುದಾದರೂ ಸ್ಥಾನದಲ್ಲಿ ಅಥವಾ ಕಾಲದಲ್ಲಿ ಆಗಿದ್ದು, ದೂರದೇಶದಿಂದ ಅದರ ಸಹಚಾರಿಯಾದ ಒಂದು ದೇಶ (ಭಾಗ ಅಥವಾ ಅಂಶ) ಪ್ರತ್ಯಕ್ಷವಾಗುವುದರಿಂದ, ನೋಡದಿರುವ ಅವಯವಿಯ ಜ್ಞಾನ ಉಂಟಾಗುವುದನ್ನು ಅನುಮಾನವೆನ್ನುತ್ತಾರೆ. ಉದಾಹರಣೆಗೆ – ಮಗನನ್ನು ನೋಡಿ ತಂದೆಯ, ಪರ್ವತ ಮೊದಲಾದೆಡೆಯಲ್ಲಿ ಹೊಗೆಯನ್ನು ನೋಡಿ ಬೆಂಕಿಯ, ಜಗತ್ತಿನಲ್ಲಿ ಸುಖ ದುಃಖಗಳನ್ನು ನೋಡಿ ಪೂರ್ವಜನ್ಮದ ಜ್ಞಾನವುಂಟಾಗುತ್ತದೆ.

ಈ ಅನುಮಾನ ಮೂರು ಬಗೆಯದಿರುತ್ತದೆ. ಒಂದನೆಯದು – **'ಪೂರ್ವವತ್'**. ಉದಾಹರಣೆಗೆ, ಮೋಡಗಳನ್ನು ನೋಡಿ ಮಳೆಯ, ಮದುವೆಯನ್ನು ನೋಡಿ ಸಂತಾನೋತ್ಪತ್ತಿಯ, ಓದುತ್ತಿರುವ ವಿದ್ಯಾರ್ಥಿಯನ್ನು ನೋಡಿ ವಿದ್ಯೆ ಲಭಿಸುವುದರ ನಿಶ್ಚಯ ಉಂಟಾಗುತ್ತದೆ. ಈ ಮೊದಲಾದುವುಗಳಂತೆ, ಎಲ್ಲಿ ಎಲ್ಲಿ ಕಾರಣವನ್ನು ನೋಡಿ ಕಾರ್ಯದ ಜ್ಞಾನವಾಗುತ್ತದೋ, ಅದು ಪೂರ್ವವತ್. ಎರಡನೆಯದು – **'ಶೇಷವತ್'** ಎಂದರೆ ನದಿಯ ಪ್ರವಾಹದಲ್ಲಿ ವೃದ್ಧಿಯನ್ನು ನೋಡಿ, ಮೇಲಣ ಪ್ರಾಂತದಲ್ಲಿ ಆಗಿರುವ ಮಳೆಯ, ಮಗನನ್ನು ನೋಡಿ ತಂದೆಯ, ಸೃಷ್ಟಿಯನ್ನು ನೋಡಿ ಅನಾದಿ ಕಾರಣ ಮತ್ತು ಕರ್ತೃವಾದ ಈಶ್ವರನ ಮತ್ತು ಪಾಪ-ಪುಣ್ಯಗಳ ಆಚರಣವನ್ನು ನೋಡಿ ಸುಖ – ದುಃಖಗಳ, ಜ್ಞಾನ ಉಂಟಾಗುತ್ತದೆ. ಹೀಗೆ ಎಲ್ಲಿ ಕಾರ್ಯವನ್ನು ನೋಡಿ ಕಾರಣದ ಜ್ಞಾನ ಲಭಿಸುವುದೋ ಅದನ್ನೇ 'ಶೇಷವತ್' – ಎನ್ನುತ್ತಾರೆ. ಮೂರನೆಯದು – **'ಸಾಮಾನ್ಯತೋ ದೃಷ್ಟ'** ಎಂದರೆ ಯಾವುದೂ, ಯಾವುದಕ್ಕಾದರೂ ಕಾರ್ಯ ಅಥವಾ ಕಾರಣವಾಗದಿದ್ದು, ಆದರೂ, ಯಾವುದಾದರೂ ಒಂದು ವಿಧದ ಸಾಧರ್ಮ್ಯ ಒಂದರದು ಮತ್ತೊಂದಕ್ಕೆ ಇದ್ದು, ಹೇಗೆ ಯಾವನೂ ಸಂಚಾರಮಾಡದೆ ಬೇರೊಂದು ಸ್ಥಾನಕ್ಕೆ ಹೋಗಲಾರನೋ, ಹಾಗೆಯೇ ಅನ್ಯರೂ ಕೂಡ ಸಂಚಾರಮಾಡದೆ ಬೇರೆ ಸ್ಥಾನಕ್ಕೆ ಎಂದಿಗೂ ಹೋಗಲಾರರು – ಎನ್ನುವ ಹಾಗೆ ನಿಶ್ಚಯ ಉಂಟಾಗುವಿಕೆ. **"ಅನು, ಅರ್ಥಾತ್ ಪ್ರತ್ಯಕ್ಷಸ್ಯಪಶ್ಚಾತ್, ಮೀಯತೇ ಯೇನ ತದನುಮಾನಂ."** – ಯಾವುದು ಪ್ರತ್ಯಕ್ಷದ ಅನಂತರವೇ ಉಂಟಾಗುವುದೋ ಅದೇ ಅನುಮಾನ ಎನ್ನುವುದೇ ಅನುಮಾನವೆಂಬ ಶಬ್ದ ಅರ್ಥವಾಗಿದೆ. ಉದಾಹರಣೆಗೆ – ಹೊಗೆಯನ್ನು ಪ್ರತ್ಯಕ್ಷವಾಗಿ ನೋಡದೆ, ಕಾಣದಿರುವ ಬೆಂಕಿಯ ಜ್ಞಾನ ಎಂದಿಗೂ ಉಂಟಾಗಲಾರದು.

ಮೂರನೆಯದು **"ಉಪಮಾನ"**

**"ಪ್ರಸಿದ್ಧಸಾಧರ್ಮ್ಯಾತ್ ಸಾಧ್ಯ ಸಾಧನಮುಪ ಮಾನಮ್"** (ನ್ಯಾಯ :– ೧. ೧.೬)

ಯಾವುದು ಪ್ರಸಿದ್ಧವಾದ ಪ್ರತ್ಯಕ್ಷದೊಂದಿಗೆ ಹೊಂದಿರುವ ಸಾಧರ್ಮ್ಯದಿಂದ ಸಾಧ್ಯದ– ಎಂದರೆ, ಸಿದ್ಧಪಡಿಸಬೇಕಾಗಿರುವ ಜ್ಞಾನದ ಸಿದ್ಧಿಯನ್ನು ಮಾಡುವ ಸಾಧನವಾಗಿದೆಯೋ, ಅದನ್ನು "ಉಪಮಾನ"– ಎನ್ನುತ್ತಾರೆ. **"ಉಪಮೀಯತೇ ಯೇನ, ತದುಪಮಾನಂ"** ಉದಾಹರಣೆಗೆ, ಯಾವನೋ ಒಬ್ಬನು ಯಾವನಾದರೂ ಭೃತ್ಯನಿಗೆ – "ನೀನು ವಿಷ್ಣುಮಿತ್ರನನ್ನು ಕರೆದು ಕೊಂಡು ಬಾ"– ಎಂದನು. ಅವನು –"ಅವನನ್ನು ನಾನು ಎಂದೂ ನೋಡಲಿಲ್ಲ" ಎಂದನು. ಅವನ ಯಜಮಾನನು– "ಈ ದೇವದತ್ತ ಹೇಗಿದ್ದಾನೋ, ಹಾಗೆಯೇ ಆ ವಿಷ್ಣುಮಿತ್ರನಿದ್ದಾನೆ"– ಎಂದನು. ಅಥವಾ, "ಈ ಹಸು ಹೇಗಿದೆಯೋ, ಗವಯವೂ[೨೪] *ಹಾಗೆಯೇ ಇರುತ್ತದೆ"– (ಎಂದು ಹೇಳಿದನೆಂದು ಭಾವಿಸಿರಿ) ಯಾವಾಗ ಅವನು ಅಲ್ಲಿ ಹೋದನೋ, ಮತ್ತು ದೇವದತ್ತನಂತೆ ಇರುವ ಅವನನ್ನು (ವಿಷ್ಣುಮಿತ್ರ) ನೋಡಿದನೋ, ಆಗ ಇವನೇ ವಿಷ್ಣುಮಿತ್ರನು – ಎಂದು ನಿಶ್ಚಯಮಾಡಿಕೊಂಡನು; ಅವನನ್ನು ಕರೆತಂದನು. ಅಥವಾ ಯಾವುದೋ ಒಂದು ಕಾಡಿನಲ್ಲಿ ಯಾವ ಪ್ರಾಣಿ ಹಸುವಿನಂತೆ ಇರುವುದನ್ನು ಕಂಡನೋ, ಅದರ ಬಗೆಗೆ ಅದರ ಹೆಸರೇ 'ಗವಯ' ಎಂದು ನಿಶ್ಚಯಿಸಿಕೊಂಡನು.

ನಾಲ್ಕನೆಯದು **ಶಬ್ದಪ್ರಮಾಣ:**

**"ಅಪ್ತೋಪದೇಶಃ ಶಬ್ದಃ"** (ನ್ಯಾಯ :– ೧.೧.೭)

ಆಪ್ತನು–ಎಂದರೆ ಪೂರ್ಣ ವಿದ್ವಾಂಸನೂ, ಧರ್ಮಾತ್ಮನೂ, ಪರೋಪಕಾರ ಪ್ರಿಯನೂ, ಸತ್ಯವಾದಿಯೂ, ಪುರುಷಾರ್ಥಿಯೂ, ಜಿತೇಂದ್ರಿಯನೂ ಆದ ಪುರುಷನು ತನ್ನ ಆತ್ಮನಲ್ಲಿ ಯಾವುದನ್ನು ಕಂಡುಕೊಳ್ಳುತ್ತಾನೋ, ಯಾವುದರಿಂದ ಸುಖವನ್ನು ಅನುಭವಿಸಿದ್ದಾನೋ, ಅದನ್ನೇ ಹೇಳುವ ಇಚ್ಛೆಯಿಂದ ಪ್ರೇರಿತನಾಗಿ, ಸಮಸ್ತ ಮಾನವರ ಕಲ್ಯಾಣಕ್ಕಾಗಿ ಉಪದೇಶ ಮಾಡುವವನು. ಎಂದರೆ ಭೂಮಿಯಿಂದ ಹಿಡಿದು ಪರಮೇಶ್ವರನ ವರೆಗೆಯಿರುವ ಪದಾರ್ಥಗಳ ಜ್ಞಾನವನ್ನು ಗಳಿಸಿ, ಉಪದೇಶಕನಾಗುತ್ತಾನೆ. ಯಾವುದು ಇಂತಹ ಪುರುಷರ ಉಪದೇಶವಾಗಿರುತ್ತದೋ, ಅದನ್ನು ಮತ್ತು ಪೂರ್ಣ ಆಪ್ತನಾದ ಪರಮೇಶ್ವರನ ಉಪದೇಶಗಳಾದ ವೇದಗಳನ್ನು **ಶಬ್ದ ಪ್ರಮಾಣ** ವೆಂದು ತಿಳಿಯಿರಿ.

ಐದನೆಯದು **ಐತಿಹ್ಯ :–**

**ನ ಚತುಷ್ಟ್ವಮೈತಿಹ್ಯಾರ್ಥಾಪತ್ತಿ ಸಂಭವಾಭಾವಪ್ರಾಮಾಣ್ಯಾತ್ ॥೧॥** (ನ್ಯಾಯ:–೨. ೨. ೧)

---

೨೪. ಇದು ಗೋವಿನಂತೆ ಕಾಣುವ ಅರಣ್ಯ ಪ್ರದೇಶದ ನೀಲಿಬಣ್ಣದ ಹಸು. (ನೀಲಗಾಯ) ಇದು ಉತ್ತರ ಭಾರತದಲ್ಲಿ ಹೆಚ್ಚಾಗಿ ಕಾಣುತ್ತದೆ. –ಅನು

"ಇತಿಹ"– ಎಂದರೆ "ಹೀಗೆ ಇದ್ದನು; ಅವನು ಹೀಗೆ ಮಾಡಿದನು"– ಎನ್ನುವುದು; ಅಂದರೆ, ಯಾವನಾದರೂ ಒಬ್ಬನ ಜೀವನಚರಿತ್ರದ ಹೆಸರು **"ಐತಿಹ್ಯ"**[೨೫] – ಎಂದು.

ಆರನೆಯದು **"ಅರ್ಥಾಪತ್ತಿ"**: –

**"ಅರ್ಥಾದಾಪದ್ಯತೇ ಸಾ ಅರ್ಥಾಪತ್ತಿಃ" ಕೇನಚಿದುಚ್ಯತೇ "ಸತ್ಸುಘನೇಷು ವೃಷ್ಟಿಃ; ಸತಿ ಕಾರಣೇ ಕಾರ್ಯಂ ಭವತೀತಿ. ಕಿಮತ್ರ ಪ್ರಸಜ್ಯತೇ? ಅಸತ್ಸು ಘನೇಷು ವೃಷ್ಟಿಃ ಅಸತಿ ಕಾರಣೇಚ ಕಾರ್ಯಂ ನ ಭವತಿ"**. ಉದಾಹರಣೆಗೆ – ಒಬ್ಬನು ಮತ್ತೊಬ್ಬನಿಗೆ "ಮೋಡವಿರುವುದರಿಂದ ಮಳೆ, ಮತ್ತು ಕಾರಣವಿರುವುದರಿಂದ ಕಾರ್ಯ ಉತ್ಪನ್ನವಾಗುತ್ತದೆ". – ಎಂದು ಹೇಳಿದನು. ಇದರಿಂದ, ಮೋಡವಿಲ್ಲದೆ ಮಳೆ ಮತ್ತು ಕಾರಣವಿಲ್ಲದೆ ಕಾರ್ಯ ಎಂದಿಗೂ ಆಗಲಾರದು – ಎಂಬ ಇನ್ನೊಂದು ಮಾತು, ಹೇಳದಿದ್ದರೂ ಕೂಡ ಸಿದ್ಧವಾಗುತ್ತದೆ.

ಏಳನೆಯದು **"ಸಂಭವ"**:–

**"ಸಂಭವತಿ ಯಸ್ಮಿನ್, ಸ ಸಂಭವಃ"** ಯಾವನಾದರೂ "ತಾಯಿ – ತಂದೆಗಳಿಲ್ಲದೆಯೇ ಸಂತತಿ ಹುಟ್ಟಿತು; ಯಾವನೋ ಒಬ್ಬನು ಸತ್ತವರನ್ನು ಬದುಕಿಸಿದನು; ಪರ್ವತಗಳನ್ನು ಎತ್ತಿದನು; ಸಮುದ್ರದಲ್ಲಿ ಕಲ್ಲುಗಳನ್ನು ತೇಲಿಸಿದನು; ಚಂದ್ರನನ್ನು ತುಂಡರಿಸಿದನು; ಪರಮೇಶ್ವರನ ಅವತಾರವಾಯಿತು; ಮನುಷ್ಯನ ಕೊಂಬುಗಳನ್ನು ನೋಡಿದೆನು; ಮತ್ತು ಬಂಜೆಯ ಮಗನಿಗೆ ಮತ್ತು ಮಗಳಿಗೆ ವಿವಾಹವನ್ನು ಮಾಡಿಸಿದೆನು". ಎಂದು ಈ ಮೊದಲಾದ ರೀತಿಯಲ್ಲಿ ಹೇಳಿದರೆ, ಇವೆಲ್ಲ ಅಸಂಭವ; ಏಕೆಂದರೆ– ಈ ಮಾತುಗಳೆಲ್ಲಾ ಸೃಷ್ಟಿಕ್ರಮಕ್ಕೆ ವಿರುದ್ಧವಾಗಿವೆ. ಮತ್ತು ಯಾವುದು ಸೃಷ್ಟಿಕ್ರಮಕ್ಕೆ ಅನುಕೂಲವಾಗಿರುವುದೋ, ಅದು ಮಾತ್ರ ಸಂಭವ.

ಎಂಟನೆಯದು **"ಅಭಾವ"**[೨೬]

**"ನ ಭವಂತಿ ಯಸ್ಮಿನ್ ಸೋಽಭಾವಃ" ೨** ಉದಾಹರಣೆಗೆ, ಯಾವನೋ ಒಬ್ಬನು ಮತ್ತೊಬ್ಬನಿಗೆ – "ಆನೆಯನ್ನು ತೆಗೆದುಕೊಂಡು ಬಾ"– ಎಂದನು. ಅವನು ಅಲ್ಲಿ ಆನೆಯ ಅಭಾವವನ್ನು ಕಂಡು, ಆನೆ ಎಲ್ಲಿದ್ದಿತೋ, ಅಲ್ಲಿಂದ ತೆಗೆದುಕೊಂಡು ಬಂದನು.

ಇವು ಎಂಟು ಪ್ರಮಾಣಗಳು. ಇವುಗಳಲ್ಲಿ ಶಬ್ದದಲ್ಲಿ ಐತಿಹ್ಯವನ್ನೂ ಮತ್ತು ಅನುಮಾನದಲ್ಲಿ ಅರ್ಥಾಪತ್ತಿ, ಸಂಭವ ಮತ್ತು ಅಭಾವವನ್ನೂ ಎಣಿಸಿದರೆ, ನಾಲ್ಕು ಪ್ರಮಾಣಗಳು ಉಳಿಯುತ್ತವೆ. ಈ ಐದು ಬಗೆಯ ಪರೀಕ್ಷೆಗಳಿಂದ ಮಾನವನು ಸತ್ಯಾಸತ್ಯಗಳ ನಿಶ್ಚಯ ಮಾಡಬಲ್ಲನು; ಬೇರೆ ಕ್ರಮದಲ್ಲಿ ಅಲ್ಲ.

**"ಧರ್ಮವಿಶೇಷಪ್ರಸೂತಾತ್ ದ್ರವ್ಯಗುಣಕರ್ಮಸಾಮಾನ್ಯವಿಶೇಷಸಮವಾಯಾನಾಂ ಪದಾರ್ಥಾನಾಂ**

**ಸಾಧರ್ಮ್ಯ ವೈಧರ್ಮ್ಯಾಭ್ಯಾಂ ತತ್ತ್ವಜ್ಞಾನ್ನಾನ್ನಿಃ ಶ್ರೇಯಸಮ್"** (ವೈಶೇಷಿಕ : – ೧.೧.೪)

ಮಾನವನು ಧರ್ಮದ ಅನುಷ್ಠಾನವನ್ನು ಯೋಗ್ಯರೀತಿಯಲ್ಲಿ ಮಾಡುವುದರಿಂದ ಪವಿತ್ರನಾಗಿ, ಪೃಥಿವೀ ಜಡ ಮತ್ತು ಜಲವೂ ಜಡ – ಎಂಬ ಹಾಗೆ ಸಾಧರ್ಮ್ಯ, ಎಂದರೆ ಸಮಾನಧರ್ಮವನ್ನೂ, ಪೃಥಿವೀ ಕಠೋರ ಮತ್ತು ಜಲ ಕೋಮಲ – ಎಂಬ ರೀತಿಯಲ್ಲಿ ವೈಧರ್ಮ್ಯ– ಎಂದರೆ ವಿಪರೀತ ಧರ್ಮವನ್ನೂ, ಇದೇ ರೀತಿ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ ಮತ್ತು ಸಮವಾಯ – ಈ ಆರು ಪದಾರ್ಥಗಳ ತತ್ತ್ವಜ್ಞಾನದಿಂದ, ಎಂದರೆ ಸ್ವರೂಪಜ್ಞಾನದಿಂದ **"ನಿಃ ಶ್ರೇಯಸ"** ವನ್ನು, ಮೋಕ್ಷವನ್ನು, ಪಡೆದುಕೊಳ್ಳುತ್ತಾನೆ.

**ಪೃಥಿವ್ಯಾಪಸ್ತೇಜೋವಾಯುರಾಕಾಶಂ ಕಾಲೋ ದಿಗಾತ್ಮಾ ಮನ ಇತಿ ದ್ರವ್ಯಾಣಿ ॥** (ವೈಶೇಷಿಕ : ೧.೧.೫)

ಪೃಥಿವೀ, ಜಲ, ತೇಜ, ವಾಯು, ಆಕಾಶ, ಕಾಲ, ದಿಕ್ಕು, ಆತ್ಮ ಮತ್ತು ಮನಸ್ಸು ಈ ಒಂಭತ್ತು ದ್ರವ್ಯಗಳಾಗಿವೆ.

**ಕ್ರಿಯಾಗುಣವತ್ಸಮವಾಯಿಕಾರಣಮಿತಿ ದ್ರವ್ಯಲಕ್ಷಣಮ್ ॥** (ವೈಶೇಷಿಕ :– ೧.೧.೧೫)

---

೨೫. ಐತಿಹ್ಯ, ಅರ್ಥಾಪತ್ತಿ, ಸಂಭವ, ಅಭಾವಗಳೂ ಕೂಡ ಪ್ರಮಾಣಗಳೇ ಆಗಿರುವವು. ಪ್ರಮಾಣಗಳು ಕೇವಲ ನಾಲ್ಕೇ ಅಲ್ಲ– ಎಂಬುದೇ ಸೂತ್ರದ ಅರ್ಥ. –ಅನು

೨೬. ಅಭಾವ–ಎಂದರೆ, ಇಲ್ಲದಿರುವಿಕೆ. –ಅನು

**"ಕ್ರಿಯಾಶ್ಚ ಗುಣಾಶ್ಚ ವಿದ್ಯಂತೇ ಯಸ್ಮಿನ್ ತತ್ ಕ್ರಿಯಾಗುಣವತ್"** – ಯಾವುದರಲ್ಲಿ ಕ್ರಿಯಾಗುಣಗಳು, ಮತ್ತು ಕೇವಲ ಗುಣಗಳು ಇರುತ್ತವೋ, ಅದನ್ನು ದ್ರವ್ಯವೆನ್ನುತ್ತಾರೆ. ಅವುಗಳಲ್ಲಿ ಪೃಥಿವೀ, ಜಲ, ತೇಜಸ್ಸು, ವಾಯು, ಮನಸ್ಸು ಮತ್ತು ಆತ್ಮ – ಈ ಆರು ದ್ರವ್ಯಗಳು ಕ್ರಿಯಾ ಮತ್ತು ಗುಣಗಳನ್ನು ಹೊಂದಿರುವಂತಹವಾಗಿವೆ. ಮತ್ತು, ಆಕಾಶ,ಕಾಲ ಹಾಗೂ ದಿಕ್ಕು– ಈ ಮೂರೂ ಕ್ರಿಯಾರಹಿತವೂ, ಗುಣಯುಕ್ತವೂ ಆಗಿವೆ. (ಸಮವಾಯಿ) - **"ಸಮವೇತುಂ ಶೀಲಂ ಯಸ್ಯ ತತ್ಸಮವಾಯಿ, ಪ್ರಾಗ್ವೃತ್ತಿತ್ವಂ ಕಾರಣಂ ಸಮವಾಯಿ ಚ ತತ್ಕಾರಣಂ ಚ ಸಮವಾಯಿಕಾರಣಂ. ಲಕ್ಷ್ಯತೇ ಯೇನ ತಲ್ಲಕ್ಷಣಂ".** "ಯಾವುದು ಸೇರುವ ಸ್ವಭಾವದಿಂದ ಯುಕ್ತವಾಗಿದೆಯೋ, ಕಾರ್ಯಕ್ಕಿಂತ ಪೂರ್ವ ಕಾಲದಲ್ಲಿರುವ ಆ ಕಾರಣವನ್ನೇ ದ್ರವ್ಯವೆನ್ನುತ್ತಾರೆ. ಕಣ್ಣಿನಿಂದ ರೂಪವು ತಿಳಿಯಲ್ಪಡುವಂತೆ, ಯಾವುದರಿಂದ ಲಕ್ಷ್ಯವು ತಿಳಿಯಲ್ಪಡುತ್ತದೋ, ಅದನ್ನು ಲಕ್ಷಣವೆನ್ನುತ್ತಾರೆ.

**ರೂಪರಸಗಂಧಸ್ಪ ರ್ಶವತೀ ಪೃಥಿವೀ** (ವೈಶೇಷಿಕ:–೨.೧.೧)

ರೂಪ,ರಸ, ಗಂಧ, ಸ್ಪರ್ಶಗಳಿಂದ ಯುಕ್ತವಾಗಿರುವುದು ಪೃಥಿವೀ, ಅದರಲ್ಲಿ ರೂಪ,ರಸ ಮತ್ತು ಸ್ಪರ್ಶ – ಇವು ಅಗ್ನಿ, ಜಲ ಮತ್ತು ವಾಯುವಿನ ಯೋಗದಿಂದ ಉಂಟಾಗಿವೆ.

**ವ್ಯವಸ್ಥಿತಃ ಪೃಥಿವ್ಯಾಂ ಗಂಧ** ಃ॥ (ವೈಶೇಷಿಕ :–೨.೨.೨)

ಪೃಥಿವಿಯಲ್ಲಿ ಗಂಧವೆಂಬ ಗುಣ ಸ್ವಾಭಾವಿಕವಾಗಿದೆ. ಹಾಗೆಯೇ ಜಲದಲ್ಲಿ ರಸ, ಅಗ್ನಿಯಲ್ಲಿ ರೂಪ, ವಾಯುವಿನಲ್ಲಿ ಸ್ಪರ್ಶ ಮತ್ತು ಆಕಾಶದಲ್ಲಿ ಶಬ್ದ ಸ್ವಾಭಾವಿಕವಾಗಿವೆ.

**ರೂಪರಸಸ್ಪರ್ಶವತ್ಯ ಆಪೋ ದ್ರವಾಃ ಸ್ನಿಗ್ಧಾ** ಃ ॥ (ವೈಶೇಷಿಕ :–೨.೧.೨)

ರೂಪ, ರಸ ಮತ್ತು ಸ್ಪರ್ಶದಿಂದ ಯುಕ್ತವೂ, ದ್ರವೀಭೂತವೂ, ಕೋಮಲವೂ ಆದುದು ಜಲವೆನಿಸುತ್ತದೆ. ಆದರೆ, ಇವುಗಳಲ್ಲಿ ರಸವು ಜಲದ ಸ್ವಾಭಾವಿಕ ಗುಣ ಮತ್ತು ರೂಪ – ಸ್ಪರ್ಶಗಳು ಅಗ್ನಿಯ ಮತ್ತು ವಾಯುವಿನ ಯೋಗದಿಂದ ಉಂಟಾಗಿವೆ.[೨೭]

**ಅಪ್ಸುಶೀತತಾ॥** (ವೈಶೇಷಿಕ : –೨.೨.೫)

ಮತ್ತು ಜಲದಲ್ಲಿ ಶೀತತ್ವವೆಂಬ ಗುಣವೂ ಸ್ವಾಭಾವಿಕವಾಗಿದೆ.

**ತೇಜೋ ರೂಪಸ್ಪ ರ್ಶವತ್** ॥ (ವೈಶೇಷಿಕ : –೨.೧.೩)

ರೂಪದಿಂದ ಮತ್ತು ಸ್ಪರ್ಶದಿಂದ ಯುಕ್ತವಾದುದು ತೇಜಸ್ಸು, ಆದರೆ ಇದರಲ್ಲಿ ರೂಪವು ಸ್ವಾಭಾವಿಕ ಮತ್ತು ಸ್ಪರ್ಶವು ವಾಯುವಿನ ಯೋಗದಿಂದ ಉಂಟಾಗಿದೆ.

**ಸ್ಪರ್ಶವಾನ್ ವಾಯುಃ** ॥ (ವೈಶೇಷಿಕ ೨.೧.೪)

ಸ್ಪರ್ಶಗುಣಯುಕ್ತವಾದುದು ವಾಯು. ಆದರೆ, ಇದರಲ್ಲಿಯೂ ಉಷ್ಣತ್ವ– ಶೀತತ್ವಗಳು ತೇಜಸ್ಸಿನ ಮತ್ತು ಜಲದ ಯೋಗದಿಂದ ಮೂಡಿರುತ್ತವೆ.

**ತ ಆಕಾಶೇ ನ ವಿದ್ಯಂತೇ** ॥ (ವೈಶೇಷಿಕ :–೨.೧.೫)

ರೂಪ, ರಸ, ಗಂಧ ಮತ್ತು ಸ್ಪರ್ಶ ಆಕಾಶದಲ್ಲಿರುವುದಿಲ್ಲ. ಆದರೆ ಶಬ್ದ ಮಾತ್ರ ಆಕಾಶದಗುಣವಾಗಿದೆ.

**ನಿಷ್ಕ್ರಮಣಂ ಪ್ರವೇಶನಮಿತ್ಯಾಕಾಶಸ್ಯ ಲಿಂಗಮ್** ॥ (ವೈಶೇಷಿಕ:–೨.೧.೨೦)

ಯಾವುದರಲ್ಲಿ ಪ್ರವೇಶ ಮತ್ತು ನಿಷ್ಕ್ರಮಣ ಆಗುತ್ತವೋ, ಅದೇ ಆಕಾಶದ ಲಿಂಗಗಳು.

**ಕಾರ್ಯಾಂತರಾಪ್ರಾದುರ್ಭಾವಾಚ್ಚ ಶಬ್ದಃ ಸ್ಪರ್ಶವತಾಮಗುಣಃ** ॥ (ವೈಶೇಷಿಕ: – ೨. ೧. ೨೫)

---

೨೭. ಆದುದರಿಂದ, ಪೃಥಿವಿಯ ಮೇಲೆ ಸಿಕ್ಕುವ ಜಲವು ತತ್ತ್ವವಲ್ಲ. ತತ್ತ್ವರೂಪದಲ್ಲಿ ಇದಕ್ಕೆ "ಆಪಃ" ಎಂಬ ಪದ ಯುಕ್ತವಾಗುತ್ತದೆ. –ಅನು.

ಪೃಥಿವಿಯೇ ಮೊದಲಾದ ಅನ್ಯ ಕಾರ್ಯಗಳಲ್ಲಿ ಪ್ರಕಟವಾಗದಿರುವುದರಿಂದ ಶಬ್ದವು ಸ್ಪರ್ಶಗುಣಯುಕ್ತವಾದ ಭೂಮಿ-ಮೊದಲಾದವುಗಳ ಗುಣವಲ್ಲ; ಆದರೆ, ಶಬ್ದ ಕೇವಲ ಆಕಾಶದ ಗುಣವೇ ಆಗಿದೆ.

**ಅಪರಸ್ಮಿನ್ನಪರಂ ಯುಗಪಚ್ಚಿರಂ ಕ್ಷಿಪ್ರಮಿತಿ ಕಾಲಲಿಂಗಾನಿ ॥** (ವೈಶೇಷಿಕ : -೨. ೨. ೬)

ಅಪರ (ಅಮೇಲೆ), ಪರ (ಮುಂಚೆ), ಯುಗಪತ್ (ಒಟ್ಟಿಗೆ), (ಚಿರಂ) ನಿಧಾನವಾಗಿ (ಕ್ಷಿಪ್ರಂ) ಶೀಘ್ರ- ಮೊದಲಾದ ಪ್ರಯೋಗಗಳು ಯಾವುದರ ಸೂಚಕವಾಗಿ ಆಗುತ್ತವೋ, ಅದನ್ನೇ ಕಾಲವೆನ್ನುತ್ತಾರೆ.

**ನಿತ್ಯೇಷ್ವಭಾವಾದನಿತ್ಯೇಷು ಭಾವಾತ್ ಕಾರಣೇ ಕಾಲಾಖ್ಯೇತಿ ॥** (ವೈಶೇಷಿಕ:- ೨. ೨. ೯)

ನಿತ್ಯವಾದ ಪದಾರ್ಥಗಳಲ್ಲಿ ಇಲ್ಲದಿರುವುದರಿಂದ ಮತ್ತು ಅನಿತ್ಯ (ಪದಾರ್ಥ)ಗಳಲ್ಲಿ ಇರುವುದರಿಂದ, ಕಾರಣದಲ್ಲಿಯೇ 'ಕಾಲ'ಎಂಬ ಸಂಜ್ಞೆಯಿದೆ.[೨೮]

**ಇತ ಇದಮಿತಿ ಯತಸ್ತದ್ದಿಶ್ಯಂ ಲಿಂಗಮ್ ॥** (ವೈಶೇಷಿಕ : -೨, ೨, ೧೦)

ಇಲ್ಲಿಂದ ಇದು ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಮೇಲೆ, ಕೆಳಗೆ - ಎಂಬ ವ್ಯವಹಾರ ಯಾವುದರಿಂದ ಆಗುತ್ತದೋ ಅದನ್ನೇ "ದಿಕ್ಕು" ಅನ್ನುತ್ತಾರೆ.

**ಆದಿತ್ಯಸಂಯೋಗಾದ್ಭೂತಪೂರ್ವಾದ್ಭವಿಷ್ಯತೋ ಭೂತಾಚ್ಚ ಪ್ರಾಚೀ ॥** (ವೈಶೇಷಿಕ : -೨, ೨, ೧೪)

ಯಾವ ಕಡೆ ಮೊದಲು ಸೂರ್ಯನ ಸಂಯೋಗವಾಗಿವೆಯೋ, ಆಗುವುದೋ, ಅದನ್ನು ಪೂರ್ವ ದಿಕ್ಕೆನ್ನುತ್ತಾರೆ. ಮತ್ತು ಎಲ್ಲಿ ಅಸ್ತವಾಗುತ್ತದೋ, ಅದನ್ನು ಪಶ್ಚಿಮವೆನ್ನುತ್ತಾರೆ. ಪೂರ್ವಾಭಿಮುಖನಾಗಿರುವ ಮಾನವನ ಬಲಗಡೆ ದಕ್ಷಿಣ ಮತ್ತು ಎಡಗಡೆ ಉತ್ತರ ದಿಕ್ಕು ಎನಿಸುತ್ತದೆ.

**ಆದಿತ್ಯ ಸಂಯೋಗಾದ್ಭೂತಪೂರ್ವಾದ್ಭವಿಷ್ಯತೋ ಭೂತಾಚ್ಚ ಪ್ರಾಚೀ ॥** (ವೈಶೇಷಿಕ : - ೨. ೨. ೧೪)

ಯಾವ ಕಡೆ ಮೊದಲು ಸೂರ್ಯನ ಸಂಯೋಗವಾಗಿದೆಯೋ, ಆಗುವುದೋ, ಅದನ್ನು ಪೂರ್ವ ದಿಕ್ಕೆನ್ನುತ್ತಾರೆ. ಮತ್ತು ಎಲ್ಲಿ ಅಸ್ತವಾಗುತ್ತದೋ, ಅದನ್ನು ಪಶ್ಚಿಮವೆನ್ನುತ್ತಾರೆ. ಪೂರ್ವಾಭಿಮುಖನಾಗಿರುವ ಮಾನವನ ಬಲಗಡೆ ದಕ್ಷಿಣ ಮತ್ತು ಎಡಗಡೆ ಉತ್ತರ ದಿಕ್ಕು ಎನಿಸುತ್ತದೆ.

**ಏತೇನ ದಿಗಂತರಾಲಾನಿ ವ್ಯಾಖ್ಯಾತಾನಿ ॥** (ವೈಶೇಷಿಕ :-೨. ೨. ೧೬)

ಇದರಿಂದ ಪೂರ್ವ-ದಕ್ಷಿಣಗಳ ನಡುವಣ ದಿಕ್ಕನ್ನು ಆಗ್ನೇಯ, ದಕ್ಷಿಣ-ಪಶ್ಚಿಮಗಳ ನಡುವಣದನ್ನು ನೈಋತ್ಯ, ಪಶ್ಚಿಮ-ಉತ್ತರಗಳ ನಡುವಣದನ್ನು ವಾಯುವ್ಯ ಮತ್ತು ಉತ್ತರ - ಪೂರ್ವಗಳ ನಡುವಣ ದಿಕ್ಕನ್ನು ಈಶಾನ್ಯ ದಿಕ್ಕೆಂದು ಹೇಳುತ್ತಾರೆ.

**ಇಚ್ಛಾದ್ವೇಷಪ್ರಯತ್ನ ಸುಖದುಃಖಜ್ಞಾನಾನ್ಯಾತ್ಮನೋ ಲಿಂಗಮಿತಿ ॥** (ನ್ಯಾಯ:- ೧.೧.೧೦)

ಯಾವನಲ್ಲಿ (ಇಚ್ಛಾ) ರಾಗ (ದ್ವೇಷ) ವೈರ, (ಪ್ರಯತ್ನ) ಪುರುಷಾರ್ಥ. ಸುಖ, ದುಃಖ, ಜ್ಞಾನ - ಈ ಗುಣಗಳಿರುತ್ತವೋ, ಅವನು ಜೀವಾತ್ಮನೆನಿಸುತ್ತಾನೆ. ವೈಶೇಷಿಕದಲ್ಲಿ ಇಷ್ಟು ಅಧಿಕವಾಗಿವೆ:-

**ಪ್ರಾಣಾಪಾನನಿಮೇಷೋನ್ಮೇಷಜೀವನಮನೋಗತೀಂದ್ರಿಯಾಂತರ್ವಿಕಾರಾಃ**
**ಸುಖ-ದುಃಖೇಚ್ಛಾದ್ವೇಷಪ್ರಯತ್ನಶ್ಚಾತ್ಮನೋ ಲಿಂಗಾನಿ ॥** (ವೈಶೇಷಿಕ:-೩.೨.೪)

(ಪ್ರಾಣ) ಒಳಗಿನಿಂದ ವಾಯುವನ್ನು ಹೊರಬಿಡುವುದು, (ಅಪಾನ) ಹೊರಗಿನಿಂದ ವಾಯುವನ್ನು ಒಳಕ್ಕೆ ತೆಗೆದುಕೊಳ್ಳುವುದು, (ನಿಮೇಷ) ರೆಪ್ಪೆ ಮುಚ್ಚುವುದು, (ಉನ್ಮೇಷ) ರೆಪ್ಪೆಯನ್ನು ತೆರೆಯುವುದು, (ಜೀವನ) ಪ್ರಾಣಾಧಾರಣ ಮಾಡುವುದು, (ಮನಃ) ಮನನ, ಆಲೋಚನೆ, ಜ್ಞಾನ, (ಗತಿ) ಬೇಕಾದ ಕಡೆ ಸಂಚರಿಸುವುದು, (ಇಂದ್ರಿಯ) ಇಂದ್ರಿಯಗಳನ್ನು

೨೮. ಪರಮಾತ್ಮ, ಜೀವಾತ್ಮ ಎರಡೂ ನಿತ್ಯ ಚೇತನ ತತ್ತ್ವಗಳು. ಈ ಎರಡು ಶಾಶ್ವತ ತತ್ತ್ವಗಳಿಗೂ ಅತೀತ-ಪ್ರಚಲಿತ-ಅನಾಗತ ಎಂಬ ಕಾಲ ಸಂಯೋಗವಿಲ್ಲ. ನಿತ್ಯವೇ ಆದರೂ, ಕಾರಣ-ಕಾರ್ಯ-ಎಂಬ ರೂಪಾಂತರ ಹೊಂದುವ, ಜಗದುಪಾದಾನ ಕಾರಣವಾದ ಪ್ರಕೃತಿಯ ಯೋಗದಿಂದಲೇ, 'ಕಾಲ' ಎಂಬ ಪದ ಬಳಕೆಗೆ ಬರುತ್ತದೆ. -ಅನು.

ವಿಷಯಗಳಲ್ಲಿ ಹರಿಬಿಡುವುದು, ಅವುಗಳಿಂದ ವಿಷಯಗಳನ್ನು ಗ್ರಹಿಸುವುದು, (ಅಂತರ್ವಿಕಾರ) ಹಸಿವು, ಬಾಯಾರಿಕೆ, ಜ್ವರ, ನೋವು ಮೊದಲಾದ ವಿಕಾರಗಳ ಆಗುವಿಕೆ, ಸುಖ, ದುಃಖ, ಇಚ್ಛಾ, ದ್ವೇಷ, ಮತ್ತು ಪ್ರಯತ್ನ - ಇವೆಲ್ಲವೂ ಆತ್ಮನ ಲಿಂಗಗಳು, ಎಂದರೆ - ಕರ್ಮಗಳು ಮತ್ತು ಗುಣಗಳಾಗಿವೆ.

**ಯುಗಪಜ್ಜ್ಞಾನಾನುತ್ಪತ್ತಿರ್ಮನಸೋ ಲಿಂಗಮ್ ॥** (ನ್ಯಾಯ :-೧. ೧. ೧೬ )

ಯಾವುದರಿಂದ ಒಂದೇ ಕಾಲದಲ್ಲಿ ಎರಡು ಪದಾರ್ಥಗಳ ಗ್ರಹಿಕೆ, ಜ್ಞಾನ ಉಂಟಾಗುವುದಿಲ್ಲವೋ, ಅದನ್ನು ಮನಸ್ಸು- ಎನ್ನುತ್ತಾರೆ.

ಹೀಗೆ ದ್ರವ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ಹೇಳಿದೆವು. ಈಗ ಗುಣಗಳನ್ನು ಹೇಳುತ್ತೇವೆ.

**ರೂಪರಸಗಂಧಸ್ಪರ್ಶಾಃ ಸಂಖ್ಯಾಪರಿಮಾಣಾನಿ ಪೃಥಕ್ತ್ವಂಸಂಯೋಗ -**

**ವಿಭಾಗೌ ಪರತ್ವಾಪರತ್ವೇ ಬುದ್ಧಯಃ ಸುಖದುಃಖೇಚ್ಛಾದ್ವೇಷೌ ಪ್ರಯತ್ನಾಶ್ಚ ಗುಣಾಃ ॥** (ವೈಶೇಷಿಕ :- ೧.೧.೬)

ರೂಪ, ರಸ, ಗಂಧ, ಸ್ಪರ್ಶ, ಸಂಖ್ಯೆ, ಪರಿಮಾಣ, ಪೃಥಕ್ತ್ವ, ಸಂಯೋಗ, ವಿಭಾಗ, ಪರತ್ವ, ಅಪರತ್ವ, ಬುದ್ಧಿ , ಸುಖ, ದುಃಖ, ಇಚ್ಛಾ, ದ್ವೇಷ, ಪ್ರಯತ್ನ, ಗುರುತ್ವ, ದ್ರವತ್ವ, ಸ್ನೇಹ, ಸಂಸ್ಕಾರ, ಧರ್ಮ, ಅಧರ್ಮ ಮತ್ತು ಶಬ್ದ - ಈ ಇಪ್ಪತ್ತುನಾಲ್ಕು ಗುಣಗಳಿರುತ್ತವೆ.[೨೯]

**ದ್ರವ್ಯಾಶ್ರಯ್ಯಗುಣವಾನ್ ಸಂಯೋಗವಿಭಾಗೇಷ್ವಕಾರಣಮನಪೇಕ್ಷ ಇತಿ ಗುಣಲಕ್ಷಣಮ್॥** (ವೈಶೇಷಿಕ:-೧.೨.೧೬)

ಯಾವುದು ದ್ರವ್ಯದ ಆಶ್ರಯದಲ್ಲಿರುತ್ತದೋ, ಬೇರೊಂದು ಗುಣವನ್ನು ಹೊಂದಿರುವುದಿಲ್ಲವೋ, ಸಂಯೋಗ-ವಿಭಾಗಗಳಿಗೆ ಕಾರಣವಾಗಿರುವುದಿಲ್ಲವೋ, ಅನಪೇಕ್ಷ-ಎಂದರೆ, ಪರಸ್ಪರ ಒಂದಕ್ಕೆ ಇನ್ನೊಂದರ ಅಪೇಕ್ಷೆಯಿರುವುದಿಲ್ಲವೋ, ಅದನ್ನು ಗುಣವೆನ್ನುತ್ತಾರೆ.

**ಶ್ರೋತ್ರೋಪಲಬ್ಧಿರ್ಬುದ್ಧಿ ನಿರ್ಗ್ರಾಹ್ಯಃ ಪ್ರಯೋಗೇಣಾಭಿಜ್ವಲಿತ ಆಕಾಶ ದೇಶಃ ಶಬ್ದಃ ॥** (ಮ. ಪ್ರ : ೧ -೨)

ಯಾವುದು ಶ್ರೋತ್ರಗಳಿಂದ ಪ್ರಾಪ್ತವಾಗುತ್ತದೋ, ಬುದ್ಧಿಯಿಂದ ಗ್ರಹಿಸಲು ಯೋಗ್ಯವಾಗಿರುತ್ತದೋ, ಪ್ರಯೋಗದಿಂದ ಪ್ರಕಾಶಿತವಾಗುತ್ತದೋ ಮತ್ತು ಯಾವುದರ ನೆಲೆ ಆಕಾಶವಾಗಿರುತ್ತದೋ, ಅದು ಶಬ್ದವೆನಿಸುತ್ತದೆ. ನೇತ್ರದಿಂದ ಯಾವುದು ಗ್ರಹಿಸಲ್ಪಡುತ್ತದೋ, ಅದು ರೂಪ, ನಾಲಿಗೆಯಿಂದ ಯಾವುದು - ಸಿಹಿ ಮೊದಲಾದ ಅನೇಕ ರೀತಿಯಲ್ಲಿ ಗ್ರಹಿಸಲ್ಪಡುತ್ತದೋ, ಅದು ರಸ, ಮೂಗಿನಿಂದ ಯಾವುದು ಗ್ರಾಹ್ಯವಾಗುತ್ತದೋ ಅದು ಗಂಧ ಚರ್ಮದಿಂದ ಯಾವುದು ಗ್ರಹಿಸಲ್ಪಡುತ್ತದೋ, ಅದು ಸ್ಪರ್ಶ, ಒಂದು, ಎರಡು ಮೊದಲಾಗಿ ಯಾವುದರಿಂದ ಗಣನೆಯಾಗುತ್ತದೋ ಅದು ಸಂಖ್ಯೆ, ಯಾವುದರಿಂದ ತೂಕ, ಎಂದರೆ ಹಗುರ, ಭಾರ- ಎಂಬುದು ತಿಳಿಯುತ್ತದೋ ಅದು ಪರಿಮಾಣ, ಪರಸ್ಪರ ಬೇರೆಯಾಗಿರುವುದು ಪೃಥಕ್ತ್ವ, ಪರಸ್ಪರ ಸೇರುವುದು ಸಂಯೋಗ, ಪರಸ್ಪರ ಕೂಡಿರುವುದರ ತುಂಡುಗಳಾಗುವುದು ವಿಭಾಗ, ಇದಕ್ಕಿಂತ ಇದು ಮುಂಚೆಯಿದೆ- ಎಂಬುದು ಪರ. ಅದಕ್ಕಿಂತ ಇದು ಆ ಮೇಲೆ ಇದೆ- ಎಂಬುದು ಅಪರ, ಯಾವುದರಿಂದ ಒಳ್ಳೆಯದರ-ಕೆಟ್ಟದರ ಜ್ಞಾನ ಲಭಿಸುತ್ತದೋ ಅದು ಬುದ್ಧಿ, ಆನಂದ ಎಂದರೆ (ಆತ್ಮಿಕ) ಸುಖ, ಕ್ಲೇಶ - ಎಂದರೆ ದುಃಖ, ಇಚ್ಛೆ- ಎಂದರೆ ರಾಗ, ದ್ವೇಷ-ಎಂದರೆ ವಿರೋಧ, (ಪ್ರಯತ್ನ) ಅನೇಕ ವಿಧದ ಬಲ - ಪುರುಷಾರ್ಥ, (ಗುರುತ್ವ) ತೂಕವಾಗಿರುವಿಕೆ, (ದ್ರವತ್ವ) ಕರಗುವುದು, (ಸ್ನೇಹ) ಪ್ರೀತಿ, ಜಿಡ್ಡು, (ಸಂಸ್ಕಾರ) ಬೇರೆಯವರ ಯೋಗದಿಂದ, ವಾಸನೆಯ ಉತ್ಪಾದನ, (ಧರ್ಮ) ನ್ಯಾಯಾಚರಣ ಹಾಗೂ ಕಠಿಣತ್ವ-ಮೊದಲಾದುವು, (ಅಧರ್ಮ) ಅನ್ಯಾಯಾಚರಣ ಮತ್ತು ಕಠಿಣತ್ವಕ್ಕೆ ವಿರುದ್ಧವಾದ ಕೋಮಲತ್ವ ಈ ೨೪ ಗುಣಗಳಿವೆ.

**ಉತ್‌ಕ್ಷೇಪಣಮದಕ್ಷೇಪಣಮಾಕುಂಚನಂ ಪ್ರಸಾರಣಂ ಗಮನಮಿತಿ ಕರ್ಮಾಣಿ ॥** (ವೈಶೇಷಿಕ : ೧.೧.೭)

---

೨೯. ಸ್ಪಷ್ಟವಾಗಿ ಹೇಳಿರುವುದು ಹದಿನೇಳು ಗುಣಗಳಾದರೂ, ಚಕಾರದಿಂದ, ಸಮನ್ವಯ ದೃಷ್ಟಿಯಿಟ್ಟು, ಇನ್ನೂ ಏಳನ್ನು ಗ್ರಹಿಸಲಾಗಿದೆ. –ಅನು

"ಉತ್ ಕ್ಷೇಪಣ" – ಮೇಲಕ್ಕೇರುವುದು, "ಅವಕ್ಷೇಪಣ" ಕೆಳಕ್ಕಿಳಿಯುವುದು, "ಆಕುಂಚನ" – ಸಂಕುಚಿತವಾಗುವುದು, "ಪ್ರಸಾರಣ"– ಹರಡುವುದು, "ಗಮನ" ಬರುವುದು–ಹೋಗುವುದು,ತಿರುಗಾಡುವುದು ಮೊದಲಾದುದು–ಇವುಗಳನ್ನು ಕರ್ಮಗಳೆನ್ನುತ್ತಾರೆ.[೩೦] ಈಗ ಕರ್ಮದ ಲಕ್ಷಣ:–

**ಏಕದ್ರವ್ಯಮಗುಣಂ ಸಂಯೋಗವಿಭಾಗೇಷ್ವನಪೇಕ್ಷಕಾರಣಮಿತಿ ಕರ್ಮಲಕ್ಷಣಮ್ ॥** (ವೈಶೇಷಿಕ:– ೧.೧.೧೭)

**"ಏಕದ್ರವ್ಯಮಾಶ್ರಯ ಆಧಾರೋ ಯಸ್ಯ ತದೇಕದ್ರವ್ಯಂ; ನ ವಿದ್ಯತೇಗುಣೋ ಯಸ್ಯ ಯಸ್ಮಿನ್ವಾ ತದಗುಣಂ, ಸಂಯೋಗೇಷು ವಿಭಾಗೇಷು ಚಾಪೇಕ್ಷಾರಹಿತಂ ಕಾರಣಂ ತತ್ಕರ್ಮ ಲಕ್ಷಣಂ"**. ಅಥವಾ **"ಯತ್ಕ್ರಿಯತೇ ತತ್ಕರ್ಮ". ಲಕ್ಷ್ಯತೇ ಯೇನ ತಲ್ಲಕ್ಷಣಂ. ಕರ್ಮಣೋ ಲಕ್ಷಣಂ ಕರ್ಮಲಕ್ಷಣಂ"** ಯಾವುದು ದ್ರವ್ಯದ ಆಶ್ರಯದಲ್ಲಿರುವುದೋ, ಗುಣಗಳಿಂದ ರಹಿತವಾಗಿರುವುದೋ, ಸಂಯೋಗ– ವಿಭಾಗಗಳ ಆಗುವಿಕೆಯಲ್ಲಿ ಅಪೇಕ್ಷಾರಹಿತ ಕಾರಣವಾಗಿರುವುದೋ, ಅದನ್ನು ಕರ್ಮವೆನ್ನುತ್ತಾರೆ.[೩೧]

**ದ್ರವ್ಯಗುಣಕರ್ಮಣಾಂ ದ್ರವ್ಯಂ ಕಾರಣಂ ಸಾಮಾನ್ಯಮ್ ॥** (ವೈಶೇಷಿಕ :– ೧.೧.೧೨)

ಯಾವುದು ಕಾರ್ಯದ್ರವ್ಯವಾಗಿದ್ದು, ಗುಣ ಮತ್ತು ಕರ್ಮದ ಕಾರಣ ದ್ರವ್ಯವಾಗಿರುತ್ತದೋ ಅದು ಸಾಮಾನ್ಯ ದ್ರವ್ಯವಾಗಿರುತ್ತದೆ.

**ದ್ರವ್ಯಾಣಾಂ ದ್ರವ್ಯಂ ಕಾರಣಂ ಸಾಮಾನ್ಯಮ್॥** (ವೈಶೇಷಿಕ:– ೧.೧.೨೩)

ಯಾವುದು ದ್ರವ್ಯಗಳ ಕಾರಣ ದ್ರವ್ಯವಾಗಿರುತ್ತದೋ, ಅದು ತನ್ನ ಕಾರ್ಯತ್ವದಿಂದ ಎಲ್ಲ ಕಾರ್ಯಗಳಲ್ಲಿಯೂ ಸಾಮಾನ್ಯವಾಗಿರುತ್ತದೆ.

**ದ್ರವ್ಯತ್ವಂ ಗುಣತ್ವಂ ಕರ್ಮತ್ವಂ ಚ ಸಾಮಾನ್ಯಾನಿ ವಿಶೇಷಾಶ್ಚ॥** (ವೈಶೇಷಿಕ:–೧.೨.೫)

ದ್ರವ್ಯಗಳಲ್ಲಿ ದ್ರವ್ಯತ್ವ, ಗುಣಗಳಲ್ಲಿ ಗುಣತ್ವ, ಕರ್ಮಗಳಲ್ಲಿ ಕರ್ಮತ್ವ – ಇವೆಲ್ಲಾ ಸಾಮಾನ್ಯ ಮತ್ತು ವಿಶೇಷ ಎನಿಸಿಕೊಳ್ಳುತ್ತವೆ. ಏಕೆಂದರೆ, ದ್ರವ್ಯಗಳಲ್ಲಿ ದ್ರವ್ಯತ್ವವು ಸಾಮಾನ್ಯ ಮತ್ತು ಗುಣತ್ವ – ಕರ್ಮತ್ವದ ದೃಷ್ಟಿಯಿಂದ ದ್ರವ್ಯತ್ವ ವಿಶೇಷವಾಗಿರುತ್ತದೆ. ಹೀಗೆಯೇ ಎಲ್ಲೆಡೆಯೂ ತಿಳಿದುಕೊಳ್ಳಬೇಕು.

**ಸಾಮಾನ್ಯಂ ವಿಶೇಷ ಇತಿ ಬುದ್ಧ್ಯ ಪೇಕ್ಷಮ್ ॥** (ವೈಶೇಷಿಕ :– ೧.೨.೩)

ಸಾಮಾನ್ಯ ಮತ್ತು ವಿಶೇಷ ಬುದ್ಧಿಯ ಅಪೇಕ್ಷೆಯಿಂದ ಸಿದ್ಧವಾಗುತ್ತದೆ. ಹೇಗೆಂದರೆ, ಮಾನವ ವ್ಯಕ್ತಿಗಳಲ್ಲಿ ಸಾಮಾನ್ಯ ಮತ್ತು ಪಶುತ್ವ– ಮೊದಲಾದುವುಗಳ ದೃಷ್ಟಿಯಿಂದ ವಿಶೇಷವಾಗಿರುತ್ತದೆ. ಮತ್ತು ಸ್ತ್ರೀತ್ವ ಹಾಗೂ ಪುರುಷತ್ವ– ಇವುಗಳಲ್ಲಿ ಬ್ರಾಹ್ಮಣತ್ವ, ಕ್ಷತ್ರಿಯತ್ವ, ವೈಶ್ಯತ್ವ, ಶೂದ್ರತ್ವಗಳೂ ಕೂಡ ವಿಶೇಷವಾಗಿರುತ್ತವೆ.[೩೨] ಬ್ರಾಹ್ಮಣ ವ್ಯಕ್ತಿಗಳಲ್ಲಿ ಬ್ರಾಹ್ಮಣತ್ವ ಸಾಮಾನ್ಯ ಮತ್ತು ಕ್ಷತ್ರಿಯತ್ವ– ಮೊದಲಾದುವುಗಳ ದೃಷ್ಟಿಯಿಂದ ವಿಶೇಷವಾಗಿರುತ್ತದೆ. ಇದೇ ರೀತಿ ಎಲ್ಲಡೆಯೂ ತಿಳಿಯಿರಿ.

**ಇಹೇದಮಿತಿ ಯತಃ ಕಾರ್ಯಕಾರಣಯೋಃ ಸ ಸಮವಾಯಃ ॥** (ವೈಶೇಷಿಕ:– ೭.೨.೨೬)

ದ್ರವ್ಯದಲ್ಲಿ ಕ್ರಿಯೆ, ಗುಣಯುಕ್ತನಲ್ಲಿ ಗುಣ, ವ್ಯಕ್ತಿಯಲ್ಲಿ ಜಾತಿ, ಅವಯವಗಳಲ್ಲಿ ಅವಯವೀ, ಕಾರ್ಯಗಳಲ್ಲಿ ಕಾರಣ – ಇವು ಹೇಗೋ, ಹಾಗೆಯೇ ಕ್ರಿಯಾ–ಕ್ರಿಯವಾನ್, ಗುಣ–ಗುಣೀ, ಜಾತಿ–ವ್ಯಕ್ತಿ, ಕಾರ್ಯ– ಕಾರಣ, ಅವಯವ – ಅವಯವೀ ಇವುಗಳ ನಿತ್ಯ ಸಂಬಂಧವಿರುವುದರಿಂದ ಸಮವಾಯವೆನಿಸುತ್ತವೆ. ಮತ್ತು ದ್ರವ್ಯಗಳ ಬೇರೆ ಬಗೆಯ ಪರಸ್ಪರ ಸಂಬಂಧವಾವುದಿದೆಯೋ, ಅದು ಸಂಯೋಗ, ಎಂದರೆ ಅನಿತ್ಯ ಸಂಬಂಧವಾಗಿರುತ್ತದೆ.

**ದ್ರವ್ಯಗುಣಯೋಃ ಸಜಾತೀಯಾರಂಭಕತ್ವಂ ಸಾಧರ್ಮ್ಯಮ್ ॥** (ವೈಶೇಷಿಕ:– ೧.೧.೯)

---

೩೦. ಉತ್ ಕ್ಷೇಪಣ–ಮೇಲಕ್ಕೇರುವುದು–ಏರಿಸುವುದು, ಅವಕ್ಷೇಪಣ–ಕೆಳಕ್ಕೆ ಬೀಳುವುದು–ಬೀಳಿಸುವುದು, ಆಕುಂಚನ– ಸ್ವತಃ ಸಂಕುಚಿತವಾಗುವುದು–ಸಂಕುಚಿತಗೊಳಿಸುವುದು. ಪ್ರಸಾರಣ–ಹರಡುವುದು–ಹರಡಿಸುವುದು, ಗಮನ– ಸ್ವತಃ ಚಲಿಸುವುದು–ಚಾಲನೆ ಮಾಡುವುದು– ಹೀಗೆ ಎರಡೆರಡು ಭಾವನೆ ಗ್ರಾಹ್ಯ; ಮತ್ತು ಆಧ್ಯಾತ್ಮಿಕ–ಭೌತಿಕ–ಉಭಯಾರ್ಥಗಳೂ ಗ್ರಾಹ್ಯ–ಅನು.

೩೧. ಈ ಕರ್ಮವೇ ಪಾಶ್ಚಾತ್ಯ ವಿಜ್ಞಾನಕ್ಕನುಸಾರವಾಗಿ 'ಎನರ್ಜಿ ಯ ರೂಪವನ್ನು ಧರಿಸುತ್ತದೆ. ಇದು ದ್ರವ್ಯದಿಂದ ಬೇರೆಯಾದ ಪದಾರ್ಥವಲ್ಲ. ಅದ್ದರಿಂದ, ಭವಿಷ್ಯತ್ಕಾಲದಲ್ಲಿ 'ಮ್ಯಾಟರ್' [ಮತ್ತು 'ಎನರ್ಜಿ' ಯ ಭೇದ ಅಳಿಸಿಹೋಗುತ್ತದೆ ಎಂದು ಐನ್ ಸ್ಟಾಯಿನ್ ಬರೆದಿದ್ದಾನೆ.] ಭಗವದ್ದತ್ತ

೩೨. ಸಾಮಾನ್ಯ, ವಿಶೇಷ ಎಂಬ, ವೈಶೇಷಿಕ ದರ್ಶನದ ಪಾರಿಭಾಷಿಕ ಶಬ್ದಗಳನ್ನು ಕನ್ನಡದಲ್ಲಿ ಬಳಕೆಯಲ್ಲಿರುವ ಸಾಧಾರಣ, ಆಧಿಕ– ಎಂಬ ಅರ್ಥದಲ್ಲಿ ಗ್ರಹಿಸಬಾರದು. ಸಾಮಾನ್ಯ– ಎಂದರೆ ಸರ್ವತ್ರ ವಿದ್ಯಮಾನ ಎಂದೂ, ವಿಶೇಷ– ಎಂದರೆ ವೈಶಿಷ್ಟ್ಯ ಎಂದೂ ತಿಳಿಯಬೇಕು– ಅನು.

ದ್ರವ್ಯ ಮತ್ತು ಗುಣದ ಯಾವ ಸಮಾನಜಾತೀಯ ಕಾರ್ಯಾರಂಭವಾಗುತ್ತದೋ, ಅದನ್ನು ಸಾಮರ್ಥ್ಯವೆನ್ನುತ್ತಾರೆ. ಉದಾಹರಣೆಗೆ, ಪೃಥಿವಿಯಲ್ಲಿ ಜಡತ್ವವೆಂಬ ಧರ್ಮವಿದೆ; ಮಡಿಕೆ ಮೊದಲಾದ ಕಾರ್ಯಗಳ ಉತ್ಪಾದಕತ್ವವೆಂಬ ಸ್ವಸದೃಶ (ತನ್ನಂತಹುದೇ ಗುಣಗಳ್ಳನ್ನುಳ್ಳ) ಧರ್ಮವೂ ಇದೆ. ಅದೇ ರೀತಿ ಜಲದಲ್ಲಿಯೂ ಜಡತ್ವವಿದೆ; ಹಿಮ ಮೊದಲಾದ ಸ್ವಸದೃಶ ಕಾರ್ಯದ ಆರಂಭಕತ್ವವೂ ಇದೆ. ಈ ದೃಷ್ಟಿಯಿಂದ, ಪೃಥಿವಿಯೊಂದಿಗೆ ಜಲದ ಮತ್ತು ಜಲದೊಂದಿಗೆ ಪೃಥಿವಿಯ ತುಲ್ಯಧರ್ಮವಿದೆ. ಅಂದರೆ **"ದ್ರವ್ಯ ಗುಣಯೋರ್ವಿಜಾತೀಯಾರಂಭಕತ್ವಂ ವೈಧರ್ಮ್ಯಂ"** – ಎಂಬುದು, ಎಂದರೆ ದ್ರವ್ಯ ಮತ್ತು ಗುಣದ ವಿರುದ್ಧ ಧರ್ಮವನ್ನು, ಮತ್ತು ಕಾರ್ಯದ ಆರಂಭವನ್ನು ವೈಧರ್ಮ್ಯವೆನ್ನುತ್ತಾರೆ– ಎಂಬುದು ವಿದಿತವಾಗಿದೆ. ಉದಾಹರಣೆಗೆ, ಪೃಥಿವಿಯಲ್ಲಿ ಕಠಿನತ್ವ, ಶುಷ್ಕತ್ವ ಮತ್ತು ಗಂಧವತ್ತ್ವ – ಎಂಬ ಧರ್ಮವು ಜಲಕ್ಕೆ ವಿರುದ್ಧವೂ, ಜಲದ ದ್ರವತ್ವ, ಕೋಮಲತ್ವ ಮತ್ತು ರಸಗುಣಯುಕ್ತತ್ವ ಪೃಥಿವಿಗೆ ವಿರುದ್ಧವೂ ಆಗಿವೆ.

**ಕಾರಣಭಾವಾತ್ ಕಾರ್ಯಭಾವ ಃ॥** (ವೈಶೇಷಿಕ :– ೪.೧.೩)

ಕಾರಣ ಇರುವಿಕೆಯಿಂದಲೇ ಕಾರ್ಯವು ಆಗುತ್ತದೆ.

**ನ ತು ಕಾರ್ಯಾಭಾವಾತ್ ಕಾರಣಾಭಾವ ಃ ॥** (ವೈಶೇಷಿಕ :– ೧.೨.೨)

ಕಾರ್ಯದ ಅಭಾವದಿಂದ ಕಾರಣದ ಅಭಾವ ಉಂಟಾಗುವುದಿಲ್ಲ.

**ಕಾರಣಾಭಾವಾತ್ ಕಾರ್ಯಭಾವ ಃ ॥** (ವೈಶೇಷಿಕ : – ೧.೨.೧)

ಕಾರಣ ಇಲ್ಲದಿರುವಿಕೆಯಿಂದ ಕಾರ್ಯ ಎಂದಿಗೂ ಆಗುವುದಿಲ್ಲ.

**ಕಾರಣಗುಣಪೂರ್ವಕಃ ಕಾರ್ಯಗುಣೋ ದೃಷ್ಟ ಃ ॥** (ವೈಶೇಷಿಕ :– ೨.೧.೨೪)

ಕಾರಣದಲ್ಲಿ ಎಂತಹ ಗುಣಗಳಿರುತ್ತವೋ, ಅಂತಹವೇ ಕಾರ್ಯದಲ್ಲಿ ಇರುತ್ತವೆ. ಪರಿಮಾಣವು ಎರಡು ವಿಧವಾಗಿರುತ್ತದೆ.

**ಅಣುಮಹದಿತಿ ತಸ್ಮಿನ್ ವಿಶೇಷಭಾವಾದ್ವಿಶೇಷಾಭಾವಾಚ್ಚ॥** (ವೈಶೇಷಿಕ : – ೭.೧.೧೧)

(ಅಣು) ಸೂಕ್ಷ್ಮ, (ಮಹತ್) ದೊಡ್ಡದು. ತ್ರಸರೇಣುವು ಲಿಕ್ಷೆಗಿಂತ ಚಿಕ್ಕದೂ, ಮತ್ತು ದ್ವ್ಯಣುಕಕ್ಕಿಂತ ದೊಡ್ಡದೂ ಆಗಿದೆ. ಪರ್ವತಗಳು ಪೃಥಿವಿಗಿಂತ ಚಿಕ್ಕವೂ ಮತ್ತು ವೃಕ್ಷಗಳಿಂತ ದೊಡ್ಡವೂ ಆಗಿವೆ ಎನ್ನುವಂತೆ.

**ಸದಿತಿ ಯತೋ ದ್ರವ್ಯಗುಣಕರ್ಮಸು ಸಾ ಸತ್ತಾ॥** (ವೈಶೇಷಿಕ :– ೧.೨.೭)

ದ್ರವ್ಯ, ಗುಣ ಮತ್ತು ಕರ್ಮಗಳಲ್ಲಿ **"ಸತ್ ದ್ರವ್ಯಂ ಸದ್ ಗುಣಃ, ಸತ್ಕರ್ಮ"** – ಎಂದರೆ, ಸದ್ದ್ರವ್ಯ, ಸದ್ಗುಣ, ಸತ್ಕರ್ಮ– ಎಂದು **'ಸತ್'** ಎಂಬ ಶಬ್ದವು ಅನ್ವಿತವಾಗಿರುತ್ತದೆ. ಅಂದರೆ ವರ್ತಮಾನಕಾಲವಾಚಕ ಶಬ್ದದ ಅನ್ವಯವು ಎಲ್ಲದರೊಂದಿಗೂ ಇರುತ್ತದೆ. (ಅದೇ **'ಸತ್ತಾ'** – ಇರುವಿಕೆಯ ಸೂಚಕ)

**ಭಾವೋನು ವೃತ್ತೇರೇವ ಹೇತುತ್ವಾತ್ಸಾಮಾನ್ಯಮೇವ ॥** (ವೈಶೇಷಿಕ:– ೧.೨.೪)

ಎಲ್ಲದರೊಂದಿಗೂ ಅನುವರ್ತಿಸುತ್ತಾ ಇರುವುದರಿಂದ 'ಸತ್ತಾ' ಎಂಬ ಭಾವ ಮಹಾ ಸಾಮಾನ್ಯವೆನಿಸುತ್ತದೆ. ಈ ಕ್ರಮವು ಭಾವರೂಪ ದ್ರವ್ಯಗಳದು.

ಮತ್ತು ಯಾವ ಆಭಾವವಿದೆಯೋ, ಅದು ಐದು ವಿಧವಾಗಿರುತ್ತದೆ:–

ಮೊದಲನೆಯದು – **ಕ್ರಿಯಾಗುಣವ್ಯಪದೇಶಾಭಾವಾತ್ ಪ್ರಾಗಸತ್ ॥** (ವೈಶೇಷಿಕ:– ೯.೧.೧)

ಕ್ರಿಯಾ ಮತ್ತು ಗುಣದ ವಿಶೇಷ ನಿಮಿತ್ತದ ಅಭಾವದಿಂದ, ಪ್ರಾಕ್ ಎಂದರೆ– ಪೂರ್ವದಲ್ಲಿ (ಅಸತ್) ಇರಲಿಲ್ಲ. ಉದಾಹರಣೆಗೆ–ಮಡಕೆ, ಬಟ್ಟೆ–ಮೊದಲಾದುವು (ತಮ್ಮ) ಉತ್ಪತ್ತಿಗೆ ಮೊದಲು ಇರಲಿಲ್ಲ. ಇದನ್ನು 'ಪ್ರಾಗಭಾವ' ಎಂದು ಹೆಸರಿಸುತ್ತಾರೆ.

ಎರಡನೆಯದು – **"ಸದಸತ್"** ॥ (ವೈಶೇಷಿಕ :– ೯.೧.೨)

ಯಾವುದು ಉತ್ಪನ್ನವಾಗಿ, ಇರದಂತಾಗುತ್ತದೋ, ಅದು ಪ್ರಧ್ವಂಸಾಭಾವವೆನಿಸುತ್ತದೆ. ಉದಾಹರಣೆಗೆ-ಘಟವು ಉತ್ಪನ್ನವಾಗಿ ನಾಶ ಹೊಂದುತ್ತದೆ.

ಮೂರನೆಯದು – **"ಸಚ್ಚಾಸತ್"** ॥ (ವೈಶೇಷಿಕ:-೯.೧.೪)

ಯಾವುದು ಇರುತ್ತದೋ ಮತ್ತು ಇಲ್ಲದಿರುತ್ತದೋ, ಅದು ಅನ್ಯೋನ್ಯಭಾವವೆನಿಸುತ್ತದೆ. ಉದಾಹರಣೆಗೆ- **"ಆಗೌರಶ್ವೋನಶ್ವೋ ಗೌಃ"** ಈ ಕುದುರೆ ಹಸುವಲ್ಲ; ಮತ್ತು ಹಸು ಕುದುರೆಯಲ್ಲ. ಎಂದರೆ- ಕುದುರೆಯಲ್ಲಿ ಹಸುವಿನ ಮತ್ತು ಹಸುವಿನಲ್ಲಿ ಕುದುರೆಯ ಅಭಾವವೂ, ಮತ್ತು ಹಸುವಿನಲ್ಲಿ ಹಸುವಿನ ಹಾಗೂ ಕುದುರೆಯಲ್ಲಿ ಕುದುರೆಯ ಭಾವವೂ ಇವೆ.

**ನಾಲ್ಕನೆಯದು – "ಯಚ್ಚಾನ್ಯದಸದತಸ್ತದಸತ್"** ॥ (ವೈಶೇಷಿಕ:-೨.೧.೫)

ಯಾವುದು ಪೂರ್ವೋಕ್ತವಾದ ಮೂರು ಅಭಾವಗಳಿಂದಲೂ ಬೇರೆಯಾಗಿದೆಯೋ, ಅದನ್ನು ಅತ್ಯಂತಾಭಾವವೆನ್ನುತ್ತಾರೆ. ಉದಾಹರಣೆಗೆ – **'ನರಶೃಂಗ'** – ಎಂದರೆ ಮನುಷ್ಯನ ಕೊಂಬು; **'ಖಪುಷ್ಪ'** – ಆಕಾಶದ ಹೂವು ಮತ್ತು **'ವಂಧ್ಯಾಪುತ್ರ'** – ಎಂದರೆ – ಬಂಜೆಯ ಮಗ ಮೊದಲಾದುವು.

ಐದನೆಯದು – **ನಾಸ್ತಿ ಘಟೋ ಗೇಹ ಇತಿ ಸತೋ ಘಟಸ್ಯ ಗೇಹಸಂಸರ್ಗಪ್ರತಿಷೇಧಃ** ॥ (ವೈಶೇಷಿಕ :- ೮.೧.೧೦)

ಮನೆಯಲ್ಲಿ ಮಡಕೆಯಿಲ್ಲ; ಎಂದರೆ ಬೇರೆಡೆಯಿದೆ, ಮನೆಯೊಂದಿಗೆ ಮಡಕೆಯ ಸಂಬಂಧವಿಲ್ಲ. (ಇದು ಸಂಬಂಧಾಭಾವ ಅಥವಾ ಸಂಸರ್ಗಭಾವ) ಇವು ಐದು ಅಭಾವಗಳೆನಿಸುತ್ತವೆ.

**ಇಂದ್ರಿಯದೋಷಾತ್ಸಂಸ್ಕಾರದೋಷಾಚ್ಚಾವಿದ್ಯಾ** ॥ (ವೈಶೇಷಿಕ :- ೯.೨.೧೦)

ಇಂದ್ರಿಯಗಳ ಮತ್ತು ಸಂಸ್ಕಾರದ ದೋಷದಿಂದ ಅವಿದ್ಯೆ ಉತ್ಪನ್ನವಾಗುತ್ತದೆ.

**ತದ್ದುಷ್ಟಜ್ಞಾನಮ್** ॥ (ವೈಶೇಷಿಕ:- ೯.೨.೧೧)

ಯಾವುದು ದುಷ್ಟವಾದ, ಎಂದರೆ ವಿಪರೀತವಾದ ಜ್ಞಾನವೋ, ಅದನ್ನು ಅವಿದ್ಯೆ ಎನ್ನುತ್ತಾರೆ.

**ಅದುಷ್ಟಂ ವಿದ್ಯಾ** ॥ (ವೈಶೇಷಿಕ:- ೯.೨.೧೨)

ಯಾವುದು ಅದುಷ್ಟವಾದ, ಎಂದರೆ ಯಥಾರ್ಥವಾದ ಜ್ಞಾನವೋ, ಅದನ್ನು ವಿದ್ಯೆ ಎನ್ನುತ್ತಾರೆ.

ಪೃಥಿವ್ಯಾದಿ ರೂಪರಸಗಂಧಸ್ಪರ್ಶಾ ದ್ರವ್ಯಾನಿತ್ಯಾತ್ವಾದನಿತ್ಯಾಶ್ಚ ॥

**ಏತೇನ ನಿತ್ಯೇಷು ನಿತ್ಯತ್ವಮುಕ್ತಮ್** ॥ (ವೈಶೇಷಿಕ :- ೭.೧.೨-೩)

ಯಾವ ಕಾರ್ಯರೂಪವಾದ ಪೃಥಿವೀ – ಮೊದಲಾದ ಪದಾರ್ಥಗಳೂ ಮತ್ತು ಅವುಗಳಲ್ಲಿ ರೂಪ, ರಸ, ಗಂಧ, ಸ್ಪರ್ಶ- ಎಂಬ ಗುಣಗಳೂ ಇವೆಯೋ, ಇವೆಲ್ಲವೂ, ದ್ರವ್ಯಗಳು ಅನಿತ್ಯವಾಗಿರುವುದರಿಂದ, ಅನಿತ್ಯವಾಗಿವೆ. ಮತ್ತು ಇದಕ್ಕೆ ಕಾರಣರೂಪವಾದ ಪೃಥಿವೀ – ಮೊದಲಾದ ನಿತ್ಯ ದ್ರವ್ಯಗಳಲ್ಲಿ ಗಂಧ – ಮೊದಲಾದ ಯಾವ ಗುಣಗಳಿವೆಯೋ ಅವು ನಿತ್ಯವಾದುವು.

**ಸದಾಕಾರಣವನ್ನಿತ್ಯಮ್** ॥ (ವೈಶೇಷಿಕ :- ೪.೧.೧)

ಯಾವುದು ಇದೆಯೋ ಮತ್ತು ಯಾವುದಕ್ಕೆ ಕಾರಣವಾವುದೂ ಇಲ್ಲವೋ, ಅದು ನಿತ್ಯ, ಎಂದರೆ – **'ಸತ್ಕಾರಣವದನಿತ್ಯಂ'** ಯಾವವು ಕಾರಣವನ್ನುಳ್ಳ ಕಾರ್ಯರೂಪವಾದ ಗುಣಗಳಿವೆಯೋ, ಅವು ಅನಿತ್ಯವೆನಿಸುತ್ತವೆ.

**ಅಸ್ಯೇದಂ ಕಾರ್ಯಂ ಕಾರಣಂ ಸಂಯೋಗಿ ವಿರೋಧಿ ಸಮವಾಯಿ ಚೇತಿ ಲೈಂಗಿಕಮ್** ॥ (ವೈಶೇಷಿಕ:- ೯.೨.೧)

ಇದು ಇದರ ಕಾರ್ಯ ಅಥವಾ ಕಾರಣ ಈ ಮೊದಲಾದ ಸಮವಾಯಿ, ಸಂಯೋಗಿ, ಏಕಾರ್ಥ ಸಮವಾಯಿ ಮತ್ತು ವಿರೋಧಿ- ಎಂಬ ಈ ನಾಲ್ಕು ಬಗೆಯ ಲೈಂಗಿಕ- ಎಂದರೆ ಲಿಂಗ-ಲಿಂಗೀ ಸಂಬಂಧದಿಂದ ಜ್ಞಾನ ಉಂಟಾಗುತ್ತದೆ, ಆಕಾಶವು ಪರಿಮಾಣಯುಕ್ತವಾದುದು-'ಸಮವಾಯಿ'; ಶರೀರವು ಚರ್ಮಯುಕ್ತವಾದುದು- ಇದು 'ಸಂಯೋಗಿ'; ಈ ಮೊದಲಾದುವುಗಳ

ಸಂಯೋಗವು ನಿತ್ಯ, "ಏಕಾರ್ಥ ಸಮವಾಯಿ" – ಕಾರ್ಯರೂಪವಾದ ಸ್ಪರ್ಶವು, ಕಾರ್ಯದ ಲಿಂಗ – ಎಂದರೆ ಜ್ಞಾತೃವಾಗಿದೆ – ಎನ್ನುವ ಹಾಗೆ ಒಂದು ಅರ್ಥದಲ್ಲಿ ಎರಡೂ ಇರುವುದು. "ವಿರೋಧಿ" – ಸುರಿದಿರುವ ಮಳೆ, ಸುರಿಯಲಿರುವ ಮಳೆಯ ವಿರೋಧಿ ಲಿಂಗವಾಗಿದೆ.

**"ವ್ಯಾಪ್ತಿಃ"** : –

**ನಿಯತಧರ್ಮಸಾಹಿತ್ಯಮುಭಯೋರೇಕತರಸ್ಯ ವಾ ವ್ಯಾಪ್ತಿಃ ॥**

**ನಿಜಶಕ್ತ್ಯುದ್ಭವಮಿತ್ಯಾಚಾರ್ಯಾಃ ।**

**ಆಧೇಯಶಕ್ತಿಯೋಗ ಇತಿ ಪಂಚಶಿಖಃ ॥** (ಸಾಂಖ್ಯ :– ೨.೨೯,೩೧,೩೨)

ಸಾಧ್ಯ–ಸಾಧನ – ಇವೆರಡರ, ಎಂದರೆ ಸಿದ್ಧಪಡಿಸಬೇಕಾಗಿರುವ ತತ್ತ್ವ ಮತ್ತು ಯಾವುದರಿಂದ ಸಿದ್ಧಪಡಿಸ ಬೇಕಾಗಿದೆಯೋ ಆ ಉಪಕರಣ – ಈ ಎರಡರ, ಅಥವಾ ಸಾಧನ ಮಾತ್ರದ ನಿಶ್ಚಿತ ಧರ್ಮದ ಸಹಚಾರವನ್ನೇ ವ್ಯಾಪ್ತಿ– ಎನ್ನುತ್ತಾರೆ. ಉದಾಹರಣೆಗೆ ಹೊಗೆ ಮತ್ತು ಬೆಂಕಿಯ ಸಹಚಾರವನ್ನು ಗಮನಿಸಬಹುದು. (೨೯).

ಮತ್ತು ವ್ಯಾಪ್ತವಾದ ಧೂಮ ತನ್ನ ಶಕ್ತಿಯಿಂದಲೇ ಉತ್ಪನ್ನವಾಗುತ್ತದೆ. ಎಂದರೆ, ಹೊಗೆಯು, ದೇಶಾಂತರಕ್ಕೆ, ದೂರಕ್ಕೆ ಹೋಗುತ್ತದೆ; ಆಗ ಅಗ್ನಿಯೋಗವಿಲ್ಲದಿದ್ದರೂ ಹೊಗೆ ಸ್ವತಃ ಇರುತ್ತದೆ. ಅದರ ಹೆಸರೇ ವ್ಯಾಪ್ತಿ. ಎಂದರೆ– ಅಗ್ನಿಯ ಛೇದನ–ಭೇದನ ಸಾಮರ್ಥ್ಯದಿಂದ ಜಲ ಮೊದಲಾದ ಪದಾರ್ಥ ಧೂಮ (ಆವಿ) ದ ರೂಪದಲ್ಲಿ ಪ್ರಕಟವಾಗುತ್ತದೆ. (೩೦)

ಮಹತ್ತ್ವ ಮೊದಲಾದುದರಲ್ಲಿ ಪ್ರಕೃತಿ – ಮೊದಲಾದುದರ ವ್ಯಾಪಕತ್ವ, ಬುದ್ಧಿ ಮೊದಲಾದ ವ್ಯಾಪ್ಯತ್ವ – ಎಂಬ ಧರ್ಮದ ಸಂಬಂಧದ ಹೆಸರು ವ್ಯಾಪ್ತಿ. ಉದಾಹರಣೆಗೆ– ಆಧೇಯರೂಪವಾದ ಶಕ್ತಿಯ ಮತ್ತು ಆಧಾರರೂಪನಾದ ಶಕ್ತಿವಂತನ ಸಂಬಂಧ (೩೧)

ಈ ಮೊದಲಾದ ಶಾಸ್ತ್ರಗಳ ಪ್ರಮಾಣ–ಮೊದಲಾದುದರ ಮೂಲಕ ಪರೀಕ್ಷೆಮಾಡಿ ಓದಬೇಕು; ಮತ್ತು ಓದಿಸಬೇಕು. ಹೀಗೆ ಮಾಡದಿದ್ದರೆ, ವಿದ್ಯಾರ್ಥಿಗಳಿಗೆ ಸತ್ಯದ ಜ್ಞಾನವು ಎಂದಿಗೂ ಆಗಲಾರದು. ಯಾವ ಯಾವ ಗ್ರಂಥಗಳನ್ನು ಓದಿಸಬೇಕೋ, ಆಯಾ ಗ್ರಂಥಗಳನ್ನು ಪೂರ್ವೋಕ್ತರೀತಿಯಲ್ಲಿ ಪರೀಕ್ಷಿಸಿ, ಯಾವುದು ಸತ್ಯವೆಂದು ಸ್ಥಿರವಾಗುವುದೋ, ಆಯಾ ಗ್ರಂಥವನ್ನೇ ಓದಿಸಬೇಕು.[೩೩] ಯಾವ ಯಾವವು ಈ ಪರೀಕ್ಷೆಗಳಿಗೆ ವಿರುದ್ಧವಾಗಿರುವವೋ ಆ ಗ್ರಂಥಗಳನ್ನು ಓದಿಸಬಾರದು. ಏಕೆಂದರೆ :–

**ಲಕ್ಷಣಪ್ರಮಾಣಾಭ್ಯಾಂ ವಸ್ತು ಸಿದ್ಧಿಃ ॥**[೩೪]

ಲಕ್ಷಣ–'ಗಂಧವತೀ ಪೃಥಿವೀ'– ಯಾವುದು ಪೃಥಿವಿಯೋ, ಅದು ಗಂಧಯುಕ್ತವಾಗಿದೆ– ಎನ್ನುವಂತೆ, ಈ ಬಗೆಯ ಲಕ್ಷಣಗಳಿಂದ ಮತ್ತು ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳು–ಇವುಗಳಿಂದ ಸಮಸ್ತ ಸತ್ಯ– ಅಸತ್ಯಗಳ ಮತ್ತು ಪದಾರ್ಥಗಳ ನಿರ್ಣಯವು ಆಗುತ್ತದೆ. ಇದರ ವಿನಹ, ಏನೂ ಆಗಲಾರದು.

## ಅಥಪಠನ ಪಾಠನವಿಧಿಃ

ಈಗ ಓದುವ – ಓದಿಸುವ ವಿಧಾನವನ್ನು ಬರೆಯುತ್ತೇವೆ. ಮೊದಲು ಪಾಣಿನಿಮುನಿರಚಿತ, ಸೂತ್ರರೂಪವಾದ ಶಿಕ್ಷಾ ಎಂಬ ಕೃತಿಯನ್ನು ಆರಂಭಿಸಬೇಕು. ಅದರ ಕ್ರಮವನ್ನು ವಿವರಿಸಬೇಕು, ಎಂದರೆ– ಈ ಅಕ್ಷರದ ಸ್ಥಾನವಿದು; ಪ್ರಯತ್ನವಿದು; ಕಾರಣವಿದು. ಉದಾಹರಣೆಗೆ, **'ಪ'** ಕಾರದ ಸ್ಥಾನ ಓಷ್ಠ; ಪ್ರಯತ್ನ – ಸ್ಪೃಷ್ಟ ಮತ್ತು ಪ್ರಾಣ ಹಾಗೂ ನಾಲಗೆಯ ಕ್ರಿಯೆಯನ್ನು ನಡೆಸುವುದೇ **'ಕಾರಣ'**ವೆನ್ನಿಸುತ್ತದೆ. ಇದೇ ರೀತಿ, ಯೋಗ್ಯವಾದ ರೀತಿಯಲ್ಲಿ ಸಮಸ್ತ ಅಕ್ಷರಗಳ ಉಚ್ಚಾರಣವನ್ನೂ ತಾಯಿ,

---

೩೩. ಆಯುರ್ವೇದಿಯ ಚರಕಸಂಹಿತಾ, ವಿಮಾನ ಸ್ಥಾನ ಅಧ್ಯಾಯ ೮ ರ ಆರಂಭದಲ್ಲಿ ಪಠನೀಯ ಶಾಸ್ತ್ರಗಳ ಪರೀಕ್ಷೆಯ ವರ್ಣನೆ ಇದೆ. ಗ್ರಂಥಕರ್ತರು–ಆರ್ಷಗ್ರಂಥಗಳನ್ನು ಏಕೆ ಓದಬೇಕು; ಅನಾರ್ಷಗ್ರಂಥಗಳನ್ನು ಏಕೆ ಓದಬಾರದು, ಎಂದು ಹೇಳಿರುವುದರ ರಹಸ್ಯ ಅಲ್ಲಿ ಪ್ರಕಟವಾಗಿದೆ. ಓದುಗರು ಅವಶ್ಯವಾಗಿ ಈ ಪ್ರಕರಣವನ್ನು ಓದಬೇಕು. –ಯು. ಮೀ.

೩೪. ನ್ಯಾಯದರ್ಶನ–ವಾತ್ಸಾಯನ ಭಾಷ್ಯ ೩.೧.೨೮. –ಸಂ

ತಂದೆ, ಆಚಾರ್ಯರು ಕಲಿಸಬೇಕು. ಆ ಮೇಲೆ ವ್ಯಾಕರಣ, ಎಂದರೆ, ಮೊದಲು, **"ವೃದ್ಧಿರಾದೈಚ್"** (೧.೧.೧) ಎಂಬ ಸೂತ್ರದಂತೆ, ಅಷ್ಟಾಧ್ಯಾಯಿಯ ಸೂತ್ರಗಳ ಪಾಠವನ್ನು ಕಲಿಸಬೇಕು. ಆ ಮೇಲೆ, "ವೃದ್ಧಿಃ, ಆತ್ ಐಚ್ ವಾ ಆದೈಚ್" – ಎಂಬ ಪದಚ್ಛೇದ. ಮತ್ತೆ " ಅಚ್ಚ ಐಚ್ಚ ಆದೈಚ್" – ಎಂಬ ಸಮಾಸ. ಮತ್ತು "ಆದೈಚಾಂ ವೃದ್ಧಿಸಂಜ್ಞಾಕ್ರಿಯತೇ" – ಎಂದರೆ, "ಆ, ಐ, ಔ, – ಇವುಗಳಿಗೆ ವೃದ್ಧಿ ಸಂಜ್ಞೆ ಮಾಡಲ್ಪಡುತ್ತದೆ " ಎಂದು ಅರ್ಥ ಹೇಳಬೇಕು. **"ತಃ ಪರೋ ಯಃ ಸ್ಯಾತ್ಸ ತಪರಸ್ತಾದಪಿ ಪರಸ್ತಪರಃ"** – "ಯಾವುದರ ಮುಂದೆ ತಕಾರವಿದೆಯೋ, ಮತ್ತು ಯಾವುದು ತಕಾರಕ್ಕಿಂತ ಮುಂದೆ ಇದೆಯೋ, ಅದು ತಪರ ವೆನ್ನಿಸುತ್ತದೆ. ಇದರಿಂದ ಸಿದ್ಧವಾದುದೇನು? ಅಕಾರದ ಮುಂದಿರುವ ತಕಾರವೂ, ಮತ್ತು ತಕಾರದ ಮುಂದಿರುವ 'ಐಚ್' – ಎರಡೂ ತಪರವೇ ಆಗಿವೆ. ತಪರದಿಂದಾದ ಪ್ರಯೋಜನವೇನೆಂದರೆ, ಹ್ರಸ್ವ ಮತ್ತು ಪ್ಲುತಗಳಿಗೆ 'ವೃದ್ಧಿ' ಎಂಬ ಸಂಜ್ಞೆಯುಂಟಾಗಲಿಲ್ಲ.

ಉದಾಹರಣೆಗೆ, (ಭಾಗಃ) ಎಂಬ ಶಬ್ದ, ಇಲ್ಲಿ 'ಭಜ'[೩೫] ಧಾತುವಿನಿಂದ 'ಘಞ್' ಪ್ರತ್ಯಯದ ಮುಂದೆ 'ಘಞ್'– ಇದಕ್ಕೆ 'ಇತ್' ಎಂಬ ಸಂಜ್ಞೆಯುಂಟಾಗಿ, ಲೋಪವಾಯಿತು,[೧] ಆ ಮೇಲೆ, 'ಭಜ್ ಅ' – ಎಂಬಲ್ಲಿ, ಜಕಾರಕ್ಕೆ ಪೂರ್ವದಲ್ಲಿರುವ, ಭಕಾರಕ್ಕೆ ಮುಂದಿರುವ ಅಕಾರಕ್ಕೆ ವೃದ್ಧಿ ಸಂಜ್ಞಕವಾದ ಆಕಾರ ಉಂಟಾಗಿದೆ.[೨] ಪುನಃ 'ಭಾಜ್'ನಲ್ಲಿನ ಜಕಾರಕ್ಕೆ ಪ್ರತಿಯಾಗಿ ಗಕಾರ ಬಂದಿತು.[೩] ಮತ್ತು 'ಅಕಾರ' ದೊಂದಿಗೆ ಸೇರಿ 'ಭಾಗಃ' ಎಂಬ ಪ್ರಯೋಗವಾಯಿತು.[೪]

**"ಅಧ್ಯಾಯಃ"** – ಇಲ್ಲಿ 'ಅಧಿಪೂರ್ವಕವಾದ 'ಇಙ್' ಧಾತುವಿನ, ಹ್ರಸ್ವ 'ಇ' ಗೆ ಪ್ರತಿಯಾಗಿ,[೫] 'ಘಞ್'[೬] ಪ್ರತ್ಯಯದ ಮುಂದೆ 'ಐ'[೭] ವೃದ್ಧಿಯಾಗಿ, ಮತ್ತು ಅದಕ್ಕೆ 'ಆಯ್' ಎಂಬ ರೂಪ ಲಭಿಸಿ, ಒಂದು ಸೇರಿ "ಅಧ್ಯಾಯಃ" ಎಂದಾಯಿತು.

**"ನಾಯಕಃ"** – ಇಲ್ಲಿ 'ನೀಞ್' ಧಾತುವಿನ ದೀರ್ಘ ಈ ಕಾರಕ್ಕೆ ಪ್ರತಿಯಾಗಿ 'ಣ್ವುತ್' ಪ್ರತ್ಯಯದ ಮುಂದೆ 'ಐ' ವೃದ್ಧಿಯಾಗಿ, ಅದಕ್ಕೆ 'ಆಯ್' ಎಂದಾಗಿ, ಒಟ್ಟು ಸೇರಿ 'ನಾಯಕಃ' ಎಂದಾಯಿತು. ಮತ್ತು 'ಸ್ತಾವಕಃ' ಎಂಬಲ್ಲಿ 'ಸ್ತು' ಧಾತುವಿನಿಂದ 'ಣ್ವುಲ್' ಪ್ರತ್ಯಯ ಉಂಟಾಗಿ, ಹ್ರಸ್ವ ಉ ಕಾರಕ್ಕೆ ಪ್ರತಿಯಾಗಿ 'ಔ' ವೃದ್ಧಿಯುಂಟಾಗಿ, 'ಆವ್' ಆದೇಶವಾಗಿ, ಆಕಾರದಲ್ಲಿ ಸೇರಿ ಹೋಯಿತು . ಹೀಗೆ 'ಸ್ತಾವಕಃ' ಎಂದಾಯಿತು.

'ಕೃಞ್' ಧಾತುವಿನ ಮುಂದೆ 'ಣ್ವುಲ್' ಪ್ರತ್ಯಯದ ಲ ಕಾರಕ್ಕೆ 'ಇತ್' ಸಂಜ್ಞೆಯುಂಟಾಗಿ ಲೋಪವಾಗಿ 'ವು'ವಿನ ಸ್ಥಾನದಲ್ಲಿ 'ಅಕ' ಆದೇಶವಾಗಿ ಮತ್ತು 'ಋಕಾರ' ಕ್ಕೆ ಪ್ರತಿಯಾಗಿ 'ಆರ್' ವೃದ್ಧಿಯಾಗಿ "ಕಾರಕಃ" ಎಂಬುದು ಸಿದ್ಧವಾಯಿತು.

ಯಾವ ಯಾವ ಸೂತ್ರಗಳು ಮುಂದಿನ – ಹಿಂದಿನ ಪ್ರಯೋಗದಲ್ಲಿ ಅನ್ವಿತವಾಗುತ್ತವೋ, ಅವುಗಳ ಕಾರ್ಯವೆಲ್ಲವನ್ನೂ ತೋರಿಸುತ್ತಾ ಹೋಗಬೇಕು ಮತ್ತು ಸ್ಲೇಟಿನ ಅಥವಾ ಮರದ ಹಲಗೆಯ ಮೇಲೆ ತೋರಿಸುತ್ತಾ–ತೋರಿಸುತ್ತಾ, 'ಭಜ್+ಘಞ್+ಸು' – ಈ ರೀತಿ ಅಪಕ್ವ  (ಅಸಂಸ್ಕೃತ?) ರೂಪವನ್ನು ಬರೆದು, ಮೊದಲು ಘ ಕಾರದ, ಆ ಮೇಲೆ 'ಞ್'ದ

---

೩೫. ಮೂಲ ಧಾತು 'ಭಜ' ಎಂದಿದೆ. ಅಕಾರದ ಲೋಪವಾಗಿ 'ಭಜ್' ಎಂದಾಗುತ್ತದೆ. –ಸಂ

೧. ಭಜ್+ಘಞ್ ಎಂದರೆ, ಭಜ್+ಘ್+ಅ+ಞ್

೨. ಭಜ್+ಅ; ಎಂದರೆ, ಭ್+ಅ+ಜ್+ಅ
–ಭ್+ಆ+ಜ್+ಅ = ಭಾಜ್+ಅ

೩. ಭಾಗ್ + ಅ = ಭಾಗ

೪. ಮುಂದೆ, ಆದೇಶ, ಲೋಪಗಳೊಂದಿಗೆ 'ಭಾಗ' ಎಂಬ ಪದವು ಕೆಳಗೆ ತೋರಿಸಿದಂತೆ, ಪ್ರಥಮಾ ವಿಭಕ್ತಿಯ ಏಕವಚನದಲ್ಲಿ 'ಭಾಗಃ' ಎಂದಾಗುತ್ತದೆ.
– ಭಾಗ + ಸು; ಅಂದರೆ, ಭಾಗ + ಸ್ + ಉ;  – ಭಾಗ – ಸ್;
– ಭಾಗ + ರು;, ಅಂದರೆ, ಭಾಗ + ರ್ + ಉ;
– ಭಾಗ + ರ್;  – ಭಾಗ + ಃ ; = ಭಾಗಃ – ಈ ಸಿದ್ಧಿಯನ್ನು ಮುಂದೆ ಗ್ರಂಥ ಕರ್ತರು ತೋರಿಸಿದ್ದಾರೆ.  –ಸಂ.

೫. ಅಧಿ + ಇಙ್;

೬. – ಅಧಿ+ಇಙ್ + ಘಞ್; ಅಂದರೆ, ಅಧಿ+ಇಙ್+ಘ್+ಅ+ಞ್ ;

೭. – ಅಧಿ + ಇ + ಅ;

೮. – ಅಧಿ + ಐ + ಅ;

೯. – ಅಧಿ + ಆಯ್ + ಅ; ಎಂದರೆ, ಅಧ್ + ಇ + ಆಯ್ + ಅ;

೧೦. – ಅಧ್ + ಯಾ + ಯ್ + ಅ = ಅಧ್ಯಾಯ.  –ಸಂ.

ಲೋಪವಾಗಿ, 'ಭಜ್+ಅ+ಸು' - ಎಂಬ ರೂಪ ಉಳಿಯಿತು. ಮತ್ತೆ 'ಅ'ಗೆ ಆ ಕಾರದ ವೃದ್ಧಿ ಮತ್ತು 'ಜ'ದ ಸ್ಥಾನದಲ್ಲಿ 'ಗ' ಬಂದುದರಿಂದ "ಭಾಗ್+ಅ+ಸು"- ಪುನಃ ಅಕಾರದಲ್ಲಿ (ಗಕಾರ) ಸೇರಿ ಹೋದುದರಿಂದ "ಭಾಗ+ಸು" ಉಳಿಯಿತು. ನಂತರ ಉ ಕಾರಕ್ಕೆ "ಇತ್ಸಂಜ್ಞೆ" ಬಂದು, 'ಸ'ದ ಸ್ಥಾನದಲ್ಲಿ "ರು" ಬಂದು, ಪುನಃ ಉ ಕಾರಕ್ಕೆ 'ಇತ್ಸಂಜ್ಞೆ'ಯುಂಟಾಗಿ ಲೋಪವಾದ ಮೇಲೆ, 'ಭಾಗರ್' ಎಂದುಳಿಯಿತು. ಆ ಮೇಲೆ, ರೇಫದ ಸ್ಥಾನದಲ್ಲಿ [ಃ] ವಿಸರ್ಜನೀಯ ಬಂದು "ಭಾಗಃ" ಎಂಬ ರೂಪ ಸಿದ್ಧವಾಯಿತು-ಎಂದು ವಿವರಿಸಬೇಕು.[೩೬]

ಯಾವ ಯಾವ ಸೂತ್ರದಿಂದ ಯಾವ ಯಾವ ಕಾರ್ಯವಾಗುತ್ತದೋ, ಆಯಾ (ಸೂತ್ರ)ವನ್ನು ಓದಿ-ಓದಿಸಿ, ಮತ್ತು ಬರೆಯಿಸುತ್ತಾ, ಕಾರ್ಯ ಮಾಡಿಸುತ್ತಾ ಹೋಗಬೇಕು. ಈ ರೀತಿ ಓದುವುದರಿಂದ - ಓದಿಸುವುದರಿಂದ ಬಹಳ ಬೇಗ ದೃಢವಾದ ಬೋಧ ಉಂಟಾಗುತ್ತದೆ. ಒಂದು ಸಾರಿ ಈ ರೀತಿ ಅಷ್ಟಾಧ್ಯಾಯಿಯನ್ನೋದಿಸಿ, ಅರ್ಥ ಸಹಿತ ಧಾತುಪಾಠವನ್ನೂ, ಹಾಗೂ ದಶ ಲಕಾರಗಳ ರೂಪಗಳನ್ನೂ ಮತ್ತು ಪ್ರಕ್ರಿಯೆಯೊಂದಿಗೆ ಸೂತ್ರಗಳ ಈ ಉತ್ಸರ್ಗವನ್ನೂ ಬೋಧಿಸಬೇಕು. ಎಂದರೆ, ಉದಾಹರಣೆಗೆ "ಕರ್ಮಣ್ಯಂ" ಎಂಬಲ್ಲಿ ಕರ್ಮ ಎಂಬ ಉಪಪದವಿದ್ದಲ್ಲಿ, ಧಾತು ಮಾತ್ರಕ್ಕೆ, "ಕುಂಭಕಾರಃ" - ಎಂಬಲ್ಲಿನಂತೆ 'ಅಣ್' ಪ್ರತ್ಯಯ ಬರುವುದು. ಆಮೇಲೆ "ಅತೋಽನುಪಸರ್ಗೇಗಃ " ಎಂಬಂತಹ ಅಪವಾದ ಸೂತ್ರಗಳನ್ನು, ಉಪಸರ್ಗದಿಂದ ಬೇರೆಯಾದ ಕರ್ಮ-ಉಪಪದವಿದ್ದಲ್ಲಿ ಆಕಾರಾಂತ ಧಾತುವಿನಿಂದ "ಕ" ಪ್ರತ್ಯಯವಾಗುವುದು; ಎಂದರೆ, ಕರ್ಮ-ಉಪಪದಂತಹ ಬಹುವ್ಯಾಪಕವಾದುದು ಇದ್ದಲ್ಲಿ, ಎಲ್ಲ ಧಾತುಗಳಿಗೂ "ಅಣ್" ಪ್ರಾಪ್ತವಾಗುವುದು. ಅದಕ್ಕಿಂತ ವಿಶೇಷವಾದ, ಎಂದರೆ ಅಲ್ಪ ವಿಷಯಕವಾದ, ಅದೇ ಪೂರ್ವಸೂತ್ರದ ವಿಷಯದಿಂದ ಆಕಾರಾಂತ ಧಾತುವನ್ನು 'ಕ' ಪ್ರತ್ಯಯವು ಗ್ರಹಿಸಿಕೊಂಡಿತು. ಹೇಗೆ ಉತ್ಸರ್ಗದ[೩೭] ವಿಷಯದಲ್ಲಿ ಅಪವಾದ[೩೮] ಸೂತ್ರ ಪ್ರವೃತ್ತವಾಗುವುದೋ, ಹಾಗೆ ಅಪವಾದಸೂತ್ರ ದ ವಿಷಯದಲ್ಲಿ ಉತ್ಸರ್ಗ ಸೂತ್ರ ಪ್ರವೃತ್ತವಾಗುವುದಿಲ್ಲ. ಚಕ್ರವರ್ತೀ ರಾಜನ ರಾಜ್ಯದಲ್ಲಿ ರಾಜರ ಮತ್ತು ಭೂಮಿದಾರರ ಪ್ರವೃತ್ತಿಯಾಗುವಂತೆ ಮಾಂಡಲಿಕ ರಾಜರೇ ಮೊದಲಾದವರ ರಾಜ್ಯದಲ್ಲಿ, ಚಕ್ರವರ್ತಿಯ ಪ್ರವೃತ್ತಿಯಾಗುವುದಿಲ್ಲ ಎನ್ನುವಂತೆ ಎಂದು ವಿವರವಾಗಿ ಬೋಧಿಸಬೇಕು.

ಇದೇ ರೀತಿ ಪಾಣಿನಿ ಮಹರ್ಷಿಯು ಸಹಸ್ರ ಶ್ಲೋಕಗಳಲ್ಲಿ[೩೯] (ಸಾಧಾರಣತಃ ಬಳಸ್ಪಡುವ ಅನುಷ್ಟುಪ್ ಛಂದಸ್ಸಿನ ಶ್ಲೋಕಗಳಲ್ಲಿ ೩೨ ಅಕ್ಷರಗಳಿರುತ್ತವೆ. ಗದ್ಯದಲ್ಲಿನ ೩೨-೩೨ ಅಕ್ಷರಗಳನ್ನೂ ಗಣನೆಗೆ ತೆಗೆದುಕೊಂಡು ಸಹಸ್ರ ಶ್ಲೋಕಗಳು) ಸಮಸ್ತ ಶಬ್ದ-ಅರ್ಥ-ಸಂಬಂಧಗಳ ವಿದ್ಯೆಯನ್ನು ಪ್ರತಿಪಾದಿಸಿದ್ದಾರೆ. ಧಾತು ಪಾಠದ ನಂತರ ಉಣಾದಿ ಗಣಗಳನ್ನು ಓದಿಸುವಲ್ಲಿ ಸಮಸ್ತ ಸುಬಂತಗಳ ವಿಷಯವನ್ನೂ ಚೆನ್ನಾಗಿ ಓದಿಸಿ, ಮತ್ತು ಎರಡನೆಯ ಸಾರಿ, ಶಂಕಾ, ಸಮಾಧಾನ, ವಾರ್ತಿಕ, ಕಾರಿಕಾ, ಪರಿಭಾಷಾ - ಇವೆಲ್ಲದರ ಪ್ರಯೋಗಪೂರ್ವಕವಾಗಿ ಅಷ್ಟಾಧ್ಯಾಯಿಯನ್ನು ಎರಡನೆಯ ಸಾರಿ ಓದಿಸಬೇಕು. ಆ ಮೇಲೆ ಮಹಾಭಾಷ್ಯವನ್ನೋದಿಸಬೇಕು. ತಾತ್ಪರ್ಯವೇನೆಂದರೆ - ಬುದ್ಧಿವಂತರೂ, ಪುರುಷಾರ್ಥಿಗಳೂ, ನಿಷ್ಕಪಟರೂ, ವಿದ್ಯಾವೃದ್ಧಿಯ ಅಭಿಲಾಷಿಗಳೂ ಆದವರು ನಿತ್ಯವೂ ಓದಿದರೆ ಮತ್ತು ಓದಿಸಿದರೆ, ಒಂದೂವರೆ ವರ್ಷದಲ್ಲಿ ಅಷ್ಟಾಧ್ಯಾಯಿಯನ್ನೂ, ಮತ್ತೆ ಒಂದೂವರೆ ವರ್ಷಗಳಲ್ಲಿ ವರ್ಷದಲ್ಲಿ ಮಹಾಭಾಷ್ಯವನ್ನೂ ಓದಿ, ಮೂರು ವರ್ಷದಲ್ಲಿ ಪೂರ್ಣವೈಯಾಕರಣರಾಗಿ ವೈದಿಕ ಮತ್ತು ಲೌಕಿಕ ಶಬ್ದಗಳ ಬೋಧವನ್ನು ವ್ಯಾಕರಣದಿಂದ ಗಳಿಸಿಕೊಂಡು, ಮತ್ತೆ ಬೇರೆ ಶಾಸ್ತ್ರಗಳನ್ನು, ಶೀಘ್ರವಾಗಿ, ಸಹಜವಾಗಿ ಓದಲೂ - ಓದಿಸಲೂ ಶಕ್ತರಾಗುತ್ತಾರೆ.

ಆದರೆ ವ್ಯಾಕರಣದಲ್ಲಿ ಎಷ್ಟು ಮಹತ್ಪರಿಶ್ರಮವನ್ನು ಮಾಡಬೇಕಾಗುತ್ತದೋ, ಅಷ್ಟನ್ನು ಅನ್ಯ ಶಾಸ್ತ್ರಗಳಲ್ಲಿ ಮಾಡಬೇಕಾಗುವುದಿಲ್ಲ. ಮತ್ತು ಇವುಗಳನ್ನು ಓದುವುದರಿಂದ ಮೂರು ವರ್ಷಗಳಲ್ಲಿ ಎಷ್ಟು ಜ್ಞಾನ ಉಂಟಾಗುವುದೋ, ಅಷ್ಟು ಜ್ಞಾನವು ಸಾರಸ್ವತ ಚಂದ್ರಿಕಾ, ಕೌಮುದೀ, ಮನೋರಮಾ - ಮೊದಲಾದ ಕುಗ್ರಂಥಗಳನ್ನೋದುವುದರಿಂದ ೫೦

---

೩೬. ಈ ಕ್ರಮದಲ್ಲಿ ಸಂಸ್ಕೃತಾಧ್ಯಯನ ಮಾಡಲಿಚ್ಛಿಸುವವರು ರಾಮಲಾಲ್ ಕಪೂರ್ ಟ್ರಸ್ಟ್ ಬಹಾಲ್ ಗಡ್[ ಸೋನಿಪತ್] ಅವರಿಂದ ಪ್ರಕಾಶಿತವಾದ ಮತ್ತು ಪಂ.ಬ್ರಹ್ಮದತ್ತ ಜಿಜ್ಞಾಸುಗಳಿಂದ ರಚಿತವಾದ 'ಸಂಸ್ಕೃತ ಪಠನ-ಪಾಠನ ಕೀ ಸರಲತಮವಿಧಿ' ಎಂಬ ಪುಸ್ತಕವನ್ನು ಓದಬೇಕು.

೩೭. ಉತ್ಸರ್ಗ ಸೂತ್ರಗಳೆಂದರೆ, ಅತಿ ವ್ಯಾಪಕವಾದ ಸೂತ್ರಗಳು. -ಅನು

೩೮. ಅಪವಾದ ಸೂತ್ರಗಳೆಂದರೆ, ಅಲ್ಪ ವ್ಯಾಪಕವಾದ ಸೂತ್ರಗಳು. - ಎಂಬ ಶಬ್ಧಗಳು 'ಸಾಮಾನ್ಯ ಮತ್ತು ವಿಶೇಷ' ಎಂಬ ಶಬ್ಧಗಳು ಇವೆರಡರ ಸ್ವರೂಪವನ್ನು ಸೂಚಿಸುತ್ತವೆ. -ಅನು

೩೯. ಸಾಧಾರಣತಃ ಬಳಸಲ್ಪಡುವ ಅನುಷ್ಟಪ್ ಛಂದಸ್ಸಿನ ಶ್ಲೋಕಗಳಲ್ಲಿ ೩೨ ಅಕ್ಷರಗಳಿರುತ್ತವೆ. ಗದ್ಯದಲ್ಲಿನ ೩೨-೩೨ ಅಕ್ಷರಗಳನ್ನು ಗಣನಗೆ ತೆಗೆದುಕೊಂಡರೆ, ಸಹಸ್ರಶ್ಲೋಕಗಳು. -ಅನು

ವರ್ಷಗಳಲ್ಲಿಯೂ ಆಗಲಾರದು. ಏಕೆಂದರೆ, ಮಹಾಶಯರಾದ ಮಹರ್ಷಿ ಜನರು ಸಹಜತ್ವದೊಂದಿಗೆ ಎಂತಹ ಮಹಾನ್ ವಿಷಯವನ್ನು ತಮ್ಮ ಗ್ರಂಥಗಳಲ್ಲಿ ಪ್ರಕಾಶಿಸಿದ್ದಾರೋ, ಅಂತಹುದು ಈ ಕ್ಷುದ್ರಾಶಯರಾದ ಮಾನವರ ಕಲ್ಪಿತ ಗ್ರಂಥಗಳಲ್ಲಿ ಇರಬಲ್ಲುದಾದರೂ ಹೇಗೆ? ಮಹರ್ಷಿ ಜನರ ಆಶಯವು, ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೂ ಸುಗಮವಾಗಿರಬೇಕು; ಮತ್ತು ಅದರ ಪ್ರಾಪ್ತಿಯಲ್ಲಿ ಕಾಲವೂ ಸ್ವಲ್ಪವಾಗಿಯೇ ಪ್ರಯುಕ್ತವಾಗ ಬೇಕು – ಎಂಬುದೇ ಆಗಿರುತ್ತದೆ; ಮತ್ತು ಕ್ಷುದ್ರಾಶಯರ ಕಾಮನೆ, ಎಷ್ಟರ ಮಟ್ಟಿಗೆ ಸಾಧ್ಯವೋ, ಅಷ್ಟರ ಮಟ್ಟಿಗೂ ಕಠಿಣವಾದ ರಚನೆ ಮಾಡಬೇಕು; ಅದನ್ನು ಅತಿ ಪರಿಶ್ರಮದಿಂದ ಓದಿ ಅಲ್ಪ ಲಾಭ ಹೊಂದಬೇಕು – ಎಂಬುದೇ ಆಗಿರುತ್ತದೆ. ಪರ್ವತವನ್ನಗೆದು ಕವಡೆಯ ಲಾಭ ಪಡೆದ ಹಾಗೆ ಅದರ ವಿಷಯ, ಮತ್ತು ಆರ್ಷ ಗ್ರಂಥಗಳ ಪಠನ, ಒಂದು ಮುಳುಗು ಹಾಕಿ ಅತಿಮೂಲ್ಯವಾದ ಮುತ್ತುಗಳನ್ನು ಪಡೆಯುವಂತೆ ಇರುತ್ತದೆ.

ವ್ಯಾಕರಣದಿಂದ ಓದಿ, ಯಾಸ್ಕಮುನಿಕೃತ ನಿಘಂಟು ಮತ್ತು ನಿರುಕ್ತವನ್ನು ಆರು ಅಥವಾ ಎಂಟು ತಿಂಗಳಲ್ಲಿ ಅರ್ಥಸಹಿತವಾಗಿ ಓದಬೇಕು; ಓದಿಸಬೇಕು. ನಾಸ್ತಿಕ ಕೃತವಾದ ಅಮರಕೋಶ ಮೊದಲಾದ ಬೇರೆಯವುಗಳಲ್ಲಿ ಅನೇಕ ವರ್ಷಗಳನ್ನು ವ್ಯರ್ಥವಾಗಿ ಕಳೆಯಬಾರದು. ಅ ಮೇಲೆ ಪಿಂಗಾಲಾಚಾರ್ಯ ಕೃತವಾದ ಛಂದೋಗ್ರಂಥದಿಂದ ವೈದಿಕ–ಲೌಕಿಕ ಛಂದಸ್ಸುಗಳ ಪರಿಜ್ಞಾನವನ್ನೂ, ನವೀನ ರಚನೆ ಮಾಡುವುದನ್ನೂ ಮತ್ತು ಶ್ಲೋಕ ರಚಿಸುವ ರೀತಿಯನ್ನೂ ಯಥಾವತ್ತಾಗಿ ಕಲಿಯಬೇಕು. ಈ ಗ್ರಂಥವನ್ನು ಮತ್ತು ಶ್ಲೋಕ ರಚನೆ ಹಾಗೂ ಪ್ರಸ್ತಾರವನ್ನು ನಾಲ್ಕು ತಿಂಗಳಲ್ಲಿ ಕಲಿಯಲೂ, ಓದಲೂ–ಓದಿಸಲೂಬಹುದು. ಮತ್ತು ವೃತ್ತರತ್ನಾಕರ– ಮೊದಲಾದ ಅಲ್ಪಬುದ್ಧಿಗಳಿಂದ ಪ್ರಕಲ್ಪಿತವಾದ ಗ್ರಂಥಗಳಲ್ಲಿ ಅನೇಕ ವರ್ಷಗಳನ್ನು ಕಳೆಯಬಾರದು. ಆನಂತರ ಮನುಸ್ಮೃತಿ, ವಾಲ್ಮೀಕೀಯ ರಾಮಾಯಣ ಮತ್ತು ಮಹಾಭಾರತದ ಉದ್ಯೋಗ ಪರ್ವದಲ್ಲಿರುವ ವಿದುರನೀತಿ–ಮೊದಲಾದ, ಯಾವವುಗಳಿಂದ ದುಷ್ಟ ವ್ಯಸನಗಳು ದೂರವಾಗುತ್ತವೋ ಮತ್ತು ಉತ್ತಮತ್ವ–ಸಭ್ಯತೆಗಳು ಪ್ರಾಪ್ತವಾಗುವುವೋ, ಅಂತಹ ಪ್ರಕರಣಗಳನ್ನು ಕಾವ್ಯ ರೀತಿಯಿಂದ, ಎಂದರೆ ಪದಚ್ಛೇದ ಪದಾರ್ಥೋಕ್ತಿ, ಅನ್ವಯ, ವಿಶೇಷ್ಯ–ವಿಶೇಷಣಗಳು ಮತ್ತು ಭಾವಾರ್ಥವನ್ನು ಅಧ್ಯಾಪಕರುಗಳು ತಿಳಿಸಿಕೊಡಬೇಕು ಮತ್ತು ವಿದ್ಯಾರ್ಥಿಗಳು ತಿಳಿದುಕೊಳ್ಳುತ್ತಾ ಹೋಗಬೇಕು. ಇದನ್ನು ಒಂದು ವರ್ಷದ ಒಳಗೇ ಓದಿಕೊಳ್ಳಬೇಕು.

ಅದರ ನಂತರ ಪೂರ್ವಮೀಮಾಂಸಾ, ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ ಮತ್ತು ವೇದಾಂತ ಈ ಆರು ಶಾಸ್ತ್ರಗಳನ್ನು ಎಲ್ಲಿಯವರೆಗೆ ಸಾಧ್ಯವೋ, ಅಲ್ಲಿಯವರೆಗೆ ಋಷಿಕೃತ ವ್ಯಾಖ್ಯಾನಗಳೊಂದಿಗೆ ಅಥವಾ ಉತ್ತಮ ವಿದ್ವಾಂಸರ ಸರಳ ವ್ಯಾಖ್ಯೆಗಳೊಂದಿಗೆ, ಓದಬೇಕು–ಓದಿಸಬೇಕು. ಆದರೆ, ವೇದಾಂತಸೂತ್ರಗಳನ್ನು ಓದುವ ಮುನ್ನ **ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ** ಮತ್ತು **ಬೃಹದಾರಣ್ಯಕ** – ಈ ಹತ್ತು ಉಪನಿಷತ್ತುಗಳನ್ನು ಓದಿ, ಭಾಷ್ಯವೃತ್ತಿಸಹಿತವಾದ ಆರು ಶಾಸ್ತ್ರಗಳ ಸೂತ್ರಗಳನ್ನು ಎರಡು ವರ್ಷಗಳೊಳಗೆ ಓದಿಸಬೇಕು ಮತ್ತು ಓದಿ ಮುಗಿಸಬೇಕು, ಅಮೇಲೆ, ಆರುವರ್ಷಗಳೊಳಗೆ ನಾಲ್ಕು ಬ್ರಾಹ್ಮಣಗಳನ್ನೂ, ಎಂದರೆ ಐತರೇಯ, ಶತಪಥ, ಸಾಮ ಮತ್ತು ಗೋಪಥ ಬ್ರಾಹ್ಮಣಗಳೊಂದಿಗೆ ನಾಲ್ಕು ವೇದಗಳನ್ನೂ ಸ್ವರ, ಶಬ್ದ, ಅರ್ಥ, ಸಂಬಂಧ ಮತ್ತು ಕ್ರಿಯೆಗಳ[೪೦] ಸಹಿತ ಓದುವುದು ಯೋಗ್ಯವಾಗಿದೆ. ಇದಕ್ಕೆ ಪ್ರಮಾಣ:–

**ಸ್ಥಾಣುರಯಂ ಭಾರಹಾರಃ ಕಿಲಾಭೂದಧೀತ್ಯ ವೇದಂ ನ ವಿಜಾನಾತಿ ಯೋಽರ್ಥಮ್ ।**

**ಯೋಽರ್ಥಜ್ಞ ಇತ್ಸಕಲಂ ಭದ್ರಮಶ್ನುತೇ ನಾಕಮೇತಿ ಜ್ಞಾನವಿಧೂತಪಾಪ್ಮಾ ॥** (ನಿರುಕ್ತ :– ೧.೧೮)

ಇದು ನಿರುಕ್ತದಲ್ಲಿರುವ ಮಂತ್ರ. ಯಾವನು ವೇದವನ್ನು ಸ್ವರ ಮತ್ತು ಪಾಠ ಮಾತ್ರ ಓದಿ, ಅರ್ಥವನ್ನು ತಿಳಿಯನೋ, ಅವನು ಕೊಂಬೆಗಳು, ಎಲೆಗಳು, ಹಣ್ಣುಗಳು ಮತ್ತು ಹೂವುಗಳ ಭಾರ ಹೊರುವ ವೃಕ್ಷದಂತೆ ಮತ್ತು ಧಾನ್ಯ ಮೊದಲಾದುವುಗಳ ಭಾರ ಹೊರುವ ಇತರ ಪಶುವಿನಂತೆ, ಭಾರವಾಹಕ, ಎಂದರೆ ಭಾರವನ್ನು ಹೊರುವವನಾಗಿರುತ್ತಾನೆ. ಮತ್ತು ಯಾವನು ವೇದವನ್ನು

---

೪೦. ಸಂಭವತಃ ಇಲ್ಲಿ **'ಕ್ರಿಯಾಸಹಿತ'** ಎಂದರೆ, ಯಾಜ್ಞಿಕ ಕರ್ಮಗಳನ್ನು ಪದೇಶಿಸುವ ಕಲ್ಪಸೂತ್ರಗಳ ಅಧ್ಯಯನ ಎಂದು ಅಭಿಪ್ರಾಯವಿರಬೇಕು. – ಯು.ಮೀ.

ಓದುತ್ತಾನೋ ಮತ್ತು ಯಥಾವತ್ತಾಗಿ ಅವುಗಳ ಅರ್ಥವನ್ನು ತಿಳಿಯುತ್ತಾನೋ, ಅವನೇ ಸಂಪೂರ್ಣ ಆನಂದವನ್ನು ಗಳಿಸಿ, ಜ್ಞಾನದಿಂದ ಪಾಪಗಳನ್ನು ಬಿಟ್ಟು, ಪವಿತ್ರವಾದ ಧರ್ಮಾಚರಣದ ಪ್ರತಾಪದಿಂದ ದೇಹಾಂತವಾದ ಮೇಲೆ ಸರ್ವಾನಂದವನ್ನು ಪಡೆದುಕೊಳ್ಳುತ್ತಾನೆ.

**ಉತ ತ್ವಃ ಪಶ್ಯನ್ನ ದದರ್ಶವಾಚಮುತ ತ್ವಃ ಶೃಣ್ವನ್ನ ಶೃಣೋತ್ಯೇನಾಮ್ ।**

**ಉತೋ ತ್ವಸ್ಮೈ ತನ್ವಂ ವಿಸಸ್ರೇ ಜಾಯೇವ ಪತ್ಯ ಉಶತೀ ಸುವಾಸಾಃ ॥** (ಋಗ್ವೇದ:- ೧೦.೭೧.೪)

ಯಾರು ಅವಿದ್ವಾಂಸರಾಗಿರುತ್ತಾರೋ, ಅವರು ಆಲಿಸುತ್ತಿದ್ದರೂ ಆಲಿಸುವುದಿಲ್ಲ; ನೋಡುತ್ತಿದ್ದರೂ ನೋಡುವುದಿಲ್ಲ; ಮಾತನಾಡುತ್ತಿದ್ದರೂ ಮಾತನಾಡುವುದಿಲ್ಲ. ಎಂದರೆ, ಅವಿದ್ವಾಂಸರಾದ ಜನರು ಈ ವಿದ್ಯಾವಾಣಿಯ ರಹಸ್ಯವನ್ನು ತಿಳಿದುಕೊಳ್ಳಲಾರರು. ಆದರೆ, ಯಾವನು ಶಬ್ದ, ಅರ್ಥ ಮತ್ತು ಸಂಬಂಧ ತಿಳಿದವನಾಗಿದ್ದಾನೋ, ಅವನಿಗೆ ವಿದ್ಯೆಯು, ಹೇಗೆ ಸುಂದರ ವಸ್ತ್ರಾಭೂಷಣಗಳನ್ನು ಧರಿಸಿರುವ, ತನ್ನ ಪತಿಯನ್ನು ಬಯಸುವ ನಾರಿಯು ತನ್ನ ಶರೀರದ ಮತ್ತು ಸ್ವರೂಪದ ಪ್ರಕಾಶನವನ್ನು ತನ್ನ ಪತಿಯ ಮುಂದೆ ಮಾಡುತ್ತಾಳೋ, ಹಾಗೆ ವಿದ್ವಾಂಸನಿಗಾಗಿ ತನ್ನ ಸ್ವರೂಪದ ಪ್ರಕಾಶನವನ್ನು ಮಾಡುತ್ತದೆ; ಅವಿದ್ವಾಂಸರಿಗಾಗಿ ಅಲ್ಲ.

**ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ದೇವಾ ಅಧಿವಿಶ್ವೇನಿ ಷೇದುಃ ।**

**ಯಸ್ತನ್ನ ವೇದಕಿಮೃಚಾ ಕರಿಷ್ಯತಿಯ ಇತ್ತದ್ವಿದುಸ್ತ ಇಮೇ ಸಮಾಸತೇ ॥** (ಋಗ್ವೇದ:-೧.೧೬೪.೩೯)

ಯಾವ ವ್ಯಾಪಕನೂ, ಅವಿನಾಶಿಯೂ, ಸರ್ವೋತ್ಕೃಷ್ಟನೂ ಆದ ಪರಮೇಶ್ವರನಲ್ಲಿ ಎಲ್ಲ ವಿದ್ವಾಂಸರೂ, ಮತ್ತು ಪೃಥಿವೀ, ಸೂರ್ಯ ಮೊದಲಾದ ಸರ್ವ ಲೋಕಗಳೂ ಸ್ಥಿತವಾಗಿವೆಯೋ, ಯಾವನಲ್ಲಿ ಸಮಸ್ತ ವೇದಗಳ ಮುಖ್ಯ ತಾತ್ಪರ್ಯವಿದೆಯೋ, ಆ ಬ್ರಹ್ಮನನ್ನು ಯಾವನು ತಿಳಿಯನೋ, ಅವನು ಋಗ್ವೇದ - ಮೊದಲಾದುದರಿಂದ ಏನಾದರೂ ಸುಖವನ್ನು ಗಳಿಸಬಲ್ಲನೇನು? ಇಲ್ಲ, ಇಲ್ಲ; ಆದರೆ, ಯಾರು ವೇದಗಳನ್ನೋದಿ, ಧರ್ಮಾತ್ಮರೂ, ಯೋಗಿಗಳು ಆಗಿ, ಆ ಬ್ರಹ್ಮನನ್ನು ತಿಳಿಯುತ್ತಾರೋ, ಅವರೆಲ್ಲರೂ ಪರಮೇಶ್ವರನಲ್ಲಿ ಸ್ಥಿತರಾಗಿ ಮುಕ್ತಿರೂಪದ ಪರಮಾನಂದವನ್ನು ಪಡೆಯುತ್ತಾರೆ. ಆದುದರಿಂದ, ಏನೇನು ಓದಬೇಕೋ, ಅದನ್ನು ಅರ್ಥಜ್ಞಾನ ಸಹಿತವಾಗಿಯೇ ಮಾಡಬೇಕು.

ಈ ರೀತಿ ಎಲ್ಲ ವೇದಗಳನ್ನೂ ಓದಿ, ಆಯುರ್ವೇದ - ಎಂದರೆ, ಚರಕ, ಸುಶ್ರುತ ಮೊದಲಾದ ಋಷಿ-ಮುನಿ-ಪ್ರಣೀತವಾದ ವೈದ್ಯಕ ಶಾಸ್ತ್ರವನ್ನು, ಅರ್ಥ, ಕ್ರಿಯೆ, ಶಸ್ತ್ರ, ಛೇದನ, ಭೇದನ, ಲೇಪಾ, ಚಿಕಿತ್ಸಾ, ನಿದಾನ, ಓಷಧ, ಪಥ್ಯ, ಶರೀರ, ದೇಶ, ಕಾಲ ಮತ್ತು ವಸ್ತುವಿನ ಗುಣಜ್ಞಾನ ಪೂರ್ವಕವಾಗಿ ನಾಲ್ಕು ವರ್ಷಗಳಲ್ಲಿ ಓದಬೇಕು - ಓದಿಸಬೇಕು. ಆ ಮೇಲೆ ಧನುರ್ವೇದ - ಎಂದರೆ ರಾಜ - ಸಂಬದ್ಧ ಕಾರ್ಯದ ಶಾಸ್ತ್ರ. ಇದರಲ್ಲಿ ಸ್ವತಃ ರಾಜಪುರುಷರಿಗೆ ಸಂಬಂಧಪಟ್ಟುದು ಮತ್ತು ಪ್ರಜೆಗಳಿಗೆ ಸಂಬಂಧಪಟ್ಟುದು - ಎಂದು ಎರಡು ಭೇದಗಳಿವೆ. ರಾಜಕಾರ್ಯದಲ್ಲಿ ಸಭೆ, ಸೇನಾಧ್ಯಕ್ಷ, ಶಸ್ತ್ರಾಸ್ತ್ರವಿದ್ಯೆ, ನಾನಾ ಬಗೆಯ ವ್ಯೂಹಗಳ ಅಭ್ಯಾಸ (ಈಗದನ್ನು 'ಕವಾಯತ್ತು' ಎನ್ನುತ್ತಾರೆ; ಶತ್ರುಗಳೊಂದಿಗೆ ಹೋರಾಡುವ ಕಾಲದಲ್ಲಿ ಈ ಕ್ರಿಯೆಯನ್ನು ಬಳಸಬೇಕಾಗುತ್ತದೆ.) ಇದನ್ನು ಯಥಾವತ್ತಾಗಿ ಕಲಿಯಬೇಕು. ಮತ್ತು ಪ್ರಜೆಗಳ ಪಾಲನ ಮತ್ತು ವೃದ್ಧಿಯನ್ನು ಸಾಧಿಸುವ ಯಾವ ಯಾವ ಕ್ರಮಗಳಿವೆಯೋ, ಅವನ್ನೂ ಕಲಿತು, ನ್ಯಾಯಪೂರ್ವಕವಾಗಿ ಪ್ರಜೆಗಳನ್ನೆಲ್ಲಾ ಪ್ರಸನ್ನರನ್ನಾಗಿ ಇಡಬೇಕು; ದುಷ್ಟರಿಗೆ ಸಲ್ಲಬೇಕಾದ ಶಿಕ್ಷೆಯ ಮತ್ತು ಶ್ರೇಷ್ಠರನ್ನು ಪಾಲಿಸುವ ವಿಧಾನವನ್ನು ಸರ್ವ ರೀತಿಯಿಂದಲೂ ಕಲಿಯಬೇಕು.

ಈ ರಾಜವಿದ್ಯೆಯನ್ನು ಎರಡೆರಡು ವರ್ಷಗಳಲ್ಲಿ ಕಲಿತು, ಯಾವುದನ್ನು ಗಾನ ವಿದ್ಯೆ - ಎನ್ನುತ್ತಾರೋ, ಆ ಗಾಂಧರ್ವವೇದದಲ್ಲಿ ಸ್ವರ, ರಾಗ, ರಾಗಿಣಿ, ಸಮಯ, ತಾಳ, ಗ್ರಾಮ, ತಾನ, ವಾದಿತ್ರ, ನೃತ್ಯ, ಗೀತ ಮೊದಲಾದುವನ್ನು ಯಥಾವತ್ತಾಗಿ ಕಲಿಯಬೇಕು; ಆದರೆ, ಮುಖ್ಯವಾಗಿ ವಾದ್ಯ - ವಾದನದೊಂದಿಗೆ ಸಾಮವೇದದ ಗಾನವನ್ನು ಕಲಿಯಬೇಕು.

ಮತ್ತು ನಾರದ ಸಂಹಿತೆ – ಮೊದಲಾದ ಯಾವ ಯಾವ ಆರ್ಷ ಗ್ರಂಥಗಳಿವೆಯೋ, ಅವನ್ನು ಓದಬೇಕು. ಆದರೆ, ಅನೈತಿಕ ವ್ಯಾಪಾರಿಗಳು, ವಾರಾಂಗನೆಯರು ಮತ್ತು ವಿಷಯಾಸಕ್ತಿಯನ್ನು ಉದ್ರೇಕಿಸುವ ವೈರಾಗಿಗಳು[೪೧] ಮಾಡುವಂತಹ, ಕತ್ತೆಯ ಕಿರುಚಾಟದಂತಿರುವ ವ್ಯರ್ಥವಾದ ಆಲಾಪನೆಯನ್ನು ಎಂದಿಗೂ ಮಾಡಬಾರದು.

ಯಾವುದನ್ನು ಶಿಲ್ಪ ವಿದ್ಯೆ – ಎನ್ನುತ್ತಾರೋ, ಈ ಅರ್ಥವೇದವನ್ನು ಪದಾರ್ಥ ಗುಣ ವಿಜ್ಞಾನ, ಕ್ರಿಯಾಕೌಶಲ, ವಿವಿಧ ವಸ್ತು ನಿರ್ಮಾಣ, ಪೃಥಿವಿಯಿಂದ ಹಿಡಿದು ಆಕಾಶದವರೆಗಿನ ವಿದ್ಯೆಯನ್ನು ಯಥಾವತ್ತಾಗಿ ಕಲಿತು, ಎಂದರೆ – ಯಾವುದು ಐಶ್ವರ್ಯವರ್ಧಕವಾಗಿದೆಯೋ, ಆ ವಿದ್ಯೆಯನ್ನು ಯಥಾವತ್ತಾಗಿ ಕಲಿತು, ಎಂದರೆ – ಯಾವುದರಲ್ಲಿ ಬೀಜ ಗಣಿತ, ಅಂಕ, ಭೂಗೋಳ, ಖಗೋಳ ಮತ್ತು ಭೂಗರ್ಭ ವಿದ್ಯೆಯಿದೆಯೋ ಆ ಸೂರ್ಯ ಸಿದ್ಧಾಂತ – ಮೊದಲಾದ ಜ್ಯೋತಿಷ ಶಾಸ್ತ್ರವನ್ನು ಯಥಾವತ್ತಾಗಿ ಕಲಿಯಬೇಕು. ಆನಂತರ ಎಲ್ಲ ಬಗೆಯ ಹಸ್ತ – ಕ್ರಿಯೆ, ಯಂತ್ರಕಲೆ ಮೊದಲಾದುವನ್ನು ಕಲಿಯಬೇಕು. ಆದರೆ – ಗ್ರಹಗಳು, ನಕ್ಷತ್ರಗಳು, ಜನ್ಮಪತ್ರಗಳು, ರಾಶಿಗಳು, ಮುಹೂರ್ತಗಳು – ಮೊದಲಾದುವುಗಳ ಫಲವನ್ನು ವಿಧಾನ ಮಾಡುವ ಎಷ್ಟು ಗ್ರಂಥಗಳಿವೆಯೋ, ಅವನ್ನು, ಅಸತ್ಯವೆಂದು ತಿಳಿದು, ಎಂದಿಗೂ ಓದಬಾರದು ಮತ್ತು ಓದಿಸಬಾರದು. ಇಪ್ಪತ್ತು ಅಥವಾ ಇಪ್ಪತ್ತೊಂದು[೪೨] ವರ್ಷಗಳಲ್ಲಿ ಸಮಸ್ತ ವಿದ್ಯೆಯನ್ನೂ, ಉತ್ತಮ ಶಿಕ್ಷಣವನ್ನೂ ಪಡೆದು, ಮಾನವರು ಕೃತಕೃತ್ಯರಾಗಿ, ಸದಾ ಆನಂದದಲ್ಲಿರುವಂತೆ, ಓದುವವರೂ ಮತ್ತು ಓದಿಸುವವರೂ ಪ್ರಯತ್ನಮಾಡಬೇಕು. ಈ ರೀತಿಯಲ್ಲಿ ಇಪ್ಪತ್ತು ಅಥವಾ ಇಪ್ಪತ್ತೊಂದು ವರ್ಷಗಳಲ್ಲಿ ಎಷ್ಟು ವಿದ್ಯೆ ಲಭಿಸಬಲ್ಲದೋ, ಅಷ್ಟು, ಬೇರೆಯ ರೀತಿಯಲ್ಲಿ ನೂರು ವರ್ಷಗಳಲ್ಲಿಯೂ ಲಭಿಸಲಾರದು.

ಋಷಿ – ಪ್ರಣೀತ ಗ್ರಂಥಗಳನ್ನು ಏತಕ್ಕೆ ಓದಬೇಕೆಂದರೆ, ಅವರು ಮಹಾ ವಿದ್ವಾಂಸರೂ, ಸರ್ವಶಾಸ್ತ್ರಜ್ಞರೂ ಮತ್ತು ಧರ್ಮಾತ್ಮರೂ ಆಗಿದ್ದರು. ಮತ್ತು ಅನೃಷಿಗಳು, ಎಂದರೆ – ಯಾರು ಅಲ್ಪ ಶಾಸ್ತ್ರಗಳನ್ನು ಓದಿದವರಾಗಿದ್ದರೋ, ಮತ್ತು ಯಾರ ಆತ್ಮ ಪಕ್ಷಪಾತಯುಕ್ತವಾಗಿದೆಯೋ, ಅವರು ರಚಿಸಿದ ಗ್ರಂಥಗಳೂ ಹಾಗೆಯೇ ಇವೆ.

ಜೈಮಿನಿಮುನಿಕೃತ ಪೂರ್ವಮೀಮಾಂಸೆಯ ಮೇಲೆ ವ್ಯಾಸಮುನಿಕೃತವಾದ ವ್ಯಾಖ್ಯೆ, ಕಣಾದರ ವೈಶೇಷಿಕದ ಮೇಲೆ ಗೌತಮಮುನಿಕೃತವಾದುದು, ಗೌತಮರ ನ್ಯಾಯ ಸೂತ್ರದ ಮೇಲೆ ವಾತ್ಸ್ಯಾಯನ ಮುನಿಕೃತವಾದ ಭಾಷ್ಯ,ಪತಂಜಲಿಮುನಿಕೃತ ಯೋಗಸೂತ್ರದ ಮೇಲೆ ವ್ಯಾಸಮುನಿಕೃತವಾದ ಭಾಷ್ಯ, ಕಪಿಲಮುನಿಕೃತ ಸಾಂಖ್ಯಸೂತ್ರದ ಮೇಲೆ ಭಾಗುರಿಮುನಿಕೃತವಾದ ಭಾಷ್ಯ ಅಥವಾ ಬೋಧಾಯನಮುನಿಕೃತ ಭಾಷ್ಯ–ಇವುಗಳನ್ನು ವೃತ್ತಿ ಸಹಿತವಾಗಿ ಓದಬೇಕು, ಓದಿಸಬೇಕು. ಈ ಮೇಲೆ ಹೇಳಿದ ಸೂತ್ರಗಳನ್ನು ಕಲ್ಪಾಂಗದಲ್ಲಿಯೂ ಎಣಿಸಬೇಕು. ಹೇಗೆ ಋಕ್, ಯಜುಃ, ಸಾಮ ಮತ್ತು ಅಥರ್ವ – ಈ ನಾಲ್ಕು ವೇದಗಳೂ ಈಶ್ವರಕೃತವಾಗಿವೆಯೋ, ಹಾಗೆ ಐತರೇಯ, ಶತಪಥ, ಸಾಮ ಮತ್ತು ಗೋಪಥ – ಈ ನಾಲ್ಕು ಬ್ರಾಹ್ಮಣಗಳೂ, ಶಿಕ್ಷಾ, ಕಲ್ಪ, ವ್ಯಾಕರಣ, ನಿಘಂಟು – ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷ – ಈ ಆರು ವೇದಾಂಗಗಳೂ, ಮೀಮಾಂಸಾ[೪೩] ಮೊದಲಾದ ಆರು ಶಾಸ್ತ್ರಗಳು ವೇದಗಳ ಉಪಾಂಗಗಳೂ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥವೇದ – ಈ ನಾಲ್ಕು ವೇದಗಳ ಉಪವೇದಗಳೂ – ಈ ಎಲ್ಲವೂ ಋಷಿ – ಮುನಿಕೃತವಾದ ಗ್ರಂಥಗಳಾಗಿವೆ. ಇವುಗಳಲ್ಲಿಯೂ ಯಾವ ಯಾವವು ವೇದ ವಿರುದ್ಧವೆಂದು ಪ್ರತೀತವಾಗುತ್ತವೋ, ಅವುಗಳನ್ನು ಬಿಟ್ಟುಬಿಡಬೇಕು. ಏಕೆಂದರೆ – ವೇದಗಳು ಈಶ್ವರ ಕೃತವಾಗಿರುವುದರಿಂದ ನಿರ್ಭ್ರಾಂತವಾಗಿವೆ; ಸ್ವತಃ ಪ್ರಮಾಣ – ಎಂದರೆ, ವೇದಗಳ ಪ್ರಮಾಣ ವೇದಗಳಿಂದಲೇ ಆಗುತ್ತದೆ. ಬ್ರಾಹ್ಮಣಗಳು – ಮೊದಲಾದ ಗ್ರಂಥಗಳೆಲ್ಲವೂ ಪರತಃ ಪ್ರಮಾಣಗಳು – ಎಂದರೆ ಇವುಗಳ ಪ್ರಾಮಾಣ್ಯ ವೇದಾಧೀನವಾಗಿದೆ. ವೇದದ ವಿಶೇಷವಾದ ವ್ಯಾಖ್ಯಾನವನ್ನು ಋಗ್ವೇದಾದಿ ಭಾಷ್ಯ ಭೂಮಿಕೆ[೪೪]ಯಲ್ಲಿ ನೋಡಿಕೊಳ್ಳಿರಿ. ಮತ್ತು ಈ ಗ್ರಂಥದಲ್ಲಿಯೂ ಮುಂದೆ ಬರೆಯುವೆವು.

ಈಗ ಪರಿತ್ಯಾಗಾರ್ಹವಾದ ಯಾವ ಗ್ರಂಥಗಳಿವೆಯೋ, ಅವುಗಳ ಪರಿಗಣನವು ಸಂಕ್ಷೇಪವಾಗಿ ಮಾಡಲ್ಪಡುತ್ತದೆ.

---

೪೧. ಎಂದರೆ, ವಿಕೃತ ರಾಗವುಳ್ಳವರು, ರಾಗಶಾಸ್ತ್ರಕ್ಕೆ ವಿರೋಧಿಗಳು. ಉದಾಹರಣೆಗೆ ಸಿನಿಮಾ ಸಂಗೀತ, ಅಧುನಿಕ 'ಪಾಪ್' ಸಂಗೀತ[?] ಇತ್ಯಾದಿ. –ಸಂ.

೪೨. ಇಲ್ಲಿ ವರ್ಷಗಳ ಗಣನೆ ಸ್ವಲ್ಪ ತಪ್ಪಿದಂತಿದೆ. ಒಟ್ಟು ಸೇರಿಸಿದರೆ ಮೂವತ್ತೊಂದು ವರ್ಷವಾಗುವುದು. –ಯು.ಮೀ.

೪೩. ಪೂರ್ವ ಮೀಮಾಂಸಾ, ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ, ಮತ್ತು ವೇದಾಂತ–ಇವೇ ವೇದೋಪಾಂಗಳೆಂದು ಖ್ಯಾತವಾದ ಆರು ಶಾಸ್ತ್ರಗಳು; ಷಡ್ದರ್ಶನಗಳು. –ಅನು

೪೪. ಈ ಗ್ರಂಥವನ್ನು ಸಂಸ್ಕೃತ ಮತ್ತು ಹಿಂದೀ ಭಾಷೆಗಳಲ್ಲಿ ಮಹರ್ಷಿ ದಯಾನಂದರೇ ರಚಿಸಿದ್ದಾರೆ.

ಎಂದರೆ– ಕೆಳಗೆ ಯಾವ ಯಾವ ಗ್ರಂಥಗಳನ್ನು ಸೂಚಿಸುತ್ತೇವೋ, ಅವೆಲ್ಲವನ್ನೂ ಜಾಲಗ್ರಂಥಗಳೆಂದು ತಿಳಿಯಬೇಕು. **ವ್ಯಾಕರಣದಲ್ಲಿ** ಕಾತಂತ್ರ, ಸಾರಸ್ವತ, ಚಂದ್ರಿಕಾ, ಮುಗ್ಧಬೋಧ, ಕೌಮುದೀ, ಶೇಖರ, ಮನೋರಮಾ– ಮೊದಲಾದುವು. **ಕೋಶದಲ್ಲಿ** ಅಮರಕೋಶ – ಮೊದಲಾದುವು. **ಛಂದೋಗ್ರಂಥದಲ್ಲಿ** ವೃತ್ತರತ್ನಾಕರ – ಮೊದಲಾದುವು. **'ಶಿಕ್ಷಾ'**ದಲ್ಲಿ **"ಅಥಂ ಶಿಕ್ಷಾಂ ಪ್ರವಕ್ಷ್ಯಾ ಮಿ ಪಾಣಿನೀಯಂ ಮತಂ ಯಥಾ"** – ಈ ಮೊದಲಾದುದು. **ಜ್ಯೋತಿಷದಲ್ಲಿ** ಶೀಘ್ರಬೋಧ, ಮುಹೂರ್ತ ಚಿಂತಾಮಣಿ – ಮೊದಲಾದುವು. **ಕಾವ್ಯದಲ್ಲಿ** ನಾಯಿಕಾಭೇದ, ಕುವಲಯಾನಂದ, ರಘುವಂಶ, ಮಾಘ, ಕಿರಾತಾರ್ಜುನೀಯ – ಮೊದಲಾದುವು. **ಮೀಮಾಂಸಾದಲ್ಲಿ** ಧರ್ಮ ಸಿಂಧು, ವ್ರತಾರ್ಕ ಮೊದಲಾದುವು. **ವೈಶೇಷಿಕದಲ್ಲಿ** ತರ್ಕಸಂಗ್ರಹ– ಮೊದಲಾದುವು. **ನ್ಯಾಯದಲ್ಲಿ** ಜಾಗದೀಶೀ – ಮೊದಲಾದುದು. **ಯೋಗದಲ್ಲಿ** ಹಠಪ್ರದೀಪಿಕಾ – ಮೊದಲಾದದು. **ಸಾಂಖ್ಯದಲ್ಲಿ** ಸಾಂಖ್ಯತತ್ತ್ವ ಕೌಮುದೀ ಮೊದಲಾದುದು. **ವೇದಾಂತದಲ್ಲಿ** ಯೋಗವಾಸಿಷ್ಠ, ಪಂಚದಶೀ ಮೊದಲಾದವು. **ವೈದ್ಯಕದಲ್ಲಿ** ಶಾರ್ಙ್ಗಧರ – ಮೊದಲಾದವು. **ಸ್ಮೃತಿಗಳಲ್ಲಿ** ಮನುಸ್ಮೃತಿಯ ಪ್ರಕ್ಷಿಪ್ತ ಶ್ಲೋಕಗಳು, ಮತ್ತು ಬೇರೆ ಎಲ್ಲಾ ಸ್ಮೃತಿಗಳು, ಸಮಸ್ತ ತಂತ್ರ ಗ್ರಂಥಗಳು, ಸಮಸ್ತ ಪುರಾಣಗಳು, ಸಮಸ್ತ ಉಪಪುರಾಣಗಳು, ತುಲಸೀದಾಸ ರಚಿತವಾದ ಭಾಷಾ ರಾಮಾಯಣ,[೪೫] ರುಕ್ಮಿಣೀ ಮಂಗಳ – ಮೊದಲಾದುವು ಗಳು ಸಕಲ ಭಾಷಾ ಗ್ರಂಥಗಳು. ಈ ಎಲ್ಲವೂ ಕಪೋಲಕಲ್ಪಿತವಾದ ಮಿಥ್ಯಾಗ್ರಂಥಗಳು.

**ಪ್ರಶ್ನೆ:** – ಈ ಗ್ರಂಥಗಳಲ್ಲಿ ಸ್ವಲ್ಪವೂ ಸತ್ಯವಿಲ್ಲವೇ?

**ಉತ್ತರ:** – ಸ್ವಲ್ಪ ಸತ್ಯವೇನೋ ಇದೆ; ಆದರೆ, ಇದರೊಂದಿಗೆ ಬಹಳ ಅಸತ್ಯವೂ ಇದೆ. ಆದುದರಿಂದ, **" ವಿಷಸಂಪೃಕ್ತಾನ್ನವತ್ ತ್ಯಾಜ್ಯಾಃ"**, ಹೇಗೆ ಅತ್ಯುತ್ತಮವಾದ ಅನ್ನವು ವಿಷಯುಕ್ತವಾಗಿದ್ದರೆ ತ್ಯಜಿಸಲು ಯೋಗ್ಯವಾಗಿರುತ್ತದೋ, ಹಾಗೆ ಈ ಸಮಸ್ತ ಗ್ರಂಥಗಳೂ ತ್ಯಾಜ್ಯವಾಗಿವೆ.

**ಪ್ರಶ್ನೆ:** – ತಾವು ಪುರಾಣ – ಇತಿಹಾಸಗಳನ್ನು ಅಂಗೀಕರಿಸುವುದಿಲ್ಲವೇ?

**ಉತ್ತರ:** – ಅಹುದು; ಅಂಗೀಕರಿಸುತ್ತೇವೆ . ಆದರೆ–ಸತ್ಯವನ್ನು ಅಂಗೀಕರಿಸುತ್ತೇವೆ; ಮಿಥ್ಯೆಯನ್ನಲ್ಲ.

**ಪ್ರಶ್ನೆ:** – ಯಾವುದು ಸತ್ಯ ಮತ್ತು ಯಾವುದು ಮಿಥ್ಯೆ?

**ಉತ್ತರ:** – **"ಬ್ರಾಹ್ಮಣಾನೀತಿಹಾಸಾನ್ ಪುರಾಣಾನಿ ಕಲ್ಪಾನ್ ಗಾಥಾ ನಾರಾಶಂ ಸೀರಿತಿ"**.

(ಅಶ್ವಲಾಯನ ಗೃಹ್ಯಸೂತ್ರ :– ೩. ೩. ೧ ತೈ. ಅ. ೨.೯) ಇದು ಗೃಹ್ಯಸೂತ್ರ – ಮೊದಲಾದುದರ ವಚನ. ಯಾವ ಐತರೇಯ, ಶತಪಥ ಮೊದಲಾದ ಬ್ರಾಹ್ಮಣಗಳ ಬಗೆಗೆ ಬರೆದಿದ್ದೇವೋ, ಅವುಗಳಿಗೇ ಇತಿಹಾಸ, ಪುರಾಣ, ಕಲ್ಪ, ಗಾಥಾ, ಮತ್ತು ನಾರಾಶಂಸೀ[೪೬] – ಈ ಐದು ಹೆಸರುಗಳಿವೆ; ಶ್ರೀ ಮದ್ಭಾಗವತ – ಮೊದಲಾದುವುಗಳ ಹೆಸರು **'ಪುರಾಣ'** ಎಂದಲ್ಲ.

**ಪ್ರಶ್ನೆ :** – ತ್ಯಾಜ್ಯ ಗ್ರಂಥಗಳಲ್ಲಿ ಯಾವ ಸತ್ಯವಿದೆಯೋ, ಅದನ್ನು ಏಕೆ ಗ್ರಹಿಸುವುದಿಲ್ಲ?

**ಉತ್ತರ:**– ಅವುಗಳಲ್ಲಿ ಯಾವ ಯಾವ ಸತ್ಯವಿದೆಯೋ, ಅದು ವೇದಗಳೇ–ಮೊದಲಾದ ಸತ್ಯ ಶಾಸ್ತ್ರಗಳದು. ಮತ್ತು ಮಿಥ್ಯೆ ಅವರ ಮನೆಯದು. ವೇದಗಳೇ ಮೊದಲಾದ ಸತ್ಯ ಶಾಸ್ತ್ರಗಳ ಸ್ವೀಕಾರದಲ್ಲಿ ಸಮಸ್ತ ಸತ್ಯದ ಗ್ರಹಿಕೆಯಾಗುತ್ತದೆ. ಯಾವನಾದರೂ ಈ ಮಿಥ್ಯಾಗ್ರಂಥಗಳಿಂದ ಸತ್ಯವನ್ನು ಗ್ರಹಿಸಲು ಇಚ್ಛಿಸಿದರೆ, ಮಿಥ್ಯೆಯೂ ಅವನ ಕೊರಳಿಗೆ ಸುತ್ತಿಹಾಕಿಕೊಳ್ಳುವುದು. ಆದುದರಿಂದ **"ಅಸತ್ಯಮಿಶ್ರಂ ಸತ್ಯಂ ದೂರತಸ್ತ್ಯಾಜ್ಯ ಮಿತಿ"**. ಅಸತ್ಯಯುಕ್ತ ಗ್ರಂಥದಲ್ಲಿನ ಸತ್ಯವನ್ನೂ ಕೂಡ, ವಿಷಯುಕ್ತವಾದ ಅನ್ನವನ್ನು ಬಿಡುವಂತೆ ಬಿಟ್ಟುಬಿಡಬೇಕು.

**ಪ್ರಶ್ನೆ :**– ನಿಮ್ಮ ಮತವೇನು?

**ಉತ್ತರ :**– ವೇದಗಳು, ಎಂದರೆ – ವೇದದಲ್ಲಿ ಯಾವ ಯಾವದನ್ನು ಮಾಡುವ ಮತ್ತು ಬಿಡುವ ಶಿಕ್ಷಣವನ್ನು ಕೊಟ್ಟಿದೆಯೋ, ಅದನ್ನು ಯಥಾವತ್ತಾಗಿ ಮಾಡಬೇಕು; ಬಿಡಬೇಕು – ಎಂದು ನಾವು ಒಪ್ಪಿಕೊಳ್ಳುತ್ತೇವೆ. ವೇದಗಳು ನಮಗೆ ಮಾನ್ಯವಾಗಿರುವ ಕಾರಣ, ನಮ್ಮ ಮತ **'ವೇದ'**, ಹೀಗೆಯೇ ಒಪ್ಪಿಕೊಂಡು ಮಾನವರೆಲ್ಲರೂ, ವಿಶೇಷತಃ ಆರ್ಯರು,

---

೪೫. ಎಂದರೆ, 'ರಾಮಚರಿತ ಮಾನಸ'

೪೬. ಅಶ್ವಲಾಯನ ಗೃಹ್ಯಸೂತ್ರ: ೩.೩.೧; ತೈ. ಅ. ೨. –ಅನು.

ಏಕಮತರಾಗಿರಬೇಕು.

**ಪ್ರಶ್ನೆ :** – ಹೇಗೆ ಸತ್ಯಾಸತ್ಯಗಳ ಮತ್ತು ಬೇರೆಯ ಗ್ರಂಥಗಳ ನಡುವೆ ಪರಸ್ಪರ ವಿರೋಧವಿದೆಯೋ, ಹಾಗೆ ಬೇರೆ ಶಾಸ್ತ್ರಗಳಲ್ಲಿಯೂ ಇದೆ. ಉದಾಹರಣೆಗೆ, ಸೃಷ್ಟಿಯ ವಿಷಯದಲ್ಲಿ ಆರು ಶಾಸ್ತ್ರಗಳ ನಡುವೆ ವಿರೋಧವಿದೆ. ಮೀಮಾಂಸಾದರ್ಶನವು ಕರ್ಮದಿಂದ, ವೈಶೇಷಿಕವು ಕಾಲದಿಂದ, ನ್ಯಾಯವು ಪರಮಾಣುವಿನಿಂದ, ಯೋಗವು ಪುರುಷಾರ್ಥದಿಂದ, ಸಾಂಖ್ಯವು ಪ್ರಕೃತಿಯಿಂದ ಮತ್ತು ವೇದಾಂತವು ಬ್ರಹ್ಮದಿಂದ ಸೃಷ್ಟಿಯ ಉತ್ಪತ್ತಿಯನ್ನು ಅಂಗೀಕರಿಸುತ್ತವೆ. ಇದು ವಿರೋಧವಲ್ಲವೇನು?

**ಉತ್ತರ:** – ಮೊದಲಾಗಿ, ಸಾಂಖ್ಯ ಮತ್ತು ವೇದಾಂತವನ್ನು ಬಿಟ್ಟು, ಉಳಿದ ನಾಲ್ಕು ಶಾಸ್ತ್ರಗಳಲ್ಲಿ ಸೃಷ್ಟಿಯ ಉತ್ಪತ್ತಿಯನ್ನು ಮುಖ್ಯವಾಗಿ ಬರೆದಿಲ್ಲ. ಮತ್ತು ಇವುಗಳಲ್ಲಿ ವಿರೋಧವೂ ಇಲ್ಲ. ಏಕೆಂದರೆ, ನಿಮಗೆ ವಿರೋಧ – ಅವಿರೋಧಗಳ ಜ್ಞಾನವಿಲ್ಲ. ವಿರೋಧ ಯಾವ ಸ್ಥಾನದಲ್ಲಿ ಉಂಟಾಗುತ್ತದೆ – ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಒಂದೇ ವಿಷಯದಲ್ಲಿಯೋ ಅಥವಾ, ಬೇರೆ ಬೇರೆ ವಿಷಯಗಳಲ್ಲಿಯೋ?

**ಪ್ರಶ್ನೆ:** – ಒಂದು ವಿಷಯದಲ್ಲಿ ಅನೇಕರ ನಡುವೆ ಪರಸ್ಪರ ವಿರುದ್ಧವಾದ ಕಥನವಿದ್ದರೆ, ಅದನ್ನು ವಿರೋಧವೆನ್ನುತ್ತಾರೆ. ಇಲ್ಲಿಯೂ ಸೃಷ್ಟಿಯ ಒಂದೇ ವಿಷಯವಿದೆ.

**ಉತ್ತರ:** – ವಿದ್ಯೆ ಒಂದೇ ಇದೆಯೋ, ಅಥವಾ ಎರಡೋ? ಒಂದು. ಒಂದೇ ಇದ್ದರೆ, ವ್ಯಾಕರಣ, ವೈದ್ಯಕ, ಜ್ಯೋತಿಷ– ಮೊದಲಾದ ಬೇರೆ ಬೇರೆ ವಿಷಯಗಳು ಏಕಿವೆ?

ಹೇಗೆ ಒಂದು ವಿದ್ಯೆಯಲ್ಲಿ, ವಿದ್ಯೆಯ ಅನೇಕ ಅವಯವಗಳ ನಡುವೆ, ಪರಸ್ಪರ ಒಂದಕ್ಕೆ ಒಂದು ಭಿನ್ನವಾದ ಪ್ರತಿಪಾದನವಾಗುತ್ತದೋ, ಹಾಗೆಯೇ ಸೃಷ್ಟಿ ವಿದ್ಯೆಯ ಬೇರೆ ಬೇರೆ ಆರು ಅವಯವಗಳ ಪ್ರತಿಪಾದನವನ್ನು ಆರು ಶಾಸ್ತ್ರಗಳಲ್ಲಿ ಮಾಡಿರುವುದರಿಂದ, ಇವುಗಳಲ್ಲಿ ಏನೇನೂ ವಿರೋಧವಿಲ್ಲ. ಹೇಗೆ ಮಡಕೆಯ ನಿರ್ಮಾಣದಲ್ಲಿ, ಕರ್ಮ, ಸಮಯ, ಮಣ್ಣು, ಸಂಯೋಗ, ವಿಯೋಗ ಮೊದಲಾದ ಪುರುಷಾರ್ಥಗಳು, ಪ್ರಕೃತಿಯ ಗುಣಗಳು ಮತ್ತು ಕುಂಬಾರ – ಇಷ್ಟು ಕಾರಣಗಳಿವೆಯೋ, ಹಾಗೆಯೇ ಸೃಷ್ಟಿಯ ಕಾರಣವಾದ ಕರ್ಮದ ವ್ಯಾಖ್ಯೆಯು ಮೀಮಾಂಸೆಯಲ್ಲಿಯೂ, ಸಮಯದ ವ್ಯಾಖ್ಯೆ ವೈಶೇಷಿಕದಲ್ಲಿಯೂ, ಉಪಾದಾನ ಕಾರಣದ ವ್ಯಾಖ್ಯೆ ನ್ಯಾಯದಲ್ಲಿಯೂ, ಪುರುಷಾರ್ಥದ ವ್ಯಾಖ್ಯೆ ಯೋಗದಲ್ಲಿಯೂ, ಅನುಕ್ರಮವಾಗಿ ತತ್ತ್ವಗಳ ಪರಿಗಣನದ ವ್ಯಾಖ್ಯೆ ಸಾಂಖ್ಯದಲ್ಲಿಯೂ ಮತ್ತು ಯಾವ ಪರಮೇಶ್ವರನು ನಿಮಿತ್ತ ಕಾರಣನಾಗಿದ್ದಾನೋ, ಅವನ ವ್ಯಾಖ್ಯೆ ವೇದಾಂತ ಶಾಸ್ತ್ರದಲ್ಲಿಯೂ ಇದೆ. ಅದರಲ್ಲಿ ಸ್ವಲ್ಪವೂ ವಿರೋಧವಿಲ್ಲ. ಹೇಗೆ ವೈದ್ಯಕ ಶಾಸ್ತ್ರದಲ್ಲಿ ನಿದಾನ, ಚಿಕಿತ್ಸೆ, ಔಷಧ – ದಾನ ಮತ್ತು ಪಥ್ಯದ ಪ್ರಕರಣಗಳು ಬೇರೆ ಬೇರೆಯಾಗಿ ಹೇಳಲ್ಪಟ್ಟಿವೆಯೋ, ಆದರೆ ಎಲ್ಲದರ ಸಿದ್ಧಾಂತವೂ ರೋಗದ ನಿವೃತ್ತಿಯಾಗಿದೆಯೋ, ಹಾಗೆಯೇ ಸೃಷ್ಟಿಯ ಕಾರಣಗಳು ಆರು ಇವೆ. ಇವುಗಳಲ್ಲಿ ಒಂದೊಂದು ಕಾರಣದ ವ್ಯಾಖ್ಯಾನವನ್ನು ಒಬ್ಬೊಬ್ಬ ಶಾಸ್ತ್ರಕಾರನು ಮಾಡಿದ್ದಾನೆ. ಆದುದರಿಂದ, ಇವುಗಳಲ್ಲಿ ಸ್ವಲ್ಪವೂ ವಿರೋಧವಿಲ್ಲ. ಇದರ ವಿಶೇಷ ವ್ಯಾಖ್ಯೆಯನ್ನು ಸೃಷ್ಟಿ ಪ್ರಕರಣ[೪೭]ದಲ್ಲಿ ಮಾಡುವೆವು.

ಓದುವುದರಲ್ಲಿ – ಓದಿಸುವುದರಲ್ಲಿ ಯಾವ ವಿಘ್ನಗಳಿರುತ್ತವೋ, ಅವುಗಳನ್ನು ಬಿಟ್ಟುಬಿಡಬೇಕು. ಉದಾಹರಣೆಗೆ– **ಕುಸಂಗ,** ಎಂದರೆ ದುಷ್ಟ ವಿಷಯಾಸಕ್ತ ಜನರ ಸಂಗ, ದುಷ್ಟ ವ್ಯಸನಗಳು, ಉದಾಹರಣೆಗೆ – ಮದ್ಯ ಮೊದಲಾದವುಗಳ ಸೇವನೆ ಮತ್ತು ವೇಶ್ಯಾವ್ಯಸನ – ಮೊದಲಾದುವು, ಬಾಲ್ಯಾವಸ್ಥೆಯಲ್ಲಿ ವಿವಾಹ, ಎಂದರೆ ೨೫ ನೆಯ ವರ್ಷಕ್ಕೆ ಮುನ್ನ ಪುರುಷನ ೧೬ನೆಯ ವರ್ಷಕ್ಕೆ ಮುನ್ನ ಸ್ತ್ರೀಯ ಮದುವೆಯಾಗುವುದು, ಪೂರ್ಣ ಬ್ರಹ್ಮಚರ್ಯವಿಲ್ಲದಿರುವುದು, ರಾಜಾ, ತಾಯಿ, ತಂದೆ ಮತ್ತು ವಿದ್ವಾಂಸರ ಮೋಹ, ವೇದ – ಮೊದಲಾದ ಶಾಸ್ತ್ರಗಳ ಪ್ರಚಾರವಿಲ್ಲದಿರುವುದರಿಂದ, ಅತಿ ಭೋಜನ ಅತಿಜಾಗರಣ– ಮಾಡುವುದು, ಓದುವುದರಲ್ಲಿ – ಓದಿಸುವುದರಲ್ಲಿ, ಪರೀಕ್ಷೆಮಾಡುವುದರಲ್ಲಿ – ಪರೀಕ್ಷೆಗೆ ಕುಳಿತುಕೊಳ್ಳುವುದರಲ್ಲಿ ಆಲಸ್ಯವನ್ನು ಕಪಟವನ್ನು ಮಾಡುವುದು, ವಿದ್ಯಾಲಾಭ ಎಲ್ಲಕ್ಕಿಂತ ಉಚ್ಚವಾದುದು – ಎಂದು ತಿಳಿಯದಿರುವುದು, ಬ್ರಹ್ಮಚರ್ಯದಿಂದ ಬಲ, ಬುದ್ಧಿ, ಪರಾಕ್ರಮ, ಆರೋಗ್ಯ, ರಾಜ್ಯ, ಧನ–ಇವುಗಳ ವೃದ್ಧಿಯಾಗುವುದೆಂದು ಅಂಗೀಕರಿಸದಿರುವುದು, ಈಶ್ವರನ ಧ್ಯಾನವನ್ನು ಬಿಟ್ಟು, ಬೇರೆಯ ಕಲ್ಲು ಮೊದಲಾದುವುಗಳ ಜಡಮೂರ್ತಿಯ ದರ್ಶನ – ಪೂಜನದಲ್ಲಿ ವ್ಯರ್ಥವಾಗಿ ಕಾಲ ಕಳೆಯುವುದು,

---

೪೭. ಅಷ್ಟಮ ಸಮುಲ್ಲಾಸವನ್ನು ನೋಡಿರಿ. –ಸಂ

ತಾಯಿ, ತಂದೆ, ಮತ್ತು ಆಚಾರ್ಯ, ವಿದ್ವಾಂಸರು - ಇವರನ್ನು ಸತ್ಯವಾದ ಮೂರ್ತಿಗಳೆಂದು ತಿಳಿದು ಸೇವೆ ಸತ್ಸಂಗ ಮಾಡದಿರುವುದು, ವರ್ಣಾಶ್ರಮದ ಧರ್ಮವನ್ನು ಬಿಟ್ಟು, ಊರ್ಧ್ವ ಪುಂಡ್ರ,[೪೮] ತ್ರಿಪುಂಡ್ರ,[೪೯] ತಿಲಕ, ಕಂಠೀ,[೫೦] ಮಾಲಾಧಾರಣ, ಏಕಾದಶೀ, ತ್ರಯೋದಶೀ, ಮೊದಲಾದ ವ್ರತಗಳನ್ನು ಮಾಡುವುದು, ಕಾಶೀ - ಮೊದಲಾದುವುಗಳ ತೀರ್ಥಯಾತ್ರೆ ಮತ್ತು ರಾಮ, ಕೃಷ್ಣ, ನಾರಾಯಣ, ಶಿವ, ಭಗವತೀ, ಗಣೇಶ - ಮೊದಲಾದವರ ನಾಮ ಸ್ಮರಣದಿಂದ ಪಾಪ ದೂರವಾಗುವುದೆಂಬ ನಂಬಿಕೆ, ಪಾಷಂಡಿಗಳ ಉಪದೇಶದಿಂದ ವಿದ್ಯೆ ಓದುವುದರಲ್ಲಿ ಅಶ್ರದ್ಧೆಯುಂಟಾಗುವುದು, ವಿದ್ಯೆ, ಧರ್ಮ, ಯೋಗ, ಪರಮೇಶ್ವರನ ಉಪಾಸನೆಯ ಹೊರತು, ಪುರಾಣಗಳೆಂಬ ಹೆಸರಿನ, ಭಾಗವತ - ಮೊದಲಾದ ಮಿಥ್ಯಾ (ಗ್ರಂಥಗಳ) ಕಥೆಗಳಿಂದ ಮುಕ್ತಿಯಾಗುವುದೆಂದು ಅಂಗೀಕರಿಸುವುದು, ಲೋಭದಿಂದ ಹಣ - ಮೊದಲಾದುವುಗಳಲ್ಲಿ ಪ್ರವೃತ್ತರಾಗಿ, ವಿದ್ಯೆಯಲ್ಲಿ ಪ್ರೀತಿಯಿಡದಿರುವುದು, ಅತ್ತ-ಇತ್ತ ವೃಥಾ ಅಲೆದಾಡುತ್ತಿರುವುದು - ಈ ಮೊದಲಾದ ಮಿಥ್ಯಾ ವ್ಯವಹಾರಗಳಲ್ಲಿ ಸಿಕ್ಕಿಕೊಂಡು, ಬ್ರಹ್ಮಚರ್ಯದ ಮತ್ತು ವಿದ್ಯೆಯ ಲಾಭದಿಂದ ರಹಿತರಾಗಿ, ರೋಗಿಗಳೂ ಮತ್ತು ಮೂರ್ಖರೂ ಆಗಿರುತ್ತಾರೆ.

ಯಾರು ಅನ್ಯರನ್ನು ವಿದ್ಯಾ - ಸತ್ಸಂಗದಿಂದ ದೂರವಿಟ್ಟು ಮತ್ತು ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಂಡು, ಅವರ ತನು, ಮನ, ಧನಗಳನ್ನು ನಾಶಪಡಿಸುತ್ತಾರೋ. ಮತ್ತು ಯಾರು ಕ್ಷತ್ರಿಯ - ಮೊದಲಾದ ವರ್ಣದವರು ಓದಿ ವಿದ್ವಾಂಸರಾಗಿ ಹೋದಲ್ಲಿ ನಮ್ಮ ಪಾಷಂಡ ಜಾಲದಿಂದ ಹೊರಬಿದ್ದು, ಮತ್ತು ನಮ್ಮ ಛಲವನ್ನು ತಿಳಿದು ನಮಗೆ ಅಪಮಾನ ಮಾಡುವರು - ಎಂದು ಭಾವಿಸುತ್ತಾರೋ, ಅಂತಹ ಆಧುನಿಕ ಸಾಂಪ್ರದಾಯಿಕರು ಮತ್ತು ಬ್ರಾಹ್ಮಣರು[೫೧] - ಮೊದಲಾದವರು - ಈ ಮೊದಲಾದ ವಿಘ್ನಗಳನ್ನು ರಾಜರು ಮತ್ತು ಪ್ರಜೆಗಳು ದೂರಮಾಡಿ ತಮ್ಮ ಹುಡುಗರನ್ನೂ, ಹುಡುಗಿಯರನ್ನೂ ವಿದ್ವಾಂಸರನ್ನಾಗಿ ಮಾಡುವುದಕ್ಕಾಗಿ ತನು-ಮನ-ಧನಗಳಿಂದ ಪ್ರಯತ್ನ ಮಾಡುತ್ತಾ ಇರಬೇಕು.

ಶೂದ್ರರೂ ಮತ್ತು ಸ್ತ್ರೀಯರೂ ಕೂಡ ವೇದಗಳನ್ನೋದಬೇಕೇನು? ಇವರು ಓದುವರಾದರೆ, ಮತ್ತೆ ನಾವೇನು ಮಾಡಬೇಕು? ಮತ್ತು ಇವರಿಗೆ ಓದಿಸಬೇಕು - ಎನ್ನಲು ಪ್ರಮಾಣವೂ ಇಲ್ಲ. ಆದರೆ ಕೆಳಕಂಡ ಹಾಗೆ ನಿಷೇಧವಿದೆ :-

**ಸ್ತ್ರೀ ಶೂದ್ರೌ ನಾಧೀಯಾತಾಮಿತಿ ಶ್ರುತೇಃ**[೫೨] ॥

ಸ್ತ್ರೀಯರು ಮತ್ತು ಶೂದ್ರರು ಓದಬಾರದು-ಹೀಗೆ ಶ್ರುತಿಯಿದೆ.

**ಉತ್ತರ:-** ಸಮಸ್ತ ಸ್ತ್ರೀಯರಿಗೂ ಮತ್ತು ಪುರುಷರಿಗೂ, ಎಂದರೆ ಮನುಷ್ಯ ಮಾತ್ರರಿಗೆ ಓದುವ ಆಧಿಕಾರವಿದೆ . ಮತ್ತು ನಿಮ್ಮ ಈ ಶ್ರುತಿ ನಿಮ್ಮ ಕಪೋಲಕಲ್ಪನೆಯಿಂದ ಉದ್ಭವಿಸಿದೆ. ಇದು ಯಾವ ಪ್ರಾಮಾಣಿಕ ಗ್ರಂಥದ್ದೂ ಅಲ್ಲ. ಮತ್ತು ಸಮಸ್ತ ಮಾನವರಿಗೂ ವೇದಾದಿ ಶಾಸ್ತ್ರಗಳನ್ನು ಓದುವ - ಕೇಳುವ ಅಧಿಕಾರದ ಪ್ರಮಾಣ ಯಜುರ್ವೇದದ ೨೬ನೆಯ ಅಧ್ಯಾಯದಲ್ಲಿ ಎರಡನೆಯ ಮಂತ್ರವಾಗಿದೆ.

**ಯಥೇಮಾಂ ವಾಚಂ ಕಲ್ಯಾಣೀಮಾವದಾನಿ ಜನೇಭ್ಯಃ ।**

**ಬ್ರಹ್ಮರಾಜನ್ಯಾಭ್ಯಾಂ ಶೂದ್ರಾಯ ಚಾರ್ಯಾಯ ಚ ಸ್ವಾಯಚಾರಣಾಯ ॥**

**ಪರಮೇಶ್ವರನು ಹೇಳುತ್ತಾನೆ: -** "(ಯಥಾ) ಹೇಗೆ ನಾನು (ಜನೇಭ್ಯಃ) ಎಲ್ಲ ಮಾನವರಿಗಾಗಿ, (ಇಮಾಂ) ಈ (ಕಲ್ಯಾಣೀಂ) ಕಲ್ಯಾಣ - ಎಂದರೆ ಸಂಸಾರದ ಮತ್ತು ಮುಕ್ತಿಯ, ಸುಖವನ್ನು ಕೊಡುವ, (ವಾಚಂ) ಋಗ್ವೇದ ಮೊದಲಾದ ನಾಲ್ಕೂ ವೇದಗಳ

---

೪೮. ಮಾಧ್ವರು ಇಡುವ ಅಂಗಾರಕ. -ಅನು

೪೯. ಶ್ರೀವೈಷ್ಣವರು ಹಾಕಿಕೊಳ್ಳುವ ಮೂರು ನಾಮಗಳು-ಅನು.

೫೦. ಕೊರಳಿಗೆ ಹಾಕಿಕೊಳ್ಳುವ ದಾರ ಅಥವಾ ತುಳಸೀಮಣಿ-ರುದ್ರಾಕ್ಷಿಗಳ ಸರ- ಅನು.

೫೧. ಎಂದರೆ, ಕೇವಲ ಬ್ರಾಹ್ಮಣ - ಎಂಬ ಹೆಸರಿನ ಕುಲದಲ್ಲಿ ಹುಟ್ಟಿದ, ವೇದವಿದ್ಯಾವಿಹೀನರಾದ ಜನರು. ಮಹರ್ಷಿಯ ವಿಶಾಲಮನಸ್ಸಿನಲ್ಲಿ ಜಾತಿ ವೈಷಮ್ಯಕ್ಕೆ ಅವಕಾಶವಿಲ್ಲ. -ಅನು.

೫೨. "ನ ಸ್ತ್ರೀ ಶೂದ್ರೌ ವೇದಮಧೀಯಾತಾಮ್" ಮೀಮಾಂಸ ನ್ಯಾಯ ಪ್ರಕಾಶ ಪೂರ್ವಾರ್ಧ. -ಅನು.

ವಾಣಿಯ (ಆವದಾನಿ) ಉಪದೇಶ ಮಾಡುತ್ತೇನೋ, ಹಾಗೆಯೇ ನೀವೂ ಮಾಡುತ್ತಾ ಹೋಗಿರಿ".

ಈ ಸ್ಥಳದಲ್ಲಿ ಯಾವನಾದರೂ, ಪ್ರಶ್ನೆ ಹಾಕಿದರೆ ಜನ – ಎಂಬ ಶಬ್ದದಿಂದ ದ್ವಿಜರನ್ನು ಗ್ರಹಿಸಬೇಕು; ಏಕೆಂದರೆ, ಸ್ಮೃತಿ– ಮೊದಲಾದ ಗ್ರಂಥಗಳಲ್ಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ವೇದಗಳನ್ನು ಓದುವ ಅಧಿಕಾರವನ್ನು ಹೇಳಿದೆ; ಸ್ತ್ರೀಯರಿಗೆ ಮತ್ತು ಶೂದ್ರ ಮೊದಲಾದ ವರ್ಣಗಳಿಗೆ ಹೇಳಿಲ್ಲ – ಎಂದು.

**ಉತ್ತರ** – (ಬ್ರಹ್ಮರಾಜನ್ಯಾಭ್ಯಾಂ) ಮೊದಲಾದುವನ್ನು ನೋಡಿರಿ, ಪರಮೇಶ್ವರನು ಸ್ವತಃ **"**ನಾವು ಬ್ರಾಹ್ಮಣ, ಕ್ಷತ್ರಿಯ, (ಆರ್ಯಾಯ) ವೈಶ್ಯ, (ಶೂದ್ರಾಯ) ಶೂದ್ರ ಮತ್ತು (ಸ್ವಾಯ) ತಮ್ಮ ಭೃತ್ಯರು ಮತ್ತು ಸ್ತ್ರೀ[೫೩] – ಮೊದಲಾದವರು, (ಅರಣಾಯ) ಮತ್ತು ಅತಿಶೂದ್ರರು – ಮೊದಲಾದವರಿಗಾಗಿಯೂ ವೇದಗಳ ಪ್ರಕಾಶವನ್ನು ಮಾಡಿದ್ದೇವೆ". – ಎಂದು ಹೇಳುತ್ತಾನೆ. ಎಂದರೆ – ಸರ್ವಮಾನವರೂ ವೇದಗಳನ್ನು ಓದಿ–ಓದಿಸಿ ಮತ್ತು ಕೇಳಿ– ಕೇಳಿಸಿ ವಿಜ್ಞಾನವನ್ನು ಹೆಚ್ಚಿಸಿ, ಒಳ್ಳೆಯ ಮಾತುಗಳ ಸ್ವೀಕಾರ ಮತ್ತು ಕೆಟ್ಟ ಮಾತುಗಳ ತ್ಯಾಗವನ್ನು ಮಾಡಿ, ದುಃಖಗಳಿಂದ ಬಿಡುಗಡೆ ಹೊಂದಿ, ಆನಂದವನ್ನು ಪಡೆದುಕೊಳ್ಳಬೇಕು. ಹೇಳಿರಿ, ಈಗ ನಿಮ್ಮ ಮಾತನ್ನು ಒಪ್ಪಿಕೊಳ್ಳಬೇಕೋ, ಅಥವಾ ಪರಮೇಶ್ವರನದನ್ನೋ? ಪರಮೇಶ್ವರನ ಮಾತು ಅವಶ್ಯಕವಾಗಿ ಮಾನನೀಯ. ಇಷ್ಟೆಲ್ಲದರ ಮೇಲೂ ಯಾವನಾದರೂ ಇದನ್ನು ಒಪ್ಪದಿದ್ದರೆ, ಅವನು **'ನಾಸ್ತಿಕ'** ನೆನಿಸುವನು. ಏಕೆಂದರೆ– **'ನಾಸ್ತಿಕೋ ವೇದನಿಂದಕಃ'** (ಮನು :– ೫.೧೧) ವೇದಗಳ ನಿಂದಕನು ಮತ್ತು ಅದನ್ನು ಒಪ್ಪದವನು ನಾಸ್ತಿಕನೆನಿಸುತ್ತಾನೆ.

ಪರಮೇಶ್ವರನು ಶೂದ್ರರಿಗೆ ಒಳಿತನ್ನು ಮಾಡಲು ಬಯಸುವುದಿಲ್ಲವೇನು? ವೇದಗಳನ್ನು ಓದಲೂ– ಆಲಿಸಲೂ ಶೂದ್ರರಿಗೆ ನಿಷೇಧವನ್ನೂ ದ್ವಿಜರಿಗೆ ವಿಧಿಯನ್ನು ರೂಪಿಸಲು ಈಶ್ವರನು ಪಕ್ಷಪಾತಿಯೇ? ಶೂದ್ರರೇ ಮೊದಲಾದವರು ಓದಬಾರದು – ಕೇಳಬಾರದು – ಎಂಬುದೇ ಪರಮೇಶ್ವರನ ಅಭಿಪ್ರಾಯವಾಗಿದ್ದರೆ, ಇವರ ಶರೀರಗಳಲ್ಲಿ ವಾಗಿಂದ್ರಿಯ ಮತ್ತು ಶ್ರೋತ್ರೇಂದ್ರಿಯಗಳನ್ನು ಏತಕ್ಕೆ ರಚಿಸುತ್ತಿದ್ದನು? ಹೇಗೆ ಪರಮಾತ್ಮನು ಪೃಥಿವೀ, ಜಲ, ಅಗ್ನಿ, ವಾಯು, ಚಂದ್ರ, ಸೂರ್ಯ ಮತ್ತು ಅನ್ನ – ಮೊದಲಾದ ಪದಾರ್ಥಗಳನ್ನು ಎಲ್ಲರ ಸಲುವಾಗಿ ಮಾಡಿದ್ದಾನೋ, ಹಾಗೆಯೇ ವೇದಗಳನ್ನು ಕೂಡ ಎಲ್ಲರ ಸಲುವಾಗಿ ಪ್ರಕಾಶಿಸಿದ್ದಾನೆ, ಮತ್ತು ಎಲ್ಲಿಯಾದರೂ ನಿಷೇಧವನ್ನು ಮಾಡಿದ್ದರೆ, ಯಾವನಿಗೆ ಓದುವುದರಿಂದ – ಓದಿಸುವುದರಿಂದ ಏನೂ ಬರುವುದಿಲ್ಲವೋ, ಅವನು ಬುದ್ಧಿಹೀನ ಮತ್ತು ಮೂರ್ಖನಾಗಿರುವುದರಿಂದ ಶೂದ್ರನೆನಿಸುತ್ತಾನೆ – ಎನ್ನುವುದು ಅದರ ಅಭಿಪ್ರಾಯ. ಅವನ ಓದುವಿಕೆ – ಓದಿಸುವಿಕೆ ವ್ಯರ್ಥ. ಮತ್ತು ಸ್ತ್ರೀಯರ ಓದುವಿಕೆಯ ಬಗೆಗೆ ನೀವು ಯಾವ ನಿಷೇಧವನ್ನು ಮಾಡುತ್ತೀರೋ, ಅದು ನಿಮ್ಮ ಮೂರ್ಖತನ, ಸ್ವಾರ್ಥ ಮತ್ತು ಬುದ್ಧಿ ಹೀನತೆಯ ಪ್ರಭಾವ. ವೇದದಲ್ಲಿ ಕನ್ಯೆಯರ ಪಠನದ ಪ್ರಮಾಣವನ್ನು ನೋಡಿರಿ:–

**ಬ್ರಹ್ಮಚರ್ಯೇಣ ಕನ್ಯಾ ಯುವಾನಂ ವಿಂದತೇ ಪತಿಮ್** । (ಅಥರ್ವ:– ೧೧.೫.೧೮)

ಹೇಗೆ ಹುಡುಗರು ಬ್ರಹ್ಮಚರ್ಯಸೇವನದಿಂದ ಪೂರ್ಣ ವಿದ್ಯೆಯನ್ನೂ ಮತ್ತು ಸುಶಿಕ್ಷಣವನ್ನೂ ಪಡೆದು, ಯುವತಿಯರೂ, ವಿದುಷಿಯರೂ, ತಮಗೆ ಅನುಕೂಲರು, ಪ್ರಿಯರೂ, ಅನುರೂಪರೂ ಆದ ಸ್ತ್ರೀಯರೊಂದಿಗೆ ವಿವಾಹ ಮಾಡಿಕೊಳ್ಳುತ್ತಾರೋ, ಹಾಗೆ, (ಕನ್ಯಾ) ಕುಮಾರಿಯು, (ಬ್ರಹ್ಮಚರ್ಯೇಣ) ಬ್ರಹ್ಮಚರ್ಯಸೇವನದಿಂದ ವೇದಾದಿ ಶಾಸ್ತ್ರಗಳನ್ನು ಓದಿ, ಪೂರ್ಣ ವಿದ್ಯೆಯನ್ನೂ, ಉತ್ತಮ ಶಿಕ್ಷಣವನ್ನೂ ಹೊಂದಿ, ಯುವತಿಯಾಗಿ ಪೂರ್ಣಯುವಾವಸ್ಥೆಯಲ್ಲಿ, ತನಗೆ ಅನುರೂಪನೂ, ಪ್ರಿಯನೂ, ವಿದ್ವಾಂಸನೂ ಆದ, (ಯುವಾನಂ) ಪೂರ್ಣ ಯುವಾವಸ್ಥಾಯುಕ್ತ ಪುರುಷನನ್ನು ಪತಿಯಾಗಿ (ವಿಂದತೇ) ಹೊಂದಬೇಕು. ಆದುದರಿಂದ, ಸ್ತ್ರೀಯರೂ ಕೂಡ ಬ್ರಹ್ಮಚರ್ಯ ಸೇವನವನ್ನೂ ಮತ್ತು ವಿದ್ಯಾಸ್ವೀಕರಣವನ್ನೂ ಅವಶ್ಯವಾಗಿ ಮಾಡಬೇಕು.

**ಪ್ರಶ್ನೆ:** – ಸ್ತ್ರೀ ಜನರೂ ಕೂಡ ವೇದಗಳನ್ನು ಓದಬೇಕೇನು?

**ಉತ್ತರ:** – ಅವಶ್ಯಕವಾಗಿ, ನೋಡಿರಿ – ಶ್ರೌತಸೂತ್ರ ಮೊದಲಾದೆಡೆ:–

---

೫೩. **"**ಸ್ವಾಯ**"**– ಶಬ್ದ ಪುಲ್ಲಿಂಗ ವಾಚಕ, ಸ್ತ್ರೀಗೆ ಅನ್ವಯಿಸದು– ಎಂದು ಹೇಳುವವರು, ಹೆಂಡತಿ ಎಂಬರ್ಥದಲ್ಲಿ ಬರುವ **'**ದಾರ**'** ಎಂಬ ಪುಲ್ಲಿಂಗ ಶಬ್ದ, ಕಲತ್ರ ಎಂಬ ನಪುಂಸಕ ಲಿಂಗ ಶಬ್ದವನ್ನು ಗ್ರಹಿಸಬೇಕು. –ಅನು.

**ಇಮಂ ಮಂತ್ರಂ ಪತ್ನೀ ಪಠೇತ್ ॥**

ಎಂದರೆ, ಸ್ತ್ರೀಯು ಯಜ್ಞದಲ್ಲಿ ಈ ಮಂತ್ರವನ್ನು ಪಠಿಸಬೇಕು. ವೇದಗಳೇ ಮೊದಲಾದ ಶಾಸ್ತ್ರಗಳನ್ನು ಓದದವಳಾಗಿದ್ದರೆ, ಯಜ್ಞದಲ್ಲಿ ಸ್ವರಸಹಿತ ಮಂತ್ರಗಳ ಉಚ್ಚಾರಣ-ಸಂಸ್ಕೃತ ಸಂಭಾಷಣಗಳನ್ನು ಮಾಡಬಲ್ಲಳಾದರೂ ಹೇಗೆ? ಭಾರತವರ್ಷದ ಸ್ತ್ರೀಯರಲ್ಲಿ ಭೂಷಣಪ್ರಾಯರಾದ ಗಾರ್ಗೀ - ಮೊದಲಾದವರು, ವೇದ ಮೊದಲಾದ ಶಾಸ್ತ್ರಗಳನ್ನು ಓದಿ, ಪೂರ್ಣ ವಿದುಷಿಯರಾಗಿದ್ದರು. ಶತಪಥ ಬ್ರಾಹ್ಮಣದಲ್ಲಿ (ಕಾಂ.೧೪) ಇದನ್ನು ಸ್ಪಷ್ಟವಾಗಿ ಬರೆದಿದೆ. "ಪುರುಷನು ವಿದ್ವಾಂಸನೂ, ಮತ್ತು ಸ್ತ್ರೀಯು ಅವಿದುಷಿಯೂ ಮತ್ತು ಸ್ತ್ರೀಯು ವಿದುಷಿಯೂ ಮತ್ತು ಪುರುಷನು ಅವಿದ್ವಾಂಸನೂ ಆಗಿದ್ದರೆ, ಪ್ರತಿದಿನವೂ ಮನೆಯಲ್ಲಿ ದೇವಾಸುರಸಂಗ್ರಾಮವೇ ನಡೆದೀತು". ಮತ್ತೆ ಸುಖವೆಲ್ಲಿ? ಆದಕಾರಣ ಸ್ತ್ರೀಯು ಓದದೇ ಇದ್ದರೆ, ಕನ್ಯೆಯರ ಪಾಠ ಶಾಲೆಯಲ್ಲಿ ಅಧ್ಯಾಪಿಕೆಯಾಗಬಲ್ಲಳಾದರೂ ಹೇಗೆ? ಮತ್ತು, ನ್ಯಾಯಾಧೀಶತ್ವ ಮೊದಲಾದ ರಾಜಕಾರ್ಯಗಳು, ಪತಿಯನ್ನು ಪತ್ನಿಯೂ ಮತ್ತು ಪತ್ನಿಯನ್ನು ಪತಿಯೂ ಪ್ರಸನ್ನರಾಗಿ ಇಟ್ಟುಕೊಳ್ಳುವುದು, ಮನೆಯ ಸಮಸ್ತಕಾರ್ಯವೂ ಸ್ತ್ರೀಯ ಅಧೀನದಲ್ಲಿರುವುದು - ಈ ಗೃಹಾಶ್ರಮದ ಕರ್ತವ್ಯ. ಇದೇ ಮೊದಲಾದ ಕಾರ್ಯಗಳು, ವಿದ್ಯೆಯಿಲ್ಲದೆ ಉತ್ತಮ ರೀತಿಯಲ್ಲಿ, ಸರಿಯಾಗಿ ಎಂದೆಂದಿಗೂ ಆಗಲಾರವು.

ನೋಡಿರಿ! ಆರ್ಯಾವರ್ತದ ರಾಜಪುರುಷರ ಸ್ತ್ರೀಯರು ಧನುರ್ವೇದ - ಎಂದರೆ ಯುದ್ಧವಿದ್ಯೆಯನ್ನೂ ಕೂಡ ಚೆನ್ನಾಗಿ ತಿಳಿದಿದ್ದರು. ಏಕೆಂದರೆ, ಹಾಗೆ ತಿಳಿಯದಿದ್ದಲ್ಲಿ. ಕೇಕಯೀ- ಮೊದಲಾದವರು, ದಶರಥ ಮೊದಲಾದವರೊಂದಿಗೆ ಯುದ್ಧದಲ್ಲಿ ಹೋಗಲು ಹೇಗೆ ಸಮರ್ಥರಾಗುತ್ತಿದ್ದರು? ಮತ್ತು ಹೇಗೆ ಯುದ್ಧ ಮಾಡಬಲ್ಲವರಾಗುತ್ತಿದ್ದರು? ಆದುದರಿಂದ, ಬ್ರಾಹ್ಮಣಿಯರು ಮತ್ತು ಕ್ಷತ್ರಾಣಿಯರು ಸಮಸ್ತ ವಿದ್ಯೆಗಳನ್ನೂ, ವೈಶ್ಯ ಸ್ತ್ರೀಯು ವ್ಯವಹಾರವಿದ್ಯೆಯನ್ನೂ ಮತ್ತು ಶೂದ್ರ ಸ್ತ್ರೀಯು ಪಾಕಶಾಸ್ತ್ರ ಮೊದಲಾದ ಸೇವೆಯ ವಿದ್ಯೆಯನ್ನೂ ಅವಶ್ಯಕವಾಗಿ ಕಲಿಯಬೇಕು.[೫೪] ಹೇಗೆ ಪುರುಷರು ವ್ಯಾಕರಣ, ಧರ್ಮ, ಮತ್ತು ತಮ್ಮ ವ್ಯವಹಾರದ ವಿದ್ಯೆಯನ್ನು ಕನಿಷ್ಠ ಮಿತಿಯಲ್ಲಾದರೂ ಅವಶ್ಯವಾಗಿ ಓದಬೇಕೋ, ಹಾಗೆ ಸ್ತ್ರೀಯರೂ ಕೂಡ ವ್ಯಾಕರಣ, ಧರ್ಮ, ವೈದ್ಯಕ, ಗಣಿತ, ಶಿಲ್ಪ ವಿದ್ಯೆಯನ್ನಂತೂ ಅವಶ್ಯವಾಗಿಯೇ ಕಲಿಯಬೇಕು. ಏಕೆಂದರೆ, ಇವನ್ನು ಕಲಿತ ಹೊರತು ಸತ್ಯಾಸತ್ಯದ ನಿರ್ಣಯ, ಪತಿ - ಮೊದಲಾದವರಿಗೆ ಅನುಕೂಲವಾಗಿ ವರ್ತಿಸುವುದು, ಯೋಗ್ಯ ರೀತಿಯಲ್ಲಿ ಸಂತಾನೋತ್ಪತ್ತಿ, ಅವರ ಪಾಲನ, ವರ್ಧನ ಮತ್ತು ಸುಶಿಕ್ಷಣದಾನ, ಮನೆಯ ಸಮಸ್ತ ಕಾರ್ಯಗಳನ್ನೂ ಹೇಗೆ ಮಾಡಬೇಕೋ, ಹಾಗೆಯೇ ಮಾಡುವುದು- ಮಾಡಿಸುವುದು, ವೈದ್ಯಕ ವಿದ್ಯೆಯಿಂದ ಔಷಧದ ರೀತಿಯಲ್ಲಿ[೫೫] ಅನ್ನ - ಪಾನಗಳನ್ನು ಮಾಡುವುದು - ಮಾಡಿಸುವುದು; ಈ ರೀತಿ ಮನೆಯಲ್ಲಿ ರೋಗ ಎಂದಿಗೂ ಬಾರದಂತೆ ಮತ್ತು ಎಲ್ಲ ಜನರೂ ಸದಾ ಆನಂದಿತರಾಗಿರುವಂತೆ ಮಾಡುವುದು - ಇವನ್ನೆಲ್ಲಾ ಮಾಡಲಾರರು. ಶಿಲ್ಪ-ವಿದ್ಯೆಯನ್ನು ತಿಳಿಯದೆ ಮನೆ ಕಟ್ಟಿಸುವುದು, ವಸ್ತ್ರ-ಆಭೂಷಣ ಮೊದಲಾದುದನ್ನು ಮಾಡುವುದು - ಮಾಡಿಸುವುದು, ಗಣಿತ ವಿದ್ಯೆಯಿಲ್ಲದೆ ಎಲ್ಲದರ ಲೆಕ್ಕವನ್ನೂ ತಿಳಿಯುವುದು- ತಿಳಿಸುವುದು - ಸಾಧ್ಯವಾಗದು. ವೇದ ಮೊದಲಾದ ಶಾಸ್ತ್ರಗಳ ವಿದ್ಯೆಯಿಲ್ಲದೆ ಈಶ್ವರನನ್ನು ಮತ್ತು ಧರ್ಮವನ್ನು ತಿಳಿಯದೆ, ಅಧರ್ಮದಿಂದ ಎಂದಿಗೂ ದೂರವಿರಲಾರರು, ಯಾರು ತಮ್ಮ ಸಂತತಿಯು ತಾಯಿ, ತಂದೆ, ಪತಿ, ಅತ್ತೆ, ಮಾವ, ರಾಜ, ಪ್ರಜೆ, ನೆರೆಹೊರೆ, ಇಷ್ಟರು ಮಿತ್ರರು ಮತ್ತು ಮಕ್ಕಳು ಮೊದಲಾದವರೊಂದಿಗೆ ಯೋಗ್ಯ ರೀತಿಯಲ್ಲಿ, ಧರ್ಮಾನುಸಾರವಾಗಿ ವರ್ತಿಸುವಂತೆ ಬ್ರಹ್ಮಚರ್ಯ, ಉತ್ತಮ ಶಿಕ್ಷಣ, ಮತ್ತು ವಿದ್ಯೆಯಿಂದ, ತಮ್ಮ ಸಂತತಿಯ ಶರೀರದ ಮತ್ತು ಆತ್ಮನ ಪೂರ್ಣ ಬಲವನ್ನು ವರ್ಧಿಸುತ್ತಾರೋ, ಅವರೇ ಧನ್ಯವಾದಾರ್ಹರು ಮತ್ತು ಕೃತಕೃತ್ಯರು. ಈ ಕೋಶವೇ ಅಕ್ಷಯ. ಇದನ್ನು ಎಷ್ಟು ವ್ಯಯಿಸುತ್ತಾರೋ, ಅಷ್ಟೇ ಹೆಚ್ಚುತ್ತಾ ಹೋಗುತ್ತದೆ. ಬೇರೆ ಎಲ್ಲಾ ಕೋಶಗಳೂ, ವ್ಯಯಿಸುವುದರಿಂದ ಕಡಿಮೆಯಾಗಿ ಹೋಗುತ್ತವೆ ಮತ್ತು ದಾಯ ಭಾಗಿಗಳೂ ತಮ್ಮ ಭಾಗವನ್ನು ತೆಗೆದುಕೊಳ್ಳುತ್ತಾರೆ. ಮತ್ತು, ವಿದ್ಯಾಕೋಶಕ್ಕೆ ಯಾವನೂ ಕೂಡ ಕಳ್ಳ ದಾಯಭಾಗಿ ಆಗಲಾರನು. ಈ ಕೋಶದ ರಕ್ಷಣೆಯನ್ನೂ, ವೃದ್ಧಿಯನ್ನೂ ಮಾಡುವವನು ವಿಶೇಷತಃ ರಾಜನು; ಸಾಮಾನ್ಯತಃ ಪ್ರಜೆಗಳೂ ಕೂಡ.

**ಕನ್ಯಾನಾಂ ಸಂಪ್ರದಾನಂ ಚ ಕುಮಾರಾಣಾಂ ಚ ರಕ್ಷಣಮ್ ।** (ಮನು:-೭.೧೫೨)

ಸಮಸ್ತ ಕನ್ಯೆಯರನ್ನೂ ಮತ್ತು ಬಾಲಕರನ್ನೂ ಮೇಲೆ ಹೇಳಿದ ನಿರ್ದಿಷ್ಟ ಸಮಯಕ್ಕನುಸಾರವಾಗಿ ಬ್ರಹ್ಮಚರ್ಯದಲ್ಲಿರಿಸಿ,

---

೫೪. ಪ್ರಚಲಿತ ಜನ್ಮಗತ ಜಾತಿಪದ್ಧತಿಯ ಹಿಡುಗಿಗೆ ಬಲಿಬಿದ್ದು, ಅರ್ಥಕ್ಕೆ ಅನರ್ಥ ಮಾಡಬಾರದು. ಇಲ್ಲಿಯೂ ಗುಣ-ಕರ್ಮ-ಸ್ವಭಾವಜನ್ಯ ವರ್ಣವೇ ಗ್ರಾಹ್ಯ. -ಅನು

೫೫. ಎಂದರೆ, ಆರೋಗ್ಯಕಾರಕವಾಗಿ,-ಅನು

ವಿದ್ವಾಂಸರನ್ನಾಗಿ ಮಾಡುವುದು ರಾಜನಿಗೆ ಯೋಗ್ಯವಾದುದು. ಯಾವನಾದರೂ ಈ ಆಜ್ಞೆಯನ್ನು ಒಪ್ಪದೇ ಇದ್ದರೆ,ಅವನ ಅಥವಾ ಅವಳ ಮಾತಾಪಿತೃಗಳಿಗೆ ಶಿಕ್ಷೆಯನ್ನು ವಿಧಿಸಬೇಕು. ಎಂದರೆ, ರಾಜನ ಆಜ್ಞೆಯಿಂದ ಎಂಟು ವರ್ಷದ ನಂತರ ಹುಡುಗನು ಅಥವಾ ಹುಡುಗಿಯು ಯಾವನ ಮನೆಯಲ್ಲಿಯೂ ಇರಲು ಅವಕಾಶವಿರಬಾರುದು; ಆದರೆ – ಆಚಾರ್ಯ ಕುಲದಲ್ಲಿರಬೇಕು. ಎಂದಿನವರೆಗೆ ಸಮಾವರ್ತನದ[೫೬] ಸಮಯ ಬರುವುದಿಲ್ಲವೋ, ಅಂದಿನವರೆಗೆ ವಿವಾಹವಾಗಲು ಆವಕಾಶವಿರಬಾರದು.

**ಸರ್ವೇಷಾಮೇವ ದಾನಾನಾಂ ಬ್ರಹ್ಮದಾನಂ ವಿಶಿಷ್ಯತೇ ।**
**ವಾರ್ಯನ್ನ ಗೋಮಹೀವಾಸಸ್ತಿಲಕಾಂಚನಸರ್ಪಿಷಾಮ್ ॥** (ಮನು :– ೪.೨೩೩)

ಜಗತ್ತಿನಲ್ಲಿ ಎಷ್ಟು ದಾನಗಳಿವೆಯೋ, ಎಂದರೆ ನೀರು, ಅನ್ನ, ಗೋವು, ಪೃಥಿವೀ, ವಸ್ತ್ರ, ಎಳ್ಳು, ಸುವರ್ಣ ಮತ್ತು ಘೃತ ಮೊದಲಾದ ಈ ಎಲ್ಲ ದಾನಗಳಿಗಿಂತಲೂ, ವೇದ ವಿದ್ಯೆಯ ದಾನ ಅತಿ ಶ್ರೇಷ್ಠವಾಗಿದೆ. ಆದುದರಿಂದ, ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನವನ್ನು ತನು–ಮನ–ಧನಗಳಿಂದ ವಿದ್ಯೆಯ ವೃದ್ಧಿಗಾಗಿ ಮಾಡುತ್ತಾ ಹೋಗಬೇಕು. ಯಾವ ದೇಶದಲ್ಲಿ ಯೋಗ್ಯ ರೀತಿಯಲ್ಲಿ ಬ್ರಹ್ಮಚರ್ಯ, ವಿದ್ಯೆ ಮತ್ತು ವೇದೋಕ್ತ ಧರ್ಮದ ಪ್ರಚಾರವಾಗುತ್ತದೋ, ಆ ದೇಶವೇ ಸೌಭಾಗ್ಯಶಾಲಿಯಾಗಿರುತ್ತದೆ.

ಬ್ರಹ್ಮಚರ್ಯಾಶ್ರಮದ ಶಿಕ್ಷಣ ಹೀಗೆ ಸಂಕ್ಷೇಪವಾಗಿ ಬರೆಯಲ್ಪಟ್ಟಿದೆ. ಇನ್ನು ಮುಂದೆ ನಾಲ್ಕನೆಯ ಸಮುಲ್ಲಾಸದಲ್ಲಿ ಸಮಾವರ್ತನ ಮತ್ತು ಗೃಹಾಶ್ರಮದ ಶಿಕ್ಷಣ ಬರೆಯಲ್ಪಡುವುದು.

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮಿಕೃತೇ ಸತ್ಯಾರ್ಥ**
**ಪ್ರಕಾಶೇ ಸುಭಾಷಾವಿಭೂಷಿತೇ ಶಿಕ್ಷಾ ವಿಷಯೇ**
**ತೃತೀಯ ಸಮುಲ್ಲಾಸಃ ಸಂಪೂರ್ಣಃ**

---

೫೬. ವಿದ್ಯಾಭ್ಯಾಸ ಮುಗಿದ ಮೇಲೆ, ವಿದ್ಯಾಗ್ರಹಣ ದೀಕ್ಷೆ ತೀರಿತೆಂಬುದರ ಸೂಚಕವಾಗಿ, ಬ್ರಹ್ಮಚಾರಿ, ಅಥವಾ ಬ್ರಹ್ಮಚಾರಿಣಿ ಸ್ನಾನಮಾಡಿ, ವಸ್ತ್ರ ಭೂಷಣಾದಿಗಳನ್ನು ಧರಿಸಿ ಪಿತೃಗೃಹಕ್ಕೆ ಹಿಂದಿರುಗಲು ಮಾಡುವ ಸಂಸ್ಕಾರ. -ಅನು.

# ಅಥ ಚತುರ್ಥ ಸಮುಲ್ಲಾಸಾರಂಭಃ

## ಅಥ ಸಮಾವರ್ತನ ವಿವಾಹಗೃಹಾಶ್ರಮವಿಧಿಂ ವಕ್ಷ್ಯಾಮಃ ।

**ವೇದಾನಧೀತ್ಯ ವೇದೌ ವಾ ವೇದಂ ವಾಪಿ ಯಥಾಕ್ರಮಮ್ ।**

**ಅವಿಪ್ಲುತಬ್ರಹ್ಮಚರ್ಯೋ ಗೃಹಸ್ಥಾಶ್ರಮಮಾವಿಶೇತ್ ॥** (ಮನು :– ೩.೨.)

ಯಥಾವತ್ತಾಗಿ ಬ್ರಹ್ಮಚರ್ಯದಲ್ಲಿ, ಆಚಾರ್ಯನಿಗೆ ಅನುಕೂಲವಾಗಿ ವರ್ತಿಸಿ, ಧರ್ಮದಿಂದ ನಾಲ್ಕು ವೇದಗಳನ್ನೂ, ಮೂರನ್ನು, ಎರಡನ್ನು, ಅಥವಾ ಒಂದು ವೇದವನ್ನು ಸಾಂಗೋಪಾಂಗವಾಗಿ ಓದಿ ಮುಗಿಸಿದ ನಂತರ, ಯಾವನ ಬ್ರಹ್ಮಚರ್ಯವು ಭಗ್ನವಾಗಿಲ್ಲವೋ ಆ ಪುರುಷನು ಅಥವಾ ಸ್ತ್ರೀಯು ಗೃಹಾಶ್ರಮದಲ್ಲಿ ಪ್ರವೇಶಮಾಡಬೇಕು.

**ತಂ ಪ್ರತೀತಂ ಸ್ವಧರ್ಮೇಣ ಬ್ರಹ್ಮದಾಯಹರಂ ಪಿತುಃ ।**

**ಸ್ರಗ್ವಿಣಂ ತಲ್ಪ ಆಸೀನಮರ್ಹಯೇತ್ಪ್ರಥಮಂ ಗವಾ ॥** (ಮನು:– ೩.೩)

ಸ್ವಧರ್ಮ– ಎಂದರೆ, ಯಥಾವತ್ತಾದ ಆಚಾರ್ಯ–ಶಿಷ್ಯರ ಯಾವ ಧರ್ಮವಿದೆಯೋ, ಅದರಿಂದ ಯುಕ್ತವಾದ, ಪಿತೃವಿನಿಂದ– ಎಂದರೆ ತಂದೆಯಿಂದ, ಅಥವಾ ಆಚಾರ್ಯನಿಂದ ಬ್ರಹ್ಮದಾಯ – ಎಂದರೆ ವಿದ್ಯಾರೂಪ ಭಾಗದ ಸ್ವೀಕಾರ ಮಾಡುವ ಶಿಷ್ಯನು. ಮಾಲೆಯನ್ನು ಧರಿಸಿ ತನ್ನ ಮಂಚದ ಮೇಲೆ ಕುಳಿತಿರುವ ಆಚಾರ್ಯನನ್ನು ಮೊದಲು ಗೋದಾನದಿಂದ ಸತ್ಕರಿಸಬೇಕು.

**ಗುರುಣಾನುಮತಃ ಸ್ನಾತ್ವಾ ಸಮಾವೃತ್ತೋ ಯಥಾವಿಧಿ ।**

**ಉದ್ವಹೇತ ದ್ವಿಜೋ ಭಾರ್ಯಾಂ ಸವರ್ಣಾಂ ಲಕ್ಷಣಾನ್ವಿತಾಮ್ ॥** (ಮನು:– ೩,೪)

ಗುರುವಿನ ಆಜ್ಞೆಯಿಂದ ಸ್ನಾನಮಾಡಿ, ಗುರುಕುಲದಿಂದ ಅನುಕ್ರಮಪೂರ್ವಕವಾಗಿ ಬಂದು ಬ್ರಾಹ್ಮಣನು, ಕ್ಷತ್ರಿಯನು, ವೈಶ್ಯನು, ತನ್ನ ವರ್ಣಕ್ಕೆ ಅನುಕೂಲಳಾದ, ಸುಂದರ, ಲಕ್ಷಣಯುಕ್ತಳಾದ ಕನ್ಯೆಯೊಂದಿಗೆ ವಿವಾಹ ಮಾಡಿಕೊಳ್ಳಬೇಕು.

**ಅಸಪಿಂಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ ।**

**ಸಾ ಪ್ರಶಸ್ತಾ ದ್ವಿಜಾತೀನಾಂ ದಾರಕರ್ಮಣಿ ಮೈಥುನೇ ॥** (ಮನು:– ೩.೫.)

ಯಾವ ಕನ್ಯೆ ಮಾತೃಕುಲದ ಏಳು ಪೀಳಿಗೆಗಳೊಳಗಿಲ್ಲವೋ, ಮತ್ತು ಪಿತೃವಿನ ಗೋತ್ರದವಳಲ್ಲವೋ, ಆ ಕನ್ಯೆಯೊಂದಿಗೆ ವಿವಾಹ ಮಾಡಿಕೊಳ್ಳುವುದು ಉಚಿತ. ಇದರ ಪ್ರಯೋಜನ ಈ ರೀತಿಯಿದೆ:–

**ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ ।** (ಶತಪಥ:– ೧೪.೪.೧೧.೨.)

ಹೇಗೆ ಪರೋಕ್ಷಪದಾರ್ಥದಲ್ಲಿ ಪ್ರೀತಿಯುಂಟಾಗುತ್ತದೋ, ಹಾಗೆ ಪ್ರತ್ಯಕ್ಷದಲ್ಲಿ ಉಂಟಾಗುವುದಿಲ್ಲ. ಉದಾಹರಣೆಗೆ– ಯಾವನಾದರೊಬ್ಬನು ಕಲ್ಲುಸಕ್ಕರೆಯ ಗುಣಗಳನ್ನೇನೋ ಕೇಳಿದ್ದಾನೆ; ಮತ್ತು ತಿಂದಿಲ್ಲವಾದರೆ, ಅವನ ಮನಸ್ಸು ಅದರಲ್ಲಿಯೇ

ನಿಂತಿರುತ್ತದೆ. ಹೇಗೆ ಯಾವದಾದರೂ ಪರೋಕ್ಷವಸ್ತುವಿನ ಪ್ರಶಂಸೆಯನ್ನು ಕೇಳಿ, ಸಂಧಿಸುವ ಉತ್ಕಟವಾದ ಇಚ್ಛೆಯಾಗುತ್ತದೋ, ಹಾಗೆಯೇ ಈ ವಿಷಯದಲ್ಲಿಯೂ ಕೂಡ; ದೂರಸ್ಥಳಾದ, ಎಂದರೆ – ಯಾವಳು ತನ್ನ ಗೋತ್ರದವಳು, ಅಥವಾ ಮಾತೆಯ ಕುಲದಲ್ಲಿ ಹತ್ತಿರದ ಸಂಬಂಧದವಳು ಅಲ್ಲವೋ, ಅದೇ ಕನ್ಯೆಯೊಂದಿಗೆ ವರನ ವಿವಾಹವಾಗಬೇಕು. ದೂರದ ಮತ್ತು ಹತ್ತಿರದ (ಜನರೊಂದಿಗೆ) ವಿವಾಹ ಮಾಡಿಕೊಳ್ಳುವುದರಲ್ಲಿ ಈ ಗುಣ (ದೋಷ)ಗಳು ಇವೆ:–

**ಒಂದನೆಯದು :–** ಯಾವ ಬಾಲಬಾಲೆಯರು ಬಾಲ್ಯಾವಸ್ಥೆಯಲ್ಲಿ ಹತ್ತಿರವಿರುತ್ತಾರೋ, ಪರಸ್ಪರ ಆಟ–ಜಗಳ ಆಡುತ್ತಾರೋ, ಮತ್ತು ಪ್ರೇಮವನ್ನು ತೋರಿಸುತ್ತಾರೋ, ಒಬ್ಬರು ಇನ್ನೊಬ್ಬರ ಗುಣ, ದೋಷ, ಸ್ವಭಾವ, ಬಾಲ್ಯಾವಸ್ಥೆಯ ವಿಪರೀತ ಆಚರಣೆಗಳನ್ನು ತಿಳಿದಿರುತ್ತಾರೋ ಮತ್ತು ಒಬ್ಬರನ್ನೊಬ್ಬರು ನಗ್ನರಾಗಿರುವಾಗಲೂ ನೋಡುತ್ತಾರೋ, ಅವರ ಪರಸ್ಪರ ವಿವಾಹವಾಗುವುದರಿಂದ ಪ್ರೇಮವೆಂದಿಗೂ ಹುಟ್ಟಲಾರದು.

**ಎರಡನೆಯದು :–** ಹೇಗೆ ನೀರಿನಲ್ಲಿ ನೀರು ಸೇರುವುದರಿಂದ ವಿಲಕ್ಷಣವಾದ ಗುಣ ಹುಟ್ಟುವುದಿಲ್ಲವೋ, ಹಾಗೆಯೇ ಒಂದೇ ಗೋತ್ರದಲ್ಲಿ , ಪಿತೃವಿನ ಅಥವಾ ಮಾತೃವಿನ ಕುಲದಲ್ಲಿ ವಿವಾಹವಾಗುವುದರಿಂದ ಧಾತುಗಳಲ್ಲಿ ಪರಿವರ್ತನೆಯಾಗದ ಕಾರಣ ಉನ್ನತಿಯಾಗುವುದಿಲ್ಲ.

**ಮೂರನೆಯದು :_** ಹೇಗೆ ಹಾಲಿನಲ್ಲಿ ಕಲ್ಲುಸಕ್ಕರೆ ಅಥವಾ ಶುಂಠಿ ಮೊದಲಾದ ಓಷಧಿಗಳ ಯೋಗದಿಂದ ಉತ್ತಮತ್ವ ಉಂಟಾಗುತ್ತದೋ, ಹಾಗೆಯೇ ಉಚ್ಚತ್ವಕ್ಕಾಗಿ ಬೇರೆ ಗೋತ್ರದ ಮಾತಾಪಿತೃಗಳ ಕುಲದಿಂದ ಬೇರೆಯಾಗಿರುವ ಸ್ತ್ರೀ–ಪುರುಷರ ವಿವಾಹವಾಗುವುದು ಉತ್ತಮವಾಗಿರುತ್ತದೆ.

**ನಾಲ್ಕನೆಯದು :_** ಹೇಗೆ ಒಂದು ದೇಶದಲ್ಲಿ ರೋಗಿಯಾಗಿರುವವನು, ಬೇರೆಯ ದೇಶದಲ್ಲಿ ವಾಯು–ಆಹಾರ–ಪಾನೀಯಗಳ ಪರಿವರ್ತನದಿಂದ ರೋಗರಹಿತನಾಗುತ್ತಾನೋ, ಹಾಗೆಯೇ ದೂರದಲ್ಲಿರುವವರ ವಿವಾಹವಾಗುವುದರಲ್ಲಿ ಉತ್ತಮತ್ವವಿದೆ.

**ಐದನೆಯದು :_** ಹತ್ತಿರದ ಸಂಬಂಧ ಮಾಡುವುದರಲ್ಲಿ, ಒಬ್ಬರು ಇನ್ನೊಬ್ಬರ ಹತ್ತಿರುವಿರುವುದರಿಂದ ಸುಖ – ದುಃಖಗಳ ಅರಿವು ಮತ್ತು ವಿರೋಧವಾಗಿರುವುದೂ ಕೂಡ ಸಂಭವವಾಗಿರುತ್ತದೆ; ದೂರದೇಶಸ್ಥರಲ್ಲಿ ಈ ಸಂಭವವಿಲ್ಲ. ಮತ್ತು ದೂರಸ್ಥರ ವಿವಾಹದಲ್ಲಿ ದೂರದೂರದವರೆಗೆ ಪ್ರೇಮಸೂತ್ರ ಉದ್ದವಾಗಿ ವರ್ಧಿಸುತ್ತದೆ; ಹತ್ತಿರದವರ ವಿವಾಹದಲ್ಲಿ ಹೀಗೆ ಆಗಲಾರದು.

**ಆರನೆಯದು :_** ದೂರದೂರದೇಶದ ವರ್ತಮಾನಗಳ ಮತ್ತು ಪದಾರ್ಥಗಳ ಪ್ರಾಪ್ತಿಯೂ ಕೂಡ ದೂರಸಂಬಂಧ ವಾಗುವುದರಲ್ಲಿ ಸಹಜವಾಗಿ ಆಗಬಲ್ಲದು. ಹತ್ತಿರದ ವಿವಾಹದಲ್ಲಿ ಹೀಗೆ ಆಗಲಾರದು. ಆದುದರಿಂದ

**ದುಹಿತಾ ದುರ್ಹಿತಾ ದೂರೇ ಹಿತಾ ಭವತೀತ ॥** (ನಿರುಕ್ತ:–೩.೪)

ಅವಳ ವಿವಾಹವು ದೂರದೇಶದಲ್ಲಿ ಆಗುವುದರಿಂದ, ಅದು ಹಿತಕಾರಿಯಾಗುವ ಕಾರಣ, ಕನ್ಯೆಯ ಹೆಸರು 'ದುಹಿತಾ' ಎಂದಾಗಿದೆ; ಹತ್ತಿರದಲ್ಲಿ ಮಾಡುವುದರಿಂದ ಹಿತಕಾರಿಯಾಗದು.

**ಏಳನೆಯದು :–** ಕನ್ಯೆಯ ಪಿತೃಗೃಹದಲ್ಲಿ ದಾರಿದ್ರ್ಯವುಂಟಾಗುವುದೂ ಕೂಡ ಸಂಭವ. ಏಕೆಂದರೆ – ಯಾವಾಗ ಯಾವಾಗ ಕನ್ಯೆ ಪಿತೃಕುಲಕ್ಕೆ ಬರುವಳೋ, ಆಗಾಗ ಅವಳಿಗೆ ಏನನ್ನಾದರೂ ಕೊಡಲೇಬೇಕಾಗುತ್ತದೆ.

**ಎಂಟನೆಯದು :_** ಯಾರಾದರೂ ಸಮೀಪದಲ್ಲಿರುವುದರಿಂದ, ತಮ್ಮ ತಮ್ಮ ಪಿತೃಕುಲದ ಸಹಾಯದ ಗರ್ವ ಹುಟ್ಟುವುದು. ಮತ್ತು ಯಾವಾಗ ಸ್ವಲ್ಪವಾದರೂ ಇಬ್ಬರ ನಡುವೆ ವೈಮನಸ್ಯವುಂಟಾಗುವುದೋ, ಆಗ ಸ್ತ್ರೀ ಕೂಡಲೇ ಪಿತೃಕುಲಕ್ಕೆ ಹೊರಟು ಹೋಗುವಳು. ಒಬ್ಬರನ್ನೊಬ್ಬರು ನಿಂದಿಸುವುದೂ ಹೆಚ್ಚಾಗುವುದು ಮತ್ತು ವಿರೋಧವೂ ಕೂಡ; ಏಕೆಂದರೆ – ಪ್ರಾಯಶಃ ಸ್ತ್ರೀಯರ ಸ್ವಭಾವ ತೀಕ್ಷ್ಣ ಹಾಗು ಮೃದುವಾಗಿರುತ್ತದೆ. ಈ ಮೊದಲಾದ ಕಾರಣಗಳಿಂದ ತಂದೆಯ ಸಹಗೋತ್ರದಲ್ಲಿ, ತಾಯಿಯ ಆರು ಪೀಳಿಗೆಗಳಲ್ಲಿ ಮತ್ತು ಸಮೀಪದೇಶದಲ್ಲಿ ವಿವಾಹ ಮಾಡಿಕೊಳ್ಳುವುದು ಒಳ್ಳೆಯದಲ್ಲ.

ಮಹಾಂತ್ಯಪಿ ಸಮೃದ್ಧಾನಿ ಗೋಽಜಾವಿಧನಧಾನ್ಯತಃ ।

**ಸ್ತ್ರೀ ಸಂಬಂಧೇ ದಶೈತಾನಿ ಕುಲಾನಿ ಪರಿವರ್ಜಯೇತ್ ॥ ೧ ॥** (ಮನು :– ೩.೬.)

ಈ ಕುಲಗಳು ಧನ, ಧಾನ್ಯ, ಗೋವು, ಮೇಕೆ, ಆನೆ, ಕುದುರೆಗಳು,ರಾಜ್ಯ, ಸಂಪತ್ತು – ಮೊದಲಾದುವುಗಳಿಂದ ಎಷ್ಟೇ ಸಮೃದ್ಧವಾಗಿದ್ದರೂ, ವಿವಾಹಸಂಬಂಧದಲ್ಲಿ ಕೆಳಗೆ ಬರೆದಿರುವ ಹತ್ತು ಕುಲಗಳನ್ನು ವರ್ಜಿಸಿಬಿಡಬೇಕು. (೧)

**ಹೀನಕ್ರಿಯಾಂ ನಿಷ್ಪುರುಷಂ ನಿಶ್ಛಂದೋ ರೋಮಶಾರ್ಶಸಮ್ ।**

**ಕ್ಷಯ್ಯಾ ಮಯಾವ್ಯಪಸ್ಮಾಂ ಶ್ವಿತ್ರಕುಷ್ಠಿಕುಲಾನಿ ಚ ॥ ೨ ॥** (ಮನು :– ೩.೭.)

ಯಾವ ಕುಲಗಳು ಸತ್ಕ್ರಿಯಾಹೀನವೂ, ಸತ್ಪುರುಷರಹಿತವೂ, ವೇದಾಧ್ಯಯನ ವಿಮುಖವೂ, ದೇಹದ ಮೇಲೆ ದಟ್ಟವಾದ ಕೂದಲುಗಳನ್ನುಳ್ಳದೂ, ಅಥವಾ, ಮೂಲ ವ್ಯಾಧಿ, ಕ್ಷಯ, ಉಬ್ಬಸ, ಕೆಮ್ಮು, ಆಮಾಶಯದೋಷ, ಮೂರ್ಛೆ, ಬಿಳಿತೊನ್ನು ಮತ್ತು ಗಲಿತಕುಷ್ಠಗಳನ್ನು ಹೊಂದಿರುವುವೋ, ಆ ಕುಲಗಳ ಕನ್ಯೆಯೊಂದಿಗೆ ಅಥವಾ ವರನೊಂದಿಗೆ ವಿವಾಹ ಮಾಡಿಕೊಳ್ಳಬಾರದು; ಏಕೆಂದರೆ – ಈ ಎಲ್ಲ ದುರ್ಗಣಗಳೂ ಹಾಗು ರೋಗಗಳು ವಿವಾಹ ಮಾಡಿಕೊಳ್ಳುವವನ ಕುಲದಲ್ಲಿಯೂ ಪ್ರವೇಶಿಸಿಬಿಡುತ್ತವೆ, ಆದುದರಿಂದ, ಉತ್ತಮ ಕುಲದ ಹುಡುಗರ ಮತ್ತು ಹುಡುಗಿಯರು ಪರಸ್ಪರ ವಿವಾಹವಾಗಬೇಕು. (೨)

**ನೋದ್ವಹೇತ್ಕಪಿಲಾಂ ಕನ್ಯಾಂ ನಾಧಿಕಾಂಗೀಂ ನ ರೋಗಿಣೀಮ್ ।**

**ನಾಲೋಮಿಕಾಂ ನಾತಿಲೋಮಾಂ ನಾವಾಚಾಟಾಂ ನ ಪಿಂಗಲಾಮ್ ॥ ೩॥** (ಮನು :– ೩.೮)

ಹಳದಿ ಬಣ್ಣದವಳೂ, ಅಧಿಕಾಂಗೀ– ಎಂದರೆ ಪುರುಷನಿಗಿಂತ ಹೆಚ್ಚು ಉದ್ದ– ಅಗಲಗಳವಳೂ, ಪುರುಷನಿಗಿಂತಧಿಕ ಬಲವುಳ್ಳವಳೂ, ರೋಗಯುಕ್ತಳೂ, ಕೂದಲಿಲ್ಲವಳೂ, ಅತಿ ಹೆಚ್ಚು ಕೂದಲುಳ್ಳವಳೂ, ಬಹುವಾಗಿ ಹರಟುವವಳೂ, ಬೂದು ಬಣ್ಣದ ಕಣ್ಣಿನವಳೂ – (೩)

**ನರ್ಕ್ಷವೃಕ್ಷನದೀ ನಾಮ್ನೀಂ ನಾಂತ್ಯಪರ್ವತನಾಮಿಕಾಮ್ ।**

**ನ ಪಕ್ಷ್ಯಹಿಪ್ರೇಷ್ಯನಾಮ್ನೀಂ ನ ಚ ಭೀಷಣನಾಮಿಕಾಮ್ ॥ ೪॥** (ಮನು :– ೩.೯)

ಋಕ್ಷ – ಎಂದರೆ ಅಶ್ವಿನೀ, ಭರಣೀ, ರೋಹಿಣೀ, ರೇವತೀ, ಚಿತ್ರಾ – ಮೊದಲಾದ ನಕ್ಷತ್ರಗಳ ಹೆಸರಿನವಳೂ, ತುಳಸೀ, ಜಾಜೀ, ಗುಲಾಬೀ, ಚಂಪಾ, ಮಲ್ಲಿಕಾ – ಮೊದಲಾದ ವೃಕ್ಷಗಳ ಹೆಸರಿನವಳೂ, ಗಂಗಾ, ಯಮುನಾ, – ಮೊದಲಾದ ನದಿಗಳ ಹೆಸರಿನವಳೂ, ಚಂಡಾಲೀ – ಮೊದಲಾದ ಅಂತ್ಯನಾಮಕಳೂ, ವಿಂಧ್ಯಾ, ಹಿಮಾಲಯ, ಪಾರ್ವತೀ – ಮೊದಲಾದ ಪರ್ವತಗಳ ಹೆಸರಿನವಳೂ, ಕೋಕಿಲಾ, ಮೈನಾ – ಮೊದಲಾದ ಪಕ್ಷಿಗಳ ಹೆಸರಿನವಳೂ, ನಾಗೀ, ಭುಜಂಗಾ – ಮೊದಲಾದ ಸರ್ಪಗಳ ಹೆಸರಿನವಳೂ, ಮಾಧೋದಾಸೀ, ಮೀರಾದಾಸೀ – ಮೊದಲಾದ ದಾಸ್ಯ – ನಾಮವನ್ನುಳ್ಳವಳೂ, ಭೀಮಕುವರೀ, ಚಂಡಿಕಾ– ಮೊದಲಾದ ಭೀಷಣವಾದ ಹೆಸರುಗಳನ್ನುಳ್ಳವಳೂ ಆದ ಕನ್ಯೆಯೊಂದಿಗೆ ವಿವಾಹ ಮಾಡಿಕೊಳ್ಳಬಾರದು. ಏಕೆಂದರೆ – ಈ ಹೆಸರುಗಳು ಕುತ್ಸಿತವೂ ಮತ್ತು ಅನ್ಯಪದಾರ್ಥಗಳಿಗೂ ಅನ್ವಯಿಸುವಂತಹವೂ ಆಗಿವೆ.[೧] (೪)

**ಅವ್ಯಂಗಾಂಗೀಂ ಸೌಮ್ಯ ನಾಮ್ನೀಂ ಹಂಸವಾರಣಗಾಮಿನೀಮ್ ।**

**ತನುಲೋಮ ಕೇಶದಶನಾಂ ಮೃದ್ವಂಗೀಮುದ್ವಹೇತ್ ಸ್ತ್ರೀಯಮ್ ॥ ೫ ॥** **(ಮನು:– ೩,೧೦)**

ಯಾವಳ ಅಂಗಗಳು ಸರಳ–ಎಂದರೆ ಸರಿಯಾಗಿವೆಯೋ, ವಿಕೃತವಾಗಿಲ್ಲವೋ, ಯಾವಳ ಹೆಸರು ಸುಂದರವಾಗಿದೆಯೋ, ಎಂದರೆ–ಯಶೋದಾ, ಸುಖದಾ ಮೊದಲಾದುದಾಗಿದೆಯೋ, ಯಾವಳ ನಡೆ ಹಂಸದ ಮತ್ತು ಆನೆಯದರಂತೆ ಇದೆಯೋ, ಯಾವಳ ಲೋಮ, ಕೇಶಗಳು ಮತ್ತು ಹಲ್ಲುಗಳು ಸೂಕ್ಷ್ಮವಾಗಿವೆಯೋ ಮತ್ತು ಯಾವಳ ಸಮಸ್ತ ಅಂಗಗಳೂ ಕೋಮಲವಾಗಿವೆಯೋ, ಅಂತಹ ಸ್ತ್ರೀಯೊಂದಿಗೆಯೇ ವಿವಾಹ ಮಾಡಿಕೊಳ್ಳಬೇಕು.[೨] (೫)

---

೧. ಇಂತಹ ಹೆಸರಿನ ಹೆಣ್ಣುಮಕ್ಕಳಿಗೆ ಮದುವೆಯಾಗುವ ಅಧಿಕಾರವೇ ಇಲ್ಲವೆಂದಲ್ಲ. ಇಂತಹ ಹೆಸರುಗಳನ್ನು ಇಡಬಾರದು. ಸಂಪ್ರದಾಯ ದೋಷದಿಂದ ಇಟ್ಟಿದ್ದರೆ ಅವುಗಳನ್ನು ಪರಿವರ್ತಿಸಬೇಕು – ಎಂಬ ಭಾವನೆಯೇ ಗ್ರಹ್ಯ. –ಅನು

೨. ಈ ಪ್ರಕರಣದಲ್ಲಿ ಹೇಳಿರುವ ಲಕ್ಷಣಗಳೂ, ಗುಣಗಳೂ ಲಿಂಗೋಚಿತವಾದ ಭೇದಗಳೊಂದಿಗೆ ಸ್ತ್ರೀ–ಪುರುಷರಿಬ್ಬರಿಗೂ ಅನ್ವಯಿಸುತ್ತದೆ. ಕೇವಲ ಸ್ತ್ರೀ ಮಾತ್ರ ಸರ್ವದೃಷ್ಟಿಯಿಂದಲೂ ಸರಿಯಾಗಿರಬೇಕು; ಪುರುಷ ಹೇಗಿದ್ದರೂ ಆದೀತು ಎಂಬ ಭಾವನೆ ಸರ್ವಥ್ಯ ತ್ಯಾಜ್ಯ. –ಅನು.

**ಪ್ರಶ್ನೆ:**– ವಿವಾಹದ ಸಮಯ ಮತ್ತು ಕ್ರಮ ಯಾವುದು ಒಳ್ಳೆಯದು?

**ಉತ್ತರ:**– ಹದಿನಾರನೆಯ ವರ್ಷದಿಂದ ಹಿಡಿದು ಇಪ್ಪತ್ತನಾಲ್ಕನೆಯ ವರ್ಷದವರೆಗೆ ಕನ್ಯೆಗೆ ಮತ್ತು ಇಪ್ಪತ್ತೈದನೆಯ ವರ್ಷದಿಂದ ಹಿಡಿದು ನಾಲ್ವತ್ತೆಂಟನೆಯ ವರ್ಷದವರೆಗೆ ಪುರುಷನಿಗೆ ವಿವಾಹದ ಉತ್ತಮ ಸಮಯ. ಇದರಲ್ಲಿ, ಹದಿನಾರು ವರ್ಷದಲ್ಲಿ ಹುಡುಗಿ ಮತ್ತು ಇಪ್ಪತ್ತೈದು ವರ್ಷದಲ್ಲಿ ಹುಡುಗ ವಿವಾಹ ಮಾಡಿಕೊಳ್ಳುವುದು ನಿಕೃಷ್ಟ; ಹದಿನೆಂಟು – ಇಪ್ಪತ್ತರ ಸ್ತ್ರೀ ಮತ್ತು ಮೂವತ್ತು, ಮೂವತ್ತೈದು ಅಥವಾ ನಾಲ್ವತ್ತು ವರ್ಷದ ಪುರುಷನ ವಿವಾಹ ಮಧ್ಯಮ; ಇಪ್ಪತ್ತುನಾಲ್ಕು ವರ್ಷದ ಸ್ತ್ರೀ ಮತ್ತು ನಾಲ್ವತ್ತೆಂಟು ವರ್ಷದ ಪುರುಷನ ವಿವಾಹವಾಗುವುದು ಉತ್ತಮವಾಗಿದೆ. ಯಾವ ದೇಶದಲ್ಲಿ ಇದೇ ರೀತಿಯ ವಿವಾಹದ ಶ್ರೇಷ್ಠ ವಿಧಿಯಿದೆಯೋ ಮತ್ತು ಬ್ರಹ್ಮಚರ್ಯ – ವಿದ್ಯಾಭ್ಯಾಸಗಳು ಹೆಚ್ಚಾಗಿ ಆಗುತ್ತವೋ, ಆ ದೇಶ ಸುಖಿಯಾಗಿರುತ್ತದೆ ಮತ್ತು ಯಾವುದರಲ್ಲಿ ಬ್ರಹ್ಮಚರ್ಯ–ವಿದ್ಯಾಭ್ಯಾಸ ರಹಿತರಾದ, ಬಾಲ್ಯಾವಸ್ಥೆಯಲ್ಲಿರುವವರ ಮತ್ತು ಅಯೋಗ್ಯರ ವಿವಾಹವಾಗುತ್ತದೋ, ಆ ದೇಶ ದುಃಖದಲ್ಲಿ ಮುಳುಗಿ ಹೋಗುತ್ತದೆ. ಏಕೆಂದರೆ – ಬ್ರಹ್ಮಚರ್ಯ– ವಿದ್ಯಾಪ್ರಾಪ್ತಿಪೂರ್ವಕವಾದ ವಿವಾಹ – ಎಂಬ ಸುಧಾರಣೆಯಿಂದಲೇ ಎಲ್ಲ ವಿಷಯಗಳ ಸುಧಾರಣೆಯೂ ಮತ್ತು ಅದರ ಕೆಡುವಿಕೆಯಿಂದ ಕೇಡೂ ಆಗುತ್ತದೆ.

**ಪ್ರಶ್ನೆ :–** **ಅಷ್ಟಾವರ್ಷಾ ಭವೇದ್ಗೌರೀ ನವವರ್ಷಾ ಚ ರೋಹಿಣೀ ।**

**ದಶವರ್ಷಾ ಭವೇತ್ಕನ್ಯಾ ತತ ಊರ್ಧ್ವಂ ರಜಸ್ವಲಾ ॥ ೧ ॥**

**ಮಾತಾ ಚೈವ ಪಿತಾ ತಸ್ಯಾ ಜ್ಯೇಷ್ಠೋಭ್ರಾತಾ ತಥೈವ ಚ ।**

**ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಮ್ ॥ ೨ ॥**

ಈ ಶ್ಲೋಕಗಳು ಪಾರಾಶರೀ (೧.೭.೭೮) ಮತ್ತು ಶೀಘ್ರಬೋಧ (೨.೧.೫೫.೬೩) ದಲ್ಲಿ ಬರೆಯಲ್ಪಟ್ಟಿವೆ. ಎಂಟನೆಯ ವರ್ಷದ ವಿವಾಹದಲ್ಲಿ ಕನ್ಯೆಗೆ ಗೌರೀ – ಎಂದೂ, ಒಂಭತ್ತನೆಯ ವರ್ಷದಲ್ಲಿ ರೋಹಿಣಿ – ಎಂದೂ, ಹತ್ತನೆಯ ವರ್ಷದಲ್ಲಿ ಕನ್ಯಾ – ಎಂದೂ, ಮತ್ತು ಅನಂತರ ರಜಸ್ವಲಾ – ಎಂದೂ ಸಂಜ್ಞೆಯುಂಟಾಗುತ್ತದೆ. (೧).

ಹತ್ತನೆಯ ವರ್ಷದವರೆಗೂ ವಿವಾಹ ಮಾಡದೆ ರಜಸ್ವಲೆಯಾದ ಕನ್ಯೆಯನ್ನು ನೋಡಿ,ತಾಯಿ,ತಂದೆ ಮತ್ತು ಅವಳ ಅಣ್ಣ ಈ ಮೂವರೂ ನರಕದಲ್ಲಿ ಬೀಳುತ್ತಾರೆ. (೨).

**ಉತ್ತರ:–** **ಏಕಕ್ಷಣಾ ಭವೇದ್ಗೌರೀ ದ್ವಿಕ್ಷಣೇಯಂತಂ ರೋಹಿಣೀ ।**

**ತ್ರಿಕ್ಷಣಾ ಸಾ ಭವೇತ್ಕನ್ಯಾ ಹ್ಯತ ಊರ್ಧ್ವಂ ರಜಸ್ವಾಲಾ ॥ ೧ ॥**

**ಮಾತಾ ಪಿತಾ ತಥಾ ಭ್ರಾತಾ ಮಾತುಲೋ ಭಗಿನೀ ಸ್ವಕಾ ।**

**ಸರ್ವೇ ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಮ್ ॥ ೨ ॥**

ಇದು ಸದ್ಯೋನಿರ್ಮಿತ ಬ್ರಹ್ಮಪುರಾಣದ ವಚನ. **ಅರ್ಥ:**– ಒಂದು ಪರಮಾಣು ಎಷ್ಟು ಕಾಲದಲ್ಲಿ ಒಂದು ತಿರುಗನ್ನು ಹಾಕುವುದೋ, ಅಷ್ಟು ಕಾಲವನ್ನು ಕ್ಷಣ – ಎನ್ನುತ್ತಾರೆ. ಯಾವ ಕನ್ಯೆ ಹುಟ್ಟುತ್ತಾಳೋ, ಆಗ ಒಂದು ಕ್ಷಣದಲ್ಲಿ ಗೌರಿ, ಎರಡನೆಯದರಲ್ಲಿ ರೋಹಿಣೀ, ಮೂರನೆಯದರಲ್ಲಿ ಕನ್ಯಾ ಮತ್ತು ನಾಲ್ಕನೆಯದರಲ್ಲಿ ರಜಸ್ವಲೆಯಾಗಿ ಹೋಗುತ್ತಾಳೆ. (೧).

ಆ ರಜಸ್ವಲೆಯನ್ನು ನೋಡಿ, ಅವಳ ತಾಯಿ, ತಂದೆ, ಸೋದರ, ಸೋದರಮಾವ ಮತ್ತು ಸೋದರೀ – ಎಲ್ಲರೂ ನರಕಕ್ಕೆ ಹೋಗುತ್ತಾರೆ. (೨)

**ಪ್ರಶ್ನೆ :**– ಈ ಶ್ಲೋಕಗಳು ಪ್ರಮಾಣವಲ್ಲ.

**ಉತ್ತರ:**– ಪ್ರಮಾಣವೇಕಲ್ಲ? ಬ್ರಹ್ಮದೇವರ ಶ್ಲೋಕಗಳು, ಪ್ರಮಾಣವಲ್ಲವಾದರೆ ನಿಮ್ಮವೂ ಪ್ರಮಾಣವಾಗಲಾರವು.

**ಪ್ರಶ್ನೆ:**– ಭಲೇ, ಭಲೇ! ಪರಾಶರ ಮತ್ತು ಕಾಶೀನಾಥರ ಪ್ರಮಾಣವನ್ನೂ ಸ್ವೀಕರಿಸುವುದಿಲ್ಲವೇ?

**ಉತ್ತರ:**– ಭಲೇ, ಸ್ವಾಮೀ, ಭಲೇ! ನೀವು ಬ್ರಹ್ಮದೇವರ ಪ್ರಮಾಣವನ್ನೂ ಅಂಗೀಕರಿಸುವುದಿಲ್ಲವೇ? ಪರಾಶರ–

ಕಾಶೀನಾಥರಿಗಿಂತ ಬ್ರಹ್ಮದೇವರು ದೊಡ್ಡವರಲ್ಲವೇ? ನೀವು ಬ್ರಹ್ಮದೇವರ ಶ್ಲೋಕಗಳಿಗೆ ಮನ್ನಣೆ ಕೊಡದಿದ್ದರೆ, ನಾವೂ ಕೂಡ ಪರಾಶರ – ಕಾಶೀನಾಥರ ಶ್ಲೋಕಗಳಿಗೆ ಮಾನ್ಯತೆ ನೀಡುವುದಿಲ್ಲ.

**ಪ್ರಶ್ನೆ:** – ನಿಮ್ಮ ಶ್ಲೋಕಗಳು ಅಸಂಭವವಾಗಿರುವುದರಿಂದ ಪ್ರಮಾಣವಲ್ಲ. ಏಕೆಂದರೆ, ಸಾವಿರಲಕ್ಷಣಗಳು ಜನನ-ಸಮಯದಲ್ಲೇ ಕಳೆದು ಹೋಗುತ್ತವೆ; ಅದರ ಮೇಲೆ ವಿವಾಹ ಹೇಗೆ ಅಗಬಲ್ಲದು? ಮತ್ತು ಆ ಸಮಯದಲ್ಲಿ ವಿವಾಹ ಮಾಡುವುದರ ಫಲವೂ ಕೂಡ ಏನೂ ಕಾಣುವುದಿಲ್ಲ.

**ಉತ್ತರ:–** ನಮ್ಮ ಶ್ಲೋಕಗಳು ಅಸಂಭವವಾಗಿದ್ದರೆ, ನಿಮ್ಮವೂ ಅಸಂಭವವಾಗಿವೆ. ಏಕೆಂದರೆ, ಎಂಟು, ಒಂಬತ್ತು, ಮತ್ತು ಹತ್ತನೆಯ ವರ್ಷದಲ್ಲಿಯೂ ಕೂಡ ವಿವಾಹ ಮಾಡುವುದು ನಿಷ್ಫಲವಾಗಿದೆ. ಏಕೆಂದರೆ – ಹದಿನಾರನೆಯ ವರ್ಷದ ನಂತರ, ಇಪ್ಪತ್ತನಾಲ್ಕನೆಯ ವರ್ಷದವರೆಗೆ ವಿವಾಹವಾಗುವುದರಿಂದ ಪುರುಷನ ವೀರ್ಯವು ಪರಿಪಕ್ವವೂ, ಶರೀರವೂ ಬಲಿಷ್ಠವೂ, ಸ್ತ್ರೀಯ ಗರ್ಭಾಶಯವೂ ಪೂರ್ಣವೂ ಮತ್ತು ಶರೀರವೂ ಕೂಡ ಬಲಯುಕ್ತವೂ ಆಗಿರುವುದರಿಂದ ಸಂತತಿಗಳು ಉತ್ತಮವಾಗುತ್ತವೆ.[೩] ಎಂಟನೆಯ ವರ್ಷದ ಕನ್ಯೆಯಲ್ಲಿ ಸಂತಾನೋತ್ಪತ್ತಿಯಾಗುವುದು ಅಸಂಭವ. ಹಾಗೆಯೇ ಗೌರೀ, ರೋಹಿಣೀ ಎಂಬ ಹೆಸರುಗಳನ್ನು ಕೊಡುವುದೂ ಕೂಡ ಅಯುಕ್ತವಾಗಿದೆ. ಮತ್ತು ಆ ಕನ್ಯೆ ಗೌರೀ– ಎಂದರೆ ಬೆಳ್ಳಗೆ ಇಲ್ಲದೆ, ಕಪ್ಪಗಿದ್ದರೆ, ಅವಳಿಗೆ ಗೌರೀ ಎಂಬ ಹೆಸರಿಡುವುದು ವ್ಯರ್ಥವಾಗುತ್ತದೆ. ಮತ್ತು ಗೌರಿಯು ಮಹಾದೇವನ ಹಾಗೂ ರೋಹಿಣಿಯು ವಸುದೇವನ ಪತ್ನಿಯರಾಗಿದ್ದರು. ಅವರನ್ನು ಪೌರಾಣಿಕರಾದ ನೀವು ಮಾತೃಸಮಾನರೆಂದು ಅಂಗೀಕರಿಸುತ್ತೀರಿ. ಆದುದರಿಂದ, ನಿಮ್ಮ ಮತ್ತು ನಮ್ಮ ಎರಡೆರಡು ಶ್ಲೋಕಗಳೂ ಮಿಥ್ಯೆಯೇ ಸರಿ. ಏಕೆಂದರೆ – ಹೇಗೆ ನಾವು **"ಬ್ರಹ್ಮೋವಾಚ"** – ಎಂಬ ಶ್ಲೋಕಗಳನ್ನು ರಚಿಸಿಕೊಂಡಿದ್ದೇವೋ, ಹಾಗೆಯೇ ಅವರೂ ಪರಾಶರ ಮೊದಲಾದವರ ಹೆಸರಿನಿಂದ ರಚಿಸಿಕೊಂಡಿದ್ದಾರೆ. ಆದುದರಿಂದ, ಇವೆಲ್ಲದರ ಪ್ರಮಾಣವನ್ನೂ ಬಿಟ್ಟು, ವೇದಗಳ ಪ್ರಮಾಣದಿಂದ ಎಲ್ಲ ಕಾರ್ಯಗಳನ್ನೂ ಮಾಡುತ್ತಾ ಹೋಗಿರಿ. ನೋಡಿರಿ – ಮನು ಸ್ಮೃತಿಯಲ್ಲಿ:–

**ತ್ರೀಣಿ ವರ್ಷಾಣ್ಯುದೀಕ್ಷೇತ ಕುಮಾರ್ಯೃತುಮತೀ ಸತೀ ।**

**ಊರ್ಧ್ವಂತು ಕಾಲಾದೇತಸ್ಮಾದ್ವಿಂದೇತ ಸದೃಶಂ ಪತಿಮ್ ॥** (ಮನು :– ೯.೯೦)

ಕನ್ಯೆ ರಜಸ್ವಲೆಯಾದ ಮೇಲೆ, ಮೂರು ವರ್ಷಗಳವರೆಗೆ, ಪತಿಯನ್ನು ಅರಸುತ್ತಾ, ತನಗೆ ಅನುರೂಪವಾದ ಪತಿಯನ್ನು ಹೊಂದಬೇಕು. ಪ್ರತಿ ತಿಂಗಳೂ ರಜೋದರ್ಶನವಾಗುವುದಾದರೆ, ಮೂರು ವರ್ಷಗಳಲ್ಲಿ ೩೬ ಸಾರಿ ರಜಸ್ವಲೆಯಾದ ಮೇಲೆ ವಿವಾಹ ಮಾಡಿಕೊಳ್ಳುವುದು ಯೋಗ್ಯವಾಗಿದೆ; ಅದಕ್ಕೆ ಮೊದಲಲ್ಲ.

**ಕಾಮಮಾಮರಣಾತ್ತಿಷ್ಠೇತ್ ಗೃಹೇ ಕನ್ಯರ್ತುಮತ್ಯಪಿ ।**

**ನ ಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥** (ಮನು :– ೯.೮೯)

---

೩. ಉಚಿತ ಸಮಯಕ್ಕಿಂತ ಕಡಿಮೆಯಾದ ವಯಸ್ಸಿನ ಸ್ತ್ರೀ–ಪುರುಷರ ಗರ್ಭಾದಾನವನ್ನು ಮುನಿವರ ಧನ್ವಂತರಿಗಳು ಸುಶ್ರುತದಲ್ಲಿ ನಿಷೇಧಿಸುತ್ತಾರೆ:

ಊನಷೋಡಶವರ್ಷಾಯಾಮಪ್ರಾಪ್ತಃ ಪಂಚವಿಂಶತಿಮ್ ।
ಯದ್ಯಾಧತ್ತೇ ಪುಮಾನ್ ಗರ್ಭಂ ಕುಕ್ಷಿಸ್ಥಃ ಸ ವಿಪದ್ಯತೇ ॥ ೧ ॥

ಜಾತೋ ವಾ ನ ಚಿರಂ ಜೀವೇಜ್ಜೀವೇದ್ವಾ ದುರ್ಬಲೇಂದ್ರಿಯಃ ।
ತಸ್ಮಾದತ್ಯಂತಬಾಲಾಯಾಂ ಗರ್ಭಾಧಾನಂ ನ ಕಾರಯೇತ್ ॥ ೨ ॥ *(ಸುಶ್ರುತ, ಶಾರೀರಸ್ಥಾನ ೧೦,೪೭,೪೮)*

**ಅರ್ಥ :** ಹದಿನಾರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀಯಲ್ಲಿ, ಇಪ್ಪತ್ತೈದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷನು ಗರ್ಭಾದಾನ ಮಾಡಿದರೆ, ಉದರದಲ್ಲಿರುವ ಆ ಗರ್ಭ ವಿಪತ್ತಿಗೆ ಸಿಕ್ಕುತ್ತದೆ. ಎಂದರೆ, ಪೂರ್ಣ ಅವಧಿಯವರೆಗೆ ಗರ್ಭದಲ್ಲಿದ್ದು ಹುಟ್ಟುವುದಿಲ್ಲ. (೧)

ಅಥವಾ ಹುಟ್ಟಿದರೆ, ಚಿರಕಾಲ ಜೀವಿಸುವುದಿಲ್ಲ. ಅಥವಾ ಜೀವಿಸಿದರೆ, ದುರ್ಬಲೇಂದ್ರಿಯವಾಗುವುದು. ಈ ಕಾರಣದಿಂದ, ಅತಿಬಾಲ್ಯಾವಸ್ಥೆಯಲ್ಲಿರುವ ಸ್ತ್ರೀಯಲ್ಲಿ ಗರ್ಭಸ್ಥಾಪನೆಯನ್ನು ಮಾಡಬಾರದು ॥೨॥

ಇಂತಿಂತಹ ಶಾಸ್ತ್ರೋಕ್ತ ನಿಯಮಗಳನ್ನು ಮತ್ತು ಸೃಷ್ಟಿಕ್ರಮವನ್ನು ನೋಡುವುದರಿಂದ, ಮತ್ತು ಬುದ್ಧಿಯಿಂದ ಆಲೋಚಿಸುವುದರಿಂದ, ೧೬ ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀ[ಯಲ್ಲಿ] ಮತ್ತು ೨೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷನು ಎಂದಿಗೂ ಗರ್ಭಾದಾನ ಮಾಡಲು ಅರ್ಹನಾಗುವುದಿಲ್ಲ – ಎಂಬುದೇ ಸಿದ್ಧವಾಗುತ್ತದೆ. ಈ ನಿಯಮಗಳಿಗೆ ವಿರುದ್ಧವಾಗಿ ಯಾರು ವರ್ತಿಸುತ್ತಾರೋ, ಅವರು ದುಃಖ ಭಾಗಿಗಳಾಗುತ್ತಾರೆ. –ದ.ಸ.

ಹುಡುಗ – ಹುಡುಗಿಯರು ಬೇಕಾದರೆ ಮರಣ ಪರ್ಯಂತವೂ ಕುಮಾರ – ಕುಮಾರಿಯರಾಗಿಯೇ ಇದ್ದು ಬಿಡಲಿ; ಆದರೆ, ಅಸದೃಶನಾದ ಅಥವಾ ಅಸದೃಶಳಾದ, ಎಂದರೆ ಪರಸ್ಪರ ವಿರುದ್ಧವಾದ ಗುಣ–ಕರ್ಮ–ಸ್ವಭಾವವುಳ್ಳವರ ವಿವಾಹವೆಂದಿಗೂ ಆಗಬಾರದು, ಇದರಿಂದ ಪೂರ್ವೋಕ್ತ ಸಮಯಕ್ಕಿಂತ ಮೊದಲು ಅಥವಾ ಅಸದೃಶರ ವಿವಾಹವಾಗುವುದು ಯೋಗ್ಯವಲ್ಲ– ಎಂದು ಸಿದ್ಧವಾಯಿತು.

**ಪ್ರಶ್ನೆ:–** ವಿವಾಹ ಮಾತಾಪಿತೃಗಳ ಅಧೀನದಲ್ಲಿರಬೇಕೋ ಅಥವಾ ಹುಡುಗ – ಹುಡುಗಿಯರ ಅಧೀನದಲ್ಲಿರಬಹುದೋ?

**ಉತ್ತರ:–** ಹುಡುಗ – ಹುಡುಗಿಯರ ಅಧೀನದಲ್ಲಿ ವಿವಾಹವಾಗುವುದು ಉತ್ತಮ . ಮಾತಾಪಿತೃಗಳು ಯಾವಾಗಲಾದರೂ ವಿವಾಹಮಾಡಿಸಲು ಆಲೋಚಿಸಿದರೆ, ಆಗಲೂ ಕೂಡ ಹುಡುಗ – ಹುಡುಗಿಯರ ಪ್ರಸನ್ನತೆಯಿಲ್ಲದೆ ಆಗಲಾರದು, ಏಕೆಂದರೆ – ಪರಸ್ಪರ ಪ್ರಸನ್ನತೆಯಿಂದ ವಿವಾಹವಾಗುವುದರಲ್ಲಿ ವಿರೋಧ ಬಹಳ ಕಡಿಮೆಯಾಗುತ್ತದೆ ಮತ್ತು ಸಂತತಿ ಉತ್ತಮವಾಗುತ್ತದೆ. ಅಪ್ರಸನ್ನತೆಯ ವಿವಾಹದಲ್ಲಿ ನಿತ್ಯವೂ ಕ್ಲೇಶವೇ ಇರುತ್ತದೆ. ವಿವಾಹದಲ್ಲಿ ಮುಖ್ಯ ಪ್ರಯೋಜನ ಮಾತಾಪಿತೃಗಳಿಗಲ್ಲ; ವರ ಮತ್ತು ಕನ್ಯೆಯರಿಗೆ ಇರುತ್ತದೆ. ಏಕೆಂದರೆ, ಅವರಿಬ್ಬರಲ್ಲಿ ಪರಸ್ಪರ ಪ್ರಸನ್ನತೆಯಿರುವುದಾದರೆ, ಅವರಿಗೇ ಸುಖವೂ, ವಿರೋಧದಲ್ಲಿ ಅವರಿಗೇ ದುಃಖವೂ ಆಗುತ್ತದೆ. ಮತ್ತು –

**ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।**

**ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಮ್ ॥** (ಮನು:– ೩.೬೦)

ಯಾವ ಕುಲದಲ್ಲಿ ಸ್ತ್ರೀಯಿಂದ ಪುರುಷನೂ, ಪುರುಷನಿಂದ ಸ್ತ್ರೀಯೂ ಸದಾ ಪ್ರಸನ್ನರಾಗಿರುತ್ತಾರೋ, ಆ ಕುಲದಲ್ಲಿಯೇ ಆನಂದ, ಲಕ್ಷ್ಮೀ ಮತ್ತು ಕೀರ್ತಿ ನಿವಾಸಮಾಡುತ್ತವೆ. ಮತ್ತು ಎಲ್ಲಿ ವಿರೋಧ, ಕಲಹವಿರುತ್ತದೋ, ಅಲ್ಲಿ, ದುಃಖ, ದಾರಿದ್ರ್ಯ ಮತ್ತು ನಿಂದೆ ನಿವಾಸಮಾಡುತ್ತವೆ. ಆದುದರಿಂದ, ಎಂತಹ ಸ್ವಯಂವರದ ರೀತಿ ಆರ್ಯಾವರ್ತದಲ್ಲಿ ಪರಂಪರೆಯಿಂದ ನಡೆದು ಬರುತ್ತಿದೆಯೋ, ಆ ವಿವಾಹವೇ ಉತ್ತಮವಾಗಿದೆ. ಯಾವಾಗ ಸ್ತ್ರೀ ಪುರುಷರು ವಿವಾಹಮಾಡಿಕೊಳ್ಳಲು ಇಚ್ಛಿಸುತ್ತಾರೋ, ಆಗ ವಿದ್ಯೆ, ವಿನಯ, ಶೀಲ, ರೂಪ, ಆಯು, ಬಲ, ಕುಲ, ಶರೀರದ ಪರಿಮಾಣ – ಮೊದಲಾದುವೆಲ್ಲವೂ ಯಥಾಯೋಗ್ಯ ವಾಗಿರಬೇಕು. ಎಂದಿನವರೆಗೆ ಇವುಗಳ ಹೊಂದಿಕೆಯಾಗುವುದಿಲ್ಲವೋ, ಅಂದಿನವರೆಗೆ ವಿವಾಹದಲ್ಲಿ ಸ್ವಲ್ಪವೂ ಸುಖ ಉಂಟಾಗುವುದಿಲ್ಲ; ಮತ್ತು ಬಾಲ್ಯಾವಸ್ಥೆಯಲ್ಲಿ ವಿವಾಹ ಮಾಡಿಕೊಳ್ಳುವುದರಿಂದಲೂ ಸುಖವು ಉಂಟಾಗುವುದಿಲ್ಲ.

**ಯುವಾ ಸುವಾಸಾಃ ಪರಿವೀಚಿತ ಆಗಾತ್ಸ ಉ ಶ್ರೇಯಾನ್ಭವತಿ ಜಾಯಮಾನಃ ।**

**ತಂ ಧೀರಾಸಃ ಕವಯ ಉನ್ನಯಂತಿ ಸ್ವಾಧ್ಯೋ ಮನಸಾ ದೇವಯಂತಃ ॥೧॥** (ಋಗ್ವೇದ:– ೩.೮.೪)

**ಆ ಧೇನವೋ ಧುನಯಂತಾಮಾಶಿಶ್ವೀಃ ಸಬರ್ದುಘಾಃ ಶಶಯಾ ಅಪ್ರದುಗ್ಧಾಃ ।**

**ನವ್ಯಾ ನವ್ಯಾ ಯುವತಯೋ ಭವಂತೀರ್ಮಹದ್ದೇ ವಾನಾಮಸುರತ್ವಮೇಕಮ್ ॥೨॥** (ಋಗ್ವೇದ:– ೩. ೫೫. ೧೬)

**ಪೂರ್ವೀರಹಂ ಶರದಃ ಶಶ್ರಮಾಣಾ ದೋಷಾವಸ್ತೋರುಷಸೋ ಜರ ಯಂತೀಃ ।**

**ಮಿನಾತಿ ಶ್ರಿಯಂ ಜರಿಮಾ ತನೂನಾಮಪ್ಯೂನು ಪತ್ನೀ ವೃಷಣೋ ಜಗಮ್ಯುಃ ॥೩॥** (ಋಗ್ವೇದ:– ೧.೧೭೯.೧.)

ಯಾವ ಪುರುಷನು (ಪರಿವೀತಃ) ಯಜ್ಞೋಪವೀತಧಾರಿಯಾಗಿ – ಬ್ರಹ್ಮಚರ್ಯ ಸೇವನದಿಂದ, ಉತ್ತಮ ಶಿಕ್ಷಣ– ವಿದ್ಯೆಯಿಂದ ಯುಕ್ತನಾಗಿ, (ಸುವಾಸಾಃ) ಸುಂದರ ವಸ್ತ್ರಗಳನ್ನು ಧರಿಸಿದವನಾಗಿ, ಬ್ರಹ್ಮಚರ್ಯಯುಕ್ತನಾಗಿ, (ಯುವಾ) ಪೂರ್ಣ ಯುವಕನಾಗಿ, ವಿದ್ಯಾಗ್ರಹಣಮಾಡಿ, ಗೃಹಾಶ್ರಮಕ್ಕೆ ಬರುತ್ತಾನೋ, (ಸ ಉ) ಕೇವಲ ಅವನೇ ಎರಡನೆಯದಾದ ವಿದ್ಯಾಜನ್ಮದಲ್ಲಿ.

(ಜಾಯಮಾನಃ) ಪ್ರಸಿದ್ಧನಾಗಿ (ಶ್ರೇಯಾನ್) ಅತಿಶಯ ಶೋಭಾಯುಕ್ತನು, ಮಂಗಳಕಾರಿಯು, (ಭವತಿ) ಆಗುತ್ತಾನೆ. (ಸ್ವಾಧ್ಯಾಃ) ಉತ್ತಮ ರೀತಿಯಲ್ಲಿ ಧ್ಯಾನಯುಕ್ತರೂ, (ಮನಸಾ) ವಿಜ್ಞಾನದಿಂದ, (ದೇವಯಂತಃ) ವಿದ್ಯಾವೃದ್ಧಿಯ ಕಾಮನಾಯುಕ್ತರೂ, (ಧೀರಾಸಃ) ಧೈರ್ಯಯುಕ್ತರೂ ಆದ, (ಕವಯಃ) ವಿದ್ವಜ್ಜನರು (ತಂ) ಆ ಪುರುಷನನ್ನೇ (ಉನ್ನಯಂತಿ) ಉನ್ನತಿಶೀಲನನ್ನಾಗಿ ಮಾಡಿ, ಪ್ರತಿಷ್ಠಿತನಾಗಿ ರೂಪಿಸುತ್ತಾರೆ. ಮತ್ತು ಯಾರು ಬ್ರಹ್ಮಚರ್ಯಧಾರಣ, ವಿದ್ಯಾ, ಉತ್ತಮ ಶಿಕ್ಷಣವನ್ನು ಗ್ರಹಿಸದೆ, ಅಥವಾ ಬಾಲ್ಯಾವಸ್ಥೆಯಲ್ಲಿ ವಿವಾಹ ಮಾಡಿಕೊಳ್ಳುತ್ತಾರೋ, ಆ ಸ್ತ್ರೀ-ಪುರುಷರು ನಷ್ಟ-ಭ್ರಷ್ಟರಾಗಿ, ವಿದ್ವಾಂಸರಲ್ಲಿ ಗೌರವವನ್ನು ಪಡೆಯುವುದಿಲ್ಲ. (೧)

(ಅಪ್ರದುಗ್ಧಾಃ ಧೇನವಃ) ಯಾರು ಇನ್ನೂ ಹಾಲನ್ನು ಕರೆಯದಿರುವ ಹಸುಗಳಂತೆ, (ಅಶಿಶ್ವೀಃ) ಶೈಶವ-ಬಾಲ್ಯಾವಸ್ಥೆಯಿಂದ ದಾಟಿದರೂ, (ಸಬರ್ದುಘಾಃ) ಎಲ್ಲ ರೀತಿಯ ಉತ್ತಮ ವ್ಯವಹಾರಗಳನ್ನೂ ಪೂರ್ಣಗೊಳಿಸುವವರೂ, (ಶಶಯಾಃ) ಕುಮಾರಾವಸ್ಥೆಯಿಂದ ಪಾರಾಗಿರುವವರೂ, (ನವ್ಯಾಃ ನವ್ಯಾಃ) ನವ-ನವ ಶಿಕ್ಷಣ-ಸ್ಥಿತಿಗಳಿಂದ ಪರಿಪೂರ್ಣರೂ, (ಭವಂತೀಃ) ಆಗಿದ್ದಾರೋ, (ಯುವತಯಃ) ಆ ಪೂರ್ಣಯುವಾವಸ್ಥೆಯಲ್ಲಿರುವ ಸ್ತ್ರೀಯರು. (ದೇವಾನಾಂ) ಬ್ರಹ್ಮಚರ್ಯ- ಸುನಿಯಮ ಗಳಿಂದ ಪೂರ್ಣರಾದ ವಿದ್ವಾಂಸರ, (ಏಕಂ) ಅದ್ವಿತೀಯವೂ (ಮಹತ್) ದೊಡ್ಡದೂ ಆದ, (ಅಸುರತ್ವಂ) ಪ್ರಜ್ಞಾವತ್ತ್ವವನ್ನು ಶಾಸ್ತ್ರ - ಶಿಕ್ಷಣ ಸಹಿತವಾದ ಜನರಂಜನ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾ, ಯುವಕರಾದ ಪತಿಗಳನ್ನು ಹೊಂದಿ. (ಆ ಧುನಯಂತಾಂ) ಗರ್ಭಧಾರಣೆ ಮಾಡಲಿ; ಎಂದಿಗೂ, ಮರೆತೂ ಕೂಡ ಬಾಲ್ಯಾವಸ್ಥೆಯಲ್ಲಿ ಪುರುಷನನ್ನು ಮನಸ್ಸಿನಿಂದಲೂ ಕೂಡ ಧ್ಯಾನಿಸದಿರಲಿ. ಏಕೆಂದರೆ, ಈ ಕಾರ್ಯವೇ ಈ ಲೋಕದ ಮತ್ತು ಪರಲೋಕದ ಸುಖದ ಸಾಧನವಾಗಿದೆ. ಬಾಲ್ಯಾವಸ್ಥೆಯಲ್ಲಿನ ವಿವಾಹದಿಂದ ಎಷ್ಟು ನಾಶ ಪುರುಷನಿಗಾಗುವುದೋ, ಅದಕ್ಕಿಂತ ಹೆಚ್ಚು ನಾಶ ಸ್ತ್ರೀಗೆ ಆಗುತ್ತದೆ. (೨)

ಹೇಗೆ(ನು) ಶೀಘ್ರವಾಗಿ, (ಶಶ್ರಮಾಣಾಃ) ಅತ್ಯಂತ ಶ್ರಮವಹಿಸುವ, (ವೃಷಣಃ) ವೀರ್ಯಸೇಚನ ಸಮರ್ಥರಾದ, ಪೂರ್ಣಯುವಾವಸ್ಥಾಯುಕ್ತರಾದ ಪುರುಷರು, (ಪತ್ನೀಃ) ಯುವಾವಸ್ಥೆಯಲ್ಲಿರುವ, ಹೃದಯಕ್ಕೆ ಪ್ರಿಯರಾದ ಸ್ತ್ರೀಯರನ್ನು (ಜಗಮ್ಯುಃ) ಪಡೆದು, ಪೂರ್ಣ ನೂರುವರ್ಷಗಳು, ಅಥವಾ, ಅದಕ್ಕಿಂತ ಹೆಚ್ಚು ಅಯಸ್ಸನ್ನು ಆನಂದದಿಂದ ಅನುಭವಿಸುತ್ತಾರೋ ಮತ್ತು ಪುತ್ರರು - ಮೊದಲಾದವರಿಂದ ಸಂಯುಕ್ತರಾಗಿರುತ್ತಾರೋ, ಹಾಗೆ ಸ್ತ್ರೀ-ಪುರುಷರು ಸದಾ ವರ್ತಿಸಬೇಕು. ಹೇಗೆ, (ಪೂರ್ವೀ) ಹಿಂದೆ ಕಳೆದು ಹೋದ, (ಶರದಃ) ಶರದೃತುಗಳನ್ನೂ, ಮತ್ತು (ಜರಯಂತೀ) ವೃದ್ಧಾವಸ್ಥೆಯನ್ನು ತರುವ, (ಉಷಸಃ) ಪ್ರಾತಃಕಾಲದ ವೇಳೆಗಳನ್ನೂ, (ದೋಷಾ) ರಾತ್ರಿ ಮತ್ತು (ವಸ್ತೋಃ) ಹಗಲುಗಳನ್ನೂ (ತನೂನಾಂ) ಶರೀರಗಳ, (ಶ್ರಿಯಂ) ಸೊಬಗನ್ನೂ, (ಜರಿಮಾ) ಅತಿಶಯವಾದ ವಾರ್ಧಕ್ಯವು, ಬಲ ಮತ್ತು ಸೌಂದರ್ಯವನ್ನು (ಮಿನಾತಿ) ದೂರಮಾಡಿಬಿಡುತ್ತದೋ, ಹಾಗೆ. (ಅಹಂ) ಸ್ತ್ರೀ ಅಥವಾ ಪುರುಷನಾದ 'ನಾನು' (ಉ) ಒಳ್ಳೆಯ ರೀತಿಯಲ್ಲಿ, (ಅಪಿ) ನಿಶ್ಚಯವಾಗಿಯೂ, ಬ್ರಹ್ಮಚರ್ಯದಿಂದ ವಿದ್ಯೆ, ಶಿಕ್ಷಣ, ಶರೀರದ ಮತ್ತು ಆತ್ಮನ ಬಲ ಹಾಗೂ ಯುವಾವಸ್ಥೆಯನ್ನು ಹೊಂದಿಯೇ ವಿವಾಹ ಮಾಡಿಕೊಳ್ಳುವೆನು. ಇದಕ್ಕೆ ವಿರುದ್ಧವಾಗಿ ಮಾಡುವುದು ವೇದ ವಿರುದ್ಧವಾದ ಕಾರಣ ಸುಖದಾಯಕವಾದ ವಿವಾಹ ಎಂದಿಗೂ ಆಗದು.(೩)

ಎಂದಿನವರೆಗೆ ಇದೇ ರೀತಿ ಋಷಿ-ಮುನಿಗಳೂ, ರಾಜ-ಮಹಾರಾಜರುಗಳೂ ಆರ್ಯರೂ, ಬ್ರಹ್ಮಚರ್ಯದಿಂದ ವಿದ್ಯೆಯನ್ನು ಗಳಿಸಿಯೇ ವಿವಾಹವನ್ನು ಮಾಡಿಕೊಳ್ಳುತ್ತಿದ್ದರೋ, ಅಂದಿನವರೆಗೆ ಸದಾ ಈ ದೇಶದ ಉನ್ನತಿಯಾಗುತ್ತಿದ್ದಿತು. ಯಾವಾಗಿನಿಂದ ಬ್ರಹ್ಮಚರ್ಯದಿಂದ ವಿದ್ಯೆಯ ಅಧ್ಯಯನ ಮಾಡದೇ ಇರುವುದು, ಬಾಲ್ಯಾವಸ್ಥೆಯಲ್ಲಿ ಪರಾಧೀನವಾಗಿ, ಎಂದರೆ ಮಾತಾಪಿತೃಗಳಿಗೆ ಅಧೀನವಾಗಿ ವಿವಾಹ ಆಗಲಾರಂಭಿಸಿತೋ, ಆಗಿನಿಂದ ಕ್ರಮಶಃ ಆರ್ಯಾವರ್ತ ದೇಶಕ್ಕೆ ಹಾನಿ ಉಂಟಾಗುತ್ತಾ ಬಂದಿದೆ. ಆದುದರಿಂದ, ಈ ದುಷ್ಟ ಕಾರ್ಯವನ್ನು ಬಿಟ್ಟು ಸಜ್ಜನರು ಪೂರ್ವೋಕ್ತವಾದ ರೀತಿಯಲ್ಲಿ ಸ್ವಯಂವರ ವಿವಾಹವನ್ನು ಮಾಡಿಕೊಳ್ಳುವುದೇ ಉತ್ತಮ. ಮತ್ತು ವಿವಾಹವನ್ನು ವರ್ಣಾನುಕ್ರಮದಿಂದ ಮಾಡಿಕೊಳ್ಳಬೇಕು. ಅಲ್ಲದೆ, ವರ್ಣವ್ಯವಸ್ಥೆಯೂ ಕೂಡ ಗುಣ, ಕರ್ಮ, ಸ್ವಭಾವಕ್ಕೆ ಅನುಸಾರವಾಗಿ ಆಗಬೇಕು.

**ಪ್ರಶ್ನೆ :-** ಯಾವಳ ಅಥವಾ ಯಾವನ ಮಾತಾಪಿತೃಗಳು ಬ್ರಾಹ್ಮಣರಾಗಿರುತ್ತಾರೋ, ಅವಳು ಅಥವಾ ಅವನು ಬ್ರಾಹ್ಮಣಿತಿ-ಬ್ರಾಹ್ಮಣರಾಗುತ್ತಾರೋ, ಅಥವಾ ಯಾವಳ ಅಥವಾ ಯಾವನ ಮಾತಾಪಿತೃಗಳು ಬೇರೆ ವರ್ಣಸ್ಥರಾಗಿರುತ್ತಾರೋ, ಅವರ ಮಕ್ಕಳೂ ಎಂದಾದರೂ ಬ್ರಾಹ್ಮಣರಾಗಬಲ್ಲರೋ?

**ಉತ್ತರ:-** ಹೌದು, ಬಹುಜನರು (ಬ್ರಾಹ್ಮಣರು) ಆಗಿಹೋಗಿದ್ದಾರೆ; ಆಗುತ್ತಾರೆ; ಮತ್ತು ಮುಂದಕ್ಕೂ ಆಗುವರು.

ಉದಾಹರಣೆಗೆ, ಛಾಂದೋಗ್ಯೋಪನಿಷತ್ತಿನಲ್ಲಿ (೪.೪) (ಹೇಳಿರುವಂತೆ) ಜಾಬಾಲ ಋಷಿಯು ಅಜ್ಞಾತ ಕುಲದಿಂದಲೂ, ಮಹಾಭಾರತದಲ್ಲಿ (ಅನುಶಾಸನ ಪರ್ವ-೪) (ಹೇಳಿರುವಂತೆ) ವಿಶ್ವಾಮಿತ್ರನು ಕ್ಷತ್ರಿಯ ವರ್ಣದಿಂದಲೂ, ಮತ್ತು ಮಾತಂಗ ಋಷಿ (ಅನುಶಾಸನ ಪರ್ವ-೨೭.೮) ಚಾಂಡಾಲಕುಲದಿಂದಲೂ ಬ್ರಾಹ್ಮಣರಾಗಿದ್ದರು. ಈಗಲೂ ಯಾವನು ಉತ್ತಮ ವಿದ್ಯೆ ಮತ್ತು ಸ್ವಭಾವದಿಂದ ಯುಕ್ತನಾಗಿರುತ್ತಾನೋ, ಅವನೇ ಬ್ರಾಹ್ಮಣ (ವರ್ಣ) ಕ್ಕೆ ಯೋಗ್ಯನೂ ಮತ್ತು ದುರ್ಬಲ ಬುದ್ಧಿಯುಳ್ಳವನು ಶೂದ್ರ (ವರ್ಣಕ್ಕೆ) ಯೋಗ್ಯನೂ ಆಗಿರುತ್ತಾರೆ; ಮತ್ತು ಹಾಗೆಯೇ ಮುಂದಕ್ಕೂ ಆಗುವುದು.

**ಪ್ರಶ್ನೆ:-** ಭಲೇ! ಯಾವ ಶರೀರ ರಜೋವೀರ್ಯದಿಂದಾಗಿದೆಯೋ, ಅದು ಪರಿವರ್ತಿತವಾಗಿ ಅನ್ಯವರ್ಣಕ್ಕೆ ಹೇಗೆ ಯೋಗ್ಯವಾಗಬಲ್ಲದು?

**ಉತ್ತರ:-** ರಜೋವೀರ್ಯದ ಯೋಗದಿಂದ ಬ್ರಾಹ್ಮಣ ಶರೀರವಾಗುವುದಿಲ್ಲ. ಆದರೆ:-

**ಸ್ವಾಧ್ಯಾಯೇನ ಜಪೈರ್ಹೋಮೈಸ್ತ್ರೈ ವಿದ್ಯೇನೇಜ್ಯಯಾ ಸುತೈಃ ।**

**ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ॥** (ಮನು:-೨.೨೮)

ಇದರ ಅರ್ಥವನ್ನು ಮೊದಲು ಹೇಳಿಯೇ ಇದ್ದೇವೆ. ಈಗ ಇಲ್ಲಿಯೂ ಸಂಕ್ಷೇಪವಾಗಿ ಹೇಳುತ್ತೇವೆ.[೪] (ಸ್ವಾಧ್ಯಾಯೇನ) ಓದುವುದರಿಂದ- ಓದಿಸುವುದರಿಂದ, (ಜಪೈಃ) ಚಿಂತನ ಮಾಡಿರುವುದರಿಂದ - ಮಾಡಿಸುವುದರಿಂದ, (ಹೋಮೈಃ) ನಾನಾ ವಿಧದ ಹೋಮಗಳ ಅನುಷ್ಠಾನದಿಂದ, (ತ್ರೈವಿದ್ಯೇನ) ಸಂಪೂರ್ಣ ವೇದಗಳನ್ನು ಶಬ್ದ - ಅರ್ಥ - ಸಂಬಂಧ ಮತ್ತು ಸ್ವರೋಚ್ಚಾರಣಸಹಿತ ಓದುವುದರಿಂದ - ಓದಿಸುವುದರಿಂದ, (ಇಜ್ಯಯಾ) ಪೌರ್ಣ ಮಾಸೀ, ಇಷ್ಟಿ- ಮೊದಲಾದುವನ್ನು ಮಾಡುವುದರಿಂದ, ಪೂರ್ವೋಕ್ತ ವಿಧಿಯಂತೆ, (ಸುತೈಃ) ಧರ್ಮಾನುಸಾರ ಸಂತಾನೋತ್ಪತ್ತಿ ಮಾಡುವುದರಿಂದ, (ಮಹಾಯಜ್ಞೈಶ್ಚ) ಪೂರ್ವೋಕ್ತ ಬ್ರಹ್ಮಯಜ್ಞ, ಪಿತೃಯಜ್ಞ, ಬಲಿವೈಶ್ವದೇವಯಜ್ಞ ಮತ್ತು ಅತಿಥಿಯಜ್ಞ, (ಯಜ್ಞೈಃಚ) ಅಗ್ನಿಷ್ಟೋಮವೇ ಮೊದಲಾದ ಯಜ್ಞಗಳನ್ನೂ, ವಿದ್ವಾಂಸರ-ಸಂಗ-ಸತ್ಕಾರ, ಸತ್ಯಭಾಷಣ, ಪರೋಪಕಾರ ಮೊದಲಾದ ಸತ್ಕರ್ಮಗಳನ್ನೂ ಮಾಡುವುದರಿಂದ ಮತ್ತು ಸಂಪೂರ್ಣ ಶಿಲ್ಪವಿದ್ಯೆ - ಮೊದಲಾದುವನ್ನು ಕಲಿತು, ದುಷ್ಟಾಚಾರವನ್ನು ಬಿಟ್ಟು, ಶ್ರೇಷ್ಠಾಚಾರದಲ್ಲಿ ವರ್ತಿಸುವುದರಿಂದ, (ಇಯಂ) ಈ, (ತನುಃ) ಶರೀರವು, (ಬ್ರಾಹ್ಮೀ) ಬ್ರಾಹ್ಮಣ- ಯೋಗ್ಯನಾಗಿ, (ಕ್ರಿಯತೇ) ಮಾಡಲ್ಪಡುತ್ತದೆ. ನೀವು ಈ ಶ್ಲೋಕವನ್ನು ಒಪ್ಪುವುದಿಲ್ಲವೇನು? ಒಪ್ಪುತ್ತೇವೆ. ಮತ್ತೇಕೆ ರಜೋವೀರ್ಯದ ಯೋಗದಿಂದ ವರ್ಣ - ವ್ಯವಸ್ಥೆಯನ್ನು ಅಂಗೀಕರಿಸುತ್ತೀರಿ? ನಾನೊಬ್ಬನೇ ಅಲ್ಲ; ಆದರೆ ಬಹಳ ಮಂದಿ ಪರಂಪರೆಯಿಂದ ಹೀಗೆಯೇ ಅಂಗೀಕರಿಸುತ್ತಾ ಬಂದಿದ್ದಾರೆ.

**ಪ್ರಶ್ನೆ:-** ನೀವು ಪರಂಪರೆಯ ಖಂಡನವನ್ನೂ ಮಾಡುತ್ತೀರೇನು?

**ಉತ್ತರ:-** ಇಲ್ಲ, ಆದರೆ ನಿಮ್ಮ ತಲೆಕೆಳಗಾದ ಅರಿವನ್ನು ಅಂಗೀಕರಿಸದೆ, ಅದರ ಖಂಡನವನ್ನೂ ಕೂಡ ಮಾಡುತ್ತೇವೆ.

**ಪ್ರಶ್ನೆ:-** ನಮ್ಮದು ತಲೆಕೆಳಗಾದ ತಿಳಿವು ಮತ್ತು ನಿಮ್ಮದು ನೇರವಾದ ತಿಳಿವು - ಎಂಬುದಕ್ಕೆ ಪ್ರಮಾಣವೇನಿದೆ?

**ಉತ್ತರ:-** ನೀವು ಐದೋ- ಏಳೋ ಪೀಳಿಗೆಗಳ ನಡವಳಿಕೆಯನ್ನು ಸನಾತನ ವ್ಯವಹಾರವೆಂದು ಅಂಗೀಕರಿಸುತ್ತೀರಿ ಮತ್ತು ನಾವು ವೇದಗಳ ಮತ್ತು ಸೃಷ್ಟಿಯ ಆರಂಭದಿಂದ ಇಂದಿನವರೆಗೆ ಪರಂಪರೆಯನ್ನು ಅಂಗೀಕರಿಸುತ್ತೇವೆ - ಇದೇ ಪ್ರಮಾಣ. ನೋಡಿರಿ; ತಂದೆ ಶ್ರೇಷ್ಠನಾಗಿದ್ದರೆ, ಅವನ ಮಗನು ದುಷ್ಟನಾಗಿರುವುದೂ, ಮತ್ತು ಮಗ ಶ್ರೇಷ್ಠನಾಗಿದ್ದರೆ, ಅವನ ತಂದೆ ದುಷ್ಟನಾಗಿರುವುದೂ, ಮತ್ತು ಒಂದೆಂಡೆ ಇಬ್ಬರೂ ಶ್ರೇಷ್ಠರು ಅಥವಾ ದುಷ್ಟರು ಆಗಿರುವುದೂ ಕಂಡುಬರುತ್ತದೆ. ಆದುದರಿಂದ ನೀವುಗಳು ಭ್ರಮದಲ್ಲಿ ಬಿದ್ದಿದ್ದೀರಿ. ನೋಡಿರಿ, ಮನು ಮಹಾರಾಜನು ಏನು ಹೇಳಿದ್ದಾನೆ:-

**ಯೇನಾಸ್ಯ ಪಿತರೋ ಯಾತಾ ಯೇನ ಯಾತಾ ಪಿತಾಮಹಾಃ ।**

**ತೇನ ಯಾಯಾತ್ಸತಾಂ ಮಾರ್ಗಂ ತೇನ ಗಚ್ಛನ್ನ ರಿಷ್ಯತೇ ॥** (ಮನು :- ೪.೧೭೮)

---

೪. ತೃತೀಯ ಸಮುಲ್ಲಾಸದಲ್ಲಿ ಪುಟ ೭೯ ನೋಡಿ.

ಯಾವ ಮಾರ್ಗದಿಂದ ಈ ಸಂತತಿಯ ಪಿತೃ-ಪಿತಾಮಹರು ನಡೆದಿದ್ದಾರೋ, ಅದೇ ಮಾರ್ಗದಿಂದ ಸಂತತಿಯೂ ನಡೆಯಲಿ, ಆದರೆ (ಸತಾಂ) ಸತ್ಪುರುಷರಾದ ಪಿತೃ-ಪಿತಾಮಹರಿದ್ದಲ್ಲಿ ಮಾತ್ರ, ಅದರ ಮಾರ್ಗದಲ್ಲಿಯೇ ನಡೆಯಬೇಕು ಮತ್ತು ಪಿತೃ-ಪಿತಾಮಹರು ದುಷ್ಟರಾಗಿದ್ದರೆ, ಅವರ ಮಾರ್ಗದಲ್ಲಿ ಎಂದೆಂದಿಗೂ ನಡೆಯಬಾರದು. ಏಕೆಂದರೆ – ಉತ್ತಮರೂ, ಧರ್ಮಾತ್ಮರೂ ಆದ ಪುರುಷರ ಮಾರ್ಗದಲ್ಲಿ ನಡೆದರೆ, ಎಂದಿಗೂ ದುಃಖ ಉಂಟಾಗುವುದಿಲ್ಲ. ಇದನ್ನು ನೀವು ಒಪ್ಪುತ್ತೀರೋ, ಅಥವಾ ಇಲ್ಲವೋ? ಹೌದು, ಹೌದು, ಒಪ್ಪುತ್ತೇವೆ. ಇನ್ನೂ ನೋಡಿರಿ, ಯಾವುದು ಪರಮೇಶ್ವರನಿಂದ ಪ್ರಕಾಶಿತವಾದ ವೇದಗಳಲ್ಲಿ ಹೇಳಿರುವ ಮಾತಾಗಿರುತ್ತದೋ, ಅದೇ ಸನಾತನವಾದುದು ಮತ್ತು ಯಾವುದು ಅದಕ್ಕೆ ವಿರುದ್ಧವಾಗಿರುತ್ತದೋ, ಅದು ಎಂದಿಗೂ ಸನಾತನವಾಗಲಾರದು. ಎಲ್ಲರೂ ಹೀಗೆಯೇ ಒಪ್ಪಬೇಕೋ ಅಥವಾ ಒಪ್ಪಬಾರದೋ? ಅಗತ್ಯವಾಗಿ ಒಪ್ಪಬೇಕು. ಹೀಗೆ ಯಾವನು ಒಪ್ಪುವುದಿಲ್ಲವೋ, ಅವನನ್ನು "ಯಾವನಾದರೊಬ್ಬನ ತಂದೆ ದರಿದ್ರನಾಗಿದ್ದರೆ, ಮತ್ತು ಅವನ ಮಗ ಧನಾಢ್ಯನಾಗಿದ್ದರೆ, ತನ್ನ ತಂದೆಯ ದರಿದ್ರಾವಸ್ಥೆಯ ಅಭಿಮಾನದಿಂದ ಧನವನ್ನು ಬಿಸಾಟುಬಿಡಬೇಕೇ? ಯಾವನ ತಂದೆಯು ಕುರುಡನಾಗಿರುತ್ತಾನೋ, ಆ ಮಗನೂ ಕೂಡ ತನ್ನ ಕಣ್ಣುಗಳನ್ನು ಕಿತ್ತು ಹಾಕಿಕೊಳ್ಳಬೇಕೇ?" – ಎಂದು ಕೇಳಿರಿ, ಇಲ್ಲ, ಇಲ್ಲ. ಆದರೆ, ಪುರುಷರ ಯಾವ ಯಾವ ಉತ್ತಮ ಕರ್ಮಗಳಿರುತ್ತವೋ ಅವುಗಳ ಸೇವನವನ್ನೂ ಮತ್ತು ದುಷ್ಟಕರ್ಮಗಳ ತ್ಯಾಗವನ್ನೂ ಮಾಡುವುದು ಸರ್ವರಿಗೂ ಅತ್ಯಾವಶ್ಯಕ. ಯಾವನಾದರೂ ರಜೋ-ವೀರ್ಯ- ಯೋಗದಿಂದಲೇ ವರ್ಣಾಶ್ರಮ ವ್ಯವಸ್ಥೆಯನ್ನು ಒಪ್ಪುವುದಾದರೆ ಮತ್ತು ಗುಣ – ಕರ್ಮಗಳ ಯೋಗದಿಂದ ಒಪ್ಪುವುದಿಲ್ಲವಾದರೆ, ಅವನನ್ನು , "ಯಾವನಾದರೋ ತನ್ನ ವರ್ಣವನ್ನು ಬಿಟ್ಟು, ನೀಚನೋ, ಅಂತ್ಯಜನೋ, ಅಥವಾ ಕ್ರೈಸ್ತನೋ, ಮುಸಲ್ಮಾನನೋ ಆಗಿ ಹೋಗಿದ್ದರೆ, ಅವನನ್ನೂ ಬ್ರಾಹ್ಮಣನೆಂದು ಏಕೆ ಒಪ್ಪಿಕೊಳ್ಳುವುದಿಲ್ಲ?" ಎಂದು ಕೇಳಬೇಕು. ಈ ಸ್ಥಿತಿಯಲ್ಲಿ – "ಅವನು ಬ್ರಾಹ್ಮಣ ಕರ್ಮಗಳನ್ನು ಬಿಟ್ಟುಬಿಟ್ಟನು; ಆದುದರಿಂದ ಅವನು ಬ್ರಾಹ್ಮಣನಲ್ಲ". – ಎಂದೇ ಹೇಳುವಿರಿ. ಆದುದರಿಂದ, ಯಾವ ಬ್ರಾಹ್ಮಣ-ಮೊದಲಾದವರು ಉತ್ತಮ ಕರ್ಮಮಾಡುತ್ತಾರೋ, ಅವರೇ ಬ್ರಾಹ್ಮಣ ಮೊದಲಾದವರು; ಮತ್ತು ಯಾವನು ನೀಚನಾದರೂ ಉತ್ತಮ ವರ್ಣದ ಗುಣ-ಕರ್ಮ-ಸ್ವಭಾವಗಳಿಂದ ಯುಕ್ತನಾಗಿದ್ದರೆ, ಅವನನ್ನು ಉತ್ತಮ ವರ್ಣದಲ್ಲಿಯೂ, ಮತ್ತು ಯಾವನು ಉತ್ತಮ ವರ್ಣಸ್ಥನಾಗಿ ನೀಚಕರ್ಮ ಮಾಡುತ್ತಾನೋ, ಅವನನ್ನು ನೀಚವರ್ಣದಲ್ಲಿಯೂ ಅವಶ್ಯಕವಾಗಿ ಎಣಿಸಬೇಕು – ಎಂಬುದು ಸಿದ್ಧವಾಗುತ್ತದೆ.

**ಪ್ರಶ್ನೆ :-** **ಬ್ರಾಹ್ಮಣೋऽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ ।**

**ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥** (ಯಜು: ೩೧-೧೧)

ಬ್ರಾಹ್ಮಣನು ಈಶ್ವರನ ಮುಖದಿಂದಲೂ, ಕ್ಷತ್ರಿಯನು ಬಾಹುಗಳಿಂದಲೂ, ವೈಶ್ಯನು ತೊಡೆಗಳಿಂದಲೂ ಮತ್ತು ಶೂದ್ರನು ಪಾದಗಳಿಂದಲೂ ಉತ್ಪನ್ನನಾಗಿದ್ದಾನೆ – ಎಂದು ಇದರ ಅರ್ಥ. ಆದುದರಿಂದ, ಹೇಗೆ ಮುಖವು ತೋಳು ಮೊದಲಾದುದಾಗಿಯೂ ಮತ್ತು ತೋಳು- ಮೊದಲಾದುವು ಮುಖವಾಗಿಯೂ ಆಗುವುದಿಲ್ಲವೋ, ಹಾಗೆಯೇ ಬ್ರಾಹ್ಮಣರು ಕ್ಷತ್ರಿಯ- ಮೊದಲಾದವರು ಬ್ರಾಹ್ಮಣರಾಗಿಯೂ ಆಗಲಾರರು.

**ಉತ್ತರ:-** ಈ ಮಂತ್ರಕ್ಕೆ ನೀವು ಯಾವ ಅರ್ಥ ಮಾಡಿದಿರೋ, ಅದು ಸರಿಯಲ್ಲ. ಏಕೆಂದರೆ-ಇಲ್ಲಿ ಪುರುಷನು – ಎಂದರೆ ನಿರಾಕಾರನೂ, ವ್ಯಾಪಕನೂ ಆದ ಪರಮಾತ್ಮನ ಅನುವೃತ್ತಿಯಿದೆ. ಅವನು ನಿರಾಕಾರನಾಗಿರುವಾಗ, ಅವನಿಗೆ ಮುಖ – ಮೊದಲಾದ ಅಂಗಗಳು ಇರಲಾರವು. ಯಾವನು ಮುಖ-ಮೊದಲಾದ ಅಂಗಗಳಿಂದ ಯುಕ್ತನಾಗಿರುತ್ತಾನೋ, ಅವನು ಪುರುಷನು, ಎಂದರೆ ವ್ಯಾಪಕನು ಅಲ್ಲ. ಮತ್ತು ಯಾವನು ವ್ಯಾಪಕನಲ್ಲವೋ, ಅವನು ಸರ್ವಶಕ್ತಿವಂತನು, ಜಗತ್ತಿನ ಉತ್ಪಾದಕನು, ಧಾರಕನು, ಪ್ರಳಯಕಾರಿಯು, ಜೀವರ ಪುಣ್ಯಪಾಪಗಳನ್ನರಿತು ವ್ಯವಸ್ಥೆಮಾಡುವವನು, ಸರ್ವಜ್ಞನು, ಅಜನ್ಮನು, ಮೃತ್ಯುರಹಿತನು – ಮೊದಲಾದ ವಿಶೇಷಣಗಳನ್ನುಳ್ಳವನು ಆಗಲಾರನು. ಆದುದರಿಂದ, ಇದರ ಅರ್ಥವಿದು :- ಯಾವನು (ಅಸ್ಯ) ಪೂರ್ಣವ್ಯಾಪಕ ಪರಮಾತ್ಮನ ಸೃಷ್ಟಿಯಲ್ಲಿ, ಮುಖದಂತೆ, ಎಲ್ಲರಲ್ಲಿ ಮುಖ್ಯನಾಗಿ ಉತ್ತಮವಾಗಿ ಇರುತ್ತಾನೋ, ಅವನು (ಬ್ರಾಹ್ಮಣಃ) ಬ್ರಾಹ್ಮಣನು; (ಬಾಹೂ) **"ಬಾಹಿರ್ವೈಬಲಂ"** (ಶತಪಥ:- ೫.೪.೧.೧) **"ಬ್ರಾಹುರ್ವೈ ವೀರ್ಯಂ"** (ಶತಪಥ:-೬.೩.೨.೩೫) ಬಲ-ವೀರ್ಯದ ಹೆಸರು ಬಾಹುವೆಂದು. ಅದು ಯಾವನಲ್ಲಿ ಅಧಿಕವಾಗಿರುತ್ತದೋ, ಅವನು

(ರಾಜನ್ಯಃ) ಕ್ಷತ್ರಿಯನು. (ಊರೂ) ಸೊಂಟದಿಂದ ಕೆಳಗಿನ ಮತ್ತು ಮಂಡಿಗಳ ಮೇಲಿನ ಭಾಗಕ್ಕೆ 'ಊರೂ' ಎಂದು ಹೆಸರು. ಯಾವನು ಸಮಸ್ತ ಪದಾರ್ಥಗಳು ಇರುವೆಡೆಗೂ, ಸಮಸ್ತ ದೇಶಗಳಿಗೂ ತೊಡೆಗಳ ಬಲದಿಂದ ಹೋಗುತ್ತಾನೋ, ಬರುತ್ತಾನೋ, ಪ್ರವೇಶಿಸುತ್ತಾನೋ, ಅವನು (ವೈಶ್ಯಃ) ವೈಶ್ಯನು, ಮತ್ತು (ಪದ್ಭ್ಯಾಂ) ಯಾವನು ಪಾದದಂತೆ, ಎಂದರೆ ಕೆಳಗಿನ ಅಂಗದಂತೆ ಇದ್ದು, ಮೌಢ್ಯ – ಮೊದಲಾದ ಗುಣಗಳನ್ನುಳ್ಳವನಾಗಿರುತ್ತಾನೋ, ಅವನು ಶೂದ್ರನು. ಬೇರೆಡೆ, ಶತಪಥ ಬ್ರಾಹ್ಮಣ– ಮೊದಲಾದುವುಗಳಲ್ಲಿಯೂ ಈ ಮಂತ್ರಕ್ಕೆ ಹೀಗೆಯೇ ಅರ್ಥ ಮಾಡಿದ್ದಾರೆ. ಉದಾಹರಣೆಗೆ:–

**"ಯಸ್ಮಾದೇತೇ ಮುಖ್ಯಾಸ್ತಸ್ಮಾನ್ಮು ಖತೋಹ್ಯಸೃಜ್ಯಂತ" – ಇತ್ಯಾದಿ.**

ಇವರು ಮುಖ್ಯರಾಗಿರುವುದರಿಂದ , ಮುಖದಿಂದ ಉತ್ಪನ್ನರಾದರು – ಎಂಬ ಕಥನ ಸಂಗತವಾಗುತ್ತದೆ. ಎಂದರೆ, ಹೇಗೆ ಮುಖವು ಎಲ್ಲ ಅಂಗಗಳಲ್ಲಿಯೂ ಶ್ರೇಷ್ಠವಾಗಿದೆಯೋ, ಹಾಗೆ, ಪೂರ್ಣ ವಿದ್ಯೆಯಿಂದ ಮತ್ತು ಉತ್ತಮ ಗುಣ – ಕರ್ಮ – ಸ್ವಭಾವಗಳಿಂದ ಯುಕ್ತನಾಗಿರುವುದರಿಂದ, ಮನುಷ್ಯ ಜಾತಿಯಲ್ಲಿ ಬ್ರಾಹ್ಮಣನು ಉತ್ತಮನೆನಿಸುತ್ತಾನೆ. ಪರಮೇಶ್ವರನು ನಿರಾಕಾರನಾಗಿರುವುದರಿಂದ, ಮುಖ–ಮೊದಲಾದ ಅಂಗಗಳೇ ಇಲ್ಲದಿರುವಾಗ, ಮುಖ– ಮೊದಲಾದುವುಗಳಿಂದ ಉತ್ಪನ್ನವಾಗುವುದು, ಬಂಜೆಯಾದ ಸ್ತ್ರೀಯ ಮಗನ ವಿವಾಹವಾಗುವಂತೆ ಅಸಂಭವ. ಮತ್ತು ಯಾವನಾದರೂ ನಿಮಗೆ – "ಯಾರು ಯಾರು ಮುಖ– ಮೊದಲಾದುವುಗಳಿಂದ ಹುಟ್ಟಿದ್ದರೋ, ಅವರಿಗೆ ಬ್ರಾಹ್ಮಣರು – ಮೊದಲಾದ ಹೆಸರುಗಳಿರಲಿ; ಆದರೆ, ನಿಮಗೆ ಅದು ಸಲ್ಲದು. ಏಕೆಂದರೆ, ಹೇಗೆ ಬೇರೆಯವರೆಲ್ಲಾ ಗರ್ಭಾಶಯದಿಂದ ಹುಟ್ಟುತ್ತಾರೋ, ಹಾಗೆ ನೀವೂ ಹುಟ್ಟುತ್ತೀರಿ. ನೀವು ಮುಖ ಮೊದಲಾದುವುಗಳಿಂದ ಹುಟ್ಟದೆ, ಬ್ರಾಹ್ಮಣ – ಮೊದಲಾದ ಸಂಜ್ಞೆಗಳ ಅಭಿಮಾನ ತೋರಿಸುತ್ತೀರಿ".– ಎಂದರೆ, ನಿಮ್ಮ ಉತ್ತರವೇನು? ಆದುದರಿಂದ, ನೀವು ಹೇಳಿದ ಅರ್ಥ ವ್ಯರ್ಥವಾಗಿದೆ. ಮತ್ತು ನಾವು ಯಾವ ಅರ್ಥ ಮಾಡಿದ್ದೇವೋ, ಅದು ಸತ್ಯವಾಗಿದೆ.

ಹೀಗಯೇ ಬೇರೆ ಕಡೆಯೂ ಹೇಳಿದೆ, ಹೇಗೆಂದರೆ:–

**ಶೂದ್ರೋ ಬ್ರಾಹ್ಮಣತಾಮೇತಿ ಬ್ರಾಹ್ಮಣಶ್ಚೈತಿ ಶೂದ್ರತಾಮ್ ।**

**ಕ್ಷತ್ರಿಯಾಜ್ಜಾತಮೇವಂತು ವಿದ್ಯಾದ್ವೈಶ್ಯಾತ್ತಥೈವ ಚ ॥** (ಮನು:– ೧೦.೬೫)

ಯಾವನು ಶೂದ್ರ ಕುಲದಲ್ಲಿ ಹುಟ್ಟಿದ್ದು, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯನಿಗೆ ಸಮವಾದ ಗುಣ–ಕರ್ಮ–ಸ್ವಭಾವಗಳಿಂದ ಯುಕ್ತನಾಗಿರುತ್ತಾನೋ, ಆ ಶೂದ್ರನು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯನಾಗಿ ಹೋಗುವನು. ಹಾಗೆಯೇ, ಯಾವನು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯಕುಲದಲ್ಲಿ ಉತ್ಪನ್ನನಾಗಿರುವನೋ, ಮತ್ತು ಯಾವನ ಗುಣ–ಕರ್ಮ–ಸ್ವಭಾವಗಳು ಶೂದ್ರನಿಗೆ ತಕ್ಕವಾಗಿರುವವೋ, ಅವನು ಶೂದ್ರನಾಗುವನು. ಹಾಗೆಯೇ ಯಾವನಾದರೂ ಕ್ಷತ್ರಿಯನ ಅಥವಾ ವೈಶ್ಯನ ಕುಲದಲ್ಲಿ ಉತ್ಪನ್ನನಾಗಿದ್ದು, ಬ್ರಾಹ್ಮಣನ ಅಥವಾ ಶೂದ್ರನ ಹಾಗೆ (ಗುಣ–ಕರ್ಮ–ಸ್ವಭಾವಗಳಿಂದ) ಆಗುವುದರಿಂದ ಬ್ರಾಹ್ಮಣನೂ ಮತ್ತು ಶೂದ್ರನೂ ಕೂಡ ಆಗಿಹೋಗುತ್ತಾನೆ. ಎಂದರೆ–ನಾಲ್ಕು ವರ್ಣಗಳಲ್ಲಿಯೂ ಯಾವ ಯಾವ ಪುರುಷನು ಅಥವಾ ಸ್ತ್ರೀಯು ಯಾವ ಯಾವ ವರ್ಣಕ್ಕೆ ತಕ್ಕವರಾಗಿರುತ್ತಾರೋ, ಅವರವರನ್ನು ಆಯಾ ವರ್ಣದಲ್ಲಿ ಎಣಿಸಬೇಕು.

**ಧರ್ಮಚರ್ಯಯಾ ಜಘನ್ಯೋವರ್ಣಃ ಪೂರ್ವಂ ಪೂರ್ವಂ ವರ್ಣಮಾಪದ್ಯತೇ ಜಾತಿಪರಿವೃತ್ತೌ॥ ೧ ॥**

**ಅಧರ್ಮಚರ್ಯಯಾ ಪೂರ್ವೋ ವರ್ಣೋ ಜಘನ್ಯಂ ಜಘನ್ಯಂ ವರ್ಣಮಾಪದ್ಯತೇ ಜಾತಿಪರಿವೃತ್ತೌ॥ ೨ ॥**

(ಆಪಸ್ತಂಬ ಧರ್ಮ ೨.೫.೧೦.೧)

**ಅರ್ಥ:**– ಧರ್ಮಾಚರಣದಿಂದ, ನಿಕೃಷ್ಟ ವರ್ಣದವನು, ತನಗಿಂತ ಉತ್ತಮ – ಉತ್ತಮ ವರ್ಣವನ್ನು ಹೊಂದುತ್ತಾನೆ. ಯಾವ ಯಾವನು ಯಾವ ಯಾವದಕ್ಕೆ ಯೋಗ್ಯನಾಗಿರುತ್ತಾನೋ ಅವನನ್ನು ಆ ವರ್ಣದಲ್ಲಿ ಎಣಿಸಬೇಕು. (೧)

ಹಾಗೆಯೇ, ಅಧರ್ಮಾಚರಣದಿಂದ ಪೂರ್ವ ಪೂರ್ವ–ಎಂದರೆ ಉತ್ತಮ–ಉತ್ತಮ ವರ್ಣದವನಾದ ಮಾನವನು, ತನಗಿಂತ ನೀಚ– ನೀಚವಾದ ವರ್ಣವನ್ನು ಹೊಂದುತ್ತಾನೆ; ಅವನನ್ನು ಅದೇ ವರ್ಣದಲ್ಲಿ ಎಣಿಸಬೇಕು. (೨)

ಹೇಗೆ ಪುರುಷನು ಯಾವ ಯಾವ ವರ್ಣಕ್ಕೆ ಯೋಗ್ಯವೆಂದು ನಿರ್ಧರಿಸಲ್ಪಡುತ್ತಾನೋ, ಹಾಗೆಯೇ ಸ್ತ್ರೀಯರ ವ್ಯವಸ್ಥೆಯನ್ನೂ ತಿಳಿಯಬೇಕು. ಹೀಗೆ ಆಗುವುದರಿಂದ ಎಲ್ಲ ವರ್ಣಗಳೂ ತಮ್ಮ ತಮ್ಮ ಗುಣ–ಕರ್ಮ–ಸ್ವಭಾವಯುಕ್ತವಾಗಿದ್ದು

ಶುದ್ಧತ್ವ ಹೊಂದಿರುತ್ತವೆ. ಎಂದರೆ – ಬ್ರಾಹ್ಮಣಕುಲದಲ್ಲಿ ಯಾವನೂ ಕ್ಷತ್ರಿಯ, ವೈಶ್ಯ ಮತ್ತು ಶೂದ್ರನಂತೆ ಇರುವುದಿಲ್ಲ; ಮತ್ತು ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಣಗಳೂ ಕೂಡ ಶುದ್ಧವಾಗಿರುತ್ತವೆ. ಎಂದರೆ – ವರ್ಣಸಂಕರ ಉಂಟಾಗುವುದಿಲ್ಲ. ಇದರಿಂದ ಯಾವ ವರ್ಣದ ನಿಂದೆಯೂ, ಅಥವಾ ಅಯೋಗ್ಯತೆಯೂ ಉದ್ಭವಿಸುವುದಿಲ್ಲ – ಎಂಬುದು ಸಿದ್ಧವಾಗುತ್ತದೆ.

**ಪ್ರಶ್ನೆ:–** ಯಾವನಿಗಾದರೂ ಒಬ್ಬನೇ ಪುತ್ರ ಅಥವಾ ಪುತ್ರಿಯಿದ್ದು, ಅವನು ಅಥವಾ ಅವಳು ಅನ್ಯವರ್ಣದಲ್ಲಿ ಸೇರಿ ಹೋದರೆ, ಆ ತಾಯಿ–ತಂದೆಗಳ ಸೇವೆಯನ್ನಾರು ಮಾಡುವರು? ಮತ್ತು ವಂಶಚ್ಛೇದನವೂ ಆಗಿಬಿಡುವುದು. ಇದಕ್ಕೆ ಯಾವ ವ್ಯವಸ್ಥೆಯಾಗಬೇಕು?

**ಉತ್ತರ:–** ಯಾವನ ಸೇವೆಗೂ ಭಂಗವೂ ಬಾರದು; ವಂಶಚ್ಛೇದನವೂ ಆಗದು. ಏಕೆಂದರೆ, ಅವರಿಗೆ ತಮ್ಮ ಪುತ್ರ–ಪುತ್ರಿಯರ ಪ್ರತಿಯಾಗಿ, ಸ್ವವರ್ಣಕ್ಕೆ ಯೋಗ್ಯವಾದ ಅನ್ಯಸಂತತಿ ವಿದ್ಯಾಸಭಾ ಮತ್ತು ರಾಜಸಭಾ ವ್ಯವಸ್ಥೆಯಿಂದ ಲಭಿಸುವುದು. ಇದೇ ಕಾರಣದಿಂದ ಸ್ವಲ್ಪವೂ ಅವ್ಯವಸ್ಥೆಯಾಗುವುದಿಲ್ಲ. ಗುಣ ಕರ್ಮಗಳಿಂದ ಉಂಟಾಗುವ ಈ ವರ್ಣವ್ಯವಸ್ಥೆ ಕನ್ಯೆಯರ ಹದಿನಾರನೆಯ ವರ್ಷದ ಮತ್ತು ಪುರುಷರ ಇಪ್ಪತ್ತೈದನೆಯ ವರ್ಷದ ಪರೀಕ್ಷೆಯಲ್ಲಿ ನಿಯತಮಾಡಲ್ಪಡಬೇಕು. ಮತ್ತು ಇದೇ ಕ್ರಮದಿಂದ, ಎಂದರೆ – ಬ್ರಾಹ್ಮಣ ವರ್ಣದವನ ವಿವಾಹ ಬ್ರಾಹ್ಮಣಿಯೊಂದಿಗೆ, ಕ್ಷತ್ರಿಯ ವರ್ಣದವನ ವಿವಾಹ ಕ್ಷತ್ರಾಣಿಯೊಂದಿಗೆ, ವೈಶ್ಯ ವರ್ಣದವನ ವಿವಾಹ ವೈಶ್ಯೆಯೊಂದಿಗೆ ಮತ್ತು ಶೂದ್ರ ವರ್ಣದವನ ವಿವಾಹ ಶೂದ್ರಾಣಿಯೊಂದಿಗೆ ಆಗಬೇಕು. ಆಗಲೇ ತಮ್ಮ ತಮ್ಮ ವರ್ಣಗಳ ಕರ್ಮಗಳೂ, ಮತ್ತು ಪರಸ್ಪರ ಪ್ರೀತಿಯೂ ಯೋಗ್ಯ ರೀತಿಯಲ್ಲಿ ಪ್ರವರ್ತಿಸುವುವು.

ಈ ನಾಲ್ಕು ವರ್ಣಗಳ ಕರ್ತವ್ಯ ಕರ್ಮಗಳು ಮತ್ತು ಗುಣಗಳು ಈ ಕೆಳಗಿನವಾಗಿವೆ:–

**ಬ್ರಾಹ್ಮಣ : ಅಧ್ಯಾಪನಮಧ್ಯಯನಂ ಯಜನಂ ಯಾಜನಂ ತಥಾ ।**

**ದಾನಂ ಪ್ರತಿಗ್ರಹಶ್ಚೈವ ಬ್ರಾಹ್ಮಣಾನಾಮಕಲ್ಪಯತ್ ॥ ೧ ॥ (ಮನು:– ೧.೮೮)**

**ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।**

**ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥ ೨ ॥ (ಭಗವದ್ಗೀತಾ:– ೧೮.೪೨)**

ಓದುವುದು–ಓದಿಸುವುದು, ಯಜ್ಞಮಾಡುವುದು–ಮಾಡಿಸುವುದು,ದಾನ ಕೊಡುವುದು ಮತ್ತು ತೆಗೆದುಕೊಳ್ಳುವುದು – ಈ ಆರೂ ಬ್ರಾಹ್ಮಣನ ಕರ್ಮಗಳಾಗಿವೆ. ಆದರೆ, **"ಪ್ರತಿಗ್ರಹಃಪ್ರತ್ಯವರಃ"** (ಮನು:–೧೦.೧೦೯) ಎಂದರೆ, (ಪ್ರತಿಗ್ರಹ) ತೆಗೆದುಕೊಳ್ಳುವುದು ನೀಚ ಕರ್ಮವಾಗಿದೆ.[೫]

(ಶಮಃ) ಮನಸ್ಸಿನಿಂದ ಕೆಟ್ಟ ಕೆಲಸದ ಬಯಕೆಯನ್ನೂ ಕೂಡ ಮಾಡದಿರುವುದು ಮತ್ತು ಅದನ್ನು ಅಧರ್ಮದಲ್ಲಿ ಎಂದೂ ಪ್ರವೃತ್ತವಾಗಲು ಬಿಡದಿರುವುದು, (ದಮಃ) ಶ್ರೋತ್ರ ಮತ್ತು ನೇತ್ರ – ಮೊದಲಾದ ಇಂದ್ರಿಯಗಳನ್ನು ಅನ್ಯಾಯಾಚರಣದಿಂದ ತಡೆದು, ಧರ್ಮದಲ್ಲಿ ತೊಡಗಿಸುವುದು, (ತಪಃ) ಸದಾ ಬ್ರಹ್ಮಚಾರಿಯಾಗಿ ಜಿತೇಂದ್ರಿಯನಾಗಿ ಧರ್ಮಾನುಷ್ಠಾನ ಮಾಡುವುದು, (ಶೌಚ) –

**ಅದ್ಭಿರ್ಗಾತ್ರಾಣಿ ಶುಧ್ಯಂತಿ ಮನಃ ಸತ್ಯೇನ ಶುಧ್ಯತಿ ।**

**ವಿದ್ಯಾತಪೋಭ್ಯಾಂ ಭೂತಾತ್ಮಾ ಬುದ್ಧಿರ್ಜ್ಞಾನೇನ ಶುಧ್ಯತಿ ॥** (ಮನು :– ೫.೧೦೯)

ನೀರಿನಿಂದ ಹೊರಗಣ ಅಂಗಗಳೂ, ಸತ್ಯಾಚಾರದಿಂದ ಮನಸ್ಸೂ, ವಿದ್ಯೆ ಮತ್ತು ಧರ್ಮಾನುಷ್ಠಾನದಿಂದ ಜೀವಾತ್ಮನೂ ಮತ್ತು ಜ್ಞಾನದಿಂದ ಬುದ್ಧಿಯೂ ಪವಿತ್ರವಾಗುತ್ತವೆ. ಒಳಗಿನ ರಾಗ – ದ್ವೇಷ ಮೊದಲಾದುವನ್ನೂ, ಮತ್ತು ಹೊರಗಣ ಕೊಳೆಗಳನ್ನೂ ದೂರಮಾಡಿ ಶುದ್ಧನಾಗಿರುವುದು, ಎಂದರೆ ವಿವೇಕಪೂರ್ವಕವಾಗಿ ಸತ್ಯವನ್ನು ಗ್ರಹಿಸುವುದರಿಂದ ಮತ್ತು ಅಸತ್ಯದ ತ್ಯಾಗದಿಂದ ನಿಶ್ಚಯವಾಗಿ ಪವಿತ್ರನಾಗುತ್ತಾನೆ. (ಕ್ಷಾಂತಿಃ) – ಎಂದರೆ, ನಿಂದಾ–ಸ್ತುತಿಗಳು, ಸುಖ ದುಃಖಗಳು, ಶೀತೋಷ್ಣಗಳು, ಹಸಿವು, ಬಾಯಾರಿಕೆ, ನಷ್ಟ, ಲಾಭ, ಮಾನ–ಅಪಮಾನಗಳು ಮೊದಲಾದುವನ್ನೂ, ಹರ್ಷ–ಶೋಕಗಳನ್ನೂ

---

೫. ಎಂದರೆ ಕರ್ತವ್ಯಪಾಲನೆ ಮಾಡದೆ, ದಾನಕ್ಕೆ ಕೈಯೊಡ್ಡುವುದು ನೀಚ ಕರ್ಮ ಎಂದು ತಾತ್ಪರ್ಯ.

ಸಹಿಸಿ, ಧರ್ಮದಲ್ಲಿ ದೃಢ ನಿಶ್ಚಯವುಳ್ಳವನಾಗಿರುವುದು, (ಆರ್ಜವ) ಕೋಮಲತ್ವ, ನಿರಭಿಮಾನತ್ವ, ಸರಳತ್ವ, ಸರಳ ಸ್ವಭಾವವನ್ನಿಟ್ಟುಕೊಳ್ಳುವುದು, ಕುಟಿಲತೆ - ಮೊದಲಾದ ದೋಷಗಳನ್ನು ಬಿಟ್ಟುಬಿಡುವುದು, (ಜ್ಞಾನ) ಸಮಸ್ತ ವೇದ ಮೊದಲಾದ ಶಾಸ್ತ್ರಗಳನ್ನು ಸಾಂಗೋಪಾಂಗವಾಗಿ ಓದಿ, ಓದಿಸುವ ಸಾಮರ್ಥ್ಯ, ವಿವೇಕ, ಸತ್ಯದ ನಿರ್ಣಯ, ಯಾವ ವಸ್ತು ಹೇಗಿದೆಯೋ ಅದನ್ನು ಹಾಗೆಯೇ, ಎಂದರೆ-ಜಡವನ್ನು ಜಡವೆಂದೂ ಚೇತನವನ್ನು ಚೇತನವೆಂದೂ ತಿಳಿಯುವುದು ಮತ್ತು ಒಪ್ಪುವುದು, (ವಿಜ್ಞಾನ) ಪೃಥಿವಿಯಿಂದ ಹಿಡಿದು ಪರಮಾತ್ಮನ ಪರ್ಯಂತ ಪದಾರ್ಥಗಳನ್ನು ವಿಶೇಷತೆಯೊಂದಿಗೆ ತಿಳಿದು, ಅದರಿಂದ ತಕ್ಕರೀತಿಯಲ್ಲಿ ಉಪಯೋಗ ಪಡೆದುಕೊಳ್ಳುವುದು, (ಆಸ್ತಿಕ್ಯ) ಎಂದಿಗೂ ವೇದಗಳು, ಈಶ್ವರ, ಮುಕ್ತಿ, ಹಿಂದಿನ ಮತ್ತು ಮುಂದಿನ ಜನ್ಮಗಳು, ಧರ್ಮ, ವಿದ್ಯೆ, ಸತ್ಸಂಗ ಇವುಗಳಲ್ಲಿ ಶ್ರದ್ಧೆ, ಮಾತೆ ಪಿತಾ, ಆಚಾರ್ಯ ಮತ್ತು ಅತಿಥಿಗಳ ಸೇವೆಯನ್ನು ಬಿಡದಿರುವುದು, ಹಾಗೂ ನಿಂದೆಯನ್ನು ಎಂದಿಗೂ ಮಾಡದಿರುವುದು - ಈ ಹದಿನೈದು ಕರ್ಮಗಳು ಮತ್ತು ಗುಣಗಳು ಬ್ರಾಹ್ಮಣ ವರ್ಣಸ್ಥರಾದ ಮಾನವರಲ್ಲಿ ಅವಶ್ಯಕವಾಗಿಯೂ ಇರಬೇಕು. (೨)

**ಕ್ಷತ್ರಿಯ : ಪ್ರಜಾನಾಂ ರಕ್ಷಣಂ ದಾನಮಿಜ್ಯಾಧ್ಯಯನಮೇವ ಚ ।**

**ವಿಷಯೇಷ್ವಪ್ರಸಕ್ತಿಶ್ಚ ಕ್ಷತ್ರಿಯಸ್ಯ ಸಮಾಸತಃ ॥ ೧ ॥** (ಮನು:- ೧.೮೯)

**ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇಚಾಪ್ಯಪಲಾಯನಮ್ ।**

**ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ ೨ ॥** (ಭಗವದ್ಗೀತಾ: - ೧೫.೪೩)

(ಪ್ರಜಾ) ನ್ಯಾಯದಿಂದ ಪ್ರಜಾರಕ್ಷಣೆ, ಎಂದರೆ, ಪಕ್ಷಪಾತವನ್ನು ಬಿಟ್ಟು ಶ್ರೇಷ್ಠರ ಸತ್ಕಾರವನ್ನೂ ದುಷ್ಟರ ತಿರಸ್ಕಾರವನ್ನೂ ಮಾಡುವುದು, ಎಲ್ಲ ರೀತಿಯಿಂದಲೂ, ಎಲ್ಲರನ್ನೂ ಪಾಲಿಸುವುದು, (ದಾನ) ವಿದ್ಯಾ - ಧರ್ಮಗಳ ಪ್ರವೃತ್ತಿಯಲ್ಲಿ ಮತ್ತು ಸುಪಾತ್ರರ ಸೇವೆಯಲ್ಲಿ ಧನವೇ ಮೊದಲಾದ ಪದಾರ್ಥಗಳ ವ್ಯಯವನ್ನು ಮಾಡುವುದು, (ಇಜ್ಯಾ) ಅಗ್ನಿಹೋತ್ರ ಮೊದಲಾದ ಯಜ್ಞಗಳನ್ನು ಮಾಡುವುದು ಮತ್ತು ಮಾಡಿಸುವುದು (ಅಧ್ಯಯನ) ವೇದಗಳೇ ಮೊದಲಾದ ಶಾಸ್ತ್ರಗಳನ್ನು ಓದುವುದು, ಓದಿಸಲು ವ್ಯವಸ್ಥೆಮಾಡುವುದು, ಮತ್ತು, (ವಿಷಯೇಷು) ವಿಷಯಗಳಿಗೆ ಸಿಕ್ಕಿಕೊಳ್ಳದೆ, ಜಿತೇಂದ್ರಿಯನಾಗಿದ್ದು, ಸದಾ ಶರೀರ ಮತ್ತು ಆತ್ಮನಿಂದ ಬಲಶಾಲಿಯಾಗಿರುವುದು.(೧)

(ಶೌರ್ಯ) ನೂರಾರು - ಸಾವಿರಾರು ಜನರೊಂದಿಗೆ ಯುದ್ಧಮಾಡುವುದರಲ್ಲಿ ಕೂಡ, ಒಬ್ಬನೇ ಆದರೂ ಭಯ ಹೊಂದದಿರುವುದು, (ತೇಜಃ) ಸದಾ ತೇಜಸ್ವಿ - ಎಂದರೆ, ದೈನ್ಯರಹಿತನಾಗಿ, ಪ್ರಗಲ್ಭನೂ, ದೃಢನೂ ಆಗಿರುವುದು, (ಧೃತಿ) ಧೈರ್ಯಶಾಲಿಯಾಗಿರುವುದು, (ದಾಕ್ಷ್ಯ) ರಾಜನ ಮತ್ತು ಪ್ರಜೆಗಳ ಸಂಬಂಧದ ವ್ಯವಹಾರಗಳಲ್ಲಿಯೂ ಮತ್ತು ಸಮಸ್ತ ಶಾಸ್ತ್ರಗಳಲ್ಲಿಯೂ ಅತಿ ಚತುರನಾಗಿರುವುದು, (ಯುದ್ಧೇ) ಯುದ್ಧದಲ್ಲಿಯೂ ದೃಢನೂ, ನಿಃಶಂಕನೂ ಆಗಿದ್ದು, ಅದರಿಂದ ಎಂದಿಗೂ ಸರಿಯದಿರುವುದು, ಓಡಿಹೋಗದಿರುವುದು, ಎಂದರೆ- ನಿಶ್ಚಯವಾಗಿ ವಿಜಯ ಲಭಿಸುವಂತೆ, ತಾನು ಉಳಿದುಕೊಳ್ಳುವಂತೆ, ಹೋರಾಡುವುದು, ಓಡಿಹೋಗುವುದರಿಂದ ಅಥವಾ ಶತ್ರುವಿಗೆ ಮೋಸಮಾಡುವುದರಿಂದ ಗೆಲುವಾಗುವಂತಿದ್ದಲ್ಲಿ, ಹಾಗೆಯೇ ಮಾಡುವುದು, (ದಾನ) ದಾನಶೀಲತ್ವವನ್ನು ಹೊಂದಿರುವುದು, (ಈಶ್ವರಭಾವ) ಪಕ್ಷಪಾತರಹಿತನಾಗಿ, ಎಲ್ಲರೊಂದಿಗೆ ತಕ್ಕರೀತಿಯಲ್ಲಿ ವರ್ತಿಸುವುದು, ಆಲೋಚಿಸಿಯೇ ಕೊಡುವುದು, ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದು, ಅದನ್ನು ಎಂದಿಗೂ ಮುರಿದು ಬೀಳಲು ಬಿಡದಿರುವುದು - ಈ ಹನ್ನೊಂದು ಕ್ಷತ್ರಿಯ ವರ್ಣದ ಕರ್ಮಗಳು ಮತ್ತು ಗುಣಗಳು. (೨)

**ವೈಶ್ಯ : ಪಶೂನಾಂ ರಕ್ಷಣಂ ದಾನಮಿಜ್ಯಾಧ್ಯಯಮೇವ ಚ ।**

**ವಣಿಕ್ಪಥಂ ಕುಸೀದಂಚ ವೈಶ್ಯಸ್ಯ ಕೃಷಿಮೇವ ಚ ॥** (ಮನು:- ೧. ೯೦)

(ಪಶುರಕ್ಷಾ) ಹಸು - ಮೊದಲಾದ ಪ್ರಾಣಿಗಳ ಪಾಲನ - ವರ್ಧನಮಾಡುವುದು.(ದಾನ) ವಿದ್ಯಾ-ಧರ್ಮಗಳ ಅಭಿವೃದ್ಧಿಯನ್ನು ಮಾಡುವುದಕ್ಕಾಗಿ - ಮಾಡಿಸುವುದಕ್ಕಾಗಿ ಧನ - ಮೊದಲಾದುವನ್ನು ವ್ಯಯಿಸುವುದು, (ಇಜ್ಯಾ) ಅಗ್ನಿಹೋತ್ರ- ಮೊದಲಾದ ಯಜ್ಞಗಳನ್ನು ಮಾಡುವುದು, (ಅಧ್ಯಯನ) ವೇದಗಳೇ ಮೊದಲಾದ ಶಾಸ್ತ್ರಗಳನ್ನು ಓದುವುದು, (ವಣಿಕ್ಪಥ) ಸಮಸ್ತ ರೀತಿಯ ವ್ಯಾಪಾರಗಳನ್ನೂ ಮಾಡುವುದು, (ಕುಸೀದ) ನೂರು ರೂಪಾಯಿಗಳಿಗೆ ನಾಲ್ಕಾಣೆ, ಆರಾಣೆ, ಎಂಟಾಣೆ, ಹನ್ನೆರಡಾಣೆ, ಹದಿನಾರಾಣೆ ಅಥವಾ ಇಪ್ಪತ್ತಾಣೆಗಳಿಗಿಂತ ಹೆಚ್ಚು ಬಡ್ಡಿಯನ್ನೂ ಮತ್ತು ಮೂಲಧನಕ್ಕೆ ಎರಡರಷ್ಟು, ಎಂದರೆ, ಒಂದು

ರೂಪಾಯಿಯನ್ನು ಕೊಟ್ಟಿದ್ದಲ್ಲಿ ನೂರು ವರ್ಷಗಳಲ್ಲಿಯೇ ಆದರೂ ಎರಡು ರೂಪಾಯಿಗಳಿಗಿಂತ ಹೆಚ್ಚನ್ನು ತೆಗೆದುಕೊಳ್ಳದಿರುವುದು ಮತ್ತು ಕೊಡದಿರುವುದು (ಕೃಷಿ) ಬೇಸಾಯ ಮಾಡುವುದು- ಇವು ವೈಶ್ಯ ಗುಣ-ಕರ್ಮಗಳು.

**ಶೂದ್ರ:** **ಏಕಮೇವತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್ ।**

**ಏತೇಷಾಮೇವ ವರ್ಣಾನಾಂ ಶುಶ್ರೂಷಾಮನಸೂಯಯಾ ॥** (ಮನು:- ೧.೯೧.)

ನಿಂದೆ, ಈರ್ಷ್ಯೆ, ಅಭಿಮಾನ - ಮೊದಲಾದ ದೋಷಗಳನ್ನು ಬಿಟ್ಟು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ಸೇವೆಯನ್ನು ತಕ್ಕರೀತಿಯಲ್ಲಿ ಮಾಡುವುದು ಮತ್ತು ಅದರಿಂದಲೇ ತನ್ನ ಜೀವನ-ನಿರ್ವಾಹ ಮಾಡುವುದು ಶೂದ್ರನಿಗೆ ಯೋಗ್ಯವಾಗಿದೆ. ಇದೊಂದೇ ಶೂದ್ರನ ಗುಣ-ಕರ್ಮವಾಗಿದೆ.

ಸಂಕ್ಷೇಪವಾಗಿ ಹೀಗೆ ವರ್ಣಗಳ ಗುಣ-ಕರ್ಮಗಳನ್ನು ಬರೆದೆವು. ಗುಣ-ಕರ್ಮ-ಸ್ವಭಾವಾನುಸಾರ ವರ್ಣವ್ಯವಸ್ಥೆಯಿಂದ ಲಾಭ ಯಾವ ಯಾವ ಪುರುಷನಲ್ಲಿ ಯಾವ ಯಾವ ವರ್ಣದ ಗುಣ-ಕರ್ಮಗಳಿರುವುವೋ, ಆಯಾ ವರ್ಣದ ಅಧಿಕಾರವನ್ನು ಕೊಡಬೇಕು. ಈ ವಿಧದ ವ್ಯವಸ್ಥೆಯನ್ನು ಇಡುವುದರಿಂದ ಸರ್ವಮಾನವರೂ ಉನ್ನತಶೀಲರಾಗಿರುತ್ತಾರೆ. ಏಕೆಂದರೆ, ಉತ್ತಮ ವರ್ಣದವರಿಗೆ ನಮ್ಮ ಮಕ್ಕಳು ಮೂರ್ಖತ್ವ ಮೊದಲಾದ ದೋಷಗಳಿಂದ ಯುಕ್ತರಾದಲ್ಲಿ ಶೂದ್ರರಾಗಿ ಹೋಗುವರು- ಎಂಬ ಭಯವಿರುವುದು. ಮತ್ತು ಮಕ್ಕಳೂ ಕೂಡ ನಾವು ಮೇಲೆ ಹೇಳಿದ ನಡೆನುಡಿಗಳನ್ನೂ ಮತ್ತು ವಿದ್ಯೆಯನ್ನೂ ಹೊಂದದವರಾದರೆ, ಶೂದ್ರರಾಗಬೇಕಾಗುವುದು - ಎಂದು ಹೆದರುತ್ತಿರುವರು, ಮತ್ತು ನೀಚ ವರ್ಣಗಳಲ್ಲಿ ಉತ್ತಮ ವರ್ಣಸ್ಥರಾಗಲು ಉತ್ಸಾಹವು ವರ್ಧಿಸುವುದು. (ಯಾವ ವರ್ಣಕ್ಕೆ ಯಾವ ಅಧಿಕಾರ ಕೊಡಬೇಕು ?)

ವಿದ್ಯೆಯ ಮತ್ತು ಧರ್ಮದ ಪ್ರಚಾರದ ಅಧಿಕಾರವನ್ನು ಬ್ರಾಹ್ಮಣರಿಗೆ ಕೊಡಬೇಕು; ಏಕೆಂದರೆ - ಅವರು ಪೂರ್ಣ ವಿದ್ಯಾವಂತರೂ ಮತ್ತು ಧಾರ್ಮಿಕರೂ ಆಗಿರುವುದರಿಂದ, ಆ ಕಾರ್ಯವನ್ನು ಯೋಗ್ಯವಾದ ರೀತಿಯಲ್ಲಿ ಮಾಡಬಲ್ಲರು.

ಕ್ಷತ್ರಿಯರಿಗೆ ರಾಜ್ಯದ ಅಧಿಕಾರವನ್ನು ಕೊಡುವುದರಿಂದ, ರಾಜ್ಯಕ್ಕೆ ಎಂದಿಗೂ ಹಾನಿ ಅಥವಾ ವಿಘ್ನ ಉಂಟಾಗುವುದಿಲ್ಲ.

ಪಶುಪಾಲನ - ಮೊದಲಾದುದರ ಅಧಿಕಾರ ವೈಶ್ಯರಿಗೆ ಮಾತ್ರವೇ ಇರುವುದು ಯೋಗ್ಯವಾಗಿದೆ. ಏಕೆಂದರೆ - ಅವರು ಈ ಕೆಲಸವನ್ನು ಚೆನ್ನಾಗಿ ಮಾಡಬಲ್ಲರು.

ಶೂದ್ರನು ವಿದ್ಯಾರಹಿತನಾದ ಮುಗ್ಧನಾಗಿರುವುದರಿಂದ, ವಿದ್ಯಾ-ಸಂಬಂಧಿಯಾದ ಯಾವ ಕಾರ್ಯವನ್ನು ಮಾಡಲಾರನು; ಆದರೆ- ಶರೀರದ ಎಲ್ಲ ಕೆಲಸಗಳನ್ನೂ ಮಾಡಬಲ್ಲನು; ಆದುದರಿಂದ ಶೂದ್ರನಿಗೆ ಸೇವೆಯ ಅಧಿಕಾರವಿದೆ. ಈ ರೀತಿ ವರ್ಣಗಳನ್ನು ಅವು- ಅವುಗಳ ಅಧಿಕಾರದಲ್ಲಿ ಪ್ರವೃತ್ತವಾಗಿಡುವುದು ರಾಜನೇ ಮೊದಲಾದ ಸಭ್ಯ ಜನರ ಕಾರ್ಯವಾಗಿದೆ.

## ವಿವಾಹದ ಲಕ್ಷಣಗಳು

**ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಾಜಾಪತ್ಯಸ್ತಥಾಽಸುರಃ ।**

**ಗಾಂಧರ್ವೋ ರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋಽಧಮಃ ॥** (ಮನು:-೩.೨೧)

ವಿವಾಹವು ಎಂಟು ಬಗೆಯದಿರುತ್ತದೆ:- ೧. **ಬ್ರಾಹ್ಮ,** ೨. **ದೈವ,** ೩. **ಆರ್ಷ,** ೪. **ಪ್ರಾಜಾಪತ್ಯ,** ೫. **ಆಸುರ,** ೬. **ಗಾಂಧರ್ವ,** ೭. **ರಾಕ್ಷಸ,** ೮. **ಪೈಶಾಚ.**

ಈ ವಿವಾಹಗಳ ವ್ಯವಸ್ಥೆಯಿದು :- ವರ-ಕನ್ಯೆ - ಇಬ್ಬರೂ ಯಥಾವತ್ ಬ್ರಹ್ಮಚರ್ಯದಿಂದ ಪೂರ್ಣ ವಿದ್ವಾಂಸರೂ, ಧಾರ್ಮಿಕರೂ ಮತ್ತು ಸುಶೀಲರೂ ಆಗಿರಬೇಕು. ಅವರ ಪರಸ್ಪರ ಪ್ರಸನ್ನತೆಯಿಂದ ನಡೆಯುವ ವಿವಾಹ **'ಬ್ರಾಹ್ಮ'** ಎನ್ನಿಸುತ್ತದೆ.

ವಿಸ್ತೃತವಾದ ಯಜ್ಞ ಮಾಡುವುದರಲ್ಲಿ ಋತ್ವಿಕ್ಕರ್ಮ ಮಾಡುತ್ತಿರುವ ಪುರುಷನಿಗೆ ಅಲಂಕಾರಯುಕ್ತಳಾದ ಕನ್ಯೆಯನ್ನು ಕೊಡುವುದು **'ದೈವ'**.

ವರನಿಂದ ಏನನ್ನಾದರೂ ತೆಗೆದುಕೊಂಡು ಮದುವೆಯಾಗುವುದು **'ಆರ್ಷ'**.

ಧರ್ಮಾಭಿವೃದ್ಧಿಗೋಸ್ಕರ ಇಬ್ಬರ ವಿವಾಹವಾಗುವುದು **'ಪ್ರಾಜಾಪತ್ಯ'**.

ವರ ಮತ್ತು ಕನ್ಯೆಗೆ ಏನನ್ನಾದರೂ ಕೊಟ್ಟು ವಿವಾಹವಾಗುವುದು **'ಆಸುರ'**.

ನಿಯಮವಿಲ್ಲದೆ, ಸಲ್ಲದ ಸಮಯದಲ್ಲಿ ಯಾವುದೋ ಕಾರಣದಿಂದ, ಇಬ್ಬರ ಇಚ್ಛೆಯಿಂದ ವರ – ಕನ್ಯೆಯರ ಪರಸ್ಪರ ಸಂಯೋಗವಾಗುವುದು **'ಗಾಂಧರ್ವ'**.

ಹೋರಾಟ ಮಾಡಿ, ಬಲತ್ಕಾರದಿಂದ, ಎಂದರೆ, ಕಸಿದು ಮೇಲೆ ಬಿದ್ದು, ಅಥವಾ ಕಪಟದಿಂದ ಕನ್ಯೆಯನ್ನು ಗ್ರಹಿಸುವುದು **'ರಾಕ್ಷಸ'**.

ಮಲಗಿರುವ, ಅಥವಾ ಮದ್ಯ ಮೊದಲಾದುದನ್ನು ಕುಡಿದು, ಮತ್ತೆಯಾಗಿರುವ ಕನ್ಯೆಯೊಂದಿಗೆ ಬಲತ್ಕಾರದಿಂದ ಸಂಯೋಗ ಮಾಡುವುದು **'ಪೈಶಾಚ'**.

ಈ ಎಲ್ಲ ವಿವಾಹಗಳಲ್ಲಿಯೂ ಬ್ರಾಹ್ಮ ವಿವಾಹ ಸರ್ವೋತ್ಕೃಷ್ಟ; ದೈವ ಮತ್ತು ಪ್ರಾಜಾಪತ್ಯ **ಮಧ್ಯಮ**; ಆರ್ಷ, ಆಸುರ ಮತ್ತು ಗಾಂಧರ್ವ ನಿಕೃಷ್ಟ; ರಾಕ್ಷಸ ಅಧಮ ಮತ್ತು ಪೈಶಾಚ **ಮಹಾಭ್ರಷ್ಟ**ವಾಗಿದೆ.

ಆದುದರಿಂದ, ವಿವಾಹಕ್ಕೆ ಮುಂಚೆ, ಏಕಾಂತದಲ್ಲಿ ಕನ್ಯಾ–ವರರ ಮಿಳನವಾಗಬಾರದು – ಎಂದೇ ನಿಶ್ಚಯ ಮಾಡಿಕೊಳ್ಳಬೇಕು. ಏಕೆಂದರೆ ಯುವಾವಸ್ಥೆಯಲ್ಲಿ ಸ್ತ್ರೀ – ಪುರುಷರ ಏಕಾಂತವಾಸವು ದೂಷಣಕರವಾಗಿರುತ್ತದೆ.

ಆದರೆ, ಯಾವಾಗ ಕನ್ಯೆಯ ಅಥವಾ ವರನ ವಿವಾಹದ ಸಮಯ ಬರುತ್ತದೋ, ಎಂದರೆ, ಬ್ರಹ್ಮಚರ್ಯಾಶ್ರಮ ಮತ್ತು ವಿದ್ಯೆ ಪೂರ್ಣವಾಗುವುದಕ್ಕೆ ಒಂದು ವರ್ಷ ಅಥವಾ ಆರು ತಿಂಗಳು ಉಳಿದಿರುವುದೋ, ಆಗ ಆ ಕನ್ಯೆಯರ ಮತ್ತು ಕುಮಾರರ, ಪ್ರತಿಬಿಂಬ ಅಥವಾ ಪ್ರತಿಕೃತಿ (Photo) ಇಳಿಸಿ, ಕನ್ಯೆಯರ ಅಧ್ಯಾಪಿಕೆಯರ ಬಳಿಗೆ ಕುಮಾರರ, ಕುಮಾರರುಗಳು ಅಧ್ಯಾಪಕರ ಬಳಿಗೆ ಕನ್ಯೆಯರ ಪ್ರತಿಕೃತಿಗಳನ್ನು ಕಳುಹಿಸಬೇಕು. ಯಾರ – ಯಾರ ರೂಪ ಹೊಂದಿಕೊಳ್ಳುವುದೋ, ಆಯಾ ವ್ಯಕ್ತಿಗಳ ಇತಿಹಾಸವನ್ನು, ಎಂದರೆ, ಗುಣ– ಕರ್ಮ ಸ್ವಭಾವಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡಬೇಕು. ಯಾವಾಗ ಇಬ್ಬರ ಗುಣ – ಕರ್ಮ ಸ್ವಭಾವಗಳೂ ಹೊಂದಿಕೊಳ್ಳುವವೋ, ಆಗ, ಯಾರ ಸಂಗಡ ಯಾರ ಯಾರ ವಿವಾಹವಾಗುವುದು ಯೋಗ್ಯವೆಂದು ತಿಳಿಯುವರೋ, ಆಯಾ ಪುರುಷರು ಮತ್ತು ಕನ್ಯೆಯರ ಪ್ರತಿಬಿಂಬ ಮತ್ತು ಚಾರಿತ್ರ್ಯವನ್ನು ಕನ್ಯೆಯರ ಮತ್ತು ವರರ ಕೈಯಲ್ಲಿ ಕೊಡಬೇಕು ಮತ್ತು 'ಇದರಲ್ಲಿ ನಿಮ್ಮ ಅಭಿಪ್ರಾಯವೇನಿದೆಯೋ, ಅದನ್ನು ನಮಗೆ ತಿಳಿಸಿರಿ' – ಎಂದು ಹೇಳಬೇಕು. ಯಾವಾಗ ಪರಸ್ಪರ ವಿವಾಹ ಮಾಡಿಕೊಳ್ಳುವ ನಿಶ್ಚಯ ಅವರಿಬ್ಬರಿಗೂ ಉಂಟಾಗುವುದೋ, ಆಗ, ಅವರಿಬ್ಬರ ಸಮಾವರ್ತನ ಸಂಸ್ಕಾರ ಒಂದೇ ಕಾಲದಲ್ಲಿ ಆಗಬೇಕು. ಅವರಿಬ್ಬರೂ ಅಧ್ಯಾಪಕರ ಎದುರಿಗೆ ಮದುವೆಮಾಡಿಕೊಳ್ಳಲು ಇಚ್ಛಿಸಿದರೆ, ಅಲ್ಲಿಯೇ, ಇಲ್ಲವಾದರೆ ಕನ್ಯೆಯ ಮಾತಾಪಿತೃಗಳ ಮನೆಯಲ್ಲಿ ವಿವಾಹವಾಗುವುದು ಯೋಗ್ಯವಾಗಿರುತ್ತದೆ. ಅವರಿಬ್ಬರೂ ಸಮಕ್ಷಮವಿದ್ದಾಗ, ಆ ಅಧ್ಯಾಪಕರುಗಳ ಅಥವಾ ಕನ್ಯೆಯ ತಾಯಿ, ತಂದೆ ಮೊದಲಾದ ಸಜ್ಜನರ ಮುಂದೆ, ಅವರಿಬ್ಬರ ಪರಸ್ಪರ ಸಂಭಾಷಣೆ, ಶಾಸ್ತ್ರಾರ್ಥ ಮಾಡಿಸಬೇಕು ಮತ್ತು ಯಾವ ಆಂತರಿಕ ವಿಷಯಗಳ ಬಗೆಗೆ ಕೇಳುತ್ತಾರೋ, ಅದನ್ನೂ ಕೂಡ ಸಭೆಯಲ್ಲಿ ಬರೆದು, ಒಬ್ಬರು ಇನ್ನೊಬ್ಬರ ಕೈಗೆ ಕೊಟ್ಟು ಪ್ರಶ್ನೋತ್ತರ ಮಾಡಿಕೊಳ್ಳಬೇಕು.

ಯಾವಾಗ ವಿವಾಹವಾಗುವುದಕ್ಕೆ ಇಬ್ಬರಿಗೂ ದೃಢಪ್ರೇಮ ಉಂಟಾಗುತ್ತದೋ, ಆ ಸಮಯದಿಂದ, ಮೊದಲಿನ ಬ್ರಹ್ಮಚರ್ಯ ಮತ್ತು ವಿದ್ಯಾಧ್ಯಯನವೆಂಬ ತಪಶ್ಚರ್ಯೆ ಮತ್ತು ಕಷ್ಟದಿಂದ ದುರ್ಬಲವಾಗಿರುವ ಅವರ ಶರೀರಗಳು ಚಂದ್ರನ ಕಲೆಯಂತೆ ವರ್ಧಿಸಿ, ಸ್ವಲ್ಪ ದಿನಗಳಲ್ಲಿಯೇ ಪುಷ್ಟವಾಗಿ ಹೋಗುವಂತೆ, ಅವರಿಬ್ಬರ ಖಾದ್ಯ–ಪೇಯಗಳ ಉತ್ತಮ ವ್ಯವಸ್ಥೆಯಾಗಬೇಕು. ಆ ಮೇಲೆ ಕನ್ಯೆ ರಜಸ್ವಲೆಯಾಗಿ, ಯಾವಾಗ ಶುದ್ಧಳಾಗುತ್ತಾಳೋ, ಆಗ, ವೇದೀ ಮತ್ತು ಮಂಟಪಗಳನ್ನು ನಿರ್ಮಿಸಿ, ಸುಗಂಧಯುಕ್ತವಾದ ಅನೇಕ ದ್ರವ್ಯಗಳ ಮತ್ತು ತುಪ್ಪ ಮೊದಲಾದುದರ ಹೋಮವನ್ನು ಮತ್ತು ಅನೇಕ ವಿದ್ವಾಂಸರಾದ ಪುರುಷರ ಹಾಗೂ ಸ್ತ್ರೀಯರ ಸತ್ಕಾರವನ್ನೂ ಯೋಗ್ಯ ರೀತಿಯಲ್ಲಿ ಮಾಡಬೇಕು. ಆ ಮೇಲೆ ಯಾವ ದಿನ ಋತುದಾನ ಮಾಡುವುದು ಯೋಗ್ಯವೆಂದು ತಿಳಿಯುತ್ತಾರೋ, ಆದೇ ದಿನ, ಸಂಸ್ಕಾರ ವಿಧಿ[೬] – ಎಂಬ ಪುಸ್ತಕದಲ್ಲಿರುವ ವಿಧಿಗೆ ಅನುಸಾರ

---

೬. ಈ ಗ್ರಂಥ ಕನ್ನಡದಲ್ಲಿ ಭಾಷಾಂತರವಾಗಿದ್ದು ಸದ್ಯ ಮುದ್ರಣದಲ್ಲಿದೆ.

ಎಲ್ಲ ಕಾರ್ಯಗಳನ್ನೂ ಮಾಡಿ, ಮಧ್ಯರಾತ್ರಿ ಅಥವಾ ಹತ್ತು[೭] ಘಂಟೆಗೆ ಅತಿ ಪ್ರಸನ್ನತೆಯಿಂದ, ಎಲ್ಲರೆದುರಿಗೆ ಪಾಣಿಗ್ರಹಣ ಪೂರ್ವಕವಾಗಿ ವಿವಾಹ ವಿಧಿಯನ್ನು ಪೂರೈಸಿ, ಏಕಾಂತ ಸೇವನೆ ಮಾಡಬೇಕು.

ಪುರುಷರು ವೀರ್ಯಸ್ಥಾಪನೆಯ ಮತ್ತು ಸ್ತ್ರೀಯು ವೀರ್ಯಾಕರ್ಷಣದ ಯಾವ ವಿಧಿಯಿದೆಯೋ, ಅದರಂತಯೇ ಇಬ್ಬರೂ ಮಾಡಬೇಕು. ಎಲ್ಲಿಯವರೆಗೆ ಸಾಧ್ಯವೋ, ಅಲ್ಲಿಯವರೆಗೂ ಬ್ರಹ್ಮಚರ್ಯದ ವೀರ್ಯವನ್ನು ವ್ಯರ್ಥವಾಗಿ ಹೋಗಲು ಬಿಡಬಾರದು. ಏಕೆಂದರೆ- ಆ ವೀರ್ಯ ಅಥವಾ ರಜಸ್ಸಿನಿಂದ ಯಾವ ಶರೀರ ಉತ್ಪನ್ನವಾಗುತ್ತದೋ, ಅದು ಅಪೂರ್ವವೂ ಉತ್ತಮವೂ, ಆದ ಸಂತತಿಯಾಗುತ್ತದೆ. ಯಾವಾಗ ವೀರ್ಯವು ಗರ್ಭಾಶಯದಲ್ಲಿ ಬೀಳುವ ಸಮಯ ಬರುತ್ತದೋ, ಆಗ ಸ್ತ್ರೀ - ಪುರುಷರಿಬ್ಬರೂ ಸ್ಥಿರರಾಗಿ, ಮತ್ತು ಮೂಗಿನೆದುರಿಗೆ ಮೂಗು, ಕಣ್ಣಿನೆದುರಿಗೆ ಕಣ್ಣು ಇರುವಂತೆ, ಎಂದರೆ ನೇರವಾದ ಶರೀರಗಳನ್ನುಳ್ಳವರಾಗಿ ಮತ್ತು ಅತ್ಯಂತ ಪ್ರಸನ್ನಚಿತ್ತರಾಗಿರಬೇಕು; ಕದಲಬಾರದು. ಪುರುಷನು ತನ್ನ ಶರೀರವನ್ನು ಸಡಿಲಬಿಡಬೇಕು ಮತ್ತು ಸ್ತ್ರೀಯು ವೀರ್ಯಪ್ರಾಪ್ತಿಯ ವೇಳೆಯಲ್ಲಿ, ಅಪಾನವಾಯುವನ್ನು ಮೇಲಕ್ಕೆಳೆಯಬೇಕು. ಯೋನಿಯನ್ನು ಮೇಲಕ್ಕೆ ಸಂಕೋಚಿಸಿ, ವೀರ್ಯವನ್ನು ಮೇಲಕ್ಕೆ ಆಕರ್ಷಿಸಿ, ಗರ್ಭಾಶಯದಲ್ಲಿ ನಿಲ್ಲಿಸಬೇಕು.[೮] ಆ ಮೇಲೆ ಇಬ್ಬರೂ ಶುದ್ಧ ಜಲದಿಂದ ಸ್ನಾನಮಾಡಬೇಕು.[೯] ಗರ್ಭಸ್ಥಿತಿಯಾದುದರ ಪರಿಜ್ಞಾನ ವಿದುಷಿಯಾದ ಸ್ತ್ರೀಗಂತೂ ಆ ಸಮಯದಲ್ಲೇ ಉಂಟಾಗುತ್ತದೆ. ಆದರೆ, ಒಂದು ಮಾಸದ ನಂತರ ರಜಸ್ವಲೆಯಾಗದಿದ್ದರೆ, ಇದರ ನಿಶ್ಚಯ ಎಲ್ಲರಿಗೂ ಉಂಟಾಗುತ್ತದೆ.

ಶುಂಠಿ, ಕೇಸರಿ, ಅಶ್ವಗಂಧಿ, ಚಿಕ್ಕ ಏಲಕ್ಕಿ ಮತ್ತು ಕೆಂಪು ಕಲ್ಲುಸಕ್ಕರೆ ಹಾಕಿ, ಬಿಸಿ ಮಾಡಿ, ಮೊದಲೇ ಇಟ್ಟಿದ್ದ ತಣ್ಣನೆಯ ಹಾಲನ್ನು ರುಚಿಗನುಸಾರವಾಗಿ ಇಬ್ಬರೂ ಕುಡಿದು ಬೇರೆ ಬೇರೆ, ತಮ್ಮ ತಮ್ಮ ಹಾಸಿಗೆಗಳಲ್ಲಿ ಮಲಗಬೇಕು. ಯಾವಾಗ ಯಾವಾಗ ಗರ್ಭಾಧಾನದ ಕ್ರಿಯೆಯನ್ನು ಮಾಡುತ್ತಾರೋ, ಆಗ - ಆಗ ಇದೇ ವಿಧಿಯನ್ನು ಅನುಸರಿಸುವುದು ಉಚಿತವಾಗಿದೆ. ತಿಂಗಳು ಪೂರ್ತಿ ರಜಸ್ವಲೆಯಾಗದಿರುವುದರಿಂದ ಯಾವಾಗ ಗರ್ಭಸ್ಥಿತಿಯ ನಿಶ್ಚಯವುಂಟಾಗುತ್ತದೋ, ಆಗಿನಿಂದ ಒಂದು ವರ್ಷ ಪರ್ಯಂತ ಸ್ತ್ರೀ-ಪುರುಷರ ಸಮಾಗಮ ಎಂದಿಗೂ ಆಗಬಾರದು. ಏಕೆಂದರೆ, ಹೀಗಿರುವುದರಿಂದ ಸಂತತಿ ಉತ್ತಮವಾಗುವುದು. ಮತ್ತು ಪುನಃ ಎರಡನೆಯ ಸಂತತಿಯೂ ಕೂಡ ಹಾಗೆಯೇ ಆಗುವುದು. ಅನ್ಯಥಾ, ವೀರ್ಯವು ವ್ಯರ್ಥವಾಗಿ ಹೋಗುತ್ತದೆ. ಇಬ್ಬರ ಆಯಸ್ಸೂ ಕುಗ್ಗಿ ಹೋಗುತ್ತದೆ ಮತ್ತು ಅನೇಕ ಪ್ರಕಾರದ ರೋಗಗಳು ಉದ್ಭವಿಸುತ್ತವೆ. ಆದರೆ, ಮೇಲಿನಿಂದ ಸಂಭಾಷಣ ಮೊದಲಾದ ಪ್ರೇಮಯುಕ್ತ ವ್ಯವಹಾರಗಳನ್ನು ಅವಶ್ಯವಾಗಿ ಇಟ್ಟುಕೊಂಡಿರಬೇಕು.

ಪುರುಷನು ವೀರ್ಯದ ಸ್ಥಿತಿಯನ್ನೂ ಮತ್ತು ಸ್ತ್ರೀಯು ಗರ್ಭದ ರಕ್ಷಣೆಯನ್ನೂ ಹೇಗೆ ಮಾಡಿಕೊಳ್ಳಬೇಕು - ಎಂದರೆ, ಪುರುಷನ ವೀರ್ಯವು ಸ್ವಪ್ನದಲ್ಲಿಯೂ ನಷ್ಟವಾಗದಂತೆ ಮತ್ತು ಗರ್ಭದಲ್ಲಿ ಶಿಶುವಿನ ಶರೀರವು ಅತ್ಯುತ್ತಮ ರೂಪ-ಲಾವಣ್ಯ-ಪುಷ್ಟಿ-ಬಲ-ಪರಾಕ್ರಮಯುಕ್ತವಾಗಿ ಹತ್ತನೆಯ ತಿಂಗಳಿನಲ್ಲಿ ಜನಿಸುವಂತೆ, ಭೋಜನ - ಆಚ್ಛಾದನಗಳನ್ನೂ ಮಾಡಬೇಕು. ಅದರ ವಿಶೇಷ ರಕ್ಷಣೆಯನ್ನು ನಾಲ್ಕನೆಯ ತಿಂಗಳಿನಿಂದಲೂ, ಮತ್ತು ಅತಿ - ವಿಶೇಷವಾಗಿ ಎಂಟನೆಯ ತಿಂಗಳಿನ ಮುಂದಕ್ಕೂ ಮಾಡಬೇಕು. ಎಂದಿಗೂ ಗರ್ಭವತೀ ಸ್ತ್ರೀ ರೇಚಕವೂ, ನೀರಸವೂ, ಮಾದಕವೂ, ಆದ ದ್ರವ್ಯದ, ಬುದ್ಧಿ ಮತ್ತು ಬಲಗಳ ನಾಶಕವಾದ ಪದಾರ್ಥಗಳ ಭೋಜನ- ಮೊದಲಾದುವನ್ನು ಮಾಡಬಾರದು. ಆದರೆ - ತುಪ್ಪ, ಹಾಲು, ಉತ್ತಮವಾದ ಅಕ್ಕಿ, ಗೋಧಿ, ಹೆಸರು, ಉದ್ದು ಮೊದಲಾದ ಅನ್ನಪಾನಗಳನ್ನು ಮತ್ತು ದೇಶದ ಮತ್ತು ಕಾಲದ ಸದುಪಯೋಗವನ್ನೂ ಯುಕ್ತಿ ಪೂರ್ವಕವಾಗಿ ಮಾಡಬೇಕು.

---

೭. ಈ ಸಮಯ ಉತ್ತರ ಭಾರತದಲ್ಲಿ ಪ್ರಚಲಿತವಾಗಿದೆ. ಇದಕ್ಕೆ ಕಾರಣ-ದೇಶ, ಕಾಲ ಮತ್ತು ಅನುಕೂಲತೆ. ದಕ್ಷಿಣ ಭಾರತೀಯರಿಗೆ ಈ ಸಮಯ ಅನ್ವಯಿಸುವುದಿಲ್ಲ. -ಸಂ.

೮. ಈ ವಿಷಯ ರಹಸ್ಯದ್ದಾಗಿದೆ. ಆದ್ದರಿಂದ, ಇಷ್ಟರಿಂದಲೇ ಸಂಪೂರ್ಣ ವಿಷಯವನ್ನು ತಿಳಿದುಕೊಳ್ಳಬೇಕು. ಹೆಚ್ಚು ಬರೆಯುವುದು ಉಚಿತವಲ್ಲ. -ದ.ಸ.

ಈ ವಿಧಿಯನ್ನು ಗ್ರಂಥಕರ್ತರು ಬೃಹದಾರಣ್ಯಕೋಪನಿಷತ್ ಮತ್ತು ಚರಕ-ಸುಶ್ರುತ ಆಯುರ್ವೇದ ಗ್ರಂಥಗಳ ಆಧಾರದ ಮೇಲೆ ಬರೆದಿದ್ದಾರೆ. 'ಅಥಾಸ್ಯಾ ಊರೂ ವಿಹಾಪಯತಿ ವಿಜಿಹೀಥಾಂ ದ್ಯಾವಾಪೃಥಿವೀ ಇತಿ ತಸ್ಯಾಮಿರ್ಥಂ ನಿಷ್ಠಾಯ ಮುಖೇನ ಮುಖಂ ಸಂಧಾಯತ್ರಿರೇನಾಮನುಲೋಮಾನುಮಾರ್ಷ್ಟಿ' ಇತ್ಯಾದಿ.

೯. ಋತುವಿಗೆ ಅನುಕೂಲವಿದ್ದರೆ, ಸ್ನಾನ ಮಾಡಬೇಕು. -ಸಂ

ಗರ್ಭವಿರುವಾಗ ಎರಡು ಸಂಸ್ಕಾರಗಳನ್ನು, ಒಂದನೆಯದಾಗಿ, ನಾಲ್ಕನೆಯ ತಿಂಗಳಲ್ಲಿ ಪುಂಸವನವನ್ನೂ[೧೦] ಮತ್ತು ಎರಡನೆಯದಾಗಿ, ಎಂಟನೆಯ ತಿಂಗಳಿನಲ್ಲಿ ಸೀಮಂತೋನ್ನ[೧೧]ಯನವನ್ನೂ ವಿಧಿಗೆ ಅನುಕೂಲವಾಗಿ ಮಾಡಬೇಕು.

ಯಾವಾಗ ಸಂತತಿಯ ಜನನವಾಗುತ್ತದೋ, ಆಗ ಸ್ತ್ರೀಯ ಮತ್ತು ಶಿಶುವಿನ ಶರೀರದ ರಕ್ಷಣೆಯನ್ನು ಬಹಳ ಎಚ್ಚರಿಕೆಯಿಂದ ಮಾಡಬೇಕು. ಎಂದರೆ – ಶುಂಠೀಪಾಕವನ್ನು ಅಥವಾ ಸೌಭಾಗ್ಯ ಶುಂಠೀಪಾಕವನ್ನು ಮೊದಲೇ ಮಾಡಿ ಇಟ್ಟಿರಬೇಕು. ಆಮೇಲೆ ನಾಡೀ ಛೇದನ; ಶಿಶುವಿನ ಹೊಕ್ಕಳಿನ ಮೂಲದಲ್ಲಿ ಒಂದು ಮೃದುವಾದ ದಾರದಿಂದ ಕಟ್ಟಿ, ನಾಲ್ಕಂಗುಲಬಿಟ್ಟು ಮೇಲಿನಿಂದ ಕತ್ತರಿಸಿಬಿಡಬೇಕು. ರಕ್ತದ ಒಂದು ತೊಟ್ಟೂ ಕೂಡ ಹೋಗಲಾಗದಂತೆ ಅದನ್ನು ಬಂಧಿಸಬೇಕು. ಕಿಂಚಿನ್ಮಾತ್ರ ಬಿಸಿಯಾಗಿರುವ, ಸುಗಂಧಿಯುಕ್ತವಾದ ಬಿಸಿನೀರಿನಿಂದಲೇ ಸ್ತ್ರೀಯು ಆಗ ಸ್ನಾನ ಮಾಡಬೇಕು. ಮತ್ತು ಶಿಶುವಿಗೂ ಕೂಡ ಸ್ನಾನವನ್ನು ಮಾಡಿಸಬೇಕು. ನಂತರ, ಆ ಸ್ಥಾನವನ್ನು ಶುದ್ಧ ಮಾಡಿ ಅದರ ಬಾಗಿಲಿನೊಳಗೆ ಸುಗಂಧ ಮೊದಲಾದುದರಿಂದ ಕೂಡಿದ ತುಪ್ಪದಿಂದ ಹೋಮವನ್ನು ಮಾಡಬೇಕು. ಆ ಮೇಲೆ ಸಂತತಿಯ ಕಿವಿಯಲ್ಲಿ ತಂದೆಯು **"ವೇದೋಽಸೀತಿ"**[೧೨] – ಎಂದರೆ "ನಿನ್ನ ಹೆಸರು ವೇದ" – ಎಂದು ಹೇಳಿ, ತುಪ್ಪ ಮತ್ತು ಜೇನುತುಪ್ಪವನ್ನು ತೆಗೆದುಕೊಂಡು, ಚಿನ್ನದ ಸರಳಿನಿಂದ, ನಾಲಗೆಯ ಮೇಲೆ **"ಓಂ"** ಎಂಬ ಅಕ್ಷರವನ್ನು ಬರೆದು, ಜೇನುತುಪ್ಪ ಹಾಗೂ ತುಪ್ಪವನ್ನು ಅದೇ ಸರಳಿನಿಂದ ನೆಕ್ಕಿಸಬೇಕು. ಆ ಮೇಲೆ ಶಿಶುವನ್ನು ಅದರ ತಾಯಿಗೆ ಕೊಟ್ಟು ಬಿಡಬೇಕು; ಶಿಶು ಹಾಲನ್ನು ಕುಡಿಯಲಿಚ್ಛಿಸಿದರೆ, ಅದರ ತಾಯಿ ಕುಡಿಸಬೇಕು. ಅದರ ತಾಯಿಯ ಹಾಲು ಇಲ್ಲದಿದ್ದರೆ, ಯಾವಳಾದರೂ ಸ್ತ್ರೀಯಳನ್ನು ಪರೀಕ್ಷಿಸಿ, ಅವಳ ಹಾಲನ್ನು ಕುಡಿಸಬೇಕು. ಆನಂತರ, ಎಲ್ಲಿಯ ವಾಯುವು ಶುದ್ಧವಾಗಿರುತ್ತದೋ, ಆ ಬೇರೆಯ ಕೋಣೆ ಅಥವಾ ಚಿಕ್ಕಮನೆಯಲ್ಲಿ, ಸುಗಂಧಿತವಾದ ತುಪ್ಪದ ಹೋಮವನ್ನು ಪ್ರಾತಃಕಾಲ – ಸಾಯಂಕಾಲ ಮಾಡುತ್ತಾ ಹೋಗಬೇಕು. ಮತ್ತು ಅದರಲ್ಲಿಯೇ ಬಾಣಂತಿ ಮತ್ತು ಮಗುವನ್ನು ಇಡಬೇಕು. ಶಿಶು ಆರು ದಿನಗಳವರೆಗೆ ತಾಯಿಯ ಹಾಲನ್ನು ಕುಡಿಯಬೇಕು. ಮತ್ತು ಸ್ತ್ರೀಯೂ ಕೂಡ ತನ್ನ ಶರೀರದ ಪುಷ್ಟಿಗೋಸ್ಕರ ಅನೇಕ ಬಗೆಯ ಉತ್ತಮ ಭೋಜನವನ್ನು ಮಾಡಬೇಕು ಮತ್ತು ಯೋನಿ ಸಂಕೋಚನ ಮೊದಲಾದುದನ್ನೂ ಮಾಡಬೇಕು. ಆರನೆಯ ದಿನ ಸ್ತ್ರೀ ಹೊರಕ್ಕೆ ಹೊರಡಬೇಕು ಮತ್ತು ಶಿಶುವು ಹಾಲನ್ನು ಕುಡಿಯುವುದಕ್ಕಾಗಿ ಯಾವಳಾದರೂ ದಾದಿಯನ್ನಿಡಬೇಕು. ಅವಳಿಗೆ ಒಳ್ಳೆಯ ಆಹಾರ – ಪಾನೀಯಗಳನ್ನು ಸೇವನೆಮಾಡಿಸಬೇಕು. ಅವಳು ಶಿಶುವಿಗೆ ಹಾಲನ್ನು ಕುಡಿಸುತ್ತಾ ಇರಲಿ; ಪಾಲನೆಯನ್ನೂ ಮಾಡಲಿ; ಆದರೆ, ಅದರ ತಾಯಿ ಶಿಶುವಿನ ಮೇಲೆ ಪೂರ್ಣವಾದ ದೃಷ್ಟಿಯಿಟ್ಟಿರಬೇಕು; ಅದರ ಪಾಲನೆಯಲ್ಲಿ ಯಾವುದೇ ಬಗೆಯ ಅನುಚಿತ ವ್ಯವಹಾರವೂ ಆಗಲಾರದು. ಸ್ತ್ರೀಯು ಹಾಲನ್ನು ನಿಲ್ಲಿಸುವುದಕ್ಕಾಗಿ, ಯಾವುದರಿಂದ ಹಾಲು ಸ್ರವಿಸುವುದಿಲ್ಲವೋ ಅಂತಹ ಲೇಪವನ್ನು ಸ್ತನದ ಅಗ್ರಭಾಗಕ್ಕೆ ಸವರಬೇಕು. ಅದೇ ರೀತಿ, ಖಾದ್ಯ–ಪೇಯಗಳ ವ್ಯವಹಾರವನ್ನೂ ಕೂಡ ಯೋಗ್ಯವಾದ ರೀತಿಯಲ್ಲಿ ನಡೆಯಿಸಬೇಕು. ಆನಂತರ, ನಾಮಕರಣವೇ ಮೊದಲಾದ ಸಂಸ್ಕಾರಗಳನ್ನು 'ಸಂಸ್ಕಾರವಿಧಿ' ಯಲ್ಲಿ ವಿಧಿಸಿರುವಂತೆ ಯುಕ್ತವಾದ ಕಾಲಗಳಲ್ಲಿ ಮಾಡುತ್ತಾ ಹೋಗಬೇಕು. ಯಾವಾಗ ಸ್ತ್ರೀ ಮತ್ತೆ ರಜಸ್ವಲೆಯಾಗುತ್ತಾಳೋ, ಆಗ ಶುದ್ಧಳಾದ ನಂತರ, ಅದೇ ರೀತಿ ಋತು–ದಾನ ಮಾಡಬೇಕು.

**ಋತುಕಾಲಾಭಿಗಾಮೀ ಸ್ಯಾತ್ ಸ್ವದಾರನಿರತಃ ಸದಾ ।**
**ಬ್ರಹ್ಮಚಾರ್ಯೇವ ಭವತಿ ಯತ್ರತತ್ರಾಶ್ರಮೇ ವಸನ್ ॥** (ಮನು:– ೩.೫೦)

ಯಾವನು ತನ್ನ ಪತ್ನಿಯಲ್ಲಿಯೇ ಪ್ರಸನ್ನನೂ, ಮತ್ತು ಋತುಗಾಮಿಯೂ ಆಗಿರುತ್ತಾನೋ, ಅವನು ಗೃಹಸ್ಥನಾಗಿದ್ದರೂ ಬ್ರಹ್ಮಚಾರಿಯಂತೆಯೇ ಸರಿ.

**ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ ।**
**ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಮ್ ॥** (ಮನು:– ೩.೬೦)

**ಯದಿ ಹಿ ಸ್ತ್ರೀ ನ ರೋಚೇತ ಪುಮಾಂಸನ್ನ ಪ್ರಮೋದಯೇತ್ ।**
**ಅಪ್ರಮೋದಾತ್ಪುನಃ ಪುಂಸಃ ಪ್ರಜನಂ ನ ಪ್ರವರ್ತತೇ ॥** (ಮನು:– ೩.೬೧.)

---

೧೦. ಇವುಗಳ ವಿಧಿ 'ಸಂಸ್ಕಾರವಿಧಿ' ವಿಧಿಯಲ್ಲಿ ಕೊಡಲಾಗಿದೆ. –ಸಂ

೧೧. ಇವುಗಳ ವಿಧಿ 'ಸಂಸ್ಕಾರವಿಧಿ' ವಿಧಿಯಲ್ಲಿ ಕೊಡಲಾಗಿದೆ– ಸಂ

೧೨. ಇವುಗಳ ವಿಧಿ 'ಸಂಸ್ಕಾರವಿಧಿ' ವಿಧಿಯಲ್ಲಿ ಕೊಡಲಾಗಿದೆ– ಸಂ
ಜಾತಕರ್ಮ ಸಂಸ್ಕಾರಕ್ಕಾಗಿ ' ಸಂಸ್ಕಾರವಿಧಿ' ಯನ್ನು ನೋಡಿರಿ.–ಸಂ

**ಸ್ತ್ರಿಯಾಂತು ರೋಚಮಾನಾಯಾಂ ಸರ್ವಂ ತದ್ರೋಚತೇ ಕುಲಮ್ ।**

**ತಸ್ಯಾಂ ತ್ವರೋಚಮಾನಾಯಾಂ ಸರ್ವಮೇವ ನ ರೋಚತೇ ॥** (ಮನು:– ೩.೬೨.)

ಯಾವ ಕುಲದಲ್ಲಿ ಪತ್ನಿಯಿಂದ ಪತಿಯೂ ಮತ್ತು ಪತಿಯಿಂದ ಪತ್ನಿಯೂ ಉತ್ತಮ ರೀತಿಯಿಂದ ಪ್ರಸನ್ನರಾಗಿರುತ್ತಾರೋ, ಆ ಕುಲದಲ್ಲಿಯೇ ಸಮಸ್ತ ಸೌಭಾಗ್ಯಗಳೂ ಮತ್ತು ಐಶ್ವರ್ಯಗಳೂ ನಿವಾಸಮಾಡುತ್ತವೆ. ಎಲ್ಲಿ ಕಲಹವಾಗುತ್ತದೋ, ಅಲ್ಲಿ ದುರ್ಭಾಗ್ಯ ಮತ್ತು ದಾರಿದ್ರ್ಯ ಸ್ಥಿರವಾಗುತ್ತದೆ. (೧)

ಸ್ತ್ರೀಯು ಪತಿಯನ್ನು ಪ್ರೀತಿಸದಿದ್ದರೆ ಮತ್ತು ಪತಿಯನ್ನು ಪ್ರಸನ್ನಗೊಳಿಸದಿದ್ದರೆ, ಪತಿಯು ಅಪ್ರಸನ್ನನಾಗಿರುವುದರಿಂದ ಕಾಮವು ಉತ್ಪನ್ನವಾಗುವುದಿಲ್ಲ.[೧೩] (೨)

ಯಾವ ಸ್ತ್ರೀಯ ಪ್ರಸನ್ನತೆಯಿಂದ ಸಮಸ್ತ ಕುಲವೂ ಪ್ರಸನ್ನವಾಗಿರುತ್ತದೋ, ಅವಳೇ ಅಪ್ರಸನ್ನಳಾದಲ್ಲಿ ಸರ್ವವೂ ಅಪ್ರಸನ್ನ ಎಂದರೆ– ದುಃಖದಾಯಕವಾಗಿ ಹೋಗುತ್ತದೆ.(೩)

**ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।**

**ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸುಭಿಃ॥** (ಮನು:– ೩.೫೫)

**ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ।**

**ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಽಫಲಾಃ ಕ್ರಿಯಾಃ ॥** (ಮನು:– ೩.೫೬)

**ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಮ್ ।**

**ನ ಶೋಚಂತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ ॥** (ಮನು:– ೩.೫೭)

**ತಸ್ಮಾದೇತಾಃ ಸದಾಪೂಜ್ಯಾ ಭೂಷಣಾಚ್ಛಾದನಾಶನೈಃ ।**

**ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷು ಚ ॥** (ಮನು:– ೩.೫೯)

ಪಿತೃಗಳೂ, ಸೋದರರೂ, ಮೈದುನಂದಿರೂ ಇವರನ್ನು ಸತ್ಕಾರಪೂರ್ವಕವಾಗಿ ಆಭರಣ – ಮೊದಲಾದುವುಗಳಿಂದ ಪ್ರಸನ್ನರಾಗಿಡಬೇಕು. ಯಾರಿಗೆ ಬಹಳ ಕಲ್ಯಾಣದ ಇಚ್ಛೆಯಿರುತ್ತದೋ, ಅವರು ಹೀಗೆ ಮಾಡಬೇಕು .

ಯಾವ ಮನೆಯಲ್ಲಿ ಸ್ತ್ರೀಯರ ಸತ್ಕಾರವಾಗುತ್ತದೋ, ಅದರಲ್ಲಿ ಪುರುಷರು ವಿದ್ಯಾಯುಕ್ತರಾಗಿ "ದೇವ" – ಎಂಬ ನಾಮವನ್ನು ಪಡೆದುಕೊಂಡು, ಆನಂದದಿಂದ ಕ್ರೀಡಿಸುತ್ತಾರೆ ಮತ್ತು ಯಾವ ಮನೆಯಲ್ಲಿ ಸ್ತ್ರೀಯರ ಸತ್ಕಾರವಾಗುವುದಿಲ್ಲವೋ, ಅಲ್ಲಿ ಸರ್ವಕ್ರಿಯೆಗಳೂ ನಿಷ್ಫಲವಾಗಿ ಹೋಗುತ್ತವೆ.[೧೪]

ಯಾವ ಮನೆಯಲ್ಲಿ ಅಥವಾ ಕುಲದಲ್ಲಿ ಸ್ತ್ರೀಯರು ಶೋಕಾತುರರಾಗಿ ದುಃಖ ಹೊಂದುತ್ತಾರೋ, ಆ ಕುಲವು ಶೀಘ್ರವೇ ನಷ್ಟ – ಭ್ರಷ್ಟವಾಗಿ ಹೋಗುತ್ತದೆ ಮತ್ತು ಯಾವ ಮನೆಯಲ್ಲಿ ಅಥವಾ ಕುಲದಲ್ಲಿ ಸ್ತ್ರೀಯರು ಆನಂದದಿಂದ, ಉತ್ಸಾಹ ಮತ್ತು ಪ್ರಸನ್ನತೆಯಿಂದ ತುಂಬಿರುತ್ತಾರೋ, ಆ ಕುಲವು ಸರ್ವದಾ ವರ್ಧಿಸುತ್ತಾ ಇರುತ್ತದೆ. (೩)

ಈ ಕಾರಣದಿಂದ, ಸತ್ಕಾರಗಳ ಮತ್ತು ಉತ್ಸವಗಳ ಸಮಯದಲ್ಲಿ ಸ್ತ್ರೀಯರನ್ನು ಒಡವೆ, ವಸ್ತ್ರ ಮತ್ತು ಭೋಜನ – ಮೊದಲಾದುವುಗಳಿಂದ ನಿತ್ಯಪ್ರತಿ ಸತ್ಕರಿಸುವುದು ಐಶ್ವರ್ಯದ ಕಾಮನೆ ಮಾಡುವ ಮನುಷ್ಯರಿಗೆ ಯೋಗ್ಯವಾಗಿದೆ. (೪)

'ಪೂಜಾ' ಎಂಬ ಶಬ್ದದ ಅರ್ಥ ಸತ್ಕಾರ – ಎಂದಾಗಿದೆ – ಎಂಬ ಮಾತನ್ನು ಸದಾ ಗಮನದಲ್ಲಿಡಬೇಕು ಮತ್ತು ಹಗಲು–ರಾತ್ರಿಗಳಲ್ಲಿ ಯಾವಾಗ ಯಾವಾಗ ಮೊದಲ ಸಾರಿ ಸಂಧಿಸುತ್ತಾರೋ ಅಥವಾ ಬೇರೆಯಾಗುತ್ತಾರೋ, ಆಗ–ಆಗ ಪ್ರೀತಿಪೂರ್ವಕವಾಗಿ ಒಬ್ಬರಿಗೊಬ್ಬರು 'ನಮಸ್ತೇ' ಮಾಡಬೇಕು.

---

೧೩. ಸಂಸ್ಕಾರವಿಧಿಯ ಗೃಹಾಶ್ರಮ ಪ್ರಕರಣದಲ್ಲೂ ಈ ಶ್ಲೋಕಗಳ ವ್ಯಾಖ್ಯೆ ಇದೆ. –ಸಂ

೧೪. 'ಸಂಸ್ಕಾರ ವಿಧಿ'ಯ ಗೃಹಾಶ್ರಮ ಪ್ರಕರಣದಲ್ಲಿ ಈ ಶ್ಲೋಕಗಳ ವ್ಯಾಖ್ಯೆ ಇದೆ.

**ಸದಾ ಪಹೃಷ್ಟಯಾ ಭಾವ್ಯಂ ಗೃಹಕಾರ್ಯೇಷು ದಕ್ಷಯಾ ।**

**ಸುಸಂಸ್ಕೃತೋಪಸ್ಕರಯಾ ವ್ಯಯೇ ಚಾಮುಕ್ತಹಸ್ತಯಾ ॥** (ಮನು:- ೫. ೧೦೫)

ಅತಿ ಪ್ರಸನ್ನತೆಯಿಂದ ಮನೆಯ ಕೆಲಸಗಳಲ್ಲಿ ಚಾತುರ್ಯಯುಕ್ತಳಾಗಿ, ಸಮಸ್ತ ಪದಾರ್ಥಗಳ ಉತ್ತಮ ಪರಿಷ್ಕಾರಗಳನ್ನೂ (ಮತ್ತು) ಮನೆಯ ಶುದ್ಧಿಯನ್ನೂ ಮಾಡಬೇಕು. ಮತ್ತು ವ್ಯಯದಲ್ಲಿ ಅತ್ಯಂತ ಉದಾರಳಾಗಿರಬಾರದು; ಎಂದರೆ ಯೋಗ್ಯ ರೀತಿಯಲ್ಲಿ ವ್ಯಯಮಾಡಬೇಕು. ಸಮಸ್ತವಸ್ತುಗಳೂ ಔಷಧರೂಪವಾಗಿ ಪರಿಣಮಿಸಿ, ಶರೀರದಲ್ಲಿ ಅಥವಾ ಆತ್ಮನಲ್ಲಿ ರೋಗವು ಪ್ರವೇಶಿಸಲು ಬಿಡದಂತೆ, ಅವನ್ನು ಪವಿತ್ರ ಹಾಗು ನಿರ್ಮಲಗೊಳಿಸಬೇಕು. ಯಾವ ಯಾವ ವ್ಯಯ ಆಗುವುದೋ, ಅದರ ಲೆಕ್ಕವನ್ನು ಯಥಾವತ್ತಾಗಿಟ್ಟು, ಪತಿ-ಮೊದಲಾದವರಿಗೆ ಹೇಳುತ್ತಾ ಇರಬೇಕು. ಮನೆಯಲ್ಲಿ ಸೇವಕ-ಭೃತ್ಯರಿಂದ ತಕ್ಕರೀತಿಯಲ್ಲಿ ಕೆಲಸ ಮಾಡಿಸಿಕೊಳ್ಳಬೇಕು. ಮನೆಯ ಯಾವ ಕೆಲಸವನ್ನೂ ಹಾಳಾಗಲು ಬಿಡಬಾರದು.

**ಸ್ತ್ರೀಯೋ ರತ್ನಾನ್ಯಥೋ ವಿದ್ಯಾಂ ಸತ್ಯಂ ಶೌಚಂ ಸುಭಾಷಿತಮ್ ।**

**ವಿವಿಧಾನಿ ಚ ಶಿಲ್ಪಾನಿ ಸಮಾದೇಯಾನಿ ಸರ್ವತಃ ॥** (ಮನು :- ೨.೨೪೦)

ಉತ್ತಮ ಸ್ತ್ರೀಯರು, ನಾನಾ ಪ್ರಕಾರದ ರತ್ನಗಳು, ವಿದ್ಯೆ, ಸತ್ಯ, ಪವಿತ್ರತೆ, ಶ್ರೇಷ್ಠ ಭಾಷಣ ಮತ್ತು ನಾನಾ ಪ್ರಕಾರದ ಶಿಲ್ಪವಿದ್ಯೆ ಎಂದರೆ ಕುಶಲ ಕೈಗಾರಿಕೆಗಳನ್ನು[೧೫] ಸಮಸ್ತ ದೇಶಗಳಿಂದಲೂ, ಸಮಸ್ತ ಮಾನವರಿಂದಲೂ ಗ್ರಹಿಸಬೇಕು.

**ಸತ್ಯಂಬ್ರೂಯಾತ್ ಪ್ರಿಯಮ್ ಬ್ರೂಯಾನ್ನ ಬ್ರೂಯಾತ್ಸತ್ಯಮಪ್ರಿಯಮ್ ।**

**ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥** (ಮನು :- ೪.೧೩೮)

**ಭದ್ರಂ ಭದ್ರಮಿತಿ ಬ್ರೂಯಾದ್ಭದ್ರಮಿತ್ಯೇವ ವಾ ವದೇತ್ ।**

**ಶುಷ್ಕ ವೈರಂ ವಿವಾದಂ ಚ ನ ಕುರ್ಯಾತ್ಕೇನ ಚಿತ್ಸಹ ॥** (ಮನು:- ೪.೧೩೯)

ಸದಾ ಪ್ರಿಯವಾದ, ಬೇರೆಯವರಿಗೆ ಹಿತಕಾರಕವಾದ ಸತ್ಯವನ್ನು ಹೇಳಬೇಕು. ಅಪ್ರಿಯವಾದ ಸತ್ಯವನ್ನು, ಎಂದರೆ, ಒಕ್ಕಣ್ಣನನ್ನು ಒಕ್ಕಣ್ಣನೆಂಬಂತೆ, ಹೇಳಬಾರದು. ಅನೃತ-ಎಂದರೆ ಸುಳ್ಳನ್ನು, ಬೇರೆಯವನನ್ನು ಪ್ರಸನ್ನಗೊಳಿಸುವುದಕ್ಕಾಗಿಯೂ ಹೇಳಬಾರದು. (೧).

ಸದಾ ಭದ್ರವಾದುದನ್ನು, ಎಂದರೆ ಎಲ್ಲರಿಗೂ ಹಿತಕಾರಿಯಾದ ಮಾತನ್ನು ಹೇಳುತ್ತಾ ಹೋಗಬೇಕು. ಶುಷ್ಕ ವೈರವನ್ನು, ಎಂದರೆ-ಅಪರಾಧವಿಲ್ಲದಿದ್ದರೂ ಕೂಡ ಯಾರೊಂದಿಗಾದರೂ ವಿರೋಧವನ್ನು ಮತ್ತು ವಿವಾದವನ್ನು ಮಾಡಬಾರದು. (೨)

ಯಾವಯಾವದು ಅನ್ಯರಿಗೆ ಹಿತಕಾರಕವಾಗಿರುವುದೋ, ಅದನ್ನು ಅವರು ಅನ್ಯಥಾ ಭಾವಿಸಿದರೂ ಕೂಡ, ಹೇಳದೇ ಇರಬಾರದು.

**ಪುರುಷಾ ಬಹವೋ ರಾಜನ್ ಸತತಂ ಪ್ರಿಯವಾದಿನಃ ।**

**ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥** (ವಿದುರನೀತಿ-೩೭, ೧೫)

ಹೇ ಧೃತರಾಷ್ಟ್ರ! ಈ ಜಗತ್ತಿನಲ್ಲಿ ಅನ್ಯರನ್ನು ಸದಾ ಪ್ರಸನ್ನಗೊಳಿಸುವುದಕ್ಕಾಗಿ ಪ್ರಿಯವಾಗಿರುವುದನ್ನು ಹೇಳುವ ಪ್ರಸಂಸಕ ಜನರು ಬಹಳವಿದ್ದಾರೆ. ಆದರೆ - ಆಲಿಸುವುದಕ್ಕೆ ಅಪ್ರಿಯವೆಂದು ತಿಳಿದರೂ, ಕಲ್ಯಾಣವನ್ನು ಉಂಟುಮಾಡುವ ವಚನವನ್ನು ಹೇಳುವವನೂ ಮತ್ತು ಆಲಿಸುವವನೂ ಆದ ಪುರುಷನು ದುರ್ಲಭನಾಗಿದ್ದಾನೆ. ಏಕೆಂದರೆ - ಮುಖದೆದುರಿಗೆ ಅನ್ಯನ ದೋಷವನ್ನು ಹೇಳುವುದು ಮತ್ತು ತಮ್ಮ ದೋಷವನ್ನು ಕೇಳುವುದು, ಪರೋಕ್ಷವಾಗಿ ಅನ್ಯನ ಗುಣವನ್ನು ಸದಾ ಹೇಳುವುದು ಸತ್ಪುರುಷರಿಗೆ ಯೋಗ್ಯವಾಗಿರುತ್ತದೆ. ಮತ್ತು ಸಮ್ಮುಖದಲ್ಲಿ ಗುಣಗಳನ್ನು ಹೇಳುವುದು ಮತ್ತು ಪರೋಕ್ಷವಾಗಿ ದೋಷವನ್ನು

---

೧೫. ಈ ಕಾರಣದಿಂದಲೇ, ಮಹರ್ಷಿ ದಯಾನಂದರು, ಭಾರತೀಯ ಯುವಕರನ್ನು ಜರ್ಮನಿಗೆ ಕಳುಹಿಸಿ, ಅವರಿಗೆ ಅಲ್ಲಿ ಶಿಕ್ಷಣ ಕೊಡಿಸುವ ಪ್ರಯತ್ನ ನಡೆಸಿದ್ದರು. ಅಲ್ಲಿ ಶಿಕ್ಷಣ ಪಡೆದು ಬರುವ ಯುವಕರಿಂದ ಭಾರತದಲ್ಲಿ ಗಡಿಯಾರದ ಕಾರ್ಖಾನೆಯ ಸ್ಥಾಪನೆಗಾಗಿ ಜರ್ಮನಿಯ ಪ್ರೊ. ಜಿ. ವ್ಯಾಸ ಎಂಬುವರೊಂದಿಗೆ ಪತ್ರ ವ್ಯವಹಾರ ನಡೆಸಿದ್ದರು. ಈ ಪತ್ರ ವ್ಯವಹಾರ ಪ್ರಕಟಿಸಲ್ಪಟ್ಟಿದೆ.

ಪ್ರಕಾಶಿಸುವುದು–ದುಷ್ಟರ ರೀತಿಯೇ ಆಗಿದೆ. **ಎಂದಿನವರೆಗೆ ಮಾನವ ಬೇರೆಯವನಿಂದ ತನ್ನ ದೋಷಗಳನ್ನು ಆಲಿಸುವುದಿಲ್ಲವೋ, ಅಥವಾ ಹೇಳುವವನು ಹೇಳುವುದಿಲ್ಲವೋ, ಆವರೆಗೆ ಮಾನವನು ದೋಷಗಳಿಂದ ಮುಕ್ತನಾಗಿ ಗುಣಶಾಲಿಯಾಗಲಾರನು**. ಎಂದೂ ಯಾವನ ನಿಂದೆಯನ್ನೂ ಮಾಡಬಾರದು. ಹೇಗೆಂದರೆ:–

**"ಗುಣೇಷು ದೋಷಾರೋಪಣಮಸೂಯಾ"** – ಎಂದರೆ, **'ದೋಷೇಷು ಗುಣಾರೋಪಣಮಪ್ಯ ಸೂಯಾ'**; **"ಗುಣೇಷು ಗುಣಾರೋಪಣಂ ದೋಷೇಷು ದೋಷಾರೋಪಣಂ ಚ ಸ್ತುತಿಃ"** ಗುಣಗಳಲ್ಲಿ ದೋಷಗಳನ್ನೂ, ದೋಷಗಳಲ್ಲಿ ಗುಣಗಳನ್ನೂ ಆರೋಪಿಸುವುದು ನಿಂದೆ; ಮತ್ತು ಗುಣಗಳಲ್ಲಿ ಗುಣಗಳನ್ನೂ, ದೋಷಗಳಲ್ಲಿ ದೋಷಗಳನ್ನೂ ಹೇಳುವುದು ಸ್ತುತಿ– ಎನ್ನಿಸುತ್ತದೆ. ಎಂದರೆ – ಮಿಥ್ಯಾಭಾಷಣದ ಹೆಸರು ನಿಂದೆ ಮತ್ತು ಸತ್ಯಭಾಷಣದ ಹೆಸರು ಸ್ತುತಿ ಎಂದಾಗಿರುತ್ತದೆ.

**ಬುದ್ಧಿವೃದ್ಧಿಕರಾಣ್ಯಾಶು ಧನ್ಯಾನಿ ಚ ಹಿತಾನಿ ಚ ।**
**ನಿತ್ಯಂ ಶಾಸ್ತ್ರಾಣ್ಯವೇಕ್ಷೇತ ನಿಗಮಾಂಶ್ಚೈವ ವೈದಿಕಾನ್ ॥** (ಮನು:– ೪.೧೯)

**ಯಥಾ ಯಥಾ ಹಿ ಪುರುಷಃ ಶಾಸ್ತ್ರಂ ಸಮಧಿಗಚ್ಛತಿ ।**
**ತಥಾ ತಥಾ ವಿಜಾನಾತಿ ವಿಜ್ಞಾನಂ ಚಾಸ್ಯ ರೋಚತೇ ॥** (ಮನು:– ೪.೨೦)

ಶೀಘ್ರರಾಗಿ ಬುದ್ಧಿ, ಧನ ಮತ್ತು ಹಿತದ ಅಭಿವದ್ಧಿಮಾಡುವ ಯಾವ ಶಾಸ್ತ್ರಗಳೂ ಮತ್ತು ವೇದಗಳೂ ಇವೆಯೋ, ಅವನ್ನು ನಿತ್ಯವೂ ಆಲಿಸಬೇಕು ಮತ್ತು ಶ್ರವಣಮಾಡಿಸಬೇಕು. ಬ್ರಹ್ಮಚರ್ಯಾಶ್ರಮದಲ್ಲಿ ಓದಿರುವ ವಿಷಯಗಳನ್ನು ಸ್ತ್ರೀ–ಪುರುಷರು ನಿತ್ಯವೂ ಆಲೋಚಿಸುವ ಮತ್ತು ಓದುವ ಪರಿಪಾಟಿಯನ್ನಿಟ್ಟುಕೊಳ್ಳಬೇಕು. (೧)

ಏಕೆಂದರೆ–ಹೇಗೆ ಹೇಗೆ ಮಾನವನು ಶಾಸ್ತ್ರಗಳನ್ನು ಯಥಾವತ್ತಾಗಿ ತಿಳಿಯುತ್ತಾ ಹೋಗುತ್ತಾನೋ, ಹಾಗೆ–ಹಾಗೆ ಅವನ ವಿದ್ಯೆಯ ವಿಜ್ಞಾನ ಹೆಚ್ಚುತ್ತಾ ಹೋಗುತ್ತದೆ ಮತ್ತು ಅದರಲ್ಲಿಯೇ ರುಚಿಯು ಹೆಚ್ಚುತ್ತಾ ಇರುತ್ತದೆ. (೨)

**ಋಷಿಯಜ್ಞಂ ದೇವಯಜ್ಞಂ ಭೂತಯಜ್ಞಂ ಚ ಸರ್ವದಾ ।**
**ನೃಯಜ್ಞಂ ಪಿತೃಯಜ್ಞಂ ಚ ಯಥಾಶಕ್ತಿ ನ ಹಾಪಯೇತ್ ॥** (ಮನು:– ೪.೨೧)

**ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಶ್ಚ ತರ್ಪಣಮ್ ।**
**ಹೋಮೋ ದೈವೋ ಬಲಿರ್ಭೌತೋ ನೃಯಜ್ಞೋಽತಿಥಿಪೂಜನಮ್ ॥** (ಮನು:– ೩.೭೦)

**ಸ್ವಾಧ್ಯಾಯೇನಾರ್ಚಯೇತರ್ಷೀನ್ ಹೋಮೈರ್ದೇವಾನ್ಯತಾವಿಧಿ ।**
**ಪಿತೄನ್ ಶ್ರಾದ್ಧೈಶ್ಚ ನೄನನ್ನೈ ಭೂರ್ತಾನಿ ಬಲಿಕರ್ಮಣಾ ॥** (ಮನು:– ೩.೮೧)

ಎರಡು ಯಜ್ಞಗಳ ವಿಷಯವನ್ನು ಬ್ರಹ್ಮಚರ್ಯ ಪ್ರಕರಣದಲ್ಲಿ ಬರೆದೇ ಇದ್ದೇವೆ. ಅವುಗಳಲ್ಲಿ, ಒಂದನೆಯದು ಬ್ರಹ್ಮಯಜ್ಞ – ಎಂದರೆ, ವೇದ ಮೊದಲಾದ ಶಾಸ್ತ್ರದ ಓದುವಿಕೆ–ಓದಿಸುವಿಕೆ, ಸಂಧ್ಯೋಪಾಸನಾ, ಯೋಗಾಭ್ಯಾಸ; ಎರಡನೆಯದು ದೇವಯಜ್ಞ, ವಿದ್ವಾಂಸರ ಸಂಗ, ಸೇವೆ, ಪವಿತ್ರತೆ, ದಿವ್ಯಗುಣಗಳ ಧಾರಣ, ದಾತೃತ್ವ, ವಿದ್ಯೆಯ ಉನ್ನತಿಯನ್ನು ಸಾಧಿಸುವುದೇ ಆಗಿದೆ. ಆ ಎರಡು ಯಜ್ಞಗಳನ್ನೂ ಸಾಯಂಕಾಲ–ಪ್ರಾತಃಕಾಲ ಮಾಡಬೇಕಾಗಿರುತ್ತದೆ.

**ಸಾಯಂ ಸಾಯಂ ಗೃಹಪತಿರ್ನೋ ಅಗ್ನಿಃ ಪ್ರಾತಃ ಪ್ರಾತಃ ಸೌಮನಸಸ್ಯ ದಾತಾ ॥ ೧ ॥**

**ಪ್ರಾತಃ ಪ್ರಾತರ್ಗೃಹಪತಿರ್ನೋ ಅಗ್ನಿಃ ಸಾಯಂ ಸಾಯಂ ಸೌಮನಸಸ್ಯ ದಾತಾ ॥ ೨ ॥**

(ಅಥರ್ವವೇದ :– ೧೯. ೫೫. ೩– ೪.)

**ತಸ್ಮಾದಹೋರಾತ್ರಸ್ಯ ಸಂಯೋಗೇ ಬ್ರಾಹ್ಮಣಃ ಸಂಧ್ಯಾಮುಪಾಸೀತ ।**

**ಉದ್ಯಂತಮಸ್ತಂ ಯಾಂತಮಾದಿತ್ಯಮಭಿ ಧ್ಯಾಯನ್ ॥ (೩)** (ಬ್ರಾಹ್ಮಣ (ಪಂಡ್ವಿಂಶ) :- ೪.೫)

**ನ ತಿಷ್ಠತಿ ತು ಯಃ ಪೂರ್ವಾಂ ನೋಪಾಸ್ತೇ ಯಸ್ತು ಪಶ್ಚಿಮಾಮ್ ।**

**ಸ ಸಾಧುಭಿರ್ಬಹಿಷ್ಕಾರ್ಯಃ ಸರ್ವಾಸ್ಮಾದ್ದ್ವಿಜ ಕರ್ಮಣಃ ॥ (೪)** (ಮನು:- ೨.೧೦೩)

ಪ್ರತಿ ಸಾಯಂಕಾಲದಲ್ಲಿಯೂ ಯಾವ ಹೋಮವಾಗುತ್ತದೋ, ಆ ಹುತದ್ರವ್ಯವು ಪ್ರಾತಃಕಾಲದವರೆಗೆ ವಾಯು - ಶುದ್ಧಿಯ ಮೂಲಕ ಸುಖಕಾರಿಯಾಗಿರುತ್ತದೆ. (೧).

ಪ್ರತಿ ಪ್ರಾತಃಕಾದಲ್ಲಿಯ, ಅಗ್ನಿಯಲ್ಲಿ ಯಾವ ಹೋಮ ಮಾಡಲ್ಪಡುತ್ತದೋ, ಆ ಹುತ ದ್ರವ್ಯವು ಸಾಯಂಕಾಲಪರ್ಯಂತ ವಾಯುವಿನ ಶುದ್ಧಿಯ ಮೂಲಕ ಬಲ-ಬುದ್ಧಿ-ಆರೋಗ್ಯಕಾರಕವಾಗಿರುತ್ತದೆ. (೨).

ಆ ಕಾರಣದಿಂದ, ಹಗಲು ಮತ್ತು ಇರುಳುಗಳ ಸಂಧಿಯಲ್ಲಿ, ಎಂದರೆ-ಸೂರ್ಯೋದಯ ಮತ್ತು ಸೂರ್ಯಾಸ್ತ ಸಮಯದಲ್ಲಿ ಪರಮೇಶ್ವರನ ಧ್ಯಾನವನ್ನು ಮತ್ತು ಅಗ್ನಿಹೋತ್ರವನ್ನು ಅವಶ್ಯವಾಗಿ ಮಾಡಬೇಕು. (೩). ಮತ್ತು ಯಾವನು ಈ ಎರಡು ಕೆಲಸಗಳನ್ನು ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಮಾಡುವುದಿಲ್ಲವೋ, ಅವನನ್ನು ಸಜ್ಜನರು ಸಮಸ್ತ ದ್ವಿಜಕರ್ಮಗಳಿಂದಲೂ ಹೊರಗಿಡಬೇಕು; ಎಂದರೆ ಅವನನ್ನು ಶೂದ್ರನಂತೆ ತಿಳಿಯಬೇಕು. (೪).

**ಪ್ರಶ್ನೆ :-** ತ್ರಿಕಾಲ ಸಂಧ್ಯೆಯನ್ನೇಕೆ ಮಾಡಬಾರದು ?

**ಉತ್ತರ :-** ಮೂರೂ ಕಾಲಗಳಲ್ಲಿ ಸಂಧಿ ಆಗುವುದಿಲ್ಲ. ಪ್ರಕಾಶ ಮತ್ತು ಅಂಧಕಾರದ ಸಂಧಿಯೂ ಕೂಡ ಸಾಯಂಕಾಲ - ಪ್ರಾತಃಕಾಲಗಳಲ್ಲಿ ಎರಡೇ ವೇಳೆಗಳಲ್ಲಿ ಆಗುತ್ತದೆ. ಯಾವನು ಇದನ್ನು ಒಪ್ಪದೆ ಮಧ್ಯಾಹ್ನಕಾಲದಲ್ಲಿಯೂ ಒಂದು ಸಂಧ್ಯೆ ಯನ್ನಂಗೀಕರಿಸುತ್ತಾನೋ, ಅವನು ಮಧ್ಯ ರಾತ್ರಿಯಲ್ಲಿಯೂ ಸಂಧ್ಯೋಪಾಸನವನ್ನು ಮಾಡಬಾರದೇಕೆ? ಮಧ್ಯರಾತ್ರಿಯಲ್ಲಿಯೂ ಮಾಡಬಯಸುತ್ತಾನೆಯಾದರೆ, ಪ್ರಹರ-ಪ್ರಹರದಲ್ಲಿಯೂ, ಘಟಿಕೆ-ಘಟಿಕೆಯಲ್ಲಿಯೂ, ಪಲ-ಪಲದಲ್ಲಿಯೂ, ಕ್ಷಣ-ಕ್ಷಣದಲ್ಲಿಯೂ ಸಂಧಿಯಾಗುವುದರಿಂದ, ಅವುಗಳಲ್ಲಿಯೂ ಮಾಡುತ್ತಾ ಹೋಗಬೇಕು. ಹೀಗೆಯೂ ಮಾಡಬಯಸುವನಾದರೆ, ಅದು ಶಕ್ಯವೇ ಅಲ್ಲ. ಮತ್ತು ಯಾವ ಶಾಸ್ತ್ರದಲ್ಲಿಯೂ ಮಧ್ಯಾಹ್ನಸಂಧ್ಯೆಗೆ ಪ್ರಮಾಣವೂ ಇಲ್ಲ. ಆದುದರಿಂದ, ಎರಡು ಕಾಲಗಳಲ್ಲಿ ಸಂಧ್ಯಾ ಮತ್ತು ಅಗ್ನಿಹೋತ್ರ ಮಾಡುವುದು ಸಮುಚಿತವಾಗಿರುತ್ತದೆ; ಮೂರನೆಯ ಕಾಲದಲ್ಲಿ ಅಲ್ಲ. ಮತ್ತು ಯಾವ ಮೂರು ಕಾಲಗಳಿರುತ್ತವೋ, ಅವು ಭೂತ, ಭವಿಷ್ಯತ್ ಮತ್ತು ವರ್ತಮಾನದ ಭೇದದಿಂದ ಇವೆಯೇ ಹೊರತು, ಸಂಧ್ಯೋಪಾಸನದ ಭೇದದಿಂದಲ್ಲ.

**ಮೂರನೆಯದು ಪಿತೃಯಜ್ಞ**; ಎಂದರೆ, ಯಾವುದರಲ್ಲಿ ದೇವಜನರ - ಎಂದರೆ ವಿದ್ವಾಂಸರ, ಋಷಿಗಳ - ಎಂದರೆ ಓದುವವರ - ಓದಿಸುವವರ, ಮತ್ತು ಪಿತೃಗಳ - ಎಂದರೆ ತಾಯಿ, ತಂದೆ ಮೊದಲಾದ ವೃದ್ಧರ, ಜ್ಞಾನಿಗಳ ಮತ್ತು ಪರಮ ಯೋಗಿಗಳ ಸೇವೆ ನಡೆಯುತ್ತದೋ ಅದು. ಪಿತೃಯಜ್ಞದಲ್ಲಿ ಎರಡು ಭೇದಗಳಿವೆ - ಒಂದನೆಯದು **ಶ್ರಾದ್ಧ** ಮತ್ತು ಎರಡನೆಯದು **ತರ್ಪಣ**. ಶ್ರಾದ್ಧ - ಎಂದರೆ **'ಶ್ರತ್'** ಎನ್ನುವುದು ಸತ್ಯದ ಹೆಸರು. **"ಶ್ರತ್ ಸತ್ಯಂ ದಧಾತಿ ಯಯಾ ಕ್ರಿಯಯಾ, ಸಾ ಶ್ರದ್ಧಾ. ಶ್ರದ್ಧಯಾ ಯತ್ ಕ್ರಿಯತೇ ತತ್ ಶ್ರಾದ್ಧಂ"**. - ಯಾವ ಕ್ರಿಯೆಯಿಂದ ಸತ್ಯವು ಗ್ರಹಿಸಲ್ಪಡುತ್ತದೋ, ಅದನ್ನು ಶ್ರದ್ಧೆ ಎನ್ನುತ್ತಾರೆ. ಮತ್ತು ಶ್ರದ್ಧೆಯಿಂದ ಯಾವ ಕರ್ಮ ಮಾಡಲ್ಪಡುತ್ತದೋ, ಅದರ ಹೆಸರು **'ಶ್ರಾದ್ಧ'**. ಮತ್ತು **"ತೃಪ್ಯಂತಿ, ತರ್ಪಯಂತಿ ಯೇನ ಪಿತೃನ್, ತತ್ತರ್ಪಣಂ"**. ಯಾವ ಯಾವ ಕರ್ಮದಿಂದ, ಜೀವಂತರಾಗಿರುವ ತಾಯಿ, ತಂದೆ ಮೊದಲಾದ ಪಿತೃಗಳು 'ತೃಪ್ತ'ರು ಎಂದರೆ- ಪ್ರಸನ್ನರಾಗುತ್ತಾರೋ, ಅಥವಾ ಪ್ರಸನ್ನರಾಗಿ ಮಾಡಲ್ಪಡುತ್ತಾರೋ, ಅದಕ್ಕೆ **'ತರ್ಪಣ'** ಎಂದು ಹೆಸರು. ಆದರೆ ಇದು ಜೀವಿತರಿಗೆ ಸಲ್ಲುತ್ತದೆಯೇ ಹೊರತು ಮೃತರಿಗಲ್ಲ.

## ಅಥ ದೇವತರ್ಪಣಮ್

**ಓಂ ಬ್ರಹ್ಮಾದಯೋ ದೇವಾಸ್ತೃಪ್ಯಂತಾಮ್ । ಬ್ರಹ್ಮಾದಿದೇವಪತ್ನ್ಯ ಸ್ತೃಪ್ಯಂತಾಮ್ । ಬ್ರಹ್ಮಾದಿದೇವಸುತಾಸ್ತೃಪ್ಯಂತಾಮ್ । ಬ್ರಹ್ಮಾದಿದೇವಗಣಾಸ್ತೃಪ್ಯಂತಾಮ್ ॥ ಇತಿ ದೇವತರ್ಪಣಮ್ ॥** (ಅಶ್ವಲಾಯನ ಗೃಹ್ಯಸೂತ್ರ :- ೩.೪)

**"ವಿದ್ವಾಂ ಸೋ ಹಿ ದೇವಾಃ"**- ಇದು ಶತಪಥ ಬ್ರಾಹ್ಮಣದ (೩.೭.೪.೧೦) ವಚನ. ಯಾರು ವಿದ್ವಾಂಸರಾಗಿರುತ್ತಾರೋ, ಅವರನ್ನೇ **'ದೇವಜನರು'** ಎನ್ನುತ್ತಾರೆ. ಯಾರು ಸಾಂಗೋಪಾಂಗವಾಗಿ ನಾಲ್ಕು ವೇದಗಳನ್ನೂ ಬಲ್ಲವರಾಗಿರುತ್ತಾರೋ, ಅವರಿಗೆ **'ಬ್ರಹ್ಮ'** ರೆಂದೂ, ಮತ್ತು ಯಾರು ಅವರಿಗಿಂತ ಕಡಿಮೆ ಓದಿರುತ್ತಾರೋ, ಅವರಿಗೂ ಕೂಡ **'ದೇವಜನ'**ರು – ವಿದ್ವಾಂಸರು – ಎಂದೂ ಹೆಸರು. ಅವರ ಹಾಗೆಯೇ ವಿದುಷಿಯರಾದ ಅವರ ಸ್ತ್ರೀಯರೂ, ಬ್ರಾಹ್ಮಣಿಯರೂ, ದೇವಿಯರೂ, ಮತ್ತು ಅವರಿಗೆ ಸಮಾನರಾದ ಪುತ್ರರೂ, ಶಿಷ್ಯರೂ ಮತ್ತು ಅವರಿಗೆ ತಕ್ಕಂತಿರುವ ಅವರ ಗಣಗಳು, ಎಂದರೆ ಸೇವಕರು ಯಾರು ಯಾರು ಇರುತ್ತಾರೋ, ಅವರ ಸೇವೆ ಮಾಡುವುದಕ್ಕೆ **ಶ್ರಾದ್ಧ** ಮತ್ತು **ತರ್ಪಣ** ಎಂದು ಹೆಸರು.

## ಅಥರ್ಷಿತರ್ಪಣಮ್

**ಓಂ ಮರೀಚ್ಯಾದಯ ಋಷಯಃ ತೃಪ್ಯಂತಾಮ್। ಮರೀಚ್ಯಾದ್ಯೃ ಷಿಪತ್ನ್ಯಃ ತೃಪ್ಯಂತಾಮ್। ಮರೀಚ್ಯಾದಿಋಷಿಸುತಾಃ ತೃಪ್ಯಂತಾಮ್ । ಮರೀಚ್ಯಾದಿಋಷಿಗಣಾಃ ತೃಪ್ಯಂತಾಮ್ ॥ ಇತಿ ಋಷಿತರ್ಪಣಮ್ ॥** (ಅಶ್ವ ಗೃ ಸೂ : –೨.೪.)

ಬ್ರಹ್ಮನ ಪ್ರಪೌತ್ರನಾದ (ಮೊಮ್ಮಗನ ಮಗ) ಮರೀಚಿಯಂತೆ ವಿದ್ವಾಂಸರಾಗಿ ಓದಿಸುವವರು ಮತ್ತು ಅವರ ಹಾಗೆಯೇ ವಿದ್ಯಾಯುಕ್ತರಾದ, ಕನ್ಯೆಯರಿಗೆ ವಿದ್ಯಾದಾನ ಮಾಡುವ ಅವರ ಸ್ತ್ರೀಯರು, ಅವರಂತೆಯೇ ಇರುವ ಅವರ ಪುತ್ರರು ಹಾಗೂ ಶಿಷ್ಯರು, ಮತ್ತು ಅವರಿಗೆ ಅನುಕೂಲರಾದ ಅವರ ಸೇವಕರು–ಇವರುಗಳ ಸೇವೆ ಮತ್ತು ಸತ್ಕಾರ ಮಾಡುವುದು **ಋಷಿ – ತರ್ಪಣ**ವಾಗಿದೆ.

## ಅಥ ಪಿತೃತರ್ಪಣಮ್

**ಓಂ ಸೋಮಸದಃ ಪಿತರಸ್ತೃಪ್ಯಂತಾಮ್ । ಅಗ್ನಿಷ್ವಾತ್ತಾಃ ಪಿತರಸ್ತೃಪ್ಯಂತಾಮ್ । ಬರ್ಹಿಷದಃ ಪಿತರಸ್ತೃಪ್ಯಂತಾಮ್ । ಸೋಮಪಾಃ ಪಿತರಸ್ತೃಪ್ಯಂತಾಮ್ । ಹವಿರ್ಭುಜಃ ಪಿತರಸ್ತೃ ಪ್ಯಂತಾಮ್ । ಆಜ್ಯಪಾಃ ಪಿತರಸ್ತೃಪ್ಯಂತಾಮ್ । ಸುಕಾಲಿನಃ ಪಿತರಸ್ತೃಪ್ಯಂತಾಮ್ । ಯಮಾದಿಭ್ಯೋ ನಮಃ । ಯಮಾದೀಂಸ್ತರ್ಪಯಾಮಿ । ಪಿತ್ರೇ ಸ್ವಧಾ ನಮಃ । ಪಿತರಂ ತರ್ಪಯಾಮಿ । ಪಿತಾಮಹಾಯ ಸ್ವಧಾ ನಮಃ। ಪಿತಾಮಹಂ ತರ್ಪಯಾಮಿ। ಪ್ರಪಿತಾ ಮಹಾಯ ಸ್ವಧಾ ನಮಃ। ಪ್ರಪಿತಾಮಹಂ ತರ್ಪಯಾಮಿ । ಮಾತ್ರೇ ಸ್ವಧಾ ನಮೋ ಮಾತರಂ ತರ್ಪಯಾಮಿ । ಪಿತಾಮಹ್ಯೈ ಸ್ವಧಾ ನಮಃ । ಪಿತಾಮಹೀಂ ತರ್ಪಯಾಮಿ । ಪ್ರಪಿತಾಮಹ್ಯೈ ಸ್ವಧಾ ನಮಃ । ಪ್ರಪಿತಾಮಹೀಂ ತರ್ಪಯಾಮಿ । ಸ್ವಪತ್ನ್ಯೈ ಸ್ವಧಾ ನಮಃ । ಸ್ವಪತ್ನೀಂ ತರ್ಪಯಾಮಿ । ಸಂಬಂಧಿಭ್ಯಃ ಸ್ವಧಾ ನಮಃ । ಸಂಬಂದಿನಸ್ತರ್ಪಯಾಮಿ । ಸಗೋತ್ರೇಭ್ಯಃ ಸ್ವಧಾ ನಮಃ । ಸಗೋತ್ರಾಂಸ್ತರ್ಪಯಾಮಿ ॥ ಇತಿ ಪಿತೃತರ್ಪಣಮ್ ॥**

(ಅಶ್ವಲಾಯನ ಗೃಹ್ಯಸೂತ್ರ : – ೨. ೪)

"ಯೇ ಸೋಮೇ ಜಗದೀಶ್ವರೇ ಪದಾರ್ಥವಿದ್ಯಾಯಾಂ ಚ ಸೀದಂತಿ ತೇ ಸೋಮ ಸದಃ" – ಯಾರು ಪರಮಾತ್ಮನ ವಿಷಯದಲ್ಲಿ ಮತ್ತು ಪದಾರ್ಥವಿದ್ಯೆಯಲ್ಲಿ ನಿಪುಣರಾಗಿರುತ್ತಾರೋ, ಅವರು **'ಸೋಮಸತ್'**ಗಳು.

"ಯೈರಗ್ನೇರ್ವಿದ್ಯುತೋ ವಿದ್ಯಾ ಗೃಹೀತಾ ತೇ ಅಗ್ನಿಷ್ವಾತ್ತಾಃ" – ಯಾರು ಅಗ್ನಿ – ಎಂದರೆ ವಿದ್ಯುತ್ತೇ ಮೊದಲಾದ ಪದಾರ್ಥಗಳನ್ನು ತಿಳಿದವರಾಗಿರುತ್ತಾರೋ, ಅವರು **'ಅಗ್ನಿಷ್ವಾತ್ತ'** ರು.

"ಯೇ ಬರ್ಹಿಷಿ, ಉತ್ತಮೇ ವ್ಯವಹಾರೇ ಸೀದಂತಿ ತೇ ಬರ್ಹಿಷದಃ" – ಯಾರು ಉತ್ತಮ ವಿದ್ಯಾವೃದ್ಧಿಯುಕ್ತ ವ್ಯವಹಾರದಲ್ಲಿ ಸ್ಥಿತರಾಗಿರುತ್ತಾರೋ, ಅವರು 'ಬರ್ಹಿಷತ್'ಗಳು.

"ಯೇ ಸೋಮಮೈಶ್ವರ್ಯಮೋಷಧೀರಸಂ ವಾ ಪಾಂತಿ, ಪಿಬಂತಿ ವಾ ತೇ ಸೋಮಪಾಃ" ಯಾರು ಐಶ್ವರ್ಯದ ರಕ್ಷಕರೂ, ಮತ್ತು ಮಹೌಷಧಿರಸಪಾನ ಮಾಡುವುದರಿಂದ ರೋಗರಹಿತರೂ, ಹಾಗು ಪರರ ಐಶ್ವರ್ಯದ ರಕ್ಷಕರೂ, ಔಷಧಗಳನ್ನು ಕೊಟ್ಟು ರೋಗನಾಶ ಮಾಡುವವರೂ ಆಗಿರುತ್ತಾರೋ, ಅವರು **'ಸೋಮಪಾ'**ಗಳು.

"ಯೇ ಹವಿಃ ಹೋತುಮತ್ತುಮರ್ಹಂ ಭುಂಜತೇ, ಭೋಜಯಂತಿ ವಾ ತೇ ಹವಿರ್ಭುಜಃ" – ಯಾರು ಮಾದಕವಾದ ಮತ್ತು ಹಿಂಸಾಕಾರಕವಾದ ದ್ರವ್ಯಗಳನ್ನು ಬಿಟ್ಟು, ಭೋಜನ ಮಾಡುವವರಾಗಿರುತ್ತಾರೋ, ಅವರು **'ಹವಿರ್ಭುಕ್'**ಗಳು.

"ಯ ಆಜ್ಯಂ ಜ್ಞಾತುಂ ಪ್ರಾಪ್ತುಂ ವಾ ಯೋಗ್ಯಂ ರಕ್ಷಂತಿ ವಾ ಪಿಬಂತಿ, ತ ಆಜ್ಯಪಾಃ" – ಯಾರು ತಿಳಿಯಲು ಯೋಗ್ಯವಾದ ವಸ್ತುವಿನ ರಕ್ಷಕರೂ ಮತ್ತು ತುಪ್ಪ, ಹಾಲು ಮೊದಲಾದುವನ್ನು ತಿನ್ನುವವರೂ, ಕುಡಿಯುವವರೂ ಆಗಿರುತ್ತಾರೋ, ಅವರು **'ಆಜ್ಯಪಾ'**ಗಳು.

**"ಶೋಭನಃ ಕಾಲೋ ವಿದ್ಯತೇ ಯೇಷಾಂ ತೇ ಸುಕಾಲಿನಃ"** – ಯಾರ ಸಮಯವು ಒಳ್ಳೆಯದೋ, ಧರ್ಮಾಚರಣದಿಂದ ಸುಖಮಯವೋ, ಅವರು **'ಸುಕಾಲಿ'**ಗಳು.

"ಯೇ ದುಷ್ಟಾನ್ ಯಚ್ಛಂತಿ, ನಿಗೃಹ್ಣಂತಿ, ತೇ ಯಮಾ ನ್ಯಾಯಾಧೀಶಾಃ" – ಯಾರು ದುಷ್ಟರಿಗೆ ದಂಡವಿಧಿಸುವ ಮತ್ತು ಶ್ರೇಷ್ಠರ ಪಾಲನಮಾಡುವ ನ್ಯಾಯಕಾರಿಗಳಾಗಿರುತ್ತಾರೋ, ಅವರು **'ಯಮ'**ರು.

"ಯಃ ಪಾತಿ ಸ ಪಿತಾ" – ಯಾವನು ಅನ್ನದಿಂದ ಮತ್ತು ಸತ್ಕಾರದಿಂದ ಸಂತತಿಗಳ ರಕ್ಷಕನಾಗಿರುತ್ತಾನೋ, ಅಥವಾ ಉತ್ಪಾದಕನಾಗಿರುತ್ತಾನೋ, ಅವನು **'ಪಿತಾ'**.

"ಪಿತುಃ ಪಿತಾ ಪಿತಾಮಹಃ ಪಿತಾಮಹಸ್ಯ ಪಿತಾ ಪ್ರಪಿತಾಮಹಃ" – ಯಾವನು ತಂದೆಯ ತಂದೆಯೋ, ಅವನು **ಪಿತಾಮಹ** ಮತ್ತು ಯಾವನು ಪಿತಾಮಹನ ತಂದೆಯೋ, ಅವನು **'ಪ್ರಪಿತಾಮಹ'**.

"ಯಾ ಮಾನಯತಿ ಸಾ ಮಾತಾ" – ಯಾವಳು ಅನ್ನದಿಂದ ಮತ್ತು ಸತ್ಕಾರಗಳಿಂದ ಮಕ್ಕಳನ್ನು ಮಾನ್ಯರನ್ನಾಗಿ ಮಾಡುತ್ತಾಳೋ, ಅವಳು **'ಮಾತೆ'**.

"ಯಾ ಮಾನಯತಿ ಸಾ ಮಾತಾ" – ಯಾವಳು ಅನ್ನದಿಂದ ಮತ್ತು ಸತ್ಕಾರಳಿಂದ ಮಕ್ಕಳನ್ನು ಮಾನ್ಯರನ್ನಾಗಿ ಮಾಡುತ್ತಾಳೋ, ಅವಳು **'ಮಾತೆ'**.

"ಯಾ ಪಿತುರ್ಮಾತಾ ಸಾ ಪಿತಾಮಹೀ, ಪಿತಾಮಹಸ್ಯ ಮಾತಾ ಪ್ರಪಿತಾಮಹೀ". – ಯಾವಳು ತಂದೆಯ ತಾಯಿಯೋ, ಅವಳು **ಪಿತಾಮಹೀ**; ಯಾವಳು ಪಿತಾಮಹನ ತಾಯಿಯೋ, ಅವಳು **'ಪ್ರಪಿತಾಮಹೀ'**.

ತನ್ನ ಪತ್ನಿ ಹಾಗು ಸೋದರಿ, ಸಂಬಂಧಿಕರು ಮತ್ತು ಒಂದೇ ಗೋತ್ರದವರು, ಹಾಗೆಯೇ, ಬೇರೆ ಯಾವ ಸತ್ಪುರುಷರು ಅಥವಾ ವೃದ್ಧರು ಇರುತ್ತಾರೋ, ಅವರನ್ನೆಲ್ಲಾ ಅತ್ಯಂತ ಶ್ರದ್ಧೆಯಿಂದ, ಉತ್ತಮವಾದ ಅನ್ನ, ವಸ್ತ್ರ, ಸುಂದರವಾದ ವಾಹನ–ಮೊದಲಾದುವನ್ನು ಕೊಟ್ಟು, ಉತ್ಕೃಷ್ಟವಾದ ರೀತಿಯಲ್ಲಿ ತೃಪ್ತರನ್ನಾಗಿ ಮಾಡುವುದು, ಎಂದರೆ, ಯಾವ ಯಾವ ಕರ್ಮದಿಂದ ಅವರ ಆತ್ಮನು ತೃಪ್ತನಾಗುತ್ತಾನೋ, ಮತ್ತು ಶರೀರ ಸ್ವಸ್ಥವಾಗಿರುತ್ತದೋ, ಆಯಾ ಕರ್ಮದಿಂದ, ಪ್ರೀತಿಪುರಃಸರವಾಗಿ, ಅವರ ಸೇವೆಯನ್ನು ಮಾಡುವುದು **ಶ್ರಾದ್ಧ** ಮತ್ತು **ತರ್ಪಣ** – ಎನ್ನಿಸಿಕೊಳ್ಳುತ್ತದೆ.

ನಾಲ್ಕನೆಯದು ವೈಶ್ವದೇವ – ಎಂದರೆ ಯಾವಾಗ ಭೋಜನ ಸಿದ್ಧವಾಗುತ್ತದೋ, ಆಗ ಊಟಕ್ಕಾಗಿ ಯಾವ ಅಡಿಗೆ ಯಾಗುವುದೋ, ಅದರಲ್ಲಿನಿಂದ, ಹುಳಿ, ಉಪ್ಪು ಮತ್ತು ಖಾರವನ್ನು ಬಿಟ್ಟು, ತುಪ್ಪ – ಸಕ್ಕರೆಯಿಂದ ಕೂಡಿದ ಖಾದ್ಯವನ್ನು ತೆಗೆದುಕೊಂಡು, ಒಲೆಯಿಂದ ಬೆಂಕಿಯನ್ನು ಬೇರೆಯಾಗಿ ತೆಗೆದಿಟ್ಟು, ಆ ಬಗ್ಗೆ ಬರೆದಿರುವ ಮಂತ್ರಗಳಿಂದ ಆಹುತಿ ಕೊಡಬೇಕು ಮತ್ತು ಭಾಗ ತೆಗೆದಿಡಬೇಕು:–

**ಪ್ರಮಾಣ:–** **ವೈಶ್ವದೇವಸ್ಯ ಸಿದ್ಧಸ್ಯ ಗೃಹ್ಯೇಽಗ್ನೌ ವಿಧಿಪೂರ್ವಕಮ್ ।**
**ಆಭ್ಯಃ ಕುರ್ಯಾದ್ದೇವತಾಭ್ಯೋ ಬ್ರಾಹ್ಮಣೋ ಹೋಮಮನ್ವಹಮ್ ॥** (ಮನು:– ೩.೮೪.)

ಯಾವ ಯಾವುದು ಪಾಕಶಾಲೆಯಲ್ಲಿ ಭೋಜನಕ್ಕಾಗಿ ಸಿದ್ಧವಾಗಿರುವುದೋ, ದಿವ್ಯಗುಣಗಳಿಗಾಗಿ, ಅದನ್ನು ಅದೇ ಅಡುಗೆಯ ಬೆಂಕಿಯಲ್ಲಿ, ಕೆಳಗೆ ಬರೆಯಲ್ಪಟ್ಟಿರುವ ಮಂತ್ರಗಳಿಂದ, ವಿಧಿಪೂರ್ವಕವಾಗಿ ನಿತ್ಯವೂ ಹೋಮಮಾಡಬೇಕು.

## ಹೋಮ ಮಾಡುವ ಮಂತ್ರಗಳು

**ಓಂ ಅಗ್ನಯೇ ಸ್ವಾಹಾ । ಸೋಮಾಯ ಸ್ವಾಹಾ । ಅಗ್ನೀಷೋಮಾಭ್ಯಾಂ ಸ್ವಾಹಾ। ವಿಶ್ವೇಭ್ಯೋ ದೇವೇಭ್ಯಃ ಸ್ವಾಹಾ । ಧನ್ವಂತರಯೇ ಸ್ವಾಹಾ । ಕುಹ್ವೈಸ್ವಾಹಾ । ಅನುಮತ್ಯೈಸ್ವಾಹಾ । ಪ್ರಜಾಪತಯೇ ಸ್ವಾಹಾ । ಸಹದ್ಯಾವಾ ಪೃಥಿವೀಭ್ಯಾಂ ಸ್ವಾಹಾ । ಸ್ವಿಷ್ಟಕೃತೇ ಸ್ವಾಹಾ ।**

ಈ ಒಂದೊಂದು ಮಂತ್ರದಿಂದಲೂ ಒಂದೊಂದು ಸಾರಿ ಆಹುತಿಯನ್ನು ಪ್ರಜ್ವಲಿತವಾದ ಅಗ್ನಿಯಲ್ಲಿ ನೀಡಬೇಕು. ಆಮೇಲೆ, ತಟ್ಟೆಯಲ್ಲಿ ಅಥವಾ ನೆಲದ ಮೇಲೆ ಎಲೆಯನ್ನು ಇಟ್ಟು, ಪೂರ್ವದಿಕ್ಕು ಮೊದಲಾದ ಕ್ರಮದಿಂದ, ತಕ್ಕ ಹಾಗೆ ಈ ಮಂತ್ರಗಳಿಂದ ಭಾಗವನ್ನು ತೆಗೆದಿಡಬೇಕು.

**ಓಂ ಸಾನುಗಾಯೇಂದ್ರಾಯ ನಮಃ । ಓಂ ಸಾನುಗಾಯ ಯಮಾಯ ನಮಃ । ಓಂ ಸಾನುಗಾಯ ವರುಣಾಯ ನಮಃ । ಓಂ ಸಾನುಗಾಯ ಸೋಮಾಯ ನಮಃ । ಮರುದ್ಭ್ಯೋ ನಮಃ । ಅದ್ಭ್ಯೋ ನಮಃ । ವನಸ್ಪತಿಭ್ಯೋ ನಮಃ । ಶ್ರಿಯೈ ನಮಃ । ಭದ್ರಕಾಲ್ಯೈ ನಮಃ । ಬ್ರಹ್ಮಪತಯೇ ನಮಃ । ವಾಸ್ತುಪತಯೇ ನಮಃ । ವಿಶ್ವೇಭ್ಯೋ ದೇವೇಭ್ಯೋ ನಮಃ । ದಿವಾಚರೇಭ್ಯೋ ಭೂತೇಭ್ಯೋ ನಮಃ । ನಕ್ತಂ ಚಾರಿಭ್ಯೋ ಭೂತೇಭ್ಯೋ ನಮಃ । ಸರ್ವಾತ್ಮಭೂತಯೇ ನಮಃ॥**

ಈ ಭಾಗವನ್ನು, ಯಾವನಾದರೂ ಅತಿಥಿಯಿದ್ದರೆ, ಅವನಿಗೆ ಊಣಬಡಿಸಬೇಕು; ಅಥವಾ ಬೆಂಕಿಯಲ್ಲಿಯೇ ಹಾಕಿಬಿಡಬೇಕು, ಇದರ ನಂತರ, ಉಪ್ಪು ಹಾಕಲ್ಪಟ್ಟ, ಸಾರು-ಹುಳಿ, ಅನ್ನ, ತರಕಾರಿ, ರೊಟ್ಟಿ ಮೊದಲಾದುವನ್ನು ತೆಗೆದುಕೊಂಡು, ನೆಲದ ಮೇಲೆ ಆರು ಭಾಗಗಳನ್ನಿಡಬೇಕು. ಇದಕ್ಕೆ ಪ್ರಮಾಣ:-

**ಶುನಾಂ ಚ ಪತಿತಾನಾಂ ಚ ಶ್ವಪಚಾಂ ಪಾಪರೋಗಿಣಾಮ್ ।**
**ವಾಯಸಾನಾಂ ಕೃಮೀಣಾಂ ಚ ಶನಕೈರ್ನಿರ್ವಪೇದ್ಭುವಿ ॥** (ಮನ:- ೩.೯೨.)

ಈ ರೀತಿ **"ಶ್ವಭ್ಯೋ ನಮಃ । ಪತಿತೇಭ್ಯೋ ನಮಃ । ಶ್ವಪಗ್ಭ್ಯೋ ನಮಃ । ಪಾಪರೋಗಿಭ್ಯೋ ನಮಃ । ವಾಯಸೇಭ್ಯೋ ನಮಃ । ಕೃಮಿಭ್ಯೋ ನಮಃ"** । ಎಂದು ಭಾಗ ತೆಗೆದಿಟ್ಟು, ಆ ಮೇಲೆ ಯಾವನಾದರೂ ದುಃಖಿತನೂ, ಹಸಿದಿರುವವನೂ ಆದ ಮಾನವನಿಗೆ, ಅಥವಾ - ನಾಯಿ, ಕಾಗೆ - ಮೊದಲಾದುವಕ್ಕೆ ಕೊಟ್ಟುಬಿಡಬೇಕು. ಇಲ್ಲಿ 'ನಮಃ', ಎಂಬ ಶಬ್ದ ಅರ್ಥ 'ಅನ್ನ'- ಎಂದು. ಎಂದರೆ-ನಾಯಿಗಳು, ಪಾಪಿಗಳು, ಚಾಂಡಾಲರು (ಪ್ರಚಂಡ ದೇಹರಾದ, ಶಾರೀರಿಕಶ್ರಮಸಮರ್ಥರಾದ ಭೃತ್ಯವರ್ಗದವವರು) ಪಾಪರೋಗಿಗಳು. ಕಾಗೆಗಳು, ಮತ್ತು ಕೃಮಿಗಳು-ಎಂದರೆ, ಇರುವೆ ಮೊದಲಾದುವಕ್ಕೆ ಆಹಾರಕೊಡುವುದು. ಇದು ಮನುಸ್ಮೃತಿ ಮೊದಲಾದುದರ ವಿಧಿಯಾಗಿದೆ.

ಪಾಕಶಾಲೆಯಲ್ಲಿನ ವಾಯುವು ಶುದ್ಧವಾಗುವುದು ಮತ್ತು ಗೊತ್ತಿಲ್ಲದಿರುವ ಹಾಗೂ ಕಾಣದಿರುವ ಜೀವರಿಗೆ ಅಗುವ ಹಿಂಸೆಗೆ ಪ್ರತಿಯಾಗಿ ಉಪಕಾರ ಮಾಡುವುದು-ಇದೇ ಹವನ ಮಾಡುವುದರ ಪ್ರಯೋಜನವಾಗಿದೆ.

ಈಗ, ಐದನೆಯದಾದ **ಅತಿಥಿಸೇವೆ**. ಯಾವನಿಗೆ ಯಾವುದೇ ನಿಶ್ಚಿತವಾದ ತಿಥಿಯಿರುವುದಿಲ್ಲವೋ, ಅಂದರೆ, ಅಕಸ್ಮಾತ್ತಾಗಿ, ಧಾರ್ಮಿಕನೂ, ಸತ್ಯೋಪದೇಶಕನೂ ಸರ್ವೋಪಕಾರಕ್ಕಾಗಿ ಎಲ್ಲೆಡೆಯೂ ಸಂಚರಿಸುವವನೂ, ಪೂರ್ಣ ವಿದ್ವಾಂಸನೂ, ಪರಮಯೋಗಿಯೂ, ಸಂನ್ಯಾಸಿಯೂ ಆಗಿರುವ ಯಾವನು ಗೃಹಸ್ಥನಲ್ಲಿಗೆ ಬರುತ್ತಾನೋ, ಅವನಿಗೆ ಮೊದಲು ಪಾದ್ಯ, ಅರ್ಘ್ಯ ಮತ್ತು ಆಚಮನೀಯ - ಎನಿಸುವ ಮೂರು ಬಗೆಯ ನೀರನ್ನು ಕೊಟ್ಟು, ಆ ಮೇಲೆ ಆಸನದ ಮೇಲೆ ಸತ್ಕಾರ ಪೂರ್ವಕವಾಗಿ ಕುಳ್ಳಿರಿಸಿ, ಆಹಾರ-ಪಾನೀಯ ಮೊದಲಾದ ಉತ್ತಮೋತ್ತಮ ಪದಾರ್ಥಗಳಿಂದ ಸೇವೆ - ಶುಶ್ರೂಷೆ, ಮಾಡಿ, ಅವನನ್ನು ಪ್ರಸನ್ನಗೊಳಿಸಬೇಕು. ಆ ಮೇಲೆ ಸತ್ಸಂಗದಲ್ಲಿ ಕುಳಿತು, ಅವನಿಂದ ಜ್ಞಾನ-ವಿಜ್ಞಾನ ಮೊದಲಾದುವನ್ನು, ಯಾವವುಗಳಿಂದ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷದ ಪ್ರಾಪ್ತಿಯಾಗುವುದೋ ಅಂತಹ ಉಪದೇಶಗಳನ್ನು ಆಲಿಸಬೇಕು ಮತ್ತು ತನ್ನ ನಡೆನುಡಿಗಳನ್ನೂ ಕೂಡ ಅವನ ಸದುಪದೇಶಕ್ಕೆ ಅನುಸಾರವಾಗಿ ಮಾಡಿಕೊಳ್ಳಬೇಕು. ಅವಕಾಶ ಲಭಿಸಿದಾಗ ಗೃಹಸ್ಥರೂ, ಹಾಗೂ ರಾಜರೇ ಮೊದಲಾದವರೂ ಕೂಡ ಅತಿಥಿಗಳಂತೆ ಸತ್ಕಾರ ಪಡೆಯಲು ಯೋಗ್ಯರಾಗಿರುತ್ತಾರೆ, ಆದರೆ-

**ಪಾಷಂಡಿನೋ ವಿಕರ್ಮಸ್ಥಾನ್ ಬೈಡಾಲವೃತ್ತಿಕಾನ್ ಶಠಾನ್ ।**
**ಹೈತುಕಾನ್ ಬಕವೃತ್ತಿಂಶ್ಚ ವಾಙ್ಮಾತ್ರೇಣಾಪಿ ನಾರ್ಚಯೇತ್ ॥** (ಮನು : - ೪.೩೦)

(ಪಾಷಂಡೀ) ಎಂದರೆ - ವೇದನಿಂದಕರು, ವೇದವಿರುದ್ಧವಾದ ಆಚರಣೆಯನ್ನು ಮಾಡುವವರು, (ವಿಕರ್ಮಸ್ಥ) ಯಾರು ವೇದವಿರುದ್ಧವಾದ ಕರ್ಮ ಮಾಡುವವರಾಗಿರುತ್ತಾರೋ-ಅವರು, ಅಸತ್ಯಭಾಷಣ-ಮೊದಲಾದುದರಿಂದ ಯುಕ್ತರಾಗಿರುವವರು, ಹೇಗೆ ಬೆಕ್ಕು ಬಚ್ಚಿಟ್ಟುಕೊಂಡು ಮತ್ತು ಸ್ಥಿರವಾಗಿದ್ದು, ಹೊಂಚು ಹಾಕುತ್ತಾ - ಹಾಕುತ್ತಾ ಒಮ್ಮೆಗೇ ಮೇಲೆರಗಿ ಇಲಿ - ಮೊದಲಾದ ಪ್ರಾಣಿಗಳನ್ನು ಕೊಂದು, ತನ್ನ ಹೊಟ್ಟೆ ತುಂಬಿಸಿ ಕೊಳ್ಳುತ್ತದೋ, ಹಾಗೆಯೇ ವರ್ತಿಸುವ ಜನರು 'ಬೈಡಾಲ ವೃತ್ತಿಕರು'; (ಶಠ) ಎಂದರೆ- ಹಠಮಾರಿಗಳು, ದುರಾಗ್ರಹಿಗಳು, ದುರಾಭಿಮಾನಿಗಳು, 'ತಮಗೆ ತಿಳಿಯದು; ಬೇರೆಯವರು

ಹೇಳಿದುದನ್ನು ಒಪ್ಪರು' – ಎಂಬಂತಹವರು (ಹೈತುಕ) ಕುತರ್ಕಿಗಳೂ, ಆಧುನಿಕ ವೇದಾಂತಿಗಳೂ – "ನಾವು ಬ್ರಹ್ಮರು ಮತ್ತು ಜಗತ್ತು ಸುಳ್ಳು" – ಎಂದು ಒದರುವಂತೆ, ವೇದಗಳು ಮೊದಲಾದ ಶಾಸ್ತ್ರಗಳು ಮತ್ತು ಈಶ್ವರನೂ ಕೂಡ ಕಲ್ಪಿತನೇ – ಎಂದು ಮೊದಲಾಗಿ ಹರಟೆಹೊಡುವವರು, ವ್ಯರ್ಥವಾಗಿ ಜಂಭಕೊಚ್ಚಿಕೊಳ್ಳುವವರು, (ಬಕವೃತ್ತಿ) ಹೇಗೆ ಕೊಕ್ಕರೆ ಒಂದು ಕಾಲನ್ನೆತ್ತಿ, ಧ್ಯಾನಾವಸ್ಥಿತವಾಗಿರುವಂತೆ ತೋರಿಸಿಕೊಂಡು, ತತ್ಕ್ಷಣ ಮೀನಿನ ಪ್ರಾಣವನ್ನು ತೆಗೆದು ತನ್ನ ಸ್ವಾರ್ಥವನ್ನು ಪೂರ್ಣಮಾಡಿಕೊಳ್ಳುವುದೋ, ಹಾಗೆಯೇ ವರ್ತಿಸುವ ಆಧುನಿಕ ವೈರಾಗಿಗಳು ಮತ್ತು ಮಣ್ಣುಮೆತ್ತಿಕೊಳ್ಳುವ ಸಾಧುಗಳು ಮೊದಲಾದ ಹಠಿಗಳೂ, ದುರಾಗ್ರಹಿಗಳೂ, ವೇದವಿರೋಧಿಗಳೂ ಆದ ಇಂತಹವರ ಸತ್ಕಾರವನ್ನು ಕೇವಲ ವಾಣಿಯಿಂದಲೂ ಕೂಡ ಮಾಡಬಾರದು, ಏಕೆಂದರೆ–ಇವರ ಸತ್ಕಾರ ಮಾಡುವುದರಿಂದ, ಇವರು ಹೆಚ್ಚಿಕೊಂಡು, ಜಗತ್ತನ್ನು ಅಧರ್ಮಯುಕ್ತವನ್ನಾಗಿ ಮಾಡುತ್ತಾರೆ. ತಾವಂತೂ ಅವನತಿಯ ಕಾರ್ಯವನ್ನು ಮಾಡಿಯೇ ಮಾಡುತ್ತಾರೆ; ಜೊತೆಯಲ್ಲಿಯೇ ಸೇವಕರನ್ನೂ ಕೂಡ ಅವಿದ್ಯೆಯೆಂಬ ಮಹಾಸಾಗರದಲ್ಲಿ ಮುಳುಗಿಸಿ ಬಿಡುತ್ತಾರೆ.

**ಈ ಪಂಚಮಹಾಯಜ್ಞಗಳ ಫಲವಿದು :** – ಬ್ರಹ್ಮಯಜ್ಞವನ್ನು ಮಾಡವುದರಿಂದ, ವಿದ್ಯೆ, ಶಿಕ್ಷಣ, ಧರ್ಮ, ಸಭ್ಯತೆ – ಮೊದಲಾದ ಶುಭಗುಣಗಳ ವೃದ್ಧಿಯೂ, ಅಗ್ನಿ ಹೋತ್ರದಿಂದ ವಾಯು, ವೃಷ್ಟಿ ಮತ್ತು ಜಲದ ಶುದ್ಧಿಯುಂಟಾಗಿ, ಮಳೆಯ ಮೂಲಕ ಜಗತ್ತಿಗೆ ಸುಖದ ಪ್ರಾಪ್ತಿಯೂ, ಆಗುವುದು. ಎಂದರೆ – ಶುದ್ಧವಾಯುವಿನ ಶ್ವಾಸಸ್ಪರ್ಶಗಳಿಂದಲೂ, ಆಹಾರ – ಪಾನೀಯಗಳಿಂದಲೂ ಆರೋಗ್ಯ, ಬುದ್ಧಿ, ಬಲ, ಪರಾಕ್ರಮಗಳು ವರ್ಧಿಸಿ, ಧರ್ಮ–ಅರ್ಥ–ಕಾಮ–ಮೋಕ್ಷಗಳ ಸಂಪ್ರಾಪ್ತಿ ಪೂರ್ಣತಃ ಆಗುವುದು. ಈ ಕಾರಣದಿಂದಲೇ ಇದನ್ನು 'ದೇವಯಜ್ಞ' – ಎನ್ನುತ್ತಾರೆ. ಪಿತೃಯಜ್ಞದ ಮೂಲಕ ಯಾವಾಗ ತಾಯಿ, ತಂದೆ, ಮತ್ತು ಜ್ಞಾನೀ ಮಹಾತ್ಮರ ಸೇವೆ ಮಾಡುವನೋ, ಆಗ ಅವನ ಜ್ಞಾನವು ಹೆಚ್ಚುವುದು, ಅದರಿಂದ ಸತ್ಯ– ಅಸತ್ಯಗಳ ನಿರ್ಣಯವನ್ನು ಮಾಡಿ, ಸತ್ಯವನ್ನು ಗ್ರಹಿಸಿ, ಅಸತ್ಯವನ್ನು ತ್ಯಜಿಸಿ, ಸುಖಿಯಾಗಿರುವನು. ಎರಡನೆಯದಾಗಿ, ಕೃತಜ್ಞತೆಯನ್ನು ತೋರಿಸುವುದು, ಎಂದರೆ – ಮಾತಾಪಿತೃಗಳು ಮತ್ತು ಆಚಾರ್ಯರು ಮಕ್ಕಳಿಗೆ ಮತ್ತು ಶಿಷ್ಯರಿಗೆ ಎಂತಹ ಸೇವೆ ಮಾಡಿದ್ದಾರೋ, ಅದಕ್ಕೆ ಪ್ರತಿಯಾಗಿ ಸೇವೆಸಲ್ಲಿಸುವುದು ಉಚಿತವೇ ಆಗಿದೆ. ಬಲಿವೈಶ್ವದೇವದ ಯಾವ ಫಲವನ್ನು ಮೊದಲು ಹೇಳಿದ್ದೇವೋ, ಅದಂತೂ ಇದ್ದೇ ಇದೆ. ಎಂದಿನವರೆಗೆ ಉತ್ತಮರಾದ ಅತಿಥಿಗಳು ಜಗತ್ತಿನಲ್ಲಿ ಇರುವುದಿಲ್ಲವೋ, ಅಂದಿನವರೆಗೆ ಉನ್ನತಿಯೂ ಕೂಡ ಆಗುವುದಿಲ್ಲ. ಅವರು ಸಮಸ್ತ ದೇಶಗಳ ಪರ್ಯಟನದಿಂದ ಮತ್ತು ಸತ್ಯೋಪದೇಶವನ್ನು ಮಾಡುವುದರಿಂದ, ಪಾಷಂಡ (ಆಡಂಬರ)ದ ವೃದ್ಧಿಯಾಗುವುದಿಲ್ಲ ಮತ್ತು ಎಲ್ಲೆಡೆಯೂ ಗೃಹಸ್ಥರಿಗೆ ಸಹಜವಾಗಿಯೇ ಸತ್ಯ ವಿಜ್ಞಾನದ ಪ್ರಾಪ್ತಿ ಆಗುತ್ತಿರುತ್ತದೆ ಹಾಗು ಮಾನವ ಮಾತ್ರರಲ್ಲಿ ಒಂದೇ ಧರ್ಮ ಸ್ಥಿರವಾಗಿರುತ್ತದೆ. ಅತಿಥಿಗಳಿಲ್ಲದಿದ್ದರೆ, ಸಂದೇಹನಿವೃತ್ತಿಯಾಗದೇ ಇದ್ದರೆ, ದೃಢನಿಶ್ಚಯವೂ ಆಗುವುದಿಲ್ಲ. ನಿಶ್ಚಯವಿಲ್ಲದೆ ಸುಖವೆಲ್ಲಿ?

**ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥೌ ಚಾನು ಚಿಂತಯೇತೇ ।**

**ಕಾಯಕ್ಲೇಶಾಂಶ್ಚ ತನ್ಮೂಲಾ ರೇದತತ್ತ್ವಾರ್ಥಮೇವ ಚ ॥** (ಮನು:– ೪.೯೨)

ರಾತ್ರಿಯ ನಾಲ್ಕನೆಯ ಪ್ರಹರದಲ್ಲಿ, ಅಥವಾ ನಾಲ್ಕು ಘಟಿಕೆಗಳಷ್ಟು ರಾತ್ರಿಯಿರುವಾಗಲೇ ಎಂದರೆ ಸೂರ್ಯೋದಯಕ್ಕಿಂತ ೧ ಘಂಟೆ, ೩೬ ನಿಮಿಷ ಮುನ್ನವೇ ಎದ್ದು, ಆವಶ್ಯಕ ಕಾರ್ಯಗಳನ್ನು ಮಾಡಿ, ಧರ್ಮದ ಮತ್ತು ಅರ್ಥದ ಚಿಂತನವನ್ನೂ ಶಾರೀರಿಕ ರೋಗಗಳ ಕಾರಣದ ಬಗೆಗೆ ಆಲೋಚನೆಯನ್ನೂ ಮತ್ತು ಪರಮಾತ್ಮನನ್ನು ಕುರಿತು ಧ್ಯಾನವನ್ನೂ ಮಾಡಬೇಕು. ಎಂದಿಗೂ ಅಧರ್ಮದ ಆಚರಣೆಯನ್ನು ಮಾಡಬಾರದು ಏಕೆಂದರೆ:–

**ನಾಧರ್ಮಶ್ಚರಿತೋ ಲೋಕೇ ಸದ್ಯಃ ಫಲತಿ ಗೌರಿವ ।**

**ಶನೈರಾವರ್ತಮಾನಸ್ತು ಕರ್ತುರ್ಮೂಲಾನಿ ಕೃಂತತಿ ॥** (ಮನು:– ೪.೧೭೨)

ಮಾಡಲ್ಪಟ್ಟ ಅಧರ್ಮ ಎಂದಿಗೂ ನಿಷ್ಫಲವಾಗುವುದಿಲ್ಲ. ಆದರೆ, ಯಾವ ಸಮಯದಲ್ಲಿ ಅಧರ್ಮವನ್ನು ಆಚರಿಸುತ್ತಾನೋ, ಅದೇ ಸಮಯದಲ್ಲಿ ಫಲವೂ ಆಗುವುದಿಲ್ಲ. ಈ ಕಾರಣದಿಂದ ಅಜ್ಞಾನಿಗಳು ಅಧರ್ಮಕ್ಕೆ ಹೆದರುವುದಿಲ್ಲ. ಆದರೂ ಕೂಡ, ಅಧರ್ಮಾಚರಣವು ನಿಧಾನ – ನಿಧಾನವಾಗಿ ನಿಮ್ಮ ಸುಖದ ಮೂಲಗಳನ್ನು ಕತ್ತರಿಸುತ್ತಾ ಹೋಗುತ್ತದೆ – ಎಂಬುದು ನಿಶ್ಚಯವೆಂದು ತಿಳಿಯಿರಿ. ಈ ಕ್ರಮದಿಂದ:–

**ಅಧರ್ಮೇಣೈಧತೇ ತಾವತ್ತತೋ ಭದ್ರಾಣಿ ಪಶ್ಯತಿ ।**

**ತತಃ ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ॥** (ಮನು:- ೪.೧೭೪)

ಅಧರ್ಮಾತ್ಮನಾದ ಮಾನವನು (ಹೇಗೆ ಕೆರೆಯ ಏರಿಯನ್ನು ಮುರಿದು ನೀರು ನಾಲ್ಕು ಕಡೆಗೂ ಹರಡಿಹೋಗುತ್ತದೋ, ಹಾಗೆ) ಧರ್ಮದ ಗಡಿಯನ್ನು ದಾಟಿ, ಮಿಥ್ಯಾಭಾಷಣ, ಕಪಟ, ಆಡಂಬರ-ಎಂದರೆ, ರಕ್ಷಣೆ ನೀಡುವ ವೇದಗಳ ಖಂಡನದಿಂದ ಮತ್ತು ನಂಬಿಕೆ ದ್ರೋಹ-ಮೊದಲಾದ ಕರ್ಮಗಳಿಂದ ಪರರ ಪದಾರ್ಥಗಳನ್ನು ಕಸಿದುಕೊಂಡು, ಮೊದಲೇನೋ ವರ್ಧಿಸುತ್ತಾನೆ; ಆಮೇಲೆ, ಧನವೇ ಮೊದಲಾದ ಐಶ್ವರ್ಯದಿಂದ ಖಾದ್ಯ, ಪೇಯ, ವಸ್ತ್ರ, ಅಭೂಷಣ, ಯಾನ, ಸ್ಥಾನ, ಮಾನ, ಪ್ರತಿಷ್ಠೆಗಳನ್ನು ಗಳಿಸುತ್ತಾನೆ; ಅನ್ಯಾಯದಿಂದ ಶತ್ರುಗಳನ್ನೂ ಕೂಡ ಗೆಲ್ಲುತ್ತಾನೆ; ಆಮೇಲೆ ಬೇಗನೇ ನಾಶ ಹೊಂದುತ್ತಾನೆ. ಹೇಗೆ ಬೇರು ಕತ್ತರಿಸಲ್ಪಟ್ಟ ವೃಕ್ಷ  ನಾಶವಾಗಿ ಹೋಗುತ್ತದೋ, ಹಾಗೆ ಅಧರ್ಮಿಯೂ ನಷ್ಟಭ್ರಷ್ಟನಾಗಿ ಹೋಗುತ್ತಾನೆ.

**ಸತ್ಯಧರ್ಮಾರ್ಯವೃತ್ತೇಷು ಶೌಚೇ ಚೈವಾರಮೇತ್ಸದಾ ।**

**ಶಿಷ್ಯಾಂಶ್ಚ ಶಿಷ್ಯಾದ್ಧರ್ಮೇಣ ವಾಗ್ಬಾಹೂದರಸಂಯತಃ ॥** (ಮನು :- ೪.೧೭೫)

ವಿದ್ವಾಂಸನು ವೇದೋಕ್ತವಾದ ಸತ್ಯಧರ್ಮವನ್ನು (ಪಾಲಿಸುತ್ತಾ), ಎಂದರೆ - ಪಕ್ಷಪಾತರಹಿತನಾಗಿ ಸತ್ಯದ ಅಂಗೀಕಾರ ಮತ್ತು ಅಸತ್ಯದ ಪರಿತ್ಯಾಗವೆಂಬ, ನ್ಯಾಯರೂಪವಾದ, ವೇದೋಕ್ತ ಧಾರಣ ಶಕ್ತಿಯೇ ಮೊದಲಾದ ಆರ್ಯಚಾರಿತ್ರದಲ್ಲಿ, ಎಂದರೆ ಧರ್ಮದಲ್ಲಿ ಸ್ಥಿತನಾಗಿರುವವನಂತೆ ಧರ್ಮಪೂರ್ವಕವಾಗಿ ಶಿಷ್ಯರಿಗೆ ಶಿಕ್ಷಣವನ್ನು ಕೊಡುವ ಪರಿಪಾಟಿಯನ್ನು ಇಟ್ಟುಕೊಂಡಿರಬೇಕು.

**ಋತ್ವಿಕ್ಪುರೋಹಿತಾಚಾರ್ಯೈಃ ಮಾತುಲಾತಿಥಿಸಂಶ್ರಿತೈಃ ।**

**ಬಾಲವೃದ್ಧಾತುರೈರ್ವೈದ್ಯೈಃ ಜ್ಞಾತಿಸಂಬಂಧಿಬಾಂಧವೈಃ ॥** (ಮನು:- ೪.೧೭೯)

**ಮಾತಾಪಿತೃಭ್ಯಾಂ ಯಾಮೀಭಿರ್ಭ್ರಾತ್ರಾ ಪುತ್ರೇಣ ಭಾರ್ಯಯಾ ।**

**ದುಹಿತ್ರಾ ದಾಸವರ್ಗೇಣ ವಿವಾದಂ ನ ಸಮಾಚರೇತ್ ॥** (ಮನು:- ೪.೧೮೦)

(ಋತ್ವಿಕ್) ಯಜ್ಞಮಾಡುವವನು, (ಪುರೋಹಿತ) ಸದಾ ಉತ್ತಮ ನಡವಳಿಕೆಯನ್ನು ಕಲಿಸುವವನು, ( ಆಚಾರ್ಯ) ವಿದ್ಯೆ ಕಲಿಸುವವನು, (ಮಾತುಲ) ಸೋದರಮಾವ, (ಅತಿಥಿ) ಯಾವನ ಆಗಮನ-ನಿರ್ಗಮನಗಳಿಗೆ ನಿಶ್ಚಿತವಾದ ತಿಥಿಯಿರುವುದಿಲ್ಲೋವೋ, ಆ ಆಗಂತುಕ, (ಸಂಶ್ರಿತ) ತಮ್ಮ ಆಶ್ರಯದಲ್ಲಿರುವವರು, (ಬಾಲ) ಬಾಲಕನು,(ವೃದ್ಧ ) ಮುದುಕನು, (ಆತುರ) ಪೀಡಿತನು, (ವೈದ್ಯ) ಆಯುರ್ವೇದವನ್ನು ಬಲ್ಲವನು, (ಜ್ಞಾತಿ) ಸ್ವಗೋತ್ರದವನು, ತನ್ನ ವರ್ಣದವನು, (ಸಂಬಂಧಿ) ಮಾವ-ಮೊದಲಾದವರು, (ಬಾಂಧವ) ಮಿತ್ರರು (೧)

(ಮಾತಾ) ಮಾತೆ, (ಪಿತಾ) ತಂದೆ, (ಯಾಮೀ) ಸೋದರಿ, (ಭ್ರಾತಾ) ಸೋದರ, (ಭಾರ್ಯಾ) ಪತ್ನಿ, (ದುಹಿತಾ) ಪುತ್ರಿ ಮತ್ತು, (ದಾಸವರ್ಗೇಣ) ಸೇವಕರುಗಳೊಂದಿಗೆ ವಿವಾದವನ್ನು, ಎಂದರೆ - ವಿರುದ್ಧವಾದ ಹೋರಾಟ - ಕಿತ್ತಾಟಗಳನ್ನು ಎಂದಿಗೂ ಮಾಡಬಾರದು (೨)

**ಅತಪಾಸ್ತ್ವನಧೀಯಾನಃ ಪ್ರತಿಗ್ರಹರುಚಿರ್ದ್ವಿಜಃ ।**

**ಅಂಭಸ್ಯಶ್ಮಪ್ಲವೇನೇವ ಸಹ ತೇನೈವ ಮಜ್ಜತಿ ॥** (ಮನು:- ೪.೧೯೦)

ಮೊದಲಾಗಿ (ಅತಪಾಃ) ಬ್ರಹ್ಮಚರ್ಯ-ಸತ್ಯಭಾಷಣ ಮೊದಲಾದ ತಪಸ್ಸಿನಿಂದ ರಹಿತನಾಗಿರುವವನು, ಎರಡನೆಯದಾಗಿ, (ಅನಧೀಯಾನಃ) ಓದಿಲ್ಲದವನು, ಮೂರನೆಯವನಾಗಿ (ಪ್ರತಿಗ್ರಹರುಚಿಃ) ಬಹಳ ಬಿಟ್ಟಿಯಾಗಿ ಅನ್ಯರಿಂದ ದಾನ ತೆಗೆದುಕೊಳ್ಳುವವನು-ಈ ಮೂವರೂ ಕಲ್ಲಿನ ನೌಕೆಯಿಂದ ಸಮುದ್ರದಲ್ಲಿ ಈಜುವ ಹಾಗೆ, ತಮ್ಮ ದುಷ್ಟಕರ್ಮಗಳೊಂದಿಗೇ ದುಃಖಸಾಗರದಲ್ಲಿ ಮುಳುಗುತ್ತಾರೆ. ಅವರಂತೂ ಮುಳುಗಿಯೇ ತೀರುತ್ತಾರೆ. ಆದರೆ-ದಾತೃಗಳನ್ನೂ ಕೂಡ ಜೊತೆಯಲ್ಲಿಯೇ ಮುಳುಗಿಸಿಕೊಳ್ಳುತ್ತಾರೆ.

**ತ್ರಿಷ್ವಪ್ಯೇತೇಷು ದತ್ತಂ ಹಿ ವಿಧಿನಾಪ್ಯರ್ಜಿತಂ ಧನಮ್ ।**

**ದಾತುರ್ಭವತ್ಯನರ್ಥಾಯ ಪರತ್ರಾದಾತುರೇವ ಚ ॥** (ಮನು:- ೪. ೧೯೩)

ಧರ್ಮದಿಂದ ಪ್ರಾಪ್ತವಾದ ಧನವನ್ನು ಈ ಮೂವರಿಗೆ ಕೊಡುವಿಕೆಯು, ಆ ದಾನ ದಾತೃವಿನ ನಾಶವನ್ನು ಇದೇ ಜನ್ಮದಲ್ಲಿ ಮತ್ತು ತೆಗೆದುಕೊಳ್ಳುವವನ ನಾಶವನ್ನು ಪರಜನ್ಮದಲ್ಲಿ ಮಾಡುತ್ತದೆ.

ಅವರುಗಳು ಹೀಗಿದ್ದಲ್ಲಿ ಏನಾದೀತು?

**ಯಥಾ ಪ್ಲವೇನೌಪಲೇನ ನಿಮಜ್ಜ ತ್ಯುದಕೇ ತರನ್ ।**

**ತಥಾ ನಿಮಜ್ಜ ತೋಽಧಸ್ತಾದಜ್ಞೌದಾತೃಪ್ರತೀಚ್ಛಕೌ ॥** (ಮನು :- ೪. ೧೯೪)

ಹೇಗೆ ಕಲ್ಲಿನ ನೌಕೆಯಲ್ಲಿ ಕುಳಿತು ನೀರಿನಲ್ಲಿ ಈಜುವವನು ಮುಳುಗಿ ಹೋಗುತ್ತಾನೋ, ಹಾಗೆ ಅಜ್ಞಾನಿಗಳಾದ ದಾನಕೊಡುವವನು ಮತ್ತು ದಾನತೆಗೆದುಕೊಳ್ಳುವವನು-ಇಬ್ಬರೂ ಅಧೋಗತಿಯನ್ನು, ಎಂದರೆ ದುಃಖವನ್ನು ಹೊಂದುತ್ತಾರೆ.

## ಪಾಷಂಡಿಗಳ ಲಕ್ಷಣಗಳು

**ಧರ್ಮಧ್ವಜೀ ಸದಾ ಲುಬ್ಧಶ್ಛಾದ್ಮಿಕೋ ಲೋಕದಂಭಕಃ ।**

**ಬೈಡಾಲವ್ರತಿಕೋ ಜ್ಞೇಯೋ ಹಿಂಸ್ರಃ ಸರ್ವಾಭಿಸಂಧಕಃ ॥ ೧ ॥** (ಮನು :-೪. ೧೯೫)

**ಅಧೋದೃಷ್ಟಿರ್ನೈಷ್ಕೃತಿಕಃ ಸ್ವಾರ್ಥಸಾಧನತತ್ಪರಃ ।**

**ಶಠೋ ಮಿಥ್ಯಾವಿನೀತಶ್ಚ ಬಕವ್ರತಚರೋ ದ್ವಿಜಃ ॥ ೨ ॥** (ಮನು:- ೪.೧೯೬)

(ಧರ್ಮಧ್ವಜೀ) ಧರ್ಮವನ್ನು ಸ್ವಲ್ಪವಾದರೂ ಆಚರಿಸದೆ, ಧರ್ಮದ ಹೆಸರಿನಲ್ಲಿ ಜನರನ್ನು ವಂಚಿಸುವವನು, (ಸದಾ ಲುಬ್ಧಃ) ಸರ್ವದಾ ಲೋಭಯುಕ್ತನಾಗಿರುವವನು, (ಛಾದ್ಮಿಕಃ) ಕಪಟಿಯು, (ಲೋಕದಂಭಕಃ) ಸಾಂಸಾರಿಕ ಮಾನವರ ಮುಂದೆ ತನ್ನ ದೊಡ್ಡಸ್ತಿಕೆಯ ಉಗ್ಗಡಣೆ ಮಾಡಿಕೊಳ್ಳುವವನು, (ಹಿಂಸ್ರಃ) ಪ್ರಾಣಿಗಳ ಘಾತಕನು, ಬೇರೆಯವರ ಬಗೆಗೆ ವೈರಬುದ್ಧಿಯಿಟ್ಟುಕೊಂಡಿರುವವನು, (ಸರ್ವಾಭಿಸಂಧಕಃ) ಒಳ್ಳೆಯವರು-ಕೆಟ್ಟವರು, ಒಳ್ಳೆಯದು-ಕೆಟ್ಟದು-ಎಲ್ಲರೊಂದಿಗೂ, ಎಲ್ಲದರೊಂದಿಗೂ ಸಂಬಂಧವಿಟ್ಟುಕೊಳ್ಳುವವನು, (ಬೈಡಾಲವ್ರತಿಕಃ)-ಎಂದರೆ ಬೆಕ್ಕಿನಂತೆ ಧೂರ್ತನು ಮತ್ತು ನೀಚನು ಎಂದು ತಿಳಿಯಿರಿ. (೧)

(ಅಧೋದೃಷ್ಟಿಃ) ಕೀರ್ತಿಗೋಸ್ಕರ ಕೆಳಗೆ ದೃಷ್ಟಿಯಿಡುವವನು, (ನೈಷ್ಕೃತಿಕಃ) ಈರ್ಷ್ಯಾವಂತನು, ಮೂರು ಕಾಸಿನಷ್ಟು ತನಗೆ ಅಪರಾಧ ಮಾಡಿರುವವನಿಂದ ಮುಯ್ಯಿ ತೀರಿಸಿಕೊಳ್ಳಲು ಅವನ ಪ್ರಾಣವನ್ನೇ ಅಪಹರಿಸುವುದರಲ್ಲಿ ತೊಡಗಿರುವವನು, (ಸ್ವಾರ್ಥ ಸಾಧನತತ್ಪರಃ) ಕಪಟ, ಅಧರ್ಮ, ವಿಶ್ವಾಸಘಾತವೇ ಆಗಲೊಲ್ಲವೇಕೆ, ತನ್ನ ಸ್ವಾರ್ಥ ಸಾಧಿಸಿಕೊಳ್ಳುವುದರಲ್ಲಿ ಚತುರನಾಗಿರುವವನು, (ಶಠಃ) ತನ್ನ ಮಾತು ಸುಳ್ಳೇ ಆಗಿರಲೊಲ್ಲದೇಕೆ, ಹಠವನ್ನು ಎಂದಿಗೂ ಬಿಡದವನು, (ಮಿಥಾವಿನೀತಃ) ಸುಳ್ಳು ಸುಳ್ಳೇ, ಮೇಲೆ ಮೇಲೆ ಶೀಲವನ್ನೂ, ಸಂತೋಷವನ್ನೂ, ಸಾಧುತ್ವವನ್ನೂ ತೋರಿಸಿಕೊಳ್ಳುವವನು, (ಬಕವ್ರತಚರಃ) ಕೊಕ್ಕರೆಯ ಹಾಗೆ ನೀಚನು-ಈ ಬಗೆಯ ಲಕ್ಷಣಗಳಿಂದ ಯುಕ್ತರಾಗಿರುವವರು ಪಾಷಂಡಿಗಳಾಗಿರುತ್ತಾರೆ-ಎಂದು ತಿಳಿಯಿರಿ. ಅವರಲ್ಲಿ ನಂಬಿಕೆಯನ್ನು ಇಡಬಾರದು ಅಥವಾ ಅವರ ಸೇವೆಯನ್ನು ಎಂದಿಗೂ ಮಾಡಬಾರದು. (೨)

**ಧರ್ಮಂ ಶನೈಃ ಸಂಚಿನುಯಾದ್ವಲ್ಮೀಕಮಿವ ಪುತ್ತಿಕಾಃ.**

**ಪರಲೋಕಸಹಾಯಾರ್ಥಂ ಸರ್ವಭೂತಾನ್ಯ ಪೀಡಯನ್ ॥ ೧ ॥** (ಮನು:- ೪. ೨೩೮೦)

**ನಾಮುತ್ರ ಹಿ ಸಹಾಯಾರ್ಥಂ ಪಿತಾ ಮಾತಾ ಚ ತಿಷ್ಠತಃ ।**

**ನ ಪುತ್ರದಾರಂ ನ ಜ್ಞಾತಿರ್ಧರ್ಮಸ್ತಿಷ್ಠತಿ ಕೇವಲಃ ॥ ೨ ॥** (ಮನು :- ೪.೨೩೯)

**ಏಕಃ ಪ್ರಜಾಯತೇ ಜಂತುರೇಕ ಏವ ಪ್ರಲೀಯತೇ ।**

**ಏಕೋಽನುಭುಂಕ್ತೇ ಸುಕೃತಮೇಕ ಏವ ಚ ದುಷ್ಕೃತಮ್ ॥ ೩ ॥** (ಮನು :– ೪. ೨೪೦)

**ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।**

**ಭೋಕ್ತಾರೋ ವಿಪ್ರಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ ॥ ೪ ॥** (ಮಹಾಭಾರತ, ಉದ್ಯೋಗ, ವಿದುರ–೩೨)

**ಮೃತಂ ಶರೀರಮುತ್ಸೃಜ್ಯ ಕಾಷ್ಠ ಲೋಷ್ಠ ಸಮಂ ಕ್ಷಿತೌ ।**

**ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥ ೫ ॥** (ಮನು:–೪. ೨೪೧)

ಹೇಗೆ ಗೆದ್ದಲು ಹುಳುವು ವಲ್ಮೀಕವನ್ನು – ಎಂದರೆ ಹುತ್ತವನ್ನು ಕಟ್ಟುತ್ತದೋ, ಹಾಗೆ, ಯಾವ ಪ್ರಾಣಿಗಳಿಗೂ ನೋವನ್ನುಂಟುಮಾಡದೆ, ಪರಲೋಕದ, ಎಂದರೆ ಪರಜನ್ಮದ ಸುಖಕ್ಕಾಗಿ ಕ್ರಮಕ್ರಮವಾಗಿ ಧರ್ಮದ ಸಂಚಯವನ್ನು ಸ್ತ್ರೀ–ಪುರುಷರು ಮಾಡಬೇಕು (೧).

ಏಕೆಂದರೆ – ಪರಲೋಕದಲ್ಲಿ ತಾಯಿಯಾಗಲಿ, ತಂದೆಯಾಗಲಿ, ಮಕ್ಕಳಾಗಲಿ, ಹೆಂಡತಿಯಾಗಲಿ, ಸಂಬಂಧಿಗಳಾಗಲಿ, ಸಹಾಯ ಮಾಡಲಾರರು. ಆದರೆ–ಒಂದು ಧರ್ಮ ಮಾತ್ರ ಸಹಾಯಕವಾಗುತ್ತದೆ. (೨)

ನೋಡಿರಿ, ಒಂಟಿಯಾಗಿಯೇ ಜೀವನು ಜನ್ಮವನ್ನು ಮತ್ತು ಮರಣವನ್ನು ಹೊಂದುತ್ತಾನೆ. ಒಂಟಿಯಾಗಿಯೇ ಧರ್ಮದ ಫಲವಾದ ಸುಖವನ್ನೂ, ಮತ್ತು ಅಧರ್ಮದ ಯಾವ ದುಃಖವೆಂಬ ಫಲವಿದೆಯೋ, ಅದನ್ನೂ ಅನುಭವಿಸುತ್ತಾನೆ. (೩)

ಕುಟುಂಬದಲ್ಲಿ ಒಬ್ಬ ಪುರುಷನು ಪಾಪಮಾಡಿ ಪದಾರ್ಥಗಳನ್ನು ತರುತ್ತಾನೆ ಮತ್ತು ಮಹಾಜನರು, ಎಂದರೆ–ಸಮಸ್ತ ಕುಟುಂಬವೂ ಅದನ್ನು ಅನುಭವಿಸುತ್ತದೆ. ಅನುಭವಿಸುವವರು ದೋಷಭಾಗಿಗಳಾಗುವುದಿಲ್ಲ; ಆದರೆ–ಅಧರ್ಮವನ್ನು ಮಾಡುವವನು ಮಾತ್ರ ದೋಷಕ್ಕೆ ಭಾಗಿಯಾಗುತ್ತಾನೆ. (೪)

ಯಾವಾಗ ಯಾವನಾದರೊಬ್ಬನ ಸಂಬಂಧಿಯಾದವನಾವನಾದರೂ ಸತ್ತು ಹೋಗುತ್ತಾನೋ, ಆಗ ಅವನನ್ನು ಮಣ್ಣಿನ ಹೆಂಟೆಯಂತೆ ಭೂಮಿಯಲ್ಲಿ ಬಿಟ್ಟು, ಬೆನ್ನನ್ನು ತಿರುಗಿಸಿ, ಬಂಧು ವರ್ಗದವರು ವಿಮುಖರಾಗಿ ಹೊರಟು ಹೋಗುತ್ತಾರೆ; ಅವನ ಸಂಗಡ ಹೋಗುವವನು ಯಾವನೂ ಇರುವುದಿಲ್ಲ. ಆದರೆ–ಒಂದು ಧರ್ಮ ಮಾತ್ರ ಅವನ ಸಂಗಾತಿಯಾಗಿರುತ್ತದೆ. (೫)

**ತಸ್ಮಾದ್ಧ ರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ ।**

**ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಃಸ್ತರಮ್ ॥ ೧ ॥** (ಮನು:– ೪. ೨೦೨.)

**ಧರ್ಮಪ್ರಧಾನಂ ಪುರುಷಂ ತಪಸಾ ಹತಕಿಲ್ಬಿಷಮ್ ।**

**ಪರಲೋಕಂ ನಯತ್ಯಾಶು ಭಾಸ್ವಂತಂ ಖಶರೀರಣಮ್ ॥** (ಮನು:– ೪. ೨೪೩)

ಆದ ಕಾರಣ, ಪರಲೋಕದಲ್ಲಿ, ಎಂದರೆ ಮುಂದಣ ಜನ್ಮದಲ್ಲಿ ಸುಖಕ್ಕಾಗಿ ಮತ್ತು ಈ ಜನ್ಮದ ಸಹಾಯಕ್ಕಾಗಿ ನಿತ್ಯವೂ ಧರ್ಮದ ಸಂಚಯವನ್ನು ಕ್ರಮ–ಕ್ರಮವಾಗಿ ಮಾಡುತ್ತಾ ಹೋಗಬೇಕು. ಏಕೆಂದರೆ–ಕೇವಲ ಧರ್ಮದ ಸಹಾಯದಿಂದಲೇ ದೊಡ್ಡ ದೊಡ್ಡ, ದಾಟಲು ಕಷ್ಟವಾದ ದುಃಖಸಾಗರವನ್ನು ಜೀವನು ದಾಟಬಲ್ಲನು. (೧).

ಆದರೆ ಯಾವ ಪುರುಷನು ಧರ್ಮವನ್ನೇ ಪ್ರಧಾನವೆಂದು ತಿಳಿಯುತ್ತಾನೋ, ಯಾವನ ಪಾಪವು ಧರ್ಮದ ಅನುಷ್ಠಾನವೆಂಬ ಕರ್ತವ್ಯದಿಂದ ದೂರವಾಗಿ ಹೋಗಿದೆಯೋ, ಅವನನ್ನು, ಪ್ರಕಾಶ ಸ್ವರೂಪನೂ, ಮತ್ತು ಯಾವನಿಗೆ ಆಕಾಶವೇ ಶರೀರದಂತಿದೆಯೋ, ಆ ಪರಲೋಕ–ಎಂದರೆ ಪರಮದರ್ಶನೀಯನಾದ ಪರಮಾತ್ಮನೆಡೆಗೆ, ಧರ್ಮವೇ ಶೀಘ್ರವಾಗಿ ಮುಟ್ಟಿಸುತ್ತದೆ. (೨) ಆದುದರಿಂದ–

**ದೃಢಕಾರೀ ಮೃದುರ್ದಾಂತಃ ಕ್ರೂರಾಚಾರೈರಸಂವಸನ್ ।**

**ಅಹಿಂಸ್ರೋ ದಮದಾನಾಭ್ಯಾಂ ಜಯೇತ್ಸ್ವರ್ಗಂ ತಥಾವ್ರತಃ ॥೧॥** (ಮನು :– ೪. ೨೪೬)

**ವಾಚ್ಯರ್ಥಾ ನಿಯತಾಃ ಸರ್ವೇ ವಾಙ್ಮೂಲಾ ವಾಗ್ವಿನಿಃಸೃತಾಃ ।**

**ತಾಂ ತು ಯಃ ಸ್ತೇನಯೇದ್ವಾಚಂ ಸ ಸರ್ವಸ್ತೇಯಕೃನ್ನರಃ ॥೨॥** (ಮನು :- ೪. ೨೫೬)

**ಆಚಾರಾಲ್ಲಭತೇ ಹ್ಯಾಯುರಾಚಾರಾದೀಪ್ಸಿತಾಃ ಪ್ರಜಾಃ ।**

**ಆಚಾರಾದ್ಧನಮಕ್ಷಯ್ಯಮಾಚಾರೋ ಹಂತ್ಯಲಕ್ಷಣಮ್ ॥ ೩॥** (ಮನು : -೪. ೨೫೬)

ಸದಾ ದೃಢಕಾರಿಯೂ, ಕೋಮಲಸ್ವಭಾವನೂ, ಜಿತೇಂದ್ರಿಯನೂ, ಹಿಂಸಕರೂ, ಕ್ರೂರರೂ, ದುರಾಚಾರಿಗಳೂ ಆದ ಪುರುಷರಿಂದ ಬೇರೆಯಿರುವವನೂ, ಧರ್ಮಾತ್ಮನೂ, ಆಗಿ, ಮನಸ್ಸನ್ನು ಗೆದ್ದು ಮತ್ತು ವಿದ್ಯೆ - ಮೊದಲಾದ ದಾನದಿಂದ ಮಾನವನು ಸುಖವನ್ನು ಗಳಿಸಿಕೊಳ್ಳುವನು. (೧)

ಆದರೆ ಯಾವ ವಾಣಿಯಲ್ಲಿ ಸಮಸ್ತ ಅರ್ಥಗಳೂ, ಎಂದರೆ ವ್ಯವಹಾರಗಳೂ ನಿಶ್ಚಿತವಾಗುತ್ತವೋ, ಆ ವಾಣಿಯೇ ಅವುಗಳ ಮೂಲ ಮತ್ತು ವಾಣಿಯಿಂದಲೇ ಸರ್ವವ್ಯವಹಾರಗಳೂ ಸಿದ್ಧವಾಗುತ್ತವೆ. ಆ ವಾಣಿಯನ್ನು ಯಾವನು ಕದಿಯುತ್ತಾನೋ, ಎಂದರೆ-ಮಿಥ್ಯಾಭಾಷಣವನ್ನು ಮಾಡುತ್ತಾನೋ, ಅವನು ಚೌರ್ಯ ಮೊದಲಾದ ಸರ್ವಪಾಪಗಳ ಕರ್ತೃವಾಗುತ್ತಾನೆ - ಎಂಬ ಈ ಮಾತನ್ನೂ ಗಮನದಲ್ಲಿಟ್ಟಿರಬೇಕು. (೨)

ಆದುದರಿಂದ, ಮಾನವನು ಮಿಥ್ಯಾಭಾಷಣವೇ ಮೊದಲಾದ ರೂಪದಲ್ಲಿರುವ ಅಧರ್ಮವನ್ನು ಬಿಟ್ಟು, ಧರ್ಮದ ಆಚರಣದಿಂದ-ಎಂದರೆ, ಬ್ರಹ್ಮಚರ್ಯ- ಜಿತೇಂದ್ರಿಯತ್ವದಿಂದ, ಪೂರ್ಣವಾದ ಆಯಸ್ಸನ್ನೂ, ಮತ್ತು ಅದೇ ಧರ್ಮದ ಅನುಷ್ಠಾನದಿಂದ ಉತ್ತಮ ಸಂತತಿಯನ್ನೂ ಹಾಗೂ ಅಕ್ಷಯಧನವನ್ನೂ ಪಡೆದುಕೊಳ್ಳುತ್ತಾನೆ. ಮತ್ತು ಯಾವನು ಧರ್ಮಾಚರಣದಲ್ಲಿ ಪ್ರವೃತ್ತನಾಗಿ ದುಷ್ಟ ಲಕ್ಷಣಗಳನ್ನು ನಾಶಮಾಡುತ್ತಾನೋ, ಅವನು ಆಚರಣವನ್ನು ಸದಾ ಮಾಡುವ ಪರಿಪಾಟಿಯನ್ನು ಇಟ್ಟುಕೊಳ್ಳಬೇಕು. (೩).

ಏಕೆಂದರೆ :-

**ದುರಾಚಾರೋ ಹಿ ಪುರುಷೋ ಲೋಕೇ ಭವತಿ ನಿಂದಿತಃ ।**

**ದುಃಖಭಾಗೀ ಚ ಸತತಂ ವ್ಯಾಧಿತೋಽಲ್ಪಾಯುರೇವ ಚ ॥** (ಮನು:- ೪. ೧೫೭)

ಯಾವ ಪುರುಷನು ದುರಾಚಾರಿಯಾಗಿರುತ್ತಾನೋ, ಅವನು ಸತ್ಪುರುಷರ ನಡುವೆ ನಿಂದೆಗೆ ಗುರಿಯಾಗುವವನೂ, ದುಃಖಭಾಗಿಯೂ ಮತ್ತು ನಿರಂತರವಾಗಿ ವ್ಯಾಧಿಯುಕ್ತನೂ ಆಗಿ ಅಲ್ಪಾಯುಷ್ಯವನ್ನೂ ಕೂಡ ಅನುಭವಿಸುವವನಾಗುತ್ತಾನೆ.

ಆದುದರಿಂದ, ಈ ರೀತಿ ಪ್ರಯತ್ನ ಮಾಡಬೇಕು:-

**ಯದ್ಯತ್ಪರವಶಂ ಕರ್ಮ ತತ್ತದ್ಯತ್ನೇನ ವರ್ಜಯೇತ್ ।**

**ಯದ್ಯದಾತ್ಮವಶಂ ತು ಸ್ಯಾತ್ತತ್ತತ್ಸೇವೇತ ಯತ್ನತಃ ॥ ೧ ॥** (ಮನು :- ೪. ೧೫೯)

**ಸರ್ವಂ ಪರವಶಂ ದುಃಖಂ ಸರ್ವಮಾತ್ಮವಶಂ ಸುಖಮ್ ।**

**ಏತದ್ವಿದ್ಯಾತ್ಸಮಾಸೇನ ಲಕ್ಷಣಂ ಸುಖದುಃಖಯೋಃ ॥ ೨ ॥** (ಮನು:- ೪. ೧೬೦)

ಯಾವ ಯಾವ ಕರ್ಮ ಪರಾಧೀನವಾಗಿರುತ್ತದೋ, ಅದನ್ನು ಪ್ರಯತ್ನಪೂರ್ವಕವಾಗಿ ತ್ಯಜಿಸಬೇಕು; ಮತ್ತು ಯಾವ ಯಾವ ಕರ್ಮ ಸ್ವಾಧೀನವಾಗಿರುತ್ತದೋ, ಅದನ್ನು ಪಯತ್ನದಿಂದ ಸೇವಿಸಬೇಕು. (೧)

ಏಕೆಂದರೆ - ಯಾವ ಯಾವುದು ಪರಾಧೀನತ್ವವಾಗಿರುತ್ತದೋ, ಅದೆಲ್ಲವೂ ದುಃಖ; ಮತ್ತು ಯಾವ ಯಾವುದು ಸ್ವಾಧೀನತ್ವವಾಗಿರುತ್ತದೋ, ಅದೆಲ್ಲವೂ ಸುಖ; ಇದೇ ಸಂಕ್ಷೇಪತಃ ದುಃಖದ ಮತ್ತು ಸುಖದ ಲಕ್ಷಣವೆಂದು ತಿಳಿಯಬೇಕು. (೨)

ಆದರೆ, ಪರಸ್ಪರ ಅಧೀನವಾದ ಯಾವ ಕಾರ್ಯವಿರುತ್ತದೋ, ಅದನ್ನು ಅಧೀನತೆಯಿಂದಲೇ ಮಾಡಬೇಕು. ಉದಾಹರಣಾರ್ಥವಾಗಿ, ಸ್ತ್ರೀ-ಪುರುಷರ ಪರಸ್ಪರ ಅಧೀನವಾದ ವ್ಯವಹಾರಗಳು, ಎಂದರೆ-ಸ್ತ್ರೀಯು ಪುರುಷನ ಬಗೆಗೆ ಮತ್ತು ಪುರುಷನು ಸ್ತ್ರೀಯ ಬಗೆಗೆ, ಪರಸ್ಪರ ಪ್ರಿಯಾಚರಣ, ಅನುಕೂಲವಾಗಿರುವುದು, ವ್ಯಭಿಚಾರವನ್ನು ಅಥವಾ ವಿರೋಧವನ್ನು

ಎಂದಿಗೂ ಮಾಡದಿರುವುದು, ಪುರುಷನ ಆಜ್ಞೆಗೆ ಅನುಕೂಲವಾಗಿ, ಗೃಹಕೃತ್ಯಗಳು ಸ್ತ್ರೀಯ ಮತ್ತು ಹೊರಗಿನ ಕೆಲಸಗಳು ಪುರುಷನ ಅಧೀನದಲ್ಲಿರುವುದು, ಕೆಟ್ಟಚಟಕ್ಕೆ ಸಿಕ್ಕಿಕೊಳ್ಳದಂತೆ ಒಬ್ಬರು ಇನ್ನೊಬ್ಬರನ್ನು ತಡೆಯುವುದು-ಎಂದರೆ ಯಾವಾಗ ವಿವಾಹವಾಗುತ್ತದೋ, ಆಗ ಸ್ತ್ರೀಯಳಿಗೆ ಪುರುಷನೂ, ಮತ್ತು ಪುರುಷನಿಗೆ ಸ್ತ್ರೀಯೂ ಮಾರಿ ಹೋದರು; ಎಂದರೆ-ಸ್ತ್ರೀಯ ಮತ್ತು ಪುರುಷನ ಬಳಿ, ಯಾವ ಹಾವ-ಭಾವಗಳೂ, ನಖ-ಶಿಖಾಗ್ರಪರ್ಯಂತ ಏನೇನು ಇದೆಯೋ, ಆ ವೀರ್ಯ ಮೊದಲಾದುದೆಲ್ಲಾ ಪರಸ್ಪರರ ಅಧೀನವಾಗಿ ಹೋಗುತ್ತದೆ-ಎಂದೇ ನಿಶ್ಚಯಪೂರ್ವಕವಾಗಿ ತಿಳಿದುಕೊಳ್ಳಬೇಕು. ಸ್ತ್ರೀ ಅಥವಾ ಪುರುಷನು ಪ್ರಸನ್ನತೆಯಿಲ್ಲದೆ ಯಾವುದೇ ವ್ಯವಹಾರವನ್ನೂ ಮಾಡಬಾರದು. ಇಂತಹ ದುಷ್ಕೃತ್ಯಗಳಲ್ಲಿ, ಬಹಳ ಅಪ್ರಿಯಕರವಾದ ಕರ್ಮಗಳು, ವ್ಯಭಿಚಾರ, ವೇಶ್ಯಾಗಮನ ಪರಪುರುಷಗಮನ ಮೊದಲಾದುವಾಗಿವೆ. ಇವನ್ನು ಬಿಟ್ಟು, ತನ್ನ ಪತಿಯೊಂದಿಗೆ ಸ್ತ್ರೀಯೂ, ಮತ್ತು ತನ್ನ ಪತ್ನಿಯೊಂದಿಗೆ ಪುರುಷನೂ ಪ್ರಸನ್ನರಾಗಿರಬೇಕು.

ಬ್ರಾಹ್ಮಣವರ್ಣಸ್ಥರಾಗಿದ್ದರೆ, ಪುರುಷನು ಬಾಲಕರಿಗೆ ಓದಿಸಬೇಕು ಮತ್ತು ಸ್ತ್ರೀಯು ಬಾಲಿಕೆಯರಿಗೆ ಓದಿಸಬೇಕು. ನಾನಾವಿಧಿಯಿಂದ ಉಪದೇಶಗಳನ್ನು ಮತ್ತು ವಕ್ತೃತ್ವಗಳನ್ನು ಕೊಟ್ಟು, ಅವರನ್ನು ವಿದ್ವಾಂಸರನ್ನಾಗಿ ಮಾಡಬೇಕು. ಸ್ತ್ರೀಯ ಪೂಜನೀಯ ದೇವನು ಪತಿಯೂ ಮತ್ತು ಪುರುಷನ ಪೂಜನೀಯೆ-ಎಂದರೆ ಸತ್ಕಾರ ಯೋಗ್ಯೆಯಾದ ದೇವಿಯು ಸ್ತ್ರೀಯೂ ಆಗಿದ್ದಾರೆ. ಎಲ್ಲಿಯವರೆಗೆ ಗುರುಕುಲದಲ್ಲಿರುತ್ತಾರೋ, ಅಲ್ಲಿಯವರೆಗೆ ಅಧ್ಯಾಪಕರನ್ನು ಮಾತಾ-ಪಿತೃಗಳಿಗೆ ಸಮಾನರೆಂದು ತಿಳಿಯಬೇಕು; ಮತ್ತು ಅಧ್ಯಾಪಕರು ಶಿಷ್ಯರನ್ನು ತಮ್ಮ ಮಕ್ಕಳಿಗೆ ಸಮಾನರೆಂದು ತಿಳಿಯಬೇಕು.

ಓದಿಸುವ ಅಧ್ಯಾಪಕರು ಮತ್ತು ಅಧ್ಯಾಪಿಕೆಯರು ಹೇಗಿರಬೇಕು?

**ಆತ್ಮಜ್ಞಾನಂ ಸಮಾರಂಭಸ್ತಿತಿಕ್ಷಾ ಧರ್ಮನಿತ್ಯತಾ ।**
**ಯಮರ್ಥಾನಾಪಕರ್ಷಂತಿ ಸ ವೈ ಪಂಡಿತ ಉಚ್ಯತೇ ॥ ೧ ॥**

**ನಿಷೇವತೇ ಪ್ರಶಸ್ತಾನಿ ನಿಂದಿತಾನಿ ನ ಸೇವತೇ ।**
**ಅನಾಸ್ತಿಕಃ ಶ್ರದ್ಧಾಧಾನ ಏತತ್ಪಂಡಿತ ಲಕ್ಷಣಮ್ ॥ ೨ ॥**

**ಕ್ಷಿಪ್ರಂ ವಿಜಾನಾತಿ ಚಿರಂ ಶೃಣೋತಿ ವಿಜ್ಞಾಯ ಚಾರ್ಥಂ ಭಜತೇ ನ ಕಾಮಾತ್ ।**
**ನಾಸಂಪೃಷ್ಟೋ ಹ್ಯುಪಯುಂಕ್ತೇ ಪರಾರ್ಥೇ ತತ್ಪ್ರಜ್ಞಾನಂ ಪ್ರಥಮಂ ಪಂಡಿತಸ್ಯ ॥ ೩ ॥**

**ನಾಪ್ರಾಪ್ಯಮಭಿವಾಂಛಂತಿ ನಷ್ಟಂ ನೇಚ್ಛಂತಿ ಶೋಚಿತುಮ್ ।**
**ಆಪತ್ಸು ಚ ಮುಹ್ಯಂತಿ ನರಾಃ ಪಂಡಿತಬುದ್ಧಯಃ ॥ ೪ ॥**

**ಪ್ರವೃತ್ತವಾಕ್ ಚಿತ್ರಕಥ ಊಹವಾನ್ ಪ್ರತಿಭಾನವಾನ್ ।**
**ಆಶುಗ್ರಂಥಸ್ಯ ವಕ್ತಾ ಚ ಯಃ ಸ ಪಂಡಿತ ಉಚ್ಯತೇ ॥ ೫ ॥**

**ಶ್ರುತಂ ಪ್ರಜ್ಞಾನುಗಂ ಯಸ್ಯ ಪ್ರಜ್ಞಾ ಚೈವ ಶ್ರುತಾನುಗಾ ।**
**ಅಸಂಭಿನ್ನಾರ್ಯಮರ್ಯಾದಃ ಪಂಡಿತಾಖ್ಯಾಂ ಲಭೇತ ಸಃ ॥ ೬ ॥**

ಈ ಎಲ್ಲವೂ ಮಹಾಭಾರತದ ಉದ್ಯೋಗಪರ್ವದ ವಿದುರ ಪ್ರಜಾಗರ (ಅಧ್ಯಾಯ:- ೩೩) ದ ಶ್ಲೋಕಗಳಾಗಿವೆ.

**ಅರ್ಥ:-** ಯಾವನಿಗೆ ಆತ್ಮಜ್ಞಾನ ಉಂಟಾಗಿದೆಯೋ, ಯಾವನು ಸಮ್ಯಕ್ ಆರಂಭವಂತನಾಗಿದ್ದನೋ, ಎಂದರೆ ಯಾವನು ನಿಷ್ಕರ್ಮನಾಗಿ, ಸೋಮಾರಿಯಾಗಿ ಎಂದಿಗೂ ಇರುವುದಿಲ್ಲವೋ, ಯಾವನು ಧರ್ಮದಲ್ಲಿಯೇ ನಿತ್ಯವೂ ನಿಶ್ಚಿತವಾಗಿರುವನೋ, ಯಾವನ ಮನಸ್ಸನ್ನು ಉತ್ತಮೋತ್ತಮ ಭೌತಿಕ ಪದಾರ್ಥಗಳೂ ಕೂಡ, ಎಂದರೆ-ವಿಷಯಸಂಬಂಧೀ ವಸ್ತುಗಳೂ ಆಕರ್ಷಿಸಲಾರವೋ, ಅವನೇ ಪಂಡಿತನೆನಿಸುತ್ತಾನೆ. (೧)

ಸದಾ ಧರ್ಮಯುಕ್ತಕರ್ಮಗಳ ಸೇವನವನ್ನೂ, ಅಧರ್ಮಯುಕ್ತಕರ್ಮಗಳ ತ್ಯಾಗವನ್ನೂ, ಮಾಡುವವನು, ಈಶ್ವರ, ವೇದಗಳು, ಸತ್ಯಾಚಾರ-ಇವುಗಳ ನಿಂದೆಯನ್ನು ಮಾಡದವನು, ಈಶ್ವರ-ಮೊದಲಾದ ತತ್ತ್ವಗಳಲ್ಲಿ ಅತ್ಯಂತ ಶ್ರದ್ಧಾಳುವಾಗಿರುವವನು - ಇವೇ ಪಂಡಿತನ ಕರ್ತವ್ಯಾಕರ್ತವ್ಯ ಕರ್ಮಗಳ (ಸೂಚಕವಾದ) ಲಕ್ಷಣಗಳಾಗಿವೆ. (೨)

ಯಾವನು ಕಠಿಣ ವಿಷಯವನ್ನೂ ಕೂಡ ಶೀಘ್ರವಾಗಿ ತಿಳಿಯಬಲ್ಲನೋ, ಬಹುಕಾಲಪರ್ಯಂತ ಶಾಸ್ತ್ರಗಳನ್ನು ಓದುವನೋ, ಆಲಿಸುವನೋ ಮತ್ತು ಪರ್ಯಾಲೋಚಿಸುವನೋ, ಯಾವನು ಏನು ತಿಳಿದುಕೊಳ್ಳುತ್ತಾನೋ, ಅದನ್ನು ಪರೋಪಕಾರದಲ್ಲಿ ಪ್ರಯೋಗಿಸುತ್ತಾನೋ, ತನ್ನ ಸ್ವಾರ್ಥಕ್ಕಾಗಿ ಯಾವ ಕೆಲಸವನ್ನೂ ಮಾಡುವುದಿಲ್ಲವೋ, ಯಾವನು ಕೇಳದಿದ್ದರೂ, ಅಥವಾ ಯೋಗ್ಯಸಮಯವೆಂಬುದನ್ನು ತಿಳಿಯದೆ, ಅನ್ಯರ ವಿಷಯಗಳಲ್ಲಿ ಸಮ್ಮತಿ ಕೊಡುವುದಿಲ್ಲವೋ, ಅವನು ಪಂಡಿತನಿಗೆ ಇರಬೇಕಾದ ಪ್ರಥಮ ಪ್ರಜ್ಞಾನವುಳ್ಳವನು. (೩)

ಯಾವನು ಪ್ರಾಪ್ತಿಗೆ ಅಯೋಗ್ಯವಾದುದರ ಇಚ್ಛೆಯನ್ನು ಎಂದಿಗೂ ಮಾಡುವುದಿಲ್ಲವೋ, ನಾಶಹೊಂದಿದ ಪದಾರ್ಥದ ಸಲುವಾಗಿ ಶೋಕವನ್ನು ಮಾಡುವುದಿಲ್ಲವೋ, ಆಪತ್ಕಾಲದಲ್ಲಿ ಮೋಹವನ್ನು ಹೊಂದುವುದಿಲ್ಲವೋ, ಎಂದರೆ ವ್ಯಾಕುಲನಾಗುವುದಿಲ್ಲವೋ, ಅವನೇ ಬುದ್ಧಿವಂತನಾದ ಪಂಡಿತನಾಗಿರುತ್ತಾನೆ. (೪)

ಯಾವನ ವಾಣಿಯು ಸಮಸ್ತವಿದ್ಯೆಗಳನ್ನು, ಪ್ರಶ್ನೋತ್ತರಗಳನ್ನು ನಿರ್ವಹಿಸುವುದರಲ್ಲಿ ಅತಿ ನಿಪುಣವಾಗಿದೆಯೋ, ಯಾವನು ವಿಚಿತ್ರವಾಗಿ- (ಅದ್ಭುತವಾಗಿ) ಶಾಸ್ತ್ರಗಳ ಪ್ರಕರಣಗಳನ್ನು ಹೇಳವವನಾಗಿದ್ದಾನೋ, ಯಾವನು ಯಥಾಯೋಗ್ಯವಾಗಿ ತರ್ಕಯುಕ್ತನೂ, ಸ್ಮೃತಿ ಸಂಪನ್ನನೂ, ಗ್ರಂಥಗಳ ಅರ್ಥವನ್ನು ಶೀಘ್ರವಾಗಿ ಹೇಳಬಲ್ಲವನೂ ಆಗಿದ್ದಾನೋ, ಅವನೇ ಪಂಡಿತನೆನಿಸುತ್ತಾನೆ. (೫)

ಯಾವನ ಪ್ರಜ್ಞೆ ತಾನು ಆಲಿಸಿರುವ ಸತ್ಯವಾದ ಅರ್ಥಕ್ಕೆ ಅನುಕೂಲವಾಗಿದೆಯೋ, ಮತ್ತು ಯಾವನ ಶ್ರವಣ ಬುದ್ಧಿಗೆ ಅನುಸಾರವಾಗಿರುತ್ತದೋ, ಯಾವನು ಎಂದಿಗೂ ಆರ್ಯರ, ಎಂದರೆ, ಶ್ರೇಷ್ಠ ಧಾರ್ಮಿಕ ಪುರುಷರ ಗೌರವಪರಿಧಿಯನ್ನು ಮೀರುವುದಿಲ್ಲವೋ ಅವನೇ ಪಂಡಿತನೆಂಬ ಹೆಸರನ್ನು ಹೊಂದುವನು. (೬)

ಎಲ್ಲಿ ಇಂತಹ ಸ್ತ್ರೀ ಪುರುಷರು ಓದಿಸುವವರಾಗಿರುತ್ತಾರೋ, ಅಲ್ಲಿ ವಿದ್ಯೆ, ಧರ್ಮ ಮತ್ತು ಉತ್ತಮಾಚಾರದ ವೃದ್ಧಿಯುಂಟಾಗಿ, ಪ್ರತಿದಿನವೂ ಆನಂದವೇ ಹೆಚ್ಚುತ್ತಾ ಇರುತ್ತದೆ.

ಓದಲು ಅನರ್ಹನ ಮತ್ತು ಮೂರ್ಖನ ಲಕ್ಷಣಗಳು: -

**ಅಶ್ರುತಶ್ಚ ಸಮುನ್ನದ್ಧೋ ದರಿದ್ರಶ್ಚ ಮಹಾಮನಾಃ ।**

**ಅರ್ಥಾಂಶ್ಚಾಕರ್ಮಣಾ ಪ್ರೇಪ್ಸು ರ್ಮೂಢ ಇತ್ಯುಚ್ಯತೇ ಬುಧೈಃ ॥ ೧ ॥**

**ಅನಾಹೂತಃ ಪ್ರವಿಶತಿ ಹ್ಯಪೃಷ್ಟೋ ಬಹು ಭಾಷತೇ ।**

**ಅವಿಶ್ವಸ್ತೇ ವಿಶ್ವಸಿತಿ ಮೂಢಚೇತಾ ನರಾಧಮಃ ॥ ೨ ॥**

ಈ ಶ್ಲೋಕಗಳೂ ಕೂಡ ಭಾರತದ ಉದ್ಯೋಗಪರ್ವದ ವಿದುರ ಪ್ರಜಾಗರವಾಗಿವೆ. ( ಅಧ್ಯಾಯ:- ೩೩.)

ಯಾವನು ಯಾವದೇ ಒಂದು ಶಾಸ್ತ್ರವನ್ನೂ ಓದಿಲ್ಲವೋ, ಕೇಳಿಯೂ ಇಲ್ಲವೋ, ಮತ್ತು ಯಾವನು ಅತಿ ಗರ್ವಿಷ್ಟನಾಗಿರುತ್ತಾನೋ, ದರಿದ್ರನಾಗಿದ್ದು ದೊಡ್ಡ ದೊಡ್ಡ ಮನೋರಥಗಳನ್ನು ಮಾಡುತ್ತಾನೋ, ಯಾವನು ಕರ್ಮವಿಲ್ಲದೆ ಪದಾರ್ಥಗಳ ಪ್ರಾಪ್ತಿಯ ಇಚ್ಛೆಯನ್ನು ಮಾಡುವವನಾಗಿರುತ್ತಾನೋ, ಅವನನ್ನೇ ಬುದ್ಧಿವಂತರಾದ ಜನರು ಮೂಢರೆನ್ನುತ್ತಾರೆ.(೧)

ಯಾವನು ಕರೆಯಲ್ಪಡದೆ ಸಭೆಯಲ್ಲಿ, ಅಥವಾ ಯಾವನದಾದರೂ ಮನೆಯಲ್ಲಿ ಪ್ರವೇಶ ಮಾಡುತ್ತಾನೋ, ಉಚ್ಚ ಸ್ಥಾನದಲ್ಲಿ ಕುಳಿತುಕೊಳ್ಳಲು ಅಪೇಕ್ಷಿಸುತ್ತಾನೋ, ಯಾವನು ಕೇಳದಿದ್ದರೂ ಸಭೆಯಲ್ಲಿ ಬಹಳವಾಗಿ ಹರಟೆಹೊಡೆಯುತ್ತಾನೋ, ಯಾವನು ನಂಬಿಕೆಗೆ ಅರ್ಹವಲ್ಲದ ವಸ್ತುವಿನಲ್ಲಿ ಅಥವಾ ಮನುಷ್ಯನಲ್ಲಿ ನಂಬಿಕೆಯಿಡುತ್ತಾನೋ, ಅವನೇ ಮೂಢನು ಮತ್ತು ಎಲ್ಲಾ ಮನುಷ್ಯರಲ್ಲಿಯೂ ನೀಚಮನುಷ್ಯನು-ಎನ್ನಿಸಿಕೊಳ್ಳುತ್ತಾನೆ. (೨)

ಎಲ್ಲಿ ಇಂತಹ ಪುರುಷರು ಅಧ್ಯಾಪಕರೂ, ಉಪದೇಶಕರೂ, ಗುರುಗಳೂ ಮತ್ತು ಮಾನನೀಯರೂ ಆಗಿರುತ್ತಾರೋ, ಅಲ್ಲಿ ಅವಿದ್ಯೆ, ಅಧರ್ಮ, ಅಸಭ್ಯತೆ, ಕಲಹ, ವಿರೋಧ ಮತ್ತು ಒಡಕು ಹೆಚ್ಚಿ ದುಃಖವೇ ಬೆಳೆಯುತ್ತಾ ಹೋಗುತ್ತದೆ.

**ಈಗ ವಿದ್ಯಾರ್ಥಿಗಳ ಲಕ್ಷಣಗಳು :**

**ಆಲಸ್ಯಂ ಮದಮೋಹೌ ಚ ಚಾಪಲಂ ಗೋಷ್ಠಿರೇವ ಚ ।**

**ಸ್ತಬ್ಧತಾ ಚಾಭಿಮಾನಿತ್ವಂ ತಥಾಽತ್ಯಾಗಿತ್ವಮೇವ ಚ ।**

**ಏತೇ ವೈ ಸಪ್ತ ದೋಷಾಃ ಸ್ಯುಃ ಸದಾ ವಿದ್ಯಾರ್ಥಿನಾಂ ಮತಾಃ ॥ ೧ ॥**

**ಸುಖಾರ್ಥಿನಃ ಕುತೋ ವಿದ್ಯಾ ಕುತೋ ವಿದ್ಯಾರ್ಥಿನಃ ಸುಖಮ್ ।**

**ಸುಖಾರ್ಥೀ ವಾ ತ್ಯಜೇದ್ವಿದ್ಯಾಂ ವಿದ್ಯಾರ್ಥೀ ವಾ ತ್ಯಜೇತ್ಸುಖಮ್ ॥ ೨ ॥**

ಇವೂ ಕೂಡಾ ವಿದುರ ಪ್ರಜಾಗರದ ೪೦ನೆಯ ಅಧ್ಯಾಯದ ೫-೬ನೆಯ ಶ್ಲೋಕಗಳಾಗಿವೆ.

**ಅರ್ಥ** :- ಆಲಸ್ಯ - ಎಂದರೆ ಶರೀರದ, ಬುದ್ಧಿಯ ಜಡತ್ವ, ಮದ, ಮೋಹ, ಯಾವುದಾದರೂ ವಸ್ತುವಿನಲ್ಲಿ ಸಿಕ್ಕಿಕೊಳ್ಳುವುದು, ಚಾಪಲ್ಯ, ಮತ್ತು ಇಲ್ಲಿಯ-ಅಲ್ಲಿಯ ವ್ಯರ್ಥವಾದ ಚಾಡಿಯನ್ನು ಹೇಳುವುದು-ಕೇಳುವುದು, ಓದುತ್ತಾ-ಓದಿಸುತ್ತಾ ನಿಲ್ಲಿಸಿ ಬಿಡುವುದು, ಅಭಿಮಾನಿಯೂ, ತ್ಯಾಗಹೀನನೂ-ಆಗಿರುವುದು-ಈ ಏಳು ದೋಷಗಳು ವಿದ್ಯಾರ್ಥಿಗಳಲ್ಲಿರುತ್ತವೆ. (೧)

ಯಾರು ಹೀಗಿರುತ್ತಾರೋ, ಅವರಿಗೆ ವಿದ್ಯೆಯೂ ಬರುವುದಿಲ್ಲ. ಸುಖ-ಭೋಗದ ಇಚ್ಛೆಯುಳ್ಳವನಿಗೆ ವಿದ್ಯೆಯೆಲ್ಲಿ? ಮತ್ತು ವಿದ್ಯೆ ಓದುವವನಿಗೆ ಸುಖವೆಲ್ಲಿ? ಏಕೆಂದರೆ-ವಿಷಯಸುಖವನ್ನು ಬಯಸುವವನು ವಿದ್ಯೆಯನ್ನೂ, ಮತ್ತು ವಿದ್ಯಾರ್ಥಿಯು ವಿಷಯಸುಖವನ್ನೂ ಬಿಟ್ಟುಬಿಡಬೇಕು (೨).

ಹೀಗೆ ಮಾಡಿದಲ್ಲದೆ ವಿದ್ಯೆಯು ಎಂದಿಗೂ ಲಭಿಸಲಾರದು ಮತ್ತು ಕೆಳಗೆ ಹೇಳಿರುವಂತಹವರಿಗ ವಿದ್ಯೆ ಲಭಿಸುತ್ತದೆ:-

**ಸತ್ಯೇ ರತಾನಾಂ ಸತತಂ ದಾಂತಾನಾಮೂರ್ಧ್ವರೇತಸಾಮ್ ।**
**ಬ್ರಹ್ಮಚರ್ಯಂ ದಹೇದ್ರಾಜನ್ ಸರ್ವಪಾಪಾನ್ಯು ಪಾಸಿತಮ್ ॥** [೧೬]

ಯಾರು ಸದಾ ಸದಾಚಾರದಲ್ಲಿ ಪ್ರವೃತ್ತರೂ, ಜಿತೇಂದ್ರಿಯರೂ ಆಗಿರುತ್ತಾರೋ, ಮತ್ತು ಯಾರ ವೀರ್ಯವು ಎಂದಿಗೂ ಅಧಃಸ್ಖಲಿತವಾಗುವುದಿಲ್ಲವೋ, ಅವರ ಬ್ರಹ್ಮಚರ್ಯವೇ ಸತ್ಯವಾದುದು ಮತ್ತು ಅವರೇ ವಿದ್ವಾಂಸರಾಗುವರು.

ಆದುದರಿಂದ, ಅಧ್ಯಾಪಕರುಗಳೂ, ವಿದ್ಯಾರ್ಥಿಗಳೂ ಶುಭಲಕ್ಷಣಯುಕ್ತರಾಗಿರಬೇಕು. ಅಧ್ಯಾಪಕರುಗಳು, ವಿದ್ಯಾರ್ಥಿಗಳು ಸತ್ಯವಾದಿಗಳೂ, ಸತ್ಯವನ್ನು ಅಂಗೀಕರಿಸುವವರೂ, ಸತ್ಯ - ಕರ್ತೃಗಳೂ, ಸಭ್ಯತೆ - ಜಿತೇಂದ್ರಿಯತ್ವ - ಸುಶೀಲತ್ವ ಮೊದಲಾದ ಶುಭಗುಣಗಳಿಂದ ಯುಕ್ತರೂ, ಶರೀರದ ಮತ್ತು ಆತ್ಮನ ಪೂರ್ಣಬಲವನ್ನು ಬೆಳೆಯಿಸಿಕೊಂಡು, ವೇದಗಳೇ ಮೊದಲಾದ ಸಮಸ್ತಶಾಸ್ತ್ರಗಳಲ್ಲಿ ವಿದ್ವಾಂಸರೂ ಆಗುವಂತೆ ಪ್ರಯತ್ನಮಾಡುತ್ತಿರಬೇಕು; ಸದಾ ಶಿಷ್ಯರ ದುಶ್ಚೇಷ್ಟೆಗಳನ್ನು ಬಿಡಿಸುವುದಕ್ಕೂ, ಮತ್ತು ವಿದ್ಯೆ ಕಲಿಸುವುದಕ್ಕೂ ಉದ್ಯಮಮಾಡುತ್ತಿರಬೇಕು. ಮತ್ತು ವಿದ್ಯಾರ್ಥಿಗಳು ಸದಾ ಜಿತೇಂದ್ರಿಯರೂ, ಶಾಂತರೂ, ಓದುವವರಲ್ಲಿ ಪ್ರೇಮವುಳ್ಳವರೂ, ವಿಚಾರಶೀಲರೂ, ಪರಿಶ್ರಮಿಗಳೂ ಆಗಿ, ಪೂರ್ಣವಿದ್ಯೆಯೂ, ಪೂರ್ಣಆಯಸ್ಸೂ, ಪರಿಪೂರ್ಣಧರ್ಮವೂ, ಮತ್ತು ಪುರುಷಾರ್ಥ ಸಿದ್ಧಿಯೂ ಪ್ರಾಪ್ತವಾಗುವಂತೆ ಪ್ರಯತ್ನಮಾಡಬೇಕು. ಈ ಮೊದಲಾದುವೆಲ್ಲಾ ಬ್ರಾಹ್ಮಣ ವರ್ಣಸ್ಥರ ಕರ್ಮಗಳಾಗಿವೆ.

## ಕ್ಷತ್ರಿಯರ ಕರ್ಮವನ್ನು ರಾಜಧರ್ಮದಲ್ಲಿ ಹೇಳುವೆವು.

ಬ್ರಹ್ಮಚರ್ಯ- ಮೊದಲಾದುದರಿಂದ ವೇದಗಳೇ ಮೊದಲಾದ ವಿದ್ಯೆಯನ್ನು ಕಲಿತು, ವಿವಾಹ ಮಾಡಿಕೊಂಡು, ದೇಶಗಳ ಭಾಷೆಗಳನ್ನೂ, ನಾನಾಪ್ರಕಾರದ ರೀತಿಯನ್ನೂ ಕಲಿತು ಅವುಗಳ ಬೆಲೆಯನ್ನು ತಿಳಿಯುವುದು, ಮಾರುವುದು, ಕೊಳ್ಳುವುದು,

೧೬. ಮಹಾಭಾರತ, ಅನುಶಾಸನ ಪರ್ವ (೭೫.೩೭) -ಯು.ಮೀ

ಪಶುಪಾಲನೆ ಮತ್ತು ಬೇಸಾಯದ ಉನ್ನತಿಯನ್ನು ಚಾತುರ್ಯದಿಂದ ಮಾಡುವುದು-ಮಾಡಿಸುವುದು, ಧನವನ್ನು ಹೆಚ್ಚಿಸುವುದು, ವಿದ್ಯೆಯ ಮತ್ತು ಧರ್ಮದ ಉನ್ನತಿಯಲ್ಲಿ ವ್ಯಯಮಾಡುವುದು, ನಿಷ್ಕಪಟರಾಗಿ, ಪ್ರಾಮಾಣಿಕತ್ವದಿಂದ ಎಲ್ಲ ವ್ಯಾಪಾರಗಳನ್ನೂ ಮಾಡುವುದು, ಯಾವುದೂ ಹಾಳಾಗದಂತೆ, ಎಲ್ಲ ವಸ್ತುಗಳನ್ನೂ ರಕ್ಷಿಸುವುದು-ಇವು ವೈಶ್ಯರ ಕರ್ಮಗಳಾಗಿವೆ.

ಶೂದ್ರನು ಸಮಸ್ತ ಸೇವೆಗಳಲ್ಲಿಯೂ ಚತುರನೂ, ಪಾಕವಿದ್ಯೆಯಲ್ಲಿ ನಿಪುಣನೂ ಆಗಿದ್ದು, ಅತಿ ಪ್ರೇಮದಿಂದ ದ್ವಿಜರ ಸೇವೆಯನ್ನೂ ಮತ್ತು ಅವರಿಂದಲೇ ತನ್ನ ಜೀವಿಕಾಸಂಪಾದನೆಯನ್ನೂ ಮಾಡಬೇಕು.

ಮತ್ತು ದ್ವಿಜರು ಇವನ ಭೋಜನ, ಪಾನ, ವಸ್ತ್ರ, ನಿವಾಸ, ವಿವಾಹ-ಮೊದಲಾದುದರಲ್ಲಿ ಏನು ವ್ಯಯವಾಗುವುದೋ, ಅದೆಲ್ಲವನ್ನೂ ಕೊಡಬೇಕು. ಅಥವಾ ಮಾಸಿಕ ವೇತನವನ್ನು ಏರ್ಪಡಿಸಬೇಕು.

ನಾಲ್ಕು ವರ್ಣಗಳೂ ಪರಸ್ಪರ ಪ್ರೀತಿ, ಉಪಕಾರ, ಸೌಜನ್ಯಗಳನ್ನು ರೂಢಿಸಿಕೊಂಡು, ಸುಖ-ದುಃಖ. ಹಾನಿ ಲಾಭಗಳಲ್ಲಿ ಐಕಮತ್ಯದಿಂದಿದ್ದು, ರಾಜ್ಯದ ಮತ್ತು ಪ್ರಜೆಗಳ ಉನ್ನತಿಯಲ್ಲಿ ತನು-ಮನ-ಧನಗಳನ್ನು ವ್ಯಯಿಸುತ್ತಿರಬೇಕು. ಸ್ತ್ರೀ-ಪುರುಷರ ವಿಯೋಗವೆಂದಿಗೂ ಆಗಬಾರದು. ಏಕೆಂದರೆ:-

**ಪಾನಂ ದುರ್ಜನಸಂಸರ್ಗಃ ಪತ್ಯಾ ಚ ವಿರೋಹೋಟನಮ್ ।**
**ಸ್ವಪ್ನೋಽನ್ಯಗೇಹವಾಸಶ್ಚ ನಾರೀಸಂದೂಷಣಾನಿ ಷಟ್ ॥** (ಮನು:- ೯. ೧೩)

ಮದ್ಯ, ಭಂಗೀಸೊಪ್ಪು - ಮೊದಲಾದ ಮಾದಕ ದ್ರವ್ಯಗಳ ಸೇವನ, ದುಷ್ಟ ಪುರುಷರ ಸಂಗ, ಪತಿ-ವಿಯೋಗ, ಒಬ್ಬಳೇ ಅಲ್ಲಿ-ಇಲ್ಲಿ ವ್ಯರ್ಥವಾಗಿ, ಪಾಷಂಡಿಗಳೇ ಮೊದಲಾದವರ ದರ್ಶನದ ನೆಪದಿಂದ ಅಲೆಯುತ್ತಿರುವುದು ಮತ್ತು ಪರರ ಮನೆಯಲ್ಲಿ ಹೋಗಿ ಮಲಗುವುದು, ಅಥವಾ ವಾಸಿಸುವುದು - ಈ ಆರೂ ಸ್ತ್ರೀಯನ್ನು ದೂಷಿತಳನ್ನಾಗಿ ಮಾಡುವ ದುರ್ಗುಣಗಳಾಗಿವೆ. ಮತ್ತು ಇವು ಪುರುಷರಿಗೂ ಕೂಡ ಅನ್ವಯಿಸುತ್ತವೆ. ಪತಿಯ ಮತ್ತು ಸ್ತ್ರೀಯ ವಿಯೋಗ ಎರಡು ಬಗೆಯದಿರುತ್ತದೆ; ಎಲ್ಲಿಗಾದರೂ ಕಾರ್ಯಾರ್ಥವಾಗಿ ದೇಶಾಂತರಕ್ಕೆ ಹೋಗುವುದು ಮತ್ತು ಎರಡನೆಯದಾಗಿ ಮೃತ್ಯುವಿನಿಂದ ವಿಯೋಗ ಉಂಟಾಗುವುದು. ಇವುಗಳಲ್ಲಿ ಮೊದಲನೆಯದಕ್ಕೆ ಪರಿಹಾರವೆಂದರೆ, ದೂರದೇಶಕ್ಕೆ ಯಾತ್ರೆಗಾಗಿ ಹೋಗುವುದಾದರೆ, ಸ್ತ್ರೀಯನ್ನೂ ಜೊತೆಯಲ್ಲಿಯೇ ಕರೆದೊಯ್ಯುವುದು, ಬಹಳ ಸಮಯದವರೆಗೆ ವಿಯೋಗವಾಗಬಾರದು-ಎಂಬುದು ಇದರ ತಾತ್ಪರ್ಯ.

**ಪ್ರಶ್ನೆ** :- ಸ್ತ್ರೀಯರ ಮತ್ತು ಪುರುಷರ ಬಹುವಿವಾಹವಾಗುವುದು ಯೋಗ್ಯವೋ ಅಥವಾ ಅಲ್ಲವೋ?

**ಉತ್ತರ** :- **'ಯುಗಪತ್ ನ '**- ಎಂದರೆ ಒಂದೇ ಕಾಲದಲ್ಲಿ ಆಗಬಾರದು.

**ಪ್ರಶ್ನೆ** :- ಸಮಯಾಂತರದಲ್ಲಿ ಅನೇಕ ವಿವಾಹಗಳಾಗಬಹುದೇ?

**ಉತ್ತರ** :- ಹೌದು. ಉದಾಹರಣೆ:

**ಸಾ ಚೇದಕ್ಷತಯೋನಿಃ ಸ್ಯಾತ್ ಗತಪ್ರತ್ಯಾಗತಾಽಪಿ ವಾ ।**
**ಪೌನರ್ಭವೇನ ಭರ್ತ್ರಾ ಸಾ ಪುನಃ ಸಂಸ್ಕಾರಮರ್ಹತಿ ॥** (ಮನು:- ೯. ೧೭೬)

ಯಾವ ಸ್ತ್ರೀಯ ಅಥವಾ ಪುರುಷನ ಪಾಣಿಗ್ರಹಣ ಮಾತ್ರದ ಸಂಸ್ಕಾರವಾಗಿರುತ್ತದೋ, ಮತ್ತು ಸಂಯೋಗ ವಾಗಿರುವುದಿಲ್ಲವೋ, ಎಂದರೆ ಅಕ್ಷತಯೋನಿಯಾಗಿ ಸ್ತ್ರೀಯೂ, ಅಕ್ಷತವೀರ್ಯನಾಗಿ ಪುರುಷನೂ ಇದ್ದಲ್ಲಿ, ಅವರ ಪುನರ್ವಿವಾಹವು ಬೇರೆಯ ಪುರುಷನೊಂದಿಗೆ ಅಥವಾ ಸ್ತ್ರೀಯೊಂದಿಗೆ ಆಗಬಹುದು. ಆದರೆ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣಗಳಲ್ಲಿ ಕ್ಷತಯೋನಿಯಾದ ಸ್ತ್ರೀಯಳ ಮತ್ತು ಕೃತ್ಯವೀರ್ಯನಾದ ಪುರುಷನ ಪುನರ್ವಿವಾಹವು ಆಗಬಾರದು.

**ಪ್ರಶ್ನೆ** : - ಪುನರ್ವಿವಾಹದಲ್ಲಿ ದೋಷಗಳೇನಿವೆ?

**ಉತ್ತರ**:- ಒಂದನೆಯದಾಗಿ, ಸ್ತ್ರೀ-ಪುರುಷರ ಪ್ರೇಮ ಕಡಿಮೆಯಾಗುವುದು. ಏಕೆಂದರೆ, ಯಾವಾಗ ಬೇಕೆನಿಸಿದರೆ ಆಗ, ಪುರಷನನ್ನು ಸ್ತ್ರೀಯೂ, ಸ್ತ್ರೀಯನ್ನೂ ಪುರುಷನೂ ಬಿಟ್ಟು, ಬೇರೆಯವರೊಂದಿಗೆ ಸಂಬಂಧ ಮಾಡಿಕೊಳ್ಳಬಹುದು.

ಎರಡನೆಯಾಗಿ : ಸ್ತ್ರೀ ಅಥವಾ ಪುರುಷನು, ಪತಿಯ ಅಥವಾ ಸ್ತ್ರೀಯ ಮರಣಾನಂತರ, ಎರಡನೆಯ ವಿವಾಹ ಮಾಡಿಕೊಳ್ಳಲು ಇಚ್ಛಿಸಿದರೆ, ಆಗ ಮೊದಲನೆಯ ಸ್ತ್ರೀಯ ಅಥವಾ ಪೂರ್ವದ ಪತಿಯ ವಸ್ತುಗಳನ್ನು ಅಪಹರಿಸಿಕೊಂಡು ಹೋಗುವುದು ಮತ್ತು ಅವರ ಕುಟುಂಬದವರು ಅವರೊಂದಿಗೆ ಜಗಳವಾಡುವುದು.

ಮೂರನೆಯದಾಗಿ : ಬಹಳ ಉತ್ತಮ ಕುಲಗಳ ಹೆಸರು ಅಥವಾ ಗುರುತೂ ಇಲ್ಲದೆ, ಅವುಗಳ ವಸ್ತುಗಳು ಭಿನ್ನಭಿನ್ನವಾಗಿ ಹೋಗುವುದು.

ನಾಲ್ಕನೆಯದಾಗಿ : ಪತಿವ್ರತ ಮತ್ತು ಸ್ತ್ರೀವ್ರತದ ಧರ್ಮವು ನಾಶವಾಗಿ ಹೋಗುವುದು.

ಈ ಮೊದಲಾದ ದೋಷಗಳ ಕಾರಣದಿಂದ, ದ್ವಿಜರಲ್ಲಿ ಪುನರ್ವಿವಾಹ ಅಥವಾ ಅನೇಕ ವಿವಾಹಗಳು ಎಂದಿಗೂ ಆಗಬಾರದು.

**ಪಶ್ನೆ :** – ಯಾವಾಗ ವಂಶಚ್ಛೇದನವಾಗಿ ಹೋಗುವುದೋ, ಆಗಲೂ ಅವರ ಕುಲ ನಾಶವಾಗಿಯೇ ಆಗುವುದು. ಮತ್ತು ಸ್ತ್ರೀ–ಪುರುಷರು ವ್ಯಭಿಚಾರವೇ ಮೊದಲಾದ ಕರ್ಮಗಳನ್ನು ಮಾಡಿ, ಗರ್ಭಪಾತ – ಮೊದಲಾದ ಬಹಳ ದುಷ್ಟ ಕರ್ಮಗಳನ್ನೂ ಮಾಡುವರು. ಆದುದರಿಂದ, ಪುನರ್ವಿವಾಹವಾಗುವುದು ಒಳ್ಳೆಯದು.

**ಉತ್ತರ :**– ಇಲ್ಲ. ಇಲ್ಲ. ಏಕೆಂದರೆ ಸ್ತ್ರೀ–ಪುರುಷರು ಬ್ರಹ್ಮಚರ್ಯದಲ್ಲಿ ಸ್ಥಿತರಾಗಲು ಬಯಸಿದರೆ, ಯಾವುದೇ ಉಪದ್ರವವೂ ಆಗುವುದಿಲ್ಲ. ಮತ್ತು ಕುಲದ ಪರಂಪರೆಯನ್ನು ಉಳಿಸಿಕೊಳ್ಳಲು, ತಮ್ಮ ಸ್ವವರ್ಣದ ಯಾವನಾದರೂ ಬಾಲಕನನ್ನು ದತ್ತು ತೆಗೆದುಕೊಂಡರೆ, ಅವನಿಂದ ಕುಲವು ಬೆಳೆದುಕೊಂಡು ಹೋಗುವುದು ಮತ್ತು ವ್ಯಭಿಚಾರವೂ ಆಗುವುದಿಲ್ಲ. ಮತ್ತು ಎಂದಿಗೂ ಬ್ರಹ್ಮಚರ್ಯವನ್ನು ಪಾಲಿಸಲಾರರಾದರೆ, ನಿಯೋಗ ಮಾಡಿಕೊಂಡು ಸಂತಾನೋತ್ಪತ್ತಿ ಮಾಡಿಕೊಳ್ಳಬಹುದು.

**ಪ್ರಶ್ನೆ :**– ಪುನರ್ವಿವಾಹ ಮತ್ತು ನಿಯೋಗದಲ್ಲಿ ವ್ಯತ್ಯಾಸವೇನಿದೆ?

**ಉತ್ತರ :**– ಮೊದಲನೆಯದು, ವಿವಾಹದಲ್ಲಿ[೧೭] ಕನ್ಯೆ ತನ್ನ ತಂದೆಯ ಮನೆಯನ್ನು ಬಿಟ್ಟು, ಪತಿಯ ಮನೆಗೆ ಸೇರುತ್ತಾಳೆ. ಮತ್ತು ತಂದೆಯ ಮನೆಯೊಂದಿಗೆ ವಿಶೇಷ ಸಂಬಂಧವಿರುವುದಿಲ್ಲ. ಹಾಗೂ ವಿಧವೆಯಾದ ಸ್ತ್ರೀ ಅದೇ ವಿವಾಹಿತ ಪತಿಯ ಮನೆಯಲ್ಲಿರುತ್ತಾಳೆ.[೧೮] ಅದೇ ವಿವಾಹಿತ ಸ್ತ್ರೀಯ ಮಕ್ಕಳು ಅದೇ ವಿವಾಹಿತ ಪತಿಯ ದಾಯಭಾಗಿಗಳಾಗುತ್ತಾರೆ.

ಎರಡನೆಯದು ನಿಯೋಗದಲ್ಲಿ ವಿಧವೆಯಾದ ಸ್ತ್ರೀಯ ಮಕ್ಕಳು ವೀರ್ಯದಾತೃವಿನ ಮಕ್ಕಳೆನ್ನಿಸುವುದಿಲ್ಲ; ಅವನ ಗೋತ್ರವೂ ಲಭಿಸುವುದಿಲ್ಲ; ಮತ್ತು ಅವನ ಸ್ವತ್ವವು ಆ ಮಕ್ಕಳ ಮೇಲೆ ಇರುವುದಿಲ್ಲ. ಆದರೆ, ಅವರು ಮೃತನಾದ ಪತಿಯ ಮಕ್ಕಳೆನ್ನಿಸಿಕೊಳ್ಳುತ್ತಾರೆ ಅವನ ಗೋತ್ರವೇ ಲಭಿಸುತ್ತದೆ ಮತ್ತು ಅವನದೇ ಪದಾರ್ಥಗಳ ದಾಯಭಾಗಿಗಳಾಗಿ, ಅದೇ ಮನೆಯಲ್ಲಿರುತ್ತಾರೆ.

ಮೂರನೆಯದು ವಿವಾಹಿತ ಸ್ತ್ರೀ–ಪುರುಷರು ಪರಸ್ಪರ ಸೇವೆ ಮತ್ತು ಪಾಲನೆ ಮಾಡುವುದು ಆವಶ್ಯಕವಾಗಿರುತ್ತದೆ ಮತ್ತು ನಿಯುಕ್ತ ಸ್ತ್ರೀ – ಪುರುಷರ ನಡುವೆ ಯಾವ ಸಂಬಂಧವೂ ಇರುವುದಿಲ್ಲ.

ನಾಲ್ಕನೆಯದು, ವಿವಾಹಿತ ಸ್ತ್ರೀ–ಪುರುಷರ ಸಂಬಂಧ ಮರಣ ಪರ್ಯಂತರವೂ ಇರುತ್ತದೆ. ಮತ್ತು ನಿಯುಕ್ತ ಸ್ತ್ರೀ ಪುರುಷರದು ಕಾರ್ಯಾನಂತರ ಬಿಟ್ಟು ಹೋಗುತ್ತದೆ.

ಐದನೆಯದು ವಿವಾಹಿತ ಸ್ತ್ರೀ–ಪುರುಷರು ಪರಸ್ಪರ ಗೃಹಕಾರ್ಯಗಳ ಸಿದ್ಧಿಗಾಗಿ ಯತ್ನ ಮಾಡುತ್ತಾ ಹೋಗುತ್ತಾರೆ ಮತ್ತು ನಿಯುಕ್ತ ಸ್ತ್ರೀ–ಪುರುಷರು ತಮ್ಮ ತಮ್ಮ ಮನೆಯ ಕೆಲಸಗಳನ್ನು ಮಾತ್ರ ಮಾಡಿಕೊಳ್ಳುತ್ತಾರೆ.

---

೧೭. ವಿವಾಹ ಮತ್ತು ಪುನರ್ವಿವಾಹದಲ್ಲಿ, ಸ್ವತ್ತಾಧಿಕಾರಗಳ ಬಗ್ಗೆ ವಿಶೇಷ ಭೇದವಿಲ್ಲದಿರುವುದರಿಂದ, ಇಲ್ಲಿ ಗ್ರಂತಕರ್ತರು ಪುನರ್ವಿವಾಹದ ಸ್ಥಾನದಲ್ಲಿ 'ವಿವಾಹ'ವೆಂಬ ಶಬ್ಧವನ್ನೇ ಪ್ರಯೋಗಿಸಿದ್ದಾರೆ. ಹೀಗೆ, ಒಂದು ಶಬ್ಧದ ಪ್ರಯೋಗದಿಂದ, ಎರಡು ಪ್ರಯೋಜನಗಳನ್ನು ಸಾಧಿಸುವುದು ಆರ್ಷ ಶೈಲಿ. –ಸಂ.

೧೮ ಎಂದರೆ ವಿಧವೆಯಯ ನಿಯೋಗ ಮಾಡಿಕೊಂಡರೂ, ತನ್ನ ಮೃತ ವಿವಾಹಿತ ಪತಿಯ ಮನೆಯಲ್ಲೇ ಇರುತ್ತಾಳೆ; ನಿಯುಕ್ತ ಪುರುಷನ ಮನೆಗೆ ಹೋಗಿ, ಇರುವುದಿಲ್ಲ. ಎಂದು ಇಲ್ಲಿ ಅಭಿಪ್ರಾಯ. –ಸಂ

**ಪ್ರಶ್ನೆ :**– ವಿವಾಹ ಮತ್ತು ನಿಯೋಗದ ನಿಯಮಗಳು ಒಂದೇ ಬಗೆಯವೋ ಅಥವಾ ಬೇರೆ ಬೇರೆಯೋ?

**ಉತ್ತರ:**– ಸ್ವಲ್ಪ–ಸ್ವಲ್ಪ ಭೇದವಿದೆ. ಈ ವರೆಗೆ ಎಷ್ಟು ಹೇಳಿದ್ದೇವೋ, ಅದಲ್ಲದೆ, ವಿವಾಹಿತ ಸ್ತ್ರೀ – ಪುರುಷರು, ಒಬ್ಬ ಪುರುಷನು ಮತ್ತು ಒಬ್ಬಳು ಸ್ತ್ರೀ ಸೇರಿ, ಹತ್ತರವರೆಗೆ ಸಂತಾನೋತ್ಪಾದನೆ ಮಾಡಬಹುದು ಮತ್ತು ನಿಯುಕ್ತ ಸ್ತ್ರೀ – ಪುರುಷರು ಎರಡು ಅಥವಾ ನಾಲ್ಕಕ್ಕಿಂತ ಹೆಚ್ಚು ಸಂತಾನೋತ್ಪತ್ತಿ ಮಾಡುವಂತಿಲ್ಲ. ಎಂದರೆ–ಹೇಗೆ ಕೇವಲ ಕುಮಾರ–ಕುಮಾರಿಯರ ಮದುವೆ ಯಾಗುತ್ತದೋ, ಹಾಗೆ, ವಿಧವಾ ಸ್ತ್ರೀ ಮತ್ತು ವಿಧುರನಾದ ಪುರುಷ ಅವರ ನಡುವೆ ಮಾತ್ರವೇ ನಿಯೋಗವಾಗುತ್ತದೆ; ಕುಮಾರ–ಕುಮಾರಿಯರ ನಡುವೆಯಲ್ಲ.[೧೯] ಹೇಗೆ ವಿವಾಹಿತ ಸ್ತ್ರೀ–ಪುರುಷರು ಸದಾ ಜೊತೆಯಲ್ಲಿರುತ್ತಾರೊ, ಹಾಗೆ ನಿಯುಕ್ತ ಸ್ತ್ರೀ–ಪುರುಷರ ವ್ಯವಹಾರ ನಡೆಯಲಾರದು. ಆದರೆ – ಋತುದಾನ ಸಮಯವನ್ನುಳಿದು, ಅವರು ಒಟ್ಟಿಗೆ ಇರಕೂಡದು.[೧೫] ಸ್ತ್ರೀಯು ತನಗಾಗಿ ನಿಯೋಗ ಮಾಡಿಕೊಳ್ಳುವುದಾದರೆ ಯಾವಾಗ ಎರಡನೆಯ ಗರ್ಭ ಸ್ಥಿತವಾಗುತ್ತದೋ, ಆ ದಿನದಿಂದಲೇ ಆ ಸ್ತ್ರೀ–ಪುರುಷರ ಸಂಬಂಧ ಬಿಟ್ಟುಹೋಗಬೇಕು. ಮತ್ತು ಪುರುಷನು ತನ್ನ ಸಲುವಾಗಿ ಮಾಡಿಕೊಳ್ಳುವುದಾದರೆ, ಆಗಲೂ ಕೂಡ ಎರಡನೆಯ ಗರ್ಭವು ಸ್ಥಿತವಾದಾಗ ಸಂಬಂಧ ಕಡಿದುಹೋಗುವುದು. ಆದರೆ ಅದೇ ನಿಯುಕ್ತ ಸ್ತ್ರೀ, ಎರಡು–ಮೂರು ವರ್ಷಗಳವರೆಗೆ ಮಕ್ಕಳ ಪಾಲನೆಯನ್ನು ಮಾಡಿ, ನಿಯುಕ್ತ ಪುರುಷನಿಗೆ ಕೊಟ್ಟುಬಿಡಬೇಕು. ಹೀಗೆ ಒಬ್ಬಳು ವಿಧವಾ ಸ್ತ್ರೀ ತನಗಾಗಿ ಎರಡು ಮತ್ತು ನಿಯುಕ್ತರಾದ ನಾಲ್ವರು ವಿಧುರ ಪುರುಷರಿಗಾಗಿ ಎರಡೆರಡು–ಹೀಗೆ ಮಕ್ಕಳನ್ನು ಉತ್ಪನ್ನ ಮಾಡಬಹುದು. ಮತ್ತು ಒಬ್ಬ ವಿಧುರನಾದ ಪುರುಷನು ತನಗಾಗಿ ಎರಡು ಮತ್ತು ನಾಲ್ವರು ವಿಧವೆಯರಿಗಾಗಿ ಎರಡೆರಡು – ಹೀಗೆ ಮಕ್ಕಳಿಗೆ ಜನ್ಮವೀಯಬಹುದು. ಈ ರೀತಿ ಒಟ್ಟು ಹತ್ತು – ಹತ್ತು ಮಕ್ಕಳನ್ನು ಉತ್ಪಾದನ ಮಾಡಲು ವೇದಗಳಲ್ಲಿ ಅನುಮತಿಯಿದೆ.

**ಇಮಾಂ ತ್ವಮಿಂದ್ರ ಮೀಢ್ವಃ ಸುಪುತ್ರಾಂ ಸುಭಗಾಂ ಕೃಣು ।**

**ದಶಾಸ್ಯಾಂ ಪುತ್ರಾನಾ ಧೇಹಿ ಪತಿಮೇಕಾದಶಂ ಕೃಧಿ ॥** (ಋಗ್ವೇದ :– ೧೦.೮೫.೪೫)

(ಮೀಢ್ವಃ) ವೀರ್ಯಸೇಚನಸಮರ್ಥನಾದ, (ಇಂದ್ರ) ಐಶ್ವರ್ಯವಾನ್ ಪುರುಷನೇ! (ಇಮಾಂ) ಈ ವಿವಾಹಿತೆಯಾದ ನಾರಿಯನ್ನು, ಅಥವಾ ವಿಧವಾ ಸ್ತ್ರೀಯನ್ನು, (ತ್ವಂ) ನೀನು, (ಸುಪುತ್ರಾಂ ಸುಭಗಾಂ ಕೃಣು) ಶ್ರೇಷ್ಠ ಪುತ್ರವತಿಯನ್ನಾಗಿ ಮತ್ತು ಸೌಭಾಗ್ಯಯುಕ್ತೆಯನ್ನಾಗಿ ಮಾಡು. (ಅಸ್ಯಾಂ) ಈ ವಿವಾಹಿತೆಯಾದ ಸ್ತ್ರೀಯಲ್ಲಿ, (ದಶ ಪುತ್ರಾನ್ ಆಧೇಹಿ) ಹತ್ತು ಮಕ್ಕಳನ್ನು ಉತ್ಪನ್ನಮಾಡು. ಮತ್ತು ಸ್ತ್ರೀಯನ್ನೇ ಹನ್ನೊಂದನೆಯವಳೆಂದು ತಿಳಿದುಕೋ, ಓ ನಾರಿ! ನೀನೂ ಕೂಡ ವಿವಾಹಿತನಾದ ಪತಿಯಿಂದ, ಅಥವಾ ನಿಯುಕ್ತರಾದ ಪುರುಷರಿಂದ ಹತ್ತು ಮಕ್ಕಳನ್ನು ಉತ್ಪನ್ನಮಾಡು. (ಪತಿಂ ಏಕಾದಶಂ ಕೃಧಿ) ಮತ್ತು ಪತಿಯನ್ನೇ ಹನ್ನೊಂದನೆಯವನೆಂದು ತಿಳಿದುಕೋ.

ವೇದದ ಈ ಆಜ್ಞೆಯಂತೆ ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯವರ್ಣೀಯರಾದ ಸ್ತ್ರೀಯರು ಮತ್ತು ಪುರುಷರು ಹತ್ತಕ್ಕಿಂತ[೨೦] ಹೆಚ್ಚು ಜನ ಮಕ್ಕಳಿಗೆ ಜನ್ಮಕೊಡಬಾರದು. ಏಕೆಂದರೆ, ಹೆಚ್ಚು ಉತ್ಪಾದನೆ ಮಾಡುವುದರಿಂದ ಮಕ್ಕಳು ದುರ್ಬಲರೂ, ಬುದ್ಧಿಹೀನರೂ, ಅಲ್ಪಾಯುಗಳೂ ಆಗುತ್ತಾರೆ. ಮತ್ತು ಸ್ತ್ರೀಯರೂ ಮತ್ತು ಪುರುಷರೂ ಕೂಡ ನಿರ್ಬಲರೂ, ಅಲ್ಪಾಯುಗಳೂ, ಮತ್ತು ರೋಗಿಗಳೂ ಆಗಿ, ವೃದ್ಧಾಪ್ಯದಲ್ಲಿ ಬಹಳ ದುಃಖಗಳಿಗೆ ಈಡಾಗುತ್ತಾರೆ.

---

೧೯. ಎಂದರೆ, ವಿಧವೆಯೊಡನೆ, ಕುಮಾರನ; ಅಥವಾ ವಿಧುರನೊಡನೆ ಕುಮಾರಿಯ ನಿಯೋಗವಾಗಬಾರದೆಂದು ಇಲ್ಲಿ ಅಭಿಪ್ರಾಯ.– ಸಂ

೨೦. ನಿಯುಕ್ತ ಸ್ತ್ರೀ–ಪುರುಷರು. –ಸಂ.

೨೧. ಇದರೊಳಗೆ ನಮಗೆ ಬೇಕಾದ ಮಿತಿಯನ್ನು ದಂಪತಿಗಳು ತಮ್ಮ ದೇಶ, ಕಾಲ, ಆರ್ಥಿಕ, ಸಾಮಾಜಿಕ, ಪರಿಸ್ಥಿತಿ ಇತ್ಯಾದಿಗಳಿಗನುಸಾರವಾಗಿ ನಿರ್ಧರಿಸಿಕೊಳ್ಳಬೇಕು.

## ಕೇವಲ ಆಪದ್ಧರ್ಮವಾದ ನಿಯೋಗ

**ಪ್ರಶ್ನೆ :–** ಈ ನಿಯೋಗದ ವಿಷಯ ವ್ಯಭಿಚಾರದಂತೆ ಕಾಣುತ್ತದೆ.

**ಉತ್ತರ:–** ಹೇಗೆ ವಿವಾಹಿತರಾಗದವರ ದೇಹ–ಸಂಗ ವ್ಯಭಿಚಾರವೆನಿಸುತ್ತದೋ, ಹಾಗೆ ನಿಯುಕ್ತರಾಗದವರ ದೇಹಸಂಗ ವ್ಯಭಿಚಾರವಾಗುತ್ತದೆ, ಹೇಗೆ ನಿಯಮಪೂರ್ವಕ ವಿವಾಹಿತರಾದ ಮೇಲೆ ಸ್ತ್ರೀ–ಪುರುಷರ ದೇಹಸಂಗ ವ್ಯಭಿಚಾರವೆನ್ನಿಸದೋ, ಹಾಗೆಯೇ ನಿಯಮಪೂರ್ವಕವಾಗಿ ನಿಯೋಗಮಾಡಿಕೊಳ್ಳುವುದರಿಂದ ವ್ಯಭಿಚಾರವೆನ್ನಿಸದು–ಎಂದು ಇದರಿಂದ ಸಿದ್ಧವಾಗುತ್ತದೆ. ಬೇರೆಯೊಬ್ಬನ ಕನ್ಯೆಯೊಂದಿಗೆ ಮತ್ತೊಬ್ಬನ ಕುಮಾರನ ವಿವಾಹ ಶಾಸ್ತ್ರೋಕ್ತವಾದ ವಿಧಿಯಂತೆ ನಡೆದ ಮೇಲೆ ಆ ನವದಂಪತಿಗಳ ಸಮಾಗಮದಲ್ಲಿ ಹೇಗೆ ವ್ಯಭಿಚಾರ, ಪಾಪ ಅಥವಾ ಲಜ್ಜೆ ಉಂಟಾಗದೋ, ಹಾಗೆಯೇ ಶಾಸ್ತ್ರೋಕ್ತವಾದ ನಿಯೋಗದಲ್ಲಿ ವ್ಯಭಿಚಾರ, ಪಾಪ ಅಥವಾ ಲಜ್ಜೆಯುಂಟಾಗುವುದೆಂದು ಭಾವಿಸಬಾರದು.

**ಪ್ರಶ್ನೆ:–** ಸರಿ, ಎಂದೇನೋ ತೋರುತ್ತದೆ. ಆದರೆ, ಇದು ವೇಶ್ಯೆಯರಿಗೆ ತಕ್ಕ ನಡವಳಿಕೆಯಂತೆ ತೋರುತ್ತದಲ್ಲ!

**ಉತ್ತರ :–** ಹಾಗಲ್ಲ. ಏಕೆಂದರೆ, ವೇಶ್ಯೆಯ ಸಮಾಗಮದಲ್ಲಿ ಯಾವನೇ ನಿಶ್ಚಿತ ಪುರುಷನಾಗಲಿ, ಅಥವಾ ಯಾವುದೇ ನಿಯಮವಾಗಲಿ ಇರುವುದಿಲ್ಲ. ಆದರೆ, ನಿಯೋಗದಲ್ಲಿ ವಿವಾಹದಂತೆಯೇ ನಿಯಮವಿದೆ. ಹೇಗೆ ವಿವಾಹಪೂರ್ವಕವಾಗಿ ಬೇರೆಯವನಿಗೆ ಕನ್ಯೆಯನ್ನು ಕೊಡುವುದರಲ್ಲಿ, ಹಾಗೂ, ಅವಳು ಅವನೊಂದಿಗೆ ಸಹಬಾಳ್ವೆ ಮಾಡುವುದರಲ್ಲಿ ಅಪ್ರೀತಿ ತೋರುವುದಿಲ್ಲವೋ, ಹಾಗೆಯೇ ನಿಯೋಗದಲ್ಲಿಯೂ ಅಪ್ರೀತಿಗೆ ಆಸ್ಪದವಿರುವುದಿಲ್ಲ. ಯಾವ ಪುರುಷನು ಅಥವಾ ಸ್ತ್ರೀಯು ವ್ಯಭಿಚಾರಿಗಳಾಗಿರುತ್ತಾರೋ, ಅವರು ವಿವಾಹಿತರಾದ ಮೇಲೆಯಾದರೂ ದುಷ್ಕರ್ಮದಿಂದ ದೂರವಿರುತ್ತಾರೇನು?

**ಪ್ರಶ್ನೆ :–** ನಮಗೆ ನಿಯೋಗದ ವಿಷಯದಲ್ಲಿ ಪಾಪವಿದೆ – ಎಂದು ತೋರುತ್ತದೆಯಲ್ಲ!

**ಉತ್ತರ :–** ನಿಯೋಗದ ಬಗೆಗೆ ಪಾಪವಿದೆ – ಎಂದು ನೀವು ಗ್ರಹಿಸುವಿರಾದರೆ, ವಿವಾಹದಲ್ಲಿ ಪಾಪವಿದೆ–ಎಂದೇಕೆ ಒಪ್ಪಿಕೊಳ್ಳುವುದಿಲ್ಲ? ಪಾಪವಿರುವುದು ನಿಯೋಗವನ್ನು ತಡೆಗಟ್ಟುವುದರಲ್ಲಿ. ಏಕೆಂದರೆ – ಈಶ್ವರನ ಸೃಷ್ಟಿಕ್ರಮಾನುಕೂಲವಾದ ಸ್ತ್ರೀ–ಪುರಷರ ಸ್ವಾಭಾವಿಕವಾದ ವ್ಯವಹಾರವು ವೈರಾಗ್ಯವಂತರೂ, ಪೂರ್ಣವಿದ್ವಾಂಸರೂ ಆದ ಯೋಗಿಗಳನ್ನು ಬಿಟ್ಟು ಅನ್ಯರಿಂದ ನಿರೋಧಿಸಲು ಶಕ್ಯವೇ ಅಲ್ಲ. ಗರ್ಭಪಾತವೆಂಬ ಭ್ರೂಣಹತ್ಯೆಯನ್ನೂ, ವಿಧವಾ ಸ್ತ್ರೀಯರ ಮತ್ತು ವಿಧುರ ಪುರುಷರ ಮಹಾಸಂತಾಪವನ್ನೂ ನೀವು ಪಾಪವೆಂದು ಎಣಿಸುವುದಿಲ್ಲವೇ? ಏಕೆಂದರೆ, ಎಲ್ಲಿಯವರೆಗೆ ಅವರು ಯುವಾವಸ್ಥೆಯಲ್ಲಿರುತ್ತಾರೋ, ಅಲ್ಲಿಯವರೆಗೆ ಮನದಲ್ಲಿ ಸಂತಾನೋತ್ಪತ್ತಿಯ ಮತ್ತು ವಿಷಯದ ಅಪೇಕ್ಷೆಯುಳ್ಳವರಾಗಿರುತ್ತಾರೆ. ಅವರನ್ನು ಯಾವುದಾದರೂ ರಾಜನಿಯಮದಿಂದ ಅಥವಾ ಸಾಮಾಜಿಕ ಬಂಧನದಿಂದ ತಡೆಗಟ್ಟಿದರೆ, ಗುಪ್ತ–ಗುಪ್ತವಾಗಿ ದುಷ್ಕರ್ಮಗಳು ದುಷ್ಚಾರಿತ್ರದ ಮೂಲಕ ನಡೆಯುತ್ತಾ ಹೋಗುತ್ತವೆ.

ಈ ವ್ಯಭಿಚಾರ ಮತ್ತು ಕುಕರ್ಮವನ್ನು ತಡೆಯುವುದಕ್ಕೆ ಇದೊಂದೇ ಶ್ರೇಷ್ಠವಾದ ಉಪಾಯವಾಗಿದೆ. ಯಾರು ಜಿತೇಂದ್ರಿಯರಾಗಿರಬಲ್ಲರೋ, ಅವರು ನಿಯೋಗ ಮಾತ್ರವೇ ಏಕೆ, ವಿವಾಹವನ್ನೂ ಕೂಡ ಮಾಡಿಕೊಳ್ಳದಿದ್ದರೂ ಸರಿಯೇ. ಆದರೆ, ಯಾರು ಹೀಗೆ (ಜಿತೇಂದ್ರಿಯರಾಗಿ) ಇಲ್ಲವೋ, ಅವರ ವಿವಾಹ ಮತ್ತು ಆಪತ್ಕಾಲದಲ್ಲಿ ನಿಯೋಗ ಅವಶ್ಯವಾಗಿ ಆಗಬೇಕು. ಇದರಿಂದ ವ್ಯಭಿಚಾರ ಕಡಿಮೆಯಾಗುವುದು ಮತ್ತು ಪ್ರೇಮದಿಂದ ಉತ್ತಮವಾದ ಸಂತತಿ ಉದ್ಭವಿಸಿ, ಮಾನವರ ಸಂವರ್ಧನ ಸಂಭವವಾಗಿರುತ್ತದೆ. ಮತ್ತು ಗರ್ಭಹತ್ಯೆ ಸರ್ವಥಾ ನಿಂತುಹೋಗುತ್ತದೆ.

ನೀಚಪುರುಷರೊಂದಿಗೆ ಉತ್ತಮಸ್ತ್ರೀಯರ ಮತ್ತು ವೇಶ್ಯೆಯರೇ ಮೊದಲಾದ ನೀಚ ಸ್ತ್ರಿಯರೊಂದಿಗೆ ಉತ್ತಮಪುರುಷರ ವ್ಯಭಿಚಾರವೆಂಬ ದುಷ್ಕರ್ಮವು ಉತ್ತಮ ಕುಲದಲ್ಲಿ ಕಳಂಕವನ್ನೂ, ವಂಶದ ಉಚ್ಛೇದವನ್ನೂ, ಸ್ತ್ರೀ–ಪುರುಷರಿಗೆ ಸಂತಾಪವನ್ನೂ, ಮತ್ತು ಗರ್ಭಹತ್ಯೆಯೇ ಮೊದಲಾದ ದುಷ್ಪ್ರವೃತ್ತಿಗಳನ್ನೂ ತಂದೊಡ್ಡುತ್ತದೆ. ವಿವಾಹದಿಂದ ಮತ್ತು ನಿಯೋಗದಿಂದ ಅವು ದೂರವಾಗುತ್ತವೆ. ಆದುದರಿಂದ, ನಿಯೋಗದ ಅಂಗೀಕಾರವು ಸಂಗತವಾಗಿದೆ.

**ಪ್ರಶ್ನೆ :–** ನಿಯೋಗದಲ್ಲಿ ಯಾವ ಯಾವ ನಿಯಮಗಳಿರಬೇಕು?

**ಉತ್ತರ:–** ವಿವಾಹವು ಹೇಗೆ ಪ್ರಸಿದ್ಧವಾಗಿಯೇ ನಡೆಯುತ್ತದೋ, ಹಾಗೆಯೇ ನಿಯೋಗವೂ ಪ್ರಸಿದ್ಧವಾಗಿಯೇ ನಡೆಯಬೇಕು. ಹೇಗೆ ವಿವಾಹದಲ್ಲಿ ಭದ್ರಪುರುಷರ ಅನುಮತಿ ಮತ್ತು ಕನ್ಯಾ–ವರರ ಪ್ರಸನ್ನತೆಯಿರುತ್ತದೋ, ಹಾಗೆಯೇ

ನಿಯೋಗದಲ್ಲಿಯೂ ಇರಬೇಕು. ಯಾವಾಗ ಸ್ತ್ರೀ-ಪುರುಷರ ನಿಯೋಗವಾಗಬೇಕಾಗಿರುತ್ತದೋ, ಆಗ ತಮ್ಮ ತಮ್ಮ ಕುಟುಂಬದಲ್ಲಿ, ಪುರುಷರ ಹಾಗೂ ಸ್ತ್ರೀಯರ ಮುಂದೆ – "ನಾವಿಬ್ಬರೂ ಸಂತಾನೋತ್ಪತ್ತಿಗಾಗಿ ನಿಯೋಗ ಮಾಡಿಕೊಳ್ಳುತ್ತೇವೆ. ಯಾವ ನಿಯೋಗದ ಉದ್ದೇಶ್ಯ ಸಿದ್ಧಿಸುವುದೋ, ಆಗ ನಾವು ದೇಹಸಂಗ ಮಾಡುವುದಿಲ್ಲ. ನಾವು ಇದಕ್ಕೆ ಪ್ರತಿಕೂಲವಾಗಿ ನಡೆದುಕೊಂಡಲ್ಲಿ, ಪಾಪಿಗಳೂ ಮತ್ತು ಸಮಾಜದ ಹಾಗೂ ರಾಜ್ಯದ ಕಡೆಯಿಂದ ದಂಡನೀಯರೂ ಆಗುವೆವು. ತಿಂಗಳಿಗೆ ಒಂದು ಸಾರಿ ಗರ್ಭಾಧಾನ ವಿಧಿಯನ್ನು ಅನುಸರಿಸುವೆವು. ಗರ್ಭನಿಂತಮೇಲೆ ಒಂದು ವರ್ಷ ಪರ್ಯಂತ ಬೇರೆ ಬೇರೆ ಇರುವೆವು" – ಎಂದು ಘೋಷಿಸಬೇಕು.

**ಪ್ರಶ್ನೆ :**– ನಿಯೋಗ ಸ್ವವರ್ಣದಲ್ಲಿಯೇ ಆಗಬೇಕೋ, ಅಥವಾ ಬೇರೆ ವರ್ಣಗಳೊಂದಿಗೂ ಆಗಬಹುದೋ?

**ಉತ್ತರ:**– ಸ್ವವರ್ಣದಲ್ಲಿನ ಅಥವಾ ತನ್ನದಕ್ಕಿಂತ ಉತ್ತಮರಾದ ವರ್ಣದ ಪುರುಷರೊಂದಿಗೆ ಆಗಬೇಕು. ಎಂದರೆ, ವೈಶ್ಯ ಸ್ತ್ರೀಯು ವೈಶ್ಯ, ಕ್ಷತ್ರಿಯ ಹಾಗೂ ಬ್ರಾಹ್ಮಣ ವರ್ಣದ ಪುರುಷನೊಂದಿಗೆ, ಕ್ಷತ್ರಾಣಿಯು ಕ್ಷತ್ರಿಯ ಹಾಗೂ ಬ್ರಾಹ್ಮಣವರ್ಣದ ಪುರುಷನೊಂದಿಗೆ ಮತ್ತು ಬ್ರಾಹ್ಮಣಿಯು ಬ್ರಾಹ್ಮಣವರ್ಣದವನೊಂದಿಗೆ ನಿಯೋಗ ಮಾಡಿಕೊಳ್ಳಬಹುದು. ಇದರ ತಾತ್ಪರ್ಯವೇನೆಂದರೆ ವೀರ್ಯವು ಸಮಾನ ವರ್ಣಕ್ಕೆ ಅಥವಾ ಉತ್ತಮ ವರ್ಣಕ್ಕೆ ಸೇರಿದುದಾಗಿರಬೇಕು; ತನಗಿಂತ ಕೆಳಗಿನ ವರ್ಣಕ್ಕೆ ಸೇರಿದುದಾಗಿರಬಾರದು.[೨೨] ಸ್ತ್ರೀಯ ಮತ್ತು ಪುರುಷನ ಸೃಷ್ಟಿಯ ಉದ್ದೇಶ್ಯವೇ ಧರ್ಮಾನುಸಾರವಾಗಿ, ಎಂದರೆ ವೇದೋಕ್ತ ರೀತಿಯಲ್ಲಿ ವಿವಾಹದಿಂದ, ಅಥವಾ ಆಪತ್ಕಾಲದಲ್ಲಿ ನಿಯೋಗದಿಂದ ಸಂತಾನೋತ್ಪತ್ತಿ ಮಾಡುವುದೇ ಆಗಿದೆ.

**ಪ್ರಶ್ನೆ:**– ಪುರುಷನಿಗೆ ನಿಯೋಗದ ಆವಶ್ಯಕತೆ ಏನಿದೆ? ಏಕೆಂದರೆ, ಅವನು ಎರಡನೆಯ ವಿವಾಹ ಮಾಡಿಕೊಳ್ಳುವನಲ್ಲ!

**ಉತ್ತರ:**– ವೇದಗಳೇ ಮೊದಲಾದ ಶಾಸ್ತ್ರಗಳಲ್ಲಿ, ದ್ವಿಜರಲ್ಲಿ ಒಂದೇ ಸಾರಿ ವಿವಾಹವಾಗುವುದರ ಉಲ್ಲೇಖವಿದೆ; ಎರಡನೆಯದರ ಪ್ರಶ್ನೆಯೇ ಇಲ್ಲ–ಎಂದು ನಾವು ಬರೆದೇ ಇದ್ದೇವೆ. ಕುಮಾರನೊಂದಿಗೆ ಕೇವಲ ಕುಮಾರಿಯ ವಿವಾಹವಾಗುವುದರಲ್ಲಿಯೇ ನ್ಯಾಯ ಮತ್ತು ವಿಧವಾ ಸ್ತ್ರೀಯೊಂದಿಗೆ ಕುಮಾರನಾದ ಪುರುಷನ ಮತ್ತು ಕುಮಾರಿಯಾದ ಸ್ತ್ರೀಯೊಂದಿಗೆ ವಿಧುರನಾದ ಪುರುಷನ ವಿವಾಹವಾಗುವುದರಲ್ಲಿ ಅನ್ಯಾಯ, ಎಂದರೆ ಅಧರ್ಮವಿದೆ. ಹೇಗೆ ವಿಧವೆಯೊಂದಿಗೆ ಕುಮಾರನಾದ ಪುರುಷನು ವಿವಾಹ ಮಾಡಿಕೊಳ್ಳಲು ಇಚ್ಛಿಸುವುದಿಲ್ಲವೋ, ಹಾಗೆಯೇ ವಿವಾಹಿತನಾದ ಮತ್ತು ಸ್ತ್ರೀಸಮಾಗಮ ಮಾಡಿರುವ ಪುರುಷನೊಂದಿಗೆ ವಿವಾಹ ಮಾಡಿಕೊಳ್ಳಲು ಕುಮಾರಿಯೂ ಇಚ್ಛಿಸುವುದಿಲ್ಲ. ಯಾವಾಗ ವಿವಾಹಿತನಾದ ಪುರುಷನನ್ನು ಯಾವ ಕುಮಾರಿಯೂ ಮತ್ತು ವಿಧವೆಯನ್ನು ಯಾವ ಕುಮಾರನೂ ಅಂಗೀಕರಿಸುವುದಿಲ್ಲವೋ, ಆಗ ಪುರುಷನಿಗೆ ಮತ್ತು ಸ್ತ್ರಿಯಳಿಗೆ ನಿಯೋಗ ಮಾಡಿಕೊಳ್ಳುವ ಆವಶ್ಯಕತೆಯುಂಟಾಗುವುದು; ಮತ್ತು ಎಂತಹ ಪುರುಷನೋ, ಅಂತಹವಳೇ ಆದ ಸ್ತ್ರೀಯ ಸಂಬಂಧವಾಗಬೇಕು–ಎನ್ನುವುದೇ ಧರ್ಮ.

**ಪ್ರಶ್ನೆ :**– ಹೇಗೆ ವಿವಾಹಕ್ಕೆ ವೇದಗಳೇ ಮೊದಲಾದ ಶಾಸ್ತ್ರಗಳ ಪ್ರಮಾಣವಿದೆಯೋ, ಹಾಗೆಯೇ ನಿಯೋಗಕ್ಕೂ ಪ್ರಮಾಣವಿದೆಯೋ ಅಥವಾ ಇಲ್ಲವೋ?

**ಉತ್ತರ :**– ಈ ವಿಷಯದಲ್ಲಿ ಬಹು ಪ್ರಮಾಣಗಳಿವೆ. ನೋಡಿರಿ ಮತ್ತು ಆಲಿಸಿರಿ:–

**ಕುಹ ಸ್ವಿದ್ದೋಷಾ ಕುಹ ವಸ್ತೋರಶ್ವಿನಾ ಕುಹಾಭಿಪಿತ್ವಂ ಕರತಃ ಕುಹೋಷತುಃ ।**

**ಕೋ ವಾಂ ಶಯುತ್ರಾ ವಿಧವೇವ ದೇವರಂ ಮರ್ಯಂನ ಯೋಷಾ ಕೃಣತೇ ಸಧಸ್ಥ ಆ ।** (ಋಗ್ವೇದ:– ೧೦.೪೦.೨)

**ಉದೀರ್ಷ್ವ ನಾರ್ಯಭಿ ಜೀವಲೋಕಂ ಗತಾಸುಮೇತಮುಪ ಶೇಷ ಏಹಿ ।**

**ಹಸ್ತಗ್ರಾಭಸ್ಯ ದಿಧಿಷೋಸ್ತವೇದಂ ಪತ್ಯುರ್ಜನಿತ್ವಮಭಿ ಸಂ ಬಭೂಥ ॥** (ಋಗ್ವೇದ :– ೧೦.೧೮.೮)

---

೨೨. 'ಈ ಬಗ್ಗೆ ಋಗ್ವೇದಾದಿ– ಭಾಷ್ಯ ಭೂಮಿಕಾ'ದ ನಿಯೋಗ ವಿಷಯಕ ಅಧ್ಯಾಯದಲ್ಲಿ ಸ್ಪಷ್ಟೀಕರಣ ಕೊಡಲಾಗಿದೆ.

* ಋಗ್ವೇದದ ಈ ಮಂತ್ರದ ಬಗೆಗೆ

**ಅರ್ಥ:** – ಎಲ್ಲೈ "(ಅಶ್ವಿನಾ) ನರನಾರಿಯರೇ ಹೇಗೆ (ದೇವರಂ) ದೇವರನನ್ನು, (ವಿಧವಾ) ವಿಧವೆಯು ಮತ್ತು (ಯೋಷಾ ಮರ್ಯಂ ನ) ವಿವಾಹಿತೆಯಾದ ನಾರಿ ತನ್ನ ಪತಿಯನ್ನು, (ಸಧಸ್ಥೇ ಆ ಕೃಣುತೇ ಇವ) ತನ್ನ ಹಾಸಿಗೆಯಲ್ಲಿ ಸಹಸ್ಥಾನೀಯನನ್ನಾಗಿ ಮಾಡಿಕೊಂಡು ಉತ್ತಮ ರೀತಿಯಿಂದ ಸಂತಾನೋತ್ಪಾದನ ಮಾಡುತ್ತಾರೋ ಹಾಗೆ ನೀವಿಬ್ಬರೂ ಸ್ತ್ರೀ–ಪುರುಷರು (ಕುಹಸ್ವಿತ್ ದೋಷಾ) ಎಲ್ಲಿ ರಾತ್ರಿಯನ್ನು ಕಳೆದಿರಿ? (ಕುಹ ವಸ್ತೋಃ) ಎಲ್ಲಿ ಹಗಲು ತಂಗಿದ್ದಿರಿ? (ಕುಹ ಅಭಿಪಿತ್ವಂ) ಎಲ್ಲಿ ಭೋಗ್ಯ ವಸ್ತುಗಳನ್ನು (ಕರತಃ) ಗಳಿಸಿದಿರಿ? ಮತ್ತು (ಕುಹ ಊಷತುಃ) ಯಾವಾಗ, ಎಲ್ಲಿ ವಾಸಿಸುತ್ತಿದ್ದಿರಿ? (ವಾಂ ಶಯುತ್ರಾ) ನಿಮ್ಮ ಶಯನ ಸ್ಥಾನ, (ಕಃ) ಎಲ್ಲಿದೆ? ಹಾಗೂ ನೀವು ಯಾರು ಮತ್ತು ಯಾವ ದೇಶದ ನಿವಾಸಿಗಳು?" ಇದರಿಂದ, ದೇಶವಿದೇಶಗಳಲ್ಲಿಯೂ ಪತಿ–ಪತ್ನಿಯರು ಜೊತೆಯಲ್ಲಿಯೇ ಇರಬೇಕು. ಮತ್ತು ವಿವಾಹಿತ ಪತಿಯೊಂದಿಗೆ ಮಾಡುವಂತೆ, ನಿಯುಕ್ತ ಪತಿಯನ್ನು ಗ್ರಹಿಸಿ ವಿಧವಾ ಸ್ತ್ರೀಯೂ ಕೂಡ ಸಂತಾನೋತ್ಪತ್ತಿ ಮಾಡಿಕೊಳ್ಳಬಹುದೆಂಬುದು ಸಿದ್ಧವಾಯಿತು.

**ಪ್ರಶ್ನೆ** :– ಯಾವನಿಗಾದರೂ ತಮ್ಮನೇ ಇಲ್ಲದಿದ್ದರೆ, ವಿಧವೆಯು ಯಾವನೊಂದಿಗೆ ನಿಯೋಗ ಮಾಡಿಕೊಳ್ಳಬೇಕು?

**ಉತ್ತರ**:– ದೇವರನೊಂದಿಗೆ; ಆದರೆ, 'ದೇವರ' – ಶಬ್ದದ ಅರ್ಥ ನೀವು ತಿಳಿದಿರುವಂತೆ 'ಮೈದುನ' ಎಂದೇ ಅಲ್ಲ. ನೋಡಿರಿ, ನಿರುಕ್ತದಲ್ಲಿ:–

**ದೇವರಂ ಕಸ್ಮಾತ್ ದ್ವಿತೀಯೋ ವರ ಉಚ್ಯತೇ ॥** (ನಿರುಕ್ತ :– ೩.೧೫)

ಯಾವನು ವಿಧವೆಯ ದ್ವಿತೀಯ ಪತಿಯಾಗುತ್ತಾನೋ, ಅವನನ್ನೇ **'ದೇವರ'**ನೆನ್ನುತ್ತಾರೆ. ಪತಿಯ ತಮ್ಮನಾಗಿರಲಿ, ಅಣ್ಣನಾಗಿರಲಿ, ಇಲ್ಲವೇ ತನ್ನ ವರ್ಣದ ಅಥವಾ ತನ್ನದಕ್ಕಿಂತ ಉತ್ತಮವಾದ ವರ್ಣದ ಯಾವನೇ ಪುರುಷನಾಗಿರಲಿ; ಯಾವನೊಂದಿಗೆ ನಿಯೋಗ ಮಾಡಿಕೊಳ್ಳುವಳೋ ಅವನಿಗೇ ದೇವರನೆಂದು ಹೆಸರು.

"(ನಾರಿ!) ಓ ಸ್ತ್ರೀ! (ಗತಾಸುಂ ಏತಂ) ಈ ಮೃತನಾದ ಪತಿಯ ಆಸೆಯನ್ನು ಬಿಟ್ಟು, (ಶೇಷೇ) ಉಳಿದವರಲ್ಲಿ, (ಜೀವಲೋಕಂ ಅಭಿ) ಜೀವಂತನಾಗಿರುವ ಎರಡನೆಯ ಪತಿಯನ್ನು, (ಉಪೈಹಿ) ಪಡೆದುಕೋ. ಮತ್ತು, (ಉದೀರ್ಷ್ವ) ಈ ವಿಷಯವನ್ನು ಆಲೋಚಿಸು ಮತ್ತು ನಿರ್ಧರಿಸು. (ಹಸ್ತಗ್ರಾಭಸ್ಯ ದಧಿಷೋಃ). ವಿಧವೆಯಾದ ನಿನ್ನ ಕೈಯನ್ನು ಮತ್ತೆ ಹಿಡಿಯುವ ನಿಯುಕ್ತನಾದ ಪತಿಯ ಸಲುವಾಗಿ ನಿಯೋಗವಾಗುವುದಾದರೆ, (ಜನಿತ್ವಂ ಇದಂ) ಹುಟ್ಟಿದ ಈ ಸಂತತಿಯು, (ಪತ್ಯುಃ) ಅದೇ ನಿಯುಕ್ತ ಪತಿಯದಾಗುವುದು. ಮತ್ತು ನೀನು ನಿನಗಾಗಿ ನಿಯೋಗ ಮಾಡಿಕೊಳ್ಳುವೆಯಾದರೆ ಈ ಸಂತತಿ, (ತವ) ನಿನ್ನದಾಗುವುದು, (ಅಭಿ ಸಂ ಬಭೂಥ) ಹೀಗೆ ನಿಶ್ಚಯಯುಕ್ತಳಾಗು. ಮತ್ತು ನಿಯುಕ್ತ ಪುರುಷನೂ ಕೂಡ ಇದೇ ನಿಯಮವನ್ನು ಪಾಲಿಸಲಿ".

**ಅದೇವೃಘ್ನ್ಯ ಪತಿಘ್ನೀ ಹೈಧಿ ಶಿವಾ ಪಶುಭ್ಯಃ ಸುಯಮಾ ಸುವರ್ಚಾಃ ।**

**ಪ್ರಜಾವತೀ ವೀರಸೂರ್ದೇವೃಕಾಮಾ ಸ್ಯೋನೇಮಮಗ್ನಿಂ ಗಾರ್ಹಪತ್ಯಂ ಸಪರ್ಯ ॥** (ಅಥರ್ವ: ೧೪. ೨. ೧೮)

(ಅಪತಿಘ್ನಿ, ಅದೇವೃಘ್ನಿ) ಪತಿಗೂ, ದೇವರನಿಗೂ ದುಃಖವೀಯದ ನಾರಿ! ನೀನು, (ಇಹ) ಈ ಗೃಹಾಶ್ರಮದಲ್ಲಿ, (ಪಶುಭ್ಯಃ) ಪಶುಗಳಿಗೂ, (ಶಿವಾ) ಒಳ್ಳೆಯದನ್ನು ಮಾಡುವವಳೂ, (ಸುಯಮಾ) ಒಳ್ಳೆಯ ರೀತಿಯಲ್ಲಿ ಧರ್ಮ ನಿಯಮಾನುಸಾರ ನಡೆಯುವವಳೂ, (ಸುವರ್ಚಾಃ) ಸುರೂಪವನ್ನೂ, ಸರ್ವಶಾಸ್ತ್ರ ವಿದ್ಯೆಯನ್ನೂ ಹೊಂದಿರುವವಳೂ, (ಪ್ರಜಾವತೀ) ಉತ್ತಮ ಪುತ್ರ ಪೌತ್ರರೇ ಮೊದಲಾದವರಿಂದ ಕೂಡಿರುವವಳೂ, (ವೀರಸೂಃ) ಶೂರ – ವೀರರಾದ ಮಕ್ಕಳನ್ನು ಹೆರುವವಳೂ, (ದೇವೃ –ಕಾಮಾ) ಮೈದುನನನ್ನು ವಾತ್ಸಲ್ಯದಿಂದ ನೋಡುವವಳೂ, (ಸ್ಯೋನಾ) ಸುಖಪ್ರದೆಯೂ ಆಗಿ, (ಏಧಿ) ಆಗಮಿಸು; ಉನ್ನತಿಯನ್ನು ಗಳಿಸು. (ಇಮಂ ಗಾರ್ಹಪತ್ಯಂ) ಗೃಹಕ್ಕೆ ಪಾಲನೆಯನ್ನು ಅಥವಾ ರಕ್ಷಣೆಯನ್ನು ಕೊಡುವ ಈ (ಅಗ್ನಿಂ ಸಪರ್ಯ) ಅಗ್ನಿಹೋತ್ರವನ್ನು ಅನುಷ್ಠಾನ ಮಾಡುತ್ತಿರು.

**ತಾಮನೇನ ವಿಧಾನೇನ ನಿಜೋ ವಿಂದೇತ ದೇವರಃ ॥** (ಮನು:– ೬. ೬೯)

ಅಕ್ಷತಯೋನಿಯಾದ ಸ್ತ್ರೀಯು ವಿಧವೆಯಾಗಿ ಹೋದರೆ, ವಯಸ್ಸಿನಲ್ಲಿ ಅವಳಿಗಿಂತ ಹಿರಿಯವನಾದ ಪತಿಯ ಸ್ವಂತ ತಮ್ಮನೂ ಕೂಡ ಅವಳೊಂದಿಗೆ ವಿವಾಹ ಮಾಡಿಕೊಳ್ಳಬಹುದು.

**ಪ್ರಶ್ನೆ :–** ಓರ್ವನಾರಿ ಅಥವಾ ಒಬ್ಬ ಪುರುಷನು ಎಷ್ಟು ನಿಯೋಗಗಳನ್ನು ಮಾಡಿಕೊಳ್ಳಬಹುದು?

**ಉತ್ತರ :– ಸೋಮಃ ಪ್ರಥಮೋ ವಿವಿದೇ ಗಂಧರ್ವೋ ವಿವಿಧ ಉತ್ತರಃ।**

**ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾಃ॥**

(ಋಗ್ವೇದ. ಮಂ. ೧೦, ಸೂ. ೮೫, ಮಂ. ೪೦)

**ಅರ್ಥ:** ಎಲೈ ಸ್ತ್ರೀ! ಯಾವ (ತೇ) ನಿನ್ನ (..ಥಮಃ) ಮೊದಲಿನ ವಿವಾಹಿತ (ಪತಿಃ) ಪತಿಯು ನನ್ನನ್ನು (ವಿವಿದೇ) ಪ್ರಾಪ್ತನಾಗುತ್ತಾನೋ, ಅವನ ಹೆಸರು (ಸೋಮಃ) ಸುಕುಮಾರತೆ ಮೊದಲಾದ ಗುಣಯುಕ್ತನಾದುದರಿಂದ, 'ಸೋಮ'ನೆಂದೂ, ಯಾವನು ಎರಡನೆಯ ನಿಯೋಗದ ಮೂಲಕ (ವಿವಿದೇ) ಪ್ರಾಪ್ತನಾಗುತ್ತಾನೋ, ಅವರು (ಗಂಧರ್ವಃ) ಒಬ್ಬ ಸ್ತ್ರೀಯೊಡನೆ ಸಂಭೋಗ ಮಾಡುವುದರಿಂದ, 'ಗಂಧರ್ವ'ವೆಂದೂ, ಯಾವನು (ತೃತೀಯ ಉತ್ತರಃ) ಎರಡಾದ ಮೇಲೆ ಮೂರನೆಯ ಪತಿಯಾಗುತ್ತಾನೋ, ಅವನು (ಅಗ್ನಿಃ) ಉತ್ಯುಷ್ಣತಾಯುಕ್ತನಾದುದರಿಂದ, 'ಅಗ್ನಿ' ಸಂಜ್ಞಕನೆಂದೂ, ಮತ್ತು ಯಾರು (ತೇ) ನಿನ್ನ (ತುರೀಯಃ) ನಾಲ್ಕರಿಂದ ಹಿಡಿದು ಹನ್ನೊಂದನೆಯ ತನಕ ನಿಯೋಗದ ಮೂಲಕ ಪತಿಯಾಗುತ್ತಾರೋ, ಅವರು (ಮನುಷ್ಯಜಾಃ) 'ಮನುಷ್ಯ'ರೆಂಬ ಹೆಸರಿನಿಂದ ಕರೆಯಲ್ಪಡುತ್ತಾರೆ.

**ಉತ್ತರ :– "ಇಮಾಂ ತ್ವಮಿಂದ್ರಮೀಢ್ವಃ"**[೨೩] – ಎಂಬ ಪೂರ್ವೋಕ್ತ ಮಂತ್ರದಲ್ಲಿ ಹತ್ತು ಜನ ಮಕ್ಕಳನ್ನು ಪಡೆಯುವವರಿಗೆ ಸ್ತ್ರೀಯು ಹೇಗೆ ನಿಯೋಗ ಮಾಡಿಕೊಳ್ಳಬಹುದೆಂದು ಹೇಳಿದೆಯೋ, ಪುರುಷನೂ ಕೂಡ ಹಾಗೆಯೇ ಹತ್ತು ಜನ ಮಕ್ಕಳಾಗುವವರೆಗೆ ನಿಯೋಗ ಮಾಡಿಕೊಳ್ಳಬಹುದು.[೨೪]

**ದೇವರಾದ್ವಾ ಸಪಂಡಾದ್ವಾ ಸ್ತ್ರಿಯಾ ಸಮ್ಯಕ್ ನಿಯುಕ್ತಯಾ ।**
**ಪ್ರಜೇಪ್ಸಿತಾಧಿಗಂತವ್ಯಾ ಸಂತಾನಸ್ಯ ಪರಿಕ್ಷಯೇ ॥** (ಮನು:– ೯. ೫೯)

**ಜ್ಯೇಷ್ಠೋ ಯವೀಯಸೋ ಭಾರ್ಯಾಂ ಯವೀಯಾನ್ವಾಗ್ರಜಸ್ತ್ರಿಯಮ್ ।**
**ಪತಿತೌ ಭವತೋ ಗತ್ವಾ ನಿಯುಕ್ತಾವಪ್ಯನಾಪದಿ ॥** (ಮನು:– ೯. ೫೮)

**ಔರಸಃ ಕ್ಷೇತ್ರಜಶ್ಚೈವ ॥** (ಮನು:– ೯.೧೫೯)

(ಸಪಿಂಡ) ಎಂದರೆ, ಪತಿಯ ಆರು ಪೀಳಿಗೆಗಳಲ್ಲಿ, ಪತಿಯ ತಮ್ಮನ ಅಥವಾ ಅಣ್ಣನ, ಇಲ್ಲವೇ ಯಾವನಾದರೂ ಸವರ್ಣೀಯನಾದ, ಇಲ್ಲವೇ ತನ್ನದಕ್ಕಿಂತ ಉತ್ತಮ ವರ್ಣಸ್ಥನಾದ ಪುರುಷನೊಂದಿಗೆ, ವಿಧವಾ ಸ್ತ್ರೀಯ ನಿಯೋಗ ಆಗಬೇಕು. **ಆದರೆ, ಆ ವಿಧುರನಾದ ಪುರುಷನು ಮತ್ತು ವಿಧವೆಯಾದ ಸ್ತ್ರೀಯು ಸಂತಾನೋತ್ಪತ್ತಿಯ ಇಚ್ಛೆಯನ್ನು ಹೊಂದಿದ್ದರೆ ಮಾತ್ರ ನಿಯೋಗವಾಗುವುದು ಉಚಿತವಾಗಿರುತ್ತದೆ, ಮತ್ತು ಯಾವಾಗ ಕುಲವೇ ನಾಶವಾಗುವ ಪರಿಸ್ಥಿತಿ ಉಂಟಾಗುತ್ತದೋ, ಆಗಮಾತ್ರ ನಿಯೋಗವಾಗಬೇಕು** – ಎಂದು ಮೊದಲಾಗಿ ಮನುವು ಬರೆದಿದ್ದಾನೆ. (೧).

**ಆಪತ್ಕಾಲದಲ್ಲಿ, ಎಂದರೆ, ಮಕ್ಕಳಾಗುವ ನಂಬಿಕೆಯೇ ಉಳಿಯದಿದ್ದಾಗ, ಅಣ್ಣನ ಪತ್ನಿಯೊಡನೆ, ತಮ್ಮನ, ಹಾಗೂ ತಮ್ಮನ ಪತ್ನಿಯೊಂದಿಗೆ ಅಣ್ಣನ ನಿಯೋಗವಾಗಿ, ಸಂತಾನೋತ್ಪತ್ತಿಯಾದ ಮೇಲೆಯೂ ಕೂಡ, ಪುನಃ ಆ ನಿಯುಕ್ತರು ಪರಸ್ಪರ ಸಮಾಗಮ ಮಾಡಿದರೆ ಪತಿತರಾಗಿ ಹೋಗುವರು**. ಎಂದರೆ, ಎರಡನೆಯ ಮಗುವಿನ[೨೫] ಗರ್ಭವು ಸ್ಥಿತವಾಗುವವರೆಗೆ ಒಂದು ನಿಯೋಗದ

೨೩. ಗುಣ–ಕರ್ಮ–ಸ್ವಭಾವಾನುಸಾರವಾದ ವರ್ಣಗಳ ಜನರಲ್ಲಿಯೂ, ಆಹಾರ–ವಿಹಾರ ಭೇದಗಳಿಂದ ವೀರ್ಯದಲ್ಲಿಯೂ ಗುಣಭೇದ ಉಂಟಾಗುತ್ತದೆ. ಶಾರೀರಿಕ ಶಾಸ್ತ್ರದ ದೃಷ್ಟಿಯಿಂದಲೂ ವೀರ್ಯದಲ್ಲಿನ ಜೀವಾಣು ರಜಸ್ಸಿನಲ್ಲಿರುವ ಅಂಡದಂತೆ ನಿಶ್ಚಲವಾಗಿರದೆ, ಗತಿಯುಕ್ತವಾಗಿರುವ ಕಾರಣ ವೀರ್ಯದ ಪ್ರಾಬಲ್ಯ ಬುದ್ಧಿ ಸಂಗತನೇ ಆಗಿದೆ. ಸ್ತ್ರೀಯು ಹೀಗೆ ಎಂದು ತಾತ್ಪರ್ಯವಲ್ಲ.

೨೪. ಎಂದರೆ ಬಂಜೆ ಸ್ತ್ರೀಯ ಪತಿ ಮತ್ತು ನಪುಂಸಕ ಅಥವಾ ಅಸಮರ್ಥ ಪುರುಷನ ಪತ್ನಿಯ ಸಲುವಾಗಿ –ಸಂ

೨೫. ಮಹಾಭಾರತಕ್ಕನುಸಾರವಾಗಿ, ಚಿತ್ರಾಂಗದನು ಅವಿವಾಹಿತನಾಗಿ ಸತ್ತಮೇಲೆ, ವಿಚಿತ್ರವೀರ್ಯನ ಇಬ್ಬರು ಸ್ತ್ರೀಯರೊಂದಿಗೆ ವ್ಯಾಸರು ನಿಯೋಗ ಮಾಡಿದರು. ಆದರೆ, ಇಲ್ಲಿ ಗ್ರಂಥಕರ್ತರು ಬರೆದಿರುವ ಮಾತು ಅನುಸಂಧನಕ್ಕೆ ಯೋಗ್ಯವಾಗಿದೆ. –ಸಂ

ಅವಧಿಯಿರುತ್ತದೆ. ಆನಂತರ ಸಮಾಗಮ ಮಾಡಬಾರದು. ಮತ್ತು ಇಬ್ಬರ ಸಲುವಾಗಿಯೂ[೨೬] ನಿಯೋಗವಾಗಿದ್ದರೆ, ನಾಲ್ಕನೆಯ ಗರ್ಭವು ಸ್ಥಿತವಾಗುವವರೆಗೆ, ಎಂದರೆ, ಪೂರ್ವೋಕ್ತ ರೀತಿಯಲ್ಲಿ ಹತ್ತು ಮಕ್ಕಳು ಜನಿಸುವವರೆಗೆ ಆಗಬಹುದು, ಆಮೇಲೆ ಅದು ವಿಷಯಾಸಕ್ತಿಯೆಂದು ಎಣಿಸಲ್ಪಡುತ್ತದೆ. ಇದರಿಂದ ಅವರು ಪತಿತರೆಂದು ಗಣಿಸಲ್ಪಡುತ್ತಾರೆ ಮತ್ತು ವಿವಾಹಿತ ಸ್ತ್ರೀ-ಪುರುಷರೂ ಕೂಡ ಹತ್ತನೆಯ ಗರ್ಭಕ್ಕಿಂತ ಹೆಚ್ಚು ಸಮಾಗಮ ಮಾಡಿದರೆ, ಅವರು ಕಾಮಿಗಳೂ ಮತ್ತು ನಿಂದಿತರೂ ಆಗುತ್ತಾರೆ. ತಾತ್ಪರ್ಯವೇನೆಂದರೆ, **ವಿವಾಹ ಅಥವಾ ನಿಯೋಗ ಕೇವಲ ಸಂತಾನದ ಸಲುವಾಗಿಯೇ ಮಾಡಲ್ಪಡುತ್ತದೆ; ಪಶುಗಳಂತೆ ಕಾಮಕ್ರೀಡೆಗಾಗಿ ಅಲ್ಲ.** (೨)

**ಪ್ರಶ್ನೆ :-** ನಿಯೋಗವು (ಪತಿಯ ಅಥವಾ ಪತ್ನಿಯು) ಮರಣಾನಂತರವೇ ಆಗುತ್ತದೋ ಅಥವಾ ಪತಿಯು ಅಥವಾ ಪತ್ನಿಯು ಜೀವಂತರಾಗಿರುವಾಗಲೂ ಆಗುತ್ತದೋ?

**ಉತ್ತರ:-** ಜೀವಂತರಾಗಿರುವಾಗಲೂ ಆಗುತ್ತದೆ:-

**ಅನ್ಯಮಿಚ್ಛಸ್ವ ಸುಭಗೇ ಪತಿಂ ಮತ್ ॥** (ಋಗ್ವೇದ:- ೧೦.೧೦.೧೦)

ಯಾವಾಗ ಪತಿಯು ಸಂತಾನೋತ್ಪತ್ತಿ ಮಾಡಲೂ ಅಸಮರ್ಥನಾಗುತ್ತಾನೋ, ಆಗ ತನ್ನ ಪತ್ನಿಗೆ - "ಓ ಸುಭಗೇ! ಸೌಭಾಗ್ಯವನ್ನು ಬಯಸುವ ನಾರಿ! ನೀನು (ಮತ್) ನನ್ನಿಂದ, (ಅನ್ಯಂ) ಬೇರೆಯವನಾದ, (ಪತಿಂ) ಪತಿಯನ್ನು, (ಇಚ್ಛಸ್ವ) ಬಯಸು. ಏಕೆಂದರೆ, ಈಗ ನನ್ನಿಂದ ಸಂತಾನೋತ್ಪತ್ತಿಯ ನಿರೀಕ್ಷಣೆಯನ್ನು ನೀನು ಮಾಡಲಾಗದು"-ಎಂದು ಅನುಮತಿಯನ್ನು ನೀಡಬೇಕು. (ಆಗ ಸ್ತ್ರೀಯು ವಿಧುರನೊಂದಿಗೆ ನಿಯೋಗ ಮಾಡಿಕೊಂಡು ಸಂತಾನೋತ್ಪಾದನೆಯನ್ನು ಮಾಡಬಹುದು.) ಆದರೆ, ಆ ಮಹದಾಶಯವನ್ನುಳ್ಳ ಪತಿಯ ಸೇವೆಯಲ್ಲಿ ತತ್ಪರಳಾಗಿರಬೇಕು. ಅದೇ ರೀತಿ ಸ್ತ್ರೀಯೂ ಕೂಡ ಯಾವಾಗ ವ್ಯಾಧಿಗಳೇ ಮೊದಲಾದ ದೋಷಗಳಿಂದ ಗ್ರಸ್ತಗಳಾಗಿ ಸಂತಾನೋತ್ಪತ್ತಿಯಲ್ಲಿ ಅಸಮರ್ಥಳಾಗುತ್ತಾಳೋ, ಆಗ ತನ್ನ ಪತಿಗೆ- "ಓ ನಾಥ! ತಾವು ನನ್ನಿಂದ ಸಂತಾನೋತ್ಪತ್ತಿಯ ಇಚ್ಛೆಯನ್ನು ತ್ಯಜಿಸಿ, ಇನ್ನಾವಳಾದರೂ ವಿಧವಾ ಸ್ತ್ರೀಯೊಂದಿಗೆ ನಿಯೋಗ ಮಾಡಿಕೊಂಡು, ಸಂತಾನೋತ್ಪತ್ತಿಯನ್ನು ಮಾಡಿರಿ". - ಎಂದು ಒಪ್ಪಿಗೆಯನ್ನು ಕೊಡಬೇಕು.

ಪಾಂಡು ರಾಜನ ಪತ್ನಿಯರಾದ ಕುಂತೀ ಮತ್ತು ಮಾದ್ರೀ - ಮೊದಲಾದವರು ಹೀಗೆ ಮಾಡಿದರು. ಮತ್ತು ವ್ಯಾಸರು ಚಿತ್ರಾಂಗದ-ವಿಚಿತ್ರವೀರ್ಯರ ಮರಣಾನಂತರ, ತಮ್ಮ ಆ ಸೋದರರ[೨೭] ಪತ್ನಿಯರೊಂದಿಗೆ ನಿಯೋಗ ಮಾಡಿಕೊಂಡು, ಅಂಬಿಕೆಯಲ್ಲಿ ಧೃತರಾಷ್ಟ್ರನನ್ನೂ, ಮತ್ತೂ ಅಂಬಾಲಿಕೆಯಲ್ಲಿ ಪಾಂಡುವನ್ನೂ, ಹಾಗೂ ದಾಸಿಯಲ್ಲಿ ವಿದುರನನ್ನೂ ಉತ್ಪನ್ನಮಾಡಿದರು. ಈ ಮೊದಲಾದ ಇತಿಹಾಸವೂ ಕೂಡ ಈ ಮಾತಿಗೆ ಪ್ರಮಾಣವಾಗಿದೆ.

**ಪ್ರೋಷಿತೋ ಧರ್ಮಕಾರ್ಯಾರ್ಥಂ ಪ್ರತೀಕ್ಷ್ಯೋಽಷ್ಟೌ ನರಃ ಸಮಾಃ ।**

**ವಿದ್ಯಾರ್ಥಂ ಷಡ್ ಯಶೋರ್ಥಂ ವಾ ಕಾಮಾರ್ಥಂ ತ್ರೀನ್‌ಸ್ತು ವತ್ಸರಾನ್ ॥ ೧ ॥** (ಮನು : - ೯.೭೬)

**ವಂಧ್ಯಾಷ್ಟಮೇಽಧಿವೇದ್ಯಾಬ್ದೇ ದಶಮೇ ತು ಮೃತಪ್ರಜಾ ।**

**ಏಕಾದಶೇ ಸ್ತ್ರೀ ಜನನೀ ಸದ್ಯಸ್ತ್ವಪ್ರಿಯವಾದಿನೀ ॥ ೨ ॥** (ಮನು: - ೯.೮೧)

ವಿವಾಹಿತ ಸ್ತ್ರೀಯು ಅವಳ ವಿವಾಹಿತ ಪತಿಯು ಧರ್ಮದ ಪ್ರಯೋಜನದಿಂದ ಪರದೇಶಕ್ಕೆ ಹೋಗಿದ್ದರೆ, ಎಂಟುವರ್ಷ; ವಿದ್ಯಾಭ್ಯಾಸ ಮತ್ತು ಕೀರ್ತಿಗಾಗಿ ಹೋಗಿದ್ದರೆ, ಆರು ವರ್ಷ; ಮತ್ತು ಧನಪ್ರಾಪ್ತಿ ಮೊದಲಾದ ಕಾಮನೆಯಿಂದ ಹೋಗಿದ್ದರೆ, ಮೂರು ವರ್ಷಗಳ ತನಕ (ವಾಪಸಾಗುವ) ದಾರಿ ನೋಡಿದ ನಂತರ, ಸಂತಾನೋತ್ಪತ್ತಿ ಮಾಡಿಕೊಳ್ಳಲಿ. ವಿವಾಹಿತ ಪತಿಯು ವಾಪಸು ಬಂದ ನಂತರ, ನಿಯುಕ್ತ ಪತಿಯು ಬಿಟ್ಟು ಹೋಗಲಿ. (೧)

---

೨೬. ಅರ್ಥ:- ಪತಿತನಾಗಿದ್ದರೂ ದ್ವಿಜನು ಶ್ರೇಷ್ಠನು; ಜಿತೇಂದ್ರಿಯನಾದ ಶೂದ್ರನು ಶ್ರೇಷ್ಠನಲ್ಲ. ಹಾಲನ್ನು ಕೊಡದಿದ್ದರೂ, ಗೋವು ಪೂಜ್ಯ; ಹಾಲನ್ನು ಕೊಡುವ ಕತ್ತೆ ಪೂಜ್ಯವಲ್ಲ.

೨೭. ಅಶ್ವಮೇಧ, ಗೋಮೇಧ, ಸಂನ್ಯಾಸ, ಮಾಂಸ ರಹಿತ ಶ್ರಾದ್ಧ, ದೇವರನಿಂದ ಸಂತೋತ್ಪತ್ತಿ- ಈ ಐದನ್ನೂ ಕಲಿಯುಗದಲ್ಲಿ ವರ್ಜಿಸಬೇಕು. ಪತಿ ಕಳೆದು ಹೋದಾಗ, ಸತ್ತಾಗ, ಸಂನ್ಯಾಸಿಯಾದಾಗ, ನಪುಂಸಕನಾದಾಗ ಮತ್ತು ಧರ್ಮಚ್ಯುತನಾದಾಗ-ಈ ಐದು ಆಪತ್ತುಗಳಲ್ಲಿ ನಾರಿಯರಿಗೆ ಬೇರೆಯ ಪತಿಯ ವಿಧಾನ ವಿದೆ. -ಅನು

ಹೀಗೆಯೇ ಪುರುಷನಿಗಾಗಿಯೂ ನಿಯಮವೇನಿದೆಯೆಂದರೆ-ತನ್ನ (ವಿವಾಹಿತ ಸ್ತ್ರೀಯು) ಬಂಜೆಯಾದರೆ, (ಎಂದರೆ, ವಿವಾಹವಾಗಿ ಎಂಟು ವರ್ಷಗಳತನಕ ಸ್ತ್ರೀಗೆ ಗರ್ಭಸ್ಥಾಪನೆಯಾಗದಿದ್ದರೆ), ಎಂಟನೆಯ; ಸಂತಾನ ಉಂಟಾಗಿ ಅದು ಸತ್ತು ಹೋದರೆ, ಹತ್ತನೆಯ; ಯಾವ - ಯಾವ ಸಂತಾನ ಉಂಟಾಗಿ, ಕೇವಲ ಕನ್ಯೆಗಳೇ ಉತ್ಪನ್ನವಾಗಿ, ಪುತ್ರನು ಉತ್ಪನ್ನನಾಗದಿದ್ದರೆ, ಹನ್ನೊಂದನೆಯ ವರ್ಷದ ತನಕ; ಮತ್ತು ಅವಳು ಅಪ್ರಿಯಭಾಷಿಣಿಯಾಗಿದ್ದರೆ, ಅವಳನ್ನು ತತ್ಕಾಲ ತ್ಯಾಗಮಾಡಿ; ಬೇರೆ ಸ್ತ್ರೀಯೊಂದಿಗೆ ನಿಯೋಗ ಮಾಡಿಕೊಂಡು, ಸಂತಾನೋತ್ಪತ್ತಿ ಮಾಡಿಕೊಳ್ಳಲಿ. (೨)

ಹಾಗೆಯೇ, ಯಾವ ಪುರುಷನು ಅತ್ಯಂತ ದುಃಖದಾಯಕನಾಗಿರುತ್ತಾನೋ, ಅವನನ್ನು ಬಿಟ್ಟುಬಿಟ್ಟು, ಬೇರೆ ಪುರುಷನೊಡನೆ ನಿಯೋಗ ಮಾಡಿಕೊಂಡು, ಸಂತಾನೋತ್ಪತ್ತಿ ಮಾಡಿ, ಅವಿವಾಹಿತ ಪತಿಯ ದಾಯಭಾಗಿಯನ್ನಾಗಿಯೇ ಸಂತಾನವನ್ನು ಮಾಡಿಕೊಳ್ಳುವುದು ಸ್ತ್ರೀಗೆ ಉಚಿತವಾಗಿರುತ್ತದೆ.

ಈ ಮೊದಲಾದ ಪ್ರಮಾಣ ಮತ್ತು ಯುಕ್ತಿಗಳಿಂದ ಸ್ವಯಂವರ ವಿವಾಹ ಮತ್ತು ನಿಯೋಗದ ಮೂಲಕ ತಮ್ಮ-ತಮ್ಮ ಕುಲಗಳ ಉನ್ನತಿ ಮಾಡಿಕೊಳ್ಳಬೇಕು.

ಯಾವ ರೀತಿ **"ಔರಸ",** ಎಂದರೆ ವಿವಾಹಿತ ಪತಿಯಿಂದ ಉತ್ಪನ್ನವಾದ ಪುತ್ರನು ತಂದೆಯ ಸಂಪತ್ತಿಗೆ ಅಧಿಕಾರಿಯಾಗುತ್ತಾನೋ, ಅದೇ ರೀತಿಯಾಗಿ **"ಕ್ಷೇತ್ರಜ"**, ಎಂದರೆ, ನಿಯೋಗದ ಮೂಲಕ ಉತ್ಪನ್ನರಾದ ಪುತ್ರರೂ ಕೂಡ ಮೃತಪಿತನ ದಾಯಭಾಗಿಗಳಾಗುತ್ತಾರೆ. (೩)

ಸ್ತ್ರೀಯು ಮತ್ತು ಪುರುಷನು ರಜಸ್ಸನ್ನು ಮತ್ತು ವೀರ್ಯವನ್ನು ಅಮೂಲ್ಯವೆಂದು ತಿಳಿಯಬೇಕು. ಯಾರೇ ಆಗಲಿ, ಈ ಅಮೂಲ್ಯವಾದ ಪದಾರ್ಥವನ್ನು ಪರಸ್ತ್ರೀಯ, ವೇಶ್ಯೆಯ ಅಥವಾ ದುಷ್ಟ ಪುರುಷರ ಸಂಗದಲ್ಲಿ ಕಳೆದುಕೊಳ್ಳುವುದಾದರೆ, ಅವರು ಮಹಾ ಮೂರ್ಖರಾಗಿರುತ್ತಾರೆ. ಏಕೆಂದರೆ, ರೈತರು ಮತ್ತು ತೋಟಗಾರರು ಮೂರ್ಖರಾಗಿದ್ದರೂ ಕೂಡ ತಮ್ಮ ಹೊಲವನ್ನು ಅಥವಾ ತೋಟವನ್ನು ಬಿಟ್ಟು, ಬೇರೆಯ ಕಡೆ ಬೀಜವನ್ನು ಬಿತ್ತುವುದಿಲ್ಲ. ಸಾಧಾರಣವಾದ ಬೀಜದ ಮತ್ತು ಮೂರ್ಖನ ಸ್ಥಿತಿಯೇ ಹೀಗಿರುವಾಗ ಯಾವನು ಮಾನವ ಶರೀರವೆಂಬ ಸರ್ವೋತ್ತಮ ವೃಕ್ಷದ ಬೀಜವನ್ನು ಕೆಟ್ಟ ಹೊಲದಲ್ಲಿ ಬಿತ್ತಿ ಹಾಳುಮಾಡಿಕೊಳ್ಳುತ್ತಾನೋ, ಅವನು ಮಹಾಮೂರ್ಖನೆನಿಸುತ್ತಾನೆ. ಏಕೆಂದರೆ, ಅದರ ಫಲ ಅವನಿಗೆ ಸಿಕ್ಕುವುದಿಲ್ಲ. ಮತ್ತು **"ಆತ್ಮಾ ವೈಜಾಯತೇ ಪುತ್ರಃ"** - ಇದು ಬ್ರಾಹ್ಮಣ ಗ್ರಂಥದ (ಶತಪಥಃ- ೧೪.೬.೪.೨೬) ವಚನವಾಗಿದೆ.

**ಅಂಗಾದಂಗಾತ್ಸಂಭವಸಿ ಹೃದಯಾದಧಿ ಜಾಯಸೇ ।**

**ಆತ್ಮಾಽಸಿ ಪುತ್ರ ಮಾ ಮೃಥಾಃ ಸ ಜೀವ ಶರದಃ ಶತಮ್ ॥**

ಇದು ಸಾಮವೇದದ (ಬ್ರಾಹ್ಮಣದ) ವಚನ. ಹೇ ಪುತ್ರ! ನೀನು ಅಂಗ-ಅಂಗದಿಂದ ಉತ್ಪನ್ನವಾದ ವೀರ್ಯದಿಂದ ಮತ್ತು ಹೃದಯದಿಂದ ಉದ್ಭವಿಸುತ್ತೀಯೆ. ಆದುದರಿಂದ ನೀನು ನನ್ನ ಆತ್ಮ. ನನಗಿಂತ ಮುನ್ನ ಮೃತನಾಗದಿರು; ಆದರೆ-ನೂರು ವರ್ಷಗಳವರೆಗೆ ಜೀವಿಸು.

**ಯಾವುದರಿಂದ ಇಂತಹ ಮಹಾತ್ಮರುಗಳ ಮತ್ತು ಮಹಾಶಯರುಗಳ ಶರೀರಗಳು ಉತ್ಪನ್ನವಾಗುತ್ತದೋ, ಅದನ್ನು ವೇಶ್ಯೆಯರೇ ಮೊದಲಾದ ದುಷ್ಟಕ್ಷೇತ್ರದಲ್ಲಿ ಬಿತ್ತುವುದು ಅಥವಾ ದುಷ್ಟ ಬೀಜಗಳನ್ನು ಒಳ್ಳೆಯ ಕ್ಷೇತ್ರಗಳಲ್ಲಿ ಬಿತ್ತಿಸುವುದು ಮಹಾಪಾಪದ ಕಾರ್ಯವಾಗಿದೆ.**

**ಪ್ರಶ್ನೆ:-** ವಿವಾಹವನ್ನೇಕೆ ಮಾಡಬೇಕು? ಏಕೆಂದರೆ- ಇದರಿಂದ ಸ್ತ್ರೀ-ಪುರುಷರು ಬಂಧನದಲ್ಲಿ ಬಿದ್ದು, ಬಹಳ ಸಂಕೋಚಪಡಬೇಕಾಗುತ್ತದೆ ಮತ್ತು ದುಃಖವನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ-ಯಾವನ ಪ್ರೀತಿ ಯಾವಳ ಮೇಲೆ ಇರುತ್ತದೋ, ಅವರು ಒಂದಾಗಿರಲಿ; ಯಾವಾಗ ಪ್ರೀತಿ ತೀರಿ ಹೋಗುವುದೋ, ಆಗ ಬಿಟ್ಟುಬಿಡಲಿ.

**ಉತ್ತರ:-** ಇದು ಪಶುಪಕ್ಷಿಗಳ ವ್ಯವಹಾರವಾಗಿದೆ; ಮಾನವರದಲ್ಲ. ಮಾನವರಲ್ಲಿ ವಿವಾಹದ ನಿಯಮವಿಲ್ಲದೇ ಹೋದರೆ, ಗೃಹಾಶ್ರಮದ ಒಳ್ಳೆ-ಒಳ್ಳೆಯ ವ್ಯವಹಾರಗಳೆಲ್ಲಾ ನಷ್ಟ-ಭ್ರಷ್ಟವಾಗಿ ಹೋಗುವುವು. ಯಾರೂ ಯಾರದೇ ಸೇವೆಯನ್ನೂ

ಮಾಡುವುದಿಲ್ಲ ಮತ್ತು ವ್ಯಭಿಚಾರ ಹೆಚ್ಚಿ, ಎಲ್ಲರೂ ರೋಗಿಗಳೂ, ನಿರ್ಬಲರೂ ಮತ್ತು ಅಲ್ಪಾಯುಗಳೂ ಆಗಿ, ಬೇಗ ಬೇಗ ಮೃತರಾಗಿ ಹೋಗುವರು. ಯಾರೂ ಯಾರದೇ ಬಗೆಗೆ ಭಯವನ್ನು ಅಥವಾ ಲಜ್ಜೆಯನ್ನು ಇಟ್ಟುಕೊಳ್ಳುವುದಿಲ್ಲ. ವೃದ್ಧಾವಸ್ಥೆಯಲ್ಲಿ ಯಾರೂ ಯಾರಿಗೂ ಸೇವೆಯನ್ನೂ ಕೂಡ ಮಾಡುವುದಿಲ್ಲ ಮತ್ತು ಈ ರೀತಿ ಕುಲಕ್ಕೆ ಕುಲಗಳೇ ನಾಶವಾಗಿ ಹೋಗುವವು. ಯಾವನೂ ಯಾವನ ಆಸ್ತಿಗೂ ಒಡೆಯ ಅಥವಾ ದಾಯಭಾಗಿಯೂ ಕೂಡ ಆಗಲಾರನು ಮತ್ತು ಯಾವನಿಗೂ, ಯಾವ ಸಂಪತ್ತಿನ ಮೇಲೂ ದೀರ್ಘಕಾಲ ಪರ್ಯಂತ ಸ್ವತ್ವವಿರುವುದಿಲ್ಲ. ಈ ಮೊದಲಾದ ದೋಷಗಳ ನಿವಾರಣಕ್ಕಾಗಿ ವಿವಾಹ ಆಗುವುದೇ ಸರ್ವಥಾ ಯೋಗ್ಯವಾಗಿರುತ್ತದೆ.

ಗೃಹಸ್ಥನು ಇನ್ನೂ ಸಿಕ್ಕದಿರುವ ವಸ್ತುವಿನ ಇಚ್ಛೆ, ಸಿಕ್ಕಿದುದರ ರಕ್ಷಣೆ ಮತ್ತು ರಕ್ಷಿತವಾದುದರ ವೃದ್ಧಿ, ವರ್ಧಿಸಿದ ಧನದ ವ್ಯಯವನ್ನು ದೇಶೋಪಕಾರ ಮಾಡುವುದರಲ್ಲಿ ವಿನಿಯೋಗ ಮಾಡುತ್ತಾ ಇರಬೇಕು. ಸಮಸ್ತ ವಿಧದ, ಎದರೆ-ಪೂರ್ವೋಕ್ತ ರೀತಿಯಿಂದ ತಮ್ಮ ವರ್ಣಾಶ್ರಮದ ವ್ಯವಹಾರಗಳನ್ನೂ, ಅತ್ಯುತ್ಸಾಹಪೂರ್ವಕವಾಗಿ, ಪ್ರಯತ್ನದೊಂದಿಗೆ, ತನು-ಮನ-ಧನ ಗಳಿಂದ ಮತ್ತು ಸರ್ವದಾ ಪರಮಾರ್ಥವನ್ನೂ ಸಾಧಿಸುತ್ತಾ ಹೋಗಬೇಕು. ತನ್ನ ತಾಯಿ, ತಂದೆ, ಮಾವ, ಅತ್ತೆ – ಇವರ ಶುಶ್ರೂಷೆಯನ್ನೂ ಬಹುವಾಗಿ ಮಾಡಬೇಕು. ಮಿತ್ರರು ಮತ್ತು ನೆರೆ-ಹೊರೆಯವರು, ರಾಜರು, ವಿದ್ವಾಂಸರು, ವೈದ್ಯರು ಮತ್ತು ಸತ್ಪುರುಷರೊಂದಿಗೆ ಪ್ರೀತಿಯಿಟ್ಟು, ಮತ್ತು ಯಾವ ದುಷ್ಟರೂ, ಅಧರ್ಮಿಗಳೂ ಇದ್ದಾರೋ, ಅವರ ಬಗೆಗೆ ಔದಾಸೀನ್ಯವನ್ನು ತಾಳಬೇಕು; ಅಥವಾ ದ್ರೋಹವನ್ನು ಬಿಟ್ಟು ಅವರನ್ನು ಸುಧಾರಿಸುವ ಪ್ರಯತ್ನವನ್ನು ಮಾಡುತ್ತಾ ಹೋಗಬೇಕು. ಎಲ್ಲಿಯವರೆಗೆ ಶಕ್ಯವೋ ಅಲ್ಲಿಯವರೆಗೆ ಪ್ರೇಮದಿಂದ ತಮ್ಮ ಸಂತತಿಯನ್ನು ವಿದ್ವಾಂಸರನ್ನಾಗಿ ಮಾಡುವುದರಲ್ಲಿ ಮತ್ತು ಸುಶಿಕ್ಷಣವನ್ನು ಕೊಡುವುದರಲ್ಲಿ-ಕೊಡಿಸುವುದರಲ್ಲಿ, ಧನವೇ ಮೊದಲಾದ ಪದಾರ್ಥಗಳ ವ್ಯಯವನ್ನು ಮಾಡಿ, ಅವರನ್ನು ಪೂರ್ಣ ವಿದ್ವಾಂಸರನ್ನಾಗಿಯೂ, ಸುಶಿಕ್ಷಣಯುಕ್ತರನ್ನಾಗಿಯೂ ಮಾಡಬೇಕು. ಮತ್ತು ಧರ್ಮಯುಕ್ತ ವ್ಯವಹಾರಗಳನ್ನು ಮಾಡಿ, ಯಾವುದರಿಂದ ಪರಮಾನಂದವನ್ನು ಸವಿಯಬಹುದೋ, ಆ ಮೋಕ್ಷದ ಉಪಾಯವನ್ನೂ ಕೂಡ ಮಾಡುತ್ತಾ ಹೋಗಬೇಕು. ಮತ್ತು ಈ ಕೆಳಗಿನದರಂತಹ ಶ್ಲೋಕಗಳನ್ನು ಅಂಗೀಕರಿಸಬಾರದು:-

**ಪತಿತೋಽಪಿ ದ್ವಿಜಃ ಶ್ರೇಷ್ಠೋ ನ ಚ ಶೂದ್ರೋ ಜಿತೇಂದ್ರಿಯಃ ।**

**ನಿರ್ದುಗ್ಧಾಚಾಪಿ ಗೌಃ ಪೂಜ್ಯಾ ನ ಚ ದುಗ್ಧವತೀ ಖರೀ ॥ ೧ ॥**

**ಅಶ್ವಾಲಂಭಂ ಗವಾಲಂಭಂ ಸಂನ್ಯಾಸಂ ಪಲಪೈತ್ರಿಕಮ್ ।**

**ದೇವರಾಚ್ಚ ಸುತೋತ್ಪತ್ತಿಂ ಕಲೌ ಪಂಚ ವಿವರ್ಜಯೇತ್ ॥ ೨ ॥**

**ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ ।**

**ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥ ೩ ॥**

**ಅರ್ಥ:-** ಪತಿತನಾಗಿದ್ದರೂ ದ್ವಿಜನು ಶ್ರೇಷ್ಠನು; ಜಿತೇಂದ್ರಿಯನಾದ ಶೂದ್ರನು ಶ್ರೇಷ್ಠನಲ್ಲ. ಹಾಲನ್ನು ಕೊಡದಿದ್ದರೂ ಗೋವು ಪೂಜ್ಯ; ಹಾಲನ್ನು ಕೊಡುವ ಕತ್ತೆ ಪೂಜ್ಯವಲ್ಲ. (೧)

ಅಶ್ವಮೇಧ, ಗೋಮೇಧ, ಸಂನ್ಯಾಸ, ಮಾಂಸಸಹಿತ ಶ್ರಾದ್ಧ, ದೇವರನಿಂದ ಸಂತಾನೋತ್ಪತ್ತಿ- ಈ ಐದನ್ನೂ ಕಲಿಯುಗದಲ್ಲಿ ವರ್ಜಿಸಬೇಕು. (೨)

ಪತಿ ಕಳೆದು ಹೋದಾಗ, ಸತ್ತಾಗ, ಸಂನ್ಯಾಸಿಯಾದಾಗ, ನಪುಂಸಕನಾದಾಗ ಮತ್ತು ಧರ್ಮಚ್ಯುತನಾದಾಗ, ಈ ಐದು ಆಪತ್ತುಗಳಲ್ಲಿ ನಾರಿಯರಿಗೆ ಬೇರೆಯ ಪತಿಯ ವಿಧಾನವಿದೆ. (೩)

ಇವು ಕಪೋಲಕಲ್ಪಿತ ಪಾರಾಶರಿಯ (೮,೩೩,೪,೩೨) ಶ್ಲೋಕಗಳಾಗಿವೆ. ದುಷ್ಟ ಕರ್ಮ ಮಾಡುವ ದ್ವಿಜನನ್ನು ಶ್ರೇಷ್ಠನೆಂದೂ ಮತ್ತು ಶ್ರೇಷ್ಠ ಕರ್ಮ ಮಾಡುವ ಶೂದ್ರನನ್ನು ನೀಚನೆಂದೂ ಒಪ್ಪುವುದಾದರೆ, ಇದಕ್ಕಿಂತ ಹೆಚ್ಚಿನ ಪಕ್ಷಪಾತ, ಅನ್ಯಾಯ, ಇದಕ್ಕಿಂತ ಬೇರೆಯಾದ ಅಧಿಕ ಅಧರ್ಮ ಏನಿರುವುದು? ಹೇಗೆ ಹಾಲನ್ನು ಕೊಡುವ ಅಥವಾ ಕೊಡದಿರುವ ಹಸು ಗೊಲ್ಲರಿಗೆ ಪಾಲನೀಯವಾಗಿರುತ್ತದೋ, ಹಾಗೆ ಕುಂಬಾರರೇ ಮೊದಲಾದವರಿಗೆ ಹೆಣ್ಣು ಕತ್ತೆ ಪಾಲನೀಯವಾಗಿರುವುದಿಲ್ಲವೇನು? ಮತ್ತು ಈ ದೃಷ್ಟಾಂತವೂ ವಿಷಮವೇ ಆಗಿದೆ. ಏಕೆಂದರೆ-ದ್ವಿಜ ಮತ್ತು ಶೂದ್ರರು ಮಾನವ ಜಾತಿಯವರೇ; ಆದರೆ, ಹಸು ಮತ್ತು ಕತ್ತೆ

ಬೇರೆ ಬೇರೆ ಜಾತಿಯವು. ಹೇಗೆ ಹೇಗೋ ಪಶುಜಾತಿ – ಎಂಬ ದೃಷ್ಟಾಂತದ ಒಂದು ಭಾಗ, ಕೊಟ್ಟಿರುವ ದೃಷ್ಟಾಂತಕ್ಕೆ ಹೊಂದಿಕೊಂಡರೂ ಕೂಡ, ಇದರ ಆಶಯ ಅಯುಕ್ತವಾಗಿರುವುದರಿಂದ, ಈ ಶ್ಲೋಕಗಳು ವಿದ್ವಾಂಸರಿಗೆ ಎಂದಿಗೂ ಮಾನನೀಯವಾಗಲಾರವು. (೧)

ಅಶ್ವಾಲಂಭ – ಎಂದರೆ ಕುದುರೆಯನ್ನು ಕೊಂದು, ಅಥವಾ ಗವಾಲಂಭ – ಎಂದರೆ ಹಸುವನ್ನು ಕೊಂದು ಹೋಮಮಾಡುವುದೇ ವೇದವಿಹಿತವಲ್ಲದಿರುವಾಗಿ, ಕಲಿಯುಗದಲ್ಲಿ ಅದರ ನಿಷೇಧಮಾಡುವುದು ಎಂತಹ ಮೌಢ್ಯ? ಕಲಿಯುಗದಲ್ಲಿ ಈ ನೀಚಕರ್ಮದ ನಿಷೇಧವನ್ನು ಒಪ್ಪುವುದಾದರೆ, ತ್ರೇತಾ–ಮೊದಲಾದವುಗಳಲ್ಲಿ ವಿಧಿ ಸಿದ್ಧವಾಗುವುದು. ಇದರಲ್ಲಿ ದೋಷವೆಂದರೆ–ಇಂತಹ ದುಷ್ಟಕರ್ಮ ಶ್ರೇಷ್ಠವೆಂದು ಭಾವಿಸಲ್ಪಟ್ಟ ಯುಗದಲ್ಲಿ ನಡೆಯುವುದು ಸರ್ವಥಾ ಅಸಂಭವವಾಗಿದೆ. ಮತ್ತು ವೇದಗಳೇ ಮೊದಲಾದ ಶಾಸ್ತ್ರಗಳಲ್ಲಿ ಸಂನ್ಯಾಸದ ವಿಧಿಯಿದೆ; ಅದನ್ನು ನಿಷೇಧಮಾಡುವುದು ಪ್ರಮಾಣರಹಿತವಾಗಿದೆ. ಮಾಂಸದ ನಿಷೇಧವೇ ಇರುವಾಗ ಸದಾಕಾಲಕ್ಕೂ ನಿಷೇಧವೇ ಸರಿ. ದೇವರ (ಮೈದುನ)ನಿಂದ ಸಂತಾನೋತ್ಪತ್ತಿ ಮಾಡುವುದನ್ನು ವೇದಗಳಲ್ಲಿ ಬರೆದಿರುವಾಗ, ಈ ಶ್ಲೋಕ ಕರ್ತೃವು ಕೂಗುತ್ತಾನೆಯಾದರೂ ಏತಕ್ಕೆ? (೨)

(ನಷ್ಟ) ಎಂದರೆ ಪತಿಯು ಯಾವುದೋ ದೇಶ–ದೇಶಾಂತರಕ್ಕೆ ಹೊರಟು ಹೋಗಿದ್ದು, ಮನೆಯಲ್ಲಿ ಸ್ತ್ರೀಯಳು ನಿಯೋಗಮಾಡಿಕೊಂಡು, ಅದೇ ಸಮಯಕ್ಕೆ ವಿವಾಹಿತ ಪತಿಯು ಬಂದು ಬಿಟ್ಟರೆ, ಅವಳು ಯಾರ ಪತ್ನಿಯಾಗಬೇಕು? ಯಾವನಾದರೂ, 'ವಿವಾಹಿತ ಪತಿಯವಳು'–ಎಂದು ಹೇಳುವನಾದರೆ, ನಾವು ಒಪ್ಪಿಕೊಂಡೆವು. ಆದರೆ–ಇಂತಹ ವ್ಯವಸ್ಥೆಯನ್ನು ಪಾರಾಶರಿಯಲ್ಲಿಯಂತೂ ಬರೆದಿಲ್ಲ. ಸ್ತ್ರೀಯ ಆಪತ್ಕಾಲಗಳು ಐದೇ ಇವೆ ಏನು? (ಪತಿ) ರೋಗಿಯಾಗಿರುವುದು, ಅಥರಾ ಜಗಳವಾಗಿರುವುದು – ಈ ಮೊದಲಾದ ಆಪತ್ಕಾಲಗಳು ಐದಕ್ಕಿಂತಲೂ ಅಧಿಕವಾಗಿವೆ. ಆದುದರಿಂದ ಈ ಬಗೆಯ ಶ್ಲೋಕಗಳನ್ನು ಎಂದಿಗೂ ಅಂಗೀಕರಿಸಬಾರದು. (೩)

**ಪ್ರಶ್ನೆ:–** ಏನು ಸ್ವಾಮೀ! ನೀವು ಪರಾಶರ ಮುನಿಯ ವಚನವನ್ನೂ ಕೂಡ ಅಂಗೀಕರಿಸುವುದಿಲ್ಲವೇ?

**ಉತ್ತರ:–** ಯಾರದೇ ವಚನವಾದರೂ ಆಗರಲಿ; ಆದರೆ, ವೇದವಿರುದ್ಧವಾಗಿರುವುದರಿಂದ ಒಪ್ಪುವದಿಲ್ಲ. ಮತ್ತು ಇದು ಪರಾಶರನ ವಚನವೂ ಅಲ್ಲ. ಏಕೆಂದರೆ, "ಬ್ರಹ್ಮೋವಾಚ ವಶಿಷ್ಠ ಉವಾಚ, ರಾಮ ಉವಾಚ, ಶಿವ ಉವಾಚ, ವಿಷ್ಣು ರುವಾಚ, ದೇವ್ಯುವಾಚ" – ಎಂದು ಮೊದಲಾಗಿ ಶ್ರೇಷ್ಠರಾದವರ ಹೆಸರನ್ನು ಬರೆದು, ಸರ್ವರಿಗೂ ಮಾನ್ಯನಾಗಿರುವವನ ಹೆಸರಿನಿಂದ ಈ ಗ್ರಂಥಗಳನ್ನು ಸಮಸ್ತಜಗತ್ತೂ ಒಪ್ಪಿಕೊಳ್ಳಲಿ ಹಾಗು ನಮಗೆ ಸಂಪಾದನೆಯೂ ಪುಷ್ಕಳವಾಗಿ ಆಗಲಿ–ಎಂದು, ಸ್ವಾರ್ಥಿಗಳು ಗ್ರಂಥರಚನೆ ಮಾಡಿಬಿಡುತ್ತಾರೆ. ಇದೇ ಕಾರಣದಿಂದ ಅನರ್ಥ ಆಖ್ಯಾನಯುಕ್ತವಾದ ಗ್ರಂಥಗಳನ್ನು ನಿರ್ಮಿಸುತ್ತಾರೆ. ಸ್ವಲ್ಪ–ಸ್ವಲ್ಪ ಪ್ರಕ್ಷಿಪ್ತವಾದ ಶ್ಲೋಕಗಳನ್ನುಳಿದು, ಮನುಸ್ಮೃತಿ ಮಾತ್ರ ವೇದಾನುಕೂಲವಾಗಿದೆ; ಬೇರೆ ಯಾವ ಸ್ಮೃತಿಯೂ (ವೇದಾನುಕೂಲ) ಆಗಿಲ್ಲ. ಹೀಗೆಯೇ ಬೇರೆ ಕೃತ್ರಿಮ ಗ್ರಂಥಗಳ ವ್ಯವಸ್ಥೆಯನ್ನೂ ತಿಳಿದುಕೊಳ್ಳಿರಿ.

**ಪ್ರಶ್ನೆ:–** ಗೃಹಾಶ್ರಮವು ಎಲ್ಲಕ್ಕಿಂತ ಚಿಕ್ಕದೋ ಅಥವಾ ದೊಡ್ಡದೋ?

**ಉತ್ತರ:–** ತಮ್ಮ ತಮ್ಮ ಕರ್ತವ್ಯ ಕರ್ಮಗಳಲ್ಲಿ ಎಲ್ಲವೂ ದೊಡ್ಡವೇ. ಆದರೆ:–

**ಯಥಾ ನದೀನದಾಃ ಸರ್ವೇ ಸಾಗರೇ ಯಾಂತಿ ಸಂಸ್ಥಿತಿಮ್ ।**
**ತಥೈವಾಶ್ರಮೀಣಃ ಸರ್ವೇ ಗೃಹಸ್ಥೇ ಯಾಂತಿ ಸಂಸ್ಥಿತಿಮ್ ॥ ೧ ॥** (ಮನು:– ೬. ೯೦)

**ಯಥಾ ವಾಯುಂ ಸಮಾಶ್ರಿತ್ಯ ವರ್ತಂತೇ ಸರ್ವಜಂತವಃ ।**
**ತಥಾ ಗೃಹಸ್ಥ ಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ ॥ ೨ ॥** (ಮನು:– ೩.೭೭)

**ಯಸ್ಮಾ ತ್ರಯೋಽಪ್ಯಾಶ್ರಮಿಣೋ ದಾನೇನಾನ್ನೇನ ಚಾನ್ವಹಮ್ ।**
**ಗೃಹಸ್ಥೇನೈವ ಧಾರ್ಯಂತೇ ತಸ್ಮಾತ್ಜ್ಯೇಷ್ಠಾಶ್ರಮೋ ಗೃಹೀ ॥ ೩ ॥** (ಮನು :– ೩. ೭೮)

**ಸ ಸಂಧಾರ್ಯಃ ಪ್ರಯತ್ನೇನ ಸ್ವರ್ಗಮಕ್ಷಯಮಿಚ್ಛತಾ ।**
**ಸುಖಂ ಚೇಹೇಚ್ಛತಾ ನಿತ್ಯಂ ಯೋಽಧಾರ್ಯೋ ದುರ್ಬಲೇಂದ್ರಿಯೈಃ ॥ ೪ ॥** (ಮನು:– ೩.೭೯)

ಹೇಗೆ ನದಿಗಳೂ ಮತ್ತು ದೊಡ್ಡ ದೊಡ್ಡ ನದಿಗಳೂ ಸಮುದ್ರವನ್ನು ಮುಟ್ಟುವವರೆಗೆ ಹರಿಯುತ್ತಾ ಇದ್ದು ಆ ಮೇಲೆ ಸ್ಥಿರವಾಗುತ್ತವೋ, ಹಾಗೆ ಗೃಹಸ್ಥನ ಆಶ್ರಯದಿಂದಲೇ ಎಲ್ಲ ಆಶ್ರಮಗಳೂ ಸ್ಥಿರವಾಗುತ್ತವೆ. ಈ ಆಶ್ರಮವಿಲ್ಲದಿದ್ದರೆ, ಯಾವುದೇ ಆಶ್ರಮದ ಯಾವ ವ್ಯವಹಾರವೂ ಸಿದ್ಧಿಸುವುದಿಲ್ಲ. (೧)

ಹೇಗೆ ವಾಯುವಿನ ಆಶ್ರಯದಿಂದ ಸರ್ವ ಜೀವರ ಇರುವೂ ಸಿದ್ಧಿಸುತ್ತದೋ ಹಾಗೆಯೇ ಗೃಹಸ್ಥನ ಆಶ್ರಯದಿಂದ ಬ್ರಹ್ಮಚಾರಿ, ವಾನಪ್ರಸ್ಥ ಮತ್ತು ಸಂನ್ಯಾಸಿಗಳ, ಎಂದರೆ ಎಲ್ಲ ಆಶ್ರಮಗಳ ನಿರ್ವಾಹವೂ ಆಗುತ್ತದೆ. (೨)

ಬ್ರಹ್ಮಚಾರೀ, ವಾನಪ್ರಸ್ಥ ಮತ್ತು ಸಂನ್ಯಾಸೀ–ಈ ಮೂವರ ಆಶ್ರಮಗಳನ್ನೂ ದಾನ ಮತ್ತು ಅನ್ನ ಮೊದಲಾದುವನ್ನು ಕೊಟ್ಟು, ಪ್ರತಿ ದಿನವೂ ಗೃಹಸ್ಥನೇ ಪರಿಪೋಷಿಸುತ್ತಾನೆ; ಆದಕಾರಣ ಗೃಹಸ್ಥಾಶ್ರಮವು ಜ್ಯೇಷ್ಠಾಶ್ರಮವಾಗಿದೆ. ಎಂದರೆ–ಸಮಸ್ತ ವ್ಯವಹಾರಗಳಲ್ಲಿಯೂ ಭಾರವಾಹಕವೆ [೨೮] ನ್ನಿಸಿಕೊಳ್ಳುತ್ತದೆ. (೩)

ಆದುದರಿಂದ ಯಾವನು ಮೋಕ್ಷದ ಮತ್ತು ಪ್ರಪಂಚದ ಸುಖದ ಇಚ್ಛೆಯನ್ನು ಹೊಂದಿರುತ್ತಾನೋ, ಅವನು, ಯಾವುದು ದುರ್ಬಲೇಂದ್ರಿಯರಿಂದ, ಎಂದರೆ–ಅಂಜುಬುರುಕರೂ ಮತ್ತು ನಿರ್ಬಲರೂ ಆದ ಪುರುಷರಿಂದ ನಿರ್ವಹಿಸಲ್ಪಡಲು ಶಕ್ಯವಲ್ಲವೋ, ಆ ಗೃಹಾಶ್ರಮವನ್ನು, ಪ್ರಯತ್ನಪೂರ್ವಕವಾಗಿ, ಉತ್ತಮ ರೀತಿಯಿಂದ ನಿರ್ವಹಿಸಬೇಕು. (೪)

ಆದುದರಿಂದ, ಜಗತ್ತಿನಲ್ಲಿ ಏನೇನು ವ್ಯವಹಾರವಿದೆಯೋ, ಅದರ ಆಧಾರ ಗೃಹಾಶ್ರಮವಾಗಿದೆ. ಈ ಗೃಹಾಶ್ರಮವು ಇರದಿದ್ದಲ್ಲಿ, ಸಂತಾನೋತ್ಪತ್ತಿಯಾಗದಿರುವುದರಿಂದ ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸಂನ್ಯಾಸಾಶ್ರಮಗಳು ಎಲ್ಲಿಂದ ಬರಲು ಸಾಧ್ಯವಿತ್ತು? ಯಾವನು ಗೃಹಾಶ್ರಮದ ನಿಂದೆಯನ್ನು ಮಾಡುತ್ತಾನೋ, ಅವನೇ ನಿಂದನೀಯನು ಮತ್ತು ಯಾವನು ಪ್ರಶಂಸೆಮಾಡುತ್ತಾನೋ, ಅವನೇ ಪ್ರಶಂಸನೀಯ. ಆದರೆ, ಯಾವಾಗ ಸ್ತ್ರೀ ಮತ್ತು ಪುರುಷ–ಈ ಇಬ್ಬರೂ ಪರಸ್ಪರ ಪ್ರಸನ್ನರೂ, ವಿದ್ವಾಂಸರೂ, ಪುರುಷಾರ್ಥಿಗಳೂ ಮತ್ತು ಸಮಸ್ತ ವ್ಯವಹಾರಗಳನ್ನೂ ಬಲ್ಲವರೂ ಆಗಿರುತ್ತಾರೋ, ಆಗಲೇ ಗೃಹಾಶ್ರಮದಲ್ಲಿ ಸುಖ ಉಂಟಾಗುತ್ತದೆ. ಆದುದರಿಂದ, ಗೃಹಾಶ್ರಮದ ಸುಖದ ಮುಖ್ಯ ಕಾರಣ ಬ್ರಹ್ಮಚರ್ಯ ಮತ್ತು ಮೊದಲು ಹೇಳಿರುವ ಸ್ವಯಂವರ ವಿವಾಹವಾಗಿದೆ.

ಹೀಗೆ ಸಂಕ್ಷೇಪವಾಗಿ ಸಮಾವರ್ತನ, ವಿವಾಹ ಮತ್ತು ಗೃಹಾಶ್ರಮದ ವಿಷಯದಲ್ಲಿ ಶಿಕ್ಷಣವನ್ನು ಬರೆದೆವು. ಇಲ್ಲಿಂದ ಮುಂದಕ್ಕೆ ವಾನಪ್ರಸ್ಥ ಮತ್ತು ಸಂನ್ಯಾಸದ ವಿಷಯದಲ್ಲಿ ಬರೆಯಲ್ಪಡುವುದು.

**ಇತಿ ಶ್ರೀಮದ್ದಯಾನಂದಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ಸಮಾವರ್ತನವಿವಾಹಗೃಹಾಶ್ರಮವಿಷಯೇ**

**ಚತುರ್ಥಃ ಸಮುಲ್ಲಾಸಃ ಸಂಪೂರ್ಣಃ**

---

೨೮. ಮುಖಂಡ, ದುರಂಧರ,

# ಅಥ ಪಂಚಮ ಸಮುಲ್ಲಾಸಃ

## ಅಥ ವಾನಪ್ರಸ್ಥ – ಸಂನ್ಯಾಸವಿಧಿಂ ವಕ್ಷ್ಯಾಮಃ

**ಬ್ರಹ್ಮಚರ್ಯಾಶ್ರಮಂ ಸಮಾಪ್ಯ ಗೃಹೀ ಭವೇತ್, ಗೃಹೀ ಭೂತ್ವಾವನೀ ಭವೇತ್, ವನೀ ಭೂತ್ವಾ ಪ್ರವ್ರಜೇತ್ ॥**

(ಶತಪಥ :– ಕಾಂಡ – ೧೪)

ಬ್ರಹ್ಮಚರ್ಯಾಶ್ರಮವನ್ನು ಸಮಾಪ್ತಮಾಡಿ, ಗೃಹಸ್ಥರಾಗಿ, ವಾನಪ್ರಸ್ಥಿಗಳಾಗಿ, ಮತ್ತು ಸಂನ್ಯಾಸಿಗಳಾಗುವುದು ಮಾನವರಿಗೆ ಉಚಿತವಾಗಿದೆ. ಎಂದರೆ, ಇದು ಕ್ರಮಾನುಸಾರ ಆಶ್ರಮದ ವಿಧಾನವಾಗಿದೆ.

**ಏವಂ ಗೃಹಾಶ್ರಮೇ ಸ್ಥಿತ್ವಾ ವಿಧಿವತ್ ಸ್ನಾತಕೋ ದ್ವಿಜಃ ।**
**ವನೇ ವಸೇತ್ತು ನಿಯತೋ ಯಥಾವದ್ವಿಜಿತೇಂದ್ರಿಯಃ ॥ ೧ ॥** (ಮನು:– ೬.೧.)

**ಗೃಹಸ್ಥಸ್ತು ಯದಾ ಪಶ್ಯೇದ್ವಲೀಪಲಿತಮಾತ್ಮನಃ ।**
**ಅಪತ್ಯಸ್ಯೈವ ಚಾಪತ್ಯಂ ತದಾರಣ್ಯಂ ಸಮಾಶ್ರಯೇತ್ ॥ ೨ ॥** (ಮನು:– ೬.೨.)

**ಸಂತ್ಯಜ್ಯ ಗ್ರಾಮ್ಯಮಾಹಾರಂ ಸರ್ವಂ ಚೈವ ಪರಿಚ್ಛದಮ್ ।**
**ಪುತ್ರೇಷು ಭಾರ್ಯಾಂ ನಿಃಕ್ಷಿಪ್ಯ ವನಂ ಗಚ್ಛೇತ್ಸಹೈವ ವಾ ॥ ೩ ॥** (ಮನು:– ೬.೩.)

**ಅಗ್ನಿಹೋತ್ರಂ ಸಮಾದಾಯ ಗೃಹ್ಯಂ ಚಾಗ್ನಿಪರಿಚ್ಛದಮ್ ।**
**ಗ್ರಾಮಾದರಣ್ಯಂ ನಿಃಸೃತ್ಯ ನಿವಸೇನ್ನಿಯತೇಂದ್ರಿಯಃ ॥ ೪ ॥** (ಮನು:– ೬.೪.)

**ಮುನ್ಯನ್ನೈರ್ವಿವಿಧೈರ್ಮೇಧ್ಯೈಃ ಶಾಕಮೂಲಫಲೇನ ವಾ ।**
**ಏತಾನೇವ ಮಹಾಯಜ್ಞಾನ್ನಿರ್ವಪೇದ್ವಿಧಿಪೂರ್ವಕಮ್ ॥ ೫ ॥** (ಮನು:– ೬.೫.)

ಈ ರೀತಿ ಸ್ನಾತಕನಾಗಿ, ಎಂದರೆ – ಬ್ರಹ್ಮಚರ್ಯಪೂರ್ವಕವಾಗಿ ಗೃಹಾಶ್ರಮವನ್ನು ನಿರ್ವಹಿಸುವ ದ್ವಿಜನು, ಎಂದರೆ– ಬ್ರಾಹ್ಮಣನು, ಕ್ಷತ್ರಿಯನು ಮತ್ತು ವೈಶ್ಯನು, ಗೃಹಾಶ್ರಮದಲ್ಲಿ ನೆಲಸಿ. ನಿಶ್ಚಿತಾತ್ಮನಾಗಿ ಮತ್ತು ಯಥಾವತ್ತಾಗಿ ಇಂದ್ರಿಯಗಳನ್ನು ಜಯಿಸಿ, ವನದಲ್ಲಿ ವಾಸಿಸಬೇಕು. (೧)

ಆದರೆ, ಯಾವಾಗ ತಲೆಗೂದಲು ನೆರೆಯುವುದೋ, ಮತ್ತು ಚರ್ಮ ಸುಕ್ಕಲಾಗುವುದೋ ಮತ್ತು ಮಗನಿಗೂ ಮಗನು ಹುಟ್ಟುವನೋ, ಆಗ ಗೃಹಸ್ಥನು ವನಕ್ಕೆಹೋಗಿ ವಾಸಿಸಬೇಕು. (೨)

ಗ್ರಾಮದ ಸಮಸ್ತ ಆಹಾರಗಳನ್ನೂ ಮತ್ತು ವಸ್ತ್ರಗಳೇ ಮೊದಲಾದ ಸರ್ವ ಉತ್ತಮೋತ್ತಮ ಪದಾರ್ಥಗಳನ್ನೂ ಬಿಟ್ಟು, ಪುತ್ರರ ಹತ್ತಿರ ಪತ್ನಿಯನ್ನಿರಿಸಿ, ಅಥವಾ ತನ್ನೊಂದಿಗೆ ಕರೆದುಕೊಂಡು ಹೋಗಿ, ವನದಲ್ಲಿ ವಾಸಿಸಬೇಕು. (೩)

ಸಾಂಗೋಪಾಂಗವಾಗಿ ಅಗ್ನಿಹೋತ್ರದ ಸಾಮಗ್ರಿಗಳನ್ನು ತೆಗೆದುಕೊಂಡು, ಗ್ರಾಮದಿಂದ ಹೊರಟು, ದೃಢೇಂದ್ರಿಯನಾಗಿ ಅರಣ್ಯಕ್ಕೆ ಹೋಗಿ ವಾಸಮಾಡಬೇಕು. (೪)

ನಾನಾ ಬಗೆಯ ಸಾಮೆ[೧] – ಮೊದಲಾದ ಆಹಾರ ವಸ್ತುಗಳಿಂದಲೂ, ಸೊಗಸೂ ಸತ್ವಯುಕ್ತವೂ ಆದ ಶಾಕ, ಮೂಲ, ಫಲ, ಪುಷ್ಪ, ಕಂದಗಳೇ – ಮೊದಲಾದವುಗಳಿಂದಲೂ, ಪೂರ್ವೋಕ್ತ 'ಪಂಚಮಹಾಯಜ್ಞ'ಗಳನ್ನು ಮಾಡಬೇಕು ಮತ್ತು ಅದರಿಂದಲೇ ಅತಿಥಿಸೇವೆಯನ್ನೂ ಮತ್ತು ತನ್ನ ನಿರ್ವಾಹವನ್ನೂ ಕೂಡ ಮಾಡಬೇಕು. (೫)

**ಸ್ವಾಧ್ಯಾಯೇ ನಿತ್ಯಯುಕ್ತಃ ಸ್ಯಾದ್ ದಾಂತೋ ಮೈತ್ರಃ ಸಮಾಹಿತಃ ।**

**ದಾತಾ ನಿತ್ಯಮನಾದಾತಾ ಸರ್ವಭೂತಾನುಕಂಪಕಃ ॥ ೧ ॥** (ಮನು:– ೬.೮)

**ಅಪ್ರಯತ್ನಃ ಸುಖಾರ್ಥೇಷು ಬ್ರಹ್ಮಚಾರೀ ಧರಾಶಯಃ ।**

**ಶರಣೇಷ್ವ ಮಮಶ್ಚೈವ ವೃಕ್ಷಮೂಲನಿಕೇತನಃ ॥ ೨ ॥** (ಮನು:– ೬.೨೬)

ಸ್ವಾಧ್ಯಾಯದಲ್ಲಿ, ಎಂದರೆ ಓದುವುದರಲ್ಲಿ – ಓದಿಸುವುದರಲ್ಲಿ ನಿತ್ಯಯುಕ್ತನೂ, ಜಿತಾತ್ಮನೂ, ಸರ್ವಮಿತ್ರನೂ, ಇಂದ್ರಿಯದಮನಶೀಲನೂ, ವಿದ್ಯೆ– ಮೊದಲಾದುದರ ದಾನಕರ್ತೃವೂ ಮತ್ತು ಎಲ್ಲರ ಮೇಲೆಯೂ ದಯಾಳುವೂ ಆಗಿದ್ದು, ಯಾರಿಂದಲೂ ಯಾವ ಪದಾರ್ಥವನ್ನೂ ತೆಗೆದುಕೊಳ್ಳದೆ, ಈ ರೀತಿ ಸದಾ ವರ್ತಿಸಬೇಕು. (೧)

ಶರೀರದ ಸುಖಕ್ಕಾಗಿ ಅತಿಪ್ರಯತ್ನ ಮಾಡಬಾರದು; ಆದರೆ– ಬ್ರಹ್ಮಚಾರಿಯಾಗಿರಬೇಕು. ಎಂದರೆ– ತನ್ನ ಪತ್ನಿ ಜೊತೆಯಲ್ಲಿದ್ದರೂ ಕೂಡ, ಅವಳೊಂದಿಗೆ ವಿಷಯಚೇಷ್ಟೆಯಾವುದನ್ನೂ ಮಾಡಬಾರದು. ನೆಲದ ಮೇಲೆ ಮಲಗಬೇಕು. ತನ್ನ ಆಶ್ರಿತರಾದವರಲ್ಲಿ ಅಥವಾ ತನ್ನ ಸ್ವಂತ ಪದಾರ್ಥಗಳಲ್ಲಿ ಮಮತ್ವವಿಡಬಾರದು. ವೃಕ್ಷದ ಕೆಳಗೆ ನೆಲಸಬೇಕು. (೨)

**ತಪಃ ಶ್ರದ್ಧೇ ಯೇ ಹ್ಯುಪವಸಂತ್ಯರಣ್ಯೇ । ಶಾಂತಾ ವಿದ್ವಾಂಸೋ ಭೈಕ್ಷಚರ್ಯಾಂ ಚರಂತಃ ॥**

**ಸೂರ್ಯದ್ವಾರೇಣ ತೇ ವಿರಾಜಃ ಪ್ರಯಾಂತಿ । ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ॥**

(ಮುಂಡಕ :– ೧.೨.೧೧)

ಶಾಂತರಾಗಿರುವ ಯಾವ ವಿದ್ವಾಂಸರುಗಳು ವನದಲ್ಲಿ ತಪಸ್ಸು, ಧರ್ಮಾನುಷ್ಠಾನ ಮಾಡುತ್ತಾ, ಮತ್ತು ಸತ್ಯದಲ್ಲಿ ಶ್ರದ್ಧೆಯಿಟ್ಟು ಭಿಕ್ಷಾಚರಣ ಮಾಡುತ್ತಾ ವಾಸಿಸುತ್ತಾರೋ, ಅವರು, ಎಲ್ಲಿ ನಾಶರಹಿತನೂ, ಪೂರ್ಣಪುರುಷನೂ, ಹಾನಿ–ಲಾಭರಹಿತನೂ ಆದ ಪರಮಾತ್ಮನಿದ್ದಾನೋ, ಅಲ್ಲಿ ನಿರ್ಮಲರಾಗಿ, ಪ್ರಾಣದ ಮೂಲಕ ಹೊರಟು, ಆ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು, ಆನಂದಿತರಾಗಿ ವಿರಾಜಿಸುತ್ತಾರೆ. (೧)

**ಅಭ್ಯಾದಧಾಮಿ ಸಮಿಧಮಗ್ನೇ ವ್ರತಪತೇ ತ್ವಯಿ ।**

**ವ್ರತಂ ಚ ಶ್ರದ್ಧಾಂ ಚೋಪೈಮೀಂಧೇ ತ್ವಾ ದೀಕ್ಷಿತೋಽ ಅಹಮ್ ॥** (ಯಜುರ್ವೇದ :– ೨೦. ೨೪)

"ನಾನು ಅಗ್ನಿಯಲ್ಲಿ ಹೋಮಮಾಡಿ, ದೀಕ್ಷಿತನಾಗಿ, ವ್ರತವನ್ನು, ಸತ್ಯಾಚರಣವನ್ನು ಮತ್ತು ಶ್ರದ್ಧೆಯನ್ನು ಸಾಧಿಸಿಕೊಳ್ಳುವೆ"– ಎಂದು ಇಚ್ಛೆಯಿಟ್ಟುಕೊಂಡು ವಾನಪ್ರಸ್ಥನಾಗುವುದು ಮಾನವನಿಗೆ ಉಚಿತವಾಗಿರುತ್ತದೆ. ನಾನಾ ವಿಧದ ತಪಶ್ಚರ್ಯೆಯನ್ನೂ, ಸತ್ಸಂಗವನ್ನೂ, ಯೋಗಾಭ್ಯಾಸವನ್ನೂ, ಉತ್ತಮ ವಿಚಾರದಿಂದ ಜ್ಞಾನವನ್ನೂ ಮತ್ತು ಪವಿತ್ರತೆಯನ್ನೂ ಕೈಗೂಡಿಸಿಕೊಳ್ಳಬೇಕು. ಆ ಮೇಲೆ, ಯಾವಾಗ ಸಂನ್ಯಾಸ ಸ್ವೀಕಾರದ ಇಚ್ಛೆ ಬರುವುದೋ, ಆಗ ಪತ್ನಿಯನ್ನು ಪುತ್ರರ ಬಳಿ ಕಳಿಹಿಸಿಬಿಡಬೇಕು; ಮತ್ತೆ ಸಂನ್ಯಾಸವನ್ನು ತೆಗೆದುಕೊಳ್ಳಬೇಕು.

**ಇತಿ ಸಂಕ್ಷೇಪೇಣ ವಾನಪ್ರಸ್ಥವಿಧಿಃ**

---

೧. ಎಂದರೆ, ಸ್ವಯಂ ಉತ್ಪನ್ನವಾದ ಅರಣ್ಯದ ಅಕ್ಕಿಗಳೆಂದು ಇಲ್ಲಿ ಅಭಿಪ್ರಾಯ.– ಯು.ಮೀ.

## ಅಥ ಸಂನ್ಯಾಸವಿಧಿಃ

**ವನೇಷು ಚ ವಿಹೃತ್ಯೈವಂ ತೃತೀಯಂ ಭಾಗಮಾಯುಷ ಃ ।**

**ಚತುರ್ಥಮಾಯುಷೋ ಭಾಗಂ ತ್ಯಕ್ತ್ವಾಸಂಗಾನ್ ಪರಿವ್ರಜೇತ್ ॥೧॥** (ಮನು:– ೬.೩೩.)

ಈ ರೀತಿ ವನದಲ್ಲಿ ಆಯಸ್ಸಿನ ಮೂರನೆಯ ಭಾಗದಲ್ಲಿ, ಎಂದರೆ – ಐವತ್ತನೆಯ ವರ್ಷದಿಂದ ಎಪ್ಪತ್ತೆ ೖದನೆಯ ವರ್ಷದವರೆಗೆ, ವಾಸಪ್ರಸ್ಥನಾಗಿದ್ದು, ಆಯಸ್ಸಿನ ನಾಲ್ಕನೆಯ ಭಾಗದಲ್ಲಿ, ಸಂಗಗಳನ್ನೆಲ್ಲಾ ಬಿಟ್ಟು, ಪರಿವ್ರಾಟ್ – ಎಂದರೆ, ಸಂನ್ಯಾಸಿಯಾಗಬೇಕು.

**ಪ್ರಶ್ನೆ** :– ಗೃಹಾಶ್ರಮ ಹಾಗು ವಾನಪ್ರಸ್ಥಾಶ್ರಮ ನಿರ್ವಹಿಸದೆ, ಸಂನ್ಯಾಸಾಶ್ರಮವನ್ನು ಕೈಗೊಂಡರೆ, ಅವನಿಗೆ ಪಾಪ ಬರುತ್ತದೋ ಅಥವಾ ಇಲ್ಲವೋ?

**ಉತ್ತರ** : – ಬರುತ್ತದೆ; ಬಾರದೆಯೂ ಇರುತ್ತದೆ.

**ಪ್ರಶ್ನೆ** : – ಈ ಎರಡು ಬಗೆಯ ಮಾತನ್ನು ಏತಕ್ಕೆ ಆಡುತ್ತೀರಿ?

**ಉತ್ತರ** : – ಎರಡು ಬಗೆಯದಲ್ಲ. ಏಕೆಂದರೆ – ಯಾವನು ಬಾಲ್ಯಾವಸ್ಥೆಯಲ್ಲಿ ವಿರಕ್ತನಾಗಿದ್ದು, ಆ ಮೇಲೆ ವಿಷಯಗಳಲ್ಲಿ ಸಿಕ್ಕಿಕೊಳ್ಳುವನೋ, ಅವನು ಮಹಾಪಾಪಿ ಮತ್ತು ಯಾವನು ಸಿಕ್ಕಿಕೊಳ್ಳುವುದಿಲ್ಲವೋ ಅವನು ಮಹಾ ಪುಣ್ಯಾತ್ಮನಾದ ಸತ್ಪುರುಷನು.

**ಯದಹರೇವ ವಿರಜೇತ್ತದಹರೇವ ಪ್ರವ್ರಜೇತ್, ವನಾದ್ವಾ ಗೃಹಾದ್ವಾ॥೨॥ ಬ್ರಹ್ಮಚರ್ಯಾದೇವ ವಾ ಪ್ರವ್ರಜೇತ್ ॥೩॥**

ಇವು ಜಾಬಾಲ ಬ್ರಾಹ್ಮಣ ಗ್ರಂಥದ ವಚನಗಳು.[೨] ಯಾವ ದಿನ ವೈರಾಗ್ಯ ಹುಟ್ಟುವುದೋ, ಅದೇ ದಿನ, ಮನೆಯಿಂದ ಅಥವಾ ವನದಿಂದ ಸಂನ್ಯಾಸವನ್ನು ತೆಗೆದುಕೊಳ್ಳಬೇಕು. ಪಕ್ಷ ಮೊದಲು ಸಂನ್ಯಾಸದ ನಿರ್ದಿಷ್ಟ ಕ್ರಮವನ್ನು ಹೇಳಿದರು. ಮತ್ತು ಇದರಲ್ಲಿ ವಿಕಲ್ಪವನ್ನು ಹೇಳಿದ್ದಾರೆ. ಎಂದರೆ – ವಾನಪ್ರಸ್ಥವನ್ನು ಮಾಡಬೇಕಾಗಿಲ್ಲ; ಗೃಹಸ್ಥಾಶ್ರಮದಿಂದಲೇ ಸಂನ್ಯಾಸವನ್ನು ಇದು ದ್ವಿತೀಯ ಪಕ್ಷ ಸ್ವೀಕರಿಸಬಹುದು. ಮತ್ತು ತೃತೀಯ ಪಕ್ಷದಲ್ಲಿ ಯಾವನು ಪೂರ್ಣ ವಿದ್ವಾಂಸನೂ, ಜಿತೇಂದ್ರಿಯನೂ, ವಿಷಯಭೋಗದ ಕಾಮನೆಯಿಲ್ಲದವನೂ, ಪರೋಪಕಾರ ಮಾಡುವ ಇಚ್ಛೆಯುಳ್ಳವನೂ ಆದ ಪುರುಷನಾಗಿದ್ದಾನೋ, ಅವನು ಬ್ರಹ್ಮಚರ್ಯಾಶ್ರಮದಿಂದಲೇ ಸಂನ್ಯಾಸವನ್ನು ತೆಗೆದುಕೊಳ್ಳಬಹುದು. ಮತ್ತು ವೇದಗಳಲ್ಲಿಯೂ ಕೂಡ **"ಯತಯಃ,[೩] ಬ್ರಾಹ್ಮಣಸ್ಯ, ವಿಜಾನತಃ"** [೪]– ಈ ಮೊದಲಾದ ಪದಗಳಿಂದ ಸಂನ್ಯಾಸದ ವಿಧಾನವಿದೆ. ಆದರೆ–

**ನಾವಿರತೋ ದುಶ್ಚರಿತಾನ್ನಾಶಾಂತೋ ನಾಸಮಾಹಿತಃ ।**

**ನಾಶಾಂತಮಾನಸೋ ವಾಪಿ ಪ್ರಜ್ಞಾನೇನೈನಮಾಪ್ನುಯಾತ್ ॥** (ಕಠೋಪನಿಷತ್ತು :– ೨.೨೪)

ಯಾವನು ದುರಾಚಾರದಿಂದ ದೂರವಿರುವುದಿಲ್ಲವೋ, ಯಾವನಿಗೆ ಶಾಂತಿಯಿಲ್ಲವೋ, ಯಾವನ ಆತ್ಮನು ಯೋಗಮಾಡಿದವನಲ್ಲವೋ, ಮತ್ತು ಯಾವನ ಮನಸ್ಸು ಶಾಂತವಾಗಿಲ್ಲವೋ, ಅವನು ಸಂನ್ಯಾಸ ತೆಗೆದುಕೊಂಡರೂ ಕೂಡ ಪ್ರಜ್ಞಾನದಿಂದ ಪರಮಾತ್ಮನನ್ನು ಹೊಂದಲಾರನು. ಆದುದರಿಂದ:–

**ಯಚ್ಛೇದ್ವಾಙ್ಮನಸೀ ಪ್ರಾಜ್ಞ ಸ್ತದ್ಯಚ್ಛೇಜ್ಜ್ಞಾನ ಆತ್ಮನಿ ।**

**ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇಚ್ಛಾಂತ ಆತ್ಮನಿ ॥೧॥** (ಕಠ :– ೩. ೧೩)

ಬುದ್ಧಿವಂತನಾದ ಸಂನ್ಯಾಸಿಯು ವಾಣಿಯನ್ನೂ ಮತ್ತು ಮನವನ್ನೂ ಅಧರ್ಮದಿಂದ ತಡೆದಿಟ್ಟು, ಅವನ್ನು ಜ್ಞಾನದಲ್ಲಿ ಮತ್ತು ಆತ್ಮನಲ್ಲಿ ನಿಯೋಜಿಸಬೇಕು. ಮತ್ತು ಆ ಜ್ಞಾನಯುಕ್ತನಾದ ತನ್ನ ಆತ್ಮನನ್ನು ಪರಮಾತ್ಮನಲ್ಲಿ ನಿಯೋಜಿಸಬೇಕು. ಮತ್ತು ಆ ವಿಜ್ಞಾನವನ್ನು ಶಾಂತಸ್ವರೂಪನಾದ ಆತ್ಮನಲ್ಲಿ ಸ್ಥಿರಗೊಳಿಸಬೇಕು. (೧)

---

೨. ಜಾಬಾಲ ಬ್ರಾಹ್ಮಣ

೩. ಋಗ್ವೇದ [೮.೬.೧೮]

೪. ಮೂಲ ಸಿಕ್ಕಿಲ್ಲ.

**ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾ ಯಾನ್ನಾಸ್ತ್ಯ ಕೃತಃ ಕೃತೇನ ॥**

(ಮುಂಡಕ:– ೨. ೧೨)

**ಕ್ಲೃಪ್ತಕೇಶನಖಶ್ಮಶ್ರುಃ ಪಾತ್ರೀ ದಂಡೀ ಕುಸುಂಭವಾನ್ ।**

**ವಿಚರೇನ್ನಿಯತೋ ನಿತ್ಯಂ ಸರ್ವಭೂತಾನ್ಯಪೀಡಯನ್ ॥ ೪ ॥**[೫] (ಮನು:– ೬. ೫೨)

**ಇಂದ್ರಿಯಾಣಾಂ ನಿರೋಧೇನ ರಾಗದ್ವೇಷಕ್ಷಯೇಣ ಚ ।**

**ಅಹಿಂಸಯಾ ಚ ಭೂತಾನಾಮಮೃತತ್ವಾಯ ಕಲ್ಪತೇ ॥ ೫ ॥**[೬] (ಮನು:– ೬. ೬೦)

**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿ ಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥** (ಮುಂಡಕ :–೨. ೧೨)

ಸಮಸ್ತ ಭೌತಿಕ ಭೋಗಗಳೂ ಕರ್ಮದಿಂದ ಸಂಚಿತವಾದುವು – ಎಂಬುದನ್ನು ಕಂಡುಕೊಂಡು, ಬ್ರಾಹ್ಮಣನು, ಎಂದರೆ ಬ್ರಹ್ಮಜ್ಞನಾದ ಸಂನ್ಯಾಸಿಯು ವೈರಾಗ್ಯವನ್ನು ಹೊಂದಬೇಕು. ಏಕೆಂದರೆ – ಅಕೃತನಾದ, ಎಂದರೆ ಯಾರಿಂದಲೂ ನಿರ್ಮಿತನಾಗದ ಪರಮಾತ್ಮನು, ಕೃತದಿಂದ, ಎಂದರೆ ಕೇವಲ ಕರ್ಮದಿಂದ ಪ್ರಾಪ್ತವಾಗುವುದಿಲ್ಲ. ಆದುದರಿಂದ, ಅರ್ಪಣ ಮಾಡುವುದಕ್ಕಾಗಿ ಏನನ್ನಾದರೂ ಕೈಯಲ್ಲಿ ತೆಗೆದುಕೊಂಡು, ವೇದವೇತ್ತನೂ ಹಾಗೂ ಪರಮೇಶ್ವರನನ್ನು ಬಲ್ಲವನೂ ಆದ ಗುರುವಿನ ಹತ್ತಿರ, ವಿಜ್ಞಾನಕ್ಕಾಗಿ ಹೋಗಬೇಕು. ಹೋಗಿ, ಎಲ್ಲ ಸಂದೇಹಗಳ ನಿವೃತ್ತಿಯನ್ನೂ ಮಾಡಿಕೊಳ್ಳಬೇಕು.

ಆದರೆ, ಕೆಳಗೆ ಹೇಳಿರುವಂತಹವರ ಸಂಗವನ್ನು ಸದಾ ಬಿಟ್ಟುಬಿಡಬೇಕು:–

**ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ ।**

**ಜಂಘನ್ಯಮಾನಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ ॥ ೧ ॥**

(ಮುಂಡಕ :– ೨.೮)

**ಅವಿದ್ಯಾಯಾಂ ಬಹುಧಾ ವರ್ತಮಾನಾ ವಯಂಕೃತಾರ್ಥಾ ಇತ್ಯಭಿಮನ್ಯಂತಿ ಬಾಲಾಃ ।**

**ಯತ್ಕರ್ಮಿಣೋ ನ ಪ್ರವೇದಯಂತಿ ರಾಗಾತ್ ತೇನಾತುರಾಃ ಕ್ಷೀಣಲೋಕಾಶ್ಚ್ಯವಂತೇ ॥ ೨ ॥**

(ಮುಂಡಕ :– ೨.೯)

ಯಾರು ಅವಿದ್ಯೆಯಲ್ಲಿ ರಮಿಸುತ್ತಾ ತಮ್ಮನ್ನು ಧೀರರು ಮತ್ತು ಪಂಡಿತರು ಎಂದು ತಿಳಿದುಕೊಳ್ಳುತ್ತಾರೋ, ಆ ನೀಚಗತಿಗೆ ಹೋಗುವ ಮೂಢರು, ಅಂಧನ ಹಿಂದೆ ನಡೆಯುವ ಅಂಧರು ದುರ್ಗತಿ ಹೊಂದುವಂತೆ, ದುಃಖಕ್ಕೆ ಈಡಾಗುತ್ತಾರೆ. (೧)

ಬಹು ರೀತಿಯಲ್ಲಿ ಅವಿದ್ಯೆಯಲ್ಲಿ ರಮಿಸುವ ಯಾವ ಬಾಲ–ಬುದ್ಧಿಗಳಿರುತ್ತಾರೋ, ತಮ್ಮನ್ನು ತಾವೇ ಕೃತಾರ್ಥರೆಂದು ತಿಳಿಯುತ್ತಾರೋ, ಅವರು, ಕೇವಲ ಕರ್ಮಕಾಂಡನಿರತರಾದ ಜನರು ರಾಗದಿಂದ ಮುಗ್ಧರಾಗಿ ಯಾವುದನ್ನು ತಿಳಿಯಲೂ–ತಿಳಿಸಲೂ ಶಕ್ತರಾಗುವುದಿಲ್ಲವೋ, ಅದನ್ನರಿಯದೆ, 'ಅತುರರಾಗಿ', ಜನನ–ಮರಣವೆಂಬ ದುಃಖದಲ್ಲಿ ಬಿದ್ದಿರುತ್ತಾರೆ. (೨) ಆದುದರಿಂದ :–

**ವೇದಾಂತವಿಜ್ಞಾನಸುಶ್ಚಿತಾರ್ಥಾಃ ಸಂನ್ಯಾಸಯೋಗಾದ್ಯತಯಃ ಶುದ್ಧಸತ್ವಾಃ ।**

**ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾಃ ಪರಿಮುಚ್ಯಂತಿ ಸರ್ವೇ ॥** (ಮುಂಡಕ :– ೩.೨.೬)

---

೫. ಕೂದಲು–ಉಗುರು–ಮೀಸೆಗಳನ್ನು ತೆಗೆಯಿಸಿಕೊಂಡವನೂ, ಕಮಂಡಲವನ್ನುಳ್ಳವನೂ, ದಂಡಧಾರಿಯೂ, ಕಾಷಾಯವಸ್ತ್ರಯುಕ್ತನೂ, ಜಿತೇಂದ್ರಿಯನೂ ಆಗಿ, ಯಾವುದೇ ಪ್ರಾಣಿಗಳನ್ನು ಪೀಡಿಸದೆ ಸದಾ ಸಂಚರಿಸುತ್ತಿರಬೇಕು. (೪) ಇಂದ್ರಿಯಗಳ ನಿರೋಧದಿಂದಲೂ ರಾಗದ್ವೇಷಗಳ ವಿನಾಶದಿಂದಲೂ, ಪ್ರಾಣಿ ಮಾತ್ರರ ಬಗೆಗೆ ಅಹಿಂಸಾಧಾರಣದಿಂದಲೂ ಸಂನ್ಯಾಸಿಯು ಅಮರತ್ವಕ್ಕೆ ಅರ್ಹನಾಗುತ್ತಾನೆ. (೫) ಮೂಲದಲ್ಲಿ ಈ ಶ್ಲೋಕಗಳ ಅರ್ಥ ಬಿಟ್ಟುಹೋಗಿದೆ.

೬. ಎಂದರೆ, ಸಕಾಮಕರ್ಮಗಳಿಂದ ಸ್ವರ್ಗಪಡೆಯಲು ಆತುರರಾದವರು, ಎಂದರ್ಥ.ಇದರ ಸರಿಯಾದ ಅರ್ಥವನ್ನರಿಯದೇ ಭ್ರಾಂತರಾಗಿ, ಹಲವರು ಸಾಯುವ ಮುನ್ನ ಸಂನ್ಯಾಸ ತೆಗೆದುಕೊಳ್ಳುತ್ತಾರೆ. ಇದಕ್ಕೆ ಆತುರಸಂನ್ಯಾಸವಿಧಿ' ಎಂದು ಹೆಸರಿಟ್ಟಿದ್ದಾರೆ. –ಯು.ಮೀ

ಯಾರು 'ವೇದಾಂತ'ದ, ಎಂದರೆ 'ಪರಮೇಶ್ವರ ಪ್ರತಿಪಾದಕವಾದ ವೇದಮಂತ್ರ'ಗಳ ಅರ್ಥಜ್ಞಾನದಲ್ಲಿ ಮತ್ತು ಆಚಾರದಲ್ಲಿ ಒಳಿತಾಗಿ ನಿಶ್ಚಿತರೂ, ಸಂನ್ಯಾಸ ಯೋಗದಿಂದ ಶುದ್ಧಾಂತಃಕರಣರೂ ಆದ ಸಂನ್ಯಾಸಿಗಳಾಗಿರುತ್ತಾರೋ, ಅವರು ಮುಕ್ತಿಸುಖವನ್ನು ಗಳಿಸಿ ಭೋಗದ ನಂತರ, ಯಾವಾಗ ಮುಕ್ತಿಯಲ್ಲಿ ಸುಖದ ಅವಧಿ ಮುಗಿದು ಹೋಗುತ್ತದೋ, ಆಗ ಅಲ್ಲಿಂದ ಬೇರೆಯಾಗಿ ಜಗತ್ತಿಗೆ ಬರುತ್ತಾರೆ. ಮುಕ್ತಿಯಿಲ್ಲದೆ ದುಃಖದ ನಾಶವಾಗುವುದಿಲ್ಲ . ಏಕೆಂದರೆ –

**ನ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯಶರೀರಮ್ ।**

**ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ॥** (ಛಾಂದೋಗ್ಯ:– ೮.೧೨.೧)

ಯಾವನು ದೇಹಧಾರಿಯಾಗಿರುತ್ತಾನೋ, ಅವನು ಸುಖ–ದುಃಖದ ಪ್ರಾಪ್ತಿಯಿಂದ ಎಂದಿಗೂ ಬೇರೆಯಾಗಿರಲಾರನು. ಮತ್ತು ಯಾವ ಶರೀರ ರಹಿತನಾದ ಜೀವಾತ್ಮನು ಮುಕ್ತಿಯಲ್ಲಿ ಸರ್ವವ್ಯಾಪಕನಾದ ಪರಮೇಶ್ವರನೊಂದಿಗೆ, ಶುದ್ಧನಾಗಿ ಇರುತ್ತಾನೋ, ಆಗ ಅವನಿಗೆ ಸಾಂಸಾರಿಕ ಸುಖ–ದುಃಖ ಉಂಟಾಗುವುದಿಲ್ಲ. ಆದುದರಿಂದ:–

**ಲೋಕೈಷಣಾಯಾಶ್ಚ ವಿತ್ತೈಷಣಾಯಾಶ್ಚ ಪುತ್ರೈಷಣಾಯಾಶ್ಚ ವ್ಯುತ್ಥಾಯ ಭೈಕ್ಷಚರ್ಯಂ ಚರಂತಿ ॥**

(ಶತಪಥ :– ೧೪.೫.೨.೧)

ಲೋಕದಲ್ಲಿ ಪ್ರತಿಷ್ಠೆ ಅಥವಾ ಲಾಭದಿಂದ, ಧನದಿಂದ ಭೋಗ ಅಥವಾ ಮಾನ್ಯತೆಯಿಂದ ಮತ್ತು ಪುತ್ರರೇ ಮೊದಲಾದವರ ಮೋಹದಿಂದ ದೂರವಿರುವವರಾಗಿ, ಸಂನ್ಯಾಸೀ ಜನರು ಭಿಕ್ಷಾವಲಂಬಿಗಳಾಗಿ, ರಾತ್ರಿ–ಹಗಲು ಮೋಕ್ಷದ ಸಾಧನೆಗಳಲ್ಲಿ ತತ್ಪರರಾಗಿರುತ್ತಾರೆ.

**ಪ್ರಾಜಾಪತ್ಯಾಂ ನಿರೂಪ್ಯೇಷ್ಟಿಂ ತಸ್ಯಾಂ ಸರ್ವವೇದಸಮ್ ।**

**ಹುತ್ವಾ ಬ್ರಾಹ್ಮಣಃ ಪ್ರವ್ರಜೇತ್ ॥ ೧ ॥** (ಯಜುರ್ವೇದ ಬ್ರಾಹ್ಮಣ)

**ಪ್ರಜಾಪತ್ಯಾಂ ನಿರೂಪ್ಯೇಷ್ಟಿಂ ಸರ್ವವೇದಸದಕ್ಷಿಣಾಮ್ ।**

**ಆತ್ಮನ್ಯಗ್ನೀನ್ ಸಮಾರೋಪ್ಯ ಬ್ರಾಹ್ಮಣಃ ಪ್ರವ್ರಜೇದ್ಗೃಹಾತ್ ॥ ೨ ॥** (ಮನು:– ೬.೩೮)

**ಯೋ ದತ್ವಾ ಸರ್ವಭೂತೇಭ್ಯಃ ಪ್ರವ್ರಜತ್ಯಭಯಂ ಗೃಹಾತ್ ।**

**ತಸ್ಯ ತೇಜೋಮಯಾ ಲೋಕಾ ಭವಂತಿ ಬ್ರಹ್ಮವಾದಿನಃ ॥ ೩ ॥** (ಮನು:– ೬.೩೯)

ಪ್ರಜಾಪತಿಯ, ಎಂದರೆ – ಪರಮೇಶ್ವರನ ಪ್ರಾಪ್ತಿಗೋಸ್ಕರ, ಇಷ್ಟಿಯನ್ನು – ಎಂದರೆ ಯಜ್ಞವನ್ನು ಮಾಡಿ, ಅದರಲ್ಲಿ ಯಜ್ಞೋಪವೀತ, ಶಿಖೆ– ಮೊದಲಾದ ಚಿಹ್ನೆಗಳನ್ನು ವರ್ಜಿಸಿ, ಆಹವನೀಯವೇ ಮೊದಲಾದ ಐದು ಅಗ್ನಿಗಳನ್ನು[೭] ಪ್ರಾಣ, ಅಪಾನ, ವ್ಯಾನ, ಉದಾನ, ಮತ್ತು ಸಮಾನ– ಈ ಐದು ಪ್ರಾಣಗಳಲ್ಲಿ ಆರೋಪಣ ಮಾಡಿ, ಬ್ರಾಹ್ಮಣನು – ಬ್ರಹ್ಮಜ್ಞನು – ಮನೆಯಿಂದ ಹೊರಟು, ಸಂನ್ಯಾಸಿಯಾಗಬೇಕು. (೧.೨) ಯಾವನು ಸರ್ವಭೂತಗಳಿಗೂ, ಎಂದರೆ ಪ್ರಾಣಿಮಾತ್ರಕ್ಕೆ ಅಭಯದಾನಮಾಡಿ, ಮನೆಯಿಂದ ಹೊರಟು ಸಂನ್ಯಾಸಿಯಾಗುತ್ತಾನೋ, 'ಆ ಬ್ರಹ್ಮವಾದಿಗೆ', ಎಂದರೆ ಪರಮೇಶ್ವರನಿಂದ ಪ್ರಕಾಶಿತವಾದ ವೇದಗಳಲ್ಲಿ ಹೇಳಲ್ಪಟ್ಟಿರುವ ಧರ್ಮವೇ ಮೊದಲಾದ ವಿದ್ಯೆಗಳ ಉಪದೇಶ ಮಾಡುವ ಸಂನ್ಯಾಸಿಗೆ ಪ್ರಕಾಶಮಯವಾದ, ಎಂದರೆ ಮುಕ್ತಿಯ ಆನಂದಸ್ವರೂಪ ಲೋಕವು ಪ್ರಾಪ್ತವಾಗುವುದು.

**ಪ್ರಶ್ನೆ** :– ಸಂನ್ಯಾಸಿಗಳ ಧರ್ಮವೇನು?

**ಉತ್ತರ:**– ಪಕ್ಷಪಾತರಹಿತವಾದ ನ್ಯಾಯಾಚರಣ, ಸತ್ಯದ ಅಂಗೀಕಾರ, ಅಸತ್ಯದ ಪರಿತ್ಯಾಗ, ಈಶ್ವರನ ವೇದೋಕ್ತವಾದ ಆಜ್ಞೆಯ ಪಾಲನ, ಪರೋಪಕಾರ, ಸತ್ಯಭಾಷಣ ಮೊದಲಾದ ಲಕ್ಷಣಗಳನ್ನುಳ್ಳ ಧರ್ಮವೇನೋ ಸಮಸ್ತ ಆಶ್ರಮಿಗಳಿಗೂ– ಎಂದರೆ, ಮನುಷ್ಯಮಾತ್ರರಿಗೆ ಒಂದೇ ಆಗಿದೆ. ಆದರೆ –'ಸಂನ್ಯಾಸಿಯ ವಿಶೇಷ ಧರ್ಮ ಇದಾಗಿದೆ.'

---

೭. ಗಾರ್ಹಪತ್ಯ, ದಕ್ಷಿಣ, ಅಹವನೀಯ, ಪ್ರಾಜಾಪತ್ಯ ಮತ್ತು ಅನ್ವಾಹಾರ್ಯ ವಚನ.

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಜಲಂ ಪಿಬೇತ್ ।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥ ೧ ॥ (ಮನು: – ೬.೪೬)
ಕ್ರುಧ್ಯಂತಂ ನ ಪ್ರತಿ ಕ್ರುಧ್ಯೇದಾಕ್ರುಷ್ಟಃ ಕುಶಲಂ ವದೇತ್ ।
ಸಪ್ತದ್ವಾರಾವಕೀರ್ಣಾಂಚ ನ ವಾಚಮನೃತಾಂ ವದೇತ್ ॥ ೨ ॥ (ಮನು:– ೬.೪೮)
ಅಧ್ಯಾತ್ಮರತಿರಾಸೀನೋ ನಿರಪೇಕ್ಷೋ ನಿರಾಮಿಷಃ ।
ಆತ್ಮನೈವ ಸಹಾಯೇನ ಸುಖಾರ್ಥೀ ವಿಚರೇದಿಹ ॥ ೩ ॥ (ಮನು:– ೬.೪೯)
ದೂಷಿತೋಽಪಿ ಚರೇದ್ಧರ್ಮಂ ಯತ್ರ ತತ್ರಾಶ್ರಮೇ ರತಃ ।
ಸಮಃ ಸರ್ವೇಷು ಭೂತೇಷು ನ ಲಿಂಗಂ ಧರ್ಮಕಾರಣಮ್ ॥ ೪ ॥ (ಮನು:– ೬.೬೬)
ಫಲಂ ಕತಕವೃಕ್ಷಸ್ಯ ಯದ್ಯಪ್ಯಂಬುಪ್ರಸಾದಕಮ್ ।
ನ ನಾಮಗ್ರಹಣಾದೇವ ತಸ್ಯ ವಾರಿ ಪ್ರಸೀದತಿ ॥ ೫ ॥ (ಮನು:– ೬.೬೭)
ಪ್ರಾಣಾಯಾಮಾ ಬ್ರಾಹ್ಮಣಸ್ಯ ತ್ರಯೋಽಪಿ ವಿಧಿವತ್ಕೃತಾಃ ।
ವ್ಯಾಹೃತಿಪ್ರಣವೈರ್ಯುಕ್ತಾ ವಿಜ್ಞೇಯಂ ಪರಮಂ ತಪಃ ॥ ೬ ॥ (ಮನು:– ೬.೭೦)
ದಹ್ಯಂತೇ ಧ್ಮಾಯಮಾನಾನಾಂ ಧಾತೂನಾಂ ಹಿ ಯಥಾ ಮಲಾಃ ।
ತಥೇಂದ್ರಿಯಾಣಾಂ ದಹ್ಯಂತೇ ದೋಷಾಃ ಪ್ರಾಣಸ್ಯ ನಿಗ್ರಹಾತ್ ॥ ೭ ॥ (ಮನು:– ೬.೭೧)
ಪ್ರಾಣಾಯಾಮೈರ್ದಹೇದ್ದೋಷಾನ್ ಧಾರಣಾಭಿಶ್ಚ ಕಿಲ್ಬಿಷಮ್ ।
ಪ್ರತ್ಯಾಹಾರೇಣ ಸಂಸರ್ಗಾನ್ ಧ್ಯಾನೇನಾನೀಶ್ವರಾನ್ ಗುಣಾನ್ ॥ ೮ ॥ (ಮನು:– ೬.೭೨)
ಉಚ್ಚಾವಚೇಷು ಭೂತೇಷು ದುರ್ಜ್ಞೇಯಾಮಕೃತಾತ್ಮಭಿಃ ।
ಧ್ಯಾನಯೋಗೇನ ಸಂಪಶ್ಯೇದ್ಗತಿಮಸ್ಯಾಂತರಾತ್ಮನಃ ॥ ೯ ॥ (ಮನು:– ೬.೭೩)
ಅಹಿಂಸಯೇಂದ್ರಿಯಾಸಂಗೈರ್ವೈದಿಕೈಶ್ಚೈವ ಕರ್ಮಭಿಃ ।
ತಪಸಶ್ಚರಣೈಶ್ಚೋಗ್ರೈಃ ಸಾಧಯಂತೀಹ ತತ್ಪದಮ್ ॥ ೧೦॥ (ಮನು:– ೬.೭೫)
ಯದಾ ಭಾವೇನ ಭವತಿ ಸರ್ವಭಾವೇಷು ನಿಃಸ್ಪೃಹಃ ।
ತದಾ ಸುಖಮವಾಪ್ನೋತಿ ಪ್ರೇತ್ಯ ಚೇಹ ಚ ಶಾಶ್ವತಮ್ ॥ ೧೧ ॥ (ಮನು:– ೬.೮೦)
ಚತುರ್ಭಿರಪಿ ಚೈವೈತೈರ್ನಿತ್ಯಮಾಶ್ರಮಿಭಿರ್ದ್ವಿಜೈಃ ।
ದಶಲಕ್ಷಣಕೋ ಧರ್ಮಃ ಸೇವಿತವ್ಯಃ ಪ್ರಯತ್ನತಃ ॥ ೧೨ ॥ (ಮನು:– ೬.೯೧)
ಧೃತಿಃಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥ ೧೩ ॥ (ಮನು:– ೬.೯೨)
ಅನೇನ ವಿಧಿನಾ ಸರ್ವಾಂಸ್ತ್ಯಕ್ತ್ವಾಸಂಗಾನ್ ಶನೈಃ ಶನೈಃ ।
ಸರ್ವದ್ವಂದ್ವವಿನಿರ್ಮುಕ್ತೋ ಬ್ರಹ್ಮಣ್ಯೇವಾವ ತಿಷ್ಠತೇ ॥ ೧೪॥ (ಮನು:– ೬.೮೧)

**ಅರ್ಥ:** ಯಾವಾಗ ಸಂನ್ಯಾಸಿಯು ಮಾರ್ಗದಲ್ಲಿ ನಡೆಯುತ್ತಾನೋ, ಆಗ ಅತ್ತ–ಇತ್ತ ನೋಡದೆ, ಕೆಳಗೆ ನೆಲದ ಮೇಲೆ ದೃಷ್ಟಿಯಿಟ್ಟು ನಡೆಯಬೇಕು. ಸದಾ ನೀರನ್ನು ಬಟ್ಟೆಯಿಂದ ಶೋಧಿಸಿ ಕುಡಿಯಬೇಕು. ನಿರಂತರವಾಗಿ ಸತ್ಯವನ್ನೇ ಹೇಳಬೇಕು. ಸರ್ವದಾ ಮನಸ್ಸಿನಿಂದ ಆಲೋಚಿಸಿ, ಸತ್ಯವನ್ನು ಗ್ರಹಿಸಬೇಕು; ಮತ್ತು ಅಸತ್ಯವನ್ನು ಬಿಟ್ಟುಬಿಡಬೇಕು. (೧)

ಯಾವಾಗಲಾದರೂ, ಎಲ್ಲಿಯಾದರೂ ಉಪದೇಶದಲ್ಲಿ ಅಥವಾ ಸಂವಾದ– ಮೊದಲಾದುದರಲ್ಲಿ, ಯಾವನಾದರೂ ಸಂನ್ಯಾಸಿಯ ಮೇಲೆ ಕೋಪ ಮಾಡಿಕೊಂಡರೆ, ಅಥವಾ ನಿಂದೆಮಾಡಿದರೆ, ಅವನ ಮೇಲೆ ತಾನು ಕೋಪ ಮಾಡಿಕೊಳ್ಳಬಾರದು; ಆದರೆ, ಸದಾ ಅವನ ಕಲ್ಯಾಣಕ್ಕಾಗಿ ಉಪದೇಶವನ್ನೇ ಮಾಡಬೇಕು ಮತ್ತು ಒಂದು ಬಾಯಿಯಲ್ಲಿ, ಎರಡು ಮೂಗಿನ ಹೊಳ್ಳೆಗಳಲ್ಲಿ, ಎರಡು ಕಣ್ಣುಗಳಲ್ಲಿ ಮತ್ತು ಎರಡು ಕಿವಿಗಳ ರಂಧ್ರಗಳಲ್ಲಿ ಹರಡಿರುವ ವಾಣಿಯನ್ನು, ಯಾವುದೇ ಕಾರಣದಿಂದಲೂ, ಎಂದಿಗೂ ಸುಳ್ಳಾಗಿ ಮಾಡಿ ಹೇಳಬಾರದು. (೨) (ಇಂದ್ರಿಯಗಳ ಸಹಕಾರದಿಂದಲೇ ವಾಣಿ ಶ್ರೇಷ್ಠವಾಗುವುದು)

ತನ್ನ ಆತ್ಮನಲ್ಲಿ ಮತ್ತು ಪರಮಾತ್ಮನಲ್ಲಿ ಸ್ಥಿರನೂ, ಅಪೇಕ್ಷಾರಹಿತನೂ, ಮದ್ಯ–ಮಾಂಸ ಮೊದಲಾದುದರಿಂದ ದೂರವಿರುವವನೂ, ಆತ್ಮಸಹಾಯದಿಂದಲೇ ಸುಖವನ್ನು ಬಯಸುವವನೂ ಆಗಿ, ಈ ಜಗತ್ತಿನಲ್ಲಿ ಧರ್ಮವನ್ನು ಮತ್ತು ವಿದ್ಯೆಯನ್ನು ಹೆಚ್ಚಿಸುವುದರಲ್ಲಿ ಉಪದೇಶಕ್ಕೋಸ್ಕರ ಸದಾ ಸಂಚರಿಸುತ್ತಿರಬೇಕು. (೩)

ತಲೆಗೂದಲು, ಉಗುರುಗಳು, ಗಡ್ಡ, ಮೀಸೆ – ಇವನ್ನು ತೆಗೆಯಿಸಿಬಿಡಬೇಕು. ಸುಂದರವಾದ ಪಾತ್ರೆ, ದಂಡ, ಹಾಗೂ, ಕಾಷಾಯದ ಬಣ್ಣ ಹಾಕಿದ ವಸ್ತ್ರಗಳನ್ನು ಗ್ರಹಿಸಿ, ನಿಶ್ಚಿತಾತ್ಮನಾಗಿ, ಯಾವುದೇ ಪ್ರಾಣಿಗಳಿಗೂ ನೋವನ್ನು ಕೊಡದೆ ಎಲ್ಲಡೆಯೂ ಪರ್ಯಟನ ಮಾಡಬೇಕು. (೪)

ಇಂದ್ರಿಯಗಳನ್ನು ಅಧರ್ಮಾಚರಣದಿಂದ ದೂರವಿಟ್ಟು, ರಾಗ–ದ್ವೇಷವನ್ನು ಬಿಟ್ಟು, ಸರ್ವಪ್ರಾಣಿಗಳೊಂದಿಗೂ ನಿರ್ವೈರನಾಗಿ ವರ್ತಿಸಿ, ಮೋಕ್ಷಕ್ಕಾಗಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬೇಕು. (೫)

ಜಗತ್ತಿನಲ್ಲಿ ಯಾವನಾದರೂ ಅವನನ್ನು ದೂಷಿತನನ್ನಾಗಿ ಮಾಡಲಿ ಅಥವಾ ಭೂಷಿತನನ್ನಾಗಿ ಮಾಡಲಿ; ಯಾವುದೇ ಆಶ್ರಮದಲ್ಲಿ ಕಾರ್ಯಪ್ರವೃತ್ತನಾಗಿರುವಾಗ, ಪುರುಷನು – ಎಂದರೆ ಸಂನ್ಯಾಸಿಯು ಸಮಸ್ತ ಪ್ರಾಣಿಗಳಲ್ಲಿಯೂ ಪಕ್ಷಪಾತರಹಿತನಾಗಿ, ಸ್ವತಃ ಧರ್ಮಾತ್ಮನಾಗಿ ಮತ್ತು ಇತರರನ್ನೂ ಧರ್ಮಾತ್ಮರನ್ನಾಗಿ ಮಾಡಲು ಪ್ರಯತ್ನ ಮಾಡುತ್ತಾ ಹೋಗಬೇಕು. ಮತ್ತು ತನ್ನ ಮನಸ್ಸಿನಲ್ಲಿ ದಂಡ, ಕಮಂಡಲು ಮತ್ತು ಕಾಷಾಯವಸ್ತ್ರ ಮೊದಲಾದ ಚಿಹ್ನೆಗಳ ಧಾರಣವು ಧರ್ಮದ ಕಾರಣವಲ್ಲ – ಎಂದು ನಿಶ್ಚಿತವಾಗಿ ತಿಳಿಯಬೇಕು. ಮನುಷ್ಯ ಮಾತ್ರರಿಗೆ ಸತ್ಯೋಪದೇಶದಿಂದ ಮತ್ತು ವಿದ್ಯಾದಾನದಿಂದ ಉನ್ನತಿಯನ್ನುಂಟುಮಾಡುವುದು ಮತ್ತು ಸಮಸ್ತ ಪ್ರಾಣಿಗಳ ಹಿತವನ್ನು ಸಾಧಿಸುವುದು ಸಂನ್ಯಾಸಿಯ ಮುಖ್ಯ ಕರ್ಮವಾಗಿರುತ್ತದೆ. (೬)

ಏಕೆಂದರೆ, ನಿರ್ಮಲೀವೃಕ್ಷದ (ಚಿಲ್ಲದ ಮರದ) ಫಲವನ್ನು ಪುಡಿಮಾಡಿ, ಕೆಸರಿನಿಂದ ಕದಡಿದ ನೀರಿನಲ್ಲಿ ಹಾಕುವುದರಿಂದ, ಅದು ಜಲದ ಶೋಧಕವಾಗುವುದಾದರೂ, ಅದನ್ನು ಹಾಕದೆ, ಅದರ ಹೆಸರನ್ನು ಹೇಳುವುದರಿಂದ ಅಥವಾ ಕೇವಲ ಆಲಿಸುವುದರಿಂದ ಜಲವು ಶುದ್ಧವಾಗಲಾರದು. (೭)

ಆದುದರಿಂದ, 'ಓಂಕಾರಪೂರ್ವಕವಾಗಿ ಸಪ್ತವ್ಯಾಹೃತಿ'ಗಳೊಂದಿಗೆ, ವಿಧಿಪೂರ್ವಕವಾಗಿ, ಎಷ್ಟು ಶಕ್ತಿಯಿದೆಯೋ, ಅಷ್ಟು ಪ್ರಾಣಾಯಾಮಗಳನ್ನು ಮಾಡುವುದು ಬ್ರಾಹ್ಮಣನಿಗೆ, ಎಂದರೆ–ಬ್ರಹ್ಮಜ್ಞನಾದ ಸಂನ್ಯಾಸಿಗೆ ಉಚಿತವಾಗಿದೆ. ಆದರೆ–'ಮೂರಕ್ಕಿಂತ ಕಡಿಮೆ ಪ್ರಾಣಾಯಾಮವನ್ನು' ಎಂದಿಗೂ ಮಾಡಬಾರದು. ಇದೇ ಸಂನ್ಯಾಸಿಯ ಪರಮ ತಪಸ್ಸು. (೮)

ಏಕೆಂದರೆ, ಹೇಗೆ ಬೆಂಕಿಯಲ್ಲಿ ಕಾಯಿಸುವುದರಿಂದ ಅಥವಾ ಕರಗಿಸುವುದರಿಂದ ಲೋಹಗಳ ಕೊಳೆ ನಾಶವಾಗುತ್ತದೋ, ಹಾಗೆಯೇ ಪ್ರಾಣಗಳ ನಿಗ್ರಹದಿಂದ ಮನಸ್ಸು ಮೊದಲಾದ ಇಂದ್ರಿಯಗಳ ದೋಷಗಳು ಭಸ್ಮೀಭೂತವಾಗಿ ಹೋಗುತ್ತವೆ. (೯)

ಆದುದರಿಂದ ಸಂನ್ಯಾಸೀ ಜನರು ಪ್ರತಿನಿತ್ಯವೂ ಪ್ರಾಣಾಯಾಮಗಳಿಂದ[೮] ಆತ್ಮನ, ಅಂತಃಕರಣದ ಮತ್ತು ಇಂದ್ರಿಯಗಳ ದೋಷವನ್ನೂ, ಧಾರಣಾನುಷ್ಠಾನದಿಂದ[೯] ಪಾಪಗಳನ್ನೂ, ಪ್ರತ್ಯಾಹಾರ[೧೦] ದಿಂದ ಸಂಗದೋಷವನ್ನೂ,[೧೧] ಧ್ಯಾನದಿಂದ

೮. "ತಸ್ಮಿನ್ ಸತಿ ಶ್ವಾಸ–ಪ್ರಶ್ವಾಸಯೋರ್ಗತಿವಿಚ್ಛೇದಃ ಪ್ರಾಣಾಯಾಮಃ" ॥ ಪಾತಂಜಲ ಯೋಗ, ಸಾಧನಪಾದ–೪೯

ದಿವ್ಯವಲ್ಲದ ಗುಣಗಳನ್ನೂ ಎಂದರೆ – ಹರ್ಷ, ಶೋಕ ಮತ್ತು ಅವಿದ್ಯೆ – ಮೊದಲಾದ ಜೀವಾತ್ಮನ ದೋಷಗಳನ್ನೂ ಭಸ್ಮೀಭೂತವನ್ನಾಗಿ ಮಾಡಬೇಕು. (೧೦)

ಇದೇ ಧ್ಯಾನಯೋಗದಿಂದ, ಯಾವುದು ಯೋಗಿಗಳಲ್ಲದ ಅವಿದ್ವಾಂಸರಿಗೆ ಅತಿಕಷ್ಟದಿಂದ ತಿಳಿದುಬರುತ್ತದೋ, ಅಂತಹ, ಚಿಕ್ಕ – ದೊಡ್ಡ ವಸ್ತುಗಳಲ್ಲಿರುವ ಪರಮಾತ್ಮನ ವ್ಯಾಪ್ತಿಯನ್ನೂ, ಮತ್ತು ತನ್ನ ಆತ್ಮನ ಹಾಗೂ ಅಂತರ್ಯಾಮಿಯಾದ ಪರಮೇಶ್ವರನ ಗತಿಯನ್ನೂ ನೋಡಬೇಕು. (೧೧)

ಸಮಸ್ತ ಪ್ರಾಣಿಗಳ ಬಗೆಗೂ ನಿರ್ವೈರರಾಗಿ, ಇಂದ್ರಿಯಗಳ ವಿಷಯಗಳ ತ್ಯಾಗದಿಂದ ವೇದೋಕ್ತ ಕರ್ಮದಿಂದ ಮತ್ತು ಅತ್ಯುಗ್ರತಪಶ್ಚರಣದಿಂದ, ಈ ಜಗತ್ತಿನಲ್ಲಿ ಮೋಕ್ಷ – ಪದವನ್ನು ಮೇಲೆ ವರ್ಣಿತರಾದ ಸಂನ್ಯಾಸಿಗಳು ಮಾತ್ರ ಸಾಧಿಸಬಲ್ಲರು; ಸಿದ್ಧಮಾಡಿಸಬಲ್ಲರು; ಅನ್ಯರಾರೂ ಹಾಗೆ ಮಾಡಲಾರರು. (೧೨)

ಯಾವಾಗ ಸಂನ್ಯಾಸಿಯು ಎಲ್ಲ ಭಾವಗಳಲ್ಲಿಯೂ, ಎಂದರೆ–ಪದಾರ್ಥಗಳಲ್ಲಿಯೂ ಇಚ್ಛಾರಹಿತನಾಗಿ, ಸಮಸ್ತ ಬಾಹ್ಯ–ಆಂತರಿಕ ವ್ಯವಹಾರಗಳಲ್ಲಿಯೂ ಭಾವನಾಪೂರ್ವಕವಾಗಿ ಪವಿತ್ರನಾಗುತ್ತಾನೋ, ಆಗಲೇ ಈ ದೇಹದ ತ್ಯಾಗವನ್ನು ಮಾಡಿ, ನಿರಂತರವಾದ ಸುಖವನ್ನು ಗಳಿಸಿಕೊಳ್ಳುತ್ತಾನೆ. (೧೩)

ಆದುದರಿಂದ, ಪ್ರಯತ್ನದಿಂದ, **"ಹತ್ತು ಲಕ್ಷಣಗಳಿಂದ ಕೂಡಿದ, ಕೆಳಗೆ ಬರೆಯಲ್ಪಟ್ಟಿರುವ ಧರ್ಮದ"** ಸೇವನವನ್ನು ಮಾಡುವುದು ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿಗಳಿಗೆ ಯೋಗ್ಯವಾಗಿದೆ. (೧೪)

ಮೊದಲನೆಯ ಲಕ್ಷಣ **ಧೃತಿ** ಸದಾ ಧೈರ್ಯವನ್ನಿಟ್ಟುಕೊಳ್ಳುವುದು.

ಎರಡನೆಯದು **ಕ್ಷಮಾ** ನಿಂದಾ ಸ್ತುತಿಗಳು, ಹಾನಿ–ಲಾಭಗಳು–ಮೊದಲಾದ ದ್ವಂದ್ವಗಳಲ್ಲಿಯೂ ಸಹನ ಶೀಲನಾಗಿರುವುದು.

ಮೂರನೆಯದು **ದಮ** ಮನಸ್ಸನ್ನು ಸದಾ ಧರ್ಮದಲ್ಲಿ ಪ್ರವೃತ್ತಗೊಳಿಸಿ, ಅಧರ್ಮದ ಕಡೆಯಿಂದ ತಡೆದಿಡುವುದು. ಎಂದರೆ– ಅಧರ್ಮವನ್ನು ಆಚರಿಸುವ ಇಚ್ಛೆಯೂ ಉದಿಸಬಾರದು.

ನಾಲ್ಕನೆಯದು **ಅಸ್ತೇಯ** ಕಳ್ಳತನದ ತ್ಯಾಗ, ಎಂದರೆ – ಅಪ್ಪಣೆಯಿಲ್ಲದೆ, ಅಥವಾ ಛಲದಿಂದ, ಕಪಟದಿಂದ ವಿಶ್ವಾಸಘಾತದಿಂದ, ಅಥವಾ ಯಾವುದಾದರೂ ವ್ಯವಹಾರದಿಂದ ಮತ್ತು ವೇದವಿರುದ್ಧವಾದ ಉಪದೇಶದಿಂದ, ಅನ್ಯರ ಪದಾರ್ಥವನ್ನು ಗ್ರಹಿಸುವುದು ಕಳ್ಳತನ ಮತ್ತು ಅದನ್ನು ಬಿಟ್ಟುಬಿಡುವುದು ಶ್ರೀಮಂತಿಕೆ ಎನಿಸುತ್ತದೆ.

ಐದನೆಯದು **ಶೌಚ** ರಾಗದ್ವೇಷ, ಪಕ್ಷಪಾತಗಳನ್ನು ಬಿಟ್ಟು ಒಳಗಿನ ಮತ್ತು ನೀರು, ಮಣ್ಣುಗಳಿಂದ ತೊಳೆದುಕೊಳ್ಳುವುದು– ಮೊದಲಾದುದರಿಂದ ಹೊರಗಿನ ಪವಿತ್ರತೆಯನ್ನು ಉಳಿಸಿಕೊಳ್ಳುವುದು.

ಆರನೆಯದು **ಇಂದ್ರಿಯನಿಗ್ರಹ** ಅಧರ್ಮಾಚರಣದಿಂದ ತಡೆದು ಇಂದ್ರಿಯಗಳನ್ನು ಸದಾ ಧರ್ಮದಲ್ಲಿಯೇ ನಡೆಯಿಸುವುದು.

ಏಳನೆಯದು **ಧೀಃ** ಮಾದಕ ದ್ರವ್ಯ, ಬುದ್ಧಿನಾಶಕವಾದ ಅನ್ಯ ಪದಾರ್ಥಗಳು, ದುಷ್ಟರ ಸಂಗ, ಆಲಸ್ಯ, ಪ್ರಮಾದ – ಮೊದಲಾದುವನ್ನು ಬಿಟ್ಟು, ಶ್ರೇಷ್ಠ ಪದಾರ್ಥಗಳ ಸೇವನ, ಸತ್ಪುರುಷರ ಸಂಗ, ಯೋಗಾಭ್ಯಾಸ – ಇವುಗಳಿಂದ ಬುದ್ಧಿಯನ್ನು ಹೆಚ್ಚಿಸಿಕೊಳ್ಳುವುದು.

ಎಂಟನೆಯದು **ವಿದ್ಯಾ** ಪೃಥಿವಿಯಿಂದ ಹಿಡಿದು ಪರಮೇಶ್ವರನ ಪರ್ಯಂತದ ಯಥಾರ್ಥಜ್ಞಾನ ಮತ್ತು ಅವುಗಳಿಂದ ಯಥೋಚಿತವಾದ ಉಪಯೋಗವನ್ನು ಪಡೆದುಕೊಳ್ಳುವುದು ವಿದ್ಯೆ; ಇದಕ್ಕೆ ವಿರುದ್ಧವಾದುದು ಅವಿದ್ಯೆ.

---

೯. **"ದೇಶಬಂಧಶ್ಚಿತ್ತಸ್ಯ ಧಾರಣಾ"**॥ ಚಿತ್ತವನ್ನು ಒಂದು ಸ್ಥಾನದಲ್ಲಿ ಬಂಧಿಸುವುದು ಧಾರಣ [ ಪಾತಂಜಲಯೋಗ– ವಿಭೂತಿ ಪಾದ

೧೦. **"ಸ್ವ ವಿಷಯಾಸಂಪ್ರಯೋಗೇ ಚಿತ್ತಸ್ಯ ಸ್ವರೂಪಾನುಕಾರ ಇವೇಂದ್ರಿಯಾಣಾಂ ಪ್ರತ್ಯಾಹಾರಃ"** ॥ –ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಿಂದ ಸರಿದು, ಚಿತ್ತದ ಸ್ವರೂಪಾನು ಕರಣ ಮಾಡುವುದು–ಪ್ರತ್ಯಾಹಾರ [ಪಾತಂಜಲ ಯೋಗ–ಸಾಧನಾಪಾದ]

೧೧. **"ತತ್ರ ಪ್ರತ್ಯಯೈಕತಾನತಾ ಧ್ಯಾನಮ್"**॥ –ಧಾರಣೆಯಲ್ಲಿ ಜ್ಞಾನ ಅವಿಚ್ಛಿನ್ನ ವಾಗಿರುವುದೇ ಧ್ಯಾನ. [ಪಾತಂಜಲಯೋಗ–ವಿಭೂತಿ ಪಾದ]

ಒಂಭತ್ತನೆಯದು **ಸತ್ಯ** ಹೇಗೆ ಆತ್ಮನಲ್ಲಿದೆಯೋ, ಹಾಗೆ ಮನಸ್ಸಿನಲ್ಲಿ, ಹೇಗೆ ಮನಸ್ಸಿನಲ್ಲಿದೆಯೋ, ಹಾಗೆಯೇ ವಾಣಿಯಲ್ಲಿ, ಹೇಗೆ ವಾಣಿಯಲ್ಲಿದೆಯೋ, ಹಾಗೆಯೇ ಕರ್ಮದಲ್ಲಿ ವರ್ತಿಸುವುದು ಸತ್ಯ. ಮತ್ತು ಯಾವ ಪದಾರ್ಥ ಹೇಗಿರುವುದೋ, ಅದನ್ನು ಹಾಗೆಯೇ ತಿಳಿಯುವುದು, ಹಾಗೆಯೇ ಹೇಳುವುದು ಮತ್ತು ಹಾಗೆಯೇ ಮಾಡುವುದೂ ಕೂಡ ಸತ್ಯವೇ ಮತ್ತು

ಹತ್ತನೆಯದು **ಅಕ್ರೋಧ** ಕ್ರೋಧ ಮೊದಲಾದ ದೋಷಗಳನ್ನು ಬಿಟ್ಟು, ಶಾಂತಿ – ಮೊದಲಾದ ಗುಣಗಳನ್ನು ಗ್ರಹಿಸುವುದು **"**ಧರ್ಮದ ಲಕ್ಷಣ**"**ವಾಗಿದೆ. ಈ ಹತ್ತು ಲಕ್ಷಣಗಳಿಂದ ಕೂಡಿರುವ, ಪಕ್ಷಪಾತರಹಿತವಾದ ನ್ಯಾಯಾಚರಣ ಧರ್ಮದ ಸೇವನವನ್ನು ನಾಲ್ಕು ಆಶ್ರಮಗಳವರೂ ಮಾಡಬೇಕು ಮತ್ತು ಇದೇ ವೇದೋಕ್ತ ಧರ್ಮದಲ್ಲಿಯೇ ತಾವು ನಡೆಯುವುದು ಮತ್ತು ತಿಳುವಳಿಕೆ ಹೇಳಿ ಬೇರೆಯವರನ್ನು ನಡೆಯಿಸುವುದು ಸಂನ್ಯಾಸಿಗಳ ವಿಶೇಷ ಧರ್ಮವಾಗಿರುತ್ತದೆ. (೧೫)

ಇದೇ ರೀತಿ, ನಿಧಾನ–ನಿಧಾನವಾಗಿ ಸಮಸ್ತ ಸಂಗದೋಷಗಳನ್ನೂ ಬಿಟ್ಟು, ಹರ್ಷ–ಶೋಕ – ಮೊದಲಾದ ಸರ್ವದ್ವಂದ್ವಗಳಿಂದಲೂ ವಿಮುಕ್ತನಾಗಿ, ಸಂನ್ಯಾಸಿಯು ಬ್ರಹ್ಮದಲ್ಲಿಯೇ ಅವಸ್ಥಿತನಾಗುತ್ತಾನೆ. ಗೃಹಸ್ಥ – ಮೊದಲಾದ ಎಲ್ಲ ಆಶ್ರಮಗಳಿಗೂ, ಸರ್ವವಿಧದ ವ್ಯವಹಾರಗಳ ಸತ್ಯ ನಿಶ್ಚಯವನ್ನುಂಟುಮಾಡಿ, ಅಧರ್ಮದ ವ್ಯವಹಾರಗಳಿಂದ ಜನರನ್ನು ಬಿಡಿಸಿ ಸಕಲಸಂಶಯಗಳನ್ನೂ ಛೇದಿಸಿ, ಸತ್ಯಧರ್ಮಯುಕ್ತ ವ್ಯವಹಾರಗಳಲ್ಲಿ ಪ್ರವೃತ್ತರನ್ನಾಗಿ ಮಾಡುವುದೇ ಸಂನ್ಯಾಸಿಗಳ ಮುಖ್ಯ ಕರ್ಮವಾಗಿದೆ. (೧೬)

**ಪ್ರಶ್ನೆ:–** ಸಂನ್ಯಾಸವನ್ನು ಗ್ರಹಿಸುವುದು ಕೇವಲ ಬ್ರಾಹ್ಮಣನ ಧರ್ಮವೋ, ಅಥವಾ ಕ್ಷತ್ರಿಯ – ಮೊದಲಾದವರದೂ ಆಗಿದೆಯೋ?

**ಉತ್ತರ:–** ಕೇವಲ ಬ್ರಾಹ್ಮಣನಿಗೆ ಮಾತ್ರ ಅಧಿಕಾರವಿದೆ. ಏಕೆಂದರೆ – **ಯಾವನು ಎಲ್ಲ ವರ್ಣಗಳಲ್ಲಿಯೂ ಪೂರ್ಣ ವಿದ್ವಾಂಸನೂ, ಧಾರ್ಮಿಕನೂ, ಪರೋಪಕಾರಪ್ರಿಯನೂ ಆದ ಮನುಷ್ಯನಾಗಿರುತ್ತಾನೋ, ಅವನಿಗೇ ಬ್ರಾಹ್ಮಣನೆಂದು ಹೆಸರು.** ಪೂರ್ಣವಿದ್ಯೆಯಿಲ್ಲದೆ, ಧರ್ಮದಲ್ಲಿ ಪರಮೇಶ್ವರನಲ್ಲಿ ನಿಷ್ಠೆ ಮತ್ತು ವೈರಾಗ್ಯವಿಲ್ಲದೆ ಸಂನ್ಯಾಸ ತೆಗೆದುಕೊಳ್ಳುವುದರಿಂದ ಜಗತ್ತಿಗೆ ವಿಶೇಷ ಉಪಕಾರವಾಗಲಾರದು. ಆದುದರಿಂದ ಬ್ರಾಹ್ಮಣನಿಗೆ ಅಧಿಕಾರವಿದೆ; ಅನ್ಯನಿಗಿಲ್ಲ ಎಂದು ಲೋಕ ಶ್ರುತಿಯಿದೆ. ಮನುವಿನ ಈ ಪ್ರಮಾಣವೂ ಕೂಡ ಇದೆ:–

**ಏಷ ವೋಽಭಿಹಿತೋ ಧರ್ಮೋ ಬ್ರಾಹ್ಮಣಸ್ಯ ಚತುರ್ವಿಧಃ ।**

**ಪುಣ್ಯೋಽಕ್ಷಯಫಲಃ ಪ್ರೇತ್ಯ ರಾಜಧರ್ಮಂ ನಿಬೋಧತ ॥** (ಮನು:– ೬.೯೭)

ಮನುವು ಇದನ್ನು ಹೇಳುತ್ತಾನೆ :– ಹೇ ಋಷಿಗಳೇ! ಈ ನಾಲ್ಕು ಬಗೆಯ, ಎಂದರೆ – ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಾಶ್ರಮ ಸ್ವೀಕರಿಸುವುದು ಬ್ರಾಹ್ಮಣನ ಧರ್ಮವಾಗಿದೆ. ಇಲ್ಲಿ, ಈ ಜೀವಿತದಲ್ಲಿ ಪುಣ್ಯವೆಂಬ ಮತ್ತು ಶರೀರ ಬಿಟ್ಟ ಮೇಲೆ ಮುಕ್ತಿ – ಎಂಬ ಅಕ್ಷಯವಾದ ಆನಂದವನ್ನು ಕೊಡುವುದು ಸಂನ್ಯಾಸಧರ್ಮವಾಗಿದೆ. ಇದಾದ ಮೇಲೆ ರಾಜರ ಧರ್ಮವನ್ನು ನನ್ನಿಂದ ಆಲಿಸಿರಿ.

ಹೀಗೆ ಸಂನ್ಯಾಸಗ್ರಹಣದ ಅಧಿಕಾರ ಮುಖ್ಯತಃ ಬ್ರಾಹ್ಮಣನದಾಗಿದೆ ಮತ್ತು ಕ್ಷತ್ರಿಯರೇ ಮೊದಲಾದವರಿಗೆ ಬ್ರಹ್ಮಚರ್ಯಾಶ್ರಮ – ಮೊದಲಾದುವು ಇದೆ ಎಂದು ಸಿದ್ಧವಾಯಿತು.

**ಪ್ರಶ್ನೆ :–** ಸಂನ್ಯಾಸಗ್ರಹಣದ ಆವಶ್ಯಕತೆ ಏನಿದೆ?

**ಉತ್ತರ:–** 'ಹೇಗೆ ಶರೀರದಲ್ಲಿ ಶಿರದ ಆವಶ್ಯಕತೆಯಿದೆಯೋ, ಹಾಗೆಯೇ ಆಶ್ರಮಗಳಲ್ಲಿ ಸಂನ್ಯಾಸಾಶ್ರಮದ ಆವಶ್ಯಕತೆಯಿದೆ.' ಏಕೆಂದರೆ ಇದಿಲ್ಲದಿದ್ದಲ್ಲಿ, ವಿದ್ಯೆ, ಧರ್ಮ ಎಂದಿಗೂ ವರ್ಧಿಸಲಾರವು. ಮತ್ತೆ, ಬೇರೆ ಆಶ್ರಮಗಳಿಗೆ ವಿದ್ಯಾಸ್ವೀಕಾರ, ಗೃಹಕೃತ್ಯಗಳು ಮತ್ತು ತಪಶ್ಚರ್ಯೆ – ಮೊದಲಾದುದರ ಸಂಬಂಧವಿರುವುದರಿಂದ ಅವಕಾಶ ಬಹಳ ಕಡಿಮೆ ಸಿಕ್ಕುತ್ತದೆ. ಪಕ್ಷಪಾತವನ್ನು ಬಿಟ್ಟು ವರ್ತಿಸುವುದು ಬೇರೆ ಆಶ್ರಮಗಳಿಗೆ ದುಷ್ಕರವಾಗಿರುತ್ತದೆ. ಹೇಗೆ ಸಂನ್ಯಾಸಿಯು ಎಲ್ಲೆಡೆಯಿಂದಲೂ, ಎಲ್ಲರಿಂದಲೂ ಮುಕ್ತನಾಗಿ ಜಗತ್ತಿಗೆ ಉಪಕಾರ ಮಾಡುತ್ತಾನೋ, ಹಾಗೆ ಬೇರೆಯ ಆಶ್ರಮಸ್ಥನು ಮಾಡಲಾರನು. ಏಕೆಂದರೆ – ಸಂನ್ಯಾಸಿಗೆ ಸತ್ಯವಿದ್ಯೆಯಿಂದ ಪದಾರ್ಥಗಳ ವಿಜ್ಞಾನದ ಉನ್ನತಿಗೆ ಎಷ್ಟು ಅವಕಾಶ ಸಿಕ್ಕುತ್ತದೋ, ಅಷ್ಟು ಬೇರೆಯ ಆಶ್ರಮದವನಿಗೆ ಸಿಕ್ಕಲಾರದು. ಆದರೆ,

ಬ್ರಹ್ಮಚರ್ಯದಿಂದ ಸಂನ್ಯಾಸಿಯಾದವನು, ಜಗತ್ತಿಗೆ ಸತ್ಯ ಶಿಕ್ಷಣವನ್ನಿತ್ತು ಎಷ್ಟು ಉನ್ನತಿ ಸಾಧಿಸಬಲ್ಲನೋ, ಅಷ್ಟನ್ನು ಗೃಹಸ್ಥ ಅಥವಾ ವಾಸಪ್ರಸ್ಥ ಆಶ್ರಮವನ್ನು ನಿರ್ವಹಿಸಿ ಸಂನ್ಯಾಸಾಶ್ರಮಿಯಾಗುವವನು ಸಾಧಿಸಲಾರನು.[೧೨]

**ಪ್ರಶ್ನೆ :**– ಸಂನ್ಯಾಸ ಸ್ವೀಕಾರ ಮಾಡುವುದು ಈಶ್ವರನ ಆಭಿಪ್ರಾಯಕ್ಕೆ ವಿರುದ್ಧವಾಗಿದೆ. ಏಕೆಂದರೆ – ಈಶ್ವರನ ಅಭಿಪ್ರಾಯ ಮಾನವರನ್ನು (ಸಂಖ್ಯೆಯನ್ನು) ಹೆಚ್ಚಿಸುವುದಾಗಿದೆ. ಗೃಹಾಶ್ರಮವನ್ನು ನಿರ್ವಹಿಸದೇ ಹೋದರೆ, ಅವನಿಂದ ಸಂತತಿಯೇ ಆಗಲಾರದು. ಸಂನ್ಯಾಸಾಶ್ರಮವೇ ಮುಖ್ಯವಾಗಿದ್ದರೆ ಮತ್ತು ಸರ್ವಮಾನವರೂ (ಅದನ್ನೇ) ಸ್ವೀಕರಿಸಿದರೆ, ಮಾನವರ ಮೂಲವೇ ಕತ್ತರಿಸಿ ಹೋಗುವುದು.

**ಉತ್ತರ:**– ಒಳ್ಳೆಯದು, ವಿವಾಹ ಮಾಡಿಕೊಂಡರೂ ಬಹುಮಂದಿಗೆ ಮಕ್ಕಳೇ ಆಗುವುದಿಲ್ಲ : ಅಥವಾ, ಆಗಿ ಬೇಗನೇ ನಾಶವನ್ನೂ ಹೊಂದುತ್ತಾರೆ. ಮತ್ತೆ, ಅವನೂ ಕೂಡ ಈಶ್ವರನ ಆಭಿಪ್ರಾಯಕ್ಕೆ ವಿರುದ್ಧವಾಗಿ ವರ್ತಿಸಿದಂತಾಯಿತಲ್ಲ! ನೀವು **"ಯತ್ನೇ ಕೃತೇ ಯದಿ ನ ಸಿಧ್ಯತಿ ಕೋಽತ್ರದೋಷಃ"**– (ಇದು ಒಬ್ಬ ಕವಿಯ[೧೩] ವಚನ) – ಅರ್ಥ:– ಯತ್ನ ಮಾಡಿದ ಮೇಲೆಯೂ ಕಾರ್ಯ ಕೈಗೂಡದಿದ್ದರೆ, ಇದರಲ್ಲೇನು ದೋಷ? ಎಂದರೆ – ಯಾವುದೂ ಇಲ್ಲ." – ಎನ್ನುವಿರಾದರೆ, ನಾವು– "ಗೃಹಾಶ್ರಮದಿಂದ ಬಹುಜನ ಮಕ್ಕಳಾಗಿ, ಪರಸ್ಪರ ವಿರುದ್ಧಾಚರಣ ಮಾಡಿ, ಹೊಡೆದಾಡಿ ಸತ್ತು ಹೋದರೆ, ಹಾನಿ ಎಷ್ಟಾಗುವುದು?**"** ಎಂದು ನಿಮ್ಮನ್ನು ಪ್ರಶ್ನಿಸುತ್ತೇವೆ. ಜ್ಞಾನದ ವಿರೋಧದಿಂದ ಕಾದಾಟ ಬಹಳ ನಡೆಯುತ್ತದೆ. ಸಂನ್ಯಾಸಿಯು ಏಕಮಾತ್ರ ವೇದೋಕ್ತ ಧರ್ಮದ ಉಪದೇಶದಿಂದ ಪರಸ್ಪರ ಪ್ರೀತಿಯನ್ನು ಉಂಟುಮಾಡಿಸುವನಾದರೆ, ಲಕ್ಷಾಂತರ ಜನ ಮಾನವರನ್ನು ಉಳಿಸಿ ಬಿಡುವನು. ಸಾವಿರಾರು ಜನ ಗೃಹಸ್ಥರು ಸಾಧಿಸುವಂತೆ, ಮಾನವರನ್ನು, (ಮಾನವರ ಸಂಖ್ಯೆಯನ್ನು) ಹೆಚ್ಚಿಸುವನು. ಮತ್ತು ಮಾನವರೆಲ್ಲರೂ ಸಂನ್ಯಾಸವನ್ನು ತೆಗೆದುಕೊಳ್ಳಲಾರರು; ಏಕೆಂದರೆ – ಎಲ್ಲರ ವಿಷಯಾಸಕ್ತಿಯೂ ಎಂದಿಗೂ ನಿವೃತ್ತಿಯಾಗಲಾರದು. ಯಾರು ಯಾರು ಸಂನ್ಯಾಸಿಗಳ ಉಪದೇಶದಿಂದ ಧಾರ್ಮಿಕರಾದ ಮಾನವರಾಗುವರೋ, ಅವರೆಲ್ಲಾ ಸಂನ್ಯಾಸಿಗಳ ಮಕ್ಕಳಂತೆಯೇ ಸರಿ, ಎಂದು ತಿಳಿಯಿರಿ.

**ಪ್ರಶ್ನೆ:**– ಸಂನ್ಯಾಸಿಗಳು – "ನಮಗೆ ಕರ್ತವ್ಯವಾವುದೂ ಇಲ್ಲ. ಆಹಾರ – ವಸ್ತ್ರ ತೆಗೆದುಕೊಂಡು ಅನಂದದಲ್ಲಿದ್ದರಾಯಿತು. ಅವಿದ್ಯಾರೂಪವಾದ ಪ್ರಪಂಚದೊಂದಿಗೆ ತಲೆ ಚಚ್ಚಿಕೊಳ್ಳುವುದೇಕೆ? ತನ್ನನ್ನೇ ಬ್ರಹ್ಮವೆಂದೊಪ್ಪಿ, ಸಂತುಷ್ಟರಾಗಿರುವುದು; ಯಾವನಾದರೂ ಬಂದು ಕೇಳಿದರೆ, ಅವನಿಗೂ ಕೂಡ, ಅದೇ ರೀತಿ, 'ನೀನೂ ಬ್ರಹ್ಮವೇ. ನಿನಗೆ ಪಾಪ – ಪುಣ್ಯ ಅಂಟುವುದಿಲ್ಲ. ಏಕೆಂದರೆ, ಶೀತ – ಉಷ್ಣ ಶರೀರದ, ಹಸಿವು ಬಾಯಾರಿಕೆ ಪ್ರಾಣದ ಮತ್ತು ಸುಖ – ದುಃಖ ಮನಸ್ಸಿನ ಧರ್ಮವಾಗಿದೆ. ಜಗತ್ತು ಮಿಥ್ಯೆ ಮತ್ತು ಜಗತ್ತಿನ ವ್ಯವಹಾರಗಳೂ ಕೂಡ ಎಲ್ಲವೂ ಕಲ್ಪಿತ, ಎಂದರೆ– ಸುಳ್ಳು. ಆದುದರಿಂದ, ಇದರಲ್ಲಿ ಸಿಕ್ಕಿಕೊಳ್ಳುವುದು ಬುದ್ಧಿವಂತರ ಕೆಲಸವಲ್ಲ. ಏನೇನು ಪಾಪ–ಪುಣ್ಯಗಳು ನಡೆಯುತ್ತವೋ, ಅವು ದೇಹದ ಮತ್ತು ಇಂದ್ರಿಯಗಳ ಧರ್ಮವಾಗಿದೆ, ಆತ್ಮನದಲ್ಲ; ಎಂದು ಹೇಳುತ್ತಾರೆ. ಇಂತಹದೇ ಉಪದೇಶ ಮಾಡುತ್ತಾರೆ. ಮತ್ತು ಸ್ವಲ್ಪ ವಿಲಕ್ಷಣವಾದ ಸಂನ್ಯಾಸದ ಧರ್ಮವನ್ನು ಹೇಳಿದ್ದೀರಿ. ಈಗ ನಾವು ಯಾವ ಮಾತನ್ನು ಸತ್ಯವೆಂದೂ, ಮತ್ತು ಯಾವನದನ್ನು ಸುಳ್ಳೆಂದೂ ತಿಳಿಯೋಣ?

**ಉತ್ತರ:**– ಅವರಿಗೆ ಒಳ್ಳೆಯ ಕರ್ಮಗಳೂ ಕೂಡ ಕರ್ತವ್ಯವಲ್ಲವೇನು? ನೋಡಿರಿ. ಮನುವು – **"ವೈದಿಕೈಶ್ಚೈವ ಕರ್ಮಭಿಃ"**[೧೪] –ಯಾವವು ಧರ್ಮಯುಕ್ತವಾದ ಸತ್ಯ ಕರ್ಮಗಳಾಗಿವೆಯೋ, ಆ ವೈದಿಕ ಕರ್ಮಗಳನ್ನು ಸಂನ್ಯಾಸಿಗಳೂ ಕೂಡ ಅವಶ್ಯವಾಗಿ ಮಾಡಬೇಕೆಂದು ಬರೆದಿದ್ದಾನೆ. ಭೋಜನ – ಆಚ್ಛಾದನ – ಮೊದಲಾದ ಕರ್ಮಗಳನ್ನು ಅವರು ಬಿಡಬಲ್ಲರೇನು? ಈ ಕರ್ಮಗಳು ಬಿಟ್ಟುಹೋಗಲಾರದೇ ಇರುವಾಗ, ಉತ್ತಮ ಕರ್ಮಗಳನ್ನು ಬಿಟ್ಟುಬಿಡುವುದರಿಂದ ಅವರು ಪತಿತರೂ ಮತ್ತು ಪಾಪ ಭಾಗಿಗಳೂ ಆಗುವುದಿಲ್ಲವೇನು? ಯಾವಾಗ ಗೃಹಸ್ಥರಿಂದ ಅನ್ನ–ವಸ್ತ್ರ ಮೊದಲಾದುವನ್ನು ತೆಗೆದುಕೊಳ್ಳುತ್ತಾರೋ ಮತ್ತು ಅವರಿಗೆ ಪ್ರತ್ಯುಪಕಾರ ಮಾಡುವುದಿಲ್ಲವೋ, ಆಗ ಅವರು ಮಹಾ ಪಾಪಿಗಳಾಗುವುದಿಲ್ಲವೇನು? ಹೇಗೆ ಕಣ್ಣುಗಳಿಂದ ನೋಡದಿದ್ದರೆ ಮತ್ತು ಕಿವಿಗಳಿಂದ ಕೇಳದಿದ್ದರೆ, ಕಣ್ಣುಗಳ ಮತ್ತು ಕಿವಿಗಳ ಇರುವಿಕೆ ವ್ಯರ್ಥವೋ, ಹಾಗೆಯೇ ಯಾವ ಸಂನ್ಯಾಸಿಗಳು ಸತ್ಯೋಪದೇಶವನ್ನೂ, ಮತ್ತು ವೇದಗಳೇ ಮೊದಲಾದ ಸತ್ಯ ಶಾಸ್ತ್ರಗಳ ಮನನ – ಚಿಂತನವನ್ನೂ ಮತ್ತು ಪ್ರಚಾರವನ್ನೂ ಮಾಡುವುದಿಲ್ಲವೋ, ಅವರೂ ಕೂಡ ಜಗತ್ತಿನಲ್ಲಿ ವ್ಯರ್ಥಭಾರರೂಪರಾಗಿರುತ್ತಾರೆ. ಮತ್ತು ಯಾರು–

---

೧೨. ಎಂದರೆ, ಆಯಸ್ಸಿನ ಬಹು ಭಾಗ ಗಾರ್ಹಸ್ಥ್ಯ–ವಾನಪ್ರಸ್ಥಗಳಿಗೆ ಸಂದು, ಸತ್ಯೋಪದೇಶಕ್ಕೆ ಸಾಕಷ್ಟು ಕಾಲ ಸಿಕ್ಕದೆಂದು ತಾತ್ಪರ್ಯ.

೧೩. ಪಂಚತಂತ್ರ, ಮಿತ್ರ ಭೇದ, ಕಥಾ ೪ –ಯು.ಮೀ

೧೪. ಮನುಸ್ಮೃತಿ [೬.೭೫] –ಯು.ಮೀ

"ಅವಿದ್ಯಾರೂಪವಾದ ಜಗತ್ತಿನೊಂದಿಗೆ ಏಕೆ ತಲೆಚಚ್ಚಿಕೊಳ್ಳಬೇಕು" – ಎಂದು ಮೊದಲಾಗಿ ಬರೆಯುತ್ತಾರೋ, ಮತ್ತು ಹೇಳುತ್ತಾರೋ, ಹಾಗೆಯೇ ಉಪದೇಶಿಸುತ್ತಾರೋ, ಅವರೇ ಮಿಥ್ಯಾರೂಪರು ಮತ್ತು ಪಾಪವನ್ನು ಹೆಚ್ಚಿಸುವ ಪಾಪಿಗಳಾಗಿರುತ್ತಾರೆ. (ಜೀವ ಮತ್ತು ಬ್ರಹ್ಮ ಒಂದಲ್ಲ) ಶರೀರ ಮೊದಲಾದುದರಿಂದ ಏನೇನು ಕರ್ಮ ಮಾಡಲ್ಪಡುತ್ತದೋ, ಅದೆಲ್ಲವೂ ಆತ್ಮನದೇ ಮತ್ತು ಅದರ ಫಲಗಳನ್ನು ಅನುಭವಿಸುವವನೂ ಆತ್ಮನೇ ಆಗಿದ್ದಾನೆ. 'ಯಾರು ಜೀವನನ್ನು ಬ್ರಹ್ಮವೆನ್ನುತ್ತಾರೋ, ಅವರು ಅವಿದ್ಯಾ– ನಿದ್ರೆಯಲ್ಲಿ ಲೀನರಾಗಿರುತ್ತಾರೆ. ಏಕೆಂದರೆ– ಜೀವನು ಅಲ್ಪನು, (ಅಣು ಸ್ವರೂಪನು) ಅಲ್ಪಜ್ಞನು ಮತ್ತು ಬ್ರಹ್ಮವು ಸರ್ವವ್ಯಾಪಕ ಮತ್ತು ಸರ್ವಜ್ಞವಾಗಿದೆ. ಬ್ರಹ್ಮವು ನಿತ್ಯ ಶುದ್ಧ ಮುಕ್ತ ಸ್ವಭಾವಯುಕ್ತವಾಗಿದೆ. ಮತ್ತು ಜೀವನು ಒಮ್ಮೊಮ್ಮೆ ಬದ್ಧನೂ, ಮತ್ತು ಒಮ್ಮೊಮ್ಮೆ ಮುಕ್ತನೂ ಆಗಿರುತ್ತಾನೆ. ಬ್ರಹ್ಮಕ್ಕೆ (ಅದು) ಸರ್ವ ವ್ಯಾಪಕ –ಸರ್ವಜ್ಞವಾಗಿರುವುದರಿಂದ ಭ್ರಮ ಅಥವಾ ಅವಿದ್ಯೆ ಎಂದೂ ಉಂಟಾಗಲಾರದು. ಮತ್ತು ಜೀವನಿಗೆ ಆಗಾಗ ವಿದ್ಯೆ ಮತ್ತು ಆಗಾಗ ಅವಿದ್ಯೆ ಉಂಟಾಗುತ್ತದೆ. ಬ್ರಹ್ಮವು ಜನನ – ಮರಣದ ದುಃಖವನ್ನು ಎಂದಿಗೂ ಹೊಂದುವುದಿಲ್ಲ; ಮತ್ತು ಜೀವನು ಹೊಂದುತ್ತಾನೆ. ಆದುದರಿಂದ ಅವರ ಈ ಉಪದೇಶ ಮಿಥ್ಯೆಯಾಗಿದೆ.

**ಪ್ರಶ್ನೆ :–** ಸಂನ್ಯಾಸಿಗಳು ಸರ್ವಕರ್ಮವಿನಾಶಿಯಾಗಿರುತ್ತಾರೆ ಮತ್ತು ಅಗ್ನಿಯ ಹಾಗೂ ಧಾತುವಿನ ಸ್ಪರ್ಶವನ್ನು ಮಾಡುವುದಿಲ್ಲ – ಈ ಮಾತು ಸತ್ಯವೋ ಅಥವಾ ಅಲ್ಲವೋ?

**ಉತ್ತರ:–** ಅಲ್ಲ, **"ಸಮ್ಯಕ್ ನಿತ್ಯಮಾಸ್ತೇ ಯಸ್ಮಿನ್, ಯದ್ವಾ ಸಮ್ಯಕ್ ನ್ಯಸ್ಯಂತಿ ದುಃಖಾನಿ ಕರ್ಮಾಣಿ ಯೇನ ಸ ಸಂನ್ಯಾಸಃ ಸ ಪ್ರಶಸ್ತೋ ವಿದ್ಯತೇ ಯಸ್ಯ ಸ ಸಂನ್ಯಾಸೀ."** ಯಾವನು ಬ್ರಹ್ಮ ಸ್ಥನಾಗಿರುತ್ತಾನೋ ಮತ್ತು ಯಾವುದರಿಂದ ದುಷ್ಟ ಕರ್ಮಗಳ ತ್ಯಾಗವು ಮಾಡಲ್ಪಡುತ್ತದೋ, ಆ ಉತ್ತಮ ಸ್ವಭಾವ ಯಾವನಲ್ಲಿರುತ್ತದೋ, ಅವನು 'ಸಂನ್ಯಾಸಿ'ಯೆನ್ನಿಸಿಕೊಳ್ಳುತ್ತಾನೆ. ಹೀಗೆ, ಸತ್ಕರ್ಮಕರ್ತೃವೂ, ಮತ್ತು ದುಷ್ಟಕರ್ಮಗಳ ನಾಶಕನೂ 'ಸಂನ್ಯಾಸಿ' ಎನ್ನಿಸಿಕೊಳ್ಳುತ್ತಾನೆ.

**ಪ್ರಶ್ನೆ :–** ಅಧ್ಯಾಪನ ಮತ್ತು ಉಪದೇಶವನ್ನು ಗೃಹಸ್ಥರು ಮಾಡುತ್ತಾ ಇರುತ್ತಾರೆ. ಪುನಃ ಸಂನ್ಯಾಸಿಯ ಪ್ರಯೋಜನವೇನು?

**ಉತ್ತರ:–** ಸತ್ಯೋಪದೇಶವನ್ನು ಎಲ್ಲ ಆಶ್ರಮಸ್ಥರೂ ಮಾಡಲಿ ಮತ್ತು ಕೇಳಲಿ. ಆದರೆ ಎಷ್ಟು ಅವಕಾಶ ಮತ್ತು ನಿಷ್ಪಕ್ಷಪಾತತ್ವ ಸಂನ್ಯಾಸಿಗಿರುತ್ತದೋ, ಅಷ್ಟು ಗೃಹಸ್ಥರಿಗೆ ಇರುವುದಿಲ್ಲ. ಹೌದು; ಯಾರು ಬ್ರಾಹ್ಮಣರಾಗಿದ್ದಾರೋ ಅವರ ಕರ್ತವ್ಯವೇ ಪುರುಷರು ಪುರುಷರಿಗೂ ಮತ್ತು ಸ್ತ್ರೀಯರು ಸ್ತ್ರೀಯರಿಗೂ ಸತ್ಯೋಪದೇಶ ಮಾಡುವುದು ಮತ್ತು ಓದಿಸುವುದಾಗಿದೆ. ಸಂನ್ಯಾಸಿಗೆ ಎಷ್ಟು ಪರ್ಯಟನದ ಅವಕಾಶ ಸಿಕ್ಕುತ್ತದೋ, ಅಷ್ಟು ಗೃಹಸ್ಥ ಬ್ರಾಹ್ಮಣರೇ ಮೊದಲಾದವರಿಗೆ ಎಂದಿಗೂ ಸಿಕ್ಕಲಾರದು. **ಯಾವಾಗ ಬ್ರಾಹ್ಮಣರು ವೇದವಿರುದ್ಧವಾದ ಆಚರಣಗಳನ್ನು ಮಾಡುತ್ತಾರೋ, ಆಗ ಅವರ ನಿಯಂತ್ರಣ ಕರ್ತೃವು ಸಂನ್ಯಾಸಿಯೇ ಆಗಿರುತ್ತಾನೆ.**[೧೫] ಆದುದರಿಂದ, ಸಂನ್ಯಾಸದ ಇರುವಿಕೆ ಉಚಿತವಾಗಿದೆ.

**ಪ್ರಶ್ನೆ :– "ಏಕರಾತ್ರಿಂ ವಸೇದ್ಗ್ರಾಮೇ"** [೧೬] – ಈ ಮೊದಲಾದ ವಚನಗಳಿಂದ ಸಂನ್ಯಾಸಿಯು ಒಂದು ಸ್ಥಳದಲ್ಲಿ ಒಂದು ರಾತ್ರಿ ಮಾತ್ರ ಇರಬೇಕು; ಹೆಚ್ಚು ನಿವಾಸ ಮಾಡಬಾರದು – ಎಂದು ತಿಳಿದುಬರುವುದಿಲ್ಲವೇ?

**ಉತ್ತರ:–** ಈ ಮಾತು ಸ್ವಲ್ಪ ಅಂಶದಲ್ಲಿಯೇನೋ ಒಳ್ಳೆಯದು. ಏಕೆಂದರೆ – ಒಂದೇ ಕಡೆ ವಾಸಮಾಡುವುದರಿಂದ ಜಗತ್ತಿನ ಉಪಕಾರ ಹೆಚ್ಚಾಗಿ ಆಗಲಾರದು. ಮತ್ತು ನಿರ್ದಿಷ್ಟ ಸ್ಥಾನದ ಅಭಿಮಾನ ಕೂಡ ಹುಟ್ಟುತ್ತದೆ. ರಾಗದ್ವೇಷವೂ ಅಧಿಕವಾಗುತ್ತದೆ. ಆದರೆ, ಒಂದೇ ಸ್ಥಾನಮಾನದಲ್ಲಿರುವುದರಿಂದ ವಿಶೇಷವಾದ ಉಪಕಾರವಾಗುವುದಾದರೆ, ಇರಬಹುದು. ಉದಾಹರಣೆಗಾಗಿ, 'ಜನಕರಾಜನ' ಹತ್ತಿರ ನಾಲ್ಕು ನಾಲ್ಕು ತಿಂಗಳವರೆಗೆ 'ಪಂಚಶಿಖ'ನೇ ಮೊದಲಾದವರೂ, ಮತ್ತು ಬೇರೆ ಸಂನ್ಯಾಸಿಗಳು ಅದೆಷ್ಟೋ ವರ್ಷಗಳವರೆಗೂ, ನಿವಾಸಮಾಡುತ್ತಿದ್ದರು. ಮತ್ತು "ಒಂದೇ ಕಡೆ ಇರಬಾರದು" – ಎಂಬ ಈ ಮಾತನ್ನು, ಆಧುನಿಕ ಪಾಷಂಡೀ ಸಾಂಪ್ರದಾಯಕರು ಬರೆದಿದ್ದಾರೆ. ಏಕೆಂದರೆ – ಸಂನ್ಯಾಸಿಯು ಒಂದೇ ಕಡೆ ಹೆಚ್ಚಾಗಿರುವನಾದರೆ, ತಮ್ಮ ಪಾಷಂಡ ನುಚ್ಚುನೂರಾಗಿ, ಹೆಚ್ಚು ವರ್ಧಿಸಲಾರದು – ಎಂಬುದು ಅವರ ಭಾವನೆ.

---

೧೫. ಇಂದು, ಸಂನ್ಯಾಸಿಗಳೇ ಗೃಹಸ್ಥರಿಗೆ ಅಂಜುವುದು ಎಷ್ಟು ಶೋಚನೀಯ? –ಅನು.

೧೬. ನಾರದ ಪರಿವ್ರಾಜಕೋಪನಿಷತ್ [೪.೧೪] ಯು.ಮೀ

**ಪ್ರಶ್ನೆ : ಯತೀನಾಂ ಕಾಂಚನಂ ದದ್ಯಾತ್ತಾಂಬೂಲಂ ಬ್ರಹ್ಮಚಾರಿಣಾಮ್ ।**

**ಚೋರಾಣಾಮಭಯಂ ದದ್ಯಾದ್ಯೋ ನರೋ ನರಕಂ ವ್ರಜೇತ್ ॥** [೧೭]

ಈ ಮೊದಲಾದ ವಚನಗಳ ಅಭಿಪ್ರಾಯ, ಸಂನ್ಯಾಸಿಗಳಿಗೆ ಯಾವನು ಚಿನ್ನದ ದಾನ ಮಾಡುವನೋ, ಆ ದಾತೃವು ನರಕವನ್ನು ಹೊಂದುತ್ತಾನೆ – ಎಂಬುದಾಗಿದೆ.

**ಉತ್ತರ:–** ಈ ಮಾತು ಕೂಡ ವರ್ಣಾಶ್ರಮ ವಿರೋಧಿಗಳೂ, ಸಾಂಪ್ರದಾಯಿಕರೂ ಮತ್ತು ಸ್ವಾರ್ಥಸಾಧಕರೂ ಆದ ಪೌರಾಣಿಕರಿಂದ ಕಲ್ಪಿತವಾಗಿದೆ. ಏಕೆಂದರೆ – "ಸಂನ್ಯಾಸಿಗಳಿಗೆ ಧನ ಸಿಕ್ಕಿದರೆ, ಅವರು ನಮ್ಮ ಖಂಡನವನ್ನು ಬಹಳವಾಗಿ ಮಾಡಬಲ್ಲವರಾಗುವರು. ಮತ್ತು ನಮಗೆ ಹಾನಿಯುಂಟಾಗುವುದು. ಮತ್ತು ಅವರು ನಮ್ಮ ಅಧೀನದಲ್ಲಿಯೂ ಇರುವುದಿಲ್ಲ. ಮತ್ತು ಭಿಕ್ಷೆಯೇ ಮೊದಲಾದ ವ್ಯವಹಾರಗಳು ನಮ್ಮ ಅಧೀನದಲ್ಲಿ ಇದ್ದರೆ, ಹೆದರುತ್ತಾ ಇರುವರು" – ಎಂದೇ ಅವರ ಭಾವನೆ. ಮೂರ್ಖರಿಗೂ ಮತ್ತು ಸ್ವಾರ್ಥಿಗಳಿಗೂ ದಾನ ಕೊಡುವುದರಲ್ಲಿ ಪುಣ್ಯವಿದೆಯೆಂದೂ ನೀವು ತಿಳಿಯುತ್ತೀರಿ; ಹೀಗಿರುವಾಗ, ವಿದ್ವಾಂಸರೂ ಮತ್ತು ಪರೋಪಕಾರಿಗಳೂ ಆದ ಸಂನ್ಯಾಸಿಗಳಿಗೆ ಕೊಡುವುದರಲ್ಲಿ ಯಾವ ದೋಷವೂ ಆಗಲಾರದು. ನೋಡಿರಿ:–

**ವಿವಿಧಾನಿ ಚ ರತ್ನಾನಿ ವಿವಿಕ್ತೇಷೂಪಪಾದಯೇತ್ ॥** (ಮನು:– ೧೧.೬)

"ನಾನಾ ವಿಧದ ರತ್ನ, ಸುವರ್ಣ ಮೊದಲಾದ ಧನವನ್ನು, (ವಿವಿಕ್ತೇಷು) ಎಂದರೆ ಸಂನ್ಯಾಸಿಗಳಿಗೆ ಕೊಡಬೇಕು". – ಎಂದಿದ್ದಾನೆ ಮನು; ಮತ್ತು ನಿಮ್ಮ ಆ ಶ್ಲೋಕವೂ ಅನರ್ಥಕವೇ ಆಗಿದೆ. ಏಕೆಂದರೆ – ಸಂನ್ಯಾಸಿಗಳಿಗೆ ಚಿನ್ನವನ್ನು ಕೊಡುವುದರಿಂದ ಯಜಮಾನನು ನರಕಕ್ಕೆ ಹೋಗುವನಾದರೆ, ಬೆಳ್ಳಿ, ಮತ್ತು ವಜ್ರ– ಮೊದಲಾದುವನ್ನು ಕೊಟ್ಟರೆ ಸ್ವರ್ಗಕ್ಕೆ ಹೋಗುವನೇ?

**ಪ್ರಶ್ನೆ :–** ಈ ಪಂಡಿತರು ಇದನ್ನು ಪಠಿಸುವಾಗ ಮರೆತರು. ಇದು – **"ಯತಿಹಸ್ತೇ ಧನಂ ದದ್ಯಾತ್"** – ಎಂದಿದೆ. ಎಂದರೆ – ಯಾವನು ಸಂನ್ಯಾಸಿಗಳ ಕೈಯಲ್ಲಿ ಧನವನ್ನು ಕೊಡುತ್ತಾನೋ, ಅವನು ನರಕಕ್ಕೆ ಹೋಗುತ್ತಾನೆ.

**ಉತ್ತರ :–** ಈ ವಚನವನ್ನೂ ಕೂಡ ಅವಿದ್ವಾಂಸನು ಕಪೋಲಕಲ್ಪನೆಯಿಂದ ರಚಿಸಿದ್ದಾನೆ. ಏಕೆಂದರೆ – ಕೈಯಲ್ಲಿ ಧನಕೊಡುವುದರಿಂದ ದಾತೃವು ಹೋಗುವನಾದರೆ, ಪಾದದ ಮೇಲೆ ಇಡುವುದರಿಂದ, ಅಥವಾ ಗಂಟುಕಟ್ಟಿಕೊಡುವುದರಿಂದ ಸ್ವರ್ಗಕ್ಕೆ ಹೋಗುವನೇ? ಆದುದರಿಂದ, ಇಂತಹ ಕಲ್ಪನೆ ಒಪ್ಪಲು ಯೋಗ್ಯವಾದುದಲ್ಲ. ಅಹುದು; ಸಂನ್ಯಾಸಿಯು ಯೋಗಕ್ಷೇಮಕ್ಕಿಂತ ಹೆಚ್ಚು ಇಟ್ಟುಕೊಂಡರೆ, ಕಳ್ಳರೇ ಮೊದಲಾದವರಿಂದ ಪೀಡಿತನಾಗಬಹುದು. ಮತ್ತು ಮೋಹಿತನೂ ಆಗಬಹುದು – ಎಂಬುದೇನೋ ಸರಿಯೇ. ಆದರೆ, ಯಾವನು ವಿದ್ವಾಂಸನಾಗಿರುತ್ತಾನೋ, ಅವನು ಅಯುಕ್ತವಾದ ವ್ಯವಹಾರವನ್ನು ಎಂದಿಗೂ ಮಾಡಲಾಗುವುದಿಲ್ಲ; ಮೋಹದಲ್ಲಿಯೂ ಸಿಕ್ಕುಕೊಳ್ಳುವುದಿಲ್ಲ. ಏಕೆಂದರೆ – ಅವನು ಮೊದಲು ಗೃಹಾಶ್ರಮದಲ್ಲಿ ಅಥವಾ ಪೂರ್ವಾಶ್ರಮದಲ್ಲಿ ಎಲ್ಲವನ್ನೂ ಅನುಭವಿಸಿರುತ್ತಾನೆ; ಅಥವಾ ಎಲ್ಲವನ್ನೂ ಕಂಡಿರುತ್ತಾನೆ. ಮತ್ತು ಯಾವನು ಬ್ರಹ್ಮಚರ್ಯದಿಂದಲೇ (ಸಂನ್ಯಾಸಿ) ಆಗಿರುತ್ತಾನೋ, ಅವನು ಪೂರ್ಣ ವೈರಾಗ್ಯಯುಕ್ತನಾಗಿರುವುದರಿಂದ ಎಂದಿಗೂ ಮೋಹಕ್ಕೆ ಸಿಕ್ಕುಕೊಳ್ಳುವುದಿಲ್ಲ.

**ಪ್ರಶ್ನೆ :** – ಶ್ರಾದ್ಧದಲ್ಲಿ ಸಂನ್ಯಾಸಿಯು ಬಂದರೆ, ಅಥವಾ (ಅವನಿಗೆ) ಊಟ ಮಾಡಿಸಿದರೆ, ಪಿತೃಗಳು ಓಡಿ ಹೋಗುವರು ಮತ್ತು ನರಕದಲ್ಲಿ ಬೀಳುವರು – ಎಂದು ಜನರು ಹೇಳುತ್ತಾರೆ.

**ಉತ್ತರ :–** ಮೊದಲಾಗಿ, ಮೃತರಾದ ಪಿತೃಗಳ ಆಗಮನ ಮತ್ತು ಮಾಡಲ್ಪಟ್ಟ ಶ್ರಾದ್ಧ ಮೃತರಾದ ಪಿತೃಗಳಿಗೆ ಲಭಿಸುವುದೇ ಅಸಂಭವ ಮತ್ತು ವೇದಗಳಿಗೆ ಹಾಗೂ ಯುಕ್ತಿಗೆ ವಿರುದ್ಧವಾಗಿರುವುದರಿಂದ ಮಿಥ್ಯೆಯಾಗಿದೆ. ಮತ್ತು "ಬರುವುದೇ ಇಲ್ಲವಾದಾಗ, ಓಡಿಹೋಗುವವರು ಯಾರು? ತಮ್ಮ ಪಾಪ–ಪುಣ್ಯಗಳಿಗನುಸಾರವಾಗಿ, ಈಶ್ವರನ ವ್ಯವಸ್ಥೆಯಿಂದ ಮರಣಾನಂತರ ಜೀವರು ಜನ್ಮವೆತ್ತುವಾಗ, ಅವರ ಬರುವಿಕೆ ಹೇಗೆ ಸಾಧ್ಯವಾಗಬಲ್ಲದು?" ಆದುದರಿಂದ, ಈ ಮಾತೂ ಕೂಡ ಉದರಾರ್ಥಿಗಳಾದ ಪೌರಾಣಿಕರ ಮತ್ತು ವೈರಾಗಿಗಳ ಮಿಥ್ಯಾ ಕಲ್ಪನೆಯೇ ಆಗಿದೆ. ಅಹುದು; ಎಲ್ಲಿ ಸಂನ್ಯಾಸಿಗಳು

---

೧೭. ಲಘು ಪರಾಶರ ಸ್ಮೃತಿ [೧.೫೭] –ಯು.ಮೀ

ಹೋಗುವರೋ ಅಲ್ಲಿ, ಈ ಮೃತರ ಶ್ರಾದ್ಧದ ಮಾಡುವಿಕೆ ಎಂಬ ಪಾಷಂಡ ವೇದಗಳೇ ಮೊದಲಾದ ಶಾಸ್ತ್ರಗಳಿಗೆ ವಿರುದ್ಧವಾಗಿರುವುದರಿಂದ, ದೂರಕ್ಕೆ ಓಡಿಹೋಗುವುದು – ಎಂಬುದೇನೋ ಸರಿ.

**ಪ್ರಶ್ನೆ:–** ಯಾವನು ಬ್ರಹ್ಮಚರ್ಯದಿಂದ ಸಂನ್ಯಾಸ ತೆಗೆದುಕೊಳ್ಳುವನೋ, ಅವನ ನಿರ್ವಾಹ ಕಷ್ಟದಿಂದ ಆಗುವುದು ಮತ್ತು ಕಾಮದ ನಿರೋಧವೂ ಕೂಡ ಅತಿ ಕಠಿಣವಾಗಿರುತ್ತದೆ. ಆದುದರಿಂದ ಗೃಹಾಶ್ರಮ, ವಾನಪ್ರಸ್ಥ – ಇವನ್ನು ನಿರ್ವಹಿಸಿ, ಯಾವಾಗ ವೃದ್ಧನಾಗುವನೋ, ಆಗಲೇ ಸಂನ್ಯಾಸ ತೆಗೆದುಕೊಳ್ಳುವುದು ಒಳ್ಳೆಯದಾಗಿರುತ್ತದೆ.

**ಉತ್ತರ:–** ಯಾವನು ನಿರ್ವಹಿಸಲಾರನೋ, ಇಂದ್ರಿಯಗಳನ್ನು ನಿಗ್ರಹಿಸಲಾರನೋ, ಅವನು ಬ್ರಹ್ಮಚರ್ಯದಿಂದ ಸಂನ್ಯಾಸ ತೆಗೆದುಕೊಳ್ಳಬಾರದು. ಆದರೆ ಯಾವನು ನಿಗ್ರಹಿಸಬಲ್ಲನೋ, ಅವನೇತಕ್ಕೆ ತೆಗೆದುಕೊಳ್ಳಬಾರದು? ಯಾವ ಪುರುಷನು ವಿಷಯದ ದೋಷಗಳನ್ನೂ ಮತ್ತು ವೀರ್ಯಸಂರಕ್ಷಣದ ಗುಣಗಳನ್ನೂ ತಿಳಿದಿರುತ್ತಾನೋ, ಅವನು ವಿಷಯಾಸಕ್ತನಾಗುವುದಿಲ್ಲ. ಮತ್ತು ಅವನ ವೀರ್ಯವು ವಿಚಾರವೆಂಬ ಬೆಂಕಿಗೆ ಕಟ್ಟಿಗೆಯಂತಿರುತ್ತದೆ : ಎಂದರೆ ಅದರಲ್ಲಿಯೇ ವ್ಯಯವಾಗಿ ಹೋಗುತ್ತದೆ. "ಹೇಗೆ ವೈದ್ಯನ ಮತ್ತು ಔಷಧಗಳ ಆವಶ್ಯಕತೆ ರೋಗಿಗೆ ಇರುತ್ತದೋ, ಹಾಗೆ ರೋಗರಹಿತನಿಗೆ ಇರುವುದಿಲ್ಲ. ಇದೇ ರೀತಿ ಯಾವ ಪುರುಷನಿಗೆ ಅಥವಾ ಸ್ತ್ರೀಗೆ ವಿದ್ಯಾ, ಧರ್ಮವೃದ್ಧಿ ಮತ್ತು ಸಮಸ್ತ ಜಗತ್ತಿನ ಉಪಕಾರ ಮಾಡುವುದೇ ಉದ್ದೇಶ್ಯವಾಗಿರುತ್ತದೋ, ಅವನು ಅಥವಾ ಅವಳು ಪಂಚಶಿಖ ಮೊದಲಾದ ಪುರುಷರೂ ಮತ್ತು ಗಾರ್ಗಿ– ಮೊದಲಾದ ಸ್ತ್ರೀಯರೂ ಇದ್ದಂತೆ, ವಿವಾಹ ಮಾಡಿಕೊಳ್ಳದೇ ಇರಬಹುದು." ಆದುದರಿಂದ ಅಧಿಕಾರಿಗಳಾಗಿರುವವರು ಸಂನ್ಯಾಸಿಗಳಾಗುವುದು ಉಚಿತವಾಗಿರುತ್ತದೆ. ಮತ್ತು "ಅನಧಿಕಾರಿಯು ಸಂನ್ಯಾಸ ಸ್ವೀಕಾರ ಮಾಡುವನಾದರೆ, ತಾನೂ ಮುಳುಗುವನು; ಮತ್ತು ಆನ್ಯರನ್ನೂ ಮುಳುಗಿಸುವನು." (ಸಾಮ್ರಾಟ್ ಮತ್ತು ಪರಿವ್ರಾಟ್‌ನ ಹೋಲಿಕೆ) ಹೇಗೆ ಚಕ್ರವರ್ತಿಯಾದ ರಾಜನು 'ಸಮ್ರಾಟ' ನಾಗಿರುತ್ತಾನೋ, ಹಾಗೆ ಸಂನ್ಯಾಸಿಯು 'ಪರಿವ್ರಾಟ' ನಾಗಿರುತ್ತಾನೆ, ವಿಶೇಷತಃ ರಾಜನು ತನ್ನ ದೇಶದಲ್ಲಿ ಅಥವಾ ತನ್ನ ಸಂಬಂಧಿಗಳ ನಡುವೆ ಸತ್ಕಾರವನ್ನು ಪಡೆಯುತ್ತಾನೆ ಮತ್ತು ಸಂನ್ಯಾಸಿಯು ಎಲ್ಲೆಡೆಯೂ ಪೂಜಿತನಾಗುತ್ತಾನೆ.

**ವಿದ್ವತ್ವಂ ಚ ನೃಪತ್ವಂಚ ನೈವ ತುಲ್ಯಂ ಕದಾಚನ ।**

**ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ॥**

ಇದು ಚಾಣಕ್ಯನೀತಿಶಾಸ್ತ್ರದ ಶ್ಲೋಕವಾಗಿದೆ. ವಿದ್ವಾಂಸನ ಮತ್ತು ರಾಜನ ಸಮತ್ವ ಎಂದಿಗೂ ಆಗಲಾರದು. ಏಕೆಂದರೆ – ರಾಜನು ತನ್ನ ರಾಜ್ಯದಲ್ಲಿ ಮಾತ್ರ ಮಾನ ಮತ್ತು ಸತ್ಕಾರ ಹೊಂದುತ್ತಾನೆ ಮತ್ತು ವಿದ್ವಾಂಸನು ಸರ್ವತ್ರ ಮಾನ– ಗೌರವಗಳನ್ನು ಪಡೆಯುತ್ತಾನೆ. ಆದುದರಿಂದ, ವಿದ್ಯೆ ಕಲಿಯಲು, ಸುಶಿಕ್ಷಣ ಗ್ರಹಿಸಲು ಮತ್ತು ಬಲಯುಕ್ತನಾಗುವುದೇ ಮೊದಲಾದುದಕ್ಕಾಗಿ ಬ್ರಹ್ಮಚರ್ಯ, ಎಲ್ಲ ಬಗೆಯ ಉತ್ತಮ ವ್ಯವಹಾರಗಳನ್ನು ಸಾಧಿಸಲು ಗೃಹಸ್ಥ, ವಿಚಾರ, ಧ್ಯಾನ ಮತ್ತು ವಿಜ್ಞಾನಗಳನ್ನು ವರ್ಧಿಸಲು ತಪಶ್ಚರ್ಯೆಗಾಗಿ ವಾನಪ್ರಸ್ಥ ಮತ್ತು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಪ್ರಚಾರ, ಧರ್ಮ ವ್ಯವಹಾರದ ಸ್ವೀಕಾರ ಮತ್ತು ದುಷ್ಟ ವ್ಯವಹಾರದ ತ್ಯಾಗ, ಸತ್ಯೋಪದೇಶ ಮತ್ತು ಸರ್ವರನ್ನೂ ಸಂದೇಹರಹಿತರನ್ನಾಗಿ ಮಾಡುವುದು – ಮೊದಲಾದುದಕ್ಕಾಗಿ ಸಂನ್ಯಾಸಾಶ್ರಮವಿರುತ್ತದೆ. ಆದರೆ, ಯಾರು ಈ ಸಂನ್ಯಾಸದ ಮುಖ್ಯ ಧರ್ಮವಾದ ಸತ್ಯೋಪದೇಶ ಮೊದಲಾದುವನ್ನು ಮಾಡುವುದಿಲ್ಲವೋ, ಅವರು ಪತಿತರು ಮತ್ತು ನರಕಗಾಮಿಗಳಾಗುತ್ತಾರೆ. ಈ ಕಾರಣದಿಂದ, ಸತ್ಯೋಪದೇಶ, ಶಂಕಾಸಮಾಧಾನ, ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಅಧ್ಯಾಪನ ಮತ್ತು ವೇದೋಕ್ತಧರ್ಮದ ವೃದ್ಧಿಯನ್ನು ಪ್ರಯತ್ನಪೂರ್ವಕವಾಗಿ ಮಾಡಿ, ಸಮಸ್ತ ಜಗತ್ತಿನ ಉನ್ನತಿಯನ್ನು ಸಾಧಿಸುವುದರಲ್ಲಿ ನಿರತರಾಗಿರುವುದು ಸಂನ್ಯಾಸಿಗಳಿಗೆ ಉಚಿತವಾಗಿದೆ.

**ಪ್ರಶ್ನೆ:–** ಯಾರು ಸಂನ್ಯಾಸಿಗಳಿಂದ ಬೇರೆಯಾದ ಸಾಧುಗಳು, ವೈರಾಗಿಗಳು, ಗೋಸಾಯಿಗಳು, ಖಾಖಿಗಳು* ಮೊದಲಾದವರು ಇದ್ದಾರೋ, ಅವರೂ ಸಂನ್ಯಾಸಾಶ್ರಮದಲ್ಲಿ ಎಣಿಸಲ್ಪಡುತ್ತಾರೋ, ಅಥವಾ ಇಲ್ಲವೋ?

**ಉತ್ತರ:–** ಇಲ್ಲ. ಏಕೆಂದರೆ – ಅವರಲ್ಲಿ ಸಂನ್ಯಾಸದ ಒಂದು ಲಕ್ಷಣವೂ ಇಲ್ಲ. ಅವರು ವೇದವಿರುದ್ಧವಾದ ಮಾರ್ಗದಲ್ಲಿ ಪ್ರವೃತ್ತರಾಗಿ, ವೇದಕ್ಕಿಂತ ಮಿಗಿಲಾಗಿ ತಮ್ಮ ಸಂಪ್ರದಾಯದ ಆಚಾರ್ಯರುಗಳ ವಚನಗಳನ್ನು ಒಪ್ಪುತ್ತಾರೆ ; ಮತ್ತು ಕೇವಲ ತಮ್ಮ ಮತದ ಪ್ರಶಂಸೆಯನ್ನು ಮಾಡುತ್ತಾರೆ. ಮಿಥ್ಯಾ ಪ್ರಪಂಚದಲ್ಲಿ ಸಿಕ್ಕಿಕೊಂಡು, ತಮ್ಮ ಸ್ವಾರ್ಥಕ್ಕಾಗಿ ಬೇರೆಯವರನ್ನೂ ತಮ್ಮ ತಮ್ಮ ಮತಗಳಲ್ಲಿ ಸಿಕ್ಕಿಸಿಕೊಳ್ಳುತ್ತಾರೆ. ಸುಧಾರಣೆ ಮಾಡುವುದಂತೂ ದೂರವೇ ಉಳಿಯಿತು; ಅದಕ್ಕೆ ಪ್ರತಿಕೂಲವಾಗಿ ಜಗತ್ತನ್ನು

ಭ್ರಾಂತಿಗೆ ಸಿಕ್ಕಸಿ, ಅಧೋಗತಿಗೆ ಈಡುಮಾಡುತ್ತಾರೆ ಮತ್ತು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ಆದುದರಿಂದ ಇವರನ್ನು ಸಂನ್ಯಾಸಾಶ್ರಮದಲ್ಲಿ ಎಣಿಸಲಾರೆವು. ಆದರೆ - ಇವರು ಪರಿಪಕ್ವ ಸ್ವಾರ್ಥಾಶ್ರಮಿಗಳಂತೂ ಅಹುದೇ ಅಹುದು. ಇದರಲ್ಲಿ ಏನೂ ಸಂದೇಹವಿಲ್ಲ. ಯಾವುದರಿಂದ ತಮಗೂ ಮತ್ತು ಸಮಸ್ತ ಜಗತ್ತಿಗೂ, ಈ ಲೋಕದಲ್ಲಿ - ಎಂದರೆ ಈಗಿನ ಜನ್ಮದಲ್ಲಿ, ಪರಲೋಕದಲ್ಲಿ - ಎಂದರೆ, ಮುಂದಣ ಜನ್ಮದಲ್ಲಿ, ಸ್ವರ್ಗದ - ಎಂದರೆ ಸುಖದ ಅನುಭವವನ್ನು ಉಂಟುಮಾಡುತ್ತಾರೋ, ಅಂತಹ, ಧರ್ಮದಲ್ಲಿ ಯಾರು ಸ್ವತಃ ನಡೆಯುತ್ತಾ, ಸಮಸ್ತ ಜಗತ್ತನ್ನೂ ನಡೆಯಿಸುತ್ತಾರೋ, ಆ ಧರ್ಮಾತ್ಮರಾದ ಜನರೇ "ಸಂನ್ಯಾಸಿ"ಗಳು ಮತ್ತು "ಮಹಾತ್ಮರು" ಆಗಿರುತ್ತಾರೆ.

ಹೀಗೆ ಸಂಕ್ಷೇಪವಾಗಿ ಸಂನ್ಯಾಸಾಶ್ರಮದ ಶಿಕ್ಷಣವನ್ನು ಬರೆದೆವು. ಈಗ ಇದರಿಂದ ಮುಂದಕ್ಕೆ ರಾಜ - ಪ್ರಜಾ ಧರ್ಮದ ವಿಷಯ ಬರೆಯಲ್ಪಡುವುದು.

**ಇತಿ ಶ್ರೀಮದ್ದಯಾನಂದಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ವಾನಪ್ರಸ್ಥ-ಸಂನ್ಯಾಸಾಶ್ರಮವಿಷಯೇ**

**ಪಂಚಮಃ ಸಮುಲ್ಲಾಸಃ ಸಂಪೂರ್ಣಃ**

# ಅಥ ಷಷ್ಠ ಸಮುಲ್ಲಾಸಾರಂಭಃ

## ಅಥ ರಾಜಧರ್ಮಾನ್ ವ್ಯಾಖ್ಯಾಸ್ಯಾಮಃ

**ರಾಜಧರ್ಮಾನ್ ಪ್ರವಕ್ಷ್ಯಾಮಿ ಯಥಾವೃತ್ತೋ ಭವೇನ್ನೃಪಃ ।**
**ಸಂಭವಶ್ಚ ಯಥಾ ತಸ್ಯ ಸಿದ್ಧಿಶ್ಚ ಪರಮಾ ಯಥಾ ॥ ೧ ॥** (ಮನು :– ೭:೧)
**ಬ್ರಾಹ್ಮಂ ಪ್ರಾಪ್ತೇನ ಸಂಸ್ಕಾರಂ ಕ್ಷತ್ರಿಯೇಣ ಯಥಾವಿಧಿ ।**
**ಸರ್ವಸ್ಯಾಸ್ಯ ಯಥಾನ್ಯಾಯಂ ಕರ್ತವ್ಯಂ ಪರಿರಕ್ಷಣಮ್ ॥ ೨ ॥** (ಮನು :– ೭:೨)

ಈಗ ಮನುಮಹಾರಾಜನು ಋಷಿಗಳಿಗೆ ಹೇಳುತ್ತಾನೆ:– ನಾಲ್ಕು ವರ್ಣಗಳ ಮತ್ತು ನಾಲ್ಕು ಆಶ್ರಮಗಳ ವ್ಯವಹಾರಗಳ ಕಥನದ ನಂತರ, ರಾಜನು ಯಾವ ರೀತಿ ಇರಬೇಕು? ಮತ್ತು ಹೇಗೆ ಇವನ ಆಗುವಿಕೆಯ ಸಂಭವವಿದೆ ಮತ್ತು ಹೇಗೆ ಇವನಿಗೆ ಪರಮ ಸಿದ್ಧಿ ಪ್ರಾಪ್ತವಾಗುವುದು – ಎಂಬ ಈ ವಿಷಯವನ್ನು, ಎಲ್ಲ ರೀತಿಯಿಂದಲೂ, ರಾಜಧರ್ಮಗಳನ್ನು ಹೇಳುತ್ತೇವೆ. (೧)

ಹೇಗೆ ಪರಮ ವಿದ್ವಾಂಸನಾದ ಬ್ರಾಹ್ಮಣನು ಇರುತ್ತಾನೋ, ಹಾಗೆ ವಿದ್ವಾಂಸನೂ, ಸುಶಿಕ್ಷಿತನೂ, ಆಗಿ, ಈ ಸಮಸ್ತ ರಾಜ್ಯದ ರಕ್ಷಣೆಯನ್ನು ನ್ಯಾಯದಿಂದ ಯಥಾವತ್ತಾಗಿ ಮಾಡುವುದು ಕ್ಷತ್ರಿಯನಿಗೆ ಯೋಗ್ಯವಾಗಿರುತ್ತದೆ. (೨) ಅದರ ಕ್ರಮವಿದು:–

**ತ್ರೀಣಿ ರಾಜಾನಾ ವಿದಥೇ ಪುರೂಣಿ ಪರಿ ವಿಶ್ವಾನಿ ಭೂಷಥಃ ಸದಾಂಸಿ ॥** (ಋಗ್ವೇದ :– ೩.೩೮.೬)

ಈಶ್ವರನು ಉಪದೇಶ ಮಾಡುತ್ತಾನೆ– **(ರಾಜಾನಾ)** ರಾಜನ ಮತ್ತು ಪ್ರಜೆಯ ಜನರು ಸೇರಿ, **(ವಿದಥೇ)** ಸುಖಪ್ರಾಪ್ತಿಕಾರಕವೂ ಮತ್ತು ವಿಜ್ಞಾನವೃದ್ಧಿಕಾರಕವೂ ಆದ, ರಾಜ–ಪ್ರಜಾ–ಸಂಬಂಧವೆಂಬ ವ್ಯವಹಾರದಲ್ಲಿ, **(ತ್ರೀಣಿ ಸದಾಂಸಿ)** ಮೂರು ಸಭೆಗಳನ್ನು, ಎಂದರೆ– ವಿದ್ಯಾರ್ಯಸಭೆ, ಧರ್ಮಾರ್ಯಸಭೆ, ರಾಜಾರ್ಯಸಭೆಗಳನ್ನು ನಿಯತಮಾಡಿ, **(ಪುರೂಣಿ)** ಬಹುವಿಧದ, **(ವಿಶ್ವಾನಿ)** ಸಮಸ್ತ ಪ್ರಜೆಗಳಿಗೆ ಸಂಬಂಧಪಟ್ಟ, ಮಾನವರೆಲ್ಲರನ್ನೂ **(ಪರಿಭೂಷಥಃ)** ಎಲ್ಲೆಡೆಯಿಂದಲೂ ವಿದ್ಯೆ, ಸ್ವಾತಂತ್ರ್ಯ, ಧರ್ಮ, ಸುಶಿಕ್ಷಣ ಮತ್ತು ಧನ– ಮೊದಲಾದುದರಿಂದ ಆಲಂಕರಿಸಿರಿ; (ಇತರ ಪ್ರಾಣಾಧಾರಿಗಳಿಗೆ ಹಿತವನ್ನುಂಟುಮಾಡಿರಿ.)

**ತಂ ಸಭಾ ಚ ಸಮಿತಿಶ್ಚ ಸೇನಾ ಚ ॥ ೧ ॥** (ಅಥರ್ವ:– ೧೫. ೯.೨)

**ಸಭ್ಯ ಸಭಾಂ ಮೇ ಪಾಹಿ ಯೇ ಚ ಸಭ್ಯಾಃ ಸಭಾಸದಃ ॥ ೨ ॥** (ಅಥರ್ವ:– ೧೯. ೫೫.೬)

**(ತಂ)** ಆ ರಾಜಧರ್ಮವನ್ನು, **(ಸಭಾ ಚ)** ಮೂರು ಸಭೆಗಳೂ **(ಸಮಿತಿಶ್ಚ)** ಸಂಗ್ರಾಮ – ಮೊದಲಾದುದರ ವ್ಯವಸ್ಥೆ, **(ಸೇನಾ ಚ)** ಮತ್ತು ಸೈನ್ಯವೂ ಸೇರಿ, ಪಾಲಿಸಬೇಕು. (೧)

ಸಭಾಸದರಿಗೆ ಮತ್ತು ರಾಜನಿಗೆ ಯೋಗ್ಯವಾದುದು ಏನೆಂದರೆ– ರಾಜನು ಸಮಸ್ತ ಸಭಾಸದರಿಗೂ, **(ಸಭ್ಯ)** ಸಭೆಗೆ ಯೋಗ್ಯನಾದ ಮುಖ್ಯ ಸಭಾಸದನೇ! ನೀನು, **(ಮೇ ಸಭಾಂ)** ನನ್ನ ಸಭೆಯ ಧರ್ಮಯುಕ್ತ ವ್ಯವಸ್ಥೆಯನ್ನು, **(ಪಾಹಿ)** ಪಾಲಿಸು. ಮತ್ತು **(ಯೇ ಚ ಸಭ್ಯಾಃ)** ಯಾವ ಸಭಾಯೋಗ್ಯರಾದ, **(ಸಭಾಸದಃ)** ಸಭಾಸದರಿದ್ದಾರೋ, ಅವರೂ ಕೂಡ ಸಭೆಯ ವ್ಯವಸ್ಥೆಯನ್ನು ಪಾಲಿಸಿಕೊಂಡು ಹೋಗುತ್ತಿರಲಿ– ಎಂದು ಆಜ್ಞೆ ಮಾಡಬೇಕು. (೨)

ಇದರ ಅಭಿಪ್ರಾಯವೇನೆಂದರೆ – ಒಬ್ಬನಿಗೇ ಸ್ವತಂತ್ರ ರಾಜ್ಯದ ಅಧಿಕಾರವನ್ನು ಕೊಡಬಾರದು. ಆದರೆ – ರಾಜನನ್ನು ಸಭಾಪತಿಯಾಗಿ ಮಾಡಬೇಕು; ಅವನ ಆಧೀನದಲ್ಲಿ ಸಭೆ, ಸಭೆಯ ಆಧೀನದಲ್ಲಿ ರಾಜ, ರಾಜ ಮತ್ತು ಸಭೆ ಪ್ರಜೆಯ ಅಧೀನದಲ್ಲಿ ಮತ್ತು ಪ್ರಜೆಯು ರಾಜಸಭೆಗೆ ಅಧೀನದಲ್ಲಿರಬೇಕು. ಹೀಗೆ ಮಾಡದೇ ಹೋಗುವಿರಾದರೆ:–

**ರಾಷ್ಟ್ರ ಮೇವ ವಿಶ್ಯಾಹಂತಿ ತಸ್ಮಾದ್ರಾಷ್ಟ್ರೀ ವಿಶಂ ಘಾತುಕಃ ।**

**ವಿಶಮೇವ ರಾಷ್ಟ್ರಾಯಾದ್ಯಾಂ ಕರೋತಿ ತಸ್ಮಾದ್ರಾಷ್ಟ್ರೀ ವಿಶ ಮತ್ತಿ ನ ಪುಷ್ಟಂ ಪಶುಂ ಮನ್ಯತ ಇತಿ॥** (ಶತಪಥ:– ೧೩.೨.೩.೭–೮)

ಪ್ರಜೆಯಿಂದ ಸ್ವತಂತ್ರವಾಗಿ, ರಾಜವರ್ಗವು ಸ್ವಾಧೀನವಾಗಿದ್ದರೆ, **(ರಾಷ್ಟ್ರಮೇವ ವಿಶ್ಯಾ ಹಂತಿ)** ರಾಜ್ಯದಲ್ಲಿ ಪ್ರವೇಶಿಸಿ, ಪ್ರಜೆಯನ್ನು ನಾಶಮಾಡುತ್ತಾ ಹೋಗುವುದು. ಏಕಾಕಿಯಾದ ರಾಜನು ಸರ್ವತಂತ್ರ ಸ್ವತಂತ್ರನಾಗಿ, ಅಥವಾ ಉನ್ಮತ್ತನಾಗಿಯಿದ್ದಲ್ಲಿ **(ರಾಷ್ಟ್ರೀ ವಿಶಂ ಘಾತುಕಃ)** ಪ್ರಜಾನಾಶಕನಾಗುತ್ತಾನೆ. ಎಂದರೆ, **(ವಿಶಮೇವ ರಾಷ್ಟ್ರಾಯಾದ್ಯಾಂ ಕರೋತಿ)** ಆ ರಾಜನು ಪ್ರಜೆಯನ್ನೇ ತಿನ್ನುತ್ತಾ ಹೋಗುತ್ತಾನೆ. (ಬಹಳ ಪೀಡಿಸುತ್ತಾನೆ). ಆದುದರಿಂದ ಯಾವನೊಬ್ಬನನ್ನೂ ರಾಜ್ಯದಲ್ಲಿ ಸರ್ವಥಾ ಸ್ವತಂತ್ರನನ್ನಾಗಿ ಮಾಡಬಾರದು. ಹೇಗೆ ಸಿಂಹಗಳು ಅಥವಾ ಮಾಂಸಾಹಾರೀ ಪ್ರಾಣಿಗಳು ಹೃಷ್ಟ-ಪುಷ್ಟ ಪಶುವನ್ನು ಕೊಂದು ತಿಂದು ಬಿಡುತ್ತವೋ, ಹಾಗೆ **(ರಾಷ್ಟ್ರೀ ವಿಶಮತ್ತಿ)** ಸರ್ವಾಧಿಕಾರ ಸಂಪನ್ನನಾದ ರಾಜನು ಪ್ರಜೆಯ ನಾಶವನ್ನು ಮಾಡುತ್ತಾನೆ. ಎಂದರೆ ಯಾವನನ್ನೂ ತನಗಿಂತ ಪ್ರಬಲನಾಗಲು ಬಿಡುವುದಿಲ್ಲ; ಶ್ರೀಮಂತನನ್ನು ಸೂರೆಮಾಡಿ, ಸುಲಿಗೆಮಾಡಿ, ಅನ್ಯಾಯದಿಂದ ದಂಡವಿಧಿಸಿ, ತನ್ನ ಸ್ವಾರ್ಥವನ್ನು ಪೂರ್ತಿಮಾಡಿಕೊಳ್ಳುವನು. ಆದುದರಿಂದ –

**ಇಂದ್ರೋ ಜಯಾತಿ ನ ಪರಾಜಯಾತಾ ಅಧಿರಾಜೋ ರಾಜಸು ರಾಜಯಾತೈ ।**

**ಚರ್ಕೃತ್ಯ ಈಡ್ಯೋ ವಂದ್ಯಶ್ಚೋಪಸದ್ಯೋ ನಮಸ್ಯೋ ಭವೇಹ ॥** (ಅಥರ್ವ:– ೬.೯೮.೧)

ಓ ಮಾನವರೇ! ಯಾವನು **(ಇಹ )** ಈ ಮಾನವ ಸಮುದಾಯದಲ್ಲಿ. **(ಇಂದ್ರಃ)** ಪರಮೈಶ್ವರ್ಯದ ಕರ್ತೃವಾಗಿ, ಶತ್ರುಗಳನ್ನು **(ಜಯಾತಿ)** ಜಯಿಸಬಲ್ಲವನಾಗಿದ್ದಾನೋ **(ನ ಪರಾಜಯಾತೈ)** ಯಾವನು ಶತ್ರುಗಳಿಂದ ಪರಾಜಿತನಾಗುವುದಿಲ್ಲವೋ, **(ರಾಜಸು)** ರಾಜರುಗಳಲ್ಲಿ, **(ಅಧಿರಾಜಃ)** ಸರ್ವೋಚ್ಚನಾಗಿ ವಿರಾಜಿಸುತ್ತಾ, **(ರಾಜಯಾತೈ)** ಪ್ರಕಾಶಮಾನನಾಗಿರುತ್ತಾನೋ, **(ಚರ್ಕೃತ್ಯಃ)** ಸಭಾಪತಿಯಾಗಲು ಅತ್ಯಂತ ಯೋಗ್ಯನೂ, **(ಈಡ್ಯಃ)** ಪ್ರಶಂಸೀಯವಾದ ಗುಣಕರ್ಮಸ್ವಭಾವಗಳಿಂದ ಯುಕ್ತನೂ, **(ವಂದ್ಯಃ)** ಸತ್ಕರಣೀಯನೂ, **(ಉಪಸದ್ಯಃ)** ಬಳಿಸಾರಲು ಮತ್ತು ಆಶ್ರಯಿಸಲು ಯೋಗ್ಯನೂ, **(ನಮಸ್ಯಃ)** ಸರ್ವರಿಗೂ ಮಾನನೀಯನೂ, **(ಭವ, ಭವೇತ್)** ಆಗಿರುವನೋ, ಅವನನ್ನೇ ಸಭಾಪತಿಯಾದ ರಾಜನನ್ನಾಗಿ ಮಾಡಬೇಕು.

**ಇಮಂ ದೇವಾ ಅಸಪತ್ನಂ ಸುವಧ್ವಂ ಮಹತೇ ಕ್ಷತ್ರಾಯ ಮಹತೇ ಜ್ಯೈಷ್ಠ್ಯಾಯ ।**

**ಮಹತೇ ಜಾನರಾಜ್ಯಾಯೇಂದ್ರಸ್ಯೇಂದ್ರಿಯಾಯ ॥ ೧ ॥** (ಯಜುರ್ವೇದ :– ೯.೪೦)

**(ದೇವಾಃ)** ಹೇ ವಿದ್ವಾಂಸರೇ! ರಾಜಪ್ರಜಾಜನರೇ! ನೀವು **(ಇಮಂ)** ಈ ರೀತಿಯ ಪುರುಷನನ್ನು, **(ಮಹತೇ ಕ್ಷತ್ರಾಯ)**

ಮಹಾನ್ ಚಕ್ರವರ್ತಿ ರಾಜ್ಯಕ್ಕಾಗಿ, **(ಮಹತೇ ಜ್ಯೈಷ್ಠ್ಯಾಯ)** ಎಲ್ಲಕ್ಕಿಂತ ಹಿರಿಮೆಗಾಗಿ, **(ಮಹತೇ ಜಾನರಾಜ್ಯಾಯ)** ದೊಡ್ಡ – ದೊಡ್ಡ ವಿದ್ವಾಂಸರುಗಳಿಂದ ಯುಕ್ತವಾದ ರಾಜ್ಯವನ್ನು ಪಾಲಿಸುವುದಕ್ಕಾಗಿ, ಮತ್ತು, **(ಇಂದ್ರ ಸ್ಯೇಂದ್ರಿಯಾಯ)** ಪರಮೈಶ್ವರ್ಯಯುಕ್ತವಾದ ರಾಜ್ಯವನ್ನೂ ಮತ್ತು ಧನವನ್ನೂ ಪಾಲಿಸುವುದಕ್ಕಾಗಿ, **(ಅಸಪತ್ನಂ ಸುವಧ್ವಂ)** ಸಮ್ಮತಿಯನ್ನು ಪಡೆದು ಎಲ್ಲೆಡೆಯೂ ಪಕ್ಷಪಾತರಹಿತನೂ, ಪೂರ್ಣವಿದ್ಯಾವಿನಯಯುಕ್ತನೂ, ಸರ್ವರ ಮಿತ್ರನೂ ಆದ ಸಭಾಪತಿ ರಾಜನನ್ನು ಸರ್ವಾಧೀಶನೆಂದು ಅಂಗೀಕರಿಸಿ, ಸಮಸ್ತ ಭೂಮಂಡಲವನ್ನೂ ಶತ್ರುರಹಿತವಾಗಿ ಮಾಡಿರಿ. ಮತ್ತು:–

**ಸ್ಥಿರಾ ವಃ ಸಂತ್ವಾಯುಧಾ ಪರಾಣುದೇ ವೀಳೂ ಉತ ಪ್ರತಿಷ್ಕಭೇ ।**

**ಯುಷ್ಮಾ ಕಮಸ್ತು ತವಿಷೀ ಪನೀಯಸೀ ಮಾ ಮರ್ತ್ಯಸ್ಯ ಮಾಯಿನಃ ॥** (ಋಗ್ವೇದ:– ೧.೩೯.೨)

ಈಶ್ವರನು ಉಪದೇಶಮಾಡುತ್ತಾನೆ – ಏನೆಂದರೆ, ಹೇ ರಾಜಪುರುಷರೇ! **(ವಃ)** ನಿಮ್ಮ, **(ಅಯುಧಾ)** ಆಗ್ನೇಯ ಮೊದಲಾದ ಅಸ್ತ್ರಗಳೂ ಮತ್ತು ಶತಘ್ನೀ **(ತೋಪು)**. ಭುಷಂಡೀ **(ಬಂದೂಕ)**. ಧನು, ಬಾಣ ಕರವಾಲ **(ಖಡ್ಗ)** – ಮೊದಲಾದ ಶಸ್ತ್ರಗಳೂ ಶತ್ರುಗಳನ್ನು, **(ಪರಾಣುದೇ)** ಪರಾಜಿತರನ್ನಾಗಿ ಮಾಡಲು, **(ಉತ ಪ್ರತಿಷ್ಕಭೇ)** ಮತ್ತು ತಡೆಗಟ್ಟಲು, **(ವೀಳೂ)** ಪ್ರಶಂಸಿತವೂ, ಮತ್ತು **(ಸ್ಥಿರಾ)** ದೃಢವೂ **(ಸಂತು)** ಆಗಿರಲಿ. **(ಯುಷ್ಮಾಕಂ)** ಮತ್ತು ನಿಮ್ಮ, **(ತವಿಷೀ)** ಸೈನ್ಯವು ನೀವು ಸದಾ ವಿಜಯಿಗಳಾಗುವಂತೆ, **(ಪನೀಯಸೀ ಅಸ್ತು)** ಪ್ರಶಂಸೀಯವಾಗಿರಲಿ. ಆದರೆ, **(ಮಾ ಮರ್ತ್ಯಸ್ಯ ಮಾಯಿನಃ)** ಯಾವನು ನಿಂದಿತವಾದ, ಅನ್ಯಾಯಭರಿತವಾದ ಕಾರ್ಯವನ್ನು ಮಾಡುತ್ತಾನೋ, ಅವನಿಗೆ ಮೇಲೆ ಹೇಳಿದ ವಸ್ತುಗಳು ಸಿಕ್ಕದಿರಲಿ, ಎಂದರೆ, "ಯಾವವರೆಗೆ ಮಾನವರು ಧಾರ್ಮಿಕರಾಗಿರುತ್ತಾರೋ, ಆ ವರೆಗೆ ಮಾತ್ರ ರಾಜ್ಯ ವರ್ಧಿಸುತ್ತಾ ಇರುತ್ತದೆ ಮತ್ತು ಯಾವಾಗ ದುಷ್ಟಾಚಾರಿಗಳಾಗುತ್ತಾರೋ, ಆಗ ನಷ್ಟ-ಭ್ರಷ್ಟವಾಗಿ ಹೋಗುತ್ತದೆ." ಮಹಾ ವಿದ್ವಾಂಸರನ್ನು ವಿದ್ಯಾಸಭಾಧಿಕಾರಿಗಳನ್ನಾಗಿಯೂ, ಧಾರ್ಮಿಕ ವಿದ್ವಾಂಸರನ್ನು ಧರ್ಮಸಭಾಧಿಕಾರಿಗಳನ್ನಾಗಿಯೂ, ಪ್ರಶಂಸನೀಯ ಧಾರ್ಮಿಕ ಪುರುಷರನ್ನು ರಾಜಸಭಾಸದರನ್ನಾಗಿಯೂ ಮತ್ತು ಯಾವನು ಎಲ್ಲರಲ್ಲಿಯೂ ಸರ್ವೋತ್ತಮ ಗುಣಕರ್ಮಸ್ವಭಾವಯುಕ್ತನಾದ ಮಹಾಪುರುಷನಾಗಿರುತ್ತಾನೋ, ಅವನನ್ನು ರಾಜಸಭೆಯ ಪತಿಯ ರೂಪದಲ್ಲಿಯೂ ಅಂಗೀಕರಿಸಿ, ಎಲ್ಲ ರೀತಿಯಿಂದಲೂ ಉನ್ನತಿಯನ್ನು ಸಾಧಿಸಬೇಕು. ಮೂರೂ ಸಭೆಗಳ ಒಪ್ಪಿಗೆಯಿಂದ ರಾಜನೀತಿಯ ಉತ್ತಮ ನಿಯಮಗಳನ್ನು ರೂಪಿಸಿ, ಮತ್ತು ನಿಯಮಗಳಿಗೆ ಅಧೀನರಾಗಿ ಜನರೆಲ್ಲರೂ ವರ್ತಿಸಬೇಕು. ಸರ್ವಹಿತಕಾರಕ ಕಾರ್ಯಗಳಲ್ಲಿ ಸಮ್ಮತಿ ಪಡೆಯಬೇಕು. "ಸರ್ವರ ಹಿತವನ್ನು ಮಾಡುವಲ್ಲಿ ಪರತಂತ್ರರಾಗಿಯೂ ಮತ್ತು ಧರ್ಮಯುಕ್ತವಾದ ಕಾರ್ಯಗಳಲ್ಲಿ, ಎಂದರೆ ಯಾವ – ಯಾವ ವೈಯಕ್ತಿಕ ಕಾರ್ಯಗಳಿರುತ್ತವೋ, ಅವುಗಳಲ್ಲಿ ಸ್ವತಂತ್ರರಾಗಿಯೂ"[೧] ಇರಬೇಕು. ಮತ್ತೆ, ಆ ಸಭಾಪತಿಯ ಗುಣಗಳು ಹೇಗಿರಬೇಕು?

**ಇಂದ್ರಾನಿಲಯಮಾರ್ಕಾಣಾಮಗ್ನೇಶ್ಚ ವರುಣಸ್ಯ ಚ ।**

**ಚಂದ್ರವಿತ್ತೇಶಯೋಶ್ಚೈವ ಮಾತ್ರಾ ನಿರ್ಹೃತ್ಯ ಶಾಶ್ವತೀಃ ॥** (ಮನು:– ೭.೪)

ಆ ಸಭೇಶನಾದ ರಾಜನು ಇಂದ್ರನ – ಎಂದರೆ ವಿದ್ಯುತ್ತಿನ ಹಾಗೆ[೨] ಶೀಘ್ರವಾಗಿ ಸಂಪತ್ತನ್ನು ಗಳಿಸುವವನೂ,ವಾಯುವಿನ ಹಾಗೆ ಸರ್ವರಿಗೂ ಪ್ರಾಣದಂತೆ ಪ್ರಿಯನೂ ಮತ್ತು ಹೃದಯದ ಭಾವವನ್ನರಿಯುವವನೂ, ಯಮನ ಹಾಗೆ – ಎಂದರೆ ಪಕ್ಷಪಾತರಹಿತನಾದ ನ್ಯಾಯಧೀಶನ ಹಾಗೆ ವರ್ತಿಸುವವನೂ, ಸೂರ್ಯನ ಹಾಗೆ[೩] ನ್ಯಾಯ, ಧರ್ಮ, ವಿದ್ಯೆಗಳ ಪ್ರಕಾಶನೂ, ಅಂಧಕಾರದ – ಎಂದರೆ, ಅವಿದ್ಯೆಯ, ಅನ್ಯಾಯದ ನಿರೋಧಕನೂ, ಅಗ್ನಿಯ ಹಾಗೆ ದುಷ್ಟ ತತ್ತ್ವಗಳನ್ನು ಭಸ್ಮಮಾಡುವವನೂ,

---

೧. ಆರ್ಯಸಮಾಜದ' ಹತ್ತನೆಯ ನಿಯಮವೂ ಇದೇ ರೀತಿ ಇದೆ.

೨. ವಿದ್ಯುತ್ತಿನ [electricity] ಮಹಿಮೆಯನ್ನುರಿತಿರುವರಿಗೆ ಅದೆಷ್ಟು ಸಂಪದ್ಯುತ್ಪಾದಕ ಎಂಬುದು ಗೊತ್ತೇ ಇದೆ.

೩. ಅಜ್ಞಾನಂಧಕಾರವನ್ನು ನಿವಾರಿಸುವ ಜ್ಞಾನಸೂರ್ಯನೆಂದು ಗ್ರಾಹ್ಯ

ವರುಣನ [೪] – ಎಂದರೆ, ಬಂಧನಕಾರಿಯ ಹಾಗೆ ದುಷ್ಟರನ್ನು ಅನೇಕ ರೀತಿಯಿಂದ ಬಂಧಿಸುವವನೂ, ಚಂದ್ರನ ಹಾಗೆ ಶ್ರೇಷ್ಠರಿಗೆ ಆನಂದದಾಯಕನೂ, ಧನಾಧ್ಯಕ್ಷನ ಹಾಗೆ ಕೋಶಗಳನ್ನು ತುಂಬಿಸುವವನೂ ಆಗಿ ಸಭಾಪತಿಯಾಗಬೇಕು.

**ತಪತ್ಯಾದಿತ್ಯವಚ್ಚೈಷ ಚಕ್ಷೂಂಷಿ ಚ ಮನಾಂಸಿ ಚ ।**

**ನ ಚೈನಂ ಭುವಿ ಶಕ್ನೋತಿ ಕಶ್ಚಿದಪ್ಯಭಿವೀಕ್ಷಿತುಮ್ ॥** (ಮನು:– ೭.೬)

ಯಾವನು ಸೂರ್ಯನ ಹಾಗೆ ಪ್ರತಾಪಶಾಲಿಯಾಗಿ ಸರ್ವರ ಬಾಹ್ಯ ಮತ್ತು ಆಂತರಿಕ ಮನಸ್ಸುಗಳನ್ನು ತನ್ನ ತೇಜಸ್ಸಿನಿಂದ ತಪ್ತವನ್ನಾಗಿ ಮಾಡುತ್ತಾನೋ, ಯಾವನನ್ನು ವಕ್ರದೃಷ್ಟಿಯಿಂದ ನೋಡಲು ಪೃಥಿವಿಯಲ್ಲಿ ಯಾವನೂ ಸಮರ್ಥನಲ್ಲವೋ.

**ಸೋಽಗ್ನಿರ್ಭವತಿ ವಾಯುಶ್ಚ ಸೋಽರ್ಕಃ ಸೋಮಃ ಸ ಧರ್ಮರಾಟ್ ।**

**ಸ ಕುವೇರಃ ಸ ವರುಣಃ ಸ ಮಹೇಂದ್ರಃ ಪ್ರಭಾವತಃ ॥** (ಮನು:–೭.೭)

ಮತ್ತು ಯಾವನು ತನ್ನ ಪ್ರಭಾವದಿಂದ ಅಗ್ನಿ, ವಾಯು, ಸೂರ್ಯ, ಸೋಮ, ಧರ್ಮಪ್ರಕಾಶ, ಧರ್ಮವರ್ಧಕ, ದುಷ್ಟರ ಬಂಧಕ, ಮಹದೈಶ್ವರ್ಯವಂತನಾಗಿರುತ್ತಾನೋ, ಅವನೇ ಸಭಾಧ್ಯಕ್ಷನಾಗಲು, ಸಭೇಶನಾಗಲು ಯೋಗ್ಯನೆಂದರಿಯಬೇಕು. (೩)

ನಿಜವಾದ ರಾಜನು ಯಾವನು?

**ಸ ರಾಜಾ ಪುರುಷೋ ದಂಡಃ ಸ ನೇತಾ ಶಾಸಿತಾ ಚ ಸಃ ।**

**ಚತುರ್ಣಾಮಾಶ್ರಮಾಣಾಂಚ ಧರ್ಮಸ್ಯ ಪ್ರತಿಭೂಃ ಸ್ಮೃತಃ ॥ ೧ ॥**

**ದಂಡಃ ಶಾಸ್ತಿ ಪ್ರಜಾಃ ಸರ್ವಾಃ ದಂಡ ಏವಾಭಿರಕ್ಷತಿ ।**

**ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ ॥ ೨ ॥**

**ಸಮೀಕ್ಷ್ಯ ಸ ಧೃತಃ ಸಮ್ಯಕ್ ಸರ್ವಾ ರಂಜಯತಿ ಪ್ರಜಾಃ ।**

**ಅಸಮೀಕ್ಷ್ಯ ಪ್ರಣೀತಸ್ತು ವಿನಾಶಯತಿ ಸರ್ವತಃ ॥ ೩ ॥** (ಮನು:– ೭.೧೭.೧೯)

ಯಾವ ದಂಡವಿದೆಯೋ, ಅದೇ ಪುರುಷ, ರಾಜ; ಅದೇ ನ್ಯಾಯದ ಪ್ರಚಾರಕ; ಮತ್ತು ಶಾಸನಕರ್ತೃ. ಅದೇ ನಾಲ್ಕು ವರ್ಣಗಳ ಮತ್ತು ಆಶ್ರಮಗಳ ಪ್ರತಿಭೂ – ಎಂದರೆ ಜಾಮೀನಾಗಿದೆ. (೧).

ಅದೇ ಪ್ರಜೆಗಳ ಶಾಸಕ, ಸರ್ವಪ್ರಜಾರಕ್ಷಕ, ನಿದ್ರಿತರಾದ ಪ್ರಜಾ ಜನರಲ್ಲಿ ಜಾಗರೂಕವಾಗಿರುತ್ತದೆ. ಆದುದರಿಂದ ಬುದ್ಧಿವಂತರಾದ ಜನರು ದಂಡವನ್ನೇ ಧರ್ಮವೆನ್ನುತ್ತಾರೆ. (೨)

ದಂಡವು ಒಳ್ಳೆಯ ರೀತಿಯಲ್ಲಿ ವಿಚಾರಪೂರ್ವಕವಾಗಿ ಧರಿಸಲ್ಪಟ್ಟರೆ, ಅದು ಪ್ರಜೆಗಳನ್ನೆಲ್ಲಾ ಆನಂದಿತರನ್ನಾಗಿ ಮಾಡುತ್ತದೆ. ಮತ್ತು ಆಲೋಚನೆಯಿಲ್ಲದೆ ನಡೆಯಿಸಲ್ಪಟ್ಟರೆ, ಎಲ್ಲೆಡೆಯಿಂದಲೂ ರಾಜನ ವಿನಾಶವನ್ನು ಮಾಡಿಬಿಡುತ್ತದೆ. (೩)

**ದುಷ್ಯೇಯುಃ ಸರ್ವವರ್ಣಾಶ್ಚ ಭಿದ್ಯೇರನ್ ಸರ್ವಸೇತವಃ ।**

**ಸರ್ವಲೋಕಪ್ರಕೋಪಶ್ಚ ಭವೇದ್ದಂಡಸ್ಯ ವಿಭ್ರಮಾತ್ ॥ ೪ ॥**

**ಯತ್ರಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಪಾಪಹಾ ।**

**ಪ್ರಜಾಸ್ತತ್ರ ನ ಮುಹ್ಯಂತಿ ನೇತಾ ಚೇತ್ಸಾಧು ಪಶ್ಯತಿ ॥ ೫ ॥**

---

೪. "ಉದುತ್ತಮಂ ಮುಮುಗ್ಧಿ ನೋ ವಿ ಪಾಶಂ ಮಧ್ಯಮಂ ಚೃತ ।
ಅವಾಧಮಾನಿ ಜೀವಸೇ" – ಋಗ್ವೇದ:– ೧.೨೫.೨೧
ಈ ರೀತಿ " ಪಾಶಗಳಿಂದ ಬಿಡಿಸು"– ಎಂದು ಭಗವಂತನಲ್ಲಿ ಮೊರೆಯಿಡುವ ಹಲವಾರು ಋಕ್ಕುಗಳಿವೆ. ಕರ್ಮಾನುಸಾರ ಜೀವರನ್ನು ಬಂಧಿಸುವ ದೇವ ದೇವನಲ್ಲಿಯೇ ಈ ಬೇಡಿಕೆ. ಹೀಗೆ, ವರುಣ, ಎಂದರೆ ಬಂಧನಕಾರಿ ಎಂದು ಸಿದ್ಧವಾಗುತ್ತದೆ. –ಅನು.

**ತಸ್ಯಾಹುಃ ಸಂಪ್ರಣೇತಾರಂ ರಾಜಾನಂ ಸತ್ಯವಾದಿನಮ್ ।**

**ಸಮೀಕ್ಷ್ಯಕಾರಿಣಂ ಪ್ರಾಜ್ಞಂ ಧರ್ಮಕಾಮಾರ್ಥಕೋವಿದಮ್ ॥ ೬ ॥**

**ತಂ ರಾಜಾ ಪ್ರಣಯನ್ ಸಮ್ಯಕ್ ತ್ರಿವರ್ಗೇಣಾಭಿ ವರ್ಧತೇ ।**

**ಕಾಮಾತ್ಮಾ ವಿಷಮಃ ಕ್ಷುದ್ರೋ ದಂಡೇನೈವ ನಿಹನ್ಯತೇ ॥ ೭ ॥**

**ದಂಡೋ ಹಿ ಸುಮಹತ್ತೇಜೋ ದುರ್ಧರಶ್ಚಾಕೃತಾತ್ಮಭಿಃ ।**

**ಧರ್ಮಾದ್ವಿಚಲಿತಂ ಹಂತಿ ನೃಪಮೇವ ಸಬಾಂಧವಮ್ ॥ ೮ ॥** (ಮನು:- ೭.೨೪-೨೮)

ದಂಡವಿಲ್ಲದೇ [೫] ಹೋದರೆ ಎಲ್ಲ ವರ್ಣಗಳೂ ದೂಷಿತವಾಗಿ ಹೋಗುವುವು ಮತ್ತು ಎಲ್ಲ ಕಟ್ಟುಪಾಡುಗಳೂ ಛಿನ್ನಭಿನ್ನವಾಗಿ ಹೋಗುವುವು. ದಂಡವು ತಕ್ಕ ರೀತಿಯಲ್ಲಿ ಇಲ್ಲದಿರುವುದರಿಂದ ಜನರೆಲ್ಲರಿಗೂ ಪ್ರಕೋಪ ಉಂಟಾಗುವುದು. (೪)

ಎಲ್ಲಿ ಕಪ್ಪು ಬಣ್ಣದ, ಕೆಂಪು ಕಣ್ಣಿನ ಪುರುಷನ ಹಾಗೆ [೬] ಪಾಪಗಳ ನಾಶಮಾಡುವ ದಂಡವು ಚಲಿಸುತ್ತದೋ, ಅಲ್ಲಿ ಪ್ರಜೆಯು ಮೋಹಕ್ಕೆ ಸಿಕ್ಕದೆ ಹರ್ಷಿತವಾಗಿರುತ್ತದೆ; ಆದರೆ ದಂಡವನ್ನು ಸಂಚಾಲನ ಮಾಡುವವನು ಪಕ್ಷಪಾತರಹಿತನಾದ ವಿದ್ವಾಂಸನಾಗಿದ್ದರೆ ಮಾತ್ರ. (೫)

ಆ ದಂಡದ ಸಂಚಾಲಕನು ಯಾವನು? ಸತ್ಯವಾದಿಯೂ, ಆಲೋಚಿಸಿ ಕೆಲಸ ಮಾಡುವವನೂ, ಬುದ್ಧಿಶಾಲಿಯೂ, ಧರ್ಮ, ಅರ್ಥ ಮತ್ತು ಕಾಮದ ಸಿದ್ಧಿಯಲ್ಲಿ ಪಂಡಿತನೂ ಆದ ರಾಜನು ಯಾವನಿದ್ದಾನೋ, ಅವನನ್ನೇ ವಿದ್ವಾಂಸರಾದ ಜನರು ಆ ದಂಡದ ಪ್ರವರ್ತಕನೆಂದು ಹೇಳುತ್ತಾರೆ. (೬)

ಯಾವ ರಾಜನು ದಂಡವನ್ನು ಒಳ್ಳೆಯ ರೀತಿಯಲ್ಲಿ ನಡೆಯಿಸುತ್ತಾನೋ, ಅವನು ಧರ್ಮದ, ಅರ್ಥದ ಮತ್ತು ಕಾಮದ ಸಿದ್ಧಿಯನ್ನು ವರ್ಧಿಸುತ್ತಾನೆ ಮತ್ತು ಯಾವನು ವಿಷಯಲಂಪಟನೂ, ವಕ್ರನೂ, ಈರ್ಷ್ಯಾಳುವೂ, ಕ್ಷುದ್ರನೂ, ನೀಚಬುದ್ಧಿಯೂ ಆಗಿ, ನ್ಯಾಯಧೀಶನ ಸ್ಥಾನ ಗ್ರಹಿಸಿದ ರಾಜನಾಗಿರುತ್ತಾನೋ, "ಅವನು ದಂಡದಿಂದಲೇ ಕೊಲ್ಲಲ್ಪಡುತ್ತಾನೆ." (೭)

ಯಾವಾಗ ದಂಡವು ಮಹಾ ತೇಜೋಮಯವಾಗಿರುತ್ತದೋ, ಮತ್ತು ಅವಿದ್ವಾಂಸನೂ, ಅಧರ್ಮಾತ್ಮನೂ ಅದನ್ನು ಧರಿಸಲು ಶಕ್ಯವಲ್ಲವೋ, ಆಗ ಆ ದಂಡವು ಧರ್ಮರಹಿತನಾದ ಆ ರಾಜನನ್ನೇ ಕುಟುಂಬಸಹಿತನಾಗಿ ನಾಶಮಾಡಿಬಿಡುತ್ತದೆ. (೮)

**ಸೋಽಸಹಾಯೇನ ಮೂಢೇನ ಲುಬ್ಧೇನಾಕೃತಬುದ್ಧಿನಾ ।**

**ನ ಶಕ್ಯೋ ನ್ಯಾಯತೋ ನೇತುಂ ಸಕ್ತೇನ ವಿಷಯೇಷು ಚ ॥ ೯ ॥**

**ಶುಚಿನಾ ಸತ್ಯಸಂಧೇನ ಯಥಾ ಶಾಸ್ತ್ರಾನುಸಾರಿಣಾ ।**

**ಪ್ರಣೇತುಂ ಶಕ್ಯತೇ ದಂಡಃ ಸುಸಹಾಯೇನ ಧೀಮತಾ ॥ ೧೦ ॥** (ಮನು:- ೭.೩೦-೩೧)

ಏಕೆಂದರೆ - ಯಾವನು ಆಪ್ತ ಪುರುಷರ ಸಹಾಯದಿಂದಲೂ, ವಿದ್ಯಾ - ಸುಶಿಕ್ಷಣಗಳಿಂದಲೂ ರಹಿತನಾಗಿರುತ್ತಾನೋ, ವಿಷಯಗಳಲ್ಲಿ ಆಸಕ್ತನಾದ ಮೂಢನಾಗಿರುತ್ತಾನೋ, ಅವನು ನ್ಯಾಯದಿಂದ ದಂಡವನ್ನು ಸಂಚಾಲನ ಮಾಡಲು ಎಂದೂ ಸಮರ್ಥನಾಗಲಾರನು. (೯)

ಮತ್ತು ಯಾವನು ಪವಿತ್ರಾತ್ಮನೂ, ಸತ್ಯಾಚಾರವಂತನೂ, ಮತ್ತು ಸತ್ಪುರುಷರ ಸಂಗಾತಿಯೂ, ತಕ್ಕಂತಹ ಕ್ರಮದಲ್ಲಿ ನೀತಿಶಾಸ್ತ್ರಕ್ಕೆ ಅನುಕೂಲವಾಗಿ ನಡೆಯುವವನೂ, ಶ್ರೇಷ್ಠ ಪುರುಷರ ಸಹಾಯದಿಂದ ಯುಕ್ತನೂ, ಬುದ್ಧಿವಂತನೂ ಆಗಿದ್ದಾನೋ, ಅವನೇ ನ್ಯಾಯರೂಪ ದಂಡವನ್ನು ನಡೆಯಿಸುವುದರಲ್ಲಿ ಸಮರ್ಥನಾಗುತ್ತಾನೆ. (೧೦) ಆದುದರಿಂದ :-

---

೫. ದಂಡ –ಎಂದರೆ, ಶಾಸನ ಶಕ್ತಿ; ನಿಗ್ರಹಾನುಗ್ರಹ ಸತ್ವಶಕ್ತಿ; ರಾಜ್ಯಾಧಿಕಾರ.–ಅನು

೬. ಕರಿಯ ಉಡುಪು ನಿಷ್ಪಕ್ಷಪಾತತ್ವದ ಚಿಹ್ನೆ; ಕೆಂಪು ಕಣ್ಣು ವರ್ಚಸ್ವಿಯ ಚಿಹ್ನೆ–ಅನು.

**ಸೇನಾಪತ್ಯಂ ಚ ರಾಜ್ಯಂ ಚ ದಂಡನೇತೃತ್ವಮೇವ ಚ ।**

**ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥ ೧ ॥ (ಮನು:– ೧೨. ೧೦೦)**

**ದಶಾವರಾ ವಾ ಪರಿಷದ್ಯಂ ಧರ್ಮಂ ಪರಿಕಲ್ಪಯೇತ್ ।**

**ತ್ರ್ಯವರಾ ವಾಪಿ ವೃತ್ತಸ್ಥಾ ತಂ ಧರ್ಮಂ ನ ವಿಚಾಲಯೇತ್ ॥ ೨ ॥**

**ತ್ರೈವಿದ್ಯೋ ಹೈತುಕಸ್ತರ್ಕೀ ನೈರುಕ್ತೋ ಧರ್ಮಪಾಠಕಃ ।**

**ತ್ರಯಶ್ಚಾಶ್ರಮಿಣಃ ಪೂರ್ವೇ ಪರಿಷತ್ ಸ್ಯಾದ್ದಶಾವರಾ ॥ ೩ ॥**

**ಋಗ್ವೇದವಿದ್ಯಜುರ್ವಿಚ್ಚ ಸಾಮವೇದವಿದೇವ ಚ ।**

**ತ್ರ್ಯವರಾ ಪರಿಷಜ್ಜ್ಞೇಯಾ ಧರ್ಮಸಂಶಯನಿರ್ಣಯೇ ॥ ೪ ॥**

**ಏಕೋಽಪಿ ವೇದವಿದ್ಧರ್ಮಂ ಯಂ ವ್ಯವಸ್ಯೇದ್ದ್ವಿಜೋತ್ತಮಃ ।**

**ಸ ವಿಜ್ಞೇಯಃ ಪರೋ ಧರ್ಮೋ ನಾಜ್ಞಾನಾಮುದಿತೋಽಯುತೈಃ ॥ ೫ ॥**

**ಅವ್ರತಾನಾಮಮಂತ್ರಾಣಾಂ ಜಾತಿಮಾತ್ರೋಪಜೀವಿನಾಮ್ ।**

**ಸಹಸ್ರಶಃ ಸಮೇತಾನಾಂ ಪರಿಷತ್ತ್ವಂ ನ ವಿದ್ಯತೇ ॥ ೬ ॥**

**ಯಂ ವದಂತಿ ತಮೋಭೂತಾ ಮೂರ್ಖಾ ಧರ್ಮಮತದ್ವಿದಃ ।**

**ತತ್ಪಾಪಂ ಶತಧಾ ಭೂತ್ವಾ ತದ್ವಕ್ತ್ರೂನಧಿ ಗಚ್ಛತಿ ॥ ೭ ॥** (ಮನು :– ೧೨. ೧೧೦– ೧೧೫)

ಸಂಪೂರ್ಣ ಸೈನ್ಯಗಳ ಮೇಲಿನ ಅಧಿಕಾರ, ಮತ್ತು ಸೇನಾಪತಿಗಳ ಮೇಲಿನ ರಾಜ್ಯಾಧಿಕಾರ, ದಂಡವಿಧಾನದ ವ್ಯವಸ್ಥೆಯ ಸಮಸ್ತಕಾರ್ಯಗಳ ಆಧಿಪತ್ಯ ಮತ್ತು ಎಲ್ಲಕ್ಕಿಂತ ಮೇಲಿರುವ ಸರ್ವಾಧೀಶನ ರಾಜ್ಯಾಧಿಕಾರ – ಈ ನಾಲ್ಕು ಅಧಿಕಾರಗಳಲ್ಲಿ "ಸಂಪೂರ್ಣ ವೇದಶಾಸ್ತ್ರಗಳಲ್ಲಿ ಪ್ರವೀಣರೂ, ಪೂರ್ಣವಿದ್ಯಾವಂತರೂ, ಧರ್ಮಾತ್ಮರೂ, ಜಿತೇಂದ್ರಿಯರೂ ಸುಶೀಲರೂ ಆದ ಜನರನ್ನು ನೇಮಿಸಬೇಕು. ಎಂದರೆ – ಮುಖ್ಯ ರಾಜ್ಯಾಧಿಕಾರಿ, ಮುಖ್ಯ ನ್ಯಾಯಾಧೀಶ ಮತ್ತು ಸೇನಾಪ್ರಧಾನ ಹಾಗೂ ರಾಜ – ಈ ನಾಲ್ವರೂ ಸಮಸ್ತ ವಿದ್ಯೆಗಳಲ್ಲಿಯೂ ಪೂರ್ಣವಿದ್ವಾಂಸರಾಗಿರಬೇಕು." (೧)

ಕನಿಷ್ಠಪಕ್ಷ ಹತ್ತು ಜನ ವಿದ್ವಾಂಸರ, ಅಥವಾ ಬಹು ಕಡಿಮೆ – ಎಂದರೆ ಮೂವರು ವಿದ್ವಾಂಸರ ಸಭೆ ಎಂತಹ ವ್ಯವಸ್ಥೆಯನ್ನು ಮಾಡುವುದೋ, ಆ ಧರ್ಮವನ್ನು, ಎಂದರೆ – ವ್ಯವಸ್ಥೆಯನ್ನು ಯಾವನೂ ಉಲ್ಲಂಘಿಸಬಾರದು. (೨)

ಈ ಸಭೆಯಲ್ಲಿ 'ನಾಲ್ಕು ವೇದಗಳು', 'ನ್ಯಾಯಶಾಸ್ತ್ರ', 'ನಿರುಕ್ತ', 'ಧರ್ಮಶಾಸ್ತ್ರ' – ಮೊದಲಾದುದರ ಜ್ಞಾನವನ್ನುಳ್ಳ ವಿದ್ವಾಂಸರು ಸಭಾಸದರಾಗಿರಬೇಕು; ಆದರೆ – ಅವರು ಬ್ರಹ್ಮಚಾರಿಗಳು, ಗೃಹಸ್ಥರು ಮತ್ತು ವಾನಪ್ರಸ್ಥರು ಆಗಿರಬೇಕು; ಯಾವುದರಲ್ಲಿ ಹತ್ತು ಮಂದಿ ವಿದ್ವಾಂಸರಿಗಿಂತ ಕಡಿಮೆ ಮಂದಿ ಇರುವುದಿಲ್ಲವೋ, ಅದೇ ಸಭೆ – ಎಂದು ಗ್ರಹಿಸಬೇಕು. (೩)

ಮತ್ತು ಯಾವ ಸಭೆಯಲ್ಲಿ 'ಋಗ್ವೇದ', 'ಯಜುರ್ವೇದ' ಮತ್ತು 'ಸಾಮವೇದವನ್ನು'[೭] ತಿಳಿದವರಾದ ಮೂವರು ಸಭಾಸದರಿದ್ದು, ವ್ಯವಸ್ಥೆ ಮಾಡುವರೋ, ಆ ಸಭೆಯು ಮಾಡಿದ ವ್ಯವಸ್ಥೆಯನ್ನೂ ಕೂಡ ಯಾವನೂ ಉಲ್ಲಂಘಿಬಾರದು. (೪)

ಒಬ್ಬನೇ ಒಬ್ಬ "ನಾಲ್ಕು ವೇದಗಳನ್ನೂ ಬಲ್ಲವನಾದ, ದ್ವಿಜರಲ್ಲಿ ಉತ್ತಮನಾದ ಸಂನ್ಯಾಸಿಯು, ಯಾವ ಧರ್ಮದ ವ್ಯವಸ್ಥೆಯನ್ನು ಮಾಡುವನೋ, ಅದೇ ಶ್ರೇಷ್ಠ ಧರ್ಮ; ಏಕೆಂದರೆ – ಅಜ್ಞಾನಿಗಳು ಸಾವಿರಾರು ಜನ, ಲಕ್ಷಾಂತರ ಜನ, ಕೋಟಿ ಕೋಟಿ ಮಂದಿ ಸೇರಿ, ಯಾವುದೊಂದು ವ್ಯವಸ್ಥೆಯನ್ನು ಮಾಡುವರೋ ಅದನ್ನು ಎಂದಿಗೂ ಒಪ್ಪಿಕೊಳ್ಳಬಾರದು." (೫)

---

೭. "ಜ್ಞಾನ–ಕರ್ಮ–ಉಪಾಸನಾ ವಿದ್ಯೆಯ ದೃಷ್ಟಿಯಿಂದ ಇಲ್ಲಿ ಮೂರು ವೇದಗಳನ್ನು ಎಣಿಸಿದೆ. ವೇದಗಳೇ ಮೂರು ಎಂದಲ್ಲ. ಮುಂದಣ ವಾಕ್ಯದಲ್ಲೇ ನಾಲ್ಕು ವೇದಗಳ ಉಲ್ಲೇಖವಿದೆ. ಋಕ್, ಯಜುಃ ಸಾಮ, ಎಂಬ ಶೈಲಿಗತ ಅಭಿಪ್ರಾಯದಿಂದಲೂ ನಾಲ್ಕು ವೇದಗಳು ಗ್ರಹಿಸಲ್ಪಡುತ್ತವೆ.
–ಸಂ.

ಯಾರು ಬ್ರಹ್ಮಚರ್ಯ, ಸತ್ಯಭಾಷಣ – ಮೊದಲಾದ ವ್ರತಗಳಿಂದಲೂ, ವೇದವಿದ್ಯೆಯಿಂದಲೂ, ವಿವೇಚನೆಯಿಂದಲೂ ರಹಿತರಾಗಿ, ಕೇವಲ ಜನ್ಮದಿಂದ ಶೂದ್ರರಂತಿರುತ್ತಾರೋ, ಅಂತಹ ಸಾವಿರಾರು ಜನ ಮಾನವರು ಸೇರಿದರೂ ಕೂಡ ಅದು ಸಭೆ – ಎನ್ನಿಸುವುದಿಲ್ಲ. (೬)

"ಅವಿದ್ಯಾಯುಕ್ತರೂ, ಮೂರ್ಖರೂ, ವೇದಗಳನ್ನು ತಿಳಿಯದವರೂ ಆದ ಮಾನವರು ಯಾವ ಮತವನ್ನು ಹೇಳುವರೋ, ಅದನ್ನು ಎಂದಿಗೂ ಅಂಗೀಕರಿಸಬಾರದು." ಏಕೆಂದರೆ – ಯಾರು ಮೂರ್ಖರು ಹೇಳಿದ ಮತಕ್ಕನುಸಾರವಾಗಿ ನಡೆಯುತ್ತಾರೋ, ಅವರ ಹಿಂದೆ ನೂರಾರು ಬಗೆಯ ಪಾಪಗಳು ಹತ್ತಿಕೊಳ್ಳುತ್ತವೆ. ಆದಕಾರಣ, ಮೂರರಲ್ಲಿಯೂ, ಎಂದರೆ – "ವಿದ್ಯಾಸಭಾ, ಧರ್ಮಸಭಾ ಮತ್ತು ರಾಜಸಭಾ" – ಇವುಗಳಲ್ಲಿ ಎಂದಿಗೂ ಮೂರ್ಖರನ್ನು ತುಂಬಿಸಬಾರದು; ಆದರೆ – ಸದಾ ವಿದ್ವಾಂಸರೂ ಮತ್ತು ಧಾರ್ಮಿಕರೂ ಆದ ಪುರುಷರನ್ನು ನೇಮಿಸಬೇಕು ಮತ್ತು ಸರ್ವಜನರೂ ಹೀಗಿರಬೇಕು:–

**ತ್ರೈವಿದ್ಯೇಭ್ಯ ಸ್ತ್ರಯೀಂ ವಿದ್ಯಾಂ ದಂಡನೀತಿಂ ಚ ಶಾಶ್ವತೀಮ್ ।**
**ಆನ್ವೀಕ್ಷಿಕೀಂ ಚಾತ್ಮ ವಿದ್ಯಾಂ ವಾರ್ತಾರಂಭಾಂಶ್ಚ ಲೋಕತಃ ॥ ೧ ॥**
**ಇಂದ್ರಿಯಾಣಾಂ ಜಯೇ ಯೋಗಂ ಸಮಾತಿಷ್ಠೇದ್ದಿವಾನಿಶಮ್ ।**
**ಜಿತೇಂದ್ರಿಯೋ ಹಿ ಶಕ್ನೋತಿ ವಶೇ ಸ್ಥಾಪಯಿತುಂ ಪ್ರಜಾಃ ॥ ೨ ॥**
**ದಶ ಕಾಮಸಮುತ್ಥಾನಿ ತಥಾಷ್ಟೌ ಕ್ರೋಧಜಾನಿ ಚ ।**
**ವ್ಯಸನಾನಿ ದುರಂತಾನಿ ಪ್ರಯತ್ನೇನ ವಿವರ್ಜಯೇತ್ ॥ ೩ ॥**
**ಕಾಮಜೇಷು ಪ್ರಸಕ್ತೋ ಹಿ ವ್ಯಸನೇಷು ಮಹೀಪತಿಃ ।**
**ವಿಯುಜ್ಯತೇಽರ್ಥಧರ್ಮಾಭ್ಯಾಂ ಕ್ರೋಧಜೇಷ್ವಾತ್ಮ ನೈವತು ॥ ೪ ॥**
**ಮೃಗಯಾಕ್ಷೋ ದಿವಾಸ್ವಪ್ನಃ ಪರೀವಾದಃ ಸ್ತ್ರಿಯೋ ಮದಃ ।**
**ತೌರ್ಯತ್ರಿಕಂ ವೃಥಾಟ್ಯಾ ಚ ಕಾಮಜೋ ದಶಕೋ ಗಣಃ ॥ ೫ ॥**
**ಪೈಶುನ್ಯಂ ಸಾಹಸಂ ದ್ರೋಹಂ ಈರ್ಷ್ಯಾಸೂಯಾರ್ಥದೂಷಣಮ್ ।**
**ವಾಗ್ದಂಡಜಂ ಚ ಪಾರುಷ್ಯಂ ಕ್ರೋಧಜೋಽಪಿ ಗಣೋಽಷ್ಟಕಃ ॥ ೬ ॥**
**ದ್ವಯೋರಪ್ಯೇತಯೋರ್ಮೂಲಂ ಯಂ ಸರ್ವೇ ಕವಯೋ ವಿದುಃ ।**
**ತಂ ಯತ್ನೇನ ಜಯೋಲ್ಲೋಭಂ ತಜ್ಜಾವೇತಾವುಭೌ ಗಣೌ ॥ ೭ ॥**
**ಪಾನಮಕ್ಷಾಃ ಸ್ತ್ರಿಯಶ್ಚೈವ ಮೃಗಯಾ ಚ ಯಥಾಕ್ರಮಮ್ ।**
**ಏತತ್ಕಷ್ಟತರಂ ವಿದ್ಯಾಚ್ಚತುಷ್ಕಂ ಕಾಮಜೇ ಗಣೇ ॥ ೮ ॥**
**ದಂಡಸ್ಯಪಾತನಂ ಚೈವ ವಾಕ್ಪಾರುಷ್ಯಾರ್ಥದೂಷಣೇ ।**
**ಕ್ರೋಧಜೇಽಪಿ ಗಣೇ ವಿದ್ಯಾತ್ಕಷ್ಟಮೇತತ್ತ್ರಿಕಂ ಸದಾ ॥ ೯ ॥**
**ಸಪ್ತಕಸ್ಯಾಸ್ಯ ವರ್ಗಸ್ಯ ಸರ್ವತ್ರೈವಾನುಷಂಗಿಣಃ ।**
**ಪೂರ್ವಂ ಪೂರ್ವಂ ಗುರುತರಂ ವಿದ್ಯಾದ್ವ್ಯಸನಮಾತ್ಮವಾನ್ ॥ ೧೦॥**
**ವ್ಯಸನಸ್ಯ ಚ ಮೃತ್ಯೋಶ್ಚ ವ್ಯಸನಂ ಕಷ್ಟಮುಚ್ಯತೇ ।**
**ವ್ಯಸನ್ಯಧೋಽಧೋ ವ್ರಜತಿ ಸ್ವರ್ಯಾತ್ಯವ್ಯಸನೀ ಮೃತಃ ॥ ೧೧ ॥** (ಮನು:– ೭.೪೩–೫೩)

ಎಂದರೆ, ಯಾವಾಗ ಅವರು ನಾಲ್ಕು ವೇದಗಳ ಕರ್ಮ, ಉಪಾಸನಾ, ಜ್ಞಾನ – ಎಂಬ ವಿದ್ಯೆಗಳನ್ನು ಬಲ್ಲವರಿಂದ ಮೂರು ವಿದ್ಯೆಗಳನ್ನೂ, ಸನಾತನ ದಂಡನೀತಿ, ನ್ಯಾಯವಿದ್ಯೆ – ಎಂದರೆ, ಪರಮಾತ್ಮನ ಗುಣ–ಕರ್ಮ–ಸ್ವಭಾವರೂಪವನ್ನು ಅದು ಇರುವ ಹಾಗೆಯೇ ತಿಳಿದುಕೊಳ್ಳುವ ಬ್ರಹ್ಮವಿದ್ಯೆ ಮತ್ತು ಜಗತ್ತಿನಿಂದ ವಾರ್ತಾರಂಭ (ಪ್ರಶ್ನೋತ್ತರ) – ಇವನ್ನು ಕಲಿತು ಸಭಾಸದರು ಅಥವಾ – ಸಭಾಪತಿಯಾಗಲು ಸಮರ್ಥರಾಗುವರೋ, ಆಗ ರಾಜ ಮತ್ತು ರಾಜಸಭೆಯ ಸಭಾಸದರಾಗಬಲ್ಲರು. (೧).

ಸಮಸ್ತ, ಸಭಾಸದರೂ ಮತ್ತು ಸಭಾಪತಿಯೂ ಇಂದ್ರಿಯಗಳನ್ನು ಗೆದ್ದು, ಎಂದರೆ – ತಮ್ಮ ವಶದಲ್ಲಿಟ್ಟುಕೊಂಡು, ಸದಾ ಧರ್ಮದಲ್ಲಿ ವರ್ತಿಸಬೇಕು ಮತ್ತು ಅಧರ್ಮದಿಂದ ಸರಿದು – ಸರಿಸಿ ಇರಬೇಕು. "ಇದಕ್ಕಾಗಿ ರಾತ್ರಿಹಗಲು ನಿಯತಕಾಲದಲ್ಲಿ ಯೋಗಾಭ್ಯಾಸವನ್ನು ಮಾಡುತ್ತಿರಬೇಕು." ಏಕೆಂದರೆ – ಯಾವನು ಅಜಿತೇಂದ್ರಿಯನೋ, ಅವನು ತನ್ನ ಇಂದ್ರಿಯಗಳನ್ನು, (ಯಾವ ಮನಸ್ಸು, ಪ್ರಾಣಗಳು ಮತ್ತು ಶರೀರ ಎಂಬ ಪ್ರಜೆಯಿದೆಯೋ, ಅದನ್ನು) ಜಯಿಸಿಕೊಳ್ಳದೆ, ಹೊಗರಣ ಪ್ರಜೆಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಎಂದಿಗೂ ಸಮರ್ಥನಾಗಲಾರನು. (೨)

ದೃಢೋತ್ಸಾಹಿಯಾಗಿ, **"ಕಾಮದಿಂದ ಯಾವ ಹತ್ತು ಮತ್ತು ಕ್ರೋಧದಿಂದ ಯಾವ ಎಂಟು"** ದುಷ್ಟ ವ್ಯಸನಗಳು ಹುಟ್ಟುತ್ತವೋ, ಯಾವವುಗಳಲ್ಲಿ ಸಿಕ್ಕಿಕೊಂಡ ಮಾನವನು ಅತಿಶ್ರಮದಿಂದ ಮಾತ್ರ ಹೊರಬರಲು ಸಮರ್ಥನಾಗುವನೋ, ಅವುಗಳನ್ನು ಪ್ರಯತ್ನದಿಂದ ಬಿಡಬೇಕು; ಬಿಡಿಸಬೇಕು. (೩)

ಏಕೆಂದರೆ, ಯಾವ ರಾಜನು ಕಾಮದಿಂದ ಉತ್ಪನ್ನವಾದ ಹತ್ತು ದುರ್ವ್ಯಸನಗಳಲ್ಲಿ ಸಿಕ್ಕಿಕೊಳ್ಳುತ್ತಾನೋ, ಅವನು ಅರ್ಥದಿಂದ, ಎಂದರೆ–ರಾಜ್ಯ, ಧನ ಮೊದಲಾದುದರಿಂದ ಮತ್ತು ಧರ್ಮದಿಂದ ರಹಿತನಾಗಿ ಹೋಗುತ್ತಾನೆ ಮತ್ತು ಯಾವನು ಕ್ರೋಧದಿಂದ ಉತ್ಪನ್ನವಾದ ಎಂಟು ದುಷ್ಟ ವ್ಯಸನಗಳಲ್ಲಿ ಸಿಕ್ಕಿಕೊಳ್ಳುತ್ತಾನೋ, ಅವನು ಶರೀರದಿಂದಲೂ ಕೂಡ ರಹಿತನಾಗಿ ಹೋಗುತ್ತಾನೆ. (೪)

**"ಕಾಮದಿಂದ ಉತ್ಪನ್ನವಾದ ವ್ಯಸನಗಳನ್ನು ಎಣಿಸುತ್ತೇವೆ, ನೋಡಿರಿ"** : ೧. **(ಮೃಗಯಾ)** ಬೇಟೆಯಾಡುವುದು, ೨. **(ಅಕ್ಷ)** ಎಂದರೆ–ಪಗಡೆಯಾಡುವುದು, ಜೂಜು – ಮೊದಲಾದುದು, ೩. **(ದಿವಾಸ್ವಪ್ನ)** ಹಗಲಿನಲ್ಲಿ ನಿದ್ರಿಸುವುದು. ೪. **(ಪರೀವಾದ)** ಕಾಮಕಥೆ ಅಥವಾ ಅನ್ಯರ ನಿಂದೆಯಲ್ಲಿ ಪ್ರವೃತ್ತನಾಗಿರುವುದು, ೫. **(ಸ್ತ್ರೀಯಃ)** ಸ್ತ್ರೀಯರೊಂದಿಗೆ ಅತಿಯಾಗಿ ಸಂಗ, ೬. **(ಮದ)** ಮಾದಕ ದ್ರವ್ಯಗಳು – ಎಂದರೆ, ಮದ್ಯ, ಅಫೀಮು, ಭಂಗೀ ಸೊಪ್ಪು, ಗಾಂಜಾ, ಚರಸ್ಸು – ಮೊದಲಾದುದರ ಸೇವನೆ, ೭. **(ತೌರ್ಯತ್ರಿಕ)** ಗಾನ, ೮. ವಾದ್ಯವಾದನ, ೯. ನೃತ್ಯ ಮಾಡುವುದು – ನರ್ತನ ಮಾಡಿಸುವುದು, ಆಲಿಸುವುದು ಮತ್ತು ನೋಡುವುದು, ೧೦. **(ವೃಥಾಟ್ಯಾ)** ವ್ಯರ್ಥವಾಗಿ ಅತ್ತಿತ್ತ ಅಲೆದಾಡುವುದು–ಈ ಹತ್ತು ಕಾಮೋತ್ಪನ್ನವಾದ ವ್ಯಸನಗಳಾಗಿವೆ. (೫).

ಕ್ರೋಧದಿಂದ ಹುಟ್ಟುವ ವ್ಯಸನಗಳನ್ನು ಎಣಿಸುತ್ತೇವೆ:–

೧. **(ಪೈಶುನ್ಯಂ)** ಎಂದರೆ–ಚಾಡಿ ಹೇಳುವುದು, ೨. **(ಸಾಹಸ)** ಆಲೋಚನೆ ಮಾಡದೇ, ಬಲಾತ್ಕಾರದಿಂದ ಯಾವನೇ ಒಬ್ಬ ಅನ್ಯನ ಸ್ತ್ರೀಯಳೊಂದಿಗೆ ಕೆಟ್ಟ ಕೆಲಸಮಾಡುವುದು, ೩. **(ದ್ರೋಹ)** ದ್ರೋಹ ಎಂದರೆ ಕೇಡನ್ನು ಮಾಡುವುದು. ೪. **(ಈರ್ಷ್ಯಾ)** ಎಂದರೆ – ಬೇರೆಯವನ ದೊಡ್ಡಸ್ತಿಕೆ ಅಥವಾ ಉನ್ನತಿಯನ್ನು ನೋಡಿ ಕರುಬುವುದು, ೫. **(ಅಸೂಯೆ)** ದೋಷಗಳಲ್ಲಿ ಗುಣಗಳನ್ನೂ, ಗುಣಗಳಲ್ಲಿ ದೋಷಗಳನ್ನೂ ಆರೋಪಿಸುವುದು, ೬. **(ಅರ್ಥದೂಷಣ)**–ಎಂದರೆ, ಅಧರ್ಮಯುಕ್ತವಾದ ಕೆಟ್ಟ ಕೆಲಸಗಳಲ್ಲಿ ಧನ–ಮೊದಲಾದುದನ್ನು ವ್ಯಯಮಾಡುವುದು, ೭. **(ವಾಗ್ದಂಡ)** ಕಟುವಚನವಾಡುವುದು ಮತ್ತು ೮. **(ಪಾರುಷ್ಯ)** ಅಪರಾಧವಿಲ್ಲದೆಯೇ ಕಠೋರ ವಚನವಾಡುವುದು ಅಥವಾ ವಿಶೇಷ ಶಿಕ್ಷೆಕೊಡುವುದು – ಈ ಎಂಟು ದುರ್ಗುಣಗಳು ಕ್ರೋಧದಿಂದ ಉತ್ಪನ್ನವಾಗುತ್ತವೆ. (೬)

ಸಮಸ್ತ ವಿದ್ವಾಂಸರೂ ಯಾವುದನ್ನು ಕಾಮಜನ್ಯವಾದ ಮತ್ತು ಕ್ರೋಧಜನ್ಯವಾದ ವ್ಯಸನಗಳ ಮೂಲವೆಂದು ತಿಳಿಯುತ್ತಾರೋ, ಏತರಿಂದ ಈ ಎಲ್ಲ ದುರ್ಗುಣಗಳೂ ಮಾನವರನ್ನು ಮುತ್ತಿಕೊಳ್ಳುತ್ತವೋ, ಆ ಲೋಭವನ್ನು ಪ್ರಯತ್ನಪೂರ್ವಕವಾಗಿ ಬಿಡಬೇಕು. (೭)

**"ಕಾಮದ ವ್ಯಸನಗಳಲ್ಲಿ ಮಹಾದುರ್ಗುಣಗಳು"** – ಒಂದನೆಯದು ಮದ್ಯ ಮೊದಲಾದುದು, ಎಂದರೆ – ಮದಕಾರಕ ದ್ರವ್ಯಗಳ ಸೇವನೆ; ಎರಡನೆಯದು ಪಗಡೆ ಮೊದಲಾದುದರಿಂದ ಜೂಜಾಡುವುದು; ಮೂರನೆಯದು ಸ್ತ್ರೀಯರ ವಿಶೇಷ ಸಂಗ; ನಾಲ್ಕನೆಯದು ಬೇಟೆಯಾಡುವುದು – ಈ ನಾಲ್ಕು ಮಹಾದುಷ್ಟ ವ್ಯಸನಗಳಾಗಿವೆ. (೮)

ಮತ್ತು **"ಕ್ರೋಧದ ವ್ಯಸನಗಳಲ್ಲಿ"**, ಅಪರಾಧವಿಲ್ಲದೆ ಶಿಕ್ಷೆಕೊಡುವುದು ಕಠೋರ ವಚನವಾಡುವುದು ಮತ್ತು ಧನ-ಮೊದಲಾದುದನ್ನು ಅನ್ಯಾಯವಾಗಿ ವ್ಯಯಿಸುವುದು - ಈ ಮೂರೂ ಕ್ರೋಧದಿಂದ ಉತ್ಪನ್ನವಾದ ಮಹಾ ದುಃಖದಾಯಕವಾದ ದೋಷಗಳಾಗಿವೆ. (೯)

ಕಾಮಜನ್ಯ ಮತ್ತು ಕ್ರೋಧಜನ್ಯ ದೋಷಗಳೆರಡಲ್ಲಿಯೂ, ಯಾವ ಈ ಏಳು ದುರ್ಗುಣಗಳನ್ನು ಎಣಿಸಿದ್ದೇವೋ, ಇವುಗಳಲ್ಲಿ ಮೊದಲ-ಮೊದಲನೆಯದು. ಎಂದರೆ ವ್ಯರ್ಥ ವ್ಯಯಕ್ಕಿಂತ ಕಠೋರವಚನಕ್ಕಿಂತ ಅನ್ಯಾಯವಾದ ದಂಡವಿಧಿಸುವುದು, ಇದಕ್ಕಿಂತ ಬೇಟೆಯಾಡುವುದು, ಇದಕ್ಕಿಂತ ಅತಿ ಸ್ತ್ರೀ-ಸಂಗ, ಇದಕ್ಕಿಂತ ಜೂಜು - ಎಂದರೆ ದ್ಯೂತವಾಡುವುದು ಮತ್ತು ಇದಕ್ಕಿಂತಲೂ **ಮದ್ಯ - ಮೊದಲಾದುವನ್ನು ಸೇವಿಸುವುದು ದೊಡ್ಡ ದುರ್ವ್ಯಸನವಾಗಿದೆ.** (೧೦)

**ದುಷ್ಟ ವ್ಯಸನದಲ್ಲಿ ಸಿಕ್ಕಿಕೊಳ್ಳುವುದಕ್ಕಿಂತ ಸತ್ತು ಹೋಗವುದು ಒಳ್ಳೆಯದು. ಏಕೆಂದರೆ, ಯಾವನು ದುರಾಚಾರಿಯಾದ ಪುರುಷನಾಗಿದ್ದಾನೋ, ಅವನು ಹೆಚ್ಚು ಕಾಲ ಬದುಕಿರುವನಾದರೆ, ಹೆಚ್ಚು ಹೆಚ್ಚು ಪಾಪ ಮಾಡಿ, ನೀಚ - ನೀಚವಾದ ಗತಿಯನ್ನು, ಎಂದರೆ - ಹೆಚ್ಚು ಹೆಚ್ಚು ದುಃಖವನ್ನು ಅನುಭವಿಸುತ್ತಾ ಹೋಗುವನು**[೮] ಮತ್ತು ಯಾವನು ಯಾವ ವ್ಯಸನಕ್ಕೂ ಸಿಕ್ಕಿಕೊಂಡಿಲ್ಲವೋ, ಅವನು ಮೃತನಾಗಿಯೇ ಹೋದರೂ ಕೂಡ ಸುಖವನ್ನು ಅನುಭವಿಸುತ್ತಾ ಹೋಗುವನು-ಎಂಬುದು ಇದರಲ್ಲಿ ನಿಶ್ಚಯವಾಗಿದೆ. ಆದುದರಿಂದ, ಎಂದಿಗೂ ಬೇಟೆ ಮತ್ತು ಮದ್ಯಪಾನ ಮೊದಲಾದ ದುಷ್ಟಕಾರ್ಯಗಲ್ಲಿ ಸಿಕ್ಕಿಕೊಳ್ಳದಿರುವುದು ಮತ್ತು ದುಷ್ಟ ವ್ಯಸನಗಳಿಂದ ದೂರವಿದ್ದು ಧರ್ಮಯುಕ್ತವಾದ ಗುಣಕರ್ಮಸ್ವಭಾವಗಳಲ್ಲಿ ಸದಾ ಪ್ರವೃತ್ತರಾಗಿ, ಒಳ್ಳೆ-ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಹೋಗುವುದು ವಿಶೇಷತಃ **ರಾಜನಿಗೆ** ಮತ್ತು **"ಸಮಸ್ತ ಮಾನವರಿಗೆ"** ಉಚಿತವಾಗಿದೆ. (೧೧)

ರಾಜಸಭಾಸದರೂ ಮತ್ತು ಮಂತ್ರಿಗಳೂ ಹೇಗಿರಬೇಕು ?

**ಮೌಲಾನ್ ಶಾಸ್ತ್ರವಿದಃ ಶೂರಾನ್ ಲಬ್ಧಲಕ್ಷಾನ್ ಕುಲೋದ್ಗತಾನ್ ।**
**ಸಚಿವಾನ್ ಸಪ್ತ ಚಾಷ್ಟೌ ವಾ ಪ್ರಕುರ್ವೀತ ಪರೀಕ್ಷಿತಾನ್ ॥ ೧ ॥**
**ಅಪಿ ಯತ್ಸುಕರಂ ಕರ್ಮ ತದಪ್ಯೇಕೇನ ದುಷ್ಕರಮ್ ।**
**ವಿಶೇಷತೋಽಸಹಾಯೇನ ಕಿನ್ನು ರಾಜ್ಯಂ ಮಹೋದಯಮ್ ॥ ೨ ॥**
**ತೈಃ ಸಾರ್ಧಂ ಚಿಂತಯೇನ್ನಿತ್ಯಂ ಸಾಮಾನ್ಯಂ ಸಂಧಿವಿಗ್ರಹಮ್ ।**
**ಸ್ಥಾನಂ ಸಮುದಯಂ ಗುಪ್ತಿಂ ಲಬ್ಧಪ್ರಶಮನಾನಿ ಚ ॥ ೩ ॥**
**ತೇಷಾಂ ಸ್ವಂ ಸ್ವಮಭಿಪ್ರಾಯಮುಪಲಭ್ಯ ಪೃಥಕ್ ಪೃಥಕ್ ।**
**ಸಮಸ್ತಾನಾಂ ಚ ಕಾರ್ಯೇಷು ವಿದಧ್ಯಾದ್ಧಿತಮಾತ್ಮನಃ ॥ ೪ ॥** (ಮನು:- ೭.೫೪. ೫೭)
**ಅನ್ಯಾನಪಿ ಪ್ರಕುರ್ವೀತ ಶುಚೀನ್ ಪ್ರಜ್ಞಾನವಸ್ಥಿತಾನ್ ।**
**ಸಮ್ಯಗರ್ಥಸಮಾಹರ್ತ್ರೄನ್ ಅಮಾತ್ಯಾನ್ಸುಪರೀಕ್ಷಿತಾನ್ ॥ ೫ ॥**
**ನಿವರ್ತೇತಾಸ್ಯ ಯಾವದ್ಭಿರಿತಿಕರ್ತವ್ಯತಾ ನೃಭಿಃ ।**
**ತಾವತೋಽತಂದ್ರಿತಾನ್ ದಕ್ಷಾನ್ ಪ್ರಕುರ್ವೀತ ವಿಚಕ್ಷಣಾನ್ ॥ ೬ ॥**
**ತೇಷಾಮರ್ಥೇನಿಯುಂಜೀತಾ ಶೂರಾನ್ ದಕ್ಷಾನ್ ಕುಲೋದ್ಗತಾನ್ ।**
**ಶುಚೀನಾಕರಕರ್ಮಾಂತೇ ಭೀರೂನಂತರ್ನಿವೇಶನೇ ॥ ೭ ॥**
**ದೂತಂ ಚೈವ ಪ್ರಕುರ್ವೀತ ಸರ್ವಶಾಸ್ತ್ರವಿಶಾರದಮ್ ।**
**ಇಂಗಿತಾಕಾರಚೇಷ್ಟಜ್ಞಂ ಶುಚಿಂ ದಕ್ಷಂ ಕುಲೋದ್ಗತಮ್ ॥ ೮ ॥**

---

೮. ಇಷ್ಟೇ ಅಲ್ಲ! ಅವರು ತನ್ನ ದುರ್ವ್ಯಸನಗಳ ಮೂಲಕ, ತನ್ನ ಪರಿವಾರವನ್ನೂ ಸಮಾಜವನ್ನೂ, ರಾಷ್ಟ್ರವನ್ನೂ ನಾಶಮಾಡಿ ಬಿಡುತ್ತಾನೆ. -ಸಂ.

**ಅನುರಕ್ತಃ ಶುಚಿರ್ದಕ್ಷಃ ಸ್ಮೃತಿಮಾನ್ ದೇಶಕಾಲವಿತ್ ।**
**ವಪುಷ್ಮಾನ್ ವೀತಭೀರ್ವಾಗ್ಮೀ ದೂತೋ ರಾಜ್ಞಃ ಪ್ರಶಸ್ಯತೇ ॥ ೯ ॥** (ಮನು :- ೭.೬೦-೬೪)

"ಸ್ವರಾಜ್ಯದಲ್ಲಿ, ಸ್ವದೇಶದಲ್ಲಿ ಹುಟ್ಟಿದವರೂ, ವೇದಗಳೇ ಮೊದಲಾದ ಶಾಸ್ತ್ರಗಳನ್ನು ತಿಳಿದವರೂ, ಶೂರ-ವೀರರೂ, ನಿಷ್ಫಲವಾಗದ ಲಕ್ಷ್ಯ- ಎಂದರೆ ಆಲೋಚನೆಗಳನ್ನುಳ್ಳವರೂ, ಮತ್ತು ಕುಲೀನರೂ, ಒಳ್ಳೆಯ ರೀತಿಯಲ್ಲಿ ಪರೀಕ್ಷಿತರೂ ಆದ, ಏಳು ಅಥವಾ ಎಂಟು ಜನ, ಉತ್ತಮರೂ, ಧಾರ್ಮಿಕರೂ ಚತುರರೂ" ಆಗಿರುವವರನ್ನು 'ಸಚಿವರು' - ಎಂದರೆ ಮಂತ್ರಿಗಳನ್ನಾಗಿ ನೇಮಿಸಬೇಕು. (೧)

ಏಕೆಂದರೆ - ವಿಶೇಷವಾದ ಸಹಾಯವಿಲ್ಲವಾದರೆ, ಯಾವ ಕರ್ಮ ಸುಗಮವಾಗಿರುವುದೋ, ಅದೂ ಕೂಡ ಒಬ್ಬನೇ ಮಾಡುವಲ್ಲಿ ಕಠಿಣವಾಗಿ ಹೋಗುತ್ತದೆ. ಸ್ಥಿತಿ ಹೀಗಿರುವಾಗ, "ಮಹತ್ತಾದ ರಾಜ್ಯಕರ್ಮವು ಒಬ್ಬನಿಂದ ಹೇಗೆ ಆಗಬಲ್ಲದು? ಆದುದರಿಂದ, ಒಬ್ಬನನ್ನು ರಾಜನಾಗಿ ಮಾಡುವುದು ಮತ್ತು ಒಬ್ಬನ ಬುದ್ಧಿಯ ಮೇಲೆ ರಾಜ್ಯದ ಕಾರ್ಯವನ್ನು ಅವಲಂಬಿತವಾಗಿಡುವುದು ಬಹಳ ಅನುಚಿತವಾದ ಕೆಲಸವಾಗಿರುತ್ತದೆ." (೨)

ಆದಕಾರಣ, ಪ್ರತಿನಿತ್ಯವೂ ರಾಜ್ಯಕಾರ್ಯಗಳಲ್ಲಿ ಕುಶಲರಾದ ವಿದ್ವಾನ್ - ಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ, ಯಾವನೊಂದಿಗಾದರೂ (**ಸಂಧಿ**) ಮೈತ್ರಿ ಬೆಳೆಸುವುದು, ಯಾವನೊಂದಿಗಾದರೂ (**ವಿಗ್ರಹ**) ವಿರೋಧ ಮಾಡುವುದು, (**ಸ್ಥಾನಂ**) ಒದಗಿದ ಸಮಯವನ್ನು ನೋಡಿ ಸುಮ್ಮನಿರುವುದು, ತನ್ನ ರಾಜ್ಯದ ರಕ್ಷಣೆಮಾಡಿ ಕುಳಿತಿರುವುದು. (**ಸಮುದಾಯ**) ಯಾವಾಗ ತನ್ನ ಉದಯ ಎಂದರೆ ವೃದ್ಧಿ ಲಭಿಸಿರುವುದೋ, ಆಗ ದುಷ್ಟ ಶತ್ರುವಿನ ಮೇಲೆ ಏರಿ ಹೋಗುವುದು, (**ಗುಪ್ತಿಂ**) ಮೂಲ, ರಾಜಸೈನ್ಯ, ಕೋಶ - ಮೊದಲಾದುದರ ರಕ್ಷಣೆ, (**ಲಬ್ಧಪ್ರಶಮನಾನಿ**) ಯಾವ ಯಾವ ದೇಶ ವಶಕ್ಕೆ ಬರುವುದೋ, ಆಯಾ ದೇಶದಲ್ಲಿ ಶಾಂತಿ ಸ್ಥಾಪನೆ, ಅದನ್ನು ಉಪದ್ರವರಹಿತವಾಗಿ ಮಾಡುವುದು - ಈ ಆರು ವಿಷಯಗಳ ಪರ್ಯಾಲೋಚನೆಯನ್ನು ಮಾಡುತ್ತಾ ಹೋಗುವುದು ಸಭಾಪತಿಗೆ ಉಚಿತವಾಗಿರುತ್ತದೆ. (೩)

ಪರ್ಯಾಲೋಚನೆಯನ್ನು ಯಾವ ರೀತಿಯಲ್ಲಿ ಮಾಡಬೇಕೆಂದರೆ, ಆ ಸಭಾಸದರ, ತಮ್ಮ ತಮ್ಮದೇ ಆದ ಯೋಚನೆಯನ್ನು ಮತ್ತು ಅಭಿಪ್ರಾಯವನ್ನು ಬೇರೆ ಬೇರೆಯಾಗಿ ಕೇಳಿ, "ಬಹುಪಕ್ಷಾನುಸಾರವಾಗಿ", ಕಾರ್ಯಗಳಲ್ಲಿ ಯಾವುದು "ತನ್ನ ಹಾಗೂ ಅನ್ಯರ ಹಿತಕಾರಕವಾಗಿರುವುದೋ," ಅದನ್ನು ಮಾಡತೊಡಗಬೇಕು. (೪)

ಪವಿತ್ರಾತ್ಮನೂ, ಬುದ್ಧಿಶಾಲಿಯೂ, ನಿಶ್ಚಿತಬುದ್ಧಿಯೂ, ಪದಾರ್ಥಗಳ ಸಂಗ್ರಹ ಮಾಡುವುದರಲ್ಲಿ ಅತಿ ಚತುರನೂ, ಸುಪರೀಕ್ಷಿತನೂ ಆದ ಬೇರೆಯವನನ್ನೂ ಕೂಡ ಮಂತ್ರಿಯನ್ನಾಗಿ ಮಾಡಿಕೊಳ್ಳಬೇಕು. (೫)

"ಎಷ್ಟು ಜನರಿಂದ ರಾಜಕಾರ್ಯವು ಕೈಗೂಡಲು ಶಕ್ಯವೋ, ಅಷ್ಟು ಜನ ಅಲಸ್ಯರಹಿತರೂ, ಬಲಶಾಲಿಗಳೂ ಮತ್ತು ದೊಡ್ಡ ದೊಡ್ಡ ಚತುರರೂ ಆದ ಮುಖ್ಯ ಪುರುಷರನ್ನು ಅಧಿಕಾರಿಗಳನ್ನಾಗಿ - ಎಂದರೆ ನೌಕರರನ್ನಾಗಿ ನೇಮಿಸಬೇಕು. (೬)

"ಇವರ ಅಧೀನತೆಯಲ್ಲಿ ಶೂರ - ವೀರರೂ ಬಲಶಾಲಿಗಳೂ, ಕುಲೋತ್ಪನ್ನರೂ, ಪವಿತ್ರರೂ ಆದ ಭೃತ್ಯರನ್ನು ದೊಡ್ಡ ದೊಡ್ಡ ಕೆಲಸಗಳಲ್ಲಿಯೂ, ಮತ್ತು ಭೀರುಗಳು, ಎಂದರೆ ಅಂಜುವವರನ್ನು ಒಳಗಿನ ಕೆಲಸಗಳಲ್ಲಿಯೂ ನೇಮಿಸಬೇಕು."[೯] (೭)

ಯಾವನು ಪ್ರಶಂಸಿತ ಕುಲದಲ್ಲಿ ಹುಟ್ಟಿದವನೂ, ಚತುರನೂ, ಪವಿತ್ರನೂ, ಹಾವ-ಭಾವಗಳಿಂದ ಮತ್ತು ಭಂಗಿ-ವೈಖರಿಯಿಂದ ಒಳಗೆ ಹೃದಯದಲ್ಲಿ ಮತ್ತು "ಭವಿಷ್ಯದಲ್ಲಿ ಸಂಭವಿಸುವ ಘಟನೆಗಳನ್ನು ತಿಳಿಯುವವನೂ ಸರ್ವಶಾಸ್ತ್ರಗಳಲ್ಲಿಯೂ ವಿಶಾರದನೂ, ಚತುರನೂ ಆಗಿರುತ್ತಾನೋ, ಅಂತಹ ದೂತನನ್ನೂ" ಕೂಡ ನೇಮಿಸಿಕೊಳ್ಳಬೇಕು. (೮)

ಅವನು ಹೇಗಿರಬೇಕು? - ರಾಜಕಾರ್ಯದಲ್ಲಿ ಅತ್ಯಂತ ಉತ್ಸಾಹಿಯೂ, ಪ್ರೀತಿಯುಕ್ತನೂ, ನಿಷ್ಕಪಟನೂ, ಪವಿತ್ರಾತ್ಮನೂ, ಚುತರನೂ, ದೀರ್ಘ ಕಾಲದ ಹಿಂದೆ ನಡೆದ ಪ್ರಸಂಗವನ್ನೂ ಕೂಡ ಮರೆಯದವನೂ, ದೇಶ ಮತ್ತು ಕಾಲಕ್ಕೆ ಅನುಕೂಲವಾಗಿ ವರ್ತನೆ ಮಾಡುವವನೂ, ಸುಂದರರೂಪಯುಕ್ತನೂ, ನಿರ್ಭಯನೂ ಮತ್ತು ಮಹಾವಾಗ್ಮಿಯೂ[೧೦] ಆಗಿರುವವನೇ ರಾಜನ ದೂತನಾಗಲು ಪ್ರಶಸ್ತನಾಗಿರುತ್ತಾನೆ. (೯)

---

೯. ಈ ಯೋಗ್ಯತೆಗಳನ್ನು ನಿರ್ಲಕ್ಷಿಸಿದ ಪರಿಣಾಮವನ್ನು ರಾಜಾ-ಪ್ರಜಾ ಜನರೇ ಅನುಭವಿಸುತ್ತಾರೆ. -ಸಂ.

೧೦. ಮಹಾವಾಗ್ಮಿ ಎಂದರೆ, ಹರಟುವವನು, ಎಂದು ಪ್ರಚಲಿತ ಅರ್ಥವಿದೆ. ಇದು ಸರಿಯಲ್ಲ. ವಾಣಿಯ ಪ್ರಯೋಗವನ್ನು ಕಾಲ-ಕಾಲಕ್ಕೆ ತಕ್ಕಂತೆ ಉಚಿತ ರೀತಿಯಲ್ಲಿ ಮಾಡುವುದರಲ್ಲಿ ಪ್ರವೀಣ ಎಂದು ಅರ್ಥ. -ಸಂ

ಯಾವ ಯಾವನಿಗೆ ಏನೇನು ಅಧಿಕಾರ ಕೊಡುವುದು ಯೋಗ್ಯವಾಗಿರುತ್ತದೆ?

**ಆಮಾತ್ಯೇ ದಂಡ ಆಯತ್ತೋ ದಂಡೇ ವೈನಯಿಕೀ ಕ್ರಿಯಾ ।**

**ನೃಪತೌ ಕೋಶರಾಷ್ಟ್ರೇ ಚ ದೂತೇ ಸಂಧಿವಿಪರ್ಯಯೌ ॥ ೧ ॥**

**ದೂತ ಏವ ಹಿ ಸಂಧತ್ತೇಭಿನತ್ತ್ಯೇವ ಚ ಸಂಹತಾನ್ ।**

**ದೂತಸ್ತತ್ಕುರುತೇ ಕರ್ಮ ಭಿದ್ಯಂತೇ ಯೇನಾ ವಾ ನ ವಾ ॥ ೨ ॥** (ಮನು :– ೭.೬೫.೬೬)

**ಬುಧ್ವಾ ಚ ಸರ್ವಂ ತತ್ತ್ವೇನ ಪರರಾಜಚಿಕೀರ್ಷಿತಮ್ ।**

**ತಥಾ ಪ್ರಯತ್ನಮಾತಿಷ್ಠೇದ್ಯಥಾತ್ಮಾನಂ ನ ಪೀಡಯೇತ್ ॥ ೩ ॥** (ಮನು :– ೭.೬೮)

**ಧನುರ್ದುರ್ಗಂ ಮಹೀದುರ್ಗಮಬ್ದುರ್ಗಂ ವಾರ್ಕ್ಷಮೇವ ವಾ ।**

**ನೃದುರ್ಗಂ ಗಿರಿದುರ್ಗಂ ವಾ ಸಮಾಶ್ರಿತ್ಯ ವಸೇತ್ಪುರಮ್ ॥ ೪ ॥** (ಮನು :– ೭.೭೦)

**ಏಕಃ ಶತಂ ಯೋಧಯತಿ ಪ್ರಾಕಾರಸ್ಥೋ ಧನುರ್ಧರಃ ।**

**ಶತಂ ದಶ ಸಹಸ್ರಾಣಿ ತಸ್ಮಾದ್ದುರ್ಗಂ ವಿಧೀಯತೇ ॥ ೫ ॥**

**ತತ್ಸ್ಯಾದಾಯುಧಸಂಪನ್ನಂ ಧನಧಾನ್ಯೇನ ವಾಹನೈಃ ।**

**ಬ್ರಾಹ್ಮಣೈಃ ಶಿಲ್ಪಿಭಿರ್ಯಂತ್ರೈರ್ಯವಸೇನೋದಕೇನ ಚ ॥ ೭ ॥**

**ತಸ್ಯ ಮಧ್ಯೇಸುಪರ್ಯಾಪ್ತಂ ಕಾರಯೇದ್ಗೃಹಮಾತ್ಮನಃ ।**

**ಗುಪ್ತಂ ಸರ್ವರ್ತುಕಂ ಶುಭ್ರಂ ಜಲವೃಕ್ಷಸಮನ್ವಿತಮ್ ॥ ೮ ॥**

**ತದಧ್ಯಾಸ್ಯೋದ್ವಹೇದ್ಭಾರ್ಯಂ ಸವರ್ಣಾಂ ಲಕ್ಷಣಾನ್ವಿತಾಮ್ ।**

**ಕುಲೇ ಮಹತಿ ಸಂಭೂತಾಂ ಹೃದ್ಯಾಂ ರೂಪಗುಣಾನ್ವಿತಾಮ್ ॥ ೯ ॥**

**ಪುರೋಹಿತಂ ಪ್ರಕುರ್ವೀತ ವೃಣುಯಾದೇವ ಚರ್ತ್ವಿಜಮ್ ।**

**ತೇಽಸ್ಯ ಗುಹ್ಯಾನಿ ಕರ್ಮಾಣಿ ಕುರ್ಯುರ್ವೈತನಕಾನಿ ಚ ॥೧೦॥** (ಮನು:– ೭. ೭೪–೭೮)

ಅಮಾತ್ಯನಿಗೆ ದಂಡಾಧಿಕಾರವನ್ನೂ, ಹಾಗೂ ಅನ್ಯಾಯಕರವಾದ ದಂಡವು ಆಗದಂತೆ ವಿಷಯಾಕ್ರಿಯೆಯನ್ನೂ, ರಾಜನ ಅಧೀನದಲ್ಲಿ ಕೋಶ ಮತ್ತು ರಾಜಕಾರ್ಯಗಳನ್ನೂ, ಮತ್ತು ಸಭೆಯ ಅಧೀನದಲ್ಲಿ ಸಮಸ್ತ ಕಾರ್ಯಗಳನ್ನೂ ಮತ್ತು ದೂತನ ಅಧೀನದಲ್ಲಿ ಯಾರೊಂದಿಗಾದರೂ ಮೈತ್ರಿಯನ್ನು ಅಥವಾ ವಿರೋಧವನ್ನು ನಿರ್ಧರಿಸುವ ಅಧಿಕಾರವನ್ನೂ ವಹಿಸಿಕೊಡಬೇಕು. (೧)

ಯಾವನು ಒಡಕಿರುವೆಡೆ ಸಂಗವನ್ನೂ ಮತ್ತು ಒಗ್ಗಟಾಗಿರುವ ದುಷ್ಟರನ್ನು ಭಿನ್ನ– ಭಿನ್ನರನ್ನಾಗಿಯೂ ಮಾಡುತ್ತಾನೋ, ಅವನನ್ನೇ ದೂತನೆನ್ನುತ್ತಾರೆ. ದೂತನು, ಯಾವುದರಿಂದ ಶತ್ರುಗಳಲ್ಲಿ ಒಡಕು ಹುಟ್ಟುವುದೋ, ಅಂತಹ ಕಾರ್ಯವನ್ನು ಮಾಡಬೇಕು. (೨)

ಆ ಸಭಾಪತಿಯೂ ಮತ್ತು ಸರ್ವಸದಸ್ಯರೂ ಅಥವಾ ದೂತನೇ ಮೊದಲಾದವರೂ ಸರಿಯಾದ ರೀತಿಯಲ್ಲಿ ಬೇರೆಯ ವಿರೋಧೀ ರಾಜನ ರಾಜ್ಯದ ಅಭಿಪ್ರಾಯವನ್ನರಿತು. ಯಾವುದರಿಂದ ತಮಗೆ ಕ್ಷತಿ ಸಂಭವಿಸದೋ, ಅಂತಹ ಪ್ರಯತ್ನವನ್ನು ಮಾಡಬೇಕು. (೩)

ಆದುದರಿಂದ, ಸುಂದರವಾದ ವನದಲ್ಲಿ, ಧನ–ಧ್ಯಾನಯುಕ್ತವಾದ ಸ್ಥಳದಲ್ಲಿ, (**ಧನುರ್ದುರ್ಗಂ**) ಧನುರ್ಧಾರಿಗಳಾದ ಪುರುಷರಿಂದ ಅಭೇದ್ಯವೂ (**ಮಹೀದುರ್ಗಂ**) ಮಣ್ಣಿನಿಂದ ನಿರ್ಮಿತವೂ, (**ಅಬ್ದುರ್ಗಂ**) ಜಲದಿಂದ ಆವೃತವೂ, (**ವಾರ್ಕ್ಷಂ**)

ನಾಲ್ಕೆಡೆಗಳಿಂದಲೂ ವೃಕ್ಷಗಳಿಂದ ಸುತ್ತಲ್ಪಟ್ಟುದೂ (**ನೃದುರ್ಗಂ**) ನಾಲ್ಕೆಡೆಯಿಂದಲೂ ಸೇನಾಯುಕ್ತವೂ, (**ಗಿರಿದುರ್ಗಂ**) ನಾಲ್ಕು ಕಡೆಗಳಿಂದಲೂ ಪರ್ವತಗಳನ್ನುಳ್ಳುದೂ ಆದ ಸ್ಥಾನದಲ್ಲಿ ಕೋಟೆಯನ್ನು ಕಟ್ಟಿ, ಅದರ ಮಧ್ಯೆ ನಗರವನ್ನು ನಿರ್ಮಿಸಬೇಕು. (೪)

ಮತ್ತು ನಗರದ ನಾಲ್ಕೆಡೆಗಳಲ್ಲಿಯೂ (**ಪ್ರಾಕಾರ**) – ಎಂದರೆ ಪ್ರಕೋಟೆಯನ್ನು ನಿರ್ಮಿಸಬೇಕು; ಏಕೆಂದರೆ – ಅದರಲ್ಲಿ ಸ್ಥಿತವಾದ ಒಬ್ಬ ವೀರ ಧನುರ್ಧಾರಿ ಶಸ್ತ್ರಯುಕ್ತ ಪುರುಷನು ನೂರು ಜನರೊಂದಿಗೆ, ಮತ್ತು ನೂರು ಮಂದಿ ಹತ್ತುಸಾವಿರ ಜನರೊಂದಿಗೆ ಯುದ್ಧಮಾಡಬಲ್ಲರು. ಆದುದರಿಂದ ಅವಶ್ಯಕವಾಗಿ ದುರ್ಗವನ್ನು ಕಟ್ಟುವುದು ಉಚಿತವಾಗಿದೆ. (೫)

ಆ ದುರ್ಗವು ಶಸ್ತ್ರಾಸ್ತ್ರಗಳಿಂದಲೂ, ಧನಧಾನ್ಯಗಳಿಂದಲೂ, ವಾಹನಗಳಿಂದಲೂ, ಓದಿಸುವ ಮತ್ತು ಉಪದೇಶ ಮಾಡುವ ಬ್ರಾಹ್ಮಣರಿಂದಲೂ, (**ಶಿಲ್ಪಿ**) ಶಿಲ್ಪವಿದ್ಯಾನಿಪುಣರಿಂದಲೂ, ಯಂತ್ರಗಳಿಂದಲೂ, ನಾನಾ ವಿಧದ ಕಲೆಗಳಿಂದಲೂ, (**ಯವಸೇನ**) ಮೇವು, ಹುಲ್ಲು, ನೀರು– ಮೊದಲಾದುದರಿಂದಲೂ ಸಂಪನ್ನವಾಗಿ ಎಂದರೆ– ಪರಿಪೂರ್ಣವಾಗಿರಬೇಕು. (೬)

ಅದರ ನಡುವೆ, ಜಲ, ವೃಕ್ಷ ಪುಷ್ಪ – ಮೊದಲಾದುವುಗಳಿಂದ, ಎಲ್ಲ ರೀತಿಯಿಂದಲೂ, ರಕ್ಷಿತವಾದ ಎಲ್ಲ ಋತುಗಳಲ್ಲಿಯೂ ಸುಖಕರವಾಗಿರುವ, ಯಾವುದರಲ್ಲಿ ಸಮಸ್ತ ರಾಜ್ಯ ಕಾರ್ಯಗಳ ನಿರ್ವಾಹವಾಗುವುದೋ ಅಂತಹ, ಬಿಳಿಯ ಬಣ್ಣದ ಮನೆಯನ್ನು ತನ್ನ ಸಲುವಾಗಿ ನಿರ್ಮಿಸಬೇಕು. (೭)

ಇಷ್ಟು ಕಾಲ, ಎಂದರೆ – ಬ್ರಹ್ಮಚರ್ಯದಿಂದ ವಿದ್ಯಾಭ್ಯಾಸ ಮಾಡಿ, ಈ ವರೆಗೆ ರಾಜ – ಕಾರ್ಯ ಮಾಡಿ, ಆ ಮೇಲೆ, "ಯಾವಳು, ತನಗೆ ಅನುಗುಣವಾಗಿ ವಿದ್ಯಾವತಿಯೂ, ಗುಣಕರ್ಮಸ್ವಭಾವದಲ್ಲಿರುವವಳೂ" ಆಗಿದ್ದಾಳೋ, ಅಂತಹ ಸೌಂದರ್ಯರೂಪಗುಣಯುಕ್ತಳೂ, ಹೃದಯಕ್ಕೆ ಅತಿಪ್ರಿಯಳೂ, ಮಹತ್ತಾದ ಉತ್ತಮ ಕುಲದಲ್ಲಿ ಹುಟ್ಟಿದವಳೂ, ಸುಂದರ ಲಕ್ಷಣಯುಕ್ತಳೂ ಆದ, ತನ್ನ ಕ್ಷತ್ರಿಯ ಕುಲದ ಕನ್ಯೆಯೊಬ್ಬಳೊಂದಿಗೆ ಮಾತ್ರ ವಿವಾಹ ಮಾಡಿಕೊಂಡು, ಏಕಪತ್ನೀವ್ರತಸ್ಥ ನಾಗಿರಬೇಕು.[೧೧] ಬೇರೆಯ ಸಮಸ್ತ ಸ್ತ್ರೀಯರನ್ನೂ ಅಗಮ್ಯರೆಂದು ತಿಳಿದು, ಕಣ್ಣೆತ್ತಿ ನೋಡಲೂಬಾರದು. (೮)

ಅವರು "ಅಗ್ನಿಹೋತ್ರ, ಪಕ್ಷೇಷ್ಟಿ" – ಮೊದಲಾದ, ರಾಜಗೃಹದ ಸಮಸ್ತ ಕರ್ಮಗಳನ್ನೂ ಮಾಡಿಕೊಂಡು ಹೋಗುವ ಸಲುವಾಗಿ, ಪುರೋಹಿತರನ್ನೂ, ಋತ್ವಿಕ್ಕುಗಳನ್ನೂ ಸ್ವೀಕರಿಸಬೇಕು ಮತ್ತು ತಾನು ಸರ್ವದಾ ರಾಜಕಾರ್ಯಗಳಲ್ಲಿ ತತ್ಪರನಾಗಿರಬೇಕು; ಎಂದರೆ– "ರಾತ್ರಿ ಹಗಲು ರಾಜಕಾರ್ಯದಲ್ಲಿ ತತ್ಪರನಾಗಿರುವುದೇ, ಯಾವ ರಾಜಕಾರ್ಯವನ್ನೂ ಕೆಡಲು ಬಿಡದಿರುವುದೇ ರಾಜನ ಸಂಧ್ಯೋಪಾಸನೆಗೆ ಸರಿಯಾದ ಕರ್ಮವಾಗಿದೆ." (೯)[೧೨]

**ಸಾಂವತ್ಸರಿಕಮಾಪ್ತೈಶ್ಚ ರಾಷ್ಟ್ರಾದಾಹಾರಯೇದ್ಬಲಿಮ್ ।**
**ಸ್ಯಾಚ್ಚಾಮ್ನಾಯಪರೋ ಲೋಕೇ ವರ್ತೇತ ಪಿತೃವನ್ನೃಷು ॥ ೧ ॥**

**ಅಧ್ಯಕ್ಷಾನ್ವಿವಿಧಾನ್ ಕುರ್ಯಾತ್ತತ್ರ ತತ್ರ ವಿಪಶ್ಚಿತಃ ।**
**ತೇಽಸ್ಯ ಸರ್ವಾಣ್ಯವೇಕ್ಷೇರನ್ನೃಣಾಂ ಕಾರ್ಯಾಣಿ ಕುರ್ವತಾನ್ ॥ ೨ ॥**

**ಆವೃತ್ತಾನಾಂ ಗುರುಕುಲಾದ್ವಿಪ್ರಾಣಾಂ ಪೂಜಕೋ ಭವೇತ್ ।**
**ನೃಪಣಾಮಕ್ಷಯೋ ಹ್ಯೇಷ ನಿಧಿರ್ಬ್ರಾಹ್ಮೋ ವಿಧೀಯತೇ ॥ ೩॥** (ಮನು:– ೭.೮೦–೮೨)

**ಸಮೋತ್ತಮಾಧಮೈಃ ರಾಜಾ ತ್ವಾಹೂತಃ ಪಾಲಯನ್ ಪ್ರಜಾಃ ।**
**ನ ನಿವರ್ತೇತ ಸಂಗ್ರಾಮಾತ್ಕ್ಷಾತ್ರಧರ್ಮಮನು ಸ್ಮರನ್ ॥ ೪ ॥** (ಮನು:– ೭.೮೭)

**ಆಹವೇಷು ಮಿಥೋಽನ್ಯೋಽನ್ಯಂ ಜಿಘಾಂಸಂತೋ ಮಹೀಕ್ಷಿತಃ ।**
**ಯುಧ್ಯಮಾನಾಃ ಪರಂ ಶಕ್ತ್ಯಾ ಸ್ವರ್ಗಂ ಯಾಂತ್ಯಪರಾಙ್ಮುಖಾಃ ॥ ೫ ॥** (ಮನು:– ೭.೮೯)

---

೧೧. ಈ ರೀತಿಯ ರಾಜಕನ್ಯೆಗಿರಬೇಕಾದ ಯೋಗ್ಯತೆಯನ್ನು ನಿರ್ಲಕ್ಷಿಸಿ, ವಿವಾಹವಾಗಿ ಮತ್ತೆ ಬಹುಪತ್ನಿಯರನ್ನಿಟ್ಟುಕೊಂಡು, ವೇಶ್ಯಾಗಾಮಿಗಳಾಗಿ, ತಮ್ಮ ಅಯೋಗ್ಯತೆಯನ್ನು ಹೆಚ್ಚಿಸಿಕೊಂಡ ತತ್ ಕ್ಷಣ, ಭಾರತೀಯ ರಾಜರು ಇಸ್ಪೇಟಿನ ರಾಜರಾದರು.

೧೨. ಇದರ ಅರ್ಥ ರಾಜನು ಸಂಧ್ಯಾದಿಗಳನ್ನು ಮಾಡಬೇಕಾಗಿಲ್ಲವೆಂದಲ್ಲ. ರಾಜಕಾರ್ಯದ ಕಡೆ ಗಮನ ಮುಖ್ಯವೆಂದೂ, ಮತ್ತು ಅದು ಸಂಧ್ಯೋಪಾಸನೆಯಷ್ಟು ಮಹತ್ವವುಳ್ಳದ್ದೆಂದೂ ಅಭಿಪ್ರಾಯ. 'ಪಂಚಮಹಾಯಜ್ಞ' ಕ್ಷತ್ರಿಯರಿಗೂ ಅಗತ್ಯವೇ. –ಅನು.

ನ ಚ ಹನ್ಯಾತ್ ಸ್ಥಲಾರೂಢಂ ನ ಕ್ಲೀಬಂ ನ ಕೃತಾಂಜಲಿಮ್ ।
ನ ಮುಕ್ತಕೇಶಂ ನಾಸೀನಂ ನ ತವಾಸ್ಮೀತಿ ವಾದಿನಮ್ ॥ ೬ ॥
ನ ಸುಪ್ತಂ ನ ವಿಸನ್ನಾಹಂ ನ ನಗ್ನಂ ನ ನಿರಾಯುಧಮ್ ।
ನಾಯುಧ್ಯಮಾನಂ ಪಶ್ಯಂತಂ ನ ಪರೇಣ ಸಮಾಗತಮ್ ॥ ೭ ॥
ನಾಯುಧವ್ಯಸನಂ ಪ್ರಾಪ್ತಂ ನಾರ್ತಂ ನಾತಿಪರಿಕ್ಷತಮ್ ।
ನ ಭೀತಂ ನ ಪರಾವೃತ್ತಂ ಸತಾಂ ಧರ್ಮಮನುಸ್ಮರನ್ ॥ ೮ ॥
ಯಸ್ತುಭೀತಃ ಪರಾವೃತ್ತಃ ಸಂಗ್ರಾಮೇ ಹನ್ಯತೇ ಪರೈಃ ।
ಭರ್ತುರ್ಯದ್ದುಷ್ಕೃತಂ ಕಿಂಚಿತ್ ತತ್ಸರ್ವಂ ಪ್ರತಿಪದ್ಯತೇ ॥ ೯ ॥
ಯಚ್ಚಾಸ್ಯ ಸುಕೃತಂ ಕಿಂಚಿದಮುತ್ರಾರ್ಥಮುಪಾರ್ಜಿತಮ್ ।
ಭರ್ತಾ ತತ್ಸರ್ವಮಾದತ್ತೇ ಪರಾವೃತ್ತಹತಸ್ಯ ತು ॥ ೧೦ ॥
ರಥಾಶ್ವಂ ಹಸ್ತಿನಂ ಛತ್ರಂ ಧನಂ ಧಾನ್ಯಂ ಪಶೂನ್ ಸ್ತ್ರಿಯಃ ।
ರಾಜ್ಞಶ್ಚ ದದ್ಯುರುದ್ಧಾರಮಿತ್ಯೇಷಾ ವೈದಿಕೀ ಶ್ರುತಿಃ ।
ರಾಜ್ಞಾ ಚ ಸರ್ವಯೋಧೇಭ್ಯೋ ದಾತವ್ಯಮಪೃಥಗ್ಜಿತಮ್ ॥ ೧೨ ॥ (ಮನು:- ೭.೯೧-೯೭)

"ವಾರ್ಷಿಕ ತೆರಿಗೆಯನ್ನು 'ಆಪ್ತ' ಪುರುಷರ ಮೂಲಕ ಗ್ರಹಿಸಬೇಕು" ಮತ್ತು ಸಭಾಪತಿಯಾದ ರಾಜನೇ ಮೊದಲಾದ ಪ್ರಧಾನ ಪುರುಷರು ಯಾರಿದ್ದಾರೋ, ಅವೆಲ್ಲರೂ, ಸಭೆಯೂ ವೇದಾನುಕೂಲವಾಗಿದ್ದು, ಪ್ರಜೆಗಳೊಂದಿಗೆ ತಂದೆಯಂತೆ ವರ್ತಿಸಬೇಕು. (೧)

ಆ ರಾಜ ಕಾರ್ಯದಲ್ಲಿ ಸಭೆಯು ವಿವಿಧ ರೀತಿಯ ಅಧ್ಯಕ್ಷರುಗಳನ್ನು ಗೊತ್ತು ಮಾಡಬೇಕು. ಯಾವ ಯಾವ ಕಾರ್ಯದಲ್ಲಿ ಎಷ್ಟು ಎಷ್ಟು ಜನ ರಾಜಪುರುಷರಿದ್ದಾರೋ, ಅವರು ನಿಯಮಾನುಸಾರವರ್ತಿಸಿ, ತಕ್ಕಂತೆ ಕೆಲಸ ಮಾಡುತ್ತಾರೋ, ಅಥವಾ ಇಲ್ಲವೋ– ಎಂಬುದನ್ನು ನಿರೀಕ್ಷಿಸುವುದೇ ಇವರ ಕೆಲಸವಾಗಿರುತ್ತದೆ. "ಯಾರು ಯುಕ್ತ ರೀತಿಯಲ್ಲಿ ಕಾರ್ಯ ಮಾಡುತ್ತಾರೋ, ಅವರನ್ನು ಸತ್ಕರಿಸಬೇಕು ಮತ್ತು ಯಾರು ವಿರುದ್ಧವಾಗಿ ಮಾಡುತ್ತಾರೋ, ಅವರಿಗೆ ಯುಕ್ತವಾದ ದಂಡವನ್ನು ವಿಧಿಸುತ್ತಾ ಹೋಗಬೇಕು." [೧೩]

ಸದಾ, ರಾಜರುಗಳ ವೇದ ಪ್ರಚಾರವೆಂಬ ಅಕ್ಷಯವಾದ ಕೋಶವಾವುದಿದೆಯೋ, ಅದರ ಪ್ರಚಾರಕ್ಕಾಗಿ, ಯಾವನು ಕ್ರಮಾನುಸಾರ ಬ್ರಹ್ಮಚರ್ಯದಿಂದ ವೇದ - ಮೊದಲಾದ ಶಾಸ್ತ್ರಗಳನ್ನೋದಿ ಗುರುಕುಲದಿಂದ ಬರುತ್ತಾನೋ, ಅವನ ಸತ್ಕಾರವನ್ನು ರಾಜನೂ ಮತ್ತು ಸಭೆಯೂ ಯೋಗ್ಯ ರೀತಿಯಲ್ಲಿ ಮಾಡಬೇಕು ಮತ್ತು ಯಾರು ಅಂತಹವನಿಗೆ ಓದಿಸಿರುತ್ತಾರೋ, ಆ ವಿದ್ವಾಂಸರನ್ನೂ ಕೂಡ ಸತ್ಕರಿಸಬೇಕು. (೩)

"ಈ ವಿಷಯವನ್ನು ಕ್ರಿಯಾತ್ಮಕನಾಗಿ ಮಾಡುವುದರಿಂದ ರಾಜ್ಯದಲ್ಲಿ ವಿದ್ಯಾಭಿವೃದ್ಧಿಯಾಗಿ, ಅತ್ಯಂತ ಉನ್ನತಿಯುಂಟಾಗುತ್ತದೆ." ಯಾವಾಗಲಾದರೂ, ಪ್ರಜಾ ಪಾಲನೆ ಮಾಡುವ ರಾಜನಿಗೆ, ಯಾವನಾದರೂ ಅವನಿಗಿಂತ ಚಿಕ್ಕವನು, ಸಮನಾದವನು ಮತ್ತು ಉತ್ತಮನಾದವನು ಯುದ್ಧಕ್ಕೆ ಅಹ್ವಾನವಿತ್ತರೆ, ಕ್ಷಾತ್ರಧರ್ಮವನ್ನು ಸ್ಮರಿಸಿ, ಸಂಗ್ರಾಮಕ್ಕೆ" ತೆರಳುವುದಕ್ಕೆ" ಎಂದೂ ಹಿಂಜರಿಯಬಾರದು, ಎಂದರೆ, "ತನಗೆಯೇ ವಿಜಯವಾಗುವಂತೆ ಬಹು ಚಾತುರ್ಯದಿಂದ ಅವರೊಂದಿಗೆ ಯುದ್ಧ ಮಾಡಬೇಕು." (೪)

---

೧೩. ಈ ಚಿಹ್ನೆ ತೋರಿಸಿರುವ ವಾಕ್ಯಗಳ ಅಭಿಪ್ರಾಯ ಮನುಸ್ಮೃತಿಯ ಶ್ಲೋಕಗಳಲಿಲ್ಲ. ಇವು ಮಹರ್ಷಿ ದಯಾನಂದರ ಸ್ವನಿರ್ದೇಶ. ಆದ್ದರಿಂದ, ಅವರು ಸ್ವಯಂ ಸಂನ್ಯಾಸಿಯಾಗಿದ್ದರೂ ಕೂಡ, ಎಷ್ಟು ಮಟ್ಟಿಗೆ ರಾಜಧರ್ಮ-ಯುದ್ಧಧರ್ಮ ವಿಶಾರದರೆಂಬುದು ತಿಳಿಯುತ್ತದೆ.

ಯಾವ ರಾಜರುಗಳು ಯುದ್ಧಗಳಲ್ಲಿ ಒಬ್ಬರನ್ನೊಬ್ಬರು ಹನನಮಾಡುವ ಇಚ್ಛೆಯನ್ನು ಇಟ್ಟು ಕೊಂಡು, ತಮ್ಮ ಸಾಮರ್ಥ್ಯವಿರುವಷ್ಟು, ಭಯವಿಲ್ಲದೆ, ಬೆನ್ನು ತೋರಿಸದೆ, ಯುದ್ಧ ಮಾಡುತ್ತಾರೋ, ಅವರು ಸುಖವನ್ನು ಹೊಂದುತ್ತಾರೆ; ಇದಕ್ಕೆಂದೂ ವಿಮುಖರಾಗಬಾರದು. ಆದರೆ, "ಒಂದೊಂದು ಸಾರಿ ಶತ್ರುವನ್ನು ಗೆಲ್ಲುವುದಕ್ಕಾಗಿ, ಅವರ ಮುಂದಿನಿಂದ ಮರೆಯಾಗುವುದು ಉಚಿತವಾಗಿರುತ್ತದೆ. ಏಕೆಂದರೆ, ಯಾವ ರೀತಿ ಶತ್ರುವನ್ನು ಜಯಿಸಬಲ್ಲರೋ, ಅದೇ ರೀತಿ ಕಾರ್ಯಮಾಡಬೇಕು. ಹೇಗೆ ಸಿಂಹವು ಕ್ರೋಧದಿಂದ ಮುಂದೆ ಬಂದು, ಶಸ್ತ್ರದ ಅಗ್ನಿಯಿಂದ ಭಸ್ಮವಾಗಿ ಹೋಗುವುದೋ, ಹಾಗೆ, ಮೂರ್ಖತನದಿಂದ ಸರ್ವ ನಾಶಹೊಂದಬಾರದು." (೫)

ಯುದ್ಧಕಾಲದಲ್ಲಿ ಅತ್ತ–ಇತ್ತ ನಿಂತಿರುವವನನ್ನೂ, ನಪುಂಸಕನನ್ನೂ, ಕೈಮುಗಿಯುವವನನ್ನೂ, ಬಿಚ್ಚಿದ ತಲೆಗೂದಲಿನವನನ್ನೂ, ಕುಳಿತಿರುವವನನ್ನೂ, 'ನಾನು, ನಿನ್ನ ಶರಣಾಗತನು' – ಎನ್ನುವವನನ್ನೂ, (೬)

ನಿದ್ರಿಸುತ್ತಿರುವವನನ್ನೂ, ಮೂರ್ಛಿತನನ್ನೂ, ನಗ್ನನನ್ನೂ, ನಿರಾಯುಧನನ್ನೂ, ಯುದ್ಧಮಾಡುತ್ತಿರುವವನನ್ನು ನೋಡುತ್ತಿರುವವರನ್ನೂ ಶತ್ರುವಿನ ಸಂಗಾತಿಯನ್ನೂ. (೭)

ಆಯುಧಪ್ರಹಾರದಿಂದ ಪೀಡಿತನಾದವನನ್ನೂ, ದುಃಖಿತನನ್ನೂ ಅತ್ಯಂತ ಗಾಯಗೊಂಡವನನ್ನೂ, ಹೆದರಿದವನನ್ನೂ ಮತ್ತು ಓಡಿ ಹೋಗುತ್ತಿರುವ ಪುರುಷನನ್ನೂ; ಸತ್ಪುರುಷರ ಧರ್ಮವನ್ನು ಸ್ಮರಿಸುತ್ತಾ, ಯೋದ್ಧರು ಎಂದಿಗೂ ಕೊಲ್ಲಬಾರದು. ಆದರೆ, ಅವರನ್ನು ಹಿಡಿದು, "ಸ್ವಸ್ಥರಾಗಿದ್ದರೆ ಕಾರಾಗಾರದಲ್ಲಿಡಬೇಕು ಮತ್ತು ಊಟ–ಉಡಿಗೆಗಳನ್ನು ಸೂಕ್ತ ರೀತಿಯಲ್ಲಿ ಕೊಡಬೇಕು. ಮತ್ತು ಗಾಯಗೊಂಡಿದ್ದರೆ, ಅವರಿಗೆ ಔಷಧ ಮೊದಲಾದುವನ್ನು ವಿಧಿಪೂರ್ವಕವಾಗಿ ಏರ್ಪಡಿಸಬೇಕು. ಅವರನ್ನು ರೇಗಿಸಲೂಬಾರದು; ನೋಯಿಸಲೂಬಾರದು. ಅವರಿಗೆ ಯೋಗ್ಯವಾದ ಕಾರ್ಯವಾವುದೋ, ಅದನ್ನು ಮಾಡಿಸಬೇಕು." "ಸ್ತ್ರೀಯರ ಮೇಲೆಯೂ, ಬಾಲಕರೂ, ವೃದ್ಧರೂ, ಆತುರರೂ, ಶೋಕಯುಕ್ತರೂ ಆದ ಪುರುಷರ ಮೇಲೆಯೂ ಶಸ್ತ್ರವನ್ನು ಎಂದೂ ಪ್ರಯೋಗಿಸಬಾರದು – ಎನ್ನುವುದರ ಕಡೆ ವಿಶೇಷ ಗಮನವಿಡಬೇಕು." "ಅವರ ಮಕ್ಕಳು ಮರಿಗಳನ್ನು ತನ್ನ ಸಂತತಿ – ಎನ್ನುವಂತೆ ಪಾಲಿಸಬೇಕು. ಮತ್ತು ಸ್ತ್ರೀಯರನ್ನೂ ಹಾಗೆಯೇ ಪಾಲಿಸಬೇಕು. ಅವರನ್ನು ತನ್ನ ಸೋದರಿಯರ ಹಾಗೂ ಪುತ್ರಿಯರ ಸಮರೆಂದು ತಿಳಿಯಬೇಕು. ಎಂದಿಗೂ ವಿಷಯಾಸಕ್ತಿಯ ದೃಷ್ಟಿಯಿಂದ ನೋಡಲೇಬಾರದು." ಯಾವಾಗ ರಾಜ್ಯ ದೃಢವಾಗುವುದೋ, ಮತ್ತು ಪುನಃ ಪುನಃ ಯುದ್ಧ ನಡೆಯುವ ಸಂದೇಹ ತೀರಿಹೋಗುವುದೋ, ಆಗ ಅವರನ್ನು ಸತ್ಕಾರಪೂರ್ವಕವಾಗಿ ಬಿಡುಗಡೆಮಾಡಿ, ಅವರವರ ಮನೆಗಳಿಗೆ ಅಥವಾ ದೇಶಕ್ಕೆ ಕಳುಹಿಸಬೇಕು. ಮತ್ತು "ಯಾರಿಂದ ಭವಿಷ್ಯತ್ಕಾಲದಲ್ಲಿ ವಿಘ್ನ ಉಂಟಾಗುವುದು ಸಂಭವವೋ, ಅವರನ್ನು ಸದಾ ಕಾರಾಗಾರದಲ್ಲಿಡಬೇಕು." (೮)

ಮತ್ತು ಯಾವನು ಪಲಾಯನ ಮಾಡುತ್ತಾನೋ, ಎಂದರೆ ಓಡಿಹೋಗುತ್ತಾನೋ, ಮತ್ತು ಅಂಜಿದವನಾದ ಭೃತ್ಯನು ಶತ್ರುಗಳಿಂದ ಕೊಲ್ಲಲ್ಪಡುತ್ತಾನೋ, ಅವನು ತನ್ನ ಒಡೆಯನ ದೋಷವನ್ನು ತಾನೇ ತೆಗೆದುಕೊಂಡು, ದಂಡನೀಯನಾಗುವನು. (೯)

ಮತ್ತು ಯಾವುದರಿಂದ ಈ ಲೋಕ ಮತ್ತು ಪರಲೋಕದಲ್ಲಿ ಸುಖ ಲಭಿಸಬೇಕಾಗಿದ್ದಿತೋ, ಅಂತಹ ಅವನ ಗೌರವವನ್ನು ಅವನ ಒಡೆಯನು ಪಡೆದುಕೊಳ್ಳುತ್ತಾನೆ ಮತ್ತು ಯಾವನು ಓಡಿಹೋಗಿ ಕೊಲ್ಲಲ್ಪಡುತ್ತಾನೋ ಅವನಿಗೆ ಸ್ವಲ್ಪವೂ ಸುಖವುಂಟಾಗುವುದಿಲ್ಲ. ಅವನ ಪುಣ್ಯಫಲವೆಲ್ಲಾ ಹಾಳಾಗಿ ಹೋಗುತ್ತದೆ. ಮತ್ತು ಯಾವನು ಧರ್ಮದಿಂದ, ಯುಕ್ತವಾದ ರೀತಿಯಲ್ಲಿ ಯುದ್ಧಮಾಡಿದ್ದಾನೋ, ಅವನು ಆ ಓಡಿಹೋಗದವನ ಗೌರವವನ್ನು ಪಡೆದುಕೊಳ್ಳುತ್ತಾನೆ. (೧೦)

ಯಾವ ಯಾವ ಯುದ್ಧದಲ್ಲಿ, ಯಾವ ಯಾವ ಭೃತ್ಯನು ಅಥವಾ ಅಧ್ಯಕ್ಷನು. ರಥಗಳು, ಕುದುರೆಗಳು, ಆನೆಗಳು, ಛತ್ರಗಳು, ಧನ, ಧಾನ್ಯ ಹಸು – ಮೊದಲಾದ ಪ್ರಾಣಿಗಳು ಮತ್ತು ಸ್ತ್ರೀಯರು,[೧೪] ಮತ್ತು ಬೇರೆ ಬಗೆಯ ಸಮಸ್ತ ದ್ರವ್ಯಗಳು, ಹಾಗೆಯೇ ತುಪ್ಪ, ಎಣ್ಣೆ – ಮೊದಲಾದುವುಗಳ ಕೊಪ್ಪರಿಗೆಗಳು – ಇವನ್ನು ಗೆದ್ದಿದ್ದಾನೋ, ಅವನೇ ಅವುಗಳನ್ನು ತೆಗೆದುಕೊಳ್ಳಬೇಕು – ಎಂಬ ಈ ವ್ಯವಸ್ಥೆಯನ್ನು ಎಂದಿಗೂ ಮುರಿಯಬಾರದು. (೧೧)

---

೧೪. ಶತ್ರುಗಳ ಕಡೆಗೆ ಸ್ತ್ರೀಯರ ವ್ಯವಸ್ಥೆಯ ಬಗ್ಗೆ ಆರ್ಯ ಸಂಸ್ಕೃತಿಗನುಸಾರವಾಗಿ ಹೇಳಲಾಗಿದೆ. ಮುಸಲ್ಮಾನರು ಯುದ್ಧದಲ್ಲಿ ಗೆದ್ದ ಅಥವಾ ದರೋಡೆಯಲ್ಲಿ ದೋಚಿ ತಂದ ಸ್ತ್ರೀಯರನ್ನು ತಮ್ಮ ಅಂತಃ ಪುರಗಳಿಗೆ ಸೇರಿಸುವುದು, ದಾಸಿಯನ್ನಾಗಿಯೋ, ವೇಶ್ಯೆಯನ್ನಾಗಿಯೋ ಉಪಯೋಗಿಸಿಕೊಳ್ಳುವುದು; ಅಥವಾ ಮಾರುಕಟ್ಟೆಯಲ್ಲಿ ಮಾರುವುದು, ಹರಾಜು ಹಾಕುವುದು ಮೊದಲಾದವು ಅವರ ಮ್ಲೇಚ್ಛಸಂಸ್ಕೃತಿಗುಣ ವಾಗಿದ್ದರೂ ಜಗತ್ತಿನಲ್ಲಿ ನಿಂದನೀಯವೇ ಸರಿ. –ಸಂ

ಆದರೆ, ಸೇನೆಯಲ್ಲಿನ ಜನರೂ ಕೂಡ, ಆ ಗೆದ್ದ ಪದಾರ್ಥಗಳ ಹದಿನಾರನೆಯ ಒಂದು ಭಾಗವನ್ನು ರಾಜನಿಗೆ ಕೊಡಬೇಕು ಮತ್ತು ರಾಜನೂ ಕೂಡ. ಎಲ್ಲರೂ ಸೇರಿ ಜಯಿಸಿದ ಧನದ ಹದಿನಾರನೆಯ ಒಂದು ಭಾಗವನ್ನು ಸೇನೆಯಲ್ಲಿನ ಯೋದ್ಧರಿಗೆ ಕೊಡಬೇಕು. ಮತ್ತು "ಯಾವನಾದರೂ ಯುದ್ಧದಲ್ಲಿ ಮೃತನಾಗಿದ್ದರೆ, ಅವನ ಪತ್ನಿಯನ್ನೂ ಮತ್ತು ಅಸಮರ್ಥರಾದ ಮಕ್ಕಳನ್ನೂ ಯುಕ್ತವಾದ ರೀತಿಯಲ್ಲಿ ಪಾಲಿಸಬೇಕು. ಯಾವಾಗ ಅವನ ಪುತ್ರರು ಸಮರ್ಥರಾಗುತ್ತಾರೋ, ಆಗ ಅವರಿಗೆ ಯೋಗ್ಯತಾನುಸಾರವಾದ ಅಧಿಕಾರವನ್ನು ಕೊಡಬೇಕು." "ಯಾವನಾದರೂ ಸರಿಯೇ; ತನ್ನ ರಾಜ್ಯದ ವೃದ್ಧಿ, ಪ್ರತಿಷ್ಠೆ, ವಿಜಯ ಮತ್ತು ಆನಂದವರ್ಧನದ ಇಚ್ಛೆಯುಳ್ಳವನಾದರೆ, ಅವರು ಈ ಕಟ್ಟುಪಾಡನ್ನು ಎಂದಿಗೂ ಉಲ್ಲಂಘಿಸಬಾರದು." (೧೨)

**ಅಲಬ್ಧಂ ಚೈವ ಲಿಪ್ಸೇತ ಲಬ್ಧಂ ರಕ್ಷೇತ್ಪ್ರಯತ್ನತಃ ।**
**ರಕ್ಷಿತಂ ವರ್ಧಯೇಚ್ಚೈವ ವೃದ್ಧಂ ಪಾತ್ರೇಷು ನಿಃಕ್ಷಿಪೇತ್ ॥ ೧ ॥**[೧೫] (ಮನು:– ೭.೯೯)
**ಅಲಬ್ಧಮಿಚ್ಛೇದ್ದಂಡೇನ ಲಬ್ಧಂ ರಕ್ಷೇದವೇಕ್ಷಯಾ ।**
**ರಕ್ಷಿತಂ ವರ್ಧಯೇದ್ವೃದ್ಧ್ಯಾ ವೃದ್ಧಂ ದಾನೇನ ನಿಃಕ್ಷಿಪೇತ್ ॥ ೨ ॥** (ಮನು :– ೭.೯೯)
**ಅಮಾಯಯೈವ ವರ್ತೇತ ನ ಕಥಂ ಚನ ಮಾಯಯಾ ।**
**ಬುಧ್ಯೇತಾರಿಪ್ರಯುಕ್ತಾಂ ಚ ಮಾಯಾನ್ನಿತ್ಯಂ ಸ್ವಸಂವೃತಃ ॥ ೩ ॥** (ಮನು:– ೭.೧೦೧)
**ನಾಸ್ಯ ಛಿದ್ರಂ ಪರೋ ವಿದ್ಯಾಚ್ಛಿದ್ರಂ ವಿದ್ಯಾತ್ಪರಸ್ಯತು ।**
**ಗೂಹೇತ್ಕೂರ್ಮ ಇವಾಂಗಾನಿ ರಕ್ಷೇದ್ವಿವರಮಾತ್ಮನಃ ॥ ೪ ॥**
**ಬಕವಚ್ಚಿಂತಯೇದರ್ಥಾನ್ ಸಿಂಹವಚ್ಚ ಪರಾಕ್ರಮೇತ್ ॥**
**ವೃಕವಚ್ಚಾವಲುಂಪೇತ ಶಶವಚ್ಚ ವಿನಿಷ್ಪತೇತ್ ॥ ೫ ॥**
**ಏವಂ ವಿಜಯಮಾನಸ್ಯ ಯೇಽಸ್ಯ ಸ್ಯುಃಪರಿಪಂಥಿನಃ ।**
**ತಾನಾನಯೇದ್ವಶಂ ಸರ್ವಾನ್ ಸಾಮಾದಿಭಿರುಪಕ್ರಮೈಃ ॥ ೬ ॥** (ಮನು:– ೭. ೧೦೪– ಯದಿತೀತು...)
**ಯಥೋದ್ಧರತಿ ನಿರ್ದಾತಾ ಕಕ್ಷಂ ಧಾನ್ಯಾಂ ಚ ರಕ್ಷತಿ ।**
**ತಥಾ ರಕ್ಷೇನ್ನೃಪೋ ರಾಷ್ಟ್ರಂ ಹನ್ಯಾಚ್ಚ ಪರಿಪಂಥಿನಃ ॥ ೭ ॥** (ಮನು:– ೭. ೧೦೪– ೧೦೭)
**ಮೋಹಾದ್ರಾಜಾ ಸ್ವರಾಷ್ಟ್ರಂ ಯಃ ಕರ್ಷಯತ್ಯ ನವೇಕ್ಷಯಾ ।**
**ಸೋಽಚಿರಾದ್ಭ್ರಶ್ಯತೇ ರಾಷ್ಟ್ರಾಜ್ಜೀವಿತಾಚ್ಚ ಸಭಾಂಧವಃ ॥ ೮ ॥**
**ಶರೀರಕರ್ಷಣಾತ್ಪ್ರಾಣಾಃ ಕ್ಷೀಯಂತೇ ಪ್ರಾಣಿನಾಂ ಯಥಾ ।**
**ತಥಾ ರಾಜ್ಞಾಮಪಿಪ್ರಾಣಾಃ ಕ್ಷೀಯಂತೇ ರಾಷ್ಟ್ರಕರ್ಷಣಾತ್ ॥ ೯ ॥**
**ರಾಷ್ಟ್ರಸ್ಯ ಸಂಗ್ರಹೇ ನಿತ್ಯಂ ವಿಧಾನಮಿತಮಾಚರೇತ್ ।**
**ಸುಸಂಗೃಹೀತರಾಷ್ಟ್ರೋ ಹಿ ಪಾರ್ಥಿವಃ ಸುಖಮೇಧತೇ ॥ ೧೦ ॥**
**ದ್ವಯೋಸ್ತ್ರಯಾಣಾಂ ಪಂಚಾನಾಂ ಮಧ್ಯೇ ಗುಲ್ಮಮಧಿಷ್ಠಿತಮ್ ।**
**ತಥಾ ಗ್ರಾಮಶತಾನಾಂ ಚ ಕುರ್ಯಾದ್ರಾಷ್ಟ್ರಸ್ಯ ಸಂಗ್ರಹಮ್ ॥ ೧೧ ॥**

---

೧೫. ಎತಚ್ಚತುರ್ವಿದಂ ಪುರುಷಾರ್ಥಪ್ರಯೋಜನನ್ ।
ಅಸ್ಯನಿತ್ಯಮನುಷ್ಠಾನಂ ಸಮ್ಯಕ ಕುರ್ಯಾದತಂದ್ರಿತಃ ॥ ೨ ॥ (ಮನು: ೭.೧೦೦)

**ಗ್ರಾಮಾಸ್ಯಾಧಿಪತಿಂ ಕುರ್ಯಾದ್ದ ಶಗ್ರಾಮಪತಿಂ ತಥಾ ।**
**ವಿಂಶತೀಶಂ ಶತೇಶಂ ಚ ಸಹಸ್ರಪತಿಮೇವ ಚ ॥ ೧೨ ॥**
**ಗ್ರಾಮೇ ದೋಷಾನ್ಸ ಮುತ್ಪನ್ನಾನ್ ಗ್ರಾಮಿಕಃ ಶನಕೈಃ ಸ್ವಯಮ್ ।**
**ಶಂಸೇದ್ಗ್ರಾಮದಶೇಶಾಯ ದಶೇಶೋ ವಿಂಶತೀಶಿನಂ ॥ ೧೩ ॥**
**ವಿಂಶತೀಶಸ್ತುತತ್ಸರ್ವಂ ಶತೇಶಾಯ ನಿವೇದಯೇತ್ ।**
**ಶಂಸೇದ್ಗ್ರಾಮಶತೇಶಸ್ತು ಸಹಸ್ರಪತಯೇ ಸ್ವಯಮ್ ॥ ೧೪ ॥**
**ತೇಷಾಂ ಗ್ರಾಮ್ಯಾಣಿ ಕಾರ್ಯಾಣಿ ಪೃಥಕ್ಕಾರ್ಯಾಣಿ ಚೈವ ಹಿ ।**
**ರಾಜ್ಞೋಽನ್ಯಃ ಸಚಿವಃ ಸ್ನಿಗ್ಧಸ್ತಾನಿ ಪಶ್ಯೇದತಂದ್ರಿತಃ ॥ ೧೫ ॥** (ಮನು:- ೭. ೧೧೦- ೧೧೭)
**ನಗರೇ ನಗರೇ ಚೈಕಂ ಕುರ್ಯಾತ್ಸ ರ್ವಾರ್ಥಚಿಂತಕಮ್ ।**
**ಉಚ್ಚೈಃ ಸ್ಥಾನಂ ಘೋರರೂಪಂ ನಕ್ಷತ್ರಾಣಾಮಿವ ಗ್ರಹಮ್ ॥ ೧೬ ॥**
**ಸ ತಾನನು ಪರಿಕ್ರಾಮೇತ್ಸರ್ವಾನೇವ ಸದಾ ಸ್ವಯಮ್ ।**
**ತೇಷಾಂ ವೃತ್ತಂ ಪರಿಣಯೇತ್ಸಮ್ಯಗ್ರಾಷ್ಟ್ರೇಷು ತಚ್ಚರೈಃ ॥ ೧೭ ॥**
**ರಾಜ್ಞೋ ಹಿ ರಕ್ಷಾಧಿಕೃತಾಃ ಷರಸ್ವಾದಾಯಿನಃ ಶಠಾಃ ।**
**ಭೃತ್ಯಾ ಭವಂತಿ ಪ್ರಾಯೇಣ ತೇಭ್ಯೋ ರಕ್ಷೇದಿಮಾಃ ಪ್ರಜಾ ॥ ೧೮ ॥**
**ಯೇ ಕಾರ್ಯಿಕೇಭ್ಯೋಽರ್ಥಮೇವ ಗೃಹ್ಣೀಯುಃ ಪಾಪಚೇತಸಃ।**
**ತೇಷಾಂ ಸರ್ವಸ್ವಮಾದಾಯ ರಾಜಾ ಕುರ್ಯಾತ್ಪ್ರವಾಸನಮ್ ॥ ೨೦ ॥** (ಮನು:- ೭.೧೨೧-೧೨೪)

ರಾಜನು ಮತ್ತು ರಾಜಸಭೆಯು ಸಿಕ್ಕದೇ ಇರುವುದನ್ನು ಗಳಿಸಲು ಇಚ್ಛಿಸಬೇಕು. ಗಳಿಸಿದುದನ್ನು ಪ್ರಯತ್ನಪೂರ್ವಕವಾಗಿ ರಕ್ಷಿಸಬೇಕು. ರಕ್ಷಿಸಿದುದನ್ನು ವರ್ಧಿಸಬೇಕು ಮತ್ತು ವರ್ಧಿಸಿದ ಧನವನ್ನು ವೇದವಿದ್ಯೆ, ಧರ್ಮಪ್ರಚಾರ, ವಿದ್ಯಾರ್ಥಿಗಳು, ವೇದಮಾರ್ಗೋಪದೇಶಕರು ಮತ್ತು ಅಸಮರ್ಥರಾದ ಅನಾಥರು - ಇವರ ಪಾಲನಕ್ಕಾಗಿ ವಿನಿಯೋಗಿಸಬೇಕು. (೧)

ಈ ನಾಲ್ಕು ಬಗೆಯ ಪುರುಷಾರ್ಥದ[೧೭] ಪ್ರಯೋಜನವನ್ನು ತಿಳಿಯಬೇಕು. ಆಲಸ್ಯವನ್ನು ಬಿಟ್ಟು, ನಿತ್ಯವೂ ಉಚಿತವಾದ ರೀತಿಯಲ್ಲಿ ಇದರ ಅನುಷ್ಠಾನವನ್ನು ಮಾಡಬೇಕು. ದಂಡದಿಂದ ಸಿಕ್ಕದಿರುವುದರ ಪ್ರಾಪ್ತಿಯ ಇಚ್ಛೆಯನ್ನೂ, ನಿತ್ಯವೂ ನಿರೀಕ್ಷಿಸುವುದರಿಂದ ಪ್ರಾಪ್ತವಾದುದರ ರಕ್ಷಣೆಯನ್ನೂ, ರಕ್ಷಿತವಾದುದರ ವೃದ್ಧಿಯನ್ನೂ, ಎಂದರೆ - ಬಡ್ಡಿಯೇ ಮೊದಲಾದುದರಿಂದ ಸಂವರ್ಧನವನ್ನೂ ಮಾಡಬೇಕು ಮತ್ತು ವರ್ಧಿತವಾದ ಧನವನ್ನು ಪೂರ್ವೋಕ್ತ ಮಾರ್ಗದಲ್ಲಿ ದಿನವೂ ವ್ಯಯಮಾಡಬೇಕು. (೨)

ಎಂದಿಗೂ, ಯಾವನೊಂದಿಗೂ ಛಲದಿಂದ ವರ್ತಿಸಬಾರದು; ಆದರೆ - ನಿಷ್ಕಪಟನಾಗಿ ಎಲ್ಲರೊಂದಿಗೂ ವರ್ತಿಸಬೇಕು ಮತ್ತು ಪ್ರತಿದಿನವೂ ತನ್ನನ್ನು ರಕ್ಷಿಸಿಕೊಂಡು, ಶತ್ರುವು ಮಾಡಿದ ಛಲವನ್ನು ಅರಿತುಕೊಂಡು, ಅದನ್ನು ನಿವಾರಿಸಿಕೊಳ್ಳಬೇಕು. (೩)

ಯಾವ ಶತ್ರುವೂ ತನ್ನ (ರಾಜನ) ಛಿದ್ರವನ್ನು, ಎಂದರೆ - ನಿರ್ಬಲತ್ವವನ್ನು ತಿಳಿಯಲು ಶಕ್ತನಾಗಬಾರದು ಮತ್ತು ತಾನು ಸ್ವತಃ ಶತ್ರುವಿನ ಛಿದ್ರಗಳನ್ನು ತಿಳಿದುಕೊಳ್ಳುತ್ತಿರಬೇಕು. ಹೇಗೆ ಆಮೆಯು ತನ್ನ ಅಂಗಗಳನ್ನು ಗುಪ್ತವಾಗಿಡುತ್ತದೋ, ಹಾಗೆ ಶತ್ರುವು ಪ್ರವೇಶಿಸುವ ಛಿದ್ರವನ್ನು ಗುಪ್ತವಾಗಿಡಬೇಕು. (೪)

---

೧೬. ಯದಿತೇ ನತಿಷ್ಠೇ ಯುರುಪಾಯೈಃ ಪ್ರಥಮಸ್ತ್ರಿ ಭಿಃ।
ದಂಡಸ್ವಿವ ಪ್ರಸಹ್ಯೈತಾಂಶ್ಚ ನಕೈರ್ವಶ ಮಾನಯೇತ್ ॥ ೮॥ (ಮನು: ೭.೧೦೪.೧೦೭)

೧೭. ಅಲಬ್ಧದ ಪ್ರಾಪ್ತಿ, ಪ್ರಾಪ್ತದ ರಕ್ಷಣೆ, ರಕ್ಷಿತದ ಸಂವರ್ಧನೆ ಮತ್ತು ಸಂವರ್ಧಿತದ ಸದ್ವಿನಿಯೋಗ-ಇವೇ ನಾಲ್ಕು ಬಗೆಯ ಪುರುಷಾರ್ಥಗಳು.

ಹೇಗೆ ಧ್ಯಾನಾವಸ್ಥಿತವಾಗಿದ್ದು ಕೊಕ್ಕರೆಯು ಮೀನನ್ನು ಹಿಡಿಯಲು ಹೊಂಚುಹಾಕುತ್ತದೋ, ಹಾಗೆ ಧನ - ಸಂಗ್ರಹದ ಆಲೋಚನೆಯನ್ನು ಮಾಡುತ್ತಾ ಹೋಗಬೇಕು. ದ್ರವ್ಯ ಮೊದಲಾದ ಪದಾರ್ಥಗಳ ಮತ್ತು ಬಲದ ವರ್ಧನವನ್ನು ಮಾಡಿಕೊಂಡು, ಶತ್ರುವನ್ನು ಗೆಲ್ಲಲು ಸಿಂಹದಂತೆ ಪರಾಕ್ರಮವನ್ನು ತೋರಿಸಬೇಕು. ತೋಳನಂತೆ ಬಚ್ಚಿಟ್ಟುಕೊಂಡು ಶತ್ರುಗಳನ್ನು ಹಿಡಿಯಬೇಕು ಮತ್ತು ಸಮೀಪಕ್ಕೆ ಬಂದ, ಬಲಿಷ್ಠರಾದ ಶತ್ರುಗಳಿಂದ, ಮೊಲದಂತೆ ದೂರಕ್ಕೆ ಓಡಿಹೋಗಬೇಕು ಮತ್ತು ಅನಂತರ ಅವರನ್ನು ಛಲದಿಂದ ಹಿಡಿಯಬೇಕು. (೫)

ಈ ರೀತಿ ವಿಜಯ ಸಾಧಿಸುವ ಸಭಾಪತಿಯ ರಾಜ್ಯದಲ್ಲಿ ಯಾವ 'ಪರಿಪಂಥಿಗಳು', ಎಂದರೆ ಡಕಾಯಿತರು-ದರೋಡೆಕೋರರು ಇರುತ್ತಾರೋ, ಅವರನ್ನು (ಸಾಮ) ಒಂದುಗೂಡಿಸಿಕೊಳ್ಳುವುದು, (ದಾನ) ಏನಾದರೂ ಕೊಡುವುದು (ಭೇದ) ಒಡಕು - ತೊಡಕು ತಂದು ಹಾಕುವುದು - ಇವುಗಳಿಂದ ವಶಪಡಿಸಿಕೊಳ್ಳಬೇಕು. ಮತ್ತು ಇವುಗಳಿಂದ ವಶಕ್ಕೆ ಬಾರದಿದ್ದರೆ, ಅತಿ ಕಠಿಣವಾದ ದಂಡದಿಂದ ವಶಪಡಿಸಿಕೊಳ್ಳಬೇಕು. (೬)

ಹೇಗೆ ಧಾನ್ಯವನ್ನು ಹೆಕ್ಕಿ ತೆಗೆದುಕೊಳ್ಳುವವನು ಹೊಟ್ಟನ್ನು ಬೇರೆಮಾಡಿ ಧಾನ್ಯವನ್ನು ರಕ್ಷಿಸುತ್ತಾನೋ, ಎಂದರೆ-ನುಚ್ಚಾಗಲು ಬಿಡುವುದಿಲ್ಲವೋ, ಹಾಗೆ ರಾಜನು ಸೂರೆಗೈಯುವವರನ್ನೂ, ಕಳ್ಳರನ್ನೂ ನಿರ್ನಾಮಮಾಡಿ, ರಾಜ್ಯವನ್ನು ರಕ್ಷಿಸಬೇಕು. (೭)

ಯಾವ ರಾಜನು ಮೋಹದಿಂದ, ವಿಚಾರಹೀನತೆಯಿಂದ ತನ್ನ ರಾಜ್ಯವನ್ನು ದುರ್ಬಲವಾಗಿ ಮಾಡುತ್ತಾನೋ, ಅವನು ರಾಜ್ಯ ಮತ್ತು ತನ್ನ ಬಂಧುಗಳ ಸಹಿತ, ಜೀವನ ಮುಗಿಯುವ ಮುನ್ನವೇ ಬೇಗ ನಷ್ಟಭ್ರಷ್ಟನಾಗಿ ಹೋಗುತ್ತಾನೆ. (೮)

ಹೇಗೆ ಪ್ರಾಣಿಗಳ ಪ್ರಾಣಗಳು ಶರೀರಗಳನ್ನು ಕೃಶಗೊಳಿಸುವುದರಿಂದ ಕ್ಷೀಣವಾಗಿ ಹೋಗುತ್ತವೋ, ಹಾಗೆಯೇ ಪ್ರಜೆಗಳನ್ನು ದುರ್ಬಲರನ್ನಾಗಿ ಮಾಡುವುದರಿಂದ ರಾಜರುಗಳ ಪ್ರಾಣಗಳು, ಎಂದರೆ - ಬಲ ಮೊದಲಾದವು, ಬಂಧುಗಳ ಸಮೇತವಾಗಿ ನಾಶವಾಗಿ ಹೋಗುತ್ತವೆ. (೯)

ಆದುದರಿಂದ, ರಾಜನೂ ಮತ್ತು ರಾಜಸಭೆಯೂ, ರಾಜಕಾರ್ಯದ ಸಿದ್ಧಿಗಾಗಿ, ರಾಜಕಾರ್ಯವು ಯೋಗ್ಯ ರೀತಿಯಲ್ಲಿ ನೆರವೇರುವಂತೆ ಪ್ರಯತ್ನಮಾಡಬೇಕು. ಯಾವ ರಾಜನು ರಾಜ್ಯಪಾಲನದಲ್ಲಿ ಎಲ್ಲ ರೀತಿಯಲ್ಲಿಯೂ ತತ್ಪರನಾಗಿರುತ್ತಾನೋ, ಅವನಿಗೆ ಸುಖವು ಸದಾ ಹೆಚ್ಚುತ್ತದೆ. (೧೦)

ಆದುದರಿಂದ, ಎರಡು, ಮೂರು, ಐದು ಮತ್ತು ನೂರು ಗ್ರಾಮಗಳ ಮಧ್ಯೆ, ಯಾವುದರಲ್ಲಿ ಯೋಗ್ಯವಾದ ರೀತಿಯಲ್ಲಿ ಭೃತ್ಯರು - ಎಂದರೆ ಕರ್ಮಚಾರಿಗಳು ಮೊದಲಾದ ರಾಜಪುರುಷರನ್ನು ನೇಮಿಸಿ, ರಾಜ್ಯದ ಸಮಸ್ತ ಕಾರ್ಯಗಳನ್ನೂ ಪೂರ್ಣಮಾಡಲಾಗುವುದೋ, ಅಂತಹ ಒಂದು ರಾಜಸ್ಥಾನವನ್ನು ಸ್ಥಾಪಿಸಬೇಕು. (೧೧)

ಒಂದೊಂದು ಗ್ರಾಮದಲ್ಲಿ ಒಬ್ಬೊಬ್ಬ ಪ್ರಧಾನ ಪುರುಷನನ್ನು ನೇಮಿಸಬೇಕು; ಅದೇ ಹತ್ತು ಗ್ರಾಮಗಳ ಮೇಲೆ ಮತ್ತೊಬ್ಬನನ್ನೂ, ಅಂತಹವೇ ಇಪ್ಪತ್ತು ಗ್ರಾಮಗಳ ಮೇಲೆ ಮೂರನೆಯವವನನ್ನೂ, ಅದೇ ನೂರು ಗ್ರಾಮಗಳ ಮೇಲೆ ನಾಲ್ಕನೆಯವನನ್ನೂ, ಮತ್ತು ಅಂತಹವೇ ಸಾವಿರ ಗ್ರಾಮಗಳ ಮೇಲೆ ಐದನೆಯ (ಪ್ರಧಾನ) ಪುರುಷನನ್ನೂ ನೇಮಿಸಬೇಕು. ಎಂದರೆ, ಈ ದಿನಗಳಲ್ಲಿ ಒಂದು ಗ್ರಾಮದಲ್ಲಿ ಒಂದು ಪಟೇಲಗಿರಿ, ಅಂತಹ ಹತ್ತು ಗ್ರಾಮಗಳ ಮೇಲೆ ಒಂದು ಹೋಬಳಿ, ಮತ್ತು ಎರಡು ಹೋಬಳಿಗಳ ಮೇಲೆ ಒಂದು ದೊಡ್ಡ ಹೋಬಳಿ, ಅಂತಹ ಐದು ದೊಡ್ಡ ಹೋಬಳಿಗಳ ಮೇಲೆ ಒಂದು ತಾಲ್ಲೂಕು ಮತ್ತು ಹತ್ತು ತಾಲ್ಲೂಕುಗಳ ಮೇಲೆ ಒಂದು ಜಿಲ್ಲೆ-ಎಂದು ಗೊತ್ತು ಮಾಡಿದ್ದಾರೋ, "ಅದನ್ನೆಲ್ಲಾ ಅದೇ ನಮ್ಮ ಮನು-ಮೊದಲಾದವರ ಧರ್ಮಶಾಸ್ತ್ರದಿಂದ ರಾಜನೀತಿಯ ವಿಧಾನವನ್ನು ತೆಗೆದುಕೊಂಡಿದ್ದಾರೆ." (೧೨)

ಇದೇ ರೀತಿ ಪ್ರಬಂಧವನ್ನು ಮಾಡಬೇಕು ಮತ್ತು ಒಂದೊಂದು ಗ್ರಾಮದ ಒಡೆಯನು ಗ್ರಾಮಗಳಲ್ಲಿ ದಿನದಿನವೂ ಯಾವ ಯಾವ ದೋಷಗಳು ಉದ್ಭವಿಸುತ್ತವೋ, ಅವುಗಳನ್ನು ಗುಪ್ತವಾಗಿ ಹತ್ತು ಗ್ರಾಮಗಳ ಒಡೆಯನಿಗೆ ತಿಳಿಸಬೇಕು ಮತ್ತು ಆ ದಶಗ್ರಾಮಾಧಿಪತಿಯು ಅದೇ ರೀತಿ ಇಪ್ಪತ್ತು ಗ್ರಾಮಗಳ ಒಡೆಯನಿಗೆ ಹತ್ತು ಗ್ರಾಮಗಳ ವೃತ್ತಾಂತಗಳನ್ನು ಪ್ರತಿದಿನವೂ ತಿಳಿಸಬೇಕು - ಎಂದು ಆಜ್ಞಾಪಿಸಬೇಕು. (೧೩)

ಮತ್ತು ಇಪ್ಪತ್ತು ಗ್ರಾಮಗಳ ಅಧಿಪತಿಗೆ ಪ್ರತಿನಿತ್ಯ ನಿವೇದಿಸಬೇಕು. ಹಾಗೆಯೇ ನೂರು-ನೂರು ಗ್ರಾಮಗಳ ಅಧಿಪತಿಗಳು ತಾವೇ ಸಹಸ್ರಾಧಿಪತಿಗೆ, ಎಂದರೆ - ಸಾವಿರ ಗ್ರಾಮಗಳ ಅಧ್ಯಕ್ಷರಿಗೆ ಹಾಗೂ ಸಾವಿರ - ಸಾವಿರ ಗ್ರಾಮಗಳ ಹತ್ತು ಅಧಿಪತಿಗಳು

ಹತ್ತು – ಹತ್ತು ಸಾವಿರ ಗ್ರಾಮಗಳ ಅಧಿಪತಿಗಳಿಗೆ ಮತ್ತು ಅವರೆಲ್ಲರೂ ಲಕ್ಷ ಗ್ರಾಮಗಳ ಸ್ವಾಮಿನಿಯಾದ ರಾಜಸಭೆಗೆ ಪ್ರತಿದಿನದ ವರ್ತಮಾನವನ್ನೂ ತಿಳಿಸುತ್ತಾ ಇರಬೇಕು. [೧೮] (೧೪)

ಮತ್ತು ಪ್ರತಿಯೊಂದು ಹತ್ತು ಸಾವಿರ ಗ್ರಾಮಗಳ ಘಟಕದ ಮೇಲೆಯೂ ಇಬ್ಬರು ಅಧ್ಯಕ್ಷರನ್ನು ನೇಮಿಸಬೇಕು. ಅವರಲ್ಲಿ ಒಬ್ಬನು ರಾಜಸಭೆಯಲ್ಲಿದ್ದುಕೊಂಡು ಮತ್ತು ಇನ್ನೊಬ್ಬ ಅಧ್ಯಕ್ಷನು ಆಲಸ್ಯರಹಿತನಾಗಿ ಸದಾ ಸಂಚರಿಸುತ್ತಾ ನ್ಯಾಯಾಧೀಶರೇ ಮೊದಲಾದ ಸಮಸ್ತ ರಾಜಪುರುಷರ ಕಾರ್ಯಗಳನ್ನೂ ನೋಡಿಕೊಳ್ಳುತ್ತಾ ಇರಬೇಕು. (೧೫)

ದೊಡ್ಡ ದೊಡ್ಡ ನಗರಗಳಲ್ಲಿ ಸುಸಜ್ಜಿತವಾದ – ಮಂತ್ರಾಲೋಚನಾ ಸಭೆಯ ಒಂದೊಂದು ಚಂದ್ರನಂತೆ ಸುಂದರವೂ, ಉಚ್ಚವೂ, ವಿಶಾಲವೂ ಆದ ಭವನವನ್ನು ನಿರ್ಮಿಸಬೇಕು. ಅದರಲ್ಲಿ ಯಾರು ವಿದ್ಯೆಯಿಂದ ಎಲ್ಲವನ್ನೂ ಪರೀಕ್ಷಿಸಿದ್ದಾರೋ, ಅಂತಹ ದೊಡ್ಡ ದೊಡ್ಡ ವಿದ್ಯಾ–ವೃದ್ಧರು ಕುಳಿತು ಸಮಾಲೋಚನೆ ಮಾಡುತ್ತಿರಬೇಕು. ಯಾವ ನಿಯಮಗಳಿಂದ ರಾಜನ ಮತ್ತು ಪ್ರಜೆಯ ಉನ್ನತಿಯಾಗುವುದೋ, ಅಂತಹ ನಿಯಮಗಳನ್ನೂ ಮತ್ತು ವಿದ್ಯೆಯನ್ನೂ ಪ್ರಕಾಶಗೊಳಿಸುತ್ತಿರಬೇಕು. (೧೬)

ಸದಾ ಪರ್ಯಟನ ಮಾಡುವ ಯಾವ ಸಭಾಪತಿಯಿರುತ್ತಾನೋ, ಅವನ ಅಧೀನದಲ್ಲಿ, ರಾಜಪುರುಷರೂ ಮತ್ತು ಬೇರೆ ಬೇರೆ ಜನಾಂಗದವರೂ ಆಗಿರುವ ಗುಪ್ತಚರರನ್ನು, ಎಂದರೆ – ದೂತರನ್ನು ನೇಮಿಸಬೇಕು; ಅವರಿಂದ ಸಮಸ್ತ ರಾಜಪುರುಷರ ಮತ್ತು ಪ್ರಜಾಪುರುಷರ ದೋಷಗಳು ಮತ್ತು ಗುಣಗಳನ್ನೆಲ್ಲಾ ಗುಪ್ತ ರೀತಿಯಿಂದ ತಿಳಿದುಕೊಳ್ಳುತ್ತಿರಬೇಕು. ಯಾರಿಂದ ಅಪರಾಧವಾಗುವುದೋ, ಅವರಿಗೆ ಶಿಕ್ಷೆಯನ್ನೂ, ಮತ್ತು ಯಾರಲ್ಲಿ ಗುಣವಿರುವುದೋ ಅವರಿಗೆ ಗೌರವವನ್ನೂ ಸದಾ ಕೊಡುತ್ತಿರಬೇಕು. (೧೭)

ರಾಜನು ಯಾರಿಗೆ ಪ್ರಜಾ – ರಕ್ಷಣೆಯ ಅಧಿಕಾರವನ್ನು ಕೊಡುತ್ತಾನೋ, ಅವರು ಧಾರ್ಮಿಕರೂ, ಚೆನ್ನಾಗಿ ಪರೀಕ್ಷಿಸಲ್ಪಟ್ಟ ವಿದ್ವಾಂಸರೂ, ಕುಲೀನರೂ ಆಗಿರಬೇಕು; ಅವರ ಅಧೀನದಲ್ಲಿ ಬಹುತೇಕವಾಗಿ ಶಠರೂ, ಪರ – ವಸ್ತುಗಳನ್ನಪಹರಿಸುವ ಕಳ್ಳರೂ, ಸೂರೆಕೋರರೂ ಆದವರನ್ನೂ ಕೂಡ ಸೇವಕರನ್ನಾಗಿ ನೇಮಿಸಿ, ಅವರನ್ನು ದುಷ್ಟ ಕರ್ಮದಿಂದ ದೂರವಿಡುವುದಕ್ಕಾಗಿ ರಾಜಸೇವಕರನ್ನಾಗಿ ಮಾಡಿ, ಅದೇ ರಕ್ಷಾ ಕರ್ತೃಗಳಾದ ವಿದ್ವಾಂಸರ ಅಧೀನದಲ್ಲಿಟ್ಟು, ಅವರ ಮೂಲಕ ಈ ಪ್ರಜೆಗಳ ರಕ್ಷಣೆಯನ್ನು ಯೋಗ್ಯ ರೀತಿಯಲ್ಲಿ ಮಾಡಬೇಕು. (೧೮)

"ಯಾವ ರಾಜಪುರುಷನು ಅನ್ಯಾಯದಿಂದ ವಾದಿ – ಪ್ರತಿವಾದಿಗಳಿಂದ ಗುಪ್ತ ಧನವನ್ನು ತೆಗೆದುಕೊಂಡು, ಪಕ್ಷಪಾತದಿಂದ ಅನ್ಯಾಯಮಾಡುತ್ತಾನೋ, ಅವನ ಸರ್ವಸ್ವವನ್ನೂ ಕಸಿದುಕೊಂಡು, ತಕ್ಕ ರೀತಿಯಲ್ಲಿ ಶಿಕ್ಷೆಕೊಟ್ಟು ಎಲ್ಲಿಂದ ಅವನು ಪುನಃ ಹಿಂದಿರುಗಿ ಬರಲಾರನೋ, ಅಂತಹ ಸ್ಥಳದಲ್ಲಿಡಬೇಕು." ಏಕೆಂದರೆ ಅವನಿಗೆ ಶಿಕ್ಷೆ ಕೊಡಲ್ಪಡದಿದ್ದರೆ, ಅವನನ್ನು ನೋಡಿ, ಬೇರೆ ರಾಜಪುರುಷರೂ ಕೂಡ ಅಂತಹ ಕೆಟ್ಟ ಕೆಲಸಗಳನ್ನು ಮಾಡುವರು ಮತ್ತು ಶಿಕ್ಷೆ ವಿಧಿಸಲ್ಪಟ್ಟರೆ, ದೂರವಿರುವರು. ಆದರೆ, [೧೯] ಎಷ್ಟರಿಂದ ಆ ರಾಜಪುರುಷರ ಯೋಗಕ್ಷೇಮವು ಚೆನ್ನಾಗಿ ಆಗುವುದೋ, ಮತ್ತು ಅವರು ಉತ್ತಮ ಕ್ರಮದಲ್ಲಿ ಧನಾಢ್ಯರೂ ಆಗುವರೋ, ಅಷ್ಟು ಧನವು ಅಥವಾ ಭೂಮಿಯ ರಾಜ್ಯದ ಕಡೆಯಿಂದ, ಮಾಸಿಕವಾಗಿಯೋ, ವಾರ್ಷಿಕವಾಗಿಯೋ, ಅಥವಾ ಒದೇ ಸಾರಿಯೋ ಸಿಕ್ಕಬೇಕು. ಮತ್ತು ಯಾರು ವೃದ್ಧರಾಗುವರೋ, ಅವರಿಗೂ ಅರ್ಧ ಸಿಕ್ಕುತ್ತಿರಬೇಕು. ಆದರೆ, ಎಲ್ಲಿಯವರೆಗೆ ಅವರು ಜೀವಿತರಾಗಿರುವರೋ, ಅಲ್ಲಿಯವರೆಗೆ ಆ ಜೀವಿಕಾಧನ ಲಭಿಸುತ್ತಿರಬೇಕು; ಅಲ್ಲಿಂದ ಮುಂದಕ್ಕಲ್ಲ – ಎಂಬುದನ್ನು ಗಮನದಲ್ಲಿಡಬೇಕು. ಆದರೆ, ಇವರ ಸಂತತಿಗೆ ಸತ್ಕಾರ ಅಥವಾ ಹುದ್ದೆಯನ್ನು, ಅವರ ಗುಣಕ್ಕನುಸಾರವಾಗಿ ಅವಶ್ಯವಾಗಿ ಕೊಡಬೇಕು. ಮತ್ತು, ಅವರ ಪುತ್ರರು ಸಮರ್ಥರಾಗುವವರಗೆ, ಮತ್ತು ಅವರ ಪತ್ನಿಯರು ಜೀವಂತರಾಗಿದ್ದರೆ, ಅವರೆಲ್ಲರ ನಿರ್ವಾಹಕ್ಕಾಗಿ ರಾಜ್ಯದ ಕಡೆಯಿಂದ ಯುಕ್ತವಾದಷ್ಟು ಹಣ ಸಿಕ್ಕುತ್ತಿರಬೇಕು. ಆದರೆ, ಅವರ ಸ್ತ್ರೀಯರು ಅಥವಾ ಮಕ್ಕಳು ದುಷ್ಕರ್ಮಿಗಳಾಗಿ ಹೋದರೆ, ಏನೂ ಸಿಕ್ಕಬಾರದು. ರಾಜನು ಇಂತಹ ನೀತಿಯನ್ನು ಸರಿಯಾಗಿ ಸ್ಥಾಪಿಸಬೇಕು. (೧೯)

**ಯಥಾ ಫಲೇನ ಯುಜ್ಯೇತ ರಾಜಾ ಕರ್ತಾ ಚ ಕರ್ಮಣಾಮ್ ।**

**ತಥಾಽವೇಕ್ಷ್ಯ ನೃಪೋ ರಾಷ್ಟ್ರೇ ಕಲ್ಪಯೇತ್ಸತತಂ ಕರಾನ್ ॥೧॥**

---

೧೮. ಲಕ್ಷ ಗ್ರಾಮಗಳ ರಾಜ್ಯ ವ್ಯವಸ್ಥೆ ಮೊದಲಿತ್ತು. ಅದು ಮುರಿದ ಮೇಲೆ, ಮತ್ತೆ ಪುನರಜ್ಜೀವನ ವಾಗಲಿಲ್ಲ. ಪುನಃ ಕೇವಲ ವೇದ ಧರ್ಮ ಪೃಥಿವಿಯಲ್ಲೆಲ್ಲಾ ಜಾರಿಗೆ ಬಂದರೆ, ಮೊದಲಿನ ಸಾರ್ವಭೌಮ ಚಕ್ರವರ್ತಿರಾಜನ ವ್ಯವಸ್ಥೆ ಬರಬೇಕೆಂದು ಇಲ್ಲಿ ಮಹರ್ಷಿಗಳ ಅಭಿಪ್ರಾಯ. ಈ ವ್ಯವಸ್ಥೆ ಮನುಸ್ಮೃತಿಯ ಶ್ಲೋಕದಲ್ಲಿಲ್ಲ. –ಸಂ.

೧೯. ಇಲ್ಲಿಂದ ಮುಂದಿನ ಪಾಠವು ಶ್ಲೋಕದ ವ್ಯಾಖ್ಯಾನವಲ್ಲ. ಆದರೆ, ಗ್ರಂಥಕರ್ತರ ಸ್ವವಿಚಾರಿತ ನಿರ್ದೇಶವನ್ನು ಸೂಚಿಸುತ್ತದೆ. –ಸಂ

**ಯಥಾಲ್ಪಾಲ್ಪಮದಂತ್ಯಾದ್ಯಂ ವಾರ್ಯೋಕೋವತ್ಸಪಟ್ಪದಾಃ ।**

**ತಥಾಲ್ಪೋಲ್ಪೋ ಗ್ರಹೀತವ್ಯೋ ರಾಷ್ಟ್ರಾದ್ರಾಜ್ಞಾಬ್ದಿಕಃ ಕರಃ ॥೨॥** (ಮನು:– ೭.೧೨೮.೧೨೯)

**ನೋಚ್ಛಿಂ ದ್ಯೇದಾತ್ಮನೋ ಮೂಲಂ ಪರೇಷಾಂ ಚಾತಿತೃಷ್ಣಯಾ ।**

**ಉಚ್ಛಿಂದ್ಯನ್ನಾತ್ಮನೋ ಮೂಲಂ ಮಾತ್ಮಾನಂ ತಾಂಶ್ಚ ಪೀಡಯೇತ್ ॥೩॥** (ಮನು:– ೭.೧೩೯)

**ತೀಕ್ಷ್ಣಶ್ಚೈವ ಮೃದಶ್ಚ ಸ್ಯಾತ್ಕಾರ್ಯಂ ವೀಕ್ಷ್ಯ ಮಹೀಪತಿಃ ।**

**ತೀಕ್ಷ್ಣಶ್ಚೈವ ಮೃದುಶ್ಚೈವ ರಾಜ ಭವತಿ ಸಮ್ಮತಃ ॥೪॥** (ಮನು:– ೭.೧೪೦)

**ಏವಂ ಸರ್ವಂ ವಿಧಾಯೇದಮಿತಿ ಕರ್ತವ್ಯ ಮಾತ್ಮನಃ ।**

**ಯುಕ್ತಶ್ಚೈವಾಪ್ರಮತ್ತಶ್ಚ ಪರಿ ರಕ್ಷೇದಿಮಾಃ ಪ್ರಜಾಃ ॥೫॥**

**ವಿಕ್ರೋಶಂತ್ಯೋ ಯಸ್ಯ ರಾಷ್ಟ್ರಾದ್ಧ್ರಿಯಂತೇ ದಸ್ಯುಭಿಃ ಪ್ರಜಾಃ ।**

**ಸಂ ಪಶ್ಯತಃ ಸಭೃತ್ಯಸ್ಯ ಮೃತಃ ಸ ನ ತು ಜೀವತಿ ॥೬॥**

**ಕ್ಷತ್ರಿಯಸ್ಯ ಪರೋ ಧರ್ಮಃ ಪ್ರಜಾನಾಮೇವ ಪಾಲನಮ್ ।**

**ನಿರ್ಧಿಷ್ಟಫಲಭೋಕ್ತಾ ಹಿ ರಾಜಾ ಧರ್ಮೇಣ ಯುಜ್ಯತೇ ॥೭॥** (ಮನು :– ೭. ೧೪೨–೧೪೪)

ಹೇಗೆ ರಾಜನೂ ಮತ್ತು ಕಾರ್ಯಕರ್ತೃವಾದ ರಾಜಪುರುಷನೂ, ಅಥವಾ ಪ್ರಜಾಜನರೂ ಸುಖವೆಂಬ ಫಲವನ್ನು ಪಡೆದುಕೊಳ್ಳುವರೋ, ಹಾಗೆ ಆಲೋಚನೆ ಮಾಡಿ, ರಾಜನೂ ಮತ್ತು ರಾಜಸಭೆಯೂ ತೆರಿಗೆಯನ್ನು ನಿರ್ಧರಿಸಬೇಕು. (೧)

ಹೇಗೆ ಜಿಗಣೆ, ಕರು ಮತ್ತು ದುಂಬಿ ಸ್ವಲ್ಪ–ಸ್ವಲ್ಪ ಭೋಗ್ಯ ವಸ್ತುಗಳನ್ನು ಗ್ರಹಿಸುತ್ತವೋ, ಹಾಗೆ ರಾಜನು ಪ್ರಜೆಗಳಿಂದ ಸ್ವಲ್ಪ–ಸ್ವಲ್ಪ ವಾರ್ಷಿಕ ಕರವನ್ನು ತೆಗೆದುಕೊಳ್ಳಬೇಕು. (೨)

ಅತಿ ಲೋಭದಿಂದ, ತನ್ನ ಅಥವಾ ಅನ್ಯರ ಸುಖದ ಮೂಲವನ್ನು ಎಂದಿಗೂ ಉಚ್ಛೇದಮಾಡಬಾರದು; ಎಂದರೆ ನಾಶ ಮಾಡಬಾರದು. ಏಕೆಂದರೆ–ಯಾವನು ವ್ಯವಹಾರದ ಮತ್ತು ಸುಖದ ಮೂಲದ ಛೇದನವನ್ನು ಮಾಡುತ್ತಾನೋ, ಅವನು ತನಗೂ ಮತ್ತು ಅವರಿಗೂ ನೋವನ್ನೇ ಕೊಡುತ್ತಾನೆ. (೩)

ಯಾವ ಮಹೀಪತಿಯೂ ಕಾರ್ಯವನ್ನು ನೋಡಿ ತೀಕ್ಷ್ಣನೂ ಮತ್ತು ಕೋಮಲನೂ ಕೂಡ ಆಗುತ್ತಾನೋ, ಆ ರಾಜನು ದುಷ್ಟರ ಬಗೆಗೆ ತೀಕ್ಷ್ಣನೂ ಮತ್ತು ಶ್ರೇಷ್ಠರ ಬಗೆಗೆ ಕೋಮಲನೂ ಆಗುವುದರಿಂದ, ಅತಿ ಮಾನನೀಯನಾಗುತ್ತಾನೆ. (೪)

ಹೀಗೆ ಸಮಸ್ತ ರಾಜ್ಯದ ವ್ಯವಸ್ಥೆಯನ್ನೂ ಮಾಡಿ, ಸದಾ ಅದರಲ್ಲಿ ತತ್ಪರನೂ ಮತ್ತು ಪ್ರಮಾದರಹಿತನೂ ಆಗಿ, ತನ್ನ ಪ್ರಜೆಗಳ ಪಾಲನೆಯನ್ನು ನಿರಂತರವಾಗಿ ಮಾಡಬೇಕು. (೫)

ಸೇವಕರೊಂದಿಗೆ ನೋಡುತ್ತಿರುವ ಯಾವ ರಾಜನ ರಾಜ್ಯದಲ್ಲಿ, ಸೂರೆಕೋರರು ರೋದಿಸುತ್ತಾ–ವಿಲಾಪ ಮಾಡುತ್ತಾ ಇರುವ ಪ್ರಜೆಗಳ ವಸ್ತುಗಳನ್ನೂ, ಮತ್ತು ಪ್ರಾಣಗಳನ್ನೂ ಕಸಿದುಕೊಳ್ಳುತ್ತಾ ಇರುತ್ತಾರೋ, ಆ ರಾಜನು ಭೃತ್ಯರ ಮತ್ತು ಅಮಾತ್ಯರ ಸಮೇತ ಮೃತನಾಗಿದ್ದಾನೆ; ಜೀವಂತನಾಗಿಲ್ಲ – ಎಂದೇ ತಿಳಿಯಬೇಕು. ಮತ್ತು ಅವನು ಮಹಾ ದುಃಖವನ್ನು ಹೊಂದುವವನಾಗಿದ್ದಾನೆ. (೬)

ಆದುದರಿಂದ, ಪ್ರಜಾಪಾಲನ ಮಾಡುವುದೇ ರಾಜರುಗಳ ಪರಮ ಧರ್ಮವಾಗಿದೆ ಮತ್ತು ಮನುಸ್ಮೃತಿಯ ಏಳನೆಯ ಅಧ್ಯಾಯದಲ್ಲಿ ಯಾವ ತೆರಿಗೆ ತೆಗೆದುಕೊಳ್ಳುವ ನಿಯಮ ಬರೆದಿದೆಯೋ, ಮತ್ತು ಸಭೆ ಹೇಗೆ ನಿರ್ಧಾರ ಮಾಡುವುದೋ, ಹಾಗೆ ಕರಗ್ರಹಿಸುವ ರಾಜನು ಧರ್ಮಯುಕ್ತನಾಗಿ ಸುಖ ಹೊಂದುತ್ತಾನೆ; ಇದಕ್ಕೆ ವಿರುದ್ಧನಾದವನು ದುಃಖವನ್ನು ಪಡೆದುಕೊಳ್ಳುತ್ತಾನೆ. (೭)

**ಉತ್ಥಾಯ ಪಶ್ಚಿಮೇ ಯಾಮೇ ಕೃತಶೌಚಃ ಸಮಾಹಿತಃ ।**

**ಹುತಾಗ್ನಿರ್ಬ್ರಾಹ್ಮಣಾಂಶ್ಚಾರ್ಚ್ಯ ಪ್ರವಿಶೇತ್ಸ ಶುಭಾಂ ಸಭಾಮ್ ॥ ೧ ॥**

**ತತ್ರ ಸ್ಥಿತಾಃ ಪ್ರಜಾಃ ಸರ್ವಾಃ ಪ್ರತಿನಂದ್ಯ ವಿಸರ್ಜಯೇತ್ ।**

**ವಿಸೃಜ್ಯ ಚ ಪ್ರಜಾಃ ಸರ್ವಾಃ ಮಂತ್ರಯೇತ್ಸಹ ಮಂತ್ರಿಭಿಃ ॥ ೨ ॥**

**ಗಿರಿಪೃಷ್ಠಂ ಸಮಾರುಹ್ಯ ಪ್ರಾಸಾದಂ ವಾ ರಹೋಗತಃ ।**

**ಆರಣ್ಯೇ ನಿಃಶಲಾಕೇ ವಾ ಮಂತ್ರಯೇದವಿಭಾವಿತಃ ॥ ೩ ॥**

**ಯಸ್ಯ ಮಂತ್ರಂ ನ ಜಾನಂತಿ ಸಮಾಗಮ್ಯ ಪೃಥಗ್ಜನಾಃ ।**

**ಸ ಕೃತ್ಸ್ನಾಂ ಪೃಥಿವೀಂ ಭುಂಕ್ತೇ ಕೋಶಹೀನೋಽಪಿ ಪಾರ್ಥಿವಃ ॥ ೪ ॥** (ಮನು:– ೭.೧೪೫–೧೪೮)

ಯಾವಾಗ ರಾತ್ರಿಯ ಕೊನೆಯ ಪ್ರಹರವಿರುವುದೋ, ಅಗ ಎದ್ದು, ಶೌಚವನ್ನೂ ಮತ್ತು ಸಾವಧಾನವಾಗಿ ಪರಮೇಶ್ವರನ ಧ್ಯಾನವನ್ನೂ, ಅಗ್ನಿಹೋತ್ರವನ್ನೂ, ಧಾರ್ಮಿಕ ವಿದ್ವಾಂಸರ ಸತ್ಕಾರವನ್ನೂ ಮತ್ತು ಭೋಜನವನ್ನೂ ಮಾಡಿ, ಒಳಗೆ ಸಭೆಯಲ್ಲಿ ಪ್ರವೇಶಿಸಬೇಕು. (೧)

ಅಲ್ಲಿ ನಿಂತು, ಯಾವ ಪ್ರಜೆಗಳು ನೆರೆದಿರುತ್ತಾರೋ, ಅವರನ್ನು ಗೌರವಿಸಿ, ಮತ್ತು ಅವರನ್ನು ವಿಸರ್ಜಿಸಿ, ಮುಖ್ಯಮಂತ್ರಿಯೊಂದಿಗೆ ರಾಜ್ಯವ್ಯವಸ್ಥೆಯನ್ನು ಆಲೋಚಿಸಬೇಕು. (೨)

ಆ ಮೇಲೆ ಅವನೊಂದಿಗೆ ತಿರುಗಾಡಲು ಹೋಗಬೇಕು; ಪರ್ವತದ ಶಿಖರದ ಮೇಲೆ, ಅಥವಾ ಏಕಾಂತವಾದ ಗೃಹದಲ್ಲಿ, ಇಲ್ಲವೇ, ಎಲ್ಲಿ ಒಂದು ಮರವೂ ಕೂಡ ಇಲ್ಲವೋ, ಅಂತಹ ವನದಲ್ಲಿ, ಏಕಾಂತ ಸ್ಥಾನದಲ್ಲಿ ಕುಳಿತು, ವಿರುದ್ಧ ಭಾವನೆಯನ್ನು ತ್ಯಜಿಸಿ, ಮಂತ್ರಿಯೊಂದಿಗೆ ಸಮಾಲೋಚನೆ ಮಾಡಬೇಕು. (೩)

ಯಾವ ರಾಜನ ಗೂಢವಾದ ಆಲೋಚನೆಯನ್ನು ಬೇರೆಯವರು ಒಂದುಗೂಡಿ ತಿಳಿಯಲಾರರೋ, ಎಂದರೆ – ಯಾವನ ಆಲೋಚನೆಯು ಗಂಭೀರವೂ, ಶುದ್ಧವೂ, ಪರೋಪಕಾರಾರ್ಥವಾಗಿ ಸದಾ ಗುಪ್ತವೂ ಆಗಿರುವುದೋ, ಆ ರಾಜನು ಧನಹೀನನೇ ಆಗಿದ್ದರೂ ಕೂಡ, ಸಮಸ್ತ ಪೃಥಿವಿಯ ರಾಜ್ಯವನ್ನಾಳಲು ಸಮರ್ಥನಾಗಿರುತ್ತಾನೆ. ಆದುದರಿಂದ ತನ್ನ ಮನಸ್ಸಿನಿಂದಲೂ, ಒಂದು ಕಾರ್ಯವನ್ನೂ ಕೂಡ, ಎಲ್ಲಿಯವರೆಗೆ ಸಭಾಸದರ ಅನುಮತಿಯಿರದೋ, ಆವರೆಗೆ ಮಾಡಬಾರದು. (೪)

**ಆಸನಂ ಚೈವ ಯಾನಂ ಚ ಸಂಧಿಂ ವಿಗ್ರಹಮೇವ ಚ ।**

**ಕಾರ್ಯಂ ವೀಕ್ಷ್ಯ ಪ್ರಯುಜೀತ ದ್ವೈಧಂ ಸಂಶ್ರಯಮೇವ ಚ ॥ ೧ ॥**

**ಸಂಧಿಂ ತು ದ್ವಿವಿಧಂ ವಿದ್ಯಾದ್ರಾಜಾ ವಿಗ್ರಹಮೇವ ಚ ।**

**ಉಭೇ ಯಾನಾಸನೇ ಚೈವ ದ್ವಿವಿಧಃ ಸಂಶ್ರಯಃ ಸ್ಮೃತಃ ॥ ೨ ॥**

**ಸಮಾನಯಾನಕರ್ಮಾ ಚ ವಿಪರೀತಸ್ತಥೈವ ಚ ।**

**ತಥಾ ತ್ವಾಯತಿಸಂಯುಕ್ತಃ ಸಂಧಿರ್ಜ್ಞೇಯೋ ದ್ವಿಲಕ್ಷಣಃ ॥ ೩ ॥**

**ಸ್ವಯಂ ಕೃತಶ್ಚ ಕಾರ್ಯಾರ್ಥಮಕಾಲೇ ಕಾಲ ಏವ ವಾ ।**

**ಮಿತ್ರಸ್ಯ ಚೈವಾಪಕೃತೇ ದ್ವಿವಿಧೋ ವಿಗ್ರಹಃ ಸ್ಮೃತಃ ॥ ೪ ॥**

**ಏಕಾಕಿನಶ್ಚಾತ್ಯಯಿಕೇ ಕಾರ್ಯೇ ಪ್ರಾಪ್ತೇ ಯದೃಚ್ಛಯಾ ।**

**ಸಂಹತಸ್ಯ ಚ ಮಿತ್ರೇಣ ದ್ವಿವಿಧಂ ಯಾನಮುಚ್ಯತೇ ॥ ೫ ॥**

**ಕ್ಷೀಣಸ್ಯ ಚೈವ ಕ್ರಮಶೋ ದೈ ವಾತ್ಪೂರ್ವಕೃತೇನ ವಾ ।**

**ಮಿತ್ರಸ್ಯ ಚಾನುರೋಧೇನ ದ್ವಿವಿಧಂ ಸ್ಮೃತಮಾಸನಮ್ ॥ ೬ ॥**

**ಬಲಸ್ಯ ಸ್ವಾಮಿನಶ್ಚೈವ ಸ್ಥಿತಿಃ ಕಾರ್ಯಾರ್ಥಸಿದ್ಧಯೇ ।**

**ದ್ವಿವಿಧಂ ಕೀರ್ತ್ಯತೇ ದ್ವೈಧಂ ಷಾಡ್ಗುಣ್ಯಗುಣವೇದಿಭಿಃ ॥ ೭ ॥**

**ಅರ್ಥಸಂಪಾದನಾರ್ಥಂ ಚ ಪೀಡ್ಯಮಾನಃ ಸ ಶತ್ರುಭಿಃ ।**

**ಸಾಧುಷು ವ್ಯಪದೇಶಾರ್ಥಂ ದ್ವಿವಿಧಃ ಸಂಶ್ರಯಃ ಸ್ಮೃತಃ ॥ ೮ ॥**

**ಯದಾವಗಚ್ಛೇದಾಯತ್ಯಾಮಾಧಿಕ್ಯಂ ಧ್ರುವಮಾತ್ಮನಃ ।**

**ತದಾತ್ವೇ ಚಾಲ್ಪಿಕಾಂ ಪೀಡಾಂ ತದಾ ಸಂಧಿಂ ಸಮಾಶ್ರಯೇತ್ ॥ ೯ ॥**

**ಯದಾ ಪಹೃಷ್ಟಾ ಮನ್ಯೇತ ಸರ್ವಾಸ್ತುಪ್ರಕೃತೀರ್ಭೃಶಮ್ ।**

**ಅತ್ಯುಚ್ಛ್ರಿತಂ ತಥಾತ್ಮಾನಂ ತದಾ ಕುರ್ವೀತ ವಿಗ್ರಹಮ್ ॥ ೧೦ ॥**

**ಯದಾ ಮನ್ಯೇತ ಭಾವೇನ ಹೃಷ್ಟಂ ಪುಷ್ಟಂ ಬಲಂ ಸ್ವಕಮ್ ।**

**ಪರಸ್ಯ ವಿಪರೀತಂ ಚ ತದಾ ಯಾಯಾದ್ರಿಪುಂ ಪ್ರತಿ ॥ ೧೧ ॥**

**ಯದಾ ತು ಸ್ಯಾತ್ಪರಿಕ್ಷೀಣೋ ವಾಹನೇನ ಬಲೇನ ಚ ।**

**ತದಾಸೀತ ಪ್ರಯತ್ನೇನ ಶನಕೈಃ ಸಾಂತ್ವಯನ್ನರೀನ್ ॥ ೧೨ ॥**

**ಮನ್ಯೇತಾರಿಂ ಯದಾ ರಾಜಾ ಸರ್ವಥಾ ಬಲವತ್ತರಮ್ ।**

**ತದಾ ದ್ವಿವಿಧಾ ಬಲಂ ಕೃತ್ವಾ ಸಾಧಯೇತ್ಕಾರ್ಯಮಾತ್ಮನಃ ॥ ೧೩ ॥**

**ಯದಾ ಪರಬಲಾನಾಂತು ಗಮನೀಯ ತಮೋ ಭವೇತ್ ।**

**ತದಾ ತು ಸಂಶ್ರಯೇತ್ಕ್ಷಿಪ್ರಂ ಧಾರ್ಮಿಕಂ ಬಲಿನಂ ನೃಪಮ್ ॥ ೧೪ ॥**

**ನಿಗ್ರಹಂ ಪ್ರಕೃತೀನಾಂ ಚ ಕುರ್ಯಾದ್ಯೋರಿಬಲಸ್ಯ ಚ ।**

**ಉಪಸೇವೇತ ತಂ ನಿತ್ಯಂ ಸರ್ವಯತ್ನೈರ್ಗುರುಂ ಯಥಾ ॥ ೧೫ ॥**

**ಯದಿ ತತ್ರಾಪಿ ಸಂಪಶ್ಯೇದ್ದೋಷಂ ಸಂಶ್ರಯಕಾರಿತಮ್ ।**

**ಸುಯುದ್ಧಮೇವ ತತ್ರಾಪಿ ನಿರ್ವಿಶಂಕಃ ಸಮಾಚರೇತ್ ॥ ೧೬॥** (ಮನು:- ೭. ೧೬೧-೧೭೬)

ರಾಜನೇ ಮೊದಲಾದ ಸಮಸ್ತ ರಾಜಪುರುಷರೂ, **(ಆಸನ)** ಸ್ಥಿರತ್ವ, **(ಯಾನ)** ಶತ್ರುವಿನೊಡನೆ ಹೋರಾಡಲು ಹೋಗುವುದು, **(ಸಂಧಿ)** ಅವರೊಂದಿಗೆ ಮಿಳನವನ್ನು ಮಾಡಿಕೊಳ್ಳುವುದು, **(ವಿಗ್ರಹ)** ದುಷ್ಟ ಶತ್ರುಗಳೊಡನೆ ಹೋರಾಡುವುದು, **(ದ್ವೈಧ)** ಎರಡು ವಿಧದ ಸೇನೆಯನ್ನು ರಚಿಸಿ ಸ್ವವಿಜಯವನ್ನು ಸಾಧಿಸಿಕೊಳ್ಳುವುದು, **(ಸಂಶ್ರಯ)** ಮತ್ತು ನಿರ್ಬಲತ್ವದ ಸ್ಥಿತಿಯಲ್ಲಿ, ಬೇರೆ ಪ್ರಬಲ ರಾಜನನ್ನು ಆಶ್ರಯಿಸುವುದು-ಈ ಆರು ವಿಧದ ಕ್ರಿಯೆಗಳನ್ನು, ಯೋಗ್ಯವಾದ ಪ್ರಕಾರ ಆಲೋಚಿಸಿ, ಅದರಲ್ಲಿ ತೊಡಗಬೇಕು-ಎಂಬ ಈ ಮಾತನ್ನು ಲಕ್ಷ್ಯದಲ್ಲಿಡುವುದು ಯೋಗ್ಯವಾಗಿದೆ. (೧)

ರಾಜನು ಯಾವ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮತ್ತು ಸಂಶ್ರಯಗಳು ಎರಡೆರಡು ವಿಧದವಾಗಿರುತ್ತವೋ, ಅವನ್ನು ಯೋಗ್ಯ ರೀತಿಯಲ್ಲಿ ತಿಳಿದುಕೊಳ್ಳಬೇಕು. (೨)

**(ಸಂಧಿ)** ಶತ್ರುವಿನೊಂದಿಗೆ ಮಿಳನವನ್ನು ಅಥವಾ, ಅವನೊಂದಿಗೆ ವಿರೋಧವನ್ನು ಮಾಡಿಕೊಳ್ಳಲಿ,[೨೦] ಆದರೆ ವರ್ತಮಾನದಲ್ಲಿ ಮತ್ತು ಭವಿಷ್ಯತ್ತಿನಲ್ಲಿ ಮಾಡಬೇಕಾದ ಕಾರ್ಯಗಳನ್ನು ಸರಿಯಾಗಿ ಮಾಡುತ್ತಾ ಹೋಗಬೇಕು. ಇದು ಎರಡು ಬಗೆಯ 'ಮಿಳನ'ವೆನಿಸುತ್ತದೆ. (೩)

**(ವಿಗ್ರಹ)** ಕಾರ್ಯಸಿದ್ಧಿಗಾಗಿ ಉಚಿತವಾದ ಸಮಯದಲ್ಲಿ ಅಥವಾ ಅನುಚಿತವಾದ ಸಮಯದಲ್ಲಿ ಸ್ವತಃ ಮಾಡುವಂತಹುದು ಅಥವಾ ಮಿತ್ರನ ಬಗೆಗೆ ಅಪರಾಧ ಮಾಡುವ ಶತ್ರುವಿನೊಂದಿಗೆ ಮಾಡುವಂತಹುದು – ಎಂದು ವಿರೋಧವನ್ನು ಎರಡು ವಿಧದಿಂದ ಗ್ರಹಿಸಬೇಕು. (೪) (ಗಮನ)

**(ಯಾನ)** ಅಕಸ್ಮಾತ್ತಾಗಿ ಯಾವುದಾದರೂ ಕಾರ್ಯ ಒದಗಿ ಬಂದಲ್ಲಿ, ಏಕಾಕಿಯಾಗಿ, ಅಥವಾ ಮಿತ್ರನೊಂದಿಗೆ ಸೇರಿ, ಶತ್ರುವಿನ ಮೇಲೇರಿ ಹೋಗುವುದು – ಎರಡು ಬಗೆಯ ಯಾನವೆನಿಸುತ್ತದೆ. (೫)

**(ಆಸನ)** ಸ್ವತಃ ಯಾವುದೋ ರೀತಿಯಿಂದ, ಕ್ರಮಶಃ ಕ್ಷೀಣನಾಗಿ, ಎಂದರೆ ನಿರ್ಬಲನಾಗಿ ಹೋದಾಗ, ತಾನಾಗಿಯೇ ಅಥವಾ ಮಿತ್ರನ ಅನುರೋಧದಿಂದ ತನ್ನ ಸ್ಥಳದಲ್ಲಿ ಕುಳಿತಿರುವುದು – ಇದು ಎರಡು ವಿಧದ ಆಸನವೆನಿಸುತ್ತದೆ. (೬)

**(ದ್ವೈಧ)** ಕಾರ್ಯಸಾಧನೆಗಾಗಿ ಸೇನಾಪತಿಯ ಮತ್ತು ಸೇನೆಯ ಎರಡು ವಿಭಾಗಗಳನ್ನು ಮಾಡಿ,[೨೧] ವಿಜಯಗಳಿಸುವುದು ಎರಡು ಬಗೆಯ ದ್ವೈಧವೆನಿಸುತ್ತದೆ. (೭)

**(ಸಂಶ್ರಯ)** ಯಾವುದಾದರೂ ಒಂದು ಉದ್ದೇಶ್ಯದ ಸಿದ್ಧಿಗಾಗಿ, ಯಾವನಾದರೂ ಬಲಿಷ್ಠನಾದ ರಾಜನ, ಅಥವಾ ಯಾವನಾದರೂ ಮಹಾತ್ಮನ ಆಶ್ರಯವನ್ನು, ಶತ್ರುವಿನಿಂದ ಪೀಡಿತನಾಗದಂತೆ ತೆಗೆದುಕೊಳ್ಳುವುದು ಎರಡು ಬಗೆಯ 'ಆಶ್ರಯಗ್ರಹಣ'ವೆನಿಸುತ್ತದೆ. (೮)

ಯಾವಾಗ, ಈ ಕೂಡಲೇ ಯುದ್ಧ ಮಾಡುವುದರಿಂದ ಸ್ವಲ್ಪ ತೊಂದರೆಯುಂಟಾಗುವುದು ಮತ್ತು ಆ ಮೇಲೆ ಮಾಡುವುದರಿಂದ ತನಗೆ ವೃದ್ಧಿ ಮತ್ತು ವಿಜಯ ನಿಶ್ಚಯವಾಗಿ ಲಭಿಸುವುದು – ಎಂದು ಗೊತ್ತಾಗುವುದೋ, ಆಗ ಶತ್ರುವಿನೊಂದಿಗೆ ಮಿಳನಮಾಡಿಕೊಂಡು, ಯುಕ್ತವಾದ ಸಮಯದವರೆಗೆ ಸಹನೆಯಿಂದ ವರ್ತಿಸಬೇಕು. (೯)

ಯಾವಾಗ ತನ್ನ ಸಮಸ್ತ ಪ್ರಜೆಗಳು ಮತ್ತು ಸೈನ್ಯವು ಅತ್ಯಂತ ಪ್ರಸನ್ನರೂ, ಉನ್ನತಿಶೀಲರೂ ಮತ್ತು ಶ್ರೇಷ್ಠರೂ ಆಗಿರುವರೆಂದು ತಿಳಿದುಬರುತ್ತದೋ, ಹಾಗೆಯೇ ತಾನೂ ಇರುವೆನೆಂದು ಎನಿಸುತ್ತದೋ, ಆಗಲೇ ಶತ್ರುವಿನೊಡನೆ ವಿಗ್ರಹವನ್ನು (ಯುದ್ಧವನ್ನು) ಮಾಡಿಬಿಡಬೇಕು. (೧೦)

ಯಾವಾಗ ತನ್ನ ಬಲ, ಎಂದರೆ ಸೈನ್ಯ ಹರ್ಷಯುಕ್ತವೂ, ಬಲಯುಕ್ತವೂ, ಹಾಗೆಯೇ ಪ್ರಸನ್ನತಾ ಭಾವಯುಕ್ತವೂ ಆಗಿದೆ–ಎಂದು ತಿಳಿಯುತ್ತಾನೋ ಮತ್ತು ಶತ್ರುವಿನ ಬಲವು ತನ್ನದಕ್ಕೆ ವಿರುದ್ಧವಾಗಿ ನಿರ್ಬಲವಾಗಿ ಹೋಗುವುದೋ, ಆಗ ಶತ್ರುವಿನ ಕಡೆಗೆ ಯುದ್ಧ ಮಾಡುವುದಕ್ಕೆ ಹೋಗಬೇಕು. (೧೧)

ಯಾವಾಗ (ತನ್ನ) ಸೇನೆ ಶಕ್ತಿ ಮತ್ತು ವಾಹನಗಳ ದೃಷ್ಟಿಯಿಂದ ಕ್ಷೀಣವಾಗುವುದೋ, ಆಗ ಶತ್ರುಗಳನ್ನು ಮೆಲ್ಲ – ಮೆಲ್ಲನೆ ಪ್ರಯತ್ನದಿಂದ ಶಾಂತರನ್ನಾಗಿ ಮಾಡುತ್ತಾ, ತನ್ನ ಸ್ಥಾನದಲ್ಲಿ ಕುಳಿತಿರಬೇಕು. (೧೨)

ಯಾವಾಗ ರಾಜನು ಶತ್ರುವನ್ನು ಅತ್ಯಂತ ಬಲಿಷ್ಠನೆಂದು ತಿಳಿಯುತ್ತಾನೋ, ಆಗ ದ್ವಿಗುಣವಾಗಿ, ಎಂದರೆ ಎರಡು ರೀತಿಯಲ್ಲಿ ಸೇನೆಯನ್ನು ರಚಿಸಿ, ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕು. (೧೩)

ಯಾವಾಗ ತಾನು "ಈಗ ಬೇಗನೇ ಬಲಶಾಲಿ ಶತ್ರುಗಳ ಏರಿಕೆ ತನ್ನ ಮೇಲೆ ಆಗುವುದು" ಎಂದು ತಿಳಿದುಕೊಳ್ಳುವನೋ, ಆ ಕೂಡಲೇ ಯಾವನಾದರೂ ಧಾರ್ಮಿಕನೂ, ಬಲಶಾಲಿಯೂ ಆದ ರಾಜನ ಆಶ್ರಯವನ್ನು ತ್ವರೆಯಿಂದ ಪಡೆದುಕೊಳ್ಳಬೇಕು. (೧೪)

---

೨೦. ಎಂದರೆ ಶತೃವಿನೊಂದಿಗೆ ಮೈತ್ರಿ ಬೆಳೆಸುವುದು; ಆದರೆ,ಆಗಾಮೀ ಯುದ್ಧಕ್ಕೆ ಸನ್ನದ್ಧವಾಗುವುದು.

೨೧. ಸೇನಾಪತಿಯೊಂದಿಗೆ ಮತ್ತೊಬ್ಬ ಸಮಾನಾಧಿಕಾರಿಯನ್ನು ನೇಮಿಸಿ, ಎರಡಾಗಿ ಸೀಳಿದ ಸೈನ್ಯವನ್ನು ಬೇರೆ ಬೇರೆ ದಿಕ್ಕುಗಳಿಂದ ನುಗ್ಗಿಸಿ, ಶತ್ರುವಿಗೆ ಭ್ರಾಂತಿ ಹುಟ್ಟಿಸುವುದು.

ಯಾವ ಪ್ರಜೆಗಳೂ ಮತ್ತು ಸೈನಿಕರೂ ಶತ್ರುವಿನ ಬಲವನ್ನು ನಿಗ್ರಹಿಸುವರೋ, ಎಂದರೆ ತಡೆಯುವರೋ, ಅವರ ಸೇವೆಯನ್ನು, ಪ್ರಯತ್ನಪೂರ್ವಕವಾಗಿ, ಗುರುಗಳಿಗೆ ಮಾಡುವಂತೆ ನಿತ್ಯವೂ ಮಾಡುತ್ತಾ ಹೋಗಬೇಕು. (೧೫)

ಯಾವನ ಆಶ್ರಯ ತೆಗೆದಕೊಳ್ಳುವನೋ, ಆ ಪುರುಷನ ಕರ್ಮಗಳಲ್ಲಿ ದೋಷಗಳನ್ನು ಕಂಡಾಗ, ಅಲ್ಲಿಯೂ ಉತ್ತಮ ರೀತಿಯಲ್ಲಿ ಯುದ್ಧವನ್ನೇ ಸಂದೇಹರಹಿತವಾಗಿ ಮಾಡಬೇಕು. (೧೬)

ಯಾವ ರಾಜನು ಧಾರ್ಮಿಕನಾಗಿರುತ್ತಾನೋ, ಅವನೊಂದಿಗೆ ಎಂದೂ ವಿರೋಧವನ್ನು ಕಟ್ಟಿಕೊಳ್ಳಬಾರದು; ಮತ್ತು ಅವನೊಂದಿಗೆ ಸದಾ ಮೈತ್ರಿಯನ್ನು ಇಟ್ಟುಕೊಳ್ಳಬೇಕು ಆದರೆ ಯಾವ ದುಷ್ಟನು ಪ್ರಬಲನಾಗಿರುತ್ತಾನೋ, ಅವನನ್ನು ಗೆಲ್ಲುವುದಕ್ಕಾಗಿಯೇ ಈ ಪೂರ್ವೋಕ್ತ ಪ್ರಯೋಗಗಳನ್ನು ಮಾಡುವುದು ಉಚಿತವಾಗಿರುತ್ತದೆ.[೨೨]

**ಸರ್ವೋಪಾಯೈಸ್ತಥಾಕುರ್ಯಾನ್ನೀತಿಜ್ಞಃ ಪೃಥಿವೀಪತಿಃ ।**

**ಯಥಾಸ್ಯಾಭ್ಯಧಿಕಾ ನ ಸ್ಯುರ್ಮಿತ್ರೋದಾಸೀನ ಶತ್ರವಃ ॥ ೧ ॥**

**ಆಯತಿಂ ಸರ್ವಕಾರ್ಯಾಣಾಂ ತದಾತ್ವಂ ಚ ವಿಚಾರಯೇತ್ ।**

**ಅತೀತಾನಾಂ ಚ ಸರ್ವೇಷಾಂ ಗುಣದೋಷೌ ಚ ತತ್ತ್ವತಃ ॥ ೨ ॥**

**ಆಯತ್ಯಾಂ ಗುಣದೋಷಜ್ಞಸ್ತದಾತ್ವೇ ಕ್ಷಿಪ್ರನಿಶ್ಚಯಃ ।**

**ಅತೀತೇ ಕಾರ್ಯಶೇಷಜ್ಞಃ ಶತ್ರುಭಿರ್ನಾಭಿಭೂಯತೇ ॥ ೩ ॥**

**ಯಥೈನಂ ನಾಭಿಸಂದದ್ಯುರ್ಮಿತ್ರೋದಾಸೀನಶತ್ರವಃ ।**

**ತಥಾ ಸರ್ವಂ ಸಂವಿದಧ್ಯಾದೇಷ ಸಮಾಸಿಕೋ ನಯಃ ॥ ೪ ॥** (ಮನು :- ೭- ೧೭೭- ೧೮೦)

ನೀತಿಯನ್ನು ತಿಳಿಯುವವನಾದ ಪೃಥಿವೀಪತಿಯಾದ ರಾಜನು, ಯಾವ ರೀತಿ ಇವನ ಮಿತ್ರರೂ, ಉದಾಸೀನರೂ (ಮಧ್ಯಸ್ಥರೂ), ಮತ್ತು ಶತ್ರುಗಳೂ ಅಧಿಕ (ಶಕ್ತಿಶಾಲಿಗಳು) ರಾಗುವುದಿಲ್ಲರೋ, ಅಂತಹ ಸಮಸ್ತ ಉಪಾಯಗಳಿಂದಲೂ ವ್ಯವಹರಿಸಬೇಕು. (೧)

ಸಮಸ್ತ ಕಾರ್ಯಗಳ, ವರ್ತಮಾನದಲ್ಲಿನ ಕರ್ತವ್ಯಗಳು, ಮತ್ತು ಭವಿಷ್ಯತ್ತಿನಲ್ಲಿ ಯಾವ ಯಾವುದನ್ನು ಮಾಡಬೇಕೋ ಮತ್ತು ಯಾವ ಯಾವ ಕರ್ಮಗಳನ್ನು ಮಾಡಿ ಮುಗಿಸಿದ್ದಾನೋ, ಅವೆಲ್ಲವುಗಳ ಗುಣದೋಷಗಳನ್ನೂ ತಕ್ಕಂತಹ ರೀತಿಯಲ್ಲಿ ಆಲೋಚಿಸಬೇಕು. ಆ ಮೇಲೆ ದೋಷಗಳ ನಿವಾರಣೆ ಮತ್ತು ಗುಣಗಳ ಸ್ಥೈರ್ಯಕ್ಕಾಗಿ ಯತ್ನಿಸಬೇಕು. (೨)

**ಯಾವ ರಾಜನು ಭವಿಷ್ಯತ್ತಿನಲ್ಲಿ, ಎಂದರೆ – ಮುಂದಕ್ಕೆ ಮಾಡಲಿರುವ ಕರ್ಮಗಳ ಗುಣ–ದೋಷಗಳನ್ನು ತಿಳಿಯುವವನೂ, ವರ್ತಮಾನದಲ್ಲಿ ಕ್ಷಿಪ್ರ ನಿಶ್ಚಯ ಮಾಡುವವನೂ, ಮತ್ತು ಮಾಡಿರುವ ಕಾರ್ಯಗಳಲ್ಲಿ ಉಳಿದಿರುವ ಕರ್ತವ್ಯವನ್ನು ಬಲ್ಲವನೂ ಆಗಿರುತ್ತಾನೋ, ಅವನು ಶತ್ರುಗಳಿಂದ ಎಂದಿಗೂ ಪರಾಜಿತನಾಗುವುದಿಲ್ಲ.** (೩)

ಹೇಗೆ ಮಾಡುವುದರಿಂದ, ರಾಜರೇ ಮೊದಲಾದ ಜನರ ಮಿತ್ರರನ್ನೂ ಉದಾಸೀನರನ್ನೂ ಮತ್ತು ಶತ್ರುವನ್ನು ವಶೀಕರಿಸಿಕೊಂಡು, ಅನ್ಯರೀತಿಯಲ್ಲಿ ನಡೆದುಕೊಳ್ಳದಂತೆ ಮಾಡಲಾಗುವುದೋ, ಹಾಗೆ, ಎಲ್ಲ ರೀತಿಯಿಂದಲೂ, ರಾಜಪುರುಷರೂ, ವಿಶೇಷತಃ ಸಭಾಪತಿಯಾದ ರಾಜನೂ ಪ್ರಯತ್ನಿಸಬೇಕು. (ವಿರುದ್ಧವಾದಂತಹ)[೨೩] ಮೋಹಕ್ಕೆ ಎಂದಿಗೂ ಸಿಕ್ಕಿಕೊಳ್ಳಬಾರದು. ಇದೇ ಸಂಕ್ಷೇಪವಾಗಿ **ನಯ**, ಎಂದರೆ **ರಾಜನೀತಿ** – ಎನಿಸುತ್ತದೆ. (೪)

**ಕೃತ್ವಾ ವಿಧಾನಂ ಮೂಲೇ ತು ಯಾತ್ರಿಕಂ ಚ ಯಥಾವಿಧಿ ।**

**ಉಪಗೃಹ್ಯಾಸ್ಪದಂ ಚೈವ ಚಾರಾನ್ ಸಮ್ಯಗ್ವಿಧಾಯ ಚ ॥ ೧ ॥**

**ಸಂಶೋಧ್ಯ ತ್ರಿವಿಧಂ ಮಾರ್ಗಂ ಷಡ್ವಿಧಂ ಚ ಬಲಂ ಸ್ವಕಮ್ ।**

---

೨೨. ಇದು ಗ್ರಂಥಕರ್ತರ ಸ್ವವಿಚಾರಿತ ನಿರ್ದೇಶ. –ಸಂ.

೨೩. ಎಂದರೆ, ಮಿತ್ರ ಮೊದಲಾದವರ ಮೋಹಕ್ಕೆ ಸಿಕ್ಕಿಕೊಳ್ಳುವುದರಿಂದ, ಅವರು ತಮ್ಮಿಚ್ಛೆಯಂತೆ ರಾಜನನ್ನು ನಡೆಸುವವರು–ಯು.ಮೀ.

**ಸಾಂಪರಾಯಿಕಕಲ್ಪೇನ ಯಾಯಾದರಿಪುರಂ ಶನೈಃ॥ ೨ ॥**

**ಶತ್ರುಸೇವಿನಿ ಮಿತ್ರೇಚ ಗೂಢೇ ಯುಕ್ತತರೋ ಭವೇತ್ ।**

**ಗತಪ್ರತ್ಯಾಗತೇ ಚೈವ ಸ ಹಿ ಕಷ್ಟತರೋ ರಿಪುಃ॥ ೩ ॥**

**ದಂಡವ್ಯೂಹೇನ ತನ್ಮಾರ್ಗಂ ಯಾಯಾತ್ತು ಶಕಟೇನ ವಾ ।**

**ವರಾಹಮಕರಾಭ್ಯಾಂ ವಾ ಸೂಚ್ಯಾ ವಾ ಗರುಡೇನ ವಾ॥ ೪ ॥**

**ಯತಶ್ಚ ಭಯಮಾಶಂಕೇತ್ತತೋ ವಿಸ್ತಾರಯೇದ್ಬಲಮ್ ।**

**ಪದ್ಮೇನ ಚೈವ ವ್ಯೂಹೇನ ನಿವಿಶೇತ ಸದಾ ಸ್ವಯಮ್॥ ೫ ॥** (ಮನು:– ೭. ೧೮೪ – ೧೮೮)

**ಸೇನಾಪತಿ ಬಲಾಧ್ಯಕ್ಷೌ ಸರ್ವದಿಕ್ಷು ನಿವೇಶಯೇತ್ ।**

**ಯತಶ್ಚ ಭಯಮಾ ಶಂಕೇತ್ಪ್ರಾ ಚೀ ತಾಂ ಕಲ್ಪಯೇದ್ದಿಶಮ್॥ ೬ ॥**

**ಗುಲ್ಮಾಂಶ್ಚ ಸ್ಥಾಪಯೇದಾಪ್ತಾನ್ ಕೃತಸಂಜ್ಞಾನ್ ಸಮಂ ತತಃ ।**

**ಸ್ಥಾನೇ ಯುದ್ಧೇ ಚ ಕುಶಲಾನಭೀರೂನಕಾರಿಣಃ॥ ೭ ॥**

**ಸಂಹತಾನ್ ಯೋಧಯೇದಲ್ಪಾನ್ ಕಾಮಂ ವಿಸ್ತಾರಯೇದ್ಬಹೂನ್ ।**

**ಸೂಚ್ಯಾ ವಜ್ರೇಣ ಚೈವೈತಾನ್ ವ್ಯೂಹೇನ ವ್ಯೂಹ್ಯ ಯೋಧಯೇತ್॥ ೮ ॥**

**ಸ್ಯಂದನಾಶ್ವೈಃ ಸಮೇ ಯುಧ್ಯೇದನೂಪೇ ನೌ ದ್ವಿಪೈಸ್ತಥಾ ।**

**ವೃಕ್ಷಗುಲ್ಮಾವೃತೇ ಚಾಪೈ ರಸಿಚರ್ಮಾಯುಧೈಃ ಸ್ಥಲೇ॥ ೯ ॥** (ಮನು:– ೭. ೧೮೯–೧೯೨)

**ಪ್ರಹರ್ಷಯೇದ್ಬಲಂ ವ್ಯೂಹ್ಯ ತಾಂಶ್ಚ ಸಮ್ಯಕ್ಪರೀಕ್ಷಯೇತ್ ।**

**ಚೇಷ್ಟಾಶ್ಚೈವ ವಿಜಾನೀಯಾದರೀನ್ ಯೋಧಯತಾಮಪಿ॥ ೧೦ ॥**

**ಉಪರುಧ್ಯಾರಿಮಾಸೀತ ರಾಷ್ಟ್ರಂ ಚಾಸ್ಯೋಪಪೀಡಯೇತ್ ।**

**ದೂಷಯೇಚ್ಚಾಸ್ಯಸತತಂ ಯವಸಾನ್ನೋದಕೇಂಧನಮ್॥ ೧೧ ॥**

**ಭಿಂದ್ಯಾಚ್ಚೈವ ತಡಾಗಾನಿ ಪ್ರಾಕಾರಪರಿಖಾಸ್ತಥಾ ।**

**ಸಮವಸ್ಕಂದಯೇಚ್ಚೈನಂ ರಾತ್ರೌ ವಿತ್ರಾಸಯೇತ್ತಥಾ॥ ೧೨ ॥** (ಮನು :– ೭ . ೧೯೪–೧೯೬)

**ಪ್ರಮಾಣಾನಿ ಚ ಕುರ್ವೀತ ತೇಷಾಂ ಧರ್ಮಾನ್ಯಥೋದಿತಾನ್।**

**ರತ್ನೈಶ್ಚ ಪೂಜಯೇದೇನಂ ಪ್ರಧಾನಪುರುಷೈಃ ಸಹ॥ ೧೩ ॥**

**ಅದಾನಮಪ್ರಿಯಕರಂ ದಾನಂ ಚ ಪ್ರಿಯಕಾರಕಮ್।**

**ಅಭೀಪ್ಸಿತಾನಾಮರ್ಥಾನಾಂ ಕಾಲೇ ಯುಕ್ತಂ ಪ್ರಶಸ್ಯತೇ॥ ೧೪ ॥** (ಮನು :– ೭, ೨೦೩–೨೦೪)

ಯಾವಾಗ[೨೪] ರಾಜನು ಶತ್ರುಗಳೊಂದಿಗೆ ಯುದ್ಧ ಮಾಡಲು ಹೋಗುವನೋ, ಆಗ ತನ್ನ ರಾಜ್ಯದ ವ್ಯವಸ್ಥೆಯನ್ನೂ ಮತ್ತು ಪ್ರಯಾಣದ ಸಮಸ್ತ ಸಲಕರಣೆಗಳನ್ನು ತಕ್ಕ ರೀತಿಯಲ್ಲಿ ಮಾಡಿ, ಎಲ್ಲ ಸೈನ್ಯ, ಯಾನ, ವಾಹನ, ಶಸ್ತ್ರಾಸ್ತ್ರಗಳೇ ಮೊದಾದುವನ್ನು

---

೨೪. ಈ ಮುಂದೆ ಕೊಟ್ಟಿರುವ ವ್ಯಾಖ್ಯಾನ ಮೇಲಿನ ಶ್ಲೋಕಗಳ ಅನುವಾದ ಮಾತ್ರವಲ್ಲ. ಗ್ರಂಥಕರ್ತರು ಸ್ವವಿಚಾರದಿಂದ ತಿಳಿಸಿರುವ ಜ್ಞಾನ ಭಂಡಾರ. –ಸಂ.

ಪೂರ್ಣತಃ ತೆಗೆದುಕೊಂಡು ಎಲ್ಲೆಡೆಯೂ ದೂತರನ್ನು, ಎಂದರೆ ನಾಲ್ಕು ಕಡೆಯ ಸಮಾಚಾರಗಳನ್ನು ತಿಳಿಸುವ ಪುರುಷರನ್ನು ಗುಪ್ತವಾಗಿ ನೇಮಿಸಿ, ಶತ್ರುಗಳ ಕಡೆಗೆ ಯುದ್ಧಕ್ಕಾಗಿ ಹೋಗಬೇಕು. (೧)

"ಮೂರು ರೀತಿಯ ಮಾರ್ಗಗಳನ್ನು", ಎಂದರೆ, ಒಂದನೆಯದಾಗಿ ಸ್ಥಳ (ಭೂಮಿ), ಎರಡನೆಯದಾಗಿ ಜಲ (ಸಮುದ್ರಗಳು, ಅಥವಾ ನದಿಗಳು) ಮೂರನೆಯದಾಗಿ 'ಆಕಾಶ' – ಈ ಮಾರ್ಗಗಳನ್ನು ನಿರ್ವಿಘ್ನವಾಗಿ ಮಾಡಿ, ಭೂ ಮಾರ್ಗದಲ್ಲಿ ರಥಗಳು, ಕುದುರೆಗಳು, ಆನೆಗಳು, ಜಲಮಾರ್ಗದಲ್ಲಿ ಹಡಗುಗಳು ಮತ್ತು ಆಕಾಶದಲ್ಲಿ ವಿಮಾನಗಳೇ[೨೫] ಮೊದಲಾದ ಯಾನಗಳಿಂದ ಹೋಗಬೇಕು ಮತ್ತು ಕಾಲಾಳುಗಳು, ರಥಗಳು, ಆನೆಗಳು, ಕುದುರೆಗಳು, ಶಸ್ತ್ರಗಳು ಮತ್ತು ಅಸ್ತ್ರಗಳು, ಖಾದ್ಯ –ಪಾನೀಯ ಮೊದಲಾದ ಸಾಮಗ್ರಿಗಳನ್ನು ಕ್ರಮಪೂರ್ವಕವಾಗಿ ಜೊತೆಯಲ್ಲಿ ತೆಗೆದುಕೊಂಡು, ಪೂರ್ಣಬಲಯುಕ್ತವಾಗಿ ಮಾಡಿ, ಯಾವುದಾದರೂ ಒಂದು ನಿಮಿತ್ತವನ್ನು ಪ್ರಕಟಪಡಿಸಿ, ಶತ್ರುವಿನ ನಗರದ ಬಳಿಗೆ ನಿಧಾನ–ನಿಧಾನವಾಗಿ ತೆರಳಬೇಕು. (೨)

ಯಾವನು ಒಳಗಿನಿಂದ ಶತ್ರುವಿನೊಂದಿಗೆ ಸೇರಿಕೊಂಡಿರುವನೋ ಮತ್ತು ಮೇಲಿನಿಂದ ತನ್ನೊಂದಿಗೂ ಮೈತ್ರಿಯನ್ನಿಟ್ಟಿರುತ್ತಾನೋ, ಗುಪ್ತವಾಗಿ ಶತ್ರುವಿಗೆ ರಹಸ್ಯವನ್ನು ತಿಳಿಸಿಬಿಡುತ್ತಾನೋ, ಅವನ ಆಗಮನ – ನಿರ್ಗಮನಗಳಲ್ಲಿ, ಅವನ ಸಂಗಡ ಮಾತನಾಡುವುದರಲ್ಲಿ, ಅತ್ಯಂತ ಎಚ್ಚರಿಕೆಯನ್ನಿಡಬೇಕು; ಏಕೆಂದರೆ – ಒಳಗಿನಿಂದ ಶತ್ರುವೂ, ಮೇಲಿನಿಂದ ಮಿತ್ರನೂ ಆಗಿರುವ ಪುರುಷನನ್ನು ಮಹಾ ಶತ್ರುವೆಂದು ತಿಳಿದುಕೊಳ್ಳಬೇಕು. (೩)

ಸಮಸ್ತ ರಾಜಪುರುಷರಿಗೂ ಯುದ್ಧ ಮಾಡುವ ವಿದ್ಯೆಯನ್ನು ಕಲಿಸಬೇಕು ಮತ್ತು ತಾನೂ ಕಲಿಯಬೇಕು. ಹಾಗೆಯೇ ಇತರ ಪ್ರಜೆಗಳಿಗೂ ಕಲಿಸಿಕೊಡಬೇಕು; ಯಾರು ಮುನ್ನವೇ ಶಿಕ್ಷಣ ಪಡೆದ ಯೋದ್ಧರಾಗಿರುತ್ತಾರೋ, ಅವರೇ ಒಳ್ಳೆಯ ರೀತಿಯಲ್ಲಿ ಹೋರಾಡಲೂ – ಹೋರಾಡಿಸಲೂ ಬಲ್ಲರು. (ವ್ಯೂಹರಚನೆ) ಯಾವಾಗ ಶಿಕ್ಷಣ ಕೊಡುತ್ತಾನೋ, ಆಗ (ದಂಡವ್ಯೂಹ) ಕೋಲಿನಂತೆ ಸೇನೆಯನ್ನು ಸಂಚಾಲನ ಮಾಡಬೇಕು; (ಶಕಟ) ಶಕಟದಂತೆ, ಎಂದರೆ ಗಾಡಿಯ ಹಾಗೆಯೂ, (ವರಾಹ) ಹೇಗೆ ಹಂದಿಗಳು ಒಂದು ಇನ್ನೊಂದರ ಹಿಂದೆ ಧಾವಿಸುತ್ತಾ ಹೋಗುತ್ತವೋ, ಮತ್ತು ಒಂದೊಂದು ಸಾರಿ ಎಲ್ಲವೂ ಸೇರಿ ಹಿಂಡಾಗಿ ಹೋಗುತ್ತವೋ, ಹಾಗೆಯೂ, (ಮಕರ) ಹೇಗೆ ಮೊಸಳೆಗಳು ಜಲದಲ್ಲಿ ಸಂಚರಿಸುತ್ತವೋ, ಹಾಗೆಯೂ, ಸೇನೆಯನ್ನು ರೂಪಿಸಬೇಕು. (ಸೂಚೀವ್ಯೂಹ) ಹೇಗೆ ಸೂಜಿಯ ಅಗ್ರಭಾಗವು ಸೂಕ್ಷ್ಮವಾಗಿಯೂ, ಅನಂತರ ಸ್ಥೂಲವಾಗಿಯೂ ಮತ್ತು ಸೂತ್ರವು ಅದಕ್ಕಿಂತಲೂ ಸ್ಥೂಲವಾಗಿಯೂ ಇರುತ್ತದೋ, ಹಾಗೆ ಶಿಕ್ಷಣದ ಮೂಲಕ ಸೇನೆಯ ವ್ಯೂಹರಚನೆ ಮಾಡಬೇಕು. (ಗರುಡ) ಹೇಗೆ ಗರುಡ ಪಕ್ಷಿ ಮೇಲಕ್ಕೂ ಕೆಳಕ್ಕೂ ಸರ್‍ರನೆ ಹತ್ತಿ – ಇಳಿದು ಮಾಡುತ್ತದೋ, ಹಾಗೆ ಸೇನೆಯನ್ನು ರೂಪಿಸಿ ಯುದ್ಧ ಮಾಡಿಸಬೇಕು. (೪)

ಯಾವ ಕಡೆಯಿಂದ ಭಯ ತೋರುತ್ತದೋ, ಆ ಕಡೆಗೇ ಸೇನೆಯನ್ನು ಹರಡಬೇಕು. ಸೇನಾಪತಿಗಳೆಲ್ಲರನ್ನೂ ನಾಲ್ಕು ಕಡೆಯೂ ನಿಲ್ಲಿಸಿ, (ಪದ್ಮವ್ಯೂಹ) ಎಂದರೆ–ಪದ್ಮ (ತಾವರೆ)ದ ಆಕಾರದಲ್ಲಿ ನಾಲ್ಕು ಕಡೆಯೂ ಸೇನೆಗಳನ್ನಿಟ್ಟು, ಮಧ್ಯದಲ್ಲಿ ತಾನು ಇರಬೇಕು (೫).

ಸೇನಾಪತಿಗಳನ್ನೂ, ಬಲಾಧ್ಯಕ್ಷರನ್ನೂ, ಎಂದರೆ ಆಜ್ಞೆ ಕೊಡುವ ಮತ್ತು ಸೇನೆಯೊಂದಿಗೆ ಕಾದಾಡುವ–ಕಾದಾಡಿಸುವ ವೀರರನ್ನೂ ಎಂಟು ದಿಕ್ಕುಗಳಲ್ಲಿಯೂ ನಿಲ್ಲಿಸಬೇಕು; ಯಾವ ಕಡೆಯಿಂದ ಹೋರಾಟ ನಡೆಯುವುದೋ, ಅದೇ ಕಡೆ ಸಮಸ್ತ ಸೈನ್ಯದ ಮುಖವನ್ನು ತಿರುಗಿಸಬೇಕು. ಆದರೆ–ಬೇರೆ ಕಡೆಗೂ ದೃಢವಾದ ವ್ಯವಸ್ಥೆಯನ್ನು ಮಾಡಬೇಕು; ಇಲ್ಲದಿದ್ದರೆ, ಹಿಂದಿನಿಂದ ಅಥವಾ ಪಕ್ಕದಿಂದ ಶತ್ರುವಿನ ಪ್ರಹಾರ ಬೀಳುವ ಸಂಭವವಿರುತ್ತದೆ. (೬)

ಯಾರು ಗುಲ್ಮ – ಎಂದರೆ ದೃಢವಾದ ಸ್ತಂಭಗಳ ಹಾಗೆ ಶತ್ರುಗಳನ್ನು ತಡೆಗಟ್ಟಬಲ್ಲವರೂ, ಯುದ್ಧ ವಿದ್ಯೆಯಿಂದ ಸುಶಿಕ್ಷಿತರೂ, ಧಾರ್ಮಿಕರೂ, ಠಾಣೆ ಹೊಡೆಯುವುದರಲ್ಲಿ ಮತ್ತು ಯುದ್ಧ ಮಾಡುವುದರಲ್ಲಿ ಚತುರರೂ, ಭಯರಹಿತರೂ ಆಗಿರುತ್ತಾರೋ, ಮತ್ತು ಯಾರ ಮನಸ್ಸಿನಲ್ಲಿ ಯಾವುದೇ ಬಗೆಯ ವಿಕಾರವಿರುವುದಿಲ್ಲವೋ, ಅವರನ್ನು ಸೇನೆಯ ನಾಲ್ಕು ಕಡೆಗೂ ಇಡಬೇಕು. (೭)

ಅಲ್ಪ ಸಂಖ್ಯಾತರಾದ ಪುರುಷರು ಬಹು ಸಂಖ್ಯಾತರೊಂದಿಗೆ ಯುದ್ಧ ಮಾಡಬೇಕಾಗಿದ್ದರೆ, ಅವರನ್ನು ಒಟ್ಟು ಸೇರಿಸಿ ಕಾದಾಡಿಸಬೇಕು ಮತ್ತು ಕೆಲಸಬಿದ್ದರೆ, ಅವರನ್ನೇ ತತ್ಕ್ಷಣ ಹರಡಿಬಿಡಬೇಕು. ಯಾವಾಗ ನಗರದಲ್ಲಿ, ದುರ್ಗದಲ್ಲಿ ಅಥವಾ

೨೫. ಮಹರ್ಷಿಗಳು ಈ ವಿಷಯ ಬರೆದಾಗ ಯುರೋಪಿನಲ್ಲಿಯೂ ವಿಮಾನಾನ್ವೇಷಣವಾಗಿರಲಿಲ್ಲ. –ಅನು.

ಶತ್ರುವಿನ ಸೈನ್ಯದಲ್ಲಿ ಪ್ರವೇಶ ಮಾಡಿ ಯುದ್ಧ ಮಾಡಬೇಕಾಗಿ ಬರುವುದೋ, ಆಗ (**ಸೂಚೀವ್ಯೂಹ**) ಅಥವಾ (**ವಜ್ರವ್ಯೂಹ**)ವನ್ನು ರಚಿಸಿ, ಹೇಗೆ ಎರಡು ಪಕ್ಕಗಳಿಂದಲೂ ಹರಿತವಾದ ಕತ್ತಿ ಎರಡು ಕಡೆಯಿಂದಲೂ ಕತ್ತರಿಸುತ್ತಾ ಹೋಗುತ್ತದೋ, ಹಾಗೆ ಎರಡು ಕಡೆಯಿಂದಲೂ ಯುದ್ಧಮಾಡುತ್ತಾ ಹೋಗಬೇಕು ಮತ್ತು ನುಗ್ಗುತ್ತಲೂ ಹೋಗಬೇಕು. ಈ ರೀತಿಯಲ್ಲಿ ಅನೇಕ ಪ್ರಕಾರದ ವ್ಯೂಹ ರಚಿಸಿ,[೨೬] ಎಂದರೆ ಸೇನೆಯನ್ನು ರೂಪಿಸಿ ಕಾದಾಡಿಸಬೇಕು. ಎದುರಿಗೆ ಶತಘ್ನೀ (**ತೋಪು**) ಅಥವಾ ಭುಷುಂಡೀ (**ಬಂದೂಕ**) ಇವುಗಳು ಅಘಾತ ಮಾಡುತ್ತಿದ್ದರೆ, (**ಸರ್ಪವ್ಯೂಹ**) ಎಂದರೆ ಸರ್ಪದ ಹಾಗೆ ನೆಲದ ಮೇಲೆ ಮಲಗಿ, ಹೊಟ್ಟೆಯ ಮೇಲೆಯೇ ತೆವಳುತ್ತಾ – ತೆವಳುತ್ತಾ ಮುಂದೆ ಸರಿಯಬೇಕು; ಯಾವಾಗ ತೋಪುಗಳ ಹತ್ತಿರ ಸೇರುವರೋ, ಅಗ, ಅವುಗಳ (**ಚಾಲಕ**)ನ್ನು ಬಡೆದು ಹಾಕಿ, ಅಥವಾ ಹಿಡಿದುಕೊಂಡು, ತೋಪುಗಳ ಮುಖವನ್ನು ಶತ್ರುಗಳ ಕಡೆಗೆ ತಿರುಗಿಸಿ, ಆ ತೋಪುಗಳಿಂದಲೇ, ಅಥವಾ ಬಂದೂಕ ಮೊದಲಾದುವುಗಳಿಂದಲೇ ಶತ್ರುಗಳನ್ನು ಸಂಹರಿಸಬೇಕು. ಅಥವಾ ವೃದ್ಧ ಪುರುಷರನ್ನು ತೋಪುಗಳ ಮುಖದ ಮುಂದೆ, ಕುದುರೆಗಳ ಮೇಲೆ ಕುಳ್ಳಿರಿಸಿ ಓಡಿಸಬೇಕು ಮತ್ತು ಪ್ರಹರಿಸಬೇಕು; ನಡುವೆ ಒಳ್ಳೆ ಒಳ್ಳೆಯ ಸವಾರರು ಇರಬೇಕು. ಒಂದೇ ಸಾರಿಗೆ ಏರಿಹೋಗಿ, ಶತ್ರು – ಸೈನ್ಯವನ್ನು ಛಿನ್ನ – ಭಿನ್ನಮಾಡಿ, ಹಿಡಿದುಕೊಳ್ಳಬೇಕು ಅಥವಾ ಓಡಿಸಿಬಿಡಬೇಕು.[೨೭] (೮)

ಸಮತಳವಾದೆಡೆ ಯುದ್ಧ ಮಾಡಬೇಕಾದರೆ ರಥಗಳಿಂದ, ಕುದುರೆಗಳಿಂದ ಮತ್ತು ಪದಾತಿಗಳಿಂದ, ಮತ್ತು ಸಮುದ್ರದಲ್ಲಿ ಯುದ್ಧಮಾಡಬೇಕಾದರೆ ಹಡಗುಗಳಿಂದ ಹಾಗು ಅಲ್ಪ ಜಲದಲ್ಲಿಯಾದರೆ ಆನೆಗಳ ಮೇಲೆ, ವೃಕ್ಷಗಳಲ್ಲಿ ಮತ್ತು ಪೊದೆಗಳಲ್ಲಿಯಾದರೆ, ಬಾಣಗಳಿಂದ ಮತ್ತು ಸ್ಥಳದಲ್ಲಿ, ಮರಳು ಭೂಮಿಯಲ್ಲಿ ಖಡ್ಗಗಳಿಂದ ಮತ್ತು ಗುರಾಣಿಗಳಿಂದ ಯುದ್ಧಮಾಡಬೇಕು, ಮಾಡಿಸಬೇಕು. (೯)

ಯಾವಾಗ ಯುದ್ಧವಾಗುತ್ತಿರುವುದೋ ಆಗ ಹೋರಾಡುವವರನ್ನು ಉತ್ಸಾಹಿತರನ್ನಾಗಿಯೂ, ಹರ್ಷಿತರನ್ನಾಗಿಯೂ ಮಾಡಬೇಕು. ಯಾವಾಗ ಯುದ್ಧ ನಿಲ್ಲುವುದೋ, ಅಗ ಯಾವುದರಿಂದ ಶೌರ್ಯ ಮತ್ತು ಯುದ್ಧದಲ್ಲಿ ಉತ್ಸಾಹವುಂಟಾಗುವುದೋ, ಅಂತಹ ಭಾಷಣಗಳಿಂದ ಮತ್ತು ಭೋಜನ–ಪಾನ, ಅಸ್ತ್ರ–ಶಸ್ತ್ರಗಳು, ಸಹಾಯ ಮತ್ತು ಔಷಧಗಳೇ ಮೊದಲಾದುದರಿಂದ ಎಲ್ಲರ ಚಿತ್ತಗಳನ್ನೂ ಪ್ರಸನ್ನವಾಗಿಸಬೇಕು. ವ್ಯೂಹವಿಲ್ಲದೆ ಯುದ್ಧ ಮಾಡಬಾರದು, ಮಾಡಿಸಲೂಬಾರದು. ಹೋರಾಡುತ್ತಿರುವ ತನ್ನ ಸೈನ್ಯದ ಗತಿ–ವಿಧಿಗಳನ್ನು, ಅದು ಸರಿ–ಸರಿಯಾಗಿ ಹೋರಾಡುತ್ತಿದೆಯೋ ಅಥವಾ ಕಪಟ ಮಾಡುತ್ತಿದೆಯೋ–ಎಂದು ನಿರೀಕ್ಷಿಸುತ್ತಿರಬೇಕು. (೧೦)

---

೨೬. "ಇಂಗ್ಲೀಷ್ ಸೇನೆಗೆ ಯುದ್ಧದಲ್ಲಿ ಕವಾಯತ್ತು [ಮಾರ್ಚಪಾಸ್ಟ್] ಮಾಡುವುದು ಗೊತ್ತಿದೆ. ಭಾರತೀಯ ಯುದ್ಧವಿದ್ಯೆಯ ಅಂಗವಾದ 'ವ್ಯೂಹ ರಚನೆ'ಯ ಕೌಶಲ ಗೊತ್ತಿಲ್ಲ. ಅದರೂ, ಇಂಗ್ಲೀಷರು ತಮ್ಮನ್ನು ಯುದ್ಧವಿದ್ಯೆಯಲ್ಲಿ ಬಹಳ ಪ್ರವೀಣರೆಂದು ಬಡಾಯಿಸಿಕೊಳ್ಳುತ್ತಾರೆ", ಎಂದು ಮಹರ್ಷಿ ದಯಾನಂದರು ಪೂನಾದಲ್ಲಿ ತಮ್ಮ ಪ್ರವಚನವೊಂದರಲ್ಲಿ [೧೮೭೫] ಹೇಳಿದ್ದರು.

ಈ ಅನುಭವ ಅವರಿಗೆ ಇಸವಿ ೧೮೫೭ ರ 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ'ದಲ್ಲಿ ಆಗಿರಬೇಕೇ ಎಂಬ ಮಾತು ಅನುಸಂಧಾನಕ್ಕೆ ಯೋಗ್ಯವಾಗಿದೆ. –ಸಂ.

೨೭. ಈ ಮೇಲಿನ ಮತ್ತು ಮುಂದಿನ ವಿವರಣೆ ಮನುಸ್ಮೃತಿಯ ಶ್ಲೋಕಗಳಲಿಲ್ಲ. ಯುದ್ಧದ ಸಂಚಾಲನೆಯ ಈ ವಿಸ್ತೃತ ವಿವರಣೆ ಸ್ವಾನುಭೂತವಾಗಿರದಿದ್ದರೆ, ಈ ರೀತಿ ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದಲೇ, ಈ ಪ್ರಸಂಗವು ಮಹರ್ಷಿ ದಯಾನಂದರು ೧೮೫೭ನೇ ಇಸವಿಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ[ಸಿಪಾಯಿದಂಗೆ]ದಲ್ಲಿ ಭಾಗವಹಿಸದ್ದಿರಬೇಕೆಂಬ ಅನೇಕ ಇತಿಹಾಸಜ್ಞರ ಶಂಕೆಗೆ ಬಲಕೊಡುತ್ತದೆ. ಏಕೆಂದರೆ, ಅವರ ಜೀವನ ಚರಿತ್ರೆಯಲ್ಲಿ ೧೮೫೭ ರಿಂದ ೧೮೬೦ನೇ ಇಸವಿಯ ತನಕದ ಅವಧಿ ಈಗಲೂ ಅಜ್ಞಾತವಾಗಿದೆ.[ಎಂದರೆ, ನರ್ಮದಾ ತೀರದಲ್ಲಿ ಕರಡಿಯೊಡನೆ ಭೇಟಿಯಾದ ಮೇಲೆ, ವಿರಾಮ ಜೀವನ ಪಡೆದ ವೃತ್ತವು, ಸ್ವಾಮೀ ವಿರಜಾನಂದರ ಕುಟಿಯಲ್ಲಿ ಪ್ರವೇಶದೊಂದಿಗೆ ಪುನಃ ಜಾರಿಯಾಗುತ್ತದೆ]

ಉತ್ತರ ಪ್ರದೇಶದ ಸಭೆಯೊಂದರಲ್ಲಿ ವ್ಯಾಖ್ಯಾನ ಕೊಡುತ್ತಾ, ಮಹರ್ಷಿ ದಯಾನಂದರು– 'ನಾನು ಯಾರು? ನನ್ನ ತಂದೆ ತಾಯಿಗಳ ಹೆಸರು ಏನು? ಎಂದು ಈಗಲೇ ತಿಳಿಸಲಾರೆ. ಹಾಗೆ ತಿಳಿಸಿಬಿಟ್ಟರೆ, ನನ್ನ ಕಾರ್ಯಗಳೆಲ್ಲಾ 'ಏರು ಪೇರಾಗಿ' ಹೋಗುವವು. ಉಚಿತ ಸಮಯ ಬಂದಾಗ ತಿಳಿಸುವೆ;– ಎಂದಿದ್ದರು. ಇಲ್ಲಿ 'ಏರು ಪೇರು' ಎಂಬ ಜಾಗದಲ್ಲಿ ಅವರು – ಸಬ್ ಗೋಲ್ ಮಾಲ್ ಹೋ ಜಾಯೇಗಾ' ಎಂದಿದ್ದರು.

ಈ ರೀತಿ, ಈ 'ಅಜ್ಞಾತವಾಸ'ದ ಅವಧಿ ಅನುಸಂಧಾನಕರ್ತರಿಗೂ, ಇತಿಹಾಸಜ್ಞರಿಗೂ 'ಕಬ್ಬಿಣದ ಕಡಲೆ' ಯಾಗಿದೆ. –ಸಂ.

'ಅಂತಹ ಭಾಷಣಗಳಿಂದ' ೨೭[ಅ]

ಈ ಸಂದರ್ಭದಲ್ಲಿ, ಭಗವದ್ಗೀತಾಕಾರನು ಮಹಾಪರಾಕ್ರಮಶಾಲಿಯೂ, ಜಗದೇಕವೀರನೂ, ಕ್ಷತ್ರಿಯ ಕುಲಭೂಷಣನೂ ಆದ ಅರ್ಜುನನಿಗೆ ಮಹಾಭಾರತದ ಯುದ್ಧಕ್ಕೆ ಪೂರ್ವ ವಿಷಾದವನ್ನು ಕಲ್ಪಿಸಿ, ಶ್ರೀಕೃಷ್ಣನ ಬಾಯಿಯಿಂದ ಇದಕ್ಕೆ ವಿರುದ್ಧವಾದ, ಯಾವ ರೀತಿಯ ವೈರಾಗ್ಯದ ಮತ್ತು ಸಂನ್ಯಾಸ–ಮೋಕ್ಷಧರ್ಮ ಪ್ರೇರಕವಾದ ಉಪದೇಶವನ್ನು ಕೊಡಿಸಿದನೆಂಬುದನ್ನು ಇಲ್ಲಿ ಗಮನಕ್ಕೆ ತರಬೇಕಾಗಿದೆ. ಮಹಾಪ್ರತಾಪಿಯಾದ ಅರ್ಜುನನ ಮಾತು ಹಾಗಿರಲಿ! ಆದರೆ, ೨೫೦೦ ವರ್ಷಗಳ ನಂತರ ಬಂದ ಆಚಾರ್ಯತ್ರಯರು ಮತ್ತು ಅವರ ಅನುಯಾಯಿಗಳು ಈ ಉಪದೇಶವನ್ನು ಅವಶ್ಯವಾಗಿ ಗ್ರಹಿಸಿದರು. –ಸಂ.

ಯಾವುದಾದರೂ ಸಮಯದಲ್ಲಿ ಉಚಿತವೆಂದು ತಿಳಿದುಬಂದರೆ, ಶತ್ರುವನ್ನು ನಾಲ್ಕು ಕಡೆಯಿಂದಲೂ ಮುತ್ತಿ, ತಡೆದಿಡಬೇಕು ಮತ್ತು ಅವನ ರಾಜ್ಯವನ್ನು ಪೀಡಿಸಿ, ಶತ್ರುವಿನ (**ಪಶುಗಳ**) ಮೇವು, ಅನ್ನ-ಜಲಗಳು ಮತ್ತು ತೈಲ-ಕಾಷ್ಠ ಮೊದಲಾದುವನ್ನು ಕೆಡಿಸಬೇಕು; ನಾಶಪಡಿಸಬೇಕು. (೧೧)

ಶತ್ರುವಿನ ಕೆರೆಗಳು, ನಗರದ ಸುತ್ತು ಗೋಡೆ ಮತ್ತು ಕಂದಕಗಳನ್ನು ಒಡೆದು-ಮುರಿದು ಹಾಕಬೇಕು. ರಾತ್ರಿಯಲ್ಲಿ ಅವರಿಗೆ (**ತ್ರಾಸ**) – ಭಯವನ್ನುಂಟುಮಾಡಬೇಕು ಹಾಗು ಜಯಿಸುವ ಉಪಾಯಮಾಡಬೇಕು. (೧೨)

ಜಯಿಸಿ, ಅವರಿಂದ ಪ್ರಮಾಣ – ಎಂದರೆ ಪ್ರತಿಜ್ಞಾಪತ್ರ ಮೊದಲಾದುವನ್ನು ಬರೆಸಿಕೊಳ್ಳಬೇಕು ಮತ್ತು ಕಾಲ ಸಮುಚಿತವೆಂದು ಕಂಡರೆ, ಅವನ ವಂಶಸ್ಥನೇ ಆದ ಯಾವನಾದರೂ ಧಾರ್ಮಿಕ ಪುರುಷನನ್ನು ರಾಜನನ್ನಾಗಿ ಮಾಡಬೇಕು ಮತ್ತು ಅವನಿಂದ, **"**ನೀನು (**ಸೋತ ರಾಜನು**) ನಮ್ಮ (**ಗೆದ್ದ ರಾಜನ**) ಆಜ್ಞೆಗೆ ಅನುಕೂಲವಾಗಿ, ಎಂದರೆ, ಧರ್ಮಯುಕ್ತವಾದ ರಾಜನೀತಿ ಹೇಗಿದೆಯೋ, ಅದಕ್ಕೆ ಅನುಸಾರವಾಗಿಯೇ ನಡೆದು, ನ್ಯಾಯಕ್ಕೆ ಅನುಗುಣವಾಗಿ ಪ್ರಜೆಗಳ ಪಾಲನವನ್ನು ಮಾಡಬೇಕಾಗುವುದು**"** – ಎಂಬ ಭಾವನೆಯ ಒಪ್ಪಂದವನ್ನು ಬರೆಸಿಕೊಳ್ಳಬೇಕು. ಇದೇ ರೀತಿ ಉಪದೇಶಮಾಡಬೇಕು ಮತ್ತು ಮತ್ತೆ ಉಪದ್ರವವಾಗದಂತೆ ಇಂತಹ ಧಾರ್ಮಿಕ ಪುರುಷರನ್ನು ಅವನ ಬಳಿ ಇಡಬೇಕು. ಮತ್ತು ಯಾವನು ಸೋತು ಹೋಗುವನೋ, ಅವನ ಸತ್ಕಾರವನ್ನು ಪ್ರಧಾನ ಪುರುಷರೊಂದಿಗೆ ಸೇರಿ, ರತ್ನವೇ ಮೊದಲಾದ ಉತ್ತಮ ಪದಾರ್ಥಗಳ ದಾನದಿಂದ ಮಾಡಬೇಕು. ಮತ್ತು ಅವನ ಯೋಗ-ಕ್ಷೇಮವೂ ಕೂಡ ಸಿದ್ಧಿಸದಂತೆ ಮಾಡಬಾರದು. ಅವನನ್ನು ಕಾರಾಗೃಹದಲ್ಲಿಟ್ಟರೂ ಕೂಡ, ಅವನು ಸೋತ ದುಃಖದಿಂದ ರಹಿತನಾಗಿ, ಆನಂದದಲ್ಲಿರುವಂತೆ, ಅವನ ಸತ್ಕಾರವನ್ನು ಯೋಗ್ಯತಾನುಸಾರವಾಗಿ ಮಾಡಬೇಕು. (೧೩)

ಏಕೆಂದರೆ-**"**ಜಗತ್ತಿನಲ್ಲಿ ಅನ್ಯನ ಪದಾರ್ಥಗಳನ್ನು ಗ್ರಹಿಸುವುದು ಅಪ್ರೀತಿಗೂ, ಕೊಡುವುದು ಪ್ರೀತಿಗೂ ಕಾರಣವಾಗಿರುತ್ತದೆ.**"** ಮತ್ತು ವಿಶೇಷತಃ ಯುಕ್ತವಾದ ಸಮಯದಲ್ಲಿ ಯುಕ್ತವೇ ಆದ ಕ್ರಿಯೆಯನ್ನು ಮಾಡುವುದು ಹಾಗೂ ಪರಾಜಿತನಾದ ಅವನ ಮನೋವಾಂಛಿತವಾದ ಪದಾರ್ಥಗಳನ್ನು ಕೊಡುವುದು ಬಹಳ ಉತ್ತಮ. ಮತ್ತು ಎಂದಿಗೂ ಅವನನ್ನು ರೇಗಿಸಬಾರದು; ನಗೆಯಾಟ ಮತ್ತು ಹಾಸ್ಯ ಮಾಡಬಾರದು; ಅವನ ಮುಂದೆ – **"**ತಾವು ನಮ್ಮ ಸೋದರರು**"** – ಎಂದು ಮೊದಲಾಗಿ ಗೌರವ – ಮರ್ಯಾದೆಗಳನ್ನು ಸದಾ ತೋರಿಸಬೇಕು. (೧೪)

**ಹಿರಣ್ಯ ಭೂಮಿಸಂಪ್ರಾಪ್ತ್ಯಾ ಪಾರ್ಥಿವೋ ನ ತಥೈಧತೇ ।**

**ಯಥಾ ಮಿತ್ರಂ ಧ್ರುವಂ ಲಬ್ಧ್ವಾ ಕೃಶಮಪ್ಯಾಯತಿಕ್ಷಮಮ್ ॥ ೧ ॥**

**ಧರ್ಮಜ್ಞಂ ಚ ಕೃತಜ್ಞಂ ಚ ತುಷ್ಟ ಪ್ರಕೃತಿಮೇವ ಚ ।**

**ಅನುರಕ್ತಂ ಸ್ಥಿರಾರಂಭಂ ಲಘು ಮಿತ್ರಂ ಪ್ರಶಸ್ಯತೇ ॥ ೨ ॥**

**ಪ್ರಾಜ್ಞಂ ಕುಲೀನಂ ಶೂರಂ ಚ ದಕ್ಷಂ ದಾತಾರಮೇವ ಚ ।**

**ಕೃತಜ್ಞಂ ಧೃತಿಮಂತಂ ಚ ಕಷ್ಟಮಾಹುರರಿಂ ಬುಧಾ ॥ ೩॥**

**ಆರ್ಯತಾ ಪುರುಷಜ್ಞಾನಂ ಶೌರ್ಯಂ ಕರುಣವೇದಿತಾ ।**

**ಸ್ಥೌಲಲಕ್ಷ್ಯಂ ಚ ಸತತಮುದಾಸೀನಗುಣೋದಯಃ ॥ ೪॥** (ಮನು:- ೭.೨೦೮-೨೧೧)

ಮಿತ್ರನ ಲಕ್ಷಣವಿದು. ರಾಜನು ಹೇಗೆ ನಿಶ್ಚಲನೂ, ಪ್ರೇಮಯುಕ್ತನೂ, ಭವಿಷ್ಯತ್ತಿನ ವಿಷಯಗಳನ್ನು ಆಲೋಚಿಸಲು ಮತ್ತು ಕಾರ್ಯಸಾಧನೆ ಮಾಡಲು ಸಮರ್ಥನೂ ಆದ ಮಿತ್ರನನ್ನು, ಮತ್ತು ದುರ್ಬಲನೇ ಆದ ಮಿತ್ರನನ್ನಾದರೂ ಸರಿಯೇ, ಗಳಿಸಿ ಸಮೃದ್ಧನಾಗುತ್ತಾನೋ, ಹಾಗೆ ಚಿನ್ನದ ಮತ್ತು ಭೂಮಿಯ ಪ್ರಾಪ್ತಿಯಿಂದ ಸಮೃದ್ಧನಾಗುವುದಿಲ್ಲ. (೧)

ರಾಜನು ಧರ್ಮವನ್ನು ತಿಳಿಯುವ, ಹಾಗೂ 'ಕೃತಜ್ಞ' – ಎಂದರೆ ಮಾಡಿದ ಉಪಕಾರವನ್ನು ಸದಾ ಒಪ್ಪಿಕೊಳ್ಳುವ, ಪ್ರಸನ್ನಸ್ವಭಾವದ, ಅನುರಾಗಿಯೂ, ಸ್ಥಿರಪ್ರಯತ್ನಕಾರಿಯೂ, ಲಘು – ಎಂದರೆ ಚಿಕ್ಕವನೇ ಆದರೂ ಸರಿಯೇ, ಮಿತ್ರನನ್ನು ಪಡೆದುಕೊಂಡು ಪ್ರಶಂಸಿತನಾಗುತ್ತಾನೆ. (೨)

ಎಂದಿಗೂ ಬುದ್ಧಿವಂತನೂ, ಕುಲೀನನೂ, ಶೂರವೀರನೂ, ಚತುರನೂ, ದಾತೃವೂ, ಮಾಡಿದುದನ್ನು ತಿಳಿಯುವವನೂ ಮತ್ತು ಧೈರ್ಯಶಾಲಿಯೂ ಆದ ಪುರುಷನನ್ನು ಶತ್ರುವಾಗಿ ಮಾಡಿಕೊಳ್ಳಬಾರದು - ಎಂಬ ವಿಷಯವನ್ನು ಸದಾ ದೃಢವಾಗಿ ಅನುಸರಿಸಬೇಕು: ಏಕೆಂದರೆ - ಇಂತಹವನನ್ನು ಶತ್ರುವಾಗಿ ಯಾವನು ಮಾಡಿಕೊಳ್ಳುತ್ತಾನೋ, ಅವನು ದುಃಖವನ್ನು ಹೊಂದುವನು. (೩)

"ಉದಾಸೀನನ ಲಕ್ಷಣ" :- ಯಾವನು ಪ್ರಶಂಸಿತ ನಾಗಿರುತ್ತಾನೋ, ಯಾವನಲ್ಲಿ ಗುಣಯುಕ್ತರಾದ ಒಳ್ಳೆಯ-ಕೆಟ್ಟ ಮಾನವರ ಜ್ಞಾನವಿರುವುದೋ, ಶೂರ-ವೀರತ್ವ ಮತ್ತು ಕರುಣೆಯೂ ಇರುವುದೋ, ಯಾವನು ಸ್ಥೂಲಲಕ್ಷ್ಯ ಎಂದರೆ ಮೇಲು ಮೇಲಿನ ಮಾತುಗಳನ್ನು ನಿರಂತರವೂ ಹೇಳುತ್ತಾ ಹೋಗುತ್ತಾನೋ, ಅವನು 'ಉದಾಸೀನ'ನೆನಿಸುತ್ತಾನೆ. (೪)

**ಏವಂ ಸರ್ವಮಿದಂ ರಾಜಾ ಸಹ ಸಂಮಂತ್ರ್ಯ ಮಂತ್ರಿಭಿಃ ।**

**ವ್ಯಾಯಮ್ಯಾಪ್ಲುತ್ಯ ಮಧ್ಯಾಹ್ನೇ ಭೋಕ್ತುಮಂತಃ ಪುರಂ ವಿಶೇತ್ ॥** (ಮನು:- ೭. ೨೧೬)

ಪೂರ್ವೋಕ್ತವಾದ ರೀತಿಯಲ್ಲಿ ಪ್ರಾತಃಕಾಲ ಎದ್ದು, ಶೌಚ - ಮೊದಲಾದುವನ್ನೂ, ಸಂಧ್ಯೋಪಾಸನಾ-ಅಗ್ನಿಹೋತ್ರ ಗಳನ್ನೂ ಮಾಡಿ, ಅಥವಾ ಮಾಡಿಸಿ, ಎಲ್ಲ ಮಂತ್ರಿಗಳೊಂದಿಗೂ ಆಲೋಚಿಸಿ, ಸಭೆಗೆ ಹೋಗಿ, ಸಮಸ್ತ ಭೃತ್ಯರು ಮತ್ತು ಸೇನಾಧ್ಯಕ್ಷರೊಂದಿಗೆ ಸೇರಿ ಅವರನ್ನು ಹರ್ಷಿತರನ್ನಾಗಿ ಮಾಡಿ, ನಾನಾ ರೀತಿಯ ವ್ಯೂಹ ಶಿಕ್ಷಣವನ್ನು - ಎಂದರೆ ವ್ಯಾಯಾಮವನ್ನು ಮಾಡಿ-ಮುಗಿಸಿ, ಎಲ್ಲ ಕುದುರೆಗಳ, ಆನೆಗಳ, ಹಸು-ಮೊದಲಾದುವುಗಳ ಶಾಲೆಗಳನ್ನೂ, ಶಸ್ತ್ರ ಹಾಗೂ ಅಸ್ತ್ರದ ಕೋಶವನ್ನೂ ಹಾಗೆಯೇ ವೈದ್ಯಾಲಯವನ್ನೂ ಧನದ ಕೋಶಗಳನ್ನೂ ಅವಲೋಕಿಸಿ ದಿನವೂ ಎಲ್ಲದರ ಮೇಲೆಯೂ ದೃಷ್ಟಿಯಿಟ್ಟು, ಅವುಗಳಲ್ಲಿ ಏನು ಕುಂದಿರುವುದೋ, ಅದನ್ನು ಸರಿಪಡಿಸಿ, ವ್ಯಾಯಾಮಶಾಲೆಗೆ ಹೋಗಿ, ವ್ಯಾಯಾಮ ಮಾಡಿ, ಮಿಂದು, ಮಧ್ಯಾಹ್ನದ ವೇಳೆಗೆ ಭೋಜನಕ್ಕಾಗಿ, 'ಅಂತಃಪುರ'ಕ್ಕೆ ಎಂದರೆ - ಪತ್ನೀ - ಮೊದಲಾದವರ ನಿವಾಸಸ್ಥಾನಕ್ಕೆ ಪ್ರವೇಶಮಾಡಬೇಕು ಮತ್ತು ಯಾವುದರಿಂದ ಸದಾ ಸುಖಿಯಾಗಿರುವನೋ, ಅಂತಹ ಸುಪರೀಕ್ಷಿತವೂ, ಬುದ್ಧಿಬಲಪರಾಕ್ರಮ ವರ್ಧಕವೂ, ರೋಗವಿನಾಶಕವೂ, ಅನೇಕ ಬಗೆಯ ಖಾದ್ಯ, ವ್ಯಂಜನ-ಪಾನ-ಮೊದಲಾದುದರೊಂದಿಗೆ ಸುಗಂಧಯುಕ್ತವೂ, ಸಿಹಿಯೇ ಮೊದಲಾದ ಅನೇಕ ರಸಯುಕ್ತವೂ ಆದ ಉತ್ತಮ ಭೋಜನವನ್ನು ಮಾಡಬೇಕು. ಹೀಗೆ ಸಮಸ್ತ ರಾಜಕಾರ್ಯಗಳ ಉನ್ನತಿಯನ್ನೂ ಸಾಧಿಸುತ್ತಾ ಹೋಗಬೇಕು.

**ಪಂಚಾಶದ್ಭಾಗ ಆದೇಯೋ ರಾಜ್ಞಾ ಪಶುಹಿರಣ್ಯಯೋಃ ।**

**ಧಾನ್ಯಾನಾಮಷ್ಟಮೋ ಭಾಗಃ ಷಷ್ಠೋ ದ್ವಾದಶ ಏವ ವಾ ॥** (ಮನು:- ೭.೧೩೦)

ವ್ಯಾಪಾರ ಮಾಡುವವರಿಗೆ ಅಥವಾ ಶಿಲ್ಪಿಗಳಿಗೆ ಚಿನ್ನದ ಮತ್ತು ಬೆಳ್ಳಿಯ ಲಾಭ ಎಷ್ಟು ಲಭಿಸುವುದೋ, ಅದರ ಐವತ್ತನೆಯ ಒಂದು ಭಾಗವನ್ನೂ, ಅಕ್ಕಿಯೇ ಮೊದಲಾದ ಆಹಾರಗಳಲ್ಲಿ ಆರನೆಯ, ಎಂಟನೆಯ ಅಥವಾ ಹನ್ನೆರಡನೆಯ ಒಂದು ಭಾಗವನ್ನೂ (ತೆರಿಗೆ ರೂಪದಲ್ಲಿ) ತೆಗೆದುಕೊಳ್ಳಬೇಕು. ಮತ್ತು ಆಹಾರ-ಧನಗಳನ್ನು[೨೮] ತೆಗೆದುಕೊಳ್ಳುವುದಾದರೂ, ರೈತರೇ ಮೊದಲಾದವರು ಖಾದ್ಯ-ಪೇಯಗಳಿಂದಲೂ ಹಣದಿಂದಲೂ ರಹಿತರಾಗಿ ದುಃಖ ಹೊಂದಲು ಅವಕಾಶವಾಗದಂತೆ ತೆಗೆದುಕೊಳ್ಳಬೇಕು. "ಏಕೆಂದರೆ, ಪ್ರಜೆಗಳು ಧನಾಢ್ಯರೂ, ನೀರೋಗರೂ, ಆಹಾರ-ಪಾನೀಯ ಮೊದಲಾದುದರಿಂದ ಸಂಪನ್ನರೂ ಆದಾಗಲೇ ರಾಜನಿಗೆ ಮಹದಭಿ ವೃದ್ಧಿಯುಂಟಾಗುತ್ತದೆ." ಪ್ರಜೆಗಳಿಗೆ ತನ್ನ ಸಂತತಿಯಂತೆ **(ಭಾವಿಸಿ)** ಸುಖವನ್ನುಂಟು ಮಾಡಬೇಕು ಮತ್ತು ಪ್ರಜೆಗಳು ರಾಜನನ್ನೂ ಮತ್ತು ರಾಜಪುರುಷರನ್ನೂ ತಮ್ಮ ತಂದೆಯಂತೆ - ಎಂದು ತಿಳಿದುಕೊಳ್ಳಬೇಕು. "ಬೇಸಾಯಗಾರರೇ ಮೊದಲಾದ ಪರಿಶ್ರಮ ಮಾಡುವವರು ರಾಜರುಗಳಿಗೂ ರಾಜರಾಗಿದ್ದಾರೆ ಮತ್ತು ರಾಜನು ಅವರ ರಕ್ಷಕನಾಗಿದ್ದಾನೆ" - ಎಂಬ ಮಾತು ಸರಿಯಾದುದು. ಪ್ರಜೆಗಳಿಲ್ಲದಿದ್ದರೆ, ಅವನು ಯಾರಿಗೆ ರಾಜ? ಮತ್ತು ರಾಜನಿಲ್ಲದಿದ್ದರೆ ಅವರು ಯಾರ ಪ್ರಜೆಗಳೆನಿಸಬೇಕು? "ಇಬ್ಬರೂ ತಮ್ಮ ತಮ್ಮ ಕಾರ್ಯಗಳಲ್ಲಿ ಸ್ವತಂತ್ರರೂ ಮತ್ತು ಸಂಯುಕ್ತವಾದ, ಪ್ರೀತಿಯುಕ್ತ ಕಾರ್ಯದಲ್ಲಿ ಪರತಂತ್ರರೂ ಆಗಿರಬೇಕು." "ಪ್ರಜೆಗಳ ಸಾಧಾರಣ ಸಮ್ಮತಿಗೆ ವಿರುದ್ಧವಾಗಿ ರಾಜನು ಅಥವಾ ರಾಜಪುರುಷನು ವರ್ತಿಸಬಾರದು. ರಾಜನ ಆಜ್ಞೆಗೆ ವಿರುದ್ಧವಾಗಿ ರಾಜಪುರುಷರು ಅಥವಾ ಪ್ರಜೆಗಳು

---

೨೮. ಎಂದರೆ, ಖಾದ್ಯಾನ್ನ ತೆಗೆದುಕೊಳ್ಳದೆ, ತೆರಿಗೆಯ ರೂಪದಲ್ಲಿ ರೂಪಾಯಿಯನ್ನು ತೆಗೆದುಕೊಂಡಾಗ. -ಯು.ಮೀ.

ವರ್ತಿಸಬಾರದು." ಯಾವುದನ್ನು 'ಪೊಲಿಟಿಕಲ್ ಸೈನ್ಸ್' ಎನ್ನುತ್ತಾರೋ, ಆ ರಾಜಕೀಯ ಸ್ವಕಾರ್ಯವನ್ನು ಹೀಗೆ ಸಂಕ್ಷೇಪವಾಗಿ ಹೇಳಿದ್ದೇವೆ. ಯಾವನು ಇನ್ನೂ ವಿಶೇಷವಾಗಿ ನೋಡಬಯಸುತ್ತಾನೋ, ಅವನು ನಾಲ್ಕು ವೇದಗಳು, ಮನುಸ್ಮೃತಿ, ಶುಕ್ರನೀತಿ, ಮಹಾಭಾರತ–ಮೊದಲಾದವುಗಳಲ್ಲಿ ನೋಡಿ ನಿಶ್ಚಯಮಾಡಿಕೊಳ್ಳಬೇಕು ಮತ್ತು ಯಾವನಾದರೂ ಪ್ರಜೆಗಳಿಗೆ ನ್ಯಾಯ ಮಾಡಬೇಕೆಂದಿದ್ದರೆ, ಮನುಸ್ಮೃತಿಯ ಎಂಟನೆಯ ಮತ್ತು ಒಂಬತ್ತನೆಯ ಅಧ್ಯಾಯ – ಮೊದಲಾದುದರ (ಹೇಳಿಕೆಯ) ಪ್ರಕಾರ ನಡೆದುಕೊಳ್ಳಬೇಕು. ಆದರೆ ಇಲ್ಲಿಯೂ ಸಂಕ್ಷೇಪವಾಗಿ ಬರೆಯುತ್ತೇವೆ:–

**ಪ್ರತ್ಯಹಂ ದೇಶದೃಷ್ಟೈಶ್ಚ ಶಾಸ್ತ್ರದೃಷ್ಟೈಶ್ಚ ಹೇತುಭಿಃ ।**

**ಅಷ್ಟಾದಶಸು ಮಾರ್ಗೇಷು ನಿಬದ್ಧಾನಿ ಪೃಥಕ್ ಪೃಥಕ್ ॥ ೧ ॥**

**ತೇಷಾಮಾದ್ಯಮೃಣಾದಾನಂ ನಿಕ್ಷೇಪೋಽಸ್ವಾಮಿವಿಕ್ರಮಃ।**

**ಸಂಭೂಯ ಚ ಸಮುತ್ಥಾನಂ ದತ್ತಸ್ಯಾನಪ ಕರ್ಮ ಚ ॥ ೨ ॥**

**ವೇತನಸ್ಯೈವ ಚಾದಾನಂ ಸಂವಿದಶ್ಯ ವ್ಯತಿಕ್ರಮಃ ।**

**ಕ್ರಯವಿಕ್ರಯಾನುಶಯೋ ವಿವಾದಃ ಸ್ವಾಮಿಪಾಲಯೋಃ ॥ ೩ ॥**

**ಸೀಮಾ ವಿವಾದಧರ್ಮಶ್ಚ ಪಾರುಷ್ಯೇ ದಂಡವಾಚಿಕೇ ।**

**ಸ್ತೇಯಂ ಚ ಸಾಹಸಂ ಚೈವ ಸ್ತ್ರೀಸಂಗ್ರಹಣಮೇವ ಚ ॥ ೪ ॥**

**ಸ್ತ್ರೀಷು ಧರ್ಮೋ ವಿಭಾಗಶ್ಚ ದ್ಯೂತಮಾಹ್ವಯ ಏವ ಚ।**

**ಪದಾನ್ಯಷ್ಟಾದಶೈತಾನಿ ವ್ಯವಹಾರಸ್ಥಿತಾವಿಹ ॥ ೫ ॥**

**ಏಷು ಸ್ಥಾನೇಷು ಭೂಯಿಷ್ಠಂ ವಿವಾದಂ ಚರತಾಂ ನೃಣಾಮ್ ।**

**ಧರ್ಮಂ ಶಾಶ್ವತಮಾಶ್ರಿತ್ಯ ಕುರ್ಯಾತ್ಕಾರ್ಯವಿನಿರ್ಣಯಮ್ ॥ ೬ ॥** (ಮನು:– ೮.೩–೮)

**ಧರ್ಮೋ ವಿದ್ಧಸ್ತ್ವಧರ್ಮೇಣ ಸಭಾಂ ಯತ್ರೋಪ ತಿಷ್ಠತೇ ।**

**ಶಲ್ಯಂ ಚಾಸ್ಯ ನ ಕೃಂತಂತಿ ವಿದ್ಧಾಸ್ತತ್ರ ಸಭಾಸದಃ ॥ ೭ ॥**

**ಸಭಾಂ ವಾ ನ ಪ್ರವೇಷ್ಟವ್ಯಂ ವಕ್ತವ್ಯಂ ವಾ ಸಮಂಜಸಮ್ ।**

**ಅಬ್ರುವನ್ ವಿಬ್ರುವನ್ ವಾಪಿ ನರೋ ಭವತಿ ಕಿಲ್ಬಿಷೀ ॥ ೮ ॥**

**ಯತ್ರ ಧರ್ಮೋಹ್ಯಧರ್ಮೇಣ ಸತ್ಯಂ ಯತ್ರಾನೃತೇನ ಚ ।**

**ಹನ್ಯತೇ ಪ್ರೇಕ್ಷಮಾಣಾನಾಂ ಹತಾಸ್ತತ್ರ ಸಭಾಸದಃ ॥ ೯ ॥**

**ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ।**

**ತಸ್ಮಾದ್ಧರ್ಮೋನ ಹಂತವ್ಯೋ ಮಾನೋ ಧರ್ಮೋಹತೋವಧೀತ್ ॥ ೧೦॥**

**ವೃಷೋ ಹಿ ಭಗವಾನ್ ಧರ್ಮಃ ತಸ್ಯ ಯಃ ಕುರುತೇ ಹ್ಯಲಮ್ ।**

**ವೃಷಲಂ ತಂ ವಿದುರ್ದೇವಾಸ್ತಸ್ಮಾದ್ಧರ್ಮಂ ನ ಲೋಪಯೇತ್ ॥ ೧೧ ॥**

**ಏಕ ಏವ ಸುಹೃದ್ಧರ್ಮೋ ನಿಧನೇಽಪ್ಯನುಯಾತಿ ಯಃ ।**

**ಶರೀರೇಣ ಸಮಂ ನಾಶಂ ಸರ್ವಮನ್ಯದ್ಧಿ ಗಚ್ಛತಿ ॥ ೧೨ ॥**

**ಪಾದೋ ಧರ್ಮಸ್ಯ ಕರ್ತಾರಂ ಪಾದಃ ಸಾಕ್ಷಿಣಮೃಚ್ಛತಿ ।**
**ಪಾದಃ ಸಭಾಸದಃ ಸರ್ವಾನ್ ಪಾದೋ ರಾಜನಮೃಚ್ಛತಿ ॥ ೧೩॥**

**ರಾಜ ಭವತ್ಯನೇನಾಸ್ತು ಮುಚ್ಯಂತೇ ಚ ಸಭಾಸದಃ ।**
**ಏನೋ ಗಚ್ಛತಿ ಕರ್ತಾರಂ ನಿಂದಾರ್ಹೋಯತ್ರ ನಿಂದ್ಯತೇ ॥ ೧೪॥** (ಮನು :- ೮. ೧೨-೧೯)

ಸಭೆಯು, ರಾಜನು, ಮತ್ತು ರಾಜಪುರುಷತರು – ಎಲ್ಲರೂ ದೇಶಾಚಾರದ ಮತ್ತು ಶಾಸ್ತ್ರ – ವ್ಯವಹಾರದ ಕಾರಣಗಳ ಆಧಾರದಿಂದ ಕೆಳಗೆ ಬರೆದಿರುವ ಹದಿಂನೆಂಟು ಬಗೆಯ ಮಾರ್ಗಗಳಿಂದ, ವಿವಾದಯುಕ್ತವಾದ ಕರ್ಮಗಳ ನಿರ್ಣಯವನ್ನು ಪ್ರತಿದಿನವೂ ಮಾಡುತ್ತಾ ಹೋಗಬೇಕು. ಮತ್ತು ಸುಭದ್ರವಾದ ರಾಜ್ಯ ವ್ಯವಸ್ಥೆಗೆ ಯಾವ ಯಾವ ನಿಯಮಗಳ – ನಿರೂಪಣದ ಅವಶ್ಯಕತೆ ತಿಳಿದುಬರುವುದೋ, ಅಂತಹ ಉತ್ತಮೋತ್ತಮವಾದ ನಿಯಮಗಳನ್ನು ರಾಜನ ಮತ್ತು ಪ್ರಜೆಗಳ ಉನ್ನತಿ ಸಿದ್ಧಿಸುವಂತೆ ರಚಿಸಬೇಕು. (೧).

**"**ಹದಿನೆಂಟು ಮಾರ್ಗಗಳು ಇವು.**"** ಅವುಗಳಲ್ಲಿ, ೧. **ಋಣದಾನ** ಯಾರಿಂದಲಾದರೂ ಸಾಲ ತೆಗೆದುಕೊಳ್ಳುವ – ಕೊಡುವ ವಿಷಯದ ವಿವಾದ. **೨. ನಿಕ್ಷೇಪ** ಒತ್ತೆ, ಎಂದರೆ ಯಾವನಾದರೂ ಮತ್ತೊಬ್ಬನ ಬಳಿ ತನ್ನ ವಸ್ತುವನ್ನು ಸ್ವಲ್ಪ ಕಾಲಕ್ಕಾಗಿ ಇಡವುದು; ಹಿಂದಕ್ಕೆ ಕೊಡಲು ಕೇಳಿದಾಗ, ಅದನ್ನಿಟ್ಟುಕೊಂಡಿದ್ದವನು ಕೊಡದಿರುವುದು. **೩. ಅಸ್ವಾಮಿವಿಕ್ರಯ** ಯಾವನದೋ ಪದಾರ್ಥವನ್ನು ಯಾವನೋ ಮಾರಿಬಿಡುವುದು. **೪. ಸಂಭೂಯ ಚ ಸಮುತ್ಥಾನಂ** ಅವರಿವರೊಂದಿಗೆ ಒಂದುಗೂಡಿ ಯಾವನ ಮೇಲಾದರೂ ಅತ್ಯಾಚಾರಮಾಡುವುದು. **೫. ದತ್ತಸ್ಯಾನಪಕರ್ಮ** ಚ ಕೊಟ್ಟಿದ್ದ ವಸ್ತುವನ್ನು ಹಿಂದಿರುಗಿಸದಿರುವುದು. **೬. ವೇತನಸ್ಯೈವ ಚಾದಾನಂ** ಯಾವನನ್ನಾದರೂ ಕೆಲಸಕ್ಕೆ ನೇಮಿಸಿಕೊಳ್ಳುವುದು ಮತ್ತು ವೇತನವನ್ನು (ನಿರ್ಧರಿಸಿದ್ದುದಕ್ಕಿಂತ) ಕಡಿಮೆ ಕೊಡುವುದು ಅಥವಾ ಕೊಡದೆಯೇ ಇರುವುದು. **೭. ಸಂವಿದಶ್ಚವ್ಯತಿಕ್ರಮಃ** ಪ್ರತಿಜ್ಞೆಗೆ ವಿರುದ್ಧವಾಗಿ ವರ್ತಿಸುವುದು. **೮. ಕ್ರಯವಿಕ್ರಯಾನುಶಯ** ಎಂದರೆ, ವ್ಯಾಪಾರದಲ್ಲಿ ತೆಗೆದುಕೊಳ್ಳುವುದು – ಕೊಡುವುದರಲ್ಲಿ ಕಲಹ ಉಂಟಾಗುವುದು. **೯. ಸ್ವಾಮಿಪಾಲಕ ವಿವಾದ** ಪಶುಗಳ ಒಡೆಯನ ಮತ್ತು ಪಶುಪಾಲನ ನಡುವಣ ಜಗಳ. (೩) **೧೦. ಗಡಿಯ ವಿವಾದ.** (ಸೀಮಾ ವಿವಾದಃ) **೧೧. ದಂಡವಾಕ್ ಪಾರುಷ್ಯ** ಯಾರಿಗಾದರೂ ಕಠೋರವಾದ ದಂಡವನ್ನು ವಿಧಿಸುವುದು. **೧೨. ಕಠೋರವಾದ ವಾಣಿ**ಯನ್ನಾಡುವುದು. **೧೩. ಸ್ತೇಯಂ** ಕಳವು – ದರೋಡೆ ಮಾಡುವುದು. **೧೪. ಸಾಹಸಂ** ಯಾವುದಾದರೂ ಕಾರ್ಯಕ್ಕಾಗಿ ಬಲಾತ್ಕಾರ ಮಾಡುವುದು. **೧೫. ವ್ಯಭಿಚಾರ** – ಯಾವಳಾದರೂ ಸ್ತ್ರೀಯಳಿಂದ ಅಥವಾ ಯಾವನಾದರೂ ಪುರುಷನಿಂದ ವ್ಯಭಿಚಾರ ನಡೆಯುವುದು. (೪) **೧೬. ಧರ್ಮವ್ಯತಿಕ್ರಮ** – ಸ್ತ್ರೀಯಳ ಅಥವಾ ಪುರುಷನ ಧರ್ಮದಲ್ಲಿ ವ್ಯತಿಕ್ರಮವಾಗುವುದು. **೧೭. ದಾಯವಿವಾದ** – ವಿಭಾಗದಲ್ಲಿ, ಎಂದರೆ ದಾಯಭಾಗದಲ್ಲಿ ವಾದ ಹುಟ್ಟುವುದು. **೧೮. ದ್ಯೂತ,** ಎಂದರೆ ಜಡವಸ್ತುವನ್ನು ಪಣವಾಗಿ ಒಡ್ಡಿ, **ಸಮಾಹ್ವಯ** – ಎಂದರೆ ಚೇತನವ್ಯಕ್ತಿಯನ್ನು[೨೯] ಪಣವಾಗಿಟ್ಟು ಜೂಜನ್ನಾಡುವುದು. ಇವು ಹದಿನೆಂಟು ಬಗೆಯ ಪರಸ್ಪರ ವಿರುದ್ಧವಾದ ವ್ಯವಹಾರದ ಕ್ಷೇತ್ರಗಳಾಗಿವೆ. (೫)

ಈ ವ್ಯವಹಾರಗಳಲ್ಲಿ ಅತಿಯಾಗಿ ವಿವಾದ ಮಾಡುವ ಪುರುಷರ ನ್ಯಾಯವನ್ನು, ಸನಾತನ ಧರ್ಮವನ್ನು ಆಶ್ರಯಿಸಿ ಮಾಡುತ್ತಾ ಹೋಗಬೇಕು. ಎಂದರೆ – ಯಾವನ ಬಗೆಗೂ ಪಕ್ಷಪಾತವನ್ನು ಎಂದಿಗೂ ಮಾಡಬಾರದು. (೬)

ಯಾವ ಸಭೆಯಲ್ಲಿ ಅಧರ್ಮದಿಂದ ಆಹತವಾಗಿ ಧರ್ಮವು ಕ್ಷತವಾಗುವುದೋ, ಎಲ್ಲಿ ಶಲ್ಯದಂತೆ, ಎಂದರೆ ಬಾಣದಂತೆ, ಧರ್ಮಕ್ಕೆ ಹತ್ತಿದ ಕಳಂಕವನ್ನು ತೊಡೆದುಹಾಕಿ, ಅಧರ್ಮವನ್ನು ಛೇದಿಸುವುದಿಲ್ಲವೋ, ಎಂದರೆ, ಧಾರ್ಮಿಕನಿಗೆ ಮಾನವೂ, ಅಧಾರ್ಮಿಕನಿಗೆ ಶಿಕ್ಷೆಯೂ ಸಿಕ್ಕುವುದಿಲ್ಲವೋ, **"**ಆ ಸಭೆಯಲ್ಲಿ ಎಷ್ಟು ಜನ ಸಭಾಸದರಿದ್ದಾರೋ, ಅವರೆಲ್ಲರೂ ಆಹತರೆಂದೇ ತಿಳಿಯಲ್ಪಡುತ್ತಾರೆ.**"** (೭)

**"**ಸಭೆಯಲ್ಲಿ ಎಂದೂ ಪ್ರವೇಶಿಸದಿರುವುದು ಮತ್ತು ಪ್ರವೇಶಮಾಡಿದ್ದಲ್ಲಿ, ಸತ್ಯವನ್ನೇ ಮಾತನಾಡುವುದು ಧಾರ್ಮಿಕನಾದ ಮಾನವನಿಗೆ ಯೋಗ್ಯವಾಗಿರುತ್ತದೆ.**"** **"**ಯಾವನಾದರೂ ಸಭೆಯಲ್ಲಿ ಅನ್ಯಾಯವಾಗುತ್ತಿರುವುದನ್ನು ನೋಡಿಯೂ ಮೌನ ತಾಳಿದ್ದರೆ, ಅಥವಾ ಸತ್ಯ – ನ್ಯಾಯಗಳಿಗೆ ವಿರುದ್ಧವಾಗಿ ಮಾತನಾಡಿದರೆ, ಅವನು ಮಹಾಪಾಪಿಯಾಗುತ್ತಾನೆ.**"** (೮)

---

೨೯. ಈ ನಿಷೇಧವಿದ್ದರೂ ಸಹ, ಯುಧಿಷ್ಠರನು ತನ್ನ ನಾಲ್ವರು ತಮ್ಮಂದಿರನ್ನೂ, ತನ್ನ ಧರ್ಮಪತ್ನಿಯಾದ ದ್ರೌಪದಿಯನ್ನೂ ಪಗಡೆಯಾಟದಲ್ಲಿ ಪಣವಾಗಿಟ್ಟು ಸೋತನೆಂಬುದು ಸೋಜಿಗದ ಸಂಗತಿ! ಜೂಜಾಡುವುದರ ನಿಷೇಧವನ್ನೂ ಮತ್ತು ಜೂಜುಗಾರರ ವಿಷಾದಕರ ಪರಿಸ್ಥಿತಿಯನ್ನೂ 'ಋಗ್ವೇದ'ದ ಅಕ್ಷ ಸೂಕ್ತದಲ್ಲಿ ವಿಷದವಾಗಿ ವರ್ಣಿಸಲಾಗಿದೆ.

ಯಾವ ಸಭೆಯಲ್ಲಿ ಅಧರ್ಮದಿಂದ ಧರ್ಮವೂ, ಅಸತ್ಯದಿಂದ ಸತ್ಯವೂ ಸಮಸ್ತ ಸಭಾಸದರೂ ನೋಡುತ್ತಿರುವಾಗ ಕೊಲ್ಲಲ್ಪಡುತ್ತದೋ, ಆ ಸಭೆಯಲ್ಲಿ ಸರ್ವರೂ ಮೃತರಿಗೆ ಸಮಾನರಾಗಿರುತ್ತಾರೆ; ಅವರಲ್ಲಿ ಯಾರೂ ಜೀವಂತರಿಲ್ಲದಂತೆಯೇ ಸರಿ. (೯)

ಮೃತವಾದ ಧರ್ಮ ಕೊಲೆಗಾರನ ನಾಶವನ್ನೂ ಮತ್ತು ರಕ್ಷಿಸಲ್ಪಟ್ಟಿರುವ ಧರ್ಮ ರಕ್ಷಕನ ರಕ್ಷಣೆಯನ್ನೂ ಮಾಡುತ್ತದೆ. ಆದಕಾರಣ ಸಂಹರಿಸಲ್ಪಟ್ಟ ಧರ್ಮ ಯಾವಾಗಲಾದರೂ ನಮ್ಮನ್ನು ಸಂಹರಿಸೀತೇನೋ ಎಂಬ ಭಯದಿಂದ, "ಧರ್ಮದ ಕೊಲೆಯನ್ನು ಎಂದಿಗೂ ಮಾಡಬಾರದು." (೧೦)

ಸಮಸ್ತ ಐಶ್ವರ್ಯಗಳನ್ನೂ ಕೊಡುವ ಮತ್ತು ಸುಖಗಳ ವೃಷ್ಟಿಯನ್ನು ಸುರಿಸುವ ಧರ್ಮವನ್ನು ಯಾವನು ಲೋಪಗೊಳಿಸುತ್ತಾನೋ, ಅವನನ್ನೇ ವಿದ್ವಜ್ಜನರು 'ವೃಷಲ'[೩೦] – ಎಂದರೆ ಸತ್ಯಜ್ಞಾನದ ಪ್ರಭೆಯಿಂದ ದೂರಕ್ಕೆ ಓಡುವ ನೀಚನೆಂದರಿಯುತ್ತಾರೆ. ಆದುದರಿಂದ ಯಾವ ಮಾನವನಿಗೂ ಧರ್ಮಕ್ಕೆ ಲೋಪ ತರುವುದು ಉಚಿತವಲ್ಲ. (೧೧)

"ಈ ಜಗತ್ತಿನಲ್ಲಿ ಒಂದು ಧರ್ಮ ಮಾತ್ರ ಸಾವಿನ ಅನಂತರವೂ ಕೂಡ ಜೊತೆಗೆ ಬರುವ ಸ್ನೇಹಿತನಾಗಿದೆ." ಮತ್ತು ಎಲ್ಲ ಪದಾರ್ಥಗಳೂ, ಸಂಗಾತಿಗಳೂ ಕೂಡ ಶರೀರದೊಂದಿಗೆಯೇ ನಾಶಹೊಂದುತ್ತಾರೆ. ಎಂದರೆ – ಎಲ್ಲರ, ಎಲ್ಲದರ ಸಂಗವೂ ಬಿಟ್ಟುಹೋಗುತ್ತದೆ; ಆದರೆ – ಧರ್ಮದ ಸಂಗ ಮಾತ್ರ ಎಂದಿಗೂ ಬಿಟ್ಟುಹೋಗುವುದಿಲ್ಲ. (೧೨)

ಯಾವಾಗ ರಾಜಸಭೆಯಲ್ಲಿ ಪಕ್ಷಪಾತದಿಂದ ಅನ್ಯಾಯ ಮಾಡಲ್ಪಡುತ್ತದೋ, ಅಲ್ಲಿ ಅಧರ್ಮ ನಾಲ್ಕು ಭಾಗಗಳಾಗಿ ಹೋಗುತ್ತದೆ. ಅವುಗಳಲ್ಲಿ ಒಂದು ಅಧರ್ಮ ಮಾಡುವವನಿಗೂ, ಎರಡನೆಯದು ಸಾಕ್ಷಿಗೂ, ಮೂರನೆಯದು ಸಭಾಸದರಿಗೂ ಮತ್ತು ನಾಲ್ಕನೆಯ ಪಾದ ಅಧರ್ಮೀ ಸಭೆಯ ಸಭಾಪತಿಯಾದ ರಾಜನಿಗೂ ಅಂಟಿಕೊಳ್ಳುತ್ತವೆ. (೧೩)

ಯಾವ ಸಭೆಯಲ್ಲಿ ನಿಂದೆಗೆ ಅರ್ಹನಾದವನ ನಿಂದೆಯೂ, ಸ್ತುತಿಗೆ ಯೋಗ್ಯನಾದವನಿಗೆ ಮಾನವೂ ಸಲ್ಲುವುದೋ, ಅಲ್ಲಿ ರಾಜನೂ ಮತ್ತು ಸಮಸ್ತ ಸಭಾಸದರೂ ಪಾಪರಹಿತರೂ ಮತ್ತು ಪವಿತ್ರರೂ ಆಗಿಹೋಗುತ್ತಾರೆ; "ಪಾಪಕರ್ತೃವಿಗೆ ಮಾತ್ರ ಪಾಪ ತಟ್ಟುತ್ತದೆ." (೪)

ಈಗ, ಸಾಕ್ಷಿಗಳಾಗಿ ಎಂತಹವರನ್ನು ಉಪಯೋಗಿಸಿಕೊಳ್ಳಬೇಕು – ಎಂದು ವಿವೇಚಿಸಿ ನೋಡೋಣ:–

**ಅಪ್ತಾಃ ಸರ್ವೇಷು ವರ್ಣೇಷು ಕಾರ್ಯಾಃ ಕಾರ್ಯೇಷು ಸಾಕ್ಷಿಣಃ।**

**ಸರ್ವಧರ್ಮವಿದೋऽಲುಬ್ಧಾ ವಿಪರೀತಾಂಸ್ತು ವರ್ಜಯೇತ್ ॥ ೧ ॥** (ಮನು:– ೮.೬೩)

**ಸ್ತ್ರೀಣಾಂ ಸಾಕ್ಷ್ಯಂ ಸ್ತ್ರಿಯಃ ಕುರ್ಯುಃ ದ್ವಿಜಾನಾಂ ಸದೃಶಾ ದ್ವಿಜಾಃ।**

**ಶೂದ್ರಾಶ್ಚ ಸಂತಃ ಶೂದ್ರಾಣಾಮಂತ್ಯಾನಾಮಂತ್ಯಯೋನಯಃ ॥ ೨ ॥** (ಮನು:– ೮.೬೮)

**ಸಾಹಸೇಷು ಚ ಸರ್ವೇಷು ಸ್ತೇಯಸಂಗ್ರಹಣೇಷು ಚ।**

**ವಾಗ್ದಂಡಯೋಶ್ಚಪಾರುಷ್ಯೇ ನ ಪರೀಕ್ಷೇತ ಸಾಕ್ಷಿಣಃ ॥ ೩ ॥**

**ಬಹುತ್ವಂ ಪರಿಗೃಹ್ಣೀಯಾತ್ಸಾಕ್ಷಿದ್ವೈಧೇ ನರಾಧಿಪಃ।**

**ಸಮೇಷು ಚ ಗುಣೋತ್ಕೃಷ್ಟಾನ್ ಗುಣದ್ವೈಧೇ ದ್ವಿಜೋತ್ತಮಾನ್ ॥ ೪ ॥**

**ಸಮಕ್ಷದರ್ಶನಾತ್ಸಾಕ್ಷ್ಯಂ ಶ್ರವಣಾಚ್ಚೈವ ಸಿಧ್ಯತಿ।**

**ತತ್ರ ಸತ್ಯಂ ಬ್ರುವನ್ ಸಾಕ್ಷೀ ಧರ್ಮಾರ್ಥಾಭ್ಯಾಂ ನ ಹೀಯತೇ ॥ ೫ ॥**

---

೩೦. ವೃಷ ಇತಿ ಧರ್ಮಃ; ತಸ್ಯಲಯಕರ್ತಾ ವೃಷಲ. ವೃಷ ಎಂದರೆ ಧರ್ಮ; ಅದರ ನಾಶಕರ್ತೃವೇ ವೃಷಲರು. ಎಂದರೆ, ಸತ್ಯಜ್ಞಾನದ ಪ್ರತಿಭೆಯಿಂದ ದೂರ ಓಡುವವರು. –ಅನು.

**ಸಾಕ್ಷೀ ದೃಷ್ಟಶ್ರುತಾದನ್ಯದ್ವಿ ಬ್ರುವನ್ನಾರ್ಯಸಂಸದಿ।**

**ಅವಾಙ್ ನರಕಮಭ್ಯೇತಿ ಪ್ರೇತ್ಯ ಸ್ವರ್ಗಾಚ್ಚ ಹೀಯತೇ ॥ ೬ ॥** (ಮನು:– ೮.೭೨–೭೫)

**ಸ್ವಭಾವೇನೈವ ಯದ್ಬ್ರೂಯುಸ್ತದ್ಗ್ರಾಹ್ಯಂ ವ್ಯಾವಹಾರಿಕಮ್ ।**

**ಅತೋ ಯದನ್ಯದ್ವಿಬ್ರೂಯುರ್ಧರ್ಮಾರ್ಥಂ ತದಪಾರ್ಥಕಮ್ ॥ ೭ ॥**

**ಸಂಭಾತಃ ಸಾಕ್ಷಿಣಃ ಪ್ರಾಪ್ತಾನರ್ಥಿಪ್ರತ್ಯರ್ಥಿಸಂನಿಧೌ ।**

**ಪ್ರಾಡ್ವಿವಾಕೋಽನುಯುಂಜೀತ ವಿಧಿನಾನೇನ ಸಾಂತ್ವಯನ್ ॥ ೮ ॥**

**ಯದ್ದ್ವಯೋರನಯೋರ್ವೇತ್ಥ ಕಾರ್ಯೇಽಸ್ಮಿನ್ ಚೇಷ್ಟಿತಂ ಮಿಥಃ ।**

**ತದ್ಬ್ರೂತ ಸರ್ವಂ ಸತ್ಯೇನ ಯುಷ್ಮಾಕಂ ಹ್ಯತ್ರ ಸಾಕ್ಷಿತಾ ॥ ೯ ॥**

**ಸತ್ಯಂ ಸಾಕ್ಷ್ಯೇ ಬ್ರುವನ್ ಸಾಕ್ಷೀ ಲೋಕಾನಾಪ್ನೋತಿ ಪುಷ್ಕಲಾನ್ ।**

**ಇಹ ಚಾನುತ್ತಮಾಂ ಕೀರ್ತಿಂ ವಾಗೇಷಾ ಬ್ರಹ್ಮಪೂಜಿತಾ ॥೧೦॥** (ಮನು:–೮–೭೮–೮೧)

**ಸತ್ಯೇನ ಪೂಯತೇ ಸಾಕ್ಷೀ ಧರ್ಮಃ ಸತ್ಯೇನ ವರ್ಧತೇ ।**

**ತಸ್ಮಾತ್ಸತ್ಯಂ ಹಿ ವಕ್ತವ್ಯಂ ಸರ್ವವರ್ಣೇಷು ಸಾಕ್ಷಿಭಿಃ ॥೧೧॥**

**ಆತ್ಮೈವ ಹ್ಯಾತ್ಮನಃ ಸಾಕ್ಷೀ ಗತಿರಾತ್ಮಾ ತಥಾಽತ್ಮನಃ ।**

**ಮಾವಮಂಸ್ಥಾಃ ಸ್ವಮಾತ್ಮಾನಂ ನರ್ಣಾಂ ಸಾಕ್ಷಿಣಮುತ್ತಮಮ್ ॥೧೨॥** (ಮನು:– ೮.೮೩–೮೪)

**ಯಸ್ಯ ವಿದ್ವಾನ್ ಹಿ ವದತಃ ಕ್ಷೇತ್ರಜ್ಞೋ ನಾಭಿಶಂಕತೇ ।**

**ತಸ್ಮಾನ್ನ ದೇವಾಃ ಶ್ರೇಯಾಂಸಂ ಲೋಕೇಽನ್ಯಂ ಪುರುಷಂ ವಿದುಃ ॥ ೧೩॥** (ಮನು:– ೮.೯೬)

**ಏಕೋಽಹಮಸ್ಮೀತ್ಯಾತ್ಮಾನಂ ಯತ್ತ್ವಂ ಕಲ್ಯಾಣ ಮನ್ಯಸೇ।**

**ನಿತ್ಯಂ ಸ್ಥಿತಸ್ತೇ ಹೃದ್ಯೇಷಃ ಪುಣ್ಯಪಾಪೇಕ್ಷಿತಾ ಮುನಿಃ ॥ ೧೪॥** (ಮನು:– ೮.೯೧)

ಸರ್ವ ವರ್ಣಗಳಲ್ಲಿಯೂ ಧಾರ್ಮಿಕರೂ, ವಿದ್ವಾಂಸರೂ, ನಿಷ್ಕಪಟರೂ, ಎಲ್ಲ ರೀತಿಯಿಂದಲೂ ಧರ್ಮವನ್ನು ತಿಳಿಯುವವರೂ, ಲೋಭರಹಿತರೂ, ಸತ್ಯವಾದಿಗಳೂ ಆಗಿರುವವರನ್ನೇ ಸಾಕ್ಷಿಗಳನ್ನಾಗಿ ತೆಗೆದುಕೊಳ್ಳಬೇಕು; ಇದಕ್ಕೆ ವಿರುದ್ಧವಾಗಿರುವವರನ್ನು ಎಂದಿಗೂ ತೆಗೆದುಕೊಳ್ಳಬಾರದು. (೧)

ಸ್ತ್ರೀಯರಿಗೆ ಸ್ತ್ರೀಯರೂ, ದ್ವಿಜರಿಗೆ ದ್ವಿಜರೂ, ಶೂದ್ರಾದಿಗಳಿಗೆ ಶೂದ್ರಾದಿಗಳೂ ಸಾಕ್ಷಿಗಳಾಗಿರಬೇಕು. (೨)

"ಬಲಾತ್ಕಾರದಿಂದ ಮಾಡಲ್ಪಡುವ ಎಷ್ಟು ಕಾರ್ಯಗಳಿವೆಯೋ, ಕಳ್ಳತನ, ವ್ಯಭಿಚಾರ, ಕಠೋರ ವಚನ, ಶಿಕ್ಷೆಯ ಅತ್ಯುಗ್ರತ್ವ ಎಂಬ ಅಪರಾಧಗಳಿವೆಯೋ, ಅವುಗಳಲ್ಲಿ ಸಾಕ್ಷಿಯ ಪರೀಕ್ಷೆಯನ್ನು ಮಾಡಬಾರದು ಮತ್ತು (ಆ ಪರೀಕ್ಷೆಯನ್ನು) ಅತ್ಯಾವಶ್ಯಕವೆಂದೂ ತಿಳಿಯಬಾರದು; ಏಕೆಂದರೆ – ಈ ಕಾರ್ಯಗಳೆಲ್ಲಾ ಗುಪ್ತವಾಗಿ ನಡೆಯುತ್ತವೆ." (೩)

ಉಭಯ ಪಕ್ಷಗಳ ಸಾಕ್ಷಿಗಳಲ್ಲಿ ಬಹುಮತಾನುಸಾರ, ಸಮ–ಸಮವಾಗಿ ಸಾಕ್ಷಿಗಳಿದ್ದರೆ ಉತ್ತಮ ಗುಣವಂತನಾದ ಪುರುಷನ ಸಾಕ್ಷ್ಯಕ್ಕೆ ಅನುಕೂಲವಾಗಿ, ಮತ್ತು ಎರಡು ಪಕ್ಷಗಳ ಸಾಕ್ಷಿಗಳೂ ಉತ್ತಮ ಗುಣವಂತರೂ ಮತ್ತು ಸಮ–ಸಮರೂ ಆಗಿದ್ದರೆ, ದ್ವಿಜೋತ್ತಮರ, ಎಂದರೆ ಋಷಿ–ಮಹರ್ಷಿಗಳ ಮತ್ತು ಯತಿಗಳ ಸಾಕ್ಷ್ಯಕ್ಕೆ ಅನುಸಾರವಾಗಿ ನ್ಯಾಯವನ್ನು ನಿರ್ಣಯಿಸಬೇಕು. (೪)

"ಎರಡು ಬಗೆಯ ಸಾಕ್ಷಿಗಳ ಇರುವಿಕೆ ನಿರ್ಧಾರಿತವಾಗಿರುತ್ತದೆ;" ಮೊದಲನೆಯದಾಗಿ "ಸಾಕ್ಷಾತ್ ನೋಡಿರುವುದರಿಂದ;" ಎರಡನೆಯದಾಗಿ – "ಆಲಿಸಿರುವುದರಿಂದ." ಯಾವಾಗ ಸಭೆಯಲ್ಲಿ ಪ್ರಶ್ನಿಸುತ್ತಾರೋ, ಆಗ ಯಾವ ಸಾಕ್ಷಿಗಳು ಸತ್ಯವನ್ನು

ಹೇಳುತ್ತಾರೋ, ಅವರು ಧರ್ಮಹೀನರೂ ಮತ್ತು ಶಿಕ್ಷೆಗೆ ಯೋಗ್ಯರೂ ಆಗುವುದಿಲ್ಲ ಮತ್ತು ಯಾವ ಸಾಕ್ಷಿಗಳು ಸುಳ್ಳನ್ನು ಹೇಳುವರೋ, ಅವರು ದಂಡನೀಯರಾಗುವರು. (೫)

ಯಾವ ಸಾಕ್ಷಿಯು ರಾಜಸಭೆಯಲ್ಲಿ ಅಥವಾ ಯಾವುದಾದರೂ ಉತ್ತಮ ಪುರುಷರ ಸಭೆಯಲ್ಲಿ, ತಾನು ನೋಡಿರುವುದಕ್ಕೆ ಮತ್ತು ಆಲಿಸಿರುವುದಕ್ಕೆ ವಿರುದ್ಧವಾಗಿ ಹೇಳುತ್ತಾನೋ, ಅವನು (ಅವಙ್ ನರಕ) – ಎಂದರೆ ಅಧೋಗತಿಯೆಂಬ ನರಕವನ್ನು (ಅತಿ ಹೀನತ್ವವನ್ನು) ಜೀವಿತ ಕಾಲದಲ್ಲಿಯೇ ಪಡೆಯುತ್ತಾನೆ. ಮತ್ತು ಸತ್ತ ಮೇಲೆ ಸುಖಹೀನನಾಗುವನು. (೬)

ಸಹಜವಾಗಿಯೇ ವ್ಯವಹಾರಕ್ಕೆ ಸಂಬಂಧಿಸಿದ ಯಾವುದನ್ನು ಹೇಳುವನೋ, ಸಾಕ್ಷಿಯ ಆ ಮಾತನ್ನು ಅಂಗೀಕರಿಸಬೇಕು ಮತ್ತು ಇದರಿಂದ ಬೇರೆಯಾದ, ಕಲಿಸಲ್ಪಟ್ಟ ಯಾವ ಯಾವ ಮಾತುಗಳನ್ನು ಹೇಳುವನೋ, ಅವನ್ನೆಲ್ಲಾ ನ್ಯಾಯಾಧೀಶನು ವ್ಯರ್ಥವೆಂದು ತಿಳಿಯಬೇಕು. (೭)

ಅರ್ಥಿಯ ಮತ್ತು ಪ್ರತ್ಯರ್ಥಿಯ (ವಾದಿ ಮತ್ತು ಪ್ರತಿವಾದಿ) ಮುಂದೆ, ಸಭೆಯ ಹತ್ತಿರ ಬಂದಿರುವ ಸಾಕ್ಷಿಗಳನ್ನು ಕುರಿತು ನ್ಯಾಯಾಧೀಶನೂ ಮತ್ತು ಪ್ರಾಡ್ವಿವಾಕನೂ, (ವಕೀಲ, ನ್ಯಾಯವಾದಿ) ಶಾಂತಿಪೂರ್ವಕವಾಗಿ ಈ ರೀತಿ ಹೇಳಬೇಕು (೮)

"ಓ ಸಾಕ್ಷಿಗಳೇ! ಈ ಕಾರ್ಯ (ಪ್ರಕರಣದಲ್ಲಿ) ಇವರಿಬ್ಬರ ಪರಸ್ಪರ ಕರ್ಮ(ವ್ಯವಹಾರ)ಗಳಲ್ಲಿ, ನೀವು ಏನನ್ನು ತಿಳಿದಿದ್ದೀರೋ, ಅದನ್ನು ಸತ್ಯದೊಂದಿಗೆ ಹೇಳಿರಿ; ಏಕೆಂದರೆ – ಈ ಕಾರ್ಯದಲ್ಲಿ ನಿಮ್ಮ ಸಾಕ್ಷ್ಯವಿದೆ. (೯)

ಯಾವ ಸಾಕ್ಷಿಯು ಸತ್ಯವನ್ನಾಡುತ್ತಾನೋ, ಅವನು ಜನ್ಮಾಂತರದಲ್ಲಿ ಉತ್ತಮ ಜನ್ಮವನ್ನೂ ಮತ್ತು ಉತ್ತಮ ಲೋಕಾಂತರಗಳಲ್ಲಿ ಜನ್ಮವನ್ನೂ ಗಳಿಸಿ, ಸುಖವನ್ನು ಅನುಭವಿಸುತ್ತಾನೆ. ಈ ಜನ್ಮದಲ್ಲಿ ಮತ್ತು ಪರಜನ್ಮದಲ್ಲಿ ಉತ್ತಮ ಕೀರ್ತಿಯನ್ನು ಗಳಿಸುತ್ತಾನೆ. ಏಕೆಂದರೆ – "ಈ ಯಾವ ವಾಣಿಯಿದೆಯೋ, ಅದೇ ಸತ್ಕಾರ ಮತ್ತು ತಿರಸ್ಕಾರಕ್ಕೆ ಕಾರಣವೆಂದು ವೇದಗಳಲ್ಲಿ ಬರೆದಿದೆ." ಯಾವನು ಸತ್ಯವಾಡುತ್ತಾನೋ, ಅವನು ಪ್ರತಿಷ್ಠಿತನೂ, ಮತ್ತು ಮಿಥ್ಯಾವಾದಿಯು ನಿಂದಿತನೂ ಆಗುತ್ತಾನೆ (೧೦)

ಸತ್ಯವನ್ನು ಹೇಳುವುದರಿಂದ ಸಾಕ್ಷಿಯು ಪವಿತ್ರನಾಗುತ್ತಾನೆ ಮತ್ತು ಕೇವಲ ಸತ್ಯವನ್ನೇ ಹೇಳುವುದರಿಂದ ಧರ್ಮ ವರ್ಧಿಸುತ್ತದೆ. ಆದುದರಿಂದ ಎಲ್ಲ ವರ್ಣಗಳಲ್ಲಿಯೂ ಸಾಕ್ಷಿಗಳು ಸತ್ಯವನ್ನೇ ಹೇಳುವುದು ಯೋಗ್ಯವಾಗಿರುತ್ತದೆ. (೧೧)

"ಆತ್ಮನಿಗೆ ಆತ್ಮನು ಸಾಕ್ಷಿ; ಆತ್ಮನಿಗೆ ಗತಿ ಆತ್ಮನು; ಇದನ್ನು ತಿಳಿದು, ಹೇ ಪುರುಷ! ನೀನು ಸಮಸ್ತ ಮಾನವರ ಉತ್ತಮ ಸಾಕ್ಷಿಯಾದ ನಿನ್ನ ಆತ್ಮನಿಗೆ ಅಪಮಾನ ಮಾಡಬೇಡ." ಸತ್ಯಭಾಷಣವು ಎಂದರೆ–ಯಾವುದು ನಿನ್ನ ಆತ್ಮ–ಮನಸ್ಸು–ವಾಕ್ಕಿನಲ್ಲಿದೆಯೋ, ಅದು ಸತ್ಯ; ಮತ್ತು ಯಾವುದು ಇದಕ್ಕೆ ವಿರುದ್ಧವಾಗಿದೆಯೋ, ಅದು 'ಮಿಥ್ಯೆ'ಯಾಗಿರುತ್ತದೆ. (೧೨)

ಮಾತನಾಡುತ್ತಿರುವ ಯಾವ ಪುರುಷನ ವಿದ್ವಾನ್ 'ಕ್ಷೇತ್ರಜ್ಞನು', ಎಂದರೆ ಶರೀರವನ್ನರಿಯುವ ಆತ್ಮನು ಒಳಗೆ ಸಂದೇಹಕ್ಕೆ ಸಿಕ್ಕನೋ, ಅವನನ್ನು ಬಿಟ್ಟು ಬೇರೆಯ ಯಾವನನ್ನೂ ವಿದ್ವಜ್ಜನರು ಉತ್ತಮ ಪುರುಷನೆಂದು ತಿಳಿಯುವುದಿಲ್ಲ. (೧೩)

ಹೇ ಕಲ್ಯಾಣವನ್ನು ಇಚ್ಛಿಸುವ ಪುರುಷನೇ! ನೀನು 'ನಾನು ಒಬ್ಬನೇ ಇದ್ದೇನೆ' – ಎಂದು, ನಿನ್ನ ಆತ್ಮನಲ್ಲಿ ತಿಳಿದು ಸುಳ್ಳನ್ನು ಹೇಳುವೆಯಾದರೆ, ಅದು ಸರಿಯಲ್ಲ. ಆದರೆ, ಎರಡನೆಯವನಾಗಿ "ನಿನ್ನ ಹೃದಯದಲ್ಲಿ ಅಂತರ್ಯಾಮೀರೂಪದಿಂದ ಯಾವ ಪರಮೇಶ್ವರನು ಪುಣ್ಯ–ಪಾಪಗಳನ್ನು ನೋಡುವ ಮುನಿ[೩೧]ಯಾಗಿ ಸ್ಥಿತನಾಗಿದ್ದಾನೋ, ಆ ಪರಮಾತ್ಮನಿಗೆ ಅಂಜಿ, ಸದಾ ಸತ್ಯವನ್ನು ಹೇಳುತ್ತಿರುವವನಾಗು." (೧೪)

**ಲೋಭಾನ್ಮೋಹಾದ್ಭಯಾನ್ಮೈತ್ರಾತ್ಕಾಮಾತ್ಕ್ರೋಧಾತ್ತಥೈವ ಚ ।**

**ಅಜ್ಞಾನಾದ್ಬಾಲಭಾವಾಚ್ಚ ಸಾಕ್ಷ್ಯಂ ವಿತಥಮುಚ್ಯತೇ ॥ ೧ ॥**

**ಏಷಾಮನ್ಯತಮೇ ಸ್ಥಾನೇ ಯಃ ಸಾಕ್ಷ್ಯಮನೃತಂ ವದೇತ್ ।**

---

೩೧. ಮುನಿ– ಎಂದರೆ, ಮೌನಿ. ಅಂತರ್ಯಾಮಿಯ ಭಾವನಾ ಪ್ರೇರಣೆ ಮಾಡುತ್ತಾನೆಯೇ ಹೊರತು, ಮಾತುಗಳನ್ನಾಡುವುದಿಲ್ಲ. ಪ್ರೇರಕನಿಗೆ 'ಸವಿತಾ' ಎಂದು ಹೆಸರು. ಗಾಯತ್ರೀ ಮಂತ್ರದಲ್ಲಿ 'ಪ್ರ ಚೋದಯಾತ್' ಎಂಬ ಕ್ರಿಯೆ ಕರ್ತೃವಾದ 'ಸವಿತಾ'ಗೆ ಅನ್ವರ್ಥಕವಾಗಿದೆ. ಇದೇ ವೇದದ ವೈಶಿಷ್ಟ್ಯ. ಮನುಷ್ಯಕೃತ ಗ್ರಂಥಗಳಲ್ಲಿ ಈ ನಿಯಮವಿರುವುದಿಲ್ಲ. –ಸಂ.

**ತಸ್ಯ ದಂಡವಿಶೇಷಾಂಸ್ತು ಪ್ರವಕ್ಷ್ಯಾಮನುಪೂರ್ವಶಃ ॥ ೨ ॥**

**ಲೋಭಾತ್ಸಹಸ್ರದಂಡ್ಯಸ್ತು ಮೋಹಾತ್ಪೂರ್ವಂತು ಸಾಹಸಮ್ ।**

**ಭಯಾದ್ದ್ವೌ ಮಧ್ಯಮೌ ದಂಡ್ಯೌ ಮೈತ್ರಾತ್ಪೂರ್ವಂ ಚತುರ್ಗುಣಮ್ ॥ ೩ ॥**

**ಕಾಮಾದ್ದಶಗುಣಂ ಪೂರ್ವಂ ಕ್ರೋಧಾತ್ತು ತ್ರಿಗುಣಂ ಪರಮ್ ।**

**ಅಜ್ಞಾನಾದ್ದ್ವೇಶತೇ ಪೂರ್ಣೇ ಬಾಲಿಶ್ಯಾಚ್ಛತಮೇವ ತು ॥ ೪ ॥** (ಮನು:– ೮.೧೧೮–೧೨೧)

**ಉಪಸ್ಥಮುದರಂ ಜಿಹ್ವಾ ಹಸ್ತೌ ಪಾದೌ ಚ ಪಂಚಮಮ್ ।**

**ಚಕ್ಷುರ್ನಾಸಾ ಚ ಕರ್ಣೌ ಚ ಧನಂ ದೇಹಸ್ತಥೈವ ಚ ॥ ೫ ॥**

**ಅನುಬಂಧಂ ಪರಿಜ್ಞಾಯ ದೇಶಕಾಲೌ ಚ ತತ್ತ್ವತಃ ।**

**ಸಾರಾಪರಾಧೌ ಚಾಲೋಕ್ಯ ದಂಡಂ ದಂಡ್ಯೇಷು ಪಾತಯೇತ್ ॥ ೬ ॥**

**ಅಧರ್ಮದಂಡನಂ ಲೋಕೇ ಯಶೋಘ್ನಂ ಕೀರ್ತಿನಾಶನಮ್ ।**

**ಅಸ್ವರ್ಗ್ಯಂ ಚ ಪರತ್ರಾಪಿ ತಸ್ಮಾತ್ತತ್ಪರಿವರ್ಜಯೇತ್ ॥ ೭ ॥**

**ಅದಂಡ್ಯಾನ್ ದಂಡಯನ್ ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ ।**

**ಅಯಶೋ ಮಹದಾಪ್ನೋತಿ ನರಕಂ ಚೈವಗಚ್ಛತಿ ॥ ೮ ॥**

**ವಾಗ್ದಂಡಂ ಪ್ರಥಮಂ ಕುಯಾದ್ಧಿಗ್ದಂಡಂ ತದನಂತರಮ್ ।**

**ತೃತೀಯಂ ಧನದಂಡಂತು ವಧದಂಡಮತಃ ಪರಮ್ ॥ ೯ ॥** (ಮನು:– ೮–೧೨೫–೧೨೯)

ಯಾವ ಸಾಕ್ಷ್ಯವು ಲೋಭ, ಮೋಹ, ಭಯ, ಮೈತ್ರೀ, ಕಾಮ, ಕ್ರೋಧ, ಅಜ್ಞಾನ ಮತ್ತು ಬಾಲಕತ್ವದಿಂದ ಕೊಡಲ್ಪಡುವುದೋ, ಅದೆಲ್ಲಾ ಸುಳ್ಳೆಂದು ತಿಳಿಯಲ್ಪಡಬೇಕು. (೧)

ಇವುಗಳಲ್ಲಿ ಯಾವುದೇ ಎಡೆಯಲ್ಲಿ ಸಾಕ್ಷಿಯು ಸುಳ್ಳನ್ನಾಡಿದರೆ, ಅವನಿಗೆ ಮುಂದೆ ಹೇಳಲ್ಪಡುವ ಅನೇಕ ವಿಧದ ಶಿಕ್ಷೆಯನ್ನು ಕೊಡಬೇಕು. (೨)

ಯಾವನು ಲೋಭದಿಂದ ಸುಳ್ಳು ಸಾಕ್ಷ್ಯವನ್ನು ಕೊಡುವನೋ, ಅವನಿಂದ ರೂ ೧೫ – ೬೩ ನ. ಪೈ ದಂಡವನ್ನು ತೆಗೆದುಕೊಳ್ಳಬೇಕು. ಯಾವನು ಮೋಹದಿಂದ ಸುಳ್ಳು ಸಾಕ್ಷ್ಯ ಹೇಳುತ್ತಾನೋ, ಅವನಿಂದ ೩ – ೧೩ ನ. ಪೈ ದಂಡವನ್ನು ತೆಗೆದುಕೊಳ್ಳಬೇಕು. ಯಾವನು ಭಯದಿಂದ ಸುಳ್ಳು ಸಾಕ್ಷ್ಯವೀಯುತ್ತಾನೋ, ಅವನಿಂದ ರೂ ೬–೨೫ ನ. ಪೈ ದಂಡವನ್ನು ತೆಗೆದುಕೊಳ್ಳಬೇಕು. ಯಾವ ಪುರುಷನು ಮೈತ್ರಿಯಿಂದ ಸುಳ್ಳು ಸಾಕ್ಷ್ಯ ಕೊಡುತ್ತಾನೋ, ಅವನಿಂದ ರೂ.೧೨–೫೦ ನ ಪೈ ದಂಡ ತೆಗೆದುಕೊಳ್ಳಬೇಕು. (೩)

ಯಾವ ಪುರುಷನು ಕಾಮದಿಂದ ಮಿಥ್ಯಾ ಸಾಕ್ಷ್ಯ ಕೊಡುವನೋ, ಅವನಿಂದ ಇಪ್ಪತ್ತೈದು ರೂಪಾಯಿ ದಂಡ ತೆಗೆದುಕೊಳ್ಳಬೇಕು; ಯಾವ ಪುರುಷನು ಕ್ರೋಧದಿಂದ ಸುಳ್ಳು ಸಾಕ್ಷ್ಯ ಕೊಡುವನೋ, ಅವನಿಂದ ರೂ. ೪೬– ೮೮ನ. ಪೈ ದಂಡ ತೆಗೆದುಕೊಳ್ಳಬೇಕು. ಯಾವ ಪುರುಷನು ಅಜ್ಞಾನಿತ್ವದಿಂದ ಸುಳ್ಳು ಸಾಕ್ಷ್ಯ ಕೊಡುವನೋ, ಅವನಿಂದ ಆರು ರೂಪಾಯಿ ದಂಡ ತೆಗೆದುಕೊಳ್ಳಬೇಕು ಮತ್ತು ಯಾವನು ಹುಡುಗುತನದಿಂದ ಸುಳ್ಳು ಸಾಕ್ಷ್ಯ ಹೇಳುವನೋ, ಅವನಿಂದ ರೂ. ೧–೫೬ ನ. ಪೈ ದಂಡ ತೆಗೆದುಕೊಳ್ಳಬೇಕು.

ಯಾವವುಗಳ ಮೇಲೆ ಶಿಕ್ಷೆ ವಿಧಿಸಲ್ಪಡುತ್ತದೋ "ಆ ಹತ್ತು ಸ್ಥಾನಗಳು ಗುಪ್ತಾಂಗ, ಉದರ, ಜಿಹ್ವೆ, ಕೈ, ಕಾಲು, ಕಣ್ಣು, ಮೂಗು, ಕಿವಿ, ಧನ ಮತ್ತು ದೇಹ" – ಇವಾಗಿವೆ. (೫)

ಆದರೆ – ಯಾವ ಯಾವ ಶಿಕ್ಷೆಗಳನ್ನು ಬರೆದಿದ್ದೇವೋ ಮತ್ತು ಬರೆಯುವೆವೋ, ಅವುಗಳನ್ನು ವಿಧಿಸುವಾಗ, ಎಂತಹ ದೇಶವೋ, ಎಂತಹ ಕಾಲವೋ, ಎಂತಹ ಪುರುಷನೋ, ಮತ್ತು ಅವನ ಅಪರಾಧವೆಂತಹುದೋ, – ಅದಕ್ಕೆ ಅನುಸಾರವಾಗಿಯೇ ಶಿಕ್ಷೆ ವಿಧಿಸಬೇಕು; ಉದಾಹರಣೆಗೆ, ಲೋಭದಿಂದ ಸಾಕ್ಷ್ಯವಿತ್ತಲ್ಲಿ ರೂ. ೧೫–೬೨ನ. ಪೈ ದಂಡವೆಂದು ಬರೆದಿದ್ದೇವೆ; ಆದರೆ – ಅವನು ಅತ್ಯಂತ ನಿರ್ಧನನಾಗಿದ್ದರೆ, ಅವನಿಂದ ಕಡಿಮೆ ಮತ್ತು ಧನಾಢ್ಯನಾಗಿದ್ದರೆ, ಅವನಿಂದ ಎರಡರಷ್ಟು, ಮೂರರಷ್ಟು ಮತ್ತು ನಾಲ್ಕರಷ್ಟೂ ಕೂಡ ತೆಗೆದುಕೊಂಡುಬಿಡಬಹುದು. (೬)

ಈ ಜಗತ್ತಿನಲ್ಲಿ ಅಧರ್ಮದಿಂದ ದಂಡಪ್ರದಾನ ಮಾಡುವುದು, ಮೊದಲಿದ್ದ ಪ್ರತಿಷ್ಠೆಯನ್ನೂ, ವರ್ತಮಾನ ಮತ್ತು ಭವಿಷ್ಯತ್ತಿನಲ್ಲಿ ಲಭಿಸುವ ಕೀರ್ತಿಯನ್ನೂ ನಾಶಮಾಡುವಂತಹುದಾದ ಕಾರಣ ಮತ್ತು ಪರಜನ್ಮದಲ್ಲಿಯೂ ದುಃಖದಾಯಕ ವಾಗಿರುವ ಕಾರಣ, ಅಧರ್ಮಯುಕ್ತವಾದ ದಂಡವನ್ನು ಯಾವನ ಮೇಲೆಯೂ ಹೊರಸಬಾರದು. (೭)

ಯಾವ ರಾಜನು ದಂಡನೀಯರಿಗೆ ದಂಡ ವಿಧಿಸನೋ ಮತ್ತು ಅದಂಡನೀಯರಿಗೆ ದಂಡ ವಿಧಿಸುತ್ತಾನೋ, ಎಂದರೆ–ಶಿಕ್ಷಾರ್ಹನಾದವನನ್ನು ಬಿಟ್ಟು ಬಿಡುತ್ತಾನೋ ಮತ್ತು ಯಾವನಿಗೆ ದಂಡ ಕೊಡಬಾರದೋ, ಅವನಿಗೆ ಶಿಕ್ಷೆ ಕೊಡುತ್ತಾನೋ, ಅವನು ಜೀವಂತನಾಗಿರುವಾಗ ಮಹಾ ನಿಂದೆಯನ್ನೂ ಮತ್ತು ಮೃತನಾದ ಮೇಲೆ ಮಹಾ ದುಃಖವನ್ನೂ ಹೊಂದುತ್ತಾನೆ. ಆದುದರಿಂದ ಯಾವನು ಅಪರಾಧ ಮಾಡುತ್ತಾನೋ, ಅವನಿಗೆ ಸದಾ ಶಿಕ್ಷೆ ಕೊಡಬೇಕು ಮತ್ತು ನಿರಪರಾಧನಿಗೆ ಎಂದಿಗೂ ಶಿಕ್ಷೆಯನ್ನು ಕೊಡಬಾರದು. (೮)

ಮೊದಲನೆಯದು ವಾಗ್ದಂಡ; ಎಂದರೆ–ಅವನನ್ನು ನಿಂದಿಸುವುದು. ಎರಡನೆಯದು 'ದಿಕ್ ದಂಡ'; ಎಂದರೆ – "ನಿನಗೆ ಧಿಕ್ಕಾರ; ನೀನು ಇಂತಹ ದುಷ್ಕರ್ಮವನ್ನೇತಕ್ಕೆ ಮಾಡಿದೆ?" – ಎಂದು ಹಳಿಯುವುದು. ಮೂರನೆಯದು ಅವನಿಂದ ಧನವನ್ನು ತೆಗೆದುಕೊಳ್ಳುವುದು. ಮತ್ತು ನಾಲ್ಕನೆಯದು 'ವಧ' ಎಂದರೆ – ಚಾವಟಿಯಿಂದ ಅಥವಾ ಬೆತ್ತದಿಂದ ಥಳಿಸುವುದು; ಇಲ್ಲವೇ ಶಿರಸ್ಸನ್ನು ಭೇದಿಸುವುದು – ಈ ನಾಲ್ಕು ವಿಧದ ಶಿಕ್ಷೆಗಳನ್ನು ಸಂದರ್ಭೋಚಿತವಾಗಿ ವಿಧಿಸಬೇಕು. (೯)

**ಯೇನ ಯೇನ ಯಥಾಂಗೇನ ಸ್ತೇನೋ ನೃಷು ವಿಚೇಷ್ಟತೇ ।**
**ತತ್ತದೇವ ಹರೇದಸ್ಯ ಪ್ರತ್ಯಾದೇಶಾಯ ಪಾರ್ಥಿವಃ ॥ ೧ ॥**
**ಪಿತಾಚಾರ್ಯಃ ಸುಹೃನ್ಮಾತಾ ಭಾರ್ಯಾ ಪುತ್ರಃ ಪುರೋಹಿತಃ ।**
**ನಾದಂಡ್ಯೋನಾಮ ರಾಜ್ಞೋಽಸ್ತಿ ಯಃ ಸ್ವಧರ್ಮೇ ನ ತಿಷ್ಠತಿ ॥ ೨ ॥**
**ಕಾರ್ಷಾಪಣಂ ಭವೇದ್ದಂಡ್ಯೋ ಯತ್ರಾನ್ಯಃ ಪ್ರಾಕೃತೋ ಜನಃ ।**
**ತತ್ರ ರಾಜಾ ಭವೇದ್ದಂಡ್ಯಃ ಸಹಸ್ರಮಿತಿ ಧಾರಣಾ ॥ ೩ ॥**
**ಅಷ್ಟಾಪಾದ್ಯಂತು ಶೂದ್ರಸ್ಯ ಸ್ತೇಯೇ ಭವತಿ ಕಿಲ್ಬಿಷಮ್ ।**
**ಷೋಡಶೈವತು ವೈಶ್ಯಸ್ಯ ದ್ವಾತ್ರಿಂಶತ್ ಕ್ಷತ್ರಿಯಸ್ಯ ಚ ॥ ೪ ॥**
**ಬ್ರಾಹ್ಮಣಸ್ಯ ಚತುಃಷಷ್ಠಿಃ ಪೂರ್ಣಂ ವಾಪಿ ಶತಂ ಭವೇತ್ ।**
**ದ್ವಿಗುಣಾ ವಾ ಚತುಃಷಷ್ಠಿಃ ತದ್ದೋಷಗುಣವಿದ್ಧಿಸಃ ॥ ೫ ॥** (ಮನು:– ೮. ೩೩೪–೩೩೮)
**ಐಂದ್ರಂ ಸ್ಥಾನಮಭಿಪ್ರೇಪ್ಸುರ್ಯಶಶ್ಚಾಕ್ಷಯಮವ್ಯಯಮ್ ।**
**ನೋಪೇಕ್ಷೇತ ಕ್ಷಣಮಪಿ ರಾಜಾ ಸಾಹಸಿಕಂ ನರಮ್ ॥ ೬ ॥**
**ವಾಗ್ದುಷ್ಟಾತ್ತಸ್ಕರಾಚ್ಚೈವ ದಂಡೇನೈವ ಚ ಹಿಂಸತಃ।**
**ಸಾಹಸಸ್ಯ ನರಃ ಕರ್ತಾ ವಿಜ್ಞೇಯಃ ಪಾಪಕೃತ್ತಮಃ ॥ ೭ ॥**

**ಸಾಹಸೇ ವರ್ತಮಾನಂತು ಯೋ ಮರ್ಷಯತಿ ಪಾರ್ಥಿವಃ ।**

**ಸ ವಿನಾಶಂ ವ್ರಜತ್ಯಾಶು ವಿದ್ವೇಷಂ ಚಾಧಿಗಚ್ಛತಿ ॥ ೮ ॥**

**ನ ಮಿತ್ರಕಾರಣಾದ್ರಾಜಾ ವಿಪುಲಾದ್ವಾ ಧನಾಗಮಾತ್ ।**

**ಸಮುತ್ಸೃಚೇತ್ಸಾಹಸಿಕಾನ್ ಸರ್ವಭೂತಭಯಾವಹಾನ್ ॥ ೯ ॥** (ಮನು:– ೮.೩೪೪–೩೪೭)

**ಗುರುಂ ವಾ ಬಾಲವೃದ್ಧೌ ವಾ ಬ್ರಾಹ್ಮಣಂ ವಾ ಬಹುಶ್ರುತಮ್ ।**

**ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್ ॥ ೧೦॥**

**ನಾತತಾಯಿವಧೇ ದೋಷೋ ಹಂತುರ್ಭವತಿ ಕಶ್ಚನ ।**

**ಪ್ರಕಾಶಂ ವಾಽಪ್ರಕಾಶಂ ವಾ ಮನ್ಯುಸ್ತನ್ಮನ್ಯುಮೃಚ್ಛತಿ ॥ ೧೧॥** (ಮನು:– ೮. ೩೫೦–೩೫೧)

**ಯಸ್ಯ ಸ್ತೇನಃ ಪುರೇ ನಾಸ್ತಿ ನಾನ್ಯಸ್ತ್ರೀಗೋ ನ ದುಷ್ಟವಾಕ್ ।**

**ನ ಸಾಹಸಿಕದಂಡಘ್ನೌ ಸ ರಾಜಾ ಶಕ್ರಲೋಕಭಾಕ್ ॥ ೧೨॥** (ಮನು:– ೮.೩೮೬)

ಕಳ್ಳನು ಹೇಗೆ, ಯಾವ ಯಾವ ಅಂಗದಿಂದ, ಮಾನವನಿಗೆ ವಿರುದ್ಧವಾದ ಕೃತ್ಯ ಮಾಡುತ್ತಾನೋ ಆಯಾ ಅಂಗವನ್ನು, ಸರ್ವಮಾನವರಿಗೂ ನೀತಿ ಕಲಿಸುವುದಕ್ಕಾಗಿ, ರಾಜನು ಕಸಿದುಕೊಳ್ಳಬೇಕು; ಎಂದರೆ – ಕತ್ತರಿಸಿಹಾಕಬೇಕು (೧)

ತಂದೆ, ಆಚಾರ್ಯ, ಸ್ನೇಹಿತ, ಪತ್ನೀ, ಪುತ್ರ ಮತ್ತು ಪುರೋಹಿತನೇ ಆಗಿರಲೊಲ್ಲನೇಕೆ, ಯಾವನು ಸ್ವಧರ್ಮದಲ್ಲಿ ಸ್ಥಿತನಾಗಿರುವುದಿಲ್ಲವೋ, ಅವನು ರಾಜನಿಗೆ 'ಅದಂಡ್ಯನು', ಎಂದರೆ ಶಿಕ್ಷೆಗೆ ಅನರ್ಹನಲ್ಲ; ಎಂದರೆ – ಯಾವಾಗ ರಾಜನು ನ್ಯಾಯವನ್ನು ತೀರ್ಮಾನಿಸುವನೋ, ಆಗ, ಯಾವನದೇ ಬಗೆಗೂ ಪಕ್ಷಪಾತಮಾಡಬಾರದು. ಆದರೆ – ಉಚಿತವಾದ ರೀತಿಯಲ್ಲಿ ಶಿಕ್ಷೆಯನ್ನು ವಿಧಿಸಬೇಕು. (೨)

**ಯಾವ ಅಪರಾಧದಲ್ಲಿ ಸಾಧಾರಣ ಮಾನವನಿಗೆ ಒಂದು ಪೈಸಾ**[೩೨] **ದಂಡ ಬೀಳುವುದೋ, ಅದೇ ಅಪರಾಧದಲ್ಲಿ ರಾಜನಿಗೆ ಸಾವಿರ ಬಿಲ್ಲೆಗಳ ದಂಡ ಬೀಳಬೇಕು. ಎಂದರೆ – ರಾಜನಿಗೆ ಸಾಧಾರಣ ಮಾನವನ ಸಾವಿರಪಟ್ಟು ದಂಡವಿಧಿಸಲ್ಪಡಬೇಕು. ಮಂತ್ರಿ – ಎಂದರೆ, ರಾಜನ ದಿವಾನನಿಗೆ ಎಂಟುನೂರುಪಟ್ಟು, ಅವನಿಗಿಂತ ನಿಮ್ನ ಶ್ರೇಣಿಯವನಿಗೆ ಏಳುನೂರುಪಟ್ಟು, ಮತ್ತು ಅವನಿಗಿಂತ ಕೆಳಗಿನವನಿಗೆ ಆರುನೂರುಪಟ್ಟು–ದಂಡ ಬೀಳಬೇಕು. ಹಾಗೆಯೇ ಉನ್ನತ–ಉನ್ನತ ರಾಜ್ಯಾಧಿಕಾರಿಗಳಿಂದ ಹಿಡಿದು, ಕೆಳಗಿನ–ಕೆಳಗಿನ ಅಧಿಕಾರಿಗಳಿಗೆ ಕಡಿಮೆ–ಕಡಿಮೆ ದಂಡಬೀಳುತ್ತಾ, ಅತ್ಯಂತ ಸಣ್ಣ ಭೃತ್ಯನಿಗೆ (ಪ್ರಜೆಗಳಿಗಿಂತ) ಎಂಟುಪಟ್ಟಿಗಿಂತ ಕಡಿಮೆಯಾದ ದಂಡಬೀಳಬಾರದು. ಏಕೆಂದರೆ–ಪ್ರಜಾಜನರಿಗಿಂತ ರಾಜಪುರುಷರಿಗೆ ಅಧಿಕ ದಂಡ ಬೀಳದಿದ್ದರೆ, ರಾಜಪುರುಷರು ಪ್ರಜಾಜನರನ್ನು ನಾಶಮಾಡಬಹುದು.** ಉದಾಹರಣೆಗೆ, ಸಿಂಹವು ಅಧಿಕ ಶಿಕ್ಷೆಯಿಂದ[೩೩] ಮತ್ತು ಆಡು ಅಲ್ಪ ಶಿಕ್ಷೆಯಿಂದಲೇ ವಶಕ್ಕೆ ಬಂದುಬಿಡುವುದು. ಆದುದರಿಂದ ರಾಜನಿಂದ ಹಿಡಿದು ಅಲ್ಪನಿಗಿಂತ ಅಲ್ಪನಾದ ಭೃತ್ಯನವರೆಗೆ ರಾಜಪುರುಷರಿಗೆ, ಅಪರಾಧ (ಮಾಡಿ)ದಲ್ಲಿ, ಪ್ರಜಾಜನರಿಗಿಂತ ಅಧಿಕವಾದ ಶಿಕ್ಷೆ ಸಿಕ್ಕಬೇಕು. (೩)

**ಮತ್ತು ಹಾಗೆಯೇ, ಯಾವನು ಸ್ವಲ್ಪ ವಿವೇಕಿಯಾಗಿದ್ದೂ ಕೂಡ ಕದಿಯುತ್ತಾನೋ, ಆ ಶೂದ್ರನಿಗೆ ಕಳುವಾದ ವಸ್ತುವಿನ ಬೆಲೆಗಿಂತ ಎಂಟರಷ್ಟೂ, ವೈಶ್ಯನಿಗೆ ಹದಿನಾರರಷ್ಟೂ, ಕ್ಷತ್ರಿಯನಿಗೆ ಮೂವತ್ತೆರಡರಷ್ಟೂ.** (೪)

**ಬ್ರಾಹ್ಮಣನಿಗೆ ಅರವತ್ತುನಾಲ್ಕರಷ್ಟೂ, ಅಥವಾ ನೂರರಷ್ಟೂ, ಇಲ್ಲವೇ ನೂರಇಪ್ಪತ್ತೆಂಟರಷ್ಟೂ ದಂಡ ವಿಧಿಸಬೇಕು. ಎಂದರೆ–ಯಾವನ ಜ್ಞಾನ ಹಾಗು ಪ್ರತಿಷ್ಠೆ ಎಷ್ಟು ಅಧಿಕವಾಗಿರುವುದೋ, ಅವನಿಗೆ ಅಪರಾಧ (ಮಾಡಿ)ದಲ್ಲಿ ಅಷ್ಟೇ ಅಧಿಕ ದಂಡ ಬೀಳಬೇಕು.** (೫)

---

೩೨. ಈಗ ೧/೧೦೦ ರೂಪಾಯಿ. –ಸಂ.

೩೩. ಮೇಲೆ ಹೇಳಿರುವ ವ್ಯಾಖ್ಯಾನಗಳು ಮೂಲ ಶ್ಲೋಕಗಳಲ್ಲಿಲ್ಲ.

ರಾಜ್ಯದ ಅಧಿಕಾರಿಗಳೂ, ಧರ್ಮ ಮತ್ತು ಸಂಪತ್ತನ್ನು ಬಯಸುವ ರಾಜನೂ, ಬಲಾತ್ಕಾರದಿಂದ ಕಾರ್ಯ ಮಾಡುವ ಸೂರೆಕೋರರಿಗೆ ದಂಡ ವಿಧಿಸುವುದರಲ್ಲಿ ಕ್ಷಣಮಾತ್ರವೂ ತಡಮಾಡಬಾರದು. (೬)

## ಸಾಹಸಿಕ ಪುರುಷನ ಲಕ್ಷಣ

ದುರ್ವಚನವಾಡುವವನಿಗಿಂತಲೂ, ಕದಿಯುವವನಿಗಿಂತಲೂ, ಅಪರಾಧವಿಲ್ಲದೆ ಶಿಕ್ಷಿಸುವವನಿಗಿಂತಲೂ ಕೂಡ, ಯಾವನು ಸಾಹಸದಿಂದ ಎಂದರೆ ಬಲಾತ್ಕಾರದಿಂದ ಕಾರ್ಯಮಾಡುವವನಾಗಿದ್ದಾನೋ, ಅವನು ಅತ್ಯಂತ ಪಾಪಿಯಾದ ದುಷ್ಟನಾಗಿದ್ದಾನೆ. (೭)

ಯಾವ ರಾಜನು 'ಸಾಹಸ'ದಲ್ಲಿ ತೊಡಗಿರುವ ಪುರುಷನಿಗೆ ಶಿಕ್ಷೆ ಕೊಡದೆ, ಸಹಿಸುತ್ತಾನೋ, ಆ ರಾಜನು ಶೀಘ್ರವೇ ನಾಶ ಹೊಂದುತ್ತಾನೆ ಮತ್ತು ರಾಜ್ಯದಲ್ಲಿ ದ್ವೇಷ ಉದ್ಭವಿಸುತ್ತದೆ. (೮)

ಮೈತ್ರಿಯಿಂದಾಗಲೀ, ಮತ್ತು ಪುಷ್ಕಳವಾದ ಧನದ ಪ್ರಾಪ್ತಿಯಿಂದಲೇ ಆಗಲಿ, ರಾಜನು ಸರ್ವ ಜೀವರಿಗೂ ದುಃಖಕೊಡುವ ಸಾಹಸಿಕನಾದ ಮಾನವನನ್ನು ಬಂಧಿಸದೆ – ಭೇದಿಸದೆ ಎಂದಿಗೂ ಬಿಡಬಾರದು. (೯)

ಗುರುವಾಗಿರಲಿ, ಪುತ್ರನೇ ಮೊದಲಾದ ಬಾಲಕರಾಗಿರಲಿ, ತಂದೆಯೇ ಮೊದಲಾದ ವೃದ್ಧರೇ ಆಗಿರಲಿ, ಬ್ರಾಹ್ಮಣನಾಗಿರಲಿ ಮತ್ತು ಶಾಸ್ತ್ರ ಮೊದಲಾದುವುಗಳನ್ನು ಬಹಳ ಆಲಿಸಿರುವವನೇ ಆಗಿರಲೊಲ್ಲನೇಕೆ, ಯಾರು ಧರ್ಮವನ್ನು ತ್ಯಜಿಸಿ, ಅಧರ್ಮದಲ್ಲಿ ನಿರತರಾಗಿ, ಅನ್ಯರನ್ನು ಅಪರಾಧವಿಲ್ಲದಿದ್ದರೂ ಕೊಲ್ಲುವವರಾಗಿರುತ್ತಾರೋ, ಅವರನ್ನು ಆಲೋಚಿಸದೆ ಕೊಂದುಬಿಡಬೇಕು; ಎಂದರೆ ಸಂಹರಿಸಿ, ಆ ಮೇಲೆ ಆಲೋಚಿಸಬೇಕು. (೧೦)

ಎಲ್ಲರಿಗೂ ಕಾಣಿಸುವಂತೆಯೇ ಆಗಲಿ, ಮುಚ್ಚುಮರೆಯಲ್ಲೇ ಆಗಲಿ, ದುಷ್ಟ ಪುರುಷರನ್ನು ಕೊಲ್ಲುವುದರಲ್ಲಿ, ಕೊಲ್ಲುವವನಿಗೆ ಪಾಪ ಬರುವುದಿಲ್ಲ; ಏಕೆಂದರೆ – ಕ್ರೋಧಿಯನ್ನು ಕ್ರೋಧದಿಂದ ಕೊಲ್ಲುವುದು ಕ್ರೋಧದೊಂದಿಗೆ ಕ್ರೋಧದ ಸಂಘರ್ಷವೇ ಸರಿ. (೧೧)

ಯಾವ ರಾಜನ ರಾಜ್ಯದಲ್ಲಿ **ಕಳ್ಳನಿಲ್ಲವೋ, ಪರಸ್ತ್ರೀಗಾಮಿಯಿಲ್ಲವೋ, ಕೆಟ್ಟ ಮಾತುಗಳನ್ನಾಡುವವನಿಲ್ಲವೋ, ಸಾಹಸಿಕನಾದ ದರೋಡೆಕೋರನಿಲ್ಲವೋ ಮತ್ತು ದಂಡಘ್ನನು** – ಎಂದರೆ ರಾಜನ ಆಜ್ಞೆಯನ್ನು ಭಂಗಿಸುವವನಿಲ್ಲವೋ, ಆ ರಾಜನು ಅತ್ಯಂತ ಶ್ರೇಷ್ಠನು.[೩೪]

**ಭರ್ತಾರಂ ಲಂಘಯೇದ್ಯಾಸ್ತ್ರೀ ಸ್ವಜ್ಞಾತಿಗುಣದರ್ಪಿತಾ ।**

**ತಾಂ ಶ್ವಭಿಃ ಖಾದಯೇದ್ರಾಜಾ ಸಂಸ್ಥಾನೇ ಬಹುಸಂಸ್ಥಿತೇ ॥ ೧ ॥**

**ಪುಮಾಂಸಂ ದಾಹಯೇತ್ಪಾಪಂ ಶಯನೇ ತಪ್ತ ಆಯಸೇ।**

**ಅಭ್ಯಾದಧ್ಯುಶ್ಚ ಕಾಷ್ಠಾನಿ ತತ್ರ ದಹ್ಯೇತ ಪಾಪಕೃತ್ ॥ ೨ ॥** (ಮನು:– ೮.೩೭೧–೩೭೨)

---

೩೪. ಮನುವಿನ ಮೂಲ ಶ್ಲೋಕದಲ್ಲಿ ಇಂತಹ ಕೆಡುಕರಿಗೆ ಕೊಡಲ್ಪಟ್ಟಿರುವ ಹೆಸರು 'ಅತತಾಯಿ' – ಎಂದು. ಶುಕ್ರನೀತಿಯಲ್ಲಿ ಅತತಾಯಿಗಳನ್ನು ಹೀಗೆ ಎಣಿಸಿದ್ದಾರೆ.:–

ಅಗ್ನಿದೋ ಗರದಶ್ಚೈವಶಸ್ತ್ರೋನ್ಮತ್ತೋ ಧನಾಪಹ।

ಕ್ಷೇತ್ರದಾರಹರಶ್ಚೈವ ಷಡ್ವಿದ್ಯಾದಾತಾಯಿನಃ ॥

–ಬೆಂಕಿ ಹಾಕುವವನು, ವಿಷ ಹಾಕುವವನು, ಶಸ್ತ್ರಧಾರಿಯಾದ ಉನ್ಮತ್ತನು, ಧನವನ್ನು ಕದಿಯುವವನು, ಭೂಮಿಯನ್ನು ಕದಿಯುವವನು, ಮತ್ತು ಪತ್ನಿಯನ್ನು ಅಪಹರಿಸುವವನು, ಈ ಆರೂ ಮಂದಿ ಅತತಾಯಿಗಳು.–ಅನು.

ಈ ಬಗ್ಗೆ ರಾಜಾ ಅಶ್ವಪತಿಯೂ ಈ ರೀತಿಯಾಗಿಯೇ ಘೋಷಣೆ ಮಾಡುತ್ತಾನೆ.–

"ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪಃ।

ನಾನಾ ಹಿತಾಗ್ನಿರ್ನಾವಿದ್ವಾನ್ ನ ಸ್ವೈರಿಣೀ ಕುತಃ ॥ [ಛಾಂದೋಗ್ಯೋಪನಿಷತ್; ೫.೧೧.೫]

–ಎಂದರೆ, ನನ್ನ ರಾಜ್ಯದಲ್ಲಿ ಕಳ್ಳನಿಲ್ಲ, ಜಿಪುಣನಿಲ್ಲ, ಹೆಂಡ ಕುಡಿಯುವವನಿಲ್ಲ. ಅಗ್ನಿಹೋತ್ರ ಮಾಡದವನಿಲ್ಲ. ಅವಿದ್ವಾಂಸನಿಲ್ಲ. ವ್ಯಭಿಚಾರಿ ಪುರುಷನೂ ಕೂಡ ಇಲ್ಲ. ಮತ್ತೆ, ವ್ಯಭಿಚಾರಿಣಿ ಸ್ತ್ರೀ ಎಲ್ಲಿಂದ ಬರಬೇಕು? –ಸಂ.

**ದೀರ್ಘಾಧ್ವನಿ ಯಥಾದೇಶಂ ಯಥಾಕಾಲಂ ತರೋ ಭವೇತ್।**

**ನದೀ ತೀರೇಷು ತದ್ವಿದ್ಯಾತ್ಸಮುದ್ರೇ ನಾಸ್ತಿ ಲಕ್ಷಣಮ್ ॥ ೩ ॥** (ಮನು:– ೮.೪೦೬)

**ಅಹನ್ಯಹನ್ಯವೇಕ್ಷೇತ ಕರ್ಮಾಂತಾನ್ವಾಹನಾನಿ ಚ।**

**ಆಯವ್ಯಯೌ ಚ ನಿಯತಾವಾಕರಾನ್ ಕೋಶಮೇವ ಚ ॥ ೪ ॥**

**ಏವಂ ಸರ್ವಾನಿಮಾನ್ ರಾಜಾ ವ್ಯವಹಾರಾಂತಮಾಪಯನ್।**

**ವ್ಯಪೋಹ್ಯ ಕಿಲ್ಬಿಷಂ ಸರ್ವಂ ಪ್ರಾಪ್ನೋತಿ ಪರಮಾಂ ಗತಿಮ್ ॥ ೫ ॥** (ಮನು:– ೮. ೪೧೯–೪೨೦)

ಯಾವ ಸ್ತ್ರೀಯು ತನ್ನ ಜಾತಿ ಮತ್ತು ಗುಣದ ಗರ್ವದಿಂದ, ಪತಿಯನ್ನು ಬಿಟ್ಟು ವ್ಯಭಿಚಾರ ಮಾಡುತ್ತಾಳೋ, ಅವಳನ್ನು ಬಹುಜನ ಸ್ತ್ರೀಯರ ಮತ್ತು ಪುರುಷರ ಮುಂದೆ, ಜೀವಂತಳಾಗಿರುವಾಗಲೇ ರಾಜನು ನಾಯಿಗಳಿಂದ ಕಚ್ಚಿಸಿ ತಿನ್ನಿಸಿಬಿಡಬೇಕು. (೧)

ಅದೇ ರೀತಿ, ತನ್ನ ಪತ್ನಿಯನ್ನು ಬಿಟ್ಟು (ಯಾವ ಪುರುಷನು) ಪರಸ್ತ್ರೀ–ಗಮನವನ್ನು ಅಥವಾ ವೇಶ್ಯಾಗಮನವನ್ನು ಮಾಡುತ್ತಾನೋ, ಆ ಪಾಪಿಯನ್ನು, ಕಬ್ಬಿಣದ ಮಂಚವನ್ನು ಬೆಂಕಿಯಲ್ಲಿ ಕಾಯಿಸಿ, ಕೆಂಪಾಗಿ ಮಾಡಿ, ಅದರ ಮೇಲೆ ಮಲಗಿಸಿ, ಜೀವಂತನಾಗಿರುವಾಗಲೇ ಬಹುಜನ ಪುರುಷರ ಎದುರಿಗೆ ಬೂದಿಮಾಡಿಬಿಡಬೇಕು. (೨)

**ಪ್ರಶ್ನೆ:** ರಾಜನಾಗಲಿ, ರಾಣಿಯಾಗಲಿ, ನ್ಯಾಯಾಧೀಶನಾಗಲಿ, ಅವನ ಸ್ತ್ರೀಯಾಗಲಿ, ವ್ಯಭಿಚಾರ ಮೊದಲಾದ ಕುಕರ್ಮಗಳನ್ನು ಮಾಡಿದರೆ, ಅವನಿಗೆ ಅಥವಾ ಅವಳಿಗೆ ಯಾವನು ಶಿಕ್ಷೆಕೊಡಬೇಕು?

**ಉತ್ತರ:**– ಸಭೆ; ಆದರೆ–ಅವರಿಗಂತೂ ರಾಜಪುರುಷರಿಗಿಂತಲೂ ಅಧಿಕವಾದ ಶಿಕ್ಷೆ ಆಗಬೇಕು.

**ಪ್ರಶ್ನೆ:**– ರಾಜ–ಮೊದಲಾದವರು ಅವರಿಂದ ಶಿಕ್ಷೆಯನ್ನೇಕೆ ತೆಗೆದುಕೊಳ್ಳುವರು?

**ಉತ್ತರ:– ರಾಜನೂ ಕೂಡ ಒಬ್ಬ ಪುಣ್ಯಾತ್ಮನೂ, ಭಾಗ್ಯಶಾಲಿಯೂ ಆದ ಮನುಷ್ಯನೇ[೩೫] ಸರಿ. ಯಾವಾಗ ಅವನಿಗೇ ಶಿಕ್ಷೆ ಕೊಡಲ್ಪಡುವುದಿಲ್ಲವೋ ಮತ್ತು ಅವನು ಗ್ರಹಿಸುವುದಿಲ್ಲರೋ, ಆಗ ಅನ್ಯಮಾನವರು ಶಿಕ್ಷೆಯನ್ನೇಕೆ ಅಂಗೀಕರಿಸುವರು? ಸಮಸ್ತ ಪ್ರಜೆಗಳೂ ಮತ್ತು ಪ್ರಧಾನ ರಾಜ್ಯಾಧಿಕಾರಿಗಳೂ ಹಾಗೂ ಸಭೆಯೂ ಕೂಡ ಧಾರ್ಮಿಕತ್ವದಿಂದ ಶಿಕ್ಷೆ ಕೊಡಲು ಅಪೇಕ್ಷಿಸಿದರೆ, ರಾಜನೊಬ್ಬನು ಏನು ಮಾಡಬಲ್ಲನು?** "ಇಂತಹ ವ್ಯವಸ್ಥೆಯಿಲ್ಲದೇ ಹೋದರೆ, ರಾಜನೂ, ಪ್ರಧಾನನೂ, ಮತ್ತು ಸರ್ವಸಮರ್ಥ ಪುರುಷರೂ ಅನ್ಯಾಯದಲ್ಲಿ ಮುಳುಗಿ, ನ್ಯಾಯ–ಧರ್ಮವನ್ನು ಮುಳುಗಿಸಿ, ಪ್ರಜೆಗಳೆಲ್ಲರ ನಾಶವನ್ನೂ ಮಾಡಿ, ತಾವೂ ನಾಶವಾಗಿ ಹೋಗುವರು." ಎಂದರೆ–ನ್ಯಾಯಯುಕ್ತವಾದ ದಂಡಕ್ಕೇ 'ರಾಜ' ಮತ್ತು 'ಧರ್ಮ' ಎಂದು ಹೆಸರು–ಎನ್ನುವ ಆ ಶ್ಲೋಕದ ಅರ್ಥವನ್ನು ಸ್ಮರಿಸಿರಿ. ಯಾವನು ಅದಕ್ಕೆ ಲೋಪ ತರುತ್ತಾನೋ, ಅವನಿಗಿಂತ ನೀಚನಾದ ಪುರುಷನು ಇನ್ನಾವನು ಇರಬಹುದು?

**ಪ್ರಶ್ನೆ:**– ಈ ಕಠೋರ ಶಿಕ್ಷೆಯಿರುವುದು ಉಚಿತವಲ್ಲ; ಏಕೆಂದರೆ–ಮಾನವನು ಯಾವ ಅಂಗದ ನಿರ್ಮಾತೃವೂ ಅಥವಾ ಜೀವನಪ್ರದನೂ ಅಲ್ಲ, ಆದುದರಿಂದ–ಇಂತಹ ಶಿಕ್ಷೆಕೊಡಬಾರದು.

**ಉತ್ತರ:**– ಯಾರು ಇದನ್ನು ಕಠೋರ ಶಿಕ್ಷೆಯೆಂದು ತಿಳಿಯುತ್ತಾರೋ, ಅವರು 'ರಾಜನೀತಿ'ಯನ್ನು ಬಲ್ಲವರಲ್ಲ. ಏಕೆಂದರೆ–ಒಬ್ಬ ಪುರುಷನಿಗೆ ಈ ಪ್ರಕಾರ ಶಿಕ್ಷೆಯಾಗುವುದರಿಂದ, ಎಲ್ಲ ಜನರೂ ಕೆಟ್ಟ ಕೆಲಸ ಮಾಡುವುದರಿಂದ ದೂರವಿರುವರು ಮತ್ತು ದುಷ್ಕರ್ಮವನ್ನು ಬಿಟ್ಟು ಧರ್ಮಮಾರ್ಗದಲ್ಲಿ ಸ್ಥಿತರಾಗಿರುವರು. ಸತ್ಯವೇನೆಂದು ಕೇಳುವಿರಾದರೆ, ಇದೇ ಕಡಿಮೆ ಶಿಕ್ಷೆ; ಏಕೆಂದರೆ–ಈ ಶಿಕ್ಷೆ, ಎಲ್ಲರಿಗೂ ಹಂಚಿದರೆ ಸಾಸಿವೆಯಷ್ಟೂ ಕೂಡ (ಒಂದೊಂದು ವ್ಯಕ್ತಿಯ ಪಾಲಿಗೆ) ಬರುವುದಿಲ್ಲ. ಮತ್ತು ಹಗುರವಾದ ಶಿಕ್ಷೆ ಕೊಡಲ್ಪಟ್ಟರೆ, ದುಷ್ಟ ಕರ್ಮಗಳು ಬಹಳ ಹೆಚ್ಚಾಗಿ ಆಗಲಾರಂಭಿಸುತ್ತವೆ. ಯಾವುದನ್ನು ನೀವು ಹಗುರವಾದ ಶಿಕ್ಷೆ–ಎನ್ನುತ್ತೀರೋ ಅದು ಕೋಟ್ಯಂತರ ಪಾಲು ಅಧಿಕವಾಗುವುದರಿಂದ, ಕೋಟ್ಯಂತರ ಪಾಲು ಕಠೋರವಾಗುತ್ತದೆ. ಏಕೆಂದರೆ–ಯಾವಾಗ ಬಹುಜನ ಮಾನವರು ದುಷ್ಟ ಕರ್ಮವನ್ನು ಮಾಡುವರೋ, ಆಗ ಸ್ವಲ್ಪ ಸ್ವಲ್ಪವೇ ಆದರೂ ಶಿಕ್ಷೆ ಕೊಡಬೇಕಾಗುವುದು.

೩೫. ಎಂದರೆ, –ಪ್ರಜಾಹಿತ ಮಾಡುವ ಸೌಭಾಗ್ಯವನ್ನು ಪಡೆದವನು ಎಂದರ್ಥ. ಪಾಪವನ್ನೇ ಮಾಡದ ಪವಿತ್ರಾತ್ಮನೆಂದಲ್ಲ. –ಅನು.

ಎಂದರೆ-ಉದಾಹರಣೆಗೆ, ಒಬ್ಬನಿಗೆ ಒಂದು ಮಣದಷ್ಟು ಶಿಕ್ಷೆ ಸಿಕ್ಕಿತು; ಮತ್ತು ಇನ್ನೊಬ್ಬನಿಗೆ ಪಾವಿನಷ್ಟು ಮಾತ್ರ-ಎಂದು ಭಾವಿಸಿರಿ. ಆಗ ಒಟ್ಟು ಶಿಕ್ಷೆ ಒಂದು ಮಣ ಮತ್ತು ಒಂದು ಪಾವು ಆಯಿತು. ಅವರಿಬ್ಬರಲ್ಲಿ ಒಬ್ಬೊಬ್ಬನ ಪಾಲಿಗೆ ೨೦ ಸೇರು ಅರ್ಧ ಪಾವು ಶಿಕ್ಷೆ ಸಿಕ್ಕಿತು. ಇಂತಹ ಹಗುರವಾದ ಶಿಕ್ಷೆಯನ್ನು ದುಷ್ಟ ಜನರು ಏನೆಂದು ತಿಳಿದಾರು? ಒಬ್ಬನಿಗೆ ಒಂದು ಮಣ ಮತ್ತು ಸಾವಿರ ಜನಕ್ಕೆ ಪಾವು-ಪಾವಿನಷ್ಟು ಶಿಕ್ಷೆಯಾದಲ್ಲಿ, ಆರೂಕಾಲು ಮಣ ಶಿಕ್ಷೆ ಮಾನವ ಜಾತಿಗೆ ಆಗುವುದರಿಂದ ಇದೇ ಅಧಿಕ ಮತ್ತು ಕಠೋರ ಮತ್ತು ಆ ಒಂದು ಮಣ ಶಿಕ್ಷೆಯೇ ಕಡಿಮೆ ಮತ್ತು ಹಗುರವಾಗಿರುತ್ತದೆ.

ದೀರ್ಘವಾದ ಮಾರ್ಗದಲ್ಲಿ, ಸಮುದ್ರದ ಖಾರಿಗಳಲ್ಲಿ, ನದಿಗಳಲ್ಲಿ ಅಥವಾ ನದಗಳಲ್ಲಿ, ದೇಶವೆಷ್ಟು ದೀರ್ಘವೋ ಅದಕ್ಕೆ ಅನುಗುಣವಾಗಿ ತೆರಿಗೆಯನ್ನು ನೇಮಿಸಬೇಕು. ಮತ್ತು ಮಹಾ ಸಮುದ್ರದಲ್ಲಿ ತೆರಿಗೆ ನಿಶ್ಚಿತವಾಗಿ ನಿರ್ಧರಿಸಲಾಗುವುದಿಲ್ಲ. ಆದರೆ, ರಾಜನೂ ಮತ್ತು ಸಮುದ್ರದಲ್ಲಿ ದೊಡ್ಡ ದೊಡ್ಡ ಹಡಗುಗಳನ್ನು ನಡೆಸುವವರೂ, ಇಬ್ಬರೂ ಕೂಡ ಲಾಭಯುಕ್ತರಾಗುವಂತೆ, ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆಮಾಡಬೇಕು. ಮತ್ತು ಯಾರು "ಮೊದಲು ಹಡಗುಗಳು ಓಡಾಡುತ್ತಿರಲಿಲ್ಲ- ಎನ್ನುತ್ತಾರೋ, ಅವರು "ಅಸತ್ಯವಾದಿಗಳು" - ಎಂಬುದನ್ನು ಗಮನಿಸಬೇಕು." ಮತ್ತು ದೇಶ-ದೇಶಾಂತರಗಳಿಗೂ ದ್ವೀಪ-ದ್ವೀಪಾಂತರಗಳಿಗೂ ಹಡಗುಗಳಿಂದ ಹೋಗುವ, ತನ್ನ ಪ್ರಜೆಗಳಲ್ಲಿನ ಜನರಿಗೆ ಎಲ್ಲೆಡೆಯೂ ರಕ್ಷಣೆಯಿತ್ತು, ಅವರಿಗೆ ಯಾವ ಬಗೆಯ ದುಃಖವನ್ನೂ ಆಗಗೊಡಬಾರದು. (೩)

ರಾಜನು ಪ್ರತಿದಿನವೂ ಕಾರ್ಯಗಳ ಪೂರ್ಯೆಕೆಯನ್ನೂ, ಆನೆಗಳು, ಕುದುರೆಗಳು- ಮೊದಲಾದ ವಾಹನಗಳನ್ನೂ, ನಿಯತವಾದ ಆದಾಯ ಮತ್ತು ವೆಚ್ಚವನ್ನೂ, 'ಆಕರಗಳು' - ಎಂದರೆ ರತ್ನ - ಮೊದಲಾದುವುಗಳ ಗಣಿಗಳನ್ನೂ, ಮತ್ತು ಕೋಶವನ್ನೂ ಅವಲೋಕಿಸುತ್ತಿರಬೇಕು. (೪)

ರಾಜನು ಈ ರೀತಿ ಸರ್ವ ವ್ಯವಹಾರಗಳನ್ನೂ ಯುಕ್ತವಾದ ಕ್ರಮದಲ್ಲಿ ಪೂರ್ಣಮಾಡಿಸುತ್ತಾ, ಸರ್ವಪಾಪಗಳನ್ನು ಬಿಡಿಸಿ, ಪರಮ ಗತಿಯಾದ ಮೋಕ್ಷದ ಆನಂದವನ್ನು ಗಳಿಸುತ್ತಾನೆ. (೫)

**ಪ್ರಶ್ನೆ :**- ಸಂಸ್ಕೃತ ವಿದ್ಯೆಯಲ್ಲಿ ಪೂರ್ಣ-ಪೂರ್ಣವಾದ ರಾಜನೀತಿಯಿದೆಯೋ, ಅಥವಾ ಅರ್ಧಂಬರ್ಧವೋ?

ಉತ್ತರ:- "ಪೂರ್ಣವಾದುದು. ಏಕೆಂದರೆ-ಭೂಮಂಡಲದಲ್ಲಿ ಯಾವ ಯಾವ ರಾಜನೀತಿ ಹೊರಟಿದೆಯೋ, ಮತ್ತು ಹೊರಡುವುದೋ, ಅದೆಲ್ಲವನ್ನೂ ಸಂಸ್ಕೃತ ವಿದ್ಯೆಯಿಂದಲೇ ತೆಗೆದುಕೊಂಡಿದ್ದಾರೆ." ಮತ್ತು ಯಾವುದರ ಬಗೆಗೆ ಪ್ರತ್ಯಕ್ಷವಾದ ಲೇಖನವಿಲ್ಲವೋ, ಅವುಗಳ ವಿಷಯದಲ್ಲಿ, **"ಪ್ರತ್ಯಹಂ ಲೋಕದೃಷ್ಟೈಶ್ಚ ಹೇತುಭಿಃ ॥"** (ಮನು:- ೮.೩) ಯಾವ ಯಾವ ನಿಯಮಗಳು ರಾಜನಿಗೆ ಮತ್ತು ಪ್ರಜೆಗಳಿಗೆ ಸುಖಕಾರಕವೂ, ಧರ್ಮಯುಕ್ತವೂ ಆಗಿವೆಯೆಂದು ತಿಳಿಯುತ್ತಾರೋ, ಆ ನಿಯಮಗಳನ್ನು ಪೂರ್ಣವಿದ್ವಾಂಸರ ರಾಜಸಭೆಯು ರೂಪಿಸುತ್ತಾ ಹೋಗಬೇಕು. (ಬಾಲವಿವಾಹ ಮತ್ತು ಬಹುವಿವಾಹ ಸರ್ವಥಾ ನಿಲ್ಲಬೇಕು) ಆದರೆ, ಎಲ್ಲಿಯವರೆಗೆ ಸಾಧ್ಯವೋ, ಅಲ್ಲಿಯವರೆಗೆ, "ಬಾಲ್ಯಾವಸ್ಥೆಯಲ್ಲಿ ವಿವಾಹವನ್ನು ಆಗಗೊಡಬಾರದು"-ಎಂಬುದರ ಕಡೆ ನಿತ್ಯವೂ ಗಮನವಿಡಬೇಕು. ಯುವಾವಸ್ಥೆಯಲ್ಲಿಯೂ ಕೂಡ ಪ್ರಸನ್ನತೆಯಿಲ್ಲದೆ ವಿವಾಹ ಮಾಡಬಾರದು; ಮಾಡಿಸಬಾರದು ಮತ್ತು ಮಾಡಗೊಡಬಾರದು. ಯುಕ್ತವಾದ ರೀತಿಯಲ್ಲಿ ಬ್ರಹ್ಮಚರ್ಯವನ್ನು ಸೇವಿಸಬೇಕು ಮತ್ತು ಸೇವನೆಮಾಡಿಸಬೇಕು. ಶರೀರದಲ್ಲಿ ಮತ್ತು ಆತ್ಮನಲ್ಲಿ ಪೂರ್ಣ ಬಲವು ಸದಾ ಇರುವಂತೆ, "ವ್ಯಭಿಚಾರ ಮತ್ತು ಬಹುವಿವಾಹವನ್ನು" ನಿರೋಧಿಸಬೇಕು. "ಏಕೆಂದರೆ, ಕೇವಲ ಆತ್ಮನ ಬಲವನ್ನೇ, ಎಂದರೆ ವಿದ್ಯಾ-ಜ್ಞಾನವನ್ನೇ ವರ್ಧಿಸಿಕೊಳ್ಳುತ್ತಾ ಹೋದಲ್ಲಿ ಮತ್ತು ಶರೀರದ ಬಲವನ್ನು ವರ್ಧಿಸದಿದ್ದಲ್ಲಿ, ಒಬ್ಬನೇ ಒಬ್ಬ ಬಲಶಾಲೀ ಪುರುಷನು ನೂರಾರು ಜನ ಜ್ಞಾನಿಗಳನ್ನು ಮತ್ತು ವಿದ್ವಾಂಸರನ್ನು ಜಯಿಸಬಲ್ಲನು." ಮತ್ತು ಕೇವಲ ಶರೀರದ ಬಲವೇ ವರ್ಧಿಸಲ್ಪಟ್ಟು, ಆತ್ಮಬಲವನ್ನು ವರ್ಧಿಸದಲ್ಲಿ ಕೂಡ, ರಾಜ್ಯಪಾಲನದ ಉತ್ತಮ ವ್ಯವಸ್ಥೆಯು ವಿದ್ಯೆಯಿಲ್ಲದೆ ಎಂದಿಗೂ ಆಗಲಾರದು. "ವ್ಯವಸ್ಥೆಯಿಲ್ಲದಿದ್ದರೆ, ಎಲ್ಲರೂ ಪರಸ್ಪರ ನುಚ್ಚು-ನೂರಾಗಿ, ವಿರೋಧ, ಹೋರಾಟ-ಜಗಳ ಮಾಡಿಕೊಂಡು ನಷ್ಟ-ಭ್ರಷ್ಟರಾಗಿ ಹೋಗುವರು." ಆದುದರಿಂದ ಯಾವಾಗಲೂ ಶರೀರದ ಮತ್ತು ಆತ್ಮನ ಬಲವನ್ನು ಹೆಚ್ಚಿಸಿಕೊಳ್ಳುತ್ತಾ ಇರಬೇಕು. ವ್ಯಭಿಚಾರ ಮತ್ತು ಅತಿವಿಷಯಾ ಸಕ್ತಿಯಂತೆ ಬಲದ ಮತ್ತು ಬುದ್ಧಿಯ ನಾಶಕವಾದ ವ್ಯವಹಾರ ಬೇರೆ ಇನ್ನಾವುದೂ ಇಲ್ಲ. ವಿಶೇಷತಃ ಕ್ಷತ್ರಿಯರು ದೃಢಾಂಗರೂ ಮತ್ತು ಬಲಯುಕ್ತರೂ ಆಗಿರಬೇಕು. ಏಕೆಂದರೆ-ಸ್ವತಃ ಅವರೇ ವಿಷಯಾಸಕ್ತರಾಗಿದ್ದರೆ, ರಾಜಧರ್ಮವೇ ನಾಶವಾಗಿ ಹೋಗುವುದು. ಮತ್ತು **"ಯಥಾ ರಾಜಾ ತಥಾ ಪ್ರಜಾ"** [೩೬] -"ರಾಜನು ಹೇಗಿರುತ್ತಾನೋ, ಅವನ ಪ್ರಜೆಗಳೂ ಹಾಗೆಯೇ

೩೬. ಚಾಣಕ್ಯ ನೀತಿ ದರ್ಪಣ ೧೩/೮ -ಯು.ಮೀ.

ಇರುತ್ತಾರೆ." – ಎಂಬುದರ ಮೇಲೆಯೂ ಗಮನವಿಡಬೇಕು. ಆದುದರಿಂದ, ಎಂದಿಗೂ ದುಷ್ಟಾಚಾರ ಮಾಡದೆ, ಸರ್ವದಿನಗಳಲ್ಲಿಯೂ ಧರ್ಮ–ನ್ಯಾಯಗಳಲ್ಲಿ ವರ್ತಿಸಿ, ಸರ್ವರ ಸುಧಾರಣೆಗೆ ಆದರ್ಶವಾಗಿರುವುದು ರಾಜನಿಗೂ, ಮತ್ತು ರಾಜಪುರುಷರಿಗೂ ಕೂಡ ಅತಿ ಉಚಿತವಾಗಿರುತ್ತದೆ.

ಹೀಗೆ ಸಂಕ್ಷೇಪವಾಗಿ 'ರಾಜಧರ್ಮ'ದ ವರ್ಣನೆಯನ್ನು ಇಲ್ಲಿ ಮಾಡಿದ್ದೇವೆ. ವಿಶೇಷವಾಗಿ 'ವೇದಗಳು', 'ಮನುಸ್ಮೃತಿ'ಯ ಏಳನೆಯ, ಎಂಟನೆಯ ಮತ್ತು ಒಂಬತ್ತನೆಯ ಅಧ್ಯಾಯಗಳು, ಮತ್ತು 'ಶುಕ್ರನೀತಿ', ಹಾಗೂ 'ವಿದುರಪ್ರಜಾಗರ' ಮತ್ತು 'ಮಹಾಭಾರತದ ಶಾಂತಿಪರ್ವ'ದ ರಾಜಧರ್ಮ ಮತ್ತು ಅಪದ್ಧರ್ಮ ಮೊದಲಾದ ಪುಸ್ತಕಗಳಲ್ಲಿ ನೋಡಿ, "ಪೂರ್ಣ ರಾಜನೀತಿಯನ್ನು ಹೃದ್ಗತಮಾಡಿಕೊಂಡು, ಮಾಂಡಲಿಕ ಅಥವಾ ಸಾರ್ವಭೌಮ ಚಕ್ರವರ್ತೀ ರಾಜ್ಯವನ್ನು ಸ್ಥಾಪಿಸಬೇಕು."[೩೭] ಮತ್ತು **"ವಯಂ ಪ್ರಜಾಪತೇಃ ಪ್ರಜಾ ಅಭೂಮ"**.[೩೮] (ಯಜು:–೧೮.೨೯) – "ನಾವು ಪ್ರಜಾಪತಿಯ, ಎಂದರೆ ಪರಮೇಶ್ವರನ ಪ್ರಜೆಗಳು ಮತ್ತು ಪರಮಾತ್ಮನು ನಮ್ಮ ರಾಜ; ನಾವು ಅವನ ಕಿಂಕರರಂತೆ, ಭೃತ್ಯರಂತೆ ಇದ್ದೇವೆ"– ಎಂದು ತಿಳಿದುಕೊಳ್ಳಬೇಕು. ಅವನು ಕೃಪೆಮಾಡಿ, ತನ್ನ ಸೃಷ್ಟಿಯಲ್ಲಿ ನಮ್ಮನ್ನು ರಾಜ್ಯಾಧಿಕಾರಿಗಳನ್ನಾಗಿ ಮಾಡಲಿ ಮತ್ತು ನಮ್ಮ ಕೈಯಿಂದ ತನ್ನ ಸತ್ಯ–ನ್ಯಾಯದ ವರ್ತನವನ್ನು ಮಾಡಿಸಲಿ. ಈಗ, ಮುಂದೆ, ಈಶ್ವರನ ಮತ್ತು ವೇದಗಳ ವಿಷಯದಲ್ಲಿ ಬರೆಯಲ್ಪಡುವುದು.

**ಇತಿ ಶ್ರೀಮದ್ದಯಾನಂದಸರಸ್ವತೀಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ರಾಜಧರ್ಮವಿಷಯೇ**

**ಷಷ್ಠಃ ಸಮುಲ್ಲಾಸಃ ಸಂಪೂರ್ಣಃ**

---

೩೭. ಇದು ಅಂದಿನ ಪರಾಧೀನ ಭಾರತದ ಕ್ಷತ್ರಿಯ ರಾಜರುಗಳಿಗೆ ಕೊಟ್ಟಿರುವ ನಿರ್ದೇಶ. –ಸಂ

೩೮. ಇದೆಂತಹ ಅಪೂರ್ವ ಅಭಿಲಾಷೆ.! ಮತ್ತು ಈಶ್ವರನಲ್ಲಿ ಪ್ರಾರ್ಥನೆ! ಇಲ್ಲಿಂದ ಪ್ರೇರಣೆ ಪಡೆದೇ, ಆ ಕಾಲದ ಆರ್ಯಸಮಾಜಿಗಳು ಬ್ರಿಟಿಷರ ಅಡಳಿತವನ್ನು ವಿರೋಧಿಸಿ, ಕಾಂಗ್ರೆಸ್ಸಿನ ಧ್ವಜದಡಿಯಲ್ಲಿ ರಾಜನೀತಿಯನ್ನು ಪ್ರವೇಶಿಸಿ, ಭಾರತದ ಸ್ವಾಧೀನತೆಗೆ ಕಾರಣರಾದರು. –ಸಂ

# ಅಥ ಸಪ್ತಮ ಸಮುಲ್ಲಾಸಾರಂಭಃ

## ಅಥೇಶ್ವರವೇದವಿಷಯಂ ವ್ಯಾಖ್ಯಾಸ್ಯಾಮಃ

**ಋಚೋ ಅಕ್ಷರೇ ಪರಮೇ ವ್ಯೋಮನ್ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದುಃ।**

**ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ॥** (ಋಗ್ವೇದ :- ೧.೧೬೪.೩೯)

**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।**

**ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯ ಸ್ವಿದ್ಧನಮ್॥** (ಯಜುರ್ವೇದ :- ೪೦.೧)

**ಅಹಂ ಭುವಂ ವಸುನಃ ಪೂರ್ವ್ಯಸ್ಪತಿರಹಂ ಧನಾನಿ ಸಂಜಯಾಮಿ ಶಶ್ವತಃ।**

**ಮಾಂ ಹವಂತೇ ಪಿತರಂ ನ ಜಂತವೋಹಂ ದಾಶುಷೇ ವಿಭಜಾಮಿ ಭೋಜನಮ್॥** (ಋಗ್ವೇದ :- ೧೦.೪೮.೧)

**ಅಹಮಿಂದ್ರೋನ ಪರಾಜಿಗ್ಯ ಇದ್ಧನಂ ನ ಮೃತ್ಯವೇವತಸ್ಥೇ ಕದಾ ಚನ।**

**ಸೋಮಮಿನ್ಮಾ ಸುನ್ವಂತೋ ಯಾಚತಾವಸು ನ ಮೇ ಪೂರವಃ ಸಖ್ಯೇ ರಿಷಾಥನ॥** (ಋಗ್ವೇದ :- ೧೦.೪೮.೫)

**ಅಹಂ ದಾ ಗೃಣತೇ ಪೂರ್ವ್ಯಂ ವಸ್ವಹಂ ಬ್ರಹ್ಮ ಕೃಣವಂ ಮಹ್ಯಂ ವರ್ಧನಮ್।**

**ಅಹಂ ಭುವಂ ಯಜಮಾನಸ್ಯ ಚೋದಿತಾಯಜ್ವನಃ ಸಾಕ್ಷಿ ವಿಶ್ವಸ್ಮಿನ್ ಭರೇ॥** (ಋಗ್ವೇದ :- ೧೦.೪೯.೧)

(ಋಚೋ ಅಕ್ಷರೇ) ಈ ಮಂತ್ರದ ಅರ್ಥವನ್ನು ಬ್ರಹ್ಮಚರ್ಯಾಶ್ರಮದ ಶಿಕ್ಷಣದಲ್ಲಿ ಬರೆದೇ ಇದ್ದೇವೆ.[೧] ಯಾವನು ದಿವ್ಯ ಗುಣಕರ್ಮಸ್ವಭಾವಗಳಿಂದ ಯುಕ್ತನಾಗಿದ್ದಾನೋ, ಯಾವನಲ್ಲಿ ಪೃಥಿವೀ, ಸೂರ್ಯ ಮೊದಲಾದ ಲೋಕಗಳು ನೆಲೆಸಿವೆಯೋ, ಯಾವನು ಆಕಾಶದಂತೆ ವ್ಯಾಪಕನಾಗಿದ್ದಾನೋ, ಯಾವನು ಸಮಸ್ತ ದೇವತೆಗಳಿಗೂ ದೇವನಾದ ಪರಮೇಶ್ವರನಾಗಿದ್ದಾನೋ, ಅವನನ್ನು ಅರಿಯದ, ಅಂಗೀಕರಿಸದ ಮತ್ತು ಧ್ಯಾನಿಸದ, ನಾಸ್ತಿಕರಾದ ಮಂದಮತಿಗಳು ಸದಾ ದುಃಖಸಾಗರದಲ್ಲಿ ಮುಳುಗಿಯೇ ಇರುತ್ತಾರೆ. ಆದುದರಿಂದ, ಸರ್ವದಾ ಅವನನ್ನೇ ತಿಳಿದು ಸರ್ವಮಾನವರೂ ಸುಖಿಗಳಾಗುತ್ತಾರೆ.

**ಪ್ರಶ್ನೆ :-** ವೇದದಲ್ಲಿ ಈಶ್ವರರು ಅನೇಕರಿದ್ದಾರೆ[೨] – ಎಂದು ಹೇಳಿದೆ. ಈ ಮಾತನ್ನು ನೀವು ಒಪ್ಪುತ್ತೀರೋ, ಅಥವಾ ಇಲ್ಲವೋ?

**ಉತ್ತರ:-** ಒಪ್ಪುವುದಿಲ್ಲ. ಏಕೆಂದರೆ, ನಾಲ್ಕು ವೇದಗಳಲ್ಲಿ ಎಲ್ಲಿಯೂ ಅನೇಕ ಈಶ್ವರರು ಸಿದ್ಧವಾಗುವಂತಹುದೇನನ್ನೂ ಬರೆದಿಲ್ಲ. ಆದರೆ, ಈಶ್ವರನು ಒಬ್ಬನಿದ್ದಾನೆ ಎಂದೇನೋ ಬರೆದಿದೆ.

---

೧. ತೃತೀಯ ಸಮುಲ್ಲಾಸ ನೋಡಿರಿ.

೨. ಇದು ಐರೋಪ್ಯ ವಿದ್ವಾಂಸರ ಮತ.– ಯು.ಮೀ.
ಶತಪಥ ಬ್ರಾಹ್ಮಣ [೧೪.೬.೯.೩–೭] ಯು.ಮೀ

**ಪ್ರಶ್ನೆ :** – ವೇದಗಳಲ್ಲಿ ಯಾವ ಅನೇಕ ದೇವತೆಗಳ ವರ್ಣನೆಯನ್ನು ಬರೆದಿದ್ದಾರೋ, ಅದರ ಅಭಿಪ್ರಾಯವೇನು?

**ಉತ್ತರ:**– ದಿವ್ಯಗುಣಗಳಿಂದ ಯುಕ್ತರಾಗಿರುವ ಕಾರಣ 'ದೇವತೆಗಳು' ಹಾಗೆ ಎನಿಸುತ್ತಾರೆ. ಉದಾಹರಣೆಗೆ – ಪೃಥಿವೀ, ಆದರೆ ಇದನ್ನು ಎಲ್ಲಿಯೂ ಈಶ್ವರ ಅಥವಾ ಉಪಾಸನೀಯವೆಂದು ಅಂಗೀಕರಿಸಿಲ್ಲ. ನೋಡಿರಿ! ಈ ಮಂತ್ರದಲ್ಲಿಯೇ ಯಾವನಲ್ಲಿ ಎಲ್ಲ ದೇವತೆಗಳೂ ಸ್ಥಿತರಾಗಿದ್ದಾರೋ, ಅವನು ತಿಳಿದುಕೊಳ್ಳಲು ಮತ್ತು ಉಪಾಸನೆ ಮಾಡಲೂ ಯೋಗ್ಯನಾದ ಈಶ್ವರನೆಂದಿದೆ. 'ದೇವತಾ' ಶಬ್ದದಿಂದ ಈಶ್ವರನನ್ನು ಗ್ರಹಿಸುವುದು ಅವರ ದೋಷವಾಗಿದೆ. ಪರಮೇಶ್ವರನು ದೇವತೆಗಳಿಗೆಲ್ಲಾ ದೇವನಾಗಿರುವು ದರಿಂದಲೇ, ಅವನೇ ಸಮಸ್ತ ಜಗತ್ತಿನ ಉತ್ಪತ್ತಿ–ಸ್ಥಿತಿ–ಪ್ರಳಯಕರ್ತೃವೂ, ನ್ಯಾಯಾಧೀಶನೂ ಅಧಿಷ್ಠಾತೃವೂ ಆಗಿರುವುದರಿಂದಲೇ ಮಹಾದೇವನೆನಿಸುತ್ತಾನೆ. **"ತ್ರಯಸ್ತ್ರಿಂಶತ್ತ್ರಿಶತಾ"** ಮೊದಲಾದ ಪ್ರಮಾಣಗಳು ವೇದಗಳಲ್ಲಿವೆ. ಇದರ ವ್ಯಾಖ್ಯಾನವನ್ನು ಶತಪಥದಲ್ಲಿ[೩] ಮಾಡಿದ್ದಾರೆ. ಮೂವತ್ತ ಮೂರು ದೇವತೆಗಳು, ಎಂದರೆ–ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ, ಚಂದ್ರ, ಸೂರ್ಯ ಮತ್ತು ನಕ್ಷತ್ರಗಳು ಸಮಸ್ತ ಸೃಷ್ಟಿಯ ನಿವಾಸಸ್ಥಾನವಾಗಿರುವುದರಿಂದ **ಇವು ಅಷ್ಟವಸುಗಳು**; ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಮತ್ತು ಜೀವಾತ್ಮ – ಈ ಹನ್ನೊಂದೂ, ಶರೀರವನ್ನು ಬಿಡುವಾಗ ರೋದನಮಾಡಿಸುತ್ತವೆಯಾದಕಾರಣ **ಏಕಾದಶ ರುದ್ರರು**–ಎನಿಸುತ್ತವೆ. ಸಂವತ್ಸರದ ಹನ್ನೆರಡು ಮಾಸಗಳು ಸರ್ವರ ಆಯಸ್ಸನ್ನೂ ತೆಗೆದುಕೊಳ್ಳುತ್ತಾ ಹೋಗುವುದರಿಂದ **ದ್ವಾದಶ ಆದಿತ್ಯರು**ಗಳೆನಿಸುತ್ತವೆ. ಪರಮೈಶ್ವರ್ಯದ ಕಾರಣವಾಗಿರುವು ದರಿಂದ ವಿದ್ಯುತ್ತು **'ಇಂದ್ರ'**[೪] ಎಂಬ ಹೆಸರನ್ನು ಹೊಂದಿದೆ. ಯಜ್ಞವನ್ನು **ಪ್ರಜಾಪತಿ**–ಎನ್ನಲು ಕಾರಣವೇನೆಂದರೆ–ಅದರಿಂದ ವಾಯು, ವೃಷ್ಟಿ ಜಲ ಹಾಗು ಓಷಧಿಗಳ ಶುದ್ಧಿಯೂ, ವಿದ್ವಾಂಸರುಗಳ ಸತ್ಕಾರವೂ ಆಗಿ, ಮತ್ತು ನಾನಾಪ್ರಕಾರದ ಶಿಲ್ಪವಿದ್ಯೆಯ ಸಿದ್ಧಿಯಿಂದ ಪ್ರಜೆಗಳ ಪಾಲನವಾಗುತ್ತದೆ. ಈ ಮೂವತ್ತಮೂರು, ಮುನ್ನ ಹೇಳಿರುವ ಗುಣಗಳ ಯೋಗದಿಂದ 'ದೇವತೆ'[೫]ಗಳು ಎನಿಸುತ್ತವೆ. ಇವೆಲ್ಲವುಗಳ ಸ್ವಾಮೀಯೂ ಮತ್ತು ಎಲ್ಲಕಿಂತಲೂ ದೊಡ್ಡವನೂ ಆಗಿರುವುದರಿಂದ ಪರಮಾತ್ಮನು ಮೂವತ್ತ ನಾಲ್ಕನೆಯವನು; ಉಪಾಸ್ಯ ದೇವನು–ಎಂದು ಶತಪಥದ ಹದಿನಾಲ್ಕನೆಯ ಕಾಂಡದಲ್ಲಿ[೬] ಸ್ಪಷ್ಟವಾಗಿ ಬರೆದಿದೆ. ಹೀಗೆಯೇ ಬೇರೆಡೆಯೂ ಬರೆದಿದೆ. ಇವರು ಈ ಶಾಸ್ತ್ರಗಳನ್ನು ನೋಡಿದ್ದರೆ, ವೇದಗಳಲ್ಲಿ ಅನೇಕ ಈಶ್ವರರನ್ನು ಅಂಗೀಕರಿಸುವಂತಹ ಭ್ರಮಜಾಲದಲ್ಲಿ ಬಿದ್ದು ಮಾರ್ಗ ತಪ್ಪುತ್ತಿದ್ದರಾದರೂ ಏಕೆ? (೧)

ಓ ಮಾನವ! ಈ ವಿಶ್ವದಲ್ಲಿ ಯಾವುದೆಲ್ಲ ಜಗತ್ತಿದೆಯೋ, ಅದೆಲ್ಲದರಲ್ಲಿಯೂ ವ್ಯಾಪಕನಾಗಿ ಯಾವನು ನಿಯಂತೃ ವಾಗಿದ್ದಾನೋ, ಅವನು ಈಶ್ವರನೆನಿಸುತ್ತಾನೆ. ಅವನಿಗೆ ಹೆದರು; ನೀನು ಅನ್ಯಾಯದಿಂದ ಯಾವನದಾದರೂ ಧನದ ಆಕಾಂಕ್ಷೆ ಮಾಡಬೇಡ. ಆ ಅನ್ಯಾಯದ ತ್ಯಾಗದಿಂದ ಮತ್ತು ನ್ಯಾಯಾಚರಣವೆಂಬ ಧರ್ಮದಿಂದ, ತನ್ನ ಆತ್ಮನಿಂದ ಆನಂದವನ್ನು ಅನುಭವಿಸು. (೨)

ಈಶ್ವರನು ಎಲ್ಲರಿಗೂ – **"**ಓ ಮಾನವರೇ! ಈಶ್ವರನಾದ ನಾನು ಎಲ್ಲರಿಗಿಂತ ಮೊದಲು ಇದ್ದೆನು; ಎಲ್ಲ ಜಗತ್ತಿಗೂ ಪತಿಯಾಗಿದ್ದೇನೆ. ನಾನು ಸನಾತನ ಜಗತ್ಕಾರಣನೂ ಮತ್ತು ಸಮಸ್ತ ಧನಗಳ ವಿಜೇತೃವೂ ಹಾಗೂ ದಾತೃವೂ ಆಗಿದ್ದೇನೆ. ಹೇಗೆ ತಂದೆಯನ್ನು ಮಕ್ಕಳು ಕರೆಯುತ್ತಾರೋ, ಹಾಗೆ ನನ್ನನ್ನೇ ಸರ್ವಜೀವರೂ ಕರೆಯಲಿ. ನಾನು ಸರ್ವರಿಗೂ ಸುಖವನ್ನು ಕೊಡುವ ಜಗತ್ತಿಗೆ, ಪಾಲನೆಗಾಗಿ ನಾನಾಪ್ರಕಾರದ ಭೋಜನಗಳ ವಿಭಜನೆಯನ್ನು ಮಾಡುತ್ತೇನೆ**"**– ಎಂದು ಉಪದೇಶಮಾಡುತ್ತಾನೆ. (೩)

ನಾನು ಪರಮೈಶ್ವರ್ಯವಂತನು; ಸೂರ್ಯನಂತೆ ಸಮಸ್ತ ಜಗತ್ತಿನ ಪ್ರಕಾಶಕನಾಗಿದ್ದೇನೆ. ಎಂದಿಗೂ ಪರಾಜಯ ಹೊಂದುವುದಿಲ್ಲ. ನಾನೇ ಜಗತ್ತೆಂಬ ಧನದ ನಿರ್ಮಾತೃವಾಗಿದ್ದೇನೆ. ಸರ್ವಜಗದುತ್ಪಾದಕನು ನಾನೇ–ಎಂದು ತಿಳಿಯಿರಿ. ಹೇ ಜೀವರೇ! ಐಶ್ವರ್ಯ ಪ್ರಾಪ್ತಿಯ ಯತ್ನ ಮಾಡುತ್ತಾ ನೀವುಗಳು ವಿಜ್ಞಾನವೇ ಮೊದಲಾದ ಧನವನ್ನು ನನ್ನಿಂದ ಬೇಡಿರಿ. ಮತ್ತು ನೀವುಗಳು ನನ್ನ ಮೈತ್ರಿಯಿಂದ ಬೇರೆಯಾಗಬೇಡಿ. (೪)

ಹೇ ಮಾನವರೇ! ನಾನು ಸತ್ಯಭಾಷಣವೆಂಬ ಸ್ತುತಿಯನ್ನು ಮಾಡುವ ಮಾನವನಿಗೆ ಸನಾತನ ಜ್ಞಾನವೇ ಮೊದಲಾದ ಧನಗಳನ್ನು ಕೊಡುತ್ತೇನೆ. **"**ನಾನು ಬ್ರಹ್ಮ, ಎಂದರೆ–ವೇದಪ್ರಕಾಶಕನು; ಮತ್ತು ನನ್ನನ್ನು ಆ ವೇದ ಯಥಾವತ್ತಾಗಿ ವರ್ಣಿಸುತ್ತದೆ.**"**

---

೩. ಶತಪಥ ಬ್ರಾಹ್ಮಣ ೧೪.೬.೯.೩–೭ –ಯು.ಮೀ.

೪. ವಿದ್ಯುಚ್ಛಕ್ತಿಯ ಮಹತ್ತ್ವವನ್ನು ತಿಳಿಯದವರು ಯಾರು? –ಅನು.

೫. "ಯೋ ದೇವಃ ಸಾ ದೇವತಾ"–ಅನು.

೬. ಶತಪಥ ಬ್ರಾಹ್ಮಣ [೧೪.೬.೯.೧೦]

ಅದರ ಮೂಲಕ ನಾನು ಎಲ್ಲರ ಜ್ಞಾನವನ್ನೂ ಹೆಚ್ಚಿಸುತ್ತೇನೆ. "ನಾನು ಸತ್ಪುರುಷನ ಪ್ರೇರಕನು;" ಯಜ್ಞ ಮಾಡುವವನಿಗೆ ಫಲಪ್ರದಾತೃವು ಮತ್ತು ಈ ವಿಶ್ವದಲ್ಲಿ ಏನೇನಿದೆಯೋ, ಆ ಸಮಸ್ತ ಕಾರ್ಯದ ನಿರ್ಮಾಣವನ್ನೂ, ಧಾರಣವನ್ನೂ ಮಾಡುವವನಾಗಿದ್ದೇನೆ. ಆದುದರಿಂದ ನೀವುಗಳು ನನ್ನನ್ನು ಬಿಟ್ಟು, ಬೇರೆ ಇನ್ನೊಬ್ಬನನ್ನು ನನಗೆ ಬದಲಾಗಿ ಪೂಜಿಸಬೇಡಿ; ಅಂಗೀಕರಿಸಬೇಡಿ ಮತ್ತು ತಿಳಿಯಬೇಡಿ. (೫)

**ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ।**

**ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈದೇವಾಯಹವಿಷಾ ವಿಧೇಮ ॥ ೧ ॥** (ಯಜುರ್ವೇದ :– ೧೩.೪)

ಇದು ಯಜುರ್ವೇದದ ಮಂತ್ರ. ಹೇ ಮಾನವರೇ, ಯಾವನು ಸೃಷ್ಟಿಗೆ ಮೊದಲು ಸೂರ್ಯನೇ ಮೊದಲಾದ ಸಮಸ್ತ ತೇಜೋಮಯ ಲೋಕಗಳ ಉತ್ಪತ್ತಿ – ಸ್ಥಾನವೂ, ಆಧಾರವೂ ಮತ್ತು ಏನೆಲ್ಲಾ ಉತ್ಪನ್ನವಾಗಿದ್ದಿತೋ, ಆಗಿದೆಯೋ ಮತ್ತು ಆಗುವುದೋ, ಅದರ ಸ್ವಾಮಿಯೂ ಆಗಿದ್ದನೋ, ಆಗಿರುತ್ತಾನೋ ಹಾಗೂ ಆಗಿರುವನೋ, ಅವನು ಪೃಥಿವಿಯಿಂದ ಹಿಡಿದು ಸೂರ್ಯಲೋಕದವರೆಗಿನ ಸೃಷ್ಟಿಯನ್ನು, ರಚಿಸಿ, ಧಾರಣ ಮಾಡುತ್ತಿದ್ದಾನೆ. ಆ ಸುಖಸ್ವರೂಪನಾದ ಪರಮಾತ್ಮನ ಭಕ್ತಿಯನ್ನು ಹೇಗೆ ನಾವು ಮಾಡುತ್ತೇವೋ, ಹಾಗೆ ನೀವುಗಳೂ ಮಾಡಿರಿ. [೭]

**ಪ್ರಶ್ನೆ** :– ತಾವು 'ಈಶ್ವರ, ಈಶ್ವರ' ಎನ್ನುತ್ತೀರಿ. ಆದರೆ–ಅವನ ಸಿದ್ಧಿಯನ್ನು ಯಾವ ರೀತಿ ಮಾಡುತ್ತೀರಿ?

**ಉತ್ತರ** :– ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ.

**ಪ್ರಶ್ನೆ** :– ಈಶ್ವರನಿಗೆ ಪ್ರತ್ಯಕ್ಷ – ಮೊದಲಾದ ಪ್ರಮಾಣಗಳು ಎಂದಿಗೂ ಅನ್ವಯಿಸಲಾರವು.

**ಉತ್ತರ:– ಇಂದ್ರಿಯಾರ್ಥಸಂನಿಕರ್ಷೋತ್ಪನ್ನಂ ಜ್ಞಾನಮವ್ಯಪದೇಶ್ಯಮವ್ಯಭಿಚಾರಿ ವ್ಯವಸಾಯಾತ್ಮಕಂ ಪ್ರತ್ಯಕ್ಷಮ್ ॥**

ಇದು ಗೌತಮಮಹರ್ಷಿ ರಚಿತವಾದ 'ನ್ಯಾಯದರ್ಶನ' (೧.೪)ದ ಸೂತ್ರವಾಗಿದೆ. ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು ಮತ್ತು ಮನಸ್ಸಿನ ಸಂಬಂಧವು ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಸುಖ–ದುಃಖಗಳು, ಸತ್ಯಾಸತ್ಯಗಳು – ಈ ವಿಷಯ ಗಳೊಂದಿಗೆ ಆದಾಗ ಯಾವ ಜ್ಞಾನ ಉತ್ಪನ್ನವಾಗುತ್ತದೋ, ಅದನ್ನು ಪ್ರತ್ಯಕ್ಷವೆನ್ನುತ್ತಾರೆ; ಆದರೆ ಅದು ಭ್ರಮರಹಿತವಾಗಿರಬೇಕು. ಈಗ, ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ಗುಣಗಳ ಪ್ರತ್ಯಕ್ಷವಾಗುತ್ತದೆಯೇ ಹೊರತು, ಗುಣಿಯದಲ್ಲ–ಎಂದು ಆಲೋಚಿಸಬೇಕು. ಹೇಗೆ ಚರ್ಮವೇ ಮೊದಲಾದ ನಾಲ್ಕು ಇಂದ್ರಿಯಗಳಿಂದ ಸ್ಪರ್ಶ, ರೂಪ, ರಸ ಮತ್ತು ಗಂಧದ ಜ್ಞಾನ ಉಂಟಾಗುವುದರಿಂದ, ಗುಣಯುಕ್ತವಾದ ಯಾವ ಪೃಥಿವಿಯಿದೆಯೋ, ಅದರ ಪ್ರತ್ಯಕ್ಷವು ಆತ್ಮನಿಂದ ಯುಕ್ತವಾದ ಮನಸ್ಸಿನಿಂದ ಮಾಡಲ್ಪಡುತ್ತದೋ, ಹಾಗೆ, ಈ ಪ್ರತ್ಯಕ್ಷ ಸೃಷ್ಟಿಯಲ್ಲಿ ರಚನಾವಿಶೇಷವೇ ಮೊದಲಾದುದು, ಜ್ಞಾನ–ಮೊದಲಾದ ಗುಣಗಳಿಂದ ಪ್ರತ್ಯಕ್ಷವಾಗುವುದರಿಂದ, ಪರಮೇಶ್ವರನ ಪ್ರತ್ಯಕ್ಷವೂ ಸಿದ್ಧವೇ. ಮತ್ತು ಯಾವಾಗ ಮನಸ್ಸನ್ನು ಆತ್ಮನೂ ಮತ್ತು ಮನಸ್ಸು ಇಂದ್ರಿಯಗಳನ್ನು ಯಾವುದಾದರೂ ವಿಷಯದಲ್ಲಿ ನೆಲೆಗೊಳಿಸುತ್ತದೋ, ಅಥವಾ ಕಳ್ಳತನವೇ ಮೊದಲಾದ ಕೆಟ್ಟ ಅಥವಾ ಪರೋಪಕಾರ ಮೊದಲಾದ ಒಳ್ಳೆಯ ಕಾರ್ಯವನ್ನು ಮಾಡಲು ಯಾವ ಕ್ಷಣದಲ್ಲಿ ಆರಂಭಿಸುತ್ತಾನೋ, ಆಗ ಜೀವನ ಇಚ್ಛೆ, ಜ್ಞಾನ – ಮೊದಲಾದುವು ಅದೇ ಇಚ್ಛಿತವಾದ ವಿಷಯದ ಕಡೆಗೆ ಓಲುತ್ತವೆ. "ಅದೇ ಕ್ಷಣದಲ್ಲಿ, ಆತ್ಮನ ಒಳಗಿನಿಂದ, ಕೆಟ್ಟ ಕೆಲಸ ಮಾಡುವಲ್ಲಿ ಭಯ, ಸಂಶಯ ಮತ್ತು ನಾಚಿಕೆಯೂ, ಒಳ್ಳೆಯ ಕೆಲಸಗಳನ್ನು ಮಾಡುವಲ್ಲಿ ಅಭಯ, ನಿಃಸಂಶಯತ್ವ ಮತ್ತು ಆನಂದೋತ್ಸಾಹವೂ ಉಕ್ಕಿ ಬರುತ್ತವೆ. ಅದು ಜೀವಾತ್ಮನ ಕಡೆಯಿಂದಲ್ಲ; ಆದರೆ– ಪರಮಾತ್ಮನ ಕಡೆಯಿಂದ ಆಗಿರುತ್ತದೆ." ಮತ್ತು ಯಾವಾಗ ಜೀವಾತ್ಮನು ಶುದ್ಧವಾಗಿ ಪರಮಾತ್ಮನ ಚಿಂತನ ಮಾಡುವುದರಲ್ಲಿ ತತ್ಪರನಾಗಿರುತ್ತಾನೋ, ಆಗ ಅದೇ ಕಾಲದಲ್ಲಿ ಇಬ್ಬರೂ ಪ್ರತ್ಯಕ್ಷವಾಗುತ್ತಾರೆ. ಪರಮೇಶ್ವರನ ಪ್ರತ್ಯಕ್ಷ ಜ್ಞಾನವೇ ಆಗುವಾಗ, ಅನುಮಾನ ಮೊದಲಾದವುಗಳಿಂದ ಪರಮೇಶ್ವರನ ಜ್ಞಾನ ಉಂಟಾಗುವುದರಲ್ಲಿ ಸಂದೇಹವೇನು? ಏಕೆಂದರೆ–ಕಾರ್ಯವನ್ನು ನೋಡಿ ಕಾರಣದ ಅನುಮಾನ ಎಂದರೆ, ಸತ್ಯವಾದ ಊಹೆ ಉಂಟಾಗುತ್ತದೆ.

**ಪ್ರಶ್ನೆ** :– ಈಶ್ವರನು ವ್ಯಾಪಕನೋ, ಅಥವಾ ಯಾವುದಾದರೂ ಸ್ಥಾನ ವಿಶೇಷದಲ್ಲಿರುತ್ತಾನೋ?

**ಉತ್ತರ** :– 'ವ್ಯಾಪಕನಾಗಿದ್ದಾನೆ.' ಏಕೆಂದರೆ, ಒಂದೆಡೆಯಲ್ಲಿ ಇದ್ದಿದ್ದರೆ, ಸರ್ವಾಂತರ್ಯಾಮಿಯೂ, ಸರ್ವಜ್ಞನೂ, ಸರ್ವ ನಿಯಂತೃವೂ, ಸರ್ವೋತ್ಪಾದಕನೂ ಸರ್ವಧಾರಕನೂ ಮತ್ತು ಪ್ರಳಯಕರ್ತೃವೂ ಆಗಲಾರನು. ತಾನಿಲ್ಲದೆಡೆಯಲ್ಲಿ ಕರ್ತೃವಿನ

---

೭. ಸಂಸ್ಕಾರವಿಧಿಯ ಈಶ್ವರ ಸ್ತುತಿ ಪ್ರಾರ್ಥನೋಪಾಸಾನಾ ಪ್ರಕರಣದಲ್ಲಿ ಈ ಮಂತ್ರದ ಪದಾರ್ಥವಿದೆ.

ಕ್ರಿಯೆ ಅಸಂಭವವಾಗಿರುತ್ತದೆ.[೮] (ಈಶ್ವರನು ಸಾಕಾರರಾದ, ಕೇವಲ ಜೀವರುಗಳಾದ ರಾಜ ಮಹಾರಾಜರುಗಳಂತೆ ಪ್ರತಿನಿಧಿಗಳ ಮೂಲಕ ಕಾರ್ಯ ಮಾಡುವ ಸಾಕಾರನೂ, ಸೀಮಿತಿ ಸಾಮರ್ಥ್ಯನೂ ಅಲ್ಲ.)

**ಪ್ರಶ್ನೆ** :– ಪರಮೇಶ್ವರನು ದಯಾಳು ಮತ್ತು ನ್ಯಾಯಕಾರಿ ಅಹುದೋ ಅಥವಾ ಅಲ್ಲವೋ?

**ಉತ್ತರ**:– 'ಅಹುದು.'

**ಪ್ರಶ್ನೆ** :– ಈ ಎರಡು ಗುಣಗಳೂ ಪರಸ್ಪರ ವಿರುದ್ಧವಾಗಿವೆ. ನ್ಯಾಯವನ್ನು ಮಾಡಿದರೆ ದಯೆ, ಮತ್ತು ದಯೆ ಮಾಡಿದರೆ ನ್ಯಾಯ ಶೂನ್ಯವಿಲೀನವಾಗುತ್ತದೆ. ಏಕೆಂದರೆ – ಕರ್ಮಗಳಿಗೆ ಅನುಸಾರ, ಹೆಚ್ಚೂ ಅಲ್ಲದೆ, ಕಡಿಮೆಯೂ ಅಲ್ಲದೆ, ಸುಖ ದುಃಖಗಳನ್ನು ಒದಗಿಸುವುದನ್ನು 'ನ್ಯಾಯ'ವೆನ್ನುತ್ತಾರೆ. ಮತ್ತು ಅಪರಾಧಿಯನ್ನು ಶಿಕ್ಷಿಸದೆ ಬಿಟ್ಟುಬಿಡುವುದನ್ನು 'ದಯೆ'[೯] ಎನ್ನುತ್ತಾರೆ.

**ಉತ್ತರ** :– ನ್ಯಾಯ ಮತ್ತು ದಯೆಯ ನಡುವಣ ಭೇದ ಹೆಸರಿಗೆ ಮಾತ್ರ. ಏಕೆಂದರೆ – ನ್ಯಾಯದಿಂದ ಯಾವ ಉದ್ದೇಶ್ಯ ಪೂರ್ಣವಾಗುತ್ತದೋ, ಅದೇ ದಯೆಯಿಂದಲೂ ಆಗುವುದು. "ಶಿಕ್ಷೆಕೊಡುವುದರ ಉದ್ದೇಶ್ಯ ಮಾನವನು ಅಪರಾಧ ಮಾಡುವುದನ್ನು ಕೊನೆ ಮುಟ್ಟಿಸಿ, ದುಃಖಗಳನ್ನು ಹೊಂದದಿರಲಿ–ಎನ್ನುವುದಾಗಿದೆ." "ಅನ್ಯರ ದುಃಖಗಳನ್ನು ನಿವಾರಿಸುವುದೇ ದಯೆ" – ಎನ್ನಿಸುತ್ತದೆ. ಮತ್ತು ನೀವು ದಯೆಗೆ ಮತ್ತು ನ್ಯಾಯಕ್ಕೆ ಯಾವ ಬಗೆಯ ಅರ್ಥವನ್ನು ಮಾಡಿದ್ದೀರೋ, ಅದು ಸರಿಯಲ್ಲ. ಏಕೆಂದರೆ – ಯಾವನು, ಎಂತಹ ಎಷ್ಟು ಕೆಟ್ಟ ಕರ್ಮವನ್ನು ಮಾಡಿರುತ್ತಾನೋ, ಅವನಿಗೆ ಅಷ್ಟೇ ಮತ್ತು ಅಂತಹದೇ ಶಿಕ್ಷೆಯನ್ನು ಕೊಡಬೇಕು. ಅದರ ಹೆಸರೇ 'ನ್ಯಾಯ'. ಮತ್ತು ಅಪರಾಧಿಗೆ ಶಿಕ್ಷೆ ಕೊಡಲ್ಪಡದಿದ್ದರೆ, ದಯೆ ನಾಶವಾಗಿ ಹೋದೀತು. ಏಕೆಂದರೆ – ಒಬ್ಬ ಅಪರಾಧಿಯಾದ ದರೋಡೆಕೋರನನ್ನು ಬಿಟ್ಟುಬಿಡುವುದರಿಂದ, ಸಾವಿರಾರು ಜನ ಧರ್ಮಾತ್ಮರಾದ ಪುರುಷರಿಗೆ ದುಃಖಕೊಟ್ಟಂತೆಯೇ ಆಗುತ್ತದೆ. ಒಬ್ಬನನ್ನು ಬಿಟ್ಟುಬಿಡುವುದರಿಂದ ಸಾವಿರಾರು ಜನ ಮಾನವರಿಗೆ ದುಃಖ ಉಂಟಾಗುವು ದಾದರೆ, ಅದು ಹೇಗೆ ತಾನೇ ದಯೆಯಾಗಬಲ್ಲದು? ಆ ದರೋಡೆಕೋರನನ್ನು ಕಾರಾಗಾರದಲ್ಲಿಟ್ಟು , ಪಾಪ ಮಾಡುವುದರಿಂದ ದೂರಮಾಡುವುದು ಆ ದರೋಡೆಕೋರನ ಮೇಲೆಯೂ, ಮತ್ತು ಆ ದರೋಡೆಕೋರನನ್ನು ಸಂಹರಿಸುವುದರಿಂದ ಬೇರೆ ಸಾವಿರಾರು ಜನರ ಮೇಲೆಯೂ ದಯೆಯು ಪ್ರಕಾಶಿತವಾಗುತ್ತದೆ. ಇದೇ ದಯೆ!

**ಪ್ರಶ್ನೆ** :– ಮತ್ತೆ, ದಯೆ ಮತ್ತು ನ್ಯಾಯ ಎಂಬ ಶಬ್ದಗಳೇಕಾದವು? ಏಕೆಂದರೆ – ಅವೆರಡರ ಅರ್ಥವೂ ಒಂದೇ ಆಗಿರುವುದಾದರೆ, ಎರಡು ಶಬ್ದಗಳ ಇರುವಿಕೆ ವ್ಯರ್ಥವಾಗಿದೆ. ಆದುದರಿಂದ, ಒಂದು ಶಬ್ದದ ಇರುವಿಕೆಯೇನೋ ಒಳ್ಳೆಯದಾಗಿರುತ್ತಿದ್ದಿತು. ಇದರಿಂದ ಗೊತ್ತಾತಗುವುದೇನು? ದಯೆ ಮತ್ತು ನ್ಯಾಯದ ಉದ್ದೇಶ್ಯ ಒಂದಲ್ಲ – ಎನ್ನುವುದೇ.

**ಉತ್ತರ**:– ಒಂದು ಅರ್ಥದ ಅನೇಕ ಹೆಸರುಗಳೂ, ಒಂದು ಹೆಸರಿನ ಅನೇಕ ಅರ್ಥಗಳೂ ಇರುವುದಿಲ್ಲವೇನು?

**ಪ್ರಶ್ನೆ** :– ಇರುತ್ತವೆ.

**ಉತ್ತರ** :– ಹಾಗೆ ಇದ್ದರೆ, ಮತ್ತೆ ನಿಮಗೆ ಸಂಶಯವೇತಕ್ಕೆ ಉಂಟಾಯಿತು?

**ಪ್ರಶ್ನೆ**:– ಜಗತ್ತಿನಲ್ಲಿ ಕೇಳುತ್ತೇವೆ, ಆದಕಾರಣ.

**ಉತ್ತರ** :– ಜಗತ್ತಿನಲ್ಲಿಯಂತೂ ಸತ್ಯಾಸತ್ಯವೆರಡೂ ಕೇಳಲು ಸಿಗುತ್ತವೆ. ಆದರೆ, ವಿಚಾರಪೂರ್ವಕವಾಗಿ ನಿಶ್ಚಯ ಮಾಡುವುದು ನಿಮ್ಮ ಕೆಲಸ. ನೋಡಿರಿ, ಈಶ್ವರನ ಪೂರ್ಣದಯೆಯಿದು; ಅವನು ಸಮಸ್ತ ಜೀವರ ಉದ್ದೇಶ್ಯ ಸಿದ್ಧಿಸಲು ಜಗತ್ತಿನಲ್ಲಿ ಸಮಸ್ತ ಪದಾರ್ಥಗಳನ್ನೂ ಉತ್ಪನ್ನಮಾಡಿ ದಾನ ಮಾಡಿದ್ದಾನೆ. ಇದಕ್ಕಿಂತ ಬೇರೆಯಾದ ದೊಡ್ಡ ದಯೆ ಯಾವುದಿದೆ? ಸುಖ–ದುಃಖಗಳ ವ್ಯವಸ್ಥೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ಫಲವನ್ನು ಪ್ರಕಾಶಪಡಿಸುತ್ತಿರುವುದರ ಮೂಲಕ 'ನ್ಯಾಯದ ಪರಿಣಾಮ ಪ್ರತ್ಯಕ್ಷವಾಗಿ ಕಂಡುಬರುತ್ತಿದೆ.' ಇವೆರಡರ ನಡುವಣ ಭೇದವಿಷ್ಟೇ; ಮನಸ್ಸಿನಲ್ಲಿ ಎಲ್ಲರಿಗೂ ಸುಖವಾಗಲಿ; ಮತ್ತು ದುಃಖ ತೀರಲಿ – ಎಂಬ ಇಚ್ಛೆಯನ್ನೂ ಮತ್ತು ಕ್ರಿಯೆಯನ್ನೂ ಮಾಡುವುದು 'ದಯೆ'; ಮತ್ತು ಬಾಹ್ಯ ಪ್ರಯತ್ನವನ್ನು, ಎಂದರೆ – ಬಂಧನ – ಛೇದನ ಮೊದಲಾದ ಶಿಕ್ಷೆಯನ್ನು ಕೊಡುವುದು ಅಥವಾ ದೋಷರಹಿತರನ್ನು ಬಿಟ್ಟು, ಗೌರವಿಸುವುದು 'ನ್ಯಾಯ'ವೆನಿಸುತ್ತದೆ. ಎಲ್ಲರನ್ನೂ ಪಾಪ ಮತ್ತು ದುಃಖಗಳಿಂದ ದೂರವಿಡುವುದೊಂದೇ ಇವೆರಡರ ಉದ್ದೇಶ್ಯವೂ ಆಗಿದೆ.

೮. ಎಂದರೆ ಸತ್ಯವಾದ ಊಹೆ. –ಅನು

೯. ಇದು ಕ್ರೈಸ್ತರ ಮತ್ತು ಮುಸಲ್ಮಾನರ ಮತ. –ಸಂ

**ಪ್ರಶ್ನೆ**:– ಈಶ್ವರನು ಸಾಕಾರನೋ, ನಿರಾಕಾರನೋ?

**ಉತ್ತರ** :– 'ನಿರಾಕಾರ!' ಏಕೆಂದರೆ – ಸಾಕಾರನಾಗಿದ್ದರೆ, ವ್ಯಾಪಕನಾಗಿರಲಾರನು. ವ್ಯಾಪಕನಾಗಿರದಿದ್ದರೆ, ಸರ್ವಜ್ಞತ್ವ – ಮೊದಲಾದ ಗುಣಗಳೂ ಈಶ್ವರನಿಗೆ ಅನ್ವಯಿಸಲಾರದು, ಏಕೆಂದರೆ – ಪರಿಮಿತ ವಸ್ತುವಿನ ಗುಣ – ಕರ್ಮ– ಸ್ವಭಾವಗಳೂ ಕೂಡ ಪರಿಮಿತವಾಗಿರುತ್ತವೆ. ಮತ್ತು ಶೀತೋಷ್ಣ, ಕ್ಷುತ್ಪಿಪಾಸೆಗಳು, ಹಾಗೂ ರೋಗ, ದೋಷ, ಛೇದನ, ಭೇದನ – ಮೊದಲಾದುದರಿಂದ ರಹಿತನಾಗಿರಲಾರನು. ಇದರಿಂದ, ಈಶ್ವರನು ನಿರಾಕಾರನಾಗಿದ್ದಾನೆ – ಎಂಬುದೇ ನಿಶ್ಚಿತ ವಾಗಿದೆ. ಸಾಕಾರನಾಗಿದ್ದರೆ, ಅವನ ಮೂಗೂ, ಕಿವಿ, ಕಣ್ಣು – ಮೊದಲಾದ ಆವಯವಗಳನ್ನು ನಿರ್ಮಿಸುವವನು ಬೇರೆ ಒಬ್ಬನಿರಬೇಕು. ಏಕೆಂದರೆ, ಯಾವುದು ಸಂಯೋಗದಿಂದ ಉತ್ಪನ್ನವಾಗುತ್ತದೋ, ಅದನ್ನು ಸಂಯುಕ್ತಗೊಳಿಸುವ ನಿರಾಕಾರನಾದ ಚೇತನನು ಅವಶ್ಯವಾಗಿಯೂ ಇರಬೇಕು. ಈ ಸ್ಥಳದಲ್ಲಿ ಯಾವನಾದರೂ ಈಶ್ವರನು ತನ್ನ ಇಚ್ಛೆಯಿಂದ ತನ್ನಷ್ಟಕ್ಕೆ ತಾನೇ ತನ್ನ ಶರೀರವನ್ನು ನಿರ್ಮಿಸಿ ಕೊಂಡನು–ಎಂದು ಹೇಳುವುದಾದರೆ, ಶರೀರವು ನಿರ್ಮಿತವಾಗುವ ಮುನ್ನ ಅವನು ನಿರಾಕಾರನಾಗಿದ್ದನು – ಎಂಬುದೇ ಸಿದ್ಧವಾಯಿತು. ಆದುದರಿಂದ 'ಪರಮಾತ್ಮನೆಂದಿಗೂ ಶರೀರಧಾರಣವನ್ನು ಮಾಡುವುದಿಲ್ಲ;' ಆದರೆ, ನಿರಾಕಾರನಾಗಿರುವು ದರಿಂದ ಸಮಸ್ತ ಜಗತ್ತನ್ನೂ ಸೂಕ್ಷ್ಮ ಕಾರಣಗಳಿಂದ ಸ್ಥೂಲಾಕಾರವಾಗಿ ಮಾಡಿಬಿಡುತ್ತಾನೆ.

**ಪ್ರಶ್ನೆ**:– ಈಶ್ವರನು ಸರ್ವಶಕ್ತಿಮಂತನಾಗಿದ್ದಾನೋ, ಅಥವಾ ಅಲ್ಲವೋ?

**ಉತ್ತರ**:– 'ಆಗಿದ್ದಾನೆ.' ಆದರೆ ನೀವು '**ಸರ್ವಶಕ್ತಿಮಾನ್**' – ಎಂಬ ಶಬ್ದಕ್ಕೆ ಹೇಗೆ ಅರ್ಥವನ್ನು ತಿಳಿದಿದ್ದೀರೋ, ಹಾಗೆ ಅಲ್ಲ. ಆದರೆ, ಈಶ್ವರನು ತನ್ನ ಕಾರ್ಯಗಳನ್ನು, ಎಂದರೆ–ಉತ್ಪತ್ತಿ, ಪಾಲನ, ಪ್ರಳಯ ಮೊದಲಾದುವನ್ನೂ, ಮತ್ತು ಸರ್ವಜೀವರ ಪುಣ್ಯ, ಪಾಪಗಳ ಫಲಗಳ ಯೋಗ್ಯ ರೀತಿಯ ವ್ಯವಸ್ಥೆಯನ್ನೂ ಮಾಡುವುದರಲ್ಲಿ 'ಸ್ವಲ್ಪವಾದರೂ ಯಾರಿಂದಲೂ ಸಹಾಯವನ್ನು ತೆಗೆದುಕೊಳ್ಳುವುದಿಲ್ಲ – ಎಂಬುದೇ ಸರ್ವಶಕ್ತಿಮಾನ್' – ಎಂಬ ಶಬ್ದದ ಅರ್ಥವಾಗಿದೆ. ಎಂದರೆ–ತನ್ನ ಅನಂತ ಸಾಮರ್ಥ್ಯದಿಂದಲೇ ತನ್ನ ಸಮಸ್ತ ಕಾರ್ಯಗಳನ್ನೂ ಪೂರ್ಣಮಾಡಿಕೊಳ್ಳುತ್ತಾನೆ.

**ಪ್ರಶ್ನೆ** :– ನಾವಂತೂ ಈಶ್ವರನು ತನಗೆ ಬೇಕಾದುದನ್ನು ಮಾಡುತ್ತಾನೆ[೧೦]–ಎಂದು ಅಂಗೀಕರಿಸುತ್ತೇವೆ; ಏಕೆಂದರೆ– ಅವನಿಗಿಂತ ಮೇಲೆ ಎರಡನೆಯವನಾವನೂ ಇಲ್ಲ.

**ಉತ್ತರ**:– ಅವನು ಅಪೇಕ್ಷಿಸುತ್ತಾನಾದರೂ ಏನನ್ನು? ನೀವು – 'ಅವನು ಎಲ್ಲವನ್ನೂ ಇಚ್ಛಿಸುತ್ತಾನೆ; ಮತ್ತು ಮಾಡಬಲ್ಲ ವನಾಗಿದ್ದಾನೆ'– ಎನ್ನುವಿರಾದರೆ,[೧೦] ನಾವು ನಿಮ್ಮನ್ನು – ಈಶ್ವರನು ತನ್ನನ್ನೇ ಕೊಂದುಕೊಂಡು, ಅನೇಕ ಈಶ್ವರರನ್ನು ಸೃಜಿಸಿ, ಸ್ವತಃ ಅವಿದ್ವಾಂಸನಾಗಿ, ಚೌರ್ಯ, ವ್ಯಭಿಚಾರ ಮೊದಲಾದ ಪಾಪಕರ್ಮಗಳನ್ನು ಮಾಡಿ, ಮತ್ತು ದುಃಖಿಯೂ ಕೂಡ ಆಗಬಲ್ಲನೋ?" – ಎಂದು ಪ್ರಶ್ನಿಸುತ್ತೇವೆ. ಹೇಗೆ ಈ ಕಾರ್ಯಗಳು ಈಶ್ವರನ ಗುಣ – ಕರ್ಮ– ಸ್ವಭಾವಕ್ಕೆ ವಿರುದ್ಧವಾಗಿವೆಯೋ, ಹಾಗೆಯೇ 'ಅವನು ಎಲ್ಲವನ್ನೂ ಮಾಡಬಲ್ಲನು' ಎಂಬ ಯಾವ ನಿಮ್ಮ ಕಥನವಿದೆಯೋ, ಅದು ಕೂಡ ಆಗಿದೆ; ಅದು ಎಂದಿಗೂ ಅನ್ವಯಿಸಲಾರದು. ಆದುದರಿಂದ, ಸರ್ವಶಕ್ತಿಮಾನ್ ಎಂಬ ಶಬ್ದಕ್ಕೆ, ನಾವು ಯಾವ ಅರ್ಥಮಾಡಿದ್ದೇವೋ; ಅದೇ ಸರಿಯಾಗಿದೆ.

**ಪ್ರಶ್ನೆ** :– ಪರಮೇಶ್ವರನು ಸಾದಿ[೧೧] (ಆದಿಯುಳ್ಳವನು)ಯೋ ಅಥವಾ ಅನಾದಿ[೧೨] (ಆದಿಯಿಲ್ಲದವನು)ಯೋ?

**ಉತ್ತರ** :– 'ಅನಾದಿ'; ಎಂದರೆ – ಯಾವನಿಗೆ ಆದಿಯು, ಯಾವುದಾದರೂ ಕಾರಣವು, ಅಥವಾ ಕಾಲವು ಇಲ್ಲವೋ, ಅವನನ್ನು 'ಅನಾದಿ'ಯೆನ್ನುತ್ತಾರೆ. ಈ ರೀತಿಯ ಸಮಸ್ತ ಅರ್ಥಗಳನ್ನೂ ಪ್ರಥಮ ಸಮುಲ್ಲಾಸದಲ್ಲಿ ಹೇಳಿದ್ದೇವೆ. ನೋಡಿಕೊಳ್ಳಿರಿ.

---

೧೦. ಇದು ಮುಸಲ್ಮಾನರ ಮತ. ಇದರ ಖಂಡನೆಯನ್ನು ಹದಿನಾಲ್ಕನೆಯ ಸಮುಲ್ಲಾಸದಲ್ಲಿ ನೋಡಿರಿ.

೧೧. ಆದಿಯುಳ್ಳವನು.

೧೨. ಆದಿಯಿಲ್ಲದವನು.

ಕಾರಣ:– ಗಡಿಗೆಗೆ ಮಣ್ಣು ಆಗಿರುವಂತೆ, ಉಪಾದಾನ ಕಾರಣವೂ ಈಶ್ವರನಿಗಿಲ್ಲ; ಗಡಿಗೆಗೆ ಕುಂಬಾರನು ಆಗಿರುವಂತೆ, ನಿಮಿತ್ತ ಕಾರಣವೂ ಈಶ್ವರನಿಗೆ ಇಲ್ಲ. ಅವನು ಸ್ವತಃ ಸ್ವಯಂಭುವಾದ ಮೌಲಿಕ, ಹಾಗೂ ಅಪರಿವರ್ತನ ಶೀಲ ತತ್ತ್ವ –ಅನು.

ಕಾಲ:– ಅಸಂಯುಕ್ತ ನಿರಾಕಾರ ಶಾಶ್ವತ ತತ್ತ್ವವಾಗಿರುವ ಈಶ್ವರನ ಬಗೆಗೆ–ಅವನು ಹುಟ್ಟುವ ಮುಂಚಿನ ಕಾಲ, ಜನ್ಮ ತಾಳಿದ ಕಾಲ, ಜೀವಿತವಾಗಿದ್ದ ಕಾಲ, ಹಾಗೂ ಇರುವ ಮತ್ತು ಮೃತನಾಗುವ, ಮೃತನಾದ ನಂತರದ ಕಾಲ ಎಂದೆಲ್ಲಾ ಹೇಳಲಾಗುವುದಿಲ್ಲ.

**ಪ್ರಶ್ನೆ** :– ಪರಮೇಶ್ವರನು ಏನನ್ನು ಬಯಸುತ್ತಾನೆ?

**ಉತ್ತರ** :– 'ಎಲ್ಲರ ಒಳಿತನ್ನು' ಮತ್ತು ಎಲ್ಲರಿಗೂ ಸುಖವನ್ನೂ ಬಯಸುತ್ತಾನೆ. ಆದರೆ, ತನ್ನ ಇಚ್ಛೆಯಿಂದ ಯಾವನನ್ನೂ ಪಾಪಮಾಡದಿದ್ದರೂ ಕೂಡ ಪರಾಧೀನನನ್ನಾಗಿ ಮಾಡುವುದಿಲ್ಲ,

**ಪ್ರಶ್ನೆ** :– ಪರಮೇಶ್ವರನ ಸ್ತುತಿ, ಪ್ರಾರ್ಥನೆ, ಉಪಾಸನೆಗಳನ್ನು ಮಾಡಬೇಕೋ ಅಥವಾ ಮಾಡಬಾರದೋ?

**ಉತ್ತರ** :– 'ಮಾಡಬೇಕು.'

**ಪ್ರಶ್ನೆ** :– ಸ್ತುತಿ – ಮೊದಲಾದುದನ್ನು ಮಾಡುವುದರಿಂದ, ಈಶ್ವರನು ತನ್ನ ನಿಯಮವನ್ನು ವರ್ಜಿಸಿ, ಸ್ತುತಿ–ಪ್ರಾರ್ಥನೆ ಮಾಡುವವನ ಪಾಪವನ್ನು ನಿವಾರಿಸಿ ಬಿಡುವನೇನು?

**ಉತ್ತರ** :– 'ಇಲ್ಲ.'

**ಪ್ರಶ್ನೆ** :– ಹಾಗಾದರೆ, ಮತ್ತೆ ಸ್ತುತಿ – ಪ್ರಾರ್ಥನಗಳನ್ನು ಮಾಡಬೇಕೇತಕ್ಕೆ?

**ಉತ್ತರ**:– 'ಅವುಗಳನ್ನು ಮಾಡುವುದರ ಫಲ ಬೇರೆಯೇ ಇದೆ.'

**ಪ್ರಶ್ನೆ** :– ಏನು?

**ಉತ್ತರ**:– 'ಸ್ತುತಿ'ಯಿಂದ 'ಈಶ್ವರನಲ್ಲಿ ಪ್ರೀತಿ', ಅವನ ಗುಣ–ಕರ್ಮ–ಸ್ವಭಾವದಿಂದ ತನ್ನ ಗುಣ–ಕರ್ಮ–ಸ್ವಭಾವದ ಸುಧಾರಣೆ, 'ಪ್ರಾರ್ಥನೆ'ಯಿಂದ ನಿರಭಿಮಾನತ್ವ, ಉತ್ಸಾಹ ಮತ್ತು ಸಹಾಯದ ಪ್ರಾಪ್ತಿ, 'ಉಪಾಸನೆ'ಯಿಂದ ಪರಬ್ರಹ್ಮದೊಂದಿಗೆ ಸಂಪರ್ಕ ಮತ್ತು ಅದರ ಸಾಕ್ಷಾತ್ಕಾರ–ಇವೇ ಫಲಗಳು.

**ಪ್ರಶ್ನೆ** :– ಇದನ್ನು ಸ್ಪಷ್ಟಪಡಿಸಿ ತಿಳಿಸಿರಿ.

**ಉತ್ತರ**:– ಹೇಗೆಂದರೆ :–

**ಸಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಂ ಶುದ್ಧಮಪಾಪವಿದ್ಧಮ್ ।**

**ಕವಿರ್ಮನೀಷೀ ಪರಿಭೂಃ ಸ್ವಯಂಭೂರ್ಯಾಥಾತಥ್ಯತೋರ್ಥಾನ್**

**ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥** (ಯಜುರ್ವೇದ :– ೪೦.೮)

(ಈಶ್ವರನ ಸ್ತುತಿ) ಆ ಪರಮಾತ್ಮನು ಎಲ್ಲ(ದ)ರಲ್ಲಿಯೂ ವ್ಯಾಪಕನು; ಶೀಘ್ರಕಾರಿಯು ಮತ್ತು ಅನಂತ ಬಲಶಾಲಿಯು, ಯಾವನು ಶುದ್ಧನೂ, ಸರ್ವಜ್ಞನೂ, ಸರ್ವಾಂತರ್ಯಾಮಿಯೂ, ಸರ್ವೋತ್ತಮನಾಗಿ ವಿರಾಜಮಾನನೂ, ಸನಾತನನೂ, ಸ್ವಯಂಸಿದ್ಧನೂ ಆಗಿದ್ದಾನೋ, ಆ ಪರಮೇಶ್ವರನು, ಜೀವರು–ಎಂಬ ಸನಾತನ ಅನಾದಿಪ್ರಜೆಗೆ, 'ತನ್ನ ಸನಾತನ ವಿದ್ಯೆಯಿಂದ ವೇದಗಳ ಮೂಲಕ, ಇರುವುದನ್ನು ಇರುವಂತೆಯೇ ಸಕಲ ವಿಷಯಗಳ ಜ್ಞಾನವನ್ನು ಉಂಟುಮಾಡುತ್ತಾನೆ.' 'ಇದು ಸಗುಣ ಸ್ತುತಿ;' ಎಂದರೆ ಪರಮೇಶ್ವರನು ಯಾವ ಯಾವ ಗುಣಗಳಿಂದ ಯುಕ್ತನಾಗಿದ್ದಾನೋ, ಅದಕ್ಕನುಸಾರವಾಗಿ ಸ್ತುತಿಮಾಡುವುದು 'ಸಗುಣ'; (ಅಕಾಯ) ಎಂದರೆ – ಅವನು ಎಂದಿಗೂ ಶರೀರಧಾರಣ ಮಾಡನು; ಅಥವಾ ಜನ್ಮವೆತ್ತುವುದಿಲ್ಲ. ಅವನಲ್ಲಿ ಛಿದ್ರ[೧೩] ಉಂಟಾಗು ವುದಿಲ್ಲ –ಎಂಬಿವೇ ಮೊದಲಾಗಿ, ಯಾವ ಯಾವ ರಾಗ–ದ್ವೇಷವೇ ಮೊದಲಾದ ಅವಗುಣಗಳಿವೆಯೋ, ಅವುಗಳಿಂದ ಬೇರೆ ಯಾಗಿರುವವನೆಂದು ತಿಳಿದು ಪರಮೇಶ್ವರನ ಸ್ತುತಿ ಮಾಡುವುದು 'ನಿರ್ಗುಣ ಸ್ತುತಿ'. ಇದರಿಂದ, ತನ್ನ ಗುಣ–ಕರ್ಮ–ಸ್ವಭಾವಗಳನ್ನೂ ಕೂಡ ಹಾಗೆಯೇ ರೂಪಿಸಿಕೊಳ್ಳಬೇಕು. ಉದಾಹರಣೆಗೆ, "ಅವನು ನ್ಯಾಯಕಾರಿ ಯಾಗಿರುವುದರಿಂದ, ತಾನೂ ನ್ಯಾಯಕಾರಿಯಾಗಬೇಕು" ಎಂದು ಸಂಕಲ್ಪಮಾಡಿ, ಅದನ್ನು ಸಾಧಿಸಬೇಕು. ಮತ್ತು ಯಾವನು ಕೇವಲ ಹೊಗಳು ಭಟ್ಟನ ಹಾಗೆ ಪರಮೇಶ್ವರನ ಗುಣಕೀರ್ತನ ಮಾಡುತ್ತಾ ಹೋಗುತ್ತಾನೋ ಮತ್ತು ತನ್ನ ಚಾರಿತ್ರವನ್ನು ಸುಧಾರಿಸಿಕೊಳ್ಳುವುದಿಲ್ಲವೋ, 'ಅವನ ಸ್ತುತಿಪಾಠ ವ್ಯರ್ಥ'.

---

೧೩. ತ್ರುಟಿ.

ಪ್ರಾರ್ಥನೆ:-

**ಯಾಂ ಮೇಧಾಂ ದೇವಗಣಾಃ ಪಿತರಶ್ಚೋಪಾಸತೇ ।**

**ತಯಾ ಮಾಮದ್ಯ ಮೇಧಯಾಗ್ನೇ ಮೇದಾವಿನಂ ಕುರು ಸ್ವಾಹಾ ॥ ೧ ॥** (ಯಜು:- ೩೨.೧೪)

**ತೇಜೋಽಸಿ ತೇಜೋ ಮಯಿ ಧೇಹಿ ವೀರ್ಯಮಸಿ ವೀರ್ಯಂ ಮಯಿ ಧೇಹಿ ।**

**ಬಲಮಸಿ ಬಲಂ ಮಯಿ ಧೇಹಿ ಓಜೋಸ್ಯೋಜೋ ಮಯಿ ಧೇಹಿ ।**

**ಮನ್ಯುರಸಿ ಮನ್ಯುಂ ಮಯಿ ಧೇಹಿ ಸಹೋಽಸಿ ಸಹೋ ಮಯಿ ಧೇಹಿ ॥ ೨ ॥** (ಯಜು:- ೧೯.೯)

**ಯಜ್ಜಾಗ್ರತೋ ದೂರಮುದೈತಿ ದೈವಂ ತದು ಸುಪ್ತಸ್ಯ ತಥೈವೈತಿ ।**

**ದೂರಂ ಗಮಂ ಜ್ಯೋತಿಷಾಂ ಜ್ಯೋತಿರೇಕಂ ತನ್ಮೇಮನಃ ಶಿವಸಂಕಲ್ಪಮಸ್ತು ॥ ೩ ॥** (ಯಜು:- ೩೪. ೧)

**ಯೇನ ಕರ್ಮಾಣ್ಯಪಸೋ ಮನೀಷಿಣೋ ಯಜ್ಞೇ ಕೃಣ್ವಂತಿ ವಿದಥೇಷು ಧೀರಾಃ ।**

**ಯದಪೂರ್ವಂ ಯಕ್ಷಮಂತಃ ಪ್ರಜಾನಾಂ ತನ್ಮೇಮನಃ ಶಿವಸಂಕಲ್ಪಮಸ್ತು ॥ ೪ ॥** (ಯಜು :- ೩೪. ೨)

**ಯತ್ಪ್ರಜ್ಞಾನಮುತ ಚೇತೋ ಧೃತಿಶ್ಚ ಯಜ್ಯೋತಿರಂತರಮೃತಂ ಪ್ರಜಾಸು ।**

**ಯಸ್ಮಾನ್ನ ಋತೇ ಕಿಂಚನ ಕರ್ಮಕ್ರಿಯತೇ ತನ್ಮೇಮನಃ ಶಿವಸಂಕಲ್ಪಮಸ್ತು ॥ ೫ ॥** (ಯಜು :-೩೪. ೩)

**ಯೇನೇದಂ ಭೂತಂ ಭುವನಂ ಭವಿಷ್ಯತ್ ಪರಿಗೃಹೀತಮಮೃತೇನ ಸರ್ವಂ ।**

**ಯೇನ ಯಜ್ಞಸ್ತಾಯತೇ ಸಪ್ತಹೋತಾ ತನ್ಮೇ ಮನಃ ಶಿವಸಂಕಲ್ಪ ಮಸ್ತು ॥ ೬॥** (ಯಜು :-೩೪. ೪)

**ಯಸ್ಮಿನ್ನೃಚಃ ಸಾಮ ಯಜೂಗ್ಂ ಷಿ ಯಸ್ಮಿನ್ ಪ್ರತಿಷ್ಠಿತಾ ರಥನಾಭಾವಿವಾರಾಃ ।**

**ಯಸ್ಮಿಂಶ್ಚಿತ್ತಗ್ಂ ಸರ್ವಮೋತಂ ಪ್ರಜಾನಾಂ ತನ್ಮೇ ಮನಃ ಶಿವಸಂಕಲ್ಪಮಸ್ತು ॥ ೭ ॥** (ಯಜು :-೩೪. ೫)

**ಸುಷಾರಥಿರಶ್ವಾಚಿನಿವ ಯನ್ಮನುಷ್ಯಾನ್ ನೇನೀಯತೇಽಭೀಷುಭಿರ್ವಾಜಿನ ಇವ ।**

**ಹೃತ್ಪ್ರತಿಷ್ಠಂ ಯದಜಿರಂ ಜವಿಷ್ಠಂ ತನ್ಮೇ ಮನಃ ಶಿವಸಂಕಲ್ಪಮಸ್ತು ॥ ೮ ॥** (ಯಜು:- ೩೪. ೬)

ಓ ಅಗ್ನೇ! ಎಂದರೆ – ಪ್ರಕಾಶಸ್ವರೂಪನಾದ ಪರಮೇಶ್ವರನೇ! ನಿನ್ನ ಕೃಪೆಯಿಂದ ಯಾವ ಬುದ್ಧಿಯ ಉಪಾಸನೆಯನ್ನು ವಿದ್ವಾಂಸರೂ, ಜ್ಞಾನಿಗಳೂ ಮತ್ತು ಯೋಗಿಗಳೂ ಮಾಡುತ್ತಾರೋ, ಅದೇ ಬುದ್ಧಿಯಿಂದ ನಮ್ಮನ್ನು ಯುಕ್ತರನ್ನಾಗಿ ಮಾಡಿ, 'ಇದೇ ವರ್ತಮಾನ ಕಾಲದಲ್ಲಿ ಮೇಧಾವಿಗಳನ್ನಾಗಿ ಮಾಡು.' (೧)

ನೀನು ಪ್ರಕಾಶಸ್ವರೂಪನು; ಕೃಪೆಮಾಡಿ ನನ್ನಲ್ಲಿಯೂ ಪ್ರಕಾಶವನ್ನು ನೆಲೆಗೊಳಿಸು. ನೀನು ಅನಂತಪರಾಕ್ರಮಯುಕ್ತನು; ಆದುದರಿಂದ, ಕೃಪಾಕಟಾಕ್ಷ ಬೀರಿ, ನನ್ನಲ್ಲಿಯೂ ಪೂರ್ಣ ಪರಾಕ್ರಮವನ್ನು ಸ್ಥಿರಗೊಳಿಸು. ನೀನು ಅನಂತಬಲಯುಕ್ತನು ; ಆದುದರಿಂದ ನನ್ನಲ್ಲಿಯೂ ಬಲವನ್ನು ಧಾರಣಮಾಡಿಸು. ನೀನು ಅನಂತಸಾಮರ್ಥ್ಯಯುಕ್ತನು; ಆದುದರಿಂದ, ನನಗೂ ಪೂರ್ಣ ಸಾಮರ್ಥ್ಯವನ್ನು ಕೊಡು. ನೀನು ದುಷ್ಟಕಾರ್ಯಗಳ ಮತ್ತು ದುಷ್ಟರ ಮೇಲೆ ಕ್ರೋಧಮಾಡುವವನಾಗಿದ್ದೀಯೆ. ನನ್ನನ್ನೂ ಹಾಗೆಯೇ ಮಾಡು. ನೀನು ನಿಂದೆ, ಸ್ತುತಿ ಮತ್ತು ತನ್ನ ಬಗೆಗೆ ಅಪರಾಧಿಗಳಾದವರನ್ನು ಸಹಿಸುವವನಾಗಿದ್ದೀಯೆ; 'ಕೃಪೆಯಿಂದ ನನ್ನನ್ನೂ ಹಾಗೆಯೇ ಸಹನಶೀಲನನ್ನಾಗಿ ಮಾಡು.' (೨)

ಹೇ ದಯಾನಿಧೇ! ನಿನ್ನ ದಯೆಯಿಂದ ನನ್ನ ಯಾವ ಮನಸ್ಸು ಎಚ್ಚರಗೊಂಡಿರುವಾಗ ದೂರದೂರ ಹೋಗುತ್ತದೋ, ದಿವ್ಯಗುಣಯುಕ್ತವಾಗಿರುತ್ತದೋ ಮತ್ತು ನಿದ್ರಿತವಾಗಿರುವ ನನ್ನ ಯಾವ ಮನಸ್ಸು ಸುಷುಪ್ತಿಯನ್ನನುಭವಿಸುತ್ತದೋ ಅಥವಾ ಸ್ವಪ್ನದಲ್ಲಿ ದೂರದೂರ ಹೋಗುವಂತೆ ವ್ಯವಹಾರಮಾಡುತ್ತದೋ, ಎಲ್ಲ ಪ್ರಕಾಶಕರಿಗೂ ಏಕಮಾತ್ರ ಪ್ರಕಾಶಕವಾದ ನನ್ನ ಆ ಮನಸ್ಸು 'ಶಿವಸಂಕಲ್ಪ'–ಎಂದರೆ, 'ತನ್ನ ಮತ್ತು ಅನ್ಯಪ್ರಾಣಿಗಳ ಸಲುವಾಗಿ ಕಲ್ಯಾಣದ ಸಂಕಲ್ಪವನ್ನು ಮಾಡುವಂತಹುದಾಗಲಿ; ಯಾರಿಗಾದರೂ ಹಾನಿಯನ್ನುಂಟುಮಾಡುವ ಇಚ್ಛೆಯಿಂದ ಎಂದೂ ಯುಕ್ತವಾಗದಿರಲಿ.' (೩)

ಹೇ ಸರ್ವಾಂತರ್ಯಾಮಿ! ಯಾವುದರಿಂದ ಸದಾ ಕರ್ತವ್ಯನಿಷ್ಠರಾದ ಧೈರ್ಯಯುಕ್ತ ವಿದ್ವಜ್ಜನರು ಯಜ್ಞದಲ್ಲಿ ಮತ್ತು ಯುದ್ಧ ಮೊದಲಾದುವುಗಳಲ್ಲಿ ಕರ್ಮಮಾಡುತ್ತಾರೋ, ಯಾವುದು ಅಪೂರ್ವ ಸಾಮರ್ಥ್ಯಯುಕ್ತವೂ, ಪೂಜನೀಯವೂ ಮತ್ತು ಜನರ ಒಳಗೆ ಇರುವಂತಹುದೂ ಆಗಿದೆಯೋ, ನನ್ನ "ಆ ಮನಸ್ಸು ಧರ್ಮವನ್ನಾಚರಿಸುವ ಇಚ್ಛೆಯಿಂದ ಯುಕ್ತವಾಗಿ, ಅಧರ್ಮವನ್ನು ಸರ್ವದಾ ಬಿಟ್ಟುಬಿಡಲಿ." (೪)

ಯಾವುದು ಉತ್ಕೃಷ್ಟಜ್ಞಾನ ಮತ್ತು ಅನ್ಯರನ್ನು ಎಚ್ಚರಿಸುವ ನಿಶ್ಚಯಾತ್ಮಕ ವೃತ್ತಿಯಾಗಿದೆಯೋ, ಮತ್ತು ಯಾವುದು ಪ್ರಜೆಗಳ ಅಂತರ್ಯದಲ್ಲಿ ಪ್ರಕಾಶಯುಕ್ತವೂ ಮತ್ತು ನಾಶರಹಿತವೂ ಆಗಿದೆಯೋ, ಯಾವುದು ಇಲ್ಲದಿದ್ದರೆ, ಯಾವನೂ ಯಾವ ಒಂದು ಕರ್ಮವನ್ನೂ ಮಾಡಲಾರನೋ, "ನನ್ನ ಆ ಮನಸ್ಸು ಶುದ್ಧಗುಣಗಳನ್ನು ಇಚ್ಛಿಸಿ, ದುಷ್ಟ ಗುಣಗಳಿಂದ ದೂರವಿರಲಿ." (೫)

ಹೇ ಜಗದೀಶ್ವರ! ಯಾವುದರಿಂದ ಸಮಸ್ತ ಯೋಗೀ ಜನರೂ ಈ ಸಕಲ ಭೂತ, ಭವಿಷ್ಯತ್ತು, ವರ್ತಮಾನಗಳ ವ್ಯವಹಾರಗಳನ್ನು[೧೪] ತಿಳಿಯುತ್ತಾರೋ, ಯಾವುದು ನಾಶರಹಿತನಾದ ಜೀವಾತ್ಮನನ್ನು ಪರಮಾತ್ಮನೊಂದಿಗೆ ಒಂದುಗೂಡಿಸಿ, ಎಲ್ಲ ರೀತಿಯಲ್ಲಿಯೂ ತ್ರಿಕಾಲಜ್ಞನನ್ನಾಗಿ[೧೫] ಮಾಡುತ್ತದೋ, ಯಾವುದರಲ್ಲಿ ಜ್ಞಾನ ಮತ್ತು ಕ್ರಿಯೆಯಿದೆಯೋ, ಯಾವುದು ಪಂಚಜ್ಞಾನೇಂದ್ರಿಯಗಳು, ಬುದ್ಧಿ ಮತ್ತು ಆತ್ಮನೊಂದಿಗಿರುತ್ತದೋ, ಯಾವುದರಿಂದ ಯೋಗವೆಂಬ ಆ ಯಜ್ಞವನ್ನು ವಿಸ್ತರಿಸುತ್ತಾರೋ, 'ನನ್ನ ಆ ಮನಸ್ಸು ಯೋಗ ಜ್ಞಾನಯುಕ್ತವಾಗಿ, ಅವಿದ್ಯೆ-ಮೊದಲಾದ ಕ್ಲೇಶಗಳಿಂದ ದೂರವಿರಲಿ.' (೬)

ಓ ಪರಮವಿದ್ವನ್! ಪರಮೇಶ್ವರ! ನಿನ್ನ ಕೃಪೆಯಿಂದ, ನನ್ನ ಯಾವ ಮನಸ್ಸಿನಲ್ಲಿ, ಚಕ್ರದ ಗುಂಬದಲ್ಲಿ ಅರೆಗಳು ಹೊಂದಿ ಕೊಂಡಿರುವಂತೆ, 'ಋಗ್ವೇದೀಯ ಮಂತ್ರಗಳು', 'ಸಾಮವೇದ', 'ಯಜುರ್ವೇದೀಯ' ಮಂತ್ರಗಳು ನೆಲೆಸಿವೆಯೋ, ಯಾವುದರಲ್ಲಿ 'ಅಥರ್ವ ವೇದ'ವೂ ಕೂಡ ನೆಲೆಸಿರುತ್ತದೋ, ಮತ್ತು ಯಾವುದರಲ್ಲಿ ಸರ್ವಜ್ಞನೂ, ಸರ್ವವ್ಯಾಪಕನೂ, ಪ್ರಜಾಮಾತ್ರಕ್ಕೆ ಸಾಕ್ಷಿಯೂ ಆಗಿರುವ ಚಿತ್ತನು ಎಂದರೆ (ವಿಶ್ವ) ಚೇತನನು ತಿಳಿದುಬರುತ್ತಾನೋ, "ನನ್ನ ಆ ಮನಸ್ಸು, ಅವಿದ್ಯೆಗೆ ಅಭಾವವನ್ನುಂಟಮಾಡಿ, ಸದಾ ವಿದ್ಯಾಪ್ರಿಯವಾಗಿರಲಿ." (೭)

ಹೇ ಸರ್ವನಿಯಂತೃವಾದ ಈಶ್ವರನೇ! ನನ್ನ ಯಾವ ಮನಸ್ಸು, ಕಡಿವಾಣದಿಂದ ಕುದುರೆಗಳನ್ನು ಹತೋಟಿಯಲ್ಲಿಡುವಂತೆ, ಅಥವಾ ಚತುರನಾದ ಸಾರಥಿಯು ಕುದುರೆಗಳನ್ನು ಅಂಕೆಯಲ್ಲಿಡುವಂತೆ, ಮಾನವರನ್ನು ಬಹುವಾಗಿ ಇತ್ತ-ಅತ್ತ ಕೊಂಡೊಯ್ಯುತ್ತದೋ, ಯಾವುದು ಹೃದಯದಲ್ಲಿ[೧೬] ಪ್ರತಿಷ್ಠಿತವೂ, ಗತಿಯುಕ್ತವೂ ಮತ್ತು ಅತ್ಯಂತ ವೇಗಶಾಲಿಯೂ ಆಗಿದೆಯೋ, "ನನ್ನ ಆ ಮನಸ್ಸು ಸಮಸ್ತ ಇಂದ್ರಿಯಗಳನ್ನೂ ಅಧರ್ಮಾಚರಣದಿಂದ ತಡೆದು, ಸದಾ ಧರ್ಮಮಾರ್ಗದಲ್ಲೇ ನಡೆಯಿಸುತ್ತಿರಲಿ;"[೧೭] ಈ ರೀತಿಯ ಕೃಪೆಯನ್ನು ನನ್ನ ಮೇಲೆ ಮಾಡು. (೮)

---

೧೪. ಕಳೆದು ಹೋದುದನ್ನು ತಿಳಿಯುವುದು ಮನಸ್ಸು; ನಡೆಯುತ್ತಿರುವುದನ್ನು ತಿಳಿಯುವುದು ಮನಸ್ಸು; ಮತ್ತು ಭವಿಷ್ಯತ್ತಿನಲ್ಲಿ ಆಗುವುದನ್ನು , ಕಾರ್ಯ-ಕಾರಣ- ಸಂಬಂಧದ ಆಧಾರದ ಮೇಲೆ ಊಹಾಶಕ್ತಿಯಿಂದ, ಮತ್ತು ಅದು ಮುಗಿದಾಗ, ಅದನ್ನು ವಸ್ತುತಃ ತಿಳಿಯುವುದು ಮನಸ್ಸು- ಎಂದು ತಿಳಿಯಬೇಕು.

೧೫. ತ್ರಿಕಾಲಜ್ಞ- ಎಂಬ ಶಬ್ದದ ಅರ್ಥವನ್ನೂ ಮೇಲಿನ ಟಿಪ್ಪಣಿಯಂತೆಯೇ ತಿಳಿಯಬೇಕು. ಮತ್ತು, ಇನ್ನೂ ಗೂಢಾರ್ಥ ಬೇಕೆಂದರೆ, ಸರ್ವಕಾಲಗಳಲ್ಲಿಯೂ ಏಕರೀತಿ, ಅಪರಿವರ್ತನಶೀಲವಾಗಿರುವ ಭಗವಂತನೇ ತ್ರಿಕಾಲ; ಆ ತ್ರಿಕಾಲವನ್ನು ತಿಳಿಯುವವನು ತ್ರಿಕಾಲಜ್ಞ, ತ್ರಿವೇದ, ಚತುರ್ವೇದ-{ ಮೂರೂ ವೇದಗಳನ್ನು ಬಲ್ಲವನು; ನಾಲ್ಕೂ ವೇದಗಳನ್ನು ಬಲ್ಲವನು} ಎಂಬಂತೆ ತ್ರಿಕಾಲ-ಎಂಬ ಪ್ರಯೋಗ ಸರ್ವಥಾ ಸಂಭವ-ಅನು.

೧೬. ಮನಸ್ಸು ಹೃದಯದಲ್ಲಿ ಪ್ರತಿಷ್ಠಿತವಾಗಿದೆ-ಎಂಬ ಕಥನ ಅರ್ಥವಾಗಬೇಕಾದರೆ, ಐತರೇಯ ಉಪನಿಷತ್ತಿನ-
"ಯದೇತತ್ ಹೃದಯಂ ಮನಶ್ಚೈತತ್" [೩.೨]
"ಹೃದಯವೇ ಮನಸ್ಸು" ಎಂಬುದನ್ನು ಸ್ಮರಿಸಬೇಕು. ಮನಃಶಕ್ತಿ ಮನನ ಸಮರ್ಥವಾದ ಜೀವಾತ್ಮನಲ್ಲಿದೆ, ಎಂದೇ ಭಾವನೆ-ಅನು.

೧೭. ಶಿವಸಂಕಲ್ಪದ ಆರು ಮಂತ್ರಗಳಲ್ಲೂ ಒಂದೇ ಪ್ರಕಾರವಾಗಿ ಅಂತ್ಯದಲ್ಲಿ 'ತನ್ಮೇ ಮನಃ ಶಿವಸಂಕಲ್ಪಮಸ್ತು', ಎಂದಿದ್ದರೂ, ಅದರ ಒಂದೇ ಅರ್ಥವನ್ನು ಕೊಡದೆ, ಆರು ಬಗೆಯ ಅಭಿಪ್ರಾಯಗಳನ್ನು ಸ್ವಾಮಿ ದಯಾನಂದರು ವ್ಯಕ್ತಪಡಿಸಿದ್ದಾರೆ. ಈ ರೀತಿಯ ಅನ್ಯ ವ್ಯಾಖ್ಯಾನಗಳ ಕಾರಣದಿಂದಲೇ, ಅವರನ್ನು 'ಋಷಿ', ಮಹರ್ಷಿ, ಎಂದು ಜನರು ಸಂಭೋದಿಸುತ್ತಾರೆ. ಯಜುರ್ವೇದ [೩೭.೮]ದಲ್ಲಿ 'ಮಖಾಯ ತ್ವಾ ಮಖಸ್ಯ ತ್ವಾ ಶೀರ್ಷ್ಣೇ' ಎಂದು, ಕ್ರಮವಾಗಿ, ಆರು ಸಲ ಪಾಠವಿದೆ. ಇದರ ಒಂದೊಂದು ಪಾಠಕ್ಕೂ, ಬೇರೆ ಬೇರೆಯಾಗಿ ಆರು ಋತುಗಳ-ವರ್ಣನೆಯನ್ನು ಮಹರ್ಷಿದಯಾನಂದರು ತಮ್ಮ ಭಾಷ್ಯದಲ್ಲಿ ಬರೆದಿದ್ದಾರೆ. ಪಂಡಿತ ಸಾತವಲೇಕರರು ಆರು ಮಂತ್ರಗಳಿಗೂ ಒಂದೇ ರೀತಿಯ ಅನುವಾದ ಮಾಡಿದ್ದಾರೆ.

**ಅಗ್ನೇನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್।**

**ಯುಯೋಧ್ಯಸ್ಮ ಜ್ಜುಹುರಾಣಮೇನೋ ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ॥** (ಯಜು:– ೪೦–೧೬)

ಓ ಸುಖದ ದಾತೃವೂ, ಸ್ವಪ್ರಕಾಶಸ್ವರೂಪನೂ, ಎಲ್ಲವನ್ನು ಬಲ್ಲವನೂ ಆದ ಪರಮಾತ್ಮನೇ! ನೀನು ನಮ್ಮನ್ನು ಶ್ರೇಷ್ಠಮಾರ್ಗದಲ್ಲಿ (ನಡೆಯಿಸಿ) ನಮಗೆ ಸಂಪೂರ್ಣ ಪ್ರಜ್ಞಾನಗಳನ್ನು ಪ್ರಾಪ್ತಗೊಳಿಸು. ಮತ್ತು ನಮ್ಮಲ್ಲಿ ಕುಟಿಲವಾದ ಯಾವ ಪಾಪಾಚರಣವೆಂಬ ನಡೆಯಿದೆಯೋ, ಅದರಿಂದ ಬೇರೆಯಾಗಿಡು. ಇದೇ ಕಾರಣದಿಂದ ನಾವುಗಳು ನಮ್ರತಾಪೂರ್ವಕವಾಗಿ, ನೀನು ನಮ್ಮನ್ನು ಪವಿತ್ರಗೊಳಿಸು–ಎಂದು ಬಹಳವಾಗಿ ಸ್ತುತಿಯನ್ನು ಮಾಡುತ್ತೇವೆ.

**ಮಾ ನೋ ಮಹಾಂತಮುತ ಮಾ ನೋ ಅರ್ಭಕಂ ಮಾನ ಉಕ್ಷಂತಮುತ ಮಾ ನ ಉಚಿಕ್ಷಿತಮ್।**

**ಮಾ ನೋ ವಧೀಃ ಪಿತರಂ ಮೋತ ಮಾತರಂ ಮಾ ನಃ ಪ್ರಿಯಾಸ್ತನ್ವೋ ರುದ್ರ ರೀರಿಷಃ॥** (ಯಜು:– ೧೬.೧೫)

ಹೇ 'ರುದ್ರ!' (ದುಷ್ಟರಿಗೆ ಪಾಪಕ್ಕನುಸಾರ ದುಃಖವೆಂಬ ಫಲವನ್ನು ಕೊಟ್ಟು ಅಳಿಸುವ ಪರಮೇಶ್ವರನೇ!) ನೀನು ನಮ್ಮ ಕಿರಿಯರನ್ನೂ ಹಿರಿಯರನ್ನೂ, ಗರ್ಭವನ್ನೂ, ತಾಯಿ, ತಂದೆ ಮತ್ತು ಪ್ರಿಯ ಬಂಧುವರ್ಗವನ್ನೂ ಹಾಗೂ ಶರೀರಗಳನ್ನೂ ಧ್ವಂಸಮಾಡುವಂತಹ ಮನೋಭಾವವನ್ನು ನಮಗೆ ಕೊಡಬೇಡ. ಯಾವುದರಿಂದ ನಾವು ನಿನ್ನ ಶಿಕ್ಷೆಗೆ ಈಡಾಗೆವೋ, ಅಂತಹ ಮಾರ್ಗದಿಂದ ನಮ್ಮನ್ನು ನಡೆಯಿಸು.

**ಅಸತೋ ಮಾ ಸದ್ಗಮಯ।**

**ತಮಸೋ ಮಾ ಜ್ಯೋತಿರ್ಗಮಯ।**

**ಮೃತ್ಯೋರ್ಮಾಽಮೃತಂಗಮಯೇತಿ॥** (ಶತಪಥ :– ೧೪.೩.೧.೩೦)

ಹೇ ಪರಮಗುರೋ ಪರಮಾತ್ಮನ್! ನೀನು ನಮ್ಮನ್ನು ಅಸನ್ಮಾರ್ಗದಿಂದ ಬೇರೆ ಮಾಡಿ, ಸನ್ಮಾರ್ಗದಲ್ಲಿ ನಿಷ್ಠರನ್ನಾಗಿ ಮಾಡು. ಅವಿದ್ಯಾಂಧಕಾರದಿಂದ ನಮ್ಮನ್ನು ಬಿಡಿಸಿ, ವಿದ್ಯೆಯೆಂಬ ಸೂರ್ಯನನ್ನು ನಮಗೆ ಒದಗಿಸು. ಮತ್ತು, ಮೃತ್ಯುರೋಗದಿಂದ ಬೇರೆ ಮಾಡಿ, ಮೋಕ್ಷದ ಆನಂದವೆಂಬ ಅಮೃತವನ್ನು ಪ್ರಾಪ್ತಮಾಡಿಸು. ಎಂದರೆ–ಯಾವ ಯಾವ ದೋಷಗಳಿಂದ, ಅಥವಾ ದುರ್ಗಣದಿಂದ ಪರಮೇಶ್ವರನನ್ನೂ ಮತ್ತು ತನ್ನನ್ನೂ ದೂರ (ಬೇರೆ) ಎಂದು ಅಂಗೀಕರಿಸಿ, ಪರಮೇಶ್ವನ ಪ್ರಾರ್ಥನೆ ಮಾಡಲ್ಪಡುತ್ತದೋ, ಅದು ವಿಧಿ–ನಿಷೇಧಗಳ ದೃಷ್ಟಿಯಿಂದ ಆಗಿರುವ ಕಾರಣ, 'ಸಗುಣ ಹಾಗೂ ನಿರ್ಗುಣ ಪ್ರಾರ್ಥನೆ ಎನಿಸುತ್ತದೆ.'[೧] 'ಯಾವ ಮಾನವನು ಯಾವ ವಿಷಯಕ್ಕಾಗಿ ಪ್ರಾರ್ಥಿಸುತ್ತಾನೋ, ಅವನು ಅದಕ್ಕೆ[೧೮] ಅನುಸಾರವಾಗಿಯೇ ವರ್ತಿಸಬೇಕು.' ಅಂದರೆ, ಉದಾಹರಣೆಗೆ, 'ಸರ್ವೋತ್ತಮ ಬುದ್ಧಿಯ ಪ್ರಾಪ್ತಿಗಾಗಿ ಪರಮೇಶ್ವರನನ್ನು ಪ್ರಾರ್ಥಿಸುವುದಾದರೆ, ತನ್ನಿಂದ ಎಷ್ಟು ಪ್ರಯತ್ನ ಶಕ್ಯವೋ, ಅಷ್ಟು ಮಾಡುತ್ತಲೇ ಹೋಗಬೇಕು. ಎಂದರೆ–ತನ್ನ ಪುರುಷಾರ್ಥದ ನಂತರವೇ ಪ್ರಾರ್ಥನೆ ಮಾಡುವುದು ಯೋಗ್ಯವಾಗಿದೆ.' ಇಂತಹ ಪ್ರಾರ್ಥನೆ ಎಂದಿಗೂ ಮಾಡಬಾರದು. "ಹೇ ಪರಮೇಶ್ವರ! ನೀನು ನನ್ನ ಶತ್ರುಗಳ ನಾಶವನ್ನು ಮಾಡು; ನನ್ನನ್ನು ಎಲ್ಲರಿಗಿಂತಲೂ ದೊಡ್ಡವನನ್ನಾಗಿ ಮಾಡು; ನನಗೆಯೇ ಗೌರವ ಸಿಕ್ಕಲಿ; ಮತ್ತು ಎಲ್ಲರೂ ನನಗೆ ಅಧೀನರಾಗಿ ಹೋಗಲಿ".–ಎಂಬ ಬಗೆಯ ಪ್ರಾರ್ಥನೆಯನ್ನು ಎಂದಿಗೂ ಮಾಡಬಾರದು; ಮತ್ತು ಪರಮೇಶ್ವರನು ಅಂತಹ ಪ್ರಾರ್ಥನೆಯನ್ನು ಸ್ವೀಕರಿಸುವುದೂ ಇಲ್ಲ. ಏಕೆಂದರೆ, ಪರಸ್ಪರ ಶತ್ರುಗಳಿಬ್ಬರು, ಒಬ್ಬನು ಇನ್ನೊಬ್ಬನ ನಾಶಕ್ಕಾಗಿ ಪ್ರಾರ್ಥನೆಮಾಡಿದರೆ, ಪರಮೇಶ್ವರನು ಇಬ್ಬರನ್ನೂ ನಾಶ ಪಡಿಸಿ ಬಿಡಬೇಕೆ? ಯಾರಾದರೂ, 'ಯಾವನ ಪ್ರೇಮ ಹೆಚ್ಚೋ, ಅವನ ಪ್ರಾರ್ಥನೆ ಸಫಲವಾಗುವುದು'–ಎನ್ನುವರಾದರೆ, ನಾವು "ಯಾವನ ಪ್ರೇಮ ಅಲ್ಪವೋ, ಅವನ ಶತ್ರುವಿನ ನಾಶವೂ ಅಲ್ಪವಾಗಿಯಾದರೂ ಆಗಲೇಬೇಕು"– ಎಂದು ಹೇಳಬಹುದಲ್ಲ! ಇಂತಹ ಮೂರ್ಖತನದ ಪ್ರಾರ್ಥನೆ ಮಾಡುತ್ತಾ ಮಾಡುತ್ತಾ ಯಾವನಾದರೂ – "ಹೇ ಪರಮೇಶ್ವರ! ನೀನು ನಮಗೆ ರೊಟ್ಟಿ ಮಾಡಿ ತಿನ್ನಿಸು; ನನ್ನ ಮನೆಯನ್ನು ಗುಡಿಸು; ಬಟ್ಟೆಗಳನ್ನು ಒಗೆದು ಹಾಕು; ಮತ್ತು ಹೊಲ–ಗದ್ದೆ–ತೋಟಗಳ ಕೆಲಸವನ್ನೂ ಮಾಡಿ ಬಿಡು".–ಎಂಬ ಈ ಬಗೆಯ ಪ್ರಾರ್ಥನೆಯನ್ನೂ ಮಾಡುವನು. (ಪುರುಷಾರ್ಥಿಯ ಪ್ರಯತ್ನವೇ ಸಫಲವಾಗುತ್ತದೆ) ಈ ರೀತಿ, 'ಯಾರು ಭಗವಂತನ ಮೇಲೆ ಆಲಸ್ಯಭರಿತವಾದ ಭರವಸೆಯಿಟ್ಟು,

---

೧೮. ದುರ್ಗುಣ ರಹಿತನನ್ನು ನಿರ್ಗುಣನೆಂದೂ, ಸಗುಣ ಸಹಿತನನ್ನು ಸಗುಣನೆಂದೂ ಭಾವಿಸಿ ಪ್ರಾರ್ಥಿಸಬೇಕು. ಉಪಾಸಕನೂ ತದ್ರೂಪನೇ ಆಗಬೇಕು. ಗುಣಗಳ ದೃಷ್ಟಿಯಿಂದ ಸದ್ಗುಣಗಳ ವಿಧಿ' ದುರ್ಗುಣಗಳ ನಿಷೇಧ ಸರ್ವದಾ ಸರ್ವಥಾ, ಸರ್ವತ್ರ, ಸರ್ವರಿಗೂ ಸ್ವೀಕರಣೀಯವೇ– ಅನು.

ಸೋಮಾರಿಗಳಾಗಿ ಕುಳಿತಿರುತ್ತಾರೋ, ಅವರು ಮಹಾಮೂರ್ಖರು.' ಏಕೆಂದರೆ, ಪುರುಷಾರ್ಥಮಾಡು-ಎಂಬ ಪರಮೇಶ್ವರನ ಯಾವ ಆಜ್ಞೆಯಿದೆಯೋ, ಅದನ್ನು ಯಾವನು ಭಂಗಿಸುವನೋ, ಅವನು ಎಂದಿಗೂ ಸುಖವನ್ನು ಹೊಂದುವುದಿಲ್ಲ. ಉದಾಹರಣೆಗೆ:-

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಗ್ಂ ಸಮಾಃ ॥** (ಯಜು:- ೪೦-೨)

ಪರಮೇಶ್ವರನು ಆಜ್ಞೆ ಮಾಡುತ್ತಾನೆ:- ಮಾನವನು ನೂರು ವರ್ಷಗಳವರೆಗೆ, ಅಥವಾ, ಎಲ್ಲಿಯವರೆಗೆ ಜೀವಿಸುವನೋ, ಅಲ್ಲಿಯವರೆಗೆ, ಕರ್ಮಮಾಡುತ್ತಲೇ ಜೀವಿಸುವ ಇಚ್ಛೆಯನ್ನು ಇಟ್ಟುಕೊಳ್ಳಬೇಕು; ಎಂದಿಗೂ ಸೋಮಾರಿಯಾಗಬಾರದು. ನೋಡಿರಿ. ಸೃಷ್ಟಿಯಲ್ಲಿ ಎಷ್ಟು ಪ್ರಾಣವಂತರಿದ್ದಾರೋ, ಅಥವಾ ನಿಷ್ಪ್ರಾಣವಂತ ವಸ್ತುಗಳಿವೆಯೋ, ಅವರೆಲ್ಲರೂ, ಅವೆಲ್ಲವೂ ತಮ್ಮ ತಮ್ಮ ಕರ್ಮಗಳನ್ನೂ, ಯತ್ನಗಳನ್ನೂ ಮಾಡುತ್ತಲೇ ಇದ್ದಾರೆ; ಮಾಡುತ್ತಲೇ ಇವೆ. ಉದಾಹರಣೆಗೆ, ಇರುವೆ ಮೊದಲಾದುವು ವರ್ಧಿಸುತ್ತಾ-ಕ್ಷೀಣಿಸುತ್ತಾ ಇರುತ್ತವೆ. ಹಾಗೆಯೇ, ಮಾನವರೂ ಕೂಡ ಈ ದೃಷ್ಟಾಂತವನ್ನು ಗ್ರಹಿಸುವುದು ಯೋಗ್ಯವಾಗಿದೆ. 'ಹೇಗೆ ಪುರುಷಾರ್ಥ ಮಾಡುತ್ತಿರುವ ಪುರುಷನಿಗೆ ಬೇರೆಯವನೂ ಕೂಡ ಸಹಾಯ ಮಾಡುತ್ತಾನೋ, ಹಾಗೆ ಧರ್ಮದಿಂದ ಪುರುಷಾರ್ಥಿಯಾದ ಪುರುಷನಿಗೆ ಈಶ್ವರನೂ ಕೂಡ ಸಹಾಯಮಾಡುತ್ತಾನೆ.' ಹೇಗೆ ಸೋಮಾರಿಯಾದವನನ್ನು ಭೃತ್ಯನೆಂದು ಕರೆಯದೆ, ಕೇವಲ ಕಾರ್ಯಗಳನ್ನು ಮಾಡುವ ಪುರುಷನನ್ನು ಭೃತ್ಯನೆಂದು ಕರೆಯುತ್ತಾರೋ, ಹೇಗೆ ನೋಡಲು ಬಯಸುವ, ಕಣ್ಣುಳ್ಳವನಿಗೆ ತೋರಿಸುತ್ತಾರೋ, ಕುರುಡನಿಗೆ ತೋರಿಸುವುದಿಲ್ಲವೋ, 'ಹಾಗೆಯೇ ಪರಮೇಶ್ವರನೂ ಕೂಡ ಸರ್ವರಿಗೂ ಉಪಕಾರ ಮಾಡುವ ಪ್ರಾರ್ಥನೆಯಲ್ಲಿ ಮಾತ್ರ ಸಹಾಯಕನಾಗುತ್ತಾನೆ; ಹಾನಿಕಾರಕ ಕರ್ಮದಲ್ಲಿ ಸಹಾಯಕನಾಗನು.' ಯಾವನೇ ಆಗಿರಲಿ; ಬೆಲ್ಲ ಸಿಹಿಯಾಗಿದೆ-ಎಂದು ಹೇಳಿದ ಮಾತ್ರಕ್ಕೆ ಅವನಿಗೆ ಬೆಲ್ಲ ಸಿಕ್ಕುವುದಿಲ್ಲ. ಅಥವಾ ಅವನಿಗೆ ಅದರ ರುಚಿಯೂ ಕೂಡ ಎಂದಿಗೂ ಲಭಿಸುವುದಿಲ್ಲ. ಮತ್ತು ಯಾವನು ಪ್ರಯತ್ನ ಮಾಡುತ್ತಾನೋ, ಅವನಿಗೆ ಶೀಘ್ರವಾಗಿ ಅಥವಾ ತಡವಾಗಿ ಬೆಲ್ಲ ಸಿಕ್ಕಿಯೇ ಸಿಕ್ಕುತ್ತದೆ. ಇನ್ನು ಮೂರನೆಯದಾದ ಉಪಾಸನೆ:-

**ಸಮಾಧಿನಿರ್ಧೂತಮಲಸ್ಯ ಚೇತಸೋ ನಿವೇಶಿತಸ್ಯಾತ್ಮನಿ ಯತ್ಸುಖಂ ಭವೇತ್ ।**

**ಸ ಶಕ್ಯತೇ ವರ್ಣಯಿತುಂ ಗಿರಾ ತದಾ ಸ್ವಯಂ ತದಂತಃಕರಣೇನ ಗೃಹ್ಯತೇ ॥** (ಮೈತ್ರಾಯಣೀಯ:- ೬.೩೪)

ಇದು ಉಪನಿಷದ್ವಚನವಾಗಿದೆ. ಸಮಾಧಿಯೋಗದಿಂದ ಯಾವ ಪುರುಷನ ಅವಿದ್ಯೆ ಮೊದಲಾದ ಮಲಗಳು ತೊಳೆದು ಹೋಗಿವೆಯೋ, ಯಾವನು ಆತ್ಮನಲ್ಲಿ ಸ್ಥಿತನಾಗಿ ಪರಮಾತ್ಮನಲ್ಲಿ ಚಿತ್ತವನ್ನು ನಿಲ್ಲಿಸಿದ್ದಾನೋ, ಅವನಿಗೆ ಪರಮಾತ್ಮನ ಯೋಗದಿಂದ ಯಾವ ಸುಖ ಉಂಟಾಗುತ್ತದೋ, ಅದು ವಾಣಿಯ ಮೂಲಕ ಹೇಳಲ್ಪಡಲಾರದು. 'ಏಕೆಂದರೆ – ಆ ಆನಂದವನ್ನು ಜೀವಾತ್ಮನು ತನ್ನ ಅಂತಃಕರಣದಿಂದ ಗ್ರಹಿಸುತ್ತಾನೆ.'

ಸಮೀಪಸ್ಥನಾಗುವುದು – ಎಂಬುದೇ 'ಉಪಾಸನಾ' ಶಬ್ದದ ಅರ್ಥ. ಅಷ್ಟಾಂಗಯೋಗದ ಮೂಲಕ ಪರಮಾತ್ಮನ ಸಮೀಪಸ್ಥ ನಾಗುವುದು ಉಪಾಸನೆ ಮತ್ತು ಅವನನ್ನು ಸರ್ವವ್ಯಾಪಕನ, ಹಾಗೂ ಸರ್ವಾಂತರ್ಯಾಮಿಯ ರೂಪದಲ್ಲಿ ಪ್ರತ್ಯಕ್ಷವಾಗಿ ಮಾಡಿಕೊಳ್ಳಲು ಯಾವ ಯಾವ ಕಾರ್ಯಗಳನ್ನು ಮಾಡಬೇಕಾಗಿರುತ್ತದೋ, ಅದೆಲ್ಲವನ್ನೂ ಮಾಡಬೇಕು. ಎಂದರೆ

**ತತ್ರಾಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾಪರಿಗ್ರಹಾ ಯಮಾಃ ॥** (ಪಾತಂಜಲ, ಸಾಧನ – ೩೦)

ಈ ಮೊದಲಾದ ಸೂತ್ರಗಳು ಪಾತಂಜಲಯೋಗ ಶಾಸ್ತ್ರದವಾಗಿವೆ. ಯಾವನು ಉಪಾಸನೆಯ 'ಆರಂಭ'ಮಾಡಲು ಬಯಸುತ್ತಾನೋ, ಅವನಿಗೆ, ಯಾವನೊಂದಿಗೂ ವೈರವನ್ನು ಇಟ್ಟುಕೊಳ್ಳದಿರುವುದು, ಸರ್ವದಾ ಸರ್ವರ ಮೇಲೆಯೂ ಪ್ರೀತಿ ಯನ್ನಿಡುವುದು, ಸತ್ಯವನ್ನಾಡುವುದು, ಸುಳ್ಳನ್ನು ಎಂದಿಗೂ ಆಡದಿರುವುದು, ಕಳ್ಳತನ ಮಾಡದಿರುವುದು, ಸತ್ಯ ವ್ಯವಹಾರವನ್ನೇ ಮಾಡುವುದು, ಜಿತೇಂದ್ರಿಯನಾಗಿರುವುದು, ವಿಷಯಾಸಕ್ತನಾಗದಿರುವುದು ಮತ್ತು ನಿರಭಿಮಾನನಾಗಿರುವುದು, ಎಂದಿಗೂ ಅಭಿಮಾನ[೧೯] ಮಾಡದಿರುವುದು. ಇದೇ 'ಆರಂಭ'ವಾಗಿದೆ. ಐದು ಬಗೆಯ ಯಮಗಳು ಸೇರಿ, ಉಪಾಸನಾ ಯೋಗದ ಮೊದಲನೆಯ ಅಂಗವಾಗಿರುತ್ತದೆ.

---

೧೯. ಅಭಿಮಾನ- ಎಂದರೆ, ತನ್ನನ್ನು ತಾನೇ ದೊಡ್ಡವನೆಂದು ತಿಳಿಯುವದರಿಂದ, ಹುಟ್ಟುವ ಗರ್ವ ಅಥವಾ ಹೆಮ್ಮೆ. ಕನ್ನಡದಲ್ಲಿ ಪ್ರೀತಿ, ಮಮತೆ, ಅಕ್ಕರೆಯನ್ನು ಕೂಡ ಅಭಿಮಾನವೆಂದು ಹೇಳುತ್ತಾರೆ; ಅದು ಈ ಪ್ರಕರಣದಲ್ಲಿ ಅಸಂಗತ. –ಅನು.

**ಶೌಚ ಸಂತೋಷ ತಪಃ ಸ್ವಾಧ್ಯಾಯೇಶ್ವರಪ್ರಣಿಧಾನಾನಿ ನಿಯಮಾಃ ॥** (ಪಾತಂಜಲ, ಸಾಧನ – ೩೧)

ರಾಗದ್ವೇಷಗಳನ್ನು ಬಿಟ್ಟು ಒಳಗಿನಿಂದಲೂ, ನೀರು–ಮೊದಲಾದುದರಿಂದ ಹೊರಗಿನಿಂದಲೂ ಪವಿತ್ರನಾಗಿರಬೇಕು. ಧರ್ಮಕ್ಕನುಸಾರ ಪುರುಷಾರ್ಥ ಮಾಡುವುದರಿಂದ, ಲಾಭದಲ್ಲಿ ಪ್ರಸನ್ನತ್ವಕ್ಕೂ,[೨೦] ಮತ್ತು ನಷ್ಟವಾದಲ್ಲಿ ಅಪ್ರಸನ್ನತ್ವಕ್ಕೂ ಎಡೆಕೊಡಬಾರದು. ಪ್ರಸನ್ನನಾಗಿದ್ದು, ಆಲಸ್ಯವನ್ನು ಬಿಟ್ಟು, ಸದಾ ಪುರುಷಾರ್ಥಮಾಡುತ್ತಿರಬೇಕು. ಸದಾ ಸುಖ–ದುಃಖಗಳ ಸಹನವನ್ನೂ ಮತ್ತು ಕೇವಲ ಧರ್ಮದ ಅನುಷ್ಠಾನವನ್ನೂ ಮಾಡಬೇಕು; ಅಧರ್ಮಾನುಷ್ಠಾನ ಮಾಡಬಾರದು. ಸದಾ ಸತ್ಯಶಾಸ್ತ್ರಗಳನ್ನು ಓದಬೇಕು–ಓದಿಸಬೇಕು. ಸತ್ಪುರುಷರ ಸಂಗವನ್ನು ಮಾಡಬೇಕು ಮತ್ತು ಪರಮಾತ್ಮನ ಏಕಮಾತ್ರ ಹೆಸರಾದ "ಓಂ" ಎಂಬುದನ್ನು, ಅರ್ಥವನ್ನು ಆಲೋಚಿಸಿ ಪ್ರತಿದಿನವೂ ಜಪಿಸುತ್ತಾ ಹೋಗಬೇಕು. ತನ್ನ ಆತ್ಮನನ್ನು ಪರಮೇಶ್ವರನ ಆಜ್ಞಾನುಸಾರ ನಡೆಯಲು ಸಮರ್ಪಿಸಿಬಿಡಬೇಕು. ಈ ಐದು ಬಗೆಯ ನಿಯಮಗಳೂ ಸೇರಿ, ಉಪಾಸನಾ ಯೋಗದ ಎರಡನೆಯ ಅಂಗವೆನಿಸುತ್ತದೆ. ಇದರ ಮುಂದಕ್ಕೆ ಆರು ಅಂಗಗಳನ್ನು ಯೋಗಶಾಸ್ತ್ರದಲ್ಲಿ ಅಥವಾ ಋಗ್ವೇದಾದಿಭಾಷ್ಯಭೂಮಿಕೆಯಲ್ಲಿ[೨೧] ನೋಡಿಕೊಳ್ಳಬೇಕು.

ಯಾವಾಗ ಉಪಾಸನೆ ಮಾಡಲು ಬಯಸುತ್ತಾನೋ, ಅಗ ಏಕಾಂತವೂ, ಶುದ್ಧವೂ ಆದ ಸ್ಥಾನಕ್ಕೆ ಹೋಗಿ, ಆಸನವನ್ನು ಸಿದ್ಧಪಡಿಸಿಕೊಂಡು, ಪ್ರಾಣಾಯಾಮವನ್ನು ಮಾಡಿ, ಇಂದ್ರಿಯಗಳನ್ನು – ಬಾಹ್ಯ ವಿಷಯಗಳಿಂದ ತಡೆದಿಟ್ಟು, ಮನಸ್ಸನ್ನು ಹೊಕ್ಕಳಿನ ಎಡೆಯಲ್ಲಿ, ಅಥವಾ ಹೃದಯ, ಕಂಠ, ನೇತ್ರ, ಶಿಖೆ, ಇಲ್ಲವೇ ಬೆನ್ನಿನ ಅಸ್ಥಿಯಲ್ಲಿನ ಯಾವುವಾದರೂ ಸ್ಥಾನದಲ್ಲಿ ಸ್ಥಿರಗೊಳಿಸಿ, ತಮ್ಮ ಆತ್ಮನ ಮತ್ತು ಪರಮಾತ್ಮನ ವಿವೇಚನೆ ಮಾಡಿ, ಪರಮಾತ್ಮನಲ್ಲಿ ಮಗ್ನರಾಗಿ ಹೋಗುವುದರ ಮೂಲಕ ಸಂಯಮಿಗಳಾಗಬೇಕು.[೨೨]

ಯಾವಾಗ ಮಾನವನು ಈ ಸಾಧನೆಗಳನ್ನು ಮಾಡುತ್ತಾನೋ, ಆಗ ಅವನ ಆತ್ಮ ಮತ್ತು ಅಂತಃಕರಣ ಪವಿತ್ರವಾಗಿ, ಅವನು ಸತ್ಯದಿಂದ ಪರಿಪೂರ್ಣನಾಗುತ್ತಾನೆ. ಪ್ರತಿದಿನವೂ ಜ್ಞಾನ–ವಿಜ್ಞಾನಗಳನ್ನು ಹೆಚ್ಚಿಸಿಕೊಂಡು ಮುಕ್ತಿಯವರೆಗೂ ಹೋಗಿ ಸೇರುತ್ತಾನೆ. 'ಯಾವನು ಎಂಟು ಪ್ರಹರಗಳಲ್ಲಿ ಒಂದು ಘಟಿಕೆಯ ಕಾಲದಷ್ಟಾದರೂ ಈ ರೀತಿ ಧ್ಯಾನ ಮಾಡುತ್ತಾನೋ, ಅವನು ಸದಾ ಉನ್ನತಿಯನ್ನು ಪಡೆದುಕೊಳ್ಳುತ್ತಾನೆ.'

ಈ (ಉಪಾಸನಾ) ಪ್ರಕರಣದಲ್ಲಿ, ಪರಮೇಶ್ವರನು ಸರ್ವಜ್ಞತ್ವವೇ ಮೊದಲಾದ ಗುಣಗಳಿಂದ ಯುಕ್ತನು–ಎಂದು ಉಪಾಸನೆ ಮಾಡುವುದು 'ಸಗುಣೋಪಾಸನೆ' ಮತ್ತು ದ್ವೇಷ, ರೂಪ, ರಸ, ಗಂಧ, ಸ್ಪರ್ಶ–ಮೊದಲಾದ ಗುಣಗಳಿಂದ ರಹಿತನೆಂದು ತಿಳಿದು, ಅತಿಸೂಕ್ಷ್ಮನಾದ ಆತ್ಮನಲ್ಲಿ ಮತ್ತು ಹೊರಗೆ ವ್ಯಾಪಕನಾಗಿರುವ ಪರಮೇಶ್ವರನಲ್ಲಿ ದೃಢವಾಗಿ ಸ್ಥಿತನಾಗುವುದು ನಿರ್ಗುಣೋಪಾಸನೆ –ಎನಿಸುತ್ತದೆ.

ಉಪಾಸನೆಯ ಫಲ : ಹೇಗೆ ಶೀತದಿಂದ ಪೀಡಿದನಾದ ಪುರುಷನ ಶೀತವು, ಬೆಂಕಿಯ ಹತ್ತಿರ ಹೋಗುವುದರಿಂದ ನಿವೃತ್ತವಾಗಿ ಹೋಗುತ್ತದೋ, ಹಾಗೆ "ಪರಮೇಶ್ವರನ ಸಮೀಪಕ್ಕೆ ಹೋಗುವುದರಿಂದ, ಸಮಸ್ತ ದೋಷ ದುಃಖಗಳೂ ದೂರವಾಗಿ, ಪರಮೇಶ್ವರನ ಗುಣ–ಕರ್ಮ–ಸ್ವಭಾವಾನುಗುಣವಾಗಿ ಜೀವಾತ್ಮನ ಗುಣಕರ್ಮಸ್ವಭಾವಗಳೂ ಪವಿತ್ರವಾಗಿ ಹೋಗುತ್ತವೆ." ಆದುದರಿಂದ, ಪರಮೇಶ್ವರನ ಸ್ತುತಿ–ಪ್ರಾರ್ಥನೋಪಾಸನೆಗಳನ್ನು ಅವಶ್ಯವಾಗಿ ಮಾಡಬೇಕು. ಇದರಿಂದ ಸಿಕ್ಕುವ ಫಲವಂತೂ ಬೇರೆಯಿದ್ದೇ ಇದೆ; ಇಷ್ಟೇ ಅಲ್ಲದೆ, "ಆತ್ಮನ ಬಲವು, ಪರ್ವತಕ್ಕೆ ಸಮಾನವಾದ ದುಃಖ ಒದಗಿದರೂ ಕೂಡ, (ಭಕ್ತನು) ಭೀತನಾಗದಷ್ಟು ಮತ್ತು ಎಲ್ಲವನ್ನು ಸಹಿಸಬಲ್ಲಷ್ಟು ವರ್ಧಿಸುವುದು." ಇದು ಅಲ್ಪ ವಿಷಯವೇನು? ಈಶ್ವರನ ಗುಣಗಳನ್ನು ಮರೆತುಬಿಡುವುದು ಕೃತಘ್ನತೆಯಾಗಿದೆ. ಮತ್ತು ಯಾವನು ಪರಮೇಶ್ವರನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಯನ್ನು ಮಾಡುವುದಿಲ್ಲವೋ, ಅವನು ಕೃತಘ್ನನೂ ಮತ್ತು ಮಹಾಮೂರ್ಖನೂ ಕೂಡ ಆಗಿರುತ್ತಾನೆ. ಏಕೆಂದರೆ, 'ಯಾವ ಪರಮಾತ್ಮನು ಈ ಜಗತ್ತಿನ ಸಮಸ್ತ ಪದಾರ್ಥಗಳನ್ನೂ ಜೀವರುಗಳ ಸುಖಕ್ಕಾಗಿ ಕೊಟ್ಟಿದ್ದಾನೋ, ಅವನ ಗುಣವನ್ನು ಮರೆತುಹೋಗುವುದು, ಮತ್ತು ಈಶ್ವರನ ಇರುವನ್ನೇ ಅಂಗೀಕರಿಸದಿರುವುದು, ಕೃತಘ್ನತೆಯೂ ಮತ್ತು ಮೂರ್ಖತೆಯೂ ಆಗಿರುತ್ತದೆ.'

---

೨೦. ಪ್ರ + ಸೀದ – ಎಂದರೆ ಚಿತ್ತವು ತಿಳಿಯಾಗುವುದು. ಮನಸ್ಸಿನಲ್ಲಿ ಉದ್ರೇಕೋದ್ವೇಗಗಳಿಗೆ ಎಡೆಗೊಡದೆ, ಅದನ್ನು ಹದವಾಗಿಡುವುದು ಪ್ರಸನ್ನತೆ. –ಅನು.

೨೧. 'ಋಗ್ವೇದಾದಿ ಭಾಷ್ಯ ಭೂಮಿಕಾ'ದ ಉಪಾಸನಾ ವಿಷಯದಲ್ಲಿ ಇದರ ವರ್ಣನೆ ಇದೆ. –ದ.ಸ

೨೨. ಪಾತಂಜಲ ಯೋಗಶಾಸ್ತ್ರದ ನಿರ್ದೇಶದಂತೆ ಧಾರಣಾ, ಧ್ಯಾನ ಮತ್ತು ಸಮಾಧಿಯ ಏಕತ್ರೀಕರಣಕ್ಕೆ ' ಸಂಯಮ' ಎಂದು ಹೆಸರು. –ಸಂ

**ಪ್ರಶ್ನೆ:**– ಪರಮೇಶ್ವರನಿಗೆ ಕಿವಿ-ಕಣ್ಣು ಮೊದಲಾದ ಇಂದ್ರಿಯಗಳಿಲ್ಲವೆಂದಾಗ, ಮತ್ತೆ ಅವನು ಇಂದ್ರಿಯಗಳ ಕೆಲಸವನ್ನು ಹೇಗೆ ಮಾಡಬಲ್ಲನು?

**ಉತ್ತರ:– ಅಪಾಣಿಪಾದೋ ಜವನೋ ಗ್ರಹೀತೀ ಪಸ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ।**

**ಸ ವೇತ್ತಿ ವಿಶ್ವಂ ನ ಚ ತಸ್ಯಾಸ್ತಿ ವೇತ್ತಾ ತಮಾಹುರಗ್ರ್ಯಂ ಪುರುಷಂ ಪುರಾಣಮ್ ॥**

ಇದು ಶ್ವೇತಾಶ್ವತರ ಉಪನಿಷತ್ತಿನ (೩.೧೯) ವಚನವಾಗಿದೆ. ಪರಮೇಶ್ವರನಿಗೆ ಕೈಗಳಿಲ್ಲ; ಆದರೂ ತನ್ನ ಶಕ್ತಿರೂಪವಾದ ಕೈಯಿಂದ ಸರ್ವವನ್ನೂ ರಚಿಸುತ್ತಾನೆ; ಗ್ರಹಿಸುತ್ತಾನೆ; ಪಾದಗಳೂ ಇಲ್ಲ; ವ್ಯಾಪಕನಾಗಿರುವುದರಿಂದ ಎಲ್ಲಕ್ಕಿಂತ ಹೆಚ್ಚು ವೇಗವಂತನಾಗಿದ್ದಾನೆ. ಕಣ್ಣಿನ ಗೋಳಕವಿಲ್ಲ; ಆದರೂ ಎಲ್ಲವನ್ನೂ, ಇರುವುದನ್ನು ಇರುವ ಹಾಗೆಯೇ ನೋಡುತ್ತಾನೆ. ಕಿವಿಗಳಿಲ್ಲ; ಆದರೆ – ಎಲ್ಲರ ಮಾತುಗಳನ್ನೂ ಆಲಿಸುತ್ತಾನೆ. ಮತ್ತು ಅವನನ್ನು ಅವಧಿಸಹಿತವಾಗಿ (ಎಂದರೆ ಸೀಮಾರಹಿತ; ಅನಂತವಾದ ಕಾರಣ, ಅವನ ಇತಿ–ಮಿತಿಗಳನ್ನು) ತಿಳಿಯುವವನು ಯಾವನೂ ಇಲ್ಲ. ಸನಾತನನೂ, ಸರ್ವಶ್ರೇಷ್ಠನೂ, ಎಲ್ಲದರಲ್ಲಿಯೂ ಪೂರ್ಣನೂ ಆಗಿರುವುದರಿಂದ, ಅವನನ್ನೇ **'ಪುರುಷ'** ಎನ್ನುತ್ತಾರೆ. ಅವನು ಇಂದ್ರಿಯಗಳ ಮತ್ತು ಅಂತಃಕರಣದ ಕೆಲಸಗಳನ್ನು ತನ್ನ ಸಾಮರ್ಥ್ಯದಿಂದ ಮಾಡುತ್ತಾನೆ.

**ಪ್ರಶ್ನೆ:**– ಅವನನ್ನು ಬಹುಜನರು ನಿಷ್ಕ್ರಿಯನು ಮತ್ತು ನಿರ್ಗುಣನು ಎನ್ನುತ್ತಾರೆ?

ಉತ್ತರ:– **ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ।**

**ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಕರ್ಮಬಲಕ್ರಿಯಾ ಚ ॥**

ಇದು ಶ್ವೇತಾಶ್ವತರ ಉಪನಿಷತ್ತಿನ (೬.೮) ವಚನವಾಗಿದೆ. ಪರಮಾತ್ಮನಿಂದ ಯಾವ ತದ್ರೂಪ ಕಾರ್ಯವೂ[೨೩] ಆಗುವುದಿಲ್ಲ. ಮತ್ತು ಅವನಿಗೆ ಸಾಧಕವಾದ[೨೪] ವಸ್ತುಗಳೂ ಬೇಕಾಗಿಲ್ಲ. ಅವನಿಗೆ ಸಮನಾಗಿರುವವನು ಯಾವನೂ ಇಲ್ಲ; ಮತ್ತು ಅಧಿಕನಾಗಿರುವವನೂ ಇಲ್ಲ. ಸರ್ವೋತ್ತಮವಾದ ಶಕ್ತಿಯು, ಎಂದರೆ – ಯಾವುದರಲ್ಲಿ ಅನಂತಜ್ಞಾನವೂ, ಅನಂತ ಬಲವೂ ಮತ್ತು ಅನಂತ ಕ್ರಿಯೆಯೂ ಇದೆಯೋ, ಆ ಮಹಚ್ಛಕ್ತಿಯು ಅವನಲ್ಲಿ ಸ್ವಾಭಾವಿಕವಾಗಿ, ಎಂದರೆ ಸಹಜವಾಗಿಯೇ ಇದೆ–ಎಂದು ಆಲಿಸಲ್ಪಡುತ್ತದೆ. ಪರಮೇಶ್ವರನು ನಿಷ್ಕ್ರಿಯನಾಗಿದ್ದರೆ, ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯಗಳನ್ನು ಮಾಡಲಾರದ ವನಾಗಿರುತ್ತಾನೆ. ಆದುದರಿಂದ, 'ಅವನು ವಿಭು'; 'ಅದರಲ್ಲಿಯೂ ಚೇತನನಾಗಿರುವುದರಿಂದ ಅವನಲ್ಲಿ ಕ್ರಿಯೆಯೂ ಇದೆ.'

**ಪ್ರಶ್ನೆ:**– ಅವನು ಕ್ರಿಯೆಯನ್ನು ಮಾಡುತ್ತಾ ಇರುತ್ತಾನೆ ಎಂದಾದರೆ, ಆ ಕ್ರಿಯೆ ಅಂತಯುಕ್ತವಾಗಿರುವುದೋ ಅಥವಾ ಅನಂತವೋ?

**ಉತ್ತರ:** – ಎಷ್ಟು ದೇಶ–ಕಾಲದಲ್ಲಿ ಕ್ರಿಯೆ ಮಾಡುವುದನ್ನು (ಪರಮೇಶ್ವರನು) ಉಚಿತವೆಂದು ತಿಳಿಯುತ್ತಾನೋ, ಅಷ್ಟೇ ದೇಶ ದ–ಕಾಲದಲ್ಲಿ ಕ್ರಿಯೆಯನ್ನು ಮಾಡುತ್ತಾನೆ; ಹೆಚ್ಚಾಗಿಯೂ ಮಾಡುವುದಿಲ್ಲ; ಕಡಿಮೆಯಾಗಿಯೂ ಮಾಡುವುದಿಲ್ಲ. ಏಕೆಂದರೆ–ಅವನು ಜ್ಞಾನವಂತನಾಗಿದ್ದಾನೆ.

**ಪ್ರಶ್ನೆ:** – ಪರಮೇಶ್ವರನು ತನ್ನ ಅಂತವನ್ನು ಬಲ್ಲನೋ ಅಥವಾ ಇಲ್ಲವೋ?

**ಉತ್ತರ:**– ಪರಮಾತ್ಮನು ಪೂರ್ಣಜ್ಞಾನಿ. ಏಕೆಂದರೆ, ಯಾವುದರಿಂದ, ಯಾವುದು ಹೇಗಿದೆಯೋ, ಅದನ್ನು ಹಾಗೆಯೇ ತಿಳಿಯಲಾಗುತ್ತದೋ, ಅದನ್ನು ಜ್ಞಾನವೆನ್ನುತ್ತಾರೆ. ಎಂದರೆ ಯಾವ ಪದಾರ್ಥ ಯಾವ ಬಗೆಯದಾಗಿರುತ್ತದೋ, ಅದನ್ನು ಹಾಗೆಯೇ ತಿಳಿಯುವುದರ ಹೆಸರೇ ಜ್ಞಾನ. ಪರಮೇಶ್ವರನು ಅನಂತನಾಗಿರುವಾಗ, ಅವನನ್ನು ಅನಂತನೆಂದೇ ತಿಳಿಯುವುದು ಜ್ಞಾನ. ಅದಕ್ಕೆ ವಿರುದ್ಧ(ವಾಗಿ ತಿಳಿಯುವುದು) 'ಅಜ್ಞಾನ'. ಎಂದರೆ – ಅನಂತನನ್ನು ಸಾಂತನೆಂದೂ, ಸಾಂತನನ್ನು ಅನಂತ

---

೨೩. ತದ್ರೂಪಕಾರ್ಯ:– ಮಣ್ಣಿನಲ್ಲಿ ಮಡಿಕೆಯಾಗಿರುವಂತೆ, ಪರಬ್ರಹ್ಮನಿಂದ ಜಗತ್ತಾಗಿಲ್ಲ. ಮಣ್ಣು ಮಡಿಕೆಗೆ ಉಪಾದಾನ ಕಾರಣವಾಗಿರುವಂತೆ, ಪರಬ್ರಹ್ಮ ಜಗತ್ತಿಗೆ ಉಪಾದಾನ ಕಾರಣವಲ್ಲ. ಮಣ್ಣಿನ ರೂಪಾಂತರವಾದ ಮಡಿಕೆ ಮಣ್ಣಿನ ತದ್ರೂಪಕಾರ್ಯ. ಆದರೆ, ಜಗತ್ತು ಪರಬ್ರಹ್ಮನ ರೂಪಾಂತರವಲ್ಲ. ಆದ ಕಾರಣ, ಪರಬ್ರಹ್ಮನ ತದ್ರೂಪಕಾರ್ಯವಲ್ಲ. ಮಡಿಕೆಗೆ ಕುಂಬಾರ ನಿಮಿತ್ತ ಕಾರಣವಾಗಿರುವಂತೆ, ಜಗತ್ತಿಗೆ ಪರಬ್ರಹ್ಮ ನಿಮಿತ್ತ ಕಾರಣ. ಮಣ್ಣು–ಮಡಿಕೆಗಳ ಕಾರಣ ಕಾರ್ಯ ಸಂಬಂಧ, ಪ್ರಕೃತಿ–ಜಗತ್ತುಗಳಿಗೆ ಇದೆ. ಪರಬ್ರಹ್ಮ–ಜಗತ್ತುಗಳಿಗಿಲ್ಲ. –ಅನು

೨೪. ಕುಂಬಾರನಿಗೆ ಚಕ್ರ, ಬೆಂಕಿ, ನೀರು ಮೊದಲಾದ ಉಪಕರಣಗಳು ಅಗತ್ಯ. ಪರಬ್ರಹ್ಮನಿಗೆ ಅಂತಹವಾವುದೂ ಬೇಕಾಗಿಲ್ಲ. –ಅನು.

ನೆಂದೂ ತಿಳಿಯುವುದೂ 'ಭ್ರಮ'ವೆನ್ನಿಸುತ್ತದೆ. **"ಯಥಾರ್ಥ ದರ್ಶನಂ ಜ್ಞಾನಮಿತಿ"** ಯಾವುದರ ಗುಣ - ಕರ್ಮ- ಸ್ವಭಾವ ಹೇಗಿರುವುದೋ, ಆ ಪದಾರ್ಥವನ್ನು ಹಾಗೆಯೇ ತಿಳಿದು ಅಂಗೀಕರಿಸುವುದೇ 'ಜ್ಞಾನ' ಮತ್ತು 'ವಿಜ್ಞಾನ'ವೆನಿಸುತ್ತದೆ. (ಅದಕ್ಕೆ) ವಿರುದ್ಧವಾದುದು ಅಜ್ಞಾನ. ಆದುದರಿಂದ :-

**ಕ್ಲೇಶಕರ್ಮವಿಪಾಕಾಶಯೈರಪರಾಮೃಷ್ಟಃ ಪುರುಷ ವಿಶೇಷ ಈಶ್ವರಃ ॥** (ಪಾತಂಜಲಯೋಗ-ಸಮಾಧಿ - ೨೪)

ಯಾವನು ಅವಿದ್ಯೆ ಮೊದಲಾದ ಕ್ಲೇಶಗಳ, ಕುಶಲಾಕುಶಲಗಳು, ಇಷ್ಟ, ಅನಿಷ್ಟ ಮತ್ತು ಮಿಶ್ರಫಲಗಳನ್ನು ಕೊಡುವ ಕರ್ಮಗಳ ವಾಸನೆಯಿಂದ ರಹಿತನಾಗಿದ್ದಾನೋ, ಸಮಸ್ತ ಜೀವರಿಗಿಂತಲೂ ವಿಶೇಷನಾಗಿರುವ ಅವನೇ 'ಈಶ್ವರ'ನೆನಿಸುತ್ತಾನೆ.

**ಪ್ರಶ್ನೆ:- ಈಶ್ವರಸಿದ್ಧೇಃ ॥ ೧ ॥** (ಸಾಂಖ್ಯ :- ೧.೧೨)

**ಪ್ರಮಾಣಾಭಾವಾನ್ನ ತತ್ಸಿದ್ಧಿಃ ॥ ೨ ॥** (ಸಾಂಖ್ಯ :- ೫.೧೦)

**ಸಂಬಂಧಾಭಾವಾನ್ನಾನುಮಾನಮ್ ॥ ೩ ॥** (ಸಾಂಖ್ಯ:- ೫.೧೧)

ಪ್ರತ್ಯಕ್ಷ ಪ್ರಮಾಣಕ್ಕೆ ಅನ್ವಯಿಸಲು ಆಗದಕಾರಣ ಈಶ್ವರನ ಸಿದ್ಧಿಯಾಗುವುದಿಲ್ಲ. (೧) ಅವನ ಸಿದ್ಧಿಯಲ್ಲಿ ಪ್ರತ್ಯಕ್ಷವೇ ಇಲ್ಲದಿರುವಾಗ, ಅನುಮಾನ-ಮೊದಲಾದ ಪ್ರಮಾಣವೂ ಅನ್ವಯಿಸಲಾರದು (೨) ಮತ್ತು ವ್ಯಾಪ್ತಿಯ ಸಂಬಂಧವಿಲ್ಲದಿರುವುದರಿಂದ, ಅನುಮಾನವೂ ಸರಿಹೋಗಲಾರದು. ಮತ್ತೆ ಪ್ರತ್ಯಕ್ಷಾನುಮಾನಗಳು ಇಲ್ಲದಿರುವುದರಿಂದ ಶಬ್ದಪ್ರಮಾಣ-ಮೊದಲಾದುವೂ ಅನ್ವಯಿಸುವುದಿಲ್ಲ. ಈ ಕಾರಣದಿಂದ ಈಶ್ವರನ ಸಿದ್ಧಿಯಾಗಲಾರದು. (೩)

**ಉತ್ತರ:-** ಈ ಸ್ಥಳದಲ್ಲಿ ಹೇಳಿರುವುದು ಈಶ್ವರನ ಸಿದ್ಧಿಗೆ ಪ್ರತ್ಯಕ್ಷ ಪ್ರಮಾಣವು ಅನ್ವಯಿಸುವುದಿಲ್ಲ ಮತ್ತು ಈಶ್ವರನು ಜಗತ್ತಿನ ಉಪಾದಾನ ಕಾರಣವಲ್ಲ-ಎಂದು ಮಾತ್ರ.[೨೫] ಮತ್ತು (ದೇಹಧಾರಿಯಾದ) ಜೀವಾತ್ಮನಿಂದ ವಿಲಕ್ಷಣನಾಗಿರುವುದರಿಂದ, ಎಂದರೆ ಸರ್ವತ್ರ ಪೂರ್ಣನಾಗಿರುವುದರಿಂದ ಪರಮಾತ್ಮನಿಗೆ 'ಪುರುಷ'ನೆಂಬ ಹೆಸರಿದೆ ಮತ್ತು ಶರೀರದಲ್ಲಿ ಶಯನಮಾಡುವುದರಿಂದ ಜೀವನಿಗೂ 'ಪುರುಷ'ನೆಂಬ ಹೆಸರಿದೆ. ಏಕೆಂದರೆ, ಇದೇ ಪ್ರಕರಣದಲ್ಲಿ ಹೇಳಿದೆ:-

**ಪ್ರಧಾನಶಕ್ತಿಯೋಗಾಚ್ಚೇತ್ಸಂಗಾಪತ್ತಿಃ ॥ ೧ ॥** (ಸಾಂಖ್ಯ:-೫.೮)

**ಸತ್ತಾಮಾತ್ರಾಚ್ಚೇತ್ಸರ್ವೈಶ್ವರ್ಯಮ್ ॥ ೨ ॥** (ಸಾಂಖ್ಯ :- ೫.೯)

**ಶ್ರುತಿರಪಿ ಪ್ರಧಾನಕಾರ್ಯತ್ವಸ್ಯ ॥ ೩ ॥** (ಸಾಂಖ್ಯ :- ೫.೧೨)

ಪುರುಷನಿಗೆ ಪ್ರಧಾನ ಶಕ್ತಿಯ ಯೋಗ ಉಂಟಾದರೆ, ಅವನಿಗೆ ಸಂಗಾಪತ್ತಿಯುಂಟಾದೀತು. ಎಂದರೆ-ಹೇಗೆ ಪ್ರಕೃತಿಯು ಸೂಕ್ಷ್ಮವಾಗಿದ್ದು, ಸಂಯುಕ್ತವಾಗಿ ಕಾರ್ಯ ರೂಪದಲ್ಲಿ ಸಂಗತವಾಗಿದೆಯೋ, ಎಂದರೆ ಸ್ಥೂಲವಾಗಿದೆಯೋ, ಹಾಗೆ ಪರಮೇಶ್ವರನೂ ಕೂಡ ಸ್ಥೂಲವಾಗಿ ಹೋಗುವನು. ಆದುದರಿಂದ, ಪರಮೇಶ್ವರನು ಜಗತ್ತಿನ ಉಪಾದಾನ ಕಾರಣನಲ್ಲ; ಆದರೆ -ನಿಮಿತ್ತಕಾರಣನು. (೧)

ಚೇತನನಿಂದ ಜಗತ್ತಿನ ಉತ್ಪತ್ತಿಯಾಗುವುದಾದರೆ, ಹೇಗೆ ಪರಮೇಶ್ವರನು ಸರ್ವೈಶ್ವರ್ಯಯುಕ್ತನಾಗಿದ್ದಾನೋ, ಹಾಗೆ ಜಗತ್ತಿನಲ್ಲಿಯೂ ಕೂಡ ಸರ್ವೈಶ್ವರ್ಯದ ಯೋಗವಿರಬೇಕು; ಆದರೆ-ಅಂತಹ ಯೋಗವಿಲ್ಲ. ಆದುದರಿಂದ ಪರಮೇಶ್ವರನು ಜಗತ್ತಿನ ಉಪಾದಾನಕಾರಣನಲ್ಲ; ಆದರೆ-ನಿಮಿತ್ತ ಕಾರಣನಾಗಿದ್ದಾನೆ. (೨)

ಏಕೆಂದರೆ - ಉಪನಿಷತ್ತೂ ಕೂಡ ಪ್ರಧಾನವನ್ನೇ[೨೬] ಜಗತ್ತಿನ ಉಪಾದಾನ ಕಾರಣವೆಂದು ಹೇಳುತ್ತಿದೆ. (೩) ಹೇಗೆಂದರೆ-

**ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸ್ವರೂಪಾಃ ॥**

ಇದು ಶ್ವೇತಾಶ್ವತರೋಪನಿಷತ್ತಿನ (೪.೫) ವಚನವಾಗಿದೆ. ಯಾವ ಜನ್ಮ ರಹಿತವಾದ ಸತ್ತ್ವ ರಜಸ್ಸು ಮತ್ತು ತಮಸ್ಸೆಂಬ ಗುಣರೂಪವನ್ನುಳ್ಳ ಪ್ರಕೃತಿಯಿದೆಯೋ, ಅದೇ ಸ್ವರೂಪಾಕಾರದಿಂದ ಬಹುಪ್ರಜಾರೂಪವಾಗಿ ಹೋಗುತ್ತದೆ. ಎಂದರೆ -

---

೨೫. ಈ ಸೂತ್ರಗಳ ಅಭಿಪ್ರಾಯವಾಗಿದೆ- ಯು.ಮೀ.

೨೬. 'ಪ್ರಧಾನ' ಎಂಬುದು ಪ್ರಕೃತಿಯ ಮತ್ತೊಂದು ಹೆಸರು ಮಾತ್ರ-ಅನು.

ಪ್ರಕೃತಿಯು ಪರಿಣಾಮಿನಿ (ಪರಿವರ್ತನಶೀಲ)ಯಾಗಿರುವುದರಿಂದ ಬೇರೆಯ ಸ್ಥಿತಿಯನ್ನು ಹೊಂದುತ್ತದೆ. ಆದರೆ ಪುರುಷನು[೨೭] ಅಪರಿಣಾಮಿ (ಪರಿವರ್ತನಶೀಲನಲ್ಲದವನು) ಯಾಗಿರುವುದರಿಂದ, ಅವನು ಬೇರೆ ಸ್ಥಿತಿಯನ್ನು ಹೊಂದಿ, ಬೇರೆಯ ರೂಪದಲ್ಲಿ ಎಂದಿಗೂ ಪ್ರಾಪ್ತನಾಗುವುದಿಲ್ಲ. ಸದಾ ಕೂಟಸ್ಥನೂ,[೨೮] ನಿರ್ವಿಕಾರನೂ ಆಗಿರುತ್ತಾನೆ. ಆದುದರಿಂದ "ಯಾವನು ಕಪಿಲಾಚಾರ್ಯರನ್ನು ಅನೀಶ್ವರವಾದಿಗಳೆಂದು ಹೇಳುತ್ತಾನೋ, ಅವನೇ ಅನೀಶ್ವರವಾದಿಯೇ ಹೊರತು ಕಪಿಲಾಚಾರ್ಯರು (ಅನೀಶ್ವರವಾದಿಗಳು) ಎಂದಿಗೂ ಅಲ್ಲ."

ಮತ್ತು 'ಮೀಮಾಂಸಾ'ದರ್ಶನದಲ್ಲಿ 'ಧರ್ಮ'[೨೯] ಮತ್ತು 'ಧರ್ಮೀ' ಎಂಬ ಶಬ್ದಗಳು ಈಶ್ವರನ ಅಸ್ತಿತ್ವವನ್ನು ತೋರಿಸುತ್ತವೆ. ವೈಶೇಷಿಕ ಮತ್ತು ನ್ಯಾಯಗಳೂ ಕೂಡ, 'ಆತ್ಮಾ' ಎಂಬ ಶಬ್ದವನ್ನು ಬಳಸಿರುವುದರಿಂದ, ಅನೀಶ್ವರವಾದಿಗಳಲ್ಲ. ಏಕೆಂದರೆ ಸರ್ವಜ್ಞತ್ವ – ಮೊದಲಾದ ಧರ್ಮಗಳಿಂದ ಯುಕ್ತನಾಗಿರವ ಈಶ್ವರನನ್ನೂ, ಹಾಗೂ **"ಅತತಿ ವ್ಯಾಪ್ನೋತಿ ಸರ್ವತ್ರ ಇತ್ಯಾತ್ಮಾ"** "ಯಾವನು ಸರ್ವತ್ರವ್ಯಾಪಕನೂ ಮತ್ತು ಸರ್ವಜ್ಞತ್ವ ಮೊದಲಾದ ಧರ್ಮಗಳಿಂದ ಯುಕ್ತನಾಗಿರುವವನೂ, ಸಮಸ್ತ ಜೀವರಿಗೂ ಆತ್ಮನೂ" ಆಗಿದ್ದಾನೋ, ಅವನನ್ನು 'ಮೀಮಾಂಸಾ', 'ವೈಶೇಷಿಕ' ಮತ್ತು 'ನ್ಯಾಯಗಳು' ಈಶ್ವರನೆಂದು ಅಂಗೀಕರಿಸುತ್ತವೆ.

**ಪ್ರಶ್ನೆ:–** ಈಶ್ವರನು ಅವತಾರವನ್ನು ಎತ್ತುತ್ತಾನೋ ಅಥವಾ ಇಲ್ಲವೋ?

**ಉತ್ತರ:–** ಇಲ್ಲ. ಏಕೆಂದರೆ **'ಅಜ ಏಕಪಾತ್'** (ಯಜು :– ೩೪.೫೩) **'ಸ ಪರ್ಯಗಾಚ್ಛುಕ್ರಮಕಾಯಂ'** (ಯಜು:– ೪೦.೮) ಈ ಮೊದಲಾದ ವೇದವಚನಗಳಿಂದ ಪರಮೇಶ್ವರನು ಜನ್ಮವೆತ್ತುವುದಿಲ್ಲ (ಎಂದು ಸಿದ್ಧವಾಗುತ್ತದೆ).

**ಪ್ರಶ್ನೆ:– ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ** ।

**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್** ॥ (ಭಗವದ್ಗೀತಾ :– ೪.೭)

ಶ್ರೀಕೃಷ್ಣನು– "ಯಾವಾಗ ಯಾವಾಗ ಧರ್ಮಕ್ಕೆ ಲೋಪ ಬರುತ್ತದೋ, ಆಗಾಗ ನಾನು ಶರೀರಧಾರಣವನ್ನು ಮಾಡುತ್ತೇನೆ." –ಎಂದು ಹೇಳುತ್ತಾನಲ್ಲ?

**ಉತ್ತರ:–** ಈ ಮಾತು ವೇದವಿರುದ್ಧವಾಗಿರುವುದರಿಂದ ಪ್ರಮಾಣವಲ್ಲ. ಮತ್ತು 'ಶ್ರೀಕೃಷ್ಣರು ಧರ್ಮಾತ್ಮನಾಗಿದ್ದರು ಮತ್ತು ಧರ್ಮದ ರಕ್ಷಣೆಯನ್ನು ಮಾಡಲು ಅಪೇಕ್ಷಿಸುತ್ತಿದ್ದರು. "ನಾನು ಯುಗಯುಗದಲ್ಲಿಯೂ ಜನ್ಮತಾಳಿ ಶ್ರೇಷ್ಠರ ರಕ್ಷಣೆಯನ್ನೂ, ಮತ್ತು ದುಷ್ಟರ ನಾಶವನ್ನೂ ಮಾಡುವೆ"– ಎಂದು ಬಯಸುತ್ತಿದ್ದರು –ಎಂಬುದೇನೋ ಸಂಭವ. ಹೀಗಿದ್ದಲ್ಲಿ – ದೋಷವೇನೂ ಇಲ್ಲ. ಏಕೆಂದರೆ –**'ಪರೋಪಕಾರಾಯ ಸತಾಂ ವಿಭೂತಯಃ'** – ಪರೋಪಕಾರಕ್ಕಾಗಿ ಸತ್ಪುರುಷರ ತನು – ಮನ – ಧನಗಳು ಮೀಸಲಿರುತ್ತವೆ. ಹೀಗಿದ್ದರೂ, ಈ ಮಾತಿನಿಂದ 'ಶ್ರೀಕೃಷ್ಣನು ಈಶ್ವರನಾಗಲಾರನು.'

**ಪ್ರಶ್ನೆ:–** ಹೀಗಿದ್ದಲ್ಲಿ, ಜಗತ್ತಿನಲ್ಲಿ ಈಶ್ವರನ ಇಪ್ಪತ್ತನಾಲ್ಕು ಅವತಾರಗಳಾಗುತ್ತವೆ – ಎನ್ನುತ್ತಾರಲ್ಲ! ಮತ್ತು ಇವನ್ನು ಅವತಾರಗಳೆಂದು ಏಕೆ ಅಂಗೀಕರಿಸುತ್ತಾರೆ?

**ಉತ್ತರ:–** "ವೇದಗಳ ಅರ್ಥವನ್ನು ತಿಳಿಯದಿರುವುದರಿಂದ, ಸಾಂಪ್ರದಾಯಿಕ ಜನರು ತಪ್ಪುದಾರಿಗೆಳೆಯುವುದರಿಂದ ಮತ್ತು ತಾವು ಸ್ವತಃ ಅವಿದ್ವಾಂಸರಾಗಿರುವುದರಿಂದ, ಭ್ರಮಜಾಲದಲ್ಲಿ ಸಿಕ್ಕಿಕೊಂಡು, ಈ ಬಗೆಯ ಅಪ್ರಾಮಾಣಿಕವಾದ ಮಾತುಗಳನ್ನಾಡುತ್ತಾರೆ ಮತ್ತು ಅಂಗೀಕರಿಸುತ್ತಾರೆ."

**ಪ್ರಶ್ನೆ :–** ಈಶ್ವರನು ಅವತಾರವನ್ನೆತ್ತದಿದ್ದರೆ, ಕಂಸ, ರಾವಣ – ಮೊದಲಾದ ದುಷ್ಟರ ನಾಶ ಹೇಗಾಗಬಲ್ಲದು?

**ಉತ್ತರ :–** ಮೊದಲನೆಯದಾಗಿ, ಯಾವನು ಹುಟ್ಟಿದ್ದಾನೋ, ಅವನು ಅವಶ್ಯವಾಗಿ ಮೃತ್ಯುವಿಗೆ ತುತ್ತಾಗುತ್ತಾನೆ. "ಯಾವ ಈಶ್ವರನು ಅವತಾರ, ಶರೀರಧಾರಣ ಮಾಡದೆಯೇ ಜಗತ್ತಿನ ಉತ್ಪತ್ತಿ, ಸ್ಥಿತಿ ಪ್ರಳಯಮಾಡುತ್ತಾನೋ, ಅವನ ಮುಂದೆ ಕಂಸ ಮತ್ತು ರಾವಣ ಮೊದಲಾದವರು ಒಂದು ಹುಳುವಿಗೂ ಸಮನಲ್ಲ." ಅವನು ಸರ್ವವ್ಯಾಪಕನಾಗಿರುವುದರಿಂದ, ಕಂಸ – ರಾವಣ

---

೨೭. ಈ ಪ್ರಕರಣದಲ್ಲಿ ಈಶ್ವರನೇ ಗ್ರಾಹ್ಯ. –ಅನು

೨೮. ಕೂಟಸ್ಥ– ಎಂದರೆ, ಸರ್ವೋಚ್ಚ, ನಿಶ್ಚಲ, ಅಪರಿವರ್ತನಶೀಲ ಎಂಬ ಅರ್ಥಗಳಿವೆ.

೨೯. ಇಲ್ಲಿ ಧರ್ಮ– ಎಂದರೆ, ಗುಣ, ಎಂದು ಗ್ರಹಿಸಬೇಕು. ಗುಣವಂತನೇ ಧರ್ಮೀ. –ಅನು.

ಮೊದಲಾದವರ ಶರೀರಗಳಲ್ಲಿಯೂ ಪರಿಪೂರ್ಣನಾಗಿದ್ದಾನೆ. ಯಾವಾಗ ಬೇಕೋ, ಆ ಸಮಯದಲ್ಲಿಯೇ ಮರ್ಮವನ್ನು ಸೀಳಿ ನಾಶಮಾಡಬಲ್ಲನು. ಒಳ್ಳೆಯದು, 'ಈ ಅನಂತ ಗುಣ – ಕರ್ಮ– ಸ್ವಭಾವಯುಕ್ತನಾದ ಪರಮಾತ್ಮನು ಒಂದು ಕ್ಷುದ್ರ ಜೀವನನ್ನು ಕೊಲ್ಲುವುದಕ್ಕಾಗಿ ಜನ್ಮ–ಮರಣಯುಕ್ತನಾಗುತ್ತಾನೆಂದು ಹೇಳುವವನಿಗೆ 'ಮೂಢ' ಎನ್ನುವುದಕ್ಕಿಂತ ಬೇರೆಯಾದ, ಯಾವುದಾದರೂ ವಿಶೇಷ ಉಪಾಧಿ ಸಿಕ್ಕಬಲ್ಲುದೇ? ಭಕ್ತರ ಉದ್ಧಾರಕ್ಕಾಗಿಯೂ ಜನ್ಮವೆತ್ತುವುದು ಅನಾವಶ್ಯಕ ಮತ್ತು ಯಾವನಾದರೂ ಭಕ್ತ ಜನರ ಉದ್ಧಾರ ಮಾಡುವುದಕ್ಕಾಗಿ ಜನ್ಮವೆತ್ತುತ್ತಾನೆ –ಎಂದು ಹೇಳುವುದಾದರೆ, ಅದೂ ಸತ್ಯವಲ್ಲ. ಏಕೆಂದರೆ, ಯಾವ ಭಕ್ತ ಜನರು ಈಶ್ವರನ ಆಜ್ಞಾನುಕೂಲವಾಗಿ ನಡೆದುಕೊಳ್ಳುತ್ತಾರೋ, ಅವರ ಉದ್ಧಾರವನ್ನು ಮಾಡುವ ಪೂರ್ಣಸಾಮರ್ಥ್ಯ ಈಶ್ವರನಲ್ಲಿದೆ. "ಪೃಥಿವೀ, ಸೂರ್ಯ, ಚಂದ್ರ – ಮೊದಲಾದ ಜಗತ್ತನ್ನು ನಿರ್ಮಿಸುವ, ಧರಿಸುವ ಮತ್ತು ಪ್ರಳಯ ಮಾಡುವಂತಹ ಈಶ್ವರನ ಕರ್ಮಗಳಿಗಿಂತ ಕಂಸ–ರಾವಣ ಮೊದಲಾದವರ ವಧೆ ಮತ್ತು ಗೋವರ್ಧನ ಮೊದಲಾದ ಪರ್ವತಗಳನ್ನು ಎತ್ತುವುದು ದೊಡ್ಡ ಕರ್ಮಗಳೇನು?" ಯಾವನಾದರೂ ಸರಿಯೇ, ಈ ಸೃಷ್ಟಿಯಲ್ಲಿ ಪರಮೇಶ್ವರನ ಕರ್ಮಗಳನ್ನು ಕುರಿತು ಆಲೋಚಿಸುವುದಾದರೆ, **"ನ ಭೂತೋ ನ ಭವಿಷ್ಯತಿ"**– ಈಶ್ವರನಿಗೆ ಸಮಾನನಾಗಿರುವವನು ಯಾವನೂ ಇಲ್ಲ ; ಆಗುವುದೂ ಇಲ್ಲ"– ಎನ್ನಲೇ ಬೇಕಾದೀತು.

ಮತ್ತು ಯುಕ್ತಿಯಿಂದಲೂ ಈಶ್ವರನ ಜನ್ಮ ಸಿದ್ಧವಾಗುವುದಿಲ್ಲ. ಯಾವನಾದರೂ, ಅನಂತವಾದ ಆಕಾಶದ ಬಗೆಗೆ 'ಗರ್ಭದಲ್ಲಿ ಪ್ರವೇಶಿಸಿತು ಅಥವಾ ಮುಷ್ಟಿಯಲ್ಲಿ ಹಿಡಿದುಕೊಂಡೆನು.' ಎಂದು ಹೇಳಿದರೆ, ಇಂತಹ ಕಥನ ಎಂದಿಗೂ ಸತ್ಯವಾಗಲಾರದು; ಏಕೆಂದರೆ– ಆಕಾಶವು ಅನಂತ ಮತ್ತು ಎಲ್ಲದರಲ್ಲಿಯೂ ವ್ಯಾಪಕವಾಗಿದೆ. ಈ ಕಾರಣದಿಂದ ಆಕಾಶವು ಹೊರಗೆ ಬರುವುದೂ ಇಲ್ಲ; ಒಳಗೆ ಹೋಗುವುದೂ ಇಲ್ಲ. ಅದೇ ರೀತಿ "ಪರಮಾತ್ಮನೂ ಕೂಡ ಅನಂತನೂ, ಸರ್ವವ್ಯಾಪಕನೂ ಆಗಿರುವುದರಿಂದ, ಅವನ ಬರುವಿಕೆ – ಹೋಗುವಿಕೆಗಳು ಎಂದಿಗೂ ಸಿದ್ಧವಾಗಲಾರವು." ಎಲ್ಲಿ ಮೊದಲೇ (ಸಂಬಂಧಪಟ್ಟ ವಸ್ತು ಅಥವಾ ವ್ಯಕ್ತಿ) ಇರಲಿಲ್ಲವೋ, ಅಲ್ಲಿಗೆ ಹೋಗುವುದು ಅಥವಾ – ಅಲ್ಲಿಂದ ಬರುವುದು ಶಕ್ಯವಾಗಿರುತ್ತದೆ. 'ಎಲ್ಲಿಂದಲಾದರೂ ಬಂದನು' – ಎನ್ನಲು, ಪರಮೇಶ್ವರನು ಗರ್ಭದಲ್ಲಿ ವ್ಯಾಪಕನಾಗಿರಲಿಲ್ಲವೇನು? ಮತ್ತು 'ಒಳಗಿನಿಂದ ಹೊರಟು ಬಂದನು – ಎನ್ನಲು', 'ಹೊರಗೆ ಅವನು ಇರಲಿಲ್ಲವೇನು?' ಈಶ್ವರನ ವಿಷಯದಲ್ಲಿ ಹೀಗೆ ಹೇಳುವುದು ಮತ್ತು ಅಂಗೀಕರಿಸುವುದು ವಿದ್ಯಾಹೀನರನ್ನು ಬಿಟ್ಟರೆ, ಮತ್ತೆ ಯಾವನಿಗೆ ತಾನೇ ಶಕ್ಯವಾಗಿದ್ದೀತು? ಆದುದರಿಂದ, "ಪರಮೇಶ್ವರನ ಆಗಮನ – ನಿರ್ಗಮನ, ಜನನ–ಮರಣ ಎಂದಿಗೂ ಸಿದ್ಧವಾಗಲಾರದು." ಅದೇ ಕಾರಣದಿಂದ, 'ಏಸು' ಮೊದಲಾದವರೂ ಕೂಡ ಈಶ್ವರನ ಅವತಾರ ಗಳಲ್ಲ – ಎಂದು ತಿಳಿದುಕೊಳ್ಳಬೇಕು. ಏಕೆಂದರೆ, ರಾಗ–ದ್ವೇಷಗಳು, ಹಸಿವು–ಬಾಯಾರಿಕೆಗಳು, ಭಯ–ಶೋಕಗಳು, ಸುಖ–ದುಃಖಗಳು, ಜನನ–ಮರಣಗಳು ಮೊದಲಾದ ಲಕ್ಷಣಗಳಿಂದ ಯುಕ್ತರಾಗಿದ್ದುದರಿಂದ (ಅವರೆಲ್ಲಾ) ಮನುಷ್ಯರೇ ಆಗಿದ್ದರು.

**ಪ್ರಶ್ನೆ:**– ಈಶ್ವರನು ತನ್ನ ಭಕ್ತರ ಪಾಪಗಳನ್ನು ಕ್ಷಮಿಸುತ್ತಾನೋ, ಅಥವಾ ಇಲ್ಲವೋ?

**ಉತ್ತರ :**– ಇಲ್ಲ. ಏಕೆಂದರೆ, ಪಾಪಗಳನ್ನು ಕ್ಷಮಿಸುವುದಾದರೆ, ಅವನ ನ್ಯಾಯ ನಾಶವಾಗಿ ಹೋಗುವುದು ಮತ್ತು ಮಾನವರೆಲ್ಲರೂ ಮಹಾಪಾಪಿಗಳಾಗಿ ಹೋಗುವರು. ಏಕೆಂದರೆ, "ಕ್ಷಮೆಯ ಮಾತನ್ನು ಕೇಳಿಯೇ ಅವರಿಗೆ ಪಾಪ ಮಾಡುವುದರಲ್ಲಿ ನಿರ್ಭಯತ್ವ ಮತ್ತು ಉತ್ಸಾಹ ಉಂಟಾಗುವುದು." ಉದಾಹರಣೆಗೆ ರಾಜನು ಅಪರಾಧಗಳನ್ನು ಕ್ಷಮಿಸಿ ಬಿಟ್ಟರೆ, ಅಪರಾಧಿಗಳು ಉತ್ಸಾಹಪೂರ್ವಕವಾಗಿ ಹೆಚ್ಚು–ಹೆಚ್ಚು , ದೊಡ್ಡ – ದೊಡ್ಡ ಪಾಪಗಳನ್ನು ಮಾಡುವರು. ಏಕೆಂದರೆ, ರಾಜನು ಅವರ ಅಪರಾಧಗಳನ್ನು ಕ್ಷಮಿಸಿಬಿಡುವವನು ಮತ್ತು ಅವರಿಗೂ "ನಾವು ರಾಜನಿಗೆ ಕೈಮುಗಿಯುವುದೇ ಮೊದಲಾದ ನಟನೆಗಳನ್ನು ಮಾಡಿ, ಅಪರಾಧದಿಂದ ಬಿಡುಗಡೆ ಹೊಂದುವೆವು" – ಎಂಬ ಭರವಸೆಯೂ ಉಂಟಾಗುವುದು, ಮತ್ತು ಯಾರು ಅಪರಾಧ ಮಾಡುವುದಿಲ್ಲವೋ, ಅವರೂ ಕೂಡ ಅಪರಾಧ ಮಾಡುವುದಕ್ಕೆ ಹೆದರದೆ, ಪಾಪ ಮಾಡುವುದರಲ್ಲಿ ಪ್ರವೃತ್ತರಾಗುವರು. ಆದುದರಿಂದ, 'ಸಮಸ್ತ ಕರ್ಮಗಳ ಫಲವನ್ನೂ ತಕ್ಕರೀತಿಯಲ್ಲಿ ಕೊಡುವುದೇ ಈಶ್ವರನ ಕಾರ್ಯವಾಗಿದೆ;' ಕ್ಷಮಿಸುವುದಲ್ಲ.

**ಪ್ರಶ್ನೆ:**– ಜೀವನು ಸ್ವತಂತ್ರನೋ ಅಥವಾ ಪರತಂತ್ರನೋ?

**ಉತ್ತರ:**– ತನ್ನ ಕರ್ತವ್ಯ ಕರ್ಮಗಳಲ್ಲಿ ಸ್ವತಂತ್ರನು ಮತ್ತು ಈಶ್ವರನ ವ್ಯವಸ್ಥೆಯಲ್ಲಿ ಪರತಂತ್ರನಾಗಿದ್ದಾನೆ. **"ಸ್ವತಂತ್ರಃ ಕರ್ತಾ"** – ಇದು ಪಾಣಿನೀಯ ವ್ಯಾಕರಣದ (೧.೪.೫೪) ಸೂತ್ರವಾಗಿದೆ. ಯಾವನು ಸ್ವತಂತ್ರನೋ, ಎಂದರೆ ಸ್ವಾಧೀನನೋ, ಅವನೇ ಕರ್ತೃವಾಗಿರುತ್ತಾನೆ.

**ಪ್ರಶ್ನೆ:–** 'ಸ್ವತಂತ್ರ'ನೆಂದು ಯಾವನನ್ನು ಹೇಳುತ್ತಾರೆ?

**ಉತ್ತರ:–** ಯಾವನ ವಶದಲ್ಲಿ ಶರೀರ, ಪ್ರಾಣ, ಇಂದ್ರಿಯಗಳು ಮತ್ತು ಅಂತಃಕರಣಗಳು ಮೊದಲಾದವು ಇರುತ್ತವೋ, ಅವನು (ಸ್ವತಂತ್ರನು). ಸ್ವತಂತ್ರನಲ್ಲದಿದ್ದರೆ, ಅವನಿಗೆ ಪಾಪ – ಪುಣ್ಯಗಳ ಫಲ ಎಂದಿಗೂ ಸಿಕ್ಕಲಾರದು. ಏಕೆಂದರೆ, ಹೇಗೆ ಭೃತ್ಯನು ಸ್ವಾಮಿಯ ಮತ್ತು ಸೇನೆಯು ಸೇನಾಧ್ಯಕ್ಷನ ಆಜ್ಞೆ ಅಥವಾ ಪ್ರೇರಣೆಯಿಂದ ಯುದ್ಧದಲ್ಲಿ ಅನೇಕ ಪುರುಷರನ್ನು ಕೊಂದರೂ ಅಪರಾಧಿಗಳಾಗುವುದಿಲ್ಲವೋ, ಹಾಗೆ ಪರಮೇಶ್ವರನ ಪ್ರೇರಣೆ ಅಥವಾ ಅಧೀನತೆಯಿಂದ ಕರ್ಮಗಳು ಸಿದ್ಧವಾದರೆ, ಜೀವನಿಗೆ ಪಾಪ ಅಥವಾ ಪುಣ್ಯ ತಗಲುವುದಿಲ್ಲ. ಪ್ರೇರಕನಾದ ಪರಮೇಶ್ವರನು ಆ ಫಲಕ್ಕೆ ಭಾಗಿಯಾಗುವನು. ನರಕ –ಸ್ವರ್ಗದ, ಎಂದರೆ – ದುಃಖ–ಸುಖಗಳ ಪ್ರಾಪ್ತಿಯೂ ಪರಮೇಶ್ವರನಿಗೇ ಆಗಬೇಕಾದಿತು. ಹೇಗೆ ಯಾವನಾದರೂ ಪುರುಷನು ಶಸ್ತ್ರ – ವಿಶೇಷದಿಂದ ಯಾವನನ್ನಾದರೂ ಕೊಂದುಹಾಕಿದರೆ, ಆ ಕೊಲೆಗಾರನೇ ಹಿಡಿಯಲ್ಪಡುತ್ತಾನೋ ಮತ್ತು ಅವನೇ ಶಿಕ್ಷೆಯನ್ನು ಪಡೆಯುತ್ತಾನೋ, ಶಸ್ತ್ರವು ಪಡೆಯದೋ, ಹಾಗೆಯೇ ಪರಾಧೀನನಾದ ಜೀವನು ಪಾಪ–ಪುಣ್ಯಗಳ ಭಾಗಿಯಾಗಲಾರನು. ಆದುದರಿಂದ, ತನ್ನ ಸಾಮರ್ಥ್ಯಕ್ಕನುಕೂಲವಾಗಿ ಕರ್ಮ ಮಾಡುವುದರಲ್ಲಿ ಜೀವನು ಸ್ವತಂತ್ರನು. ಆದರೆ, ಯಾವಾಗ ಅವನು ಪಾಪ ಮಾಡಿಮುಗಿಸುತ್ತಾನೋ, ಆಗ ಈಶ್ವರನ ವ್ಯವಸ್ಥೆಯಲ್ಲಿ ಪರಾಧೀನನಾಗಿ ಪಾಪದ ಫಲಗಳನ್ನು ಅನುಭವಿಸುತ್ತಾನೆ. ಆದುದರಿಂದ, "ಕರ್ಮಮಾಡುವುದರಲ್ಲಿ ಜೀವನು ಸ್ವತಂತ್ರನೂ ಮತ್ತು ಪಾಪದ ದುಃಖವೆಂಬ ಫಲವನ್ನು ಅನುಭವಿಸುವುದರಲ್ಲಿ ಪರತಂತ್ರನೂ ಆಗಿರುತ್ತಾನೆ." (ಪುಣ್ಯದ ಸುಖವೆಂಬ ಫಲದ ಬಗೆಗೂ ಇದೇ ತಥ್ಯ)

**ಪ್ರಶ್ನೆ:–** ಪರಮೇಶ್ವರನು ಜೀವನನ್ನು ರಚಿಸದಿದ್ದರೆ, ಮತ್ತು ಸಾಮರ್ಥ್ಯವನ್ನು ಕೊಡದೇ ಇದ್ದಿದ್ದರೆ, ಜೀವನು ಏನನ್ನೂ ಮಾಡಲು ಶಕ್ತನಾಗಿರುತ್ತಿರಲಿಲ್ಲ. ಆದುದರಿಂದ, ಪರಮೇಶ್ವರನ ಪ್ರೇರಣೆಯಿಂದಲೇ ಜೀವನು ಕರ್ಮಮಾಡುತ್ತಾನೆ.

**ಉತ್ತರ:–** 'ಜೀವನು ಎಂದೂ ಉತ್ಪನ್ನನಾಗಲಿಲ್ಲ'; ಹೇಗೆ ಈಶ್ವರನೂ ಮತ್ತು ಜಗತ್ತಿನ ಉಪದಾನಾಕಾರಣವೂ ನಿತ್ಯವೋ, ಹಾಗೆ (ಜೀವನು) ಅನಾದಿಯಾಗಿದ್ದಾನೆ. ಮತ್ತು ಜೀವನ ಶರೀರ ಮತ್ತು ಇಂದ್ರಿಯಗಳ ಗೋಳಕಗಳು ಪರಮೇಶ್ವರನಿಂದ ನಿರ್ಮಿತವಾಗಿವೆ; ಆದರೆ, ಅವೆಲ್ಲವೂ ಜೀವನ ಅಧೀನದಲ್ಲಿವೆ. ಯಾವನೊಬ್ಬನು ಮನಸ್ಸು, ಕರ್ಮ, ವಚನಗಳಿಂದ ಪಾಪ–ಪುಣ್ಯಗಳನ್ನು ಮಾಡುತ್ತಾನೋ, ಅವನು ಭೋಕ್ತೃವೇ ಹೊರತು, ಈಶ್ವರನಲ್ಲ. ಉದಾಹರಣೆಗೆ, ಯಾವನೋ ಪರ್ವತದಿಂದ ಕಬ್ಬಿಣವನ್ನು ತೆಗೆದನು; ಆ ಕಬ್ಬಿಣವನ್ನು ಯಾವನೋ ವ್ಯಾಪಾರಿಯು ತೆಗೆದುಕೊಂಡನು; ಕಮ್ಮಾರನು ಅವನ ಅಂಗಡಿಯಿಂದ ಅದನ್ನು ತೆಗೆದುಕೊಂಡು ಕತ್ತಿಯನ್ನು ಮಾಡಿದನು. ಅವನಿಂದ ಯಾವನೋ ಸೈನಿಕನು ಕತ್ತಿಯನ್ನು ತೆಗೆದು ಕೊಂಡನು. ಮತ್ತೆ ಅದರಿಂದ ಯಾವನನ್ನೋ ಕೊಂದು ಹಾಕಿದನು. ಈ ಉದಾಹರಣೆಯಲ್ಲಿ ಹೇಗೆ ಕಬ್ಬಿಣ ತೆಗೆದವನನ್ನೂ, ಅದನ್ನು ತೆಗೆದು ಕೊಂಡವನನ್ನೂ, ಕತ್ತಿ ಮಾಡಿದವನನ್ನೂ ಮತ್ತು ಕತ್ತಿಯನ್ನೂ ಹಿಡಿದುಕೊಂಡು ರಾಜನು ಶಿಕ್ಷೆ ಕೊಡುವು ದಿಲ್ಲವೋ, ಆದರೆ ಯಾವನು ಕತ್ತಿಯಿಂದ ಕೊಂದನೋ, ಅವನೇ ಶಿಕ್ಷೆಯನ್ನು ಹೊಂದುತ್ತಾನೋ, ಹಾಗೆಯೇ ಶರೀರ–ಮೊದಲಾದವುಗಳ ಉತ್ಪತ್ತಿ ಮಾಡುವವನಾದ ಪರಮಾತ್ಮನು, ಜೀವನ ಕರ್ಮಗಳ ಭೋಕ್ತೃವಾಗುವುದಿಲ್ಲ; ಆದರೆ – ಜೀವನಿಗೆ ಅನುಭವ ಮಾಡಿಸುವವನಾಗಿರುತ್ತಾನೆ. "ಪರಮೇಶ್ವರನು ಕರ್ಮಗಳನ್ನು ಮಾಡುತ್ತಾ ಇದ್ದಿದ್ದರೆ, ಯಾವ ಜೀವನೂ ಪಾಪಗಳನ್ನು ಮಾಡುತ್ತಿರಲಿಲ್ಲ." ಏಕೆಂದರೆ, ಪರಮೇಶ್ವರನು ಪವಿತ್ರನೂ, ಮತ್ತು ಧಾರ್ಮಿಕನೂ ಆಗಿರುವುದರಿಂದ, ಯಾವ ಜೀವನಿಗೂ ಪಾಪ ಮಾಡುವುದಕ್ಕೆ ಪ್ರೇರಣೆ ಕೊಡುತ್ತಿರಲಿಲ್ಲ. ಆದುದರಿಂದ, "ಜೀವನು ತನ್ನ ಕೆಲಸಗಳನ್ನು ಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ." ಹೇಗೆ ಜೀವನು ತನ್ನ ಕರ್ಮಗಳನ್ನು ಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೋ, ಹಾಗೆಯೇ ಪರಮೇಶ್ವರನೂ ತನ್ನ ಕರ್ಮಗಳನ್ನು ಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ.

**ಪ್ರಶ್ನೆ:–** ಜೀವನ ಮತ್ತು ಈಶ್ವರನ ಸ್ವರೂಪ, ಗುಣ, ಕರ್ಮ ಮತ್ತು ಸ್ವಭಾವ, ಹೇಗಿದೆ?

**ಉತ್ತರ:–** 'ಇಬ್ಬರೂ ಚೇತನಸ್ವರೂಪರಾಗಿದ್ದಾರೆ.' ಇಬ್ಬರ ಸ್ವಭಾವವೂ ಪವಿತ್ರ ಅವಿನಾಶೀ ಮತ್ತು ಧಾರ್ಮಿಕ ಮೊದಲಾದು ದಾಗಿದೆ. ಆದರೆ, ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಪ್ರಳಯ, ಎಲ್ಲರನ್ನೂ – ಎಲ್ಲವನ್ನೂ – ನಿಯಮದಲ್ಲಿಡುವುದು, ಜೀವರಿಗೆ ಪಾಪ–ಪುಣ್ಯಗಳ ಫಲಕೊಡುವುದು ಮೊದಲಾದ ಧರ್ಮಯುಕ್ತ ಕರ್ಮಗಳು ಪರಮೇಶ್ವರನದಾಗಿವೆ. ಮತ್ತು ಸಂತಾನೋತ್ಪಾದನ, ಅವುಗಳ ಪಾಲನ, ಶಿಲ್ಪ ವಿದ್ಯೆ ಮೊದಲಾದ ಸತ್ಕರ್ಮಗಳು ಮತ್ತು ಅನ್ಯ ದುಷ್ಕರ್ಮಗಳು ಜೀವನವಾಗಿವೆ. ನಿತ್ಯತ್ವ, ಜ್ಞಾನ, ಆನಂದ, ಅನಂತಬಲ ಮೊದಲಾದುವು ಈಶ್ವರನ ಗುಣಗಳಾಗಿವೆ. ಜೀವಾತ್ಮನ ಗುಣಗಳು, ಎಂದರೆ:–

ಇಚ್ಛಾದ್ವೇಷಪ್ರಯತ್ನಸುಖದುಃಖಜ್ಞಾನಾನ್ಯಾತ್ಮನೋ ಲಿಂಗಮಿತಿ ॥ (ನ್ಯಾಯಸೂತ್ರ :– ೧.೧.೧೦)

ಪ್ರಾಣಾಪಾನನಿಮೇಷೋನ್ಮೇಷಮನೋಗತೀಂದ್ರಿಯಾಂತರ ವಿಕಾರಾಃ

ಸುಖದುಃಖೇಚ್ಛಾದ್ವೇಷೌಪ್ರಯತ್ನಾಶ್ಚಾತ್ಮನೋ ಲಿಂಗಾನಿ ॥ (ವೈಶೇಷಿಕ :– ೩.೨.೪)

(ಇಚ್ಛಾ) ಪದಾರ್ಥಗಳ ಪ್ರಾಪ್ತಿಯ ಅಭಿಲಾಷೆ, (ದ್ವೇಷ) ದುಃಖ–ಮೊದಲಾದುದರ ಅನಿಚ್ಛೆ, ವೈರ, (ಪ್ರಯತ್ನ) ಪುರುಷಾರ್ಥ ಬಲ, (ಸುಖ) ಸುಖ, (ದುಃಖ) ವಿಲಾಪ, ಅಪ್ರಸನ್ನತ್ವ (ಜ್ಞಾನ) ವಿವೇಕ, ಅರಿವು–ಇವುಗಳು (ನ್ಯಾಯ–ವೈಶೇಷಿಕವೆರಡಕ್ಕೂ) ಸಮನಾಗಿವೆ. ಆದರೆ, ವೈಶೇಷಿಕದಲ್ಲಿ, (ಪ್ರಾಣ) ಪ್ರಾಣವಾಯುವನ್ನು ಹೊರಕ್ಕೆ ಹೊರಡಿಸುವುದು, (ಅಪಾನ) ಪ್ರಾಣವನ್ನು ಹೊರಗಿನಿಂದ ಒಳಕ್ಕೆ ತೆಗೆದುಕೊಳ್ಳುವುದು, (ನಿಮೇಷ) ಕಣ್ಣನ್ನು ಮುಚ್ಚುವುದು, (ಉನ್ಮೇಷ) ಕಣ್ಣನ್ನು ತೆರೆಯುವುದು, (ಮನ) ನಿಶ್ಚಯ, ಸ್ಮರಣ ಮತ್ತು ಅಹಂಕಾರವನ್ನು ಮಾಡುವುದು, (ಗತಿ) ಚಲನೆ, (ಇಂದ್ರಿಯ) ಎಲ್ಲ ಇಂದ್ರಿಯಗಳನ್ನು ಕಾರ್ಯದಲ್ಲಿ ತೊಡಗಿಸುವುದು, (ಅಂತರವಿಕಾರ) ಹಸಿವು ನೀರಡಿಕೆ, ಹರ್ಷ, ಶೋಕ ಮೊದಲಾದ ಬೇರೆ ಬೇರೆ ಸ್ಥಿತಿಗಳಿಂದ ಯುಕ್ತನಾಗಿರುವುದು–ಜೀವಾತ್ಮನ ಈ ಗುಣಗಳು ಪರಮಾತ್ಮನದರಿಂದ ಬೇರೆಯಾಗಿವೆ. ಇವುಗಳಿಂದಲೇ ಆತ್ಮನ ಇರುವನ್ನು ಗ್ರಹಿಸಬೇಕು. ಏಕೆಂದರೆ–ಅವನು ಸ್ಥೂಲನಲ್ಲ. ಎಲ್ಲಿಯವರೆಗೆ ಆತ್ಮನು ದೇಹದಲ್ಲಿರುತ್ತಾನೋ, ಅವರೆಗೆ ಮಾತ್ರ ಈ ಗುಣಗಳು ಕಂಡುಬರುತ್ತವೆ. ಮತ್ತು ಯಾವಾಗ ಶರೀರವನ್ನು ಬಿಟ್ಟು ಹೊರಟು ಹೋಗುತ್ತಾನೋ, ಆಗ ಈ ಗುಣಗಳು ಶರೀರದಲ್ಲಿರುವುದಿಲ್ಲ. ಯಾವನು ಇರುವಾಗ ಯಾವವು ಇರುತ್ತವೋ ಮತ್ತು ಇಲ್ಲದಾಗ ಇರುವುದಿಲ್ಲವೋ, ಆ ಗುಣಗಳು ಅವನವೇ ಆಗಿರುತ್ತವೆ. ಹೇಗೆ ದೀಪ ಮತ್ತು ಸೂರ್ಯ ಮೊದಲಾದುದರ ಇಲ್ಲದಿರುವಿಕೆಯಿಂದ ಬೆಳಕು ಮೊದಲಾದುದರ ಇಲ್ಲದಿರುವಿಕೆಯೂ, ಮತ್ತು ಅವುಗಳ ಇರುವಿಕೆಯಿಂದ (ಬೆಳಕು ಮೊದಲಾದುದರ) ಇರುವಿಕೆಯೂ ಉಂಟಾಗುತ್ತವೋ, ಹಾಗೆಯೇ ಜೀವನ ಮತ್ತು ಪರಮಾತ್ಮನ ಬಗೆಗೂ ತಿಳಿಯಬೇಕು. 'ಅವರ ವಿಜ್ಞಾನವು ಗುಣಗಳ ಮೂಲಕವೇ[೩೦] ಆಗುತ್ತದೆ.'

**ಪ್ರಶ್ನೆ:**– ಪರಮಾತ್ಮನು ತ್ರಿಕಾಲದರ್ಶಿಯಾಗಿದ್ದಾನೆ. ಆದಕಾರಣ, ಭವಿಷ್ಯತ್ತಿನ ವಿಷಯಗಳನ್ನೂ ತಿಳಿಯುತ್ತಾನೆ. ಅವನು ಹೇಗೆ ನಿಶ್ಚಯಮಾಡುವನೋ, ಜೀವನು ಹಾಗೆಯೇ ಮಾಡುವನು. ಆದುದರಿಂದ, ಜೀವನು ಸ್ವತಂತ್ರನಲ್ಲ. ಮತ್ತು ಜೀವನಿಗೆ ಈಶ್ವರನು ಶಿಕ್ಷೆಯನ್ನೂ ಕೊಡಲಾರನು. ಏಕೆಂದರೆ–ಹೇಗೆ ಈಶ್ವರನು ತನ್ನ ಜ್ಞಾನದಿಂದ ನಿಶ್ಚಯಮಾಡಿದ್ದಾನೋ, ಹಾಗೆಯೇ ಜೀವನು ಮಾಡುತ್ತಾನೆ.

**ಉತ್ತರ:**– ಈಶ್ವರನನ್ನು 'ತ್ರಿಕಾಲದರ್ಶಿ' – ಎನ್ನುವುದು ಮೂರ್ಖತನದ ಕೆಲಸ. ಏಕೆಂದರೆ, ಯಾವುದು ಆಗಿ, ಇಲ್ಲವಾಗುವುದೋ, ಅದು ಭೂತಕಾಲ; ಮತ್ತು ನಡೆಯದೆ ಮುಂದೆ ಆಗುವುದೋ ಅದು ಭವಿಷ್ಯತ್ಕಾಲವೆನಿಸುತ್ತದೆ. ಈಶ್ವರನಿಗೆ ಯಾವುದಾದರೂ ಜ್ಞಾನ ಉಂಟಾಗಿ, ಉಳಿಯದೇ ಹೋಗುವುದೋ ಮತ್ತು ಈಗ ಆಗಿರದೆ, ಮುಂದಕ್ಕೆ ಆಗುವುದೋ? ಆದುದರಿಂದ, 'ಪರಮೇಶ್ವರನ ಜ್ಞಾನವು ಸದಾ ಏಕರಸವೂ, ಅಖಂಡವೂ ಆಗಿರುತ್ತದೆ. ಭೂತ, ಭವಿಷ್ಯತ್ತು–ಜೀವರಿಗಿದೆ.' ಹೌದು. ಜೀವಾತ್ಮರ ಕರ್ಮದ ಸಂಬಂಧದಿಂದ ತ್ರಿಕಾಲಜ್ಞತ್ವ ಈಶ್ವರನಲ್ಲಿದೆ; ಸ್ವತಃ ಇಲ್ಲ. ಹೇಗೆ ಸ್ವತಂತ್ರತೆಯಿಂದ ಕರ್ಮಗಳನ್ನು ಜೀವನು ಮಾಡುತ್ತಾನೋ, ಹಾಗೆಯೇ ಸರ್ವಜ್ಞತೆಯಿಂದ ಈಶ್ವರನು ತಿಳಿದುಕೊಳ್ಳುತ್ತಾನೆ. ಮತ್ತು ಹೇಗೆ ಈಶ್ವರನು ತಿಳಿಯುತ್ತಾನೋ, ಹಾಗೆ ಜೀವನು ಮಾಡುತ್ತಾನೆ. ಎಂದರೆ ಭೂತ, ಭವಿಷ್ಯತ್ತು ವರ್ತಮಾನದ ಜ್ಞಾನದ ವಿಷಯದಲ್ಲಿ ಮತ್ತು ಫಲಗಳನ್ನು ಕೊಡುವುದರಲ್ಲಿ ಈಶ್ವರನು ಸ್ವತಂತ್ರನು ಮತ್ತು ಜೀವನು ಕಿಂಚಿತ್ ವರ್ತಮಾನದಲ್ಲಿ ಮತ್ತು ಕರ್ಮ ಮಾಡುವುದರಲ್ಲಿ ಸ್ವತಂತ್ರನಾಗಿದ್ದಾನೆ. ಈಶ್ವರನ ಜ್ಞಾನವು ಅನಾದಿಯಾಗಿರುವುದರಿಂದ, ಹೇಗೆ ಕರ್ಮದ ಜ್ಞಾನವಿದೆಯೋ, ಹಾಗೆಯೇ ಶಿಕ್ಷೆಕೊಡುವ ಜ್ಞಾನವೂ ಅನಾದಿಯಾಗಿದೆ. ಅವನ ಈ ಎರಡು ಜ್ಞಾನಗಳೂ ಸತ್ಯವೇ. ಕರ್ಮ ಜ್ಞಾನವು ಸತ್ಯವೂ, ಮತ್ತು ದಂಡ–ಜ್ಞಾನವು ಮಿಥ್ಯೆಯೂ ಎಂದಿಗಾದರೂ ಆಗಬಲ್ಲದೇ? ಆದಕಾರಣ, ಇದರಲ್ಲಿ ಯಾವ ದೋಷವೂ ಸಲ್ಲದು.

**ಪ್ರಶ್ನೆ** :– ಜೀವನು ಶರೀರದಿಂದ ಬೇರೆಯಾಗಿ, ವ್ಯಾಪಕನಾಗಿದ್ದಾನೋ ಅಥವಾ ಪರಿಚ್ಛಿನ್ನನಾಗಿದ್ದಾನೋ?

**ಉತ್ತರ:**– 'ಪರಿಚ್ಛಿನ್ನ' ಎಂದರೆ (ಏಕದೇಶಿಯನು) ಆಗಿದ್ದಾನೆ. ಅವನು 'ವಿಭು' ಎಂದರೆ ವ್ಯಾಪಕನಾಗಿದ್ದಲ್ಲಿ, ಜಾಗ್ರತ್, ಸ್ವಪ್ನ, ಸುಷುಪ್ತಿ, ಮರಣ, ಜನನ, ಸಂಯೋಗ, ವಿಯೋಗ, ನಿರ್ಗಮನ, ಆಗಮನ – ಎಂದಿಗೂ ಶಕ್ಯವಾಗಲಾರದು. ಆದುದರಿಂದ,

೩೦. ಆತ್ಮ ಸಾಕ್ಷಾತ್ಕಾರ, ಪರಮಾತ್ಮ–ಸಾಕ್ಷಾತ್ಕಾರ, ಎಂದರೆ ಇದೇ! ರೂಪ ರಹಿತ ಪದಾರ್ಥದ ರೂಪ–ಸಾಕ್ಷಾತ್ಕಾರವೆಂದಿಗೂ ಆಗುವುದಿಲ್ಲ. –ಸಂ.

'ಜೀವನ ಸ್ವರೂಪ ಅಲ್ಪಜ್ಞ; ಅಲ್ಪ-ಎಂದರೆ ಸೂಕ್ಷ್ಮವಾಗಿದೆ.' ಮತ್ತು ಪರಮೇಶ್ವರನು ಅತ್ಯಂತ ಸೂಕ್ಷ್ಮಕ್ಕಿಂತ ಸೂಕ್ಷ್ಮತರ, ಅನಂತ, ಸರ್ವಜ್ಞ ಮತ್ತು ಸರ್ವವ್ಯಾಪಕ ಸ್ವರೂಪನಾಗಿದ್ದಾನೆ. ಆದುದರಿಂದ 'ಜೀವ ಮತ್ತು ಪರಮೇಶ್ವರರಿಗೆ ವ್ಯಾಪ್ಯ-ವ್ಯಾಪಕ ಸಂಬಂಧವಿದೆ.'

**ಪ್ರಶ್ನೆ :-** ಯಾವ ಸ್ಥಳದಲ್ಲಿ ಒಂದು ವಸ್ತುವಿರುತ್ತದೋ, ಆ ಸ್ಥಳದಲ್ಲಿ ಇನ್ನೊಂದು ವಸ್ತುವಿರಲಾರದು. ಆದುದರಿಂದ ಜೀವ-ಈಶ್ವರರ ನಡುವೆ ಸಂಯೋಗ ಸಂಬಂಧವಿರಬಲ್ಲದು; ವ್ಯಾಪ್ಯ-ವ್ಯಾಪಕ ಸಂಬಂಧವಲ್ಲ.

**ಉತ್ತರ:-** ಈ ನಿಯಮ ಸಮಾನ ಆಕಾರಯುಕ್ತವಾದ ಪದಾರ್ಥಗಳಿಗೆ ಅನ್ವಯಿಸಬಲ್ಲದು; ಅಸಮಾನಾಕೃತಿಗಳಿಗೆ ಸಲ್ಲದು, ಹೇಗೆ ಕಬ್ಬಿಣವು ಸ್ಥೂಲವೂ, ಅಗ್ನಿಯು ಸೂಕ್ಷ್ಮವೂ ಅಗಿರುತ್ತದೋ, ಈ ಕಾರಣದಿಂದ ಹೇಗೆ ಕಬ್ಬಿಣದಲ್ಲಿ ವಿದ್ಯುತ್ತು, ಅಗ್ನಿಯು ವ್ಯಾಪಕವಾಗಿ ಒಂದೇ ಅವಕಾಶದಲ್ಲಿ ಎರಡೂ ಇರುತ್ತವೋ, ಹಾಗೆ ಜೀವನು ಪರಮೇಶ್ವರನಿಗಿಂತ ಸ್ಥೂಲನೂ ಮತ್ತು ಪರಮೇಶ್ವರನು ಜೀವನಿಗಿಂತ ಸೂಕ್ಷ್ಮನೂ ಆಗಿರುವುದರಿಂದ, ಪರಮೇಶ್ವರನು ವ್ಯಾಪಕನೂ ಮತ್ತು ಜೀವನು ವ್ಯಾಪ್ಯನೂ ಆಗಿದ್ದಾರೆ. ಹೇಗೆ ಜೀವ-ಈಶ್ವರರಿಗೆ ಈ ವ್ಯಾಪ್ಯ-ವ್ಯಾಪಕಸಂಬಂಧವಿದೆಯೋ, ಹಾಗೆಯೇ ಸೇವ್ಯ-ಸೇವಕ, ಆಧಾರಾಧೇಯ, ಸ್ವಾಮೀ-ಭೃತ್ಯ, ರಾಜಾ-ಪ್ರಜಾ ಮತ್ತು ಪಿತೃ-ಪುತ್ರ ಈ ಮೊದಲಾದ ಸಂಬಂಧಗಳೂ ಇವೆ.

**ಪ್ರಶ್ನೆ:-** (ಜೀವ-ಈಶ್ವರರು) ಬೇರೆ ಬೇರೆಯಿರುವುದಾದರೆ-

**"ಪ್ರಜ್ಞಾನಂ ಬ್ರಹ್ಮ"**[೩೧] (ಐತರೇಯ:- ೫.೩); **"ಅಹಂ ಬ್ರಹ್ಮಾಸ್ಮಿ"** (ಬೃಹದಾರಣ್ಯಕ:- ೧.೪.೧೦) (೨); **"ತತ್ತ್ವಮಸಿ"**- (ಛಾಂದೋಗ್ಯ:- ೬.೮.೭) (೩) **"ಅಯಮಾತ್ಮಾ ಬ್ರಹ್ಮ"**. (ಮಾಂಡೂಕ್ಯ:-೨) (೪) - ವೇದಗಳ ಈ 'ಮಹಾವಾಕ್ಯ'ಗಳ ಅರ್ಥವೇನು?

**ಉತ್ತರ :-** ಇವು ವೇದವಾಕ್ಯಗಳೇ ಅಲ್ಲ; ಆದರೆ ಬ್ರಾಹ್ಮಣ ಗ್ರಂಥಗಳ ವಚನಗಳಾಗಿವೆ. ಮತ್ತು ಇವುಗಳಿಗೆ ಮಹಾವಾಕ್ಯ ವೆಂದು ಹೆಸರು-ಎಂದು ಸತ್ಯಶಾಸ್ತ್ರಗಳಲ್ಲಿ ಎಲ್ಲಿಯೂ ಬರೆದಿಲ್ಲ. ಅರ್ಥ:- "(ಅಹಂ) ನಾನು, (ಬ್ರಹ್ಮ ) ಬ್ರಹ್ಮ-ಎಂದರೆ ಬ್ರಹ್ಮಸ್ಥನು, (ಅಸ್ಮಿ) ಆಗಿದ್ದೇನೆ. ಇಲ್ಲಿ ತಾಸ್ಥ್ಯೋಪಾದಿಯಿದೆ. ಉದಾಹರಣೆಗೆ - **"ಮಂಚಾಃ ಕ್ರೋಶಂತಿ"** - ಮಂಚಗಳು ಕೂಗುತ್ತವೆ" - ಎನ್ನುತ್ತಾರೆ. ಮಂಚಗಳು ಜಡ; ಅವಕ್ಕೆ ಕೂಗುವ ಸಾಮರ್ಥ್ಯವಿಲ್ಲ. ಆದುದರಿಂದ, "ಮಂಚಸ್ಥರಾದ ಮಾನವರು ಕೂಗುತ್ತಾರೆ." - ಎಂದರಿಯಲಾಗುತ್ತದೆ. ಈ ಸ್ಥಳದಲ್ಲಿಯೂ ಹೀಗೆಯೇ ತಿಳಿಯಬೇಕು. ಯಾವನಾದರೂ "ಎಲ್ಲ ಪದಾರ್ಥಗಳೂ ಬ್ರಹ್ಮ ಸ್ಥವೇ ಆಗಿವೆ; ಮತ್ತೆ, ಜೀವನನ್ನು ಬ್ರಹ್ಮಸ್ಥನೆನ್ನುವುದರಲ್ಲಿ ವಿಶೇಷವೇನಿದೆ?" - ಎಂದು ಕೇಳುವನಾದರೆ, ಉತ್ತರವಿದು:- "ಎಲ್ಲಾ ಪದಾರ್ಥಗಳೂ ಬ್ರಹ್ಮಸ್ಥವಾಗಿವೆ; ಆದರೆ ಹೇಗೆ ಜೀವನು ಸಾಧರ್ಮ್ಯಯುಕ್ತನೂ, ಸಮೀಪಸ್ಥನೂ ಆಗಿದ್ದಾನೋ, ಹಾಗೆ ಬೇರೆ ಯಾವುದೂ ಇಲ್ಲ" ಮತ್ತು ಜೀವನಿಗೆ ಬ್ರಹ್ಮದ ಜ್ಞಾನವಿದೆ; ಮತ್ತು ಮುಕ್ತಿಯಲ್ಲಿ ಅವನು ಬ್ರಹ್ಮದ ಸಾಕ್ಷಾಂತ್ಸಂಬಂಧದಲ್ಲಿರುತ್ತಾನೆ. ಈ ಕಾರಣದಿಂದ, ಜೀವನಿಗೆ ಬ್ರಹ್ಮದೊಂದಿಗೆ 'ತಾಸ್ಥ್ಯ'[೩೨] ಅಥವಾ 'ತತ್ಸಹಚರಿತೋಪಾಧಿ' ಅನ್ವಯಿಸುತ್ತದೆ; ಎಂದರೆ - ಜೀವನು ಬ್ರಹ್ಮದ ಸಹಚಾರಿಯಾಗಿದ್ದಾನೆ. ಹೀಗೆಂದ ಮಾತ್ರಕ್ಕೆ 'ಜೀವ ಮತ್ತು ಬ್ರಹ್ಮ ಒಂದೇ ಅಲ್ಲ.' ಉದಾಹರಣೆಗೆ, ಯಾವನಾದರೂ, ಯಾವನಿಗಾದರೂ 'ನಾನು ಮತ್ತು ಇವನು ಒಂದೇ; ಎಂದರೆ ಅವಿರೋಧಿಗಳಾಗಿದ್ದೇವೆ'- ಎಂದು ಹೇಳುವಂತೆ ಯಾವ ಜೀವನು ಸಮಾಧಿಸ್ಥನಾಗಿ, ಪರಮೇಶ್ವರನಲ್ಲಿ ಪ್ರೇಮಬದ್ಧನಾಗಿ ನಿಮಗ್ನನಾಗುತ್ತಾನೋ, ಅವನು-"ನಾನು ಮತ್ತು ಬ್ರಹ್ಮ ಒಂದು; ಎಂದರೆ - ಅವಿರೋಧಿಗಳೂ, ಒಂದೇ ಅವಕಾಶಸ್ಥಿತರೂ ಆಗಿದ್ದವೆ".- ಎಂದು ಹೇಳಬಲ್ಲನು. ಯಾವ ಜೀವನು ಪರಮೇಶ್ವರನ ಗುಣ-ಕರ್ಮ-ಸ್ವಭಾವಕ್ಕೆ ಅನುಕೂಲವಾಗಿ, ತನ್ನ ಗುಣ-ಕರ್ಮ-ಸ್ವಭಾವಗಳನ್ನು ರೂಪಿಸಿಕೊಳ್ಳುತ್ತಾನೋ, ಅವನು ಮಾತ್ರ ಸಾಧರ್ಮ್ಯದಿಂದ ಬ್ರಹ್ಮದೊಂದಿಗೆ ಏಕತ್ವವನ್ನು ಹೇಳಿಕೊಳ್ಳಬಲ್ಲನು.

**ಪ್ರಶ್ನೆ :-** ಒಳ್ಳೆಯದು; ಹಾಗಾದರೆ, "(ತತ್) ಆ ಬ್ರಹ್ಮವು, (ತ್ವಂ) ಜೀವನಾದ ನೀನು, (ಅಸಿ) ಆಗಿದ್ದೀಯೆ. ಹೇ ಜೀವ! (ತ್ವಂ) ನೀನು, (ತತ್) ಆ ಬ್ರಹ್ಮ, (ಅಸಿ) ಆಗಿದ್ದೀಯೆ".- ಇದಕ್ಕೆ ಹೇಗೆ ಅರ್ಥಮಾಡುತ್ತೀರಿ?

---

೩೧. ಈ ವಾಕ್ಯದ ವಾಸ್ತವಿಕ ಅರ್ಥ ಮತ್ತು ಅದರ ಮೇಲೆ ವಿಚಾರ ಬಿಟ್ಟು ಹೋಗಿದೆ- ಯು.ಮೀ.

೩೨. ಈ ಬಗ್ಗೆ, ವಿಶೇಷ ವಿಚಾರವನ್ನು ತಿಳಿಯಲು, 'ನ್ಯಾಯ ದರ್ಶನ ಭಾಷ್ಯ'[೨.೨.೬೧] ನೋಡಿ. ಯು.ಮೀ.

**ಉತ್ತರ :–** ನೀವು 'ತತ್' ಎಂಬ ಶಬ್ದದಿಂದ ಎನನ್ನು ಗ್ರಹಿಸುತ್ತೀರಿ? (ಪ್ರಶ್ನೆ) –"ಬ್ರಹ್ಮ"ವನ್ನು. (ಉತ್ತರ) ಬ್ರಹ್ಮ ಶಬ್ದದ 'ಅನುವೃತ್ತಿ'ಯನ್ನು (ಅಧ್ಯಾಹಾರ) ಎಲ್ಲಿಂದ ತಂದಿರಿ?

**ಪ್ರಶ್ನೆ:– "ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ ಬ್ರಹ್ಮ"–** ಎಂಬ ಈ ಪೂರ್ವವಾಕ್ಯದಿಂದ.

**ಉತ್ತರ:–** ನೀವು ಈ 'ಛಾಂದೋಗ್ಯೋಪನಿಷತ್ತಿನ' ದರ್ಶನವನ್ನೂ ಮಾಡಿಲ್ಲ. ಅದನ್ನು ನೋಡಿದ್ದ ಪಕ್ಷದಲ್ಲಿ, ಅಲ್ಲಿ ಬ್ರಹ್ಮ ಶಬ್ದದ ಉಚ್ಚಾರಣೆ ಕೂಡ ಇಲ್ಲ – (ಎಂದು ತಿಳಿಯುತ್ತಿದ್ದಿರಿ). ಇಂತಹ ಅಸತ್ಯವನ್ನು ಏಕೆ ಹೇಳುತ್ತೀರಿ? ಆದರೆ, 'ಛಾಂದೋಗ್ಯ'ದಲ್ಲಿಯಂತೂ

**"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್"** (೬.೨.೧) ಎಂಬ ಈ ಪಾಠವಿದೆ. 'ಅಲ್ಲಿ ಬ್ರಹ್ಮ – ಎಂಬ ಶಬ್ದವಿಲ್ಲ.'

**ಪ್ರಶ್ನೆ:–** ಹಾಗಾದರೆ ತಾವು 'ತತ್' ಶಬ್ದದಿಂದ ಏನನ್ನು ಗ್ರಹಿಸುತ್ತೀರಿ?

**ಉತ್ತರ:– "ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ".** (ಛಾಂದೋಗ್ಯ:– ೬.೮.೭)

ಆ ಪರಮಾತ್ಮನು ತಿಳಿಯಲು ಯೋಗ್ಯನಾಗಿದ್ದಾನೆ. ಯಾವ ಅವನು ಅತ್ಯಂತ ಸೂಕ್ಷ್ಮ ನೂ ಮತ್ತು ಈ ಎಲ್ಲಾ ಜಗತ್ತಿಗೂ ಮತ್ತು ಜೀವನಿಗೂ ಕೂಡ ಆತ್ಮನೂ ಆಗಿದ್ದಾನೋ, ಅವನೇ ಸತ್ಯಸ್ವರೂಪನು ಮತ್ತು ತನ್ನ ಆತ್ಮನು ತಾನೇ ಆಗಿದ್ದಾನೆ. ಓ ಶ್ವೇತಕೇತೋ! ಪ್ರಿಯಪುತ್ರ!

**"ತದಾತ್ಮ ಕಸ್ತದಂತರ್ಯಾಮೀ ತ್ವಮಸಿ"–** "ಅದೇ ಪರಮಾತ್ಮನನ್ನು ಅಂತರ್ಯಾಮಿಯಾಗಿ ಹೊಂದಿರುವವನು ನೀನಾಗಿದ್ದೀಯೆ" ಈ ಅರ್ಥವೇ ಉಪನಿಷತ್ತುಗಳಿಗೆ ಅವಿರುದ್ಧವಾಗಿದೆ. ಏಕೆಂದರೆ –

**ಯ ಆತ್ಮನಿ ತಿಷ್ಠನ್ ಆತ್ಮನೋಽತರೋ ಯಮಾತ್ಮಾ ನ ವೇದ ಯಸ್ಯಾತ್ಮಾ ಶರೀರಮ್ ।**

**ಆತ್ಮನೋಽತರೋ ಯಮಯತಿ ಸ ತ ಆತ್ಮಾಂತರ್ಯಾಮ್ಯಮೃತಃ॥"**

ಇದು ಬೃಹದಾರಣ್ಯಕದ ವಚನವಾಗಿದೆ. ಮತ್ತು ಶತಪಥ ಬ್ರಾಹ್ಮಣ (೧೪.೬.೭.೩೨)ದಲ್ಲಿದೆ. ಮಹರ್ಷಿ ಯಾಜ್ಞವಲ್ಕ್ಯರು ತಮ್ಮ ಪತ್ನಿಯಾದ ಮೈತ್ರೇಯಿಗೆ – ಓ ಮೈತ್ರೇಯಿ![೩೩] ಯಾವ ಪರಮೇಶ್ವರನಾದ ಆತ್ಮನು, ಎಂದರೆ (ಪರಮ) ಆತ್ಮನು ಜೀವನದಲ್ಲಿ ಸ್ಥಿತನಾಗಿದ್ದಾನೋ ಮತ್ತು ಯಾವನು ಜೀವಾತ್ಮನಿಂದ ಬೇರೆಯಾಗಿದ್ದಾನೋ, ಮೂಢನಾದ ಜೀವಾತ್ಮನು ಯಾವನ ಬಗೆಗೆ, "ಆ ಪರಮಾತ್ಮನು ನನ್ನಲ್ಲಿ ವ್ಯಾಪಕನಾಗಿದ್ದಾನೆ" ಎಂದು ತಿಳಿಯುವುದಿಲ್ಲವೋ, ಯಾವ ಪರಮೇಶ್ವರನಿಗೆ ಜೀವಾತ್ಮನು ಶರೀರನಾಗಿದ್ದಾನೋ, ಎಂದರೆ, ಶರೀರದಲ್ಲಿ ಜೀವನಿರುವಂತೆಯೇ ಜೀವನಲ್ಲಿ ಪರಮೇಶ್ವರನು ವ್ಯಾಪಕನಾಗಿದ್ದಾನೆ, ಯಾವನು ಜೀವಾತ್ಮನಿಂದ ಬೇರೆಯಾಗಿದ್ದು, ಜೀವನ ಪಾಪ–ಪುಣ್ಯಗಳ ಸಾಕ್ಷಿಯಾಗಿದ್ದು, ಅವುಗಳ ಫಲಗಳನ್ನು ಜೀವರಿಗೆ ಕೊಟ್ಟು, ನಿಯಮದಲ್ಲಿಡುತ್ತಾನೋ, ಅದೇ ಅವಿನಾಶಿಸ್ವರೂಪನು ನಿನಗೂ ಅಂತರ್ಯಾಮೀ ಆತ್ಮನಾಗಿದ್ದಾನೆ; ಎಂದರೆ ನಿನ್ನಲ್ಲಿ ವ್ಯಾಪಕ ನಾಗಿದ್ದಾನೆ. ಅವನನ್ನು ತಿಳಿದುಕೋ."–ಎಂದು ಹೇಳುತ್ತಾರೆ. ಈ ಮೊದಲಾದ ವಚನಗಳಿಗೆ ಯಾವನಾದರೂ ಬೇರೆ ಬಗೆಯ ಅರ್ಥವನ್ನು ಮಾಡಬಲ್ಲನೇನು? **"ಅಯಮಾತ್ಮಾ ಬ್ರಹ್ಮ"–** ಎಂದರೆ, ಸಮಾಧಿ ಸ್ಥಿತಿಯಲ್ಲಿ ಯಾವಾಗ ಯೋಗಿಗೆ ಪರಮೇಶ್ವರನ ಪ್ರತ್ಯಕ್ಷ (ಜ್ಞಾನ)ವಾಗುತ್ತದೋ, ಆಗ ಅವನು –"ಯಾವುದು ನನ್ನಲ್ಲಿ ವ್ಯಾಪಕವಾಗಿದೆಯೋ, ಅದೇ ಬ್ರಹ್ಮವು ಎಲ್ಲೆಡೆಯೂ ವ್ಯಾಪಕವಾಗಿದೆ."– ಎಂದು ಹೇಳುತ್ತಾನೆ. ಆದುದರಿಂದ, ಯಾವ ಆಧುನಿಕ ವೇದಾಂತಿಗಳು ಜೀವ–ಬ್ರಹ್ಮರ ಏಕತ್ವವನ್ನು ಹೇಳುತ್ತಾರೋ, ಅವರು ವೇದಾಂತ ಶಾಸ್ತ್ರವನ್ನು ತಿಳಿಯರು.

**ಪ್ರಶ್ನೆ :– ಅನೇನಾತ್ಮನಾ ಜೀವೇನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ"** (೧) (ಛಾಂದೋಗ್ಯ:– ೬.೩.೨)

**ತತ್ಸೃಷ್ಟ್ವಾತದೇವಾನು ಪ್ರಾವಿಶತ್.** (೨) (ತೈತ್ತಿರೀಯ:– ಬ್ರಹ್ಮಾನಂದವಲ್ಲೀ, ಅನುವಾಕ–೬)

---

೩೩. ಇದು ಶತಪಥ ಬ್ರಾಹ್ಮಣ [೧೪.೬.೭.೩೨]ದಲ್ಲಿದೆ. ಇಲ್ಲಿ ಯಾಜ್ಞವಲ್ಕ್ಯ–ಉದ್ದಾಲಕರ ಸಂವಾದವಿದೆ. ಆದ್ದರಿಂದ, 'ಮೈತ್ರೇಯಿ' ಎಂಬ ಸ್ಥಾನದಲ್ಲಿ 'ಉದ್ದಾಲಕ' ಎಂದಿರಬೇಕಿತ್ತು. –ಯು.ಮೀ.

ಪರಮೇಶ್ವರನು –"ನಾನು ಜಗತ್ತನ್ನೂ, ಮತ್ತು ಶರೀರವನ್ನೂ ರಚಿಸಿ, ಜಗತ್ತಿನಲ್ಲಿ ವ್ಯಾಪಕನೂ ಮತ್ತು ಜೀವರೂಪನೂ ಆಗಿ, ಶರೀರದಲ್ಲಿ ಪ್ರವಿಷ್ಟನಾಗುತ್ತಾ, ನಾಮ ಮತ್ತು ರೂಪದ ವಿಸ್ತಾರವನ್ನು ಮಾಡುವೆ.– ಎನ್ನುತ್ತಾನೆ. "ಪರಮೇಶ್ವರನು ಆ ಜಗತ್ತನ್ನೂ ಮತ್ತು ಶರೀರವನ್ನೂ ನಿರ್ಮಿಸಿ, ಅದರಲ್ಲಿ ಅವನು ಪ್ರವಿಷ್ಟನಾದನು". – ಈ ಮೊದಲಾದ ಶ್ರುತಿಗಳಿಗೆ ಬೇರೆಯ ಅರ್ಥವನ್ನು ಹೇಗೆ ಮಾಡಬಲ್ಲಿರಿ?

**ಉತ್ತರ:–** ನೀವು ಪದ, ಪದಾರ್ಥ ಮತ್ತು ವಾಕ್ಯಾರ್ಥಗಳನ್ನು ತಿಳಿದಿದ್ದರೆ, ಇಂತಹ ಅನರ್ಥವನ್ನು ಎಂದಿಗೂ ಮಾಡುತ್ತಿರಲಿಲ್ಲ. ಏಕೆಂದರೆ–ಈ ಸ್ಥಳದಲ್ಲಿ ಒಂದು ಪ್ರವೇಶ ಮತ್ತು ಎರಡನೆಯದು ಅನುಪ್ರವೇಶ, ಅಂದರೆ ಆಮೇಲಿನ ಪ್ರವೇಶ – ಎನಿಸುತ್ತದೆ – ಎಂದು ತಿಳಿದುಕೊಳ್ಳಿರಿ. ಪರಮೇಶ್ವರನು, ಶರೀರದಲ್ಲಿ ಪ್ರವಿಷ್ಟರಾದ ಜೀವರುಗಳೊಂದಿಗೆ ಅನುಪ್ರವಿಷ್ಟನಂತೆ ಆಗಿ, ವೇದಗಳ ಮೂಲಕ ಸಮಸ್ತ ನಾಮ–ರೂಪಗಳೇ ಮೊದಲಾದುದರ ವಿದ್ಯೆಯನ್ನು ಪ್ರಕಟ ಮಾಡುತ್ತಾನೆ ಮತ್ತು ಶರೀರದಲ್ಲಿ ಜೀವನನ್ನು ಪ್ರವೇಶಮಾಡಿಸಿ, ತಾನು ಜೀವನಲ್ಲಿ ಅನುಪ್ರವಿಷ್ಟನಾಗುತ್ತಿದ್ದಾನೆ. ನೀವು **"ಅನು"** ಎಂಬ ಶಬ್ದದ ಅರ್ಥವನ್ನು ತಿಳಿದಿದ್ದರೆ, ಅಂತಹ ವಿಪರೀತವಾದ ಅರ್ಥವನ್ನು ಎಂದಿಗೂ ಮಾಡುತ್ತಿರಲಿಲ್ಲ.

**ಪ್ರಶ್ನೆ :– "ಸೋಽಯಂ ದೇವದತ್ತೋಯ ಉಷ್ಣಕಾಲೇ ಕಾಶ್ಯಾಂ ದೃಷ್ಟಃ, ಸ ಇದಾನೀಂ ಪ್ರಾವೃಟ್ಸಮಯೇ ಮಥುರಾಯಾಂ ದೃಶ್ಯತೇ"–** ಎಂದರೆ "ಯಾವ ದೇವದತ್ತನನ್ನು ನಾನು ಬೇಸಿಗೆಯಲ್ಲಿ ಕಾಶಿಯಲ್ಲಿ ನೋಡಿದ್ದೇನೋ, ಅವನನ್ನೇ ಮಳೆಗಾಲದಲ್ಲಿ ಮಥುರೆಯಲ್ಲಿ ನೋಡುತ್ತೇನೆ." ಎಂಬ ಈ ಪ್ರಕರಣದಲ್ಲಿ ಹೇಗೆ ಕಾಶೀದೇಶವನ್ನೂ, ಬೇಸಿಗೆ ಕಾಲವನ್ನೂ ಬಿಟ್ಟು, ಶರೀರ ಮಾತ್ರವನ್ನು ಲಕ್ಷ್ಯದಲ್ಲಿಟ್ಟರೆ, ದೇವದತ್ತನು ಮಾತ್ರ ಕಾಣಲ್ಪಡುತ್ತಾನೋ, ಹಾಗೆಯೇ, ಈ 'ಬಾಗತ್ಯಾಗಲಕ್ಷಣೆ'ಯಿಂದ[೩೪] ಈಶ್ವರನ ಪರೋಕ್ಷ ದೇಶ, ಕಾಲ, ಮಾಯೆ, ಉಪಾಧಿ[೩೫]ಯನ್ನೂ ಮತ್ತು ಜೀವನ ಈ ದೇಶ, ಕಾಲ, ಅವಿದ್ಯೆ ಮತ್ತು ಅಲ್ಪಜ್ಞತ್ವ– ಎಂಬ ಉಪಾಧಿಯನ್ನೂ ಬಿಟ್ಟು, ಚೇತನ ಮಾತ್ರದಲ್ಲಿ ಲಕ್ಷ್ಯವಿಡುವುದರಿಂದ, ಒಂದೇ ಬ್ರಹ್ಮವಸ್ತು ಇಬ್ಬರಲ್ಲಿಯೂ ಲಕ್ಷಿತವಾಗುತ್ತದೆ. ಈ 'ಭಾಗತ್ಯಾಗಲಕ್ಷಣೆ'ಯಿಂದ, ಎಂದರೆ ಕೆಲವನ್ನು ಗ್ರಹಿಸುವುದು ಮತ್ತು ಕೆಲವನ್ನು ತ್ಯಜಿಸುವುದು–ಈ ಪ್ರಕ್ರಿಯೆಯಿಂದ, ಈಶ್ವರನ ಸರ್ವಜ್ಞತ್ವ–ಮೊದಲಾದ ವಾಚ್ಯಾರ್ಥ[೩೬]ವನ್ನೂ, ಮತ್ತು ಜೀವನ ಅಲ್ಪಜ್ಞತ್ವ–ಮೊದಲಾದ ವಾಚ್ಯಾರ್ಥವನ್ನೂ ತ್ಯಜಿಸಿ, ಚೇತನ ಮಾತ್ರದ ಲಕ್ಷ್ಯಾರ್ಥವನ್ನು[೩೭] ಗ್ರಹಿಸುವುದರಿಂದ ಅದ್ವೈತವು ಸಿದ್ಧವಾಗುತ್ತದೆ. ಈ ಸಂದರ್ಭದಲ್ಲಿ ಏನು ಹೇಳಬಲ್ಲಿರಿ?

**ಉತ್ತರ:** ಮೊದಲಾಗಿ ನೀವು ಜೀವನನ್ನು ಮತ್ತು ಈಶ್ವರನನ್ನು 'ನಿತ್ಯ'ರೆಂದು ಅಂಗೀಕರಿಸುತ್ತೀರೋ ಅಥವಾ 'ಅನಿತ್ಯ'ರೆಂದೋ?

**ಪ್ರಶ್ನೆ:–** ಇವರಿಬ್ಬರನ್ನೂ ಉಪಾಧಿಜನ್ಯರೂ, ಕಲ್ಪಿತರೂ ಆಗಿರುವ ಕಾರಣ ಅನಿತ್ಯರೆಂದು ಅಂಗೀಕರಿಸುತ್ತೇವೆ.

**ಉತ್ತರ:–** ಆ ಉಪಾಧಿಯನ್ನು ನಿತ್ಯವೆಂದು ಅಂಗೀಕರಿಸುತ್ತೀರೋ, ಅಥವಾ ಅನಿತ್ಯವೆಂದೋ?

**ಪ್ರಶ್ನೆ:–** ನಮ್ಮ ಮತದಲ್ಲಿ

**ಜೀವೇಶೌ ಚ ವಿಶದ್ಧಾಚಿದ್ವಿಭೇದಸ್ತು ತಯೋರ್ದ್ವಯೋಃ ।**

**ಅವಿದ್ಯಾತಚ್ಚಿತೋರ್ಯೋಗಃ ಷಡಸ್ಮಾಕಮನಾದಯಃ ॥ ೧ ॥**

**ಕಾರ್ಯೋಪಾಧಿರಯಂ ಜೀವಃ ಕಾರಣೋಪಾಧಿರೀಶ್ವರಃ ।**

**ಕಾರ್ಯಕಾರಣತಾಂ ಹಿತ್ವಾ ಪೂರ್ಣಬೋಧೋಽವಶಿಷ್ಯತೇ ॥ ೨ ॥**

ಇವು "ಸಂಕ್ಷೇಪಶಾರೀರಕ" ಮತ್ತು "ಶಾರೀರಕ ಭಾಷ್ಯ"ದಲ್ಲಿನ ಕಾರಿಕೆಗಳಾಗಿವೆ.[೩೮] ವೇದಾಂತಿಗಳಾದ ನಾವು ಆರು

---

೩೪. ಭಾಗತ್ಯಾಗಲಕ್ಷಣಾಃ:– ಸಾಮಾನ್ಯವಾದುದನ್ನು ಗ್ರಹಿಸಿ, ವಿಶೇಷವಾದುದನ್ನು ತ್ಯಜಿಸುವ, ಅಥವಾ ಸಾಧರ್ಮ್ಯವನ್ನು ಗ್ರಹಿಸಿ, ವೈಧರ್ಮವನ್ನು ತ್ಯಜಿಸುವ ದಾರ್ಶನಿಕ ಸರಣಿ. –ಅನು

೩೫. ಉಪಾಧಿ– ಎಂದರೆ ಅವರಣ. –ಅನು.

೩೬. ವಾಚ್ಯಾರ್ಥ– ಎಂದರೆ, ಸ್ಫುಟವಾಗಿ ತೋರಿಸುವ ವಿಷಯ. –ಅನು

೩೭. ಲಕ್ಷ್ಯಾರ್ಥ. ಎಂದರೆ, ಗಮನಿಸಬೇಕಾದ ಗುರಿ. –ಅನು

೩೮. ಯಾವುದಾದರೂ ಸಿದ್ಧಾಂತದ ಸಾರವನ್ನು ಸ್ಮರಿಸಲು ಸುಲಭವಾಗುವಂತೆ ಮಾಡಲು ರಚಿತವಾಗುವ ಶ್ಲೋಕಗಳು.

ಪದಾರ್ಥ ಗಳನ್ನು, ಎಂದರೆ– ೧. ಜೀವ, ೨. ಈಶ್ವರ, ೩. ಬ್ರಹ್ಮ, ೪. ಜೀವ – ಈಶ್ವರರ ವಿಶೇಷ ಭೇದ, ೫ ಅವಿದ್ಯಾ–ಅಜ್ಞಾನ, ೬. 'ಅವಿದ್ಯಾ' ಮತ್ತು 'ಚೇತನನ ಯೋಗ' – ಇವನ್ನು ಅನಾದಿಗಳೆಂದು ಅಂಗೀಕರಿಸುತ್ತೇವೆ. ಆದರೆ – ಒಂದು 'ಬ್ರಹ್ಮ' ಅನಾದಿ – ಅನಂತ ಮತ್ತು ಬೇರೆ ಐದು, ಪ್ರಾಗಭಾವ[೩೯]ದಂತೆ ಅನಾದಿ – ಸಾಂತವಾಗಿವೆ. ಎಲ್ಲಿಯವರೆಗೆ ಅಜ್ಞಾನವಿರುವುದೋ, ಅಲ್ಲಿಯವರೆಗೆ ಈ ಐದೂ ಇರುತ್ತವೆ. ಮತ್ತು ಈ ಐದರ ಆದಿಯು ವಿದಿತವಾಗುವುದಿಲ್ಲ. ಈ ಕಾರಣದಿಂದ ಅನಾದಿಗಳು ಮತ್ತು ಜ್ಞಾನ ಉಂಟಾದ ಮೇಲೆ ನಾಶವಾಗಿ ಹೋಗುತ್ತವೆಯಾದುದರಿಂದ ಸಾಂತಗಳು, ಎಂದರೆ – ನಾಶಯುಕ್ತವಾದುವು – ಎನಿಸುತ್ತವೆ.

**ಉತ್ತರ :–** ನಿಮ್ಮ ಈ ಶ್ಲೋಕಗಳೆರಡೂ ಅಶುದ್ಧವಾಗಿವೆ. ಏಕೆಂದರೆ–ಅವಿದ್ಯೆಯ ಯೋಗವಿಲ್ಲದೆ ಜೀವನೂ, ಮತ್ತು ಮಾಯೆಯ ಯೋಗವಿಲ್ಲದೆ ಈಶ್ವರನೂ ನಿಮ್ಮ ಮತದಲ್ಲಿ ಸಿದ್ಧರಾಗಲಾರರು. ಆದುದರಿಂದ, **"ತಚ್ಚಿತೋರ್ಯೋಗಃ"–** ಎಂದು, ಆರನೆಯ ಪದಾರ್ಥವಾಗಿ ನೀವು ಯಾವುದನ್ನು ಎಣಿಸಿದ್ದೀರೋ, ಅದು ಉಳಿಯಲಿಲ್ಲ. ಏಕೆಂದರೆ – ಆ ಅವಿದ್ಯೆ, ಮಾಯೆ, ಜೀವ – ಈಶ್ವರರಲ್ಲಿ ಅನ್ವಿತವಾಗಿ ಹೋಯಿತು. ಮತ್ತು ಬ್ರಹ್ಮ ಹಾಗೂ ಮಾಯೆ ಮತ್ತು ಅವಿದ್ಯೆಯ ಯೋಗವಿಲ್ಲದೆ ಈಶ್ವರನು ಆಗುವುದಿಲ್ಲ. ಮತ್ತೆ ಈಶ್ವರನನ್ನು ಅವಿದ್ಯೆ ಮತ್ತು ಬ್ರಹ್ಮದಿಂದ ಬೇರೆ – ಎಂದೆಣಿಸುವುದು ವ್ಯರ್ಥವಾಗಿದೆ. ಆದುದರಿಂದ, ಎರಡೇ ಪದಾರ್ಥಗಳು, ಎಂದರೆ ಬ್ರಹ್ಮ ಮತ್ತು ಅವಿದ್ಯೆ ನಿಮ್ಮ ಮತದಲ್ಲಿ ಸಿದ್ಧವಾಗಬಲ್ಲವು; ಆರು ಅಲ್ಲ. ಮತ್ತು, ಯಾವಾಗ ಅನಂತವೂ ನಿತ್ಯವೂ ಶುದ್ಧವೂ, ಬುದ್ಧವೂ, ಮುಕ್ತಸ್ವಭಾವವೂ ಸರ್ವವ್ಯಾಪಕವೂ ಆದ ಬ್ರಹ್ಮದಲ್ಲಿ ಅಜ್ಞಾನವನ್ನು ಸಿದ್ಧಪಡಿಸುವಿರೋ, ಆಗ ಮಾತ್ರ ನೀವು ಪ್ರಥಮತಃ ಕಾರ್ಯೋಪಾಧಿ – ಕಾರಣೋಪಾಧಿಗಳಿಂದ ಜೀವ ಮತ್ತು ಈಶ್ವರರನ್ನು ಸಿದ್ಧಮಾಡುವುದು ಸಾಧ್ಯವಾಗುತ್ತದೆ. ಅದರ ಆಶ್ರಯದಲ್ಲಿಯೇ ಇರುವ, ಅದರ ವಿಷಯಕ್ಕೆ ಸಂಬಂಧಪಟ್ಟ, ಅನಾದಿಯಾದ ಅಜ್ಞಾನವು, ಅದರ ಏಕ ದೇಶದಲ್ಲಿಯೋ, ಅಥವಾ ಸರ್ವತ್ರವೋ ಇರಲು ಶಕ್ಯ. ಸರ್ವತ್ರ ಎಂದು ಅಂಗೀಕರಿಸುವಿರಾದರೆ, ಸಮಸ್ತ ಬ್ರಹ್ಮವೂ ಶುದ್ಧವಾಗಿರಲು ಶಕ್ಯವೇ ಇಲ್ಲ. ಮತ್ತು ಏಕದೇಶದಲ್ಲಿ ಅಜ್ಞಾನವನ್ನು ಅಂಗೀಕರಿಸುವುದಾದರೆ, ಅದು ಪರಿಚ್ಛಿನ್ನವಾಗಿರುವುದರಿಂದ ಇತ್ತ–ಅತ್ತ ಬರುತ್ತಾ ಹೋಗುತ್ತಾ ಇರುವುದು. ಎಲ್ಲಿ ಎಲ್ಲಿ ಹೋಗುವುದೋ, ಅಲ್ಲಿ – ಅಲ್ಲಿನ ಬ್ರಹ್ಮವು ಅಜ್ಞಾನಿಯೂ, ಮತ್ತು ಯಾವ ಯಾವ ದೇಶವನ್ನು ಬಿಡುತ್ತಾ ಹೋಗುವುದೋ, ಆಯಾ ದೇಶದ ಬ್ರಹ್ಮವು ಜ್ಞಾನಿಯೂ ಆಗುತ್ತಿರುವುದು. ಈ ಸ್ಥಿತಿಯಲ್ಲಿ ಯಾವ ದೇಶದ ಬ್ರಹ್ಮವನ್ನೂ ಅನಾದಿ ಶುದ್ಧ ಜ್ಞಾನಯುಕ್ತ – ಎಂದು ಹೇಳಲಾರಿರಿ. ಮತ್ತು ಅಜ್ಞಾನದ ಎಲ್ಲೆಯಲ್ಲಿ ಯಾವ ಬ್ರಹ್ಮವಿದೆಯೋ, ಅದು ಅಜ್ಞಾನವನ್ನು ತಿಳಿದುಕೊಳ್ಳುವುದು. ಅಜ್ಞಾನಾವರಣದ ಒಳಗಿನ ಮತ್ತು ಹೊರಗಿನ ಬ್ರಹ್ಮದ ಚೂರುಗಳಾಗುವುವು. "ಚೂರುಗಳಾಗಲೊಲ್ಲವೇಕೆ? ಬ್ರಹ್ಮಕ್ಕೇನು ಹಾನಿ?" – ಎನ್ನುವಿರಾದರೆ, ಅದು ಅಖಂಡವಾಗದು. ಮತ್ತು ಅಖಂಡವಾಗಿರುವುದಾದರೆ, ಅಜ್ಞಾನಿಯಾಗಿರದು. ಮತ್ತು ಜ್ಞಾನದ ಅಭಾವ ಅಥವಾ ವಿಪರೀತ ಜ್ಞಾನವೂ ಗುಣವಾಗಿರುವುದರಿಂದ, ಯಾವುದಾದರೂ ದ್ರವ್ಯದೊಂದಿಗೆ ನಿತ್ಯ ಸಂಬಂಧಯುಕ್ತವಾಗಿರುವುದು. ಹೀಗಿರುವುದಾದರೆ, 'ಸಮವಾಯ ಸಂಬಂಧ'[೪೦]ವಿರುವ ಕಾರಣ ಎಂದಿಗೂ ಅನಿತ್ಯವಾಗಲಾರದು. ಮತ್ತು ಹೇಗೆ ಶರೀರದ ಒಂದು ದೇಶ(ಅಂಗ)ದಲ್ಲಿ ಗುಳ್ಳೆ ಏಳುವುದರಿಂದ ಎಲ್ಲ ಕಡೆಯೂ ದುಃಖವು ಹರಡಿಕೊಳ್ಳುವುದೋ, ಹಾಗೆಯೇ ಒಂದು ದೇಶದಲ್ಲಿ ಅಜ್ಞಾನ, ಸುಖ, ದುಃಖ, ಕ್ಲೇಶಗಳ ಪ್ರಾಪ್ತಿಯಾಗುವುದರಿಂದ, ಸಮಸ್ತ ಬ್ರಹ್ಮವೂ ದುಃಖ – ಮೊದಲಾದುದರ ಅನುಭವದಿಂದಲೇ ಅಜ್ಞಾನಿಯಾಗಿ ಹೋಗುವುದು. ಕಾರ್ಯೋಪಾಧಿಯಿಂದ, ಎಂದರೆ ಅಂತಃಕರಣದ ಉಪಾಧಿಯ ಯೋಗದಿಂದ 'ಬ್ರಹ್ಮ'ವನ್ನು ಜೀವನೆಂದು ಅಂಗೀಕರಿಸುವಿರಾದಾರೆ, ನಾವು – "ಬ್ರಹವು ವ್ಯಾಪಕವೋ, ಪರಿಚ್ಛಿನ್ನವೋ?" ಎಂದು ಕೇಳುತ್ತೇವೆ. (ಬ್ರಹ್ಮವು) ವ್ಯಾಪಕ ಮತ್ತು ಉಪಾಧಿಯು ಪರಿಚ್ಛಿನ್ನ; ಎಂದರೆ – ಏಕದೇಶೀಯ ಹಾಗೂ ಬೇರೆ ಬೇರೆಯಾಗಿವೆ – ಎನ್ನುವಿರಾದರೆ, ಅಂತಃಕರಣವು ನಡೆಯುತ್ತಾ – ತಿರುಗುತ್ತಾ ಇರುತ್ತದೆಯೋ, ಅಥವಾ ಇಲ್ಲವೋ?

**ಉತ್ತರ :–** ನಡೆಯತ್ತಾ – ತಿರುಗುತ್ತಾ ಇರುತ್ತದೆ.

**ಪ್ರಶ್ನೆ :–** ಅಂತಃಕರಣದೊಂದಿಗೆ ಬ್ರಹ್ಮವೂ ಚಲಿಸುತ್ತಾ–ತಿರುಗುತ್ತಾ ಇರುತ್ತದೋ, ಅಥವಾ ಸ್ಥಿರವಾಗಿರುತ್ತದೋ?

**ಉತ್ತರ :–** ಸ್ಥಿರವಾಗಿರುತ್ತದೆ.

---

೩೯. ಆದಿ ಮಾತ್ರವಿರದೇ, ಅಂತವನ್ನು ಹೊಂದಿರುವದು. ಘಟ ನಿರ್ಮಾಣವಾಗುವ ಮುನ್ನ ಅದರ ಅಭಾವ ಅನಾದಿ; ನಿರ್ಮಿತವಾದೊಡನೆಸ, ಅದರ ಅಭಾವಕ್ಕೆ ಅಂತವಾಯಿತು. –ಅನು.

೪೦. ಸಮವಾಯ ಸಂಬಂಧವೆಂದರೆ, ಎಂದಿಗೂ ಮುರಿದು ಬೀಳದ, ಯಾವುದಕ್ಕೆ ಅನ್ವಯಿಸುವುದೋ, ಅದು ಇರುವವರದೆಗೆ ಅದರಿಂದ ಬೇರೆಯಾಗದ, ನೂಲು–ಬಟ್ಟೆಗಳ ನಡುವಿನಂತಹ ಸಂಬಂಧ.

**ಪ್ರಶ್ನೆ :–** ಅಂತಃಕರಣವು ಯಾವ ಯಾವ ದೇಶವನ್ನು ಬಿಡುತ್ತದೋ, ಆಯಾದೇಶದ ಬ್ರಹ್ಮ ಅಜ್ಞಾನರಹಿತವೂ ಮತ್ತು ಯಾವ ಯಾವ ದೇಶವನ್ನು ಹೊಗುತ್ತದೋ ಆಯಾ ದೇಶದ ಶುದ್ಧವಾದ ಬ್ರಹ್ಮವು ಅಜ್ಞಾನಿಯೂ ಆಗುತ್ತಿರಬಹುದು. ಹಾಗೆ, ಕ್ಷಣದಲ್ಲಿ ಬ್ರಹ್ಮವು ಜ್ಞಾನಿಯೂ, ಅಜ್ಞಾನಿಯೂ ಆಗುತ್ತಿರುವುದು. ಇದರಿಂದ ಮೋಕ್ಷ ಮತ್ತು ಬಂಧನವೂ ಕೂಡ ಕ್ಷಣಭಂಗುರವಾಗುವುದು. ಮತ್ತು ಹೇಗೆ ಬೇರೆಯವನು ನೋಡಿದುದರ ಸ್ಮರಣವನ್ನು ಬೇರೆಯೊಬ್ಬನು ಮಾಡಲಾರನೋ, ಹಾಗೆ ನಿನ್ನೆ ನೋಡಿದ, ಆಲಿಸಿದ ವಸ್ತುವಿನ ಅಥವಾ ಮಾತಿನ ಜ್ಞಾನ ಉಳಿದಿರಲಾರದು. ಏಕೆಂದರೆ, ಯಾವ ಕಾಲದಲ್ಲಿ ನೋಡಿದ್ದನೋ –ಆಲಿಸಿದ್ದನೋ, ಅದು ಬೇರೆ ದೇಶ ಮತ್ತು ಬೇರೆ ಕಾಲ; ಯಾವ ಸಮಯದಲ್ಲಿ ಸ್ಮರಿಸುತ್ತಾನೋ, ಅದು ಬೇರೆ ದೇಶ ಮತ್ತು ಬೇರೆ ಕಾಲ. ಬ್ರಹ್ಮ ಒಂದಾಗಿದೆ – ಎನ್ನುವಿರಾದರೆ, ಅದು ಸರ್ವಜ್ಞವೇತಕ್ಕಲ್ಲ? ಅಂತಃಕರಣಗಳು ಬೇರೆ ಬೇರೆಯಾಗಿವೆ; ಆದುದರಿಂದ ಅದೂ (ಬ್ರಹ್ಮ) ಕೂಡ ಬೇರೆ ಬೇರೆಯಾಗಿ ಹೋಗುತ್ತಿರಬಹುದು–ಎನ್ನುವಿರಾದರೆ, ಅದು ಜಡ;[೪೧] ಅದರಲ್ಲಿ ಜ್ಞಾನ ಉಂಟಾಗಲಾರದು. ಕೇವಲ ಬ್ರಹ್ಮಕ್ಕೂ" ಜ್ಞಾನ ಉಂಟಾಗುವುದಿಲ್ಲ; ಕೇವಲ ಅಂತಃಕರಣಕ್ಕೂ" ಜ್ಞಾನ ಉಂಟಾಗುವುದಿಲ್ಲ; ಆದರೆ, ಅಂತಃಕರಣಸ್ಥನಾದ ಚಿದಾಭಾಸನಿಗೆ [೪೨] ಜ್ಞಾನ ಉಂಟಾಗುತ್ತದೆ – ಎನ್ನುವಿರಾದರೆ, ಆಗಲೂ ಕೂಡ ಚೇತನಿಗೆಯೇ ಅಂತಃಕರಣದ ಮೂಲಕ ಜ್ಞಾನ ಉಂಟಾಯಿತು–ಎಂದೇ ಆಯಿತು. ಹಾಗಾದರೆ, ಅವನು ನೇತ್ರದ ಮೂಲಕ [೪೩] ಅಲ್ಪನೂ ಅಲ್ಪಜ್ಞನೂ ಆಗುವನೇಕೆ? ಆದುದರಿಂದ, ಕಾರಣೋಪಾಧಿ ಮತ್ತು ಕಾರ್ಯೋಪಾಧಿಗಳ ಯೋಗದಿಂದ, ಬ್ರಹ್ಮವನ್ನು ಜೀವನನ್ನಾಗಿಯೂ ಈಶ್ವರನನ್ನಾಗಿಯೂ ಮಾಡಲಾರಿರಿ. ಆದರೆ, 'ಈಶ್ವರ' –ಎನ್ನುವುದು ಬ್ರಹ್ಮದ ಹೆಸರು. ಮತ್ತು ಬ್ರಹ್ಮದಿಂದ ಭಿನ್ನರೂ, ಅನಾದಿಗಳೂ, ಅನುತ್ಪನ್ನರೂ ಮತ್ತು ಅಮೃತಸ್ವರೂಪರೂ ಆದ ಪರಿಚ್ಛಿನ್ನ ಚೇತನರಿಗೆ 'ಜೀವ'ರೆಂದು ಹೆಸರು. ನೀವು ಚಿದಾಭಾಸನಿಗೇ ಜೀವನೆಂದು ಹೆಸರು–ಎನ್ನುವಿರಾದರೆ. ಅವನು ಕ್ಷಣಭಂಗುರನಾದುದರಿಂದ ನಾಶವಾಗಿ ಹೋಗುವನು. ಹಾಗಾದರೆ, ಮೋಕ್ಷದ ಸುಖವನ್ನು ಯಾವನು ಅನುಭವಿಸುವನು? ಆದುದರಿಂದ 'ಬ್ರಹ್ಮವು ಜೀವನಾಗಿ ಮತ್ತು ಜೀವನು ಬ್ರಹ್ಮವಾಗಿ ಎಂದೂ ಆಗಲಿಲ್ಲ; ಈಗಲೂ ಆಗಿಲ್ಲ; ಮುಂದೆ ಆಗುವುದೂ ಇಲ್ಲ.'

**ಪ್ರಶ್ನೆ :–** ಹಾಗಾದರೆ, **"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾ ದ್ವಿತೀಯಮ್**। (ಛಾಂದೋಗ್ಯ:– ೬.೨.೧) – ಹೀಗೆ ಅದ್ವೈತ ಸಿದ್ಧಿ ಹೇಗಾಗುವುದು? ನಮ್ಮ ಮತದಲ್ಲಿಯಂತೂ ಬ್ರಹ್ಮದಿಂದ ಬೇರೆಯಾದ ಯಾವುದೇ ಸಜಾತೀಯ, ವಿಜಾತೀಯ ಮತ್ತು ಸ್ವಗತ–ಎಂದರೆ ಅವಯವಗಳ (ದೃಷ್ಟಿ)ಯಿಂದ) ಭೇದವೇ ಇಲ್ಲವಾದುದರಿಂದ, ಒಂದು ಬ್ರಹ್ಮಮಾತ್ರ ಸಿದ್ಧವಾಗುತ್ತದೆ. ಎರಡನೆಯವನಾಗಿ ಜೀವನು ಇರುವುದಾದರೆ, 'ಅದ್ವೈತ ಸಿದ್ಧಿ'ಯಾಗುವುದಾದರೂ ಹೇಗೆ?

**ಉತ್ತರ:–** ಈ ಭ್ರಮದಲ್ಲಿ ಬಿದ್ದು ಹೆದರುತ್ತೀರೇಕೆ? ಅದರ ಫಲವೇನೆಂದು ತಿಳಿಯಲು, ವಿಶೇಷ್ಯ – ವಿಶೇಷಣ ವಿದ್ಯೆಯ ಜ್ಞಾನವನ್ನು ಗಳಿಸಿರಿ. **"ವ್ಯಾವರ್ತಕಂ** [೪೪] **ವಿಶೇಷಣಂ ಭವತೀತಿ"**, ಭೇದವನ್ನು ತೋರಿಸುವುದು ವಿಶೇಷಣ – ಎನ್ನುವಿರಾದರೆ, **"ಪ್ರವರ್ತಕಂ** [೪೫] **ಪ್ರಕಾಶಕಂ** [೪೬] **ಮಪಿ ವಿಶೇಷಣಂ ಭವತೀತಿ."**– ವಿಶೇಷಣವು ಪ್ರವರ್ತಕವೂ ಮತ್ತು ಪ್ರಕಾಶವೂ ಕೂಡ ಆಗಿರುತ್ತದೆ – ಎಂದು ಮತ್ತಿಷ್ಟನ್ನೂ ಅಂಗೀಕರಿಸಿರಿ. ಹೀಗೆ, 'ಅದ್ವೈತ' ಎನ್ನುವುದು ಬ್ರಹ್ಮದ ವಿಶೇಷಣವೆಂದು ತಿಳಿದುಕೊಳ್ಳಿರಿ. ಇದರಲ್ಲಿ ವ್ಯಾವರ್ತಕ ಧರ್ಮವೇನೆಂದರೆ–ಅದ್ವೈತ – ಎಂಬ ಶಬ್ದವು, ವಸ್ತುಗಳು, ಎಂದರೆ ಯಾವ ಅನೇಕ ಜೀವರೂ ಮತ್ತು ತತ್ತ್ವಗಳೂ ಇವೆಯೋ, ಅವೆಲ್ಲದರಿಂದಲೂ ಬ್ರಹ್ಮವನ್ನು ಬೇರ್ಪಡಿಸುತ್ತದೆ. ಮತ್ತು ಬ್ರಹ್ಮವು ಒಂದೇ ಇದೆ–ಎಂದು ನಿರ್ಧರಿಸುವುದು ಈ ವಿಶೇಷಣದ ಪ್ರಕಾಶಕ ಧರ್ಮವಾಗಿದೆ. ಉದಾಹರಣೆಗೆ–"**'ಅಸ್ಮಿನ್ನಗರೇಽದ್ವಿತೀಯೋ ಧನಾಢ್ಯೋ ದೇವದತ್ತಃ । ಅಸ್ಯಾಂ ಸೇನಾಯಾಮದ್ವಿತೀಯಃ ಶೂರವೀರೋ ವಿಕ್ರಮಸಿಂಹಃ"** ॥"ಯಾವನೋ ಒಬ್ಬನು ಮತ್ತೊಬ್ಬನಿಗೆ – "ಈ ನಗರದಲ್ಲಿ ಅದ್ವಿತೀಯ ಧನಾಢ್ಯನು ದೇವದತ್ತನು. ಮತ್ತು ಈ ಸೈನ್ಯದಲ್ಲಿ ಅದ್ವಿತೀಯ ಶೂರವೀರನು ವಿಕ್ರಮಸಿಂಹನು."– ಎಂದು

---

೪೧. ೧. ಬ್ರಹ್ಮ, ೨. ಎಂದರೆ ಅಂತಃಕರಣ. –ಯು.ಮೀ.

೪೨. ಅಂತಃಕರಣದಲ್ಲಿ ಬಿಂಬಿತವಾದ ಚೇತನನ ಅಂಶ.

೪೩. ನೇತ್ರ ಕೇವಲ ಉಪಲಕ್ಷಣ. ಅಲ್ಪಸಾಮರ್ಥ್ಯವುಳ್ಳ ಇಂದ್ರಿಯಗಳಿಗೆ ಸಿಕ್ಕಿ ನೋಯುವನೇಕೆ ಎಂಬುದು ಮಹರ್ಷಿಯ ಪ್ರಶ್ನೆ. –ಅನು.

೪೪. ವ್ಯಾವರ್ತಕ:– ಬೇರೆ ಎಲ್ಲ ವಸ್ತುಗಳಿಂದಲೂ ಉದ್ದಿಷ್ಟ ವಸ್ತುವನ್ನು ಬೇರ್ಪಡಿಸಿ ತೋರಿಸಲು ಬಳಸುವ ವಿಶೇಷಣ ಪದ. ರಾಮನು ಎಲ್ಲರಿಗಿಂತ ಶ್ರೇಷ್ಠನು ಎನ್ನುವಂತೆ. –ಅನು.

೪೫. ಪ್ರವರ್ತಕ:– ನಿರ್ದಿಷ್ಟ ಕ್ಷೇತ್ರದಲ್ಲಿ ಸಂಗತ ಎಂದು ಸೂಚಿಸಲು ಬಳಸುವ ವಿಶೇಷಣಪದ. ರಾಮನಿ ಶಿಕ್ಷಣಾ ವಿಭಾಗಾಧಿಕಾರಿ ಎನ್ನುವಂತೆ,

೪೬. ಪ್ರಕಾಶಕ:– ವಿಶಿಷ್ಟ ಗುಣವನ್ನೋ, ಶಕ್ತಿಯನ್ನೋ ಸೂಚಿಸಲು ಬಳಸುವ ವಿಶೇಷಣ ಪದ. ರಾಮನು ವೇದ ವೇದಾಂಗಪಾರಂಗತ ವಿದ್ವಾಂಸ ಎನ್ನುವಂತೆ. ಒಂದೇ ವಿಶೇಷಣದಲ್ಲಿ ಮೂರು ಧರ್ಮಗಳು ಇರಲು ಸಾಧ್ಯ. –ಅನು.

ಹೇಳಿದನೆಂದು ಭಾವಿಸಿರಿ. ಇದರಿಂದ ಸಿದ್ಧವಾದುದೇನು? ದೇವದತ್ತನಿಗೆ ಸಮಾನನಾದ ಬೇರೆಯ ಧನಾಢ್ಯನು ಈ ನಗರದಲ್ಲಿಲ್ಲ; ಮತ್ತು ಈ ಸೇನೆಯಲ್ಲಿ ವಿಕ್ರಮಸಿಂಹನಿಗೆ ಸಮಾನನಾದ ಶೂರವೀರನು ಬೇರೆಯಿಲ್ಲ; ಅಂದರೆ – 'ಕಡಿಮೆ ಯಾದವರೇನೋ ಇದ್ದಾರೆ' – ಎಂದೇತಾನೇ? ಮತ್ತು ಪೃಥಿವಿಯೇ ಮೊದಲಾದ ಜಡ ಪದಾರ್ಥಗಳೂ, ಪಶು–ಮೊದಲಾದ ಪ್ರಾಣಿಗಳೂ, ಮತ್ತು ವೃಕ್ಷ–ಮೊದಲಾದುವೂ ಕೂಡ ಇದ್ದೇ ಇವೆ; ಅವುಗಳ ನಿಷೇಧವಾಗಲಾರದು. ಹಾಗೆಯೇ, ಬ್ರಹ್ಮವಿರುವಂತೆ ಜೀವ ಅಥವಾ ಪ್ರಕೃತಿಯಿಲ್ಲ; ಆದರೆ ಕಡಿಮೆಯಾಗಿ (ಗುಣ, ಶಕ್ತಿಗಳ ದೃಷ್ಟಿಯಿಂದ) ಏನೋ ಇದ್ದೇ ಇದೆ. ಇದರಿಂದ, ಬ್ರಹ್ಮವು ಸದಾ ಒಂದು; ಮತ್ತು ಜೀವರು ಹಾಗೂ ಪ್ರಕೃತಿಸ್ಥ ತತ್ತ್ವಗಳು ಅನೇಕವಿದೆ. ಅವುಗಳಿಂದ ಬೇರೆಯಾಗಿ ಮಾಡಿ, ಬ್ರಹ್ಮದ ಏಕತ್ವವನ್ನು ಸಿದ್ಧಪಡಿಸುವ ವಿಶೇಷಣ 'ಅದ್ವೈತ' ಅಥವಾ ಅದ್ವಿತೀಯ–ಎನ್ನುವುದು. ಇದರಿಂದ ಜೀವ ಅಥವಾ ಪ್ರಕೃತಿಯ ಮತ್ತು ಕಾರ್ಯರೂಪಕವಾದ ಜಗತ್ತಿನ ಅಭಾವ ಅಥವಾ ನಿಷೇಧ ಆಗಲಾರದು. ಆದರೆ ಇವೆಲ್ಲವೂ ಇವೆ; ಆದರೆ ಬ್ರಹ್ಮಕ್ಕೆ ಸಮಾನವಾಗಿಲ್ಲ. ಇದರಿಂದ ಸತ್ಯವಾದ 'ಅದ್ವೈತಸಿದ್ಧಿ'ಗೂ ಹಾನಿಯಿಲ್ಲ; ಸತ್ಯವೇ ಆದ 'ದ್ವೈತ' ಸಿದ್ಧಿಗೂ ಹಾನಿಯಿಲ್ಲ. ಅಸಮಂಜಸದಲ್ಲಿ ಬೀಳಬೇಡಿ; ಯೋಚಿಸಿರಿ ಮತ್ತು ತಿಳಿದುಕೊಳ್ಳಿರಿ.

**ಪ್ರಶ್ನೆ:–** ಬ್ರಹ್ಮದ ಸತ್, ಚಿತ್, ಆನಂದ ಮತ್ತು ಜೀವನ ಅಸ್ತಿ, ಭಾತಿ, ಪ್ರಿಯರೂಪದಿಂದ ಏಕತ್ವ ಉಂಟಾಗುತ್ತದೆ. ಮತ್ತೆ ಏಕೆ ಖಂಡಿಸುತ್ತೀರಿ?

**ಉತ್ತರ:–** ಸ್ವಲ್ಪ ಸಾಧರ್ಮ್ಯ ಸಿಕ್ಕುವುದರಿಂದ ಏಕತ್ವ ಉಂಟಾಗಲಾರದು. ಹೇಗೆ ಪೃಥಿವೀ ಜಡವೂ, ದೃಶ್ಯವೂ ಆಗಿದೆಯೋ, ಹಾಗೆ ಜಲ ಮತ್ತು ಅಗ್ನಿ– ಮೊದಲಾದುವೂ ಜಡಗಳೂ ಮತ್ತು ದೃಶ್ಯಗಳೂ ಆಗಿವೆ. ಇಷ್ಟರಿಂದ ಏಕತ್ವವಾಗುವುದಿಲ್ಲ. ಇವುಗಳಲ್ಲಿ ವೈಧರ್ಮ್ಯವು ಭೇದಕಾರಕವಾಗಿದೆ; ಎಂದರೆ, ಗಂಧ, ರೂಕ್ಷತ್ವ, ಕಾಠಿಣ್ಯ – ಮೊದಲಾದ ಗುಣಗಳು ವಿರುದ್ಧವಾದ ಧರ್ಮವಾಗಿ ಪೃಥಿವಿಯದೂ, ಮತ್ತು ರಸ, ದ್ರವತ್ವ, ಕೋಮಲತ್ವ ಮೊದಲಾದ ಧರ್ಮವು ಜಲದ್ದೂ, ಹಾಗೂ, ರೂಪ, ದಾಹಕತ್ವ ಮೊದಲಾದ ಧರ್ಮಗಳು ಅಗ್ನಿಯದೂ ಆಗಿರುವುದರಿಂದ ಏಕತ್ವವಿಲ್ಲ. ಹೇಗೆ ಮನುಷ್ಯರೂ ಮತ್ತು ಹುಳುಗಳೂ ನೋಡುವುದು ಕಣ್ಣಿನಿಂದ; ತಿನ್ನುವುದು ಬಾಯಿನಿಂದ; ನಡೆಯುವುದು ಕಾಲಿನಿಂದ; ಹಾಗಿದ್ದರೂ ಮನುಷ್ಯನ ಆಕೃತಿ ಎರಡು ಕಾಲುಗಳು; ಹುಳುವಿನ ಆಕೃತಿ ಅನೇಕ ಕಾಲುಗಳು–ಮೊದಲಾದುವು ಭಿನ್ನವಾಗಿರುವುದರಿಂದ ಏಕತ್ವ ಸಿದ್ಧಿಸುವುದಿಲ್ಲವೋ, ಹಾಗೆ ಪರಮೇಶ್ವರನ ಅನಂತ ಜ್ಞಾನ, ಆನಂದ, ಬಲ, ಕ್ರಿಯೆ, ನಿರ್ಭ್ರಾಂತಿತ್ವ, ಮತ್ತು ವ್ಯಾಪಕತ್ತ್ವಗಳು ಜೀವನಿಂದ ಮತ್ತು ಜೀವನ ಅಲ್ಪಜ್ಞಾನ, ಅಲ್ಪಬಲ, ಅಲ್ಪಸ್ವರೂಪ, ಸಭ್ರಾಂತಿತ್ವ ಮತ್ತು ಪರಿಚ್ಛಿನ್ನತ್ವ ಮೊದಲಾದ ಗುಣಗಳು ಬ್ರಹ್ಮದಿಂದ ಭಿನ್ನವಾಗಿರುವುದರಿಂದ 'ಜೀವ ಮತ್ತು ಪರಮೇಶ್ವರ ಒಂದೇ ಅಲ್ಲ.' ಮತ್ತು ಇವರ ಸ್ವರೂಪವೂ ಕೂಡ, (ಪರಮೇಶ್ವರನು ಅತಿ ಸೂಕ್ಷ್ಮನೂ ಮತ್ತು ಜೀವನು ಅವನಿಗಿಂತ ಸ್ವಲ್ಪ ಸ್ಥೂಲನೂ ಆಗಿರುವುದರಿಂದ) ಬೇರೆಯಾಗಿದೆ.

**ಪ್ರಶ್ನೆ :– "ಅಥೋದರಮಂತರಂ ಕುರುತೇ. ಅಥ ತಸ್ಯ ಭಯಂ ಭವತಿ; ದ್ವಿತೀಯಾದ್ವೈ ಭಯಂ ಭವತಿ"** – ಇದು ಬೃಹದಾರಣ್ಯಕದ (೧. ೪. ೨) ವಚನವಾಗಿದೆ. ಯಾವನು ಬ್ರಹ್ಮ ಮತ್ತು ಜೀವನಲ್ಲಿ ಸ್ವಲ್ಪವೇ ಆದರೂ ಭೇದವನ್ನೆಣಿಸುತ್ತಾನೋ, ಅವನಿಗೆ ಭಯ ಉಂಟಾಗುತ್ತದೆ. ಏಕೆಂದರೆ, ಎರಡನೆಯವನಿಂದಲೇ ಭಯ ಪ್ರಾಪ್ತವಾಗುತ್ತದೆ.

**ಉತ್ತರ:–** ಇದರ ಅರ್ಥ ಇದಲ್ಲ. ಆದರೆ, ಯಾವ ಜೀವನು ಪರಮೇಶ್ವರನನ್ನು ನಿಷೇಧಿಸುತ್ತಾನೋ, ಅಥವಾ ಯಾವುದೋ ಒಂದು ದೇಶ – ಕಾಲದಲ್ಲಿ ಪರಿಚ್ಛಿನ್ನನಾಗಿರುವ ಪರಮಾತ್ಮನನ್ನು ಅಂಗೀಕರಿಸುತ್ತಾನೋ, ಅಥವಾ ಅವನ ಆಜ್ಞೆಗೆ, ಮತ್ತು ಗುಣ–ಕರ್ಮ–ಸ್ವಭಾವಗಳಿಗೆ ವಿರುದ್ಧವಾಗಿರುತ್ತಾನೋ ಅಥವಾ ಯಾವನಾದರೂ ಬೇರೆಯ ಮನುಷ್ಯನಲ್ಲಿ ವೈರವಿಟ್ಟು ಕೊಳ್ಳುತ್ತಾನೋ, ಅವನಿಗೆ ಭಯ ಪ್ರಾಪ್ತವಾಗುತ್ತವೆ. ಏಕೆಂದರೆ 'ದ್ವಿತೀಯ ಬುದ್ಧಿಯಿಂದ', ಎಂದರೆ, "ಈಶ್ವರನಿಗೂ ನನಗೂ ಯಾವ ಸಂಬಂಧವೂ ಇಲ್ಲ" – ಎಂದು ತಿಳಿಯುವುದರಿಂದ, ಮತ್ತು ಯಾವನಾದರೂ ಮಾನವನಿಗೂ "ನಾನು ನಿನ್ನನ್ನು ತೃಣ ಸಮನೆಂದೂ ತಿಳಿಯುವುದಿಲ್ಲ; ನೀನು ನನಗೆ ಏನನ್ನೂ ಮಾಡಲಾರೆ"– ಎಂದು ಹೇಳುವುದರಿಂದ, ಅಥವಾ ಯಾರಿಗಾದರೂ ಹಾನಿಯನ್ನು ಉಂಟುಮಾಡುತ್ತಾ ಮತ್ತು ದುಃಖವನ್ನು ಕೊಡುತ್ತಾ ಹೋಗುವುದರಿಂದ, ಅವನಿಗೆ ಅವರ ದೆಸೆಯಿಂದ ಭಯ ಉಂಟಾಗುತ್ತದೆ. ಮತ್ತು ಎಲ್ಲ ಬಗೆಯಿಂದಲೂ ಅವಿರೋಧವಿದ್ದರೆ, ಅವರು "ಒಂದು"– ಎನಿಸುತ್ತಾರೆ. ಉದಾಹರಣೆಗೆ, ಪ್ರಪಂಚದಲ್ಲಿ "ದೇವದತ್ತ, ಯಜ್ಞದತ್ತ ಮತ್ತು ವಿಷ್ಣುಮಿತ್ರರು ಒಂದೇ ಆಗಿದ್ದಾರೆ; ಎಂದರೆ – ಅವಿರುದ್ಧರಾಗಿದ್ದಾರೆ" – ಎಂದು ಹೇಳುತ್ತಾರೆ. 'ವಿರೋಧವಿಲ್ಲದಿರುವುದರಿಂದ ಸುಖ ಮತ್ತು ವಿರೋಧದಿಂದ ದುಃಖ ಪ್ರಾಪ್ತವಾಗುತ್ತದೆ.'[೪೭]

೪೭. ವೇದೋಕ್ತವಾದ ಅದ್ವೈತ ಭಾವದ್ವೈತವಲ್ಲ; ಭಾವನಾದ್ವೈತ. –ಅನು.

**ಪ್ರಶ್ನೆ :**– ಬ್ರಹ್ಮದ ಮತ್ತು ಜೀವನ ಏಕತ್ವ – ಅನೇಕತ್ವ ಸದಾ ಇರುತ್ತದೋ, ಅಥವಾ ಯಾವಾಗಲಾದರೂ ಇಬ್ಬರೂ ಸೇರಿ ಒಂದೇ ಆಗುವರೋ, ಅಥವಾ ಇಲ್ಲವೋ?

**ಉತ್ತರ:**– ಇದೇ ತಾನೇ ಇದಕ್ಕೆ ಸ್ವಲ್ಪ ಉತ್ತರ ಕೊಟ್ಟಿದ್ದೇವೆ. ಆದರೆ, ಸಾಧರ್ಮ್ಯ – ಅನ್ವಯ ಭಾವದಿಂದ ಏಕತ್ವವಿರುತ್ತದೆ. ಯಾವ ರೀತಿ ಮೂರ್ತ ದ್ರವ್ಯಗಳು ಜಡತ್ವವಿರುವುದರಿಂದ ಮತ್ತು ಎಂದೂ ಬೇರೆಯಾಗದಿರುವುದರಿಂದ ಆಕಾಶದೊಂದಿಗೆ (ಅವುಗಳ) ಏಕತ್ವವಿದೆಯೋ, ಮತ್ತು ಆಕಾಶವು ವಿಭು, ಸೂಕ್ಷ್ಮ, ರೂಪರಹಿತ, ಅನಂತ ಮೊದಲಾದ ಗುಣಗಳಿಂದ ಹಾಗೂ ಮೂರ್ತವು ಪರಿಚ್ಛಿನ್ನತ್ವ, ದೃಶ್ಯತ್ವ ಮೊದಲಾದ ವೈಧರ್ಮ್ಯ ಹೊಂದಿರುವುದರಿಂದ ಹೇಗೆ ಭೇದವಿರುತ್ತದೋ, ಎಂದರೆ ಹೇಗೆ ಪೃಥಿವೀ – ಮೊದಲಾದ 'ದ್ರವ್ಯಗಳು', 'ಅನ್ವಯ'[೪೮] – ಎಂದರೆ ಅವಕಾಶವಿಲ್ಲದೆ, ಮೂರ್ತದ್ರವ್ಯ ಎಂದಿಗೂ ಇರಲಾರದ ಕಾರಣ, ಆಕಾಶದಿಂದ ಬೇರೆಯಾಗಿರುವುದಿಲ್ಲವೋ, ಮತ್ತು 'ವ್ಯತಿರೇಕ'[೪೯] – ಎಂದರೆ ಸ್ವರೂಪತಃ ಬೇರೆಯಾಗಿರುವುದರಿಂದ ಪೃಥಕ್ತ್ವವಿರುತ್ತದೋ, ಹಾಗೆಯೇ ಬ್ರಹ್ಮವು ವ್ಯಾಪಕವಾಗಿರುವುದರಿಂದ ಜೀವರು ಮತ್ತು ಪೃಥಿವೀ ಮೊದಲಾದ ದ್ರವ್ಯಗಳು, ಅದರಿಂದ ಬೇರೆಯಾಗಿರುವುದಿಲ್ಲ ಮತ್ತು ಸ್ವರೂಪತಃ ಒಂದೂ ಆಗಿರುವುದಿಲ್ಲ. ಉದಾಹರಣೆಗೆ, ಮನೆಯನ್ನು ಕಟ್ಟುವ ಮುನ್ನ ಮಣ್ಣು ಮರ, ಕಬ್ಬಿಣ ಮೊದಲಾದ ಪದಾರ್ಥಗಳು, ಬೇರೆ ಬೇರೆ ಸ್ಥಾನಗಳಲ್ಲಿದ್ದರೂ ಆಕಾಶದಲ್ಲಿಯೇ ಇರುತ್ತವೆ; ಮನೆಯು ನಿರ್ಮಿತವಾದ ಮೇಲೆಯೂ ಆಕಾಶದಲ್ಲಿಯೇ ಇರುತ್ತವೆ. ಮತ್ತು ಅದು ನಾಶವಾಗಿ ಹೋದಾಗಲೂ ಕೂಡ, ಎಂದರೆ – ಆ ಮನೆಯ ಎಲ್ಲ ಅಂಗಗಳೂ ಬೇರೆ ಬೇರೆ ಸ್ಥಳಗಳನ್ನು ಸೇರಿಕೊಂಡಾಗಲೂ ಆಕಾಶದಲ್ಲಿಯೇ ಇರುತ್ತವೆ. ಎಂದರೆ–ಮೂರು ಕಾಲಗಳಲ್ಲಿಯೂ ಆಕಾಶದಿಂದ ಬೇರೆಯಾಗಲಾರವು. ಮತ್ತು ಸ್ವರೂಪತಃ ಬೇರೆಯಾಗಿರುವುದರಿಂದ, ಅವು ಎಂದೂ ಒಂದಾಗಿರಲಿಲ್ಲ; ಒಂದಾಗಿಲ್ಲ; ಒಂದಾಗುವುದೂ ಇಲ್ಲ. ಇಂದಿನ ವೇದಾಂತಿಗಳ ದೃಷ್ಟಿಯು ಒಕ್ಕಣ್ಣನ ದೃಷ್ಟಿಯಂತೆ ಅನ್ವಯದ ಮೇಲೆ ಬಿದ್ದು, ವ್ಯತಿರೇಕ–ಭಾವವನ್ನು ದೂರೀಕರಿಸಿ, ವಿರುದ್ಧವಾಗಿ ಹೋಗಿದೆ. ಯಾವುದರಲ್ಲಿ ಸಗುಣತ್ವ – ನಿರ್ಗುಣತ್ವ, ಅನ್ವಯ–ವ್ಯತಿರೇಕ, ಸಾಧರ್ಮ್ಯ–ವೈಧರ್ಮ್ಯ ಮತ್ತು ಸಾಮಾನ್ಯ– ವಿಶೇಷಭಾವ ಇಲ್ಲವೋ, ಅಂತಹ ಯಾವ ದ್ರವ್ಯವೂ ಇಲ್ಲ.

**ಪ್ರಶ್ನೆ:**– ಪರಮೇಶ್ವರನು ಸಗುಣನೋ ನಿರ್ಗುಣನೋ?

**ಉತ್ತರ:**– ಎರಡು ರೀತಿಯಲ್ಲಿಯೂ ಇದ್ದಾನೆ.

**ಪ್ರಶ್ನೆ:**– ಚೆನ್ನಾಯಿತು! ಒಂದು ಒರೆಯಲ್ಲಿ ಎರಡು ಕತ್ತಿಗಳೂ ಎಂದಾದರೂ ಇರಬಲ್ಲವೇ? ಒಂದು ಪದಾರ್ಥದಲ್ಲಿ ಸಗುಣತ್ವ ಮತ್ತು ನಿರ್ಗುಣತ್ವ ಹೇಗೆ ಇರಬಲ್ಲವು?

**ಉತ್ತರ:**– ಹೇಗೆ ಜಡದಲ್ಲಿ ರೂಪವೇ ಮೊದಲಾದ ಗುಣಗಳಿವೆಯೋ ಮತ್ತು ಚೇತನನ ಜ್ಞಾನವೇ ಮೊದಲಾದ ಗುಣಗಳು ಜಡದಲ್ಲಿಲ್ಲವೋ, ಹಾಗೆ ಚೇತನನಲ್ಲಿ ಇಚ್ಛೆ ಮೊದಲಾದ ಗುಣಗಳಿವೆ; ಮತ್ತು ರೂಪ ಮೊದಲಾದ ಜಡದ ಗುಣಗಳಿಲ್ಲ. ಆದುದರಿಂದ, **"ಯದ್ಗುಣೈಃ ಸಹ ವರ್ತಮಾನಂ, ತತ್ಸಗುಣಂ; ಗುಣೇಭ್ಯೋ ಯನ್ನಿರ್ಗತಂ ಪೃಥಗ್ಭೂತಂ, ತನ್ನಿರ್ಗುಣಂ". –** ಯಾವುದು ಗುಣಗಳಿಂದ ಯುಕ್ತವಾಗಿರುತ್ತದೋ, ಅದು ಸಗುಣ; ಮತ್ತು ಯಾವುದು ಗುಣಗಳಿಂದ ರಹಿತವಾಗಿರುತ್ತದೋ, ಅದು ನಿರ್ಗುಣ –ಎನ್ನಿಸುತ್ತದೆ. ತಮ್ಮ ತಮ್ಮ ಗುಣಗಳಿಂದ ಯುಕ್ತವೂ, ಮತ್ತು ಅನ್ಯ ವಿರೋಧೀಗುಣಗಳಿಂದ ರಹಿತವೂ ಆಗಿರುವುದರಿಂದ, ಸಕಲ ಪದಾರ್ಥಗಳೂ ಸಗುಣ ಮತ್ತು ನಿರ್ಗುಣವಾಗಿವೆ. "ಯಾವುದರಲ್ಲಿ ಕೇವಲ ನಿರ್ಗುಣತ್ವ ಅಥವಾ ಕೇವಲ ಸಗುಣತ್ವವಿರುವುದೋ, ಅಂತಹ ಯಾವುದೇ ಪದಾರ್ಥವೂ ಇಲ್ಲ." ಆದರೆ–ಒಂದರಲ್ಲಿಯೇ ಸಗುಣತ್ವ ಮತ್ತು ನಿರ್ಗುಣತ್ವ ಸದಾ ಇರುತ್ತವೆ. ಅದೇ ರೀತಿ, ಪರಮೇಶ್ವರನು ತನ್ನ ಅನಂತ ಜ್ಞಾನ, ಬಲ – ಮೊದಲಾದ ಗುಣಗಳಿಂದ ಕೂಡಿರುವುದರಿಂದ 'ಸಗುಣ' ಮತ್ತು ರೂಪ – ಮೊದಲಾದ ಜಡದ ಹಾಗೂ ದ್ವೇಷ – ಮೊದಲಾದ ಜೀವನ ಗುಣಗಳಿಂದ ಬೇರೆಯಿರುವುದರಿಂದ 'ನಿರ್ಗುಣ' ಎನಿಸುತ್ತಾನೆ.

**ಪ್ರಶ್ನೆ:**– ಜಗತ್ತಿನಲ್ಲಿ ನಿರಾಕಾರನನ್ನು ನಿರ್ಗುಣ ಮತ್ತು ಸಾಕಾರನನ್ನು ಸಗುಣ–ಎನ್ನುತ್ತಾರೆ. ಎಂದರೆ – ಯಾವಾಗ ಪರಮೇಶ್ವರನು ಜನ್ಮವೆತ್ತುವುದಿಲ್ಲವೋ, ಆಗ 'ನಿರ್ಗುಣ'; ಮತ್ತು ಯಾವಾಗ ಅವತಾರವೆತ್ತುತ್ತಾನೋ ಆಗ 'ಸಗುಣ'–ಎನ್ನುತ್ತಾರೆ.

**ಉತ್ತರ:**– 'ಈ ಕಲ್ಪನೆ ಕೇವಲ ಅಜ್ಞಾನಿಗಳದು ಮತ್ತು ಅವಿದ್ವಾಂಸರದು.' ಯಾರಿಗೆ ವಿದ್ಯೆಯಿಲ್ಲವೋ, ಅವರು ಪಶುಗಳಂತೆ

೪೮. ಹೊಂದಿಕೆ.

೪೯. ವಿಪರೀತತ್ವ

ಹೇಗೆ-ಹೇಗೋ, ಒದರುತ್ತಾ ಹೋಗುತ್ತಾರೆ. ಹೇಗೆ ಸನ್ನಿಪಾತಜ್ವರಗ್ರಸ್ತನಾದ ಮಾನವನು ಅರ್ಥರಹಿತವಾಗಿ ಒದರುತ್ತಾನೋ, ಹಾಗೆಯೇ ಅವಿದ್ವಾಂಸರ ಉಕ್ತಿಯನ್ನು ಅಥವಾ ಲೇಖನವನ್ನು ವ್ಯರ್ಥವೆಂದು ತಿಳಿಯಬೇಕು.

**ಪ್ರಶ್ನೆ:**- ಪರಮೇಶ್ವರನು ರಾಗಯುಕ್ತನೋ ಅಥವಾ ವಿರಾಗನೋ?

**ಉತ್ತರ:**- ಎರಡು ಶ್ರೇಣಿಗಳಲ್ಲಿಯೂ ಇಲ್ಲ. ಏಕೆಂದರೆ-ರಾಗವು ತನ್ನಿಂದ ಬೇರೆಯಾದ ಉತ್ತಮ ಪದಾರ್ಥಗಳ ಬಗೆಗೆ ಉದ್ಭವಿಸುತ್ತದೆ. ಈ ಸ್ಥಿತಿಯಲ್ಲಿ, ಪರಮೇಶ್ವರನಿಂದ ಯಾವ ಪದಾರ್ಥವೂ ಬೇರೆಯಾಗಿಲ್ಲ; ಉತ್ತಮವಾಗಿಯೂ ಇಲ್ಲ. ಆದುದರಿಂದ ಅವನಲ್ಲಿ ರಾಗ ಉಂಟಾಗುವ ಸಂಭವವಿಲ್ಲ. ಮತ್ತು 'ಯಾವನು ಪ್ರಾಪ್ತವಾಗಿರುವುದನ್ನು ಬಿಟ್ಟುಬಿಡುತ್ತಾನೋ, ಅವನನ್ನು ವಿರಾಗ (ವಿರಕ್ತ)ನೆನ್ನುತ್ತಾರೆ.' ಈಶ್ವರನು ವ್ಯಾಪಕನಾಗಿರುವುದಿರಿಂದ, ಯಾವುದೇ ಪದಾರ್ಥವನ್ನೂ ಬಿಡಲಾರನು. ಆದುದರಿಂದ, ವಿರಕ್ತನೂ ಅಲ್ಲ.

**ಪ್ರಶ್ನೆ:**- ಈಶ್ವರನಲ್ಲಿ ಇಚ್ಛೆಯಿದೆಯೋ ಅಥವಾ ಇಲ್ಲವೋ?

**ಉತ್ತರ:**- ಅಂತಹ (ಜೀವರಿಗಿರುವಂತಹ) ಇಚ್ಛೆಯಿಲ್ಲ. ಏಕೆಂದರೆ - 'ಇಚ್ಛೆ'ಯೂ ಕೂಡ, ಸಿಕ್ಕದಿರುವುದರ, ಉತ್ತಮವಾಗಿ ರುವುದರ ಮತ್ತು ಯಾವುದರ ಪ್ರಾಪ್ತಿಯಿಂದ ಸುಖ - ವಿಶೇಷ ಲಭಿಸುವುದೋ, ಅದರ ಬಗೆಗೆ ಉಂಟಾಗುತ್ತದೆ. ಎಂದ ಮೇಲೆ, ಈಶ್ವರನಲ್ಲಿ ಇಚ್ಛೆ ಶಕ್ಯವೇ? ಅವನಿಗೆ ಸಿಕ್ಕದ ಪದಾರ್ಥವಾವುದೂ ಇಲ್ಲ; ಅವನಿಗಿಂತ ಉತ್ತಮವಾದುದೂ ಇಲ್ಲ. ಮತ್ತು ಪೂರ್ಣಸುಖಯುಕ್ತ (ಆನಂದಯುಕ್ತ)ನಾಗಿರುವುದರಿಂದ, ಸುಖದ ಅಭಿಲಾಷೆಯೂ ಕೂಡ ಇಲ್ಲ. ಆದುದರಿಂದ ಈಶ್ವರನಲ್ಲಿ ಇಚ್ಛೆಯ ಸಂಭವವಂತೂ ಇಲ್ಲ. ಆದರೆ, 'ಈಕ್ಷಣ' ಇದೆ; ಎಂದರೆ ಪೂರ್ಣ ವಿದ್ಯಾದರ್ಶನ ಮತ್ತು ಸಮಸ್ತ ಸೃಷ್ಟಿಯ ರಚನೆ - ಇದೇ 'ಈಕ್ಷಣ'ವಾಗಿದೆ. ಹೀಗೆ ಸಂಕ್ಷಿಪ್ತ ವಿಷಯಗಳಿಂದಲೇ ಸಜ್ಜನರು ಬಹಳ ವಿಸ್ತರಣವನ್ನು ಮಾಡಿಕೊಳ್ಳುವರು. ಹೀಗೆ, ಸಂಕ್ಷೇಪವಾಗಿ ಈಶ್ವರನ ವಿಷಯವನ್ನು ಬರೆದ ಮೇಲೆ ವೇದದ ವಿಷಯವನ್ನು ಬರೆಯುತ್ತೇವೆ.

**ಯಸ್ಮಾದೃಚೋ ಅಪಾತಕ್ಷನ್ ಯಜುರ್ಯಸ್ಮಾದಪಾಕಷನ್ ।**

**ಸಾಮಾನಿ ಯಸ್ಯ ಲೋಮಾನ್ಯಥರ್ವಾಂಗಿರಸೋ ಮುಖಂ ಸ್ಕಂಭಂ**

**ತಂ ಬ್ರೂಹಿ ಕತಮಃ ಸ್ವಿದೇವ ಸ ಃ ॥** (ಅಥರ್ವವೇದ :- ೧೦.೭.೨೦)

ಯಾವ ಪರಮಾತ್ಮನಿಂದ 'ಋಗ್ವೇದ', 'ಯಜುರ್ವೇದ', 'ಸಾಮವೇದ' ಮತ್ತು 'ಅಥರ್ವ ವೇದಗಳು' ಪ್ರಕಾಶಿತ ವಾಗಿವೆಯೋ, ಅವನು ಯಾವ ದೇವನು? ಇದರ ಉತ್ತರ - 'ಯಾವನು ಎಲ್ಲವನ್ನೂ ಉತ್ಪನ್ನಮಾಡಿ, ಧಾರಣ ಮಾಡುತ್ತಿದ್ದಾನೋ, ಅವನೇ ಪರಮಾತ್ಮನು!

**ಸ್ವಯಂ ಭೂರ್ಯಾಥಾತಥ್ಯತೋರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ॥** (ಯಜುರ್ವೇದ:- ೪೦.೮)

ಯಾವ ಸ್ವಯಂಭುವೂ, ಸರ್ವವ್ಯಾಪಕನೂ, ಶುದ್ಧನೂ, ಸನಾತನೂ, ನಿರಾಕಾರನೂ ಆದ ಪರಮೇಶ್ವರನಿದ್ದಾನೋ, ಅವನು ಸನಾತನರಾದ ಜೀವರೆಂಬ ಪ್ರಜೆಗಳ ಕಲ್ಯಾಣಕ್ಕೋಸ್ಕರ, ಯಥಾವತ್ತಾಗಿ, ಕ್ರಮಪೂರ್ವಕವಾಗಿ, ವೇದಗಳ ಮೂಲಕ ಸಮಸ್ತ ವಿದ್ಯೆಗಳ ಉಪದೇಶವನ್ನೂ ಮಾಡುತ್ತಾನೆ.

**ಪ್ರಶ್ನೆ:**- ಪರಮೇಶ್ವರನನ್ನು ತಾವು ನಿರಾಕಾರನೆಂದು ಅಂಗೀಕರಿಸುತ್ತೀರೋ ಅಥವಾ ಸಾಕಾರನೆಂದೋ?

**ಉತ್ತರ:**- ನಿರಾಕಾರನೆಂದು ಅಂಗೀಕರಿಸುತ್ತೇವೆ.

ನಿರಾಕಾರನಾಗಿರುವುದಾದರೆ, ಬಾಯಿನಿಂದ ವರ್ಣೋಚ್ಛಾರಣ ಮಾಡದೆ, ವೇದವಿದ್ಯೆಯ ಉಪದೇಶ ಆಗಬಲ್ಲುದೆಂತು? ಏಕೆಂದರೆ, ವರ್ಣಗಳ ಉಚ್ಚಾರಣದಲ್ಲಿ ತಾಲು-ಮೊದಲಾದ ಸ್ಥಾನಗಳೂ, ನಾಲಗೆಯ ಪ್ರಯತ್ನವೂ ಅವಶ್ಯವಾಗಿ ಇರಬೇಕಾಗುತ್ತದೆ.

**ಉತ್ತರ:**- ಪರಮೇಶ್ವರನು ಸರ್ವಶಕ್ತಿಮಂತನೂ ಮತ್ತು ಸರ್ವವ್ಯಾಪಕನೂ ಆಗಿರುವುದರಿಂದ ಜೀವರಿಗೆ, ತನ್ನ ವ್ಯಾಪ್ತಿಯಿಂದ ವೇದವಿದ್ಯೆಯ ಉಪದೇಶವನ್ನು ಮಾಡುವುದರಲ್ಲಿ, ಬಾಯಿಯೆ ಮೊದಲಾದವುಗಳ ಅವಶ್ಯಕತೆ ಸ್ವಲ್ಪವೂ ಇರುವುದಿಲ್ಲ. ಏಕೆಂದರೆ, ಬಾಯಿ-ನಾಲಗೆಗಳಿಂದ ವರ್ಣೋಚ್ಛಾರಣ, ತನ್ನಿಂದ ಭಿನ್ನ (ದೂರ)ನಾಗಿರುವವನ ಜ್ಞಾನಕ್ಕಾಗಿ ಮಾಡಲ್ಪಡುತ್ತದೆ; ತನಗಾಗಿ

ಏನೂ ಅಲ್ಲ. ಏಕೆಂದರೆ, ಬಾಯಿನ ಮತ್ತು ನಾಲಗೆಯ ಉಪಯೋಗವನ್ನು ಮಾಡದೆಯೇ ಮನಸ್ಸಿನಲ್ಲಿ ಅನೇಕ ವ್ಯವಹಾರಗಳ ಆಲೋಚನೆ ಮತ್ತು ಶಬ್ದೋಚ್ಚಾರಣ ನಡೆಯುತ್ತಾ ಇರುತ್ತದೆ. ಕಿವಿಗಳನ್ನು ಬೆರಳುಗಳಿಂದ ಮುಚ್ಚಿಕೊಂಡು ನೋಡಿರಿ; ಬಾಯಿ, ನಾಲಗೆ, ತಾಲು ಮೊದಲಾದ ಸ್ಥಾನಗಳಿಲ್ಲದೆಯೇ, ಎಂತಹ – ಎಂತಹ ಶಬ್ದಗಳಾಗುತ್ತಿವೆಯೋ ಆಲಿಸಿರಿ. ಹಾಗೆಯೇ 'ಪರಮಾತ್ಮನು ಜೀವರಿಗೆ, ಅಂತರ್ಯಾಮೀ ರೂಪದಿಂದ ಉಪದೇಶ ಮಾಡಿದ್ದಾನೆ.' ಅಲ್ಲದೆ, ಕೇವಲ ಅನ್ಯರಿಗೆ ತಿಳುಹಿಸಲು ಉಚ್ಚಾರಣ ಮಾಡುವ ಅವಶ್ಯಕತೆಯಿರುತ್ತದೆ. ಪರಮೇಶ್ವರನು ನಿರಾಕಾರನೂ, ಸರ್ವವ್ಯಾಪಕನೂ ಆಗಿರುವುದರಿಂದ, ಜೀವನಲ್ಲಿಯೂ ಸ್ಥಿತನಾಗಿರುವ ತನ್ನ ಅಂತರ್ಯಾಮೀ ಸ್ವರೂಪದಿಂದ, ಜೀವಾತ್ಮನಲ್ಲಿ, ತನ್ನ 'ಸಮಸ್ತ ವೇದವಿದ್ಯೆ'ಯ ಉಪದೇಶವನ್ನೂ ಪ್ರಕಾಶಿಸಿಬಿಡುತ್ತಾನೆ. ಮತ್ತೆ ಆ ಮಾನವನು ತನ್ನ ಬಾಯಿನಿಂದ ಉಚ್ಚಾರಣ ಮಾಡಿ ಬೇರೆಯವರಿಗೆ ಶ್ರವಣ ಮಾಡಿಸುತ್ತಾನೆ. ಆದುದರಿಂದ ಈಶ್ವರನ ಬಗೆಗೆ ಅವಯವವಿಲ್ಲದಿರುವಿಕೆಯ ನ್ಯೂನತೆ ಸಲ್ಲದು.

**ಪ್ರಶ್ನೆ** :– ಯಾರ ಆತ್ಮಗಳಲ್ಲಿ, ಯಾವಾಗ ಪರಮಾತ್ಮನು ವೇದಗಳ ಪ್ರಕಾಶನವನ್ನು ಮಾಡಿದನು?

**ಉತ್ತರ:– ಅಗ್ನೇರ್ಋಗ್ವೇದೋ ವಾಯೋರ್ಯಜುರ್ವೇದಃ ಸೂರ್ಯಾತ್ ಸಾಮವೇದಃ ॥** (ಶತಪಥ:– ೧೧.೫.೮.೩)

ಮೊದಲು, ಸೃಷ್ಟಿಯ ಪ್ರಾರಂಭದಲ್ಲಿ, ಪರಮಾತ್ಮನು 'ಅಗ್ನಿ', 'ವಾಯು', 'ಆದಿತ್ಯ' ಮತ್ತು 'ಅಂಗಿರಾಃ' – ಈ ಋಷಿಗಳ ಆತ್ಮಗಳಲ್ಲಿ, ಒಂದೊಂದು ವೇದಗಳನ್ನು ಪ್ರಕಾಶ[೫೦] ಪಡಿಸಿದನು. (ಶತಪಥದ ಉದ್ಧರಣದಲ್ಲಿ ಅಂಗಿರಾ–ಎಂಬ ಶಬ್ದವಿಲ್ಲವಾದರೂ, ಮುನ್ನ ಉದ್ಧರಿಸಿದ ಅಥರ್ವ ಮಂತ್ರದಲ್ಲಿದೆ.)

**ಪ್ರಶ್ನೆ:– ಯೋ ವೈ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ** ॥

ಇದು ಶ್ವೇತಾಶ್ವತರ (೬.೧೮) ಉಪನಿಷತ್ತಿನ ವಚನ. ಈ ವಚನದಿಂದ, ಬ್ರಹ್ಮನ ಹೃದಯದಲ್ಲಿ ವೇದಗಳನ್ನು ಉಪದೇಶಿಸಿದ್ದಾನೆ– (ಎಂದು ತೋರುತ್ತದೆ). ಮತ್ತು "ಅಗ್ನಿ – ಮೊದಲಾದ ಋಷಿಗಳ ಆತ್ಮಗಳಲ್ಲಿ" – ಎಂದೇಕೆ ಹೇಳಿದಿರಿ?

ಉತ್ತರ:– ಬ್ರಹ್ಮನ ಆತ್ಮನಲ್ಲಿ 'ಅಗ್ನಿ' – ಮೊದಲಾದವರ ಮುಖಾಂತರ ನೆಲೆಗೊಳಿಸಿದನು. ನೋಡಿರಿ, ಮನುಸ್ಮೃತಿಯಲ್ಲಿ ಏನು ಬರೆದಿದ್ದಾರೆ:–

**ಅಗ್ನಿವಾಯುರವಿಭ್ಯಸ್ತು ತ್ರಯಂ ಬ್ರಹ್ಮ ಸನಾತನಮ್ ।**

**ದುದೋಹ ಯಜ್ಞ ಸಿದ್ಧ್ಯರ್ಥಂ ಋಗ್ಯಜುಃ ಸಾಮಲಕ್ಷಣಮ್ ॥** (ಮನು:– ೧.೨೩)

ಪರಮಾತ್ಮನು ಆದಿ ಸೃಷ್ಟಿಯಲ್ಲಿ ಮನುಷ್ಯರನ್ನು ಉತ್ಪನ್ನಮಾಡಿ, ಅಗ್ನಿ–ಮೊದಲಾದ ನಾಲ್ಕು ಮಹರ್ಷಿಗಳ ಮೂಲಕ, ನಾಲ್ಕು ವೇದಗಳನ್ನು ಬ್ರಹ್ಮನಿಗೆ ಪ್ರಾಪ್ತಗೊಳಿಸಿದನು ಮತ್ತು ಆ ಬ್ರಹ್ಮನು,[೫೧] 'ಅಗ್ನಿ ವಾಯು', 'ಆದಿತ್ಯ' ಮತ್ತು 'ಅಂಗಿರಾ' – ಇವರಿಂದ, 'ಋಕ್', 'ಯಜುಃ', 'ಸಾಮ' ಮತ್ತು 'ಅಥರ್ವ' ವೇದಗಳನ್ನು ಗ್ರಹಿಸಿದನು. (ಶಾಸ್ತ್ರಗಳಲ್ಲಿ ಮೂರರ ಎಣಿಕೆಯಿದ್ದರೆ, ಜ್ಞಾನಕರ್ಮೋಪಾಸನೆ ಗಳೆಂಬ ಮೂರು ವಿದ್ಯೆಗಳ ದೃಷ್ಟಿಯಿಂದ ಮಾತ್ರ; ಸಂಖ್ಯಾದೃಷ್ಟಿಯಿಂದಲ್ಲ).

**ಪ್ರಶ್ನೆ:**– ಆ ನಾಲ್ವರಲ್ಲಿಯೇ ವೇದವನ್ನು ಪ್ರಕಾಶಪಡಿಸಿದನು; ಅನ್ಯರಲ್ಲಿ ಅಲ್ಲ. ಇದರಿಂದ ಈಶ್ವರನು ಪಕ್ಷಪಾತಿ ಯಾಗಿರುತ್ತಾನೆ – ಎನ್ನಿಸುತ್ತದಲ್ಲ!

**ಉತ್ತರ:**– ಆ ನಾಲ್ವರೇ, ಜೀವರಲ್ಲೆಲ್ಲಾ ಅಧಿಕ ಪವಿತ್ರಾತ್ಮರಾಗಿದ್ದರು. ಬೇರೆಯವರು ಅವರಂತೆ ಇರಲಿಲ್ಲ. ಆದುದರಿಂದ, ಪವಿತ್ರ ವಿದ್ಯೆಯ ಪ್ರಕಾಶನವನ್ನು ಅವರಲ್ಲಿಯೇ ಮಾಡಿದನು.

---

೫೦. ಶತಪಥದ ಉದ್ಧರಣದಲ್ಲಿ ಅಂಗೀರಾ ಎಂಬ ಶಬ್ದವಿಲ್ಲವಾದರೂ ಅದು ಮೊದಲೇ ಉದ್ಧರಿಸಿದ ಅಥರ್ವ ಮಂತ್ರದಲ್ಲಿದೆ. –ಅನು.

೫೧. ಬ್ರಹ್ಮ ಎಂಬುದು ಪರಮಾತ್ಮನ ಹೆಸರು. ಈ ಶಬ್ಧ ನಪುಂಸಕ ಲಿಂಗ–ವಾಚ್ಯ. ಭಾಷೆಗಳಲ್ಲಿ ಪುಲ್ಲಿಂಗದಲ್ಲಿ ವ್ಯವಹಾರವಿದೆ. 'ಬ್ರಹ್ಮಾ' ಎಂಬುದು ಮಾನವ ಋಷಿಯ ಹೆಸರು. ಈ ಶಬ್ಧ ಪುಲ್ಲಿಂಗ ವಾಚ್ಯ. ಪರಮಾತ್ಮನಿಗೆ ಇತರ ಗುಣವಾಚಕ ಹೆಸರುಗಳಿರುವಂತೆ 'ಬ್ರಹ್ಮಾ' ಎಂಬ ಹೆಸರೂ ಅನ್ವಯಿಸುತ್ತದೆ. –ಸಂ.

'ವೇದಗಳನ್ನು ಗ್ರಹಿಸಿದನು'* –ಅಲ್ಲದೆ, ಋಕ್, ಯಜು, ಸಾಮ ಎಂಬ ಶೈಲಿಗತ ಭೇದಿಂದಲೂ ನಾಲ್ಕು ವೇದಗಳು.

**ಪ್ರಶ್ನೆ:**– ಯಾವುದಾದರೂ ದೇಶಭಾಷೆಯಲ್ಲಿ ವೇದಗಳ ಪ್ರಕಾಶನವನ್ನು ಮಾಡದೆ (ವೈದಿಕ) ಸಂಸ್ಕೃತದಲ್ಲಿ ಏಕೆ ಮಾಡಿದನು?

**ಉತ್ತರ:**– ಯಾವುದಾದರೂ ದೇಶಭಾಷೆಯಲ್ಲಿ ಪ್ರಕಾಶಪಡಿಸಿದ್ದರೆ, ಈಶ್ವರನು ಪಕ್ಷಪಾತಿಯಾಗಿ ಹೋಗುತ್ತಿದ್ದನು. ಏಕೆಂದರೆ – ಯಾವ ದೇಶದ ಭಾಷೆಯಲ್ಲಿ ಪ್ರಕಾಶಪಡಿಸುತ್ತಿದ್ದನೋ, (ಆ ದೇಶದ) ಮಂದಿಗೆ ಸೌಗಮ್ಯವೂ, ಮತ್ತು ವಿದೇಶೀಯರಿಗೆ ಕಠಿಣತ್ವವೂ ವೇದಗಳನ್ನು ಓದುವಲ್ಲಿ– ಓದಿಸುವಲ್ಲಿ ಉಂಟಾಗುತ್ತಿದ್ದಿತು. ಆದುದರಿಂದ, ಯಾವುದು ಯಾವದೇ ದೇಶದ ಭಾಷೆಯೂ ಅಲ್ಲವೋ, ಆ ವೈದಿಕ ಸಂಸ್ಕೃತದಲ್ಲಿಯೇ ಪ್ರಕಾಶಪಡಿಸಿದನು. ಮತ್ತು 'ವೇದಭಾಷೆ, ಬೇರೆ ಎಲ್ಲಾ ಭಾಷೆಗಳಿಗೂ ಮೂಲವಾಗಿದೆ.'[೫೨] ಅದರಲ್ಲಿಯೇ ವೇದಗಳ ಪ್ರಕಾಶನವನ್ನು ಮಾಡಿದನು. ಹೇಗೆ ಈಶ್ವರನ ಪೃಥಿವೀ – ಮೊದಲಾದ ರಚನೆ, ಸಮಸ್ತ ದೇಶಗಳಿಗೂ, ದೇಶದವರಿಗೂ ಒಂದೇ ವಿಧವಾಗಿಯೂ ಮತ್ತು ಎಲ್ಲ ಶಿಲ್ಪವಿದ್ಯೆಗಳಿಗೂ ಮೂಲವೂ ಆಗಿದೆಯೋ, ಹಾಗೆಯೇ ಪರಮೇಶ್ವರನ ವಿದ್ಯೆಯ ಭಾಷೆಯೂ ಕೂಡ ಒಂದೇ ರೀತಿಯದಾಗಿರಬೇಕು. ಸಮಸ್ತ ದೇಶಗಳ ನಿವಾಸಿಗಳಿಗೂ ಓದುವುದರಲ್ಲಿ ಓದಿಸುವುದರಲ್ಲಿ ಸಮಾನವಾದ ಪರಿಶ್ರಮವಾಗುವುದರಿಂದ ಈಶ್ವರನು ಪಕ್ಷಪಾತಿಯೆಂದಾಗುವುದಿಲ್ಲ ಮತ್ತು (ವೇದಭಾಷೆ) ಸಕಲ ಭಾಷೆಗಳಿಗೂ ಮೂಲವೂ ಆಗಿದೆ.

**ಪ್ರಶ್ನೆ:**– ವೇದಗಳು ಈಶ್ವರಕೃತ; ಅನ್ಯಕೃತವಲ್ಲ – ಎನ್ನುವುದಕ್ಕೆ ಪ್ರಮಾಣವೇನು?

**ಉತ್ತರ:**– ಹೇಗೆ ಈಶ್ವರನು ಪವಿತ್ರತ್ವ, ಸರ್ವವಿದ್ಯಾಭಿಜ್ಞತ್ವ, ಶುದ್ಧ ಗುಣಕರ್ಮ ಸ್ವಭಾವಯುಕ್ತತ್ವ, ನ್ಯಾಯಕಾರಿತ್ವ, ದಯಾಳುತ್ವ ಮೊದಲಾದ ಗುಣಗಳಿಂದ ಯುಕ್ತನಾಗಿದ್ದಾನೋ, ಹಾಗೆ, "ಯಾವ ಕೃತಿಯಲ್ಲಿ ಈಶ್ವರನ ಗುಣ–ಕರ್ಮ–ಸ್ವಭಾವಕ್ಕೆ ಅನುಕೂಲವಾದ ಕಥನವಿರುವುದೋ, ಅದು ಈಶ್ವರಕೃತವೇ ಹೊರತು ಬೇರೆಯದಲ್ಲ." ಮತ್ತು ಯಾವುದರಲ್ಲಿ ಸೃಷ್ಟಿ ಕ್ರಮ, ಪ್ರತ್ಯಕ್ಷ– ಮೊದಲಾದ ಪ್ರಮಾಣಗಳು, ಆಪ್ತರ ಹಾಗೂ ಪವಿತ್ರಾತ್ಮರ ವ್ಯವಹಾರ ಇವಕ್ಕೆ ವಿರುದ್ಧವಾದ ಕಥನವಿರುವುದಿಲ್ಲವೋ, ಅದು ಈಶ್ವರೋಕ್ತ. ಹೇಗೆ ಈಶ್ವರನ ಜ್ಞಾನವು ನಿರ್ಭ್ರಮವಾಗಿರುತ್ತದೋ, ಹಾಗೆ ಯಾವ ಕೃತಿಯಲ್ಲಿ ಭ್ರಾಂತಿರಹಿತವಾದ ಜ್ಞಾನದ ಪ್ರತಿಪಾದನೆಯಿರುತ್ತದೋ, ಅದು ಈಶ್ವರೋಕ್ತವಾಗಿರುತ್ತದೆ . ಹೇಗೆ ಪರಮೇಶ್ವರನಿದ್ದಾನೋ, ಮತ್ತು ಎಂತಹ ಸೃಷ್ಟಿಕ್ರಮವನ್ನು ಇಟ್ಟಿದ್ದಾನೋ, ಹಾಗೆಯೇ ಈಶ್ವರನ, ಸೃಷ್ಟಿಕಾರ್ಯದ, ಕಾರಣದ ಮತ್ತು ಜೀವನ ಪ್ರತಿಪಾದನೆ ಯಾವುದರಲ್ಲಿರುವುದೋ, ಅದು ಪರಮೇಶ್ವರೋಕ್ತವಾದ ಶಾಸ್ತ್ರ ಕೃತಿಯಾಗಿರುತ್ತದೆ. ಮತ್ತು ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳ ವಿಷಯಕ್ಕೆ ಅವಿರುದ್ದವೂ, ಶುದ್ದಾತ್ಮನ ಸ್ವಭಾವಕ್ಕೆ ವಿರುದ್ಧವಲ್ಲದುದೂ ಆಗಿ, 'ವೇದಗಳು ಈ ಬಗೆಯದಾಗಿವೆ.'[೫೩] 'ಬೈಬಲ್', 'ಕುರಾನ್' – ಮೊದಲಾದ ಬೇರೆಯ ಪುಸ್ತಕಗಳು ಹಾಗಿಲ್ಲ. ಅದರ ಸ್ಪಷ್ಟವಾದ ವ್ಯಾಖ್ಯಾನವು ಬೈಬಲ್ ಮತ್ತು ಕುರಾನ್‌ಗಳ ಪ್ರಕರಣದಲ್ಲಿ, ಹದಿಮೂರನೆಯ ಮತ್ತು ಹದಿನಾಲ್ಕನೆಯ ಸಮುಲ್ಲಾಸಗಳಲ್ಲಿ, ಮಾಡಲ್ಪಡುವುದು.

**ಪ್ರಶ್ನೆ:**– ವೇದವು ಈಶ್ವರನಿಂದ ಪ್ರಕಟವಾಗವುದರ ಅವಶ್ಯಕತೆ ಏನೇನೂ ಇರುವುದಿಲ್ಲ. ಏಕೆಂದರೆ, ಮಾನವರು ಕ್ರಮಶಃ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಿ, ಆ ಮೇಲೆ ಪುಸ್ತಕಗಳನ್ನೂ ಕೂಡ ರಚಿಸಿಕೊಳ್ಳುವರು.

**ಉತ್ತರ:**– 'ಎಂದಿಗೂ ರಚಿಸಲಾರರು.' ಏಕೆಂದರೆ – ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಗುವುದು ಅಸಂಭವವಾಗಿದೆ. ಹೇಗೆ ಕಾಡು ಮನುಷ್ಯರು ಸೃಷ್ಟಿಯನ್ನು ನೋಡಿಯೂ ವಿದ್ವಾಂಸರಾಗುವುದಿಲ್ಲವೋ, ಮತ್ತು ಅವರಿಗೆ ಯಾವನಾದರೂ ಶಿಕ್ಷಕನು ಸಿಕ್ಕಿದರೆ ಮಾತ್ರ ವಿದ್ವಾಂಸರಾಗುತ್ತಾರೋ ಮತ್ತು ಹೇಗೆ ಈಗಲೂ ಕೂಡ ಯಾವನಿಂದಲಾದರೂ ಕಲಿಯದೆ, ಯಾವನೂ ವಿದ್ವಾಂಸನಾಗು ವುದಿಲ್ಲವೋ, ಹಾಗೆಯೇ ಪರಮಾತ್ಮನು ಆ ಆದಿಸೃಷ್ಟಿಯ ಋಷಿಗಳಿಗೆ ವೇದವಿದ್ಯೆಯನ್ನು ಓದಿಸದೇ ಇದ್ದಲ್ಲಿ ಮತ್ತು ಅವರು ಅನ್ಯರಿಗೆ ಓದಿಸದೇ ಹೋಗಿದ್ದರೆ, 'ಸರ್ವಜನರೂ ಅವಿದ್ವಾಂಸರಾಗಿಯೇ ಉಳಿದುಹೋಗುತ್ತಿದ್ದರು.'[೫೪]

---

೫೨. ಎಂದರೆ, ವೈದಿಕ ಸಂಸ್ಕೃತ. ಈಗ ಪ್ರಚಲಿತವಾಗಿರುವ ಆಧುನಿಕ ಸಂಸ್ಕೃತ ಭಾಷೆಗೆ ಮೂಲವಾದ ವೇದ ಭಾಷೆ. ಇದರ ವಿಸ್ತೃತ ವ್ಯಾಖ್ಯಾನವನ್ನು ಮಹರ್ಷಿ ದಯಾನಂದರು ತಮ್ಮ 'ಪೂನಾ ಪ್ರವಚನ'ದ ಐದನೇಯ ವ್ಯಾಖ್ಯಾನದಲ್ಲಿ ಮಾಡಿದ್ದಾರೆ. ಈ ಪುಸ್ತಕದ ಕನ್ನಡದ ಅನುವಾದ ಪ್ರಕಟವಾಗಿದೆ.

೫೩. ಇದರ ವಿಶೇಷ ವ್ಯಾಖ್ಯಾನವನ್ನು ಗ್ರಂಥಕರ್ತರಿಂದ ರಚಿತವಾದ 'ಋಗ್ವೇದಾದಿ ಭಾಷ್ಯ ಭೂಮಿಕಾ'ದಲ್ಲಿ ನೋಡಿ.

೫೪. ಈ ವಿಷಯದಲ್ಲಿ ಸ್ವಾಮೀ ದಯಾನಂದ ಸರಸ್ವತಿಯವರೊಂದಿಗೆ ಉತ್ತರ ಪ್ರದೇಶದಲ್ಲಿ ಚಾಂದಾಪುರ ಎಂಬ ಸ್ಥಾನದಲ್ಲಾದ ಮೇಳದ ಸಂದರ್ಭದಲ್ಲಿ ಮುಸ್ಲಿಂ, ಮತ್ತು ಕ್ರೈಸ್ತ ವಿದ್ವಾಂಸರ ಶಾಸ್ತ್ರಾರ್ಥ ನಡೆಯಿತು. ಈ ಶಾಸ್ತ್ರಾರ್ಥ ಐದು ದಿನ ನಡೆಯಬೇಕಿದ್ದು ಮೌಲವೀ ಮತ್ತು ಪಾದ್ರಿಗಳ ಮತ ಭಂಗವಾಗುತ್ತಿದ್ದಂತೆಯೇ, ಎರಡೇ ದಿನಗಳಲ್ಲಿ ಸಮಾಪ್ತ ಮಾಡಲ್ಪಟ್ಟಿತು. ಈ ಶಾಸ್ತ್ರಾರ್ಥದಲ್ಲಿ ಯಾವ ಪುಸ್ತಕದ ಪ್ರಮಾಣವೂ ಇಲ್ಲದೆ, ಕೇವಲ ಅಪೂರ್ವ ತರ್ಕ–ಯುಕ್ತಿಗಳಿಂದ [ಇದು ದಯಾನಂದರ ವೈಶಿಷ್ಟ್ಯ]– ಮಹರ್ಷಿಗಳು ತಮ್ಮ ವಿರೋಧಿಗಳನ್ನು ತಮ್ಮ ಸಿದ್ಧಾಂತಕ್ಕೆ ತಿರುಗುವಂತೆ ಮಾಡುತ್ತಿದ್ದರು. ಈ ಶಾಸ್ತ್ರಾರ್ಥವು 'ಸತ್ಯ ಧರ್ಮ–ವಿಚಾರ–ಮೇಲಾ ಚಾಂದಾಪುರ್ ಎಂಬ ಕಿರು ಹೊತ್ತಿಗೆಯ ರೂಪದಲ್ಲಿ ಪ್ರಕಾಶಿತವಾಗಿದೆ. ಮಹರ್ಷಿಗಳ ಅನ್ಯ [ಏಳು] ಶಾಸ್ತ್ರಗಳನ್ನೂ ಉಳ್ಳ ದಯಾನಂದ–ಶಾಸ್ತ್ರಾರ್ಥ ಸಂಗ್ರಹ' ಎಂಬ ಗ್ರಂಥವು ಇನ್ನೂ ಕನ್ನಡದಲ್ಲಿ ಹೊರಬೀಳಬೇಕಾಗಿದೆ.

–ಸಂ.

ಉದಾಹರಣೆಗೆ, ಯಾವನಾದರೂ ಒಬ್ಬ ಬಾಲಕನನ್ನು, ಜನ್ಮಕಾಲದಿಂದ ಏಕಾಂತ ದೇಶದಲ್ಲಿ, ಅವಿದ್ವಾಂಸರ ಅಥವಾ ಪಶುಗಳ ಸಂಗದಲ್ಲಿ ಇಟ್ಟುಬಿಟ್ಟರೆ, ಅವನು ಎಂತಹ ಸಂಗವೋ, ಅಂತಹವನೇ ಆಗಿಹೋಗುವನು. ಕಾಡಾಡಿಗಳಾದ ಭಿಲ್ಲರು – ಮೊದಲಾದವರು ಇದಕ್ಕೆ ದೃಷ್ಟಾಂತವಾಗಿದ್ದಾರೆ. ಎಂದಿನವರೆಗೆ ಆರ್ಯಾವರ್ತದೇಶದಿಂದ ಶಿಕ್ಷಣವು ಹೋಗಿರಲಿಲ್ಲವೋ, ಅಂದಿನವರೇಗೆ ಈಜಿಪ್ಟ್, ಗ್ರೀಸ್ ಮತ್ತು ಯೂರೋಪ್‌ಖಂಡ ಮೊದಲಾದೆಡೆಗಳಲ್ಲಿನ ಮಾನವರಲ್ಲಿ ವಿದ್ಯೆ ಸ್ವಲ್ಪವೂ ಕೂಡ ಮೂಡಿರಲಿಲ್ಲ. ಮತ್ತು ಪೋರ್ಚುಗಲ್ಲಿನ ಕೊಲಂಬಸ್ ಮೊದಲಾದ ಪುರುಷರು ಎಂದಿನವರೆಗೆ ಅಮೇರಿಕಾಕ್ಕೆ ಹೋಗಿರಲಿಲ್ಲವೋ, ಆವರೆಗೆ ಅವರೂ ಕೂಡ ಸಾವಿರಾರು, ಲಕ್ಷಾಂತರ, ಕೋಟ್ಯಂತರ ವರ್ಷಗಳಿಂದ ಮೂರ್ಖರು[೫೫] – ಎಂದರೆ ವಿದ್ಯಾಹೀನರೇ ಆಗಿದ್ದರು. ಮತ್ತೆ ಉತ್ತಮ ಶಿಕ್ಷಣ ಪಡೆದುದರಿಂದ ವಿದ್ವಾಂಸರಾಗಿದ್ದಾರೆ. ಅದೇ ರೀತಿಯಲ್ಲಿಯೇ ಪರಮಾತ್ಮನಿಂದ ಸೃಷ್ಟಿಯ ಆದಿಯಲ್ಲಿ ವಿದ್ಯೆ-ಶಿಕ್ಷಣಗಳ ಪ್ರಾಪ್ತಿಯಾಗಿ, ಉತ್ತರೋತ್ತರ ಕಾಲದಲ್ಲಿ ವಿದ್ವಾಂಸರಾಗುತ್ತಾ ಬಂದರು.

**"ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ "।** (ಯೋಗ, ಸಮಾಧಿ–೨೬)

ಹೇಗೆ ಈಗಿನ ಕಾಲದಲ್ಲಿ ನಾವುಗಳು ಅಧ್ಯಾಪಕರಿಂದ ಓದಿಯೇ ವಿದ್ವಾಂಸರಾಗುತ್ತೇವೋ, ಹಾಗೆ ಸೃಷ್ಟಿಯ ಆರಂಭದಲ್ಲಿ ಉತ್ಪನ್ನರಾದ ಅಗ್ನಿ- ಮೊದಲಾದ ಋಷಿಗಳು ಪರಮೇಶ್ವರನೆಂಬ ಅಧ್ಯಾಪಕನಿಂದ ವಿದ್ಯೆಯನ್ನು ಕಲಿತರು; ಪರಮೇಶ್ವರನು ಗುರುವು ಎಂದರೆ – ಓದಿಸುವವನಾಗಿದ್ದಾನೆ. ಏಕೆಂದರೆ – ಹೇಗೆ ಜೀವರು ಸುಷುಪ್ತಿಯಲ್ಲಿ ಮತ್ತು ಪ್ರಳಯದಲ್ಲಿ ಜ್ಞಾನ ರಹಿತರಾಗಿ ಹೋಗುತ್ತಾರೋ, ಹಾಗೆ ಪರಮೇಶ್ವರನು (ಜ್ಞಾನ ರಹಿತನು) ಆಗುವುದಿಲ್ಲ. ಅವನ ಜ್ಞಾನ ನಿತ್ಯವಾಗಿರುತ್ತದೆ . ಆದುದರಿಂದ, ನಿಮಿತ್ತವಿಲ್ಲದೆ ನೈಮಿತ್ತಿಕವಾದ ವಿಷಯ (ಅನ್ಯರಿಂದ ಕಲಿಯಬೇಕಾದ ವಿದ್ಯೆ) ಎಂದಿಗೂ ಸಿದ್ಧವಾಗುವುದಿಲ್ಲ ಎಂಬುದನ್ನು ನಿಶ್ಚಯಪೂರ್ವಕವಾಗಿ ತಿಳಿದುಕೊಳ್ಳಬೇಕು.

**ಪ್ರಶ್ನೆ:**– ವೇದಗಳು ವೈದಿಕ ಸಂಸ್ಕ ೃತ ಭಾಷೆಯಲ್ಲಿ ಪ್ರಕಾಶಿತವಾದವು ಮತ್ತು ಅಗ್ನಿ – ಮೊದಲಾದ ಆ ಋಷಿಜನರು ಆ ವೈದಿಕ ಸಂಸ್ಕೃತ ಭಾಷೆಯನ್ನು ತಿಳಿದಿರಲಿಲ್ಲ. ಮತ್ತೆ ವೇದಗಳ ಅರ್ಥವನ್ನು ಅವರು ಹೇಗೆ ತಿಳಿದರು?

**ಉತ್ತರ:**– 'ಪರಮೇಶ್ವರನು ತಿಳಿಸಿದನು.' ಮತ್ತು ಧರ್ಮಾತ್ಮರೂ, ಯೋಗಿಗಳೂ ಆದ ಮಹರ್ಷಿ ಜನರು ಯಾವಾಗ ಯಾವಾಗ ಯಾವ – ಯಾವದರ ಅರ್ಥವನ್ನು ತಿಳಿಯುವ ಇಚ್ಛೆಯನ್ನು ಮಾಡಿ, ಧ್ಯಾನಾವಸ್ಥಿತರಾಗಿ, ಪರಮೇಶ್ವರನ ಸ್ವರೂಪದಲ್ಲಿ ಸಮಾಧಿ ಸ್ಥಿತರಾದರೋ, ಆಗ- ಆಗ ಪರಮಾತ್ಮನು ಅಭೀಷ್ಟವಾದ[೫೬] ಮಂತ್ರಗಳ ಅರ್ಥಗಳನ್ನು ತಿಳಿಸಿದನು. ಬ್ರಾಹ್ಮಣ ಗ್ರಂಥದ ರಚನೆ ಯಾವಾಗ ಬಹಳ ಮಂದಿಯ ಆತ್ಮಗಳಲ್ಲಿ ವೇದಾರ್ಥದ ಪ್ರಕಾಶ ಉಂಟಾಯಿತೋ, ಆಗ ಋಷಿ-ಮುನಿಗಳು ಆ ಅರ್ಥಗಳನ್ನೂ, ಮತ್ತು ಋಷಿ-ಮುನಿಗಳ ಇತಿಹಾಸ ಪೂರ್ವಕವಾದ ಗ್ರಂಥಗಳನ್ನೂ ಬರೆದರು. ಅವುಗಳಿಗೆ 'ಬ್ರಾಹ್ಮಣ'ಗಳೆಂದು ಹೆಸರಾಯಿತು; ಎಂದರೆ – 'ಬ್ರಹ್ಮ'ವೆಂಬ ಹೆಸರನ್ನುಳ್ಳ ವೇದಗಳ ವ್ಯಾಖ್ಯಾನ ಗ್ರಂಥವಾಗಿರುವುದರಿಂದ **'ಬ್ರಾಹ್ಮಣ'** – ಎಂಬ ಹೆಸರು ಉಂಟಾಯಿತು. ಮತ್ತು –

**" ಋಷಯೋ ಮಂತ್ರದೃಷ್ಟಯಃ.... ಮಂತ್ರಾನ್ ಸಂಪ್ರಾದುಃ "॥** (ನಿರುಕ್ತ : ೭.೨–೧.೨೦)

ಯಾವ ಯಾವ ಮಂತ್ರಾರ್ಥದ ದರ್ಶನ ಯಾವ ಯಾವ ಋಷಿಗೆ ಆಯಿತೋ, ಮತ್ತು ಪ್ರಥಮತಃ ಯಾವನ ಮೊದಲು ಆ ಮಂತ್ರದ ಅರ್ಥವನ್ನು ಬೇರೆ ಯಾವನೂ ಪ್ರಕಾಶಪಡಿಸಿರಲಿಲ್ಲವೋ ಮತ್ತು ಯಾವನು ಅನ್ಯರಿಗೂ ಓದಿಸಿದನೋ, ಆ ಋಷಿಯ

---

೫೫. ಹಿಂದಿನ ಟಿಪ್ಪಣಿಯನ್ನು ಓದಿ.

೫೬. 'ಅಭಿಷ್ಟವಾದ' ಎಂದರೆ, ಇಷ್ಟಪಟ್ಟ ಹಲವು ಮಂತ್ತಗಳ ಎಂದರ್ಥ. ಇದರಿಂದ ತಿಳಿಯುವುದೇನೆಂದರೆ, ವೇದಾರ್ಥಕ್ಕೆ ಸಮಾಧಿ ಸ್ಥಿತಿಯಲ್ಲಿ ಪರಮೇಶ್ವರನ ಸಹಾಯ ಪಡೆಯುವುದು ಅವಶ್ಯಕ ಎಂದು. ಇಷ್ಟೇ ಅಲ್ಲದೆ, ನಾಲ್ಕೂ ವೇದಗಳ ಸುಮಾರು ೨೬೦೦೦ ಮಂತ್ರಗಳ ಭಾಷ್ಯ ಬರೆಯುವುದು ಸರಿ ಸುಮಾರು ಅಸಂಭವವೆಂದೇ ನಿರ್ಧಾರ. ಹೀಗಿರುವಾಗ ಅನೃಷಿಗಳಾದ, ಸಂಸ್ಕೃತ ವ್ಯಾಕರಣವನ್ನು ತಿಳಿದ–ತಿಳಿಯದ ಪಂಡಿತರುಗಳಿಂದ, ಮತ್ತು ಐರೋಪ್ಯ ವಿದ್ವಾಂಸರ, ಮತ್ತು ಅವರ ಅನುಯಾಯಿಗಳಿಂದ, ರಚಿತವಾದ ಒಂದೆರೆಡು ವೇದಗಳ, ಅಥವಾ ನಾಲ್ಕೂ ವೇದಗಳ ಸಂಸ್ಕೃತ, ಹಾಗೂ ಸಂಸ್ಕೃತತೇರ ಭಾರತೀಯ ಭಾಷೆಗಳು ಯಾವ ಸ್ಥಾನವನ್ನಲಂಕರಿಸಬೇಕೆಂಬುದನ್ನು ಸಹಜವಾಗಿ ಊಹಿಸಬಹುದು. ಇನ್ನು ಮತ್ತೆ, ಐರೋಪ್ಯಗಳ ಭಾಷ್ಯಗಳ ಗೊಂದಲವೆಷ್ಟಿರಬಹುದು. –ಸಂ.

ಹೆಸರು, ಜ್ಞಾಪಕಾರ್ಥವಾಗಿ, ಇಂದಿನವರೆಗೆ ಆಯಾ ಮಂತ್ರದೊಂದಿಗೆ ಬರೆಯಲ್ಪಡುತ್ತಾ ಬಂದಿದೆ.[೫೭] ಯಾರೇ ಆಗಲಿ, ಋಷಿಗಳನ್ನು 'ಮಂತ್ರಕರ್ತೃಗಳೆಂದು'[೫೮] ಹೇಳಿದರೆ, ಅವರನ್ನು ಯಥಾರ್ಥವಾದಿಗಳಲ್ಲವೆಂದು ತಿಳಿಯಬೇಕು. ಋಷಿಗಳಾದರೋ ಮಂತ್ರಗಳ ಅರ್ಥಗಳ ಪ್ರಕಾಶಕರಾಗಿದ್ದಾರೆ.

**ಪ್ರಶ್ನೆ:-** ವೇದಗಳು ಎನ್ನುವುದು ಯಾವ ಗ್ರಂಥಗಳ ಹೆಸರು?

**ಉತ್ತರ:-** 'ಋಕ್', 'ಯಜುಃ', 'ಸಾಮ' ಮತ್ತು 'ಅಥರ್ವ' ಮಂತ್ರ ಸಂಹಿತೆಗಳ ಹೆಸರು; ಬೇರೆಯದರದಲ್ಲ.

**ಪ್ರಶ್ನೆ:- ಮಂತ್ರಬ್ರಾಹ್ಮಣಯೋರ್ವೇದನಾಮಧೇಯಮ್ ॥**

ಈ ಮೊದಲಾದ, 'ಕಾತ್ಯಾಯನನೇ' ಮೊದಲಾದವರು ರಚಿಸಿದ 'ಪ್ರತಿಜ್ಞಾಸೂತ್ರ'[೫೯] ಮೊದಲಾದುದರ ಅರ್ಥವನ್ನು ಹೇಗೆ ಮಾಡುವಿರಿ.

**ಉತ್ತರ:-** ನೋಡಿರಿ, ಸಂಹಿತಾಪುಸ್ತಕದ ಆರಂಭದಲ್ಲಿ ಮತ್ತು ಅಧ್ಯಾಯದ ಸಮಾಪ್ತಿಯಲ್ಲಿ ವೇದವೆಂಬ ಶಬ್ದ ಸನಾತನ (ಕಾಲ)ದಿಂದ ಬರೆಯಲ್ಪಡುತ್ತಾ ಬಂದಿದೆ. ಮತ್ತು ಬ್ರಾಹ್ಮಣ ಪುಸ್ತಕದ ಆರಂಭ ಅಥವಾ ಅಧ್ಯಾಯದ ಸಮಾಪ್ತಿಯಲ್ಲಿ ಎಲ್ಲಿಯೂ (ವೇದ-ಎಂಬ ಶಬ್ದ) ಬರೆದಿಲ್ಲ. ಮತ್ತು ನಿರುಕ್ತದಲ್ಲಿ-

**ಇತ್ಯಪಿ ನಿಗಮೋ ಭವತಿ । ಇತಿ ಬ್ರಾಹ್ಮಣಮ್ ॥** (ನಿರುಕ್ತ:- ೫.೩.೪)

"ಹೀಗೆಯೂ ವೇದವಿದೆ; ಹೀಗೆ ಬ್ರಾಹ್ಮಣ"- ಎಂದು ಯಾಸ್ಕರು "ವೇದಗಳು ಬೇರೆ; ಬ್ರಾಹ್ಮಣಗಳು ಬೇರೆ".- ಎಂದು ಹೇಳಿದ್ದಾರೆ.

**ಛಂದೋ ಬ್ರಾಹ್ಮಣಾನಿ ಚ ತದ್ವಿಷಯಾಣಿ ॥** (ಅಷ್ಟಾಧ್ಯಾಯೀ:- ೪.೨. ೬೬)

ಇದು ಪಾಣಿನೀಯ ಸೂತ್ರವಾಗಿದೆ. ಇದರಿಂದಲೂ ವೇದಗಳು ಮಂತ್ರ ಭಾಗಗಳು[೬೦] ಮತ್ತು ಬ್ರಾಹ್ಮಣಗಳು ವ್ಯಾಖ್ಯಾ ಭಾಗಗಳು -ಎಂದು ಸ್ಪಷ್ಟವಾಗಿ ವಿದಿತವಾಗುತ್ತದೆ. ಇದಕ್ಕಿಂತ ಹೆಚ್ಚು ತಿಳಿಯಲು ಬಯಸುವಿರಾದರೆ, ನಾನು ಬರೆದಿರುವ **'ಋಗ್ವೇದಾದಿ ಭಾಷ್ಯ ಭೂಮಿಕೆ'**ಯಲ್ಲಿ ನೋಡಿಕೊಳ್ಳಿರಿ. ಅಲ್ಲಿ ಅನೇಕಶಃ ಪ್ರಮಾಣಗಳಿಗೆ ವಿರುದ್ಧವಾಗಿರುವುದರಿಂದ ಕಾತ್ಯಾಯನ ಈ ವಚನ (ಮಾನ್ಯ) ಆಗಲಾರದು - ಎಂದೇ ಸಿದ್ಧ ಮಾಡಲ್ಪಟ್ಟಿದೆ. ಏಕೆಂದರೆ, ಹಾಗೆ ಒಪ್ಪಿದಲ್ಲಿ, ವೇದಗಳು ಎಂದಿಗೂ ಸನಾತನವಾಗಲಾರವು. ಏಕೆಂದರೆ-ವೇದಗಳಲ್ಲಿ ಮಾನವರ ಇತಿಹಾಸವಿಲ್ಲ 'ಬ್ರಾಹ್ಮಣ ಪುಸ್ತಕ'ಗಳಲ್ಲಿ ಬಹುಮಂದಿ ಋಷಿ-ಮಹರ್ಷಿಗಳ ಮತ್ತು ರಾಜರು-ಮೊದಲಾದವರ ಇತಿಹಾಸಗಳು ಬರೆಯಲ್ಪಟ್ಟಿವೆ ಮತ್ತು ಇತಿಹಾಸ ಯಾವನದಾಗಿರುತ್ತದೋ, ಅವನ ಜನನದ ನಂತರ ಅದು ಬರೆಯಲ್ಪಡುತ್ತದೆ. "ವೇದಗಳಲ್ಲಿ ಯಾವನದೇ ಇತಿಹಾಸವಿಲ್ಲ; ಆದರೆ-ಯಾವ ಶಬ್ದದಿಂದ ವಿದ್ಯೆಯ ಜ್ಞಾನ ಉಂಟಾಗುವುದೋ ಆಯಾ ಶಬ್ದದ ಪ್ರಯೋಗ ಮಾಡಲಾಗಿದೆ." "ಯಾವನೇ ವಿಶೇಷ ಮಾನವನ ಹೆಸರು ಅಥವಾ ವಿಶೇಷವಾದ ಕಥೆಯ ಪ್ರಸಂಗ ವೇದಗಳಲ್ಲಿಲ್ಲ."

**ಪ್ರಶ್ನೆ:-** ವೇದಗಳ ಶಾಖೆಗಳೆಷ್ಟಿವೆ?

**ಉತ್ತರ:-** ಒಂದು ಸಾವಿರದ ಒಂದುನೂರ ಇಪ್ಪತ್ತೇಳು. (೧.೧೨೭)

**ಪ್ರಶ್ನೆ:-** ಯಾವುದು 'ಶಾಖೆ' ಎನಿಸುತ್ತದೆ?

**ಉತ್ತರ:-** ವ್ಯಾಖ್ಯಾನವನ್ನು 'ಶಾಖೆ' ಎನ್ನುತ್ತಾರೆ.

**ಪ್ರಶ್ನೆ:-** ಜಗತ್ತಿನಲ್ಲಿ ವಿದ್ವಾಂಸರು ವೇದಗಳ ಅವಯವ ಭೂತವಾದ ವಿಭಾಗಗಳನ್ನು 'ಶಾಖೆ' ಎನ್ನುತ್ತಾರಲ್ಲ?

**ಉತ್ತರ:-** ಸ್ವಲ್ಪವಾದರೂ ಆಲೋಚಿಸಿದರೆ ಸರಿ. ಏಕೆಂದರೆ, ಎಷ್ಟು ಶಾಖೆಗಳಿವೆಯೋ, ಅವು 'ಅಶ್ವಲಾಯನವ'-

---

೫೭. ವೇದಗಳ ಅನುಕ್ರಮಣೀ ಗ್ರಂಥಗಳಲ್ಲಿ ಯಾವ ಮಂತ್ರದ ಋಷಿ ಯಾರೆಂದು ನಿರ್ದೇಶಿಸಲಾಗಿದೆ. -ಯು.ಮೀ.

೫೮. ಈ ಮತ ಪಾಶ್ಚಾತ್ಯರದು- ಯು.ಮೀ.

೫೯. ಪ್ರತಿಜ್ಞಾನ ಪರಿಶಿಷ್ಟ [೧.೧]- ಯು.ಮೀ.

೬೦. ಇಲ್ಲಿ 'ಭಾಗ' ಎಂಬ ಶಬ್ಧ ಪೂರ್ವಪಕ್ಷಿಯ ಮತಾನುಸಾರ ಹೇಳಲಾಗಿದೆ. ಸ್ವಮತವಲ್ಲ. -ಯು.ಮೀ.

ಮೊದಲಾದ ಋಷಿಗಳ ಹೆಸರಿನಿಂದ ಪ್ರಸಿದ್ಧವಾಗಿವೆ ಮತ್ತು 'ಮಂತ್ರಸಂಹಿತೆ ಪರಮೇಶ್ವರನ ಹೆಸರಿನಿಂದ ಪ್ರಸಿದ್ಧವಾಗಿದೆ.' ಹೇಗೆ ನಾಲ್ಕು ವೇದಗಳನ್ನೂ ಪರಮೇಶ್ವರ ಕೃತವೆಂದು ಅಂಗೀಕರಿಸುತ್ತೇವೋ, ಹಾಗೆ 'ಅಶ್ವಲಾಯನೀ' ಮೊದಲಾದ ಶಾಖೆಗಳನ್ನು ಆಯಾ ಋಷಿಕೃತಗಳೆಂದು ಅಂಗೀಕರಿಸುತ್ತೇವೆ. ಮತ್ತು ಎಲ್ಲಾ ಶಾಖೆಗಳಲ್ಲಿಯ ಮಂತ್ರಗಳ ಪ್ರತೀಕವನ್ನಿಟ್ಟು ವ್ಯಾಖ್ಯಾನ ಮಾಡುತ್ತಾರೆ. ಉದಾಹರಣೆಗೆ, ತೈತ್ತಿರೀಯ ಶಾಖೆಯಲ್ಲಿ **"ಇಷೇ ತ್ವೋರ್ಜೇತ್ವೇತಿ"** – ಮೊದಲಾದ ಪ್ರತೀಕಗಳನ್ನುದ್ಧರಿಸಿ, ವ್ಯಾಖ್ಯಾನ ಮಾಡಿದ್ದಾರೆ. ಮತ್ತು ವೇದಸಂಹಿತೆಗಳಲ್ಲಿ ಯಾವುದರ ಪ್ರತೀಕವನ್ನೂ ಉದ್ಧರಿಸಿಲ್ಲ. ಆದುದರಿಂದ ಪರಮೇಶ್ವರಕೃತವಾದ ನಾಲ್ಕು ವೇದಗಳೂ ಮೂಲ ವೃಕ್ಷಗಳು ಮತ್ತು ಅಶ್ವಲಾಯನ – ಮೊದಲಾದ ಶಾಖೆಗಳೆಲ್ಲವೂ ಋಷಿಮುನಿಕೃತವಾಗಿವೆ; ಪರಮೇಶ್ವರ ಕೃತವಲ್ಲ, ಯಾರು ಈ ವಿಷಯದ ವಿಶೇಷ–ವ್ಯಾಖ್ಯಾನವನ್ನು ನೋಡಬಯಸುತ್ತಾರೋ, ಅವರು **"ಋಗ್ವೇದಾದಿ ಭಾಷ್ಯ ಭೂಮಿಕೆ"**ಯಲ್ಲಿ ನೋಡಿಕೊಳ್ಳಬಹುದು. ಹೇಗೆ ಮಾತಾಪಿತೃಗಳು ತಮ್ಮ ಮಕ್ಕಳ ಮೇಲೆ ಕೃಪಾದೃಷ್ಟಿಯಿಟ್ಟು, ಉನ್ನತಿಯನ್ನು ಬಯಸುತ್ತಾರೋ, ಹಾಗೆಯೇ ಪರಮಾತ್ಮನು ಮಾನವರೆಲ್ಲರ ಮೇಲೆಯೂ ಕೃಪೆಮಾಡಿ, ಯಾವುದರಿಂದ ಮಾನವರು ಅವಿದ್ಯಾಂಧಕಾರ–ಭ್ರಮಜಾಲದಿಂದ ಹೊರಬಂದು, ವಿದ್ಯಾಜ್ಞಾನವೆಂಬ ಸೂರ್ಯನ ಪ್ರಕಾಶವನ್ನು ಪಡೆದು ಅತ್ಯಾನಂದದಿಂದ ಇರಲಾಗುವುದೋ ಮತ್ತು ವಿದ್ಯೆ ಹಾಗೂ ಸುಖಗಳ ವೃದ್ಧಿಯನ್ನು ಸಾಧಿಸುತ್ತಾ ಹೋಗಬಹುದೋ, ಅಂತಹ ವೇದಗಳನ್ನು ಪ್ರಕಾಶಪಡಿಸಿದ್ದಾನೆ.

**ಪ್ರಶ್ನೆ:–** ವೇದಗಳು ನಿತ್ಯವೋ ಅಥವಾ ಅನಿತ್ಯವೋ?

**ಉತ್ತರ:–** 'ನಿತ್ಯವಾಗಿವೆ.' ಏಕೆಂದರೆ, ಪರಮೇಶ್ವರನು ನಿತ್ಯನಾಗಿರುವುದರಿಂದ, ಅವನ ಜ್ಞಾನವೇ ಮೊದಲಾದ ಗುಣಗಳೂ ನಿತ್ಯವಾಗಿವೆ. ಯಾವ ನಿತ್ಯ ಪದಾರ್ಥಗಳಿವೆಯೋ, ಅವುಗಳ ಗುಣ–ಕರ್ಮ ಸ್ವಭಾವಗಳು ನಿತ್ಯವೂ ಮತ್ತು ಅನಿತ್ಯ ದ್ರವ್ಯದವು ಅನಿತ್ಯವೂ ಆಗಿರುತ್ತವೆ.

**ಪ್ರಶ್ನೆ:–** ಈ ಪುಸ್ತಕವೂ ನಿತ್ಯವೇನು?

**ಉತ್ತರ:–** ಅಲ್ಲ. ಏಕೆಂದರೆ – ಪುಸ್ತಕವಾದರೋ, ಹಾಳೆಗಳು ಹಾಗೂ ಮಸಿಯಿಂದಾಗಿದೆ. ಅದು ನಿತ್ಯ ಹೇಗಾಗಬಲ್ಲದು? ಆದರೆ – "ಯಾವ ಶಬ್ದಗಳು, ಅರ್ಥಗಳು ಮತ್ತು ಸಂಬಂಧಗಳಿವೆಯೋ," ಅವು ನಿತ್ಯವಾಗಿವೆ.

**ಪ್ರಶ್ನೆ:–** ಈಶ್ವರನು ಆ ಋಷಿಗಳಿಗೆ ಜ್ಞಾನವನ್ನು ಕೊಟ್ಟಿರಬಹುದು; ಮತ್ತು ಆಜ್ಞಾನದಿಂದ ಅವರುಗಳು ವೇದಗಳನ್ನು ರಚಿಸಿಕೊಂಡಿರಬಹುದಲ್ಲ?

**ಉತ್ತರ:–** ಜ್ಞೇಯವಿಲ್ಲದೆ ಜ್ಞಾನವಿರಲಾರದು. ಗಾಯತ್ರೀ – ಮೊದಲಾದ ಷಡ್ಜ– ಮೊದಲಾದ ಮತ್ತು ಉದಾತ್ತ– ಅನುದಾತ್ತಸ್ವರದ ಜ್ಞಾನಪೂರ್ವಕವಾದ ಛಂದಸ್ಸುಗಳನ್ನು ನಿರ್ಮಿಸುವ, ಈ ರೀತಿಯ 'ಸರ್ವಜ್ಞಾನಯುಕ್ತ'ವಾದ ಶಾಸ್ತ್ರವನ್ನು ನಿರ್ಮಿಸುವಂತಹ ಸಾಮರ್ಥ್ಯವು ಸರ್ವಜ್ಞ ಪ್ರಭುವನ್ನು ಬಿಟ್ಟರೆ ಯಾವನಿಗೂ ಇಲ್ಲ. ಹೌದು; ವೇದವನ್ನು ಓದಿದ ಮೇಲೆ, 'ವ್ಯಾಕರಣ', 'ನಿರುಕ್ತ' ಹಾಗೂ 'ಛಂದಸ್ಸು' – ಮೊದಲಾದ ಗ್ರಂಥಗಳನ್ನು ಋಷಿ – ಮುನಿಗಳು ವಿದ್ಯೆಗಳ ಪ್ರಕಾಶಕ್ಕಾಗಿ ರಚಿಸಿದ್ದಾರೆ. ಪರಮಾತ್ಮನು ವೇದಗಳ ಪ್ರಕಾಶನವನ್ನು ಮಾಡದಿದ್ದರೆ, ಯಾವನೂ, ಏನನ್ನೂ ರಚಿಸಲಾರನು. ಆದುದರಿಂದ 'ವೇದಗಳು ಪರಮೇಶ್ವರೋಕ್ತವಾಗಿವೆ.' ಇವುಗಳಿಗೆ ಅನುಸಾರವಾಗಿಯೇ ಸರ್ವಜನರೂ ನಡೆದುಕೊಳ್ಳಬೇಕು. ಮತ್ತು ಯಾವನಾದರೂ, ಯಾವನನ್ನಾದರೂ "ನಿಮ್ಮ ಮತವೇನು?" – ಎಂದು ಕೇಳಿದರೆ, "ನಮ್ಮ ಮತ ವೇದಗಳು; ಎಂದರೆ – ವೇದಗಳಲ್ಲಿ ಏನೆಲ್ಲಾ ಹೇಳಿದೆಯೋ, ನಾವು ಅದನ್ನು ಅಂಗೀಕರಿಸುತ್ತೇವೆ ".–ಎಂದೇ ಉತ್ತರವನ್ನು ಕೊಡುವುದು ಉಚಿತವಾಗಿದೆ.

ಈಗ ಇದರಿಂದ ಮುಂದಕ್ಕೆ ಸೃಷ್ಟಿಯ ವಿಷಯದಲ್ಲಿ ಬರೆಯುವೆವು. ಹೀಗೆ ಸಂಕ್ಷೇಪವಾಗಿ ಈಶ್ವರನ ಮತ್ತು ವೇದಗಳ ವಿಷಯದಲ್ಲಿ ವ್ಯಾಖ್ಯಾನ ಮಾಡಿದ್ದೇವೆ. ಈಗ ಇದರಿಂದ ಮುಂದಕ್ಕೆ 'ಸೃಷ್ಟಿಯ ವಿಷಯ'ದಲ್ಲಿ ಬರೆಯುವೆವು.

ಇತಿ ಶ್ರೀಮದ್ದಯಾನಂದಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ

ಸುಭಾಷಾವಿಭೂಷಿತೇ ಈಶ್ವರವೇದವಿಷಯೇ

**ಸಪ್ತಮಃ ಸಮುಲ್ಲಾಸಃ ಸಂಪೂರ್ಣಃ**

# ಅಷ್ಟಮ ಸಮುಲ್ಲಾಸಾರಂಭಃ

## ಅಥ ಸೃಷ್ಟ್ಯುತ್ಪತ್ತಿಸ್ಥಿತಿಪ್ರಲಯವಿಷಯಾನ್ ವ್ಯಾಖ್ಯಾಸ್ಯಾಮಃ

**ಇಯಂ ವಿಸೃಷ್ಟಿರ್ಯತ ಆ ಬಭೂವ ಯದಿ ವಾ ದಧೇ ಯದಿ ವಾ ನ ।**

**ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್ ಸೋ ಅಂಗ ವೇದ ಯದಿ ವಾ ನ ವೇದ ॥ ೧ ॥**

(ಋಗ್ವೇದ :- ೧೦.೧೨೯.೭)

**ತಮ ಆಸೀತ್ತಮಸಾಗೂಳ್ಹಮಗ್ರೇಪ್ರಕೇತಂ ಸಲಿಲಂ ಸರ್ವಮಾ ಇದಮ್ ।**

**ತುಚ್ಛ್ಯೇನಾಭ್ವಪಿಹಿತಂ ಯದಾಸೀತ್ ತಪಸಸ್ತನ್ಮಹಿನಾ ಜಾಯತೈಕಮ್ ॥ ೨ ॥** (ಋಗ್ವೇದ :- ೧೦.೧೨೯.೩)

**ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ।**

**ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ ॥ ೩ ॥** (ಋಗ್ವೇದ :- ೧೦.೧೨೧.೧)

**ಪುರುಷ ಏವೇದಗ್ಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಮ್ ।**

**ಉತಾಮೃತತ್ವಸ್ಯೇಶಾನೋ ಯದನ್ನೇನಾತಿ ರೋಹತಿ ॥ ೪ ॥** (ಯಜು:- ೩೧.೨)

**ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ ।**

**ಯತ್ಪ್ರ ಯಂತ್ಯಭಿ ಸಂ ವಿಶಂತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮ ॥ ೫ ॥** (ತೈತ್ತಿರೀಯ:- ಭೃಗುವಲ್ಲೀ- ೧.)

ಹೇ (ಅಂಗ) ಮಾನವ! ಯಾವನಿಂದ ಈ ವಿವಿಧ ಸೃಷ್ಟಿ ಪ್ರಕಾಶಿತವಾಗಿದೆಯೋ, ಯಾವನು ಇದರ ಧಾರಣವನ್ನೂ ಮತ್ತು ಪ್ರಳಯವನ್ನೂ ಮಾಡುತ್ತಾನೋ, ಯಾವನು ಈ ಜಗತ್ತಿನ ಸ್ವಾಮಿಯಾಗಿದ್ದಾನೋ, ಯಾವ ವ್ಯಾಪಕನಲ್ಲಿ ಈ ಸರ್ವಜಗತ್ತೂ ಉತ್ಪತ್ತಿ, ಸ್ಥಿತಿ, ಪ್ರಳಯವನ್ನು ಹೊಂದುತ್ತದೋ, ಅವನು ಪರಮಾತ್ಮನಾಗಿದ್ದಾನೆ. "ಅವನನ್ನು ನೀನು ತಿಳಿದುಕೋ ಮತ್ತು ಬೇರೆಯವನನ್ನು ಸೃಷ್ಟಿಕರ್ತೃವೆಂದು ಅಂಗೀಕರಿಸಬೇಡ." (೧)

ಈ ಸಮಸ್ತ ಜಗತ್ತೂ ಸೃಷ್ಟಿಗೆ ಮೊದಲು ಅಂಧಕಾರದಿಂದ ಆವೃತವಾಗಿ, ರಾತ್ರಿಯ ರೂಪದಲ್ಲಿ ತಿಳಿಯಲು ಶಕ್ಯವಿಲ್ಲದಂತೆ, ಅವ್ಯಕ್ತರೂಪದಲ್ಲಿ, 'ತುಚ್ಛ'ವಾಗಿ-ಎಂದರೆ-ಅನಂತನಾದ ಪರಮೇಶ್ವರನ ಮುಂದೆ ಏಕದೇಶೀಯವಾಗಿ ಆಚ್ಛಾದಿತವಾಗಿದ್ದಿತು. ಆಮೇಲೆ ಪರಮೇಶ್ವರನು ತನ್ನ ಸಾಮರ್ಥ್ಯದಿಂದ ಸರ್ವಜಗತ್ತನ್ನೂ ಕಾರಣರೂಪದಿಂದ ಕಾರ್ಯರೂಪವಾಗಿ ಮಾಡಿದನು. (೨)

ಓ ಮಾನವರೇ! ಯಾವನು ಸೂರ್ಯನೇ ಮೊದಲಾದ ಸಮಸ್ತ ತೇಜಸ್ವೀ ಪದಾರ್ಥಗಳಿಗೂ ಆಧಾರನಾಗಿದ್ದಾನೋ ಮತ್ತು ಯಾವನು ಈ ಯಾವ ಜಗತ್ತು ಉತ್ಪನ್ನವಾಗಿದೆಯೋ ಮತ್ತು ಉತ್ಪನ್ನವಾಗುವುದೋ, ಅದರ ಏಕಮಾತ್ರ "ಅದ್ವಿತೀಯ

ಪತಿಯಾಗಿದ್ದಾನೋ," ಆ ಪರಮಾತ್ಮನು ಈ ಜಗತ್ತಿನ ಉತ್ಪತ್ತಿಗೆ ಮೊದಲೂ ಅಸ್ತಿತ್ವದಲ್ಲಿದ್ದನು. ಮತ್ತು ಯಾವನು ಪೃಥಿವಿಯಿಂದಾರಂಭಿಸಿ ಸೂರ್ಯನವರೆಗಿನ ಜಗತ್ತನ್ನು ಉತ್ಪನ್ನ ಮಾಡಿದ್ದಾನೋ, ಆ ಪರಮಾಪ್ತ ದೇವನ ಭಕ್ತಿಯನ್ನು ಪ್ರೇಮದಿಂದ ಮಾಡುತ್ತಾ ಹೋಗೋಣ. (೩)

ಹೇ ಮಾನವರೇ! ಯಾವನು ಎಲ್ಲದರಲ್ಲಿಯೂ ಪೂರ್ಣನಾಗಿರುವ ಪುರುಷನಾಗಿದ್ದಾನೋ, ಮತ್ತು ಯಾವನು ನಾಶರಹಿತವಾದ ಕಾರಣದ, ಎಂದರೆ ಪ್ರಕೃತಿಯ ಮತ್ತು ಜೀವನ ಸ್ವಾಮಿಯಾಗಿದ್ದಾನೋ, ಯಾವನು ಪೃಥಿವಿಯೇ ಮೊದಲಾದ ಜಡವಸ್ತುಗಳಿಂದಲೂ ಮತ್ತು ಜೀವನಿಂದಲೂ ಬೇರೆಯಾಗಿದ್ದಾನೋ, ಆ ಪುರುಷನೇ ಈ ಭೂತ, ಭವಿಷ್ಯತ್ ಮತ್ತು ವರ್ತಮಾನದಲ್ಲಿರುವ ಜಗತ್ತಿನ ನಿರ್ಮಾಪಕನಾಗಿದ್ದಾನೆ. (೪)

ಯಾವ ಪರಮಾತ್ಮನ ರಚನೆಯಿಂದ ಈ ಪೃಥಿವಿಯೇ ಮೊದಲಾದ ಭೂತಗಳೂ, ದೇಹಧಾರೀ ಪ್ರಾಣಿಗಳೂ ಉತ್ಪನ್ನ ವಾಗುತ್ತವೋ, ಯಾವನಿಂದ ಜೀವಿಸುತ್ತವೋ ಮತ್ತು ಯಾವನಲ್ಲಿ ಪ್ರಳಯವನ್ನು ಹೊಂದುತ್ತವೋ, ಅವನು ಬ್ರಹ್ಮವಾಗಿದ್ದಾನೆ. 'ಅವನನ್ನು ತಿಳಿಯಲು ಇಚ್ಛಿಸಿರಿ.' (೫)

**ಜನ್ಮಾದ್ಯಸ್ಯ ಯತಃ ॥** (ಶಾರೀರಕ ಸೂತ್ರ:[೧]– ೧.೧.೨)

ಯಾವುದರಿಂದ ಈ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯವಾಗುತ್ತದೋ, ಆ ಬ್ರಹ್ಮವೇ ತಿಳಿಯಲರ್ಹವಾಗಿದೆ.

**ಪ್ರಶ್ನೆ** :– ಈ ಜಗತ್ತು ಪರಮಾತ್ಮನಿಂದ ಉತ್ಪನ್ನವಾಗಿದೆಯೋ ಅಥವಾ ಬೇರೆಯವನಿಂದಲೋ?

**ಉತ್ತರ**:– ನಿಮಿತ್ತಕಾರಣನಾದ ಪರಮಾತ್ಮನಿಂದ ಉತ್ಪನ್ನವಾಗಿದೆ. ಆದರೆ ಪ್ರಕೃತಿ ಇದರ ಉಪಾದಾನಕಾರಣವಾಗಿದೆ. (ನಿಮಿತ್ತಕಾರಣನೆಂದರೆ ರಚಿಸುವವನು ; ಉಪಾದಾನ ಕಾರಣವೆಂದರೆ ರೂಪಾಂತರ ಹೊಂದುವ ಜಡದ್ರವ್ಯ.)

**ಪ್ರಶ್ನೆ** :– ಪ್ರಕೃತಿಯನ್ನು ಪರಮೇಶ್ವರನು ಉತ್ಪನ್ನಮಾಡಲಿಲ್ಲವೇನು?

**ಉತ್ತರ**:– ಇಲ್ಲ. 'ಅದು ಅನಾದಿಯಾಗಿದೆ.'

**ಪ್ರಶ್ನೆ**:– 'ಅನಾದಿ'–ಎಂದು ಯಾವುದನ್ನು ಹೇಳುತ್ತಾರೆ? ಮತ್ತು ಎಷ್ಟು ಪದಾರ್ಥಗಳು 'ಅನಾದಿ'ಗಳಾಗಿವೆ?

**ಉತ್ತರ**:– ಈಶ್ವರ, ಜೀವ ಮತ್ತು ಜಗತ್ತಿನ (ಉಪಾದಾನ) ಕಾರಣ–ಈ ಮೂರೂ ಅನಾದಿಗಳಾಗಿವೆ. (ಯಾವುದಕ್ಕೆ ಬೇರೆ ಯಾವ ಉಪಾದಾನಕಾರಣವೂ, ಆದಿಯೂ ಇಲ್ಲವೋ, ಅದು 'ಅನಾದಿ'.)

**ಪ್ರಶ್ನೆ**:– ಇದಕ್ಕೆ ಪ್ರಮಾಣವೇನಿದೆ?

**ಉತ್ತರ**:– **ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।**

**ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ ನಶ್ನನ್ನನ್ಯೋ ಅಭಿಚಾಕಶೀತಿ ॥ ೧ ॥** (ಋಗ್ವೇದ:– ೧.೧೬೪.೨೦)

**ಶಾಶ್ವತೀಭ್ಯಃ ಸಮಾಭ್ಯಃ ॥ ೨ ॥** (ಯಜು:– ೪೦.೮)

(ದ್ವಾ) ಬ್ರಹ್ಮ ಮತ್ತು ಜೀವ – ಎಂಬ ಯಾವ ಎರಡು (ತತ್ತ್ವಗಳು) ಇವೆಯೋ, ಅವು, (ಸುಪರ್ಣಾ) ಚೇತನತ್ವ ಮತ್ತು ಪಾಲನ–ಮೊದಲಾದ ಗುಣಗಳಿಂದ ಒಂದೇ ಬಗೆಯವೋ, (ಸಯುಜಾ) ವ್ಯಾಪ್ಯ–ವ್ಯಾಪಕ ಭಾವದಿಂದ ಜೊತೆಯಲ್ಲೇ ಇರುವಂತಹವೂ, (ಸಖಾಯಾ) ಪರಸ್ಪರ ಮಿತ್ರತಾಯುಕ್ತವೂ, ಸನಾತನವೂ, ಅನಾದಿಯೂ ಆಗಿವೆ. ಮತ್ತು, (ಸಮಾನಂ) ಅಂತಹದೇ, (ವೃಕ್ಷಂ) ಅನಾದಿಮೂಲರೂಪವಾದ ಕಾರಣವನ್ನು ಮತ್ತು ಶಾಖಾರೂಪವಾದ ಕಾರ್ಯವನ್ನೂ ಹೊಂದಿರುವ ವೃಕ್ಷ – ಎಂದರೆ, ಯಾವುದು ಸ್ಥೂಲವಾಗಿ, ಪ್ರಳಯದಲ್ಲಿ ಛಿನ್ನ–ಭಿನ್ನವಾಗಿ ಹೋಗುತ್ತದೋ, ಅದು ಮೂರನೆಯ ಅನಾದಿ ಪದಾರ್ಥವಾಗಿದೆ. ಈ ಮೂರರ ಗುಣ–ಕರ್ಮ–ಸ್ವಭಾವಗಳೂ ಕೂಡ ಅನಾದಿಗಳಾಗಿವೆ. ಈ ಜೀವ–ಬ್ರಹ್ಮದಲ್ಲಿ ಒಬ್ಬನಾದ ಯಾವ ಜೀವನಿದ್ದಾನೋ, ಅವನು ಈ ವೃಕ್ಷರೂಪವಾದ ಜಗತ್ತಿನಲ್ಲಿ ಪಾಪ–ಪುಣ್ಯಯುಕ್ತವಾದ ಫಲಗಳನ್ನು (ಸ್ವಾದು ಅತ್ತಿ)

---

೧. ಇದಕ್ಕೆ ವೇದಾಂತ ದರ್ಶನ, ಬ್ರಹ್ಮಸೂತ್ರ ಮೊದಲಾದ ಹೆಸರುಗಳೂ ಇವೆ.–ಸಂ

ಒಳ್ಳೆಯ ರೀತಿಯಲ್ಲಿ ಭುಂಜಿಸುತ್ತಾನೆ. ಮತ್ತು ಎರಡನೆಯವನಾದ ಪರಮಾತ್ಮನು ಕರ್ಮಗಳ ಫಲಗಳನ್ನು (ಅನಶ್ನನ್) ಭಂಜಿಸದೆ, ನಾಲ್ಕೂ ಕಡೆಯೂ-ಎಂದರೆ ಒಳಗೆ-ಹೊರಗೆ ಮೇಲೆ-ಕೆಳಗೆ ಎಲ್ಲೆಡೆಯೂ ಪ್ರಕಾಶಮಾನನಾಗಿದ್ದಾನೆ. "ಜೀವನಿಂದ ಈಶ್ವರನೂ, ಈಶ್ವರನಿಂದ ಜೀವನೂ ಮತ್ತು ಇಬ್ಬರಿಂದ ಪ್ರಕೃತಿಯೂ ಭಿನ್ನಸ್ವರೂಪವಾಗಿವೆ. ಮೂರೂ ಅನಾದಿಗಳಾಗಿವೆ." (೧).

(ಶಾಶ್ವತೀ) ಎಂದರೆ- ಅನಾದಿಯಾದ, ಸನಾತನವಾದ ಜೀವರೆಂಬ ಪ್ರಜಾವರ್ಗಕ್ಕಾಗಿ, ವೇದಗಳ ಮೂಲಕ ಪರಮಾತ್ಮನು ಸಕಲ ವಿದ್ಯೆಗಳನ್ನೂ ಬೋಧಿಸಿದ್ದಾನೆ. (೨)

**ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸ್ವರೂಪಾಃ ।**

**ಅಜೋ ಹ್ಯೇಕೋ ಜುಷಮಾಣೋಽನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ ॥**

ಇದು ಶ್ವೇತಾಶ್ವತರ ಉಪನಿಷತ್ತಿನ (೪.೫) ವಚನವಾಗಿದೆ. ಪ್ರಕೃತಿ, ಜೀವ ಮತ್ತು ಪರಮಾತ್ಮ-ಈ ಮೂವರೂ 'ಅಜ'ರು -ಎಂದರೆ, ಯಾವ ತತ್ತ್ವಗಳಿಗೆ ಎಂದೂ ಜನ್ಮವಿಲ್ಲವೋ, ಮತ್ತು ಎಂದಿಗೂ ಜನ್ಮತಾಳುವುದಿಲ್ಲವೋ, ಆ ತತ್ತ್ವಗಳು; ಎಂದರೆ - "ಈ ಮೂರೂ ಸಮಸ್ತ ಜಗತ್ತಿನ ಕಾರಣಗಳು." ಇವಕ್ಕೆ ಯಾವದೇ ಕಾರಣವೂ ಇಲ್ಲ. ಈ ಅನಾದಿ ಪ್ರಕೃತಿಯ ಭೋಗವನ್ನು, ಅನಾದಿ ಜೀವನು ಅನುಭವಿಸುತ್ತಾ ಸಿಕ್ಕಿಕೊಳ್ಳುತ್ತಾನೆ. ಮತ್ತು ಅದರಲ್ಲಿ ಪರಮಾತ್ಮನು ಸಿಕ್ಕಿಕೊಳ್ಳುವುದಿಲ್ಲ. ಮತ್ತು ಅದರ ಭೋಗವನ್ನೂ ಕೂಡ ಅನುಭವಿಸುವುದಿಲ್ಲ. ಈಶ್ವರನ ಮತ್ತು ಜೀವನ ಲಕ್ಷಣವನ್ನು ಈಶ್ವರನ ವಿಷಯದ (ಪ್ರಕರಣ)ದಲ್ಲಿ ಹೇಳಿಯೇ ಇದ್ದೇವೆ. ಈಗ ಪ್ರಕೃತಿಯ ಲಕ್ಷಣವನ್ನು ಬರೆಯುತ್ತೇವೆ:-

**ಸತ್ತ್ವ ರಜಸ್ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ ಪ್ರಕೃತೇರ್ಮಹಾನ್ ಮಹತೋಽಹಂಕಾರೋಽಹಂಕಾರಾತ್ಪಂಚ ತನ್ಮಾತ್ರಾಣ್ಯುಭಯ ಮಿಂದ್ರಿಯಂ ಪಂಚತನ್ಮಾತ್ರೇಭ್ಯಃ ಸ್ಥೂಲಭೂತಾನಿ ಪುರುಷ ಇತಿ ಪಂಚವಿಂಶತಿರ್ಗಣಃ ॥** (ಸಾಂಖ್ಯ:- ೧.೬೧)

**(ಸತ್ತ್ವ)** ಶುದ್ಧವಾದುದು; **(ರಜ)** ಮಧ್ಯಮವಾದುದು; **(ತಮಃ)** ಜಾಡ್ಯ- ಎಂದರೆ ಜಡಯುಕ್ತವಾದದು - ಈ ಮೂರು ವಸ್ತುಗಳೂ ಸೇರಿ ಯಾವ ಒಂದು ಸಾಮೂಹಿಕ ದ್ರವ್ಯವಿದೆಯೋ, ಅದಕ್ಕೆ ಪ್ರಕೃತಿಯೆಂದು ಹೆಸರು. ಅದರಿಂದ **ಮಹತ್ತತ್ತ್ವ** - ಎಂದರೆ **ಬುದ್ಧಿ**, ಅದರಿಂದ **ಅಹಂಕಾರ**, ಅದರಿಂದ **ಪಂಚತನ್ಮಾತ್ರೆಗಳು** - ಎಂದರೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಎಂಬ ಸೂಕ್ಷ್ಮ ಭೂತಗಳು, ಮತ್ತು ಹತ್ತು ಇಂದ್ರಿಯಗಳು ಮತ್ತು ಹನ್ನೊಂದನೆಯದಾದ ಮನಸ್ಸು, ಪಂಚತನ್ಮಾತ್ರೆಗಳಿಂದ ಪೃಥಿವೀ, ಅಪ್, ತೇಜಸ್, ವಾಯು, ಆಕಾಶ ಎಂಬ ಐದು ಭೂತಗಳು- ಈ ಇಪ್ಪತ್ತನಾಲ್ಕು; ಇಪ್ಪತ್ತೈದನೆಯವನು 'ಪುರುಷನು' - ಎಂದರೆ ಜೀವನು ಮತ್ತು ಪರಮೇಶ್ವರನು. ಇವುಗಳಲ್ಲಿ ಪ್ರಕೃತಿಯು ಮೂಲಕಾರಣ ಮತ್ತು ಮಹತ್ತತ್ತ್ವ, ಅಹಂಕಾರ ಹಾಗೂ ಐದು ಸೂಕ್ಷ್ಮ ಭೂತಗಳು ಪ್ರಕೃತಿಯ ಕಾರ್ಯಗಳೂ ಮತ್ತು ಇಂದ್ರಿಯಗಳು, ಮನಸ್ಸು ಮತ್ತು ಸ್ಥೂಲ ಭೂತಗಳ ಕಾರಣಗಳೂ ಆಗಿವೆ. 'ಪುರುಷನು' ಯಾವುದರ ಪ್ರಕೃತಿಯೂ, (ಉಪಾದಾನ ಕಾರಣವೂ) ಅಲ್ಲ; ಯಾವುದರ ಕಾರ್ಯವೂ ಅಲ್ಲ.

**ಪ್ರಶ್ನೆ :- ಸದೇವ ಸೋಮ್ಯೇದಮಗ್ರ ಅಸೀತ್ ॥ ೧ ॥** (ಛಾಂದೋಗ್ಯ:- ೬.೨.೧)

**ಅಸತ್ವಾ ಇದಮಗ್ರ ಆಸೀತ್ ॥ ೨ ॥** (ತೈತ್ತಿರೀಯ; ಬ್ರಹ್ಮಾನಂದ :- ೭)

**ಆತ್ಮೈವೇದಮಗ್ರ ಆಸೀತ್ ॥ ೩॥** (ಬೃಹದಾರಣ್ಯಕ :- ೧.೪.೧)

**ಬ್ರಹ್ಮ ವಾ ಇದಮಗ್ರ ಆಸೀತ್ ॥ ೪ ॥** (ಶತಪಥ :- ೧೧.೧.೧೧.೧)

ಇವು ಉಪನಿಷತ್ತುಗಳ ಮತ್ತು ಶತಪಥದ ವಚನಗಳಾಗಿವೆ. ಹೇ ಶ್ವೇತಕೇತೋ! ಈ ಸೃಷ್ಟಿಗೆ ಮುನ್ನ ಜಗತ್ತು ೧. ಸದ್ರೂಪವಾಗಿ, ೨. ಅಸದ್ರೂಪವಾಗಿ, ೩. ಆತ್ಮರೂಪವಾಗಿ, ಮತ್ತು ೪. ಬ್ರಹ್ಮರೂಪವಾಗಿ ಇದ್ದಿತು. ಆಮೇಲೆ -

**ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ॥** (ಛಾಂದೋಗ್ಯ:- ೬. ೨.೩)

**ಸೋಽಕಾಮಯತ ಬಹುಃ ಸ್ಯಾಂ ಪ್ರಜಾಯೇಯೇತಿ ॥** (ತೈತ್ತಿರೀಯ, ಬ್ರಹ್ಮ - ೬)

ಅದೇ ಪರಮಾತ್ಮನು ತನ್ನ ಇಚ್ಛೆಯಿಂದ ಬಹುರೂಪವಾಗಿ ಹೋಗಿದ್ದಾನೆ.

**ಸರ್ವಂ ಖಲ್ವಿದಂ ಬ್ರಹ್ಮನೇಹ ನಾನಾಽಸ್ತಿ ಕಿಂಚನ ।** [೨]

---

೨. ಇದು ಯಾವ ಪ್ರಾಮಾಣಿಕ ಉಪನಷತ್ತಿನ ಪಾಠವೂ ಅಲ್ಲ. -ಯು.ಮೀ.

ಇದು ಕೂಡ ಉಪನಿಷತ್ತಿನ ವಚನವಾಗಿದೆ. ಯಾವ ಈ ಜಗತ್ತಿದೆಯೋ, ಅದೆಲ್ಲವೂ ನಿಶ್ಚಯಪೂರ್ವಕವಾಗಿ ಬ್ರಹ್ಮವಾಗಿದೆ, ಅದರಲ್ಲಿ ಬೇರೆಯ, ನಾನಾಪ್ರಕಾರದ ಪದಾರ್ಥಗಳು ಏನೇನೂ ಇಲ್ಲ. ಆದರೆ – ಎಲ್ಲವೂ ಬ್ರಹ್ಮರೂಪವಾಗಿದೆ.

**ಉತ್ತರ:–** ಈ ವಚನಗಳಿಗೆ ಅಪಾರ್ಥವನ್ನೇಕೆ ಮಾಡುತ್ತೀರಿ? ಏಕೆಂದರೆ, ಅದೇ ಉಪನಿಷತ್ತುಗಳಲ್ಲಿ :–

**(ಏವಮೇವ ಖಲು) ಸೋಮ್ಯಾನ್ನೇನ ಶುಂಗೇನಾಪೋ ಮೂಲಮನ್ವಿಚ್ಛಾದ್ಭಿಃ ಸೋಮ್ಯ ಶುಂಗೇನ ತೇಜೋಮೂಲಮನ್ವಿಚ್ಛ ತೇಜಸಾ ಸೋಮ್ಯ ಶುಂಗೇನ ಸನ್ಮೂಲ ಮನ್ವಿಚ್ಛ ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ॥**

(ಛಾಂದೋಗ್ಯ:– ೬.೮.೪)

ಹೇ ಶ್ವೇತಕೇತೋ! ಅನ್ನರೂಪವಾದ ಪೃಥಿವೀ – ಎಂಬ ಕಾರ್ಯದಿಂದ ಜಲವೆಂಬ ಮೂಲ ಕಾರಣವನ್ನು ನೀನು ತಿಳಿದುಕೋ. ಕಾರ್ಯರೂಪವಾದ ಜಲದಿಂದ ತೇಜಸ್ಸೆಂಬ ಮೂಲವನ್ನೂ, ಮತ್ತು ತೇಜಸ್ಸೆಂಬ ಕಾರ್ಯದಿಂದ, ಯಾವ ನಿತ್ಯ ಪ್ರಕೃತಿಯಿದೆಯೋ ಆ ಸದ್ರೂಪವಾದ ಕಾರಣವನ್ನೂ ತಿಳಿದುಕೋ, ಈ ಸತ್ಯಸ್ವರೂಪವಾದ ಪ್ರಕೃತಿಯೇ ಸಮಸ್ತ ಜಗತ್ತಿನ ಮೂಲಗೃಹ ಮತ್ತು ನೆಲೆಸುವ ಸ್ಥಾನವಾಗಿದೆ. ಈ ಸರ್ವಜಗತ್ತೂ, ಸೃಷ್ಟಿಗೆ ಮುನ್ನ 'ಅಸತ್ತಿನ' ಹಾಗೆ ಇದ್ದಿತು; ಮತ್ತು ಜೀವಾತ್ಮನೂ, ಪ್ರಕೃತಿಯೂ, ಬ್ರಹ್ಮದಲ್ಲಿ 'ಲೀನವಾಗಿದ್ದರು'; ಅಭಾವವಿರಲಿಲ್ಲ. ಮತ್ತು ಯಾವ **"ಸರ್ವಂ ಖಲು"** ಎಂಬ ವಚನವಿದೆಯೋ, ಅದು – "ಎಲ್ಲಿನದೋ ಇಟ್ಟಿಗೆ; ಎಲ್ಲಿನದೋ ಕಲ್ಲು; ಮಾಟಗಾರ್ತಿ ಮನೆ ಕಟ್ಟಿದಳು"– ಎನ್ನುವಂತಹ ಲೀಲೆಯಾಗಿದೆ. ಏಕೆಂದರೆ :–

**ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ ॥** (ಛಾಂದೋಗ್ಯ:– ೩.೧೪.೧)

ಮತ್ತು :– **ನೇಹ ನಾನಾಽಸ್ತಿ ಕಿಂಚನ** ॥ – ಇದು ಕಠವಲ್ಲಿಯ (ಕಠ:– ೨.೪.೧೧) ವಚನವಾಗಿದೆ. ಹೇಗೆ ಶರೀರದ ಅಂಗಗಳು ಯಾವವರೆಗೆ ಶರೀರದೊಂದಿಗೆ ಇರುತ್ತವೋ, ಆವರೆಗೆ ಕಾರ್ಯೋಪಯೋಗಿಗಳೂ, ಮತ್ತು ಬೇರೆಯಾಗುವುದರಿಂದ ನಿರುಪಯೋಗವೂ ಆಗಿ ಹೋಗುತ್ತವೋ, ಹಾಗೆಯೇ ಪ್ರಕರಣದಲ್ಲಿನ ವಾಕ್ಯಗಳು 'ಸಾರ್ಥಕವೂ' ಮತ್ತು ಪ್ರಕರಣದಿಂದ ಬೇರೆ ಮಾಡುವುದರಿಂದ, ಅಥವಾ ಬೇರೆಯೊಂದರ ಜೊತೆಗೆ ಸೇರಿಸುವುದರಿಂದ 'ಅಪಾರ್ಥಕರವೂ' ಆಗಿ ಹೋಗುತ್ತವೆ. ಕೇಳಿರಿ. ಇದರ 'ಅರ್ಥ'ವಿದು. ಹೇ ಜೀವ! ನೀನು ಬ್ರಹ್ಮದ ಉಪಾಸನೆ ಮಾಡು. ಯಾವ ಬ್ರಹ್ಮದಿಂದ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಜೀವನ[3] ನಡೆಯುತ್ತದೋ, ಯಾವನು ನಿರ್ಮಿಸುವುದರಿಂದ ಮತ್ತು ಧಾರಣ ಮಾಡುವುದರಿಂದ ಈ ಸಮಸ್ತ ಜಗತ್ತೂ ಅಸ್ತಿತ್ವಕ್ಕೆ ಬಂದಿದೆಯೋ ಅಥವಾ ಬ್ರಹ್ಮನೊಂದಿಗೆ ಸಹಚಾರಿಯಾಗಿದೆಯೋ, "ಅದನ್ನು ಬಿಟ್ಟು, ಬೇರೆಯವರ ಉಪಾಸನೆಯನ್ನು ಮಾಡಬಾರದು." ಈ ಚೇತನಮಾತ್ರವೂ, ಅಖಂಡವೂ, ಏಕರಸವೂ ಆಗಿರುವ ಬ್ರಹ್ಮರೂಪದಲ್ಲಿ ನಾನವಸ್ತುಗಳ ಮಿಶ್ರಣವಿಲ್ಲ. ಆದರೆ ಇವೆಲ್ಲವೂ ಬೇರೆ ಬೇರೆ ಸ್ವರೂಪದಲ್ಲಿ, ಪರಮೇಶ್ವರನ ಆಧಾರದಲ್ಲಿ ನೆಲೆಗೊಂಡಿವೆ.

**ಪ್ರಶ್ನೆ** :– 'ಜಗತ್ತಿನ ಕಾರಣ'ಗಳು ಎಷ್ಟು ಇರುತ್ತವೆ.

**ಉತ್ತರ:–** ಮೂರು. ಒಂದನೆಯದು 'ನಿಮಿತ್ತ', ಎರಡನೆಯದು 'ಉಪಾದಾನ', ಮೂರನೆಯದು 'ಸಾಧಾರಣ'. ಯಾವನು ನಿರ್ಮಿಸಿದರೆ ಮಾತ್ರ ಏನಾದರೂ ರಚನೆ ಆಗುತ್ತದೋ, ನಿರ್ಮಿಸದಿದ್ದರೆ ಏನೂ ಆಗುವುದಿಲ್ಲವೋ, ಅವನನ್ನು **ನಿಮಿತ್ತಕಾರಣ**ವೆನ್ನುತ್ತಾರೆ. ಅವನು ತಾನು ಸ್ವತಃ ನಿರ್ಮಿತನಾಗುವುದಿಲ್ಲ; ಬೇರೆ ವಸ್ತುಗಳನ್ನು ಬೇರೆಯ ರೂಪಕ್ಕೆ ತಂದುಬಿಡುತ್ತಾನೆ. ಯಾವುದು ಇಲ್ಲದಿದ್ದರೆ ಏನೊಂದೂ ನಿರ್ಮಿತವಾಗುವುದಿಲ್ಲವೋ, ಯಾವುದು ಸ್ವತಃ ಬೇರೆಯ ಸ್ಥಿತಿ ಹೊಂದಿ, ರೂಪಗೊಳ್ಳುತ್ತದೋ ಮತ್ತು ಆ ರೂಪದಲ್ಲಿ ನಾಶವನ್ನೂ ಹೊಂದುತ್ತದೋ, ಅದನ್ನು ಎರಡನೆಯದಾದ **ಉಪಾದಾನಕಾರಣ**ವೆನ್ನುತ್ತಾರೆ. ಯಾವುದು ನಿರ್ಮಾಣದ ಸಾಧನವೂ ಹಾಗೂ, 'ಸಾಧಾರಣ ನಿಮಿತ್ತವೂ' ಆಗಿರುತ್ತದೋ, ಅದನ್ನು ಮೂರನೆದಾದ **ಸಾಧಾರಣಕಾರಣ**ವೆನ್ನುತ್ತಾರೆ. 'ನಿಮಿತ್ತ ಕಾರಣಗಳು' ಎರಡು ರೀತಿಯವಿರುತ್ತವೆ. ಒಂದು ಸಮಸ್ತ ಸೃಷ್ಟಿಯನ್ನೂ (ಉಪಾದಾನ) ಕಾರಣದಿಂದ ನಿರ್ಮಿಸುವ, ಧರಿಸುವ ಮತ್ತು ಪ್ರಳಯ ಮಾಡುವ ಹಾಗೂ ಎಲ್ಲದರ ವ್ಯವಸ್ಥೆಯನ್ನೂ ಇಡುವ **ಮುಖ್ಯ ನಿಮಿತ್ತಕಾರಣ ಪರಮಾತ್ಮನು**. ಪರಮೇಶ್ವರನ ಸೃಷ್ಟಿಯಲ್ಲಿನಿಂದ ಪದಾರ್ಥಗಳನ್ನು ತೆಗೆದುಕೊಂಡು ಅನೇಕ ವಿಧದ ಬೇರೆ ಬೇರೆ ಕಾರ್ಯಗಳನ್ನು ಮಾಡುವ **ಸಾಧಾರಣನಿಮಿತ್ತಕಾರಣ ಜೀವನು**. ಉಪಾದಾನ ಕಾರಣವು ಪ್ರಕೃತಿ. ಯಾವುದನ್ನು ಸಮಸ್ತ ಜಗತ್ತನ್ನೂ ನಿರ್ಮಿಸುವು

---

೩. ಇಲ್ಲಿ ಪ್ರಕರಣಾನುಸಾರ 'ಜೀವನ' ಎಂಬ ಸ್ಥಳದಲ್ಲಿ 'ಪ್ರಳಯ' ಎಂದಿರಬೇಕಿತ್ತು. –ಯು.ಮೀ.

ಸಾಮಗ್ರಿ-ಎನ್ನುತ್ತಾರೋ, ಆ ಪರಮಾಣು ಸಮೂಹ; ಅದು ಜಡವಾಗಿರುವುದರಿಂದ ತನ್ನಷ್ಟಕ್ಕೆ ತಾನೇ ನಿರ್ಮಿತವೂ ಆಗಲಾರದು; ಕೆಡಲಾರದು. ಆದರೆ ಬೇರೆಯವರು ರಚಿಸುವುದರಿಂದ ರಚಿತವಾಗುತ್ತದೆ. ಮತ್ತು ನಾಶಮಾಡುವುದರಿಂದ ನಾಶವಾಗುತ್ತದೆ. ಒಂದೊಂದು ಕಡೆ, ಜಡದ ನಿಮಿತ್ತದಿಂದ ಜಡ ವಸ್ತುವೂ ಕೂಡ ನಿರ್ಮಿತವಾಗುವುದೂ ಉಂಟು; ನಾಶ ಹೊಂದುವುದೂ ಉಂಟು. ಉದಾಹರಣೆಗೆ, ಪರಮಾತ್ಮನಿಂದ ರಚಿತವಾದ ಬೀಜಗಳು ಭೂಮಿಯಲ್ಲಿ ಬೀಳುವುದರಿಂದ ಮತ್ತು ನೀರನ್ನು ಹೊಂದುವುದರಿಂದ ವೃಕ್ಷಾಕಾರವಾಗಿ ಹೋಗುತ್ತವೆ ಮತ್ತು ಬೆಂಕಿಯೇ ಮೊದಲಾದ ಜಡದ ಸಂಯೋಗದಿಂದ ನಾಶವಾಗಿಯೂ ಹೋಗುತ್ತವೆ. ಆದರೆ **"ನಿಯಮ ಪೂರ್ವಕವಾಗಿ ಇವುಗಳ ಆಗುವಿಕೆ ಮತ್ತು ಕೆಡುವಿಕೆ ಪರಮೇಶ್ವರನಿಗೆ ಮತ್ತು ಜೀವನಿಗೆ ಅಧೀನವಾಗಿರುತ್ತವೆ."** ಮತ್ತು ಯಾವಾಗ ಯಾವುದಾದರೂ ವಸ್ತು ರಚಿಸಲ್ಪಡುತ್ತದೋ, ಆಗ ಯಾವ ಯಾವ ಸಾಧನಗಳಿಂದ, ರಚಿತವಾಗುವವೋ; ಅವು, ಎಂದರೆ-**'ಜ್ಞಾನ'**, **'ದರ್ಶನ'**, **'ಬಲ'**, **'ಕೈ'** ಹಾಗೂ ನಾನಾ ವಿಧದ ಇತರ ಸಲಕರಣೆಗಳು, ಮತ್ತು **'ದಿಕ್ಕು'**, **'ಕಾಲ'** ಮತ್ತು **'ಆಕಾಶ'** - ಇವು **ಸಾಧಾರಣಕಾರಣ**ಗಳಾಗಿವೆ. ಉದಾಹರಣೆಗೆ, ಮಡಕೆಯನ್ನು ಮಾಡುವವನಾದ ಕುಂಬಾರನು ನಿಮಿತ್ತ; ಮಣ್ಣು ಉಪಾದಾನ ಮತ್ತು ತಿರುಹುಗೋಲು, ಚಕ್ರ ಮೊದಲಾದುವು ಸಾಮಾನ್ಯ ನಿಮಿತ್ತಗಳು; 'ದಿಕ್ಕು', 'ಕಾಲ', 'ಆಕಾಶ', 'ಪ್ರಕಾಶ', 'ಕಣ್ಣು', 'ಕೈ', 'ಜ್ಞಾನ', ಕ್ರಿಯೆ ಮೊದಲಾದುವು ನೈಮಿತ್ತಿಕ - ಸಾಧಾರಣ ಕಾರಣಗಳು; ಇವೆಲ್ಲಾ ಒಂದೊಂದು ದೃಷ್ಟಿಯಿಂದ ನಿಮಿತ್ತಕಾರಣಗಳೂ ಕೂಡ ಆಗಿರುತ್ತವೆ. **"ಈ ಮೂರೂ ಕಾರಣಗಳಿಲ್ಲದೆ, ಯಾವ ವಸ್ತುವೂ ಆಗಲಾರದು; ಕೆಡಲೂಲಾರದು."**[೪]

**ಪ್ರಶ್ನೆ :-** ನವೀನ ವೇದಾಂತಿಗಳು ಕೇವಲ ಪರಮೇಶ್ವರನನ್ನೇ ಜಗತ್ತಿನ ಅಭಿನ್ನ ನಿಮಿತ್ತೋಪಾದಾನ ಕಾರಣವೆಂದು ಅಂಗೀಕರಿಸುತ್ತಾರೆ:

**ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ॥** (ಮುಂಡಕ :- ೧.೧.೭)

ಇದು ಉಪನಿಷತ್ತಿನ ವಚನವಾಗಿದೆ. ಹೇಗೆ ಜೇಡರ ಹುಳುವು ಹೊರಗಿನಿಂದ ಯಾವ ಪದಾರ್ಥವನ್ನೂ ತೆಗೆದುಕೊಳ್ಳದೆ, ತನ್ನ ಒಳಗಿನಿಂದಲೇ ತಂತುವನ್ನು ಹೊರತಂದು, ಬಲೆಯನ್ನು ನೇಯ್ದು, ತಾನೇ ಅದರಲ್ಲಿ ಆಡುತ್ತದೋ, ಹಾಗೆ ಬ್ರಹ್ಮವು ತನ್ನೊಳಗಿನಿಂದಲೇ ಜಗತ್ತನ್ನು ರಚಿಸಿ, ತಾನು ಜಗದಾಕಾರವಾಗಿ, ತಾನೇ ಆಟವಾಡುತ್ತಿದೆ. ಆ ಬ್ರಹ್ಮವು ನಾನು ಬಹುರೂಪವಾಗಿ, ಅಂದರೆ-ಜಗದಾಕಾರವಾಗಿ ಹೋಗುವೆ-ಎಂದು ಇಚ್ಛಿಸುತ್ತಾ ಮತ್ತು ಕಾಮನೆಮಾಡುತ್ತಾ, ಸಂಕಲ್ಪ ಮಾತ್ರದಿಂದ ಸಮಸ್ತ ಜಗದ್ರೂಪವಾಗಿ ಹೋಯಿತು. ಏಕೆಂದರೆ:-

**ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ॥**

ಇದು ಮಾಂಡೋಕ್ಯೋಪನಿಷತ್ತಿನ ಮೇಲೆ (ಗೌಡಪಾದೀಯ) ಕಾರಿಕೆ (೩೧.) ಯಾಗಿದೆ. ಯಾವುದು ಮೊದಲು ಇರುವುದಿಲ್ಲವೋ, ಕೊನೆಯಲ್ಲಿಯೂ ಇರುವುದಿಲ್ಲರೋ, ಅದು ವರ್ತಮಾನದಲ್ಲಿಯೂ ಇಲ್ಲ. ಆದರೆ-ಸೃಷ್ಟಿಯ ಆದಿಯಲ್ಲಿ ಜಗತ್ತಿರಲಿಲ್ಲ; ಬ್ರಹ್ಮವಿದ್ದಿತು. ಪ್ರಳಯದ ಸ್ಥಿತಿಯಲ್ಲಿ ಜಗತ್ತಿರುವುದಿಲ್ಲ; ಮತ್ತು ಕೇವಲ ಬ್ರಹ್ಮವಿರುವುದು . ಹೀಗಿರುವಾಗ, ವರ್ತಮಾನದಲ್ಲಿ ಸಮಸ್ತ ಜಗತ್ತೂ ಬ್ರಹ್ಮವೇತಕ್ಕಲ್ಲ?

**ಉತ್ತರ:** ನಿಮ್ಮ ಹೇಳಿಕೆಗೆ ಅನುಸಾರವಾಗಿ, ಜಗತ್ತಿಗೆ ಉಪಾದಾನ ಕಾರಣ ಬ್ರಹ್ಮವಾಗಿರುವುದಾದರೆ, ಅದು ಪರಿಣಾಮಿಯೂ, ಅವಸ್ಥಾಂತರವನ್ನುಳ್ಳ ವಿಕಾರಿಯೂ ಆಗಿ ಹೋಗುವುದು. ಮತ್ತು ಉಪಾದಾನಕಾರಣದ ಗುಣ-ಕರ್ಮ-ಸ್ವಭಾವಗಳು ಕಾರ್ಯದಲ್ಲಿಯೂ ಬರುತ್ತವೆ.

**ಕಾರಣಗುಣಪೂರ್ವಕಃ ಕಾರ್ಯಗುಣೋ ದೃಷ್ಟಃ ॥** (ವೈಶೇಷಿಕ :- ೨.೧. ೨೪)

ಉಪಾದಾನಕಾರಣದಲ್ಲಿರುವಂತಹ ಗುಣಗಳು ಕಾರ್ಯದಲ್ಲಿರುತ್ತವೆ. ಹಾಗಾದರೆ, ಬ್ರಹ್ಮವು ಸಚ್ಚಿದಾನಂದಸ್ವರೂಪ; ಜಗತ್ತು ಕಾರ್ಯರೂಪದಿಂದ ಅಸತ್ತು, ಜಡ ಮತ್ತು ಆನಂದರಹಿತ. ಬ್ರಹ್ಮವು ಅಜ; ಜಗತ್ತು ಉತ್ಪನ್ನವಾಗಿದೆ. ಬ್ರಹ್ಮವು ಅದೃಶ್ಯ; ಜಗತ್ತು ದೃಶ್ಯವಾಗಿದೆ. ಬ್ರಹ್ಮವು ಅಖಂಡ; ಮತ್ತು ಜಗತ್ತು ಖಂಡರೂಪವಾಗಿದೆ. ಬ್ರಹ್ಮದಿಂದ ಪೃಥಿವೀ- ಮೊದಲಾದ ಕಾರ್ಯ ಉತ್ಪನ್ನವಾಗುವುದಾದರೆ ಕಾರ್ಯರೂಪವಾದ ಪೃಥಿವೀ-ಮೊದಲಾದುವುಗಳಲ್ಲಿನ ಜಡತ್ವ ಮೊದಲಾದ ಗುಣಗಳು

೪. ಇದು ವೈದಿಕ ಸಿದ್ಧಾಂತ; ಅಕಾಟ್ಯ! ಇದನ್ನು ತ್ಯಜಿಸಿದಾಗಲೇ ಚಮತ್ಕಾರ, ಗಾಳಿ ಗೋಪುರಗಳಿಂದ ಕೂಡಿದ, ತಲೆ-ಬಾಲಗಳಿಲ್ಲದ, ತರ್ಕಹೀನ, ಅಯಥಾರ್ಥ, ಅವೈದಿಕ ಪೌರಾಣಿಕ ಕಥಾನಕ ರೂಪೀ ಸಿದ್ಧಾಂತಗಳು ಜನರ ಮನಸ್ಸಿನಲ್ಲಿ ಮನೆ ಮಾಡಿಕೊಂಡವು. -ಸಂ.

ಬ್ರಹ್ಮದಲ್ಲಿಯೂ ಇರಬೇಕಾದೀತು. ಎಂದರೆ-ಹೇಗೆ ಪೃಥಿವೀ ಮೊದಲಾದುವು ಜಡವಾಗಿವೆಯೋ, ಹಾಗೆ ಬ್ರಹ್ಮವೂ ಜಡವಾಗಿ ಹೋಗಬೇಕು. ಮತ್ತು ಹೇಗೆ ಪರಮೇಶ್ವರನು ಚೇತನನಾಗಿದ್ದಾನೋ, ಹಾಗೆ ಪೃಥಿವೀ- ಮೊದಲಾದ ಕಾರ್ಯಗಳೂ ಚೇತನವಾಗಬೇಕು. ಮತ್ತು ಯಾವ ಜೇಡರ ಹುಳುವಿನ ದೃಷ್ಟಾಂತವನ್ನು ಕೊಟ್ಟಿರೋ, ಅದು ನಿಮ್ಮ ಮತದ ಸಾಧಕವಲ್ಲ; ಆದರೆ-ಬಾಧಕವಾಗಿದೆ. ಏಕೆಂದರೆ - ಆ ಜಡರೂಪ ಶರೀರವು ತಂತುವಿನ ಉಪಾದಾನ ಮತ್ತು ಜೀವಾತ್ಮನು ನಿಮಿತ್ತ ಕಾರಣವಾಗಿದ್ದಾನೆ. ಮತ್ತು ಇದೂ ಕೂಡ ಪರಮಾತ್ಮನ ಅದ್ಭುತ ರಚನೆಯ ಪ್ರಭಾವವಾಗಿದೆ. ಏಕೆಂದರೆ-ಬೇರೆ ಜಂತುವಿನ ಶರೀರದಿಂದ ಜೀವನು ತಂತುವನ್ನು ಹೊರತರಲಾರನು. ಹಾಗೆಯೇ ವ್ಯಾಪಕವಾಗಿರುವ ಬ್ರಹ್ಮವು ತನ್ನಲ್ಲಿ ವ್ಯಾಪ್ಯವಾಗಿರುವ ಪ್ರಕೃತಿಯಿಂದ, ಮತ್ತು ಪರಮಾಣು ಕಾರಣದಿಂದ ಸ್ಥೂಲ ಜಗತ್ತನ್ನು ನಿರ್ಮಿಸಿ, ಹೊರಗೆ ಸ್ಥೂಲರೂಪವನ್ನು ಸೃಜಿಸಿ, ತಾನು ಅದರಲ್ಲಿಯೇ ವ್ಯಾಪಕವಾಗಿ, ಸಾಕ್ಷೀಭೂತವಾಗಿ, ಆನಂದಮಯವಾಗಿ ರಾಜಿಸುತ್ತಿದೆ. ಮತ್ತು ಪರಮಾತ್ಮನು ನಾನು ಸಮಸ್ತ ಜಗತ್ತನ್ನೂ ನಿರ್ಮಿಸಿ ಪ್ರಸಿದ್ಧನಾಗುವೆನು-ಎಂದು 'ಈಕ್ಷಣ'-ಎಂದರೆ ದರ್ಶನವನ್ನು, ಆಲೋಚನೆ ಮತ್ತು ಕಾಮನೆಯನ್ನು ಮಾಡಿದನು-ಎನ್ನುವುದರ ಅರ್ಥವಿದು:- ಯಾವಾಗ ಜಗತ್ತು ಉತ್ಪನ್ನವಾಗುತ್ತದೋ, ಆಗಲೇ ಜೀವರ ವಿಚಾರ, ಜ್ಞಾನ, ಧ್ಯಾನ, ಉಪದೇಶ ಶ್ರವಣದಲ್ಲಿ ಪರಮೇಶ್ವರನು ಪ್ರಸಿದ್ಧನಾಗುತ್ತಾನೆ ಮತ್ತು ಬಹುಸ್ಥೂಲವಾದ ವಸ್ತುಗಳೊಂದಿಗೆ ವರ್ತಮಾನ ನಾಗಿರುತ್ತಾನೆ. ಯಾವಾಗ ಪ್ರಳಯವಾಗುತ್ತದೋ, ಆಗ ಪರಮೇಶ್ವರನನ್ನು ಹಾಗು ಮುಕ್ತ ಜೀವರನ್ನು ಬಿಟ್ಟು, ಅವನನ್ನು ಯಾವನೂ ತಿಳಿಯುವುದಿಲ್ಲ. ಮತ್ತು ಈ ಯಾವ ಕಾರಿಕೆಯಿದೆಯೋ, ಅದು ಭ್ರಮಮೂಲಕವಾದುದಾಗಿದೆ. ಏಕೆಂದರೆ-ಸೃಷ್ಟಿಯ ಆದಿಯಲ್ಲಿ, ಎಂದರೆ ಪ್ರಳಯದಲ್ಲಿ ಜಗತ್ತು ಪ್ರಸಿದ್ಧವಾಗಿರಲಿಲ್ಲ ಮತ್ತು ಸೃಷ್ಟಿಯ ಅಂತದಲ್ಲಿ, ಎಂದರೆ-ಪ್ರಳಯದ ಆರಂಭದಿಂದ, ಎಲ್ಲಿಯವರೆಗೆ ಎರಡನೆಯ ಸಾರಿ ಸೃಷ್ಟಿಯಾಗುವುದಿಲ್ಲವೋ, ಅಲ್ಲಿಯವರೆಗೂ ಕೂಡ, ಜಗತ್ತಿನ ಕಾರಣವು ಸೂಕ್ಷ್ಮ ವಾಗಿ, ಅಪ್ರಸಿದ್ಧವಾಗಿರುತ್ತದೆ. ಏಕೆಂದರೆ:-

**ತಮ ಅಸೀತ್ತಮಸಾ ಗೂಳ್ಹಮಗ್ರೇ ॥** (ಋಗ್ವೇದ:- ೧೦.೧೨೯.೩)

**ಆಸೀದಿದಂ ತಮೋಭೂತಮಪ್ರಜ್ಞಾತಮಲಕ್ಷಣಮ್ ।**

**ಅಪ್ರತರ್ಕ್ಯಮವಿಜ್ಞೇಯಂ ಪ್ರಸುಪ್ತಮಿವ ಸರ್ವತಃ ॥** (ಮನು:- ೧. ೫)

ಈ ಸಮಸ್ತ ಜಗತ್ತೂ ಸೃಷ್ಟಿಗೆ ಮುನ್ನ, ಪ್ರಳಯದಲ್ಲಿ ಅಂಧಕಾರದಿಂದ ಆವೃತವಾಗಿ, ಅಚ್ಛಾದಿತವಾಗಿದ್ದಿತು ಮತ್ತು ಪ್ರಳಯಾರಂಭದ ನಂತರವೂ ಹಾಗೆಯೇ ಇರುತ್ತದೆ. ಆ ಸಮಯದಲ್ಲಿ ಅದು ಯಾವನೂ ತಿಳಿಯಲು, ತರ್ಕದಲ್ಲಿ ತರಲು ಪ್ರಸಿದ್ಧವಾಗಿರುವ ಚಿಹ್ನೆಗಳಿಂದ ಕೂಡಿ ಇಂದ್ರಿಯಗಳ ಮೂಲಕ ಅರಿಯಲು ಯೋಗ್ಯವಾಗಿರಲಿಲ್ಲ ಮತ್ತು ಆಗಿರುವುದೂ ಇಲ್ಲ. ಆದರೆ-ವರ್ತಮಾನದಲ್ಲಿ ತಿಳಿಯಲ್ಪಡುತ್ತದೆ ಮತ್ತು ಪ್ರಸಿದ್ಧವಾಗಿರುವ ಚಿಹ್ನೆಗಳಿಂದ ಕೂಡಿ, ತಿಳಿಯಲು ಯೋಗ್ಯವಾಗಿರುತ್ತದೆ ಮತ್ತು ಯಥಾವತ್ತಾಗಿ ಪ್ರಾಪ್ತವಾಗಿದೆ. ಹೀಗಿದ್ದರೂ ಆ ಕಾರಿಕಾಕಾರನು ವರ್ತಮಾನದಲ್ಲಿಯೂ ಜಗತ್ತಿನ ಅಭಾವವನ್ನು ಬರೆದಿರುವುದು ಸರ್ವಥಾ ಅಪ್ರಮಾಣವಾಗಿದೆ. ಏಕೆಂದರೆ - ಯಾವುದನ್ನು ತಿಳಿದುಕೊಳ್ಳುವವನು ಪ್ರಮಾಣಗಳಿಂದ ತಿಳಿಯುತ್ತಾನೋ ಮತ್ತು ಗಳಿಸುತ್ತಾನೋ, ಅದೆಂದಿಗೂ ಅನ್ಯಥಾ ಆಗಲಾರದು.

**ಪ್ರಶ್ನೆ** :- ಜಗತ್ತನ್ನು ನಿರ್ಮಿಸುವುದರಲ್ಲಿ ಪರಮೇಶ್ವರನ ಉದ್ದೇಶ್ಯವೇನು?

**ಉತ್ತರ** :- ನಿರ್ಮಿಸದಿರುವುದರಲ್ಲಿ ಏನು ಉದ್ದೇಶ್ಯವಿದ್ದೀತು?

**ಪ್ರಶ್ನೆ**:- ನಿರ್ಮಿಸದಿದ್ದರೆ ಆನಂದದಲ್ಲಿ ದೃಢವಾಗಿರುತ್ತಿದ್ದನು ಮತ್ತು ಜೀವರಿಗೂ ಸುಖ - ದುಃಖ ಪ್ರಾಪ್ತವಾಗುತ್ತಿರಲಿಲ್ಲ.

**ಉತ್ತರ**:- "ಇದು ಸೋಮಾರಿಗಳೂ, ದರಿದ್ರರೂ ಆದ ಜನರಮಾತು; ಪುರುಷಾರ್ಥಿಯವಲ್ಲ." ಮತ್ತು ಜೀವರಿಗೆ ಪ್ರಳಯದಲ್ಲಿ ಏನು ಸುಖ ಅಥವಾ ದುಃಖವಿದೆ? ಸೃಷ್ಟಿಯ ಸುಖ-ದುಃಖಗಳನ್ನು ಹೋಲಿಸಿ ನೋಡಿದರೆ, ಸುಖ ಅನೇಕ ಪಟ್ಟು ಅಧಿಕ ವಾಗುತ್ತದೆ ಮತ್ತು ಬಹುಜನ ಪವಿತ್ರಾತ್ಮರಾದ ಜೀವರು, ಮುಕ್ತಿಯ ಸಾಧನಗಳನ್ನು ಅವಲಂಬಿಸಿ, ಮೋಕ್ಷದ ಆನಂದವನ್ನೂ ಕೂಡ ಗಳಿಸಿಕೊಳ್ಳುತ್ತಾರೆ. ಪ್ರಳಯದಲ್ಲಿ, ನಿಷ್ಕರ್ಮರಾಗಿ, ಹೇಗೆ ಸುಷುಪ್ತಿಯಲ್ಲಿ ಮಲಗಿರುತ್ತಾರೋ, ಹಾಗೆ ಮಲಗಿರುತ್ತಾರೆ. ಮತ್ತು ಪುನಃ ಜಗದ್ರಚನೆ ಮಾಡದೇ ಇದ್ದಿದ್ದರೆ, ಪರಮಾತ್ಮನು ಪ್ರಳಯದ ಮುಂಚಿನ ಸೃಷ್ಟಿಯಲ್ಲಿ ಜೀವರು ಮಾಡಿದ ಪಾಪ-ಪುಣ್ಯ ಕರ್ಮಗಳ ಫಲವನ್ನು ಕೊಡಲು ಹೇಗೆ ತಾನೇ ಸಾಧ್ಯವಾಗುತ್ತಿದ್ದಿತು? ಮತ್ತು ಜೀವರು ಹೇಗೆ ಅನುಭವಿಸಲು ಶಕ್ತರಾಗುತ್ತಿದ್ದರು? ನಿಮ್ಮನ್ನು ಯಾರಾದರೂ ಕಣ್ಣು ಇರುವುದರ ಉದ್ದೇಶ್ಯವೇನು-ಎಂದು ಕೇಳಿದರೆ,

'ನೋಡುವುದು'-ಎಂದು ತಾನೇ ಹೇಳುವಿರಿ? ಮತ್ತು ಈಶ್ವರನಲ್ಲಿ ಜಗದ್ರಚನೆ ಮಾಡುವ ಯಾವ ವಿಜ್ಞಾನ, ಬಲ ಮತ್ತು ಕ್ರಿಯೆಯಿದೆಯೋ, ಅದರ ಪ್ರಯೋಜನವಾದರೂ ಏನು? ಜಗತ್ತಿನ ಉತ್ಪತ್ತಿಮಾಡುವುದು- ಎಂಬುದನ್ನು ಬಿಟ್ಟು, ಬೇರೆಯದೇನನ್ನೂ ಹೇಳಲಾರಿರಿ. ಮತ್ತು ಯಾವಾಗ ಜಗತ್ತನ್ನು ರಚಿಸುತ್ತಾನೋ, ಆಗಲೇ ಪರಮಾತ್ಮನ ನ್ಯಾಯ, ಧಾರಣ, ದಯೆ-ಮೊದಲಾದ ಗುಣಗಳು ಸಾರ್ಥಕ ವಾಗಬಲ್ಲವು. "ಅವನ ಅನಂತ ಸಾಮರ್ಥ್ಯವು ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯ ಹಾಗೂ ವ್ಯವಸ್ಥೆ ಮಾಡುವುದರಿಂದಲೇ ಸಫಲವಾಗುತ್ತದೆ." ಹೇಗೆ ಕಣ್ಣಿನ ಸ್ವಾಭಾವಿಕ ಗುಣ ನೋಡುವುದಾಗಿದೆಯೋ, ಹಾಗೆ "ಪರಮಾತ್ಮನ ಸ್ವಾಭಾವಿಕ ಗುಣ ಜಗತ್ತಿನ ಉತ್ಪತ್ತಿಯನ್ನು ಮಾಡಿ, ಸಮಸ್ತ ಜೀವರಿಗೂ ಅಸಂಖ್ಯ ಪದಾರ್ಥಗಳನ್ನು ಕೊಟ್ಟು, ಪರೋಪಕಾರ ಮಾಡುವುದಾಗಿದೆ."

**ಪ್ರಶ್ನೆ:-** ಬೀಜ ಮೊದಲೋ ಅಥವಾ ವೃಕ್ಷವೋ?

**ಉತ್ತರ:-** ಬೀಜ. ಏಕೆಂದರೆ-ಬೀಜ, ಹೇತು, ನಿದಾನ, ನಿಮಿತ್ತ ಮತ್ತು ಕಾರಣ ಈ ಮೊದಲಾದ ಶಬ್ದಗಳು ಏಕಾರ್ಥವಾಚಕ ಗಳಾಗಿವೆ. ಕಾರಣಕ್ಕೆ 'ಬೀಜ' ಎಂದು ಹೆಸರಿರುವುದರಿಂದ, ಕಾರ್ಯಕ್ಕೆ ಮೊದಲೇ ಇರುತ್ತದೆ.

**ಪ್ರಶ್ನೆ:-** ಪರಮೇಶ್ವರನು ಸರ್ವಶಕ್ತಿಮಂತನಾಗಿರುವಾಗ, ಅವನು ಕಾರಣ ಮತ್ತು ಜೀವನನ್ನೂ, ಕೂಡ ಉತ್ಪನ್ನಮಾಡಬಲ್ಲನು. ಉತ್ಪನ್ನಮಾಡಲಾರನಾದರೆ, ಸರ್ವಶಕ್ತಿಮಂತನೂ ಆಗಿರಲಾರನು.

**ಉತ್ತರ:-** 'ಸರ್ವಶಕ್ತಿಮಾನ್' - ಎಂಬ ಶಬ್ದದ ಅರ್ಥವನ್ನು ಮೊದಲೂ ಬರೆದೇ ಇದ್ದೇವೆ.[೫] ಆದರೆ, ಯಾವನು ಅಸಂಭವ ವಾದುದನ್ನೂ ಕೂಡ ಮಾಡಬಲ್ಲನೋ, ಅವನು ಸರ್ವಶಕ್ತಿಮಂತನೆನಿಸುತ್ತಾನೋ? ಕಾರಣವಿಲ್ಲದೆಯೇ ಕಾರ್ಯವನ್ನು ಮಾಡಬಲ್ಲನು - ಎಂಬಂತಹ ಅಸಂಭವವಾದುದನ್ನೂ ಕೂಡ ಯಾವನಾದರೂ ಮಾಡಬಲ್ಲನಾದರೆ, ಕಾರಣವಿಲ್ಲದೆ ಎರಡನೆಯ ಈಶ್ವರನ ಉತ್ಪತ್ತಿಯನ್ನು ಮಾಡಿ, ಮತ್ತು ಸ್ವತಃ ಮೃತ್ಯುವನ್ನು ಹೊಂದಿ, ಜಡನೂ, ದುಃಖಿಯೂ, ಅನ್ಯಾಯ ಕಾರಿಯೂ, ಅಪವಿತ್ರನೂ, ಮತ್ತು ದುಷ್ಕರ್ಮಿಯೇ ಮೊದಲಾದವನೂ ಆಗಬಲ್ಲನೋ ಅಥವಾ ಇಲ್ಲವೋ? "ಯಾವ ಸ್ವಾಭಾವಿಕ ನಿಯಮವಿದೆಯೋ, ಅದಕ್ಕೆ ಪ್ರತಿಕೂಲವಾಗಿ ಈಶ್ವರನೂ ಮಾಡಲಾರನು," ಉದಾಹರಣೆಗೆ, ಅಗ್ನಿಯ ಉಷ್ಣತ್ವ, ಜಲದ ಶೀತತ್ವ ಮತ್ತು ಪೃಥಿವೀ-ಮೊದಲಾದ ಸಮಸ್ತ ಜಡವಸ್ತುಗಳ ಸ್ವಾಭಾವಿಕ ಗುಣಗಳನ್ನು ಪರಮಾತ್ಮನೂ ಕೂಡ ಪ್ರತಿಕೂಲಗುಣಗಳನ್ನಾಗಿ ಮಾಡಲಾರನು. ಮತ್ತು ಈಶ್ವನ ನಿಯಮಗಳು ಸತ್ಯವೂ ಮತ್ತು ಪೂರ್ಣವೂ ಆಗಿವೆ. ಆದುದರಿಂದ, ಪರಿವರ್ತನಮಾಡಲಾರನು. ಆದಕಾರಣ, ಸರ್ವಶಕ್ತಿಮಾನ್- ಎಂಬುದರ ಅರ್ಥ, "ಪರಮಾತ್ಮನು ಯಾವನ ಸಹಾಯವೂ ಇಲ್ಲದೆ, ತನ್ನ ಸಮಸ್ತ ಕಾರ್ಯಗಳನ್ನೂ ಪೂರ್ಣವಾಗಿ ಮಾಡಬಲ್ಲನು" - ಎಂಬುದಷ್ಟೇ ಆಗಿದೆ.

**ಪ್ರಶ್ನೆ:-** ಈಶ್ವರನು ಸಾಕಾರನೋ, ಅಥವಾ ನಿರಾಕಾರನೋ? ನಿರಾಕಾರನಾಗಿದ್ದಲ್ಲಿ, ಕೈಯೇ ಮೊದಲಾದ ಸಾಧನಗಳಿಲ್ಲದೆ, ಜಗತ್ತನ್ನು ರಚಿಸಲಾರನು. ಮತ್ತು ಸಾಕಾರನಾಗಿದ್ದಲ್ಲಿ, ಯಾವದೇ ದೋಷವೂ ಬಾರದು.

**ಉತ್ತರ:-** ಈಶ್ವರನು ನಿರಾಕಾರನಾಗಿ[೬]ದ್ದಾನೆ. ಯಾವನು ಸಾಕಾರನಾಗಿ, ಎಂದರೆ ಸಶರೀರನಾಗಿ ಇದ್ದಾನೋ, ಅವನು ಈಶ್ವರನಲ್ಲ. ಏಕೆಂದರೆ, ಅವನು ಪರಿಮಿತಶಕ್ತಿಯುಕ್ತನೂ, ದೇಶ-ಕಾಲ-ವಸ್ತುಗಳಿಂದ ಪರಿಚ್ಛಿನ್ನನೂ, ಹಸಿವು, ಬಾಯಾರಿಗೆ, ಛೇದನ, ಭೇದನ, ಶೀತತ್ವ-ಉಷ್ಣತ್ವ, ಜ್ವರ, ನೋವು-ಮೊದಲಾದುದರಿಂದ ಯುಕ್ತನೂ ಆಗಿರಬೇಕಾದೀತು. "ಸಾಕಾರನಾಗಿದ್ದಲ್ಲಿ, ಅವನಲ್ಲಿ ಜೀವನ ಗುಣಗಳಿರಬಲ್ಲವೇ ಹೊರತು, ಈಶ್ವರನ ಗುಣಗಳು ಎಂದಿಗೂ ಇರಲಾರವು." ಉದಾಹರಣೆಗೆ, ನೀವು ಮತ್ತು ನಾವು ಸಾಕಾರರಾಗಿ, ಎಂದರೆ-ಶರೀರಧಾರಿಗಳಾಗಿದ್ದೇವೆ. ಈ ಕಾರಣದಿಂದ, ತ್ರಸರೇಣು, ಅಣು, ಪರಮಾಣು ಮತ್ತು ಪ್ರಕೃತಿಯನ್ನು ನಮ್ಮ ವಶಕ್ಕೆ ತರಲಾರೆವಾಗಿದ್ದೇವೆ. ಹಾಗೆಯೇ, ಸ್ಥೂಲ ದೇಹದಾರಿಯಾಗಿರುವ ಪಕ್ಷದಲ್ಲಿ ಪರಮೇಶ್ವರನೂ ಕೂಡ, ಆ ಸೂಕ್ಷ್ಮ ಪದಾರ್ಥಗಳಿಂದ ಸ್ಥೂಲ ಜಗತ್ತನ್ನು ರಚಿಸಲಾರನು. ಪರಮೇಶ್ವರನು ಭೌತಿಕ ಇಂದ್ರಿಯಗಳ ಗೋಳಕಗಳು, ಕೈ-ಕಾಲುಗಳೇ ಮೊದಲಾದ ಅವಯವಗಳಿಂದ ರಹಿತನಾಗಿದ್ದಾನೆ. ಆದರೆ - ಅವನಲ್ಲಿ ಅನಂತವಾದ ಶಕ್ತಿ-ಬಲ-ಪರಾಕ್ರಮಗಳಿವೆ. ಜೀವನಿಂದ ಮತ್ತು ಪ್ರಕೃತಿಯಿಂದ ಯಾವುವು ಎಂದಿಗೂ ಆಗಲಾರವೋ, ಆ ಸಮಸ್ತ ಕರ್ಮಗಳನ್ನೂ ಅವುಗಳಿಂದ ಮಾಡುತ್ತಾನೆ. ಅವನು ಪ್ರಕೃತಿಗಿಂತಲೂ ಸೂಕ್ಷ್ಮನೂ ಮತ್ತು ಅವುಗಳಲ್ಲಿ ವ್ಯಾಪಕನೂ ಆಗಿರುವುದರಿಂದಲೇ, ಅವುಗಳನ್ನು ಹಿಡಿದು ಜಗದಾಕಾರವಾಗಿ ಮಾಡಿಬಿಡುತ್ತಾನೆ.

---

೫. ಸಪ್ತಮ ಸಮುಲ್ಲಾಸವನ್ನು ನೋಡಿರಿ.

೬. ಈ ವಿಷಯದ ಬಗ್ಗೆ ಸಪ್ತಮ ಸಮುಲ್ಲಾಸದಲ್ಲೂ ವಿಚಾರ ಮಾಡಲಾಗಿದೆ.

**ಪ್ರಶ್ನೆ:**– ಹೇಗೆ ಮನುಷ್ಯರೇ ಮೊದಲಾದವರ ತಾಯಿ–ತಂದೆಗಳು ಸಾಕಾರರಾಗಿದ್ದಾರೋ, ಹಾಗೆ ಅವರ ಸಂತತಿಯೂ ಸಾಕಾರವಾಗಿರುತ್ತದೆ. ಇವರು ನಿರಾಕಾರರಾಗಿದ್ದಲ್ಲಿ, ಇವರ ಮಕ್ಕಳೂ ನಿರಾಕಾರರಾಗಿರುತ್ತಿದ್ದರು. ಹಾಗೆ, ಪರಮೇಶ್ವರನು ನಿರಾಕಾರನಾಗಿದ್ದಲ್ಲಿ, ಅವನಿಂದ ರಚಿತವಾದ ಜಗತ್ತೂ ಕೂಡ ನಿರಾಕಾರವಾಗಿರಬೇಕು.[೭]

**ಉತ್ತರ:**– 'ನಿಮ್ಮ ಈ ಪ್ರಶ್ನೆ ಮಕ್ಕಳ ಪ್ರಶ್ನೆಯ ಹಾಗೆ ಇದೆ.' ಏಕೆಂದರೆ ನಾವು ಈ ಮೊದಲೇ ಪರಮೇಶ್ವರನು ಜಗತ್ತಿನ ಉಪಾದಾನ ಕಾರಣವಲ್ಲ; ಆದರೆ–ನಿಮಿತ್ತಕಾರಣನಾಗಿದ್ದಾನೆ. –ಎಂದು ಹೇಳಿಯೇ ಇದ್ದೇವೆ. ಯಾವುದು ಸ್ಥೂಲವಾಗಿರುತ್ತದೋ,[೮] ಆ ಪ್ರಕೃತಿ ಮತ್ತು ಪರಮಾಣುಗಳು ಜಗತ್ತಿನ ಉಪಾದಾನಕಾರಣವಾಗಿವೆ. ಆದರೆ, ಅವು ಸರ್ವಥಾ ನಿರಾಕಾರವಲ್ಲ. ಆದರೆ ಪರಮೇಶ್ವರನಿಗಿಂತ ಸ್ಥೂಲವೂ ಮತ್ತು ಅನ್ಯ ಕಾರ್ಯ ವಸ್ತುಗಳಿಗಿಂತ ಸೂಕ್ಷ್ಮವೂ ಆದ ಆಕಾರವನ್ನು ಹೊಂದಿರುತ್ತದೆ.

**ಪ್ರಶ್ನೆ:**– ಕಾರಣವಿಲ್ಲದೆ ಪರಮೇಶ್ವರನು, ಕಾರ್ಯವನ್ನು ಮಾಡಲಾರನೇನು?

**ಉತ್ತರ:**– ಇಲ್ಲ. ಏಕೆಂದರೆ–ಯಾವುದರ ಅಭಾವವಿರುತ್ತದೋ, ಎಂದರೆ, ಯಾವುದು ಇಲ್ಲವೇ ಇಲ್ಲವೋ, ಅದರ ಭಾವ ಉಂಟಾಗುವುದು, ಅಸ್ತಿತ್ವಕ್ಕೆ ಬರುವುದು ಸರ್ವಥಾ ಅಸಂಭವವಾಗಿರುತ್ತದೆ. ಯಾವನಾದರೂ, "ನಾನು ಬಂಜೆಯ ಮಗನ ಮತ್ತು ಮತ್ತೊಬ್ಬ ಬಂಜೆಯ ಮಗಳ ಮದುವೆಯನ್ನು ನೋಡಿದೆನು; ಅವನು ಮನುಷ್ಯನ ಕೊಂಬಿನ ಬಿಲ್ಲನ್ನೂ ಮತ್ತು ಇಬ್ಬರೂ ಆಗಸದ ಹೂವಿನ ಹಾರಗಳನ್ನೂ ಧರಿಸಿದ್ದರು. ಬಿಸಿಲ್ಗುದುರೆಯ ನೀರಿನಲ್ಲಿ ಸ್ನಾನ ಮಾಡುತ್ತಿದ್ದರು ಮತ್ತು ಗಂಧರ್ವನಗರದಲ್ಲಿ ವಾಸಿಸುತ್ತಿದ್ದರು. ಅಲ್ಲಿ ಮೋಡಗಳಿಲ್ಲದೆ ಮಳೆಯೂ, ಪೃಥಿವಿಯಿಲ್ಲದೆ ಸಮಸ್ತ ಆಹಾರಗಳ ಉತ್ಪತ್ತಿ–ಮೊದಲಾದುದೂ ಆಗುತ್ತಿತ್ತು" ಎಂದು ಬುರುಡೆ ಹೊಡೆದರೆ ಹೇಗೋ, ಹಾಗೆಯೇ, ಕಾರಣವಿಲ್ಲದೆ ಕಾರ್ಯವಾಗುವುದು ಎನ್ನುವುದೂ ಅಸಂಭವವಾದುದರ ಕಥನ. ಯಾವನಾದರೂ **"ಮಮ ಮಾತಾಪಿತರೌ ನ ಸ್ತಃ । ಅಹಮೇವಮೇವ ಜಾತಃ। ಮಮ ಮುಖೇ ಜಿಹ್ವಾ ನಾಸ್ತಿ । ವದಾಮಿ ಚ"** – ಎಂದರೆ, "ನನ್ನ ತಾಯಿ–ತಂದೆಗಳು ಇರಲಿಲ್ಲ; ಹೀಗೆಯೇ ನಾನು ಹುಟ್ಟಿಬಿಟ್ಟಿದ್ದೇನೆ. ನನ್ನ ಬಾಯಿಯಲ್ಲಿ ನಾಲಗೆಯಿಲ್ಲ; ಆದರೂ ಮಾತನಾಡುತ್ತೇನೆ".– ಎನ್ನುವುದು ಹೇಗೋ, "ಬಿಲದಲ್ಲಿ ಹಾವು ಇರಲಿಲ್ಲ; ಹೊರಟು ಬಂದಿತು. ನಾನು ಎಲ್ಲಿಯೂ ಇರಲಿಲ್ಲ; ಇವರೂ ಎಲ್ಲಿಯೂ ಇರಲಿಲ್ಲ; ಆದರೂ ನಾವೆಲ್ಲ ಮಂದಿಯೂ ಬಂದಿದ್ದೇವೆ". ಎಂದು ಹೇಳುವುದು ಹೇಗೋ, ಹಾಗೆ, ಇಂತಹ ಅಂಸಭವವಾದ ಮಾತುಗಳೂ 'ಪ್ರಮತ್ತ ಗೀತೆಗಳೇ' ಸರಿ. ಎಂದರೆ – ಹುಚ್ಚು ಜನರ ಮಾತುಗಳು, ಅಷ್ಟೇ.

**ಪ್ರಶ್ನೆ:**– ಕಾರಣವಿಲ್ಲದೆ ಕಾರ್ಯವಾಗುವುದಿಲ್ಲವಾದರೆ, ಕಾರಣದ ಕಾರಣವಾವುದು? [೯]

**ಉತ್ತರ:**– ಯಾವವು ಕೇವಲ ಕಾರಣರೂಪವೇ ಆಗಿರುತ್ತವೋ, ಅವು ಯಾವುದರ ಕಾರ್ಯವೂ ಆಗಿರುವುದಿಲ್ಲ. ಮತ್ತು ಯಾವುದು ಯಾವುದಾದರೂ ಒಂದರ ಕಾರಣವೂ, ಮತ್ತು ಇನ್ನಾವುದಾದರೂ ಒಂದರ ಕಾರ್ಯವೂ ಆಗಿರುತ್ತದೋ, ಅದು ಬೇರೆಯದೆನಿಸುತ್ತದೆ. ಉದಾಹರಣೆಗೆ, ಪೃಥಿವಿಯು ಮನೆ–ಮೊದಲಾದವುದರ ಕಾರಣವೂ, ಮತ್ತು ಜಲ–ಮೊದಲಾದುದರ ಕಾರ್ಯವೂ ಆಗಿರುತ್ತದೆ. 'ಆದರೆ, ಯಾವುದು ಆದಿ ಕಾರಣವಾದ ಪ್ರಕೃತಿಯಿದೆಯೋ, ಅದು ಅನಾದಿಯಾಗಿದೆ.'

**ಮೂಲೇ ಮೂಲಾಭಾವಾದಮೂಲಂ ಮೂಲಮ್ ॥** (ಸಾಂಖ್ಯ:– ೧.೬೭)

'ಮೂಲವು, ಎಂದರೆ – ಕಾರಣದ ಕಾರಣವು ಇರುವುದಿಲ್ಲ.' ಆದುದರಿಂದ – ಅಕಾರಣವು (ತನಗೆ ಬೇರೆ ಕಾರಣವಿಲ್ಲದ ಮೂಲದ್ರವ್ಯ) ಸಮಸ್ತ ಕಾರ್ಯಗಳ ಕಾರಣವಾಗಿರುತ್ತದೆ. ಏಕೆಂದರೆ, ಯಾವುದೇ ಕಾರ್ಯದ ಆರಂಭ ಸಮಯಕ್ಕಿಂತ ಮೊದಲಾದರೂ, ಮೂರು ಕಾರಣಗಳೂ ಅವಶ್ಯಕವಾಗಿಯೇ ಇರುತ್ತವೆ. ಉದಾಹರಣೆಗೆ, ಬಟ್ಟೆಯನ್ನು ಮಾಡುವ ಮುನ್ನ, ನೇಕಾರ, ಹತ್ತಿಯ ನೂಲು, ಲಾಳಿ–ಮೊದಲಾದುವು ಮೊದಲೇ ಅಸ್ತಿತ್ವದಲ್ಲಿರುವುದರಿಂದ, ಬಟ್ಟೆ ಆಗುತ್ತದೆ. ಹಾಗೆಯೇ, ಜಗತ್ತಿನ ಉತ್ಪತ್ತಿಗೆ ಮುನ್ನ ಪರಮೇಶ್ವರ, ಪ್ರಕೃತಿ, ಕಾಲ ಮತ್ತು ಆಕಾಶ ಹಾಗೂ ಜೀವರು ಅನಾದಿಗಳಾಗಿರುವುದರಿಂದ, ಈ ಜಗತ್ತಿನ ಉತ್ಪತ್ತಿಯಾಗುತ್ತದೆ. ಇವುಗಳಲ್ಲಿ ಯಾವದೇ ಒಂದು ಇಲ್ಲದಿದ್ದರೂ, ಜಗತ್ತು ಆಗಲಾರದು.

---

೭. ವಾದವನ್ನು ಬಳಸಲು ಸಾಕಾರವಾದಿಗಳದು, ಇದು ಒಂದು ತರಹದ ತರ್ಕ. ಆದರೆ ಅದು ಬುದ್ಧಿಹೀನರ ತರ್ಕ.

೮. ಎಂದರೆ, ಪರಮಾತ್ಮನಿಗಿಂತ ಸ್ಥೂಲ ಎಂದರ್ಥ. ವಾಸ್ತವವಾಗಿ ಇಂದ್ರಿಯಗಳಿಗೆ ಅಗೋಚರವಾಗುವಷ್ಟು ಸೂಕ್ಷ್ಮ. –ಸಂ

೯. ಇದಕ್ಕೆ ಕುತರ್ಕವೆಂದು ಹೆಸರು.–ಸಂ

**ಅತ್ರ ನಾಸ್ತಿಕಾ ಆಹುಃ** [೧೦] – ಈ ಸ್ಥಳದಲ್ಲಿ ನಾಸ್ತಿಕರು ಹೇಳುತ್ತಾರೆ:–

**ಶೂನ್ಯಂ ತತ್ತ್ವಂ ಭಾವೋ ವಿನಶ್ಯತಿ ವಸ್ತುಧರ್ಮತ್ವಾದ್ವಿನಾಶಸ್ಯ॥ ೧ ॥** (ಸಾಂಖ್ಯ:–೧.೪೪)

**ಅಭಾವಾದ್ಭಾವೋತ್ಪತ್ತಿರ್ನಾನುಪಮೃದ್ಯ ಪ್ರಾದುರ್ಭಾವಾತ್ ॥ ೨ ॥** (ನ್ಯಾಯ:– ೪.೧.೧೪)

**ಈಶ್ವರಃ ಕಾರಣಂ ಪುರುಷಕರ್ಮಾಫಲ್ಯದರ್ಶನಾತ್ ॥ ೩ ॥** (ನ್ಯಾಯ:–೪.೧.೧೯)

**ಅನಿಮಿತ್ತತೋ ಭಾವೋತ್ಪತ್ತಿಃ ಕಂಟಕತೈಕ್ಷ್ಣ್ಯಾದಿದರ್ಶನಾತ್ ॥ ೪ ॥** (ನ್ಯಾಯ:–೪.೧.೨೨)

**ಸರ್ವಮನಿತ್ಯಮುತ್ಪತ್ತಿವಿನಾಶಧರ್ಮಕತ್ವಾತ್ ॥ ೫ ॥** (ನ್ಯಾಯ:– ೪.೧.೨೫)

**ಸರ್ವಂ ನಿತ್ಯಂ ಪಂಚಭೂತನಿತ್ಯತ್ವಾತ್ ॥ ೬ ॥** (ನ್ಯಾಯ:– ೪.೧.೨೯)

**ಸರ್ವಂ ಪೃಥಕ್ ಭಾವಲಕ್ಷಣಪೃಥಕ್ತ್ವಾತ್ ॥ ೭ ॥** (ನ್ಯಾಯ:– ೪.೧.೩೪)

**ಸರ್ವಮಭಾವೋ ಭಾವೇಷ್ವಿತರೇತರಾಭಾವಸಿದ್ಧೇಃ॥ ೮ ॥** (ನ್ಯಾಯ:– ೪.೧.೩೭)

**ನ ಸ್ವಭಾವಸಿದ್ಧಿರಾಪೇಕ್ಷಿಕತ್ವಾತ್ ॥ ೯ ॥** (ನ್ಯಾಯ:– ೪.೧.೩೯)

ಇಲ್ಲಿ ನಾಸ್ತಿಕ ಜನರು ಹೀಗೆನ್ನುತ್ತಾರೆ. (ಮೊದಲನೆಯ ನಾಸ್ತಿಕ) **"ಶೂನ್ಯವೇ ಒಂದು ಪದಾರ್ಥ.** ಸೃಷ್ಟಿಗೆ ಮುನ್ನ ಶೂನ್ಯವಿದ್ದಿತು; ಅಂತದಲ್ಲಿ ಶೂನ್ಯವಿರುವುದು. ಏಕೆಂದರೆ ಯಾವ ಭಾವವಿದೆಯೋ, ಎಂದರೆ ಈಗ ಇರುವ ಪದಾರ್ಥವಿದೆಯೋ, ಅದಕ್ಕೂ ಅಭಾವ ಉಂಟಾಗಿ ಶೂನ್ಯವಾಗಿ ಹೋಗುವುದು.

**ಉತ್ತರ:–** ಆಕಾಶ, ಅದೃಶ್ಯ, ಅವಕಾಶ ಮತ್ತು ಸೊನ್ನೆಯನ್ನೂ ಕೂಡ ಶೂನ್ಯವೆನ್ನುತ್ತಾರೆ. 'ಶೂನ್ಯವು ಜಡವಸ್ತು'; ಈ ಶೂನ್ಯದಲ್ಲಿ ಸಮಸ್ತ ಪದಾರ್ಥಗಳೂ ಅದೃಶ್ಯವಾಗಿರುತ್ತವೆ. ಒಂದು ಬಿಂದುವಿನಿಂದ ರೇಖೆಯೂ, ರೇಖೆಗಳಿಂದ ವರ್ತುಳಾಕಾರವೂ ಹೇಗೆ ಆಗುವುದೋ, ಹಾಗೆ ಈಶ್ವರನ ರಚನೆಯಿಂದ ಭೂಮಿ, ಪರ್ವತ–ಮೊದಲಾದುವು ನಿರ್ಮಿತವಾಗುತ್ತವೆ. ಮತ್ತು, 'ಶೂನ್ಯವನ್ನು ತಿಳಿದುಕೊಳ್ಳುವವನು ಶೂನ್ಯವಾಗಿರುವುದಿಲ್ಲ.' (೧)

ಎರಡನೆಯ ನಾಸ್ತಿಕ :– ಅಭಾವದಿಂದ ಭಾವದ ಉತ್ಪತ್ತಿಯಾಗುತ್ತದೆ. ಉದಾಹರಣೆಗೆ–ಬೀಜವನ್ನು ಮರ್ದಿಸದೆ ಮೊಳಕೆ ಹುಟ್ಟುವುದಿಲ್ಲ. ಮತ್ತು ಬೀಜವನ್ನು ಒಡೆದು ನೋಡುವುದಾದರೆ, ಮೊಳಕೆಯ ಅಭಾವವಿದೆ. ಯಾವಾಗ ಮೊದಲು ಮೊಳಕೆ ಕಾಣಿಸುತ್ತಿರಲಿಲ್ಲರೋ, ಆಗ ಅಭಾವದಂದ ಉತ್ಪತ್ತಿಯಾಯಿತು–ಎಂದೇ ತಿಳಿಯಬೇಕಲ್ಲವೇ?

**ಉತ್ತರ:–** ಯಾವುದು ಬೀಜವನ್ನು ಮರ್ದಿಸುತ್ತದೋ, ಅದು ಮೊದಲೇ ಬೀಜದಲ್ಲಿದ್ದಿತು. ಇಲ್ಲದೇ ಇರುತ್ತಿದ್ದರೆ, ಎಂದಿಗೂ ಉತ್ಪನ್ನವಾಗುತ್ತಿರಲಿಲ್ಲ. (೨)

ಮೂರನೆಯ ನಾಸ್ತಿಕನು ಹೀಗೆನ್ನುತ್ತಾನೆ:– ಕರ್ಮಗಳ ಫಲವು, ಪುರುಷನು ಕರ್ಮ ಮಾಡುವುದರಿಂದ ಪ್ರಾಪ್ತವಾಗು ವುದಿಲ್ಲ. ಎಷ್ಟೋ ಕರ್ಮಗಳು ನಿಷ್ಫಲವಾಗುವುದು ಕಂಡುಬರುತ್ತದೆ. ಇದರಿಂದ–ಕರ್ಮಗಳ ಫಲ ಪ್ರಾಪ್ತವಾಗುವುದು ಈಶ್ವರನ

---

೧೦. ವೈದಿಕ ಷಡ್ದರ್ಶನಗಳಲ್ಲಿ ಯಾವುದು ಪೂರ್ವಪಕ್ಷಗಳಿವೆಯೋ, ಅವೆಲ್ಲಾ ಚಾರವಾಕ, ಜೈನ ಬೌದ್ಧ ಮೊದಲಾದ ನಾಸ್ತಿಕ ದರ್ಶನಗಳ ಸಿದ್ಧಾಂತಗಳಾಗಿವೆ. ಇದರಿಂದ, ಹಿಂದೆ ಒಂದು ಸಮಯದಲ್ಲಿ, ಎಂದರೆ ಮಹಾಭಾರತ ಯುದ್ಧದ ನಂತರ, ಭಾರತದಲ್ಲಿ ನಾಸ್ತಿಕತೆಯು ಅತ್ಯಂತ ಪ್ರಬಲವಾಗಿರಬೇಕು, ಎನ್ನುವ ಐತಿಹಾಸಿಕ ತಥ್ಯ ದೃಷ್ಟಿಗೋಚರವಾಗುತ್ತದೆ. ಕುಮಾರಿಲಭಟ್ಟನಿಂದ ಮೊದಲ್ಗೊಂಡು, ಮಹರ್ಷಿ ದಯಾನಂದರವರೆಗೆ, ಎಲ್ಲ ಆಚಾರ್ಯರೂ ಈ ನಾಸ್ತಿಕತೆಯ ಪ್ರವಾಹವನ್ನು ತಡೆಗಟ್ಟಲು ತಮ್ಮ–ತಮ್ಮ ಶಕ್ತಿ –ಯೋಗ್ಯತೆಗಳನುಸಾರ ಪುರುಷಾರ್ಥ ಮಾಡಿದರು, ಎಂಬುದು ಸ್ಫುಟವಾಗುತ್ತದೆ.

ಈ ಪೂರ್ವ ಪಕ್ಷಗಳ ಅರಿವಿಲ್ಲದ ವಿದ್ವಾಂಸರು ಮತ್ತು ಆಚಾರ್ಯರು ತಿಳಿದೋ; ತಮ್ಮ ಸಂಪ್ರದಾಯ ಮತ ಪ್ರತಿಪಾದನೆಯ ಸ್ವಾರ್ಥತೆಯಿಂದ; ಅಥವಾ ತಿಳಿಯದೆಯೋ, ಈ ಪೂರ್ವಪಕ್ಷಗಳನ್ನು ದರ್ಶನಕಾರರ ಸಿದ್ಧಾಂತಪಕ್ಷಗಳೆಂದು ಗ್ರಹಿಸಿ, ಅವರನ್ನು ನಾಸ್ತಿಕರೆಂದು ಘೋಷಿಸಿ, ಜನತೆಯ ಮನಸ್ಸಿನಲ್ಲಿ ವೈದಿಕ ದರ್ಶನಗಳ ಬಗ್ಗೆ ಅನಾದರ– ತಿರಸ್ಕಾರ ಭಾವನೆಯನ್ನು ಮೂಡಿಸಿ, ತಮ್ಮ–ತಮ್ಮ ಸಂಪ್ರದಾಯಕ್ಕೆ ಹಿಂಡನ್ನು ಒದಗಿಸಿಕೊಂಡಿದ್ದಾರೆ. –ಸಂ

ಅಧೀನದಲ್ಲಿದೆ; ಯಾವ ಕರ್ಮದ ಫಲವನ್ನು ಈಶ್ವರನು ಕೊಡ ಬಯಸುತ್ತಾನೋ, ಕೊಡುತ್ತಾನೆ; ಯಾವ ಕರ್ಮದ ಫಲವನ್ನು ಕೊಡಲು ಇಚ್ಛಿಸುವುದಿಲ್ಲವೋ, ಕೊಡುವುದಿಲ್ಲ. ಈ ಮಾತಿನಿಂದ, ಕರ್ಮ ಫಲವು ಈಶ್ವರಾಧೀನವಾಗಿದೆ ಎಂದು ಊಹಿಸಲ್ಪಡುತ್ತದೆ.

**ಉತ್ತರ:–** ಕರ್ಮದ ಫಲ ಈಶ್ವರಾಧೀನವಾಗಿದ್ದರೆ, ಕರ್ಮ ಮಾಡದೆಯೇ ಈಶ್ವರನು ಫಲವನ್ನೇಕೆ ಕೊಡುವುದಿಲ್ಲ? ಆದುದರಿಂದ, ಎಂತಹ ಕರ್ಮವನ್ನು ಮಾನವನು ಮಾಡುತ್ತಾನೋ, ಅಂತಹದೇ ಫಲವನ್ನು ಈಶ್ವರನು ಕೊಡುತ್ತಾನೆ. ಇದರಿಂದ, ಈಶ್ವರನು ಸ್ವೇಚ್ಛೆಯಾಗಿ ಪುರುಷನಿಗೆ ಕರ್ಮದ ಫಲವನ್ನು ಕೊಡಲಾರನು. ಆದರೆ, ಎಂತಹ ಕರ್ಮವನ್ನು ಜೀವನು ಮಾಡುತ್ತಾನೋ, ಅಂತಹದೇ ಫಲವನ್ನು ಈಶ್ವರನು ಕೊಡುತ್ತಾನೆ – ಎನ್ನುವುದು ಗ್ರಾಹ್ಯ. (೩)

ನಾಲ್ಕನೆಯ ನಾಸ್ತಿಕನು ಹೀಗೆ ಹೇಳುತ್ತಾನೆ :– ನಿಮಿತ್ತವಿಲ್ಲದೆ ಪದಾರ್ಥಗಳ ಉತ್ಪತ್ತಿಯಾಗುತ್ತದೆ. ಉದಾಹರಣೆಗೆ ಜಾಲಿಯೇ ಮೊದಲಾದ ವೃಕ್ಷಗಳಿಗೆ ಮೊನಚಾದ ಕೊನೆಯುಳ್ಳ ಮುಳ್ಳುಗಳು ಮೂಡಿಬರುತ್ತವೆ. ಇದರಿಂದ ಯಾವಾಗ ಯಾವಾಗ ಸೃಷ್ಟಿಯ ಆರಂಭವಾಗುತ್ತದೋ, ಆಗ ಆಗ, ಶರೀರಗಳೇ ಮೊದಲಾದ ಪದಾರ್ಥಗಳು ನಿಮಿತ್ತವಿಲ್ಲದೆ ಉದ್ಭವಿಸುತ್ತವೆ – ಎಂದು ವಿದಿತವಾಗುತ್ತದೆ.

**ಉತ್ತರ :–** ಯಾವುದರಿಂದ ಪದಾರ್ಥ ಉತ್ಪನ್ನವಾಗುತ್ತದೋ, ಅದೇ ಅದರ ನಿಮಿತ್ತವಾಗಿರುತ್ತದೆ. ಮುಳ್ಳು–ಮರವಿಲ್ಲದೆ, ಮುಳ್ಳುಗಳೇಕೆ ಉತ್ಪನ್ನವಾಗುವುದಿಲ್ಲ? (೪)

ಐದನೆಯ ನಾಸ್ತಿಕ ಹೇಳುತ್ತಾನೆ:– ಸಮಸ್ತ ಪದಾರ್ಥಗಳೂ ಉತ್ಪತ್ತಿ ಹಾಗೂ ವಿನಾಶಗಳಿಂದ ಕೂಡಿವೆ. ಆದುದರಿಂದ, ಎಲ್ಲವೂ ಅನಿತ್ಯವಾಗಿವೆ.

**ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।**

**ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥**

ಇದು ಅಷ್ಟಾವಕ್ರಗೀತೆಯ ಐದನೆಯ ಶ್ಲೋಕವಾಗಿದೆ. ನವೀನ ವೇದಾಂತಿಗಳು ಐದನೆಯ ನಾಸ್ತಿಕನ ಶ್ರೇಣಿಯಲ್ಲಿದ್ದಾರೆ. ಏಕೆಂದರೆ ಅವರು – **"**ಬ್ರಹ್ಮ ಸತ್ಯ; ಜಗತ್ತು ಮಿಥ್ಯಾ ಮತ್ತು ಜೀವನು ಬ್ರಹ್ಮದಿಂದ ಬೇರೆಯಲ್ಲ – ಎಂಬ ಈ ಮತ ಕೋಟ್ಯಂತರ ಗ್ರಂಥಗಳ ಸಿದ್ಧಾಂತ**"**. ಎಂದು ಹೇಳುತ್ತಾರೆ.

**ಉತ್ತರ :–** ಎಲ್ಲದರ ಅನಿತ್ಯತ್ವವೂ ನಿತ್ಯವಾಗಿದ್ದರೆ, ಎಲ್ಲವೂ ಅನಿತ್ಯವಾಗಲಾರದು.

**ಪ್ರಶ್ನೆ :–** ಎಲ್ಲದರ ಅನಿತ್ಯತ್ವವೂ ಕೂಡ ಅನಿತ್ಯವಾಗಿರುತ್ತದೆ. ಉದಾಹರಣೆಗೆ, ಬೆಂಕಿ ಕಟ್ಟಿಗೆಗಳನ್ನು ನಾಶಪಡಿಸಿ, ತಾನೂ ಕೂಡ ನಾಶವಾಗಿ ಹೋಗುತ್ತದೆ.

ಉತ್ತರ:– ಯಾವುದು ಯಥಾವತ್ತಾಗಿ ಇಂದ್ರಿಯಗೋಚರವಾಗುತ್ತದೋ, ವರ್ತಮಾನದಲ್ಲಿ ಅದರ ಅನಿತ್ಯತ್ವವನ್ನು ಪ್ರತಿಪಾದಿಸವುದೂ, ಮತ್ತು ಪರಮ ಸೂಕ್ಷ್ಮವಾದ ಕಾರಣವನ್ನು ಅನಿತ್ಯವೆಂದು ಹೇಳುವುದೂ ಎಂದಿಗೂ ಸಲ್ಲಲಾರದು. ವೇದಾಂತೀ ಜನರು ಬ್ರಹ್ಮದಿಂದ ಜಗತ್ತಿನ ಉತ್ಪತ್ತಿಯನ್ನು ಅಂಗೀಕರಿಸುವವರಾದರೆ, ಬ್ರಹ್ಮವು ಸತ್ಯವಾಗಿರುವುದರಿಂದ, ಅದರ ಕಾರ್ಯವು ಎಂದಿಗೂ ಅಸತ್ಯವಾಗಲಾರದು. ಸ್ವಪ್ನ, ರಜ್ಜು, – ಸರ್ಪ ಮೊದಲಾದುವುಗಳಂತೆ ಕಲ್ಪಿತವೆಂದು ಹೇಳುವವರಾದರೆ, ಆಗಲೂ ಸರಿಯಾಗದು. ಏಕೆಂದರೆ ಕಲ್ಪನೆ ಗುಣವಾಗಿದೆ. ಗುಣದಿಂದ ದ್ರವ್ಯ ಉದ್ಭವಿಸದು ಮತ್ತು ಗುಣ ದ್ರವ್ಯದಿಂದ ಬೇರೆಯಾಗಿ ಇರಲಾರದು. ಕಲ್ಪನೆಯ ಕರ್ತೃವು ನಿತ್ಯನಾಗಿರುವಾಗ, ಅವನ ಕಲ್ಪನೆಯೂ ನಿತ್ಯವಾಗಿರಬೇಕು. ಇಲ್ಲವಾದರೆ, ಅವನನ್ನೂ ಅನಿತ್ಯನೆಂದು ಅಂಗೀಕರಿಸಿರಿ. ಸ್ವಪ್ನವು ಏನನ್ನೂ ನೋಡದೆ, ಏನನ್ನೂ ಕೇಳದೆ ಎಂದಿಗೂ ಬರುವುದಿಲ್ಲ. ಜಾಗ್ರದವಸ್ಥೆಯಲ್ಲಿ, ಎಂದರೆ ಈ ವರ್ತಮಾನಸಮಯದಲ್ಲಿ, ಯಾವ ಸತ್ಯ ಪದಾರ್ಥಗಳಿವೆಯೋ, ಅವುಗಳ ಸಾಕ್ಷಾತ್ ಸಂಬಂಧಗಳಿಂದ ಪ್ರತ್ಯಕ್ಷವೇ ಮೊದಲಾದ ಜ್ಞಾನ ಉಂಟಾದ ಮೇಲೆ, ಸಂಸ್ಕಾರವು, ಎಂದರೆ ಅವುಗಳ ವಾಸನಾರೂಪದವಾದ ಜ್ಞಾನವು ಆತ್ಮನವು ಆತ್ಮನಲ್ಲಿ ಸ್ಥಿರವಾಗುತ್ತವೆ. ಸ್ವಪ್ನದಲ್ಲಿ ಅವುಗಳನ್ನೆ ಪ್ರತ್ಯಕ್ಷವಾಗಿ ನೋಡುತ್ತಾನೆ. ಹೇಗೆ ಸುಷುಪ್ತಿ ಬಂದಾಗ, ಬಾಹ್ಯ ಪದಾರ್ಥಗಳ ಜ್ಞಾನದ ಅಭಾವದಲ್ಲಿಯೂ, ಬಾಹ್ಯ ಪದಾರ್ಥಗಳು ಇದ್ದೇ ಇರುತ್ತವೋ, ಹಾಗೆ ಪ್ರಳಯದಲ್ಲಿಯೂ ಕಾರಣ ದ್ರವ್ಯವು ಇದ್ದೇ ಇರುತ್ತದೆ. ಸಂಸ್ಕಾರವಿಲ್ಲದೆ ಸ್ವಪ್ನ ಬೀಳುವುದಾದರೆ, ಜನ್ಮಾಂಧಿಗೂ ರೂಪದ ಸ್ವಪ್ನ ಬಿದ್ದೀತು. ಆದುದರಿಂದ, ಸ್ವಪ್ನದ ಸ್ಥಿತಿಯಲ್ಲಿ ಅವುಗಳ ಜ್ಞಾನಮಾತ್ರವಿದೆ. ಮತ್ತು ಹೊರಗೆ ಎಲ್ಲಾ ಪದಾರ್ಥಗಳೂ ಇದ್ದೇ ಇರುತ್ತವೆ.

**ಪ್ರಶ್ನೆ:**– ಹೇಗೆ ಜಾಗ್ರದವಸ್ಥೆಯ ಪದಾರ್ಥಗಳು ಸ್ವಪ್ನದಲ್ಲಿ ಮತ್ತು ಎರಡರದೂ ಸುಷುಪ್ತಿಯಲ್ಲಿ ಅಭಾವವಾಗಿ ಹೋಗುತ್ತವೋ, ಹಾಗೆ ಜಾಗ್ರದವಸ್ಥೆಯ ಪದಾರ್ಥಗಳನ್ನೂ ಸ್ವಪ್ನದ ವಸ್ತುಗಳ ಹಾಗೆಯೇ (ಅಭಾವ) – ಎಂದು ಅಂಗೀಕರಿಸಬೇಕು.

**ಉತ್ತರ:**– ಹೀಗೆ ಎಂದೂ ಅಂಗೀಕರಿಸಲಾಗದು. ಏಕೆಂದರೆ–ಸ್ವಪ್ನ ಮತ್ತು ಸುಷುಪ್ತಿಯಲ್ಲಿ ಬಾಹ್ಯ ಪದಾರ್ಥಗಳ ಅಜ್ಞಾನ ಮಾತ್ರ ಉಂಟಾಗುತ್ತದೆ; ಅಭಾವವಲ್ಲ. ಹೇಗೆ ಯಾವನಾದರೂ ಒಬ್ಬನ ಹಿಂದುಗಡೆ ಬಹಳ ವಸ್ತುಗಳು ಕಾಣದಂತಿರುತ್ತವೋ, ಆದರೂ, ಅವುಗಳ ಅಭಾವ ಉಂಟಾಗುವುದಿಲ್ಲವೋ, ಹಾಗೆಯೇ ಸ್ವಪ್ನದ ಮತ್ತು ಸುಷುಪ್ತಿಯ ವಿಷಯವೂ ಇದೆ. ಆದುದರಿಂದ, 'ಬ್ರಹ್ಮ', 'ಜೀವ' ಮತ್ತು 'ಜಗತ್ತಿನ ಕಾರಣ'–ಇವು ಅನಾದಿ–ನಿತ್ಯವೆಂದು ನಾವು ಮೊದಲು ಏನು ಹೇಳಿದ್ದೇವೋ, ಅದೇ ಸತ್ಯವಾಗಿದೆ. (೫)

**ಪ್ರಶ್ನೆ :**– ಆರನೆಯ ನಾಸ್ತಿಕನು ಹೇಳುತ್ತಾನೆ:– ಪಂಚಭೂತಗಳು ನಿತ್ಯವಾಗಿರುವುದರಿಂದ ಸಮಸ್ತ ಜಗತ್ತೂ ನಿತ್ಯವಾಗಿದೆ.

**ಉತ್ತರ :**– ಈ ಕಥನ ಸತ್ಯವಲ್ಲ. ಏಕೆಂದರೆ, ಯಾವ ಪದಾರ್ಥಗಳ ಉತ್ಪತ್ತಿಯ ಮತ್ತು ವಿನಾಶದ ಕಾರಣ ಕಂಡು ಬರುತ್ತದೆಯೋ, ಅವೆಲ್ಲ ನಿತ್ಯವಾಗಿದ್ದಲ್ಲಿ, ಸಮಸ್ತ ಸ್ಥೂಲ ಜಗತ್ತು ಮತ್ತು ಶರೀರ–ಗಡಿಗೆ–ಬಟ್ಟೆ–ಮೊದಲಾದ ಪದಾರ್ಥಗಳೂ ಉತ್ಪನ್ನ ಮತ್ತು ನಾಶವಾಗುತ್ತಿರುವುದನ್ನು ನೋಡುತ್ತಲೇ ಇದ್ದೇವೆಯಲ್ಲವೇ?[೧೧] ಅವುಗಳನ್ನು ನಿತ್ಯವೆನ್ನಲಾದೀತೇ? ಆದುದರಿಂದ ಕಾರ್ಯವನ್ನು ನಿತ್ಯವೆಂದು ಅಂಗೀಕರಿಸಲಾರೆವು. (೬)

**ಪ್ರಶ್ನೆ :**– ಏಳನೆಯ ನಾಸ್ತಿಕ ಹೇಳುತ್ತಾನೆ:–ಎಲ್ಲವೂ ಬೇರೆ ಬೇರೆಯಾಗಿವೆ. ಯಾವುದೇ ಒಂದು ಪದಾರ್ಥವೂ ಇಲ್ಲ. ಯಾವ ಯಾವ ವಸ್ತುಗಳನ್ನು ನಾವು ನೋಡುತ್ತೇವೋ, ಅದರಲ್ಲಿ ಬೇರೆಯದಾದ ಪದಾರ್ಥವಾವುದೂ ಕಂಡುಬರುವುದಿಲ್ಲ. (ಎಲ್ಲ ವಸ್ತುಗಳೂ ತಮ್ಮಷ್ಟಕ್ಕೆ ತಾವು ಇವೆ; ಸರ್ವನಿಯಾಮಕ ಶಕ್ತಿ ಯಾವುದೂ ಇಲ್ಲ).

**ಉತ್ತರ:**– (ಕೊಂಬೆಗಳು, ಎಲೆಗಳು, ಹೂವು–ಕಾಯಿಗಳು, ಕಾಂಡ, ಬೇರು–ಈ ಅವಯವಗಳಲ್ಲಿ ಮರವು ಇರುವ ಹಾಗೆ) ಅವಯವಗಳಲ್ಲಿ ಅವಯವೀ ತತ್ತ್ವವಿರುತ್ತದೆ. ವರ್ತಮಾನ ಕಾಲ, ಆಕಾಶ, ಪರಮಾತ್ಮ ಮತ್ತು (ವಿಶಿಷ್ಟ ಲಕ್ಷಣಗಳಿಂದ ಕಂಡುಬರುವ) ಜಾತಿ–ಇವು ಬೇರೆ–ಬೇರೆ ತತ್ತ್ವಗಳೇ ಆದರೂ, ಸಮೂಹಗಳಲ್ಲಿ ಒಂದೊಂದಾಗಿವೆ. ಅವುಗಳಿಂದ ಬೇರೆಯಾಗಿ ಯಾವ ಪದಾರ್ಥವೂ ಇರಲಾರದು. ಆದುದರಿಂದ, ಎಲ್ಲವೂ (ಪರಸ್ಪರ ಸಂಬಂಧವಿಲ್ಲದ) ಬೇರೆ ಬೇರೆ ಪದಾರ್ಥಗಳಲ್ಲ. ಆದರೆ ಸ್ವರೂಪದಿಂದ ಬೇರೆ ಬೇರೆಯಾಗಿವೆ. ಮತ್ತು ಬೇರೆ ಬೇರೆ ಪದಾರ್ಥಗಳಲ್ಲಿ ಒಂದು ವ್ಯಾಪಕ ತತ್ತ್ವವೂ ಇದೆ. (೭).

ಎಂಟನೆಯ ನಾಸ್ತಿಕನು ಹೇಳುತ್ತಾನೆ: ಸಮಸ್ತ ಪದಾರ್ಥಗಳಲ್ಲಿಯೂ ಇತರೇತರಾಭಾವದ ಸಿದ್ಧಿಯಾಗುವುದರಿಂದ, ಎಲ್ಲವೂ ಅಭಾವ ರೂಪಗಳೇ, ಉದಾಹರಣೆಗೆ, **"ಅನಶ್ವೋಗೌಃ । ಅಗೌರಶ್ವಃ"** ಹಸುವು ಕುದುರೆಯಲ್ಲ; ಮತ್ತು ಕುದುರೆ ಹಸುವಲ್ಲ. ಆದುದರಿಂದ ಎಲ್ಲವನ್ನೂ ಅಭಾವರೂಪವೆಂದು ಒಪ್ಪಬೇಕು.

**ಉತ್ತರ:** ಎಲ್ಲ ಪದಾರ್ಥಗಳಲ್ಲಿಯೂ ಇತರೇತರಾಭಾವದ ಯೋಗವಾಗಬಹುದು. ಆದರೆ, **"ಗವಿಗೌರಶ್ವೇಶ್ವೋ ಭಾವರೂಪ ವರ್ತತ ಏವ"**. – ಹಸುವಿನಲ್ಲಿ ಹಸುವಿನ ಮತ್ತು ಕುದುರೆಯಲ್ಲಿ ಕುದುರೆಯ ಭಾವವೇ ಇದೆ; ಅಭಾವವೆಂದಿಗೂ ಆಗಲಾರದು. ಪದಾರ್ಥಗಳ ಭಾವವೇ ಇಲ್ಲದೇ ಹೋಗಿದ್ದರೆ, ಇತರೇತರಾಭಾವವೂ ಕೂಡ ಏತರಲ್ಲಿ ಹೇಳಲ್ಪಟ್ಟೀತು? [೮].

**ಪ್ರಶ್ನೆ :** ಒಂಬತ್ತನೆಯ ನಾಸ್ತಿಕನು ಹೇಳುತ್ತಾನೆ:– ಸ್ವಭಾವದಿಂದ ಜಗತ್ತಿನ ಉತ್ಪತ್ತಿಯಾಗುತ್ತದೆ. ಹೇಗೆ ನೀರು–ಅನ್ನ ಒಂದು ಗೂಡಿ ಕೊಳೆಯುವುದರಿಂದ ಕ್ರಿಮಿಗಳು ಉತ್ಪನ್ನವಾಗುತ್ತವೋ, ಹೇಗೆ ಬೀಜ, ಮಣ್ಣು, ನೀರು ಸೇರುವುದರಿಂದ ಹುಲ್ಲು–ಮರ ಮೊದಲಾದುವೂ, ಮತ್ತು ಕಲ್ಲು ಮೊದಲಾದುವೂ ಉತ್ಪನ್ನವಾಗುತ್ತವೋ, ಹೇಗೆ ಸಮುದ್ರ ವಾಯುಗಳ ಯೋಗದಿಂದ ತರಂಗಗಳೂ, ಮತ್ತು ತರಂಗಗಳಿಂದ ಸಮುದ್ರದ ನೊರೆಯೂ ಉತ್ಪನ್ನವಾಗುತ್ತದೋ, ಹೇಗೆ ಅರಿಶಿನ, ಸುಣ್ಣ ಮತ್ತು ನಿಂಬೆಯ ರಸವನ್ನು ಸೇರಿಸುವುದರಿಂದ ಕುಂಕುಮವಾಗುತ್ತದೋ, ಹಾಗೆ ಸಂಪೂರ್ಣ ಜಗತ್ತು ತತ್ತ್ವಗಳ ಸ್ವಭಾವ – ಗುಣಗಳಿಂದ ಉತ್ಪನ್ನವಾಯಿತು. 'ಇದನ್ನು ನಿರ್ಮಿಸುವವನು ಯಾವನೂ ಇಲ್ಲ.'

---

೧೧. ಅವುಗಳನ್ನು ನಿತ್ಯವೆನ್ನಲಾದೀತೇ? –ಅನು.

* ಪದಾರ್ಥ

**ಉತ್ತರ :**– ಸ್ವಭಾವದಿಂದ ಜಗತ್ತಿನ ಉತ್ಪತ್ತಿಯಾಗುವುದಾದರೆ, ವಿನಾಶವೆಂದಿಗೂ ಆಗಲಾರದು ಮತ್ತು ವಿನಾಶವೂ ಸ್ವಭಾವದಿಂದಲೇ ಎಂದೊಪ್ಪುವಿರಾದರೆ, ಉತ್ಪತ್ತಿಯಾಗಲಾರದು. ಮತ್ತು ಎರಡು ಸ್ವಭಾವಗಳನ್ನೂ ಏಕಕಾಲದಲ್ಲಿ ದ್ರವ್ಯಗಳಲ್ಲಿರುವವೆಂದು ಅಂಗೀಕರಿಸುವಿರಾದರೆ, ಉತ್ಪತ್ತಿ ಹಾಗೂ ವಿನಾಶದ ವ್ಯವಸ್ಥೆಯು ಎಂದಿಗೂ ಆಗಲಾರದು ಮತ್ತು ನಿಮಿತ್ತವಿರುವುದರಿಂದ ಉತ್ಪತ್ತಿ ಮತ್ತು ನಾಶವನ್ನು ಒಪ್ಪುವಿರಾದರೆ, ನಿಮಿತ್ತವನ್ನು ಉತ್ಪನ್ನವಾಗುವ ಮತ್ತು ನಾಶವಾಗುವ ದ್ರವ್ಯಗಳಿಂದ ಬೇರೆ –ಎಂದು ಒಪ್ಪಬೇಕಾಗುವುದು. ಸ್ವಭಾವದಿಂದಲೇ ಉತ್ಪತ್ತಿ ಮತ್ತು ನಾಶವಾಗುತ್ತಿದ್ದಲ್ಲಿ, ಒಂದೇ ಕಾಲದಲ್ಲಿ ಉತ್ಪತ್ತಿ ಮತ್ತು ವಿನಾಶವಾಗುವುದು ಸಂಭವವಲ್ಲ. ಸ್ವಭಾವದಿಂದ ಉತ್ಪನ್ನವಾಗುತ್ತಿದ್ದಲ್ಲಿ, ಈ ಭೂಗೋಳದ ಹತ್ತಿರದಲ್ಲಿ ಎರಡನೆಯ ಭೂಗೋಳ, ಚಂದ್ರ–ಸೂರ್ಯ ಮೊದಲಾದುವು ಏಕೆ ಉತ್ಪನ್ನವಾಗುವುದಿಲ್ಲ? ಮತ್ತು ಯಾವ ಯಾವುದರ ಯೋಗದಿಂದ ಯಾವ ಯಾವುದು ಉತ್ಪನ್ನವಾಗುತ್ತದೋ, ಅದೆಲ್ಲವೂ ಈಶ್ವರನಿಂದ ಉತ್ಪಾದಿತವಾದ ಬೀಜ, ಅನ್ನ, ಜಲ–ಮೊದಲಾದುದರ ಸಂಯೋಗದಿಂದಲೇ ಹುಲ್ಲು, ವೃಕ್ಷ ಮತ್ತು ಕೃಮಿ ಮೊದಲಾದವುಗಳಾಗಿ ಉತ್ಪನ್ನವಾಗುತ್ತವೆ; ಅದಿಲ್ಲದೆ ಆಗುವುದಿಲ್ಲ. ಉದಾಹರಣೆಗೆ, ಅರಿಶಿನ, ಸುಣ್ಣ ಮತ್ತು ನಿಂಬೆಯ ರಸ ದೂರ ದೂರದ ಸ್ಥಾನಗಳಿಂದ ಸ್ವತಃ ತಾವೇ ಬಂದು ಸೇರುವುದಿಲ್ಲ; ಯಾವನಾದರೂ ಸೇರಿಸುವುದರಿಂದ ಸೇರುತ್ತವೆ. ಅದರಲ್ಲಿಯೂ ಕೂಡ, ತಕ್ಕ ರೀತಿಯಲ್ಲಿ ಸೇರಿಸುವುದರಿಂದ ಕುಂಕುಮವಾಗುತ್ತದೆ; ಹೆಚ್ಚಾಗಿ, ಕಡಿಮೆಯಾಗಿ ಅಥವಾ ಬೇರೆ ರೀತಿಯಲ್ಲಿ ಸೇರಿಸುವುದರಿಂದ ಕುಂಕುಮವಾಗುವುದಿಲ್ಲ; **"**ಹಾಗೆಯೇ ಪ್ರಕೃತಿಯ ಪರಮಾಣುಗಳನ್ನು ಜ್ಞಾನ ಮತ್ತು ಯುಕ್ತಿಯಿಂದ ಪರಮೇಶ್ವರನು ಸೇರಿಸದೇ ಇದ್ದರೆ, ಜಡ ಪದಾರ್ಥಗಳು ಯಾವುದೇ ಕಾರ್ಯದ ಸಿದ್ಧಿಗಾಗಿ, ಸ್ವತಃ ವಿಶೇಷ ಪದಾರ್ಥವಾಗಿ ರೂಪಾಂತರ ಹೊಂದಲಾರವು. ಆದುದರಿಂದ, ಸ್ವಭಾವ–ಮೊದಲಾದುದರಿಂದ ಸೃಷ್ಟಿಯಾಗುವುದಿಲ್ಲ. ಆದರೆ ಪರಮೇಶ್ವರನ ರಚನೆಯಿಂದ ಆಗುತ್ತದೆ.**"** (೯).

**ಪ್ರಶ್ನೆ:**– ಈ ಜಗತ್ತಿನ ಕರ್ತೃವು ಯಾವನೂ ಇರಲಿಲ್ಲ; ಇಲ್ಲ; ಹಾಗೂ ಇರುವುದೂ ಇಲ್ಲ. ಆದರೆ, ಅನಾದಿ ಕಾಲದಿಂದ ಇದು ಹೇಗಿದೆಯೋ ಹಾಗೆಯೇ ಇದೆ. ಎಂದೂ ಇದರ ಉತ್ಪತ್ತಿಯಾಗಲಿಲ್ಲ; ಎಂದಿಗೂ ವಿನಾಶವೂ ಆಗುವುದಿಲ್ಲ.[೧೨]

**ಉತ್ತರ:**– ಕರ್ತೃವಿಲ್ಲದೆ, ಯಾವುದೇ ಕ್ರಿಯೆಯೂ, ಅಥವಾ ಕ್ರಿಯೆಯಿಂದ ಉದ್ಭವಿಸುವ ಪದಾರ್ಥವೂ ಆಗಲಾರದು. ಯಾವ ಪೃಥಿವೀ ಮೊದಲಾದ ಪದಾರ್ಥಗಳಲ್ಲಿ ಸಂಯೋಗ ವಿಶೇಷದಿಂದ ರಚನೆ ಕಾಣಿಸುತ್ತದೋ, ಅವು ಎಂದಿಗೂ ಅನಾದಿಯಾಗಲಾರವು ಮತ್ತು ಯಾವುದು ಸಂಯೋಗದಿಂದ ಆಗುತ್ತದೋ, ಅದು ಸಂಯೋಗಕ್ಕಿಂತ ಮುಂಚೆ ಇರುವುದಿಲ್ಲ ಮತ್ತು ವಿಯೋಗದ ನಂತರವೂ ಇರುವುದಿಲ್ಲ. ನೀವು ಇದನ್ನು ಒಪ್ಪುವುದಿಲ್ಲವಾದರೆ, ಕಠಿಣ–ಕಠಿಣವಾದ ಪಾಷಾಣ, ವಜ್ರ ಮತ್ತು ಉಕ್ಕು–ಮೊದಲಾದುವನ್ನು ಮುರಿದು, ಚೂರು ಮಾಡಿ, ಕರಗಿಸಿ ಅಥವಾ ಬೂದಿಯಾಗಿ ಮಾಡಿ, ಇವುಗಳಲ್ಲಿ ಬೇರೆ ಬೇರೆ ಪರಮಾಣುಗಳು ಸೇರಿವೆಯೋ ಅಥವಾ ಇಲ್ಲವೋ–ನೋಡಿರಿ. ಸೇರಿವೆಯಾದರೆ, ಅವು ಕಾಲಕ್ರಮೇಣ ಅವಶ್ಯವಾಗಿ ಬೇರೆ ಬೇರಯೂ ಆಗುತ್ತವೆ.

**ಪ್ರಶ್ನೆ:**– ಅನಾದಿಯಾದ ಈಶ್ವರನು ಯಾವನೂ ಇಲ್ಲ. ಆದರೆ, ಯಾವನು ಯೋಗಾಭ್ಯಾಸದಿಂದ, ಅಣಿಮಾ–ಮೊದಲಾದ ಸಿದ್ಧಿಯನ್ನು ಗಳಿಸಿ, ಸರ್ವಜ್ಞತ್ವ ಮೊದಲಾದ ಗುಣಗಳಿಂದ ಯುಕ್ತನಾಗಿ, ಕೇವಲ ಜ್ಞಾನಿಯಾಗುವನೋ, ಆ ಜೀವನೇ ಪರಮೇಶ್ವರನೆನಿಸುತ್ತಾನೆ.[೧೩]

**ಉತ್ತರ:**– ಅನಾದಿಯಾದ ಈಶ್ವರನು ಜಗತ್ತಿನ ಸೃಷ್ಟಿಕರ್ತೃವಲ್ಲದಿದ್ದರೆ, ಜೀವಾತ್ಮರ ಆಧಾರವಾಗಿರುವ, ಸಾಧನಗಳಿಂದ ಸಿದ್ಧವಾಗುವ, ಜೀವನ ರೂಪವಾದ ಜಗತ್ತು, ಶರೀರಗಳು ಮತ್ತು ಇಂದ್ರಿಯಗಳ ಗೋಲಕಗಳು ಹೇಗೆ ಲಭಿಸುತ್ತವೆ? ಇವುಗಳಿಲ್ಲದೆ ಜೀವನು ಸಾಧನೆ ಮಾಡಲಾರನು. ಸಾಧನಗಳೇ ಇಲ್ಲದಿದ್ದರೆ, 'ಸಿದ್ಧ'ನಾಗುವನಾದರೂ ಎಲ್ಲಿಂದ? ಜೀವನು ಎಂತಹ ಸಾಧನೆಯನ್ನು ಬೇಕಾದರೂ ಮಾಡಿ ಸಿದ್ಧನಾಗಲಿ; ಏನೇ ಮಾಡಲಿ. ಆದರೆ ಯಾವನಲ್ಲಿ ಅನಂತ ಸಿದ್ಧಿಗಳಿವೆಯೋ, ಅಂತಹ, ಸ್ವತಃ ಸನಾತನನೂ, ಅನಾದಿಸಿದ್ಧನೂ ಆದ 'ಈಶ್ವರನಿಗೆ ಸಮನಾಗಿ ಯಾವನೇ ಜೀವನೂ ಆಗಲಾರನು.' ಏಕೆಂದರೆ, ಪರಮಾವಧಿ ಯವರೆಗೆ ಜೀವಾತ್ಮನ, ಜ್ಞಾನ ವರ್ಧಿಸಿದರೂ ಕೂಡ, ಅವನು ಪರಿಮಿತ ಜ್ಞಾನಯುಕ್ತನೂ, (ಪರಿಮಿತ) ಸಾಮರ್ಥ್ಯಯುಕ್ತನೂ ಆಗಿಯೇ ಉಳಿಯುತ್ತಾನೆ. ಅನಂತ ಜ್ಞಾನವಂತನೂ, ಸಾಮರ್ಥ್ಯವಂತನೂ ಎಂದಿಗೂ ಆಗಲಾರನು. ನೋಡಿರಿ, ಯಾವ ಯೋಗಿಯೂ ಕೂಡ ಈ ದಿನದವರೆಗೆ ಈಶ್ವರಕೃತವಾದ ಸೃಷ್ಟಿಕ್ರಮವನ್ನು ಪರಿವರ್ತಿಸುವವನಾಗಿಲ್ಲ; ಮತ್ತು

---

೧೨. ಇದು ಜೈನರ ಮತ್ತು ನವೀನ ಮೀಮಾಂಸಕರ ಮತ–ಯು.ಮೀ.

೧೩. ಇದು ಕೂಡ ಜೈನರ ಮತ.– ಯು.ಮೀ.

ಆಗುವುದೂ ಇಲ್ಲ. ಉದಾಹರಣೆಗೆ, ಅನಾದಿಸಿದ್ಧನಾದ ಪರಮೇಶ್ವರನು ಕಣ್ಣುಗಳಿಂದ ನೋಡವ ಮತ್ತು ಕಿವಿಗಳಿಂದ ಆಲಿಸುವ ವಿಧಾನವನ್ನು ಮಾಡಿದ್ದಾನೆ. ಇದನ್ನು ಯಾವನೇ ಯೋಗಿಯೂ ಪರಿವರ್ತಿಸಲಾರನು. 'ಜೀವನು ಈಶ್ವರನೆಂದಿಗೂ ಆಗಲಾರನು.'

**ಪ್ರಶ್ನೆ :–** ಕಲ್ಪ–ಕಲ್ಪಾಂತರಗಳಲ್ಲಿ ಈಶ್ವನು ಸೃಷ್ಟಿಯನ್ನು ವಿಲಕ್ಷಣ ವಿಲಕ್ಷಣವಾಗಿ ರಚಿಸುತ್ತಾನೋ ಅಥವಾ ಒಂದೇ ವಿಧವಾದುದನ್ನೋ?

**ಉತ್ತರ:–** ಈಗ ಹೇಗಿದೆಯೋ, ಹಾಗೆ ಮೊದಲೂ ಇದ್ದಿತು. ಮತ್ತು ಮುಂದಕ್ಕೂ ಇರುವುದು. ವ್ಯತ್ಯಾಸವನ್ನುಂಟು ಮಾಡುವುದಿಲ್ಲ:–

**ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ ।**

**ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸ್ವಃ ॥** (ಋಗ್ವೇದ:– ೧೦.೧೯೦.೩)

(ಧಾತಾ) ಪರಮೇಶ್ವರನು ಹೇಗೆ ಪೂರ್ವಕಲ್ಪದಲ್ಲಿ ಸೂರ್ಯ, ಚಂದ್ರ, ವಿದ್ಯುತ್ತು, ಪೃಥಿವೀ, ಅಂತರಿಕ್ಷ–ಮೊದಲಾದುವನ್ನು ರಚಿಸಿದ್ದನೋ, ಹಾಗೆಯೇ ಈಗ ರಚಿಸಿದ್ದಾನೆ ಮತ್ತು ಮುಂದಕ್ಕೂ ಹಾಗೆಯೇ ರಚಿಸುವನು. ಆದುದರಿಂದ, "ಪರಮೇಶ್ವರನ ರಚನೆಗಳು ಲೋಪ – ದೋಷಗಳಿಲ್ಲದ ಕಾರಣ, ಸದಾ ಒಂದೇ ವಿಧದವಾಗಿರುತ್ತವೆ." ಯಾವನು ಅಲ್ಪಜ್ಞನೋ ಮತ್ತು ಯಾವನ ಜ್ಞಾನವು ವೃದ್ಧಿ – ಕ್ಷಯಗಳನ್ನು ಹೊಂದುತ್ತದೋ, ಅವನ ಕೆಲಸದಲ್ಲಿಯೇ ಲೋಪ – ದೋಷಗಳಿರುತ್ತವೆ; 'ಈಶ್ವರನ ಕೆಲಸದಲ್ಲಿ ಎಂದಿಗೂ ಇಲ್ಲ.'

**ಪ್ರಶ್ನೆ:–** ಸೃಷ್ಟಿಯ ವಿಷಯದಲ್ಲಿ, ವೇದಗಳು ಮೊದಲಾದ ಶಾಸ್ತ್ರಗಳ ನಡವೆ ಅವಿರೋಧವಿದೆಯೋ ಅಥವಾ ವಿರೋಧವೋ?

**ಉತ್ತರ:–** 'ಅವಿರೋಧವಿದೆ.'

**ಪ್ರಶ್ನೆ:–** ಅವಿರೋಧವಿರುವುದಾದರೆ:–

**ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ. ಪೃಥಿವ್ಯಾ ಓಷಧಯಃ । ಓಷಧಿಭ್ಯೋನ್ನಂ । ಅನ್ನಾದ್ರೇತಃ । ರೇತಸಃ ಪುರುಷಃ । ಸ ವಾ ಏಷ ಪುರುಷೋಽನ್ನರಸಮಯಃ ।** (ತೈತ್ತಿರೀಯೋಪನಿಷತ್ತು:– ಬ್ರಹಮನಂದವಲ್ಲೀ – ೧.)

ಇದು ತೈತ್ತಿರೀಯ ಉಪನಿಷತ್ತಿನ ವಚನವಾಗಿದೆ. ಆ ಪರಮೇಶ್ವರನಿಂದ ಮತ್ತು ಪ್ರಕೃತಿಯಿಂದ ಆಕಾಶ, ಅವಕಾಶ, ಉತ್ಪನ್ನ ವಾಯಿತು, ಎಂದರೆ, ಯಾವ ಕಾರಣರೂಪವಾದ ದ್ರವ್ಯವು ಸರ್ವತ್ರ ಹರಡಿಕೊಂಡಿದ್ದಿತೋ, ಅದನ್ನು ಒಂದುಗೂಡಿಸುವು ದರಿಂದ, ಅವಕಾಶವು ಉತ್ಪನ್ನವಾದಂತೆ ಆಗುತ್ತದೆ. ವಾಸ್ತವಿಕವಾಗಿ ಆಕಾಶದ ಉತ್ಪತ್ತಿಯಾಗುವುದಿಲ್ಲ. ಏಕೆಂದರೆ – ಆಕಾಶ ವಿಲ್ಲದೆ, ಪ್ರಕೃತಿ ಮತ್ತು ಪರಮಾಣುಗಳು ಇರಬಲ್ಲವಾದರೂ ಎಲ್ಲಿ? 'ಆಕಾಶ'ದ ನಂತರ 'ವಾಯು', ವಾಯುವಿನ ನಂತರ 'ಅಗ್ನಿ', ಅಗ್ನಿಯ ನಂತರ 'ಜಲ', ಜಲದ ನಂತರ 'ಪೃಥಿವೀ', ಪೃಥಿವಿಯಿಂದ 'ಓಷಧಿ'ಗಳು, ಓಷಧಿಗಳಿಂದ 'ಅನ್ನ', ಅನ್ನದಿಂದ 'ವೀರ್ಯ', ವೀರ್ಯದಿಂದ 'ಪುರುಷ' – ಎಂದರೆ ಶರೀರ ಉತ್ಪನ್ನವಾಗುತ್ತದೆ. ಇಲ್ಲಿ ಆಕಾಶಾದಿಕ್ರಮದಿಂದ, ಮತ್ತು ಛಾಂದೋಗ್ಯದಲ್ಲಿ ಅಗ್ನಿ – ಆದಿಕ್ರಮದಿಂದ, 'ಐತರೇಯ'ದಲ್ಲಿ ಜಲಾದಿ ಕ್ರಮದಿಂದ, ಸೃಷ್ಟಿಯಾಯಿತು (ಎಂದು ಹೇಳಿದೆ.) ವೇದಗಳಲ್ಲಿ ಒಂದೊಂದು ಕಡೆ 'ಪುರುಷ'ನಿಂದ, ಮತ್ತೊಂದು ಕಡೆ 'ಹಿರಣ್ಯಗರ್ಭ' ಮೊದಲಾದುದರಿಂದ, 'ಮೀಮಾಂಸಾದಲ್ಲಿ ಕರ್ಮ'ದಿಂದ, 'ವೈಶೇಷಿಕ'ದಲ್ಲಿ ಕಾಲದಿಂದ, 'ನ್ಯಾಯದಲ್ಲಿ ಪರಮಾಣುವಿನಿಂದ', 'ಯೋಗದಲ್ಲಿ ಪುರುಷಾರ್ಥದಿಂದ', 'ಸಾಂಖ್ಯದಲ್ಲಿ ಪ್ರಕೃತಿಯಿಂದ' ಮತ್ತು 'ವೇದಾಂತದಲ್ಲಿ ಬ್ರಹ್ಮದಿಂದ', ಸೃಷ್ಟಿಯ ಉತ್ಪತ್ತಿ ಅಂಗೀಕರಿಸಲ್ಪಟ್ಟಿದೆ. ಈಗ ಯಾವುದನ್ನು ಸತ್ಯವೆಂದು ಮತ್ತು ಯಾವುದನ್ನು ಸುಳ್ಳೆಂದು ಒಪ್ಪಬೇಕು?

**ಉತ್ತರ:–** ಇದರಲ್ಲಿ ಎಲ್ಲವೂ ಸತ್ಯವೇ; ಯಾವುದೂ ಸುಳ್ಳಲ್ಲ. "ಯಾವನು ವಿಪರೀತವಾಗಿ ತಿಳಿದುಕೊಳ್ಳುತ್ತಾನೋ, ಅವನು ಸುಳ್ಳುಗಾರ." ಏಕೆಂದರೆ–ಪರಮೇಶ್ವರನು ಜಗತ್ತಿನ ನಿಮಿತ್ತಕಾರಣ ಮತ್ತು ಪ್ರಕೃತಿ ಉಪಾದಾನಕಾರಣ. ಯಾವಾಗ ಮಹಾ ಪ್ರಳಯ ರಾಗುತ್ತದೋ, ಆನಂತರ 'ಆಕಾಶಾದಿಕ್ರಮದಿಂದ', ಎಂದರೆ ಯಾವಾಗ ಆಕಾಶದ ಮತ್ತು ವಾಯುವಿನ

ಪ್ರಳಯವಾಗುವುದಿಲ್ಲವೋ ಮತ್ತು ಅಗ್ನಿ – ಮೊದಲಾದುವುಗಳದು ಆಗುತ್ತದೋ, ಆಗ 'ಅಗ್ನಿ–ಆದಿಕ್ರಮ'ದಿಂದ ಮತ್ತು ಯಾವಾಗ ವಿದ್ಯುತ್ತು ಅಗ್ನಿಯ ನಾಶವೂ ಆಗುವುದಿಲ್ಲವೋ, 'ಆಗ ಜಲದ ಕ್ರಮದಿಂದ ಸೃಷ್ಟಿಯಾಗುತ್ತದೆ.' ಎಂದರೆ – ಯಾವ ಯಾವ ಪ್ರಳಯದಲ್ಲಿ, ಎಲ್ಲ–ಎಲ್ಲಿಯವರೆಗೆ ಪ್ರಳಯವಾಗುತ್ತದೋ, ಅಲ್ಲಿ–ಅಲ್ಲಿನಿಂದ ಸೃಷ್ಟಿಯ ಉತ್ಪತ್ತಿಯಾಗುತ್ತದೆ. 'ಪುರುಷ' ಮತ್ತು 'ಹಿರಣ್ಯಗರ್ಭ' – ಮೊದಲಾದುದರ ಬಗೆಗೆ ಪ್ರಥಮ ಸಮುಲ್ಲಾಸದಲ್ಲಿ ಬರೆದೇ ಇದ್ದೇವೆ. ಅವೆಲ್ಲಾ ಪರಮೇಶ್ವರನ ಹೆಸರುಗಳೇ. ಒಂದು ಕಾರ್ಯದಲ್ಲಿ, ಒಂದೇ ವಿಷಯದ ಮೇಲೆ ವಿರುದ್ಧವಾದ ವಾದವನ್ನೇ 'ವಿರೋಧ'ವೆನ್ನುತ್ತಾರೆ. ಆರು ಶಾಸ್ತ್ರಗಳಲ್ಲಿ ಅವಿರೋಧವನ್ನು ನೋಡಿರಿ, ಹೀಗಿದೆ:– 'ಮೀಮಾಂಸಾದಲ್ಲಿ', "ಯಾವುದರ ನಿರ್ಮಾಣದಲ್ಲಿ ಕರ್ಮದ ಪ್ರವರ್ತನೆಯೇ ಮಾಡಲ್ಪಡದೋ ಅಂತಹ ಯಾವುದೇ ಕಾರ್ಯವೂ ಜಗತ್ತಿನಲ್ಲಿ ನಡೆಯುವುದಿಲ್ಲ." – ಎಂದಿದೆ. 'ವೈಶೇಷಿಕ'ದಲ್ಲಿ– "ಕಾಲವು ವ್ಯತೀತವಾಗದೆ, ಏನೂ ಆಗುವುದಿಲ್ಲ."–ಎಂದಿದೆ. 'ನ್ಯಾಯ'ದಲ್ಲಿ–"ಉಪಾದಾನಕಾರಣವಿಲ್ಲದಿದ್ದರೆ, ಯಾವುದೂ ನಿರ್ಮಿತವಾಗಲಾರದು". – ಎಂದಿದೆ. 'ಯೋಗ'ದಲ್ಲಿ – ವಿದ್ಯಾ, ಜ್ಞಾನ, ವಿಚಾರ ಮಾಡಲ್ಪಡದೇ ಹೋದರೆ, ಏನೂ ಆಗಲಾರದು".– ಎಂದಿದೆ. ಸಾಂಖ್ಯದಲ್ಲಿ –"ತತ್ತ್ವಗಳ ಮಿಳನವಾಗದಿದ್ದರೆ, ಏನೂ ರಚಿತವಾಗದು."– ಎಂದಿದೆ. ಮತ್ತು 'ವೇದಾಂತ'ದಲ್ಲಿ –"ಸೃಷ್ಟಿಕರ್ತೃವು ಸೃಜಿಸದಿದ್ದರೆ, ಯಾವ ಪದಾರ್ಥವೂ ಉತ್ಪನ್ನವಾಗಲಾರದು"– ಎಂದಿದೆ. ಆದುದರಿಂದ, ಸೃಷ್ಟಿ ಆರು ಕಾರಣಗಳಿಂದ ಆಗುತ್ತದೆ. ಆ ಆರು ಕಾರಣಗಳಲ್ಲಿ ಒಂದೊಂದರ ವ್ಯಾಖ್ಯಾನ ಒಂದೊಂದು ಶಾಸ್ತ್ರದಲ್ಲಿದೆ. ಆದುದರಿಂದ, ಅವುಗಳಲ್ಲಿ ವಿರೋಧ ಸ್ವಲ್ಪವೂ ಇಲ್ಲ. ಹೇಗೆ ಆರು ಜನ ಪುರುಷರು ಸೇರಿ, ಮೇಲು ಚಾವಣಿಯನ್ನೆತ್ತಿ ಗೋಡೆಗಳ ಮೇಲೆ ಇಡುತ್ತಾರೋ, ಹಾಗೆಯೇ 'ಸೃಷ್ಟಿ'–ಎಂಬ ಕಾರ್ಯದ ವ್ಯಾಖ್ಯಾನವನ್ನು ಆರು ಜನ ಶಾಸ್ತ್ರಕಾರರು ಸೇರಿ ಪೂರ್ತಿಮಾಡಿದ್ದಾರೆ. ಉದಾಹರಣೆಗೆ – ಐವರು ಕುರುಡರು ಮತ್ತು ಒಬ್ಬ ಮಂದದೃಷ್ಟಿಯವನಿಗೆ ಯಾವನೋ ಒಬ್ಬನು ಆನೆಯ ಒಂದೊಂದು ಭಾಗವನ್ನು ತೋರಿಸಿದನು. ಅವರನ್ನು – "ಆನೆ ಹೇಗಿದೆ"?–ಎಂದು ಕೇಳಿದನು. ಅವರಲ್ಲಿ ಒಬ್ಬನು "–'ಕಂಬ' ಎಂದನು; ಎರಡನೆಯವನು 'ಮೊರ' ಎಂದನು. ಮೂರನೆಯವನು 'ಕಂಬ' ಎಂದನು, ನಾಲ್ಕನೆಯವನು 'ಪೊರಕೆ' ಎಂದನು. ಐದನೆಯವನು 'ಜಗಲಿ' ಎಂದನು. ಮತ್ತು ಆರನೆಯವನು–"ನಾಲ್ಕು ಕಂಬಗಳ ಮೇಲೆ, ಕಪ್ಪ–ಕಪ್ಪಗೆ, ಕೋಣನ ಆಕಾರ ಹೊಂದಿರುವ ಅದೇನೋ ಒಂದು ಇದೆ".–ಎಂದನು. ಇದೇ ರೀತಿ, ಆದುನಿಕ ಕಾಲದ, ಅನಾರ್ಷವೂ,[೧೫] ನವೀನವೂ[೧೬] ಆದ ಗ್ರಂಥಗಳನ್ನು ಓದುವವರೂ, ಮತ್ತು 'ಪ್ರಾಕೃತ'[೧೭] ಭಾಷೆಯವರೂ, 'ಋಷಿ–ಪ್ರಣೀತ'ವಾದ ಗ್ರಂಥಗಳನ್ನೋದದೆ, ನವೀನವೂ, ಕ್ಷುದ್ರಬುದ್ಧಿಗಳಿಂದ ಕಲ್ಪಿತವೂ ಆದ ಸಂಸ್ಕೃತದ ಮತ್ತು (ಅನ್ಯ) ಭಾಷೆಗಳ ಗ್ರಂಥಗಳನ್ನೋದಿ, ಒಬ್ಬರು ಇನ್ನೊಬ್ಬರ ನಿಂದೆಯಲ್ಲಿ ತತ್ಪರರಾಗಿ, ಸುಳ್ಳು ಸುಳ್ಳೇ ಆದ ಕಲಹಗಳನ್ನು ಉಂಟುಮಾಡಿದ್ದಾರೆ. ಇವರ ಕಥನವು ಬುದ್ಧಿವಂತರಿಗೂ ಅಥವಾ ಬೇರೆಯವರಿಗೂ ಕೂಡ ಒಪ್ಪಲು ಯೋಗ್ಯವಾದುದಲ್ಲ. ಏಕೆಂದರೆ, "ಕುರುಡರ ಹಿಂದೆ ಕುರುಡರು ನಡೆದರೆ, ದುಃಖವನ್ನು ಹೊಂದದೇ ಇರುವುದೆಂತು?" ಅದೇ ರೀತಿ ಇಂದಿನ ಅಲ್ಪ ವಿದ್ಯಾಯುಕ್ತರೂ, ಸ್ವಾರ್ಥಿಗಳೂ, ಇಂದ್ರಿಯಾರಾಮರೂ ಆದ ಪುರುಷರ ಲೀಲೆ ಜಗತ್ತನ್ನು ನಾಶಮಾಡುವಂತಹುದಾಗಿದೆ.

**ಪ್ರಶ್ನೆ:**– ಕಾರಣವಿಲ್ಲದೆ ಕಾರ್ಯವಾಗದಿರುವಾಗ, ಕಾರಣಕ್ಕೆ ಕಾರಣವೇತಕ್ಕಿಲ್ಲ?

**ಉತ್ತರ:**– ಓ ಮುಗ್ಧ ಸೋದರರರೇ! ನಿಮ್ಮ ಬುದ್ಧಿಯನ್ನೇತಕ್ಕೆ ಸ್ವಲ್ಪವಾದರೂ ಉಪಯೋಗಿಸುವುದಿಲ್ಲ? ನೋಡಿರಿ, ಜಗತ್ತಿನಲ್ಲಿ ಎರಡು ಪದಾರ್ಥಗಳಿರುತ್ತವೆ. 'ಒಂದು ಕಾರಣ', 'ಎರಡನೆಯದು ಕಾರ್ಯ'. ಯಾವುದು ಕಾರಣವೋ, ಅದು ಕಾರ್ಯವಲ್ಲ; ಮತ್ತು ಯಾವಾಗ ಅದು ಕಾರ್ಯವಾಗಿರುತ್ತದೋ, ಆಗ ಅದು ಕಾರಣವಲ್ಲ. ಎಲ್ಲಿಯವರೆಗೆ ಮಾನವನು ಸೃಷ್ಟಿಯನ್ನು ಅದು ಇರುವಂತೆ ತಿಳಿದುಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಅವನಿಗೆ ಯಥಾವತ್ತಾದ ಜ್ಞಾನವು ಪ್ರಾಪ್ತವಾಗುವುದಿಲ್ಲ.–

**ನಿತ್ಯಯಾಃ ಸತ್ತ್ವರಜಸ್ತಮಸಾಂ ಸಾಮ್ಯಾವಸ್ಥಾಯಾಃ ಪ್ರಕೃತೇರುತ್ಪನ್ನಾ ನಾಂ ಪರಮಸೂಕ್ಷ್ಮಾಣಾಂ ಪೃಥಕ್ಪೃಥಗ್ವರ್ತ ಮಾನಾನಾಂ ತತ್ತ್ವಪರಮಾಣೂನಾಂ ಪ್ರಥಮಃ ಸಂಯೋಗಾರಂಭಃ ಸಂಯೋಗವಿಶೇಷಾದವಸ್ಥಾಂತರಸ್ಯ ಸ್ಥೂಲಾಕಾರಪ್ರಾಪ್ತಿಃ ಸೃಷ್ಟಿರುಚ್ಯತೇ ॥**

---

೧೪. ಈ ಬಗ್ಗೆ ತೃತೀಯ ಸಮುಲ್ಲಾಸದಲ್ಲಿ ವಿಚಾರ ಮಾಡಿಯಾಗಿದೆ. ಇಲ್ಲಿ ಮತ್ತೆ ದೃಷ್ಟಾಂತದೊಡನೆ ಸ್ಪಷ್ಟೀಕರಣ ಕೊಡಲಾಗಿದೆ.

೧೫. ಎಂದರೆ, ಐರೋಪ್ಯ ವಿದ್ವಾಂಸರಿಂದ ರಚಿತವಾದ, ಮತ್ತು ಅವರ ಅನುಯಾಯಿಗಳಾದ ಭಾರತೀಯ, ಹಾಗೂ ಭಾರತೀಯೇತರ ವಿದ್ವಾಂಸರಿಂದ ರಚಿತವಾದ ಗ್ರಂಥಗಳು. –ಸಂ.

೧೬. ಎಂದರೆ, ಆಂಗ್ಲಭಾಷೆಯ ಗ್ರಂಥಗಳು, ಅದರ ಅನುವಾದಗಳು; ಇತ್ಯಾದಿ. –ಸಂ

೧೭. ಎಂದರೆ ಸಂಸ್ಕೃತದಿಂದ ಅಪಭ್ರಂಶಿತವಾದ ಭಾರತೀಯ ಭಾಷಾಭಾಷಿಗಳು. –ಸಂ

ಅನಾದಿಯೂ, ನಿತ್ಯಸ್ವರೂಪವೂ ಆದ, ಸತ್ತ್ವ ರಜಸ್ಸು ಮತ್ತು ತಮಸ್ಸು- ಈ ಗುಣಗಳ ಏಕಾವಸ್ಥೆಯಾಗಿರುವ ಪ್ರಕೃತಿಯಿಂದ ಉತ್ಪನ್ನವಾದ ಯಾವ ಪರಮ ಸೂಕ್ಷ್ಮವೂ, ಬೇರೆ ಬೇರೆಯಾಗಿ ಇರುವಂತಹವೂ ಆದ ತತ್ತ್ವದ ಅಂಗಗಳಿವೆಯೋ, ಅವುಗಳ ಪ್ರಥಮ ಸಂಯೋಗದ ಯಾವ ಆರಂಭವಿದೆಯೋ, ಯಾವುದು ಸಂಯೋಗ ವಿಶೇಷಗಳಿಂದ ಬೇರೆ ಬೇರೆ ಸ್ಥಿತಿಗಳನ್ನು ಎಂದರೆ ಬೇರೆ ಬೇರೆ ರೂಪಗಳನ್ನು ಹೊಂದುತ್ತಾ, ಸೂಕ್ಷ್ಮದಿಂದ ಸ್ಥೂಲ ಸ್ಥೂಲವಾಗುತ್ತಾ-ಆಗಿಸುತ್ತಾ ವಿಚಿತ್ರಾದ ಸ್ವರೂಪವನ್ನು ಪಡೆದುಕೊಂಡಿದೆಯೋ, ಅದು ಸಂಸರ್ಗವಾಗಿರುವುದರಿಂದ ಸೃಷ್ಟಿಯೆನಿಸುತ್ತದೆ. ಪ್ರಥಮ ಸಂಯೋಗದಲ್ಲಿ ಯಾವುದು ಸೇರುವ-ಸೇರಿಸುವ ಪದಾರ್ಥವಾಗಿದೆಯೋ, ಯಾವುದು ಸಂಯೋಗದ ಪ್ರಾರಂಭ ಮತ್ತು ವಿಯೋಗದ ಅಂತವಾಗಿದೆಯೋ, ಎಂದರೆ, ಯಾವುದರ ವಿಭಾಗವಾಗಲಾರದೋ, ಅದು ಕಾರಣವೆಂದೂ, ಮತ್ತು ಯಾವುದು ಸಂಯೋಗದ ನಂತರ ಉಂಟಾಗುತ್ತದೆಯೋ, ಮತ್ತು ವಿಯೋಗದ ನಂತರ ಹಾಗೆ ಇರುವುದಿಲ್ಲವೋ, ಅದು ಕಾರ್ಯವೆಂದೂ ಎನ್ನಿಸಿಕೊಳ್ಳುತ್ತದೆ. ಯಾವನು ಆ ಕಾರಣದ ಕಾರಣವನ್ನೂ, ಕಾರ್ಯದ ಕಾರ್ಯವನ್ನೂ, ಕರ್ತೃವಿನ ಕರ್ತೃವನ್ನೂ, ಸಾಧನದ ಸಾಧನವನ್ನೂ ಮತ್ತು ಸಾಧ್ಯದ ಸಾಧ್ಯವನ್ನೂ ಕುರಿತು ಮಾತನಾಡುತ್ತಾನೋ, ಅವನು ನೋಡುತ್ತಿದ್ದರೂ ಕುರುಡನು; ಆಲಿಸುತ್ತಿದ್ದರೂ ಕಿವುಡನು ಮತ್ತು ತಿಳಿದುಕೊಳ್ಳುತ್ತಿದ್ದರೂ ಮೂಢನು ಆಗಿರುತ್ತಾನೆ. "ಕಣ್ಣಿನ ಕಣ್ಣು, ದೀಪದ ದೀಪ ಮತ್ತು ಸೂರ್ಯನ ಸೂರ್ಯ ಎಂದಾದರೂ ಇರಬಲ್ಲುದೋ?" ಯಾವುದು ಯಾವುದರಿಂದ ಉತ್ಪನ್ನವಾಗುತ್ತದೋ ಅದರ ಕಾರಣ ಅದು. ಮತ್ತು ಯಾವುದು ಉತ್ಪನ್ನವಾಗುತ್ತದೋ, ಅದು 'ಕಾರ್ಯ' ಮತ್ತು ಯಾವನು ಕಾರಣವನ್ನು ಕಾರ್ಯರೂಪವಾಗಿ ಮಾಡುವವನಾಗಿದ್ದಾನೋ, ಅವನು 'ಕರ್ತೃ'-ಎನಿಸುತ್ತಾನೆ.

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।**

**ಉಭಯೋರಪಿ ದೃಷ್ಟೋಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥** (ಗೀತಾ:- ೨.೧೬)

ಎಂದಿಗೂ ಅಸತ್ತಿಗೆ ಭಾವ ಎಂದರೆ ಇರುವಿಕೆ ಮತ್ತು ಸತ್ತಿಗೆ ಅಭಾವ, ಎಂದರೆ ಇಲ್ಲದಿರುವಿಕೆ ಉಂಟಾಗುವುದಿಲ್ಲ. ಇವೆರಡರ ನಿರ್ಣಯವನ್ನು ತತ್ತ್ವದರ್ಶಿಗಳಾದ ಜನರು ತಿಳಿದಿದ್ದಾರೆ. ಬೇರೆ ಪಕ್ಷಪಾತಿಗಳೂ, ಆಗ್ರಹಿಗಳೂ, ಮಲಿನಾತ್ಮರೂ, ಅವಿದ್ವಾಂಸರೂ ಆಗಿರುವ ಜನರು ಈ ವಿಷಯವನ್ನು ಸಹಜವಾಗಿ ಹೇಗೆ ತಿಳಿಯಬಲ್ಲರು?

ಏಕೆಂದರೆ, ಯಾವ ಮಾನವನು ವಿದ್ವಾಂಸನೂ, ಸತ್ಸಂಗಿಯೂ ಆಗಿ, ಪೂರ್ಣ ವಿಚಾರವನ್ನು ಮಾಡುವುದಿಲ್ಲವೋ, ಅವನು ಸದಾ ಭ್ರಮಜಾಲದಲ್ಲಿ ಬಿದ್ದಿರುತ್ತಾನೆ. ಯಾರು ಸಮಸ್ತ ವಿದ್ಯೆಗಳ ಸಿದ್ಧಾಂತಗಳನ್ನೂ ತಿಳಿದಿರುತ್ತಾರೋ ಮತ್ತು ತಿಳಿಯಲು ಪರಿಶ್ರಮವನ್ನು ಮಾಡುತ್ತಾರೋ, ಆ ಪುರುಷರು ಧನ್ಯರು. ಅವರು ಸ್ವತಃ ತಿಳಿದು, ಅನ್ಯರಿಗೂ ನಿಷ್ಕಪಟತ್ವದಿಂದ ತಿಳಿಸುತ್ತಾರೆ. ಹೀಗೆ ನೋಡಿದಾಗ, ಯಾವನೇ ಆಗಿರಲಿ; ಕಾರಣವಿಲ್ಲದೆ ಸೃಷ್ಟಿಯಾಗುವುದೆಂದು ತಿಳಿಯುವವನು ಏನನ್ನೂ ತಿಳಿಯನು. ಸೃಷ್ಟಿಯ ರಚನೆಯಕ್ರಮ ಯಾವಾಗ ಸೃಷ್ಟಿಯ ಸಮಯ ಬರುತ್ತದೋ, ಆಗ ಪರಮಾತ್ಮನು ಆ ಪರಮಸೂಕ್ಷ್ಮ ಪದಾರ್ಥಗಳನ್ನು ಒಂದುಗೂಡಿಸುತ್ತಾನೆ. ಅದರ ಪ್ರಥಮಾವಸ್ಥೆಯಲ್ಲಿ ಯಾವುದು ಪರಮಸೂಕ್ಷ್ಮವಾದ 'ಪ್ರಕೃತಿ' ಎಂಬ ಕಾರಣಕ್ಕಿಂತ ಸ್ವಲ್ಪ ಸ್ಥೂಲವಾಗಿರುತ್ತದೋ, ಅದಕ್ಕೆ 'ಮಹತ್ತ'ವೆಂದು ಹೆಸರು; ಮತ್ತು ಯಾವುದು ಅದಕ್ಕಿಂತ ಸ್ವಲ್ಪ ಸ್ಥೂಲವಾಗಿರುತ್ತದೋ, ಅದರ ಹೆಸರು ಅಹಂಕಾರವೆಂದಾಗಿದೆ. ಮತ್ತು ಅಹಂಕಾರದಿಂದ ಬೇರೆ ಬೇರೆಯಾದ 'ಐದು ಸೂಕ್ಷ್ಮಭೂತಗಳು', 'ಶ್ರೋತ್ರ', 'ಚರ್ಮ', 'ನೇತ್ರ', 'ಜಿಹ್ವೆ', 'ನಾಸಿಕ'-ಈ ಐದು ಜ್ಞಾನೇಂದ್ರಿಯಗಳು, 'ವಾಕ್ಕು', 'ಹಸ್ತಗಳು', 'ಪಾದಗಳು', 'ಉಪಸ್ಥ' ಹಾಗೂ 'ಗುದಾ' - ಈ ಐದು ಕರ್ಮೇಂದ್ರಿಯಗಳು, ಮತ್ತು ಹನ್ನೊಂದನೆಯದಾದ ಮನಸ್ಸು ಸ್ವಲ್ಪ ಸ್ಥೂಲವಾಗಿ ಉತ್ಪನ್ನವಾಗುತ್ತದೆ. ಮತ್ತು ಆ ಪಂಚತನ್ಮಾತ್ರೆಗಳಿಂದ ಅನೇಕ ಸ್ಥೂಲಾವಸ್ಥೆಗಳನ್ನು ಹೊಂದುತ್ತಾ, ಯಾವವನ್ನು ನಾವುಗಳು ಪ್ರತ್ಯಕ್ಷವಾಗಿ ನೋಡುತ್ತೇವೋ, 'ಆ ಪಂಚಸ್ಥೂಲಭೂಗಳು' ಕ್ರಮಶಃ ಉತ್ಪನ್ನವಾಗುತ್ತವೆ. ಅವುಗಳಿಂದ ನಾನಾಬಗೆಯ ಓಷಧಿಗಳೂ, ವೃಕ್ಷ - ಮೊದಲಾದುವೂ, ಅವುಗಳಿಂದ ಅನ್ನವೂ, ಅನ್ನದಿಂದ ವೀರ್ಯವೂ ಮತ್ತು ವೀರ್ಯದಿಂದ ಶರೀರವೂ ಉದ್ಭವಿಸುತ್ತವೆ. ಆದರೆ, ಆದಿ ಸೃಷ್ಟಿಯು ಮೈಥುನಜನ್ಯವಾಗಿರುವುದಿಲ್ಲ. ಏಕೆಂದರೆ, ಯಾವಾಗ ಸ್ತ್ರೀ-ಪುರುಷರ ಶರೀರಗಳನ್ನು ಪರಮಾತ್ಮನು ಸೃಜಿಸಿ, ಅವುಗಳಲ್ಲಿ ಜೀವರ ಸಂಯೋಗವನ್ನು ಕಲ್ಪಿಸುತ್ತಾನೋ, ಆ ಮೇಲೆಯೇ ಮೈಥುನಜನ್ಯವಾದ ಸೃಷ್ಟಿಯು ನಡೆದುಬರುತ್ತದೆ.

ನೋಡಿರಿ! ಯಾವುದನ್ನು ವಿದ್ವಜ್ಜನರು ನೋಡಿ ಆಶ್ಚರ್ಯಪಡುತ್ತಾರೋ, ಅಂತಹ ಶರೀರದಲ್ಲಿ ಪರಮಾತ್ಮನು ಯಾವ ರೀತಿಯ ಜ್ಞಾನಪೂರ್ವಕವಾದ ಸೃಷ್ಟಿಯನ್ನು ರಚಿಸಿದ್ದಾನೆ? 'ಒಳಗೆ ಮೂಳೆಗಳ ಜೋಡಣೆ, ನಾಡಿಗಳ ಬಂಧನ, ಮಾಂಸದ ಲೇಪನ, ಚರ್ಮದ ಆವರಣ, ಗುಲ್ಮ, ಪಿತ್ತಜನಕಾಂಗ, ಶ್ವಾಸಕೋಶಗಳು, ವಾಯುನಿಯಾಮಕ ಯಂತ್ರದ ಸ್ಥಾಪನೆ, ಜೀವನ

ಸಂಯೋಜನೆ, ಶಿರಸ್ಸೆಂಬ ಮೂಲ ರಚನೆ, ಲೋಮ-ಉಗುರು-ಮೊದಲಾದುದರ ಸ್ಥಾಪನೆ, ಕಣ್ಣಿನ ಅತ್ಯಂತ ಸೂಕ್ಷ್ಮ ನರದ, ತಂತಿಯಂತಹ ಗ್ರಂಥನ, ಇಂದ್ರಿಯಗಳ ಮಾರ್ಗಗಳ ಪ್ರಕಾಶನ, ಜೀವನು ಜಾಗೃತ, ಸ್ವಪ್ನ, ಸುಷುಪ್ತಿಯ ಅವಸ್ಥೆಗಳನ್ನು ಅನುಭವಿಸಲು ಸ್ಥಾನವಿಶೇಷಗಳ ನಿರ್ಮಾಣ, ಸಮಸ್ತಧಾತುವಿನ ವಿಭಾಗಕರಣ, ಕಲೆ, ಕೌಶಲಗಳ ಸ್ಥಾಪನೆ – ಮೊದಲಾದ ಅದ್ಭುತ ಸೃಷ್ಟಿಯನ್ನು ಪರಮೇಶ್ವರನನ್ನು ಬಿಟ್ಟು ಯಾವನು ತಾನೇ ಮಾಡಬಲ್ಲನು? "ಇದೇ ಅಲ್ಲದೆ, ನಾನಾಪ್ರಕಾರದ ರತ್ನ-ಧಾತುಗಳಿಂದ ಜಟಿತವಾದ ಭೂಮಿ, ವಿವಿಧಪ್ರಕಾರದ ಆಲದಮರ – ಮೊದಲಾದುವುಗಳ ಬೀಜಗಳಲ್ಲಿ ಅತಿಸೂಕ್ಷ್ಮ ರಚನೆ, ಅಸಂಖ್ಯವಾದ ಹಸಿರು, ಬಿಳಿ, ಹಳದಿ, ಕಪ್ಪು, ಚಿತ್ರಿತ ಮತ್ತು ನಡುವಣ ರೂಪಗಳಿಂದ ಯುಕ್ತವೂ, ಸುಗಂಧಭರಿತವೂ, ಪತ್ರ, ಪುಷ್ಪ, ಫಲ, ಅನ್ನ, ಕಂದ – ಮೂಲಗಳ ನಿರ್ಮಾಣ, ಸಿಹಿಯ, ಉಪ್ಪಿನ, ಕಾರವಾದ, ಕಹಿಯಾದ, ಒಗರಾದ, ಹುಳಿಯಾದ ವಿವಿಧ ರಸಗಳು, ಅನೇಕಾನೇಕವಾದ, ಕೋಟ್ಯಂತರ ಭೂಗೋಳಗಳು, ಸೂರ್ಯ, ಚಂದ್ರ ಮೊದಲಾದ ಲೋಕಗಳ ನಿರ್ಮಾಣ, ಧಾರಣ, ತಿರುಗಿಸುವಿಕೆ, ನಿಯಮಗಳಲ್ಲಿಡುವುದು – ಮೊದಲಾದುವನ್ನು ಪರಮೇಶ್ವರನನ್ನು ಬಿಟ್ಟು ಬೇರೆ ಯಾವನೂ ಕೂಡ ಮಾಡಲಾರನು."

ಯಾವನಾದರೂ, ಯಾವುದಾದರೂ ಪದಾರ್ಥವನ್ನು ನೋಡಿದಾಗ, ಎರಡು ಬಗೆಯ ಜ್ಞಾನ ಪ್ರಾಪ್ತವಾಗುತ್ತದೆ. ಒಂದನೆಯದಾಗಿ, ಆ ಪದಾರ್ಥ ಹೇಗೆ ಇದೆಯೋ, ಅದರದು ಮತ್ತು ಎರಡನೆಯದಾಗಿ, ಅದರಲ್ಲಿನ ರಚನೆಯನ್ನು ನೋಡಿ, ರಚಿಸುವವನ ಜ್ಞಾನ ಲಭಿಸುತ್ತದೆ. ಉದಾಹರಣೆಗೆ, ಯಾವನೋ ಒಬ್ಬ ಪುರುಷನು ಸುಂದರವಾದ ಒಡವೆಯನ್ನು ಕಾಡಿನಲ್ಲಿ ಕಂಡನು. ನೋಡಿದ ಮೇಲೆ, ಇದು ಚಿನ್ನದ್ದು ಮತ್ತು ಯಾವನೋ ಬುದ್ಧಿವಂತನಾದ ಕಾರ್ಯಕುಶಲನು ಅದನ್ನು ರಚಿಸಿದ್ದಾನೆ – ಎಂದು ವಿದಿತವಾಯಿತು. ಇದೇ ರೀತಿ, ಈ ನಾನಾ ಪ್ರಕಾರದ ಸೃಷ್ಟಿಯಲ್ಲಿನ ವಿವಿಧ ರಚನೆಯು, ನಿರ್ಮಾಣಕರ್ತೃವಾದ ಪರಮೇಶ್ವರನ ಇರುವಿಕೆಯನ್ನು ಸಿದ್ಧಪಡಿಸುತ್ತದೆ.

**ಪ್ರಶ್ನೆ:**- ಮನುಷ್ಯರ ಸೃಷ್ಟಿ ಮೊದಲಾಯಿತೋ ಅಥವಾ ಪೃಥಿವೀ ಮೊದಲಾದುದರದೋ?

**ಉತ್ತರ:**- 'ಪೃಥಿವೀ – ಮೊದಲಾದುದರದು.' ಏಕೆಂದರೆ, ಪೃಥಿವೀ ಮೊದಲಾದುದು ಇಲ್ಲದೇ ಹೋದರೆ, ಮನುಷ್ಯನ ನಿವಾಸ ಮತ್ತು ಪಾಲನ ಆಗಲಾರದು.

**ಪ್ರಶ್ನೆ:**- ಸೃಷ್ಟಿಯ ಆದಿಯಲ್ಲಿ, ಒಬ್ಬನನ್ನು ಸೃಜಿಸಿದ್ದನೋ, ಅಥವಾ ಅನೇಕ ಮಾನವರನ್ನು ಉತ್ಪನ್ನಮಾಡಿದ್ದನೋ? ಇಲ್ಲವೇ ಬೇರೆ ಹೇಗಾದರೂ ಮಾಡಿದ್ದನೋ?

**ಉತ್ತರ :**- ಅನೇಕರನ್ನು. ಏಕೆಂದರೆ – ಯಾವ ಜೀವರ ಕರ್ಮಗಳು ಈಶ್ವರೀಯ ಸೃಷ್ಟಿಯಲ್ಲಿ ಉತ್ಪನ್ನರಾಗಲು ಯೋಗ್ಯವಾಗಿದ್ದವೋ, ಅವರಿಗೆ ಈಶ್ವರನು ಸೃಷ್ಟಿಯ ಆದಿಯಲ್ಲಿ ಜನ್ಮವೀಯುತ್ತಾನೆ. ಏಕೆಂದರೆ- **"ಮನುಷ್ಯಾ ಋಷಯಶ್ಚ ಯೇ**[೧೮] **। ತತೋ ಮನುಷ್ಯಾ ಅಜಾಯಂತ ।"**[೧೯] – ಹೀಗೆ ಯಜುರ್ವೇದಬ್ರಾಹ್ಮಣದಲ್ಲಿ ಬರೆದಿದೆ. ಈ ಪ್ರಮಾಣದಿಂದ, ಆದಿಯಲ್ಲಿ ಅನೇಕರು, ಎಂದರೆ ನೂರಾರು-ಸಾವಿರಾರು ಜನ ಮಾನವರು ಉದ್ಭವಿಸಿದರೆಂದೇ ನಿಶ್ಚಯವಾಗುತ್ತದೆ. ಮತ್ತು ಸೃಷ್ಟಿಯಲ್ಲಿ ನೋಡುವುದರಿಂದಲೂ ಮಾನವರು ಅನೇಕ ಜನ ತಾಯಿ-ತಂದೆಗಳ ಸಂತತಿಗಳಾಗಿದ್ದಾರೆಂದು ನಿಶ್ಚಿತವಾಗುತ್ತದೆ.

**ಪ್ರಶ್ನೆ:**- ಆದಿಸೃಷ್ಟಿಯಲ್ಲಿ ಮಾನವರೇ ಮೊದಲಾದವರ ಸೃಷ್ಟಿಯು ಬಾಲ್ಯ, ಯೌವನ ಅಥವಾ ವೃದ್ಧಾವಸ್ಥೆಯಲ್ಲಿ ಆಗಿದ್ದಿತೋ ಅಥವಾ ಮೂರು ಅವಸ್ಥೆಗಳಲ್ಲಿಯೂ ಆಗಿದ್ದೀತೋ?

**ಉತ್ತರ:**- 'ಯುವಾವಸ್ಥೆಯಲ್ಲಿ', ಏಕೆಂದರೆ, ಬಾಲಕರನ್ನು ಉತ್ಪನ್ನಮಾಡಿದ್ದರೆ, ಅವರನ್ನು ಪಾಲಿಸಲು ಬೇರೆ ಮಾನವರು ಆವಶ್ಯಕವಾಗುತ್ತಿದ್ದರು ಮತ್ತು ವೃದ್ಧಾವಸ್ಥೆಯಲ್ಲಿ ಮಾಡಿದ್ದರೆ, ಮೈಥುನಜನ್ಯ ಸೃಷ್ಟಿಯಾಗುತ್ತಿರಲಿಲ್ಲ. ಆದುದರಿಂದ ಯುವಾವಸ್ಥೆಯಲ್ಲಿಯೇ ಸೃಷ್ಟಿಸಿದ್ದಾನೆ.

**ಪ್ರಶ್ನೆ:**- ಎಂದಾದರೂ ಸೃಷ್ಟಿಯ ಪ್ರಾರಂಭವಿದೆಯೋ, ಅಥವಾ ಇಲ್ಲವೋ?

**ಉತ್ತರ:**- ಇಲ್ಲ. ಹೇಗೆ ಹಗಲಿಗಿಂತ ಮುನ್ನ ರಾತ್ರಿ ಮತ್ತು ರಾತ್ರಿಗೆ ಮುನ್ನ ಹಗಲು ಮತ್ತು ಹಗಲಿನ ನಂತರ ರಾತ್ರಿ ಮತ್ತು ರಾತ್ರಿಯ ನಂತರ ಹಗಲು ಸರಿಯಾಗಿ ನಡೆದುಬರುತ್ತದೋ, ಹಾಗೆಯೇ ಸೃಷ್ಟಿಗೆ ಮೊದಲು ಪ್ರಳಯ ಮತ್ತು ಪ್ರಳಯಕ್ಕೆ ಮೊದಲು

---

೧೮. ಯಜುರ್ವೇದ [೩೧.೯]; ತುಲನೆ ಮಾಡಿ. –ಸಂ

೧೯. ಶತಪಥ ಬ್ರಾಹ್ಮಣ [೧೪.೪.೨.೫] ಯು.ಮೀ.

ಸೃಷ್ಟಿ ಹಾಗೂ ಸೃಷ್ಟಿಯ ನಂತರ ಪ್ರಳಯ ಮತ್ತು ಪ್ರಳಯದ ನಂತರ ಸೃಷ್ಟಿ ಅನಾದಿಕಾಲದಿಂದ ಚಕ್ರದಂತೆ ನಡೆದುಬರುತ್ತದೆ. ಇದಕ್ಕೆ ಆದಿ ಅಥವಾ ಅಂತವಿಲ್ಲ. ಆದರೆ ಹೇಗೆ ಹಗಲಿನ ಅಥವಾ ರಾತ್ರಿಯ ಆರಂಭ ಹಾಗೂ ಅಂತ ಕಂಡುಬರುತ್ತದೋ, ಹಾಗೆಯೇ ಸೃಷ್ಟಿ ಮತ್ತು ಪ್ರಳಯದ ಆದಿ ಮತ್ತು ಅಂತ ಆಗುತ್ತಾ ಇರುತ್ತದೆ. ಏಕೆಂದರೆ, ಹೇಗೆ ಪರಮಾತ್ಮ, ಜೀವ ಮತ್ತು ಜಗತ್ತಿನ ಕಾರಣ ಮೂವರೂ ಸ್ವರೂಪದಿಂದ ಅನಾದಿಗಳಾಗಿದ್ದಾರೋ, ಹಾಗೆ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು 'ಪ್ರಳಯ ಪ್ರವಾಹ' ರೂಪದಲ್ಲಿ ಅನಾದಿಗಳಾಗಿವೆ. ಹೇಗೆ ನದಿಯ ಪ್ರವಾಹವು ಒಂದೇ ಬಗೆಯದಾಗಿ ತೋರುತ್ತದೋ, ಒಂದೊಂದು ಸಾರಿ ಹೇಗೆ ಬತ್ತಿ ಹೋಗುತ್ತದೋ, ಒಂದೊಂದು ಸಾರಿ ಕಾಣುವುದಿಲ್ಲವೋ, ಮತ್ತು ಹೇಗೆ ಮಳೆಗಾಲದಲ್ಲಿ ಕಾಣಿಸುತ್ತದೋ ಮತ್ತು ಬೇಸಿಗೆಯಲ್ಲಿ ಕಾಣುವುದಿಲ್ಲವೋ, ಹಾಗೆ ಆಗುತ್ತಾ-ಹೋಗುತ್ತಾ ಇರುವ ವ್ಯವಹಾರಗಳನ್ನು ಪ್ರವಾಹರೂಪವೆಂದು ತಿಳಿದುಕೊಳ್ಳಬೇಕು. ಹೇಗೆ ಪರಮೇಶ್ವರನ ಗುಣ-ಕರ್ಮ-ಸ್ವಭಾವಗಳು ಅನಾದಿಗಳಾಗಿವೆಯೋ, ಹಾಗೆಯೇ ಅವನ ಜಗತ್ತಿನ ಉತ್ಪತ್ತಿ, ಸ್ಥಿತಿ ಪ್ರಳಯದ ಮಾಡುವಿಕೆಯೂ ಅನಾದಿಯಾಗಿದೆ. ಹೇಗೆ ಈಶ್ವರನ ಗುಣಕರ್ಮಸ್ವಭಾವಗಳ ಆರಂಭ ಮತ್ತು ಕೊನೆಯಿಲ್ಲವೋ, ಹಾಗೆಯೇ ಅವನ ಕರ್ತವ್ಯಕರ್ಮಗಳಿಗೂ ಆರಂಭ ಮತ್ತು ಅಂತವಿಲ್ಲ.

**ಪ್ರಶ್ನೆ** :- ಈಶ್ವರನು ಯಾರು ಯಾರೋ ಜೀವರಿಗೆ ಮನುಷ್ಯ ಜನ್ಮವನ್ನೂ, ಯಾರು ಯಾರಿಗೋ ಸಿಂಹ ಮೊದಲಾದ ಕ್ರೂರ ಜನ್ಮಗಳನ್ನೂ ಮತ್ತು ಯಾರು ಯಾರಿಗೋ ಜಿಂಕೆ, ಹಸುಗಳು, ಆರಾರಿಗೋ ವೃಕ್ಷ ಮೊದಲಾದವುಗಳ, ಇನ್ನೂ ಯಾರಾರಿಗೋ ಕೃಮಿ-ಕೀಟ-ಪತಂಗ ಮೊದಲಾದ ಜನ್ಮಗಳನ್ನೂ ಕೊಟ್ಟಿದ್ದಾನೆ. ಇದರಿಂದ ಪರಮಾತ್ಮನಲ್ಲಿ ಪಕ್ಷಪಾತ ಕಂಡು ಬರುತ್ತದೆ ಅಲ್ಲವೇ?

**ಉತ್ತರ** :- ಪೂರ್ವಸೃಷ್ಟಿಯಲ್ಲಿ ಆ ಜೀವರುಗಳು ಮಾಡಿದ ಕರ್ಮಗಳಿಗೆ ಅನುಸಾರ ವ್ಯವಸ್ಥೆಯನ್ನು ಮಾಡುವುದರಿಂದ, ಪರಮಾತ್ಮನಿಗೆ ಪಕ್ಷಪಾತ ದೋಷ ಬರುವುದಿಲ್ಲ. ಕರ್ಮವಿಲ್ಲದೆ ಜನ್ಮಕೊಟ್ಟಿದ್ದರೆ, ಪಕ್ಷಪಾತ ದೋಷ ತಗಲುತ್ತಿದ್ದಿತು.

**ಪ್ರಶ್ನೆ**:- ಮಾನವರ ಆದಿಸೃಷ್ಟಿ ಯಾವ ಸ್ಥಳದಲ್ಲಿ ಆಯಿತು?

**ಉತ್ತರ**:- ಯಾವುದನ್ನು 'ಟಿಬೆಟ್' ಎನ್ನುತ್ತಾರೋ, ಆ 'ತ್ರಿವಿಷ್ಟಪ'ದಲ್ಲಿ.

**ಪ್ರಶ್ನೆ**:- ಆದಿಸೃಷ್ಟಿಯಲ್ಲಿ ಒಂದು ಜಾತಿಯಿದ್ದಿತೋ, ಅಥವಾ ಅನೇಕವೋ?

**ಉತ್ತರ**:- ಒಂದು ಮಾನವ ಜಾತಿಯಿದ್ದಿತು. ಆ ಮೇಲೆ, **"ವಿಜಾನೀಹ್ಯಾರ್ಯಾನ್ ಯೇ ಚ ದಸ್ಯವಃ"** - ಇದು ಋಗ್ವೇದದ (೧.೫೧.೮) ವಚನವಾಗಿದೆ. ಶ್ರೇಷ್ಠರ ಹೆಸರು 'ಆರ್ಯ', 'ವಿದ್ವಾಂಸ', 'ದೇವ' - ಎಂದೂ, ದುಷ್ಟರ ಹೆಸರು 'ದಸ್ಯು'-ಎಂದರೆ ದರೋಡೆಕಾರ, ಮೂರ್ಖ ಎಂದೂ ಆಗಿರುವುದರಿಂದ 'ಆರ್ಯ', ಮತ್ತು 'ದಸ್ಯು'-ಎಂದು ಹೆಸರುಗಳಾದುವು. **"ಉತ ಶೂದ್ರೇ ಉತಾರ್ಯೇ"**- ಇದು ಅಥರ್ವ ವೇದದ (೧೯.೬೨.೧) ವಚನವಾಗಿದೆ. ಆರ್ಯರಲ್ಲಿ ಮೊದಲು ಹೇಳಿದ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ-ಎಂದು ನಾಲ್ಕು ಭೇದಗಳಾದವು. ವಿದ್ವಾಂಸರಾದ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗೆ ಮತ್ತು ಅವಿದ್ವಾಂಸರಾದರೂ ಪರಿಶ್ರಮಿಗಳೂ, ಸಚ್ಚರಿತ್ರರೂ ಆದ ಶೂದ್ರರಿಗೆ 'ಆರ್ಯ'ರೆಂದೂ, ಅನಾಚಾರಿಗಳೂ, ಅಸಭ್ಯರೂ ಆದವರಿಗೆ 'ಅನಾರ್ಯ'ರೆಂದೂ ಹೆಸರಾಯಿತು.

**ಪ್ರಶ್ನೆ**:- ಮತ್ತೆ ಅವರು ಇಲ್ಲಿ ಹೇಗೆ ಬಂದರು?

**ಉತ್ತರ**:- ಯಾವಾಗ ಆರ್ಯರ ಮತ್ತು ದಸ್ಯುಗಳ ನಡುವೆ, ಎಂದರೆ 'ದೇವಜನರು' ಎನ್ನಿಸಿಕೊಂಡ ವಿದ್ವಾಂಸರ ಹಾಗೂ 'ಅಸುರರು' ಎನ್ನಿಸಿಕೊಂಡ ಅವಿದ್ವಾಂಸರ ನಡುವೆ ಸದಾ ಕಲಹ-ಕಿತ್ತಾಟ ಆಗಲಾರಂಭಿಸಿತೋ, ಯಾವಾಗ ಬಹಳ ಉಪದ್ರವವಾಗಲಾರಂಭಿಸಿತೋ, ಆಗ ಆರ್ಯರು, "ಭೂಲೋಕದಲ್ಲೆಲ್ಲಾ ಈ ಭೂಮಿಯ ಖಂಡವೇ ಉತ್ತಮವೆಂದು ತಿಳಿದು" ಇಲ್ಲಿಯೇ ಬಂದು ನೆಲೆಸಿದರು. ಇದೇ ಕಾರಣದಿಂದ ಈ ದೇಶಕ್ಕೆ 'ಆರ್ಯಾವರ್ತ'ವೆಂದು ಹೆಸರಾಯಿತು.

**ಪ್ರಶ್ನೆ**:- ಆರ್ಯಾವರ್ತದ ಅವಧಿ ಎಲ್ಲಿಯವರೆಗೆ ಇದೆ?

**ಉತ್ತರ**:- **ಅಸಮುದ್ರಾತ್ತು ವೈಪೂರ್ವಾದಾಸಮುದ್ರಾತ್ತುಪಶ್ಚಿಮಾತ್ ।**

**ತಯೋರೇವಾಂತರಂ ಗಿರ್ಯೋರಾರ್ಯಾವರ್ತಂ ವಿದುರ್ಬುಧಾಃ ॥ ೧ ॥** (ಮನು :- ೨.೨೨)

**ಸರಸ್ವತೀದೃಷದ್ವತ್ಯೋರ್ದೇವನದ್ಯೋರ್ಯದಂತರಮ್ ।**

**ತಂ ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥ ೨ ॥** (ಮನು :-೨.೧೭)

ಉತ್ತರದಲ್ಲಿ 'ಹಿಮಾಲಯ', ದಕ್ಷಿಣದಲ್ಲಿ 'ವಿಂಧ್ಯಾಚಲ', ಪೂರ್ವ ಮತ್ತು ಪಶ್ಚಿಮದಲ್ಲಿ 'ಸಮುದ್ರಗಳು'(೧), ಮತ್ತು ಪಶ್ಚಿಮದಲ್ಲಿ 'ಸರಸ್ವತೀ' (ಅಟಕ್ ಅಥವಾ ಸಿಂಧೂ) ನದಿ, ಪೂರ್ವದಲ್ಲಿ ನೇಪಾಳದ ಪೂರ್ವಭಾಗದ ಪರ್ವತದಿಂದ ಹೊರಟು, ಬಂಗಾಳದ, ಅಸಾಮಿನ ಪೂರ್ವದಲ್ಲಿ ಮತ್ತು ಬ್ರಹ್ಮದೇಶದ (ಬರ್ಮಾ) ಪಶ್ಚಿಮದ ಕಡೆಗೆ ಹರಿದು, ದಕ್ಷಿಣದ ಸಮುದ್ರದಲ್ಲಿ ಸೇರುವ, 'ಬ್ರಹ್ಮಪುತ್ರಾ' ಎಂದು ಯಾವುದನ್ನು ಕರೆಯುತ್ತಾರೋ, ಮತ್ತು ಯಾವುದು ಉತ್ತರದ ಪರ್ವತಗಳಿಂದ ಹೊರಟು, ದಕ್ಷಿಣದ ಸಮುದ್ರದ ಕೊಲ್ಲಿಯಲ್ಲಿ ಬಂದು ಸೇರುತ್ತದೋ, ಆ ದೃಷದ್ವತೀ ನದಿ; ಹಿಮಾಲಯದ ಮಧ್ಯರೇಖೆಯಿಂದ ದಕ್ಷಿಣಕ್ಕೆ, ಮತ್ತು ಪರ್ವತಗಳ ಮಧ್ಯದಲ್ಲಿ ಮತ್ತು ರಾಮೇಶ್ವರದವರೆಗೆ ವಿಂಧ್ಯಾಚಲದ[೨೦] ನಡುವೆ ಎಷ್ಟು ಪ್ರಾಂತಗಳಿವೆಯೋ, ಅವೆಲ್ಲವನ್ನೂ, ದೇವಜನರು, ಎಂದರೆ ವಿದ್ವಾಂಸರು ನೆಲೆಗೊಳಿಸಿರುವುದರಿಂದ **"ಆರ್ಯಾವರ್ತ"**ವೆನ್ನುತ್ತಾರೆ. ಮತ್ತು ಆರ್ಯಜನರು ನಿವಾಸ ಮಾಡುವುದರಿಂದ 'ಆರ್ಯಾವರ್ತ' ವೆನಿಸಿಕೊಂಡಿದೆ. (ಎರಡನೆಯ ಶ್ಲೋಕದಲ್ಲಿ 'ಬ್ರಹ್ಮಾವರ್ತ'ವೆಂಬ ಶಬ್ದವಿದೆ. 'ಬ್ರಹ್ಮ' – ಎಂದರೆ ವೇದ ಜ್ಞಾನ ಆರ್ಯರಿಗೆ ಮಾನ್ಯವಾದುದರಿಂದ 'ಬ್ರಹ್ಮಾವರ್ತ' ವೆಂದರೂ ಉಚಿತವೇ ಸರಿ.)

**ಪ್ರಶ್ನೆ:**– ಮೊದಲು ಈ ದೇಶದ ಹೆಸರು ಏನಾಗಿತ್ತು? ಮತ್ತು ಇದರಲ್ಲಿ ಯಾರು ವಾಸಿಸುತ್ತಿದ್ದರು?

**ಉತ್ತರ:**– "ಇದಕ್ಕಿಂತ ಮೊದಲು ಈ ದೇಶಕ್ಕೆ ಯಾವ ಹೆಸರೂ ಇರಲಿಲ್ಲ. ಮತ್ತು ಆರ್ಯರಿಗಿಂತ ಮೊದಲು ಈ ದೇಶದಲ್ಲಿ ಯಾರೂ ವಾಸಿಸುತ್ತಲೂ ಇರಲಿಲ್ಲ." ಏಕೆಂದರೆ, ಆರ್ಯಜನರು ಸೃಷ್ಟಿಯ ಆದಿಯಲ್ಲಿ, ಸ್ವಲ್ಪ ಕಾಲಾನಂತರ, ಟಿಬೆಟ್ಟಿನಿಂದ ನೇರವಾಗಿ ಈ ದೇಶಕ್ಕೇ ಬಂದು ನೆಲೆಸಿದ್ದರು.

**ಪ್ರಶ್ನೆ:**– ಕೆಲವರು–"ಈ ಜನರು ಈರಾನಿನಿಂದ ಬಂದರು. ಆದುದರಿಂದಲೇ ಈ ಜನರಿಗೆ 'ಆರ್ಯರು' ಎಂದು ಹೆಸರಾಗಿದೆ. ಇವರಿಗಿಂತ ಮೊದಲು[೨೧] ಇಲ್ಲಿ, ಯಾರನ್ನು 'ಅಸುರರು', 'ರಾಕ್ಷಸರು'–ಎಂದು ಕರೆಯುತ್ತಿದ್ದರೋ, ಆ ಕಾಡುಜನರು ವಾಸ ಮಾಡುತ್ತಿದ್ದರು.[೨೨] ಆರ್ಯಜನರು ತಮ್ಮನ್ನು ದೇವತೆಗಳೆಂದು ಹೇಳಿಕೊಳ್ಳುತ್ತಿದ್ದರು ಮತ್ತು ಯಾವಾಗ ಅವರೊಡನೆ ಸಂಗ್ರಾಮ ವಾಯಿತೋ, ಆಗ, ಕಥೆಗಳಲ್ಲಿ ಅದಕ್ಕೆ 'ದೇವಾಸುರಸಂಗ್ರಾಮ' ಎಂದು ಹೆಸರನ್ನಿಟ್ಟರು"– ಎಂದು ಹೇಳುತ್ತಾರೆ.

**ಉತ್ತರ:**– 'ಈ ಮಾತು ಎಲ್ಲ ಬಗೆಯಿಂದಲೂ ಸುಳ್ಳು.' ಏಕೆಂದರೆ –

**ವಿಜಾನೀಹ್ಯಾರ್ಯಾನ್ ಯೇ ಚ ದಸ್ಯವೋ ಬರ್ಹಿಷ್ಮತೇ ರಂಧಯಾ ಶಾಸದವ್ರತಾನ್ ॥** (ಋಗ್ವೇದ:–೧.೫೧.೮)

**ಉತ ಶೂದ್ರ ಉತಾರ್ಯೇ ॥** (ಅಥರ್ವ:– ೧೯.೬೨.೧)

ಇದು ಅಥರ್ವವೇದದ ಪ್ರಮಾಣವಾಗಿದೆ. ಧಾರ್ಮಿಕರೂ, ವಿದ್ವಾಂಸರೂ, ಆಪ್ತರೂ ಆದ ಪುರುಷರ ಹೆಸರು ಆರ್ಯರೆಂದೂ ಮತ್ತು ಇವರಿಗೆ ವಿರುದ್ಧವಾಗಿರುವ ಜನರ ಹೆಸರು ದಸ್ಯು–ಎಂದರೆ ದರೋಡೆಕಾರರು, ದುಷ್ಟರು, ಅಧಾರ್ಮಿಕರು ಮತ್ತು ಅವಿದ್ವಾಂಸರು ಎಂದೂ, ಮತ್ತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ – ಈ ದ್ವಿಜರ ಮತ್ತು ಸದಾಚಾರಿಗಳಾದ ಶೂದ್ರರ ಹೆಸರು 'ಆರ್ಯರು'– ಎಂದೂ, ದುರಾಚಾರಿಗಳ ಹಾಗೂ ಅಸಭ್ಯರ ಹೆಸರು 'ಅನಾರ್ಯರು'–ಎಂದೂ ಮೊದಲೇ ನಾವು ಬರೆದೇ ಇದ್ದೇವೆ. "ವೇದವು ಹೀಗೆ ಹೇಳುತ್ತಿರುವಾಗ, ಅನ್ಯ ವಿದೇಶೀಯರ ಕಪೋಲ ಕಲ್ಪಿತವನ್ನು ಬುದ್ಧಿವಂತರಾದ ಜನರು ಎಂದಿಗೂ ಒಪ್ಪಲಾರರು." ಮತ್ತು 'ದೇವಾಸುರ ಸಂಗ್ರಾಮದ' ವಿಷಯ ಹೀಗಿದೆ; ಆರ್ಯಾವರ್ತೀಯರಾದ ಅರ್ಜುನ ಮತ್ತು ಮಹಾರಾಜ ದಶರಥ – ಮೊದಲಾದವರು, ಹಿಮಾಲಯ ಪರ್ವತದಲ್ಲಿ, ಆರ್ಯರ ಮತ್ತು 'ದಸ್ಯು', 'ಮ್ಲೇಚ್ಛ' – 'ಅಸುರರ' ಯಾವ ಯುದ್ಧ ನಡೆದಿತ್ತೋ, ಅದರಲ್ಲಿ ದೇವಜನರ – ಎಂದರೆ ಆರ್ಯರ ರಕ್ಷಣೆ ಮಾಡಲು ಮತ್ತು

---

೨೦. ಪ್ರಾಚೀನ ಕಾಲದಲ್ಲಿ ಈಗ ನರ್ಮದಾ ನದಿಯ ಉತ್ತರ ತೀರದಲ್ಲಿ ಸಮಾನಾಂತರವಾಗಿ ಹರಡಿರುವ ಪರ್ವತಶ್ರೇಣಿಗೆ ವಿಂಧ್ಯಾಚಲವೆಂದು ಹೆಸರಿರುವಂತೆ, ವಿಂಧ್ಯಾಚಲವೆಂಬ ಹೆಸರಿರಲಿಲ್ಲ. ಆಗ ಸಂಪೂರ್ಣ ದಕ್ಷಿಣ ಭಾರತಕ್ಕೆ 'ವಿಂಧ್ಯಾಚಲ' ಎಂಬ ಹೆಸರಿತ್ತು. ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡಲದಲ್ಲಿ ಇದರ ಉಲ್ಲೇಖವಿದೆ. ಆಂಗ್ಲ ಇತಿಹಾಸಕಾರರು ಆರ್ಯೇತಿಹಾಸ–ಶಾಸ್ತ್ರ–ಮೂಢರಾದುದರಿಂದ, ಈಗಿನ ನರ್ಮದಾ ನದಿಯ ಉತ್ತರದ ಪರ್ವತವನ್ನೇ ವಿಂಧ್ಯಾಚಲವೆಂದು ತಿಳಿದು, ಆರ್ಯಾವರ್ತದ ದಕ್ಷಿಣ ಸೀಮೆಯನ್ನು ನರ್ಮದಾ ನದಿಯ ತನಕ ಮಾತ್ರ ಹರಡಿ, ದಕ್ಷಿಣ ಭಾರತವನ್ನು 'ಆರ್ಯಾವರ್ತದಿಂದ ಹೊರಗಿಟ್ಟರು. ಇದರಲ್ಲಿ ಆಶ್ಚರ್ಯವೇನಿಲ್ಲ.

ಆದರೆ, ಸ್ವಯಂ ಈ ದೇಶದ ನವಾಸಿಗಳಾದವರು, ಅದರಲ್ಲೂ ವಿಶೇಷವಾಗಿ ದಕ್ಷಿಣಭಾರತದ ವಿದ್ವಾಂಸರು, ಆರ್ಯೇತಿಹಾಸ– ಶಾಸ್ತ್ರಗಳಲ್ಲಿ ಸ್ವಯಂ ನಷ್ಣಾತರಾಗಿಯೂ ಕೂಡ, ಆಂಗ್ಲರ ಈ ಧೂರ್ತತನವನ್ನು ಒಪ್ಪಿಕೊಂಡು, ಅವರ ಈ ಮೂಢತಾ ಪೂರ್ಣ ನರ್ಣಯವನ್ನು ಅಪ್ಪಿಕೊಂಡಿರುವುದು ಸೋಜಿಗವಲ್ಲವೇ? – ಸ್ಮೃತಿಗಳಲ್ಲಿ ಬ್ರಹ್ಮಾವರ್ತ, ಆರ್ಯಾವರ್ತ ಪರ್ಯಾಯವಾಚೀ ಶಬ್ಧಗಳಾಗಿವೆ. –ಸಂ

೨೧. ಎಂದರೆ, ಆರ್ಯಾವರ್ತದಲ್ಲಿ – ಸಂ

೨೨. ಇದು, ಆಂಗ್ಲರು ಗುಲಾಮ ಭಾರತೀಯರಿಗೆ ಕಲಿಸಿಕೊಟ್ಟ ಪಾಠ ! ಸ್ವತಂತ್ರವಾದ ಮೇಲೂ ಮರೆಯುವಂತಿಲ್ಲ !

ಅಸುರರ[23] ಪರಾಜಯವನ್ನು ಸಾಧಿಸಲು ಸಹಾಯಕರಾಗಿದ್ದರು. ಇದರಿಂದ ಆರ್ಯಾವರ್ತದಿಂದ ಹೊರಗೆ ನಾಲ್ಕು ಕಡೆಯೂ, ಹಿಮಾಲಯದ ಪೂರ್ವ, ಆಗ್ನೇಯ ದಕ್ಷಿಣ, ನೈಋತ್ಯ, ಪಶ್ಚಿಮ, ವಾಯವ್ಯ, ಉತ್ತರ, ಈಶಾನ್ಯದ ದೇಶಗಳಲ್ಲಿ ಯಾವ ಮನುಷ್ಯರಿರುತ್ತಾರೋ, ಅವರ ಹೆಸರೇ 'ಅಸುರ'-ಎಂದು ಸಿದ್ಧವಾಗುತ್ತದೆ. ಏಕೆಂದರೆ- ಯಾವ ಯಾವ ಕಾಲದಲ್ಲಿ ಹಿಮಾಲಯ ಪ್ರದೇಶಸ್ಥರಾದ ಆರ್ಯರ ಮೇಲೆ ಯುದ್ಧ ಮಾಡುವುದಕ್ಕಾಗಿ (ಅಸುರರು) ಏರಿಬರುತ್ತಿದ್ದರೋ, ಆಯಾ ಕಾಲದಲ್ಲಿ ಇಲ್ಲಿನ ರಾಜ-ಮಹಾರಾಜರುಗಳು ಅದೇ ಉತ್ತರ-ಮೊದಲಾದೆಡೆಯ ದೇಶಗಳಲ್ಲಿ ಆರ್ಯರಿಗೆ ಸಹಾಯಕರಾಗುತ್ತಿದ್ದರು. ಮತ್ತು ಶ್ರೀರಾಮಚಂದ್ರನೊಂದಿಗೆ ದಕ್ಷಿಣದಲ್ಲಿ ಯಾವ ಯುದ್ಧ ನಡೆದಿದೆಯೋ, ಅದರ ಹೆಸತರು 'ದೇವಾಸುರ ಸಂಗ್ರಾಮವಲ್ಲ'. ಆದರೆ ಅದನ್ನು 'ರಾಮ-ರಾವಣ'ರ ಅಥವಾ 'ಆರ್ಯರ-ರಾಕ್ಷಸ'ರ ಸಂಗ್ರಾಮವೆಂದು ಹೇಳುತ್ತಾರೆ. ಯಾವ ಸಂಸ್ಕೃತ ಗ್ರಂಥದಲ್ಲಿಯೂ ಅಥವಾ ಇತಿಹಾಸದಲ್ಲಿಯೂ, ಆರ್ಯಜನರು ಈರಾನಿನಿಂದ ಬಂದರು ಮತ್ತು ಇಲ್ಲಿನ ಕಾಡುಜನರೊಂದಿಗೆ ಹೋರಾಡಿ, ಜಯಗಳಿಸಿ (ಅವರನ್ನು) ಓಡಿಸಿ, ದೇಶದ ರಾಜರಾದರು-ಎಂದು ಬರೆದಿಲ್ಲ. ಮತ್ತೆ, ವಿದೇಶೀಯರ ಲೇಖನ ಹೇಗೆ ಮಾನನೀಯವಾಗಬಲ್ಲದು? ಮತ್ತು:-

**ಮ್ಲೇಚ್ಛವಾಚಶ್ಚಾರ್ಯವಾಚಃ ಸರ್ವೇ ತೇ ದಸ್ಯವಃ ಸ್ಮೃತಾಃ ॥ ೧ ॥** (ಮನು :- ೧೦.೪೫)

**ಮ್ಲೇಚ್ಛದೇಶಸ್ತ್ವತಃ ಪರಃ ॥ ೨ ॥** (ಮನು :- ೨.೨೩)

ಆರ್ಯಾವರ್ತದೇಶದಿಂದ ಬೇರೆಯಾದ ಯಾವ ದೇಶಗಳಿವೆಯೋ, ಅವು 'ದಸ್ಯು ದೇಶಗಳು' ಮತ್ತು 'ಮ್ಲೇಚ್ಛ ದೇಶಗಳು' ಎನಿಸುತ್ತವೆ. ಇದರಿಂದಲೂ ಕೂಡ, ಆರ್ಯಾವರ್ತದಿಂದ ಬೇರೆಯಾದ, ಪೂರ್ವದೇಶದಿಂದ ಹಿಡಿದು ಈಶಾನ್ಯ, ಉತ್ತರ, ವಾಯವ್ಯ ಹಾಗೂ ಪಶ್ಚಿಮದ ದೇಶಗಳಲ್ಲಿ ವಾಸಮಾಡುವವರ ಹೆಸರು 'ದಸ್ಯುಗಳು', ಮತ್ತು 'ಮ್ಲೇಚ್ಛರು' ಹಾಗೂ 'ಅಸುರರು' – ಎಂದಾಗಿದೆ ಮತ್ತು ನೈಋತ್ಯ, ದಕ್ಷಿಣ ಹಾಗೂ ಆಗ್ನೇಯ ದಿಕ್ಕುಗಳಲ್ಲಿ, ಆರ್ಯಾವರ್ತದಿಂದ ಬೇರೆಯಾದು ದರಲ್ಲಿ ವಾಸಿಸುವ ಮನುಷ್ಯರ ಹೆಸರು 'ರಾಕ್ಷಸ' – ಎಂದಾಗಿದೆ – ಎಂದೇ ಸಿದ್ಧವಾಗುತ್ತದೆ. ಈಗಲೂ ನೋಡಿರಿ, 'ಹಬಶೀ' (ನೀಗ್ರೋ) ಜನರ ಸ್ವರೂಪ ಭಯಂಕರವಾಗಿ, ಹೇಗೆ ರಾಕ್ಷಸರ ವರ್ಣನೆ ಮಾಡಲ್ಪಟ್ಟಿದೆಯೋ, ಹಾಗೆಯೇ ಕಾಣಿಸುತ್ತದೆ. ಮತ್ತು ಆರ್ಯಾವರ್ತಕ್ಕೆ ನೇರವಾಗಿ, ಕೆಳಗಿರುವವರ ಹೆಸರು 'ನಾಗ' ಎಂದಾಗಿದೆ. ಮತ್ತು ಆ ದೇಶವು ಆರ್ಯಾವರ್ತೀಯ ಮಾನವರ ಪಾದಗಳ ಎಂದರೆ ಕಾಲುಗಳ ಕೆಳಗೆ ಇರುವುದರಿಂದ, ಆ ದೇಶದ ಹೆಸರು ಪಾತಾಳವೆಂದು[24] ಹೇಳುತ್ತಾರೆ. ಮತ್ತು 'ನಾಗವಂಶೀಯರು', ಎಂದರೆ 'ನಾಗ'-ಎಂಬ ಹೆಸರಿನ ಪುರುಷನ ವಂಶದವರು ಅವರಿಗೆ ರಾಜರಾಗಿರುತ್ತಿದ್ದರು. ಅದೇ ವಂಶದ ಉಲೂಪೀ-ಎಂಬ ರಾಜಕನ್ಯೆ ಯೊಂದಿಗೆ ಅರ್ಜುನನ ವಿವಾಹವಾಗಿದ್ದಿತು. ಎಂದರೆ-"ಇಕ್ಷ್ವಾಕುವಿನಿಂದ ಹಿಡಿದು ಕೌರವ-ಪಾಂಡವರವರೆಗೆ, ಸಮಸ್ತ ಭೂಗೋಳದಲ್ಲಿ ಆರ್ಯರ ರಾಜ್ಯವಿದ್ದಿತು ಮತ್ತು ವೇದಗಳ ಅಲ್ಪ-ಸ್ವಲ್ಪ ಪ್ರಚಾರವು ಆರ್ಯವರ್ತದಿಂದ ಬೇರೆಯಾದ ದೇಶಗಳಲ್ಲಿಯೂ ಇರುತ್ತಿದ್ದಿತು." 'ಬ್ರಹ್ಮನ ಪುತ್ರ ವಿರಾಟ್', 'ವಿರಾಟನ ಮಗ ಮನು', 'ಮನುವಿನ ಮಕ್ಕಳು ಮರೀಚಿ'- ಮೊದಲಾದವರು ಹತ್ತು ಜನರು, ಅವರ ಮಕ್ಕಳಾದ ಸ್ವಾಯಂಭವ-ಮೊದಲಾದವರು ಏಳು ಜನ ರಾಜರು ಮತ್ತು ಆರ್ಯಾ ವರ್ತದ ಪ್ರಥಮ ರಾಜರಾದರೋ, ಯಾರು ಈ ಆರ್ಯಾವರ್ತವನ್ನು ನೆಲೆಗೊಳಿಸಿದರೋ, 'ಆ ಇಕ್ಷ್ವಾಕು' – ಮೊದಲಾದ ರಾಜರು ಅವರ ಮಕ್ಕಳು ಆಗಿದ್ದರು. ಇದು ಈ ವಿಷಯದಲ್ಲಿ ಪ್ರಮಾಣವಾಗಿದೆ.

ಈಗ ಅಭಾಗ್ಯದ ಉದಯದಿಂದ ಮತ್ತು ಆರ್ಯರ ಆಲಸ್ಯ, ಪ್ರಮಾದ, ಪರಸ್ಪರ ವಿರೋಧದಿಂದ, ಬೇರೆ ದೇಶಗಳ ಮೇಲೆ ರಾಜ್ಯಭಾರ ಮಾಡವ ಕತೆಯನ್ನಾದರೂ ಏನು ಹೇಳೋಣ? ಸ್ವತಃ-ಆರ್ಯಾವರ್ತದಲ್ಲಿಯೂ ಕೂಡ ಆರ್ಯರ ಅಖಂಡವೂ, ಸ್ವತಂತ್ರವೂ, ಸ್ವಾಧೀನವೂ, ನಿರ್ಭಯವೂ ಆದ ರಾಜ್ಯ ಈ ಕಾಲದಲ್ಲಿಲ್ಲ! ಏನು ಸ್ವಲ್ಪ ಉಳಿದಿದೆಯೋ, ಆದೂ ಕೂಡ ವಿದೇಶೀಯರ ಪಾದಾಕ್ರಾಂತವಾಗಿ ಹೋಗುತ್ತಿದೆ. ಎಲ್ಲೋ ಹಲವರು ರಾಜರು ಸ್ವತಂತ್ರರಾಗಿದ್ದಾರೆ. ದುರ್ದಿನ ಯಾವಾಗ

---

೨೩. ಮ್ಲೇಚ್ಛ-ಅಸುರರ ವಸತಿಗಳು 'ಮೋಹನ್ ಜೋ ದಡೋ' ಮೊದಲಾದವುಗಳಲ್ಲಿಯೂ ಇದ್ದಿತು.- ಭಗವದ್ದತ್ತ.
ಈ ಜಾಗ ಈಗ ಪಾಕೀಸ್ಥಾನದ ಉತ್ತರ ಸಿಂಧು ಪ್ರದೇಶದಲ್ಲಿದೆ. ಸಿಂಧೂ ನದಿಯ ಪ್ರವಾಹದ ಹಾವಳಿಯಿಂದ, ಸುಮಾರು ೧೦,೦೦೦ ವರ್ಷಗಳ ಹಿಂದೆ, ಈ ನಗರ ಕೆಸರಿನಲ್ಲಿ ಹೂತುಹೋಗಿತ್ತು. ಈಗ ಮಣ್ಣನ್ನು ಅಗೆದು, ನಗರವನ್ನು ಪ್ರಕಟಿಸಲಾಗಿದೆ. ಇದೇ ರೀತಿ, ಇದಕ್ಕೆ ಸಮೀಪದಲ್ಲಿ ಹಡಪ್ಪಾ ಎಂಬ ನಗರವೂ ಹೊರಬಂದಿದೆ. –ಸಂ

೨೪. ಎಂದರೆ ಅಮೆರಿಕಾ ಖಂಡ. –ಸಂ
–ಋಗ್ವೇದಾದಿ ಭಾಷ್ಯ ಭೂಮಿಕಾ'ದ ವೇದೋತ್ಪತ್ತಿ ವಿಷಯವನ್ನು ನೋಡಿ. –ದ. ಸ.

ಬರುತ್ತದೋ, ಆಗ ದೇಶ ನಿವಾಸಿಗಳು ಅನೇಕ ಪ್ರಕಾರದ ದುಃಖವನ್ನು ಅನುಭವಿಸಬೇಕಾಗುತ್ತದೆ. (ಸುರಾಜ್ಯಕ್ಕಿಂತ ಸ್ವರಾಜ್ಯ ಉತ್ತಮ) **ಯಾರು ಎಷ್ಟೇ ಯತ್ನಮಾಡಲಿ; ಆದರೆ, ಯಾವುದು ಸ್ವದೇಶೀಯರ ರಾಜ್ಯವಾಗಿರುತ್ತದೋ, ಅದು ಎಲ್ಲಕ್ಕಿಂತ ಮೇಲೆ ಉತ್ತಮವಾಗಿರುತ್ತದೆ.** ಅಥವಾ, ಮತ ಮತಾಂತರಗಳ ಆಗ್ರಹವಿಲ್ಲದ, ತಮ್ಮವರು-ಬೇರೆಯವರು-ಎಂಬ ಪಕ್ಷಪಾತವಿಲ್ಲದ, ಪ್ರಜೆಗಳ ಮೇಲೆ ಮಾತಾ- ಪಿತೃಗಳಂತೆ, ಕೃಪೆ, ನ್ಯಾಯ ಮತ್ತು ಪಾಪದಿಂದ ದೂರವಿಡಲು ನೆರವಾಗುವ ಮರುಕದಿಂದ ವರ್ತಿಸುವ ವಿದೇಶೀಯರ ರಾಜ್ಯವೂ ಕೂಡ ಪೂರ್ಣ ಸುಖದಾಯಕವಾಗಿರುವುದಿಲ್ಲ. ಆದರೆ, ಬೇರೆ ಬೇರೆ ಭಾಷೆಗಳು, ಬೇರೆ ಬೇರೆ ಶಿಕ್ಷಣ, ಅನ್ಯ ವ್ಯವಹಾರದ ವಿರೋಧ ತಪ್ಪುವುದು ಅತಿ ದುಷ್ಕರವಾಗಿರುತ್ತದೆ. ಇದು ಬಿಟ್ಟು ಹೋಗದೆ, ಪರಸ್ಪರರ ಪೂರ್ಣ ಉಪಕಾರ ಮತ್ತು ಉದ್ದೇಶ್ಯ ಕೈಗೂಡುವುದು ಕಠಿಣವಾಗಿದೆ. ಆದುದರಿಂದ, ವೇದಗಳೇ ಮೊದಲಾದ ಶಾಸ್ತ್ರಗಳಲ್ಲಿ. ಯಾವ ಒಂದು ವ್ಯವಸ್ಥೆಯಿದೆಯೋ, ಹಾಗೂ ಆರ್ಯರ ಯಾವ ಇತಿಹಾಸವನ್ನು ಬರೆದಿದ್ದಾರೋ, ಅದನ್ನೇ ಗೌರವಿಸುವುದು ಪ್ರತಿಷ್ಠಿತ ಪುರುಷರ ಕಾರ್ಯವಾಗಿದೆ.

**ಪ್ರಶ್ನೆ** :- ಜಗತ್ತಿನ ಉತ್ಪತ್ತಿಯಲ್ಲಿ ಎಷ್ಟು ಕಾಲ ವ್ಯತೀತವಾಗಿದೆ?

**ಉತ್ತರ:**- ಒಂದು ಅರ್ಬುದ, ತೊಂಬತ್ತಾರು ಕೋಟಿ, ಎಂಟು ಲಕ್ಷ, ಐವತ್ತೆರಡು ಸಹಸ್ರ ಒಂಬೈನೂರ ಎಪ್ಪತ್ತಾರು ವರ್ಷಗಳು ಜಗತ್ತಿನ ಉತ್ಪತ್ತಿ ಮತ್ತು ವೇದಗಳ ಪ್ರಕಾಶನವಾದ ಮೇಲೆ ಕಳೆದಿವೆ. ಈ ರೀತಿ ಸೃಷ್ಟಿಯ ನಿರ್ಮಾಣದ ಹಾಗೂ ಉತ್ಪತ್ತಿಯ ಸೂಕ್ಷ್ಮ ವಿಷಯವಿರುತ್ತದೆ. ಇಷ್ಟು ಮಾತ್ರವಲ್ಲ; ಯಾವುದನ್ನು ತುಂಡರಿಸಲು ಸಾಧ್ಯವಿಲ್ಲವೋ, ಆ ಎಲ್ಲಕ್ಕಿಂತ ಸೂಕ್ಷ್ಮವಾದ ತುಣುಕನ್ನು 'ಪರಮಾಣು' ಎಂಬ ಹೆಸರಿನಿದ ನಿರ್ದೇಶಿಸುತ್ತಾರೆ. ಅರವತ್ತು ಪರಮಾಣು ಸೇರಿರುವುದಕ್ಕೆ ಅಣುವೆಂದು ಹೆಸರು. ಎರಡು ಅಣುಗಳು ಸೇರಿ ಒಂದು ದ್ವ್ಯಣುಕ; ಸ್ಥೂಲವಾಯು ದ್ವ್ಯಣುಕದಿಂದಾಗುವುದು. ಮೂರು ದ್ವ್ಯಣುಕಗಳಿಂದ ಅಗ್ನಿ, ನಾಲ್ಕು ದ್ವ್ಯಣುಕದಿಂದ ಜಲ; ಐದು ದ್ವ್ಯಣುಕದಿಂದ (ಸೂಕ್ಷ್ಮ) ಪೃಥಿವೀ ಆಗುತ್ತವೆ. ಎಂದರೆ ಮೂರು ದ್ವ್ಯಣುಕಗಳಿಂದ ಒಂದು ತ್ರಸರೇಣು[೨೫] ಮತ್ತು ಅದರ ಎರಡರಷ್ಟರಿಂದ ಪೃಥಿವಿಯೇ ಮೊದಲಾದ ವ್ಯಕ್ತವಾಗುವ ತತ್ತ್ವಗಳು[೨೬] ಆಗುತ್ತವೆ. ಇದೇ ಪ್ರಕಾರ ಕ್ರಮ ಪೂರ್ವಕವಾಗಿ ಕೂಡಿಸಿ ಭೂಗೋಳ - ಮೊದಲಾದುವನ್ನು ಪರಮಾತ್ಮನು ರಚಿಸಿದ್ದಾನೆ.

**ಪ್ರಶ್ನೆ** :- ಇದರ ಧಾರಣವನ್ನು ಯಾವನು ಮಾಡುತ್ತಾನೆ? ಒಬ್ಬನು -"ಶೇಷನು, ಎಂದರೆ - ಸಾವಿರ ಹೆಡೆಗಳನ್ನುಳ್ಳ ಸರ್ಪದ ತಲೆಯ ಮೇಲೆ ಪೃಥಿವೀ ಇದೆ."- ಎನ್ನುತ್ತಾನೆ. ಎರಡನೆಯವನು "ಎತ್ತಿನ ಕೊಂಬಿನ ಮೇಲೆ".-ಎನ್ನುತ್ತಾನೆ. ಮೂರನೆಯವನು "ಏತರ ಮೇಲೆಯೂ ಇಲ್ಲ"- ಎನ್ನುತ್ತಾನೆ. ನಾಲ್ಕನೆಯವನು "ವಾಯುವಿನ ಆಧಾರದ ಮೇಲೆ" -ಎನ್ನುತ್ತಾನೆ. ಐದನೆಯವನು-"ಸೂರ್ಯನ ಆಕರ್ಷಣದಿಂದ ಎಳೆಯಲ್ಪಟ್ಟು ತನ್ನ ಸ್ಥಾನದಲ್ಲಿ ಸ್ಥಿತವಾಗಿದೆ".- ಎನ್ನುತ್ತಾನೆ. ಆರನೆಯವನು -"ಪೃಥಿವೀ ಭಾರಯುಕ್ತವಾಗಿರುವುದರಿಂದ ಕೆಳಕ್ಕೆ ಕೆಳಕ್ಕೆ ಆಕಾಶದಲ್ಲಿ ಚಲಿಸುತ್ತಾ ನಡೆದಿದೆ".- ಎನ್ನುತ್ತಾನೆ. ಈ ಮೊದಲಾದ ಹೇಳಿಕೆಗಳಲ್ಲಿ ಯಾವ ಮಾತನ್ನು ಸತ್ಯವೆಂದು ಅಂಗೀಕರಿಸೋಣ?

**ಉತ್ತರ:**- ಯಾವನು 'ಶೇಷಸರ್ಪನ' ಮತ್ತು 'ಎತ್ತಿನ ಕೊಂಬಿನ' ಮೇಲೆ ಇಡಲ್ಪಟ್ಟ ಪೃಥಿವಿಯ ಸ್ಥಿತಿಯನ್ನು ಪ್ರತಿಪಾದಿಸುತ್ತಾನೋ, ಅವನನ್ನು-ಸರ್ಪದ ಮತ್ತು ಎತ್ತಿನ ತಾಯಿ-ತಂದೆಗಳ ಜನ್ಮಕಾಲದಲ್ಲಿ ಪೃಥಿವೀ ಏತರ ಮೇಲಿದ್ದಿತು? ಮತ್ತು ಸರ್ಪ ಹಾಗೂ ಎತ್ತು-ಮೊದಲಾದುವು ಯಾವುದರ ಮೇಲೆ ಇವೆ"?- ಎಂದು ಕೇಳಬೇಕು. ಎತ್ತಿನ ಪಕ್ಷದವರಾದ ಮುಸಲ್ಮಾನರಂತೂ ಮೌನವನ್ನೇ ತಾಳುವರು. ಆದರೆ ಸರ್ಪದ ಪಕ್ಷದವರು - "ಸರ್ಪವು ಕೂರ್ಮದ ಮೇಲೆ, ಕೂರ್ಮವು ನೀರಿನ ಮೇಲೆ, ನೀರು ಅಗ್ನಿಯ ಮೇಲೆ, ಅಗ್ನಿಯು ವಾಯುವಿನ ಮೇಲೆ, ವಾಯುವು ಆಕಾಶದಲ್ಲಿ ನಿಂತಿದೆ". - ಎನ್ನುವರು. ಅವರನ್ನು- "ಸರ್ಪವೂ ಏತರಮೇಲೆ ಇದೆ" ? - ಎಂದು ಕೇಳಬೇಕು. ಆಗ ಅವಶ್ಯವಾಗಿಯೂ "ಪರಮೇಶ್ವರನ ಆಧಾರದ ಮೇಲೆ" ಎಂದೇ ಹೇಳುವರು. ಯಾವಾಗ ಅವರನ್ನು ಯಾವನಾದರೂ - "ಶೇಷ ಮತ್ತು ಎತ್ತು ಯಾರ ಮಕ್ಕಳು?" ಎಂದು ಪ್ರಶ್ನಿಸುವನೋ, ಆಗ "(ಶೇಷನು)

---

೨೫. ತ್ರಸರೇಣುವಿನ ಲಕ್ಷಣ ಮನುಸ್ಮೃತಿ [೩.೧೧೩]ಯಲ್ಲಿ ಹೀಗೆ ಬರೆಯಲಾಗಿದೆ.
"ಯಾವುದಾದರೂ ಛಿದ್ರದಿಂದ ಸೂರ್ಯನ ಬಿಸಿಲು ಒಳಗೆ ಬಂದಾಗ, ಗತಿಶೀಲವಾದ ಯಾವ ಸೂಕ್ಷ್ಮ ಧೂಳಿನ ಕಣಗಳು ಕಂಡು ಬರುತ್ತವೋ, ಅವಕ್ಕೆ ' ತ್ರಸರೇಣು' ಎಂದು ಹೆಸರು. -ಯು.ಮೀ.

೨೬. ಇಲ್ಲಿ ಸ್ವಲ್ಪ ತಪ್ಪಿದ್ದಂತೆ ತೋರುತ್ತದೆ. ಸತ್ಯಾರ್ಥ ಪ್ರಕಾಶ, ಪ್ರಥಮ ಸಂಸ್ಕರಣ[೧೮೭೫ ಇಸವಿ] ದಲ್ಲಿ ಹೀಗೆ ಬರೆಯಲಾಗಿದೆ.
"ಅರವತ್ತು ಪರಮಾಣುಗಳನ್ನು ಸೇರಿಸಿ, ಒಂದು 'ಅಣು'ವನ್ನು ರಚಿಸಿದನು. ಎರಡು ಅಣುಗಳಿಂದ, ಒಂದು ದ್ವ್ಯಣುಕ'; ಮತ್ತು ಮೂರು ದ್ವ್ಯಣುಕಗಳಿಂದ, ಒಂದು ತ್ರಸರೇಣು; ಮತ್ತು ಅನೇಕ ತ್ರಸರೇಣುಗಳನ್ನು ಸೇರಿಸಿ, ಈ ಕಾಣುತ್ತಿರುವ ಜಗತ್ತನ್ನು ರಚಿಸಿದನು"
ಈ ಮಾತನ್ನೇ 'ಪೂನಾ ಪ್ರವಚನ'ದ ಎಂಟನೆಯ ಪ್ರವಚನದಲ್ಲೂ ಹೇಳಲಾಗಿದೆ. -ಯು.ಮೀ.

ಕಶ್ಯಪ-ಕದ್ರೂ - ಇವರ ಮಗ ಮತ್ತು ಎತ್ತು ಹಸುವಿನ ಸಂತತಿ". - ಎನ್ನುವರು. ಕಶ್ಯಪನು ಮರೀಚಿಯ, ಮರೀಚಿಯು ಮನುವಿನ, ಮನುವು ವಿರಾಟನ ಮತ್ತು ವಿರಾಟನು ಬ್ರಹ್ಮನ ಮಗ; ಬ್ರಹ್ಮ ಆದಿ ಸೃಷ್ಟಿಯವನಾಗಿದ್ದನು. ಯಾವಾಗ ಶೇಷನ ಜನನವಾಗಿರಲಿಲ್ಲವೋ, ಆ ಕಾಲಕ್ಕೆ ಮುಂಚೆ ಐದು ಪೀಳಿಗೆಗಳು ಆಗಿ ಹೋಗಿವೆ. ಆಗ ಯಾವನು ಧಾರಣ ಮಾಡಿದ್ದನು? ಎಂದರೆ, ಕಶ್ಯಪನ ಜನ್ಮಪೂರ್ವದಲ್ಲಿ ಪೃಥಿವೀ ಯಾವನ ಮೇಲಿತ್ತು? - ಎಂದು ಪ್ರಶ್ನಿಸಿದರೆ, "ನಿನ್ನ ಮಾತೂ ನೀರವ; ನನ್ನದೂ ನೀರವವೇ"! ಎಂದಾದೀತು. ಮತ್ತು, ಪರಸ್ಪರ ಕಾದಾಡಲಾರಂಭಿಸುವರು. ಯಾವನು 'ಅವಶಿಷ್ಟ'ನಾಗಿ ಉಳಿದಿರುತ್ತಾನೋ, ಅವನನ್ನು 'ಶೇಷ' ಎನ್ನುತ್ತಾರೆ - ಇದೇ ಇದರ ನಿಜವಾದ ಅಭಿಪ್ರಾಯ. ಹೀಗೆ ಯಾವನೋ ಕವಿಯು, **"ಶೇಷಾಧಾರಾ ಪೃಥಿವೀತ್ಯುಕ್ತಂ"** - ಎಂದರೆ, "ಶೇಷನ ಆಧಾರದ ಮೇಲೆ ಪೃಥಿವೀ ಇದೆ".- ಎಂದು ಹೇಳಿದನು. ಎರಡನೆಯವನು ಅವನ ಅಭಿಪ್ರಾಯವನ್ನು ತಿಳಿದುಕೊಳ್ಳದೆ, ಸರ್ಪದ ಮಿಥ್ಯಾಕಲ್ಪನೆ ಮಾಡಿಕೊಂಡನು. ಆದರೆ, ಪರಮೇಶ್ವರನು ಉತ್ಪತ್ತಿ ಮತ್ತು ಪ್ರಳಯದಿಂದ 'ಅವಶಿಷ್ಟ'ನಾಗಿ ಉಳಿದಿರುತ್ತಾನೆ; ಎಂದರೆ ನಾಶರಹಿತನಾಗಿ ಬೇರೆಯೇ ಇರುತ್ತಾನೆ; ಇದೇ ಕಾರಣದಿಂದ ಅವನನ್ನು 'ಶೇಷ'ನೆನ್ನುತ್ತಾರೆ. ಮತ್ತು ಅವನ ಆಧಾರದ ಮೇಲೆಯೇ ಪೃಥಿವೀ ಇದೆ.

**ಸತ್ಯೇನೋತ್ತಭಿತಾ ಭೂಮಿಃ ॥** (ಋಗ್ವೇದ:- ೧೦.೮೫.೧)

(ಸತ್ಯ) ಎಂದರೆ, ಯಾವನು ತ್ರಿಕಾಲಾಬಾಧಿತನಾಗಿದ್ದಾನೋ, ಯಾವನ ನಾಶವೆಂದಿಗೂ ಆಗುವುದಿಲ್ಲವೋ, ಆ ಪರಮೇಶ್ವರನು ಭೂಮಿ, ಸೂರ್ಯ ಮತ್ತು ಸಮಸ್ತ ಲೋಕಗಳನ್ನೂ ಧರಿಸಿದ್ದಾನೆ.

**ಉಕ್ಷಾ ಸ ದ್ಯಾವಾಪೃಥಿವೀ ಭರ್ತಿ ॥**[೨೭] (ಋಗ್ವೇದ:- ೧೦.೩೧.೮)

ಇದೂ ಕೂಡ ಋಗ್ವೇದದ ವಚನ. ಇದೇ "ಉಕ್ಷನ್" ಎಂಬ ಶಬ್ದವನ್ನು ನೋಡಿ ಯಾವನೋ 'ಎತ್ತು' ಎಂದು ಗ್ರಹಿಸಿರಬಹುದು. ಏಕೆಂದರೆ-ಉಕ್ಷಾ-ಎಂಬುದು ಎತ್ತಿನ ಹೆಸರೂ ಅಹುದು. ಆದರೆ, ಆ ಮೂಢನಿಗೆ ಇಷ್ಟು ದೊಡ್ಡ ಭೂಗೋಳವನ್ನು ಧರಿಸುವ ಸಾಮರ್ಥ್ಯ ಎತ್ತಿನಲ್ಲಿ ಎಲ್ಲಿಂದ ಬಂದೀತು - ಎಂಬುದು ಗೊತ್ತಾಗಲಿಲ್ಲ. ಮತ್ತು ಮಳೆಯ ಮೂಲಕ ಭೂಗೋಳವನ್ನು ಸೇಚನ ಮಾಡುವುದರಿಂದ 'ಉಕ್ಷಾ'-ಎಂಬುದು ಸೂರ್ಯನ ಹೆಸರಾಗಿದೆ. ಅವನು ತನ್ನ ಆಕರ್ಷಣದಿಂದ ಪೃಥಿವಿಯನ್ನು ಎತ್ತಿ ಹಿಡಿದಿದ್ದಾನೆ. ಆದರೆ, ಸೂರ್ಯನೇ ಮೊದಲಾದುವನ್ನು ಧಾರಣಮಾಡುವವನು ಪರಮಾತ್ಮನಲ್ಲದೆ ಬೇರೆ ಯಾವನೂ ಅಲ್ಲ.

**ಪ್ರಶ್ನೆ:-** ಇಷ್ಟು-ಇಷ್ಟು ದೊಡ್ಡ ಭೂಗೋಳಗಳನ್ನು ಪರಮೇಶ್ವರನು ಹೇಗೆ ಧಾರಣಮಾಡಬಲ್ಲವನಾಗಿರಬಹುದು?

**ಉತ್ತರ:-** ಹೇಗೆ ಅನಂತವಾದ ಆಕಾಶದ ಮುಂದೆ ದೊಡ್ಡ ದೊಡ್ಡ ಭೂಗೋಳೋಗಳು, ಸಮುದ್ರದ ಮುಂದೆ ನೀರಿನ ಚಿಕ್ಕ ಹನಿಯಂತೆಯೂ ಅಲ್ಲರೋ, ಹಾಗೆ ಅನಂತನಾದ ಪರಮೇಶ್ವರನ ಮುಂದೆ ಅಸಂಖ್ಯಾತ ಲೋಕಗಳು ಒಂದು ಪರಮಾಣುವಿಗೆ ಸಮವೆಂದೂ ಕೂಡ ಹೇಳಲಾರೆವು. ಅವನು ಹೊರಗೆ - ಒಳಗೆ, ಎಲ್ಲೆಡೆಯೂ, **"ವಿಭೂಃ ಪ್ರಜಾಸು"** - (ಯಜುರ್ವೇದ:-೩೨.೮) ಎಂಬ ಯಜುರ್ವೇದದ ವಚನವಿರುವಂತೆ, ವ್ಯಾಪಕನಾಗಿದ್ದಾನೆ. ಆ ಪರಮಾತ್ಮನು ಎಲ್ಲಾ ಪ್ರಜೆಗಳಲ್ಲಿಯೂ ವ್ಯಾಪಕನಾಗಿ, ಎಲ್ಲವನ್ನೂ ಧಾರಣ ಮಾಡುತ್ತಿದ್ದಾನೆ. ಅವನು ಕ್ರೈಸ್ತರ, ಮುಸಲ್ಮಾನರ, ಪೌರಾಣಿಕರ ಹೇಳಿಕೆಯಂತೆ ವಿಭುವಾಗಿರದಿದ್ದರೆ, ಈ ಸಮಸ್ತ ಸೃಷ್ಟಿಯ ಧಾರಣವನ್ನು ಎಂದಿಗೂ ಮಾಡಲಾಗುತ್ತಿರಲಿಲ್ಲ. ಏಕೆಂದರೆ 'ಪ್ರಾಪ್ತಿ'ಯಿಲ್ಲದೆ ಎಂದರೆ ಸಮೀಪಸ್ಥನಾಗದೆ, ಯಾವುದನ್ನೂ ಯಾವನೂ ಎತ್ತಿ ಹಿಡಿಯಲಾರನು. ಯಾವನಾದರೂ "ಈ ಲೋಕಗಳೆಲ್ಲಾ ಪರಸ್ಪರ ಆಕರ್ಷಣದಿಂದ ಧಾರಿತವಾಗಿರಬಹುದು; ಮತ್ತೆ ಪರಮೇಶ್ವರನು ಧಾರಣಮಾಡಬೇಕಾದ ಅವಶ್ಯಕತೆ ಏನಿದೆ"? - ಎಂದು ಕೇಳಿದರೆ, ಅವರನ್ನು - "ಈ ಸೃಷ್ಟಿ ಅನಂತವೋ ಅಥವಾ ಸಾಂತವೋ"? - ಎಂದು ಪ್ರಶ್ನಿಸಬೇಕು. 'ಅನಂತ' ಎನ್ನುವರಾದರೆ, ಆಕಾಶವನ್ನುಳ್ಳ ವಸ್ತು ಅನಂತವೆಂದಿಗೂ ಆಗಲಾರದು. ಮತ್ತು 'ಸಾಂತ' ಎನ್ನುವರಾದರೆ ಅದರ ಆಚೆಯ ಭಾಗದಲ್ಲಿ, ಎಂದರೆ ಯಾವುದರ ಆಚೆಗೆ ಬೇರೆ ಯಾವ ಲೋಕವೂ ಇಲ್ಲವೋ, ಅಲ್ಲಿ, ಯಾವುದರ ಆಕರ್ಷಣದಿಂದ ಧಾರಣವಾಗುವುದು?- ಎಂಬ ಪ್ರಶ್ನೆಯ ಮೂಲಕ ಉತ್ತರ ಕೊಡಬೇಕು. ಉದಾಹರಣೆಗೆ - 'ಸಮಷ್ಟಿ' ಮತ್ತು 'ವ್ಯಷ್ಟಿ'; ಎಂದರೆ, ಸಮಸ್ತ ಸಮುದಾಯಕ್ಕೆ 'ವನ' ಎಂದು ಹೆಸರಿಟ್ಟರೆ, ಅದು 'ಸಮಷ್ಟಿ' ಎನ್ನಿಸುತ್ತದೆ. ಮತ್ತು ಒಂದು ಒಂದೇ ಮರ ಮೊದಲಾದುದನ್ನು ಬೇರೆ ಬೇರೆಯಾಗಿ ಎಣಿಸಿದರೆ, ಅದು 'ವ್ಯಷ್ಟಿ' ಎನ್ನಿಸುತ್ತದೆ. ಹಾಗೆ ಸಮಸ್ತ ಭೂಗೋಳಗಳನ್ನೂ ಸಮಷ್ಟಿಯೆಂದು ಗಣಿಸಿ, 'ಜಗತ್ತು', ಎನ್ನುವಿರಾದರೆ,

---

೨೭. ಅಥರ್ವವೇದದಲ್ಲಿ-

"ಅನಡ್ ವಾನ್ ದಾಧಾರ ಪೃಥಿವೀಮುತ ದ್ಯಾಮ್" [೪.೧೧.೧] ಎಂದಿದೆ.

ಸಮಸ್ತ ಜಗತ್ತಿನ ಧಾರಣ ಮತ್ತು ಆಕರ್ಷಣ ಮಾಡುವವನು, ಪರಮೇಶ್ವರ ನಲ್ಲದೆ ಬೇರೆ ಯಾವನೂ ಅಲ್ಲ. ಆದುದರಿಂದ, ಯಾವನು ಸಮಸ್ತ ಜಗತ್ತನ್ನೂ ರಚಿಸುತ್ತಾನೋ, ಅವನೇ, **"ಸ ದಾಧಾರ ಪೃಥಿವೀಂ ದ್ಯಾಮುತೇಮಾಂ"**. (ಯಜು: ೧೩.೪) ಯಾವನು ಪೃಥಿವೀ–ಮೊದಲಾದ ಪ್ರಕಾಶ ರಹಿತವಾದ ಲೋಕ ಲೋಕಾಂತರ ತತ್ತ್ವಗಳ ಮತ್ತು ಸೂರ್ಯನೇ ಮೊದಲಾದ ಪ್ರಕಾಶ ಸಹಿತವಾದ ಲೋಕಗಳ ಮತ್ತು ತತ್ತ್ವಗಳ ರಚನೆಯನ್ನೂ, ಧಾರಣವನ್ನೂ ಮಾಡುತ್ತಾನೋ, ಯಾವ ಪರಮಾತ್ಮನು ಎಲ್ಲದರಲ್ಲಿಯೂ ವ್ಯಾಪಕನಾಗಿದ್ದಾನೋ, ಅವನೇ ಸಮಸ್ತ ಜಗತ್ತಿನ ಕರ್ತೃವೂ ಮತ್ತು ಧಾರಕನೂ ಆಗಿದ್ದಾನೆ.

**ಪ್ರಶ್ನೆ:**– ಪೃಥಿವೀ–ಮೊದಲಾದ ಲೋಕಗಳು ಚಲಿಸುತ್ತವೋ ಅಥವಾ ಸ್ಥಿರವಾಗಿರುತ್ತವೋ?

**ಉತ್ತರ:**– 'ಚಲಿಸುತ್ತವೆ.'

**ಪ್ರಶ್ನೆ:**– ಎಷ್ಟೋ ಜನರು ಸೂರ್ಯನು ಸುತ್ತುತ್ತಾನೆ ಮತ್ತು ಪೃಥಿವೀ ಸುತ್ತುವುದಿಲ್ಲ [೨೮]–ಎನ್ನುತ್ತಾರೆ. ಬೇರೆಯವರು ಪೃಥಿವೀ ಸುತ್ತುತ್ತದೆ; ಸೂರ್ಯಸುತ್ತುವುದಿಲ್ಲ–ಎನ್ನುತ್ತಾರೆ. ಇದರಲ್ಲಿ ಯಾವುದು ಸತ್ಯವೆಂದು ಅಂಗೀಕರಿಸಲ್ಪಡಬೇಕು?

**ಉತ್ತರ:**– ಈ ಎರಡೂ ಪಕ್ಷಗಳು ಅರ್ಧ ಸುಳ್ಳು. ಏಕೆಂದರೆ, ವೇದದಲ್ಲಿ ಹೀಗೆ ಬರೆದಿದೆ:–

**ಆಯಂ ಗೌಃ ಪೃಶ್ನಿರಕ್ರಮೀದಸದನ್ ಮಾತರಂ ಪುರಃ । ಪಿತರಂ ಚ ಪ್ರಯಂತ್ಸ್ವಃ ॥** (ಯಜುರ್ವೇದ :– ೩.೬)

ಎಂದರೆ ಈ ಭೂಗೋಳವು ಜಲಸಹಿತ[೨೯] ಸೂರ್ಯನ ನಾಲ್ಕು ಕಡೆಯೂ ತಿರುಗುತ್ತಾ ಹೋಗುತ್ತದೆ. ಆದುದರಿಂದ ಭೂಮಿಯು ಸುತ್ತುತ್ತಾ ಇರುತ್ತದೆ – ಎಂದರಿಯಿರಿ.

**ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ ।**

**ಹಿರಣ್ಯಯೇನ ಸವಿತಾ ರಥೇನಾ ದೇವೋ ಯಾತಿ ಭುವನಾನಿ ಪಶ್ಯನ್ ॥** (ಯಜುರ್ವೇದ :– ೩೩.೪೩)

ಯಾವ 'ಸವಿತೃವು', ಎಂದರೆ–ಸೂರ್ಯನಿದ್ದಾನೋ, ಅವನು ವೃಷ್ಟಿ ಮೊದಲಾದುವನ್ನು ಉಂಟುಮಾಡುವವನೂ, ಸ್ವತಃ ಪ್ರಕಾಶಸ್ವರೂಪನೂ, ಇತರ ಗ್ರಹಗಳನ್ನು ಬೆಳಗಿಸುವ ತೇಜೋಮಯನೂ, ರಮಣೀಯವಾದ ಸ್ವರೂಪದಿಂದ ಯುಕ್ತನೂ ಆಗಿದ್ದು, ಸಮಸ್ತ ಪ್ರಾಣಯುಕ್ತ– ಪ್ರಾಣರಹಿತ ಜಗತ್ತಿನಲ್ಲಿ ಅಮೃತರೂಪ ವೃಷ್ಟಿಯನ್ನು ಎಂದರೆ ಜೀವನ ರಸವನ್ನು ಅಥವಾ ಕಿರಣಗಳ ಮೂಲಕ ಚೇತನನಿಗೆ ಜೀವನವನ್ನು ಊಡಿಸುತ್ತಾ, ಹಾಗೂ ಸಮಸ್ತ ಮೂರ್ತಿಮಂತ ದ್ರವ್ಯಗಳನ್ನೂ ಬೆಳಕಿಗೆ ತರುತ್ತಾ, ಸರ್ವಲೋಕಗಳೊಂದಿಗೆ ಆಕರ್ಷಣ ಗುಣದಿಂದ ವರ್ತಿಸುತ್ತಾ, "ತನ್ನ ಅಕ್ಷದ ಮೇಲೆಯೇ ತಿರುಗುತ್ತಾ ಇರುತ್ತಾನೆ; ಆದರೆ, ಯಾವ ಲೋಕದ ಸುತ್ತಲೂ ಸುತ್ತುವುದಿಲ್ಲ." ಹಾಗೆಯೇ ಒಂದೊಂದು ಬ್ರಹ್ಮಾಂಡದಲ್ಲಿ, ಎಂದರೆ ಸೌರವ್ಯೂಹದಲ್ಲಿ ಒಬ್ಬ ಸೂರ್ಯನು ಪ್ರಕಾಶಕನೂ ಮತ್ತು ಬೇರೆ ಲೋಕ ಲೋಕಾಂತರಗಳೂ ಪ್ರಕಾಶ್ಯವೂ ಆಗಿರುತ್ತವೆ.

ಹೇಗೆಂದರೆ:– **"ದಿವಿ ಸೋಮೋ ಅಧಿ ಶ್ರಿತಃ"** । (ಅಥರ್ವವೇದ :– ೧೪.೧.೧)

ಹೇಗೆ ಈ ಚಂದ್ರಲೋಕವು ಸೂರ್ಯನಿಂದ ಪ್ರಕಾಶಿತವಾಗುತ್ತದೋ, ಹಾಗೆಯೇ ಪೃಥಿವೀ ಮೊದಲಾದ ಲೋಕಗಳೂ ಕೂಡ, ಸೂರ್ಯನ ಪ್ರಕಾಶದಿಂದಲೇ ಪ್ರಕಾಶಿತವಾಗುತ್ತವೆ. ಆದರೆ – ರಾತ್ರಿ ಮತ್ತು ಹಗಲು ಸರ್ವದಾ ವರ್ತಿಸುತ್ತಾ ಇರುತ್ತವೆ. ಏಕೆಂದರೆ – ಪೃಥಿವೀ ಮೊದಲಾದ ಲೋಕಗಳು ಸುತ್ತಿ, ಎಷ್ಟು ಭಾಗ ಸೂರ್ಯನ ಮುಂದೆ ಬರುತ್ತವೋ, ಅಷ್ಟರಲ್ಲಿ ಹಗಲು

---

೨೮. ಫಲಿತ ಜ್ಯೋತಿಷ್ಯದಲ್ಲಿ ಪೃಥಿವಿಯನ್ನು ಚಲಿಸದೇ ಸ್ಥಿರವೆಂದು ಕಲ್ಪಿಸಿಕೊಂಡು ಸೂರ್ಯ ಮೊದಲಾದ ಗ್ರಹ–ಉಪಗ್ರಹಗಳು ಪೃಥಿವಿಯ ಸುತ್ತಲೂ ತಿರುಗುತ್ತವೆ, ಎಂದು ಅಂಗೀಕರಿಸಲಾಗಿದೆ. ಈ ವಿದ್ಯೆಯು ಮೊದಲು ಯುರೋಪಿನಲ್ಲಿ ಎಷ್ಟು ಹರಡಿತ್ತೆಂದರೆ ಇಟಲಿಯ ವೈಜ್ಞಾನಿಕನಾದ 'ಗೆಲಿಲಿಯೋ' ಸತ್ಯ ಸಂಗತಿಯನ್ನು ತಿಳಿಸಿದಾಗ, ಜನರು ಅವನ ಮೇಲೆ ಬಂಡಾಯವೆದ್ದು, ಅವನು ಮೂರ್ಖರ ಪ್ರಚಲಿತ ಸಿದ್ಧಾಂತಕ್ಕೆ ಒಪ್ಪುವಂತೆ ಬಾಧ್ಯ ಪಡಿಸಿದ್ದರು. ಭಾರತದಲ್ಲಿ ಇಂತಹ ವಿದ್ವಾಂಸರು[?] ಈಗಲೂ ಇದ್ದಾರೆ.

ದಿನಾಂಕ ೨೦.೭.೧೯೬೯ ನೆಯ ದಿನ ಅಮೆರಿಕಾದ ವ್ಯೋಮ ಯಾತ್ರಿ ನೀಲ್ ಆರ್ಮಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟಾಗ, ಭಾರತದ ಈ ವಿದ್ವಾಂಸರು[?] ಅವನನ್ನು ಖಂಡಿಸಿ, ಚಂದ್ರನ ಬಗೆಗೆ ಎಸೆದ –ಅಪರಾಧ– ಅಪಮಾನಗಳಿಗಾಗಿ, ಚಂದ್ರನು ಪೃಥಿವಿಯ ಮಾನವರ ಮೇಲೆ ತನ್ನ ಕೋಪವನ್ನು ತೀರಿಸಿಕೊಳ್ಳದೆ ಬಿಡನೆಂದು ಎಚ್ಚರಿಸಿದ್ದರು.– ಸಂ.

೨೯. ಭೂಮಿಯು, 'ಆಪಃ' ಜಲದಿಂದ ಉತ್ಪನ್ನವಾಗಿದೆ. ಆದ್ದರಿಂದ 'ಆಪಃ' ಎಂಬುದು ಭೂಮಿಯ ಮಾತೆಯಾಯಿತು. ಹೀಗೆ ಭೂಗರ್ಭದ ಕೇಂದ್ರವು 'ಆಪಃ'ದಿಂದ ಯುಕ್ತವಾಗಿದೆ. ಪಾಶ್ಚಿಮಾತ್ಯ ಭೂಗರ್ಭಶಾಸ್ತ್ರಿಗಳ ಅನುಮಾನದಂತೆ, ಭೂಗರ್ಭ ಕೇಂದ್ರದಲ್ಲಿ ಕಲ್ಲಿನ ಬಂಡೆಯಿಲ್ಲ– ಸಂ

ಮತ್ತು ಎಷ್ಟು ಹಿಂಬದಿಯಲ್ಲಿ, ಎಂದರೆ ಮರೆಯಲ್ಲಿ ಸರಿಯುತ್ತಾ ಹೋಗುತ್ತವೋ, ಅಷ್ಟರಲ್ಲಿ ರಾತ್ರಿ ಆಗುತ್ತದೆ. ಅಂದರೆ-ಉದಯ, ಅಸ್ತ, ಸಂಜೆ, ಮಧ್ಯಾಹ್ನ, ಮಧ್ಯ-ರಾತ್ರಿ ಮೊದಲಾದ, ಕಾಲದ ಎಷ್ಟು ಅಂಶಗಳಿವೆಯೋ, ಅವು ದೇಶ ದೇಶಾಂತರಗಳಲ್ಲಿ ಸದಾ ಇದ್ದೇ ಇರುತ್ತವೆ. ಅಂದರೆ-ಯಾವಾಗ 'ಆರ್ಯಾವರ್ತದಲ್ಲಿ' ಸೂರ್ಯೋದಯವಾಗುತ್ತದೋ, ಆ ಕಾಲದಲ್ಲಿ ಪಾತಾಳದಲ್ಲಿ, ಎಂದರೆ-ಅಮೇರಿಕಾದಲ್ಲಿ ಅಸ್ತವಾಗುತ್ತದೆ. ಮತ್ತು ಯಾವಾಗ ಆರ್ಯಾವರ್ತದಲ್ಲಿ ಅಸ್ತವಾಗುತ್ತದೋ, ಆಗ 'ಪಾತಾಳ'ದೇಶದಲ್ಲಿ ಉದಯವಾಗುತ್ತದೆ. ಯಾವಾಗ ಆರ್ಯಾವರ್ತದಲ್ಲಿ ಮಧ್ಯದಿನ ಮತ್ತು ಮಧ್ಯರಾತ್ರಿಯಾಗುತ್ತದೋ, ಅದೇ ಸಮಯದಲ್ಲಿ ಪಾತಾಳದೇಶದಲ್ಲಿ ಮಧ್ಯರಾತ್ರಿ ಮತ್ತು ಮಧ್ಯದಿನವಾಗಿರುತ್ತದೆ. (ಪೃಥಿವಿಯ ಭ್ರಮಣದ ಹೇತು) ಯಾರು ಸೂರ್ಯನು ಸುತ್ತುತ್ತಾನೆ ಮತ್ತು ಪೃಥಿವೀ ಸುತ್ತುವುದಿಲ್ಲ-ಎನ್ನುತ್ತಾರೋ, ಅವರೆಲ್ಲರೂ ಅಜ್ಞರು. ಏಕೆಂದರೆ, ಹಾಗೆ ಆಗಿದ್ದ ಪಕ್ಷದಲ್ಲಿ ಅನೇಕ ಸಾವಿರ ವರ್ಷಗಳ ಹಗಲುಗಳೂ, ಮತ್ತು ರಾತ್ರಿಗಳೂ ಆಗುತ್ತಿದ್ದವು. ಎಂದರೆ-ಸೂರ್ಯನಿಗೆ 'ಬ್ರಧ್ನಃ'[೩೦] -ಎಂಬ ಹೆಸರಿದೆ; ಹಾಗೆಂದರೆ ಸೂರ್ಯನು -ಪೃಥಿವಿಗಿಂತ ಲಕ್ಷಾಂತರಪಾಲು ದೊಡ್ಡವನು ಮತ್ತು ಕೋಟ್ಯಂತರ ಮೈಲಿ ದೂರವಿದ್ದಾನೆ. ಹೇಗೆ ಸಾಸಿವೆಯ ಮುಂದೆ ಪರ್ವತ ಸುತ್ತಿದರೆ, ಬಹಳ ಕಾಲ ಹಿಡಿಯುತ್ತದೋ ಮತ್ತು ಸಾಸಿವೆಯು ಸುತ್ತುವುದಾದರೆ, ಬಹಳ ಕಾಲ ಹಿಡಿಯು ವುದಿಲ್ಲವೋ, ಹಾಗೆಯೇ ಪೃಥಿವಿಯ ಸುತ್ತುವಿಕೆಯಿಂದ ತಕ್ಕರೀತಿಯಲ್ಲಿ ಹಗಲು-ರಾತ್ರಿಗಳಾಗುತ್ತವೆ; ಸೂರ್ಯನ ಸುತ್ತುವಿಕೆಯಿಂದ ಆಗುವುದಿಲ್ಲ. ಮತ್ತು ಯಾರು ಸೂರ್ಯನನ್ನು 'ಸ್ಥಿರ'ನೆಂದು ಹೇಳುತ್ತಾರೋ, ಅವರೂ ಜ್ಯೋತಿರ್ವಿದ್ಯಾ ಭಿಜ್ಞರಲ್ಲ. ಏಕೆಂದರೆ-ಸೂರ್ಯನು ಸುತ್ತು ಹಾಕದೇ ಇದ್ದಲ್ಲಿ, ಒಂದು ರಾಶಿಸ್ಥಾನದಿಂದ ಇನ್ನೊಂದು ರಾಶಿಗೆ, ಎಂದರೆ-ಸ್ಥಾನಕ್ಕೆ ಪ್ರವೇಶಿಸಲಾಗುತ್ತಿರಲಿಲ್ಲ ಮತ್ತು "ಭಾರವಾದ ಪದಾರ್ಥವು ಸುತ್ತದೇ, ಆಕಾಶದಲ್ಲಿ ನಿಯತವಾದ ಸ್ಥಾನದಲ್ಲಿ ಎಂದಿಗೂ ಇರಲಾರದು."[೩೧] ಮತ್ತು ಯಾವ ಜೈನರು-ಪೃಥಿವಿಯು ಸುತ್ತುವುದಿಲ್ಲ; ಆದರೆ-ಕೆಳಕ್ಕೆ ಕೆಳಕ್ಕೆಯೇ ಹೋಗುತ್ತಿರುತ್ತದೆ. ಮತ್ತು ಇಬ್ಬರು ಸೂರ್ಯರು ಹಾಗೂ ಇಬ್ಬರು ಚಂದ್ರರು ಕೇವಲ ಜಂಬೂದ್ವೀಪದಲ್ಲೇ ಇದ್ದಾರೆ-ಎನ್ನುತ್ತಾರೋ, ಅವರಂತೂ ಗಾಢವಾದ ಮಾದಕದ್ರವ್ಯದ ಮತ್ತಿನಲ್ಲಿ ಮುಳುಗಿದ್ದಾರೆ. ಏಕೆ? ಕೆಳಕ್ಕೆ-ಕೆಳಕ್ಕೆಯೇ (ಪೃಥಿವೀ) ಇಳಿದು ಹೋಗುತ್ತಿದ್ದಲ್ಲಿ, ಸುತ್ತಲೂ ವಾಯುವಿನ ಆವರಣ ಉಂಟಾಗದೆ, ಪೃಥಿವಿಯು ಛಿನ್ನ ಭಿನ್ನರಾಗುತ್ತಿತ್ತು ಮತ್ತು ಕೆಳಗಣ ಸ್ಥಾನಗಳಲ್ಲಿ ಇರುವವರಿಗೆ ವಾಯುವಿನ ಸ್ಪರ್ಶವಾಗುತ್ತಿರಲಿಲ್ಲ; ಮೇಲಿನವರಿಗೆ ಹೆಚ್ಚು (ಸ್ಪರ್ಶ) ಆಗುತ್ತಿತ್ತು. ಮತ್ತು ವಾಯುವಿನ ಚಲನೆ ಒಂದೇ ಪ್ರಕಾರ ವಾಗಿರುತ್ತಿರಲಿಲ್ಲ. ಇಬ್ಬರು-ಇಬ್ಬರು ಸೂರ್ಯ-ಚಂದ್ರರಿದ್ದಿದ್ದರೆ, ರಾತ್ರಿ ಮತ್ತು ಕೃಷ್ಣಪಕ್ಷದ ಆಗುವಿಕೆಯೇ ನಷ್ಟ-ಭ್ರಷ್ಟವಾಗಿ ಹೋಗುತ್ತಿತ್ತು. ಆದುದರಿಂದ, ಒಂದು ಭೂಮಿಯ ಹತ್ತಿರ ಒಬ್ಬ ಚಂದ್ರ[೩೨] ಮತ್ತು ಅನೇಕ ಭೂಮಿಗಳ[೩೩] ನಡುವೆ ಒಬ್ಬ ಸೂರ್ಯ ಇರುತ್ತಾರೆ.

**ಪ್ರಶ್ನೆ:**- ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಏನು ಪದಾರ್ಥಗಳು? ಮತ್ತು ಅವುಗಳಲ್ಲಿ ಮನುಷ್ಯರು-ಮೊದಲಾದವರ ಸೃಷ್ಟಿ ಇದೆಯೋ, ಅಥವಾ ಇಲ್ಲವೋ?

**ಉತ್ತರ:**- ಈ ಎಲ್ಲ ಭೂಗೋಳಗಳೂ[೩೪] ಎಂದರೆ - ಗೋಳಾಕಾರದ ಗ್ರಹಗಳೂ ಲೋಕಗಳಾಗಿವೆ. ಮತ್ತು ಇವುಗಳಲ್ಲಿ ಮನುಷ್ಯರೇ ಮೊದಲಾದ ಪ್ರಜೆಗಳೂ[೩೫] (ಎಂದರೆ ಅಶರೀರರಾದ, ಮುಂದೆ ಜನ್ಮತಾಳಲಿರುವ ಜೀವರು) ಇದ್ದಾರೆ. ಏಕೆಂದರೆ:-

**ಏತೇಷು ಹೀದಂ ಸರ್ವಂ ವಸು ಹಿತಮೇತೇ ಹೀದಂ ಸರ್ವಂ ವಾಸಯಂತೇ ತದ್ಯದಿದಂ ಸರ್ವಮ್ ವಾಸಯಂತೇ ತಸ್ಮಾದ್ವಸವ ಇತಿ॥**
(ಶತಪಥ:- ೧೪.೬.೭.೫)

---

೩೦. "ಅಸೌ ವಾ ಆದಿತ್ಯ ಬ್ರಧ್ನಃ" ಶತಪಥ ಬ್ರಾಹ್ಮಣ [೧೩.೨.೬.೧] -ಅನು.

೩೧. ಈ ರೀತಿಯ ಮತ್ತು ಮುಂದೆ ಹೇಳುವ ವೈಜ್ಞಾನಿಕ ಮತ್ತು ಖಗೋಳಿಕ ಸಿದ್ಧಾಂತಗಳನ್ನು ಮಹರ್ಷಿ ದಯಾನಂದರು ಅರಿತಿದ್ದರು. ಫಲಿತ ಜ್ಯೋತಿಷಿಗಳು ಇಂದಿಗೂ ಅರಿತಿಲ್ಲ. -ಸಂ.

೩೨. ಏಕೆಂದರೆ, ಕೆಲವು ಗ್ರಹಗಳಿಗೆ ಅನೇಕ ಚಂದ್ರರಿದ್ದಾರೆ.

೩೩. ಎಂದರೆ, ಗ್ರಹಗಳು. -ಸಂ.

೩೪. ಎಂದರೆ, ಗೋಲಾಕಾರದ ಗ್ರಹಗಳು. -ಸಂ.

೩೫. ಈ ಮಾತಿನ ಬಗ್ಗೆ ವಿದ್ವಾಂಸರಲ್ಲಿ ಸಂಶಯವಿದೆ. ವೈಜ್ಞಾನಿಕರು ಜೀವನವಿಲ್ಲವೆಂದು ಸಾಧಿಸುತ್ತಾರೆ. ಪ್ರತ್ಯಕ್ಷ ಪ್ರಯೋಗ ಮಾಡದೆಯೇ ಅನುಮಾನದಿಂದ 'ಇದೆ' ಎಂದು ಹೇಳುವುದು ಅಪಾಯಕಾರಿಯಾಗಲಾರದು. ಆದರೆ, 'ಇಲ್ಲ' ಎಂದು ಹೇಳುವುದೂ ಅಥವಾ ಮಧ್ಯಸ್ಥ ಮಾರ್ಗ ಹಿಡಿಯುವುದು ಅವಶ್ಯವಾಗಿ ಅಪಾಯಕಾರಿಯಾಗಿದೆ. ಅನ್ಯ ಪಂಡಿತರಿಗೂ ಋಷಿ ದಯಾನಂದರಿಗೂ ಇರುವ ವ್ಯತ್ಯಾಸವನ್ನು ಎಲ್ಲರೂ ಧ್ಯಾನದಲ್ಲಿಟ್ಟುಕೊಳ್ಳಬೇಕು. -ಸಂ.

ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ, ಚಂದ್ರ, ನಕ್ಷತ್ರಗಳು ಮತ್ತು ಸೂರ್ಯ ಇವಕ್ಕೆ, ಇವುಗಳಲ್ಲಿಯೇ ಎಲ್ಲ ಪದಾರ್ಥಗಳೂ ಹಾಗೂ ಪ್ರಜೆಗಳೂ ವಾಸಮಾಡುತ್ತಾರೆ ಮತ್ತು ಇವೇ ಎಲ್ಲವನ್ನೂ ನೆಲೆಗೊಳಿಸುತ್ತವೆಯಾದುದರಿಂದ 'ವಸು' ಎಂಬ ಹೆಸರಿದೆ. ಇವು ವಾಸದ, ನಿವಾಸಮಾಡುವ ಮನೆಗಳಾಗಿರುವುದರಿಂದ, ಇವುಗಳಿಗೆ 'ವಸು'[೩೬] ಎಂಬ ಹೆಸರಿದೆ. ಪೃಥಿವಿಯ ಹಾಗೆಯೇ ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳು ವಸುಗಳಾಗಿರುವಾಗ, ಅವುಗಳಲ್ಲಿ ಇದೇ ರೀತಿ ಪ್ರಜೆಗಳ ಇರುವಿಕೆಯಲ್ಲಿ ಏನು ಸಂದೇಹ?[೩೭] ಮತ್ತು ಪರಮೇಶ್ವರನ ಈ ಚಿಕ್ಕ ಲೋಕ ಮನುಷ್ಯರೇ ಮೊದಲಾದವರ ಸೃಷ್ಟಿಯಿಂದ ತುಂಬಿರುವಾಗ, ಈ ಎಲ್ಲಾ ಲೋಕಗಳೂ ಶೂನ್ಯವಾಗಿರುವವೇನು? ಪರಮೇಶ್ವರನ ಯಾವುದೇ ಕಾರ್ಯವೂ ನಿಷ್ಪ್ರಯೋಜನ ವಾಗಿರುವುದಿಲ್ಲ. ಎಂದ ಮೇಲೆ, ಇಷ್ಟೊಂದು ಅಸಂಖ್ಯ ಲೋಕಗಳಲ್ಲಿ, ಮನುಷ್ಯರೇ ಮೊದಲಾದವರ ಸೃಷ್ಟಿಯಾಗದಿದ್ದರೆ, ಎಂದಿಗಾದರೂ ಸಫಲವಾಗಬಲ್ಲದೇ? ಆದುದರಿಂದ ಎಲ್ಲೆಡೆಯೂ ಮನುಷ್ಯ ಮೊದಲಾಗಿ ಹುಟ್ಟಲಿರುವವರ ಸೃಷ್ಟಿಯಿದೆ.

**ಪ್ರಶ್ನೆ:–** ಹೇಗೆ ಈ ಭೂಮಿಯಲ್ಲಿ ಮನುಷ್ಯರೇ ಮೊದಲಾದವರ ಸೃಷ್ಟಿಯ ಆಕೃತಿ–ಅವಯವಗಳು ಇವೆಯೋ, ಹಾಗೆಯೇ ಅನ್ಯಲೋಕಗಳಲ್ಲಿಯೂ ಇರುವುವೋ, ಅಥವಾ ವಿಪರೀತವಾಗಿಯೋ?

**ಉತ್ತರ:–** ಆಕೃತಿಯಲ್ಲಿ ಅಲ್ಪ–ಸ್ವಲ್ಪ ಭೇದವಿರುವ ಸಂಭರರಿದೆ. ಹೇಗೆ ಈ ದೇಶದಲ್ಲಿ ಚೀನ, ನೀಗ್ರೋ, ಮತ್ತು ಆರ್ಯಾವರ್ತ, ಯುರೋಪಿನಲ್ಲಿ ಅವಯವಗಳಲ್ಲಿ ಮತ್ತು ಬಣ್ಣ–ರೂಪ ಹಾಗೂ ಆಕೃತಿಯಲ್ಲಿಯೂ ಕೂಡ ಸ್ವಲ್ಪ–ಸ್ವಲ್ಪ ವ್ಯತ್ಯಾಸ ಇರುತ್ತದೋ, ಹಾಗೆಯೇ ಲೋಕಲೋಕಾಂತರಗಳಲ್ಲಿಯೂ ಭೇದಗಳಿರುತ್ತವೆ. ಆದರೆ, ಯಾವ ಜಾತಿಯ ಸೃಷ್ಟಿ ಈ ಭೂಮಿಯಲ್ಲಿ ಹೇಗಿದೆಯೋ, ಹಾಗೆಯೇ ಆ ಜಾತಿಯ ಸೃಷ್ಟಿ ಅನ್ಯಲೋಕಗಳಲ್ಲಿಯೂ (ಅನ್ಯ ಭೂಲೋಕಗಳಲ್ಲಿ) ಇರುತ್ತದೆ. ಶರೀರದ ಯಾವ ಯಾವ ಪ್ರದೇಶದಲ್ಲಿ ಕಣ್ಣುಗಳು ಮೊದಲಾದ ಅಂಗಗಳಿವೆಯೋ, ಅದೇ ಅದೇ ಪ್ರದೇಶದಲ್ಲಿ ಲೋಕಾಂತರದಲ್ಲಿಯೂ, ಆ ಜಾತಿಯ ಅವಯವಗಳು ಅದೇ ರೀತಿಯಲ್ಲಿ ಇರುತ್ತವೆ. ಏಕೆಂದರೆ:–

**ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ ।**

**ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸ್ವಃ ॥** (ಋಗ್ವೇದ :– ೧೦.೧೯೦.೩)

(ಧಾತಾ) ಪರಮಾತ್ಮನು ಯಾವ ರೀತಿಯ ಸೂರ್ಯ, ಚಂದ್ರ, ದ್ಯೌಃ, ಭೂಮಿ, ಅಂತರಿಕ್ಷ ಮತ್ತು ಅಲ್ಲಿರುವ ಸುಖ ವಿಶೇಷ–ಪದಾರ್ಥಗಳನ್ನು ಪೂರ್ವಕಲ್ಪದಲ್ಲಿ ರಚಿಸಿದ್ದನೋ, ಹಾಗೆಯೇ ಈ ಕಲ್ಪದಲ್ಲಿ, ಎಂದರೆ ಈ ಸೃಷ್ಟಿಯಲ್ಲಿ ರಚಿಸಿದ್ದಾನೆ. [೩೮] ಮತ್ತು ಸಮಸ್ತ ಲೋಕ ಲೋಕಾಂತರಗಳಲ್ಲಿಯೂ ನಿರ್ಮಿಸಿದ್ದಾನೆ. ಭೇದವು ಕಿಂಚನ್ಮಾತ್ರವಿರಬಹುದು.

**ಪ್ರಶ್ನೆ:–** ಈ ಲೋಕದಲ್ಲಿ ಯಾವ ವೇದಗಳ ಪ್ರಕಾಶವಿದೆಯೋ, ಅವುಗಳದೇ ಪ್ರಕಾಶವು ಆ ಲೋಕಗಳಲ್ಲಿಯೂ ಇರುವುದೋ ಅಥವಾ ಇಲ್ಲವೋ?

**ಉತ್ತರ:–** ಅವುಗಳದೇ ಇರುತ್ತದೆ. ಹೇಗೆ ಒಬ್ಬ ರಾಜನ ರಾಜ್ಯ–ವ್ಯವಸ್ಥೆ–ನೀತಿ ಸಮಸ್ತ ದೇಶಗಳಿಗೂ ಸಮಾನವಾಗಿ ರುತ್ತದೋ, ಹಾಗೆಯೇ ರಾಜರಾಜೇಶ್ವರನಾದ ಪರಮಾತ್ಮನ ವೇದೋಕ್ತ ನೀತಿ ಅವನ ಸೃಷ್ಟಿಯಾದ ಸಮಸ್ತ ರಾಜ್ಯದಲ್ಲಿಯೂ ಒಂದೇ ಬಗೆಯದಾಗಿರುತ್ತದೆ.

**ಪ್ರಶ್ನೆ:–** ಯಾವಾಗ ಈ ಜೀವರೂ ಮತ್ತು ಪ್ರಕೃತಿಯಲ್ಲಿನ ತತ್ತ್ವಗಳೂ ಅನಾದಿಗಳಾಗಿದ್ದಾರೋ, ಮತ್ತು ಈಶ್ವರನ ರಚನೆಗಳಲ್ಲವೋ, ಆಗ ಈಶ್ವರನ ಅಧಿಕಾರವೂ ಇವುಗಳ ಮೇಲೆ ಇರಬಾರದು. ಏಕೆಂದರೆ–ಎಲ್ಲವೂ, ಎಲ್ಲರೂ ಸ್ವತಂತ್ರರಾದರು!

**ಉತ್ತರ:–** ಹೇಗೆ ರಾಜರೂ ಮತ್ತು ಪ್ರಜೆಗಳೂ ಸಮಕಾಲೀನರಾಗಿರುತ್ತಾರೋ, ಮತ್ತು ಪ್ರಜೆಗಳು ರಾಜನಿಗೆ ಅಧೀನರಾಗಿ

---

೩೬. ಸೂರ್ಯನಂತಹ ಅಗ್ನಿಗೋಳ, ಚಂದ್ರನಂತಹ ನಿರ್ವಾತ ಗ್ರಹಗಳನ್ನು 'ವಸು' ಎಂದಾಗ ಅವು ಪೃಥಿವೀಸ್ಥರಿಗೆ ಪರೋಕ್ಷವಾಗಿ ವಾಸ– ಸೌಕರ್ಯ ಕೊಡುವಂತಹವು ಎಂದೇ ಗ್ರಹಿಸಬೇಕು. –ಸಂ

೩೭. ಈ ಬಗ್ಗೆ ವೈಜ್ಞಾನಿಕರು ಇನ್ನೂ ಅನುಸಂಧಾನ ನಡೆಸುತ್ತಿದ್ದಾರೆ. ಇಷ್ಟು ವರ್ಷಗಳಲ್ಲಿ ಕೇವಲ ಚಂದ್ರನನ್ನು ಮುಟ್ಟಿ ಬಂದಿದ್ದಾರೆ. ಇಂದಿನವರೆಗಿನ ಅವರ ಪ್ರಯತ್ನ ಸಮುದ್ರದ ಅಗಾಧ ಜಲರಾಶಿಯ ಮುಂದೆ ಬಿಂದುವಿನಷ್ಟು ಮಾತ್ರ ಇದ್ದಂತೆ ಇದೆ. – ಸಂ

೩೮. ಭೂಮಿ, ಸೂರ್ಯ–ಚಂದ್ರಾದಿ ಜಡ ಪದಾರ್ಥಗಳ ರಚನೆಯಲ್ಲಿ ಭೇದವಿರುವುದಿಲ್ಲ. ಚೇತನರ ಅಕೃತಿಗಳ ರಚನೆಯಲ್ಲಿ ಸ್ವಲ್ಪ ಭೇದ ಸಂಭವ,, ಎಂದು ಹಿಂದೆಯೇ ತಿಳಿಸಲಾಗಿದೆ. –ಸಂ.

ರುತ್ತಾರೋ, ಹಾಗೆಯೇ ಜೀವರು ಮತ್ತು ಜಡಪದಾರ್ಥಗಳು ಪರಮೇಶ್ವರನಿಗೆ ಅಧೀನವಾಗಿರುತ್ತವೆ. ಪರಮೇಶ್ವರನು ಸಮಸ್ತ ಸೃಷ್ಟಿಯ ನಿರ್ಮಾಣ ಮಾಡುವವನೂ, ಜೀವರುಗಳ ಕರ್ಮಗಳ ಫಲಗಳನ್ನು ಕೊಡುವವನೂ, ತಕ್ಕಂತಹ ರೀತಿಯಲ್ಲಿ ಸರ್ವರಕ್ಷಕನೂ ಮತ್ತು ಅನಂತ ಸಾಮರ್ಥ್ಯಯುಕ್ತನೂ ಆಗಿರುವಾಗ, ಅಲ್ಪ ಸಾಮರ್ಥ್ಯಯುಕ್ತ (ಜೀವ)ರೂ ಹಾಗೂ ಜಡಪದಾರ್ಥಗಳೂ ಅವನ ಅಧೀನದಲ್ಲಿ ಇರಲಾರವಾದರೂ ಏಕೆ? ಆದುದರಿಂದ ಜೀವರು ಕರ್ಮಮಾಡುವುದರಲ್ಲಿ ಸ್ವತಂತ್ರರೂ, ಆದರೆ–ಕರ್ಮಗಳ ಫಲಗಳನ್ನು ಅನುಭವಿಸುವಲ್ಲಿ ಈಶ್ವರನ ವ್ಯವಸ್ಥೆಯಿಂದ 'ಪರತಂತ್ರ'ರೂ ಆಗಿದ್ದಾರೆ. ಹಾಗೆಯೇ ಸರ್ವಶಕ್ತಿಮಾನ್ (ಪರಮಾತ್ಮನು) ಸೃಷ್ಟಿ–ಸಂಹಾರ ಹಾಗೂ ಸಮಸ್ತ ವಿಶ್ವದ ಪಾಲನಕರ್ತೃವೂ ಆಗಿದ್ದಾನೆ.

ಇದರಿಂದ ಮುಂದಕ್ಕೆ ವಿದ್ಯೆ, ಅವಿದ್ಯೆ, ಬಂಧ ಮತ್ತು ಮೋಕ್ಷದ ವಿಷಯದಲ್ಲಿ ಬರೆಯಲ್ಪಡುವುದು. ಹೀಗೆ ಎಂಟನೆಯ ಸಮುಲ್ಲಾಸ ಪೂರ್ಣವಾಯಿತು. (೮) ಇದರಿಂದ ಮುಂದಕ್ಕೆ ವಿದ್ಯೆ, ಅವಿದ್ಯೆ, ಬಂಧ ಮತ್ತು ಮೋಕ್ಷದ ವಿಷಯದಲ್ಲಿ ಬರೆಯಲ್ಪಡುವುದು.

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ಸೃಷ್ಟ್ಯುತ್ಪತ್ತಿ–ಸ್ಥಿತಿ–ಪ್ರಳಯವಿಷಯೇ**

**ಅಷ್ಟಮ ಸಮುಲ್ಲಾಸಃ ಸಂಪೂರ್ಣಃ**

# ಅಥ ನವಮ ಸಮುಲ್ಲಾಸಾರಂಭಃ

## ಅಥ ವಿದ್ಯಾಽವಿದ್ಯಾ ಬಂಧಮೋಕ್ಷ ವಿಷಯಾನ್ ವ್ಯಾಖ್ಯಾಸ್ಯಾಮಃ

**ವಿದ್ಯಾಂ ಚಾವಿದ್ಯಾ ಚ ಯಸ್ತದ್ವೇದೋಭಯಂ ಸಹ ।**

**ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥** (ಯಜುರ್ವೇದ :- ೪೦.೧೪)

ಯಾವ ಮಾನವನು ವಿದ್ಯೆಯ ಮತ್ತು ಅವಿದ್ಯೆಯ ಸ್ವರೂಪವನ್ನು ಜೊತೆ-ಜೊತೆಯಲ್ಲಿಯೇ ತಿಳಿಯುತ್ತಾನೋ, ಅವನು ಅವಿದ್ಯೆಯಿಂದ,[೧] ಎಂದರೆ ಕರ್ಮೋಪಾಸನೆಯಿಂದ,[೨] ಮೃತ್ಯುವನ್ನು ದಾಟಿ, ವಿದ್ಯೆಯಿಂದ - ಎಂದರೆ ಯಥಾರ್ಥಜ್ಞಾನದಿಂದ ಮೋಕ್ಷವನ್ನು ಪಡೆದುಕೊಳ್ಳುತ್ತಾನೆ. ಅವಿದ್ಯೆಯ ಲಕ್ಷಣ:-

**ಅನಿತ್ಯಾಶುದುಃಖಾನಾತ್ಮಸು ನಿತ್ಯಶುಸುಖಾತ್ಮಖ್ಯಾತಿರವಿದ್ಯಾ ॥** (ಯೋಗ-ಸಾಧನ-೫)

'ಅನಿತ್ಯ'ವಾದ ಜಗತ್ತು ಮತ್ತು ದೇಹ-ಮೊದಲಾದುದಲ್ಲಿ ನಿತ್ಯವಾದುದು, ಎಂದರೆ-ಯಾವ ಕಾರ್ಯಜಗತ್ತು ನೋಡಲ್ಪಡುತ್ತದೋ- ಕೇಳಲ್ಪಡುತ್ತದೋ, ಅದು ಸದಾ ಇರುವುದು; ಸದಾ ಇದ್ದುಕೊಂಡೇ ಬಂದಿದೆ; ಮತ್ತು ಯೋಗಬಲದಿಂದ ಇದೇ 'ದೇವ' ಜನರ ಶರೀರವಾಗಿ ಸದಾ ಇರುವುದು-ಎಂಬ ವಿಪರೀತ ಬುದ್ಧಿಯ ಆಗುವಿಕೆ 'ಅವಿದ್ಯೆಯ ಪ್ರಥಮ ಭಾಗ'ವಾಗಿದೆ. 'ಅಶುಚಿ', ಎಂದರೆ ಮಲಮಯವಾದ, ನರನಾರಿ[೩] ಮೊದಲಾದವರ ಶರೀರದಲ್ಲಿಯೂ ಮತ್ತು ಮಿಥ್ಯಾ-ಭಾಷಣ, ಚೌರ್ಯ- ಮೊದಲಾದ ಅಪವಿತ್ರ (ಕರ್ಮ)ಗಳಲ್ಲಿಯೂ ಪವಿತ್ರವೆಂಬ ಬುದ್ಧಿಯನ್ನು ಹೊಂದುವುದು 'ಅವಿದ್ಯೆಯ ಎರಡನೆಯ', ಅತ್ಯಂತ ವಿಷಯ ಸೇವನವೆಂಬ ದುಃಖದಲ್ಲಿ ಸುಖದ ಬುದ್ಧಿಯನ್ನು ಹೊಂದುವುದು ಮೂರನೆಯ, ಅನಾತ್ಮನಲ್ಲಿ ಆತ್ಮಬುದ್ಧಿಯನ್ನು ಹೊಂದುವುದು ನಾಲ್ಕನೆಯ ಭಾಗವಾಗಿದೆ. ಈ ನಾಲ್ಕು ಬಗೆಯ ವಿಪರೀತ ಜ್ಞಾನವು ಅವಿದ್ಯೆಯೆನ್ನಿಸುತ್ತದೆ. ವಿದ್ಯೆಯ ಲಕ್ಷಣ ಇದಕ್ಕೆ ಪ್ರತಿಕೂಲವಾಗಿ, ಎಂದರೆ - ಅನಿತ್ಯದಲ್ಲಿ, ಅನಿತ್ಯದ ಹಾಗೂ ನಿತ್ಯದಲ್ಲಿ ನಿತ್ಯದ, ಅಪವಿತ್ರದಲ್ಲಿ ಅಪವಿತ್ರದ

---

೧. ಅವಿದ್ಯೆ ಎಂಬ ಸಮಸ್ತ ಪದಕ್ಕೆ ಎರಡು ಅರ್ಥಗಳಿವೆ.-ಒಂದು ಅ+ವಿದ್ಯಾ= ವಿದ್ಯೆ ಅಲ್ಲದುದು; ಎಂದರೆ, ಬೇರೆಯ ತರಹೆಯ ವಿದ್ಯೆ. ಎರಡು. ನ+ವಿದ್ಯಾ= ವಿದ್ಯೆ ಇಲ್ಲ; ಎಂದರೆ, ವಿದ್ಯೆಯ ಅಭಾವ. ಇಲ್ಲಿ ವೇದದಲ್ಲಿ ಮೊದಲ ಪರಿಭಾಷೆ ಸಂಗತ- ಸಂ.

೨. ವಿದ್ಯೆಯಲ್ಲದುದು ಅವಿದ್ಯೆ. ಜ್ಞಾನವೇ ವಿದ್ಯೆಯೆಂದಾಗ, ಜ್ಞಾನವಲ್ಲದ ಕರ್ಮವನ್ನೇ ಅವಿದ್ಯೆಯೆಂದು ಗ್ರಹಿಸಬೇಕು.

೩. ಮೂಲ ಗ್ರಂಥದಲ್ಲಿ 'ಸ್ತ್ರೀ' ಎಂಬ ಶಬ್ದ ಮಾತ್ರವಿದೆ. ಇದರ ಅರ್ಥ ಪುರುಷರ ಶರೀರ ಮಲಮಯವಲ್ಲ, ಎಂದು ಗ್ರಹಿಸಬಾರದು. ಪೌರಾಣಿಕರು ಇದರ ಅಭಿಪ್ರಾಯವನ್ನರಿಯದೇ ಪುರುಷರ ಬಡಾಯಿಯನ್ನೂ, ಸ್ತ್ರೀಯ ನಿಂದೆಯನ್ನೂ ಮಾಡುತ್ತಾರೆ. 'ಸ್ತ್ರೀಯು ಮೋಕ್ಷಕ್ಕೆ ಅಧಿಕಾರಿಣಿಯೇ ಅಲ್ಲ; ಪತಿಯ ಸೇವೆ ಮಾಡಿ, ನಂತರ ಸತ್ತಮೇಲೆ, ತತ್ಫಲ ಸ್ವರೂಪವಾಗಿ ಪುರುಷ ಶರೀರವನ್ನು ಹೊಂದಿ, ಮತ್ತೆ ಮೋಕ್ಷ ಸಾಧನೆಗೆ ಯತ್ನಿಸಬಹುದು ಎಂದು ಸಂಪ್ರದಾಯಸ್ಥ ಆಚಾರ್ಯರುಗಳ [ಅ] ನ್ಯಾಯ ನಿರ್ಣಯವಾಗಿದೆ.

ವಾಸ್ತವವಾಗಿ, ಯೋಗಭ್ಯಾಸದಲ್ಲಿ ಪುರುಷರೇ ಪ್ರಧಾನರಾಗಿರುತ್ತಾರಾದ್ದರಿಂದ, ಯೋಗಭಾಷ್ಯಕಾರ [ವ್ಯಾಸರು]ರು ಪುರುಷರನ್ನು ಉದ್ದೇಶಿಸಿ ಸ್ತ್ರೀ ಶರೀರದ ಬಗ್ಗೆ ಎಚ್ಚರಿಸಿದ್ದಾರೆ. ಸ್ತ್ರೀಯೋಗಾಭ್ಯಾಸಿಗಳಿಗೆ ಪುರುಷ-ಶರೀರದ ಬಗ್ಗೆ ಇದೇ ಎಚ್ಚರಿಕೆ ಅನ್ವಯವಾಗುತ್ತದೆ- ಸಂ.

೩ [ಅ ]ಈ ಬಗ್ಗೆ 'ವೇದಾಂತಿಧ್ವಾಂತನಿವಾರಣ' ಎಂಬ ಪುಸ್ತಿಕೆಯನ್ನು ಗ್ರಂಥಕಾರರು ಬರೆದಿದ್ದಾರೆ. ಯು.ಮೀ.

ಹಾಗೂ ಪವಿತ್ರದಲ್ಲಿ ಪವಿತ್ರದ, ದುಃಖದಲ್ಲಿ ದುಃಖದ ಮತ್ತು ಸುಖದಲ್ಲಿ ಸುಖದ, ಅನಾತ್ಮದಲ್ಲಿ ಅನಾತ್ಮದ ಮತ್ತು ಆತ್ಮನಲ್ಲಿ ಆತ್ಮನ ಜ್ಞಾನದ ಆಗುವಿಕೆ ವಿದ್ಯೆಯಾಗಿರುತ್ತದೆ. ಎಂದರೆ – **ವೇತ್ತಿ ಯಥಾವತ್ತತ್ತ್ವ ಪದಾರ್ಥಸ್ವರೂಪಂ ಯಯಾ ಸಾ ವಿದ್ಯಾ; ಯಯಾ ತತ್ತ್ವಸ್ವರೂಪಂ ನ ಜಾನಾತಿ, ಭ್ರಮಾದನ್ಯಸ್ಮಿನ್ ಅನ್ಯನ್ನಿಶ್ಚಿನೋತಿ ಯಯಾ ಸಾಽವಿದ್ಯಾ".**– ಯಾವುದರಿಂದ ಪದಾರ್ಥಗಳ ಯಥಾರ್ಥಸ್ವರೂಪದ ಜ್ಞಾನವುಂಟಾಗುವುದೋ, ಅದು ವಿದ್ಯೆ. ಒಂದರಲ್ಲಿ ಇನ್ನೊಂದರ ಅರಿವು ಯಾವುದರಿಂದ ಮೂಡುವುದೋ, ಅದು 'ಅವಿದ್ಯೆ'ಯೆನ್ನಿಸುತ್ತದೆ. ಬಂಧನಕ್ಕೆ ಸಾಮಾನ್ಯ ಕಾರಣ ಎಂದರೆ, ಕರ್ಮ ಹಾಗೂ ಉಪಾಸನೆ ಬಾಹ್ಯ ಹಾಗೂ ಆಂತರಿಕ ಕ್ರಿಯವಿಶೇಷಗಳ ಹೆಸರುಗಳಾಗಿವೆ; ಜ್ಞಾನವಿಶೇಷವಲ್ಲ. ಆದುದಿಂದ (ಅವುಗಳನ್ನು) ಅವಿದ್ಯೆಯೆನ್ನಲಾಗಿದೆ. ಮಂತ್ರದಲ್ಲಿನ ಅವಿದ್ಯಾ ಶಬ್ದದ ಅರ್ಥ ಈ ಕಾರಣದಿಂದಲೇ ಮಂತ್ರದಲ್ಲಿ ಶುದ್ಧವಾದ ಕರ್ಮಗಳು ಮತ್ತು ಪರಮೇಶ್ವರನ ಉಪಾಸನೆಯ ಹೊರತು, ಯಾವನೂ ಮೃತ್ಯುವಿನ ದುಃಖದಿಂದ ಪಾರಾಗುವುದಿಲ್ಲವೆಂದು ಹೇಳಿದೆ. ಎಂದರೆ ಪವಿತ್ರವಾದ ಕರ್ಮ, ಪವಿತ್ರವಾದ ಉಪಾಸನೆ ಮತ್ತು ಪವಿತ್ರವಾದ ಜ್ಞಾನದಿಂದಲೇ ಮುಕ್ತಿಯೂ, ಮತ್ತು ಅಪವಿತ್ರವಾದ ಮಿಥ್ಯಾಬಾಷಣ ಮೊದಲಾದ ಕರ್ಮಗಳಿಂದ, ಶಿಲಾಪ್ರತಿಮೆ ಮೊದಲಾದುದರ ಉಪಾಸನೆಯಿಂದ ಮತ್ತು ಮಿಥ್ಯಾಜ್ಞಾನದಿಂದ ಬಂಧನವೂ ಉಂಟಾಗುತ್ತದೆ. ಯಾವನೇ ಮಾನವನೂ, ಕ್ಷಣಮಾತ್ರಕ್ಕೂ ಕರ್ಮ, ಉಪಾಸನೆ ಮತ್ತು ಜ್ಞಾನದಿಂದ ರಹಿತನಾಗುವುದಿಲ್ಲ. ಆದುದರಿಂದ ಧರ್ಮಯುಕ್ತವಾದ ಸತ್ಯಭಾಷಣೆವೇ ಮೊದಲಾದ ಕರ್ಮಗಳನ್ನು ಮಾಡುವುದೇ, ಮತ್ತು ಮಿಥ್ಯಾಭಾಷಣ ಮೊದಲಾದ ಅಧರ್ಮಗಳನ್ನು ಬಿಟ್ಟುಬಿಡುವುದೇ ಮುಕ್ತಿಯ ಸಾಧನವಾಗಿದೆ. ಮುಕ್ತಿಯ ಸಾಮಾನ್ಯ ಸಾಧನ.

**ಪ್ರಶ್ನೆ:** – ಮುಕ್ತಿ ಯಾವನಿಗೆ ಸಿಕ್ಕುವುದಿಲ್ಲ?

**ಉತ್ತರ:**– ಯಾವನು ಬದ್ಧನಾಗಿರುತ್ತಾನೋ, ಅವನಿಗೆ .

**ಪ್ರಶ್ನೆ** :– ಬದ್ಧನು ಯಾವನು?

**ಉತ್ತರ:**– ಯಾವನು ಅಧರ್ಮದಲ್ಲಿ, ಅಜ್ಞಾನದಲ್ಲಿ ಸಿಕ್ಕಿಬಿದ್ದಿದ್ದಾನೋ ಆ ಜೀವನು.

**ಪ್ರಶ್ನೆ** :– ಬಂಧ ಮತ್ತು ಮೋಕ್ಷ ಸಹಜವಾಗಿ ಆಗುತ್ತವೋ ಅಥವಾ ನಿಮಿತ್ತದಿಂದಲೋ?

**ಉತ್ತರ:**– ನಿಮಿತ್ತದಿಂದ. ಏಕೆಂದರೆ, ಸಹಜವಾಗಿ ಆಗುವುದಿದ್ದರೆ, ಬಂಧದ ಮತ್ತು ಮುಕ್ತಿಯ ನಿವೃತ್ತಿ ಎಂದಿಗೂ ಆಗುತ್ತಿರಲಿಲ್ಲ.

**ಪ್ರಶ್ನೆ : ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।**

**ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥**

ಈ ಶ್ಲೋಕವು ಮಾಂಡೂಕ್ಯೋಪನಿಷತ್ತಿನ ಮೇಲೆ (ಗೌಡಪಾದೀಯಕಾರಿಕಾ–೨.೩೨.) ರಚಿತವಾಗಿದೆ. ಜೀವನು ಬ್ರಹ್ಮವಾಗಿರುವುದರಿಂದ, ವಸ್ತುತಃ ಜೀವನಿಗೆ ನಿರೋಧವಿಲ್ಲ; ಎಂದರೆ–ಯಾವಾಗಲೂ ಅವನು ಆವರಣದೊಳಕ್ಕೆ ಬರಲಿಲ್ಲ; ಜನ್ಮವೆತ್ತುವುದಿಲ್ಲ; ಬದ್ಧನಾಗುವುದಿಲ್ಲ; ಮತ್ತು ಸಾಧಕನೂ ಅಲ್ಲ, ಎಂದರೆ ಯಾವುದೇ ಸಾಧನೆಯನ್ನೂ ಮಾಡುವವನಲ್ಲ. ಬಿಡುಗಡೆ ಹೊಂದಲು ಇಚ್ಛಿಸುವುದೂ ಇಲ್ಲ ಮತ್ತು ಇವನಿಗೆ ಎಂದಿಗೂ ಮುಕ್ತಿಯಿಲ್ಲ. ಏಕೆಂದರೆ, ಪರಮಾರ್ಥದಲ್ಲಿ ಬಂಧನವೇ ಸಿದ್ಧಿಸದಿರುವಾಗ, ಮುಕ್ತಿ ಎನ್ನುವುದಕ್ಕೆ ಅರ್ಥವೇನು?

**ಉತ್ತರ** :– ನವೀನ ವೇದಾಂತಿಗಳ ಈ ಕಥನ ಸತ್ಯ್ಯವಲ್ಲ. ಏಕೆಂದರೆ–ಜೀವನ ಸ್ವರೂಪ 'ಅಲ್ಪ' ಎಂದರೆ ಏಕದೇಶೀಯ ಅಣುಸ್ವರೂಪವಾಗಿರುವುದರಿಂದ ಆವರಣದಲ್ಲಿ ಬರುತ್ತಾನೆ. ಶರೀರದೊಂದಿಗೆ ಪ್ರಕಟನಾಗುತ್ತಾನೆ–ಎಂದರೆ, ಜನ್ಮವನ್ನು ಎತ್ತುತ್ತಾನೆ. ಪಾಪವೆಂಬ (ಕು) ಕರ್ಮಗಳ ಫಲಭೋಗವೆಂಬ ಬಂಧನಕ್ಕೆ ಸಿಕ್ಕಿಕೊಳ್ಳುತ್ತಾನೆ; ಅದರಿಂದ ಬಿಡಿಸಿಕೊಳ್ಳುವ ಸಾಧನೆಯನ್ನು ಮಾಡುತ್ತಾನೆ; ದುಃಖದಿಂದ ಮುಕ್ತನಾಗಲು ಇಚ್ಛಿಸುತ್ತಾನೆ ಮತ್ತು ದುಃಖಗಳಿಂದ ಬಿಡುಗಡೆ ಹೊಂದಿ, ಪರಮಾನಂದಸ್ವರೂಪನಾದ ಪರಮೇಶ್ವರನನ್ನು ಸಾಕ್ಷಾತ್ಕರಿಸಿಕೊಂಡು ಮುಕ್ತಿಯನ್ನೂ ಕೂಡ ಅನುಭವಿಸುತ್ತಾನೆ.

**ಪ್ರಶ್ನೆ :**– ಈ ಸಮಸ್ತ ಧರ್ಮಗಳೂ ದೇಹ ಮತ್ತು ಅಂತಃಕರಣದವು; ಜೀವನದಲ್ಲ. ಏಕೆಂದರೆ–ಜೀವನಾದರೋ ಪಾಪ–ಪುಣ್ಯಗಳಿಂದ ರಹಿತನಾದ ಸಾಕ್ಷೀಮಾತ್ರನಾಗಿದ್ದಾನೆ. ಶೀತ–ಉಷ್ಣ ಮೊದಲಾದುವು ಶರೀರ ಮೊದಲಾದುದರ ಧರ್ಮಗಳಾಗಿವೆ. ಆತ್ಮನು ನಿರ್ಲೇಪನಾಗಿದ್ದಾನೆ.[೧]

**ಉತ್ತರ :**– ದೇಹ ಮತ್ತು ಅಂತಃಕರಣ ಜಡವಾಗಿವೆ. ಅವಕ್ಕೆ ಶೀತೋಷ್ಣಗಳ ಪ್ರಾಪ್ತಿ ಮತ್ತು ಭೋಗವಿಲ್ಲ. ಯಾವ ಚೇತನರಾದ, ಮಾನವರೇ ಮೊದಲಾದ ಪ್ರಾಣವಂತರು ಅದನ್ನು ಸ್ಪರ್ಶಿಸುತ್ತಾರೋ,[೨] ಅವರಿಗೆ ಮಾತ್ರ ಶೀತ–ಉಷ್ಣದ ಅನುಭವವೂ, ಭೋಗವೂ ಲಭಿಸುತ್ತದೆ. ಹಾಗೆಯೇ, ಪ್ರಾಣವೂ ಜಡವೇ. ಅದಕ್ಕೆ ಹಸಿವೂ ಇಲ್ಲ; ಬಾಯಾರಿಕೆಯೂ ಇಲ್ಲ. ಆದರೆ, ಪ್ರಾಣಯುಕ್ತನಾದ ಜೀವನಿಗೆ ಹಸಿವು–ಬಾಯಾರಿಕೆಯುಂಟಾಗುತ್ತದೆ. ಅದೇ ರೀತಿ, ಮನವೂ ಜಡವೇ. ಅದಕ್ಕೆ ಹರ್ಷವೂ ಆಗಲಾರದು; ಶೋಕವೂ ಆಗಲಾರದು. ಆದರೆ, ಮನಸ್ಸಿನಿಂದ ಹರ್ಷ– ಶೋಕಗಳ, ಸುಖ–ದುಃಖಗಳ ಅನುಭವವನ್ನು ಜೀವನು ಪಡೆದುಕೊಳ್ಳುತ್ತಾನೆ. ಹೇಗೆ ಬಾಹ್ಯ– ಕರಣಗಳಾದ ಶ್ರೋತ್ರ ಮೊದಲಾದ ಇಂದ್ರಿಯಗಳಿಂದ ಶಬ್ದ ಮೊದಲಾದ ವಿಷಯಗಳನ್ನು ಗ್ರಹಿಸಿ ಜೀವನು ಸುಖಿಯೋ ದುಃಖಿಯೋ ಆಗುತ್ತಾನೋ, ಹಾಗೆಯೇ ಅಂತಃಕರಣದಿಂದ, ಎಂದರೆ–ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರದಿಂದ ಸಂಕಲ್ಪ, ವಿಕಲ್ಪ, ನಿಶ್ಚಯ, ಸ್ಮರಣ ಮತ್ತು ಅಭಿಮಾನ ಮಾಡುವವನಾಗಿ ಶಿಕ್ಷೆಗೆ ಮತ್ತು ಗೌರವಕ್ಕೆ ಭಾಗಿಯಾಗುತ್ತಾನೆ. ಹೇಗೆ ಖಡ್ಗದಿಂದ ಪ್ರಹರಿಸುವವನು ದಂಡನೀಯನಾಗುತ್ತಾನೋ, ಖಡ್ಗವು ದಂಡನೀಯ ವಾಗದೋ, ಹಾಗೆಯೇ ದೇಹೇಂದ್ರಿಯಗಳು, ಅಂತಃಕರಣಗಳು ಮತ್ತು ಪ್ರಾಣಗಳು–ಎಂಬ ಸಾಧನಗಳಿಂದ ಒಳ್ಳೆಯ – ಕೆಟ್ಟ ಕರ್ಮಗಳನ್ನು ಮಾಡುವ ಜೀವನು ಸುಖ–ದುಃಖಗಳ ಭೋಕ್ತೃವಾಗಿದ್ದಾನೆ. 'ಜೀವನು ಕರ್ಮಗಳ ಸಾಕ್ಷಿಯಲ್ಲ', 'ಆದರೆ – ಕರ್ತೃವು ಮತ್ತು ಭೋಕ್ತೃವು'. 'ಕರ್ಮಗಳ ಸಾಕ್ಷಿಯೆಂದರೆ, ಏಕಮಾತ್ರ ಅದ್ವಿತೀಯನಾದ ಪರಮಾತ್ಮನೇ ಆಗಿದ್ದಾನೆ.' ಯಾವನು ಕರ್ಮವನ್ನು ಮಾಡುವ ಜೀವನಿದ್ದಾನೋ, ಅವನೇ ಕರ್ಮಗಳಿಂದ ಲಿಪ್ತನಾಗುತ್ತಾನೆ; ಅವನು ಸಾಕ್ಷಿಯಾದ ಈಶ್ವರನಲ್ಲ.

**ಪ್ರಶ್ನೆ :**– ಜೀವನು ಬ್ರಹ್ಮದ ಪ್ರತಿಬಿಂಬವಾಗಿದ್ದಾನೆ. ಹೇಗೆ ಕನ್ನಡಿ ಒಡೆದು ಮುರಿದು ಹೋಗುವುದರಿಂದ ಬಿಂಬಕ್ಕೆ ಏನೂ ಹಾನಿತಟ್ಟದೋ, ಹಾಗೆಯೇ ಅಂತಃಕರಣದಲ್ಲಿ ಬ್ರಹ್ಮದ ಪ್ರತಿಬಿಂಬವಾದ ಜೀವನು ಆ ಅಂತಃಕರಣದ ಉಪಾಧಿಯಿರುವವರೆಗೆ ಇರುತ್ತಾನೆ. ಯಾವಾಗ ಅಂತಃಕರಣ ನಷ್ಟವಾಗಿ ಹೋಯಿತೋ, ಆಗ ಜೀವನು ಮುಕ್ತನಾಗುತ್ತಾನೆ.

**ಉತ್ತರ:**– ಇದು ಹುಡುಗತನದ ಮಾತು. ಏಕೆಂದರೆ–ಸಾಕಾರವಾದುದರ ಪ್ರತಿಬಿಂಬ ಸಾಕಾರ(ವಸ್ತುವಿನಲ್ಲಿ)ದಲ್ಲಿ ಬೀಳುತ್ತದೆ. ಉದಾಹರಣೆಗೆ, ಮುಖ ಮತ್ತು ಕನ್ನಡಿ ಸಾಕಾರವಾಗಿವೆ; ಮತ್ತು ಬೇರೆ ಬೇರೆಯೂ ಆಗಿವೆ. ಬೇರೆ – ಬೇರೆಯಲ್ಲದಿದ್ದರೂ ಪ್ರತಿಬಿಂಬ ಮೂಡಲಾರದು. ಬ್ರಹ್ಮವು ನಿರಾಕಾರವೂ, ಸರ್ವವ್ಯಾಪಕವೂ ಆಗಿರುವುದರಿಂದ ಅದಕ್ಕೆ ಪ್ರತಿಬಿಂಬವೇ ಇರಲು ಶಕ್ಯವಿಲ್ಲ.

**ಪ್ರಶ್ನೆ :**– ನೋಡಿರಿ, ಗಂಭೀರವೂ ಸ್ವಚ್ಛವೂ ಆದ ನೀರಿನಲ್ಲಿ ನಿರಾಕಾರ ಮತ್ತು ವ್ಯಾಪಕವಾದ ಆಕಾಶದ ಆಭಾಸ ಬೀಳುತ್ತದೆ. ಇದೇ ರೀತಿ ಸ್ವಚ್ಛವಾದ ಅಂತಃಕರಣದಲ್ಲಿ ಪರಮಾತ್ಮನ ಆಭಾಸ ಬೀಳುತ್ತದೆ. ಈ ಕಾರಣದಿಂದ ಅದನ್ನು '**ಚಿದಾಭಾಸ**'ವೆನ್ನುತ್ತಾರೆ.

**ಉತ್ತರ:**– ಇದು ಬಾಲಬುದ್ಧಿಯ ಮಿಥ್ಯಾಪ್ರಲಾಪ! ಏಕೆಂದರೆ, ಆಕಾಶವು ದೃಶ್ಯವೇ ಅಲ್ಲದಿರುವಾಗ, ಅದನ್ನು ಯಾವನಾದರೂ ಕಣ್ಣಿನಿಂದ ನೋಡಬಲ್ಲನಾದರೂ ಹೇಗೆ?

**ಪ್ರಶ್ನೆ :**– ಯಾವುದು ಮೇಲೆ ನೀಲವೂ, ಮಸಕು–ಮಸಕೂ ಆಗಿ ಕಾಣುತ್ತಿದೆಯೋ, ಅದು ಆಕಾಶವಲ್ಲವೇ? ಅದು ನೀಲವಾಗಿ ಕಾಣುತ್ತದೋ, ಅಥವಾ ಇಲ್ಲವೋ?

**ಉತ್ತರ :**– ಅದು ಆಕಾಶವಲ್ಲ.

---

೧. ಇಂತಿಂತಹ ವಾದಗಳನ್ನು ನವೀನ, ವೇದಾಂತಿಗಳು ಆದಿಶಂಕರಾಚಾರ್ಯರ ಹೆಸರಿನಲ್ಲಿ ರಚಿಸಿದ್ದಾರೆ. ಇವರ ಮತಕ್ಕೆ ಸೇರಿದ ಯೋಗಾಚಾರ್ಯರು ವೈರಾಗ್ಯ, ಶರೀರ– ಆತ್ಮಗಳ ಭಿನ್ನತೆ ಮೊದಲಾದುವುಗಳಲ್ಲಿ ಈ ವಾದಗಳನ್ನು ಮಂಡಿಸುತ್ತಾರೆ.– ಸಂ.

೨. ಎಂದರೆ, ಶರೀರದಿಂದ ಯುಕ್ತರಾಗಿ ಸಂಪರ್ಕವಿಡುತ್ತಾರೆ, ಎಂದರ್ಥ. –ಸಂ.

**ಪ್ರಶ್ನೆ :–** ಹಾಗಾದರೆ, ಅದೇನು?

**ಉತ್ತರ :–** ಬೇರೆ ಬೇರೆ ಪೃಥಿವಿಯ, ಜಲದ ಮತ್ತು ಅಗ್ನಿಯ ತ್ರಸರೇಣುಗಳು ಕಾಣುತ್ತವೆ. ಅದರಲ್ಲಿ ಯಾವ ನೀಲತ್ವ ಕಾಣುತ್ತದೋ, ಅದು ಮಳೆಯಾಗಿ ಸುರಿಯುವ ಅಧಿಕ ಜಲ; ಮತ್ತು ಯಾವುದು ಮಸಕು–ಮಸಕಾಗಿ ಕಾಣುತ್ತದೋ, ಅದು ಪೃಥಿವಿಯಿಂದ ಹಾರಿ ವಾಯುವಿನಲ್ಲಿ ಚಲಿಸುತ್ತಿರುವ ಧೂಳು; ಕಾಣಿಸುವುದು ಅದೇ. ಜಲದಲ್ಲಿ ಅಥವಾ ಕನ್ನಡಿಯಲ್ಲಿ ಅದರದೇ ಪ್ರತಿಬಿಂಬ ಕಾಣಿಸುತ್ತದೆ; ಎಂದಿಗೂ ಆಕಾಶದ್ದಲ್ಲ.

**ಪ್ರಶ್ನೆ :–** ಹೇಗೆ 'ಘಟಾಕಾಶ', 'ಮಠಾಕಾಶ', 'ಮೇಘಾಕಾಶ' ಮತ್ತು 'ಮಹದಾಕಾಶ' ಭೇದಗಳು ವ್ಯವಹಾರದಲ್ಲಿದೆಯೋ, ಹಾಗೆಯೇ ಬ್ರಹ್ಮಾಂಡದ ಮತ್ತು ಅಂತಃಕರಣದ ಉಪಾಧಿಯ ಭೇದದಿಂದ ಬ್ರಹ್ಮಕ್ಕೆ ಈಶ್ವರ ಮತ್ತು ಜೀವ ಎಂದು ಹೆಸರಾಗುತ್ತದೆ. ಘಟ– ಮೊದಲಾದುವು ನಾಶವಾಗಿ ಹೋದಾಗ, ಮಹಾಕಾಶ ಮಾತ್ರವೇ ಕಾಣುತ್ತದೆ.

**ಉತ್ತರ :–** 'ಇದೂ ಕೂಡ ಅವಿದ್ವಾಂಸರ ಮಾತೇ.' ಏಕೆಂದರೆ–ಆಕಾಶವೆಂದೂ ಭಿನ್ನ–ಭಿನ್ನವಾಗುವುದಿಲ್ಲ. ನಡೆನುಡಿಗಳಲ್ಲಿಯೂ, 'ಮಡಿಕೆಯನ್ನು ತೆಗೆದುಕೊಂಡು ಬಾ' – ಎಂಬೀ ರೀತಿಯ ವ್ಯವಹಾರಗಳೇ ಆಗುತ್ತವೆ; 'ಮಡಿಕೆಯ ಆಕಾಶವನ್ನು ತೆಗೆದುಕೊಂಡು ಬಾ' –ಎಂದು ಯಾವನೂ ಹೇಳುವುದಿಲ್ಲ. ಆದುದರಿಂದ ಈ ಮಾತು ಸರಿಯಲ್ಲ.

**ಪ್ರಶ್ನೆ :–** ಹೇಗೆ ಸಮುದ್ರದ ಮಧ್ಯೆ ಮೀನುಗಳು, ಹುಳಗಳು ಮತ್ತು ಆಕಾಶದ ಮಧ್ಯೆ ಪಕ್ಷಿಗಳು – ಮೊದಲಾದುವು ಸಂಚರಿಸುತ್ತವೋ, ಹಾಗೆಯೇ, ಚಿದಾಕಾಶ ಬ್ರಹ್ಮದಲ್ಲಿ ಸಮಸ್ತ ಅಂತಃಕರಣಗಳು ಸಂಚರಿಸುತ್ತವೆ. ಇವು ಸ್ವತಃ ಏನೋ ಜಡಗಳೇ; ಆದರೆ–ಸರ್ವವ್ಯಾಪಕನಾದ ಪರಮಾತ್ಮನ ಅಸ್ತಿತ್ವದಿಂದ, ಕಬ್ಬಿಣವು ಬೆಂಕಿಯಿಂದ (ಪ್ರಭಾವಿತ)ವಾಗುವಂತೆ, ಚೇತನವಾಗುತ್ತಾ ಇರುತ್ತವೆ. ಅವು ಸುತ್ತುತ್ತಾ–ತಿರುಗುತ್ತಾ ಇರುತ್ತವೆ; ಹಾಗೂ ಅಕಾಶ ಮತ್ತು ಬ್ರಹ್ಮ ನಿಶ್ಚಲವಾಗಿಯೇ ಇರುತ್ತವೆ, ಈ ರೀತಿ, ಜೀವನನ್ನು ಬ್ರಹ್ಮವೆಂದು ಅಂಗೀಕರಿಸುವುದರಲ್ಲಿ ದೋಷವೇನೂ ಬಾರದು. (ಅಂತಃಕರಣದಿಂದ ಹುಟ್ಟುವ ವಿಕಾರಗಳು ಜೀವನಿಗೆ ತಾಗವು.)

**ಉತ್ತರ:–** 'ಈ ನಿಮ್ಮ ದೃಷ್ಟಾಂತವೂ ಸತ್ಯವಲ್ಲ.' ಏಕೆಂದರೆ, ಸರ್ವವ್ಯಾಪಕವಾದ ಬ್ರಹ್ಮವು ಅಂತಃಕರಣಗಳಲ್ಲಿ ಪ್ರಕಾಶಮಾನವಾಗಿ, ಜೀವನಾಗುವುದಾದರೆ, ಸರ್ವಜ್ಞತ್ವ ಮೊದಲಾದ ಗುಣಗಳು ಅವನಲ್ಲಿರುತ್ತವೋ, ಅಥವಾ ಇಲ್ಲವೋ? ಆವರಣವಿರುವುದರಿಂದ ಸರ್ವಜ್ಞತ್ವವಿರುವುದಿಲ್ಲ – ಎನ್ನುವಿರಾದರೆ, ಬ್ರಹ್ಮ ಆವರಿತ ತತ್ತ್ವವೇನು? ಮತ್ತು ಅದು ಖಂಡಿಸಲ್ಪಡುವಂತಹುದೋ ಅಥವಾ ಅಖಂಡವೋ? ಹೇಳಿರಿ. ಅಖಂಡಿತವೆಂದು ಹೇಳುವಿರಾದರೆ, ಮಧ್ಯದಲ್ಲಿ ಯಾವನೂ ತೆರೆಯನ್ನು ಹಾಕಲಾರನು. ತೆರೆಯಿಲ್ಲದಾಗ, ಸರ್ವಜ್ಞತ್ವವೇತಕ್ಕಿಲ್ಲ? ತನ್ನ ಸ್ವರೂಪವನ್ನು ಮರೆತು, ಅಂತಃಕರಣದೊಂದಿಗೆ ಸಂಚರಿಸುವಂತೆ ಮಾಡುತ್ತದೆ; ಸ್ವರೂಪತಃ ಅಲ್ಲ – ಎಂದು ಹೇಳುವಿರಾದರೆ, ಅದು ಸ್ವತಃ ಚಲಿಸದಾಗ, ಅಂತಃಕರಣವು ತಾನು ಮೊದಲಿದ್ದ ಎಷ್ಟು–ಎಷ್ಟು ಭಾಗವನ್ನು ಬಿಡುತ್ತಾ ಮತ್ತು ಮುಂದೆ ಮುಂದೆ ಎತ್ತ–ಎತ್ತ ಸರಿಯುತ್ತಾ ಹೋಗುವುದೋ, ಅಷ್ಟು–ಅಷ್ಟು, ಅಲ್ಲಿ–ಅಲ್ಲಿಯ ಬ್ರಹ್ಮಭ್ರಾಂತವೂ, ಅಜ್ಞಾನಿಯೂ ಆಗಿಹೋಗುವುದು ಮತ್ತು ಎಷ್ಟು–ಎಷ್ಟು ಬಿಡುಗಡೆ ಹೊಂದುತ್ತಾ ಹೋಗುವುದೋ, ಅಷ್ಟು–ಅಷ್ಟು ಅಲ್ಲಿ–ಅಲ್ಲಿನ ಬ್ರಹ್ಮವು ಜ್ಞಾನಿಯೂ, ಪವಿತ್ರವೂ ಮತ್ತು ಮುಕ್ತವೂ ಆಗುತ್ತಾ ಹೋಗುವುದು. ಹೀಗೆಯೇ ಎಲ್ಲೆಡೆಯೂ ಸೃಷ್ಟಿಯಲ್ಲಿನ ಬ್ರಹ್ಮವನ್ನು ಅಂತಃಕರಣಗಳು ಕೆಡಿಸುತ್ತಾ ಹೋಗುವುವು ಮತ್ತು ಬಂಧನ ಮುಕ್ತಿಯೂ ಕೂಡ ಕ್ಷಣ–ಕ್ಷಣದಲ್ಲಿ ಆಗುತ್ತಾ ಹೋಗುವುದು. ನೀವು ಹೇಳಿದ ರೀತಿಯಲ್ಲಿ ವಸ್ತುಸ್ಥಿತಿಯಿದ್ದಲ್ಲಿ, ಯಾವನೇ ಜೀವನಿಗೂ ಮೊದಲು ನೋಡಿದುದರ–ಕೇಳಿದುದರ ಸ್ಮರಣವಿರುತ್ತಿರಲಿಲ್ಲ. ಏಕೆಂದರೆ, ಯಾವ ಬ್ರಹ್ಮವು ನೋಡಿತೋ, ಅದು ಉಳಿಯಲಿಲ್ಲ! ಆದುದರಿಂದ "ಬ್ರಹ್ಮ ಜೀವನಾಗಿ; ಅಥವಾ ಜೀವನು ಬ್ರಹ್ಮವಾಗಿ, ಒಂದಾಗುವುದೂ ಎಂದಿಗೂ ಇಲ್ಲ; ಸದಾ ಬೇರೆ ಬೇರೆಯೇ ಆಗಿರುತ್ತಾರೆ."

**ಪ್ರಶ್ನೆ :–** ಇವೆಲ್ಲವೂ ಅಧ್ಯಾರೋಪಮಾತ್ರವಾಗಿದೆ. ಎಂದರೆ, ಒಂದು ವಸ್ತುವಿನಲ್ಲಿ ಇನ್ನೊಂದು ವಸ್ತುವಿನ ಇರುವಿಕೆಯನ್ನು ಹೇಳುವುದು ಅಧ್ಯಾರೋಪವೆನಿಸುತ್ತದೆ. ಹಾಗೆಯೇ, ಬ್ರಹ್ಮವೆಂಬ ವಸ್ತುವಿನಲ್ಲಿ ಸರ್ವ ಜಗತ್ತಿನ ಹಾಗೂ ಇದರ ವ್ಯವಹಾರದ ಅಧ್ಯಾರೋಪಮಾಡುವುದರಿಂದ, ಜಿಜ್ಞಾಸುವಿಗೆ ಜ್ಞಾನವನ್ನುಂಟುಮಾಡಲಾಗುತ್ತದೆ. ವಾಸ್ತವವಾಗಿ ಎಲ್ಲವೂ ಬ್ರಹ್ಮವೇ ಆಗಿದೆ.

**ಪ್ರಶ್ನೆ :–** ಅಧ್ಯಾರೋಪವನ್ನು ಮಾಡುವವನು ಯಾವನು?

**ಉತ್ತರ:–** ಜೀವನು.

**ಪ್ರಶ್ನೆ:–** ಜೀವನೆಂದು ಯಾವನನ್ನು ಕರೆಯುತ್ತೀರಿ?

**ಉತ್ತರ:–** ಅಂತಃಕರಣದಿಂದ ಅವಚ್ಛಿನ್ನನಾದ[೧] ಚೇತನನ್ನು.

**ಪ್ರಶ್ನೆ:–** ಅಂತಃಕರಣಾವಚ್ಛಿನ್ನ ಚೇತನನು ಬೇರೆಯೋ ಅಥವಾ ಅದೇ ಬ್ರಹ್ಮವೋ?

**ಉತ್ತರ:–** ಅದೇ ಬ್ರಹ್ಮವೇ.

**ಪ್ರಶ್ನೆ :–** ಹಾಗಾದರೆ, ಬ್ರಹ್ಮವೇ ತನ್ನಲ್ಲಿ ಜಗತ್ತಿನ ಮಿಥ್ಯಾಕಲ್ಪನೆ ಮಾಡಿಕೊಂಡಿತೇ?

**ಉತ್ತರ :–** ಹೌದು. ಇದರಿಂದ ಬ್ರಹ್ಮಕ್ಕೇನು ಹಾನಿ?

**ಪ್ರಶ್ನೆ :–** ಯಾವನು ಮಿಥ್ಯಾಕಲ್ಪನೆ ಮಾಡಿಕೊಳ್ಳುತ್ತಾನೋ, ಅವನು ಸುಳ್ಳುಗಾರನಾಗುವುದಿಲ್ಲವೇ?

**ಉತ್ತರ :–** ಇಲ್ಲ. ಏಕೆಂದರೆ, ಯಾವುದು ಮನಸ್ಸಿನಿಂದ, ವಾಣಿಯಿಂದ ಕಲ್ಪಿತವಾಗಿದೆಯೋ, ಕಥಿತವಾಗಿದೆಯೋ, ಅದೆಲ್ಲವೂ ಸುಳ್ಳು.

**ಪ್ರಶ್ನೆ:–** ಮತ್ತೆ, ಮನಸ್ಸಿನಿಂದ, ವಾಣಿಯಿಂದ ಮಿಥ್ಯಾಕಲ್ಪನೆಯನ್ನೂ, ಮಿಥ್ಯಾಭಾಷಣವನ್ನೂ ಮಾಡುವ ಬ್ರಹ್ಮವು ಕಲ್ಪಿತವೂ ಮತ್ತು ಮಿಥ್ಯಾವಾದಿಯೂ ಆಯಿತೋ, ಅಥವಾ ಇಲ್ಲವೋ

**ಉತ್ತರ:–** ಆಗಲಿ, ಬಿಡಿ. ನಮಗೆ ಅದು ಬೇಕಾದ ತೀರ್ಮಾನವೇ ಆಗಿದೆ.

ಭಲೇ! ಸುಳ್ಳುಗಾರ ವೇದಾಂತಿಗಳೇ! ನೀವು ಸತ್ಯಸ್ವರೂಪನೂ, ಸತ್ಯಕಾಮನೂ, ಸತ್ಯಸಂಕಲ್ಪನೂ ಆದ ಪರಮಾತ್ಮನನ್ನು ಮಿಥ್ಯಾಚಾರಿಯನ್ನಾಗಿ ಮಾಡಿಬಿಟ್ಟಿರಿ! 'ಇದು ನಿಮ್ಮ ದುರ್ಗತಿಯ ಕಾರಣವಲ್ಲವೇ?' ಪರಮೇಶ್ವರನು ಮಿಥ್ಯಾಸಂಕಲ್ಪನು ಮತ್ತು ಮಿಥ್ಯಾವಾದಿಯು–ಎಂದು ಯಾವ ಉಪನಿಷತ್ತಿನಲ್ಲಿ, ಸೂತ್ರದಲ್ಲಿ ಅಥವಾ ವೇದದಲ್ಲಿ ಬರೆದಿದೆ? ಏಕೆಂದರೆ, ಯಾವನೋ ಕಳ್ಳನು ಪೋಲೀಸಿನವನಿಗೆ ಶಿಕ್ಷೆ ಕೊಟ್ಟಂತೆ ಆಯಿತು . ಎಂದರೆ "ಕಳ್ಳನೇ ದಂಡಿಸಿದ ನ್ಯಾಯರಕ್ಷಕನನ್ನು" – ಎಂಬ ಕಥೆಯಂತೆ ಆಯಿತು ನಿಮ್ಮ ಮಾತು. ನ್ಯಾಯರಕ್ಷಕನು ಕಳ್ಳನನ್ನು ದಂಡಿಸುವುದೇನೋ ಉಚಿತವಾಗಿದೆ. ಆದರೆ – ಕಳ್ಳನು ನ್ಯಾಯ ರಕ್ಷನಿಗೆ ಶಿಕ್ಷೆವಿಧಿಸುವುದು ತಲೆಕೆಳಗಾದ ಮಾತೆ ಸರಿ! ಹಾಗೆಯೇ ನೀವು ಮಿಥ್ಯಾಸಂಕಲ್ಪರೂ ಮತ್ತು ಮಿಥ್ಯಾವಾದಿಗಳೂ ಆಗಿ, ಆ ನಿಮ್ಮ ದೋಷವನ್ನೇ ಬ್ರಹ್ಮದಲ್ಲಿ ವ್ಯರ್ಥವಾಗಿ ಆರೋಪಿಸುತ್ತೀರಿ. ಬ್ರಹ್ಮವು ಮಿಥ್ಯಾಜ್ಞಾನಿಯೂ, ಮಿಥ್ಯಾವಾದಿಯೂ, ಮಿಥ್ಯಾಕಾರಿಯೂ ಆಗಿದ್ದರೆ, ಸಮಸ್ತ ಅನಂತಬ್ರಹ್ಮವೂ ಹಾಗೆಯೇ ಆದೀತು. ಏಕೆಂದರೆ, ಅದು ಏಕರಸವಾಗಿದೆ; ಸತ್ಯಸ್ವರೂಪವೂ, ಸತ್ಯಾಂಗೀಕರ್ತೃವೂ, ಸತ್ಯವಾದಿಯೂ ಹಾಗೂ ಸತ್ಯಕಾರಿಯೂ ಆಗಿದೆ. ಮೇಲೆ ನೀವು ಹೇಳಿದ ಎಲ್ಲ ದೋಷಗಳೂ ನಿಮ್ಮವು; ಬ್ರಹ್ಮದ್ದಲ್ಲ. 'ಯಾವುದನ್ನು ನೀವು ವಿದ್ಯೆಯೆನ್ನುತ್ತೀರೋ, ಅದು ಅವಿದ್ಯೆಯಾಗಿದೆ.' ಮತ್ತು ನಿಮ್ಮ ಅದ್ಯಾರೋಪವೂ ಸುಳ್ಳೇ. ಏಕೆಂದರೆ – ತಾವು ಸ್ವತಃ ಬ್ರಹ್ಮವಲ್ಲವಾಗಿದ್ದು, ತಮ್ಮನ್ನು ಬ್ರಹ್ಮವೆಂದೂ, ಬ್ರಹ್ಮವನ್ನು ಜೀವನೆಂದೂ ಅಂಗೀಕರಿಸುವುದು ಮಿಥ್ಯಾಜ್ಞಾನವಲ್ಲವಾದರೆ, ಅದು ಮತ್ತೆ ಇನ್ನೇನು? ಯಾವನು ಸರ್ವವ್ಯಾಪಕನಾಗಿರುತ್ತಾನೋ, ಅವನು ಪರಿಚ್ಛಿನ್ನ[೨]ನಾಗನು; ಅಜ್ಞಾನ ಮತ್ತು ಬಂಧನದಲ್ಲಿ ಎಂದಿಗೂ ಬೀಳುವುದಿಲ್ಲ. ಏಕೆಂದೆ–ಅಜ್ಞಾನವು ಪರಿಚ್ಛಿನ್ನನೂ, ಏಕದೇಶೀಯನೂ, ಅಲ್ಪನೂ, ಅಲ್ಪಜ್ಞನೂ ಆದ ಜೀವನಲ್ಲಿ ಉಂಟಾಗುತ್ತದೆ; ಸರ್ವಜ್ಞವೂ, ಸರ್ವವ್ಯಾಪಕವೂ ಆದ ಬ್ರಹ್ಮದಲ್ಲಿ ಉಂಟಾಗುವುದಿಲ್ಲ.

## ಈಗ ಮುಕ್ತಿ – ಬಂಧನಗಳನ್ನು ವರ್ಣಿಸುತ್ತೇವೆ

**ಪ್ರಶ್ನೆ:–** ಮುಕ್ತಿಯೆಂದು ಯಾವುದನ್ನು ಹೇಳುತ್ತಾರೆ?

**ಉತ್ತರ:–** **"ಮುಂಚಂತಿ ಪೃಥಿಗ್ಭವಂತಿ ಜನಾ ಯಸ್ಯಾಂ ಸಾ ಮುಕ್ತಿಃ"**– ಯಾವುದರಲ್ಲಿ ಬಿಡುಗಡೆಯಾಗುವುದೋ, ಅದಕ್ಕೆ ಮುಕ್ತಿಯೆಂದು ಹೆಸರು.

---

೧. ಅಂತಃಕರಣದ ಆವರಣದಲ್ಲಿ ಬಂದು, ಅದರ ಹೊರಗಣ ಚೇತನನಿಂದ ಪ್ರತ್ಯೇಕಿಸಲ್ಪಟ್ಟ ಚೇತನದ ಅಷ್ಟು ಭಾಗವೇ ಅಂತಃಕರಣವಚ್ಛನ್ನ ಚೇತನ.

೨. ಏಕದೇಶಿಯನು; ಸ್ಥಾನದ ದೃಷ್ಟಿಯಿಂದ ಎಲ್ಲೋ ಒಂದೆಡೆ ಇರುವವನು. –ಅನು.

**ಪ್ರಶ್ನೆ :–** ಯಾವುದರಿಂದ ಬಿಡುಗಡೆ ಹೊಂದುವುದು?

**ಉತ್ತರ:–** ಯಾವುದರಿಂದ ಬಿಡುಗಡೆ ಹೊಂದಲು ಸರ್ವಜೀವರೂ ಇಚ್ಛಿಸುತ್ತಾರೋ, ಅದರಿಂದ.

**ಪ್ರಶ್ನೆ :–** ಯಾವುದರಿಂದ ಬಿಡುಗಡೆ ಹೊಂದಲು ಇಚ್ಛಿಸುತ್ತಾರೆ?

**ಉತ್ತರ:–** 'ದುಃಖದಿಂದ.'

**ಪ್ರಶ್ನೆ:–** ಬಿಡುಗಡೆ ಹೊಂದಿ ಏನನ್ನು ಪಡೆದುಕೊಳ್ಳುತ್ತಾರೆ ಮತ್ತು ಎಲ್ಲಿರುತ್ತಾರೆ?

**ಉತ್ತರ :–** 'ಆನಂದ[೮]ವನ್ನು ಪಡೆದುಕೊಳ್ಳುತ್ತಾರೆ ಮತ್ತು ಬ್ರಹ್ಮದಲ್ಲಿರುತ್ತಾರೆ.'

**ಪ್ರಶ್ನೆ:–** 'ಮುಕ್ತಿ' ಮತ್ತು 'ಬಂಧನ' ಯಾವ ಯಾವ ಕಾರಣಗಳಿಂದ ಆಗುತ್ತವೆ?

**ಉತ್ತರ:–** ಪರಮೇಶ್ವರನ ಆಜ್ಞಾಪಾಲನ ಮಾಡುವುದು, ಅಧರ್ಮದಿಂದಲೂ, ಅವಿದ್ಯೆಯಿಂದಲೂ, ದುಷ್ಟ ಸಂಗದಿಂದಲೂ, ಕೆಟ್ಟ ಸಂಸ್ಕಾರಗಳಿಂದಲೂ, ದುರ್ವ್ಯಸನಗಳಿಂದಲೂ ದೂರವಿರುವುದು, ಮತ್ತು ಸತ್ಯಭಾಷಣ, ಪರೋಪಕಾರ, ವಿದ್ಯೆ, ನಿಷ್ಪಕ್ಷಪಾತ ನ್ಯಾಯ ಮತ್ತು ಧರ್ಮವನ್ನು ವರ್ಧಿಸುವುದು, ಪೂರ್ವೋಕ್ತ ರೀತಿಯಲ್ಲಿ ಪರಮೇಶ್ವರನ ಸ್ತುತಿ–ಪ್ರಾರ್ಥನಾ–ಉಪಾಸನೆಗಳನ್ನು, ಎಂದರೆ–ಯೋಗಾಭ್ಯಾಸವನ್ನು ಮಾಡುವುದು, ವಿದ್ಯೆಯನ್ನು ಕಲಿಯುವುದು–ಕಲಿಸುವುದು ಮತ್ತು ಧರ್ಮದಿಂದ ಪರಿಶ್ರಮ ಮಾಡಿ ಜ್ಞಾನದ ಉನ್ನತಿಯನ್ನು ಮಾಡುವುದು, ಸರ್ವೋತ್ಕೃಷ್ಟವಾದ ಸಾಧನೆಗಳನ್ನು ಮಾಡುವುದು ಮತ್ತು ಯಾವುದನ್ನೇ ಮಾಡಿದರೂ, ಅದೆಲ್ಲವನ್ನೂ ಪಕ್ಷಪಾತರಹಿತನಾಗಿ, ನ್ಯಾಯಧರ್ಮಾನುಸಾರವಾಗಿಯೇ ಮಾಡುವುದು–ಈ ಮೊದಲಾದ ಸಾಧನಗಳಿಂದ ಮುಕ್ತಿಯೂ, ಮತ್ತು ಇವಕ್ಕೆ ಪ್ರತಿಕೂಲವಾಗಿ 'ಈಶ್ವರಾಜ್ಞಾಭಂಗವೇ'[೯] ಮೊದಲಾದ ಕರ್ಮದಿಂದ 'ಬಂಧನ'ವೂ ಉಂಟಾಗುತ್ತದೆ.

**ಪ್ರಶ್ನೆ:–** ಮುಕ್ತಿಯಲ್ಲಿ ಜೀವನು 'ಲಯ' ಹೊಂದುತ್ತಾನೋ, ಅಥವಾ ಅಸ್ತಿತ್ವದಲ್ಲಿರುತ್ತಾನೋ?

**ಉತ್ತರ:–** ಅಸ್ತಿತ್ವದಲ್ಲಿರುತ್ತಾನೆ.

**ಪ್ರಶ್ನೆ :–** ಎಲ್ಲಿರುತ್ತಾನೆ?

**ಉತ್ತರ:–** ಬ್ರಹ್ಮದಲ್ಲಿ.

**ಪ್ರಶ್ನೆ :–** ಬ್ರಹ್ಮವೆಲ್ಲಿದೆ ಮತ್ತು ಆ ಮುಕ್ತಜೀವನು ಒಂದೇ ಸ್ಥಳದಲ್ಲಿರುತ್ತಾನೋ, ಅಥವಾ ಸ್ವೇಚ್ಛಾನುಸಾರ ಸಂಚರಿಸುವವನಾಗಿ ಎಲ್ಲೆಡೆಯೂ ತಿರುಗುತ್ತಾನೋ?

**ಉತ್ತರ:–** ಯಾವ ಬ್ರಹ್ಮವು ಸರ್ವತ್ರ ಪೂರ್ಣವಾಗಿದೆಯೋ, ಅದರಲ್ಲಿಯೇ ಮುಕ್ತ ಜೀವನು ಅವ್ಯಾಹತಗತಿಯಿಂದ, ಎಂದರೆ ಎಲ್ಲಿಯೂ ಅಡ್ಡಿ–ತಡೆಯಿಲ್ಲದೆ, ವಿಜ್ಞಾನ–ಆನಂದ–ಪೂರ್ವಕವಾಗಿ, ಸ್ವತಂತ್ರನಾಗಿ ಸಂಚರಿಸುತ್ತಾನೆ.

**ಪ್ರಶ್ನೆ:–** ಮುಕ್ತಜೀವನಿಗೆ ಸ್ಥೂಲಶರೀರವಿರುತ್ತದೋ, ಅಥವಾ ಇಲ್ಲವೋ?

**ಉತ್ತರ:–** ಇರುವುದಿಲ್ಲ.

**ಪ್ರಶ್ನೆ:–** ಮತ್ತೆ ಅವನು ಆನಂದದ ಅನುಭವವನ್ನು ಹೇಗೆ ಹೊಂದುತ್ತಾನೆ?

**ಉತ್ತರ:–** ಸತ್ಯಸಂಕಲ್ಪ ಮೊದಲಾದ ಅವನ ಸ್ವಾಭಾವಿಕವಾದ ಗುಣ–ಸಾಮರ್ಥ್ಯಗಳೆಲ್ಲವೂ ಇರುತ್ತವೆ. ಭೌತಿಕ–ಸಂಗ ವಿರುವುದಿಲ್ಲ. ಹೇಗೆಂದರೆ:–

---

೮. ಮುಕ್ತಿಯ 'ಸುಖ' ಅಥವಾ 'ಆನಂದ' ಪರ್ಯಾಯವಾಚೀ ಶಬ್ದಗಳು. 'ಖ' ಎಂದರೆ ಇಂದ್ರಿಯ ಎಂಬ ಅರ್ಥ ಇಲ್ಲಿ ಅನ್ವಯಿಸದು.– ಸಂ.

೯. ಎಂದರೆ, ವೇದ ವಿರುದ್ಧವಾದ ಜಡ; ಪಾಷಾಣ ಪೂಜೆ, ಪರಮಾತ್ಮನ ಸ್ಥಾನದಲ್ಲಿ ಮನುಷ್ಯ– ಪ್ರಾಣಿ ಮೊದಲಾದುವುಗಳ ಉಪಾಸನೆ, ಮತ್ತು ವೇದದ್ವಾರಾ ನಿಷಿದ್ಧ ವ್ಯವಹಾರಗಳ ಆಚರಣೆ ಇತ್ಯಾದಿ.

**ಶೃಣ್ವನ್ ಶ್ರೋತ್ರಂ ಭವತಿ, ಸ್ಪರ್ಶಯನ್ ತ್ವಗ್ಭವತಿ, ಪಶ್ಯನ್ ಚಕ್ಷುರ್ಭವತಿ, ರಸಯನ್ ರಸನಾ ಭವತಿ, ಜಿಘ್ರನ್ ಘ್ರಾಣಂ ಭವತಿ, ಮನ್ವಾನೋ ಮನೋ ಭವತಿ, ಬೋಧಯನ್ ಬುದ್ಧಿರ್ಭವತಿ, ಚೇತಯನ್ ಚಿತ್ತಂ ಭವತಿ, ಅಹಂ ಕುರ್ವಾಣೋಽಹಂಕಾರೋ ಭವತಿ ॥**

(ಶತಪಥ:– ೧೪.೨.೨.೧೭)

ಮೋಕ್ಷದಲ್ಲಿ ಭೌತಿಕ ಶರೀರವಾಗಲಿ, ಇಂದ್ರಿಯಗಳ ಗೋಳಕಗಳಾಗಲಿ ಜೀವಾತ್ಮನೊಂದಿಗೆ ಇರುವುದಿಲ್ಲ. ಆದರೆ–ಅವನ ಸ್ವಾಭಾವಿಕವಾದ ಶುದ್ಧ ಗುಣಗಳಿರುತ್ತವೆ. ಯಾವಾಗ ಆಲಿಸಬಯಸುತ್ತಾನೋ, ಆಗ 'ಶ್ರೋತ್ರ', ಯಾವಾಗ ಸ್ಪರ್ಶಿಸಬಯಸುತ್ತಾನೋ, ಆಗ 'ಚರ್ಮ', ನೋಡಲು ಸಂಕಲ್ಪ ಮಾಡುವುದರಿಂದ 'ಕಣ್ಣು', ಸವಿಗಾಗಿ 'ನಾಲಗೆ', ಗಂಧಕ್ಕೋಸ್ಕರ 'ನಾಸಿಕ', ಸಂಕಲ್ಪ–ವಿಕಲ್ಪ ಮಾಡುವಾಗ 'ಮನಸ್ಸು', ನಿಶ್ಚಯಿಸಲು ಬುದ್ಧಿ, ಸ್ಮರಿಸುವುದಕ್ಕಾಗಿ 'ಚಿತ್ತ' ಮತ್ತು ಸ್ವಾಸ್ತಿತ್ವಬೋಧಕ್ಕಾಗಿ[೧೦] ಅಹಂಕಾರ–ಎಂಬ ತನ್ನ ಸ್ವಶಕ್ತಿಯಿಂದ ಯುಕ್ತನಾಗಿ ಹೋಗುತ್ತಾನೆ. ಮುಕ್ತಿಯಲ್ಲಿ ಜೀವಾತ್ಮನು 'ಸಂಕಲ್ಪಮಾತ್ರಶರೀರ' ನಾಗಿರುತ್ತಾನೆ. ಜೀವನು ಹೇಗೆ ಶರೀರದ ಆಧಾರವನ್ನು ಅವಲಂಬಿಸಿ, ಇಂದ್ರಿಯಗೋಳಕಗಳ ಮೂಲಕ ಸ್ವಕಾರ್ಯಗಳನ್ನು ಮಾಡುತ್ತಾನೋ, ಹಾಗೆ ತನ್ನ ಶಕ್ತಿಯಿಂದ, ಮುಕ್ತಿಯಲ್ಲಿ ಸಮಸ್ತ ಆನಂದವನ್ನೂ ಅನುಭವಿಸುತ್ತಾನೆ. (ಭೌತಿಕವಿಷಯಗಳಿಂದ ವಿರಕ್ತನಾದ ಮೇಲೆಯೇ ಮುಕ್ತನಾಗುವುದರಿಂದ, ಇಲ್ಲಿ ಹೇಳಿರುವುದು ಜೀವನ ಸ್ವಾಭಾವಿಕ ಶಕ್ತಿಯನ್ನು ಮಾತ್ರ.)

**ಪ್ರಶ್ನೆ:–** ಅವನ ಶಕ್ತಿ ಎಷ್ಟು ಬಗೆಯದು ಮತ್ತು ಎಷ್ಟಿದೆ?

**ಉತ್ತರ:–** ಮುಖ್ಯವಾಗಿ ಒಂದು ವಿಧದ ಶಕ್ತಿಯಿದೆ. ಆದರೆ, ಬಲ, ಪರಾಕ್ರಮ, ಆಕರ್ಷಣ, ಪ್ರೇರಣೆ, ಗತಿ, ಭೀಷಣ,[೧೦(ಅ)] ವಿವೇಚನ, ಕ್ರಿಯೆ, ಉತ್ಸಾಹ, ಸ್ಮರಣ, ನಿಶ್ಚಯ, ಇಚ್ಛೆ, ದ್ವೇಷ, ಸಂಯೋಗ, ವಿಭಾಗ, ಸಂಯೋಜಕ, ವಿಭಾಜಕ, ಶ್ರವಣ, ಸ್ಪರ್ಶನ, ದರ್ಶನ, ಸ್ವಾದನ, ಮತ್ತು ಗಂಧಗ್ರಹಣ, ಹಾಗೆಯೇ ಜ್ಞಾನ– 'ಈ ೨೪ ಬಗೆಯ ಸಾಮರ್ಥ್ಯಗಳಿಂದ ಜೀವನು ಯುಕ್ತನಾಗಿದ್ದಾನೆ.' ಇದರಿಂದ ಮುಕ್ತಿಯಲ್ಲಿಯೂ ಕೂಡ ಆನಂದಪ್ರಾಪ್ತಿಯ ಅನುಭವ ಹೊಂದುತ್ತಾನೆ. ಮುಕ್ತಿಯಲ್ಲಿ ಜೀವನು ಲಯ ಹೊಂದುವುದಾದಲ್ಲಿ ಮುಕ್ತಿಯ ಆನಂದವನ್ನು ಯಾವನು ಅನುಭವಿಸುವನು? ಮತ್ತು ಯಾರು ಜೀವನ ನಾಶವನ್ನೇ ಮುಕ್ತಿಯೆಂದು ತಿಳಿಯುತ್ತಾರೋ, ಅವರಂತೂ ಮಹಾಮೂಢರೇ ಸರಿ. ಏಕೆಂದರೆ, ದುಃಖಗಳಿಂದ ಬಿಡುಗಡೆ ಹೊಂದಿ ಆನಂದಸ್ವರೂಪನೂ, ಸರ್ವವ್ಯಾಪಕನೂ, ಅನಂತನೂ ಆದ ಪರಮೇಶ್ವರನಲ್ಲಿ ಜೀವನು ಆನಂದದಿಂದ ಇರುವುದೇ ಜೀವನ ಮುಕ್ತಿಯಾಗಿರುತ್ತದೆ. ನೋಡಿರಿ, ವೇದಾಂತದ ಶಾರೀರಿಕ ಸೂತ್ರಗಳಲ್ಲಿ:–

**ಅಭಾವಂ ಬಾದರಿರಾಹ ಹ್ಯೇವಮ್ ॥** (ವೇದಾಂತ:– ೪.೪.೧೦)

ವ್ಯಾಸರ ತಂದೆಯಾದ 'ಬಾದರಿ'ಯು ಮುಕ್ತಿಯಲ್ಲಿ ಜೀವನ ಮತ್ತು ಅವನೊಂದಿಗೆ ಮನಸ್ಸಿನ ಭಾವವನ್ನು ಅಂಗೀಕರಿಸುತ್ತಾರೆ. ಎಂದರೆ, ಜೀವನ ಮತ್ತು ಮನಸ್ಸಿನ ಲಯವನ್ನು 'ಪರಾಶರರು' ಅಂಗೀಕರಿಸುವುದಿಲ್ಲ.[೧೧] ಹಾಗೆಯೇ–

**ಭಾವಂ ಜೈಮಿನಿರ್ವಿಕಲ್ಪಾಮನನಾತ್ ॥** (ವೇದಾಂತ:– ೪.೪.೧೧)

ಮತ್ತು ಆಚಾರ್ಯ 'ಜೈಮಿನಿಗಳು' ಮುಕ್ತಪುರುಷನೊಂದಿಗೆ ಮನಸ್ಸಿನ ಹಾಗೆಯೇ ಸೂಕ್ಷ್ಮ ಶರೀರದ, ಇಂದ್ರಿಯಗಳ ಮತ್ತು ಪ್ರಾಣ–ಮೊದಲಾದುದರ ಇರುವಿಕೆಯನ್ನೂ ಅಂಗೀಕರಿಸುತ್ತಾರೆ; ಅಭಾವವನ್ನಲ್ಲ.

**ದ್ವಾದಶಾಹವದುಭಯವಿಧಂ ಬಾದರಾಯಣೋತಃ ॥** (ವೇದಾತಂ:– ೪.೪.೧೨)

'ವ್ಯಾಸಮುನಿ'ಗಳು ಮುಕ್ತಿಯಲ್ಲಿ ಭಾವ ಮತ್ತು ಅಭಾವ – ಈ ಎರಡನ್ನೂ ಅಂಗೀಕರಿಸುತ್ತಾರೆ. ಅಂದರೆ, ಶುದ್ಧಸಾಮರ್ಥ್ಯ ಯುಕ್ತಜೀವನು ಮುಕ್ತಿಯಲ್ಲಿ ಅಸ್ತಿತ್ವದಲ್ಲಿರುತ್ತಾನೆ. ಅಪವಿತ್ರತೆ, ಪಾಪಾಚರಣ, ದುಃಖ, ಅಜ್ಞಾನ ಮೊದಲಾದುದರ ಅಭಾವವಿರುವುದು–ಎಂದು ಅಂಗೀಕರಿಸುತ್ತಾರೆ.

---

೧೦. ತನ್ನ ಇರುವಿಕೆಯ ಅರಿವಿಗಾಗಿ.

೧೦. [ಅ]ಎಂದರೆ, ಭಯಪಡುವುದು

೧೧. ಮತ್ತು ಇದರಿಂದ ಬೇರೆಯಾದ ಇಂದ್ರಿಯ ಮೊದಲಾದ ಪದಾರ್ಥಗಳ ಅಭಾವವಾಗಿ ಬಿಡುತ್ತದೆ. [ಋ.ಭಾ.ಭೂ ದಿಂದ ಉದ್ಧೃತ] ಯು.ಮೀ.

**ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।**

**ಬುದ್ಧಿಶ್ಚ ನ ವಿಚೇಷ್ಟತೇ ತಾಮಾಹುಃ ಪರಮಾಂ ಗತಿಮ್ ॥** (ಕಠ:–೨.೧.೧೦)

ಇದು ಉಪನಿಷದ್ವಚನ. ಯಾವಾಗ ಶುದ್ಧವಾದ ಮನಸ್ಸಿನ ಶಕ್ತಿಯಿಂದ ಕೂಡಿದ ಐದು ಜ್ಞಾನೇಂದ್ರಿಯಗಳ ಶಕ್ತಿಗಳು ಜೀವನೊಂದಿಗೆ ಇರುತ್ತವೋ, ಮತ್ತು ಬುದ್ಧಿಯ ನಿಶ್ಚಯವು ಸ್ಥಿರವಾಗುತ್ತದೋ, ಆಗಿನ ಸ್ಥಿತಿಯನ್ನು ಪರಮಗತಿ, ಎಂದರೆ 'ಮೋಕ್ಷ'ವೆನ್ನುತ್ತಾರೆ.

**ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿ ಘತ್ಸೋಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋಽನ್ವೇಷ್ಟವ್ಯಃ ಸ ವಿಜಿ ಜ್ಞಾಸಿತವ್ಯಃ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ ಯಸ್ತಮಾತ್ಮನಮನುವಿದ್ಯ ವಿಜಾನಾತೀತಿ ॥**

(ಛಾಂದೋಗ್ಯ:– ೮.೭.೧)

**ಸ ವಾ ಏತೇನ ದೈವೇನ ಚಕ್ಷುಷಾ ಮನಸೈತಾನ್ ಕಾಮಾನ್ ಪಶ್ಯನ್ ರಮತೇ ।**

**ಯ ಏತೇ ಬ್ರಹ್ಮಲೋಕೇ ತಂ ವಾ ಏತಂ ದೇವಾ ಆತ್ಮಾನಮುಪಾಸತೇ ತಸ್ಮಾತ್ತೇಷಾಂ ಸರ್ವೇ ಚ ಲೋಕಾ ಆತ್ತಾಃ ಸರ್ವೇ ಚ ಕಾಮಾಃ ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ ಯಸ್ತಮಾತ್ಮಾನ ಮನುವಿದ್ಯ ವಿಜಾನಾತೀತಿ ॥**

(ಛಾಂದೋಗ್ಯ: ೮.೧೨.೫–೬)

**ಮಘವನ್ ಮರ್ತ್ಯಂ ವಾ ಇದಂ ಶರೀರಮಾತ್ತಂ ಮೃತ್ಯುನಾ ತದಸ್ಯಾಮೃತಸ್ಯಾಶರೀರಸ್ಯಾತ್ಮನೋಽಧಿಷ್ಠಾನಮಾತ್ತೋ ವೈ ಸಶರೀರಃ ಪ್ರಿಯಾ ಪ್ರಿಯಾಭ್ಯಾಂ ನ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯ ಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ॥**

(ಛಾಂದೋಗ್ಯ:– ೮.೧೨.೧)

ಯಾವ ಪರಮಾತ್ಮನು ಅಪಹತಪಾಪ್ಮಾ–ಸರ್ವಪಾಪರಹಿತನೂ, ಮುಪ್ಪು, ಸಾವು ದುಃಖ–ಹಸಿವು–ಬಾಯಾರಿಕೆಗಳಿಂದಲೂ ರಹಿತನೂ, ಸತ್ಯಕಾಮನೂ, ಸತ್ಯಸಂಕಲ್ಪನೂ, ಆಗಿದ್ದಾನೋ, ಅವನ ಅನ್ವೇಷಣವನ್ನೂ ಮತ್ತು ಅವನನ್ನೇ ತಿಳಿದುಕೊಳ್ಳುವ ಇಚ್ಛೆಯನ್ನೂ ಮಾಡಬೇಕು. ಯಾವ ಪರಮಾತ್ಮನ ಸಂಬಂಧದಿಂದ, ಮುಕ್ತನಾದ ಜೀವನು ಸರ್ವಲೋಕಗಳನ್ನೂ ಮತ್ತು ಸರ್ವಕಾಮಗಳನ್ನೂ ಪಡೆದುಕೊಳ್ಳುತ್ತಾನೋ, ಯಾವನು ಪರಮಾತ್ಮನನ್ನು ತಿಳಿದು, ಮೋಕ್ಷದ ಸಾಧನೆಯನ್ನೂ ಮತ್ತು ತನ್ನನ್ನು ನಿರ್ಮಲನನ್ನಾಗಿ ಮಾಡಿಕೊಳ್ಳುವುದನ್ನೂ ತಿಳಿದುಕೊಂಡಿರುತ್ತಾನೋ, ಅಂತಹ ಮುಕ್ತಿಯನ್ನು ಪಡೆದುಕೊಂಡ ಈ ಜೀವನು. ಶುದ್ಧವೂ, ದಿವ್ಯವೂ ಆದ ದರ್ಶನಶಕ್ತಿಯಿಂದ ಮತ್ತು ನಿರ್ಮಲವಾದ ಮನಃಶಕ್ತಿಯಿಂದ ಕಾಮನೆಗಳನ್ನು ನೋಡುತ್ತಾ, ಗಳಿಸುತ್ತಾ, ರಮಿಸುತ್ತಾನೆ. ಯಾವ ಈ ಜೀವರು ಬ್ರಹ್ಮಲೋಕದಲ್ಲಿ, ಎಂದರೆ, ದರ್ಶನೀಯನಾದ ಪರಮಾತ್ಮನಲ್ಲಿ ಸ್ಥಿರರಾಗಿ ಮೋಕ್ಷದ ಆನಂದವನ್ನು ಅನುಭವಿಸುತ್ತಾರೋ, ಆ ಮೋಕ್ಷ ಪಡೆಯುವ ವಿದ್ವಾಂಸರು ಸರ್ವರ ಅಂತರ್ಯಾಮೀ ಆತ್ಮನಾಗಿರುವ ಅದೇ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾರೆ. ಅದರಿಂದ ಅವರಿಗೆ ಸರ್ವಲೋಕಗಳೂ, ಮತ್ತು ಸಮಸ್ತಕಾಮಗಳೂ ಪ್ರಾಪ್ತವಾಗುತ್ತವೆ. ಎಂದರೆ, ಯಾವ ಯಾವ ಸಂಕಲ್ಪಗಳನ್ನು ಮಾಡುತ್ತಾರೋ, ಆಯಾ ಲೋಕಗಳೂ, ಆಯಾ ಕಾಮನೆಗಳೂ ಕೈಗೂಡುತ್ತವೆ. ಮತ್ತು ಆ ಮುಕ್ತಜೀವರು, ಸ್ಥೂಲಶರೀರಗಳನ್ನು ಬಿಟ್ಟು, 'ಸಂಕಲ್ಪಮಯ ಶರೀರ'ದಿಂದ, ಆಕಾಶದಲ್ಲಿ, ಪರಮೇಶ್ವರನಲ್ಲಿ ವಿಚರಿಸುತ್ತಾರೆ. ಏಕೆಂದರೆ, ಇಂದ್ರನಿಗೆ ಪ್ರಜಾಪತಿಯು "ಹೇ ಪರಮಪೂಜಿತ ಐಶ್ವರ್ಯಸಂಪನ್ನ ಪುರುಷನೇ! ಈ ಶರೀರವು ಮರಣವನ್ನೇ ಧರ್ಮವಾಗಿ ಹೊಂದಿದೆ. ಮತ್ತು ಸಿಂಹದ ಬಾಯಿಯಲ್ಲಿ ಮೇಕೆ ಸಿಕ್ಕಿಕೊಳ್ಳುವಂತೆ, ಈ ಶರೀರ ಮೃತ್ಯುವಿನ ಬಾಯಿಯ ನಡುವೆಯಿದೆ. ಈ ಶರೀರವು ಮರಣರಹಿತನೂ ಮತ್ತು ಶರೀರರಹಿತನೂ ಆದ ಜೀವಾತ್ಮನ ನಿವಾಸಸ್ಥಾನವಾಗಿದೆ. ಆದುದರಿಂದ ಈ ಜೀವನು ಸುಖ–ದುಃಖಗಳಿಂದ ಸದಾ ಗ್ರಸ್ತನಾಗಿರುತ್ತಾನೆ. ಏಕೆಂದರೆ–ಶರೀರಸಹಿತನಾದ ಜೀವನ ಸಾಂಸಾರಿಕ ಪ್ರಸನ್ನತೆಗೆ ನಿವೃತ್ತಿ ಇದ್ದೇ ಇದೆ. ಮತ್ತು ಯಾವ ಶರೀರರಹಿತನೂ, ಮುಕ್ತನೂ ಆದ ಜೀವಾತ್ಮನು ಬ್ರಹ್ಮದಲ್ಲಿರುತ್ತಾನೋ, ಅವನಿಗೆ ಸಾಂಸಾರಿಕ ಸುಖ–ದುಃಖದ ಸ್ಪರ್ಶಕೂಡ ಆಗುವುದಿಲ್ಲ; ಆದರೆ ಸದಾ ಆನಂದದಲ್ಲಿರುತ್ತಾನೆ". ಎಂದು ಹೇಳಿರುವಂತೆ, ಯಾರು ಶರೀರಯುಕ್ತರಾಗಿರುತ್ತಾರೋ, ಅವರು ಸಾಂಸಾರಿಕ ದುಃಖದಿಂದ ರಹಿತರಾಗಲಾರರು.

**ಪ್ರಶ್ನೆ:**– ಜೀವರು ಮುಕ್ತಿಯನ್ನು ಹೊಂದಿ, ಪುನಃ ಜನನ–ಮರಣ ರೂಪವಾದ ದುಃಖದಲ್ಲಿ ಎಂದಾದರೂ ಬೀಳುತ್ತಾರೋ ಅಥವಾ ಇಲ್ಲವೋ? ಏಕೆಂದರೆ–

**ನ ಚ ಪುನರಾವರ್ತತೇ ನ ಚ ಪುನರಾವರ್ತತ ಇತಿ ॥** (ಛಾಂದೋಗ್ಯ:– ೮.೧೫.೧)

"ಮತ್ತೆ ಹಿಂದಿರುಗುವುದಿಲ್ಲ; ಮತ್ತೆ ಹಿಂದಿರುಗುವುದಿಲ್ಲ". ಎಂಬ ಉಪನಿಷದ್ವಚನವಿದೆ.

**ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್ ॥** (ವೇದಾಂತ:–೪.೪.೩೩)

"ಪುನರಾಗಮನವಿಲ್ಲ; ಪುನರಾಗಮನವಿಲ್ಲ– ಎಂಬ ಶಬ್ದವಿದೆ".

**ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥** (ಭಗವದ್ಗೀತಾ:– ೧೫.೬)

"ಯಾವುದನ್ನು ಸೇರಿ, ಹಿಂದೆ ಬಾರರೋ, ಅದೇ ನನ್ನ ಪರಮ ಧಾಮ".

ಈ ಮೊದಲಾದ ವಚನಗಳಿಂದ, ಯಾವುದರಿಂದ ನಿವೃತ್ತನಾಗಿ ಮತ್ತೆ ಎಂದಿಗೂ ಜಗತ್ತಿಗೆ ಬರುವುದಿಲ್ಲವೋ, ಅದೇ ಮುಕ್ತಿಯೆಂದು ವಿದಿತವಾಗುತ್ತದೆ.

**ಉತ್ತರ:**– ಈ ಮಾತು ಸರಿಯಲ್ಲ. ಏಕೆಂದರೆ, ವೇದದಲ್ಲಿ ಈ ಮಾತನ್ನು ನಿಷೇಧಿಸಿದೆ.

**ಕಸ್ಯ ನೂನಂ ಕತಮಸ್ಯಾಮೃತಾನಾಂ ಮನಾಮಹೇ ಚಾರು ದೇವಸ್ಯ ನಾಮ ।**

**ಕೋ ನೋ ಮಹ್ಯಾ ಅದಿತಯೇ ಪುನರ್ದಾತ್ ಪಿತರಂ ಚ ದೃಶೇಯಂ ಮಾತರಂ ಚ ॥** (ಋಗ್ವೇದ:– ೧.೨೪.೧)

**ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಂ ಮನಾಮಹೇ ಚಾರು ದೇವಸ್ಯ ನಾಮ ।**

**ಸ ನೋ ಮಹ್ಯಾ ಅದಿತಯೇ ಪುನರ್ದಾತ್ ಪಿತರಂ ಚ ದೃಶೇಯಂ ಮಾತರಂ ಚ ॥** (ಋಗ್ವೇದ:– ೧.೨೪.೨)

**ಇದಾನೀಮಿವ ಸರ್ವತ್ರ ನಾತ್ಯಂತೋಚ್ಛೇದಃ ॥** (ಸಾಂಖ್ಯ :– ೧.೫೯)

**ಪ್ರಶ್ನೆ:**– ನಾವು ಯಾವನ ಹೆಸರನ್ನು ಪವಿತ್ರವೆಂದು ತಿಳಿಯೋಣ? ನಾಶ ರಹಿತವಾದ ಪದಾರ್ಥಗಳ ಮಧ್ಯೆ ವಿರಾಜಿಸುವ ಯಾವ ದೇವನು ಸದಾ ಪ್ರಕಾಶಸ್ವರೂಪನಾಗಿರುತ್ತಾನೆ? ಯಾವನು ನಮಗೆ ಮುಕ್ತಿಯ ಸುಖವನ್ನು ಕರುಣಿಸಿ, ಪುನಃ ಈ ಜಗತ್ತಿನಲ್ಲಿ ಜನ್ಮಕೊಡುತ್ತಾನೆ? ಮತ್ತು ಮಾತೆಯ ಹಾಗೂ ಪಿತೃವಿನ ದರ್ಶನಮಾಡಿಸುತ್ತಾನೆ? (೧)

**ಉತ್ತರ :**– ಯಾವನು ನಮಗೆ ಮುಕ್ತಿಯಲ್ಲಿ ಆನಂದದ ಸವಿನೋಡಿಸಿ, ಪೃಥಿವಿಯಲ್ಲಿ ಪುನಃ ಮಾತಾಪಿತೃಗಳ ಸಂಬಂಧದಲ್ಲಿ ಜನ್ಮವಿತ್ತು, ತಾಯಿ–ತಂದೆಗಳ ದರ್ಶನ ಮಾಡಿಸುತ್ತಾನೋ, ಅದೇ ಪ್ರಕಾಶಸ್ವರೂಪನೂ, ಅನಾದಿಯೂ, ಸದಾ ಮುಕ್ತನೂ ಆದ ಪರಮಾತ್ಮನ ಹೆಸರನ್ನು ನಾವು ಪವಿತ್ರವೆಂದು ತಿಳಿಯೋಣ. ಆ ಪರಮಾತ್ಮನೇ ಮುಕ್ತಿಯ ವ್ಯವಸ್ಥೆಯನ್ನು ಮಾಡುತ್ತಾನೆ; ಸರ್ವರ ಸ್ವಾಮಿಯಾಗಿದ್ದಾನೆ. (೨)

"ಹೇಗೆ ಈಗ ಜೀವರು ಬದ್ಧರೂ, ಮುಕ್ತರೂ ಆಗಿದ್ದಾರೋ, ಹಾಗೆಯೇ ಸರ್ವದಾ ಆಗಿರುತ್ತಾರೆ; ಬಂಧಕ್ಕಾಗಲಿ, ಮುಕ್ತಿಗಾಗಲಿ ಅತ್ಯಂತ ವಿಚ್ಛೇದವುಂಟಾಗುವುದಿಲ್ಲ. ಎಂದರೆ, ಬಂಧನ ಹಾಗೂ ಮುಕ್ತಿ ಸದಾ ಇರುವುದಿಲ್ಲ." (೩)

**ಪ್ರಶ್ನೆ:– ತದತ್ಯಂತವಿಮೋಕ್ಷೋಽಪವರ್ಗಃ ॥** (ನ್ಯಾಯ :– ೧.೧.೨೨)

**ದುಃಖಜನ್ಮಪ್ರವೃತ್ತಿದೋಷಮಿಥ್ಯಾಜ್ಞಾನಾನಾಮುತ್ತರೋತ್ತರಾಪಯೇ ತದನಂತರಾಪಾಯಾದಪವರ್ಗಃ ॥** (ನ್ಯಾಯ:–೧.೧.೨)

ದುಃಖದ ಅತ್ಯಂತ ವಿನಾಶವಾವುದಿದೆಯೋ, ಅದೇ 'ಮುಕ್ತಿ'ಯೆನಿಸುತ್ತದೆ. ಏಕೆಂದರೆ–ಮಿಥ್ಯಾಜ್ಞಾನ, ಅವಿದ್ಯಾ, ಲೋಭ ಮೊದಲಾದ ದೋಷಗಳು, ವಿಷಯಗಳಲ್ಲಿ ದುರ್ವ್ಯಸನಗಳಲ್ಲಿ ಪ್ರವೃತ್ತಿ, ಜನ್ಮ ಹಾಗೂ ದುಃಖ–ಇವುಗಳಲ್ಲಿ ಉತ್ತರ–ಉತ್ತರ ವಾದುದು (ಮುಂದುಮುಂದಿನದು) ಬಿಟ್ಟು ಹೋಗುವುದರಿಂದ, ಪೂರ್ವ–ಪೂರ್ವವಾದುದರ (ಹಿಂದು ಹಿಂದಿನದರ) ನಿವೃತ್ತಿಯಾಗುವುದರಿಂದ (ಮಿಥ್ಯಾಜ್ಞಾನನಾಶದಿಂದ ದೋಷನಿವೃತ್ತಿ, ಅದರಿಂದ ಪ್ರವೃತ್ತಿ ನಿವೃತ್ತಿ, ಅದರಿಂದ ಜನ್ಮನಿವೃತ್ತಿ, ಅದರಿಂದ ದುಃಖನಿವೃತ್ತಿ) ಸದಾ ಅಸ್ತಿತ್ವದಲ್ಲಿರುವ ಮೋಕ್ಷವು ಲಭಿಸುತ್ತದೆ.

**ಉತ್ತರ :–** 'ಅತ್ಯಂತ' – ಎಂಬ ಶಬ್ದದ ಅರ್ಥ 'ಅತ್ಯಂತಾಭಾವ'ವೇ ಆಗಬೇಕಾದುದು ಆವಶ್ಯಕವಲ್ಲ. ಉದಾಹರಣೆಗೆ **"ಅತ್ಯಂತಂ ದುಃಖಮತ್ಯಂತಂ ಸುಖಂ ಚಾಸ್ಯವರ್ತತೇ".**– ಬಹಳ ದುಃಖ ಮತ್ತು ಬಹಳ ಸುಖ ಈ ಮಾನವನಿಗಿದೆ. – ಎನ್ನುತ್ತಾರೆ. ಇವನಿಗೆ ಬಹಳ ಸುಖವೋ ಅಥವಾ (ಬಹಳ) ದುಃಖವೋ ಇದೆ–ಎಂದೇ ಅದರ ತಾತ್ಪರ್ಯ. ಇದೇ ರೀತಿ ಇಲ್ಲಿಯೂ 'ಅತ್ಯಂತ' –ಎಂಬ ಶಬ್ದದ ಅರ್ಥವನ್ನು ತಿಳಿದುಕೊಳ್ಳಬೇಕು.

**ಪ್ರಶ್ನೆ:– ಜೀವನು ಮುಕ್ತಿಯಿಂದಲೂ ಹಿಂದಕ್ಕೆ ಬರುತ್ತಾನೆ–ಎಂದಾದರೆ, ಅವನು ಎಷ್ಟು ಕಾಲದವರೆಗೆ ಮುಕ್ತಿಯಲ್ಲಿರುತ್ತಾನೆ?**

**ಉತ್ತರ:– ತೇ ಬ್ರಹ್ಮಲೋಕೇ ಹ ಪರಾಂತ ಕಾಲೇ ಪರಾಮೃತಾತ್ಪರಿ ಮುಚ್ಯಂತಿ ಸರ್ವೇ ॥** (ಮುಂಡಕ :– ೩.೨.೬)

ಇದು ಮುಂಡಕೋಪನಿಷದ್ವಚನ. ಆ ಮುಕ್ತಜೀವರು ಮುಕ್ತಿಯಲ್ಲಿ ಪ್ರವಿಷ್ಟರಾಗಿ, ಬ್ರಹ್ಮದಲ್ಲಿ ಆನಂದವನ್ನು ಆವರೆಗೆ ಅನುಭವಿಸಿ, 'ಪುನಃ ಮಹಾಕಲ್ಪದ ನಂತರ, ಮುಕ್ತಿಸುಖವನ್ನು ಬಿಟ್ಟು ಜಗತ್ತಿಗೆ ಬರುತ್ತಾರೆ.' ಇದರ ಸಂಖ್ಯೆ ಹೀಗೆದೆ:– ನಾಲ್ವತ್ತುಮೂರು ಲಕ್ಷ ಇಪ್ಪತ್ತು ಸಾವಿರ ವರ್ಷಗಳಿಗೆ (೪೩,೨೦,೦೦೦) ಒಂದು 'ಚತುರ್ಯುಗ', ಎರಡು ಸಾವಿರ ಚತುರ್ಯುಗಗಳಿಗೆ ಒಂದು 'ಅಹೋರಾತ್ರ.' ಇಂತಹ ಮೂವತ್ತು ಅಹೋರಾತ್ರಗಳಿಗೆ ಒಂದು 'ಮಾಸ.' ಇಂತಹ ಹನ್ನೆರಡು ಮಾಸಗಳಿಗೆ ಒಂದು 'ವರ್ಷ.' ಇಂತಹ ನೂರು ವರ್ಷಗಳಿಗೆ ಒಂದು 'ಪರಾಂತಕಾಲ.' ಇದನ್ನು ಗಣಿತದ ರೀತಿಯಿಂದ ಯಥಾವತ್ತಾಗಿ ತಿಳಿದುಕೊಳ್ಳಿರಿ. ಮುಕ್ತಿಯಲ್ಲಿ ಸುಖವನ್ನು ಅನುಭವಿಸುವ [೧೨] ಕಾಲ. (೩೧೧೦೪೦,೦೦,೦೦,೦೦,೦೦೦ ವರ್ಷಗಳು)

**ಪ್ರಶ್ನೆ:–** ಯಾವುದರಿಂದ ಮರಳಿ, ಪುನಃ ಜನನ–ಮರಣದಲ್ಲಿ ಎಂದಿಗೂ ಬೀಳುವುದಿಲ್ಲವೋ, (ಅದೇ ಮುಕ್ತಿ) ಎಂದೇ ಸಮಸ್ತ ಜಗತ್ತಿನ ಮತ್ತು ಗ್ರಂಥಕಾರರ ಮತವಾಗಿದೆ.

**ಉತ್ತರ:–** ಈ ಮಾತು ಎಂದಿಗೂ ಆಗಲಾರದು. ಏಕೆಂದರೆ, ಮೊದಲನೆಯದಾಗಿ ಜೀವನ ಸಾಮರ್ಥ್ಯ, ಶರೀರ ಮೊದಲಾದ ಪದಾರ್ಥಗಳು ಮತ್ತು ಸಾಧನಗಳು ಪರಿಮಿತವಾಗಿವೆ. ಮತ್ತೆ, ಅದರ ಫಲ ಅನಂತ ಹೇಗಾಗಬಲ್ಲದು? ಅನಂತವಾದ ಆನಂದವನ್ನು ಅನುಭವಿಸುವ ಅಸೀಮವಾದ ಸಾಮರ್ಥ್ಯ, ಕರ್ಮಗಳು ಮತ್ತು ಸಾಧನಗಳು ಜೀವರುಗಳಲ್ಲಿಲ್ಲ. ಆದುದರಿಂದ, ಅನಂತ ಸುಖವನ್ನು ಅನುಭವಿಸಲಾರರು. ಯಾರ ಸಾಧನಗಳು ಅನಿತ್ಯವೋ, ಅವರಿಗೆ (ಲಭಿಸುವ) ಫಲ ಎಂದಿಗೂ ನಿತ್ಯವಾಗಲಾರದು, ಮತ್ತು ಮುಕ್ತಿಯಿಂದ ಯಾವ ಜೀವರೂ ಹಿಂದಿರುಗಿ ಜಗತ್ತಿಗೆ ಬಾರದಿದ್ದರೆ, ಜಗತ್ತಿನ ವಿಚ್ಛೇದವಾಗಿ ಹೋಗಬೇಕು. ಎಂದರೆ ಜೀವರು ನಿಃಶೇಷರಾಗಿ ಹೋಗಬೇಕು.

---

೧೨. ಇದರ ಎಣಿಕೆ ಹೀಗಿದೆ.

| | | |
|---|---|---|
| ಕೃತಯುಗ | ೧೭,೨೮,೦೦೦ | ವರ್ಷಗಳು |
| ದ್ವಾಪರಯುಗ | ೧೨,೯೬,೦೦೦ | –"– |
| ತ್ರೇತಾಯುಗ | ೮,೬೪,೦೦೦ | –"– |
| ಕಲಿಯುಗ | ೪,೩೨,೦೦೦ | –"– |
| ಒಂದು ಚತುರ್ಯುಗ | ೪೩,೨೦,೦೦೦ | ವರ್ಷಗಳು |

೧೦೦೦೦ ಚತುರ್ಯುಗಿ = ೨ ಒಂದು ಸೃಷ್ಟಿಯ ದಿನ–ರಾತ್ರಿ; ಅಥವಾ ಬ್ರಹ್ಮದಿನ = ಬ್ರಹ್ಮರಾತ್ರಿ

ಆದ್ದರಿಂದ, ೧ ಬ್ರಾಹ್ಮ ಆಹೋರಾತ್ರ = ೪೩,೨೦೦೦.* ೨೦೦೦ ವರ್ಷಗಳು
೮೬೪,೦೦,೦೦,೦೦೦

ಆದ್ದರಿಂದ, ಒಂದು ಪರಾಂತಕಾಲ = ೧೦೦ ಬ್ರಾಹ್ಮವರ್ಷ = ೮೬೪,೦೦,೦೦,೦೦೦*೩೦*೧೨.* ೧೦೦ ವರ್ಷಗಳು = ೩೧,೧೦,೪೦,೦೦,೦೦,೦೦,೦೦೦ ವರ್ಷಗಳು.

ಸೃಷ್ಟಿ ಸಂವತ್ಸರದ ಗಣನೆಯನ್ನು ಪರಿಶಿಷ್ಟ ೧ ರಲ್ಲಿ ಕೊಡಲಾಗಿದೆ.

**ಪ್ರಶ್ನೆ :–** ಎಷ್ಟು ಜನ ಜೀವರು ಮುಕ್ತರಾಗುತ್ತಾರೋ, ಅಷ್ಟು ಹೊಸ ಜೀವರನ್ನು ಉತ್ಪನ್ನಮಾಡಿ, ಈಶ್ವರನು ಜಗತ್ತಿನಲ್ಲಿಟ್ಟುಬಿಡುತ್ತಾನೆ. ಆದುದರಿಂದ 'ನಿಃಶೇಷ'ರಾಗುವುದಿಲ್ಲ.

**ಉತ್ತರ:–** ಹೀಗೆ ಆಗುವುದಾದರೆ, ಜೀವರು 'ಅನಿತ್ಯ'ರಾಗುವರು. ಏಕೆಂದರೆ, ಯಾವನ ಉತ್ಪತ್ತಿಯಾಗುತ್ತದೋ, ಅವನ ನಾಶವು ಅವಶ್ಯವಾಗಿ ಆಗುತ್ತದೆ. ಮತ್ತೆ, ನಿಮ್ಮ ಮತಾನುಸಾರವಾಗಿ ಮುಕ್ತಿ ಹೊಂದಿಯೂ ವಿನಷ್ವರಾಗಿ ಹೋಗುವರು. ಮುಕ್ತಿ ಅನಿತ್ಯವಾಯಿತು. ಮತ್ತು ಮುಕ್ತಿಯ ಸ್ಥಾನದಲ್ಲಿ ಬಹಳ ಗುಜುಗುಂಪಲಾಗಿ ಹೋಗುವುದು. ಏಕೆಂದರೆ, ಅಲ್ಲಿ ಆಗಮನ ಬಹಳ ಮತ್ತು ವ್ಯಯ ಏನೇನೂ ಇಲ್ಲದಿರುವುದರಿಂದ ವೃದ್ಧಿಗೆ ಪಾರವೇ ಇರುವುದಿಲ್ಲ. ಮತ್ತು "ದುಃಖದ ಅನುಭವವಿಲ್ಲದೆ ಸುಖವು ಏನೇನೂ ಉಂಟಾಗಲಾರದು."

**ಪ್ರಶ್ನೆ:–** ಕಹಿಯಿಲ್ಲವಾದರೆ ಸಿಹಿಯಾಗುವುದು? ಸಿಹಿಯಿಲ್ಲವಾದರೆ ಯಾವುದು ಕಹಿ ಎನ್ನಿಸುವುದು? ಏಕೆಂದರೆ, ಒಂದು ರುಚಿ ಮತ್ತೊಂದು ರಸಕ್ಕೆ ವಿರುದ್ಧವಾಗಿದ್ದರೆ, ಎರಡರ ಪರೀಕ್ಷೆಯೂ ಆಗುವುದು. ಉದಾಹರಣೆಗೆ, ಯಾವನಾದರೂ ಮಾನವನು ಸಿಹಿ–ಸಿಹಿಯಾದುದನ್ನೇ ತಿನ್ನುತ್ತಾ–ಕುಡಿಯುತ್ತಾ ಹೋದರೆ, ಅವನಿಗೆ, ಎಲ್ಲ ರಸಗಳನ್ನೂ ಸೇವಿಸುವವನಿಗೆ ಉಂಟಾಗುವಂತೆ ಸುಖವುಂಟಾಗುವುದಿಲ್ಲ. ಮತ್ತು, ಈಶ್ವರನು ಕೊನೆಯುಳ್ಳ ಕರ್ಮಗಳಿಗೆ ಕೊನೆಯಿಲ್ಲದ ಫಲವನ್ನು ಕೊಡುವನಾದರೆ, ಅವನ ನ್ಯಾಯವೇ ನಾಶವಾಗಿ ಹೋಗುವುದು. "ಯಾವನು ಎಷ್ಟು ಭಾರ ಹೊರಬಲ್ಲನೋ. ಅಷ್ಟನ್ನೇ ಅವನ ಮೇಲೆ ಹೊರೆಸುವುದು ಬುದ್ಧಿವಂತರ ಕೆಲಸ." ಹೇಗೆ ಒಂದು ಮಣ ಹೊರಬಲ್ಲವನ ತಲೆಯ ಮೇಲೆ ಹತ್ತು ಮಣ ಹೇರುವುದರಿಂದ, ಭಾರವನ್ನು ಹೊರೆಯಿಸುವವನು ನಿಂದಿತನಾಗುತ್ತಾನೋ, ಹಾಗೆ, ಅಲ್ಪಜ್ಞನೂ,, ಅಲ್ಪಸಾಮರ್ಥ್ಯವಂತನೂ ಆದ ಜೀವನ ಮೇಲೆ, ಅನಂತವಾದ ಸುಖದ ಭಾರವನ್ನು ಹೇರುವುದು ಈಶ್ವರನಿಗೆ ಸರಿಯಾದುದಲ್ಲ. ಮತ್ತು ಪರಮೇಶ್ವರನು ಹೊಸಜೀವರನ್ನು ಉತ್ಪನ್ನ ಮಾಡುತ್ತಾನಾದರೆ, ಯಾವ (ಉಪಾದಾನ) ಕಾರಣದಿಂದ (ಜೀವರು) ಉತ್ಪನ್ನರಾಗುತ್ತಾರೋ, ಅದು ಮುಗಿದುಹೋಗವುದು. ಏಕೆಂದರೆ, "ಧನದ ಕೋಶವು ಎಷ್ಟೇ ದೊಡ್ಡದಾಗಿರಲಿ; ಆದರೆ, ಯಾವುದಕ್ಕೆ ವ್ಯಯವಿದೆಯೋ, ಮತ್ತು ಆದಾಯವಿಲ್ಲವೋ, ಅದು ಒಂದಲ್ಲ ಒಂದು ಕಾಲದಲ್ಲಿ ಬರಿದಾಗಿಯೇ ಹೋಗುವುದು." ಆದುದರಿಂದ, "ಮುಕ್ತಿಗೆ ಹೋಗುವುದು, ಅಲ್ಲಿಂದ ಮತ್ತೆ ಬರುವುದು" – 'ಇದೇ ಒಳಿತು; ಈ ಸ್ಥಿತಿಯೇ ಸರಿ.' ಶಿಕ್ಷಾರ್ಹನಾದ ಯಾವನಾದರೂ ಪ್ರಾಣವಂತನು ಅಲ್ಪಕಾಲೀನ ಕಾರಾವಾಸಕ್ಕಿಂತ, ಆಜನ್ಮ ಕಾರಾವಾಸವನ್ನಾಗಲಿ ಅಥವಾ ಗಲ್ಲಿಗೇರುವುದನ್ನಾಗಲಿ ಒಳ್ಳೆಯದೆಂದು ಅಂಗೀಕರಿಸುವನೇ? ಅಲ್ಲಿನಿಂದ ಹಿಂದಕ್ಕೆ ಬರುವುದೇ ಇಲ್ಲವಾದರೆ, ಆಜನ್ಮಕಾರಾವಾಸಕ್ಕೂ, ಅದಕ್ಕೂ[೧೩] ಅಲ್ಲಿ ಕೂಲಿ ಮಾಡಬೇಕಾಗುವುದಿಲ್ಲವೆಂಬುದಷ್ಟೇ ವ್ಯತ್ಯಾಸವಾಗಿರುತ್ತದೆ. ಮತ್ತು ಬ್ರಹ್ಮದಲ್ಲಿ ಲಯವಾಗುವುದು ಸಮುದ್ರದಲ್ಲಿ ಮುಳುಗಿ ಸಾಯುವಂತೆಯೇ ಸರಿ.

**ಪ್ರಶ್ನೆ :–** ಹೇಗೆ ಪರಮೇಶ್ವರನು ನಿತ್ಯಮುಕ್ತನೂ, ಪೂರ್ಣಸುಖಿಯೂ ಆಗಿದ್ದಾನೋ, ಹಾಗೆಯೇ ಜೀವನೂ ಕೂಡ ನಿತ್ಯ–ಮುಕ್ತನೂ, ಹಾಗೂ ಸುಖಿಯೂ ಆಗಿರುವನು–ಎಂದರೆ, ಯಾವುದೇ ದೋಷವೂ ಬಾರದು.

**ಉತ್ತರ:–** ಪರಮೇಶ್ವರನು ಅನಂತವಾದ ಸ್ವರೂಪದಿಂದಲೂ, ಸಾಮರ್ಥ್ಯದಿಂದಲೂ, ಗುಣಗಳಿಂದಲೂ, ಕರ್ಮಗಳಿಂದಲೂ, ಸ್ವಭಾವದಿಂದಲೂ ಯುಕ್ತನಾಗಿದ್ದಾನೆ. ಆದುದರಿಂದ ಅವನು ಎಂದಿಗೂ ಅವಿದ್ಯೆಯ ಮತ್ತು ದುಃಖದ ಬಂಧನದಲ್ಲಿ ಬೀಳಲಾರನು. ಜೀವನು ಮುಕ್ತನಾಗಿಯೂ ಕೂಡ ಶುದ್ಧ ಸ್ವರೂಪನೂ, "ಅಲ್ಪಜ್ಞನೂ ಮತ್ತು ಪರಿಮಿತವಾದ ಗುಣಕರ್ಮ ಸ್ವಭಾವಯುಕ್ತನೂ ಆಗಿರುತ್ತಾನೆ. ಪರಮೇಶ್ವರನಿಗೆ ಸಮನಾಗಿ ಎಂದಿಗೂ ಆಗುವುದಿಲ್ಲ."

**ಪ್ರಶ್ನೆ :–** ಹೀಗಿರುವುದಾದಲ್ಲಿ, ಮುಕ್ತಿಯೂ ಜನನ–ಮರಣದಂತೆಯೇ ಆಗಿರುತ್ತದೆ. ಆದುದರಿಂದ, ಶ್ರಮಿಸುವುದು ವ್ಯರ್ಥವಾಗಿದೆ.

**ಉತ್ತರ:–** ಮುಕ್ತಿಯು ಜನನ–ಮರಣಕ್ಕೆ ಸಮನಾಗಿಲ್ಲ. ಏಕೆಂದರೆ ಎಲ್ಲಿಯವರೆಗೆ ೩೬,೦೦೦ ಸಾರಿ ಉತ್ಪತ್ತಿ ಮತ್ತು ಪ್ರಳಯಕ್ಕೆ ಬೇಕಾದಷ್ಟು ಕಾಲ ಪೂರ್ಣವಾಗದೋ, ಅಷ್ಟು ಕಾಲದ ಪರ್ಯಂತ ಜೀವರು ಮುಕ್ತಿಯ ಆನಂದದಲ್ಲಿರುವುದು, ದುಃಖ ಉಂಟಾಗದೇ ಇರುವುದು ಅಲ್ಪ ವಿಷಯವೇನು? ಇಂದು ಆಹಾರ–ಪಾನೀಯಗಳನ್ನು ಸೇವಿಸುತ್ತೀರಿ; ನಾಳೆ ಹಸಿವು ಆಗಲಿಕ್ಕಿದೆ. ಹಾಗಿದ್ದರೂ ಅದಕ್ಕಾಗಿ ಸಾಧನೆ ಮಾಡುತ್ತೀರಿ ಏಕೆ? ಹಸಿವು, ಬಾಯಾರಿಕೆ, ಕ್ಷುದ್ರವಾದ ಧನ, ರಾಜ್ಯ, ಪ್ರತಿಷ್ಠೆ,

---

೧೩. ಎಂದರೆ, ಮುಕ್ತಿಗೂ,

ಸ್ತ್ರೀಯರು, ಸಂತತಿ–ಮೊದಲಾದುವಕ್ಕಾಗಿ ಸಾಧನೆಯನ್ನು ಮಾಡುವುದು ಅವಶ್ಯವಾಗಿರುವಾಗ, ಮುಕ್ತಿಗಾಗಿ ಮಾಡಬಾರದೇಕೆ? **"ಹೇಗೆ ಸಾಯುವುದು ಅವಶ್ಯವಾಗಿದ್ದರೂ, ಜೀವನಕ್ಕಾಗಿ ಶ್ರಮ ಮಾಡಲ್ಪಡುತ್ತದೋ, ಹಾಗೆಯೇ ಮುಕ್ತಿಯಿಂದ ಹಿಂದಿರುಗಿ, ಜನ್ಮವೆತ್ತಬೇಕಾಗಿದ್ದರೂ, ಅದಕ್ಕಾಗಿ ಶ್ರಮಿಸುವುದು ಅತ್ಯಾವಶ್ಯಕವಾಗಿದೆ."**

**ಪ್ರಶ್ನೆ:**– ಮುಕ್ತಿಯ ಸಾಧನಗಳಾವುವು?

**ಉತ್ತರ:**– ಕೆಲವು ಸಾಧನಗಳನ್ನಂತೂ ಮೊದಲು ಬರೆದೇ ಇದ್ದೇವೆ. ಆದರೆ ವಿಶೇಷವಾದ ಸಾಧನಗಳು ಇವು:– ಯಾವನು ಮುಕ್ತಿಯನ್ನು ಬಯಸುತ್ತಾನೋ, ಅವನು ಜೀವನ್ಮು ಕ್ತನಾಗಿರಬೇಕು; ಎಂದರೆ ಮಿಥ್ಯಾಭಾಷಣವೇ ಮೊದಲಾದ ಯಾವ ಪಾಪಕರ್ಮಗಳ ಫಲವು ದುಃಖವಾಗಿದೆಯೋ, ಅವುಗಳನ್ನು ಬಿಟ್ಟು, ಸುಖವೆಂಬ ಫಲವನ್ನು ಕೊಡುವ ಸತ್ಯಭಾಷಣವೇ ಮೊದಲಾದ ಧರ್ಮಾಚರಣವನ್ನು ಅವಶ್ಯವಾಗಿ ಮಾಡಬೇಕು. **"ಯಾವನೇ ಆಗಿರಲಿ; ದುಃಖವನ್ನು ಬಿಡಿಸಿಕೊಳ್ಳಲು ಮತ್ತು ಸುಖವನ್ನು ಗಳಿಸಲು ಅಪೇಕ್ಷಿಸುವುದಾದರೆ, ಅಧರ್ಮವನ್ನು ಬಿಟ್ಟು, ಧರ್ಮವನ್ನು ಅವಶ್ಯವಾಗಿ ಆಚರಿಸಬೇಕು. ಏಕೆಂದರೆ, ಪಾಪಾಚರಣವು ದುಃಖದ ಮತ್ತು ಧರ್ಮಾಚರಣವು ಸುಖದ ಮೂಲಕಾರಣವಾಗಿರುತ್ತದೆ."** (ಮುಕ್ತಿಯ ಮೊದಲನೆಯ ಸಾಧನ–'ವಿವೇಕ') ಸತ್ಪುರುಷರ ಸಂಗದಿಂದ 'ವಿವೇಕ'ವನ್ನು ಪಡೆಯಬೇಕು; ಎಂದರೆ, ಸತ್ಯಾಸತ್ಯಗಳ, ಧರ್ಮಾ ಧರ್ಮಗಳ, ಕರ್ತವ್ಯಾಕರ್ತವ್ಯಗಳ ನಿಶ್ಚಯವನ್ನು ಅವಶ್ಯವಾಗಿ ಮಾಡಬೇಕು; ಅವನ್ನು ಬೇರೆ–ಬೇರೆ ಮಾಡಿ ತಿಳಿಯಬೇಕು ಮತ್ತು ಜೀವನು ಶರೀರದ, ಎಂದರೆ–ಐದು ಕೋಶಗಳ ವಿವೇಚನೆಯನ್ನು ಮಾಡಬೇಕು.

ಮೊದಲನೆಯದು, ಯಾವುದು ಚರ್ಮದಿಂದ ಹಿಡಿದು ಮೂಳೆಗಳವರೆಗಿನ, ಪೃಥಿವೀಮಯವಾದ ಸಮುದಾಯವಿದೆಯೋ ಆ **'ಅನ್ನಮಯ'**. ಎರಡನೆಯದು, ಯಾವುದು ಒಳಗಿನಿಂದ ಹೊರಕ್ಕೆ ಬರುತ್ತದೋ, ಆ ಪ್ರಾಣ; ಯಾವುದು ಹೊರಗಿನಿಂದ ಒಳಕ್ಕೆ ಹೋಗುತ್ತದೋ ಆ 'ಅಪಾನ'; ಯಾವುದು ನಾಭಿಯಲ್ಲಿದ್ದುಕೊಂಡು ಶರೀರದಲ್ಲಿ ಎಲ್ಲೆಡೆಗೂ ರಸವನ್ನು ತಲುಪಿಸುತ್ತದೋ, ಆ 'ಸಮಾನ '; ಯಾವುದರಿಂದ ಕಂಠಸ್ಥವಾದ ಅನ್ನ–ಪಾನ ಅಕರ್ಷಿಸಲ್ಪಡುತ್ತದೋ, ಮತ್ತು ಬಲ–ಪರಾಕ್ರಮ ಉಂಟಾಗುತ್ತದೋ, ಆ 'ಉದಾನ'; ಯಾವುದರಿಂದ ಜೀವನು ಸಮಸ್ತ ಶರೀರದಲ್ಲಿ ಗತಿ ಮೊದಲಾದ ಕರ್ಮಗಳನ್ನು ಮಾಡುತ್ತಾನೋ ಆ 'ವ್ಯಾನ'– ಈ ಐದರಿಂದ ಯುಕ್ತವಾಗಿರುವ **'ಪ್ರಾಣಮಯ'**. ಮೂರನೆಯದು, ಯಾವುದರಲ್ಲಿ ಮನಸ್ಸಿನೊಂದಿಗೆ ಅಹಂಕಾರ, ವಾಕ್ಕು, ಪಾದಗಳು, ಕೈಗಳು, ಮಲೇಂದ್ರಿಯ ಮತ್ತು ಮೂತ್ರೇಂದ್ರಿಯವೆಂಬ ಪಂಚ ಕರ್ಮೇಂದ್ರಿಗಳಿವೆಯೋ, ಆ **'ಮನೋಮಯ'**. ನಾಲ್ಕನೆಯದು, ಯಾವುದರಲ್ಲಿ ಬುದ್ಧಿ, ಚಿತ್ತ, ಶ್ರೋತ್ರ, ನೇತ್ರ, ರಸನಾ ಮತ್ತು ನಾಸಿಕ–ಎಂಬ, ಜೀವನು ಜ್ಞಾನವೇ ಮೊದಲಾದ ವ್ಯವಹಾರಗಳನ್ನು ಯಾವುದರಿಂದ ನಡೆಯಿಸುತ್ತಾನೋ, ಅಂತಹ ಪಂಚ ಜ್ಞಾನೇಂದ್ರಿಯಗಳು ಇವೆಯೋ, ಆ **'ವಿಜ್ಞಾನಮಯ'**. ಐದನೆಯದು, ಯಾವುದರಲ್ಲಿ ಪ್ರೀತಿ, ಪ್ರಸನ್ನತೆ, ಅಲ್ಪಾನಂದ, ಅಧಿಕಾನಂದಗಳೂ, ಮತ್ತು ಆಧಾರಕಾರಣರೂಪವಾದ ಪ್ರಕೃತಿಯೂ ಇವೆಯೋ ಆ **'ಆನಂದಮಯ ಕೋಶ'**. ಇವು 'ಐದು ಕೋಶ'ಗಳೆನಿಸುತ್ತವೆ. ಇವುಗಳಿಂದಲೇ ಜೀವನು ಸರ್ವಪ್ರಕಾರದ ಕರ್ಮಗಳನ್ನೂ, ಉಪಾಸನೆನ್ನೂ, ಹಾಗೂ ಜ್ಞಾನವೇ ಮೊದಲಾದ ವ್ಯವಹಾರಗಳನ್ನೂ ಮಾಡುತ್ತಾನೆ.

ಮೂರು ಸ್ಥಿತಿಗಳಿವೆ. ಒಂದು **'ಜಾಗೃತ್'**; ಎರಡನೆಯದು **'ಸ್ವಪ್ನ'**. ಮತ್ತು ಮೂರನೆಯದು **'ಸುಷುಪ್ತಿ'** ಅವಸ್ಥೆಯೆನಿಸುತ್ತದೆ. (ಎಚ್ಚರ, ಕನಸು ಮತ್ತು ಗಾಢನಿದ್ರೆಯ ಸ್ಥಿತಿ.)

ಮೂರು (ಬಗೆಯ) ಶರೀರಗಳಿವೆ. ಒಂದನೆಯದು, ಕಾಣಿಸುತ್ತಿರುವ **'ಸ್ಥೂಲಶರೀರ'**. ಎರಡನೆಯದು ಪಂಚಪ್ರಾಣಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ಸೂಕ್ಷ್ಮ ಭೂತಗಳು ಹಾಗೂ ಮನಸ್ಸು ಮತ್ತು ಬುದ್ಧಿ – ಈ ಹದಿನೇಳು ತತ್ತ್ವಗಳ ಸಮುದಾಯವಾದುದು, **'ಸೂಕ್ಷ್ಮ ಶರೀರ'**ವೆನಿಸುತ್ತದೆ. ಈ ಸೂಕ್ಷ್ಮ ಶರೀರ ಜನನ–ಮರಣ ಮೊದಲಾದುವುಗಳಲ್ಲಿಯೂ ಜೀವನೊಂದಿಗೆ ಇರುತ್ತದೆ. ಇದರಲ್ಲಿ ಎರಡು ವಿಧವಿದೆ. ಯಾವುದು ಸೂಕ್ಷ್ಮ ಭೂತಗಳ ಅಂಶದಿಂದಾಗಿದೆಯೋ, ಆ **'ಭೌತಿಕ'**ವಾದುದು ಒಂದು. ಜೀವನ ಸ್ವಾಭಾವಿಕವಾದ ಗುಣರೂಪವಾದುದು, 'ಸ್ವಾಭಾವಿಕ'ವಾದುದು ಎರಡನೆಯದು. ಈ ಎರಡನೆಯ ಅಭೌತಿಕವಾದ (ಸೂಕ್ಷ್ಮ) ಶರೀರವು ಮುಕ್ತಿಯಲ್ಲಿಯೂ ಇರುತ್ತದೆ. ಇದರಿಂದಲೇ ಜೀವನು ಮುಕ್ತಿಯಲ್ಲಿ ಸುಖವನ್ನು ಅನುಭವಿಸುತ್ತಾನೆ.[೧೪] ಮೂರನೆಯದು, ಯಾವುದರಲ್ಲಿ ಸುಷುಪ್ತಿ – ಎಂದರೆ, ಗಾಢವಾದ ನಿದ್ರೆ ಬರುತ್ತದೋ, ಆ **'ಕಾರಣಶರೀರ'**. ಅದು ಪ್ರಕೃತಿರೂಪವಾದುದರಿಂದ ಸರ್ವತ್ರವೂ ವಿಭುವೂ (ವ್ಯಾಪಕ) ಆಗಿದೆ ಮತ್ತು ಸರ್ವಜೀವರಿಗೂ ಒಂದೇ

---

೧೪. ಇಲ್ಲಿ ಅಭೌತಿಕ ಸಾಧಾರಣ ಶರೀರಕ್ಕೆ ಸಂಕಲ್ಪ ಮಾತ್ರ ಅಥವಾ ಸಂಕಲ್ಪಮಯ ಶರೀರ ಎನ್ನಲಾಗಿದೆ– ಯು.ಮೀ.

ಆಗಿದೆ. ನಾಲ್ಕನೆಯದು, ಯಾವುದರಲ್ಲಿ, ಸಮಾಧಿಸ್ಥಿತಿಯಿಂದ ಪರಮಾತ್ಮನ ಆನಂದಸ್ವರೂಪದಲ್ಲಿ ಜೀವರು ಮಗ್ನರಾಗುತ್ತಾರೋ ಅದು, **'ತುರೀಯ ಶರೀರ'**[೧೫]ವೆನ್ನಿಸುತ್ತದೆ. ಇದೇ ಸಮಾಧಿ ಸಂಸ್ಕಾರ ಜನ್ಯವಾದ ಶುದ್ಧ ಶರೀರದ ಪರಾಕ್ರಮವು ಮುಕ್ತಿಯಲ್ಲಿಯೂ ಯಥಾವತ್ತಾಗಿ ಸಹಾಯಕವಾಗುತ್ತದೆ.

"ಜೀವನು ಈ ಸಮಸ್ತ ಕೋಶಗಳಿಂದಲೂ, ಅವಸ್ಥೆಗಳಿಂದಲೂ ಬೇರೆಯಾಗಿದ್ದಾನೆ. ಏಕೆಂದರೆ, ಅವಸ್ಥೆಗಳಿಂದ ಜೀವನು ಬೇರೆ"–ಎಂಬುದು ಎಲ್ಲರಿಗೂ ವಿದಿತವಾಗಿದೆ. ಏಕೆಂದರೆ, ಯಾವಾಗ ಮೃತ್ಯು ಬರುತ್ತದೋ, ಆಗ ಎಲ್ಲವೂ 'ಜೀವನು ಹೊರಟು ಹೋದನು'. – ಎನ್ನುತ್ತಾರೆ. ಈ ಜೀವನೇ ಎಲ್ಲದರ ಪ್ರೇರಕನು, ಎಲ್ಲದರ ಧಾರಕನು, ಸಾಕ್ಷಿಯು, ಕರ್ತೃವು, ಭೋಕ್ತೃವು–ಎನ್ನಿಸಿಕೊಳ್ಳುತ್ತಾನೆ. ಯಾವನಾದರೂ 'ಜೀವನು ಕರ್ತೃ–ಭೋಕ್ತೃವಲ್ಲ. – ಎಂದು ಹೇಳುವನಾದರೆ, "ಅವನು ಅಜ್ಞಾನಿ, ಅವಿವೇಕಿ" – ಎಂದು ತಿಳಿದುಕೊಳ್ಳಿರಿ. ಏಕೆಂದರೆ, ಯಾವ ಈ ಸಮಸ್ತ ಜಡ ಪದಾರ್ಥಗಳಿವೆಯೋ, ಇವಕ್ಕೆ, ಜೀವನು ಇಲ್ಲವಾದರೆ, ಸುಖ–ದುಃಖಗಳ ಅನುಭವವಾಗಲಿ, ಪಾಪ–ಪುಣ್ಯಗಳ ಕರ್ತೃತ್ವವಾಗಲಿ ಎಂದಿಗೂ ಆಗಲಾರದು. ಅಹುದು; ಇವುಗಳ ಸಂಬಂಧದಿಂದ ಜೀವನು ಪಾಪ–ಪುಣ್ಯಗಳ ಕರ್ತೃವೂ ಮತ್ತು ಸುಖ–ದುಃಖಗಳ ಭೋಕ್ತೃವೂ ಆಗಿರುತ್ತಾನೆ.

ಯಾವಾಗ ಇಂದ್ರಿಯಗಳು ಅರ್ಥ[೧೬]ಗಳಲ್ಲಿಯೂ, ಮನಸ್ಸು ಇಂದ್ರಿಯಗಳಲ್ಲಿಯೂ, ಮತ್ತು ಆತ್ಮನು ಮನಸ್ಸಿನಲ್ಲಿಯೂ ಸಂಯುಕ್ತವಾಗಿ, ಪ್ರಾಣಗಳಿಗೆ ಪ್ರೇರಣೆಯಿತ್ತು, ಒಳ್ಳೆಯ ಅಥವಾ ಕೆಟ್ಟ ಕರ್ಮಗಳಲ್ಲಿ ನಿರತನಾಗುತ್ತಾನೋ, ಆಗಲೇ ಅವನು ಬಹಿರ್ಮುಖನಾಗಿ ಹೋಗುತ್ತಾನೆ. ಅದೇ ಸಮಯದಲ್ಲಿ ಒಳಗಿನಿಂದ ಸತ್ಕರ್ಮವಾಗಿದ್ದಲ್ಲಿ ಆನಂದ, ಉತ್ಸಾಹ, ನಿರ್ಭಯತ್ವ, ಮತ್ತು ಕೆಟ್ಟ ಕರ್ಮಗಳಲ್ಲಿ ಭಯ, ಸಂಶಯ, ನಾಚಿಕೆ ಉಂಟಾಗುತ್ತದೆ. "ಅದು ಅಂತರ್ಯಾಮಿಯಾದ ಪರಮಾತ್ಮನ ಶಿಕ್ಷಣವಾಗಿದೆ." ಯಾವನು ಈ ಶಿಕ್ಷಣಕ್ಕೆ ಅನುಕೂಲವಾಗಿ ವರ್ತಿಸುತ್ತಾನೋ, ಅವನೇ ಮುಕ್ತಿಜನ್ಯವಾದ ಆನಂದವನ್ನು ಪಡೆದುಕೊಳ್ಳುತ್ತಾನೆ. ಮತ್ತು ಯಾವನು ಪ್ರತಿಕೂಲವಾಗಿ ವರ್ತಿಸುತ್ತಾನೋ, ಅವನು ಬಂಧಜನ್ಯವಾದ ದುಃಖವನ್ನು ಅನುಭವಿಸುತ್ತಾನೆ. ವಿವೇಕ ಮುಕ್ತಿಯ ಪ್ರಥಮ ಸಾಧನವಾಗಿದೆ.

ಎರಡನೆಯ ಸಾಧನ **ವೈರಾಗ್ಯ**. ಎಂದರೆ, ಸತ್ಯಾಸತ್ಯಗಳನ್ನು ಬೇರೆ–ಬೇರೆಯಾಗಿ ತಿಳಿಯುವ ಸಾಧನ ವಿವೇಕ. ವಿವೇಕದಿಂದ ಈ ರೀತಿ ತಿಳಿದ ಮೇಲೆ, ಅದರಲ್ಲಿ ಸತ್ಯಾಚರಣವನ್ನು ಗ್ರಹಿಸುವುದು ಮತ್ತು ಅಸತ್ಯಾಚರಣವನ್ನು ತ್ಯಜಿಸುವುದು ವಿವೇಕದ ಪ್ರಯೋಜನವಾಗಿದೆ. ಪೃಥಿವಿಯಿಂದ ಹಿಡಿದು ಪರಮೇಶ್ವರನ ವರೆಗೆ, ಪದಾರ್ಥಗಳ ಗುಣ–ಕರ್ಮ–ಸ್ವಭಾವಗಳನ್ನು ತಿಳಿದು, ಅವನ ಆಜ್ಞಾಪಾಲನೆಯಲ್ಲಿ ಮತ್ತು ಉಪಾಸನೆಯಲ್ಲಿ ತತ್ಪರನಾಗಿರುವುದು, ಅದಕ್ಕೆ ವಿರುದ್ಧವಾಗಿ ನಡೆಯದಿರುವುದು, ಸೃಷ್ಟಿಯಿಂದ ಉಪಯೋಗ ಪಡೆದುಕೊಳ್ಳುವುದು ವಿವೇಕವೆನ್ನಿಸುತ್ತದೆ. ಈ ವಿವೇಕದಿಂದ ನಶ್ವರ ವಸ್ತುಗಳ ಬಗೆಗೆ 'ರಾಗ' – ಎಂದರೆ ಆಸಕ್ತಿ ಹೊಂದದಿರುವುದೇ **ವೈರಾಗ್ಯ**.

ಆ ಮೇಲೆ ಮೂರನೆಯ ಸಾಧನ **'ಸಂಪತ್ತಿಷಟ್ಕ'** – ಎಂದರೆ, ಆರು ಬಗೆಯ ಕರ್ಮಗಳ ಆಚರಣ. ಒಂದನೆಯದು, ಯಾವುದರಿಂದ ತನ್ನ ಆತ್ಮನನ್ನು ಮತ್ತು ಅಂತಃಕರಣವನ್ನು ಅಧರ್ಮಾಚರಣದಿಂದ ಸರಿಸಿ, ಧರ್ಮಾಚರಣದಲ್ಲಿ ಸದಾ ಪ್ರವೃತ್ತಿವಾಗಿಡಲಾಗುವುದೋ, ಆ **'ಶಮ'**. ಎರಡನೆಯದು, ಯಾವುದರಿಂದ ಶ್ರೋತ್ರವೇ ಮೊದಲಾದ ಇಂದ್ರಿಯಗಳನ್ನು ಮತ್ತು ಶರೀರವನ್ನು ವ್ಯಭಿಚಾರವೇ ಮೊದಲಾದ ದುಷ್ಕರ್ಮಗಳಿಂದ ಸರಿಸಿ, ಜಿತೇಂದ್ರಿಯತ್ವವೇ ಮೊದಲಾದ ಶುಭಕರ್ಮಗಳಲ್ಲಿ ಪ್ರವೃತ್ತವಾಗಿಡಲಾಗುವುದೋ ಆ **'ದಮ'**. ಮೂರನೆಯದು, ಯಾವುದರಿಂದ ದುಷ್ಟಕರ್ಮಗಳನ್ನು ಮಾಡುವ ಪುರುಷರಿಂದ ಸದಾ ದೂರವಿರಲಾಗುವುದೋ, ಆ **'ಉಪರತಿ'**. ನಾಲ್ಕನೆಯದು **'ತಿತಿಕ್ಷಾ'**–ಎಂದರೆ, ನಿಂದಾ–ಸ್ತುತಿಗಳು, ಹಾನಿ–ಲಾಭಗಳು, ಎಷ್ಟಾದರೂ ಆಗಲೊಲ್ಲವೇಕೆ, ಆದರೆ, ಹರ್ಷ–ಶೋಕಗಳನ್ನು ವರ್ಜಿಸಿ, ಮುಕ್ತಿಸಾಧನಗಳಲ್ಲೇ ಸದಾ ತತ್ಪರನಾಗಿರುವುದು. ಐದನೆಯದು **'ಶ್ರದ್ಧೆ'**– ಎಂದರೆ, ವೇದಗಳೇ ಮೊದಲಾದ ಸತ್ಯ ಶಾಸ್ತ್ರಗಳಲ್ಲಿ ಮತ್ತು ಇವುಗಳ ಜ್ಞಾನದಿಂದ ಪೂರ್ಣರೂ, ಆಪ್ತ–ವಿದ್ವಾಂಸರೂ, ಸತ್ಯೋಪದೇಶಕರೂ ಆದ ಮಹಾಶಯರುಗಳ ವಚನಗಳಲ್ಲಿ ನಂಬಿಕೆಯಿಡುವುದು. ಆರನೆಯದು **'ಸಮಾಧಾನ'**– ಎಂದರೆ, ಚಿತ್ತದ ಏಕಾಗ್ರತೆ, ಈ ಆರೂ ಸೇರಿ, 'ಮೂರನೆಯದಾದ ಒಂದು ಸಾಧನ'ವೆನ್ನಿಸುತ್ತವೆ.

ನಾಲ್ಕನೆಯದು **ಮುಮುಕ್ಷುತ್ವ**. ಎಂದರೆ, ಹೇಗೆ ಹಸಿವು–ಬಾಯಾರಿಕೆಗಳಿಂದ ಆತುರನಾಗಿರುವವನಿಗೆ ಅನ್ನ–ಜಲಗಳ ಹೊರತು ಮತ್ತೆ ಯಾವುದೂ ಹಿತವಾಗಿ ಕಾಣಿಸುವುದಿಲ್ಲವೋ, ಹಾಗೆ ಮುಕ್ತಿಯ ಸಾಧನಗಳನ್ನು ಮತ್ತು ಮುಕ್ತಿಯನ್ನು ಬಿಟ್ಟು,

---

೧೫. ತುರೀಯವು ಜಾಗ್ರತ್–ಸ್ವಪ್ನ–ಸುಷುಪ್ತಿಗಳಂತೆ ಒಂದು ಅವಸ್ಥಾ ವಿಶೇಷ. ಅದನ್ನು ಶರೀರದಲ್ಲಿ ಎಣಿಸಿರುವುದು ಸಮಾಲೋಚನೀಯ.

೧೬. ಎಂದರೆ, ವಿಷಯಗಳಲ್ಲಿ

ಬೇರೆಯದರಲ್ಲಿ ಲೇಪವಿಲ್ಲದಿರುವಿಕೆ. ಇವು 'ನಾಲ್ಕು ಸಾಧನಗಳು.' ಯಾವನು ಈ ನಾಲ್ಕು ಸಾಧನಗಳಿಂದ ಯುಕ್ತನಾಗಿರುತ್ತಾನೋ, ಅವನೇ ಮೋಕ್ಷದ ಅಧಿಕಾರಿಯಾಗಿರುತ್ತಾನೆ. ಮತ್ತು ಅನುಬಂಧ ಚತುಷ್ಟಯ **ನಾಲ್ಕು ಅನುಬಂಧಗಳು,** ಎಂದರೆ, ಸಾಧನಗಳ ನಂತರ ಮಾಡಬೇಕಾದ ಕರ್ಮಗಳೂ ಕೂಡ ಇವೆ. ಮೊದಲನೆಯದು **ಸಾಧನೋಪಪತ್ತಿ,** ಎಂದರೆ ಸಾಧನಗಳ ಸನ್ನಾಹವೇ ಆಗಿದೆ; ಹೀಗೆ ಸಾಧನಸಂಪನ್ನನಾದವನಿಗೆ **'ಅಧಿಕಾರ'**[೧೭]ವಿರುತ್ತದೆ.

ಎರಡನೆಯದು **ಸಂಬಂಧ**. ಎಂದರೆ ಪ್ರತಿಪಾದ್ಯವಾದ ಬ್ರಹ್ಮಸಾಕ್ಷಾತ್ಕಾರವೆಂಬ ಮುಕ್ತಿಯನ್ನು ಮತ್ತು ಪ್ರತಿಪಾದಕಗಳಾದ ವೇದಗಳೇ ಮೊದಲಾದ ಶಾಸ್ತ್ರಗಳನ್ನು ಯಥಾವತ್ತಾಗಿ ತಿಳಿದು, ಅವುಗಳ ಪರಸ್ಪರ ಸಮನ್ವಯ ಮಾಡುವುದೇ ಆಗಿದೆ.

ಮೂರನೆಯದು **ವಿಷಯ** ಎಂದರೆ – ಸರ್ವಶಾಸ್ತ್ರಗಳ ಪ್ರತಿಪಾದನದ ವಿಷಯವಾಗಿರುವ ಬ್ರಹ್ಮ ಮತ್ತು ಅದರ ಪ್ರಾಪ್ತಿ – ಇವೇ ಮೋಕ್ಷಾಭಿಲಾಷಿಯ ಗುರಿಯಾದ **'ವಿಷಯ'**ವಾಗಿರುತ್ತದೆ.

ನಾಲ್ಕನೆಯದು **ಪ್ರಯೋಜನ**.– ಸರ್ವದುಃಖಗಳಿಂದಲೂ ನಿವೃತ್ತಿ ಮತ್ತು ಪರಮಾನಂದವನ್ನು ಗಳಿಸಿ, ಮುಕ್ತಿಯ ಅಧ್ಯಾತ್ಮಿಕ ಸುಖದ ಆಗುವಿಕೆ. ಆ ನಾಲ್ಕೂ ಅನುಬಂಧಗಳೆನಿಸುತ್ತವೆ.

ಅದರ ನಂತರ **"ಶ್ರವಣ ಚತುಷ್ಟಯ"**. ಮೊದಲನೆಯದು **'ಶ್ರವಣ'**. ಯಾವಾಗ ಯಾವನಾದರೂ ವಿದ್ವಾಂಸನು ಉಪದೇಶ ಮಾಡುತ್ತಾನೋ, ಆಗ ಶಾಂತನಾಗಿ, ಗಮನಕೊಟ್ಟು ಆಲಿಸಬೇಕು. ಇದು ಸಮಸ್ತ ವಿದ್ಯೆಗಳಲ್ಲಿಯೂ ಸೂಕ್ಷ್ಮ ವಿದ್ಯೆಯಾಗಿರುವುದರಿಂದ, ವಿಶೇಷತಃ ಬ್ರಹ್ಮವಿದ್ಯೆಯನ್ನಾಲಿಸುವಾಗ ಅತ್ಯಂತ ಗಮನವನ್ನು ಕೊಡಬೇಕು. ಆಲಿಸಿದ ಮೇಲೆ ಎರಡನೆಯ ಹಂತವಾದ **'ಮನನ'**. ಏಕಾಂತವಾದ ಸ್ಥಳದಲ್ಲಿ ಕುಳಿತು, ಕೇಳಿದುದರ ಮೇಲೆ ಆಲೋಚನೆಮಾಡಬೇಕು. ಯಾವ ವಿಷಯದಲ್ಲಿ ಸಂಶಯವಿರುವುದೋ, ಅದರ ಬಗೆಗೆ ಮರಳಿ ಪ್ರಶ್ನಿಸಬೇಕು. ಮತ್ತು ಆಲಿಸುತ್ತಿರುವ ಸಮಯದಲ್ಲಿಯೂ ಕೂಡ ವಕ್ತೃವು ಮತ್ತು ಶ್ರೋತೃವು ಉಚಿತವೆಂದು ತಿಳಿದಲ್ಲಿ ಕೇಳಬೇಕು ಮತ್ತು ಶಂಕಾನಿವಾರಣ ಮಾಡಿಕೊಳ್ಳಬೇಕು. ಮೂರನೆಯದು **'ನಿದಿಧ್ಯಾಸನ'**. ಯಾವಾಗ ಆಲಿಸುವುದರಿಂದ ಮತ್ತು ಮನನಮಾಡುವುದರಿಂದ ನಿಃಸಂದೇಹನಾಗುವನೋ, ಆಗ ಸಮಾಧಿಸ್ಥನಾಗಿ 'ಹೇಗೆ ಆಲಿಸಿದ್ದೆನೋ, ಆಲೋಚಿಸಿದ್ದೆನೋ, ಆ ವಿಷಯ ಹಾಗೆಯೇ ಇದೆಯೋ ಅಥವಾ ಇಲ್ಲವೋ? ಎಂದು ನೋಡುವುದು– ತಿಳಿಯುವುದು; ಧ್ಯಾನಯೋಗದಿಂದ (ಚಿತ್ತದ ಏಕಾಗ್ರತೆಯ ಸಂಪರ್ಕದಿಂದ)ನೋಡುವುದು. ನಾಲ್ಕನೆಯ **'ಸಾಕ್ಷಾತ್ಕಾರ'**. ಎಂದರೆ, ಪದಾರ್ಥದ ಸ್ವರೂಪ, ಗುಣ ಮತ್ತು ಸ್ವಭಾವ ಹೇಗಿರುತ್ತದೋ, ಹಾಗೆ, ತಥ್ಯ ಹೇಗಿದೆಯೋ ಹಾಗೆಯೇ ತಿಳಿದಕೊಳ್ಳುವುದು. ಇದು **'ಶ್ರವಣಚತುಷ್ಟಯ'**ವೆನಿಸುತ್ತದೆ.

ಸದಾ 'ತಮೋಗುಣ'ವನ್ನು, ಎಂದರೆ ಕ್ರೋಧ, ಮಾಲಿನ್ಯ, ಆಲಸ್ಯ, ಪ್ರಮಾದ ಮೊದಲಾದುದನ್ನೂ, 'ರಜೋಗುಣ'ವನ್ನು, ಎಂದರೆ ಈರ್ಷ್ಯಾ, ದ್ವೇಷ, ಕಾಮ, ಅಭಿಮಾನ, ವಿಕ್ಷೇಪ–(ಎಂದರೆ ಚಿತ್ತದ ಅಸ್ಥಿರತೆ ಮತ್ತು ಕ್ಷೋಭೆ) ಮೊದಲಾದುವನ್ನೂ ದೂರೀಕರಿಸಿ, ಸತ್ತ್ವವನ್ನು, ಎಂದರೆ ಶಾಂತಪ್ರಕೃತಿ, ಪವಿತ್ರತೆ, ವಿದ್ಯೆ, ವಿಚಾರ ಮೊದಲಾದ ಗುಣಗಳನ್ನು ಧರಿಸಬೇಕು. **"ಮೈತ್ರೀ"**[೧೮] – ಸುಖೀಜನರಲ್ಲಿ ಮಿತ್ರತ್ವ, **"ಕರುಣಾ"–** ದುಃಖೀ ಜನರ ಮೇಲೆ ದಯೆ, **(ಮುದಿತಾ)** ಪುಣ್ಯಾತ್ಮರುಗಳಿಂದ ಹರ್ಷಿತನಾಗುವುದು, **"ಉಪೇಕ್ಷಾ"** – ದುಷ್ಟಾತ್ಮರಲ್ಲಿ ಪ್ರೀತಿಯನ್ನೂ ಇಡದಿರುವುದು; ವೈರವನ್ನೂ ಕಟ್ಟಿಕೊಳ್ಳದಿರುವುದು.[೧೯] – ಇವೂ ಕೂಡ ಮುಕ್ತಿಸಾಧನೆಗೆ ಸಹಾಯಕವಾದ ಭಾವನೆಗಳು.

ಮುಮುಕ್ಷುವು ಪ್ರತಿದಿನವೂ, ಮನಸ್ಸು ಮೊದಲಾದ ಆಂತರಿಕ ತತ್ತ್ವಗಳು ಬುದ್ಧಿಗಮ್ಯವಾಗುವಂತೆ, ಕನಿಷ್ಠಪಕ್ಷ ಎರಡು ಘಂಟೆಗಳ ಪರ್ಯಂತ ಅವಶ್ಯವಾಗಿ ಧ್ಯಾನ ಮಾಡಬೇಕು. ಆತ್ಮನು ಶರೀರದಿಂದ ಬೇರೆಯಾಗಿದ್ದಾನೆ. ನೋಡಿರಿ, ನಾವು ಚೇತನಸ್ವರೂಪರಾಗಿದ್ದೇವೆ. ಇದೇ ಕಾರಣದಿಂದ ಜ್ಞಾನಸ್ವರೂಪರೂ ಮತ್ತು ಮನಸ್ಸಿನ ಸಾಕ್ಷಿಗಳೂ ಆಗಿದ್ದೇವೆ. ಏಕೆಂದರೆ, ಯಾವಾಗ ಮನಸ್ಸು ಶಾಂತವೋ, ಚಂಚಲವೋ, ಆನಂದಿತವೋ ಅಥವಾ ವಿಷಾದಯುಕ್ತವೋ ಆಗುತ್ತದೋ, ಆಗ ಅದನ್ನು ಅದು ಇರುವಂತೆಯೇ ಕಂಡುಕೊಳ್ಳುತ್ತೇವೆ. ಹಾಗೆಯೇ ಇಂದ್ರಿಯಗಳು, ಪ್ರಾಣಗಳು ಮೊದಲಾದುವುಗಳನ್ನು ತಿಳಿದುಕೊಳ್ಳುವವರೂ, ಹಿಂದೆ ನೋಡಲ್ಪಟ್ಟುದನ್ನು ಸ್ಮರಿಸುವವರೂ ಮತ್ತು ಒಂದೇ ಕಾಲದಲ್ಲಿ ಅನೇಕ ಪದಾರ್ಥಗಳನ್ನು ಅರಿತುಕೊಳ್ಳುವವರೂ,

೧೭. ಸಾಧನೋತ್ಪತ್ತಿ ಎಂದರೆ, ಸಾಧನಗಳ ಸನ್ನಾಹವೇ ಆಗಿದೆ. ಹೀಗೆ ಸಾಧನೆ–ಸಂಪನ್ನನಾದವನಿಗೆ "ಅಧಿಕಾರ"ವಿರುತ್ತದೆ.

೧೮. ಮೈತ್ರೀ ಕರುಣಾಮುದಿತೋಪೇಕ್ಷಾಣಾಂ ಸುಖ–ದುಃಖ ಪುಣ್ಯಾಪುಣ್ಯ–ವಿಷಯಾಣಾಂ ಭಾವನಾತಶ್ಚಿತ್ತಪ್ರಸಾದನಮ್ – ಯೋಗದರ್ಶನ [ ೧.೩೩ ] –ಸಂ

೧೯. ಇವು ಕೂಡ ಮುಕ್ತಿ ಸಾಧನೆಗೆ ಸಹಾಯಕವಾದ ಭಾವನೆಗಳು. –ಅನು.

ಧಾರಣ–ಆಕರ್ಷಣಗಳ ಕರ್ತೃಗಳೂ ಮತ್ತು ಎಲ್ಲರಿಂದ ಬೇರೆಯಾದವರೂ ಆಗಿದ್ದೇವೆ. ಬೇರೆಯಾದವರಲ್ಲದಿದ್ದಲ್ಲಿ ಸ್ವತಂತ್ರರಾದ ಕರ್ತೃಗಳೂ, ಇವುಗಳ ಪ್ರೇರಕರೂ, ಅಧಿಷ್ಠಾತೃಗಳೂ (ಸಾಧನಗಳನ್ನು ವಶದಲ್ಲಿಟ್ಟುಕೊಳ್ಳುವವರು) ಆಗಲು ಎಂದಿಗೂ ಶಕ್ತರಾಗುತ್ತಿರಲಿಲ್ಲ.

**ಅವಿದ್ಯಾಽಸ್ಮಿತಾರಾಗದ್ವೇಷಾಭಿನಿವೇಶಾಃ ಪಂಚಕ್ಲೇಶಾಃ ॥** (ಪಾತಂಜಲಯೋಗ, ಸಾಧನ–೩)

ಇವುಗಳಲ್ಲಿ **'ಅವಿದ್ಯೆ'**ಯ ಸ್ವರೂಪವನ್ನು ಹೇಳಿಯೇ ಇದ್ದೇವೆ. ಬೇರೆಯಾಗಿ ಇರುವ ಬುದ್ಧಿಯನ್ನು ಆತ್ಮನಿಂದ ಬೇರೆ–ಎಂದು ತಿಳಿಯದಿರುವುದು **'ಅಸ್ಮಿತಾ'**; ಸುಖದಲ್ಲಿ ಪ್ರೀತಿಯು **'ರಾಗ'**; ದುಃಖದಲ್ಲಿ ಅಪ್ರೀತಿಯು **'ದ್ವೇಷ'**; ಮತ್ತು ಸಮಸ್ತ ಪ್ರಾಣಿಮಾತ್ರರಿಗೂ "ನಾನು ಸದಾ ಶರೀರದಲ್ಲಿಯೇ ಇರುವೆ; ಸಾಯದಿರುವೆ". – ಎಂಬ ಇಚ್ಛೆ ಸದಾ ಇರುತ್ತದೆ. ಸಾವಿನ ದುಃಖದಿಂದ ಆಗುವ ತ್ರಾಸವೇ **'ಅಭಿನಿವೇಶ'**ವೆನಿಸುತ್ತದೆ. ಈ ಐದು ಕ್ಲೇಶಗಳನ್ನು ಯೋಗಾಭ್ಯಾಸ– ವಿಜ್ಞಾನದಿಂದ ದೂರೀಕರಿಸಿ, ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಂಡು, ಮುಕ್ತಿಯ ಪರಮಾನಂದವನ್ನು ಅನುಭವಿಸಬೇಕು.

**ಪ್ರಶ್ನೆ:**– ಎಂತಹ ಮುಕ್ತಿಯನ್ನು ತಾವು ಅಂಗೀಕರಿಸುತ್ತೀರೋ, ಅಂತಹವನ್ನು ಬೇರೆ ಯಾವನೂ ಅಂಗೀಕರಿಸುವುದಿಲ್ಲ. ನೋಡಿರಿ, 'ಜೈನರು' ಮೋಕ್ಷಶಿಲೆಯನ್ನೂ, ಶಿವಪುರಕ್ಕೆ ಹೋಗಿ ಸದ್ದಿಲ್ಲದೆ ಕುಳಿತಿರುವುದನ್ನೂ, 'ಕ್ರೈಸ್ತರು' ಎಲ್ಲಿ ವಿವಾಹ, ಕಲಹ, ವಾದ್ಯ ಬಂಜಂತ್ರಿಗಳು, ವಸ್ತ್ರ–ಮೊದಲಾದುದರ ಧಾರಣದಿಂದ ಆನಂದದ ಅನುಭವ ಉಂಟಾಗುತ್ತದೋ, ಆ ನಾಲ್ಕನೆಯ ಆಕಾಶರನ್ನೂ, ಹಾಗೆಯೇ 'ಮುಸಲ್ಮಾನರು' ಏಳನೆಯ ಆಕಾಶವನ್ನೂ, 'ವಾಮಮಾರ್ಗಿಗಳು ಶ್ರೀಪುರ'ವನ್ನೂ, 'ಶೈವರು ಕೈಲಾಸ'ವನ್ನೂ, 'ವೈಷ್ಣವರು ವೈಕುಂಠ'ವನ್ನೂ, 'ಗೋಕುಲೀಯ ಗೋಸ್ವಾಮಿ'ಗಳು ಗೋಲೋಕ ಮೊದಲಾದ ಕಡೆಗೆ ಹೋಗಿ ಉತ್ತಮ ನಾರಿಯರು, ಅನ್ನ, ಪಾನ, ವಸ್ತ್ರ, ನೆಲೆ–ಮೊದಲಾದುವನ್ನು ಪಡೆದುಕೊಂಡು ಆನಂದದಲ್ಲಿರುವುದನ್ನೂ ಮುಕ್ತಿಯೆಂದು ಅಂಗೀಕರಿಸುತ್ತಾರೆ. 'ಪೌರಾಣಿಕರು' (ಸಾಲೋಕ್ಯ) ಈಶ್ವರನ ಲೋಕದಲ್ಲಿ ನಿವಾಸ, (ಸಾನುಜ್ಯ)[೨೦] ತಮ್ಮನ ಹಾಗೆ ಈಶ್ವರನ ಜೊತೆಗಿರುವುದು, ಇದನ್ನು ಬೇರೆಯೆಂದು ಬಹುಜನರು ಭಾವಿಸುವುದಿಲ್ಲ (ಸಾರೂಪ್ಯ) ಉಪಾಸನೀಯನ ಆಕೃತಿ ಹೇಗಿದೆಯೋ, ಹಾಗೆ ಆಗಿಹೋಗುವುದು, (ಸಾಮೀಪ್ಯ) ಸೇವಕನಂತೆ ಈಶ್ವರನ ಸಮೀಪದಲ್ಲಿರುವುದು, (ಸಾಯುಜ್ಯ) ಈಶ್ವರನೊಂದಿಗೆ ಸಂಯುಕ್ತನಾಗಿ ಹೋಗುವುದು ಈ ನಾಲ್ಕು ಪ್ರಕಾರದ ಮುಕ್ತಿಯನ್ನು ಅಂಗೀಕರಿಸುತ್ತಾರೆ. ವೇದಾಂತಿಗಳು ಬ್ರಹ್ಮದಲ್ಲಿ ಲಯವಾಗಿ ಹೋಗುವುದನ್ನು ಮೋಕ್ಷವೆಂದು ಅಂಗೀಕರಿಸುತ್ತಾರೆ.

**ಉತ್ತರ:**– ೧೨ನೆಯ ಸಮುಲ್ಲಾಸದಲ್ಲಿ ಜೈನರ, ೧೩ರಲ್ಲಿ ಕ್ರೈಸ್ತರ ಮತ್ತು ಹದಿನಾಲ್ಕರಲ್ಲಿ ಮುಸಲ್ಮಾನರ ಮುಕ್ತಿ–ಮೊದಲಾದ ವಿಷಯಗಳನ್ನು ವಿಶೇಷವಾಗಿ ಬರೆಯುವೆವು. ವಾಮಮಾರ್ಗಿಗಳು ಶ್ರೀಪುರಕ್ಕೆ ಹೋಗಿ, ಲಕ್ಷ್ಮಿಯಂತಹ ಸ್ತ್ರೀಯರು, ಮದ್ಯ, ಮಾಂಸ, ಮೊದಲಾದುದರ ಭಕ್ಷಣ–ಪಾನ, ರಂಜನ–ರಾಗ ಭೋಗಗಳನ್ನು ಪ್ರಾಪ್ತಿ ಮಾಡಿಕೊಳ್ಳುವ ಬಗೆಗೆ ಏನು ಹೇಳುತ್ತಾರೋ, ಅದು ಈ ಲೋಕಕ್ಕಿಂತ ವಿಶೇಷವಾದುದಲ್ಲ. ಹಾಗೆಯೇ ಮಹಾದೇವನಂತೆ ಮತ್ತು ವಿಷ್ಣುವಿನಂತೆ ಆಕೃತಿ ಹೊಂದಿ, ಪಾರ್ವತಿಯಂತಹ ಮತ್ತು ಲಕ್ಷ್ಮಿಯಂತಹ ಸ್ತ್ರೀಯರಿಂದ ಯುಕ್ತರಾಗಿ ಆನಂದವನ್ನನುಭವಿಸುವುದು, ಇಲ್ಲಿನ ಧನಾಢ್ಯರಾದ ರಾಜರುಗಳ (ಭೋಗಯುಕ್ತ)ಬಾಳಿಗಿಂತ ಅಧಿಕವಾಗಿರುವುದೆಂದರೆ, ಅಲ್ಲಿ ರೋಗಗಳಿರುವುದಿಲ್ಲ; ಮತ್ತು ಯುವಾವಸ್ಥೆ ಸದಾ ಇರುವುದು–ಎಂದು ಬರೆಯುತ್ತಾರೆ. ಅವರ ಈ ಮಾತು ಸುಳ್ಳಾಗಿದೆ. ಏಕೆಂದರೆ – "ಎಲ್ಲಿ ಭೋಗವಿರುವುದೋ, ಅಲ್ಲಿ ರೋಗವಿರುವುದು; ಎಲ್ಲಿ ರೋಗವಿರುವುದೋ, ಅಲ್ಲಿ ವೃದ್ಧಾವಸ್ಥೆಯೂ ಕೂಡ ಅವಶ್ಯವಾಗಿಯೂ ಇರುವುದು." ಮತ್ತು ಪೌರಾಣಿಕರನ್ನು – "ನಿಮ್ಮ ನಾಲ್ಕು ಪ್ರಕಾರದ ಎಂತಹ ಮುಕ್ತಿಯಿದೆಯೋ, ಅಂತಹುದಂತೂ ಕೃಮಿ–ಕೀಟ–ಪತಂಗ–ಪಶು–ಮೊದಲಾದುವಕ್ಕೂ ಸ್ವತಃ ಸಿದ್ಧವಾಗಿ ಲಭಿಸಿದೆ. ಏಕೆಂದರೆ ಈ ಲೋಕಗಳೆಷ್ಟಿವೆಯೋ, ಅವೆಲ್ಲವೂ ಈಶ್ವರನವಾಗಿವೆ. ಇವುಗಳಲ್ಲಿಯೇ ಜೀವರೆಲ್ಲರೂ ಇರುತ್ತಾರೆ. ಆದುದರಿಂದ 'ಸಾಲೋಕ್ಯ' ಮುಕ್ತಿ ಅನಾಯಾಸವಾಗಿ ಪ್ರಾಪ್ತವಾಗಿದೆ. **'ಸಾಮೀಪ್ಯ':**– ಈಶ್ವರನು ಸರ್ವತ್ರ ವ್ಯಾಪಕನಾಗಿರುವುದರಿಂದ ಎಲ್ಲರೂ ಅವನ ಸಮೀಪದಲ್ಲಿದ್ದಾರೆ. ಆದುದರಿಂದ ಸಾಮೀಪ್ಯಮುಕ್ತಿ ಸ್ವತಃ ಸಿದ್ಧವಾಗಿದೆ. **ಸಾನುಜ್ಯ :**– ಜೀವನು ಈಶ್ವರನಿಗಿಂತ ಎಲ್ಲ ರೀತಿಯಿಂದಲೂ ಚಿಕ್ಕವನು ಮತ್ತು ಚೇತನನು ಆಗಿರುವುದರಿಂದ ಸ್ವತಃ ಭ್ರಾತೃವಿನಂತಿದ್ದಾನೆ. ಆದುದರಿಂದ ಸಾನುಜ್ಯ ಮುಕ್ತಿಯೂ ಕೂಡ ಪ್ರಯತ್ನವಿಲ್ಲದೆಯೇ ಲಭಿಸಿದೆ. ಮತ್ತು ಸರ್ವಜೀವರೂ ಸರ್ವವ್ಯಾಪಕ ಪರಮಾತ್ಮನಲ್ಲಿ ವ್ಯಾಪ್ಯವಾಗಿರುವುದರಿಂದ ಸಂಯುಕ್ತರಾಗಿದ್ದಾರೆ. ಇದರಿಂದ **'ಸಾಯುಜ್ಯ'** ಮುಕ್ತಿಯೂ ಸ್ವತಃ

೨೦. ಅನೇಕ ಪೌರಾಣಿಕರು 'ಸಾನುಜ್ಯ'ವನ್ನು ಬೇರೆ ಎಂದು ಗಣಿಸುವುದಿಲ್ಲ. ಆದರೆ, ಅ'ಸಾರೂಪ್ಯ'ವನ್ನು ಅವಶ್ಯಕವಾಗಿ ಎಣಿಸುತ್ತಾರೆ. ಹೀಗೆ ಎಣಿಕೆಯಲ್ಲಿ ನಾಲ್ಕು ಮುಕ್ತಿಗಳು – ಗ್ರಂಥಕರ್ತರ **"ವೇದವಿರುದ್ಧ ಮತಖಂಡನಮ್"** ಪುಸ್ತಿಕೆಯನ್ನು ಓದಿ.

ಸಿದ್ಧವಾಗಿದೆ. ಮತ್ತು ಬೇರೆ ಸಾಧಾರಣ ನಾಸ್ತಿಕರು, ಸಾಯುವುದರಿಂದ ತತ್ತ್ವಗಳಲ್ಲಿ ತತ್ತ್ವಗಳು ಸೇರಿಹೋಗಿ ಮುಕ್ತಿಯಾಗುವುದೆಂದು ಯಾವುದನ್ನು ಅಂಗೀಕರಿಸುತ್ತಾರೋ, ಅದಂತೂ ನಾಯಿಗಳೂ – ಕತ್ತೆಗಳು – ಮೊದಲಾದುವಕ್ಕೂ ಕೂಡ ಪ್ರಾಪ್ತವಾಗಿದೆ. ಇವು ಮುಕ್ತಿಗಳಲ್ಲ; ಆದರೆ–ಒಂದು ಬಗೆಯ ಬಂಧನವೇ ಆಗಿವೆ. ಏಕೆಂದರೆ– ಈ ಜನರು 'ಶಿವಪುರ', 'ಮೋಕ್ಷಶೀಲಾ', 'ನಾಲ್ಕನೆಯ ಆಕಾಶ', 'ಏಳನೆಯ ಆಕಾಶ', 'ಶ್ರೀಪುರ', 'ಕೈಲಾಸ', 'ವೈಕುಂಠ', 'ಗೋಲೋಕ' – ಇವನ್ನು ಒಂದು ಪ್ರದೇಶದಲ್ಲಿರುವ ಸ್ಥಾನವಿಶೇಷವೆಂದು ತಿಳಿದುಕೊಳ್ಳುತ್ತಾರೆ. ಅವರು ಈ ಸ್ಥಾನಗಳಿಂದ ಬೇರೆಯಾದರೆ, ಮುಕ್ತಿ ಕೈಬಿಟ್ಟು ಹೋಗುವುದು. ಆದುದರಿಂದ, ಇದೂ ಒಂದು ಬಗೆಯ ಬಂಧನವೇ ಹೊರತು ಮೋಕ್ಷವಲ್ಲ. ಎಲ್ಲಿ ಇಚ್ಛೆಯಾಗುವುದೋ ಅಲ್ಲಿ ಪರ್ಯಟನ ಮಾಡಬೇಕು; ಎಲ್ಲಿಯೂ ಅಡ್ಡಿಯಿರಬಾರದು – 'ಇವೇ ವಸ್ತುತಃ ಮುಕ್ತಿ;' ಭಯವಿಲ್ಲ; ಸಂಶಯವಿಲ್ಲ; ದುಃಖ ಉಂಟಾಗುವುದಿಲ್ಲ. ಜನ್ಮವಾವುದಿದೆಯೋ ಅದು 'ಉತ್ಪತ್ತಿ'; ಮತ್ತು ಸಾವು ಪ್ರಳಯವೆಂದಿದ್ದಾರೆ. ಸಮಯದಲ್ಲಿ ಜನ್ಮವೆತ್ತುತ್ತಾರೆ.

**ಪ್ರಶ್ನೆ:**– ಜನ್ಮ ಒಂದೇ ಇದೆಯೋ, ಅಥವಾ ಅನೇಕವೋ?

**ಉತ್ತರ:**– 'ಅನೇಕವಿವೆ.'

**ಪ್ರಶ್ನೆ :** – ಅನೇಕವಿದ್ದರೆ ಪೂರ್ವಜನ್ಮ ಮತ್ತು ಮೃತ್ಯುವಿನ ವಿಷಯಗಳ ಸ್ಮರಣವೇಕೆ ಆಗುವುದಿಲ್ಲ?

**ಉತ್ತರ :**– 'ಜೀವನು ಅಲ್ಪಜ್ಞನು.' 'ತ್ರಿಕಾಲದರ್ಶಿಯಲ್ಲ.' ಆದುದರಿಂದ, 'ಸ್ಮರಣವಿರುವುದಿಲ್ಲ.' ಮತ್ತು ಯಾವ ಮನಸ್ಸಿನಿಂದ ಜ್ಞಾನಗಳಿಸುತ್ತಾನೋ, ಅದೂ ಕೂಡ ಏಕಕಾಲದಲ್ಲಿ ಎರಡು (ವಸ್ತುಗಳ) ಜ್ಞಾನವನ್ನು ಪಡೆದುಕೊಳ್ಳಲಾರದು. ಒಳ್ಳಿತು, ಪೂರ್ವಜನ್ಮದ ವಿಷಯವನ್ನು ದೂರದಲ್ಲಿಡಗೊಡಿರಿ. ಇದೇ ದೇಹದಲ್ಲಿ ಜೀವನು ಗರ್ಭದಲ್ಲಿದ್ದನು. ಶರೀರವು ನಿರ್ಮಿತವಾಗಿ, ಆ ಮೇಲೆ ಜನ್ಮತಾಳಿದನು. ಐದು ವರ್ಷಗಳು ತುಂಬಿದ ಮುನ್ನ ಯಾವ ಯಾವ ಘಟನೆಗಳು ನಡೆದಿವೆಯೋ, ಅವುಗಳ ಸ್ಮರಣವನ್ನು ಏತಕ್ಕೆ ಮಾಡಲಾರನು? ಮತ್ತು ಜಾಗ್ರುತ್ ಅಥವಾ ಸ್ವಪ್ನದಲ್ಲಿ ಬಹು ವ್ಯವಹಾರಗಳನ್ನು ಪ್ರತ್ಯಕ್ಷವಾಗಿ ಮಾಡಿ, ಸುಷುಪ್ತಿ–ಎಂದರೆ ಗಾಢ ನಿದ್ರೆ ಬರುತ್ತದೋ ಆಗ ಜಾಗ್ರುತ್ ಮೊದಲಾದುದರಲ್ಲಿನ ವ್ಯವಹಾರದ ಸ್ಮರಣವನ್ನು ಮಾಡಲಾರನೇತಕ್ಕೆ? ಮತ್ತು ನಿಮ್ಮನ್ನು ಯಾರಾದರೂ – "ಹನ್ನೆರಡು ವರ್ಷಗಳಿಗೆ ಮೊದಲು, (ನಿಮ್ಮ ವಯಸ್ಸಿನ) ಹದಿಮೂರನೆಯ ವರ್ಷದ, ಐದನೆಯ ತಿಂಗಳ, ಒಂಬತ್ತನೆಯ ದಿನದ ಹತ್ತು ಘಂಟೆಯಾದ ಮೇಲೆ, ಒಂದನೆಯ ನಿಮಿಷದಲ್ಲಿ ನಿವೇನು ಮಾಡಿದ್ದಿರಿ? ನಿಮ್ಮ ಮುಖ, ಕೈಗಳು, ಕಿವಿಗಳು, ಕಣ್ಣಗಳು, ಶರೀರ ಯಾವ ಕಡೆಗೆ, ತಿರುಗಿದ್ದವು? ಯಾವ ರೀತಿಯಲ್ಲಿ ಇದ್ದವು ಮತ್ತು ಮನಸ್ಸಿನಲ್ಲಿ ಯಾವ ಯೋಚನೆಯಿತ್ತು?" ಎಂದು ಕೇಳಿದರೆ (ಹೇಳಬಲ್ಲಿರಾ?) ಈ ಶರೀರದಲ್ಲಿಯೇ ಹೀಗಿರುವಾಗ, ಪೂರ್ವಜನ್ಮದ ವಿಷಯಗಳ ಸ್ಮರಣದ ಬಗೆಗೆ ಸಂದೇಹಪಡುವುದು ಕೇವಲ ಹುಡುಗುತನದ ಮಾತೇ ಸರಿ. ಮತ್ತು ಸ್ಮರಣವಾಗುವುದಿಲ್ಲ; ಇದರಿಂದಲೇ ಜೀವನು ಸುಖಿಯಾಗಿದ್ದಾನೆ. ಇಲ್ಲದಿದ್ದರೆ, ಸಮಸ್ತ ಜನ್ಮಗಳ ದುಃಖಗಳನ್ನೂ ನೋಡಿ ನೋಡಿ, ದುಃಖಿತನಾಗಿ ಸತ್ತು ಹೋಗುತ್ತಿದ್ದನು. ಮತ್ತು ಯಾವನೇ ಆಗಲಿ, ಹಿಂದಣ ಮತ್ತು ಮುಂದಣ ಜನ್ಮದ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸಿದರೂ ಕೂಡ, ತಿಳಿದುಕೊಳ್ಳಲಾರನು. (ಇದಕ್ಕೆ ಅಪವಾದಗಳೂ ಅಪರೂಪವಾಗಿ ಕಂಡುಬರುವುದು) ಏಕೆಂದರೆ, ಜೀವನ ಜ್ಞಾನ ಮತ್ತು ಸ್ವರೂಪ ಅಲ್ಪವಾದುದು. "ಈ ವಿಷಯ ಈಶ್ವರನು ತಿಳಿದುಕೊಳ್ಳಲು ಯೋಗ್ಯವಾದುದು; ಸಾಮಾನ್ಯತ; ಜೀವನು ತಿಳಿಯಲರ್ಹವಾದುದಲ್ಲ."

**ಪ್ರಶ್ನೆ:**– ಜೀವನಿಗೆ ಪೂರ್ವ(ಜನ್ಮ)ದ ಜ್ಞಾನವಿಲ್ಲದಾಗ, ಈಶ್ವರನು ಇವನಿಗೆ ಶಿಕ್ಷೆ ವಿಧಿಸಿದರೆ, ಜೀವನ ಸುಧಾರಣೆಯಾಗಲಾರದು. ಏಕೆಂದರೆ, "ನಾವು ಈ ಬಗೆಯ ಕೆಲಸ ಮಾಡಿದ್ದೆವು; ಅದರದೇ ಈ ಫಲ." – ಎಂಬ ಜ್ಞಾನ ಯಾವಾಗ ಜೀವನಿಗಿರುವುದೋ, ಆಗಲೇ ಅವನು ಪಾಪಕರ್ಮಗಳಿಂದ ದೂರ ಉಳಿಯಬಲ್ಲನು.

**ಉತ್ತರ:**– ನೀವು ಎಷ್ಟು ವಿಧದ ಜ್ಞಾನಗಳನ್ನು ಒಪ್ಪಿಕೊಳ್ಳುತ್ತೀರಿ?

**ಪ್ರಶ್ನೆ:**– ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ ಎಂಟು ವಿಧವಾದುದನ್ನು.

**ಉತ್ತರ:**– ನೀವು ಜನನದಿಂದಾರಂಭಿಸಿ, ಕಾಲ–ಕಾಲದಲ್ಲಿ, 'ರಾಜ್ಯ', ಧನ, ಬುದ್ಧಿ, ವಿದ್ಯೆ, ದಾರಿದ್ರ್ಯ, ನಿರ್ಬುದ್ಧಿತ್ವ, ಮೂರ್ಖತ್ವ – ಮೊದಲಾದ (ಪುಣ್ಯ–ಪಾಪಗಳ ಪರಿಣಾಮವಾದ) ಸುಖ–ದುಃಖಗಳನ್ನು ಜಗತ್ತಿನಲ್ಲಿ ನೋಡಿ, ಪೂರ್ವಜನ್ಮದ ಜ್ಞಾನವನ್ನು ಪಡೆದುಕೊಳ್ಳುವುದಿಲ್ಲವೇಕೆ? ಉದಾಹರಣೆಗೆ:– ಒಬ್ಬ ವೈದ್ಯನಲ್ಲದವನಿಗೆ ಮತ್ತು ಒಬ್ಬ ವೈದ್ಯನಿಗೆ ಏನಾದರೂ ವ್ಯಾಧಿಯುಂಟಾದರೆ, ಅದರ ನಿದಾನವನ್ನು, ಎಂದರೆ ಕಾರಣವನ್ನು ವೈದ್ಯನು ತಿಳಿದುಕೊಳ್ಳುತ್ತಾನೆ; ಮತ್ತು ಅವಿದ್ವಾಂಸನು ತಿಳಿದುಕೊಳ್ಳಲಾರನು.

ಮೊದಲನೆಯವನು ವೈದ್ಯಕ ವಿದ್ಯೆಯನ್ನು ಓದಿದ್ದಾನೆ; ಮತ್ತು ಎರಡನೆಯವನು[೨೧] ಓದಿಲ್ಲ. ಆದರೆ, ಜ್ವರ-ಮೊದಲಾದ ರೋಗಗಳು ಬಂದಾಗ, ವೈದ್ಯನಲ್ಲದವನೂ ಕೂಡ, "ಯಾವುದರಿಂದ ನನಗೆ ಈ ವ್ಯಾಧಿ ಬಂದಿದೆಯೋ, ಅಂತಹ ಯಾವುದೋ ಕುಪಥ್ಯ ನನ್ನಿಂದ ಆಗಿದೆ". - ಎಂದು ಇಷ್ಟನ್ನು ತಿಳಿದುಕೊಳ್ಳಬಲ್ಲನು. ಹಾಗೆಯೇ ಜಗತ್ತಿನಲ್ಲಿ ವಿಚಿತ್ರವಾದ ಸುಖ-ದುಃಖ ಮೊದಲಾದುವುಗಳ ಹ್ರಾಸ - ವೃದ್ಧಿಗಳನ್ನು ನೋಡಿ, ಪೂರ್ವಜನ್ಮದ ಅನುಮಾನವನ್ನು (ಊಹೆಯನ್ನು) ಮಾಡಿಕೊಳ್ಳುವುದಿಲ್ಲವೇಕೆ? ಮತ್ತು ಪೂರ್ವಜನ್ಮವನ್ನು ಅಂಗೀಕರಿಸುವುದಿಲ್ಲವಾದರೆ, ಪರಮೇಶ್ವರನು ಪಕ್ಷಪಾತಿಯೆಂದೊಪ್ಪ ಬೇಕಾದೀತು. ಏಕೆಂದರೆ, ಪಾಪವಿಲ್ಲದೆ ದಾರಿದ್ರ್ಯ ಮೊದಲಾದ ದುಃಖಗಳನ್ನೂ, ಮತ್ತು ಪೂರ್ವಸಂಚಿತ ಪುಣ್ಯವಿಲ್ಲದೆ ರಾಜ್ಯ, ಧನಾಢ್ಯತ್ವ ಮತ್ತು ನಿರ್ಬುದ್ಧಿತ್ವವನ್ನೂ ಜೀವರಿಗೆ ಕೊಟ್ಟನೇಕೆ? ಮತ್ತು ಪೂರ್ವಜನ್ಮದ ಪಾಪ-ಪುಣ್ಯಕ್ಕನುಸಾರವಾಗಿ ದುಃಖ-ಸುಖಗಳನ್ನು ಕೊಡುವುದರಿಂದ, ಪರಮೇಶ್ವರನು ಯಥಾವತ್ತಾಗಿ ನ್ಯಾಯಕಾರಿಯೆಂದೇ ಗ್ರಹಿಸಲಾಗುವುದು.

**ಪ್ರಶ್ನೆ:**- ಒಂದು ಜನ್ಮವಿದ್ದರೂ ಕೂಡ ಪರಮೇಶ್ವರನು ನ್ಯಾಯಕಾರಿಯಾಗಬಲ್ಲನು. ಹೇಗೆಂದರೆ-ಸರ್ವೋತ್ತಮನಾದ ರಾಜನು ಏನು ಮಾಡುತ್ತಾನೋ, ಅದು ನ್ಯಾಯ. ಉದಾಹರಣೆಗೆ, ತೋಟಗಾರನು ತನ್ನ ತೋಟದಲ್ಲಿ ಚಿಕ್ಕ ಮತ್ತು ದೊಡ್ಡ ಮರಗಳನ್ನು ಬೆಳೆಯಿಸುತ್ತಾನೆ. ಯಾವ ಯಾವದನ್ನೋ ಕತ್ತರಿಸುತ್ತಾನೆ; ಕಿತ್ತು ಹಾಕುತ್ತಾನೆ. ಮತ್ತು ಯಾವುದನ್ನೋ ರಕ್ಷಿಸುತ್ತಾನೆ; ಬೆಳೆಯಿಸುತ್ತಾನೆ. ಯಾವುದು ಯಾವನ ವಸ್ತುವೋ, ಅದನ್ನು ಅವನು ಹೇಗೆ ಬೇಕಾದರೂ ಇಡಬಲ್ಲನು. ಈಶ್ವರನನ್ನು ದಂಡಿಸಬಲ್ಲ ಬೇರೆ ಒಬ್ಬ ನ್ಯಾಯಕರ್ತೃವು ಯಾವನೂ ಅವನಿಗಿಂತ ಮೇಲೆ ಇಲ್ಲ; ಈಶ್ವರನು ಯಾವನಿಂದಲೂ ಹೆದರುವುದೂ ಇಲ್ಲ.

**ಉತ್ತರ** :- ಪರಮಾತ್ಮನು ನ್ಯಾಯವನ್ನು ಬಯಸುತ್ತಾನೆ, ಮಾಡುತ್ತಾನೆ; ಅನ್ಯಾಯವನ್ನು ಎಂದಿಗೂ ಮಾಡುವುದಿಲ್ಲ. ಇದರಿಂದ ಅವನು ಪೂಜನೀಯನು ಮತ್ತು ದೊಡ್ಡವನು ಆಗಿದ್ದಾನೆ. "ಯಾವನು ನ್ಯಾಯಕ್ಕೆ ವಿರುದ್ಧವಾದುದನ್ನು ಮಾಡುತ್ತಾನೋ, ಅವನು ಈಶ್ವರನೇ ಅಲ್ಲ." ಹೇಗೆ ತೋಟಗಾರನು ಯುಕ್ತಿಯಿಲ್ಲದೆ ಮತ್ತು ಮಾರ್ಗದಲ್ಲಿ ಅಥವಾ ತಪ್ಪು ಸ್ಥಳದಲ್ಲಿ ಮರವನ್ನು ನೆಡುವುದರಿಂದ, ಕತ್ತರಿಸಬಾರದುದನ್ನು ಕತ್ತಿರಿಸುವುದರಿಂದ, ಯೋಗ್ಯವಲ್ಲದುದನ್ನು ಬೆಳೆಯಿಸುವುದರಿಂದ, ಯೋಗ್ಯವಾದುದನ್ನು ಬೆಳೆಯಿಸದಿರುವುದರಿಂದ, ದೂಷಿತನಾಗುತ್ತಾನೋ, ಹಾಗೆಯೇ ಕಾರಣವಿಲ್ಲದೆ ಏನನ್ನಾದರೂ ಮಾಡುವುದರಿಂದ, ಈಶ್ವರನೂ ದೋಷಕ್ಕೆ ಈಡಾಗುತ್ತಾನೆ. ಸ್ವಾಭಾವಕವಾಗಿಯೇ ಪರಮೇಶ್ವರನ ಮೇಲೆ ನ್ಯಾಯಯುಕ್ತವಾದ ಕೆಲಸವನ್ನು ಮಾಡುವ ಅವಶ್ಯಕತೆಯು ಇದೆ. ಏಕೆಂದರೆ, ಅವನು ಸ್ವಭಾವದಿಂದ ಪವಿತ್ರನೂ ಮತ್ತು ನ್ಯಾಯಕಾರಿಯೂ ಆಗಿದ್ದಾನೆ. ಉನ್ಮತ್ತನಿಗೆ ಸಮನಾಗಿ ಕೆಲಸ ಮಾಡುವನಾದರೆ, ಜಗತ್ತಿನ ಶ್ರೇಷ್ಠ ನ್ಯಾಯಾಧೀಶನಿಗಿಂತಲೂ ತುಚ್ಛನೂ, ಮತ್ತು ಅಪ್ರತಿಷ್ಠಿತನೂ ಆಗಿ ಹೋದಾನು! ಈ ಜಗತ್ತಿನಲ್ಲಿ ಯೋಗ್ಯತೆಯಿಲ್ಲದೆ, ಉತ್ತಮ ಕರ್ಮ ಮಾಡದೆ (ಯಾವನಿಗಾದರೂ) ಗೌರವವನ್ನೂ ಮತ್ತು ದುಷ್ಟಕರ್ಮ ಮಾಡದೆ ಶಿಕ್ಷೆಯನ್ನೂ ಕೊಡುವವನು ನಿಂದನೀಯನೂ, ಅಪ್ರತಿಷ್ಠಿತನೂ ಆಗುವುದಿಲ್ಲವೆ? ಆದುದರಿಂದ, ಈಶ್ವರನು ಅನ್ಯಾಯವನ್ನು ಮಾಡುವುದಿಲ್ಲ. ಇದೇ ಕಾರಣದಿಂದ, ಯಾವನಿಂದಲೂ ಹೆದರುವುದಿಲ್ಲ.

**ಪ್ರಶ್ನೆ** :- ಪರಮಾತ್ಮನು ಮೊದಲೇ ಯಾವನಿಗೆ ಎಷ್ಟು ಕೊಡಬೇಕೆಂದು ಆಲೋಚಿಸಿದ್ದಾನೋ, ಅಷ್ಟನ್ನು ಕೊಡುತ್ತಾನೆ ಮತ್ತು ಎಷ್ಟು ಕೆಲಸ ಮಾಡಬೇಕಾಗಿದೆಯೋ, ಅಷ್ಟನ್ನು ಮಾಡುತ್ತಾನೆ.

**ಉತ್ತರ** :- ಅವನ ಆಲೋಚನೆ ಜೀವರ ಕರ್ಮಗಳಿಗೆ ಅನುಸಾರವಾಗಿರುತ್ತದೆ; ಬೇರೆಯ ರೀತಿಯಲ್ಲಿ ಅಲ್ಲ . ಬೇರೆ ರೀತಿಯಲ್ಲಿರುವುದಾದರೆ, ಅವನೇ ಅಪರಾಧಿಯೂ, ಅನ್ಯಾಯಕಾರಿಯೂ ಆಗಿ (ಹೋಗುವನು! ಜೀವನು ಸತ್ಕರ್ಮ ಮಾಡಿದಾಗ ದುಷ್ಫಲವನ್ನೂ, ದುಷ್ಕರ್ಮಮಾಡಿದಾಗ ಸತ್ಫಲವನ್ನೂ ಕೊಡುವ ಆಲೋಚನೆಯನ್ನು ಈಶ್ವರನು ಮಾಡುವುದಿಲ್ಲ.)

**ಪ್ರಶ್ನೆ** :- ದೊಡ್ಡವರಿಗೂ, ಚಿಕ್ಕವರಿಗೂ ಒಂದೇ ಬಗೆಯ ಸುಖ-ದುಃಖಗಳಿವೆ. ದೊಡ್ಡವರಿಗೆ ದೊಡ್ಡ ಚಿಂತೆ; ಚಿಕ್ಕವರಿಗೆ ಚಿಕ್ಕದು. ದೃಷ್ಟಾಂತಕ್ಕಾಗಿ, ಯಾವನೋ ಒಬ್ಬ ಧನಿಕನ ವಿವಾದ, ಲಕ್ಷ ರೂಪಾಯಿಗಳದು ರಾಜನ್ಯಾಯಗೃಹದಲ್ಲಿದೆ. ಅವನು ತನ್ನ ಮನೆಯಿಂದ ಪಲ್ಲಕ್ಕಿಯಲ್ಲಿ ಕುಳಿತು, ನ್ಯಾಯಾಲಯಕ್ಕೆ ಉಷ್ಣ ಕಾಲದಲ್ಲಿ ಹೋಗುತ್ತಿದ್ದಾನೆ. ಪೇಟೆಯಲ್ಲಿ ಅವನು ಹೋಗುತ್ತಿರುವುದನ್ನು ನೋಡಿ ಅಜ್ಞಾನೀ ಜನರು ನೋಡಿರಿ, ಪುಣ್ಯ-ಪಾಪಗಳ ಫಲವನ್ನು! ಒಬ್ಬನು ಪಲ್ಲಕ್ಕಿಯಲ್ಲಿ ಆನಂದಪೂರ್ವಕವಾಗಿ ಕುಳಿತಿದ್ದಾನೆ. ಮತ್ತು ಬೇರೆಯವರು ಪಾದರಕ್ಷೆಗಳನ್ನೂ ಧರಿಸಿದೆ, ಮೇಲಿನಿಂದಲೂ-ಕೆಳಗಿನಿಂದಲೂ ಬೆಂದು ಹೋಗುತ್ತಾ, ಪಲ್ಲಕ್ಕಿಯನ್ನೆತ್ತಿಕೊಂಡು ಹೋಗುತ್ತಾರೆ" - ಎಂದುಕೊಳ್ಳುತ್ತಾರೆ. ಆದರೆ, ಬುದ್ಧಿವಂತರಾದ ಜನರು ಈ

೨೧. ಎಂದರೆ, ಅವೈದ್ಯರು-ಯು.ಮೀ.

ವಿಷಯದಲ್ಲಿ–ಹೇಗೆ ಹೇಗೆ ನ್ಯಾಯಾಲಯ ಹತ್ತಿರ ಹತ್ತಿರವಾಗುತ್ತಾ ಹೋಗುತ್ತದೋ, ಹಾಗೆ ಹಾಗೆ ಧನಿಕನಿಗೆ ಮಹಾಶೋಕವೂ ಮತ್ತು ಸಂದೇಹವೂ ವರ್ಧಿಸುತ್ತಾ ಹೋಗುತ್ತದೆ ಮತ್ತು ಬೋಯಿಗಳಿಗೆ ಸಂತೋಷವಾಗುತ್ತಾ ಹೋಗುತ್ತದೆ".-ಎಂದು ತಿಳಿದುಕೊಳ್ಳುತ್ತಾರೆ. ನ್ಯಾಯಾಲಯವನ್ನು ಸೇರಿದ ಮೇಲೆ, ಧನಿಕನು 'ನ್ಯಾಯವಾದಿಯ ಬಳಿ ಹೋಗಲೋ? ಅಥವಾ ನ್ಯಾಯಲಯದ ವ್ಯವಸ್ಥಾಪಕನ ಬಳಿ ಹೋಗಲೋ? ಇಂದು ಸೋಲುವೆನೋ ಅಥವಾ ಗೆಲ್ಲುವೆನೋ? ಏನಾಗುವುದೋ ತಿಳಿಯದು'. – ಎಂದುಕೊಂಡು ಅತ್ತ–ಇತ್ತ ತಿರುಗಾಡುವ ಆಲೋಚನೆ ಮಾಡುತ್ತಾನೆ. ಮತ್ತು ಬೋಯಿಗಳು ಹೊಗೆಸೊಪ್ಪನ್ನು ಸೇದುತ್ತಾ ಅಥವಾ ಮೆಲಕುತ್ತಾ, ಪರಸ್ಪರ ಸಂಭಾಷಣೆ ಮಾಡುತ್ತಾ, ಪ್ರಸನ್ನರಾಗಿ ತೃಪ್ತಿಯಿಂದ ನಿದ್ರಿಸಿಬಿಡುತ್ತಾರೆ. ಧನಿಕನು ಗೆದ್ದಪಕ್ಷದಲ್ಲಿ ಸ್ವಲ್ಪ ಸುಖ ಹೊಂದುತ್ತಾನೆ; ಸೋತು ಹೋದರೆ ದುಃಖಸಾಗರದಲ್ಲಿ ಮುಳುಗಿ ಹೋಗುತ್ತಾನೆ. ಮತ್ತು ಆ ಬೋಯಿಗಳು ಹೇಗಿದ್ದರೋ, ಹಾಗೆಯೇ ಇರುತ್ತಾರೆ. ಹೀಗೆಯೇ ರಾಜನು ಸುಂದರವೂ, ಕೋಮಲವೂ ಆದ ಹಾಸಿಗೆಯಲ್ಲಿ ಮಲಗುತ್ತಾನಾದರೂ ಬೇಗ ನಿದ್ರೆ ಬರುವುದಿಲ್ಲ. ಮತ್ತು ಕೂಲಿಗಾರನು ನೋರಜು–ಬೆಣಚು ಕಲ್ಲುಗಳ ಮತ್ತು ಮಣ್ಣಿನ ಎತ್ತರ–ತಗ್ಗುಗಳನ್ನುಳ್ಳ ನೆಲದ ಮೇಲೆ ಮಲಗುತ್ತಾನೆ. ಅವನಿಗೆ ಬೇಗಲೇ ನಿದ್ರೆ ಬಂದುಬಿಡುತ್ತದೆ. ಸರ್ವತ್ರ ಹೀಗೆಯೇ ಎಂದು ತಿಳಿಯಿರಿ.

**ಉತ್ತರ:–** ಈ ಅರಿವು ಅಜ್ಞಾನಿಗಳದು. ಯಾವನಾದರೂ ಧನಿಕನಿಗೆ 'ನೀನು ಬೋಯಿಯಾಗು' ಎಂದೂ, ಮತ್ತು ಬೋಯಿಗೆ–'ನೀನು ಧನಿಕವಾಗಿ ಹೋಗು'.-ಎಂದೂ ಹೇಳಿದರೆ, ಧನಿಕನು ಎಂದಿಗೂ ಬೋಯಿಯಾಗಲು ಬಯಸುವುದಿಲ್ಲ ಮತ್ತು ಬೋಯಿಗಳು ಧನಿಕರಾಗಲು ಬಯಸುತ್ತಾರೆ. ಸುಖ–ದುಃಖಗಳು ಸಮ–ಸಮವೇ ಆಗಿದ್ದರೆ, ತಮ್ಮ ತಮ್ಮ ಸ್ಥಿತಿಯನ್ನು ಬಿಟ್ಟು, ನೀಚರೂ, ಉಚ್ಚರೂ ಆಗಲು ಇಬ್ಬರೂ ಬಯುಸುತ್ತಿರಲಿಲ್ಲ. ನೋಡಿರಿ, ಒಬ್ಬ ಜೀವನು ವಿದ್ವಾಂಸನೂ, ಪುಣ್ಯಾತ್ಮನೂ, ಶ್ರೀಮಂತನೂ ಆದ ರಾಜನ ರಾಣಿಯ ಗರ್ಭದಲ್ಲಿ ಜನ್ಮವೆತ್ತಿ ಬರುತ್ತಾನೆ ಮತ್ತು ಇನ್ನೊಬ್ಬನು ಮಹಾದರಿದ್ರಳಾದ ಹುಲ್ಲುಕೆತ್ತುವವಳ ಗರ್ಭದಲ್ಲಿ ಜನಿಸುತ್ತಾನೆ. ಒಬ್ಬನಿಗೆ ಗರ್ಭದಿಂದಲೇ ಆರಂಭಿಸಿ ಸುಖವೂ ಮತ್ತು ಇನ್ನೊಬ್ಬನಿಗೆ ಎಲ್ಲ ಬಗೆಯ ದುಃಖವೂ ಸಿಕ್ಕುತ್ತದೆ. ಒಬ್ಬನು ಯಾವಾಗ ಜನ್ಮತಾಳುತ್ತಾನೋ, ಆಗ ಸುಂದರವೂ, ಸುಂಗಂಧಯುಕ್ತವೂ ಆದ ನೀರು–ಮೊದಲಾದುದರಿಂದ ಸ್ನಾನ, ಉಪಾಯವಾಗಿ ನಾಡಿ–ಛೇದನ, ಹಾಲಿನ ಪಾನ ಮೊದಲಾದುವು ಯೋಗ್ಯಕ್ರಮದಲ್ಲಿ ಲಭಿಸುತ್ತವೆ. ಅವನು ಹಾಲನ್ನು ಕುಡಿಯಲಿಚ್ಛಿಸಿದರೆ, ಅದರೊಂದಿಗೆ ಕಲ್ಲುಸಕ್ಕರೆ ಮೊದಲಾದುವನ್ನು ಸೇರಿಸಿ, ಯಥೇಷ್ಟವಾಗಿ ಕೊಡಲ್ಪಡುತ್ತದೆ. ಅವನನ್ನು ಪ್ರಸನ್ನನಾಗಿಡುವುದಕ್ಕಾಗಿ ಸೇವಕರೂ–ಉಪಚಾರಕರೂ, ಸನ್ನದ್ಧರಾಗಿರುತ್ತಾರೆ; ಆಟಿಕೆಗಳೂ, ವಾಹನಗಳೂ ಇರುತ್ತವೆ. ಉತ್ತಮವಾದ ಸ್ಥಳಗಳಲ್ಲಿ ಮುದ್ದುಮಾಡುವುದರಿಂದ ಹರ್ಷವೂ ಲಭಿಸುತ್ತದೆ. ಇನ್ನೊಬ್ಬನ ಜನನ ವನದಲ್ಲಿ ಆಗುತ್ತದೆ. ಸ್ನಾನಕ್ಕೆ ನೀರೂ ಕೂಡ ಸಿಕ್ಕುವುದಿಲ್ಲ. ಯಾವಾಗ ಹಾಲನ್ನು ಕುಡಿಯಲಿಚ್ಛಿಸುತ್ತಾನೋ, ಆಗ ಹಾಲಿಗೆ ಪ್ರತಿಯಾಗಿ ಗುದ್ದು, ಪೆಟ್ಟು ಮೊದಲಾದುದರಿಂದ ಪ್ರಹಾರವಾಗುತ್ತದೆ. ಅತ್ಯಂತ ಆರ್ತಸ್ವರದಿಂದ ರೋದಿಸುತ್ತಾನೆ. ಯಾವನೂ ಕೇಳುವುದಿಲ್ಲ. ಈ ಮೊದಲಾದ ರೀತಿಯಲ್ಲಿ, ಜೀವರಿಗೆ ಪುಣ್ಯ–ಪಾಪಗಳೇ ಇಲ್ಲದೆ ಸುಖ–ದುಃಖಗಳು ಆಗುವುದಾದರೆ, ಪರಮೇಶ್ವರನ ಮೇಲೆ ದೋಷವನ್ನು ಆರೋಪಿಸಬೇಕಾಗುತ್ತದೆ. ಎರಡನೆಯದಾಗಿ, ಕರ್ಮಗಳನ್ನು ಮಾಡದೆಯೇ ಸುಖ–ದುಃಖಗಳು ಸಿಕ್ಕುತ್ತವೆಯಾದರೆ, ಮುಂದೆ ನರಕ–ಸ್ವರ್ಗಗಳೂ (ದುಃಖ ಸುಖದ ಸ್ಥಿತಿಗಳೂ) ಕೂಡ ಇರಬಾರದು. ಏಕೆಂದರೆ, ಹೇಗೆ ಪರಮೇಶ್ವರನು ಈ ಕಾಲದಲ್ಲಿ ಕರ್ಮಗಳಿಲ್ಲದೆಯೇ ಸುಖ–ದುಃಖಗಳನ್ನು ಕೊಟ್ಟಿದ್ದಾನೋ, ಹಾಗೆ ಮರಣಾ ನಂತರವೂ, ಯಾವನನ್ನು ಇಚ್ಛಿಸುವನೋ, ಅವನನ್ನು ಸ್ವರ್ಗಕ್ಕೆ ಮತ್ತು ಯಾವನನ್ನು ಇಚ್ಛಿಸುವನೋ, ಅವನನ್ನು ನರಕಕ್ಕೆ ಕಳುಹಿಸಿಬಿಡುವನು. ಮತ್ತೆ ಸರ್ವಜೀವರೂ ಅಧರ್ಮಯುಕ್ತರಾಗಿ ಹೋಗುವರು. ಧರ್ಮವನ್ನು ಆಚರಿಸಬೇಕೇತಕ್ಕೆ? ಏಕೆಂದರೆ, ಧರ್ಮದ ಫಲ ಸಿಕ್ಕುವುದರಲ್ಲಿ ಸಂದೇಹವಿದೆ. ಪರಮೇಶ್ವರನ ಕೈಯಲ್ಲಿದೆ. ಹೇಗೆ (ತನಗೆ) ಪ್ರಸನ್ನತೆ ಲಭಿಸುವುದೋ, ಹಾಗೆ ಮಾಡುವನು. ಹೀಗಾದರೆ, ಪಾಪಕರ್ಮಗಳ ಬಗೆಗೆ ಭಯವೇ ಇಲ್ಲದೆ, ಜಗತ್ತಿನಲ್ಲಿ ಪಾಪದ ವೃದ್ಧಿ ಮತ್ತು ಧರ್ಮದ ಕ್ಷಯ ಉಂಟಾಗುವುದು. ಆದುದರಿಂದ, ಪೂರ್ವಜನ್ಮದ ಪುಣ್ಯ–ಪಾಪಗಳಿಗೆ ಅನುಸಾರವಾಗಿ, ವರ್ತಮಾನ[೨೨] ಜನ್ಮ ಮತ್ತು ವರ್ತಮಾನ ಹಾಗೂ ಪೂರ್ವಜನ್ಮದ ಕರ್ಮಾನುಸಾರ ಭವಿಷ್ಯಜ್ಜನ್ಮಗಳು ಆಗುತ್ತವೆ–(ಎನ್ನುವುದೇ ಸತ್ಯ ಸಿದ್ಧಾಂತ)

---

೨೨. ಸತೀಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ" [ಯೋಗದರ್ಶನ ೨/೧೩] – ಎಂದರೆ, ಪೂರ್ವಜನ್ಮದ ಶುಭಾಶುಭಕರ್ಮಗಳು ಪರಿಣಾಮಹೊಂದಿ, ಮುಂದಿನ ಜನ್ಮದಲ್ಲಿ ಜಾತಿ ವಿಶೇಷ [ಎಂದರೆ, ಮನುಷ್ಯ, ಪ್ರಾಣಿ, ವನಸ್ಪತಿ ಇತ್ಯಾದಿಗಳಲ್ಲಿ ಜನ್ಮವಿಶೇಷ] ಜನ್ಮದ ಪರಿಸ್ಥಿತಿ, ಜಾತಿಯ ಸಾಮಾನ್ಯ ಆಯಸ್ಸಿನ ಅವಧಿ ಮತ್ತು ಅದರ ಸಾಮಾನ್ಯ ಭೋಗ– ಇವುಗಳ ರೂಪದಲ್ಲಿ ಪರಿಣಮಿಸುತ್ತವೆ. –ಸಂ.

**ಪ್ರಶ್ನೆ :–** ಮಾನವನ ಮತ್ತು ಅನ್ಯ ಪಶುಗಳ ಶರೀರದಲ್ಲಿ ಜೀವನು ಒಂದೇ ವಿಧದವನಾಗಿರುತ್ತಾನೋ ಅಥವಾ ಬೇರೆ ಬೇರೆ ಜಾತಿಯವನೋ?

**ಉತ್ತರ:–** ಜೀವರು ಒಂದೇ ವಿಧದವರು. ಆದರೆ–ಪಾಪ–ಪುಣ್ಯಗಳ ಯೋಗದಿಂದ ಮಲಿನರು ಮತ್ತು ಪವಿತ್ರರು ಆಗುತ್ತಾರೆ.

**ಪ್ರಶ್ನೆ:–** ಮನುಷ್ಯನ ಜೀವ ಪಶು–ಮೊದಲಾದುವುಗಳಲ್ಲಿ ಮತ್ತು ಪಶು–ಮೊದಲಾದುವುಗಳ ಜೀವ ಮನುಷ್ಯನ ಶರೀರದಲ್ಲಿ, ಮತ್ತು ನಾರಿಯ ಜೀವ ಪುರುಷನ ಹಾಗೂ ಪುರುಷನ ಜೀವ ನಾರಿಯ ಶರೀರದಲ್ಲಿ ಬರುತ್ತಾನೋ– ಹೋಗುತ್ತಾನೋ ಅಥವಾ ಇಲ್ಲವೋ?

**ಉತ್ತರ:–** 'ಅಹುದು'; 'ಬರುತ್ತಾನೆ–ಹೋಗುತ್ತಾನೆ.' ಏಕೆಂದರೆ, ಯಾವಾಗ ಪಾಪ ಹೆಚ್ಚಾಗುವುದೋ, ಪುಣ್ಯ ಕಡಿಮೆ ಯಾಗುವುದೋ, ಆಗ ಮಾನವನ ಜೀವನಿಗೆ, ಪಶುಗಳೇ ಮೊದಲಾದುವುಗಳ ನೀಚ ಶರೀರವೂ, ಮತ್ತು ಯಾವಾಗ ಧರ್ಮವು ಅಧಿಕವೂ ಮತ್ತು ಅಧರ್ಮವೂ ಕಡಿಮೆಯೂ ಆಗುವುದೋ, ಆಗ ದೇವ ಜನರ, ಎಂದರೆ ವಿದ್ವಾಂಸರ ಶರೀರವೂ ಸಿಕ್ಕುತ್ತದೆ. ಮತ್ತು ಯಾವಾಗ ಪುಣ್ಯ–ಪಾಪಗಳು ಸಮವಾಗಿರುತ್ತವೋ, ಆಗ 'ಸಾಧಾರಣ ಮಾನವಜನ್ಮ ಸಿಕ್ಕುತ್ತದೆ.' ಇದರಲ್ಲಿಯೂ ಪುಣ್ಯ–ಪಾಗಳ ಉತ್ತಮ, ಮಧ್ಯಮ, ನಿಕೃಷ್ಟ ಶ್ರೇಣಿಗಳಿಗೆ ಅನುಸಾರವಾಗಿ ಮಾನವರೇ ಮೊದಲಾದ ಜನ್ಮಗಳಲ್ಲಿಯೂ ಉತ್ತಮ, ಮಧ್ಯಮ, ನಿಕೃಷ್ಟ ಶರೀರಗಳೇ ಮೊದಲಾದ ಸಾಧನಗಳನ್ನುಳ್ಳವರಾಗುತ್ತಾರೆ. ಮತ್ತು ಯಾವಾಗ ಜೀವನು, ಅಧಿಕ ಪಾಪದ ಫಲವನ್ನು ಪಶುಗಳೇ ಮೊದಲಾದ ದೇಹಗಳಲ್ಲಿ ಅನುಭವಿಸಿ ಮುಗಿಸಿರುತ್ತಾನೋ, ಆಗ ಮತ್ತೆ ಪಾಪ–ಪುಣ್ಯಗಳು ಸಮನಾಗಿರುವುದರಿಂದ 'ಮಾನವ ಶರೀರ'ದಲ್ಲಿ ಬರುತ್ತಾನೆ ಮತ್ತು ಪುಣ್ಯದ ಫಲಗಳನ್ನು ಅನುಭವಿಸಿ, 'ಮರಳಿ ಮಧ್ಯಸ್ಥವಾದ ಮಾನವ ಶರೀರ'ದಲ್ಲಿ ಜನಿಸುತ್ತಾನೆ.

ಜೀವನು, ಶರೀರದಿಂದ ಹೊರಟು ಹೋಗುವುದಕ್ಕೆ 'ಸಾವು' ಎಂದೂ, ಮತ್ತು ಶರೀರದೊಂದಿಗೆ ಸಂಯೋಗ ಹೊಂದುವುದಕ್ಕೆ 'ಜನ್ಮ' ಎಂದೂ ಹೆಸರು. ಯಾವಾಗ ಶರೀರವನ್ನು ಬಿಡುತ್ತಾನೋ, ಆಗ 'ಯಮಾಲಯ'ದಲ್ಲಿ, ಎಂದರೆ ಆಕಾಶದಲ್ಲಿರುವ ವಾಯುವಿನಲ್ಲಿ ಇರುತ್ತಾನೆ. ಏಕೆಂದರೆ, ವೇದದಲ್ಲಿ **'ಯಮೇನ ವಾಯುನಾ'**[೨೩] – ಎಂದರೆ ಯಮ ಎಂಬುದು ವಾಯುವಿನ ಹೆಸರು–ಎಂದು ಬರೆದಿದೆ; 'ಗರುಡಪುರಾಣದ ಕಲ್ಪಿತ' ಯಮನಲ್ಲ. ಇದರ ವಿಶೇಷ ಖಂಡನ–ಮಂಡನಗಳನ್ನು ಹನ್ನೊಂದನೆಯ ಸಮುಲ್ಲಾಸದಲ್ಲಿ ಬರೆಯುವೆವು. ಆ ಮೇಲೆ 'ಧರ್ಮರಾಜನು', ಎಂದರೆ ಪರಮೇಶ್ವರನು ಆ ಜೀವನ ಪಾಪ–ಪುಣ್ಯಾನುಸಾರ ಜನ್ಮ ಕೊಡುತ್ತಾನೆ. ಅವನು ವಾಯು, ಅನ್ನ, ಜಲ ಅಥವಾ ಶರೀರದ, ಛಿದ್ರದ ಮೂಲಕ ಬೇರೆ ಯವನ ಶರೀರದಲ್ಲಿ 'ಈಶ್ವರನ ಪ್ರೇರಣೆಯಿಂದ' ಪ್ರವಿಷ್ಟನಾಗುತ್ತಾನೆ. ಪ್ರವಿಷ್ಟನಾದವನು ಕ್ರಮಶಃ ವೀರ್ಯದಲ್ಲಿ ಸೇರಿ, ಗರ್ಭದಲ್ಲಿ ಸ್ಥಿತನಾಗಿ, ಶರೀರಧಾರಣ ಮಾಡಿ ಹೊರಬರುತ್ತಾನೆ.[೨೪] ಸ್ತ್ರೀ–ಶರೀರ ಧಾರಣಮಾಡಲು ಯೋಗ್ಯವಾದ ಕರ್ಮಗಳಿದ್ದರೆ ಸ್ತ್ರೀಯ ಮತ್ತು ಪುರುಷನ ಶರೀರಧಾರಣಮಾಡಲು ಯೋಗ್ಯವಾದ ಕರ್ಮಗಳಿದ್ದರೆ ಪುರುಷನ ಶರೀರದಲ್ಲಿ ಪ್ರವೇಶ ಮಾಡುತ್ತಾನೆ. ಮತ್ತು ಗರ್ಭಸ್ಥಿತಿಯ ಸಮಯದಲ್ಲಿ ಸ್ತ್ರೀ–ಪುರುಷರ ಶರೀರದ ಸಂಬಂಧದಲ್ಲಿ ರಜೋ–ವೀರ್ಯಗಳು ಸಮವಾಗಿರುವುದರಿಂದ ನಪುಂಸಕನಾಗುತ್ತಾನೆ. (ಅದೂ ಪೂರ್ವಕೃತ ಕರ್ಮಾನುಸಾರವೇ.) ಹೀಗೆಯೇ ನಾನಾಪ್ರಕಾರದ ಜನನ–ಮರಣದಲ್ಲಿ ಜೀವನು

---

೨೩. ಋಗ್ವೇದ [೧೦.೧೪.೮]; ಮತ್ತು ಅಥರ್ವವೇದ [೨೦.೧೪೧.೨]. 'ಸಂಸ್ಕಾರವಿಧಿ'ಯ ಅಂತ್ಯೇಷ್ಟಿ ಪ್ರಕರಣದಲ್ಲಿ ಈ ವಾಕ್ಯದ ಸ್ಪಷ್ಟೀಕರಣವಿದೆ. ಹನ್ನೊಂದನೆಯ ಸಮುಲ್ಲಾಸದಲ್ಲೂ ಈ ವಿಷಯ ಬರಲಿದೆ. –ಸಂ.

೨೪. ಇದು ವೈದಿಕ ಸಿದ್ಧಾಂತ. ಇದರ ಸ್ಪಷ್ಟೀಕರಣ ಬೃಹದಾರಣ್ಯಕೋಪನಷತ್ತಿನಲ್ಲಿ ತೃಣಜಲಾಯುಕಾ ಎಂಬ ಒಂದು ಕೀಟದ ಗತಿಯ ವೃತ್ತಾಂತದಿಂದ ಕೊಡಲಾಗಿದೆ.

"ತಥ್ಯಥಾ ತೃಣಜಲಾಯುಕಾ ತ್ರಣಸ್ಯಾಂತಂ ಗತ್ವಾ ನ್ಯಮಾಕ್ರಮಮಾಕ್ರಮ್ಯಾತ್ಮಾನ ಮುಪಸಂಹರತ್ಯೇವ ಮೇವಾಯಮಾತ್ಮೇದ ಶರೀರ ನಹತ್ಯವಿದ್ಯಾಂ ಗಮಯಿತ್ವಾನ್ಯಮಾಕ್ರಮಮಾಕ್ರಮ್ಯಾತ್ಮಾನಮುಪಸಂಹರತಿ – ಎಂದರೆ, ಹೇಗೆ ಈ ಕೀಟವು ಚಲಿಸುವಾಗ, ಹುಲ್ಲಿನ ಕೊನೆಯನ್ನು ಸೇರಿ, ಬೇರೆ ಹುಲ್ಲಿನ ತುದಿಯ ಮೇಲೆ ತನ್ನ ಮುಂದೆರಡು ಕಾಲುಗಳನ್ನಿಟ್ಟು, ಅದನ್ನು ಹಿಡಿದುಕೊಂಡು, ಮತ್ತೆ ತನ್ನ ಹಿಂದಿನೆರಡು ಕಾಲುಗಳನ್ನು ಮೇಲೆಕ್ಕೆತ್ತಿ ಮುಂದಿನ ಹುಲ್ಲಿನ ಮೇಲಿಡುತ್ತದೋ. ಹಾಗಯೇ ಜೀವಾತ್ನನು ಮರಣ ಸಮಯದಲ್ಲಿ ಮುಂದಿನ ಶರೀರದ ಅವಲಂಬನೆಯನ್ನು ಪಡೆದೇ ವರ್ತಮಾನ ಶರೀರದ ತ್ಯಾಗಮಾಡುತ್ತಾನೆ.

ಇದರ ಅಭಿಪ್ರಾಯವೇನೆಂದರೆ, ಮರಣವಾದ ತತ್ಕಾಲ, ಜೀವಾತ್ಮನು ಸಂಭೋಗರತ ಸ್ತ್ರೀ–ಪುರುಷರ ರಜೋ–ವೀರ್ಯಗಳು ಸಂಯುಕ್ತವಾದಾಗ, ವೀರ್ಯದ ಮೂಲಕ ಅಂಡದಲ್ಲಿ ಪರಮಾತ್ಮನ ನಿರ್ದೇಶನದಂತೆ ಪ್ರವೇಶಿಸಿ, ಗರ್ಭಸ್ಥಾಪನೆಗೆ ಕಾರಣನಾಗುತ್ತಾನೆ. ಎಂದರೆ, ಮೃತ್ಯು ಮತ್ತು ಪುನರ್ಜನ್ಮಗಳ ನಡುವಣ ಅವಧಿ ನಗಣ್ಯ ಎಂದರ್ಥ.

ಉತ್ತಮ ಕರ್ಮೋಪಾಸನಾ ಜ್ಞಾನಗಳನ್ನು ಸಾಧಿಸಿಕೊಂಡು ಮುಕ್ತಿ ಹೊಂದುವವರೆಗೂ ಬಿದ್ದಿರುತ್ತಾನೆ. "ಏತಕ್ಕೆಂದರೆ, ಉತ್ತಮವಾದ ಕರ್ಮಗಳು ಮೊದಲಾದುವನ್ನು ಮಾಡುವುದರಿಂದ ಮಾನವರಲ್ಲಿ ಉತ್ತಮ ಜನ್ಮವನ್ನು ಹೊಂದುತ್ತಾನೆ ಮತ್ತು ಮುಕ್ತಿಯಲ್ಲಿ ಮಹಾಕಲ್ಪಪರ್ಯಂತ ಜನನ - ಮರಣದ ದುಃಖದಿಂದ ರಹಿತನಾಗಿ ಆನಂದದಲ್ಲಿರುತ್ತಾನೆ."

**ಪ್ರಶ್ನೆ:**- ಮುಕ್ತಿ ಒಂದು ಜನ್ಮದಲ್ಲಾಗುತ್ತದೋ, ಅಥವಾ ಅನೇಕ ಜನ್ಮಗಳಲ್ಲಿಯೋ?

**ಉತ್ತರ:**- ಅನೇಕ ಜನ್ಮಗಳಲ್ಲಿ. ಏಕೆಂದರೆ:

**ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।**

**ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್ ದೃಷ್ಟೇ ಪರಾಽವರೇ ॥** (ಮುಂಡಕ :- ೨.೨.೮)

ಯಾವಾಗ ಜೀವನ ಹೃದಯದ ಅವಿದ್ಯಾ- ಅಜ್ಞಾನವೆಂಬ ಗಂಟು ಬಿರಿದುಹೊಗುತ್ತದೋ, ಸಮಸ್ತ ಸಂಶಯಗಳೂ ಛಿನ್ನವಾಗುತ್ತವೋ ಮತ್ತು ದುಷ್ಟ ಕರ್ಮಗಳು ಕ್ಷಯವನ್ನು ಹೊಂದುತ್ತವೋ, ಆಗಲೇ, ಯಾವನು ತನ್ನ ಆತ್ಮನ ಒಳಗೂ ಮತ್ತು ಹೊರಗೂ ವ್ಯಾಪಿಸಿದ್ದಾನೋ, ಆ ಪರಮಾತ್ಮನಲ್ಲಿ ನಿವಾಸಮಾಡುತ್ತಾನೆ.

**ಪ್ರಶ್ನೆ :**- ಮುಕ್ತಿಯಲ್ಲಿ ಜೀವನು ಪರಮೇಶ್ವರನಲ್ಲಿ ಸೇರಿಹೋಗುತ್ತಾನೋ, ಅಥವಾ ಬೇರೆಯಿರುತ್ತಾನೋ?

**ಉತ್ತರ:**- "ಬೇರೆಯಿರುತ್ತಾನೆ. ಏಕೆಂದರೆ, ಸೇರಿಹೋಗುವನಾದರೆ, ಮುಕ್ತಿಯ ಸುಖನ್ನು ಯಾವನು ಅನುಭವಿಸಬೇಕು?" ಮತ್ತು ಮುಕ್ತಿಯ ಎಷ್ಟು ಸಾಧನಗಳಿವೆಯೋ, ಅವೆಲ್ಲವೂ ನಿಷ್ಫಲವಾಗಿ ಹೋಗುವವಲ್ಲವೇ? ಅದು ಮುಕ್ತಿಯಂತೂ ಅಲ್ಲ; ಆದರೆ ಜೀವನ ಪ್ರಳಯವೆಂದು ತಿಳಿದುಕೊಳ್ಳಬೇಕು. ಯಾವ ಜೀವನು ಪರಮೇಶ್ವರನ ಆಜ್ಞಾಪಾಲನೆ, ಉತ್ತಮ ಕರ್ಮ, ಸತ್ಸಂಗ, ಯೋಗಾಭ್ಯಾಸ, ಪೂರ್ವವರ್ಣಿತ ಸಕಲ ಸಾಧನೆಗಳನ್ನೂ ಮಾಡುತ್ತಾನೋ, ಅವನೇ 'ಮುಕ್ತಿ'ಯನ್ನು ಪಡೆದುಕೊಳ್ಳುತ್ತಾನೆ.

**ಸತ್ಯಂ ಜ್ಞಾನಮಂನಂತಂ ಬ್ರಹ್ಮ ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।**

**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತೇತಿ ॥** (ತೈತ್ತಿರೀಯ, ಆನಂದವಲ್ಲೀ ೧.೧)

ಯಾವ ಜೀವಾತ್ಮನು ತನ್ನ ಬುದ್ಧಿಯಲ್ಲಿ ಮತ್ತು ಆತ್ಮನಲ್ಲಿ ಸ್ಥಿತನಾಗಿರುವ ಸತ್ಯ-ಜ್ಞಾನ-ಅನಂತಾನಂದಸ್ವರೂಪನಾದ ಪರಮಾತ್ಮನನ್ನು ತಿಳಿದುಕೊಳ್ಳುತ್ತಾನೋ, ಅವನು ಆ ವ್ಯಾಪಕರೂಪವಾದ ಬ್ರಹ್ಮದಲ್ಲಿ ಸ್ಥಿತನಾಗಿ ಆ 'ವಿಪಶ್ಚಿತ್' - ಎಂದರೆ ಅನಂತ ವಿದ್ಯಾಯುಕ್ತ ಬ್ರಹ್ಮದೊಂದಿಗೆ ಸಮಸ್ತಕಾಮನಗೆಳನ್ನೂ ಪಡೆದುಕೊಳ್ಳುತ್ತಾನೆ. ಎಂದರೆ, ಯಾವ ಯಾವ ಆನಂದದ ಕಾಮನೆಯನ್ನು ಮಾಡುತ್ತಾನೋ, ಆಯಾ ಆನಂದವನ್ನು ಗಳಿಸಿಕೊಳ್ಳುತ್ತಾನೆ. ಇದೇ ಮುಕ್ತಿಯೆನಿಸುತ್ತದೆ.

**ಪ್ರಶ್ನೆ:**- ಹೇಗೆ ಶರೀರವಿಲ್ಲದೆ ಸಾಂಸಾರಿಕ ಸುಖಗಳನ್ನನುಭವಿಸಲಾರನೋ, ಹಾಗೆ ಮುಕ್ತಿಯಲ್ಲಿ ಶರೀರವಿಲ್ಲದೆ ಆನಂದವನ್ನು ಅನುಭವಿಸಲಾರನು; ಹೇಗೆ ತಾನೇ ಅನುಭವಿಸಬಲ್ಲನು?

**ಉತ್ತರ:**- ಇದಕ್ಕೆ ಮುನ್ನ ಸಮಾಧಾನ ಹೇಳಿಯೇ ಇದ್ದೇವೆ. ಮತ್ತೆ ಇಷ್ಟು ಹೆಚ್ಚಿಗೆ ಆಲಿಸಿರಿ. ಹೇಗೆ ಸಾಂಸಾರಿಕ ಸುಖಗಳನ್ನು ಶರೀರದ ಆಧಾರದಿಂದ ಅನುಭವಿಸುತ್ತಾನೋ, ಹಾಗೆ ಪರಮೇಶ್ವರನ ಆಧಾರದಿಂದ ಮುಕ್ತಿಯ ಆನಂದವನ್ನು ಜೀವಾತ್ಮನು ಅನುಭವಿಸುತ್ತಾನೆ. ಅದು ಮುಕ್ತಿ. ಜೀವನು ಅನಂತವ್ಯಾಪಕಬ್ರಹ್ಮದಲ್ಲಿ ತನ್ನ ಇಚ್ಛೆಯಂತೆ ಸಂಚರಿಸುತ್ತಾನೆ. ಶುದ್ಧಜ್ಞಾನದಿಂದ ಸರ್ವಸೃಷ್ಟಿಯನ್ನೂ ನೋಡುತ್ತಾನೆ. ಅನ್ಯಮುಕ್ತರೊಂದಿಗೆ ಸಂಪರ್ಕದಲ್ಲಿರುತ್ತಾನೆ. ಸೃಷ್ಟಿವಿದ್ಯೆಯನ್ನು ಕ್ರಮವಾಗಿ ನೋಡುತ್ತಾ, ಎಲ್ಲ ಲೋಕಲೋಕಾಂತರಗಳಲ್ಲಿಯೂ, ಎಂದರೆ ಈ ಎಷ್ಟು ಲೋಕಗಳು ಕಾಣುತ್ತವೋ ಮತ್ತು ಎಷ್ಟು ಕಾಣಿಸದೆ ಇವೆಯೋ, ಅವೆಲ್ಲವುಗಳಲ್ಲಿಯೂ ಸಂಚರಿಸುತ್ತಾನೆ. ಯಾವವು ಅವನ ಜ್ಞಾನದ ಸಮಕ್ಷದಲ್ಲಿವೆಯೋ, ಅ ಸರ್ವಪದಾರ್ಥಗಳನ್ನೂ, ತನ್ನ ಮುಂದೆ ಇರುವುದೆಲ್ಲವನ್ನೂ ನೋಡುತ್ತಾನೆ. ಜ್ಞಾನ ಎಷ್ಟು ಅಧಿಕವಾಗಿರುತ್ತದೋ, ಅವನಿಗೆ ಅಷ್ಟೇ ಅಧಿಕವಾದ ಆನಂದ ಉಂಟಾಗುತ್ತದೆ. ಸ್ವರ್ಗ-ನರಕದ ವ್ಯಾಖ್ಯೆ ಮುಕ್ತಿಯಲ್ಲಿ ಜೀವಾತ್ಮನು ನಿರ್ಮಲನಾಗಿರುವುದರಿಂದ, (ತನ್ನ ಅಲ್ಪಜ್ಞತ್ವ-ಅಣುಸ್ವರೂಪತ್ವದ ಪರಿಧಿಯಲ್ಲಿ) ಪೂರ್ಣವಾಗುವಷ್ಟು ಜ್ಞಾನವನ್ನುಳ್ಳವನಾಗಿರುವುದರಿಂದ, ಅವನಿಗೆ ಸಮಸ್ತ ಸನ್ನಿಹಿತ ಪದಾರ್ಥಗಳ ಅರಿವು ಅವು ಇರುವ ಹಾಗೆಯೇ ಪ್ರಾಪ್ತವಾಗುತ್ತದೆ. ಈ ಸುಖ ವಿಶೇಷವೇ ಸ್ವರ್ಗ. ಮತ್ತು ವಿಷಯಲಾಲಸೆಯಲ್ಲಿ ಸಿಕ್ಕಿಹಾಕಿಕೊಂಡು ದುಃಖ ವಿಶೇಷವನ್ನು ಅನುಭವಿಸುವುದು 'ನರಕ'ವೆನ್ನಿಸುತ್ತದೆ. "ಸ್ವಃ" ಎಂಬುದು ಸುಖದ ಹೆಸರು. **"ಸ್ವಃ ಸುಖಂ ಗಚ್ಛಂತಿ ಯಸ್ಮಿನ್,**

**ಸ ಸ್ವರ್ಗಃ"; "ಅತೋ ವಿಪರೀತೋ ನರಕ ಇತಿ"**. ಯಾವ ಸಾಂಸಾರಿಕ ಸುಖವಿದೆಯೋ, ಅದು ಸಾಮಾನ್ಯ ಸ್ವರ್ಗವಾಗಿದೆ. ಮತ್ತು ಪರಮೇಶ್ವರನ ಪ್ರಾಪ್ತಿಯಿಂದ ಯಾವ ಆನಂದವಾಗುವುದೋ, ಅದೇ 'ವಿಶೇಷ ಸ್ವರ್ಗ'ವೆನಿಸುತ್ತದೆ.

"ಸರ್ವಜೀವರೂ ಸ್ವಭಾವದಿಂದ ಸುಖಪ್ರಾಪ್ತಿಯನ್ನು ಬಯಸುತ್ತಾರೆ. ಮತ್ತು ದುಃಖವಿಯೋಗದ ಆಗುವಿಕೆಯನ್ನು ಅಪೇಕ್ಷಿಸುತ್ತಾರೆ. ಆದರೆ, ಎಂದಿನವರೆಗೆ ಧರ್ಮವನ್ನು ಆಚರಿಸುವುದಿಲ್ಲವೋ ಮತ್ತು ಪಾಪಗಳನ್ನು ಬಿಡುವುದಿಲ್ಲರೋ, ಅಂದಿನವರಗೆ ಅವರಿಗೆ ಸುಖದ ಪ್ರಾಪ್ತಿಯೂ ಮತ್ತು ದುಃಖದ ನಿವಾರಣವೂ ಅಸಂಭವವಾಗಿರುತ್ತದೆ." ಏಕೆಂದರೆ, ಯಾವುದಕ್ಕೆ ಕಾರಣ, ಎಂದರೆ ಮೂಲವಿರುತ್ತದೋ, ಅದು ಎಂದಿಗೂ ನಾಶ ಹೊಂದುವುದಿಲ್ಲ. ಉದಾಹರಣೆಗೆ :-

**ಛಿನ್ನೇ ಮೂಲೇ ವೃಕ್ಷೋ ನಶ್ಯತಿ ತಥಾ ಪಾಪೇ ಕ್ಷೀಣೇ ದುಃಖಂ ನಶ್ಯತಿ ।**

ಹೇಗೆ ಬೇರು ಕತ್ತರಿಸಿ ಹೋಗುವುದರಿಂದ ವೃಕ್ಷವು ನಾಶವಾಗುತ್ತದೋ, ಹಾಗೆ ಪಾಪವನ್ನು ವರ್ಜಿಸುವುದರಿಂದ ದುಃಖವು ನಾಶವಾಗಿ ಹೋಗುತ್ತದೆ. ನೋಡಿರಿ, ಮನುಸ್ಮೃತಿಯಲ್ಲಿ ಪಾಪಗಳ ಮತ್ತು ಪುಣ್ಯಗಳ ಕಾರಣದಿಂದಾಗುವ ಬಹುವಿಧದ ಗತಿಗಳನ್ನು ಹೇಗೆ ವಿವರಿಸಿದ್ದಾರೆ :-

**ಮಾನಸಂ ಮನಸೈವಾಯಮುಪಭುಂಕ್ತೇ ಶುಭಾಶುಭಮ್ ।**
**ವಾಚಾ ವಾಚಾ ಕೃತಂಕರ್ಮ ಕಾಯೇನೈವ ಚ ಕಾಯಿಕಮ್ ॥ ೧ ॥**
**ಶರೀರಜೈಃ ಕರ್ಮದೋಷೈರ್ಯಾತಿ ಸ್ಥಾವರತಾಂ ನರಃ ।**
**ವಾಚಿಕೈಃ ಪಕ್ಷಿಮೃಗತಾಂ ಮಾನಸೈರಂತ್ಯಜಾತಿತಾಮ್ ॥ ೨ ॥** (ಮನು:- ೧೨.೮-೯)
**ಯೋ ಯದೈಷಾಂ ಗುಣೋ ದೇಹೇ ಸಾಕಲ್ಯೇನಾತಿರಿಚ್ಯತೇ।**
**ಸ ತದಾ ತದ್ಗುಣಪ್ರಾಯಂ ತಂ ಕರೋತಿ ಶರೀರಿಣಮ್ ॥ ೩ ॥**
**ಸತ್ತ್ವಂ ಜ್ಞಾನಂ ತಮೋಽಜ್ಞಾನಂ ರಾಗದ್ವೇಷೌ ರಜಃಸ್ಮೃತಮ್ ।**
**ಏತದ್ವ್ಯಾಪ್ತಿಮದೇತೇಷಾಂ ಸರ್ವಭೂತಾಶ್ರಿತಂ ವಪುಃ ॥ ೪ ॥**
**ತತ್ರ ಯತ್ಪ್ರೀತಿಸಂಯುಕ್ತಂ ಕಿಂಚಿದಾತ್ಮನಿ ಲಕ್ಷಯೇತ್ ।**
**ಪ್ರಶಾಂತಮಿವ ಶುದ್ಧಾಭಂ ಸತ್ತ್ವಂ ತದುಪಧಾರಯೇತ್ ॥ ೫ ॥** (ಮನು :- ೧೨.೨೫-೨೭)
**ಯತ್ತು ದುಃಖಸಮಾಯುಕ್ತಮಪ್ರೀತಿಕರಮಾತ್ಮನಃ ।**
**ತದ್ರಜೋಽಪ್ರತಿಪಂ ವಿದ್ಯಾತ್ಸತತಂ ಹಾರಿ ದೇಹಿನಾಮ್ ॥ ೬ ॥**
**ಯತ್ತು ಸ್ಯಾನ್ಮೋಹಸಂಯುಕ್ತಮವ್ಯಕ್ತಂ ವಿಷಯಾತ್ಮಕಮ್ ।**
**ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪ ಧಾರಯೇತ್ ॥ ೭ ॥**
**ತ್ರಯಾಣಾಮಪಿ ಚೈತೇಷಾಂ ಗುಣಾನಾಂ ಯಃ ಫಲೋದಯಃ ।**
**ಅಗ್ರ್ಯೋ ಮಧ್ಯೋ ಜಘನ್ಯಶ್ಚ ತಂ ಪ್ರವಕ್ಷ್ಯಾಮ್ಯಶೇಷತಃ ॥ ೮ ॥** (ಮನು:- ೧೨.೨೮-೩೦)
**ವೇದಾಭ್ಯಾಸಸ್ತಪೋ ಜ್ಞಾನಂ ಶೌಚಮಿಂದ್ರಿಯನಿಗ್ರಹಃ।**
**ಧರ್ಮಕ್ರಿಯಾತ್ಮ ಚಿಂತಾ ಚ ಸಾತ್ತ್ವಿಕಂ ಗುಣಲಕ್ಷಣಮ್ ॥ ೯ ॥**
**ಆರಂಭರುಚಿತಾಽಧೈರ್ಯಮಸತ್ಕಾರ್ಯಪರಿಗ್ರಹಃ ।**
**ವಿಷಯೋಪಸೇವಾ ಚಾಜಸ್ರಂ ರಾಜಸಂ ಗುಣಲಕ್ಷಣಮ್ ॥ ೧೦॥**

**ಲೋಭಃ ಸ್ವಪ್ನೋ ಧೃತಃ ಕ್ರೌರ್ಯಂ ನಾಸ್ತಿಕ್ಯಂಭಿನ್ನವೃತ್ತಿತಾ ।**

**ಯಾಚಿಷ್ಣುತಾ ಪ್ರಮಾದಶ್ಚ ತಾಮಸಂ ಗುಣಲಕ್ಷಣಮ್ ॥ ೧೧ ॥** (ಮನು:– ೧೨.೩೧–೩೩)

**ಯತ್ಕರ್ಮಕೃತ್ವಾ ಕುರ್ವಂಶ್ಚ ಕರಿಷ್ಯಂಶ್ಚೈವ ಲಜ್ಜತಿ ।**

**ತಜ್ಞೇಯಂ ವಿದುಷಾ ಸರ್ವಂ ತಾಮಸಂ ಗುಣಲಕ್ಷಣಮ್ ॥ ೧೨ ॥**

**ಯೇನಾಸ್ಮಿನ್ಕರ್ಮಣಾ ಲೋಕೇ ಖ್ಯಾತಿಮಿಚ್ಛತಿ ಪುಷ್ಕಲಾಮ್ ।**

**ನ ಚ ಶೋಚತ್ಯಸಂಪತ್ತೌ ತದ್ವಿಜ್ಞೇಯಂ ತು ರಾಜಸಮ್ ॥ ೧೩॥**

**ಯತ್ಸರ್ವೇಣೇಚ್ಛತಿ ಜ್ಞಾತುಂ ಯನ್ನ ಲಜ್ಜತಿ ಚಾಚರನ್ ।**

**ಯೇನ ತುಷ್ಯತಿ ಚಾತ್ಮಾಽಸ್ಯ ತತ್ಸತ್ತ್ವಗುಣಲಕ್ಷಣಮ್ ॥ ೧೪ ॥**

**ತಮಸೋ ಲಕ್ಷಣಂ ಕಾಮೋ ರಜಸಸ್ತ್ವರ್ಥ ಉಚ್ಯತೇ ।**

**ಸತ್ತ್ವಸ್ಯ ಲಕ್ಷಣಂ ಧರ್ಮಃ ಶ್ರೈಷ್ಠ್ಯಂತೇಷಾಂ ಯಥೋತ್ತರಮ್ ॥ ೧೫ ॥** (ಮನು :– ೧೨.೩೫–೩೮)

ಎಂದರೆ, ಮಾನವನು ಈ ರೀತಿ ತನ್ನ ಶ್ರೇಷ್ಠವೂ, ಮಧ್ಯಮವೂ ಮತ್ತು ನಿಕೃಷ್ಟವೂ ಆದ ಸ್ವಭಾವವನ್ನು ತಿಳಿದುಕೊಂಡು, ಉತ್ತಮ ಸ್ವಭಾವವನ್ನು ಗ್ರಹಿಸಬೇಕು; ಮಧ್ಯಮ ಹಾಗೂ ನಿಕೃಷ್ಟವನ್ನು ತ್ಯಜಿಸಬೇಕು. ಮತ್ತು, ಈ ಜೀವನು ಮನಸ್ಸಿನಿಂದ ಯಾವ ಶುಭವಾದ ಅಥವಾ ಅಶುಭವಾದ ಕರ್ಮವನ್ನು ಮಾಡುತ್ತಾನೋ, ಅದನ್ನು ಮನಸ್ಸಿನಿಂದ, ವಾಣಿಯಿಂದ ಮಾಡಿದುದನ್ನು ವಾಣಿಯಿಂದ ಮತ್ತು ಶರೀರದಿಂದ ಮಾಡಿದುದನ್ನು ಶರೀರದಿಂದ, ಎಂದರೆ, (ಆಯಾ ಕರ್ಮಗಳ ಫಲವಾದ) ಸುಖ–ದುಃಖಗಳನ್ನು ಅನುಭವಿಸುತ್ತಾನೆ–ಎಂಬುದನ್ನೂ ಕೂಡ ನಿಶ್ಚಯವಾಗಿ ತಿಳಿದುಕೊಳ್ಳಬೇಕು. (೧)

ಯಾವ ಮಾನವನು ಶರೀರದಿಂದ ಕಳ್ಳತನ, ಪರನಾರೀಗಮನ, ಶ್ರೇಷ್ಠರ ಹತ್ಯೆ ಮೊದಲಾದ ದುಷ್ಟ ಕರ್ಮಗಳನ್ನು ಮಾಡುತ್ತಾನೋ, "ಅವನಿಗೆ ವೃಕ್ಷಗಳೇ ಮೊದಲಾದ ಸ್ಥಾವರಗಳ ಜನ್ಮವೂ, ವಾಣಿಯಿಂದ ಮಾಡಿದ ಪಾಪಕರ್ಮಗಳಿಂದ ಪಕ್ಷಿಗಳ ಮತ್ತು ಮೃಗಗಳೇ ಮೊದಲಾದುದರ" ಮತ್ತು ಮನಸ್ಸಿನಿಂದ ಮಾಡಿದ ದುಷ್ಟಕರ್ಮಗಳಿಂದ, ನೀಚಗುಣಯುಕ್ತವಾದ ಶರೀರವೂ ಸಿಕ್ಕುತ್ತದೆ. (೨)

"ಯಾವ ಗುಣವು ಈ ಜೀವರ ದೇಹದಲ್ಲಿ ಅಧಿಕವಾಗಿ ವರ್ತಿಸುತ್ತದೋ, ಆ ಗುಣವು ಆ ಜೀವನನ್ನು ತನಗೆ ತಕ್ಕ ಹಾಗೆ ಮಾಡಿಕೊಳ್ಳುತ್ತದೆ." (೩)

ಯಾವಾಗ ಆತ್ಮದಲ್ಲಿ ಜ್ಞಾನ ಬೆಳಗುವುದೋ, ಆಗ ಸತ್ತ್ವ, ಯಾವಾಗ ಅಜ್ಞಾನ ಕವಿಯುವುದೋ ಆಗ ತಮಸ್ಸು ಮತ್ತು ಯಾವಾಗ ರಾಗದ್ವೇಷಗಳಲ್ಲಿ ಆತ್ಮನು ರತನಾಗುವನೋ, ಆಗ ರಜೋಗುಣ ವರ್ತಿಸುತ್ತಿದೆ – ಎಂದು ತಿಳಿದುಕೊಳ್ಳಬೇಕು. "ಪ್ರಕೃತಿಯ ಈ ಮೂರು ಗುಣಗಳು ಜಗತ್ತಿನಲ್ಲಿರುವ ಸರ್ವ ಪದಾರ್ಥಗಳಲ್ಲಿಯೂ ವ್ಯಾಪ್ತವಾಗಿರುತ್ತವೆ." (೪)

ಅದರ ವಿವೇಕವನ್ನು ಈ ರೀತಿ ಮಾಡಬೇಕು:– ಯಾವಾಗ ಆತ್ಮನಲ್ಲಿ ಪ್ರಸನ್ನತ್ವವಿರುತ್ತದೋ, ಮನಸ್ಸು ತಿಳಿಯಾಗಿ, ಪ್ರಶಾಂತವಾಗಿರುವಂತೆ ಇದ್ದು, ನಿರ್ಮಲ ಪ್ರತಿಭಾಯುಕ್ತವಾಗಿ ವರ್ತಿಸುತ್ತದೋ, ಆಗ ಸತ್ತ್ವಗಣವು ಮುಖ್ಯವಾಗಿಯೂ ಮತ್ತು 'ರಜೋಗುಣ' ಹಾಗೂ 'ತಮೋಗುಣ'ಗಳು ಮುಖ್ಯವಲ್ಲದವಾಗಿಯೂ ಇವೆ–ಎಂದು ತಿಳಿದುಕೊಳ್ಳಬೇಕು (೫)

ಯಾವಾಗ ಆತ್ಮನೂ ಮತ್ತು ಮನಸ್ಸೂ ದುಃಖಸಂಯುಕ್ತವೂ, ಪ್ರಸನ್ನತಾ ರಹಿತವೂ ಆಗಿ, ವಿಷಯಗಳಲ್ಲಿ ಇಲ್ಲಿಂದ ಅಲ್ಲಿಗೆ ಪರದಾಡುವುದರಲ್ಲಿ ನಿರತವಾಗಿರುತ್ತವೋ, ಆಗ 'ರಜೋಗುಣವು' ಮುಖ್ಯವಾಗಿಯೂ ಮತ್ತು ಸತ್ತ್ವಗುಣ ಹಾಗೂ ತಮೋಗುಣಗಳು ಅಮುಖ್ಯವಾಗಿಯೂ ಇವೆ–ಎಂದು ತಿಳಿದುಕೊಳ್ಳಬೇಕು. (೬)

ಯಾವಾಗ ಮೋಹದಲ್ಲಿ, ಎಂದರೆ ಸಾಂಸಾರಿಕ ಪದಾರ್ಥದಲ್ಲಿ ಆತ್ಮನೂ ಮತ್ತು ಮನಸ್ಸೂ ಸಿಕ್ಕಿಕೊಂಡಿರುತ್ತವೋ, ಯಾವಾಗ ಆತ್ಮನಲ್ಲಿ ಮತ್ತು ಮನಸ್ಸಿನಲ್ಲಿ ಸ್ವಲ್ಪವೂ ವಿವೇಕವಿರುವುದಿಲ್ಲರೋ, ವಿಷಯಗಳಲ್ಲಿ ಆಸಕ್ತವೂ, ತರ್ಕ–ವಿತರ್ಕವಿಹೀನವೂ ಆಗಿ, ತಿಳಿದುಕೊಳ್ಳಲು ಯೋಗ್ಯವಾಗಿರುವುದಿಲ್ಲರೋ, ಆಗ ನಿಶ್ಚಯವಾಗಿ– "ಈ ಸಮಯದಲ್ಲಿ ನನ್ನಲ್ಲಿ

ತಮೋಗುಣವು ಮುಖ್ಯವಾಗಿಯೂ, ಮತ್ತು ಸತ್ವಗುಣ ಹಾಗೂ ರಜೋಗುಣಗಳು ಅಮುಖ್ಯವಾಗಿಯೂ ಇವೆ". - ಎಂದು ತಿಳಿದುಕೊಳ್ಳಬೇಕು. (೭)

ಈಗ ಈ ಗುಣಗಳ ಉತ್ತಮ, ಮಧ್ಯಮ ಮತ್ತು ನಿಕೃಷ್ಟವಾದ ಯಾವ ಫಲೋದಯವಾಗುತ್ತದೋ, ಅದನ್ನು ಪೂರ್ಣರೂಪದಲ್ಲಿ ಹೇಳುತ್ತೇವೆ. (೮)

ವೇದಗಳ ಅಭ್ಯಾಸ, ಧರ್ಮಾನುಷ್ಠಾನ, ಜ್ಞಾನದ ವೃದ್ಧಿ, ಪವಿತ್ರತ್ವದ ಇಚ್ಛೆ, ಇಂದ್ರಿಯಗಳ ನಿಗ್ರಹ, ಧರ್ಮಕ್ರಿಯೆ ಮತ್ತು ಆತ್ಮನ ಚಿಂತನ-ಇದೇ ಸತ್ತ್ವಗುಣದ ಲಕ್ಷಣವಾಗಿದೆ. (೯)

ಯಾವಾಗ ರಜೋಗುಣದ ಉದಯ, ಸತ್ತ್ವ ಮತ್ತು ತಮೋಗುಣದ ಕುಸಿತ ಉಂಟಾಗುತ್ತದೋ, ಆಗ ಕ್ರಿಯೆಯಲ್ಲಿ ಅಭಿರುಚಿ, ಧೈರ್ಯ, ತ್ಯಾಗ, ಅಸತ್ಕರ್ಮಗಳ ಸ್ವೀಕಾರ, ನಿರಂತರ ವಿಷಯಸೇವನದಲ್ಲಿ ಪ್ರೀತಿ ಇವು ಉಂಟಾಗುತ್ತದೆ. ಆಗಲೇ- "ನನ್ನಲ್ಲಿ ರಜೋಗುಣ, ಪ್ರಾಧಾನ್ಯದಿಂದ ವರ್ತಿಸುತ್ತಿದೆ".-ಎಂದು ತಿಳಿದುಕೊಳ್ಳಬೇಕು. (೧೦)

ಯಾವಾಗ ತಮೋಗುಣದ ಉದಯ ಮತ್ತು ಉಳಿದ ಎರಡರ ಅಂತರ್ಭಾವವಾಗುತ್ತದೋ, ಆಗ ಅತ್ಯಂತ 'ಲೋಭ'-ಎಂದರೆ ಸರ್ವಪಾಪಗಳ ಮೂಲವು ವರ್ಧಿಸುತ್ತದೆ. ಅತ್ಯಂತ ಆಲಸ್ಯ ಮತ್ತು ನಿದ್ರೆ, ಧೈರ್ಯನಾಶ, ಕ್ರೌರ್ಯದ ಉದ್ಭವ, 'ನಾಸ್ತಿಕ'-ಎಂದರೆ, ವೇದಗಳಲ್ಲಿ ಮತ್ತು ಈಶ್ವರನಲ್ಲಿ ಶ್ರದ್ಧೆಯಿಲ್ಲದಿರುವಿಕೆ, ಅಂತಃಕರಣದ ಬೇರೆ ಬೇರೆ ವೃತ್ತಿಗಳು ಮತ್ತು ಏಕಾಗ್ರತೆಯ ಅಭಾವ ಹಾಗೂ ಯಾವುದಾದರೂ ಚಟಗಳಿಗೆ ಸಿಕ್ಕಿಕೊಳ್ಳುವುದು ಇವು ಕಂಡುಬರುತ್ತವೋ, ಆಗ ವಿದ್ವಾಂಸರು 'ತಮೋಗುಣ ಪ್ರಬಲಿಸಿದೆ' ಎಂದು ತಿಳಿಯುವುದು ಯೋಗ್ಯವಾಗಿರುತ್ತದೆ. (೧೧)

ಮತ್ತು ಯಾವಾಗ ತನ್ನ ಆತ್ಮ ಯಾವುದಾದರೂ ಕಾರ್ಯವನ್ನು ಮಾಡಿ, ಮಾಡುತ್ತಿರುವ ಹಾಗೂ ಮಾಡಬಯಸಿದಾಗ ನಾಚಿಕೆ, ಸಂಶಯ ಮತ್ತು ಭಯವನ್ನು ಅನುಭವಿಸುತ್ತಾನೋ, ಆಗ "ನನ್ನಲ್ಲಿ ಪ್ರವೃದ್ಧವಾದ ತಮೋಗುಣವಿದೆ" - ಎಂದು ತಿಳಿದುಕೊಳ್ಳಬೇಕು. (೧೨)

ಯಾವಾಗ ಜೀವಾತ್ಮನು ಯಾವುದಾದರೂ ಕರ್ಮದಿಂದ ಈ ಲೋಕದಲ್ಲಿ ಪುಷ್ಕಳವಾದ ಪ್ರಸಿದ್ಧಿಗಾಗಿ ಹಾತೊರೆಯುತ್ತಾನೋ, ದಾರಿದ್ರ್ಯವಿದ್ದರೂ ಹೊಗಳುಭಟ್ಟರಿಗೆ ದಾನ ಕೊಡುವುದನ್ನು ಬಿಡುವುದಿಲ್ಲವೋ, ಆಗ "ನನ್ನಲ್ಲಿ ರಜೋಗುಣ ಪ್ರಬಲವಾಗಿದೆ".-ಎಂದು ತಿಳಿದುಕೊಳ್ಳಬೇಕು. (೧೩)

ಮತ್ತು ಯಾವಾಗ ಮಾನವನ ಆತ್ಮನು ಎಲ್ಲರಿಂದಲೂ ಜ್ಞಾನಗಳಿಸ ಬಯಸುತ್ತಾನೋ, ಗುಣಗಳನ್ನು ಗ್ರಹಿಸುತ್ತಾ ಹೋಗುತ್ತಾನೋ, ಒಳ್ಳೆಯ ಕರ್ಮಗಳನ್ನು ಮಾಡುವಲ್ಲಿ ನಾಚಿಕೆ ಪಡುವುದಿಲ್ಲವೋ, ಯಾವ ಕರ್ಮದಿಂದ ಆತ್ಮನು ಪ್ರಸನ್ನನಾಗುವನೋ, ಅಂತಹದರಲ್ಲಿ, ಎಂದರೆ ಧರ್ಮಾಚರಣದಲ್ಲಿಯೇ ಅಭಿರುಚಿ ಹೊಂದಿರುತ್ತಾನೋ, ಆಗ, "ನನ್ನಲ್ಲಿ ಸತ್ತ್ವಗುಣ ಪ್ರಬಲವಾಗಿದೆ".-ಎಂದು ತಿಳಿದುಕೊಳ್ಳಬೇಕು. (೧೪)

"ತಮೋಗುಣದ ಲಕ್ಷಣ ಕಾಮ, ರಜೋಗುಣದ ಲಕ್ಷಣ ಧನಸಂಚಯದ ಬಯಕೆ ಮತ್ತು ಸತ್ತ್ವಗುಣದ ಲಕ್ಷಣ ಧರ್ಮಸೇವೆಯ ಆಚರಣವೇ ಆಗಿದೆ. ಆದರೆ, ತಮೋಗುಣಕ್ಕಿಂತ ರಜೋಗುಣವು ಮತ್ತು ರಜೋಗುಣಕ್ಕಿಂತ ಸತ್ತ್ವಗುಣವು ಶ್ರೇಷ್ಠವಾಗಿದೆ." (೧೫)

ಈಗ ಜೀವನು ಯಾವ ಯಾವ ಗುಣದಿಂದ ಯಾವ ಯಾವ ಗತಿಯನ್ನು[೨೫] ಹೊಂದುತ್ತಾನೋ, ಅದರ ಬಗೆಗೆ ಮುಂದೆ ಬರೆಯುತ್ತೇವೆ.

**ದೇವತ್ವಂ ಸಾತ್ವಿಕಾ ಯಾಂತಿ ಮನುಷ್ಯತ್ವಂ ಚ ರಾಜಸಾಃ।**

**ತಿರ್ಯಕ್ತ್ವಂ ತಾಮಸಾ ನಿತ್ಯಮಿತ್ಯೇಷಾ ತ್ರಿವಿಧಾ ಗತಿಃ ॥ ೧ ॥** (ಮನು:- ೧೨.೪೦)

---

೨೫. 'ಗತಿ' ಎಂದರೆ ವೃತ್ತಿ ಅಥವಾ ಪ್ರವೃತ್ತಿ ಎಂದರ್ಥ. ಏಕೆಂದರೆ, ಸತ್ವ-ರಜಸ್-ತಮೋಗುಣಗಳ ಪ್ರಧಾನತೆಯಿಂದ ವೃತ್ತಿ-ಪ್ರವೃತ್ತಿಗಳು ತದನುಸಾರ ರೂಪುಗೊಳ್ಳುತ್ತವೆ. ಜನ್ಮ ಅಥವಾ ಯೋನಿ ಸಿಗುವುದು ಪೂರ್ವ ಕರ್ಮಗಳ ಫಲರೂಪವಾಗಿ ! ಗುಣಗಳಿಂದಲ್ಲ. -ಸಂ.

ಸ್ಥಾವರಾಃ ಕೃಮಿಕೀಟಾಶ್ಚ ಮತ್ಸ್ಯಾಃ ಸರ್ಪಾಶ್ಚ ಕಚ್ಛಪಾಃ।
ಪಶವಶ್ಚ ಮೃಗಾಶ್ಚೈವ ಜಘನ್ಯಾ ತಾಮಸೀ ಗತಿಃ ॥ ೨ ॥
ಹಸ್ತಿನಶ್ಚ ತುರಂಗಾಶ್ಚ ಶೂದ್ರಾ ಮ್ಲೇಚ್ಛಾಶ್ಚ ಗರ್ಹಿತಾಃ ।
ಸಿಂಹಾ ವ್ಯಾಘ್ರಾ ವರಾಹಾಶ್ಚ ಮಧ್ಯಮಾ ತಾಮಸೀ ಗತಿಃ ॥ ೩ ॥
ಚಾರಣಾಶ್ಚ ಸುಪರ್ಣಾಶ್ಚ ಪುರುಷಾಶ್ಚೈವ ದಾಂಭಿಕಾಃ।
ರಕ್ಷಾಂಸಿ ಚ ಪಿಶಾಚಾಶ್ಚ ತಾಮಸೀಷೂತ್ತಮಾ ಗತಿಃ ॥ ೪ ॥
ಝಲ್ಲಾ ಮಲ್ಲಾ ನಟಾಶ್ಚೈವ ಪುರುಷಾಃ ಶಸ್ತ್ರವೃತ್ತಯಃ।
ದ್ಯೂತಪಾನಪ್ರಸಕ್ತಾಶ್ಚ ಜಘನ್ಯಾ ರಾಜಸೀ ಗತಿಃ ॥ ೫ ॥
ರಾಜಾನಃ ಕ್ಷತ್ರಿಯಾಶ್ಚೈವ ರಾಜ್ಞಾಂ ಚೈವ ಪುರೋಹಿತಾಃ।
ವಾದಯುದ್ಧಪ್ರಧಾನಾಶ್ಚ ಮಧ್ಯಮಾ ರಾಜಸೀ ಗತಿಃ ॥ ೬ ॥
ಗಂಧರ್ವಾ ಗುಹ್ಯಕಾ ಯಕ್ಷಾ ವಿಬುಧಾನುಚರಾಶ್ಚ ಯೇ।
ತಥೈವಾಪ್ಸರಸಃ ಸರ್ವಾ ರಾಜಸೀಷೂತ್ತಮಾ ಗತಿಃ ॥ ೭ ॥
ತಾಪಸಾ ಯತಯೋ ವಿಪ್ರಾ ಯೇ ಚ ವೈಮಾನಿಕಾ ಗಣಾಃ ।
ನಕ್ಷತ್ರಾಣಿ ಚ ದೈತ್ಯಾಶ್ಚ ಪ್ರಥಮಾ ಸಾತ್ವಿಕೀ ಗತಿಃ ॥ ೮ ॥
ಯಜ್ವಾನ ಋಷಯೋ ದೇವಾ ವೇದಾ ಜ್ಯೋತೀಂಷಿ ವತ್ಸರಾಃ ।
ಪಿತರಶ್ಚೈವ ಸಾಧ್ಯಾಶ್ಚ ದ್ವಿತೀಯಾ ಸಾತ್ವಿಕೀ ಗತಿಃ ॥ ೯ ॥
ಬ್ರಹ್ಮಾ ವಿಶ್ವಸೃಜೋ ಧರ್ಮೋ ಮಹಾನವ್ಯಕ್ತಮೇವ ಚ ।
ಉತ್ತಮಾಂ ಸಾತ್ವಿಕೀಮೇತಾಂ ಗತಿಮಾಹುರ್ಮನಿಷಿಣಃ ॥ ೧೦॥ (ಮನು:– ೧೨.೪೨–೫೦)
ಇಂದ್ರಿಯಾಣಾಂ ಪ್ರಸಂಗೇನ ಧರ್ಮಸ್ಯಾ ಸೇವನೇನ ಚ ।
ಪಾಪಾನ್ ಸಂಯಾಂತಿ ಸಂಸಾರಾನವಿದ್ವಾಂಸೋ ನರಾಧಮಾಃ ॥ ೧೧ ॥ (ಮನು:– ೧೨. ೫೨)

ಯಾವ ಮಾನವರು ಸಾತ್ವಿಕರಾಗಿರುತ್ತಾರೋ, ಅವರು 'ದೇವ' ಜನರು–ಎಂದರೆ ವಿದ್ವಾಂಸರಾಗಿಯೂ, ಯಾರು ರಜೋಗುಣಯುಕ್ತರಾಗಿರುತ್ತಾರೋ, ಅವರ ಮಧ್ಯಮ ಮನುಷ್ಯರಾಗಿಯೂ ಉದ್ಭವಿಸುತ್ತಾರೆ. ಮತ್ತು ಯಾರು ತಮೋಗುಣಯುಕ್ತರಾಗಿರುತ್ತಾರೋ, ಅವನು ನೀಚ ಗತಿಯನ್ನು ಹೊಂದುತ್ತಾರೆ. (೧)

'ಯಾರು ಅತ್ಯಂತ ತಮೋ ಗುಣಯುಕ್ತರಾಗಿರುತ್ತಾರೋ', ಅವರು ಸ್ಥಾವರವಾದ[೨೬] ವೃಕ್ಷಗಳೇ ಮೊದಲಾದವಾಗಿಯೂ, ಕೃಮಿ, ಕೀಟ, ಮತ್ಸ್ಯ–ಸರ್ಪ, ಆಮೆ, ಪಶು ಮತ್ತು ಮೃಗಗಳಾಗಿಯೂ ಜನ್ಮವನ್ನು ಪಡೆಯುತ್ತಾರೆ. (೨)

'ಯಾರು ಮಧ್ಯಮ ತಮೋಗುಣಯುಕ್ತರಾಗಿರುತ್ತಾರೋ', ಅವರು ಆನೆ, ಕುದುರೆ, ಶೂದ್ರ (ಜ್ಞಾನಜ್ಯೋತಿಯಿಂದ ದೂರಕ್ಕೆ ಸರಿಯುವವರು), ಮ್ಲೇಚ್ಛ (ಮಲಿನಮನೋಭಾವವನ್ನುಳ್ಳವರು), ನಿಂದಾರ್ಹವಾದ ಕರ್ಮಗಳನ್ನು ಮಾಡುವವರು, ಸಿಂಹ, ಹುಲಿ, ವರಾಹ ಎಂದರೆ ಹಂದಿ – ಈ ಮೊದಲಾದವುಗಳ ಜನ್ಮವನ್ನು ಪಡೆಯುತ್ತಾರೆ. (೩)

---

೨೬. ವೃಕ್ಷಾದಿಗಳಲ್ಲಿರುವ ಜೀವನ ಕೇವಲ ಅನುಶಾಯಿ; ಅಭಿಮಾನಿಯಲ್ಲ. ಹೀಗೆ, ಹಿಂಸಾಹಿಂಸೆಯ ಪ್ರಶ್ನೆಯಿಲ್ಲ –ಅನು.
ಇದು ಒಂದು ಮತ. ವೃಕ್ಷಾದಿಗಳಲ್ಲಿರುವ ಜೀವನು ಅಭಿಮಾನಿ, ಎನ್ನುವುದು ಇನ್ನೊಂದು ಮತ. ಈ ಮತವನ್ನಿಂಗೀಕರಿಸುವವರು ಹಿಂಸೆ–ಅಹಿಂಸೆಯ ಪ್ರಶ್ನೆಯಿಂದ ಪ್ರಭಾವಿತರಾಗುವುದಿಲ್ಲ. ಈ ಪ್ರಶ್ನೆ ಈ ಸಿದ್ಧಾಂತಕ್ಕೆ, ಯಥಾರ್ಥತೆಗೆ ಅನ್ವಯಿಸದು– ಸಂ.

'ಯಾರು ಉತ್ತಮ ತಮೋಗುಣಯುಕ್ತರಾಗಿರುತ್ತಾರೋ', ಅವರು ಹೊಗಳುಭಟರು (ಹಾಡು-ಪದ್ಯ ಮೊದಲಾದುವನ್ನು ರಚಿಸಿ, ಮನುಷ್ಯಸ್ತುತಿ ಮಾಡುವವರು). ಸುಂದರವಾದ ಪಕ್ಷಿಗಳು, ದಾಂಭಿಕ ಪುರುಷರು, ಎಂದರೆ ತಮ್ಮ ಸುಖಕ್ಕಾಗಿ ತಮ್ಮನ್ನು ತಾವೇ ಹೊಗಳಿಕೊಳ್ಳುವವರು, ಹಿಂಸಕರಾದ ದುರ್ಗುಣಶಾಲಿಗಳು, ಪಿಶಾಚರು – ಎಂದರೆ ಆಚಾರಹೀನರು, ಮಾದಕ ವಸ್ತುಗಳ ಸೇವನೆ ಮಾಡುವವರು ಹಾಗೂ ಮಲಿನರಾಗಿರುವವರು – ಇಂತಹವರ ಜನ್ಮಗಳನ್ನು ತಾಳುತ್ತಾರೆ. ಇದು ಉತ್ತಮ ತಮೋಗುಣದ ಕರ್ಮದ ಫಲವಾಗಿದೆ. (೪)

'ಯಾರು ಅಧಮ ರಜೋಗುಣಯುಕ್ತರಾಗಿರುತ್ತಾರೋ', ಅವರು ಖಡ್ಗ ಮೊದಲಾದುದರಿಂದ ಪ್ರಹಾರ ಮಾಡುವವರು. ಸನಿಕೆ-ಪಿಕಾಸಿಗಳಿಂದ ತೋಡುವವರು, ದೋಣಿ ಮೊದಲಾದುವನ್ನು ನಡೆಯಿಸುವವರು, ಬೊಂಬು -ಮೊದಲಾದುವುಗಳ ಮೇಲೆ ನಾನಾ ಪ್ರಕಾರದ ಹತ್ತುವ-ಇಳಿಯುವ, ಹಾರುವ ಆಟತೋರಿಸುವ ದೊಂಬರು, ಶಸ್ತ್ರಧಾರಿಗಳಾದ ಸೇವಕರು, ಮತ್ತು ಮದ್ಯಪಾನದಲ್ಲಿ ಆಸಕ್ತರು ಇಂತಹವರ ಜನ್ಮಗಳನ್ನು ಹೊಂದುತ್ತಾರೆ. ಇದು 'ನೀಚ ರಜೋಗುಣದ[೨೭] ಫಲವಾಗಿದೆ.' (೫)

'ಯಾರು ಮಧ್ಯಮ ರಜೋಗುಣಯುಕ್ತರಾಗಿರುತ್ತಾರೋ', ಅವರು ರಾಜರು, ಕ್ಷತ್ರಿಯ ವರ್ಣೀಯ ರಾಜರುಗಳ ಪುರೋಹಿತರು, ವಾದ-ವಿವಾದ ಮಾಡುವವರು, ದೂತರು, ನ್ಯಾಯವಾದಿಗಳು, ಯುದ್ಧ ವಿಭಾಗದ ಅಧ್ಯಕ್ಷರು-ಇಂತಹವರ ಜನ್ಮಗಳನ್ನು ಹೊಂದುತ್ತಾರೆ. (೬)

ಯಾರು ಉತ್ತಮ ರಜೋಗುಣಯುಕ್ತರಾಗಿರುತ್ತಾರೋ, ಅವರು ಗಂಧರ್ವರು (ಗಾಯಕರು) ಗುಹ್ಯಕರು (ವಾದ್ಯ ಬಾರಿಸುವವರು), ಯಕ್ಷರು (ಧನಾಢ್ಯರು) ವಿದ್ವಾಂಸರ ಸೇವಕರು ಮತ್ತು ಅಪ್ಸರೆಯರು-ಎಂದರೆ ಉತ್ತಮ ರೂಪವತಿಯರಾದ ಸ್ತ್ರೀಯರು ಇವರ ಜನ್ಮವನ್ನು ಹೊಂದುತ್ತಾರೆ. (೭)

ತಪಸ್ವಿಗಳೂ, ಯತಿಗಳೂ, ಸಂನ್ಯಾಸಿಗಳೂ, ವೇದಪಾಠಿಗಳೂ, ವಿಮಾನ ಸಂಚಾಲಕರೂ ಮತ್ತು 'ದೈತ್ಯರು' – ಎಂದರೆ (ದಿತಿ-ಔದಾರ್ಯ) ಉದಾರಾತ್ಮರೂ ಆದ ಮಾನವರಾಗಿ ಯಾರು ಜನ್ಮ ತಾಳುವರೋ, ಅವರ ಆ ಜನ್ಮವು ಪ್ರಥಮ ಸತ್ತ್ವಗುಣದ ಕರ್ಮದ ಪರಿಣಾಮವೆಂದು ತಿಳಿಯಿರಿ. (೮)

ಯಾರು ಮಧ್ಯಮ ಸತ್ತ್ವಗುಣಯುಕ್ತರಾಗಿ ಕರ್ಮಮಾಡುತ್ತಾರೋ, ಆ ಜೀವರು ಯಜ್ಞಕರ್ತೃಗಳೂ, ವೇದಾರ್ಥಬಲ್ಲವರೂ, ವಿದ್ವಾಂಸರೂ, ವೇದಗಳು, ವಿದ್ಯುತ್ತು ಮೊದಲಾದುದರ ಮತ್ತು ಕಾಲವಿದ್ಯೆಯ ಜ್ಞಾತೃಗಳೂ, ರಕ್ಷಕರೂ, ಜ್ಞಾನಿಗಳೂ ಮತ್ತು 'ಸಾಧ್ಯರೂ', ಎಂದರೆ, ಕಾರ್ಯಸಿದ್ಧಿಗಾಗಿ ಸೇವಾಯೋಗ್ಯರಾದ ಅಧ್ಯಾಪಕರೂ ಆಗಿ ಜನ್ಮತಾಳುತ್ತಾರೆ. (೯)

'ಯಾರು ಉತ್ತಮ ಸತ್ತ್ವಗುಣಯುಕ್ತರಾಗಿ', ಉತ್ತಮ ಕರ್ಮಗಳನ್ನು ಮಾಡುತ್ತಾರೋ, ಅವರು ಬ್ರಹ್ಮ-ಎಂದರೆ ಸಮಸ್ತ ವೇದಜ್ಞರೂ, 'ವಿಶ್ವಸೃಜ' – ಸಕಲ ಸೃಷ್ಟಿಕ್ರಮ ವಿದ್ಯೆಯನ್ನೂ ತಿಳಿದು ವಿಮಾನಗಳೇ ಮೊದಲಾದ ವಿವಿಧ ಯಾನಗಳನ್ನು ನಿರ್ಮಿಸುವವರೂ, ಧಾರ್ಮಿಕರೂ, ಸರ್ವೋತ್ತಮ ಬುದ್ಧಿಯುಕ್ತರೂ, ಅವ್ಯಕ್ತದ (ಮೂಲಪ್ರಕೃತಿ) ಅಭಿವ್ಯಕ್ತಿಯನ್ನು ತಿಳಿಯುವವರೂ ಮತ್ತು ಪ್ರಕೃತಿಯನ್ನು ವಶೀಕರಿಸಿಕೊಳ್ಳುವ ಸಿದ್ಧಿಯನ್ನು ಪಡೆದವರೂ ಆಗುತ್ತಾರೆ. (೧೦)

'ಯಾರು ಇಂದ್ರಿಯಗಳಿಗೆ ವಶೀಭೂತರಾಗಿ ವಿಷಯಾಸಕ್ತರೂ', ಧರ್ಮವನ್ನು ಬಿಟ್ಟು, ಅಧರ್ಮವನ್ನು ಆಚರಿಸುವವರೂ, ಅವಿದ್ವಾಂಸರೂ ಆಗಿರುತ್ತಾರೋ, "ಅವರು ಮಾನವರಲ್ಲಿ ನೀಚ ಜನ್ಮವನ್ನು, ಕೆಟ್ಟಕೆಟ್ಟದಾದ ದುಃಖರೂಪವಾದ ಜನ್ಮವನ್ನು ಪಡೆಯುತ್ತಾರೆ." (೧೧)

ಹೀಗೆ ಸತ್ತ್ವ, ರಜಸ್ಸು ಮತ್ತು ತಮಸ್ಸು – ಈ ಗುಣಗಳಿಂದ ಯುಕ್ತನಾದ ಜೀವನು, ತೀವ್ರತೆಯಿಂದ ಎಂತೆಂತಹ ಕರ್ಮವನ್ನು ಮಾಡುತ್ತಾನೋ, ಅಂತಹ ಅಂತಹ ಕರ್ಮಕ್ಕೆ ಅಂತಹ – ಅಂತಹದೇ ಫಲವನ್ನು[೨೮] ಪಡೆದುಕೊಳ್ಳುತ್ತಾನೆ. ಯಾರು

---

೨೭. ಜನ್ಮ ಎಂದರೆ, ಇಲ್ಲಿ, ಮತ್ತು ಈ ಮುಂದೆ, 'ಯೋನಿ' ಎಂದು ಅರ್ಥವಲ್ಲ. ಗತಿ, ಪ್ರವೃತ್ತಿ ಅಥವಾ ವೃತ್ತಿ ಎಂದು ಅರ್ಥ. –ಸಂ.

೨೮. ವಿಶೇಷ ದಿಗ್ದರ್ಶನ :– ಮನುವು ತಮೋ–ರಜ–ಸತ್ವಗುಣಗಳ ಆಧಾರದಿಂದ ಪ್ರಾಪ್ತವಾಗುವ ವಿವಿಧ ಜನ್ಮಗಳನ್ನು ವರ್ಣಿಸುತ್ತಾ ಅಂತ್ಯಜಾತಿತ್ವ, ಶೂದ್ರತ್ವ–ಮೊದಲಾದ ಶಬ್ದಗಳನ್ನು ಬಳಸಿದ್ದಾನೆ. ಆದರೆ, ಇದಾವದೂ, ಜಾತಿಪದ್ಧತಿಯನ್ನು ಹುಟ್ಟಿನಿಂದ ಬರುವುದೆಂದು ಭಾವಿಸಲ್ಪಡುವ, ಮಾನವ ಸಮತಾಭಾವಕ್ಕೆ ಕೊಡಲಿಯ ಪೆಟ್ಟನ್ನು ಹಾಕುವ ಉಚ್ಚ–ನೀಚ ವಾದವನ್ನು ಸಮರ್ಥಿಸುವುದಿಲ್ಲ. ಮಹರ್ಷಿಗಳು ಜನ್ಮಗತ ಜಾತಿ ಪದ್ಧತಿಯನ್ನೇ ಒಪ್ಪುತ್ತಿರಲಿಲ್ಲ. ಇಲ್ಲಿ ಹೇಳಿರುವುದೆಲ್ಲಾ ಗುಣಗಳ ವೃತ್ತಿ–ಪ್ರವೃತ್ತಿ, ಪರಿಣಾಮದ ವಿಷಯ ಮಾತ್ರ. –ಅನು.

ಮುಕ್ತರಾಗಿರುತ್ತಾರೋ,[೨೯] ಅವರು ಗುಣಾತೀತರಾಗಿರುತ್ತಾರೆ. ಎಂದರೆ, ಸರ್ವಗುಣಗಳ ಸ್ವಭಾವದಲ್ಲಿ ಸಿಕ್ಕಿಕೊಳ್ಳದೆ, ಮಹಾಯೋಗಿಗಳಾಗಿ, ಮುಕ್ತಿಯ ಸಾಧನೆಯನ್ನು ಮಾಡಬೇಕು. ಏಕೆಂದರೆ:–

**ಯೋಗಶ್ಚಿತ್ತವೃತ್ತಿನಿರೋಧಃ** ॥ [೩೦] (ಪಾತಂಜಲ ಯೋಗ, ಸಮಾಧಿಪಾದ–೨)

**ತದಾ ದ್ರಷ್ಟುಃ ಸ್ವರೂಪೇಽವಸ್ಥಾನಮ್** ॥ [೩೧] (ಪಾತಂಜಲ ಯೋಗ, ಸಮಾಧಿಪಾದ–೩)

ಇವು ಪಾತಂಜಲ ಯೋಗ ಶಾಸ್ತ್ರದ ಸೂತ್ರಗಳು. **"**ಮಾನವನು ರಜೋಗುಣ–ತಮೋ ಗುಣಯುಕ್ತವಾದ ಕರ್ಮಗಳಿಂದ ಮನಸ್ಸನ್ನು (ದೂರ) ತಡೆದಿಟ್ಟು, ಶುದ್ಧ ಸತ್ತ್ವಗುಣಯುಕ್ತವಾದ ಕರ್ಮಗಳಿಂದಲೂ ಕೂಡ ಮನಸ್ಸನ್ನು ತಡೆದು, ಶುದ್ಧ ಸತ್ತ್ವಗುಣಯುಕ್ತನಾಗಿ, ಆ ಮೇಲೆ ಅದನ್ನೂ ಕೂಡ ನಿರೋಧಿಸಿ, ಚಿತ್ತವನ್ನು ಏಕಾಗ್ರವಾಗಿ ಮಾಡಬೇಕು. ಎಂದರೆ ಏಕೈಕನಾದ ಪರಮಾತ್ಮನ ಮತ್ತು ಧರ್ಮಯುಕ್ತ ಕರ್ಮದ ಅಗ್ರಭಾಗದಲ್ಲಿ ನಿಲ್ಲಿಸಿಡಬೇಕು. 'ನಿರುದ್ಧ'ವಾಗಿ ಮಾಡಬೇಕು ಎಂದರೆ–ಎಲ್ಲ ಕಡೆಯಿಂದಲೂ ಮನಸ್ಸಿನ ವೃತ್ತಿಯನ್ನು ತಡೆಯಬೇಕು.**"** (೧)

**"**ಯಾವಾಗ ಚಿತ್ತವು ಏಕಾಗ್ರವೂ ಮತ್ತು ನಿರುದ್ಧವೂ ಆಗುತ್ತದೋ, ಆಗ ಸರ್ವದ್ರಷ್ಟನಾದ ಈಶ್ವರನ ಸ್ವರೂಪದಲ್ಲಿ ಜೀವಾತ್ಮನು ಸ್ಥಿತಿಯನ್ನು ಪಡೆದುಕೊಳ್ಳುತ್ತಾ.**"** (೨) ಈ ಮೊದಲಾದ ಸೂತ್ರಗಳಲ್ಲಿ ಹಾಗೂ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಸಾಧನೆಗಳನ್ನು ಮೋಕ್ಷದ ಪ್ರಾಪ್ತಿಗಾಗಿ ಮಾಡಬೇಕು. ಮತ್ತು:–

**ಅಥ ತ್ರಿವಿಧದುಃಖಾತ್ಯಂತನಿವೃತ್ತಿರತ್ಯಂತಪುರುಷಾರ್ಥಃ** ॥ (ಸಾಂಖ್ಯ : ೧.೧)

ಯಾವುದು ಶರೀರಕ್ಕೆ ಸಂಬಂಧಿಸಿದ ನೋವು ಇದೆಯೋ, ಮತ್ತು ಯಾವುದು ತನ್ನ ಅಜ್ಞಾನದಿಂದಲೇ ಉದಿಸುವ ನೋವು ಇದೆಯೋ, ಅದು **ಆಧ್ಯಾತ್ಮಿಕ**; ಯಾವುದು ಅನ್ಯಜೀವರ ಕಡೆಯಿಂದ ಉಂಟಾಗುವ ದುಃಖದಿಂದ ಯುಕ್ತನಾಗುವುದಿದೆಯೋ, ಅದು **ಆಧಿಭೌತಿಕ** [೩೨] ಮತ್ತು ಯಾವುದು ಅತಿವೃಷ್ಟಿ, ಅತಿತಾಪ, ಅತಿ ಶೀತ ಮತ್ತು ಮನಸ್ಸು– ಇಂದ್ರಿಯಗಳ ಚಂಚಲತೆಯಿಂದ ಉಂಟಾಗುವುದೋ ಅದು **ಆಧಿದೈವಿಕ** ದುಃಖವಾಗಿದೆ. ಈ ತ್ರಿವಿಧ ದುಃಖಗಳಿಂದ ಬಿಡುಗಡೆ ಹೊಂದಿ ಮುಕ್ತಿಯನ್ನು ಪಡೆಯುವುದು ಸರ್ವೋನ್ನತ ಪುರುಷಾರ್ಥವಾಗಿದೆ.

ಇದರಿಂದ ಮುಂದಕ್ಕೆ ಆಚಾರ–ಅನಾಚಾರ ಮತ್ತು ಭಕ್ಷ್ಯ–ಅಭಕ್ಷ್ಯಗಳ ವಿಷಯವನ್ನು ಬರೆಯುವೆವು.

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**
**ಸುಭಾಷಾವಿಭೂಷಿತೇ ವಿದ್ಯಾಽವಿದ್ಯಾಬಂಧಮೋಕ್ಷವಿಷಯೇ**
**ನವಮ ಸಮುಲ್ಲಾಸಃ ಸಂಪೂರ್ಣಃ**

---

೨೯. ಎಂದರೆ, ಮುಕ್ತರಾಗಬಯಸುತ್ತಾರೋ. –ಯು.ಮೀ.

೩೦. ಪಾತಂಜಲ ಯೋಗ, ಸಮಾಧಿಪಾದ ೨

೩೧. ಪಾತಂಜಲ ಯೋಗ , ಸಮಾಧಿ ಪಾದ ೩

೩೨. ಮತ್ತು ಯಾವುದು ತನ್ನ ಅಜ್ಞಾನದಿಂದಲೇ ಉದಿಸುವ ನೋವು ಇದೆಯೋ ಅದು ಕೂಡ ಅದಿಭೌತಿಕ. –ಅನು.

# ಅಥ ದಶಮ ಸಮುಲ್ಲಾಸಾರಂಭಃ

## ಅಥಾಚಾರಾನಾಚಾರ ಭಕ್ಷ್ಯಾ ಭಕ್ಷ್ಯವಿಷಯಾನ್ ವ್ಯಾಖ್ಯಾಸ್ಯಾಮಃ

ಈಗ, ಧರ್ಮಯುಕ್ತವಾದ ಕರ್ಮಗಳ ಆಚರಣ, ಸುಶೀಲತ್ವ, ಸತ್ಪುರುಷರ ಸಂಗ ಮತ್ತು ಸದ್ವಿದ್ಯೆಯನ್ನು ಗ್ರಹಿಸುವುದರಲ್ಲಿ ಅಭಿರುಚಿ–ಮೊದಲಾದ ಯಾವ ಆಚಾರವಿದೆಯೋ, ಮತ್ತು ಇವಕ್ಕೆ ವಿರುದ್ಧವಾಗಿ ಯಾವುದು ಅನಾಚಾರವೆನಿಸುತ್ತದೋ, ಅದನ್ನು ಕುರಿತು ಬರೆಯುತ್ತೇವೆ:–

**ವಿದ್ವದ್ಭಿಃ ಸೇವಿತಃ ಸದ್ಭಿರ್ನಿತ್ಯಮದ್ವೇಷರಾಗಿಭಿಃ ।**
**ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತನ್ನಿಬೋಧತ ॥ ೧ ॥**
**ಕಾಮಾತ್ಮತಾ ನ ಪ್ರಶಸ್ತಾ ನ ಚೈಹೇವಾಸ್ತ್ಯಕಾಮತಾ ।**
**ಕಾಮ್ಯೋ ಹಿ ವೇದಾಧಿಗಮಃ ಕರ್ಮಯೋಗಶ್ಚ ವೈದಿಕಃ ॥ ೨ ॥**
**ಸಂಕಲ್ಪಮೂಲಃ ಕಾಮೋ ವೈ ಯಜ್ಞಾಃ ಸಂಕಲ್ಪಸಂಭವಾಃ ।**
**ವ್ರತಾನಿ ಯಮಧರ್ಮಾಶ್ಚ ಸರ್ವೇ ಸಂಕಲ್ಪಜಾಃ ಸ್ಮೃತಾಃ ॥ ೩ ॥**
**ಅಕಾಮಸ್ಯ ಕ್ರಿಯಾ ಕಾಚಿದ್ದೃಶ್ಯತೇ ನೇಹ ಕರ್ಹಿಚಿತ್ ।**
**ಯದ್ಯದ್ಧಿ ಕುರುತೇ ಕಿಂಚಿತ್ತತ್ತತ್ಕಾಮಸ್ಯ ಚೇಷ್ಟಿತಮ್ ॥ ೪ ॥** (ಮನು:– ೨. ೧–೪)
**ವೇದೋಽಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಮ್ ।**
**ಆಚಾರಶ್ಚೈವ ಸಾಧೂನಾಮಾತ್ಮನಸ್ತುಷ್ಟಿರೇವ ಚ ॥ ೫ ॥** (ಮನು:– ೨.೬)
**ಸರ್ವಂತು ಸಮವೇಕ್ಷ್ಯೇದಂ ನಿಖಿಲಂ ಜ್ಞಾನಚಕ್ಷುಷಾ ।**
**ಶ್ರುತಿಪ್ರಾಮಾಣ್ಯತೋ ವಿದ್ವಾನ್ ಸ್ವಧರ್ಮೇ ನಿವಿಶೇತ ವೈ ॥ ೬ ॥**
**ಶ್ರುತಿಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿ ಮಾನವಃ ।**
**ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಮ್ ॥ ೭ ॥** (ಮನು :– ೨.೮.೯)
**ಯೋಽವ ಮನ್ಯೇತ ತೇ ಮೂಲೇ ಹೇತುಶಾಸ್ತ್ರಾಶ್ರಯಾದ್ವಿಜಃ ।**
**ಸ ಸಾಧುಭಿರ್ಬಹಿಷ್ಕಾರ್ಯೋ ನಾಸ್ತಿಕೋ ವೇದನಿಂದಕಃ ॥ ೮ ॥** (ಮನು :– ೨.೧೧)

**ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।**

**ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಮ್ ॥ ೯ ॥** (ಮನು :-೨.೧೨)

**ಅರ್ಥಕಾಮೇಷ್ವಸಕ್ತಾನಾಂ ಧರ್ಮಜ್ಞಾನಂ ವಿಧೀಯತೇ ।**

**ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ॥ ೧೦॥** (ಮನು: ೨.೧೩)

**ವೈದಿಕೈಃ ಕರ್ಮಭಿಃ ಪುಣ್ಯೈರ್ನಿಷೇಕಾದಿರ್ದ್ವಿಜನ್ಮನಾಮ್ ।**

**ಕಾರ್ಯಃ ಶರೀರಸಂಸ್ಕಾರಃ ಪಾವನಃ ಪ್ರೇತ್ಯ ಚೇಹ ಚ ॥ ೧೧ ॥** (ಮನು:-೨.೨೬)

**ಕೇಶಾಂತಃ ಷೋಡಶೇ ವರ್ಷೇ ಬ್ರಾಹ್ಮಣಸ್ಯ ವೀಧೀಯತೇ ।**

**ರಾಜನ್ಯ ಬಂಧೋರ್ದ್ವಾವಿಂಶೇ ವೈಶ್ಯಸ್ಯ ದ್ವ್ಯಧಿಕೇ ತತಃ ॥ ೧೨ ॥** (ಮನು:-೨.೬೫)

ರಾಗದ್ವೇಷರಹಿತರಾದ ವಿದ್ವಜ್ಜನರು ಯಾವುದರ ಅನುಷ್ಠಾನವನ್ನು ಸದಾ ಮಾಡುತ್ತಾರೋ, ಯಾವುದನ್ನು ಹೃದಯದಿಂದ, ಎಂದರೆ ಆತ್ಮನಿಂದ ಸತ್ಯಕರ್ತವ್ಯವೆಂದು ತಿಳಿಯುತ್ತಾರೋ, ಆ ಧರ್ಮವೇ ಮಾನನೀಯ ಮತ್ತು ಕರಣೀಯವೆಂಬ ವಿಷಯದ ಮೇಲೆ ಮಾನವರು ಸದಾ ಗಮನವಿಡಬೇಕು. (೧)

ಏತಕ್ಕೆಂದರೆ, ಈ ಜಗತ್ತಿನಲ್ಲಿ ಅತ್ಯಂತ ಕಾಮಾತ್ಮತ್ವ ಹಾಗೂ ಅತ್ಯಂತ ನಿಷ್ಕಾಮತ್ವ[೧] ಶ್ರೇಷ್ಠವಲ್ಲ. ವೇದಾರ್ಥಜ್ಞಾನ ಮತ್ತು ವೇದೋಕ್ತ ಕರ್ಮ–ಈ ಎಲ್ಲವೂ ಕಾಮನೆಯಿಂದಲೇ ಸಿದ್ಧಿಸುತ್ತವೆ. (೨)

ಯಾವನಾದರೂ "ನಾನು ಇಚ್ಛಾಹೀನನು ಮತ್ತು ನಿಷ್ಕಾಮನು; ಅಥವಾ ಹಾಗೆ ಆಗಿ ಹೋಗುವೆ"–ಎಂದು ಹೇಳಿದರೆ, ಅದು ಎಂದಿಗೂ ಆಗಲಾರದು. ಏಕೆಂದರೆ–ಸಮಸ್ತ ಕಾರ್ಯಗಳೂ, ಎಂದರೆ, ಯಜ್ಞಗಳು, ಸತ್ಯಭಾಷಣ ಮೊದಲಾದ ವ್ರತಗಳು, ಯಮನಿಯಮರೂಪದ ಧರ್ಮ ಮೊದಲಾದುವು ಸಂಕಲ್ಪದಿಂದಲೇ ನೆರವೇರುತ್ತವೆ. (೩)

ಏಕೆಂದರೆ, ಯಾವ ಯಾವ ಕೈಗಳು, ಕಾಲುಗಳು, ನೇತ್ರಗಳು, ಮನಸ್ಸು ಮೊದಲಾದುವು ಸಂಚಾಲನ ಮಾಡಲ್ಪಡುತ್ತವೋ, ಅವೆಲ್ಲವೂ ಕಾಮನೆಯಿಂದಲೇ ಸಂಚಾಲಿತವಾಗುತ್ತವೆ. ಇಚ್ಛೆಯಿಲ್ಲವಾದರೆ, ಕಣ್ಣನ್ನು ತೆರೆಯುವುದು ಮತ್ತು ಮುಚ್ಚುವುದೂ ಕೂಡ ಆಗಲಾರದು. (೪)

ಆದುದರಿಂದ, ಸಂಪೂರ್ಣ ವೇದಗಳು, ಮನುಸ್ಮೃತಿ ಮತ್ತು ಋಷಿ–ಪ್ರಣೀತವಾದ ಶಾಸ್ತ್ರಗಳು, ಸತ್ಪುರುಷರ ಆಚಾರ ಮತ್ತು ಯಾವ ಯಾವ ಕರ್ಮದಲ್ಲಿ ತನ್ನ ಆತ್ಮ ಪ್ರಸನ್ನನಾಗಿರುವನೋ, ಎಂದರೆ–ಭಯ, ಸಂಶಯ, ಲಜ್ಜೆ ಯಾವ ಕರ್ಮಗಳಲ್ಲಿ ಉಂಟಾಗುವುದಿಲ್ಲವೋ, ಆ ಕರ್ಮಗಳನ್ನು ಆಚರಿಸುವುದು ಉಚಿತವಾಗಿರುತ್ತದೆ. ನೋಡಿರಿ, ಯಾವಾಗ ಯಾವನಾದರೂ ಮಿಥ್ಯಾಭಾಷಣ, ಕಳ್ಳತನ ಮೊದಲಾದುದರ ಇಚ್ಛೆಯನ್ನು ಮಾಡಿಕೊಳ್ಳುತ್ತಾನೋ, ಆಗಲೇ ಅವನ ಆತ್ಮನಲ್ಲಿ ಭಯ, ಸಂಶಯ, ಲಜ್ಜೆ ಅವಶ್ಯವಾಗಿ ಉತ್ಪನ್ನವಾಗುತ್ತವೆ. ಆದುದರಿಂದ, ಆ ಕರ್ಮ ಮಾಡಲು ಅರ್ಹವಾದುದಲ್ಲ. (೫)

ಮಾನವನು ಸಂಪೂರ್ಣ ಶಾಸ್ತ್ರಗಳು, ವೇದಗಳು, ಸತ್ಪುರುಷರ ಆಚಾರ, ತನ್ನ ಆತ್ಮನಿಗೆ ವಿರುದ್ಧವಲ್ಲದುದು – ಎಲ್ಲವನ್ನೂ ಚೆನ್ನಾಗಿ ಆಲೋಚಿಸಿ, ಜ್ಞಾನವನ್ನೇ ನೇತ್ರವನ್ನಾಗಿ ಮಾಡಿಕೊಂಡು, ಶ್ರುತಿಪ್ರಮಾಣದಿಂದ, ತನ್ನ ಆತ್ಮನಿಗೆ ಅನುಕೂಲವಾದ ಧರ್ಮದಲ್ಲಿ ಪ್ರವೇಶಿಸಬೇಕು. (೬)

ಏಕೆಂದರೆ, ಯಾವ ಮಾನವನು ವೇದೋಕ್ತವಾದ ಮತ್ತು ವೇದಕ್ಕೆ ವಿರುದ್ಧವಲ್ಲದ ಸ್ಮೃತಿಯಿಂದ ಉಕ್ತವಾದ ಧರ್ಮವನ್ನು ಅನುಷ್ಠಾನ ಮಾಡುತ್ತಾನೋ, ಅವನು ಈ ಲೋಕದಲ್ಲಿ ಕೀರ್ತಿಯನ್ನೂ ಮತ್ತು ಮೃತನಾದ ಮೇಲೆ ಸರ್ವೋತ್ತಮ ಆಧ್ಯಾತ್ಮಿಕ ಸುಖವನ್ನೂ ಗಳಿಸಿಕೊಳ್ಳುತ್ತಾನೆ. (೭)

---

೧. ಭಗವದ್ಗೀತೆಯ "ನಿಷ್ಕಾಮ ಕರ್ಮ" ಸಂದೇಶದ ಅಪಭಾಷ್ಯಗಳಿಂದ ದೇಶಕ್ಕೆ ಎಷ್ಟು ಹಾನಿಯಾಯಿತೆಂದು ಅರಿತವರಲ್ಲಿ ದಯಾನಂದರು ಮೊದಲನೆಯವರು. ಈ ಸಂದೇಶದ ವಿರೋಧವನ್ನು ಮಾಡಿದವರಲ್ಲಿಯೂ ಅವರೇ ಪ್ರಥಮರು. ಏಕೆಂದರೆ, ಈ ಸಂದೇಶ ಮನಸ್ಮೃತಿಗೂ, ವೇದಕ್ಕೂ ವಿರುದ್ಧ. ಆದ್ದರಿಂದಲೇ 'ಭಗವದ್ಗೀತಾ' ವೈದಿಕ ಯಜ್ಞಗಳ ನೆವದಲ್ಲಿ ವೇದಗಳನ್ನು, ಯಾಜ್ಞಿಕರನ್ನು ನಿಂದಿಸುತ್ತದೆ.

ವೇದಗಳನ್ನು ಶ್ರುತಿಯೆಂದೂ ಮತ್ತು ಧರ್ಮಶಾಸ್ತ್ರವನ್ನು ಸ್ಮೃತಿಯೆಂದೂ ಹೇಳುತ್ತಾರೆ. ಇವುಗಳಿಂದ ಸಮಸ್ತ ಕರ್ತವ್ಯಾಕರ್ತವ್ಯಗಳ ನಿಶ್ಚಯವನ್ನು ಮಾಡಬೇಕು.

ಯಾವನಾದರೂ ಮಾನವನು ವೇದಗಳ ಮತ್ತು ವೇದಾನುಕೂಲವಾದ ಆಪ್ತಗ್ರಂಥಗಳ ಅಪಮಾನವನ್ನು ಮಾಡಿದರೆ, ಶ್ರೇಷ್ಠರಾದ ಜನರು ಅವನನ್ನು ಸಮಾಜದಿಂದ ಹೊರಹಾಕಬೇಕು. ಏಕೆಂದರೆ-ಯಾವನು ವೇದದ ನಿಂದೆಯನ್ನು ಮಾಡುತ್ತಾನೋ, ಅವನೇ ನಾಸ್ತಿಕನೆನಿಸುತ್ತಾನೆ. (೮)

ಆದುದರಿಂದ ವೇದಗಳು, ಸ್ಮೃತಿ,[೨] ಸತ್ಪುರುಷರ ಆಚಾರ ಮತ್ತು ತನ್ನ ಆತ್ಮನ ಜ್ಞಾನಕ್ಕೆ ಅವಿರುದ್ಧವಾದ ಪ್ರಿಯಾಚರಣ-ಇವು ನಾಲ್ಕು ಧರ್ಮದ ಲಕ್ಷಣಗಳಾಗಿವೆ. ಎಂದರೆ-ಇವುಗಳಿಂದಲೇ ಧರ್ಮವು ಗುರುತಿಸಲ್ಪಡುತ್ತದೆ. (೯)

ಆದರೆ ಯಾವನು ದ್ರವ್ಯಗಳ ಲೋಭಕ್ಕೆ ಮತ್ತು ಕಾಮಕ್ಕೆ, ಎಂದರೆ ವಿಷಯಸೇವನಕ್ಕೆ ಸಿಕ್ಕಿಕೊಳ್ಳದೆ ಇರುತ್ತಾನೋ, ಅವನಿಗೆ ಮಾತ್ರ ಧರ್ಮದ ಜ್ಞಾನ ಉಂಟಾಗುತ್ತದೆ. ಯಾರು ಧರ್ಮವನ್ನು ತಿಳಿಯಲು ಇಚ್ಛಿಸುತ್ತಾರೋ, ಅವರಿಗೆ ವೇದಗಳೇ ಪರಮ ಪ್ರಮಾಣವಾಗಿದೆ. (೧೦)

ಇದೇ ಕಾರಣದಿಂದ, ವೇದೋಕ್ತವಾದ ಪುಣ್ಯಕರ್ಮಗಳ ಮೂಲಕ, ಈ ಜನ್ಮದಲ್ಲಿ ಮತ್ತು ಪರಜನ್ಮದಲ್ಲಿ ಪವಿತ್ರಗೊಳಿಸುವಂತಹವಾದ ನಿಷೇಕ-ಮೊದಲಾದ ಸಂಸ್ಕಾರಗಳನ್ನು ತಮ್ಮ ಸಂತತಿಗೆ ಮಾಡಿಸುವುದು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗೂ, ಸಮಸ್ತ ಮಾನವರಿಗೂ ಉಚಿತವಾಗಿರುತ್ತದೆ.[೩] (೧೧)

ಬ್ರಾಹ್ಮಣವರ್ಣೀಯನಿಗೆ ಹದಿನಾರನೆಯ, ಕ್ಷತ್ರಿಯವರ್ಣೀಯನಿಗೆ ಇಪ್ಪತ್ತೆರಡನೆಯ ಹಾಗೂ ವೈಶ್ಯನಿಗೆ ಇಪ್ಪತ್ತುನಾಲ್ಕನೆಯ ವರ್ಷದಲ್ಲಿ, ಕೇಶಾಂತಕರ್ಮ, (ಎಂದರ ಉಪಯನಕ್ಕೆ ಸಂಬಂಧಿಸಿದ) ಮುಂಡನವು ಮಾಡಲ್ಪಡಬೇಕು. (ಇದೇ ದೀರ್ಘತಮ ಅವಧಿಯಾಗಿದೆ.) ಎಂದರೆ, ಈ ವಿಧಿಯ ನಂತರ, ಕೇವಲ ಶಿಖೆ(ಜುಟ್ಟು)ಯನ್ನಿಟ್ಟುಕೊಂಡು, ಬೇರೆಯ ಗಡ್ಡಮೀಸೆಗಳು ಮತ್ತು ತಲೆಗೂದಲನ್ನು ಸದಾ ಮುಂಡನಮಾಡಿಸುತ್ತಾ ಇರಬೇಕು. ಆದರೆ, ಪುನಃ ಎಂದಿಗೂ ಬೆಳೆಯಿಸಬಾರದು. ಮತ್ತು ಶೀತಪ್ರಧಾನವಾದ ದೇಶವಾಗಿದ್ದರೆ, ಇಷ್ಟಬಂದಂತೆ ಮಾಡಬಹುದು, ಬೇಕಾದರೆ ಐದು[೪] ಶಿಖೆಗಳನ್ನಿಟ್ಟುಕೊಳ್ಳಬಹುದು. ಮತ್ತು ಅತ್ಯುಷ್ಣವಾದ ದೇಶವಾಗಿದ್ದರೆ, ಶಿಖೆಯೊಂದಿಗೆ ಎಲ್ಲವನ್ನೂ ಬೋಳಿಸಿಬಿಡಬಹುದು. ಏಕೆಂದರೆ, ತಲೆಯ ಮೇಲೆ ಕೂದಲಿದ್ದರೆ, ಉಷ್ಣತ್ವ ಹೆಚ್ಚಾಗುತ್ತದೆ. ಮತ್ತು ಅದರಿಂದ ಬುದ್ಧಿ[೫] ಕಡಿಮೆಯಾಗುತ್ತದೆ. ಗಡ್ಡ-ಮೀಸೆಗಳನ್ನು ಇಟ್ಟುಕೊಳ್ಳುವುದರಿಂದ, ಭೋಜನಪಾನಗಳು ಚೆನ್ನಾಗಿ ಆಗುವುದಿಲ್ಲ. ಮತ್ತು ಎಂಜಲೂ ಕೂಡ ಕೂದಲಿನಲ್ಲಿ ಉಳಿದುಹೋಗುವುದು. (೧೨)

**ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು ।**
**ಸಂಯಮೇ ಯತ್ನಮಾತಿಷ್ಠೇದ್ವಿದ್ವಾನ್ ಯಂತೇವ ವಾಜಿನಾಮ್ ॥ ೧ ॥** (ಮನು:-೨.೮೮)

**ಇಂದ್ರಿಯಾಣಾಂ ಪ್ರಸಂಗೇಣ ದೋಷಮೃಚ್ಛತ್ಯಸಂಶಯಮ್ ।**
**ಸಂನಿಯಮ್ಯ ತು ತಾನ್ಯೇವ ತಪಃಸಿದ್ಧಿಂ ನಿಯಚ್ಛತಿ ॥ ೨ ॥**

**ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।**
**ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ[೬] ॥ ೩ ॥** (ಮನು:- ೨.೯೩-೯೪)

**ವೇದಾಸ್ತ್ಯಾಗಶ್ಚ ಯಜ್ಞಾಶ್ಚ ನಿಯಮಾಶ್ಚ ತಪಾಂಸಿ ಚ ।**
**ನ ವಿಪ್ರದುಷ್ಟಭಾವಸ್ಯ ಸಿದ್ಧಿಂ ಗಚ್ಛಂತಿ ಕರ್ಹಿಚಿತ್ ॥ ೪ ॥**

---

೨. ಎಂದರೆ, ಪ್ರಕ್ಷಿಪ್ತ ಶ್ಲೋಕಗಳನ್ನು ಬಿಟ್ಟು, ಕೇವಲ ಮನುಸ್ಮೃತಿ.

೩. 'ನಿಷೇಕ, ಮೊದಲಾದ ಷೋಡಶ ಸಂಸ್ಕಾರಗಳ ವಿಧಿ 'ಸಂಸ್ಕಾರವಿಧಿ'ಯಲ್ಲಿ ವರ್ಣಿಸಲ್ಪಟ್ಟಿದೆ.

೪. ಐದು ಕ್ಲೇಶದ ಉಲ್ಲೇಖ 'ಸಂಸ್ಕಾರವಿಧಿ' ಯ ಚೂಡಾಕರ್ಮ ಪ್ರಕರಣದಲ್ಲಿ ಮಾಡಲಾಗಿದೆ. -ಯು.ಮೀ.

೫. ಈ ಕೂದಲಿನ ಸಂಪ್ರದಾಯದವರ ಚೇಷ್ಟೆಯ ಪರಿಣಾಮವಾದ ಭಯಂಕರ ರಕ್ತಪಾತವನ್ನು ದೇಶವು ಕಳೆದ ಹಲವಾರು ವರ್ಷಗಳಿಂದ ಭೋಗಿಸುತ್ತಿದೆ.

೬. ಈ ಶ್ಲೋಕವನ್ನು ಮಹಾಭಾರತದಲ್ಲಿ 'ಯಯಾತಿ ರಾಜನ' ಬಾಯಿಯಿಂದಲೂ ಹೊರಡಿಸಲಾಗಿದೆ.

**ವಶೇ ಕೃತ್ವೇಂದ್ರಿಯಗ್ರಾಮಂ ಸಂಯಮ್ಯ ಚ ಮನಸ್ತಥಾ ।**

**ಸರ್ವಾನ್ ಸಂ ಸಾಧಯೇದರ್ಥಾನಕ್ಷಿಣ್ವನ್ ಯೋಗತಸ್ತನುಮ್ ॥ ೫ ॥** (ಮನು :- ೨.೯೭.೧೦೦)

**ಶ್ರುತ್ವಾ ಸ್ಪೃಷ್ಟ್ವಾ ಚ ದೃಷ್ಟ್ವಾ ಚ ಭುಕ್ತ್ವಾ ಘ್ರಾತ್ವಾ ಚ ಯೋ ನರಃ ।**

**ನ ಹೃಷ್ಯತಿ ಗ್ಲಾಯತಿ ವಾ ಸ ವಿಜ್ಞೇಯೋ ಜಿತೇಂದ್ರಿಯಃ ॥ ೬ ॥** (ಮನು :- ೨.೯೮)

**ನಾಪೃಷ್ಟಃ ಕಸ್ಯಚಿದ್ಬ್ರೂಯಾನ್ನ ಚಾನ್ಯಾಯೇನ ಪೃಚ್ಛತಃ ।**

**ಜಾನನ್ನಪಿ ಹಿ ಮೇಧಾವೀ ಜಡವಲ್ಲೋಕ ಆಚರೇತ್ ॥ ೭ ॥** (ಮನು:- ೨.೧೧೦)

**ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಭವತಿ ಪಂಚಮೀ ।**

**ಏತಾನಿ ಮಾನ್ಯ ಸ್ಥಾನಾನಿ ಗರೀಯೋ ಯದ್ಯದುತ್ತರಮ್ ॥ ೮ ॥** (ಮನು:-೨.೧೩೬)

**ಅಜ್ಞೋಭವತಿ ವೈ ಬಾಲಃ ಪಿತಾ ಭವತಿ ಮಂತ್ರದಃ ।**

**ಅಜ್ಞಂ ಹಿ ಬಾಲಮಿತ್ಯಾಹುಃ ಪಿತೇತ್ಯೇವ ತು ಮಂತ್ರದಮ್ ॥ ೯ ॥**

**ನ ಹಾಯನೈರ್ನ ಪಲಿತೈಃ ನ ವಿತ್ತೇನ ನ ಬಂಧುಭಿಃ ।**

**ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ನ ನೋ ಮಹಾನ್ ॥ ೧೦ ॥** (ಮನು:- ೨.೧೫೩- ೧೫೪)

**ವಿಪ್ರಾಣಾಂ ಜ್ಞಾನತೋ ಜ್ಯೈಷ್ಠ್ಯಂ ಕ್ಷತ್ರಿಯಾಣಾಂ ತು ವೀರ್ಯತಃ ।**

**ವೈಶ್ಯಾನಾಂ ಧಾನ್ಯಧನತಃ ಶೂದ್ರಾಣಾಮೇವ ಜನ್ಮತಃ ॥ ೧೧ ॥**

**ನ ತೇನ ವೃದ್ಧೋ ಭವತಿ ಯೇನಾಸ್ಯ ಪಲಿತಂ ಶಿರಃ ।**

**ಯೋ ವೈ ಯುವಾಽಪ್ಯಧೀಯಾನಸ್ತಂ ದೇವಾಃ ಸ್ಥವಿರಂ ವಿದುಃ ॥ ೧೨ ॥**

**ಯಥಾ ಕಾಷ್ಠಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ ॥**

**ಯಶ್ಚ ವಿಪ್ರೋಽನಧೀಯಾನಸ್ತ್ರಯಸ್ತೇ ನಾಮ ಬಿಭ್ರತಿ ॥ ೧೩ ॥** (ಮನು:-೨.೧೫೫.೧೫೭)

**ಅಹಿಂಸಯೈವ ಭೂತಾನಾಂ ಕಾರ್ಯಂ ಶ್ರೇಯೋಽನು ಶಾಸನಮ್ ।**

**ವಾಕ್ಚೈವ ಮಧುರಾ ಶ್ಲಕ್ಷ್ಣಾಪ್ರಯೋಜ್ಯಾ ಧರ್ಮಮಿಚ್ಛತಾ ॥ ೧೪ ॥** (ಮನು:-೨.೧೫೯)

ಯಾವ ಇಂದ್ರಿಯಗಳು ಚಿತ್ತವನ್ನು ಸೆಳೆದುಕೊಳ್ಳುವ ವಿಷಯಗಳಲ್ಲಿ ಪ್ರವೃತ್ತಗೊಳಿಸುತ್ತವೋ, ಅವುಗಳನ್ನು ತಡೆಯಲು ಪ್ರಯತ್ನಮಾಡಬೇಕಾದುದೇ ಮಾನವನ ಮುಖ್ಯವಾದ ಆಚಾರವಾಗಿದೆ. ಹೇಗೆ ಸಾರಥಿಯು ಕುದುರೆಯನ್ನು ತಡೆದು, ಶುದ್ಧವಾದ ಮಾರ್ಗದಲ್ಲಿ ನಡೆಯಿಸುತ್ತಾನೋ, ಹಾಗೆ ಇವನ್ನು ತನ್ನ ವಶದಲ್ಲಿಟ್ಟುಕೊಂಡು, ಅಧರ್ಮ ಮಾರ್ಗದಿಂದ ದೂರಸರಿಸಿ, ಧರ್ಮಮಾರ್ಗದಲ್ಲಿ ಸದಾ ನಡೆಯಿಸುತ್ತಾ ಇರಬೇಕು. (೧)

ಏಕೆಂದರೆ, ಇಂದ್ರಿಯಗಳನ್ನು ವಿಷಯಾಸಕ್ತಿಯಲ್ಲಿ ಮತ್ತು ಅಧರ್ಮದಲ್ಲಿ ಪ್ರವೃತ್ತಗೊಳಿಸುವುದರಿಂದ, ಮಾನವನು ನಿಶ್ಚಯವಾಗಿಯೂ ದೋಷವನ್ನು ಹೊಂದುತ್ತಾನೆ ಮತ್ತು ಯಾವಾಗ ಇವನ್ನು ಗೆದ್ದು, ಧರ್ಮದಲ್ಲಿ ಪ್ರವೃತ್ತಗೊಳಿಸುತ್ತಾನೋ, ಆಗಲೇ ಅಭೀಷ್ಟ ಸಿದ್ಧಿಯನ್ನು ಹೊಂದುತ್ತಾನೆ. (೨)

ಹೇಗೆ ಸಮಿತ್ತನ್ನೂ ಮತ್ತು ತುಪ್ಪವನ್ನೂ ಹಾಕುವುದರಿಂದ ಬೆಂಕಿ ಹೆಚ್ಚುತ್ತಾ ಹೋಗುತ್ತದೋ, ಹಾಗೆಯೇ, ಕಾಮಗಳ ಉಪಭೋಗದಿಂದ, ಕಾಮವೆಂದಿಗೂ ಶಾಂತವಾಗುವುದಿಲ್ಲ; ಆದರೆ ಹೆಚ್ಚುತ್ತಲೇ ಹೋಗುತ್ತದೆ-ಎನ್ನುವುದು ನಿಶ್ಚಯವಾಗಿದೆ. ಆದುದರಿಂದ ಮಾನವನು ಎಂದಿಗೂ ವಿಷಯಾಸಕ್ತನಾಗಬಾರದು. (೩)

ಯಾವ ಪುರುಷನು ತನ್ನ ಇಂದ್ರಿಯಗಳನ್ನು ಜಯಿಸಿಲ್ಲವೋ, ಅವನನ್ನು ವಿ+ಪ್ರ+ದುಷ್ಟ–ಎಂದರೆ ಮಹಾದೋಷಯುಕ್ತನು–ಎನ್ನುತ್ತಾರೆ. ಅಂತಹ ಇಂದ್ರಿಯವಿಜಯಿಯಲ್ಲದವನು ಗಳಿಸಿದ ವೇದ ಜ್ಞಾನವಾಗಲಿ, ತ್ಯಾಗವಾಗಲಿ, ಯಜ್ಞವಾಗಲಿ, ನಿಯಮವಾಗಲಿ ಮತ್ತು ಧರ್ಮಾಚರಣವೇ ಆಗಲಿ, ಸಿದ್ಧಿಯನ್ನು ತರುವುದಿಲ್ಲ. ಆದರೆ, ಇವೆಲ್ಲವೂ ಜಿತೇಂದ್ರಿಯನಾದ ಧಾರ್ಮಿಕ ಪುರುಷನಿಗೆ ಸಿದ್ಧಿಯನ್ನುಂಟುಮಾಡುತ್ತವೆ. (೪)

ಆದುದರಿಂದ ಐದು ಕರ್ಮೇಂದ್ರಿಯಗಳನ್ನೂ, ಐದು ಜ್ಞಾನೇಂದ್ರಿಯಗಳನ್ನೂ, ಮತ್ತು ಹನ್ನೊಂದನೆಯದಾದ ಮನಸ್ಸನ್ನೂ ತನ್ನ ವಶದಲ್ಲಿಟ್ಟುಕೊಂಡು, ಯುಕ್ತಾಹಾರ ವಿಹಾರ ಯೋಗದಿಂದ ಶರೀರದ ರಕ್ಷಣೆಯನ್ನು ಮಾಡಿಕೊಳ್ಳುತ್ತಾ, ಸರ್ವ ಉದ್ದೇಶ್ಯಗಳನ್ನೂ ಸಾಧಿಸಿಕೊಳ್ಳಬೇಕು. (೫)

ಯಾವನು ಸ್ತುತಿಯನ್ನಾಲಿಸಿ ಹರ್ಷವನ್ನೂ, ನಿಂದೆಯನ್ನಾಲಿಸಿ ಶೋಕವನ್ನೂ, ಉತ್ತಮವಾದ ಸ್ಪರ್ಶಮಾಡಿ ಸುಖವನ್ನೂ, ಮತ್ತು ಕೆಟ್ಟದರ ಸ್ಪರ್ಶದಿಂದ ದುಃಖವನ್ನೂ ಹೊಂದುವುದಿಲ್ಲವೋ, ಸುಂದರರೂಪವನ್ನು ನೋಡಿ ಪ್ರಸನ್ನನೂ ಮತ್ತು ದುಷ್ಟರೂಪವನ್ನು ನೋಡಿ ಅಪ್ರಸನ್ನನೂ, ಉತ್ತಮ ಭೋಜನವನ್ನು ಮಾಡಿ ಸುಖಿಯೂ ಮತ್ತು ನಿಕೃಷ್ಟ ಭೋಜನವನ್ನು ಮಾಡಿ ದುಃಖಿತನೂ ಆಗುವುದಿಲ್ಲವೋ, ಸುಂಗಂಧದಲ್ಲಿ ಅಭಿರುಚಿಯನ್ನೂ, ದುರ್ಗಂಧದಲ್ಲಿ ತಿರಸ್ಕಾರವನ್ನೂ ಹೊಂದುವುದಿಲ್ಲವೋ, ಅವನನ್ನು ಜಿತೇಂದ್ರಿಯನೆನ್ನುತ್ತಾರೆ. (೬)

ಎಂದಿಗೂ, ಕೇಳದಿರುವಾಗ, ಅಥವಾ ಅನ್ಯಾಯದಿಂದ ಕೇಳುವವನಿಗೆ, ಮತ್ತು ಯಾವನು ಕಪಟದಿಂದ ಕೇಳುತ್ತಾನೋ, ಅವನಿಗೆ ಉತ್ತರವನ್ನು ಕೊಡಬಾರದು. ಅಂತಹವನ ಮುಂದೆ ಬುದ್ಧಿವಂತನು ಜಡದಂತೆ ಇದ್ದುಬಿಡಬೇಕು. ಅಹುದು; ಯಾರು ನಿಷ್ಕಪಟರೂ ಮತ್ತು ಜಿಜ್ಞಾಸುಗಳೂ ಆಗಿರುತ್ತಾರೋ, ಅವರಿಗೆ, ಕೇಳದಿದ್ದರೂ ಕೂಡ ಉಪದೇಶ ಮಾಡಬೇಕು. (೭)

ಒಂದನೆಯದು ಧನ, ಎರಡನೆಯದು ಬಂಧು–ಕುಟುಂಬ–ಕುಲ, ಮೂರನೆಯದು ವಯಸ್ಸು, ನಾಲ್ಕನೆಯದು ಉತ್ತಮಕರ್ಮ ಮತ್ತು ಐದನೆಯದು ಶ್ರೇಷ್ಠವಿದ್ಯೆ–ಈ ಐದೂ ಗೌರವಸ್ಥಾನಗಳಾಗಿವೆ. ಆದರೆ, ಧನಕ್ಕಿಂತ ಬಂಧು ಉತ್ತಮ; ಬಂಧುವಿಗಿಂತ ಹೆಚ್ಚು ವಯಸ್ಸು; ವಯಸ್ಸಿಗಿಂತ ಕರ್ಮವು ಶ್ರೇಷ್ಠ; ಮತ್ತು ಕರ್ಮಕ್ಕಿಂತ ಪವಿತ್ರವಾದುದು ವಿದ್ಯೆ, ಆಯಾ ತತ್ತ್ವಗಳಿಂದ ಯುಕ್ತರಾದವರು ಉತ್ತರೋತ್ತರವಾಗಿ ಅಧಿಕ–ಅಧಿಕ ಮಾನನೀಯರಾಗಿರುತ್ತಾರೆ. (೮)

ಏಕೆಂದರೆ, ನೂರು ವರ್ಷದವನೇ ಬೇಕಾದರೂ ಆಗಿರಲಿ; ಆದರೆ ಯಾವನು ವಿದ್ಯಾ ವಿಜ್ಞಾನರಹಿತನಾಗಿರುತ್ತಾನೋ ಅವನು ಬಾಲಕನು ಮತ್ತು ಯಾವನು ವಿದ್ಯಾ–ವಿಜ್ಞಾನದಾಯಕನಾಗಿರುತ್ತಾನೋ, ಆ ಬಾಲಕನೂ ಕೂಡ ವೃದ್ಧನೆಂದು ಒಪ್ಪಿಕೊಳ್ಳಬೇಕು. ಏಕೆಂದರೆ, ಸಕಲ ಶಾಸ್ತ್ರಗಳೂ, ಆಪ್ತರೂ, ವಿದ್ವಾಂಸರೂ ಅಜ್ಞಾನಿಯನ್ನು ಬಾಲಕನೆಂದೂ ಮತ್ತು ಜ್ಞಾನಿಯನ್ನು ಪಿತೃವೆಂದು ಹೇಳುತ್ತಾರೆ. (೯)

ಹೆಚ್ಚು ವರ್ಷಗಳು ಉರುಳುವುದರಿಂದ, ಕೂದಲೂ, ನೆರೆಯುವುದರಿಂದ ಅಧಿಕ ಧನದಿಂದ ಮತ್ತು ದೊಡ್ಡ ಕುಟುಂಬದ ಇರುವಿಕೆಯಿಂದ (ಯಾವನೂ) ವೃದ್ಧನಾಗುವುದಿಲ್ಲ. ಆದರೆ, ಯಾವನು ನಮ್ಮ ನಡುವೆ ವಿದ್ಯಾ– ವಿಜ್ಞಾನದಲ್ಲಿ ಹೆಚ್ಚಾಗಿದ್ದಾನೋ, ಅವನೇ ವೃದ್ಧ ಪುರುಷನೆನಿಸುತ್ತಾನೆ–ಎನ್ನುವುದೇ ಋಷಿ–ಮಹಾತ್ಮರುಗಳ ನಿಶ್ಚಯವಾಗಿದೆ. (೧೦)

ಬ್ರಾಹ್ಮಣನು ಜ್ಞಾನದಿಂದ, ಕ್ಷತ್ರಿಯನು ಬಲದಿಂದ, ವೈಶ್ಯನು ಧನ–ಧಾನ್ಯದಿಂದ ಮತ್ತು ಶೂದ್ರನು ಜನ್ಮದಿಂದ, ಎಂದರೆ–ಅಧಿಕ ವಯಸ್ಸಿನಿಂದ ವೃದ್ಧನಾಗುತ್ತಾನೆ. (೧೧)

ತಲೆಗೂದಲೂ ಬೆಳ್ಳಗಾಗುವುದರಿಂದ (ಯಾವನೂ) ವೃದ್ಧನಾಗುವುದಿಲ್ಲ; ಆದರೆ ಯಾವನು ಯುವಕನಾಗಿದ್ದರೂ ವಿದ್ಯಾಧ್ಯಯನ ಮಾಡಿದ್ದಾನೋ, ಅವನನ್ನೇ ವಿದ್ವಜ್ಜನರು ದೊಡ್ಡವನೆಂದು ತಿಳಿಯುತ್ತಾರೆ. (೧೨)

ಮತ್ತು ಯಾವನು ವಿದ್ಯೆಯನ್ನು ಕಲಿತಿಲ್ಲವೋ, ಅವನು, ಆ ಅವಿದ್ವಾಂಸನಾದ ಮಾನವ ಹೇಗೆ ಮರದ ಆನೆಯೂ ಚರ್ಮದ ಮೃಗವೂ ಇರುತ್ತದೋ, ಹಾಗೆ, ಜಗತ್ತಿನಲ್ಲಿ ಹೆಸರಿಗೆ ಮಾತ್ರ ಮಾನವನೆನಿಸುತ್ತಾನೆ. (೧೩)

ಆದುದರಿಂದ, ವಿದ್ಯೆಯನ್ನು ಕಲಿತು, ವಿದ್ವಾಂಸನೂ, ಧರ್ಮಾತ್ಮನೂ ಆಗಿ, ನಿರ್ವೈರತ್ವದಿಂದ ಸಮಸ್ತ ಪ್ರಾಣಿಗಳ ಕಲ್ಯಾಣದ ಉಪದೇಶವನ್ನು ಮಾಡಬೇಕು ಮತ್ತು ಉಪದೇಶ ಮಾಡುವಲ್ಲಿ ಮಧುರವೂ ಮತ್ತು ಕೋಮಲವೂ ಆದ ವಾಣಿಯನ್ನು ಪ್ರಯೋಗಿಸಬೇಕು. ಯಾರು ಸತ್ಯೋಪದೇಶದಿಂದ ಧರ್ಮದ ವೃದ್ಧಿಯನ್ನೂ ಮತ್ತು ಅಧರ್ಮದ ನಾಶವನ್ನೂ ಮಾಡುತ್ತಾರೋ, ಆ ಪುರುಷರು ಧನ್ಯರಾಗಿರುತ್ತಾರೆ. (೧೪)

ನಿತ್ಯವೂ ಸ್ನಾನ ಮಾಡಬೇಕು; ವಸ್ತ್ರ, ಅನ್ನ, ಪಾನೀಯ, ಸ್ಥಳ –ಎಲ್ಲವನ್ನೂ ಶುದ್ಧವಾಗಿಡಬೇಕು. ಏಕೆಂದರೆ, ಇವು ಶುದ್ಧವಾಗುವುದರಿಂದ ಚಿತ್ತದ ಶುದ್ಧಿಯೂ ಮತ್ತು ಆರೋಗ್ಯವೂ ಪ್ರಾಪ್ತವಾಗಿ, ಶ್ರಮಸಾಮರ್ಥ್ಯವು ವರ್ಧಿಸುತ್ತದೆ. ಎಷ್ಟರಿಂದ ಹೊಲಸು ಮತ್ತು ಕೆಟ್ಟವಾಸನೆ ದೂರವಾಗುವುದೋ, ಅಷ್ಟು ಶೌಚವನ್ನಿಟ್ಟುಕೊಳ್ಳುವುದು ಯೋಗ್ಯವಾಗಿರುತ್ತದೆ.

**ಅಚಾರಃ ಪರಮೋ ಧರ್ಮಃ ಶ್ರುತ್ಯುಕ್ತಃ ಸ್ಮಾರ್ತ ಏವ ಚ ॥** (ಮನು:– ೧.೧೦೮)

ಸತ್ಯಭಾಷಣ–ಮೊದಲಾದ ಕರ್ಮಗಳ ಯಾವ ಆಚರಣವಿದೆಯೋ, ಅದೇ ವೇದಗಳಲ್ಲಿ ಮತ್ತು ಸ್ಮೃತಿಯಲ್ಲಿ ಹೇಳಲ್ಪಟ್ಟಿರುವ ಆಚಾರವಾಗಿದೆ.

**ಮಾ ನೋ ವಧೀಃ ಪಿತರಂ ಮೋತ ಮಾತರಮ್ ॥** (ಯಜುರ್ವೇದ :– ೧೫.೧೬)

**ಆಚಾರ್ಯೋಬ್ರಹ್ಮಚರ್ಯೇಣ ಬ್ರಹ್ಮಚಾರಿಣಮಿಚ್ಛತೇ ॥** (ಅಥರ್ವವೇದ :– ೧೧.೫.೧೭)

**ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋ ಭವ । ಅತಿಥಿದೇವೋ ಭವ॥** (ತೈತ್ತಿರೀಯ:– ೭.೧೧)

ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿಯ ಸೇವೆ ಮಾಡುವುದು ದೇವಪೂಜೆಯೆನ್ನಿಸುತ್ತದೆ. ಮತ್ತು ಯಾವ ಯಾವ ಕರ್ಮದಿಂದ ಜಗತ್ತಿಗೆ ಉಪಕಾರವಾಗುತ್ತದೋ, ಆಯಾ ಕರ್ಮ ಮಾಡುವುದು ಮತ್ತು ಹಾನಿಕಾರವಾದುದನ್ನು ಬಿಟ್ಟುಬಿಡುವುದೇ ಮಾನವನ ಮುಖ್ಯವಾದ ಕರ್ತವ್ಯಕರ್ಮವಾಗಿದೆ. ಎಂದಿಗೂ ನಾಸ್ತಿಕರು, ಲಂಪಟರು, ವಿಶ್ವಾಸಘಾತಕರು, ಮಿಥ್ಯಾವಾದಿಗಳೂ, ಸ್ವಾರ್ಥಿಗಳು, ಕಪಟಿಗಳು, ಛಲಸಾಧಕರು–ಮೊದಲಾದ ದುಷ್ಟಮಾನವರ ಸಂಗವನ್ನು ಮಾಡಬಾರದು. ಯಾರು ಸತ್ಯವಾದಿಗಳೂ, ಧರ್ಮಾತ್ಮರೂ ಪರೋಪಕಾರಪ್ರಿಯರೂ ಆದ ಆಪ್ತ ಜನರಿದ್ದಾರೋ, ಅವರ ಸಂಗವನ್ನು ಸದಾ ಮಾಡುವುದಕ್ಕೇ ಶ್ರೇಷ್ಠಾಚಾರವೆಂಬ ಹೆಸರಿದೆ.

**ಪ್ರಶ್ನೆ:**– ಆರ್ಯಾವರ್ತ ದೇಶವಾಸಿಗಳು, ಆರ್ಯಾವರ್ತ ದೇಶದಿಂದ ಬೇರೆ ಬೇರೆ ದೇಶಗಳಿಗೆ ಹೋಗುವುದರಿಂದ, ಅವರ ಆಚಾರವು ನಾಶವಾಗಿ ಹೋಗುತ್ತದೋ ಅಥವಾ ಇಲ್ಲವೋ?

**ಉತ್ತರ:**– ಈ ಮಾತು[೭] ಮಿಥ್ಯೆಯಾಗಿದೆ. ಏಕೆಂದರೆ, ಹೊರಗು–ಒಳಗುಗಳ ಪವಿತ್ರತೆಯನ್ನು ಪಾಲಿಸುವುದು, ಸತ್ಯಭಾಷಣ–ಮೊದಲಾದುದರ ಆಚರಣವನ್ನು ಮಾಡುವುದು ಅವನ್ನು ಎಲ್ಲಿದ್ದರೂ ನಡೆಯಿಸಿಕೊಂಡು ಹೋಗುವುದು ಆಚಾರ; ಮತ್ತು ಎಂದಿಗೂ (ಅಂತಹವನು) ಧರ್ಮಭ್ರಷ್ಟನಾಗುವುದಿಲ್ಲ. ಮತ್ತು ಯಾವನು ಆರ್ಯಾವರ್ತದಲ್ಲಿದ್ದೂ ಕೂಡ ದುರಾಚಾರವನ್ನು ಮಾಡುವನೋ, ಅವನೇ ಧರ್ಮಭ್ರಷ್ಟನು ಮತ್ತು ಆಚಾರಭ್ರಷ್ಟನು ಎನಿಸುವನು. (ನೀವು) ಹೇಳುವಂತೆ ಆಗುವುದಿದ್ದರೆ–

**ಮೇರೋರ್ಹರೇಶ್ಚ ದ್ವೇ ವರ್ಷೇ ವರ್ಷಂ ಹೈ ಮವತಂ ತತಃ ।**

**ಕ್ರಮೇಣೈವ ಸಮಾಗಮ್ಯ ಭಾರತಂ ವರ್ಷಮಾಸದತ್ ॥**

**ಸ ದೃಷ್ಟ್ವಾ ದೇಶಾನ್ ವಿವಿಧಾನ್ ಚೀನಹೂಣನಿಷೇವಿತಾನ್ ॥**

ಈ ಶ್ಲೋಕಗಳು ಭಾರತದ ಶಾಂತಿಪರ್ವದ ೩೨೭ನೆಯ ಅಧ್ಯಾಯದಲ್ಲಿ ಮೋಕ್ಷಧರ್ಮ (ಪ್ರಕರಣ)[೮]ದಲ್ಲಿ ವ್ಯಾಸ–ಶುಕ–ಸಂವಾದದಲ್ಲಿವೆ. ಎಂದರೆ, ಒಂದು ಸಮಯದಲ್ಲಿ ವ್ಯಾಸರು ತಮ್ಮ ಪುತ್ರನಾದ ಶುಕನ ಮತ್ತು ಶಿಷ್ಯರ ಸಮೇತ, ಆಧುನಿಕ ಕಾಲದಲ್ಲಿ ಯಾವುದನ್ನು 'ಅಮೇರಿಕಾ' ಎಂದು ಕರೆಯುತ್ತಾರೋ, ಆ ಪಾತಾಳದಲ್ಲಿ ನಿವಾಸಮಾಡುತ್ತಿದ್ದರು. ಶುಕಾಚಾರ್ಯರು ತಂದೆಯನ್ನು "ಆತ್ಮವಿದ್ಯೆ ಇಷ್ಟೇ ಇದೆಯೋ, ಅಥವಾ ಇನ್ನೂ ಹೆಚ್ಚಾಗಿದೆಯೋ?"–ಎಂದು ಒಂದು ಪ್ರಶ್ನೆಯನ್ನು ಕೇಳಿದರು. ವ್ಯಾಸರು ಉದ್ದೇಶ್ಯ ಪೂರ್ವಕವಾಗಿಯೇ ಆ ಮಾತಿಗೆ ಪ್ರತ್ಯುತ್ತರವನ್ನು ಕೊಡಲಿಲ್ಲ; ಏಕೆಂದರೆ, ಈ ವಿಷಯದಲ್ಲಿ ಉಪದೇಶ ಮಾಡಿಯೇ ಇದ್ದರು. ಇನ್ನೊಬ್ಬನ ಸಾಕ್ಷಿಗಾಗಿ, ತಮ್ಮ ಪುತ್ರನಾದ ಶುಕನಿಗೆ–"ಮಗನೇ! ನೀನು ಮಿಥಿಲಾಪುರಿಗೆ ಹೋಗಿ ಜನಕರಾಜನಿಗೆ ಇದೇ ಪ್ರಶ್ನೆಯನ್ನು ಹಾಕು. ಅವನು ಇದಕ್ಕೆ ಯೋಗ್ಯರೀತಿಯಲ್ಲಿ ಉತ್ತರ ಕೊಡುವನು". – ಎಂದು ಹೇಳಿದರು.

---

೭. ಎಂದರೆ, ಆಚಾರ. –ನಾಶ.

೮. ಇಂತಹ ಖಡಾಖಂಡಿತ ಉತ್ತರವನ್ನು ಪಡೆದ ಮೇಲೆಯೇ, ದೇಶವಾಸಿಗಳು ವಿದೇಶಕ್ಕೆ ಹೋಗಿ, ವೈಜ್ಞಾನಿಕ–ಔದ್ಯೋಗಿಕ ಪ್ರಾವೀಣ್ಯತೆಯನ್ನು ಗಳಿಸಿ, ಈಗ ರಾಷ್ಟ್ರಾಭಿವೃದ್ಧಿಯಲ್ಲಿ ತೊಡಗಿದ್ದಾರೆ. ಆದ್ದರಿಂದ, ರಾಷ್ಟ್ರವು ದಯಾನಂದರಿಗೆ ಎಷ್ಟು ಋಣಿಯಾಗಿರಬೇಕು?

ತಂದೆಯ ಮಾತನ್ನು ಕೇಳಿ ಶುಕಾಚಾರ್ಯರು ಪಾತಾಳದಿಂದ ಮಿಥಿಲಾಪುರಿಯ ಕಡೆಗೆ ನಡೆದರು. ಮೇರು–ಎಂದರೆ, ಹಿಮಾಲಯದ ಈಶಾನ್ಯಕ್ಕೂ, ಉತ್ತರಕ್ಕೂ ಮತ್ತು ವಾಯವ್ಯಕ್ಕೂ ಇರುವ ಪ್ರದೇಶದಲ್ಲಿ ಯಾವ ದೇಶಗಳಿವೆಯೋ, ಅವುಗಳಿಗೆ 'ಹರಿವರ್ಷ' – ಎಂದು ಹೆಸರಿದ್ದಿತು. ಎಂದರೆ, ಕೋತಿಯನ್ನು 'ಹರಿ' ಎನ್ನುತ್ತಾರೆ. ಆ ದೇಶದ ಜನರು ಈಗಲೂ ಕೂಡ ಕೆಂಪುಮುಖದವರಾಗಿ, ಎಂದರೆ, ಕೋತಿಯ ಹಾಗೆಯೇ ಬೂದೂಗಣ್ಣಿನವರಾಗಿದ್ದಾರೆ. ಯಾವ ದೇಶಗಳಿಗೆ ಈಗ 'ಯೂರೋಪ್' – ಎಂಬ ಹೆಸರಿದೆಯೋ, ಅವುಗಳನ್ನೇ ಸಂಸ್ಕೃತದಲ್ಲಿ 'ಹರಿವರ್ಷ'ವೆನ್ನುತ್ತಿದ್ದರು. ಮೊದಲು ಆ ದೇಶಗಳನ್ನು ನೋಡುತ್ತಾ, ಮತ್ತು ಹೂಣ, ಯಹೂದ್ಯ – ಎಂದೂ ಕೂಡ ನಿರ್ದೇಶಿಸಲ್ಪಡುವ ದೇಶಗಳನ್ನೂ ನೋಡಿ, (ಶುಕಾಚಾರ್ಯರು) ಚೀಣಕ್ಕೆ ಬಂದರು. ಚೀಣದಿಂದ ಹಿಮಾಲಯಕ್ಕೂ ಮತ್ತು ಹಿಮಾಲಯದಿಂದ ಮಿಥಿಲಾಪುರಿಗೂ ಬಂದರು.

ಮತ್ತು ಶ್ರೀಕೃಷ್ಣನು ಹಾಗೂ ಅರ್ಜುನನು, ಅಗ್ನಿಯಾನ ನೌಕೆಯೆಂದು ಕರೆಯಲ್ಪಡುವ 'ಅಶ್ವತರೀ' ವಾಹನದಲ್ಲಿ ಕುಳಿತು, ಪಾತಾಳಕ್ಕೆ ಹೋಗಿ, ಮಹಾರಾಜ ಯುಧಿಷ್ಠಿರನ ಯಜ್ಞದಲ್ಲಿ (ಭಾಗಿಯಾಗಲು) ಉದ್ದಾಲಕ ಋಷಿಯನ್ನು ಕರೆತಂದಿದ್ದರು. ಈ ದಿನಗಳಲ್ಲಿ 'ಕಾಂದಹಾರ್'[೯] ಎಂದು ಕರೆಯಲ್ಪಡುವ ಗಾಂಧಾರದ ರಾಜಪುತ್ರಿಯೊಂದಿಗೆ ಧೃತರಾಷ್ಟ್ರನ ವಿವಾಹವಾಗಿದ್ದಿತು. ಪಾಂಡುವಿನ ಪತ್ನಿ ಮಾದ್ರಿಯು ಈರಾನ್ ದೇಶದ ರಾಜನ ಮಗಳಾಗಿದ್ದಳು. ಮತ್ತು 'ಅಮೇರಿಕಾ' ಎಂದು ಕರೆಯಲ್ಪಡುವ ಪಾತಾಳದ ರಾಜನ ಮಗಳು ಉಲೂಪಿಯೊಂದಿಗೆ ಅರ್ಜುನನ ವಿವಾಹವಾಗಿದ್ದಿತು. ದೇಶ–ದೇಶಾಂತರಗಳಿಗೂ, ದ್ವೀಪ–ದ್ವೀಪಾಂತರಗಳಿಗೂ ಹೋಗದೇ ಇರುತ್ತಿದ್ದಲ್ಲಿ, ಎಲ್ಲ ಕಾರ್ಯಗಳೂ ಹೇಗೆ ಆಗಬಲ್ಲವಾಗಿದ್ದವು? ಮನುಸ್ಮೃತಿಯಲ್ಲಿ ಸಮುದ್ರದ ಮೇಲೆ ಚಲಿಸುವ ನೌಕೆಯ ಮೇಲೆ ತೆರಿಗೆ ಹಾಕಬೇಕೆಂದು ಬರೆದಿರುವುದಾದರೂ, ಜನರು ಆರ್ಯಾವರ್ತದಿಂದ ದ್ವೀಪಾಂತರಗಳಿಗೆ ಹೋಗುತ್ತಿದ್ದ ಕಾರಣದಿಂದಲೇ ಸರಿ. ಮತ್ತು ಯಾವಾಗ ಮಹಾರಾಜ ಯುಧಿಷ್ಠಿರನು ರಾಜಸೂಯ ಯಾಗವನ್ನು ಮಾಡಿದ್ದನೋ, ಆಗ, ಸಮಸ್ತ ಭೂಮಂಡಲದ ರಾಜರುಗಳಿಗೆ ಅಹ್ವಾನವೀಯಲು ಭೀಮ, ಅರ್ಜುನ, ನಕುಲ ಮತ್ತು ಸಹದೇವರು ನಾಲ್ಕು ದಿಕ್ಕುಗಳಿಗೂ ಹೋಗಿದ್ದರು. ಅದು ದೋಷವೆಂದು ತಿಳಿದಿದ್ದಲ್ಲಿ, ಎಂದಿಗೂ ಹೋಗುತ್ತಿರಲಿಲ್ಲ.

ಹೀಗೆ ಮೊದಲು ಆರ್ಯಾವರ್ತದೇಶೀಯ ಜನರು ವ್ಯಾಪಾರ, ರಾಜಕಾರ್ಯ ಮತ್ತು ಪರ್ಯಟನಕ್ಕಾಗಿ ಸಮಸ್ತ ಭೂಮಂಡಲದಲ್ಲಿಯೂ ಸಂಚರಿಸುತ್ತಿದ್ದರು. ಮತ್ತು ಈ ದಿನಗಳಲ್ಲಿ ಕಂಡುಬರುವ ಸ್ಪೃಶ್ಯಾಸ್ಪೃಭಾವನೆ ಮತ್ತು ಧರ್ಮವು ನಾಶವಾಗಿ ಹೋಗುವುದೆಂಬ ಸಂದೇಹ ಕೇವಲ ಮೂರ್ಖರನ್ನು ಪಥಭ್ರಷ್ಟರನ್ನಾಗಿ ಮಾಡಿದುದರಿಂದ ಹಾಗೂ ಅಜ್ಞಾನವೃದ್ಧಿಯಿಂದ ಉದ್ಭವಿಸಿದೆ. ಯಾವ ಮಾನವನು ದೇಶ–ದೇಶಾಂತರಗಳಿಗೆ ಮತ್ತು ದ್ವೀಪ–ದ್ವೀಪಾಂತರಗಳಿಗೆ ಹೋಗಿ–ಬಂದು ಮಾಡಲು ಸಂಶಯಪಡುವುದಿಲ್ಲವೋ, ಅವರು ದೇಶ–ದೇಶಾಂತರಗಳ ಅನೇಕ ಬಗೆಯ ಜನರ ಸಂಪರ್ಕದಿಂದಲೂ, ರೀತಿ–ನೀತಿಗಳ ಅವಲೋಕನದಿಂದಲೂ, ತಮ್ಮ ರಾಜ್ಯವನ್ನೂ, ಮತ್ತು ವ್ಯವಹಾರಗಳನ್ನೂ ಹೆಚ್ಚಿಸಿಕೊಳ್ಳುವುದರಿಂದಲೂ, ನಿರ್ಭಯರೂ, ಶೂರ–ವೀರರೂ[೧೦] ಆಗಲು ಆರಂಭಿಸುತ್ತಾರೆ ಮತ್ತು ಒಳ್ಳೆಯ ವ್ಯವಹಾರಗಳನ್ನು ಗ್ರಹಿಸುವುದರಲ್ಲಿಯೂ, ಕೆಟ್ಟ ವಿಷಯಗಳನ್ನು ತ್ಯಜಿಸುವುದರಲ್ಲಿಯೂ ತತ್ಪರರಾಗಿ ಮಹದೈಶ್ವರ್ಯವನ್ನು ಗಳಿಸುತ್ತಾರೆ. ಎಂತಹ ಸೋಜಿಗ! ಮಹಾಭ್ರಷ್ಟರೂ, ಮ್ಲೇಚ್ಛಕುಲೋತ್ಪನ್ನರೂ ಆದ ವೇಶ್ಯೆಯರೇ ಮೊದಲಾದವರ ಸಂಪರ್ಕದಿಂದ ಆಚಾರ ಭ್ರಷ್ಟರೂ, ಧರ್ಮಹೀನರೂ ಆಗುವುದಿಲ್ಲ;[೧೧] ಆದರೆ, ದೇಶದೇಶಾಂತರದ ಉತ್ತಮ ಪುರುಷರೊಂದಿಗೆ ಸಂಪರ್ಕವಿಟ್ಟಲ್ಲಿ, ಮೈಲಿಗೆ ಮತ್ತು ದೋಷವನ್ನೆಣಿಸುತ್ತಾರೆ! ಇದು ಕೇವಲ ಮೂರ್ಖತ್ವದ ಮಾತಲ್ಲದಿದ್ದರೆ, ಇನ್ನೇನು ಆಗಿರಲು ಶಕ್ಯ?

ಹೌದು, ಯಾವ ಜನರು ಮಾಂಸಭಕ್ಷಣ ಮತ್ತು ಮದ್ಯಪಾನ ಮಾಡುತ್ತಾರೋ, ಅವರ ಶರೀರಗಳೂ, ಮತ್ತು ವೀರ್ಯ ಮೊದಲಾದ ಧಾತುಗಳೂ ದುರ್ಗಂಧ ಮೊದಲಾದುದರಿಂದ ದೂಷಿತವಾಗಿರುತ್ತವೆ; ಆದುದರಿಂದ, ಅವರ ಸಂಗ

---

೯. ಈಗ ಇದಕ್ಕೆ 'ಅಫ್ಘಾನಿಸ್ಥಾನ್' ಎಂದು ಹೆಸರು. ಈಗ ಇದು ಮುಸ್ಲಿಂ ಬಾಹುಳ್ಯ ಪ್ರದೇಶ.

೧೦. ಇದರಿಂದ ಮಹರ್ಷಿ ದಯಾನಂದರು ಎಂತಹ ದೂರದೃಷ್ಟಿಯುಕ್ತರೂ, ಮತ್ತು ಕ್ಷತ್ರಿಯರಲ್ಲಿ ಕ್ಷಾತ್ರತೇಜವನ್ನು ಬಯಸುವವರೂ ಆಗಿದ್ದರೆಂಬುದು ತಿಳಿದುಬರುತ್ತದೆ.

೧೧. ಇದು, ಆಗಿನ ಕಾಲದ ಭಾರತೀಯ ರಾಜರ ಸ್ಥಿತಿ. ಜೋಧಪುರದ ರಾಜನಾದ ಜಸ್ವಂತಸಿಂಹನು ' 'ನನ್ಹಿಜಾನ್' ಎಂಬ ಮುಸ್ಲಿಂ ವೇಶ್ಯೆಯಲ್ಲಿ ಅತ್ಯಂತ ಆಸಕ್ತನಾಗಿದ್ದನು. ಜೋಧಪುರು ರಾಜ್ಯದ ಅತಿಥಿಯಾಗಿದ್ದಾಗ ಮಹರ್ಷಿ ದಯಾನಂದರಿಗೆ ಈ ವಿಷಯ ತಿಳಿಯಿತು. ಈ ಬಗ್ಗೆ ತಿಳುವಳಿಕೆ ಕೊಡುವ ಪತ್ರವನ್ನು ಮಹರ್ಷಿಗಳು ರಾಜನಿಗೆ ಬರೆದರು. ಒಮ್ಮೆ ಅಕಸ್ಮಾತ್ತಾಗಿ, ದಯಾನಂದರ ಮುಂದೆಯೇ ನನ್ಹಿಜಾನ್‌ಳ ಪಲ್ಲಕ್ಕಿಗೆ ರಾಜನು ಹೆಗಲು ಕೊಟ್ಟ ದೃಶ್ಯವನ್ನು ಮಹರ್ಷಿಗಳು ನೋಡಿದಾಗ, – 'ಸಿಂಹವು ಎಂದಿಗೂ ಹೆಣ್ಣು ನಾಯಿಯೊಂದಿಗೆ ಸಮಾಗಮ ಮಾಡಬಾರದು', ಎಂದು ಮೂದಲಿಸಿದರು. ಈ ಮಾತನ್ನು ಪಲ್ಲಕ್ಕಿಯ ತೆರೆಯೊಳಗಿಂದ ಕೇಳಿದ ನನ್ಹಿಜಾನಳು ಕ್ರುದ್ಧ ಸರ್ಪಿಣಿಯಂತಾಗಿ, ಮಹರ್ಷಿಗಳ ಅಕಾಲಮೃತ್ಯುವಿಗೆ ಶೀಘ್ರವಾಗಿಯೇ ಕಾರಣಳಾದಳು.

ಮಾಡುವುದರಿಂದ ಆರ್ಯರಿಗೂ ಈ ದುರ್ಲಕ್ಷಣಗಳು ಅಂಟಿಕೊಳ್ಳುವವೇನೋ-ಎಂಬಿಷ್ಟು (ಶಂಕೆಗೇನೋ) ಕಾರಣವಿದೆ. ಇದೇನೋ ಸರಿಯೇ. ಆದರೆ, ಇವರೊಂದಿಗೆ ವ್ಯವಹಾರಗಳನ್ನು ಮತ್ತು ಗುಣಗ್ರಹಣವನ್ನು ಮಾಡುವುದರಲ್ಲಿ ಯಾವುದೇ ದೋಷವೂ ಅಥವಾ ಪಾಪವೂ ಇಲ್ಲ. ಇವರ ಮದ್ಯಪಾನ ಮೊದಲಾದ ದೋಷಗಳನ್ನು ಬಿಟ್ಟು, ಗುಣಗಳನ್ನು ಗ್ರಹಿಸುವುದಾದರೆ, ಸ್ವಲ್ಪವೂ ಹಾನಿಯಿಲ್ಲ. ಯಾವಾಗ ಮೂರ್ಖಜನರು ಇವರ ಸ್ಪರ್ಶದಿಂದಲೂ ಮತ್ತು ದರ್ಶನದಿಂದಲೂ ಪಾಪವನ್ನು ಎಣಿಸಲಾರಂಭಿಸುತ್ತಾರೋ, ಆಗ, ಇದೇ ಕಾರಣದಿಂದ ಅವರೊಂದಿಗೆ ಎಂದಿಗೂ ಯುದ್ಧ ಮಾಡಲಾರರು.[೧೨] ಏಕೆಂದರೆ, ಯುದ್ಧದಲ್ಲಿ ಅವರನ್ನು ನೋಡುವುದೂ ಮತ್ತು ಸ್ಪರ್ಶಮಾಡುವುದೂ ಅವಶ್ಯಕವೇ ಆಗಿರುತ್ತವೆ.

ಸಜ್ಜನರಾದ ಮಾನವರು ರಾಗ-ದ್ವೇಷ, ಅನ್ಯಾಯ, ಮಿಥ್ಯಾಭಾಷಣ ಮೊದಲಾದ ದೋಷಗಳನ್ನು ಬಿಟ್ಟು, ನಿರ್ವೈರರಾಗಿ, ಪ್ರೀತಿ, ಪರೋಪಕಾರ, ಸಜ್ಜನತ್ವ ಮೊದಲಾದುವನ್ನು ರೂಢಿಸಿಕೊಳ್ಳುವುದು ಉತ್ತಮವಾದ ಆಚಾರವಾಗಿರುತ್ತದೆ. ಮತ್ತು ಧರ್ಮದ ಸಂಬಂಧ ನಮ್ಮ ಆತ್ಮಗಳೊಂದಿಗೆ ಮತ್ತು ಕರ್ತವ್ಯದೊಂದಿಗೆ ಇದೆ-ಎಂಬುದನ್ನೂ ತಿಳಿದುಕೊಳ್ಳಬೇಕು. ನಾವು ಉತ್ತಮ ಕಾರ್ಯಗಳನ್ನು ಮಾಡುವಾಗ, ದೇಶ-ದೇಶಾಂತರಗಳಿಗೂ, ದ್ವೀಪ-ದ್ವೀಪಾಂತರಗಳಿಗೂ ಹೋಗುವುದರಲ್ಲಿ ಸ್ವಲ್ಪವೂ ದೋಷವು ನಮಗೆ ತಟ್ಟಲಾರದು. ದೋಷ ತಗಲುವುದು ಪಾಪವೃತ್ತಿಯಿಂದ ಕಾರ್ಯಮಾಡುವುದರಲ್ಲಿ. ಅಹುದು; ಯಾವನೂ ನಮಗೆ ಅಸತ್ಯವಾದ ನಿಶ್ಚಯವನ್ನು ಮಾಡಿಸಲಾಗದಂತೆ, ವೇದೋಕ್ತ ಧರ್ಮದ ನಿಶ್ಚಯವನ್ನೂ ಮತ್ತು ಪಾಷಂಡ ಮತದ ಖಂಡನ ಮಾಡುವುದನ್ನೂ ಅವಶ್ಯವಾಗಿಯೂ ಕಲಿತುಕೊಳ್ಳಬೇಕು. ಇಷ್ಟು ಅಗತ್ಯವಾಗಿದೆ.

ದೇಶ-ದೇಶಾಂತರಗಳಲ್ಲಿಯೂ ಮತ್ತು ದ್ವೀಪ-ದ್ವೀಪಾಂತರಗಳಲ್ಲಿಯೂ, ರಾಜ್ಯಭಾರವನ್ನು ಅಥವಾ ವ್ಯಾಪಾರವನ್ನು ಮಾಡದೆ, ಸ್ವದೇಶದ ಉನ್ನತಿ ಎಂದಿಗಾದರೂ ಆಗಬಲ್ಲದೇನು? ಸ್ವದೇಶೀಯರಾದ ಜನರು ಸ್ವದೇಶದಲ್ಲಿಯೇ ವ್ಯವಹಾರ ಮಾಡುತ್ತಿರುವಾಗ ಮತ್ತು ವಿದೇಶೀಯರು ಸ್ವದೇಶ[೧೩]ದಲ್ಲಿ ವ್ಯವಹಾರಗಳನ್ನು ಮತ್ತು ರಾಜ್ಯಭಾರವನ್ನು ನಡೆಯಿಸುವಾಗ, ದಾರಿದ್ರ್ಯ ಮತ್ತು ದುಃಖದ ಹೊರತು ಮತ್ತೆ ಏನೂ ಲಭಿಸಲಾರದು. ಪಾಷಂಡಿಗಳಾದ ಜನರು, "ನಾವು ಇವರಿಗೆ ವಿದ್ಯೆಯನ್ನು ಕಲಿಸಿದರೆ, ಮತ್ತೆ ದೇಶದೇಶಾಂತರಗಳಿಗೆ ಹೋಗಲು ಅನುಮತಿಯನ್ನು ಕೊಟ್ಟರೆ, ಇವರು ಬುದ್ಧಿವಂತರಾಗಿ, ನಮ್ಮ ಪಾಷಂಡದ ಬಲೆಯಲ್ಲಿ ಸಿಕ್ಕಿಕೊಳ್ಳದಿರುವುದರಿಂದ ನಮ್ಮ ಸ್ಥಾನ-ಮಾನಗಳು ಮತ್ತು ಜೀವಿಕೆ ನಾಶವಾಗಿ ಹೋಗುವವು".-ಎಂದು ತಿಳಿಯುತ್ತಾರೆ. ಇದೇ ಕಾರಣದಿಂದ, ಅವರು ಅನ್ಯ ದೇಶಗಳಿಗೆ ಹೋಗಲಾಗದಂತೆ, ಊಟ-ಉಡಿಗೆಗಳಲ್ಲಿಯೂ ಗೊಂದಲವೆಬ್ಬಿಸುತ್ತಾರೆ. ಹೌದು; ಮದ್ಯ-ಮಾಂಸಗಳ ಸೇವನೆಯನ್ನು ಎಂದಿಗೂ, ಮರೆತೂ ಕೂಡ ಮಾಡಬಾರದು-ಎಂಬುದಿಷ್ಟನ್ನು ಅವಶ್ಯವಾಗಿ ಗಮನದಲ್ಲಿಡಬೇಕು. ರಾಜಪುರುಷರು ಯುದ್ಧಕಾಲದಲ್ಲಿಯೂ ಕೂಡ, 'ಮಡಿ' ಮಾಡಿ, ಸ್ವತಃ ಅಡಿಗೆಮಾಡಿ ಭಕ್ಷಿಸುವುದು ಅವಶ್ಯವಾಗಿ ಪರಾಜಯದ ಕಾರಣವೆಂದು ಸಮಸ್ತ ಬುದ್ಧಿಶಾಲಿಗಳೂ ನಿಶ್ಚಯಿಸಿಲ್ಲವೇನು?[೧೪] ಆದರೆ, ಕ್ಷತ್ರಿಯರಾದ ಜನರು ಯುದ್ಧದಲ್ಲಿ ಒಂದು ಕೈಯಿನಿಂದ ಆಹಾರ ಸೇವಿಸುತ್ತಾ, ನೀರನ್ನು ಕುಡಿಯುತ್ತಾ ಹೋಗುವುದು ಮತ್ತು ಇನ್ನೊಂದು ಕೈಯಿನಿಂದ ಶತ್ರುಗಳನ್ನು ಕುದುರೆಯ ಮೇಲೋ, ಆನೆಯ ಮೇಲೋ, ರಥದ ಮೇಲೋ ಹತ್ತಿ, ಅಥವಾ ಕಾಲಾಳಾಗಿಯೇ ಸಂಹರಿಸುತ್ತಾ ಹೋಗುವುದು, ತನ್ನ ಜಯವನ್ನು ಗಳಿಸುವುದು-ಇದೇ ಆಚಾರ ಮತ್ತು ಪರಾಜಿತರಾಗುವುದು ಅನಾಚಾರವಾಗಿದೆ. ಇದೇ ಮೂಢತನದಿಂದ ಈ ಜನರು "ಅಡಿಗೆಯ ಮಡಿ" ಮಾಡುತ್ತಾ-ಮಾಡುತ್ತಾ, ವಿರೋಧವನ್ನು ಮಾಡುತ್ತಾ-ಮಾಡಿಸುತ್ತಾ, ಸ್ವಾತಂತ್ರ್ಯ, ಆನಂದ, ಧನ, ರಾಜ್ಯ, ವಿದ್ಯೆ ಮತ್ತು ಪುರುಷಾರ್ಥದ ಮೇಲೆಯೂ ಹಲಗೆ ಎಳೆದು, ಕೈಮೇಲೆ ಕೈಹಾಕಿ ಕುಳಿತಿದ್ದಾರೆ. ಮತ್ತು "ಏನಾದರೂ ವಸ್ತು ಸಿಕ್ಕಿದರೆ, ಬೇಯಿಸಿ ತಿನ್ನೋಣ".-ಎಂದು ಇಚ್ಛಿಸುತ್ತಾರೆ! ಆದರೆ, ಹಾಗೆ ಆಗದೇ ಹೋದಾಗ, ಸಂಪೂರ್ಣ ಆರ್ಯಾವರ್ತ ದೇಶದಲ್ಲಿಯೇ ಎಲ್ಲವನ್ನೂ ನೆಲಸಮಮಾಡಿ ಸರ್ವಥಾ ನಾಶವಾಗಿ ಹೋಗುವಂತೆ ಮಾಡಿದ್ದಾರೆ. ಸರಿಯೇ; ಎಲ್ಲಿ ಭೋಜನ ಮಾಡುತ್ತಾರೋ, ಆ ಸ್ಥಳವನ್ನು ತೊಳೆಯುವುದು, ಸಾರಿಸುವುದು, ಗುಡಿಸುವುದು, ಕಸವನ್ನು ದೂರ ಹಾಕುವುದು-ಇವನ್ನೆಲ್ಲಾ ಅವಶ್ಯವಾಗಿ ಮಾಡಬೇಕು. ವಿಮತೀಯರ[೧೫] ಹಾಗೆ ಪಾಕಶಾಲೆಯನ್ನು ಹೊಲಸಾಗಿಡಬಾರದು.

---

೧೨. ೧೮೫೭ನೇ ಇಸವಿಯ ' ಸ್ವಾತಂತ್ರ್ಯ ಸಂಗ್ರಾಮ'ದಲ್ಲಿ ಭಾರತೀಯ ಸೈನಿಕರ ಸೋಲಿಗೆ ಇದೂ ಒಂದು ಕಾರಣವಾಗಿತ್ತು.

೧೩. ಎಂದರೆ, ಭಾರತದಲ್ಲಿ. –

೧೪. ಪಾನೀಪತ್ತಿನ ಮೂರನೇಯ ಯುದ್ಧದಲ್ಲಿ ಮರಾಠರು, ಜಾಟರು, ಮತ್ತು ರಾಜಪೂತರ ಪರಾಜಯಕ್ಕೆ ಅವರ ಬೇರೆ –ಬೇರೆ ಅಡಿಗ–ಅಗ್ಗಿಷ್ಟಿಕೆಗಳೇ ಕಾರಣವಾಗಿದ್ದವು. ಇತಿಹಾಸವನ್ನು ನೋಡಿ. –ಯು.ಮೀ.

೧೫. ಇವೆಲ್ಲಾ ಪಾಕದ ಶುದ್ಧಿಗಾಗಿ; ಜಾತಿಮತದ ಪ್ರಶ್ನೆಯಿಲ್ಲ.

**ಪ್ರಶ್ನೆ**:– ಬೆಂದ ಆಹಾರ, ಕರಿದ ಆಹಾರ[೧೬] ಎಂದರೇನು?

**ಉತ್ತರ** :– ನೀರಿನಲ್ಲಿ ಬೇಯಿಸಿದುದು 'ಬೆಂದ ಆಹಾರ', ತುಪ್ಪದಲ್ಲಿ ಕರಿದುದು, ಹಾಲಿನಲ್ಲಿ ಬೇಯಿಸಿದುದು 'ಕರಿದ ಆಹಾರ'; ಅದೇ 'ಚೊಕ್ಕ' ಭೋಜನ. ಇದೂ ಕೂಡ ಈ ಧೂರ್ತರು ಆರಂಭಿಸಿದ ಪಾಷಂಡವಾಗಿದೆ. ಏಕೆಂದರೆ, ಯಾವುದರಲ್ಲಿ ತುಪ್ಪ–ಹಾಲು ಹೆಚ್ಚು ಬೀಳುವುದೋ, ಅದನ್ನು ತಿನ್ನುವುದರಲ್ಲಿ 'ರುಚಿ' ಮತ್ತು ಹೊಟ್ಟೆಯಲ್ಲಿ ಜಿಡ್ಡಿನ ಪದಾರ್ಥ ಹೆಚ್ಚಾಗಿ ಸೇರಲಿ–ಎಂದು ಈ ಪ್ರಪಂಚವನ್ನು ಹೂಡಿದ್ದಾರೆ. ನ್ಯಾಯವಾಗಿ ನೋಡಿದರೆ, ಬೆಂಕಿಯಿಂದ ಅಥವಾ ಕಾಲದಿಂದ ಪಕ್ವವಾದ ಪದಾರ್ಥವೇ ಪರಿಪಕ್ವವಾದುದು ಮತ್ತು ಪಕ್ವವಾಗದುದು 'ಆಮ' – ಎಂದರೆ ಹಸಿಯದು. ಪಕ್ವವಾದುದನ್ನು ತಿನ್ನಬೇಕು; ಮತ್ತು ಹಸಿಯಾದುದನ್ನು ತಿನ್ನಬಾರದು – ಎನ್ನುವುದೂ ಕೂಡ ಸರ್ವತ್ರ ಸರಿಯಲ್ಲ. ಏಕೆಂದರೆ, ಕಡಲೆ–ಮೊದಲಾದುವುದು ಹಸಿಯಾಗಿರುವಾಗಲೇ ತಿನ್ನಲ್ಪಡುತ್ತವೆ.

**ಪ್ರಶ್ನೆ** :– ದ್ವಿಜರು ತಮ್ಮ ಕೈಯಿನಿಂದಲೇ ಅಡಿಗೆಮಾಡಿ ತಿನ್ನಬೇಕೋ ಅಥವಾ ಶೂದ್ರನ ಕೈಯಿನಿಂದ ಮಾಡಲ್ಪಟ್ಟುದನ್ನು ತಿನ್ನಬೇಕೋ?

**ಉತ್ತರ** :– ಶೂದ್ರನ ಕೈಯಿಂದ ಮಾಡಲ್ಪಟ್ಟುದನ್ನು ತಿನ್ನಬೇಕು. ಏಕೆಂದರೆ, ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯವರ್ಣಸ್ಥರಾದ ಸ್ತ್ರೀ–ಪುರುಷರು ವಿದ್ಯೆ ಕಲಿಸುವುದರಲ್ಲಿ, ರಾಜ್ಯಪಾಲನದಲ್ಲಿ, ವ್ಯವಸಾಯ ಮತ್ತು ಪಶು–ಪಾಲನ–ವ್ಯಾಪಾರಗಳಲ್ಲಿ ತತ್ಪರರಾಗಿರಬೇಕು. ಆದರೆ ಶೂದ್ರನ ಮಲಿನ ಪಾತ್ರೆಯಲ್ಲಿನ ಮತ್ತು ಅವನ ಮನೆಯಲ್ಲಿ ಬೇಯಿಸಿದ ಆಹಾರವನ್ನು ಆಪತ್ಕಾಲದ[೧೭] ಹೊರತು ತಿನ್ನಬಾರದು. ಆಲಿಸಿರಿ ಪ್ರಮಾಣವನ್ನು :–

**ಆರ್ಯಾಧಿಷ್ಠಿತಾ ವಾ ಶೂದ್ರಾಃ ಸಂಸ್ಕರ್ತಾರಃ ಸ್ಯುಃ॥** (ಆಪಸ್ತಂಬ ಧರ್ಮಸೂತ್ರ:–೨.೨.೨.೩)

ಇದು ಆಪಸ್ತಂಬದ ಸೂತ್ರವಾಗಿದೆ. ಆರ್ಯರ ಮನೆಯಲ್ಲಿ ಶೂದ್ರರು, ಎಂದರೆ–ಜ್ಞಾನಹೀನರಾದ ಸ್ತ್ರೀ–ಪುರುಷರು ಅಡಿಗೆಯೇ ಮೊದಲಾದ ಸೇವೆಯನ್ನು ಮಾಡಬೇಕು. ಆದರೆ, ಅವರು ಶರೀರ, ವಸ್ತ್ರ ಮೊದಲಾದುದರಿಂದ ಪವಿತ್ರರಾಗಿರಬೇಕು. ಆರ್ಯರ ಮನೆಗಳಲ್ಲಿ ಯಾವಾಗ ಅಡಿಗೆಮಾಡುತ್ತಾರೋ, ಆಗ, (ಆಗ ಸಿದ್ಧಮಾಡುವ ಅಡಿಗೆ ಶುದ್ಧವಾಗಿರಬೇಕು–ಎಂಬ ದೃಷ್ಟಿಯಿಂದ) ಬಾಯಿಯ ಮೇಲೆ ಬಟ್ಟೆಯನ್ನು ಕಟ್ಟಿಕೊಂಡು ಅಡಿಗೆಯನ್ನು ಮಾಡಬೇಕು. ಏಕೆಂದರೆ, ಅವರ ಬಾಯಿನಿಂದ ಉಗುಳು ಮತ್ತು ಹೊರಬರುವ ಉಸಿರೂ ಕೂಡ, ಆಹಾರದ ಮೇಲೆ ಬೀಳಬಾರದು. ಎಂಟನೆಯ ದಿನ ಕ್ಷೌರವನ್ನು ಮಾಡಿಸಿಕೊಳ್ಳಬೇಕು. ಉಗುರುಗಳನ್ನು ತೆಗೆಯಿಸಬೇಕು. ಸ್ನಾನಮಾಡಿ, ಅಡಿಗೆಮಾಡುವ ರೂಢಿಯನ್ನಿಟ್ಟುಕೊಳ್ಳಬೇಕು. ಗೃಹದ ಒಡೆಯರಿಗೆ ಊಟಮಾಡಿಸಿ, ತಾವು ಊಟ ಮಾಡಬೇಕು.

**ಪ್ರಶ್ನೆ** :– ಶೂದ್ರನು ಮುಟ್ಟಿದ ಪಕ್ವಾನ್ನವನ್ನು ತಿನ್ನುವುದರಲ್ಲಿ ದೋಷವನ್ನೆಣಿಸುವಾಗ, ಅವನು ಕೈಯಿಂದ ಬೇಯಿಸಿದುದನ್ನು ಹೇಗೆ ತಾನೇ ತಿನ್ನಲಾದೀತು?

**ಉತ್ತರ** :– ಈ ಮಾತು ಕಪೋಲಕಲ್ಪಿತ ಮತ್ತು ಸುಳ್ಳು. ಏಕೆಂದರೆ, ಯಾರು ಬೆಲ್ಲ, ಸಕ್ಕರೆ, ತುಪ್ಪ, ಹಾಲು, ಹಿಟ್ಟು, ಸೊಪ್ಪು, ಹಣ್ಣು, ಮೂಲ–ಇವನ್ನು ತಿಂದರೋ, ಅವರು ಸಂಪೂರ್ಣ ಪ್ರಪಂಚದ ಕೈಯಿನಿಂದ ಬೇಯಿಸಲ್ಪಟ್ಟುದನ್ನೂ ಮತ್ತು ಎಂಜಲನ್ನೂ ತಿಂದ ಹಾಗೆಯೇ ಎಂದು ತಿಳಿಯಿರಿ. ಏಕೆಂದರೆ, ಯಾವಾಗ ಶೂದ್ರರೂ, ಚಮ್ಮಾರರೂ, ಜಲಗಾರರೂ, ಮುಸಲ್ಮಾನರೂ, ಕ್ರೈಸ್ತರೂ, ಇನ್ನೂ ಬೇರೆಯವರೂ ಗದ್ದೆಗಳಿಂದ ಕಬ್ಬನ್ನು ಕೀಳುತ್ತಾರೋ, ಸಿಪ್ಪೆ ತೆಗೆಯುತ್ತಾರೋ, ಗಾಣಕ್ಕೆ ಹಾಕಿ ರಸ ತೆಗೆಯುತ್ತಾರೋ, ಆಗ ಮಲಮೂತ್ರವಿಸರ್ಜನೆಮಾಡಿ, ತೊಳೆಯದ ಕೈಗಳಿಂದ ಅದನ್ನು ಮುಟ್ಟುತ್ತಾರೆ, ಎತ್ತುತ್ತಾರೆ, ಇಡುತ್ತಾರೆ; ಅರ್ಧ ಜಿಲ್ಲೆಯ ರಸ ಹೀರಿಕೊಂಡು, ಇನ್ನು ಅರ್ಧವನ್ನು ಅದರಲ್ಲಿಯೇ ಹಾಕಿಬಿಡುತ್ತಾರೆ. ಮತ್ತು ರಸವನ್ನು ಬೇಯಿಸುವ ಸಮಯದಲ್ಲಿ, ಆ ರಸದಲ್ಲಿ ರೊಟ್ಟಿಯನ್ನೂ ಬೇಯಿಸಿ ತಿನ್ನುತ್ತಾರೆ. ಮತ್ತು ಯಾವಾಗ ಸಕ್ಕರೆಯನ್ನು ಮಾಡುತ್ತಾರೋ, ಆಗ,

---

೧೬. ಇದಕ್ಕೆ ಹಿಂದಿಯಲ್ಲಿ 'ಸಖರೀ–ನಿಖರೀ' ಎನ್ನುತ್ತಾರೆ.

೧೭. ಒಮ್ಮೆ, ಕುರುದೇಶದಲ್ಲಿ ಮಿಡತೆಗಳ ಹಾವಳಿಯಿಂದ, ಬೆಳೆ ನಷ್ಟವಾದಾಗ ಹಸಿವಿನಿಂದ ಬಳಲಿದ ಉಪಸ್ತಿ ಚಾಕ್ರಾಯಣನೆಂಬ ಋಷಿಯು ತನ್ನ ಪತ್ನಿ ಅಟಿಕೆ ಯೊಂದಿಗೆ ಆನೆ ಪಾಲಿಸುವವರ ಗ್ರಾಮಕ್ಕೆ ಬಂದು, ಅವರಿಂದ ಎಂಜಲು ಉದ್ದಿನ ಬೇಳೆಯನ್ನು ಸ್ವೀಕರಿಸಿ, ಪ್ರಾಣ ಉಳಿಸಿಕೊಂಡರು. ಆದರೆ, ಅವರು ಕೊಟ್ಟ ನೀರನ್ನು ಕುಡಿಯಲು ಸ್ವೀಕರಿಸಲಿಲ್ಲ. ಏಕೆಂದರೆ, ನೀರು ಸರ್ವತ್ರ ಉಪಲಬ್ಧವಾಗಿತ್ತು. [ಛಾಂದಗ್ಯೋಪನಿಷತ್–ಪ್ರಪಾಠಕ ೧; ಖಂಡ ೧೦]

ಯಾವುದರ ತಳದಲ್ಲಿ ಮಲ–ಮೂತ್ರ–ಸಗಣಿ–ಧೂಳು ಮೆತ್ತಿಕೊಂಡಿರುತ್ತದೋ, ಆ ಪಾದರಕ್ಷೆಗಳಿಂದಲೇ ಅದನ್ನು ತುಳಿದು ಉಜ್ಜುತ್ತಾರೆ. ಹಾಲಿನಲ್ಲಿ ತಮ್ಮ ಮನೆಯ ಎಂಜಲು ಪಾತ್ರೆಯ ನೀರನ್ನು ಹಾಕುತ್ತರೆ. ಅದರಲ್ಲಿಯೇ ತುಪ್ಪ–ಮೊದಲಾದುವನ್ನು ಇಡುತ್ತಾರೆ. ಮತ್ತು ಹಿಟ್ಟನ್ನು ಬೀಸುವ ಸಮಯದಲ್ಲಿಯೂ ಹಾಗೆಯೇ ಎಂಜನು ಕೈಗಳಿಂದ ಎತ್ತುತ್ತಾರೆ. ಹಾಗೂ ಬೆವರೂ ಕೂಡ ಹಿಟ್ಟಿಗೆ ತೊಟ್ಟಿಡುತ್ತಾ ಹೋಗುತ್ತದೆ. ಇಂತಹ ಘಟನೆಗಳೆಲ್ಲಾ ನಡೆಯುತ್ತವೆ. ಮತ್ತು ಫಲ–ಮೂಲ–ಕಂದಗಳ ವಿಷಯದಲ್ಲಿಯೂ ಇದೇ ಲೀಲೆ ನಡೆಯುತ್ತದೆ. ಈ ಪದಾರ್ಥಗಳನ್ನು ತಿಂದಾಗ, ಎಲ್ಲರ ಕೈಗಳದನ್ನೂ ತಿಂದಂತೆಯೇ–ಎಂದು ತಿಳಿದುಕೊಳ್ಳಬೇಕು.

**ಪ್ರಶ್ನೆ:–** ಫಲ, ಮೂಲ, ಕಂದ, ರಸ ಮೊದಲಾದುವುಗಳ ಬಗೆಗೆ ಕಾಣದೇ ನಡೆದುದರಲ್ಲಿ ದೋಷವಿಲ್ಲ.

**ಉತ್ತರ:–** ಭಲೇ, ಭಲೇ, ನಿಜ. ಇಂತಹ ಉತ್ತರವನ್ನು ಕೊಡದಿದ್ದರೆ, ಧೂಳು–ಬೂದಿ ಮುಕ್ಕುತ್ತಿದ್ದಿರೇನೋ? ಬೆಲ್ಲ–ಸಕ್ಕರೆ ಸಿಹಿಯಾಗಿ ಕಾಣುತ್ತದೆ, ಹಾಲು–ತುಪ್ಪ ಪುಷ್ಟಿ ಕೊಡುತ್ತವೆ. ಇದೇ ಕಾರಣದಿಂದ ಈ ಅನುಕೂಲ ಸಿಂಧುವನ್ನು ರಚಿಸಿಲ್ಲವೇನು? ಒಳ್ಳೆಯದು. (ಕಾಣಿಸದುದರಲ್ಲಿ ದೋಷವಿಲ್ಲ) ಎಂದಾದರೆ, ಜಲಗಾರರೂ, ಮುಸಲ್ಮಾನರೂ ತಮ್ಮ ಕೈಗಳಿಂದಲೇ ಬೇರೆ ಸ್ಥಳದಲ್ಲಿ ಅಡಿಗೆಮಾಡಿ, ನಿಮಗೆ ತಂದುಕೊಟ್ಟರೆ, ತಿನ್ನುವಿರೋ ಅಥವಾ ಇಲ್ಲವೋ?[೧೮] 'ಇಲ್ಲ' ಎನ್ನುವಿರಾದರೆ ಕಾಣದುದರಲ್ಲಿಯೂ ದೋಷವಿದೆ ಎಂದೇ ಆಯಿತು. ಹೌದು. ಮುಸಲ್ಮಾನರು, ಕ್ರೈಸ್ತರು ಮೊದಲಾದ ಮದ್ಯ– ಮಾಂಸ ಸೇವಿಸುವವರ ಕೈಯಿನದನ್ನು ತಿನ್ನುವುದರಲ್ಲಿ, ಆರ್ಯರಿಗೂ ಕೂಡ ಮದ್ಯ–ಮಾಂಸ ಮೊದಲಾದುದರ ಸೇವನದ ಅಪರಾಧ ಅಂಟಿಕೊಂಡುಬಿಡುವುದು. ಆದರೆ, ಆರ್ಯರಲ್ಲಿ ಪರಸ್ಪರ ಸಹ ಭೋಜನವಾಗುವುದರಲ್ಲಿ ಯಾವ ದೋಷವೂ ಕಾಣಿಸುವುದಿಲ್ಲ. (ಜಾತಿ ಪದ್ಧತಿಯಲ್ಲ; ಕೇವಲ ಆಹಾರ ಶುದ್ಧಿಯು ಮಾತ್ರ ಈ ಸ್ಥಳದಲ್ಲಿ ಗಮನಾರ್ಹ)

ಎಂದಿನವರೆಗೆ ಒಂದು ಅಭಿಪ್ರಾಯ, ಒಂದು ಹಾನಿ–ಲಾಭ, ಒಂದು ಸುಖ–ದುಃಖವನ್ನು ಪರಸ್ಪರ ಒಪ್ಪಿಕೊಳ್ಳುವುದಿಲ್ಲವೋ, ಅಂದಿನವರೆಗೆ ಉನ್ನತಿಯಾಗುವುದು ಬಹು ಕಠಿಣ. ಆದರೆ ಕೇವಲ ಭೋಜನ–ಪಾನಗಳು ಒಂದಾಗುವುದರಿಂದ ಸುಧಾರಣೆಯಾಗಲಾರದು. ಜನರು ಎಂದಿನವರೆಗೆ ಕೆಟ್ಟ ವಿಷಯಗಳನ್ನು ಬಿಡುವುದಿಲ್ಲವೋ ಮತ್ತು ಒಳ್ಳೆಯ ವಿಷಯಗಳನ್ನು[೧೯] ಅನುಷ್ಠಾನ ಮಾಡುವುದಿಲ್ಲವೋ, ಅಂದಿನವರೆಗೆ ವೃದ್ಧಿಗೆ ಪ್ರತಿಯಾಗಿ ಹಾನಿಯೇ ಉಂಟಾಗುತ್ತದೆ. ಆರ್ಯಾವರ್ತದಲ್ಲಿ ವಿದೇಶೀಯರ ರಾಜ್ಯವಿರುವ ಕಾರಣದಿಂದ, ಒಳಗಿನ ಒಡಕು, ಮತಭೇದ, ಬ್ರಹ್ಮಚರ್ಯವನ್ನ ಪಾಲಿಸದಿರುವುದು, ವಿದ್ಯೆಯನ್ನು

---

೧೮. ಉತ್ರರ ಭಾರತದ ಮಾಂಸಾಹಾರಿ ಹಿಂದುಗಳ ಮನೆಗಳಲ್ಲಿ, ೪೦ ವರ್ಷಗಳ ಹಿಂದಿನ ತನಕ, ಮುಸಲ್ಮಾನ ಅಡಿಗೆಯವನೇ [ಖಾನಸಮಾ] ಮನೆಯ ಹೊರ ಅಂಗಳದಲ್ಲಿ ಮಾಂಸವನ್ನು ಬೇಯಿಸಿ ಯಜಮಾನನಿಗೆ ತಿನ್ನಿಸುತ್ತಿದ್ದ. ಮನೆಯ ಹೆಂಗಸರು ಮಾಂಸವನ್ನು ಮುಟ್ಟುತ್ತಲೂ ಇರಲಿಲ್ಲ. ಅಡಿಗೆಯ ಮನೆಯಲ್ಲಿ ಮಾಂಸ ಬೇಯಿಸಲು ಬಿಡುತ್ತಲೂ ಇರಲಿಲ್ಲ. ರಾಜಸ್ಥಾನದಲ್ಲಿ ರಜಪೂತ ಸ್ತ್ರೀಯರು ಈಗಲೂ ಮಾಂಸದಡಿಗೆಯನ್ನು ಮನೆಯಲ್ಲಿ ಮಾಡಗೊಡುವುದಿಲ್ಲ. ಮಾಂಸದಡಿಗೆಯ ಪಾತ್ರೆಗಳು ಬೇರೆ, ಹೊರಗೆ ಇರುತ್ತಿದ್ದವು.

ಕಾಯಸ್ಥ ಸ್ತ್ರೀಯರು ಮಾಂಸಾಹಾರವನ್ನು ತಿನ್ನಲಾರಂಭಿಸಿದ ಮೇಲೆ, ಹಿಂದುಗಳ ಮನೆಯಲ್ಲಿ ಮಾಂಸದ ಅಡಿಗೆ ಆರಂಭವಾಯಿತು.

ಸಿಂಧಿಗಳು ಭಾರತಕ್ಕೆ ಬರುವ ಮೊದಲು ಕಟುಕನ ಮತ್ತು ಮಾಂಸ ಮಾರುವವನ ಕೆಲಸವನ್ನು ಕೇವಲ ಮುಸಲ್ಮಾನರೇ ಮಾಡುತ್ತಿದ್ದರು. ಈಗ ಹಿಂದೂ–ಸಿಂಧಿಗಳೂ ಈ ಕೆಲಸವನ್ನು ಮಾಡುತ್ತಾರೆ.

೧೯. ಮುಸಲ್ಮಾನರಲ್ಲಿ ಈಗಲೂ ಎಲ್ಲರೂ ಒಂದೇ ತಟ್ಟೆಯಲ್ಲಿ, ಒಂದೇ ಪಾತ್ರೆಯಲ್ಲಿ ಭೋಜನ ಮಾಡುತ್ತಾರೆ. ಅದರೂ, ಅವರಲ್ಲಿಂದ ದಾರಿದ್ರ್ಯ ದೂರ ಹೋಗಿಲ್ಲ. ಅವರಿಗೆ ವಿದ್ಯೆ, ಸುಸಂಸ್ಕೃತಿ, ಉನ್ನತಿ, ವಿಜ್ಞಾನ ಲಭಿಸಿಲ್ಲ. ಅವರಲ್ಲಿರುವ ಐಕ್ಯತೆಗೆ ಎಂಜಲು ಭೋಜನ ಕಾರಣವಲ್ಲ.; ಅವಿದ್ಯೆ ಮತ್ತು ಅಂಧವಿಶ್ವಾಸ ಕಾರಣ! ಈ ರೀತಿಯ ಎಂಜಲು ಭೋಜನದಿಂದ ಪರಸ್ಪರ ಪ್ರೇಮ ಹೆಚ್ಚುತ್ತದೆಂದು [ತಪ್ಪಾಗಿ ]ತಿಳಿದ ಹಿಂದೂ ಕಾಯಸ್ಥರು ಕೂಡ ಒಂದೇ ತಟ್ಟೆಯಲ್ಲಿ ಭೋಜನ ಮಾಡುವ ರೂಢಿಯನ್ನು ಇಟ್ಟುಕೊಂಡಿದ್ದರು. ಹೊರ ದೇಶಗಳವರ ಸಂಪರ್ಕವಾದ ಮೇಲೆ ಈ ರೀತಿಯನ್ನು ಬಿಟ್ಟರು.

ಕಲಿಯದೆ–ಕಲಿಸದೆ ಇರುವುದು, ಮತ್ತು ಬಾಲ್ಯಾವಸ್ಥೆಯಲ್ಲಿ ಸ್ವಯಂವರವಲ್ಲದ[೨೦] ವಿವಾಹ, ವಿಷಯಾಸಕ್ತಿ, ಮಿಥ್ಯಾ–ಭಾಷಣ ಮೊದಲಾದ ದುರ್ಲಕ್ಷಣಗಳು, ವೇದವಿದ್ಯೆಯ ಪ್ರಚಾರವಿಲ್ಲದುದು ಮೊದಲಾದ ನ್ಯೂನತೆಗಳು ಪ್ರಚಲಿತವಾಗಿವೆ. ಯಾವಾಗ ಸೋದರರು ತಮ್ಮ ತಮ್ಮಲ್ಲೇ ಕಾದಾಡುತ್ತಾರೋ, ಆಗಲೇ ಮೂರನೆಯವನಾದ ವಿದೇಶೀಯನು ಪಂಚಾಯತದಾರನಾಗಿ ಬಂದು[೨೧] ಕುಳಿತುಕೊಳ್ಳುತ್ತಾನೆ. ಐದು ಸಾವಿರ ವರ್ಷದ ಹಿಂದೆ[೨೨] ನಡೆದ, ಮಹಾ ಭಾರತದ ಆ ಘಟನೆಗಳನ್ನೂ ಕೂಡ ನೀವುಗಳು ಮರೆತು ಹೋದಿರೇನು? ನೋಡಿರಿ! ಮಹಾಭಾರತಯುದ್ಧದಲ್ಲಿ ಎಲ್ಲ ಜನರೂ ಹೋರಾಟದಲ್ಲಿ ವಾಹನಗಳ ಮೇಲೆಯೇ ಆಹಾರ ಪಾನೀಯಗಳನ್ನು ಸೇವಿಸುತ್ತಿದ್ದರು. ಆಂತರಿಕ ಕಲಹದಿಂದ ಕೌರವರ, ಪಾಂಡವರ ಮತ್ತು ಯಾದವರ ಸರ್ವನಾಶವಾದುದಂತೂ ಆಗಿಯೇ ಹೋಯಿತು. ಆದರೆ, ಈವರೆಗೂ ಅದೇ ರೋಗ ಬೆನ್ನು ಹತ್ತಿದೆ! ಈ ಭಯಂಕರ ರಾಕ್ಷಸನು ಎಂದಾದರೂ ಬಿಟ್ಟುಹೋಗುವನೋ, ಅಥವಾ ಆರ್ಯರನ್ನು ಸರ್ವಸುಖಗಳಿಂದಲೂ ದೂರವಿಟ್ಟು, ದುಃಖಸಾಗರದಲ್ಲಿ ಮುಳುಗಿಸಿ ಸಾಯಿಸುವನೋ, ತಿಳಿಯದು. ಅದೇ ನೀಚನೂ, ಗೋತ್ರಘಾತಕನೂ, ಸ್ವದೇಶ ವಿನಾಶಕನೂ ಆದ ದುಷ್ಟ ದುರ್ಯೋಧನನ ದುರ್ಮಾರ್ಗದಲ್ಲಿ, ಆರ್ಯಜನರು ಈಗಿನವರೆಗೂ, ನಡೆದು, ದುಃಖವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಈ ರಾಜರೋಗವು[೨೩] ಆರ್ಯರಾದ ನಮ್ಮಗಳಿಂದ ನಾಶವಾಗಿ ಹೋಗುವಂತೆ ಪರಮೇಶ್ವರನು ಕೃಪೆಮಾಡಲಿ.

---

೨೦. ದಿನಾಂಕ ೨೪.೦೯.೧೯೩೧ರಂದು ಬೆಂಗಳೂರಿನ ಶಂಕರಮಠದಲ್ಲಿ ಸನಾತನ ಧರ್ಮ ಸಭೆಯ ಪೌರಾಣಿಕ ವಿದ್ವಾನ್, ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರೀಗಳೊಡನೆ 'ಬಾಲ್ಯ ವಿವಾಹವು ವೇದ ಸಮ್ಮತವೇ, ಅಥವಾ ಇಲ್ಲವೇ', ಎಂಬ ವಿಷಯದಲ್ಲಿ ಆರ್ಯ ಸಮಾಜದ ಪ್ರತಿನಿಧಿಗಳಾದ ಪಂ. ಧರ್ಮದೇವ ವಿದ್ಯಾ ವಾಚಸ್ಪತಿ ಯವರ ಶಾಸ್ತ್ರಾರ್ಥವು ಸಂಸ್ಕೃತದಲ್ಲಿ ನಡೆಯಿತು. ಡಾ॥ ಸಿ.ಬಿ ರಾಮರಾಯರು ಅಧ್ಯಕ್ಷರಾಗಿಯೂ, ಸರ್ವಶ್ರೀ ಡಿ. ವೆಂಕಟರಾಮಯ್ಯ ಮತ್ತು ಕೆ. ಸಂಪದ್ಗಿರಿರಾವ್ ರವರು ಉಪಾಧ್ಯಕ್ಷರಾಗಿದ್ದರು.

"ವೇದಗಳಲ್ಲಿ ಷೋಡಶ ಸಂಸ್ಕಾರಗಳು ಎಳ್ಳಷ್ಟಾದರೂ ಇಲ್ಲ. ಗೃಹ್ಯ ಸೂತ್ರ ಮೊದಲಾದುವುಗಳಲ್ಲಿ ಮಾತ್ರ ಇವೆ. ವೇದಗಳಲ್ಲಿ ವಿವಾಹ ಸಂಸ್ಕಾರದ ವಿಧಿಯಿಲ್ಲ. ಬಹುಕಾಲದಿಂದಲೂ ಬಾಲ್ಯವಿವಾಹವೇ ಶಿಷ್ಟಾಚಾರವಾಗಿ ಬಂದಿರುವುದರಿಂದಲೂ, ಪ್ರೌಢ ವಿವಾಹದ ಆಂದೋಲನವು ಇತ್ತೀಚಿಗೆ ಹುಟ್ಟಿರುವದರಿಂದಲೂ, ಅನೇಕ ಮಂದಿ ಧರ್ಮಶಾಸ್ತ್ರಕಾರರು ಬಾಲ್ಯವಿವಾಹವನ್ನೇ ಮುಕ್ತ ಕಂಠದಿಂದ ಸಮರ್ಥಿಸಿರುವುದರಿಂದಲೂ, ಬಾಲ್ಯವಿವಾಹವೇ ವೇದ ಶಾಸ್ತ್ರ ಸಂಮತವೆಂಬುದರಲ್ಲಿ ಯಾರಿಗೂ, ಎಂದಿಗೂ, ಯಾವ ಸಂಶಯವೂ ಇಲ್ಲ" ಎಂಬುದು ಶ್ರೀ ಶಾಸ್ತ್ರಿಗಳ ಪ್ರಥಮ ವಾದವಾಗಿತ್ತು. ಪಂ ಧರ್ಮದೇವಜೀ ಅವರು ಋಗ್ವೇದದ ಮತ್ತು ಅಥರ್ವವೇದದ ಅನೇಕ ಮಂತ್ರಗಳನ್ನು ಉದಾಹರಿಸಿ, ವಿವಾಹದ ವಿಧಾನ ವೇದಗಳಲ್ಲಿದೆಯೆಂದೂ, ಮತ್ತು ಅವುಗಳ ಅಭಿಪ್ರಾಯ ಪ್ರೌಢ ವಿವಾಹವಲ್ಲದೇ, ಬಾಲ್ಯವಿವಾಹವಲ್ಲವೆಂದೂ ಪ್ರಮಾಣ ಪುರಃಸ್ಸರವಾಗಿ ಸ್ವ ಪಕ್ಷ ಪ್ರತಿಪಾದನೆ ಮಾಡಿದರು.

ಇದಕ್ಕೆ ಉತ್ತರವಾಗಿ ಶ್ರೀ ಶಾಸ್ತ್ರಿಗಳು – ವೇದಗಳಲ್ಲಿನ ಈ ವಿಧಾನ ಮನುಷ್ಯರಿಗಾಗಿಲ್ಲ, ದೇವತೆಗಳಿಗಾಗಿದೆ; ವೇದಗಳಲ್ಲಿ ಸುರಾಪಾನದ ವಿಧಿ ಇದೆ. ವೇದಗಳು ಸ್ವತಃ ಪ್ರಮಾಣಗಳಲ್ಲ; ಸ್ವಯಂವರವು ಕ್ಷತ್ರಿಯರಿಗೆ ಮಾತ್ರ ವಿಹಿತವೇ ಹೊರತು ಬ್ರಾಹ್ಮಣರಿಗಲ್ಲ ಎಂಬ ಅನೇಕ ಹೊಸ ವಾದಗಳನ್ನು ಪ್ರಸ್ತುತ ಮಾಡಿದರೇ ಹೊರತು, ತಮ್ಮ ಪಕ್ಷ ಪ್ರತಿಪಾದನೆಗಾಗಿ, ಒಂದು ವೇದಮಂತ್ರವನ್ನೂ ಉದ್ಧರಿಸಲಿಲ್ಲ.

ಈಗಿನ ಪೌರಾಣಿಕ ವಿದ್ವಾಂಸರು, ಶ್ರೀ ಶಾಸ್ತ್ರೀಗಳ ಉಪರ್ಯುಕ್ತ ವಾದಗಳೊಡನೆ, ಈಗ ತಾವು ಅನುಸರಿಸುತ್ತಿರುವ, ಹಾಗೂ ಒಪ್ಪುತ್ತಿರುವ ಸಿದ್ಧಾಂತಗಳನ್ನು ಹೋಲಿಸಿ ನೋಡಬೇಕು. ಈ ಶಾಸ್ತ್ರಾರ್ಥವು ಕನ್ನಡದಲ್ಲಿ ಪ್ರಕಟಿಸಲ್ಪಟ್ಟಿದೆ.

೨೧. ಆಂಗ್ಲರು ಭಾರತವನ್ನು ತಮ್ಮ ಆಡಳಿತಕ್ಕೆ ಸುಲಭವಾಗಿ ವಶಪಡಿಸಿಕೊಂಡಿದ್ದಕ್ಕೆ ಇದೇ ಕಾರಣ. ಈ ಇತಿಹಾಸದ ಕರೆಗೆ ದಯಾನಂದರು ನಮ್ಮ ಗಮನ ಸೆಳೆಯುತ್ತಿದ್ದಾರೆ.

೨೨. ಪಾಶ್ಚಾತ್ಯ ವಿದ್ವಾಂಸರ ಅನುಸಾರ, ಈ ಸಮಯ ಕ್ರಿ.ಪೂ ೧೪೦೦ ವರ್ಷ. ಇದು ತಪ್ಪು. ಯು.ಮೀ.

೨೩. ಇಸವಿ ೧೮೫೭ ನೆಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರ ಸೋಲಿಗೆ ಈ ರಾಜರೋಗವೇ ಕಾರಣ. ಮರಾಠರಲ್ಲಿ ಅತ್ಯಂತ ಪ್ರಬಲರಾದ ಹೋಳ್ಕರ್ [ಇಂದೂರ್] ಮತ್ತು ಸಿಂಧ್ಯಾ [ಗ್ವಾಲಿಯರ್]ರಲ್ಲಿ ಪರಸ್ಪರ ವೈಮನಸ್ಯವಿತ್ತು. ಪುಣೆಯ ಪೇಷ್ವೆಗೂ ಹಾಗೂ ಹೋಳ್ಕರನಿಗೂ ಹೊಂದಾಣಿಕೆ ಇರಲಿಲ್ಲ. ರಾಜಪುಟಾಣದ ಶಕ್ತಿಶಾಲೀ ರಾಜನಾದ ಜಯಪುರದ ರಾಮಸಿಂಹನು, ಬ್ರಿಟಿಷರ ವಿರುದ್ಧ ಮರಾಠರಿಗೆ ಸಹಾಯಕನಾಗಬೇಕೋ, ಬೇಡವೋ, ಎಂದು ಯೋಚಿಸುತ್ತಿರುವಾಗ– ಆಗಾಗ ಅವನ ರಾಜ್ಯದಲ್ಲಿ ಮರಾಠರು ನುಗ್ಗಿ, ಪ್ರಜೆಗಳನ್ನು ಸುಲಿಗೆ ಮಾಡುತ್ತಿದ್ದ ಪ್ರಸಂಗ ನೆನಪಿಗೆ ಬಂದಿತು. ಗೆದ್ದಮೇಲೆ ಮರಾಠರ ಸಖ್ಯಕ್ಕಿಂತ ಇಂಗ್ಲೀಷರ ಸಖ್ಯವೇ ಮೇಲೆಂದು, ತೀರ್ಮಾನಿಸಿ, ಅವನು ಇಂಗ್ಲಿಷರ ಸಹಾಯಕ್ಕೆ ನಿಂತನು. ಇದೇ ಕಾರಣದಿಂದ ಸಿಕ್ಕರು ಇಂಗ್ಲೀಷರಿಗೆ ಸಹಾಯ ಮಾಡಿದರು.

ಹೋಳ್ಕರನೂ, ಸಿಂಧ್ಯನೂ ಸ್ವಾತಂತ್ರ್ಯವೀರರ ಕಡೆ ನಿಲ್ಲಲಿಲ್ಲ. ಹೈದರಾಬಾದಿನ ನಿಜಾಮನಂತೂ ಪ್ರಕಟವಾಗಿಯೇ ಇಂಗ್ಲಿಷರ ಸಹಾಯಕ್ಕೆ ಬಂದನು. ಮೈಸೂರು ಆಗ ಅತ್ಯಂತ ನಿರ್ಬಲವಾಗಿತ್ತು.

ಮೇ ೧೧ರಂದು ಯುದ್ಧ ಆರಂಭವಾದಾಗ, ಭಾರತದಲ್ಲಿ ಬ್ರಿಟಿಷರ ಸೇನೆ ಕೇವಲ ೨೭,೦೦೦ ಇತ್ತು. ಈ ರಾಜರೆಲ್ಲಾ ತಮಗೆ ವಿರುದ್ಧವಾಗಿ ಹೋರಾಡುವರೆಂದು, ಅನುಮಾನಿಸಿದ ಇಂಗ್ಲೀಷರು ಇಂಗ್ಲೆಂಡಿಗೆ ವಾಪಸು ತೆರಳಲು ಹಾಸಿಗೆಗಳನ್ನು ಕಟ್ಟಿಯೇ ಬಿಟ್ಟಿದ್ದರು. ಯುದ್ಧದ ಆರು ತಿಂಗಳಲ್ಲಿ ಸ್ವಾತಂತ್ರ್ಯ ವೀರರಿಗೆ ಜಯ ಲಭಿಸಿತ್ತು. ಆದರೆ, ನಂತರ, ಅವರು ರಾಜರುಗಳ ಸಹಾಯವಿಲ್ಲದ್ದರಿಂದ, ಏಕಾಕಿಗಳಾಗಿ ಬಿಟ್ಟರು. ಕೊನೆಗೆ ಸೋತರು.

ಈ ವಿಷಯ ಮಹರ್ಷಿ ದಯಾನಂದರಿಗೆ ಚೆನ್ನಾಗಿ ತಿಳಿದಿತ್ತು. ಆಗ ಅವರಿಗೆ ೩೩ ವರ್ಷ. ಅಗ ಅವರೆಲಿದ್ದರು? ಏನು ಮಾಡುತ್ತಿದ್ದರು, ಎಂಬುದನ್ನು 'ಸತ್ಯಾರ್ಥ ಪ್ರಕಾಶ'ದ ಈ ಉದ್ಗಾರದಿಂದ ಊಹಿಸಿಕೊಳ್ಳಬಹುದಾಗಿದೆ.

ಭಕ್ಷ್ಯ–ಅಭಕ್ಷ್ಯ ಎರಡು ಬಗೆಯವಿವೆ. ಒಂದು ಧರ್ಮಶಾಸ್ತ್ರೋಕ್ತವಾದುದು, ಎರಡನೆಯದು ವೈದ್ಯಕ ಶಾಸ್ತ್ರೋಕ್ತವಾದುದು. ಉದಾಹರಣೆಗೆ, ಧರ್ಮಶಾಸ್ತ್ರದಲ್ಲಿ:–

**ಅಭಕ್ಷ್ಯಾಣಿ ದ್ವಿಜಾತೀನಾಮಮೇಧ್ಯಪ್ರಭವಾಣಿ ಚ ॥** (ಮನು:–೫.೫)

ದ್ವಿಜರು, ಎಂದರೆ–ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೂ ಕೂಡ, ಮಲಿನವಾದ, ಮಲ–ಮೂತ್ರಾದಿಗಳ ಸಂಸರ್ಗದಿಂದ ಉತ್ಪನ್ನವಾದ ಸೊಪ್ಪು, ಹಣ್ಣು, ಗೆಡ್ಡೆ – ಮೊದಲಾದುವನ್ನು ತಿನ್ನಬಾರದು.

**ವರ್ಜಯೇನ್ಮಧು ಮಾಂಸಂಚ ॥** (ಮನು:–೨.೧೭೭)

ಅನೇಕ ರೀತಿಯ ಮದ್ಯಗಳು, ಗಾಂಜಾ, ಭಂಗೀರಸ, ಅಫೀಮು ಮೊದಲಾದ ಯಾವ ಯಾವ –

**ಬುದ್ಧಿಂ ಲುಂಪತಿ ಯದ್ದ್ರವ್ಯಂ ಮದಕಾರಿ ತದುಚ್ಯತೇ ॥** (ಶಾರ್ಙ್ಗಧರ:–೪.೨೧)

ಬುದ್ಧಿಯನ್ನು ನಾಶಮಾಡುವ ಪದಾರ್ಥಗಳಿವೆಯೋ, ಅವುಗಳ ಸೇವನೆಯನ್ನು ಎಂದಿಗೂ ಮಾಡಬಾರದು. ಮತ್ತು ಕೊಳೆತ, ಕೆಟ್ಟುಹೋದ, ದುರ್ಗಂಧದಿಂದ ದೂಷಿತವಾದ, ಚೆನ್ನಾಗಿ ಮಾಡಲ್ಪಡದ ಎಷ್ಟು ಆಹಾರಗಳಿವೆಯೋ, ಅವುಗಳನ್ನೂ, ಮತ್ತು ಯಾರ ಶರೀರಗಳು ಮದ್ಯ–ಮಾಂಸಗಳ ಪರಮಾಣುಗಳಿಂದಲೇ ಪೂರಿತವಾಗಿವೆಯೋ, ಆ ಮದ್ಯ–ಮಾಂಸಾಹಾರೀ ಮ್ಲೇಚ್ಛರ ಕೈಯಿನದನ್ನೂ ತಿನ್ನಬಾರದು.

ಯಾವುದರ (ಪ್ರಾಪ್ತಿ)ಯಲ್ಲಿ ಉಪಕಾರ ಮಾಡುವ ಪ್ರಾಣಿಗಳ ಹಿಂಸೆಯಾಗುವುದೋ, ಅಂತಹ ಮಾಂಸವನ್ನು ಭಕ್ಷಿಸಬಾರದು. ಉದಾಹರಣೆಗೆ, ಹಸುವಿನ ಶರೀರದಿಂದ ಹಾಲು, ತುಪ್ಪ (ಮಾತ್ರವಲ್ಲದೆ) ಎತ್ತುಗಳು, ಹಸುಗಳು ಉತ್ಪನ್ನವಾಗುವುದರಿಂದ, ಒಂದು ಪೀಳಿಗೆಯಲ್ಲಿ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರದ ಆರುನೂರು ಜನರಿಗೆ ಸುಖ ಸಿಕ್ಕುತ್ತದೆ. ಅಂತಹ ಪಶುಗಳನ್ನು ಕೊಲ್ಲಬಾರದು; ಕೊಲ್ಲಲುಬಿಡಬಾರದು. ದೃಷ್ಟಾಂತವಾಗಿ, ಒಂದು ಹಸುವಿನಿಂದ ಇಪ್ಪತ್ತು ಸೇರು ಮತ್ತು ಇನ್ನೊಂದರಿಂದ ಎರಡು ಸೇರು ಹಾಲು ಪ್ರತಿ ದಿನ ಸಿಕ್ಕಿದರೆ, ಅದರ ಸರಾಸರಿ ಹನ್ನೊಂದು ಸೇರು ಒಂದು ಹಸುವಿನಿಂದ ಲಭಿಸುತ್ತದೆ. ಒಂದು ಹಸು ಹದಿನೆಂಟು ತಿಂಗಳು, ಇನ್ನೊಂದು ಆರು ತಿಂಗಳ ತನಕ ಹಾಲು ಕೊಡುತ್ತದೆ. ಇದರ ಸರಾಸರಿ ಹನ್ನೆರಡು ತಿಂಗಳುಗಳಾಯಿತು. ಈಗ ಪ್ರತಿಯೊಂದು ಹಸುವಿನ ಜೀವಮಾನದ ಪೂರ್ತದ ಹಾಲಿನಿಂದ ೨೪,೯೬೦ ಜನರು ಒಂದು ಸಾರಿ ತೃಪ್ತರಾಗಬಲ್ಲರು. ಆದಕ್ಕೆ ಆರು ಹೆಣ್ಣು ಕರುಗಳೂ, ಆರು ಗಂಡು ಕರುಗಳೂ ಆಗುತ್ತವೆ. ಅವುಗಳಲ್ಲಿ ಎರಡು ತೀರಿ ಹೋದರೂ ಹತ್ತು ಉಳಿದೇ ಉಳಿಯುತ್ತವೆ. ಅವುಗಳಲ್ಲಿನ ಐದು ಹೆಣ್ಣು ಕರುಗಳ ಜೀವನ ಕಾಲದಲ್ಲಿ ಲಭಿಸುವ ಹಾಲನ್ನು ಸೇರಿಸಿ ಒಂದು ಲಕ್ಷ ಇಪ್ಪತ್ತುನಾಲ್ಕು ಸಾವಿರದ ಎಂಟುನೂರು ಜನ ತೃಪ್ತರಾಗಬಹುದು. ಇನ್ನು ಉಳಿದವು ಐದು ಎತ್ತುಗಳು. ಅವು ತಮ್ಮ ಜೀವಿತ ಕಾಲದಲ್ಲಿ ಕನಿಷ್ಠಪಕ್ಷ ಐದು ಸಾವಿರಮಣ ಆಹಾರವನ್ನು ಉತ್ಪಾದಿಸಬಲ್ಲವು. ಆ ಆಹಾರದಿಂದ ಪ್ರತಿಯೊಬ್ಬನೂ ಮೂರುಪಾವು ತಿನ್ನುವುದಾರೆ, ಎರಡೂವರೆ ಲಕ್ಷ ಜನರಿಗೆ ತೃಪ್ತಿಯುಂಟಾಗುತ್ತದೆ. ಹಾಲು ಮತ್ತು ಆಹಾರ ಸೇರಿಸಿ ಮೂರು ಲಕ್ಷ ಎಪ್ಪತ್ತುನಾಲ್ಕು ಸಾವಿರದ ಎಂಟುನೂರು ಜನರು ತೃಪ್ತರಾಗುತ್ತಾರೆ. ಎರಡು ಸಂಖ್ಯೆಗಳನ್ನೂ ಸೇರಿಸಿದರೆ, ಒಂದು ಹಸುವಿನ ಪೀಳಿಗೆಯಲ್ಲಿ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರದ ಆರುನೂರು ಜನರು ಒಂದು ಸಾರಿ ಪಾಲನೆ[೨೪] ಪಡೆಯುತ್ತಾರೆ. ಪೀಳಿಗೆಯ ಮೇಲೆ ಪೀಳಿಗೆಯನ್ನು ವರ್ಧಿಸಿ ಗಣನೆ ಮಾಡಿದರೆ, ಅಸಂಖ್ಯಾತ ಮಾನವರ ಪಾಲನವಾಗುತ್ತದೆ. ಇದರಿಂದ ಬೇರೆಯಾಗಿ, (ಎತ್ತುಗಳು) ಬಂಡಿಗಳನ್ನೆಳೆಯುವುದು, ವಾಹನಗಳಾಗಿ ಒದಗುವುದ, ಬಾರಹೊರುವುದು–ಮೊದಲಾದ ಕಾರ್ಯಗಳ ಮೂಲಕ ಮಾನವರಿಗೆ ಮಹದುಪಕಾರಿಗಳಾಗಿರುತ್ತವೆ. ಮತ್ತು ಹಸುವು ವಿಶೇಷತಃ ಹಾಲು ಕೊಡುವುದರಲ್ಲಿ ಅಧಿಕ ಉಪಕಾರಕಾರಿ ಯಾಗಿರುತ್ತದೆ. ಅಲ್ಲದೆ, ಹೇಗೆ ಎತ್ತುಗಳು ಉಪಕಾರಿಗಳಾಗಿರುತ್ತವೋ, ಹಾಗೆ ಕೋಣಗಳೂ ಕೂಡ (ಉಪಕಾರಿಗಳೇ) ಆಗಿರುತ್ತವೆ.

---

೨೪. ಈ ಲೆಕ್ಕಾಚಾರವು ಮಹರ್ಷಿ ದಯಾನಂದರು ರಚಿಸಿದ 'ಗೋಕರುಣಾನಿಧಿ' ಎಂಬ ಪುಸ್ತಿಕೆಯಲ್ಲಿ ಕೊಡಲಾಗಿದೆ. ಹೀಗೆ ಆರ್ಥಿಕ ದೃಷ್ಟಿಯಿಂದ ಗೋವು [ಮತ್ತಿತ್ತರ ಪಶುಗಳು] ಅತ್ಯಂತ ಉಪಕಾರಿ ಪಶುವೆಂದು ತಿಳಿದು, ಮಹರ್ಷಿ ದಯಾನಂದರು ತಮ್ಮ ಜೀವನವೆಲ್ಲಾ ಗೋ–ಸಂಪೋಷಣೆಗೆ ಮತ್ತು ರಕ್ಷಣೆಗಾಗಿ ದುಡಿದರು. ತಮ್ಮ ಪ್ರಭಾವವಿದ್ದ ದೇಶೀ ರಾಜ್ಯಗಳಲ್ಲಿ ಗೋವಧೆಯನ್ನು ನಿಲ್ಲಿಸುವ ಕಾನೂನನ್ನು ಜಾರಿಗೆ ತರಿಸಿದರು. ಆಂಗ್ಲರಿಂದ ಶಾಸಿತವಾದ ಬ್ರಿಟಿಷ್ ಭಾರತದಲ್ಲಿ ಗೋವಧೆಯನ್ನು ನಿಲ್ಲಿಸಲು ಅಲ್ಲಿನ ಗವರ್ನರುಗಳೊಡನೆ ಮತ್ತು ವೈಸರಾಯಿಯೊಡನೆ ಭೇಟಿ ಮಾಡಿದರು. ಅವರುಗಳೆಲ್ಲಾ– ನಮ್ಮ ಕೈಯಲ್ಲೇನಿಲ್ಲ; ಎಲ್ಲವೂ ಬ್ರಿಟಿಷ್ ಪಾರ್ಲಿಮೆಂಟ್ ನ ಕೈಯಲ್ಲಿದೆ ಎಂದು ತಿಳಿಸಿದಾಗ, ತಾವೇ ಸ್ವತಃ ಇಂಗ್ಲೆಂಡಿಗೆ ಹೋಗಿ ವಿಕ್ಟೋರಿಯಾ ಮಹಾರಾಣಿ ಬಳಿ ಪ್ರಾರ್ಥನೆ ಮಾಡಲು ಎರಡು ಕೋಟಿ ಹಸ್ತಾಕ್ಷರಗಳಿಂದ ಕೂಡಿದ ಮನವಿಯನ್ನು ತಯಾರಿಸಿದರು. ಆದರೆ, ಅಕಾಲದಲ್ಲೇ ಮೃತ್ಯು ಉಂಟಾದ್ದರಿಂದ, ಅವರ ಪ್ರಯತ್ನ ಕೈಗೂಡಲಿಲ್ಲ.

ಆದರೆ, ಹಸುವಿನ ಹಾಲು-ತುಪ್ಪಗಳಿಂದ ಎಷ್ಟು ಬುದ್ಧಿ-ವೃದ್ಧಿಯಾಗಿ ಲಾಭವಾಗುತ್ತದೋ, ಅಷ್ಟು ಎಮ್ಮೆಯ ಹಾಲಿನಿಂದ ಆಗುವುದಿಲ್ಲ. ಈ ಕಾರಣದಿಂದ ಆರ್ಯರು[೨೫] ಹಸುವನ್ನು ಮುಖ್ಯೋಪಕಾರಿ-ಎಂದೆಣಿಸಿದ್ದಾರೆ. ಬೇರೆ ಯಾವನಾದರೂ ವಿದ್ವಾಂಸನಾಗಿರುವುದಾದರೆ, ಅವನೂ ಇದೇ ರೀತಿ ತಿಳಿಯುವನು.

ಮೇಕೆಯ ಹಾಲಿನಿಂದ ೨೫,೯೨೦ ಜನರ ಪಾಲನೆಯಾಗುತ್ತದೆ. ಹಾಗೆಯೇ, ಆನೆ, ಕುದುರೆ, ಒಂಟೆ, ಕುರಿ, ಕತ್ತೆ[೨೬] - ಮೊದಲಾದುವುಗಳಿಂದಲೂ ಮಹೋಪಕಾರಗಳಾಗುತ್ತವೆ. ಈ ಪ್ರಾಣಿಗಳನ್ನು ಕೊಲ್ಲುವವರನ್ನು ಮಾನವರೆಲ್ಲರ ಘಾತಕರೆಂದೇ ತಿಳಿದುಕೊಳ್ಳಿರಿ.

ನೋಡಿರಿ, ಯಾವಾಗ ಆರ್ಯರ ರಾಜ್ಯವಿದ್ದಿತೋ, ಆಗ ಈ ಮಹೋಪಕಾರವಾದ ಹಸುವೇ ಮೊದಲಾದ ಪ್ರಾಣಿಗಳು ಕೊಲ್ಲಲ್ಪಡುತ್ತಿರಲಿಲ್ಲ. ಆಗಲೇ ಆರ್ಯಾವರ್ತದ ಮತ್ತು ಭೂಮಂಡಲದ ಅನ್ಯ ದೇಶಗಳಲ್ಲಿ ಮನುಷ್ಯರೇ ಮೊದಲಾದ ಜೀವಧಾರಿಗಳು ಬಹಳ ಸುಖತೃಪ್ತಿಗಳಿಂದ ಇರುತ್ತಿದ್ದರು. ಏಕೆಂದರೆ, ಹಾಲು, ತುಪ್ಪವಲ್ಲದೆ, ಎತ್ತು ಮೊದಲಾದ ಪ್ರಾಣಿಗಳ ಅಧಿಕ್ಯವಿರುತ್ತಿದ್ದರಿಂದ, ಅನ್ನ-ರಸಗಳು ಪುಷ್ಕಳವಾಗಿ ಸಿಕ್ಕುತ್ತಿದ್ದವು. ಯಾವಾಗಿನಿಂದ ವಿದೇಶೀಯರಾದ ಮಾಂಸಾಹಾರಿಗಳು[೨೭] ಈ ದೇಶಕ್ಕೆ ಬಂದರೋ, ಮತ್ತು ಗೋವುಗಳೇ ಮೊದಲಾದ ಪಶುಗಳನ್ನು ಕೊಲ್ಲುವವರೂ, ಮದ್ಯಪಾನ ಮಾಡುವವರೂ ರಾಜ್ಯಾಧಿಕಾರಿಗಳಾಗಿದ್ದಾರೋ, ಆಗಿನಿಂದ ಕ್ರಮಶಃ ಆರ್ಯರ ದುಃಖದ ವೃದ್ಧಿಯಾಗುತ್ತಾ[೨೮] ಬಂದಿದೆ. ಏಕೆಂದರೆ:-

**ನಷ್ಟೇ ಮೂಲೇ ನೈವ ಪತ್ರಂ ನ ಪುಷ್ಪಮ್ ॥** (ವೃದ್ಧಚಾಣಕ್ಯ:- ೧೦.೧೩)

ವೃಕ್ಷದ ಮೂಲವೇ ಕತ್ತರಿಸಿ ಹಾಕಲ್ಪಟ್ಟಾಗ, ಹಣ್ಣು-ಹೂವುಗಳು ಎಲ್ಲಿಂದ ಬಂದಾವು?

**ಪ್ರಶ್ನೆ :-** ಎಲ್ಲರೂ ಅಹಿಂಸಕರಾಗಿ ಹೋದರೆ, ಹುಲಿ ಮೊದಲಾದ ಪ್ರಾಣಿಗಳು, ಹಸುವೇ ಮೊದಲಾದ ಪ್ರಾಣಿಗಳೆಲ್ಲವನ್ನೂ, ಕೊಂದು ತಿನ್ನುವಷ್ಟು ಹೆಚ್ಚಿ ಹೋದಾವು! ನಿಮ್ಮ ಪುರುಷಾರ್ಥವೇ ನಿರರ್ಥಕವಾಗಿ ಹೋಗುವುದು.

**ಉತ್ತರ :-** ಹಾನಿಕಾರಕವಾದ ಯಾವ ಪಶುಗಳು ಅಥವಾ ಮನುಷ್ಯರಿದ್ದಾರೋ, ಅವರನ್ನು ಶಿಕ್ಷಿಸುವುದು ಮತ್ತು ಪ್ರಾಣವನ್ನೂ ಕೂಡ (ಅವಶ್ಯಕವಾದಲ್ಲಿ) ತೆಗೆಯುವುದು ರಾಜಪುರುಷರ ಕೆಲಸವಾಗಿದೆ.

**ಪ್ರಶ್ನೆ:-** ಮತ್ತೆ, ಅವುಗಳ ಮಾಂಸವನ್ನು ಬಿಸಾಕಿಬಿಡಬೇಕೇನು?

**ಉತ್ತರ:-** ಬೇಕಾದರೆ ಬಿಸಾಕಿಬಿಡಲಿ; ಬೇಕಾದರೆ ನಾಯಿಗಳೇ ಮೊದಲಾದ ಮಾಂಸಾಹಾರಿಗಳಿಗೆ ತಿನ್ನಿಸಿಬಿಡಲಿ, ಅಥವಾ ಸುಟ್ಟುಬಿಡಲಿ; ಅಥವಾ ಯಾವನಾದರೂ ಮಾಂಸಾಹಾರಿಯು[೨೯] (ಮನುಷ್ಯ) ತಿಂದರೂ, ಪ್ರತ್ಯಕ್ಷ ಹಿಂಸೆ ಏನೂ ಆಗುವುದಿಲ್ಲ. ಆದರೆ - ಆ ಮನುಷ್ಯನ ಸ್ವಭಾವ ಮಾಂಸಾಹಾರಿಯದಾಗಿ, ಹಿಂಸಕವಾಗುವ ಸಂಭವವಿದೆ. ಹಿಂಸೆ, ಕಳವು, ವಿಶ್ವಾಸಘಾತ, ಛಲ, ಕಪಟ, ಆ ಮೊದಲಾದುದರಿಂದ ಎಷ್ಟು ಪದಾರ್ಥಗಳನ್ನು ಗಳಿಸಿ, ಅನುಭವಿಸಲಾಗುತ್ತದೋ, ಅದು ಅಭಕ್ಷ್ಯ ಮತ್ತು ಅಹಿಂಸೆ, ಧರ್ಮ ಮೊದಲಾದ ಕರ್ಮಗಳಿಂದ ಗಳಿಸಿದುದರ ಭೋಜನ ಭಕ್ಷ್ಯವಾಗಿರುತ್ತದೆ. ಯಾವ ಪದಾರ್ಥಗಳಿಂದ ಸ್ವಾಸ್ಥ್ಯ, ರೋಗನಿವಾರಣ, ಬುದ್ಧಿ, ಬಲ-ಪರಾಕ್ರಮ, ಉನ್ನತಿ ಮತ್ತು ಆಯುರ್ವರ್ಧನವಾಗುತ್ತದೋ, ಆ ಅಕ್ಕಿ, ಗೋಧಿ, ಹಣ್ಣು, ಮೂಲ,

---

೨೫. ಈ ದೃಷ್ಟಿಕೋನದಿಂದಲೇ, ಪಂಜಾಬಿನ ಸಿಕ್ಕರು ಗೋಭಕ್ತರಾಗಿದ್ದರು. ಗೋರಕ್ಷಕರಾಗಿದ್ದರು. ಹರಿಯಾಣದ, ಹಿಂದುಗಳು ಮಾಂಸಾಹಾರಿಗಳಲ್ಲವಾಗಿರುವುದಲ್ಲದೆ, ಎಷ್ಟು ಗೋಭಕ್ತರೆಂಬುದು ೧೧ನೇ ಸಮುಲ್ಲಾಸದಲ್ಲಿ ಬರುವ ಜಾಟ್-ಪೋಪರ ಪ್ರಕರಣದಲ್ಲಿ ತಿಳಿದುಬರುತ್ತದೆ. ಅಲ್ಲಿಯೂ ಆರ್ಥಿಕ ದೃಷ್ಟಿಕೋಣವೇ ಪ್ರಧಾನ.

ಆದರೆ, ಪೌರಾಣಿಕ ಕಾಲದಲ್ಲಿ ಗೋವು ಆರ್ಥಿಕ ಪ್ರಧಾನತೆಯನ್ನು ಕಳೆದುಕೊಂಡು, ಧಾರ್ಮಿಕ ಪ್ರಧಾನತೆಯನ್ನು ಗಳಿಸಿಕೊಂಡಮೇಲೆ, ಅದು 'ಪೂಜಾರ್ಹ'ವಾಗಿ ಪೋಷಾರ್ಹತೆಯನ್ನು ಕಳೆದುಕೊಂಡಿತು. ಆಗ ಹಿಂದೂಗಳು ಧಾರ್ಮಿಕ ಭಾವನೆಯಿಂದ ಮಾತ್ರ ಗೋವಧೆ ನಿಷೇಧಕ್ಕೆ ಟೊಂಕ ಕಟ್ಟಿದರು. ಗೋವು ಹಿಂದು-ಮುಸ್ಲಿಂರ ನಡುವಿನ ವ್ಯಾಜ್ಯಕ್ಕೆ ಪ್ರಮುಖ ಕಾರಣವಾಯಿತು. ಬಾಬರನು ಗೋವುಗಳ ಹಿಂಡನ್ನು ಮುಂದಿಟ್ಟುಕೊಂಡು, ಯುದ್ಧಮಾಡಿ, ಅನೇಕ ಬಾರಿ ಹಿಂದೂಗಳನ್ನು ಸೋಲಿಸಿದನು.

೨೬. ಸಿಡುಬಿನ ರೋಗದಲ್ಲಿ ಕತ್ತೆಯ ಹಾಲು ರಾಮ ಬಾಣ ಔಷಧಿಯಾಗಿರುತ್ತದೆ. ಯು.ಮೀ.

೨೭. ಎಂದರೆ, ಮುಸಲ್ಮಾನರು ಮತ್ತು ಕ್ರೈಸ್ತರು !

೨೮. ಈ ಮಾತನ್ನು ಮಹರ್ಷಿ ದಯಾನಂದರು ಅವರ ಶಾಸನ ಕಾಲದಲ್ಲೇ, ಅವರ ರಾಜ್ಯಗಳಲ್ಲೇ ನಿರ್ಭಯವಾಗಿ ಹೇಳುತ್ತಿದ್ದರು.

೨೯. ಮಾಂಸಾಹಾರಿಗಳು ಸಾಧಾರಣವಾಗಿ ಹಿಂಸ್ರ ಪಶುಗಳ ಮಾಂಸವನ್ನು ತಿನ್ನುವುದಿಲ್ಲ. ಅವರು ತಿನ್ನುವುದು ಸಸ್ಯಾಹಾರಿಗಳಾದ ಬಡಪಾಯಿ ಮನುಷ್ಯೋಪಕಾರಕ ಪಶುಗಳನ್ನಶೇ.

ಗೆಡ್ಡೆ, ಹಾಲು, ತುಪ್ಪ, ಸಿಹಿ–ಮೊದಲಾದುವನ್ನು ಯುಕ್ತರೀತಿಯಲ್ಲಿ ಬೇಯಿಸಿ, ಬೆರೆಯಿಸಿ, ಕ್ಲೃಪ್ತವಾದ ಕಾಲದಲ್ಲಿ ಮಿತವಾಗಿ ಸೇವನ ಮಾಡುವುದು, ಭುಂಜಿಸುವುದು ಎಲ್ಲವೂ ಭಕ್ಷ್ಯವೆನಿಸುತ್ತದೆ. ಎಷ್ಟು ಪದಾರ್ಥಗಳು ತನ್ನ ಪ್ರಕೃತಿಗೆ ವಿರುದ್ಧವಾಗಿ ವಿಕಾರವನ್ನುಂಟುಮಾಡುವಂತಹವಾಗಿರುತ್ತವೋ, ಆ ಎಲ್ಲವನ್ನೂ ಪೂರ್ಣವಾಗಿ ಬಿಟ್ಟುಬಿಡುವುದು ಮತ್ತು ಯಾವ ಯಾವವು, ಯಾರಾರಿಗೆ ವಿಹಿತವಾಗಿವೆಯೋ ಆಯಾ ಪದಾರ್ಥಗಳನ್ನು ಗ್ರಹಿಸುವುದು–ಇದೂ ಭಕ್ಷ್ಯವಾಗಿರುತ್ತದೆ.

**ಪ್ರಶ್ನೆ :–** ಒಂದಿಗೆ ಊಟ ಮಾಡುವುದರಲ್ಲಿ ಏನಾದರೂ ದೋಷವಿದೆಯೋ ಅಥವಾ ಇಲ್ಲವೋ?

**ಉತ್ತರ:–** ದೋಷವಿದೆ. ಏಕೆಂದರೆ, ಒಬ್ಬನೊಂದಿಗೆ ಇನ್ನೊಬ್ಬನ ಸ್ವಭಾವ ಮತ್ತು ಪ್ರಕೃತಿ ಹೊಂದಿಕೊಳ್ಳುವುದಿಲ್ಲ. ಹೇಗೆ ಕುಷ್ಠರೋಗಿ–ಮೊದಲಾದವರೊಂದಿಗೆ ಊಟ ಮಾಡುವುದರಿಂದ, ಒಳ್ಳೆಯ ಮನುಷ್ಯನ ರಕ್ತವೂ ಕೂಡ ಕೆಟ್ಟು ಹೋಗುತ್ತದೋ, ಹಾಗೆ ಬೇರೆಯವರೊಂದಿಗೆ ತಿನ್ನುವುದರಲ್ಲಿಯೂ ಸ್ವಲ್ಪ ಕೇಡೇ ಆಗುತ್ತದೆ; ಸುಧಾರಣೆಯಲ್ಲ.

**ನೋಚ್ಛಿಷ್ಟಂ ಕಸ್ಯಚಿದ್ದದ್ಯಾನ್ನಾದ್ಯಾಚ್ಚೈವ ತಥಾಂತರಾ ।**

**ನ ಚೈವಾತ್ಯಶನಂ ಕುರ್ಯಾನ್ನ ಚೋಚ್ಛಿಷ್ಟಃ ಕ್ವಚಿದ್ವ್ರಜೇತ್ ॥** (ಮನು:–೨.೫೬)

ತನ್ನ ಎಂಜಲು ಪದಾರ್ಥರನ್ನು ಯಾವನಿಗೂ ಕೊಡಬಾರದು; ಯಾವನಾದರೂ ಊಟದ ನಡುವೆ ತಾನೂ ತಿನ್ನಬಾರದು. ಅತಿಯಾಗಿ ಊಟವನ್ನು ಮಾಡಬಾರದು; ಭೋಜನಾನಂತರ, ಕೈ–ಬಾಯಿ ತೊಳೆದುಕೊಳ್ಳದೆ ಎಲ್ಲಿಯೂ ಅತ್ತ–ಇತ್ತ ಅಡ್ಡಾಡಬಾರದು.

**ಪ್ರಶ್ನೆ:– "ಗುರೋರುಚ್ಛಿಷ್ಟಭೋಜನಮ್".** ಈ ವಾಕ್ಯದ ಅರ್ಥವೇನಿದ್ದೀತು?

**ಉತ್ತರ:–** ಗುರುವಿನ ಊಟವಾದ ನಂತರ, ಯಾವ ಪ್ರತ್ಯೇಕವಾದ ಆಹಾರವು ಶುದ್ಧವಾಗಿಡಲ್ಪಟ್ಟಿದೆಯೋ, ಅದನ್ನು ಭಕ್ಷಿಸಬೇಕು; ಎಂದರೆ ಮೊದಲು ಗುರುವಿಗೆ ಭೋಜನ ಮಾಡಿಸಿ, ಆ ಮೇಲೆ ಶಿಷ್ಯನು ಭೋಜನ ಮಾಡಬೇಕು–ಎನ್ನುವುದು ಇದರ ಅರ್ಥವಾಗಿದೆ. (ಎಂಜಲನ್ನು ತಿನ್ನಬೇಕೆಂದಲ್ಲ)

**ಪ್ರಶ್ನೆ :–** ಎಂಜಲೆಲ್ಲದಕ್ಕೂ ನಿಷೇಧವಿದ್ದಲ್ಲಿ, ಜೇನು ತುಪ್ಪ, ಜೇನು ನೊಣಗಳ ಎಂಜಲು; ಹಾಲು ಕರುವಿನ ಎಂಜಲು ಮತ್ತು ಒಂದು ತುತ್ತನ್ನು ತಿಂದಮೇಲೆ ತನ್ನ (ಊಟ)ದೂ ಕೂಡ ಎಂಜಲೇ ಆಗುತ್ತದೆ. ಮತ್ತೆ, ಅದನ್ನೂ ಕೂಡ ತಿನ್ನಬಾರದು.

**ಉತ್ತರ :–** ಜೇನುತುಪ್ಪ ನಾಮಮಾತ್ರಕ್ಕೆ ಎಂಜಲು, ಅಷ್ಟೇ, ವಸ್ತುತಃ ಅದು ಬಹಳ ಓಷಧಿಗಳ ಸಾರ; ಮತ್ತು ಗ್ರಾಹ್ಯವಾಗಿದೆ. ಕರು ತನ್ನ ತಾಯಿಯ ಕೆಚ್ಚಲಿನಿಂದ ಹೊರಬಂದ ಹಾಲನ್ನು ಕುಡಿಯುತ್ತದೆ; ಒಳಗಿನ ಹಾಲನ್ನು ಕುಡಿಯಲಾರದು. ಆದುದರಿಂದ, (ಹಾಲು) ಎಂಜಲಲ್ಲ. ಆದರೆ, ಕರುವು ಕುಡಿದಾದ ಮೇಲೆ, ನೀರಿನಿಂದ ಅದರ ತಾಯಿಯ ಸ್ತನವನ್ನ ತೊಳೆದು ಶುದ್ಧವಾದ ಪಾತ್ರೆಯಲ್ಲಿ (ಹಾಲನ್ನು) ಕರೆಯಬೇಕು. ಮತ್ತು ತನ್ನ ಎಂಜಲು ತನಗೆ ವಿಕಾರಕರವಾಗಿರುವುದಿಲ್ಲ. ನೋಡಿರಿ, ಯಾವನ ಎಂಜಲನ್ನೂ ಯಾವನೂ ತಿನ್ನಬಾರದು–ಎಂಬುದು ಸ್ವಭಾವದಿಂದ ಸಿದ್ಧವಾಗಿದೆ. ತನ್ನ ಬಾಯಿ, ಮೂಗು, ಕಿವಿ, ಕಣ್ಣು, ಉಪಸ್ಥ ಹಾಗೂ ಗುಹ್ಯೇಂದ್ರಿಯಗಳ ಮಲ–ಮೂತ್ರ ಮೊದಲಾದುವುಗಳ ಸ್ಪರ್ಶದಿಂದ ಅಸಹ್ಯವಾಗುವುದಿಲ್ಲ; ಆದರೆ ಬೇರೆಯವನ ಮಲ–ಮೂತ್ರಗಳ ಸ್ಪರ್ಶದಿಂದ ಜುಗುಪ್ಸೆಯಾಗುತ್ತದೆ. ಈ ವ್ಯವಹಾರ[೩೦] ಸೃಷ್ಟಿಕ್ರಮಕ್ಕೆ ವಿರುದ್ಧವಾಗಿಯೇ ಇದೆ ಎಂಬುದು ಇದರಿಂದ ಸಿದ್ಧವಾಗುತ್ತದೆ. ಆದುದರಿಂದ, ಯಾವನದೇ ಉಚ್ಛಿಷ್ಟವನ್ನು, ಎಂದರೆ ಎಂಜಲನ್ನು ತಿನ್ನಬಾರದೆಂಬುದು ಮಾನವಮಾತ್ರರಿಗೆ ಉಚಿತವಾಗಿದೆ.

---

೩೦. ಎಂದರೆ, ಬೇರೆಯವರ ಎಂಜಲು ತಿನ್ನುವುದು. –ಯು.ಮೀ.

**ಪ್ರಶ್ನೆ :–** ಒಳ್ಳೆಯಿತು! ಸ್ತ್ರೀ–ಪುರುಷರೂ (ಗಂಡ–ಹೆಂಡತಿ) ಕೂಡ ಪರಸ್ಪರ ಎಂಜಲನ್ನು ತಿನ್ನಬಾರದೇ?[೩೧]

**ಉತ್ತರ :–** ತಿನ್ನಬಾರದು. ಏಕೆಂದರೆ, ಅವರ ಶರೀರಗಳ ಸ್ವಭಾವವೂ ಕೂಡ ಬೇರೆ ಬೇರೆಯವಾಗಿವೆ.

**ಪ್ರಶ್ನೆ :–** ಹೇಳಿರಲ್ಲ! ಮಾನವಮಾತ್ರರ ಕೈಯಿಂದ ಸಿದ್ಧವಾದ ಅಡಿಗೆಯನ್ನು, ಆಹಾರವನ್ನು ತಿನ್ನುವುದರಲ್ಲಿ ದೋಷವೇನಿದೆ? ಏಕೆಂದರೆ, ಬ್ರಾಹ್ಮಣನಿಂದ ಹಿಡಿದು ಚಾಂಡಾಲನವರೆಗಿನ ಶರೀರಗಳು ಮೂಳೆ–ಮಾಂಸ–ಚರ್ಮಗಳವು. ಮತ್ತು ಎಂತಹ ರಕ್ತ ಬ್ರಾಹ್ಮಣನ ಶರೀರದಲ್ಲಿದೆಯೋ, ಅಂತಹದೇ ಚಾಂಡಾಲ – ಮೊದಲಾದವರ ಶರೀರಗಳಲ್ಲಿಯೂ ಇದೆ. ಮತ್ತೆ ಮಾನವಮಾತ್ರರ ಕೈಯಿನಿಂದ ಮಾಡಲ್ಪಟ್ಟ ಅಡಿಗೆಯನ್ನು ತಿನ್ನುವುದರಲ್ಲಿ ಏನು ದೋಷವಿದೆ?

**ಉತ್ತರ :–** ದೋಷವಿದೆ. ಏಕೆಂದರೆ, ಉತ್ತಮವಾದ ಪದಾರ್ಥಗಳ ಭೋಜನ–ಪಾನದಿಂದ, ಗುಣಕರ್ಮಸ್ವಭಾವಗಳಿಂದ ಬ್ರಾಹ್ಮಣ–ಬ್ರಾಹ್ಮಣಿತಿಯರಾದವರ ಶರೀರದಲ್ಲಿ ದುರ್ಗಂಧ ಮೊದಲಾದ ದೋಷಗಳಿಂದ ರಹಿತವಾದ ಎಂತಹ ರಜೋ–ವೀರ್ಯಗಳು ಉತ್ಪನ್ನವಾಗುತ್ತವೋ, ಅಂತಹುದು ಗುಣಕರ್ಮಸ್ವಬಾವಾನುಸಾರ ಚಾಂಡಾಲ–ಚಾಂಡಾಲಿಯರಾದವರ ಶರೀರದಲ್ಲಿ ಉತ್ಪನ್ನವಾಗುವುದಿಲ್ಲ. ಏಕೆಂದರೆ, ಆ ಬಗೆಯ ಚಾಂಡಾಲನ ಶರೀರ ದುರ್ಗಂಧಯುಕ್ತವಾದ ಪರಮಾಣುಗಳಿಂದ ತುಂಬಿರುತ್ತದೆ; ಹಾಗೆ ಮೇಲೆ ಹೇಳಿರುವಂತಹ ಬ್ರಾಹ್ಮಣ–ಮೊದಲಾದ ವರ್ಣಗಳವರದು ಇರುವುದಿಲ್ಲ. ಆದುದರಿಂದ ಬ್ರಾಹ್ಮಣರೇ ಮೊದಲಾದ ಉತ್ತಮ ವರ್ಣಗಳವರ ಕೈಯಿನದನ್ನು ತಿನ್ನಬೇಕು; ಮತ್ತು ಚಾಂಡಾಲರೇ ಮೊದಲಾದ ನೀಚಮಟ್ಟದ, ಜಲಗಾರರು, ಚಮ್ಮಾರರು ಮೊದಲಾದವರ ಕೈಯಿನದನ್ನು ತಿನ್ನಬಾರದು. ಆಯಿತು; ಯಾವನಾದರೂ, "ಹೇಗೆ ತಾಯಿ, ಅತ್ತೆ, ಸೋದರಿ, ಮಗಳು ಮತ್ತು ಸೊಸೆಯ ಶರೀರ ಚರ್ಮದ್ದಾಗಿದೆಯೋ, ಹಾಗೆಯೇ ತನ್ನ ಪತ್ನಿಯದೂ ಕೂಡ; ಆದುದರಿಂದ, ತಾಯಿಯೇ ಮೊದಲಾದ ಸ್ತ್ರೀಯರೊಂದಿಗೆಯೂ ಸ್ವಪತ್ನಿಯೊಂದಿಗೆ ವರ್ತಿಸುವಂತೆ ವರ್ತಿಸುವಿರೇನು?"–ಎಂದು ಯಾವಾಗ ನಿಮ್ಮನ್ನು ಕೇಳುವನೋ, ಆಗ ನೀವು ಸಂಕೋಚಪಟ್ಟು, ಮಾನವಾಗಿಯೇ ಇರಬೇಕಾಗುವುದು. ಹೇಗೆ ಉತ್ತಮವಾದ ಆಹಾರ ಕೈ ಮತ್ತು ಬಾಯಿನಿಂದ ತಿನ್ನಲ್ಪಡುತ್ತದೋ, ಹಾಗೆ ದುರ್ಗಂಧಮಯವಾದುದೂ ತಿನ್ನಲ್ಪಡಬಹುದು. ಹಾಗೆಂದು, ಮಲವೇ ಮೊದಲಾದುದನ್ನೂ ತಿನ್ನುವಿರೇನು? ಇಂತಹ ವಿಚಾರಹೀನನೂ ಯಾವನಾದರೂ ಇರಬಲ್ಲನೇನು?

**ಪ್ರಶ್ನೆ :–** ಗೋವಿನ ಸೆಗಣಿಯಿಂದ ಪಾಕಶಾಲಾ ಸ್ಥಳವನ್ನು ಸಾರಿಸುವಾಗ, ತನ್ನ ಮಲದಿಂದ ಸಾರಿಸುವುದಿಲ್ಲವೇಕೆ? ಮತ್ತು ಸೆಗಣಿ ಪಾಕಾಶಾಲಾವರಣದಲ್ಲಿ ಪ್ರವೇಶಿಸಿದರೆ, ಅದು ಅಶುದ್ಧವಾಗುವುದಿಲ್ಲವೇಕೆ?

**ಉತ್ತರ :–** ಎಂತಹ ದುರ್ಗಂಧ ಮಾನವನ ಮಲದಿಂದ ಹೊರಡುವುದೋ, ಅಂತಹುದು ಹಸುವಿನ ಸೆಗಣಿಯಿಂದ ಹೊರಡುವುದಿಲ್ಲ. (ಸೆಗಣಿ) ಜಿಗಟಾಗಿರುವುದರಿಂದ ಬೇಗ ಕಿತ್ತು ಬರುವುದಿಲ್ಲ. ಬಟ್ಟೆ ಕೆಡುವುದೂ ಇಲ್ಲ; ಮಲಿನವಾಗುವುದೂ ಇಲ್ಲ. ಮಣ್ಣಿನಿಂದ ಹೇಗೆ ಕೊಳಕು ಏಳುವುದೋ, ಹಾಗೆ ಒಣ ಸೆಗಣಿಯಿಂದ ಏಳುವುದಿಲ್ಲ. ಮಣ್ಣು ಮತ್ತು ಸೆಗಣಿಯಿಂದ ಯಾವ ಸ್ಥಳವನ್ನು ಸಾರಿಸಿರುತ್ತಾರೋ, ಅದು ನೋಡುವುದಕ್ಕೆ ಅತಿ ಸುಂದರವಾಗಿರುತ್ತದೆ. ಮತ್ತು ಎಲ್ಲಿ ಅಡಿಗೆಯಾಗುತ್ತದೋ, ಅಲ್ಲಿ ಭೋಜನ–ಮೊದಲಾದುವನ್ನು ಮಾಡುವುದರಿಂದ ತುಪ್ಪ, ಸಕ್ಕರೆ ಮತ್ತು ಎಂಜಲೂ ಕೂಡ ಬೀಳುತ್ತದೆ. ಅದರಿಂದ ನೊಣ, ಇರುವೆ ಮೊದಲಾದ ಬಹಳ ಜೀವಿಗಳು ಸ್ಥಾನವು ಮಲಿನವಾಗಿರುವುದರಿಂದ ಬರುತ್ತವೆ. ಪೊರಕೆಯಿಂದ ಗುಡಿಸುವುದು, ಸಾರಿಸುವುದು ಮೊದಲಾದುದರಿಂದ ಪ್ರತಿದಿನವೂ ಶುದ್ಧಗೊಳಿಸದಿದ್ದರೆ, ಆ ಸ್ಥಳವು ಶೌಚಗೃಹದಂತೆ ಆಗಿ ಹೋಗುತ್ತದೆ–ಎಂದು ತಿಳಿಯಿರಿ. ಆದುದರಿಂದ ಪ್ರತಿದಿನವೂ ಸೆಗಣಿ–ಮಣ್ಣುಗಳ ಸಾರಣೆಯಿಂದ ಮತ್ತು ಗುಡಿಸುವುದರಿಂದ ಸರ್ವದಾ ಶುದ್ಧವಾಗಿಡಬೇಕು. ಮತ್ತು ಸಿಮೆಂಟಿನ ನೆಲದ ಮನೆಯಾಗಿದ್ದರೆ, ನೀರಿನಿಂದ ತೊಳೆದು ಶುದ್ಧವಾಗಿಡಬೇಕು. ಇದರಿಂದ ಪೂರ್ವೋಕ್ತ ದೋಷಗಳ ನಿವಾರಣೆಯಾಗುತ್ತದೆ. ಸಾಹೇಬರುಗಳ[೩೨] ಅಡಿಗೆಯ ಮನೆಯಲ್ಲಿ ಒಂದು ಕಡೆ ಇದ್ದಿಲು, ಒಂದು ಕಡೆ

---

೩೧. ೫೦–೬೦ ವರ್ಷಗಳ ಹಿಂದೆ, ಗಂಡನ ಎಂಜಲನ್ನು ಹೆಂಗಸು ತಿನ್ನಲೇ ಬೇಕೆಂಬ ವಿಧಾನ ಪೌರಾಣಿಕ ಹಿಂದುಗಳಲ್ಲಿತ್ತು. ಗಂಡನು ಊಟಮಾಡಿದ ತಟ್ಟೆಯಲ್ಲೇ ಅವಳ ಊಟ ! ಆಕೆಗೆ ಬೇರೆ ತಟ್ಟೆಯೇ ಇರಲಿಲ್ಲ. ಈ ಎಂಜಲು ತಿನ್ನುವ ಸಮಾರಂಭವು ಮದುವೆಯ ದಿನದ ಊಟದಿಂದ ಆರಂಭವಾಗುತ್ತಿತ್ತು. ವಧು–ವರರಿಗೆ ಒಂದೇ ಎಲೆಯಲ್ಲಿ ಊಟ ಬಡಿಸುತ್ತಿದ್ದರು. ಇದಕ್ಕೆ 'ಭೂಮ' ಎಂದು ಹೆಸರಿಟ್ಟಿದ್ದರು. ಆಗ ವಧು–ವರರು ಪರಸ್ಪರರ ಬಾಯಿಗೆ ಊಟ ತಿನ್ನಿಸುತ್ತಿದ್ದರು. ಒಂದೊಂದೆಡೆ, ಊಟಕ್ಕೆ ಕುಳಿತಿರುವವರೆಲ್ಲಾ, ಪರಸ್ಪರ ಎಂಜಲು ತಿನ್ನುತ್ತಿದ್ದರು.ಇದನ್ನು ಬಿಟ್ಟು, ಬೇರೆ ಸಂದರ್ಭಗಳಲ್ಲಿ "ಆಚಾರವಂತರ ಮಡಿ" ಸೋಜಿಗವೇ ಸರಿ ೧ ಈಗ ಈ ಭೂಮ ಕಡಿಮೆಯಾದರೂ, ಪೂರ್ಣವಾಗಿ ನಿಂತಿಲ್ಲ.

೩೨. ಸಾಹೇಬ ಎಂಬ ಶಬ್ದ ಮೊದಲು ಮುಸಲ್ಮಾನವರ್ಯರಿಗೆ ಅನ್ವಯಿಸಿದ್ದು, ಆಮೇಲೆ, ಆಂಗ್ಲ ಅಧಿಕಾರಿಗಳಿಗೂ, ನಂತರ, ಭಾರತೀಯ ಅಧಿಕಾರಿಗಳಿಗೂ ಸಂಭೋದಿಸಲ್ಪಟ್ಟು ರೂಢಿಯಲ್ಲಿರುವುದರಿಂದ, ಇಲ್ಲಿ 'ಸಾಬಿ', ಎಂಬ ರೂಢ–ಪ್ರಯೋಗವನ್ನು ಬಳಸಲಾಗಿದೆ.

ಬೂದಿ, ಒಂದೆಡೆ ಸೌದೆ, ಮತ್ತೊಂದು ಕಡೆ ಒಡೆದ ಗಡಿಗೆ, ಒಂದೆಡೆ ಎಂಜಲು ತಟ್ಟೆ, ಇನ್ನೊಂದೆಡೆ ಮೂಳೆ ಮುರುಕು ಬಿದ್ದಿರುತ್ತವೆ. ಇನ್ನು ನೊಣಗಳ ಬಗೆಗೆ ಹೇಳುವುದಾದರೂ ಏನು? ಆ ಸ್ಥಳ ಎಷ್ಟು ಹೊಲಸಾಗಿ ಕಾಣುತ್ತದೆಂದರೆ, ಯಾವನಾದರೂ ಉತ್ತಮನಾದ ಮನುಷ್ಯನು ಅಲ್ಲಿ ಹೋಗಿ ಕುಳಿತರೆ, ಅವನಿಗೆ ವಾಂತಿ ಬರುವ ಸಂಭವವೂ ಉಂಟು. ಮತ್ತು ದುರ್ಗಂಧಭರಿತ ಶೌಚಾಲಯದಂತೆಯೇ ಆ ಜಾಗವೂ ಕಾಣಿಸುತ್ತದೆ. ಆ ಜನರನ್ನು ಯಾರಾದರೂ – "ಸೆಗಣಿಯಿಂದ ಚೌಕಟ್ಟನ್ನು ಸಾರಿಸುವುದರಲ್ಲಿ ನೀವು ದೋಷವೆಣಿಸುತ್ತೀರಿ; ಆದರೆ, ಒಲೆಯಲ್ಲಿ ಬೆರಣಿಯನ್ನಿಡುವುದು, ಅದರ ಬೆಂಕಿಯಿಂದ ಗುಡುಗುಡಿ ಅಥವಾ ಹುಕ್ಕಾ ಸೇದುವುದು, ಮನೆಯಗೋಡೆಗೆ ಲೇಪನ ಮಾಡುವುದು ಮೊದಲಾದುದರಿಂದ ಸಾಹೇಬರ ಪಾಕಶಾಲೆಯೂ ಕೂಡ ಭ್ರಷ್ಟವಾಗುವುದಿಲ್ಲವೇ?"–ಎಂದು ಕೇಳಬಹುದಲ್ಲ ! ಇದರಲ್ಲಿ ಸಂದೇಹವಾದರೂ ಏನು?

**ಪ್ರಶ್ನೆ** :– ಪಾಕಶಾಲಾವರಣದಲ್ಲಿ ಕುಳಿತು ಊಟ ಮಾಡುವುದು ಒಳ್ಳೆಯದೋ, ಅಥವಾ ಹೊರಗೆ ಕುಳಿತು ಮಾಡುವುದೋ?

**ಉತ್ತರ** :– ಎಲ್ಲಿ ಒಳ್ಳೆಯ, ರಮಣೀಯ ಹಾಗೂ ಸುಂದರವಾದ ಸ್ಥಾನ ಕಾಣಿಸುವುದೋ, ಅಲ್ಲಿ ಊಟ ಮಾಡಬೇಕು. ಆದರೆ, ಆವಶ್ಯಕವಾದ ಯುದ್ಧ ಮೊದಲಾದ ಸಂದರ್ಭಗಳಲ್ಲಿಯಂತೂ ಕುದುರೆ ಮೊದಲಾದ ವಾಹನಗಳ ಮೇಲೆ ಕುಳಿತೋ, ಅಥವಾ ನಿಂತುಕೊಂಡಾದರೂ[೩೩] ಕೂಡ ತಿನ್ನುವುದು–ಕುಡಿಯುವುದು ಅತ್ಯಂತ ಉಚಿತವಾಗಿರುತ್ತದೆ.

**ಪ್ರಶ್ನೆ** :– ಕೇವಲ ತನ್ನ ಕೈಯಿನದನ್ನು ತಿನ್ನಬೇಕೇ? ಮತ್ತು ಇನ್ನೊಬ್ಬರ ಕೈಯಿನದನ್ನು ತಿನ್ನಬಾರದೇ?

**ಉತ್ತರ** :– ಆರ್ಯರಲ್ಲಿ ಶುದ್ಧರೀತಿಯಿಂದ ಅಡಿಗೆ ಮಾಡುವುದಾದಲ್ಲಿ, ನೇರವಾಗಿ ಸಮಸ್ತ ಆರ್ಯರೊಂದಿಗೆ ಊಟ ಮಾಡುವುದರಲ್ಲಿ ಸ್ವಲ್ಪವೂ ಹಾನಿಯಿಲ್ಲ. ಏಕೆಂದರೆ, ಬ್ರಾಹ್ಮಣ ಮೊದಲಾದ ವರ್ಣಗಳಲ್ಲಿನ ಸ್ತ್ರೀ–ಪುರುಷರು ಅಡಿಗೆ ಮಾಡುವುದು, ಮತ್ತು ಪಾಕಶಾಲಾವರಣ ನಿರ್ಮಿಸುವುದು, ಪಾತ್ರೆ–ಕೊಡಗಳನ್ನು ತಿಕ್ಕುವುದು ಮೊದಲಾದ ಗೊಂದಲಗಳಲ್ಲಿಯೇ ಬಿದ್ದಿದ್ದರೆ, ವಿದ್ಯೆ ಮೊದಲಾದ ಶುಭ–ಗುಣಗಳ ವೃದ್ಧಿಯು ಕಾಲಾವಕಾಶವಿಲ್ಲದೆ, ಎಂದಿಗೂ ಆಗಲಾರದು.

ನೋಡಿರಿ, ಯುಧಿಷ್ಠಿರನ ರಾಜಸೂಯಯಾಗದಲ್ಲಿ ಭೂಮಂಡಲದ ರಾಜರುಗಳೂ, ಋಷಿ–ಮಹರ್ಷಿಗಳೂ ಬಂದಿದ್ದರು. ಒಂದೇ ಪಾಕಶಾಲೆಯಿಂದ ಊಟಮಾಡುತ್ತಿದ್ದರು. ಯಾವಾಗಿನಿಂದ ಕ್ರೈಸ್ತರು, ಮುಸಲ್ಮಾನರು–ಮೊದಲಾದವರ ಮತಮತಾಂತರಗಳು ಹೊರಟವೋ, ಆಗಿನಿಂದ ಪರಸ್ಪರ ವೈರ–ವಿರೋಧಗಳು ಉಂಟಾದವು. ಅವರು ಮದ್ಯಪಾನ, ಗೋಮಾಂಸ–ಮೊದಲಾದುವುಗಳ ಸೇವನೆಯನ್ನು ಕೈಗೊಂಡರು. ಅದೇ ಕಾಲದಿಂದ ಭೋಜನ ಮೊದಲಾದುವುಗಳಲ್ಲಿ ಗೊಂದಲ ತಲೆಯೆತ್ತಿತು.[೩೪]

ನೋಡಿರಿ, ಕಾಬೂಲು, ಕಂದಹಾರ್, ಈರಾನ್, ಅಮೇರಿಕಾ, ಯುರೋಪ್ ಮೊದಲಾದ ದೇಶಗಳ ರಾಜರುಗಳ ಪುತ್ರಿಯರಾದ ಗಾಂಧಾರೀ, ಮಾದ್ರೀ, ಉಲೂಪೀ ಮೊದಲಾದವರೊಂದಿಗೆ ಆರ್ಯಾವರ್ತ ದೇಶೀಯ ರಾಜರುಗಳು ವಿವಾಹ–ಮೊದಲಾದ ವ್ಯವಹಾರಗಳನ್ನು ನಡೆಯಿಸುತ್ತಿದ್ದರು. ಶಕುನಿ–ಮೊದಲಾದವರು ಕೌರವ–ಪಾಂಡವರ ಜೊತೆಯಲ್ಲಿ ಭೋಜನ–ಪಾನಗಳನ್ನು ಮಾಡುತ್ತಿದ್ದರು. ವಿರೋಧವನ್ನೇನೂ ಮಾಡುತ್ತಿರಲಿಲ್ಲ. ಏಕೆಂದರೆ, ಆ ಕಾಲದಲ್ಲಿ ಸಮಸ್ತ ಭೂಮಂಡಲದಲ್ಲಿ ವೇದೋಕ್ತ ಧರ್ಮ ಒಂದೇ ಇದ್ದಿತು. ಅದರಲ್ಲಿಯೇ ಸರ್ವರೂ ನಿಷ್ಠೆಯಿಟ್ಟಿದ್ದರು. ಮತ್ತು ಒಬ್ಬರು ಇನ್ನೊಬ್ಬರ ಸುಖ–ದುಃಖಗಳನ್ನೂ, ಹಾನಿ–ಲಾಭಗಳನ್ನೂ ಪರಸ್ಪರ ತಮ್ಮದಕ್ಕೆ ಸಮನೆಂದೇ ತಿಳಿಯುತ್ತಿದ್ದರು. ಆಗಲೇ ಭೂಮಂಡಲದಲ್ಲೆಲ್ಲಾ ಸುಖವಿದ್ದಿತು. ಈಗಲಾದರೋ, ಬಹಳ ಜನ ಮತವಾದಿಗಳಾಗಿರುವುದರಿಂದ ಬಹಳ ದುಃಖವೂ ಮತ್ತು ವಿರೋಧವೂ ಹೆಚ್ಚಿಹೋಗಿದೆ. ಇದರ ನಿವಾರಣೆ ಮಾಡುವುದು ಬುದ್ಧಿವಂತರ ಕರ್ತವ್ಯವಾಗಿದೆ. ಮಿಥ್ಯಾಮತಗಳು ಶೀಘ್ರವೇ ಪ್ರಳಯ ಹೊಂದುವಂತೆ, ಪರಮಾತ್ಮನು ಎಲ್ಲರ ಮನದಲ್ಲಿಯೂ ಸತ್ಯಧರ್ಮದ ಮೊಳಕೆಯನ್ನು ಮೂಡಿಸಲಿ. ಇದರಲ್ಲಿ ಸಕಲ ವಿದ್ವಾಂಸರೂ ಆಲೋಚಿಸಿ, ವಿರೋಧ ಭಾವವನ್ನು ಬಿಟ್ಟು ಆನಂದವನ್ನು ವರ್ಧಿಸಬೇಕು.

---

೩೩. ಈ ಕಾಲದಲ್ಲಿ ಮದುವೆಯ ಸತ್ಕಾರ–ಸಮಾರಂಭಗಳಲ್ಲಿ, ಪಾರ್ಟಿ–ಭೋಜನಗಳಲ್ಲಿ ನಿಂತುಕೊಂಡೇ ಊಟ ಮಾಡುವ ಪರಿಪಾಟಿ ದೇಶದಲ್ಲಿ ಬಂದು ಬಿಟ್ಟಿದೆ. ಇದಕ್ಕೆ ಇಂಗ್ಲೀಷ್ ನಲ್ಲಿ ಬಫೆ ಅಥವಾ ಬೂಫೆ ಎನ್ನುತ್ತಾರೆ.

೩೪. ಎಂದರೆ, ಕ್ರೈಸ್ತರು–ಮುಸಲ್ಮಾನರು ಮೊದಲು ಆರ್ಯರಾಗಿದ್ದು, ನಂತರ ಅವರು, ಮದ್ಯಪಾನ–ಗೋಮಾಂಸ ಮೊದಲಾದ ಸೇವನೆಯನ್ನಾರಂಭಿಸಿದ ಮೇಲೆ, ಭಾರತೀಯ ಆರ್ಯರಿಗೆ ಅವರೊಂದಿಗೆ ಭೋಜನ–ಪಾನ ಮಾಡುವುದರಲ್ಲಿ, ವ್ಯವಹಾರ ನಡೆಸುವುದರಲ್ಲಿ ಜಿಗುಪ್ಸೆಯುಂಟಾಯಿತು ಎಂದು ಅಭಿಪ್ರಾಯ.

ಆಚಾರ-ಅನಾಚಾರ, ಭಕ್ಷ್ಯ - ಅಭಕ್ಷ್ಯಗಳ ಬಗೆಗೆ ಹೀಗೆ ಸಂಕ್ಷೇಪವಾಗಿ ಬರೆದಿದ್ದೇವೆ.

ಈ ಗ್ರಂಥದ ಪೂರ್ವಾರ್ಧ ಈ ಹತ್ತನೆಯ ಸಮುಲ್ಲಾಸದೊಂದಿಗೆಯೇ ಪೂರ್ಣವಾಯಿತು. ಎಲ್ಲಿಯವರೆಗೆ ಮಾನವರು ಸತ್ಯಾಸತ್ಯ ವಿವೇಚನೆಯಲ್ಲಿ ಸ್ವಲ್ಪವಾದರೂ ಸಾಮರ್ಥ್ಯವನ್ನು ಬೆಳೆಯಿಸಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಸ್ಥೂಲವಾದ ಮತ್ತು ಸೂಕ್ಷ್ಮವಾದ ಖಂಡನಗಳ ಅಭಿಪ್ರಾಯವನ್ನು ತಿಳಿದುಕೊಳ್ಳಲಾರರು. ಆದುದರಿಂದ ಈ ಸಮುಲ್ಲಾಸಗಳಲ್ಲಿ ವಿಶೇಷವಾಗಿ ಖಂಡನ-ಮಂಡನಗಳನ್ನು ಬರೆಯಲಿಲ್ಲ. ಈ ಕಾರಣದಿಂದ ಮೊದಲು ಎಲ್ಲರಿಗೂ ಸತ್ಯಶಿಕ್ಷಣದ ಉಪದೇಶವನ್ನು ಮಾಡಿ, ಈಗ ನಾಲ್ಕು ಸಮುಲ್ಲಾಸಗಳಲ್ಲಿರುವ ಉತ್ತರಾರ್ಧದಲ್ಲಿ, ವಿಶೇಷವಾಗಿ ಖಂಡನ-ಮಂಡನಗಳನ್ನು ಬರೆಯುವೆವು. ಈ ನಾಲ್ಕರಲ್ಲಿ ಮೊದಲನೆಯ ಸಮುಲ್ಲಾಸದಲ್ಲಿ ಆರ್ಯಾವರ್ತೀಯ ಮತ-ಮತಾಂತರಗಳ, ಎರಡನೆಯದರಲ್ಲಿ ಜೈನರ, ಮೂರನೆಯದರಲ್ಲಿ ಕ್ರೈಸ್ತರ ಮತ್ತು ನಾಲ್ಕನೆಯದರಲ್ಲಿ ಮುಸಲ್ಮಾನರ ಮತ-ಮತಾಂತರಗಳ ಖಂಡನ-ಮಂಡನದ ವಿಷಯದಲ್ಲಿ ಬರೆಯುವೆವು. ಮತ್ತು ಅನಂತರ ಹದಿನಾಲ್ಕನೆಯ ಸಮುಲ್ಲಾಸದ ಕೊನೆಯಲ್ಲಿ ಸ್ವಧರ್ಮವೂ ಕೂಡ ತೋರಿಸಲ್ಪಡುವುದು. ಯಾರಾದರೂ ವಿಶೇಷ ಖಂಡನ-ಮಂಡನಗಳನ್ನು ನೋಡಲು ಅಪೇಕ್ಷಿಸುವರಾದರೆ, ಅವರು ಈ ನಾಲ್ಕು ಸಮುಲ್ಲಾಸಗಳನ್ನು ನೋಡಲಿ. ಆದರೆ, ಸಾಮಾನ್ಯ ರೀತಿಯಲ್ಲಿ ಹತ್ತು ಸಮುಲ್ಲಾಸಗಳಲ್ಲಿಯೂ ಅಲ್ಲಿ ಅಲ್ಲಿ ಸ್ವಲ್ಪ ಮಟ್ಟಿಗೆ ಖಂಡನ-ಮಂಡನವನ್ನು ಮಾಡಿದ್ದೇವೆ. ಈ ಹದಿನಾಲ್ಕು ಸಮುಲ್ಲಾಸಗಳನ್ನೂ ಪಕ್ಷಪಾತವನ್ನು ಬಿಟ್ಟು ನ್ಯಾಯದೃಷ್ಟಿಯಿಂದ ಯಾವನು ನೋಡುವನೋ, ಅವನ ಆತ್ಮನಲ್ಲಿ ಸತ್ಯವಾದ ಅರ್ಥದ, ವಿಷಯದ ಪ್ರಕಾಶವುಂಟಾಗಿ ಹರ್ಷ ಲಭಿಸುವುದು ಮತ್ತು ಯಾವನು ಹಠ, ದುರಾಗ್ರಹ, ಮತ್ತು ಈರ್ಷ್ಯೆಯಿಂದ ನೋಡುವನೋ-ಕೇಳುವನೋ, ಅವನಿಗೆ ಈ ಗ್ರಂಥದ ಅಭಿಪ್ರಾಯವು, ಯಥಾರ್ಥವಾಗಿ ವಿದಿತವಾಗುವುದು ಬಹಳ ಕಠಿನವೇ ಸರಿ. ಆದುದರಿಂದ ಯಾವನೇ ಆಗಲಿ, ಯಥಾವತ್ತಾಗಿ ಆಲೋಚನೆ ಮಾಡುವುದಿಲ್ಲವೋ, ಅವನು ಇದರ ಅಭಿಪ್ರಾಯವನ್ನು ಗ್ರಹಿಸದೆ, ಭ್ರಾಂತನಾಗುತ್ತಾ ಇರುವನು. ಮತ್ತು, ಸತ್ಯಾಸತ್ಯದ ನಿರ್ಣಯವನ್ನು ಮಾಡಿ, ಸತ್ಯದ ಸ್ವೀಕಾರವನ್ನೂ, ಅಸತ್ಯದ ತ್ಯಾಗವನ್ನೂ ಮಾಡಿ,[೩೫] ಹರ್ಷಿತರಾಗುವುದೇ ವಿದ್ವಾಂಸರ ಕೆಲಸವಾಗಿದೆ. ಆ ಗುಣ-ಗ್ರಾಹಕರಾದ ಪುರುಷರೇ ವಿದ್ವಾಂಸರಾಗಿ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವೆಂಬ ಫಲಗಳನ್ನು ಗಳಿಸಿ ಹರ್ಷಿತರಾಗಿರುತ್ತಾರೆ.

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ಆಚಾರಾನಾಚಾರ ಭಕ್ಷ್ಯಾ-ಭಕ್ಷ್ಯ ವಿಷಯೇ**

**ದಶಮಃ ಸಮುಲ್ಲಾಸಃ ಸಂಪೂರ್ಣಃ**

**ಸಮಾಪ್ತೋಯಂ ಪೂರ್ವಾರ್ಧಃ**

---

೩೫. ಆರ್ಯ ಸಮಾಜದ ನಾಲ್ಕನೆಯ ನಿಯಮವೂ ಇದೇ ಆಗಿದೆ.

# ಉತ್ತರಾರ್ಧ

## ಅನುಭೂಮಿಕೆ

ಐದು ಸಾವಿರ ವರ್ಷಗಳಿಗೆ ಹಿಂದೆ ವೇದಧರ್ಮದಿಂದ ಬೇರೆಯಾದ ಇನ್ನು ಯಾವುದೇ ಮತವೂ ಇರಲಿಲ್ಲ-ಎನ್ನುವುದು ಸಿದ್ಧವಾದ ವಿಷಯವಾಗಿದೆ. ಏಕೆಂದರೆ-ವೇದೋಕ್ತವಾದ ಸರ್ವವಿಷಯಗಳೂ ವಿದ್ಯೆಗೆ ಅವಿರುದ್ಧವಾಗಿವೆ. ಮಹಾಭಾರತ ಯುದ್ಧವು ವೇದಗಳ ಪ್ರಸಾರಣ ನಿಂತು ಹೋಗಲು ಕಾರಣವಾಯಿತು. ಇವುಗಳ ಪ್ರಸಾರಣಾಭಾವದಿಂದ ಅವಿದ್ಯೆಯ ಅಂಧಕಾರವು ಭೂಮಂಡಲದಲ್ಲಿ ವಿಸ್ತೃತವಾಗಿ, ಮಾನವರ ಬುದ್ಧಿಯು ಭ್ರಮಯುಕ್ತವಾಗಿ, ಯಾವನ ಮನಸ್ಸಿಗೆ ಎಂತಹುದು ತೋರಿತೋ, ಅವನು ಅಂತಹ ಮತವನ್ನು ಪ್ರವರ್ತಿಸಿದನು.[೧] ಆ ಎಲ್ಲ ಮತಗಳಲ್ಲಿಯೂ ನಾಲ್ಕು ಮತಗಳು, ಎಂದರೆ ವೇದ ವಿರುದ್ಧವಾದ ಪೌರಾಣಿಕ, ಜೈನ, ಕ್ರೈಸ್ತ ಹಾಗೂ ಇಸ್ಲಾಮೀ ಮತಗಳು ಎಲ್ಲ ಮತಗಳ ಮೂಲವಾಗಿವೆ. ಅವು ಕ್ರಮಶಃ, ಮೊದಲನೆಯ ನಂತರ ಎರಡನೆಯದು, ಮೂರನೆಯದು, ನಾಲ್ಕನೆಯದು ಈ ಕ್ರಮದಿಂದ ಹೊರಟಿವೆ. ಈಗ ಈ ನಾಲ್ಕರ ಶಾಖೆಗಳು ಒಂದು ಸಾವಿರಕ್ಕಿಂತ ಕಡಿಮೆಯಿಲ್ಲ. ಈ ಸರ್ವ ಮತವಾದಿಗಳಿಗೂ, ಇವರ ಅನುಯಾಯಿಗಳಿಗೂ ಮತ್ತು ಬೇರೆ ಎಲ್ಲರಿಗೂ, ಪರಸ್ಪರ ಸತ್ಯಾಸತ್ಯದ ಆಲೋಚನೆ ಮಾಡಲು ಹೆಚ್ಚು ಪರಿಶ್ರಮವಾಗದಿರಲಿ-ಎಂದು ಈ ಗ್ರಂಥವನ್ನು[೨] ರಚಿಸಿದ್ದೇನೆ. ಇದರಲ್ಲಿ ಯಾವ ಯಾವ ಸತ್ಯಮತದ ಮಂಡನವನ್ನೂ, ಮತ್ತು ಅಸತ್ಯದ ಖಂಡನವನ್ನೂ ಬರೆದಿದ್ದೇನೋ, ಅದನ್ನು ಎಲ್ಲರಿಗೂ ತಿಳಿಸಿಕೊಡುವುದೇ ಉದ್ದೇಶ್ಯವೆಂದು ತಿಳಿಯಲ್ಪಟ್ಟಿದೆ. ಈ ವಿಷಯದಲ್ಲಿ, ನನ್ನ ಬುದ್ಧಿ ಹೇಗಿದೆಯೋ, ವಿದ್ಯೆ ಎಷ್ಟಿದೆಯೋ, ಮತ್ತು ಈ ನಾಲ್ಕು ಮತಗಳ ಮೂಲಗ್ರಂಥಗಳನ್ನು ನೋಡುವುದರಿಂದ ಎಷ್ಟು ಜ್ಞಾನ ಲಭಿಸಿದೆಯೋ, ಅದನ್ನು ಎಲ್ಲರ ಸಮ್ಮುಖದಲ್ಲಿ ನಿವೇದನ ಮಾಡುವುದನ್ನು ನಾನು ಉತ್ತಮವೆಂದು ತಿಳಿದಿದ್ದೇನೆ; ಏಕೆಂದರೆ ಗುಪ್ತವಾಗಿ ಹೋದ ವಿಜ್ಞಾನದ ಪ್ರಾಪ್ತಿ ಪುನಃ ಸಹಜವಾಗಿ ಆಗುವುದಿಲ್ಲ. ಪಕ್ಷಪಾತವನ್ನು ಬಿಟ್ಟು ಇದನ್ನು ನೋಡವುದರಿಂದ ಸತ್ಯ-ಅಸತ್ಯ ಮತ ಎಲ್ಲರಿಗೂ ವಿದಿತವಾಗಿ ಹೋಗುವುದು. ಆ ಮೇಲೆ ಎಲ್ಲಿರಿಗೂ ತಮ್ಮ ತಮ್ಮ ತಿಳಿವಿಗನುಸಾರವಾಗಿ ಸತ್ಯ ಮತದ ಸ್ವೀಕಾರ ಮಾಡುವುದು ಮತ್ತು ಅಸತ್ಯ ಮತವನ್ನು ಬಿಟ್ಟುಬಿಡುವುದು ಸಹಜವಾಗುವುದು.

ಇವುಗಳಲ್ಲಿ, ಪುರಾಣಗಳೇ ಮೊದಲಾದ ಗ್ರಂಥಘಳಿಂದ ಶಾಖಾ-ಶಾಖಾಂತರ ರೂಪವಾಗಿ ಯಾವ ಮತಗಳು ಆರ್ಯಾವರ್ತ ದೇಶದಲ್ಲಿ ಹೊರಟಿವೆಯೋ, ಅವುಗಳ ಗುಣದೋಷಗಳು ಸಂಕ್ಷೇಪವಾಗಿ ಈ ಹನ್ನೊಂದನೆಯ ಸಮುಲ್ಲಾಸದಲ್ಲಿ ತೋರಿಸಲ್ಪಡುತ್ತವೆ. ನನ್ನ ಈ ಉದ್ಯಮದಿಂದ ಉಪಕಾರವಾಗುವುದೆಂದು ಒಪ್ಪದಿದ್ದರೆ ಚಿಂತೆಯಿಲ್ಲ ; ವಿರೋಧವನ್ನಾದರೂ ಮಾಡಬೇಡಿರಿ. ಏಕೆಂದರೆ, ನನ್ನ ಉದ್ದೇಶ್ಯ ಯಾರಿಗಾದರೂ ಹಾನಿಯನ್ನು ಅಥವಾ ವಿರೋಧವನ್ನು ಮಾಡುವುದಲ್ಲ; ಆದರೆ, ಸತ್ಯಾಸತ್ಯ ನಿರ್ಣಯವನ್ನು ಮಾಡುವುದು-ಮಾಡಿಸುವುದು ಮಾತ್ರ ಆಗಿದೆ. ಇದೇ ರೀತಿ ಮಾನವರೆಲ್ಲರೂ ನ್ಯಾಯದ ದೃಷ್ಟಿಯಿಂದ ವರ್ತಿಸುವುದು ಅತಿ ಉಚಿತವಾಗಿರುತ್ತದೆ. ಮಾನವ ಜನ್ಮ ಪ್ರಾಪ್ತವಾಗುವುದು ಸತ್ಯಾಸತ್ಯ ನಿರ್ಣಯವನ್ನು ಮಾಡುವುದಕ್ಕಾಗಿ-ಮಾಡಿಸುವುದಕ್ಕಾಗಿಯೇ ಹೊರತು, ವಾದವಿವಾದ ವಿರೋಧಗಳನ್ನು ಮಾಡುವುದಕ್ಕಾಗಿ- ಮಾಡಿಸುವುದಕ್ಕಾಗಿ ಅಲ್ಲ. ಇದೇ ಮತಮತಾಂತರಗಳ ವಿವಾದದಿಂದ ಜಗತ್ತಿನಲ್ಲಿ ಏನೇನು ಅನಿಷ್ಟವಾದ ಪರಿಣಾಮಗಳಾಗಿವೆಯೋ, ಆಗುತ್ತಿವೆಯೋ, ಹಾಗೂ ಆಗಲಿವೆಯೋ, ಅವುಗಳನ್ನು ಪಕ್ಷಪಾತ ರಹಿತರಾದ ವಿದ್ವಜ್ಜನರು ತಿಳಿದುಕೊಳ್ಳಬಲ್ಲರು. ಎಂದಿನವರೆಗೆ ಈ ಮಾನವಜಾತಿಯೊಳಗಿನಿಂದ, ಪರಸ್ಪರ ಮಿಥ್ಯಾ ಮತ ಮತಾಂತರಗಳ ವಿರುದ್ಧವಾದವು ಬಿಟ್ಟು ಹೋಗದೋ, ಅಂದಿನವರೆಗೆ

---

೧. ವೈದಿಕ ಧರ್ಮದ ಹ್ರಾಸದ ಚಿತ್ರವನ್ನು ಪರಿಶಿಷ್ಟ –೨ ರಲ್ಲಿ ತೋರಿಸಲಾಗಿದೆ.

೨. ಎಂದರೆ, 'ಸತ್ಯಾರ್ಥ ಪ್ರಕಾಶದ–ಉತ್ತರಾರ್ಧ.

ಅನ್ಯೋನ್ಯವಾಗಿದ್ದು ಹರ್ಷ ಉಂಟಾಗುವುದಿಲ್ಲ. **ಮಾನವರಾದ ನಾವೆಲ್ಲರೂ, ಮತ್ತು ವಿಶೇಷತಃ ವಿದ್ವಜ್ಜನರು ಈರ್ಷ್ಯಾ–ದ್ವೇಷಗಳನ್ನು ಬಿಟ್ಟು, ಸತ್ಯಾಸತ್ಯ ನಿರ್ಣಯವನ್ನು ಮಾಡಿ, ಸತ್ಯದ ಸ್ವೀಕಾರವನ್ನೂ ಮತ್ತು ಅಸತ್ಯದ ತ್ಯಾಗವನ್ನೂ ಮಾಡಲು–ಮಾಡಿಸಲು ಬಯಸುವೆವಾದರೆ, ನಮಗೆ ಈ ವಿಷಯ ಅಸಾಧ್ಯವಲ್ಲ. ಈ ವಿದ್ವಾಂಸರ ವಿರೋಧವೇ ಎಲ್ಲರನ್ನೂ ವಿರೋಧದ ಜಾಲದಲ್ಲಿ ಸಿಕ್ಕಿಸಿಬಿಟ್ಟಿದೆ–ಎನ್ನುವುದು ನಿಶ್ಚಯವಾಗಿದೆ.** ಈ ಜನರು ತಮ್ಮ ಸ್ವಾರ್ಥದಲ್ಲಿ ಸಿಕ್ಕಿ ಹಾಕಿಕೊಳ್ಳದೆ, ಸರ್ವರ ಉಪಕಾರವನ್ನು ಸಾಧಿಸಲಪೇಕ್ಷಿಸಿದರೆ, ಈಗಲೇ ಐಕಮತ್ಯ ಉಂಟಾಗುವುದು. ಇದನ್ನು ಸಾಧಿಸುವ ಯುಕ್ತಿಯನ್ನು[೩] ಈ ಗ್ರಂಥದ ಸಮಾಪ್ತಿಯಲ್ಲಿ ಬರೆಯುವೆವು. ಸರ್ವಶಕ್ತಿಮಾನ್ ಪರಮಾತ್ಮನು ಒಂದು ಧರ್ಮದಲ್ಲಿ ಪ್ರವೃತ್ತರಾಗುವ ಉತ್ಸಾಹವನ್ನು ಎಲ್ಲ ಮಾನವರ ಆತ್ಮಗಳಲ್ಲಿಯೂ ಪ್ರಕಾಶಿತವಾಗಿ ಮಾಡಲಿ.

**ಅಲಮತಿ ವಿಸ್ತರೇಣ ವಿಪಶ್ಚಿದ್ವರ ಶಿರೋಮಣಿಷು**

೩. ಎಂದರೆ, **'ಸ್ವಮಂತವ್ಯಾಮಂತವ್ಯ'** ಪ್ರಕಾಶದಲ್ಲಿ. –ಯು.ಮೀ

### ಉತ್ತರಾರ್ಧಃ

# ಅಥ ಏಕಾದಶಸಮುಲ್ಲಾಸಾರಂಭಃ

## ಅಥಾರ್ಯಾವರ್ತೀಯಮತ ಖಂಡನಮಂಡನೇ

**ವಿಧಾಸ್ಯಾಮಃ**

ಈಗ ಆರ್ಯಾವರ್ತ ದೇಶದಲ್ಲಿ ವಾಸಮಾಡುವ ಆರ್ಯಜನರ ಮತಗಳ ಖಂಡನ – ಮಂಡನದ ವಿಧಾನವನ್ನು ನಿರೂಪಿಸುವೆವು. ಈ ಆರ್ಯಾವರ್ತ ದೇಶ ಭೂಮಂಡಲದಲ್ಲಿ ತನಗೆ ಸಾಟಿಯಾದ ಬೇರಾವ ದೇಶವೂ ಇಲ್ಲದಂತಹುದಾಗಿದೆ. ಆದುದರಿಂದ ಈ ಭೂಮಿಗೆ ಸುವರ್ಣಭೂಮಿ ಎಂದು ಹೆಸರಾಗಿದೆ. ಏಕೆಂದರೆ, ಇದೇ ಸುವರ್ಣ ಮೊದಲಾದ ರತ್ನಗಳನ್ನು ಉತ್ಪನ್ನ ಮಾಡುತ್ತದೆ. ಇದೇ ಕಾರಣದಿಂದ ಸೃಷ್ಟಿಯ[೪] ಆರಂಭದಲ್ಲಿ ಇದೇ ದೇಶಕ್ಕೆ ಬಂದು ಆರ್ಯಜನರು ನೆಲೆಸಿದರು. ಈ ಕಾರಣದಿಂದಲೇ ನಾವು ಸೃಷ್ಟಿವಿಷಯದಲ್ಲಿ ಆರ್ಯ ಎನ್ನುವುದು ಉತ್ತಮ ಪುರುಷರ ಹೆಸರು ಮತ್ತು ಆರ್ಯರಿಂದ ಬೇರೆಯಾದವರ ಹೆಸರು 'ದಸ್ಯು'–ಎಂದು ಹೇಳಿದ್ದೇವೆ. ಭೂಮಂಡಲದಲ್ಲಿ ಎಷ್ಟು ದೇಶಗಳಿವೆಯೋ, ಅವೆಲ್ಲಾ ಇದೇ ದೇಶವನ್ನು ಕೊಂಡಾಡುತ್ತವೆ ಮತ್ತು 'ಸ್ಪರ್ಶಮಣಿ' ಎಂಬ ಶಿಲೆಯ ವಿಷಯ ಏನು ಕಿವಿಗಳ ಮೇಲೆ ಬೀಳುತ್ತದೋ, ಅದಂತೂ ಸುಳ್ಳು; ಆದರೆ, ಯಾವುದನ್ನು ಕಬ್ಬಿಣದಂತಿರುವ ದರಿದ್ರರಾದ ವಿದೇಶೀಯರು ಸ್ಪರ್ಶ ಮಾಡಿದೊಡನೆಯೇ ಸುವರ್ಣವಾಗಿ, ಎಂದರೆ ಧನಾಢ್ಯರಾಗಿ ಹೋಗುತ್ತಾರೋ, ಆ ಆರ್ಯಾವರ್ತ ದೇಶವೇ ನಿಜವಾದ ಸ್ಪರ್ಶಮಣಿಯಾಗಿದೆ – ಎಂದು ಆಶಾಭರಿತವಾಗಿ ನೋಡುತ್ತಾರೆ.[೫]

**ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ ।**

**ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ ಪೃಥಿವ್ಯಾಂ ಸರ್ವಮಾನವಾಃ ॥** (ಮನು :–೨.೨೦)

ಸೃಷ್ಟಿಯಿಂದ ಹಿಡಿದು ಐದು ಸಾವಿರ ವರ್ಷಗಳ ಪೂರ್ವದವರೆಗೆ ಆರ್ಯರ ಸಾರ್ವಭೌಮ ಚಕ್ರವರ್ತೀ ರಾಜ್ಯವಿದ್ದಿತು; ಎಂದರೆ, ಭೂಮಂಡಲದಲ್ಲಿ ಸರ್ವೋಪರಿ ಏಕಮಾತ್ರ ರಾಜ್ಯವಿದ್ದಿತು. ಬೇರೆ ದೇಶಗಳಲ್ಲಿ ಮಾಂಡಲಿಕರು ಎಂದರೆ ಸಾಮಂತ ರಾಜರುಗಳು ಇರುತ್ತಿದ್ದರು. ಏಕೆಂದರೆ–ಕೌರವ–ಪಾಂಡವರ ಕಾಲದವರೆಗೆ, ಇಲ್ಲಿನ ರಾಜ್ಯ ಮತ್ತು ರಾಜಶಾಸನದಲ್ಲಿ ಸಕಲ ಮಹೀಮಂಡಲದ ರಾಜರುಗಳೂ, ಪ್ರಜೆಗಳೂ ನಡೆದು ಬರುತ್ತಿದ್ದರು. ಏಕೆಂದರೆ–ಯಾವುದು ಸೃಷ್ಟಿಯ ಆದಿಕಾಲದಲ್ಲಿ ರಚಿತವಾಗಿದೆಯೋ, ಆ ಮನುಸ್ಮೃತಿಯ ಪ್ರಮಾಣ – "ಇದೇ ಆರ್ಯಾವರ್ತ ದೇಶದಲ್ಲಿ ಉತ್ಪನ್ನರಾದ ಬ್ರಾಹ್ಮಣದಿಂದ, ಎಂದರೆ

---

೪. "ಸೃಷ್ಟಿಯ ಆರಂಭದಲ್ಲಿ" ಎಂಬ ಮಾತನ್ನು ಗಮನಿಸಿ. 'ತ್ರಿವಿಷ್ಟಪ'ದಿಂದ ಭಾರತಕ್ಕೆ ಬಂದು ನೆಲಸಿದರು.

೫. ಇದಕ್ಕಾಗಿಯೇ, ಮೊದಲು ಗ್ರೀಕರು, ನಂತರ ಮುಸಲ್ಮಾನರು; ಮತ್ತೆ ಚಂಗೇಜ್ ಖಾನ್, ತೈಮೂರ್ ಲಂಗ್, ನಾದಿರ್ ಶಾಹರಂತಹ ದರೋಡೆಕೋರರು; ತದನಂತರ ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಮತ್ತು ಇಂಗ್ಲೀಷರು ಭಾರತಕ್ಕೆ ಬಂದರು. ಮುಸಲ್ಮಾನರು ಭಾರತದ ಸಂಪತ್ತನ್ನು ಒಟ್ಟಾಗಿ ದೋಚುವುದರಲ್ಲಿ ನಿಸ್ಸೀಮರೆಂಬುದೂ, ಮತ್ತೆ ಕ್ರಮ–ಕ್ರಮವಾಗಿ ದೋಚುವುದರಲ್ಲಿ ಇಂಗ್ಲೀಷರು ಪ್ರವೀಣರೆಂಬುದೂ ಐತಿಹಾಸಿಕ ತಥ್ಯವಾಗಿದೆ.

ವಿದ್ವಾಂಸರಿಂದ ಭೂಮಂಡಲದ ಮಾನವರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ದಸ್ಯುಗಳು, ಮ್ಲೇಚ್ಛರು – ಮೊದಲಾದವರೆಲ್ಲರೂ ತಮತಮಗೆ ಯೋಗ್ಯವಾದ ವಿದ್ಯಾ–ಚಾರಿತ್ರಗಳ ಶಿಕ್ಷಣವನ್ನೂ ಪಡೆಯಬೇಕು ಮತ್ತು ವಿದ್ಯಾಭ್ಯಾಸವನ್ನೂ ಮಾಡಿಕೊಳ್ಳಬೇಕು" ಎಂದಿರುತ್ತದೆ. ಮತ್ತು ಮಹಾರಾಜಾ ಯುಧಿಷ್ಠಿರನ ರಾಜಸೂಯ ಯಾಗದ ಮತ್ತು ಮಹಾಭಾರತದ ಯುದ್ಧದವರೆಗೆ ಎಲ್ಲ ರಾಜ್ಯಗಳೂ ಇಲ್ಲಿನ ರಾಜ್ಯಕ್ಕೆ ಅಧೀನವಾಗಿದ್ದುವು.

ಆಲಿಸಿರಿ, ಚೀನದ ಭಗದತ್ತ, ಅಮೇರಿಕಾದ ಬಭ್ರುವಾಹನ, ಯುರೋಪ್ ಖಂಡದ ಬಿಡಾಲಾಕ್ಷ ಎಂದರೆ ಬೆಕ್ಕಿನದರಂತಹ ಕಣ್ಣುಗಳನ್ನುಳ್ಳವನು, ಯೂನಾನ್ ಎಂದು ನಾವು ನಿರ್ದೇಶಿಸಿರುವ ಯವನ ಮತ್ತು ಈರಾನಿನ ಶಲ್ಯ – ಮೊದಲಾದ ಸಮಸ್ತ ರಾಜರುಗಳೂ ರಾಜಸೂಯಯಾಗಕ್ಕೆ ಮತ್ತು ಮಹಾಭಾರತದ ಯುದ್ಧಕ್ಕೆ ಆಜ್ಞಾನುಸಾರವಾಗಿ ಬಂದಿದ್ದರು. ಯಾವಾಗ ರಘುವಂಶೀಯರು ರಾಜರಾಗಿದ್ದರೋ, ಆಗ ರಾವಣನೂ[೬] ಕೂಡ ಈ ದೇಶಕ್ಕೆ ಅಧೀನನಾಗಿದ್ದನು; ಶ್ರೀರಾಮಚಂದ್ರನ ಕಾಲದಲ್ಲಿ ವಿರುದ್ಧನಾಗಿ ಹೋದುದರಿಂದ, ಅವನಿಗೆ ರಾಮಚಂದ್ರನು ಶಿಕ್ಷೆಯನ್ನು ಕೊಟ್ಟು, ರಾಜ್ಯದಿಂದ ಚ್ಯುತನನ್ನಾಗಿ ಮಾಡಿ, ಅವನ ತಮ್ಮನಾದ ವಿಭೀಷಣನಿಗೆ ರಾಜ್ಯವನ್ನು ಕೊಟ್ಟಿದ್ದನು.

ಸ್ವಾಯಂಭುವ ರಾಜನಿಂದ ಹಿಡಿದು, ಪಾಂಡವರವರೆಗೆ ಆರ್ಯರ ಚಕ್ರವರ್ತೀ ರಾಜ್ಯವಿದ್ದಿತು. ಅನಂತರ ಪರಸ್ಪರ ವಿರೋಧದಿಂದ ಹೋರಾಡಿ, ನಾಶವಾಗಿ ಹೋದರು. ಏಕೆಂದರೆ, ಪರಮಾತ್ಮನ ಈ ಸೃಷ್ಟಿಯಲ್ಲಿ ದುರಭಿಮಾನಿಗಳೂ, ಅನ್ಯಾಯಕಾರಿಗಳೂ ಅವಿದ್ವಾಂಸರೂ ಆದ ಜನರ ರಾಜ್ಯ ಬಹಳ ದಿನ ನಡೆಯುವುದಿಲ್ಲ. ಮತ್ತು **ಯಾವಾಗ ಬಹಳ ಧನವು ಅಸಂಖ್ಯವಾದ ಉಪಯೋಗಗಳಿಗೆ ಬೇಕಾದುದಕ್ಕಿಂತ ಅಧಿಕವಾಗಿರುತ್ತದೋ, ಆಗ ಆಲಸ್ಯ, ಪುರುಷಾರ್ಥರಹಿತತ್ವ, ಈರ್ಷ್ಯೆ, ದ್ವೇಷ, ವಿಷಯಾಸಕ್ತಿ ಮತ್ತು ಪ್ರಮಾದ ಹೆಚ್ಚುವುದು ಜಗತ್ತಿನ ಸ್ವಾಭಾವಿಕವಾದ ಪ್ರವೃತ್ತಿಯಾಗಿದೆ**. ಇದರಿಂದ ದೇಶದ ವಿದ್ಯೆ ಉತ್ತಮ ಶಿಕ್ಷಣಗಳು ನಾಶವಾಗಿ, ದುರ್ಗುಣಗಳೂ, ದುಷ್ಟ ವ್ಯಸನಗಳೂ ಹೆಚ್ಚಾಗಿ ಹೋಗುತ್ತವೆ. ಉದಾಹರಣೆಗೆ, ಮದ್ಯ–ಮಾಂಸ–ಸೇವನೆ, ಬಾಲ್ಯಾವಸ್ಥೆಯಲ್ಲಿ ವಿವಾಹ ಮತ್ತು ಸ್ವೇಚ್ಛಾಚಾರ ಮೊದಲಾದ ದೋಷಗಳು ಹೆಚ್ಚುತ್ತವೆ. ಮತ್ತು ಯುದ್ಧ ವಿಭಾಗದಲ್ಲಿ ಯಾವಾಗ ಯುದ್ಧ ವಿದ್ಯಾ ಕೌಶಲವೂ ಮತ್ತು ಸೇನೆಯೂ ಭೂಮಂಡಲದಲ್ಲಿ ಎದುರಿಸಬಲ್ಲವನಾದ ಬೇರೆ ಯಾವನೂ ಇಲ್ಲದಿರುವಷ್ಟು ಸಮೃದ್ಧವಾಗಿ ಹೋಗುವುವೋ, ಆಗ ಆ ಜನರಲ್ಲಿ ಪಕ್ಷಪಾತ–ಅಭಿಮಾನಗಳು ವರ್ಧಿಸಿ, ಅನ್ಯಾಯವು ಹೆಚ್ಚಿಹೋಗುತ್ತದೆ. ಯಾವಾಗ ಈ ದೋಷಗಳು ಉದ್ಭವಿಸುತ್ತವೋ ಆಗ ತಮ್ಮ ತಮ್ಮಲ್ಲೇ ವಿರೋಧ ಉಂಟಾಗಿ, ಧ್ವಂಸವಾಗುತ್ತಾರೆ; ಅಥವಾ ಬೇರೆ ನಿಮ್ನತರದ ಕುಲಗಳಲ್ಲಿ ಅವರಿಗಿಂತ ಹೆಚ್ಚಾಗಿ, ಅವರನ್ನು ಪರಾಜಯಗೊಳಿಸಲು ಸಮರ್ಥನಾದ ಯಾವನಾದರೂ ಸಾಮರ್ಥ್ಯಶಾಲೀ ಪುರುಷನು ಉದಯಿಸುತ್ತಾನೆ. ದೃಷ್ಟಾಂತಕ್ಕಾಗಿ, ಮುಸಲ್ಮಾನರ ಚಕ್ರವರ್ತಿತ್ವಕ್ಕೆ ಎದುರಾಗಿ, ಶಿವಾಜೀ, ಗುರು ಗೋವಿಂದಸಿಂಹರು ನಿಂತು, ಮುಸಲ್ಮಾನರ ರಾಜ್ಯವನ್ನು ಛಿನ್ನ–ಭಿನ್ನವಾಗಿ ಮಾಡಿಬಿಟ್ಟರು.

**ಅಥ ಕಿಮೇತೈರ್ವಾ ಪರೇನ್ಯೇ ಮಹಾಧನುರ್ಧರಾಶ್ಚಕ್ರವರ್ತಿನಃ ಕೇಚಿತ್‌ಸುದ್ಯುಮ್ನ ಭೂರಿದ್ಯುಮ್ನೇಂದ್ರದ್ಯುಮ್ನ ಕುವಲಯಾಶ್ವ ಯೌವನಾಶ್ವವದ್ಧ್ಯಶ್ವಾಶ್ವಪತಿಶತಬಿಂದು ಹರಿಶ್ಚಂದ್ರಾಂಬರೀಷನನಕ್ತುಸರ್ಯಾತಿಯಯಾ ತ್ಯನರಣ್ಯಾಕ್ಷಸೇನಾದಯಃ । ಅಥಮರುತ್ತ ಭರತಪ್ರಭೃತಯೋ ರಾಜಾನಃ ॥** (ಮೈತ್ರ್ಯುಪನಿಷತ್ :– ೧.೪)

ಈ ಮೊದಲಾದ ಪ್ರಮಾಣಗಳಿಂದ ಸೃಷ್ಟಿಯಿಂದಾರಂಭಿಸಿ ಮಹಾಭಾರತದ (ಕಾಲದ)ವರೆಗೆ ಚಕ್ರವರ್ತೀ ಸಾರ್ವಭೌಮ ರಾಜರು (ತಮ್ಮ ಸದ್ಗುಣ–ಸಚ್ಚಾರಿತ್ರ್ಯ–ಸತ್ಸಾಮರ್ಥ್ಯಗಳಿಂದ ಸಂಪೂರ್ಣ ಪ್ರಪಂಚದ ಮೇಲೆಯೇ ಆಧಿಪತ್ಯವನ್ನು ಸ್ಥಾಪಿಸಿದವರು) ಆರ್ಯಕುಲದಲ್ಲಿಯೇ ಆಗಿದ್ದುದು ಸಿದ್ಧವಾಗಿದೆ. ಈಗ ಇವರ ಸಂತತಿಯ ಅಭಾಗ್ಯದ ಉದಯವಾಗಿರುವುದರಿಂದ, ರಾಜ್ಯ–ಭ್ರಷ್ಟರಾಗಿ ಆರ್ಯರು ವಿದೇಶೀಯರ ಪಾದಾಕ್ರಾಂತರಾಗುತ್ತಿದ್ದಾರೆ. ಇಲ್ಲಿ ಸುದ್ಯುಮ್ನ, ಭೂರಿದ್ಯುಮ್ನ, ಕುವಲಯಾಶ್ವ, ಯೌವನಾಶ್ವ, ವದ್ಧ್ಯಶ್ವ, ಅಶ್ವಪತಿ, ಶತಬಿಂದು, ಹರಿಶ್ಚಂದ್ರ, ಅಂಬರೀಷ, ನನಕ್ತು, ಸರ್ಯಾತಿ, ಯಯಾತಿ, ಅನರಣ್ಯ, ಅಕ್ಷಸೇನ, ಮರುತ್ತ ಮತ್ತು ಭರತ ಸಾರ್ವಭೌಮರ, ಸಕಲ ಭೂಮಂಡಲದಲ್ಲಿಯೂ ಪ್ರಸಿದ್ಧರಾದ ಚಕ್ರವರ್ತೀ ರಾಜರುಗಳ ಹೆಸರುಗಳನ್ನು ಬರೆದಿರುವಂತೆ, ಸ್ವಾಯಂಭುವ ಮೊದಲಾದ ಚಕ್ರವರ್ತೀ ರಾಜರುಗಳ ಹೆಸರುಗಳನ್ನು ಸ್ಪಷ್ಟವಾಗಿ ಮನುಸ್ಮೃತಿ, ಮಹಾಭಾರತ ಮೊದಲಾದ ಗ್ರಂಥಗಳಲ್ಲಿ ಬರೆದಿದ್ದಾರೆ. ಇದನ್ನು ಸುಳ್ಳೆಂದು ವಾದಿಸುವುದು ಅಜ್ಞಾನಿಗಳ ಮತ್ತು ಪಕ್ಷಪಾತಿಗಳ ಕೆಲಸವಾಗಿದೆ.

---

೬. ರಾವಣನು ಅತಿ ದೀರ್ಘಜೀವಿಯಾಗಿದ್ದನು. ಅದಕ್ಕೆ ಅವನ ವೈಜ್ಞಾನಿಕ ಉನ್ನತಿಯೇ ಕಾರಣವಾಗಿತ್ತು. ಆದರೆ, ಸೀತಾಪಹರಣದ ಅಪರಾಧದಿಂದ, ಅವನು ಶೀಘ್ರವೇ ಮೃತ್ಯುಗೀಡಾದನು.

**ಪ್ರಶ್ನೆ:–** ಯಾವ ಅಗ್ನೇಯಾಸ್ತ್ರ ಮೊದಲಾದುದರ ವಿದ್ಯೆಯನ್ನು ಬರೆದಿದ್ದಾರೋ, ಅವು ಸತ್ಯವಾಗಿವೆಯೋ, ಅಥವಾ ಇಲ್ಲವೋ? ಮತ್ತು ತುಪಾಕಿ ಮತ್ತು ಕೋವಿಗಳು ಆ ಕಾಲದಲ್ಲಿದ್ದವೋ ಅಥವಾ ಇಲ್ಲವೋ?

**ಉತ್ತರ:–** ಈ ಮಾತು ಸತ್ಯವಾಗಿದೆ. ಈ ಶಸ್ತ್ರಗಳೂ ಇದ್ದವು. ಏಕೆಂದರೆ, ಪದಾರ್ಥವಿದ್ಯೆಯಿಂದ (ಭೌತಿಕ ವಿಜ್ಞಾನದಿಂದ) ಈ ಎಲ್ಲಾ ವಿಷಯಗಳ ಸಿದ್ಧಿ ಸಂಭವವಾಗಿದೆ.

**ಪ್ರಶ್ನೆ:–** ಇವು ದೇವತೆಗಳ ಮಂತ್ರಗಳಿಂದ ಸಿದ್ಧಿಸುತ್ತಿದ್ದವೇನು?

**ಉತ್ತರ :–** ಇಲ್ಲ. ಯಾವುದರಿಂದ ಅಸ್ತ್ರ–ಶಸ್ತ್ರಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರೋ, ಆ ವಿಷಯಗಳೆಲ್ಲವನ್ನೂ "ಮಂತ್ರ"ಗಳು, ಎಂದರೆ ಆಲೋಚನೆಗಳಿಂದ ಆವಿಷ್ಕಾರಗಳನ್ನು ಮಾಡುತ್ತಿದ್ದರು ಮತ್ತು ಪ್ರಯೋಗಿಸುತ್ತಿದ್ದರು. ಮತ್ತು ಯಾವುದು ಶಬ್ದಮಯವಾಗಿರುತ್ತದೋ, ಆ ಮಂತ್ರದಿಂದ ಯಾವ ದ್ರವ್ಯವೂ ಉತ್ಪನ್ನವಾಗಲಾರದು. ಮತ್ತು ಯಾವನಾದರೂ– "ಮಂತ್ರದಿಂದ ಅಗ್ನಿ ಉತ್ಪನ್ನವಾಗುತ್ತದೆ". – ಎಂದು ಹೇಳುವುದಾದರೆ, ಆ ಮಂತ್ರದ ಜಪಮಾಡುವವನ ಹೃದಯವನ್ನು ಮತ್ತು ಜಿಹ್ವೆಯನ್ನು ಆಮಂತ್ರ ಭಸ್ಮಮಾಡಿ ಬಿಟ್ಟೀತು! ಸಾಯಿಸಹೊರಡುವುದು ಶತ್ರುವನ್ನು; ಮತ್ತು ಸತ್ತು ಹೋದುದು ಸ್ವತಃ ತಾನೇ! ಆದುದರಿಂದ 'ಮಂತ್ರ' ಎನ್ನುವುದು 'ಆಲೋಚನೆ'ಯ ಹೆಸರಾಗಿದೆ. ಹೇಗೆ, ರಾಜಕಾರ್ಯಗಳ ಆಲೋಚನೆ ಮಾಡುವವನು 'ರಾಜಮಂತ್ರೀ' ಎನ್ನಿಸಿಕೊಳ್ಳುತ್ತಾನೋ, ಹಾಗೆ, 'ಮಂತ್ರ' ಎಂದರೆ ಆಲೋಚನೆಯಿಂದ ಸಮಸ್ತ ಸೃಷ್ಟಿಯ ಪದಾರ್ಥಗಳನ್ನು ಮೊದಲು ತಿಳಿದುಕೊಂಡು, ಮತ್ತು ಆಮೇಲೆ 'ಕ್ರಿಯೆ'ಯನ್ನು ಮಾಡುವುದರಿಂದ, ಅನೇಕ ವಿಧದ ಪದಾರ್ಥಗಳೂ ಹಾಗೂ ಕ್ರಿಯಕೌಶಲವೂ ಉತ್ಪನ್ನವಾಗುತ್ತವೆ. ಯಾವನಾದರೂ ಒಬ್ಬನು ಕಬ್ಬಿಣದ ಬಾಣವನ್ನು ಅಥವಾ ಗೋಳವನ್ನು ನಿರ್ಮಿಸಿ, ಅದರಲ್ಲಿ, ಬೆಂಕಿ ತಗಲುವುದರಿಂದ ವಾಯುವಿನಲ್ಲಿ ಹೊಗೆ ಹರಡಿಕೊಳ್ಳುವಂತಹ, ಅಥವಾ ಸೂರ್ಯನ ಕಿರಣದ, ಇಲ್ಲವೇ ವಾಯುವಿನ ಸ್ಪರ್ಶವಾಗುವುದರಿಂದ ಬೆಂಕಿ ಹೊತ್ತಿಕೊಳ್ಳುವಂತಹ ಪದಾರ್ಥಗಳನ್ನು ತುಂಬಿಸಿದರೆ, ಅದು 'ಅಗ್ನೇಯಾಸ್ತ್ರ'– ಎಂಬ ಹೆಸರನ್ನು ಹೊಂದುತ್ತದೆ. ಇನ್ನೊಬ್ಬನು ಇದನ್ನು ನಿವಾರಿಸಲು ಅಪೇಕ್ಷಿಸಿದರೆ, ಅದರ ಮೇಲೆಯೇ ವಾರುಣಾಸ್ತ್ರವನ್ನು ಪ್ರಯೋಗಿಸಬೇಕು. ಎಂದರೆ, ಹೇಗೆ ಶತ್ರುವು ತನ್ನ ಶತ್ರುವಿನ ಸೇನೆಯ ಮೇಲೆ ಆಗ್ನೇಯ ಅಸ್ತ್ರ ವನ್ನು ಬಿಟ್ಟು ನಾಶಮಾಡಬಯಸಿದನೋ, ಹಾಗೆಯೇ ತನ್ನ ಸೇನೆಯ ರಕ್ಷಣೆಗಾಗಿ ಸೇನಾಪತಿಯು ವಾರುಣಾಸ್ತ್ರದಿಂದ ಆಗ್ನೇಯಾಸ್ತ್ರವನ್ನು ನಿವಾರಿಸಬೇಕು. ಯಾವುದರ ಹೊಗೆ ವಾಯುವಿನ ಸ್ಪರ್ಶವಾದೊಡನೆಯೇ ಮೋಡವಾಗಿ ಕೂಡಲೇ ಮಳೆಗರೆಯಲಾರಂಭಿಸುವುದೋ, ಹಾಗೂ ಬೆಂಕಿಯನ್ನಾರಿಸಿಬಿಡುವುದೋ, ಅಂತಹ ದ್ರವ್ಯಗಳ ಯೋಗದಿಂದ ಅದು ಸಿದ್ಧವಾಗುತ್ತದೆ. ಹೀಗೆಯೇ, ನಾಗಪಾಶ–ಎಂದರೆ, ಶತ್ರವಿನ ಮೇಲೆ ಬಿಡುವುದರಿಂದ, ಅವನ ಅಂಗಗಳನ್ನು ಸೆಳೆದು ಕಟ್ಟಿಹಾಕಿ ಬಿಡುವ ಅಸ್ತ್ರ. ಹಾಗೆಯೇ ಮೋಹನಾಸ್ತ್ರವೂ ಒಂದಿರುತ್ತದೆ; ಅಂದರೆ ಯಾವುದರಲ್ಲಿ ಮಾದಕ ದ್ರವ್ಯ ಸೇರಿದ್ದು, ಹೊಗೆ ತಗುಲಿದೊಡನೆ ಸಮಸ್ತ ಶತ್ರು ಸೈನ್ಯವೂ ನಿದ್ರಾವಶವಾಗುವುದೋ ಅಥವಾ ಮೂರ್ಛಿತವಾಗುವುದೋ, ಅಂತಹ ಅಸ್ತ್ರವಿರುತ್ತದೆ. ಇದೇ ರೀತಿ ಸಕಲ ಶಾಸ್ತ್ರಗಳೂ ಇರುತ್ತಿದ್ದವು. ಮತ್ತು ಒಂದು ತಂತಿಯಿಂದ, ಅಥವಾ ಸೀಸೆಯಿಂದ, ಇಲ್ಲವೇ ಮತ್ತಾವುದಾದರೂ ಪದಾರ್ಥದಿಂದ ವಿದ್ಯುತ್ತನ್ನು ಉತ್ಪನ್ನಮಾಡಿ, ಶತ್ರುಗಳನ್ನು ನಾಶಪಡಿಸುತ್ತಿದ್ದರು. ಅದನ್ನೂ ಕೂಡ ಆಗ್ನೇಯಾಸ್ತ್ರ ಮತ್ತು ಪಾಶುಪತಾಸ್ತ್ರವೆನ್ನುತ್ತಾರೆ.

'ತೋಪು ಮತ್ತು ಬಂದೂಕ' – ಈ ಹೆಸರುಗಳು ಬೇರೆ ದೇಶದ ಭಾಷೆಯವಾಗಿವೆ; ಸಂಸ್ಕೃತ ಭಾಷೆಯದು ಮತ್ತು ಆರ್ಯಾವರ್ತೀಯ ಭಾಷೆಯದು ಅಲ್ಲ. ಆದರೆ, ಯಾವುದನ್ನು ವಿದೇಶೀಯ ಜನರು 'ತೋಪು' ಎನ್ನುತ್ತಾರೋ, ಅದರ ಹೆಸರು ಸಂಸ್ಕೃತದಲ್ಲಿ ಮತ್ತು ಆರ್ಯ ಭಾಷೆಯಲ್ಲಿ 'ಶತಘ್ನೀ' ಎಂದಾಗಿದೆ; ಮತ್ತು ಯಾವುದನ್ನು 'ಬಂದೂಕ'ವೆನ್ನುತ್ತಾರೋ ಅದನ್ನು ಸಂಸ್ಕೃತದಲ್ಲಿ ಮತ್ತು ಆರ್ಯ[೭] ಭಾಷೆಯಲ್ಲಿ 'ಭುಷುಂಡೀ'–ಎನ್ನುತ್ತಾರೆ. ಯಾರು ಸಂಸ್ಕೃತ ವಿದ್ಯೆಯನ್ನು ಓದಿಲ್ಲವೋ, ಅವರು ಭ್ರಮದಲ್ಲಿ ಬಿದ್ದು, ಏನೇನೋ ಬರೆಯುತ್ತಾರೆ ಮತ್ತು ಏನೇನೋ ಒದರಿಕೊಳ್ಳುತ್ತಾರೆ. ಬುದ್ಧಿವಂತರಾದ ಜನರು ಅದನ್ನು ಪ್ರಮಾಣವೆಂದು ಒಪ್ಪಲಾರರು. ಮತ್ತು ಭೂಮಂಡಲದಲ್ಲಿ ಎಷ್ಟು ವಿದ್ಯೆ ಹರಡಿದೆಯೋ, ಅದೆಲ್ಲವೂ ಆರ್ಯಾವರ್ತ ದೇಶದಿಂದ ಈಜಿಪ್ಟಿನವರಿಗೂ, ಅವರಿಂದ ಯೂನಾನಿನವರಿಗೂ, ಅವರಿಂದ ರೋಮಿನವರಿಗೂ, ಅವರಿಂದ ಸಂಪೂರ್ಣ ಯೂರೋಪ್ ಖಂಡಕ್ಕೂ, ಅವರಿಂದ ಅಮೇರಿಕಾ ಮೊದಲಾದ ದೇಶಗಳಲ್ಲಿಯೂ ಹರಡಿದೆ.

---

೭. ಎಂದರೆ, ಹಿಂದೀ ಮೊದಲಾದ ಭಾರತೀಯ ಭಾಷೆಗಳಲ್ಲಿ. ಹಿಂದೀ ಭಾಷೆಗೆ ಮಹರ್ಷಿ ದಯಾನಂದರು 'ಆರ್ಯಭಾಷೆ' ಎಂಬ ಹೆಸರನ್ನು ಕೊಟ್ಟಿದ್ದರು.

ಈವರೆಗೆ ಸಂಸ್ಕೃತ ವಿದ್ಯೆಯ ಎಷ್ಟು ಪ್ರಚಾರ ಆರ್ಯಾವರ್ತ ದೇಶದಲ್ಲಿದೆಯೋ, ಅಷ್ಟು ಬೇರೆ ಯಾವ ದೇಶದಲ್ಲಿಯೂ ಇಲ್ಲ. ಯಾವ ಜನರು – "ಜರ್ಮನೀ ದೇಶದಲ್ಲಿ ಸಂಸ್ಕೃತ ವಿದ್ಯಾಪ್ರಚಾರ ಬಹಳವಾಗಿದೆ ಮತ್ತು ಎಷ್ಟು ಸಂಸ್ಕೃತವನ್ನು ಮ್ಯಾಕ್ಸ್ ಮುಲ್ಲರ್ ಸಾಹೇಬರು ಓದಿದ್ದಾರೋ, ಅಷ್ಟನ್ನು ಬೇರೆ ಯಾರೂ ಓದಿಲ್ಲ". – ಎಂದು ಹೇಳುತ್ತಾರೋ, ಅವರು ಹೇಳುವುದ ಕಲ್ಪನಾ ಮಾತ್ರ. ಏಕೆಂದರೆ–**"ಯಸ್ಮಿನ್ ದೇಶೇ ದ್ರುಮೋ ನಾಸ್ತಿ ತತ್ರೈರಂಡೋ ದ್ರುಮಾಯತೇ"**. – ಎಂದರೆ ಯಾವ ದೇಶದಲ್ಲಿ ಯಾವ ಮರವೂ ಇರುವುದಿಲ್ಲವೋ, ಆ ದೇಶದಲ್ಲಿ 'ಹರಳಿನ ಗಿಡಿ'ವನ್ನೇ ಮಹಾವೃಕ್ಷವೆಂದು ತಿಳಿಯುತ್ತಾರೆ. ಹಾಗೆಯೇ ಯೂರೋಪ್ ಖಂಡದಲ್ಲಿ ಸಂಸ್ಕೃತ ವಿದ್ಯೆ ಪ್ರಚಾರವಿಲ್ಲದಿರುವುದರಿಂದ, ಜರ್ಮನ್ ಜನರು ಮತ್ತು ಮ್ಯಾಕ್ಸ್ ಮುಲ್ಲರ್ ಸಾಹೇಬರು ಸ್ವಲ್ಪ ಓದಿಕೊಂಡರು; ಅದೇ ಆ ದೇಶಕ್ಕೆ ಮಹದ್ವಿಷಯವಾಗಿದೆ. ಆದರೆ, ಆರ್ಯಾವರ್ತ ದೇಶದ ಕಡೆ ನೋಡಿದರೆ, ಅವರ ಗಣನೆ ಅತ್ಯಲ್ಪವಾಗಿದೆ. ಏಕೆಂದರೆ, ಜರ್ಮನ್ ದೇಶನಿವಾಸಿಯಾದ ಪ್ರಧಾನಾಧಿಕಾರಿಯೊಬ್ಬರ ಪತ್ರದಿಂದ, ಜರ್ಮನೀ ದೇಶದಲ್ಲಿ ಸಂಸ್ಕೃತ ಪತ್ರದ ಅರ್ಥರನ್ನು ಹೇಳುವವರೂ ಕೂಡ ಬಹಳ ಕಡಿಮೆಯಾಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಮ್ಯಾಕ್ಸ್ ಮುಲ್ಲರ್ ಸಾಹೇಬರ ಸಂಸ್ಕೃತ ಸಾಹಿತ್ಯವನ್ನೂ ಮತ್ತು ಅಲ್ಪ ಸ್ವಲ್ಪ ವೇದ–ಭಾಷ್ಯವನ್ನೂ ನೋಡಿ. ಮ್ಯಾಕ್ಸ್ ಮುಲ್ಲರ್ ಸಾಹೇಬರು ಅಲ್ಲಿ–ಇಲ್ಲಿ ಆರ್ಯಾವರ್ತೀಯ ಜನರು ಮಾಡಿರುವ ಟೀಕೆಯನ್ನು ನೋಡಿಕೊಂಡು ಅಲ್ಪ ಸ್ವಲ್ಪ ಹೇಗೋ ಹಾಗೆ ಬರೆದಿದ್ದಾರೆ – ಎಂದು ನನಗೆ ವಿದಿತವಾಗುತ್ತದೆ. ಉದಾಹರಣೆಗೆ, **"ಯುಂಜಂತಿ ಬ್ರಧ್ನ ಮರುಷಂ ಚರಂತಂ ಪರಿ ತಸ್ಥುಷಃ. ರೋಚಂತೇ ರೋಚನಾ ದಿವಿ"॥** (ಋಗ್ವೇದ:– ೧.೬.೧) ಈ ಮಂತ್ರದ ಅರ್ಥವನ್ನು 'ಕುದುರೆ'ಗೆ ಅನ್ವಯಿಸಿದ್ದಾರೆ. ಸಾಯಣಾಚಾರ್ಯರು 'ಸೂರ್ಯ' ಎಂಬ ಯಾವ ಅರ್ಥವನ್ನು ಮಾಡಿದ್ದಾರೋ, ಅದು ಇದಕ್ಕಿಂತ ಎಷ್ಟೋ ಚೆನ್ನಾಗಿದೆ. ಆದರೆ, ಇದರ ಸರಿಯಾದ ಅರ್ಥ 'ಪರಮಾತ್ಮನು' ಎಂದಾಗಿದೆ. ಅದನ್ನು ನಾನು ರಚಿಸಿರುವ 'ಋಗ್ವೇದಾದಿ ಭಾಷ್ಯ[೮] ಭೂಮಿಕೆ'ಯಲ್ಲಿ ನೋಡಿಕೊಳ್ಳಿರಿ. ಅದರಲ್ಲಿ ಈ ಮಂತ್ರದ ಯಥಾರ್ಥವಾದ ಅರ್ಥವನ್ನು ಮಾಡಿದ್ದೇನೆ. ಇಷ್ಟರಿಂದ, ಜರ್ಮನೀ ದೇಶದಲ್ಲಿ ಮತ್ತು ಮ್ಯಾಕ್ಸ್ ಮುಲ್ಲರ್ ಸಾಹೇಬರಲ್ಲಿ ಸಂಸ್ಕೃತ ವಿದ್ಯೆಯ ಪಾಂಡಿತ್ಯವೆಷ್ಟಿದೆ – ಎಂದು ತಿಳಿದುಕೊಳ್ಳಿರಿ.

ಎಷ್ಟು ವಿದ್ಯೆ ಹಾಗೂ ಮತಗಳು ಭೂಮಂಡಲದಲ್ಲಿ ಹರಡಿವೆಯೋ, ಅವೆಲ್ಲವೂ ಆರ್ಯಾವರ್ತ ದೇಶದಿಂದಲೇ ಪ್ರಚಾರಿತವಾಗಿವೆ–ಎಂಬುದು ನಿಶ್ಚಯವಾಗಿದೆ. ನೋಡಿರಿ, ಪ್ಯಾರಿಸ್ ನಗರದ, ಎಂದರೆ ಫ್ರಾನ್ಸ್ ದೇಶದ ನಿವಾಸಿಯಾದ 'ಗೋಲ್ಡ್ ಸ್ಟಕರ್'[೯] ಎಂಬ ಸಜ್ಜನರೊಬ್ಬರು, ತಮ್ಮ "ಬೈಬಲ್ ಇನ್ ಇಂಡಿಯಾ" (ಲಾ ಬೈಬಲ್ ಡನ್ಸ್ ಲಾ ಇಂಡೇ – ಎಂದು ಫ್ರೆಂಚ್ ಮೂಲಗ್ರಂಥ ಪ್ರಕಾಶನ ವರ್ಷ ೧೮೬೯–ಭಗವದ್ದತ್ತ) ಎಂಬ ಕೃತಿಯಲ್ಲಿ – "ಸಮಸ್ತ ವಿದ್ಯೆಗಳ ಮತ್ತು ಒಳಿತುಗಳ ಭಂಡಾರವಾಗಿದೆ ಈ ಆರ್ಯಾವರ್ತ ದೇಶ. ಮತ್ತು ಸಕಲ ವಿದ್ಯೆಗಳೂ ಮತ್ತು ಮತಗಳೂ ಈ ದೇಶದಿಂದಲೇ ಹರಡಿವೆ. ಮತ್ತು ಪರಮಾತ್ಮನಲ್ಲಿ–ಓ ಪರಮೇಶ್ವರ! ಪೂರ್ವಕಾಲದಲ್ಲಿ ಆರ್ಯಾವರ್ತದ ದೇಶದ ಉನ್ನತಿ ಹೇಗಿದ್ದಿತೋ, ಹಾಗೆಯೇ ನಮ್ಮ ದೇಶಕ್ಕೂ (ಉನ್ನತಿಯನ್ನು) ಕರುಣಿಸು–ಎಂದು ಪ್ರಾರ್ಥಿಸುತ್ತೇವೆ" – ಎಂದು ಬರೆಯುತ್ತಾರೆ. ಆ ಗ್ರಂಥದಲ್ಲಿ ನೋಡಿಕೊಳ್ಳಿರಿ. ಮತ್ತು 'ದಾರಾಶಿಕೋಹ್'[೧೦] ಮೊಗಲ್ ರಾಜಪುತ್ರನೂ ಕೂಡ– ಪೂರ್ಣ ವಿದ್ಯೆ ಹೇಗೆ ಸಂಸ್ಕೃತದಲ್ಲಿಯೋ ಹಾಗೆ ಬೇರೆ ಯಾವ ಭಾಷೆಯಲ್ಲಿಯೂ ಇಲ್ಲ".–ಎಂದೇ ನಿಶ್ಚಯಿಸಿದ್ದನು. ಉಪನಿಷತ್ತುಗಳ ಭಾಷಾಂತರದಲ್ಲಿ[೧೧] ಅವನು – "ನಾನು ಅರಬ್ಬೀ ಮೊದಲಾದ ಬಹಳ ಭಾಷೆಗಳನ್ನೋದಿದೆ. ಆದರೆ, ಮನಸ್ಸಿನ ಸಂದೇಹ ದೂರವಾಗಿ ಆನಂದ ಉಂಟಾಗಲಿಲ್ಲ. ಯಾವಾಗ ಸಂಸ್ಕೃತವನ್ನು ನೋಡಿದೆನೋ ಮತ್ತು ಆಲಿಸಿದೆನೋ, ಆಗ ನಿಃಸಂದೇಹವಾಗಿ, ನನಗೆ ಮಹದಾನಂದ ಉಂಟಾಗಿದೆ".– ಎಂದು ಬರೆಯುತ್ತಾನೆ, ಔರಂಗಜೇಬ್ ಬಾದಶಾಹನ ಆ ಹಿರಿಯ ಅಣ್ಣ.

ಯಾವುದಕ್ಕೆ ಪೂರ್ಣವಾದ ರಕ್ಷಣೆ ಸಿಕ್ಕದೇ ಹೋದರೂ ಯಾವುದರಿಂದ ಈಗ ಕೂಡ ಖಗೋಳದ ಬಹಳ ವೃತ್ತಾಂತ ವಿದಿತವಾಗುತ್ತದೋ, ಕಾಶಿಯ "ಮಾನಮಂದಿರ"ದಲ್ಲಿರುವ ಆ ಶಿಶುಮಾರ ಚಕ್ರ" ಎಷ್ಟು ಉತ್ತಮವಾಗಿದೆ, ನೋಡಿರಿ. ಸವಾಯೀ ಜಯಪರಾಧೀಶರು ಅದನ್ನು ರಕ್ಷಿಸಿಕೊಂಡು, ಛಿನ್ನ–ಭಿನ್ನವಾಗಿರುವುದನ್ನು ಪುನಃ ಕಟ್ಟಿಸಿಕೊಂಡು ಹೋದರೆ, ಬಹಳ

---

೮. ಉಪಾಸನಾ ಪ್ರಕರಣದಲ್ಲಿ

೯. ಜೆಕಾಲಿಯಟ್ ಎಂದಿರಬೇಕಿತ್ತು –ಯು.ಮೀ.

೧೦. ಔರಂಗಜೇಬ್ ಬಾದಶಹನ ಹಿರಿಯ ಅಣ್ಣ.

೧೧. ಈ ಭಾಷಾಂತರದ ಫಾರಸೀ ಹೆಸರು.– "ಸಿರೇ ಅಕಬರ್" ಎಂದರೆ, ದೊಡ್ಡ ರಹಸ್ಯ ಎಂದು –ಭಗವದ್ದತ್ತ.

ಒಳ್ಳೆಯದಾದೀತು.[೧೨] ಆದರೆ, ಇಂತಹ ಶಿರೋಮಣಿ ದೇಶಕ್ಕೆ ಮಹಾಭಾರತ ಯುದ್ಧವು ಎಂತಹ ಅಘಾತವನ್ನುಂಟು ಮಾಡಿತೆಂದರೆ, ಈಗಿನವರೆಗೂ ಇದು ತನ್ನ ಪೂರ್ವದ ಸ್ಥಿತಿಗೆ ಬಂದಿಲ್ಲ. ಏಕೆಂದರೆ, ಸೋದರನು ಸೋದರನನ್ನು ಕೊಲ್ಲಹತ್ತಿದರೆ, ನಾಶವಾಗುವುದರಲ್ಲಿ ಸಂದೇಹವೇನು?

**"ವಿನಾಶಕಾಲೇ ವಿಪರೀತ ಬುದ್ಧಿಃ"** (ವೃದ್ಧಚಾಣಕ್ಯ:- ೧೬.೧೭)

ಇದು ವೃದ್ಧಚಾಣಕ್ಯನ ವಚನವಾಗಿದೆ. ಯಾವಾಗ ನಾಶವಾಗುವ ಸಮಯ ಹತ್ತಿರಬರುತ್ತದೋ, ಆಗ ಬುದ್ಧಿ ತಲೆಕೆಳಗಾಗಿ, ತಲೆಕೆಳಗಾದ ಕಾರ್ಯಗಳನ್ನೇ ಮಾಡುತ್ತಾರೆ. ಯಾರಾದರೂ ಅವರಿಗೆ ಯುಕ್ತವಾದುದನ್ನು ತಿಳಿಸಿದರೆ, ಅದನ್ನು ತಲೆಕೆಳಗಾಗಿಯೇ ಅಂಗೀಕರಿಸುತ್ತಾರೆ ಮತ್ತು ತಲೆಕೆಳಗಾದುದನ್ನು ಬೋಧಿಸಿದರೆ, ಅದನ್ನೇ ಯುಕ್ತವಾದುದೆಂದು ಭಾವಿಸುತ್ತಾರೆ. ಯಾವಾಗ ದೊಡ್ಡ ದೊಡ್ಡ ವಿದ್ವಾಂಸರೂ, ರಾಜರುಗಳೂ, ಮಹಾ ರಾಜರುಗಳೂ ಋಷಿ-ಮಹರ್ಷಿಜನರೂ ಮಹಾಭಾರತ ಯುದ್ಧದಲ್ಲಿ ಬಹಳವಾಗಿ ಕೊಲ್ಲಲ್ಪಟ್ಟರೋ, ಮತ್ತು ಬಹು ಮಂದಿ ಮೃತರಾದರೋ, ಆಗ ವಿದ್ಯೆಯ ಮತ್ತು ವೇದೋಕ್ತ ಧರ್ಮದ ಪ್ರಚಾರ ಧ್ವಸ್ತವಾಗುತ್ತಾ ನಡೆಯಿತು. ಈರ್ಷ್ಯೆ, ದ್ವೇಷ, ಅಭಿಮಾನಗಳನ್ನು ತಮ್ಮ ತಮ್ಮಲ್ಲೇ ಮಾಡತೊಡಗಿದರು. ಯಾವನು ಬಲಶಾಲಿಯಾಗಿದ್ದನೋ, ಅವನು ದೇಶವನ್ನು ಅದುಮಿ ರಾಜನಾಗಿ ಕುಳಿತನು. ಹಾಗೆಯೇ ಆರ್ಯಾವರ್ತ ದೇಶದಲ್ಲಿ ಎಲ್ಲೆಡೆಯೂ ಖಂಡ-ಖಂಡವಾದ ರಾಜ್ಯಗಳು ತಲೆಯೆತ್ತಿದುವು. ಇನ್ನು ದ್ವೀಪ-ದ್ವೀಪಾಂತರಗಳ ವ್ಯವಸ್ಥೆಯನ್ನು ಮಾಡುವವನಾದರೂ ಯಾವನು? ಯಾವಾಗ ಬ್ರಾಹ್ಮಣರುಗಳೇ ವಿದ್ಯಾಹೀನರಾದರೋ, ಆಗ ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು-ಈ ಅವಿದ್ವಾಂಸರ ಕಥೆಯನ್ನು ಹೇಳುವುದಾದರೂ ಏನಿದೆ? ಪರಂಪರೆಯಿಂದ ವೇದಗಳೇ ಮೊದಲಾದ ಶಾಸ್ತ್ರಗಲ ಅರ್ಥಸಹಿತ ಅಧ್ಯಾಪನದ ಯಾವ ಪ್ರಚಾರವಿತ್ತೋ, ಅದೂ ಕೂಡ ಕೈಬಿಟ್ಟು ಹೋಯಿತು. ಕೇವಲ ಜೀವನನಿರ್ವಾಹಕ್ಕಾಗಿ ಬ್ರಾಹ್ಮಣರು ಪಾಠವನ್ನು ಮಾತ್ರ ಕಲಿಯುತ್ತಿದ್ದರು.[೧೩] ಆ ಕೇವಲ ಪಾಠವನ್ನೂ ಕೂಡ ಕ್ಷತ್ರಿಯರು ಮೊದಲಾದವರಿಗೆ ಕಲಿಸಲಿಲ್ಲ. ಏಕೆಂದರೆ ಯಾವಾಗ ಅವಿದ್ವಾಂಸರಾದವರು ಗುರುಗಳಾದರೋ, ಆಗ ಛಲ, ಕಪಟ, ಅಧರ್ಮವೂ ಕೂಡ ಅವರಲ್ಲಿ ಹೆಚ್ಚುತ್ತಾ ಹೋದವು. ಬ್ರಾಹ್ಮಣರು ತಮ್ಮ ಜೀವಿಕಾ-ನಿರ್ವಾಹದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಯೋಚಿಸಿದರು. ಪರ್ಯಾಲೋಚನೆ ಮಾಡಿ, ಇದೇ ನಿರ್ಣಯವನ್ನು ಮಾಡಿ, ಕ್ಷತ್ರಿಯರೇ ಮೊದಲಾದವರಿಗೆ - "ನಾವೇ ನಿಮ್ಮ ಪೂಜ್ಯ ದೇವರು. ನಮ್ಮ ಸೇವೆಯನ್ನು ಮಾಡದೇ ಹೋದರೆ, ನಿಮಗೆ ಸ್ವರ್ಗ ಅಥವಾ ಮುಕ್ತಿ ಸಿಕ್ಕಲಾರದು. ಅಷ್ಟೇ ಅಲ್ಲ; ನೀವು ನಮ್ಮ ಸೇವೆಯನ್ನು ಮಾಡುವುದಿಲ್ಲವಾದರೆ, ಘೋರವಾದ ನರಕದಲ್ಲಿ ಬೀಳುವಿರಿ".-ಎಂದು ಉಪದೇಶವನ್ನು ಮಾಡಲಾರಂಭಿಸಿದರು.

ವೇದಗಳಲ್ಲಿ ಮತ್ತು ಋಷಿ-ಮುನಿಗಳ ಶಾಸ್ತ್ರದಲ್ಲಿ ಯಾವ ಯಾವ ಪೂರ್ಣ ವಿದ್ವಾಂಸರಾದ ಧಾರ್ಮಿಕರ ಹೆಸರು ಬ್ರಾಹ್ಮಣರು, ಪೂಜನೀಯರು-ಎಂದು ಬರೆದಿದ್ದಿತೋ, ಅದನ್ನು ಮೂರ್ಖರೂ, ವಿಷಯಾಸಕ್ತರೂ, ಕಪಟಿಗಳೂ, ಲಂಪಟರೂ ಆದ ತಮಗೆಯೇ ಅನ್ವಯಿಸಿಕೊಂಡರು. ಎನ್ನುವುದಾದರೂ ಏನು? ಆಪ್ತ ವಿದ್ವಾಂಸರಾದ ಬ್ರಾಹ್ಮಣಶ್ರೇಷ್ಠರ ಆ ಲಕ್ಷಣಗಳು ಈ ಮೂರ್ಖರಲ್ಲಿ ಎಂದು ತಾನೇ ಅನ್ವಯವಾಗಬಲ್ಲವು? ಆದರೆ, ಯಾವಾಗ ಕ್ಷತ್ರಿಯರೇ ಮೊದಲಾದ ಯಜಮಾನರುಗಳು ಸಂಸ್ಕೃತ ವಿದ್ಯೆಯಿಂದ ಪೂರ್ಣತಃ ರಹಿತರಾದರೋ, ಆಗ, ಅವರ ಮುಂದೆ ಯಾವ ಯಾವ ಬರಡು ಕತೆಗಳನ್ನು

---

೧೨. ಜಯಪುರಾಧೀಶನಾದ ಸವಾಯಿ ಮಾನಸಿಂಹನು, ವಾರಾಣಾಸಿ, ಉಜ್ಜಯಿನಿ, ಮತ್ತು ಜಯಪುರಗಳಲ್ಲಿ ಜ್ಯೋತಿಷಾಸ್ತ್ರೋಪಯೋಗಿ 'ಮಾನ ಮಂದಿರ'ಗಳನ್ನು ನಿರ್ಮಿಸಿದ್ದನು. ದೆಹಲಿಯ 'ಮಾನ ಮಂದಿರವು' ಜಂತರ್- ಮಂತರ್ ಎಂದು ಪ್ರಸಿದ್ಧವಾಗಿದ್ದು ಈಗ ಭಗ್ನಾವಸ್ಥೆಯಲ್ಲಿದೆ. - ಯು.ಮೀ.

ಆದರೆ, ಕರ್ಕ-ಸಂಕ್ರಾಂತಿ ವೃತ್ತದ ಮೇಲೆ ಸ್ಥಿತವಾಗಿರುವ ಉಜ್ಜಯನಿಯ ವೇಧಶಾಲೆಯು [ಠಭಜಡಿತಚಿಣಠಡಿಥಿ] ಈಗಲೂ ಪ್ರಾಮಾಣಿಕ ವೀಕ್ಷಣೆಗಳನ್ನು ಕೊಡುತ್ತಿವೆ.

೧೩. ಕೇವಲ ಕುರುಡು ಪಾಠ ಮಾತ್ರ ಕಲಿಯುವುದರಿಂದ-ಕಲಿಸುವುದರಿಂದ, ಜೀವನ ನಿರ್ವಾಹ ಆಗದೆಂದು ಎಲ್ಲರೂ ಬಲ್ಲರು. ಆದುದರಿಂದ, ಮೂರ್ತಿಪೂಜೆ, ಮೃತಕ ಶ್ರಾದ್ಧ, ಮಾಡಿಸುವುದು, ಫಲಿತ ಜ್ಯೋತಿಷ ಹೇಳುವುದು ಮೊದಲಾದ ಅವೈದಿಕ ಹಾಗೂ, ಅಬ್ರಾಹ್ಮಣೋಚಿತ ಕರ್ಮಗಳನ್ನು ಬ್ರಾಹ್ಮಣರು ಮಾಡತೊಡಗಿದರು.

ಚಿತ್ತರಿಸಿದರೋ, ಅವುಗಳನ್ನೆಲ್ಲಾ ಆ ಬಡಪಾಯಿಗಲು ಸರಿಯೆಂದು ಒಪ್ಪಿಕೊಂಡರು.[೧೪] ಆಗ ಈ ಹೆಸರಿಗೆ ಮಾತ್ರ ಬ್ರಾಹ್ಮಣರಾದವರ ಯುಕ್ತಿ ಸಫಲವಾಯಿತು. ಎಲ್ಲರನ್ನೂ ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಂಡು ವಶೀಭೂತರನ್ನಾಗಿ ಮಾಡಿಕೊಂಡರು ಮತ್ತು **"ಬ್ರಹ್ಮವಾಕ್ಯಂ ಜನಾರ್ದನಃ"**– ಎಂದು ಹೇಳಲಾರಂಭಿಸಿದರು. (ಬ್ರಾಹ್ಮಣವಾಕ್ಯ ಭಗವದ್ವಾಕ್ಯ–ಎಂಬ ಪಾಮರೋಕ್ತಿ)

ಎಂದರೆ, ಬ್ರಾಹ್ಮಣರ ಬಾಯಿನಿಂದ ಯಾವುದೊಂದು ಮಾತು ಹೊರಡುತ್ತದೋ ಅದು ಸಾಕ್ಷಾತ್ ಭಗವಂತನ ಮುಖದಿಂದ ಹೊರಟುದೇ ಸರಿ–ಎಂದು ತಿಳಿಯಿರಿ. ಯಾವಾಗ ಕ್ಷತ್ರಿಯರೇ ಮೊದಲಾದ ವರ್ಣದವರು ಕಣ್ಣಿದ್ದೂ ಕಾಣದವರೂ, ದುಡ್ಡಿನಿಂದ ಬಲಿಷ್ಠರೂ ಆದರೋ, ಎಂದರೆ, ಯಾರ ವಿದ್ಯೆಯ ಆಂತರಿಕ ನೇತ್ರ ಮುಚ್ಚಿ ಹೋಯಿತೋ ಮತ್ತು ಯಾರ ಬಳಿ ಹಣ ಮಾತ್ರ ಪುಷ್ಕಳವಾಗಿದ್ದಿತೋ, ಅಂತಹವರು ಶಿಷ್ಯರಾಗಿ ಸಿಕ್ಕಿದರು. ಮತ್ತೆ ಈ ನಿರರ್ಥಕರಾದ ಬ್ರಾಹ್ಮಣ ನಾಮಧಾರಿಗಳಿಗೆ ವಿಷಯಾನಂದದ ಉದ್ಯಾನ ಲಭಿಸಿತು. ಆ ಜನರು, "ಪೃಥಿವಿಯಲ್ಲಿ ಯಾವ ಯಾವ ಉತ್ತಮ ಪದಾರ್ಥಗಳಿವೆಯೋ, ಅವೆಲ್ಲವೂ ಬ್ರಾಹ್ಮಣರಿಗಾಗಿಯೇ ಇವೆ". – ಎಂದೂ ಕೂಡ ಪ್ರಸಿದ್ಧಪಡಿಸಿದರು. ಎಂದರೆ, ಗುಣ–ಕರ್ಮ ಸ್ವಭಾವಗಳಿಂದ ಬ್ರಾಹ್ಮಣ ಮೊದಲಾದ ವರ್ಣಗಳ ಯಾವ ವ್ಯವಸ್ಥೆಯಿದ್ದಿತೋ, ಅದನ್ನು ನಾಶಪಡಿಸಿ, ಹುಟ್ಟಿನ ಮೂಲದ ಅವಲಂಬನವನ್ನು ಸ್ಥಾಪಿಸಿದರು. ಮತ್ತು ಮೃತನಾದವನವರೆಗಿನ ದಾನವನ್ನೂ ಕೂಡ ಯಜಮಾನರುಗಳಿಂದ ತೆಗೆದುಕೊಳ್ಳಲಾರಂಭಿಸಿದರು. ಹೇಗೆ ತಮಗೆ ಇಚ್ಛೆಯಾಯಿತೋ, ಹಾಗೆ ಮಾಡುತ್ತಾ ಹೋದರು. "ನಾವು ಭೂದೇವರು. ನಮ್ಮ ಸೇವೆಯನ್ನು ಮಾಡದೆ, ದೇವಲೋಕವು ಯಾವನಿಗೂ ಸಿಕ್ಕಲಾರದು".– ಎನ್ನುವವರೆಗೂ ಮುನ್ನಡೆದರು. ಇವರನ್ನು – ತಾವು ಯಾವ ಲೋಕಕ್ಕೆ ದಯಮಾಡಿಸುವಿರಿ?–ತಮ್ಮ ಕರ್ಮಗಳಂತೂ ಘೋರನರಕದ ಭೋಗಕ್ಕೆ ತಕ್ಕವಾಗಿವೆ. ಕ್ರಿಮಿ, ಕೀಟ, ಪತಂಗ ಮೊದಲಾದುವಾಗಿ ಜನಿಸುವಿರೇನೋ?– ಎಂದು ಕೇಳಬೇಕು. ಆಗಲಾದರೋ ಮಹಾ ಕ್ರುದ್ಧರಾಗಿ – "ನಾವು ಶಾಪ ಹಾಕಿದರೆ, ನಿಮ್ಮ ನಾಶವಾಗಿ ಹೋಗುವುದು. ಏಕೆಂದರೆ – **ಬ್ರಹ್ಮದ್ರೋಹೀ ವಿನಶ್ಯತಿ** – ಎಂದರೆ, ಯಾವನು ಬ್ರಾಹ್ಮಣರಿಗೆ ದ್ರೋಹ ಮಾಡುತ್ತಾನೋ, ಅವನು ನಾಶವಾಗಿ ಹೋಗುತ್ತಾನೆ–ಎಂದು ಬರೆದಿದೆ".– ಎಂದು ಹೇಳುತ್ತಾರೆ. ಹೌದು; ಯಾವನು ಪೂರ್ಣ ವೇದಗಳನ್ನೂ ಮತ್ತು ಪರಮಾತ್ಮನ್ನೂ ತಿಳಿದಿರುವ, ಧರ್ಮಾತ್ಮರೂ, ಸರ್ವಜಗತ್ತಿಗೂ ಉಪಕಾರಿಗಳೂ ಆದ ಪುರುಷರೊಂದಿಗೆ ದ್ವೇಷವನ್ನು ಸಾಧಿಸುವನೋ, ಅವನು ಅವಶ್ಯವಾಗಿಯೂ ನಾಶಹೊಂದುವನು. ಆದರೆ ಯಾರು ಬ್ರಾಹ್ಮಣರಲ್ಲವೋ, ಅವರಿಗೆ ಬ್ರಾಹ್ಮಣರೆಂಬ ಹೆಸರೂ ಸಲ್ಲದು; ಅವರ ಸೇವೆಯನ್ನು ಮಾಡುವುದೂ ಯೋಗ್ಯವಲ್ಲ.

**ಪ್ರಶ್ನೆ**:– ಹಾಗಾದರೆ, ನಾವು ಯಾರು?

**ಉತ್ತರ**:– ನೀವು ಪೋಪರಾಗಿದ್ದೀರಿ.

**ಪ್ರಶ್ನೆ** :– ಯಾವನನ್ನು ಪೋಪನೆಂದು ಕರೆಯುತ್ತಾರೆ?

**ಉತ್ತರ** :– ಇದರ ಸೂಚನೆ, (ರೂಮನ್) ಲ್ಯಾಟಿನ್ ಭಾಷೆಯಲ್ಲಿ ಏನೋ ಹಿರಿಯನನ್ನು ಹಾಗೂ ತಂದೆಯನ್ನು 'ಪೋಪ್'– ಎನ್ನುತ್ತಾರೆ. ಆದರೆ ಈಗ ಛಲ ಕಪಟಗಳಿಂದ ಅನ್ಯರನ್ನು ವಂಚಿಸಿ, ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವವನನ್ನು 'ಪೋಪ್' ಎನ್ನುತ್ತಾರೆ.

**ಪ್ರಶ್ನೆ** :– ನಾವೇನೋ ಬ್ರಾಹ್ಮಣರು ಸಾಧುಗಳಾಗಿದ್ದೇವೆ. ಏಕೆಂದರೆ, ನಮ್ಮ ತಂದೆ ಬ್ರಾಹ್ಮಣನಾಗಿದ್ದನು; ನಮ್ಮ ತಾಯಿ ಬ್ರಾಹ್ಮಣಿತಿಯಾಗಿದ್ದಳು. ಮತ್ತು ನಾವು ಇಂತಹ ಸಾಧುವಿನ ಶಿಷ್ಯರಾಗಿದ್ದೇವೆ.

---

೧೪. ಸಂಸ್ಕೃತ ಭಾಷೆಯನ್ನು ಸ್ವತಃ ಕಲಿಯದೇ, ಇತರರ ಉಪದೇಶಗಳನ್ನು ಆಲಿಸುತ್ತಾ, ಅಥವಾ ಅನುವಾದಗಳ ಮೇಲೆ ನಿರ್ಭರರಾದ ಭಾರತೀಯರು ಎಷ್ಟು ಭ್ರಾಂತಿಗೆ ಈಡಾಗಿದ್ದರೆಂಬುದಕ್ಕೆ ಒಂದು ವಾಲ್ಮೀಕಿಯ ರಾಮಾಯಣದ ಬದಲು ಐವತ್ತಾರು ರಾಮಾಯಣಗಳು ಹುಟ್ಟಿಕೊಂಡಿರುವುದೇ ನಿದರ್ಶನ. ಈ ಐವತ್ತಾರು ರಾಮಾಯಣಗಳು ವಾಲ್ಮೀಕಿಯ ರಾಮಾಯಣಕ್ಕೂ ಮತ್ತು ಪರಸ್ಪರ ವಿರುದ್ಧವಾದ ಘಟನೆಗಳಿಂದ ಕೂಡಿದೆ.

ಅನುವಾದದಿಂದ ಉತ್ಪನ್ನವಾಗುವಂತಹ ಭ್ರಾಂತಿಗಾಗಿ ಛಾಂದೋಗ್ಯಪನಿಷತ್ತಿನ ಜಾನಶ್ರುತಿ ಎಂಬ ರಾಜನ ಕಥಾನಕವನ್ನು ಒಂದು ದೃಷ್ಟಾಂತವನ್ನಾಗಿ ಕೊಡಬಹುದು.

"ತಸ್ಯಾ ಹ ಮುಖಮುಪೋದ್ಗೃಹ್ಣನ್ನುವಾಚ" [ಛಾಂ. ಉ.೪.೨.೫] ಎಂಬುದರ ಅರ್ಥ– 'ಅವಳ ಮುಖವನ್ನು ಎತ್ತಿ ಹೇಳತೊಡಗಿದನು.' ಎಂದಾಗುವುದು. ಕೆಲವು ಅನುವಾದಕರು– "ಆ ಸ್ತ್ರೀಯ ಮುಖವನ್ನು ಪ್ರೇಮದಿಂದ ಚುಂಬಿಸುತ್ತಾ ಹೇಳತೊಡಗಿದನು' ಎಂದು ಭಾಷಾಂತರ ಮಾಡಿದ್ದಾರೆ. [ಏಕಾದಶೋಪನಿಷತ್–ಸಂಗ್ರಹ– ಸ್ವಾಮಿ ಸತ್ಯಾನಂದ] ಆದ್ದರಿಂದಲೇ, ಮಹರ್ಷಿ ದಯಾನಂದರು ತಮ್ಮ ವೇದಭಾಷ್ಯದ ಇಂಗ್ಲೀಷ್ ಅನುವಾದಕ್ಕೆ ಅನುಮತಿಕೊಡಲಿಲ್ಲ.

**ಉತ್ತರ :–** ಇದು ಸತ್ಯ. ಆದರೆ, ಕೇಳು ಸೋದರನೇ! ತಾಯಿ ತಂದೆಗಳ ಬ್ರಾಹ್ಮಣಿತಿ–ಬ್ರಾಹ್ಮಣರಾಗಿರುವುದರಿಂದ, ಮತ್ತು ಯಾವನಾದರೂ ಸಾಧುವಿನ ಶಿಷ್ಯನಾಗಿರುವುದರಿಂದ, ನೀನು ಬ್ರಾಹ್ಮಣ ಹಾಗೂ ಸಾಧುವಾಗಲಾರೆ. ಆದರೆ, ಯಾರು ಪರೋಪಕಾರಿಗಳಾಗಿರುತ್ತಾರೋ, ಅವರು, ತಮ್ಮ ಉತ್ತಮವಾದ ಗುಣ–ಕರ್ಮ–ಸ್ವಾಭಾವದಿಂದಲೇ ಬ್ರಾಹ್ಮಣರು ಮತ್ತು ಸಾಧುಗಳು ಆಗಿರುತ್ತಾರೆ.

ರೋಮ್ ನಗರದ ಪೋಪ್ ಮಹಾಶಯರು ತಮ್ಮ ಶಿಷ್ಯರಿಗೆ – "ನೀವು ನಿಮ್ಮ ಪಾಪಗಳನ್ನು ನಮ್ಮ ಮುಂದೆ ಹೇಳಿಕೊಳ್ಳುವಿರಾದರೆ, ನಾವು ಕ್ಷಮಿಸಿಬಿಡುತ್ತೇವೆ. ನಮ್ಮ ಸೇವೆಯನ್ನು ಮಾಡದೆ, ಮತ್ತು ನಮ್ಮ ಅಪ್ಪಣೆಯಿಲ್ಲದೆ ಯಾವನೂ ಸ್ವರ್ಗಕ್ಕೆ ಹೋಗಲಾರನು. ನೀವು ಸ್ವರ್ಗಕ್ಕೆ ಹೋಗಲು ಬಯಸುವಿರಾದರೆ, ನಮ್ಮ ಬಳಿ ಎಷ್ಟು ರೂಪಾಯಿಗಳನ್ನು ಶೇಖರಿಸಿಡುವಿರೋ, ಅಷ್ಟರದೇ ಸಾಮಗ್ರಿ ನಿಮಗೆ ಸ್ವರ್ಗದಲ್ಲಿ ಸಿಕ್ಕುವುದು"–ಎಂದು ಹೇಳುತ್ತಿದ್ದರು. ಇಂತಹ ಮಾತುಗಳನ್ನು ಕೇಳಿ, ಯಾರು ಯಾರೋ, ಕಣ್ಣಿದ್ದರೂ ಕುರುಡರೂ, ಹಣದ ಗಂಟಿನ ಧನಿಗಳೂ ಆದ ಜನರು ಸ್ವರ್ಗಕ್ಕೆ ಹೋಗಲು ಬಯಸಿ, ಪೋಪರಿಗೆ ಬೇಕಾದಷ್ಟು ರೂಪಾಯಿಗಲನ್ನು ಕೊಡುತ್ತಿದ್ದರು. ಆಗ ಆ ಪೋಪ್ ಮಹಾಶಯರು ಏಸು ಮತ್ತು ಮೇರಿಯ ಪ್ರತಿಮೆಗಳ ಮಂದೆ ನಿಂತು, "ಓ ಭಗವತ್ಸೇವಕ ಏಸುಪ್ರವಾದಿ! ಈ ಹೆಸರಿನ ಪುರುಷನು ನಿನ್ನ ಹೆಸರಿನ ಮೇಲೆ ಲಕ್ಷ ರೂಪಾಯಿಗಳನ್ನು ಸ್ವರ್ಗದಲ್ಲಿ ಪ್ರವೇಶಿಸುವುದಕ್ಕಾಗಿ ನಮ್ಮ ಬಳಿ ಮುಡಿಪಾಗಿಟ್ಟಿದ್ದಾನೆ. ಯಾವಾಗ ಅವನು ಸ್ವರ್ಗಕ್ಕೆ ಬರುವನೋ, ಆಗ ನೀನು ನಿನ್ನ ತಂದೆಯ ಸ್ವರ್ಗರಾಜ್ಯದಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳಲ್ಲಿ ತೋಟ–ತುಡಿಕೆ ಹಾಗೂ ಕಟ್ಟಡಗಳನ್ನು ಇಪ್ಪತ್ತೈದು ಸಾವಿರಕ್ಕೆ ವಾಹನಗಳು – ಬೇಟೆಗಾರರು ಮತ್ತು ನೌಕರ–ಚಾರಕರನ್ನೂ ಇಪ್ಪತ್ತೈದು ಸಾವಿರದಲ್ಲಿ ಭೋಜನ–ಪಾನ–ಬಟ್ಟೆ–ಬರೆಗಳನ್ನೂ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಇವನ ಇಷ್ಟಮಿತ್ರರು, ಸೋದರ–ನಂಟರು ಮೊದಲಾದವರ ಮನೋರಂಜನೆಗಾಗಿ ಕೊಡಿಸಿಬಿಡು".– ಎಂದು ಕರಾರು ಪತ್ರ ಬರೆದು ಕೊಡುತ್ತಿದ್ದರು. ಮತ್ತೆ ಆ ಕರಾರು ಪತ್ರಕ್ಕೆ ಪೋಪ್ ಮಹಾಶಯರು ತಮ್ಮ ರುಜು ಹಾಕಿ, ಆ ಕರಾರು ಪತ್ರವನ್ನು ಆ ಪುರುಷನ ಕೈಗೆ ಕೊಟ್ಟು, "ನೀನು ಯಾವಾಗ ಮೃತನಾಗುವೆಯೋ, ಆಗ ಕರಾರು ಪತ್ರವನ್ನು ಗೋರಿಯಲ್ಲಿ ನಿನ್ನ ತಲೆದಿಂಬಿನ ಕಡೆಗಿಟ್ಟು ಬಿಡುವಂತೆ ನಿನ್ನ ಕುಟುಂಬಕ್ಕೆ ಹೇಳಿಬಿಟ್ಟಿರು. ಮತ್ತೆ ನಿನ್ನನ್ನು ಕರೆದೊಯ್ಯಲು ದೇವತೆಗಳು ಬರುವರು. ಆಗ ನಿನ್ನನ್ನೂ ಮತ್ತು ನಿನ್ನ ಕರಾರು ಪತ್ರವನ್ನೂ ಸ್ವರ್ಗಕ್ಕೆ ತೆಗೆದುಕೊಂಡು ಹೋಗಿ, ಅದರಲ್ಲಿ ನಮೂದಿಸಿರುವಂತೆ ಎಲ್ಲ ಪದಾರ್ಥಗಳನ್ನೂ ನಿನಗೆ ಕೊಡಿಸಿಬಿಡುವರು" – ಎಂದು ಹೇಳುತ್ತಿದ್ದರು – ಎಂದು ಕೇಳಿದ್ದೇವೆ.

ಈಗ ನೋಡಿರಿ! ಪೋಪ್ ಮಹಾಶಯರು ಸ್ವರ್ಗದ ಗುತ್ತಿಗೆಯನ್ನು ತೆಗೆದುಕೊಂಡಂತೆ ಕಾಣುತ್ತದೆ! ಎಂದಿನವರೆಗೆ ಯೂರೋಪ್ ಖಂಡದಲ್ಲಿ ಮೂರ್ಖತ್ವವಿತ್ತೋ, ಅವರೆಗೆ ಮಾತ್ರ ಪೋಪ್ ರವರ ಲೀಲೆ ನಡೆಯುತ್ತಿತ್ತು. ಆದರೆ ಈಗ ವಿದ್ಯೆ ಹರಡಿರುವುದರಿಂದ ಪೋಪರ ಸುಳ್ಳು ಲೀಲೆ ಹೆಚ್ಚಾಗಿ ನಡೆಯುವುದಿಲ್ಲ. ಆದರೆ, ನಿರ್ಮೂಲವೂ[೧೫] ಆಗಿಲ್ಲ.

ಹಾಗೆಯೇ ಆರ್ಯಾವರ್ತ ದೇಶದಲ್ಲಿ ಪೋಪ್ ಮಹಾಶಯರು ಲಕ್ಷಾಂತರ ಅವತಾರಗಳನ್ನೆತ್ತಿ, ಲೀಲೆಯನ್ನು ಚಿತ್ತರಿಸಿದಂತೆ ಕಾಣುತ್ತದೆ. ಎಂದರೆ, ರಾಜರಿಗೂ ಮತ್ತು ಪ್ರಜೆಗಳಿಗೂ ವಿದ್ಯೆ ಕಲಿಯಲು ಬಿಡದಿರುವುದು, ಸತ್ಪುರುಷರ ಸಂಗಕ್ಕೆ ಅವಕಾಶ ಕೊಡದಿರುವುದು, ಹಗಲಿರುಳೂ ದುಷ್ಪೇರಣೆ ಕೊಡುವುದೊಂದನ್ನು ಬಿಟ್ಟು ಮತ್ತೇನನ್ನೂ ಮಾಡದಿರುವುದು–ಇದೇ ಅವರ ಲೀಲೆ! ಆದರೆ, ಛಲ–ಕಪಟ ಮೊದಲಾದ ಕುತ್ಸಿತ ವ್ಯವಹಾರಗಳನ್ನು ಯಾರು ಯಾರು ಮಾಡುತ್ತಾರೋ, ಅವರೇ ಪೋಪರೆನ್ನಿಸಿಕೊಳ್ಳುತ್ತಾರೆ. ಅವರಲ್ಲಿಯೂ ಯಾರು ಧಾರ್ಮಿಕರೂ, ವಿದ್ವಾಂಸರೂ, ಪರೋಪಕಾರಿಗಳೂ ಆಗಿದ್ದಾರೋ, ಅವರು ನಿಜವಾದ ಬ್ರಾಹ್ಮಣರು ಮತ್ತು ಸಾಧುಗಳು ಆಗಿರುತ್ತಾರೆ – ಎಂಬ ಈ ವಿಷಯವನ್ನು ಗಮನದಲ್ಲಿಡಬೇಕು.

ಈಗ 'ಪೋಪ್' ಎಂಬ ಶಬ್ದದಿಂದ ಅದೇ ಛಲಯುಕ್ತರೂ, ಕಪಟಿಗಳೂ, ಸ್ವಾರ್ಥಿಗಳೂ ಆದ ಜನರನ್ನು, ಮಾನವರನ್ನು ವಂಚಿಸಿ ತಮ್ಮ ಸ್ವಾರ್ಥವನ್ನು ಸಾಧಿಸುವವರನ್ನು ಮಾತ್ರ ಗ್ರಹಿಸಬೇಕು. ಮತ್ತು 'ಬ್ರಾಹ್ಮಣರು' ಮತ್ತು 'ಸಾಧುಗಳು' ಎಂಬ ಹೆಸರುಗಳಿಂದ ಉತ್ತಮರಾದ ಪುರುಷರನ್ನು ಸ್ವೀಕರಿಸುವುದು ಯೋಗ್ಯವಾಗಿರುತ್ತದೆ. ನೋಡಿರಿ, ಯಾರೂ ಉತ್ತಮರಾದ ಬ್ರಾಹ್ಮಣರು ಹಾಗೂ ಸಾಧುಗಳು ಇಲ್ಲದೇ ಹೋಗಿದ್ದರೆ, ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಪುಸ್ತಕಗಳ ಸ್ವರಸಹಿತವಾದ ಪಠನ–ಪಾಠನಗಳ, ಮೂಲಕ ಜೈನ, ಮುಸಲ್ಮಾನ ಮತ್ತು ಕ್ರೈಸ್ತ ಮೊದಲಾದವರ ಜಾಲದಿಂದ ಸ್ವತಃ ಅವನ್ನು ರಕ್ಷಿಸಿಕೊಂಡು,

---

೧೫. ಈ ಮಾತು ೧೩೭ ವರ್ಷಗಳಿಗೆ ಮೊದಲು ಬರೆದುದು. ಆದರೆ, ಈಗಲೂ ನಿಜವಾಗಿಯೇ ಇದೆ.

ಆರ್ಯರನ್ನು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಲ್ಲಿ ಪ್ರೀತಿಯುಕ್ತರನ್ನಾಗಿ ಮಾಡಿ, ವರ್ಣಾಶ್ರಮಗಳಲ್ಲಿ ಸ್ಥಿತಿರನ್ನಾಗಿಡುವುದು, ಮತ್ತಾವನಿಗೆ ಶಕ್ಯವಿತ್ತು?

**"ವಿಷಾದಪ್ಯಮೃತಂ ಗ್ರಾಹ್ಯಮ್"**. (ಮನು :- ೨. ೨೩೯)

ಇದು ವಿಷದಿಂದಲೂ ಕೂಡ ಅಮೃತವನ್ನು ಗ್ರಹಿಸುವ ಹಾಗೆ ಆಯಿತು; ಪೋಪ್ ಲೀಲೆಯಿಂದ ದುಷ್ಪೇರಣೆ ಯಾಗುತ್ತಿದ್ದರೂ, ಜೈನ-ಮೊದಲಾದ ಮತಗಳಿಂದ ಆರ್ಯರು ದೂರ ಉಳಿದುಕೊಂಡುದು ವಿಷದಲ್ಲಿಯೂ ಅಮೃತದಂತಹ ಗುಣವೆಂದೇ ತಿಳಿಯಬೇಕು.

ಯಾವಾಗ ಯಜಮಾನರು ವಿದ್ಯಾಹೀನರಾದರೋ, ಮತ್ತು ತಾವು ಸ್ವಲ್ಪ ಪೂಜಾಪಾಠಗಳನ್ನು ಕಲಿತು ಅಭಿಮಾನದಲ್ಲಿ ಬಿದ್ದರೋ, ಆಗ ಎಲ್ಲ ಜನರೂ ಪರಸ್ಪರ ಸಮಾಲೋಚನೆ ನಡೆಯಿಸಿ, ರಾಜರೇ ಮೊದಲಾದವರಿಗೆ-"ಬ್ರಾಹ್ಮಣರು ಮತ್ತು ಸಾಧುಗಳು ದಂಡಾರ್ಹರಲ್ಲ. ನೋಡಿರಿ"-ಎಂದು ಹೇಳಿದರು; **'ಬ್ರಾಹ್ಮಣೋ ನ ಹಂತವ್ಯಃ'** ; **'ಸಾಧುರ್ನ ಹಂತವ್ಯಃ'**.- ಮೊದಲಾದ ಯಾವ ವಚನಗಳು ನಿಜವಾದ ಬ್ರಾಹ್ಮಣರ ಮತ್ತು ಸಾಧುಗಳ ವಿಷಯದಲ್ಲಿದ್ದುವೋ, ಅವುಗಳನ್ನು ಪೋಪರು ತಮಗೆ ಅನ್ವಯಿಸಿಕೊಂಡರು. ಮತ್ತೂ ಸುಳ್ಳು-ಸುಳ್ಳಾದ ವಚನಗಳಿಂದ ಯುಕ್ತವಾದ ಗ್ರಂಥಗಳನ್ನು ರಚಿಸಿ, ಅವುಗಳಲ್ಲಿ ಋಷಿ-ಮುನಿಗಳ ಹೆಸರುಗಳನ್ನು ಉಲ್ಲೇಖಿಸಿ, ಅವರ ಹೆಸರುಗಳಿಂದಲೇ ಶ್ರವಣಮಾಡಿಸುತ್ತಾ ನಡೆದರು. ಆ ಪ್ರತಿಷ್ಠಿತರಾದ ಋಷಿ-ಮಹರ್ಷಿಗಳ ಹೆಸರಿನಿಂದ, ತಮ್ಮ ಮೇಲಿನ ದಂಡದ ವ್ಯವಸ್ಥೆಯನ್ನೇ ತೆಗೆಸಿಹಾಕಿದರು. ಮತ್ತು ಇಷ್ಟಬಂದಂತೆ ವರ್ತಿಸತೊಡಗಿದರು. ಎಂದರೆ, ಎಂತಹ ಕಠೋರ ನಿಯಮಗಳನ್ನು ಬಳಕೆಗೆ ತಂದರು-ಎಂದರೆ, ಆ ಪೋಪರ ಅನುಮತಿಯಿಲ್ಲದೆ, ನಿದ್ರಿಸುವುದು, ಏಳುವುದು, ಕುಳಿತುಕೊಳ್ಳುವುದು, ಹೋಗುವುದು, ಬರುವುದು, ತಿನ್ನುವುದು, ಕುಡಿಯುವುದು-ಮೊದಲಾದುದೂ ಕೂಡ ಮಾಡಲಾಗುತ್ತಿರಲಿಲ್ಲ! ರಾಜರುಗಳಿಗೆ "ಪೋಪ್ ಎಂಬ ಸಂಜ್ಞೆಯುಳ್ಳ ನಾಮಮಾತ್ರದ ಬ್ರಾಹ್ಮಣರು, ಸಾಧುಗಳು ತಮಗೆ ಬೇಕಾದುದನ್ನು ಮಾಡಲಿ; ಅವರಿಗೆ ಎಂದೂ ಶಿಕ್ಷೆ ವಿಧಿಸಲಾಗದು. ಅಂದರೆ, ಮನಸ್ಸಿನಲ್ಲಿಯೂ ಅವರಿಗೆ ಶಿಕ್ಷೆಕೊಡಲು ಇಚ್ಛಿಸಬಾರದು".-ಎಂದು ನಿಶ್ಚಯಮಾಡಿಸಿದರು. ಯಾವಾಗ ಇಂತಹ ಮೂರ್ಖತ್ವ ಉಂಟಾಯಿತೋ, ಆಗ ಪೋಪರಿಗೆ ಹೇಗೆ ಇಚ್ಛೆಯಾಯಿತೋ, ಹಾಗೆ ಮಾಡತೊಡಗಿದರು. ಎಂದರೆ, ಈ ಕೇಡಿನ ಮೂಲಗಳು ಮಹಾಭಾರತದ ಯುದ್ಧಕ್ಕಿಂತ ಒಂದು ಸಾವಿರ ವರ್ಷ ಪೂರ್ವದಲ್ಲಿ ಪ್ರವೃತ್ತವಾಗಿದ್ದುವು. ಏಕೆಂದರೆ, ಆ ಸಮಯದಲ್ಲಿ ಋಷಿ-ಮುನಿಗಳೂ ಕೂಡ ಇದ್ದರು; ಆದರೂ ಸ್ವಲ್ಪ ಸ್ವಲ್ಪ ಆಲಸ್ಯ, ಪ್ರಮಾದ, ಈರ್ಷ್ಯೆ- ದ್ವೇಷಗಳ ಮೊಳಕೆಗಳು ಎದ್ದಿದ್ದುವು. ಅವು ವರ್ಧಿಸುತ್ತಾ ವರ್ಧಿಸುತ್ತಾ ಪ್ರವೃದ್ಧವಾಗಿ ಹೋದವು. ಯಾವಾಗ ಸತ್ಯೋಪದೇಶ ಉಳಿಯಲಿಲ್ಲರೋ, ಆಗ ಆರ್ಯಾವರ್ತದಲ್ಲಿ ಅವಿದ್ಯೆ ಹರಡಿಕೊಂಡು, ಜನರು ಪರಸ್ಪರ ಹೋರಾಡಲು-ಜಗಳವಾಡಲು ಆರಂಭಿಸಿದರು, ಏಕೆಂದರೆ :-

**ಉಪದೇಶ್ಯೋಪದೇಷ್ಟ್ರತ್ವಾತ್ತತ್ಸಿದ್ಧಿಃ । ಇತರಥಾಂಽಧಪರಂಪರಾ ॥** (ಸಾಂಖ್ಯ :- ೩.೭೯.೮೧)

ಎಂದರೆ, ಯಾವಾಗ ಉತ್ತಮ-ಉತ್ತಮರಾದ ಉಪದೇಶಕರು ಇರುತ್ತಾರೋ, ಆಗ ಒಳ್ಳೆಯ ರೀತಿಯಲ್ಲಿ ಧರ್ಮ-ಅರ್ಥ-ಕಾಮ-ಮೋಕ್ಷಗಳು ಸಿದ್ಧಿಸುತ್ತವೆ. ಮತ್ತು ಯಾವಾಗ ಉತ್ತಮರಾದ ಉಪದೇಶಕರೂ ಮತ್ತು ಶ್ರೋತೃಗಳೂ ಇರುವುದಿಲ್ಲವೋ, ಆಗ ಅಂಧ ಪರಂಪರೆ ನಡೆಯುತ್ತದೆ. ಆದರೂ, ಯಾವಾಗ ಸತ್ಪುರುಷರು ಜನಿಸಿ, ಸತ್ಯೋಪದೇಶ ಮಾಡುತ್ತಾರೋ, ಆಗಲೇ ಅಂಧಪರಂಪರೆ ನಾಶವಾಗಿ, ಪ್ರಕಾಶದ ಪರಂಪರೆ ಪ್ರಚಲಿತವಾಗುತ್ತದೆ.

ಪುನಃ ಆ ಪೋಪರುಗಳು ತಮ್ಮ ಮತ್ತು ತಮ್ಮ ಚರಣಗಳ ಪೂಜೆಯನ್ನು ಮಾಡಿಸಿಕೊಳ್ಳತೊಡಗಿದರು ಮತ್ತು 'ಇದರಲ್ಲಿಯೇ ನಿಮ್ಮ ಉದ್ಧಾರವಿದೆ'. - ಎಂದು ಹೇಳತೊಡಗಿದರು. ಯಾವಾಗ ಈ ಜನರು ಇವರ ವಶಕ್ಕೆ ಸಿಕ್ಕಿದರೋ, ಆಗ ಪ್ರಮಾದದಲ್ಲಿ ಮತ್ತು ವಿಷಯಾಸಕ್ತಿಯಲ್ಲಿ ನಿಮಗ್ನರಾಗಿ ಕುರುಬರ ಹಾಗೆ, ಮಿಥ್ಯಾಗುರುಗಳಾಗಿ ಕುಳಿತರು; ಮತ್ತು ಶಿಷ್ಯರುಗಳು ಇವರ ಬಲೆಗೆ ಬಿದ್ದರು. ವಿದ್ಯೆ, ಬುದ್ಧಿ, ಪರಾಕ್ರಮ ಶೂರವೀರತ್ವ ಮೊದಲಾದ ಶುಭಗುಣಗಳು ನಾಶವಾಗುತ್ತಾ ಹೋದುವು. ಆ ಮೇಲೆ, ವಿಷಯಾಸಕ್ತರಾದುದರಿಂದ ಮಾಂಸ-ಮದ್ಯಗಳ ಸೇವನೆಯನ್ನು ಗುಟ್ಟು ಗುಟ್ಟಾಗಿ ಮಾಡಲಾರಂಭಿಸಿದರು.

ಆ ಮೇಲೆ ಅವರಲ್ಲಿಯೇ ಹಲವರು ವಾಮಮಾರ್ಗವನ್ನು ಪ್ರಚಲಿತವಾಗಿ ಮಾಡಿದರು. 'ಶಿವ ಉವಾಚ', 'ಪಾರ್ವತೀ ಉವಾಚ', 'ಭೈರವ ಉವಾಚ' - ಎಂದು ಮೊದಲಾಗಿ ಹೆಸರುಗಳನ್ನು ಬರೆದು, ಆ ಕೃತಿಗಳಿಗೆ 'ತಂತ್ರ'ವೆಂದು ಹೆಸರಿಟ್ಟರು. ಅವುಗಳಲ್ಲಿ ಈ ಕೆಳಗೆ ಬರೆದಿರುವಂತಹ ವಿಚಿತ್ರ ರೀತಿಯ ಮಾತುಗಳನ್ನು ಬರಿದಿದ್ದಾರೆ:-

**ಮದ್ಯಂ ಮಾಂಸಂ ಚ ಮೀನಂ ಚ ಮುದ್ರಾ ಮೈಥುನಮೇವ ಚ ।**

**ಏತೇ ಪಂಚ ಮಕಾರಾಃ ಸ್ಯುರ್ಮೋಕ್ಷದಾ ಹಿ ಯುಗೇ ಯುಗೇ ॥ ೧ ॥** (ಕಾಲೀ ತಂತ್ರ)

**ಪ್ರವೃತ್ತೇ ಭೈರವೀ ಚಕ್ರೇ ಸರ್ವೇ ವರ್ಣಾ ದ್ವಿಜಾತಯಃ ।**

**ನಿವೃತ್ತೇ ಭೈರವೀ ಚಕ್ರೇ ಸರ್ವೇ ವರ್ಣಾಃ ಪೃಥಕ್ ಪೃಥಕ್ ॥ ೨ ॥** (ಕುಲಾರ್ಣವ ತಂತ್ರ :– ೮.೯೬)

**ಪೀತ್ವಾ ಪೀತ್ವಾ ಪುನಃ ಪೀತ್ವಾ ಯಾವತ್ಪತತಿ ಭೂತಲೇ ।**

**ಪುನರುತ್ಥಾಯ ವೈ ಪೀತ್ವಾ ಪುನರ್ಜನ್ಮ ನ ವಿದ್ಯತೇ ॥ ೩॥** (ಕುಲಾರ್ಣವ ತಂತ್ರ ೭.೧೦೦)

**ಮಾತೃಯೋನಿಂ ಪರಿತ್ಯಜ್ಯ ವಿಹರೇತ್ಸರ್ವಯೋನಿಷು ॥ ೪ ॥**

**ವೇದಶಾಸ್ತ್ರಪುರಾಣಾನಿ ಸಾಮಾನ್ಯಗಣಿಕಾ ಇವ ।**

**ಏಕೈವ ಶಾಂಭವೀ ಮುದ್ರಾ ಗುಪ್ತಾ ಕುಲವಧೂರಿವ ॥ ೫ ॥** (ಜ್ಞಾನಸಂಕಲನೀ ತಂತ್ರ)

ಎಂದರೆ, ನೋಡಿರಿ ಈ ವಿಕೃತಮತಿಗಳಾದ ಪೋಪರ ಲೀಲೆಯನ್ನು! ವೇದ ವಿರುದ್ಧವಾದ ಯಾವ ಮಹಾನ್ ಅಧರ್ಮದ ಕರ್ಮಗಳಿವೆಯೋ, ಅವುಗಳನ್ನೇ ಶ್ರೇಷ್ಠವೆಂದು ವಾಮಮಾರ್ಗಿಗಳು ಅಂಗೀಕರಿಸಿದ್ದಾರೆ. ಮದ್ಯ, ಮಾಂಸ, ಮೀನು, ಮುದ್ರೆ, ಪೂರಿ, ಉಪ್ಪಿನ ಕಜ್ಜಾಯ, ವಡೆ ಮತ್ತು ರೊಟ್ಟಿ–ಮೊದಲಾದ ಹಲ್ಲಿನಿಂದ ಅಗಿದು ತಿನ್ನುವ ಖಾದ್ಯಗಳು ಯೋನಿಯಾಕಾರದ ಪಾತ್ರೆ, ಮುದ್ರೆ (ಸಂಭೋಗಕ್ಕಾಗಿ ಬಳಸುವ ನಿಲುವುಗಳು) ಮತ್ತು ಐದನೆಯ ಮೈಥುನ–ಅಂದರೆ, ಪುರುಷರೆಲ್ಲರೂ ಶಿವಸಮಾನರು ಮತ್ತು ಸ್ತ್ರೀಯರೆಲ್ಲರೂ ಪಾರ್ವತೀ ಸಮಾನರು – ಎಂದು ಅಂಗೀಕರಿಸಿ –

**ಅಹಂ ಭೈರವಸ್ತ್ವಂ ಭೈರವೀ ಹ್ಯಾವಯೋರಸ್ತು ಸಂಗಮಃ ।**

ಯಾವನೇ ಪುರುಷನಾಗಿರಲಿ, ಯಾವಳೇ ಸ್ತ್ರೀಯಾಗಿರಲಿ; ಈ ಸೊಟ್ಟಪಟ್ಟಾದ ವಚನವನ್ನು ಉಚ್ಚರಿಸಿ, ಸಂಭೋಗ ಮಾಡುವುದರಲ್ಲಿ ವಾಮಮಾರ್ಗಿಗಳು ದೋಷವನ್ನೆಣಿಸರು, ಎಂದರೆ, ಯಾವ ನೀಚ ನಾರಿಯರನ್ನು ಮುಟ್ಟಬಾರದೋ, ಅವರನ್ನು ಅತಿ ಪವಿತ್ರರೆಂದು ಅವರು ತಿಳಿದಿದ್ದಾರೆ. ಉದಾಹರಣೆಗೆ, ಶಾಸ್ತ್ರಗಳಲ್ಲಿ ರಜಸ್ವಲೆಯರು ಮೊದಲಾದ ಸ್ತ್ರೀಯರ ಸ್ಪರ್ಶದ ನಿಷೇಧವಿದೆ; ಅವರನ್ನು ವಾಮಮಾರ್ಗಿಗಳು ಅತಿ ಪವಿತ್ರರೆಂದೆಣಿಸಿದ್ದಾರೆ. ಆಲಿಸಿರಿ ಇವರ ಮುಖ–ಮೂತಿಗಳಿಲ್ಲದ ಶ್ಲೋಕವನ್ನು:–

**ರಜಸ್ವಲಾ ಪುಷ್ಕರಂ ತೀರ್ಥಂ ಚಾಂಡಾಲೀ ತು ಸ್ವಯಂ ಕಾಶೀ ಚರ್ಮಕಾರೀ ಪ್ರಯಾಗಃ**

**ಸ್ಯಾದ್ರಜಕೀ ಮಥುರಾ ಮತಾ । ಅಯೋಧ್ಯಾ ಪುಕ್ಕಸೀ ಪ್ರೋಕ್ತಾ ॥**[೧೬]

ಈ ಮೊದಲಾದುವಿವೆ. "ರಜಸ್ವಲೆಯೊಂದಿಗೆ ಸಮಾಗಮ ಮಾಡಿದರೆ, ಪುಷ್ಕರಸ್ನಾನ ಮಾಡಿದಂತೆ; ಚಾಂಡಾಲಿಯೊಂದಿಗೆ ಸಮಾಗಮ ಮಾಡಿದಲ್ಲಿ ಕಾಶೀಯಾತ್ರೆ ಮಾಡಿದಂತೆ; ಚಮ್ಮಾರಗಿತ್ತಿಯೊಡನೆ ಸಮಾಗಮ ಮಾಡುವುದರಿಂದ ಪ್ರಯಾಗಸ್ನಾನ ಮಾಡಿದಂತೆ; ಅಗಸಗಿತ್ತಿಯೊಂದಿಗೆ ಸಮಾಗಮ ಮಾಡುವುದರಲ್ಲಿ ಮಥುರಾಯಾತ್ರೆ ಮತ್ತು ಪುಕ್ಕಸಿಯೊಂದಿಗೆ ಅದೇ ಲೀಲೆ ಮಾಡುವುದರಿಂದ ಅಯೋಧ್ಯಾಯಾತ್ರೆ ಮಾಡಿಬಂದಂತೆ ಗ್ರಹಿಸಿರಿ". ಮದ್ಯಕ್ಕೆ ತೀರ್ಥರೆಂದು ಹೆಸರಿಟ್ಟರು. ಮಾಂಸಕ್ಕೆ 'ಶುದ್ಧಿ'ಯೆಂದೂ, ಪುಷ್ಪವೆಂದೂ ಹೆಸರಿಟ್ಟರು. ಮೀನಿಗೆ 'ತೃತೀಯಾ, ಜಲತುಂಬಿಕಾ',ಎಂದೂ, ಮುದ್ರೆಗೆ[೧೭] 'ಚತುರ್ಥೀ' ಎಂದೂ ಮತ್ತು ಮೈಥುನಕ್ಕೆ 'ಪಂಚಮೀ' ಎಂದೂ ಹೆಸರಿಟ್ಟರು. ಬೇರೆಯವನಿಗೆ ತಿಳಿಯಲಾಗದಿರಲಿ ಎಂದು, ಇಂತಿಂತಹ ಹೆಸರುಗಳನ್ನು ಇಟ್ಟರು. ತಮಗೆ ಕೌಲರು, ಆರ್ದ್ರವೀರರು, ಶಾಂಭವರು, ಮತ್ತು ಗಣರುಗಳು–ಮೊದಲಾದ ಹೆಸರುಗಳನ್ನಿಟ್ಟುಕೊಂಡರು. ಮತ್ತು ಯಾರು ವಾಮಮಾರ್ಗದ ಮತದಲ್ಲಿಲ್ಲವೋ, ಅವರಿಗೆ 'ಕಂಟಕ'ಗಳು, 'ವಿಮುಖ'ರು 'ಶುಷ್ಕಪಶು'ಗಳು ಎಂದು ಮೊದಲಾದ ಹೆಸರುಗಳನ್ನಿಟ್ಟರು. ಮತ್ತು 'ಯಾವಾಗ ಭೈರವೀ ಚಕ್ರದಲ್ಲಿರುವರೋ, ಆಗ ಬ್ರಾಹ್ಮಣರಿಂದ

---

೧೬. ರುದ್ರಯಾಮಲ ತಂತ್ರ –ಯು.ಮೀ.

೧೭. ಯೋನಿ ಮತ್ತು ಸಂಭೋಗಕ್ರಿಯೆಯನ್ನು ಕೈಬೆರಳುಗಳಿಂದ ತೋರಿಸುವ ಸಂಕೇತಗಳು.

ಹಿಡಿದು ಚಾಂಡಾಲರವರೆಗೆ ಎಲ್ಲರಿಗೂ ದ್ವಿಜರೆಂದು ಹೆಸರಾಗುತ್ತದೆ; ಮತ್ತು ಯಾವಾಗ ಭೈರವೀ ಚಕ್ರದಿಂದ ಬೇರೆಯಾಗುತ್ತಾರೋ, ಆಗ ಎಲ್ಲರೂ ತಮ್ಮ ತಮ್ಮ ವರ್ಣದವರಾಗಿ ಹೋಗುವರು".- ಎಂದು ಹೇಳುತ್ತಾರೆ.

ಭೈರವೀ ಚಕ್ರದಲ್ಲಿ ವಾಮಮಾರ್ಗಿಗಳು ನೆಲದ ಮೇಲೆಯೋ, ಅಥವಾ ಒಂದು ಹಲಗೆಯ ಮೇಲೆಯೋ, ತ್ರಿಕೋಣಾಕಾರವಾಗಿಯೋ,[೧೮] ಚತುಷ್ಕೋಣಾಕಾರವಾಗಿಯೋ, ವರ್ತುಲಾಕಾರವಾಗಿಯೋ ಕೇಂದ್ರ ಒಂದನ್ನು ರಚಿಸಿ, ಅದರ ಮೇಲೆ ಮದ್ಯದ ಗಡಿಗೆಯನ್ನಿಟ್ಟು, ಅದರ ಪೂಜೆಯನ್ನು ಮಾಡುತ್ತಾರೆ. ಮತ್ತೆ **"ಬ್ರಹ್ಮಶಾಪಂ ವಿಮೋಚಥ"**. "ಓ ಮದ್ಯ! ನೀನು ಬ್ರಹ್ಮಾ-ಮೊದಲಾದವರ ಶಾಪದಿಂದ ರಹಿತವಾಗು" - ಎಂಬ ಶಬ್ದಗಳನ್ನು ಉಚ್ಚರಿಸುತ್ತಾರೆ. ಎಲ್ಲಿ ವಾಮಮಾರ್ಗಿಗಳನ್ನುಳಿದು, ಅನ್ಯರನ್ನು ಹೋಗಗೊಡುವುದಿಲ್ಲವೋ, ಅಲ್ಲಿ, ಸ್ತ್ರೀಯರು ಮತ್ತು ಪುರುಷರು ಒಟ್ಟು ಸೇರುತ್ತಾರೆ. ಅಲ್ಲಿ ಒಬ್ಬಳು ಸ್ತ್ರೀಯನ್ನು 'ನಗ್ನೆ'ಯನ್ನಾಗಿ ಮಾಡಿ, ಪೂಜಿಸುತ್ತಾರೆ ಮತ್ತು ಸ್ತ್ರೀಯರು ಒಬ್ಬ ಪುರುಷನನ್ನು ನಗ್ನನನ್ನಾಗಿ ಮಾಡಿ ಪೂಜಿಸುತ್ತಾರೆ. ಆಮೇಲೆ, ಯಾವಳೋ ಯಾವನೊಬ್ಬನ ಪತ್ನಿಯಾಗಿರಬಹುದು. ಯಾವಳೋ ತನ್ನ ಅಥವಾ ಮತ್ತೊಬ್ಬನ ಮಗಳಾಗಿರಬಹುದು. ಯಾವಳಾದರೂ ಯಾವನೊಬ್ಬನ ಸ್ವಂತ ತಾಯಿಯೋ, ಸೋದರಿಯೋ, ಸೊಸೆಯೋ, ಆಗಿರಬಹುದು-ಈ ಮೊದಲಾದವರೆಲ್ಲಾ ಬರುತ್ತಾರೆ. ಆ ಮೇಲೆ ಒಂದು ಪಾತ್ರೆಯಲ್ಲಿ ಮದ್ಯವನ್ನು ತುಂಬಿಸಿ, ಮಾಂಸ, ವಡೆ-ಮೊದಲಾದುವನ್ನು ಒಂದು ತಟ್ಟೆಯಲ್ಲಿಡುತ್ತಾರೆ. ಯಾವನು ಅವರ ಆಚಾರ್ಯನಾಗಿರುತ್ತಾನೋ, ಅವನು ಆ ಮದ್ಯದ ಬಟ್ಟಲನ್ನು ಕೈಯಲ್ಲಿ ತೆಗೆದುಕೊಂಡು, **"ಭೈರವೋऽಹಂ, ಶಿವೋऽಹಂ"**- ನಾನು ಭೈರವ ಅಥವಾ ಶಿವ" - ಎನ್ನುತ್ತಾನೆ; ಹಾಗೆ ಹೇಳಿ ಕುಡಿದುಬಿಡುತ್ತಾನೆ. ಮತ್ತೆ ಆ ಎಂಜಲು ಪಾತ್ರೆಯಲ್ಲಿಯೇ ಎಲ್ಲರೂ ಕುಡಿಯುತ್ತಾರೆ. ಮತ್ತೆ, ಯಾವನಾದರೊಬ್ಬನ ಪತ್ನಿಯನ್ನು, ಅಥವಾ ವೇಶ್ಯೆಯನ್ನು ನಗ್ನೆಯನ್ನಾಗಿ ಮಾಡಿ, ಅಥವಾ ಯಾವನಾದರೂ ಪುರುಷನನ್ನು ನಗ್ನನನ್ನಾಗಿ ಮಾಡಿ, ಕೈಯಲ್ಲಿ ಕತ್ತಿಯನ್ನು ಕೊಟ್ಟು, ಅವಳ ಹೆಸರು 'ದೇವಿ'-ಎಂದೂ, ಮತ್ತು ಪುರುಷನ ಹೆಸರು 'ಮಹಾದೇವ' ಎಂದೂ ಇಡುತ್ತಾರೆ. ಮತ್ತು ಅವರ ಉಪಸ್ಥೇಂದ್ರಿಯಗಳ ಪೂಜೆಯನ್ನು ಮಾಡುತ್ತಾರೆ. ಆಗ ಆ ದೇವಿಗೆ ಅಥವಾ ಶಿವನಿಗೆ ಬಟ್ಟಲು ಮದ್ಯವನ್ನು ಕುಡಿಸಿ, ಅದೇ ಎಂಜಲು ಪಾತ್ರೆಯಿಂದ ಎಲ್ಲ ಜನರೂ ಒಂದೊಂದು ಬಟ್ಟಲು ಕುಡಿಯುತ್ತಾರೆ. ಮತ್ತೆ ಅದೇ ರೀತಿ, ಕ್ರಮದಿಂದ ಕುಡಿದು-ಕುಡಿದು, ಉನ್ಮತ್ತರಾಗಿ, ಯಾವಳಾದರೂ ಯಾವನೊಬ್ಬನ ಸೋದರೀ, ಮಗಳು ಅಥವಾ ತಾಯಿಯೇ ಆಗಿರಲೊಲ್ಲಳೇಕೆ, ಯಾವನಿಗೆ ಯಾವಳೊಂದಿಗೆ ಇಚ್ಛೆಯಾಗುವುದೋ, ಅವಳೊಂದಿಗೆ ದುಷ್ಕರ್ಮವನ್ನು ಮಾಡುತ್ತಾರೆ. ಒಂದೊದು ಸಾರಿ ಮದ ವಿಪರೀತವಾಗಿ ಏರುವುದರಿಂದ, ಪಾದರಕ್ಷೆಗಳು, ಒದೆತ, ಗುದ್ದಾಟ, ಕೂದಲನ್ನು ಪರಸ್ಪರ ಎಳೆದೆಳೆದು ಹೋರಾಡುವುದು-ಈ ಬಗೆಗಳಿಂದ ಜಗಳವಾಡುತ್ತಾರೆ. ಹಲಕೆಲವರಿಗೆ ಅಲ್ಲಿಯೇ ವಾಂತಿಯಾಗುತ್ತದೆ. ಅವರಲ್ಲಿ ಯಾವನು ಸಿದ್ಧಿಪ್ರಾಪ್ತ ಅಘೋರಿ, ಎಂದರೆ ಸರ್ವೋತ್ತಮಸಿದ್ಧನೆಂದು ಎಣಿಸಲ್ಪಡುತ್ತಾನೋ, ಅವನು ವಾಂತಿಯಾದ ವಸ್ತುವನ್ನೂ ಕೂಡ ತಿಂದುಬಿಡುತ್ತಾನೆ. ಎಂದರೆ, ಇವರಲ್ಲಿ ಸರ್ವೋಚ್ಚಸಿದ್ಧನ ಲಕ್ಷಣಗಳು ಇವಾಗಿರುತ್ತವೆ:-

**ಹಾಲಾಂ ಪಿಬತಿ ದೀಕ್ಷಿತಸ್ಯ ಮಂದಿರೇ ಸುಪ್ತೋ ನಿಶಾಯಾಂ ಗಣಿಕಾಗೃಹೇಷು ।**

**ವಿರಾಜತೇ ಕೌಲವ ಚಕ್ರವರ್ತೀ ॥**

ಯಾವನು ದೀಕ್ಷಿತನ, ಎಂದರೆ ಮದ್ಯವನ್ನಿಳಿಸುವವನ ಮನೆಗೆ ಹೋಗಿ, ಬಾಟಲಿಗಳನ್ನೇರಿಸುವನೋ, ವೇಶ್ಯೆಯರ ಮನೆಗೆ ಹೋಗಿ ದುಷ್ಕರ್ಮ ಮಾಡಿ ನಿದ್ರಿಸುವನೋ ಮತ್ತು ಇವೇ ಮೊದಲಾದ ಕುಕರ್ಮಗಳನ್ನು ನಿರ್ಲಜ್ಜನೂ, ನಿಃಶಂಕನೂ ಆಗಿ ಮಾಡುವನೋ, ಅವನೇ ವಾಮಮಾರ್ಗಿಗಳಲ್ಲಿ ಸರ್ವೋನ್ನತನೂ, ಮುಖ್ಯನೂ ಆದ ಚಕ್ರವರ್ತೀ, ರಾಜನಿಗೆ ಸಮಾನನೆಂದು

---

೧೮. ವಾಮಮಾರ್ಗೀ ತಾಂತ್ರಿಕರು ತಲೆಕೆಳಗಾದ ತ್ರಿಭುಜಾಕೃತಿಯನ್ನು ಸ್ತ್ರೀ-ಜನನೇಂದ್ರಿಯದ ಪ್ರತೀಕವೆಂದು ಅಂಗೀಕರಿಸಿದ್ದಾರೆ. ಇಂತಹ, ತ್ರಿಭುಜಗಳಿಂದ, ಮತ್ತು ವೃತ್ತದಿಂದ ಕೂಡಿದ ಕೆಂಪುವರ್ಣದ "ಶ್ರೀ ಚಕ್ರ"ದ ರಚನೆಯನ್ನು ಇವರೇ ನಿರ್ಮಿಸಿದ್ದಾರೆ.

"ಇದೇ ಅವರ ಕೇಂದ್ರ' ಈ ಶ್ರೀ ಚಕ್ರವನ್ನು ಭಾರತದ ಭೌಗೋಲಿಕ ಮೇರೆಯಾಗಿ ಎಲ್ಲಿ-ಎಲ್ಲಿ ವಾಮಮಾರ್ಗಿಗಳ ಕೇಂದ್ರಗಳೋ, ಅಲ್ಲಿ-ಅಲ್ಲಿ ಅಳವಡಿಸಿಕೊಂಡಿದ್ದಾರೆ. ಉದಾಹರಣೆಗೆ, - ಈ ತ್ರಿಭುಜ ಒಂದು ಕೋಣ ಶ್ರೀನಗರದಲ್ಲೂ [ಕಾಶ್ಮೀರ], ಇನ್ನೊಂದು ಕಾಶಿಯಲ್ಲೂ, ಮೂರನೇಯದು ಕನ್ಯಾಕುಮಾರಿಯಲ್ಲೂ ಇದೆಯೆಂದು ಭಾವಿಸುತ್ತಾರೆ.

ಹೀಗಿದ್ದರೂ ಸಹ, ವಾಮಾಚಾರಗಳಿಗೆ ವಿರುದ್ಧರಾದ ಶೈವರೂ, ಹಲವಾರು ದೇವಿಯ ಉಪಾಸಕರೂ, ಫಲಿತ-ಜ್ಯೋತಿಷಿಗಳೂ ಮೊದಲಾದವರು 'ಶ್ರೀಚಕ್ರ' ವನ್ನು ತಾಂತ್ರಿಕರಂತೆಯೇ ಉಪಾಸ್ಯ ಎಂದು ಅಂಗೀಕರಿಸಿರುವುದು ಆಶ್ಚರ್ಯದ ವಿಷಯ.

ಭಾರತ ಸರಕಾರದ 'ಪರಿವಾರ ನಿಯೋಜನ' ಮಂತ್ರಾಲಯವೂ ಕೂಡ ತಲೆಕೆಳಗಾದ ಕೆಂಪುಬಣ್ಣದ ತ್ರಿಭುಜವನ್ನೇ ತಮ್ಮ ಪ್ರತೀಕವೆಂದು ಸ್ವೀಕರಿಸಿದ್ದಾರೆ.

ಅಂಗೀಕರಿಸಲ್ಪಡುತ್ತಾನೆ. ಎಂದರೆ, ಯಾವನು ದೊಡ್ಡ ದುಷ್ಕರ್ಮಿಯೋ, ಅವನೇ ಅವರಲ್ಲಿ ದೊಡ್ಡವನು ಮತ್ತು ಯಾವನು ಒಳ್ಳೆಯ ಕೆಲಸಗಳನ್ನು ಮಾಡುವನೋ ಮತ್ತು ಕೆಟ್ಟಕೆಲಸಗಳಿಗೆ ಹೆದರುವನೋ, ಅವನೇ ಚಿಕ್ಕವನು. ಏಕೆಂದರೆ:–

**ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತಃ ಸದಾಶಿವಃ ॥** (ಜ್ಞಾನಸಂಕಲನೀ ತಂತ್ರ–೪೩)

ಲೋಕಲಜ್ಜೆ, ಶಾಸ್ತ್ರಲಜ್ಜೆ, ಕುಲಲಜ್ಜೆ, ದೇಶಲಜ್ಜೆ–ಮೊದಲಾದ ಪಾಶಗಳಲ್ಲಿ ಯಾವನು ಬದ್ಧನಾಗಿರುತ್ತಾನೋ, ಅವನು ಜೀವನು ಮತ್ತು ಯಾವನು ನಿರ್ಲಜ್ಜನಾಗಿ ಕೆಟ್ಟಕೆಲಸಗಳನ್ನು ಮಾಡುವನೋ, ಅವನೇ ಸದಾಶಿವನಾಗಿರುತ್ತಾನೆ – ಎಂದು ತಂತ್ರದಲ್ಲಿ ಹೇಳುತ್ತಾರೆ.

ಉಡ್ಡೀಸ ತಂತ್ರ–ಮೊದಲಾದುದರಲ್ಲಿ ಹೀಗೆ ಒಂದು ಪ್ರಯೋಗವನ್ನು ಬರೆದಿದ್ದಾರೆ:– ಒಂದು ಮನೆಯಲ್ಲಿ ನಾಲ್ಕು ಕಡೆಯ ಗೋಡೆಗಳಲ್ಲಿಯೂ ಗೂಡುಗಳಿರಬೇಕು. ಅವುಗಳಲ್ಲಿ ಮದ್ಯದ ಶೀಶಿಗಳನ್ನು ತುಂಬಿಸಿ ಇಟ್ಟುಬಿಡಬೇಕು. ಒಂದು ಗೂಡಿನಿಂದ ಒಂದು ಬಾಟಲಿ ಕುಡಿದು, ಎರಡನೆಯ ಗೂಡಿಗೆ ಹೋಗಬೇಕು. ಅದರಿಂದಲೂ ಕುಡಿದು ಮೂರನೆಯದಕ್ಕೂ, ಮತ್ತು ಮೂರನೆಯದರಿಂದ ಕುಡಿದು ನಾಲ್ಕನೆಯ ಗೂಡಿಗೂ ಹೋಗಬೇಕು. ಎಲ್ಲಿಯವರೆಗೆ ಕಟ್ಟಿಗೆಯಂತೆ ನೆಲದ ಮೇಲೆ ಬಿದ್ದುಹೋಗನೋ, ಆವರೆಗೆ ನಿಂತು ನಿಂತೇ ಮದ್ಯವನ್ನು ಕುಡಿಯಬೇಕು. ಮತ್ತೆ ಯಾವಾಗ ಮದವಿಳಿಯುವುದೋ, ಆಗ, ಅದೇ ರೀತಿ ಕುಡಿದು ಬೀಳಬೇಕು. ಮತ್ತೆ ಮೂರನೆಯ ಸಾರಿ ಇದೇ ರೀತಿ ಕುಡಿದು, ಬಿದ್ದು, ಎದ್ದರೆ, ಅವನಿಗೆ ಪುನರ್ಜನ್ಮವಿರುವುದಿಲ್ಲ! ಎಂದರೆ, ಇಂತಹವರಿಗೆ ಮಾನವ ಜನ್ಮ ಮತ್ತೆ ಸಿಕ್ಕುವುದಿಲ್ಲ; ಲಭಿಸುವುದೇ ಕಠಿಣ–ಎಂಬರ್ಥದಲ್ಲಿಯೇನೋ ಇದು ಸರಿಯೇ; ಆದರೆ ನೀಚ ಯೋನಿಯಲ್ಲಿ ಬಿದ್ದು ಬಹುಕಾಲ ಪರ್ಯಂತ ಅವನು ತೊಳಲುತ್ತಾ ಇರುವನು ಎನ್ನುವುದೇನೋ ಸತ್ಯವೇ ಆಗಿದೆ.

ವಾಮೀಯರ ತಂತ್ರ ಗಂಥಗಳಲ್ಲಿ **"**ತಾಯಿಯೊಬ್ಬಳನ್ನುಳಿದು ಬೇರೆ ಯಾವಳೇ ಸ್ತ್ರೀಯನ್ನೂ ಬಿಡಬಾರದು–ಎಂಬ ನಿಯಮವಿದೆ. ಅಂದರೆ, ಮಗಳಾಗಿರಲಿ, ಅಥವಾ ಸೋದರಿಯೇ ಮೊದಲಾದ, ಯಾವ ಹತ್ತಿರದ ನೆಂಟಳೇ ಆಗಿರಲೊಲ್ಲವೇಕೆ, ಎಲ್ಲರೊಂದಿಗೂ ಸಂಭೋಗ ಮಾಡಬೇಕು**"**.– ಎಂದು ಬರೆದಿದೆ. ಈ ವಾಮಮಾರ್ಗೀಯರಲ್ಲಿ ದಶ ಮಹಾವಿದ್ಯೆಗಳು ಪ್ರಸಿದ್ಧವಾಗಿವೆ. ಅವರಲ್ಲಿ ಒಬ್ಬ ಮಾತಂಗೀವಿದ್ಯಾಯುಕ್ತನು – **"ಮಾತರಪಿ ನ ತ್ಯಜೇತ್"**– ಎಂದರೆ – **"**ತಾಯಿಯನ್ನೂ ಕೂಡ ಸಂಭೋಗ ಮಾಡದೇ ಬಿಡಬಾರದು**"** – ಎಂದು ಹೇಳುತ್ತಾನೆ! ಮತ್ತು ಸ್ತ್ರೀ–ಪುರುಷರ ಸಮಾಗಮದ ಸಮಯದಲ್ಲಿ – **"**ನಮಗೆ ಸಿದ್ಧಿ ಪ್ರಾಪ್ತವಾಗಲಿ**"**– ಎಂಬ ಮಂತ್ರವನ್ನು ಜಪಿಸುತ್ತಾರೆ. ಇಂತಹ ಹುಚ್ಚು ಮಹಾಮೂರ್ಖ ಮಾನವರೂ ಕೂಡ ಜಗತ್ತಿನಲ್ಲಿ ಬಹಳ ಕಡಿಮೆಯೇ ಇದ್ದಾರು!

**ಯಾವ ಮಾನವನು ಸುಳ್ಳನ್ನು ಪ್ರಚಲಿತವಾಗಿ ಮಾಡಲು ಬಯಸುತ್ತನೋ, ಅವನು ಅವಶ್ಯವಾಗಿಯೇ ಸತ್ಯದ ನಿಂದೆಯನ್ನು ಮಾಡುತ್ತಾನೆ**. ನೋಡಿರಿ, ವಾಮಮಾರ್ಗಿಗಳು ಏನು ಹೇಳುತ್ತಾರೆ! ವೇದಗಳು, ಶಾಸ್ತ್ರಗಳು, ಮತ್ತು ಪುರಾಣಗಳು – ಇವೆಲ್ಲಾ ಸಾಮಾನ್ಯ ವೇಶ್ಯೆಯರಂತೆ ಇವೆ ಮತ್ತು ಯಾವ ಈ ಶಾಂಭವೀ ವಾಮಮಾರ್ಗಿಯ ಮುದ್ರೆಯಿದೆಯೋ, ಅದು ಗುಪ್ತ[೧೯] ಕುಲದ ಸ್ತ್ರೀಗೆ ಸಮವಾಗಿದೆ(೫). ಇದೇ ಕಾರಣದಿಂದ ಈ ಜನರು ಕೇವಲ ವೇದವಿರುದ್ಧವಾದ ಮತವನ್ನು ಎತ್ತಿ ನಿಲ್ಲಿಸಿದ್ದಾರೆ. ಆ ಮೇಲೆ ಈ ಜನರ ಮತ ಬಹಳ ಪ್ರಚಲಿತರಾಯಿತು. ಆಗ ಧೂರ್ತತನವನ್ನು ಮಾಡಿ, ವೇದಗಳ ಹೆಸರಿನಿಂದಲೂ ಕೂಡ ವಾಮಮಾರ್ಗದ ಲೀಲೆಯನ್ನು ಸ್ವಲ್ಪ–ಸ್ವಲ್ಪ ನಡೆಯಿಸಿದರು. ಎಂದರೆ:–

**ಸೌತ್ರಾಮಣ್ಯಾಂ ಸುರಾಂ ಪಿಬೇತ್ ॥** (ಶತಪಥ :– ೧೨.೯.೩.೭)

**ಪ್ರೋಕ್ಷಿತಂ ಭಕ್ಷಯೇನ್ಮಾಂಸಮ್ ॥** (ಮನು :– ೫.೨೭)

**ವೈದಿಕೀ ಹಿಂಸಾ ಹಿಂಸಾ ನ ಭವತಿ**[೨೦] ॥

೧೯. ಎಂದರೆ, ಪರದೆಯಲ್ಲಿರುವ ಕುಲೀನ ಸ್ತ್ರೀ –ಯು.ಮೀ

೨೦. ಮನುಸ್ಮೃತಿ [೫.೪೪] ಯೊಂದಿಗೆ ತುಲನೆಮಾಡಿ.– ಯು.ಮೀ.

**ನ ಮಾಂಸಭಕ್ಷಣೇ ದೋಷೋನ ಮದ್ಯೆ ನ ಚ ಮೈಥುನೇ ।**

**ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತು ಮಹಾಫಲಾ**[೨೧] ॥ (ಮನು :-೫.೫೬)

ಸೌತ್ರಾಮಣೀ(ಇಂದ್ರನಿಗೆ ಸಂಬಂಧಿಸಿದುದು) ಯಜ್ಞದಲ್ಲಿ ಮದ್ಯ ಕುಡಿಯಬೇಕು. ಇದರ ಅರ್ಥ ಸೌತ್ರಾಮಣಿ ಯಜ್ಞದಲ್ಲಿ ಸೋಮರಸವನ್ನು, ಎಂದರೆ - ಸೋಮಲತೆಯ ರಸವನ್ನು ಕುಡಿಯಬೇಕು - ಎಂದಾಗಿರುತ್ತದೆ. ಪ್ರೋಕ್ಷಿತವಾದುದನ್ನು, ಎಂದರೆ-ಯಜ್ಞದಲ್ಲಿ ಮಾಂಸವನ್ನು ತಿನ್ನುವುದರಲ್ಲಿ ದೋಷವಿಲ್ಲ-ಎನ್ನುವಂತಹ ಪಾಮರತನದ ಮಾತುಗಳನ್ನೂ ವಾಮಮಾರ್ಗೀಯರು ಪ್ರಚಲಿತಗೊಳಿಸಿದ್ದಾರೆ. ಅವರನ್ನು "ವೈದಿಕೀ ಹಿಂಸೆ ಹಿಂಸೆಯಲ್ಲವಾದರೆ, ನಿನ್ನನ್ನು ಮತ್ತು ನಿನ್ನ ಕುಟುಂಬವನ್ನು ವಧಿಸಿ ಹೋಮ ಮಾಡಿಬಿಟ್ಟರೆ, ಚಿಂತೆ ಏನು"? - ಎಂದು ಕೇಳಬೇಕು. ಮಾಂಸ ಭಕ್ಷಣ ಮಾಡುವುದರಲ್ಲಿ, ಮದ್ಯ ಕುಡಿಯುವುದರಲ್ಲಿ, ಪರಸ್ತ್ರೀಗಮನ ಮಾಡುವುದು - ಮೊದಲಾದುದರಲ್ಲಿ ದೋಷವಿಲ್ಲವೆನ್ನುವುದು ಹುಡುಗುತನವಾಗಿದೆ. ಏಕೆಂದರೆ, ಪ್ರಾಣಿಗಳಿಗೆ ನೋವನ್ನು ಉಂಟುಮಾಡದೆ ಮಾಂಸ ಪ್ರಾಪ್ತವಾಗುವುದಿಲ್ಲ; ಮತ್ತು ಅಪರಾಧವಿಲ್ಲದೆ ನೋವನ್ನು ಉಂಟುಮಾಡುವುದು ಧರ್ಮದ ಕಾರ್ಯವಲ್ಲ. ಮದ್ಯಪಾನದ ಬಗೆಗಂತೂ ಸರ್ವಥಾ ನಿಷೇಧವೇ ಇದೆ. ಏಕೆಂದರೆ-ಈ ವರೆಗೆ ವಾಮಮಾರ್ಗಿಗಳ ಹೊರತು, ಯಾವುದೇ ಗ್ರಂಥದಲ್ಲಿಯೂ ಮದ್ಯವು ಸೇವನೀಯವೆಂದು ಬರೆದಿಲ್ಲ. ಆದರೆ, ಎಲ್ಲೆಡೆಯೂ ನಿಷೇಧವಿದೆ. ಮತ್ತು ವಿವಾಹವಿಲ್ಲದೆ ಮೈಥುನದಲ್ಲಿಯೂ ದೋಷವಿದೆ. ಇದನ್ನು ನಿರ್ದೋಷವೆನ್ನುವವನು ದೋಷಯುಕ್ತ ನಾಗಿರುತ್ತಾನೆ. ಇಂತಹ ವಚನಗಳನ್ನೂ ಋಷಿಗಳ ಗ್ರಂಥಗಳಲ್ಲಿ ಸೇರಿಸಿ, ಅದೆಷ್ಟೋ ಋಷಿ-ಮುನಿಗಳ ಹೆಸರಿನಿಂದ ಗ್ರಂಥಗಳನ್ನು ರಚಿಸಿ, ಗೋಮೇಧ, ಅಶ್ವಮೇಧವೆಂಬ ಹೆಸರಿನ ಯಜ್ಞಗಳನ್ನೂ ಮಾಡಲು ತೊಡಗಿದ್ದರು. ಎಂದರೆ -"ಈ ಪಶುಗಳನ್ನು ಕೊಂದು ಹೋಮ ಮಾಡುವುದರಿಂದ ಯಜಮಾನನಿಗೆ ಮತ್ತು ಪಶುವಿಗೆ ಸ್ವರ್ಗದ ಪ್ರಾಪ್ತಿಯಾಗುತ್ತದೆ"- ಎನ್ನಹತ್ತಿದ್ದರು. ಈ ಯಜ್ಞಗಳ ಪ್ರಸಿದ್ಧಿಯ ತಾತ್ಪರ್ಯವೇನೆಂದರೆ, ಬ್ರಾಹ್ಮಣ ಗಂಥಗಳಲ್ಲಿ ಯಾವ ಅಶ್ವಮೇಧ, ಗೋಮೇಧ, ನರಮೇಧ-ಮೊದಲಾದ ಶಬ್ದಗಳಿವೆಯೋ, ಅವುಗಳ ಅರ್ಥವನ್ನು ಸರಿಯಾಗಿ ತಿಳಿದುಕೊಂಡಿಲ್ಲ. ಏಕೆಂದರೆ, ತಿಳಿದುಕೊಂಡಿದ್ದಲ್ಲಿ, ಇಂತಹ ಅನರ್ಥವನ್ನೇಕೆ ಮಾಡುತ್ತಿದ್ದರು?[೨೨]

**ಪ್ರಶ್ನೆ:-** ಅಶ್ವಮೇಧ, ಗೋಮೇಧ ಮೊದಲಾದ ಶಬ್ದಗಳ ಅರ್ಥವಾದರೂ ಏನು?

**ಉತ್ತರ:-** ಇವುಗಳ ಅರ್ಥವಾದರೋ ಇದಾಗಿದೆ:-

**ರಾಷ್ಟ್ರಂ ವಾ ಅಶ್ವಮೇಧಃ ॥** (ಶತಪಥ:- ೧೩.೧.೬.೩)

**ಅನ್ನಂ ಹಿ ಗೌಃ ॥** (ಶತಪಥ:-೪.೧.೩.೨೫)

**ಅಗ್ನಿರ್ವಾ ಅಶ್ವಃ ॥** (ಶತಪಥ:- ೩.೬.೨.೫)

**ಆಜ್ಯಂ ಮೇಧಃ ॥** (ಶತಪಥ:- ೧೩.೩.೬.೨)

ಕುದುರೆಗಳು, ಹಸು ಮೊದಲಾದ ಪಶುಗಳನ್ನು ಮತ್ತು ಮನುಷ್ಯರನ್ನು ವಧಿಸಿ ಹೋಮ ಮಾಡುವುದನ್ನು ಎಲ್ಲಿಯೂ ಬರೆದಿಲ್ಲ. ಕೇವಲ ವಾಮಮಾರ್ಗಿಗಳ ಗ್ರಂಥಗಳಲ್ಲಿ ಇಂತಹ ಅನರ್ಥವನ್ನು ಬರೆದಿದ್ದಾರೆ. ಆದರೆ, ಈ ವಿಷಯವನ್ನೂ ಕೂಡ ವಾಮಮಾರ್ಗಿಗಳೇ ಪ್ರಚಲಿತವಾಗಿ ಮಾಡಿದ್ದಾರೆ. ಮತ್ತು ಎಲ್ಲಿ ಎಲ್ಲಿ ಇಂತಹ ಲೇಖನವಿದೆಯೋ, ಅಲ್ಲಿ-ಅಲ್ಲಿಯೂ

---

೨೧. ಇವು ಮನುಸ್ಮೃತಿಯ ಪ್ರಕ್ಷಿಪ್ತ ಶ್ಲೋಕಗಳು. ಗ್ರಂಥಕರ್ತರು ಇವನ್ನು ಇಲ್ಲಿ ಉದ್ಧರಿಸಿದ್ದಾರೆ. ಮನುಸ್ಮೃತಿಯ ೨೦೦೦ ಶ್ಲೋಕಗಳಲ್ಲಿ ೧೨೦೦ ಶ್ಲೋಕಗಳು ಪ್ರಕ್ಷಿಪ್ತ [ಮನುರಚಿತವಲ್ಲ]ವೆಂದು ಗಣಿಸಲಾಗಿದೆ. ಆರ್ಷ ಸಾಹಿತ್ಯ ಪ್ರಚಾರ ಟ್ರಸ್ಟ್, ೪೫೫, ಖಾರೀ ಬಾವಲೀ, ನವದೆಹಲಿ ೧೧೦೦೦೬ ಅವರು ಈ ಅನುಸಂಧಾನಾತ್ಮಕ 'ಮನುಸ್ಮೃತಿ'ಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಪ್ರತ್ಯೇಕ ಪ್ರಕ್ಷಿಪ್ತ ಶ್ಲೋಕಕ್ಕೂ ಕಾರಣಗಳನ್ನು ಕೊಡಲಾಗಿದೆ.

೨೨. ಮಹೀಧರನು ಯಜುರ್ವೇದದ 'ಗಣಾನಾಂ ತ್ವಾ ಗಣಪತಿಂ ಹವಾಮಹೇ' [೨೩/೧೯.೮೧] ಮೊದಲಾದ ಹಲವು ಮಂತ್ರಗಳ ಭಾಷ್ಯವನ್ನು ಮಹಾ ಅಶ್ಲೀಲಕರವಾಗಿಯೂ, ಜಿಗುಪ್ಸೆ ತರುವಂತಹದಾಗಿಯೂ ಮಾಡಿ, ತನ್ನ ಲೇಖನಿಗೆ ಕಳಂಕ ತಂದಿದ್ದಾನೆ. ಈ ಭಾಷ್ಯವನ್ನು ಬಯಲಿಗೆ ತಂದು, ಘೋರವಾಗಿ ಖಂಡನೆ ಮಾಡಿದವರಲ್ಲಿ ಮಹರ್ಷಿ ದಯಾನಂದರು ಮೊದಲನೆಯವರು. ವೇದಗಳ ಸ್ವಾಧ್ಯಾಯಮಾಡದೇ, ಕೇವಲ ಪೂಜಾ-ಪಾಠ-ಶ್ರಾದ್ಧಗಳನ್ನು ಮಾಡಿಸುವುದರಲ್ಲಿಯೇ ನಿರತರಾದ ಪೌರಾಣಿಕ ವಿದ್ವಾಂಸರು ಈವರೆಗೂ ಮಹೀಧರನನ್ನು ಮಹಾವಿದ್ವಾಂಸನೆಂದು ತಿಳಿದಿದ್ದರು! ಮಹರ್ಷಿ ದಯಾನಂದರು ತಮ್ಮ 'ಋಗ್ವೇದಾದಿ ಭಾಷ್ಯ ಭೂಮಿಕಾ'ದ ಭಾಷ್ಯಕರಣ-ಶಂಕಾ-ಸಮಾಧಾನಾದಿ ವಿಷಯ ಪ್ರಕರಣದಲ್ಲಿ ಮಹೀಧರನ ಭ್ರಷ್ಟ ಭಾಷ್ಯವನ್ನು ಹೊರಗೆಡಹಿ, ಮಂತ್ರಗಳ ಸತ್ಯಾರ್ಥವನ್ನು ತೋರಿಸಿದ್ದಾರೆ.

ವಾಮಮಾರ್ಗಿಗಳು ಪ್ರಕ್ಷೇಪವನ್ನು ಮಾಡಿದ್ದಾರೆ. (ಎಂದರೆ-ತಮ್ಮ ಕಥನವನ್ನೇ ತೂರಿಸಿದ್ದಾರೆ) ನೋಡಿರಿ, ರಾಜನು ನ್ಯಾಯ-ಧರ್ಮದಿಂದ ಪ್ರಜಾ-ಪಾಲನೆ ಮಾಡುವುದು; ಯಜಮಾನನು ವಿದ್ಯೆ-ಮೊದಲಾದುವುಗಳ ದಾನವನ್ನು ಮಾಡುವುದು ಮತ್ತು ಅಗ್ನಿಯಲ್ಲಿಯೂ ಕೂಡ ತುಪ್ಪ ಮೊದಲಾದುದರ ಹೋಮವನ್ನು ಮಾಡುವುದು ಅಶ್ವಮೇಧ; ಅನ್ನ, ಇಂದ್ರಿಯಗಳು, ಪೃಥಿವೀ ಮೊದಲಾದುವನ್ನು ಪವಿತ್ರವಾಗಿಡುವುದು ಗೋಮೇಧ; ಯಾವಾಗ ಮಾನವನು ಮೃತನಾಗುವನೋ, ಆಗ ವಿಧಿಪೂರ್ವಕವಾಗಿ ಅವನ ಶರೀರದ ದಹನಮಾಡುವುದು ನರಮೇಧ-ಎನಿಸುತ್ತದೆ.

**ಪ್ರಶ್ನೆ :-** ಯಜ್ಞ ಮಾಡುವವರು-**"**ಯಜ್ಞ ಮಾಡುವುದರಿಂದ ಯಜಮಾನನು ಮತ್ತು ಪಶುವು ಸ್ವರ್ಗಗಾಮಿಗಳಾಗುತ್ತಾರೆ. ಮತ್ತು ಹೋಮಮಾಡಿ ಮತ್ತೆ ಪಶುವನ್ನು ಜೀವಿತವನ್ನಾಗಿ ಮಾಡುತ್ತಿದ್ದರು**"**.- ಎಂದು ಹೇಳುತ್ತಾರೆ. ಈ ಮಾತು ಸತ್ಯವೋ, ಅಥವಾ ಅಲ್ಲವೋ?

**ಉತ್ತರ :-** ಸತ್ಯವಲ್ಲ. ಸ್ವರ್ಗಕ್ಕೆ ಹೋಗುವುದಾದರೆ, ಇಂತಹ ಮಾತುಗಳನ್ನಾಡುವವರನ್ನು ವಧಿಸಿ, ಹೋಮಮಾಡಿ, ಸ್ವರ್ಗಕ್ಕೆ ಕಳುಹಿಸಬೇಕು. ಅಥವಾ ಅವರಿಗೆ ಪ್ರಿಯರಾದ ತಾಯಿ, ತಂದೆ, ಹೆಂಡತಿ ಅಥವಾ ಮಕ್ಕಳು ಮೊದಲಾದವರನ್ನು ವಧಿಸಿ, ಹೋಮಮಾಡಿ, ಸ್ವರ್ಗಕ್ಕೆ ತಲುಪಿಸುವುದಿಲ್ಲವೇಕೆ? ಅಥವಾ ಮಧ್ಯದಿಂದ ಮರಳಿ ಬದುಕಿಸಿಕೊಳ್ಳುವುದಿಲ್ಲವೇಕೆ?

**ಪ್ರಶ್ನೆ :-** ಯಾವಾಗ ಯಜ್ಞವನ್ನು ಮಾಡುತ್ತಾರೋ, ಆಗ ವೇದಮಂತ್ರಗಳನ್ನು ಉಚ್ಚರಿಸುತ್ತಾರೆ. ವೇದಗಳಲ್ಲಿ ಇಲ್ಲದೇ ಇದ್ದಿದ್ದರೆ, ಎಲ್ಲಿಂದ ಉಚ್ಚರಿಸುತ್ತಿದ್ದರು?

**ಉತ್ತರ :-** ಮಂತ್ರವು ಯಾವನನ್ನೂ, ಎಲ್ಲಿಯೇ ಆಗಲಿ, ಉಚ್ಚರಿಸುವುದರಿಂದ ತಡೆಯುವುದಿಲ್ಲ. ಏಕೆಂದರೆ-ಅದು ಒಂದು ಶಬ್ದ. ಆದರೆ, ಅದರ ಅರ್ಥ ಪಶುವನ್ನು ಕೊಂದು ಹೋಮ ಮಾಡಬೇಕು-ಎಂಬುದಲ್ಲ. ಉದಾಹರಣೆಗಾಗಿ, **"ಅಗ್ನಯೇ ಸ್ವಾಹಾ"** ಮೊದಲಾದ ಮಂತ್ರಗಳ ಅರ್ಥ, ಅಗ್ನಿಯಲ್ಲಿ ಹವಿಸ್ಸು, ಪುಷ್ಟಿ-ಮೊದಲಾದುವನ್ನು ಕೊಡುವ ತುಪ್ಪ-ಮೊದಲಾದ ಉತ್ತಮ ಪದಾರ್ಥಗಳ ಹೋಮ ಮಾಡುವುದರಿಂದ ವಾಯು, ಮಳೆ, ಜಲ ಶುದ್ಧವಾಗಿ ಜಗತ್ತಿಗೆ ಸುಖಕರವಾಗಿರುತ್ತವೆ-ಎಂದಾಗಿದೆ. ಆದರೆ, ಈ ಸತ್ಯವಾದ ಅರ್ಥಗಳನ್ನು ಆ ಮೂಢರು ತಿಳಿದುಕೊಂಡಿರಲಿಲ್ಲ. ಏಕೆಂದರೆ - **ಯಾರು ಸ್ವಾರ್ಥ-ಬುದ್ಧಿಗಳಾಗಿರುತ್ತಾರೋ, ಅವರು ಕೇವಲ ತಮ್ಮ ಸ್ವಾರ್ಥಸಾಧಿಸುವುದರ ಹೊರತು, ಬೇರೆ ಏನನ್ನೂ ತಿಳಿದುಕೊಳ್ಳುವುದಿಲ್ಲ; ಒಪ್ಪಿಕೊಳ್ಳುವುದೂ ಇಲ್ಲ.**

ಜನರು ಯಾವಾಗ ಈ ಪೋಪರ ಇಂತಹ ಅನಾಚಾರವನ್ನು ಕಂಡರೋ, ಮತ್ತು ಮೃತನಾದವನಿಗಾಗಿ ತರ್ಪಣ-ಶ್ರಾದ್ಧ ಮೊದಲಾದುವನ್ನು ಮಾಡುವುದನ್ನು ನೋಡಿದರೋ, ಆಗ ವೇದಗಳೇ ಮೊದಲಾದ ಶಾಸ್ತ್ರಗಳ ನಿಂದಕವಾದ, ಒಂದು ಮಹಾ ಭಯಂಕರವಾದ, ಬೌದ್ಧ ಅಥವಾ ಜೈನ ಮತ ಪ್ರಚಲಿತವಾಯಿತು. ಇದೇ ದೇಶದಲ್ಲಿ ಗೋರಖಪುರದ ರಾಜನೊಬ್ಬನಿದ್ದನು. ಪೋಪರು ಅವನಿಂದ ಯಜ್ಞ ಮಾಡಿಸಿದರು. ಅವನ ಪ್ರಿಯೆಯಾದ ರಾಣಿಯ ಸಮಾಗಮವನ್ನು ಕುದುರೆಯೊಂದಿಗೆ ಮಾಡಿಸಿದುದರಿಂದ,[೨೩] ಅವಳು ಮೃತಳಾದ ಮೇಲೆ, ರಾಜನು ವೈರಾಗ್ಯವಂತನಾಗಿ, ತನ್ನ ಮಗನಿಗೆ ರಾಜ್ಯವನ್ನಿತ್ತು,[೨೪] ಸಾಧುವಾಗಿ ಪೋಪರ ಪೊಳ್ಳನ್ನು ಬಹಿರಂಗಪಡಿಸತೊಡಗಿದನು-ಎಂದು ಆಲಿಸಿದ್ದೇವೆ. ಇದರದೇ ಶಾಖೆಗಳ ರೂಪದಲ್ಲಿ ಚಾರವಾಕ ಹಾಗೂ ಆಭಾಣಕ ಮತಗಳೂ ಕೂಡ ಹೊರಟವು. ಅವರು ಈ ರೀತಿಯ ಶ್ಲೋಕಗಳನ್ನು ರಚಿಸಿದ್ದಾರೆ:-

---

೨೩. ಮಹೀಧರನ ಯಜುರ್ವೇದ ಭಾಷ್ಯ ಈ ಜಘನ್ಯ ಅತ್ಯಾಚಾರಕ್ಕೆ ಪ್ರೇರಕವಾಗಿದೆ.

೨೪. ಇಂತಹ ಇನ್ನೊಂದು ಪ್ರಸಂಗ ಬ್ರಹ್ಮವೈವರ್ತ ಪುರಾಣದಲ್ಲಿ [ಶ್ರೀಕೃಷ್ಣನ ಜನ್ಮಖಂಡ-೪ ಅಧ್ಯಾಯ೧೪, ಶ್ಲೋಕ ೪೪-೫೨] ಹೀಗೆ ಕೊಡಲಾಗಿದೆ.

ಜನಮೇಜಯ ರಾಜನು ಅಶ್ವಮೇಧ ಯಜ್ಞವನ್ನು ಮಾಡಿ, ಇಂದ್ರನ ಅರಮನೆಯಲ್ಲಿ ಬಿಡಾರಹಾಕಿದ್ದನು. ಸುಂದರ ಯಜ್ಞಾಶ್ವವನ್ನು ನೋಡುವ ಕುತೂಹಲದಿಂದ ಜನಮೇಜಯನ ರಾಣಿಯು ಏಕಾಕಿಯಾಗಿ ಅಶ್ವದ ಬಳಿ ಹೋದಾಗ, ಇಂದ್ರನು ಅವಳನ್ನು ಹಿಡಿದು, ಬಲಾತ್ಕಾರದಿಂದ ಭೋಗಿಸಿದನು. ರಾಣಿಯು ಈ ಬಲಾತ್ಕಾರದಿಂದ ಕಂಗೆಟ್ಟು, ಶರೀರ ತ್ಯಾಗಮಾಡಿದಳು.

ಈ ರೀತಿಯಾಗಿ, ಈ ಅಶ್ವಮೇಧಯಜ್ಞದ ಜೊತೆಗೆ ಅನೇಕ ಕುಕರ್ಮಗಳು ಹತ್ತಿಕೊಂಡು ಈ ಯಜ್ಞವು ಕೆಟ್ಟ ಹೆಸರನ್ನು ಪಡೆದು, ಈಗ ಲುಪ್ತವಾಗಿದೆ. ಇದಕ್ಕೆಲ್ಲಾ ವಾಮಮಾರ್ಗಿಗಳ ಕುಚೇಷ್ಟೆ-ಕುತಂತ್ರಗಳೇ ಕಾರಣ.

ವರ್ತಮಾನದಲ್ಲಿ ಬ್ರಾಹ್ಮಣ ಯಾಜ್ಞಿಕರು ಪಶುಯಾಗ ಮೊದಲಾದ ಇಂತಹ ಭ್ರಾಂತ ಕರ್ಮಕಾಂಡಗಳಲ್ಲಿನ ಅನೀತಿ-ಅಕರ್ಮಗಳನ್ನು ಪ್ರಕರಾಂತರಗಳಿಂದ ಸಮರ್ಥಿಸುವ ಬದಲು ಅವುಗಳಿಂದ ದೂರಸರಿದು ಸನ್ಮಾರ್ಗಕ್ಕೆ ಬರುವುದು ಒಳ್ಳೆಯದು.

**ಪಶುಶ್ಚೇನ್ನಿಹತಃ ಸ್ವರ್ಗಂ ಜ್ಯೋತಿಷ್ಟೋಮೇ ಗಮಿಷ್ಯತಿ ।**

**ಸ್ವಪಿತಾ ಯಜಮಾನೇನ ತತ್ರ ಕಥಂ ನ ಹಿಂಸ್ಯತೇ ॥ ೧ ॥**

**ಮೃತನಾಮಿಹ ಜಂತೂನಾಂ ಶ್ರಾದ್ಧಂ ಚೇತ್ತೃಪ್ತಿಕಾರಣಮ್ ।**

**ಗಚ್ಛತಾಮಿಹ ಜಂತೂನಾಂ ವ್ಯರ್ಥಂ ಪಾಥೇಯಕಲ್ಪನಮ್ ॥ ೨ ॥** (ಸರ್ವದರ್ಶನ ಸಂಗ್ರಹ)

ಪಶುವನ್ನು ಕೊಂದು ಅಗ್ನಿಯಲ್ಲಿ ಹೋಮಮಾಡುವುದರಿಂದ ಪಶುವು ಸ್ವರ್ಗಕ್ಕೆ ಹೋಗುತ್ತದೆಯಾದರೆ, ಯಜಮಾನನು ತನ್ನ ತಂದೆ ಮೊದಲಾದವರನ್ನು ಕೊಂದು, ಸ್ವರ್ಗಕ್ಕೆ ಕಳುಹಿಸಿಕೊಡುವುದಿಲ್ಲವೇಕೆ? (೧)

ಮೃತನಾದ ಮಾನವನ ತೃಪ್ತಿಗಾಗಿ ಶ್ರಾದ್ಧ ಹಾಗೂ ತರ್ಪಣ ಇರುವುದಾದರೆ, ವಿದೇಶಕ್ಕೆ ತೆರಳುವ ಜನರಿಗಾಗಿ ಮಾರ್ಗವ್ಯಯ-ಖಾದ್ಯಪೇಯಗಳ ಬುತ್ತಿ ಕಟ್ಟಿಕೊಡುವುದು ವ್ಯರ್ಥವಾಗಿರುತ್ತದೆ. ಏಕೆಂದರೆ - ಮೃತರಾದವನಿಗೆ ಶ್ರಾದ್ಧ-ತರ್ಪಣದಿಂದ ಅನ್ನ-ಜಲ ಸಿಕ್ಕುವುದಾದರೆ, ಜೀವಂತರಾಗಿ ಪರದೇಶದಲ್ಲಿರುವವರಿಗಾಗಿ, ಅಥವಾ ಮಾರ್ಗದಲ್ಲಿ ಸಂಚರಿಸುತ್ತಿರುವವರಿಗಾಗಿ, ಮನೆಯಲ್ಲಿ ಬೇಯಿಸಿದ ಭೋಜನವನ್ನು ಎಲೆಯ ಮೇಲೆ ಬಡಿಸಿ, ಪಾತ್ರೆಯನ್ನು ತುಂಬಿಸಿ, ಅವರ ಹೆಸರನ್ನು ಹೇಳುವುದರಿಂದ ಅವರಿಗೆ ತಲುಪುವುದಿಲ್ಲವೇಕೆ? ಜೀವಂತನಾಗಿದ್ದು ದೂರದಲ್ಲಿ ಅಥವಾ ಹತ್ತು ಮೊಳ ದೂರದಲ್ಲಿ ಕುಳಿತವನಿಗೆ ಕೊಟ್ಟುದು ತಲುಪುವುದಿಲ್ಲವಾದರೆ, ಸತ್ತವನ ಹತ್ತಿರಕ್ಕೆ ಯಾವ ರೀತಿಯಲ್ಲಿಯೂ ತಲುಪಲಾರದು. ಜನರು, ಅವರ ಇಂತಹ ಯುಕ್ತಿಸಿದ್ಧವಾದ ಉಪದೇಶಗಳನ್ನು ಒಪ್ಪತೊಡಗಿದರು. ಆಗ ಪೋಪರೂ ಕೂಡ ಅವರ ಕಡೆಗೇ ಓಲಿದರು. ಏಕೆಂದರೆ, ಇವರಗೆ ಎಲ್ಲಿ ಭಾರೀ ತುತ್ತು ಚೆನ್ನಾಗಿ ಸಿಕ್ಕುವುದೋ, ಅಲ್ಲಿಗೇ ಹೊರಟು ಹೋಗುವರು. ಸರ್‍ರನೆ ಜೈನರಾಗತೊಡಗಿದರು. ಜೈನ(ಮತ) ದಲ್ಲಿಯೂ ಬೇರೆ ಬಗೆಯ ಪೋಪ ಲೀಲೆ ಬಹಳವಿದೆ. ಅದನ್ನ ಹನ್ನೆರಡನೆಯ ಸಮುಲ್ಲಾಸದಲ್ಲಿ ಬರೆಯುವೆವು.

ಬಹುಮಂದಿ ಇವರ ಮತವನ್ನು ಸ್ವೀಕಾರಮಾಡಿದರು. ಆದರೆ, ಪರ್ವತ ಪ್ರದೇಶಗಳು, ಕಾಶೀ, ಕನ್ಯಾಕುಬ್ಜ, ಪಶ್ಚಿಮ ಮತ್ತು ದಕ್ಷಿಣ ದೇಶಗಳ ಅದೆಷ್ಟೋ ಮಂದಿ ಜನರು ಜೈನರ ಮತವನ್ನು ಸ್ವೀಕರಿಸಲಿಲ್ಲ. ಆ ಜೈನರು ವೇದಾರ್ಥವನ್ನು ತಿಳಿಯದೆ, ಬಾಹ್ಯ ಪೋಪಲೀಲೆಯನ್ನು ಭ್ರಾಂತಿಯಿಂದ ವೇದಾನುಕೂಲವೆಂದು ಅಂಗೀಕರಿಸಿ, ವೇದಗಳನ್ನೂ ಕೂಡ ನಿಂದಿಸಲಾರಂಭಿಸಿದರು.[೨೫] ಅದರ ಪಠನ-ಪಾಠನಗಳನ್ನೂ, ಯಜ್ಞೋಪವೀತ-ಹಾಗೂ ಬ್ರಹ್ಮಚರ್ಯ ಮೊದಲಾದ ನಿಯಮಗಳನ್ನೂ ಕೂಡ ನಾಶಮಾಡಿದರು. ವೇದಗಳೇ ಮೊದಲಾದುವುಗಳ ಎಷ್ಟು ಪುಸ್ತಕಗಳು ಎಲ್ಲಿ ಸಿಕ್ಕಿದುವೋ, ಅಷ್ಟನ್ನೂ ನಾಶಪಡಿಸಿದರು. ಆರ್ಯರ ಮೇಲೆ ಬಹಳ ರಾಜ್ಯಶಾಸನವನ್ನೂ ಕೂಡ ನಡೆಯಿಸಿದರು; ದುಃಖವನ್ನು ಕೊಟ್ಟರು. ಯಾವಾಗ ಅವರಿಗೆ ಭಯ ಸಂಶಯ ಉಳಿಯಲಿಲ್ಲವೋ, ಆಗ ತಮ್ಮ ಮತೀಯರಾದ ಗೃಹಸ್ಥರಿಗೆ ಮತ್ತು ಸಾಧುಗಳಿಗೆ ಗೌರವವನ್ನೂ, ಮತ್ತು ವೇದಮಾರ್ಗಿಗಳಿಗೆ ಅಪಮಾನವನ್ನೂ ಮತ್ತು ಪಕ್ಷಪಾತದಿಂದ ಶಿಕ್ಷೆಯನ್ನೂ ಕೂಡ ಕೊಡತೊಡಗಿದರು.[೨೬] ಮತ್ತು ತಾವು ಸುಖದಲ್ಲಿ, ಆರಾಮದಲ್ಲಿ ಮತ್ತು ಗರ್ವದಲ್ಲಿ ಉಬ್ಬ ತಿರುಗಹತ್ತಿದರು. ಋಷಭದೇವನಿಂದ ಹಿಡಿದು ಮಹಾವೀರನವರೆಗಿನ ತಮ್ಮ ತೀರ್ಥಂಕರರ ದೊಡ್ಡ ದೊಡ್ಡ ಪ್ರತಿಮೆಗಳನ್ನು ರಚಿಸಿ, ಪೂಜೆ ಮಾಡತೊಡಗಿದರು. ಎಂದರೆ-ಪಾಷಾಣ-ಮೊದಲಾದುದರ ವಿಗ್ರಹಗಳ ಪೂಜೆಯ ಮೂಲ ಜೈನರಿಂದ ಪ್ರಚಲಿತವಾಯಿತು. ಪರಮೇಶ್ವರನ ಅಂಗೀಕಾರ ಕಡಿಮೆಯಾಯಿತು; ಶಿಲೆಯೇ ಮೊದಲಾದುವುಗಳ ಮೂರ್ತಿಗಳ ಪೂಜೆಯಲ್ಲಿ ತೊಡಗಿದರು. ಹೀಗೆ ಮುನ್ನೂರು ವರ್ಷಗಳವರೆಗೆ ಆರ್ಯಾವರ್ತದಲ್ಲಿ ಜೈನರ[೨೭] ರಾಜ್ಯವಿದ್ದಿತು. ಪ್ರಾಯಶಃ (ಜನರು) ವೇದಾರ್ಥ ಜ್ಞಾನದಿಂದ ಶೂನ್ಯರಾಗಿ ಹೋಗಿದ್ದರು. ಈ ಘಟನೆಗೆ ಸುಮಾರು ಎರಡೂವರೆ ಸಾವಿರ ವರ್ಷಗಳು ತೀರಿರಬಹುದು.

೨, ೨೦೦ ವರ್ಷಗಳು ಉರುಳಿವೆ. ಶಂಕರಾಚಾರ್ಯರೆಂಬ ದ್ರವಿಡದೇಶೋತ್ಪನ್ನರಾದ (ಕೇರಳೀಯ) ಬ್ರಾಹ್ಮಣರೊಬ್ಬರು ವ್ಯಾಕರಣ ಮೊದಲಾದ ಸರ್ವಶಾಸ್ತ್ರಗಳನ್ನೂ ಓದಿ, "ಓಹೋ! ಸತ್ಯವೂ, ಆಸ್ತಿಕವೂ ಆದ ವೇದಮತ ಬಿಟ್ಟುಹೋದುದು ಮತ್ತು

---

೨೫. ಪ್ರಮಾಣಕ್ಕಾಗಿ ಕರ್ನಾಟಕದವನೇ ಆದ ಸೋಮದೇವಸೂರಿ ವಿರಚಿತ 'ಯಶಸ್ತಿಲಕಚಂಪೂ' [ಸಂಸ್ಕೃತ] ಎಂಬ ಗ್ರಂಥವನ್ನು ಓದಿ.

೨೬. ರಾಜನು ಯಾವಾಗ ಜೈನಮತವನ್ನು ಅಂಗೀಕರಿಸುತ್ತಿದ್ದನೋ, ಆಗ ವೇದಮಾರ್ಗಿಗಳನ್ನು ಆನೆಯ ಕಾಲಿನಿಂದ ತುಳಿಸಿ, ಕೊಲ್ಲಿಸುತ್ತಿದ್ದರೆಂದು ಇತಿಹಾಸವಿದೆ. ಉಜ್ಜಯನಿಯ ರಾಜನು ಹೀಗೆ ಮಾಡುತ್ತಿದ್ದನು. ಆದ್ದರಿಂದ ಶಂಕರಾಚಾರ್ಯರು ಮೊದಲು ಅಲ್ಲಿಗೆ ಹೊರಟರು.

೨೭. ಜೈನರ ಐತಿಹಾಸಿಕ ಹಿನ್ನೆಲೆ ಮತ್ತು ಮೂರ್ತಿಪೂಜೆಯ ಬಗ್ಗೆ ವಿಶೇಷ ವಿವರಗಳಿಗೆ ಪರಿಶಿಷ್ಟ-೩ ನ್ನು ನೋಡಿರಿ.

ಜೈನ ನಾಸ್ತಿಕ ಮತದ ಪ್ರಚಲನವಾದುದು ಮಹಾ ಹಾನಿಕರವಾದ ವಿಷಯವಾಗಿದೆ. ಇವರನ್ನು ಹೇಗಾದರೂ ನಿಗ್ರಹಿಸಬೇಕು".- ಎಂದು ಯೋಚಿಸಲಾರಂಭಿಸಿದರು. ಶಂಕರಾಚಾರ್ಯರು ಶಾಸ್ತ್ರಗಳನ್ನಂತೂ ಓದಿಯೇ ಇದ್ದರು. ಜೊತೆಗೆ, ಜೈನಮತದ ಪುಸ್ತಕಗಳನ್ನೂ ಓದಿದ್ದರು. ಮತ್ತು ಅವರ ಯುಕ್ತಿಯೂ ಕೂಡ ಬಹಳ ಪ್ರಬಲವಾಗಿದ್ದಿತು. ಇವರನ್ನು ಹೇಗೆ ಮೂಲೆಗುಂಪಾಗಿಸಬೇಕು. ಎಂದವರು ಆಲೋಚಿಸಿದರು. ಉಪದೇಶ ಮತ್ತು ಶಾಸ್ತ್ರಾರ್ಥಗಳನ್ನು ಮಾಡುವುದರಿಂದ ಈ ಜನರು ದೂರ ಸರಿದುಹೋಗುವರೆಂದು ನಿಶ್ಚಯವಾಯಿತು. ಹೀಗೆ ಆಲೋಚಿಸಿ, ಉಜ್ಜಯಿನೀ ನಗರಿಗೆ ಬಂದರು. ಅಲ್ಲಿ ಅಕಾಲದಲ್ಲಿ ಜೈನರ ಗ್ರಂಥಗಳನ್ನೂ ಮತ್ತು ಸ್ವಲ್ಪ ಸಂಸ್ಕೃತವನ್ನೂ ಕೂಡ ಓದಿದ್ದ ಸುಧನ್ವರು ರಾಜರಾಗಿದ್ದರು. ಅಲ್ಲಿ ಹೋಗಿ, ವೇದೋಪದೇಶ ಮಾಡತೊಡಗಿದರು ಮತ್ತು ರಾಜನನ್ನು ಸಂಧಿಸಿ -"ತಾವು ಸಂಸ್ಕೃತವನ್ನೂ ಮತ್ತು ಜೈನರ ಗ್ರಂಥಗಳನ್ನೂ ಕೂಡ ಓದಿದ್ದೀರಿ; ಮತ್ತು ಜೈನಮತವನ್ನು ಅಂಗೀಕರಿಸಿದ್ದೀರಿ. ಆದುದರಿಂದ ನಾನು ತಮಗೆ, ಯಾವನು ಸೋಲುವನೋ, ಅವನು ಗೆಲ್ಲುವವನ ಮತವನ್ನು ಸ್ವೀಕರಿಸಬೇಕು - ಎಂಬ ಪ್ರತಿಜ್ಞೆಯ ಮೇಲೆ, ಜೈನರ ಪಂಡಿತರೊಂದಿಗೆ ನನ್ನ ಶಾಸ್ತ್ರಾರ್ಥವನ್ನು ಮಾಡಿಸಬೇಕೆಂದು ಕೋರುತ್ತೇನೆ. ಮತ್ತು ತಾವೂ ಕೂಡ ಗೆಲ್ಲುವವನ ಮತವನ್ನು ಸ್ವೀಕರಿಸಿರಿ". - ಎಂದು ಹೇಳಿದರು.

ಸುಧನ್ವರಾಜರು ಜೈನಮತದಲ್ಲಿದ್ದರೂ ಕೂಡ, ಸಂಸ್ಕೃತ ಗ್ರಂಥಗಳನ್ನು ಓದುವುದರಿಂದ, ಅವರ ಬುದ್ಧಿಯಲ್ಲಿ ಸ್ವಲ್ಪ ವಿದ್ಯಾಪ್ರಕಾಶವಿದ್ದಿತು. ಇದರಿಂದಾಗಿ ಅವರ ಮನಸ್ಸನ್ನು ಅತ್ಯಂತ ಪಶುತ್ವವು ಆವರಿಸಿರಲಿಲ್ಲ. ಏಕೆಂದರೆ, **ಯಾವನು ವಿದ್ವಾಂಸನಾಗಿರುತ್ತಾನೋ, ಅವನು ಸತ್ಯಾಸತ್ಯದ ಪರೀಕ್ಷೆಯನ್ನು ಮಾಡಿ, ಸತ್ಯದ ಸ್ವೀಕಾರವನ್ನೂ ಮತ್ತು ಅಸತ್ಯದ ತ್ಯಾಗವನ್ನೂ ಮಾಡುತ್ತಾನೆ**. ಎಂದಿನವರೆಗೆ ಸುಧನ್ವರಾಜರಿಗೆ ದೊಡ್ಡ ವಿದ್ವಾಂಸನಾದ ಉಪದೇಶಕನು ಸಿಕ್ಕಿರಲಿಲ್ಲವೋ, ಅಲ್ಲಿಯವರೆಗೆ ಇವುಗಳಲ್ಲಿ ಸತ್ಯವಾವುದು ಮತ್ತು ಅಸತ್ಯವಾದುದು-ಎಂಬ ಸಂದೇಹದಲ್ಲಿದ್ದರು. ಯಾವಾಗ ಶಂಕರಾಚಾರ್ಯರ ಈ ಮಾತನ್ನು ಕೇಳಿದರೋ, ಆಗ ಬಹಳ ಪ್ರಸನ್ನತೆಯಿಂದ - "ನಾವು ಶಾಸ್ತ್ರಾರ್ಥವನ್ನು ಮಾಡಿಸಿ, ಸತ್ಯಾಸತ್ಯನಿರ್ಣಯವನ್ನು ಅವಶ್ಯವಾಗಿ ಮಾಡಿಸುವೆವು".- ಎಂದು ಹೇಳಿದರು.

ಜೈನರ ಪಂಡಿತರುಗಳನ್ನು ದೂರದೂರದಿಂದ ಕರೆಯಿಸಿ ಸಭೆಯನ್ನು ಮಾಡಿಸಿದರು. ಅದರಲ್ಲಿ ಶಂಕರಾಚಾರ್ಯರದು ವೇದಮತವೂ ಮತ್ತು ಜೈನರದು ವೇದವಿರುದ್ಧವಾದ ಮತವೂ ಆಗಿದ್ದಿತು. ಎಂದರೆ, ಶಂಕರಾಚಾರ್ಯರ ಪಕ್ಷ ವೇದಮತದ ಸ್ಥಾಪನೆಯೂ ಹಾಗೂ ಜೈನರ(ಮತದ) ಖಂಡನವೂ, ಮತ್ತು ಜೈನರ ಪಕ್ಷ ತಮ್ಮ ಮತದ ಸ್ಥಾಪನೆಯೂ ಹಾಗೂ ವೇದದ ಖಂಡನವೂ ಆಗಿದ್ದಿತು. ಶಾಸ್ತ್ರಾರ್ಥ ಅನೇಕ ದಿನಗಳವರೆಗೆ ಆಯಿತು. ಜೈನರ ಮತವು - "ಸೃಷ್ಟಿಯ ಕರ್ತೃವಾದ ಅನಾದಿ ಈಶ್ವರನು ಯಾವನೂ ಇಲ್ಲ. ಈ ಜಗತ್ತು ಮತ್ತು ಜೀವರು ಅನಾದಿಗಳಾಗಿದ್ದಾರೆ. ಈ ಎರಡು ತತ್ತ್ವಗಳ ಉತ್ಪತ್ತಿ ಮತ್ತು ನಾಶ ಎಂದಿಗೂ ಆಗುವುದಿಲ್ಲ". ಎಂಬುದಾಗಿದ್ದಿತು. ಇದಕ್ಕೆ ವಿರುದ್ಧವಾಗಿ ಶಂಕರಾಚಾರ್ಯರ ಮತವು "ಅನಾದಿಸಿದ್ಧನಾದ ಪರಮಾತ್ಮನೇ ಜಗತ್ತಿನ ಕರ್ತೃವಾಗಿದ್ದಾನೆ. ಈ ಜಗತ್ತು ಮತ್ತು ಜೀವ ಮಿಥ್ಯೆ. ಏಕೆಂದರೆ, ಆ ಪರಮೇಶ್ವರನು ತನ್ನ ಮಾಯೆಯಿಂದ ಜಗತ್ತನ್ನು ರಚಿಸಿದನು. ಅವನೇ ಧಾರಣ ಹಾಗೂ ಪ್ರಳಯವನ್ನು ಮಾಡುತ್ತಾನೆ. ಮತ್ತು ಈ ಜೀವ ಹಾಗೂ ಪ್ರಪಂಚ ಸ್ವಪ್ನದಂತಿವೆ. ಪರಮೇಶ್ವರನು ತಾನೇ ಸರ್ವರೂಪನಾಗಿ ಲೀಲೆಯನ್ನು ಮಾಡುತ್ತಿದ್ದಾನೆ" - ಎಂಬುದಾಗಿದ್ದಿತು. ಬಹುದಿನಗಳವರೆಗೆ ಶಾಸ್ತ್ರಾರ್ಥವಾಗುತ್ತಾ ಹೋಯಿತು. ಆದರೆ ಕೊನೆಯಲ್ಲಿ, ಯುಕ್ತಿ ಮತ್ತು ಪ್ರಮಾಣದಿಂದ ಜೈನರಮತವು ಕಡಿದುಹೋಯಿತು ಮತ್ತು ಶಂಕರಾಚಾರ್ಯರ ಮತವು ಅಖಂಡವಾಗಿ ಉಳಿಯಿತು. ಆಗ ಆ ಜೈನರ ಪಂಡಿತರೂ ಮತ್ತು ಸುಧನ್ವರಾಜರೂ ವೇದಮತವನ್ನು ಸ್ವೀಕರಿಸಿದರು; ಜೈನಮತವನ್ನು ಬಿಟ್ಟುಬಿಟ್ಟರು. ಮತ್ತೆ ಬಹಳ ಕೋಲಾಹಲವಾಯಿತು ಮತ್ತು ಸುಧನ್ವರಾಜರು ತಮ್ಮ ಇಷ್ಟಮಿತ್ರರಾದ ರಾಜರುಗಳಿಗೆ ಬರೆದು, ಶಂಕರಾಚಾರ್ಯರಿಂದ ಶಾಸ್ತ್ರಾರ್ಥ ಮಾಡಿಸಿದರು. ಆದರೆ, ಜೈನರ ಪರಾಜಯ ಕಾಲ ಬಂದಿದ್ದುದರಿಂದ, ಪರಾಜಿತರಾಗುತ್ತಾ ಹೋದರು. ಆ ಮೇಲೆ, ಆರ್ಯಾವರ್ತ ದೇಶದಲ್ಲಿ ಎಲ್ಲೆಡೆಯೂ ಶಂಕರಾಚಾರ್ಯರಿಗೆ ಪರ್ಯಟನ ಮಾಡುವ ವ್ಯವಸ್ಥೆಯನ್ನು ಸುಧನ್ವರೇ ಮೊದಲಾದ ರಾಜರುಗಳು ಮಾಡಿಸಿದರು ಮತ್ತು ಅವರ ರಕ್ಷಣೆಗಾಗಿ ಜೊತೆಗೆ ಸೇವಕ - ಪರಿಚಾರಕರನ್ನೂ ಕೂಡ ನೇಮಿಸಿದರು.

ಅದೇ ಕಾಲದಿಂದ ಎಲ್ಲರಿಗೂ ಯಜ್ಞೋಪವೀತ ಸಂಸ್ಕಾರಗಳು ಆಗತೊಡಗಿದವು. ವೇದಗಳ ಪಠನ-ಪಾಠನವೂ ಆರಂಭವಾಯಿತು. ಶಂಕರರು ಹತ್ತು ವರ್ಷಗಳಷ್ಟು ಕಾಲ ಆರ್ಯಾವರ್ತದಲ್ಲಿ ಸುತ್ತಾಡಿ, ಜೈನ(ಮತ)ದ ಖಂಡನವನ್ನೂ ಮತ್ತು ವೇದಗಳ ಮಂಡನವನ್ನೂ ಮಾಡಿದರು. ಅಲ್ಲದೆ, ಶಂಕರಾಚಾರ್ಯರ ಕಾಲದಲ್ಲಿ ಜೈನ(ಮತದ) ವಿಧ್ವಂಸವಾಯಿತು. ಅಂದರೆ, ಜೈನರ ಎಷ್ಟು ವಿಗ್ರಹಗಳು ಭೂಗತವಾಗಿ ಸಿಕ್ಕುತ್ತವೋ, ಅವು ಶಂಕರಾಚಾರ್ಯರ ಕಾಲದಲ್ಲಿ ಭಗ್ನವಾಗಿದ್ದವು. ಮತ್ತು ಯಾವವು ಭಗ್ನವಾಗದೆಯೇ ನೆಲದಿಂದ ಹೊರಬರುತ್ತವೋ, ಅವುಗಳನ್ನು ಜೈನರು ಮುರಿಯಲ್ಪಡದೇ ಇರಲಿ-ಎಂದು ಹೂತಿಟ್ಟಿದ್ದರು. ಅವು

ಈ ವರೆಗೂ ಕೂಡ ಎಲ್ಲೆಲ್ಲಿಯೂ ಭೂಮಿಯೊಳಗಿನಿಂದ ಹೊರಬರುತ್ತವೆ. ಶಂಕರಾಚಾರ್ಯರಿಗಿಂತ ಮೊದಲು ಶೈವಮತವೂ ಸ್ವಲ್ಪ ಪ್ರಚಲಿತವಾಗಿದ್ದಿತು. ಅದನ್ನೂ ಕೂಡ ಖಂಡಿಸಿದರು.[೨೮] ವಾಮಮಾರ್ಗದ ಖಂಡನವನ್ನೂ ಮಾಡಿದರು.

ಆ ಕಾಲದಲ್ಲಿ ದೇಶದಲ್ಲಿ ಐಶ್ವರ್ಯ ಪುಷ್ಕಳವಾಗಿದ್ದಿತು. ಮತ್ತು ಸ್ವದೇಶಭಕ್ತಿಯೂ ಕೂಡಿ ಇದ್ದಿತು. ಜೈನರ ದೇವಾಲಯಗಳನ್ನು ಶಂಕರಾಚಾರ್ಯರು ಅಥವಾ ಸುಧನ್ವ ರಾಜರು ಒಡೆಯಿಸಿರಲಿಲ್ಲ. ಏಕೆಂದರೆ, ಅವುಗಳಲ್ಲಿ ವೇದಗಳೇ ಮೊದಲಾದುದರ ಪಾಠಶಾಲೆಗಳನ್ನು ನಡೆಯಿಸುವ ಇಚ್ಛೆಯಿದ್ದಿತು. ಯಾವಾಗ ವೇದಮತದ ಸ್ಥಾಪನೆಯಾಯಿತೋ ಮತ್ತು ವಿದ್ಯಾಪ್ರಚಾರಮಾಡುವ ಆಲೋಚನೆಯನ್ನು ಮಾಡುತ್ತಲಿದ್ದರೋ, ಆಗಲೇ, ಅಷ್ಟರಲ್ಲಿಯೇ ಇಬ್ಬರು ಜೈನರು ಹೊರಗೆಮಾತ್ರ ಹೆಸರಿಗೆ ವೇದಮತೀಯರೂ ಮತ್ತು ಒಳಗಿನಿಂದ ಕಟ್ಟುಗ್ರ ಜೈನರೂ–ಅಂದರೆ ಕಪಟಮುನಿಗಳೂ ಆದವರು ಬಳಿಸೇರಿದರು. ಶಂಕರಾಚಾರ್ಯರು ಅವರ ಮೇಲೆ ಬಹಳ ಪ್ರಸನ್ನರಾಗಿದ್ದರು. ಅವರಿಬ್ಬರೂ ಅವಕಾಶ ಸಾಧಿಸಿ ಶಂಕರಾಚಾರ್ಯರಿಗೆ ಹಸಿವೆಯೇ ಮಂದವಾಗಿ ಹೋಗುವಂತಹ ವಿಷಯುಕ್ತವಾದ ವಸ್ತುವನ್ನು ತಿನ್ನಿಸಿದರು. ಆಮೇಲೆ ಶರೀರದಲ್ಲಿ ಗುಳ್ಳೆಗಳು ಗಾಯಗಳು ಉದ್ಭವಿಸಿ, ಆರು ತಿಂಗಳುಗಳೊಳಗೆ ಶರೀರವು ಬಿದ್ದುಹೋಯಿತು. ಆಗ ಎಲ್ಲರೂ ನಿರುತ್ಸಾಹರಾಗಿಹೋದರು ಮತ್ತು ಯಾವ ವಿದ್ಯಾಪ್ರಚಾರವಾಗಲಿದ್ದಿತೋ, ಅದೂ ಕೂಡ ಆಗದೇ ಹೋಯಿತು. ಅವರು ಶಾರೀರಕ ಭಾಷ್ಯ ಮೊದಲಾದ ಯಾವಯಾವದನ್ನು ರಚಿಸಿದ್ದರೋ, ಅವುಗಳ ಪ್ರಚಾರವನ್ನು ಶಂಕರಾಚಾರ್ಯರ ಶಿಷ್ಯರು ಮಾಡತೊಡಗಿದರು. ಎಂದರೆ, ಜೈನರ ಖಂಡನಕ್ಕಾಗಿ ಬ್ರಹ್ಮಸತ್ಯ; ಜಗನ್ಮಿಥ್ಯಾ; ಮತ್ತು ಜೀವ–ಬ್ರಹ್ಮ–ಏಕತ್ವದ ಯಾವ ಯಾವ ಕಥನವನ್ನು ಮಾಡಿದ್ದರೋ, ಅದರ ಉಪದೇಶವನ್ನು ಮಾಡಲಾರಂಭಿಸಿದರು.

ದಕ್ಷಿಣದಲ್ಲಿ ಶೃಂಗೇರಿ, ಪೂರ್ವದಲ್ಲಿ ಭೂಗೋರ್ಧನ (ಪುರೀ ಜಗನ್ನಾಥ[೨೯]). ಉತ್ತರದಲ್ಲಿ ಜೋಷೀ ಮತ್ತು ದ್ವಾರಿಕೆಯಲ್ಲಿ ಶಾರದಾಮಠಗಳನ್ನು ಸ್ಥಾಪಿಸಿ, ಶಂಕರಾಚಾರ್ಯರ ಶಿಷ್ಯರು ಮಹಂತರಾಗಿ, ಮತ್ತು ಐಶ್ವರ್ಯಶಾಲಿಗಳಾಗಿ, ವಿಲಾಸಿಗಳಾಗಿ ಇರತೊಡಗಿದರು. ಏಕೆಂದರೆ, ಶಂಕರಾಚಾರ್ಯರ ನಂತರ ಅವರ ಶಿಷ್ಯರಿಗೆ ಬಹಳ ಗೌರವ ಸಿಕ್ಕತೊಡಗಿತು.

ಈಗ ಈ ಬಗೆಗೆ ಯೋಚಿಸಬೇಕಾದುದು ಹೀಗಿದೆ. ಜೀವಬ್ರಹ್ಮರ ಏಕತ್ವ, ಜಗತ್ತಿನ ಮಿಥ್ಯಾತ್ವ ಶಂಕರಾಚಾರ್ಯರ ಸ್ವಂತ ಮತವಾಗಿದ್ದಲ್ಲಿ, ಅದು ಒಳ್ಳೆಯ ಮತವಲ್ಲ. ಜೈನರ (ಮತದ) ಖಂಡನಕ್ಕಾಗಿ ಆ ಮತವನ್ನು ಸ್ವೀಕರಿಸಿದ್ದಲ್ಲಿ ಸ್ವಲ್ಪ ಒಳ್ಳೆಯದು.

ನವೀನ ವೇದಾಂತಿಗಳ ಮತವು ಹೀಗಿದೆ:–

**ಪ್ರಶ್ನೆ:**– ಜಗತ್ತು ಸ್ವಪ್ನದಂತೆ, ಹಗ್ಗದಲ್ಲಿ ಹಾವಿನಂತೆ, ಚಿಪ್ಪಿನಲ್ಲಿ ಬೆಳ್ಳಿಯಂತೆ, ಬಿಸಿಲ್ಗುದುರೆಯಲ್ಲಿ ನೀರಿನಂತೆ, ಇಂದ್ರಜಾಲದ ಗಂಧರ್ವ ನಗರದಂತೆಯಿದೆ;[೩೦] ಈ ಪ್ರಪಂಚ ಸುಳ್ಳಾಗಿದೆ. ಒಂದು ಬ್ರಹ್ಮಮಾತ್ರ ಸತ್ಯವಾಗಿದೆ.

**ಸಿದ್ಧಾಂತಿ:**– ನೀವು ಯಾವುದನ್ನು ಸುಳ್ಳು ಎನ್ನುತ್ತೀರಿ?

---

೨೮. 'ನೋಡಿ, ಶಂಕರದಿಗ್ವಿಜಯ' –ಸರ್ಗ ೧೫, ಶ್ಲೋಕ ೧೬೪

ಶಾಕ್ತೈಃ ಪಾಶುಪತೈಪಿ ಕ್ಷಪಣಕೈಃ ಕಾಪಾಲಿಕೈರ್ವೈಷ್ಣವೈರಪ್ಯ ನ್ಯೈರಖಿಲೈಃ ಖಿಲಂ ಖಲು ಖಲೈದದರ್ಧೂರ್ವಾದಿಭಿವ್ವೈದಿಕಮ್।
ಮಾರ್ಗಂ ರಕ್ಷಿತುಮುಗ್ರವಾದಿವಿಜಯಂ ನೋ ಮಾನಹೇತೋರ್ವ್ಯಧಾತ್
ಸರ್ವಜ್ಞೋ ನ ಯತೋಽಸ್ಯ ಸಂಭವತಿ ಸಮ್ಮಾನಗ್ರಹಗ್ರಸ್ತತಾ॥

–ಆಶ್ಚರ್ಯದ ವಿಷಯವೇನೆಂದರೆ, ಶಂಕರಾಚಾರ್ಯರು ಯಾವ ಶೈವ ಮತ ಖಂಡನೆ ಯನ್ನು ಮಾಡಿದ್ದರೋ, ಅವರ ಅನುಯಾಯಿ ಉತ್ತರಾಧಿಕಾರಿ ಶಂಕರಾಚಾರ್ಯರುಗಳು ಶೈವ ಮತವನ್ನೇ ಅಂಗೀಕರಿಸುತ್ತಾರೆ. –ಯು.ಮೀ.

೨೯. ಪ್ರಚಲಿತ ಧಾರಣೆಯಂತೆ, ಆದಿಶಂಕರಾಚಾರ್ಯರೇ ಈ ನಾಲ್ಕೂ ಮಠಗಳನ್ನೂ, ಮತ್ತು ಅವುಗಳಲ್ಲಿನ ವಿಗ್ರಹದ ಪ್ರತಿಷ್ಠೆ, ಪೂಜೆ ಮೊದಲಾದ ವ್ಯವಸ್ಥೆಯನ್ನು ಮಾಡಿದರೆಂದು ನಂಬಿಕೆ ಇದೆ. ಆದರೆ, ಇಲ್ಲಿ ಮಹರ್ಷಿ ದಯಾನಂದರು ಆದಿಶಂಕರಾಚಾರ್ಯರ ಅನುಯಾಯಿಗಳು ಈ ಮಠಗಳನ್ನು ಸ್ಥಾಪಿಸಿದರೆಂದು ಹೇಳುತ್ತಾರೆ. ಆದಿಶಂಕರಾಚಾರ್ಯರ ಶಿಷ್ಯಂದಿರೂ ಕೂಡ ಶಂಕರಾಚಾರ್ಯರ ಹೆಸರಿನಿಂದಲೇ ತಾವು ಮೆರೆದು, ಮೆರೆಯುತ್ತಿರುವ ಕಾರಣದಿಂದ, ಇವರ ಕಾರ್ಯಗಳೆಲ್ಲಾ ಆದಿ ಶಂಕರಾಚಾರ್ಯರ ತಲೆಗೆ ಕಟ್ಟಿಬಿಟ್ಟಿದೆ, ಎಂದು ಹೇಳಿದರೆ, ಅತಿಶಯೋಕ್ತಿ ಏನಲ್ಲ.! ಏಕೆಂದರೆ, ಅದಿಶಂಕರಾಚಾರ್ಯರ ಹೆಸರಿನಲ್ಲಿ ರಚಿತವಾಗಿರುವ ದೇವೀ–ದೇವತೆಗಳ ಸ್ತೋತ್ರ ಪಾಠಗಳಂತಹ ಗ್ರಂಥಗಳು ಅವರದಲ್ಲವೆಂದೂ, ಅವರ ಅನುಯಾಯೀ ವಿದ್ವಾಂಸರೇ ಒಪ್ಪುತ್ತಾರೆ. ಆದಿಶಂಕರಾಚಾರ್ಯರಂತಹ ಅಸಾಧಾರಣ, ಅಭೂತಪೂರ್ವ ವ್ಯಕ್ತಿತ್ವವು ಇಂತಹ ಸಾಮಾನ್ಯ ಜನರಂಜನೆಯ ಕಾರ್ಯಗಳನ್ನು ಮಾಡಿರಲಿಲ್ಲವೆಂಬುದು, ಅವರ 'ಶಾರೀರಕ ಭಾಷ್ಯ'ದ ಸ್ತರದಿಂದಲೇ ತಿಳಿದುಬರುತ್ತದೆ.

೩೦. ವರ್ಷಾ ಋತುವಿನ ನಂತರ ಆಕಾಶದಲ್ಲಿ ಕಾಣುವ ಮೇಘಮಂಡಲವು ಒಮ್ಮೊಮ್ಮೆ ನಗರದಂತೆ ಕಾಣಿಸುತ್ತದೆ. ಇದಕ್ಕೆ ಗಂಧರ್ವನಗರ ಎಂದು ಕಲ್ಪನೆ.

**ನವೀನ:**– ಯಾವ ವಸ್ತು ಇಲ್ಲವೋ, ಮತ್ತು ಪ್ರತೀತವಾಗುತ್ತದೋ, ಅದನ್ನು.

**ಸಿದ್ಧಾಂತಿ:**– ಯಾವ ವಸ್ತುವೇ ಇಲ್ಲವೋ, ಅದರ ಪ್ರತೀತಿಯಾಗಬಲ್ಲದೆಂತು?

**ನವೀನ:**– ಅಧ್ಯಾರೋಪದಿಂದ

**ಸಿದ್ಧಾಂತಿ:**– ಯಾವುದನ್ನು ಅಧ್ಯಾರೋಪವೆನ್ನುತ್ತೀರಿ?

**ನವೀನ :**– **"ವಸ್ತುನ್ಯವಸ್ತ್ವಾ ರೋಪಣಮಧ್ಯಾಸಃ"**[೩೧] **"ಅಧ್ಯಾರೋಪಾಪ ವಾದಾಭ್ಯಂ ನಿಷ್ಪ್ರಪಂಚಂ ಪ್ರಪಂಚ್ಯತೇ"**.[೩೨] ಪದಾರ್ಥವಾವುದೋ ಒಂದಾಗಿದ್ದು, ಅದರಲ್ಲಿ ಅನ್ಯವಸ್ತುವಿನ ಆರೋಪಣ ಮಾಡುವುದು ಅಧ್ಯಾಸ, ಅಧ್ಯಾರೋಪ ಹಾಗೂ ಅದರ ನಿರಾಕರಣವನ್ನು ಮಾಡುವುದು ಅಪವಾದವೆನಿಸುತ್ತದೆ. ಇವೆರಡರಿಂದ ಪ್ರಪಂಚರಹಿತವಾದ ಬ್ರಹ್ಮದಲ್ಲಿ ಪ್ರಪಂಚವೆಂಬ ಜಗತ್ತಿನ ವಿಸ್ತಾರವನ್ನು ಮಾಡುತ್ತಾರೆ.

**ಸಿದ್ಧಾಂತಿ:**– ನೀವು ಹಗ್ಗವನ್ನು ವಸ್ತು ಮತ್ತು ಸರ್ಪವನ್ನು ಅವಸ್ತುವೆಂದು ಅಂಗೀಕರಿಸಿ, ಈ ಭ್ರಮಜಾಲದಲ್ಲಿ ಬಿದ್ದಿದ್ದೀರಿ. ಸರ್ಪವು ವಸ್ತುವಲ್ಲವೇನು? ಹಗ್ಗದಲ್ಲಿಲ್ಲ ಎನ್ನುವಿರಾದರೆ, ಬೇರೆ ಕಡೆ ಇದೆ ಮತ್ತು ಅದರ ಸಂಸ್ಕಾರ ಮಾತ್ರ ಹೃದಯದಲ್ಲಿದೆ. ಮತ್ತೆ ಆ ಸರ್ಪವೂ ಕೂಡ ಅವಸ್ತುವಾಗಿ ಉಳಿಯಲಿಲ್ಲ. ಹಾಗೆಯೇ ಕಾಂಡದಲ್ಲಿ ಪುರುಷ, ಚಿಪ್ಪಿನಲ್ಲಿ ಬೆಳ್ಳಿ – ಮೊದಲಾದುದರ ವ್ಯವಸ್ಥೆಯನ್ನೂ ತಿಳಿದುಕೊಳ್ಳಿರಿ. ಮತ್ತು ಸ್ವಪ್ನದಲ್ಲಿಯೂ ಯಾವವುಗಳ ಭಾಸವಾಗುತ್ತದೋ, ಅವು ಬೇರೆಡೆಯಲ್ಲಿವೆ; ಅವುಗಳ ಸಂಸ್ಕಾರಗಳು ಆತ್ಮನಲ್ಲಿಯೂ ಕೂಡ ಇರುತ್ತವೆ. ಆದುದರಿಂದ, ಆ ಸ್ವಪ್ನವೂ ಕೂಡ ವಸ್ತುವಿನಲ್ಲಿ ಆರೋಪಣಕ್ಕೆ ಸಮಾನವಾಗಿಲ್ಲ.

**ನವೀನ:**– ತನ್ನ ತಲೆ ಕತ್ತರಿಸಿದೆ ಮತ್ತು ತಾನೇ ಅಳುತ್ತಾನೆ; ಜಲದ ಧಾರೆ ಮೇಲಕ್ಕೇರಿ ಹೋಗುತ್ತದೆ – ಹೀಗೆ ಯಾವುದನ್ನು ಯಾವಾಗಲೂ ನೋಡಲಿಲ್ಲವೋ, ಆಲಿಸಲಿಲ್ಲವೋ, ಯಾವುದು ಎಂದಿಗೂ ಆಗಿಯೇ ಇರಲಿಲ್ಲವೋ, ಅದು ನೋಡಲ್ಪಡುತ್ತದೆ. ಅದು ಹೇಗೆ ತಾನೇ ಸತ್ಯವಾಗಬಲ್ಲದು?

**ಸಿದ್ಧಾಂತಿ:**– ಈ ದೃಷ್ಟಾಂತವೂ ನಿಮ್ಮ ಪಕ್ಷವನ್ನು ಸಿದ್ಧಪಡಿಸಲಾರದು, ಏಕೆಂದರೆ ನೋಡದೆ – ಕೇಳದೆ ಸಂಸ್ಕಾರ ಮೂಡುವುದಿಲ್ಲ. ಸಂಸ್ಕಾರವಿಲ್ಲದೆ ಸ್ಮೃತಿ ಮತ್ತು ಸ್ಮೃತಿಯಿಲ್ಲದೆ ಸಾಕ್ಷಾತ್ ಅನುಭವ ಆಗುವುದಿಲ್ಲ. 'ಇಂತಹವನ ತಲೆ ಕತ್ತರಿಸಿ ಹೋಯಿತು ಮತ್ತು ಅವನ ಸೋದರ ಅಥವಾ ತಂದೆ ಮೊದಲಾದವರುಗಳನ್ನು ಯುದ್ಧದಲ್ಲಿ ಪ್ರತ್ಯಕ್ಷವಾಗಿ ಅಳುವಾಗ ನೋಡದನು; ಯಾವನಿಂದಲೋ ಆಲಿಸಿದನು; ಇಲ್ಲವೇ ನೋಡಿದನು. ಮತ್ತು ಚಿಲುಮೆಯ ನೀರು ಮೇಲೇರುರುದನ್ನು ನೋಡಿದನು. ಇಲ್ಲವೇ ಕೇಳಿದನು. ಅದರ ಸಂಸ್ಕಾರ ಅವನ ಆತ್ಮನಲ್ಲಿಯೇ ಮೂಡುತ್ತದೆ. ಯಾವಾಗ ಅವನು ಜಾಗ್ರತ್ತಿನ ಪದಾರ್ಥಗಳಿಂದ ಬೇರೆಯಾಗಿ[೩೩] ನೋಡುತ್ತಾನೋ, ಆಗ ತನ್ನ ಆತ್ಮನಲ್ಲಿ ಯಾವುವನ್ನು ನೋಡಿರತ್ತಾನೋ ಅಥವಾ ಆಲಿಸಿರುತ್ತಾನೋ, ಆ ಪದಾರ್ಥಗಳನ್ನೇ ನೋಡುತ್ತಾನೆ. ಯಾವಾಗ ತನ್ನಲ್ಲಿಯೇ ನೋಡುತ್ತಾನೋ, ಆಗ ತನ್ನ ತಲೆಯೇ ಕತ್ತರಿಸಿತು; ತಾನೇ ಆಳುತ್ತಾನೆ ಮತ್ತು ಜಲಧಾರೆ ಮೇಲಕ್ಕೇರಿ ಹೋಗುತ್ತಿದೆ – ಎನ್ನುವಂತೆ ನೋಡುತ್ತಾನೆ. ಇದೂ ವಸ್ತುವಿನಲ್ಲಿ ಅವಸ್ತುವಿನ ಆರೋಪಣದಂತೆಯಿಲ್ಲ. ಆದರೆ–ಹೇಗೆ ಚಿತ್ರನಿರ್ಮಾಪಕರು ಮೊದಲು ನೋಡಿದ, ಆಲಿಸಿದ ಅಥವಾ ಮಾಡಿದುದನ್ನು, ಆತ್ಮನಲ್ಲಿಂದ ಹೊರತೆಗೆದು ಕಾಗದದ ಮೇಲೆ ಬರೆದು ಬಿಡುತ್ತಾರೋ, ಅಥವಾ ಪ್ರತಿಬಿಂಬವನ್ನು ರಚಿಸುವವನು, ಬಿಂಬವನ್ನು ನೋಡಿ, ಆತ್ಮನಲ್ಲಿ ಆಕೃತಿಯನ್ನಿಳಿಸಿಕೊಂಡು, ಸರಿಯಾಗಿ ಬರೆದು ಬಿಡುತ್ತಾನೋ, ಹಾಗೆಯೇ ಇದೂ ಕೂಡ. ಅಹುದು. ಹಲಸಾರಿ ಸ್ವಪ್ನದಲ್ಲಿ, ತನ್ನ ಅಧ್ಯಾಪಕನನ್ನು ನೋಡುತ್ತಾನೆ; ಅವರ ಸ್ಮರಣಯುಕ್ತವಾದ ಪ್ರತೀತಿಯುಂಟಾಗುತ್ತದೆ. ಮತ್ತೆ ಹಲ ಸಾರಿ, ನೋಡಿ ಮತ್ತು ಆಲಿಸಿ ಬಹುಕಾಲವಾದ, ಅತೀತದ ಜ್ಞಾನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ; ಆಗ, ಯಾವುದನ್ನು ನಾನು ಆ ಸಮಯದಲ್ಲಿ ನೋಡಿದ್ದೆನೋ, ಕೇಳಿದ್ದೆನೋ ಅಥವಾ ಮಾಡಿದ್ದೆನೋ, ಅದನ್ನೇ ನೋಡುತ್ತೇನೆ. ಕೇಳುತ್ತೇನೆ ಅಥವಾ ಮಾಡುತ್ತೇನೆ – ಎಂಬ ಸ್ಮರಣವಿರುವುದಿಲ್ಲ; ಇಷ್ಟೇನೋ ಸತ್ಯ. ಹೇಗೆ ಜಾಗ್ರತ್ತಿನಲ್ಲಿ ಸ್ಮರಣಮಾಡುತ್ತಾನೋ, ಹಾಗೆ ಸ್ವಪ್ನದಲ್ಲಿ ಸ್ಮರಿಸುವುದಿಲ್ಲ.

---

೩೧. ವೇದಾಂತ ಸಾರ, ಖಂಡ೬– ಯು.ಮೀ.

೩೨. ಅನುಭೂತಿ ಪ್ರಕಾಶ ೧.೧೮ –ಯು.ಮೀ.

೩೩. ಎಂದರೆ, ಸ್ವಪ್ನದಲ್ಲಿ–ಯು.ಮೀ

ನೋಡಿರಿ. ಜನ್ಮಾಂಧನಿಗೆ ರೂಪದ ಸ್ವಪ್ನ ಬರುವುದಿಲ್ಲ. ಆದುದರಿಂದ ನಿಮ್ಮ ಅಧ್ಯಾಸದ ಮತ್ತು ಅಧ್ಯಾರೋಪದ ಲಕ್ಷಣ ಸುಳ್ಳಾಗಿರುತ್ತದೆ. ಮತ್ತು ವೇದಾಂತಿಗಳು ಯಾವ ವಿವರ್ತವಾದದ, ಎಂದರೆ, ಹಗ್ಗದಲ್ಲಿ ಹಾವಿನ ಭ್ರಮ ಹುಟ್ಟುವುದೇ ಮೊದಲಾದ ದೃಷ್ಟಾಂತಗಳನ್ನು, ಬ್ರಹ್ಮದಲ್ಲಿ ಜಗತ್ತಿನ ಪ್ರತೀತಿಯಾಗುವುದರ (ಸಮರ್ಥನೆಗೆ) ಕೊಡುತ್ತಾರೋ, ಅದೂ ಕೂಡ ಸರಿಯಾದುದಲ್ಲ.

**ನವೀನ:–** ಅಧಿಷ್ಠಾನವಿಲ್ಲದೆ, ಅಧ್ಯಸ್ತವು[೩೪] ಪ್ರತೀತವಾಗುವುದಿಲ್ಲ. ಉದಾಹರಣೆಗೆ, ಹಗ್ಗವೇ ಇಲ್ಲವಾದರೆ, ಸರ್ಪದ ಪ್ರತೀತಿಯೂ ಆಗಲಾರದು.[೩೫] ಹೇಗೆ ಹಗ್ಗದಲ್ಲಿ ಹಾವು ಮೂರು ಕಾಲಗಳಲ್ಲಿಯೂ ಇಲ್ಲವೋ, ಆದರೆ ಕತ್ತಲೆ ಹಾಗೂ ಅಲ್ಪ ಪ್ರಕಾಶದ ಸಂಧಿವೇಳೆಯಲ್ಲಿ ಅಕಸ್ಮಾತ್ತಾಗಿ ಹಗ್ಗವನ್ನು ನೋಡುವುದರಿಂದ, ಹಾವಿನ ಭ್ರಮ ಉಂಟಾಗಿ ಭಯದಿಂದ ಕಂಪಿಸುತ್ತಾನೋ, ಯಾವಾಗ ಅದನ್ನು ದೀಪ–ಮೊದಲಾದುದರಿಂದ ನೋಡಿಕೊಳ್ಳುತ್ತಾನೋ, ಆಗಲೇ ಭ್ರಮ ಮತ್ತು ಭಯ ನಿವೃತ್ತವಾಗುತ್ತದೋ, ಹಾಗೆ ಬ್ರಹ್ಮದಲ್ಲಿ ಯಾವ ಜಗತ್ತಿನ ಮಿಥ್ಯಾಪ್ರತೀತಿಯುಂಟಾಗಿದೆಯೋ, ಅದು ಬ್ರಹ್ಮದ ಸಾಕ್ಷಾತ್ಕಾರವಾಗುವಲ್ಲಿ, ಅದರ ನಿವೃತ್ತಿ ಹಾಗೂ ಬ್ರಹ್ಮದ ಪ್ರತೀತಿ, ಸರ್ಪದ ನಿವೃತ್ತಿ ಮತ್ತು ಹಗ್ಗ ಪ್ರತೀತಿಯಾಗುವಂತೆ, ಉಂಟಾಗುತ್ತದೆ.

**ಸಿದ್ಧಾಂತಿ:–** ಬ್ರಹ್ಮದಲ್ಲಿ ಜಗತ್ತಿನ ಪ್ರತೀತಿ ಯಾವನಿಗಾಯಿತು?

**ನವೀನ:–** ಜೀವನಿಗೆ.

**ಸಿದ್ಧಾಂತಿ:–** ಜೀವನು ಎಲ್ಲಿಂದ ಅದನು?

**ನವೀನ:–** ಅಜ್ಞಾನದಿಂದ.

**ಸಿದ್ಧಾಂತಿ:–** ಅಜ್ಞಾನ ಎಲ್ಲಿಂದ ಆಯಿತು? ಮತ್ತು ಎಲ್ಲಿರುತ್ತದೆ?

**ನವೀನ:–** ಅಜ್ಞಾನ ಅನಾದಿ ಮತ್ತು ಬ್ರಹ್ಮದಲ್ಲಿರುತ್ತದೆ.

**ಸಿದ್ಧಾಂತಿ:–** ಬ್ರಹ್ಮದಲ್ಲಿ ಬ್ರಹ್ಮದ (ಬಗೆಗೆ) ಅಜ್ಞಾನ ಉಂಟಾಯಿತೋ ಅಥವಾ ಬೇರೆ ಇನ್ನೊಂದರ ಬಗೆಗೋ? ಆ ಅಜ್ಞಾನ ಯಾವನಿಗಾಯಿತು?

**ನವೀನ:–** ಚಿದಾಭಾಸನಿಗೆ.

**ಸಿದ್ಧಾಂತಿ:–** ಚಿಧಾಭಾಸನ ಸ್ವರೂಪವೇನು?

**ನವೀನ:–** ಬ್ರಹ್ಮ. ಬ್ರಹ್ಮಕ್ಕೆ ಬ್ರಹ್ಮದ ಬಗೆಗೆ ಅಜ್ಞಾನ ಉಂಟಾಗುತ್ತದೆ. ಅಂದರೆ, ತನ್ನ ಸ್ವರೂಪವನ್ನು ತಾನೇ ಮರೆತುಬಿಡುತ್ತದೆ.

**ಸಿದ್ಧಾಂತಿ:–** ಅದು ಮರೆಯುವುದಕ್ಕೆ ನಿಮಿತ್ತವೇನು?

**ನವೀನ:–** ಅವಿದ್ಯೆ.

**ಸಿದ್ಧಾಂತಿ:–** ಅವಿದ್ಯೆ ಸರ್ವವ್ಯಾಪಕ–ಸರ್ವಜ್ಞನ ಗುಣವೋ ಅಥವಾ ಅಲ್ಪಜ್ಞನದೋ?

**ನವೀನ:–** ಅಲ್ಪಜ್ಞನದು.

**ಸಿದ್ಧಾಂತಿ:–** ಹಾಗಾದರೆ, ನಿಮ್ಮ ಮತದಲ್ಲಿ ಒಬ್ಬ ಅನಂತ ಸರ್ವಜ್ಞ ಚೇತನನಲ್ಲದೆ, ಬೇರೆ ಯಾವನಾದರೋ ಚೇತನನು ಇದ್ದಾನೋ ಅಥವಾ ಇಲ್ಲವೋ? ಮತ್ತು ಅಲ್ಪಜ್ಞನು ಎಲ್ಲಿಂದ ಬಂದನು? ಅಹುದು, ಬ್ರಹ್ಮದಿಂದ ಭಿನ್ನನಾದ ಅಲ್ಪಜ್ಞ ಚೇತನನ್ನು ಒಪ್ಪುವಿರಾದರೆ, ಸರಿ, ಬ್ರಹ್ಮಕ್ಕೆ ಒಂದೆಡೆಯಲ್ಲಿ ತನ್ನ ಸ್ವರೂಪದ ಅಜ್ಞಾನವಾಗುವುದಾದರೆ, ಎಲ್ಲೆಡೆಯೂ ಅಜ್ಞಾನ ಪ್ರಸರಿಸಿಬಿಟ್ಟೀತು. ಹೇಗೆ ಶರೀರದಲ್ಲಿ ಕುರುವಿನ ನೋವು ಸಮಸ್ತ ಶರೀರದ ಅವಯವಗಳನ್ನೂ ನಿರರ್ಥಕವಾಗಿ ಮಾಡಿಬಿಡುತ್ತದೋ, ಅದೇ ರೀತಿ

---

೩೪. ಆರೋಪಿತವಾದ ವಸ್ತು.

೩೫. ಇದು ಬುದ್ಧಿಹೀನರ ದೃಷ್ಟಾಂತ ! ಸರ್ಪವನ್ನು ನೋಡಿದ ಮೇಲೆಯೇ, ಅದು ಹಗ್ಗದಂತಿದೆ ಎಂದು ಪ್ರತೀತಿಯಾಗುವುದು. ಸರ್ಪವನ್ನು ಎಂದೂ ನೋಡದೆ,–ಕೇಳದೆ, ಹಗ್ಗವನ್ನು ಮಾತ್ರ ನೋಡಿ, ಅದು ಸರ್ಪದಂತಿದೆ, ಎಂದು ಯಾವನೂ ಭಾವಿಸಲಾರನು.

ಬ್ರಹ್ಮವೂ ಒಂದು ಎಡೆಯಲ್ಲಿ ಅಜ್ಞಾನಿ ಮತ್ತು ಕ್ಲೇಶಯುಕ್ತವಾದಲ್ಲಿ, ಸರ್ವಬ್ರಹ್ಮವೂ ಅಜ್ಞಾನಿ ಮತ್ತು ನೋವಿನ ಅನುಭವದಿಂದ ಕೂಡಿದುದಾಗಿ ಹೋಗುವುದು.

**ನವೀನ : –** ಇದೆಲ್ಲಾ ಉಪಾಧಿಯ ಧರ್ಮವಾಗಿದೆ; ಬ್ರಹ್ಮದ್ದಲ್ಲ.

**ಸಿದ್ಧಾಂತಿ:–** ಉಪಾಧಿ ಜಡವೋ ಅಥವಾ ಚೇತನವೋ? ಮತ್ತು ಸತ್ಯವೋ ಅಥವಾ ಅಸತ್ಯವೋ?

**ನವೀನ:–** ಅನಿರ್ವಚನೀಯವಾಗಿದೆ. ಎಂದರೆ – ಅದನ್ನು ಜಡ ಅಥವಾ ಚೇತನ, ಸತ್ಯ ಅಥವಾ ಅಸತ್ಯ – ಎಂದು ಹೇಳಲಾರೆವು.

**ಸಿದ್ಧಾಂತಿ :–** ಈ ನಿಮ್ಮ ಹೇಳುವಿಕೆ **"ವದತೋ ವ್ಯಾಘಾತಃ"**[೩೬] ಎಂದರೆ ಸ್ವಪಕ್ಷ ಖಂಡನಕ್ಕೆ ಸಮವಾದ ದೋಷವಾಗಿದೆ. ಏಕೆಂದರೆ–ಅವಿದ್ಯೆಯಿದೆ–ಎನ್ನುತ್ತೀರಿ; ಅದನ್ನು ಜಡ, ಚೇತನ, ಸತ್, ಅಸತ್ – ಹೇಳಲಾರೆವೆನ್ನುತ್ತೀರಿ. ಈ ಮಾತು ಹೀಗಿದೆ:– ಚಿನ್ನದಲ್ಲಿ ಹಿತ್ತಾಳೆ ಸೇರಿದೆ: ಇದು ಚಿನ್ನವೋ ಅಥವಾ ಹಿತ್ತಾಳೆಯೋ–ಎಂದು ಸ್ವರ್ಣಕಾರನ ಬಳಿ ಪರೀಕ್ಷೆ ಮಾಡಿಸುತ್ತೀರಿ. ಆ ಮೇಲೆ "ಇದನ್ನು ನಾವು ಚಿನ್ನವೆಂದೂ ಹೇಳಲಾರೆವು; ಹಿತ್ತಾಳೆಯೆಂದೂ ಹೇಳಲಾರೆವು. ಆದರೆ, ಎರಡು ಧಾತುಗಳೂ ಸೇರಿವೆ".–ಎಂದೇ ಹೇಳುವಿರಿ. ಅಲ್ಲವೇ?

ನವೀನ :– ನೋಡಿ, ಘಟಾಕಾಶ, ಮಠಾಕಾಶ, ಮೇಘಾಕಾಶ ಮತ್ತು ಮಹದಾಕಾಶಗಳು ಉಪಾಧಿಗಳ (ಆವರಣಗಳ)–ಎಂದರೆ ಘಟ, ಮನೆ ಹಾಗೂ ಮೇಘದ ಇರುವಿಕೆಯಿಂದ ಹೇಗೆ ಬೇರೆ–ಬೇರೆಯಾಗಿ ತೋರುತ್ತವೋ, ವಸ್ತುತಃ ಮಹದಾಕಾಶ ಒಂದೇ ಇರುತ್ತದೋ, ಹಾಗೆಯೇ ಮಾಯೆ, ಅವಿದ್ಯೆ, ಸಮಷ್ಟಿ(ಸಮೂಹ), ವ್ಯಷ್ಟಿ (ಘಟಕ) ಮತ್ತು ಅಂತಃಕರಣದ ಉಪಾಧಿಗಳಿಂದ ಬ್ರಹ್ಮವು ಅಜ್ಞಾನಿಗಳಿಗೆ ಬೇರೆ ಬೇರೆಯಾಗಿ ತೋರುತ್ತಿದೆ. ವಸ್ತುತಃ ಒಂದೇ ಇದೆ. ನೋಡಿರಿ, ಮುಂದಿನ ಪ್ರಮಾಣದಲ್ಲಿ ಏನು ಹೇಳಿದೆ :–

**ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋಬಭೂವ ।**

**ಏಕಸ್ತಥಾ ಸರ್ವಭೂತಾಂತರಾತ್ಮ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥** (ಕಠ:– ೫. – ೯)

ಹೇಗೆ ಅಗ್ನಿಯು ಉದ್ದವಾದ, ಅಗಲವಾದ, ಗುಂಡಾದ, ಚಿಕ್ಕದಾದ, ದೊಡ್ಡದಾದ ಎಲ್ಲ ಆಕೃತಿಗಳಿಂದ ಕೂಡಿದ ಪದಾರ್ಥಗಳಲ್ಲಿ ವ್ಯಾಪಕವಾಗಿ, ಅದೇ ಆಕಾರವುಳ್ಳದಾಗಿ ಕಾಣಿಸುತ್ತದೋ, ಮತ್ತು ಅವುಗಳಿಂದ ಬೇರೆಯಾಗಿದೆಯೋ, ಹಾಗೆ ಸರ್ವವ್ಯಾಪಕನಾದ ಪರಮಾತ್ಮನು, ಅಂತಃಕರಣಗಳಲ್ಲಿ ವ್ಯಾಪಕನಾಗಿ, ಅಂತಃಕರಣಕಾರನಾಗಿ ರಾಜಿಸುತ್ತಿದ್ದಾನೆ, ಆದರೆ ಅವುಗಳಿಂದ ಬೇರೆಯಾಗಿದ್ದಾನೆ.

**ಸಿದ್ಧಾಂತಿ:–** ಈ ನಿಮ್ಮ ಕಥನವೂ ಕೂಡ ವ್ಯರ್ಥವಾಗಿದೆ. ಏಕೆಂದರೆ, ಹೇಗೆ ಘಟ, ಮಠ, ಮೇಘಗಳನ್ನು ಮತ್ತು ಆಕಾಶವನ್ನು ಬೇರೆಯೆಂದು ಅಂಗೀಕರಿಸುತ್ತೀರೋ, ಹಾಗೆ ಕಾರಣ–ಕಾರ್ಯರೂಪವಾದ ಜಗತ್ತನ್ನು ಮತ್ತು ಜೀವನನ್ನು ಬ್ರಹ್ಮದಿಂದ ಮತ್ತು ಬ್ರಹ್ಮವನ್ನು ಇವುಗಳಿಂದ ಬೇರೆಯೆಂದು ಒಪ್ಪಿಕೊಳ್ಳಿರಿ.

**ನವೀನ :–** ಹೇಗೆ ಅಗ್ನಿ ಎಲ್ಲದರಲ್ಲಿ ಪ್ರವಿಷ್ಟವಾಗಿ, ನೋಡುವುದಕ್ಕೆ ಅದೇ ಆಕಾರವುಳ್ಳದಾಗಿ ಕಾಣುಸುತ್ತದೋ, ಇದೇ ರೀತಿ ಪರಮಾತ್ಮನು ಜಡದಲ್ಲಿ ಮತ್ತು ಜೀವನಲ್ಲಿ ವ್ಯಾಪಕನಾಗಿ, ಆಕೃತಿಯುಕ್ತನಾಗುತ್ತಾನೆ; ಅಜ್ಞಾನಿಗಳಿಗೆ ಸಾಕಾರನಾಗಿ ಕಾಣಿಸುತ್ತಾನೆ. ವಸ್ತುತಃ ಬ್ರಹ್ಮ ಜಡವೂ ಅಲ್ಲ; ಜೀವನೂ ಅಲ್ಲ. ಹೇಗೆ ಸಾವಿರ ಜಲದ ಕುಂಡಗಳು ಇಡಲ್ಪಟ್ಟಲ್ಲಿ, ಅವುಗಳಲ್ಲಿ ಸೂರ್ಯನ ಸಹಸ್ರ ಪ್ರತಿಬಿಂಬಗಳು ಕಾಣಿಸುತ್ತವೋ, ವಸ್ತುತಃ ಸೂರ್ಯನು ಒಬ್ಬನೇ ಇದ್ದಾನೋ, ಕುಂಡಗಳು ಒಡೆದು ಹೋಗುವುದರಿಂದ ನೀರು ಹರಿಯುವುದರಿಂದ ಅಥವಾ ಹರಡುವುದರಿಂದ ಸೂರ್ಯನು ಹೇಗೆ ಭಗ್ನನಾಗುವುದಿಲ್ಲವೋ, ಚಲಿಸುವುದಿಲ್ಲವೋ ಮತ್ತು ಹರಡುವುದೂ ಇಲ್ಲವೋ, ಹಾಗೆಯೇ ಅಂತಃಕರಣಗಳಲ್ಲಿ, 'ಚಿದಾಭಾಸ' ಎನ್ನಿಸಿಕೊಳ್ಳುವ, ಬ್ರಹ್ಮದ ಆಭಾಸ ಬಿದ್ದಿರುತ್ತದೆ. ಎಂದಿನವರೆಗೆ ಅಂತಃಕರಣವಿದೆಯೋ, ಆವರೆಗೆ ಮಾತ್ರ ಜೀವನಿರುತ್ತಾನೆ. ಯಾವಾಗ ಅಂತಃಕರಣ ಜ್ಞಾನದಿಂದ ನಾಶವಾಗಿ ಹೋಗುತ್ತದೋ, ಆಗ ಜೀವ ಬ್ರಹ್ಮಸ್ವರೂಪನಾಗುತ್ತಾನೆ. ಈ ಚಿದಾಭಾಸನು ತನ್ನ ಬ್ರಹ್ಮಸ್ವರೂಪದ ಅಜ್ಞಾನವನ್ನುಂಟು

---

೩೬. ಎಂದರೆ, ಸ್ವಪಕ್ಷ ಖಂಡನಕ್ಕೆ

ಮಾಡಿಕೊಳ್ಳುವವನೂ, ಭೋಗಕರ್ತೃವೂ, ಸುಖಿಯೂ, ದುಃಖಿಯೂ, ಪಾಪಿಯೂ, ಪುಣ್ಯಾತ್ಮನೂ ಆಗಿ, ಜನನ-ಮರಣಗಳನ್ನು ತನ್ನಲ್ಲಿಯೇ ಆರೋಪಿಸಿಕೊಳ್ಳುತ್ತಾನೆ. ಆವರೆಗೆ ಸಾಂಸಾರಿಕ ಬಂಧನಗಳಿಂದ ಬಿಡುಗಡೆ ಹೊಂದುವುದಿಲ್ಲ.

**ಸಿದ್ಧಾಂತಿ :-** ಈ ನಿಮ್ಮ ದೃಷ್ಟಾಂತ ವ್ಯರ್ಥವಾಗಿದೆ. ಏಕೆಂದರೆ, ಸೂರ್ಯನು ಆಕಾರವಂತನು; ಜಲದ ಕುಂಡಗಳೂ ಸಾಕಾರವಾಗಿವೆ. ಸೂರ್ಯನು ಜಲದ ಕುಂಡಗಳಿಂದ ಬೇರೆಯಾಗಿದ್ದಾನೆ. ಮತ್ತು ಸೂರ್ಯನಿಂದ ಜಲಕುಂಡಗಳು ಬೇರೆಯಾಗಿವೆ. ಆಗ ಮಾತ್ರ ಪ್ರತಿಬಿಂಬ ಬೀಳುತ್ತದೆ. ನಿರಾಕಾರವಾಗಿದ್ದರೆ, ಅವುಗಳ ಪ್ರತಿಬಿಂಬವೆಂದಿಗೂ ಬೀಳುತ್ತಿರಲಿಲ್ಲ . ಮತ್ತು ಪರಮೇಶ್ವರನು ನಿರಾಕಾರನೂ, ಆಕಾಶದಂತೆ ಎಲ್ಲೆಡೆಯೂ ವ್ಯಾಪಕನೂ ಆಗಿರುವುದರಿಂದ, ಬ್ರಹ್ಮದಿಂದ ಯಾವ ಪದಾರ್ಥಗಳೂ ಬೇರೆಯಾಗಿಲ್ಲ; ಅಥವಾ ಪದಾರ್ಥಗಳಿಂದ ಬ್ರಹ್ಮವೂ ಬೇರೆಯಾಗಲಾರದು. ಮತ್ತು ವ್ಯಾಪ್ಯ- ವ್ಯಾಪಕ ಸಂಬಂಧವಿರುವುದರಿಂದ ಒಂದೂ ಆಗಲಾರದು. ಎಂದರೆ, ಅನ್ವಯ - ವ್ಯತಿರೇಕಭಾವದಿಂದ[೩೭] ನೋಡುವುದರಿಂದ ವ್ಯಾಪ್ಯ-ವ್ಯಾಪಕರು ಒಂದುಗೂಡಿದವರೂ ಮತ್ತು ಸದಾ ಬೇರೆಯಾಗಿರುವವರೂ ಆಗಿರುತ್ತಾರೆ. ಒಂದೇ ಆಗಿದ್ದಲ್ಲಿ ತನ್ನಲ್ಲಿಯೇ ವ್ಯಾಪ್ಯ-ವ್ಯಾಪಕಭಾವದ ಸಂಬಂಧ ಎಂದಿಗೂ ಅನ್ವಯಿಸಲಾರದು. ಇದು ಬೃಹದಾರಣ್ಯಕದ ಅಂತರ್ಯಾಮೀ ಬ್ರಾಹ್ಮಣ (೧.೩.೭.)ದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ಮತ್ತು ಬ್ರಹ್ಮದ ಅಭಾಸವೂ ಕೂಡ ಬೀಳಲಾರದು. ಏಕೆಂದರೆ, ಆಕಾರವಿಲ್ಲದೆ ಪ್ರತಿಬಿಂಬ ಮೂಡುವುದು ಅಸಂಭವವಾಗಿದೆ. ಅಂತಃಕರಣದ ಉಪಾಧಿಯಿಂದ ಬ್ರಹ್ಮವನ್ನು ಜೀವನೆಂದು ಅಂಗೀಕರಿಸುವ ನಿಮ್ಮ ಮಾತೂ ಕೂಡ ಬಾಲಕನದರ ಹಾಗಿದೆ. ಅಂತಃಕರಣವು ಚಲಾಯಮಾನವೂ, ಖಂಡ ಖಂಡವೂ ಆಗಿದೆ ಮತ್ತು ಬ್ರಹ್ಮವು ಅಚಲವೂ, ಅಖಂಡವೂ ಆಗಿದೆ. ನೀವು ಬ್ರಹ್ಮವನ್ನು ಮತ್ತು ಜೀವನನ್ನು ಬೇರೆ-ಬೇರೆ ಎಂದು ಅಂಗೀಕರಿಸುವುದಿಲ್ಲವಾದರೆ, ಈ ಕೆಳಗಿನದಕ್ಕೆ ಉತ್ತರವನ್ನು ಕೊಡಿರಿ. ಅಂತಃಕರಣ ಎಲ್ಲಿ-ಎಲ್ಲಿ ಹೋಗುವುದೋ ಅಲ್ಲಿ-ಅಲ್ಲಿಯ ಬ್ರಹ್ಮವನ್ನು ಅಜ್ಞಾನಿಯನ್ನಾಗಿಯೂ, ಮತ್ತು ಯಾವ ಯಾವಾ ಸ್ಥಾನವನ್ನು ಬಿಡುವುದೋ, ಅಲ್ಲಿ-ಅಲ್ಲಿಯ ಬ್ರಹ್ಮವನ್ನು ಜ್ಞಾನಿಯನ್ನಾಗಿಯೂ ಮಾಡಿಬಿಡುವುದೋ ಅಥವಾ ಇಲ್ಲವೋ? ಹೇಗೆ ಕೊಡೆ ಬೆಳಕಿನ ನಡುವೆ ಎಲ್ಲಿ ಎಲ್ಲಿ ಹೋಗುತ್ತೋ ಅಲ್ಲಿ-ಅಲ್ಲಿಯ ಬೆಳಕನ್ನು ಆವರಣಯುಕ್ತವನ್ನಾಗಿಯೂ, ಮತ್ತು ಎಲ್ಲಿ-ಎಲ್ಲಿನಿಂದ ಸರಿದು ಹೋಗುತ್ತದೋ, ಅಲ್ಲಿ-ಅಲ್ಲಿಯ ಪ್ರಕಾಶವನ್ನು ಆವರಣ ರಹಿತವಾಗಿಯೂ ಮಾಡುತ್ತದೋ, ಹಾಗೆಯೇ ಅಂತಃಕರಣ ಬ್ರಹ್ಮವನ್ನು ಕ್ಷಣ-ಕ್ಷಣವೂ ಜ್ಞಾನಿಯನ್ನಾಗಿಯೂ, ಬದ್ಧನನ್ನಾಗಿಯೂ ಮತ್ತು ಮುಕ್ತನನ್ನಾಗಿಯೂ ಮಾಡುತ್ತಾ ಹೋಗುವುದು. ಅಖಂಡವಾದ ಬ್ರಹ್ಮದ ಏಕಸ್ಥಾನದಲ್ಲಿಯ ಆವರಣದ ಪ್ರಭಾವವು ಸರ್ವಸ್ಥಾನದಲ್ಲಿಯೂ ಉಂಟಾಗುವುದರಿಂದ ಸಂಪೂರ್ಣ ಬ್ರಹ್ಮ ಅಜ್ಞಾನಿಯಾಗಿ ಹೋಗುವುದು, ಏಕೆಂದರೆ-ಅದು ಚೇತನವಾಗಿದೆ.[೩೮] ಮತ್ತು ಮಥುರೆಯಲ್ಲಿ ಯಾವ ಅಂತಃಕರಣ ಸ್ಥಿತವಾದ ಬ್ರಹ್ಮವು ಯಾವ ವಸ್ತುವನ್ನು ನೋಡಿತೋ, ಅದರ ಸ್ಮರಣವು ಅದೇ ಅಂತಃಕರಣ ಸ್ಥಿತವಾದುದಕ್ಕೆ ಕಾಶಿಯಲ್ಲಿ ಉಂಟಾಗಲಾರದು. ಏಕೆಂದರೆ, **"ಅನ್ಯದೃಷ್ಟಮನ್ಯೋನ ಸ್ಮರತೀತಿನ್ಯಾಯಾತ್"**. - ಒಬ್ಬನು ನೋಡಿದುದರ ಸ್ಮರಣ ಇನ್ನೊಬ್ಬನಿಗೆ ಆಗಲಾರದು.೩ ಯಾವ ಚಿದಾಭಾಸನು ಮಥುರೆಯಲ್ಲಿ ನೋಡಿದನೋ, ಆ ಚಿದಾಭಾಸನು ಕಾಶಿಯಲ್ಲಿರುವುದಿಲ್ಲ. ಆದರೆ, ಮಥುರೆಯಲ್ಲಿನ ಅಂತಃಕರಣದ ಪ್ರಕಾಶವಾದ ಬ್ರಹ್ಮವು ಕಾಶಿಯಲ್ಲಿನ ಬ್ರಹ್ಮವಾಗಿರುವುದಿಲ್ಲ.[೩೯] ಬ್ರಹ್ಮವೇ ಜೀವನಾಗಿದ್ದರೆ, ಬೇರೆಯವನಲ್ಲರಾದರೆ, ಜೀವನು ಸರ್ವಜ್ಞನಾಗಿರಬೇಕು. ಬ್ರಹ್ಮದ ಪ್ರತಿಬಿಂಬ ಬೇರೆಯಾಗಿದ್ದರೆ 'ಪ್ರತ್ಯಭಿಜ್ಞಾ'- ಎಂದರೆ ಹಿಂದೆ ನೋಡಿದುದರ, ಕೇಳಿದುದರ ಜ್ಞಾನ ಯಾವನಿಗೂ ಉಂಟಾಗಲಾರದು. 'ಬ್ರಹ್ಮ ಒಂದು; ಆದಕಾರಣ ಸ್ಮರಣವಾಗುತ್ತದೆ'.- ಎನ್ನುವಿರಾದರೆ, ಒಂದೆಡೆ ಅಜ್ಞಾನ ಅಥವಾ ದುಃಖ ಉಂಟಾಗುವುದರಿಂದ ಸಮಸ್ತ ಬ್ರಹ್ಮಕ್ಕೂ ಅಜ್ಞಾನ ಅಥವಾ ದುಃಖವಾಗಬೇಕು. ಮತ್ತು ಈ ರೀತಿಯ ದೃಷ್ಟಾಂತಗಳಿಂದ ನಿತ್ಯಶುದ್ಧಬದ್ಧ ಮುಕ್ತಸ್ವಭಾವವಾದ ಬ್ರಹ್ಮವನ್ನು ನೀವು ಅಶುದ್ಧ, ಅಜ್ಞಾನಿ ಮತ್ತು ಬದ್ಧ ಮೊದಲಾದ ದೋಷಗಳಿಂದ ಕೂಡಿದುದನ್ನಾಗಿ ಮಾಡಿಬಿಟ್ಟಿರಿ ಮತ್ತು ಅಖಂಡವನ್ನು ಖಂಡ-ಖಂಡವಾಗಿ ಮಾಡಿಬಿಟ್ಟಿರಿ.

---

೩೭. ಅನ್ವಯ-ವ್ಯತಿರೇಕಭಾವವೆಂದರೆ, ಸಾಧರ್ಮ್ಯ-ವೈಧರ್ಮ್ಯಗಳ, ಸಾಮ್ಯ-ವೈಷಮ್ಯಗಳ ಭಾವ-

೩೮. ವಿಶಾಲವಾಗಿ ಹರಡಿದ ಯಾವುದಾದರೂ ಜಡತತ್ತ್ವ. ಉದಾಹರಣೆಗೆ- ವಾಯುವು ದೇಶ-ದೇಶಗಳ ಸಮುದ್ರ ಸಾಮೀಪ್ಯ, ಸ್ತರದ ಔನ್ನತ್ಯ ಮೊದಲಾದ ಕಾರಣಗಳಿಂದ, ಹಲವೆಡೆ ತಂಪಾಗಿ, ಹಲವೆಡೆ ಬಿಸಿಯಾಗಿ ಇರಬಹುದು. ಆದರೆ, ಅಖಂಡ ಚೇತನನ ಬಗೆಗೆ ಹಾಗೆನ್ನಲು ಎಂದಿಗೂ ಸಾಧ್ಯವಿಲ್ಲ. ಅಖಂಡ ಚೇತನನ ಪ್ರತಿಯೊಂದು ಗುಣವೂ ಅಖಂಡವೇ ಆಗಿರುವುದು ಎನ್ನುತ್ತಾರೆ ಮಹರ್ಷಿಗಳು.

೩೯. ಮಥುರೆಯಲ್ಲಿಯ ಬ್ರಹ್ಮನ ಅಂತಃಕರಣಕ್ಕೆ ಸಿಕ್ಕಿ ಕಂಡ ನೋಟ, ಕಾಶಿಯಲ್ಲಿಲ್ಲ. ಚಿದಾಬಾಸರು ಬೇರೆ ಬೇರೆ !

**ನವೀನ:**– ನಿರಾಕಾರದ ಆಭಾಸವೂ ಆಗುತ್ತದೆ. ಹೇಗೆ ಕನ್ನಡಿಯಲ್ಲಿ ಅಥವಾ ನೀರು ಮೊದಲಾದುದರಲ್ಲಿ ಆಕಾಶದ ಆಭಾಸ ಬೀಳುತ್ತದೋ, ಅದು ನೀಲಿಯಾಗಿ ಅಥವಾ ಬೇರೆ ಯಾವುದಾದರೂ ರೀತಿ ಗಂಭೀರವೂ ಆಳವೂ ಆಗಿ ಕಾಣಿಸುತ್ತದೋ, ಹಾಗೆ, ಬ್ರಹ್ಮದ ಆಭಾಸವೂ ಸಮಸ್ತ ಅಂತಃಕರಣಗಳಲ್ಲಿ ಬೀಳುತ್ತದೆ.

**ಸಿದ್ಧಾಂತಿ** :– ಆಕಾಶಕ್ಕೆ ರೂಪವೇ ಇಲ್ಲದಿರುವಾಗ, ಅದನ್ನು ಯಾವನೂ ಕಣ್ಣಿನಿಂದ ನೋಡಲಾರನು. ಯಾವ ಪದಾರ್ಥ ಕಾಣಿಸುವುದೇ ಇಲ್ಲವೋ, ಅದು ಕನ್ನಡಿ ಮತ್ತು ನೀರು ಮೊದಲಾದುದರಲ್ಲಿ ಕಾಣಿಸುತ್ತದೆಂತು? ಗಾಢವಾಗಿ ಅಥವಾ ತೆಳುವಾಗಿ ಸಾಕಾರವಸ್ತು ಕಾಣಿಸುತ್ತದೆ; ನಿರಾಕಾರವಾದುದಲ್ಲ.

**ನವೀನ** :– ಹಾಗಾದರೆ, ಮತ್ತೆ ಮೇಲುಗಡೆ ನೀಲಿಯಾಗಿರುವಂತೆ ಅದೇನೋ ಕಾಣಿಸುತ್ತಿದೆಯಲ್ಲ, ಅದೇ ಕನ್ನಡಿಯಲ್ಲಿ ಪ್ರತಿಬಿಂಬಿತವಾಗುತ್ತದೆ. ಅದು ಏನು ಪದಾರ್ಥ?

**ಸಿದ್ಧಾಂತಿ** :– ಅದು ಪೃಥಿವಿಯಿಂದ ಹಾರಿದ ಜಲದ, ಪೃಥಿವಿಯ ಮತ್ತು ಅಗ್ನಿಯ ತ್ರಸರೇಣುಗಳು. ಎಲ್ಲಿಂದ ಮಳೆಯಾಗುತ್ತದೋ, ಅಲ್ಲಿ ನೀರು ಇಲ್ಲದಿದ್ದರೆ, ಮಳೆ ಎಲ್ಲಿಂದ ಆದೀತು? ಆದುದರಿಂದ, ದೂರ ದೂರದಲ್ಲಿ ಯಾವುದು ಗುಡಾರದಂತೆ ಕಾಣಿಸುತ್ತದೋ, ಅದು ಜಲದ ಚಕ್ರವಾಗಿದೆ. ಹೇಗೆ ಮಂಜು ದೂರದಿಂದ ಘನವಾದ ಆಕಾರವುಳ್ಳದಾಗಿ, ಮತ್ತು ಹತ್ತಿರದಿಂದ ತೆಳುವಾಗಿ ಮತ್ತು ಗುಡಾರದ ಹಾಗೆಯೂ ಕೂಡ ಕಾಣಿಸುತ್ತದೋ, ಹಾಗೆ ಆಕಾಶದಲ್ಲಿ ನೀರು ಕಾಣಿಸುತ್ತದೆ.

**ನವೀನ** :– ನಮ್ಮ ಹಗ್ಗ, ಹಾವು ಮತ್ತು ಸ್ವಪ್ನ ಮೊದಲಾದ ದೃಷ್ಟಾಂತಗಳು ಮಿಥ್ಯೆಯೇನು?

**ಸಿದ್ಧಾಂತಿ** :– ಅಲ್ಲ; ನಿಮ್ಮ ತಿಳಿವು ಮಿಥ್ಯೆ. ಅದನ್ನು ನಾವು ಮೊದಲೇ ಬರೆದಿದ್ದೇವೆ. ಒಳ್ಳೆಯದು, ಮೊದಲು ಅಜ್ಞಾನ ಯಾವನಿಗಾಗುತ್ತದೆ–ಎಂಬುದನ್ನಾದರೂ ಹೇಳಿರಿ.

**ನವೀನ** :– ಬ್ರಹ್ಮಕ್ಕೆ.

**ಸಿದ್ಧಾಂತಿ** :– ಬ್ರಹ್ಮ ಅಲ್ಪಜ್ಞವೋ ಅಥವಾ ಸರ್ವಜ್ಞವೋ?

**ನವೀನ** :– ಸರ್ವಜ್ಞವೂ ಅಲ್ಲ ಮತ್ತು ಅಲ್ಪಜ್ಞವೂ ಅಲ್ಲ. ಏಕೆಂದರೆ, ಸರ್ವಜ್ಞತ್ವ ಮತ್ತು ಅಲ್ಪಜ್ಞತ್ವ ಉಪಾಧಿಯುಳ್ಳವನಿಗೆ ಉಂಟಾಗುವುದು.

**ಸಿದ್ಧಾಂತಿ** :– ಉಪಾಧಿಸಹಿತನಾದವನು ಯಾವನು?

**ನವೀನ** :– ಬ್ರಹ್ಮ.

**ಸಿದ್ಧಾಂತಿ** :– ಹಾಗಾದರೆ, ಬ್ರಹ್ಮವೇ ಸರ್ವಜ್ಞವೂ ಮತ್ತು ಅಲ್ಪಜ್ಞವೂ ಆಯಿತು. ಹಾಗಿದ್ದಲ್ಲಿ ನೀವು ಸರ್ವಜ್ಞ ಮತ್ತು ಅಲ್ಪಜ್ಞ–ಎಂಬುದರ ನಿಷೇಧವನ್ನೇಕೆ ಮಾಡಿದ್ದಿರಿ? ಉಪಾಧಿಯು ಕಲ್ಪಿತವಾದುದು, ಎಂದರೆ ಮಿಥ್ಯೆಯಾದುದು–ಎನ್ನುವಿರಾದರೆ, ಕಲ್ಪಕನು, ಎಂದರೆ, ಕಲ್ಪನೆ ಮಾಡುವವನು ಯಾವನು?

**ನವೀನ** :– ಜೀವನು ಬ್ರಹ್ಮವೋ, ಅಥವಾ ಬೇರೆಯೋ?

**ಸಿದ್ಧಾಂತಿ** :– ಬೇರೆಯವನಾಗಿದ್ದಾನೆ. ಏಕೆಂದರೆ, (ಜೀವನು) ಬ್ರಹ್ಮ ಸ್ವರೂಪನಾಗಿದ್ದಾನೆಯಾದರೆ, ಯಾವನು ಮಿಥ್ಯಾಕಲ್ಪನೆಯನ್ನು ಮಾಡಿದನೋ, ಅವನು ಬ್ರಹ್ಮವೇ ಆಗಿರಲಾರನು. ಯಾವನ ಕಲ್ಪನೆಯೇ ಮಿಥ್ಯೆಯೋ, ಅವನು ಸತ್ಯನಾಗಬಲ್ಲನಾದರೂ ಯಾವಾಗ?

**ನವೀನ** :– ನಾವು ಸತ್ಯವನ್ನು ಮತ್ತು ಅಸತ್ಯವನ್ನು ಸುಳ್ಳೆಂದು ಅಂಗೀಕರಿಸುತ್ತೇವೆ. ಮತ್ತು ವಾಣಿಯಿಂದ ಮಾತನಾಡುವುದೂ ಕೂಡ ಮಿಥ್ಯೆಯೇ ಆಗಿದೆ.

**ಸಿದ್ಧಾಂತಿ:**– ನೀವು ಸುಳ್ಳನ್ನು ಹೇಳುವವರು ಮತ್ತು ಒಪ್ಪುವವರು ಆಗಿದ್ದೀರಿ–ಎಂದಾಗ ನೀವು ಸುಳ್ಳಲ್ಲವೇತಕ್ಕೆ?

**ನವೀನ:**– ಆಗಲಿ. ಸುಳ್ಳು ಮತ್ತು ನಿಜ ನಮ್ಮಲ್ಲಿಯೇ ಕಲ್ಪಿತವಾಗಿವೆ. ಮತ್ತು ನಾವು ಎರಡರ ಸಾಕ್ಷಿಗಳಾದ ಅಧಿಷ್ಠಾನ–ಎಂದರೆ ಆಶ್ರಯಭೂತರಾಗಿದ್ದೇವೆ.

**ಸಿದ್ಧಾಂತಿ:**– ನೀವು ಸತ್ಯದ ಮತ್ತು ಸುಳ್ಳಿನ ಆಧಾರವಾದಿರಿ–ಎಂದಾಗ, ನೀವೇ ಸಾಹುಕಾರನಂತೆಯೂ ಮತ್ತು ಕಳ್ಳನಂತೆಯೂ ಆದಿರಿ. ಈ ಕಾರಣದಿಂದ ನೀವು ಪ್ರಾಮಾಣಿಕರಾಗಿಯೂ ಕೂಡ ಉಳಿಯಲಿಲ್ಲ. ಏಕೆಂದರೆ, ಯಾವನು ಸರ್ವದಾ ಸತ್ಯವನ್ನಂಗೀಕರಿಸುತ್ತಾನೋ, ಸತ್ಯವನ್ನಾಡುತ್ತಾನೋ, ಸತ್ಯವನ್ನಾಚರಿಸುತ್ತಾನೋ, ಸುಳ್ಳನ್ನು ಒಪ್ಪುವುದಿಲ್ಲವೋ, ಸುಳ್ಳನ್ನಾಡುವುದಿಲ್ಲವೋ ಮತ್ತು ಸುಳ್ಳನ್ನು ಎಂದಿಗೂ ವ್ಯವಹರಿಸುವುದಿಲ್ಲವೋ, ಅವನು ಪ್ರಾಮಾಣಿಕನಾಗಿರುತ್ತಾನೆ. ನೀವು ನಿಮ್ಮ ಮಾತನ್ನು ನೀವೇ ಸುಳ್ಳಾಗಿ ಮಾಡುವುದರಿಂದ, ಸ್ವತಃ ನೀವೇ ಮಿಥ್ಯಾವಾದಿಗಳಾಗಿದ್ದೀರಿ.

**ನವೀನ:**– ಬ್ರಹ್ಮದ ಆಶ್ರಯದಲ್ಲಿರುವ ಮತ್ತು ಬ್ರಹ್ಮವನ್ನೇ ಆವರಿಸುವ ಅನಾದಿಯಾದ ಮಾಯೆಯನ್ನು ನೀವು ಒಪ್ಪುತ್ತೀರೋ ಅಥವಾ ಇಲ್ಲವೋ?

**ಸಿದ್ಧಾಂತಿ:**– ಒಪ್ಪುವುದಿಲ್ಲ. ಏಕೆಂದರೆ ನೀವು – "ಯಾವ ವಸ್ತು ಇಲ್ಲವೋ, ಆದರೂ ಭಾಸವಾಗುವುದೋ, ಅದು" – ಎಂದು ಮಾಯೆಗೆ ಅರ್ಥ ಹೇಳುತ್ತೀರಿ. ಆದರೆ, ಯಾವನ ಹೃದಯದ ಕಣ್ಣು ಇಂಗಿ ಹೋಗಿದೆಯೋ, ಅವನು ಈ ಮಾತನ್ನು ಒಪ್ಪುವನು. ಏಕೆಂದರೆ, ಯಾವ ವಸ್ತುವಿಲ್ಲವೋ, ಅದರ ಭಾಸವಾಗುವಿಕೆ ಸರ್ವಥಾ ಅಸಂಭವ. ಉದಾಹರಣೆಗೆ, ಬಂಜೆಯ ಮಗನ ಪ್ರತಿಬಿಂಬ ಎಂದಿಗೂ ಬೀಳಲಾರದು. ಮತ್ತು ಇದನ್ನು **"ಸನ್ಮೂಲಾಃ ಸೋಮ್ಯೇಮಾಃ ಪ್ರಜಾಃ"** ಈ ಮೊದಲಾದ ಛಾಂದೋಗ್ಯೋಪನಿಷತ್ತಿನ (೬.೮.೪) ವಚನಗಳಿಗೆ ವಿರುದ್ಧವಾಗಿ ಹೇಳುತ್ತೀರಿ.

**ನವೀನ:**– ನೀವು ವಸಿಷ್ಠ, ಶಂಕರಾಚಾರ್ಯ ಮೊದಲಾದವರು, ಮತ್ತು ನಿಶ್ಚಲದಾಸನವರೆಗೆ, ನಿಮಗಿಂತ ದೊಡ್ಡ ಪಂಡಿತರೇ ಆಗಿದ್ದವರು ಬರೆದಿರುವುದನ್ನು ಖಂಡಿಸುತ್ತೀರೇನು? ನಮಗೇನೋ ವಸಿಷ್ಠ , ಶಂಕರಾಚಾರ್ಯ ಮತ್ತು ನಿಶ್ಚಲದಾಸರು ಮೊದಲಾದವರು ಅಧಿಕರೆಂದು, ಹೆಚ್ಚು ಸ್ವೀಕಾರ ಯೋಗ್ಯರೆಂದು ಕಾಣಿಸುತ್ತಾರೆ.

**ಸಿದ್ಧಾಂತಿ** :– ನೀವು ವಿದ್ವಾಂಸರೋ ಅಥವಾ ಅವಿದ್ವಾಂಸರೋ?

**ನವೀನ** :– ನಾವೂ ಸ್ವಲ್ಪ ವಿದ್ವಾಂಸರಾಗಿದ್ದೇವೆ.

**ಸಿದ್ಧಾಂತಿ** :– ಒಳ್ಳೆಯದು, ವಸಿಷ್ಠ, ಶಂಕರಾಚಾರ್ಯ ಮತ್ತು ನಿಶ್ಚಲದಾಸರ ಪಕ್ಷವನ್ನು ನಮ್ಮ ಮುಂದೆ ಸ್ಥಾಪಿಸಿರಿ; ನಾವು ಖಂಡಿಸುತ್ತೇವೆ. ಯಾವನ ಪಕ್ಷ ಸಿದ್ಧವಾಗುವುದೋ, ಅವನೇ ದೊಡ್ಡವನು. ಅವರ ಮತ್ತು ನಿಮ್ಮ ಮಾತು ಅಖಂಡನೀಯವಾಗಿದ್ದಲ್ಲಿ, ನೀವು ಅವರ ಯುಕ್ತಿಗಳನ್ನು ಆಧಾರವಾಗಿ ಮಾಡಿಕೊಂಡು, ನಮ್ಮ ಮಾತನ್ನು ಖಂಡಿಸಲಾರಿರೇಕೆ? ಹಾಗೆ ಮಾಡಿದರೆ ಮಾತ್ರ ನಿಮ್ಮ ಮತ್ತು ಅವರ ಮಾತು ಮಾನನೀಯವಾದೀತು. ಶಂಕರಾಚಾರ್ಯ–ಮೊದಲಾದವರೇನೋ ಜೈನರ ಮತವನ್ನು ಖಂಡಿಸುವುದಕ್ಕಾಗಿಯೇ ಈ ಮತವನ್ನು ಸ್ವೀಕರಿಸಿರಬಹುದು – ಎಂಬ ಊಹೆಯಿದೆ. ಏಕೆಂದರೆ, ದೇಶ–ಕಾಲಗಳಿಗೆ ಅನುಕೂಲವಾಗಿ ತಮ್ಮ ಪಕ್ಷವನ್ನು ಸಿದ್ಧಪಡಿಸುವುದಕ್ಕಾಗಿ, ಬಹುಜನ ಚತುರಾರಾದ ವಿದ್ವಾಂಸರು ತಮ್ಮ ಆತ್ಮನ ಜ್ಞಾನಕ್ಕೆ ವಿರುದ್ಧವಾಗಿಯೂ ವರ್ತಿಸುತ್ತಾರೆ. ಮತ್ತು ಈ ಮಾತುಗಳನ್ನು, ಎಂದರೆ–ಜೀವ–ಈಶ್ವರರ ಏಕತ್ವ, ಜಗತ್ತಿನ ಮಿಥ್ಯಾತ್ವ–ಮೊದಲಾದುವನ್ನು ಸತ್ಯವೆಂದೂ, ವ್ಯವಹಾರಗಳನ್ನು ಸತ್ಯವಲ್ಲವೆಂದೂ ಒಪ್ಪುತ್ತಿದ್ದರಾದರೆ, ಅವರ ಮಾತು[೪೦] ಸತ್ಯವಾಗಲಾರದು. ಮತ್ತು ನಿಶ್ಚಲದಾಸರ ಪಾಂಡಿತ್ಯವನ್ನು ನೋಡಿರಿ, ಹೀಗಿದೆ: – **"ಜೀವೋ ಬ್ರಹ್ಮಾ ಭಿನ್ನಶ್ಚೇತನತ್ವಾತ್"**. ಅವರು **"ವೃತ್ತಿಪ್ರಭಾಕರ"**ದಲ್ಲಿ ಜೀವ–ಬ್ರಹ್ಮರ ಏಕತ್ವಕ್ಕೆ ಅನುಮಾನಪ್ರಮಾಣವಾಗಿ **"ಚೇತನನಾಗಿರುವುದರಿಂದ**[೪೧] **ಜೀವನು ಬ್ರಹ್ಮದಿಂದ ಅಭಿನ್ನನಾಗಿದ್ದಾನೆ"**.–ಎಂದು ಬರೆದಿದ್ದಾರೆ. ಇದು ಬಹಳ ಕಡಿಮೆ ತಿಳುವಳಿಕೆಯ ಪುರುಷನ ಮಾತಿಗೆ ಸಮಾನವಾದ ಮಾತಾಗಿದೆ. ಏಕೆಂದರೆ, ಸಾಧರ್ಮ್ಯ ಮಾತ್ರದಿಂದ, (ಕೇವಲ ಸಮಾನ ಗುಣತ್ವದಿಂದ) ಒಂದರ ಏಕತ್ವ ಇನ್ನೊಂದರೊಂದಿಗೆ ಉಂಟಾಗುವುದಿಲ್ಲ; ವೈಧರ್ಮ್ಯವು (ವಿರುದ್ಧಗುಣತ್ವವು) ಬೇರ್ಪಡಿಸುವಂತಹದಾಗಿರುತ್ತದೆ. ಉದಾಹರಣಗೆ, ಯಾವನಾದರೂ **"ಪೃಥಿವಿಯು ಜಲದಿಂದ ಅಭಿನ್ನವಾಗಿದೆ"**. ಎಂದರೆ, ಹೇಗೆ ಈ ವಾಕ್ಯ ಸಂಗತವಾಗಲಾರದೋ, ಹಾಗೆ ನಿಶ್ಚಲದಾಸರು ಹೇಳಿರುವ ಲಕ್ಷಣವೂ ಕೂಡ ವ್ಯರ್ಥವಾಗಿದೆ. ಏಕೆಂದರೆ, ಅಲ್ಪತ್ವ ಅಲ್ಪಜ್ಞ ಮತ್ತು ಭ್ರಾಂತಿಯುಕ್ತತ್ವ ಮೊದಲಾದ ಧರ್ಮಗಳು ಜೀವನದಲ್ಲಿದ್ದು ಬ್ರಹ್ಮಕ್ಕೆ ಮತ್ತು ಸರ್ವಗತತ್ವ, ಸರ್ವಜ್ಞತ್ವ ಮತ್ತು ಭ್ರಾಂತಿರಹಿತತ್ವ ಮೊದಲಾದ ವೈಧರ್ಮ್ಯಗಳು ಬ್ರಹ್ಮದಲ್ಲಿದ್ದು ಜೀವನಿಗೆ ವಿರುದ್ಧವಾಗಿವೆ. ಆದುದರಿಂದ ಬ್ರಹ್ಮ ಮತ್ತು ಜೀವರು ಬೇರೆ–ಬೇರೆಯಾಗಿದ್ದಾರೆ. ಹೇಗೆ ಗಂಧವತ್ತ್ವ, ಕಠಿನತ್ವ ಮೊದಲಾದುವು

---

೪೦. ಎಂದರೆ, ಹೊಸ ಸಿದ್ಧಾಂತದ ಅಂಗೀಕಾರ.

೪೧. ಕೇವಲ ಸಮಾನ ಗುಣತ್ವದಿಂದ

ಭೂಮಿಯ ಧರ್ಮಗಳು, ರಸವತ್ತ್ವ, ದ್ರವತ್ವ ಮೊದಲಾದ ಜಲದ ಧರ್ಮಕ್ಕೆ ವಿರುದ್ಧವಾಗಿರುವುದರಿಂದ ಪೃಥಿವೀ ಮತ್ತು ಜಲ ಒಂದಲ್ಲ; ಹಾಗೆಯೇ ಜೀವನ ಮತ್ತು ಬ್ರಹ್ಮದ ನಡುವೆ ವೈಧರ್ಮ್ಯವಿರುವುದರಿಂದ, ಜೀವ ಮತ್ತು ಬ್ರಹ್ಮ ಎಂದೂ ಒಂದಾಗಿರಲಿಲ್ಲ ಒಂದಾಗಿಲ್ಲ ಮತ್ತು ಎಂದೂ ಒಂದಾಗುವುದೂ ಇಲ್ಲ. ಇಷ್ಟರಿಂದಲೇ ನಿಶ್ಚಲದಾಸರೇ ಮೊದಲಾದವರ ಬಗೆಗೆ ಅವರಲ್ಲಿ ಎಷ್ಟು ಪಾಂಡಿತ್ಯವಿದ್ದಿತೆಂದು ತಿಳಿದುಕೊಳ್ಳಿರಿ. ಮತ್ತು ಯಾವನು ಯೋಗವಾಸಿಷ್ಠರನ್ನು ರಚಿಸಿದ್ದಾನೋ, ಅವನು ಯಾವನೋ ಆಧುನಿಕ ವೇದಾಂತಿಯಾಗಿದ್ದನು; ಅದು ವಾಲ್ಮೀಕಿಯು, ವಸಿಷ್ಠರು ಮತ್ತು ರಾಮಚಂದ್ರನು ರಚಿಸಿದುದು, ಅಥವಾ ಹೇಳಿದುದು-ಕೇಳಿದುದಲ್ಲ. ಏಕೆಂದರೆ-ಅವರೆಲ್ಲರೂ ವೇದಾನುಯಾಯಿಗಳಾಗಿದ್ದರು; ವೇದಕ್ಕೆ ವಿರುದ್ಧವಾಗಿ ರಚಿಸುವುದೂ, ಹೇಳುವುದೂ ಮತ್ತು ಕೇಳುವುದೂ ಶಕ್ಯವಾಗಿರಲಿಲ್ಲ.

ವ್ಯಾಸರು ಯಾವ ಶಾರೀರಕ ಸೂತ್ರಗಳನ್ನು ರಚಿಸಿದ್ದಾರೋ, ಅವುಗಳಲ್ಲಿಯೂ ಕೂಡ ಜೀವ-ಬ್ರಹ್ಮರ ಏಕತ್ವ ಕಂಡುಬರುತ್ತದೆ, ನೋಡಿರಿ:-

**ಸಂಪದ್ಯಾವಿರ್ಭಾವಃ ಸ್ವೇನಶಬ್ದಾತ್** ॥ ೧ ॥ (ವೇದಾಂತ:- ೪.೪.೧)

**ಬ್ರಾಹ್ಮೇಣ ಜೈಮಿನಿರುಪನ್ಯಾಸಾದಿಭ್ಯಃ** ॥ ೨ ॥ (ವೇದಾಂತ:- ೪.೪.೨)

**ಚಿತಿತನ್ಮಾತ್ರೇಣ ತದಾತ್ಮಕತ್ವಾದಿತ್ಯೌಡುಲೋಮಿಃ** ॥ ೩ ॥ (ವೇದಾಂತ:- ೪.೪.೩)

**ಏವಮಪ್ಯುಪನ್ಯಾಸಾತ್ ಪೂರ್ವಭಾವಾವಿರೋಧಂ ಬಾದರಾಯಣಃ** ॥ ೪ ॥ (ವೇದಾಂತ:-೪.೪.೪)

**ಅತ ಏವ ಚಾನನ್ಯಾಧಿಪತಿಃ** ॥ ೫ ॥ (ವೇದಾಂತ:-೪.೪.೫)

ಎಂದರೆ ಮೊದಲು ಯಾವನು ಬ್ರಹ್ಮಸ್ವರೂಪನಾಗಿದ್ದನೋ, ಆ ಜೀವನು ತನ್ನ ಸ್ವರೂಪವನ್ನು ಪಡೆದುಕೊಂಡು ಪ್ರಕಟನಾಗುತ್ತಾನೆ. ಏಕೆಂದರೆ, ಸ್ವ-ಎಂಬ ಶಬ್ದದಿಂದ ತನ್ನ ಬ್ರಹ್ಮಸ್ವರೂಪದ ಗ್ರಹಿಕೆಯಾಗುತ್ತದೆ. (೧).

**"ಅಯಮಾತ್ಮಾ ಅಪಹತಪಾಪ್ಮಾ"** ಮೊದಲಾದ ಉಪನ್ಯಾಸಗಳಿಂದ, ಐಶ್ವರ್ಯ (ಈಶ್ವರತ್ವ)ದ ಪ್ರಾಪ್ತಿಯಾಗುವ ಪರ್ಯಂತ ಉಕ್ತವಾಗಿರುವ ಕಾರಣಗಳಿಂದ, ಜೀವನು ಬ್ರಹ್ಮ ಸ್ವರೂಪದಿಂದ ಸ್ಥಿತನಾಗುತ್ತಾನೆ - ಎಂದು ಜೈಮಿನಿ ಆಚಾರ್ಯರ ಅಭಿಪ್ರಾಯವಿದೆ. (೨)

ಮತ್ತು ಔಡುಲೋಮಿ ಆಚಾರ್ಯರು, ತದಾತ್ಮಕಸ್ವರೂಪದ ನಿರೂಪಣ ಮೊದಲಾದ, ಬೃಹದಾರಣ್ಯಕದ ಕಾರಣರೂಪವಾದ ವಚನಗಳ ಪ್ರಮಾಣದಿಂದ, ಜೀವನು ಮುಕ್ತಿಯಲ್ಲಿ ಚೈತನ್ಯ ಸ್ವರೂಪದಿಂದ ಸ್ಥಿತನಾಗಿರುತ್ತಾನೆ-ಎನ್ನುತ್ತಾರೆ. (೩)

ವ್ಯಾಸರು ಮೊದಲು ಹೇಳಿರುವ ಈ ಉಪನ್ಯಾಸ ಮೊದಲಾದುದರಿಂದಲೂ, ಐಶ್ವರ್ಯ ಪ್ರಾಪ್ತಿಯೆಂಬ ಹೇತುಗಳಿಂದಲೂ ಜೀವನು ಬ್ರಹ್ಮಸ್ವರೂಪವಾಗುವುದರಲ್ಲಿ ಅವಿರೋಧವನ್ನು ಅಂಗೀಕರಿಸುತ್ತಾರೆ. (೪)

ಯೋಗಿಯು ಐಶ್ವರ್ಯಸಹಿತನಾಗಿ (ಈಶ್ವರತ್ವಯುಕ್ತನಾಗಿ) ತನ್ನ ಬ್ರಹ್ಮಸ್ವರೂಪವನ್ನು ಪಡೆದುಕೊಂಡು, ಬೇರೆಯ ಅಧಿಪತಿಯಿಂದರಹಿತನಾಗಿ, ಎಂದರೆ ಸ್ವತಃ ತಾನೇ ತನ್ನ ಮತ್ತು ಎಲ್ಲರ ಅಧಿಪತಿಯ ರೂಪದಲ್ಲಿ, ಬ್ರಹ್ಮಸ್ವರೂಪದಿಂದ ಮುಕ್ತಿಯಲ್ಲಿ ಸ್ಥಿತನಾಗಿರುತ್ತಾನೆ. (೫)

**ಉತ್ತರ :-** ಈ ಸೂತ್ರಗಳ ಅರ್ಥ ಈ ರೀತಿಯಲ್ಲಿಲ್ಲ. ಆದರೆ, ಇವುಗಳ ಯಥಾರ್ಥವಾದ ಅರ್ಥ ಹೀಗಿದೆ, ಕೇಳಿರಿ. ಎಲ್ಲಿಯವರೆಗೆ ಜೀವನು ತನ್ನ ಸ್ವಕೀಯ ಶುದ್ಧ ಸ್ವರೂಪವನ್ನು ಗಳಿಸಿಕೊಂಡು, ಎಲ್ಲ ಕಶ್ಮಲಗಳಿಂದಲೂ ರಹಿತನಾಗಿ, ಪವಿತ್ರನಾಗುವುದಿಲ್ಲವೋ, ಅಲ್ಲಿನವರೆಗೆ ಯೋಗದಿಂದ ಐಶ್ವರ್ಯವನ್ನು (ಯೋಗಾಭ್ಯಾಸದಿಂದ ಲಭಿಸುವ, ಇಂದ್ರಿಯಗಳೇ ಮೊದಲಾದುವುಗಳ ಮೇಲಿನ ಸ್ವಾಮಿತ್ವ) ಸಾಧಿಸಿ, ತನ್ನ ಅಂತರ್ಯಾಮೀ ಬ್ರಹ್ಮವನ್ನು ಪಡೆದುಕೊಂಡು, ಆನಂದದಲ್ಲಿ ಸ್ಥಿತನಾಗಲಾರನು. (೧)

ಇದೇ ರೀತಿ, ಯೋಗಿಯು ಯಾವಾಗ ಪಾಪ ಮೊದಲಾದುವುಗಳಿಂದ ರಹಿತನಾಗಿ, ಐಶ್ವರ್ಯಯುಕ್ತನಾಗುತ್ತಾನೋ, ಆಗ ಮಾತ್ರ ಬ್ರಹ್ಮದೊಂದಿಗೆ ಮುಕ್ತಿಯ ಆನಂದವನ್ನು ಅನುಭವಿಸಬಲ್ಲನು-ಈ ರೀತಿ ಜೈಮಿನಿ ಆಚಾರ್ಯರ ಅಭಿಪ್ರಾಯವಿದೆ. (೨)

ಯಾವಾಗ ಅವಿದ್ಯೆಯೇ ಮೊದಲಾದ ದೋಷಗಳಿಂದ ಬಿಡುಗಡೆ ಹೊಂದಿ, ಶುದ್ಧ ಚೈತನ್ಯ ಮಾತ್ರಸ್ವರೂಪದಿಂದ ಜೀವನು ಸ್ಥಿರನಾಗುತ್ತಾನೋ, ಆಗಮಾತ್ರ "ತದಾತ್ಮಕತ್ವ"ವನ್ನು, ಎಂದರೆ ಬ್ರಹ್ಮಸ್ವರೂಪದೊಂದಿಗೆ ಸಂಬಂಧವನ್ನು ಗಳಿಸಿಕೊಳ್ಳುತ್ತಾನೆ. (೩)

ಯಾವಾಗ (ಜೀವನು) ಬ್ರಹ್ಮದೊಂದಿಗೆ ಐಶ್ವರ್ಯವನ್ನೂ (ಆಧ್ಯಾತ್ಮಿಕ ಉತ್ಕೃಷ್ಟ ಭಾವವನ್ನೂ) ಮತ್ತು ಪರಿಶುದ್ಧವೂ, ವಿವಿಧತತ್ತ್ವ ಸಂಬಂಧಿಯೂ ಆದ ವಿಜ್ಞಾನವನ್ನೂ ಗಳಿಸಿಕೊಳ್ಳುತ್ತಾನೋ, ಆಗ ಜೀವಂತನಾಗಿರುವಾಗಲೇ ಜೀವನ್ಮುಕ್ತನಾಗುತ್ತಾನೆ. ಆಗ ತನ್ನ ನಿರ್ಮಲವಾದ ಮೊದಲ ಸ್ವರೂಪವನ್ನು ಗಳಿಸಿ, ಆನಂದಿತನಾಗುತ್ತಾನೆ. ಎಂದು ವ್ಯಾಸಮುನಿಗಳ ಅಭಿಪ್ರಾಯವಿದೆ. (೪)

ಯಾವಾಗ ಯೋಗಿಯ ಸಂಕಲ್ಪವು ಸತ್ಯವಾಗುತ್ತದೋ, ಆಗ ಸ್ವತಃ ಪರಮೇಶ್ವರನನ್ನು ಸಾಕ್ಷಾತ್ಕರಿಸಿಕೊಂಡು, ಮುಕ್ತಿ ಸುಖವನ್ನು ಪಡೆಯುತ್ತಾನೆ. ಅಲ್ಲಿ ಸ್ವಾಧೀನನಾಗಿ, ಸ್ವತಂತ್ರನಾಗಿರುತ್ತಾನೆ. ಹೇಗೆ ಜಗತ್ತಿನಲ್ಲಿ ಒಬ್ಬನು ಮುಖ್ಯ, ಇನ್ನೊಬ್ಬ ಅಮುಖ್ಯನಾಗಿರುತ್ತಾನೋ, ಹಾಗೆ ಮುಕ್ತಿಯಲ್ಲಿರುವುದಿಲ್ಲ. ಆದರೆ, ಮುಕ್ತ ಜೀವರೆಲ್ಲರೂ ಒಂದೇ ಸಮನಾಗಿರುತ್ತಾರೆ. (೫) ಹೀಗೆ ಅಲ್ಲವಾದರೆ:-

**ನೇತರೋಽನುಪಪತ್ತೇಃ ॥ ೧ ॥** (ವೇದಾಂತ :- ೧.೧.೧೬)

**ಭೇದವ್ಯಪದೇಶಾಚ್ಚ ॥ ೨ ॥** (ವೇದಾಂತ :- ೧.೧.೧೭)

**ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ॥ ೩ ॥** (ವೇದಾಂತ :- ೧.೨.೨೨)

**ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ ॥ ೪ ॥** (ವೇದಾಂತ :-೧.೧.೧೯)

**ಅಂತಸ್ತದ್ಧರ್ಮೋಪದೇಶಾತ್ ॥ ೫ ॥** (ವೇದಾಂತ :- ೧.೧.೨೦)

**ಭೇದವ್ಯಪದೇಶಾಚ್ಚಾನ್ಯಃ ॥ ೬ ॥** (ವೇದಾಂತ :- ೧.೧.೨೧)

**ಗುಹಾಂ ಪ್ರವಿಷ್ಟಾವಾತ್ಮನೌ ಹಿ ತದ್ದರ್ಶನಾತ್ ॥ ೭ ॥** (ವೇದಾಂತ :- ೧.೨.೧೧)

**ಅನುಪಪತ್ತೇಸ್ತು ನ ಶಾರೀರಃ ॥ ೮ ॥** (ವೇದಾಂತ :- ೧.೨.೩)

**ಅಂತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್ ॥ ೯ ॥** (ವೇದಾಂತ :- ೧.೨.೧೮)

**ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ ॥ ೧೦॥** (ವೇದಾಂತ :- ೧.೨.೨೦)

**ಅರ್ಥ:-** ಬ್ರಹ್ಮದಿಂದ ಬೇರೆಯಾದ ಜೀವನು ಸೃಷ್ಟಿಕರ್ತೃವಲ್ಲ, ಏಕೆಂದರೆ-ಅಲ್ಪನೂ, (ಅಣುಸ್ವರೂಪನೂ, ಏಕದೇಶೀಯನೂ) ಅಲ್ಪ ಸಾಮರ್ಥ್ಯಯುಕ್ತನೂ ಮತ್ತು ಅಲ್ಪಜ್ಞನೂ ಆದ, (ದೇಹದೇಹಾಂತರನಿವಾಸೀ) ಜೀವನಲ್ಲಿ ಸೃಷ್ಟಿಕರ್ತೃತ್ವ ಸಂಘಟಿಸಲಾರದು. ಆದುದರಿಂದ, ಜೀವನು ಬ್ರಹ್ಮವಲ್ಲ . (೧)

**"ರಸಂ ಹ್ಯೇವಾಯಂ ಲಬ್ಧ್ವಾಽಽನಂದೀ ಭವತಿ".-** ಇದು ತೈತ್ತಿರೀಯೋಪನಿಷತ್ತಿನ ವಚನವಾಗಿದೆ. ಜೀವ ಮತ್ತು ಬ್ರಹ್ಮ ಬೇರೆಯಾಗಿದ್ದಾರೆ. ಏಕೆಂದರೆ- ಇವರಿಬ್ಬರ ಭೇದವು ಪ್ರತಿಪಾದಿಸಲಪಟ್ಟಿದೆ. ಹೀಗೆ ಅಲ್ಲವಾಗಿದ್ದಲ್ಲಿ, ರಸವನ್ನು, ಎಂದರೆ ಆನಂದಸ್ವರೂಪವಾದ ಬ್ರಹ್ಮವನ್ನು ಪಡೆದು, ಜೀವನು ಆನಂದಸ್ವರೂಪನಾಗುತ್ತಾನೆ-ಎಂಬ, ಸಾಕ್ಷಾತ್ಕರಿಸಿಕೊಳ್ಳಬೇಕಾದ ಬ್ರಹ್ಮ ಮತ್ತು ಪ್ರಾಪ್ತಿಗಾಗಿ ಸಾಧನೆ ಮಾಡುವ ಜೀವರ ನಿರೂಪಣ ಅನ್ವಯಿಸಲಾರದು. ಆದುದರಿಂದ ಜೀವ ಮತ್ತು ಬ್ರಹ್ಮ ಒಂದಲ್ಲ. (೨)

**ದಿವ್ಯೋ ಹ್ಯಮೂರ್ತಃ ಪುರುಷ ಃ ಸ ಬಾಹ್ಯಾಭ್ಯಂತರೋ ಹ್ಯಜಃ ।**

**ಅಪ್ರಾಣೋ ಹ್ಯಮನಾಃ ಶುಭ್ರೋಽಕ್ಷರಾತ್ಪರತಃ ಪರಃ ॥** (ಮುಂಡೋಕಪನಿಷತ್ತು:- ೨.೨.೨)

ದಿವ್ಯನು, ಶುದ್ಧನು, ಅಕಾರರಹಿತನು, ಸರ್ವದಲ್ಲಿಯೂ ಪೂರ್ಣನು, ಹೊರಗೆ-ಒಳಗೆ ನಿರಂತರವಾಗಿ ವ್ಯಾಪಕನು, ಅಜನು, ಜನನ-ಮರಣ-ಶರೀರಧಾರಣ-ಮೊದಲಾದುವುಗಳಿಂದ ರಹಿತನು, ಶ್ವಾಸ-ಪ್ರಶ್ವಾಸಗಳ ಶರೀರ-ಮನಸ್ಸುಗಳ ಸಂಬಂಧದಿಂದ ರಹಿತನು, ಪ್ರಕಾಶ ರೂಪನು - ಈ ಮೊದಲಾದ ವಿಶೇಷಣಗಳು ಪರಮಾತ್ಮನಿಗೆ ಹೇಳಲ್ಪಟ್ಟಿವೆ. ಮತ್ತು ಅಕ್ಷರವೂ, ನಾಶರಹಿತವೂ ಆದ ಪ್ರಕೃತಿಗಿಂತ ಶ್ರೇಷ್ಠನಾದವನು, ಎಂದರೆ ಸೂಕ್ಷ್ಮನಾದವನು ಜೀವನು; ಅವನಿಗಿಂತಲೂ ಪರಮಾತ್ಮನು

ಶ್ರೇಷ್ಠನು, ಎಂದರೆ ಬ್ರಹ್ಮವು ಸೂಕ್ಷ್ಮವಾಗಿದೆ. ಪ್ರಕೃತಿಯಿಂದ ಮತ್ತು ಜೀವರಿಂದ ಬ್ರಹ್ಮದ ಭೇದದ ಪ್ರತಿಪಾದನಗಳಿಗಿರುವ ಕಾರಣಗಳಿಂದ, ಪ್ರಕೃತಿ ಮತ್ತು ಜೀವರಿಂದ ಬ್ರಹ್ಮವು ಬೇರೆಯಾಗಿದೆ. (೩).

ಇದೇ ಸರ್ವವ್ಯಾಪಕ ಬ್ರಹ್ಮದಲ್ಲಿ ಜೀವನ ಯೋಗವನ್ನು ಅಥವಾ ಜೀವನಲ್ಲಿ ಬ್ರಹ್ಮದ ಯೋಗವನ್ನು ಪ್ರತಿಪಾದಿಸಿರುವುದರಿಂದ ಜೀವ ಮತ್ತು ಬ್ರಹ್ಮ ಬೇರೆಯಾಗಿದ್ದಾರೆ. ಏಕೆಂದರೆ, ಯೋಗವು (ಎಂದರೆ ಸೇರುವಿಕೆ ಒಂದಕ್ಕಿಂತ ಹೆಚ್ಚು ವಸ್ತುಗಳಿದ್ದಾಗ ಮಾತ್ರ) ಬೇರೆ ಬೇರೆಯ ಪದಾರ್ಥಗಳದು ಮಾತ್ರ ಆಗುತ್ತದೆ. (೪)

ಈ ಬ್ರಹ್ಮ ಕ್ಕೆ ಅಂತರ್ಯಾಮಿತ್ವ ಮೊದಲಾದ ಧರ್ಮಗಳನ್ನು ಹೇಳಿದ್ದಾರೆ ಮತ್ತು ಜೀವನಲ್ಲಿ ವ್ಯಾಪಕವಾಗಿರುವುದರಿಂದ, ವ್ಯಾಪ್ಯನಾದ ಜೀವನು ವ್ಯಾಪಕವಾದ ಬ್ರಹ್ಮದಿಂದ ಬೇರೆಯಾಗಿದ್ದಾನೆ. ಏಕೆಂದರೆ, ವ್ಯಾಪ್ಯ-ವ್ಯಾಪಕ ಸಂಬಂಧವೂ ಭೇದವಿದ್ದಲ್ಲಿ ಅನ್ವಯಿಸಬಲ್ಲದು. (೫)

ಹೇಗೆ ಪರಮಾತ್ಮನು ಜೀವನಿಂದ ಬೇರೆಯಾದ ಸ್ವರೂಪದಿಂದ ಯುಕ್ತನಾಗಿದ್ದಾನೋ, ಹಾಗೆ ಇಂದ್ರಿಯಗಳು, ಅಂತಃಕರಣಗಳು, ಪೃಥಿವೀ-ಮೊದಲಾದ ಭೂತಗಳು, ದಿಕ್ಕುಗಳು, ವಾಯು (ಆಕರ್ಷಣಶಕ್ತಿ) ಸೂರ್ಯ-ಮೊದಲಾದುವು, ದಿವ್ಯಗುಣಗಳ ಭೋಗದಿಂದ ದೇವತೆಗಳೆಂದು ನಿರ್ದೇಶಿಸಲ್ಪಡುವ ವಿದ್ವಾಂಸರು ಇವರಿಂದಲೂ ಕೂಡ ಪರಮಾತ್ಮನು ಬೇರೆಯಾಗಿದ್ದಾನೆ. (೬)

**"ಗುಹಾಂ ಪ್ರವಿಷ್ಟೌ ಸುಕೃತಸ್ಯ ಲೋಕೇ".**- ಮೊದಲಾದ ಉಪನಿಷತ್ತಿನ (ಕಠ:- ೩.೧) ವಚನಗಳಿಂದ ಜೀವ ಮತ್ತು ಪರಮಾತ್ಮನು ಬೇರೆಯಾಗಿದ್ದಾರೆ-ಎಂದು ಸ್ಪಷ್ಟವಾಗಿದೆ. ಹಾಗೆಯೇ ಉಪನಿಷತ್ತುಗಳಲ್ಲಿ ಬಹಳ ಕಡೆ ತೋರಿಸಿದ್ದಾರೆ. (೭)

**"ಶರೀರೇ ಭವಃ ಶಾರಿರಃ"**- ಶರೀರಧಾರೀ ಜೀವನು ಬ್ರಹ್ಮವಲ್ಲ. ಏಕೆಂದರೆ, ಬ್ರಹ್ಮದ ಗುಣ, ಕರ್ಮ, ಸ್ವಭಾವಗಳು ಜೀವನಿಗೆ ಅನ್ವಯಿಸುವುದಿಲ್ಲ. (೮)

(ಅಧಿದೇವ) ದಿವ್ಯವಾದ ಮನಸ್ಸು-ಮೊದಲಾದುದರಲ್ಲಿಯೂ, ಜ್ಞಾನೇಂದ್ರಿಯಗಳು-ಮೊದಲಾದ ಸಕಲ ವಸ್ತುಗಳಲ್ಲಿಯೂ, (ಅಧಿಭೂತ) ಪೃಥಿವೀ-ಮೊದಲಾದ ಭೂತಗಳಲ್ಲಿಯೂ, (ಅಧ್ಯಾತ್ಮ) ಸಮಸ್ತ ಜೀವರಲ್ಲಿಯೂ ಪರಮಾತ್ಮನು ಅಂತರ್ಯಾಮಿರೂಪದಿಂದ ಸ್ಥಿತನಾಗಿದ್ದಾನೆ. ಏಕೆಂದರೆ, ಅದೇ ಪರಮಾತ್ಮನ ವ್ಯಾಪಕತ್ವ ಮೊದಲಾದ ಧರ್ಮಗಳು ಉಪನಿಷತ್ತುಗಳಲ್ಲಿ ಸರ್ವತ್ರ ವಿವರಿಸಲ್ಪಟ್ಟಿವೆ. (೯)

ಶರೀರಧಾರಿಯಾದ ಜೀವನು ಬ್ರಹ್ಮವಲ್ಲ; ಏಕೆಂದರೆ-ಬ್ರಹ್ಮದಿಂದ ಜೀವನ ಭೇದವು ಸ್ವರೂಪದಿಂದ ಸಿದ್ಧವಾಗಿದೆ. (೧೦)

ಈ ಮೊದಲಾದ ಶಾರೀರಿಕ ಸೂತ್ರಗಳಿಂದಲೂ ಕೂಡ, ಸ್ವರೂಪದಿಂದ ಬ್ರಹ್ಮ ಮತ್ತು ಜೀವರ ಭೇದ ಸಿದ್ಧವಾಗಿದೆ. ಹಾಗೆಯೇ ವೇದಾಂತಿಗಳ ಉಪಕ್ರಮ ಮತ್ತು ಉಪಸಂಹಾರವೂ ಕೂಡ ಅನ್ವಯಿಸಲಾರದು. ಏಕೆಂದರೆ, 'ಉಪಕ್ರಮ'-ಎಂದರೆ ಆರಂಭವೂ ಬ್ರಹ್ಮದಿಂದ ಮತ್ತು 'ಉಪಸಂಹಾರ' ಎಂದರೆ ಪ್ರಳಯ ಕೂಡ ಬ್ರಹ್ಮದಲ್ಲಿಯೇ (ಆಗುತ್ತವೆ) ಎಂದು ಹೇಳುತ್ತಾರೆ. ಬೇರೆಯ ಯಾವುದೇ ವಸ್ತುವನ್ನೂ ನೀವು ಒಪ್ಪದೇ ಇರುವಾಗ, ಉತ್ಪತ್ತಿ ಮತ್ತು ಪ್ರಳಯವೂ ಕೂಡ ಬ್ರಹ್ಮದ ಧರ್ಮಗಳಾಗಿ ಹೋಗುತ್ತವೆ. ಮತ್ತು ಉತ್ಪತ್ತಿ-ವಿನಾಶರಹಿತ ಬ್ರಹ್ಮದ ಪ್ರತಿಪಾದನವನ್ನು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಲ್ಲಿ ಮಾಡಲಾಗಿದೆ; ಅದು ನವೀನ ವೇದಾಂತಿಗಳ ಮೇಲೆ ಕನಲುವುದು. ಏಕೆಂದರೆ-ನಿರ್ವಿಕಾರ, ಅಪರಿಣಾಮಿ, ಶುದ್ಧ, ಸನಾತನ, ನಿರ್ಭ್ರಾಂತ ಮೊದಲಾದ ವಿಶೇಷಣಗಳಿಂದ ಸೂಚ್ಯವಾಗುವ ಬ್ರಹ್ಮದಲ್ಲಿ ವಿಕಾರ, ಉತ್ಪತ್ತಿ ಮತ್ತು ಅಜ್ಞಾನ ಮೊದಲಾದುದರ ಸಂಭವ ಯಾವ ರೀತಿಯಲ್ಲಿಯೂ ಉಂಟಾಗಲಾರದು. ಮತ್ತು ಉಪಸಂಹಾರ (ಪ್ರಳಯ) ಆದ ಮೇಲೆಯೂ ಬ್ರಹ್ಮ, ಕಾರಣರೂಪವಾದ ಜಡ ಮತ್ತು ಜೀವರು ನಿಃಸಂದೇಹವಾಗಿ ಇದ್ದೇ ಇರುತ್ತಾರೆ. ಆದುದರಿಂದ, ಉಪಕ್ರಮ ಮತ್ತು ಉಪಸಂಹಾರವೂ ಕೂಡ ಈ ವೇದಾಂತಿಗಳ ಸುಳ್ಳಾದ ಕಲ್ಪನೆ. ಶಾಸ್ತ್ರಗಳು ಮತ್ತು ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಗೆ ವಿರುದ್ಧವಾದ ಇಂತಹವೇ ಅಶುದ್ಧವಾದ ಬಹಳ ಮಾತುಗಳೂ ಇವರ ಬಳಿ ಬೇರೆಯವಿದೆ.

ಇದರ ನಂತರ ಸ್ವಲ್ಪ ಸ್ವಲ್ಪ ಜೈನರ ಮತ್ತು ಸ್ವಲ್ಪ ಸ್ವಲ್ಪ ಶಂಕರಾಚಾರ್ಯರ ಅನುಯಾಯಿಗಳ ಉಪದೇಶದ ಸಂಸ್ಕಾರಗಳು ಆರ್ಯಾವರ್ತದಲ್ಲಿ ಹರಡಿದ್ದವು. ಮತ್ತು ಪರಸ್ಪರ ಖಂಡನ-ಮಂಡನಗಳೂ ನಡೆಯುತ್ತಿದ್ದವು. ಶಂಕರಾಚಾರ್ಯರ ನಂತರ ಮುನ್ನೂರು ವರ್ಷಗಳು ಆದ ಮೇಲೆ ಉಜ್ಜಯಿನೀ ನಗರಿಯಲ್ಲಿ ವಿಕ್ರಮಾದಿತ್ಯನು ಪ್ರತಾಪಶಾಲಿಯಾದ ರಾಜನಾದನು. ಅವನು ಸರ್ವರಾಜರುಗಳ ಮಧ್ಯೆ ಪ್ರವೃತ್ತವಾಗಿದ್ದ ಯುದ್ಧವನ್ನು ಕೊನೆಮುಟ್ಟಿಸಿ, ಶಾಂತಿಯನ್ನು ಸ್ಥಾಪಿಸಿದನು. ಅವನ ನಂತರ ರಾಜಾ

ಭರ್ತೃಹರಿಯು ಕಾವ್ಯ ಮೊದಲಾದ ಶಾಸ್ತ್ರಗಳಲ್ಲಿಯೂ, ಅನ್ಯ ವಿಷಯಗಳಲ್ಲಿಯೂ ಸ್ವಲ್ಪ ಸ್ವಲ್ಪ ವಿದ್ವಾಂಸನೆನಿಸಿದನು. ಅವನು ವೈರಾಗ್ಯವಂತನಾಗಿ ರಾಜ್ಯವನ್ನು ಬಿಟ್ಟುಬಿಟ್ಟನು.[೪೨] ವಿಕ್ರಮಾದಿತ್ಯನ ನಂತರ ಐನೂರು ವರ್ಷಗಳಾದ ಮೇಲೆ ರಾಜಾಭೋಜನು ಬಂದನು. ಅವನು ಅಲ್ಪ ಸ್ವಲ್ಪ ವ್ಯಾಕರಣದ ಮತ್ತು ಕಾವ್ಯಾಲಂಕಾರ ಮೊದಲಾದುದರ ಎಷ್ಟು ಪ್ರಚಾರವನ್ನು ಮಾಡಿದನೆಂದರೆ, ಅವನ ರಾಜ್ಯದಲ್ಲಿ ಕುರಿ, ಮೇಕೆಗಳನ್ನು ಮೇಯಿಸುವವನಾದ ಕಾಳಿದಾಸನೂ ಕೂಡ 'ರಘುವಂಶ' ಕಾವ್ಯದ ಕರ್ತೃವಾದನು. ಯಾವನೇ ಆದರೂ ಒಳ್ಳೆಯ ಶ್ಲೋಕವನ್ನು ರಚಿಸಿ, ಭೋಜರಾಜರ ಬಳಿಗೆ ತೆಗೆದುಕೊಂಡು ಹೋದರೆ, ಅವನಿಗೆ ಬಹಳ ಧನವನ್ನು ಕೊಡುತ್ತಿದ್ದರು ಮತ್ತು ಗೌರವ ಲಭಿಸುತ್ತಿದ್ದಿತು. ಅ ಮೇಲೆ, ರಾಜರುಗಳೂ, ಶ್ರೀಮಂತರೂ ಓದುವುದನ್ನೇ ಬಿಟ್ಟುಬಿಟ್ಟರು.

ಶಂಕರಾಚಾರ್ಯರಿಗಿಂತ ಮೊದಲು, ವಾಮಮಾರ್ಗಿಗಳ, ನಂತರ ಶೈವಮೊದಲಾದ ಸಂಪ್ರದಾಯಸ್ಥರಾದ ಮತೀಯರೂ ಇದ್ದರೂ ಕೂಡ, ಅವರ ಬಲ ಹೆಚ್ಚಾಗಿರಲಿಲ್ಲ. ಮಹಾರಾಜಾ ವಿಕ್ರಮಾದಿತ್ಯನಿಂದ ಆರಂಭಿಸಿ, ಶೈವರ ಬಲ ಹೆಚ್ಚುತ್ತಾ ಬಂದಿತು. ಶೈವರಲ್ಲಿ ಪಾಶುಪತ ಮೊದಲಾದ ಬಹಳ ಶಾಖೆಗಳು ವಾಮ-ಮಾರ್ಗಿಗಳಲ್ಲಿನ ದಶಮಹಾವಿದ್ಯೆ ಮೊದಲಾದ ಶಾಖೆಗಳಂತೆಯೇ ಹೊರಟಿದ್ದವು. ಜನರು ಶಂಕರಾಚಾರ್ಯರನ್ನು ಶಿವನ ಅವತಾರವೆಂದು ಪರಿಗಣಿಸಿದರು. ಅವರ ಅನುಯಾಯಿಗಳಾದ ಸಂನ್ಯಾಸಿಗಳೂ ಕೂಡ ಶೈವ ಮತದಲ್ಲಿ ಪ್ರವೃತ್ತರಾದರು ಮತ್ತು ವಾಮಮಾರ್ಗಿಗಳನ್ನೂ ಕೂಡ ಸೇರಿಸಿಕೊಳ್ಳುತ್ತಾ ಹೋದರು. ವಾಮಮಾರ್ಗಿಗಳು ಶಿವನ ಪತ್ನಿಯಾದ ದೇವಿಯ ಉಪಾಸಕರೂ ಮತ್ತು ಶೈವರು ಮಹಾದೇವನ ಉಪಾಸಕರೂ ಆದರು. ಈ ಇಬ್ಬರೂ ರುದ್ರಾಕ್ಷ ಮತ್ತು ಭಸ್ಮವನ್ನು ಇಂದಿನವರೆಗೂ ಧರಿಸುತ್ತಾರೆ. ಆದರೆ, ವಾಮಮಾರ್ಗಿಗಳು ಎಷ್ಟು ವೇದ ವಿರೋಧಿಗಳಾಗಿದ್ದಾರೋ, ಶೈವರು ಅಷ್ಟು ವಿರೋಧಿಗಳಾಗಿಲ್ಲ.

**ಧಿಕ್ ಧಿಕ್ ಕಪಾಲಂ ಭಸ್ಮರುದ್ರಾಕ್ಷವಿಹೀನಮ್** ॥ ೧ ॥

**ರುದ್ರಾಕ್ಷಾನ್ ಕಂಠದೇಶೇ ದಶನಪರಿಮಿತಾನ್ ಮಸ್ತಕೇ ವಿಂಶತಿ ದ್ವೇ**

**ಷಟ್ ಷಟ್ ಕರ್ಣಪ್ರದೇಶೇ ಕರಯುಗಲಗತಾನ್ ದ್ವಾದಶಾನ್ದ್ವಾದಶೈವ** ।

**ಬಾಹ್ವೋರಿಂದೋಃ ಕಲಾಭಿಃ ಪೃಥಗಿತಿ ಗದಿತಮೇಕಮೇವಂ ಶಿಖಾಯಾಂ**

**ವಕ್ಷಸ್ಯಷ್ಟಾಧಿಕಂ ಯಃ ಕಲಯತಿ ಶತಕಂ ಸ ಸ್ವಯಂ ನೀಲಕಂಠಃ**[೪೩] ॥

ಈ ಮೊದಲಾದ ಅನೇಕ ವಿಧದ ಶ್ಲೋಕಗಳನ್ನು ಈ ಜನರು ರಚಿಸಿದರು ಮತ್ತು "ಯಾವನ ಕಪಾಲದಲ್ಲಿ ಭಸ್ಮ ಮತ್ತು ಕಂಠದಲ್ಲಿ ರುದ್ರಾಕ್ಷವಿಲ್ಲವೋ, ಅವನಿಗೆ ಧಿಕ್ಕಾರವಿದೆ. **"ತಂ ತ್ಯಜೇದಂತ್ಯಜಂ ಯಥಾ"**- ಅವನನ್ನು ಚಾಂಡಾಲನಿಗೆ ಸಮನೆಂದು ತ್ಯಜಿಸಬೇಕು. (೧)

ಯಾವನು ಕಂಠದಲ್ಲಿ ಮೂವತ್ತು ತಲೆಯಲ್ಲಿ ನಾಲ್ವತ್ತು, ಕಿವಿಗಳಲ್ಲಿ ಆರು-ಆರು, ಕರಗಳಲ್ಲಿ ಹನ್ನೆರಡು-ಹನ್ನೆರಡು, ಭುಜಗಳಲ್ಲಿ ಹದಿನಾರು-ಹದಿನಾರು, ಶಿಖೆಯಲ್ಲಿ ಒಂದು ಮತ್ತು ಹೃದಯದಲ್ಲಿ ನೂರೆಂಟು ರುದ್ರಾಕ್ಷಗಳನ್ನು ಧರಿಸುತ್ತಾನೋ, ಅವನು ಸಾಕ್ಷಾತ್ ಮಹಾದೇವನಂತೆಯೇ ಇರುತ್ತಾನೆ. (೨)

ಹೀಗೆಯೇ ಶಾಕ್ತರೂ ಕೂಡ ಒಪ್ಪುತ್ತಾರೆ. ಆ ಮೇಲೆ ಈ ವಾಮಮಾರ್ಗಿಗಳೂ ಮತ್ತು ಶೈವರೂ ಸಮ್ಮತರಾಗಿ ಭಗ-ಲಿಂಗದ ಸ್ಥಾಪನೆಯನ್ನು ಮಾಡಿದರು; ಅವನ್ನು ಜಲಧಾರೀ ಮತ್ತು ಲಿಂಗವೆನ್ನುತ್ತಾರೆ. ಮತ್ತು ಅದರ ಪೂಜೆಯನ್ನು ಮಾಡತೊಡಗಿದರು. ನಾವು ಈ ಪಾಮರತನದ ಕೆಲಸವನ್ನೇತಕ್ಕೆ ಮಾಡುತ್ತೇವೆ-ಎಂದು ಆ ನಿರ್ಲಜ್ಜರಿಗೆ ಸ್ವಲ್ಪವೂ ನಾಚಿಕೆಯಾಗಲಿಲ್ಲ. ಯಾವನೋ ಕವಿ **"ಸ್ವಾರ್ಥೀ ದೋಷಂ ನ ಪಶ್ಯತಿ"** - ಎಂದಿದ್ದಾನೆ. ಸ್ವಾರ್ಥೀ ಜನರು ತಮ್ಮ ಸ್ವಾರ್ಥ ಸಿದ್ಧಿಮಾಡಿಕೊಳ್ಳುವಲ್ಲಿ ದುಷ್ಟ ಕರ್ಮಗಳನ್ನೂ ಕೂಡ ಶ್ರೇಷ್ಠವೆಂದೊಪ್ಪಿಕೊಂಡು, ದೋಷವನ್ನು ನೋಡುವುದಿಲ್ಲ. ಅದೇ ಶಿಲೆ-ಮೊದಲಾದುದರ ಪ್ರತಿಮೆಗಳ ಮತ್ತು ಭಗ-ಲಿಂಗದ ಪೂಜೆಯಲ್ಲಿ ಸಮಸ್ತ ಧರ್ಮ, ಅರ್ಥ, ಕಾಮ, ಮೋಕ್ಷ ಮೊದಲಾದ ಸಿದ್ಧಿಗಳನ್ನೂ ತಿಳಿಯತೊಡಗಿದರು.

---

೪೨. ಭರ್ತೃಹರಿಯ 'ನೀತಿಶತಕ'ದ ಪ್ರಥಮ ಶ್ಲೋಕದಲ್ಲಿ [ಒಂದು ಕಿಂವದಂತಿಗನುಸಾರವಾಗಿ], ಈ ವೈರಾಗ್ಯಕ್ಕೆ ಕಾರಣಭೂತವಾದ ಘಟನೆಯ ಸಂಕೇತವಿದೆ.

೪೩. ನೋಡಿರಿ. 'ರುದ್ರಾಕ್ಷಜಾಬಾಲೋಪನಿಷತ್' [೧.೧೫.೧೬] –ಯು.ಮೀ

ಯಾವಾಗ ಜೈನರು ರಾಜಭೋಜರ ನಂತರ ತಮ್ಮ ಮಂದಿರಗಳಲ್ಲಿ ಮೂರ್ತಿ ಸ್ಥಾಪನೆ, ದರ್ಶನ ಮತ್ತು ಸ್ಪರ್ಶನಕ್ಕಾಗಿ ಬರಲು–ಹೋಗಲು ಆರಂಭಿಸಿದರೋ, ಆಗ ಈ ಪೋಪರ ಹಿಂಬಾಲಕರೂ ಕೂಡ ಜೈನಮಂದಿರಕ್ಕೆ ಹೋಗಲೂ, ಬರಲೂ ಹತ್ತಿದರು. ಮತ್ತು ಅತ್ತ ಪಶ್ಚಿಮದಲ್ಲಿ ಅನ್ಯರ ಮತಗಳು ಹಲವು ಉದ್ಭವಿಸಿದವು ಮತ್ತು ಯವನರೂ ಕೂಡ ಆರ್ಯಾವರ್ತಕ್ಕೆ ಬರಲು–ಹೋಗಲುತೊಡಗಿದರು. ಆಗ ಪೋಪರುಗಳು ಈ ಶ್ಲೋಕವನ್ನು ರಚಿಸಿದರು:–

**ನ ವದೇದ್ಯಾವನೀಂ ಭಾಷಾಂ ಪ್ರಾಣೈಃ ಕಂಠಗತೈರಪಿ ।**

**ಹಸ್ತಿನಾ ತಾಡ್ಯ ಮಾನೋಽಪಿ ನ ಗಚ್ಛೇಜ್ಜೈನಮಂದಿರಮ್**[೪೪] ॥

ಎಷ್ಟೇ ದುಃಖ ಬೇಕಾದರೂ ಬರಲಿ, ಮತ್ತು  ಪ್ರಾಣವು ಕಂಠಗತವಾಗಿ ಬೇಕಾದರೂ ಇರಲಿ; ಎಂದರೆ, ಸಾವಿನ ಸಮಯವೇ ಬಂದಿರಲೊಲ್ಲದೇಕೆ, ಹಾಗಿದ್ದರೂ, ಯಾವನೀ ಭಾಷೆಯನ್ನು ಎಂದರೆ,– ಮ್ಲೇಚ್ಛಭಾಷೆಯನ್ನು ಬಾಯಿನಿಂದಾಡಬಾರದು. ಮತ್ತು ಮದವೇರಿದ ಆನೆ ಕೊಲ್ಲಲು ಅಟ್ಟಿಸಿಕೊಂಡು ಬರುತ್ತಿರಲೊಲ್ಲದೇಕೆ, ಮತ್ತು ಜೈನ ಮಂದಿರ ದೊಳಹೋದರೆ ಪ್ರಾಣ ಉಳಿಯುವುದಾದರೂ ಕೂಡ, ಜೈನ ಮಂದರಿದಲ್ಲಿ ಪ್ರವೇಶ ಮಾಡಬಾರದು. ಆದರೆ, ಜೈನಮಂದಿರದಲ್ಲಿ ಪ್ರವೇಶ ಮಾಡಿ ಉಳಿಯುವುದಕ್ಕಿಂತ, ಆನೆಯ ಮುಂದೆ ಹೋಗಿ ಸತ್ತು ಹೋಗುವುದು ಒಳ್ಳೆಯದು. ಇಂತಿಂತಹ ಉಪದೇಶಗಳನ್ನು ಶಿಷ್ಯರಿಗೆ ಮಾಡತೊಡಗಿದರು. ಅವರನ್ನು ಯಾವನಾದರೂ 'ನಿಮ್ಮ ಮತಕ್ಕೆ ಯಾವುದಾದರೂ ಮಾನನೀಯ ಗ್ರಂಥದ ಪ್ರಮಾಣವೂ ಇದೆಯೇ?' ಎಂದು ಪ್ರಮಾಣವನ್ನು ಕೇಳಿದರೆ, 'ಹೌದು, ಇದೆ'.  ಎನ್ನುತ್ತಿದ್ದರು. ಅವರು 'ತೋರಿಸಿರಿ'.– ಎಂದು ಹೇಳಿದಾಗ, ಮಾರ್ಕಂಡೇಯಪುರಾಣ–ಮೊದಲಾದುದರ ವಚನಗಳನ್ನು ಉದ್ಧರಿಸುತ್ತಿದ್ದರು ಮತ್ತು ದುರ್ಗಾಪಾಠದಲ್ಲಿ ಬರೆದಿರುವಂತೆ ದೇವಿಯ ವರ್ಣನೆಯನ್ನು ಮಾಡುತ್ತಿದ್ದರು.

ಭೋಜರಾಜರ ರಾಜ್ಯದಲ್ಲಿ ವ್ಯಾಸರ ಹೆಸರಿನಿಂದ ಮಾರ್ಕಂಡೇಯ ಮತ್ತು ಶಿವಪುರಾಣಗಳನ್ನು ಯಾವನೋ ರಚಿಸಿ, ಸ್ಥಾಪಿಸಿದನು. ಅದರ ಸಮಾಚಾರವು ಭೋಜರಾಜರಿಗೆ ತಿಳಿದು, ಆ ಪಂಡಿತರಿಗೆ ಕೈಗಳನ್ನು ಕತ್ತರಿಸುವ ಶಿಕ್ಷೆಯನ್ನು ವಿಧಿಸಿದರು ಮತ್ತು ಅವರಿಗೆ–"ಯಾವನಾದರೂ ಕಾವ್ಯ ಮೊದಲಾದ ಗ್ರಂಥಗಳನ್ನು ರಚಿಸುವುದಾದರೆ, ಅವನು ತನ್ನ ಹೆಸರಿನಿಂದ ರಚಿಸಬೇಕು; ಋಷಿ–ಮುನಿಗಳ ಹೆಸರಿನಿಂದಲ್ಲ".–ಎಂದು ಆಜ್ಞಾಪಿಸಿದರು.

ಯಾವುದು ಗ್ವಾಲಿಯರ್ ರಾಜ್ಯದ 'ಭಿಂಡ್' ಎಂಬ ನಗರದ ತಿವಾರೀ ಬ್ರಾಹ್ಮಣರ ಮನೆಯಲ್ಲಿದೆಯೋ, ಯಾವುದನ್ನು ಲಖುನಾದರಾವ್ ಸಾಹೇಬರು ಮತ್ತು ಅವರ ಗುಮಾಸ್ತೆ ರಾಮದಯಾಳ ಚೌಬೆಯವರು ತಮ್ಮ ಕಣ್ಣಿನಿಂದ ನೋಡಿದ್ದಾರೋ, ಅಂತಹ ಭೋಜರಾಜರು ರಚಿಸಿದ "ಸಂಜೀವಿನೀ"– ಎಂಬ ಹೆಸರಿನ ಇತಿಹಾಸದಲ್ಲಿ ಈ ಸಂಗತಿಯನ್ನು ಬರೆದಿದ್ದಾರೆ. ಅದರಲ್ಲಿ ಸ್ಪಷ್ಟವಾಗಿ–"ವ್ಯಾಸರು ನಾಲ್ಕುನೂರು ಮತ್ತು ಅವರ ಶಿಷ್ಯರು ಐದುಸಾವಿರದ ಆರುನೂರು ಶ್ಲೋಕಗಳಿಂದ ಕೂಡಿದ, ಎಂದರೆ, ಎಲ್ಲಸೇರಿ ಹತ್ತು ಸಾವಿರ ಶ್ಲೋಕಗಳ ಪ್ರಮಾಣದ ಭಾರತವನ್ನು ಬರೆದಿದ್ದರು. ಅದು ಮಹಾರಾಜ ವಿಕ್ರಮಾದಿತ್ಯನ ಕಾಲದಲ್ಲಿ ಇಪ್ಪತ್ತು ಸಾವಿರವಾಯಿತು. ಮಹಾರಾಜಾಭೋಜರು "ನನ್ನ ತಂದೆಯವರ ಕಾಲದಲ್ಲಿ ಇಪ್ಪತ್ತೈದು ಸಾವಿರವಾಯಿತು. ಮತ್ತು ಈಗ ನನ್ನ ಮಧ್ಯ ವಯಸ್ಸಿನಲ್ಲಿ ಮೂವತ್ತು ಸಾವಿರ ಶ್ಲೋಕಯುಕ್ತವಾದ ಮಹಾಭಾರತದ ಪುಸ್ತಕ ಸಿಕ್ಕುತ್ತದೆ. ಹೀಗೆಯೇ ಬೆಳೆಯುತ್ತಾ ಹೋದರೆ, ಮಹಾಭಾರತದ ಪುಸ್ತಕ ಒಂದು ಒಂಟೆಯ ಹೊರೆಯಾಗಿ ಹೋಗುವುದು".  – ಎನ್ನುತ್ತಾರೆ. ಮತ್ತು ಋಷಿ ಮುನಿಗಳ ಹೆಸರಿನಿಂದ ಪುರಾಣಗಳೇ ಮೊದಲಾದ ಗ್ರಂಥಗಳನ್ನು ರಚಿಸುವವರಾದರೆ, ಆರ್ಯಾವರ್ತೀಯರಾದ ಜನರು ಭ್ರಮಜಾಲದಲ್ಲಿ ಬಿದ್ದು, ವೈದಿಕಧರ್ಮಹೀನರಾಗಿ, ಭ್ರಷ್ಟರಾಗಿ ಹೋಗುವರು". – ಎಂದು ಸ್ಪಷ್ಟವಾಗಿ ಬರೆದಿದ್ದಾರೆ. ಇದರಿಂದ, ಭೋಜರಾಜರಿಗೆ ಸ್ವಲ್ಪ ಸ್ವಲ್ಪ ವೇದಗಳ ಸಂಸ್ಕಾರವಿದ್ದಿತೆಂದು ಗೊತ್ತಾಗುತ್ತದೆ. ಇವರು[೪೫] ತಮ್ಮ "ಭೋಜಪ್ರಬಂಧ"ದಲ್ಲಿ ಹೀಗೆ ಬರೆದಿದ್ದಾರೆ:–

**ಘಟ್ಯೈಕಯಾ ಕ್ರೋದಶೈಕಮಶ್ವಃ ಸುಕೃತ್ರಿಮೋ ಗಚ್ಛತಿ ಚಾರುಗತ್ಯಾ ।**

**ವಾಯುಂ ದದಾತಿ ವ್ಯಜನಂ ಸುಪುಷ್ಕಲಂ ವಿನಾ ಮನುಷ್ಯೇಣ ಚಲತ್ಯಜಸ್ರಮ್**[೪೬] ॥

೪೪. ಭವಿಷ್ಯ ಪುರಾಣ, ಪ್ರತಿಸರ್ಗಪರ್ವ [೮.೩.೨೮.೫೩] –ಯು.ಮೀ.

೪೫. ಎಂದರೆ, ಇವರಿಗೆ ಸಂಬಂಧಪಟ್ಟ ಗ್ರಂಥ. ಇದನ್ನು ಬಲ್ಲಾಳ ಪಂಡಿತನು ರಚಿಸಿದ್ದಾನೆ.

೪೬. ರಾಜಾಭೋಜರಿಂದ ರಚಿತವಾದ 'ಸಮರಾಂಗಣಸೂತ್ರಧಾರ'ದ ಯಂತ್ರಾಧ್ಯಾಯದಲ್ಲಿ ಅನೇಕ ಯಂತ್ರಗಳ ಮತ್ತು ವಿಮಾನ ರಚನೆಯ ವರ್ಣನೆ ಇದೆ. ಅವರ 'ಯುಕ್ತಿ ಕಲ್ಪತರು' ಗ್ರಂಥವನ್ನು ನೋಡಿ. –ಯು.ಮೀ.

ರಾಜಾಭೋಜರ ರಾಜ್ಯದಲ್ಲಿ ಮತ್ತು ಸಮೀಪದಲ್ಲಿ ಕುದುರೆಯ ಆಕಾರದ, ಯಂತ್ರ ಕಲಾಯುಕ್ತವಾದ, ಒಂದು ಲಘು ಘಟಿಕೆಯಲ್ಲಿ[೪೭] ಹನ್ನೊಂದು ಕ್ರೋಶಗಳಷ್ಟು, ಮತ್ತು ಒಂದು ಘಂಟೆಯಲ್ಲಿ ಇಪ್ಪತ್ತೇಳೂವರೆ ಕ್ರೋಶದಷ್ಟು ದೂರ ಹೋಗುವ ಒಂದು ಯಾನವನ್ನು ರಚಿಸಿದ್ದಂತಹ ಶಿಲ್ಪಿ ಜನರಿದ್ದರು. ಆ ಯಾನವು ಭೂಮಿಯ ಮೇಲೆಯೂ ಮತ್ತು ಅಂತರಿಕ್ಷದಲ್ಲಿಯೂ ಕೂಡ ನಡೆಯುತ್ತಿದ್ದಿತು.[೪೮] ಮತ್ತು ಎರಡನೆಯದಾಗಿ, ಮನುಷ್ಯನು ಸಂಚಾಲನಮಾಡದೆ, ಕಲಾಯಂತ್ರದ ಬಲದಿಂದ ನಿರಂತರವೂ ಚಲಿಸುವ ಮತ್ತು ಪುಷ್ಕಳವಾದ ವಾಯುವನ್ನು ಕೊಡುವ ಬೀಸಣಿಗೆಯನ್ನು ರಚಿಸಿದ್ದರು. ಈ ಎರಡು ಪದಾರ್ಥಗಳೂ ಇಂದಿನವರೆಗೆ ಇರುತ್ತಿದ್ದರೆ, ಐರೋಪ್ಯರು ಅಭಿಮಾನದಿಂದ ಇಷ್ಟು ಉಬ್ಬಿ ಹೋಗುತ್ತಿರಲಿಲ್ಲ.

ಪೋಪರು ತಮ್ಮ ಶಿಷ್ಯರು ಜೈನರ ಬಳಿ ಹೋಗದಂತೆ ತಡೆಯತೊಡಗಿದರೂ ಕೂಡ, ದೂರ ಉಳಿಯಲಾರದೇ ಹೋದರು. ಮತ್ತು ಜೈನರ ಕಥೆಗೆ[೪೯] ಕೂಡ ಜನರು ಹೋಗತೊಡಗಿದರು. ಜೈನರ ಪೋಪರು ಈ ಪೌರಾಣಿಕ ಪೋಪರ ಶಿಷ್ಯರುಗಳನ್ನು ದಾರಿ ತಪ್ಪಿಸಹತ್ತಿದರು. ಆಗ ಪೌರಾಣಿಕರು – "ಇದಕ್ಕೇನಾದರೂ ಉಪಾಯಮಾಡಬೇಕು. ಇಲ್ಲವಾದರೆ ನಮ್ಮ ಶಿಷ್ಯರು ಜೈನರಾಗಿ ಹೋಗುವರು".– ಎಂದು ಆಲೋಚಿಸಿದರು. ಆ ಮೇಲೆ ಪೋಪರು – "ಜೈನರಂತೆ ನಮ್ಮ (ದೇವರ) ಅವತಾರಗಳನ್ನೂ, ಮಂದಿರಗಳನ್ನೂ ಮೂರ್ತಿಗಳನ್ನೂ ಮತ್ತು ಕಥಾ – ಪುಸ್ತಕಗಳನ್ನೂ ರಚಿಸಬೇಕು". ಎಂದೇ ಸೂಚಿಸಿದರು. ಈ ಜನರು ಜೈನರ ಇಪ್ಪತ್ತುನಾಲ್ಕು ತೀರ್ಥಂಕರರಿಗೆ ಸಮನಾಗಿ ಇಪ್ಪತ್ತುನಾಲ್ಕು ಅವತಾರಗಳನ್ನೂ, ಮಂದಿರಗಳನ್ನೂ ಮತ್ತು ಮೂರ್ತಿಗಳನ್ನೂ ನಿರ್ಮಿಸಿದರು. ಮತ್ತು ಹೇಗೆ ಜೈನರ ಪೂರ್ವ ಮತ್ತು ಉತ್ತರ ಪುರಾಣಗಳು–ಮೊದಲಾದುವು ಇವೆಯೋ, ಹಾಗೆ ಹದಿನೆಂಟು ಪುರಾಣಗಳನ್ನು ರಚಿಸತೊಡಗಿದರು.

ಭೋಜರಾಜರ ನಂತರ ನೂರೈವತ್ತು ವರ್ಷಗಳಾದ ಮೇಲೆ, ವೈಷ್ಣವ ಮತ ಆರಂಭವಾಯಿತು. ಶಠಕೋಪರೆಂಬ ಹೆಸರಿನ ಪುರುಷರೊಬ್ಬರು ಮೇದರ ಕುಲದಲ್ಲಿ ಉದ್ಭವಿಸಿದ್ದರು. ವೈಷ್ಣವ ಮತ ಅವರಿಂದ ಸ್ವಲ್ಪ ಪ್ರಚಲಿತವಾಯಿತು. ಅವರ ನಂತರ ಶೌಚಕರ್ಮ ಮಾಡುವವರ ಕುಲದಲ್ಲಿ ಜನಿಸಿದ ಮುನಿವಾಹನರೂ, ಮತ್ತು ಮೂರನೆಯರಾಗಿ ಯವನಕುಲೋತ್ಪನ್ನರಾದ ಯಾವನಾಚಾರ್ಯರೂ ಆಚಾರ್ಯರಾದರು. ಆಮೇಲೆ ಬ್ರಾಹ್ಮಣ ಕುಲೋತ್ಪನ್ನರಾದ ರಾಮಾನುಜರು ನಾಲ್ಕನೆಯ ಆಚಾರ್ಯರಾದರು. ಅವರು ತಮ್ಮ ಮತವನ್ನು ಪ್ರಸರಿಸಿದರು. ಶೈವರು ಶಿವಪುರಾಣ ಮೊದಲಾದುವನ್ನೂ, ಶಾಕ್ತರು ದೇವೀಭಾಗವತ ಮೊದಲಾದುವನ್ನೂ, ವೈಷ್ಣವರು ವಿಷ್ಣುಪುರಾಣ ಮೊದಲಾದುವನ್ನೂ ರಚಿಸಿದರು. "ತಮ್ಮ ಹೆಸರುಗಳಿಂದ ರಚಿತವಾದರೆ ಯಾವನೂ (ಅವನ್ನು) ಪ್ರಮಾಣವೆಂದು ತಿಳಿಯುವುದಿಲ್ಲ".– ಎಂಬ ಕಾರಣದಿಂದ ಅವುಗಳಲ್ಲಿ ತಮ್ಮ ಹೆಸರುಗಳನ್ನು ಸೂಚಿಸಲಿಲ್ಲ. ಆದರೆ ವ್ಯಾಸರೇ ಮೊದಲಾದ ಋಷಿ–ಮುನಿಗಳ ಹೆಸರುಗಳನ್ನು ಕೊಟ್ಟು ಪುರಾಣಗಳನ್ನು ರಚಿಸಿದರು. ಇವುಗಳ ಹೆಸರುಗಳನ್ನೂ ಕೂಡ ವಸ್ತುತಃ "ನವೀನಗಳು"–ಎಂದು ಇಡಬೇಕಾಗಿದ್ದಿತು. ಆದರೆ, ಯಾವನಾದರೂ ಬಡವನು ತನ್ನ ಮಗನಿಗೆ ಮಹಾರಾಜಾಧಿರಾಜನೆಂದು ಹೆಸರನ್ನು ಇಡುವಂತೆ, ಯಾರಾದರೂ ಆಧುನಿಕ ವಸ್ತುವಿಗೆ ಸನಾತನವೆಂದು ಹೆಸರಿಟ್ಟರೆ, ಆಶ್ಚರ್ಯವೇನು? ಈಗ, ಇವರ ನಡುವೆ ಹೇಗೆ ಪರಸ್ಪರ ವಿವಾದಗಳಿವೆಯೋ, ಹಾಗೆಯೇ ಪುರಾಣಗಳಲ್ಲಿಯೂ ತುಂಬಿಸಿಟ್ಟಿದ್ದಾರೆ.

ನೋಡಿರಿ! ದೇವೀಭಾಗವತದಲ್ಲಿ, ಯಾವಳನ್ನು ಶ್ರೀಪುರದ ಸ್ವಾಮಿನೀ ಎಂದು ಬರೆದಿದ್ದಾರೋ, ಅವಳೇ ಸಮಸ್ತ ಜಗತ್ತನ್ನೂ ರಚಿಸಿದಳು ಮತ್ತು ಬ್ರಹ್ಮಾ, ವಿಷ್ಣು ಮತ್ತು ಮಹಾದೇವರನ್ನೂ ಅವಳೇ ಸೃಜಿಸಿದ್ದಾಳೆ. ಯಾವಾಗ ಆ ದೇವಿಗೆ ಇಚ್ಛೆಯಾಯಿತೋ, ಆಗ ಅವಳು ತನ್ನ ಕೈಯನ್ನುಜ್ಜಿದಳು. ಅದರಿಂದ ಕೈಯಲ್ಲಿ ಒಂದು ಗಾಯವಾಯಿತು. ಅದರಿಂದ ಬ್ರಹ್ಮನ ಉತ್ಪತ್ತಿಯಾಯಿತು. ದೇವಿಯು ಅವನಿಗೆ – "ನೀನು ನನ್ನೊಂದಿಗೆ ವಿವಾಹ ಮಾಡಿಕೋ". – ಎಂದಳು. ಬ್ರಹ್ಮನು – "ನೀನು ನನ್ನ ತಾಯಿಯಾಗಿರುವೆ. ನಾನು ನಿನ್ನೊಂದಿಗೆ ವಿವಾಹ ಮಾಡಿಕೊಳ್ಳಲಾರೆನು".– ಎಂದನು. ಇದನ್ನು ಕೇಳಿ ಮಾತೆಗೆ ಕೋಪವೇರಿತು. ಮತ್ತು ಮಗನನ್ನು ಭಸ್ಮವಾಗಿ ಮಾಡಿಬಿಟ್ಟಳು. ಮತ್ತು ಮರಳಿ ಕೈಗಳನ್ನುಜ್ಜಿ ಅದೇ ರೀತಿ ಎರಡನೆಯ ಮಗನನ್ನು ಸೃಜಿಸಿದಳು. ಅವನಿಗೆ ವಿಷ್ಣುವೆಂದು ಹೆಸರಿಟ್ಟಳು. ಅವನಿಗೂ ಅದೇ ರೀತಿ ಹೇಳಿದಳು. ಅವನೂ ಒಪ್ಪಲಿಲ್ಲವಾದುದರಿಂದ ಅವನನ್ನೂ ಭಸ್ಮ ಮಾಡಿಬಿಟ್ಟಳು. ಮತ್ತೆ, ಅದೇ ರೀತಿ ಮೂರನೆಯ ಮಗನನ್ನು ಉತ್ಪನ್ನಮಾಡಿದಳು. ಅವನಿಗೆ ಮಹಾದೇವನೆಂದು ಹೆಸರನ್ನಿಟ್ಟಳು.

---

೪೭. ಎರಡೂವರೆ ಘಟಿಕೆಗಳಿಗೆ ಒಂದು ಘಂಟೆ. ಒಂದು ಕ್ರೋಶವೆಂದರೆ, ಸುಮಾರು ಮೂರು ಮೈಲಿಗಳು.

೪೮. ಈ ಬಗ್ಗೆ ತಮ್ಮ 'ಪೂನಾ ಪ್ರವಚನ'ದಲ್ಲೂ [ಐದನೇಯ ಪ್ರವಚನ] ಮಹರ್ಷಿ ದಯಾನಂದರು ಉಲ್ಲೇಖ ಮಾಡಿದ್ದಾರೆ.

೪೯. ಪೌರಾಣಿಕರ 'ಹರಿಕಥೆ' ಇದ್ದಂತೆ. ಜೈನ ಮುನಿಗಳ ಪ್ರವಚನ ಮೊದಲಾದವು. ಇವು ಈಗಲೂ ಮತ್ತು ಚಾತುರ್ಮಾಸ್ಯಗಳಲ್ಲಿ ಜೈನರಲ್ಲಿ ರೂಢಿಯಲ್ಲಿವೆ.

ಮತ್ತು ಅವನಿಗೆ "ನೀನು ನನ್ನೊಂದಿಗೆ ವಿವಾಹ ಮಾಡಿಕೋ"-ಎಂದಳು. ಮಹಾದೇವನು-'ನಾನು ನಿನ್ನೊಂದಿಗೆ ವಿವಾಹ ಮಾಡಿಕೊಳ್ಳಲಾನೆ. ನೀನು ಬೇರೆ ಸ್ತ್ರಿಯ ಶರೀರವನ್ನು ಧರಿಸು'.- ಎಂದನು. ದೇವಿಯು ಹಾಗೆಯೇ ಮಾಡಿದಳು. ಆಗ ಮಹಾದೇವನು-"ಈ ಎರಡು ಕಡೆ ಬೂದಿಯಂತೆ ಬಿದ್ದಿರುವುದೇನು"?-ಎಂದು ಕೇಳಿದನು. ದೇವಿಯು-"ಇವರಿಬ್ಬರೂ ನಿನ್ನ ಸಹೋದರರು. ಇವರು ನನ್ನ ಆಜ್ಞೆಯನ್ನು ಪಾಲಿಸಲಿಲ್ಲವಾದುದರಿಂದ, ಭಸ್ಮ ಮಾಡಿಬಿಟ್ಟೆನು".- ಎಂದಳು. ಮಹಾದೇವನು-"ನಾನು ಒಂಟಿಯಾಗಿ ಏನನ್ನು ತಾನೇ ಮಾಡಬಲ್ಲೆನು? ಇವರನ್ನು ಜೀವತರನ್ನಾಗಿ ಮಾಡು, ಹಾಗೂ ಇನ್ನಿಬ್ಬರು ಸ್ತ್ರೀಯರನ್ನು ನಿರ್ಮಿಸು. ಮೂವರ ವಿವಾಹಗಳೂ ಮೂವರೊಂದಿಗೆ ಆಗುವವು".- ಎಂದನು. ದೇವಿಯು ಹಾಗೆಯೇ ಮಾಡಿದಳು. ಆ ಮೇಲೆ ಮೂವರೊಂದಿಗೆ ಮೂವರ ವಿವಾಹಗಳೂ ಆದವು".- ಎಂದು ಬರೆದಿದೆ.

ಭಲೇ! ತಾಯಿಯೊಂದಿಗೆ ಮದುವೆ ಮಾಡಿಕೊಳ್ಳಲಿಲ್ಲ; ತಂಗಿಯೊಂದಿಗೆ ಮಾಡಿಕೊಂಡು ಬಿಟ್ಟನು! ಇದನ್ನು ಉಚಿತವೆಂದು ತಿಳಿಯಬೇಕೇ? "ಆ ಮೇಲೆ, ಇಂದ್ರ-ಮೊದಲಾದವರನ್ನು ಸೃಜಿಸಿದಳು. ಬ್ರಹ್ಮ , ವಿಷ್ಣು, ರುದ್ರ ಮತ್ತು ಇಂದ್ರ-ಇವರನ್ನು ಪಲ್ಲಕ್ಕಿ ಹೊರುವ ಭೋಯಿಗಳನ್ನಾಗಿ ಮಾಡಿದಳು".- ಈ ಮೊದಲಾಗಿ ಸುಳ್ಳು ಮಾತುಗಳನ್ನು ಉದ್ದುದ್ದ-ಅಗಲಗಲವಾಗಿ ಮನ ಬಂದಂತೆ ಬರೆದಿದ್ದಾರೆ. ಯಾರಾದರೂ ಅವರನ್ನು "ಆ ದೇವಿಯ ಶರೀರವನ್ನು ಮತ್ತು ಶ್ರೀಪುರವನ್ನು ರಚಿಸಿದವನಾವನು? ಯಾರು ದೇವಿಯ ಮಾತಾಪಿತೃಗಳಾಗಿದ್ದರು? ದೇವಿಯು ಅನಾದಿ-ಎನ್ನುವಿರಾದರೆ, ಯಾವುದು ಸಂಯೋಗದಿಂದ ಉದ್ಭವಿಸುವ ವಸ್ತುವಾಗಿರುತ್ತದೋ, ಅದು ಎಂದಿಗೂ ಅನಾದಿಯಾಗಿರಲಾರದು. ಮಾತಾ-ಪುತ್ರರ ವಿವಾಹಕ್ಕೆ ಹೆದರುವುದಾದರೆ, ಸೋದರ-ಸೋದರಿಯರ ವಿವಾಹದಲ್ಲಿ ಯಾವ ಶ್ರೇಷ್ಠ ಚಾರಿತ್ರ್ಯವಿದ್ದೀತು?

ಹೇಗೆ ಈ ದೇವೀಭಾಗವತದಲ್ಲಿ ಮಹಾದೇವ, ವಿಷ್ಣು ಮತ್ತು ಬ್ರಹ್ಮಮೊದಲಾದವರ ಕ್ಷುದ್ರತ್ವವನ್ನೂ ಮತ್ತು ದೇವಿಯ ಮಾಹಾತ್ಮ್ಯವನ್ನೂ ಬರೆದಿದ್ದಾರೋ, ಹಾಗೆಯೇ ಶಿವಪುರಾಣದಲ್ಲಿ ದೇವೀ-ಮೊದಲಾದವರ ಅತಿ ಕ್ಷುದ್ರತ್ವವನ್ನೂ ಬರೆದಿದ್ದಾರೆ. ಎಂದರೆ, ಇವರೆಲ್ಲಾ ಮಹಾದೇವನ ದಾಸರು ಮತ್ತು ಮಹಾದೇವನು ಎಲ್ಲರಿಗೂ ಈಶ್ವರನು ಎಂದಿದ್ದಾರೆ. ರುದ್ರಾಕ್ಷವನ್ನು, ಎಂದರೆ, ಒಂದು ವೃಕ್ಷದ ಫಲದ ಓಟೆಯನ್ನು ಮತ್ತು ಭಸ್ಮವನ್ನು ಧರಿಸುವುದರಿಂದ ಮುಕ್ತಿಯಾಗುವುದೆಂದು ಒಪ್ಪುವುದಾದರೆ, ಬೂದಿಯಲ್ಲಿ ಹೊರಳಾಡುವ ಕತ್ತೆಯೇ ಮೊದಲಾದ ಪಶುಗಳೂ ಮತ್ತು ಮಣಿಗಳೇ ಮೊದಲಾದುವನ್ನು ಧರಿಸುವ ಭೀಲರು, ಮೇದರು ಮೊದಲಾದವರೂ ಮುಕ್ತಿಗೆ ಪಾತ್ರರಾದಾರು! ಮತ್ತು ಹಂದಿಗಳು, ನಾಯಿಗಳು, ಹೇಸರ ಕತ್ತೆಗಳು ಮೊದಲಾದ ಬೂದಿಯಲ್ಲಿ ಹೊರಳಾಡುವ ಪ್ರಾಣಿಗಳಿಗೆ ಮುಕ್ತಿ ಏತಕ್ಕಾಗುವುದಿಲ್ಲ?

**ಪ್ರಶ್ನೆ:**- ಕಾಲಾಗ್ನಿರುದ್ರೋಪನಿಷತ್ತಿನಲ್ಲಿ ಭಸ್ಮ ಧರಿಸುವ ವಿಧಾನ ಬರೆದಿದೆ. ಅದು ಸುಳ್ಳೇನು? ಮತ್ತು **'ತ್ರ್ಯಾಯುಷಂ ಜಮದಗ್ನೇಃ'** ಯಜುರ್ವೇದದ ಈ ವಚನ (೩.೬೨)-ಮೊದಲಾದ ವೇದ ಮಂತ್ರಗಳಿಂದಲೂ ಭಸ್ಮಧಾರಣದ ವಿಧಾನ ಸಿದ್ಧವಾಗುತ್ತದೆ. ಮತ್ತು ಪುರಾಣಗಳಲ್ಲಿ "ರುದ್ರನ ಕಣ್ಣಿನ ಅಶ್ರುಪಾತದಿಂದ ಯಾವ ವೃಕ್ಷ ಹುಟ್ಟಿತೋ ಅದರ ಹೆಸರು ಮಾತ್ರ ರುದ್ರಾಕ್ಷ: ಈ ಕಾರಣದಿಂದ ಅದರ ಧಾರಣದಲ್ಲಿ ಪುಣ್ಯವಿದೆ.- ಕೇವಲ ಒಂದು ರುದ್ರಾಕ್ಷವನ್ನು ಧರಿಸಿದರೂ ಸರ್ವಪಾಪಗಳಿಂದ ಬಿಡುಗಡೆ ಹೊಂದಿ, ಸ್ವರ್ಗಕ್ಕೆ ತೆರಳುವನು. ಯಮರಾಜನ ಮತ್ತು ನರಕದ ಭಯವಿರುವುದಿಲ್ಲ"- ಎಂದು ಬರೆದಿದ್ದಾರೆ.

**ಉತ್ತರ :**- ಕಾಲಾಗ್ನಿರುದ್ರೋಪನಿಷತ್ತನ್ನು ಯಾವನೋ ಬೂದಿಬಡಕನಾದ ಮಾನವನು, ಎಂದರೆ ಭಸ್ಮಧಾರಿಯು ಬರೆದಿದ್ದಾನೆ. ಏಕೆಂದರೆ, **'ಯಸ್ಯ ಪ್ರಥಮಾ ರೇಖಾ ಸಾ ಭೂರ್ಲೋಕಃ'** - ಈ ಮೊದಲಾದ ವಚನಗಳು ಅರ್ಥರಹಿತವಾಗಿವೆ. ಪ್ರತಿ ದಿನವೂ ಕೈಯಿನಿಂದ ರಚಿತವಾಗುವ ಯಾವ ರೇಖೆಯಿದೆಯೋ, ಅದು ಭೂಲೋಕ ಅಥವಾ ಅದರ ಸೂಚಕವಾಗಬಲ್ಲದಾದರೂ ಹೇಗೆ? ಮತ್ತು **"ತ್ರ್ಯಾಯುಷಂ ಜಮದಗ್ನೇಃ"** ಮೊದಲಾದ ಯಾವ ಮಂತ್ರಗಳಿವೆಯೋ, ಅವು ಭಸ್ಮದ ಅಥವಾ ತ್ರಿಪುಂಡ್ರದ ಧಾರಣದ ವಾಚಕಗಳಲ್ಲ. ಆದರೆ **" ಚಕ್ಷುರ್ವೈ ಜಮದಗ್ನಿಃ"**- (ಶತಪಥ:- ೮.೧.೨.೩) - "ಓ ಪರಮೇಶ್ವರ! ನನ್ನ ನೇತ್ರದ ಜ್ಯೋತಿ, (ತ್ರ್ಯಾಯುಷಂ) ತ್ರಿಗುಣವಾಗಲಿ, ಎಂದರೆ ಮುನ್ನೂರು ವರ್ಷಗಳವರೆಗಿರಲಿ ಮತ್ತು ನಾನು ಕೂಡ, ಯಾವುದರಿಂದ ದೃಷ್ಟಿನಾಶವಾಗುವುದಿಲ್ಲವೋ, ಅಂತಹ ಧರ್ಮಕಾರ್ಯಗಳನ್ನೇ ಮಾಡುತ್ತಿರುವೆ".- ಎಂದು ಅದರ ಅರ್ಥ. ಭಲೇ! ಇದೆಷ್ಟು ದೊಡ್ಡ ಮೂರ್ಖತನದ ಮಾತು? ಕಣ್ಣಿನ ಅಶ್ರುಪಾತದಿಂದಲೂ ವೃಕ್ಷ ಉತ್ಪನ್ನವಾಗಬಲ್ಲದೇ? ಪರಮೇಶ್ವರನ ಸೃಷ್ಟಿಕ್ರಮವನ್ನು ಯಾವನಾದರೂ ಬೇರೆ ರೀತಿಯದಾಗಿ ಮಾಡಬಲ್ಲನೇ? ಉದಾಹರಣೆಗೆ, ಯಾವ ವೃಕ್ಷದ ಬೀಜವನ್ನು ಪರಮಾತ್ಮನು ರಚಿಸಿದ್ದಾನೋ, ಅದರಿಂದಲೇ ಆ ವೃಕ್ಷ ಉತ್ಪನ್ನವಾಗಬಲ್ಲದು; ಅನ್ಯಥಾ ಆಗದು. ಆದುದರಿಂದ ರುದ್ರಾಕ್ಷ, ಭಸ್ಮ, ತುಳಸೀ, ಕಮಲಾಕ್ಷ (ತಾವರೆಯ ಬೀಜ) ದರ್ಭೆ, ಚಂದನ-ಮೊದಲಾದುವನ್ನು ಕೊರಳಲ್ಲಿ ಧರಿಸುವ ಎಷ್ಟು ವಿಧಾನಗಳು ಇವೆಯೋ, ಅವೆಲ್ಲವೂ ಅಸಭ್ಯನೂ, ವಿವೇಕಹೀನನೂ ಆದ ಮನುಷ್ಯನ ಕೆಲಸಗಳಾಗಿವೆ.

ಹೀಗೆ ವಾಮಮಾರ್ಗಿಗಳು ಮತ್ತು ಶೈವರು ಅತ್ಯಂತ ಮಿಥ್ಯಾಚಾರವಂತರೂ, ವಿರೋಧಿಗಳೂ ಮತ್ತು ಮಾಡಬೇಕಾದ ಕರ್ಮಗಳನ್ನು ತ್ಯಜಿಸುವವರೂ ಆಗಿರುತ್ತಾರೆ. ಅವರಲ್ಲಿಯೂ ಯಾವನು ಶ್ರೇಷ್ಠ ಪುರುಷನಾಗಿರುತ್ತಾನೋ, ಅವನು ಈ ಮಾತುಗಳನ್ನು ನಂಬದೆ, ಉತ್ತಮ ಕರ್ಮಗಳನ್ನು ಮಾಡುತ್ತಾನೆ. ರುದ್ರಾಕ್ಷ, ಭಸ್ಮಧಾರಣದಿಂದ ಯಮರಾಜನ ದೂತರು ಹೆದರುವವರಾದರೆ, ಪೋಲಿಸ್ ಸಿಪಾಯಿಗಳೂ ಹೆದರುವರೇನೋ? ರುದ್ರಾಕ್ಷ-ಭಸ್ಮಧಾರಣ ಮಾಡುವವರಿಗೆ ನಾಯಿಗಳು, ಸಿಂಹಗಳು, ಸರ್ಪಗಳು, ಚೇಳುಗಳು, ನೊಣಗಳು ಮತ್ತು ಸೊಳ್ಳೆಗಳು ಮೊದಲಾದುವೂ ಕೂಡ ಹೆದರದಿರುವಾಗ, ನ್ಯಾಯಾಧೀಶನ (ನ್ಯಾಯಕಾರಿಯಾದ ಪರಮಾತ್ಮನೇ ಯಮ; ಅವನಿಗೆ ಗಣಗಳ ಅವಶ್ಯಕತೆಯೇ ಇಲ್ಲ.) ಗಣಗಳು ಹೆದರುತ್ತವೆ-ಎಂಬುದಕ್ಕೆ ಅರ್ಥವೇನು?

**ಪ್ರಶ್ನೆ :**- ವಾಮಮಾರ್ಗಿಗಳು ಮತ್ತು ಶೈವರೇನೋ ಸನ್ಮತೀಯರಲ್ಲ; ಆದರೆ, ವೈಷ್ಣವರಾದರೂ ಸತ್ಯಮತದವರೋ?

**ಉತ್ತರ:**- ಇವರೂ ವೇದವಿರೋಧಿಗಳಾಗಿರುವುದರಿಂದ, ಅವರಿಗಿಂತಲೂ ಕೂಡ ಹೆಚ್ಚು ನಿಕೃಷ್ಟರಾಗಿದ್ದಾರೆ.

**ಪ್ರಶ್ನೆ :**- **'ನಮಸ್ತೇ ರುದ್ರಮನ್ಯವೇ'** (ಯಜು:- ೧೬.೧) **'ವೈಷ್ಣವಮಸಿ'** (ಯಜು:-೫.೨೧) **'ವಾಮನಾಯ ಚ'**(ಯಜು:-೧೬.೩೦), **'ಗಣಾನಾಂ ತ್ವಾಗಣಪತಿಂ ಹವಾಮಹೇ'** (ಯಜು:- ೨೩.೧೯), **'ಭಗವತೀ ಭೂಯಾಃ'** (ಅಥರ್ವ:-೯.೧೦.೨೦) **'ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ'** (ಯಜು:-೧೩.೪೬) ಈ ಮೊದಲಾದ ವೇದ ಪ್ರಮಾಣಗಳಿಂದ ಶೈವ-ಮೊದಲಾದ ಮತಗಳು ಸಿದ್ಧವಾಗುತ್ತವೆ. ಮತ್ತೆ ಏತಕ್ಕೆ ಖಂಡಿಸುತ್ತೀರಿ?

**ಉತ್ತರ:**- ಈ ವಚನಗಳಿಂದ ಶೈವ ಮೊದಲಾದ ಸಂಪ್ರದಾಯಗಳು ಸಿದ್ಧವಾಗುವುದಿಲ್ಲ. ಏಕೆಂದರೆ, ರುದ್ರ-ಎಂಬ ಶಬ್ದ ಪರಮೇಶ್ವರ, ಪ್ರಾಣ-ವಾಯು, ಜೀವ, ಅಗ್ನಿ-ಮೊದಲಾದವುಗಳ ಹೆಸರಾಗಿದೆ. ಕ್ರೋಧ ಮಾಡಿಕೊಳ್ಳುವ ರುದ್ರನಿಗೆ, ಎಂದರೆ ದುಷ್ಟರನ್ನು ರೋದನ ಮಾಡಿಸುವ ಪರಮಾತ್ಮನಿಗೆ ನಮಸ್ಕಾರ ಮಾಡುವುದು, ಪ್ರಾಣ ಮತ್ತು ಜಾಠರಾಗ್ನಿಗೆ ಅನ್ನವನ್ನು ನೀಡಬೇಕು. (ನಮ ಇತ್ಯನ್ನನಾಮ-ನಿಘಂಟು ೨.೬.) ಯಾವನು ಮಂಗಳಕರನೂ, ಸಮಸ್ತ ಜಗತ್ತಿಗೂ ಅತ್ಯಂತ ಕಲ್ಯಾಣವನ್ನುಂಟು ಮಾಡುವವನೂ ಆಗಿದ್ದಾನೋ, ಆ ಪರಮಾತ್ಮನಿಗೆ ನಮಸ್ಕಾರ ಮಾಡಬೇಕು. **"ಶಿವಸ್ಯ ಪರಮೇಶ್ವರಸ್ಯಾಯಂ ಭಕ್ತಃ ಶೈವಃ"; "ವಿಷ್ಣೋಃ ಪರಮಾತ್ಮನೋऽಯಂ ಭಕ್ತೋ ವೈಷ್ಣವಃ"; "ಗಣಪತೇಃ ಸಕಲಜಗತ್ಸ್ವಾಮಿನೋऽಯಂ ಸೇವಕೋ ಗಾಣಪತ್ಯಃ"; " ಭಗವತ್ಯಾ**[೫೦] **ವಾಣ್ಯಾ ಅಯಂ ಸೇವಕಃ ಭಾಗವತಃ"; "ಸೂರ್ಯಸ್ಯ ಚರಾಚರಾತ್ಮನೋऽಯಂ ಸೇವಕಃ ಸೌರಃ";** ರುದ್ರ, ಶಿವ, ವಿಷ್ಣು, ಗಣಪತಿ, ಸೂರ್ಯ ಮೊದಲಾದ ಈ ಎಲ್ಲವೂ ಪರಮೇಶ್ವರನ ಮತ್ತು ಭಗವತೀ-ಎಂಬುದು ಸತ್ಯಭಾಷಣಯುಕ್ತವಾದ ವಾಣಿಯ ಹೆಸರು. ಈ ವಿಷಯದಲ್ಲಿ, ತಿಳಿದುಕೊಳ್ಳದೆ ಈ ಬಗೆಯ ಕಲಹವನ್ನೆಬ್ಬಿಸಿದ್ದಾರೆ, ಹೇಗೆಂದರೆ:-

ಯಾವನೋ ಒಬ್ಬ ವೈರಾಗಿಗೆ ಇಬ್ಬರು ಶಿಷ್ಯರಿದ್ದರು. ಅವರು ಪ್ರತಿದಿನವೂ ಗುರುವಿನ ಪಾದಗಳನ್ನು ಒತ್ತುತ್ತಿದ್ದರು. ಒಬ್ಬನು ಬಲಕಾಲಿನ ಮತ್ತು ಇನ್ನೊಬ್ಬನು ಎಡಗಾಲಿನ ಸೇವೆ ಮಾಡುವುದನ್ನು ಹಂಚಿಕೊಂಡಿದ್ದರು. ಒಂದು ದಿನ ಹೀಗಾಯಿತು. ಒಬ್ಬ ಶಿಷ್ಯನ ಎಲ್ಲಿಯೋ ಪೇಟೆಗೆ, ಮಾರುಕಟ್ಟೆಗೆ ಹೊರಟುಹೋದನು. ಮತ್ತು ಇನ್ನೊಬ್ಬನು ತನ್ನ ಪಾಲಿನ ಸೇವನೀಯ ಪಾದಕ್ಕೆ ಸೇವೆ ಸಲ್ಲಿಸುತ್ತಿದ್ದನು. ಇಷ್ಟರಲ್ಲಿ ಗುರುವರ್ಯರು ಮಗ್ಗಿಲಿಗೆ ಹೊರಳಿದರು; ಆಗ ಅವನ ಸೇವನೀಯ ಪಾದದ ಮೇಲೆ ಇನ್ನೊಬ್ಬ ಸಹಪಾಠಿಯ ಪಾಲಿನ ಸೇವ್ಯವಾದ ಪಾದ ಬಿದ್ದಿತು. ಅವನು ಕೋಲನ್ನೆತ್ತಿ ಪಾದದ ಮೇಲೆ ಅಪ್ಪಳಿಸಿ ಬಿಗಿದನು. ಗುರುವರ್ಯರು -"ಓ ದುಷ್ಟ! ನೀನಿದೇನು ಮಾಡಿದೆ?" ಎಂದು ಕೇಳಿದರು. ಶಿಷ್ಯನು 'ನನ್ನ ಪಾಲಿನ ಸೇವನೀಯ ಪಾದದ ಮೇಲೆ ಈ ಪಾದ ಏಕೆ ಬಂದು ಏರಿತು?'-ಎಂದು ಕೇಳಿದನು. ಇಷ್ಟರಲ್ಲಿ ಪೇಟೆಗೆ, ಮಾರುಕಟ್ಟೆಗೆ ಹೋಗಿದ್ದ ಶಿಷ್ಯನು ಹಿಂದಕ್ಕೆ ಬಂದನು. ಅವನೂ ಕೂಡ ತನ್ನ ಭಾಗದ ಸೇವನೀಯ ಪಾದದ ಸೇವೆಯನ್ನು ಮಾಡಲಾರಂಭಿಸಿದರು. ನೋಡಿದರೆ, ಪಾದವು ಊದಿಕೊಂಡಿದೆ. "ಗುರುವರ್ಯರೇ! ನನ್ನ ಪಾಲಿನ ಈ ಸೇವನೀಯ ಪಾದಕ್ಕೆ ಏನಾಯಿತು?"- ಎಂದು ಕೇಳಿದನು. ಗುರುವರ್ಯರು ಸಮಾಚಾರವನ್ನೆಲ್ಲಾ ಹೇಳಿಬಿಟ್ಟರು. ಮೂರ್ಖನೂ ಕೂಡ ತುಟಿಪಿಟಕ್ಕೆನ್ನಲಿಲ್ಲ. ಸುಮ್ಮನೇ, ಕೋಲನ್ನೆತ್ತಿ ತುಂಬ ಬಲಪ್ರಯೋಗಿಸಿ ಗುರುವರ್ಯರ ಇನ್ನೊಂದು ಪಾದಕ್ಕೆ ಬಾರಿಸಿಯೇ ಬಿಟ್ಟನು. ಆಗ ಗುರುವರ್ಯರು ಉಚ್ಚ ಸ್ವರದಿಂದ ಕೂಗಾಡಿದರು. ಆಗಲಂತೂ ಇಬ್ಬರೂ ಶಿಷ್ಯರೂ ಕೋಲನ್ನೆತ್ತಿ ಧುಮುಕಿದರು ಮತ್ತು ಗುರುವರ್ಯರ ಪಾದಗಳಿಗೆ ಬಡಿಯತೊಡಗಿದರು. ಆಗ ಭಾರೀ ಕೋಲಾಹಲವೆದ್ದಿತು ಮತ್ತು ಅದನ್ನು ಕೇಳಿ ಜನರು ಬಂದರು. "ಸಾಧುಪ್ರವರರೇ! ಇದೇನಾಯಿತು?" ಎಂದು

೫೦. ಪ್ರಥಮ ಸಮುಲ್ಲಾಸದಲ್ಲಿ ಮಹರ್ಷಿ ದಯಾನಂದರು ಸ್ತ್ರೀ ಲಿಂಗವಾಚಕ ಶಬ್ದಗಳೂ ಭಗವಂತನನ್ನು ನಿರ್ದೇಶಿಸುತ್ತವೆ, ಎಂದಿದ್ದಾರೆ. ಆದುದರಿಂದ, 'ಭಗವತೀ' ಎಂಬುದು ಪರಮೇಶ್ವರ ವಾಚಕವೂ ಆಗಬಹುದು.

ಕೇಳಲಾರಂಭಿಸಿದರು. ಅವರಲ್ಲಿ ಯಾವನೋ ಒಬ್ಬ ಬುದ್ಧಿಶಾಲಿಯಾದ ಮಾನವನು ಸಾಧುವನ್ನು ಬಿಡಿಸಿ, ಆ ಮೇಲೆ ಆ ಮೂರ್ಖ ಶಿಷ್ಯರಿಗೆ- "ನೋಡಿರಿ, ಈ ಎರಡು ಪಾದಗಳೂ ನಿಮ್ಮ ಗುರುವರ್ಯವು. ಅವೆರಡರ ಸೇವೆಯನ್ನೂ ಮಾಡುವುದರಿಂದ, ಅವರಿಗೇ ಸುಖ ಲಭಿಸುತ್ತದೆ. ಮತ್ತು ದುಃಖವನ್ನುಂಟುಮಾಡುವುದರಿಂದ ದುಃಖವಾಗುವುದೂ ಅದೇ ಗುರುವರ್ಯರಿಗೆ". ಎಂದು ಉಪದೇಶ ಮಾಡಿದನು.

ಹೇಗೆ ಒಬ್ಬನೇ ಗುರುವಿನ ಸೇವೆಯಲ್ಲಿ ಶಿಷ್ಯರ ಲೀಲೆಯಾಯಿತೋ, ಹಾಗೆಯೇ ಏಕಮಾತ್ರ ಅಖಂಡ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ಯಾವ ವಿಷ್ಣು ರುದ್ರ ಮೊದಲಾದ ಹೆಸರುಗಳಿವೆಯೋ, ಆ ಹೆಸರುಗಳ ಸತ್ಯವಾದ ಅರ್ಥವನ್ನು ಪ್ರಥಮ ಸಮುಲ್ಲಾಸದಲ್ಲಿ ನಾವು ಪ್ರಕಾಶಗೊಳಿಸಿರುವಂತೆ ತಿಳಿಯದೆ, ಶೈವರು, ಶಾಕ್ತರು, ವೈಷ್ಣವರು ಮೊದಲಾದ ಸಾಂಪ್ರದಾಯಿಕ ಜನರು ಪರಸ್ಪರ ಒಬ್ಬರು ಇನ್ನೊಬ್ಬರ ಹೆಸರನ್ನು ನಿಂದಿಸುತ್ತಾರೆ. ಮಂದಮತಿಗಳು ಸ್ವಲ್ಪವೂ ತಮ್ಮ ಬುದ್ಧಿಯನ್ನು ಅರಳಿಸಿ, ವಿಷ್ಣು, ರುದ್ರ, ಶಿವ ಮೊದಲಾದ ಈ ಎಲ್ಲ ಹೆಸರುಗಳೂ ಏಕಮಾತ್ರ ಅದ್ವಿತೀಯನೂ, ಸರ್ವ ನಿಮಾಯಕನೂ, ಸರ್ವಾಂತರ್ಯಾಮಿಯೂ ಆದ ಜಗದೀಶ್ವರನು ಅನೇಕ ಗುಣ-ಕರ್ಮ-ಸ್ವಭಾವಯುಕ್ತನಾಗಿರುವುದರಿಂದ ಅವನ ವಾಚಕಗಳೇ ಆಗಿರುತ್ತವೆ-ಎಂದು ಆಲೋಚಿಸುವುದಿಲ್ಲ. ಆಯಿತು. ಇಂತಹ ಮೂರ್ಖರ ಮೇಲೆ ಈಶ್ವರನ ಕೋಪ[೫೧] ತಾಗದೇ ಹೋದೀತೇನು?

**ಈಗ ನೋಡಿರಿ ಚಕ್ರಾಂಕಿತ ವೈಷ್ಣವರ ಅದ್ಭುತ ಮಾಯೆಯನ್ನು:-**

**ತಾಪಃ ಪುಂಡ್ರಂ ತಥಾ ನಾಮ ಮಾಲಾ ಮಂತ್ರಸ್ತಥೈವ ಚ ।**

**ಅಮೀ ಹಿ ಪಂಚ ಸಂಸ್ಕಾರಾಃ ಪರಮೈಕಾಂತಹೇತವಃ ॥ ೧ ॥**

**ಅತಪ್ತತನೂರ್ನ ತದಾಮೋ ಅಶ್ನುತೇ[೫೨] – ಇತಿಶ್ರುತೇಃ ॥** (ರಾಮಾನುಜಪಟಲಪದ್ಧತಿ)

ಎಂದರೆ, (ತಾಪಃ) ಶಂಖ, ಚಕ್ರ, ಗದೆ ಮತ್ತು ಪದ್ಮದ ಮುದ್ರೆಗಳನ್ನು ಅಗ್ನಿಯಲ್ಲಿ ಕಾಯಿಸಿ, ಭುಜದ ಮೂಲದಲ್ಲಿ ಒತ್ತಿ, ಆ ಮೇಲೆ ಹಾಲನಿಂದ ಕೂಡಿದ ಪಾತ್ರೆಯಲ್ಲಿ ತಣಿಸುತ್ತಾರೆ. ಮತ್ತು ಕೆಲವರು ಆ ಹಾಲನ್ನು ಕುಡಿದೂ ಬಿಡುತ್ತಾರೆ. ಈಗ ನೋಡಿರಿ, ಪ್ರತ್ಯಕ್ಷವಾಗಿಯೇ ಮನುಷ್ಯನ ಮಾಂಸದ ರುಚಿಯೂ ಕೂಡ ಅದರಲ್ಲಿ ಬರಬಹುದು! ಇಂತಹ ಕರ್ಮಗಳಿಂದ ಪರಮೇಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳುವ ನಿರೀಕ್ಷಣೆಯನ್ನಿಟ್ಟುಕೊಳ್ಳುತ್ತಾರೆ ಮತ್ತು ಶಂಕ-ಚಕ್ರ-ಮೊದಲಾದುದರಿಂದ ಶರೀರವನ್ನು ಕಾಯಿಸಿಕೊಳ್ಳದೆ ಜೀವನು ಪರಮೇಶ್ವರನನ್ನು ಪಡೆದುಕೊಳ್ಳಲಾರನು. ಏಕೆಂದರೆ, ಅವನು (ಆಮಃ) ಹಸಿ-ಎಂದರೆ ಅಪಕ್ವನಾಗಿರುತ್ತಾನೆ. ಮತ್ತು ಹೇಗೆ ರಾಜ್ಯದ ಡವಾಲಿ-ಮೊದಲಾದ ಚಿಹ್ನೆಗಳಿರುವುದರಿಂದ ರಾಜಪುರುಷನೆಂದು ತಿಳಿದು ಅವನಿಗೆ ಎಲ್ಲ ಜನರೂ ಹೆದರಿಕೊಳ್ಳುತ್ತಾರೋ, ಹಾಗೆಯೇ ವಿಷ್ಣುವಿನ ಶಂಖ-ಚಕ್ರ ಮೊದಲಾದ ಆಯುಧಗಳ ಚಿಹ್ನೆಗಳನ್ನು ಕಂಡು ಯಮರಾಜನು ಮತ್ತು ಅವನ ಗಣಗಳು ಹೆದರುತ್ತಾರೆ-ಎಂದು ಹೇಳುತ್ತಾರೆ. ಮತ್ತೂ ಹೀಗೆ ಹೇಳುತ್ತಾರೆ.

**ದೋಹಾ:- ಬಾನಾ ಬಡಾ ದಯಾಲಕಾ, ತಿಲಕ ಛಾಪ ಔರ್ ಮಾಲ್ ।**

**ಯಮ ಡರಪೈ ಕಾಲೂಕಹೇ, ಭಯಮಾನೇ ಭೂಪಾಲ್[೫೩] ॥**

ಎಂದರೆ, ಭಗವಂತನ ಸಮಚಿಹ್ನೆಗಳಾದ ತಿಲಕ, ಮುದ್ರೆ, ಮತ್ತು ಮಾಲೆ ಬಹುದೊಡ್ಡವು. ಅದರಿಂದ ಯಮರಾಜನೂ ಮತ್ತು ರಾಜನೂ ಕೂಡ ಹೆದರುತ್ತಾರೆ. (ಪುಂಡ್ರಂ) ತ್ರಿಶೂಲದಂತೆ ಹಣೆಯಲ್ಲಿ ನಾಮಗಳನ್ನು ತಿದ್ದುವುದು, (ನಾಮ) ನಾರಾಯಣದಾಸ, ವಿಷ್ಣುದಾಸ-ಎಂಬಂತೆ 'ದಾಸ' ಶಬ್ದದಿಂದ ಕೊನೆಯಾಗುವ ಹೆಸರುಗಳನ್ನಿಡುವುದು (ಮಾಲೆ) ಕಮಲ ಬೀಜದ[೫೪] ಹಾರವನ್ನು ಧರಿಸುವುದು ಮತ್ತು ಐದನೆಯದಾಗಿ (ಮಂತ್ರ) ಉದಾಹರಣಾರ್ಥವಾಗಿ:-

---

೫೧. ಪರಸ್ಪರ ವಿರೋಧ, ಕಚ್ಚಾಟದಿಂದ ಭಾರತದ ಅವನತಿ; ಮುಸಲ್ಮಾನರ ಆಕ್ರಮಣ ಮತ್ತು ರಾಜ್ಯಾಡಳಿತ; ಹಿಂದುಗಳ ದುರ್ಗತಿ; ನಂತರ ಇಂಗ್ಲೀಷರ ಅಧೀನತೆಯಲ್ಲಿ ರಾಷ್ಟ್ರ ಮುಳುಗಿದುದು- ಇವೆಲ್ಲಾ ಐತಿಹಾಸಿಕ ಘಟನೆಗಳು ಪರಮಾತ್ಮನ ವೇದಾದೇಶವನ್ನು ಅಣಕಿಸಿ, ವಿರುದ್ಧವಾಗಿ ವರ್ತಿಸಿದ್ದರಿಂದ ಆಯಿತೆಂದು ಇಲ್ಲಿ ಅಭಿಪ್ರಾಯ.

೫೨. ಋಗ್ವೇದ [೯.೮.೮.೧]-ಯು.ಮೀ

೫೩. ಭಕ್ತಮಾಲ್, ನಿಷ್ಠಾ -ಯು.ಮೀ.

೫೪. ದಕ್ಷಿಣದಲ್ಲಿ ತುಳಸೀ ಮಾಲೆ ಪ್ರಚಲಿತವಾಗಿದೆ.

**ಓಂ ನಮೋ ನಾರಾಯಣಾಯ ॥ ೧ ॥**

ಇದನ್ನು ಇವರು ಸಾಧಾರಣ ಜನರಿಗಾಗಿ 'ಮಂತ್ರ'ವೆಂದು ಮಾಡಿಟ್ಟಿದ್ದಾರೆ. ಮತ್ತು:–

**ಶ್ರೀಮನ್ನಾರಾಯಣಚರಣಂ ಶರಣಂ ಪ್ರಪದ್ಯೇ ॥ ೨ ॥**

**ಶ್ರೀಮತೇ ನಾರಾಯಣಾಯ ನಮಃ ॥ ೩ ॥**

**ಶ್ರೀಮತೇ ರಾಮಾನುಜಾಯ ನಮಃ ॥ ೪ ॥**

ಈ ಮೊದಲಾದ ಮಂತ್ರಗಳನ್ನು ಧನಾಢ್ಯರಿಗಾಗಿ ಮತ್ತು ಮಾನನೀಯರಿಗಾಗಿ ರಚಿಸಿದ್ದಾರೆ. ನೋಡಿರಿ, ಇದೂ ಒಂದು ಅಂಗಡಿಯೇ ಆಗಿ ಹೋಯಿತು. ಎಂತಹ ಮುಖವೋ, ಅಂತಹ ನಾಮ! ಈ ಐದು ಸಂಸ್ಕಾರಗಳನ್ನು ಚಕ್ರಾಂಕಿತರು ಮುಕ್ತಿಗೆ ಸಾಧನಗಳೆಂದು ಅಂಗೀಕರಿಸುತ್ತಾರೆ. ಈ ಮಂತ್ರಗಳ ಅರ್ಥ:– "ನಾನು ನಾರಾಯಣನಿಗೆ ನಮಸ್ಕಾರ ಮಾಡುತ್ತೇನೆ". (೧)

ಮತ್ತು, "ನಾನು ಲಕ್ಷ್ಮೀಸಮೇತನಾದ ನಾರಾಯಣನ ಚರಣಾರವಿಂದದ ಆಶ್ರಯವನ್ನು ಗಳಿಸುತ್ತೇನೆ". (೨)

ಮತ್ತು, "ಶ್ರೀಮನ್ನಾರಾಯಣನಿಗೆ ನಮಸ್ಕಾರ ಮಾಡುತ್ತೇನೆ". ಎಂದರೆ, "ಯಾವ ಶೋಭಾಯುಕ್ತನಾದ ನಾರಾಯಣನಿದ್ದಾನೋ, ಅವನಿಗೆ ನನ್ನ ನಮಸ್ಕಾರವಿರಲಿ". (೩)

"ಶ್ರೀಮದ್ರಾಮಾನುಜರಿಗೆ ನಮಸ್ಕಾರ". (೪)

ಹೇಗೆ ಪಂಚಮಕಾರಗಳನ್ನು ವಾಮಮಾರ್ಗಿಗಳು ಅಂಗೀಕರಿಸುತ್ತಾರೋ, ಹಾಗೆ ಚಕ್ರಾಂಕಿತರು ಪಂಚಸಂಸ್ಕಾರಗಳನ್ನು ಅಂಗಿಕರಿಸುತ್ತಾರೆ ಮತ್ತು ತಮ್ಮ ಶಂಖ–ಚಕ್ರದಿಂದ ಮುದ್ರೆಯೊತ್ತುವುದಕ್ಕೆ ಯಾವ ವೇದಮಂತ್ರದ ಪ್ರಮಾಣವನ್ನು ಕೊಟ್ಟಿದ್ದಾರೋ, ಅದರ ಪಾಠ ಮತ್ತು ಅರ್ಥಗಳು ಹೀಗಿವೆ:–

**ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ ।**

**ಅತಪ್ತತನೂರ್ನ ತದಾಮೋ ಅಶ್ನುತೇ ಶೃತಾಸ ಇದ್ವಹಂತಸ್ತತ್ಸಮಾಶತ ॥ ೧ ॥** (ಋಗ್ವೇದ :– ೯.೮೩.೧)

**ತಪೋಷ್ಪವಿತ್ರಂ ವಿತತಂ ದಿವಸ್ಪದೇ ॥ ೨ ॥** (ಋಗ್ವೇದ :– ೯.೮೩.೨)

"ಓ ಬ್ರಹ್ಮಾಂಡದ ಮತ್ತು ವೇದಗಳ ಪಾಲನ ಮಾಡುವ ಪ್ರಭೋ! ಸರ್ವಸಾಮರ್ಥ್ಯ ಯುಕ್ತ ಸರ್ವಶಕ್ತಿಮಾನ್! ನೀನು ನಿನ್ನ ವ್ಯಾಪಕತ್ವದಿಂದ ಜಗತ್ತಿನ ಸಮಸ್ತ ಅವಯವಗಳನ್ನೂ ವ್ಯಾಪ್ತವಾಗಿ ಮಾಡಿದ್ದೀಯೆ. ಆ ನಿನ್ನ ಯಾವ ವ್ಯಾಪಕವಾದ ಪವಿತ್ರ ಸ್ವರೂಪವಿದೆಯೋ, ಅದನ್ನು ಬ್ರಹ್ಮಚರ್ಯ, ಸತ್ಯಭಾಷಣ, ಶಮ, ದಮ, ಯೋಗಾಭ್ಯಾಸ, ಜಿತೇಂದ್ರಿಯತ್ವ, ಸತ್ಸಂಗ–ಮೊದಾಲಾದ ತಪೋಽನುಷ್ಠಾನದಿಂದ ರಹಿತನಾದ ಯಾವನು, ಅಪರಿಪಕ್ವನಾದ ಆತ್ಮನಿಂದ ಹಾಗೂ ಅಂತಃಕರಣದಿಂದ ಕೂಡಿದವನಾಗಿರುತ್ತಾನೋ, ಅವನು ಆ ನಿನ್ನ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲಾರನು ಮತ್ತು ಯಾರು ಮೇಲೆ ಹೇಳಿದ ತಪಸ್ಸಿನಿಂದ ಶುದ್ಧರಾಗುತ್ತಾರೋ, ಅವರು ಮಾತ್ರ ಈ ತಪೋಽನುಷ್ಠಾನವನ್ನು ಮಾಡುತ್ತಾ, ಆ ನಿನ್ನ ಶುದ್ಧಸ್ವರೂಪವನ್ನು ಒಳ್ಳೆಯ ರೀತಿಯಲ್ಲಿ ಪ್ರಾಪ್ತಮಾಡಿಕೊಳ್ಳುತ್ತಾರೆ. (೧).

ಯಾರು ಪ್ರಕಾಶಸ್ವರೂಪನಾದ ಪರಮೇಶ್ವರನ ಸೃಷ್ಟಿಯಲ್ಲಿ, ವಿಸ್ತೃತವಾದ ಪವಿತ್ರಾಚರಣವೆಂಬ ತಪಸ್ಸನ್ನು ಮಾಡುತ್ತಾರೋ, ಅವರೇ ಪರಮಾತ್ಮನನ್ನು ಪ್ರಾಪ್ತಮಾಡಿಕೊಳ್ಳಲು ಯೋಗ್ಯರಾಗಿರುತ್ತಾರೆ. (೨)

ಈಗ, ರಾಮಾನುಜೀಯರೇ, ಮೊದಲಾದ ಜನರು ಈ ಮಂತ್ರದಿಂದ "ಚಕ್ರಾಂಕಿತ"ರಾಗುವಿಕೆಯನ್ನು ಹೇಗೆ ತಾನೇ ಸಿದ್ಧಪಡಿಸಬಲ್ಲರೆಂದು ಆಲೋಚಿಸಿರಿ. ಒಳ್ಳೆಯದು, ಅವರು ವಿದ್ವಾಂಸರಾಗಿದ್ದರೋ, ಅಥವಾ ಅವಿದ್ವಾಂಸರಾಗಿದ್ದರೋ –ಎಂಬದನ್ನಾದರೂ ಹೇಳಿರಿ. ವಿದ್ವಾಂಸರಾಗಿದ್ದರು–ಎನ್ನುವಿರಾದರೆ, ಇಂತಹ ಅಸಂಭವವಾದ ಅರ್ಥವನ್ನು ಈ ಮಂತ್ರಕ್ಕೇಕೆ

ಮಾಡುತ್ತಿದ್ದರು? ಏಕೆಂದರೆ, ಈ ಮಂತ್ರದಲ್ಲಿ **'ಅತಪ್ತತನೂಃ'** (ತಪ್ತವಾಗದ ದೇಹವನ್ನುಳ್ಳವನು) ಎಂಬ ಶಬ್ದವಿದೆಯೇ ಹೊರತು **"ಅತಪ್ತಭುಜೈಕದೇಶಃ"** (ತಪ್ತವಾಗದ ಭುಜಪ್ರದೇಶವನ್ನುಳ್ಳವನು) – ಎಂದಿಲ್ಲ. ಮತ್ತೆ, "ಅತಪ್ತತನೂಃ" – ಎಂಬುದು ನಖ–ಶಿಖಾಗ್ರಪರ್ಯಂತ ಸಮಸ್ತ ದೇಹದ ವಾಚಕವಾಗಿರುತ್ತದೆ. ಈ ಪ್ರಮಾಣವನ್ನೊಪ್ಪಿ, ಅಗ್ನಿಯಿಂದಲೇ ಸುಡಿಸಿಕೊಳ್ಳುವುದನ್ನು ಚಕ್ರಾಂಕಿತರು ಸ್ವೀಕರಿಸುವುದಾದರೆ, ತಮ್ಮ ತಮ್ಮ ಶರೀರಗಳನ್ನು ಭಟ್ಟಿಯಲ್ಲಿ ಕೆಡಹಿ, ಸಮಸ್ತ ಶರೀರವನ್ನೂ ಸುಟ್ಟುಕೊಂಡರೂ ಕೂಡ, ಈ ಮಂತ್ರಾರ್ಥಕ್ಕೆ ವಿರುದ್ಧವಾಗುತ್ತದೆ. ಏಕೆಂದರೆ, ಈ ಮಂತ್ರದಲ್ಲಿ ಸತ್ಯಭಾಷಣ ಮೊದಲಾದ ಪವಿತ್ರ ಕರ್ಮಗಳ ಆಚರಣವನ್ನೇ ತಪಸ್ಸೆಂದು ಗ್ರಹಿಸಲಾಗಿದೆ.[೫೫]

**ಋತಂ ತಪಃ ಸತ್ಯಂ ತಪಃ ಶ್ರುತಂ ತಪಃ ಶಾಂತಂ ತಪೋ ದಮಸ್ತಪಃ ಸ್ವಾಧ್ಯಾಯಸ್ತಪಃ ॥** (ತೈತ್ತಿರೀಯ:– ೧೦.೮)

ಈ ಮೊದಲಾದುವು ತಪಸ್ಸೆನಿಸುತ್ತವೆ. ಎಂದರೆ, (ಋತಂ ತಪಃ) ಯಥಾರ್ಥವಾದ ಶುದ್ಧಭಾವ, ಸತ್ಯವನ್ನು ಅಂಗೀಕರಿಸುವುದು, ಸತ್ಯವನ್ನು ಮಾತನಾಡುವುದು, ಸತ್ಯವನ್ನಾಚರಿಸುವುದು, ಮನಸ್ಸನ್ನು ಅಧರ್ಮಕ್ಕೆ ಹೋಗಗೊಡದಿರುವುದು, ಹೊರಗಣ ಇಂದ್ರಿಯಗಳನ್ನು ಅನ್ಯಾಯದ ಆಚರಣೆಗಳಲ್ಲಿ ತೊಡಗದಂತೆ ತಡೆಯುವುದು ಅಂದರೆ ಶರೀರ, ಇಂದ್ರಿಯಗಳು ಮತ್ತು ಮನಸ್ಸಿನಿಂದ ಶುಭಕರ್ಮಗಳನ್ನು ಆಚರಿಸುವುದು, ವೇದಗಳೇ ಮೊದಲಾದ ಸತ್ಯವಿದ್ಯೆಗಳನ್ನು ಓದುವುದು–ಓದಿಸುವುದು, ವೇದಾನುಸಾರವಾಗಿ ಆಚರಣೆ ಮಾಡುವುದು–ಮೊದಲಾದ ಉತ್ತಮವಾದ ಧರ್ಮಯುಕ್ತ ಕರ್ಮಗಳಿಗೆ ತಪಸ್ಸೆಂದು ಹೆಸರು. ಧಾತುವನ್ನು ಕಾಯಿಸಿ ಚರ್ಮವನ್ನು ಸುಟ್ಟುಕೊಳ್ಳುವುದು ತಪಸ್ಸೆನಿಸಿಕೊಳ್ಳುವುದಿಲ್ಲ.

ನೋಡಿರಿ. ಚಕ್ರಾಂಕಿತರು ತಮ್ಮನ್ನು ಮಹಾನ್ ವೈಷ್ಣವರೆಂದು ತಿಳಿದುಕೊಳ್ಳುತ್ತಾರೆ. ಆದರೆ, ತಮ್ಮ ಪರಂಪರೆಯನ್ನು ಮತ್ತು ಕುಕರ್ಮವನ್ನು ಗಮನಿಸುವುದಿಲ್ಲ. ಯಾರ ಬಗೆಗೆ ಸ್ವತಃ ಚಕ್ರಾಂಕಿತರ ಗ್ರಂಥಗಳಲ್ಲಿ ಮತ್ತು ನಾಭಾಡೂಮನಿಂದ ರಚಿತವಾದ 'ಭಕ್ತಮಾಲ' ಎಂಬ ಗ್ರಂಥದಲ್ಲಿ ಈ ಕೆಳಗೆ ಹೇಳಿದಂತೆ ಬರೆದಿದೆಯೋ, ಆ ಶಠಕೋಪರು ಇವರ ಪ್ರಥಮ ಮೂಲಪುರುಷರಾಗಿದ್ದರು:–

**ವಿಕ್ರೀಯ ಶೂರ್ಪಂ ವಿಚಚಾರ ಯೋಗೀ[೫೬] ॥**

ಈ ಮೊದಲಾದ ವಚನಗಳನ್ನು, ಚಕ್ರಾಂಕಿತರ ಗ್ರಂಥಗಳಲ್ಲಿ ಬರೆದಿದ್ದಾರೆ. ಶಠಕೋಪ ಯೋಗಿಗಳು ಮೊರಗಳನ್ನು ಹೆಣೆದು, ಮಾರಿಕೊಂಡು ಸಂಚರಿಸುತ್ತಿದ್ದರು; ಎಂದರೆ ಮೇದರ ಜಾತಿಯಲ್ಲಿ ಜನ್ಮತಾಳಿದ್ದರು. ಅವರು ಬ್ರಾಹ್ಮಣದಿಂದ ಓದಲು ಅಥವಾ ಕೇಳಲು ಯಾವಾಗ ಬಯಸಿರಬಹುದೋ, ಆಗ ಬ್ರಾಹ್ಮಣರು ತಿರಸ್ಕರಿಸಬಹುದು. ಬ್ರಾಹ್ಮಣರಿಗೆ ವಿರುದ್ಧವಾದ, ಸಂಪ್ರದಾಯವಾಗಿ ನಾಮಗಳು, ಚಕ್ರ–ಮುದ್ರಾಧಾರಣ ಮೊದಲಾದ ಶಾಸ್ತ್ರವಿರುದ್ಧವಾದ, ಮನಸ್ಸಿಗೆ ತೋರಿದಂತಹ ರೂಢಿಗಳನ್ನು ಪ್ರವರ್ತಿತರಾಗಿ ಮಾಡಿರಬಹುದು. ಚಾಂಡಾಲ ಕುಲದಲ್ಲಿ ಉದ್ಭವಿಸಿದ ಮುನಿವಾಹನರು ಅವರ ಶಿಷ್ಯರಾದರು. ಯಾರು ಯವನ ಕುಲೋತ್ಪನ್ನರಾಗಿದ್ದಾರೋ, ಯಾರ ಹೆಸರನ್ನು ಪರಿವರ್ತಿಸಿ ಹಲಕೆಲವರು 'ಯಮುನಾಚಾರ್ಯ' ಎಂದೂ ಹೇಳುತ್ತಾರೋ, ಆ ಯಾವನಾಚಾರ್ಯರು ಅವರ ಶಿಷ್ಯರಾಗಿದ್ದರು. ಅವರ ನಂತರ ರಾಮಾನುಜರು ಬ್ರಾಹ್ಮಣ

---

೫೫. ಋಗ್ವೇದದ ಮೊದಲ ೪೦ ಸೂಕ್ತಗಳಿಗೆ ಆಧ್ಯಾತ್ಮಿಕ ಭಾಷ್ಯವನ್ನು ಬರೆದ ಮಧ್ವಾಚಾರ್ಯರು ಈ ಮಂತ್ರವನ್ನು ತಮ್ಮ ಸಂಪ್ರದಾಯವನ್ನು ಹರಡುವ ಸಾಧನವನ್ನಾಗಿ [ ಟ್ರೇಡ್ ಮಾರ್ಕ] ಉಪಯೋಗಿಸಿಕೊಂಡಿರುವುದು ಆಶ್ಚರ್ಯದ ಸಂಗತಿ.

೫೬. ದಿವ್ಯ ಸೂರಿ ಚರಿತ, ಸರ್ಗ ೨, ಶ್ಲೋಕ ೫೮,– ಯು.ಮೀ.

ಕುಲೋತ್ಪನ್ನರಾಗಿದ್ದು, ಚಕ್ರಾಂಕಿತರಾದರು. ಅದಕ್ಕೆ ಮೊದಲು ಕೆಲವು ಭಾಷಾಗ್ರಂಥಗಳನ್ನು ರಚಿಸಿದ್ದರು. ರಾಮಾನುಜರು[೫೭] ಸ್ವಲ್ಪ ಸಂಸ್ಕೃತವನ್ನೋದಿ, ಸಂಸ್ಕೃತಚದಲ್ಲಿ ಶ್ಲೋಕಬದ್ಧವಾದ ಗ್ರಂಥಗಳನ್ನೂ ಮತ್ತು ಶಂಕರಾಚಾರ್ಯರ ಟೀಕೆಗೆ ವಿರುದ್ಧವಾಗಿ, ಶಾರೀರಿಕ ಸೂತ್ರಗಳ ಮತ್ತು ಉಪನಿಷತ್ತುಗಳ ಮೇಲೆ ಟೀಕೆಯನ್ನು ರಚಿಸಿದರು ಮತ್ತು ಶಂಕರಾಚಾರ್ಯರನ್ನು ಬಹುವಾಗಿ ನಿಂದಿಸಿದರು. ಶಂಕರಾಚಾರ್ಯರ ಮತವು ಅದ್ವೈತ – ಎಂದರೆ "ಜೀವ ಮತ್ತು ಬ್ರಹ್ಮ ಒಂದೇ; ಎರಡನೆಯ ಯಾವ ವಸ್ತುವೂ ವಾಸ್ತವಿಕವಲ್ಲ; ಜಗತ್ತು–ಪ್ರಪಂಚ ಎಲ್ಲವೂ ಮಿಥ್ಯೆ; ಮಾಯಾರೂಪವಾದ ಅನಿತ್ಯ ವಸ್ತುವಾಗಿದೆ". – ಎಂದಾಗಿದ್ದಿತು. ಇದಕ್ಕೆ ವಿರುದ್ಧವಾಗಿ ರಾಮಾನುಜರ ಮತ ಜೀವ, ಬ್ರಹ್ಮ ಮತ್ತು ಮಾಯೆ ಮೂರೂ ನಿತ್ಯವೆಂಬುದಾಗಿದೆ.

ಈ ಸ್ಥಳದಲ್ಲಿ ಬ್ರಹ್ಮದಿಂದ ಅತಿರಿಕ್ತನಾದ ಜೀವನನ್ನು ಮತ್ತು ಕಾರಣವಸ್ತುವನ್ನು (ಪ್ರಕೃತಿ) ಒಪ್ಪದಿರುವ ಶಂಕರಾಚಾರ್ಯರ ಮತ ಯುಕ್ತವಲ್ಲ ಮತ್ತು ಈ ಅಂಶದಲ್ಲಿ, ಜೀವ ಮತ್ತು ಮಾಯೆಯೊಂದಿಗೆ ಪರಮೇಶ್ವರನು ಒಬ್ಬನೇ–ಎಂದು ಈ ಮೂರನ್ನೂ ಅಂಗೀಕರಿಸಿದ ಮೇಲೆಯೂ, 'ಅದ್ವೈತ' ಎಂಬ ಪದವನ್ನು ಬಳಸುವ ರಾಮಾನುಜರ "ವಿಶಿಷ್ಟಾದ್ವೈತ"ವು ಸರ್ವಥಾ ನಿರರ್ಥಕವಾಗಿದೆ; ಹಾಗೂ ಜೀವನು ಸರ್ವಥಾ ಈಶ್ವರಾಧೀನನು, ಪರತಂತ್ರನು ಎಂದು ಒಪ್ಪಿಕೊಳ್ಳುವುದು, ಕೊರಳಿನ ಅಡ್ಡಿಕೆ, ನಾಮ,ಹಾರ, ವಿಗ್ರಹಾರಾಧನೆ–ಮೊದಲಾದ ಪಾಷಂಡ ಮತವನ್ನು ಪ್ರಚಲಿತವಾಗಿ ಮಾಡುವುದು – ಮೊದಲಾದ ತಪ್ಪು ಗ್ರಹಿಕೆಗಳು ಚಕ್ರಾಂಕಿತರೇ ಮೊದಲಾದವರಲ್ಲಿವೆ. ಚಕ್ರಾಂಕಿತರು ಮೊದಲಾದವರು ಎಷ್ಟು ವೇದವಿರೋಧಿಗಳಾಗಿದ್ದಾರೋ, ಶಂಕರಾಚ್ರಾರ್ಯರ ಮತದವರು ಅಷ್ಟು ವೇದವಿರೋಧಿಗಳಾಗಿಲ್ಲ.[೫೮] (ಶಾಂಕರಸಂಪ್ರದಾಯದಲ್ಲಿ ವೈಷ್ಣವಸಂಪ್ರದಾಯ ಗಳಲ್ಲಿರುವಷ್ಟು ಭೇದಗಳಿಲ್ಲವೆಂದು ತಾತ್ಪರ್ಯ).

**ಪ್ರಶ್ನೆ** :– ಪ್ರತಿಮಾಪೂಜನವೆಲ್ಲಿಂದ ಹೊರಟಿತು?

**ಉತ್ತರ** :– ಜೈನರಿಂದ.[೫೯]

---

೫೭. ರಾಮಾನುಜಚಾರ್ಯರ ಜನ್ಮ ಸಮಯ ಕ್ರಿ.ಶ ೧೦೨೭.

ವೈಷ್ಣವ ಮತದ ಇತರ ಮೂರು ಪ್ರಸಿದ್ಧ ಆಚಾರ್ಯರುಗಳೆಂದರೆ,

೧. ನಿಂಬಕಾಚಾರ್ಯರು [ಕ್ರಿ.ಶ ೧೦೨೭–೧೧೦೦]; ೨. ಮಧ್ವಾಚಾರ್ಯರು [ಕ್ರಿ.ಶ.೧೧೯೯ರಲ್ಲಿ ಉಡುಪಿ[ಕರ್ನಾಟಕ]ಯಲ್ಲಿ ಜನನ. ಮತ್ತು ೩. ವಲ್ಲಭಾಚಾರ್ಯರು [ಕ್ರಿ.ಶ ೧೪೦೧]

ಮಧ್ವಾಚಾರ್ಯರನ್ನು ಬಿಟ್ಟು, ಉಳಿದ ಇಬ್ಬರು ಆಚಾರ್ಯರು ತೆಲುಗು ಪ್ರದೇಶದ ಬ್ರಾಹ್ಮಣರು. ನಿಂಬಕಾಚಾರ್ಯರು ಮತ್ತು ವಲ್ಲಭಾಚಾರ್ಯರು ಉತ್ತರಭಾರತಕ್ಕೆ ಬಂದು ಅಲ್ಲೇ ನೆಲಸಿದರು. ವಲ್ಲಭಾಚಾರ್ಯರ ಸಮಯದಲ್ಲೇ ವೈಷ್ಣವ ಮತವು ಭ್ರಷ್ಟವಾಗಿ ಅನೀತಿಯುಕ್ತವಾಯಿತು. ಅವರು ಯೋಗ, ಮತ್ತು ತ್ಯಾಗದ ಸ್ಥಾನದಲ್ಲಿ ಭೋಗವನ್ನು ಪ್ರವೇಶ ಮಾಡಿಸಿದ್ದುದೇ ಇದಕ್ಕೆ ಕಾರಣ. ವಿಷ್ಣುವಿನ ಉಪಾಸನೆಯ ಸ್ಥಾನವನ್ನು ಕೃಷ್ಣನು ಕಸಿದುಕೊಂಡನು. ಲಕ್ಷ್ಮಿಯ ಸ್ಥಾನವನ್ನು ರಾಧೆಯು ಕಸಿದುಕೊಂಡಳು. ಮತ್ತೆ ಪತಿ–ಪತ್ನಿಯರ ಸಂಬಂಧವು ಪರ ಪುರುಷ–ಪರಸ್ತ್ರೀ ಸಂಬಂಧವಾಗಿ ಪರಿಣಮಿಸಿತು. ಎಂದರೆ, ಆರಂಭವಾಯಿತು. ರಾಸಲೀಲೆ–ಕಾಮಲೀಲೆ [ಇದು ಪಾಶ್ಚಿಮಾತ್ಯರಿಗೆ ಪ್ರಿಯವಾದ ಲೀಲೆ] ಆದ್ದರಿಂದ, ಈ ವೈಷ್ಣವ ಮತ ಆ ಮೇಲೆ ವಿದೇಶಗಳಿಗೆ ಹರಡಿ, 'ಹರೇ ರಾಮಾ ಹರೇ ಕೃಷ್ಣಾ' ಮತವಾಯಿತು. ನಂತರ ಬಂಗಾಲದಲ್ಲಿ ಚೈತನ್ಯ[ಜನನ ಕ್ರಿ.ಶ.೧೪೨೮] ಮತ್ತೆ ಗುಜರಾತ್‌ನಲ್ಲಿ ಅಯೋಧ್ಯೆಯಿಂದ ಬಂದವನಾದ ಸಹಜಾನಂದ. ನಂತರ ಕಾಶಿಯಲ್ಲಿ ನೆಲಸಿದ ರಾಮಾನಂದ.

ರಾಮಾನಂದರ ಶಿಷ್ಯ ಕಬೀರ. ನಂತರ ಖಾಖಿ[ಗಳು], ಮಲೂಕದಾಸ[ಪಂಥದವರು], ದಾದೂ [ಪಂಥದವರು], ರಾಮಚರಣ [ರಾಮಸನೇಹಿಗಳು] ಇತ್ಯಾದಿ.

ಇವರೆಲ್ಲರ ವಿವೇಚನೆ ಮುಂದೆ ಬರಲಿದೆ.

೫೮. ಶಾಂಕರ ಸಂಪ್ರದಾಯದಲ್ಲಿ ವೈಷ್ಣವ ಸಂಪ್ರದಾಯಗಳಲ್ಲಿರುವ ಭೇದಗಳಿಲ್ಲ.

೫೯. ಇದು ಐತಿಹಾಸಿಕ ಸತ್ಯ ! ಏಕೆಂದರೆ, ಮೂರ್ತಿಪೂಜೆಗೆ ಪ್ರೇರಕಗಳಾದ ಹಿಂದೂ ಪುರಾಣಗಳಿಗಿಂತಲೂ, ಮೊದಲು, ಅತ್ಯಂತ ಮೂರ್ತಿಪೂಜಕರಾದ ಜೈನರ ಪುರಾಣಗಳು ವಿದ್ಯಮಾನವಾಗಿದ್ದವು. ಶಂಕರಾಚಾರ್ಯರ ಪ್ರಯತ್ನದಿಂದ ಜೈನರ ಪ್ರತಾಪ ಅಡಗಿದ ಮೇಲೆ, ಅವರ ರಾಜ್ಯಗಳು ನಷ್ಟವಾದ ಮೇಲೆ, ಅವರ ದೇವಾಲಯಗಳು ಅಲ್ಲಿ–ಇಲ್ಲಿ ಮಾತ್ರ ಉಳಿದುಕೊಂಡವು. ನಂತರ, ಹಿಂದುಗಳ ಉನ್ನತಿಯುಂಟಾಗಿ, ಹಿಂದೂ ದೇವಸ್ಥಾನಗಳ ಸಂಖ್ಯೆ [ಶೈವ, ವೈಷ್ಣವ ಮತ್ತು ಶಾಕ್ತ] ಹೆಚ್ಚಿಕೊಂಡಿತು. ಜೈನರ ಐತಿಹಾಸಿಕ ಹಿನ್ನೆಲೆಯನ್ನು ಪರಿಶಿಷ್ಟ–೩ ರಲ್ಲಿ ಕೊಡಲಾಗಿದೆ.

**ಪ್ರಶ್ನೆ :**– ಜೈನರು ಎಲ್ಲಿಂದ ಪ್ರಚಲಿತವಾಗಿ ಮಾಡಿದರು?

**ಉತ್ತರ :**– ತಮ್ಮ ತಪ್ಪುಗ್ರಹಿಕೆಯಿಂದ.[೬೦] (ಮೂರ್ಖತೆಯಿಂದ)

**ಪ್ರಶ್ನೆ:**– ಶಾಂತವಾಗಿ, ಧ್ಯಾನಾವಸ್ಥಿತವಾಗಿ ಕುಳಿತಿರುವ ಪ್ರತಿಮೆಯನ್ನು ನೋಡಿ, ತನ್ನ ಜೀವನಿಗೂ ಕೂಡ ಅದೇ ರೀತಿ ಶುಭಪರಿಣಾಮವಾಗುವುದೆಂದು ಜೈನರು ಹೇಳುತ್ತಾರೆ.

**ಉತ್ತರ:**– ಜೀವನು ಚೇತನ ಮತ್ತು ಪ್ರತಿಮೆ ಜಡ. ಪ್ರತಿಮೆಯ ಹಾಗೆ ಜೀವನೂ ಕೂಡ ಜಡನಾಗಿ ಹೋಗುವನೇ? ಈ ವಿಗ್ರಹಾರಾಧನೆ ಕೇವಲ ಪಾಷಂಡ ಮತ. ಜೈನರು ಪ್ರಚಲಿತವಾಗಿ ಮಾಡಿದ್ದಾರೆ. ಆದುದರಿಂದ, ಇವರ (ಮತದ) ಖಂಡನವನ್ನು ಹನ್ನೆರಡನೆಯ ಸಮುಲ್ಲಾಸದಲ್ಲಿ ಮಾಡುವೆವು.

**ಪ್ರಶ್ನೆ :**– ಶಾಕ್ತರೇ ಮೊದಲಾದವರು ಪ್ರತಿಮೆಯ (ವಿಷಯದ)ಲ್ಲಿ ಜೈನರ ಅನುಕರಣವನ್ನು ಮಾಡಿಲ್ಲ. ಏಕೆಂದರೆ, ವೈಷ್ಣವರೇ ಮೊದಲಾದವರ ಪ್ರತಿಮೆಗಳ ಹಾಗೆ ಇಲ್ಲ.

**ಉತ್ತರ:**– ಹೌದು, ಇದು ಸರಿ. ಜೈನರ ಹಾಗೆ ರಚಿಸಿದ್ದಲ್ಲಿ, ಜೈನ ಮತದಲ್ಲಿ ಸೇರಿಹೋಗುತ್ತಿದ್ದರು. ಈ ಕಾರಣದಿಂದ, ಜೈನರ ಪ್ರತಿಮೆಗಳಿಗೆ ವಿರುದ್ಧವಾಗಿ ರಚಿಸಿದ್ದಾರೆ. ಏಕೆಂದರೆ, ಜೈನರನ್ನು ವಿರೋಧಿಸುವುದು ಇವರ ಉದ್ದೇಶ್ಯವಾಗಿದ್ದಿತು ಮತ್ತು ಇವರನ್ನು ವಿರೋಧಿಸುವುದು ಜೈನರ ಮುಖ್ಯವಾದ ಕಾರ್ಯವಾಗಿದ್ದಿತು. ಜೈನರು ಪ್ರತಿಮೆಗಳನ್ನು ಬೆತ್ತಲೆಯೂ, ಧ್ಯಾನಾವಸ್ಥಿತವೂ ಮತ್ತು ವೈರಾಗ್ಯಶಾಲೀ ಮನುಷ್ಯನಿಗೆ ಸಮಾನವಾಗಿಯೂ ನಿರ್ಮಿಸಿದ್ದಾರೆ; ಅದಕ್ಕೆ ವಿರುದ್ಧವಾಗಿ ವೈಷ್ಣವರೇ ಮೊದಲಾದವರು ಯಥೇಷ್ಟವಾಗಿ ಸಿಂಗರಿಸಲ್ಪಟ್ಟ ಸ್ತ್ರೀಯಳೊಂದಿಗೆ ಬಣ್ಣ, ಅನುರಾಗ, ಭೋಗ ಹಾಗೂ ವಿಷಯಾಸಕ್ತಿ ಸಹಿತವಾದ ಆಕಾರಗಳನ್ನುಳ್ಳ, ನಿಂತ ಮತ್ತು ಕುಳಿತ ಪ್ರತಿಮೆಗಳನ್ನು ರಚಿಸಿದ್ದಾರೆ. ಜೈನರು ವಿಶೇಷರಾಗಿ ಶಂಖ–ಘಂಟೆ, ಜಾಗಟೆ ಮೊದಲಾದುವನ್ನು ಬಾರಿಸುವುದಿಲ್ಲ. ಈ ಜನರು[೬೧] ಬಹಳ ಕೋಲಹಲವನ್ನೆಬ್ಬಿಸುತ್ತಾರೆ. ಆಗಲಂತೂ ಇಂತಹ ಲೀಲೆಗಳನ್ನು ರಚಿಸಿದುದರಿಂದ ವೈಷ್ಣವ–ಮೊದಲಾದ ಸಾಂಪ್ರದಾಯಿಕ ಪೋಪರ ಶಿಷ್ಯರು, ಜೈನರ ಲೀಲೆಗಳಿಂದ ದೂರವಾಗಿ, ಇವರ ಲೀಲೆಯಲ್ಲಿ ಸಿಕ್ಕಿಕೊಂಡರು ಮತ್ತು ವ್ಯಾಸರೇ–ಮೊದಲಾದ ಮಹರ್ಷಿಗಳ ಹೆಸರಿನಲ್ಲಿ ಮನಬಂದಂತೆ, ಅತ್ಯಂತ ಅಸಂಭವವಾದ ಕಟ್ಟುಕತೆಗಳಿಂದ ಕೂಡಿದ ಗ್ರಂಥಗಳನ್ನು ರಚಿಸಿದ್ದಾರೆ. ಅವಕ್ಕೆ 'ಪುರಾಣ'ವೆಂದು ಹೆಸರಿಟ್ಟು, ಕಥೆಯನ್ನೂ ಕೂಡ ಶ್ರವಣ ಮಾಡಿಸತೊಡಗಿದರು. ಮತ್ತು ಶಿಲಾಪ್ರತಿಮೆಗಳನ್ನು ರಚಿಸಿ, ಗುಪ್ತವಾಗಿ ಎಲ್ಲಿಯಾದರೂ ಪರ್ವತದ ಮೇಲೆ ಅಥವಾ ಕಾಡು–ಮೊದಲಾದ ಕಡೆ ಇಟ್ಟು ಬಂದರು ಅಥವಾ ಭೂಮಿಯಲ್ಲಿ ಹೂತಿಟ್ಟರು. ಆ ಮೇಲೆ, ತಮ್ಮ ಶಿಷ್ಯರ ನಡುವೆ "ನನಗೆ ರಾತ್ರಿ ಸ್ವಪ್ನದಲ್ಲಿ ಮಹಾದೇವ, ಪಾರ್ವತೀ, ರಾಧಾ, ಕೃಷ್ಣ, ಸೀತಾ, ರಾಮ ಅಥವಾ ಲಕ್ಷ್ಮೀನಾರಾಯಣ, ಮತ್ತು ಭೈರವ, ಹನುಮಾನ್" ಮೊದಲಾದವರು ಪ್ರತ್ಯಕ್ಷರಾಗಿ "ನಾವು ಇಂತಿಂತಹ ಕಡೆಯಿದ್ದೇವೆ. ನಮ್ಮನ್ನು ಅಲ್ಲಿಂದ ತಂದು, ಮಂದಿರದಲ್ಲಿ ಸ್ಥಾಪಿಸು; ಮತ್ತು ನೀನೇ ನಮ್ಮ ಪೂಜಾರಿಯಾಗುವೆಯಾದರೆ, ನಾವು ಮನೋವಾಂಛಿತವಾದ ಫಲಗಳನ್ನು ಕೊಡುವೆವು.– ಎಂದು ಹೇಳಿದ್ದಾರೆ".– ಎಂದು ಪ್ರಸಿದ್ಧ ಪಡಿಸಿದರು. ಈ ರೀತಿಯ ವಿಚಿತ್ರವಾದ ಮಾಯೆಯನ್ನು ಬಿತ್ತರಿಸ ಹತ್ತಿದರು.

ಯಾವಾಗ ಕಣ್ಣಿದ್ದೂ ಕಾಣಲಾರದ, ಹಣದಿಂದ[೬೨] ಉಬ್ಬಿದ ಜನರು ಪೋಪರ ಲೀಲೆಯನ್ನು ಆಲಿಸಿದರೋ, ಆಗಲಂತೂ ಅದನ್ನು ಸತ್ಯವೆಂದೇ ಒಪ್ಪಿಕೊಂಡುಬಿಟ್ಟರು. ಮತ್ತು ಅವರನ್ನು 'ಇಂತಹ ಆ ಪ್ರತಿಮೆ ಎಲ್ಲಿದೆ?' ಎಂದು ಕೇಳಿದರು. ಆಗ ಪೋಪರು 'ಇಂತಹ ಪರ್ವತದ ಮೇಲೆ ಅಥವಾ ಕಾಡಿನಲ್ಲಿದೆ. ನಮ್ಮೊಂದಿಗೆ ನಡೆ. ತೋರಿಸಿ ಬಿಡುವೆವು'.– ಎಂದರರು. ಆಗ ಮತ್ತೇನು ಆ

---

೬೦. ಇದು ಎಷ್ಟು ಸ್ಪಷ್ಟವಾದ ಪ್ರತಿಪಾದನೆ ! ಮೂರ್ತಿ ಪೂಜೆ ಮೂರ್ಖ [ಅವಿದ್ವಾಂಸ] ಮಾನವನ ದೌರ್ಬಲ್ಯ ! ಚಿತ್ರಗಳು, ಪ್ರತಿಮೆಗಳು ಸಾಧಾರಣ ಜನರಿಗೆ ಪ್ರಿಯವಾದ ಆಕರ್ಷಣೀಯ ವಸ್ತುಗಳು ! ಸ್ಮರಣೆಗಾಗಿ ಇವುಗಳ ಪ್ರಥಮ ನಿರ್ಮಾಣ ! ಮತ್ತೆ ಕಲೆ ಗಾಗಿ ಇವುಗಳಲ್ಲಿ ವೈವಿಧ್ಯತೆ, ಹಾಗೂ ವಿಸ್ತಾರ ! ಸತ್ತವರಿಗೆ ಇವುಗಳಲ್ಲಿ ಪ್ರಾಮುಖ್ಯತೆ ! ಮೃತ ಹಿರಿಯರಿಗೆ ಇವುಗಳ ಮೂಲಕವೇ ಆದರದ ಪ್ರಕಟಣೆ ! ಪುನಃ ಮೃತ ಮಹಾಪುರುಷರಿಗೆ ಸತ್ಕಾರದ ನಟನೆ ! ನಂತರ, ಕಲ್ಪಿತ ಸಾಮರ್ಥ್ಯಶಾಲೀ ಜಡವಸ್ತು, ವೃಕ್ಷ–ವನಸ್ಪತಿ, ಪ್ರಾಣಿ ಮತ್ತು ಮಾನವರ ಬಗ್ಗೆ ಭಯ, ಹಾಗೂ ಪೂಜೆ [?].
ಇದು ಮೂರ್ತಿಪೂಜೆಯ 'ಏಣಿ' ! ಆದರೆ, ಇದು ಪರಮಾತ್ಮನ ಉಪಾಸನೆಗೆ, ಸಾಕ್ಷಾತ್ಕಾರಕ್ಕೆ ಏಣಿಯಲ್ಲ. ಅದರ ಹಳ್ಳದಂತೆ ಇದೆ, ಎಂಬ ಪ್ರತಿಪಾದನೆಯನ್ನು ಮುಂದೆ, ಮಹರ್ಷಿ ದಯಾನಂದರು ಮಾಡಿದ್ದಾರೆ.

೬೧. ಎಂದರೆ, ವೈಷ್ಣವರು.

೬೨. ಹಿಂದಿಯಲ್ಲಿ ಇದಕ್ಕೆ– "ಆಂಖ್ ಕೇ ಅಂಧೇ ಔರ್ ಗಾಂಠ್ ಕೇ ಪೂರೇ" ಎಂಬ ಪ್ರಯೋಗವಿದೆ. ಇದನ್ನು 'ಸತ್ಯಾರ್ಥ ಪ್ರಕಾಶ'ದಲ್ಲಿ ಮಹರ್ಷಿ ದಯಾನಂದರು ಮೂರ್ಖ ಧನಿಕರ ಪ್ರತಿ ಬಹಳ ಕಡೆ ಉಪಯೋಗಿಸಿದ್ದಾರೆ.

ಕುರುಡರು ಆ ಧೂರ್ತರೊಂದಿಗೆ ಹೊರಟು, ಅಲ್ಲಿ ಹೋಗಿ ನೋಡಿದರು. ಆಶ್ಚರ್ಯ ಉಂಟಾಗಿ, ಆ ಪೋಪರ ಪಾದಕ್ಕೆರಗಿ– "ತಮ್ಮ ಮೇಲೆ ಈ ದೇವತಾನುಗ್ರಹ ಬಹಳವಾಗಿದೆ. ಈಗ ತಾವು ಅದನ್ನು ತೆಗೆದುಕೊಂಡ ನಡೆಯಿರಿ. ನಾವು ದೇವಾಲಯವನ್ನು ಕಟ್ಟಿಸಿಬಿಡುತ್ತೇವೆ, ಅದರಲ್ಲಿ ಈ ದೇವತೆಯನ್ನು ಪ್ರತಿಷ್ಠಾಪಿಸಿ, ತಾವೇ ಪೂಜಿಸಿರಿ, ಮತ್ತು ನಾವುಗಳೂ ಕೂಡ ಈ ಪ್ರತಾಪಶಾಲೀ ದೇವತೆಯ ದರ್ಶನ–ಸ್ಪರ್ಶನಗಳನ್ನು ಮಾಡಿ, ಮನೋವಾಂಛಿತ ಫಲಗಳ್ನು ಪಡೆದುಕೊಳ್ಳುವೆವು".–ಎಂದರು. ಇದೇ ರೀತಿ ಯಾವಾಗ ಒಬ್ಬನು ಲೀಲೆ ಮಾಡಿದನೋ, ಆಗ ಅವನನ್ನು ನೋಡಿ, ಪೋಪರುಗಳನ್ನೆಲ್ಲಾ ತಮ್ಮ ಹೊಟ್ಟೆಯ ಪಾಡಿಗಾಗಿ ಛಲ–ಕಪಟಗಳಿಂದ ಪ್ರತಿಮೆಗಳನ್ನು ಸ್ಥಾಪಿಸಿದರು.

**ಪ್ರಶ್ನೆ :**– ಪರಮೇಶ್ವರನು ನಿರಾಕಾರನಾಗಿದ್ದಾನೆ. ಅವನು ಧ್ಯಾನದಲ್ಲಿ ಬರಲಾರನು. ಆದುದರಿಂದ ಪ್ರತಿಮೆ ಅವಶ್ಯವಾಗಿಯೂ ಇರಬೇಕು. ಆಗಲಿ, ಮತ್ತೇನನ್ನೂ ಮಾಡದಿದ್ದರೂ, ಪ್ರತಿಮೆಯ ಮುಂದೆ ಹೋಗಿ, ಕೈಜೋಡಿಸಿ, ಪರಮೇಶ್ವರನ ಸ್ಮರಣೆಯನ್ನಾದರೂ ಮಾಡುತ್ತಾರೆ ಮತ್ತು ಹೆಸರನ್ನಾದರೂ ಹೇಳುತ್ತಾರೆ. ಇದರಲ್ಲಿ ಹಾನಿ ಏನಿದೆ?

**ಉತ್ತರ:**– ಯಾವಾಗ ಪರಮೇಶ್ವರನು ನಿರಾಕಾರನೂ, ಸರ್ವವ್ಯಾಪಕನೂ ಆಗಿದ್ದಾನೋ, ಆಗ ಅವನ ಪ್ರತಿಮೆಯೇ ನಿರ್ಮಿತವಾಗಲಾರದು. ಮತ್ತು ಪ್ರತಿಮೆಯ ದರ್ಶನ ಮಾತ್ರದಿಂದ ಪರಮೇಶ್ವರನ ಸ್ಮರಣವಾಗುವುದಾದರೆ, ಪರಮೇಶ್ವರನು ರಚಿಸಿದ ಪೃಥಿವೀ, ಜಲ, ಅಗ್ನಿ, ವಾಯು ಮತ್ತು ವನಸ್ಪತಿಗಳನ್ನು ಮತ್ತು ಯಾವವುಗಳಿಂದ ಈಶ್ವರನು ಅದ್ಭುತವಾದ ರಚನೆಗಳನ್ನು ಮಾಡಿದ್ದಾನೋ, ಆ ಅನೇಕ ವಸ್ತುಗಳನ್ನು ನೋಡಿ, ಯಾವ ಪರ್ವತಗಳು ಮೊದಲಾದುವುಗಳಲ್ಲಿನ ಶಿಲೆಗಳಿಂದ ಮನುಷ್ಯರಚಿತವಾದ ಮೂರ್ತಿಗಳು ರೂಪತಾಳುತ್ತವೋ, ಅಂತಹ ವಿವಿಧ ರಚನಾಕೌಶಲಯುಕ್ತವಾದ ಪರಮಾತ್ಮನಿಂದಲೇ ರಚಿತವಾಗಿರುವ ಮೃತ್ತಿಕಾ–ಪರ್ವತ ಮೊದಲಾದ ಮಹಾಮೂರ್ತಿಗಳನ್ನು ಅವಲೋಕಿಸಿ, ಪರಮೇಶ್ವರನ ಸ್ಮರಣೆಯಾಗಲಾರದೇನು? ಪ್ರತಿಮೆವನ್ನು ನೋಡುವುದರಿಂದ ಪರಮೇಶ್ವರನ ಸ್ಮರಣೆಯಾಗುತ್ತದೆ–ಎಂಬ ತಮ್ಮ ಕಥನ ಸರ್ವಥಾ ಸುಳ್ಳಾಗಿದೆ. ಮತ್ತು ಆ ಪ್ರತಿಮೆಯ ಎದುರಿಗೆ ಇಲ್ಲದಿದ್ದರೆ ಪರಮೇಶ್ವರನ ಸ್ಮರಣವಾಗದಿರುವುದರಿಂದ, ಮಾನವನು ಏಕಾಂತವನ್ನು ಪಡೆದುಕೊಂಡು, ಕಳವು, ವ್ಯಭಿಚಾರ ಮೊದಲಾದ ದುಷ್ಕರ್ಮಗಳನ್ನು ಮಾಡುವುದರಲ್ಲಿ ಪ್ರವೃತ್ತನೂ ಆಗಬಲ್ಲನು. ಏಕೆಂದರೆ, ಅವನು ಈ ಸಮಯದಲ್ಲಿ ಇಲ್ಲಿ ಯಾವನೂ ತನ್ನನ್ನು ನೋಡುವುದಿಲ್ಲವೆಂದು ತಿಳಿಯುತ್ತಾನೆ. ಆದುದರಿಂದ ಅವನು ಅನರ್ಥವನ್ನು ಮಾಡದೇ ಇರುವುದಿಲ್ಲ, ಇದೇ ಮೊದಲಾದ ಅನೇಕ ದೋಷಗಳು ಶಿಲೆ ಮೊದಲಾದವುಗಳ ಪ್ರತಿಮೆಗಳ ಪೂಜನ ಮಾಡುವುದರಲ್ಲಿ ತಲೆಯೆತ್ತುತ್ತವೆ.

ಈಗ ನೋಡಿರಿ. ಯಾವನು ಶಿಲೆಯೇ ಮೊದಲಾದ ಪ್ರತಿಮೆಗಳನ್ನು ಒಪ್ಪದೆ, ಸರ್ವದಾ ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ, ನ್ಯಾಯಕಾರಿಯೂ ಆದ ಪರಮಾತ್ಮನನ್ನು ಸರ್ವತ್ರವೂ ಇದ್ದಾನೆ–ಎಂದು ತಿಳಿಯುತ್ತಾನೋ ಮತ್ತು ಒಪ್ಪಿಕೊಳ್ಳುತ್ತಾನೋ, ಆ ಪುರುಷನು ಎಲ್ಲೆಡೆಯೂ, ಎಲ್ಲ ಕಾಲಗಳಲ್ಲಿಯೂ ಪರಮೇಶ್ವರನು ಎಲ್ಲರ ಕೆಟ್ಟ ಮತ್ತು ಒಳ್ಳೆಯ ಕರ್ಮಗಳನ್ನೂ ನೋಡುತ್ತಾನೆ–ಎಂದರಿತು, ಒಂದು ಕ್ಷಣ ಮಾತ್ರಕ್ಕೂ ತಾನು ಪರಮಾತ್ಮನಿಂದ ದೂರವೆಂದು ತಿಳಿದು, ಕೆಟ್ಟ ಕರ್ಮಮಾಡುವುದಂತೂ ದೂರವೇ ಉಳಿಯಿತು; ಮನಸ್ಸಿನಲ್ಲಿಯೂ ದುಷ್ಕರ್ಮವನ್ನು ಯೋಚಿಸಲಾರನು. ಏಕೆಂದರೆ, ಅವನು "ನಾನು ಮನಸ್ಸಿನಿಂದ, ಮಾತಿನಿಂದ ಮತ್ತು ಕ್ರಿಯಾತ್ಮಕವಾಗಿ ಕೂಡ ಏನಾದರೂ ಕೆಟ್ಟ ಕೆಲಸ ಮಾಡುವೆನಾದರೆ, ಈ ಅಂತರ್ಯಾಮಿಯ ನ್ಯಾಯಾನುಸಾರ ಶಿಕ್ಷೆ ಹೊಂದದೆ ಎಂದಿಗೂ ಉಳಿಯಲಾರೆನು."–ಎಂದು ತಿಳಿದಿರುತ್ತಾನೆ. ಮತ್ತು ಹೇಗೆ 'ಸಕ್ಕರೆ, ಸಕ್ಕರೆ' ಎನ್ನುವುದರಿಂದ ಬಾಯಿ ಸಿಹಿಯೂ, 'ಬೇವು, ಬೇವು'–ಎನ್ನುವುದರಿಂದ ಕಹಿಯೂ ಆಗುವುದಿಲ್ಲವೋ, ಆದರೆ ನಾಲಗೆಯಿಂದ ಸವಿಯುವುದರಿಂದಲೇ ಸಿಹಿತನ ಅಥವಾ ಕಹಿತನ ತಿಳಿಯಲ್ಪಡುತ್ತದೋ, ಹಾಗೆ, ನಾಮಸ್ಮರಣಮಾತ್ರದಿಂದ ಯಾವುದೇ ಫಲವೂ ಸಿಕ್ಕುವುದಿಲ್ಲ. (ಆದರೆ, ನಾಮಸೂಚಿತ ಗುಣದ ವಿಕಾಸದಿಂದ ಮಾತ್ರ ಫಲ ಲಭಿಸುವುದು.)

**ಪ್ರಶ್ನೆ :**– ನಾಮೋಚ್ಚಾರಣ ಮಾಡುವುದು ಸರ್ವಥಾ ವ್ಯರ್ಥವೇ? ಎಲ್ಲೆಡೆಯೂ ಪುರಾಣಗಳಲ್ಲಿ ನಾಮಸ್ಮರಣದ ಮಾಹಾತ್ಮ್ಯವನ್ನು ಬಹುವಾಗಿ ಬರೆದಿದ್ದಾರಲ್ಲ!

**ಉತ್ತರ:**– ನಾಮೋಚ್ಚಾರಣ ಮಾಡುವ ನಿಮ್ಮ ರೀತಿ ಉತ್ತಮವಲ್ಲ. ಯಾವ ರೀತಿ ನೀವು ನಾಮಸ್ಮರಣ ಮಾಡುತ್ತೀರೋ, ಅದು ನಿರರ್ಥಕವಾಗಿದೆ.

**ಪ್ರಶ್ನೆ:**– ನಮ್ಮ ರೀತಿ ಹೇಗಿದೆ?

**ಉತ್ತರ:**– ವೇದವಿರುದ್ಧವಾಗಿದೆ.

**ಪ್ರಶ್ನೆ:**– ಆಯಿತು ; ಈಗ ತಾವು ನಮಗೆ ವೇದೋಕ್ತವಾದ ನಾಮಸ್ಮರಣದ ರೀತಿಯನ್ನು ತಿಳಿಸಿರಿ.

**ಉತ್ತರ:**– ನಾಮಸ್ಮರಣವನ್ನು ಈ ರೀತಿ ಮಾಡಬೇಕು:–ಉದಾಹರಣೆಗೆ, 'ನ್ಯಾಯಕಾರಿ'– ಎನ್ನುವುದು ಈಶ್ವರನ ಒಂದು ಗುಣಕವಾಚಕ ಶಬ್ದವಾಗಿದೆ. ಇದನ್ನು ಉಚ್ಚರಿಸುವಾಗ, "ಪರಮಾತ್ಮನು ಪಕ್ಷಪಾತರಹಿತನಾಗಿ, ಎಲ್ಲರಿಗೂ ಯಥೋಚಿತವಾದ ನ್ಯಾಯವನ್ನೇ ಮಾಡುತ್ತಾನೆ; ಹಾಗೆಯೇ ಅದನ್ನು ಗ್ರಹಿಸಿ, ನ್ಯಾಯಯುಕ್ತವಾದ ವ್ಯವಹಾರವನ್ನು ಸದಾ ಮಾಡಬೇಕು; ಅನ್ಯಾಯವನ್ನೆಂದಿಗೂ ಮಾಡಬಾರದು". ಎಂಬ (ಸೂಕ್ಷ್ಮವಾದ) ಅರ್ಥವನ್ನು ಗ್ರಹಿಸಬೇಕು. ಈ ರೀತಿ ಒಂದು ಹೆಸರಿನಿಂದಲೂ ಕೂಡ ಮಾನವನ ಕಲ್ಯಾಣವಾಗಬಲ್ಲದು.

**ಪ್ರಶ್ನೆ:**– ಪರಮೇಶ್ವರನು ನಿರಾಕಾರನೆಂದು ನಾವೂ ಬಲ್ಲೆವು. ಆದರೆ ಅವನು ಶಿವ, ವಿಷ್ಣು, ಗಣೇಶ, ಸೂರ್ಯ, ಮತ್ತು ದೇವಿ–ಮೊದಲಾದವರ ಶರೀರಗಳನ್ನು ಧರಿಸಿ, ರಾಮ, ಕೃಷ್ಣ–ಮೊದಲಾದ ಅವತಾರಗಳನ್ನೂ ಎತ್ತಿದನು. ಈ ಕಾರಣದಿಂದ ಅವನ ಪ್ರತಿಮೆಯೂ ರಚಿತವಾಗಬಲ್ಲದು. ಈ ಮಾತೂ ಕೂಡ ಅರ್ಥರಹಿತವೇನು?

**ಉತ್ತರ:**– ಹೌದು, ಹೌದು; ಸುಳ್ಳು! ಏಕೆಂದರೆ, "ಅಜ ಏಕಪಾತ್", "ಅಕಾಯಂ"– ಈ ಮೊದಲಾದ ವಿಶೇಷಣಗಳಿಂದ (ಋಗ್ವೇದ:– ೭.೩೫.೧೩.; ಯಜುರ್ವೇದ:– ೪೦.೮) ವೇದಗಳಲ್ಲಿ ಪರಮೇಶ್ವರನನ್ನು ಜನ್ಮ–ಮರಣ–ಶರೀರಧಾರಣ ರಹಿತನೆಂದು ಹೇಳಿದೆ. ಮತ್ತು ಯುಕ್ತಿಯಿಂದಲೂ ಕೂಡ, ಪರಮೇಶ್ವರನ ಅವತಾರವೆಂದಿಗೂ (ಸಿದ್ಧ) ಆಗಲಾರದು. ಏಕೆಂದರೆ, ಯಾವನು ಆಕಾಶದಂತೆ ಸರ್ವತ್ರವ್ಯಾಪಕನೂ, ಅನಂತನೂ ಮತ್ತು ಸುಖ, ದುಃಖ, ದೃಶ್ಯತ್ವ–ಮೊದಲಾದ ಗುಣಗಳಿಂದ ರಹಿತನೂ ಆಗಿದ್ದಾನೋ, ಅವನು ಹೇಗೆ ಅಲ್ಪ ಪ್ರಮಾಣದ ವೀರ್ಯಗಳಲ್ಲಿ, ಗರ್ಭಾಶಯದಲ್ಲಿ ಮತ್ತು ಶರೀದಲ್ಲಿ ಪ್ರವೇಶಿಸಬಲ್ಲನು? ಯಾವನು ಏಕದೇಶೀಯನಾಗಿರುತ್ತಾನೋ, ಅವನು ಬರುತ್ತಾನೆ–ಹೋಗುತ್ತಾನೆ. ಮತ್ತು ಯಾವನು ಅಚಲನೋ, ಅದೃಶ್ಯನೋ, ಯಾವನಿಂದ ಒಂದು ಪರಮಾಣುವೂ ಕೂಡ ತೆರವಾಗಿಲ್ಲವೋ, ಅವನ ಅವತಾರವನ್ನು (ಕುರಿತು) ಹೇಳುವುದು, ಬಂಜೆಯ ಮಗನಿಗೆ ಮದುವೆಮಾಡಿ, ಅವಳ ಮೊಮ್ಮಗನ ಮುಖದರ್ಶನ ಮಾಡುವ ಮಾತಿನ ಹಾಗೆಯೇ ಇದೆ. ಈ ಹೇಳಿಕೆ.

**ಪ್ರಶ್ನೆ:**– ಪರಮೇಶ್ವರನು ವ್ಯಾಪಕನಾಗಿರುವಾಗ, ಪ್ರತಿಮೆಯಲ್ಲಿಯೂ ಕೂಡ ಇದ್ದಾನೆ. ಎಂದ ಮೇಲೆ, ಯಾವುದೇ ವಸ್ತುವಿನಲ್ಲಿ ಆಗಲಿ, ಭಾವನಾಪೂರ್ವಕವಾಗಿ ಪೂಜೆಮಾಡುವುದು ಒಳ್ಳೆಯದೇತಕ್ಕಲ್ಲ?[೬೩] ನೋಡಿರಿ:–

**ನ ಕಾಷ್ಠೇ ವಿದ್ಯತೇ ದೇವೋ ನ ಪಾಷಾಣೇ ನ ಮೃಣ್ಮಯೇ ।**

**ಭಾವೇ ಹಿ ವಿದ್ಯತೇ ದೇವಸ್ತಸ್ಮಾದ್ಭಾವೋ ಹಿ ಕಾರಣಮ್ ॥** (ಚಾಣಕ್ಯ:– ೮.೧೧)

ಪರಮೇಶ್ವರದೇವನು ಕಟ್ಟಿಗೆಯಲ್ಲಿಲ್ಲ; ಕಲ್ಲಿನಲ್ಲಿಲ್ಲ; ಮಣ್ಣಿನಿಂದ ರಚಿಸಲ್ಪಟ್ಟ ಪದಾರ್ಥಗಳಲ್ಲಿಯೂ ಇಲ್ಲ. ಆದರೆ, ಪರಮೇಶ್ವರನಾದರೋ 'ಭಾವ'ದಲ್ಲಿರುತ್ತಾನೆ. ಎಲ್ಲಿ ಭಾವನೆ ಮಾಡಿಕೊಳ್ಳುತ್ತೇವೋ, ಅಲ್ಲಿಯ ಪರಮೇಶ್ವರನು ಸಿದ್ಧನಾಗುತ್ತಾನೆ.

**ಉತ್ತರ :**– ಪರಮೇಶ್ವರನು ಎಲ್ಲೆಡೆಯೂ ವ್ಯಾಪಕನಾಗಿರುವಾಗ, ಯಾವುದಾದರೂ ಒಂದು ವಸ್ತುವಿನಲ್ಲಿ ಪರಮೇಶ್ವರನ ಭಾವನೆಯನ್ನು ಮಾಡಿಕೊಳ್ಳುವುದು, ಬೇರೆಯದರಲ್ಲಿ ಮಾಡಿಕೊಳ್ಳದಿರುವುದು, ಚಕ್ರವರ್ತೀ ರಾಜನನ್ನು ಸಮಸ್ತ ರಾಜ್ಯದ ಅಧಿಕಾರದಿಂದ ದೂರೀಕರಿಸಿ, ಒಂದು ಚಿಕ್ಕ ಗುಡಿಸಲಿನ ಸ್ವಾಮಿಯೆಂದು ಭಾವಿಸುವಂತಹ ಸಂಗತಿಯಾಗಿರುತ್ತದೆ. ಇದೆಷ್ಟು ದೊಡ್ಡ ಅಪಮಾನವಾಗಿರುತ್ತೆ? ಹಾಗೆಯೇ ನೀವು ಪರಮೇಶ್ವರನಿಗೂ ಅಪಮಾನ ಮಾಡುತ್ತೀರಿ. ವ್ಯಾಪಕನೆಂದು ಅಂಗೀಕರಿಸುತ್ತೀರಿ – ಎಂದ ಮೇಲೆ ತೋಟದಿಂದ ಹೂವು–ಎಲೆಗಳನ್ನು ಕಿತ್ತು ತಂದು ಏರಿಸುತ್ತೀರಿ ಏಕೆ? ಚಂದನವನ್ನು ತೇಯ್ದು ಹಚ್ಚುತ್ತೀರಿ ಏಕೆ? ಧೂಪವನ್ನು ಹೊತ್ತಿಸಿ ಅರ್ಪಿಸುತ್ತೀರಿ ಏಕೆ? ಘಂಟೆ, ಜಾಗಟೆ, ಮೃದಂಗ ಮೊದಲಾದುವನ್ನು ಕೋಲಿನಿಂದ ಬಡೆಯುತ್ತೀರಿ–ಬಾರಿಸುತ್ತೀರಿ ಏಕೆ? ನಿಮ್ಮ ಕೈಗಳಲ್ಲಿಯೂ ಇದ್ದಾನೆ; ಕೈ ಮುಗಿಯುತ್ತೀರಿ ಏಕೆ? ತಲೆಯಲ್ಲಿದ್ದಾನೆ; ತಲೆ ಬಾಗಿಸುತ್ತೀರಿ ಏಕೆ? ಅನ್ನ, ನೀರು–ಮೊದಲಾದುದರಲ್ಲಿದ್ದಾನೆ; ನೈವೇದ್ಯವನ್ನು ಅರ್ಪಿಸುತ್ತೀರಿ ಏಕೆ? ನೀರಿನಲ್ಲಿದ್ದಾನೆ; ಸ್ನಾನಮಾಡಿಸುತ್ತೀರಿ ಏಕೆ? ಆ ಪದಾರ್ಥಗಳಲ್ಲೆಲ್ಲಾ ಪರಮಾತ್ಮನು ವ್ಯಾಪಕನಾಗಿದ್ದಾನೆ. ಮತ್ತು ನೀವು ವ್ಯಾಪಕನನ್ನು ಪೂಜಿಸುತ್ತಿರೋ ಅಥವಾ ವ್ಯಾಪ್ಯವನ್ನೋ? ವ್ಯಾಪಕನನ್ನು ಪೂಜಿಸುತ್ತೀರಿಯಾದರೆ ಶಿಲೆ, ಮರ ಮೊದಲಾದುದರ ಮೇಲೆ

---

೬೩. ಇದು, ಮೂರ್ತಿ ಪೂಜಕರು ಉಪಯೋಗಿಸುವ, ಅವರು ತಿಳಿದಿರುವಂತೆ ಬ್ರಹ್ಮಾಸ್ತ್ರ.

ಚಂದನ, ಪುಷ್ಪ ಮೊದಲಾದುವನ್ನು ಏರಿಸುತ್ತೀರಿ ಏಕೆ? ಮತ್ತು ವ್ಯಾಪ್ಯವನ್ನು ಪೂಜಿಸುತ್ತೀರಿಯಾದರೆ, 'ನಾವು ಪರಮೇಶ್ವರನ ಪೂಜೆಯನ್ನು ಮಾಡುತ್ತೇವೆ' - ಎಂದು ಅನೃತವನ್ನು ಏಕೆ ಹೇಳುತ್ತೀರಿ? 'ನಾವು ಕಲ್ಲು ಮೊದಲಾದುವುಗಳ ಪೂಜಾರಿಗಳಾಗಿದ್ದೇವೆ'- ಎಂದು ಸತ್ಯವನ್ನೇತಕ್ಕೆ ಹೇಳುವುದಿಲ್ಲ?

'ಭಾವ ' ಸತ್ಯವೋ ಅಥವಾ ಅಸತ್ಯವೋ-ಎಂಬುದನ್ನು ಈಗ ಹೇಳಿರಿ. ಸತ್ಯ-ಎನ್ನುವಿರಾದರೆ, ನಿಮ್ಮ ಭಾವಕ್ಕೆ ಅಧೀನನಾಗಿ ಪರಮೇಶ್ವರನು ಬದ್ಧನಾಗಿ ಹೋಗುವನು. ಮತ್ತು ನೀವು ಮಣ್ಣಿನಲ್ಲಿ ಚಿನ್ನ-ಬೆಳ್ಳಿ ಮೊದಲಾದುದರ, ಕಲ್ಲಿನಲ್ಲಿ ವಜ್ರ ಪಚ್ಚೆ ಮೊದಲಾದುದರ, ಸಮುದ್ರದ ನೊರೆಯಲ್ಲಿ ಮುತ್ತಿನ, ನೀರಿನಲ್ಲಿ ತುಪ್ಪ, ಹಾಲು, ಮೊಸರು-ಮೊದಲಾದುದರ ಮತ್ತು ಧೂಳಿನಲ್ಲಿ ಹಿಟ್ಟು, ಸಕ್ಕರೆ ಮೊದಲಾದುದರ ಭಾವನೆಯನ್ನು ಮಾಡಿಕೊಂಡು, ಅವುಗಳನ್ನು ಹಾಗೆಯೇ ಮಾರ್ಪಡಿಸಿಕೊಳ್ಳುವುದಿಲ್ಲವೇಕೆ? ನೀವು ದುಃಖದ ಭಾವನೆಯನ್ನು ಎಂದಿಗೂ ಮಾಡಿಕೊಳ್ಳುವುದಿಲ್ಲ; ಅದೇಕೆ ಉಂಟಾಗುತ್ತದೆ? ಮತ್ತು ಸುಖದ ಭಾವನೆಯನ್ನು ಯಾವಾಗಲೂ ಮಾಡಿಕೊಳ್ಳುತ್ತಾ ಇರುತ್ತೀರಿ; ಅದು ಏತಕ್ಕೆ ಪ್ರಾಪ್ತವಾಗುವುದಿಲ್ಲ? ಕುರುಡನಾದ ಮಾನವನು ಕಣ್ಣಿನ ಭಾವನೆಯನ್ನು ಮಾಡಿಕೊಂಡು, ನೋಡುವುದಿಲ್ಲವೇಕೆ? ಸಾಯವ ಭಾವನೆಯನ್ನು ಮಾಡಿಕೊಳ್ಳುವುದಿಲ್ಲ; ಸತ್ತು ಹೋಗುತ್ತೀರಿ ಏಕೆ? ಆದುದರಿಂದ ನಿಮ್ಮ ಭಾವನೆ ಸತ್ಯವಾದುದಲ್ಲ. ಏಕೆಂದರೆ, ಯಾವುದು ಹೇಗಿದೆಯೋ, ಅದನ್ನು ಹಾಗೆಯೇ ಗ್ರಹಿಸುವುದನ್ನು ಭಾವನೆಯೆನ್ನುತ್ತಾರೆ. ಉದಾಹರಣೆಗೆ, ಬೆಂಕಿಯಲ್ಲಿ ಬೆಂಕಿಯನ್ನೇ ತಿಳಿಯುವುದು, ಜಲದಲ್ಲಿ ಜಲವನ್ನೇ ತಿಳಿಯುವುದು ಭಾವನೆ; ಮತ್ತು ಜಲದಲ್ಲಿ ಅಗ್ನಿಯನ್ನು, ಅಗ್ನಿಯಲ್ಲಿ ಜಲವನ್ನು ತಿಳಿಯುವುದು ಅಭಾವನೆಯಾಗಿರುತ್ತದೆ. ಏಕೆಂದರೆ, **ಯಾವುದು ಹೇಗಿದೆಯೋ, ಅದನ್ನು ಹಾಗೆಯೇ ತಿಳಿಯುವುದು ಜ್ಞಾನ ಮತ್ತು ಬೇರೆ ವಿಧದಲ್ಲಿ ತಿಳಿಯುವುದು ಅಜ್ಞಾನವಾಗಿರುತ್ತದೆ**. ಆದುದರಿಂದ ನೀವು ಅಭಾವನೆಯನ್ನು ಭಾವನೆಯೆಂದೂ ಮತ್ತು ಭಾವನೆಯನ್ನು ಅಭಾವನೆಯೆಂದೂ ಹೇಳುತ್ತೀರಿ.

**ಪ್ರಶ್ನೆ:-** ಮಹಾಶಯರೇ! ಎಲ್ಲಿಯವರೆಗೆ ವೇದಮಂತ್ರಗಳಿಂದ ಆವಾಹನೆ ಮಾಡುವುದಿಲ್ಲವೋ, ಅವರೆಗೆ ದೇವತೆಯು ಬರುವುದಿಲ್ಲ. ಮತ್ತು ಆವಾಹನೆ ಮಾಡುವುದರಿಂದ ಕೂಡಲೇ ಬರುತ್ತಾನೆ ಮತ್ತು ವಿಸರ್ಜನೆ ಮಾಡುವುದರಿಂದ ಹೊರಟುಹೋಗುತ್ತಾನೆ.

**ಉತ್ತರ:-** ಮಂತ್ರವನ್ನುಚ್ಚರಿಸಿ ಆವಾಹನೆ ಮಾಡುವುದರಿಂದ ದೇವತೆ ಬಂದು ಬಿಡುವುದಾದರೆ, ಪ್ರತಿಮೆ ಚೇತನವಾಗಿ ಹೋಗುವುದಿಲ್ಲವೇಕೆ? ಮತ್ತು ವಿಸರ್ಜನೆ ಮಾಡುವುದಿಲ್ಲದರಿಂದ ಹೊರಟುಹೋಗುವುದಿಲ್ಲವೇಕೆ? ಮತ್ತು ಅವನು ಎಲ್ಲಿಂದ ಬರುತ್ತಾನೆ ಮತ್ತು ಎಲ್ಲಿಗೆ ಹೋಗುತ್ತಾನೆ? ಅಂಧರೇ! ಆಲಿಸಿರಿ. ಪೂರ್ಣನಾದ ಪರಮಾತ್ಮನು ಬರುವುದೂ ಇಲ್ಲ; ಮತ್ತು ಹೋಗುವುದೂ ಇಲ್ಲ. ನೀವು ಮಂತ್ರಬಲದಿಂದ ಪರಮೇಶ್ವರನನ್ನು ಕರೆಯಿಸಿಕೊಳ್ಳುವಿರಾದರೆ, ಆ ಮಂತ್ರಗಳಿಂದಲೇ ಮೃತನಾದ ತಮ್ಮ ಪುತ್ರನ ಶರೀರದಲ್ಲಿ ಜೀವನನ್ನೇತಕ್ಕೆ ಬರಮಾಡಿಕೊಳ್ಳುವುದಿಲ್ಲ? ಮತ್ತು ಶತ್ರುವಿನ ಶರೀರದಲ್ಲಿಂದ ಜೀವಾತ್ಮನನ್ನು ವಿಸರ್ಜನೆಮಾಡಿ ಕೊಲ್ಲಲಾರಿರೇತಕ್ಕೆ? ಕೇಳಿರಿ ಸೋದರರೇ! ಮುಗ್ಧ ಜನರೇ! ಈ ಪೋಪರುಗಳು ನಿಮ್ಮನ್ನು ವಂಚಿಸಿ, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ವೇದಗಳಲ್ಲಿ ಶಿಲೆ-ಮೊದಲಾದುದರ ಪ್ರತಿಮೆಗಳ ಪೂಜೆಯನ್ನೂ ಮತ್ತು ಪರಮೇಶವರನ ಆವಾಹನ-ವಿಸರ್ಜನಮಾಡುವುದನ್ನೂ ಸೂಚಿಸುವ ಒಂದು ಅಕ್ಷರವೂ ಕೂಡ ಇಲ್ಲ.

**ಪ್ರಶ್ನೆ:-** **ಪ್ರಾಣಾ ಇಹಾಗಚ್ಛಂತು ಸುಖಂ ಚಿರಂ ತಿಷ್ಠಂತು ಸ್ವಾಹಾ ॥**

**ಆತ್ಮೇಹಾಗಚ್ಛತು ಸುಖಂ ಚಿರಂ ತಿಷ್ಠತು ಸ್ವಾಹಾ ॥**

**ಇಂದ್ರಿಯಾಣೀಹಾಗಚ್ಛಂತು ಸುಖಂ ಚಿರಂ ತಿಷ್ಠಂತು ಸ್ವಾಹಾ**[೬೪] ॥

ಈ ಮೊದಲಾದ ವೇದಮಂತ್ರಗಳಿವೆ. ಇಲ್ಲವೆಂದೇಕೆ ಹೇಳುತ್ತೀರಿ?

**ಉತ್ತರ :-** ಅಯ್ಯೋ ಸೋದರ! ಸ್ವಲ್ಪವಾದರೂ ಬುದ್ಧಿಯನ್ನು ನಿಮ್ಮ ಹಿತಕ್ಕಾಗಿ ಬಳಸಿಕೊಳ್ಳುವುದಿಲ್ಲವೇಕೆ? ಇವೆಲ್ಲವೂ ವಾಮಮಾರ್ಗಿಗಳ ಕಪೋಲಕಲ್ಪಿತವಾದ, ವೇದವಿರುದ್ಧವಾದ ತಂತ್ರ ಗ್ರಂಥಗಳ ಪೋಪರಚಿತ ಪಂಕ್ತಿಗಳಾಗಿವೆ; ವೇದವಚನಗಳಲ್ಲ.

---

೬೪. "ಪ್ರತಿಷ್ಠಾ ಮಯೂಖ" ಮೊದಲಾದ ಗ್ರಂಥಗಳು. -ಯು.ಮೀ.

**ಪ್ರಶ್ನೆ** :– ತಂತ್ರ ಮಿಥ್ಯೆ ಏನು?

**ಉತ್ತರ:**– ಹೌದು, ಸರ್ವಥಾ ಮಿಥ್ಯೆಯೇ. ಹೇಗೆ ಶಿಲೆ–ಮೊದಲಾದುದರ ಪ್ರತಿಮೆಗಳಿಗೆ ಸಂಬಂಧಿಸಿದ, ಆವಾಹನ, ಪ್ರಾಣಪ್ರತಿಷ್ಠೆ–ಮೊದಲಾದುದರ ಬಗೆಗೆ ಒಂದು ಮಂತ್ರವೂ ಕೂಡ ವೇದಗಳಲ್ಲಿಲ್ಲವೋ, ಹಾಗೆ **"ಸ್ನಾನಂ ಸಮರ್ಪಯಾಮಿ"**.– ಈ ಮೊದಲಾದ ವಚನಗಳೂ ಕೂಡ ಇಲ್ಲ. ಎಂದರೆ, **"ಪಾಷಾಣಾದಿಮೂರ್ತಿಂ ರಚಯಿತ್ವಾ ಮಂದಿರೇಷು ಸಂಸ್ಥಾಪ್ಯ ಗಂಧಾದಿಭಿರರ್ಚಯೇತ್"** ಎಂದರೆ, ಶಿಲಾಪ್ರತಿಮೆ ರಚಿಸಿ, ದೇವಾಲಯಗಳಲ್ಲಿ ಸ್ಥಾಪಿಸಿ, ಚಂದನ–ಅಕ್ಷತೆ ಮೊದಲಾದುವುಗಳಿಂದ ಅರ್ಚಿಸಬೇಕು."–ಎಂದಿಷ್ಟೂ ಕೂಡ ಹೇಳಿಲ್ಲ; ಈ ರೀತಿ ಲೇಶಮಾತ್ರವೂ ಪ್ರಮಾಣವಿಲ್ಲ.

**ಪ್ರಶ್ನೆ:**– ವೇದಗಳಲ್ಲಿ ವಿಧಿಯಿಲ್ಲದಿದ್ದರೆ, ಖಂಡನವೂ ಕೂಡ ಇಲ್ಲ. ಮತ್ತು ಖಂಡನವಿರುದಾದರೆ, **"ಪ್ರಾಪ್ತೌ ಸತ್ಯಾಂ ನಿಷೇಧಃ"**– ಪ್ರತಿಮಾರ್ಚನೆಯಿದ್ದರೆ ಮಾತ್ರ ಆ ವಿಧಾನದ ಖಂಡನ ಸಿದ್ಧಿಸುವುದು.

**ಉತ್ತರ:**– ವಿಧಿಯಂತೂ ಇಲ್ಲ. ಆದರೆ, ಪರಮೇಶ್ವರನಿಗೆ ಪ್ರತಿಯಾಗಿ, ಬೇರೆ ಯಾವದೇ ಪದಾರ್ಥವನ್ನೂ ಪೂಜನೀಯವೆಂದು ಒಪ್ಪಬಾರದು–ಎಂದು, ಸರ್ವಥಾ ನಿಷೇಧವೇ ಮಾಡಲ್ಪಟ್ಟಿದೆ. ಅಪೂರ್ವವಿಧಿ (ಖಂಡನ ಮಾಡದ ಮಂಡನವಿಧಿ)ಯಿರುವುದಿಲ್ಲವೇನು? ಆಲಿಸಿರಿ. ಈ ವಿಧಿಯಿದೆ:–

**ಅಂಧಂ ತಮಃ ಪ್ರವಿಶಂತಿ ಯೇऽ ಸಂಭೂತಿಮುಪಾಸತೇ ।**

**ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಗ್ಂ ರತಾಃ ॥ ೧ ॥** (ಯಜು:– ೪೦.೯)

**ನ ತಸ್ಯ ಪ್ರತಿಮಾ ಅಸ್ತಿ ॥ ೨ ॥** (ಯಜು :– ೩೨.೩)

**ಯದ್ವಾಚಾ ನಾಭ್ಯುದಿತಂ ಯೇನವಾಗಭ್ಯುದ್ಯತೇ ।**

**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೩ ॥**

**ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್।**

**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೪ ॥**

**ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯಂತಿ।**

**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೫ ॥**

**ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಮ್ ।**

**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೬ ॥**

**ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ।**

**ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೭ ॥** (ಕೇನೋಪನಿಷತ್ತು:– ೧.೪–೮)

ಯಾರು ಅಸಂಭೂತಿಯನ್ನು, ಅಂದರೆ, ಅನುತ್ಪನ್ನವೂ ಅನಾದಿಯೂ ಆದ, (ಉಪಾದಾನ) ಕಾರಣವಾದ ಪ್ರಕೃತಿಯನ್ನು ಬ್ರಹ್ಮಕ್ಕೆ ಪ್ರತಿಯಾಗಿ ಉಪಾಸನೆ ಮಾಡುತ್ತಾರೋ, ಅವರು ಅಂಧಕಾರದಲ್ಲಿ, ಎಂದರೆ ಅಜ್ಞಾನದಲ್ಲಿ ಮತ್ತು, ದುಃಖ ಸಾಗರದಲ್ಲಿ ಮುಳುಗುತ್ತಾರೆ. ಮತ್ತು, ಯಾವುದು ಕಾರಣದಿಂದ ಉತ್ಪನ್ನವಾದ, ಕಾರ್ಯರೂಪವಾದ ಪೃಥಿವಿಯೇ ಮೊದಲಾದ ಭೂತಗಳಿಂದ ಆದ ಶಿಲೆ ಹಾಗೂ ವೃಕ್ಷ ಮೊದಲಾದ ಪ್ರಕೃತಿಯ ಅಂಶಗಳಿವೆಯೋ,[೬೫] ಅವುಗಳಿಂದ ರಚಿತವಾದ ಪ್ರತಿಮೆಗಳ

೬೫. ಅವುಗಳಿಂದ ರಚಿತವಾದ ಪ್ರತಿಮೆಗಳ, ಅಥವಾ ಸ್ವತಃ ವೃಕ್ಷ ಮೊದಲಾದುವುಗಳ

ಅಥವಾ ಸ್ವತಃ ವೃಕ್ಷ ಮೊದಲಾದವುಗಳ, ಅದೇ ರೀತಿ ಮಾನವರೇ ಮೊದಲಾದವರ ಶರೀರಗಳ ಉಪಾಸನೆಯನ್ನು ಯಾರು ಬ್ರಹ್ಮ ಕ್ಕೆ ಪ್ರತಿಯಾಗಿ ಮಾಡುತ್ತಾರೋ, ಅವರು ಆ ಅಂಧಕಾರಕ್ಕಿಂತಲೂ ಅಧಿಕವಾದ ಅಂಧಕಾರದಲ್ಲಿ ಮುಳುಗುವರು; ಎಂದರೆ, ಮಹಾಮೂರ್ಖರಾಗಿ ವಿಕರಾಳವೂ, ಘೋರವೂ ಆದ ದುಃಖರೂಪ ನರಕದಲ್ಲಿ ಬಿದ್ದು, ಮಹಾಕ್ಲೇಶವನ್ನು ಅನುಭವಿಸುತ್ತಾರೆ. (೧)

ಯಾವನು ಸಮಸ್ತ ಜಗತ್ತಿನಲ್ಲಿಯೂ ವ್ಯಾಪಕನಾಗಿದ್ದಾನೋ, ಆ ನಿರಾಕಾರನಾದ ಪರಮಾತ್ಮನ ಪ್ರತಿಮೆ, ಪರಿಮಾಣ, ಅವನಂತಹ ವಸ್ತು ಅಥವಾ ಮೂರ್ತಿಯಿಲ್ಲ.[೬೬] (೨)

ಯಾವುದು, "ಇದು ನೀರು; ತೆಗೆದುಕೊಳ್ಳಿರಿ".– ಎನ್ನುವಂತೆ, ವಾಣಿಯ "ಇದಾಗಿರುವಿಕೆ"ಯ ವಿಷಯವಲ್ಲವೋ, (ಎಂದರೆ ಕೇವಲ ಶಬ್ದದಿಂದ ಸೂಚಿತವಾದುದು) ಮತ್ತು ಯಾವುದರ ಧಾರಣದಿಂದ ಮತ್ತು ಇರುವಿಕೆಯಿಂದ ವಾಣಿಯ ಪ್ರವೃತ್ತಿ ಯಾಗುತ್ತದೋ, ಅದನ್ನೇ ಬ್ರಹ್ಮವೆಂದು ತಿಳಿದುಕೋ ಮತ್ತು ಉಪಾಸನೆಮಾಡು ಮತ್ತು ಅದರಿಂದ ಯಾವುದು ಬೇರೆಯಾಗಿದೆಯೋ, ಅದು ಉಪಾಸನೀಯವಲ್ಲ. (೩)

ಯಾವುದು 'ಇಯತ್ತಾ' ಎಂದರೆ 'ಇಷ್ಟೇ' ಎಂಬುದಾಗಿ ಮನನಕ್ಕೆ ಒಳಪಡುವುದಿಲ್ಲವೋ, ಯಾವುದು ಮನಸ್ಸನ್ನು ತಿಳಿದುಕೊಳ್ಳುತ್ತದೋ, ಅದೇ ಬ್ರಹ್ಮವನ್ನು ನೀನು ತಿಳಿದುಕೋ ಮತ್ತು ಅದರ ಉಪಾಸನೆಯನ್ನೇ ಮಾಡು. ಅದರಿಂದ ಬೇರೆಯಾದ ಯಾವ ಜೀವನಿದ್ದಾನೋ ಮತ್ತು ಅಂತಃಕರಣವಿದೆಯೋ, ಅದರ ಉಪಾಸನೆಯನ್ನು ಬ್ರಹ್ಮಕ್ಕೆ ಪ್ರತಿಯಾಗಿ ಮಾಡಬೇಡ. (೪)

ಯಾವುದು ಕಣ್ಣಿಗೆ ಕಾಣಿಸುವುದಿಲ್ಲವೋ ಮತ್ತು ಯಾವುದರಿಂದ ಕಣ್ಣುಗಳೆಲ್ಲವೂ ನೋಡುತ್ತವೋ, ಅದನ್ನೇ ನೀನು ಬ್ರಹ್ಮವೆಂದು ತಿಳಿದುಕೋ ಮತ್ತು ಅದರ ಉಪಾಸನೆಯನ್ನೇ ಮಾಡು ಹಾಗೂ ಅದರಿಂದ ಬೇರೆಯಾದ ಯಾವ ಸೂರ್ಯ, ವಿದ್ಯುತ್ತು ಮತ್ತು ಅಗ್ನಿಯೇ ಮೊದಲಾದ ಜಡಪದಾರ್ಥಗಳಿವೆಯೋ, ಅವುಗಳ ಉಪಾಸನೆಯನ್ನು ಮಾಡಬೇಡ. (೫)

ಯಾವುದು ಕಿವಿಯಿಂದ ಆಲಿಸಲ್ಪಡುವುದಿಲ್ಲವೋ, ಮತ್ತು ಯಾವುದರಿಂದ ಕಿವಿಯು ಆಲಿಸುತ್ತದೋ, ಅದನ್ನೇ ನೀನು ಬ್ರಹ್ಮವೆಂದು ತಿಳಿದುಕೋ ಮತ್ತು ಅದರ ಉಪಾಸನೆಯನ್ನೇ ಮಾಡು. ಮತ್ತು ಅದರಿಂದ ಬೇರೆಯಾದ ಶಬ್ದ-ಮೊದಲಾದುವುಗಳ ಉಪಾಸನೆಯನ್ನು ಅದಕ್ಕೆ ಪ್ರತಿಯಾಗಿ ಮಾಡಬೇಡ.(೬)

ಯಾವುದು ಪ್ರಾಣಗಳಿಂದ ಚಲಾಯಮಾನವಾಗುವುದಿಲ್ಲವೋ, ಯಾವುದರಿಂದ ಪ್ರಾಣವು ಚಲನೆಯನ್ನು ಹೊಂದುತ್ತದೋ, ಅದೇ ಬ್ರಹ್ಮವನ್ನು ನೀನು ತಿಳಿದುಕೋ ಮತ್ತು ಅದರ ಉಪಾಸನೆಯನ್ನೇ ಮಾಡು. ಅದರಿಂದ ಬೇರೆಯಾದ ಈ ಯಾವ ವಾಯುವಿದೆಯೋ, ಅದರ ಉಪಾಸನೆಯನ್ನು ಮಾಡಬೇಡ. (೭)

ಈ ಮೊದಲಾದ ಬಹಳ ನಿಷೇಧಗಳಿವೆ. ಪ್ರಾಪ್ತವಾದುದರ ಮತ್ತು ಅಪ್ರಾಪ್ತವಾದದರ ನಿಷೇಧವೂ ಕೂಡ ಆಗುತ್ತದೆ. 'ಪ್ರಾಪ್ತ' ವಾದುದರ ನಿಷೇಧ, ಯಾವನಾದರೂ ಎಲ್ಲಿಯಾದರೂ ಕುಳಿತಿದ್ದರೆ, ಅವನನ್ನು ಅಲ್ಲಿಂದ ಎಬ್ಬಿಸಿಬಿಡುವುದರ ಹಾಗೆ ಆಗುತ್ತದೆ; 'ಮಗನೇ! ನೀನು ಎಂದಿಗೂ ಕಳ್ಳತನ ಮಾಡಬಾರದು. ಭಾವಿಯಲ್ಲಿ ಬೀಳಬೇಡ; ದುಷ್ಟರ ಸಂಗಮಾಡಬೇಡ. ವಿದ್ಯಾಹೀನನಾಗಿರಬೇಡ".– ಎಂದು ಮೊದಲಾಗಿ, ಅಪ್ರಾಪ್ತವಾದುದರ ನಿಷೇಧವೂ ಆಗಬಲ್ಲದು. ಹೀಗೆ ಮನುಷ್ಯರ ಜ್ಞಾನದಲ್ಲಿ ಪ್ರಾಪ್ತವಾದುದರ ನಿಷೇಧವನ್ನು ಮಾಡಲಾಗಿದೆ. ಆದುದರಿಂದ, ಶಿಲೆ-ಮೊದಲಾದುದರ ಪ್ರತಿಮೆಗಳ ಪೂಜನ ಅತ್ಯಂತ ನಿಷಿದ್ಧವಾಗಿದೆ.

---

೬೬. ಒಂದು ಸಲ [ಸುಮಾರು ೮೦ ವರ್ಷಗಳ ಹಿಂದೆ] ಮುಂಬೈಯಲ್ಲಿ ಆರ್ಯಸಮಾಜೀ ವಿದ್ವಾಂಸರ, ಮತ್ತು ಪೌರಾಣಿಕ ವಿದ್ವಾಂಸರ ನಡುವೆ ಮೂರ್ತಿಪೂಜೆಯ ವಿಷಯದಲ್ಲಿ ಶಾಸ್ತ್ರಾರ್ಥ ನಡೆಯಿತು. ಪೌರಾಣಿಕ ವಿದ್ವಾಂಸರು – "ನ ತಸ್ಯ ಪ್ರತಿಮಾ ಅಸ್ತಿ", ಎಂಬ ಯಜುರ್ವೇದ ಮಂತ್ರವನ್ನು ಧೂರ್ತತನದಿಂದ, "ನತಸ್ಯ ಪ್ರತಿಮಾ ಅಸ್ತಿ", ಎಂದು ಉಚ್ಚರಿಸಿ, 'ಭಕ್ತರ ಪ್ರತಿ ಸದಾ ನಮ್ರೀಭೂತನಾದ ಪರಮಾತ್ಮನ ಪ್ರತಿಮೆ ಇದೆ' ಎಂದು ವಾದ ಮಾಡಲಾರಂಭಿಸಿದರು. ಆರ್ಯಸಮಾಜೀ ವಿದ್ವಾಂಸರು– 'ನ ತಸ್ಯ' ಎಂಬ [ನಿಷೇಧಾರ್ಥಕ] ಎರಡು ಶಬ್ದಗಳನ್ನು ನತಸ್ಯ ಎಂಬುದಾಗಿ ಒಂದೇ ಶಬ್ದಮಾಡಿ ಅರ್ಥ ಮಾಡಿದ ಪೌರಾಣಿಕರ ಬಗ್ಗೆ ಪ್ರತಿಭಟನೆ ಸೂಚಿಸಿದರು. ಕೊನೆಗೆ ಭಾರತದ ನಾಲ್ಕೂ ದಿಕ್ಕುಗಳ [ಪೌರಾಣಿಕರೇ ಆದ] ವೇದ ಪಾಠಿಗಳನ್ನು ಕರೆಯಿಸಿ, ಅವರಿಂದ ಉಕ್ತ ಮಂತ್ರದ ಪದ ಪಾಠ ಹೇಳಿಸಿದಾಗ, ಅವರು–

"ನನನ, ತಸ್ಯ, ತಸ್ಯ ತಸ್ಯ; ನ ತಸ್ಯ; ನತಸ್ಯ; ನತಸ್ಯ; ನತಸ್ಯ; ಎಂದು ಮೊದಲಾಗಿ ಪಾಠ ಮಾಡತೊಡಗಿದರು.

**ಪ್ರಶ್ನೆ:–** ಪ್ರತಿಮಾಪೂಜನದಲ್ಲಿ ಪುಣ್ಯವಿಲ್ಲವಾದರೆ, ಪಾಪವೂ ಇಲ್ಲವಲ್ಲವೇ?

**ಉತ್ತರ:–** ಎರಡೇ ವಿಧದ ಕರ್ಮಗಳಿರುತ್ತವೆ:– ವಿಹಿತವಾದುವು–ವೇದದಲ್ಲಿ **'ಮಾಡಬೇಕಾದುದು'** ಎಂದು ಪ್ರತಿಪಾದಿತವಾಗಿರುವ ಸತ್ಯಭಾಷಣ–ಮೊದಲಾದುವು. ಎರಡನೆಯದು ನಿಷಿದ್ಧವಾದುವು–**"ಮಾಡಬಾರದು"**–ಎಂದು ವೇದದಲ್ಲಿ ನಿಷೇಧಿತವಾಗಿರುವ ಮಿಥ್ಯಾಭಾಷಣ ಮೊದಲಾದುವು. ಹೇಗೆ ವಿಹಿತವಾದುದರ ಅನುಷ್ಠಾನ ಮಾಡುವುದು ಧರ್ಮವೋ, ಅದನ್ನು ಮಾಡದಿರುವುದು ಅಧರ್ಮವೋ ಹಾಗೆಯೇ ನಿಷಿದ್ಧ ಕರ್ಮವನ್ನು ಮಾಡುವುದು ಅಧರ್ಮ ಮತ್ತು ಮಾಡದಿರುವುದು ಧರ್ಮವಾಗಿರುತ್ತದೆ. ವೇದಗಳಿಂದ ನಿಷಿದ್ಧವಾದ ಪ್ರತಿಮಾಪೂಜನ–ಮೊದಲಾದ ಕರ್ಮಗಳನ್ನು ನೀವು ಮಾಡುತ್ತಿರುವಾಗ, ವೇದವಿರೋಧೀ ಅನುಚಿತ ಕರ್ಮಕರ್ತೃಗಳಲ್ಲವೇತಕ್ಕೆ?

**ಪ್ರಶ್ನೆ:–** ನೋಡಿರಿ, ವೇದಗಳು ಅನಾದಿಯಾಗಿವೆ. ಆ ಕಾಲದಲ್ಲಿ ಮೂರ್ತಿಗಳ ಕಾರ್ಯವಾದರೂ ಏನಿದ್ದಿತು? ಏಕೆಂದರೆ, ಪೂರ್ವದಲ್ಲಿಯಂತೂ ದೇವತೆಗಳು ಪ್ರತ್ಯಕ್ಷರಾಗಿದ್ದರು. ಈ ಕ್ರಮವಾದರೋ ಹಿಂದಿನಿಂದ, ತಂತ್ರಗಳಿಂದ ಮತ್ತು ಪುರಾಣಗಳಿಂದ ಹೊರಟಿದೆ.[೬೭] ಮಾನವರ ಜ್ಞಾನ ಮತ್ತು ಸಾಮರ್ಥ್ಯ ನ್ಯೂನವಾಗಿ ಹೋದುದರಿಂದ, ಪರಮೇಶ್ವರನನ್ನು ಧ್ಯಾನದಲ್ಲಿ ತರಲಾರದೇ ಹೋದರು. ಆದರೆ, ಪ್ರತಿಮೆಯ ಧ್ಯಾನವನ್ನೇನೋ ಮಾಡಬಲ್ಲರು. ಈ ಕಾರಣಗಳಿಂದ, ಅಜ್ಞಾನಿಗಳಿಗಾಗಿ ಪ್ರತಿಮಾಪೂಜನವಿದೆ. ಏಕೆಂದರೆ, ಮೆಟ್ಟಲು–ಮೆಟ್ಟಲಾಗಿ ಏರಿದರೆ, ಮಹಡಿಯನ್ನು ಸೇರಬಹುದು. ಮೊದಲನೆಯ ಮೆಟ್ಟಿಲನ್ನು ಬಿಟ್ಟು ಮೇಲಕ್ಕೇರಬಯಸಿದರೆ, ಮಾನವನು ಅಲ್ಲಿ ಹೋಗಲಾರನು. ಆದುದರಿಂದ ಪ್ರತಿಮೆ ಮೊದಲನೆಯ ಮೆಟ್ಟಲಾಗಿದೆ. ಇದನ್ನು ಪೂಜಿಸುತ್ತಾ–ಪೂಜಿಸುತ್ತಾ ಯಾವಾಗ ಜ್ಞಾನ ಉಂಟಾಗುವುದೋ ಮತ್ತು ಅಂತಃಕರಣ ಪವಿತ್ರವಾಗುವುದೋ, ಆಗ ಪರಮಾತ್ಮನ ಧ್ಯಾನವನ್ನು ಮಾಡಲು ಶಕ್ತನಾಗುವನು. ಹೇಗೆ ಲಕ್ಷ್ಯವೇಧವನ್ನು ಮಾಡುವವನು ಸ್ಥೂಲವಾದ ಲಕ್ಷ್ಯದಲ್ಲಿ ಬಾಣವನ್ನು, ಗುಂಡನ್ನು ಅಥವಾ ಕ್ಷಿಪಣಿ ಮೊದಲಾದುವನ್ನು ಪ್ರಯೋಗ ಮಾಡುತ್ತಾ–ಮಾಡುತ್ತಾ, ಆಮೇಲೆ ಸೂಕ್ಷ್ಮವಾದುದರಲ್ಲಿಯೂ ಗುರಿಯನ್ನು ಸಾಧಿಸಬಲ್ಲನೋ, ಹಾಗೆ ಸ್ಥೂಲವಾದ ಪ್ರತಿಮೆಯ ಪೂಜೆಯನ್ನು ಮಾಡುತ್ತಾ, ಮಾಡುತ್ತಾ, ಮತ್ತೆ ಸೂಕ್ಷ್ಮವಾದ ಬ್ರಹ್ಮವನ್ನೂ ಕೂಡ ಸಾಕ್ಷಾತ್ಕರಿಸಿಕೊಳ್ಳಬಲ್ಲನು. ಎಂದಿನವರೆಗೆ ನಿಜವಾದ ಪತಿಯನ್ನು ಪಡೆದುಕೊಳ್ಳುವುದಿಲ್ಲವೋ, ಅಂದಿನವರೆಗೆ ಹುಡುಗಿಯರು ಬೊಂಬೆಗಳೊಂದಿಗೆ ಆಟವಾಡುತ್ತಾರಲ್ಲವೇ? ಈ ಮೊದಲಾದ ದೃಷ್ಟಿಗಳಿಂದ ನೋಡಿದಾಗ ಪ್ರತಿಮಾಪೂಜನ ಮಾಡುವುದು ಕೆಟ್ಟ ಕಾರ್ಯವೆಂದು ತೋರುವುದಿಲ್ಲ.

**ಉತ್ತರ:–** ವೇದವಿಹಿತವಾದ (ಕರ್ಮ)ದಲ್ಲಿ ಧರ್ಮ ಮತ್ತು ವೇದವಿರುದ್ಧವಾದ ಆಚರಣದಲ್ಲಿ ಅಧರ್ಮವಿರುವಾಗ, ನಿಮ್ಮ ಹೇಳಿಕೆಯಿಂದಲೂ ಕೂಡ ಪ್ರತಿಮಾಪೂಜನವು ಅಧರ್ಮವೆಂದೇ ನಿರ್ಣಯವಾಯಿತು. ಯಾವ ಗ್ರಂಥಗಳು ವೇದಗಳಿಗೆ ವಿರುದ್ಧವಾಗಿವೆಯೋ, ಅವುಗಳನ್ನು ಪ್ರಮಾಣವೆಂದು ಗ್ರಹಿಸುವುದು ನಾಸ್ತಿಕನಾಗುವಂತೆಯೇ ಸರಿ. ಆಲಿಸಿರಿ:–

**ನಾಸ್ತಿಕೋ ವೇದನಿಂದಕಃ ॥ ೧ ॥** (ಮನು:– ೨.೧೧)

**ಯಾ ವೇದಬಾಹ್ಯಾಃ ಸ್ಮೃತಯೋ ಯಾಶ್ಚ ಕಾಶ್ಚ ಕುದೃಷ್ಟಯಃ ।**

**ಸರ್ವಾಸ್ತಾ ನಿಷ್ಫಲಾಃ ಪ್ರೇತ್ಯ ತಮೋನಿಷ್ಠಾ ಹಿ ತಾಃ ಸ್ಮೃತಾಃ ॥ ೨ ॥**

**ಉತ್ಪದ್ಯಂತೇ ಚ್ಯವಂತೇ ಚ ಯಾನ್ಯತೋಽನ್ಯಾನಿ ಕಾನಿಚಿತ್ ।**

**ತಾನ್ಯರ್ವಾಕ್ಕಾಲಿಕತಯಾ ನಿಷ್ಫಲಾನ್ಯನೃತಾನಿ ಚ ॥ ೩ ॥** (ಮನು:–೧೨.೯೫.೯೬)

ಯಾವನು ವೇದಗಳ ನಿಂದೆಯನ್ನು, ಎಂದರೆ ಅಪಮಾನವನ್ನು, ತ್ಯಾಗವನ್ನು, ಅದಕ್ಕೆ ವಿರುದ್ಧಾಚರಣವನ್ನು ಮಾಡುತ್ತಾನೋ, ಅವನು ನಾಸ್ತಿಕನೆನ್ನಿಸುತ್ತಾನೆ–ಎಂದು ಮನು ಹೇಳುತ್ತಾನೆ. (೧)

---

೬೭. ಈ ಮಾತನ್ನು ಪೌರಾಣಿಕ ಮೂರ್ತಿಪೂಜಕ ವಿದ್ವಾಂಸರೇ ಒಪ್ಪಿಕೊಂಡು, ಮೂರ್ತಿ ಪೂಜೆಯ ಸಮರ್ಥನೆಗೆ ಹೊರಡುತ್ತಾರೆ. ! ಇವರ ಯುಕ್ತಿಗಳು ಹೇಗಿದೆಯೆಂದರೆ,– ಕೆಸರಿನಲ್ಲಿ ಕಾಲು ಹೂತಿರುವ ಮನುಷ್ಯನು ಮೇಲೇಳಲು ಪ್ರಯತ್ನಿಸಿ, ಕೈಯನ್ನು ಕೆಸರಿನಲ್ಲಿ ಊರಿದಂತೆ ಇದೆ.

ಯಾವ ಗ್ರಂಥಗಳು ವೇದಬಾಹ್ಯವೂ, ಕುತ್ಸಿತರಾದ ಪುರುಷರಿಂದ ರಚಿತವಾದುವೂ, ಜಗತ್ತಿನ್ನು ದುಃಖಸಾಗರದಲ್ಲಿ ಮುಳುಗಿಸುವಂತಹವೂ ಆಗಿವೆಯೋ, ಅವೆಲ್ಲವೂ, ನಿಷ್ಫಲವೂ, ಅಸತ್ಯವೂ, ಅಂಧಕಾರರೂಪವೂ, ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ದುಃಖವನ್ನು ಕೊಡುವಂತಹುವೂ[೬೮] ಆಗಿರುತ್ತವೆ. (೨)

ಯಾವ ಈ ವೇದಗಳಿಗೆ ವಿರುದ್ಧರಾದ ಗ್ರಂಥಗಳು ಉತ್ಪನ್ನವಾಗುತ್ತವೋ, ಅವು ಆದುನಿಕವಾಗಿರುವ ಕಾರಣ ಶೀಘ್ರವೇ ನಾಶವಾಗಿ ಹೋಗುತ್ತವೆ. ಅವುಗಳನ್ನು ಅಂಗೀಕರಿಸುವುದು ನಿಷ್ಫಲ ಮತ್ತು ವೇದವಿರುದ್ಧವಾಗಿರುತ್ತದೆ.[೬೯] (೩)

ಇದೇ ರೀತಿ, ವಿರುವಿರುದ್ಧವಾದುದನ್ನು ಒಪ್ಪಬಾರದು; ಆದರೆ ವೇದಾನುಕೂಲವಾದುದನ್ನೇ ಆಚರಿಸುವುದು ಧರ್ಮವಾಗಿದೆಯೆಂದು ಬ್ರಹ್ಮನಿಂದ ಆರಂಭಿಸಿ ಜೈಮಿನಿ ಮಹರ್ಷಿಯವರೆಗಿನವರ ಅಭಿಪ್ರಾಯವಾಗಿದೆ. ಏಕೆ? ವೇದಗಳು ಸತ್ಯವಾದ ವಿಷಯಗಳ ಪ್ರತಿಪಾದಕವಾಗಿವೆ. ಇದಕ್ಕೆ ವಿರುದ್ಧವಾಗಿ ಎಷ್ಟು ತಂತ್ರಗಳು ಮತ್ತು ಪುರಾಣಗಳು ಇವೆಯೋ, ಅವು ವೇದವಿರುದ್ಧವಾಗಿರುವ ಕಾರಣ ಸುಳ್ಳಾಗಿವೆ ಮತ್ತು ವೇದಗಳಿಗೆ ವಿರುದ್ಧವಾಗಿ ಪ್ರಚಲಿತವಾಗಿರುವ ಅವುಗಳಲ್ಲಿ ಹೇಳಲ್ಪಟ್ಟಿರುವ ಪ್ರತಿಮಾ ಪೂಜನವೂ ಕೂಡ ಅಧರ್ಮರೂಪವೂ ಆಗಿದೆ. ಮಾನವರ ಜ್ಞಾನವು ಜಡದ ಪೂಜೆಯಿಂದ ವರ್ಧಿಸಲಾರದು; ಆದರೆ, ಏನೊಂದು ಸ್ವಲ್ಪ ಜ್ಞಾನವಿದೆಯೋ, ಅದೂ ಕೂಡ ನಾಶವಾಗಿ ಹೋಗುತ್ತದೆ. ಆದುದರಿಂದ, ಶಿಲೆ–ಮೊದಲಾದುವುಗಳಿಂದಲ್ಲ; ಜ್ಞಾನಿಗಳ ಸೇವೆ – ಸಂಗಗಳಿಂದ ಜ್ಞಾನ ಹೆಚ್ಚುತ್ತದೆ. ಯಾವನಾದರೂ, ಶಿಲೆ–ಮೊದಲಾದುವುಗಳ ಪ್ರತಿಮೆಯ ಪೂಜನದಿಂದ ಪರಮೇಶ್ವರನನ್ನು ಎಂದಿಗಾದರೂ ಧ್ಯಾನದಲ್ಲಿ ತರಬಲ್ಲನೇ? ಇಲ್ಲ, ಇಲ್ಲ. ಪ್ರತಿಮಾಪೂಜನ ಮೆಟ್ಟಲಲ್ಲ; ಆದರೆ ಯಾವುದರಲ್ಲಿ ಬಿದ್ದು ಮಾನವನು ಛಿನ್ನ– ಭಿನ್ನವಾಗಿ ಹೋಗುತ್ತಾನೋ, ಅಂತಹದೊಂದು ದೊಡ್ಡ ಕಂದಕವಾಗಿದೆ ಅದು. ಮತ್ತೆ ಆ ಕಂದಕದಿಂದ ಹೊರಬರಲಾರನು; ಆದರೆ, ಅದರಲ್ಲಿಯೇ ಮೃತನಾಗಿ ಹೋಗುತ್ತಾನೆ. ಅಹುದು, ಧಾರ್ಮಿಕರಾಗಿರುವ ಅಲ್ಪವಿದ್ಯರಾದವರಿಂದ ಆರಂಭಿಸಿ, ಪರಮ ವಿದ್ವಾಂಸರಾದ ಯೋಗಿಗಳ ಸಂಗದಿಂದ ಸದ್ವಿದ್ಯೆಯನ್ನು ಗ್ರಹಿಸುವುದು ಹಾಗೂ ಸತ್ಯ–ಭಾಷಣ–ಮೊದಲಾದುವು, ಮಹಡಿಯ ಮೇಲಕ್ಕೆ ಹೋಗಲು ಮೆಟ್ಟಲುಗಳಿರುವಂತೆ, ಪರಮೇಶ್ವರನ ಪ್ರಾಪ್ತಿಗೆ ಮೆಟ್ಟಲುಗಳಾಗಿರುತ್ತವೆ. ಆದರೆ, ಪ್ರತಿಮಾಪೂಜನ ಮಾಡುತ್ತಾ – ಮಾಡುತ್ತಾ ಯಾವನೊಬ್ಬನೂ ಜ್ಞಾನಿಯೇನೂ[೭೦] ಆಗಲಿಲ್ಲ; ಬದಲಾಗಿ ಎಲ್ಲಾ ಪ್ರತಿಮಾಪೂಜಕರೂ ಅಜ್ಞಾನಿಗಳಾಗಿಯೇ ಉಳಿದು, ಮಾನವಜನ್ಮವನ್ನು ವ್ಯರ್ಥವಾಗಿ ಕಳೆದುಕೊಂಡು, ಬಹುಜನರು ಮೃತರೇ ಆಗಿ ಹೋದರು. ಮತ್ತು ಈಗ ಯಾರು ಇದ್ದಾರೋ ಅಥವಾ ಮುಂದೆ ಆಗಲಿದ್ದಾರೋ, ಅವರೂ ಕೂಡ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಪ್ರಾಪ್ತಿಯೆಂಬ ಮಾನವಜನ್ಮದ ಫಲಗಳಿಗೆ ವಿಮುಖರಾಗಿ, ನಿರರ್ಥಕವಾಗಿ ನಾಶವಾಗಿ ಹೋಗುತ್ತಾರೆ. ಬ್ರಹ್ಮ ಪ್ರಾಪ್ತಿಯಲ್ಲಿ ಪ್ರತಿಮಾಪೂಜನ ಸ್ಥೂಲವಾದ ಲಕ್ಷ್ಯದಂತಿಲ್ಲ; ಆದರೆ ಧಾರ್ಮಿಕ ವಿದ್ವಾಂಸರ ಸಂಗವೂ ಮತ್ತು ಸೃಷ್ಟಿ ವಿದ್ಯೆಯೂ (ಸ್ಥೂಲ ಲಕ್ಷ್ಯದಂತೆ) ಇರುತ್ತವೆ. ಸತ್ಸಂಗ–ಸೃಷ್ಟಿ ವಿಜ್ಞಾನಗಳನ್ನು ಹೆಚ್ಚಿಸಿಕೊಳ್ಳುತ್ತಾ – ಹೆಚ್ಚಿಸಿಕೊಳ್ಳುತ್ತಾ ಬ್ರಹ್ಮವನ್ನೂ ಕೂಡ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಮತ್ತು ಪ್ರತಿಮೆ ಬೊಂಬೆಯ ಆಟದಂತಿಲ್ಲ; ಆದರೆ, ಮೊದಲಿನ ಅಕ್ಷರಾಭ್ಯಾಸದ ಹಾಗೂ ಸುಶಿಕ್ಷಣದ ಸುವ್ಯವಸ್ಥೆಯು ಬೊಂಬೆಗಳ ಆಟದ ಹಾಗೆ, ಆಕರ್ಷಕವಾದ ಬ್ರಹ್ಮಪ್ರಾಪ್ತಿಯ ಸಾಧನವಾಗಿರುತ್ತದೆ. ಕೇಳಿರಿ, ಯಾವಾಗ ಒಳ್ಳೆಯ ಶಿಕ್ಷಣ ಮತ್ತು ವಿದ್ಯೆ ಪ್ರಾಪ್ತವಾಗುವುದೋ, ಆಗ ಮಾನವನು ನಿಜವಾದ ಸ್ವಾಮಿಯಾದ ಪರಮಾತ್ಮನನ್ನೂ ಕೂಡ ಸಾಕ್ಷಾತ್ಕರಿಸಿಕೊಳ್ಳುವನು.

**ಪ್ರಶ್ನೆ :–** ಸಾಕಾರದಲ್ಲಿ ಮನಸ್ಸು ಸ್ಥಿರವಾಗುತ್ತದೆ ಮತ್ತು ನಿರಾಕಾರದಲ್ಲಿ ಸ್ಥಿರವಾಗುವುದು ಕಠಿಣವಾಗಿರುತ್ತದೆ. ಆದುದರಿಂದ ಪ್ರತಿಮೆಯ ಪೂಜನವಿರಬೇಕು.

**ಉತ್ತರ:–** ಸಾಕಾರದಲ್ಲಿ ಮನಸ್ಸು ಎಂದಿಗೂ ಸ್ಥಿರವಾಗಲಾರದು. ಏಕೆಂದರೆ, ಮನಸ್ಸು ಅದನ್ನು ಕ್ಷಿಪ್ರವಾಗಿ ಗ್ರಹಿಸಿ, ಅದರ ಒಂದೊಂದು ಅವಯವದಲ್ಲಿಯೂ ತಿರುಗುತ್ತಾ, ಮತ್ತು ಎರಡನೆಯದರತ್ತ ಓಡಿಹೋಗುತ್ತದೆ. ಮತ್ತು ನಿರಾಕಾರನಾದ ಪರಮಾತ್ಮನ ಪ್ರಾಪ್ತಿಯಲ್ಲಿ ಸಾಮರ್ಥ್ಯವಿರುವಷ್ಟೂ ಮನಸ್ಸು ಅತ್ಯಂತವಾಗಿ ಓಡಿದರೂ, ಕೊನೆಯನ್ನು ಕಂಡುಕೊಳ್ಳುವುದಿಲ್ಲ.

---

೬೮. ಮನುಸ್ಮೃತಿಯ ಈ ನೀಷೇಧವಿದ್ದೂ ಸಹ ಪೌರಾಣಿಕ ವಿದ್ವಾಂಸರು ಯಾಜ್ಞವಲ್ಕ್ಯ ಸ್ಮೃತಿ, ಪಾರಾಶರ ಸ್ಮೃತಿ ಇತ್ಯಾದಿ ಸ್ಮೃತಿಗಳನ್ನು ಕೊರಳಿಗೆ ಸುತ್ತಿಕೊಂಡಿರುವ ಕಾರಣವೇನೆಂದರೆ, ಅವುಗಳಿಂದ ಮೂರ್ತಿಪೂಜೆ, ಮೃತಕ ಶ್ರಾದ್ಧ, ಬಾಲ್ಯವಿವಾಹ ಮೊದಲಾದ ಕುರೀತಿಗಳು ಸಿದ್ಧವಾಗುತ್ತವೆ; ಮನುಸ್ಮೃತಿಯಿಂದಲ್ಲ.

೬೯. ಈ ಮಾತು ಎಷ್ಟು ಸತ್ಯವಾಗಿದೆ ! ನೂರಾರು ಸ್ಮೃತಿಗಳ ರಚನೆಯಾದರೂ ಅವೆಲ್ಲಾ ನಷ್ಟವಾಗಿ [ನಿಷ್ಪ್ರಯೋಜಕವಾಗಿ] ಪ್ರಕ್ಷಿಪ್ತ ಶ್ಲೋಕಗಳಿಂದ ಕೂಡಿದ ಮನುಸ್ಮೃತಿ ಮಾತ್ರ ಉಳಿದುಕೊಂಡಿದೆ. ಈ ಪ್ರಕ್ಷಿಪ್ತ ಶ್ಲೋಕಗಳೇ ಅನಾರ್ಷ ಸ್ಮೃತಿಗಳ ಅಂಶಗಳು. ಉಪನಿಷತ್ತುಗಳ ಸ್ಥಿತಿಯೂ ಹೀಗೇಯೇ ಇದೆ.

೭೦. ಇದೂ ಕೂಡ ಪ್ರತ್ಯಕ್ಷವಾದ ಸತ್ಯ ಮಾತು. ಯಾವ ಮೂರ್ತಿಪೂಜಕನೂ ಇಂದಿನವರೆಗೆ ಈ ಮಾತನ್ನು ಸುಳ್ಳಾಗಿಸಲಿಲ್ಲ.

ಈಶ್ವರನು ನಿರವಯವನಾಗಿರುವುದರಿಂದ ಚಂಚಲವೂ ಆಗಿರುವುದಿಲ್ಲ. ಆದರೆ, ಅವನ ಗುಣ–ಕರ್ಮ–ಸ್ವಭಾವದ ಚಿಂತನ ಮಾಡುತ್ತಾ–ಮಾಡುತ್ತಾ, ಆನಂದದಲ್ಲಿ ಮಗ್ನನಾಗಿ, ಸ್ಥಿರವಾಗಿ ಹೋಗುತ್ತದೆ. ಮತ್ತು ಸಾಕಾರದಲ್ಲಿ ಸ್ಥಿರವಾಗುವಂತಿದ್ದರೆ, ಸರ್ವಜಗತ್ತಿನ ಮನಸ್ಸೂ ಸ್ಥಿರರಾಗಿ ಹೋಗುತ್ತಿದ್ದಿತು. ಏಕೆಂದರೆ, ಜಗತ್ತಿನಲ್ಲಿ ಮಾನವನು ಸ್ತ್ರೀ, ಪುತ್ರರು, ಧನ, ಮಿತ್ರರು–ಮೊದಲಾದ ಸಾಕಾರದಲ್ಲಿ ಸಿಕ್ಕಿಕೊಂಡೇ ಇರುತ್ತಾನೆ. ಆದರೆ, ಯಾವತ್ತಿನವರೆಗೆ ನಿರಾಕಾರದಲ್ಲಿ ನಿಲ್ಲಿಸುವುದಿಲ್ಲವೋ, ಆವರೆಗೆ ಯಾವನ ಮನಸ್ಸೂ ಸ್ಥಿರವಾಗುವುದಿಲ್ಲ. ಏಕೆಂದರೆ, (ಪರಮಾತ್ಮನು) ಅವಯವರಹಿತನಾಗಿರುವುದರಿಂದ, ಅವನಲ್ಲಿ ಸ್ಥಿರವಾಗಿ ಹೋಗುತ್ತದೆ. ಆದುದರಿಂದ ಪ್ರತಿಮಾಪೂಜನವನ್ನು ಮಾಡುವುದು ಅಧರ್ಮವಾಗಿರುತ್ತದೆ.

ಎರಡನೆಯದಾಗಿ, ಅದಕ್ಕಾಗಿ, ದೇವಾಲಯಗಳಲ್ಲಿ ಕೋಟ್ಯಂತರ ರೂಪಾಯಿಗಳ ವ್ಯಯವನ್ನು ಮಾಡಿ, ದರಿದ್ರರಾಗುತ್ತಾರೆ ಮತ್ತು ಅದರಲ್ಲಿ ಪ್ರಮಾದ ಉಂಟಾಗುತ್ತದೆ. ಮೂರನೆಯದಾಗಿ, ದೇವಾಲಯಗಳಲ್ಲಿ ಸ್ತ್ರೀ–ಪುರುಷರ ಕೂಟವಾಗುವುದರಿಂದ ವ್ಯಭಿಚಾರ, ಹೋರಾಟ–ಕಲಹಗಳು ಮತ್ತು ರೋಗಗಳೇ ಮೊದಲಾದುವು ಉದ್ಭವಿಸುತ್ತವೆ. ನಾಲ್ಕನೆಯದಾಗಿ, ಅದನ್ನೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಾಧನವೆಂದು ಅಂಗೀಕರಿಸಿ, ಮಾನವನು ಪುರುಷಾರ್ಥರಹಿತನಾಗಿ ಮಾನವ–ಜನ್ಮವನ್ನು ವ್ಯರ್ಥವಾಗಿ ಕಳೆದುಕೊಳ್ಳುತ್ತಾನೆ. ಐದನೆಯದಾಗಿ, ನಾನಾ ಪ್ರಕಾರದ ವಿರುದ್ಧ ಸ್ವರೂಪಗಳನ್ನೂ, ಹೆಸರುಗಳನ್ನೂ, ಚರಿತ್ರವನ್ನೂ, ಹೊಂದಿರುವ ಪ್ರತಿಮೆಗಳ ಪೂಜಕರ ಐಕಮತ್ಯವು ನಾಶವಾಗಿ, ವಿರುದ್ಧವಾದ ಮತದಲ್ಲಿ ಪ್ರವರ್ತಿತರಾಗಿ, ಪರಸ್ಪರ ಒಡಕನ್ನು ಹೆಚ್ಚಿಸಿ, ದೇಶದ ನಾಶವನ್ನು[೭೧] ಮಾಡುತ್ತಾರೆ. ಆರನೆಯದಾಗಿ, ಅದರ ಭರವಸೆಯಲ್ಲಿ, ಶತ್ರುವಿಗೆ ಸೋಲು ಮತ್ತು ತಮಗೆ ಗೆಲವು–ಎಂದು ಅಂಗೀಕರಿಸಿ, ನಿಷ್ಕ್ರಿಯರಾಗಿ ಕುಳಿತಿರುತ್ತಾರೆ. ಅವರಿಗೆ ಪರಾಜಯವಾಗಿ ರಾಜ್ಯ ಸ್ವಾತಂತ್ರ್ಯ ಮತ್ತು ಧನದ ಸುಖ ಅವರ ಶತ್ರುಗಳಿಗೆ ವಶವಾಗಿ ಹೋಗುತ್ತವೆ ಮತ್ತು ತಾವು ಪರಾಧೀನರಾಗಿ, ಧರ್ಮಛತ್ರದ ಪಾರುಪತ್ತೆದಾರನ ದುರ್ಬಲವಾದ ಕುದುರೆಯ ಮತ್ತು ಕುಂಬಾರನ ಕತ್ತೆಯ ಹಾಗೆ, ಶತ್ರುಗಳಿಗೆ ವಶೀಭೂತರಾಗಿ ಅನೇಕ ವಿಧದ ದುಃಖಗಳನ್ನು ಹೊಂದುತ್ತಾರೆ. ಏಳನೆಯದಾಗಿ, ಯಾವನಾದರೂ ಯಾವನೇ ಒಬ್ಬನಿಗೆ– "ನಾವು ನೀನು ಕುಳಿತುಕೊಳ್ಳುವ ಸ್ಥಳದಲ್ಲಿ ಅಥವಾ ಹೆಸರಿನಲ್ಲಿ ಕಲ್ಲನ್ನು ಹಾಕುತ್ತೇವೆ".–ಎಂದು ಹೇಳಿದರೆ, ಹೇಗೆ ಅವನು ಆ ರೀತಿ ಹೇಳುವವನ್ನು ಕೋಪದಿಂದ ಹೊಡೆಯುತ್ತಾನೋ, ಅಥವಾ ಬೈಯುತ್ತಾನೋ, ಹಾಗೆಯೇ ಪರಮೇಶ್ವರನ ಉಪಾಸನಾಸ್ಥಾನವಾದ ಹೃದಯಕ್ಕೆ ಬದಲಾಗಿ. ಮತ್ತು ಅವನ ಹೆಸರಿನ ಮೇಲೆ ಶಿಲೆಯೇ ಮೊದಲಾದುವುಗಳ ಪ್ರತಿಮೆಗಳನ್ನಿರಿಸಿರೆ, ಆ ದುಷ್ಟ ಬುದ್ಧಿಗಳ ಬುದ್ಧಿಹೀನಕೃತಿಗಾಗಿ, ಪರಮೇಶ್ವರನು ಶಿಕ್ಷೆವಿಧಿಸದೆ ಇರುವನಾದರೂ ಏತಕ್ಕೆ? ಎಂಟನೆಯದಾಗಿ, ಭ್ರಾಂತರಾಗಿ ದೇವಾಲಯದಿಂದ ದೇವಾಲಯಕ್ಕೆ ದೇಶದೇಶಾಂತರಗಳಲ್ಲಿ ತಿರುಗಾಡುತ್ತಾ–ತಿರುಗಾಡುತ್ತಾ ದುಃಖಗಳನ್ನು ಅನುಭವಿಸುತ್ತಾರೆ;[೭೨] ಧರ್ಮ, ಜಗತ್ತು ಮತ್ತು ಪರಮಾರ್ಥದ ಕೆಲಸಗಳನ್ನು ಹಾಳುಮಾಡಿಕೊಳ್ಳುತ್ತಾರೆ; ಕಳ್ಳರೇ ಮೊದಲಾದವರಿಂದ ಪೀಡಿತರಾಗುತ್ತಾರೆ ಹಾಗೂ ವಂಚಕರಿಂದ ವಂಚಿಸಲ್ಪಡುತ್ತಾ[೭೩] ಇರುತ್ತಾರೆ. ಒಂಬತ್ತನೆಯದಾಗಿ, ದುಷ್ಟರಾದ ಪೂಜಾರಿಗಳಿಗೆ ಧನವನ್ನು ಕೊಡುತ್ತಾರೆ. ಅವರು ಆ ಧನವನ್ನು ವೇಶ್ಯಾಸಕ್ತಿ, ಪರಸ್ತ್ರೀಗಮನ, ಮದ್ಯಪಾನ, ಮಾಂಸಾಹಾರ, ಕಿತ್ತಾಟ–ಹೋರಾಟಗಳಲ್ಲಿ ಅಪವ್ಯಯ ಮಾಡುತ್ತಾರೆ. ಅದರಿಂದ, ದಾತೃವಿನ ಸುಖದ ಮೂಲವೇ ಹಾಳಾಗಿ, ದುಃಖ ಉದ್ಭವಿಸುತ್ತದೆ.

ಹತ್ತನೆಯದಾಗಿ ಮಾತಾಪಿತೃಗಳೇ ಮೊದಲಾದ ಮಾನನೀಯರಿಗೆ ಅಪಮಾನ ಮಾಡಿ, ಪ್ರತಿಮೆಗಳಿಗೆ ಮಾನವನ್ನಿತ್ತು. ಕೃತಘ್ನರಾಗುತ್ತಾರೆ. ಹನ್ನೊಂದನೆಯದಾಗಿ, ಆ ಪ್ರತಿಮೆಗಳನ್ನು ಯಾವನಾದರೂ ಒಡೆದುಹಾಕಿದರೆ, ಅಥವಾ ಕಳ್ಳನು ಕದ್ದುಕೊಂಡು ಹೋದರೆ, ಆಗ ಹಾಹಾಕಾರಮಾಡುತ್ತಾರೆ ಮತ್ತು ಅಳುತ್ತಾ[೭೪] ಇರುತ್ತಾರೆ. ಹನ್ನೆರಡನೆಯದಾಗಿ, ಪೂಜಾರಿಗಳು

---

೭೧. ಶಾಕ್ತ, ಶೈವ, ವೈಷ್ಣವರ ಜಗಳಗಳಿಗೆ, ಮತ್ತು ಅವರ ಪುರಾಣಗಳಲ್ಲಿನ ಕಥಾನಾಯಕರ ಪರಸ್ಪರ ವಿರುದ್ಧ ವ್ಯಕ್ತಿತ್ವ, ಹೋರಾಟ, ನಿಂದೆಗಳಿಗೆ ಇದೇ ಕಾರಣ.

೭೨. ಭಾರತದಲ್ಲಿ ಮುಸಲ್ಮಾನರ ರಾಜ್ಯ ಸ್ಥಾಪನೆಗೆ ಇದೂ ಪ್ರಮುಖ ಕಾರಣ. ಹೀಗಿದ್ದೂ 'ಭಾರತದ ಮೇಲೆ ಮುಸಲ್ಮಾನರ, ಮತ್ತು ನಂತರ ಇಂಗ್ಲೀಷ್ ರ ಅಧಿಕಾರ ಭಾರತದ ಜನ್ಮ ಪತ್ರಿಕೆಗನುಸಾರವಾಗಿ ಮತ್ತು ಪರಮಾತ್ಮನ ಇಚ್ಛೆಯಂತೆ ಆಗಿರುವುದರಿಂದ, ಅವರ ವಿರೋಧವನ್ನು ಮಾಡಬಾರದು' ಎಂದು ಲಜ್ಜೆಗೆಟ್ಟ ಪೌರಾಣಿಕ ಜ್ಯೋತಿಷಿಗಳು ಜನರನ್ನು, ರಾಜರನ್ನು ಹಾದಿ ತಪ್ಪಿಸುತ್ತಿದ್ದರು. ಇದರ ಐತಿಹಾಸಿಕ ವರ್ಣನೆಯನ್ನು ಪರಿಶಿಷ್ಟ–೪ರಲ್ಲಿ ನೋಡಿರಿ. ಮುಂದೆ, ಸೋಮನಾಥಪುರದ ದೇವಾಲಯದ ವಿಧ್ವಂಸದ ಘಟನೆಯನ್ನು ಓದುವಿರಿ.

೭೩. ಭಾರತದಲ್ಲಿ ಕಳ್ಳತನ–ವಂಚಕತನದ ಬಹುಭಾಗ ಮೂರ್ತಿಪೂಜಾಸ್ಥಾನಗಳಲ್ಲಿ ಹುದುಗಿಕೊಂಡಿದೆ. ಈ ವಂಚಕತನದ ಔದ್ಯೋಗಿಕ ಸಾಮ್ರಾಜ್ಯದ ಸೂಚಿಯನ್ನು ಪರಿಶಿಷ್ಟ–೪ರಲ್ಲಿ ನೋಡಿ.

೭೪. ಸೋಮನಾಥಪುರ ದೇವಾಲಯವನ್ನು ಮುಸ್ಲಿಂರು ವಿಧ್ವಂಸಮಾಡಿ, ಕೊಳ್ಳೆ ಹೊಡೆದಾಗ ಪೂಜಾರಿಗಳು ತೋರಿಸಿದ ಪ್ರತಿಕ್ರಿಯೆ ಇದು.

ಪರಸ್ತ್ರೀಯರ ಸಂಗದಿಂದ ಮತ್ತು ಪೂಜಾರಿಣಿಯರು ಪರಪುರುಷರ ಸಂಗದಿಂದ, ಬಹುತೇಕವಾಗಿ ದೂಷಿತರಾಗಿ, ಸತಿ-ಪತಿಗಳ ಪ್ರೇಮದ ಆನಂದವನ್ನು ಸರ್ವಥಾ ಕಳೆದುಕೊಂಡು ಕೂಡುತ್ತಾರೆ. ಹದಿಮೂರನೆಯದಾಗಿ, ಸ್ವಾಮಿ-ಸೇವಕರ ಅಜ್ಞಾಪ್ರದಾನ-ಅಜ್ಞಾಪಾಲನ ಯಥಾವತ್ತಾಗಿ ನಡೆಯದಿರುವುದರಿಂದ ಪರಸ್ಪರ ವಿರುದ್ಧಭಾವನೆ ಉದಿಸಿ, ನಷ್ಟಭ್ರಷ್ಟರಾಗಿ ಹೋಗುತ್ತಾರೆ. ಹದಿನಾಲ್ಕನೆಯದಾಗಿ, ಜಡದ ಧ್ಯಾನಮಾಡುವವನ ಆತ್ಮನೂ ಕೂಡ ಜಡವಾದ ಬುದ್ಧಿಯನ್ನುಳ್ಳವನೇ ಆಗಿಹೋಗುತ್ತಾನೆ, ಏಕೆಂದರೆ, ಧ್ಯೇಯದ ಜಡತ್ವವೆಂಬ ಧರ್ಮವು ಅಂತಃಕರಣದ ಮೂಲಕ ಆತ್ಮನಲ್ಲಿ ಅವಶ್ಯವಾಗಿ ಮೂಡುತ್ತದೆ.[೭೬]

ಹದಿನೈದನೆಯದಾಗಿ ಪರಮೇಶ್ವರನು ಸುಗಂಧಿಯುಕ್ತವಾದ ಪುಷ್ಪ - ಮೊದಲಾದ ಪದಾರ್ಥಗಳನ್ನು ವಾಯು-ಜಲಗಳ ದುರ್ಗಂಧದ ನಿವಾರಣಕ್ಕಾಗಿ ಮತ್ತು ಆರೋಗ್ಯದ ಸಲುವಾಗಿ ರಚಿಸಿದ್ದಾನೆ. ಆ ಪುಷ್ಪಗಳ ಸುಗಂಧವು ಆಕಾಶಕ್ಕೇರಿ ಅದೆಷ್ಟು ದಿನಗಳವರೆಗೆ ವಾಯು-ಜಲಗಳನ್ನು ಶುದ್ಧಗೊಳಿಸುತ್ತಿದ್ದಿತೋ ಏನೋ; ಸುಗಂಧಿ ಪೂರ್ಣವಾಗುವ ಸಮಯದವರೆಗೆ ಅದರ ಪರಿಮಳವಿರುತ್ತಿದ್ದಿತು; ಪೂಜಾರೀ ಮಹಾಶಯರು[೭೭] ಅವುಗಳನ್ನು ಕಿತ್ತು-ಮುರಿದು ಮಧ್ಯದಲ್ಲಿಯೇ ಅವುಗಳನ್ನು ನಾಶಮಾಡಿಬಿಡುತ್ತಾನೆ. ಆ ಹೂವೇ ಮೊದಲಾದುವು ಕೊಳಚೆಯಲ್ಲಿ ಬೆರೆತು, ಕೊಳೆತು, ಪ್ರತಿಯಾಗಿ ದುರ್ಗಂಧವನ್ನುಂಟು ಮಾಡುತ್ತವೆ. ಪರಮಾತ್ಮನು ಕಲ್ಲಿನ ಮೇಲೇರಿಸುವುದಕ್ಕಾಗಿ ಪುಷ್ಪ ಮೊದಲಾದ ಸುಗಂಧಯುಕ್ತವಾದ ಪದಾರ್ಥಗಳನ್ನು ನಿರ್ಮಿಸಿದ್ದಾನೇನು?[೭೮] ಹದಿನಾರನೆಯದಾಗಿ, ಕಲ್ಲಿನ ಮೇಲೇರಿದ ಪುಷ್ಪಗಳು, ಚಂದನ ಮತ್ತು ಅಕ್ಷತೆ-ಮೊದಲಾದುದೆಲ್ಲದರ ನೀರು ಮತ್ತು ಮಣ್ಣಿನ ಸಂಯೋಗ ಉಂಟಾಗುವುದರಿಂದ, ಮೋರಿಯಲ್ಲಿ ಅಥವಾ ಕುಂಡದಲ್ಲಿ ಬಂದು ಕೊಳೆತು, ಮಾನವನ ಮಲದಿಂದ ಎಷ್ಟು ಏರಬಹುದೋ, ಅಷ್ಟು ದುರ್ಗಂಧ ಅದರಿಂದ ಆಕಾಶಕ್ಕೇರುತ್ತದೆ. ಮತ್ತೆ ಅದರಲ್ಲಿ ಸಾವಿರಾರು ಜೀವಗಳು ಬೀಳುತ್ತವೆ; ಅದರಲ್ಲಿಯೇ ಸಾಯುತ್ತವೆ ಮತ್ತು ಕೊಳೆಯುತ್ತವೆ.[೭೯]

ಇಂತಿಂತಹ[೮೦] ಅನೇಕ ದೋಷಗಳು ಪ್ರತಿಮಾಪೂಜನ ಮಾಡುವುದರಲ್ಲಿ ಉದ್ಭವಿಸುತ್ತವೆ. ಆದುದರಿಂದ ಪ್ರತಿಮಾಪೂಜನವು ಸತ್ಪುರುಷರಿಂದ ಸರ್ವಥಾ ತ್ಯಾಗಯೋಗ್ಯವಾಗಿದೆ. ಮತ್ತು ಯಾರು ಶಿಲಾಮಯ ಪ್ರತಿಮೆಯ ಪೂಜೆಯನ್ನು ಮಾಡಿದ್ದಾರೋ, ಮಾಡುತ್ತಾರೋ, ಮತ್ತು ಮಾಡುವರೋ, ಅವರು ಮೇಲೆ ಹೇಳಿರುವ ದೋಷಗಳಿಂದ ಬಿಡುಗಡೆ ಹೊಂದಿಲ್ಲ; ಹೊಂದುವುದಿಲ್ಲ ಮತ್ತು ಮುಂದಕ್ಕೂ ಹೊಂದುವಂತಿಲ್ಲ.

**ಪ್ರಶ್ನೆ:-** ಯಾವುದೇ ಬಗೆಯ ಪ್ರತಿಮಾಪೂಜನವನ್ನೂ ಮಾಡಬಾರದು, ಮಾಡಿಸಲೂಬಾರದು-ಎನ್ನುತ್ತೀರಿ! ಮತ್ತೆ ನಮ್ಮ ಆರ್ಯಾವರ್ತದಲ್ಲಿ ಪಂಚ-ದೇವಪೂಜೆ - ಎಂಬ ಶಬ್ದ ಪ್ರಾಚೀನಪರಂಪರೆಯಿಂದ ನಡೆದುಬಂದಿದೆ. ಶಿವ, ವಿಷ್ಣು, ಅಂಬಿಕೆ, ಗಣೇಶ ಮತ್ತು ಸೂರ್ಯ- ಇವರ ಪ್ರತಿಮೆಗಳನ್ನು ರಚಿಸಿ, ಪಂಚಾಯತನಪೂಜೆ - ಎಂಬ ಆರಾಧನೆ ನಡೆಯುತ್ತಾ ಬಂದಿದೆ. ಇದು ಪಂಚಾಯತನ ಪೂಜೆಯಹುದೋ ಅಥವಾ ಅಲ್ಲವೋ?

---

೭೫. ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಅಲ್ಲಲ್ಲಿ ಜೀವಿತವಾಗಿರುವ 'ದೇವದಾಸೀ' ರೂಢಿ ಇದಕ್ಕೆ ಒಂದು ನಿದರ್ಶನ.

೭೬. ಪಶ್ಚಿಮೀ ದೇಶಗಳಲ್ಲಿ ಮೌಲಿಕ ರೂಪದಲ್ಲಿ ಆಗುತ್ತಿರುವ ವೈಜ್ಞಾನಿಕ ಪ್ರಗತಿಗೂ, ಭಾರತದಲ್ಲಿ ಅನುಕರಣರೂಪದಲ್ಲಿ ಆಗುತ್ತಿರುವ ವೈಜ್ಞಾನಿಕ ಪ್ರಗತಿಗೂ ಇರುವ ವ್ಯತ್ಯಾಸಕ್ಕೆ ಇದೇ ಕಾರಣ.

೭೭. ಮತ್ತು ಸ್ತ್ರೀಯರು ಪೂಜೆಗಾಗಿ ಅಥವಾ ಶೃಂಗಾರಕ್ಕಾಗಿ.

೭೮. ಈ ಪ್ರಶ್ನೆಗೆ ಮೂರ್ತಿಪೂಜಕರ ಉತ್ತರವೇನು?

೭೯. ತೀರ್ಥಸ್ಥಾನಗಳಲ್ಲಿ ಹರಡುವ ಕಾಲರಾ ಬೇನೆಗೆ ಇದೂ ಒಂದು ಕಾರಣ.

೮೦. ಇವಲ್ಲದೆ, ಮೂರ್ತಿಪೂಜೆಯ ಪರಿಣಾಮವಾಗಿ, ಕೆಳಕಂಡ ದೋಷಗಳೂ ಭಾರತೀಯರಲ್ಲಿ ಮನೆ ಮಾಡಿಕೊಂಡಿವೆ.

೧. ಆಲಸ್ಯ ಮತ್ತು ಜಡತ್ವ. ೨. ಭಾಗ್ಯದ ಮೇಲೆ ಭರವಸೆಯಿಟ್ಟು, ಸುಮ್ಮನೆ ಕುಳಿತಿರುವುದು,೩. ಫಲಿತ ಜ್ಯೋತಿಷ್ಯದ ಕಥನಗಳ ಮೇಲೆ ಅಂಧಶ್ರದ್ಧೆಯಿಟ್ಟು ಪುರುಷಾರ್ಥ ಮತ್ತು ಉತ್ಸಾಹದ ತ್ಯಾಗ. ೪ ಮೃತಕಶ್ರಾದ್ಧ; ದಾರಿದ್ರ್ಯ, ಮತ್ತು ವೈರಾಗ್ಯ ೫.ಈಶ್ವರನ 'ಅವತಾರವಾದ' ಎಂಬ ಅಪಸಿದ್ಧಾಂತದಲ್ಲಿ ನಂಬಿಕೆ. ೬. ಚಮತ್ಕಾರಿಕ ಕತೆ ನಟನೆ, ನರ್ತನಗಳ ಮೇಲೆ ಅಂಧಭಕ್ತಿ. ೭ ಹೊಟ್ಟೆ ಕಿಚ್ಚು. ೮. ದ್ವೇಷ .೯ ಧೂರ್ತತೆ. ೧೦. ವಿದೂಷಕತ್ವ ೧೧. ಮೋಸ ೧೨. ವಂಚನೆ ೧೩. ಮಾಯಾ-ಮಾಟ ೧೪. ನಶೆ ಕೊಡುವ ಪದಾರ್ಥದ ಸೇವನೆ. ೧೫. ಕಾಮುಕತೆ. ೧೬. ದುರ್ವ್ಯಸನಗಳಿಗೀಡಾಗುವುದು ೧೭. ಪರಾವಲಂಬನ. ೧೮. ಜವಾಬ್ದಾರಿಯಿಲ್ಲದ, ನಿರಕ್ಷರ ಭಿಕ್ಷುಕರ ಹಾವಳಿ; ಪರಪದಾರ್ಥ ಗ್ರಾಹಕರಾದ ಪಂಡಾ-ಪೂಜಾರಿಗಳ ಹಿಂಡು. ೧೯. ದುಷ್ಟ ಸಂನ್ಯಾಸಿಗಳು ಮತ್ತು ಸಾಧುಗಳು. ೨೦. ಸಮಾಜವಿರೋಧಿ ತತ್ವಗಳು. ೨೧. ಅಪರಾಧಿಗಳು ೨೨. ಪರಸ್ತ್ರೀಗಾಮಿಗಳು ೨೩. ಸತೀದಹನ; ಆತ್ಮದಾಹ ೨೪. ಬಾಲ-ಶಿಶು ಹತ್ಯೆ ೨೫ ದೇವದಾಸೀ ಪದ್ಧತಿ. ೨೬. ನರಬಲಿ, ಪಶುಬಲಿ ೨೭. ಆತ್ಮಹತ್ಯೆ, ಸ್ವಾಂಗಭೇದನ ಇತ್ಯಾದಿ.

**ಉತ್ತರ:-** ಯಾವುದೇ ವಿಧದ ಪ್ರತಿಮಾಪೂಜನವನ್ನೂ ಮಾಡಬಾರದು. ಅದರೆ, ಕೆಳಗೆ ಯಾರ ಬಗೆಗೆ ಹೇಳುತ್ತೇವೋ, ಆ ಮೂರ್ತಿಮಂತರ (ಆಕಾರವನ್ನುಳ್ಳವರ) ಪೂಜನವನ್ನು ಎಂದರೆ ಸತ್ಕಾರವನ್ನು ಮಾಡಬೇಕು. ಆ ಪಂಚದೇವಪೂಜೆ, ಪಂಚಾಯತನ ಪೂಜೆ ಎಂಬ ಶಬ್ದ ಅತ್ಯುತ್ತಮವಾದ ಅರ್ಥದಿಂದ ಕೂಡಿದೆ. ಆದರೆ, ವಿದ್ಯಾಹೀನರಾದ ಮೂಢರು ಅದರ ಉತ್ತಮವಾದ ಅರ್ಥವನ್ನು ಬಿಟ್ಟು, ನಿಕೃಷ್ಟವಾದ ಅರ್ಥವನ್ನು ಗ್ರಹಿಸಿಕೊಂಡಿದ್ದಾರೆ. ಶಿವನೇ ಮೊದಲಾದ ಐವರ ಪ್ರತಿಮೆಗಳನ್ನು ರಚಿಸಿ, ಯಾವ ಪೂಜೆಯನ್ನು ಈ ದಿನಗಳಲ್ಲಿ ಮಾಡುತ್ತಾರೋ, ಅದರ ಖಂಡನವನ್ನಂತೂ ಈಗಾಗಲೇ ಮಾಡಿದ್ದೇವೆ. ಆದರೆ, ವೇದೋಕ್ತವಾದ ಯಾವ ಸತ್ಯ ಪಂಚಾಯತನಪೂಜೆಯಿದೆಯೋ, ಮತ್ತು ವೇದಾನುಕೂಲವಾಗಿ ಹೇಳಲ್ಪಟ್ಟ ಯಾವ ದೇವಪೂಜೆ ಮತ್ತು ಪ್ರತಿಮಾಪೂಜನವಿದೆಯೋ, ಅವುಗಳ ಸ್ವರೂಪವನ್ನಾಲಿಸಿರಿ.

**ಮಾ ನೋ ವಧೀಃ ಪಿತರಂ ಮೋತ ಮಾತರಂ॥ ೧ ॥** (ಯಜುರ್ವೇದ :- ೧೬.೧೫)

**ಆಚಾರ್ಯೋ ಬ್ರಹ್ಮಚರ್ಯೇಣ ಬ್ರಹ್ಮಚಾರಿಣಮಿಚ್ಛತೇ॥ ೨ ॥** (ಅಥರ್ವವೇದ :- ೧೧.೫.೧೭)

**ಅತಿಥಿರ್ಗೃಹಾನಾಗಚ್ಛೇತ್ ॥ ೩॥** (ಅಥರ್ವವೇದ :- ೧೫.೧೩.೧೧)

**ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ ॥ ೪ ॥** (ಋಗ್ವೇದ :- ೮.೬೯.೮)

**ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ॥ ೫॥** (ತೈತ್ತಿರೀಯೋಪನಿಷತ್ತು :- ೧.೧.)

**ಕತಮ ಏಕೋ ದೇವ ಇತಿ ಸ ಬ್ರಹ್ಮ ತ್ಯ ದಿತ್ಯಾ ಚಕ್ಷತೇ॥ ೬॥** (ಶತಪಥ :- ೧೪.೬.೯.೧೦)

**ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋಭವ ।**

**ಅತಿಥಿದೇವೋ ಭವ ॥ ೭॥** (ತೈತ್ತಿರೀಯ :- ೧.೧೧)

**ಪಿತೃಭಿರ್ಭ್ರಾತೃಭಿಶ್ಚೈತಾಃ ಪತಿಭಿರ್ದೇವರೈಸ್ತಥಾ ।**

**ಪೂಜ್ಯಾ ಭೂಷಯಿತವ್ಯಾಶ್ಚ ಬಹುಕಲ್ಯಾಣಮೀಪ್ಸು ಭಿಃ॥ ೮ ॥** (ಮನು :- ೩.೫೫)

**ಪೂಜ್ಯೋ ದೇವವತ್ಪತಿಃ॥ ೯॥** (ಮನು:-೫.೧೫೪)

ಮೊದಲಾಗಿ ಮಾತೆಯು ಮೂರ್ತಿವಂತಳೂ, ಪೂಜನೀಯಳೂ ಆದ ದೇವತೆಯಾಗಿದ್ದಾಳೆ. ಎಂದರೆ-ಸಂತತಿಯು ತನು-ಮನ-ಧನಗಳಿಂದ ಸೇವೆಸಲ್ಲಿಸಿ ಮಾತೆಯನ್ನು ಪ್ರಸನ್ನಳನ್ನಾಗಿಟ್ಟುಕೊಳ್ಳಬೇಕು; ಹಿಂಸೆಯನ್ನು, ಎಂದರೆ ಪ್ರಹಾರವನ್ನು ಎಂದಿಗೂ ಮಾಡಬಾರದು. ನೋಯಿಸಬಾರದು. ಎರಡನೆಯ ಸತ್ಕರಣೀಯ ದೇವನು ಪಿತೃವು. ಅವನಿಗೂ ಕೂಡ ಮಾತೆಗೆ ಮಾಡುವಂತೆ ಸೇವೆಯನ್ನು ಮಾಡಬೇಕು. (೧)

ಮೂರನೆಯವನಾಗಿ, ಯಾವನು ವಿದ್ಯಾದಾನ ಮಾಡುವವನಾಗಿದ್ದಾನೋ ಆ ಆಚಾರ್ಯನು ಇದ್ದಾನೆ. ಅವನಿಗೂ ತನು-ಮನ, ಧನಗಳಿಂದ ಸೇವೆ ಮಾಡಬೇಕು. (೨)

ನಾಲ್ಕನೆಯವನಾಗಿ ಯಾವನು ವಿದ್ವಾಂಸನೂ, ಧಾರ್ಮಿಕನೂ, ನಿಷ್ಕಪಟನೂ, ಸರ್ವರ ಉನ್ನತಿಯನ್ನೂ ಬಯಸುವವನೂ ಆಗಿದ್ದು, ಜಗತ್ತಿನಲ್ಲಿ ಸಂಚರಿಸುತ್ತಾ ಸತ್ಯೋಪದೇಶದಿಂದ ಸರ್ವರನ್ನೂ ಸುಖಿಗಳನ್ನಾಗಿ ಮಾಡುತ್ತಾನೋ, ಆ ಅತಿಥಿಯಿದ್ದಾನೆ; ಅವನ ಸೇವೆಯನ್ನೂ ಮಾಡಬೇಕು. (೩)

ಐದನೆಯದಾಗಿ, ಸ್ತ್ರೀಯಳಿಗೆ ಪತಿಯೂ, ಮತ್ತು ಪುರುಷನಿಗೆ ತನ್ನ ಪತ್ನಿಯೂ ಪೂಜನೀಯರಾಗಿರುತ್ತಾರೆ. (೪)

ಯಾರ ಸಂಗದಿಂದ ಮಾನವನ ದೇಹದ ಉತ್ಪತ್ತಿಯೂ, ಪಾಲನವೂ, ಸತ್ಯಶಿಕ್ಷಣವೂ, ವಿದ್ಯೆಯೂ ಮತ್ತು ಸತ್ಯೋಪದೇಶವೂ ಪ್ರಾಪ್ತವಾಗುತ್ತವೋ, ಆ ಐವರು ಮೂರ್ತಿಮಂತ ದೇವತೆಗಳು ಇವರೇ ಆಗಿದ್ದಾರೆ. ಇವರೇ ಪರಮೇಶ್ವರನನ್ನು ಪ್ರಾಪ್ತ

ಮಾಡಿಕೊಳ್ಳಲು ಮೆಟ್ಟಲುಗಳಾಗಿದ್ದಾರೆ. ಯಾರು ಇವರ ಸೇವೆಯನ್ನು ಮಾಡದೆ, ಶಿಲೆ-ಮೊದಲಾದುವುಗಳ ಪ್ರತಿಮೆಗಳನ್ನು ಪೂಜಿಸುತ್ತಾರೋ, ಅವರು ಅತ್ಯಂತ ಅಜ್ಞಾನಿಗಳೂ, ಮಹಾದುಃಖವನ್ನು ಹೊಂದುವವರೂ ಆಗಿರುತ್ತಾರೆ.

**ಪ್ರಶ್ನೆ:-** ಮಾತಾಪಿತೃಗಳೇ ಮೊದಲಾದವರ ಸೇವೆಯನ್ನೂ ಮಾಡೋಣ; ಮತ್ತು ಪ್ರತಿಮಾಪೂಜನವನ್ನೂ ಮಾಡೋಣ; ಆಗಲಾದರೂ ಯಾವ ದೋಷವೂ ಇಲ್ಲವಷ್ಟೆ?

**ಉತ್ತರ:-** ಶಿಲೆ-ಮೊದಲಾದವರ ಪ್ರತಿಮೆಗಳ ಪೂಜನವನ್ನು ಸರ್ವಥಾ ಬಿಡುವುದರಲ್ಲಿ ಮತ್ತು ಮಾತೆ-ಮೊದಲಾದವರ ಸೇವೆಯನ್ನು ಮಾಡುವುದರಲ್ಲಿಯೇ ಕಲ್ಯಾಣವಿದೆ. ಸಾಕ್ಷಾತ್ ಮಾತೆಯೇ ಮೊದಲಾದ ಪ್ರತ್ಯಕ್ಷವಾಗಿ ಸುಖಕೊಡುವ ದೇವತೆಗಳನ್ನು ಬಿಟ್ಟು, ದೇವತೆಯಲ್ಲದ ಶಿಲೆ-ಮೊದಲಾದುವಕ್ಕೆ ತಲೆ ಚಚ್ಚಿಕೊಳ್ಳುವುದನ್ನು ಅಂಗೀಕರಿಸಿದುದು ದೊಡ್ಡ ಅನರ್ಥದ ವಿಷಯವಾಗಿದೆ. ಮೂಢ ಜನರು **"ಮಾತಾಪಿತೃಗಳೇ ಮೊದಲಾದವರ ಮುಂದೆ ನೈವೇದ್ಯವನ್ನು ಅಥವಾ ಕಾಣಿಕೆ-ಕಪ್ಪಗಳನ್ನಿಟ್ಟರೆ, ಅವರು ಸ್ವತಃ ತಿಂದುಬಿಡುವರು ಮತ್ತು ನೈವೇದ್ಯ-ಸತ್ಕಾರಗಳನ್ನು ತೆಗೆದುಕೊಂಡುಬಿಡುವರು. ಹೀಗಾದಲ್ಲಿ ನಮ್ಮ ಬಾಯಿಗೆ ಮತ್ತು ಕೈಗೆ ಏನೂ ಬೀಳುವುದಿಲ್ಲ".** - ಎಂಬ ಕಾರಣದಿಂದಲೇ ಈ ಮಾರ್ಗವನ್ನು ಅಂಗೀಕರಿಸಿದ್ದಾರೆ! ಆದುದರಿಂದ, ಶಿಲೆ-ಮೊದಲಾದುದರ ಪ್ರತಿಮೆಯನ್ನು ರಚಿಸಿ, ಅದರ ಮುಂದೆ ನೈವೇದ್ಯವನ್ನಿಟ್ಟು, **"ಟನ್ ಟನ್-ಪೂಂ ಪೂಂ"** ಎಂದು ಗಂಟೆಯನ್ನು ಬಾರಿಸಿ, ಮತ್ತು ಶಂಖವನ್ನೂದಿ, ಕೋಲಾಹಲವನ್ನು ಮಾಡಿ **'ತ್ವಮಂಗುಷ್ಠಂ ಗೃಹಾಣ, ಭೋಜನಂ ಪದಾರ್ಥಂ ವಾಽಹಂ ಗ್ರಹೀಷ್ಯಾಮಿ'.** - (ನೀನು ತೆಗೆದುಕೋ ಹೆಬ್ಬೆಟ್ಟನ್ನು; ಭೋಜನ ಅಥವಾ ಸರಕು ನನ್ನ ಪಾಲಿಗಿರಲಿ.) - ಎಂದು, ಒಬ್ಬನು ಮತ್ತೊಬ್ಬನಿಗೆ ವಂಚನೆಮಾಡಿ,-**"ನಿನಗಿರಲಿ ಘಂಟೆ !"** ಎಂಬುದಾಗಿ ರೊಚ್ಚಿಗೆಬ್ಬಿಸಿ, ಹೆಬ್ಬೆರಳನ್ನು ತೋರಿಸಿ, ಅವನ ಮುಂದೆಯೇ ಸಮಸ್ತ ವಸ್ತುಗಳನ್ನೂ ತಾನೇ ಉಪಭೋಗಿಸುವಂತೆ, ಹೆಬ್ಬೆರಳನ್ನು ಪ್ರತಿಮೆಗೆ ತೋರಿಸಿ ಈ ಪೂಜಾರಿಗಳು ಎಂದರೆ ಪೂಜಾ-ಎಂದರೆ ಸತ್ಕರ್ಮಕ್ಕೆ ಅರಿಗಳಾಗಿ-ಎಂದರೆ ಶತ್ರುಗಳಾಗಿ ರಚಿಸಿದ್ದಾರೆ ಈ ಲೀಲೆಯನ್ನು. ಮೂಢರನ್ನು ಒನಪು-ವೈಯಾರಗಳಿಂದ, ಹೊಳಪು-ಝಳಪುಗಳಿಂದ ಬೆರಗುಗೊಳಿಸಿ, ಪ್ರತಿಮೆಗಳನ್ನು ಸಿಂಗರಿಸಿ-ಅಲಂಕರಿಸಿ, ಸ್ವತಃ ತಾವು ಠಕ್ಕರಾಗಿ ಕೊರೆದು-ಮೆರೆದು ಬಡಪಾಯಿಗಳಾದ ಬುದ್ಧಿಹೀನ ಅನಾಥರ ಸಿರಿಯನ್ನು ಕಸಿದು ಉಲಿಯುತ್ತಾರೆ. ಯಾವನಾದರೂ ಧಾರ್ಮಿಕನಾದ ರಾಜನಿದ್ದರೆ, ಈ ಶಿಲಾಪ್ರಿಯರನ್ನು ಕಲ್ಲನ್ನು ಒಡೆಯುವ, ಕುಟ್ಟುವ ಮತ್ತು ಮನೆಗಳನ್ನು ನಿರ್ಮಿಸುವ ಕೆಲಸಗಳಿಗೆ ನೇಮಿಸಿ, ತಿನ್ನಲು-ಕುಡಿಯಲು ಕೊಡುತ್ತಿದ್ದನು; ಜೀವನನಿರ್ವಾಹಕ್ಕೆ ವ್ಯವಸ್ಥೆ ಮಾಡುತ್ತಿದ್ದನು.

**ಪ್ರಶ್ನೆ:-** ಹೇಗೆ ಸ್ತ್ರೀಯರೇ ಮೊದಲಾದವರ ಶಿಲೆ-ಮೊದಲಾದ ಪ್ರತಿಮೆಗಳನ್ನು ನೋಡುವುದರಿಂದ ಕಾಮೋತ್ತೇಜನ ವಾಗುತ್ತದೋ, ಹಾಗೆ ವೀತರಾಗನೋ, ಶಾಂತನೂ ಆದವನ ಪ್ರತಿಮೆಯನ್ನು ನೋಡುವುದರಿಂದ ವೈರಾಗ್ಯದ ಮತ್ತು ಶಾಂತಿಯ ಪ್ರಾಪ್ತಿಯಾಗಲೊಲ್ಲದೇಕೆ?

**ಉತ್ತರ:-** ಆಗಲಾರದು. ಏಕೆಂದರೆ, ಆ ಮೂರ್ತಿಯ ಜಡತ್ವವೆಂಬ ಧರ್ಮ ಆತ್ಮನಲ್ಲಿಳಿಯುವುದರಿಂದ, ಆಲೋಚನಾಶಕ್ತಿ ಕುಗ್ಗಿ ಹೋಗುತ್ತದೆ. ವಿವೇಕವಿಲ್ಲದೆ, ವೈರಾಗ್ಯಬಾರದು; ಮತ್ತು ವೈರಾಗ್ಯವಿಲ್ಲದೆ ವಿಜ್ಞಾನವೂ, ವಿಜ್ಞಾನವಿಲ್ಲದೆ ಶಾಂತಿಯೂ ಉಂಟಾಗದು. ಮತ್ತು ಏನಾದರೂ ಸ್ವಲ್ಪ ಲಭಿಸುವುದಾದರೆ, ಅದು ಯಾರ ಪ್ರತಿಮೆಗಳು ರಚಿತವಾಗಿರುತ್ತವೋ, ಅವರ ಸಂಗದಿಂದ ಹಾಗೂ ಉಪದೇಶ ಮತ್ತು ಅವರ ಇತಿಹಾಸ-ಮೊದಲಾದುವನ್ನು ನೋಡುವುದರಿಂದ ಪ್ರಾಪ್ತವಾಗುತ್ತದೆ. ಏಕೆಂದರೆ, ಯಾವನ ಗುಣ-ದೋಷಗಳ ಅರಿವಿಲ್ಲವೋ, ಅವನ ಪ್ರತಿಮೆಯನ್ನು ಮಾತ್ರ ನೋಡುವುದರಿಂದ ಪ್ರೀತಿಯುಂಟಾಗುವುದಿಲ್ಲ. ಪ್ರೀತಿಯುಂಟಾಗಲು ಗುಣದ ಜ್ಞಾನವು ಕಾರಣವಾಗಿರುತ್ತದೆ. ಪ್ರತಿಮಾಪೂಜನದಂತಹ ದುಷ್ಟ ಕಾರಣಗಳಿಂದಲೇ ಆರ್ಯಾವರ್ತದಲ್ಲಿ ನಿಷ್ಕರ್ಮಿಗಳಾದ ಪೂಜಾರಿಗಳೂ, ಭಿಕ್ಷುಕರೂ, ಸೋಮಾರಿಗಳೂ, ಪುರುಷಾರ್ಥರಹಿತರೂ ಆದ ಕೋಟ್ಯಂತರ ಜನರಿದ್ದಾರೆ. ಅವರು ಮೂಢರಾಗಿರುವುದರಿಂದ, ಸಮಸ್ತ ಜಗತ್ತಿನಲ್ಲಿಯೂ ಮೌಢ್ಯವನ್ನು ಅವರೇ ಪ್ರಸರಿಸಿದ್ದಾರೆ. ಸುಳ್ಳು-ಮೋಸ ಕೂಡ ಬಹಳ ಹರಡಿದೆ.[೮೧]

---

೮೧. ಇದು ಈಗಲೂ ಸತ್ಯ ! ಭಾರತದ ರಾಜನೈತಿಕ, ಆರ್ಥಿಕ, ಮತ್ತು ಚಾರಿತ್ರಿಕ ಉನ್ನತಿಗೆ ಅಡ್ಡಿಯಾಗಿ ನಿಂತಿದೆ. ಈ ಮೂರ್ತಿಪೂಜೆಯ ಉನ್ನತಿ ಮತ್ತು ಅದರ ವೈವಿಧ್ಯ ವಿಸ್ತಾರ.

**ಪ್ರಶ್ನೆ :–** ನೋಡಿರಿ, ಕಾಶಿಯಲ್ಲಿ ಔರಂಗಜೇಬ್ ಸಾಮ್ರಾಟನಿಗೆ 'ಲಾಟ ಭೈರವ' ಮೊದಲಾದವರು ದೊಡ್ಡ ದೊಡ್ಡ ಚಮತ್ಕಾರಗಳನ್ನು ತೋರಿಸಿದ್ದರು. ಯಾವಾಗ ಮುಸಲ್ಮಾನರು ಅವುಗಳನ್ನು ಒಡೆದು ಹಾಕಲು ಹೋದರೋ ಮತ್ತು ಯಾವಾಗ ಅವರು ಅವುಗಳ ಮೇಲೆ ತೋಪು–ಗುಂಡ ಮೊದಲಾದುವನ್ನು ಹೊಡೆದರೋ, ಆಗ ದೊಡ್ಡ ದೊಡ್ಡ ಜೇನುನೊಣಗಳು ಹೊರಬಂದು ಸೈನ್ಯವನ್ನೆಲ್ಲಾ ವ್ಯಾಕುಲವಾಗಿ ಮಾಡಿ ಓಡಿಸಿಬಿಟ್ಟವು.[೮೨]

**ಉತ್ತರ:–** ಇದು ಶಿಲೆಯ ಚಮತ್ಕಾರವಲ್ಲ. ಆದರೆ, ಅಲ್ಲಿ ಜೇನುನೊಣಗಳ ಗೂಡುಗಳು ಇದ್ದಿರಬಹುದು. ಅವುಗಳ ಸ್ವಭಾವವೇ ಕ್ರೂರ. ಯಾವನಾದರೂ ಅವನ್ನು ಕೆಣಕಿದರೆ, ಅವು ಕುಟುಕಲು ಓಡಿಬರುತ್ತವೆ. ಮತ್ತು ಹಾಲಿನ ಧಾರೆಯ ಯಾವ ಚಮತ್ಕಾರ ನಡೆಯುತ್ತಿದ್ದಿತೋ, ಅದು ಪೂಜಾರೀ ಮಹಾಶಯರ ಲೀಲೆಯಾಗಿದ್ದಿತು, ಅಷ್ಟೇ.

**ಪ್ರಶ್ನೆ:–** ನೋಡಿರಿ, ಮಹಾದೇವನು ಮ್ಲೇಚ್ಛನಿಗೆ ದರ್ಶನ ಕೊಡಬಾರದೆಂದು ಭಾವಿಯಲ್ಲಿಯೂ, ಮತ್ತು ವೇಣೀಮಾಧವನು ಒಬ್ಬ ಬ್ರಾಹ್ಮಣನ ಮನೆಯಲ್ಲಿಯೂ ಹೋಗಿ ಬಚ್ಚಿಟ್ಟುಕೊಂಡರು. ಇದೂ ಕೂಡ ಚಮತ್ಕಾರವಲ್ಲವೇನು?

**ಉತ್ತರ:–** ಭಲೇ! ಯಾವನ ಕೋಟೆಯ ಪಾಲಕರಾಗಿ ಕಾಲಭೈರವ, ಲಾಟಬೈರವ ಮೊದಲಾದವರೂ, ಭೂತಪ್ರೇತಳೂ ಮತ್ತು ಗರುಡನೇ ಮೊದಲಾದ ಗಣಗಳೂ ಇದ್ದಾರೋ, ಅವರು ಯುದ್ಧಮಾಡಿ, ಮುಸಲ್ಮಾನರನ್ನು ದೂರಸರಿಸಲಿಲ್ಲವೇಕೆ? ಮಹಾದೇವ ಮತ್ತು ವಿಷ್ಣುವಿನ ಬಗೆಗೆ, ಪುರಾಣಗಳಲ್ಲಿ–"ತ್ರಿಪುರಾಸುರನೇ ಮೊದಲಾದ ದೊಡ್ಡ ದೊಡ್ಡ ಭಯಂಕರ ದುಷ್ಟರನ್ನು ಭಸ್ಮಮಾಡಿಬಿಟ್ಟರು–ಎಂದು ಕಥೆಯಿದೆ. ಹಾಗಾದರೆ ಮುಸಲ್ಮಾನರನ್ನು ಏತಕ್ಕೆ ಭಸ್ಮಮಾಡಲಿಲ್ಲ? ಬಡಪಾಯಿಗಳಾದ ಕಲ್ಲುಗಳು ಯುದ್ಧ ಮಾಡುವುದು–ಮಾಡಿಸುವುದಾದರೂ ಏನಿತ್ತು–ಎಂಬುದು ಇದರಿಂದ ಸಿದ್ಧವಾಗುತ್ತದೆ. ಮುಸಲ್ಮಾನರು ದೇವಾಲಯಗಳನ್ನೂ, ಪ್ರತಿಮೆಗಳನ್ನೂ ಒಡೆಯುತ್ತಾ–ಮುರಿಯುತ್ತಾ ಕಾಶಿಯ ಬಳಿ ಬಂದಾಗ, ಪೂಜಾರಿಗಳು ಆ ಶಿಲಾ ಲಿಂಗವನ್ನು ಭಾವಿಯಲ್ಲಿ ಹಾಕಿದರು. ಮತ್ತು ವೇಣೀಮಾಧವನನ್ನು ಬ್ರಾಹ್ಮಣನ ಮನೆಯಲ್ಲಿ ಬಚ್ಚಿಟ್ಟರು. ಕಾಶಿಯಲ್ಲಿ ಕಾಲ ಭೈರವನ ಭಯದಿಂದಾಗಿ ಯಮದೂತರೂ ಹೋಗುವುದಿಲ್ಲ ಮತ್ತು ಪ್ರಳಯ ಕಾಲದಲ್ಲಿಯೂ ಕೂಡ ಕಾಶಿಯನ್ನು ನಾಶವಾಗಲು ಬಿಡುವುದಿಲ್ಲವೆಂದಾಗ, ಮ್ಲೇಚ್ಛರ ದೂತರನ್ನೇಕೆ ಹೆದರಿಸಲಿಲ್ಲ? ತನ್ನ ರಾಜನ ಮಂದಿರವನ್ನು ನಾಶವಾಗಲು ಬಿಟ್ಟನೇಕೆ? ಇದೆಲ್ಲಾ ಪೋಪಮಾಯೆಯಾಗಿದೆ.

**ಪ್ರಶ್ನೆ:–** ಗಯಾದಲ್ಲಿ ಶ್ರಾದ್ಧ ಮಾಡುವುದರಿಂದ ಪಿತೃಗಳ ಪಾಪ ಕಳಚಿಹೋಗಿ, ಅಲ್ಲಿನ ಶ್ರಾದ್ಧದ ಪುಣ್ಯ–ಪ್ರಭಾವದಿಂದ ಸ್ವರ್ಗಕ್ಕೆ ತೆರಳುತ್ತಾರೆ ಮತ್ತು ಪಿತೃಗಳು ತಮ್ಮ ಕೈಗಳನ್ನು ಚಾಚಿ ಪಿಂಡವನ್ನು ತೆಗೆದುಕೊಳ್ಳುತ್ತಾರೆ. ಈ ಮಾತೂ ಕೂಡ ಸುಳ್ಳೇನು?

**ಉತ್ತರ:–** ಸರ್ವಥಾ ಸುಳ್ಳು, ಅಲ್ಲಿ ಪಿಂಡದಾನಮಾಡುವುದರ ಪ್ರಭಾವ ಇದೇ ಆಗಿದ್ದಲ್ಲಿ, ಯಾವ ಪಂಡಾ[೮೩]ಗಳಿಗೆ ಪಿತೃಗಳ ಸುಖಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಾರೋ, ಅದನ್ನು ಗಯಾದವರು ವೇಶ್ಯಾಗಮನ ಮೊದಲಾದ ಪಾಪದಲ್ಲಿ ವ್ಯಯಿಸುತ್ತಾರೆ. ಆ ಪಾಪ ಬಿಟ್ಟು ಹೋಗುವುದಿಲ್ಲವೇಕೆ? ಮತ್ತು, ಭಟ್ಟರುಗಳ ಕೈಗಳನ್ನು ಬಿಟ್ಟರೆ, ಬೇರೆ ಯಾರೂ ಕೈಚಾಚುವುದು ಈ ದಿನಗಳಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ. ಯಾವಾಗಲೋ ಯಾವನೋ ಒಬ್ಬ ಧೂರ್ತನು ನೆಲದಲ್ಲಿ ಗುಂಡಿತೋಡಿ, ಅದರಲ್ಲಿ ಒಬ್ಬ ಮನುಷ್ಯನನ್ನು ಕುಳ್ಳಿರಿಸಿರಬಹುದು. ಆ ಮೇಲೆ ಅದರ ದ್ವಾರದ ಮೇಲೆ ಹುಲ್ಲನ್ನು ಹರಡಿ, ಪಿಂಡವನ್ನಿಟ್ಟಿರಬಹುದು. ಮತ್ತೆ ಆ ಕಪಟಿಯು ಅದನ್ನು ಎತ್ತಿಕೊಂಡಿರಬಹುದು. ಯಾವನಾದರೂ ಒಬ್ಬ ಕಣ್ಣಿದ್ದರೂ ಕುರುಡನಾದ, ಹಣದ ಗಂಟಿನ ಭಂಟನೊಬ್ಬನನ್ನು ಹೀಗೆ ವಂಚಿಸಿದ್ದರೆ, ಆಶ್ಚರ್ಯವಿಲ್ಲ. ಹಾಗೆಯೇ ವೈಜನಾಥನನ್ನು ರಾವಣನು ತಂದಿದ್ದನು– ಎನ್ನುವುದೂ ಸುಳ್ಳುಮಾತೇ ಆಗಿರುತ್ತದೆ.

---

೮೨. ಲಜ್ಜಾಜನಕವಾದ ವಾಸ್ತವಿಕ ಘಟನೆಗಳಿಗೆ ಏರು–ಪೇರು ಅರ್ಥ ಕಲ್ಪಿಸಿ, ನಪುಂಸಕತೆಗೆ ಪೌರುಷದ ಮೆರಗು ಹಚ್ಚಿ, ಚಮತ್ಕಾರಗಳ ರೂಪದಲ್ಲಿ ಬಣ್ಣಿಸಿ, ಜನರನ್ನು ಮರಳುಗೊಳಿಸಿ, ನಿಷ್ಕ್ರಿಯರನ್ನಾಗಿ ಮಾಡುವುದೇ ಪುರಾಣಕಾರರ ಉದ್ದೇಶ್ಯವಾಗಿತ್ತು.
ಈ ಪ್ರಶ್ನೆ ಮತ್ತು ಮುಂದಿನ ಪ್ರಶ್ನೆಗಳೆಲ್ಲಾ ಈ ಮಾತಿಗೆ ದೃಷ್ಟಾಂತ ರೂಪದಲ್ಲಿವೆ.

೮೩. ಭಟ್ಟರುಗಳಿಗೆ.
ಉತ್ತರಭಾರತದ ತೀರ್ಥಸ್ಥಾನಗಳಲ್ಲಿ ತೀರ್ಥಯಾತ್ರಿಗಳ ವ್ಯವಸ್ಥೆ ಮಾಡುವ ಮತ್ತು ಅವರಿಂದ ಪೂಜಾ–ಪಾಠ–ಶ್ರಾದ್ಧ ಮೊದಲಾದುವುಗಳನ್ನು ಮಾಡಿಸುವ, ಹಾಗೂ ಅವರಿಂದ ಪುಷ್ಕಳವಾಗಿ ಭೋಜನ ಮತ್ತು ದಕ್ಷಿಣೆಗಳನ್ನು ಗಿಟ್ಟಿಸಿಕೊಂಡು, ಕೊನೆಗೆ ಅವರನ್ನು ಧನದಿಂದ ರಿಕ್ತರನ್ನಾಗಿ ಮಾಡುವ ಬ್ರಾಹ್ಮಣ–ಪಟಿಂಗರಿಗೆ 'ಪಂಡಾ' ಎಂಬುದು ರೂಢಿಯಾದ ಹೆಸರು. ಆದರೆ, ಪಂಡಾ ಶಬ್ದದ ವಾಸ್ತವಿಕ ಅರ್ಥ "ಸದಸದ್ವಿವೇಕಶಾಲಿನೀ ಬುದ್ಧಿ" ಎಂದು. ಈ ಬುದ್ಧಿಯಾರಲ್ಲಿದೆಯೋ ಅವರಿಗೆ 'ಪಂಡಿತಾ' ಎಂದು ಹೆಸರು.

**ಪ್ರಶ್ನೆ :-** ನೋಡಿರಿ! ಕಲಕತ್ತೆಯ ಕಾಳೀ ಮತ್ತು ಕಾಮಾಕ್ಷೀ[೮೪] ಮೊದಲಾದ ದೇವಿಯರನ್ನು ಲಕ್ಷಾಂತರ ಜನರು ಅಂಗಿಕರಿಸುತ್ತಾರೆ. ಇದು ಚಮತ್ಕಾರವಲ್ಲವೇನು?

**ಉತ್ತರ :-** ಏನೂ ಅಲ್ಲ. ಈ ಅಂಧರಾದ ಮಂದಿಗಳು ಕುರಿಗಳಂತೆ ಒಬ್ಬರ ಹಿಂದೊಬ್ಬರು ನಡೆಯುತ್ತಾರೆ; ಬಾವಿಯಲ್ಲಿ-ಕಮರಿಯಲ್ಲಿ ಬೀಳುತ್ತಾರೆ; ಅತ್ತ ದೂರ ಸರಿಯಲಾರರು. ಅದೇ ರೀತಿ ಒಬ್ಬ ಮೂರ್ಖನ ಹಿಂದೆ ಮತ್ತೊಬ್ಬನು ನಡೆದು ಪ್ರತಿಮಾ ಪೂಜನವೆಂಬ ಹಳ್ಳದಲ್ಲಿ ಸಿಕ್ಕಿಹಾಕಿಕೊಂಡು, ದುಃಖವನ್ನು ಹೊಂದುತ್ತಾರೆ.

**ಪ್ರಶ್ನೆ:-** ಆಯಿತಲ್ಲ! ಇದು ಹೋಗಲಿ, ಬಿಡಿರಿ. ಆದರೆ, ಜಗನ್ನಾಥದಲ್ಲಿಯಂತೂ ಪ್ರತ್ಯಕ್ಷವಾದ ಚಮತ್ಕಾರವಿದೆ. ಒಂದು ಶರೀರವನ್ನು ಪರಿವರ್ತಿಸುವ ಕಾಲಕ್ಕೆ, ಚಂದನದ ತೊಲೆ ಸಮುದ್ರದೊಳಗಿನಿಂದ ಸ್ವತಃ ಬರುತ್ತದೆ. ಒಲೆಯ ಮೇಲೆ, ಒಂದರ ಮೇಲೆ ಒಂದರಂತೆ ಏಳು ಹಂಡೆಗಳನ್ನಿಡುವುದರಿಂದ, ಮೇಲೆ-ಮೇಲಿನದರ ಅಕ್ಕಿ ಮೊದಲು ಬೇಯುತ್ತದೆ. ಮತ್ತು ಯಾವನಾದರೂ ಅಲ್ಲಿ ಜಗನ್ನಾಥನ ಪ್ರಸಾದವನ್ನು ತಿನ್ನದಿದ್ದರೆ, ಕುಷ್ಠ-ರೋಗಿಯಾಗಿ ಹೋಗುತ್ತಾನೆ. ಮತ್ತು ರಥ ತನ್ನಷ್ಟಕ್ಕೆ ತಾನೇ ಚಲಿಸುತ್ತದೆ. ಪಾಪಿಗೆ ದರ್ಶನವಾಗುವುದಿಲ್ಲ. ಇಂದ್ರದಮನನ ರಾಜ್ಯಭಾರದ ಕಾಲದಲ್ಲಿ ದೇವತೆಗಳು ದೇವಾಲಯವನ್ನು ನಿರ್ಮಿಸಿದ್ದಾರೆ. ಶರೀರವನ್ನು ಪರಿವರ್ತಿಸುವ ಕಾಲದಲ್ಲಿ ಒಬ್ಬ ರಾಜನು, ಒಬ್ಬ ಭಟ್ಟನು ಮತ್ತು ಒಬ್ಬ ಬಡಗಿಯು ಮೃತರಾಗುತ್ತಾರೆ. ಈ ಮೊದಲಾದ ಚಮತ್ಕಾರಗಳನ್ನು ನೀವು ಸುಳ್ಳೆನ್ನಲಾರಿರಿ.

**ಉತ್ತರ:-** ಯಾವನು ಹನ್ನೆರಡು ವರ್ಷ ಪರ್ಯಂತ ಜಗನ್ನಾಥನ ಪೂಜೆಯನ್ನು ಮಾಡಿದ್ದನೋ, ಅವನು ವಿರಕ್ತನಾಗಿ ಮಥುರೆಗೆ ಬಂದಿದ್ದನು; ನನ್ನನ್ನು ಸಂಧಿಸಿದ್ದನು. ನಾನು ಈ ಪ್ರಶ್ನೆಗಳಿಗೆ ಉತ್ತರವನ್ನು ಕೇಳಿದ್ದೆನು. ಅವನು ಈ ಎಲ್ಲ ಮಾತುಗಳೂ ಸುಳ್ಳೆಂದು ಹೇಳಿದನು. ಆದರೆ, ವಿವೇಕದಿಂದ-"ಯಾವಾಗ ಶರೀರವನ್ನು ಪರಿವರ್ತಿಸುವ ಕಾಲ ಬರುತ್ತದೋ, ಆಗ, ಹಡಗಿನಲ್ಲಿ ಚಂದನದ ಕೊರಡನ್ನು ಒಯ್ದು ಸಮುದ್ರದಲ್ಲಿ ಹಾಕುತ್ತಾರೆ. ಅದು ಸಮುದ್ರದ ಅಲೆಗಳಿಂದ ತೀರಕ್ಕೆ ಬಂದು ಮುಟ್ಟುತ್ತದೆ. ಅದನ್ನು ತೆಗೆದುಕೊಂಡು ಬಡಗಿಗಳು ಪ್ರತಿಮೆಗಳನ್ನು ನಿರ್ಮಿಸುತ್ತಾರೆ. ಯಾವಾಗ ಅಡಿಗೆಯಾಗುತ್ತದೋ, ಆಗ ದ್ವಾರವನ್ನು ಮುಚ್ಚಿ, ಬಾಣಸಿಗನೊಬ್ಬನನ್ನು ಬಿಟ್ಟು, ಬೇರೆ ಯಾವನನ್ನೂ ಒಳಹೋಗಲೂ ಬಿಡುವುದಿಲ್ಲ. ನೋಡಲೂ ಬಿಡುವುದಿಲ್ಲ. ನೆಲದ ಮೇಲೆ ಸುತ್ತಲೂ ಆರು ಮಧ್ಯೆ ಒಂದು ಚಕ್ರಾಕಾರವಾಗಿ ಒಲೆಗಳು ರಚಿತವಾಗುತ್ತವೆ. ಆ ಹಂಡೆಗಳ ತಳಕ್ಕೆ ತುಪ್ಪ, ಮಣ್ಣು ಮತ್ತು ಬೂದಿಯನ್ನು ಸವರಿ, ಆರು ಒಲೆಗಳ ಮೇಲೆ ಅಕ್ಕಿಯನ್ನು ಬೇಯಿಸಿ, ಅವುಗಳ ತಳವನ್ನುಜ್ಜಿ, ಆ ಮಧ್ಯದ ಹಂಡೆಯಲ್ಲಿ ಆಗಲೇ ಅಕ್ಕಿ ಹಾಕಿ, ಆರು ಹಂಡೆಗಳ ಬಾಯಿಗಳನ್ನು ಕಬ್ಬಿಣದ ಕಾವಲಿಗಳಿಂದ ಮುಚ್ಚಿ, ಧನಾಢ್ಯರಾಗಿರುವ ದರ್ಶನಾಕಾಂಕ್ಷಿಗಳನ್ನು ಒಳಕ್ಕೆ ಕರೆದು ತೋರಿಸುತ್ತಾರೆ. ಮೇಲಮೇಲಣ ಹಂಡೆಗಳಿಂದ ಅನ್ನವನ್ನು ತೆಗೆದು, ಬೆಂದಿರುವ ಅಗಳುಗಳನ್ನು ತೋರಿಸಿ, ಕೆಳಗಿನ ಹಸಿಯ ಅಕ್ಕಿಯನ್ನು ತೆಗೆದು ತೋರಿಸಿ, ಅವರಿಗೆ-'ಹಂಡೆಗಳಿಗಾಗಿ ಏನನ್ನಾದರೂ ಅರ್ಪಿಸಿಬಿಡಿ'.-ಎನ್ನುತ್ತಾರೆ. ಕಣ್ಣಿದ್ದರೂ ಕುರುಡರಾದ ಆ ಹಣದ ಗಂಟಿನ ಬಂಟರು[೮೫] ರೂಪಾಯಿಗಳನ್ನೂ, ಚಿನ್ನದ ವರಹಗಳನ್ನೂ ಅರ್ಪಿಸುತ್ತಾರೆ. ಮತ್ತು ಕೆಲವರು ಮಾಸಿಕ ವಂತಿಕೆಯನ್ನೂ ವ್ಯವಸ್ಥೆಗೊಳಿಸುತ್ತಾರೆ".- ಎಂಬುದು ನಿಶ್ಚಯವಾಗುತ್ತದೆ. ಕೊಳಕರೂ, ನೀಚಜನರೂ ದೇವಾಲಯಕ್ಕೆ ನೈವೇದ್ಯವನ್ನು ತರುತ್ತಾರೆ. ಯಾವಾಗ ನೈವೇದ್ಯ ಸಮರ್ಪಿತವಾಗಿ ತೀರುತ್ತದೋ, ಆಗ ಆ ಕೊಳಕರೂ, ನೀಚಜನರೂ ಎಂಜಲು ಮಾಡಿಬಿಡುತ್ತಾರೆ. ಆ ಮೇಲೆ ಯಾವನು ರೂಪಾಯಿಗಳನ್ನು ಕೊಟ್ಟು ಹಂಡೆಯನ್ನು ತೆಗೆದುಕೊಳ್ಳುತ್ತಾನೋ, ಅವನ ಮನೆಗೆ ತಲುಪಿಸುತ್ತಾರೆ, ಮತ್ತು ಸಾಧು-ಸಂತರಿಂದ ಹಿಡಿದು ಹುಂಬರ ಮತ್ತು ಹೊಲಸರವರೆಗೆ ಒಂದು ಪಂಕ್ತಿಯಲ್ಲಿ ಕುಳಿತು, ಒಬ್ಬರು ಇನ್ನೊಬ್ಬರ ಎಂಜಲನ್ನು ಉಣ್ಣುತ್ತಾರೆ. ಯಾವಾಗ ಈ ಪಂಕ್ತಿ ಏಳುತ್ತದೋ, ಆಗ ಅದೇ ಎಲೆಗಳ ಮೇಲೆ ಬೇರೆಯವರಿಗೆ ಬಡಿಸುತ್ತಾ ಹೋಗುತ್ತಾರೆ. ಮತ್ತು ಬಹಳ ಮಂದಿಗಳು ಅಲ್ಲಿ ಹೋಗಿ, ಅವರ ಎಂಜಲನ್ನು ತಿನ್ನದೆ, ತಮ್ಮ ಕೈಯಿಂದಲೇ ಅಡಿಗೆಮಾಡಿ, ಊಟಮಾಡಿ ಹೊರಟುಬರುತ್ತಾರೆ. ಕುಷ್ಠ ಮೊದಲಾದ ಯಾವದೇ ರೋಗಗಳೂ ಬರುವುದಿಲ್ಲ. ಮತ್ತು ಆ ಜಗನ್ನಾಥಪುರಿಯಲ್ಲಿಯೂ ಕೂಡ, ಬಹಳ ಮಂದಿ ಪ್ರಸಾದವನ್ನು ತಿನ್ನುವುದಿಲ್ಲ. ಅವರಿಗೂ ಕುಷ್ಠವೇ ಮೊದಲಾದ ರೋಗಗಳು

---

೮೪. "ಕಾಮಾಕ್ಷಾ" ಎಂಬ ಹೆಸರಿನ ದೇವಿಯ ಮಂದಿರ ಅಸ್ಸಾಮಿನಲ್ಲಿದೆ. ಇವರೆಡು ದೇವಿಯ ಮಂದಿರಗಳೂ ವಾಮಮಾರ್ಗಿಗಳ ಪ್ರಧಾನಕ್ಷೇತ್ರಗಳಾಗಿವೆ. ಪಶುಬಲಿಯ ನಿತ್ಯ ಕಾರ್ಯದಿಂದ, ಮಂದಿರದ ಹೊರಗೆ ರಕ್ತದ ಕೋಡಿ ಹರಿಯುತ್ತಿರುತ್ತದೆ. ಕಾಮಾಕ್ಷ ದೇವಿಯ ಮಂದಿರದಲ್ಲಿ ಪಂಚ ಮಕಾರಗಳ ಭ್ರಷ್ಟ ಲೀಲೆ ಇನ್ನಷ್ಟು ಪ್ರಬಲವಾಗಿದೆ.

೮೫. ಹಿಂದಿಯಲ್ಲಿ ಇದಕ್ಕೆ 'ಆಂಖ್ ಕೇ ಅಂಧೇ ಔರ್ ಗಾಂಠ್ ಕೇ ಪೂರೇ' ಎಂಬ ವಾಗ್ದೋರಣೆಯನ್ನು ಪ್ರಯೋಗಿಸಲಾಗಿದೆ. ಈ ಪ್ರಯೋಗವನ್ನು ಮಹರ್ಷಿ ದಯಾನಂದರು ಮೂಢ ಧನಿಕರಾಗಿ, ಈ ಗ್ರಂಥದಲ್ಲಿ ಅನೇಕ ಕಡೆ ಮಾಡಿದ್ದಾರೆ.

ಬರುವುದಿಲ್ಲ. ಮತ್ತು ಜಗನ್ನಾಥಪುರಿಯಲ್ಲಿಯೂ ಬಹಳ ಜನ ಕುಷ್ಠ ರೋಗಿಗಳಿದ್ದಾರೆ. ಪ್ರತಿನಿತ್ಯವೂ ಎಂಜಲನ್ನು ತಿನ್ನುವುದರಿಂದಲೂ ಆ ರೋಗ ತಪ್ಪುವದಿಲ್ಲ. ಮತ್ತು ಜಗನ್ನಾಥದಲ್ಲಿ ವಾಮಮಾರ್ಗಿಗಳು ಈ ಭೈರವೀ ಚಕ್ರವನ್ನು[೮೬] ನಿರ್ಮಿಸಿದ್ದಾರೆ. ಏಕೆಂದರೆ, ಸುಭದ್ರೆಯು ಶ್ರೀಕೃಷ್ಣ ಮತ್ತು ಬಲರಾಮರ ಸೋದರಿಯಾಗಿದ್ದಾಳೆ. ಅವಳನ್ನೇ ಇಬ್ಬರು ಸೋದರರ ನಡುವೆ ಸ್ತ್ರೀಯ ಅಥವಾ ಮಾತೆಯ[೮೭] ಸ್ಥಾನದಲ್ಲಿ ಕೂಡಿಸಿದ್ದಾರೆ. ಭೈರವೀ ಚಕ್ರವಲ್ಲದಿದ್ದಲ್ಲಿ, ಈ ಘಟನೆ ಎಂದಿಗೂ ಆಗುತ್ತಿರಲಿಲ್ಲ.[೮೮] ಮತ್ತು ರಥದ ಚಕ್ರಗಳೊಂದಿಗೆ ಕೀಲನ್ನು ಹೊಂದಿಸಿದ್ದಾರೆ. ಅವುಗಳನ್ನು ಯಾವಾಗ ನೇರವಾಗಿ ತಿರುಗಿಸುತ್ತಾರೋ, ಕೀಲೂ ತಿರುಗುತ್ತದೆ. ಆಗ ರಥ ಚಲಿಸುತ್ತದೆ. ಯಾವಾಗ ಜಾತ್ರೆಯ ನಡುವೆ ರಥ ಸೇರುತ್ತದೋ, ಆಗಲೇ ಅದರ ಕೀಲನ್ನು ವಿರುದ್ಧವಾಗಿ ತಿರುಗಿಸುವುದರಿಂದ ರಥವು ನಿಂತುಬಿಡುತ್ತದೆ. ಪೂಜಾರಿಗಳು "ಜಗನ್ನಾಥನು ಪ್ರಸನ್ನನಾಗಿ ತನ್ನ ರಥವನ್ನು ನಡೆಯಿಸುವಂತೆ ದಾನ ಕೊಡಿರಿ. ಪುಣ್ಯಗಳಿಸಿರಿ. ನಮ್ಮ ಧರ್ಮ ಉಳಿಯಲಿ". – ಎಂದು ಕರೆಗೊಡುತ್ತಾರೆ. ಯಾವವರೆಗೆ ಕಾಣಿಕೆ ಬರುತ್ತಾ ಹೋಗುತ್ತದೋ, ಆ ವರೆಗೆ ಹೀಗೆಯೇ ಕರೆಗೊಡುತ್ತಾ ಹೋಗುತ್ತಾರೆ. ಯಾವಾಗ ಕಾಣಿಕೆ ಬರುವುದು ನಿಲ್ಲುತ್ತದೋ, ಆಗ ಒಬ್ಬ ವ್ರಜವಾಸಿಯು ಒಳ್ಳೆಯ ವಸ್ತ್ರಗಳನ್ನೂ, ಶಾಲನ್ನೂ ಹೊದೆದು, ಮುಂದುಗಡೆ ನಿಂತು, ಕೈಮುಗಿದು "ಓ ಜಗನ್ನಾಥ ಸ್ವಾಮಿ! ನೀನು ದೆಯತೋರಿ, ರಥವನ್ನು ನಡೆಯಿಸು. ನಮ್ಮ ಧರ್ಮವನ್ನುಳಿಸು". ಎಂದು ಸ್ತುತಿಸುತ್ತಾನೆ. ಈ ಮೊದಲಾದುವನ್ನು ಹೇಳಿ, ಸಾಷ್ಟಾಂಗ ದಂಡಪ್ರಣಾಮ ಮಾಡಿ, ರಥದ ಮೇಲೆ ಹತ್ತುತ್ತಾನೆ. ಅದೇ ಕಾಲಕ್ಕೆ ಕೀಲನ್ನು ನೇರವಾಗಿ ತಿರುಗಿಸಿ ಬಿಡುತ್ತಾರೆ ಮತ್ತು ಜಯಜಯಕಾರಮಾಡಿ ಸಾವಿರಾರು ಮಂದಿ ಹಗ್ಗವನ್ನೆಳೆಯುತ್ತಾರೆ. ರಥ ನಡೆಯುತ್ತದೆ. ಮಂದಿರವು ಹಗಲಿನಲ್ಲಿಯೂ ಕೂಡ ಕತ್ತಲೆ ಕವಿದಿರುವಷ್ಟು ದೊಡ್ಡದಾಗಿದೆ. ಯಾವಾಗ ಬಹುಮಂದಿ ದರ್ಶನಕ್ಕೆ ಬರುತ್ತಾರೋ, ಆಗ ದೀಪವನ್ನು ಹಚ್ಚಬೇಕಾಗುತ್ತದೆ. ಆ ಪ್ರತಿಮೆಗಳ ಮಂದೆ ಎಳೆದು ಮರೆಮಾಡುವ ತೆರೆಗಳು ಎರಡು ಪಕ್ಕಗಳಿಗೂ ಇರುತ್ತವೆ. ಭಟ್ಟರು–ಪೂಜಾರಿಗಳು ಒಳಗೆ ನಿಂತಿರುತ್ತಾರೆ. ಯಾವಾಗ ಒಂದು ಕಡೆಯವನು ತೆರೆಯನ್ನು ಎಳೆಯುತ್ತಾನೋ, ಆ ಕೂಡಲೇ ಪ್ರತಿಮೆ ಮರೆಯಾಗಿ ಹೋಗುತ್ತದೆ. ಆಗ ಭಟ್ಟರು, ಪೂಜಾರಿಗಳು ಎಲ್ಲರೂ – "ನೀವು ಕಾಣಿಕೆ ನೀಡಿರಿ. ನಿಮ್ಮ ಪಾಪಗಳು ಹೊರಟುಹೋಗುವುವು. ಆಗ ದರ್ಶನವಾಗುವುದು. ಬೇಗ ಮಾಡಿರಿ". ಎಂದು ಕರೆಗೊಡುತ್ತಾರೆ. ಆ ಬಡಪಾಯಿ ಮುಗ್ಧ ಜನರು ಧೂರ್ತರುಗಳಿಂದ ಕೊಳ್ಳೆಹೊಡೆಯಲ್ಪಡುತ್ತಾರೆ. ಮತ್ತು ಸರ್ರನೆ ಎರಡನೆಯ ತೆರೆಯನ್ನು ಎಳೆದುಬಿಡುತ್ತಾರೆ. ಆಗಲೇ ದರ್ಶನವಾಗುತ್ತದೆ. ಆಗ ಜಯಕಾರಮಾಡಿ, ಪ್ರಸನ್ನರಾಗಿ, ತಳ್ಳಿಸಿಕೊಂಡು, ತಿರಸ್ಕೃತರಾಗಿ ಹೊರಟುಬರುತ್ತಾರೆ. ಇಂದ್ರದಮನನ ಕುಲದವರು ಇಂದಿಗೂ ಕಲಕತ್ತೆಯಲ್ಲಿದ್ದಾರೆ. ಅವನು ಧನಾಢ್ಯನಾದ ರಾಜನೂ, ದೇವಿಯ ಉಪಾಸಕನೂ ಆಗಿದ್ದನು. ಈ ರೀತಿಯಿಂದಲಾದರೂ ಆರ್ಯಾವರ್ತ ದೇಶದ ಭೋಜನದ ಕಲಹವನ್ನು ಬಗೆ ಹರಿಸೋಣವೆಂದು, ಅವನು ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿ ದೇವಾಲಯವನ್ನು ಕಟ್ಟಿಸಿದ್ದನು. ಆದರೆ, ಆ ಮೂರ್ಖರು ಯಾವಾಗ ತಾನೇ ಬಿಟ್ಟಾರು? 'ದೇವ'ನೆಂದು ಅಂಗೀಕರಿಸುವಿರಾದರೆ, ಯಾವ ಶಿಲ್ಪಿಗಳು ದೇವಾಲಯವನ್ನು ನಿರ್ಮಿಸಿದರೋ, ಆ ಕಾರ್ಯಕುಶಲರನ್ನೇ ಹಾಗೆಂದು ಅಂಗೀಕರಿಸಿರಿ. ರಾಜನೂ, ಭಟ್ಟನೂ ಮತ್ತು ಬಡಗಿಯೂ ಆ ಸಮಯದಲ್ಲಿ ಮೃತರಾಗುವುದಿಲ್ಲ; ಆದರೆ, ಮೂವರೂ ಅಲ್ಲಿ ಪ್ರಧಾನರಾಗಿರುತ್ತಾರೆ. ಚಿಕ್ಕವರಿಗೆ ಅವರು ದುಃಖವನ್ನುಂಟುಮಾಡುತ್ತಿದ್ದರೋ, ಏನೋ? ಆ ಕಾಲದಲ್ಲಿ, ಎಂದರೆ ಶರೀರವನ್ನು ಪರಿವರ್ತಿಸುವ ಸಮಯದಲ್ಲಿ, ಆ ಮೂವರೂ ಉಪಸ್ಥಿತರಾಗಿರುತ್ತಾರೆ. ಅವರು[೮೯] ಪರಸ್ಪರ ಆಲೋಚಿಸಿ, ಪ್ರತಿಮೆಯ ಹೃದಯವನ್ನು ಟೊಳ್ಳಾಗಿ ಮಾಡಿರುತ್ತಾರೆ. ಅದರಲ್ಲಿ ಒಂದು ಚಿನ್ನದ ಕರಡಿಗೆಯಲ್ಲಿ, ಸಾಲಿಗ್ರಾಮ ಒಂದನ್ನು ಇಟ್ಟಿರುತ್ತಾರೆ. ಅದನ್ನು ಪ್ರತಿದಿನವೂ ತೊಳೆದು ಚರಣಾಮೃತವನ್ನು ಸಿದ್ಧಪಡಿಸುತ್ತಾರೆ. ಶಯನೋತ್ಸವದ ರಾತ್ರಿಯಲ್ಲಿ, ಆರತಿಯಾಗುವಾಗ, ಆ ಜನರು ಆ ಸಾಲಿಗ್ರಾಮದ ಮೇಲೆ ವಿಷದ ದ್ರಾವಕವನ್ನು ಸವರಿರಬಹುದು. ಅದನ್ನು ತೊಳೆದು, ಅದೇ ಮೂವರಿಗೆ ಕುಡಿಸಿರಬಹುದು; ಅದರಿಂದ ಯಾವಾಗಲೋ

---

೮೬. 'ಭೈರವೀಚಕ್ರ' ದ ವರ್ಣನೆಯು ಹಿಂದೆ ಇದೇ ಸಮುಲ್ಲಾಸದಲ್ಲಿ ಮಾಡಲ್ಪಟ್ಟಿದೆ.

೮೭. ಪ್ರಾಚೀನ ಭಾರತೀಯ ಶಿಷ್ಟಾಚಾರಕ್ಕನುಸಾರವಾಗಿ, ಯಜ್ಞಕಾರ್ಯವಲ್ಲದ ವೇಳೆಯಲ್ಲಿ ಪತ್ನಿಯನ್ನು ಪತಿಯ ಎಡ ಭಾಗದಲ್ಲಿ, ಮತ್ತು ಪತ್ನಿಯಲ್ಲದ ಇತರ ಸ್ತ್ರೀಯರನ್ನು ಬಲಭಾಗದಲ್ಲಿ ಕೂಡಿಸುವ ವಿಧಾನವಿದೆ. ಇಬ್ಬರ ಮಧ್ಯದಲ್ಲೂ ಸುಭದ್ರೆಯನ್ನು ಕೂಡಿಸಿರುವುದರಿಂದ, ಅವಳ ಸ್ಥಿತಿಯು, ಅವಳು ಯಾರ ಎಡಭಾಗದಲ್ಲಿರುವಳೋ, ಅವನಿಗೆ ಪತ್ನಿಯಂತೆಯೂ, ಮತ್ತು ಯಾರ ಬಲಭಾಗದಲ್ಲಿರುವಳೋ ಅವನಿಗೆ ಮಾತೆಯಂತೆಯೂ ಆಗುತ್ತದೆ. –ಯು.ಮೀ.

೮೮. ಈ ಮಾತು ಜಗನ್ನಾಥ ಮಂದಿರದ ಮೇಲೆ ಕೆತ್ತಿರುವ ಭೋಗಾತ್ಮಕ [ಸಂಭೋಗರತ] ಮೂರ್ತಿಗಳಿಂದ ಸಿದ್ಧವಾಗುತ್ತದೆ. –ಯು.ಮೀ.
ಮಧ್ಯಪ್ರದೇಶದ ಛತರಪುರ ಜಿಲ್ಲೆಯಲ್ಲಿನ ಖಜುರಾಹೋ ಎಂಬ ಸ್ಥಾನದ ದೇವಾಲಯಗಳು ಈ ವಿಧದ ಪ್ರತಿಮೆಗಳ ಬಾಹುಲ್ಯದ ಕಾರಣದಿಂದ, ಭೋಗಾತ್ಮಕ ಜೀವಿಗಳಾದ ಪಶ್ಚಿಮೀಯರಿಗೆ ಅತಿ ದರ್ಶನೀಯ ಸ್ಥಾನಗಳಾಗಿವೆ.

೮೯. ಎಂದರೆ, ಪಂಡಾ–ಪೂಜಾರಿಗಳು.

ಅವರು ಮೃತರಾಗಿ ಹೋಗಿರಬಹುದು. ಅವರು ಸತ್ತುದೇನೋ ಹೀಗೆಯೇ; ಮತ್ತು ಭೋಜನ ಭಟ್ಟರು – "ಜಗನ್ನಾಥ ದೇವರು ತಮ್ಮ ಶರೀರವನ್ನು ಪರಿವರ್ತಿಸುವ ಕಾಲದಲ್ಲಿ ಮೂವರು ಭಕ್ತರನ್ನೂ ಕೂಡ ಸಂಗಡ ಕರೆದೊಯ್ದರು". ಎಂದು ಪ್ರಸಿದ್ಧ ಪಡಿಸಿರಬಹುದು. ಪರಧನವನ್ನು ಕಸಿದುಕೊಳ್ಳಲು ಇಂತಹ ಕಪಟನಾಟಕಗಳು ನಡೆಯುತ್ತಲೇ ಇರುತ್ತವೆ.

**ಪ್ರಶ್ನೆ:–** ರಾಮೇಶ್ವರದಲ್ಲಿ ಗಂಗೋತ್ರಿಯ ಜಲವನ್ನು ಅಭಿಷೇಕ ಮಾಡುವ ಕಾಲದಲ್ಲಿ ಲಿಂಗವು ದೊಡ್ಡದಾಗುತ್ತದೆ. ಈ ಮಾತೂ ಸುಳ್ಳೇನು?

**ಉತ್ತರ:–** ಸುಳ್ಳು. ಏಕೆಂದರೆ, ಆ ದೇವಾಲಯದಲ್ಲಿಯೂ ಕೂಡ ಹಗಲಿನಲ್ಲಿಯೂ ಕತ್ತಲಿರುತ್ತದೆ. ದೀಪಗಳು ಹಗಲಿರುಳೂ ಉರಿಯುತ್ತಾ ಇರುತ್ತವೆ.[೯೦] ಯಾವಾಗ ಜಲದ ಧಾರೆಯನ್ನು ಬಿಡುತ್ತಾರೋ, ಆಗ ಆ ಜಲದಲ್ಲಿ ಮಿಂಚಿನಂತೆ ದೀಪದ ಪ್ರತಿಬಿಂಬ ಹೊಳೆಯುತ್ತದೆ. ಮತ್ತೇನೂ ಇಲ್ಲ. ಶಿಲೆ ಕುಗ್ಗುವುದೂ ಇಲ್ಲ; ಹಿಗ್ಗುವುದೂ ಇಲ್ಲ. ಎಷ್ಟಿರುತ್ತದೋ ಅಷ್ಟೇ ಇರುತ್ತದೆ. ಇಂತಹ ಲೀಲೆಮಾಡಿ ಬಡಪಾಯಿಗಳಾದ ಬುದ್ಧಿ ಹೀನರನ್ನು ವಂಚಿಸುತ್ತಾರೆ.

**ಪ್ರಶ್ನೆ:–** ರಾಮೇಶ್ವರವನ್ನು ಶ್ರೀರಾಮಚಂದ್ರನೇ ಸ್ಥಾಪಿಸಿದ್ದಾನೆ. ಪ್ರತಿಮಾ–ಪೂಜನ ವೇದವಿರುದ್ಧವಾಗಿದ್ದಲ್ಲಿ ಶ್ರೀರಾಮಚಂದ್ರನು ಪ್ರತಿಮಾಸ್ಥಾಪನೆಯನ್ನು ಏತಕ್ಕೆ ಮಾಡುತ್ತಿದ್ದನು? ಮತ್ತು ರಾಮಾಯಣದಲ್ಲಿ ವಾಲ್ಮೀಕಿಗಳು ಏಕೆ ಬರೆಯುತ್ತಾರೆ?

**ಉತ್ತರ:–** ಶ್ರೀರಾಮಚಂದ್ರನ ಕಾಲದಲ್ಲಿ ಆ ಲಿಂಗದ, ಅಥವಾ ದೇವಾಲಯದ ಹೆಸರು–ಕುರುಹು ಕೂಡ ಇರಲಿಲ್ಲ.[೯೧] ಆದರೆ, ದಕ್ಷಿಣ ದೇಶಸ್ಥನಾದ ರಾಮನೆಂಬ ಹೆಸರನ್ನುಳ್ಳ ರಾಜನು ದೇವಾಲಯವನ್ನು ಕಟ್ಟಿ, ಲಿಂಗಕ್ಕೆ ರಾಮೇಶ್ವರವೆಂದು ಹೆಸರಿಟ್ಟಿದ್ದಾನೆ– ಎಂಬುದು ಸರಿಯಾಗಿದೆ. ಯಾವಾಗ ಶ್ರೀರಾಮಚಂದ್ರನು ಸೀತೆಯನ್ನು ಕರೆದುಕೊಂಡು, ಹನುಮಂತ – ಮೊದಲಾದವರೊಂದಿಗೆ ಲಂಕೆಯಿಂದ ಆಕಾಶ ಮಾರ್ಗದಲ್ಲಿ ವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಬರುತ್ತಿದ್ದನೋ, ಆಗ ಸೀತೆಗೆ ಹೀಗೆ ಹೇಳಿದ್ದಾನೆ:–

**ಸೇತುಬಂಧ ಇತಿ ಖ್ಯಾತಂ ತ್ರೈಲೋಕ್ಯ ಪರಿಪೂಜಿತಮ್ ।**

**ಅತ್ರ ಪೂರ್ವಂ ಮಹಾದೇವಃ ಪ್ರಸಾದಮಕರೋದ್ವಿಭುಃ ।** (ವಾಲ್ಮೀಕಿರಾಮಾಯಣ ಯುದ್ಧ :– ೧೨೩ . ೨೧–೨೨)

"ಹೇ ಸೀತೆ! ನಿನ್ನ ವಿಯೋಗದಿಂದ ನಾವು ವ್ಯಾಕುಲರಾಗಿ ತಿರುಗುತ್ತಿದ್ದೆವು. ಮತ್ತು ಚಾತುರ್ಮಾಸ್ಯವನ್ನು ಮಾಡಿದ್ದೆವು. ಹಾಗೆಯೇ ಪರಮೇಶ್ವರನ ಉಪಾಸನಾಧ್ಯಾನಗಳನ್ನೂ ಕೂಡ ಮಾಡುತ್ತಿದ್ದೆವು. ಅದೇ ಯಾವ ಸರ್ವತ್ರವಿಭುವಾದ, ವ್ಯಾಪಕನಾದ, ದೇವತೆಗಳಿಗೆಲ್ಲಾ ದೇವನಾದ ಮಹಾದೇವನು, ಪರಮಾತ್ಮನು ಇದ್ದಾನೋ, ಅವನ ಕೃಪೆಯಿಂದ, ನಮಗೆ ಇಲ್ಲಿ ಸಮಸ್ತ ಸಲಕರಣೆಗಳೂ ಸಿಕ್ಕಿವೆ. ಮತ್ತು ನೋಡು, ನಾವು ಈ ಸೇತುವನ್ನು ಕಟ್ಟಿ, ಲಂಕೆಗೆ ಹೋಗಿ, ಆ ರಾವಣನನ್ನು ಸಂಹರಿಸಿ, ನಿನ್ನನ್ನು ಕರೆತಂದೆವು". ಇದರ ಹೊರತು ಅಲ್ಲಿ ವಾಲ್ಮೀಕಿಯು ಮತ್ತೇನನ್ನೂ ಬರೆಯಲಿಲ್ಲ.[೯೨]

**ಪ್ರಶ್ನೆ:– ರಂಗ್ ಹೈ ಕಾಲಿಯೂ ಕಾಂತ್ ಕೋ । ಜಿಸನೇ ಹುಕ್ಕಾ ಪಿಲಾಯಾ ಸಂತ್ ಕೋ ॥**

ದಕ್ಷಿಣದಲ್ಲಿ ಕಾಲಿಯಾಕಾಂತನ ಒಂದು ಮೂರ್ತಿಯಿದೆ. ಅದು ಈವರೆಗೂ ಕೂಡ ಗುಡುಗುಡಿಯನ್ನು[೯೩] ಸೇದುತ್ತದೆ. ಪ್ರತಿಮಾಪೂಜನ ಸುಳ್ಳಾಗಿದ್ದರೆ, ಈ ಚಮತ್ಕಾರವೂ ಕೂಡ ಸುಳ್ಳಾಗಿ ಹೋದೀತು!

**ಉತ್ತರ:–** ಸುಳ್ಳು, ಸುಳ್ಳು, ಇದೆಲ್ಲವೂ ಪೋಪಲೀಲೆಯಾಗಿದೆ. ಏಕೆಂದರೆ, ಆ ಪ್ರತಿಮೆಯ ಬಾಯಿ ಟೊಳ್ಳಾಗಿರಬಹುದು. ಅದರ ಛಿದ್ರವನ್ನು, ಬೆನ್ನಿನಿಂದ ಹೊರಹೊರಡಿಸಿ, ಗೋಡೆಯ ಅತ್ತಕಡೆ, ಇನ್ನೊಂದು ಮನೆಯಲ್ಲಿ ಕೊಳವೆ

---

೯೦. ಈ ಮಾತುಗಳು ಪ್ರತ್ಯಕ್ಷ ಅನುಭವದಂತಿದೆ. ಆದ್ದರಿಂದ, ಮಹರ್ಷಿ ದಯಾನಂದರು ರಾಮೇಶ್ವರದ ಯಾತ್ರೆಯನ್ನೂ ಮಾಡಿದ್ದರಬಹುದೆಂಬ ಅನುಮಾನವುಂಟಾಗುತ್ತದೆ.

೯೧. ಇದರಿಂದ, ರಾಮಚಂದ್ರನ ಕಾಲವು ಎಷ್ಟು ಪ್ರಾಚೀನವೆಂದು ತಿಳಿದು ಬರುತ್ತದೆ.

೯೨. ವಾಲ್ಮೀಕಿ ರಾಮಾಯಣದಲ್ಲಿ ಬರೆಯಲ್ಪಡದ ಅನ್ಯ ಸಂಗತಿಗಳು ಅನ್ಯ ಕವಿಗಳಿಂದ ಪ್ರಕ್ಷಿಪ್ತವಾಗಿ ಪುರಾಣವಾಚನ–ಹರಿಕಥೆಗಳ ಮೂಲಕ ಜನರ ಕಿವಿಗಳನ್ನು ಪ್ರವೇಶಿಸಿ, ಹೃದಯದಲ್ಲಿ ಬೇರೂರಿವೆ.

೯೩. ಹಿಂದೀ ಭಾಷೆಯಲ್ಲಿ ಇದಕ್ಕೆ 'ಹುಕ್ಕಾ' ಎಂದು ಹೆಸರು. ಇದರಲ್ಲಿ ತಂಬಾಕು ಮತ್ತು ನೀರಿನ ಸಂಬಂಧವಿದೆ. ಈ ದುರಭ್ಯಾಸ ಮುಸಲ್ಮಾನ ನವಾಬರಿಂದ ಭಾರತದ ಹಿಂದೂ ಧನಿಕರಲ್ಲಿ ಪ್ರವೇಶಿಸಲ್ಪಟ್ಟಿತು. ನಂತರ, ಸಾಧಾರಣ ರೈತನವರೆಗೆ! ಇದು ಉತ್ತರ ಭಾರತದಲ್ಲಿ ಅತ್ಯಂತ ಪ್ರಚಲಿತವಾಗಿತ್ತು. ಧನಿಕ ಸ್ತ್ರೀಯರೂ ಇದರ ಸೇವನೆ ಮಾಡುತ್ತಿದ್ದರು. ಈಗ ಇದರ ಪ್ರಚಲನೆ ನಿಂತಿದೆ. ಅನೇಕ ತೀರ್ಥಸ್ಥಾನಗಳು ಎಷ್ಟು ಆಧುನಿಕ, ಎಂಬುದು ಇದರಿಂದ ಅರಿವಾಗುತ್ತದೆ.

ಹೊಂದಿಕೊಂಡಿರಬಹುದು. ಯಾವಾಗ ಪೂಜಾರಿ ಗುಡುಗುಡಿಯನ್ನು ತುಂಬಿಸಿ, ತೆರೆಯನ್ನೆಳೆದು, ಪ್ರತಿಮೆಯ ಬಾಯಿಗೆ ಕೊಳವೆಯನ್ನಿಟ್ಟು, ಹೊರಗೆ ಬರುತ್ತಿರಬಹುದೋ, ಆಗಲೇ ಹಿಂದಿರುವ ಮಾನವನು ತನ್ನ ಬಾಯಿನಿಂದ ಎಳೆಯುತ್ತಿರಬಹುದು. ಆಗ ಗುಡುಗುಡಿ 'ಗಡಗಡ' ನಾದವನ್ನು ಮಾಡುತ್ತಿರಬಹುದು. ಮತ್ತೊಂದು ರಂಧ್ರವು ಮೂಗು ಮತ್ತು ಬಾಯಿಯೊಂದಿಗೆ ಸಂಬಂಧವನ್ನು ಹೊಂದಿರಬಹುದು. ಹಿಂದೆ ಕುಳಿತು ಯಾವಾಗ ಹಿಂದೆ ಉಸಿರೆಳೆದು ಬಿಡುತ್ತಾನೋ, ಆಗ ಮೂಗು-ಬಾಯಿಗಳ ಛಿದ್ರಗಳಿಂದ ಹೊರಡುತ್ತಿರಬಹುದು. ಆಗ ಬಹುಮಂದಿ ಮೂಢರನ್ನು ಧನವೇ ಮೊದಲಾದ ವಸ್ತುಗಳನ್ನು ಕಸಿದು, ಸೂರೆಮಾಡಿ, ನಿರ್ಧನರನ್ನಾಗಿ ಮಾಡುತ್ತಿರಬಹುದು.

**ಪ್ರಶ್ನೆ :-** ನೋಡಿರಿ, ಡಾಕೋರದೇವರ್[೯೪] ಪ್ರತಿಮೆ ದ್ವಾರಿಕೆಯಿಂದ ಭಕ್ತನೊಂದಿಗೆ ಹೊರಟುಬಂದಿತು. ಒಂದೂಕಾಲು ಗುಲಗಂಜೀ ತೂಕದ ಚಿನ್ನಕ್ಕೆ ಅದೆಷ್ಟೋ ಮಣದ ಪ್ರತಿಮೆ ಸರಿತೂಗಿತು. ಇದೂ ಚಮತ್ಕಾರವಿಲ್ಲವೇ?

**ಉತ್ತರ:-** ಅಲ್ಲ. ಆ ಭಕ್ತನು ಮೂರ್ತಿಯನ್ನು ಕದ್ದುಕೊಂಡು ಬಂದಿರಬಹುದು. ಮತ್ತು ಒಂದೂಕಾಲು ಗುಲಗುಂಜಿಯಷ್ಟು ಚಿನ್ನಕ್ಕೆ ಸರಿತೂಗುವ ಪ್ರತಿಮೆಯ ಬಗೆಗೆ ಯಾವನೋ ಭಂಗೀಕೋರನು ಬುರುಡೆ ಹೊಡೆದಿರಬಹುದು.

**ಪ್ರಶ್ನೆ :-** ನೋಡಿರಿ! ಸೋಮನಾಥ್[೯೫] ದೇವರು ನೆಲದಿಂದ ಮೇಲಕ್ಕೆಯೇ ಇರುತ್ತಿದ್ದರು. ಹಾಗೂ ಭಾರೀ ಚಮತ್ಕಾರವಿತ್ತು. ಇದೂ ಕೂಡ ಸುಳ್ಳು ಮಾತೇನು?

**ಉತ್ತರ:-** ಹೌದು, ಸುಳ್ಳು, ಆಲಿಸಿ, ಮೇಲೆ-ಕೆಳಗೆ ಚುಂಬಕ ಶಿಲೆಯನ್ನು ಅಳವಡಿಸಿದ್ದರು. ಅದರ ಆಕರ್ಷಣೆಯಿಂದ ಆ ಪ್ರತಿಮೆ ನಡುವೆ ನಿಂತಿದ್ದಿತು. ಯಾವಾಗ ಮಹಮೂದ್ ಗಜನವೀ ಬಂದು ಹೋರಾಡಿದನೋ, ಆಗ ನಡೆದ ಚಮತ್ಕಾರವೆಂದರೆ, ಅವರ ದೇವಾಲಯ ಒಡೆಯಲ್ಪಟ್ಟಿತು ಮತ್ತು ಪೂಜಾರಿಗಳಿಗೂ, ಭಕ್ತರಿಗೂ ದುರ್ಗತಿಯುಂಟಾಯಿತು. ಮತ್ತು ಲಕ್ಷಾಂತರ ಜನರ ಸೈನ್ಯ[೯೬] ಹತ್ತು ಸಾವಿರ ಮಂದಿಯ[೯೭] ಸೇನೆಯ ಮುಂದೆ ಪಲಾಯನಮಾಡಿತು. ಪೋಪಪೂಜಾರಿಗಳು ಪೂಜೆ, ಪುರಶ್ಚರಣ, ಸ್ತುತಿಯನ್ನೂ "ಹೇ ಮಹಾದೇವ! ಈ ಮ್ಲೇಚ್ಛನನ್ನು ನೀನು ಸಾಯಿಸಿಬಿಡು. ನಮ್ಮನ್ನು ರಕ್ಷಿಸು". ಎಂದು ಪ್ರಾರ್ಥನೆಯನ್ನೂ ಮಾಡುತ್ತಿದ್ದರು ಮತ್ತು ತಮ್ಮ ಮುಗ್ಧ ಶಿಷ್ಯರಾದ ರಾಜರುಗಳಿಗೆ "ತಾವು ನಿಶ್ಚಿಂತರಾಗಿರಿ. ಮಹಾದೇವ ಭಗವಾನರು ಭೈರವನನ್ನು ಅಥವಾ ವೀರಭದ್ರನನ್ನು ಕಳುಹಿಸಿಕೊಡುವರು. ಅವರು ಎಲ್ಲ ಮ್ಲೇಚ್ಛರನ್ನೂ ಸಾಯಿಸಿಬಿಡುವರು ಅಥವಾ ಕುರುಡರನ್ನಾಗಿ ಮಾಡುವರು. ಈಗಲೇ ನಮ್ಮ ದೇವತೇ ಪ್ರಸಿದ್ಧನಾಗುತ್ತಾನೆ. ಹನುಮಾನ್, ದುರ್ಗಾ ಮತ್ತು ಭೈರವರು-"ನಾವೆಲ್ಲಾ ಕೆಲಸವನ್ನೂ ಮಾಡಿಬಿಡುವೆವು".-ಎಂದು ಸ್ವಪ್ನದಲ್ಲಿ ಹೇಳಿದ್ದಾರೆ". - ಎಂದು ತಿಳಿಸುತ್ತಾ ಕುಳಿತಿದ್ದರು. ಆ ಬಡಪಾಯಿಗಳಾದ ಮುಗ್ಧ ರಾಜರುಗಳು ಮತ್ತು ಕ್ಷತ್ರಿಯರು ಪೋಪರ ದುಷ್ಪ್ರೇರಣೆಯಿಂದ ನಂಬಿಕೊಂಡು ಕುಳಿತರು. ಎಷ್ಟೋ ಜನ ಜ್ಯೋತಿಷಿ ಪೋಪರು-"ಇನ್ನೂ ನಿನ್ನ ಪ್ರತ್ಯಾಕ್ರಮಣದ ಮುಹೂರ್ತ ಬಂದಿಲ್ಲ". ಎಂದರು. ಒಬ್ಬನು 'ಚಂದ್ರ ಎಂಟನೆಯ ಮನೆಯಲ್ಲಿದ್ದಾನೆ'.- ಎಂದನು. ಮತ್ತೊಬ್ಬನು ಯೋಗಿನಿಯನ್ನು ಮುಂದೆಮಾಡಿ ತೋರಿಸಿದನು. ಇದೇ ಮೊದಲಾದ ಭ್ರಷ್ಟ ಪ್ರಥಪ್ರದರ್ಶನಗಳಿಗೆ ಸಿಕ್ಕಿಬಿದ್ದರು. ಯಾವಾಗ ಮ್ಲೇಚ್ಛರ ಸೈನ್ಯ ಬಂದು ಮುತ್ತಿಕೊಂಡಿತೋ, ಆಗ ದುರ್ಗತಿಗೀಡಾಗಿ ಓಡಿಹೋದರು. ಅದೆಷ್ಟೋ ಜನ ಪೋಪ ಪೂಜಾರಿಗಳೂ ಮತ್ತು ಅವ ಶಿಷ್ಯರೂ ಹಿಡಿಯಲ್ಪಟ್ಟರು. ಪೂಜಾರಿಗಳು ಕೈಮುಗಿದು-"ಮೂರೂ ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳಿರಿ. ದೇವಾಲಯವನ್ನು ಮತ್ತು ಪ್ರತಿಮೆಯನ್ನು ಒಡೆಯಬೇಡಿ".-ಎಂದೂ ಕೂಡ ಕೇಳಿಕೊಂಡರು. ಮುಸಲ್ಮಾನರು- "ನಾವು 'ಬುತ್ ಪರಸ್ತ್'- ಎಂದರೆ ಪ್ರತಿಮಾಪೂಜಕರಲ್ಲ; ಆದರೆ, 'ಬುತ್ ಶಿಕನ್'-ಎಂದರೆ ಪ್ರತಿಮಾಭಂಜಕರಾಗಿದ್ದೇವೆ".- ಎಂದು ಹೇಳಿದರು; ಶೀಘ್ರವಾಗಿ ತೆರಳಿ ಮಂದಿರವನ್ನು ಒಡೆದು ಹಾಕಿದರು. ಯಾವಾಗ ಮೇಲಿನ ಚಾವಣಿ ಮುರಿದುಬಿದ್ದಿತೋ, ಆಗ ಚುಂಬಕಶಿಲೆ ಬೇರೆಯಾದ ಕಾರಣ, ಪ್ರತಿಮೆ ಬಿದ್ದು ಹೋಯಿತು. ಪ್ರತಿಮೆಯನ್ನು ಒಡೆದಾಗಿ ಹದಿನೆಂಟು ಕೋಟಿ ರೂಪಾಯಿಗಳ ರತ್ನ ಸಿಕ್ಕಿತೆಂದು ಕೇಳಿದ್ದೇವೆ. ಯಾವಗ ಪೂಜಾರಿಗಳಿಗೆ ಮತ್ತು ಪೋಪರಿಗೆ ಚಾವಟಿ ಏಟುಗಳು ಬಿದ್ದವೋ, ಆಗ ರೋದಿಸತೊಡಗಿದರು. ಆಕ್ರಮಣಕಾರಿಗಳು "ನಿಧಿಯನ್ನು ತೋರಿಸಿ".- ಎಂದರು. ಪ್ರಹಾರದ ಕಾರಣದಿಂದ ಪೋಪರುಗಳು ಕೂಡಲೇ ತೋರಿಸಿಬಿಟ್ಟರು. ಆಗ ಸಮಸ್ತ ಕೋಶವನ್ನೂ ಸೂರೆಮಾಡಿ, ಸುಲಿಗೆ ಮಾಡಿ,

---

೯೪. ಈ ವೈಷ್ಣವ ಸ್ಥಾನ ಗುಜರಾತಿನಲ್ಲಿದೆ.

೯೫. ಈ ಪ್ರಸಿದ್ಧ ಶೈವ ತೀರ್ಥಸ್ಥಾನವೂ ಕೂಡ ಗುಜರಾತಿನ ಸೌರಾಷ್ಟ್ರ ಪ್ರದೇಶದಲ್ಲಿದೆ.

೯೬. ಹಿಂದುಗಳದು.

೯೭. ಮ್ಲೇಚ್ಛರದು.

ಪೋಪರನ್ನೂ ಅವರ ಶಿಷ್ಯರನ್ನೂ ದಾಸರನ್ನಾಗಿಯೂ, ಭಿಕ್ಷುಕನ್ನಾಗಿಯೂ ಮಾಡಿ, ಅವರಿಂದ ಹಿಟ್ಟನ್ನು ಬೀಸಿಸಿದರು, ಹುಲ್ಲನ್ನು ಕೆತ್ತಿಸಿದರು, ಮಲ-ಮೂತ್ರ ಮೊದಲಾದುವನ್ನು ಎತ್ತಿಸಿದರು ಮತ್ತು ತಿನ್ನಲು ಕಡಲೆಯನ್ನು[೯೮] ಕೊಟ್ಟರು. ಅಯ್ಯೋ! ಶಿಲಾಪೂಜನವನ್ನು ಮಾಡಿ, ಸರ್ವನಾಶವನ್ನೇತಕ್ಕೆ ಮಾಡಿಕೊಂಡಿರಿ? ಮ್ಲೇಚ್ಛರ ದಂತ ಭಂಗಮಾಡಬಲ್ಲವರಾಗುವಂತೆ ಮತ್ತು ಸ್ವತಃ ವಿಜಯಗಳಿಸುವಂತೆ, ಆ ಪರಮೇಶ್ವರನಲ್ಲಿ ಭಕ್ತಿಯನ್ನೇತಕ್ಕೆ ಇಡದೇ ಹೋದಿರಿ? ನೋಡಿರಿ, ಎಷ್ಟು ಪ್ರತಿಮೆಗಳಿವೆಯೋ, ಅಷ್ಟು ಮಂದಿ ಶೂರವೀರರ ಪೂಜೆಯನ್ನೇ ಮಾಡಿದ್ದರೂ ಎಷ್ಟೊಂದು ರಕ್ಷಣೆ ಸಿಕ್ಕುತ್ತಿತ್ತು? ಪೂಜಾರಿಗಳು ಈ ಶಿಲೆಗಳಲ್ಲಿ ಇಷ್ಟು ಭಕ್ತಿಯಿಟ್ಟರು. ಆದರೆ ಒಂದು ಪ್ರತಿಮೆಯೂ ಕೂಡ ಆ ಶತ್ರುಗಳ ತಲೆಯ ಮೇಲೆ ದಾರಿ ಬಡಿಯಲಿಲ್ಲ! ಯಾವನಾದರೂ ಒಬ್ಬ ಶೂರ-ವೀರ ಪುರುಷನ ಸೇವೆಯನ್ನು ಪ್ರತಿಮೆಗೆ ಮಾಡಿದ್ದಂತೆ ಮಾಡಿದ್ದರೆ, ಅವನು ತನ್ನ ಸೇವಕರನ್ನು ಯಥಾಶಕ್ತಿ ರಕ್ಷಿಸುತ್ತಿದ್ದನು ಮತ್ತು ಆ ಶತ್ರುಗಳನ್ನು ಸದೆಬಡೆಯುತ್ತಿದ್ದನು.

**ಪ್ರಶ್ನೆ :-** ದ್ವಾರಕೆಯ 'ರಣಛೋಡ್'[೯೯] ದೇವರು ನರಸೀಮೆಹತಾನ ಬಳಿ ಹುಂಡಿಯನ್ನು ಕಳುಹಿಸಿದರು. ಹಾಗೂ ಅವನ ಸಾಲವನ್ನು ತೀರಿಸಿಬಿಟ್ಟರು. ಈ ಮೊದಲಾದ ಮಾತುಗಳೂ ಕೂಡ ಸುಳ್ಳೇನು?

**ಉತ್ತರ:-** ಯಾವನೋ ಸಾಹುಕಾರನು ರೂಪಾಯಿಗಳನ್ನು ಕೊಟ್ಟಿರಬಹುದು. ಯಾವನೋ 'ಶ್ರೀಕೃಷ್ಣನು ಕಳುಹಿಸಿದನು'- ಎಂದು ಸುಳ್ಳು ಸುದ್ದಿಯನ್ನು ಹಾರಿಸಿರಬಹುದು. ಯಾವಾಗ ಸಂವತ್[೧೦೦] ೧೯೧೪ರಲ್ಲಿ ತೋಪುಗಳಿಂದ ಆಂಗ್ಲರು ದೇವಾಲಯ - ಪ್ರತಿಮೆಗಳನ್ನು ಹಾರಿಸಿಬಿಟ್ಟಿದ್ದರೋ, ಆಗ ಪ್ರತಿಮೆ ಎಲ್ಲಿಗೆ ಹೋಗಿದ್ದಿತು? ಆ ರೀತಿ ನೋಡಿದರೆ ಬಾಘೇರ ಜನರು ಎಷ್ಟೋ ವೀರತ್ವ ತೋರಿಸಿದರು. ಹೋರಾಡಿದರು ಮತ್ತು ಶತ್ರುಗಳನ್ನು ಕೊಂದರು; ಆದರೆ ಪ್ರತಿಮೆ ಒಂದು ನೊಣದ ಕಾಲನ್ನೂ ಕೂಡ ಮುರಿಯಲು ಸಮರ್ಥವಾಗಲಿಲ್ಲ. ಶ್ರೀಕೃಷ್ಣನಂತಹವನು ಯಾವನಾದರೂ ಇದ್ದಿದ್ದರೆ, ಇವರನ್ನು ನುಚ್ಚು ನೂರಾಗಿ ಮಾಡುತ್ತಿದ್ದನು. ಮತ್ತು ಇವರು[೧೦೧] ಪರದಾಡುತ್ತಿದ್ದರು. ಆಯಿತಲ್ಲ! ಯಾವನ ರಕ್ಷಕನೇ ಪೆಟ್ಟನ್ನು ತಿನ್ನುತ್ತಾನೋ, ಅವನ ಶರಣಾಗತರು ಏಕೆ ಚಚ್ಚಲ್ಪಡುವುದಿಲ್ಲ - ಎಂಬುದನ್ನಾದರೂ ಹೇಳಿರಿ.

**ಪ್ರಶ್ನೆ :-** ಜ್ವಾಲಾಮುಖಿಯಂತೂ[೧೦೨] ಪ್ರತ್ಯಕ್ಷ ದೇವಿಯೇ ಆಗಿದ್ದಾಳೆ. ಎಲ್ಲವನ್ನೂ ತಿಂದುಬಿಡುತ್ತಾಳೆ ಮತ್ತು ಪ್ರಸಾದವನ್ನು ಕೊಟ್ಟರೆ, ಅರ್ಧವನ್ನು ತಿಂದು ಬಿಡುತ್ತಾಳೆ ಮತ್ತು ಅರ್ಧವನ್ನು ಬಿಟ್ಟುಬಿಡುತ್ತಾಳೆ. ಮುಸಲ್ಮಾನ ಬಾದಶಾಹರು ಅವಳ ಮೇಲೆ ನೀರಿನ ಕಾಲುವೆ ಹರಿಸಿದ್ದರು ಮತ್ತು ಕಬ್ಬಿಣದ ಕಾವಲಿಗಳನ್ನು ಮುಚ್ಚಿಸಿದ್ದರು. ಆದರೂ ಜ್ವಾಲೆ ಆರಲಿಲ್ಲ; ಮತ್ತು ನಿಲ್ಲಲೂ ಇಲ್ಲ. ಹಾಗೆಯೇ ಹಿಂಗಲಾಜ ದೇವತೆಯೂ ಕೂಡ ನಡುರಾತ್ರಿ ಸವಾರಿ ಮಾಡುತ್ತಾ ಪರ್ವತದ ಮೇಲೆ ಕಾಣಿಸಿಕೊಳ್ಳುತ್ತಾಳೆ; ಪರ್ವತವನ್ನು ಗುಡುಗಿಸುತ್ತಾಳೆ. ಚಂದ್ರಕೂಪ ಮಾತನಾಡುತ್ತದೆ ಮತ್ತು ಯೋನಿನಿಯಂತ್ರದಿಂದ ನುಸಿದು ಬಂದರೆ ಪುನರ್ಜನ್ಮ

---

೯೮. ಓದುಗರು ಈ ಸಂಬಂಧ ಭಾರತೀಯ ಇತಿಹಾಸವನ್ನು ಮತ್ತೆ ಅಧ್ಯಯನ ಮಾಡಬೇಕು.

೯೯. ಶ್ರೀಕೃಷ್ಣನು ತನ್ನ ಸೋದರಮಾವ ಕಂಸನನ್ನು ಸಂಹರಿಸಿ, ರಾಜ್ಯವನ್ನು ಕಂಸನ ತಂದೆಯಾದ ಉಗ್ರಸೇನನಿಗೆ ವಾಪಸುಕೊಟ್ಟ ಮೇಲೆ, ಇದರಿಂದ ಕ್ರುದ್ಧನಾಗಿ ಕಂಸನ ಮಾವನಾದ ಮಹಾಶಕ್ತಿಶಾಲೀ ಸಮ್ರಾಟ್ ಮಗಧ ನರೇಶ ಜರಾಸಂಧನು ಮಥುರೆಯ ಮೇಲೆ ದಂಡೆತ್ತಿ ಬಂದನು. ಯುದ್ಧದಲ್ಲಿ ಕೃಷ್ಣನಿಗೆ ಜಯ ಸಿಗದಿದ್ದ ಕಾರಣ, ಜರಾಸಂಧನ ಅಧೀನತೆಯನ್ನು ಸ್ವೀಕರಿಸಿ, ಅವನೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಮತ್ತೆ ಯಾವಾಗ-ಯಾವಾಗ ಮಥುರಾ ರಾಜ್ಯ ತಲೆ ಎತ್ತುತ್ತಿತ್ತೋ ಆಗ ಜರಾಸಂಧನು ಮುತ್ತಿಗೆ ಹಾಕಿ, ಛೀಮಾರಿ ಹಾಕುತ್ತಿದ್ದನು. ಹೀಗೆ ಹದಿನಾರು ಸಲ ನಡೆಯಿತು. ಇಷ್ಟರತನಕ ಎದುರಿಸಿದ ಕೃಷ್ಣನ ಬಲ ಈಗ ಉಡುಗಿಹೋಯಿತು. ಆಗ ಕೊನೆಯದಾಗಿ, ಹದಿನೇಳನೆಯ ಸಲ ಜರಾಸಂಧನು ದಂಡೆತ್ತಿ ಬಂದು, ಕೃಷ್ಣನ ಸೇನೆಯನ್ನು ಸೋಲಿಸಿ ಮಥುರೆಯನ್ನು ವಶಪಡಿಸಿಕೊಂಡನು.

ಕೃಷ್ಣನು ತನ್ನ ಉಳಿದ ಬಂಧು-ಭಾಂಧವರ, ಮತ್ತು ಸೇನೆಯೊಡನೆ ಮಥುರೆಯನ್ನು ತ್ಯಜಿಸಿ ಪ್ರಾಣ ಉಳಿಸಿಕೊಂಡು, ದಕ್ಷಿಣ-ಪಶ್ಚಿಮ ದಿಕ್ಕಿನ ಕಡೆಗೆ ಓಡಿದನು. ಜರಾಸಂಧನ ಸೇನೆ ಅವನ ಬೆನ್ನಟ್ಟಿತು. ಕೊನೆಗೆ ಕೃಷ್ಣನು ಭಾರತದ ಭೂಪ್ರದೇಶವನ್ನು ದಾಟಿ, ಸೌರಾಷ್ಟ್ರದ ಆಚೆ, ಸಮುದ್ರದ ದ್ವೀಪವೊಂದರಲ್ಲಿ ಬಿಡಾರ ಬಿಟ್ಟನು. ಅಲ್ಲೇ ಯಾದವರ ರಾಜಧಾನಿ 'ದ್ವಾರಕಾ' ಹುಟ್ಟಿ ಮೆರೆಯಿತು.

ಹೀಗೆ ಯುದ್ಧದಿಂದ ಪಲಾಯನ ಮಾಡಿದುದರಿಂದ, ಶ್ರೀಕೃಷ್ಣನಿಗೆ 'ರಣ-ಛೋಡ್ ಜೀ' ಎಂದು ಸೌರಾಷ್ಟ್ರದಲ್ಲಿ ಪ್ರಸಿದ್ಧ ಹೆಸರಾಯಿತು. ಕೃಷ್ಣನನ್ನು ಪರಮಾತ್ಮನೆಂದು ಅಂಗೀಕರಿಸುವವರು ಈ ಐತಿಹಾಸಿಕ ಘಟನೆಯ ಬಗ್ಗೆ ಗಮನವೀಯಬೇಕು.

ನಂತರ, ಕೃಷ್ಣನು ಯುಧಿಷ್ಠರನ ರಾಜಸೂಯಯಾಗದ ಸಂದರ್ಭದಲ್ಲಿ ಭೀಮನಿಂದ ಜರಾಸಂಧನನ್ನು ಕೊಲ್ಲಿಸಿ, ತನಗಾದ ಅಪಮಾನವನ್ನು ಒರೆಸಿಹಾಕಿದನು.

೧೦೦. ಎಂದರೆ, ೧೮೫೭ ನೇ ಇಸವಿಯ ಭಾರತೀಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ. ಈ ಸಂಗ್ರಾಮದ ಜೊತೆ ಮಹರ್ಷಿ ದಯಾನಂದರ ಸಂಬಂಧ ಅನ್ವೇಷಣೆಯಲ್ಲಿದೆ.

೧೦೧. ಎಂದರೆ, ಆಂಗ್ಲರು.

೧೦೨. ಜ್ವಾಲಾಮುಖೀ ಮತ್ತು ಹಿಂಗಲಾಜ ಕ್ಷೇತ್ರಗಳು ಹಿಮಾಚಲ ಪ್ರದೇಶದ ಕಾಂಗಡಾ ಜಿಲ್ಲೆಯಲ್ಲಿ ವಾಮಮಾರ್ಗಿಗಳ ತೀರ್ಥಸ್ಥಾನಗಳಾಗಿವೆ.

ಬರುವುದಿಲ್ಲ. ಹವಳದ ಸರ ಕಟ್ಟಿಕೊಳ್ಳುವುದರಿಂದ ಪೂರ್ಣ ಮಹಾಪುರುಷನೆನಿಸುತ್ತಾನೆ. ಎಂದಿನವರೆಗೆ ಹಿಂಗಲಾಜಿಗೆ ಹೋಗಿ ಬರುವುದಿಲ್ಲವೋ, ಅಂದಿನವರೆಗೆ ಅರ್ಧ ಮಹಾಪುರುಷನೆನಿಸುತ್ತಾನೆ. ಈ ಮೊದಲಾದ ಮಾತುಗಳೆಲ್ಲಾ ಒಪ್ಪಲರ್ಹವಲ್ಲವೇನು?

**ಉತ್ತರ:–** ಅಲ್ಲ. ಏಕೆಂದರೆ, ಆ ಜ್ವಾಲಾಮುಖಿ ಪರ್ವತದಿಂದ ಹೊರಡುವ ಬೆಂಕಿ ಮಾತ್ರವಾಗಿದೆ. ಅದರಲ್ಲಿ ಪೂಜಾರಿಗಳ ವಿಚಿತ್ರವಾದ ಲೀಲೆಯಿದೆ. ಹೀಗೆ ಒಗ್ಗರಣೆಯ ತುಪ್ಪದ ಸೌಟಿನಲ್ಲಿ ಉರಿ ಏಳುತ್ತದೋ, ಬೇರೆ ಮಾಡುವುದರಿಂದ, ಅಥವಾ ಊದುವುದರಿಂದ ಆರಿ ಹೋಗುತ್ತದೋ, ಸ್ವಲ್ಪ ತುಪ್ಪವನ್ನು ಹೀರಿ, ಉಳಿದುದನ್ನು ಬಿಟ್ಟುಬಿಡುತ್ತದೋ ಹಾಗೆಯೇ ಅಲ್ಲಿಯೂ ನಡೆಯುತ್ತದೆ. ಒಲೆಯ ಉರಿಯಲ್ಲಿ ಏನು ಹಾಕಲ್ಪಟ್ಟರೂ, ಎಲ್ಲವೂ ಬೂದಿಯಾಗಿ ಹೋಗುವಂತೆ, ಕಾಡಿನಲ್ಲಿ ಅಥವಾ ಮನೆಯಲ್ಲಿ (ಬೆಂಕಿ) ಹೊತ್ತಿಕೊಳ್ಳುವುದರಿಂದ ಎಲ್ಲವನ್ನೂ ಕಬಳಿಸುವುದಿಲ್ಲವೇನು? ಇದಕ್ಕಿಂತ ಅಲ್ಲಿ ಏನು ವಿಶೇಷವಿದೆ? ಒಂದು ದೇವಾಲಯ, ಕುಂಡ ಮತ್ತು ಅಲ್ಲಿ–ಇಲ್ಲಿ ನಲ್ಲಿಗಳ ಪ್ರಸರಣವನ್ನುಳಿದು, ಹಿಂಗಾಲಾಜಿನಲ್ಲಿ ಯಾವ ಸವಾರಿಯೂ ಆಗುವುದಿಲ್ಲ. ಏನೇನು ನಡೆಯುತ್ತದೋ, ಅದೆಲ್ಲಾ ಪೋಪಪೂಜಾರಿಗಳ ಲೀಲೆಯಿಂದ; ಮತ್ತೇ ಏನೂ ಇಲ್ಲ. ಒಂದು ನೀರಿನ ಮತ್ತು ಕೆಸರಿನ ಕುಂಡವನ್ನು ನಿರ್ಮಿಸಿಟ್ಟಿದ್ದಾರೆ. ಅದರ ಕೆಳಗಿನಿಂದ ನೀರಿನ ಗುಳ್ಳೆಗಳು ಏಳುತ್ತವೆ. ಮೂಢರು ಅದನ್ನು ಯಾತ್ರಾಸಾಫಲ್ಯವೆಂದು ತಿಳಿಯುತ್ತಾರೆ. ಯೋನಿಯಂತ್ರವನ್ನು ಪೋಪ ಮಹಾಶಯರು ಧನವನ್ನು ಸೆಳೆಯಲು ಮಾಡಿಟ್ಟಿದ್ದಾರೆ ಮತ್ತು ಹವಳದ ಸರಗಳೂ ಕೂಡ ಅದೇ ರೀತಿ ಪೋಪ ಲೀಲೆಯದಾಗಿವೆ. ಅದರಿಂದ ಮಹಾಪುರುಷನಾಗುವುದಾದರೆ, ಒಂದು ಪಶುವಿನ ಮೇಲೆ ಹವಳದ ಹೊರೆಯನ್ನು ಹೊರೆಸಿದರೆ, ಅದು ಮಹಾ ಪುರುಷನಾಗಿ ಹೋಗುತ್ತದೇನು? ಮಹಾ ಪುರುಷನಾಗುವುದಾದರೋ ಅತ್ಯುತ್ತಮರಾದ ಧರ್ಮಯುಕ್ತ ಪುರುಷಾರ್ಥದಿಂದ ಮಾತ್ರ.

**ಪ್ರಶ್ನೆ:–** ಅಮೃತಸರದ ಸರಸ್ಸು ಅಮೃತರೂಪವಾಗಿದೆ. ಒಂದು ಮುರೇಠೀ (ಅಂಟವಾಳ) ಫಲ ಅರ್ಧ ಸಿಹಿಯಾಗಿರುತ್ತದೆ. ಮತ್ತು ಒಂದು ಗೋಡೆ ಓಲಿದೆ; ಆದರೆ ಬೀಳುವುದಿಲ್ಲ.[೧೦೩] ರೇವಾಲಸರದಲ್ಲಿ ದೋಣಿಗಳು ತೇಲುತ್ತವೆ. ಅಮರನಾಥದಲ್ಲಿ ತನ್ನಷ್ಟಕ್ಕೆ ತಾವೇ ಲಿಂಗಗಳು ಉದ್ಭವಿಸುತ್ತವೆ. ಹಿಮಾಲಯದಿಂದ ಪಾರಿವಾಳಗಳ ಜೋಡಿಯೊಂದು ಬಂದು, ಎಲ್ಲರಿಗೂ ದರ್ಶನವಿತ್ತು ಹೊರಟುಹೋಗುತ್ತದೆ. ಇದೂ ಕೂಡ ಒಪ್ಪಲು ಯೋಗ್ಯವಾದುದಲ್ಲವೇ?

**ಉತ್ತರ:–** ಅಲ್ಲ. ಆ ಕೊಳದ ಹೆಸರು ಮಾತ್ರ ಅಮೃತಸರವಾಗಿದೆ. ಯಾವಾಗಲೋ ಕಾಡಿನಲ್ಲಿ ಅದು ಇದ್ದಾಗ, ಅದರ ನೀರು ಸ್ವಚ್ಛವಾಗಿದ್ದಿರಬಹುದು. ಈ ಕಾರಣದಿಂದ ಅದಕ್ಕೆ ಅಮೃತಸರವೆಂದು ಹೆಸರಿಟ್ಟಿರಬಹುದು. ಅಮೃತವಾಗಿದ್ದರೆ, ಪೌರಾಣಿಕರ ಗ್ರಹಿಕೆಯಂತೆ, ಯಾವಾನಾದರೂ ಸಾಯುತ್ತಾನೆ ಏತಕ್ಕೆ? ಗೋಡೆಯ ರಚನೆಯೇ ಓಲಿರುವಂತೆ, ಆದರೂ ಬೀಳದಂತೆ ಆಗಿರಬಹುದು. ಅಂಟವಾಳದ ಹಣ್ಣುಗಳು ಅರ್ಧ ಸಿಹಿಯಾಗಿರುವುದು ಕಸಿಮಾಡಿರುವುದರ ಪರಿಣಾಮವಾಗಿರಬಹುದು; ಇಲ್ಲವೇ ಬುರುಡೆಯಾಗಿರಬಹುದು. ರೇವಾಲಸರದಲ್ಲಿ ದೋಣಿಗಳ ತೇಲುವಿಕೆಯಲ್ಲಿ ಏನಾದರೂ ಶಿಲ್ಪವಿರಬಹುದು. ಅಮರನಾಥದಲ್ಲಿ ಮಂಜಿನಗಡ್ಡೆಯ ಪರ್ವತಗಳೇ ರೂಪುಗೊಳ್ಳುವಾಗ, ಜಲವು ಘನೀಭೂತವಾಗಿ ಚಿಕ್ಕ ಲಿಂಗವಾಗುವುದು ಯಾವ ಆಶ್ಚರ್ಯ? ಪಾರಿವಾಳಗಳ ಜೋಡಿ ಪಾಲಿಸಲ್ಪಟ್ಟುದಿರಬಹುದು. ಪರ್ವತದ ಮರೆಯಿಂದ ಪೋಪ ಮಹಾಶಯರು ಹಾರಿಸಿಬಿಡುತ್ತಿರಬಹುದು. ತೋರಿಸಿ ದುಡ್ಡು ಕಸಿಯುತ್ತಿರಬಹುದು.

**ಪ್ರಶ್ನೆ:–** ಹರದ್ವಾರ[೧೦೪] ಸ್ವರ್ಗದ ದ್ವಾರವಾಗಿದೆ. ಹರನ ಸೋಪಾನದಲ್ಲಿ ಮಿಂದರೆ, ಪಾಪಗಳು ತೊಲಗಿ ಹೋಗುತ್ತವೆ. ಮತ್ತು ತಪೋವನದಲ್ಲಿರುವುದರಿಂದ (ಮಾನವನು) ತಪಸ್ವಿಯಾಗುತ್ತಾನೆ. ದೇವಪ್ರಯೋಗ, ಗಂಗೋತ್ರಿಯಲ್ಲಿ ಗೋಮುಖ, ಉತ್ತರ ಕಾಶಿಯಲ್ಲಿ ಗುಪ್ತಕಾಶಿ, ತ್ರಿಯುಗೀನಾರಾಯಣ–ಎಲ್ಲೆಡೆಯೂ ದರ್ಶನವಾಗುತ್ತದೆ. ಕೇದಾರ ಮತ್ತು ಬದರೀನಾರಾಯಣನ ಪೂಜೆಯನ್ನು ಆರು ತಿಂಗಳುಗಳವರೆಗೆ ಮಾನವರೂ ಮತ್ತು ಆರು ತಿಂಗಳುಗಳವರೆಗೆ ದೇವತೆಗಳೂ ಮಾಡುತ್ತಾರೆ. ಮಹಾದೇವನ ಮುಖವು ನೇಪಾಳದಲ್ಲಿ ಪಶುಪತಿ (ನಾಥಮಂದಿರ) ದಲ್ಲಿಯೂ, ಪೃಷ್ಠಗಳು ಕೇದಾರದಲ್ಲಿಯೂ, ಮೊಣಕಾಲುಗಳು ತುಂಗನಾಥದಲ್ಲಿಯೂ ಮತ್ತು ಪಾದಗಳು ಅಮರನಾಥದಲ್ಲಿಯೂ ಇವೆ. ಇವುಗಳ ದರ್ಶನ, ಸ್ಪರ್ಶನ ಮತ್ತು

---

೧೦೩. ಇಂತಹ ಗೋಡೆ ಗುರುದಾಸಪುರದಲ್ಲಿದೆ. ಇದರ ಮೇಲೆ ಕುಳಿತು, ಅಲ್ಲಾಡಿಸಿದರೆ ಬಾಗುತ್ತದೆ.
ಹೀಗೆಯೇ ಅಹಮದಾಬಾದಿನಲ್ಲಿ ಮಸೀದಿಯೊಂದರ 'ಮೀನಾರ'ನ್ನು [ಒಳಗೆ ಮೆಟ್ಟಲಿರುವ ಕಂಬ] ಹತ್ತಿ ಜಗ್ಗಿಸಿದರೆ ಅಲ್ಲಾಡುತ್ತದೆ. ಇದೇ ರೀತಿ, ಎಲ್ಲ ಆರ್.ಸಿ.ಸಿ. ಉಚ್ಚಭವನಗಳೂ ಅಲ್ಲಾಡುತ್ತವೆ. ಇವುಗಳ ಸ್ಪಂದನ ಅನುಭವ ತಜ್ಞರಾದ ಇಂಜನಿಯರುಗಳಿಗೆ ಮಾತ್ರ ಆಗುತ್ತದೆ.; ಎಲ್ಲರಿಗಲ್ಲ. ಆದ್ದರಿಂದಲೇ, ಇಂತಹ ಭವನಗಳು ಬಿರುಗಾಳಿ, ಭೂಕಂಪಗಳನ್ನು ತಡೆದುಕೊಳ್ಳುತ್ತವೆ.

೧೦೪. ಇದನ್ನು 'ಹರಿದ್ವಾರ' ಎಂದೂ ಕರೆಯುತ್ತಾರೆ. 'ಹರನ' ದ್ವಾರವೋ, 'ಹರಿಯ' ದ್ವಾರವೂ ಒಂದೇ ಹೇಗಾಯಿತು?

ಸ್ನಾನ ಮಾಡುವುದರಿಂದ ಮುಕ್ತಿ ಪ್ರಾಪ್ತವಾಗುತ್ತದೆ. ಅಲ್ಲಿ ಕೇದಾರ ಮತ್ತು ಬದರಿಯಿಂದ ಸ್ವರ್ಗಕ್ಕೆ ಹೋಗಲಿಚ್ಛಿಸಿದರೆ, ಹೋಗಬಹುದು. ಈ ಮೊದಲಾದ ಮಾತುಗಳು ಹೇಗಿವೆ?

**ಉತ್ತರ:–** ಹರದ್ವಾರವು ಉತ್ತರದಿಂದ ಪರ್ವತಗಳಿಗೆ ಹೋಗುವ ಒಂದು ಮಾರ್ಗದ ಪ್ರಾರಂಭವಾಗಿದೆ. ಹರನ ಸೋಪಾನಗಳು ಸ್ನಾನದ ಸಲುವಾಗಿ ನಿರ್ಮಿಸಿರುವ, ಒಂದು ಕುಂಡದ ಮೆಟ್ಟಲುಗಳಾಗಿವೆ. ನಿಜವಾಗಿ ಹೇಳುವಿರಾದರೆ, 'ಹ್ಯಾಡ್ ಪೈಡೀ', (ಮೂಳೆಯ ಸೋಪಾನ) ಆಗಿದೆ. ಏಕೆಂದರೆ, ದೇಶದೇಶಾಂತರಗಳ ಮೃತರ ಮೂಳೆಗಳು ಅದರಲ್ಲಿ ಬೀಳುತ್ತಾ ಇರುತ್ತವೆ. ಫಲಗಳನ್ನು ಅನುಭವಿಸದೆ, ಪಾಪಗಳು ಎಂದಿಗೂ, ಎಲ್ಲಿಯೂ ತೀರಲಾರವು ಅಥವಾ ಕಳೆದು ಹೋಗುವುದಿಲ್ಲ. 'ತಪೋವನ' ಯಾವಾಗ ಆಗಿದ್ದಿತೋ, ಆಗ ಆಗಿದ್ದಿರಬಹುದು. ಈಗಲಂತೂ ಅದು 'ಭಿಕ್ಷುಕವನ'ವಾಗಿದೆ. ತಪೋವನಕ್ಕೆ ಹೋಗುವುದರಿಂದ, ಅಲ್ಲಿ ಇರುವುದರಿಂದ ತಪಸ್ಸಾಗುವುದಿಲ್ಲ. ಏಕೆಂದರೆ, ತಪಸ್ಸಂತೂ ಅನುಷ್ಠಾನದಿಂದ ಆಗುತ್ತದೆ. ಏಕೆಂದರೆ, ಅಲ್ಲಿ ಸುಳ್ಳನ್ನಾಡುವ ವ್ಯಾಪಾರಿಗಳೂ ಬಹುಮಂದಿಗಳಿದ್ದಾರೆ. **"ಹಿಮವತಃ ಪ್ರಭವತಿ ಗಂಗಾ"**. ಪರ್ವತದ ಮೇಲಿನಿಂದ ನೀರು ಬೀಳುತ್ತದೆ. ಗೋಮುಖದ ಆಕಾರವನ್ನು ದುಡ್ಡನ್ನು ಸೆಳೆಯುವರು ನಿರ್ಮಿಸಿರಬಹುದು. ಮತ್ತು ಆ ಪರ್ವತವೇ ಪೋಪರ ಸ್ವರ್ಗವಾಗಿದೆ. ಅಲ್ಲಿ ಉತ್ತರಕಾಶೀ–ಮೊದಲಾದ ಸ್ಥಾನಗಳು ಧ್ಯಾನ ಮಾಡುವವರಿಗೆ ಒಳ್ಳೆಯವಾಗಿವೆ. ಆದರೆ, ಅಂಗಡಿಕಾರತನವೇ ಇದೆ. ದೇವಪ್ರಯಾಗ ಪುರಾಣದ ಬುರುಡೆಗಳ ಲೀಲೆಯಾಗಿದೆ. ಎಂದರೆ, "ಎಲ್ಲಿ ಅಲಖನಂದೆ ಮತ್ತು ಗಂಗೆ ಒಂದಾಗುತ್ತವೋ, ಅಲ್ಲಿ, ಅದೇ ಕಾರಣದಿಂದ ದೇವತೆಗಳು ವಾಸಿಸುತ್ತಾರೆ!"ಎಂದು ಇಂತಹ ಬುರುಡೆಗಳನ್ನು ಹೊಡೆಯದಿದ್ದರೆ, ಅಲ್ಲಿ ಹೋಗುವವನಾವನು? ಮತ್ತು ದುಡ್ಡನ್ನು ಕೊಡಬೇಕು ಯಾವನು? ಗುಪ್ತಕಾಶಿಯಂತೂ ಅಲ್ಲ; ಅದು ಪ್ರಸಿದ್ಧಕಾಶಿಯೇ ಆಗಿದೆ. ಮೂರು ಯುಗಗಳ[೧೦೫] ಯಜ್ಞಾಗ್ನಿಯೇನೋ ಕಾಣಿಸುವುದಿಲ್ಲ. ಆದರೆ, ಖಾಖಿಗಳ ಉರಿಯವ ಕೊಳ್ಳಿ ಮತ್ತು ಪಾರ್ಸಿಗಳ 'ಅಗ್ಯಾರಿ' ಸರ್ವದಾ ಉರಿಯುತ್ತಿರುವಂತೆ, ಪೋಪರುಗಳ ಹತ್ತು–ಇಪ್ಪತ್ತು ಪೀಳಿಗೆಗಳದಿರಬಹುದು. ಪರ್ವತಗಳ ಒಳಗೆ ಊಷ್ಮಾ–ಎಂದರೆ ಕಾವು ಇರುತ್ತದೆ. ಅದರಲ್ಲಿ ಕಾದು ನೀರು ಬರುತ್ತದೆ. ತಪ್ತಕುಂಡವೂ ಇದೇ. ಅದರ ಬಳಿ, ಇನ್ನೊಂದು ಕುಂಡದಲ್ಲಿ ಮೇಲಣ ನೀರು ಅಥವಾ ಎಲ್ಲಿ ಕಾವಿಲ್ಲವೋ, ಅಲ್ಲಿನದು ಬರುತ್ತದೆ. ಈ ಕಾರಣದಿಂದ ಅದು ತಣ್ಣಗಿರುತ್ತದೆ. ಕೇದಾರದ ಸ್ಥಳ, ಆ ಭೂಮಿ ಬಹಳ ಉತ್ತಮವಾಗಿದೆ. ಆದರೆ, ಅಲ್ಲಿಯೂ ಕೂಡ, ಗಟ್ಟಿಯಾಗಿರುವ ಒಂದು ಕಲ್ಲಿನ ಮೇಲೆ ಪೂಜಾರಿಗಳು ಅಥವಾ ಅವರ ಶಿಷ್ಯರು ದೇವಾಲಯವನ್ನು ನಿರ್ಮಿಸಿದ್ದಾರೆ. ಅಲ್ಲಿ ಮಹಂತರೂ, ಪೂಜಾರಿಗಳೂ, ಭಟ್ಟರುಗಳೂ ಕಣ್ಣಿದ್ದೂ ಕುರುಡರೂ ಹಣದ ಗಂಟಿನ ಬಂಟರೂ ಆದವರಿಂದ ಪದಾರ್ಥಗಳನ್ನು ಕಸಿದು ವಿಷಯಸುಖವನ್ನು ಸವಿಯುತ್ತಾರೆ. ಹಾಗೆಯೇ ಬದರೀನಾರಾಯಣದಲ್ಲಿ ಠಕ್ಕ ವಿದ್ಯೆಯವರು ಬಹುಮಂದಿ ಕುಳಿತಿದ್ದಾರೆ. 'ರಾವಲ್ ಜೀ' ಅಲ್ಲಿನ ಪ್ರಮುಖರಾಗಿರುತ್ತಾರೆ. ಒಬ್ಬಳು ಸ್ತ್ರೀಯನ್ನುಳಿದು ಅನೇಕ ಸ್ತ್ರೀಯರನ್ನು ಗಂಟು ಹಾಕಿಕೊಂಡಿದ್ದಾರೆ. ಒಂದು ದೇವಾಲಯದಲ್ಲಿನ ಐದು ಮುಖಗಳ ಒಂದು ಪ್ರತಿಮೆಗೆ ಪಶುಪತಿ–ಎಂದು ಹೆಸರಿಟ್ಟಿದ್ದಾರೆ. ಯಾವಾಗ ಯಾವನೂ ಕೇಳುವುದಿಲ್ಲವೋ, ಆಗಲೇ ಇಂತಹ ಲೀಲೆ ಪ್ರಬಲವಾಗುತ್ತದೆ. ಆದರೆ, ತೀರ್ಥದ ಧೂರ್ತ ಜನರಂತೆ, ಪಾರ್ವತ್ಯ ಜನರು ಧನಾಪಹಾರಿಗಳಾಗಿರುವುದಿಲ್ಲ. ಅಹುದು ಅಲ್ಲಿನ ಭೂಮಿ ಬಹಳ ರಮ್ಯ ಮತ್ತು ಪವಿತ್ರವಾಗಿರುತ್ತದೆ.

**ಪ್ರಶ್ನೆ:–** ವಿಂಧ್ಯಾಚಲದಲ್ಲಿ ವಿಂಧ್ಯೇಶ್ವರೀ ಅಷ್ಟಭುಜಾ ಕಾಳಿಯು ಪ್ರತ್ಯಕ್ಷ ಸತ್ಯವಾಗಿದ್ದಾಳೆ. ವಿಂಧ್ಯೇಶ್ವರೀ ಮೂರು ಕಾಲಗಳಲ್ಲಿ ಮೂರು ರೂಪಗಳನ್ನು ಪರಿವರ್ತಿಸುತ್ತಾಳೆ. ಮತ್ತು ಅವಳ ಅಂಗಳದಲ್ಲಿ ಒಂದೇ ಒಂದು ನೊಣವೂ ಕೂಡ ಇರುವುದಿಲ್ಲ. ಪ್ರಯಾಗವು ತೀರ್ಥರಾಜ; ಅಲ್ಲಿ ತಲೆಬೋಳಿಸಿಕೊಂಡರೆ ಸಿದ್ಧಿಯಾಗುತ್ತದೆ. ಗಂಗಾ ಯಮುನಾ ಸಂಗಮದಲ್ಲಿ ಸ್ನಾನ ಮಾಡುವುದರಿಂದ ಇಷ್ಟ ಸಿದ್ಧಿಯಾಗುತ್ತದೆ. ಗಂಗಾ ಯಮುನಾ ಸಂಗಮದಲ್ಲಿ ಸ್ನಾನ ಮಾಡುವುದರಿಂದ ಇಷ್ಟ ಸಿದ್ಧಿಯಾಗುತ್ತದೆ. ಹಾಗೆಯೇ ಅಯೋಧ್ಯೆ, ಅನೇಕ ಸಾರಿ ಹಾರಿ, ಸಮಸ್ತ ವಸತಿಯೊಂದಿಗೆ ಸ್ವರ್ಗಕ್ಕೆ ಹೋಗಿ ಬಂದಿದೆ. ಮಥುರೆ ಎಲ್ಲ ತೀರ್ಥಗಳಿಗಿಂದ ಹೆಚ್ಚು; ಬೃಂದಾವನ ಲೀಲಾಸ್ಥಾನ; ಮತ್ತು ಗೋವರ್ಧನ ವ್ರಜಯಾತ್ರೆ ಮಹಾಭಾಗ್ಯದಿಂದ ಲಭಿಸುತ್ತದೆ. ಸೂರ್ಯಗ್ರಹಣದ ಕಾಲದಲ್ಲಿ ಕುರುಕ್ಷೇತ್ರದಲ್ಲಿ ಲಕ್ಷಾಂತರ ಮಾನವರ ಜಾತ್ರೆ ಸೇರುತ್ತದೆ. ಈ ಎಲ್ಲ ಮಾತುಗಳು ಸುಳ್ಳೇನು?

**ಉತ್ತರ:–** ಪ್ರತ್ಯಕ್ಷವಾಗಿ ಕಾಣುವುದೆಂದರೆ, ಕಣ್ಣಿನ ಮುಂದೆ ಶಿಲೆಯ ಮೂರು ವಿಗ್ರಹಗಳಿವೆ–ಎಂಬುದೇ; ಮೂರು ಪ್ರತಿಮೆಗಳು ಕಾಣಿಸುತ್ತವೆ, ಮತ್ತು ಮೂರು ಕಾಲಗಳಲ್ಲಿ ಮೂರು ಬಗೆಯ ರೂಪಗಳಾಗಲು, ಪೂಜಾರೀ ಮಹಾಶಯರು ವಸ್ತ್ರ–ವಡವೆಗಳನ್ನು ತೊಡಿಸುವ ಚಾತುರ್ಯ ಕಾರಣವಾಗಿದೆ. ಮತ್ತು ನೊಣಗಳು ಸಾವಿರಾರು, ಲಕ್ಷಗಟ್ಟಲೆಯಿರುತ್ತವೆ. ನಾನು

---

೧೦೫. ತ್ರಿಯುಗೀ–ನಾರಾಯಣದಲ್ಲಿ–ಯು.ಮೀ.

ನನ್ನ ಕಣ್ಣುಗಳಿಂದಲೇ ನೋಡಿದ್ದೇನೆ. ಪ್ರಯಾಗದಲ್ಲಿ ಶ್ಲೋಕರಚಿಸುವವನಾದ ನಾಯಿಂದನಾವನೋ, ಪೋಪರಿಗೆ ಸ್ವಲ್ಪ ಹಣವಿತ್ತು ಮುಂಡನ ಮಾಡಿಸುವುದರ ಮಹಾತ್ಮವನ್ನು ತಾನೇ ಬರೆದಿರಬಹುದು. ಇಲ್ಲವೇ ಬರೆಯಿಸಿರಬಹುದು. ಪ್ರಯಾಗದಲ್ಲಿ ಮಿಂದು ಸ್ವರ್ಗಕ್ಕೆ ಹೋಗುತ್ತಿದ್ದಲ್ಲಿ, ಮನೆಗೆ ಹಿಂದಿರುಗಿ ಬರುವವನಾವನೂ ಕಾಣಿಸುತ್ತಿರಲಿಲ್ಲ. ಆದರೆ, ಎಲ್ಲರೂ ಮನೆಗೆ ಮನೆಗೆ ಹಿಂದಿರುಗುವುದೇ ಕಾಣಿಸುತ್ತದೆ. ಅಥವಾ, ಯಾವನಾದರೂ ಅಲ್ಲಿ ಮುಳುಗಿ ಸಾಯುವುದರಾದರೆ, ಅವನ ಜೀವನ ಕೂಡ ಆಕಾಶದಲ್ಲಿ ವಾಯುವಿನೊಂದಿಗೆ ತಿರುಗಾಡಿ, ಜನ್ಮವೆತ್ತುತ್ತಿರಬಹುದು. ದುಡ್ಡು ಕಸಿಯುವ ಜನರೇ 'ತೀರ್ಥರಾಜ'ನೆಂದು ಹೆಸರಿಟ್ಟಿದ್ದಾರೆ. ಜಡದಲ್ಲಿ ರಾಜ-ಪ್ರಜಾ-ಭಾವನೆ ಎಂದಿಗೂ ಸಲ್ಲಲಾರದು. ಅಯೋಧ್ಯಾನಗರೀ- ನಿವಾಸಿಗಳೊಂದಿಗೆ, ನಾಯಿಗಳು, ಕತ್ತೆಗಳು, ಜಲಗಾರರು-ಚಮ್ಮಾರರು, ಚರಂಡಿಗಳು-ಎಲ್ಲರೊಂದಿಗೆ ಮೂರು ಸಾರಿ ಸ್ವರ್ಗಕ್ಕೆ ಹೋಯಿತು- ಎನ್ನುವುದು ಮಹಾ ಅಸಂಭವವಾದ ಮಾತಾಗಿದೆ. ಸ್ವರ್ಗಕ್ಕಂತೂ ಹೋಗಲಿಲ್ಲ, ಎಲ್ಲಿದ್ದಿತೋ, ಅಲ್ಲಿಯೇ ಇದೆ. ಆದರೆ ಪೋಪ ಮಹಾಶಯರ ಬಾಯಿನ ಬುರುಡೆಗಳಲ್ಲಿ ಅಯೋಧ್ಯೆ ಸ್ವರ್ಗಕ್ಕೆ ಹಾರಿ ಹೋಯಿತು! ಈ ಬುರುಡೆ ಶಬ್ದರೂಪದಲ್ಲಿ ಹಾರತ್ತಾ-ಅಲೆಯುತ್ತಾ ಇರುತ್ತದೆ. ನೈಮಿಷಾರಣ್ಯವೇ ಮೊದಲಾದದರ ಪೋಪ-ಲೀಲೆಯನ್ನು ಹೀಗೆಯೇ - ಎಂದು ತಿಳಿಯಬೇಕು. ಮಥುರೆ ಮೂರು ಲೋಕಗಳಲ್ಲಿ 'ಅನುಪಮ'[೧೦೬] ವೇನೋ ಅಲ್ಲ; ಆದರೆ ಯಾರ ಕಾಟದಿಂದ ಜಲ, ನೆಲ ಮತ್ತು ಆಗಸದಲ್ಲಿ ಯಾವನಿಗಾದರೂ ಸುಖ ಸಿಕ್ಕುವುದು ಕಠಿಣವಾಗಿದೆಯೋ, ಅಂತಹ ಮೂರು ಪ್ರಾಣಿಗಳು ಅಲ್ಲಿ ಬಹು ಲೀಲಾಧಾರಿಗಳಾಗಿವೆ. ಒಂದನೆಯದಾಗಿ, ಯಾವನಾದರೂ ಸ್ನಾನ ಮಾಡಲು ಹೋದರೆ, ತಮ್ಮ 'ಸುಂಕ' ಸುಲಿದುಕೊಳ್ಳಲು ನಿಂತಿರುವ, "ಬನ್ನಿ, ಯಜಮಾನರೇ! ಭಂಗೀರಸ, ಖಾರ, ಉಂಡೆ-ತಿನ್ನೋಣ-ಕುಡಿಯೋಣ. ಯಜಮಾನರಿಗೆ ಜಯಘೋಷ ಹಾಕೋಣ".- ಎಂದು ಅರಚುತ್ತಿರುವ ಚೌಬೇಗಳು. ಎರಡನೆಯದಾಗಿ, ಯಾವವುಗಳ ದೆಸೆಯಿಂದ ಘಟ್ಟದಲ್ಲಿ ಸ್ನಾನ ಮಾಡುವುದೂ ಕೂಡ ಕಷ್ಟವಾಗುತ್ತದೋ, ಆ ಆಮೆಗಳು ನೀರಿನಲ್ಲಿ ಕಚ್ಚಿ ತಿಂದೇ ತಿನ್ನುತ್ತವೆ. ಮೂರನೆಯದಾಗಿ, ಆಕಾಶದಲ್ಲಿ ಕೆಂಪು ಮೂತಿಯ ಕೋತಿಗಳು ಪೇಟ, ಟೋಪಿ, ಒಡವೆ ಮತ್ತು ಪಾದರಕ್ಷೆಗಳನ್ನೂ ಕೂಡ ಬಿಡುವುದಿಲ್ಲ; ಕದಿಯುತ್ತವೆ; ತಳ್ಳಿ, ಕೆಡಹಿ, ಸಾಯಿಸುತ್ತವೆ! ಮತ್ತು ಈ ಮೂರೂ, ಪೋಪರಿಗೂ ಹಾಗೂ ಪೋಪರುಗಳ ಶಿಷ್ಯರಿಗೂ ಪೂಜನೀಯವಾಗಿವೆ. ಮಣಗಟ್ಟಲೆ ಕಡಲೆ-ಮೊದಲಾದ ಖಾದ್ಯಗಳನ್ನು ಆಮೆಗಳಿಗೂ, ಮತ್ತು ಕಡಲೆ-ಬೆಲ್ಲ ಮೊದಲಾದುವನ್ನೂ ಮಂಗಗಳಿಗೂ ಮತ್ತು ಚೌಬೆಗಳಿಗೆ ದಕ್ಷಿಣೆ ಮತ್ತು ಉಂಡೆಗಳನ್ನೂ ಅರ್ಪಿಸಿ, ಅವರ ಸೇವಕರು ಸೇವೆ ಮಾಡುತ್ತಾರೆ. ಮತ್ತು ಅದು ಯಾವಾಗ ಬೃಂದಾವನವಾಗಿದ್ದಿತೋ, ಆಗಿದ್ದಿತು; ಈಗ ವೇಶ್ಯೋದ್ಯಾನದಂತೆ ಪ್ರಣಯ-ಪ್ರಣಯಿನಿಯರ ಮತ್ತು ಗುರು-ಶಿಷ್ಯೆಯರ ಲೀಲೆಯನ್ನು ಪ್ರಸರಿಸುತ್ತಿದೆ. ಹಾಗೆಯೇ ದೀಪಮಾಲಿಕೆಯ ಜಾತ್ರೆ, ಗೋವರ್ಧನ ಮತ್ತು ವ್ರಜ ಯಾತ್ರೆಯಲ್ಲಿಯೂ ಕೂಡ ಪೋಪರುಗಳಿಗೇ ಇಷ್ಟ ಸಿದ್ಧಿಯಾಗುತ್ತದೆ. ಕುರುಕ್ಷೇತ್ರದಲ್ಲಿಯೂ ಇರುವುದು ಇದೇ ಹೊಟ್ಟೆಪಾಡಿನ ಲೀಲೆಯೆಂದು ತಿಳಿಯಿರಿ. ಅದರಲ್ಲಿಯೂ ಯಾವನು ಧಾರ್ಮಿಕ ಪರೋಪಕಾರೀ ಪುರುಷನಾಗಿರುತ್ತಾನೋ, ಅವನು ಈ ಪೋಪ ಲೀಲೆಯಿಂದ ದೂರವಾಗಿ ಹೋಗುತ್ತಾನೆ.[೧೦೭]

**ಪ್ರಶ್ನೆ:-** ಈ ಪ್ರತಿಮಾಪೂಜನ ಮತ್ತು ತೀರ್ಥಯಾತ್ರೆ ಸನಾತನ ಕಾಲದಿಂದ ನಡೆದುಬರುತ್ತಿವೆ. ಹೇಗೆ ತಾನೇ ಸುಳ್ಳಾಗಬಲ್ಲವು?

**ಉತ್ತರ:-** ನೀವು ಯಾವುದನ್ನು ಸನಾತನವೆನ್ನುತ್ತೀರಿ?

**ಪ್ರಶ್ನೆ:-** ಯಾವುದು ಸದಾಕಾಲದಿಂದ ನಡೆದುಬರುತ್ತದೋ, ಅದನ್ನು.

**ಉತ್ತರ:-** ಇವು ಸದಾಕಾಲದಿಂದ ನಡೆದುಬರುತ್ತಿರುವುದಾದರೆ, ವೇದಗಳಲ್ಲಿ ಮತ್ತು ಋಷಿ-ಮುನಿಕೃತ ಬ್ರಾಹ್ಮಣಗಳೇ ಮೊದಲಾದ ಗ್ರಂಥಗಳಲ್ಲಿ ಇವುಗಳ ಹೆಸರೇತಕ್ಕೆ ಬರುವುದಿಲ್ಲ? ಈ ಪ್ರತಿಮಾಪೂಜನ ಎರಡೂವರೆ-ಮೂರು ಸಾವಿರ ವರ್ಷಗಳ

---

೧೦೬. ಮಥುರೆ ಮೂರು ಲೋಕಗಳಲ್ಲಿ 'ಅನುಪಮ'ವೇನೂ ಅಲ್ಲ-

೧೦೭. ಈ ರೀತಿಯಾಗಿ, ಕೆಲವು ಪೌರಾಣಿಕ ತೀರ್ಥಸ್ಥಾನಗಳಲ್ಲಿನ ಪೋಪಲೀಲೆ ಮತ್ತು ಚಮತ್ಕಾರಗಳನ್ನು ಮಹರ್ಷಿ ದಯಾನಂದರು ಸಂಕೇತಮಾತ್ರವಾಗಿ ತೋರಿಸಿದ್ದಾರೆ. ಒಂದೆರಡು ತೀರ್ಥಸ್ಥಾನಗಳನ್ನು ಬಿಟ್ಟು, ಮಿಕ್ಕೆಲ್ಲಾ ಉತ್ತರ ಭಾರತದಲ್ಲೇ ಇವೆ. ಇದಕ್ಕೆ ಕಾರಣವೇನೆಂದರೆ, ಪುರಾಣಗಳಲ್ಲಿ ಗಂಗಾ, ಯಮುನಾ, ಮತ್ತು ನರ್ಮದಾ ನದಿಯ ತೀರದ ತೀರ್ಥಗಳ ವರ್ಣನೆಯೇ ಅಧಿಕವಾಗಿದೆ. ದಕ್ಷಿಣ ಭಾರತದ ತೀರ್ಥಗಳ ವರ್ಣನೆ ಅಷ್ಟಿಲ್ಲ. ಉತ್ತರ ಭಾರತದಲ್ಲಿಯೇ ಲಕ್ಷಾಂತರ ನಿರಕ್ಷರ-ಕುಕ್ಷಿ ಸಾಧುಗಳೂ, ಸಂನ್ಯಾಸಿಗಳೂ, ಧೂರ್ತ ಪೂಜಾರಿಗಳೂ ಇರುವದರಿಂದಲೂ, ಮತ್ತು ಅಲ್ಲಿನ ಜನ ಸಾಧಾರಣರು ಮುಗ್ಧರಾಗಿರುವುದರಿಂದಲೂ, ಮತ್ತು ದಕ್ಷಿಣ ಭಾರತೀಯರು ಕೂಡ ಉತ್ತರ ಭಾರತದ ತೀರ್ಥಸ್ಥಾನಗಳಿಗೇ ಯಾತ್ರೆ ಹೊರಡುವದರಿಂದ, ಜನ್ಮ ಸಾಫಲ್ಯವೆಂದು ತಿಳಿದಿರುವುದರಿಂದಲೂ ಈ ಪೋಪಲೀಲೆ-ಚಮತ್ಕಾರಗಳು ಅಲ್ಲೇ ಬೀಡು ಬಿಟ್ಟಿವೆ.

ಇತ್ತೀಚಿನದಾಗಿದ್ದು, ವಾಮಮಾರ್ಗಿಗಳಿಂದ ಮತ್ತು ಜೈನರಿಂದ ಪ್ರಚಲಿತವಾಗಿದೆ. ಮೊದಲು ಆರ್ಯಾವರ್ತದಲ್ಲಿರಲಿಲ್ಲ. ಮತ್ತು ತೀರ್ಥಗಳೂ ಇರಲಿಲ್ಲ. ಯಾವಾಗ ಜೈನರು ಗಿರನಾರ, ಪಾಲಿಟಾನಾ, ಶಿಖರ, ಶತ್ರುಂಜಯ ಮತ್ತು ಅಬೂ ಮೊದಲಾದ ತೀರ್ಥಗಳನ್ನು ನಿರ್ಮಿಸಿದರೋ, ಆಗ, ಅದಕ್ಕೆ ಸರಿಯಾಗಿ ಈ ಜನರೂ[೧೦೮] ಕೂಡ ನಿರ್ಮಿಸಿಕೊಂಡರು. ಯಾರಾದರೂ ಇವುಗಳ ಆರಂಭವನ್ನು ಪರೀಕ್ಷಿಸಲು ಬಯಸಿದರೆ, ಅವರು ಭಟ್ಟರುಗಳ ಪುರಾತನವಾದುದಕ್ಕಿಂತ ಪುರಾತನವಾದುದಕ್ಕಿಂತ ಪುರಾತನವಾದ ದಾಖಲೆಗಳನ್ನೂ, ಮತ್ತು ತಾಮ್ರ-ಪತ್ರ[೧೦೯] ಮೊದಲಾದ ಬರೆಹಗಳನ್ನೂ ನೋಡಲಿ. ಆಗ ಈ ಎಲ್ಲಾ ತೀರ್ಥಗಳೂ ಐನೂರು ಅಥವಾ ಸಾವಿರ ವರ್ಷಗಳಿಂದ ಈಚೆಗೇ ನಿರ್ಮಿತವಾಗಿವೆ-ಎನ್ನುವುದು ನಿಶ್ಚಯವಾಗಿ ಹೋಗುವುದು. ಸಾವಿರ ವರ್ಷಗಳಿಗಿಂತ ಹಿಂದಿನ ಬರೆಹ ಯಾವನ ಬಳ್ಳಿಯಿಂದಲೂ ಹೊರ ಬರುವುದಿಲ್ಲ.[೧೧೦] ಆದುದರಿಂದ, ಅಧುನಿಕವಾಗಿದೆ.

**ಪ್ರಶ್ನೆ:-** **"ಅನ್ಯಕ್ಷೇತ್ರೇ ಕೃತಂ ಪಾಪಂ ಕಾಶೀಕ್ಷೇತ್ರೇ[೧೧೧] ವಿನಶ್ಯತಿ".** ಎನ್ನುವಂತಹ ಯಾವ ಯಾವ ತೀರ್ಥದ ಅಥವಾ ಹೆಸರಿನ ಮಾಹಾತ್ಮ್ಯದ ಮಾತುಗಳಿವೆಯೋ, ಅವು ಸತ್ಯವಾಗಿವೆಯೋ, ಅಥವಾ ಇಲ್ಲವೋ?

**ಉತ್ತರ:-** ಇಲ್ಲ. ಏಕೆಂದರೆ, ಪಾಪಗಳು ಬಿಟ್ಟು ಹೋಗುತ್ತಿದ್ದರೆ, ದರಿದ್ರರಿಗೆ ಧನ, ರಾಜ್ಯಾಧಿಕಾರ, ಅಂಧರಿಗೆ ಕಣ್ಣು ಸಿಕ್ಕಿ ಬಿಡುತ್ತಿದ್ದವು. ಕುಷ್ಠರೋಗಿಗಳ ಕುಷ್ಠ ಮೊದಲಾದ ರೋಗಗಳು ವಾಸಿಯಾಗುತ್ತಿದ್ದವು. ಹೀಗೆ ಆಗುವುದಿಲ್ಲ. ಆದುದರಿಂದ, ಯಾವನ ಪಾಪ-ಪುಣ್ಯವೂ ಹರಿದುಹೋಗುವುದಿಲ್ಲ. (ಫಲಭೋಗಾನಂತರವೇ ಅವುಗಳಿಂದ ಬಿಡುಗಡೆ.)-ಎಂದೇ ತಾತ್ಪರ್ಯ.

**ಪ್ರಶ್ನೆ:-** **ಗಂಗಾಗಂಗೇತಿ ಯೋ ಬ್ರೂಯಾ ದ್ಯೋಜನಾನಾಂ ಶತೈರಪಿ ।**

**ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣು ಲೋಕಂ ಸಗಚ್ಛತಿ ॥ ೧ ॥** (ಬ್ರಹ್ಮಪುರಾಣ:-೧೭೫.೮೨)

**ಹರಿರ್ಹರತಿ ಪಾಪಾನಿ ಹರಿರಿತ್ಯಕ್ಷರದ್ವಯಮ್ ॥ ೨ ॥** (ಪದ್ಮಪುರಾಣ:-೨೨.೩೪)

**ಪ್ರಾತಃ ಕಾಲೇ ಶಿವಂ ದೃಷ್ಟ್ವಾ ನಿಶಿ ಪಾಪಂ ವಿನಶ್ಯತಿ ।**

**ಆಜನ್ಮಕೃತಂ ಮಧ್ಯಾಹ್ನೇ ಸಾಂಧ್ಯಾಹ್ನೇ ಸಪ್ತಜನ್ಮನಾಮ್[೧೧೨] ॥ ೩॥**

ಈ ಮೊದಲಾದ ಶ್ಲೋಕಗಳು ಪೋಪ ಪುರಾಣದವಾಗಿವೆ. ನೂರಾರು, ಸಾವಿರಾರು ಯೋಜನಗಳಿಂದಲಾದರೂ 'ಗಂಗಾ, ಗಂಗಾ'- ಎಂದು ಹೇಳಿದರೆ, ಅವನ ಪಾಪಗಳು ನಿವಾರಿತವಾಗಿ, ಅವನು ವಿಷ್ಣುಲೋಕಕ್ಕೆ, ಎಂದರೆ-ವೈಕುಂಠಕ್ಕೆ ಹೋಗುತ್ತಾನೆ(೧).

**'ಹರಿ'** ಎಂಬ ಈ ಎರಡು ಅಕ್ಷರಗಳ ಹೆಸರಿನ ಉಚ್ಚಾರಣೆ ಸರ್ವಪಾಪಗಳನ್ನೂ ನಿವಾರಿಸಿ ಬಿಡುತ್ತದೆ. ಹಾಗೆಯೇ ರಾಮ, ಕೃಷ್ಣ, ಶಿವ, ಭಗವತೀಯೇ ಮೊದಲಾದ ನಾಮಗಳಿಗೂ ಮಹಾತ್ಮ್ಯವಿದೆ (೨)

ಮತ್ತು ಮಾನವನು ಪ್ರಾತಃಕಾಲದಲ್ಲಿ ಶಿವನ, ಎಂದರೆ ಲಿಂಗದ ಅಥವಾ ಅವನ ಪ್ರತಿಮೆಯ ದರ್ಶನ ಮಾಡುವವನಾದರೆ, ರಾತ್ರಿಯಲ್ಲಿ ಮಾಡಿದ, ಮಧ್ಯಾಹ್ನದಲ್ಲಿ ದರ್ಶನ ಮಾಡುವುದರಿಂದ ಜನ್ಮಪೂರ್ತದ, ಸಾಯಂಕಾಲದಲ್ಲಿ ದರ್ಶನ ಮಾಡುವುದರಿಂದ ಏಳು ಜನ್ಮಗಳ ಪಾಪ ಬಿಟ್ಟು ಹೋಗುತ್ತದೆ. ಇದು ದರ್ಶನದ ಮಹಾತ್ಮ್ಯವಾಗಿದೆ. (೩) ಇದೆಲ್ಲಾ ಸುಳ್ಳಾಗಿ ಹೋಗುವುದೇನೋ?

**ಉತ್ತರ:-** ಸುಳ್ಳಾಗಿರುವುದರಲ್ಲಿ ಸಂದೇಹವೇನು? ಏಕೆಂದರೆ, ಗಂಗಾ - ಗಂಗಾ ಎನ್ನುವುದರಿಂದ, ಅಥವಾ ಹರಿ, ರಾಮ, ಕೃಷ್ಣ, ನಾರಾಯಣ, ಶಿವ ಮತ್ತು ಭಗವತಿಯ ನಾಮಸ್ಮರಣದಿಂದ ಪಾಪವೆಂದಿಗೂ ಬಿಟ್ಟುಹೋಗುವುದಿಲ್ಲ. ಬಿಟ್ಟು

---

೧೦೮. ಎಂದರೆ, ಪೌರಾಣಿಕ ಪೋಪರು.

೧೦೯. ಈ ತಾಮ್ರಪತ್ರಗಳು ಪ್ರಾಯಶಃ ದಾನಗಳ ಸಂಬಂಧದಲ್ಲಿವೆ. -ಯು.ಮೀ.

೧೧೦. ಈ ಪರೀಕ್ಷೆಯನ್ನು ಮಹರ್ಷಿ ದಯಾನಂದರೇ ಮಾಡಬೇಕಾಯಿತು. ಅನ್ಯ ವಿದ್ವಾಂಸ-ಅವಿದ್ವಾಂಸ ಜನರು ಕಣ್ಣು ಮುಚ್ಚಿಕೊಂಡು, ತೀರ್ಥಯಾತ್ರೆಯನ್ನು ಮಾಡುತ್ತಲೇ ಹೋಗುತ್ತಿದ್ದಾರೆ.

೧೧೧. ಪದ್ಮಪುರಾಣ, ಕಾಶೀಮಹಾತ್ಮ್ಯ, ಕಾಶೀ ಖಂಡ ಇತ್ಯಾದಿ. -ಯು.ಮೀ.

೧೧೨. ನೋಡಿ- 'ತೀರ್ಥ ದರ್ಪಣ ಪಂಡ ಅರ್ಪಣ' -ಪರಿಚ್ಛೇದ ೮

ಹೋಗುವುದಾದಲ್ಲಿ, ಯಾವನೂ ದುಃಖಿತನಾಗಿರಲಾರನು. ಮತ್ತು ಪಾಪ ಮಾಡುವುದಕ್ಕೆ ಯಾವನೂ ಹೆದರುವುದಿಲ್ಲ. ಉದಾಹರಣೆಗೆ, ಈ ದಿನಗಳಲ್ಲಿ ಪೋಪ ಲೀಲೆಯಲ್ಲಿ ಪಾಪಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಿವೆ. ಮೂಢರಿಗೆ, "ನಾವು ಪಾಪಮಾಡಿ ನಾಮಸ್ಮರಣೆಯನ್ನು ಅಥವಾ ತೀರ್ಥಯಾತ್ರೆಯನ್ನು ಮಾಡುವೆವಾದರೆ, ಪಾಪಗಳ ನಿವೃತ್ತಿಯಾಗಿ ಹೋಗುವುದು".- ಎಂಬ ನಂಬಿಕೆಯಿರುತ್ತದೆ. ಇದೇ ನಂಬಿಕೆಯಿಂದ ಪಾಪಗಳನ್ನು ಮಾಡಿ, ಈ ಲೋಕದ ಮತ್ತು ಪರಲೋಕದ ನಾಶವನ್ನು ಮಾಡಿಕೊಳ್ಳುತ್ತಾರೆ. ಆದರೆ ಮಾಡಿದ ಪಾಪವನ್ನು ಅನುಭವಿಸಲೇಬೇಕಾಗುತ್ತದೆ.

**ಪ್ರಶ್ನೆ:**– ಹಾಗಾದರೆ, ಯಾವುದಾದರೂ ತೀರ್ಥ, ನಾಮಸ್ಮರಣ ಸತ್ಯವಹುದೋ, ಅಥವಾ ಅಲ್ಲವೋ?

**ಉತ್ತರ:**– ಸತ್ಯವಾದುದು ಇದೆ. ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಅಧ್ಯಯನ – ಅಧ್ಯಾಪನ, ಧಾರ್ಮಿಕ ವಿದ್ವಾಂಸರ ಸಂಗ, ಪರೋಪಕಾರ, ಧರ್ಮಾನುಷ್ಠಾನ, ಯೋಗಾಭ್ಯಾಸ, ನಿರ್ವೈರತ್ವ, ನಿಷ್ಕಪಟತ್ವ, ಸತ್ಯಭಾಷಣ, ಸತ್ಯದ ಅಂಗೀಕಾರ, ಸತ್ಯಾಚರಣ, ಬ್ರಹ್ಮಚರ್ಯ, ಆಚಾರ್ಯ–ಅತಿಥಿ–ಮಾತಾಪಿತೃಗಳ ಸೇವೆ, ಪರಮೇಶ್ವರನ ಸ್ತುತಿಪ್ರಾರ್ಥನೋಪಾಸನೆಗಳು, ಶಾಂತಿ, ಜಿತೇಂದ್ರಿಯತ್ವ, ಸುಶೀಲತ್ವ, ಧರ್ಮಯುಕ್ತವಾದ ಪುರುಷಾರ್ಥ, ಜ್ಞಾನ, ವಿಜ್ಞಾನ–ಮೊದಲಾದ ಶುಭಗುಣಕರ್ಮಗಳು ದುಃಖದಿಂದ ಪಾರುಗಾಣಿಸುವವಾಗಿರುವುದರಿಂದ **'ತೀರ್ಥ'**ಗಳಾಗಿವೆ. ಮತ್ತು ಯಾವವು ಜಲಮಯ–ಸ್ಥಳಮಯಗಳಾಗಿವೆಯೋ, ಅವು ಎಂದಿಗೂ **'ತೀರ್ಥ'**ವಾಗಲಾರವು. ಏಕೆಂದರೆ, **"ಜನಾ ಯೈಸ್ತರಂತಿ ತಾನಿ ತೀರ್ಥಾನಿ"**. – ಯಾವವುಗಳ ನೆರವಿನಿಂದ ಮಾನವರು ದುಃಖಗಳಿಂದ ಪಾರಾಗುವರೋ, ಅವಕ್ಕೇ **"ತೀರ್ಥ"**ಗಳೆಂಬ ಹೆಸರಿದೆ. ಜಲ–ಸ್ಥಳಗಳು ಕಡೆ ಹಾಯಿಸುವವಲ್ಲ; ಮುಳುಗಿಸಿ ಸಾಯಿಸುವವಾಗಿವೆ. ಪ್ರತಿಯಾಗಿ, ಹಡಗು ಮೊದಲಾದುವಕ್ಕೆ ತೀರ್ಥವೆಂಬ ಹೆಸರಿಡಬಹುದು. ಏಕೆಂದರೆ, ಅವುಗಳಿಂದ ಸಮುದ್ರ ಮೊದಲಾದುವನ್ನು ದಾಟುತ್ತಾರೆ.

**ಸಮಾನತೀರ್ಥೇ ವಾ ಸೀ ॥ ೧ ॥** (ಅಷ್ಟಾಧ್ಯಾಯಿ:– ೪.೪.೧೦೮)

**ನಮಸ್ತೀರ್ಥ್ಯಾಯ ಚ ॥.೨ ॥** (ಯಜುರ್ವೇದ :– ೧೬.೪೨)

ಯಾವ ಬ್ರಹ್ಮಚಾರಿಗಳು ಒಬ್ಬ ಆಚಾರ್ಯನ ಬಳಿ, ಒಂದು ಶಾಸ್ತ್ರವನ್ನು ಒಂದಿಗೇ ಓದುತ್ತಾರೋ, ಅವರೆಲ್ಲರೂ ಸತೀರ್ಥ್ಯರು, ಎಂದರೆ ಸಮಾನ ತೀರ್ಥ ಸೇವಿಗಳು ಆಗಿರುತ್ತಾರೆ. (೧).

ಯಾವನು ವೇದಗಳೇ ಮೊದಲಾದ ಶಾಸ್ತ್ರಗಳು ಮತ್ತು ಸತ್ಯಭಾಷಣ ಮೊದಲಾದ ಧರ್ಮಲಕ್ಷಣಗಳಲ್ಲಿ ಸ್ಥಿತನಾದ ಸಾಧುವಾಗಿರುವನೋ, ಅವನಿಗೆ ಆಹಾರ ಮೊದಲಾದ ಪದಾರ್ಥಗಳನ್ನು ಕೊಡುವುದು ಮತ್ತು ಅವನಿಂದ ವಿದ್ಯೆ ಗ್ರಹಿಸುವುದು–ಈ ಮೊದಲಾದುವು ತೀರ್ಥಗಳೆನಿಸುತ್ತವೆ. ನಾಮಸ್ಮರಣವೆಂದು ಈ ಕೆಳಗಿನದನ್ನು ಹೇಳುತ್ತಾರೆ:–

**ಯಸ್ಯ ನಾಮ ಮಹದ್ಯಶಃ ॥** (ಯಜು :– ೩೨.೩)

ಪರಮೇಶ್ವರನ ನಾಮಸ್ಮರಣದಿಂದ ಮಹಾ ಯಶಸ್ಸು ಪ್ರಾಪ್ತವಾಗುತ್ತದೆ. ಎಂದರೆ, ಅವನು ಧರ್ಮಯುಕ್ತವಾದ ಕರ್ಮಗಳನ್ನು ಮಾಡಿ, ಭಗವಂತನಂತೆಯೇ ಮಹಾ ಯಶಸ್ವಿಯಾಗುತ್ತಾನೆ. ಇದೇ ನಿಜವಾದ ನಾಮಸ್ಮರಣ. ಬ್ರಹ್ಮ, ಪರಮೇಶ್ವರ, ಈಶ್ವರ, ನ್ಯಾಯಕಾರೀ, ದಯಾಳು, ಸರ್ವಶಕ್ತಿಮಾನ್ ಮೊದಲಾದ ಹೆಸರುಗಳು ಪರಮೇಶ್ವರನ ಗುಣ–ಕರ್ಮ–ಸ್ವಭಾವಗಳ ದೆಸೆಯಿಂದಲೇ ಆಗಿವೆ. ಹೇಗೆಂದರೆ, ಬ್ರಹ್ಮ ಎಲ್ಲರಿಗಿಂತ ದೊಡ್ಡವನು, ಪರಮೇಶ್ವರ–ಎಂದರೆ ಈಶ್ವರರಿಗೆಲ್ಲಾ ಈಶ್ವರನು, ಈಶ್ವರ–ಎಂದರೆ ಸಾಮರ್ಥ್ಯ ಸಂಪನ್ನನು, ನ್ಯಾಯಕಾರಿ–ಎಂದರೆ ಎಂದಿಗೂ ಅನ್ಯಾಯವನ್ನು ಮಾಡದವನು. ದಯಾಳು ಎಂದರೆ ಎಲ್ಲರ ಮೇಲೆಯೂ ಕೃಪಾದೃಷ್ಟಿಯನ್ನಿಡುವವನು; ಸರ್ವಶಕ್ತಿಮಾನ್–ಎಂದರೆ ತನ್ನ ಸಾಮರ್ಥ್ಯದಿಂದಲೇ ಸಮಸ್ತ ಜಗತ್ತಿನ ಉತ್ಪತ್ತಿ–ಸ್ಥಿತಿ–ಪ್ರಳಯಗಳನ್ನು ಮಾಡುವವನು; ಯಾವನ ಸಹಾಯವನ್ನೂ ತೆಗೆದುಕೊಳ್ಳುವುದಿಲ್ಲ. ಬ್ರಹ್ಮಾ–ಎಂದರೆ ವಿವಿಧ ಜಗತ್ತಿನ ಪದಾರ್ಥಗಳನ್ನು ನಿರ್ಮಿಸುವವನಾಗಿದ್ದಾನೆ. ವಿಷ್ಣು–ಎಂದರೆ ಎಲ್ಲದರಲ್ಲಿಯೂ ವ್ಯಾಪಕನಾಗಿ ರಕ್ಷಣೆ ಮಾಡುವವನಾಗಿದ್ದಾನೆ. ಮಹಾದೇವ–ಎಂದರೆ ಸಮಸ್ತ ದೇವತೆಗಳಿಗೂ ದೇವನಾಗಿದ್ದಾನೆ. ರುದ್ರ–ಎಂದರೆ ಪ್ರಳಯ ಮಾಡುವವನಾಗಿದ್ದಾನೆ–ಈ ರೀತಿಯಲ್ಲಿ ಗುಣವಾಚಕವಾದ ಹೆಸರುಗಳ ಅರ್ಥಗಳನ್ನು ಗ್ರಹಿಸಿ ಅದಕ್ಕನುಕೂಲವಾದ ಗುಣಗಳನ್ನು ಅರಳಿಸಿ, ಮಹತ್ಕಾರ್ಯಗಳಿಂದ ದೊಡ್ಡವನಾಗಬೇಕು; ಸಮರ್ಥರಲ್ಲಿ ಸಮರ್ಥನತಾಗಬೇಕು; ಸಾಮರ್ಥ್ಯಗಳನ್ನು

ಹೆಚ್ಚಿಸಿಕೊಳ್ಳುತ್ತಾ ಹೋಗಬೇಕು; ಅಧರ್ಮವನ್ನೆಂದಿಗೂ ಮಾಡಬಾರದು; ಎಲ್ಲರ ಮೇಲೆಯೂ ದಯೆಯಿಡಬೇಕು; ಎಲ್ಲ ಬಗೆಯ ಸಾಧನಗಳನ್ನೂ ಶಕ್ತಿ ಸಂಪನ್ನವಾಗಿ ಮಾಡಬೇಕು; ಶಿಲ್ಪ ವಿದ್ಯೆಯಿಂದ ನಾನಾಪ್ರಕಾರದ ಪದಾರ್ಥಗಳನ್ನು ನಿರ್ಮಿಸಬೇಕು; ತನ್ನ ಆತ್ಮನಿಗೆ ಸಮನಾಗಿಯೇ ಜಗತ್ತಿನಲ್ಲಿ (ಎಲ್ಲರಿಗೂ) ಸುಖ-ದುಃಖಗಳಿವೆ-ಎಂದು ತಿಳಿಯಬೇಕು; ಸರ್ವರನ್ನೂ ಯಥಾಶಕ್ತಿ ರಕ್ಷಿಸಬೇಕು; ವಿದ್ವಾಂಸರಲ್ಲಿ ವಿದ್ವಾಂಸನಾಗಿರಬೇಕು; ದುಷ್ಕರ್ಮ ಮಾಡುವವರಿಗೆ ಪ್ರಯತ್ನಪೂರ್ವಕವಾಗಿ ಶಿಕ್ಷೆಯನ್ನೂ ಮತ್ತು ಸಜ್ಜನರಿಗೆ ರಕ್ಷಣೆಯನ್ನು (ರಾಜ್ಯಶಾಸನದ ಮೂಲಕ) ಕೊಡಿಸಬೇಕು. ಹೀಗೆ ಪರಮೇಶ್ವರನ ಹೆಸರುಗಳ ಅರ್ಥವನ್ನು ಅರಿತು, ಪರಮೇಶ್ವರನ ಗುಣಕರ್ಮಸ್ವಭಾವಗಳಿಗೆ ಅನುಕೂಲವಾಗಿ ನಡೆದುಕೊಳ್ಳುತ್ತಾ ಹೋಗುವುದೇ ಪರಮೇಶ್ವರನ ಯಥಾರ್ಥವಾದ ನಾಮಸ್ಮರಣವಾಗಿದೆ.

**ಪ್ರಶ್ನೆ:- ಗುರುರ್ಬ್ರಹ್ಮಾ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ ।**

**ಗುರುರೇವ ಪರಂಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ** [೧೧೩] ॥

ಈ ಮೊದಲಾದ ಗುರುಮಾಹಾತ್ಮ್ಯವಾದರೂ ಸತ್ಯವೇನು? ಗುರುವಿನ ಚರಣಗಳನ್ನು ತೊಳೆದು, ಆ ನೀರನ್ನು ಕುಡಿಯುವುದು, ಹೇಗೆ ಆಜ್ಞಾಪಿಸುವನೋ, ಹಾಗೆ ವರ್ತಿಸುವುದು, ಗುರುವು ಲೋಭಿಯಾಗಿದ್ದರೆ ವಾಮನನಿಗೆ ಸಮನೆಂದೂ, ಕ್ರೋಧಿಯಾಗಿದ್ದರೆ ನರಸಿಂಹನಿಗೆ ಸಮನೆಂದೂ, ಮೋಹಿಯಾಗಿದ್ದರೆ ರಾಮನಿಗೆ ಸಮನೆಂದೂ, ಕಾಮಿಯಾಗಿದ್ದರೆ ಕೃಷ್ಣನಿಗೆ ಸಮನೆಂದೂ, ಗುರುವಿನ ಬಗೆಗೆ ತಿಳಿದುಕೊಳ್ಳಬೇಕು. ಗುರುವು ಎಂತಹ ಪಾಪವನ್ನು ಬೇಕಾದರೂ ಮಾಡಲಿ, ಆಗಲೂ ಅಶ್ರದ್ಧೆಯನ್ನು ಮಾಡಬಾರದು. ಸಂತನ ಅಥವಾ ಗುರುವಿನ ದರ್ಶನಕ್ಕೆ ಹೋಗುವಲ್ಲಿ ಹೆಜ್ಜೆ ಹೆಜ್ಜೆಗೆ ಅಶ್ವಮೇಧದ ಫಲ ಸಿಕ್ಕುತ್ತದೆ-ಎಂಬುದು ಸರಿಯೋ ಅಥವಾ ಅಲ್ಲವೋ?

**ಉತ್ತರ:-** ಸರಿಯಲ್ಲ. ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ಪರಬ್ರಹ್ಮ - ಇವು ಪರಮೇಶ್ವರನ ಹೆಸರುಗಳಾಗಿವೆ. ಗುರುವು ಅವನಿಗೆ ಎಂದಿಗೂ ಸಮನಾಗಲಾರನು. ಈ ಗುರುಮಾಹಾತ್ಮ್ಯ, ಗುರುಗೀತೆಯೂ ಕೂಡ ಒಂದು ದೊಡ್ಡ ಪೋಪಲೀಲೆಯಾಗಿದೆ. ಮಾತೆ, ಪಿತೃ, ಆಚಾರ್ಯ ಹಾಗೂ ಅತಿಥಿಗಳು ಗುರುಗಳಾಗಿರುತ್ತಾರೆ. ಅವರ ಸೇವೆಯನ್ನು ಮಾಡುವುದು, ಅವರಿಂದ ವಿದ್ಯೆಯನ್ನೂ, ಶಿಕ್ಷಣವನ್ನೂ ಗ್ರಹಿಸುವುದು ಹಾಗೂ ಕೊಡುವುದು ಶಿಷ್ಯನ ಮತ್ತು ಗುರುವಿನ ಕೆಲಸವಾಗಿರುತ್ತದೆ. ಆದರೆ, ಗುರುವು ಲೋಭಿಯೂ, ಕ್ರೋಧಿಯೂ, ಮೋಹಿಯೂ, ಮತ್ತು ಕಾಮಿಯೂ ಆಗಿದ್ದರೆ, ಅವನನ್ನು ಸರ್ವಥಾ ವರ್ಜಿಸಿ ಬಿಡಬೇಕು. ಸರಿಯಾದ ಮಾರ್ಗಕ್ಕೆ ಬರುವಂತೆ ತಿಳುವಳಿಕೆಯನ್ನು ಗುರುನಾಮಧಾರಿಗೆ, ಹೇಳಬೇಕು. ಅದಕ್ಕೆ ಒಪ್ಪದಿದ್ದರೆ, ಅಂತಹ ಜನವಂಚಕರನ್ನು ರಾಜ್ಯದ ಶಾಸನದ ಕಡೆಯಿಂದ ದಂಡಿಸಬೇಕು. ಪ್ರಜಾಹಿತ ಸಾಧನೆಗಾಗಿ ಅಂತಹ ಗುರುವೇಷಧಾರಿಗಳಿಗೆ ಮೃತ್ಯುದಂಡವನ್ನಿತ್ತರೂ ದೋಷವಿಲ್ಲ. ಯಾರಿಗೆ ವಿದ್ಯೆ ಮೊದಲಾದ ಸದ್ಗುಣಗಳಲ್ಲಿ ಹಿರಿತನವಿಲ್ಲವೋ, ಯಾರು ಸುಳ್ಳು ಸುಳ್ಳೇ ಮಾಲೆ, ನಾಮ, ವೇದವಿರುದ್ಧವಾದ ಮಂತ್ರೋಪದೇಶಗಳನ್ನು ಮಾಡುವವರಾಗಿದ್ದಾರೋ, ಅವರು ಗುರುಗಳೇ ಅಲ್ಲ; ಆದರೆ ಕುರುಬರಂತೆ ಇರುತ್ತಾರೆ. ಹೇಗೆ ಕುರುಬರು ತಮ್ಮ ಕುರಿ-ಮೇಕೆಗಳಿಂದ ಹಾಲು-ಮೊದಲಾದುವುಗಳಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೋ, ಹಾಗೇಯೇ ಶಿಷ್ಯರ, ಅನುಯಾಯಿ-ಅನುಯಾಯಿನಿಯರ ಧನವನ್ನು ಕಸಿದು, ತಮ್ಮ ಸ್ವಾರ್ಥವನ್ನು ಪೂರ್ಣ ಮಾಡಿಕೊಳ್ಳುತ್ತಾರೆ.

ದೋಹಾ:- **ಗುರು ಲೋಭೀ ಚೇಲಾ ಲಾಲಚೀ ದೋನೋಂ ಖೇಲೇಂ ದಾವ್ ।**

**ಭವಸಾಗರಮೇಂ ಡೂಬತೇ, ಬೈಠ್ ಪತ್ಥರ್ ಕೀ ನಾವ್ ॥**

ಗುರುಗಳು - **'ಶಿಷ್ಯ-ಶಿಷ್ಯೆಯರು ಏನನ್ನಾದರೂ ಕೊಟ್ಟೇ ಕೊಟ್ಟಾರು!'** - ಎಂದು ನಿರೀಕ್ಷಿಸುವವರು; ಶಿಷ್ಯರು - **"**ನಡೆಯಿರಿ. ಗುರುಗಳು ಸುಳ್ಳು ಆಣೆಯಿಡುವುದು, ಪಾಪದಿಂದ ಬಿಡಿಸುವುದು-ಮೊದಲಾದ ದುರಾಶೆ ತೋರುವರು**"**.- ಎಂದು ಎದುರು ನೋಡುವರು. ಇಂತಹ ಕಪಟ ಮುನಿಗಳಿಬ್ಬರೂ, ಕಲ್ಲಿನ ಹಡಗಿನಲ್ಲಿ ಕುಳಿತುಕೊಳ್ಳುವವರು ಹೇಗೆ ಸಮುದ್ರದಲ್ಲಿ ಮುಳುಗಿಸಾಯುವರೋ, ಹಾಗೆ ಭವಸಾಗರದ ದುಃಖದಲ್ಲಿ ಮುಳುಗುತ್ತಾರೆ. ಇಂತಹ ಕಪಟೀ ಗುರು-ಶಿಷ್ಯರ ಗುಂಪು ಮಣ್ಣನ್ನು ಮುಕ್ಕಲಿ. ಅವರ ಬಳಿ ಯಾವನೂ ನಿಲ್ಲಲೂಬಾರದು. ಯಾವನು ಬಳಿ ಇರುವನೋ, ಅವನು ದುಃಖಸಾಗರದಲ್ಲಿ ಬೀಳುವನು.

೧೧೩. ಗುರು-ಗೀತಾ, ಗುರು ಮಹಾತ್ಮ್ಯ ೧೬- ಯು.ಮೀ.

ಪೂಜಾರೀ ಪೌರಾಣಿಕರು ಎಂತಹ ಪೋಪಲೀಲೆಯನ್ನು ನಡೆಯಿಸಿದ್ದಾರೋ, ಅಂತಹ ಲೀಲೆಯನ್ನು ಈ ಕರುಬ ಗುರುಗಳೂ ಕೂಡ ಮೆರೆಯಿಸಿದ್ದಾರೆ. ಈ ಕೆಲಸವೆಲ್ಲಾ ಸ್ವಾರ್ಥಿಗಳದಾಗಿದೆ. **ಯಾರು ಪರಮಾರ್ಥಿಗಳಾದ ಜನರಾಗಿರುತ್ತಾರೋ, ಅವರು ತಾವು ದುಃಖಗಳನ್ನು ಅನುಭವಿಸಿದರೂ ಕೂಡ, ಜಗತ್ತಿಗೆ ಉಪಕಾರ ಮಾಡುವುದರನ್ನು ಬಿಡುವುದಿಲ್ಲ.** ಮತ್ತು ಗುರುಮಾಹಾತ್ಮ್ಯ ಮತ್ತು ಗುರು-ಗೀತೆ-ಮೊದಲಾದುವನ್ನೂ ಕೂಡ ಈ ಲೋಭಿಗಳೂ, ಕುಕರ್ಮಿಗಳೂ ಆದ ಗುರುಜನರು ರಚಿಸಿದ್ದಾರೆ.

**ಪ್ರಶ್ನೆ:-** **ಅಷ್ಟಾದಶಪುರಾಣಾನಾಂ ಕರ್ತಾಸತ್ಯವತೀಸುತಃ** ॥ ೧ ॥

**ಇತಿಹಾಸಪುರಾಣಾಭ್ಯಾಂ ವೇದಾರ್ಥಮುಪಬೃಂಹಯೇತ್** ॥ ೨ ॥ (ಮಹಾಭಾರತ ಆದಿಪರ್ವ ೩.೨೬೭)

**ಪುರಾಣಾನ್ಯಖಿಲಾನಿ ಚ** . . . . . ॥ ೩ ॥ (ಮನು:- ೩.೨೩೨)

**ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ** ॥ ೪ ॥ (ಛಾಂದೋಗ್ಯ:- ೭.೧)

**ದಶಮೇऽಹನಿ ಕಿಂಚಿತ್ಪುರಾಣಮಾ ಚಕ್ಷೀತ**[೧೧೪] ॥ ೫ ॥

**ಪುರಾಣವಿದ್ಯಾ ವೇದಃ** ॥ ೬ ॥ (ಸೂತ್ರಂ)

ಹದಿನೆಂಟು ಪುರಾಣಗಳ ಕರ್ತೃವು ವ್ಯಾಸರಾಗಿದ್ದಾರೆ. ವ್ಯಾಸವಚನವನ್ನು ಅವಶ್ಯವಾಗಿ ಪ್ರಮಾಣೀಕರಿಸಬೇಕು. (೧).

ಇತಿಹಾಸ, ಮಹಾಭಾರತ, ಹದಿನೆಂಟು ಪುರಾಣಗಳಿಂದ ಅರ್ಥಗಳನ್ನು ಓದಬೇಕು-ಓದಿಸಬೇಕು. ಏಕೆಂದರೆ, ಇತಿಹಾಸ ಮತ್ತು ಪುರಾಣಗಳು ವೇದಗಳ ಅರ್ಥಗಳಿಗೆ ಅನುಕೂಲವಾಗಿವೆ. (೨)

ಪಿತೃಕರ್ಮದಲ್ಲಿ ಪುರಾಣಗಳನ್ನು ಮತ್ತು ಹರಿವಂಶದ ಕಥೆಯನ್ನು ಆಲಿಸಬೇಕು. (೩)

ಇತಿಹಾಸ ಮತ್ತು ಪುರಾಣಗಳು ಐದನೆಯ ವೇದವೆನಿಸುತ್ತವೆ. (೪)

ವೇದಾರ್ಥವನ್ನು ತಿಳಿಸುವ ಕಾರಣಗಳಿಂದ ಪುರಾಣಗಳು ವೇದಗಳಾಗಿವೆ. (೫)

ಅಶ್ವಮೇಧದ ಸಮಾಪ್ತಿಯಲ್ಲಿ, ಹತ್ತನೆಯ ದಿನ ಸ್ವಲ್ಪ ಪುರಾಣದ ಕಥೆಯನ್ನು ಆಲಿಸಬೇಕು. (೬)

ಈ ಮೊದಲಾದ ಪ್ರಮಾಣಗಳಿಂದ ಪುರಾಣಗಳ ಪ್ರಾಮಾಣ್ಯ ಮತ್ತು ಇವುಗಳ[೧೧೫] ಪ್ರಮಾಣದಿಂದ ಪ್ರತಿಮಾಪೂಜನ ಮತ್ತು ತೀರ್ಥಗಳ ಪ್ರಮಾಣವು ಸಿದ್ಧವಾಗುತ್ತದೆ. ಏಕೆಂದರೆ, ಪುರಾಣಗಳಲ್ಲಿ ಮೂರ್ತಿ ಪೂಜೆಯ ಮತ್ತು ತೀರ್ಥದ ವಿಧಾನವಿದೆ.

**ಉತ್ತರ :-** ಹದಿನೆಂಟು ಪುರಾಣಗಳ ಕರ್ತೃಗಳು ವ್ಯಾಸರಾಗಿದ್ದರೆ, ಅವುಗಳಲ್ಲಿ ಇಷ್ಟು ಬುರುಡೆಗಳು ಇರುತ್ತಿರಲಿಲ್ಲ. ಏಕೆಂದರೆ, ಶಾರೀರಿಕ ಸೂತ್ರಗಳು, ಯೋಗಶಾಸ್ತ್ರದ ಭಾಷ್ಯ ಮೊದಲಾದ ವ್ಯಾಸೋಕ್ತ ಗ್ರಂಥಗಳನ್ನು ನೋಡುವುದರಿಂದ ವ್ಯಾಸರು ಮಹಾವಿದ್ವಾಂಸರೂ, ಸತ್ಯವಾದಿಗಳೂ, ಧಾರ್ಮಿಕರೂ, ಯೋಗಿಗಳೂ ಆಗಿದ್ದರೆಂದು ವಿದಿತವಾಗುತ್ತದೆ. ಅವರು ಇಂತಹ ಸುಳ್ಳು ಕಥೆಗಳನ್ನು ಎಂದಿಗೂ ಬರೆಯುತ್ತಿದ್ದಿಲ್ಲ. ಮತ್ತು ಇವರಿಂದ "ಯಾವ ಸಾಂಪ್ರದಾಯಿಕ ಪರಸ್ಪರ ವಿರೋಧೀ ಜನರು ಭಾಗವತನೇ ಮೊದಲಾದ ನವೀನ ಕಪೋಲಕಲ್ಪಿತ ಗ್ರಂಥಗಳನ್ನು ರಚಿಸಿದ್ದಾರೋ, ಅವರಲ್ಲಿ ವ್ಯಾಸರಲ್ಲಿದ್ದ ಗುಣಗಳ ಲೇಶಮಾತ್ರವೂ ಇರಲಿಲ್ಲ ಮತ್ತು ವೇದಶಾಸ್ತ್ರಗಳಿಗೆ ವಿರುದ್ಧವಾದ ಅಸತ್ಯವಾದಗಳನ್ನು ಬರೆಯುವುದು ವ್ಯಾಸರಂತಹ ವಿದ್ವಾಂಸರ ಕಾರ್ಯವಲ್ಲ; ಆದರೆ, ಈ ಕೆಲಸ ವಿರೋಧಿಗಳೂ, ಸ್ವಾರ್ಥಿಗಳೂ, ಅವಿದ್ವಾಂಸರೂ ಆದ ಜನರದಾಗಿದೆ"-ಎಂಬುದು ಸಿದ್ಧವಾಗುತ್ತದೆ. ಇತಿಹಾಸ ಮತ್ತು ಪುರಾಣ-ಎನ್ನುವುದು ಶಿವಪುರಾಣ-ಮೊದಲಾದುದರ ಹೆಸರಲ್ಲ ಆದರೆ:-

**ಬ್ರಾಹ್ಮಣಾನೀತಿಹಾಸಾನ್ ಪುರಾಣಾನಿ ಕಲ್ಪಾನ್ ಗಾಥಾ ನಾರಾಶಂಸೀರಿತಿ ।**

ಇದು ಬ್ರಾಹ್ಮಣ ಮತ್ತು ಸೂತ್ರಗಳ ವಚನವಾಗಿದೆ. ಐತರೇಯ, ಶತಪಥ, ಸಾಮ ಮತ್ತು ಗೋಪಥ ಬ್ರಾಹ್ಮಣ ಗ್ರಂಥಗಳಿಗೇ ಇತಿಹಾಸ, ಪುರಾಣ, ಕಲ್ಪ, ಗಾಥಾ, ಮತ್ತು ನಾರಾಶಂಸೀ - ಈ ಐದು ಹೆಸರುಗಳೂ ಇವೆ. ಉದಾಹರಣೆಗೆ,

---

೧೧೪. ತುಲನೆ ಮಾಡಿ, ಶತಪಥ ಬ್ರಾಹ್ಮಣ [೧೩.೪.೩.೧೩]

೧೧೫. ಎಂದರೆ, ಪುರಾಣಗಳ,

**ಇತಿಹಾಸ** – ಜನಕ – ಯಾಜ್ಞವಲ್ಕ್ಯರ ಸಂವಾದ;

**ಪುರಾಣ:**– ಜಗದುತ್ಪತ್ತಿ ಮೊದಲಾದುದರ ವರ್ಣನೆ;

**ಕಲ್ಪ:**– ವೇದಶಬ್ದಗಳ ಸಾಮರ್ಥ್ಯದ ವರ್ಣನೆ; ಅರ್ಥ ನಿರೂಪಣೆ ಮಾಡುವುದು;

**ಗಾಥಾ:**– ಯಾವನಾದರೊಬ್ಬನ ದೃಷ್ಟಾಂತ ಕೊಟ್ಟು, ಅದಕ್ಕೆ ಅನುರೂಪವಾಗಿ ಕಥಾ–ಪ್ರಸಂಗವನ್ನು ಹೇಳುವುದು,

**ನಾರಾಶಂಸೀ:**– ಮಾನವರ ಪ್ರಶಂಸನೀಯವಾದ ಅಥವಾ ಅಪ್ರಶಂಸನೀಯವಾದ ಕರ್ಮಗಳ ಕಥನವನ್ನು ಮಾಡುವುದು.

ಇವುಗಳಿಂದಲೇ ವೇದಾರ್ಥದ ಅರಿವು ಉಂಟಾಗುತ್ತದೆ. ಪಿತೃಕರ್ಮದಲ್ಲಿ, ಎಂದರೆ (ವೇದವಿರುದ್ಧವಾದ ಮೃತಕಶ್ರಾದ್ಧದಲ್ಲಿ ಅಲ್ಲ) ಜ್ಞಾನಿಗಳ ಪ್ರಶಂಸಾ ಪ್ರಕರಣದಲ್ಲಿ, ಅಶ್ವಮೇಧದ ಕೊನೆಯಲ್ಲಿಯೂ ಇವುಗಳನ್ನೇ ಸ್ವಲ್ಪ ಆಲಿಸುವುದು – ಎಂದು ಬರೆದಿದೆ. ಏಕೆಂದರೆ, – ವ್ಯಾಸರಚಿತವಾದ ಯಾವ ಗ್ರಂಥಗಳಿವೆಯೋ, ಅವುಗಳನ್ನು ಕೇಳುವುದು – ಹೇಳುವುದು ವ್ಯಾಸರ ಜನ್ಮದ ಹಾಗೂ ಅವರು ರಚಿಸಿದ ನಂತರ ಆಗಬಲ್ಲದೇ ಹೊರತು, ಅದಕ್ಕಿಂತ ಮೊದಲಲ್ಲ. ಯಾವಾಗ ವ್ಯಾಸರ ಜನ್ಮವೂ ಕೂಡ ಆಗಿರಲಿಲ್ಲವೋ, ಆಗಲೂ ವೇದಾರ್ಥದ ಅಧ್ಯಯನ–ಅಧ್ಯಾಪನಗಳನ್ನೂ, ಶ್ರವಣ–ಬೋಧನಗಳನ್ನು ಮಾಡುತ್ತಿದ್ದರು. ಆದುದರಿಂದ, ಎಲ್ಲಕ್ಕಿಂತ ಪ್ರಾಚೀನವಾದ ಬ್ರಾಹ್ಮಣ ಗ್ರಂಥಗಳಿಗೆ[೧೧೬] ಮಾತ್ರ ಈ ಎಲ್ಲವೂ ಅನ್ವಯಿಸಬಲ್ಲದು; ಈ ನವೀನವೂ, ತಾವೇ ಕಲ್ಪಿಸಿಕೊಂಡುದೂ ಆದ ಶ್ರೀಮದ್ಭಾಗವತ, ಶಿವಪುರಾಣ ಮೊದಲಾದ ಸುಳ್ಳಾದ ಅಥವಾ ದೂಷಿತವಾದ ಗ್ರಂಥಗಳಿಗೆ ಅನ್ವಯಿಸಲಾರದು. ವ್ಯಾಸರು ವೇದಗಳನ್ನೋದಿದವರು; ಮತ್ತು ಓದಿಸಿ ವೇದಾರ್ಥವನ್ನು ಪ್ರಸರಿಸಿದರು. ಆದುದರಿಂದ ಅವರಿಗೆ 'ವೇದವ್ಯಾಸ'ರೆಂದು ಹೆಸರಾಯಿತು. ಏಕೆಂದರೆ (ಯಾವುದೇ ವಸ್ತುವಿನ) ನಡುವಿನಿಂದ, ಅತ್ತಿಂದ ಇತ್ತ ಹಾದುಹೋಗುವ ಮಧ್ಯರೇಖೆಯನ್ನು 'ವ್ಯಾಸ' ಎನ್ನುತ್ತಾರೆ. ಎಂದರೆ, ಋಗ್ವೇದದ ಪ್ರಾರಂಭದಿಂದ ಹಿಡಿದು, ಅಥರ್ವವೇದದ ಕೊನೆಯವರೆಗೆ ನಾಲ್ಕು ವೇದಗಳನ್ನೂ ಓದಿದ್ದರು. ಮತ್ತು ಶುಕದೇವ ಹಾಗೂ ಜೈಮಿನಿ ಮೊದಲಾದ ಶಿಷ್ಯರಿಗೆ ಓದಿಸಿಯೂ ಇದ್ದರು. ಹಾಗಲ್ಲದಿದ್ದರೆ, ಅವರ ಜನ್ಮ–ನಾಮ 'ಕೃಷ್ಣ ದ್ವೈಪಾಯನ' ಎಂದಿದ್ದಿತು. ವೇದಗಳನ್ನು ವ್ಯಾಸರು ಒಂದುಗೂಡಿಸಿದರು–ಎಂದು ಹಲವರು ಹೇಳುವುದೂ ಕೂಡ ಆಯುಕ್ತವಾದ ಮಾತೇ ಸರಿ. ಏಕೆಂದರೆ, ವ್ಯಾಸರ ತಂದೆ, ತಾತ, ಮುತ್ತಾತ, ಪರಾಶರ, ಶಕ್ತಿ, ವಸಿಷ್ಠ ಮತ್ತು ಬ್ರಹ್ಮಾ– ಮೊದಾಲಾದವರೂ ಕೂಡ ನಾಲ್ಕು ವೇದಗಳನ್ನೂ ಓದಿದ್ದರು. ಎಂದ ಮೇಲೆ, ಈ ಮಾತು ಹೇಗೆ ತಾನೇ ಅನ್ವಯಿಸಬಲ್ಲದು?

**ಪ್ರಶ್ನೆ:**– ಪುರಾಣಗಳಲ್ಲಿ ಎಲ್ಲ ಮಾತುಗಳೂ ಸುಳ್ಳೇ ಆಗಿವೆಯೋ ಅಥವಾ ಯಾವುದಾದರೂ ಸತ್ಯವಾಗಿಯೂ ಇವೆಯೋ?

**ಉತ್ತರ:**– ಬಹಳ ಮಾತುಗಳು ಸುಳ್ಳಾಗಿವೆ, ಮತ್ತು ಯಾವ ಯಾವದೋ ಒಂದು ಘುಣಾಕ್ಷರ ನ್ಯಾಯದಿಂದ (ಸಮುದ್ರದ ತಟದ ಮೇಲೆ ಹುಳುವು ಹರಿದಾಗ ಅಕ್ಷರದ ಆಕಾರ ಉದ್ದೇಶ್ಯವಿಲ್ಲದೆಯೇ ಮೂಡುವಂತೆ[೧೧೭]) ಸತ್ಯವೂ ಆಗಿದೆ. ಯಾವವು ಸತ್ಯವಾಗಿವೆಯೋ ಅವು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳವು ಮತ್ತು ಯಾವವು ಸುಳ್ಳಾಗಿವೆಯೋ, ಅವು ಈ ಪೋಪರುಗಳ ಪುರಾಣಗಳೆಂಬ ಮನೆಯವಾಗಿವೆ. ಹೇಗೆ ಶಿವಪುರಾಣದಲ್ಲಿ ಶಿವನನ್ನು ಪರಮೇಶ್ವರನೆಂದು ಅಂಗೀಕರಿಸಿ, ವಿಷ್ಣು, ಬ್ರಹ್ಮಾ, ಇಂದ್ರ, ಗಣೇಶ ಮತ್ತು ಸೂರ್ಯ ಮೊದಲಾದವರನ್ನು ಅವನ ದಾಸರೆಂದು ನಿರ್ಣಯಿಸಿದ್ದಾರೋ, ಹಾಗೆಯೇ ವೈಷ್ಣವರು ವಿಷ್ಣುಪುರಾಣ ಮೊದಲಾದುದರಲ್ಲಿ ವಿಷ್ಣುವಿನ ದಾಸರೆಂದು ನಿರ್ಧರಿಸಿದರು. ದೇವೀ ಭಾಗವತದಲ್ಲಿ ದೇವಿಯನ್ನು ಪರಮೇಶ್ವರಿಯನ್ನಾಗಿ ಮತ್ತು ಶಿವ, ವಿಷ್ಣು–ಮೊದಲಾದವರನ್ನು ಅವಳ ಕಿಂಕರರನ್ನಾಗಿ ಮಾಡಿದರು. ಗಣೇಶ ಖಂಡದಲ್ಲಿ ಗಣೇಶನನ್ನು ಈಶ್ವರನನ್ನಾಗಿ, ಉಳಿದ ಸರ್ವರನ್ನೂ ದಾಸರನ್ನಾಗಿ ಮಾಡಿದರು. ಭಲೇ! ಈ ಮಾತು ಈ ಸಾಂಪ್ರದಾಯಿಕ ಜನರದಲ್ಲವಾದರೆ ಮತ್ತು ಯಾರದು? ಒಬ್ಬ ಸಾಧಾರಣ ವಿಚಾರಶೀಲ ಮಾನವನ ಕೃತಿಯಲ್ಲಿಯೂ ಇಂತಹ ಪರಸ್ಪರ ವಿರುದ್ಧವಾದ ಮಾತುಗಳು ಇರುವುದಿಲ್ಲವೆಂದ ಮೇಲೆ, ವಿದ್ವಾಂಸನ ರಚನೆಯಲ್ಲಿ ಎಂದಿಗೂ ಇರಲಾರವು. ಇದರಲ್ಲಿ ಒಂದು ಮಾತನ್ನು ಸತ್ಯವೆಂದು ಒಪ್ಪಿದರೆ ಇನ್ನೊಂದು ಸುಳ್ಳಾಗುತ್ತದೆ. ಮತ್ತು ಎರಡನೆಯದನ್ನು ಸತ್ಯವೆಂದು ಒಪ್ಪಿದರೆ, ಮೂರನೆಯದು ಸುಳ್ಳು, ಮೂರನೆಯದನ್ನು ಸತ್ಯವೆಂದು ಒಪ್ಪಿದರೆ, ಬೇರೆ

---

೧೧೬. ಸಂಪ್ರತಿ ದೊರೆಯುವ ಬ್ರಾಹ್ಮಣ ಗ್ರಂಥಗಳಲ್ಲಿ, ವೇದದ ಶಾಖೆಗಳಲ್ಲಿ ಐತರೇಯ ಬ್ರಾಹ್ಮಣವನ್ನು ಬಿಟ್ಟರೆ, ಉಳಿದವು ಪ್ರಾಚೀನ ಗ್ರಂಥಗಳಲ್ಲ. ಎಂದರೆ, ಇವೆಲ್ಲಾ ಕೃಷ್ಣ ದ್ವೈಪಾಯನ ವ್ಯಾಸರ ಶಿಷ್ಯ–ಪ್ರಶಿಷ್ಯರಿಂದ ಪ್ರೋಕ್ತವಾಗಿವೆ. –ಯು.ಮೀ

೧೧೭. ಯಾವುದೋ ಮರದ ಹುಳುವು ಮರವನ್ನು ಕೊರೆದು ತಿಂದಾಗ, ಆ ಕೊರೆದ ಭಾಗವು 'ಕ' ಎಂಬ ಅಕ್ಷರದಂತಾಯಿತು. ವಿದ್ಯೆಯಿಲ್ಲದ ಹುಳು ಹೇಗೆ ಅಕ್ಷರವನ್ನು ಕೊರೆಯಿತೋ ಹಾಗೇ, ಮೂರ್ಖರ ಮಾತೂ ಒಂದೊಂದು ಸಲ ಯಥಾರ್ಥವಾಗಿರುತ್ತದೆ ಎಂದು ಅರ್ಥ.

ಎಲ್ಲವೂ ಸುಳ್ಳಾಗುತ್ತವೆ. ಶಿವಪುರಾಣದವರು ಶಿವನಿಂದ, ವಿಷ್ಣುಪುರಾಣದವರು ವಿಷ್ಣುವಿನಿಂದ, ದೇವೀಪುರಾಣದವರು ದೇವಿಯಿಂದ, ಗಣೇಶಖಂಡದವರು ಗಣೇಶನಿಂದ, ಸೂರ್ಯಪುರಾಣದವರು ಸೂರ್ಯನಿಂದ ಮತ್ತು ವಾಯುಪುರಾಣದವರು ವಾಯುವಿನಿಂದ ಸೃಷ್ಟಿಯ ಉತ್ಪತ್ತಿ, ಪ್ರಳಯಗಳನ್ನು ಬರೆದು, ಮತ್ತೆ, ಯಾವ ಒಬ್ಬನಿಂದ ಜಗತ್ತು ಉತ್ಪನ್ನವಾಯಿತೆಂದು ಬರೆದರೋ, ಅವನ ಉತ್ಪತ್ತಿಗೂ ಬೇರೆಯ ಕಾರಣವನ್ನು ಬರೆದಿಟ್ಟರು! ಇದೇನು ವಿಚಿತ್ರ? ಯಾವನಾದರೂ ಇವರನ್ನು-ಜಗತ್ತಿನ ಉತ್ಪತ್ತಿ-ಸ್ಥಿತಿ-ಪ್ರಳಯಗಳನ್ನು ಮಾಡುವವನು ಉತ್ಪನ್ನನಾಗುತ್ತಾನೋ? ಮತ್ತು ಯಾವನು ಉತ್ಪನ್ನನಾಗುತ್ತಾನೋ, ಅವನು ಸೃಷ್ಟಿಯ ಕಾರಣವೆಂದಾದರೂ ಆಗಬಲ್ಲನೋ, ಅಥವಾ ಇಲ್ಲವೋ?" - ಎಂದು ಪ್ರಶ್ನಿಸಬೇಕು. ಆಗ ಕೇವಲ ಸುಮ್ಮನಿರುವುದರ ಹೊರತು ಮತ್ತೇನನ್ನೂ ಹೇಳಲಾರರು. ಮತ್ತು ಶಿವ ವಿಷ್ಣು ಮೊದಲಾದ ಇವರೆಲ್ಲರ ಶರೀರಗಳ ಉತ್ಪತ್ತಿಯೂ ಕೂಡ ಈ ಪ್ರಕೃತಿಯಿಂದ ಆಗಿರಬಹುದು, ಮತ್ತೆ ಅವರು ಸ್ವತಃ ಜಗತ್ತಿನ ರಚಿತ ವಸ್ತುಗಳೂ ಹಾಗೂ ಪರಿಚ್ಛಿನ್ನರೂ (ಏಕದೇಶೀಯರೂ) ಆದರು; ಅವರು ಜಗದುತ್ಪಾದಕರಾಗಬಲ್ಲರಾದರೂ ಎಂತು? ಮತ್ತು ಉತ್ಪತ್ತಿಯನ್ನೂ ಕೂಡ, ಸರ್ವಥಾ ಅಸಂಭವವಾದ ವಿಲಕ್ಷಣ-ವಿಲಕ್ಷಣವಾದ ರೀತಿಯಲ್ಲಿ ಅಂಗೀಕರಿಸಿದ್ದಾರೆ. ಹೇಗೆಂದರೆ:-

ಶಿವಪುರಾಣಕ್ಕೆ" ಅನುಸಾರವಾಗಿ, ಶಿವನು ನಾನು ಸೃಷ್ಟಿ ಮಾಡುವೆ-ಎಂದು ಇಚ್ಛಿಸಿದನು. ಆಗ ನಾರಾಯಣ ಜಲಾಶಯವನ್ನು[೧೧೮] ಉತ್ಪನ್ನಮಾಡಿದನು. ಅದರ ನಾಭಿಯಿಂದ[೧೧೯] ಕಮಲದಿಂದ ಬ್ರಹ್ಮನೂ ಉತ್ಪನ್ನನಾದನು. ಎಲ್ಲವೂ ಜಲಮಯವಾಗಿದೆ-ಎಂಬುದನ್ನು ಅವನು[೧೨೦] ನೋಡಿದನು. ಅಂಜಲಿಯಲ್ಲಿ ಜಲವನ್ನೆತ್ತಿ, ನೋಡಿ, ಜಲದಲ್ಲಿಯೇ ಸುರಿದುಬಿಟ್ಟನು. ಅದರಿಂದ ಒಂದು ನೀರ್ಗುಳ್ಳೆ ಉದ್ಭವಿಸಿತು, ಮತ್ತು ನೀರ್ಗುಳ್ಳೆಯಿಂದ ಒಬ್ಬ ಪುರುಷನು ಉತ್ಪನ್ನನಾದನು. ಅವನು ಬ್ರಹ್ಮನಿಗೆ - "ಓ ಮಗನೇ! ಸೃಷ್ಟಿಯನ್ನು ಉತ್ಪನ್ನಮಾಡು". ಎಂದನು. ಬ್ರಹ್ಮನು ಅವನಿಗೆ - "ನಾನು ನಿನ್ನ ಮಗನಲ್ಲ; ಆದರೆ, ನೀನು ನನ್ನ ಮಗನಾಗಿದ್ದೀಯೆ". ಎಂದು ಹೇಳಿದನು. ಅವರಲ್ಲಿ ವಿವಾದ ಉಂಟಾಯಿತು ಮತ್ತು ಸಹಸ್ರ ದಿವ್ಯ ವರ್ಷಗಳವರೆಗೆ ಇಬ್ಬರೂ ನೀರಿನ ಮೇಲೆ ಕಾದಾಡುತ್ತಿದ್ದರು. ಆಗ ಮಹಾದೇವನು 'ಯಾರನ್ನು ನಾನು ಸೃಷ್ಟಿಮಾಡಲು ಕಳುಹಿಸಿದ್ದೆನೋ, ಅವರಿಬ್ಬರೂ ಪರಸ್ಪರ ಹೋರಾಡುತ್ತಾ-ಜಗಳ ಮಾಡುತ್ತಾ ಇದ್ದಾರೆ!" ಎಂದು ಆಲೋಚಿಸಿದನು. ಆಗ ಅವರಿಬ್ಬರ ನಡುವೆ ಒಂದು ತೇಜೋಮಯವಾದ ಲಿಂಗವು ಉತ್ಪನ್ನವಾಯಿತು. ಮತ್ತು ಅದು ಶೀಘ್ರವಾಗಿ ಆಕಾಶಕ್ಕೆ" ಏರಿಬಿಟ್ಟಿತು. ಅದನ್ನು ನೋಡಿ ಇಬ್ಬರೂ ಆಶ್ಚರ್ಯಯುಕ್ತರಾದರು. "ಇದರ ಆದಿ-ಅಂತಗಳನ್ನು ತಿಳಿಯಬೇಕು. ಯಾವನು ಆದಿ-ಅಂತಗಳನ್ನರಿತು ಬೇಗ ಬರುವನೋ, ಅವನು ತಂದೆ ಮತ್ತು ಯಾವನು ಆ ಮೇಲೆ ತಿಳಿದುಕೊಂಡು ಅಥವಾ ಅಳತೆಯರಿಯದೆ ಬರುವನೋ, ಅವನು ಪುತ್ರನೆನ್ನಿಸಿಕೊಳ್ಳಲಿ. ಎಂದು ನಿರ್ಧರಿಸಿಕೊಂಡರು. ವಿಷ್ಣುವು ಆಮೆಯ ರೂಪ ತಾಳಿ ಕೆಳಕ್ಕೆ" ನಡೆದನು ಮತ್ತು ಬ್ರಹ್ಮನು ಹಂಸದ ಶರೀರವನ್ನು ಧರಿಸಿ ಮೇಲಕ್ಕೆ" ಹಾರಿದನು. ಇಬ್ಬರೂ ಮನೋವೇಗದಿಂದ ನಡೆದರು. ದಿವ್ಯ ಸಹಸ್ರವರ್ಷ ಪರ್ಯಂತ ಇಬ್ಬರೂ ನಡೆಯುತ್ತಲೇ ಇದ್ದರು; ಆದರೂ ಅದರ ಅಂತವನ್ನು ಕಾಣಲಿಲ್ಲ. ಆಗ, ಕೆಳಗಿನಿಂದ ಮೇಲಕ್ಕೆ" ವಿಷ್ಣುವೂ, ಮತ್ತು ಮೇಲಿನಿಂದ ಕೆಳಕ್ಕೆ" ಬ್ರಹ್ಮನೂ ನಡೆಯುತ್ತಾ, "ಮತ್ತೊಬ್ಬನು ಕೊನೆಯನ್ನು ಕಂಡು ಬಂದಿರುವುದಾದರೆ, ನಾನು ಪುತ್ರನಾಗಬೇಕಾದೀತಲ್ಲ! - ಎಂದು ಆಲೋಚಿಸಿದರು. ಬ್ರಹ್ಮನು ಹೀಗೆ ಯೋಚಿಸುತ್ತಿರುವಾಗಲೇ ಒಂದು ಹಸು ಮತ್ತು ಒಂದು ಕೇತಕೀವೃಕ್ಷ ಮೇಲಿನಿಂದ ಇಳಿದುಬಂದುವು. ಅವುಗಳನ್ನು ಬಹ್ಮನು - "ನೀವು ಎಲ್ಲಿಂದ ಬಂದಿರಿ"? - ಎಂದು ಕೇಳಿದನು. ಅವು - "ನಾವು ಸಹಸ್ರವರ್ಷಗಳಿಂದ ಈ ಲಿಂಗದ ಆಧಾರದಿಂದ ನಡೆದು ಬರುತ್ತಿದ್ದೇವೆ". ಎಂದವು. ಬ್ರಹ್ಮನು -"ಈ ಲಿಂಗಕ್ಕೆ" ಕೊನೆಯಿದೆಯೋ, ಇಲ್ಲವೋ?" ಎಂದು ಕೇಳಿದನು. ಅವು-"ಇಲ್ಲ" ಎಂದವು. ಬ್ರಹ್ಮನು ಅವಕ್ಕೆ "ನೀವು ನಮ್ಮೊಂದಿಗೆ ನಡೆಯಿರಿ; ಮತ್ತು ಹಸುವು 'ನಾನು ಈ ಲಿಂಗದ ಮಸ್ತಕದ ಮೇಲೆ ಹಾಲಿನ ಧಾರೆಯನ್ನು ಕರೆಯುತ್ತಿದ್ದೆನು' ಎಂದೂ, ಹಾಗೂ ವೃಕ್ಷವು 'ನಾನು ಹೂಗಳನ್ನು ಸುರಿಸುತ್ತಿದ್ದೆನು'- ಎಂದೂ ಸಾಕ್ಷ್ಯವನ್ನು ಕೊಡಿರಿ. ಹೀಗೆ ಸಾಕ್ಷ್ಯಕೊಡುವುದಾದರೆ, ನಾನು ನಿಮ್ಮನ್ನು ನೆಲೆಗೆ ಮುಟ್ಟಿಸುವೆನು. ಎಂದು ಹೇಳಿದನು. ಅವು - "ನಾವು ಸುಳ್ಳು ಸಾಕ್ಷ್ಯವನ್ನು ಕೊಡುವುದಿಲ್ಲ". ಎಂದವು. ಆಗ ಬ್ರಹ್ಮನು ಕ್ರುದ್ಧನಾಗಿ - "ನೀವು ಸಾಕ್ಷ್ಯ ಕೊಡದಿದ್ದರೆ, ನಾನು ನಿಮ್ಮನ್ನು ಈಗಲೇ ಭಸ್ಮಮಾಡಿ ಬಿಡುತ್ತೇನೆ" ಎಂದನು. ಆಗ ಎರಡೂ ಹೆದರಿ - "ನಾವು - ನೀವು ಹೇಗೆ ಹೇಳುತ್ತೀರೋ ಹಾಗೆ ಸಾಕ್ಷ್ಯ ಕೊಡುವೆವು - ಎಂದವು.

---

೧೧೮. ಎಂದರೆ, ನಾರಾಯಣ ಎಂಬ ಹೆಸರಿನ ಜಲಾಶಯ. 'ನಾರಾಯಣ ತೀರ್ಥ'ದ ನಿರ್ದೇಶ ಶಿವಪುರಾಣದಲ್ಲಿದೆ. ಇದರಿಂದಲೇ ಶಿವನು ಸೃಷ್ಟಿರಚನೆ ಮಾಡಿದನು. -ಯು.ಮೀ.

೧೧೯. ಎಂದರೆ, ಮಧ್ಯದಿಂದ, ವಿಷ್ಣುವಿನ ನಾಭಿಯಿಂದ ಬ್ರಹ್ಮನು ಹುಟ್ಟಿದನೆಂಬ ಸಂಗತಿಯು ಶಿವಪುರಾಣದ ಮತವಲ್ಲ. ಬ್ರಹ್ಮನೇ ಪುರುಷನನ್ನು, ಎಂದರೆ ವಿಷ್ಣುವನ್ನು ಉತ್ಪನ್ನ ಮಾಡಿದನು ಎಂದು ಮುಂದೆ ಹೇಳಲಾಗಿದೆ.

೧೨೦. ಎಂದರೆ, ಬ್ರಹ್ಮನು.

ಆಗ ಮೂವರೂ ಕೆಳಕ್ಕೆ" ನಡೆದರು. ವಿಷ್ಣು ಮೊದಲೇ ಬಂದಿದ್ದನು. ಬ್ರಹ್ಮನೂ ಬಂದು ಸೇರಿದನು. ಶಿವನು ವಿಷ್ಣುವನ್ನು – "ನೀನು ಅಂತ ತಿಳಿದು ಬಂದೆಯೋ, ಅಥವಾ ಇಲ್ಲವೋ"? – ಎಂದು ಕೇಳಿದನು. ಆಗ ವಿಷ್ಣುವು– "ನನಗೆ ಇದರ ಅಂತ ಸಿಕ್ಕಲಿಲ್ಲ". ಎಂದನು. ಬ್ರಹ್ಮನು – "ನಾನು ಕಂಡು ಬಂದಿದ್ದೇನೆ". – ಎಂದನು. ವಿಷ್ಣುವು– "ಏನಾದರೂ ಸಾಕ್ಷ್ಯವನ್ನು ಕೊಡು". ಎಂದನು. ಆಗ ಹಸು ಮತ್ತು ವೃಕ್ಷ– "ನಾವು ಇಬ್ಬರೂ ಲಿಂಗದ ಮಸ್ತಕದ ಮೇಲೆ ಇದ್ದೆವು". ಎಂದು ಸಾಕ್ಷ್ಯವನ್ನು ಕೊಟ್ಟವು. ಆಗ ಲಿಂಗದೊಳಗಿನಿಂದ ಶಬ್ದ ಹೊರಟಿತು ಮತ್ತು ವೃಕ್ಷಕ್ಕೆ – "ನೀನು ಸುಳ್ಳು ಹೇಳಿದೆಯಾದ ಕಾರಣ ನಿನ್ನ ಹೂವು ಬಾಡಿ ಹೋಗುವುದು. ಅಥವಾ ಬೇರಾವ ದೇವತೆಯ ಮೇಲೆಯೂ ಜಗತ್ತಿನಲ್ಲಿ ಏರುವುದಿಲ್ಲ. ಮತ್ತು ಯಾವನಾದರೂ ಏರಿಸಿದಲ್ಲಿ, ಅವನಿಗೆ ಸರ್ವನಾಶವಾದೀತು". – ಎಂದು ಶಾಪವಿತ್ತಿತು. ಹಸುವಿಗೆ – "ಯಾವ ಬಾಯಿನಿಂದ ನೀನು ಸುಳ್ಳಾಡಿದೆಯೋ, ಅದರಿಂದಲೇ ಮಲವನ್ನು ತಿನ್ನುತ್ತಾ ಹೋಗವೆ. ನಿನ್ನ ಮುಖಕ್ಕೆ" ಯಾವನೂ ಪೂಜೆ ಮಾಡುವುದಿಲ್ಲ; ಆದರೆ, ಬಾಲವನ್ನು ಪೂಜಿಸುವರು".– ಎಂದು ಶಾಪಕೊಟ್ಟಿತು. ಮತ್ತು ಬ್ರಹ್ಮನಿಗೆ – "ನೀನು ಸುಳ್ಳನ್ನು ಹೇಳಿದೆಯಾದುದರಿಂದ ನಿನ್ನ ಪೂಜೆ ಜಗತ್ತಿನಲ್ಲಿ ಎಲ್ಲಿಯೂ ನಡೆಯುವುದಿಲ್ಲ".– ಎಂದು ಶಾಪವಿತ್ತಿತು. ಮತ್ತು ವಿಷ್ಣುವಿಗೆ – "ನೀನು ಸತ್ಯವನ್ನಾಡಿದುದರಿಂದ ನಿನ್ನ ಪೂಜೆಸರ್ವತ್ರ ನಡೆಯುವುದು". – ಎಂದು ವರವನ್ನು ಕೊಟ್ಟಿತು. ಮತ್ತೆ ಇಬ್ಬರೂ ಲಿಂಗವನ್ನು ಸ್ತುತಿಸಿದರು. ಅದರಿಂದ ಪ್ರಸನ್ನನಾಗಿ ಆ ಲಿಂಗದೊಳಗಿನಿಂದ ಜಟಾಜೂಟವಾದ ಮೂರ್ತಿಯೊಂದು ಹೊರಬಂದಿತು, ಮತ್ತು "ನಿಮ್ಮನ್ನು ನಾನು ಸೃಷ್ಟಿಮಾಡುವುದಕ್ಕಾಗಿ" ಕಳುಹಿಸಿದ್ದೆನು. ಜಗಳದಲ್ಲಿ ಏಕೆ ಸಿಕ್ಕಿಕೊಂಡಿದ್ದಿರಿ?"– ಎಂದು ಕೇಳಿತು, ಬ್ರಹ್ಮನು ಮತ್ತು ವಿಷ್ಣುವು – "ಸಾಮಗ್ರಿಯಿಲ್ಲದೆ ನಾವು ಸೃಷ್ಟಿಯನ್ನು ಎಲ್ಲಿಂದ ಮಾಡೋಣ?" ಎಂದು ಕೇಳಿದರು. ಆಗ ಮಹಾದೇವನು ತನ್ನ ಜಡೆಯೊಳಗಿನಿಂದ ಭಸ್ಮದ ಗೋಳ ಒಂದನ್ನು ತೆಗೆದುಕೊಟ್ಟನು; "ಹೋಗಿ, ಇದರಿಂದ ಸಮಸ್ತ ಸೃಷ್ಟಿಯನ್ನೂ ಮಾಡಿರಿ'. – ಎಂದನು – ಈ ಮೊದಲಾದುವನ್ನು ಬರೆದಿವೆ. ಓಹೋ! ಈ ಪುರಾಣಗಳನ್ನು ರಚಿಸುವವರಾದ ಪೋಪರುಗಳನ್ನು–"ಯಾವಾಗ ಸೃಷ್ಟಿ ತತ್ತ್ವಗಳು ಮತ್ತು ಪಂಚ ಮಹಾಭೂತಗಳೂ ಕೂಡ ಇರಲಿಲ್ಲವೋ, ಆಗ ಬ್ರಹ್ಮ, ವಿಷ್ಣು, ಮಹಾದೇವ – ಇವರ ಶರೀರಗಳು, ಜಲ, ಕಮಲ, ಲಿಂಗ, ಹಸು ಮತ್ತು ಕೇತಕೀ ವೃಕ್ಷ ಮತ್ತು ಭಸ್ಮದ ಗೋಳ – ಇವೆಲ್ಲಾ ನಿಮ್ಮ ಅಜ್ಜನ ಮನೆಯಿಂದ ಬಂದು ಬಿದ್ದವೋ?" ಎಂದು ಯಾರಾದರೂ ಕೇಳಬೇಕು.

ಹಾಗೆಯೇ ಭಾಗವತದಲ್ಲಿ[೧೨೧] – "ವಿಷ್ಣುವಿನ ನಾಭಿಯಿಂದ ಕಮಲವೂ, ಕಮಲದಿಂದ ಬ್ರಹ್ಮನೂ ಮತ್ತು ಬ್ರಹ್ಮನ ಬಲಗಾಲಿನ ಹೆಬ್ಬೆರಳಿನಿಂದ ಸ್ವಾಯಂಭುವನೂ ಮತ್ತು ಎಡ ಹೆಬ್ಬೆರಳಿನಿಂದ ಶತರೂಪಾ ರಾಣಿಯೂ, ಹಣೆಯಿಂದ ರುದ್ರ ಮತ್ತು ಮರೀಚಿ ಮೊದಲಾದ ಹತ್ತು ಜನ ಪುತ್ರರೂ, ಅವರಿಂದ ಹತ್ತು ಮಂದಿ ಪ್ರಜಾಪತಿಗಳೂ ಉದ್ಭರಿಸಿದರು. ಅವರ ಹದಿಮೂರು ಮಂದಿ ಪುತ್ರಿಯರ ವಿವಾಹ ಕಶ್ಯಪನೊಂದಿಗಾಯಿತು. ಅವರಲ್ಲಿ ದಿತಿಯಿಂದ ದೈತ್ಯರೂ, ದನುವಿನಿಂದ ದಾನವರೂ, ಅದಿತಿಯಿಂದ ಆದಿತ್ಯರೂ, ವನಿತೆಯಿಂದ ಪಕ್ಷಿಗಳೂ, ಕದ್ರುವಿನಿಂದ ಸರ್ಪಗಳೂ, ಸರಮೆಯಿಂದ ನಾಯಿಗಳೂ, ನರಿಗಳು–ಮೊದಲಾದುವೂ ಮತ್ತು ಬೇರೆ ಸ್ತ್ರೀಯರಿಂದ ಆನೆಗಳು, ಕುದುರೆಗಳು, ಒಂಟೆಗಳು, ಕತ್ತೆ, ಕೋಣ, ಹುಲ್ಲು–ಮೇವು ಮತ್ತು ನೆಗ್ಗಿಲು ಮೊದಲಾದ, ಮುಳ್ಳುಗಳನ್ನುಳ್ಳ ವೃಕ್ಷಗಳೂ ಉತ್ಪನ್ನವಾದುವು" – ಎಂದು ಬರೆದಿದೆ. ಧನ್ಯ! ಧನ್ಯ!! ಭಾಗವತನನ್ನು ನಿರ್ಮಿಸಿದ ಮೊಂಡು ಮಂಡೆಯ ಗುಂಡಪ್ಪ![೧೨೨] ಏನೆನ್ನೋಣ ನಿನಗೆ? ಇಂತಹ ಇಂತಹ ಸುಳ್ಳು ಮಾತುಗಳನ್ನು ಬರೆಯುವಲ್ಲಿ ಎಳ್ಳಿನಷ್ಟಾದರೂ ಲಜ್ಜೆ, ನಾಚಿಕೆ ಬರಲಿಲ್ಲವಲ್ಲ! ಪೂರ್ಣತಃ ಕುರುಡನೇ ಆಗಿಹೋದೆ! ಒಳ್ಳೆಯದು; ಸ್ತ್ರೀ–ಪುರುಷರ ರಜೋವೀರ್ಯ ಸಂಯೋಗದಿಂದ ಮನುಷ್ಯರಂತೂ ಹುಟ್ಟಿಯೇ ಹುಟ್ಟುತ್ತಾರೆ. ಆದರೆ ಪರಮೇಶ್ವರನ ಸೃಷ್ಟಿಕ್ರಮಕ್ಕೆ" ವಿರುದ್ಧವಾಗಿ ಪಶು, ಪಕ್ಷಿ, ಸರ್ಪ ಮೊದಲಾದುವು ಎಂದಿಗೂ ಉತ್ಪನ್ನವಾಗಲಾರವು. ಮತ್ತು ಆನೆ, ಒಂಟೆ, ಸಿಂಹ, ನಾಯಿ, ಕತ್ತೆ ಮತ್ತು ಮರ–ಮೊದಲಾದುವು ನಾರಿಯ ಗರ್ಭಾಶಯದಲ್ಲಿ ಸ್ಥಿತವಾಗಲು ಅವಕಾಶವಾದರೂ ಎಲ್ಲಿಂದ ಉಂಟಾಗಬಲ್ಲದು? ಮತ್ತು ಸಿಂಹ–ಮೊದಲಾದುವು ಉತ್ಪನ್ನವಾಗಿ, ತಮ್ಮ ತಾಯಿದಂತೆಗಳನ್ನೇಕೆ ತಿಂದು ಹಾಕಲಿಲ್ಲ? ಮತ್ತು ಮಾನವ ಶರೀರದಿಂದ ಪಶು, ಪಕ್ಷಿ, ವೃಕ್ಷ ಮೊದಲಾದವುಗಳ ಉತ್ಪಾದನ ಅದೆಂತು ಸಂಭವವಾಗಬಲ್ಲದು?

ಯಾವುದು ಈವರೆಗೂ ಜಗತ್ತನ್ನು ಭ್ರಾಂತವಾಗಿಟ್ಟಿದೆಯೋ, ಅಂತಹ ಈ ಜನರ ರಚನೆಯಾದ ಮಹಾ ಅಸಂಭವ ಲೀಲೆಗಳ ಮೇಲೆ ಶೋಕ ಉಂಟಾಗುತ್ತದೆ. ಇಷ್ಟಾದರೂ ಈ ಮಹಾ ಅಸತ್ಯವಾದ ಮಾತುಗಳನ್ನು ಆ ಕುರುಡ ಪೋಪರೂ, ಹಾಗೂ ಒಳಗಣ–ಹೊರಗಣ ಕಣ್ಣುಗಳನ್ನು ಕಳೆದುಕೊಂಡಿರುವ ಅವರ ಅನುಯಾಯಿಗಳೂ ಆಲಿಸುತ್ತಾರೆ ಮತ್ತು ಅಂಗೀಕರಿಸುತ್ತಾರೆ.

೧೨೧. ಭಾಗವತ ಖಂಡನಮ್ ಎಂಬ ಸಂಸ್ಕೃತದ ಕಿರು ಹೊತ್ತಿಗೆ ಸ್ವಾಮೀ ದಯಾನಂದರ ಮೊದಲ ಕೃತಿ.

೧೨೨. ಹಿಂದಿಯಲ್ಲಿ ಇದಕ್ಕೆ – 'ಲಾಲ್ ಬಝುಡ್', ಎಂಬ ಶಬ್ದದ ಪ್ರಯೋಗ ಮಾಡಲಾಗಿದೆ.

ಇವರು ಮನುಷ್ಯರೋ, ಅಥವಾ ಬೇರೆ ಯಾವುದೋ ಜೀವರೋ–ಎಂಬುದು ಮಹಾದಾಶ್ಚರ್ಯಕರವೇ ಆದ ವಿಷಯವಾಗಿದೆ. ಈ ಭಾಗವತ[೧೨೩] ಮೊದಲಾದ ಪುರಾಣಗಳನ್ನು ರಚಿಸಿದವರು ಈ ಜಗತ್ತಿನಲ್ಲಿ ಜನ್ಮವನ್ನೇ ಎತ್ತದೆ ಹೋಗಿದ್ದರೆ ಅಥವಾ ಜನ್ಮವೆತ್ತಿದ ಮೇಲೆ ಇಂತಹ ವಿಕೃತ ಕೃತಿಗಳನ್ನು ರಚಿಸುವ ಯೋಚನೆಯೇ ಬಾರದಿದ್ದರೆ, ಎಷ್ಟೋ ಒಳ್ಳೆಯದಾಗುತ್ತಿದ್ದಿತು. ಏಕೆಂದರೆ, ಈ ಪೋಪರುಗಳಿಂದ ದೂರವಿದ್ದಲ್ಲಿ, ಆರ್ಯಾವರ್ತದೇಶ ದುಃಖಗಳಿಂದ ದೂರವಿರುತ್ತಿದ್ದಿತು.[೧೨೪]

**ಪ್ರಶ್ನೆ:–** ಈ ಮಾತುಗಳಿಂದ ವಿರೋಧ ಬರಲಾರದು. ಏಕೆಂದರೆ, "ಯಾವನ ಮದುವೆಯೋ, ಅವನದೇ ಸ್ತುತಿಪಾಠ". ಯಾವಾಗ ವಿಷ್ಣುವಿನ ಸ್ತುತಿ ಮಾಡತೊಡಗಿದರೋ, ಆಗ ವಿಷ್ಣುವನ್ನು ಪರಮೇಶ್ವರನೆಂದೂ, ಅನ್ಯರನ್ನು ದಾಸರೆಂದೂ ಹೇಳಿದರು. ಯಾವಾಗ ಶಿವನ ಗುಣವನ್ನು ಹಾಡತೊಡಗಿದರೋ, ಆಗ ಶಿವನನ್ನು ಪರಮಾತ್ಮನನ್ನಾಗಿಯೂ, ಬೇರೆಯವರನ್ನು ಕಿಂಕರರನ್ನಾಗಿಯೂ ಮಾಡಿದರು, ಮತ್ತು ಪರಮೇಶ್ವರನ ಮಾಯೆಯಲ್ಲಿ ಎಲ್ಲವೂ ಆಗಬಲ್ಲದು. ಮನುಷ್ಯರಿಂದ ಪಶು – ಮೊದಲಾದವುಗಳ ಮತ್ತು ಪಶುವಿನಿಂದ ಮನುಷ್ಯ–ಮೊದಲಾದವರ ಉತ್ಪತ್ತಿಯನ್ನು ಪರಮೇಶ್ವರನು ಮಾಡಬಲ್ಲನು. ನೋಡಿರಿ, ಕಾರಣವಿಲ್ಲದೆ, ತನ್ನ ಮಾಯೆಯಿಂದ ಸಮಸ್ತ ಸೃಷ್ಟಿಯನ್ನೂ ಸೃಜಿಸಿದ್ದಾನೆ. ಅವನಲ್ಲಿ ಸಂಭವಿಸದ ವಿಷಯವಾವುದಿದೆ? ಏನು ಮಾಡಬಯಸುತ್ತಾನೋ, ಅದೆಲ್ಲವನ್ನೂ ಮಾಡಬಲ್ಲನು.

**ಉತ್ತರ:–** ಓ ಮುಗ್ಧ ಮಂದಿಗಳೇ! ವಿವಾಹದಲ್ಲಿ ಯಾವನ ಹಾಡನ್ನು ಹಾಡುತ್ತಾರೋ, ಅವನನ್ನು ಎಲ್ಲರಿಗಿಂತ ದೊಡ್ಡವನನ್ನಾಗಿ ಮತ್ತು ಅನ್ಯರನ್ನು ಚಿಕ್ಕವರೆಂದು, ಇಲ್ಲವೇ ನಿಂದೆಯನ್ನು ಮಾಡುವುದಿಲ್ಲವಲ್ಲ! ಅಥವಾ ಅವನನ್ನು ಎಲ್ಲರ ತಂದೆಯನ್ನಾಗಿ ಮಾಡಿಕೊಡಿಸುವುದಿಲ್ಲ. ಹೇಳಿರಿ, ಪೋಪರೇ! ನೀವು ಸ್ತುತಿ ಪಾಠಕರೂ ಮತ್ತು ಹೊಗಳು ಭಟ್ಟರೂ ಆದ ಚಾರಣರನ್ನೂ ಮೀರಿಸುವ ಹರಟೆಮಲ್ಲರಾಗಿದ್ದೀರೋ ಅಥವಾ ಇಲ್ಲವೋ? ಯಾರ ಬೆನ್ನು ಹತ್ತುವಿರೋ, ಅವನನ್ನು ಎಲ್ಲರಿಗಿಂತ ದೊಡ್ಡವನೆನ್ನುವಿರಿ! ಮತ್ತು ಯಾವನನ್ನು ವಿರೋಧಿಸುವಿರೋ, ಅವನನ್ನು ಎಲ್ಲರಿಗಿಂತ ನೀಚನಾಗಿ ಮಾಡಿಕೊಡಿಸುವಿರಿ. ನಿಮಗೆ ಸತ್ಯದಿಂದ ಮತ್ತು ಧರ್ಮದಿಂದ ಪ್ರಯೋಜನವೇನು? ಆದರೆ, ನಿಮಗಂತೂ ನಿಮ್ಮ ಸ್ವಾರ್ಥದೊಂದಿಗೆ ಮಾತ್ರ ನಂಟು, ಮಾಯೆ ಮನುಷ್ಯನಲ್ಲಿರಬಹುದು. ಯಾರು ಛಲ – ಕಪಟಯುಕ್ತರೋ, ಅವರನ್ನೇ ಮಾಯಾವಿಗಳೆನ್ನುತ್ತಾರೆ. ಪರಮೇಶ್ವರನಲ್ಲಿ ಛಲ – ಕಪಟ ಮೊದಲಾದ ದೋಷಗಳು ಇಲ್ಲದಿರುವುದರಿಂದ, ಅವನನ್ನು ಮಾಯಾವಿ – ಎನ್ನಲಾರಿರಿ. ಆದಿ ಸೃಷ್ಟಿಯಲ್ಲಿ ಕಶ್ಯಪ ಮತ್ತು ಕಶ್ಯಪನ ಹೆಂಡತಿಯರಿಂದ ಪಶು, ಪಕ್ಷಿ, ಸರ್ಪ, ವೃಕ್ಷ ಮೊದಲಾದುವು ಉತ್ಪನ್ನವಾಗಿದ್ದಿದ್ದರೆ, ಇಂದೂ ಕೂಡ ಅಂತಹ ಸಂತತಿಯಾಗುವುದಿಲ್ಲವೇಕೆ? ನಾವು ಮೊದಲೇ ಯಾವ ಸೃಷ್ಟಿಕ್ರಮವನ್ನು ಬರೆದಿದ್ದೇವೋ[೧೨೫] ಅದೇ ಸರಿಯಾಗಿದೆ. ಮತ್ತು ಪೋಪಮಹಾಶಯರು ಈ ಕೆಳಗಿನ ವಚನದಿಂದಲೇ ಮೋಸ ಹೋಗಿ, ದಾರಿ ತಪ್ಪಿದ್ದಾರೆಂದು ತೋರುತ್ತದೆ :–

---

೧೨೩. ಭಾಗವತ ರಚನಾಕಾರನು ಬೋಪದೇವ, ಎಂಬುದನ್ನು ಮುಂದೆ ಓದುವಿರಿ.

೧೨೪. ಸಂಪ್ರದಾಯಸ್ಥ ವೈಷ್ಣವರಿಗೆ ಈ ಮಾತು ಅತಿ ಕಠೋರವಾಗಿ ತೋರಿರಬಹುದು. ಆದರೆ ಮಹರ್ಷಿ ದಯಾನಂದರು ಈ ಮಾತನ್ನು ಅತಿ ನೊಂದು, ಬಹಳ ದುಃಖದಿಂದ, ವ್ಯಕ್ತ ಮಾಡಿದ್ದಾರೆ. ಭಾಗವತ ಪ್ರಚಾರದಿಂದ ದೇಶದಲ್ಲಿ ಎಷ್ಟು ಭ್ರಮೆ ಹರಡಿ, ಜನರು ನಿಷ್ಕ್ರಿಯರಾಗಿ, ಉತ್ಸವ ಪ್ರಿಯರಾಗಿ, ದುರಾಚಾರಗಳಿಗಿಡಾಗಿ, ದೇಶದ ಸ್ವಾತಂತ್ರ್ಯವನ್ನೂ ಕೂಡ ಕಳೆದುಕೊಂಡ ವಿಷಾದಕರ ಪರಿಸ್ಥಿತಿಯನ್ನು ದಯಾನಂದರು ಕಣ್ಮುಟ್ಟ ನೋಡಿದ್ದರು. ಆಗ ಅವರಿಗೆ ೩೩ ವರ್ಷ.

೧೮೫೭ನೆಯ ಇಸವಿಯ 'ಭಾರತದ ಪ್ರಥಮ ಸ್ವಾತಂತ್ರ್ಯ ಸಮರ'ದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿಯು ತಾಂತ್ಯ ಟೋಪೇ, ನಾನಾರಾವ್ ಮೊದಲಾದ ಸ್ವಾತಂತ್ರ್ಯ ವೀರರ ನೆರವಿನಿಂದ, ಆಂಗ್ಲರ ಪಕ್ಷಪಾತಿಯೂ, ಮಹಾ ಸೈನ್ಯ ಶಕ್ತಿಯುತನೂ ಆದ ಗ್ವಾಲಿಯರ್ ಸಿಂಧ್ಯನ ರಾಜಧಾನಿಯನ್ನು ಕೇವಲ ಎರಡೇ ದಿನಗಳ ಯುದ್ಧಮಾಡಿ, ವಶಪಡಿಸಿಕೊಂಡಳು. ಆಗ ಸದಾಶಿವರಾವ್ ಸಿಂಧ್ಯನು ಆಂಗ್ಲರ ನೆರವು ಪಡೆಯಲು ಆಗ್ರಾಕ್ಕೆ ಓಡಿಹೋದನು.

ಇಂತಹ ಸಂದರ್ಭದಲ್ಲಿ ಕ್ರಾಂತಿ ವೀರರು ಎಷ್ಟು ಜಾಗರೂಕತೆಯಿಂದರಬೇಕಾಗಿತ್ತು! ಆದರೆ, ವಿಜಯೋನ್ಮಾದದಲ್ಲಿ ಭಾಗವತ ಸಪ್ತಾಹವನ್ನೂ, ಬ್ರಹ್ಮಭೋಜನವನ್ನೂ ಏರ್ಪಡಿಸುವ ಆಗ್ರಹವನ್ನು ಬ್ರಾಹ್ಮಣರು ಮಾಡಿದರು. ಲಕ್ಷ್ಮೀಬಾಯಿಯು ಮೊದಲು ಒಪ್ಪಲಿಲ್ಲ. ಬಹಳ ಒತ್ತಾಯ ಮಾಡಿದ ಮೇಲೆ ಒಪ್ಪಿದಳು. ಈ ಒಪ್ಪಿಗೆಯೇ ' ಸ್ವಾತಂತ್ರ್ಯ ಸಮರ'ದ ಅಂತ್ಯೇಷ್ಟಿಗೆ ಕಾರಣವಾಯಿತು. ಸ್ವಾತಂತ್ರ್ಯ ವೀರರ ಬಾಯಿಯಲ್ಲಿ, ಕೈಯಲ್ಲಿ, ಚಿರೋಟಿ ಲಾಡುಗಳಿರುವಾಗಲೇ, ಆಂಗ್ಲರು ಗ್ವಾಲಿಯರ್ ಕೋಟೆಗೆ ಮುತ್ತಿಗೆ ಹಾಕಿ, ಅವರಿಗೆ ಸೀಸದ ಲಾಡುಗಳನ್ನು ತಿನ್ನಿಸಿದರು. ಲಕ್ಷ್ಮೀಬಾಯಿಯು ಹೋರಾಡುತ್ತಾ ಸತ್ತಳು. ತಾಂತ್ಯಾಟೋಪೆಯು ಅರಣ್ಯದಲ್ಲಿ ಕಣ್ಮರೆಯಾದನು. ನಾನಾರಾಯನು ನೇಪಾಳಕ್ಕೆ ಓಡಿದನು. ಸೈನ್ಯವೆಲ್ಲಾ ದಿಕ್ಕಾಪಾಲಾಯಿತು.

೧೨೫. ಅಷ್ಟಮ ಸಮುಲ್ಲಾಸವನ್ನು ನೋಡಿರಿ.

**ತಸ್ಮಾತ್ ಕಾಶ್ಯಾಪ್ಯಾ ಇಮಾಃ ಪ್ರಜಾಃ ॥**

ಶತಪಥದಲ್ಲಿ ಈ ಸಮಸ್ತ ಸೃಷ್ಟಿಯೂ ಕಶ್ಯಪನಿಂದ ರಚಿತವಾಗಿದೆ – ಎಂದು ಬರೆದಿದೆ.

**ಕಶ್ಯಪಃ ಕಸ್ಮಾತ್ ಪಶ್ಯಕೋ ಭವತೀತಿ ॥** (ನಿರುಕ್ತ :– ೨.೨.)

ಪಶ್ಯಕ, ಎಂದರೆ, **"ಪಶ್ಯತೀತಿ ಪಶ್ಯಃ ಪಶ್ಯ ಏವ ಪಶ್ಯಕಃ"**. ಭ್ರಮರಹಿತನಾಗಿ ಚರಾಚರ ಜಗತ್ತನ್ನೂ, ಸರ್ವ ಜೀವರನ್ನೂ ಇವರ ಕರ್ಮಗಳನ್ನೂ, ಸಕಲ ವಿದ್ಯೆಗಳನ್ನೂ ಯಥಾವತ್ತಾಗಿ ನೋಡುವವನಾದ ಕಾರಣ, ಆ ಸೃಷ್ಟಿಕರ್ತೃವಾದ ಪರಮಾತ್ಮನ ಹೆಸರು ಕಶ್ಯಪ' ಎಂದಾಗಿರುತ್ತದೆ. ಮತ್ತು **"ಆದ್ಯಂತ ವಿಪರ್ಯಯಶ್ಚ"** – ಈ ಮಹಾಭಾಷ್ಯದ ವಚನದಂತೆ, ಮೊದಲ ಅಕ್ಷರ ಕೊನೆಗೆ ಮತ್ತು ಕೊನೆಯ ವರ್ಣಮೊದಲಿಗೆ ಬರುವುದರಿಂದ 'ಪಶ್ಯಕ' ಎಂಬುದರಿಂದ 'ಕಶ್ಯಪ' – ಎಂದಾಗಿದೆ. ಇದರ ಅರ್ಥವನ್ನು ತಿಳಿಯದೆ, ಭಂಗೀರಸದ ಪಾತ್ರೆಯನ್ನೇರಿಸಿ, ತಮ್ಮ ಜನ್ಮವನ್ನು ಸೃಷ್ಟಿವಿರುದ್ಧವಾದ ಕಥನಗಳಲ್ಲಿ ನಾಶಮಾಡಿಕೊಂಡರು.

ಮಾರ್ಕಂಡೇಯ ಪುರಾಣದ ದುರ್ಗಾಪಾಠದಲ್ಲಿ ಹೀಗೆ ಹೇಳಿದೆ:– ದೇವತೆಗಳ ಶರೀರಗಳಿಂದ ತೇಜಸ್ಸು ಹೊರಬಂದು, ಒಬ್ಬಳು ದೇವಿ ಉದ್ಭವಿಸಿದಳು. ಅವಳು ಮಹಿಷಾಸುರನನ್ನು ಸಂಹರಿಸಿದಳು. ರಕ್ತಬೀಜನ ಶರೀರದಿಂದ ಒಂದು ತೊಟ್ಟು ರಕತ ನೆಲದ ಮೇಲೆ ಬೀಳುವುದರಿಂದ, ಅವನಂತಹ ರಕ್ತಬೀಜನು ಉತ್ಪನ್ನವಾದುದರಿಂದ ಸಮಸ್ತ ಜಗತ್ತಿನಲ್ಲಿಯೂ ರಕ್ತಿಬೀಜರೇ ತುಂಬಿಹೋಗುವುದು, ರಕ್ತದ ನದಿ ಉದಿಸಿ ಹರಿಯುವುದು – ಮೊದಲಾದ ಬುರುಡೆಗಳನ್ನು ಬಹಳವಾಗಿ ಬರೆದಿಟ್ಟಿದ್ದಾರೆ. ರಕ್ತಬೀಜರಿಂದ ಸಮಸ್ತ ಜಗತ್ತೂ ತುಂಬಿ ಹೋಗಿದ್ದಿತಾದರೇ, ದೇವಿ ಮತ್ತು ದೇವಿಯ ಸಿಂಹ ಹಾಗೂ ಅವಳ ಸೈನ್ಯ ಎಲ್ಲಿ ಬೀಡುಬಿಟ್ಟಿದ್ದಿತು? ದೇವಿಯಿಂದ ದೂರ ದೂರಕ್ಕೆ ರಕ್ತಬೀಜರಿದ್ದರು – ಎನ್ನುವಿರಾದರೆ, ಜಗತ್ತೆಲ್ಲಾ ರಕ್ತಬೀಜರಿಂದ ತುಂಬಿರಲಿಲ್ಲ. ತುಂಬಿದ್ದ ಪಕ್ಷದಲ್ಲಿ ಪಶುಗಳು, ಪಕ್ಷಿಗಳು, ಮನುಷ್ಯರೇ ಮೊದಲಾದ ಪ್ರಾಣಧಾರಿಗಳು ಹಾಗೂ ಜಲದಲ್ಲಿ ವಾಸಿಸುವ ಮೊಸಳೆಗಳು, ತಿಮಿಂಗಿಲಗಳು, ಆಮೆಗಳು, ಮತ್ಸ್ಯಗಳು–ಮೊದಲಾದುವೂ, ವನಸ್ಪತಿ–ಮೊದಲಾದ ವೃಕ್ಷಗಳು, ಎಲ್ಲಿರುತ್ತಿದ್ದುವು? ದುರ್ಗಾಪಾಠವನ್ನು ರಚಿಸಿದ ಪೋಪನ ಮನೆಯೊಳಕ್ಕೇ ಓಡಿ ಹೋಗಿ ಸೇರಿಕೊಂಡಿರಬಹುದೆಂದೇ ಇಲ್ಲಿ ನಿಶ್ಚಯಮಾಡಬೇಕಾದೀತು. ಭಂಗಿಯ ಅಮಲಿನ ಅಲೆಯಲ್ಲಿ ತೂರಾಡುತ್ತಾ ಗೊತ್ತು–ಗುರಿಯಿಲ್ಲದ ಎಂತಹ ಅಸಂಭವವಾದ ಕಥೆಯ ಬುರುಡೆಯನ್ನು ಹೊಡೆದಿದ್ದಾರೆ, ನೋಡಿರಿ!

ಯಾವುದನ್ನು ಶ್ರೀಮದ್ಭಾಗವತವೆನ್ನುತ್ತಾರೋ, ಅದರ ಲೀಲೆಯನ್ನು ಈಗ ಕೇಳಿರಿ. ಬ್ರಹ್ಮನಿಗೆ ನಾರಾಯಣನು ನಾಲ್ಕು" ಶ್ಲೋಕಗಳ ಭಾಗವತದ ಉಪದೇಶವನ್ನು ಕೊಟ್ಟನು:–

**ಜ್ಞಾನಂ ಪರಮಗುಹ್ಯಂ ಮೇ ಯದ್ವಿಜ್ಞಾನಸಮನ್ವಿತಮ್ ।**

**ಸರಹಸ್ಯಂ ತದಂಗಂ ಚ ಗೃಹಾಣ ಗದಿತಂ ಮಯಾ ॥** (ಭಾಗವತ:–೨.೯.೩೦)

**ಅರ್ಥ:–** ಹೇ ಬ್ರಹ್ಮದೇವ! ಯಾವುದು ವಿಜ್ಞಾನ ಮತ್ತು ರಹಸ್ಯದಿಂದ ಯುಕ್ತವಾಗಿದೆಯೋ ಮತ್ತು ಧರ್ಮ, ಅರ್ಥ, ಕಾಮ, ಮೋಕ್ಷಗಳ ಅಂಗವಾಗಿದೆಯೋ, ನನ್ನ ಆ ಪರಮಗುಹ್ಯವಾದ ಜ್ಞಾನವನ್ನೇ ನನ್ನಿಂದ ಗ್ರಹಿಸು. ವಿಜ್ಞಾನಯುಕ್ತವಾದ ಜ್ಞಾನವೆಂದು ಹೇಳಿದ ಮೇಲೆ, "ಪರಮ" ಎಂದು ಜ್ಞಾನಕ್ಕೆ" ವಿಶೇಷಣವನ್ನು ಹಚ್ಚುವುದು ವ್ಯರ್ಥವಾಗಿದೆ ಮತ್ತು "ಗುಹ್ಯ" ಎಂಬ ವಿಶೇಷಣದ ಕಾರಣದಿಂದ "ರಹಸ್ಯ" ಎಂಬುದೂ ಪುನರುಕ್ತವಾಗಿದೆ. ಮೂಲಶ್ಲೋಕವೇ ಅನರ್ಥಕವಾಗಿರುವಾಗ, ಬೇರೆಯವು ಅನರ್ಥಕವೇಕಲ್ಲ? ಭಾಗವತದ ಮೂಲವೇ ಸುಳ್ಳಾಗಿರುವಾಗ, ಅದರ ವೃಕ್ಷ ಸುಳ್ಳೇತಕ್ಕೆ" ಆಗದಿದ್ದೀತು? ಬಹ್ಮದೇವರಿಗೆ ಹೀಗೆ ವರವನ್ನು ಕೊಟ್ಟನು:–

**ಭವಾನ್ ಕಲ್ಪ ವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್ ॥** (ಭಾಗವತ:– ೨.೯.೩೬)

ನೀನು ಕಲ್ಪ–ಸೃಷ್ಟಿಯಲ್ಲಿ, ಮತ್ತು ವಿಕಲ್ಪ–ಪ್ರಳಯದಲ್ಲಿ ಕೂಡ ಮೋಹವನ್ನು ಎಂದಿಗೂ ಹೊಂದುವುದಿಲ್ಲ–ಹೀಗೆ ಬರೆದು ಮತ್ತೆ ದಶಮಸ್ಕಂಧದಲ್ಲಿ ಮೋಹಿತನಾಗಿ ಕರುವನ್ನು ಅಪಹರಿಸಿದನು[೧೨೬] –ಎಂದೂ ಬರೆದಿದೆ. ಈ ಎರಡರಲ್ಲಿ ಒಂದು ಮಾತು ಸತ್ಯ; ಎರಡನೆಯದು ಸುಳ್ಳು. ಹೀಗಾಗಿ, ಎರಡು ಮಾತುಗಳೂ ಸುಳ್ಳಾದವು. ವೈಕುಂಠದಲ್ಲಿ ರಾಗ, ದ್ವೇಷ, ಕ್ರೋಧ, ಈರ್ಷ್ಯೆ,

---

೧೨೬. ಭಾಗವತ ೧೦.೧೮.೧೪ –ಯು.ಮೀ.

ದುಃಖ–ಇಲ್ಲವಾದರೆ, ಸನಕಾದಿಗಳಿಗೆ ವೈಕುಂಠದ ದ್ವಾರದಲ್ಲಿ ಕ್ರೋಧವೇಕೆ ಉಂಟಾಯಿತು? ಕ್ರೋಧ ಉಂಟಾದರೆ, ಅದು ಸ್ವರ್ಗವೇ ಅಲ್ಲ. ಆಗ ಜಯವಿಜಯರು ದ್ವಾರಪಾಲಕರಾಗಿದ್ದರು. ಸ್ವಾಮಿಯ ಆಜ್ಞಾಪಾಲನೆ ಅವಶ್ಯಕವೇ ಆಗಿದ್ದಿತು. ಅವರು ಸನಕಾದಿಗಳನ್ನು ತಡೆದರೆ, ಅಪರಾಧವೇನಾಯಿತು? ಇದರ ಮೇಲೆ, ಅಪರಾಧವಿಲ್ಲದೆ ಶಾಪವೇ ತಗಲಲಾರದು. "ನೀವು ಭೂಮಿಗೆ ಬೀಳಿರಿ".– ಎಂದು ಶಾಪ ಬಿದ್ದುದರಿಂದ, ಅಲ್ಲಿ ಭೂಮಿಯಿರಲಾರದು–ಎಂಬುದು ಸಿದ್ಧವಾಗುತ್ತದೆ. ಆಕಾಶ, ವಾಯು, ಅಗ್ನಿ ಮತ್ತು ಜಲ ಮಾತ್ರ ಇದ್ದಿರಬಹುದು. ಇಂತಹ ದ್ವಾರ. ಮಂದಿರ ಮತ್ತು ನೀರು ಯಾವುದರ ಆಧಾರದ ಮೇಲೆ ಇದ್ದುವು? ಮತ್ತೆ ಜಯ – ವಿಜಯರು –"ಮಹಾಸ್ವಾಮಿಗಳೇ! ಪುನಃ ನಾವು ವೈಕುಂಠಕ್ಕೆ ಯಾವಾಗ ಬರುವೆವು"? ಎಂದು ಸನಕಾದಿಗಳನ್ನು ಕೇಳಿಕೊಂಡರು. ಅವರು –"ಪ್ರೇಮದಿಂದ ನಾರಾಯಣನ ಭಕ್ತಿ ಮಾಡುವಿರಾದರೆ ಏಳನೆಯ ಜದನ್ಮದಲ್ಲಿ, ಮತ್ತು ವಿರೋಧದಿಂದ ಭಕ್ತಿ ಮಾಡುವಿರಾದರೆ ಮೂರನೆಯ ಜನ್ಮದಲ್ಲಿ ವೈಕುಂಠವನ್ನು ಸೇರುವಿರಿ".–ಎಂದು ಅವರಿಗೆ ಹೇಳಿದರು.[೧೨೭] ಇದರಲ್ಲಿ ಆಲೋಚಿಸಬೇಕಾದುದುದ ಇದು. ಜಯ–ವಿಜಯರು ನಾರಾಯಣನ ಸೇವಕರು. ಅವರ ರಕ್ಷಣೆಯನ್ನೂ ಮತ್ತು ಸಹಾಯವನ್ನೂ ಮಾಡುವು ನಾರಾಯಣನ ಕರ್ತವ್ಯಕರ್ಮವಾಗಿದ್ದಿತು. ಯಾರು ತನ್ನ ಸೇವಕರಿಗೆ ಅಪರಾಧವಿಲ್ಲದೆಯೇ ದುಃಖ ಕೊಡುವರೋ, ಅವರಿಗೆ ಆ ಸೇವಕರ ಒಡೆಯನು ಶಿಕ್ಷೆಕೊಡದಿದ್ದರೆ, ಅವನ ಸೇವಕರಿಗೆ ಎಲ್ಲರೂ ದುರ್ಗತಿಯನ್ನು ಉಂಟುಮಾಡುವರು. ಜಯ–ವಿಜಯರ ಸತ್ಕಾರವನ್ನೂ, ಮತ್ತು ಸನಕಾದಿಗಳಿಗೆ ಚೆನ್ನಾಗಿ ಶಿಕ್ಷೆಯನ್ನೂ ಕೊಡುವುದು ನಾರಾಯಣನಿಗೆ ಉಚಿತವಾಗಿದ್ದಿತು. ಏಕೆಂದರೆ, ಅವರು ಒಳಬರಲು ಹಠವನ್ನೇಕೆ ಮಾಡಿದರು? ಮತ್ತು ಸೇವಕರೊಂದಿಗೆ ಹೋರಾಡಿದರೇಕೆ? ಶಾಪವನ್ನು ಕೊಟ್ಟರೇಕೆ? ಅವರಿಗೆ ಪ್ರತಿಯಾಗಿ ಸನಕಾದಿಗಳನ್ನು ಭೂಮಿಗೆ ಕಳುಹಿಸುವುದು ನಾರಾಯಣನಿಗೆ ಯುಕ್ತವಾಗಿತ್ತು. ನಾರಾಯಣನ ಮನೆಯಲ್ಲಿಯೇ ಇಂತಹ ಗೊಂದಲವಿದ್ದಲ್ಲಿ, ವೈಷ್ಣವರೆಂದು ಕರೆಯಲ್ಪಡುವ ಅವನ ಸೇವಕರಿಗೆ ಎಷ್ಟು ದುರ್ಗತಿಯಾದರೂ ಅದು ಕಡಿಮೆಯೇ ಸರಿ.

ಪುನಃ ಅವರು ಹಿರಣಾಕ್ಷ ಮತ್ತು ಹಿರಣ್ಯಕಶಿಪುಗಳಾಗಿ[೧೨೮] ಹುಟ್ಟಿದರು. ಅವರಲ್ಲಿ ಹಿರಣ್ಯಾಕ್ಷನನ್ನು ವರಾಹನು ಸಂಹರಿಸಿದನು. ಅವನ ಕಥೆಯನ್ನು ಹೀಗೆ ಬರೆದಿದ್ದಾರೆ:– ಅವನು ಭೂಮಿಯನ್ನು ಚಾಪೆಯಂತೆ ಸುತ್ತಿ ತಲೆ ಕೆಳಗಿಟ್ಟುಕೊಂಡು ನಿದ್ರಿಸಿದನು. ವಿಷ್ಣುವು ವರಾಹನ ರೂಪವನ್ನು ಧರಿಸಿ, ಅವನ ತಲೆಯ ಕೆಳಗಿನಿಂದ ಪೃಥಿವಿಯನ್ನು ಬಾಯಿಯಲ್ಲಿಟ್ಟುಕೊಂಡನು.[೧೨೯] ಅವನು ಎದ್ದನು, ಇಬ್ಬರಿಗೂ ಯುದ್ಧವಾಯಿತು. ವರಾಹನು ಹಿರಣಾಕ್ಷನನ್ನು ಸಂಹರಿಸಿದನು. ಯಾರಾದರೂ ಇವರನ್ನು–"ಭೂಮಿ ಗುಂಡಾಗಿದೆಯೋ, ಅಥವಾ ಚಾಪೆಯ ಹಾಗಿದೆಯೋ"?–ಎಂದು ಕೇಳಬೇಕು. ಆಗ ಏನನ್ನೂ ಹೇಳಲಾರರು. ಏಕೆಂದರೆ, ಪೌರಾಣಿಕರು ಭೂಗೋಳ ವಿದ್ಯೆಯ ಶತ್ರುಗಳಾಗಿದ್ದಾರೆ. ಒಳ್ಳಿತು, ಸುತ್ತಿ ತಲೆಯ ಕೆಳಗೆ ಇಟ್ಟುಕೊಂಡಾಗ, ಹಿರಣ್ಯಾಕ್ಷನು ಏತರ ಮೇಲೆ ಮಲಗಿದನು? ಮತ್ತು ವರಾಹದೇವರು ಯಾವುದರ ಮೇಲೆ ಕಾಲಿಟ್ಟು ಓಡಿಬಂದರು? ಪೃಥಿವಿಯನ್ನಂತೂ ವರಾಹದೇವರು ಬಾಯಿಯಲ್ಲಿಟ್ಟುಕೊಂಡರು! ಮತ್ತೆ ಇಬ್ಬರೂ ಯಾವುದರ ಮೇಲೆ ನಿಂತು ಕಾದಾಡಿದರು? ಅಲ್ಲಿಯಂತೂ ನಿಲ್ಲಲು ಬೇರೆ ಸ್ಥಳವೂ ಇರಲಿಲ್ಲ. ಆದರೆ, ಭಾಗವತ ಮೊದಲಾದ ಈ ಪುರಾಣಗಳನ್ನು ರಚಿಸಿದ ಪೋಪಮಹಾಶಯರ ಎದೆಯ ಮೇಲೆ ನಿಂತು ಕಾದಾಡಿರಬಹುದೋ? ಆದರೆ ಪೋಪಮಹಾಶಯರು ಯಾವುದರ ಮೇಲೆ ನಿದ್ರಿಸಿರಬಹುದು? 'ಹರಟೆಮಲ್ಲನ ಮನೆಗೆ ಹರಟೆಮಲ್ಲ ಬಂದನು. ಹರಟಿದರು ಹರಟೆಮಲ್ಲರು'.[೧೩೦] – ಎನ್ನುವ ಹಾಗೆ, ಮಿಥ್ಯಾವಾದಿಗಳ ಮನೆಗೆ ಬೆರ ಹರಟೆಮಲ್ಲರು ಬರುತ್ತಾರೆ. ಇನ್ನು ಬುರುಡೆ ಹೊಡೆಯುವುದಕ್ಕೆ ಕಡಿಮೆ ಏನು? ಇನ್ನು ಉಳಿದವನು ಹಿರಣ್ಯಕಶಿಪು.[೧೩೧] ಅವನ ಮಗ ಪ್ರಹ್ಲಾದನು ಭಕ್ತನಾಗಿದ್ದನು. ಅವನ ತಂದೆ ಓದಿಸುವುದಕ್ಕಾಗಿ ಪಾಠಶಾಲೆಗೆ ಕಳುಹಿಸುತ್ತಿದ್ದನು. ಆಗ ಅವನು ಅಧ್ಯಾಪಕರಿಗೆ–"ನನ್ನ ಕರಿಹಲಗೆಯ ಮೇಲೆ ರಾಮ, ರಾಮ – ಎಂದು ಬರೆದುಕೊಡಿರಿ".[೧೩೨] – ಎಂದು ಹೇಳುತ್ತಿದ್ದನು. ಅವನ ತಂದೆ ಯಾವಾಗ ಅದನ್ನು ಕೇಳಿದನೋ, ಆಗ "ನೀನು ನಮ್ಮ ಶತ್ರುವಿನ ಭಜನವನ್ನೇಕೆ ಮಾಡುತ್ತೀಯೆ"?– ಎಂದು ಪ್ರಶ್ನಿಸಿದನು. ಹುಡುಗನು ಒಪ್ಪಲಿಲ್ಲ. ಆಗ ಅವನ ತಂದೆ ಅವನನ್ನು ಬಂಧಿಸಿ, ಪರ್ವತದ

---

೧೨೭. ಭಾಗವತ ೩.೧೫.೧೬– ಯು.ಮೀ.

೧೨೮. ಭಾಗವತ ೮.೧೭.೧೮ – ಯು.ಮೀ

೧೨೯. ಭಾಗವತ ೮.೧೮.೧೯ – ಯು.ಮೀ

೧೩೦. ಹಿಂದಿಯಲ್ಲಿ ಇದಕ್ಕೆ – 'ಗಪ್ಪಿ ಕೆ ಘರ್ ಗಪ್ಪೀ ಆಯೇ ' ಬೋಲೆ ಗಪ್ಪೀ ಜೀ"

೧೩೧. ಮೂಲ ಗ್ರಂಥದಲ್ಲಿ 'ಹಿರಣ್ಯ ಕಶ್ಯಪ' ಎಂಬ ಪಾಠವಿದೆ. –ಸಂ

೧೩೨. 'ಭಕ್ತಮಾಲ'ದಲ್ಲಿ ಈ ಪ್ರಕರಣವಿದೆ. ಭಾಗವತ ಪುರಾಣದಲ್ಲಿ ಈ ಪ್ರಸಂಗ ಸ್ವಲ್ಪ ವ್ಯತ್ಯಾಸದಿಂದ ಬರೆಯಲ್ಲಿಟ್ಟಿದೆ.

ಮೇಲಿನಿಂದ ಕೆಡಹಿಸಿದನು. ಭಾವಿಯಲ್ಲಿ ಹಾಕಿದನು. ಆದರೆ, ಅವನಿಗೇನೂ ಆಗಲಿಲ್ಲ. ಆಗ ಅವನು ಕಬ್ಬಿಣದ ಕಂಬ ಒಂದನ್ನು ಬೆಂಕಿಯಲ್ಲಿ ಕಾಯಿಸಿ, ಅವನಿಗೆ – "ನಿನ್ನ ಇಷ್ಟ ದೇವನಾದ ರಾಮನು ಸತ್ಯವಾಗಿರುವುದಾದರೆ, ನೀನು ಇದನ್ನು ಹಿಡಿದುಕೊಳ್ಳುವುದರಿಂದ ಸುಟ್ಟುಹೋಗುವುದಿಲ್ಲ'.– ಎಂದು ಹೇಳಿದನು. ಪ್ರಹ್ಲಾದನು ಹಿಡಿಯ ಹೊರಟನು. ಮನಸ್ಸಿನಲ್ಲಿ 'ಸುಟ್ಟು ಹೋಗುವುದರಿಂದ ದೂರ ಉಳಿದೇನೋ ಅಥವಾ ಇಲ್ಲವೋ' – ಎಂಬ ಸಂಶಯ ಮೂಡಿತು. ನಾರಾಯಣನು ಆ ಕಂಬದ ಮೇಲೆ ಸಣ್ಣ ಸಣ್ಣ ಇರುವೆಗಳ ಸಾಲನ್ನು ಹರಿಯಬಿಟ್ಟನು. ಪ್ರಹ್ಲಾದನಿಗೆ ನಂಬಿಕೆ ಹುಟ್ಟಿತು. ಸರ್ರನೆ ಹೋಗಿ ಕಂಭವನ್ನು ಹಿಡಿದನು. ಅದು ಸೀಳಿ ಹೋಯಿತು. ಅದರ ಒಳಗಿನಿಂದ ನರಸಿಂಹನು ಹೊರಬಂದನು ಮತ್ತು ಅವನ ತಂದೆಯನ್ನು ಹಿಡಿದು, ಹೊಟ್ಟೆಯನ್ನು ಬಗೆದುಹಾಕಿದನು. ಆ ಮೇಲೆ ಪ್ರಹ್ಲಾದನನ್ನು ಮುದ್ದಿನಿಂದ ನೆಕ್ಕತೊಡಗಿದನು. ಪ್ರಹ್ಲಾದನಿಗೆ–"ವರವನ್ನು ಬೇಡು". ಎಂದನು ಅವನು ತನ್ನ ತಂದೆಗೆ ಸದ್ಗತಿಯ ಪ್ರಾಪ್ತಿಯನ್ನು ಕೇಳಿಕೊಂಡನು. ನರಸಿಂಹನು[೧೩೩] –"ನಿನ್ನ ಇಪ್ಪತ್ತೊಂದು ಹಿಂದಣ ಪೀಳಿಗೆಗಳವರು ಸದ್ಗತಿ ಹೊಂದಿದರು".[೧೩೪] – ಎಂದನು. ಈಗ ನೋಡಿರಿ! ಇದೂ ಕೂಡ ಬೇರೆ ಬುರುಡೆಗಳ ಸೋದರನಾದ ಭಾರೀ ಬುರುಡೆಯಾಗಿದೆ. ಯಾವನಾದರೂ ಭಾಗವತ ಕೇಳುವವನ್ನು ಅಥವಾ ಹೇಳುವವನ್ನು ಹಿಡಿದು, ಪರ್ವತದ ಮೇಲಿನಿಂದ ಬೀಳಿಸುವುದಾದರೆ, ಯಾವನೂ ರಕ್ಷಿಸುವುದಿಲ್ಲ; ಚೂರು ಚೂರಾಗಿ ಮೃತನೇ ಆಗಿ ಹೋಗುವನು. ಪ್ರಹ್ಲಾದನನ್ನು ಅವನ ತಂದೆ ಓದುವುದಕ್ಕಾಗಿ ಕಳುಹಿಸುತ್ತಿದ್ದನು. ಕೆಟ್ಟಕೆಲಸವನ್ನೇನು ಮಾಡಿದ್ದನು? ಮತ್ತು ಆ ಪ್ರಹ್ಲಾದನೆಂತಹ ಮೂರ್ಖ? ಓದುವುದನ್ನು ಬಿಟ್ಟು, ವೈರಾಗಿಯಾಗಬಯಸುತ್ತಿದ್ದನು. ಉರಿಯುತ್ತಿರುವ ಕಂಬದ ಮೇಲೆ ಇರುವೆ ಏರಲಾರಂಭಿಸಿತು ಮತ್ತು ಸ್ಪರ್ಶಮಾಡುವುದರಿಂದ ಪ್ರಹ್ಲಾದ ಸುಟ್ಟು ಹೋಗಲಿಲ್ಲ–ಎಂಬ ಈ ಮಾತನ್ನು ಸತ್ಯವೆಂದು ಒಪ್ಪಿಕೊಳ್ಳುವವನನ್ನೂ ಕೂಡ ಕಂಭಕ್ಕೇ ಕಟ್ಟಿಹಾಕಬೇಕು. ಇವನು ಸುಟ್ಟು ಹೋಗದೇ ಇದ್ದಲ್ಲಿ, ಅವನೂ ಸುಟ್ಟು ಹೋಗದಿರಬಹುದೆಂದು ಭಾವಿಸಿರಿ. ಮತ್ತು ನರಸಿಂಹನೂ ಸುಟ್ಟು ಹೋಗಲಿಲ್ಲವೇಕೆ? ಮೊದಲು ಮೂರನೆಯ ಜನ್ಮದಲ್ಲಿ ವೈಕುಂಠಕ್ಕೆ ಬರುವಂತಹ ವರ ಸನಕಾದಿಗಳದಾಗಿದ್ದಿತು. ಅದನ್ನು ನಿಮ್ಮ ನಾರಾಯಣ ಮರೆತನೇನು? ಭಾಗವತ ಕ್ರಮದಿಂದ ಬ್ರಹ್ಮಾ, ಪ್ರಜಾಪತಿ, ಕಶ್ಯಪ, ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು–ಹೀಗೆ ಕೊನೆಯವರಿಬ್ಬರು ನಾಲ್ಕನೆಯ ಪೀಳಿಗೆಯವರಾಗುತ್ತಾರೆ. ಪ್ರಹ್ಲಾದನ ಇಪ್ಪತ್ತೊಂದು ಪೀಳಿಗೆ ಆಗಿಯೂ ಕೂಡ ಇರಲಿಲ್ಲ. ಮತ್ತು ೨೧ ತಲೆಮಾರಿನ ಪೂರ್ವಜರು ಸದ್ಗತಿ ಪಡೆದರು–ಎನ್ನುವುದು ಎಷ್ಟು ಪ್ರಮಾದ? ಮತ್ತು ಅವರುಗಳೇ ಹಿರಣ್ಯಾಕ್ಷ–ಹಿರಣ್ಯಕಶಿಪು, ರಾವಣ–ಕುಂಭಕರ್ಣ, ಪುನಃ ಶಿಶುಪಾಲ–ದಂತವಕ್ರರಾಗಿ ಉತ್ಪನ್ನರಾದರೆ, ನರಸಿಂಹನ ವರ ಎಲ್ಲಿಗೆ ಹಾರಿ ಹೋಯಿತು? (ಪ್ರಹ್ಲಾದನ ಹಿಂದಿನ ಪೀಳಿಗೆಯ ಹಿರಣ್ಯಕಶಿಪು, ಕುಂಭಕರ್ಣ–ದಂತವಕ್ರರಾಗಿ ಹುಟ್ಟಿಬರಬೇಕಾಗಿದ್ದಾಗ 'ಸದ್ಗತಿಗೆ ಸಂದ'ನೆಂಬ ನರಸಿಂಹನ ವರದಾನಕ್ಕೇನು ಬೆಲೆ?) ಇಂತಹ ಮಾತುಗಳನ್ನು ಪ್ರಮಾದಿಗಳು ಆಡುತ್ತಾರೆ; ಆಲಿಸುತ್ತಾರೆ; ಒಪ್ಪುತ್ತಾರೆ. ವಿದ್ವಾಂಸರೊಪ್ಪರು.

**ಪೂತನಾ ಮತ್ತು ಅಕ್ರೂರರ ವಿಷಯದಲ್ಲಿ ನೋಡಿರಿ:–**

**ರಥೇನ ವಾಯುವೇಗೇನ** (ಭಾಗವತ:– ೧೦.೩೯.೩೮)

**ಜಗಾಮ ಗೋಕುಲಂಪ್ರತಿ** (ಭಾಗವತ:– ೧೦.೩೮.೨೪)

ಅಕ್ರೂರ ಮಹಾಶಯರು ಕಂಸನು ಕಳುಹಿಸಿದುದರಿಂದ, ವಾಯುವೇಗಕ್ಕೆ ಸಮನಾಗಿ ಓಡುವ ಕುದುರೆಗಳ ರಥದಲ್ಲಿ ಕುಳಿತು, ಸೂರ್ಯೋದಯ ಕಾಲಕ್ಕೆ ಹೊರಟರು. ಮತ್ತು ನಾಲ್ಕು ಮೈಲಿ ದೂರದ ಗೋಕುಲಕ್ಕೆ ಸೂರ್ಯಾಸ್ತದ ಕಾಲಕ್ಕೆ ಮುಟ್ಟಿದರು. ಒಂದು ವೇಳೆ ಕುದುರೆಗಳು ಭಾಗವತ ಬರೆದವನ ಸುತ್ತ ಪ್ರದಕ್ಷಿಣ ಮಾಡುತ್ತಿದ್ದಿರಬಹುದು. ಅಥವಾ ಮಾರ್ಗವನ್ನು ಮರೆತು, ಕುದುರೆಗಳನ್ನೋಡಿಸುವವರೂ ಮತ್ತು ಅಕ್ರೂರ ಮಹಾಶಯರೂ, ಭಾಗವತ ಬರೆದವರ ಮನೆಗೆ ಬಂದು ನಿದ್ರಿಸಿಬಿಟ್ಟಿರಬೇಕೋ, ಏನೋ?

ಪೂತನಾ ಶರೀರ ೧೨ಮೈಲಿ ಅಗಲ ಮತ್ತು ಬಹಳ ಉದ್ದವಿದ್ದಿತೆಂದು ಬರೆದಿದ್ದಾರೆ. ಮಥುರಾ ಹಾಗೂ ಗೋಕುಲದ ನಡುವೆ ಶ್ರೀಕೃಷ್ಣದೇವರು ಅವಳನ್ನು ಸಾಯಿಸಿ ಕೆಡಹಿದರು. ಹೀಗೆ ಆಗಿದ್ದಲ್ಲಿ, ಮಥುರೆ ಮತ್ತು ಗೋಕುಲ ಎರಡೂ ನೆಲಸಮವಾಗಿ, ಈ ಪೋಪಮಹಾಶಯರ ಮನೆಯೂ ಕೂಡ ಅಪ್ಪಚ್ಚಿಯಾಗಿ ಹೋಗುತ್ತಿತ್ತು.

---

೧೩೩. ಮೂಲ ಗ್ರಂಥದಲ್ಲಿ 'ನೃಸಿಂಹ' ಎಂಬ ಪಾಠವಿದೆ.–ಯು.ಮೀ.

೧೩೪. ಭಾಗವತ ೭೧೮.೧೮ – ಯು.ಮೀ

ಮತ್ತು ಅಜಾಮಿಳನ[೧೩೫] ಕಥೆಯನ್ನು ಸಿಕ್ಕಾಪಟ್ಟೆ ಬರೆದಿದ್ದಾರೆ.[೧೩೬] ಅವನು ನಾರದರು ಹೇಳಿದುದರಿಂದ ತನ್ನ ಮಗನಿಗೆ 'ನಾರಾಯಣ'ನೆಂದು ಹೆಸರಿಟ್ಟಿದ್ದನು. ಮೃತನಾಗುವ ಸಮಯದಲ್ಲಿ ತನ್ನ ಮಗನನ್ನು ಕರೆದನು. ನಡುವೆ ನಾರಾಯಣದೇವರು ಧುಮುಕಿಬಿಟ್ಟರು![೧೩೭] "ಅವನು ನನ್ನನ್ನಲ್ಲ; ತನ್ನ ಮಗನನ್ನು ಕರೆಯುತ್ತಾನೆ".- ಎಂದು, ಆವನ ಅಂತಃಕರಣದ ಭಾವನೆಯನ್ನು ನಾರಾಯಣದೇವರು ತಿಳಿದಿರಲಿಲ್ಲವೇನು? ನಾಮ-ಮಾಹಾತ್ಮ್ಯ ಹೀಗೆಯೇ ಇರುವುದಾದರೆ, ಇಂದೂ ಕೂಡ ನಾರಾಯಣ-ಸ್ಮರಣ ಮಾಡುವವರ ದುಃಖಗಳನ್ನು ಪರಿಹರಿಸುವುದಕ್ಕಾಗಿ ಅವರು ಏಕೆ ಬರುವುದಿಲ್ಲ? ಈ ಮಾತು ಸತ್ಯವಾಗಿದ್ದರೆ, ಕೈದಿಗಳು "ನಾರಾಯಣ! ನಾರಾಯಣ!" - ಎನ್ನುತ್ತಾ ಬಿಡುಗಡೆಯನ್ನೇತಕ್ಕೆ ಹೊಂದುವುದಿಲ್ಲ? ಇದೇ ರೀತಿ, ಜ್ಯೋತಿಷ ಶಾಸ್ತ್ರಕ್ಕೆ ವಿರುದ್ಧವಾಗಿ ಸುಮೇರು ಪರ್ವತದ ಪರಿಮಾಣವನ್ನು ಬರೆದಿದ್ದಾರೆ.[೧೩೮] ಮತ್ತು, ಪ್ರಿಯವ್ರತರಾಜನ ರಥದ ಚಕ್ರದ ಜಾಡಿನಿಂದ ಸಮುದ್ರಗಳಾದವು;[೧೩೯] ಪೃಥಿವೀ ನಾಲ್ವತ್ತೊಂಬತ್ತು ಕೋಟಿ ಯೋಜನೆಯಿದೆ[೧೪೦] -ಈ ಮೊದಲಾದ ಸುಳ್ಳು ಮಾತುಗಳ ಬುರುಡೆಯನ್ನು ಭಾಗವತದಲ್ಲಿ ಬರೆದಿದ್ದಾರೆ; ಅದಕ್ಕೆ ಏನೂ ತುದಿಮೊದಲಿಲ್ಲ.

"ಗೀತಗೋವಿಂದ"ವನ್ನು ಬರೆದಿರುವ ಜಯದೇವನ ಸೋದರನಾದ ಬೋಪದೇವನು[೧೪೧] ಈ ಭಾಗವತವನ್ನು[೧೪೨] ಬರೆದಿದ್ದಾನೆ. "ಶ್ರೀಮದ್ಭಾಗವತವನ್ನು ನಾನು ರಚಿಸಿದ್ದೇನೆ".-ಎಂದು ಅವನು ತನ್ನಿಂದ ರಚಿತವಾದ 'ಹಿಮಾದ್ರಿ'[೧೪೩] ಎಂಬ ಗ್ರಂಥದಲ್ಲಿ ಈ ಶ್ಲೋಕಗಳನ್ನು ಬರೆದಿದ್ದಾನೆ. ಆ ಲೇಖನದ ಮೂರು ಪತ್ರಗಳು ನಮ್ಮ ಹತ್ತಿರವಿದ್ದವು. ಅವುಗಳಲ್ಲಿ ಒಂದು ಪತ್ರ ಕಳೆದು ಹೋಗಿದೆ. ಆ ಪತ್ರದಲ್ಲಿನ ಶ್ಲೋಕಗಳ ಆಶಯವೇನಿದ್ದಿತೋ, ಆ ಆಶಯದ ಎರಡು ಶ್ಲೋಕಗಳನ್ನು ನಾರು ರಚಿಸಿ, ಕೆಳಗೆ ಬರೆದಿದ್ದೇವೆ. ನೋಡಬೇಕೆಂದು ಯಾವನಿಗೆ ಬಯಕೆಯುಂಟೋ ಅವನು ಹಿಮಾದ್ರಿ ಗ್ರಂಥದಲ್ಲಿ ನೋಡಿಕೊಳ್ಳಲಿ:-

**ಹಿಮಾದ್ರೇಃ ಸಚಿವಸ್ಯಾರ್ಥೇ ಸೂಚನಾಕ್ರಿಯತೇಽಧುನಾ ।**

**ಸ್ಕಂಧಾಧ್ಯಾಯಕಥಾನಾಂಚ ಯತ್ಪ್ರಮಾಣಂ ಸಮಾಸತಃ ॥ ೧ ॥**

**ಶ್ರೀ ಮದ್ಭಾಗವತಂ ನಾಮ ಪುರಾಣಂ ಚ ಮಯೇರಿತಮ್ ।**

**ವಿದುಷಾ ಬೋಪದೇವೇನ ಶ್ರೀಕೃಷ್ಣಸ್ಯ ಯಶೋಽನ್ವಿತಮ್ ॥ ೨ ॥**

ಕಳೆದು ಹೋದ ಪತ್ರದಲ್ಲಿ ಇದೇ ಪ್ರಕಾರದ ಶ್ಲೋಕಗಳಿದ್ದವು. ಅಂದರೆ, ರಾಜನ ಸಚಿವನಾದ ಹಿಮಾದ್ರಿಯು ಬೋಪದೇವ ಪಂಡಿತನಿಗೆ-"ನನಗೆ ನೀನು ರಚಿಸಿದ ಶ್ರೀಮದ್ಭಾಗವತವನ್ನು ಸಂಪೂರ್ಣವಾಗಿ ಕೇಳಲು ಅವಕಾಶವಿಲ್ಲ. ಆದುದರಿಂದ ಯಾವುದನ್ನು ನೋಡಿ ನಾನು ಶ್ರೀಮದ್ಭಾಗವತದ ಕಥೆಯನ್ನು ಸಂಕ್ಷೇಪವಾಗಿ ತಿಳಿಯಲಾಗುವುದೋ, ಅಂತಹ ಸಂಕ್ಷಿಪ್ತವಾದ ಶ್ಲೋಕಬದ್ಧ ಸೂಚೀಪತ್ರವನ್ನು ನೀನು ರಚಿಸು". ಎಂದು ಹೇಳಿದನು. ಹೀಗಾಗಿ ಕೆಳಗೆ ಬರೆದಿರುವ ಸೂಚೀಪತ್ರವನ್ನು ಈ ಬೋಪದೇವನು ರಚಿಸಿದನು. ಅದರಲ್ಲಿ, ಆ ಕಳೆದುಹೋದ ಪತ್ರದಲ್ಲಿದ್ದ ಹತ್ತು ಶ್ಲೋಕಗಳು ಕಳೆದು ಹೋಗಿವೆ. ಹನ್ನೊಂದನೆಯ ಶ್ಲೋಕದಿಂದ ಬರೆಯುತ್ತೇವೆ. ಈ ಕೆಳಗೆ ಬರೆದ ಶ್ಲೋಕಗಳೆಲ್ಲವನ್ನೂ ಬೋಪದೇವನೇ ಬರೆದಿದ್ದಾನೆ. ಅವು:-

**ಬೋಧಯಂತೀತಿ ಹಿ ಪ್ರಾಹುಃ ಶ್ರೀಮದ್ಭಾಗವತಂ ಪುನಃ ।**

**ಪಂಚಪ್ರಶ್ನಾಃ ಶೌನಕಸ್ಯ ಸೂತಸ್ಯಾತ್ರೋತ್ತರಂ ತ್ರಿಷು ॥ ೧೧ ॥**

---

೧೩೫. ಭಾಗವತ ೧೦.೬.೧೪– ಯು.ಮೀ

೧೩೬. ಮೂಲಗ್ರಂಥದಲ್ಲಿ 'ಅಜಾಮೇಲ' ಎಂಬ ಪಾಠವಿದೆ.

೧೩೭. ಭಾಗವತ ೬.೧.೨೯.೩೦ – ಯು.ಮೀ

೧೩೮. ಭಾಗವತ ೫.೧೬.೭ – ಯು.ಮೀ

೧೩೯. ಭಾಗವತ ೫.೧೬.೨ – ಯು.ಮೀ

೧೪೦. ಭಾಗವತ ೫.೨೦.೩೮ – ಯು.ಮೀ

೧೪೧. ಮೂಲಗ್ರಂಥದಲ್ಲಿ 'ಬೋಬ ದೇವ' ಎಂಬ ಪಾಠವಿದೆ. –ಯು.ಮೀ.

೧೪೨. ನೋಡಿರಿ, ನೀಲಕಂಠ ವಿರಚಿತ ದೇವಿ ಭಾಗವತದ ಟೀಕೆಯ ಉಪೋದ್ಘಾತವನ್ನು
'ವಿಷ್ಣು ಭಾಗವತಂ ಬೋಪದೇವ ಕೃತ ಮಿತಿ ವದನ್ತಿ'।
ಶಾಹಜಹಾನನ ಸಮಕಾಲೀನನಾದ ಕವೀಂದ್ರಚಾರ್ಯನ ಪುಸ್ತಕಾಲಯದ ಸೂಚೀಪತ್ರ [ಬಡೋದೆಯಲ್ಲಿ ಮುದ್ರಿತವಾದದ್ದು ] ದಲ್ಲಿ ಭಾಗವತವು ಬೋಪದೇವನಿಂದ ರಚಿತವಾಗಿದೆಯೆಂದು ಬರೆಯಲಾಗಿದೆ– ಯು.ಮೀ.

೧೪೩. ಇದರ ಹೆಸರು ' ಹರಿಲೀಲಾಮೃತ' ಎಂದೂ ಕೂಡ ಇದೆ. ಯು.ಮೀ.

ಪ್ರಶ್ನಾವತಾರಯೋಶ್ಚೈವ ವ್ಯಾಸಸ್ಯ ನಿರ್ವೃತಿಃ ಕೃತಾತ್ ।
ನಾರದಸ್ಯಾತ್ರ ಹೇತೋಕ್ತಿಃ ಪ್ರತೀತ್ಯರ್ಥಂ ಸ್ವಜನ್ಮ ಚ ॥ ೧೨ ॥

ಸುಪ್ತಘ್ನಂ ದ್ರೌಣ್ಯಭಿಭವಸ್ತದಸ್ತ್ರಾತ್ಪಾಂಡವಾವನಮ್ ।
ಭೀಷ್ಮಸ್ಯ ಸ್ವಪದಪ್ರಾಪ್ತಿಃ ಕೃಷ್ಣಸ್ಯ ದ್ವಾರಿಕಾಗಮಃ ॥ ೧೩ ॥

ಶ್ರೋತುಃ ಪರೀಕ್ಷಿತೋಜನ್ಮ ಧೃತರಾಷ್ಟ್ರಸ್ಯನಿರ್ಗಮಃ ।
ಕೃಷ್ಣಮರ್ತ್ಯತ್ಯಾಗಸೂಚಾ ತತಃ ಪಾರ್ಥಮಹಾಪಥಃ ॥ ೧೪ ॥

ಇತ್ಯಷ್ಟಾದಶಭಿಃ ಪಾದ್ಯೈರಧ್ಯಾಯಾರ್ಥಾಃ ಕ್ರಮಾತ್ ಸ್ಮೃತಃ ।
ಸ್ವಪರಪ್ರತಿಬಂಧೋನಂ ಸ್ಫೀತಂ ರಾಜ್ಯಂ ಜಹೌ ನೃಪಃ ॥ ೧೫ ॥

ಇತಿ ವೈರಾಜ್ಞೋ ದಾರ್ಢ್ಯೇಕ್ತೌ ಪ್ರೋಕ್ತಾ ದ್ರೌಣಿ ಜಯಾದಯಃ ॥ ೧೬॥

**ಇತಿ ಪ್ರಥಮಃ ಸ್ಕಂದಃ**

ಈ ಮೊದಲಾಗಿ ಹನ್ನೆರಡು ಸ್ಕಂದಗಳ ಸೂಚೀಪತ್ರವನ್ನು ಇದೇ ರೀತಿ ಬೋಪದೇವ ಪಂಡಿತನು ರಚಿಸಿ, ಹಿಮಾದ್ರಿ ಸಚಿವನಿಗೆ ಕೊಟ್ಟನು. ಯಾವನು ವಿಸ್ತಾರವನ್ನು ನೋಡಬಯಸುತ್ತಾನೋ, ಅವನು ಬೋಪದೇವನಿಂದ ರಚಿತವಾದ ಹಿಮಾದ್ರಿ ಗ್ರಂಥದಲ್ಲಿ ನೋಡಿಕೊಳ್ಳಲಿ, ಇದೇ ರೀತಿ ಬೇರೆ ಪುರಾಣಗಳ ಲೀಲೆಯನ್ನೂ ಕೂಡ ತಿಳಿದುಕೊಳ್ಳಬೇಕು. ಆದರೆ, ಹತ್ತೊಂಬತ್ತು, ಇಪ್ಪತ್ತು, ಇಪ್ಪತ್ತೊಂದು-ಒಂದನ್ನೊಂದು ಮೀರಿಸುತ್ತವೆ (ಒಂದಕ್ಕಿಂತ ಮತ್ತೊಂದು ದೊಡ್ಡ ಬುರುಡೆ-ಎಂದರ್ಥ)

ನೋಡಿರಿ. ಶ್ರೀಕೃಷ್ಣನ ಇತಿಹಾಸ ಮಹಾಭಾರತದಲ್ಲಿ ಅತ್ಯುತ್ತಮವಾಗಿದೆ. ಅವನ ಗುಣ-ಕರ್ಮ-ಸ್ವಭಾವಗಳು ಮತ್ತು ಚಾರಿತ್ರ ಆಪ್ತ ಪುರುಷರದರ ಹಾಗೆ ಇವೆ. ಶ್ರೀಕೃಷ್ಣನು ಜನ್ಮದಿಂದ ಹಿಡಿದು ಮರಣ ಪರ್ಯಂತ ಅಧರ್ಮದ ಆಚರಣವನ್ನು ದುಷ್ಕರ್ಮವನ್ನು ಸ್ವಲ್ಪವೂ ಕೂಡ ಮಾಡಿದನು-ಎಂದು[೧೪೪] ಬರೆದಿಲ್ಲ. ಮತ್ತು ಈ ಭಾಗವತದವನು ಅನುಚಿತವಾದ, ಮನಸ್ಸಿಗೆ ಬಂದಂತಹ ದೋಷಗಳನ್ನು ಹೊರೆಸಿದ್ದಾನೆ. ಹಾಲು, ಮೊಸರು, ಬೆಣ್ಣೆ -ಮೊದಲಾದುವುಗಳ ಕಳವು ಮತ್ತು ಕುಬ್ಜೆಯೆಂಬ ದಾಸಿಯೊಂದಿಗೆ ಸಮಾಗಮ, ಪರನಾರಿಯರೊಂದಿಗೆ ರಾಸ-ಮಂಡಲ, ಕ್ರೀಡೆ-ಮೊದಲಾದ ಮಿಥ್ಯಾ ದೋಷಗಳನ್ನು ಶ್ರೀಕೃಷ್ಣನ ಮೇಲೆ ಆರೋಪಿಸಿದ್ದಾನೆ.[೧೪೫] ಇದನ್ನು ಓದಿ-ಓದಿಸಿ ಕೇಳಿ-ಕೇಳಿಸಿ, ಅನ್ಯಮತೀಯರು ಶ್ರೀಕೃಷ್ಣನ ನಿಂದೆಯನ್ನು ಬಹಳವಾಗಿ ಮಾಡುತ್ತಾರೆ. ಈ ಭಾಗವತವಿಲ್ಲದಿದ್ದರೆ, ಶ್ರೀಕೃಷ್ಣನಂತಹ ಮಹಾತ್ಮರುಗಳ ಸುಳ್ಳು ನಿಂದೆ ಆಗುತ್ತಿದ್ದಿತಾದರೂ ಹೇಗೆ? ಶಿವಪುರಾಣದಲ್ಲಿ ಹನ್ನೆರಡು ಜ್ಯೋತಿರ್ಲಿಂಗಗಳನ್ನು ವರ್ಣಿಸಿದ್ದಾರೆ. ಅದರ ಕಥೆಯು ಸರ್ವಥಾ ಅಸಂಭವವಾಗಿದೆ. ಹೆಸರೇನೋ ಇಟ್ಟಿದ್ದಾರೆ 'ಜ್ಯೋತಿರ್ಲಿಂಗ'ವೆಂದು. ಮತ್ತು ಅವುಗಳಲ್ಲಿ ಪ್ರಕಾಶದ ಲೇಶವೂ ಇಲ್ಲ. ರಾತ್ರಿಯಲ್ಲಿ ದೀಪ ಹೊತ್ತಿಸದೆ, ಲಿಂಗಗಳೂ ಕೂಡ ಕತ್ತಲಲ್ಲಿ ಕಾಣಿಸುವುದಿಲ್ಲ. ಈ ಎಲ್ಲ ಲೀಲೆಗಳೂ ಪೋಪಮಹಾಶಯರದು.

**ಪ್ರಶ್ನೆ** :- ಯಾವಾಗ ವೇದಗಳನ್ನೋದುವ ಸಾಮರ್ಥ್ಯವಿರದಾಯಿತೋ ಆಗ ಸ್ಮೃತಿಗಳನ್ನೂ, ಯಾವಾಗ ಸ್ಮೃತಿಯನ್ನೋದುವ ಬುದ್ಧಿಯಿಲ್ಲವಾಯಿತೋ, ಆಗ ಶಾಸ್ತ್ರಗಳನ್ನೂ, ಯಾವಾಗ ಶಾಸ್ತ್ರವನ್ನೋದುವ ಸಾಮರ್ಥ್ಯವಿಲ್ಲದೆ ಹೋಯಿತೋ, ಆಗ ಪುರಾಣಗಳನ್ನೂ ರಚಿಸಿದರು.[೧೪೬] ಕೇವಲ ಸ್ತ್ರೀಯರ ಮತ್ತು ಶೂದ್ರರ ಸಲುವಾಗಿ; ಏಕೆಂದರೆ, ಇವರಿಗೆ ವೇದಗಳನ್ನೋದುವ-ಕೇಳುವ ಅಧಿಕಾರವಿಲ್ಲ.

---

೧೪೪. ಮಹಾಭಾರತದಲ್ಲಿ ಶ್ರೀಕೃಷ್ಣನ ಚರಿತ್ತೆಯು ವಿಭಿನ್ನ ಸ್ಥಳಗಳಲ್ಲಿ ವರ್ಣಿತವಾಗಿದೆ. ಭಾಗವತದಲ್ಲಿ ಬರೆದಂತೆ, ಶ್ರೀಕೃಷ್ಣನು ದುಷ್ಕರ್ಮಗಳೇನಾದರೂ ಮಾಡಿದಿದ್ದಲ್ಲಿ, ರಾಜಸೂಯಯಾಗದ ಸಂದರ್ಭದಲ್ಲಿ [ಸಭಾಪರ್ವ-ಶಿಶುಪಾಲವಧ] ಶಿಶುಪಾಲನು ಕೃಷ್ಣನ ದೋಷವನ್ನೆಣಿಸುವಾಗ, ಈ ದುಷ್ಕರ್ಮಗಳ ಉಲ್ಲೇಖವನ್ನು ಅವಶ್ಯವಾಗಿ ಮಾಡುತ್ತಿದ್ದನು. ಆದರೆ ಹೀಗಾಗಿಲ್ಲ! ಆದ್ದರಿಂದ ಶ್ರೀಕೃಷ್ಣನ ಚರಿತ್ರವು ನಿರ್ಮಲವಾಗಿತ್ತೆಂಬುದು ಸ್ಪಷ್ಟವಾಗಿದೆ. -ಯು.ಮೀ.

೧೪೫. ಭಾಗವತದ ರಚನೆಯು ಮಹಾಭಾರತದ ನಂತರ, ಪೌರಾಣಿಕ ಭ್ರಷ್ಟಕಾಲದಲ್ಲಿ ಆಯಿತೆಂಬುದಕ್ಕೆ ಬೇರೆ ಪ್ರಮಾಣ ಬೇಕಿಲ್ಲ.

೧೪೬. ಅತ್ರಿ ಸ್ಮೃತಿಯ ಈ ಪ್ರಮಾಣವನ್ನು ನೋಡಿ.
ವೇದೈರ್ವಿಹೀನಾಃ ಪಠಂತಿ ಶಾಸ್ತ್ರಂ ಶಾಸ್ತ್ರೈರ್ವಿಹೀನಾಃ ಪುರಾಣಪಾಠಾಃ ।
ಪುರಾಣೈರ್ವಿಹೀನಾಃ ಕೃಷಿಣೋ ಭವನ್ತಿ ಭ್ರಷ್ಟಾಸ್ತತೋ ಭಾಗವತಾ ಭವನ್ತಿ ॥

**ಉತ್ತರ:–** ಇದು ಸುಳ್ಳುಮಾತು. ಏಕೆಂದರೆ, ಅಧಿಕಾರ ಓದುವುದರಿಂದ–ಓದಿಸುವುದರಿಂದಲೇ ಉಂಟಾಗುತ್ತದೆ. ಮತ್ತು ವೇದಗಳನ್ನು ಓದುವ–ಕೇಳುವ ಅಧಿಕಾರ ಎಲ್ಲರಿಗೂ ಇದೆ. ನೋಡಿರಿ, ಗಾರ್ಗೀ[೧೪೭] ಮೊದಲಾದ ಸ್ತ್ರೀಯರು ಮತ್ತು ಛಾಂದೋಗ್ಯದಲ್ಲಿ ಹೇಳಿರುವಂತೆ ಜಾನಶ್ರುತಿಯೆಂಬ ಶೂದ್ರನೂ ಕೂಡ ವೇದವನ್ನು ರೈಕ್ವಮುನಿಯ ಬಳಿ ಓದಿದ್ದರು. ಮತ್ತು ಯಜುರ್ವೇದದ ೨೬ನೆಯ ಅಧ್ಯಾಯದ ಎರಡನೆಯ ಮಂತ್ರದಲ್ಲಿ ಸ್ಪಷ್ಟವಾಗಿ ವೇದಗಳನ್ನು ಓದುವ ಮತ್ತು ಕೇಳುವ ಅಧಿಕಾರ ಮಾನವಮಾತ್ರರಿಗಿದೆ–ಎಂದು ಬರೆದಿದೆ. ಎಂದ ಮೇಲೆ ಯಾರು ಈ ಬಗೆಯ ಮಿಥ್ಯಾ ಗ್ರಂಥಗಳನ್ನು ರಚಿಸಿ, ಜನರನ್ನು ಸತ್ಯಗ್ರಂಥಗಳಿಂದ ವಿಮುಖರನ್ನಾಗಿ, ಮಾಡಿ, ಬಲೆಯಲ್ಲಿ ಸಿಕ್ಕಿಸಿಕೊಂಡು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೋ, ಅವರು ಮಹಾ ಪಾಪಿಗಳೇತಕ್ಕಲ್ಲ?

ನೋಡಿರಿ! ಗ್ರಹಗಳ ಚಕ್ರವನ್ನು, ವಿದ್ಯಾಹೀನ ಮಾನವರನ್ನು ಕಚ್ಚಿ ಹಿಡಿಯುವಂತೆ ಹೇಗೆ ಪ್ರಚಲಿತವಾಗಿ ಮಾಡಿದ್ದಾರೆ!

**ಆ ಕೃಷ್ಣೇನ ರಜಸಾ ॥** (ಯಜು:– ೩೩.೪೨) ಸೂರ್ಯಮಂತ್ರ.

**ಇಮಂ ದೇರಾ ಅಸಪತ್ನಂ ಸುವಧ್ವಮ್ ॥** (ಯಜು:–೯.೪೦) ಚಂದ್ರಮಂತ್ರ.

**ಅಗ್ನಿರ್ಮೂರ್ಧಾದಿವಃ ಕಕುತ್ಪತಿಃ ॥** (ಯಜು:–೧೫.೨೦) ಮಂಗಳಮಂತ್ರ.

**ಉದ್ಬುಧ್ಯಸ್ವಾಗ್ನೇ ॥** (ಯಜು:–೧೫.೨೪) ಬುಧಮಂತ್ರ.

**ಬೃಹಸ್ಪತೇ ಅತಿಯದರ್ಯಃ ॥** (ಯಜು:–೨೬.೩) ಬೃಹಸ್ಪತಿಮಂತ್ರ.

**ಶುಕ್ರಮಂಧಸಃ ॥** (ಯಜು:–೧೯.೭೫) ಶುಕ್ರಮಂತ್ರ.

**ಶನ್ನೋ ದೇವೀರಭಿಷ್ಟಯೇ ॥** (ಯಜು:–೩೬.೧೨) ಶನಿಮಂತ್ರ

**ಕಯಾ ನಶ್ಚಿತ್ರ ಆ ಭುವತ್ ॥** (ಯಜು:– ೨೭.೩೯) ರಾಹುಮಂತ್ರ

ಮತ್ತು, **ಕೇತುಂ ಕೃಣ್ವನ್ನಕೇತವೇ ॥** (ಯಜು:– ೨೯.೩೭)

ಇದನ್ನು ಕೇತುವಿನ ಕಂಡಿಕೆಯೆನ್ನುತ್ತಾರೆ.

**ಒಂದನೆಯದು ಸೂರ್ಯ ಮತ್ತು ಭೂಮಿಯ ಆಕರ್ಷಣದ ವಿಷಯಬೋಧಕ. (೧).**

**ಎರಡನೆಯದು ರಾಜಗುಣ ವಿಧಾಯಕವಾದುದು. (೨)**

**ಮೂರನೆಯದು ಅಗ್ನಿಯ ವರ್ಣನೆ ಮಾಡುವಂತಹುದು. (೩).**

**ಮತ್ತು ನಾಲ್ಕನೆಯದು ಯಜಮಾನ ಸೂಚಕವಾದುದು. (೪)**

**ಐದನೆಯದು ವಿದ್ವಾಂಸ ವಿಷಯವಾದುದು. (೫)**

**ಆರನೆಯದು ವೀರ್ಯ, ಅನ್ನ ಸಂಬಂಧವಾದುದು. (೬)**

**ಏಳನೆಯದು ಜಲ ಪ್ರಾಣ ಮತ್ತು ಪರಮೇಶ್ವರ ವಿಷಯವಾದುದು. (೭)**

**ಎಂಟನೆಯದು ಮಿತ್ರ ಸೂಚಕ. (೮)**

**ಒಂಬತ್ತನೆಯದು ಜ್ಞಾನ ಸಂಪಾದನದ ವಿಧಾಯಕ ಮಂತ್ರ. (೯)**

ಇವು ಗ್ರಹಗಳ ವಾಚಕವಲ್ಲ. ಅರ್ಥವನ್ನು ತಿಳಿಯದಿರುವುದರಿಂದ ಭ್ರಮಜಾಲದಲ್ಲಿ ಬಿದ್ದಿದ್ದಾರೆ.

**ಪ್ರಶ್ನೆ :–** ಗ್ರಹಗಳ ಫಲ ಸಿಕ್ಕುತ್ತದ್ದೋ, ಅಥವಾ ಇಲ್ಲವೋ?

**ಉತ್ತರ :–** ಪೋಪಲೀಲೆಯಲ್ಲಿ ಹೇಳಿರುವಂತಹ ಫಲವೇನೂ ಇಲ್ಲ. ಆದರೆ, ಸೂರ್ಯ ಚಂದ್ರರ ಕಿರಣಗಳ ಮೂಲಕ ಉಷ್ಣತ್ವ, ಶೀತತ್ವ ಅಥವಾ ಋತುವಿಗೆ ಅನುಗುಣವಾದ ಕಾಲ ಚಕ್ರದ ಸಂಬಂಧಮಾತ್ರದಿಂದ ತನ್ನ ಪ್ರಕೃತಿಗೆ ಅನುಕೂಲವಾಗಿ, ಪ್ರತಿಕೂಲವಾಗಿ ಸುಖ–ದುಃಖಗಳಿಗೆ ನಿಮಿತ್ತವಾಗುವ ಫಲ ಮಾತ್ರ ಸತ್ಯ. ಆದರೆ ಪೋಪಲೀಲೆಯವರು, "ಕೇಳಿರಿ ಸ್ವಾಮಿಯವರೇ! ಸೇಠರೇ! ಯಜಮಾನರೇ! ಇಂದು ನಿಮಗೆ ಚಂದ್ರ, ಸೂರ್ಯ ಮೊದಲಾದವರು ಎಂಟನೆಯವರಿದ್ದು ಕ್ರೂರವಾದ ಮನೆಗೆ ಬಂದಿದ್ದಾರೆ. ಎರಡೂವರೆ ವರ್ಷಗಳ ಕಾಲ ಶನಿ ಪಾದಸ್ಥಾನಕ್ಕೆ ಬಂದಿದ್ದಾನೆ. ನಿಮಗೆ ಭಾರೀ ವಿಘ್ನವಿದೆ. ಮನೆ–ಬಾಗಿಲು ಬಿಡಿಸಿ, ಪರದೇಶದಲ್ಲಿ ಅಲೆದಾಡಿಸುವುದು. ಆದರೆ, ನೀವು ಗ್ರಹಗಳ (ಶಾಂತಿಗಾಗಿ) ದಾನವನ್ನೂ, ಜಪವನ್ನೂ, ಪಾಠವನ್ನೂ, ಪೂಜೆಯನ್ನೂ ಮಾಡಿಸುವಿರಾದರೆ, ದುಃಖದಿಂದ ಪಾರಾಗುವಿರಿ". – ಎಂದು ಹೇಳುತ್ತಾರೆ. ಇವರಿಗೆ – "ಪೋಪ ಮಹೋದಯರೇ! ನಿಮಗೆ ಮತ್ತು ಗ್ರಹಗಳಿಗೆ ಸಂಬಂಧವೇನಿದೆ? ಗ್ರಹ ಎಂತಹ ಪದಾರ್ಥ"– ಎಂದು ಪ್ರಶ್ನೆ ಹಾಕಬೇಕು.

**ಪೋಪರು:– ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಾಶ್ಚದೇವತಾಃ ।**

**ತೇ ಮಂತ್ರಾ ಬ್ರಾಹ್ಮಣಾಧೀನಾಸ್ತಸ್ಮಾದ್ಬ್ರಾಹ್ಮಣದೈವತಮ್ ॥**

ನೋಡಿರಿ, ಎಂತಹ ಪ್ರಮಾಣವಿದೆ. ಎಲ್ಲಾ ಜಗತ್ತೂ ದೇವತೆಗಳಿಗೆ ಅಧೀನವಾಗಿದೆ. ಸರ್ವದೇವತೆಗಳೂ ಮಂತ್ರಗಳಿಗೆ ಅಧೀನರಾಗಿರುತ್ತಾರೆ. ಮತ್ತು ಆ ಮಂತ್ರಗಳು ಬ್ರಾಹ್ಮಣರಿಗೆ ಅಧೀನವಾಗಿರುತ್ತವೆ. ಆದುದರಿಂದ ಬ್ರಾಹ್ಮಣರು ದೇವತೆಗಳೆನಿಸುತ್ತಾರೆ. ಏಕೆಂದರೆ, ಯಾವ ದೇವತೆಯನ್ನು ಬೇಕಾದರೂ ಮಂತ್ರದ ಬಲದಿಂದ ಬರಮಾಡಿಕೊಂಡು, ಪ್ರಸನ್ನರಾಗಿ ಮಾಡಿ, ಕಾರ್ಯವನ್ನು ಸಾಧಿಸಿಕೊಡುವ ಅಧಿಕಾರ ನಮ್ಮದೇ ಆಗಿರುತ್ತದೆ. ನಮ್ಮಲ್ಲಿ ಮಂತ್ರಶಕ್ತಿಯು ಇಲ್ಲವಾಗಿದ್ದರೆ, ನಿಮ್ಮಂತಹ ನಾಸ್ತಿಕರು[೧೪೮] ನಮ್ಮನ್ನು ಜಗತ್ತಿನಲ್ಲಿ ಇರುವುದಕ್ಕೇ ಬಿಡುತ್ತಿರಲಿಲ್ಲ.

**ಸತ್ಯವಾದೀ :–** ಯಾರು ಕಳ್ಳರೂ, ಡಕಾಯಿತರೂ, ದುಷ್ಕರ್ಮಿಗಳೂ ಆದ ಜನರಾಗಿರುತ್ತಾರೋ, ಅವರೂ ಕೂಡ ನಿಮ್ಮ ದೇವತೆಗಳಿಗೆ ಅಧೀನರಾಗಿರುತ್ತಾರೇನು? ದೇವತೆಗಳೇ ಅವರಿಂದ ದುಷ್ಕಾರ್ಯ ಮಾಡಿಸುತ್ತಾ ಇರಬಹುದು! ಹಾಗಿದ್ದಲ್ಲಿ, ನಿಮ್ಮ ದೇವತೆಗಳಿಗೂ ಮತ್ತು ರಾಕ್ಷಸರಿಗೂ ಸ್ವಲ್ಪವಾದರೂ ವ್ಯತ್ಯಾಸವಿರುವುದಿಲ್ಲ. ಮಂತ್ರಗಳು ನಿಮ್ಮ ಅಧೀನದಲ್ಲಿರುವುದಾದರೆ, ಅವುಗಳಿಂದ ನೀವು ಬೇಕಾದುದನ್ನು ಮಾಡಿಸಬಲ್ಲಿರಾದರೆ, ಆ ಮಂತ್ರಗಳಿಂದ ದೇವತೆಗಳನ್ನು ವಶಪಡಿಸಿಕೊಂಡು, ರಾಜರುಗಳ ಕೋಶವನ್ನೆತ್ತಿ, ನಿಮ್ಮ ಮನೆಯಲ್ಲಿ ತುಂಬಿಸಿಕೊಂಡು, ಕುಳಿತು ಆನಂದವನ್ನೇತಕೆ ಅನುಭವಿಸುವುದಿಲ್ಲ? ಶನಿ ಮೊದಲಾದವರ ಹೆಸರಿನಲ್ಲಿ ಎಣ್ಣೆ ಮೊದಲಾದುದರ ಛಾಯಾದಾನವನ್ನು (ಗ್ರಹಕೋಪ ನಿವಾರಕ ದಾನ) ತೆಗೆದುಕೊಳ್ಳುವುದಕ್ಕಾಗಿ, ಮನೆಮನೆಗೆ ಅಲೆದಾಡುವಿರೇಕೆ? ಮತ್ತು ಯಾವನನ್ನು ನೀವು ಕುಬೇರನೆಂದು ತಿಳಿದಿದ್ದೀರೋ, ಅವನನ್ನು ವಶೀಕರಿಸಿಕೊಂಡು, ಬೇಕಾದಷ್ಟು ಧನವನ್ನು ತೆಗೆದುಕೊಳ್ಳುತ್ತಾ ಹೋಗಿರಿ. ಬಡಪಾಯಿಗಳಾದ ಬಡವರನ್ನೇಕೆ ಕೊಳ್ಳೆ ಹೊಡೆಯುತ್ತೀರಿ? ನಿಮಗೆ ದಾನ ಕೊಡುವುದರಿಂದ ಗ್ರಹಗಳು ಪ್ರಸನ್ನವೂ, ಮತ್ತು ಕೊಡದಿರುವುದರಿಂದ ಅಪ್ರಸನ್ನವೂ ಆಗುವವಾದರೆ, ನಮಗೆ ಸೂರ್ಯ

---

೧೪೭. ಈಕೆ ಜನಕನ ಸಭೆಯಲ್ಲಿ ಯಾಜ್ಞವಲ್ಕ್ಯರೊಂದಿಗೆ ಶಾಸ್ತ್ರಾರ್ಥ ಮಾಡಿದ್ದಳು. ನೋಡಿ. ಶತಪಥ ಬ್ರಾಹ್ಮಣ [೧೪.೬.೬.೮] ಯು.ಮೀ. ಶತಪಥ ಬ್ರಾಹ್ಮಣದ ಹದಿನಾಲ್ಕನೆಯ ಕಾಂಡಕ್ಕೆ ಬೃಹದಾರಣ್ಯಕೋಪನಿಷತ್ ಎಂದು ಹೆಸರು.

೧೪೮. ಮೂರ್ತಿಪೂಜೆ, ಮೃತಕ ಶ್ರಾದ್ಧ ಮತ್ತು ಫಲಿತ ಜ್ಯೋತಿಷ್ಯದಲ್ಲಿ ನಂಬಿಕೆ–ಇವು ಮೂರು ಪೌರಾಣಿಕರ ಪರಿಚಾಯಕ ಸ್ತಂಭಗಳು ! ಯಾರು ಇದನ್ನು ಖಂಡಿಸುತ್ತಾರೋ, ಅವರೆಲ್ಲಾ ಇವರ ದೃಷ್ಟಿಯಲ್ಲಿ ನಾಸ್ತಿಕರು.! ಸೃಷ್ಟಿಕರ್ತೃವೂ, ನಿರಾಕಾರನೂ ಆದ ಪರಮೇಶ್ವರನ ಅನನ್ಯ ಭಕ್ತರೂ, ಅವನ ವೇದಾದೇಶವನ್ನು ಅಂಗೀಕರಿಸುವವರೂ ಆದ ಸ್ವಾಮೀ ದಯಾನಂದರನ್ನು ಆ ಕಾಲದ ಪೌರಾಣಿಕ ವಿದ್ವಾಂಸರು ನಾಸ್ತಿಕರೂ, ಕಿರಸ್ತಾನರೂ, ಎಂದು ಘೋಷಿಸಿ, ಅವರ ಮುಖ ನೋಡಿದರೆ, ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದು ಜನರಿಗೆ ಹೆದರಿಸುತ್ತಿದ್ದರು.

ಮೊದಲಾದ ಗ್ರಹಗಳ ಪ್ರಸನ್ನತ್ವ-ಅಪ್ರಸನ್ನತ್ವಗಳನ್ನೂ ಪ್ರತ್ಯಕ್ಷವಾಗಿ ತೋರಿಸಿರಿ. ಯಾವನ ಕುಂಡಲಿಯಲ್ಲಿ ಸೂರ್ಯ-ಚಂದ್ರರು ಎಂಟನೆಯ ಮನೆಯಲ್ಲಿರುತ್ತಾರೋ, ಮತ್ತು ಯಾವನ ಕುಂಡಲಿಯಲ್ಲಿ ಮೂರನೆಯದರಲ್ಲಿರುತ್ತಾರೋ, ಅವರಿಬ್ಬರನ್ನೂ ಜ್ಯೇಷ್ಠಮಾಸದಲ್ಲಿ ಪಾದರಕ್ಷೆಗಳಿಲ್ಲದೆ ಕಾದಿರುವ ಭೂಮಿಯ ಮೇಲೆ ನಡೆಯಿಸಿರಿ. ಯಾವನ ಮೇಲೆ (ಸೂರ್ಯ-ಚಂದ್ರರು) ಪ್ರಸನ್ನರಾಗಿದ್ದಾರೋ ಅವನ ಪಾದಗಳೂ, ಶರೀರವೂ ಸುಟ್ಟು ಹೋಗಬಾರದು ಮತ್ತು ಯಾವನ ಮೇಲೆ ಕ್ರುದ್ಧವಾಗಿವೆಯೋ ಅವನ ಪಾದ ಶರೀರಗಳು ಸುಟ್ಟು ಹೋಗಬೇಕು. ಮತ್ತು ಪುಷ್ಯಮಾಸದಲ್ಲಿ ಇಬ್ಬರನ್ನೂ ಬೆತ್ತಲೆಮಾಡಿ, ಪೂರ್ಣಿಮಾ ರಾತ್ರಿಯ ಪೂರ್ತಾ ಬಯಲಿನಲ್ಲಿ ಇಡಬೇಕು. ಒಬ್ಬನಿಗೆ ಶೀತವಾಗಿ, ಇನ್ನೊಬ್ಬನಿಗೆ ಆಗದಿದ್ದರೆ, ಗ್ರಹಗಳು ಕ್ರೂರದೃಷ್ಟಿ ಮತ್ತು ಸೌಮ್ಯದೃಷ್ಟಿಯವಾಗಿವೆ-ಎಂದು ತಿಳಿಯಿರಿ. ಗ್ರಹಗಳು ನಿಮ್ಮ ಸಂಬಂಧಿಕರೇನು? ಮತ್ತು ನಿಮ್ಮ ಅಂಚೆ ಅಥವಾ ತಂತಿ ಅವುಗಳ ಬಳಿ ಹೋಗುತ್ತವೇನು? ಅಥವಾ ನೀವು ಅವುಗಳ ಹತ್ತಿರ ಅಥವಾ ಅವು ನಿಮ್ಮ ಹತ್ತಿರ ಬಂಧು-ಹೋಗಿ ಮಾಡುವುದುಂಟೊ? ನಿಮ್ಮಲ್ಲಿ ಮಂತ್ರ ಶಕ್ತಿಯಿದ್ದರೆ, ನೀವು ಸ್ವತಃ ರಾಜರು ಅಥವಾ ಧನಾಢ್ಯರು ಆಗಲೊಲ್ಲರೇಕೆ? ಅಥವಾ ಶತ್ರುಗಳನ್ನು ನಿಮ್ಮ ವಶೀಭೂತರನ್ನಾಗಿ ಮಾಡಿಕೊಳ್ಳುವುದಿಲ್ಲವೇಕೆ? ಯಾವನು ಈಶ್ವರನ ಆಜ್ಞೆಗೆ, ವೇದಗಳಿಗೆ ವಿರುದ್ಧವಾಗಿ ಪೋಪಲೀಲೆಯನ್ನು ನಡೆಯಿಸುತ್ತಾನೋ, ಅವನು ನಾಸ್ತಿಕನಾಗಿರುತ್ತಾನೆ. ನಿಮಗೆ ಗ್ರಹದಾನವನ್ನು ಕೊಡದೆ, ಯಾವನ ಮೇಲೆ ಗ್ರಹ ಏರಿದೆಯೋ, ಅವನೇ ಗ್ರಹದಾನವನ್ನು ಅನುಭವಿಸಿದರೆ, ಚಿಂತೆ ಏನು? ನೀವು **"ಹಾಗಲ್ಲ, ಕೇವಲ ನಮಗೆ ಕೊಡುವುದರಿಂದ ಮಾತ್ರ ಪ್ರಸನ್ನವಾಗುತ್ತವೆ, ಬೇರೆಯವರಿಗೆ ಕೊಡುವುದರಿಂದ ಅಲ್ಲ"** - ಎನ್ನವಿರಾದರೆ, ನೀವು ಗ್ರಹಗಳ ಗುತ್ತಿಗೆಯನ್ನು ತೆಗೆದುಕೊಂಡಿದ್ದಿರೇನು? ಗುತ್ತಿಗೆ ತೆಗೆದುಕೊಂಡಿರುವಿರಾದರೆ, ಸೂರ್ಯ ಮೊದಲಾದವರನ್ನು ನಿಮ್ಮ ಮನೆಗೆ ಕರೆಯಿಸಿಕೊಂಡು, ಅದರ ಪರಿಣಾಮವನ್ನಾದರೂ ಪರೀಕ್ಷಿಸಿ ನೋಡಿರಿ.

ಸೂರ್ಯನೇ ಮೊದಲಾದ ಲೋಕಗಳು ಜಡವಾಗಿವೆ. ಅವು ಯಾವನಿಗೂ ದುಃಖವನ್ನು ಕೊಡುವ ಕ್ರಿಯೆಯನ್ನೂ ಮಾಡಲಾರವು; ಸುಖವನ್ನೂ ಕೊಡುವ ಕ್ರಿಯೆಯನ್ನೂ ಮಾಡಲಾರವು; ಸುಖವನ್ನೂ ಕೊಡುವ ಕ್ರಿಯೆಯನ್ನೂ ಮಾಡಲಾರವು-ಎನ್ನುವುದೇ ಸತ್ಯವಾಗಿದೆ. ಆದರೆ, ಗ್ರಹದಾನದಿಂದ ಜೀವನ ನಿರ್ವಾಹಮಾಡುವ ನೀವು ಎಷ್ಟು ಜನರಿದ್ದೀರೋ, ಆ ನೀವೆಲ್ಲರೂ ಗ್ರಹಗಳ ಮೂರ್ತಿಗಳಾಗಿದ್ದೀರಿ. ಏಕೆಂದರೆ, ಗ್ರಹ-ಎಂಬ ಶಬ್ದದ ಅರ್ಥವೂ ಕೂಡ ನಿಮಗೇ ಅನ್ವಯಿಸುತ್ತದೆ. **"ಯೇ ಗೃಹ್ಣಂತಿ ತೇ ಗ್ರಹಾಃ"** - ಯಾರು ಗ್ರಹಿಸುತ್ತಾರೋ ಅವರ ಹೆಸರೇ 'ಗ್ರಹ' ಎಂದಾಗಿರುತ್ತದೆ. ಯಾವ ಕಾಲದವರೆಗೆ ನಿಮ್ಮ ಚರಣಗಳು ರಾಜರು, ಜಮೀನುದಾರರು, ಸೇಠರು, ಸಾಹುಕಾರರು ಮತ್ತು ಬಡವರ ಬಳಿಗೆ ಮುಟ್ಟುವುದಿಲ್ಲವೋ, ಆವರೆಗೆ ಯಾವನಿಗೂ ನವಗ್ರಹಗಳ ಸ್ಮರಣವೂ ಕೂಡ ಆಗುವುದಿಲ್ಲ. ಯಾವಾಗ ನೀವು ಸಾಕ್ಷಾತ್ ಸೂರ್ಯ, ಶನೈಶ್ವರ ಮೊದಲಾದ ಮೂರ್ತಿಮಂತ ಕ್ರೂರರೂಪ ಧರಿಸಿ, ಅವರ ಮೇಲೆ ಹೋಗಿ ಏರುತ್ತೀರೋ, ಆಗ, ಗ್ರಹಣಮಾಡದೆ ಅವರನ್ನು ಎಂದಿಗೂ ಬಿಡುವುದಿಲ್ಲ. ಮತ್ತು ಯಾವನಾದರೂ ನಿಮ್ಮ ತುತ್ತಿಗೆ ಸಿಕ್ಕದೆ ಇದ್ದರೆ, ನಾಸ್ತಿಕ ಮೊದಲಾದ ಶಬ್ದಗಳಿಂದ, ಅವನ ನಿಂದೆಯನ್ನು ಮಾಡುತ್ತಾ ತಿರುಗುತ್ತೀರಿ.

ಪೋಪಮಹಾಶಯರು-ನೋಡಿರಿ, ಜ್ಯೋತಿಷದ ಫಲ ಪ್ರತ್ಯಕ್ಷವೇ ಆಗಿದೆ. ಆಕಾಶದಲ್ಲಿರುವ ಸೂರ್ಯ-ಚಂದ್ರ ಹಾಗೂ ರಾಹು-ಕೇತುಗಳ ಸಂಯೋಗ ರೂಪವಾದ ಗ್ರಹಣವನ್ನು ನಾವು ಮೊದಲೇ ಹೇಳಿಬಿಡುತ್ತೇವೆ. ಹೇಗೆ ಇದು ಪ್ರತ್ಯಕ್ಷವಾಗುತ್ತದೋ, ಹಾಗೆ ಗ್ರಹಗಳ ಫಲವೂ ಕೂಡ ಪ್ರತ್ಯಕ್ಷವಾಗಿ ಹೋಗುತ್ತದೆ. ನೋಡಿರಿ, ಧನಾಢ್ಯರು, ದರಿದ್ರರು, ರಾಜರು, ನಿರ್ಗತಿಕರು, ಸುಖಿಗಳು, ದುಃಖಿಗಳು-ಎಲ್ಲರೂ ಗ್ರಹಗಳ ಕಾರಣದಿಂದಲೇ ಆಗುತ್ತಾರೆ.

**ಸತ್ಯವಾದೀ:-** ಗ್ರಹಣ-ಎಂಬ ಯಾವ ಈ ಪ್ರತ್ಯಕ್ಷ ಫಲವಿದೆಯೋ, ಅದು ಫಲಿತದ್ದಲ್ಲ; ಗಣಿತವಿದ್ಯೆಯದು. ಗಣಿತವಿದ್ಯೆ ಸತ್ಯ ಮತ್ತು ಫಲಿತವಿದ್ಯೆ ಸ್ವಾಭಾವಿಕ ಸಂಬಂಧಜನ್ಯವಾದುದರಿಂದ ದೂರವಾದ ಕಾರಣ ಅಸತ್ಯವಾಗಿದೆ. ಅನುಲೋಮ-ಪ್ರತಿಲೋಮ ಕ್ರಮದಲ್ಲಿ ತಿರುಗುವ ಪೃಥಿವೀ ಮತ್ತು ಚಂದ್ರನ ಗಣಿತದಿಂದ ಯಾವ ಕಾಲದಲ್ಲಿ, ಯಾವ ದೇಶದಲ್ಲಿ ಯಾವ ಅವಯವದಲ್ಲಿ ಸೂರ್ಯನ ಅಥವಾ ಚಂದ್ರನ ಗ್ರಹಣವಾಗುವುದೆಂದು ಸ್ಪಷ್ಟವಾಗಿ ವಿದಿತವಾಗುತ್ತದೆ. ಉದಾಹರಣೆಗೆ:-

**ಛಾದಯತ್ಯರ್ಕಮಿಂದುರ್ವಿಧುಂ ಭೂಮಿಭಾಃ ॥** (ಗ್ರಹಲಾಘವ, ಚಂದ್ರಗ್ರಣಾಧಿಕಾರ-೫.೪)

ಇದು ಸಿದ್ಧಾಂತ ಶಿರೋಮಣಿಯ ವಚನವಾಗಿದೆ. ಮತ್ತು ಇದೇ ರೀತಿ ಸೂರ್ಯ ಸಿದ್ಧಾಂತ-ಮೊದಲಾದುವುಗಳಲ್ಲಿಯೂ ಇದೆ. ಎಂದರೆ, ಯಾವಾಗ ಸೂರ್ಯ ಭೂಮಿಗಳ ನಡುವೆ ಚಂದ್ರನು ಬರುತ್ತಾನೋ, ಆಗ ಸೂರ್ಯಗ್ರಹಣ ಮತ್ತು ಯಾವಾಗ ಸೂರ್ಯ-ಚಂದ್ರರ ನಡುವೆ ಭೂಮಿ ಬರುತ್ತದೋ, ಆಗ ಚಂದ್ರಗ್ರಹಣವಾಗುತ್ತದೆ. ಎಂದರೆ ಚಂದ್ರನ ಛಾಯೆ ಭೂಮಿಯ ಮೇಲೆ

ಮತ್ತು ಭೂಮಿಯ ಛಾಯೆ ಚಂದ್ರನ ಮೇಲೆ ಬೀಳುತ್ತದೆ. ಸೂರ್ಯನು ಪ್ರಕಾಶರೂಪವಾಗಿರುವುದರಿಂದ ಅವನ ಸಮ್ಮುಖ ಯಾವುದರ ಛಾಯೆಯೂ ಬೀಳುವುದಿಲ್ಲ. ಆದರೆ, ಹೇಗೆ ಪ್ರಕಾಶಮಾನ ಸೂರ್‍ಯನ ಅಥವಾ ದೀಪದ ಕಾರಣದಿಂದ ದೇಹ-ಮೊದಲಾದುದರ ಛಾಯೆ ವಿರುದ್ಧದಿಕ್ಕಿನಲ್ಲಿ ಬೀಳುವುದೋ, ಹಾಗೆಯೇ ಗ್ರಹಣದಲ್ಲಿಯೂ (ಆಗುವುದೆಂದು) ತಿಳಿಯಿರಿ. ಯಾರು ಧನಾಢ್ಯರೂ, ದರಿದ್ರರೂ, ಪ್ರಜೆಗಳೂ, ರಾಜರೂ, ನಿರ್ಗತಿಕರೂ ಆಗುತ್ತಾರೋ, ಅವರು ತಮ್ಮ ಕರ್ಮಗಳಿಂದ ಆಗುತ್ತಾರೆ; ಗ್ರಹಗಳಿಂದಲ್ಲ. ಅನೇಕ ಮಂದಿ ಜ್ಯೋತಿಷಿಗಳು ತಮ್ಮ ಪುತ್ರ-ಪುತ್ರಿಯರ ವಿವಾಹವನ್ನು ಗಣಿತ ವಿದ್ಯೆಗನುಸಾರವಾಗಿ ಮಾಡುತ್ತಾರೆ. ಆದರೂ ಅವರಲ್ಲಿ ವಿರೋಧ ಉಂಟಾಗುತ್ತದೆ. (ಹಲವರು) ವಿಧವೆಯರು ಅಥವಾ ವಿಧುರರು ಆಗಿ ಹೋಗುತ್ತಾರೆ. ಫಲ ಸತ್ಯವಾಗಿರುವುದಾದರೆ, ಹೀಗೆತಕ್ಕೆ ಆಗುತ್ತದೆ? ಆದುದರಿಂದ ಕರ್ಮಗತಿ ಸತ್ಯ ಮತ್ತು ಗ್ರಹಗಳ ಗತಿ ಸುಖ-ದುಃಖ ಭೋಗದಲ್ಲಿ ಕಾರಣವಲ್ಲ. (ಅವುಗಳ ಚಲನೆಯಿಂದ ಆಗುವ ಪರಿಣಾಮ ಸರ್ವಸಾಮಾನ್ಯ) ಒಳ್ಳಿತು, ಗ್ರಹಗಳು ಆಕಾಶದಲ್ಲಿವೆ; ಮತ್ತು ಪೃಥಿವಿಯೂ ಕೂಡ ಆಕಾಶದಲ್ಲಿ ಬಹಳ ದೂರದಲ್ಲಿದೆ. ಕರ್ತೃ ಮತ್ತು ಕರ್ಮಗಳೊಂದಿಗೆ ಇವುಗಳ ಸಾಕ್ಷಾತ್ ಸಂಬಂಧವಿಲ್ಲ. ಕರ್ಮದ ಕರ್ತೃವೂ ಮತ್ತು ಕರ್ಮಫಲದ ಭೋಕ್ತೃವೂ ಜೀವಾತ್ಮನು ಮತ್ತು ಕರ್ಮಗಳ ಫಲವನ್ನು ಉಣಿಸುವವನು ಪರಮಾತ್ಮನಾಗಿದ್ದಾನೆ. ನೀವು ಗ್ರಹಗಳ ಫಲವನ್ನು ಒಪ್ಪುವಿರಾದರೆ, ಯಾವುದನ್ನು ನೀವು ಧ್ರುವಾತ್ರುಟಿ-ಎಂದು ಅಂಗೀಕರಿಸಿ, ಜನ್ಮಪತ್ರವನ್ನು ಬರೆಯುತ್ತಿರೋ, ಆ ಕ್ಷಣದಲ್ಲಿ ಒಬ್ಬ ಮಾನವನ ಜನನವಾಗುತ್ತದೆ; ಅದೇ ಸಮಯದಲ್ಲಿ ಭೂಮಂಡಲದಲ್ಲಿ ಮತ್ತೊಬ್ಬನ ಜನನವಾಗುತ್ತದೋ ಅಥವಾ ಇಲ್ಲವೋ – ಎಂಬುದಕ್ಕೆ ಉತ್ತರವನ್ನು ಕೊಡಿರಿ. 'ಇಲ್ಲ' ಎನ್ನುವಿರಾದರೆ, ಸುಳ್ಳು; ಮತ್ತು 'ಆಗುತ್ತದೆ' ಎನ್ನುವಿರಾದರೆ, ಒಬ್ಬನು ಭೂಮಂಡಲದಲ್ಲಿ ಚಕ್ರವರ್ತಿಯಂತೆ ಆಗುವ ಹಾಗೆ, ಇನ್ನೊಬ್ಬನು ಚಕ್ರವರ್ತೀ ರಾಜನಾಗುವುದಿಲ್ಲವೇಕೆ? ಅಹುದು; "ಈ ಲೀಲೆ ನಮ್ಮ ಹೊಟ್ಟೆಪಾಡಿನದು"- ಎಂದಿಷ್ಟು ನೀವು ಹೇಳಬಹುದು; ಆಗ ಯಾವನಾದರೂ ಅದನ್ನು ಒಪ್ಪಿಕೊಳ್ಳಲೂಬಹುದು.

**ಪ್ರಶ್ನೆ** :- ಗರುಡಪುರಾಣವೂ ಕೂಡ ಸುಳ್ಳೇನು?

**ಉತ್ತರ**:- ಅಹುದು, ಸುಳ್ಳಾಗಿದೆ.

**ಪ್ರಶ್ನೆ** :- ಹಾಗಾದರೆ, ಮೃತನಾದ ಜೀವನ ಗತಿ ಏನಾಗುತ್ತದೆ?

**ಉತ್ತರ**:- ಅವನ ಕರ್ಮಗಳು ಹೇಗಿವೆಯೋ, ಹಾಗೆ.

**ಪ್ರಶ್ನೆ** :- ಯಮರಾಜನು ಶಾಸಕ; ಚಿತ್ರ-ಗುಪ್ತರು ಮಂತ್ರಿಗಳು; ಅವನ ಬಹುದೊಡ್ಡ, ಕಾಡಿಗೆಯ ಪರ್ವತಕ್ಕೆ ಸಮನಾದ ಶರೀರಗಳನ್ನುಳ್ಳ, ಭಯಂಕರ ಭಟರು ಜೀವನನ್ನು ಹಿಡಿದುಕೊಂಡು ಹೋಗುತ್ತಾರೆ. ಪಾಪ-ಪುಣ್ಯಾನುಸಾರವಾಗಿ ನರಕ-ಸ್ವರ್ಗಗಳಲ್ಲಿ ಹಾಕುತ್ತಾರೆ. ಅವನಿಗಾಗಿ ದಾನ, ಪುಣ್ಯ, ಶ್ರಾದ್ಧ, ತರ್ಪಣ, ಗೋದಾನ ಮೊದಲಾದುವನ್ನು ವೈತರಿಣೀ ನದಿಯನ್ನು ದಾಟುವ ಸಲುವಾಗಿ ಮಾಡುತ್ತಾರೆ. ಈ ಎಲ್ಲ ಮಾತುಗಳೂ ಹೇಗೆ ತಾನೇ ಸುಳ್ಳಾಗಬಲ್ಲವು?

**ಉತ್ತರ**:- ಈ ಎಲ್ಲ ಮಾತುಗಳೂ ಪೋಪಲೀಲೆಯ ಬುರುಡೆಗಳು. ಬೇರೆಡೆಯ ಜೀವರು ಅಲ್ಲಿ ಹೋಗುವುರಾದರೆ, ಧರ್ಮರಾಜ, ಚಿತ್ರಗುಪ್ತ ಮೊದಲಾದವರು ಅವರ ನ್ಯಾಯವನ್ನು ಮಾಡುವರಾದರೆ, ಯಮಲೋಕದ ಆ ಜೀವರು ಪಾಪ ಮಾಡಿದಲ್ಲಿ, ಅಲ್ಲಿನ ನ್ಯಾಯಾದೀಶರು ಅವರ ನ್ಯಾಯವನ್ನು ಮಾಡುವ ಸಲುವಾಗಿ, ಎರಡನೆಯ ಯಮಲೋಕವನ್ನೂ ಒಪ್ಪಿಕೊಳ್ಳಬೇಕಾದೀತು. ಮತ್ತು ಯಮದೂತರ ಶರೀರಗಳು ಪರ್ವತಗಳಿಗೆ ಸಮಾನವಾಗಿದ್ದರೆ, ಕಾಣಿಸುವುದಿಲ್ಲವೇಕೆ? ಮತ್ತು ಸಾಯುವ ಜೀವನನ್ನು ಹಿಡಿದುಕೊಳ್ಳುವಾಗ, ಚಿಕ್ಕ ಬಾಗಿಲಿನಲ್ಲಿ ಅವರ ಒಂದು ಬೆರಳೂ ಕೂಡ ತೂರಲಾರದು. ಮತ್ತು ದಾರಿ ಸಂದಿಗಳ್ಲಲಿ ನಿಂತು ಹೋಗುವುದಿಲ್ಲವೇಕೆ? ಅವರು ಸೂಕ್ಷ್ಮ ದೇಹವನ್ನೂ ಕೂಡ ಧರಿಸಿಕೊಳ್ಳುತ್ತಾರೆ-ಎನ್ನುವಿರಾದರೆ, ಮೊದಲ, ಪರ್ವತದಂತಹ ಶರೀರದ ದೊಡ್ಡ-ದೊಡ್ಡ ಮೂಳೆಗಳನ್ನು ಪೋಪಮಹಾಶಯರು ತಮ್ಮ ಮನೆಯಲ್ಲಿ ಅಲ್ಲದೆ, ಬೇರೆ ಎಲ್ಲಿಡುವರು? ಯಾವಾಗ ಕಾಡಿನಲ್ಲಿ ಕಿಚ್ಚು ಹೊತ್ತಿಕೊಳ್ಳತ್ತದೋ, ಆಗ ಒಂದೇ ಸಲಕ್ಕೆ ಇರುವೆಗಳೇ ಮೊದಲಾದ ಜೀವರ ಶರೀರಗಳು ಕಳಚಿಹೋಗುತ್ತವೆ. ಅವರುಗಳನ್ನು ಹಿಡಿಯಲು ಯಮನ ಅಸಂಖ್ಯ ದೂತರು ಬರುವರಾದರೆ, ಅಲ್ಲಿ ಕತ್ತಲೆ ಹರಡಿಕೊಳ್ಳಬೇಕು. ಮತ್ತು ಯಾವಾಗ ಪರಸ್ಪರ ಜೀವರುಗಳನ್ನು ಹಿಡಿಯಲು ಓಡುವರೋ, ಆಗ ಯಾವಾಗಲಾದರೂ ಅವರ ಶರೀರಗಳು ಮುಗ್ಗರಿಸಿದರೆ, ಡಿಕ್ಕಿ ಹೊಡೆದರೆ, ಹೇಗೆ ಪರ್ವತದ ದೊಡ್ಡ ದೊಡ್ಡ ಶಿಖರಗಳು ಮುರಿದು ಭೂಮಿಯ ಮೇಲೆ ಬೀಳುತ್ತವೋ, ಹಾಗೆ, ಅವರ ದೊಡ್ಡ ದೊಡ್ಡ ಅವಯವಗಳು ಗರುಡಪುರಾಣವನ್ನು ಓದುವವರ-ಕೇಳುವವರ ಅಂಗಳದಲ್ಲಿ

ಬಿದ್ದುಬಿಟ್ಟರೇನು ಗತಿ? ಆಗ ಅವರು ಜಜ್ಜಿಹೋಗಿ ಸಾಯುವರು. ಅಥವಾ ಮನೆಯ ಬಾಗಿಲು, ಇಲ್ಲವೇ ದಾರಿ ಮುಚ್ಚಿಹೋಗುವುದು. ಆಗ ಅವರು ಹೇಗೆ ಹೊರಡಬಲ್ಲರು? ಮತ್ತು ಹೇಗೆ ನಡೆಯಬಲ್ಲರು?

ಶ್ರಾದ್ಧ, ತರ್ಪಣ, ಪಿಂಡಪ್ರದಾನ ಆ ಮೃತರಾದ ಜೀವರಿಗೇನೋ ತಲಪುವುದಿಲ್ಲ; ಆದರೆ, ಮೃತರ ಪ್ರತಿನಿಧಿಯಾದ ಪೋಪಮಹಾಶಯರ ಮನೆಗೆ, ಉದರಕ್ಕೆ ಮತ್ತು ಕೈಗೆ ಸೇರುತ್ತದೆ. ವೈತರಣಿಯನ್ನು ದಾಟಲಿಕ್ಕಾಗಿ ಯಾವ ಗೋದಾನವನ್ನು ತೆಗೆದುಕೊಳ್ಳುತ್ತಾರೋ, ಅದಂತೂ ಪೋಪಮಹಾಶಯರ ಮನೆಯಲ್ಲಿ ಅಥವಾ ಕಟುಕರೇ ಮೊದಲಾದವರ ಮನೆಯಲ್ಲಿ ಹೋಗಿ ಮುಟ್ಟುತ್ತದೆ. ವೈತರಿಣಿಯ ಮೇಲೆ ಹಸುವು ಹೋಗುವುದಿಲ್ಲ ; ಮತ್ತೆ, ಯಾವುದರ ಬಾಲವನ್ನು ಹಿಡಿದು ಮೃತನ ಆತ್ಮನು ವೈತರಣಿಯನ್ನು ದಾಟುವನು? ಮತ್ತು ಕೈಕೂಡ ಇಲ್ಲಿಯೇ ಸುಡಲ್ಪಟ್ಟಿತು ಅಥವಾ ಹೂಳಲ್ಪಟ್ಟಿತು. ಮತ್ತೆ ಬಾಲವನ್ನು ಹಿಡಿದುಕೊಳ್ಳುವನೆಂತು? ಈ ಸ್ಥಳದಲ್ಲಿ, ಈ ವಿಷಯಕ್ಕೆ ಒಂದು ದೃಷ್ಟಾಂತ ಉಪಯುಕ್ತವಾಗಿರುತ್ತದೆ. ಅದು ಹೀಗಿದೆ:–

ಒಬ್ಬ ಜಾಟನು (ಒಕ್ಕಲಿಗ ಅಥವಾ ಬಂಟ[೧೪೯]) ಇದ್ದನು. ಅವನ ಮನೆಯಲ್ಲಿ ಬಹಳ ಒಳ್ಳೆಯ, ಮತ್ತು, ೨೦ ಸೇರು ಹಾಲನ್ನು ಕೊಡುವ ಒಂದು ಹಸುವಿದ್ದಿತು. ಅದರ ಹಾಲು ಬಹಳ ರುಚಿಕರವಾಗಿತ್ತು. ಆಗಾಗ ಪೋಪರ ಬಾಯಿಗೂ ಅಷ್ಟಿಷ್ಟು ಬೀಳುತ್ತಿತ್ತು . ಅವನ ಪುರೋಹಿತನು –'ಯಾವಾಗ ಜಾಟನ ಮುದಕನಾದ ತಂದೆ ಮೃತನಾಗತೊಡಗುವನೋ, ಆಗ ಅವನಿಂದ ಇದೇ ಹಸುವಿನ (ದಾನದ) ಸಂಕಲ್ಪ ಮಾಡಿಸಿಕೊಳ್ಳುವೆನು'.–ಎಂದೇ ಆಲೋಚಿಸುತ್ತಾ ಇದ್ದನು. ಹಲ ದಿನಗಳ ನಂತರ ದೈವಯೋಗದಿಂದ, ಅವನ ತಂದೆಯ ಮರಣ ಸಮಯ ಬಂದು, ನಾಲಗೆ ಸೆಡೆತುಕೊಂಡಿತು; ಮತ್ತು ಮಂಚದಿಂದ ನೆಲದ ಮೇಲಕ್ಕೆ ಇಳಿಸಿಕೊಂಡರು. ಎಂದರೆ, ಪ್ರಾಣ ಬಿಡುವ ಸಮಯ ಸನ್ನಿಹಿತವಾಯಿತು. ಆಗ ಜಾಟನ ಇಷ್ಟಮಿತ್ರರೂ ಮತ್ತು ನಂಟರೂ ಕೂಡ ಬಂದು ಸೇರಿದ್ದರು. ಆಗ ಪೋಪರು – "ಯಜಮಾನನೇ! ಈಗ ನೀನು ಇವನ ಕೈಯಿಂದ ಗೋದಾನ ಮಾಡಿಸು".– ಎಂದನು. ಜಾಟನು ಹತ್ತು ರೂಪಾಯಿಗಳನ್ನು ತೆಗೆದು, ತಂದೆಯ ಕೈಯಲ್ಲಿತ್ತು, "ಸಂಕಲ್ಪವನ್ನು ಹೇಳು".– ಎಂದನು. ಪೋಪಮಹಾಶಯರು–"ಭಲೇ, ಭಲೇ!! ತಂದೆ ಮತ್ತೆ ಮತ್ತೆ ಸಾಯುತ್ತಾನೇನು? ಈಗಲಾದರೂ, ಯಾವುದು ಹಾಲನ್ನು ಕೊಡುತ್ತದೋ, ಯಾವುದು ಮುದಿಯಲ್ಲವೋ, ಯಾವುದು ಎಲ್ಲ ರೀತಿಯಲ್ಲಿಯೂ ಉತ್ತಮವಾಗಿರುತ್ತದೋ, ಅಂತಹ ಸಾಕ್ಷಾತ್ ಆಕಳನ್ನು ತೆಗೆದುಕೊಂಡು ಬಾ. ಇಂತಹ ಗೋವಿನ ದಾನವನ್ನೇ ಮಾಡಬೇಕು".–ಎಂದರು.

**ಜಾಟ :–** "ನಮ್ಮ ಬಳಿಯಂತೂ ಒಂದೇ ಹಸುವಿದೆ. ಅದರ ಹೊರತು ನಮ್ಮ ಮಕ್ಕಳು–ಮರಿಗಳ ನಿರ್ವಾಹವಾಗಲಾರದು. ಆದುದರಿಂದ, ಅದನ್ನು ಕೊಡುವುದಿಲ್ಲ. ತೆಗೆದುಕೊಳ್ಳಿ; ಇಪ್ಪತ್ತು ರೂಪಾಯಿಗಳ ಸಂಕಲ್ಪ ಮಾಡಿಸಿ ಬಿಡಿರಿ. ಮತ್ತು ಈ ರೂಪಾಯಿಗಳಿಂದ ಬೇರೆಯ ಹಾಲನ್ನು ಕರೆಯುವ ಹಸುವನ್ನು ತೆಗೆದುಕೊಳ್ಳಿರಿ".

**ಪೋಪಮಹಾಶಯರು:–** "ಓಹೋ! ಏನು ಹೇಳೋಣ! ನೀನು ಹಸುವನ್ನು ನಿನ್ನ ತಂದೆಗಿಂತ ಹೆಚ್ಚೆಂದು ತಿಳಿಯುತ್ತೀಯೇನು? ನಿನ್ನ ತಂದೆಯನ್ನು ವೈತರಣೀ ನದಿಯಲ್ಲಿ ಮುಳುಗಿಸಿ, ದುಃಖವನ್ನು ಕೊಡಬಯಸುತ್ತೀಯೇನು? ನೀನು ಒಳ್ಳೆಯ ಸುಪುತ್ರನಾದೆ"!–ಎಂದರು. ಆಗ, ಪರಿವಾರದವರೆಲ್ಲಾ ಪೋಪರ ಕಡೆಗೇ ಹೊರಳಿದರು. ಏಕೆಂದರೆ, ಪೋಪರು ಮೊದಲೇ ತಿರುಹಿಸಿಟ್ಟಿದ್ದರು. ಮತ್ತು ಆಗಲೂ ಸಂಕೇತಮಾಡಿದರು. ಎಲ್ಲರೂ ಸೇರಿ ಹಠದಿಂದ ಅದೇ ಹಸುವಿನ ದಾನವನ್ನು ಅದೇ ಪೋಪರಿಗೆ ಕೊಡಿಸಿದರು. ಆಗ ಜಾಟನು ಏನನ್ನೂ ಹೇಳಲಿಲ್ಲ. ಅವನ ತಂದೆ ಮೃತನಾದನು. ಮತ್ತು ಪೋಪರು ಕರುವಿನೊಂದಿಗೆ ಹಸುವನ್ನೂ, ಹಾಲನ್ನು ಕರೆಯುವ ಪಾತ್ರ ಸಮೇತ ತಮ್ಮ ಮನೆಗೆ ಒಯ್ದರು. ತಮ್ಮ ಮನೆಯಲ್ಲಿ ಹಸುವನ್ನು ಕಟ್ಟಿ, ಪಾತ್ರೆಯನ್ನೂ ಇಟ್ಟು, ಮರಳಿ ಜಾಟನ ಮನೆಗೆ ಬಂದರು. ಮೃತನ ಶವದೊಂದಿಗೆ ಸ್ಮಶಾನ ಭೂಮಿಗೆ ಹೋಗಿ, ದಹನಕ್ರಿಯೆಯನ್ನು ನಡೆಯಿಸಿದರು. ಅಲ್ಲಿಯೂ ಅಲ್ಪ ಸ್ವಲಪ ಪೋಪಲೀಲೆಯನ್ನು ನಡೆಯಿಸಿದರು. ಅಮೇಲೆ ದಶಗಾತ್ರ ಸಂಪಿಂಡೀಕರಣ (ಭಸ್ಮೀಭೂತ ದೇಹಕ್ಕೆ ಪ್ರತಿಯಾಗಿ, ಬೇರಾವದೋ ಬಗೆಯ ದೇಹವನ್ನು ಒದಗಿಸುವುದೆಂದು ನಂಬಿ ಮಾಡಲ್ಪಡುವ ಕ್ರಿಯೆಗಳು) ಮೊದಲಾದುದರಲ್ಲಿಯೂ ಅವನಿಗೆ ತಲೆಬೋಳಿಸಿದರು. ಮಹಾ ಬ್ರಾಹ್ಮಣರೂ ಕೂಡ (ಕೇವಲ ಪ್ರೇತಕರ್ಮವೃತ್ತಿಯವರು) ಸುಲಿಗೆ ಮಾಡಿದರು. ಮತ್ತು ತಿಂಡಿಪೋತರಾದ ಹೊಟ್ಟೆಬಾಕರೂ ಕೂಡ ಚೆನ್ನಾಗಿ ಹೊಟ್ಟೆ ತುಂಬಿಸಿಕೊಂಡರು. ಸಮಸ್ತ ಕ್ರಿಯೆಗಳೂ ಪೂರ್ಣವಾದಾಗ ಜಾಟನು ಅವರಿವರ ಮನೆಯಿಂದ ಹಾಲನ್ನು ಬೇಡಿತಂದು ನಿರ್ವಾಹಮಾಡಿದನು. ಹದಿನಾಲ್ಕನೆಯದಿನ ಪ್ರಾತಃಕಾಲ ಪೋಪಮಹಾಶಯರ ಮನೆಗೆ ಹೋದನು. ನೋಡಿದರೆ, ಹಸುವಿನಿಂದ ಹಾಲನ್ನು ಕರೆದು

೧೪೯. ಹರಿಯಾಣದ ರೈತರು, ಸೈನಿಕರು 'ಜಾಟ' ಎಂಬ ದೇಹದಾರ್ಢ್ಯವುಳ್ಳ, ಜನಾಂಗಕ್ಕೆ ಸೇರಿದ್ದಾರೆ. ಇವರು ಶಾಖಾಹಾರಿಗಳು. ಈ ದೃಷ್ಟಾಂತ ಅವರಿಗೆ ಸಂಬಂಧಿಸಿದ್ದು.

ಪಾತ್ರೆ ತುಂಬಿಸಿ, ಪೋಪರು ಮೇಲೇಳುವ ಸನ್ನಾಹದಲ್ಲಿದ್ದರು. ಇಷ್ಟರಲ್ಲಿಯೇ ಜಾಟ ಮಹೋದಯನು ದಯಮಾಡಿಸಿದನು. ಅವನನ್ನು ಕಂಡು ಪೋಪರು–"ದಯೆಮಾಡಿಸಿರಿ, ಯಜಮಾನರೇ! ಕುಳಿತುಕೊಳ್ಳಿರಿ".–ಎಂದು ಹೇಳಿದರು.

**ಜಾಟಮಹಾಶಯ:**– ಪುರೋಹಿತಪ್ರವರರೇ! ನೀವು ಕೂಡ ಇತ್ತ ಬನ್ನಿರಿ.

**ಪೋಪರು:**– ಒಳ್ಳೆಯದು, ಹಾಲನ್ನಿಟ್ಟು ಬರುವೆನು.

**ಜಾಟಮಹಾಶಯ:**– ಇಲ್ಲ, ಇಲ್ಲ, ಹಾಲಿನ ಪಾತ್ರೆಯನ್ನು ಇತ್ತ ತೆಗೆದುಕೊಂಡು ಬನ್ನಿರಿ. ಬಡಪಾಯಿ ಪೋಪರು ಹೋಗಿ ಕುಳಿತರು ಮತ್ತು ಪಾತ್ರೆಯನ್ನು ಮುಂದೆ ಇಟ್ಟು ಬಿಟ್ಟರು.

**ಜಾಟ:**– ನೀವು ದೊಡ್ಡ ಸುಳ್ಳುಗಾರರಾಗಿದ್ದೀರಿ!

**ಪೋಪರು:**– ಸುಳ್ಳು ವ್ಯವಹಾರವನ್ನು ನಾನೇನು ಮಾಡಿದೆ?

**ಜಾಟ:**– ಹೇಳಿರಿ, ನೀವು ಹಸುವನ್ನು ಯಾವುದಕ್ಕಾಗಿ ತೆಗೆದುಕೊಂಡಿದ್ದಿರಿ?

**ಪೋಪರು:**– ನಿಮ್ಮ ತಂದೆ ವೈತರಣೀ ನದಿಯನ್ನು ದಾಟವುದಕ್ಕಾಗಿ.

**ಜಾಟ:**– ಒಳ್ಳೆಯದು, ಹಾಗಾದರೆ ನೀವು ಅಲ್ಲಿ ವೈತರಣೀ ನದಿಯ ತೀರಕ್ಕೆ ಹಸುವನ್ನು ಏಕೆ ತಲುಪಿಸಲಿಲ್ಲ? ನಾವೇನೋ ನಿಮ್ಮ ಭರವಸೆಯ ಮೇಲೆ ಇದ್ದೆವು ಮತ್ತು ನೀವು ನಿಮ್ಮ ಮನೆಯಲ್ಲಿ ಕಟ್ಟಿಕೊಂಡು ಕುಳಿತಿರಿ! ನನ್ನ ತಂದೆ ವೈತರಣಿಯಲ್ಲಿ ಎಷ್ಟು ಸಾರಿ ಮುಳುಗಿರಬಹುದೋ ತಿಳಿಯದು!

**ಪೋಪರು:**– ಇಲ್ಲ, ಇಲ್ಲ, ಅಲ್ಲಿ ಈ ದಾನದ ಪುಣ್ಯದ ಪ್ರಭಾವವು ಬೇರೆ ಒಂದು ಹಸುವಾಗಿ, ಅವನನ್ನು ಕಡೆಹಾಯಿಸಿರಬೇಕು.

**ಜಾಟ:**– ವೈತರಣೀ ನದಿ ಇಲ್ಲಿಂದ ಎಷ್ಟು ದೂರವಿದೆ? ಮತ್ತು ಯಾವ ಕಡೆಗೆ ಇದೆ?

**ಪೋಪರು:**– ಅಂದಾಜಿನಿಂದ ಅರವತ್ತು ಕೋಟಿ ಮೈಲಿ ದೂರವಿದೆ. ಏಕೆಂದರೆ, ೨೦೦ಕೋಟಿ ಮೈಲಿ ಪೃಥಿವಿಯಿದೆ. ಮತ್ತು ದಕ್ಷಿಣ–ನೈಋತ್ಯ ದಿಕ್ಕಿನಲ್ಲಿ ವೈತರಣೀ ನದಿಯಿದೆ.

**ಜಾಟ:**– ಇಷ್ಟು ದೂರದಿಂದ ನಿಮ್ಮ ಪತ್ರವಾಗಲೀ, ತಂತಿಯ ಸಮಾಚಾರವಾಗಲೀ ಹೋಗಿದ್ದು, 'ಇಲ್ಲಿ ಪುಣ್ಯದ ಹಸು ಉದ್ಭವಿಸಿತು; ಇಂತಹವನ ತಂದೆಯನ್ನು ಪಾರುಗಾಣಿಸಿತು' – ಎಂದು ಅದಕ್ಕೆ ಉತ್ತರ ಬಂದಿದ್ದರೆ, ತೋರಿಸಿರಿ.

**ಪೋಪರು:**– ನಮ್ಮ ಬಳಿ ಗರುಡಪುರಾಣದ ಬರೆಹದ ಹೊರತು. ಅಂಚೆಯ ಅಥವಾ ತಂತಿಯ ಬೇರೆ ಯಾವ ವ್ಯವಸ್ಥೆಯೂ ಇಲ್ಲ.

**ಜಾಟ:**– ಈ ಗರುಡಪುರಾಣವನ್ನು ನಾವು ಸತ್ಯವೆಂದು ಹೇಗೆ ಒಪ್ಪಿಕೊಳ್ಳೋಣ?

**ಪೋಪರು :**– ಎಲ್ಲರೂ ಒಪ್ಪಿಕೊಳ್ಳುವಂತೆ.

**ಜಾಟ:**– ಈ ಪುಸ್ತಕವನ್ನು ನಿಮ್ಮ ಪೂರ್ವಜರು ನಿಮ್ಮ ಹೊಟ್ಟೆ ಪಾಡಿಗಾಗಿ ರಚಿಸಿದ್ದಾರೆ. ಏಕೆಂದರೆ, ತಂದೆಗೆ ತನ್ನ ಪುತ್ರರಿಗಿಂತ ಹೆಚ್ಚಾಗಿ ಯಾರೂ ಪ್ರಿಯರಲ್ಲ. ಯಾವಾಗ ನನ್ನ ತಂದೆ ನನ್ನ ಬಳಿಗೆ ಕಾಗದ–ಪತ್ರವನ್ನು ಅಥವಾ ತಂತಿಯನ್ನು ಕಳುಹಿಸುವನೋ ಆಗಲೇ ನಾನು ವೈತರಣೀ ನದಿಯ ತಟಕ್ಕೆ ಹಸುವನ್ನು ತಲಪಿಸುವೆನು. ಮತ್ತು ಅವರನ್ನು ಕಡೆಹಾಯಿಸಿ, ಹಸುವನ್ನು ಪುನಃ ಮನೆಗೆ ಕರೆತಂದು, ಹಾಲನ್ನು ನಾನು ಮತ್ತು ನನ್ನ ಮಕ್ಕಳು–ಮರಿಗಳು ಕುಡಿಯುತ್ತಾ ಹೋಗುವೆವು. ತನ್ನಿರಿ, ಎಂದು ಹಾಲಿನಿಂದ ತುಂಬಿದ ಪಾತ್ರೆಯನ್ನೂ, ಹಸುವನ್ನೂ, ಕರುವನ್ನೂ ಕರೆದುಕೊಂಡು, ಜಾಟಮಹೋದಯನು ತನ್ನ ಮನೆಗೆ ಹೊರಟನು.

**ಪೋಪರು:**– ನೀನು ದಾನಕೊಟ್ಟು, ಹಿಂದಕ್ಕೆ ತೆಗೆದುಕೊಳ್ಳುತ್ತೀಯೇ! ನಿನಗೆ ಸರ್ವನಾಶವಾಗುವುದು.

**ಜಾಟ:**– "ಸುಮ್ಮನೇ ಇರಿ. ಇಲ್ಲವಾದರೆ, ಹದಿಮೂರು ದಿನಗಳವರೆಗೆ ಹಾಲಿಲ್ಲದೆ, ನಾವು ಎಷ್ಟು ಕಷ್ಟಪಟ್ಟಿದ್ದೆವೋ ಅದೆಲ್ಲದರ ಬೆಲೆಯನ್ನೂ ಕಕ್ಕಿಸಿಬಿಟ್ಟೇನು" ಎಂದು ಹೆದರಿಸಿದನು. ಆಗ ಪೋಪರು ಸುಮ್ಮನಾದರು. ಮತ್ತು ಜಾಟಮಹಾಶಯನು ಹಸುವನ್ನೂ, ಕರುವನ್ನೂ ಕರೆದುಕೊಂಡು ತನ್ನ ಮನೆಗೆ ಸೇರಿದನು.

ಈ ಜಾಟಮಹಾಶಯನಂತಹ ಪುರುಷರೇ ಇದ್ದರೆ, ಪೋಪಲೀಲೆ ಜಗತ್ತಿನಲ್ಲಿ ನಡೆಯುವುದಿಲ್ಲ. ದಶಗಾತ್ರದ ಪಿಂಡಗಳಿಂದ ಹತ್ತು ಅಂಗಗಳು, ಸಪಿಂಡೀಕರಣದಿಂದ ಶರೀರದೊಂದಿಗೆ ಆತ್ಮನ ಸೇರಿಕೆಯಾಗಿ, ಹೆಬ್ಬೆಟ್ಟಿನ ಗಾತ್ರದ ಶರೀರ ಉದ್ಭವಿಸಿ, ಆಮೇಲೆ ಯಮಲೋಕಕ್ಕೆ ಹೋಗುತ್ತಾನೆ-ಎಂದು ಈ ಜನರು ಹೇಳುತ್ತಾರೆ; ಹಾಗೆ ಆದಲ್ಲಿ, ಮರಣಕಾಲದಲ್ಲಿ ಯಮದೂತರ ಆಗಮನ ವ್ಯರ್ಥವಾಗುತ್ತದೆ. ತ್ರಯೋದಶಾಹದನಂತರ (ದೂತರು) ಬರಬೇಕು! ಶರೀರ ಉದ್ಭವಿಸುವುದಾದರೆ, ತನ್ನ ಪತ್ನಿ, ಸಂತತಿ ಮತ್ತು ಇಷ್ಟಮಿತ್ರರ ಮೋಹದಿಂದ ಹಿಂದಿರುಗಿ ಬರುವುದಿಲ್ಲವೇಕೆ?

**ಪ್ರಶ್ನೆ :-** ಸ್ವರ್ಗದಲ್ಲಿ ಏನೂ ಸಿಕ್ಕುವುದಿಲ್ಲ. ಏನು ದಾನಮಾಡಲ್ಪಡುತ್ತದೋ ಅದೇ ಅಲ್ಲಿ ಸಿಕ್ಕುತ್ತದೆ. ಆದುದರಿಂದ ಎಲ್ಲ ದಾನಗಳನ್ನೂ ಮಾಡಬೇಕು.

**ಉತ್ತರ :-** ಯಾವುದರಲ್ಲಿ ಧರ್ಮಶಾಲೆಗಳಿವೆಯೋ, ಜನರು ದಾನಕೊಡುತ್ತಾರೋ, ಇಷ್ಟಮಿತ್ರರ ಮತ್ತು ಜಾತಿಬಾಂಧವರ ಔತಣಗಳು ಭರ್ಜರಿಯಾಗಿ ನಡೆಯುತ್ತವೋ, ಒಳ್ಳೆ ಒಳ್ಳೆಯ ವಸ್ತ್ರಗಳು ಸಿಕ್ಕುತ್ತವೋ, ಅಂತಹ ಈ ಲೋಕವೇ ನಿಮ್ಮ ಆ ಸ್ವರ್ಗಕ್ಕಿಂತ ಒಳ್ಳೆಯದಾಗಿವೆ. ನೀವು ಹೇಳುವುದಕ್ಕೆ ಅನುಸಾರವಾಗಿ ಸ್ವರ್ಗದಲ್ಲಿ ಏನೂ ಸಿಕ್ಕುವುದಿಲ್ಲ! ಇಂತಹ ನಿರ್ದಯವೂ, ಕೃಪಣವೂ ನಿರ್ಗತಿಕವೂ ಆದ ಸ್ವರ್ಗಕ್ಕೆ ಪೋಪಮಹಾಶಯರೇ, ಹೋಗಿ ವಿರಾಜಿಸಲಿ, ಅಲ್ಲಿ ಒಳ್ಳೆ-ಒಳ್ಳೆಯ ಮನುಷ್ಯರಿಗೇನು ಕೆಲಸ?

**ಪ್ರಶ್ನೆ:-** ನಿಮ್ಮ ಹೇಳಿಕೆಯಂತೆ ಯಮಲೋಕ ಮತ್ತು ಯಮ ಇಲ್ಲವಾದರೆ, ಮೃತನಾಗಿ ಜೀವನು ಎಲ್ಲಿ ಹೋಗುತ್ತಾನೆ ಮತ್ತು ಇವರ ನ್ಯಾಯವನ್ನು ಯಾವನು ಮಾಡುತ್ತಾನೆ?

**ಉತ್ತರ:-** ನಿಮ್ಮ ಗರುಡಪುರಾಣ ಹೇಳಿರುವುದಂತೂ ಅಪ್ರಮಾಣವಾಗಿದೆ. ಆದರೆ, ವೇದೋಕ್ತವಾದುದು ಹೀಗೆ ಇದೆ:-

**ಯಮೇನ**[೧೫೦] ॥ (ಋಗ್ವೇದ :- ೧೦.೧೪.೮)

**ವಾಯುನಾ**[೧೫೧] ॥ (ಅಥರ್ವ:- ೨೦.೧೪೧.೨)

**ಸತ್ಯರಾಜನ್**[೧೫೨] ॥ (ಯಜುರ್ವೇದ:- ೨೦.೪)

ಈ ಮೊದಲಾದ ವೇದವಚನಗಳಿಂದ[೧೫೩] **'ಯಮ'** - ಎಂಬುದು ವಾಯುವಿನ ಹೆಸರು-ಎಂದು ನಿಶ್ಚಯವಾಗತ್ತದೆ. ಶರೀರವನ್ನು ಬಿಟ್ಟು, ವಾಯುವಿನೊಂದಿಗೆ ಅಂತರಿಕ್ಷದಲ್ಲಿ ಜೀವರಿರುತ್ತಾರೆ. ಮತ್ತು ಯಾವ ಸತ್ಯಕಾರಿಯೂ, ಪಕ್ಷಪಾತರಹಿತನೂ ಆದ ಪರಮಾತ್ಮನಿದ್ದಾನೋ, ಅವನೇ ಧರ್ಮರಾಜನು, ಸರ್ವರ ನ್ಯಾಯಕರ್ತೃವು ಆಗಿದ್ದಾನೆ.

**ಪ್ರಶ್ನೆ:-** ನೀವು ಹೇಳುವುದರಿಂದ ಗೋದಾನ-ಮೊದಲಾದ ದಾನಗಳನ್ನು ಯಾವನಿಗೂ ಕೊಡಬಾರದು ; ಮತ್ತು ಯಾವುದೇ ದಾನ-ಪುಣ್ಯಗಳನ್ನು ಮಾಡಬಾರದು-ಎಂದು ಸಿದ್ಧವಾಗುತ್ತದೆ.

**ಉತ್ತರ:-** ಈ ನಿಮ್ಮ ಹೇಳಿಕೆಯು ಸರ್ವಥಾ ವ್ಯರ್ಥವಾಗಿದೆ. ಏಕೆಂದರೆ, ಸುಪಾತ್ರರಿಗೆ, ಪರೋಪಕಾರಿಗಳಿಗೆ,

---

೧೫೦. ಸಂ ಗಚ್ಛಸ್ವ ಪಿತೃಭಿಃ ಸಂಯಮೇನೇಷ್ಟಾ ಪೂರ್ತೇನ ಪರಮೇ ವ್ಯೋ ಮನ್ ॥ ಋಗ್ವೇದ೧೦.೧೪.೮

"ಓ ಜೀವ! [ಪರಮೇ ವ್ಯೋಮನ್] ಸರ್ವೋಚ್ಚ ಪ್ರಭುವಿನಲ್ಲಿ, ಆಕಾಶದಲ್ಲಿ [ಪಿತ್ರಭಿಃ ಸಮ್] ಪಾಲಕ ತತ್ವಗಳಿಂದ ಯುಕ್ತನಾಗಿ, [ಇಷ್ಟಾಪೂರ್ತೇನ ಸಮ್] ಉಪಲಬ್ಧವಾಗಿರುವ, ಆಗಬೇಕಾಗಿರುವ ಕಾಮನೆಗಳಿಂದ ಯುಕ್ತನಾಗಿ [ಗಚ್ಛಸ್ವ] ವಿಹರಿಸು.

೧೫೧. ಯದಿಂದ್ರೇಣ ಸರಥಂ ಯಾಥೋ ಅಶ್ವಿನಾ ಯದ್ವಾ ವಾಯುನಾ ಭವಥಃ ಸಮೋಕಸಾ [ಅಥರ್ವ೨೦.೧೪೧.೨

[ಸಮೋಕಸಾ ಅಶ್ವಿನಾ] ಸಮಾನ ಗೃಹನಿವಾಸೀ ದಂಪತಿಗಳೇ ! [ಇಂದ್ರೇಣಾ ಸರಥಮ್] ಸೂರ್ಯನ ಶಕ್ತಿಯಿಂದ ಯುಕ್ತರಾಗಿ, [ವಾ] ಮತ್ತು, [ವಾಯುನಾ ಸರಥಮ್] ವಾಯುವಿನಿಂದ ಯುಕ್ತರಾಗಿ, [ಯತ್, ಯತ್, ಭವಥಃ] ಏನೇನು ಬೇಕೋ, ಪಡೆದುಕೊಳ್ಳಿರಿ.

೧೫೨. ಕೋಸಿ, ಕತಮೋಸಿ, ಕಸ್ಮೈತ್ವಾ ಕಾಯ ತ್ವಾ ಸುಶ್ಲೋಕ ಸುಮಂಗಲ ಸತ್ಯರಾಜನ್ ॥ ಯಜುರ್ವೇದ ೨೦.೪

[ಸುಶ್ಲೋಕ ಸುಮಂಗಲ ಸತ್ಯರಾಜನ್] ಉತ್ತಮ ಯಶಸ್ವೀ, ಸಜ್ಜನರಿಗೆ ಮಂಗಳಕರ, ಸತ್ಯ ಪ್ರಕಾಶಕ ಭಗವಾನ್ ! [ಕಃ ಅಸಿ, ಕತಮಃ ಅಸಿ] ಆನಂದ ಮಯವಾಗಿರುವೆ; ಆನಂದ ಮಯರಲ್ಲಿಯೂ ಶ್ರೇಷ್ಠವಾಗಿರುವೆ. [ಕಸ್ಮೈ ತ್ವಾ ಕಾಯ ತ್ವಾ] ಆನಂದಕ್ಕಾಗಿ, ಸುಖಮಯ ನಾಗಲಿಕ್ಕಾಗಿ ನಿನ್ನನ್ನು ಆಶ್ರಯಿಸುವೆನು.

೧೫೩. ಸಂಸ್ಕಾರ ವಿಧಿಯ ಅಂತ್ಯೇಷ್ಟಿ ಪ್ರಕರಣದಲ್ಲಿ ಇನ್ನೂ ಹಲವು ಪ್ರಮಾಣಗಳಿವೆ.

ಪರೋಪಕಾರಕ್ಕಾಗಿ ಚಿನ್ನ, ಬೆಳ್ಳಿ, ವಜ್ರ, ಮುತ್ತು, ಮಾಣಿಕ್ಯ, ಆಹಾರ, ಜಲ, ಭೂಮಿ, ವಸ್ತ್ರ-ಮೊದಲಾದುದರ ದಾನವನ್ನು ಅವಶ್ಯವಾಗಿ ಮಾಡುವುದು ಉಚಿತವಾಗಿದೆ. ಆದರೆ, ಕುಪಾತ್ರರಿಗೆ ಎಂದಿಗೂ ಕೊಡಬಾರದು.

**ಪ್ರಶ್ನೆ:-** ಕುಪಾತ್ರನ ಮತ್ತು ಸುಪಾತ್ರನ ಲಕ್ಷಣವೇನು?

**ಉತ್ತರ:-** ಯಾರು ಛಲಯುಕ್ತರೂ, ಕಪಟಯುಕ್ತರೂ, ಸ್ವಾರ್ಥಿಗಳೂ, ವಿಷಯಾಸಕ್ತರೂ, ಕಾಮ-ಕ್ರೋಧ-ಲೋಭ-ಮೋಹಯುಕ್ತರೂ, ಪರಹಾನಿ ಮಾಡುವವರೂ, ಲಂಪಟರೂ, ಮಿಥ್ಯಾವಾದಿಗಳೂ, ಅವಿದ್ವಾಂಸರೂ, ದುಃಸಂಗಿಗಳೂ, ಆಲಸ್ಯಯುಕ್ತರೂ ಆಗಿರುತ್ತಾರೋ, ಅವರುಗಳು ಕುಪಾತ್ರರಾಗಿರುತ್ತಾರೆ. ಮತ್ತು ಉದಾರಮನಸ್ಕನಾಗಿ ಕೊಡುವ ಯಾವನಾದರೂ ದಾನಿಯಿದ್ದರೆ, ಅವನ ಬಳಿ ಮತ್ತೆ ಮತ್ತೆ ಬೇಡುವುದು ಮುಷ್ಕರ ಹೂಡುವುದು, 'ಇಲ್ಲ' ಎಂದ ಮೇಲೆಯೂ ಹಠ ಹಿಡಿದು ಬೇಡುತ್ತಲೇ ಹೋಗುವುದು, ತೃಪ್ತನಾಗದಿರುವುದು, ಯಾವನು ಕೊಡುವುದಿಲ್ಲವೋ, ಅವನನ್ನು ನಿಂದಿಸುವುದು, ಶಾಪ ಹಾಕುವುದು, ಬೈಯುವುದು-ಮೊದಲಾದುದರಲ್ಲಿ ತೊಡಗುವುದು, ಯಾವನಾದರೂ, ಅನೇಕ ಸಾರಿ ಸೇವೆ ಸಲ್ಲಿಸಿ, ಒಂದು ಸಾರಿ ಸಲ್ಲಿಸದಿದ್ದರೆ, ಅವನ ಶತ್ರುವಾಗಿ ಹೋಗುವುದು, ಮೇಲಿನಿಂದ ಸಾಧುವೇಷ ಹಾಕಿಕೊಂಡು, ಜನರನ್ನು ಪಥಭ್ರಷ್ಟರನ್ನಾಗಿಮಾಡಿ ವಂಚಿಸುವುದು, ಮತ್ತು ತನ್ನ ಹತ್ತಿರ ವಸ್ತುವಿದ್ದರೂ ಕೂಡ, 'ನನ್ನ ಬಳಿ ಏನೂ ಇಲ್ಲ'.- ಎನ್ನುವುದು. ಎಲ್ಲರನ್ನೂ ಉಬ್ಬಿಸಿ-ಏರಿಸಿ, ಸ್ವಾರ್ಥವನ್ನು ಸಾಧಿಸಿಕೊಳ್ಳುವುದು, ಇರುಳೂ-ಹಗಲೂ ಭಿಕ್ಷೆ ಬೇಡುವುದರಲ್ಲಿಯೇ ಪ್ರವೃತ್ತನಾಗಿರುವುದು, ಆಹ್ವಾನ ಬಂದ ಮೇಲೆ ಯಥೇಷ್ಟವಾಗಿ ಭಂಗಿ-ಮೊದಲಾದ ಮಾದಕ ದ್ರವ್ಯಗಳನ್ನು ತಿಂದು-ಕುಡಿದು, ಬಹಳವಾಗಿ ಪರವಸ್ತುಗಳನ್ನು ನುಂಗಿಹಾಕುವುದು, ಪುನಃ ಉನ್ಮತ್ತನಾಗಿ ಪ್ರಮಾದಯುಕ್ತನಾಗುವುದು, ಸತ್ಯದ ಮಾರ್ಗವನ್ನು ವಿರೋಧಿಸುವುದು ಮತ್ತು ಸುಳ್ಳಿನ ದಾರಿಯಲ್ಲಿ ತನ್ನ ಸ್ವಾರ್ಥಕ್ಕಾಗಿ ನಡೆಯುವುದು, ಅದೇ ರೀತಿ ತನ್ನ ಅನುಯಾಯಿಗಳಿಗೆ ಬೇರೆಯ ಪುರುಷನ ಸೇವೆ ಮಾಡುವುದಕ್ಕೆ ಉಪದೇಶ ಮಾಡದೆ, ಕೇವಲ ತನ್ನ ಸೇವೆಯನ್ನೇ ಮಾಡಬೇಕೆಂದು ಉಪದೇಶಿಸುವುದು, ಸದ್ವಿದ್ಯೆ ಮೊದಲಾದ ಪ್ರವೃತ್ತಿಗಳಿಗೆ ವಿರೋಧಿಯಾಗಿರುವುದು, "ಇದೆಲ್ಲವೂ ಅಸತ್ಯವಾಗಿದೆ ಮತ್ತು ಜಗತ್ತೂ ಕೂಡ ಮಿಥ್ಯೆಯಾಗಿದೆ". ಎಂದು ಬೋಧಿಸಿ, ಜಗತ್ತಿನ ವ್ಯವಹಾರಗಳಲ್ಲಿ-ಎಂದರೆ, ಸ್ತ್ರೀಯರು, ಪುರುಷರು, ತಾಯಿ, ತಂದೆ, ಸಂತತಿ, ರಾಜ, ಪ್ರಜೆ, ಇಷ್ಟ - ಮಿತ್ರರುಗಳಲ್ಲಿ ಅಪ್ರೀತಿಯನ್ನುಂಟು ಮಾಡುವುದು, ಈ ಮೊದಲಾ ರೀತಿಯ ದುಷ್ಟವಾದ ಉಪದೇಶಗಳನ್ನು ಮಾಡುವುದು-ಈ ಮೊದಲಾದುವು ಕುಪಾತ್ರರ ಲಕ್ಷಣಗಳಾಗಿವೆ. ಮತ್ತು ಯಾರು ಬ್ರಹ್ಮಚಾರಿಗಳೂ, ಜಿತೇಂದ್ರಿಯರೂ, ವೇದಗಳೇ ಮೊದಲಾದ ವಿದ್ಯೆಯನ್ನು ಓದುವವರೂ-ಓದಿಸುವವರೂ, ಸುಶೀಲರೂ. ಸತ್ಯವಾದಿಗಳೂ, ಪರೋಪಕಾರಪ್ರಿಯರೂ, ಪುರುಷಾರ್ಥಿಗಳೂ, ಉದಾರರೂ, ವಿದ್ಯೆಯ ಮತ್ತು ಧರ್ಮದ ಉನ್ನತಿಯನ್ನು ನಿರಂತರವಾಗಿ ಸಾಧಿಸುವವರೂ, ಧರ್ಮಾತ್ಮರೂ, ಶಾಂತರೂ, ನಿಂದಾ-ಸ್ತುತಿಗಳಲ್ಲಿ ಶೋಕ-ಹರ್ಷ ರಹಿತರೂ, ನಿರ್ಭಯರೂ, ಉತ್ಸಾಹಿಗಳೂ, ಯೋಗಿಗಳೂ, ಜ್ಞಾನಿಗಳೂ, ಸೃಷ್ಟಿಕ್ರಮಕ್ಕೆ, ವೇದಗಳ ಆಜ್ಞೆಗೆ, ಈಶ್ವರನ ಗುಣಕರ್ಮಸ್ವಭಾವಕ್ಕೆ ಅನುಕೂಲವಾಗಿ ವರ್ತಿಸುವವರೂ, ನ್ಯಾಯರೀತಿಯುಕ್ತರೂ, ಪಕ್ಷಪಾತರಹಿತರೂ, ಸತ್ಯೋಪದೇಶವನ್ನು ಮತ್ತು ಸತ್ಯಶಾಸ್ತ್ರಗಳನ್ನು ಓದುವವನ-ಓದಿಸುವವನ ಪರೀಕ್ಷಕರೂ, ಯಾವನನ್ನೂ ಹೊಗಳಿ ಅಟ್ಟಕ್ಕೆ ಏರಿಸದವರೂ, ಪ್ರಶ್ನೆಗಳಿಗೆ ಯಥಾರ್ಥವಾದ ಸಮಧಾನ ಕೊಡುವವರೂ, ತಮ್ಮ ಆತ್ಮನ ಹಾಗೆಯೇ ಬೇರೆಯವರ ಆತ್ಮಗಳಿಗೂ ಸುಖ-ದುಃಖ, ಹಾನಿ-ಲಾಭಗಳಿವೆಯೆಂದು ತಿಳಿದುಕೊಳ್ಳುವವರೂ, ಅವಿದ್ಯೆ-ಮೊದಲಾದ ಕ್ಲೇಶಗಳಿಂದಲೂ, ಹಠ-ದುರಾಗ್ರಹ-ದುರಭಿಮಾನಗಳಿಂದಲೂ ರಹಿತರಾದವರೂ, ಸಂತೋಷಯುಕ್ತರೂ, ಯಾವನಾದರೂ ಪ್ರೀತಿಯಿಂದ ಎಷ್ಟನ್ನು ಕೊಡುವನೋ, ಅಷ್ಟರಿಂದಲೇ ತೃಪ್ತರಾಗುವವರೂ, ಒಂದು ಸಾರಿ ಆಪತ್ಕಾಲದಲ್ಲಿಯೇ ಬೇಡಿದರೂ ಕೂಡ ಯಾವನಾದರೂ ಕೊಡದಿದ್ದರೂ ಅಥವಾ ನಿಷೇಧಿಸಿದರೂ ಕೂಡ ದುಃಖವನ್ನು ಅಥವಾ ಕೆಟ್ಟ ವ್ಯವಹಾರನ್ನು ಮಾಡದವರೂ, ಆ ಕೂಡಲೇ ಅಲ್ಲಿಂದ ಹೊರಟು ಬರುವವರೂ, ಅವನನ್ನು ನಿಂದಿಸದವರೂ, ಸುಖೀಪುರುಷರೊಂದಿಗೆ ಮೈತ್ರಿಯನ್ನೂ, ದುಃಖಿಗಳ ಮೇಲೆ ಕರುಣೆಯನ್ನೂ, ಪುಣ್ಯಾತ್ಮರ ಬಗೆಗ ಆನಂದವನ್ನೂ ಮತ್ತು ಪಾಪಿಗಳ ಬಗೆಗೆ ಉಪೇಕ್ಷೆಯನ್ನೂ ತಾಳುವವರೂ,[೧೫೪] ಎಂದರೆ ರಾಗ-ದ್ವೇಷಭಾವನೆಯನ್ನು ತಾಳದವರೂ, ಸತ್ಯವನ್ನು ಅಂಗೀಕರಿಸುವವರೂ, ಸತ್ಯಾಚರಣಯುಕ್ತರೂ, ನಿಷ್ಕಪಟರೂ, ಈರ್ಷ್ಯಾದ್ವೇಷರಹಿತರೂ, ಗಂಭೀರಾಶಯರೂ, ಸತ್ಪುರುಷರೂ, ಮತ್ತು ಸರ್ವಥಾ ದುಷ್ಟಾಚಾರರಹಿತರೂ, ತಮ್ಮ ತನು-ಮನ-ಧನಗಳನ್ನು ಪರೋಪಕಾರ ಮಾಡುವುದರಲ್ಲಿ ವಿನಿಯೋಗಿಸುವವರೂ, ಪರರ ಸುಖಕ್ಕಾಗಿ ತಮ್ಮ ಪ್ರಾಣಗಳನ್ನೂ ಕೂಡ ಸಮರ್ಪಣ ಮಾಡುವವರೂ ಮತ್ತು ಇದೇ ಬಗೆಯ ಶುಭಲಕ್ಷಣಯುಕ್ತರೂ

---

೧೫೪. ಮೈತ್ರೀ-ಕರುಣಾ-ಮುದಿತೋಪೇಕ್ಷಾಣಾಂ ಸುಖ ದುಃಖ-ಪುಣ್ಯಾ ಪುಣ್ಯ ವಿಷಯಾಣಾಂ ಭಾವನಾತಶ್ಚಿತ್ತ ಪ್ರಸಾದನಮ್ - ಯೋಗ ದರ್ಶನ [೧.೩೩] ಯು.ಮೀ.

ಸುಪಾತ್ರರಾಗಿರುತ್ತಾರೆ. **ಆದರೆ ದುರ್ಭಿಕ್ಷ ಮೊದಲಾದ ಆಪತ್ಕಾಲದಲ್ಲಿ ಆಹಾರ, ಜಲ, ವಸ್ತ್ರ ಮತ್ತು ಔಷಧ, ಪಥ್ಯ ಮತ್ತು ಆಶ್ರಯಕ್ಕೆ ಪ್ರಾಣಿಮಾತ್ರರೆಲ್ಲರೂ ಅಧಿಕಾರಿಗಳಾಗಬಲ್ಲರು.**

**ಪ್ರಶ್ನೆ:**– ದಾತೃಗಳು ಎಷ್ಟು ವಿಧದವರಿರುತ್ತಾರೆ?

**ಉತ್ತರ:**–ಮೂರು ವಿಧದವರು–ಉತ್ತಮರು, ಮಧ್ಯಮರು ಮತ್ತು ನಿಕೃಷ್ಟರು ಎಂದು. ಯಾವನು ದೇಶ, ಕಾಲ ಮತ್ತು ಪಾತ್ರವನ್ನರಿತು ಸತ್ಯವಿದ್ಯಾ–ಧರ್ಮದ ಉನ್ನತಿಯೆಂಬ ಪರೋಪಕಾರಕ್ಕಾಗಿ ದಾನವನ್ನು ಕೊಡುತ್ತಾನೋ, ಅವನನ್ನು ಉತ್ತಮ ದಾತೃ ಎನ್ನುತ್ತಾರೆ. ಯಾವನು ಕೀರ್ತಿಗಾಗಿ ಅಥವಾ ಸ್ವಾರ್ಥಕ್ಕಾಗಿ ದಾನವನ್ನು ಮಾಡುತ್ತಾನೋ, ಅವನು ಮಧ್ಯಮನಾಗಿರುತ್ತಾನೆ. ಯಾವನು ತನಗಾಗಲೀ ಅಥರಾ ಬೇರೆಯವರಿಗಾಗಲೀ ಸ್ವಲ್ಪವೂ ಉಪಕಾರ ಮಾಡಲಾರನೋ, ಆದರೆ–ವೇಶ್ಯಾಗಮನ–ಮೊದಲಾದುವಕ್ಕಾಗಿ ಅಥವಾ ಭಂಡರು–ಹೊಗಳು ಭಟ್ಟರು ಮೊದಲಾದವರಿಗೆ, ಕೊಡುತ್ತಾನೋ, ಕೊಡುವಾಗ ತಿರಸ್ಕಾರ, ಅಪಮಾನ–ಮೊದಲಾದ ದುರ್ವ್ಯವಹಾರವನ್ನೂ ಕೂಡ ಮಾಡುತ್ತಾನೋ, ಯಾವನು ಪಾತ್ರ–ಅಪಾತ್ರರ ಭೇದವನ್ನು ಸ್ವಲ್ಪವೂ ತಿಳಿಯುವುದಿಲ್ಲವೋ, ಆದರೆ–"ಯಾವುದೇ ಖಾದ್ಯಕೊಳ್ಳಿರಿ; ಎಲ್ಲಕ್ಕೂ ಕ್ರಯ[೧೫೫] ಒಂದೇ"– ಎಂಬ ವ್ಯಾಪಾರಿಗಳಂತೆ ವಿವೇಕ ಶೂನ್ಯನಾಗಿ, ವಿವಾದ–ಹೋರಾಟಗಳಿಗಾಗಿ, ಅನ್ಯಧರ್ಮಾತ್ಮನಿಗೆ ದುಃಖವನ್ನಿತ್ತು ತಾನು ಸುಖಿಯಾಗಬೇಕೆಂದು ದಾನ ಕೊಡುತ್ತಾನೋ, ಅವನು ಅಧಮ ದಾತೃನಾಗಿದ್ದಾನೆ. ಎಂದರೆ ಯಾವನು ಪರೀಕ್ಷಾಪೂರ್ವಕವಾಗಿ, ವಿದ್ವಾಂಸರಾದ ಧರ್ಮಾತ್ಮರ ಸತ್ಕಾರಮಾಡುವನೋ, ಅವನು ಉತ್ತಮತನು ಮತ್ತು ಯಾವನು ಪರೀಕ್ಷೆಮಾಡಲಿ ಅಥವಾ ಬಿಡಲಿ; ತನ್ನ ಪ್ರಶಂಸೆಯಾಗಬೇಕು–ಎಂದು ಕೊಡುತ್ತಾನೋ, ಅವನು ಮಧ್ಯಮನು ಮತ್ತು ಯಾವನು ಕಂಡಾಪಟ್ಟೆ, ಪರೀಕ್ಷೆಯನ್ನು ಮಾಡದೆ ನಿಷ್ಫಲವಾದ ದಾನವನ್ನು ಕೊಡುತ್ತಾ ಹೋಗುತ್ತಾನೋ, ಅವನು ನೀಚದಾತೃವೆನಿಸುತ್ತಾನೆ.

**ಪ್ರಶ್ನೆ:**– ದಾನದ ಫಲಗಳು ಇಲ್ಲಿ ಸಿಕ್ಕುತ್ತವೋ ಅಥವಾ ಪರಲೋಕದಲ್ಲಿವೆಯೋ?

**ಉತ್ತರ:**– ಎಲ್ಲೆಡೆಯೂ ಸಿಕ್ಕುತ್ತವೆ.

**ಪ್ರಶ್ನೆ:**– ಸ್ವತಃ ಸಿಕ್ಕತ್ತವೋ ಅಥವಾ ಯಾವನಾದರೂ ಫಲಕೊಡುವವನಿದ್ದಾನೆಯೋ?

**ಉತ್ತರ:**– ಫಲಗಳನ್ನು ಕೊಡುವವನು ಈಶ್ವರನು. ಹೇಗೆ ಕಳ್ಳನೂ, ದರೋಡೆಕೋರನೂ ಸ್ವತಃ ಕಾರಾಗೃಹಕ್ಕೆ ಹೋಗಲು ಬಯಸುವುದಿಲ್ಲವೋ, ಆದರೆ ಹೇಗೆ ರಾಜನು ಅವರನ್ನು ಅವಶ್ಯವಾಗಿ ಕಳುಹಿಸುತ್ತಾನೋ, ಧರ್ಮಾತ್ಮರುಗಳ ಸುಖವನ್ನು ರಕ್ಷಿಸುತ್ತಾನೋ ಮತ್ತು ಸವಿಯಿಸುತ್ತಾನೋ, ಡಕಾಯಿತರೇ ಮೊದಲಾದವರಿಂದ ಕಾಪಾಡಿ, ಅವರನ್ನು ಸುಖದಲ್ಲಿಡುತ್ತಾನೋ, ಹಾಗೆಯೇ ಪರಮಾತ್ಮನು ಎಲ್ಲರಿಗೂ ಪಾಪ–ಪುಣ್ಯಗಳ ದುಃಖಗಳು–ಸುಖಗಳು ಎಂಬ ಫಲಗಳನ್ನು ಯಥಾವತ್ತಾಗಿ ಕೊಡುತ್ತಾನೆ.

**ಪ್ರಶ್ನೆ :**– ಗರುಡಪುರಾಣ ಮೊದಲಾದ ಯಾವ ಈ ಗ್ರಂಥಗಳಿವೆಯೋ, ಅವು ವೇದಾರ್ಥವನ್ನು ಅಥವಾ ವೇದವನ್ನು ಪುಷ್ಟೀಕರಿಸುವಂತಹವೋ ಅಥವಾ ಅಲ್ಲವೋ?

**ಉತ್ತರ :**– ಅಲ್ಲ, ಆದರೆ, ವೇದಗಳ ವಿರೋಧಿಗಳಾಗಿವೆ ಮತ್ತು ವಿಪರೀತ ದಿಕ್ಕಿನಲ್ಲಿ ನಡೆಯುತ್ತವೆ. ಮತ್ತು ತಂತ್ರಗಳೂ ಹಾಗೆಯೇ ಇವೆ. ಹೇಗೆ ಯಾವನಾದರೂ ಒಬ್ಬ ಮಾನವನು ಒಬ್ಬನ ಮಿತ್ರನೂ ಮತ್ತು ಸಮಸ್ತ ಜಗತ್ತಿನ ಶತ್ರುವೂ ಆಗಿರುವನೋ,[೧೫೬] ಹಾಗೆಯೇ ಪುರಾಣಗಳನ್ನು ಮತ್ತು ತಂತ್ರವನ್ನು ಅಂಗೀಕರಿಸುವ ಪುರುಷನೂ ಆಗಿರುತ್ತಾನೆ. ಏಕೆಂದರೆ, ಒಬ್ಬನಿಂದ ಮತ್ತೊಬ್ಬನಿಗೆ ವಿರೋಧ ಹುಟ್ಟಿಸುವ ಗ್ರಂಥಗಳಾಗಿವೆ ಇವು. ಇವನ್ನು ಅಂಗೀಕರಿಸುವುದು ಯಾವನೇ ಮಾನವನಿಗೂ ಅರ್ಹವಾದ ಕಾರ್ಯವಲ್ಲ. ಆದರೆ, ಇವುಗಳನ್ನು ಅಂಗೀಕರಿಸುವುದು ಪಶುತ್ವದ, ಎಂದರೆ, ವಿವೇಕಹೀನತೆಯ ಕುರುಹಾಗಿದೆ.

ನೋಡಿರಿ, ಶಿವಪುರಾಣದಲ್ಲಿ ತ್ರಯೋದಶೀ ಸೋಮವಾರ, ಆದಿತ್ಯಪುರಾಣದಲ್ಲಿ ರವಿವಾರ, ಚಂದ್ರಖಂಡದಲ್ಲಿ ಸೋಮಗ್ರಹಯುಕ್ತ ಮಂಗಳವಾರ. ಬುಧವಾರ, ಬೃಹಸ್ಪತಿವಾರ, ಶುಕ್ರವಾರ, ಶನಿವಾರ, ರಾಹು, ಕೇತುಗಳಿದ್ದಾಗ, ವೈಷ್ಣವರಿಗೆ ಏಕಾದಶೀ ವಾಮನ–ದ್ವಾದಶೀ, ನೃಸಿಂಹನ ಅಥವಾ ಅನಂತನ ಚತುರ್ದಶೀ, ಚಂದ್ರ–ಪೂರ್ಣಿಮಾ, ದಿಕ್ಪಾಲಕರ ದಶಮೀ,

---

೧೫೫. ಹಿಂದಿಯಲ್ಲಿ ಇದಕ್ಕೆ– 'ಸಬ್ ಅನ್ನ ಬಾರಹ್ ಪಸೇರಿ' ಎಂಬ ವಾಗ್ದೋರಣೆಯನ್ನು ಪ್ರಯೋಗಿಸಲಾಗಿದೆ.

೧೫೬. ಪುರಾಣಗಳಿಗೆ ಮತ್ತು ತಂತ್ರಗ್ರಂಥಗಳಿಗೆ ಇದಕ್ಕಿಂತ ಯಥಾರ್ಥವಾದ ಉಪಮೆ ಎಲ್ಲಿ ಸಿಕ್ಕುತ್ತದೆ?

ದುರ್ಗಾನವಮೀ, ವಸುಗಳ ಅಷ್ಟಮೀ, ಮುನಿಗಳ ಸಪ್ತಮೀ, ಕಾರ್ತಿಕೇಯನ ಷಷ್ಠೀ, ನಾಗಪಂಚಮೀ, ಗಣೇಶಚತುರ್ಥೀ, ಗೌರೀತೃತೀಯಾ, ಅಶ್ವಿನೀಕುಮಾರ ದ್ವಿತೀಯಾ, ಆದ್ಯಾದೇವೀಪ್ರತಿಪದಾ ಮತ್ತು ಪಿತೃಗಳ ಅಮಾವಾಸ್ಯಾ ಈ ದಿನಗಳು ಉಪವಾಸ ಮಾಡಲು ಗೊತ್ತುಮಾಡಲ್ಪಟ್ಟಿವೆ, ಮತ್ತು ಎಲ್ಲೆಡೆಯೂ, "ಈ ವಾರಗಳಲ್ಲಿ ಮತ್ತು ತಿಥಿಗಳಲ್ಲಿ ಯಾವ ಮಾನವನು ಭೋಜನ–ಪಾನೀಯಗಳನ್ನು ತೆಗೆದುಕೊಳ್ಳುವನೋ! ಅವನು ನರಕಗಾಮಿಯಾಗುವನು".–ಎಂದೇ ಬರೆದಿದೆ. ಯಾವ ವಾರವೂ, ಅಥವಾ ಯಾವ ತಿಥಿಯಂದೂ ಭೋಜನವನ್ನು ಈಗ ಪೋಪರೂ ಮತ್ತು ಪೋಪರ ಅನುಯಾಯಿಗಳೂ ಮಾಡಬಾರದು. ಏಕೆಂದರೆ, ಭೋಜನವನ್ನು ಅಥವಾ ಪಾನವನ್ನು ಮಾಡಿದರೆ, ನರಕಗಾಮಿಗಳಾಗುವರು. ಈಗ 'ನಿರ್ಣಯಸಿಂಧು', 'ಧರ್ಮಸಿಂಧು', 'ವ್ರತಾರ್ಕ' ಮೊದಲಾದ ಪ್ರಮಾದಿಗಳಿಂದ ರಚಿತವಾದ ಗ್ರಂಥಗಳಲ್ಲಿಯೇ ಒಂದೊಂದು ವ್ರತಕ್ಕೂ ಎಂತಹ ದುರ್ಗತಿಯನ್ನು ತಂದು ಒಡ್ಡಿದ್ದಾರೆಂದರೆ, ಶೈವರು ಏಕಾದಶಿಯ್ನು ದಶಮೀವಿದ್ಧವೆನ್ನುತ್ತಾರೆ; ಹಲವರು ದ್ವಾದಶಿಯಂದು ಏಕಾದಶೀ ವ್ರತವನ್ನು ಆಚರಿಸುತ್ತಾರೆ! ಎಂದರೆ ಹಸಿವಿನಿಂದ ಮೃತರಾಗುವಲ್ಲಿಯೂ ಕೂಡ ವಾದವಿವಾದಗಳನ್ನೇ ಮಾಡುತ್ತಾರೆ! ಏನು ಮಹಾವಿಚಿತ್ರವಾದ ಪೋಪಲೀಲೆ! ಯಾವನು ಏಕಾದಶೀ ವ್ರತವನ್ನು ಪ್ರಚಲಿತವಾಗಿ ಮಾಡಿದ್ದಾನೋ, ಅವನು ಅದರಲ್ಲಿ ತನ್ನ ಸ್ವಾರ್ಥವನ್ನೇ ಒಡ್ಡಿದ್ದಾನೆ ಮತ್ತು ದಯೆ ಸ್ವಲ್ಪವೂ ಇಲ್ಲ. ಅವರೆನ್ನುತ್ತಾರೆ:–

**ಏಕಾದಶ್ಯಾಮನ್ನೇ ಪಾಪಾನಿ ವಸಂತಿ ।**

ಎಷ್ಟು ಪಾಪಗಳಿವೆಯೋ, ಅವೆಲ್ಲವೂ ಏಕಾದಶಿಯ ಅನ್ನದಲ್ಲಿ, ಆಹಾರದಲ್ಲಿ ನೆಲೆಸುತ್ತವೆ! ಪೋಪಮಹಾಶಯರನ್ನು– "ಯಾವನ ಪಾಪಗಳು ಅದರಲ್ಲಿ ಬಂದು ನೆಲೆಸುತ್ತವೆ? ನಿಮ್ಮವೋ ಅಥವಾ ನಿಮ್ಮ ತಂದೆ ಮೊದಲಾದವರವೋ"?–ಎಂದು ಪ್ರಶ್ನಿಸಬೇಕು. ಸರ್ವಸಮಸ್ತಪಾಪಗಳೂ ಏಕಾದಶಿಯಲ್ಲಿ ಹೋಗಿ ನೆಲೆಸುವುದಾದರೆ, ಏಕಾದಶಿಯಂದು ಯಾರಿಗೂ ದುಃಖವಿರಬಾರದು. ಹೀಗೇನೂ ಆಗುವುದಿಲ್ಲ; ಪ್ರತಿಯಾಗಿ ಹಸಿವು–ಮೊದಲಾದುದರಿಂದ ದುಃಖ ಉಂಟಾಗುತ್ತದೆ. ದುಃಖವು ಪಾಪದ ಫಲವಾಗಿದೆ. ಆದುದರಿಂದ ಹಸಿದು ಸಾಯುವುದು ಪಾಪವಾಗಿದೆ. ಇದರ ಮಹಾತ್ಮ್ಯವನ್ನು ದೊಡ್ಡದಾಗಿ ಮಾಡಿಟ್ಟಿದ್ದಾರೆ. ಅದರ ಕಥೆಯನ್ನೋದಿ ಬಹುಮಂದಿ ಮೋಸಹೋಗುತ್ತಾರೆ, ಅದರಲ್ಲಿ ಈ ಒಂದು ಕಥೆಯಿದೆ:–[೧೫೭]

ಬ್ರಹ್ಮಲೋಕದಲ್ಲಿ ಒಬ್ಬಳು ವೇಶ್ಯೆಯಿದ್ದಳು. ಅವಳು ಏನೋ ಅಪರಾಧ ಮಾಡಿದಳು. ಅವಳಿಗೆ "ಭೂಲೋಕದಲ್ಲಿ ಜನ್ಮವೆತ್ತು"– ಎಂಬ ಶಾಪವಿತ್ತನು. "ನಾನು ಪುನಃ ಸ್ವರ್ಗಕ್ಕೆ ಹೇಗೆ ಬರಬಲ್ಲೆನು"? – ಎಂದು ಸ್ತುತಿಪೂರ್ವಕವಾಗಿ ಕೇಳಿಕೊಂಡಳು. ಆಗ ಅವನು– "ಯಾವಾಗ ಯಾವನಾದರೂ ಒಬ್ಬನು ಏಕಾದಶೀ ವ್ರತದ ಫಲವನ್ನು ನಿನಗೆ ಕೊಡುವನೋ, ಆಗಲೇ ನೀನು ಸ್ವರ್ಗಕ್ಕೆ ಬಂದುಬಿಡುವೆ". ಎಂದು ಹೇಳಿದನು. ಅವಳು ವಿಮಾನಸಹಿತ ಯಾವದೋ ನಗರದಲ್ಲಿ ಬಂದುಬಿದ್ದಳು. ಅಲ್ಲಿನ ರಾಜನು ಅವಳನ್ನು – "ನೀನು ಯಾವಳು"? ಎಂದು ಕೇಳಿದನು. ಆಗ ಅವಳು ಸಮಸ್ತ ವೃತ್ತಾಂತವನ್ನೂ ಹೇಳಿ ಶ್ರುತಪಡಿಸಿದಳು ಮತ್ತು 'ಯಾವನಾದರೂ ತನ್ನ ಏಕಾದಶೀ ಫಲವನ್ನು ನನಗೆ ಅರ್ಪಿಸಿದರೆ, ಮರಳಿ ಸ್ವರ್ಗಕ್ಕೆ ಹೋಗಬಲ್ಲೆನು'. ಎಂದು ಹೇಳಿದಳು. ರಾಜನು ನಗರದಲ್ಲಿ ಹುಡುಕಿಸಿದನು, ಏಕಾದಶೀ ವ್ರತಮಾಡುವವನು ಯಾವನೂ ಸಿಕ್ಕಲಿಲ್ಲ. ಆದರೆ, ಒಂದು ದಿನ ಯಾರೋ ಶೂದ್ರ ದಂಪತಿಗಳಲ್ಲಿ ಜಗಳವಾಗಿದ್ದಿತು. ಕೋಪದಿಂದ ಸ್ತ್ರೀಯು ಹಗಲೂ ರಾತ್ರಿ ಹಸಿದೇ ಇದ್ದಳು. ದೈವಯೋಗದಿಂದ ಅಂದು ಏಕಾದಶೀ ಆಗಿದ್ದಿತು. ಅವಳು "ನಾನು ಏಕಾದಶೀ ತಿಳಿದೇನೋ ಉಪವಾಸವಿರಲಿಲ್ಲ;[೧೫೮] ಅಕಸ್ಮಾತ್ತಾಗಿ ಆ ದಿನ ಉಪವಾಸ ಮಾಡಿದ್ದೆನು". ಎಂದು ರಾಜನ ಸೈನಕರಿಗೆ ಹೇಳಿದಳು. ಆಗ ಅವರು ಅವಳನ್ನು ರಾಜನೆದುರಿಗೆ ಕೊಂಡೊಯ್ದರು; ಅವಳಿಗೆ ರಾಜನು 'ನೀನು ಈ ವಿಮಾನವನ್ನು ಮುಟ್ಟು' – ಎಂದನು. ಅವಳು ಮುಟ್ಟಿದಳು; ಅದೇ ಕ್ಷಣ ವಿಮಾನ ಮೇಲಕ್ಕೆ ಹಾರಿ ಹೋಯಿತು. ಇದಾದರೂ ತಿಳಿಯದೆಯೇ ಮಾಡಿದ ಏಕಾದಶಿಯ ವ್ರತದ ಫಲವಾಗಿದೆ. ಇನ್ನು ತಿಳಿದುಕೊಂಡು ಮಾಡುವುದಾರೆ, ಅದರ ಫಲದ ಇತಿಮಿತಿ ಏನಿದ್ದೀತು? ಭಲೇ ಕಣ್ಣುಗಳಿದ್ದೂ ನೋಡಲಾರದ ಮುಗ್ಧರೇ! ಈ ಮಾತು ಸತ್ಯವಾಗಿದ್ದರೆ, ನಾವು ಸ್ವರ್ಗದಲ್ಲಿಲ್ಲದ ವೀಳೆಯದೆಲೆಯ ಸುರುಳಿಯೊಂದನ್ನು ಕಳುಹಿಸಲಪೇಕ್ಷಿಸುತ್ತೇವೆ. ಏಕಾದಶಿಯವರೆಲ್ಲಾ ನಿಮ್ಮ ಫಲವನ್ನು ಕೊಡಿರಿ, ಒಂದು ವೀಳೆಯದೆಲೆಯ ಸುರುಳಿ ಮೇಲಕ್ಕೆ ಹೊರಟುಹೋಗುವುದಾದರೆ, ಮತ್ತೆ ಲಕ್ಷಾಂತರ, ಕೋಟ್ಯಂತರ ಸುರುಳಿಗಳನ್ನು ಅಲ್ಲಿಗೆ ಕಳುಹಿಸುವೆವು; ಮತ್ತು ನಾವೂ ಕೂಡ ಏಕಾದಶಿಯ ಆಚರಣೆಮಾಡುತ್ತಾ ಹೋಗುವೆವು. ಮತ್ತು ಹೀಗೆ ಆಗದಿದ್ದರೆ, ನಿಮ್ಮಗಳನ್ನು ಹಸಿದು ಸಾಯುವುದೆಂಬ ಈ ಆಪತ್ಕಾಲದಿಂದ ದೂರವಿಟ್ಟು ರಕ್ಷಿಸುವೆವು.

---

೧೫೭. ಈ ತರಹದ ಒಂದು ಕಥೆ 'ಭಕ್ತಮಾಲ'ದ ತಿಲಕ್ ಟೀಕಾದಲ್ಲಿದೆ. ಪುಟ ೧೬೨.೧೬೩.

೧೫೮. ಎಂದರೆ, ಉಪವಾಸವಿರಲಿಲ್ಲ. ಎಂದರ್ಥ.

ಈ ೨೪ ಏಕಾದಶಿಗಳಿಗೆ ಬೇರೆ ಬೇರೆ ಹೆಸರುಗಳನ್ನಿಟ್ಟಿದ್ದಾರೆ.[೧೫೯] ಒಂದಕ್ಕೆ 'ಧನದಾ' ಎಂದೂ, ಇನ್ನೊಂದಕ್ಕೆ 'ಕಾಮದಾ' ಎಂದೂ, ಮತ್ತೊಂದಕ್ಕೆ 'ಪುತ್ರದಾ' ಎಂದೂ, ಮಗದೊಂದಕ್ಕೆ 'ನಿರ್ಜಲಾ' ಎಂದೂ ಹೆಸರು! ಬಹುಮಂದಿ ದರಿದ್ರರು, ಬಹಳ ಜನ ಕಾಮಿಗಳು, ಮತ್ತು ಬಹಳ ಜನ ನಿಃಸಂತಾನರಾದವರು ಏಕಾದಶೀ ಮಾಡಿ ವೃದ್ಧರಾಗಿ ಹೋದರು ಮತ್ತು ಮೃತರೂ ಆದರು. ಆದರೆ, ಧನ, ಕಾಮನೆ, ಮತ್ತು ಪುತ್ರರು ಸಿಕ್ಕಲಿಲ್ಲ. ಮತ್ತು ಯಾವಾಗ ಘಟಿಕಾ ಮಾತ್ರಕ್ಕೂ ನೀರು ಸಿಕ್ಕದಾದರೆ ಮಾನವ ವ್ಯಾಕುಲನಾಗಿ ಹೋಗುತ್ತಾನೋ, ಆ ಜ್ಯೇಷ್ಠಮಾಸದ ಶುಕ್ಲಪಕ್ಷದಲ್ಲಿ ವ್ರತಮಾಡುವವರಿಗೆ ಮಹಾದುಃಖವು ಪ್ರಾಪ್ತವಾಗುತ್ತದೆ. ಅದರಲ್ಲಿಯೂ ಬಂಗಾಳದಲ್ಲಿ ವಿಧವಾ ಸ್ತ್ರೀಯರೆಲ್ಲರಿಗೂ ಏಕಾದಶಿಯಂದು ಮಹಾ ದುರ್ಗತಿಯುಂಟಾಗುತ್ತದೆ. ಈ ನಿರ್ದಯನಾದ ಕಟುಕನಿಗೆ ಬರೆಯುವ ಕಾಲದಲ್ಲಿ, ಮನದಲ್ಲಿ ಸ್ವಲ್ಪವೂ ದಯೆಬಾರಲಿಲ್ಲ. ಅಲ್ಲದಿದ್ದರೆ, ನಿರ್ಜಲಾ ಏಕಾದಶಿಗೆ 'ಸಜಲಾ' ಎಂದು ಹೆಸರಿಟ್ಟು ಪುಷ್ಯಮಾಸದ ಶುಕ್ಲಪಕ್ಷದ ಏಕಾದಶಿಗೆ 'ನಿರ್ಜಲಾ' ಹೆಸರಿಟ್ಟಿದ್ದರೂ ಸ್ವಲ್ಪ ಒಳಿತಾಗುತ್ತಿತ್ತು. ಆದರೆ, ಈ ಪೋಪರಿಗೆ ದಯೆಯ ಗೋಜೇನು? "ಯಾರಾದರೂ ಜೀವಿಸಿರಿ ಅಥವಾ ಸಾಯಿರಿ; ಪೋಪರ ಹೊಟ್ಟೆಯನ್ನಂತೂ ಪೂರ್ಣವಾಗಿ ತುಂಬಿಸಿರಿ!" ಆಯಿತು. ಗರ್ಭವತಿಯು ಅಥವಾ ನವವಿವಾಹಿತೆಯಾದ ನಾರಿ, ಹುಡುಗರು ಅಥವಾ ಯುವಕರಾದ ಪುರುಷರಂತೂ, ಎಂದೂ ಉಪವಾಸಮಾಡಬಾರದು, ಆದರೆ ಯಾರಾದರೂ ಮಾಡಬೇಕಾದರೂ ಕೂಡ, ಎಂದು ಅಜೀರ್ಣವಾಗಿರುವುದೋ, ಹಸಿವಾಗದೋ, ಆದಿನ ಶರಬತನ್ನು ಅಥವಾ ಹಾಲನ್ನು ಕುಡಿದು ನಿರ್ವಹಿಸಬೇಕು. **ಯಾರು ಹಸಿವೆಯಿರುವಾಗ ಉಣ್ಣುವುದಿಲ್ಲವೋ ಮತ್ತು ಯಾರು ಹಸಿವೆಯಿಲ್ಲದಾಗ ಭೋಜನ ಮಾಡುತ್ತಾರೋ, ಅವರಿಬ್ಬರೂ ರೋಗಸಾಗರದಲ್ಲಿ ಮುಳುಗಿ, ದುಃಖಪಡುತ್ತಾರೆ**. ಈ ಪ್ರಮಾದಿಗಳ ಕಥನ – ಲೇಖನವನ್ನು ಯಾವನೂ ಕೂಡ ಪ್ರಮಾಣೀಕರಿಸಬಾರದು.

---

| | | | |
|---|---|---|---|
| ೧೫೯. | ಮಾರ್ಗಶಿರಾ ಕೃಷ್ಣಪಕ್ಷ | – | ಸಂವತ್ಸರ ದೀಪವ್ರತಾ |
| " | ಶುಕ್ಲಪಕ್ಷ | – | ಮೋಕ್ಷದಾ |
| | ಪುಷ್ಯ. ಕೃ | – | ಸಫಲಾ |
| | ಪುಷ್ಯ. ಶು | – | ಪುತ್ರದಾ |
| | ಮಾಘ ಕೃ | – | ಷಟ್ ತಿಲಾ |
| " | ಶು | – | ಜಯಾ |
| | ಫಾಲ್ಗುಣ. ಕೃ | – | ವಿಜಯಾ |
| " | ಶು | – | ಅಮಲಕೀ |
| | ಚೈತ್ರ ಕೃ | – | ಪಾಪವಿಮೋಚನೀ |
| " | ಶು | – | ಕಾಮದಾ |
| | ವೈಶಾಖ ಕೃ | – | ರೂಪಿಣೀ |
| " | ಶು | – | ಮೋಹಿನಿ |
| | ಜೇಷ್ಠ ಕೃ | – | ಅಪರಾ |
| | ಜೇಷ್ಠ ಶು | – | ನಿರ್ಜಲಾ |
| | ಆಷಾಢ ಕೃ | – | ಯೋಗಿನಿ |
| " | ಶು | – | ಶಾಯಿನೀ |
| | ಶ್ರಾವಣ. ಕೃ | – | ಕಾಮಿಕಾ |
| " | ಶು | – | ಪುತ್ರದಾ |
| | ಭಾದ್ರಪದಾ ಕೃ | – | ಅಜಾ |
| " | ಶು | – | ಪದ್ಮಾ |
| | ಆಶ್ವಯುಜ.ಕೃ | – | ಇಂದ್ರಾ |
| " | ಶು | – | ಪಾಪಂಕುಶಾ |
| | ಕಾರ್ತಿಕ ಕೃ | – | ರಮಾ |
| " | ಶು | – | ಪ್ರಬೋಧಿನಿ. |

"ಸತ್ಯಾರ್ಥಪ್ರಕಾಶ" ಸ್ವಾಮಿ ವೇದಾನಂದ ಸಂಸ್ಕರಣ. ಪುಟ ೩೧೨.

ಈಗ ಗುರು-ಶಿಷ್ಯ-ಮಂತ್ರೋಪದೇಶದ ಮತ್ತು ಮತಮತಾಂತರಗಳ ಚರಿತ್ರೆಗಳ ಸಮಾಚಾರವನ್ನು ಹೇಳುತ್ತೇವೆ. ಪ್ರತಿಮಾಪೂಜಕರಾದ ಸಾಂಪ್ರದಾಯಿಕರು – 'ವೇದಗಳು ಅನಂತವಾಗಿವೆ.[೧೬೦] ಋಗ್ವೇದಕ್ಕೆ ೨೧, ಯಜುರ್ವೇದಕ್ಕೆ ೧೦೧, ಸಾಮವೇದಕ್ಕೆ ೧,೦೦೦ ಮತ್ತು ಅಥರ್ವವೇದಕ್ಕೆ ೯ ಶಾಖೆಗಳಿವೆ.[೧೬೧] ಇವುಗಳಲ್ಲಿ ಸ್ವಲ್ಪ ಶಾಖೆಗಳು ಸಿಕ್ಕುತ್ತವೆ. ಉಳಿದುವು ಲುಪ್ತವಾಗಿ ಹೋಗಿವೆ. ಅವುಗಳಲ್ಲಿಯೇ ಪ್ರತಿಮಾರ್ಚನೆಯ ಮತ್ತು ತೀರ್ಥಗಳ ಪ್ರಮಾಣವಿರುವುದು. ಇಲ್ಲದೆಯೇ ಇದ್ದಿದ್ದರೆ, ಪುರಾಣಗಳಲ್ಲಿ ಎಲ್ಲಿಂದ ಬರುತ್ತಿದ್ದಿತು? ಯಾವಾಗ ಕಾರ್ಯವನ್ನು ನೋಡಿ ಕಾರಣದ ಅನುಮಾನ ಉಂಟಾಗುತ್ತದೋ, ಆಗ ಪುರಾಣಗಳನ್ನು ನೋಡಿ, ಪ್ರತಿಮಾಪೂಜನದ[೧೬೨] ಬಗೆಗೆ ಇರಬಹುದಾದ ಆದೇಶದ ವಿಷಯದಲ್ಲಿ ಸಂದೇಹವಾದರೂ ಏತಕ್ಕೆ"? ಎಂದು ಕೇಳುತ್ತಾರೆ.

**ಉತ್ತರ :–** ಶಾಖೆ ಯಾವ ವೃಕ್ಷದ್ದಾಗಿರುತ್ತದೋ, ಅದರಂತೆಯೇ ಇರುತ್ತದೆ; ವಿರುದ್ಧವಾಗಿಯಲ್ಲ. ಶಾಖೆ ಚಿಕ್ಕದಾಗಿರಲಿ, ದೊಡ್ಡದಾಗಿರಲಿ; ಆದರೆ, ಅವುಗಳಲ್ಲಿ ವಿರೋಧವಿರಲಾರದು. ಹಾಗೆಯೇ, ಎಷ್ಟು ಶಾಖೆಗಳು ಸಿಕ್ಕುತ್ತವೋ ಅವುಗಳಲ್ಲಿ ಯಾವಾಗ ಶಿಲೆಯೇ ಮೊದಲಾದವರ ಪ್ರತಿಮೆಯ ಮತ್ತು ಜಲ-ಸ್ಥಳ-ವಿಶೇಷ ತೀರ್ಥಗಳ ಪ್ರಮಾಣ ಸಿಕ್ಕುವುದಿಲ್ಲವೋ, ಆಗ ಆ ಲುಪ್ತಶಾಖೆಗಳಲ್ಲಿಯೂ ಕೂಡ ಇದ್ದಿರಲಾರದು. ಮತ್ತು ನಾಲ್ಕು ವೇದಗಳೂ ಪೂರ್ಣವಾಗಿ ಸಿಕ್ಕುತ್ತವೆ. ಅವುಗಳಿಗೆ ವಿರುದ್ಧವಾಗಿ ಶಾಖೆಗಳು ಎಂದಿಗೂ ಇರಲಾರವು. ಮತ್ತು ಯಾವವು ವಿರುದ್ಧವಾಗಿವೆಯೋ, ಅವುಗಳನ್ನು ಯಾವನೂ ಶಾಖೆಗಳೆಂದು ಸಿದ್ಧಪಡಿಸಲಾರದು. ವಸ್ತುಸ್ಥಿತಿ ಹೀಗಿರುವಾಗ, ಪುರಾಣಗಳು ವೇದಗಳ ಶಾಖೆಗಳಲ್ಲ; ಆದರೆ ಸಾಂಪ್ರದಾಯಿಕ ಜನರು ಪರಸ್ಪರ ವಿರುದ್ಧವಾದ ರೂಪದಲ್ಲಿ ಗ್ರಂಥಗಳನ್ನು ರಚಿಸಿಟ್ಟಿದ್ದಾರೆ.

ವೇದಗಳನ್ನು ನೀವು ಪರಮೇಶ್ವರಕೃತವೆಂದು ಒಪ್ಪುವಿರಾದರೆ, ಆಶ್ವಲಾಯನರೇ ಮೊದಲಾದ ಋಷಿ-ಮುನಿಗಳ ಹೆಸರಿನಿಂದ ಪ್ರಸಿದ್ಧವಾದ ಗ್ರಂಥಗಳನ್ನು ವೇದಗಳೆಂದೇಕೆ ಗ್ರಹಿಸುತ್ತೀರಿ? ಹೇಗೆ ಕೊಂಬೆಗಳನ್ನು ಮತ್ತು ಎಲೆಗಳನ್ನು ನೋಡುವುದರಿಂದ ಅರಳಿ, ಅಲ ಮತ್ತು ಮಾವು ಮೊದಲಾದ ಮರಗಳ ಗೊತ್ತು ಹತ್ತುವುದೋ, ಹಾಗೆಯೇ ಋಷಿ-ಮುನಿಗಳಿಂದ ರಚಿತವಾದ ವೇದಾಂಗಗಳು, ನಾಲ್ಕು ಬ್ರಾಹ್ಮಣಗಳು, ಅಂಗಗಳು, ಉಪಾಂಗಗಳು ಮತ್ತು ಉಪವೇದಗಳು-ಮೊದಲಾದವುಗಳಿಂದ ವೇದಾರ್ಥವು ಗುರುತಿಸಲ್ಪಡುತ್ತದೆ. ಇದೇ ಕಾರಣದಿಂದ ಈ ಗ್ರಂಥಗಳನ್ನು ಶಾಖೆಗಳೆಂದು ಅಂಗೀಕರಿಸಿದ್ದಾರೆ. ಯಾವುದು ವೇದವಿರುದ್ಧವಾಗಿದೆಯೋ ಅದರ ಪ್ರಮಾಣ ಮತ್ತು ಅನುಕೂಲವಾದುದರ ಅಪ್ರಮಾಣ ಸಿದ್ಧವಾಗಲಾರದು.[೧೬೩] ನೀವು ಅದೃಷ್ಟವಾದ,[೧೬೪] ಎಂದರೆ ಕಾಣಿಸದಿರುವ ಶಾಖೆಗಳಲ್ಲಿ ಪ್ರತಿಮೆ-ಮೊದಲಾದುದರ ಪ್ರಮಾಣದ ಕಲ್ಪನೆಯನ್ನು

---

೧೬೦. ಅನಂತಾ ವೈ ವೇದಾಃ – ತೈತ್ತಿರೀಯ ಬ್ರಾಹ್ಮಣ [೮.೧೦.೧೧.೩] ಯು.ಮೀ.

೧೬೧. ಮಹಾಭಾಷ್ಯ [೧.೧.೧] ವನ್ನು ನೋಡಿ. ಇಲ್ಲಿ ಎಣಿಸಿರುವುದು ಕೃಷ್ಣ ದ್ವೈಪಾಯನ ವ್ಯಾಸರ ಶಿಷ್ಯ-ಶಿಷ್ಯರಿಂದ ಪ್ರವಚನ ಮಾಡಲ್ಪಟ್ಟ ಶಾಖೆಗಳದು. ವ್ಯಾಸರಿಗಿಂತ ಪ್ರಾಚೀನ ವಾದ ಶಾಖೆಗಳು ಲುಪ್ತವಾಗಿ ಹೋದವು. ಉಪಲಬ್ಧ ಐತರೇಯ ಬ್ರಾಹ್ಮಣದ ಸಂಬಂಧ ಪ್ರಾಚೀನ ಐತರೇಯ ಶಾಖೆಯೊಂದಿಗಿತ್ತು. ಈ ಶಾಖೆ ಲುಪ್ತವಾಗಿ ಹೋಯಿತು. ಶಾಖೆಗಳ ಮತ್ತು ಬ್ರಾಹ್ಮಣಗಳ ಪ್ರವಚನವು ಬ್ರಹ್ಮಾನ ಸಮಯದಿಂದಲೇ ಆರಂಭವಾಗಿ, ಕೃಷ್ಣ ದ್ವೈಪಾಯನ ವ್ಯಾಸರ ಶಿಷ್ಯ-ಪ್ರಶಿಷ್ಯರ ತನಕ ನಡೆದು ಬಂದಿತು. ನೋಡಿರಿ. 'ಸಂಸ್ಕೃತ ವ್ಯಾಕರಣ ಶಾಸ್ತ್ರ ಕಾ ಇತಿಹಾಸ್' ಭಾಗ ೧, ಪುಟ ೨೫೦-ಯು.ಮೀ.

ಉಪಲಬ್ಧ ಶಾಖೆಗಳು ಈ ರೀತಿ ಇವೆ-

ಋಗ್ವೇದದ –ಶಾಕಲ ಮತ್ತು ಶಾಂಖಾಯನ;

ಶುಕ್ಲಯಜುರ್ವೇದದ –ಮಾಧ್ಯಂದಿನ ಮತ್ತು ಕಾಣ್ವ;

ಕೃಷ್ಣ ಯಜುರ್ವೇದದ– ತೈತ್ತಿರೀಯ [= ಅಪಸ್ತಂಬೀ], ಮೈತ್ರಾಯಣೀ, ಕಾಠಕ, ಕಠ, ಕಪಿಷ್ಠಲ ;

ಸಾಮವೇದದ –ಕೌಥುಮೀ ಮತ್ತು ರಾಣಾಯನೀ;

ಅಥರ್ವವೇದದ –ಶೌನಕ ಮತ್ತು ಪಿಪ್ಪಲಾದ– ಯು.ಮೀ.

೧೬೨. ಬಗೆಗೆ ಇರಬಹುದಾದ ಆದೇಶದಲ್ಲಿ

೧೬೩. ಇದಕ್ಕೆ ಜೈಮಿನಿ ಆಚಾರ್ಯರ ಪ್ರಸಿದ್ಧ ನ್ಯಾಯವೇನೆಂದರೆ-' ವಿರೋಧೇ ತ್ವ ನಪೇಕ್ಷಂ ಸ್ಯಾದಸತಿಹ್ಯನುಮಾನಮ್' ಎಂದು ಮೀಮಾಂಸಾ [೧.೩.೨] ಯು.ಮೀ.

೧೬೪. ಎಂದರೆ ಕಾಣಿಸದಿರುವ

ಮಾಡಿಕೊಳ್ಳುವುವಿರಾದರೆ, ಯಾವನಾದರೂ-"ಲುಪ್ತವಾದ ಶಾಖೆಗಳಲ್ಲಿ ವರ್ಣಾಶ್ರಮಗಳ ವ್ಯವಸ್ಥೆ ತಲೆಕೆಳಗಾಗಿದ್ದಿತು. ಎಂದರೆ, ಅತ್ಯಂತ ಕೀಳು ಮಟ್ಟದವರ ಮತ್ತು ಜ್ಞಾನವಿಮುಖರಾದವರ ಹೆಸರು ಬ್ರಾಹ್ಮಣರೆಂದೂ, ಬ್ರಹ್ಮಜ್ಞಾನಯುಕ್ತರೂ, ಕ್ಷಾತ್ರತೇಜೋಯುಕ್ತರೂ, ಕೃಷಿ-ವಾಣಿಜ್ಯ ಮೊದಲಾದ ವೃತ್ತಿಗಳಲ್ಲಿ ನಿರತರಾದವರೂ ಕೀಳು ಮಟ್ಟದವರು ಮತ್ತು ಮಂದಮತಿಗಳು - ಎಂದೂ, ಹೋಗಬಾರದವಳ ಬಳಿ ಹೋಗುವುದು, ಮಾಡಬಾರದುದನ್ನು ಮಾಡುವುದು, ಸುಳ್ಳನ್ನಾಡುವುದು -ಮೊದಲಾದುದು ಧರ್ಮವೆಂದೂ, ಸತ್ಯಭಾಷಣ-ಮೊದಲಾದುದು ಅಧರ್ಮವೆಂದೂ, ಬರೆದಿರಬಹುದು". ಎಂಬ ಪಕ್ಷವನ್ನು ಹಿಡಿದಲ್ಲಿ, ನೀವು ಕೂಡ ನಾವು ಉತ್ತರ ಕೊಟ್ಟಂತೆಯೇ, ಎಂದರೆ "ವೇದಗಳಲ್ಲಿ ಮತ್ತು ಪ್ರಸಿದ್ಧವಾದ ಶಾಖೆಗಳಲ್ಲಿ ಬ್ರಹ್ಮಜ್ಞಾನ ಮೊದಲಾದುದನ್ನುಳ್ಳವರನ್ನು, ಬ್ರಾಹ್ಮಣರೆಂದೂ, ಜ್ಞಾನಹೀನರನ್ನು ಶೂದ್ರರು ಮೊದಲಾದವರೆಂದೂ ಬರೆದಿರುವಂತೆಯೇ ಅದೃಷ್ಟವಾದ, ಎಂದರೆ ಲುಪ್ತವಾದ ಶಾಖೆಗಳಲ್ಲಿಯೂ ಬರೆದಿದ್ದಿತೆಂದು ಗ್ರಹಿಸಬೇಕು. ಇಲ್ಲವಾದರೆ, ವರ್ಣಾಶ್ರಮ ವ್ಯವಸ್ಥೆ-ಮೊದಲಾದುವೆಲ್ಲಾ ವಿಕೃತವಾಗಿ ಹೋಗುವವು" - ಎಂದೇ ಉತ್ತರ ಕೊಡುವಿರಿ.

ಒಳ್ಳೆಯದು; ಜೈಮಿನಿ, ವ್ಯಾಸ ಪತಂಜಲಿಗಳ ಕಾಲದವರೆಗಾದರೂ ಎಲ್ಲ ಸಾಖೆಗಳೂ ಇದ್ದುವೋ ಅಥವಾ ಇಲ್ಲವೋ? ಇದ್ದುವಾದರೆ, ನೀವು ಎಂದಿಗೂ ನಿಷೇಧ ಮಾಡಲಾರಿರಿ. ಮತ್ತು ಇರಲಿಲ್ಲ-ಎನ್ನುವಿರಾದರೆ, ಆ ಶಾಖೆಗಳ ಇರುವಿಕೆಗೆ ಪ್ರಮಾಣವೇನಿದೆ? ನೋಡಿರಿ, ಜೈಮಿನಿಯ ಮೀಮಾಂಸಾಶಾಸ್ತ್ರದಲಲಿ ಸಮಸ್ತ ಕರ್ಮಕಾಂಡವನ್ನೂ, ಪತಂಜಲಿ ಮುನಿಯು ಯೋಗಶಾಸ್ತ್ರದಲ್ಲಿ ಸಮಸ್ತ ಉಪಾಸನಾಕಾಂಡವನ್ನೂ, ಮತ್ತು ವ್ಯಾಸಮುನಿಯು ಶಾರೀರಸೂತ್ರಗಳಲ್ಲಿ ಸಮಸ್ತ ಜ್ಞಾನಕಾಂಡವನ್ನೂ ವೇದಾನುಕೂಲವಾಗಿ ಬರೆದಿದ್ದಾರೆ. ಅವುಗಳಲ್ಲಿ ಶಿಲೆ-ಮೊದಲಾದುವುಗಳ ಪ್ರತಿಮೆಗಳ ಪೂಜನದ ಅಥವಾ ಪ್ರಯಾಗ-ಮೊದಲಾದ ತೀರ್ಥಗಳ ಹೆಸರು-ನೆರಳುಗಳನ್ನು ಕೂಡ ಬರೆದಿಲ್ಲ. ಬರೆಯುವರಾದರೂ ಎಲ್ಲಿಂದ? ವೇದಗಳಲ್ಲಿ ಎಲ್ಲಿಯಾದರೂ ಇದ್ದಿದ್ದರೆ, ಎಂದಿಗೂ ಬರೆಯದೆ ಬಿಡುತ್ತಿರಲಿಲ್ಲ. ಆದುದರಿಂದ, ಲುಪ್ತಶಾಖೆಗಳಲ್ಲಿಯೂ ಕೂಡ ಈ ಪ್ರತಿಮಾಪೂಜನಾದಿಗಳ ಪ್ರಮಾಣವಿರಲಿಲ್ಲ. ಈ ಎಲ್ಲಾ ಶಾಖೆಗಳೂ ವೇದಗಳಲ್ಲ; ಏಕೆಂದರೆ, ಇವುಗಳಲ್ಲಿ ಈಶ್ವರ ಕೃತವಾದ ವೇದಗಳ ಪ್ರತೀಕವನ್ನು[೧೬೫] ಉದ್ಧರಿಸಿ ವ್ಯಾಖ್ಯಾನವನ್ನೂ ಮತ್ತು ಸಾಂಸಾರಿಕರ ಬೋಧಕ್ಕಾಗಿ ಇತಿಹಾಸಗಳನ್ನೂ ಬರೆದಿದ್ದಾರೆ. ಆದುದರಿಂದ, ಈ ಶಾಖೆಗಳನ್ನು ಎಂದಿಗೂ ವೇದಗಳಲ್ಲಿ ಎಣಿಸಲು ಸಾಧ್ಯವಿಲ್ಲ. ವೇದಗಳಲ್ಲಿಯಾದರೋ ಮಾನವರಿಗಾಗಿ ಕೇವಲ ವಿದ್ಯೆಯ ಉಪದೇಶವನ್ನು ಮಾಡಲಾಗಿದೆ; ಯಾವನೇ ಮಾನವನ ಹೆಸರು ಕೂಡ[೧೬೬] ಇಲ್ಲ. ಆದುದರಿಂದ, ಪ್ರತಿಮಾಪೂಜನದ ಖಂಡನ ಎಲ್ಲ ರೀತಿಯಲ್ಲಿ ಸಿದ್ಧವಾಗಿದೆ.

ನೋಡಿರಿ! ಪ್ರತಿಮಾಪೂಜನದಿಂದ ಶ್ರೀರಾಮಚಂದ್ರ, ಶ್ರೀಕೃಷ್ಣ, ನಾರಾಯಣ ಮತ್ತು ಶಿವ-ಮೊದಲಾದವರ ಮಹಾನಿಂದೆ ಮತ್ತು ಅಪಹಾಸ್ಯವಾಗುತ್ತದೆ.[೧೬೭] ಸರ್ವರೂ "ಅವರು ಮಹಾರಾಜಾಧಿರಾಜರಾಗಿದ್ದರು ಮತ್ತು ಅವರ ಪತ್ನಿಯರಾದ ಸೀತಾ ಮತ್ತು ರುಕ್ಮಿಣೀ, ಲಕ್ಷ್ಮೀ ಮತ್ತು ಪಾರ್ವತೀ ಮೊದಲಾದವರು ಮಹಾರಾಣಿಯರಾಗಿದ್ದರು"-ಎಂದು ಬಲ್ಲರು. ಆದರೆ, ಅವರ ಪ್ರತಿಮೆಗಳನ್ನು ದೇವಾಲಯ ಮೊದಲಾದೆಡೆ ಸ್ಥಾಪಿಸಿ, ಪೂಜಾರಿಗಳು ಅವರುಗಳ ಹೆಸರಿನ ಮೇಲೆ ಭಿಕ್ಷೆ ಬೇಡುತ್ತಾರೆ. ಎಂದರೆ, "ಬನ್ನಿ ಮಹಾರಾಜರೇ, ಮಹಾಮಾನನೀಯರೇ! ಸೇಠರೇ! ಸಾಹುಕಾರರೇ! ದರ್ಶನಮಾಡಿರಿ. ಕುಳಿತುಕೊಳ್ಳಿರಿ. ಚರಣಾಮೃತವನ್ನು ತೆಗೆದುಕೊಳ್ಳಿರಿ. ಏನಾದರೂ ಕಾಣಿಕೆಯನ್ನು ಅರ್ಪಿಸಿರಿ. ಮಹೋದಯರೇ! ಸೀತಾ-ರಾಮರಿಗೆ, ರುಕ್ಮಿಣೀ-ಕೃಷ್ಣರಿಗೆ ಅಥವಾ ರಾಧಾಕೃಷ್ಣರಿಗೆ, ಲಕ್ಷ್ಮೀ-ನಾರಾಯಣರಿಗೆ ಮತ್ತು ಪಾರ್ವತೀ-ಪರಮೇಶ್ವರರಿಗೆ ಮೂರು ದಿನಗಳಿಂದ ಬಾಲಭಾಗವಾಗಲೀ, ರಾಜಬೋಜನವಾಗಲೀ, ಎಂದರೆ ಉಪಾಹಾರವಾಗಲೀ, ಭೋಜನಪಾನವಾಗಲೀ ಸಿಕ್ಕಿಲ್ಲ. ಇಂದು ಇವರುಗಳ ಹತ್ತಿರ ಏನೂ ಇಲ್ಲ. ಸೀತೆ ಮೊದಲಾದವರಿಗೆ ಮೂಗುಬೊಟ್ಟು ಮೊದಲಾದುವನ್ನು ಮಾಡಿಸಿ ಕೊಡಿರಿ, ರಾಣಿಸಾಹೀಬಾರವರೇ! ಖಾದ್ಯ-ಮೊದಾಲಾದುವನ್ನು ಕಳುಹಿಸವಿರಾದರೆ ರಾಮ, ಕೃಷ್ಣ-ಮೊದಲಾದವರಿಗೆ ನೈವೇದ್ಯ ಸಮರ್ಪಿಸುವೆವು. ವಸ್ತ್ರಗಳೆಲ್ಲಾ ಹರಿದು ಹೋಗಿವೆ. ದೇವಾಲಯದ ಮೂಲೆಗಳು ಬಿದ್ದುಹೋಗಿವೆ. ಮೇಲಿನಿಂದ ಸೋರುತ್ತದೆ. ಮತ್ತು, ಏನು ಸ್ವಲ್ಪವಿತ್ತೋ, ಅದನ್ನು ದುಷ್ಟರಾದ ಕಳ್ಳರು ಎತ್ತಿಕೊಂಡು ಹೋದರು. ಇಲಿಗಳು ಸ್ವಲ್ಪವನ್ನು ಕಚ್ಚಿ-ಕಡಿದುಹಾಕಿವೆ. ನೋಡಿರಿ! ಒಂದು ದಿನ

---

೧೬೫. "ವ್ಯಾಖ್ಯಾನಕ್ಕಾಗಿ ಪ್ರಸ್ತುತ ಪಡಿಸುವ ಯಾವುದೋ ವೇದಮಂತ್ರದ ಪ್ರಾರಂಭದ ಶಬ್ದಗಳ ಉದ್ಧರಣವನ್ನು 'ಪ್ರತೀಕ' ಎನ್ನುತ್ತಾರೆ.

೧೬೬. ಈ ಲಕ್ಷಣಗಳಿರವ ಋಗ್ವೇದದ ಶಾಕಲ ಶಾಖೆಯನ್ನು, ಯಜುರ್ವೇದದ ಮಾಧ್ಯಂದಿನ ಶಾಖೆಯನ್ನು, ಸಾಮವೇದದ ಕೌಥುಮೀ ಶಾಖೆಯನ್ನು ಮತ್ತು ಅಥರ್ವವೇದದ ಶೌನಕ ಶಾಖೆಯನ್ನು ಮಾತ್ರ ಮೂಲವೇದವೆಂದು ಅಂಗೀಕರಿಸಲಾಗಿದೆ. ಮೂಲವೇದಕ್ಕೂ, ಶಾಖೆಗೂ ಇರುವ ವ್ಯತ್ಯಾಸವನ್ನು 'ಸಂಸ್ಕಾರವಿಧಿ' [ಕನ್ನಡ ಸಂಸ್ಕರಣ ೧೯೮೯]ಯ ಪರಿಶಿಷ್ಟ-೨ ರಲ್ಲಿ ವಿಶದವಾಗಿ ತೋರಿಸಲಾಗಿದೆ.

೧೬೭. ಇಲ್ಲಿ ಐತಿಹಾಸಿಕ ಮಹಾಪುರುಷರ ನಿರ್ದೇಶ ಮಾಡಲಾಗಿದೆ. ಕಲ್ಪಿತ ಪೌರಾಣಿಕ ಪಾತ್ರಧಾರಿಗಳನ್ನಲ್ಲ.

ಇಲಿಗಳು ಎಂತಹ ಅನರ್ಥವನ್ನು ಮಾಡಿದವೆಂದರೆ, ಇವರ ಕಣ್ಣುಗಳನ್ನು ಕೂಡ ಕಿತ್ತುಕೊಂಡು ಓಡಿಹೋದವು! ಈಗ ನಾವು ಬೆಳ್ಳಿಯ ಕಣ್ಣನ್ನು ಮಾಡಿಸಲಾರದೇ ಹೋದೆವು. ಆದುದರಿಂದ ಕವಡೆಯನ್ನು ಹೊಂದಿಸಿದ್ದೇವೆ".-ಎಂದು ಹೇಳುತ್ತಾ ಅವರನ್ನು ಭಿಕ್ಷುಕರನ್ನಾಗಿ ಮಾಡಿಸುತ್ತಾರೆ. ಸೀತಾರಾಮರು, ರಾಧಾ-ಕೃಷ್ಣರು ನರ್ತಿಸುತ್ತಿದ್ದಾರೆ. ಮತ್ತು ರಾಜರು, ಮಹಂತರು ಮೊದಲಾದವರು, ಅವರ ಸೇವಕರು ಸುಖದಿಂದ ಕುಳಿತಿದ್ದಾರೆ. ದೇವಾಲಯತದಲ್ಲಿ ಸೀತಾ, ರಾಮ-ಮೊದಲಾದವರು ನಿಂತಿದ್ದಾರೆ. ಮತ್ತು ಪೂಜಾರಿಗಳು ಅಥವಾ ಮಹಂತರು ಆಸನಗಳಲ್ಲಿ ಅಥವಾ ಗದ್ದಿಗೆಯ ಮೇಲೆ, ಒರಗುದಿಂಬನ್ನಿಟ್ಟುಕೊಡು ಕುಳಿತುಕೊಳ್ಳುತ್ತಾರೆ. ಅತ್ಯುಷ್ಣಕಾಲದಲ್ಲಿಯೂ ಕೂಡ ಬೀಗಹಾಕಿ, ಒಳಗಡೆ ಕೂಡಿಡುತ್ತಾರೆ ಮತ್ತು ತಾವು ಹಿತಕರವಾದ ವಾಯುವಿನಲ್ಲಿ ಮಂಚಹಾಕಿಸಿ ನಿದ್ರಿಸುತ್ತಾರೆ. ಬಹಳ ಜನ ಪೂಜಾರಿಗಳು ತಮ್ಮ ನಾರಾಯಣನನ್ನು (ಸಾಲಿಗ್ರಾಮ) ಡಬ್ಬಿಯಲ್ಲಿ ಮುಚ್ಚಿಟ್ಟು, ಮೇಲಿನಿಂದ ಬಟ್ಟೆ-ಮೊದಲಾದುದನ್ನು ಸುತ್ತಿ, ಕೊರಳಿಗೆ ತಗುಲಿಹಾಕಿಕೊಳ್ಳುತ್ತಾರೆ. ಹೇಗೆ ತಾಯಿಕೋತಿ ತನ್ನ ಮರಿಯನ್ನು ಎದೆಗೆ ತಗುಲುಹಾಕಿಕೊಳ್ಳುತ್ತದೋ, ಹಾಗೆ ಪೂಜಾರಿಗಳು ಕೊರಳಿಗೆ (ನಾರಾಯಣ ದೇವರನ್ನು) ನೇತುಹಾಕಿಕೊಳ್ಳುತ್ತಾರೆ! ಯಾವಾಗ ಯಾವನಾದರೂ ಪ್ರತಿಮೆಯನ್ನು ಮುರಿದು ಹಾಕುತ್ತಾನೋ, ಆಗ ಹಾಹಾಕಾರ ಮಾಡುತ್ತಾ, ಎದೆ ಜಜ್ಜಿಕೊಂಡು-"ಸೀತಾರಾಮರನ್ನು, ರಾಧಾಕೃಷ್ಣರನ್ನು ಮತ್ತು ಶಿವಪಾರ್ವತಿಯನ್ನು ದುಷ್ಟರು ಒಡೆದುಹಾಕಿಬಿಟ್ಟರು"-ಎಂದು ಗೋಳಾಡುತ್ತಾರೆ. "ಒಳ್ಳೆಯ ಶಿಲ್ಪಿಯು ಅಮೃತಶಿಲೆಯಿಂದ ನಿರ್ಮಿಸಿದ ಮತ್ತೊಂದು ಪ್ರತಿಮೆಯನ್ನು ಈಗ ತರಿಸಿ, ಸ್ಥಾಪನೆ ಮಾಡಿ ಪೂಜಿಸಬೇಕು. ತುಪ್ಪವಿಲ್ಲದೆ ನಾರಾಯಣ ದೇವರಿಗೆ ನೈವೇದ್ಯ ಅರ್ಪಿತವಾಗಲಾರದು. ಹೆಚ್ಚು ಸಾಧ್ಯವಾಗದಿದ್ದರೆ, ಸ್ವಲ್ಪವನ್ನಾದರೂ ಅವಶ್ಯವಾಗಿ ಕಳುಹಿಸಬೇಕು". ಈ ಮೊದಲಾದ ಮಾತುಗಳನ್ನು ಈ ದೇವರುಗಳ ಕುತ್ತಿಗೆಗೆ ಸುತ್ತುತ್ತಾರೆ. ಮತ್ತು ರಾಸಕ್ರೀಡೆ ಅಥರಾ ರಾಮಲೀಲೆಯ ಕೊನೆಯಲ್ಲಿ ಸೀತಾರಾಮರಿಂದ ಅಥವಾ ರಾಧಾಕೃಷ್ಣರಿಂದ ಭಿಕ್ಷೆ ಬೇಡಿಸುತ್ತಾರೆ. ಎಲ್ಲಿ ಸಂತೆ-ಜಾತ್ರೆ ನಡೆಯುತ್ತದೋ, ಅಲ್ಲಿ ಹುಡುಗನ ತಲೆಯ ಮೇಲೆ ಕಿರೀಟವನ್ನಿಟ್ಟು, 'ಕೃಷ್ಣ'ನನ್ನಾಗಿ ಮಾಡಿ, ಮಾರ್ಗದಲ್ಲಿ ಕುಳ್ಳಿರಿಸಿ ಭಿಕ್ಷೆ ಬೇಡಿಸುತ್ತಾರೆ. ಈ ಮೊದಲಾದ ಪದ್ಧತಿಗಳು ಅದೆಷ್ಟು ದುಃಖದ ವಿಷಯವೆಂದು ತಾವುಗಳು ಆಲೋಚಿಸಿ ನೋಡಿರಿ.

ಆಯಿತಲ್ಲ! ಸೀತಾರಾಮರೇ ಮೊದಲಾದವರು ಇಂತಹ ದರಿದ್ರರು ಮತ್ತು ಭಿಕ್ಷುಕರು ಆಗಿದ್ದರೋ, ಹೇಳಿ. ಇದು ಅವರ ಅಪಹಾಸ್ಯ ಹಾಗೂ ನಿಂದೆಯಲ್ಲವಾದರೆ ಮತ್ತೇನು? ಇದರಿಂದ ನಮ್ಮ ಮಹಾಮಾನನೀಯ ಪುರುಷರ ನಿಂದೆಯಾಗುತ್ತದೆ. ಯಾವಾಗ ಇವರುಗಳು ಇದ್ದರೋ, ಆಗ ಸೀತೆ, ರುಕ್ಮಿಣೀ, ಲಕ್ಷ್ಮೀ ಮತ್ತು ಪಾರ್ವತಿಯರನ್ನು, ದಾರಿಯಲ್ಲಿ, ಅಥವಾ ಯಾವನದಾದರೂ ಮನೆಯಲ್ಲಿ ನಿಲ್ಲಿಸಿ, ಪೂಜಾರಿಗಳು 'ಬನ್ನಿರಿ, ಇವರ ದರ್ಶನಮಾಡಿರಿ ಮತ್ತು ಸರಿಯಾಗಿ ಕಾಣಿಕೆಯನ್ನೂ ಸಲ್ಲಿಸಿರಿ'.-ಎಂದು ಹೇಳಿದ್ದಿದ್ದರೆ, ಸೀತಾರಾಮರೇ ಮೊದಲಾದವರು ಈ ಮೂರ್ಖರ ಕಥನದಂತೆ ಇಂತಹ ಕೆಲಸವನ್ನೆಂದೂ ಮಾಡುತ್ತಿರಲಿಲ್ಲ; ಮತ್ತು ಮಾಡಲು ಬಿಡುತ್ತಲೂ ಇರಲಿಲ್ಲ. ಯಾವನಾದರೂ ಅವರಿಗೆ ಇಂತಹ ಅಪಹಾಸ್ಯವನ್ನು ಮಾಡುತ್ತಿದ್ದಲ್ಲಿ, ಅವನಿಗೆ ಶಿಕ್ಷೆ ಕೊಡದೆ ಬಿಡುತ್ತಿದ್ದರೇನು? ಅಹುದು; ಅವರಿದಂಲೇ ಶಿಕ್ಷೆ ಸಿಕ್ಕಲ್ಲಿಲ; ಆದರೆ ಇವರ ಕರ್ಮಗಳು ಈ ಪೂಜಾರಿಗಳಿಗೆ ಬಹು ಮಂದಿ ಪ್ರತಿಮಾವಿರೋಧಿಗಳಿಂದ[೧೬೮] 'ಪ್ರಸಾದ'ವನ್ನು ಕೊಡಿಸಿಯೇ ತೀರಿದುವು ಮತ್ತು ಈಗಲೂ ಕೂಡ ಸಿಕ್ಕುತ್ತಲಿದೆ. ಮತ್ತು ಯಾವ ಕಾಲದವರೆಗೆ ಈ ದುಷ್ಕರ್ಮವನ್ನು ಬಿಡುವುದಿಲ್ಲವೋ, ಆವರೆಗೂ ಸಿಕ್ಕುತ್ತಲೇ ಇರುವುದು. ಆರ್ಯಾವರ್ತಕ್ಕೆ ಪ್ರತಿದಿನವೂ ಮಹಾಹಾನಿಯಾಗುತ್ತಿರುವುದು, ಶಿಲೆ-ಮೊದಲಾದುದರ ಪ್ರತಿಮೆಗಳ ಪೂಜಕರಿಗೆ ಪರಾಜಯವಾಗುತ್ತಿರುವುದು ಈ ಅರ್ಥಹೀನವಾದ ಕರ್ಮಗಳ ಪರಿಣಾಮವೇ-ಎನ್ನುವುದರಲ್ಲಿ ಸಂದೇಹವೇನಿದೆ?[೧೬೯] ಏಕೆಂದರೆ, ಪಾಪದ ಫಲ ದುಃಖವಾಗಿದೆ. ಇದೇ ಶಿಲೆ-ಮೊದಲಾದ ಪ್ರತಿಮೆಗಳ ಮೇಲಿನ ನಂಬಿಕೆಯಿಂದ ಬಹಳ ಹಾನಿಯುಂಟಾಗಿದೆ. ಬಿಡುವುದಿಲ್ಲವಾದರೆ, ಪ್ರತಿ ದಿನವೂ ಹೆಚ್ಚು ಹೆಚ್ಚಾಗಿಯೇ ಆಗುತ್ತಾ ಹೋಗುವುದು. ಇವರುಗಳಲ್ಲಿ[೧೭೦] ವಾಮಮಾರ್ಗಿಗಳು ಬಹುದೊಡ್ಡ ಅಪರಾಧಿಗಳು. ಯಾವಾಗ ಇವರು ಶಿಷ್ಯನನ್ನು ದೀಕ್ಷಿತನನ್ನಾಗಿ ಮಾಡುತ್ತಾರೋ, ಆಗ ಸಾಧಾರಣನಾದವನಿಗೆ-

**ದಂ ದುರ್ಗಾಯೈ ನಮಃ । ಭಂ ಭೈರವಾಯ ನಮಃ ।**

**ಐಂ ಹ್ರೀಂ ಕ್ಲೀಂ ಚಾಮುಂಡಾಯೈ ವಿಚ್ಚೇ ॥**

---

೧೬೮. ಮುಸಲ್ಮಾನರು ತಮ್ಮನ್ನು 'ಬುತ್ ಶಿಕನ್' ಎಂದರೆ ಮೂತಿಭಂಜಕರೆಂದೂ, ಹಿಂದೂಗಳನ್ನು 'ಬುತ್ ಫರಸ್ತ್' ಎಂದರೆ, ಮೂರ್ತಿ ಪೂಜಕರೆಂದೂ ಕರೆಯುತ್ತಾರೆ.

೧೬೯. ಈ ಬಗ್ಗೆ ಮುಸ್ಲಿಮರಿಂದ ಸಿಂಧು ಪ್ರದೇಶದ ಪ್ರವೇಶದೊಂದಿಗೆ ಆರಂಭವಾದ ಭಾರತದ ಇತಿಹಾಸದ ಅಧ್ಯಯನ ಮಾಡಿ.

೧೭೦. ಎಂದರೆ, ಮೂರ್ತಿಪೂಜಕರಲ್ಲಿ

ಈ ಮೊದಲಾದ ಉಪದೇಶಗಳನ್ನು ಮಾಡಿಬಿಡುತ್ತಾರೆ. ಮತ್ತು ಬಂಗಾಳದಲ್ಲಿ[೧೭೧] ವಿಶೇಷವಾಗಿ ಏಕಾಕ್ಷರೀ ಮಂತ್ರೋಪದೇಶವನ್ನು ಮಾಡುತ್ತಾರೆ. ಹೇಗೆಂದರೆ–**"ಹ್ರೀಂ, ಶ್ರೀಂ, ಕ್ಲೀಂ"**. (ಶಾವರ ತಂತ್ರ, ಬಂ. ಪ್ರಕೀ, ಪ್ರ–೪೪.) ಈ ಮೊದಲಾದವು. ಮತ್ತು ಧನಾಢ್ಯರಿಗೆ ಪೂರ್ಣಾಭಿಷೇಕಮಾಡುತ್ತಾರೆ. ಇದೇ ರೀತಿ ದಶಮಹಾವಿದ್ಯೆಗಳ ಮಂತ್ರವಿದೆ:–

**ಹ್ರಾಂ, ಹ್ರೀಂ ಹ್ರೂಂ, ಬಗುಲಾಮುಖ್ಯೈಫಟ್ ಸ್ವಾಹಾ ॥** (ಶಾ. ಪ್ರಕೀ. ಪು.೪೧)

**ಒಂದೊಂದೆಡೆ – ಹ್ರೂಂ ಫಟ್ ಸ್ವಾಹಾ ॥** (ಕಾಮರತ್ನ ಮಂತ್ರಬೀಜ ತಂ–೪)

ಮತ್ತು ಮಾರಣ, ಮೋಹನ, ಉಚ್ಚಾಟನ, ವಿದ್ವೇಷಣ, ವಶೀಕರಣ ಮೊದಲಾದ ಪ್ರಯೋಗಗಳನ್ನು ಮಾಡುತ್ತಾರೆ. ಮಂತ್ರದಿಂದಲಂತೂ ಏನೂ ಆಗುವುದಿಲ್ಲ; ಆದರೆ–ಕ್ರಿಯೆಯಿಂದ ಎಲ್ಲವನ್ನೂ ಮಾಡುತ್ತಾರೆ. ಯಾವಾಗ ಯಾವನನ್ನಾದರೂ ಕೊಲ್ಲುವ ಪ್ರಯೋಗವನ್ನು ಮಾಡುತ್ತಾರೋ, ಆಗ ಇತ್ತ ಮಾಡಿಸುವವನಿಂದ ಧನವನ್ನು ತೆಗೆದುಕೊಂಡು, ಯಾವನನ್ನು ಕೊಲ್ಲಬಯಸುತ್ತಾರೋ, ಅವನ ಬೊಂಬೆಯನ್ನು ಹಿಟ್ಟಿನಿಂದ ಅಥವಾ ಮಣ್ಣಿನಿಂದ ರಚಿಸಿಕೊಳ್ಳುತ್ತಾರೆ. ಅದರ ಎದೆಯಲ್ಲಿ, ಹೊಕ್ಕಳಿನಲ್ಲಿ, ಕೊರಳಿನಲ್ಲಿ ಚೂರಿಗಳನ್ನು ತೂರಿಸುತ್ತಾರೆ. ಕಣ್ಣುಗಳು, ಕೈಗಳು, ಪಾದಗಳಲ್ಲಿ ಮೊಳೆಗಳನ್ನು ಬಡಿಯುತ್ತಾರೆ; ಆ ಮೇಲೆ ಭೈರವನ ಅಥವಾ ದುರ್ಗೆಯ ಪ್ರತಿಮೆಯನ್ನು ನಿರ್ಮಿಸಿ, ಕೈಯಲ್ಲಿ ತ್ರಿಶೂಲವನ್ನು ಕೊಟ್ಟು, ಅದರ ಹೃದಯದ ಮೇಲೆ ಇಡುತ್ತಾರೆ. ಒಂದು ವೇದಿಯನ್ನು ರಚಿಸಿ, ಮಾಂಸ–ಮೊದಲಾದುದರ ಹೋಮವನ್ನು ಮಾಡತೊಡಗುತ್ತಾರೆ. ಮತ್ತು ಆ ಕಡೆ ದೂತರು ಮೊದಲಾದವರನ್ನು ಕಳುಹಿಸಿ, ಅವನನ್ನು ವಿಷ–ಮೊದಲಾದುದರಿಂದ ಕೊಲ್ಲುವ ಉಪಾಯವನ್ನು ಮಾಡುತ್ತಾರೆ.[೧೭೨] ತಮ್ಮ ಪುರಶ್ಚರಣದ ಮಧ್ಯೆಯೇ ಅವನನ್ನು ಕೊಂದುಬಿಟ್ಟರೆ, ತಾವು ಭೈರವ–ದೇವಿಯರ ಸಿದ್ಧಿ ಪಡೆದವರು–ಎಂದು ಹೇಳಿ ಕೊಳ್ಳುತ್ತಾರೆ. **" ಭೈರವೋ ಭೂತನಾಥಶ್ಚ".**– ಈ ಮೊದಲಾದ ಪಾಠಗಳನ್ನು ಪಠಿಸುತ್ತಾರೆ.

**ಮಾರಯ ಮಾರಯ, ಉಚ್ಚಾಟಯ ಉಚ್ಚಾಟಯ, ವಿದ್ವೇಷಯ ವಿದ್ವೇಷಯ, ಛಿಂದಿ ಛಿಂದಿ, ಭಿಂಧಿ ಭಿಂಧಿ, ವಶೀಕುರು ವಶೀಕುರು, ಖಾದಯ ಖಾದಯ, ಭಕ್ಷಯ ಭಕ್ಷಯ, ತ್ರೋಟಯ ತ್ರೋಟಯ, ನಾಶಯ ನಾಶಯ, ಮಮ ಶತ್ರೂನ್ ವಶೀಕುರು ವಶೀಕರು, ಹುಂ ಫಟ್ ಸ್ವಾಹಾ ॥**

(ಕಾಮರತ್ನತಂತ್ರ, ಉಚ್ಚಾಟನ ಪ್ರಕರಣ ೫.೭)

---

೧೭೧. ಭಾರತದಲ್ಲಿ ವಾಮಮಾರ್ಗಿಗಳ ಪ್ರಧಾನ ಕೇಂದ್ರ ಬಂಗಾಳವಾಗಿದ್ದಿತು. ಶಾಕ್ತರು ಈಗಲೂ ಅಲ್ಲಿ ಪ್ರಬಲರಾಗಿದ್ದಾರೆ. ಈ ಶಾಕ್ತ ಸಂಸ್ಕೃತಿಯೇ ಅಲ್ಲಿ ಈಗಲೂ ಪ್ರಚಲಿತವಾಗಿದೆ. ನಂತರ, ವೈಷ್ಣವ ಸಂಸ್ಕೃತಿಯು ಅದರೊಡನೆ ಬೆರೆತು, ಅದನ್ನು ಸ್ವಲ್ಪ ಸೌಮ್ಯವನ್ನಾಗಿ ಮಾಡಿತು.

ವಾಮಮಾರ್ಗದ ಉಗಮ ಸ್ಥಾನ ಟಿಬೆಟ್ ! ಬಂಗಾಳದಿಂದ ಹರಡಿದ ವಾಮಮಾರ್ಗವು ತನ್ನ ವಿವಿಧ ರೂಪಗಳಲ್ಲಿ ಅಸ್ಸಾಂ ಮುಂತಾದ ಪೂರ್ವೀ ಭಾರತವನ್ನು ವ್ಯಾಪಿಸಿ, ಉತ್ತರ ಪ್ರದೇಶ, ಕಾಶ್ಮೀರಗಳಲ್ಲಿನ ಹಿಮಾಲಯಾದ ಪರ್ವತೀಯ ಕೇಂದ್ರಗಳಲ್ಲಿ ಮನೆಮಾಡಿ, ರಾಜಸ್ಥಾನದ ಒಳಭಾಗಗಳಲ್ಲಿ ಅಲ್ಲಲ್ಲಿ ನೆಲೆ ಬಿಟ್ಟು, ಮಹಾರಾಷ್ಟ್ರ, ಉತ್ತರ ಕರ್ನಾಟಕ, ಆಂಧ್ರ, ಒಡಿಸ್ಸಾ ಮತ್ತು ಮಧ್ಯ ಪ್ರದೇಶದ ನರ್ಮದಾ ತೀರ ಇವುಗಳಲ್ಲಿ ಅಲ್ಲಲ್ಲಿ ಕೇಂದ್ರಗಳನ್ನು ಸ್ಥಾಪಿಸಿ, ಈಗ ತೆರೆಮರೆಯಲ್ಲಿ ನಿಂತಿದೆ.

೧೭೨. ಸುಮಾರು ೬೦ ವರ್ಷಗಳ ಹಿಂದೆ, ಬೆಂಗಳೂರನ್ನೇ ನಡುಗಿಸುವಂತಹ ಘಟನೆ ನಡೆಯಿತು. ರಿಜರ್ವ ಬ್ಯಾಂಕಿನ ಗುಮಾಸ್ತೆ ಯಾಗಿದ್ದ, ಬಿ.ಎನ್. ಗೋಪಾಲರಾಯನು ಲೇವಾದೇವಿ ವ್ಯವಹಾರಗಳಲ್ಲಿ ಚಾತುರ್ಯವನ್ನು ಗಳಿಸಿ, ಬ್ಯಾಂಕಿಗೆ ರಾಜೀನಾಮೆಯಿತ್ತು, ಸ್ವಂತ ವ್ಯವಹಾರವನ್ನು ಆರಂಭಿಸಿ, ಹೆಚ್ಚು–ಹೆಚ್ಚು ಬಡ್ಡಿಕೊಡುತ್ತಾ ೭ ಕೋಟಿ ರೂಪಾಯಿಗಳ ವ್ಯವಹಾರವನ್ನು ಸಾಧಿಸಿದನು. ಬಡ್ಡಿಯ ದುರಾಸೆಗಾಗಿ, ಮೈಸೂರು ಸಂಸ್ಥಾನದ ದೊಡ್ಡ ದೊಡ್ಡ ಆಸಾಮಿಗಳು ಗೋಪಾಲರಾಯನ ಬಲೆಗೆ ಸಿಕ್ಕಿಹಾಕಿಕೊಂಡರು. ಕೊನೆಗೆ ಗೋಪಾಲರಾಯನು ದಿವಾಳಿಯಾಗಿ, ಎಲ್ಲರನ್ನೂ ಮುಳುಗಿಸಿಬಿಟ್ಟನು !

ಈ ಬಗ್ಗೆ ತನಿಖೆ ಮಾಡಲು ಮೈಸೂರು ಸರ್ಕಾರವು ಸಮಿತಿಯೊಂದನ್ನು ನೇಮಿಸಿತು. ಅದಕ್ಕೆ ಅಧ್ಯಕ್ಷರಾಗಿ ಜಸ್ಟೀಸ್ ಮೇದಪ್ಪ ನಿಯುಕ್ತರಾದರು. ಈ ತನಿಖೆ ಕಾರ್ಯಕಲಾಪಗಳ ರೀತಿಯನ್ನು ಬೆಂಗಳೂರಿನ ಪ್ರಸಿದ್ಧ ವಕೀಲರಾದ ಶ್ರೀ ಎಲ್.ಎಸ್. ರಾಜು ಟೀಕಿಸಿದರು. ನ್ಯಾಯಾಲಯದ ಅಪಮಾನ ಮಾಡಿದುದಕ್ಕಾಗಿ ರಾಜು ಅವರಿಗೆ ಶಿಕ್ಷೆಯಾಯಿತು. ಅದಲ್ಲದೇ, ಒಬ್ಬ ದೊಡ್ಡ ಮನುಷ್ಯರ ಸಂಬಂಧದಲ್ಲಿ 'ಉಯಿಲು [Will] ರಚಿಸಿ, ಅವರ ಚರಾಸ್ತಿಯಲ್ಲಿ ಸಾವಿರಾರು ಹಣವನ್ನು ಲಪಟಾಯಿಸಿದ್ದನ್ನು ತಿಳಿದ ಜಸ್ಟೀಸ್ ಮೇದಪ್ಪನವರು ಹಿಂದಿನ ಲೆಕ್ಕ ಪತ್ರಗಳನ್ನು ತೆಗೆಸಿ ತನಿಖೆ ಮಾಡಿಸುತ್ತಿದ್ದರು. ಇದನ್ನು ತಿಳಿದ ರಾಜು ಕ್ರುದ್ಧರಾಗಿ, ಮೇದಪ್ಪನವರನ್ನು ಕೊಲ್ಲಲು ಮೇಲೆ ಹೇಳಿದಂತೆ ತಾಂತ್ರಿಕ ಪ್ರಯೋಗವನ್ನು ಮಾಡಿಸಿದರು. ಜೊತೆಗೆ ಜಸ್ಟೀಸ್ ಮೇದಪ್ಪನವರ ಕೆಲಸಗಾರರ ಮುಖಾಂತರ ಅವರು ಕುಡಿಯುವ ಚಹಾಗೆ ವಿಷ ಪ್ರಯೋಗವನ್ನು ಮಾಡಿಸಿದರು. ಆದರೆ, ಚಹಾಪಾನಕ್ಕೆ ಮೊದಲೇ ಅಡಿಗೆಯವನು ಇದನ್ನು ಕಂಡುಹಿಡಿದು, ಮೇದಪ್ಪನವರಿಗೆ ತಿಳಿಸಿಬಿಟ್ಟನು. ಮತ್ತೆ, ರಾಜು ಅವರಿಗೆ ಕಠಿಣ ಶಿಕ್ಷೆಯಾಯಿತು. ಅಲ್ಲಿಗೆ ರಾಜು ಅವರ ಭಾಗ್ಯಸೂರ್ಯನ ಅಸ್ತವಾಯಿತು.

ಈ ಮೊದಲಾದ ಮಂತ್ರಗಳನ್ನು[೧೭೩] ಜಪಿಸುತ್ತಾರೆ, ಮದ್ಯ–ಮಾಂಸ ಮೊದಲಾದುವನ್ನು ಯಥೇಷ್ಟವಾಗಿ ಸೇವಿಸುತ್ತಾರೆ, ಹುಬ್ಬುಗಳ ನಡುವೆ ಕುಂಕುಮದ ರೇಖೆಯನ್ನಿಡುತ್ತಾರೆ, ಆಗಾಗ ಕಾಳೀ–ಮೊದಲಾದವರಿಗಾಗಿ ಯಾವನಾದರೂ ಮಾನವನನ್ನು ಹಿಡಿದು, ಕೊಂದು, ಹೋಮ ಮಾಡಿ, ಅವನ ಮಾಂಸವನ್ನು ಸ್ವಲ್ಪ ಸ್ವಲ್ಪ ತಿಂದೂ[೧೭೪] ತಿನ್ನುತ್ತಾರೆ. ಯಾವನಾದರೂ ಭೈರವೀ ಚಕ್ರದಲ್ಲಿ ಪ್ರವೇಶಿಸಿ, ಮದ್ಯ ಮಾಂಸಗಳ ಸೇವನೆಯನ್ನು ಮಾಡದಿದ್ದರೆ, ಅವನನ್ನು ಕೊಂದು ಹೋಮ ಮಾಡಿಬಿಡುತ್ತಾರೆ.[೧೭೫] ಅವರಲ್ಲಿ ಯಾವನು ಅಘೋರಿಯಾಗಿರುತ್ತಾರನೋ, ಅವನು ಮೃತನಾದ ಮಾನವನ ಮಾಂಸವನ್ನೂ ಕೂಡ ತಿನ್ನುತ್ತಾನೆ. ಸಿದ್ಧಪುರುಷನಿಗೆ ಎಲ್ಲವೂ ಭಕ್ಷಣೀಯವೆಂದು ತಿಳಿಯುವವರು ಮಲ–ಮೂತ್ರಗಳನ್ನೂ ಕೂಡ ಸೇವಿಸುತ್ತಾರೆ.

ಈ ವಾಮಮಾರ್ಗಿಗಳಲ್ಲಿ ಚೋಲೀ[೧೭೬] ಮಾರ್ಗದವರು ಮತ್ತು ಬೀಜ[೧೭೭] ಮಾರ್ಗದವರು–ಎಂದು ಎರಡು ವಿಧದವರಿದ್ದಾರೆ. ಚೋಲೀಮಾರ್ಗದವರು ಒಂದು ಗುಪ್ತ ಸ್ಥಾನದಲ್ಲಿ ಅಥವಾ ನೆಲವನ್ನು ಅಗೆದು ಮಾಡಿದ ನೆಲಮಾಳಿಗೆಯಲ್ಲಿ ಸೇರುತ್ತಾರೆ. ಅಲ್ಲಿ ಎಲ್ಲರ ಪತ್ನಿಯರೂ, ಪುರುಷರೂ, ಹುಡುಗರೂ, ಹುಡುಗಿಯರೂ, ಸೋದರಿಯರೂ, ತಾಯಂದಿರೂ, ಸೊಸೆಯರೂ–ಈ ಮೊದಲಾದವರೆಲ್ಲರೂ ಒಂದುಗೂಡಿ, ಎಲ್ಲರೂ ಕಲಸಿ ಬೆರಸಿ ಮಾಂಸ ತಿನ್ನುತ್ತಾರೆ; ಮದ್ಯ ಕುಡಿಯುತ್ತಾರೆ. ಒಬ್ಬಳು ಸ್ತ್ರೀಯನ್ನು ಬೆತ್ತಲೆ ಮಾಡಿ, ಅವಳ ಗುಪ್ತೇಂದ್ರಿಯದ ಪೂಜೆಯನ್ನು ಪುರುಷರೆಲ್ಲರೂ ಮಾಡುತ್ತಾರೆ. ಮತ್ತು ಅವಳಿಗೆ 'ದುರ್ಗಾದೇವಿ' ಎಂದು ಹೆಸರಿಡುತ್ತಾರೆ. ಒಬ್ಬ ಪುರುಷನನ್ನು ನಗ್ನನನ್ನಾಗಿ ಮಾಡಿ, ಅವನ ಗುಪ್ತೇಂದ್ರಿಯದ ಪೂಜೆಯನ್ನು ಸ್ತ್ರೀಯರೆಲ್ಲರೂ ಮಾಡುತ್ತಾರೆ. ಯಾವಾಗ ಮದ್ಯ ಕುಡಿದು–ಕುಡಿದು ಉನ್ಮತ್ತರಾಗಿ ಹೋಗುತ್ತಾರೋ, ಆಗ ಸ್ತ್ರೀಯರೆಲ್ಲರೂ 'ಚೋಲೀ'(ರವಿಕೆ) ಎಂದು ಕರೆಯಲ್ಪಡುವ ಎದೆಯ ವಸ್ತ್ರವನ್ನು ತೆಗೆದು ಮಣ್ಣಿನದೊಂದು ದೊಡ್ಡ ಗುಡಾಣದಲ್ಲಿ ಒಟ್ಟಾಗಿ ಬೆರೆಸಿಡುತ್ತಾರೆ. ಒಬ್ಬೊಬ್ಬ ಪುರುಷನೂ ಅದಕ್ಕೆ ಕೈಹಾಕಿ ತೆಗೆದಾಗ, ಯಾವನ ಕೈಗೆ ಯಾವಳ ರವಿಕೆ ಬರುವುದೋ, ಅವಳು

---

೧೭೩. ವಸ್ತುತಃ ಇವು ಮಂತ್ರಗಳೇ ಅಲ್ಲ; ಸ್ವಂತ ಉದ್ಗಾರಗಳು.

೧೭೪. ಈ ಸಂದರ್ಭದಲ್ಲೇ, ಉತ್ತರ ಪ್ರದೇಶದ ಶಾಹಜಹಾಂಪುರದ ಜಿಲ್ಲೆಯ ಚಂದಾಪುರ್ ಮೇಳದಲ್ಲಿ [೧೮೭೭ ಇಸವಿ] ಭಾಗವಹಿಸಿದ ನಂತರ. ಒಂದು ದಿನ ಸ್ವಾಮೀ ದಯಾನಂದರು ತಮ್ಮ ಸ್ವಂತ ಅನುಭವವನ್ನು ಮಿತ್ರರೊಡನೆ ಈ ರೀತಿ ವರ್ಣಿಸುತ್ತಾರೆ.

"ಒಂದು ಸಲ, ನಾನು ಯಾವಾಗ ಏಕಾಂಗಿಯಾಗಿ ಸಂಚರಿಸುತ್ತಿದ್ದೆನೋ, ಆಗ ಶಾಕ್ತನು ವಾಸಿಸುವ ಒಂದು ಸ್ಥಾನಕ್ಕೆ ಬಂದೆ. ಅವರು ನನಗೆ ಬಹಳ ಸೇವೆ– ಸತ್ಕಾರ ಮಾಡಿದರು. ಕೆಲವು ದಿನಗಳ ನಂತರ, ನಾನು ಅಲ್ಲಿಂದ ಹೊರಡಲು ಸಿದ್ಧನಾದಾಗ ಅವರು ಅತ್ಯಾಗ್ರಹದಿಂದ ನನ್ನನ್ನು ಇನ್ನಷ್ಟು ದಿನ ಉಳಿಸಿಕೊಂಡರು. ಭಕ್ತಿ ಭಾವದಿಂದ, ಅವರು ಹೀಗೆ ಮಾಡಿದ್ದಾರೇನೋ, ಎಂದು ನಾನು ಭಾವಿಸಿದೆ. ನಂತರ, ಅವರ ಉತ್ಸವದ ದಿನ ಬಂದಿತು. ಅವರು ನನ್ನನ್ನು ದೇವಿಯ ಮಂದಿರಕ್ಕೆ ಆಹ್ವಾನಿಸಿದರು. ನಾನು ಒಲ್ಲೆನೆಂದೆ. ಅವರು ನನ್ನ ಕಾಲುಗಳನ್ನು ಹಿಡಿದುಕೊಂಡು 'ನಾನು ಬರಲೇ ಬೇಕೆಂದೂ, ಇಲ್ಲದಿದ್ದರೆ, ಎಲ್ಲರ ಉತ್ಸಾಹ ಭಂಗವಾಗುವುದೆಂದೂ; ಬೇಕಾದರೆ, ನಾನು ಮೂರ್ತಿಗೆ ನಮಸ್ಕರಿಸುವುದು ಅವಶ್ಯಕವಲ್ಲವೆಂದೂ, ಗೋಗರೆದರು. ವಿವಶವಾಗಿ, ನಾನು ದೇವಿಯ ಮಂದಿರಕ್ಕೆ ಹೋಗಬೇಕಾಯಿತು.

ಮಂದಿರದ ಅಂಗಳದಲ್ಲಿ ಹೋಮ ನಡೆಯುತ್ತಿತ್ತು. ನನಗೆ ದುರ್ಗಾಪ್ರತಿಮೆಯನ್ನು ತೋರಿಸುವ ನೆವದಿಂದ, ನನ್ನನ್ನು ಕರೆದೊಯ್ದರು. ವಿಗ್ರಹದ ಬಳಿಯೇ ನಗ್ನ ಖಡ್ಗವನ್ನು ಕೈಯಲ್ಲಿ ಹಿಡಿದ ಬಲಿಷ್ಠ ವ್ಯಕ್ತಿಯೊಬ್ಬನು ನಿಂತಿದ್ದನು. ಜನರು– 'ಮಹಾತ್ಮರೇ ! ಮಾತೆಯ ಮುಂದೆ ಬಗ್ಗಿ ಅವಶ್ಯವಾಗಿ ನಮಸ್ಕಾರ ಮಾಡಿರಿ' ಎಂದು ಹೇಳತೊಡಗಿದರು. "ಈ ದುರಾಶೆಯ ಅಪೇಕ್ಷೆಯನ್ನು ನನ್ನಲ್ಲಿಡಬೇಡಿ" ಎಂದು ಸ್ಪಷ್ಟವಾಗಿ ಹೇಳಿದೆ. ನನ್ನ ಈ ಮಾತಿನಿಂದ ಪೂಜಾರಿಗೆ ಕೋಪ ಬಂದಿತು. ಅವನು ಹತ್ತಿರ ಬಂದು, ನನ್ನ ಕುತ್ತಿಗೆಯನ್ನು ಹಿಡಿದು, ಬಲಾತ್ಕಾರವಾಗಿ ಬಗ್ಗಿಸತೊಡಗಿದನು. ಈ ವರ್ತನೆಯಿಂದ ವಿಸ್ಮಿತನಾಗಿ, ನಾನು ಕಣ್ಣೆತ್ತಿ ನೋಡುವಲ್ಲಿಯೇ, ಖಡ್ಗ ಧಾರಿಯು ನನ್ನ ಬಳಿ ಬಂದು ಖಡ್ಗದ ಪ್ರಯೋಗವನ್ನು ನನ್ನ ಕುತ್ತಿಗೆಯ ಮೇಲೆ ಮಾಡುವುದರಲ್ಲಿದ್ದುದನ್ನು ಕಂಡೆನು.

ತತ್ ಕ್ಷಣ ಸಾವಧಾನವಾಗಿ, ನಾನು ಮೇಲೆಗರಿ, ಅವನ ಕೈಯಿಂದ ಖಡ್ಗವನ್ನು ಕಸಿದುಕೊಂಡೆನು. ನನ್ನ ಎಡಗೈಯ ಹೊಡೆತದಿಂದಲೇ ಪೂಜಾರಿಯು ಮಂದಿರದ ಗೋಡೆಗೆ ಡಿಕ್ಕಿ ಹೊಡೆದನು. ಖಡ್ಗವನ್ನು ಕೈಯಲ್ಲಿ ಹಿಡಿದುಕೊಂಡೇ ನಾನು ಅಂಗಳಕ್ಕೆ ಬಂದೆನು. ಆಗ ಅಂಗಳದಲ್ಲಿ ನೆರೆದಿದ್ದವರೆಲ್ಲರೂ ಕೊಡಲಿ, ಚೂರಿ, ಮೊದಲಾದ ಶಾಸ್ತ್ರಗಳನ್ನು ತೆಗೆದುಕೊಂಡು ನನ್ನನ್ನು ಮುತ್ತಿದರು. ಬಾಗಿಲಿನ ಕಡೆ ನೋಡಿದಾಗ, ಅದಕ್ಕೆ ಬೀಗ ಬಿದ್ದಿತು. ಈ ಬಲಿದಾನದಿಂದ ನನ್ನನ್ನು ರಕ್ಷಿಸಿಕೊಳ್ಳಲು, ನಾನು ಕೂಡಲೇ ಮೇಲೆಗರಿ ಗೋಡೆಯನ್ನು ಹತ್ತಿಬಿಟ್ಟೆ. ಮತ್ತು ಆಚೆಗೆ ಜಿಗಿದು ಓಡಿಬಿಟ್ಟೆ. ಹತ್ತಿರದ ಕಾಡೊಂದರಲ್ಲಿ ಹಗಲೆಲ್ಲಾ ಬಚ್ಚಿಟ್ಟುಕೊಂಡಿದ್ದು ಕುಳಿತಿದ್ದೆ. ಕತ್ತಲಾದೊಡನೆಯೇ, ರಾತ್ರಿಯಲ್ಲೇ ಬೇರೆ ಗ್ರಾಮವನ್ನು ಸೇರಿಬಿಟ್ಟೆ. ಅಂದಿನಿಂದ, ನಾನು ಶಾಕ್ತರನ್ನು ಎಂದಿಗೂ ನಂಬಲಿಲ್ಲ."

*–'ಶ್ರೀ ಮದ್ದಯಾನಂದ ಪ್ರಕಾಶ'; ಸ್ವಾಮೀ ಸತ್ಯಾನಂದ [ಪುಟ –೨೪೧]*

೧೭೫. ಸಂಸ್ಕೃತದ ಪ್ರಸಿದ್ಧ ಕವಿ ದಂಡಿಯಿಂದ ರಚಿತವಾದ ಗದ್ಯಾತ್ಮಕ ಗ್ರಂಥ 'ದಶಕುಮಾರಚರಿತಮ್'ನಲ್ಲಿ ವಾಮಮಾರ್ಗಿಗಳ ಸಂಪೂರ್ಣ ಕಲೆಗಳ ವರ್ಣನೆಗಳನ್ನೊಳಗೊಂಡ ಹತ್ತು ಕಥಾನಕಗಳಿವೆ. ಸ್ತ್ರೀ–ಪುರುಷರನ್ನು ಎಲ್ಲಾ ವಿಧದ ದುಶ್ಚರಿತ್ರೆಗಳಿಗೀಡಾಗಿಸಿ, ಭ್ರಷ್ಟ ಮಾಡಲು ಪ್ರೇರಣೆ ಕೊಡುವಂತಹ ದುಷ್ಟ ಸಂಸ್ಕೃತ ಗ್ರಂಥ ಬೇರಿಲ್ಲ.

೧೭೬. ಚೋಲಿ, ಎಂದರೆ, ರವಿಕೆ ಅಥವಾ ಕುಪ್ಪಸ.

೧೭೭. ಪುರುಷನ ವೀರ್ಯ ಬಿಂದುವೇ ಬೀಜ.

ತಾಯಿ, ಸೋದರಿ ಮಗಳು ಮತ್ತು ಸೊಸೆಯೇ ಆಗಿರಲೊಲ್ಲಳೇಕೆ, ಆ ಸಮಯಪೂರ್ತಿಗೆ ಅವಳು ಅವನ ಹೆಂಡತಿಯಾಗಿ ಹೋಗುತ್ತಾಳೆ. ಪರಸ್ಪರ ದುಷ್ಕರ್ಮ ಮಾಡುವಾಗ ಮತ್ತು ಬಹಳ ಮದವೇರಿದಾಗ ಪಾದರಕ್ಷೆಗಳಿಂದ ಹೊಡೆದಾಡುವುದೂ-ಕಡಿದಾಡುವುದೂ ಉಂಟು. ಪ್ರಾತಃಕಾಲದಲ್ಲಿ ನಸುಕತ್ತಲಿರುವಾಗ, ತಮ್ಮ ತಮ್ಮ ಮನೆಗಳಿಗೆ ಹೊರಟುಹೋಗುತ್ತಾರೆ. ಆಗ ತಾಯಿ ತಾಯಿಯೂ, ಮಗಳು ಮಗಳೂ, ಸೋದರಿಯು ಸೋದರಿಯೂ ಮತ್ತು ಸೊಸೆ ಸೊಸೆಯೂ ಆಗಿ ಹೋಗುತ್ತಾರೆ. ಮತ್ತು ಬೀಜಮಾರ್ಗಿಗಳಾದ ಸ್ತ್ರೀಪುರುಷರು, ಸಂಭೋಗ ಮಾಡಿ, ನೀರಿನಲ್ಲಿ ವೀರ್ಯವನ್ನು ಹಾಕಿ, ಸೇರಿಸಿ ಕುಡಿಯುತ್ತಾರೆ. ಈ ಪಾಮರರು[೧೭೮] ಇಂತಹ ಕರ್ಮಗಳನ್ನು ಮುಕ್ತಿಯ ಸಾಧನಗಳೆಂದು ಅಂಗೀಕರಿಸುತ್ತಾರೆ! ವಿದ್ಯೆ, ವಿವೇಕ, ಸೌಜನ್ಯ-ಮೊದಲಾದುವುಗಳಿಂದ ರಹಿತರಾಗಿರುತ್ತಾರೆ.

**ಪ್ರಶ್ನೆ :**- ಶೈವ ಮತದವರಾದರೂ ಉತ್ತಮರಾಗಿರುತ್ತಾರೋ?

**ಉತ್ತರ:**- ಉತ್ತಮರಾಗುವುದೆಲ್ಲಿಂದ? **"ಪ್ರೇತನಾಥನಂತೆಯೇ ಭೂತನಾಥ"** ಹೇಗೆ ವಾಮಮಾರ್ಗಿಗಳು ಮಂತ್ರೋಪದೇಶ ಮೊದಲಾದುದರಿಂದ ಜನರ ಧನವನ್ನು ಕಸಿದುಕೊಳ್ಳುತ್ತಾರೋ, ಹಾಗೆ ಶೈವರೂ ಕೂಡ **'ಓಂ ನಮಃ ಶಿವಾಯ'** ಈ ಮೊದಲಾದ ಪಂಚಾಕ್ಷರೀ ಮೊದಲಾದ ಮಂತ್ರಗಳ ಉಪದೇಶಮಾಡುತ್ತಾರೆ. ರುದ್ರಾಕ್ಷ-ಭಸ್ಮ-ಧಾರಣ ಮಾಡುತ್ತಾರೆ; ಮಣ್ಣಿನ ಮತ್ತು ಶಿಲೆ-ಮೊದಲಾದುದರ ಲಿಂಗಗಳನ್ನು ನಿರ್ಮಿಸಿ ಪೂಜಿಸುತ್ತಾರೆ ಮತ್ತು **'ಹರಹರ'** ಮತ್ತು **'ಬಂಬಂ'** ಮತ್ತು ಮೇಕೆಯ ಶಬ್ದದಂತೆ ಬಡಬಡಬಡನಾದವನ್ನೂ ಮಾಡುತ್ತಾರೆ. **"ಚಪ್ಪಾಳೆ ತಟ್ಟುವುದರಿಂದ ಮತ್ತು 'ಬಂಬಂ'** ಶಬ್ದವನ್ನು ಮಾಡುವುದರಿಂದ ಪಾರ್ವತಿಯು ಪ್ರಸನ್ನಳಾಗುತ್ತಾಳೆ ಮತ್ತು ಮಹಾದೇವನು ಅಪ್ರಸನ್ನನಾಗುತ್ತಾನೆ. ಏಕೆಂದರೆ ಯಾವಾಗ ಭಸ್ಮಾಸುರನ ಮುಂದಿನಿಂದ ಮಹಾದೇವನು ಓಡಿಹೋಗಿದ್ದನೋ, ಆಗ ಬಂಬಂ ಸಂಗಡ ಹಾಸ್ಯಪೂರ್ವಕವಾಗಿ ಚಪ್ಪಾಳೆಗಳು ತಟ್ಟಲ್ಪಟ್ಟಿದ್ದವು. ಮತ್ತೆ ಕೆನ್ನೆ ಬಡಿದುಕೊಳ್ಳುವುದರಿಂದ ಪಾರ್ವತಿಯು ಅಪ್ರಸನ್ನಳೂ, ಮಹಾದೇವನು ಪ್ರಸನ್ನನೂ ಆಗತ್ತಾರೆ, ಏಕೆಂದರೆ, ಪಾರ್ವತಿಯ ತಂದೆ ದಕ್ಷಪ್ರಜಾಪತಿಯ ತಲೆಯನ್ನು ಕತ್ತರಿಸಿ, ಅಗ್ನಿಯಲ್ಲಿ ಹಾಕಿ, ಅವನ ಮುಂಡದ ಮೇಲೆ ಟಗರಿನ ತಲೆಯನ್ನು ಕೂಡಿಸಿದ್ದರು. ಅದರ ಅನುಕರಣಕ್ಕೆ ಸಮನಾಗಿ ಕೆನ್ನೆಗಳನ್ನು ಬಡಿದುಕೊಳ್ಳುವ ಶಬ್ದವಿರುತ್ತದೆ-ಎಂದು ಕಾರಣವನ್ನು ಹೇಳುತ್ತಾರೆ. ಶಿವರಾತ್ರಿಯ ದಿನ ಪ್ರದೋಷದ ವ್ರತವನ್ನಾಚರಿಸುತ್ತಾರೆ. ಈ ಮೊದಲಾದ ಕಾರಣಗಳಿಂದ ಮುಕ್ತಿಯಾಗುವುದೆಂದು ಒಪ್ಪುತ್ತಾರೆ. ಆದುದರಿಂದ, ವಾಮಮಾರ್ಗಿಗಳು ಭ್ರಾಂತರಾಗಿರುವ ಹಾಗೆ, ಶೈವರೂ ಕೂಡ ಭ್ರಾಂತರೇ ಆಗಿದ್ದಾರೆ. ಇವರಲ್ಲಿ ವಿಶೇಷತಃ ಕಿವಿಹರುಕರು, ನಾಥರು, ಗಿರಿ, ಪುರಿ, ವನ, ಅರಣ್ಯ, ಪರ್ವತ, ಮತ್ತು ಸಾಗರ - ಈ ಸಂಪ್ರದಾಯಗಳ ಸಾಧುಗಳೂ ಮತ್ತು ಗೃಹಸ್ಥರೂ ಕೂಡ ಶೈವರಾಗಿರುತ್ತಾರೆ. ಒಬ್ಬೊಬ್ಬರು ಎರಡು ಕುದುರೆಗಳ ಮೇಲೆಯೂ ಏರುತ್ತಾರೆ. ಎಂದರೆ, ವಾಮ ಮತ್ತು ಶೈವ- ಎರಡು ಮತಗಳನ್ನೂ ಅಂಗೀಕರಿಸುತ್ತಾರೆ. ಮತ್ತು ಎಷ್ಟೋ ಮಂದಿ ವೈಷ್ಣವರೂ ಆಗಿರುತ್ತಾರೆ. ಅವರ ನುಡಿಯಿದು.

**ಅಂತಃ ಶಾಕ್ತಾ ಬಹಿಃ ಶೈವಾಃ ಸಭಾಮಧ್ಯೇ ಚ ವೈಷ್ಣವಾಃ ।**

**ನಾನಾರೂಪಧರಾಃ ಕೌಲಾ ವಿಚರಂತಿ ಮಹೀತಲೇ**[೧೭೯] ॥

ಇದು ತಂತ್ರದ ಶ್ಲೋಕವಾಗಿದೆ. ಒಳಗನಿಂದ ಶಾಕ್ತರು ಎಂದರೆ ವಾಮಮಾರ್ಗಿಗಳೂ ಹೊರಗಿನಿಂದ ಶೈವರು-ಎಂದರೆ ರುದ್ರಾಕ್ಷ-ಭಸ್ಮ-ಧಾರಣೆಮಾಡುವವರೂ ಮತ್ತು ಸಭೆಯಲ್ಲಿ 'ನಾವು ವಿಷ್ಣುವಿನ ಉಪಾಸಕರಾದವರು' ಎಂದು ಸಾರುವ ವೈಷ್ಣವರೂ ಆಗಿ ಇರುತ್ತಾರೆ. ನಾನಾ ವಿಧದ ರೂಪಗಳನ್ನು ಧಾರಣಮಾಡಿಕೊಂಡು ವಾಮಮಾರ್ಗಿ ಜನರು ಭೂಮಿಯಲ್ಲಿ ಓಡಾಡುತ್ತಾರೆ.

**ಪ್ರಶ್ನೆ:**- ವೈಷ್ಣವರಾದರೂ ಉತ್ತಮರಾಗಿದ್ದಾರೋ?

**ಉತ್ತರ:**- ಏನು ಮಣ್ಣು ಉತ್ತಮರಾಗಿರುವುದು? ಅವರು ಹೇಗೋ, ಇವರೂ ಹಾಗೆಯೇ! ನೋಡಿ ಬಿಡಿರಿ ವೈಷ್ಣವರ ಲೀಲೆಯನ್ನು, ತಮ್ಮನ್ನು ವಿಷ್ಣುವಿನ ದಾಸರೆಂದು ಹೇಳಿಕೊಳ್ಳುತ್ತಾರೆ. ಯಾರು ಚಕ್ರಾಂಕಿತರಾಗಿರುತ್ತಾರೋ, ಆ ಶ್ರೀ ವೈಷ್ಣವರು ಅವರಲ್ಲಿ ತಮ್ಮನ್ನು ಸರ್ವಶ್ರೇಷ್ಠರೆಂದು ತಿಳಿದುಕೊಂಡಿರುತ್ತಾರೆ. ಅಂತಹುದೇನೂ ಇಲ್ಲ.

---

೧೭೮. ಎಂದರೆ, ನೀಚರು, ದುಷ್ಟರು. ಕನ್ನಡದಲ್ಲಿ ಬಳಕೆ ಇರುವ 'ತಿಳುವಳಿಕೆ ಇಲ್ಲದವರು' ಎಂಬರ್ಥ ಸರಿಯಲ್ಲ.

೧೭೯. **"ಕೌಲೋಪನಿಷತ್**; ಕುಲಾರ್ಣವ ತಂತ್ರ, ಉಲ್ಲಾಸ ೧೧.

**ಪ್ರಶ್ನೆ:–** ಏನೇನೂ ಇಲ್ಲವೆನ್ನುವುದೇಕೆ? ಎಲ್ಲವೂ ಇದೆ. ನೋಡಿರಿ. ಹಣೆಯ ಮೇಲೆ ನಾರಾಯಣನ ಚರಣಾರವಿಂದದಂತಿರುವ ನಾಮವಿದೆ. ಮತ್ತು ನಡುವಣ ಹಳದಿಯ ರೇಖೆ 'ಶ್ರೀ'ಯಾಗಿದೆ. ಆದುದರಿಂದ ನಾವು ಶ್ರೀವೈಷ್ಣವರೆನಿಸುತ್ತೇವೆ. ನಾರಾಯಣನೊಬ್ಬನನ್ನುಳಿದು ಬೇರೆ ಯಾವನನ್ನೂ ಅಂಗೀಕರಿಸುವುದಿಲ್ಲ. ಮಹಾದೇವನ ಲಿಂಗದ ದರ್ಶನವನ್ನೂ ಮಾಡುವುದಿಲ್ಲ. ಏಕೆಂದರೆ ನಮ್ಮ ಹಣೆಯ ಮೇಲೆ 'ಶ್ರೀ' ವಿರಾಜಾಸುತ್ತಿದ್ದಾಳೆ; ಅವಳು ಲಜ್ಜಿತಳಾಗುತ್ತಾಳೆ.[೧೮೦] ಅಳವಂದಾರ್[೧೮೧] ಮೊದಲಾದವರ ಸ್ತೋತ್ರಗಳನ್ನು ಉಚ್ಚರಿಸುತ್ತೇವೆ. ನಾರಾಯಣನ ಪೂಜೆಯನ್ನು ಮಂತ್ರಪೂರ್ವಕವಾಗಿ ಮಾಡತ್ತೇವೆ. ಮಾಂಸ ತಿನ್ನುವುದಿಲ್ಲ; ಮದ್ಯವನ್ನೂ ಕುಡಿಯುವುದಿಲ್ಲ. ಮತ್ತೆ ಶ್ರೇಷ್ಠರೇತಕ್ಕಲ್ಲ?

**ಉತ್ತರ:–** ಈ ನಾಮವನ್ನು ಹರಿಪದಾಕೃತಿ ಎನ್ನುವುದೂ, ಈ ಹಳದಿಯ ರೇಖೆಯನ್ನು ಶ್ರೀ–ಎಂದು ಅಂಗೀಕರಿಸುವುದೂ ವ್ಯರ್ಥವಾಗಿದೆ. ಏಕೆಂದರೆ, ಇದಂತೂ ನಿಮ್ಮ ಕೈಯಿನ ಚತುರಕೃತಿ ಮತ್ತು ಯಾವ ರೀತಿ ಆನೆಯ ಹಣೆಯನ್ನು ಚಿತ್ರ–ವಿಚಿತ್ರವಾಗಿ ಮಾಡುತ್ತಾರೋ, ಅದೇರೀತಿ ಹಣೆ ಚಿತ್ರಿತವಾಗಿದೆ. ನಿಮ್ಮ ಹಣೆಯಲ್ಲಿ ವಿಷ್ಣುವಿನ ಪಾದದ ಚಿಹ್ನೆ ಎಲ್ಲಿಂದ ಬಂದಿತು? ಯಾವನಾದರೂ ವೈಕುಂಠಕ್ಕೆ ಹೋಗಿ, ವಿಷ್ಣುವಿನ ಪಾದದ ಚಿಹ್ನೆಯನ್ನು ಹಣೆಯಮೇಲೆ ಮಾಡಿಸಿಕೊಂಡು ಬಂದಿದ್ದಾನೇನು?

**ವಿವೇಕಿ :–** ಮತ್ತು 'ಶ್ರೀ' ಜಡವೋ, ಚೇತನವೋ?

**ವೈಷ್ಣವ :–** ಚೇತನಳಾಗಿದ್ದಾಳೆ.

**ವಿವೇಕೀ :–** ಹಾಗಾದರೆ, ಈ ರೇಖೆ ಜಡವಾಗಿರುವುದರಿಂದ, ಶ್ರೀಯಲ್ಲ. ನಾವು "ಶ್ರೀ ರಚಿತವಾದುದೋ ಅಥವಾ ಅರಚಿತವೋ"? ಎಂದು ಕೇಳುತ್ತೇವೆ. ಅರಚಿತವಾಗಿದ್ದರೆ, ಇದು ಶ್ರೀಯಲ್ಲ; ಏಕೆಂದರೆ, ಇದನ್ನಂತೂ ನೀವು ದಿನವೂ ನಿಮ್ಮ ಕೈಯಿಂದ ರಚಿಸುತ್ತೀರಿ. ಹೀಗೆ, ಇದು ಶ್ರೀಯಾಗಲಾರದು. ನಿಮ್ಮ ಹಣೆಯಲ್ಲಿ ಶ್ರೀ ಇರುವುದಾದರೆ ಅದೆಷ್ಟೋಜನ ವೈಷ್ಣವರ ಮುಖವು ಕುರೂಪವಾಗಿ, ಅಂದರೆ ಸೌಂದರ್ಯರಹಿತವಾಗಿ ಏತಕ್ಕೆ ಕಾಣಿಸುತ್ತದೆ? ಲಲಾಟದಲ್ಲಿ ಶ್ರೀ ಇದ್ದರೂ ಮನೆಮನೆಗೆ ಭಿಕ್ಷೆಬೇಡುತ್ತಾ ಮತ್ತು ತಿರುಪೆಗೂಳನ್ನು ತೆಗೆದುಕೊಳ್ಳುತ್ತಾ, ಹೊಟ್ಟೆಹೊರೆದುಕೊಳ್ಳುತ್ತಾ ತಿರುಗುತ್ತೀರಿ ಏಕೆ? ಇದು ಮೂಢರ ಮತ್ತು ನಿರ್ಲಜ್ಜರ ವ್ಯವಹಾರ; ಲಲಾಟದಲ್ಲಿ ಶ್ರೀ ಮತ್ತು ಕಾರ್ಯ ಮಹಾದರಿದ್ರರದು!

ಇವರಲ್ಲಿ ಪರಕಾಲ[೧೮೨]ನೆಂಬ ಒಬ್ಬ ವೈಷ್ಣವ ಭಕ್ತನಿದ್ದನು. ಅವನು ಕಳ್ಳತನ, ದರೋಡೆಮಾಡಿ, ಛಲಕಪಟಮಾಡಿ, ಪರರ ಧನವನ್ನು ಕಸಿದುತಂದು, ವೈಷ್ಣವರ ಬಳಿಯಿಟ್ಟು ಪ್ರಸನ್ನನಾಗುತ್ತಿದ್ದನು. ಒಂದು ಸಾರಿ, ಯಾವುದನ್ನು ಸೂರೆಮಾಡಬಹದೋ ಅಂತಹ ಯಾವ ಪದಾರ್ಥವೂ ಅವನಿಗೆ ಕಳ್ಳತನದಲ್ಲಿ ಸಿಕ್ಕಲಿಲ್ಲ, ವ್ಯಾಕುಲನಾಗಿ ಅಲೆದಾಡುತ್ತಿದ್ದನು. 'ನಮ್ಮ ಭಕ್ತ ದುಃಖಪಡುತ್ತಿದ್ದಾನೆ' ಎಂದು ನಾರಾಯಣನು ತಿಳಿದಕೊಂಡನು. ಸೇಠ ಮಹಾಶಯರ ಸ್ವರೂಪವನ್ನು ತಳೆದು, ಉಂಗುರ–ಮೊದಲಾದ ಒಡವೆಗಳನ್ನು ತೊಟ್ಟು, ರಥದಲ್ಲಿ ಕುಳಿತು ಎದುರಿಗೆ ಬಂದನು. ಆಗ, ಹೇಳುವುದೇನು? ಪರಕಾಲನು ರಥದ ಬಳಿ ಹೋದನು. "ಎಲ್ಲ ವಸ್ತುಗಳನ್ನೂ ಬೇಗ ತೆಗೆದುಕೊಡು. ಇಲ್ಲದಿದ್ದರೆ ಕೊಂದುಹಾಕುವೆನು" ಎಂದು ಸೇಠರಿಗೆ ಹೇಳಿದನು. ತೆಗೆದು–ತೆಗೆದು ಕೊಡುವಲ್ಲಿ, ಉಂಗುರವನ್ನು ಕಳಚುವಾಗ ತಡವಾಯಿತು. ಪರಕಾಲನು (ಸೇಠರ ರೂಪದಲ್ಲಿದ್ದ) ನಾರಾಯಣನ ಬೆರಳನ್ನು ಕತ್ತರಿಸಿ, ಉಂಗುರವನ್ನು ತೆಗೆದುಕೊಂಡನು. ನಾರಾಯಣನು ಬಹಳ ಪ್ರಸನ್ನರಾಗಿ, ಚತುರ್ಭುಜ ಶರೀರರೂಪತಾಳಿ, ದರ್ಶನವಿತ್ತನು. "ನೀನು ನನ್ನ ಬಹುಪ್ರಿಯನಾದ ಭಕ್ತನ. ಏಕೆಂದರೆ, ಎಲ್ಲ ಹಣವನ್ನೂ ಕೊಲೆ–ಸುಲಿಗೆ–ಕಳುವುಮಾಡಿ, ವೈಷ್ಣವರ ಸೇವೆಮಾಡುತ್ತೀಯೆ. ಆದುದರಿಂದ, ನೀನು ಧನ್ಯನಾಗಿದ್ದೀಯೆ".–ಎಂದನು. ಮತ್ತೆ ಅವನು ಹೋಗಿ, ವೈಷ್ಣವರ ಹತ್ತಿರ ಎಲ್ಲ ಒಡವೆಗಳನ್ನೂ ಇಟ್ಟುಬಿಟ್ಟನು. ಒಂದು ಸಾರಿ ಪರಕಾಲನನ್ನು ಯಾವನೋ ಸಾಹುಕಾರನು ನೌಕರನನ್ನಾಗಿ ಮಾಡಿಕೊಂಡು, ಜಹಜಿನಲ್ಲಿ ಕುಳ್ಳಿರಿಸಿಕೊಂಡು, ದೇಶಾಂತರಕ್ಕೆ ಕರೆದೊಯ್ದನು. ಅಲ್ಲಿಂದ ಹಡಗಿನಲ್ಲಿ ಅಡಿಕೆಯನ್ನು ತುಂಬಿಸಿದನು. ಪರಕಾಲನು ಒಂದು ಅಡಿಕೆಯನ್ನು ಮುರಿದು, ಅರ್ಧ ತುಂಡು ಮಾಡಿ, ವ್ಯಾಪಾರಿಗೆ–"ಈ ನನ್ನ ಅರ್ಧ ಅಡಿಕೆಯನ್ನು ಹಡಗಿನಲ್ಲಿಟ್ಟುಬಿಡು ಮತ್ತು ಹಡಗಿನಲ್ಲಿ ಅರ್ಧ ಅಡಿಕೆ ಪರಕಾಲನದು ಎಂದು

---

೧೮೦. ಶೈವರು ಶಿವಲಿಂಗದ ಬಗ್ಗೆ ಏನೇನೋ ಕಲ್ಪನೆಗಳನ್ನು ಮಾಡಿಕೊಂಡು, ಅದರ ಉಚ್ಚ ಭಾವನೆಯನ್ನು ವ್ಯಕ್ತ ಮಾಡುತ್ತಾರೆ. ಆದರೆ, ಶಿವ ಪುರಾಣದ 'ದಾರುವನ'ದಲ್ಲಿ ಶಿವನು ಋಷಿ ಪತ್ನಿಯರೊಂದಿಗೆ ಕಾಮುಕ ಚೇಷ್ಟೆಗಳ ಕಾರಣದಿಂದ, ಮತ್ತು ವೈಷ್ಣವರು ಶಿವಲಿಂಗವನ್ನು ಕಂಡು ಲಜ್ಜೆ ಪಡುವುದರಿಂದ, ಈ ಶಿವಲಿಂಗವು ಪುರುಷನ ಜನನೇಂದ್ರಿಯದ ಪ್ರತೀಕವೆಂದೇ ಸಿದ್ಧವಾಗುತ್ತದೆ.

೧೮೧. ಮೂಲಗ್ರಂಥದಲ್ಲಿ 'ಅಲಮಂದರಾದಿ' ಎಂಬ ಪಾಠವಿದೆ. ಇದು ತಮಿಳಿನ ಸ್ತೋತ್ರಗಳು.

೧೮೨. ಮೂಲಗ್ರಂಥದಲ್ಲಿ 'ಪರಿಕಾಲ' ಎಂಬ ಪಾಠವಿದೆ.

ಬರೆದುಕೊಡು" ಎಂದು ಹೇಳಿದನು. ವ್ಯಾಪಾರಿಯು – "ಬೇಕಾದರೆ, ನೀನು ಒಂದು ಸಾವಿರ ಅಡಿಕೆಗಳನ್ನು ತೆಗೆದುಕೊಳ್ಳು" – ಎಂದನು. ಪರಕಾಲನು – "ಇಲ್ಲ; ಸುಳ್ಳು ಸುಳ್ಳೇ ತೆಗೆದುಕೊಳ್ಳಲು ನಾವು ಅಧಾರ್ಮಿಕರಲ್ಲ. ನಮಗಂತೂ ಅರ್ಧವೇ ಬೇಕು"– ಎಂದು ಹೇಳಿದನು. ಬಡಪಾಯಿಯಾದ ವ್ಯಾಪಾರಿ ಮುಗ್ಧನಾಗಿದ್ದನು. ಅವನು ಬರೆದುಕೊಟ್ಟನು. ಯಾವಾಗ ತನ್ನ ದೇಶದ ರೇವು ಪಟ್ಟಣಕ್ಕೆ ಹಡಗು ಸೇರಿತೋ ಮತ್ತು ಅಡಿಕೆಯನ್ನು ಇಳಿಸುವ ಸನ್ನಾಹವಾಯಿತೋ, ಆಗ ಪರಕಾಲನು– "ನಮ್ಮ ಅರ್ಧ ಅಡಿಕೆಯನ್ನು ಕೊಟ್ಟುಬಿಡಿರಿ".– ಎಂದನು. ವ್ಯಾಪಾರಿಯು ಅದೇ ಅರ್ಧ ಅಡಿಕೆಯನ್ನು ಕೊಡಲಾರಂಭಿಸಿದನು. ಆಗ ಪರಕಾಲನು – "ಜಹಜಿನಲ್ಲಿ ಅರ್ಧ ಅಡಿಕೆ ನನ್ನದಾಗಿದೆ. ಅರ್ಧ ಹಂಚಿಕೊಳ್ಳುವೆನು".– ಎಂದು ಜಗಳವಾಡತೊಡಗಿದನು. ಕಲಹ ರಾಜಪುರುಷರವರೆಗೆ ಹೋಯಿತು. ಪರಕಾಲನು "ಇವನು ಅರ್ಧ ಅಡಿಕೆ ಕೊಡುವುದಾಗಿ ಬರೆದುಕೊಟ್ಟಿದ್ದಾನೆ". ಎಂದು, ವ್ಯಾಪಾರಿಯ ಪತ್ರವನ್ನು ತೋರಿಸಿದನು. ವ್ಯಾಪಾರಿಯು ಬಹಳ ಬಹಳ ತರ್ಕಿಸಿದನು; ಆದರೆ, ಅವನು ಒಪ್ಪಲಿಲ್ಲ. ಅರ್ಧ(ಭಾಗ) ಅಡಿಕೆ ತೆಗೆದುಕೊಂಡು ವೈಷ್ಣವರಿಗೆ ಅರ್ಪಿಸಿಬಿಟ್ಟನು. ಆಗಲಾದರೋ ವೈಷ್ಣವರು ಬಹಳ ಪ್ರಸನ್ನರಾದರು. ಈವರೆಗೂ ಆ ಸೂರೆಗಳ್ಳ ಪರಕಾಲನ ವಿಗ್ರಹವನ್ನು ದೇವಾಲಯಗಳಲ್ಲಿಡುತ್ತಾರೆ! ಈ ಕಥೆಯನ್ನು "ಭಕ್ತಮಾಲ"ದಲ್ಲಿ ಬರೆದಿದ್ದಾರೆ. ಬುದ್ಧಿವಂತರು ವೈಷ್ಣವರೂ, ಅವರ ಸೇವಕರೂ, ಮತ್ತು ನಾರಾಯಣನೂ–ಈ ಮೂವರೂ 'ಚೋರಮಂಡಲಿ'ಯಹುದೋ ಅಥವಾ ಅಲ್ಲವೋ ನೋಡಿಕೊಳ್ಳಲಿ. ಮತಮತಾಂತರಗಳಲ್ಲಿ ಯಾವುದಾದರೂ ಸ್ವಲ್ಪ ಒಳ್ಳೆಯ ತತ್ವಗಳಿದ್ದರೂ ಕೂಡ, ಆ ಮತದಲ್ಲಿದ್ದು ಯಾವನೂ ಸರ್ವಥಾ ಒಳ್ಳೆಯವನಾಗಲಾರನು.

ಈಗ ವೈಷ್ಣವರಲ್ಲಿ ಎಂತಹ ಒಡಕು–ಕಲಹ ಇದೆ, ನೋಡಿರಿ. ಬೇರೆ ಬೇರೆ ಬಗೆಯ ನಾಮಗಳನ್ನೂ, ಕಂಠಸೂತ್ರಗಳನ್ನೂ ಧರಿಸುತ್ತಾರೆ. ರಾಮಾನಂದಿಗಳು ಅಕ್ಕಪಕ್ಕದಲ್ಲಿ ಗೋಪೀಚಂದನದ, ನಡುವೆ ಕೆಂಪುನಾಮವನ್ನೂ, ನೀಮಾವತರು ಎರಡು ತೆಳ್ಳನೆಯ ರೇಖೆಗಳನ್ನೂ, ನಡುವೆ ಕರಿಯ ಚುಕ್ಕೆಯನ್ನೂ, ಮಾಧ್ವರು ಕಪ್ಪುರೇಖೆಯನ್ನೂ ಮತ್ತು ಗೌಡಬಂಗಾಳಿಗಳು ಕಟಾರಿಯಂತಹದನ್ನೂ ಹಾಗೂ ರಾಮಪ್ರಸಾದನ ಗುಂಪಿನವರು ಎರಡು ಚಂದ್ರರೇಖೆಗಳ ನಡುವೆ ಒಂದು ಬಿಳಿಯ ಗುಂಡು ಬೊಟ್ಟನ್ನೂ ಇಟ್ಟುಕೊಳ್ಳುತ್ತಾರೆ. ಇಂತಹ ವ್ಯತ್ಯಾಸಗಳಿವೆ. ಇವರ ಕಥನಗಳು[೧೮೩] ವಿಲಕ್ಷಣ–ವಿಲಕ್ಷಣಗಳಾಗಿವೆ. ರಾಮಾನಂದಿಗಳು ಕೆಂಪುರೇಖೆಯನ್ನು ಲಕ್ಷ್ಮಿಯ ಚಿಹ್ನೆ ಎಂದೂ, ಮತ್ತು "ಅವಳು ನಾರಾಯಣನ ಹೃದಯದಲ್ಲಿದ್ದಾಳೆ" – ಎಂದೂ, ಗೋಸಾಯಿಗಳು, "ಶ್ರೀಕೃಷ್ಣನ ಹೃದಯದಲ್ಲಿ ರಾಧೆ ವಿರಾಜಿಸುತ್ತಿದ್ದಾಳೆ" ಎಂದೂ ನಾನಾರೀತಿಯ ಕಗ್ಗಗಳನ್ನು ಬಿತ್ತರಿಸುತ್ತಾರೆ.

ಒಂದು ಕಥೆಯನ್ನು "ಭಕ್ತಮಾಲ"ದಲ್ಲಿ ಬರೆದಿದ್ದಾರೆ. ಯಾವನೋ ಒಬ್ಬ ಪುರುಷನು ಮರದ ಕೆಳಗೆ ನಿದ್ರಿಸುತ್ತಿದ್ದನು. ನಿದ್ರಿಸುತ್ತಾ–ನಿದ್ರಿಸುತ್ತಾ ಹಾಗೆಯೇ ಮೃತವಾಗಿ ಹೋದನು. ಮೇಲಿನಿಂದ ಕಾಗೆ ಮಲವಿಸರ್ಜಿಸಿತು. ಅದು ಲಲಾಟದ ಮೇಲೆ ತಿಲಕಾಕಾರವಾಗಿ ಬಿದ್ದಿತು. ಅಲ್ಲಿ ಯಮನ ದೂತರು ಅವನನ್ನು ಕರೆದೊಯ್ಯಲು ಬಂದರು. ಇಷ್ಟರಲ್ಲಿ ವಿಷ್ಣುವಿನ ದೂತರೂ ಬಂದು ಸೇರಿದರು. "ಇದು ನಮ್ಮ ಒಡೆಯನ ಆಜ್ಞೆ; ನಾವು ಇವನನ್ನು ಕರೆದೊಯ್ಯುವೆವು".– ಎಂದು ಎರಡು ಗುಂಪುಗಳ ಜನರೂ ವಿವಾದ ಮಾಡತೊಡಗಿದರು. ವಿಷ್ಣುವಿನ ದೂತರು – "ನಮ್ಮ ಒಡೆಯನ ಆಜ್ಞೆಯಾಗಿದೆ – ವೈಕುಂಠಕ್ಕೆ ಕರೆದೊಯ್ಯಬೇಕೆಂದು. ನೋಡಿರಿ, ಇವನ ಲಲಾಟದಲ್ಲಿ ವೈಷ್ಣವನ ತಿಲಕವಿದೆ. ನೀವು ಹೇಗೆ ಕರೆದೊಯ್ಯುವಿರಿ"? – ಎಂದು ಪ್ರಶ್ನಿಸಿದರು. ಆಗ ಯಮದೂತರು ಸುಮ್ಮನೇ ಹೊರಟುಹೋದರು. ವಿಷ್ಣುವಿನ ದೂತರು ಸುಖದಿಂದ ಅವನನ್ನು ವೈಕುಂಠಕ್ಕೆ ಕರೆದುಕೊಂಡು ಹೋದರು. ನಾರಾಯಣನು ಅವನನ್ನು ವೈಕುಂಠದಲ್ಲಿಟ್ಟನು. ನೋಡಿರಿ, ಅಕಸ್ಮಾತ್ತಾಗಿ ತಿಲಕರೂಪಗೊಳ್ಳುವುದಕ್ಕೆ ಇಷ್ಟು ಮಹಾತ್ಮ್ಯವಿದ್ದರೆ, ಯಾರು ಸ್ವತಃ ಪ್ರೀತಿಯಿಂದ ಮತ್ತು ತಮ್ಮ ಕೈಯಿಂದಲೇ ತಿಲಕವನ್ನು ಹಾಕಿಕೊಳ್ಳುತ್ತಾರೋ, ಅವರು ನರಕದಿಂದ ಹೊರಗಾಗಿ, ವೈಕುಂಠಕ್ಕೆ ತೆರಳಿದರೆ, ಇದರಲ್ಲಿ ಆಶ್ಚರ್ಯವಾದರೂ ಏನಿದೆ? "ಚಿಕ್ಕ ನಾಮವನ್ನು ತಿದ್ದಿಕೊಳ್ಳುವುದರಿಂದ ವೈಕುಂಠಕ್ಕೆ ಹೋಗುವುದಾದರೆ, ಸಮಸ್ತ ಮುಖದ ಮೇಲೆ ಲೇಪನಮಾಡಿಕೊಳ್ಳುವುದರಿಂದ, ಅಥವಾ ಮುಖವನ್ನು ಕಪ್ಪಗೆ ಮಾಡಿಕೊಳ್ಳುವುದರಿಂದ, ಇಲ್ಲವೇ ಶರೀರದ ಮೇಲೆ ಲೇಪನಮಾಡಿಕೊಳ್ಳುವುದರಿಂದ, ವೈಕುಂಠಕ್ಕಿಂತಲೂ ಮುಂದಕ್ಕೆ ಪಾದಬೆಳೆಸುವರೋ ಅಥವಾ ಇಲ್ಲವೋ? – ಎಂದು ನಾವು ಕೇಳುತ್ತೇವೆ. ಹೀಗೆ ಈ ಮಾತುಗಳೆಲ್ಲವೂ ವ್ಯರ್ಥವಾಗಿವೆ.

ಇನ್ನು ಇವರಲ್ಲಿ ಬಹುಮಂದಿ[೧೮೪] 'ಖಾಖಿ'[೧೮೫]ಗಳಿದ್ದಾರೆ. ಅವರು ಮರದ ಲಂಗೋಟಿ ಧರಿಸುತ್ತಾರೆ, ಬೆಂಕಿಯ ಕೊರಡದ ಬಳಿ ಕಾಯಿಸಿಕೊಳ್ಳುತ್ತಾ ಕೂತಿರುತ್ತಾರೆ; ಜಡೆಗಳನ್ನು ಬೆಳೆಯಿಸಿಕೊಳ್ಳುತಾರೆ; ಸಿದ್ಧನ ವೇಷವನ್ನು ಹಾಕಿಕೊಳ್ಳುತ್ತಾರೆ.

---

೧೮೩. ಎಂದರೆ, ಬೇರೆ–ಬೇರೆ ಬಗೆಯ ತಿಲಕಗಳ ಪ್ರಯೋಜನ– ಕಥನಗಳು. –ಯು.ಮೀ.

೧೮೪. ಎಂದರೆ, ವೈಷ್ಣವರಲ್ಲಿ

೧೮೫. ಬೂದಿಬಡುಕ ಸಾಧುಗಳು.

ಕೊಕ್ಕರೆಯಂತೆ ಧ್ಯಾನಾವಸ್ಥಿತರಾಗುತ್ತಾರೆ. ಗಾಂಜಾ, ಭಂಗೀ, ಚರಸ್ಸನ್ನು ಸೇದುತ್ತಾರೆ; ಕೆಂಪು ಕಣ್ಣುಗಳನ್ನು ಹೊಂದಿರುತ್ತಾರೆ. ಎಲ್ಲರಿಂದಲೂ ಅನ್ನ, ಹಿಟ್ಟು, ಕವಡೆ, ಕಾಸು ಬೇಡಿ ತೆಗೆದುಕೊಳ್ಳುತ್ತಾರೆ. ಗೃಹಸ್ಥರ ಮಕ್ಕಳನ್ನು ದಾರಿತಪ್ಪಿಸಿ ಅನುಯಾಯಿಗಳನ್ನಾಗಿ ಮಾಡಿಕೊಳ್ಳುತ್ತಾರೆ. ವಿಶೇಷವಾಗಿ ಕೂಲಿಗಾರರು ಅವರಲ್ಲಿರುತ್ತಾರೆ. ಯಾವನಾದರೂ ವಿದ್ಯೆಯನ್ನು ಕಲಿಯುತ್ತಿದ್ದರೆ, ಅವನನ್ನು ಓದಲುಬಿಡುವುದಿಲ್ಲ. ಪ್ರತಿಯಾಗಿ ಹೀಗೆ ಹೇಳುತ್ತಾರೆ:–

**ಪಠಿತವ್ಯಂ ತದಪಿ ಮರ್ತವ್ಯಂ ದಂತಕಟಾಕಟೇತಿ ಕಿಂ ಕರ್ತವ್ಯಮ್ ॥**

ಸಂತರಿಗೆ ವಿದ್ಯಾಭ್ಯಾಸದ ಗೋಜಾದರೂ ಏನು? ಏಕೆಂದರೆ, ವಿದ್ಯೆಯನ್ನು ಓದುವವರೂ ಕೂಡ ಸತ್ತು ಹೋಗುತ್ತಾರೆ. ಮತ್ತೆ ಹಲ್ಲನ್ನು ಕಟಿಕಟಕಡಿಯುವುದೇತಕ್ಕಾಗಿ? ಸಾಧುಗಳು ನಾಲ್ಕು ಧಾಮಗಳಿಗೆ ಯಾತ್ರೆಮಾಡಿ ಬರಬೇಕು, ಸಂತರ ಸೇವೆಮಾಡಬೇಕು. ರಾಮದೇವರ ಭಜನ ಮಾಡಬೇಕು.

ಯಾವನಾದರೂ ಅಪ್ಪಟ ಮೂರ್ಖನನ್ನು, ಅವಿದ್ಯೆಯ ಪ್ರತಿಮೆಯನ್ನು ನೋಡಿಲ್ಲವಾದರೆ, ಖಾಖೀ ಮಹಾರಾಜರ ದರ್ಶನಮಾಡಿ ಬರಬೇಕು. ಅವರ ಹತ್ತಿರ ಯಾರೇ ಹೋಗಲಿ, ಹೋಗುವವರು ಖಾಖೀಮಹಾರಾಜರ ತಂದೆಗೆ, ತಾಯಿಗೆ ಸಮಾನರೇ ಆಗಿರಲೊಲ್ಲವೇಕೆ, ಅವರನ್ನು 'ಮಗನೇ! ಮಗಳೇ!' ಎಂದು ಅವರು ಕರೆಯುತ್ತಾರೆ. ಖಾಖೀಮಹಾರಾಜರು ಹೇಗೋ, ಹಾಗೆಯೇ ಮರದವರು*, ಒಣಮರದವರು* ಚಿಂದಿ ಬಟ್ಟೆಯವರು*, ಹಾಗೂ ಗುಂಪುಗುಳಿಗಳು*, ಶುಷ್ಕಪ್ರಾಣರು*, ಅಕಾಲಿಗಳು, ಕಿವಿಹರುಕರು*, ಜೋಗಿಗಳು*, ಅವಘಡದವರು*– ಮೊದಲಾದವರೆಲ್ಲರೂ ಒಂದೇ ವಿಧದವರಾಗಿರುತ್ತಾರೆ.

ಖಾಖಿಯ ಶಿಷ್ಯನೊಬ್ಬನು **'ಸ್ರೀ ಗನೇ ಸಾಜನಮೇ'**– ಎಂದು ಒದರುತ್ತಾ ಒದರುತ್ತಾ ನೀರನ್ನು ತರಲು ಭಾವಿಗೆ ಹೋದನು. ಅಲ್ಲಿ ಒಬ್ಬ ಪಂಡಿತ ಕುಳಿತಿದ್ದನು. ಖಾಖೀಶಿಷ್ಯನು **'ಸ್ರೀ ಗನೇ ಸಾಜನಮೇ'**– ಎಂದು ಜಪಿಸುವುದನ್ನು ಕೇಳಿ ಆ ಪಂಡಿತನು "ಓ ಸಾಧು! ಅಶುದ್ಧವಾಗಿ ಪಠಿಸುತ್ತಿದ್ದೀಯೆ! **"ಶ್ರೀ ಗಣೇಶಾಯ ನಮಃ"** ಎಂದು ಉಚ್ಚರಿಸು"– ಎಂದನು. ಅವನು ಕೂಡಲೇ ಪಾತ್ರೆಯನ್ನು ತುಂಬಿಸಿಕೊಂಡು ಗುರುವರ್ಯರ ಸಮೀಪಕ್ಕೆ ಹೋಗಿ–"ಒಬ್ಬ ಹಾರುವಯ್ಯ ನನ್ನ ಉಚ್ಚಾರಣವನ್ನು ಅಸುದ್ಧವೆನ್ನುತ್ತಾನೆ"– ಎಂದನು. ಅದನ್ನು ಕೇಳಿ, ಕೂಡಲೇ ಖಾಖೀಮಹಾಶಯರು ಎದ್ದರು; ಭಾವಿಯ ಬಳಿ ಹೋದರು ಮತ್ತು ಪಂಡಿತನಿಗೆ–"ನೀನು ನನ್ನ ಶಿಷ್ಯನಿಗೆ ದಾರಿ ತಪ್ಪಿಸುತ್ತೀಯಾ? ಗುರುವಿನ ಗುಟ್ಟನ್ನು ತಿಳಿಯಲು ನೀನು ಓದಿರುವುದಾದರೂ ಏನು? ನೋಡು; ನೀನು ಒಂದು ಬಗೆಯ ಪಾಠವನ್ನು ಬಲ್ಲೆ. ನಾವು ಮೂರು ಬಗೆಯದನ್ನು ತಿಳಿದಿದ್ದೇವೆ. **"ಸ್ರೀ ಗನೇಸಾಜನ್ನಮೋ, ಸ್ರೀ ಗನೇಸಾಯಮ್ನವೇ, ಶ್ರೀ ಗನೇಸಾಯನಮೇ"**. ಕೇಳಿದೆಯಾ"? ಎಂದು ಅಬ್ಬರಿಸಿದರು.

**ಪಂಡಿತ:**– ಕೇಳಿರಿ ಸಾಧುಗಳೇ! ವಿದ್ಯೆಯ ವಿಷಯ ಬಹುಕಠಿನವಾಗಿದೆ. ಓದದೇ ಬರುವುದಿಲ್ಲ.

**ಖಾಖೀ:**– ಹೋಗೋ ಅತ್ತ! ಭಂಗೀರಸದ ಒಂದೇ ಸೆಳೆತದಲ್ಲಿ, ಒಂದೇ ಉಸಿರಿಗೆ ಎಲ್ಲರನ್ನೂ ಹಾರಿಸಿಬಿಟ್ಟಿದ್ದೇವೆ. ಎಲ್ಲ ವಿದ್ವಾಂಸರನ್ನೂ ನಾವು ತೀಡಿ ಹಾಕಿದ್ದೇವೆ. ಸಂತರ ಬಿಡಾರ ದೊಡ್ಡದು. ಬರೇ ಹಾರುವ ನೀನೇನು ತಿಳಿದಿದ್ದೀಯೆ?

**ಪಂಡಿತ:**– ನೋಡಿರಿ, ನೀವು ವಿದ್ಯೆಯನ್ನು ಕಲಿತಿದ್ದರೆ ಇಂತಹ ಅಪಶಬ್ದಗಳನ್ನು ಏಕೆ ಆಡುತ್ತಿದ್ದಿರಿ? ನಿಮಗೆ ಎಲ್ಲ ಬಗೆಯ ಜ್ಞಾನವೂ ಇರುತ್ತಿದ್ದಿತು.

**ಖಾಖೀ:**– ಎಲೋ, ನೀನು ನಮ್ಮ ಗುರುವಾಗುತ್ತೀಯೇನು? ನಿನ್ನ ಉಪದೇಶವನ್ನು ನಾವು ಕೇಳುವುದಿಲ್ಲ.

**ಪಂಡಿತ:**– ಆಲಿಸುವೆ ಎಲ್ಲಿಂದ? ಬುದ್ಧಿಯೇ ಇಲ್ಲ! ಉಪದೇಶವನ್ನು ಕೇಳುವುದಕ್ಕೂ, ತಿಳಿದುಕೊಳ್ಳುವುದಕ್ಕೂ ವಿದ್ಯೆಬೇಕು.

**ಖಾಖೀ:**– ಸಮಸ್ತ ವೇದಶಾಸ್ತ್ರಗಳನ್ನು ಓದಿದ್ದರೂ, ಸಂತರನ್ನು ಮಾನಿಸದಿದ್ದರೆ, ಅವನು ಏನನ್ನೂ ಓದಿಲ್ಲವೆಂದು ತಿಳಿಯಿರಿ. (ಓದಿಲ್ಲದಂತೆಯೇ ಸರಿ.)

**ಪಂಡಿತ :**– ಅಹುದು. ನಾವು ಸಂತರ ಸೇವೆಯನ್ನು ಮಾಡುತ್ತೇವೆ. ಆದರೆ ನಿಮ್ಮಂತಹ ಗಾಂಪರೊಡೆಯನ ಸೇವೆಯನ್ನು ಮಾಡುವುದಿಲ್ಲ. ಏಕೆಂದರೆ–ಸಜ್ಜನರೂ, ವಿದ್ವಾಂಸರೂ, ಧಾರ್ಮಿಕರೂ, ಪರೋಪಕಾರಿಗಳೂ ಆದ ಪುರುಷರನ್ನು ಸಂತರೆನ್ನುತ್ತಾರೆ.

---

* ಈ ಚಿಹ್ನೆಗಳ ನಡುವೆ ಕಾಣಿಸಿರುವ ಹೆಸರುಗಳೆಲ್ಲಾ ಇದೇ ವಿಧದ ಅವಿದ್ಯಾವಂತ ಬೈರಾಗಿ ಮತಗಳ ಹೆಸರು.

**ಖಾಖೀ:**– ನೋಡು, ನಾವು ಇರುಳೂ–ಹಗಲೂ ಬೆತ್ತಲೆಯಿರುತ್ತೇವೆ. ಅಗ್ನಿಯನ್ನು ಹೊತ್ತಿಸಿಕೊಂಡಿರುತ್ತೇವೆ. ಗಾಂಜಾ–ಚರಸ್ಸುಗಳ ನೂರಾರು ಸೆಳೆತಗಳನ್ನು ಮಾಡುತ್ತಾ ಇರುತ್ತೇವೆ. ಮೂರು–ಮೂರು ತಂಬಿಗೆ ಭಂಗೀರಸ ಕುಡಿಯುತ್ತೇವೆ. ಗಾಂಜಾ, ಭಂಗೀ, ಧತ್ತೂರೀ ಎಲೆಗಳ ಶಾಕವನ್ನು ಮಾಡಿ ಭಕ್ಷಿಸುತ್ತೇವೆ. ಶಂಖಪಾಷಾಣ ಮತ್ತು ಅಫೀಮನ್ನೂ ಕೂಡ ಲೀಲಾಜಾಲವಾಗಿ ನುಂಗಿಬಿಡುತ್ತೇವೆ. ಮದದಲ್ಲಿ ಮೈಮರೆತು ರಾತ್ರಿ–ಹಗಲು ದುಃಖರಹಿತರಾಗುತ್ತೇವೆ. ಪ್ರಪಂಚದ ಹಂಗನ್ನೇ ಕಟ್ಟಿಕೊಳ್ಳುವುದಿಲ್ಲ. ಭಿಕ್ಷೆಬೇಡಿ, ಕೂಳನ್ನು ಬೇಯಿಸಿ ತಿನ್ನುತ್ತೇವೆ. ಯಾವನು ಪಕ್ಕದಲ್ಲಿ ಮಲಗುತ್ತಾನೋ, ಅವನಿಗೂ ಕೂಡ ಎಂದಿಗೂ ನಿದ್ರೆ ಬಾರದಂತೆ ರಾತ್ರೆಯೆಲ್ಲಾ ಕೆಮ್ಮು ಬರುತ್ತಾ ಇರುತ್ತದೆ. ಈ ಮೊದಲಾದ ಸಿದ್ಧಿಗಳು ಮತ್ತು ಸಾಧುತ್ವ ನಮ್ಮಲ್ಲಿದೆ. ಮತ್ತೆ ನೀನು ನಮ್ಮ ನಿಂದೆಯನ್ನೇಕೆ ಮಾಡುತ್ತೀಯೆ? ಎಚ್ಚೆತ್ತುಕೋ ಅಯ್ಯ! ನಮ್ಮನ್ನು ಬೇಸರಪಡಿಸುವೆಯಾದರೆ, ನಾವು ನಿನ್ನನ್ನು ಬೂದಿಮಾಡಿಬಿಡುತ್ತೇವೆ!

**ಪಂಡಿತ:**– ಈ ಸಮಸ್ತವೂ ಅಸಾಧುಗಳೂ, ಮೂರ್ಖರೂ, ಮತಿಹೀನರೂ ಆದವರ ಲಕ್ಷಣಗಳು; ಸಾಧುಗಳದಲ್ಲ! ಕೇಳಿರಿ. **"ಸಾಧ್ನೋತಿ ಪರಾಣಿ ಧರ್ಮಕಾರ್ಯಾಣಿ ಸ ಸಾಧುಃ"** ಯಾವನು ಧರ್ಮಯುಕ್ತವಾದ ಉತ್ತಮ ಕರ್ಮಗಳನ್ನು ಮಾಡುವನೋ, ಸದಾ ಪರೋಪಕಾರದಲ್ಲಿಯೇ ಪ್ರವೃತ್ತನಾಗಿರುವನೋ, ಯಾವನಲ್ಲಿ ಯಾವ ದುರ್ಗುಣಗಳೂ ಇರುವುದಿಲ್ಲವೋ, ಯಾವನು ವಿದ್ವಾಂಸನಾಗಿ ಸತ್ಯೋಪದೇಶದಿಂದ ಸರ್ವರಿಗೂ ಉಪಕಾರ ಮಾಡುವನೋ, ಅವನನ್ನು ಸಾಧುವೆನ್ನುತ್ತಾರೆ.

**ಖಾಖೀ:**– ಹೋಗಯ್ಯಾ ನೀನು ಸಾಧುವಿನ ಕಾರ್ಯಗಳನ್ನೇನು ಬಲ್ಲೆ? ಸಂತರ ಒಕ್ಕಲು ಬಹು ದೊಡ್ಡದು! ಯಾವ ಸಂತನನ್ನೂ ಅಡ್ಡಹಾಯಬೇಡ. ಇಲ್ಲದಿದ್ದರೆ, ನೋಡು, ಇಕ್ಕಳವನ್ನೆತ್ತಿ ಒಂದು ಬಿಗಿದರೆ, ನಿನ್ನ ಬುರುಡೆ ಒಡೆದು ಹೋಗಾದೀತು!

**ಪಂಡಿತ:**– ಒಳ್ಳೆಯದು, ಬೂದಿಬಡುಕ, ಹೋಗು ನಿನ್ನ ಆಸನಕ್ಕೆ. ನಮ್ಮೊಂದಿಗೆ ಹೆಚ್ಚು ಕೋಪಿಸಿಕೊಳ್ಳಬೇಡ. ರಾಜ್ಯ ಹೇಗಿದೆ–ಎಂಬುದು ಗೊತ್ತಿದೆಯೇ? ಯಾರನ್ನಾದರೂ ಹೊಡೆದರೆ, ಕೊಂದರೆ, ಹಿಡಿಯಲ್ಪಡುವೆ. ಸೆರೆಯಾಳಾಗುವೆ. ಬೆತ್ತದ ಏಟು ತಿನ್ನುವೆ. ಅಥವಾ ಯಾವನಾದರೂ ನಿನ್ನನ್ನೂ ಕೂಡ ಬಡೆದು ಹಾಕಿದರೆ, ಮತ್ತೇನು ಮಾಡುವೆ? ಇದು ಸಾಧುವಿನ ಲಕ್ಷಣವಲ್ಲ.

**ಖಾಖೀ:**– ನಡೆಯೋ ಶಿಷ್ಯ! ಯಾವ ರಾಕ್ಷಸನ ಮುಖವನ್ನು ತೋರಿಸಿದೆ?

**ಪಂಡಿತ:**– ನೀನು ಯಾವಾಗಲೂ ಯಾವ ಮಹಾತ್ಮನ ಸಂಗವನ್ನೂ ಮಾಡಿಲ್ಲ. ಇಲ್ಲದಿದ್ದರೆ, ಇಂತಹ ಜಡಮೂರ್ಖನಾಗಿರುತ್ತಿರಲಿಲ್ಲ!

**ಖಾಖೀ:**– ನಾವು ಸ್ವತಃ ಮಹಾತ್ಮರಾಗಿದ್ದೇವೆ. ನಮಗೆ ಬೇರೆ ಇನ್ನಾರ ಅಪೇಕ್ಷೆಯೂ ಇಲ್ಲ.

**ಪಂಡಿತ:**– ಯಾರ ಭಾಗ್ಯ ಮಣ್ಣುಗೂಡಿರುತ್ತದೋ, ಅವರಿಗೆ ನಿನ್ನದರಂತಹ ಬುದ್ಧಿ ಮತ್ತು ಅಭಿಮಾನ ಉಂಟಾಗುತ್ತದೆ.

ಖಾಖೀ ತನ್ನ ಬಿಡಾರಕ್ಕೆ ತೆರಳಿದನು. ಮತ್ತು ಪಂಡಿತರು ಮನೆಗೆ ಹೋದರು.

ಯಾವಾಗ ಸಂಧ್ಯಾಕಾಲದ ಆರತಿಯಾಯಿತೋ, ಆಗ ಆ ಖಾಖಿಯನ್ನು ವೃದ್ಧನೆಂದು ತಿಳಿದು ಬಹು ಮಂದಿ ಬೂದಿಬಡುಕರು 'ಡಾಂಡೋತ್, ಡಾಂಡೋತ್'[೧೮೬] ಎನ್ನುತ್ತಾ ಸಾಷ್ಟಾಂಗ ಪ್ರಣಾಮಮಾಡಿ, ಕುಳಿತರು. ಆ ಖಾಖೀ ಕೇಳಿದನು:– 'ಎಲೋ ರಾಮದಾಸು! ನೀನು ಏನನ್ನು ಓದಿರುವೆ?"

**ರಾಮದಾಸ:**– ಮಹಾರಾಜ್! ನಾನು 'ಬೇಸ್ನುಸಹಸರನಾಮ'[೧೮೭] ಓದಿದ್ದೇನೆ.

**ಖಾಖೀ:**– ಓ ಗೋವಿಂದದಾಸ! ನೀನು ಏನನ್ನು ಓದಿದ್ದೀಯೇ?

**ಗೋವಿಂದದಾಸ:**– ನಾನು 'ರಾಮಸತವ ರಾಜ'[೧೮೮] ಓದಿದ್ದೇನೆ, ಇಂಹ ಖಾಖೀ ಮಹಾರಾಜರ ಹತ್ತಿರ.

ಆಗ ರಾಮದಾಸನು :– "ಮಹಾರಾಜ್! ತಾವು ಏನನ್ನು ಓದಿದ್ದೀರಿ?" ಎಂದು ಕೇಳಿದನು.

---

೧೮೬. ಎಂದರೆ, ದಂಡವತ್ ಸಾಷ್ಟಾಂಗ ನಮಸ್ಕಾರ ಎಂದರ್ಥ.

೧೮೭. ಎಂದರೆ, ವಿಷ್ಣು ಸಹಸ್ರನಾಮ.

೧೮೮. ಎಂದರೆ, ರಾಮಸ್ತವರಾಜ

**ಖಾಖೀ:**– ನಾವು ಗೀತೆಯನ್ನು ಓದಿದ್ದೇವೆ.

**ರಾಮದಾಸ:**– ಯಾರಹತ್ತಿರ?

**ಖಾಖೀ:**– ಹೋಗಲೋ ಹುಡುಗ! ನಾವು ಯಾರನ್ನೂ ಗುರುವನ್ನಾಗಿ ಮಾಡಿಕೊಳ್ಳುವುದಿಲ್ಲ. ನೋಡು, ನಾವು 'ಪರಾಗರಾಜ'[೧೮೯]ದಲ್ಲಿ ಇರುತ್ತಿದ್ದೆವು. ನಮಗೆ ಅಕ್ಷರ ಬರುತ್ತಿರಲಿಲ್ಲ. ಯಾವಾಗ ಯಾವನಾದರೂ ಉದ್ದವಾದ ಪಂಚೆಯ ಪಂಡಿತನನ್ನು ನೋಡುತ್ತಿದ್ದೆವೋ, ಆಗ ಗೀತೆಯ ಕಿರುಹೊತ್ತಿಗೆಯಲ್ಲಿ–"ಈ ಕೊಂಬನ್ನುಳ್ಳ[೧೯೦] ಅಕ್ಷರದ ಹೆಸರೇನು?" ಎಂದು ಕೇಳುತ್ತಿದ್ದೆವು. ಹೀಗೆ ಕೇಳುತ್ತಾ–ಕೇಳುತ್ತಾ ೧೮ ಅಧ್ಯಾಯದ ಗೀತೆಯನ್ನು ತೀಡಿಹಾಕಿದೆವು. ಗುರುವನ್ನಾಗಿ ಯಾವ ಒಬ್ಬನ್ನೂ ಮಾಡಿಕೊಳ್ಳಲಿಲ್ಲ.

ಒಳ್ಳಿತು, ಇಂತಹ ವಿದ್ಯಾಶತ್ರುಗಳಲ್ಲಿ ಅವಿದ್ಯೆ ಮನೆಮಾಡಿಕೊಳ್ಳದಿದ್ದರೆ, ಇನ್ನೆಲ್ಲಿ ಹೋಗಬೇಕು?

ಈ ಮಂದಿ ಮದ, ಪ್ರಮಾದ, ಕಾದಾಟ, ತಿನ್ನುವುದು, ನಿದ್ರಿಸುವುದು, ಜಾಗಟೆಬಾರಿಸುವುದು, ಘಂಟೆ–ತಮ್ಮಟೆ–ಶಂಖ ಬಾರಿಸುವುದು, ಅಗ್ನಿಯನ್ನು ಪ್ರದೀಪ್ತವಾಗಿಟ್ಟುಕೊಂಡಿರುವುದು, ಮೀವುದು, ತೊಳೆಯುವುದು, ಎಲ್ಲ ದಿಕ್ಕುಗಳಲ್ಲಿಯೂ ವ್ಯರ್ಥವಾಗಿ ಅಲೆಯುವುದು–ತಿರುಗುವುದು–ಇದನ್ನು ಬಿಟ್ಟರೆ, ಬೇರೆ ಯಾವದೇ ಒಳ್ಳೆಯ ಕೆಲಸವನ್ನೂ ಮಾಡುವುದಿಲ್ಲ. ಯಾವನಾದರೂ ಬೇಕಾದರೆ ಕಲ್ಲನ್ನೂ ಕೂಡ ಕರಗಿಸಿಕೊಳ್ಳಬಹುದು; ಆದರೆ ಈ ಬೂದಿಬಡುಕರ ಆತ್ಮಗಳಿಗೆ ಜ್ಞಾನವನ್ನುಂಟುಮಾಡುವುದು ಕಠಿಣವಾಗಿರುತ್ತದೆ. ಏಕೆಂದರೆ, ಬಹುಭಾಗದಲ್ಲಿ ಅವರು ವಿದ್ಯಾಜ್ಞಾನಶೂನ್ಯರಾದ ಕೂಲಿಗಾರರು ಬೇಸಾಯಗಾರರು, ಬೋಯಿಗಳು–ಮೊದಲಾದವರಾಗಿದ್ದು, ತಮ್ಮ ವೃತ್ತಿಯನ್ನು ಬಿಟ್ಟು, ಕೇವಲ ಬೂದಿಬಳೆದುಕೊಂಡು ಬೈರಾಗಿಗಳು, ಖಾಖಿಗಳು–ಮೊದಲಾದವರಾಗಿ ಹೋಗುತ್ತಾರೆ. ಅವರಿಗೆ ವಿದ್ಯೆಯ ಅಥವಾ ಸತ್ಸಂಗ ಮೊದಲಾದುದರ ಮಾಹಾತ್ಮ್ಯವು ತಿಳಿದುಬರಲಾರದು.

ಇದರಲ್ಲಿ ನಾಥರುಗಳ ಮಂತ್ರ "ನಮಃ ಶಿವಾಯಃ"; ಖಾಖಿಗಳದು "ನೃಸಿಂಹಾಯ ನಮಃ"; ರಾಮಾವರಾತರದು "ಶ್ರೀರಾಮಚಂದ್ರಾಯ ನಮಃ" ಅಥವಾ "ಸೀತಾರಾಮಾಭ್ಯಾಂ ನಮಃ"; ಕೃಷ್ಣೋಪಾಸಕರದು "ಶ್ರೀ ರಾಧಾಕೃಷ್ಣಭ್ಯಾಂ ನಮಃ"; "ನಮೋ ಭಗವತೇ ವಾಸುದೇವಾಯ" ಮತ್ತು ಬಂಗಾಳಿಗಳದು "ಗೋವಿಂದಾಯ ನಮಃ" ಈ ಮಂತ್ರಗಳನ್ನು ಕಿವಿಯಲ್ಲಿ ಊದಿ ಬಿಡುವುದರ ಮಾತ್ರದಿಂದ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ಮತ್ತು ಈ ಕೆಳಗೆ ಬರೆದಂತಹ ಶಿಕ್ಷಣವನ್ನೂ ಕೊಡುತ್ತಾರೆ– "ಮಗನೇ! ತಂಬಿಗೆಯ[೧೯೧] ಮಂತ್ರವನ್ನು ಪಠಿಸು":–

**ಜಲ ಪವಿತರ ಸಥಲ ಪವಿತರ ಔರ್ ಪವಿತರ್ ಕುವಾ ।**

**ಶಿವ ಕಹೇ ಸುನ ಪಾರ್ವತೀ ತೂಂಬಾ ಪವಿತರ್ ಹುವಾ**[೧೯೨] ॥

ಒಳ್ಳೆಯದು. ಇಂತಹವರಿಗೆ ಸಾಧುವಾಗಲು ಅಥವಾ ವಿದ್ವಾಂಸರಾಗಲು ಅಥವಾ ಜಗತ್ತಿಗೆ ಉಪಕಾರಮಾಡಲು ಎಂದಿಗಾದರೂ ಯೋಗ್ಯತೆಯುಂಟಾದೀತೇ? ಖಾಖಿಗಳು ರಾತ್ರಿ–ಹಗಲು ಕಟ್ಟಿಗೆಗಳನ್ನೂ, ಬೆರಣಿಗಳನ್ನೂ ಸುಡುತ್ತಾ ಇರುತ್ತಾರೆ. ಒಂದು ತಿಂಗಳಲ್ಲಿ ಎಷ್ಟೋ ರೂಪಾಯಿಗಳ ಕಟ್ಟಿಗೆಯನ್ನು ಉರಿಸಿಹಾಕುತ್ತಾರೆ. ಒಂದು ತಿಂಗಳಿನ ಕಟ್ಟಿಗೆಯ ಬೆಲೆಗೆ ಕಂಬಳಿ–ಮೊದಲಾದ ವಸ್ತ್ರಗಳನ್ನು ತೆಗೆದುಕೊಂಡರೆ, ನೂರನೆಯ ಒಂದಂಶದ ಹಣದಲ್ಲಿ ಸುಖದಿಂದ ಇರುವರು. ಅವರಿಗೆ ಇಷ್ಟು ಬುದ್ಧಿ ಎಲ್ಲಿಂದ ಬಂದೀತು? ಆ ಉರಿಯುವ ಕೊರಡಿನಿಂದ ತಾಪ ಪಡೆಯುತ್ತಾ ಹೋಗುವುದರಿಂದಲೇ ತಮಗೆ 'ತಪಸ್ವಿಗಳು' ಎಂಬ ಹೆಸರನ್ನಿಟ್ಟುಕೊಂಡಿರುತ್ತಾರೆ. ಈ ರೀತಿ ತಪಸ್ವಿಗಳಾಗಬಲ್ಲರಾದರೆ, ಕಾಡುಜನರು ಇವರಿಗಿಂತ ಹೆಚ್ಚು

---

೧೮೯. ಎಂದರೆ, ಪ್ರಯಾಗರಾಜ

೧೯೦. ದೇವನಾಗರೀ ವರ್ಣಮಾಲೆಯ ಎ, ಐ, ಓ, ಔ, ಮಾತ್ರೆಗಳು ವ್ಯಂಜನದ ಅಕ್ಷರದ ಮೇಲೆ, ಕಿರೀಟದ ಮೇಲೆ ನವಿಲುಗರಿಯನ್ನು ಸಿಕ್ಕಿಸುವಂತೆ, ಹಾಕಲ್ಪಡುತ್ತವೆ.

೧೯೧. ಮೂಲ ಗ್ರಂಥದಲ್ಲಿ "ತೂಂಬಾ" ಎಂಬ ಶಬ್ದವಿದೆ. ಇದು ಸೋರೇ ಬುರುಡೆಯ ಕಮಂಡಲಿನಂತಿರುತ್ತದೆ. ಇದರಲ್ಲಿ ನೀರಿನ ದೋಷ ದೂರವಾಗುತ್ತಿತ್ತು.

೧೯೨. ರಾಮಸ್ನೇಹಿ ಧರ್ಮಪ್ರಕಾಶ, ರಾಮ ಪಟಲ. –ಯು.ಮೀ

ತಪಸ್ವಿಗಳಾದಾರು. ಉದ್ದವಾಗಿ ಜಡೆ ಬಿಡುವುದರಿಂದ, ನಾಮಗಳನ್ನೆಳೆದು ಕೊಳ್ಳುವುದರಿಂದ ತಪಸ್ವಿಯಾಗುವುದಾದರೆ, ಎಲ್ಲರೂ ಹಾಗೆ ಮಾಡಬಲ್ಲರು. ಇವರು ಮೇಲಿನಿಂದ ತ್ಯಾಗಸ್ವರೂಪರೂ ಮತ್ತು ಒಳಗಿನಿಂದ ಮಹಾಸಂಗ್ರಹಿಗಳು ಆಗಿರುತ್ತಾರೆ.

ಕಬೀರಪಂಥಿಗಳಾದರೂ ಶ್ರೇಷ್ಠರೂ?

**ಉತ್ತರ :-** ಇಲ್ಲ.

**ಪ್ರಶ್ನೆ :-** ಶ್ರೇಷ್ಠರೇತಕ್ಕಲ್ಲ? ಶಿಲೆ-ಮೊದಲಾದುದರ ಪ್ರತಿಮೆಗಳ ಪೂಜೆಯನ್ನು ಖಂಡಿಸುತ್ತಾರೆ. ಕಬೀರ ಮಹಾರಾಜರು ಹೂಗಳಿಂದ ಉತ್ಪನ್ನರಾಗಿದ್ದರು ಮತ್ತು ಕೊನೆಗೂ ಹೂವೇ ಆಗಿಹೋದರು. ಬ್ರಹ್ಮಾ, ವಿಷ್ಣು, ಮಹಾದೇವರ ಜನ್ಮ ಯಾವಾಗ ಆಗಿರಲಿಲ್ಲವೋ, ಆಗಲೂ ಕಬೀರ ಮಹಾರಾಜರು ಇದ್ದರು. ಮಹಾಸಿದ್ಧರು; ಎಷ್ಟೆಂದರೆ-ಯಾವ ವಿಷಯವನ್ನು ವೇದ-ಪುರಾಣಗಳೂ ಕೂಡ ತಿಳಿಸಲಾರವೋ, ಅದನ್ನು ಕಬೀರರು ತಿಳಿಯುತ್ತಾರೆ. ಸತ್ಯಮಾರ್ಗವಾವುದಿದೆಯೋ, ಅದನ್ನು ಕಬೀರರು ಮಾತ್ರವೇ ತೋರಿಸಿದ್ದಾರೆ. **"ಸತ್ಯನಾಮ ಕಬೀರ"** ಮೊದಲಾದುದು ಇವರ ಮಂತ್ರವಾಗಿದೆ.

**ಉತ್ತರ:-** ಶಿಲೆ-ಮೊದಲಾದುವನ್ನು ಬಿಟ್ಟು, ಮಂಚ, ಗದ್ದಿಗೆ, ದಿಂಬು, ಹಾವುಗೆ, ಬೆಳಕು ಎಂದರೆ-ದೀಪ ಮೊದಲಾದುವನ್ನು ಪೂಜಿಸುವುದು ಶಿಲಾಮೂರ್ತಿಗಿಂತ ಕಡಿಮೆಯಲ್ಲ. ಹೂಗಳಿಂದ ಹುಟ್ಟಿ ಮತ್ತು ಕೊನೆಗೆ ಹೂವಾಗಿ ಹೋಗಲು, ಕಬೀರ ಮಹಾರಾಜರು ಕೀಟ ಅಥವಾ ಮೊಗ್ಗುಗಳಾಗಿದ್ದರೇನು?

ಈ ಪ್ರಕರಣದಲ್ಲಿ, ಆಲಿಸಲ್ಪಡುವ ಕೆಳಕಂಡ ವಿಷಯವೇ ಸತ್ಯವಿರಬಹುದು. ಯಾವನೋ ಒಬ್ಬ ನೇಕಾರನು ಕಾಶಿಯಲ್ಲಿರುತ್ತಿದ್ದನು. ಅವನಿಗೆ ಮಕ್ಕಳು-ಮರಿಗಳಿರಲಿಲ್ಲ. ಒಂದು ಸಮಯದಲ್ಲಿ, ರಾತ್ರಿ ಸ್ವಲ್ಪವಿತ್ತು. ಒಂದು ಓಣಿಯಲ್ಲಿ ಹೋಗುತ್ತಾ ಇದ್ದನು. ದಾರಿಯ ಅಂಚಿನಲ್ಲಿ, ಒಂದು ಬುಟ್ಟಿಯಲ್ಲಿ, ಹೂಗಳ ನಡುವೆ, ಅದೇ ರಾತ್ರಿ ಜನಿಸಿದ್ದ ಗಂಡು ಮಗುವಿದ್ದಿತು. ಅದನ್ನು ನೋಡಿದನು. ಅವನು ಅದನ್ನು ಎತ್ತಿಕೊಂಡು ಹೋದನು. ತನ್ನ ಹೆಂಡತಿಗೆ ಕೊಟ್ಟನು. ಅವಳು ಪಾಲಿಸಿದಳು. ಯಾವಾಗ ಅವನು ದೊಡ್ಡವನಾದನೋ, ಆಗ ನೇಕಾರನ ಕೆಲಸವನ್ನು ಮಾಡುತ್ತಿದ್ದನು. ಯಾವನೋ ಪಂಡಿತನ ಬಳಿ ಸಂಸ್ಕೃತವನ್ನು ಕಲಿಯಲು ಹೋದನು. ಅವನು (ಪಂಡಿತನು) ಅವನಿಗೆ ಅಪಮಾನವನ್ನು ಮಾಡಿದನು. "ನೇಕಾರನಿಗೆ ನಾವು ಕಲಿಸುವುದಿಲ್ಲ".-ಎಂದು ಹೇಳಿದನು. ಹೀಗೆಯೇ ಅನೇಕ ಪಂಡಿತರ ಬಳಿ ತಿರುಗಾಡಿದನು; ಆದರೆ ಯಾವನೂ ಓದಿಸಲಿಲ್ಲ. ಆಗ ಸಿಕ್ಕಾಪಟ್ಟೆ ಭಾಷಾಕೃತಿಗಳನ್ನು ರಚಿಸಿ, ನೇಕಾರರೇ ಮೊದಲಾದ ಕೆಳಗಣಮಟ್ಟದ ಜನರಿಗೆ ಬೋಧಿಸತೊಡಗಿದನು. ತಂಬೂರಿ ಹಿಡಿದು ಹಾಡುತ್ತಿದ್ದನು. ಭಜನೆಗಳನ್ನು ರಚಿಸುತ್ತಿದ್ದನು. ವಿಶೇಷವಾಗಿ ಪಂಡಿತರ, ಶಾಸ್ತ್ರಗಳ ಮತ್ತು ವೇದಗಳ ನಿಂದೆಯನ್ನು ಮಾಡುತ್ತಿದ್ದನು. ಕೆಲ ಮೂರ್ಖಮಂದಿಗಳು ಅವನ ಬಲೆಯಲ್ಲಿ ಸಿಕ್ಕಿಕೊಂಡರು. ಯಾವಾಗ ಮೃತನಾದನೋ, ಆಗ ಜನರು ಅವನನ್ನು ಸಿದ್ಧನನ್ನಾಗಿ ಮಾಡಿಟ್ಟರು. ಯಾವ ಯಾವದನ್ನು ಅವನು ತನ್ನ ಜೀವಿತಕಾಲದಲ್ಲಿ ರಚಿಸಿದ್ದನೋ, ಅದನ್ನು ಅವನ ಶಿಷ್ಯರು ಓದುತ್ತಾ ಬಂದರು. ಕಿವಿಗಳನ್ನು ಮುಚ್ಚಿಕೊಂಡಾಗ ಯಾವ ಶಬ್ದ ಕೇಳಲ್ಪಡುತ್ತದೋ, ಅದನ್ನು **"ಅನಹತಶಬ್ದ"**ವೆಂದು ಕರೆಯುವ ಸಿದ್ಧಾಂತವನ್ನು ಸ್ಥಾಪಿಸಿದರು. ಮನದ ವೃತ್ತಿಯನ್ನು 'ಸುರತಿ' ಎನ್ನುತ್ತಾರೆ. ಅದನ್ನು ಆ ಶಬ್ದವನ್ನಾಲಿಸುವುದರಲ್ಲಿ ತೊಡಗಿಸುವುದನ್ನೇ ಆ ಪಂಥದ ಸಂತರು ಪರಮೇಶ್ವರನ ಧ್ಯಾನವೆಂದು ಹೇಳುತ್ತಾರೆ. ಅಲ್ಲಿ ಕಾಲ ತಲುಪಲಾರದಂತೆ. ಭರ್ಜಿಯಂತೆ ತಿಲಕವನ್ನೂ, ಮತ್ತು ಚಂದನ ಮೊದಲಾದವರ ಮಣಿರಸವನ್ನೂ ಧರಿಸುತ್ತಾರೆ. ಒಳ್ಳೆಯದು, ಆಲೋಚಿಸಿ ನೋಡಿರಿ, ಇದರಲ್ಲಿ ಆತ್ಮನ ಉನ್ನತಿ ಮತ್ತು ಜ್ಞಾನ ವರ್ಧಿಸಬಲ್ಲದೇನು? ಇದು ಕೇವಲ ಬಾಲಕರ ಆಟಕ್ಕೆ ಸಮಾನವಾದ ಲೀಲೆಯಾಗಿದೆ.

**ಪ್ರಶ್ನೆ:-** ಪಂಜಾಬ ಪ್ರಾಂತದಲ್ಲಿ ನಾನಕರು ಒಂದು ಮಾರ್ಗವನ್ನು ಪ್ರಚಲಿತವಾಗಿ ಮಾಡಿದ್ದಾರೆ. ಏಕೆಂದರೆ, ಅವರೂ ಕೂಡ ಪ್ರತಿಮಾ (ಪೂಜೆಯ) ಖಂಡನವನ್ನು ಮಾಡುತ್ತಿದ್ದರು. ಮುಸಲ್ಮಾನರಾಗುವುದನ್ನು ತಡೆಗಟ್ಟಿದರು. ಅವರು ಸಾಧುಗಳೂ ಆಗಲಿಲ್ಲ. ಆದರೆ, ಗೃಹಸ್ಥರಾಗಿದ್ದರು. ನೋಡಿರಿ, ಅವರು ಆ ಮಂತ್ರವನ್ನು ಉಪದೇಶಿಸಿದ್ದಾರೆ. ಇದರಿಂದಲೇ ಅವರ ಆಶಯ ಒಳ್ಳೆಯದಾಗಿದ್ದಿತೆಂದು ವಿದಿತವಾಗುತ್ತದೆ :-

**ಓಂ ಸತ್ಯನಾಮ ಕರ್ತಾ ಪುರುಷ ನಿರ್ಭೋ ನಿರ್ವೈರ ಅಕಾಲಮೂರ್ತ ಅಜೋ ನಿ ಸಹಭಂ ಗುರುಪ್ರಸಾದ**

**ಜಪ ಆದಿ ಸಚ್, ಜುಗಾದಿ ಸಚ್, ಹೈ ಭೀ ಸಚ್, ನಾನಕ ಹೋಸೀ ಭೀ ಸಚ್** ॥ (ಜಪ್‌ಜೀ ಪೌಢೀ-೧.)

"ಓಂ" ಯಾವನ ಸತ್ಯವಾದ ಹೆಸರೋ, ಆ ಕರ್ತೃವಾದ ಪುರುಷನು ಭಯದಂದ ಮತ್ತು ವೈರದಿಂದ ರಹಿತನಾಗಿದ್ದಾನೆ. ಅಕಾಲಮೂರ್ತಿ, ಎಂದರೆ, ಕಾಲದ ಹಿಡಿತದಲ್ಲಿ ಮತ್ತು ಯೋನಿಯಲ್ಲಿ ಬಾರದವನೂ, ಪ್ರಕಾಶಮಾನನೂ ಆಗಿದ್ದಾನೆ. ಅವನದೇ ಜಪವನ್ನು ಗುರುವಿನ ಕೃಪೆಯಿಂದ ಮಾಡು. ಆ ಪರಮಾತ್ಮನು ಆದಿಯಲ್ಲಿ ಸತ್ಯನಾಗಿದ್ದನು; ಯುಗಗಳ ಆದಿಯಲ್ಲಿ ಸತ್ಯನು; ವರ್ತಮಾನ ಕಾಲದಲ್ಲಿ ಸತ್ಯನು ಮತ್ತು ಮುಂದಕ್ಕೆ ಆಗಿರುವುದೂ ಸತ್ಯಸ್ವರೂಪನೇ.

**ಉತ್ತರ :–** ನಾನಕರ ಆಶಯವೇನೋ ಒಳ್ಳೆಯದೇ ಆಗಿದ್ದಿತು. ಆದರೆ – ವಿದ್ಯೆ ಸ್ವಲ್ಪವೂ ಇರಲಿಲ್ಲ. ಅಹುದು; ಗ್ರಾಮೀಣ ಭಾಷೆಯಾಗಿರುವ ಆ ದೇಶದ ಭಾಷೆಯನ್ನು ಮಾತ್ರ ತಿಳಿದಿದ್ದರು. ವೇದಗಳೇ ಮೊದಲಾದ ಶಾಸ್ತ್ರಗಳನ್ನೂ ಮತ್ತು ಸಂಸ್ಕೃತವನ್ನೂ ಸ್ವಲ್ಪವೂ ಅರಿತಿರಲಿಲ್ಲ. ಅರಿತಿದ್ದ ಪಕ್ಷದಲ್ಲಿ 'ನಿರ್ಭಯ' ಎಂಬ ಶಬ್ದವನ್ನು 'ನಿರ್ಭೋ' ಎಂದೇಕೆ ಬರೆಯುತ್ತಿದ್ದರು? ಮತ್ತು ಇದಕ್ಕೆ ಅವರು ರಚಿಸಿರುವ 'ಸಂಸ್ಕೃತೀಯ ಸ್ತೋತ್ರವು' ದೃಷ್ಟಾಂತವಾಗಿದೆ. "ನಾನು ಸಂಸ್ಕೃತದಲ್ಲಿಯೂ ಹೆಜ್ಜೆಯನ್ನು ಹಾಕಬೇಕು" – ಎಂದು ಬಯಸುತ್ತಿದ್ದರು. ಆದರೆ, ಓದದೇ ಸಂಸ್ಕೃತ ಬರಬಲ್ಲದಾದರೂ ಹೇಗೆ? ಅಹುದು; ಯಾರು ಸಂಸ್ಕೃತವನ್ನು ಎಂದೂ ಕೇಳಿಯೂ ಕೂಡ ಇರಲಿಲ್ಲವೋ, ಆ ಗ್ರಾಮೀಣರೆದುರಿಗೆ "ಸಂಸ್ಕೃತೀ"(ಸ್ತೋತ್ರ) ರಚಿಸಿ, ಸಂಸ್ಕೃತದಲ್ಲಿಯೂ ಪಂಡಿತರಾಗಿ ಹೋಗಿರಬಹುದು.[೯೩] ನಿಜವಾಗಿಯೂ ತಮ್ಮ ಗೌರವ ಪ್ರತಿಷ್ಠೆ ಮತ್ತು ತಮ್ಮ ಪ್ರಖ್ಯಾತಿಯ ಇಚ್ಛೆ ಇಲ್ಲದಿದ್ದಲ್ಲಿ, ಈ ವ್ಯವಹಾರವನ್ನೆಂದಿಗೂ ಮಾಡುತ್ತಿರಲಿಲ್ಲ. ಅವರಿಗೆ ತಮ್ಮ ಪ್ರತಿಷ್ಠೆಯ ಇಚ್ಛೆ ಅವಶ್ಯವಾಗಿಯೂ ಇದ್ದಿತು.[೯೪] ಇಲ್ಲದಿದ್ದಲ್ಲಿ, ಎಂತಹ ಭಾಷೆಯನ್ನು ತಿಳಿದಿದ್ದರೋ, ಅದರಲ್ಲಿಯೇ ಮಾತನಾಡಿಕೊಂಡು ಹೋಗುತ್ತಿದ್ದರು. ಮತ್ತು "ನಾನು ಸಂಸ್ಕೃತವನ್ನು ಓದಿಲ್ಲ". ಎಂದೂ ಕೂಡ ಹೇಳಿ ಬಿಡುತ್ತಿದ್ದರು. ಸ್ವಲ್ಪ ಅಭಿಮಾನವಿದ್ದಿತೆಂದಾಗ, ಮಾನ–ಪ್ರತಿಷ್ಠೆಗಾಗಿ ಸ್ವಲ್ಪ ದಂಭವನ್ನೂ ಮಾಡಿರಬಹುದು. ಇದೇ ಕಾರಣದಿಂದ ಅವರ ಗ್ರಂಥದಲ್ಲಿ ಅಲ್ಲಲ್ಲಿ ವೇದಗಳ ನಿಂದೆಯೂ ಮತ್ತು ಸ್ತುತಿಯೂ ಕೂಡ ಇದೆ. ಏಕೆಂದರೆ, ಹೀಗೆ ಮಾಡದೇ ಹೋಗಿದ್ದರೆ, ಅವರನ್ನೂ ಕೂಡ ಯಾವನಾದರೂ ವೇದದ ಅರ್ಥವನ್ನು ಕೇಳಿಬಿಡುತ್ತಿದ್ದನು. ಯಾವಾಗ (ಅರ್ಥಹೇಳಲು) ಬರುತ್ತಿರಲಿಲ್ಲವೋ, ಆಗ ಪ್ರತಿಷ್ಠೆಗೆ ಭಂಗ ಬರುತ್ತಿದ್ದಿತು. ಆದಕಾರಣ ಮೊದಲೇ ತಮ್ಮ ಶಿಷ್ಯರ ಮುಂದೆ ಅಲ್ಲಲ್ಲಿ ವೇದಗಳಿಗೆ ವಿರುದ್ಧವಾಗಿ ಮಾತನಾಡುತ್ತಿದ್ದರು. ಮತ್ತು ಒಂದೊಂದೆಡೆ ವೇದಗಳ ಬಗೆಗೆ ಒಳಿತನ್ನೂ ಕೂಡ ಹೇಳಿದ್ದಾರೆ. ಏಕೆಂದರೆ, ಎಲ್ಲಿಯೂ ಒಳ್ಳೆಯದನ್ನು ಹೇಳದೆಯೇ ಇದ್ದರೆ, ಜನರು ಅವರನ್ನು ನಾಸ್ತಿಕರೆಂದೇ ನಿರ್ಣಯಿಸುತ್ತಿದ್ದರು.[೯೫] ಉದಾಹರಣೆಗೆ:–

**ವೇದ ಪಢತ ಬ್ರಹ್ಮಾಮರೇ । ಚಾರೋಂ ವೇದ ಕಹಾ ನಿ**[೯೬] ।

**ಸಂತ (ಸಾಧ) ಕೀ ಮಹಿಮಾ ವೇದ ನ ಜಾನೇ ॥** (ಸುಖಮನೀ, ಪೌಡೀ–೭. ಪದ–೮)

**ನಾನಕ ಬ್ರಹ್ಮಜ್ಞಾನೀ ಆಪ ಪರಮೇಶ್ವರ ॥** (ಸುಖಮನೀ, ಪೌ–೮. ಪದ–೬)

ವೇದ ಓದುವವರು ಸತ್ತು ಹೋದರು ಮತ್ತು ನಾನಕರೇ ಮೊದಲಾದವರು ತಮ್ಮನ್ನು ಅಮರರೆಂದು ತಿಳಿದಿದ್ದರೇನು? ಅವರು ಮೃತರಾಗಲಿಲ್ಲವೇ? ವೇದಗಳಂತೂ ಸರ್ವವಿದ್ಯೆಗಳ ಭಂಡಾರಗಳು.ಆದರೆ, ಯಾವನೂ ನಾಲ್ಕೂ ವೇದಗಳನ್ನು ಕಥೆ–ಎನ್ನುವನೋ, ಅವನ ಮಾತುಗಳೆಲ್ಲವೂ ಕಥೆಯಾಗಿರುತ್ತವೆ. ಅಜ್ಞಾನಿಗಳಿಗೆ ಸಂತರೆಂದು ಹೆಸರಾದರೆ, ಆ ಬಡಪಾಯಿಗಳು ವೇದಗಳ ಮಹಿಮೆಯನ್ನು ಎಂದೂ ತಿಳಿಯಲಾರರು. ನಾನಕರು ವೇದಗಳ ಸಮ್ಮಾನವನ್ನೇ ಮಾಡಿದಿದ್ದರೆ, ಅವರ ಸಂಪ್ರದಾಯ

---

೯೩. ನಾನಕಜೀ ಅವರ ಸಂಸ್ಕೃತ ವಿಷಯಕ ಅಜ್ಞಾನವನ್ನು ಬಚ್ಚಿಡಲು, ಕನ್ ಖಲ್ [ಹರಿದ್ವಾರ]ನ ವಿದ್ವಾಂಸರಾದ ಸ್ವಾಮೀ ಕೇಶವಾನಂದಜೀ ಉದಾಸೀನರು ನಾನಕಜೀ ಅವರ ಹೆಸರಿನಲ್ಲಿ ಎರಡು ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಒಂದು "ಅದ್ಭುತ ಗೀತಾ" ಎಂಬುದು. ಇನ್ನೊಂದು ' ನಿರಾಕಾರ ಮೀಮಾಂಸಾ'

–ಸತ್ಯಾರ್ಥ ಪ್ರಕಾಶ– ವೇದಾನಂದ ಸಂಸ್ಕರಣದ ಟಿಪ್ಪಣಿ.

೯೪. ಈ ರೋಗ ಎಲ್ಲರಿಗೂ ಇದೆ. ಇಂಗ್ಲಿಷ್ ಬಾರದವರು ಇಂಗ್ಲೀಷ್ ನಲ್ಲಿ ಮಾತನಾಡುವುದಕ್ಕೂ, ಸಂಸ್ಕೃತ ಬಾರದವರು ಸಂಸ್ಕೃತದಲ್ಲಿ ಮಾತನಾಡುವುದಕ್ಕೂ ಪ್ರಯತ್ನಿಸುತ್ತಾರಲ್ಲವೇ! ಇದೇ ರೀತಿ ಪೌರಾಣಿಕ ವಿದ್ವಾಂಸರು ಜನರು ತಿಳಿಯದ [ಸಂಸ್ಕೃತ– ಇಂಗ್ಲೀಷ್] ಭಾಷೆಗಳಲ್ಲಿ ಮಾತನಾಡುವುದು; ಶಾಸ್ತ್ರಾರ್ಥ ವಾದ–ವಿವಾದಗಳಲ್ಲಿ ವಿಪಕ್ಷಿಯು ನಿಷ್ಣಾತನಲ್ಲದ [ಸಂಸ್ಕೃತ–ಇಂಗ್ಲೀಷ್] ಭಾಷೆಗಳ ಪ್ರಯೋಗವೇ ಆಗಬೇಕೆಂದು ಹಠ ಮಾಡುವುದು, ವ್ಯಾಕರಣದ ಶುದ್ಧಾಶುದ್ಧತೆಯ ಬಗ್ಗೆ ವಿವಾದ ಮಾಡುವುದು, ಇವೆಲ್ಲಾ ಮುಖ್ಯವಿಷಯವನ್ನು ಮುಟ್ಟುವ ಕಾರ್ಯಕ್ಕೆ ಹೋಗದೆಯೇ, ಪ್ರತಿಷ್ಠೆ ಮಾನ ಗಳಿಸಲು ಹೂಡುವ ಉಪಾಯಗಳು.

೯೫. ನಾಸ್ತಿಕೋ ವೇದ ನಿಂದಕಃ [ಮನುಸ್ಮೃತಿ. ೩.೧೧]

೯೬. ಮೂಲ ಸಿಕ್ಕಿಲ್ಲ.

ಪ್ರಚಲಿತವಾಗುತ್ತಿರಲಿಲ್ಲ;[೧೯೭] ಅವರು ಗುರುಗಳು ಆಗಲೂ ಶಕ್ಯವಾಗುತ್ತಿರಲಿಲ್ಲ. ಏಕೆಂದರೆ, ಸಂಸ್ಕೃತ ವಿದ್ಯೆಯನ್ನಂತೂ ಓದಿಯೇ ಇರಲಿಲ್ಲ; ಹಾಗಿರುವಾಗ ಬೇರೆಯವರಿಗೆ ಓದಿಸಿ, ಹೇಗೆ ಶಿಷ್ಯರನ್ನಾಗಿ ಮಾಡಿಕೊಳ್ಳಲಾಗುತ್ತಿತ್ತು?

ಯಾವ ಕಾಲದಲ್ಲಿ ನಾನಕರು ಪಂಜಾಬಿನಲ್ಲಿ ಹುಟ್ಟಿದ್ದರೋ, ಆಗ ಪಂಜಾಬು ಸಂಸ್ಕೃತವಿದ್ಯೆಯಿಂದ ಪೂರ್ಣತಃ ರಹಿತವೂ, ಮುಸಲ್ಮಾನರಿಂದ ಪೀಡಿತವೂ ಆಗಿದ್ದಿತು – ಎನ್ನುವುದು ಸತ್ಯವಾಗಿದೆ. ಆ ಕಾಲದಲ್ಲಿ ಅವರು ಕೆಲ ಮಂದಿಗಳನ್ನು ರಕ್ಷಿಸಿದರು.[೧೯೮] ನಾನಕರ ಸಮ್ಮುಖದಲ್ಲಿ ಅವರ ಸಂಪ್ರದಾಯ ಅಥವಾ ಬಹುಮಂದಿ ಶಿಷ್ಯರು ಆಗಿರಲಿಲ್ಲ. ಏಕೆಂದರೆ, ಅವಿದ್ವಾಂಸರಲ್ಲಿ, ಮರಣಾನಂತರ (ಗುರುಜನರನ್ನು) ಸಿದ್ಧರನ್ನಾಗಿ ಮಾಡಿಬಿಡುವ ನಡತೆಯಿರುತ್ತದೆ. ಆ ಮೇಲೆ ಬಹಳ ಮಹಾತ್ಮ್ಯವನ್ನು ಹಬ್ಬಿಸಿ, ಈಶ್ವರನಿಗೆ ಸಮಾನರೆಂದು ಅಂಗೀಕರಿಸುತ್ತಾರೆ.[೧೯೯]

ಅಹುದು; ನಾನಕರು ಮಹಾಧನಾಢ್ಯರು ಮತ್ತು ಶ್ರೀಮಂತರು ಕೂಡ ಆಗಿರಲಿಲ್ಲ. ಆದರೆ, ಅವರ ಅನುಯಾಯಿಗಳು "ನಾನಕ ಚಂದ್ರೋದಯ" ಮತ್ತು "ಜನ್ಮಶಾಖೀ" ಮೊದಲಾದುದರಲ್ಲಿ "ಅವರು ಮಹಾಸಿದ್ಧರು ಮತ್ತು ಅತಿದೊಡ್ಡ ಐಶ್ವರ್ಯವಂತರಾಗಿದ್ದರು; ನಾನಕರು ಬ್ರಹ್ಮನೇ ಮೊದಲಾದವರನ್ನು ಸಂಧಿಸಿದರು; ದೊಡ್ಡ ಸಂವಾದವನ್ನು ನಡೆಯಿಸಿದರು. ಎಲ್ಲರೂ ಇವರನ್ನು ಸನ್ಮಾನಿಸಿದರು. ನಾನಕರ ವಿವಾಹದಲ್ಲಿ ಬಹುಸಂಖ್ಯೆಯಲ್ಲಿ ಕುದುರೆಗಳು, ರಥಗಳು, ಆನೆಗಳು, ಚಿನ್ನ, ಬೆಳ್ಳಿ, ಮುತ್ತು, ಪನ್ನ–ಮೊದಲಾದ ರತ್ನಗಳಿಂದ ಜಟಿತವಾಗಿದ್ದುವು ಮತ್ತು ಅಮೂಲ್ಯ ರತ್ನಗಳಿಗೆ–ಇತಿ–ಮಿತಿಗಳಿರಲಿಲ್ಲ". ಎಂದು ಬರೆದಿದ್ದಾರೆ. ಇವು ಕಗ್ಗಗಳಲ್ಲವಾದರೆ ಮತ್ತೇನು? ಇದರಲ್ಲಿ ಇವರ ಅನುಯಾಯಿಗಳ ದೋಷವಿದೆ; ನಾನಕರದಲ್ಲ.

ಎರಡನೆಯದಾಗಿ, ಅವರಾದ ನಂತರ, ಅವರ ಪುತ್ರನಿಂದ ಉದಾಸೀ ಸಂಪ್ರದಾಯದ ಶಿಷ್ಯರೂ ಮತ್ತು ರಾಮದಾಸ–ಮೊದಲಾದವರಿಂದ ನಿರ್ಮಲಾ ಸಂಪ್ರದಾಯಸ್ಥರೂ ಪ್ರಚಲಿತರಾಗಿ, ಎಷ್ಟೋ ಜನ ಗದ್ದುಗೆಗೆ ಏರಿದವರು ಪ್ರಾಂತದ ಭಾಷೆಯಲ್ಲಿ ರಚನೆ ಮಾಡಿ, "ಗ್ರಂಥ"[೨೦೦]ದಲ್ಲಿ ಸೇರಿಸಿದ್ದಾರೆ. ಎಂದರೆ, ಇವರ ಹತ್ತನೆಯ ಗುರುಗೋವಿಂದಸಿಂಹರಾದರು. ಅವರಾದನಂತರ ಆ ಗ್ರಂಥದಲ್ಲಿ ಯಾವನದೇ ಭಾಷೆಯೂ ಸೇರಿಸಲ್ಪಡಲಿಲ್ಲ. ಆದರೆ ಆ ಕಾಲದವರೆಗೆ ಎಷ್ಟು ಚಿಕ್ಕ ಚಿಕ್ಕ ಪುಸ್ತಕಗಳಿದ್ದವೋ, ಅವೆಲ್ಲವನ್ನೂ ಒಂದುಗೂಡಿಸಿ ರಟ್ಟನ್ನು ಹಾಕಿಸಿದರು. ಈ ಜನರೂ ಕೂಡ ನಾನಕರಾದ ನಂತರ ಬಹಳ ಭಾಷಾಗ್ರಂಥಗಳನ್ನು ರಚಿಸಿದರು. ಎಷ್ಟೋ ಜನರು ಪುರಾಣಗಳ ಸುಳ್ಳು ಕಥೆಗಳಿಗೆ ಸಮನಾಗಿ ನಾನಾ ಪ್ರಕಾರದ ರಚನೆಮಾಡಿದರು. ಆದರೆ –"ಬ್ರಹ್ಮಜ್ಞಾನಿಯು ತಾನೇ ಪರಮೇಶ್ವರ" ಎಂಬ ಮಾತಿನ ಮೇಲೆ, ಕರ್ಮಗಳನ್ನೂ, ಉಪಾಸನೆಯನ್ನೂ ಬಿಟ್ಟು, ಇವರ ಶಿಷ್ಯರುಗಳು ಬಾಗುತ್ತಾ ಬಂದರು. ಇದು ಮಹಾಪ್ರಮಾದವನ್ನುಂಟುಮಾಡಿತು. ಹೀಗೆ ಮಾಡದೆ, ನಾನಕರು ಈಶ್ವರನ ಬಗೆಗೆ ಭಕ್ತಿವಿಶೇಷವಾಗಿ ಏನನ್ನು ಬರೆದಿದ್ದರೋ, ಅದನ್ನಾಚರಿಸುತ್ತಾ ಬಂದಿದ್ದರೆ, ಒಳ್ಳೆಯದಾಗುತ್ತಿತ್ತು.

ಈಗ ಉದಾಸಿಗಳು ತಾವು ದೊಡ್ಡವರೆಂದೂ, ನಿರ್ಮಲಾಮತೀಯರು ತಾವು ದೊಡ್ಡವರೆಂದೂ ಹೇಳಿಕೊಳ್ಳುತ್ತಾರೆ. ಅಕಾಲಿಗಳು ಮತ್ತು ಸುಥರೇಶಾಹಿಗಳು "ನಾವು ಎಲ್ಲರಿಗಿಂತ ಉಚ್ಚರಾಗಿದ್ದೇವೆ".[೨೦೧] ಎನ್ನುತ್ತಾರೆ.

ಇವರಲ್ಲಿ ಗೋವಿಂದಸಿಂಹರು ಶೂರ–ವೀರರಾಗಿದ್ದರು. ಮುಸಲ್ಮಾನರು ಅವರ ಪೂರ್ವಜರಿಗೆ ಮಹಾದುಃಖವನ್ನುಂಟು ಮಾಡಿದ್ದರು; ಅದಕ್ಕೆ ಮುಯ್ಯಿ ತೀರಿಸಿಕೊಳ್ಳಬಯಸುತ್ತಿದ್ದರು. ಆದರೆ, ಇವರ ಬಳಿ ಸಲಕರಣೆ ಯಾವುದೂ ಇರಲಿಲ್ಲ. ಮತ್ತು ಅತ್ತಮುಸಲ್ಮಾನರ ಸಾಮ್ರಾಜ್ಯ ಪ್ರಜ್ವಲಿತವಾಗುತ್ತಿದ್ದಿತು. ಇವರು ಒಂದು ಪುರಶ್ಚರಣ[೨೦೨] ಮಾಡಿಸಿದರು. "ನೀನು

---

೧೯೭. ಈ ಯಥಾರ್ಥದ ಕಾರಣದಿಂದಲೇ, ಯಾವ ಸಂಪ್ರದಾಯ ಪ್ರವರ್ತಕರೂ ವೇದವನ್ನು ಮುಟ್ಟುವ ಪ್ರಯತ್ನಕ್ಕೆ ಹೋಗಲಿಲ್ಲ. ಅವರಿಗೆ ಅಮೃತಸಿಂಧುವಿನಂತಿರುವ ಪುರಾಣಗಳನ್ನೇ ಉಸಿರು–ಉಸಿರಿಗೂ ಜಪಿಸತೊಡಗಿದರು. ಸಂಪ್ರದಾಯ–ಪ್ರವರ್ತನಕ್ಕೆ ವಿರುದ್ಧರಾದ ಮಹರ್ಷಿ ದಯಾನಂದರು ಮಾತ್ರ ಕೇವಲ ವೇದಗಳನ್ನು ಎತ್ತಿ ಹಿಡಿದರು.

೧೯೮. ಎಂದರೆ, ಮುಸಲ್ಮಾನರಾಗದಂತೆ,

೧೯೯. ಇದಕ್ಕೆ ಭಾರತೀಯರಿಗಿಂತ ದೊಡ್ಡ ಉದಾಹರಣೆ ಜಗತ್ತಿನಲ್ಲಿಲ್ಲ.

೨೦೦. ಎಂದರೆ, ಸಿಕ್ಕರ ಮಾನನೀಯ ಪವಿತ್ರ ಗ್ರಂಥ' ಗುರು ಗ್ರಂಥ ಸಾಹೀಬ್' ಇದರಲ್ಲಿ ಉತ್ತರ ಭಾರತದ ಗ್ರಾಮೀಣ ಭಾಷೆಗಳಲ್ಲಿ ಸಂತರ ವಾಣಿಗಳು ಸಂಗೃಹಿತವಾಗಿವೆ. ರಾಮನಾಮ ಮಹಿಮೆಯೂ ಇದೆ.

೨೦೧. ಈ ಪಂಥಗಳಲ್ಲದೇ, ಗಂಜಭಕ್ಷಿ, ರಾಮರೀಸ್ ಸೂತ್ರಶಾಹೀ, ಗೋವಿಂದಸಿಂಘೀ, ಮತ್ತು ನಿಹಂಗ ಮೊದಲಾದ ಪಂಥಗಳು ಸಿಕ್ಕರ ಮತದಲ್ಲಿ ಹುಟ್ಟಿಕೊಂಡವು. ಇವರಲ್ಲಿ ಅನೇಕ ಕಲಹಗಳಿವೆ. ಸಶಸ್ತ್ರ ಹೋರಾಟವೂ ಆಗಾಗ ನಡೆಯುತ್ತಿರುತ್ತದೆ. ಇದಕ್ಕೆ ಗುರುದ್ವಾರಗಳಲ್ಲಿನ ಅಪಾರ ಸಂಪತ್ತೇ ಕಾರಣ. ವರ್ತಮಾನದ 'ಪಂಜಾಬ್ –ಖಾಲಿಸ್ತಾನ್' ಸಮಸ್ಯೆಯ ಉದ್ಭವಕ್ಕೂ ಅದರ ಪರಿಹಾರವಾಗದಿರುವುದಕ್ಕೂ ಈ ಪಂಥಗಳೇ ಕಾರಣ.

೨೦೨. ಎಂದರೆ, ದುರ್ಗಾಪುರಶ್ಚರಣ. –ಯು.ಮಿ

ಮುಸಲ್ಮಾನರೊಂದಿಗೆ ಹೋರಾಡು. ನಿನಗೆ ವಿಜಯವಾಗುವುದು-ಎಂದು ನನಗೆ ದೇವಿಯು ವರವನ್ನು ಮತ್ತು ಖಡ್ಗವನ್ನು ಕೊಟ್ಟಿದ್ದಾಳೆ".-ಎಂದು ಪ್ರಸಿದ್ಧಿಪಡಿಸಿದರು. ಬಹಳ ಮಂದಿಗಳು ಅವರ ಸಂಗಾತಿಗಳಾದರು. ಮತ್ತು ಅವರು ಹೇಗೆ ವಾಮಮಾರ್ಗಿಗಳು ಐದು ಮಕಾರಗಳನ್ನೂ, ಚಕ್ರಾಂಕಿತರು ಐದು ಸಂಸ್ಕಾರಗಳನ್ನೂ ಪ್ರಚಲಿತವಾಗಿ ಮಾಡಿದ್ದರೋ, ಹಾಗೆ 'ಪಂಚಕಕಾರ'ಗಳನ್ನು ಪ್ರಚಲಿತಗೊಳಿಸಿದರು. ಎಂದರೆ, ಇವರ ಐದು ಕಕಾರಗಳು ಯುದ್ಧಕ್ಕೆ ಉಪಯುಕ್ತವಾಗಿದ್ದವು. ಒಂದನೆಯದು-ಯಾವುದನ್ನು ಬೆಳೆಯಿಸಿಕೊಳ್ಳುವುದರಿಂದ ಯುದ್ಧದಲ್ಲಿ ದಂಡದಿಂದ ಮತ್ತು ಖಡ್ಗದಿಂದ ಸ್ವಲ್ಪಮಟ್ಟಿನ ರಕ್ಷಣೆಸಿಕ್ಕುವುದೋ, ಆ **'ಕೇಶ'**. ಎರಡನೆಯದು-ಅಕಾಲಿಗಳು ಯಾವುದನ್ನು ತಲೆಯ ಮೇಲೆ, ಪೇಟದೊಳಗೆ ಇಟ್ಟುಕೊಳ್ಳುತ್ತಾರೋ, ಮತ್ತು ಯಾವುದರಿಂದ ಕೈಗೆ ಮತ್ತು ತಲೆಗೆ ರಕ್ಷಣೆ ಸಿಕ್ಕುತ್ತದೋ, ಆ **'ಕಂಕಣ ಮತ್ತು ಕಡಾ'**; ಮೂರನೆಯದು-ಯಾವುದು ಓಡುವುದಕ್ಕೂ ಮತ್ತು ಧುಮುಕುವುದಕ್ಕೂ ನೆರವಾಗುವುದೋ, ಅಂತಹ, ಮೊಣಕಾಲುಗಳ ಮೇಲಕ್ಕಿರುವ **'ಕಾಛ'**; ಬಹುತರವಾಗಿ ಮಲ್ಲರಂಗದಲ್ಲಿ ಮಲ್ಲರೂ ಮತ್ತು ದೊಂಬರೂ ಕೂಡ, ಶರೀರದ ಮರ್ಮಸ್ಥಾನ ಸುರಕ್ಷಿತವಾಗಿರಲಿ ಮತ್ತು ಅಡ್ಡಿಯಾಗದಿರಲಿ-ಎಂದು ಇದನ್ನು ಧರಿಸುತ್ತಾರೆ. ನಾಲ್ಕನೆಯದು-ಕೂದಲನ್ನು ಯಾವುದರಿಂದ ಬಾಚಿಕೊಳ್ಳುತ್ತಾರೋ, ಆ **'ಕಂಘಾ'**. ಐದನೆಯದು-ಶತ್ರುವಿನೊಂದಿಗೆ ಎದುರು-ಬದುರು ಬಿದ್ದಾಗ, ಯುದ್ಧದಲ್ಲಿ ಯಾವುದು ಕೆಲಸಕ್ಕೆ ಬರುವುದೋ, ಆ **'ಕಾಚೂ'** (ಕೃಪಾಣ). ಇದೇ ಕಾರಣದಿಂದ ಈ ರೀತಿಯನ್ನು ಗೋವಿಂದಸಿಂಹರು ತಮ್ಮ ಬುದ್ಧಿವಂತಿಕೆಯಿಂದ ಅಕಾಲಕ್ಕಾಗಿ ಪ್ರಚಲಿತಗೊಳಿಸಿದ್ದರು. ಈಗ, ಈ ಕಾಲದಲ್ಲಿ ಅವುಗಳನ್ನು ಇಟ್ಟುಕೊಳ್ಳುವುದು ಸ್ವಲ್ಪವೂ ಉಪಯೋಗಕರವಾಗಿಲ್ಲ. ಆದರೆ, ಈಗ ಯುದ್ಧದ ಉಪಯೋಗಕ್ಕಾಗಿ ಯಾವ ವಿಷಯಗಳು ಕರ್ತವ್ಯವಾಗಿದ್ದವೋ, ಅವನ್ನು ಧರ್ಮದೊಂದಿಗೆ ಸೇರಿಸಿಕೊಂಡು ಬಿಟ್ಟಿದ್ದಾರೆ.

ಪ್ರತಿಮಾಪೂಜನವನ್ನೇನೋ ಮಾಡುವುದಿಲ್ಲ. ಆದರೆ, ಅದಕ್ಕಿಂತ ಹೆಚ್ಚಾಗಿ ಗ್ರಂಥದ ಪೂಜೆಯನ್ನು ಮಾಡುತ್ತಾರೆ. ಇದು ಪ್ರತಿಮಾಪೂಜನವಲ್ಲವೇನು? ಯಾವುದಾದರೂ ಜಡಪದಾರ್ಥದ ಎದುರಿಗೆ ತಲೆಬಾಗಿಸುವುದು ಅಥವಾ ಅದರ ಪೂಜೆಯನ್ನು ಮಾಡುವುದು-ಎಲ್ಲವೂ ಮೂರ್ತಿಪೂಜೆಯೇ. ಹೇಗೆ ಪ್ರತಿಮೆಗಳವರು ತಮ್ಮ ಅಂಗಡಿಯನ್ನು ನೆಲೆಗೊಳಿಸಿ, ಹೊಟ್ಟೆಯಪಾಡಿನ ಏರ್ಪಾಟು ಮಾಡಿಕೊಂಡಿದ್ದಾರೋ, ಹಾಗೆ ಈ ಜನರೂ ಮಾಡಿಕೊಂಡಿದ್ದಾರೆ. ಹೇಗೆ ಪೂಜಾರಿಗಳು ಪ್ರತಿಮೆಯ ದರ್ಶನ ಮಾಡಿಸುತ್ತಾರೋ, ಕಾಣಿಕೆ ಸಮರ್ಪಿಣೆಮಾಡಿಸುತ್ತಾರೋ, ಹಾಗೆ ನಾನಕಪಂಥೀ ಜನರು ಗ್ರಂಥದ ಪೂಜೆಯನ್ನು ಮಾಡುತ್ತಾರೆ-ಮಾಡಿಸುತ್ತಾರೆ; ಕಾಣಿಕೆಯನ್ನೂ ಕೂಡ ಸಮರ್ಪಣೆಮಾಡಿಸುತ್ತಾರೆ. ಆದರೆ, ಪ್ರತಿಮಾಪೂಜಕರು ವೇದಕ್ಕೆ ಎಷ್ಟು ಗೌರವ ನೀಡುತ್ತಾರೋ, ಅಷ್ಟು ಗೌರವವನ್ನು ಈ "ಗ್ರಂಥಸಾಹಬ್"ನ ಜನರು ನೀಡುವುದಿಲ್ಲ.

ಹೌದು; ಇವರು ವೇದಗಳನ್ನು ಕೇಳಲೂ ಇಲ್ಲ; ನೋಡಲೂ ಇಲ್ಲ - ಎಂದು ಹೇಳಲು ಶಕ್ಯವಿದೆ. ಮಾಡುವವರಾದರೂ ಏನು? ಆಲಿಸಲು ಮತ್ತು ನೋಡಲು ಅವಕಾಶವಾದಲ್ಲಿ, ಯಾರು ಹಠಮಾರಿಗಳೂ, ದುರಾಗ್ರಹಿಗಳೂ ಆಗಿಲ್ಲವೋ, ಅಂತಹ ಈ ಸಂಪ್ರದಾಯಸ್ಥರಾದ ಬುದ್ಧಿಶಾಲೀ ಜನರು, ವೇದಮತದಲ್ಲಿ ಪ್ರವಿಷ್ಟರಾಗುತ್ತಾರೆ. ಆದರೆ, ಈ ಜನರು ಭೋಜನದ ಗೊಂದಲವನ್ನು ಬಹುಮಟ್ಟಿಗೆ ದೂರಮಾಡಿ ಬಿಟ್ಟಿದ್ದಾರೆ, ಹೇಗೆ ಇದನ್ನು ದೂರೀಕರಿಸಿದರೋ, ಹಾಗೆ ವಿಷಯಾಸಕ್ತಿಯನ್ನೂ,[೨೦೩] ದುರಭಿಮಾನವನ್ನೂ[೨೦೪] ಕೂಡ ದೂರೀಕರಿಸಿ, ವೇದಮತದ ಉನ್ನತಿಯನ್ನು ಸಾಧಿಸುವರಾದರೆ, ಬಹಳ ಒಳ್ಳೆಯದಾದೀತು.

**ಪ್ರಶ್ನೆ:-** ದಾದೂಪಂಥಿಗಳ ಮಾರ್ಗವಾದರೂ ಉತ್ತಮವೇನು?

**ಉತ್ತಮ:-** ಒಳ್ಳೆಯದು ಎಂದರೆ ವೇದಮಾರ್ಗ; ಗ್ರಹಿಸಲು ಶಕ್ಯವಿದ್ದರೆ ಗ್ರಹಿಸಿರಿ. ಇಲ್ಲವಾದರೆ ಸದಾ ಮುಳುಗುತ್ತಾ-ತೇಲುತ್ತಾ ಇರುವಿರಿ. ಇವರ ಮತಕ್ಕೆ ಅನುಸಾರ, ದಾದೂರವರ ಜನನ ಗುಜರಾತಿನಲ್ಲಿ ಆಗಿದ್ದಿತು. ಆ ಮೇಲೆ, ಜಯಪುರದ ಬಳಿ 'ಆಮೇರ್'ನಲ್ಲಿ ಇರುತ್ತಿದ್ದರು. ಗಾಣಿಗನ ಕೆಲಸ ಮಾಡುತ್ತಿದ್ದರು. ಈಶ್ವರನ ಸೃಷ್ಟಿಯ ವಿಚಿತ್ರಲೀಲೆ-ಎಂದರೆ, ದಾದೂಗಳೂ ಕೂಡ ಪೂಜಿಸಲ್ಪಡತೊಡಗಿದರು, ಈಗ ವೇದಗಳೇ ಮೊದಲಾದ ಶಾಸ್ತ್ರಗಳ ಮಾತುಗಳನ್ನು ಬಿಟ್ಟು **"ದಾದೂರಾಮ್, ದಾದೂರಾಮ್"** - ಎಂಬುದರಲ್ಲಿಯೇ ಮುಕ್ತಿಯಾಗುವುದೆಂದು ಒಪ್ಪಿಕೊಂಡಿದ್ದಾರೆ. ಯಾವಾಗ ಸತ್ಯೋಪದೇಶಕನಿರುವುದಿಲ್ಲವೋ, ಆಗ ಇಂಹ ಗೊಂದಲಗಳೇ ಪ್ರಚಲಿತವಾಗುತ್ತಾ ಹೋಗುತ್ತವೆ.

---

೨೦೩. ಸಿಕ್ಕರು ವಿಷಯಾಸಕ್ತಿಯನ್ನು ಮುಸಲ್ಮಾನರ ಸಂಪರ್ಕದಿಂದ ಕಲಿತರು. ಇದರ ಉದಾಹರಣೆಗಳನ್ನು ಪಂಜಾಬಿನಲ್ಲಿ ಕಾಣಬಹುದು.

೨೦೪. ಖಾಲಿಸ್ತಾನಕ್ಕಾಗಿ ಈ ಜನರು ಮಾಡುತ್ತಿರುವ ನರಸಂಹಾರ ಇದಕ್ಕೆ ನಿದರ್ಶನ.

ಕೆಲವೇ ದಿನಗಳ ಹಿಂದೆ 'ಶಾಹಪುರಾ'[೨೦೫]ದಿಂದ 'ರಾಮಸ್ನೇಹೀಮತ' ಒಂದು ಹೊರಟಿದೆ. ಅವರು ಸಮಸ್ತ ವೇದೋಕ್ತ ಧರ್ಮವನ್ನೂ ಬಿಟ್ಟು "ರಾಮ-ರಾಮ" ಎಂದು ಕೂಗುವುದನ್ನು ಶ್ರೇಷ್ಠವೆಂದು ಅಂಗೀಕರಿಸಿದ್ದಾರೆ. ಅದರಲ್ಲಿಯೇ ಜ್ಞಾನ-ಧ್ಯಾನ-ಮುಕ್ತಿಯಾಗುವುದೆಂದು ಒಪ್ಪುತ್ತಾರೆ. ಆದರೆ, ಯಾವಾಗ ಹಸಿವೆಯಾಗುತ್ತದೊ, ಆಗ ರಾಮ ನಾಮದಿಂದ ರೊಟ್ಟಿ - ಕಾಯಿಪಲ್ಯ ಹೊರಟು ಬರುವುದಿಲ್ಲ. ಏಕೆಂದರೆ, ಖಾದ್ಯ-ಪೇಯಗಳು ಮೊದಲಾದುವು ಗೃಹಸ್ಥರ ಮನೆಯಲ್ಲಿಯೇ ಸಿಕ್ಕುತ್ತವೆ. ಅವರೂ ಪ್ರತಿಮಾಪೂಜನವನ್ನು ಧಿಕ್ಕರಿಸುತ್ತಾರೆ; ಆದರೆ ತಾವು ಸ್ವತಃ ಪ್ರತಿಮೆಗಳಾಗಿ ಕುಳಿತಿದ್ದಾರೆ. ಸ್ತ್ರೀಯರ ಸಹವಾಸದಲ್ಲಿ ಬಹಳ ಹೆಚ್ಚಾಗಿ ಇರುತ್ತಾರೆ. ಏಕೆಂದರೆ, 'ರಾಮದೇವ'ರಿಗೆ 'ರಾಮಮ್ಮ'ನವರಿಲ್ಲದೆ ಆನಂದವೇ ಸಿಕ್ಕಲಾರದು. ಈಗ ರಾಮಸ್ನೇಹೀಮತದ ವಿಷಯದಲ್ಲಿ ಸ್ವಲ್ಪ ವಿಶೇಷವನ್ನು ಬರೆಯುತ್ತೇವೆ:-

ರಾಮಚರಣನೆಂಬ ಸಾಧು ಒಬ್ಬನು ಸ್ವಲ್ಪ ಕಾಲದ ಹಿಂದೆ ಜನ್ಮವೆತ್ತಿದ್ದಾನೆ. ಅವನ ಮತವು ಮುಖ್ಯತಃ ಮೇವಾಡ ರಾಜ್ಯದಲ್ಲಿನ 'ಶಾಹಪುರಾ' ಎಂಬ ಸ್ಥಳದಿಂದ ಪ್ರಚಲಿತವಾಗಿದೆ. 'ರಾಮರಾಮ' ಎನ್ನುವುದನ್ನೇ ಪರಮಮಂತ್ರವೆಂದೂ, ಮತ್ತು ಇದನ್ನೇ ಸಿದ್ಧಾಂತವೆಂದೂ ಅಂಗೀಕರಿಸುತ್ತಾರೆ. ಯಾವುದರಲ್ಲಿ ಸಂತದಾಸರೇ ಮೊದಲಾದವರ ವಾಣಿಗಳಿವೆಯೋ, ಅಂತಹ ಅವರ ಗ್ರಂಥ ಒಂದರಲ್ಲಿ ಹೀಗೆ ಬರೆಯುತ್ತಾರೆ:-

## ಅವರ ವಚನ

**ಭರಮ ರೋಗ ತಬ ಹೀ ಮಿಟ್ಯಾ, ರಟ್ಯಾ ನಿರಂಜನ ರಾಇ ।**

**ತಬ ಜಮ ಕಾ ಕಾಗಜ್ ಫಟ್ಯಾ, ಕಟ್ಯಾ ಕರ್ಮ ತಬ ಜಾಇ**[೨೦೬] **॥ ೬॥**

"ನಿರಂಜನನಾದ ಸ್ವಾಮಿಯ ಹೆಸರನ್ನು ಹೇಳಿದಾಗಲೇ ಭ್ರಮವೆಂಬ ರೋಗ ತೀರಿತು. ಆಗ ಯಮನ ಕರೆಯೋಲೆ ಹರಿಯಿತು. ಆಗ ಕರ್ಮವೆಲ್ಲ ಕತ್ತರಿಸಿ ಹೋಯಿತು".

"ರಾಮರಾಮ" ಎನ್ನುವುದರಿಂದ 'ಅಜ್ಞಾನ'ವೇ ಆಗಿರುವ ಭ್ರಾಂತಿಯು, ಅಥವಾ ಯಮರಾಜನ (ಸರ್ವನಿಯಾಮಕನ) ಕಡೆಯಿಂದ ಪಾಪಕ್ಕೆ ಸಿಕ್ಕಬೇಕಾದ ಶಿಕ್ಷೆ ಅಥವಾ ಮಾಡಿದ ಕರ್ಮಗಳು ಎಂದಿಗಾದರೂ ಬಿಟ್ಟುಹೋಗಬಲ್ಲವೋ ಅಥವಾ ಇಲ್ಲವೋ-ಎಂದು ಈಗ ಬುದ್ಧಿಶಾಲಿಗಳಾದ ಜನರು ಆಲೋಚಿಸಿ ನೋಡಲಿ. ಇದು ಕೇವಲ ಮಾನವರನ್ನು ಪಾಪಗಳಲ್ಲಿ ಸಿಕ್ಕಿಹಾಕಿಸುವುದು ಮತ್ತು ಮಾನವಜನ್ಮವನ್ನು ಹಾಳುಮಾಡಿಕೊಳ್ಳುವುದು ಮಾತ್ರವಾಗಿದೆ. ಈಗ ಯಾವನು ಇವರ ಮುಖ್ಯ ಗುರುವಾಗಿದ್ದಾನೋ, ಆ ರಾಮಚರಣನ ಮಾತುಗಳನ್ನು ಆಲಿಸಿರಿ:

**ಮಹಮಾ ನಾಂವ್ ಪ್ರತಾಪಕೀ, ಸುನೌ ಸರವಣ ಚಿತ ಲಾಈ ।**

**ರಾಮಚರಣ ರಸನಾ ರಟೌ, ಕರಮ ಸಕಲ ಝಡ ಜಾಈ ॥೧॥**

**ಜಿನಜಿನ ಸುಮರ್ಯಾ ನಾಂವಕೂಂ, ಸೋ ಸಬ ಉತರ್ಯಾ ಪಾರ್ ।**

**ರಾಮಚರಣ ಜೋ ಬೀಸರ್ಯಾ, ಸೋ ಹೀ ಜಮ ಕೇ ದ್ವಾರ್ ॥೨॥**

**ರಾಮ ಬೀನಾ ಝೂಠ್ ಬತಾಯೋ ॥**

**ರಾಮ ಭಜತ ಛೂಟ್ಯಾಸಬಕ್ರಮ್ಮಾ, ಚಂದ ಔರ್ ಸೂರ್ ದೇಈ ಪರಕಮ್ಮಾ ।**

**ರಾಮ ಕಹೇ ತಿನ ಕೋ ಭೈ ನಾಹೀಂ, ತಿನ ಲೋಕಮೇ ಕೀರತಿ ಗಾಹೀಂ ॥**

**ರಾಮ ರಟತ ಜಗ ಚೋರ ನ ಲಾಗೈ ॥**

---

೨೦೫. ಇದು ರಾಜಾಸ್ಥಾನದಲ್ಲಿ ಭೂತಪೂರ್ವ ಮೇವಾಡದ ರಾಜ್ಯವೊಂದರ ರಾಜಧಾನಿಯಾಗಿತ್ತು. ಭೀಲ್ ವಾಡಾ ರೈಲ್ವೆ ಸ್ಟೇಷನ್ನಿನಿಂದ ಪೂರ್ವಕ್ಕೆ ೩೫ ಮೈಲಿ ದೂರದಲ್ಲಿದೆ. -ಯು.ಮೀ.

ಶಾಹಪುರಾದ ನರೇಶ ನಾಹರಸಿಂಹನು ಸ್ವಾಮೀ ದಯಾನಂದರ ಭಕ್ತನಾಗಿದ್ದನು. ಈ ರಾಜ್ಯ ಉದಯಪುರ ರಾಜ್ಯಕ್ಕೆ ಸಾಮಂತವಾಗಿತ್ತು.

೨೦೬. ನಿರಂಜನ ಸ್ವಾಮಿಯ ಹೆಸರನ್ನು ಹೇಳಿದಾಗಲೇ ಭ್ರಮವೆಂಬ ರೋಗ ತೀರಿತು. ಆಗ ಯಮನ ಕರಿಯೋಲೆ ಹರಿಯಿತು. ಆಗ ಕರ್ಮವೆಲ್ಲಾ ಕತ್ತರಿಸಿ ಹೋಯಿತು.

**ರಾಮನಾಮ ಲಿಷ ಪಥರ್ ತರಾಈ, ಭಗತಿ ಹೇತಿ ಔತಾರ ಹಿ ಧರಹೀ ।**

**ಊಂಚ ನೀಚ ಕುಳಭೇದ ಬಿಚಾರೈ, ಸೋ ತೋ ಜನಮ ಆಪಣೋಹಾರೈ ॥**

**ಸಂತಾಂ ಕೈ ಕುಲ ದೀಸೈ ನಾಹೀಂ ರಾಮರಾಮಕಹ್ ರಾಮ ಸಮ್ಹಾಹೀಂ ॥**

**ಐಸೋ ಕುಣ ಜೋ ಕೀರತಿ ಗಾವೈ, ಹರಿಹರಿ ಜನಕೌ ಪಾರ ನ ಪಾವೈ ।**

**ರಾಮ ಸಂತಾಂ ಕಾ ಅಂತನ ಆವೈ, ಆಪ ಅಪಕೀ ಬುದ್ಧಿಸಮ ಗಾವೈ ॥**

"ಪ್ರತಾಪಶಾಲೀ ನಾಮದ ಮಹಿಮೆಯನ್ನು ಎಲ್ಲರೂ ಚಿತ್ತ ನಿಲ್ಲಿಸಿ ಕೇಳಿರಿ. ನಾಲಗೆ, ರಾಮಚರಣನೇ, ರಾಮನೆಂದರೆ, ಕರ್ಮಗಳೆಲ್ಲಾ ಉದುರಿ ಹೋಗುತ್ತವೆ. ಯಾರು ಯಾರು ನಾಮಸ್ಮರಣ ಮಾಡಿದರೋ, ಅವರೆಲ್ಲರೂ ತಟಸೇರಿದರು. ಓ ರಾಮಚರಣ! ಯಾವನು ಅದನ್ನು ಬಿಟ್ಟನೋ, ಅವನೇ ಯಮನ ದ್ವಾರಕ್ಕೆ ಮುಟ್ಟಿದನು. ರಾಮನನ್ನು ಬಿಟ್ಟರೆ, ಹೇಳುವುದೆಲ್ಲಾ ಸುಳ್ಳೇ! ರಾಮಭಜನ ಮಾಡಿ, ಕರ್ಮಗಳೆಲ್ಲಾ ಸವೆದುವು. ಚಂದ್ರಸೂರ್ಯರು ಪ್ರದಕ್ಷಿಣೆ ಮಾಡುತ್ತಿದ್ದಾರೆ. ರಾಮ–ಎನ್ನುವವರಿಗೆ ಭಯವಿಲ್ಲ. ಮೂರುಲೋಕಗಳಲ್ಲಿಯೂ ಕೀರ್ತಿಗಾನಮಾಡುತ್ತಾರೆ. ರಾಮನಾಮ ಜಪ ನಡೆದಾಗ ಜಗತ್ತಿನ ಒತ್ತಡ ಏನೂ ನಡೆಯದು. ರಾಮನಾಮವನ್ನು ಬರೆದು ಕಲ್ಲನ್ನು ತೇಲಿಸಿದರು! ಭಕ್ತರ ಸಲುವಾಗಿ ಅವತಾರವನ್ನೆತ್ತಿದನು. ಉಚ್ಚ–ನೀಚ ಯಾವದೇ ಭೇದವನ್ನೂ ಎಣಿಸುವವರು ತಮ್ಮ ಬಾಳನ್ನೇ ಸೋಲುತ್ತಾರೆ. ಸಂತರ ಕುಲ ಕಾಣಿಸುವುದಿಲ್ಲ. ರಾಮ ರಾಮ – ಎನ್ನು. ರಾಮನೇ ವ್ಯಾಪಿಸಿದ್ದಾನೆ. ರಾಮನ ಕೀರ್ತಿಯನ್ನು ಹಾಡಬಲ್ಲನು ಯಾವನಿದ್ದಾನೆ? ರಾಮನಿಗೂ, ರಾಮಭಕ್ತನಿಗೂ ಪಾರವೇ ಇಲ್ಲ. ರಾಮನ, ಸಂತರ ಅಂತವಿಲ್ಲ. ತಮ ತಮಗೆ ಬುದ್ಧಿಯಿರುವಷ್ಟು ಹಾಡುತ್ತಾರೆ.

## ಇವುಗಳ ವಿವೇಚನೆ

ಮೊದಲನೆಯದಾಗಿ, ರಾಮಚರಣಮೊದಲಾದವರ ಗ್ರಂಥಗಳನ್ನು ನೋಡುವುದರಿಂದ – "ಇವನು ಒಬ್ಬ ಸಾಧಾರಣ ಶ್ರೇಣಿಯ ಗ್ರಾಮೀಣನಾಗಿದ್ದನು. ಅವನು ಏನನ್ನೂ ಓದಿರಲಿಲ್ಲ" – ಎಂದು ವಿದಿತವಾಗುತ್ತದೆ. ಹಾಗಿಲ್ಲದಿದ್ದರೆ, ಈ ರೀತಿ ಕಗ್ಗವನ್ನೇಕೆ ಬರೆಯುತ್ತಿದ್ದನು? ರಾಮ–ರಾಮ ಎನ್ನವುದರಿಂದ ಕರ್ಮಗಳು ತೀರಿಹೋಗುತ್ತವೆ–ಎನ್ನವುದು ಇವರಿಗೆ ಆಗಿರುವ ಕೇವಲ ಭ್ರಮವಾಗಿದೆ. ಇವರು ನಿರರ್ಥಕವಾಗಿ ತಮ್ಮ ಮತ್ತು ಅನ್ಯರ ಜನ್ಮಗಳನ್ನು ಹಾಳುಮಾಡುತ್ತಾರೆ. ಯಮನ ಭಯವಂತೂ ತುಂಬಾ ದೊಡ್ಡದು; ಆದರೆ, ರಾಜಸೈನಿಕರ, ಕಳ್ಳರ, ದರೋಡೆಖೋರರ, ಹುಲಿಗಳ, ಸರ್ಪಗಳ, ಚೇಳು ಮತ್ತು ಸೊಳ್ಳೆ–ಮೊದಲಾದುದರ ಭಯವೂ ಕೂಡ ಎಂದಿಗೂ ಬಿಟ್ಟುಹೋಗುವುದಿಲ್ಲ. ಬೇಕಾದರೆ, ಹಗಲೂ–ಇರುಳೂ 'ರಾಮರಾಮ' ಎಂದು ಜಪಿಸುತ್ತಿರಿ; ಏನೂ ಆಗುವುದಿಲ್ಲ. ಹೇಗೆ 'ಸಕ್ಕರೆ ಸಕ್ಕರೆ' ಎನ್ನವುದರಿಂದ ಬಾಯಿ ಸಿಹಿಯಾಗುವುದಿಲ್ಲವೋ, ಹಾಗೆ, ಸತ್ಯಭಾಷಣ–ಮೊದಲಾದ ಕರ್ಮಗಳನ್ನಾಚರಿಸದೆ, ರಾಮರಾಮ – ಎನ್ನುವುದರಿಂದ ಏನೂ ಫಲವಾಗುವುದಿಲ್ಲ. ಮತ್ತು ರಾಮರಾಮ–ಎನ್ನವುದನ್ನು ಇವರ ರಾಮನು ಆಲಿಸುವುದಿಲ್ಲವಾದರೆ, ಜನ್ಮಪೂರ್ತ ಹೇಳುತ್ತಾ ಹೋದರೂ ಕೂಡ ಆಲಿಸುವುದಿಲ್ಲ. ಮತ್ತು ಆಲಿಸುತ್ತಾನೆ–ಎಂಬ ಪಕ್ಷಕ್ಕೆ, ಎರಡನೆಯ ಸಾರಿ ರಾಮ–ರಾಮ ಎನ್ನುವುದೂ ವ್ಯರ್ಥವಾಗಿರುತ್ತದೆ. ಈ ಜನರು ತಮ್ಮ ಹೊಟ್ಟೆಹೊರೆದುಕೊಳ್ಳುವುದಕ್ಕಾಗಿ ಮತ್ತು ಬೇರೆಯವರ ಜನ್ಮವನ್ನು ಕೂಡ ಹಾಳುಮಾಡುವುದಕ್ಕಾಗಿ ಒಂದು ಪಾಷಂಡವನ್ನು ಸ್ಥಾಪಿಸಿದ್ದಾರೆ. ಅಲ್ಲದೆ, ನಾವು ಈ ಮಹದಾಶ್ಚರ್ಯವನ್ನು ಕೇಳುತ್ತೇವೆ ಮತ್ತು ನೋಡುತ್ತೇವೆ:– ಹೆಸರೇನೋ ಇಟ್ಟಿದ್ದಾರೆ 'ರಾಮಸ್ನೇಹೀ' ಎಂದು; ಆದರೆ ಇವರು ಮಾಡುವ ಕೆಲಸ 'ವಿಧವಾಸ್ನೇಹಿ'ಗಳದ್ದೇ. ಎಲ್ಲಿ ನೋಡಿದರೂ ಅಲ್ಲಿ ನಿತ್ಯ ಸುಮಂಗಲಿಯರೇ ಸಂತರನ್ನು ಸುತ್ತಿಕೊಂಡಿರುತ್ತಾರೆ. ಇಂತಿಂತಹ ಪಾಷಂಡಗಳು ಪ್ರಚಲಿತವಾಗದೇ ಇದ್ದರೆ, ಆರ್ಯಾವರ್ತದೇಶದ ದುರವಸ್ಥೆ ಏತಕ್ಕಾಗುತ್ತಿದ್ದಿತು? ಈ ಮಂದಿ ತಮ್ಮ ಶಿಷ್ಯರಿಗೆ ಎಂಜಲನ್ನು ತಿನ್ನಿಸುತ್ತಾರೆ ಮತ್ತು ಸ್ತ್ರೀಯರೂ ಕೂಡ ದೀರ್ಘವಾಗಿ ಒರಗಿ 'ದಂಡವತ್' ಪ್ರಣಾಮವನ್ನು[೨೦೭] ಮಾಡುತ್ತಾರೆ. ಏಕಾಂತದಲ್ಲಿಯೂ ಕೂಡ ಸ್ತ್ರೀಯರ ಮತ್ತು ಸಾಧುಗಳ ಲೀಲೆ ನಡೆಯುತ್ತಲೇ ಇರುತ್ತದೆ.

---

೨೦೭. ಸ್ತ್ರೀಯರು ತಮ್ಮ ಪತಿಯನ್ನು ಬಿಟ್ಟು ಇತರರಿಗೆ ನಮಸ್ಕಾರ ಮಾಡಬಾರದು. ವಿಶೇಷ ಅವಸರಗಳಲ್ಲಿ ಸ್ವಕುಲಸ್ಥ ಪೂಜ್ಯರಿಗೆ, ಹಿರಿಯರಿಗೆ ನಮಸ್ಕಾರ ಮಾಡಬೇಕು. ಸ್ತ್ರೀಯರು ಸಾಷ್ಟಾಂಗ ನಮಸ್ಕಾರವನ್ನು ಯಾರಿಗೂ, ಎಂದಿಗೂ ಮಾಡಬಾರದು! ಇದು ಆರ್ಯಮರ್ಯಾದೆ! ಮೂರ್ತಿಪೂಜೆಯ ಆರಂಭವಾದ ಮೇಲೆ, ಸ್ತ್ರೀಯರನ್ನು ಮಂದಿರಗಳಿಗೆ ಕಳುಹಿಸುವುದು, ಅವರಿಂದ ಮೂರ್ತಿಗೆ, ಗಿಡಗಳಿಗೆ, ಮರಗಳಿಗೆ, ಕಲ್ಲು–ಹಾವುಗಳಿಗೆ, ನದಿ–ನೀರುಗಳಿಗೆ, ಪೂಜಾರಿಗಳಿಗೆ, ಮಠಾಧೀಶರಿಗೆ, ಧೂರ್ತಸಂನ್ಯಾಸಿಗಳಿಗೆ, ಸಾಷ್ಟಾಂಗ ನಮಸ್ಕಾರ ಮಾಡಿಸುವುದು ಮೊದಲಾದ ಕುರೀತಿಗಳು ಪ್ರಚಲಿತವಾದ ಮೇಲೆ, ಸ್ತ್ರೀಯರ ಮರ್ಯಾದೆಗೆ ಧಕ್ಕೆ ತಗುಲಿತು. ಎಲ್ಲರಿಗೂ, ಎಲ್ಲ ಕಾಲಕ್ಕೂ ಯೋಗ್ಯವಾದುದು "ನಮಸ್ತೇ"

ಈಗ ಇದರ ಇನ್ನೊಂದು ಶಾಖೆ ಮಾರವಾಡದ 'ಖೇಡಾಪಾ' ಗ್ರಾಮದಿಂದ ಹೊರಟಿದೆ. ಅದರ ಇತಿಹಾಸವಿದು:- ಹುಟ್ಟಿನಿಂದ ಹೊಲೆಯ ಕುಲದವನಾದ ರಾಮದಾಸನೆಂಬ ಒಬ್ಬ ಮಹಾಚತುರನಿದ್ದನು. ಅವನಿಗೆ ಇಬ್ಬರು ಹೆಂಡತಿಯರಿದ್ದರು. ಅವನು ಮೊದಲು ಬಹುದಿನಗಳವರೆಗೆ 'ಅವಘಡ' ಎಂದರೆ-ಸರ್ವಭಕ್ಷಕನಾಗಿ ನಾಯಿಗಳೊಂದಿಗೆ ತಿನ್ನುತ್ತಿದ್ದನು. ಆ ಮೇಲೆ ವಾಮಮಾರ್ಗೀಯ ಕೂಂಡಾಪಂಥಿಯೂ, ಅನಂತರ ರಾಮದೇವಕೃತ ಹಾಡುಗಳನ್ನು ಹಾಡುವ "ತಂಬೂರಿದಾಸ"ನೂ ಆದನು . ತನ್ನ ಇಬ್ಬರು ಹೆಂಡಿರೊಂದಿಗೂ ಸೇರಿ ಹಾಡುತ್ತಿದ್ದನು. ಹೀಗೆ ಸುತ್ತುತ್ತಾ-ಸುತ್ತುತ್ತಾ, 'ಸೀಥಲ'[೨೦೮] ಗ್ರಾಮದಲ್ಲಿದ್ದ, ಚಮ್ಮಾರರ ಗುರುವಾದ 'ರಾಮದಾಸ'ನನ್ನು ಸಂಧಿಸಿದನು. ಚರ್ಮಕಾರ ಗುರು ರಾಮದಾಸನು, ತಂಬೂರಿದಾಸ ರಾಮದಾಸನಿಗೆ 'ರಾಮದೇವ' ಸಂಪ್ರದಾಯವನ್ನು ತೋರಿಸಿದನು ಮತ್ತು ಅವನನ್ನು ತನ್ನ ಶಿಷ್ಯನಾಗಿ ಸ್ವೀಕರಿಸಿದನು. ಆ ರಾಮದಾಸನು ಖೇಡಾಪಾ ಗ್ರಾಮದಲ್ಲಿ ಬೀಡುಬಿಟ್ಟನು ಮತ್ತು ಇತ್ತ ಇವನ ಮತ ಹೊರಟಿತು. ಅಲ್ಲಿ ಶಾಹಪುರಾದಲ್ಲಿ ರಾಮಚರಣನದು ಪ್ರಚಲಿತವಾಯಿತು. ಅವನ ಇತಿಹಾಸವನ್ನೂ ಕೂಡ, "ಅವನು ಜಯಪುರದ ಒಬ್ಬ ವೈಶ್ಯನಾಗಿದ್ದನು. ಅವನು 'ದಾಂತಡಾ'[೨೦೯] ಗ್ರಾಮದಲ್ಲಿ ಒಬ್ಬ ಸಾಧುವಿನಿಂದ ದೀಕ್ಷೆ ಪಡೆದನು ಮತ್ತು ಅವನನ್ನು ಗುರುವಾಗಿ ಮಾಡಿಕೊಂಡನು ಮತ್ತು ಶಾಹಪುರಾಕ್ಕೆ, ಬಂದು ಗೂಟ ಹೊಡೆದು ಕುಳಿತನು". ಎಂದು ಕೇಳಿದ್ದೇವೆ.

ಮುಗ್ಧ ಮಂದಿಗಳಲ್ಲಿ ಪಾಷಂಡದ ಬೇರು ಬೇಗ ಇಳಿಯುತ್ತದೆ; ಇಳಿಯಿತು. ಇವರೆಲ್ಲರಲ್ಲಿ, ಮೇಲೆ ಹೇಳಿದ ರಾಮಚರಣನ ವಚನಗಳ ಪ್ರಮಾಣದಂತೆ, ಶಿಷ್ಯರಾದ ಮೇಲೆ, ಸ್ವಲ್ಪವೂ ಉಚ್ಚ-ನೀಚರೆಂಬ ಭೇದವಿರುವುದಿಲ್ಲ. ಬ್ರಾಹ್ಮಣನಿಂದ ಹಿಡಿದು ಅಂತ್ಯಜನವರೆಗೆ ಇವರಲ್ಲಿ ಶಿಷ್ಯರಾಗುತ್ತಾರೆ. ಈಗಲೂ ಕೂಡ ಕೂಂಡಾಪಂಥಿಗಳಂತೆಯೇ ಇದ್ದಾರೆ. ಏಕೆಂದರೆ, ಮಣ್ಣಿನ ಪಾತ್ರೆಗಳಲ್ಲಿಯೇ ಊಟ ಮಾಡುತ್ತಾರೆ ಮತ್ತು ಸಾಧುಗಳ ಎಂಜಲನ್ನು ತಿನ್ನುತ್ತಾರೆ. ವೇದಧರ್ಮದಿಂದ, ತಾಯಿ-ತಂದೆಗಳ ಸೇವೆ ಮತ್ತು ಸಾಂಸಾರಿಕ ವ್ಯವಹಾರಗಳಿಂದ, ದುಷ್ಪ್ರೇರಣೆಮಾಡಿ ದೂರಮಾಡಿ ಬಿಡುತ್ತಾರೆ ಮತ್ತು ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ಮತ್ತು ರಾಮನಾಮವನ್ನು ಮಹಾಮಂತ್ರವೆಂದು ಅಂಗೀಕರಿಸುತ್ತಾರೆ ಮತ್ತು ಇದನ್ನೇ 'ಛುಚ್ಛಮ ವೇದ' (ಸೂಕ್ಷ್ಮವೇದ)ವೆಂದೂ ಕೂಡ ಹೇಳುತ್ತಾರೆ. "ರಾಮ-ರಾಮ-ಎನ್ನುವುದರಿಂದ ಅನಂತ ಜನ್ಮಗಳ ಪಾಪಗಳು ಬಿಟ್ಟುಹೋಗುತ್ತವೆ. ಇದರ ಹೊರತು ಮುಕ್ತಿ ಯಾವನಿಗೂ ಆಗುವುದಿಲ್ಲ"-ಎನ್ನುತ್ತಾರೆ. ಯಾವನು ಶ್ವಾಸ-ಪ್ರಶ್ವಾಸಗಳೊಂದಿಗೆ ರಾಮ-ರಾಮ ಎನ್ನಬೇಕು-ಎಂದು ಬೋಧಿಸುತ್ತಾನೋ, ಅವನನ್ನು ಸತ್ಯಗುರುವೆನ್ನುತ್ತಾರೆ. ಮತ್ತು ಸತ್ಯಗುರುವನ್ನು ಪರಮೇಶ್ವರನಿಗಿಂತ ದೊಡ್ಡವನೆಂದು ಅಂಗೀಕರಿಸುತ್ತಾರೆ. ಮತ್ತು ಅವನ ಮೂರ್ತಿಯ ಧ್ಯಾನವನ್ನು ಮಾಡುತ್ತಾರೆ. ಸಾಧುಗಳ ಪಾದತೊಳೆದು ಆ ನೀರನ್ನು ಕುಡಿಯುತ್ತಾರೆ. ಯಾವಾಗ ಶಿಷ್ಯನು ಗುರುವಿನಿಂದ ದೂರ ಹೋಗುವನೋ, ಆಗ ಗುರುವಿನ ಉಗುರುಗಳನ್ನೂ ಮತ್ತು ಗಡ್ಡದ ಕೂದಲುಗಳನ್ನೂ ತನ್ನ ಬಳಿ ಇಟ್ಟುಕೊಳ್ಳುವನು. ಅವನ ಚರಣಾಮೃತವನ್ನು ನಿತ್ಯವೂ ತೆಗೆದುಕೊಳ್ಳುವನು. ರಾಮದಾಸನ ಮತ್ತು ಹರರಾಮದಾಸನ ವಾಣಿಯ ಪುಸ್ತಕವನ್ನು ವೇದಕ್ಕಿಂತ ಹೆಚ್ಚೆಂದು ಗ್ರಹಿಸುತ್ತಾರೆ. ಅದಕ್ಕೆ ಪ್ರದಕ್ಷಿಣೆಯನ್ನೂ, ಸಾಷ್ಟಾಂಗ ದಂಡವತ್ ಪ್ರಣಾಮವನ್ನೂ ಮಾಡುತ್ತಾರೆ. ಮತ್ತು ಗುರುವು ಬಳಿಯಿದ್ದರೆ, ಗುರುವಿಗೆ ದಂಡವತ್ ಪ್ರಣಾಮವನ್ನು ಮಾಡುತ್ತಾರೆ. ಸ್ತ್ರೀಗೆ ಅಥವಾ ಪುರುಷನಿಗೆ 'ರಾಮರಾಮ' ಎಂಬ ಒಂದೇ ಬಗೆಯ ಮಂತ್ರೋಪದೇಶವನ್ನು ಮಾಡುತ್ತಾರೆ. ಮತ್ತು ನಾಮಸ್ಮರಣದಿಂದಲೇ ಕಲ್ಯಾಣವಾಗುತ್ತದೆ-ಎಂದು ತಿಳಿಯುತ್ತಾರೆ ಮತ್ತು ಓದುವುದರಲ್ಲಿ ಪಾಪವಿದೆ-ಎಂದು ತಿಳಿದುಕೊಳ್ಳುತ್ತಾರೆ. ಅವರ ಹೇಳಿಕೆಯಿದೆ:-

**ಪಂಡಿತಾಈ ಪಾನೇ ಪಡೀ ಓ ಪೂರಬಲೋ ಪಾಪ್ ।**

**ರಾಮರಾಮ ಸಮರ್ಯಾಂ ಬಿನಾ ರಇಗ್ಯೋ ರೀತೋ ಆಪ್ ॥**

**ವೇದಪುರಾಣ ಪಢೇ ಪಢ ಗೀತಾ, ರಾಮ ಭಜನಬಿನ ರಹಗಯೇ ರೀತಾ ॥**

"ಯಾವ ಪೂರ್ವಜನ್ಮದ ಪಾಪವೋ? ಪಾಂಡಿತ್ಯವೇನೋ ಪಾಲಿಗೆ ಬಿದ್ದಿತು! ರಾಮ ರಾಮ-ಎಂದು ಸ್ಮರಿಸದೇ ಹೋದರೆ, ರಿಕ್ತನಾಗಿಯೇ ಉಳಿದನು ಆತ್ಮ! ಗೀತೆಯನ್ನು ಓದಿ, ವೇದಪುರಾಣಗಳನ್ನೂ ಓದಿದೆ; ರಾಮಭಜನೆಯಿಲ್ಲದೆ ರಿಕ್ತನಾಗಿಯೇ ಉಳಿದು ಹೋದೆ".

---

೨೦೮. ಜೋಧಪುರ ರಾಜ್ಯದ ಗ್ರಾಮ.

೨೦೯. ಇದು ಫುಲೇರಾ ಮತ್ತು ಕಿಶನಘಡದ ಮಧ್ಯೆ ಇರುವ ರೈಲ್ವೆ ಸ್ಟೇಷನ್.

ಇಂತಹ ಪುಸ್ತಕಗಳನ್ನು ರಚಿಸಿದ್ದಾರೆ! ಹೆಂಡತಿ ಗಂಡನ ಸೇವೆ ಮಾಡುವುದರಲ್ಲಿ ಪಾಪವಿದೆ ಮತ್ತು ಗುರುವಿನ ಹಾಗೂ ಸಾಧುವಿನ ಸೇವೆ ಮಾಡುವುದರಲ್ಲಿ ಧರ್ಮವಿದೆ ಎನ್ನುತ್ತಾರೆ. ವರ್ಣಾಶ್ರಮಗಳನ್ನು ಒಪ್ಪುವುದಿಲ್ಲ. ಬ್ರಹ್ಮಜ್ಞನಾಗಿದ್ದರೂ ರಾಮಸ್ನೇಹಿಯಾಗದಿದ್ದರೆ, ಅವನನ್ನು ನೀಚನೆಂದೂ, ಮತ್ತು ಅತಿ ಕ್ಷುದ್ರನೆಂದೂ, ರಾಮಸ್ನೇಹಿಯಾದರೆ ಅವನನ್ನು ಉತ್ತಮನೆಂದೂ ತಿಳಿದುಕೊಳ್ಳುತ್ತಾರೆ. ಈಗ ಈಶ್ವರನ ಅವತಾರವನ್ನು ಒಪ್ಪುವುದಿಲ್ಲ ಮತ್ತು ನಾವು ಮೇಲೆ ಬರೆದಿರುವ "ಭಗತಿ ಹೇತಿ ಔತಾರಹಿ".- ಎಂಬ ರಾಮಚರಣನ ವಚನವೂ ಇದೆ.

ಭಕ್ತರ ಮತ್ತು ಸಂತರ ಹಿತಕ್ಕಾಗಿ ಅವತಾರವಾಗುತ್ತದೆ ಎಂದೂ ಕೂಡ ಅಂಗೀಕರಿಸುತ್ತಾರೆ. ಈ ಮೊದಲಾದ ಪಾಷಂಡ ಪ್ರಪಂಚ ಇವರದು ಎಷ್ಟಿದೆಯೋ, ಅದೆಲ್ಲವೂ ಆರ್ಯಾವರ್ತ ದೇಶಕ್ಕೆ ಅಹಿತಕರವೇ ಆಗಿರುತ್ತದೆ. ಇಷ್ಟರಿಂದಲೇ ಬುದ್ಧಿವಂತರು ಬಹಳ ಹೆಚ್ಚನ್ನು ತಿಳಿದುಕೊಳ್ಳುವರು.

**ಪ್ರಶ್ನೆ :-** ಗೋಕುಲೀಯ ಗೋಸಾಯಿಗಳ ಮತವಂತೂ ಬಹಳ ಚೆನ್ನಾಗಿದೆ.[೨೧೦] ನೋಡಿರಿ, ಎಂತಹ ಐಶ್ವರ್ಯವನ್ನು ಅನುಭವಿಸುತ್ತಾರೆ! ಈ ಬಗೆಯ ಐಶ್ವರ್ಯ, ಲೀಲೆಯಿಲ್ಲದೆ ಈ ರೀತಿ ಆಗಬಲ್ಲದೋ?

**ಉತ್ತರ :-** ಈ ಐಶ್ವರ್ಯ ಗೃಹಸ್ಥರುಗಳದು; ಗೋಸಾಯಿಗಳದು ಏನೇನೂ ಇಲ್ಲ.

**ಪ್ರಶ್ನೆ :-** ಓಹೋ! ಗೋಸಾಯಿಗಳ ಪ್ರತಾಪದಿಂದ (ಐಶ್ವರ್ಯ) ಇದೆ. ಏಕೆಂದರೆ, ಈ ರೀತಿಯ ಐಶ್ವರ್ಯ ಅನ್ಯರಿಗೆ ಸಿಕ್ಕುವುದಿಲ್ಲವೇತಕ್ಕೆ?

**ಉತ್ತರ:-** ಅನ್ಯರೂ ಇದೇ ರೀತಿ ವಂಚನಾ ಪ್ರಪಂಚ ರಚಿಸುವರಾದರೆ, ಐಶ್ವರ್ಯ ಲಭಿಸುವುದರಲ್ಲಿ ಸಂದೇಹವೇನಿದೆ? ಮತ್ತು ಇದಕ್ಕಿಂತ ಹೆಚ್ಚು ಧೂರ್ತತನ ಮಾಡಿದಲ್ಲಿ, ಐಶ್ವರ್ಯ ಇನ್ನೂ ಅಧಿಕವಾಗಲು ಶಕ್ಯವಿದೆ.

**ಪ್ರಶ್ನೆ :-** ಭಲೇ, ಭಲೇ! ಇದರಲ್ಲಿ ಧೂರ್ತತನವೇನಿದೆ? ಇದೆಲ್ಲವೂ ಗೋಲೋಕದ ಲೀಲೆಯೇ ಅಗಿದೆ.

**ಉತ್ತರ:-** ಗೋಲೋಕದ ಲೀಲೆಯಲ್ಲ; ಆದರೆ-ಗೋಸಾಯಿಗಳ ಲೀಲೆಯಾಗಿದೆ. ಗೋಲೋಕದ ಲೀಲೆಯಾಗಿದ್ದರೆ, ಗೋಲೋಕವೂ ಹೀಗೆಯೇ ಇರಬಹುದು!

ಈ ಮತ ಅಂಧ್ರದೇಶದಿಂದ[೨೧೧] ಪ್ರಚಲಿತವಾಗಿದೆ. ಏಕೆಂದರೆ, ಲಕ್ಷ್ಮಣಭಟ್ಟನೆಂಬ ಅಂಧ್ರ ಬ್ರಾಹ್ಮಣನೊಬ್ಬನು, ವಿವಾಹ ಮಾಡಿಕೊಂಡು, ಯಾವುದೋ ಕಾರಣದಿಂದ ಮಾತಾಪಿತೃಗಳನ್ನೂ ಮತ್ತು ಪತ್ನಿಯನ್ನೂ ಬಿಟ್ಟು, ಕಾಶಿಗೆ ಹೋಗಿ ಸಂನ್ಯಾಸವನ್ನು ತೆಗೆದುಕೊಂಡಿದ್ದನು ಮತ್ತು 'ನನಗೆ ಮದುವೆಯಾಗಿಲ್ಲ'-ಎಂದು ಸುಳ್ಳನ್ನು ಹೇಳಿದ್ದನು. ದೈವಯೋಗದಿಂದ ಅವನ ತಾಯಿ-ತಂದೆ ಮತ್ತು ಹೆಂಡತಿಯು ಅವನು ಕಾಶಿಯಲ್ಲಿ ಸಂನ್ಯಾಸಿಯಾಗಿದ್ದಾನೆ-ಎಂದು ಸಮಾಚಾರವನ್ನು ಕೇಳಿದರು. ಅವನ ತಾಯಿ-ತಂದೆಗಳು ಮತ್ತು ಹೆಂಡತಿಯು ಕಾಶಿಗೆ ತೆರಳಿ, ಯಾವನು ಅವನಿಗೆ ಸಂನ್ಯಾಸ ಕೊಟ್ಟಿದ್ದನೋ, ಅವನಿಗೆ- "ನಮ್ಮ ಮಗನನ್ನು ಸಂನ್ಯಾಸಿಯನ್ನಾಗಿ ಮಾಡಿದೆ ಏಕೆ? ನೋಡು, ಇವಳು ಅವನ ಯುವತೀಪತ್ನಿಯಾಗಿದ್ದಾಳೆ".-ಎಂದು ಹೇಳಿದರು. ಮತ್ತು ಪತ್ನಿಯು- "ತಾವು ನನ್ನ ಪತಿಯನ್ನು ನನ್ನೊಡನೆಯಿರುವಂತೆ ಮಾಡುವುದಿಲ್ಲವಾದರೆ, ನನಗೂ ಸಂನ್ಯಾಸವನ್ನು ಕೊಟ್ಟುಬಿಡಿರಿ".- ಎಂದಳು. ಆಗ ಆತನು (ದೀಕ್ಷೆಯಿತ್ತವನು) ಅವನನ್ನು ಕರೆದು-"ನೀನು ಮಹಾಮಿಥ್ಯಾವಾದಿಯಾಗಿದ್ದೀಯೆ.

---

೨೧೦. ಗೋಕುಲೀಯ ಗೋಸಾಯಿ, ಎಂದರೆ ವಲ್ಲಭಮತದ ಖಂಡನೆಯನ್ನು ಸ್ವಾಮೀ ದಯಾನಂದರು ತಮ್ಮ "ವೇದವಿರುದ್ಧಖಂಡನಮ್" ಎಂಬ ಕಿರುಹೊತ್ತಿಗೆಯಲ್ಲಿ ಮಾಡಿದ್ದಾರೆ. ಈ ಕಿರುಹೊತ್ತಿಗೆ ಪ್ರಕಾಶಿತವಾದೊಡನೆಯೇ ಈ ಮತದ ಅನುಯಾಯಿಗಳು ಸ್ವಾಮಿ ದಯಾನಂದರ ಪ್ರಾಣ ತೆಗೆಯಲು ಪ್ರಯತ್ನಿಸಿದರು.

ವಲ್ಲಭಾಚಾರ್ಯನು ವೈಷ್ಣವ ಮತದಲ್ಲಿ ಪ್ರವೇಶಮಾಡಿದಮೇಲೆ, ವೈಷ್ಣವ ಮತವನ್ನು ವ್ಯಭಿಚಾರವೆಂಬ ರಸಾತಳಕ್ಕಿಳಿಸಿದನು !

ಗೃಹಸ್ಥ ಸ್ತ್ರೀಯರು ತನು-ಮನ-ಧನಗಳನ್ನು ಗುರುವಿಗೆ ಅರ್ಪಿಸಿಕೊಳ್ಳುವುದರ ನೆವದಿಂದ, ಅವರಿಂದ ಏಕಾಂತದಲ್ಲಿ ಶಾರೀರಿಕ ಸೇವೆ ಮೂಲಕ ಅವರನ್ನು ಭ್ರಷ್ಟ ಮಾಡತೊಡಗಿದರು. ವಲ್ಲಭಮತವು ಉತ್ತರ ಮುಂಬೈ ಪ್ರದೇಶದಲ್ಲೂ, ಗುಜರಾತಿನಲ್ಲೂ ಪ್ರಾಬಲ್ಯದಲ್ಲಿತ್ತು. ೧೮೭೦ ರ ದಶಕದಲ್ಲಿ ಈ ಗೋಸಾಯಿ ಮಹಾರಾಜರಿಂದ, ಅವರ ದುರಾಚಾರವನ್ನು ಹೊರಗೆಡಹಿದ ಆರ್ಯಸಮಾಜೀ ಸಜ್ಜನರ ವಿರುದ್ಧವಾಗಿ 'Maharaja Libel case' ಎಂಬ ಮಾನಹಾನಿ ಪ್ರಕರಣ ನ್ಯಾಯಾಲಯದಲ್ಲಿ ಹೂಡಲಾಯಿತು. ಇದರಿಂದ ಇವರ ಇನ್ನಷ್ಟು ಹುಳುಕು ಹೊರಬಂದು, ನ್ಯಾಯಾಧೀಶರು 'ಮಹಾರಾಜ'ರಿಗೆ ಛೀಮಾರಿ ಹಾಕಿದರು. ಅಮೆರಿಕಾ ಮತ್ತು ಪಶ್ಚಿಮೀ ದೇಶಗಳಲ್ಲಿ ಈ ಮತ 'ಹರೇ ರಾಮಾ, ಹರೇ ಕೃಷ್ಣ' ಸಂಪ್ರದಾಯದ ರೂಪದಲ್ಲಿ ವೈಭವದಿಂದ ಮೆರೆಯುತ್ತಿರುವುದಕ್ಕೆ ಈ ಮತದಲ್ಲಿರುವ ಈ 'ಆಕರ್ಷಣೆ' ಯೇ ಕಾರಣ.

೨೧೧. ಮೂಲಗ್ರಂಥದಲ್ಲಿ ' ತೈಲಂಗದೇಶ' ಎಂದಿದೆ.

ಸಂನ್ಯಾಸವನ್ನು ಬಿಟ್ಟು, ಗೃಹಾಶ್ರಮವನ್ನು ಗ್ರಹಿಸು. ಏಕೆಂದರೆ, ನೀನು ಸುಳ್ಳನ್ನು ಹೇಳಿ ಸಂನ್ಯಾಸವನ್ನು ತೆಗೆದುಕೊಂಡೆ".-ಎಂದು ಹೇಳಿದನು. ಅವನು ಮರಳಿ ಹಾಗೆಯೇ ಮಾಡಿದನು. ಸಂನ್ಯಾಸವನ್ನು ವರ್ಜಿಸಿ, ಅವಳೊಂದಿಗೆ ಹೊರಟನು.

ನೋಡಿರಿ, ಈ ಮತದ ಮೂಲವೇ ಸುಳ್ಳಿನಿಂದ, ಮೋಸದಿಂದ ಹೊರಟಿದೆ. ಯಾವಾಗ ಆಂಧ್ರ ಪ್ರಾಂತಕ್ಕೆ ಹೋದರೋ, ಆಗ ಅವನ್ನು ಯಾವನೂ ಜಾತಿಯಲ್ಲಿ ಸೇರಿಸಿಕೊಳ್ಳಲಿಲ್ಲ. ಆಗ ಅಲ್ಲಿಂದ ಹೊರಟು ತಿರುಗಾಡತೊಡಗಿದರು. ಕಾಸಿಯ ಸಮೀಪವಿರುವ ಚರಣಾರಗಢದ ಬಳಿಯ ಚಂಪಾರಣ್ಯಕ್ಕೆ ಹೊರಟು ಹೋಗುತ್ತಾ ಇದ್ದರು. ಅಲ್ಲಿ ಯಾವನೋ ಒಬ್ಬನು ಒಬ್ಬ ಬಾಲಕನನ್ನು ಕಾಡಿನಲ್ಲಿ ಬಿಟ್ಟು, ನಾಲ್ಕು ದಿಕ್ಕುಗಳಲ್ಲಿಯೂ ದೂರದೂರ ಬೆಂಕಿಹೊತ್ತಿಸಿ, ಹೊರಟು ಹೋಗಿದ್ದನು. ಏಕೆಂದರೆ, ಆ ಬಾಲಕನನ್ನು ಬಿಟ್ಟವನು, "ಬೆಂಕಿಯನ್ನು ಹೊತ್ತಿಸದೇ ಹೋದರೆ, ಕೂಡಲೇ ಯಾವುದಾದರೂ ಪ್ರಾಣಿ ಅವನನ್ನು ಕೊಂದುಬಿಡುವುದು" ಎಂದು ತಿಳಿದಿದ್ದನು.

ಲಕ್ಷ್ಮಣಭಟ್ಟನು ಮತ್ತು ಅವನ ಪತ್ನಿಯು ಆ ಬಾಲಕನನ್ನು ತೆಗೆದುಕೊಂಡು ತಮ್ಮ ಪುತ್ರನನ್ನಾಗಿ ಮಾಡಿಕೊಂಡರು. ಮತ್ತೆ ಕಾಶಿಗೆ ಹೋಗಿ ಇದ್ದರು. ಯಾವಾಗ ಆ ಬಾಲಕನು ದೊಡ್ಡವನಾದನೋ, ಆಗ ಅವನ ತಾಯಿ-ತಂದೆಗಳ ಶರೀರಗಳು ಕಳಚಿಹೋದವು. ಕಾಶಿಯಲ್ಲಿ ಬಾಲ್ಯಾವಸ್ಥೆಯಿಂದ ಯುವಾವಸ್ಥೆಯವರೆಗೆ ಸ್ವಲ್ಪ ಓದುತ್ತಲೂ ಇದ್ದನು. ಮತ್ತೆ, ಇನ್ನೆಲ್ಲಿಯೋ ಹೋಗಿ ಒಂದು ವಿಷ್ಣುದೇವರ ಮಂದಿರದಲ್ಲಿ ಶಿಷ್ಯನಾಗಿ ಹೋದನು. ಯಾವಾಗಲೋ, ಸ್ವಲ್ಪ ಗೊಂದಲವಾದುದರಿಂದ, ಮತ್ತೆ ಕಾಶಿಗೆ ಹೋರಟು ಹೋದನು ಮತ್ತು ಸಂನ್ಯಾಸವನ್ನು ತೆಗೆದುಕೊಂಡನು. ಮತ್ತೆ, ಅದೇ ರೀತಿ ಜಾತಿಯಿಂದ ಬಹಿಷ್ಕೃತನಾಗಿದ್ದ ಯಾವನೋ ಬ್ರಾಹ್ಮಣನು ಕಾಶಿಯಲ್ಲಿ ಇದ್ದನು. ಅವನ ಮಗಳು ಯುವತಿಯಾಗಿದ್ದಳು. ಅವನು ಇವನಿಗೆ 'ನೀನು ಸಂನ್ಯಾಸವನ್ನು ಬಿಟ್ಟು ನನ್ನ ಮಗಳೊಂದಿಗೆ ಮದುವೆಮಾಡಿಕೋ'.-ಎಂದು ಹೇಳಿದನು. ಅದೇ ರೀತಿ ನಡೆಯಿತು. ತಂದೆ ಎಂತಹ ಲೀಲೆ ಮಾಡಿದ್ದನೋ, ಮಗನು ಅಂತಹದನ್ನು ಮಾಡದಿರುವನಾದರೂ ಏಕೆ? ಆ ಹೆಂಡತಿಯನ್ನೂ ಕರೆದುಕೊಂಡು ಮೊದಲು ಯಾವ ವಿಷ್ಣುದೇವರ ಮಂದಿರದಲ್ಲಿ ಶಿಷ್ಯನಾಗಿದ್ದನೋ, ಅಲ್ಲಿಗೇ ಹೊರಟುಹೋದನು. ವಿವಾಹಿತನಾಗಿದ್ದುದರಿಂದ, ಅವನನ್ನು ಅಲ್ಲಿಂದ ಹೊರ ಹಾಕಿದರು. ಮತ್ತೆ, ಎಲ್ಲಿ ಅವಿದ್ಯೆ ಮನೆಮಾಡಿಕೊಂಡಿದೆಯೋ, ಆ ವ್ರಜದೇಶಕ್ಕೆ ಹೋಗಿ, ತನ್ನದೇ ಆದ ಪ್ರಪಂಚವನ್ನು ಅನೇಕ ವಿಧದ ಛಲ-ಉಪಾಯಗಳಿಂದ ಬಿತ್ತರಿಸಹತ್ತಿದನು ಮತ್ತು "ಶ್ರೀಕೃಷ್ಣದೇವರು ನನಗೆ ಸಿಕ್ಕಿದರು ಮತ್ತು ಗೋಲೋಕದಿಂದ ಯಾವ ದೈವೀಜೀವರು ಮರ್ತ್ಯಲೋಕಕ್ಕೆ ಬಂದಿದ್ದಾರೋ, ಅವರನ್ನು ಬ್ರಹ್ಮಸಂಬಂಧ-ಮೊದಲಾದುದರಿಂದ ಪವಿತ್ರಗೊಳಿಸಿ ಗೋಲೋಕಕ್ಕೆ ಕಳುಹಿಸು-ಎಂದು ಹೇಳಿದರು"-ಎಂದು ಸುಳ್ಳು ಸಂಗತಿಗಳನ್ನು ಪ್ರಸಿದ್ಧಪಡಿಸಿದನು. ಮೂರ್ಖರಿಗೆ ಈ ರೀತಿಯ ಪ್ರಲೋಭನದ ಮಾತುಗಳನ್ನು ಹೇಳಿ, ಸ್ವಲ್ಪ ಜನರನ್ನು , ಎಂದರೆ ಎಂಬತ್ತುನಾಲ್ಕು ಜನರನ್ನು ವೈಷ್ಣವರನ್ನಾಗಿ ಮಾಡಿದನು ಮತ್ತು ಕೆಳಗೆ ಬರೆದಿರುವ ಮಂತ್ರಗಳನ್ನು ರಚಿಸಿಕೊಂಡನು, ಮತ್ತು ಇವುಗಳಲ್ಲಿಯೂ ವ್ಯತ್ಯಾಸವನ್ನಿಟ್ಟನು. ಏಕೆಂದರೆ-

**ಶ್ರೀಕೃಷ್ಣಃ ಶರಣಂ ಮಮ ॥ ೧ ॥**

**ಕ್ಲೀಂ ಕೃಷ್ಣಾಯ ಗೋಪೀಜನವಲ್ಲಭಾಯ ಸ್ವಾಹ ॥ ೨ ॥** (ಗೋಪಾಲಸಹಸ್ರನಾಮ)

ಇವೆರಡೂ ಸಾಧಾರಣ ಮಂತ್ರಗಳಾಗಿವೆ. ಆದರೆ, ಮುಂದಿನ ಮಂತ್ರವು ಬ್ರಹ್ಮ ಸಂಬಂಧವನ್ನೂ, ಮತ್ತು ಸಮರ್ಪಣವನ್ನೂ ಮಾಡಿಸುವಂತಹುದಾಗಿದೆ:-

**ಶ್ರೀಕೃಷ್ಣಃ ಶರಣಂ ಮಮ ಸಹಸ್ರಪರಿವತ್ಸರಮಿತ ಕಾಲಜಾತ ಕೃಷ್ಣವಿಯೋಗ ಜನಿತತಾಪಕ್ಲೇಶಾನಂತತಿರೋ ಭಾವೋಹಂ ಭಗವತೇ ಕೃಷ್ಣಾಯ ದೇಹೇಂದ್ರಿಯಪ್ರಾಣಾಂತಃಕರಣತದ್ಧರ್ಮಾಂಶ್ಚ ದಾರಾಗಾರ ಪುತ್ರಾಪ್ತ ವಿತ್ತೇಹ ಪರಾಣ್ಯಾತ್ಮನಾ ಸಹ ಸಮರ್ಪಯಾಮಿ ದೋಸೋಽಹಂ ಕೃಷ್ಣ ತವಾಸ್ಮಿ ॥**

"ಶ್ರೀಕೃಷ್ಣನು ನನಗೆ ಆಶ್ರಯ. ಸಾವಿರ ವರ್ಷಗಳಷ್ಟು ಕಾಲದಿಂದ ಕೃಷ್ಣನ ವಿಯೋಗದಿಂದ ಹುಟ್ಟಿದ ತಾಪಕ್ಲೇಶದಿಂದ ಅನಂತ ದುರ್ದಶಾಗ್ರಸ್ತನಾದ ನಾನು ಭಗವಾನ್ ಕೃಷ್ಣನಿಗೆ ದೇಹ, ಇಂದ್ರಿಯಗಳು, ಪ್ರಾಣ, ಅಂತಃಕರಣಗಳು ಮತ್ತು ಅವುಗಳ ಧರ್ಮವನ್ನೂ, ಹೆಂಡತಿ, ಮನೆ, ಮಕ್ಕಳು, ಆಪ್ತರು, ಧನ, ಇಹ-ಪರಗಳು-ಎಲ್ಲವನ್ನೂ ಆತ್ಮನೊಂದಿಗೆ ಸಮರ್ಪಿಸುತ್ತೇನೆ. ಕೃಷ್ಣ! ನಾನು ನಿನ್ನ ದಾಸನಾಗಿದ್ದೇನೆ".- ಈ ಮಂತ್ರದ ಉಪದೇಶವನ್ನು ಮಾಡಿ, ಶಿಷ್ಯ-ಶಿಷ್ಯೆಯರಿಂದ ಸಮರ್ಪಣವನ್ನು ಮಾಡಿಸುತ್ತಾರೆ. "ಕ್ಲೀಂ ಕೃಷ್ಣಾಯೇತಿ" - ಇಲ್ಲಿ ಕ್ಲೀಂ ಎಂಬುದು ತಂತ್ರಗ್ರಂಥದ ಪದ. ಇದರಿಂದ ಈ ವಲ್ಲಭಮತವೂ ಕೂಡ ವಾಮಮಾರ್ಗಿಗಳ ಒಂದು ಪಂಗಡವಾಗಿದೆ-ಎಂದು ವಿದಿತವಾಗುತ್ತದೆ. ಇದೇ ಕಾರಣದಿಂದ ಗೋಸಾಯಿಗಳು ಬಹುತೇಕವಾಗಿ

ಸ್ತ್ರೀ-ಸಂಗಮಾಡುತ್ತಾರೆ. "ಗೋಪೀವಲ್ಲಭೇತಿ" ಕೃಷ್ಣನು ಗೋಪಿಯರಿಗೆ ಮಾತ್ರ ಪ್ರಿಯನಾಗಿದ್ದನೇ? ಅನ್ಯರಿಗೆ ಪ್ರಿಯನಾಗಿರಲಿಲ್ಲವೇ? ಯಾವನು ಸ್ತ್ರೈಣನು - ಎಂದರೆ ಅತಿ ಸ್ತ್ರೀಲೋಲುಪನಾಗಿರುತ್ತಾನೋ, ಅವನು ಸ್ತ್ರೀಯರಿಗೆ ಪ್ರಿಯನಾಗಿರುತ್ತಾನೆ. ಶ್ರೀಕೃಷ್ಣನು ಇಂತಹವನಾಗಿದ್ದನೇನು?

ಈಗ 'ಸಹಸ್ರಪರಿವತ್ಸರ'-ಎಂಬುದನ್ನು ನೋಡಿರಿ. ಸಾವಿರ ವರ್ಷಗಳ ಗಣನೆ ವ್ಯರ್ಥವಾಗಿದೆ. ಏಕೆಂದರೆ, ವಲ್ಲಭನೂ ಮತ್ತು ಅವನ ಶಿಷ್ಯರೂ ಸರ್ವಜ್ಞರೇನೂ ಆಗಿರಲಿಲ್ಲ. ಕೃಷ್ಣನ ವಿಯೋಗ ಸಾವಿರ ವರ್ಷಗಳಿಂದ ಆಯಿತೇನು? ಮತ್ತು ಇಂದಿನವರೆಗೆ, ಎಲ್ಲಿಯವರೆಗೆ ವಲ್ಲಭ ಮತವಿರಲಿಲ್ಲವೋ, ವಲ್ಲಭನ ಜನ್ಮವೂ ಆಗಿರಲಿಲ್ಲವೋ, ಅದಕ್ಕಿಂತ ಮುನ್ನ ತನ್ನ ದೈವೀ ಜೀವರನ್ನು ಉದ್ಧರಿಸಲು ಬರಲಿಲ್ಲವೇಕೆ. ತಾಪ ಮತ್ತು ಕ್ಲೇಶ - ಎರಡೂ ಪರ್ಯಾಯವಾಚಕ ಶಬ್ದಗಳಾಗಿವೆ. ಇವೆರಡರಲ್ಲಿ ಒಂದನ್ನು ಗ್ರಹಿಸುವುದು ಉಚಿತವಾಗಿತ್ತು; ಎರಡನ್ನೂ ಗ್ರಹಿಸುವುದು ಯುಕ್ತವಲ್ಲ.

"ಅನಂತ" ಎಂಬ ಶಬ್ದದ ಪಾಠವನ್ನಿಡುವುದು ವ್ಯರ್ಥವಾಗಿದೆ. ಏಕೆಂದರೆ-ಅನಂತವೆಂಬ ಶಬ್ದವನ್ನು ಪ್ರಯೋಗಿಸುವಿರಾದರೆ, ಸಹಸ್ರ-ಎಂಬ ಶಬ್ದದ ಪಾಠವನ್ನು ಇಡಬಾರದು. ಮತ್ತು ಸಹಸ್ರವೆಂಬ ಶಬ್ದದ ಪಾಠವನ್ನಿಡುವಿರಾದರೆ, ಅನಂತ-ಎಂಬ ಶಬ್ದದ ಪಾಠವನ್ನಿಡುವುದು ಸರ್ವಥಾ ವ್ಯರ್ಥವಾಗಿರುತ್ತದೆ. ಮತ್ತು ಅನಂತಕಾಲದವರೆಗೆ ತಿರೋಹಿತನಾಗಿ, ಎಂದರೆ ಅಚ್ಛಾದಿತನಾಗಿರುವನಾದರೆ, ಅವನ ಮುಕ್ತಿಗಾಗಿ ವಲ್ಲಭನ ಉದ್ಭವವೂ ಕೂಡ ವ್ಯರ್ಥವಾಗಿರುತ್ತದೆ. ಏಕೆಂದರೆ ಅನಂತವಾದುದಕ್ಕೆ ಅಂತವಿರುವುದಿಲ್ಲ.

ಭಲೇ! ದೇಹೇಂದ್ರಿಯಗಳು, ಪ್ರಾಣಾಂತಃಕರಣಗಳು ಮತ್ತು ಅವುಗಳ ಧರ್ಮಗಳು, ಪತ್ನಿ, ಗೃಹ, ಪುತ್ರ, ಪ್ರಾಪ್ತವಾದ ಧನ-ಇವುಗಳ ಅರ್ಪಣವನ್ನು ಶ್ರೀಕೃಷ್ಣನಿಗೆ ಏಕೆ ಮಾಡಬೇಕು? ಏಕೆಂದರೆ - ಶ್ರೀಕೃಷ್ಣನು ಪೂರ್ಣಕಾಮ ನಾಗಿರುವುದರಿಂದ,[೨೧೨] ಯಾವನದೇ ದೇಹ-ಮೊದಲಾದುದರ ಇಚ್ಛೆಯನ್ನು ಮಾಡಲಾರನು. ಮತ್ತು ದೇಹ - ಮೊದಲಾದುದರ ಅರ್ಪಣವನ್ನು ಮಾಡುವುದೂ ಕೂಡ ಸಂಭವವಲ್ಲ. ಏಕೆಂದರೆ, ದೇಹದ ಅರ್ಪಣ-ಎಂದಾಗ, ಕಾಲುಗುರುಗಳಿಂದ ಹಿಡಿದು ಶಿರಸ್ಸಿನ ಶಿಖಾಗ್ರದವರೆಗೆ ದೇಹವನ್ನಿಸುವುದಷ್ಟೆ? ಅವುಗಳಲ್ಲಿ ಏನೇನು ಒಳ್ಳೆಯ - ಕೆಟ್ಟ ವಸ್ತುಗಳಿರುತ್ತವೋ, ಮಲ-ಮೂತ್ರ ಮೊದಲಾದುವೂ ಉಂಟಲ್ಲ; ಅವೆಲ್ಲದರ ಅರ್ಪಣವನ್ನೂ ಹೇಗೆ ಮಾಡಬಲ್ಲಿರಿ? ಮತ್ತು ಪಾಪ-ಪುಣ್ಯಗಳೆಂಬ ಯಾವ ಕರ್ಮಗಳಿವೆಯೋ, ಅವುಗಳನ್ನು ಕೃಷ್ಣಾರ್ಪಣಮಾಡುವುದರಿಂದ, ಅವುಗಳ ಫಲಭಾಗಿಯೂ ಕೃಷ್ಣನೇ ಆಗಬೇಕಾದೀತು! ಅಂದರೆ, ಹೆಸರೇನೋ ಶ್ರೀಕೃಷ್ಣನದನ್ನೇ ಹೇಳುತ್ತಾರೆ ಮತ್ತು ಸಮರ್ಪಣವನ್ನು ತಮಗಾಗಿ ಮಾಡಿಸಿಕೊಳ್ಳುತ್ತಾರೆ. ದೇಹದಲ್ಲಿ ಮಲ-ಮೂತ್ರ ಮೊದಲಾದುದು ಏನೇನಿದೆಯೋ, ಅದೂ ಕೂಡ ಗೋಸಾಯೀಮಹಾರಾಜರಿಗೆ ಅರ್ಪಣವಾಗುವುದಿಲ್ಲವೇಕೆ? "ಸಿಹಿಸಿಹಿಯಾದುದು ನನಗೆ ಮತ್ತು ಕಹಿ-ಕಹಿಯೆಲ್ಲಾ ನಿನಗೆ!"-ಎಂಬುದು ತತ್ತ್ವವೋ? ಮತ್ತು "ಗೋಸಾಯಿ ಮಹಾರಾಜರಿಗೆ ಮಾತ್ರ ಅರ್ಪಣ ಮಾಡಬೇಕು; ಬೇರೆ ಮತದವರಿಗಲ್ಲ". ಎಂದೂ ಕೂಡ ಬರೆದಿದ್ದಾರೆ. ಈ ಸಮಸ್ತ ಲೀಲೆಯನ್ನೂ ಸ್ವಾರ್ಥಸಾಧನಕ್ಕಾಗಿ, ಅನ್ಯರ ಧನ-ಮೊದಲಾದ ಪದಾರ್ಥಗಳ ಹರಣಕ್ಕಾಗಿ ಮತ್ತು ವೇದೋಕ್ತ ಧರ್ಮದ ನಾಶಮಾಡುವುದಕ್ಕಾಗಿ ರಚಿಸಿದ್ದಾರೆ. ನೋಡಿರಿ, ವಲ್ಲಭರ ಈ ಪ್ರಪಂಚವನ್ನು:-

**ಶ್ರಾವಣಸ್ಯಾಮಲೇಪಕ್ಷ ಏಕಾದಶ್ಯಾಂ ಮಹಾನಿಶಿ ।**

**ಸಾಕ್ಷಾದ್ಭಗವತಾ ಪ್ರೋಕ್ತಂ ತದಕ್ಷರಶ ಉಚ್ಯತೇ ॥ ೧ ॥**

**ಬ್ರಹ್ಮಸಂಬಂಧಕರಣಾತ್ಸರ್ವೇಷಾಂ ದೇಹಜೀವಯೋಃ ।**

**ಸರ್ವದೋಷನಿವೃತ್ತಿರ್ಹಿ ದೋಷಾಃ ಪಂಚವಿಧಾಃ ಸ್ಮೃತಾಃ ॥ ೨ ॥**

**ಸಹಜಾ ದೇಶಕಾಲೋತ್ಥಾ ಲೋಕರೇದನಿರೂಪಿತಾಃ ।**

**ಸಂಯೋಗಜಾಃ ಸ್ಪರ್ಶಜಾಶ್ಚ ನ ಮಂತವ್ಯಾಃ ಕದಾಚನ ॥ ೩ ॥**

---

೨೧೨. "ದುರ್ಜನತೋಷ ನ್ಯಾಯ"ದಂತೆ, ಈ ಮತವನ್ನು ವಲ್ಲಭ ಸಂಪ್ರದಾಯದ ಸಿದ್ಧಾಂತವಾದುದರಿಂದ ಹೇಳಲಾಗಿದೆ.

अन्यथा ಸರ್ವದೋಷಾಣಾಂ ನ ನಿವೃತ್ತಿಃ ಕಥಂ ಚನ ।

ಅಸಮರ್ಪಿತವಸ್ತೂನಾಂ ತಸ್ಮಾದ್ವರ್ಜನಮಾ ಚರೇತ್ ॥ ೪ ॥

ನಿವೇದಿಭಿಃ ಸಮರ್ಪ್ಯೈವ ಸರ್ವಂ ಕುರ್ಯಾದಿತಿ ಸ್ಥಿತಿಃ ।

ನ ಮತಂ ದೇವದೇವಸ್ಯ ಸ್ವಾಮಿಭುಕ್ತಿಸಮರ್ಪಣಮ್ ॥ ೫ ॥

ತಸ್ಮಾದದೌ ಸರ್ವಕಾರ್ಯೇ ಸರ್ವವಸ್ತುಸಮರ್ಪಣಮ್ ।

ದತ್ತಾಪಹಾರವಚನಂ ತಥಾ ಚ ಸಕಲಂ ಹರೇಃ ॥ ೬ ॥

ನ ಗ್ರಾಹ್ಯಮಿತಿ ವಾಕ್ಯಂ ಹಿ ಭಿನ್ನ ಮಾರ್ಗಪರಂ ಮತಮ್ ।

ಸೇವಕಾನಾಂ ಯಥಾಲೋಕೇ ವ್ಯವಹಾರಃ ಪ್ರಸಿಧ್ಯತಿ ॥ ೭ ॥

ತಥಾ ಕಾರ್ಯಂ ಸಮರ್ಪ್ಯೈವ ಸರ್ವೇಷಾಂ ಬ್ರಹ್ಮತಾ ತತಃ ।

ಗಂಗಾತ್ವೇ ಗುಣದೋಷಾಣಾಂ ಗುಣದೋಷಾದಿವರ್ಣನಮ್[೨೧೩] ॥ ೮ ॥

ಈ ಮೊದಲಾದ ಶ್ಲೋಕಗಳನ್ನು ಗೋಸಾಯಿಗಳ ಸಿದ್ಧಾಂತರಹಸ್ಯ-ಮೊದಲಾದ ಗ್ರಂಥಗಳಲ್ಲಿ ಬರೆದಿದ್ದಾರೆ. ಇದೇ ಗೋಸಾಯಿಗಳ ಮತದ ಮೂಲ ತತ್ತ್ವವಾಗಿದೆ. ಆಯಿತಲ್ಲ; ಯಾವನಾದರೂ ಇವರನ್ನು – "ಶ್ರೀಕೃಷ್ಣನ ದೇಹಾಂತವಗಿ ಸ್ವಲ್ಪ ಕಡಿಮೆ ಐದು ಸಾವಿರ ವರ್ಷಗಳು ಕಳೆದಿವೆ. ಅವನು ವಲ್ಲಭರನ್ನು ಶ್ರಾವಣಮಾಸದ ಅರ್ಧ ರಾತ್ರಿಯಲ್ಲಿ ಸಂಧಿಸಲು ಶಕ್ತನಾದನೆಂತು?" ಎಂದು ಕೇಳಬೇಕು. (೧)

ಯಾವನು ಗೋಸಾಯಿಯ ಶಿಷ್ಯನಾಗುತ್ತಾನೋ, ಮತ್ತು ಅವನಿಗೆ ಸಮಸ್ತ ಪದಾರ್ಥಗಳ ಸಮರ್ಪಣವನ್ನು ಮಾಡುತ್ತಾನೋ, ಅವನ ಶರೀರದ ಮತ್ತು ಜೀವನದ ಸರ್ವದೋಷಗಳ ನಿವೃತ್ತಿಯಾಗಿ ಹೋಗುತ್ತದೆ. ಮೂರ್ಖರನ್ನು ಮಾರ್ಗ ತಪ್ಪಿಸಿ, ತಮ್ಮ ಮತಕ್ಕೆ ಸೇರಿಸಿಕೊಳ್ಳುವ ಸಲುವಾಗಿ, ವಲ್ಲಭರು ರಚಿಸಿದ ಪ್ರಂಪಂಚವಿದೇ ಆಗಿದೆ. ಗೋಸಾಯಿಗಳ ಶಿಷ್ಯ-ಶಿಷ್ಯೆಯರೆಲ್ಲಾ ಸಮಸ್ತ ದೋಷಗಳಿಂದಲೂ ನಿವೃತ್ತರಾಗಿ ಹೋಗುವರಾದರೆ, ರೋಗ-ದಾರಿದ್ರ್ಯ ಮೊದಲಾದ ದುಃಖಗಳಿಂದ ಪೀಡಿತರಾಗಿರುವರೇಕೆ? ಮತ್ತು ಆ ದೋಷಗಳು ಐದು ವಿಧದವಾಗಿವೆ. (೨)

ಒಂದನೆಯದು-ಯಾವವು ಸ್ವಾಭಾವಿಕವಾಗಿ, ಎಂದರೆ ಕಾಮ-ಕ್ರೋಧ-ಮೊದಲಾದುವುಗಳಿಂದ ಹುಟ್ಟುತ್ತವೋ, ಆ ಸಹಜ ದೋಷಗಳು. ಎರಡನೆಯದು-ಯಾವುದೋ ದೇಶದಲ್ಲಿ ಮತ್ತು ಕಾಲದಲ್ಲಿ ನಾನಾರೀತಿಯಿಂದ ಮಾಡಲ್ಪಡುವ ಪಾಪಗಳು. ಮೂರನೆಯದು-ಯಾವುದನ್ನು ಲೋಕದಲ್ಲಿ ಭಕ್ಷ್ಯಾಭಕ್ಷ್ಯಗಳೆನ್ನುತ್ತಾರೋ, ಮತ್ತು ಯಾವುದು ವೇದೋಕ್ತವಾದ ಮಿಥ್ಯಾಭಾಷಣ ಮೊದಲಾದುವು ಇವೆಯೋ, ಅವು ನಾಲ್ಕನೆಯದು-ಯಾವುದು ದುಃಸಂಗದಿಂದ, ಎಂದರೆ-ಕಳವು, ಹಾದರ, ತಾಯಿ, ಸೋದರಿ, ಮಗಳು, ಸೊಸೆ, ಗುರುಪತ್ನಿ ಮೊದಲಾದರೊಂದಿಗೆ ಸಂಯೋಗ ಮಾಡುವುದರಿಂದ ಹುಟ್ಟುವುದೋ, ಆ ಸಂಯೋಗಜ ದೋಷ. ಐದನೆಯ – ಅಸ್ಪೃಶ್ಯರ ಸ್ಪರ್ಶದಿಂದ ಆಗುವ ಸ್ಪರ್ಶಜದೋಷ. ಈ ಐದು ದೋಷಗಳನ್ನು ಗೋಸಾಯಿಗಳ ಮತದವರು ಎಂದೂ ಅಂಗೀಕರಿಸಬಾರದು. ಎಂದರೆ, ಇಚ್ಛೆ ಬಂದ ರೀತಿಯ ಆಚರಣವನ್ನು ಮಾಡಬಹುದು. (೩)

ಗೋಸಾಯೀ ಮತವನ್ನುಳಿದು ಬೇರೆ ಯಾವುದೇ ರೀತಿಯೂ ದೋಷಗಳ ನಿವೃತ್ತಿಗೆ ಇಲ್ಲ. ಆದುದರಿಂದ, ಸಮರ್ಪಣಮಾಡದೇ ಇರುವ ಪದಾರ್ಥವನ್ನು ಗೋಸಾಯಿಗಳ ಶಿಷ್ಯರು ಅನುಭವಿಸಬಾರದು. ಇದೇ ಕಾರಣದಿಂದ ಇವರ ಶಿಷ್ಯರುಗಳು ತಮ್ಮ ಪತ್ನಿಯರು, ಹೆಣ್ಣು ಮಕ್ಕಳು, ಸೊಸೆಯರು ಮತ್ತು ಧನವೇ ಮೊದಲಾದ ಪದಾರ್ಥಗಳನ್ನೂ ಕೂಡ ಸಮರ್ಪಣ ಮಾಡುತ್ತಾರೆ. ಯಾವ ಕಾಲದವರೆಗೆ ಗೋಸಾಯಿ ಮಹಾರಾಜರ ಚರಣಸೇವೆಯಲ್ಲಿ ಸಮರ್ಪಿತಳಾಗುವುದಿಲ್ಲವೋ, ಆವರೆಗೆ ಅವಳ ಸ್ವಾಮಿಯು ತನ್ನ ಪತ್ನಿಯನ್ನು ಸ್ಪರ್ಶಿಸಬಾರದು-ಎನ್ನುವುದು ಈ ಸಮರ್ಪಣದ ನಿಯಮವಾಗಿದೆ. (೪)

---

೨೧೩. ಪೌರಾಣಿಕ ಸಂಸ್ಕೃತ ಸಾಹಿತ್ಯವೆಲ್ಲಾ ಈ ರೀತಿಯ ಪಾಮರ- ಸ್ವಾರ್ಥ ಸಿಂಧು ಶ್ಲೋಕಗಳಿಂದ ತುಂಬಿದೆ. ಜನರಲ್ಲಿ ಸಂಸ್ಕೃತ ಭಾಷೆಯು ಪ್ರಚಾರದಲ್ಲಿದ್ದರಿಂದ, ಇಂತಹ ಶ್ಲೋಕಗಳ, ಸಾಹಿತ್ಯದ ಪರಿಚಯ ಜನರಿಗಾಗಲಿಲ್ಲ. ಇಲ್ಲದಿದ್ದರೆ, ಜನರು ಇಂತಹ ಶ್ಲೋಕಗಳನ್ನು ಖಂಡಿಸಿ, ಶ್ಲೋಕಕರ್ತರ ಹುಟ್ಟನ್ನು ಅಡಗಿಸುತ್ತಿದ್ದರು. ಹೀಗಾಗದಿದ್ದರಿಂದ, ಮಳೆಗಾಲದ ನಾಯಿಕೊಡೆಗಳಂತೆ ಈ ದುಷ್ಟ ಸಾಹಿತ್ಯ ಅಭಿವೃದ್ಧಿಗೊಂಡಿತು.

ಈ ಕಾರಣದಿಂದ ಗೋಸಾಯಿಗಳ ಶಿಷ್ಯರು ಸಮರ್ಪಣಮಾಡಿ ಆ ಮೇಲೆ ತಮ್ಮ ತಮ್ಮ ಪದಾರ್ಥದ ಉಪಭೋಗವನ್ನು ಮಾಡಬೇಕು, ಏಕೆಂದರೆ-ಸ್ವಾಮಿಯು[೨೧೪] ಉಪಭೋಗ ಮಾಡಿದ ಮೇಲೆ ಸಮರ್ಪಣವಾಗಲಾರದು. (೫)

ಆದುದರಿಂದ, ಮೊದಲು ಸಮಸ್ತ ಕಾರ್ಯಗಳಲ್ಲಿಯೂ ವಸ್ತುಗಳ ಸಮರ್ಪಣವನ್ನು ಮಾಡಬೇಕು. ಮೊದಲು ಗೋಸಾಯೀ ಮಹಾರಾಜರಿಗೆ ಪತ್ನೀ- ಮೊದಲಾದವರನ್ನು ಸಮರ್ಪಣಮಾಡಿ, ಆ ಮೇಲೆ ಗ್ರಹಿಸಬೇಕು. ಹಾಗೆಯೇ ಹರಿಗೆ ಸಂಪೂರ್ಣ ಪದಾರ್ಥಗಳನ್ನು ಸಮರ್ಪಣಮಾಡಿ, ಅನಂತರ ಗ್ರಹಿಸಬೇಕು. (೬)

ಗೋಸಾಯೀ ಮಹಾರಾಜರ ಮತದಿಂದ ಬೇರೆಯಾದ ಮಾರ್ಗದ ಒಂದು ವಾಕ್ಯವನ್ನೂ ಕೂಡ ಗೋಸಾಯಿಗಳ ಶಿಷ್ಯ-ಶಿಷ್ಯೆಯರು ಎಂದಿಗೂ ಆಲಿಸಬಾರದು; ಗ್ರಹಿಸಲೂಬಾರದು. ಅವರ ಶಿಷ್ಯರುಗಳ ಈ ವ್ಯವಹಾರವೇ ಪ್ರಸಿದ್ಧವಾಗಿವೆ (೭)

ಹಾಗೆಯೇ ಸಕಲ ವಸ್ತುಗಳ ಸಮರ್ಪಣವನ್ನೂ ಮಾಡಿ, ಎಲ್ಲದರಲ್ಲಿಯೂ ಬ್ರಹ್ಮ ಬುದ್ಧಿಯನ್ನಿಡಬೇಕು. ಆ ಮೇಲೆ, ಹೇಗೆ ಗಂಗೆಯಲ್ಲಿ ಬೇರೆಯ ನೀರು ಸೇರಿ ಗಂಗಾ ರೂಪವಾಗಿ ಹೋಗುತ್ತದೋ, ಹಾಗೆಯೇ (ಸಮರ್ಪಿತ ವಸ್ತುವು ಪವಿತ್ರವಾಗಿ ಹೋಗುವುದು) ಎಂದು ತಿಳಿದುಕೊಳ್ಳಬೇಕು. ತಮ್ಮ ಗೋಸಾಯೀ ಮತದಲ್ಲಿ ಗುಣಗಳೂ ಮತ್ತು ಅನ್ಯರ ಮತದಲ್ಲಿ ದೋಷಗಳೂ ಇವೆ. ಆದುದರಿಂದ ತಮ್ಮ ಮತದಲ್ಲಿ ಗುಣಗಳ ವರ್ಣನೆಯನ್ನು ಮಾಡುತ್ತಾ ಹೋಗಬೇಕು. (೮)

ಈಗ ನೋಡಿರಿ, ಗೋಸಾಯಿಗಳ ಮತ ಎಲ್ಲ ಮತಗಳಿಗಿಂತ ಹೆಚ್ಚು ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವಂತಹುದಾಗಿದೆ. ಆಯಿತಲ್ಲ! ಈ ಗೋಸಾಯಿಗಳನ್ನು ಯಾವನಾದರೂ "ಬ್ರಹ್ಮದ ಒಂದು ಲಕ್ಷಣವನ್ನೂ ನೀವು ತಿಳಿದಿಲ್ಲ; ಇನ್ನು ನೀವು ಶಿಷ್ಯಶಿಷ್ಯೆಯರಿಗೆ ಬ್ರಹ್ಮಸಂಬಂಧವನ್ನು ಮಾಡಿಸಬಲ್ಲಿರಾದರೂ ಹೇಗೆ?"-ಎಂದು ಪ್ರಶ್ನಿಸಬೇಕು. "ನಾವೇ ಬ್ರಹ್ಮವಾಗಿದ್ದೇವೆ. ನಮ್ಮೊಂದಿಗೆ ಸಂಬಂಧವಾಗುವುದರಿಂದ ಬ್ರಹ್ಮಸಂಬಂಧವಾಗಿ ಹೋಗುತ್ತದೆ".- ಎನ್ನುವಿರಾದರೆ, ನಿಮ್ಮಲ್ಲಿ ಬ್ರಹ್ಮದ ಗುಣ-ಕರ್ಮ-ಸ್ವಭಾವ ಒಂದೂ ಕೂಡ ಇಲ್ಲ. ಮತ್ತೆ ನೀವು ಕೇವಲ ಭೋಗವಿಲಾಸಕ್ಕಾಗಿ ಬ್ರಹ್ಮವಾಗಿ ಕುಳಿತಿದ್ದೀರೇನು? ಶಿಷ್ಯ-ಶಿಷ್ಯೆಯರನ್ನು ನೀವು ನಿಮಗೇ ಸಮರ್ಪಮಮಾಡಿಸಿಕೊಂಡು ಶುದ್ಧರನ್ನಾಗಿ[೨೧೫] ಮಾಡುತ್ತೀರಿ. ಆದರೆ ನೀವು, ನಿಮ್ಮ ಹೆಂಡಿರು, ಪುತ್ರಿಯರು ಮತ್ತು ಸೊಸೆಯರು ಮೊದಲಾದವರು ಅಸಮರ್ಪಿತರಾಗಿಯೇ ಉಳಿದು ಹೋಗುವುದರಿಂದ, ಅಶುದ್ಧರಾಗಿಯೇ ಉಳಿದುಹೋದರೋ ಅಥವಾ ಇಲ್ಲವೋ? ಮತ್ತು ನೀವು ಅಸಮರ್ಪಿತವಾದ ವಸ್ತುವನ್ನು ಅಶುದ್ಧವೆಂದು ಒಪ್ಪುತ್ತೀರಿ. ಮತ್ತು ಅವುಗಳಿಂದ ಉತ್ಪನ್ನರಾದ ನೀವುಗಳು ಅಶುದ್ಧರೇತಕ್ಕಲ್ಲ? ಆದುದರಿಂದ ನೀವೂ ಕೂಡ ನಿಮ್ಮ ಪತ್ನಿಯರು, ಪುತ್ರಿಯರು ಮತ್ತು ಸೊಸೆಯರು ಮೊದಲಾದವರನ್ನು ಅನ್ಯ ಮತೀಯರಿಗೆ ಸಮರ್ಪಿತರನ್ನಾಗಿ ಮಾಡುತ್ತಾ ಹೋಗುವುದು ಉಚಿತವಾಗಿರುತ್ತದೆ. "ಒಲ್ಲೆವು"- ಎನ್ನುವಿರಾದರೆ, ನೀವೂ ಕೂಡ ಬೇರೆಯ ಸ್ತ್ರೀಯರು, ಪುರುಷರು ಮತ್ತು ಧನ ಮೊದಲಾದ ಪದಾರ್ಥಗಳನ್ನು ಸಮರ್ಪಣ ಮಾಡಿಸುವುದು-ಮಾಡುವುದನ್ನು ಬಿಟ್ಟುಬಿಡಿರಿ.

ಒಳಿತು; ಈವರೆಗೆ ಏನು ಆಯಿತೋ, ಅದಂತೂ ಆಗಿಯೇ ಹೋಯಿತು. ಆದರೆ, ಈಗಲಾದರೂ ನಿಮ್ಮ ಮಿಥ್ಯಾ-ಪ್ರಪಂಚ ಮೊದಲಾದ ಕೆಡಕುಗಳನ್ನು ಬಿಡಿರಿ ಮತ್ತು ಸುಂದರವೂ, ಈಶ್ವರೋಕ್ತವೂ, ವೇದವಿಹಿತವೂ ಆದ ಸತ್ಪಥಕ್ಕೆ ಬಂದು, ನಿಮ್ಮ ಮಾನವಸ್ವರೂಪ ಜನ್ಮವನ್ನು ಸಫಲವಾಗಿ ಮಾಡಿಕೊಂಡು, ಧರ್ಮ, ಅರ್ಥ, ಕಾಮ, ಮೋಕ್ಷ - ಈ ಫಲಚತುಷ್ಟಯವನ್ನು ಗಳಿಸಿ, ಆನಂದವನ್ನು ಅನುಭವಿಸಿರಿ.

ಮತ್ತೂ ನೋಡಿರಿ. ಈ ಗೋಸಾಯೀ ಜನರು ತಮ್ಮ ಸಂಪ್ರದಾಯವನ್ನು 'ಪುಷ್ಟಿಮಾರ್ಗ'ವೆಂದು ಕರೆಯುತ್ತಾರೆ. ಎಂದರೆ, ತಿನ್ನುವುದು, ಕುಡಿಯುವುದು, ಪುಷ್ಟರಾಗುವುದು ಮತ್ತು ಎಲ್ಲ ಸ್ತ್ರೀಯರೊಂದಿಗೂ ಯಥೇಷ್ಟವಾಗಿ ಭೋಗ-ವಿಲಾಸ ಮಾಡುವುದನ್ನು "ಪುಷ್ಟೀಮಾರ್ಗ"ವೆನ್ನುತ್ತಾರೆ! ಆದರೆ, ಯಾವಾಗ ಮಹಾದುಃಖದಾಯಕವಾದ ಭಗಂದರವೇ ಮೊದಲಾದ ರೋಗಗಳಿಂದ ಗ್ರಸ್ತರಾಗಿ ಅವರಿಗೆ ಮಾತ್ರವೇ ಅರಿವಾಗುವಂತೆ ನರಳಿನರಳಿ ಸಾಯುತ್ತಾರೋ, ಆಗ ಇವರನ್ನು ವಿಚಾರಿಸಬೇಕು! ನಿಜವನ್ನು ಕೇಳಬೇಕೆಂದರೆ, ಇದು ಪುಷ್ಟಿಮಾರ್ಗವಲ್ಲ; ಆದರೆ, ಕುಷ್ಠಿಮಾರ್ಗವಾಗಿರುತ್ತದೆ. ಹೇಗೆ ಕುಷ್ಠರೋಗಿಯ ಶರೀರದ ಸಮಸ್ತ ಧಾತುಗಳೂ ಕರಗಿ-ಕರಗಿ ಹೊರಟು ಹೋಗುತ್ತವೋ ಮತ್ತು ಹೇಗೆ ವಿಲಾಪ ಮಾಡುತ್ತಾ ಶರೀರವನ್ನು ಬಿಡುತ್ತಾನೋ, ಹಾಗೆಯೇ ಇವರ ಲೀಲೆಯೂ ಕೂಡ ಕಂಡುಬರುತ್ತದೆ. ಆದುದರಿಂದ, ಇದನ್ನೇ ನರಕಮಾರ್ಗವೆಂದೂ ಕೂಡ ಹೇಳುವುದು ಯುಕ್ತಿಯುಕ್ತವಾಗಬಲ್ಲದು. ಏಕೆಂದರೆ, ದುಃಖಕ್ಕೆ ನರಕವೆಂದು ಹೆಸರು ಮತ್ತು ಸುಖಕ್ಕೆ ಸ್ವರ್ಗಕ್ಕೆ ಹೆಸರು ಇರುತ್ತದೆ.

---

೨೧೪. ಎಂದರೆ, ಪದಾರ್ಥದ ಒಡೆಯನು.

೨೧೫. ಎಂದರೆ, ವಾಸ್ತವವಾಗಿ 'ಅಶುದ್ಧ'ರನ್ನಾಗಿ.

ಇದೇ ರೀತಿ ಮಿಥ್ಯಾಜಾಲವನ್ನು ರಚಿಸಿ, ಬಡಪಾಯಿಗಳಾದ ಪಾಮರ ಜನರನ್ನು ಬಲೆಯಲ್ಲಿ ಸಿಕ್ಕಿಸಿದರು ಮತ್ತು ತಮ್ಮನ್ನು ತಾವೇ ಕೃಷ್ಣರೆಂದುಕೊಂಡು, ಎಲ್ಲರಿಗೂ 'ಸ್ವಾಮಿ'ಗಳಾಗಿ ಮೆರೆಯುತ್ತಾರೆ. "ಎಷ್ಟು ದೈವೀ ಜೀವರು ಗೋಲೋಕದಿಂದ ಇಲ್ಲಿಗೆ ಬಂದಿದ್ದಾರೋ, ಅವರ ಉದ್ಧಾರವನ್ನು ಮಾಡುವುದಕ್ಕಾಗಿ ಲೀಲಾಪುರುಷೋತ್ತಮರಾದ ನಾವು ಜನ್ಮವೆತ್ತುತ್ತಿದ್ದೇವೆ. ಎಂದಿನವರೆಗೆ ನಮ್ಮ ಉಪದೇಶವನ್ನು ತೆಗೆದುಕೊಳ್ಳುವುದಿಲ್ಲವೋ, ಅಂದಿನವರೆಗೆ ಗೋಲೋಕದ ಪ್ರಾಪ್ತಿಯಾಗುವುದಿಲ್ಲ. ಅಲ್ಲಿ ಶ್ರೀಕೃಷ್ಣನೊಬ್ಬನು ಪುರುಷನು ಮತ್ತು ಎಲ್ಲರೂ ಸ್ತ್ರೀಯರು"-ಎಂದು ಇವರು ಹೇಳುತ್ತಾರೆ. ಸರಿ, ಸ್ವಾಮೀ, ಸರಿ! ಒಳ್ಳೆಯದು ನಿಮ್ಮ ಮತ! ಗೋಸಾಯಿಗಳ ಶಿಷ್ಯರೆಷ್ಟು ಜನರಿದ್ದಾರೋ, ಅವರೆಲ್ಲರೂ ಗೋಪಿಯರಾಗಿ ಹೋಗುವರು.

ಈಗ ಆಲೋಚಿಸಿರಿ. ಹಾಗೆ ನೋಡಿದರೆ, ಯಾವ ಪುರುಷನಿಗೆ ಇಬ್ಬರು ಹೆಂಡತಿಯರಿರುತ್ತಾರೋ, ಅವನಿಗೆ ಮಹಾ ದುರ್ಗತಿಯುಂಟಾಗುತ್ತದೆ. ಎಂದ ಮೇಲೆ ಒಬ್ಬ ಪುರುಷನಿದ್ದು ಎಲ್ಲಿ ಅವನೊಬ್ಬನ ಹಿಂದೆ ಕೋಟ್ಯಂತರ ನಾರಿಯರು ಗಂಟು ಬಿದ್ದಿರುತ್ತಾರೋ, ಅಲ್ಲಿ ಅವನ ಮತ್ತು ಅವರ ದುಃಖಕ್ಕೆ ಮಿತಿ ಏನಾದರೂ ಇರುತ್ತದೆಯೇ? ಶ್ರೀಕೃಷ್ಣನಲ್ಲಿ ಬಹಳ ಭಾರೀ ಸಾಮರ್ಥ್ಯವಿದೆ; ಎಲ್ಲರನ್ನೂ ಪ್ರಸನ್ನಗೊಳಿಸುತ್ತಾನೆ-ಎನ್ನುವಿರಾದರೆ, ಯಾವಳನ್ನು 'ಸ್ವಾಮಿನೀ' - ಎನ್ನುತ್ತಾರೋ, ಅವನ ಆ ಸ್ತ್ರೀಯಲ್ಲಿಯೂ ಶ್ರೀಕೃಷ್ಣನದಕ್ಕೆ ಸಮಾನವೇ ಆದ ಸಾಮರ್ಥ್ಯವಿರಬೇಕು; ಏಕೆಂದರೆ, ಅವಳು ಅವನ ಅರ್ಧಾಂಗಿನಿಯಾಗಿರುತ್ತಾಳೆ. ಈ ಲೋಕದಲ್ಲಿಯೂ ಸ್ತ್ರೀ-ಪುರುಷ ಕಾಮಚೇಷ್ಟೆ ಸಮನಾಗಿಯೋ, ಅಥವಾ ಪುರುಷನದಕ್ಕಿಂತ ಸ್ತ್ರೀಯದು ಹೆಚ್ಚಾಗಿಯೋ ಇರುವಂತೆ ಗೋಲೋಕದಲ್ಲಿ ಏತಕ್ಕಿರಬಾರದು? ಹೀಗಿರುವುದಾದಲ್ಲಿ, ಅನ್ಯ ಸ್ತ್ರೀಯರೊಂದಿಗೆ ಸ್ವಾಮಿನಿಯ ಕಾದಾಟ-ಕಚ್ಚಾಟ ಹೆಚ್ಚಾಗಿಯೇ ನಡೆಯುತ್ತಿರಬಹುದು; ಏಕೆಂದರೆ-ಸವತಿತನ ಬಹಳ ಕೆಟ್ಟದಾಗಿರುತ್ತದೆ. ಎಂದ ಮೇಲೆ ಗೋಲೋಕವು ಸ್ವರ್ಗಕ್ಕೆ ಬದಲಾಗಿ ನರಕದಂತೆ ಆಗಿ ಹೋಗಿರಬಹುದು. ಅಥವಾ ಹೇಗ ಬಹು ಸ್ತ್ರೀಗಾಮಿಯಾದ ಪುರುಷನು ಭಗಂದರವೇ ಮೊದಲಾದ ರೋಗಗಳಿಂದ ಪೀಡಿತನಾಗಿರುತ್ತಾನೋ, ಹಾಗೆಯೇ ಗೋಲೋಕದಲ್ಲಿಯೂ ಆಗಿರಬಹುದು. ಧಿಕ್ಕಾರ, ಧಿಕ್ಕಾರ, ಧಿಕ್ಕಾರ! ಇಂತಹ ಗೋಲೋಕಕ್ಕಿಂತ ಬಡಪಾಯೀ ಮರ್ತ್ಯಲೋಕವೇ ಒಳಿತು, ಇಲ್ಲಿ ಗೋಸಾಯೀ ಮಹಾರಾಜರು ತಮ್ಮನ್ನು ಶ್ರೀಕೃಷ್ಣನೆಂದು ಭಾವಿಸಿ, ಬಹುಮಂದಿ ನಾರಿಯರೊಂದಿಗೆ ಲೀಲೆ ನಡೆಸುವುದರಿಂದ ಭಗಂದರ ಮತ್ತು ಪ್ರಮೇಹ ಮೊದಲಾದುದರಿಂದ ಪೀಡಿತರಾಗಿ ಹೇಗೆ ಮಹಾದುಃಖವನ್ನು ಅನುಭವಿಸುತ್ತಾರೋ, ನೋಡಿರಿ. ಈಗ ಆಲೋಚಿಸಿರಿ. ಯಾವನ ಸ್ವರೂಪವಾದ ಗೋಸಾಯಿ ಪೀಡಿತನಾಗಿರುತ್ತಾನೋ, ಗೋಲೋಕದ ಸ್ವಾಮಿಯಾದ ಆ ಶ್ರೀಕೃಷ್ಣ ಈ ರೋಗಗಳಿಂದ ಪೀಡಿತನಾಗದಿರುವುದಾದರೂ ಹೇಗೆ? ಮತ್ತು ಇಲ್ಲ-ಎನ್ನುವ ಪಕ್ಷದಲ್ಲಿ, ಅವನ ಸ್ವರೂಪವಾದ ಗೋಸಾಯಿಯವರೇಕೆ ಪೀಡಿತರಾಗಿರುತ್ತಾರೆ?

**ಪ್ರಶ್ನೆ :-** ಮರ್ತ್ಯಲೋಕದಲ್ಲಿ ಲೀಲಾವತಾರ ಧಾರಣಮಾಡುವುದರಿಂದ ರೋಗದೋಷ ಉಂಟಾಗುತ್ತದೆ; ಗೋಲೋಕದಲ್ಲಿ ಉಂಟಾಗದು. ಏಕೆಂದರೆ-ಅಲ್ಲಿ ರೋಗದೋಷವೇ ಇಲ್ಲ!

**ಉತ್ತರ:- "ಭೋಗ ರೋಗ ಭಯಂ"** - ಎಲ್ಲಿ ಭೋಗವಿರುವುದೋ, ಅಲ್ಲಿ ರೋಗವು ಅವಶ್ಯವಾಗಿ ಇರುತ್ತದೆ. ಮತ್ತ ಕೊಟ್ಯನುಕೋಟಿ ಸ್ತ್ರೀಯರಿಂದ ಶ್ರೀಕೃಷ್ಣನಿಗೆ ಮಕ್ಕಳಾಗುತ್ತವೋ ಅಥವಾ ಇಲ್ಲವೋ? ಮತ್ತು ಆಗುವುದಾದಲ್ಲಿ, ಕೇವಲ ಗಂಡು ಮಕ್ಕಳೇ ಹುಟ್ಟುತ್ತಾರೋ ಅಥವಾ ಕೇವಲ ಹೆಣ್ಣುಮಕ್ಕಳೇಯೋ? ಇಲ್ಲವೇ ಗಂಡು ಮಕ್ಕಳು ಹೆಣ್ಣು ಮಕ್ಕಳು ಇಬ್ಬರೂ ಹುಟ್ಟುತ್ತಾರೋ? ಕೇವಲ ಹೆಣ್ಣು ಮಕ್ಕಳೇ ಆಗುತ್ತಾರೆ ಎನ್ನುವಿರಾದರೆ, ಅವರ ಮದುವೆ ಯಾರೊಂದಿಗೆ ಆಗುತ್ತಿರಬಹುದು? ಏಕೆಂದರೆ, ಅಲ್ಲಿ ಶ್ರೀ ಕೃಷ್ಣನನ್ನುಳಿದು ಬೇರೆಯಾದ ಪುರುಷನೂ ಇಲ್ಲ. ಬೇರೆಯವನಿರುವುದಾದರೆ, ನಿಮ್ಮ ಪ್ರತಿಜ್ಞೆಗೆ ಹಾನಿಬಂದಿತು. ಕೇವಲ ಗಂಡು ಮಕ್ಕಳೇ ಆಗುತ್ತಾರೆ-ಎನ್ನುವಿರಾದರೆ, ಅವರ ವಿವಾಹ ಎಲ್ಲಿ ಮತ್ತು ಯಾರೊಂದಿಗೆ ಆಗುವುದು - ಎಂಬ ಇದೇ ದೋಷ ಆ ಪಕ್ಷದಲ್ಲಿಯೂ ಕಂಡೇ ಬರುವುದು. ಅಥವಾ ಮನೆಯ ಒಳಗೊಳಗೇ ಏನೇನೋ ಗಲಿಬಿಲಿ ಮಾಡಿಕೊಂಡು ಬಿಡುತ್ತಾರೋ? ಅಥವಾ, ಬೇರೆ ಯಾರಾದಾದರೂ ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳು ಇದ್ದಾರೆ-ಎನ್ನುವಿರಾದರೂ, "ಗೋಲೋಕದಲ್ಲಿ ಶ್ರೀಕೃಷ್ಣನೊಬ್ಬನು ಮಾತ್ರ ಪುರುಷ" ಎಂಬ ನಿಮ್ಮ ಪ್ರತಿಜ್ಞೆ ಭಂಗವಾಗಿ ಹೋಗುವುದು. ಮತ್ತು ಮಕ್ಕಳು ಆಗುವುದೇ ಇಲ್ಲ-ಎನ್ನುವಿರಾದರೆ, ಶ್ರೀಕೃಷ್ಣನಲ್ಲಿ ನಪುಂಸಕತ್ವದ ಮತ್ತು ನಾರಿಯರಲ್ಲಿ ಬಂಜೆತನದ ದೋಷ ಬರುವುದು.

ಓಹೋ! ಈ ಗೋಲೋಕ ಆಗಿರುವುದಾದರೂ ಏನು? ದಿಲ್ಲಿಯ ಬಾದಶಾಹನ ಬೇಗಂಗಳ ಪಡೆಯಂತಾಯಿತು! ಈಗ ಗೋಸಾಯಿಗಳು ತಮ್ಮ ಶಿಷ್ಯ-ಶಿಷ್ಯೆಯರ ತನು, ಮನ ಮತ್ತು ಧನದ ಯಾವ ಸಮರ್ಪಣವನ್ನು ತಮಗೆ ಮಾಡಿಸಿಕೊಳ್ಳುತ್ತಾರೋ, ಅದೂ ಕೂಡ ಸರಿಯಲ್ಲ. ಏಕೆಂದರೆ ತನುವಂತೂ ವಿವಾಹ ಸಮಯದಲ್ಲಿ ಸ್ತ್ರೀಯದು ಹಾಗೂ ಪುರುಷನದು ಪರಸ್ಪರರಿಗೆ

ಸಮರ್ಪಿತವಾಗಿ ಹೋಗುತ್ತದೆ. ಮತ್ತು ಮನಸ್ಸೂ ಕೂಡ ಅನ್ಯರಿಗೆ ಸಮರ್ಪಿತವಾಗಲಾರದು. ಏಕೆಂದರೆ, ಮನಸ್ಸಿನೊಂದಿಗೆಯೇ ತನುವಿನ ಸಮರ್ಪಣವಾಗುವುದೂ ಶಕ್ಯ. ಮತ್ತು ಅನ್ಯರಿಗೆ ಸಮರ್ಪಣ ಮಾಡುವವರಾದರೆ, ವ್ಯಭಿಚಾರಿಗಳೆನ್ನಿಸಿಕೊಳ್ಳುವರು! ಈಗ ಉಳಿಯಿತು-ಧನ, ಅದರ ಲೀಲೆಯೂ ಇದೇ-ಎಂದು ತಿಳಿಯಿರಿ. ಎಂದರೆ, ಮನಸ್ಸಿಲ್ಲದೆ ಯಾವುದರ ಸಮರ್ಪಣವೂ ಆಗಲಾರದು. "ಶಿಷ್ಯರು ಸಂಪಾದಿಸಲಿ; ಮತ್ತು ಭೋಗದಿಂದ ನಲಿಯೋಣ ನಾವು!"-ಎಂಬುದೇ ಈ ಗೋಸಾಯಿಗಳ ಅಭಿಪ್ರಾಯ.

ಎಷ್ಟು ಜನ ವಲ್ಲಭ ಸಂಪ್ರದಾಯದ ಗೋಸಾಯಿಗಳಿದ್ದಾರೋ, ಅವರು ಈವರೆಗೂ ಆಂಧ್ರ-ಜಾತಿಯಲ್ಲಿಲ್ಲ. ಮತ್ತು ಯಾವನಾದರೂ ಮುಗ್ಧ ಭ್ರಷ್ಟನು ಇವರಿಗೆ ಕನ್ಯೆಯನ್ನು ಕೊಟ್ಟಲ್ಲಿ, ಅವನೂ ಜಾತಿಬಾಹಿರನಾಗಿ ಭ್ರಷ್ಟನಾಗಿ ಹೋಗುತ್ತಾನೆ. ಏಕೆಂದರೆ, ಜಾತಿಯಿಂದ ಪತಿತರಾಗಿ ಮಾಡಲ್ಪಟ್ಟ ಮತ್ತು ವಿದ್ಯಾಹೀನರಾದ ಅವರು ಹಗಲಿರುಳೂ ಪ್ರಮಾದದಲ್ಲಿರುತ್ತಾರೆ. ಮತ್ತು ನೋಡಿರಿ! ಯಾವನಾದರೂ ಯಾವಾಗ ಗೋಸಾಯೀ ಮಹಾರಾಜರನ್ನು ವಿಜೃಂಭಣೆಯಿಂದ ಸ್ವಾಗತಸಮಾದರಕ್ಕಾಗಿ ಕರೆದೊಯ್ಯುತ್ತಾನೋ, ಆಗ ಅವರು ಅವನ ಮನೆಗೆ ತೆರಳಿ, ಮೌನದಿಂದ ಕಟ್ಟಿಗೆಯಂತೆ ಕುಳಿತಿರುತ್ತಾರೆ; ಯಾವ ಮಾತೂ ಇಲ್ಲ; ಯಾವ ಕಥೆಯೂ ಇಲ್ಲ! ಬಡಪಾಯಿ ಮೂರ್ಖನಾಗದಿದ್ದಾಗ ತಾನೇ ಮಾತನಾಡಿಯಾನು? **"ಮೂರ್ಖಾಣಾಂ ಬಲಂ ಮೌನಂ"**. - ಏಕೆಂದರೆ-ಮೂರ್ಖರ ಬಲವು ಮೌನವೇ ಸರಿ. ಮಾತನಾಡಿದರೆ, ಪೊಳ್ಳು ಹೊರಬಿದ್ದೀತು. ಆದರೆ ಸ್ತ್ರೀಯರ ಕಡೆಗೆ ಚೆನ್ನಾಗಿ ಗಮನವಿತ್ತು ನೋಡುತ್ತಿರುತ್ತಾರೆ. ಮತ್ತು ಯಾವಳ ಕಡೆಗೆ ಗೋಸಾಯೀ ಮಹಾರಾಜರು ನೋಡುತ್ತಾರೋ ಅದು ಮಹಾಭಾಗ್ಯದ ವಿಷಯದಂತೆ ತೋರುತ್ತದೆ. ಮತ್ತು ಅವಳ ಪತಿ, ಸೋದರರು, ನಂಟರು, ಮಾತಾ-ಪಿತೃಗಳು ಬಹಳ ಪ್ರಸನ್ನರಾಗುತ್ತಾರೆ. ಅಲ್ಲಿ ನಾರಿಯರೆಲ್ಲರೂ ಗೋಸಾಯೀಮಹಾರಾಜರ ಪಾದಸ್ಪರ್ಶಮಾಡುತ್ತಾರೆ. ಯಾವಳ ಮೇಲೆ ಗೋಸಾಯೀ ಮಹಾರಾಜರಿಗೆ ಮನಸ್ಸು ಆಗುತ್ತದೋ, ಅಥವಾ ಕೃಪೆಯುಂಟಾಗುತ್ತದೋ, ಅವಳ ಬೆರಳನ್ನು ಪಾದದಿಂದ ಒತ್ತಿ ಬಿಡುತ್ತಾರೆ. ಆ ಸ್ತ್ರೀ ಮತ್ತು ಅವಳ ಪತಿ ಮೊದಲಾದವರು ಅದನ್ನು ತಮ್ಮ ಧನ್ಯಭಾಗ್ಯವೆಂದು ತಿಳಿದುಕೊಳ್ಳುತ್ತಾರೆ. ಮತ್ತು ಆ ಸ್ತ್ರೀಯಳಿಗೆ ಅವಳ ಪತಿ ಮೊದಲಾದವರು "ನೀನು ಗೋಸಾಯೀ ಮಹಾರಾಜರ ಸೇವೆಗೆ ಹೋಗು".- ಎಂದು ಹೇಳಿಯೂ ಹೇಳುತ್ತಾರೆ. ಮತ್ತು ಎಲ್ಲಿಯಾದರೂ ಅಂತಹ ಸ್ತ್ರೀಯ ಪತಿ ಮೊದಲಾದವರು ಪ್ರಸನ್ನರಾಗದಿದ್ದರೆ, ಅಲ್ಲಿ ದೂತೆ ಅಥವಾ ಕುಟಿನಿ[೨೧೬] (ವೇಶ್ಯೆ)ಯರಿಂದ ಕಾರ್ಯಸಾಧನೆ ಮಾಡಿಕೊಳ್ಳುತ್ತಾರೆ. ಸತ್ಯವನ್ನು ಕೇಳುವಿರಾದರೆ, ಇಂತಹ ಕೆಲಸ ಮಾಡುವವರು ಅವರ ಮಂದಿರಗಳಲ್ಲಿ ಮತ್ತು ಅವರ ಹತ್ತಿರ ಬಹುಮಂದಿ ಇದ್ದೇ ಇರುತ್ತಾರೆ.

ಈಗ ಇವರ ದಕ್ಷಿಣೆಯ ಲೀಲೆ. "ತನ್ನಿರಿ ಕಾಣಿಕೆಯನ್ನು ಗೋಸಾಯೀ ಮಹಾರಾಜರಿಗೆ, ಸೊಸೆಯರಿಗೆ, ಕುಮಾರರಿಗೆ, ಪುತ್ರಿಯರಿಗೆ, ಮುಖ್ಯಸ್ಥರಿಗೆ, ಹೊರಗಣವರಿಗೆ, ಗಾಯಕರಿಗೆ ಮತ್ತು ದೇವರಿಗೆ".- ಎಂದು ಈ ರೀತಿ ಬೇಡುತ್ತಾರೆ. ಈ ಏಳು ಅಂಗಡಿಗಳಿಂದ[೨೧೭] ಯಥೇಷ್ಟವಾಗಿ ವಸ್ತುಗಳನ್ನು ಕಸಿದುಕೊಳ್ಳುತ್ತಾರೆ. ಯಾವಾಗ ಗೋಸಾಯೀ ಮಹಾರಾಜರ ಯಾವನಾದರೂ ಸೇವಕನು ಸಾಯಲಿಕ್ಕಿರುತ್ತಾನೋ, ಆಗ ಅವನ ಎದೆಯ ಮೇಲೆ ಗೋಸಾಯೀ ಮಹಾರಾಜರು ಕಾಲೂರುತ್ತಾರೆ; ಮತ್ತು ಏನು ದಕ್ಕುತ್ತದೋ, ಅದನ್ನು ಗೋಸಾಯೀ ಮಹಾರಾಜರು ನುಂಗಿಕೊಳ್ಳುತ್ತಾರೆ. ಈ ಕಾರ್ಯ ಮಹಾಬ್ರಾಹ್ಮಣನದರ ಮತ್ತು ಚಟ್ಟ ಹೊರುವವನದರ ಅಥವಾ ಹೆಣವನ್ನೆತ್ತುವವನದರ ಹಾಗೆ ಇಲ್ಲವೇ?

ಹಲಕೆಲವರು ಅನುಯಾಯಿಗಳು ವಿವಾಹಕ್ಕೆ ಗೋಸಾಯೀ ಮಹಾರಾಜರನ್ನು ಕರೆದು, ಅವರಿದಂದ ಪುತ್ರ-ಪುತ್ರಿಯರ ಪ್ರಾಣಿಗ್ರಹಣಮಾಡಿಸುತ್ತಾರೆ. ಮತ್ತು ಹಲಮಂದಿ ಸೇವಕರು 'ಕೇಸರೀಸ್ನಾನವನ್ನು' ಮಾಡಿಸುವುದುಂಟು; ಎಂದರೆ, ಗೋಸಾಯೀ ಮಹಾರಾಜರ ಶರೀರದ ಮೇಲೆ ನಾರಿಯರು ಕೇಸರದ ಲೇಪನವನ್ನು ಮಾಡಿ, ಮತ್ತೆ ಒಂದು ದೊಡ್ಡ ಪಾತ್ರೆಯಲ್ಲಿ ಮಣೆಯನ್ನಿಟ್ಟು, ನರ-ನಾರಿಯರು ಸೇರಿ ಗೋಸಾಯೀ ಮಹಾರಾಜರಿಗೆ ಸ್ನಾನ ಮಾಡಿಸುತ್ತಾರೆ; ಆದರೆ, ವಿಶೇಷವಾಗಿ ಸ್ತ್ರೀಯರೇ ಸ್ನಾನ ಮಾಡಿಸುತ್ತಾರೆ. ಮತ್ತು ಯಾವಾಗ ಗೋಸಾಯೀ ಮಹಾರಾಜರು ಪೀತಾಂಬರವನ್ನುಟ್ಟು, ಮತ್ತು ಹಾವುಗೆಗಳನ್ನು ಮೆಟ್ಟಿಕೊಂಡು, ಹೊರಕ್ಕೆ ಬಂದುಬಿಡುತ್ತಾರೋ ಹಾಗೂ ಧೋತ್ರವನ್ನು ಆ ಪಾತ್ರೆಯಲ್ಲೇ ಹಾಕಿಬಿಡುತ್ತಾರೋ, ಆಗ ಅವರ ಸೇವಕರು ಆ ನೀರಿನಿಂದ ಆಚಮನ ಮಾಡುತ್ತಾರೆ. ಮತ್ತು ಚೆನ್ನಾಗಿ ಮಸಾಲೆ ಹಾಕಿ ವೀಳೆಯದೆಲೆಯ ಸುರುಳಿಯನ್ನು

---

೨೧೬. ಎಂದರೆ, ಗರತಿಯರನ್ನು ವ್ಯಭಿಚಾರಕ್ಕೆ ಪ್ರೇರೇಪಿಸುವ ಸ್ತ್ರೀಯರು. ಇವರು ಯೌವನದಲ್ಲಿ ವೇಶ್ಯೆಯರಾಗಿರುತ್ತಾರೆ. ವೃದ್ಧಾಪ್ಯ ಬಂದ ಮೇಲೆ ಈ ಕೆಲಸ ಮಾಡುತ್ತಾರೆ. ಇವರಿಗೆ ಸಂಸ್ಕೃತದಲ್ಲಿ "ಕುಟ್ಟನೀ" ಎಂದು ಹೆಸರು. ಬಂಗಾಳದ ದಾಮೋದರ ಪಂಡಿತನು 'ಕುಟ್ಟನೀ ಮತಮ್' ಎಂಬ ಕಾವ್ಯವನ್ನು ರಚಿಸಿದ್ದಾನೆ. ಇದರಲ್ಲಿ ವೇಶ್ಯೆಯರಿಗೆ ಉಪದೇಶವಿದೆ.

೨೧೭. ಎಂದರೆ, ಮೇಲೆಣಿಸಿದ ವ್ಯಕ್ತಿಗಳಿಂದ

ಗೋಸಾಯಿಯವರಿಗೆ ಕೊಡುತ್ತಾರೆ. ಅವರು ಅದನ್ನು ಜಗಿದು, ಸ್ವಲ್ಪವನ್ನೇನೋ ನುಂಗಿಬಿಡುತ್ತಾರೆ. ಮತ್ತು ಉಳಿದ ಬಾಯ್ದಂಬುಲವನ್ನು ಅವರ ಸೇವಕರು ಬಾಯಿನ ಮುಂದೆ ಹಿಡಿಯುವ ಒಂದು ಬೆಳ್ಳಿಯ ಪಾತ್ರೆಯಲ್ಲಿ ಉಗುಳಿಬಿಡುತ್ತಾರೆ. ಅದರ ಪ್ರಸಾದವೂ ಹಂಚಲ್ಪಡುತ್ತದೆ; ಅದನ್ನು 'ಖಾಸ್ ಪ್ರಸಾದ' ಎನ್ನುತ್ತಾರೆ.

ಈ ಜನರು ಎಂತಹ ಮನುಷ್ಯರೆಂಬುದನ್ನು ಈಗ ಯೋಚಿಸಿರಿ. ಮೌಢ್ಯ ಮತ್ತು ಅನಾಚಾರವಿರುವುದಾದರೆ, ಅದು ಇಷ್ಟೇ ಇರುವುದು ಶಕ್ಯ.[೨೧೮] ಬಹುಜನರು ಸಮರ್ಪಣ ಮಾಡಿಕೊಳ್ಳುತ್ತಾರೆ. ಅವರಲ್ಲಿ ಎಷ್ಟೋ ಜನ ವೈಷ್ಣವರ ಕೈಯಿನದನ್ನು ಮಾತ್ರ ತಿನ್ನುತ್ತಾರೆ; ಬೇರೆಯವರ ಕೈಯಿನದನ್ನು ತಿನ್ನರು. ಎಷ್ಟೋ ಜನರು ವೈಷ್ಣವರ ಕೈಯಿನದನ್ನೂ ಕೂಡ ತಿನ್ನುವುದಿಲ್ಲ. ಕಟ್ಟಿಗೆಯವರೆಗೂ[೨೧೯] ತೊಳೆದು ತೆಗೆದುಕೊಳ್ಳುತ್ತಾರೆ. ಆದರೆ ಹಿಟ್ಟು, ಬೆಲ್ಲ, ಸಕ್ಕರೆ, ತುಪ್ಪ – ಮೊದಲಾದುವು ತೊಳೆಯದೆಯೇ ಸ್ಪರ್ಶದೋಷದಿಂದ ನಿವೃತ್ತವಾಗುತ್ತವೆ. ಮಾಡುವುದಾದರೂ ಏನು ಈ ಬಡಪಾಯಿಗಳು? ಇವುಗಳನ್ನು ತೊಳೆದರೆ, ಪದಾರ್ಥವನ್ನೇ ಕೈಗಳಿಂದ ಕಳೆದುಕೊಳ್ಳುತ್ತಾರಲ್ಲ!

ಅವರು – **"ದೇವರ ರಂಗು, ರಾಗ ಹಾಗೂ ಭೋಗಕ್ಕಾಗಿ ಬಹಳ ಹಣವನ್ನು ವಿನಿಯೋಗಿಸುತ್ತೇವೆ".**– ಎಂದು ಹೇಳುತ್ತಾರೆ; ಆದರೆ–ಆ ರಂಗು–ರಾಗ–ಭೋಗಗಳನ್ನು ತಾವೇ ಅನುಭವಿಸುತ್ತಾರೆ. ಮತ್ತು ನಿಜವನ್ನು ಹೇಳುವುದಾದರೆ, ದೊಡ್ಡ ಅನರ್ಥಗಳು ಸಂಭವಿಸುತ್ತವೆ. ಎಂದರೆ, ಹೋಳೀ ಹಬ್ಬದ ಸಂದರ್ಭದಲ್ಲಿ ಪಿಚಕಾರಿಗಳನ್ನು ತುಂಬಿಸಿ, ಸ್ತ್ರೀಯರ ಅಸ್ಪರ್ಶನೀಯವಾದ ಅವಯವಗಳ ಮೇಲೆ ಅಂದರೆ, ಗುಹ್ಯಸ್ಥಾನಗಳು ಯಾವವು ಇವೆಯೋ, ಅವುಗಳ ಮೇಲೆ ಬಿಡುತ್ತಾರೆ.[೨೨೦] ಮತ್ತು ಬ್ರಾಹ್ಮಣರಿಗೆ ನಿಷಿದ್ಧವಾದ ರಸವಿಕ್ರಯವನ್ನೂ[೨೨೧] ಕೂಡ ಮಾಡುತ್ತಾರೆ.

**ಪ್ರಶ್ನೆ :**– ಗೋಸಾಯಿಗಳು ರೊಟ್ಟಿ, ತೊವ್ವೆ, ಪಳಿದ್ಯ, ಅನ್ನ, ಪಲ್ಯ ಮತ್ತು ಮಜ್ಜಿಗೆ ಹಾಗೂ ಲಾಡು ಮೊದಲಾದುವನ್ನು ಪ್ರತ್ಯಕ್ಷವಾಗಿ ಪೇಟೆಯಲ್ಲಿ ಕುಳಿತೇನೂ ಮಾರುವುದಿಲ್ಲ; ಆದರೆ, ತಮ್ಮ ನೌಕರ–ಚಾಕರರಿಗೆ ಎಲೆಗಳನ್ನು ಹಂಚಿಬಿಡುತ್ತಾರೆ. ಆ ಜನರು ಮಾರುತ್ತಾರೆ;[೨೨೨] ಗೋಸಾಯೀ ಮಹಾರಾಜರಲ್ಲ.

**ಉತ್ತರ:**– ಗೋಸಾಯೀ ಮಹಾರಾಜರು ಅವರಿಗೆ ಮಾಸಿಕಧನವನ್ನು ಕೊಟ್ಟರೆ, ಅವರು ಎಲೆಗಳನ್ನೇಕೆ ತೆಗೆದುಕೊಳ್ಳುವರು? ಗೋಸಾಯಿಯವರು ತಮ್ಮ ನೌಕರರ ಕೈಗೆ ಅನ್ನ–ಸಾರು ಮೊದಲಾದುವನ್ನು ನೌಕರಿಗೆ(ವೇತನಕ್ಕೆ) ಬದಲಾಗಿ ಮಾರಿಬಿಡುತ್ತಾರೆ. ಅವರು ತೆಗೆದುಕೊಂಡು ಹೋಗಿ ಪೇಟೆ–ಮಾರುಕಟ್ಟೆಗಳಲ್ಲಿ ಮಾರಿಬಿಡುತ್ತಾರೆ. ಗೋಸಾಯಿಗಳು ಸ್ವತಃ ಹೊರಗೆ ಮಾರುತ್ತಿದ್ದರೆ, ಬ್ರಾಹ್ಮಣರೇ ಮೊದಲಾದ ಅವರ ಸೇವಕರಾದರೂ ರಸವಿಕ್ರಯದ ದೋಷದಿಂದ ದೂರ ಉಳಿಯುತ್ತಿದ್ದರು. ಮತ್ತು ಕೇವಲ ಗೋಸಾಯಿಗಳು ಮಾತ್ರ ರಸವಿಕ್ರಯರೂಪದ ಪಾಪಕ್ಕೆ ಭಾಗಿಗಳಾಗುತ್ತಿದ್ದರು. ಮೊದಲಾಗಿ ತಾವು ಈ ಪಾಪದಲ್ಲಿ ಮುಳುಗಿದರು; ಆ ಮೇಲೆ ಅನ್ಯರನ್ನೂ ಸೆಳೆದುಕೊಂಡರು. ಮತ್ತು ನಾಥದ್ವಾರಾ[೨೨೩] – ಮೊದಲಾದ ಹಲವು ಕಡೆಗಳಲ್ಲಿ ಗೋಸಾಯಿಗಳೂ ಕೂಡ ಮಾರುತ್ತಾರೆ. ರಸವಿಕ್ರಯ ನೀಚಕಾರ್ಯ; ಉತ್ತಮರದಲ್ಲ. ಇಂತಹ ವರ್ತನೆಯ ಜನರು ಆರ್ಯಾವರ್ತಕ್ಕೆ ಅಧೋಗತಿಯನ್ನುಂಟುಮಾಡಿದರು.

---

೨೧೮. ಎಂದರೆ, ಇಷ್ಟೇ ಅಲ್ಲ. ಎಂದರ್ಥ.

೨೧೯. ಹಳೆಯ ಮಾಧ್ವ ಮತ್ತು ಶ್ರೀ ವೈಷ್ಣವರಲ್ಲಿ ಈ ರೂಢಿಯಿತು.

೨೨೦. ಉತ್ತರ ಭಾರತದಲ್ಲಿ ಪ್ರಚಲಿತವಾಗಿರುವ, 'ಹೋಳಿ ಹುಣ್ಣಿಮೆ' ಯನ್ನಾಚರಿಸುವ ಭ್ರಷ್ಟ ಪದ್ಧತಿಗೆ ಈ ಗೋಸಾಯಿಗಳೇ ಕಾರಣ. ಆದ್ದರಿಂದಲೇ, ಶ್ರೀಕೃಷ್ಣನಿಗೆ ಸಂಬಂಧಪಟ್ಟ, ಎಲ್ಲಾ ಪವಿತ್ರ [?] ಕ್ಷೇತ್ರಗಳಲ್ಲೂ ಈ ಪರ್ವವು ಅಡೆ–ತಡೆಯಿಲ್ಲದೆ ನಡೆಯುತ್ತದೆ. ಇದು ವಾಮಾಚಾರದ ಒಂದು ಅಂಗವಾಗಿರುವುದರಿಂದಲೇ ಮುಂಬೈ ನ ಫಿಲ್ಮೀ ಪ್ರಪಂಚ ಇದಕ್ಕೆ ಹೆಚ್ಚು ಮನ್ನಣೆ ! ಇದರ ಇನ್ನೊಂದು ರೂಪವು ಹಲವು ವರ್ಷಗಳ ಮೊದಲು ದಕ್ಷಿಣ ಭಾರತದಲ್ಲಿ ವಿವಾಹಕ್ಕೆ ಮೊದಲು ಎಲ್ಲ ಸ್ತ್ರೀ–ಪುರುಷರು 'ಓಕಳಿ' ಆಡುವ ಪದ್ಧತಿಯಲ್ಲಿತ್ತು.

೨೨೧. ಎಂದರೆ, ಈಗಿನ ಹೋಟಲುಗಳಿದ್ದಂತೆ. ಊಟದ ಮಾರಾಟ.

೨೨೨. ಉತ್ತರ ಭಾರತದಲ್ಲಿ ರಾಜಸ್ಥಾನದ ನಾಥದ್ವಾರಾ ಮೊದಲಾದ ವೈಷ್ಣವ ತೀರ್ಥ ಸ್ಥಾನಗಳಲ್ಲಿ ಈ ರಸವಿಕ್ರಯ ಪದ್ಧತಿ ಜಾರಿಯಲ್ಲಿದೆ. ಭಾರತದ ಎಲ್ಲ ವೈಷ್ಣವ ಮಂದಿರಗಳಲ್ಲೂ ಪ್ರಾಯಶಃ ಈ ಪದ್ಧತಿಯನ್ನು ಕಾಣಬಹುದು.

೨೨೩. ಇದು ರಾಜಾಸ್ಥಾನದ ಉದಯಪುರ ಜಿಲ್ಲೆಯಲ್ಲಿ ಗೋಸಾಯಿಗಳ ಪ್ರಸಿದ್ಧ ತೀರ್ಥಕ್ಷೇತ್ರ. ಇಲ್ಲಿಯ ದೇವರ ಹೆಸರು 'ಶ್ರೀನಾಥ' ಎಂದು. ದಕ್ಷಿಣ ಭಾರತದ ತಿರುಪತಿ ಯಲ್ಲಿದ್ದಂತೆಯೇ ಇಲ್ಲೂ ಅದೇ ಕಾರ್ಯಕ್ರಮ, ಅದೇ ವ್ಯವಹಾರ !

**ಪ್ರಶ್ನೆ:**– ಸ್ವಾಮೀ ನಾರಾಯಣಮತ ಹೇಗಿದೆ?[೨೨೪]

**ಉತ್ತರ:– "ಯಾದೃಶೀ ಶೀತಲಾ ದೇವೀ ತಾದೃಶೋ ವಾಹನಃ ಖರಃ"** ಹೇಗೆ ಧನಹರಣ ಮೊದಲಾದುದರಲ್ಲಿ ಗೋಸಾಯಿಗಳ ವಿಚಿತ್ರ ಲೀಲೆಯಿದೆಯೋ, ಹಾಗೆಯೇ ಸ್ವಾಮೀ ನಾರಾಯಣನದೂ ಇದೆ.

ನೋಡಿರಿ. ಸಹಜಾನಂದನೆಂಬ ಹೆಸರಿನವನೊಬ್ಬನು ಅಯೋಧ್ಯೆಯ ಹತ್ತಿರದ ಗ್ರಾಮ ಒಂದರಲ್ಲಿ ಹುಟ್ಟಿದ್ದನು. ಅವನು ಬ್ರಹ್ಮಚಾರಿಯಾಗಿ ಗುಜರಾತ್, ಕಾಠಿಯಾವಾಡ್, ಕಚ್ಛಭುಜ–ಮೊದಲಾದ ಪ್ರಾಂತಗಳಲ್ಲಿ ಸುತ್ತಾಡುತ್ತಿದ್ದನು. ಅವನು "ಆ ದೇಶ ಅವಿದ್ಯಾಗ್ರಸ್ತ ಮತ್ತು ಮುಗ್ಧವಾಗಿದೆ. ತಮಗೆ ಬೇಕಾದ ಹಾಗೆ ಇವರನ್ನು ತನ್ನ ಮತಕ್ಕೆ ಒಲಿಸಿಕೊಳ್ಳಬಹುದು ; ಹಾಗೆಯೇ ಈ ಜನರು ಒಲಿಯಬಲ್ಲರು"–ಎಂದು ಕಂಡುಕೊಂಡನು. ಅಲ್ಲಿ ಅವನು ನಾಲ್ಕಾರು ಜನರನ್ನು ಶಿಷ್ಯರನ್ನಾಗಿ ಮಾಡಿಕೊಂಡನು. ಅವರೊಂದಿಗೆ ಪರಸ್ಪರ ವಿಚಾರ–ವಿನಿಮಯ ಮಾಡಿಕೊಂಡು–"ಸಹಜಾನಂದನು ನಾರಾಯಣನ ಅವತಾರ ಮತ್ತು ಮಹಾಸಿದ್ಧನು, ಮತ್ತು ಭಕ್ತರಿಗೆ ಚತುರ್ಭುಜಮೂರ್ತಿಯಾಗಿ ದರ್ಶನವನ್ನೂ ಕೊಡುತ್ತಾನೆ".– ಎಂದು ಪ್ರಸಿದ್ಧಪಡಿಸಿದನು. ಒಂದು ಸಾರಿ ಕಾಠಿಯಾವಾಡದಲ್ಲಿ, ಯಾವನೋ "ದಾದಾಖಾಚರನೆಂಬ, ತಗ್ಗುನೆಲದ ಜಮೀನುದಾರನಾದಕಾಠಿ (ಕಾಠಿಯಾವಾಡ ಪ್ರಾಂತದವನು)ಯೊಬ್ಬನಿಗೆ ಸಹಜಾನಂದನ ಒಬ್ಬ ಶಿಷ್ಯನು, "ನೀನು ಚತುರ್ಭುಜನಾದ ನಾರಾಯಣನ ದರ್ಶನಮಾಡಲಿಚ್ಛಿಸುವೆಯಾದರೆ, ನಾವು ಸಹಜಾನಂದರಲ್ಲಿ ಪ್ರಾರ್ಥಿಸಿಕೊಳ್ಳುವೆವು" ಎಂದನು. ಅವನು "ಬಹಳ ಒಳ್ಳೆಯದು" ಎಂದನು. ಅವನು ಮುಗ್ಧಮಾನವನಾಗಿದ್ದನು. ಸಹಜಾನಂದನು ಒಂದು ಕೊಠಡಿಯಲ್ಲಿ, ತಲೆಯ ಮೇಲೆ ಕಿರೀಟವನ್ನಿಟ್ಟುಕೊಂಡು, ತನ್ನ ಕೈಗಳಲ್ಲಿ ಶಂಖ–ಚಕ್ರಗಳನ್ನು ಧರಿಸಿ ಎತ್ತಿಹಿಡಿದನು. ಮತ್ತು ಇನ್ನೊಬ್ಬ ಪುರುಷನು ಅವನ ಹಿಂದೆ ನಿಂತು ತನ್ನ ಕೈಗಳಲ್ಲಿ ಗದಾಪದ್ಮಗಳನ್ನು ಹಿಡಿದು, ಸಹಜಾನಂದನ ಪಕ್ಕಗಳಿಂದ ಕೈಗಳನ್ನು ಚಾಚಿ, ಚತುರ್ಭುಜನಂತೆ ಸಜ್ಜಾಗಿ ನಿಂತನು. ದಾದಾಖಾಚರನಿಗೆ ಅವನ ಶಿಷ್ಯರು – "ಒಂದು ಸಾರಿ ಕಣ್ಣುಗಳನ್ನು ತೆರೆದುನೋಡಿ, ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡು ಬಿಡಬೇಕು ಮತ್ತು ಬೇಗ ಈ ಕಡೆ ಬಂದು ಬಿಡಬೇಕು. ಬಹಳ ನೋಡುವೆಯಾದರೆ, ನಾರಾಯಣದೇವರು ಕೋಪಿಸಿಕೊಳ್ಳುವರು"–ಎಂದು ಹೇಳಿದರು. ಎಂದರೆ ಶಿಷ್ಯರ ಮನಸ್ಸಿನಲ್ಲಿ–ನಮ್ಮ ಕಪಟದ ಪರೀಕ್ಷೆಯನ್ನು ಮಾಡದಿರಲಿ"–ಎಂಬ ಅಭಿಪ್ರಾಯವಿದ್ದಿತು. ಅವನನ್ನು ಕರೆದೊಯ್ದರು. ಆ ಸಹಜಾನಂದನು ಕಲಾಬತ್ತು ಹಾಗೂ ಮಿರುಗುತ್ತಿರುವ ಜರತಾರಿಯ ರೇಶ್ಮೆವಸ್ತ್ರಗಳನ್ನು ಧರಿಸಿದ್ದನು. ಕತ್ತಲಕೋಣೆಯಲ್ಲಿ ನಿಂತಿದ್ದನು. ಅವನ ಶಿಷ್ಯರು ತತ್ ಕ್ಷಣ ಲಾಂದ್ರದಿಂದ ಕೊಠಡಿಯ ಕಡೆಗೆ ಬೆಳಕನ್ನು ಬೀರಿದರು. ದಾದಾಖಾಚರನು ನೋಡಿದರೆ, ಚತುರ್ಭಜಮೂರ್ತಿಯು ಕಂಡುಬಂದಿತು. ಮತ್ತು ಬೇಗನೇ ದೀಪವನ್ನು ಮರೆಮಾಡಿಬಿಟ್ಟರು. ಅವರೆಲ್ಲಾ ಕೆಳಕ್ಕೆ ಒರಗಿ, ನಮಸ್ಕಾರ ಮಾಡಿ, ಬೇರೆ ಕಡೆಗೆ ಬಂದು ಬಿಟ್ಟರು. ಮತ್ತು ಅದೇಕಾಲದಲ್ಲಿ–ನಿನ್ನದು ಧನ್ಯಭಾಗ್ಯ; ಈಗ ನೀನು ಗುರುದೇವರ ಅನುಯಾಯಿಯಾಗಿ ಹೋಗು"–ಎಂದು ಮಾತನಾಡಿದರು. "ಒಳ್ಳೆಯದು" – ಎಂದು ಅವನು ಹೇಳಿದನು. ತಿರುಗಾಡಿಕೊಂಡು ಅವರು ಬೇರೆಡೆಗೆ ಹೋಗುವವರೆಗೆ, ಸಹಜಾನಂದನು ಬೇರೆ ವಸ್ತ್ರ–ಧಾರಣಮಾಡಿ, ಗದ್ದುಗೆಯ ಮೇಲೆ ಕುಳಿತುಕಾಣಿಸಿದನು. ಆಗ ಶಿಷ್ಯರು – "ನೋಡು, ಈಗ ಬೇರೆ ಸ್ವರೂಪ ಧರಿಸಿ ಇಲ್ಲಿ ವಿರಾಜಿಸುತ್ತಿದ್ದಾರೆ"– ಎಂದರು. ಆ ದಾದಾಖಾಚರನು ಇವರ ಬಲೆಯಲ್ಲಿ ಸಿಕ್ಕಿ ಬಿದ್ದನು. ಅಲ್ಲಿಂದಲೇ ಅವರ ಮತ ಬೇರುಬಿಟ್ಟಿತು. ಏಕೆಂದರೆ– ಅವನೊಬ್ಬ ದೊಡ್ಡ ಜಮೀನುದಾರನಾಗಿದ್ದನು. ಅಲ್ಲಿಯೇ ತನ್ನ ಬೇರನ್ನು ಭದ್ರಪಡಿಸಿಕೊಂಡನು. ಆಮಲೆ ಅಲ್ಲಿ–ಇಲ್ಲಿ ತಿರುಗಾಡುತ್ತಿದ್ದನು. ಎಲ್ಲರಿಗೂ ಉಪದೇಶಮಾಡುತ್ತಿದ್ದನು. ಬಹಳ ಜನರನ್ನು ಸಾಧುಗಳನ್ನಾಗಿಯೂ ಮಾಡುತ್ತಿದ್ದನು.

ಒಂದೊಂದು ಸಾರಿ ಯಾವನಾದರೂ ಸಾಧುವಿನ ಕೊರಳಿನ ನಾಡಿಯನ್ನು ಉಜ್ಜಿ ಮೂರ್ಛಿತನನ್ನಾಗಿಯೂ ಮಾಡಿಬಿಡುತ್ತಿದ್ದನು. ಮತ್ತು ಎಲ್ಲರಿಗೂ – "ನಾವು ಇವರ ಸಮಾಧಿಯನ್ನು ಏರಿಸಿದ್ದೇವೆ". – ಎಂದು ಹೇಳುತ್ತಿದ್ದನು. ಇಂತಹ ಧೂರ್ತತ್ವದಲ್ಲಿ ಕಾಠಿಯಾವಾಡದ ಮುಗ್ಧ ಜನರು ಅವನ ಸುಳಿಯಲ್ಲಿ ಸಿಕ್ಕಿಕೊಂಡರು. ಯಾವಾಗ ಅವನು ತೀರಿಹೋದನೋ, ಆಗ ಅವನ ಅನುಯಾಯಿಗಳು ಬಹಳ ಪಾಷಂಡವನ್ನು ಹರಡಿದರು.

ಈ ವಿಷಯದಲ್ಲಿ ಈ ದೃಷ್ಟಾಂತ ಉಚಿತವಾಗಬಹುದು. ಹೇಗೆಂದರೆ, ಯಾವನೋ ಒಬ್ಬನು ಕದಿಯುತ್ತಿದ್ದಾಗ ಹಿಡಿಯಲ್ಪಟ್ಟಿದ್ದನು. ನ್ಯಾಯಾಧೀಶನು ಅವನ ಮೂಗು–ಕಿವಿಗಳನ್ನು ಕತ್ತರಿಸುವ ಶಿಕ್ಷೆಯನ್ನು ವಿಧಿಸಿದನು. ಯಾವಾಗ ಅವನ ಮೂಗು ಕತ್ತರಿಸಲ್ಪಟ್ಟಿತೋ, ಆಗ ಆ ಧೂರ್ತನು ಕುಣಿಯಲೂ, ಹಾಡಲೂ ಮತ್ತು ನಗಲೂ ಆರಂಭಿಸಿದನು. ಜನರು–"ನೀನೇಕೆ ನಗುತ್ತಿಯೆ"? ಎಂದು ಕೇಳಿದರು. ಅವನು "ಹೇಳುವಂತಹ ಮಾತೇ ಅಲ್ಲ!" ಎಂದನು. ಜನರು "ಅಂತಹ ವಿಶೇಷವಾದರೂ

---

೨೨೪. ಈ ಮತದ ಖಂಡನೆಯನ್ನು "ಶಿಕ್ಷಾಪತ್ರೀಧ್ವಾಂತನಿವಾರಣಮ್" ಎಂಬ ಕಿರುಹೊತ್ತಿಗೆಯಲ್ಲಿ ಗ್ರಂಥಕರ್ತರು ಮಾಡಿದ್ದಾರೆ.

ಏನಿದೆ?" ಎಂದು ಪ್ರಶ್ನಿಸಿದರು. ಅವನು–"ಬಹುದೊಡ್ಡ ಆಶ್ಚರ್ಯದ ಸಂಗತಿ. ನಾವು ಇಂತಹದನ್ನು ಎಂದೂ ನೋಡಲೇ ಇಲ್ಲ!" ಎಂದನು. ಜನರು "ಹೇಳು, ವಿಷಯವೇನು?" ಎಂದರು. ಅವನು–"ನನ್ನ ಮುಂದೆ ಸಾಕ್ಷಾತ್ ಚತುರ್ಭುಜ ನಾರಾಯಣನು ನಿಂತಿದ್ದಾನೆ. ನಾನು ನೋಡಿ, ಬಹಳ ಪ್ರಸನ್ನನಾಗಿ ಕುಣಿಯುತ್ತಿದ್ದೇನೆ. ಹಾಡುತ್ತಿದ್ದೇನೆ; ನನ್ನ ಭಾಗ್ಯಕ್ಕೆ ಧನ್ಯವಾದವನ್ನರ್ಪಿಸುತ್ತಿದ್ದೇನೆ. ಏಕೆಂದರೆ, ನಾನು ನಾರಾಯಣನ ಸಾಕ್ಷಾತ್ ದರ್ಶನವನ್ನು ಮಾಡುತ್ತಿದ್ದೇನೆ" – ಎಂದನು. "ನಮಗೇಕೆ ದರ್ಶನವಾಗುವುದಿಲ್ಲ?"– ಎಂದು ಜನರು ಪ್ರಶ್ನಿಸಿದರು. ಅವನು–"ಮೂಗು ಅಡ್ಡಬರುತ್ತಿದೆ. ಮೂಗನ್ನು ಕತ್ತರಿಸಿ ಹಾಕಿದರೆ ನಾರಾಯಣನು ಕಾಣಿಸುತ್ತಾನೆ; ಇಲ್ಲದಿದ್ದರೆ, ಇಲ್ಲ".–ಎಂದು ಹೇಳಿದನು. ಅವರಲ್ಲಿ ಯಾವನೋ ಒಬ್ಬ ಮೂರ್ಖನು –"ಮೂಗು ಹೋದರೆ ಹೋಗಲಿ; ಆದರೆ, ನಾರಾಯಣನ ದರ್ಶನವನ್ನಂತೂ ಅವಶ್ಯವಾಗಿಯೂ ಮಾಡಲೇಬೇಕು"–ಎಂದು ಬಯಸಿದನು. ಅವನು "ನನ್ನ ಮೂಗನ್ನು ಕತ್ತರಿಸು; ನಾರಾಯಣನನ್ನು ತೋರಿಸು".– ಎಂದನು. ಅವನು ಅವನ ಮೂಗನ್ನು ಕತ್ತರಿಸಿ, ಕಿವಿಯಲ್ಲಿ–"ನೀನೂ ಹೀಗೆಯೇ ಮಾಡು. ಇಲ್ಲದಿದ್ದರೆ ನನ್ನ ಮತ್ತು ನಿನ್ನ ಉಪಹಾಸವಾದೀತು". ಎಂದು ಹೇಳಿದನು. ಅವನೂ ಕೂಡ–"ಈಗ ಮೂಗಂತೂ ಬರುವುದಿಲ್ಲ; ಆದುದರಿಂದ ಹೀಗೆಯೇ ಹೇಳುವುದು ಸರಿ". ಎಂದು ಭಾವಿಸಿದನು. ಆಗಲಂತೂ ಅವನೂ ಕೂಡ ಅಲ್ಲಿ ಅವನ ಹಾಗೆಯೇ ಕುಣಿಯಲೂ, ಕುಪ್ಪಳಿಸಲೂ, ಹಾಡಲೂ, ವಾದ್ಯಬಾರಿಸಲೂ, ನಗಲೂ ಮತ್ತು 'ನನಗೂ ನಾರಾಯಣನು ಕಾಣಿಸುತ್ತಾನೆ'– ಎನ್ನಲೂ ಆರಂಭಿಸಿದನು.

ಹಾಗೆ ಆಗುತ್ತಾ ಆಗುತ್ತಾ ಒಂದು ಸಾವಿರ ಜನರ ಗುಂಪು ಕೂಡಿತು ಮತ್ತು ಬಹಳ ಕೋಲಾಹಲವೆದ್ದಿತು. ಮತ್ತು ತಮ್ಮ ಸಂಪ್ರದಾಯಕ್ಕೆ "ನಾರಾಯಣದರ್ಶೀ" ಎಂದು ಹೆಸರಿಟ್ಟರು. ಯಾವನೋ ಮೂರ್ಖರಾಜನು ಇದನ್ನು ಕೇಳಿ, ಅವರನ್ನು ಕರೆದನು. ರಾಜನು ಅವರ ಬಳಿ ಯಾವಾಗ ಹೋದನೋ, ಆಗ ಅವರು ಬಹಳ ಬಹಳ ಕುಣಿಯಲೂ, ಕುಪ್ಪಳಿಸಲೂ, ನಗಲೂ ಆರಂಭಿಸದರು. ಆಗ ರಾಜನು –"ಇದೇನು ಸಂಗತಿ?" ಎಂದು ಪ್ರಶ್ನಿಸಿದನು. ಅವರು –'ಸಾಕ್ಷಾತ್ ನಾರಾಯಣ ನಮಗೆ ಕಾಣಿಸುತ್ತಾನೆ'.– ಎಂದರು.

**ರಾಜಃ**– ನಮಗೇಕೆ ಕಾಣಿಸುವುದಿಲ್ಲ?

**ನಾರಾಯಣದರ್ಶಿಃ**– ಯಾವತನಕ ಮೂಗಿರುವುದೋ ಆತನಕ ಕಾಣಿಸನು. ಮತ್ತು ಯಾವಾಗ ಮೂಗನ್ನು ಛೇದನಮಾಡಿಸಿಕೊಳ್ಳುವೆಯೋ, ಆಗ ನಾರಾಯಣನು ಪ್ರತ್ಯಕ್ಷವಾಗಿ ಕಾಣಿಸುವನು.

ಈ ಮಾತು ಸರಿಯೆಂದು ಆ ರಾಜನು ಆಲೋಚಿಸಿದನು. ರಾಜನು "ಜ್ಯೋತಿಷಿಗಳೇ! ಮುಹೂರ್ತ ನೋಡಿರಿ". ಎಂದನು. ಜ್ಯೋತಿಷಿಗಳು– "ಆಜ್ಞೆಯಂತೆಯೇ, ಅನ್ನದಾತಾ! ದಶಮಿಯ ದಿನ ಪ್ರಾತಃಕಾಲ ಎಂಟು ಗಂಟೆಗೆ ಮೂಗನ್ನು ಛೇದನ ಮಾಡಿಸುವುದಕ್ಕೆ ಮತ್ತು ನಾರಾಯಣನ ದರ್ಶನಮಾಡುವುದಕ್ಕೆ ಬಹಳ ಪ್ರಶಸ್ತವಾದ ಮುಹೂರ್ತವಿದೆ".– ಎಂದರು.

ಭಲೇ! ಪೋಪ್ ಮಹಾಶಯರೇ! ತಮ್ಮ ಗ್ರಂಥದಲ್ಲಿ ಮೂಗನ್ನು ಛೇದನ ಮಾಡಿಸವ ಮುಹೂರ್ತವನ್ನು ಕೂಡ ಬರೆದಿಟ್ಟಿರಿ! ಯಾವಾಗ ರಾಜನಿಗೆ ಬಯಕೆ ಹುಟ್ಟಿತೋ, ಮತ್ತು ಯಾವಾಗ ಆ ಸಹಸ್ರಮಂದಿ ಮೂಗುಹರಕರಿಗೆ ಭೋಜನದ ವ್ಯವಸ್ಥೆ ಮಾಡಲ್ಪಟ್ಟಿತೋ, ಆಗಲಂತೂ ಅವರು ಬಹಳ ಪ್ರಸನ್ನರಾಗಿ, ಕುಣಿಯಲೂ ಜಿಗಿಯಲೂ ಮತ್ತು ಹಾಡಲೂ ಆರಂಭ ಮಾಡಿಬಿಟ್ಟರು. ಈ ವರ್ತನೆಯು ದಿವಾನನೇ ಮೊದಲಾದ ಅಲ್ಪ ಸ್ವಲ್ಪ ಬುದ್ಧಿಯುಳ್ಳವರಿಗೆ ಒಪ್ಪಿಗೆಯಾಗಲಿಲ್ಲ.

ರಾಜನ ಬಳಿ ನಾಲ್ಕು ಪೀಳಿಗೆಗಳಷ್ಟು ವೃದ್ಧನಾದ, ೯೦ ವರ್ಷ ವಯಸ್ಸಿನ ದಿವಾನನಿದ್ದನು. ಆ ಕಾಲದಲ್ಲಿ ದಿವಾನನಾಗಿದ್ದ ಅವನ ಮೊಮ್ಮಗನ ಮಗನು ಅವನ ಬಳಿ ಹೋಗಿ, ಸುದ್ದಿಯನ್ನು ಹೇಳಿದನು. ಆಗ ವೃದ್ಧನು–"ಧೂರ್ತಜನರು! ನೀನು ನನ್ನನ್ನು ರಾಜನ ಬಳಿ ಕರೆದುಕೊಂಡು ಹೋಗು".–ಎಂದನು. ಅವನು ಕರೆದೊಯ್ದನು. ಕುಳಿತುಕೊಳ್ಳುವಾಗ ರಾಜನು ಬಹಳ ಹರ್ಷಿತನಾಗಿ ಆ ಮೂಗುಹರಕರ ಮಾತುಗಳನ್ನು ಹೇಳಿದನು. ದಿವಾನನು– "ಕೇಳಿರಿ, ಮಹಾರಾಜರೇ! ಇಷ್ಟು ಅವಸರಪಡಬಾರದು. ಪರೀಕ್ಷಿಸದೆಯೇ ಕೆಲಸಮಾಡಿದರೆ ಪಶ್ಚಾತ್ತಾಪ ಪಡಬೇಕಾಗುವುದು"–ಎಂದನು.

**ರಾಜಃ**– ಈ ಸಾವಿರ ಜನರೂ ಸುಳ್ಳನ್ನು ಹೇಳುತ್ತಿರಲಾದೀತೇ?

**ದಿವಾನಃ**– ಸುಳ್ಳಾಡಲಿ ಅಥವಾ ನಿಜ ಹೇಳಲಿ; ಪರೀಕ್ಷಿಸದೆ ದಿಟ, ಸಟೆ ಎಂದು ಹೇಗೆ ಹೇಳಬಲ್ಲೆವು?

**ರಾಜಃ**– ಪರೀಕ್ಷೆಯನ್ನು ಯಾವ ರೀತಿ ಮಾಡಬೇಕು?

**ದಿವಾನ:**– ವಿದ್ಯೆ, ಸೃಷ್ಟಿಕ್ರಮ, ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ.

**ರಾಜ :**– ಯಾವನು ಓದಿಲ್ಲವೋ, ಅವನೆಂತು ಪರೀಕ್ಷಿಸಬೇಕು?

**ದಿವಾನ:**– ವಿದ್ವಾಂಸರ ಸಂಗದಿಂದ ಜ್ಞಾನವನ್ನು ವರ್ಧಿಸಿಕೊಂಡು.

**ರಾಜ :**– ವಿದ್ವಾಂಸನು ಸಿಕ್ಕದೇ ಇದ್ದರೆ?

**ದಿವಾನ:**– ಪುರುಷಾರ್ಥಿಗೆ ಯಾರ ವಿಷಯವೂ ದುರ್ಲಭವಲ್ಲ.

**ರಾಜ:**– ಹಾಗಾದರೆ ತಾವೇ ಹೇಳಿರಿ. ಹೇಗೆ ಮಾಡಿದರಾದೀತು?

**ದಿವಾನ:**– ನಾನು ವೃದ್ಧನು. ಹಾಗೂ ಮನೆಯಲ್ಲಿ ಕುಳಿತಿರುತ್ತೇನೆ ಮತ್ತು ಇನ್ನು ಬದುಕಿರುವುದೂ ಕೆಲವೇ ದಿನಗಳಷ್ಟು ಕಾಲ. ಆದುದರಿಂದ ಮೊಲು ನಾನು ಪರೀಕ್ಷೆಮಾಡಿಕೊಳ್ಳುವೆನು. ಅದರ ನಂತರ, ಹೇಗೆ ಉಚಿತವೆಂದು ತಿಳಿಯುವಿರೋ, ಹಾಗೆ ಮಾಡಿರಿ.

**ರಾಜ:**– ಬಹಳ ಒಳ್ಳೆಯ ಮಾತು. ಜ್ಯೋತಿಷಿಗಳೇ! ದಿವಾನರಿಗಾಗಿ ಮುಹೂರ್ತ ನೋಡಿರಿ.

**ಜ್ಯೋತಿಷಿ:**– ಮಹಾರಾಜರ ಅಪ್ಪಣೆಯಂತೆ. ಇದೇ ಶುಕ್ಲಪಂಚಮೀ ಹತ್ತು ಗಂಟೆಯ ಮುಹೂರ್ತ ಪ್ರಶಸ್ತವಾಗಿದೆ.

ಪಂಚಮೀ ಯಾವಾಗ ಬಂದಿತೋ, ಆಗ ರಾಜನ ಬಳಿಗೆ ಎಂಟು ಘಂಟೆಗೆ ವೃದ್ಧ ದಿವಾನರು ಹೋಗಿ, "ಸಾವಿರ, ಎರಡು ಸಾವಿರ ಸೈನಿಕರನ್ನು ಕರೆದುಕೊಂಡು ಹೊರಡಬೇಕು".–ಎಂದರು.

**ರಾಜ:**– ಅಲ್ಲಿ ಸೈನ್ಯಕ್ಕೇನು ಕೆಲಸವಿದೆ?

**ದಿವಾನ:**– ತಮಗೆ ರಾಜ್ಯವ್ಯವಸ್ಥೆಯ ತಿಳುವಳಿಕೆಯಿಲ್ಲ. ಹೇಗೆ ನಾನು ಹೇಳುತ್ತೇನೋ, ಹಾಗೆ ಮಾಡಿರಿ.

**ರಾಜ :**– ಒಳ್ಳಿತು. ಹೋಗು ಸೋದರ! ಸೈನ್ಯಸಿದ್ಧವಾಗಲೆಂದನು. ಒಂಬತ್ತೂವರೆಗೆ ಸವಾರನಾಗಿ ರಾಜನು ಎಲ್ಲರನ್ನೂ ಕರೆದುಕೊಂಡು ಹೋದನು. ಅವರನ್ನು ನೋಡಿ ಮೂಗುಹರಕರು ಕುಣಿಯಲೂ, ಹಾಡಲೂ ಆರಂಭಿಸಿದರು. ರಾಜನು ಹೋಗಿ ಕುಳಿತನು. ಯಾವನು ಈ ಸಂಪ್ರದಾಯವನ್ನು ಪ್ರಚಲಿತಗೊಳಿಸಿದ್ದನೋ, ಯಾವನ ಮೂಗು ಮೊದಲು ಕತ್ತರಿಸಲ್ಪಟ್ಟಿದ್ದಿತೋ, ಅವನು ಆ ಮಹಂತನನ್ನು ಕರೆದು – "ಇಂದು ನಮ್ಮ ದಿವಾನರಿಗೆ ನಾರಾಯಣನ ದರ್ಶನ ಮಾಡಿಸಿರಿ".– ಎಂದು ಹೇಳಿದನು. ಅವನು 'ಒಳ್ಳೆಯದು' ಎಂದನು. ಹತ್ತು ಘಂಟೆಯ ವೇಳೆ ಯಾವಾಗ ಬಂದಿತೋ, ಆಗ ಒಂದು ತಟ್ಟೆಯನ್ನು ಪುರುಷನೊಬ್ಬನು ಮೂಗಿನ ಕೆಳಗೆ ಹಿಡಿದನು. ಅವನು ಚೂಪಾದ ಚಾಕುವನ್ನು ತೆಗೆದುಕೊಂಡು, ಮೂಗನ್ನು ಕತ್ತರಿಸಿ, ತಟ್ಟೆಯಲ್ಲಿ ಹಾಕಿದನು. ಮತ್ತು ದಿವಾನರ ಮೂಗಿನಿಂದ ರಕ್ತದಧಾರೆ ಸುರಿಯತೊಡಗಿತು. ದಿವಾನರ ಮುಖ ಮಲಿನವಾಯಿತು. ಮತ್ತು ಆ ಧೂರ್ತನು ದಿವಾನರ ಕಿವಿಯಲ್ಲಿ – "ತಾವೂ ನಕ್ಕು ಎಲ್ಲರಿಗೂ, 'ಈಗ ನನಗೆ ನಾರಾಯಣನು ಕಾಣಿಸುತ್ತಾನೆ'.–ಎಂದು ಹೇಳಿರಿ. ಈಗ ಕತ್ತರಿಸಿ ಹೋದ ಮೂಗು ಮತ್ತೆ ಬಾರದು. ಹೀಗೆ ಹೇಳದೇ ಇದ್ದರೆ, ನಿಮಗೆ ಬಹಳ ಅಪಹಾಸ್ಯವಾಗುವುದು. ಜನರೆಲ್ಲಾ ಗೇಲಿ ಮಾಡುವರು".– ಎಂದು ಮಂತ್ರೋಪದೇಶಮಾಡಿದನು. ಅವನು ಇಷ್ಟು ಹೇಳಿ ಬೇರೆಯಾದನು. ಮತ್ತು ದಿವಾನರು ಕರವಸ್ತ್ರವನ್ನು ಮೂಗಿಗೆ ಅಡ್ಡವಾಗಿ ಹಿಡಿದುಕೊಂಡರು. ಯಾವಾಗ ದಿವಾನರನ್ನು ರಾಜನು–'ಹೇಳಿರಿ, ನಾರಾಯಣನು ಕಾಣಿಸುತ್ತಾನೋ ಅಥವಾ ಇಲ್ಲವೋ?' ಎಂದು ಕೇಳಿದನೋ, ಆಗ ದಿವಾನರು ರಾಜನ ಕಿವಿಯಲ್ಲಿ –"ಏನೂ ಕಾಣಿಸುವುದಿಲ್ಲ. ವ್ಯರ್ಥವಾಗಿ ಈ ಧೂರ್ತನು ಸಾವಿರಾರು ಜನರನ್ನು ಹಾಳುಮಾಡಿದನು".– ಎಂದರು. ರಾಜರು ದಿವಾನರನ್ನು–"ಈಗ ಏನು ಮಾಡಬೇಕು?" ಎಂದು ಕೇಳಿದನು, ದಿವಾನರು–"ಇವರನ್ನು ಹಿಡಿದು ಕಠಿಣ ಶಿಕ್ಷೆಕೊಡಬೇಕು. ಎಂದಿನವರೆಗೆ ಬದುಕಿರುವರೋ ಅಂದಿನವರೆಗೆ ಕಾರಾಗಾರದಲ್ಲಿಡಬೇಕು. ಮತ್ತು ಯಾವನು ಇವರೆಲ್ಲರನ್ನೂ ಹಾಳುಮಾಡಿದ್ದಾನೋ; ಈ ದುಷ್ಟನನ್ನು ಕತ್ತೆಯ ಮೇಲೇರಿಸಿ, ಬಹಳ ದುರ್ದಶೆಯಲ್ಲಿಟ್ಟು ಕೊಲ್ಲಬೇಕು".– ಎಂದರು. ಯಾವಾಗ ರಾಜನೂ, ದಿವಾನರೂ ಕಿವಿಯಲ್ಲಿ ಮಾತನಾಡತೊಡಗಿದರೋ, ಆಗ ಅವರು ಹೆದರಿ ಓಡಿಹೋಗವ ಸನ್ನಾಹವನ್ನು ಮಾಡಿದರು, ಆದರೆ ನಾಲ್ಕು ದಿಕ್ಕಿನಲ್ಲಿಯೂ ಸೈನ್ಯವು ಮುತ್ತಿಹಾಕಿದ್ದಿತು; ಓಡಿಹೋಗಲು ಆಗಲಿಲ್ಲ. ರಾಜನು–"ಎಲ್ಲರನ್ನೂ ಹಿಡಿದು ಬೇಡಿಗಳನ್ನು ಹಾಕಿರಿ. ಮತ್ತು ಈ ದುಷ್ಟನ ಮುಖಕ್ಕೆ ಮಸಿ ಬಳೆದು, ಕತ್ತೆಯ ಮೇಲೆ ಕುಳ್ಳಿರಿಸಿ, ಇವನ ಕೊರಳಿಗೆ ಹರಿದ ಪಾದರಕ್ಷೆಗಳ ಹಾರವನ್ನು ಹಾಕಿ, ಎಲ್ಲೆಡೆಯೂ ತಿರುಗಾಡಿಸಿ, ಹುಡುಗರಿಂದ ಇವನಮೇಲೆ ಮಣ್ಣು–ಬೂದಿಗಳನ್ನೆರಚಿಸಿ, ಚೌಕ–ಚೌಕದಲ್ಲಿಯೂ ಎಕ್ಕಡಗಳಿಂದ ಹೊಡೆಯಿಸಿ, ನಾಯಿಗಳಿಂದ ಕಚ್ಚಿಸಿ, ಸಾಯಿಸಿಬಿಡಬೇಕು. ಹೀಗೆ ಮಾಡದೇ ಹೋದರೆ, ಮತ್ತೆ ಬೇರೆಯವರೂ ಕೂಡ ಇಂತಹ ಕೆಲಸಮಾಡಲು

ಹೆದರುವುದಿಲ್ಲ".-ಎಂದು ಅಪ್ಪಣೆ ಮಾಡಿದನು. ಹೀಗೆ ಮಾಡಿದುದರಿಂದ ಮೂಗಹರಕರ ಸಂಪ್ರದಾಯ ಕೊನೆಗೊಂಡಿತು. ಹೀಗೆಯೇ ವೇದವಿರೋಧಿಗಳೆಲ್ಲರೂ ಅನ್ಯರ ಧನಹರಣದಲ್ಲಿ ಬಹಳ ಚತುರರಾಗಿರುತ್ತಾರೆ. ಇದು ಸಂಪ್ರದಾಯಗಳ ಲೀಲೆಯಾಗಿದೆ.

ಈ ಸ್ವಾಮಿನಾರಾಯಣ ಮತದವರು ಧನಾಪಹಾರಿಗಳು; ಛಲಕಪಟಯುಕ್ತವಾದ ಕಾರ್ಯವನ್ನು ಮಾಡುತ್ತಾರೆ. ಎಷ್ಟೋ ಜನರು ಮೂರ್ಖರನ್ನು ದಾರಿತಪ್ಪಿಸಲು ಸಾಯುವ ಸಮಯದಲ್ಲಿ – "ಬಿಳಿಯ ಕುದುರೆಯ ಮೇಲೆ ಕುಳಿತು ಸಹಜಾನಂದರು ಮುಕ್ತಿಗೆ ಕರೆದೊಯ್ಯಲು ಬಂದಿದ್ದಾರೆ. ಮತ್ತು ದಿನವೂ ಈ ಮಂದಿರಕ್ಕೆ ಒಂದು ಸಾರಿ ಬಂದು ಹೋಗುತ್ತಾರೆ"–ಎನ್ನುವುದೂ ಉಂಟು. ಜಾತ್ರೆ ಸೇರಿದಾಗ ಮಂದಿರದೊಳಗೆ ಪೂಜಾರಿಗಳಿರುತ್ತಾರೆ ಮತ್ತು ಕೆಳಗೆ ಅಂಗಡಿಯಿಟ್ಟಿರುತ್ತಾರೆ. ಮಂದಿರದೊಳಗಿನಿಂದ ಅಂಗಡಿಗೆ ಹೋಗುವ ಕಂಡಿಯೊಂದನ್ನಿಡುತ್ತಾರೆ. ಯಾವನಾದರೂ ತೆಂಗಿನಕಾಯಿಯನ್ನು ಅರ್ಪಿಸಿದರೆ, ಅದನ್ನೇ ಅಂಗಡಿಗೆ ಎಸೆದರು. ಅಂದರೆ ಇದೇ ರೀತಿ ಒಂದೇ ತೆಂಗಿನಕಾಯಿ ಸಾವಿರ ಸಾರಿ ಮಾರಲ್ಪಡುತ್ತದೆ. ಹೀಗೆಯೇ ಎಲ್ಲ ಪದಾರ್ಥಗಳನ್ನೂ ಮಾರುತ್ತಾರೆ. ಯಾವ ಜಾತಿಯ ಸಾಧುವಾಗಿರುತ್ತಾನೋ, ಅವನಿಂದ ಅಂತಹ ಕೆಲಸವನ್ನೇ ಮಾಡಿಸುತ್ತಾರೆ. ಉದಾಹರಣೆಗಾಗಿ, ನಾಯಿಂದನಾಗಿದ್ದರೆ ಅವನಿಂದ ನಾಯಿನಂದನ, ಕುಂಬಾರನಾಗಿದ್ದರೆ ಕುಂಬಾರನ, ಶಿಲ್ಪಿಯಾಗಿದ್ದರೆ ಶಿಲ್ಪಿಯ, ವೈಶ್ಯನಾಗಿದ್ದರೆ ವೈಶ್ಯನ ಮತ್ತು ಅಜ್ಞಾನಿಯಾಗಿದ್ರೆ ಅಜ್ಞಾನಿಗಳಿಗೆ ಅರ್ಹವಾದ ಕೆಲಸವನ್ನೇ ಮಾಡಿಸಿಕೊಳ್ಳುತ್ತಾರೆ. ತಮ್ಮ ಅನುಯಾಯಿಗಳ ಮೇಲೆ ಒಂದು ತೆರಿಗೆಯನ್ನು ವಿಧಿಸಿಟ್ಟಿದ್ದಾರೆ. ಲಕ್ಷಾಂತರ–ಕೋಟ್ಯಂತರ ರೂಪಾಯಿಗಳನ್ನು ವಂಚನೆಮಾಡಿ ಒಂದುಗೂಡಿಸಿದ್ದಾರೆ. ಮತ್ತು ಶೇಖರಿಸುತ್ತಾ ಹೋಗುತ್ತಾರೆ. ಯಾವನು ಗದ್ದುಗೆಯ ಮೇಲೆ ಏರುತ್ತಾನೋ, ಅವನು ಗೃಹಸ್ಥನಾಗಿ ವಿವಾಹ ಮಾಡಿಕೊಳ್ಳುತ್ತಾನೆ. ಒಡವೆ ಮೊದಲಾದುವನ್ನು ಧರಿಸುತ್ತಾನೆ. ಎಲ್ಲಿಯಾದರೂ ಸತ್ಕಾರಸಮಾರಂಭ ನಡೆದಲ್ಲಿ ಅಲ್ಲಿ ಗೋಕುಲೀಯರಂತೆಯೇ ಗೋಸಾಯೀ ಮಹಾರಾಜರು, ಸೊಸೆಯವರು–ಈ ಮೊದಲಾದ ಹೆಸರುಗಳಿಂದ ಕಾಣಿಕೆ–ಪೂಜೆ ಪಡೆದುಕೊಳ್ಳುತ್ತಾರೆ.

ತಮ್ಮನ್ನು 'ಸತ್ಸಂಗಿ'ಗಳೆಂದೂ, ಮತ್ತು ಬೇರೆ ಮತದವರನ್ನು 'ಕುಸಂಗಿ'ಗಳೆಂದೂ ಹೇಳುತ್ತಾರೆ. ತಮ್ಮ ಹೊರತು, ಬೇರೆಯವನು ಎಂತಹ ಉತ್ತಮ ಧಾರ್ಮಿಕ ಪುರುಷನೇ ಆಗಿರಲೊಲ್ಲನೇಕೆ? ಆದರೆ ಅವನ ಮನ್ನಣೆಯನ್ನು ಮತ್ತು ಸೇವೆಯನ್ನು ಎಂದಿಗೂ ಮಾಡುವುದಿಲ್ಲ. ಏಕೆಂದರೆ–ಅನ್ಯ ಮತಸ್ಥನ ಸೇವೆ ಮಾಡುವುದರಲ್ಲಿ ಪಾಪವಿದೆಯೆಂದು ಎಣಿಸುತ್ತಾರೆ. ಪ್ರಕಟರೂಪದಲ್ಲಿ ಅವರ ಸಾಧುಗಳು ನಾರಿಯರ ಮುಖವನ್ನು ನೋಡುವುದಿಲ್ಲ; ಆದರೆ, ಗುಪ್ತವಾಗಿ ಏನು ಲೀಲೆ ನಡೆಯುತ್ತಿರಬಹುದೋ, ತಿಳಿಯದು. ಇದರ ಪ್ರಸಿದ್ಧಿ ಎಲ್ಲೆಡೆಯೂ ಕಡಿಮೆಯಿದೆ. ಒಂದೊಂದೆಡೆ ಸಾಧುಗಳ ಪರಸ್ತ್ರೀಗಮನ–ಮೊದಲಾದ ಲೀಲೆ ಹೊರಬಿದ್ದೂ ಇದೆ. ಮತ್ತು ಅವರಲ್ಲಿ, ದೊಡ್ಡ ದೊಡ್ಡ ಸ್ಥಿತಿಯುಳ್ಳವರು ಮೃತರಾಗುವಾಗ ಅವರ ಶವಗಳನ್ನು ಗುಪ್ತವಾಗಿ ಭಾವಿಯಲ್ಲೆಸೆದು, "ಇಂತಹ ಮಹಾರಾಜರು ಸದೇಹರಾಗಿ ವೈಕುಂಠಕ್ಕೆ ಹೋದರು; ಸಹಜಾನಂದರು ಬಂದು ಕರೆದೊಯ್ದರು, ನಾವು–'ಮಹಾರಾಜ್! ಇವರನ್ನು ಕರೆದೊಯ್ಯಬೇಡಿರಿ. ಏಕೆಂದರೆ–ಈ ಮಹಾತ್ಮರು ಇಲ್ಲಿರುವುದು ಒಳ್ಳೆಯದು'–ಎಂದು ಬಹಳವಾಗಿ ಪ್ರಾರ್ಥಿಸಿದೆವು. ಸಹಜಾನಂದರು–"ಇಲ್ಲ! ಈಗ ವೈಕುಂಠದಲ್ಲಿ ಇವರ ಅವಶ್ಯಕತೆ ಬಹಳವಿದೆ. ಆದುದರಿಂದ ಕರೆದೊಯ್ಯುತ್ತೇವೆ".-ಎಂದು ಹೇಳಿದರು. ನಾವು ನಮ್ಮ ಕಣ್ಣುಗಳಿಂದ ಸಹಜಾನಂದರನ್ನೂ, ಮತ್ತು ವಿಮಾನವನ್ನೂ ಕೂಡ ನೋಡಿದೆವು ಮತ್ತು ಮೃತರಾಗಲಿದ್ದವರನ್ನು ವಿಮಾನದಲ್ಲಿ ಕೂಡಿಸಿದೆವು. ಮೇಲಕ್ಕೆ ಕರೆದುಕೊಂಡು ಹೋದರು ಮತ್ತು ಹೂಮಳೆ ಗರೆಯುತ್ತಾ ಹೋದರು".- ಎಂದು ಪ್ರಸಿದ್ಧಿಪಡಿಸುತ್ತಾರೆ. ಮತ್ತು ಯಾವಾಗ ಯಾವನಾದರೂ ಸಾಧುವು ರೋಗಿಯಾಗಿ, ಉಳಿದುಕೊಳ್ಳುವ ಭರವಸೆಯಿರುವುದಿಲ್ಲವೋ, ಆಗ "ನಾನು ನಾಳೆ ರಾತ್ರಿ ವೈಕುಂಠಕ್ಕೆ ತೆರಳುವೆನು".-ಎಂದು ಹೇಳುತ್ತಾನೆ. ಆ ರಾತ್ರಿ ಅವನ ಪ್ರಾಣ ಹೋಗದಿದ್ದರೆ ಮತ್ತು ಮೂರ್ಛಿತನಾಗಿದ್ದರೆ, ಆಗಲೂ ಭಾವಿಯಲ್ಲಿ ಎಸೆದುಬಿಡುತ್ತಾರೆ–ಎಂದು ಕೇಳಿದ್ದೇವೆ. ಏಕೆಂದರೆ–ಆ ರಾತ್ರಿ ಎಸೆಯದಿದ್ದರೆ, ಸುಳ್ಳುಗಾರರೆಂದಾಗುತ್ತಾರೆ. ಆದುದರಿಂದ, ಇಂತಹ ಕಾರ್ಯ ಮಾಡುತ್ತಿರಬಹುದು.

ಹೀಗೆಯೇ ಗೋಕುಲೀಯ ಗೋಸಾಯಿ ಯಾವಾಗ ಮೃತನಾಗುತ್ತಾನೋ, ಆಗ ಅವನ ಶಿಷ್ಯರು–"ಗೋಸಾಯಿಗಳು ಲೀಲಾವಿಸ್ತಾರಮಾಡಿ ಹೋದರು".- ಎಂದು ಹೇಳುತ್ತಾರೆ. ಈ ಗೋಸಾಯಿಗಳ ಮತ್ತು ಸ್ವಾಮೀನಾರಾಯಣ ಮತದವರ ಉಪದೇಶ ಮಾಡಲ್ಪಡುವ ಮಂತ್ರ " **ಶ್ರೀ ಕೃಷ್ಣಃ ಶರಣಂ ಮಮ**".- ಎಂಬುದು ಒಂದೇ ಆಗಿದೆ. ಇದಕ್ಕೆ –"ಶ್ರೀಕೃಷ್ಣನು ನನ್ನ ಶರಣನಾಗಿದ್ದಾನೆ; ಎಂದರೆ, ನಾನು ಶ್ರೀಕೃಷ್ಣನಿಗೆ ಶರಣಾಗತನಾಗಿದ್ದೇನೆ".-ಎಂದು ಅರ್ಥಮಾಡುತ್ತಾರೆ. ಆದರೆ ಇದರ ಅರ್ಥ–"ಶ್ರೀಕೃಷ್ಣನು ನನ್ನ ಶರಣನ್ನು ಪ್ರಾಪ್ತಮಾಡಿಕೊಳ್ಳಲಿ; ಎಂದರೆ ನನಗೆ ಶರಣಾಗತನಾಗಲಿ"–ಎಂದೂ ಕೂಡ ಆಗಬಲ್ಲುದು.

ಈ ಮತಗಳು ಎಷ್ಟಿವೆಯೋ, ಅವು ವಿದ್ಯಾಹೀನವಾಗಿರುವುದರಿಂದ ಯದ್ವಾ ತದ್ವಾ ಶಾಸ್ತ್ರವಿರುದ್ಧವಾದ ವಾಕ್ಯರಚನೆ ಮಾಡುತ್ತಾರೆ. ಏಕೆಂದರೆ-ಇವರಿಗೆ ವಿದ್ಯೆಯ ನಿಯಮದ ಪರಿಚಯವಿಲ್ಲ.

**ಪ್ರಶ್ನೆ:**- ಮಾಧ್ವಮತವಾದರೂ ಶ್ರೇಷ್ಠವೋ?

**ಉತ್ತರ:**- ಹೇಗೆ ಅನ್ಯಮತೀಯರಿದ್ದಾರೋ, ಹಾಗೆಯೇ ಮಾಧ್ವರೂ ಇದ್ದಾರೆ. ಏಕೆಂದರೆ, ಇವರೂ ಚಕ್ರಾಂಕಿತರಾಗುತ್ತಾರೆ,[೨೨೫] ಎಂದರೆ ತಪ್ತಮುದ್ರಾಧಾರಣೆ ಮಾಡುತ್ತಾರೆ. ಇವರಲ್ಲಿ ಅನ್ಯ ಚಕ್ರಾಂಕಿತರಿಗಿಂತ ವಿಶೇಷವೇನೆಂದರೆ, ಅದಿಷ್ಟೇ ಆಗಿದೆ:- ರಾಮಾನುಜೀಯರು ಒಂದು ಸಾರಿ ಚಕ್ರಾಂಕಿತರಾಗುತ್ತಾರೆ ಮತ್ತು ಮಾಧ್ವರು ವರ್ಷ-ವರ್ಷವೂ ಮತ್ತೆ ಮತ್ತೆ ತಪ್ತಮುದ್ರಾಧಾರಣೆಮಾಡಿಸಿಕೊಳ್ಳುತ್ತಾ[೨೨೬] ಹೋಗುತ್ತಾರೆ. ಚಕ್ರಾಂಕಿತರು ಹಣೆಯ ಮೇಲೆ ಹಳದಿಯ ರೇಖೆ (ನಾಮ) ಯನ್ನೂ, ಮಾಧ್ವರು ಕಪ್ಪು ರೇಖೆಯನ್ನೂ ಹಾಕಿಕೊಳ್ಳುತ್ತಾರೆ. ಒಬ್ಬ ಮಾಧ್ವ ಪಂಡಿತರೊಂದಿಗೆ ಯಾವನೋ ಒಬ್ಬ ಮಹಾತ್ಮನ ಶಾಸ್ತ್ರಾರ್ಥವಾಗಿದ್ದಿತು.

**ಮಹಾತ್ಮ :**- ನೀವು ಈ ಅಂಗಾರ-ಅಕ್ಷತೆಗಳನ್ನೇಕೆ ಹಾಕಿಕೊಂಡಿರುತ್ತೀರಿ?

**ಪಂಡಿತರು:**- ಇವುಗಳನ್ನು ಹಾಕಿಕೊಳ್ಳುವುದರಿಂದ ನಮಗೆ ವೈಕುಂಠಪ್ರಾಪ್ತಿಯಾಗುವುದು. ಮತ್ತು ಶ್ರೀಕೃಷ್ಣನ ಶರೀರವೂ ಕೂಡ ಶ್ಯಾಮಲವರ್ಣವನ್ನುಳ್ಳದಾಗಿದ್ದಿತು. ಈ ಕಾರಣಗಳಿಂದ ನಾವು ಕಪ್ಪು ಅಂಗಾರವನ್ನಿಟ್ಟುಕೊಳ್ಳುತ್ತೇವೆ.

**ಮಹಾತ್ಮ :**- ಅಂಗಾರ-ಅಕ್ಷತೆಗಳನ್ನಿಟ್ಟುಕೊಳ್ಳುವುದರಿಂದ ವೈಕುಂಠಕ್ಕೆ ತೆರಳುವಿರಾದರೆ, ಸಂಪೂರ್ಣಮುಖವನ್ನೇ ಕಪ್ಪಗೆ ಮಾಡಿಕೊಂಡಲ್ಲಿ, ಎಲ್ಲಿಗೆ ಹೋಗುವಿರಿ? ವೈಕುಂಠವನ್ನೂ ದಾಟಿ ಹೋಗಿಬಿಡುವಿರೇನು?[೨೨೭] ಶ್ರೀಕೃಷ್ಣನ ಸಮಸ್ತ ಶರೀರವೂ

---

೨೨೫. ಎಂದರೆ 'ತಪ್ತ ಮುದ್ರಾಧಾರಣೆ' ಮಾಡುತ್ತಾರೆ.

೨೨೬. ಮೊದಲು, ಶ್ರೀವೈಷ್ಣವರೂ ಮತ್ತು ಮಾಧ್ವ ಮತದ ಸ್ವಾಮಿಗಳೂ ಬಲಾತ್ಕಾರದಿಂದ ಜನರನ್ನು ಹಿಡಿದು ಚಕ್ರಾಂಕಿತರನ್ನಾಗಿ [ಮುದ್ರಾಧಾರಣೆ] ಮಾಡುತ್ತಿದ್ದರು. ಮಕ್ಕಳ ಮೇಲೆ ನಡೆಸುತ್ತಿದ್ದ ಈ ಬಲಾತ್ಕಾರದ ಬಗ್ಗೆ ಈ ನಿರ್ದಯ ಸ್ವಾಮಿಗಳಿಗೂ, ಮಕ್ಕಳ ಮೂರ್ಖ ತಂದೆ, ತಾಯಿಗಳಿಗೂ ಯಾವ ಶಿಕ್ಷೆ ವಿಧಿಸಬೇಕೆಂಬುದನ್ನು ಪರಮಾತ್ಮನೇ ಬಲ್ಲನು ! ಒಂದು ವರ್ಷ, ಆರು ತಿಂಗಳು ಹಸುಳೆಗಳನ್ನು ಸ್ವಾಮಿಗಳ ಮುಂದೆ ಅಂಗಾತನಾಗಿ ಮಲಗಿಸಿ, ಅವುಗಳ ಹೊಟ್ಟೆಯ ಮೇಲೆ ತಪ್ತ ಮುದ್ರೆಯನ್ನು ತಾಯಿ-ತಂದೆಗಳೇ ಒತ್ತಿಸುತ್ತಿದ್ದರು.

ಈ ಸಂದರ್ಭದಲ್ಲಿ ದಯಾನಂದರ ಜೀವನದ ಚರಿತ್ರೆಯ ಘಟನೆಯೊಂದು ಹೀಗಿದೆ.

-ಬರೌಲಿಯ ರಾವ್ ಕರ್ಣಸಿಂಹರು ವೈಷ್ಣವ ಮತದ ದೀಕ್ಷೆಯನ್ನು ತೆಗೆದುಕೊಂಡ ಮೇಲೆ ಎಷ್ಟು ಹಠಿಗಳೂ, ಪಕ್ಷಪಾತಿಗಳೂ ಆಗಿಹೋಗಿದ್ದರೆಂದರೆ, ಅವರ ಅಧೀನಸ್ಥ ರಾದವರೆಲ್ಲರನ್ನೂ ವೈಷ್ಣವರನ್ನಾಗಿ ಮಾಡಬಯಸುತ್ತಿದ್ದರು. ಈ ರಂಗು ಅವರ ಮೇಲೆ ಎಷ್ಟು ಹತ್ತಿತ್ತೆಂದರೆ, ಅವರ ನೌಕರ-ಚಾಕರರೆಲ್ಲರ ಹಣೆ ಮೇಲೆ ತಿಲಕ ಮತ್ತು ಕೊರಳುಗಳಲ್ಲಿ ಸರಗಳು ಬಿದ್ದಿದ್ದವು. ಹಸು, ಎಮ್ಮೆ, ಕುದುರೆಗಳ ಹಣೆಗಳ ಮೇಲೂ ತಿಲಕವು ವಿರಾಜಿಸುತ್ತಿತ್ತು. ಒಂದು ದಿನ ರಾವ್ ಮಹಾಶಯರು ತಮ್ಮ ಪುರೋಹಿತನನ್ನು ಹಿಡಿದುಕೊಂಡು, ಬಲಾತ್ಕಾರದಿಂದ ಚಕ್ರಾಂಕಿತನನ್ನಾಗಿ ಮಾಡಿಬಿಟ್ಟರು. ಅವನು ಹೇಗೋ ತಪ್ಪಿಸಿಕೊಂಡು, ಸ್ವಾಮೀಜಿ ಅವರ ಹತ್ತಿರ ಬಂದು ಅಳುತ್ತಾ ತಮ್ಮ ಗಾಯವನ್ನು ತೋರಿಸಿದರು. ಸ್ವಾಮೀಜೀಯವರು ಅವನನ್ನು ಸಮಾಧಾನ ಪಡಿಸಿ ಅವನ ಗಾಯಕ್ಕೆ ಔಷಧೋಪಚಾರ ಮಾಡಿದರು. ಗಾಯ ಮಾಸುವವರೆಗೂ ಅವನನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು.

-*'ಶ್ರೀಮದ್ದಯಾನಂದ ಪ್ರಕಾಶ'* -*ಸ್ವಾಮೀ ಸತ್ಯಾನಂದ [ ಗಂಗಾ ಕಾಂಡ, ಸರ್ಗ ೧೦]*

೨೨೭. ಸ್ವಾಮಿ ದಯಾನಂದರು ತಮ್ಮ ಗ್ವಾಲಿಯರ್ ಪ್ರವಾಸದ ಸಂದರ್ಭದಲ್ಲಿ ಪ್ರವಚನ ನೀಡುತ್ತಿದ್ದಾಗ, ಹನುಮಂತಾಚಾರ್ಯರೆಂಬ ಮಾಧ್ವ ಪಂಡಿತರೊಬ್ಬರು ಮುಖದ ಮೇಲೆ ಮುಸುಕು ಹಾಕಿಕೊಂಡು ಪ್ರತಿದಿನವೂ ಅವರ ಪ್ರವಚನ ಕೇಳಲು ಬರುತ್ತಿದ್ದರು. [ ಮಾಧ್ವ ಸಂಪ್ರದಾಯದ ಜನರು ದಯಾನಂದರ ಪ್ರವಚನ ಕೇಳುವ ಹನುಮಂತಾಚಾರ್ಯರನ್ನು ಗುರುತಿಸದೇ ಇರಲೆಂದು ಈ ರೀತಿ ಮುಖ ಮುಚ್ಚಿಕೊಂಡಿರಬಹುದು]

ಈ ಮಾಧ್ವ ಪಂಡಿತರು ಏನನ್ನೂ ಮಾತನಾಡುತ್ತಿರಲಿಲ್ಲ. ಪ್ರವಚನ ಮುಗಿದೊಡನೆಯೇ ಹೊರಟು ಹೋಗುತ್ತಿದ್ದರು.

ಒಂದು ಸಲ, ಸ್ವಾಮೀಜೀಯವರಿಂದ ಸಂಸ್ಕೃತದ ಅಶುದ್ಧ ಪ್ರಯೋಗವಾದಾಗ ಮಾತ್ರ ಈ ಮಾಧ್ವ ಪಂಡಿತರು ಅದನ್ನು ಕಂಡು ಹಿಡಿದರು. ಸ್ವಾಮೀಜೀಯವರು ತತ್ ಕ್ಷಣ ಒಪ್ಪಿಕೊಂಡರು.

ಮತ್ತೆ, ಒಮ್ಮೆ, ಸ್ವಾಮೀಜೀಯವರು, ಪ್ರವಚನದಲ್ಲಿ ಮೇಲಿನ ಪ್ರಶ್ನೆಯನ್ನು ಹಾಕಿದರು ಆಗ ಮಾಧ್ವ ಪಂಡಿತರು ಕೋಪಗೊಂಡು ಎದ್ದು ಹೊರಟು ಹೋದರು. ಪುನಃ ಪ್ರವಚನ ಕೇಳಲು ಬರಲಿಲ್ಲ.

ಕಪ್ಪಗಿದ್ದಂತೆ, ನೀವು ಪೂರ್ಣ ಶರೀರವನ್ನೂ ಕಪ್ಪಗೆ ಮಾಡಿಕೊಳ್ಳಿರಿ. ಆಗ, ಶ್ರೀಕೃಷ್ಣನೊಂದಿಗೆ ಸಾದೃಶ್ಯಸಿದ್ಧಿಸುವುದು. ಇಂತಹ ಮಾತುಗಳೇ ತುಂಬಿರುವುದರಿಂದ, ಈ ಮಾಧ್ವಮತವೂ ಮೊದಲು ಹೇಳಿದ ಮತಗಳಂತೆಯೇ ಇದೆ-ಎಂದು ತಿಳಿಯಿರಿ.[೨೨೮]

**ಪ್ರಶ್ನೆ:–** ಲಿಂಗಾಂಕಿತರ (ಲಿಂಗಾಯತರ) ಮತ ಹೇಗೆ ತೋರುತ್ತದೆ?

**ಉತ್ತರ:–** ಚಕ್ರಾಂಕಿತರ ಮತದ ಹಾಗೆಯೇ; ಲಿಂಗಾಂಕಿತರಲ್ಲಿ ಮಹಾದೇವನೊಬ್ಬನನ್ನುಳಿದು ಬೇರೆ ಯಾವನನ್ನೂ ಒಪ್ಪದ ಒಂದು ಮತವೂ ಇದೆ. ಅದು ಚಕ್ರಾಂಕಿತರು ನಾರಾಯಣನೊಬ್ಬನನ್ನುಳಿದು ಅನ್ಯರನ್ನು ಒಪ್ಪದಂತೆಯೇ ಇದೆ. ಇವರಲ್ಲಿ ವಿಶೇಷವೇನೆಂದರೆ, ಲಿಂಗಾಯತರು[೨೨೯] ಕಲ್ಲಿನ ಲಿಂಗವೊಂದನ್ನು ಚಿನ್ನದ ಅಥವಾ ಬೆಳ್ಳಿಯ ಕರಡಿಗೆಯಲ್ಲಿಟ್ಟು, ಕೊರಳಿಗೆ ತಗಲು ಹಾಕಿಕೊಳ್ಳುತ್ತಾರೆ. ನೀರು ಕುಡಿಯುವಾಗಲೂ, ಅದಕ್ಕೆ ತೋರಿಸಿಯೇ ಕುಡಿಯುತ್ತಾರೆ. ಅವರ ಮಂತ್ರವೂ ಶೈವರ ಮಂತ್ರದ ಹಾಗೆಯೇ ಇರುತ್ತದೆ.

## ಈಗ ಬ್ರಾಹ್ಮಸಮಾಜ-ಪ್ರಾರ್ಥನಾಸಮಾಜಗಳ ಗುಣದೋಷ ಕಥನ[೨೩೦]

**ಪ್ರಶ್ನೆ:–** ಬ್ರಾಹ್ಮಸಮಾಜ ಮತ್ತು ಪ್ರಾರ್ಥನಾಸಮಾಜಗಳಾದರೂ ಉತ್ತಮವಾಗಿವೆಯೋ-ಇಲ್ಲವೋ?

**ಉತ್ತರ:–** ಹಲವಾರು ಮಾತುಗಳು ಒಳ್ಳೆಯವಿವೆ; ಮತ್ತು ಅದಕ್ಕಿಂತ ಬಹಳವಾಗಿ ಗ್ರಾಹ್ಯವಲ್ಲದ ಮಾತುಗಳೂ ಇವೆ.

**ಪ್ರಶ್ನೆ :–** ಬ್ರಾಹ್ಮಸಮಾಜ ಮತ್ತು ಪ್ರಾರ್ಥನಾ ಸಮಾಜ ಎಲ್ಲಕ್ಕಿಂತ ಉತ್ತಮವಾಗಿವೆ. ಏಕೆಂದರೆ – ಇವುಗಳ ನಿಯಮಗಳು ಅತ್ಯುತ್ತಮವಾಗಿವೆ.

**ಉತ್ತರ:–** ನಿಯಮಗಳು ಸಮಸ್ತ ಅಂಶಗಳಲ್ಲಿಯೂ ಉತ್ತಮವಾಗಿಲ್ಲ. ಏಕೆಂದರೆ, ವೇದವಿದ್ಯಾವಿಹೀನ ಜನರ ಕಲ್ಪನೆ ಹೇಗೆ ತಾನೇ ಸರ್ವಥಾ ಸತ್ಯವಾಗಿರಬಲ್ಲದು? ಬ್ರಾಹ್ಮ ಸಮಾಜಿಗಳೂ ಮತ್ತು ಪ್ರಾರ್ಥನಾಸಮಾಜಿಗಳೂ ಸ್ವಲ್ಪ ಮಂದಿ ಕ್ರೈಸ್ತರಾಗುವುದನ್ನು ತಡೆದುದು, ಪಾಷಾಣ-ಮೊದಲಾದುವುಗಳ ಮೂರ್ತಿಗಳ ಪೂಜೆಯನ್ನು ಸ್ವಲ್ಪ ಮಟ್ಟಿಗೆ ದೂರೀಕರಿಸಿದರು. ಬೇರೆಯ ಜಾಲಗ್ರಂಥಗಳಿಂದ ಜನರನ್ನು ಸ್ವಲ್ಪದೂರವಿಟ್ಟುದು ಇಂತಹ ವಿಷಯಗಳು ಉತ್ತಮವಾಗಿವೆ.

(೧) ಆದರೆ ಈ ಜನರಲ್ಲಿ ಸ್ವದೇಶಭಕ್ತಿ ಬಹಳ ಕಡಿಮೆಯಿದೆ. ಬಹಳವಾಗಿ ಕ್ರೈಸ್ತರ ಆಚರಣಗಳನ್ನು ತೆಗೆದುಕೊಂಡಿದ್ದಾರೆ. ಖಾದ್ಯ-ಪೇಯಗಳ, ವಿವಾಹ-ಮೊದಲಾದುವುಗಳ ನಿಯಮಗಳನ್ನೂ ಪರಿವರ್ತಿಸಿಬಿಟ್ಟಿದ್ದಾರೆ.

(೨) ತಮ್ಮ ದೇಶದವರ ಪ್ರಶಂಸೆ ಅಥವಾ ಪೂರ್ವಜರ ದೊಡ್ಡಸ್ತಿಕೆಯನ್ನು ಮಾಡುವುದಂತೂ ದೂರವೇ ಉಳಿಯಿತು; ಅದಕ್ಕೆ ಪ್ರತಿಯಾಗಿ ಮನಃಪೂರ್ತಿ ನಿಂದೆ ಮಾಡುತ್ತಾರೆ. ವ್ಯಾಖ್ಯಾನಗಳಲ್ಲಿ ಆಂಗ್ಲರೇ ಮೊದಲಾದ ಕ್ರೈಸ್ತರ ಪ್ರಶಂಸೆಯನ್ನು ಹೃತ್ಪೂರ್ವಕವಾಗಿ ಮಾಡುತ್ತಾರೆ. ಬ್ರಹ್ಮನೇ ಮೊದಲಾದ ಋಷಿಗಳ ಹೆಸರನ್ನೂ ಕೂಡ ಎತ್ತುವುದಿಲ್ಲ. ಅದಕ್ಕೆ ಪ್ರತಿಯಾಗಿ,

---

೨೨೮. "ಜೀವೇಶ್ವರ ಭೇದ" ಎಂಬ ಮುಖ್ಯಾಂಶದಲ್ಲಿ ಶ್ರೀ ಮಧ್ವಾಚಾರ್ಯರ ಮತ್ತು ಮಹರ್ಷಿ ದಯಾನಂದರ ಸಿದ್ಧಾಂತ ಒಂದೇ ಆದರೂ, ಸಾಕಾರೇಶ್ವರವಾದ, ಅವತಾರವಾದ, ತಾರತಮ್ಯವಾದ, ಪ್ರತೀಕೋಪಾಸನೆ, ಮೊದಲಾದ ವಿಷಯಗಳಲ್ಲಿ ಶ್ರೀಮನ್ಮಧ್ವ-ಶ್ರೀ ಮದ್ದಯಾನಂದರ ನಡುವೆ ತುಂಬಲಾಗದಂತಹ ಮತ ಭೇದವಿದೆ. ಮಹಾಭಾರತ-ಪಂಚರಾತ್ರ- ಪುರಾಣಗಳಿಗೂ ವೇದಗಳಷ್ಟೇ ಪ್ರಾಧಾನ್ಯ ನೀಡುವ ಆಚಾರ್ಯ ಮಧ್ವರ, ಹಾಗೂ ಕೇವಲ ವೇದಪ್ರಮಾಣವಾದಿಗಳಾದ ಮಹರ್ಷಿ ದಯಾನಂದರ ನಡುವೆ, ಆಚಾರ್ಯರ ಜಾತಿ ಪದ್ಧತಿಯಂತರ ಭಗವದ್ದ್ರೋಹಕರವೂ, ಮಾನವತ್ವಾಪಹಾರಿಯೂ ಆದ ಘೋರ ಅಭಿಶಾಪದ ಬಗೆಗೆ ಭೇದವಿದ್ದಲ್ಲಿ ಆಶ್ಚರ್ಯವಿಲ್ಲ. ಮಹರ್ಷಿಗಳಿಗೆ ಕೊಲ್ಹಾಪುರಕ್ಕಿಂತ ದಕ್ಷಿಣಕ್ಕೆ ಬರುವ ಅವಕಾಶ ಸಿಕ್ಕಲಿಲ್ಲ. [ಎಂದು ಕಾಣುತ್ತದೆ] ಮತ್ತು ಮಹರ್ಷಿಯವರ ಕಾರ್ಯಕ್ಷೇತ್ರವಾಗಿದ್ದ ಉತ್ತರ ಭಾರತದಲ್ಲಿ ಮಾಧ್ವ ಮತದ ಪ್ರಚಾರವೂ ಇರಲಿಲ್ಲ. ಮಾಧ್ವ ಮತದ ಪ್ರಚಾರವಿರುವ ದಕ್ಷಿಣ ಭಾರತಕ್ಕೆ ಬಂದಿದ್ದಲ್ಲಿ ಮಹರ್ಷಿಯವರು ಇನ್ನೂ ಆಳಕ್ಕಿಳಿದು, ಎಲ್ಲ ದೃಷ್ಟಿಯಿಂದ ಮಾಧ್ವ ಸಂಪ್ರದಾಯದ ಮೇಲೆ ಹೆಚ್ಚು ಪ್ರಕಾಶ ಬೀರುತ್ತಿದ್ದರೆಂಬುದರಲ್ಲಿ ಸಂದೇಹವೇ ಇಲ್ಲ.

ಶ್ರೀ॥ ಮಧ್ವರು ತಮ್ಮ ಋಕ್ಸೂಕ್ತಗಳ ವ್ಯಾಖ್ಯಾನದಲ್ಲಿ ಅಗ್ನಿ ಮೊದಲಾದ ಶಬ್ದಗಳ ಮೇಲೆ ಬರೆದಿರುವ ಭಾಷ್ಯ ಶ್ರೀ॥ ದಯಾನಂದರ ಭಾಷ್ಯದಂತೆಯೇ ಇರುವುದು ಗಮನಾರ್ಹವೇ ಆದ ವಿಷಯವಾಗಿದೆ.

ಹೀಗಿದ್ದರೂ ಕೂಡ, ವ್ಯವಹಾರದಲ್ಲಿ ಪುರಾಣ-ಅವತಾರ-ಮೂರ್ತಿಪೂಜೆ ಮೊದಲಾದುವುಗಳಿಗೆ ಸರ್ವೋಚ್ಚ ಪ್ರಾಶಸ್ತ್ಯವನ್ನಿತ್ತು [ವೇದಗಳನ್ನು ಕಡೆಗಣಿಸಿ], ತಮ್ಮ ಸಂಪ್ರದಾಯದ ಕೋಟೆಯನ್ನು ವಿಶಿಷ್ಟ ರೀತಿಯಲ್ಲಿ ಭದ್ರಪಡಿಸಿಟ್ಟುಕೊಂಡ ಆಚಾರ್ಯರ ವರ್ತನೆ ದ್ವಿಶಿರ-ಗಂಡ-ಭೇರುಂಡ ಪಕ್ಷಿಯಂತಿದೆ.

೨೨೯. ಲಿಂಗಾಯತ ಮತ ಉತ್ತರ ಕರ್ನಾಟಕದಲ್ಲಿ ಪ್ರಾಬಲ್ಯದಲ್ಲಿದೆ. ಈ ಮತಪ್ರವರ್ತಕರು ಬಸವೇಶ್ವರರು.

"ಅಂಗ್ಲರನ್ನುಳಿದರೆ ಸೃಷ್ಟಿಯಲ್ಲಿ ಈ ಪರ್ಯಂತ ಯಾವನೂ ವಿದ್ವಾಂಸನಾಗಲಿಲ್ಲ. ಆರ್ಯಾವರ್ತೀಯ ಜನರು ಸರ್ವದಾ ಮೂರ್ಖರೇ ಆಗುತ್ತಾ ಬಂದಿದ್ದಾರೆ. ಎಂದೂ ಇವರ ಉನ್ನತಿ ಆಗಿಲ್ಲ" – ಎಂದೂ ಹೇಳುತ್ತಾರೆ.

(೩) ವೇದಾದಿಗಳಿಗೆ ಗೌರವಮಾಡುವುದು ದೂರವೇ ಉಳಿಯಿತು. ತದ್ವಿರುದ್ಧ, ನಿಂದಿಸುವುದರಿಂದಲಾದರೂ ದೂರವಿರುವುದಿಲ್ಲ. ಬ್ರಾಹ್ಮಸಮಾಜದ ಉದ್ದೇಶ್ಯದ ಪುಸ್ತಕದಲ್ಲಿ ಸಾಧುಗಳ ಸಂಖ್ಯೆಯಲ್ಲಿ "ಏಸು, ಮೋಸೆಸ್, ಮುಹಮ್ಮದ್, ನಾನಕ್ ಮತ್ತು ಚೈತನ್ಯ"[೨೩೧] –ಎಂದು ಬರೆದಿದ್ದಾರೆ. ಯಾವನೇ ಋಷಿ–ಮಹರ್ಷಿಯ ಹೆಸರನ್ನೂ ಕೂಡ ಬರೆಯಲಿಲ್ಲ. ಇದರಿಂದ ಈ ಜನರು ಯಾರ ಹೆಸರುಗಳನ್ನು ಬರೆದಿದ್ದಾರೋ, ಅವರ ಮತಗಳನ್ನೇ ಅನುಸರಿಸುವ ಮತದವರು ಇವರು–ಎಂದು ತಿಳಿಯಲ್ಪಡುತ್ತದೆ. ಭಲೇ! ಆರ್ಯಾವರ್ತದಲ್ಲಿ ಹುಟ್ಟಿರುವಾಗ ಮತ್ತು ಇದೇ ದೇಶದ ಅನ್ನ–ಜಲಗಳನ್ನು ಸೇವಿಸಿರುವಾಗ, ಈಗಲೂ ಸೇವಿಸುತ್ತಿರುವಾಗ, ತಮ್ಮ ತಾಯಿ, ತಂದೆ, ತಾತ–ಮೊದಲಾದವರ ಮಾರ್ಗವನ್ನು ಬಿಟ್ಟು, ಬೇರೆ ವಿದೇಶಿಯ ಮತಗಳ ಕಡಗೆ ಓಲುವುದು, ಬ್ರಾಹ್ಮಸಮಾಜಿಗಳೂ ಮತ್ತು ಪ್ರಾರ್ಥನಾಸಮಾಜಿಗಳೂ, ಈ ದೇಶದ ಸಂಸ್ಕೃತ

---

೨೩೦. ಬ್ರಹ್ಮ ಸಮಾಜದ ಸ್ಥಾಪನೆಯನ್ನು ಬಂಗಾಳದ ಪ್ರಸಿದ್ಧ ಸಮಾಜ ಸುಧಾರಕರಾದ ರಾಜಾರಾಮಮೋಹನರಾಯರು [೧೭೭೪–೧೮೩೩] ಕಲ್ಕತ್ತೆಯಲ್ಲಿ ಜನವರಿ ೧೮೩೦ ರಲ್ಲಿ ಮಾಡಿದರು. ಭಾರತದಲ್ಲಿ ವರ್ತಮಾನವಾಗಿದ್ದ ಅಂಧಶ್ರದ್ಧೆ, ಕುರೀತಿಗಳು, ಮೂರ್ತಿಪೂಜೆ, ಬಾಲ್ಯವಿವಾಹ, ವಿಧವಾವಸ್ಥೆ ಮತ್ತು ಬಲಾತ್ 'ಸತಿ' ಸಹಗಮನ ಮೊದಲಾದುವುಗಳನ್ನು ಘೋರವಾಗಿ ಖಂಡಿಸಿದವರಲ್ಲಿ ಇವರೇ ಪ್ರಥಮ ಭಾರತೀಯರು. ಇದಕ್ಕೆ, ಆಗ ಬಂಗಾಳದಲ್ಲಿ ಉದಯವಾಗುತ್ತಿದ್ದ ಕ್ರೈಸ್ತ ಮಿಶನರಿಳ ಪ್ರಭಾವ ಮತ್ತು ಇಂಗ್ಲೀಷ್ ವಿಧ್ಯಾಭ್ಯಾಸವೇ ಕಾರಣ. ಆದ್ದರಿಂದ, ಇವರ ಸಾಮಾಜಿಕ ಸುಧಾರಣೆಗಳನ್ನು ಬ್ರಿಟಿಷ್ ಸರ್ಕಾರವು ಪ್ರೋತ್ಸಾಹಿಸುತ್ತಿತ್ತು. ಹೀಗಾಗಿ, ಅವರು ಧಾರ್ಮಿಕ ಸ್ವಾತಂತ್ರ್ಯತೆಗೆ ಹೋರಾಡುತ್ತಿದ್ದರೇ ಹೊರತು ಆಂಗ್ಲರನ್ನು ಭಾರತದಿಂದ ಹೊರಹಾಕಿ, ರಾಜನೈತಿಕ ಸ್ವಾತಂತ್ರ್ಯತೆ ಪಡೆಯುವ ವಿಚಾರ ಅವರಿಗೆ ಬರಲಿಲ್ಲ. ಅಲ್ಲದೇ, ಅವರು ಬ್ರಿಟಿಷರನ್ನು ಭಾರತದಲ್ಲೇ ಶಾಶ್ವತವಾಗಿ ಉಳಿಸಿಕೊಳ್ಳುವ ಅಪೇಕ್ಷೆಯನ್ನಿಟ್ಟಿದ್ದರು.

ನಂತರ, ಬ್ರಾಹ್ಮ ಸಮಾಜದ ನೇತೃತ್ವವಹಿಸಿದವರು ದೇವೇಂದನಾಥ ಠಾಕೂರರು. ಈ ಮೊದಲು, ಬ್ರಾಹ್ಮ ಸಮಾಜದಲ್ಲಿ ವೇದಗಳ ಹೆಸರು ನಾಮ ಮಾತ್ರವಿದ್ದು ಉಪನಿಷತ್ತಿಗಳಿಗೆ ಪ್ರಾಶಸ್ತ್ಯವಿತ್ತು! ಕಾಶಿಯಲ್ಲಿ ಅಧ್ಯಯನ ಮಾಡಿ ಬಂದ ಬ್ರಾಹ್ಮಣ ಯುವಕರು ವೇದಗಳ ವಿಷಯವಾಗಿ ಯಾವ ವರದಿಯನ್ನು ಕೊಟ್ಟರೋ, ಅದರ ಪರಿಣಾಮವಾಗಿ ವೇದಗಳ ಹೆಸರೂ ಕೂಡ ಬ್ರಾಹ್ಮ ಸಮಾಜದಿಂದ ಬಹಿಷ್ಕೃತವಾಯಿತು.

ಆಮೇಲೆ ಲಂಗು ಲಗಾಮು–ಲಂಗರು ಇಲ್ಲದ ಕೇಶವ ಚಂದ್ರ ಸೇನ [೧೮೩೮–೧೮೮೪] ನ ಪ್ರಭಾವ ಹೆಚ್ಚಾಯಿತು. ಈಗ ಬ್ರಾಹ್ಮ ಸಮಾಜವು ಕ್ರೈಸ್ತಮತದ ಸಿದ್ಧಾಂತಗಳ ಕಡೆ ಓಡಿತು. ಕೇಶವಚಂದ್ರಸೇನನಿಗೆ ಏಸುಕ್ರಿಸ್ತನ ಬಗ್ಗೆ ವಿಶೇಷ ಭಕ್ತಿ; ಮತ್ತು ಬೈಬಲ್ ಆಧ್ಯಾತ್ಮಿಕ ಆಹಾರ ಕೊಡುವ ಗ್ರಂಥ! ಯಜ್ಞೋಪವೀತ ಧಾರಣೆಯನ್ನು ಕೇಶವ ಚಂದ್ರನು ವಿರೋಧಿಸಿದಾಗ ಅವನನ್ನು ದೇವೇಂದ್ರನಾಥರು ಬ್ರಾಹ್ಮ ಸಮಾಜದಿಂದ ಹೊರಹಾಕಿದರು.

ನಂತರ, ಕೇಶವ ಚಂದ್ರನು ೧೮೬೬ ನೇ ಇಸವಿಯಲ್ಲಿ 'The Brahmo samaj of India' ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಆಗ ಕೇಶವ ಚಂದ್ರನು ಪ್ರಕಟವಾಗಿಯೇ ಏಸುವಿನ ಹೊಗಳುಭಟ್ಟನಾದನು. ಮತ್ತೆ ಅವನ ಅಧಿಕಾರಕ್ಕೆ ವಿರೋಧ ಉಂಟಾಗಿ, ಭಿನ್ನಾಭಿಪ್ರಾಯಗಳು ಹೆಚ್ಚಾದಾಗ, ಬ್ರಾಹ್ಮ ಸಮಾಜವು ಪುನಃ ಇಬ್ಬಾಗವಾಗಿ, 'ಸಾಧಾರಣ ಬ್ರಾಹ್ಮ ಸಮಾಜ' ವು ೧೮೭೮ ರಲ್ಲಿ ಆನಂದ ಮೋಹನ ಬೋಸನ ನೇತೃತ್ವದಲ್ಲಿ ಜನ್ಮ ತಾಳಿತು.

ಸ್ವಾಮೀ ದಯಾನಂದರು ಡಿಸೆಂಬರ್ ೧೮೭೨ ರಿಂದ ಏಪ್ರಿಲ್ ೧೮೭೩ ತನಕ ಬಂಗಾಳದ ಪ್ರವಾಸದಲ್ಲಿದ್ದರು. ಆಗ ಅವರನ್ನು ಸ್ವಾಗತಿಸಿದವರಲ್ಲಿ ಬ್ರಾಹ್ಮ ಸಮಾಜಕ್ಕೆ ನೆರವಾದಾರೇನೋ. ಎಂಬ ನಂಬಿಕೆಯಿಂದ ಅಗ್ರಗಣ್ಯ ನಾದವನೇ ಕೇಶವ ಚಂದ್ರ ! ಅವರಿಬ್ಬರ ಮೈತ್ರಿ ಬೆಳೆಯಿತು. ಆದರೆ, ಏಸುಕ್ರಿಸ್ತನ ಭಕ್ತನಿಗೂ, ಪರಮಾತ್ಮನ ಭಕ್ತನಿಗೂ ಯಾವ ಹೊಂದಾಣಿಕೆಯೂ ಆಗಲಿಲ್ಲ. ಭಾರತದ ಮೇಲೆ ವಿದೇಶಿ ಬ್ರಿಟಿಷರ ಆಡಳಿತ ದೈವೀ ವರದಾನವೆಂದು ಪ್ರಚಾರ ಮಾಡುತ್ತಿದ್ದ ಸ್ವದೇಶ–ಸ್ವಭಾಷಾ– ಸ್ವಸಂಸ್ಕೃತಿ ಸ್ವಾಭಿಮಾನ್ಯ ಶೂನ್ಯ ಕೇಶವಚಂದ್ರನಲ್ಲೂ, ವಿದೇಶಿಶಾಸನವನ್ನು ತತ್ಕಾಲ ಹೊರಹಾಕಬೇಕೆಂದು ಪ್ರೇರೇಪಿಸುತ್ತಿದ್ದ,ಆರ್ಷ ಪರಂಪರೆಯ ಪೋಷಕರಾದ ಮಹರ್ಷಿ ದಯಾನಂದರಲ್ಲೂ ಐಕಮತ್ಯ ಹೇಗೆ ಉದಯವಾದೀತು! ಆದುದರಿಂದಲೇ, ಬ್ರಾಹ್ಮ ಸಮಾಜದ ಕ್ರೈಸ್ತ ಪ್ರೇರಿತ ವಿಧಿ–ವಿಧಾನಗಲ ಬಗ್ಗೆ ಮಹರ್ಷಿಗಳ ಪ್ರತಿಕ್ರಿಯೆ ಪ್ರಕಟವಾಗಿದೆ.

ಮುಂಬೈ ಪ್ರಾಂತದಲ್ಲಿ 'ಪ್ರಾರ್ಥನಾ ಸಮಾಜ'ವು ಬ್ರಾಹ್ಮ ಸಮಾಜದ ಅನಕೃತಿಯ ರೂಪದಲ್ಲಿ ಸ್ಥಾಪಿತವಾಗಿತ್ತು, ಅಷ್ಟೇ !

೨೩೧. Third principle.

'God himself never becomes man by puttin on human body. His diversity dwells in every man, and is displayed more vividly in some. Moses, jesus christ, Mohamed, Nanak, Chaitanya, and other great teachers appeared at special time and conferred vast benefits upon the world.

*[Brahma samaj and Aryasamaj- by Lillingtom page 77]*

ವಿದ್ಯೆಯಿಂದ ರಹಿತರಾದ ತಮ್ಮನ್ನು ವಿದ್ವಾಂಸರೆಂದು ಪ್ರಕಟಪಡಿಸುವುದು,[೨೩೨] ಆಂಗ್ಲಭಾಷೆಯನ್ನೋದಿ, ಪಂಡಿತತ್ವದ ಅಭಿಮಾನಿಗಳಾಗಿ ಕೂಡಲೇ ಮತವೊಂದನ್ನು ಪ್ರಚಲಿತಗೊಳಿಸುವುದರಲ್ಲಿ ಪ್ರವೃತ್ತರಾಗುವುದು ಮಾನವರ ಸ್ಥಿರವಾದ ಮತ್ತು ಉನ್ನತಿಕರವಾದ ಕಾರ್ಯ ಆಗಬಲ್ಲುದಾದರೂ ಹೇಗೆ?

(೪) ಆಂಗ್ಲರು, ಯವನರು, ತುಚ್ಛವಾದ ನಡೆ-ನುಡಿಗಳನ್ನಿಟ್ಟುಕೊಂಡಿರುವವರು-ಇಂತಹರವರೊಂದಿಗೆ ಭೋಜನ-ಪಾನಗಳಲ್ಲಿ ಭೇದವನ್ನಿಟ್ಟುಕೊಂಡಿಲ್ಲ. ಖಾದ್ಯಪೇಯಗಳ ಮತ್ತು ಜಾತಿಗಳ ಭೇದವನ್ನು ತೊಡೆದುಹಾಕುವುದರಿಂದ ನಮ್ಮ ಹಾಗೂ ನಮ್ಮ ದೇಶದ ಸುಧಾರಣೆಯಾಗುವುದೆಂದೇ ಇವರು ತಿಳಿದಿರಬಹುದು. ಆದರೆ ಇಂತಹ ಪ್ರವೃತ್ತಿಗಳಿಂದ ಸುಧಾರಣೆಯಾಗುವುದೆಲ್ಲಿ? ಪ್ರತಿಯಾಗಿ, ದೋಷವೇ ಉಂಟಾಗುತ್ತದೆ. (ಜಾತಿಯಲ್ಲ; ನೀತಿ ನೋಡಿರಿ. ಕುಲವಲ್ಲ; ಶೀಲ ನೋಡಿರಿ-ಎಂಬುದು ಮಹರ್ಷಿಗಳ ಭಾವನೆ)

(೫) **ಪ್ರಶ್ನೆ:-** ಜಾತಿಭೇದಗಳು ಈಶ್ವರಕೃತವೋ ಅಥವಾ ಮನುಷ್ಯ ಕೃತವೋ?

**ಉತ್ತರ:-** ಜಾತಿಭೇದಗಳು ಈಶ್ವರಕೃತವಾದುವೂ ಇವೆ; ಮನುಷ್ಯಕೃತವಾದುವೂ ಇವೆ.

**ಪ್ರಶ್ನೆ :-** ಈಶ್ವರಕೃತವಾದುವು ಯಾವವು ಮತ್ತು ಮನುಷ್ಯಕೃತವಾದುವು ಯಾವುವು?

**ಉತ್ತರ:-** ಮನುಷ್ಯ, ಪಶು, ಪಕ್ಷಿ, ವೃಕ್ಷ ಜಲ-ಜಂತು ಮೊದಲಾದ ಜಾತಿಗಳು ಪರಮೇಶ್ವರ ಕೃತವಾಗಿವೆ; ಹೇಗೆ ಪಶುಗಳಲ್ಲಿ ಗೋವು, ಕುದುರೆ, ಆನೆ-ಮೊದಲಾದ ಜಾತಿಗಳೂ, ವೃಕ್ಷಗಳಲ್ಲಿ ಅರಳಿ, ಆಲ, ಮಾವು-ಮೊದಲಾದವೂ, ಪಕ್ಷಿಗಳಲ್ಲಿ ಹಂಸ, ಕಾಗೆ ಕೊಕ್ಕರೆ-ಮೊದಲಾದುವೂ, ಜಲಜಂತುಗಳಲ್ಲಿ ಮತ್ಸ್ಯ - ಮೊಸಳೆ ಮೊದಲಾದ ಜಾತಿ-ಭೇದಗಳೂ ಈಶ್ವರಕೃತವಾಗಿವೆಯೋ, ಹಾಗೆ ಮನುಷ್ಯರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ, ನಿಷಾದ ಎಂಬಿವು ಈಶ್ವರಕೃತವಾದ ಜಾತಿಭೇದಗಳಲ್ಲ; (ಏಕೆಂದರೆ-ಅವು ಜಾತಿಗಳೇ ಅಲ್ಲ) ಮೊದಲು ವರ್ಣಾಶ್ರಮ ವ್ಯವಸ್ಥೆಯನ್ನು ನಿರೂಪಿಸಿರುವಂತೆಯೇ ಗುಣ-ಕರ್ಮ-ಸ್ವಭಾವಾನುಣವಾದ ವರ್ಣವ್ಯವಸ್ಥೆಯನ್ನಂಗೀಕರಿಸುವದು ಆವಶ್ಯಕ. ಪ್ರತಿಯೊಬ್ಬ ವ್ಯಕ್ತಿಯ ಗುಣ-ಕರ್ಮ ಸ್ವಭಾವಾನುಸಾರವಾಗಿ, ಮೊದಲು ಹೇಳಿರುವಂತೆ, ನಾಲ್ಕು ವರ್ಣಗಳ ವ್ಯವಸ್ಥೆಯನ್ನು ಪರೀಕ್ಷಾಪೂರ್ವಕವಾಗಿ ನಿಯತಗೊಳಿಸುವುದು ರಾಜನ ಮತ್ತು ವಿದ್ವಾಂಸರ ಕರ್ತವ್ಯವಾಗಿದೆ-ಎನ್ನುವುದಿಷ್ಟೇ ಈ ವಿಷಯದಲ್ಲಿ ಮನುಷ್ಯಕೃತತ್ವವಿರುತ್ತದೆ. ಭೋಜನ-ಭೇದವೂ ಕೂಡ ಈಶ್ವರಕೃತವಾದುದೂ ಇದೆ; ಮನುಷ್ಯತ್ವವಾದುದೂ ಇದೆ. ಉದಾಹರಣೆಗೆ - ಸಿಂಹವು ಮಾಂಸಾಹಾರಿ-ಮತ್ತು ಜಿಂಕೆ, ಕೋಣ ಮೊದಲಾದುವು ಶಾಖಾಹಾರ ಮಾಡುತ್ತವೆ. ಇದು ಈಶ್ವರಕೃತವಾದ ಭೇದ ಮತ್ತು ದೇಶ, ಕಾಲ, ವಸ್ತು-ಇವುಗಳ ಭೇದದಿಂದ ಮಾಡಲ್ಪಡುವ ಬೋಜನ ಭೇದವು ಮನುಷ್ಯಕೃತವಾದುದು.

**ಪ್ರಶ್ನೆ:-** ನೋಡಿರಿ, ಐರೋಪ್ಯದೇಶೀಯ ಜನರು ಹ್ಯಾಟು-ಬೂಟುಗಳನ್ನೂ ಕೋಟು-ಷರಾಯಿಗಳನ್ನೂ ಧರಿಸುತ್ತಾರೆ; ಹೋಟೇಲಿನಲ್ಲಿ ಎಲ್ಲರ ಕೈನದನ್ನೂ ತಿನ್ನುತ್ತಾರೆ. ಆದುದರಿಂದ ತಮ್ಮ ಉನ್ನತಿಯನ್ನು ಸಾಧಿಸಿಕೊಳ್ಳುತ್ತಾ ಹೋಗುತ್ತಾರೆ.

**ಉತ್ತರ:-** ಇದು ನಿಮ್ಮ ತಪ್ಪುಗ್ರಹಿಕೆ. ಏಕೆಂದರೆ, ಮುಸಲ್ಮಾನರೂ, ಅತ್ಯಂತ ತುಚ್ಛರೂ ಎಲ್ಲರ ಕೈಯಿನದನ್ನೂ ತಿನ್ನುತ್ತಾರೆ. ಆದರೂ, ಅವರ ಉನ್ನತಿಯಾಗದೇಕೆ?[೨೩೩]

ಐರೋಪ್ಯರಲ್ಲಿ ಬಾಲ್ಯಾವಸ್ಥೆಯಲ್ಲಿ ವಿವಾಹವಾಗದಿರುವುದು, ಬಾಲಕ ಬಾಲಿಕೆಯರಿಗೆ ವಿದ್ಯೆ-ಸುಶಿಕ್ಷಣಗಳನ್ನು ಕೊಡುವುದು-ಕೊಡಿಸುವುದು, ಸ್ವಯಂವರ ವಿವಾಹವಾಗುವುದು-ಮೊದಲಾದ ಶುಭಗುಣಗಳಿವೆ. ದುಷ್ಟ-ದುರ್ಜನರ

---

೨೩೨. ಒಂದು ಸಲ ಕೇಶವಚಂದ್ರರು - "ವಿಷಾದಕರವಾದುದೇನೆಂದರೆ, ವೇದಗಳ ಅದ್ವಿತೀಯ ವಿದ್ವಾಂಸನು ಆಂಗ್ಲ ಭಾಷೆಯನ್ನರಿತಿಲ್ಲ. ಇಲ್ಲದಿದ್ದರೆ, ಇಂಗ್ಲೆಂಡಿಗೆ ಹೋಗುವಾಗ ನನಗೆ ಮನೋನುಕೂಲವಾದ ಜೊತೆಗಾರನಾಗುತ್ತಿದ್ದನು" ಎಂದರು.

ಸ್ವಾಮೀಜಿಯವರು ನಕ್ಕು ಹೇಳಿದರು- "ವಿಷಾದಕರವಾದುದೇನೆಂದರೆ, ಬ್ರಾಹ್ಮ ಸಮಾಜದ ಮುಖಂಡರು ಸಂಸ್ಕೃತವನ್ನರಿತಿಲ್ಲ. ಮತ್ತು ಜನರಿಗೆ ಯಾವ ಭಾಷೆಯಲ್ಲಿ ಉಪದೇಶ ಮಾಡುತ್ತಾರೆಂದರೆ, ಜನರು ಆ ಭಾಷೆಯನ್ನು ಅರಿತೇ ಇಲ್ಲ !"

*ಶ್ರೀಮದ್ದಯಾನಂದ ಪ್ರಕಾಶ - ಸ್ವಾಮೀ ಸತ್ಯಾನಂದ*

*ಕಾಶೀಕಾಂಡ, ೭ ನೇಯ ಸರ್ಗ*

೨೩೩. ಮುಸಲ್ಮಾನರು ಭಾರತದಲ್ಲಿ ಸಾವಿರವರ್ಷಆಳಿದರೂ, ಅವರ ಅನುಯಾಯಿಗಳು ಈಗಲೂ ದರಿದ್ರರೇ ಆಗಿರುವುದಕ್ಕೆ ಕಾರಣ ಏನು? ಅವರಲ್ಲಿ ಮತೀಯ ಅಂಧಶ್ರದ್ಧೆ, ಮಾತ್ರ ಇದೆ. ಆರ್ಥಿಕ ಉನ್ನತಿ, ಸುಸಂಸ್ಕೃತಿ-ಸಭ್ಯತೆಗಾಗಿ ತೆರೆದ ಮನೋಭಾವವಿಲ್ಲ. ತದನುಗುಣವಾದ ಪುರುಷಾರ್ಥವಿಲ್ಲ.

ಉಪದೇಶ ನಡೆಯುವುದಿಲ್ಲ. ಅವರು ವಿದ್ವಾಂಸರಾಗಿ, ಅವರಿವರ ಪಾಷಂಡಗಳಿಗೆ ಸಿಕ್ಕಿಕೊಳ್ಳುವುದಿಲ್ಲ. ಏನೇನು ಮಾಡುತ್ತಾರೋ. ಅದನ್ನೆಲ್ಲಾ ಪರಸ್ಪರ ಆಲೋಚಿಸಿ, ಮತ್ತು ಸಭೆಯಲ್ಲಿ ನಿಶ್ಚಯಿಸಿ ಮಾಡುತ್ತಾರೆ. ತಮ್ಮ ಸ್ವಜಾತಿಯ ಉನ್ನತಿಗಾಗಿ ತನು-ಮನ-ಧನಗಳನ್ನು ವ್ಯಯಿಸುತ್ತಾರೆ. ಆಲಸ್ಯವನ್ನು ತ್ಯಜಿಸಿ, ಉದ್ಯೋಗವನ್ನು ಮಾಡುತ್ತಾಹೋಗುತ್ತಾರೆ. ನೋಡಿರಿ, ತಮ್ಮ ದೇಶದಲ್ಲಿ ಆದ ಪಾದರಕ್ಷೆಯನ್ನು ಕಾರ್ಯಾಲಯಗಳ ಹಾಗೂ ನ್ಯಾಯಾಲಯಗಳ ಒಳಕ್ಕೆ ಹೋಗಲು ಬಿಡುತ್ತಾರೆ. ಈ ದೇಶದ ಪಾದರಕ್ಷೆಯನ್ನು ಬಿಡುವುದಿಲ್ಲ. ಇಷ್ಟರಿಂದಲೇ ತಮ್ಮ ದೇಶದಲ್ಲಿ ನಿರ್ಮಿತವಾದ ಪಾದರಕ್ಷೆಗಳಿಗೆ ಇಷ್ಟು ಗೌರವವನ್ನು ಕೊಡುತ್ತಾರೋ, ಅಷ್ಟು ಗೌರವವನ್ನೂ ಬೇರೆಯ ದೇಶದ ಪಾದರಕ್ಷೆಗಳಿಗೆ ಕೊಡುವುದಿಲ್ಲ-ಎಂದು ತಿಳಿದುಕೊಳ್ಳಿರಿ.

ನೋಡಿರಿ, ಐರೋಪ್ಯರು ಈ ದೇಶಕ್ಕೆ ಬಂದು ನೂರು ವರ್ಷಕ್ಕಿಂತ ಸ್ವಲ್ಪ ಹೆಚ್ಚು ಕಾಲವಾಯಿತು. ಮತ್ತು ಇಂದಿನವರೆಗೂ ಅವರು, ಹೇಗೆ ತಮ್ಮ ದೇಶದಲ್ಲಿ ಧರಿಸುತ್ತಿದ್ದರೋ, ಹಾಗೆ ದಪ್ಪನಾದ ವಸ್ತ್ರಗಳು-ಮೊದಲಾದುವನ್ನು ಧರಿಸುತ್ತಾರೆ. ಆದರೆ ಅವರು ತಮ್ಮ ದೇಶದ ನಡೆವಳಿಕೆಯನ್ನು ಬಿಡಲಿಲ್ಲ. ಮತ್ತು ನಿಮ್ಮಲ್ಲಿ ಬಹುಮಂದಿ ಜನರು ಅವರ ಅನುಕರಣವನ್ನು ಮಾಡಿಕೊಂಡಿದ್ದೀರಿ. ಇದರಿಂದಲೇ ನೀವು ಬುದ್ಧಿಹೀನರು ಮತ್ತು ಅವರು ಬುದ್ಧಿವಂತರು ಎಂದು ಸ್ಥಿರವಾಯಿತು. ಅನುಕರಣಮಾಡುವುದು ಯಾವ ಬುದ್ಧಿಶಾಲಿಯ ಕಾರ್ಯವೂ ಅಲ್ಲ. ಮತ್ತು (ಅವರಲ್ಲಿ) ಯಾವನು ಯಾವ ಕಾರ್ಯವನ್ನು ವಹಿಸಿಕೊಳ್ಳುತ್ತಾನೋ, ಅವನು ಅದನ್ನು ಯುಕ್ತವಾದ ರೀತಿಯಲ್ಲಿ ಮಾಡುತ್ತಾನೆ. ಸರಿಯಾಗಿ (ತಮ್ಮ ಮೇಲಣವರ) ಆಜ್ಞಾನುವರ್ತಿಗಳಾಗಿರುತ್ತಾರೆ. ತಮ್ಮ ದೇಶದವರಿಗೆ ವ್ಯಾಪಾರ-ಮೊದಲಾದುದರಲ್ಲಿ ಸಹಾಯ ಕೊಡುತ್ತಾರೆ. ಈ ಮೊದಲಾದ ಗುಣಗಳಿಂದ ಮತ್ತು ಉತ್ತಮ-ಉತ್ತಮವಾದ ಕರ್ಮಗಳಿಂದ ಅವರಿಗೆ ಉನ್ನತಿಯುಂಟಾಗುತ್ತಿದೆ. ಹ್ಯಾಟು-ಬೂಟು, ಕೋಟು-ಷರಾಯಿ, ಹೋಟಲಿನಲ್ಲಿ ತಿನ್ನುವುದು-ಕುಡಿಯುವುದು-ಮೊದಾದ ಸಾಧಾರಣವಾದ ಮತ್ತು ಕೆಟ್ಟ ಕರ್ಮಗಳಿಂದ ಅವರು ಸಮೃದ್ಧರಾಗಿಲ್ಲ. ಮತ್ತು ಇವರಲ್ಲಿ ಜಾತಿಭೇದವೂ ಇದೆ. ಯಾವಾಗ ಯಾವನಾದರೂ ಐರೋಪ್ಯನು, ಎಷ್ಟು ದೊಡ್ಡ ಅಧಿಕಾರದಲ್ಲಿಯೇ ಇರಲಿ ಮತ್ತು ಗೌರವಾನ್ವಿತನೇ ಆಗಿರಲಿ; ಯಾವನಾದರೂ ಬೇರೆ ದೇಶದವನ, ಬೇರೆ ಮತದವನ ಕನ್ಯೆಯನ್ನು ಮದುವೆಯಾದರೆ, ಅಥವಾ ಐರೋಪ್ಯನ ಮಗಳು ಬೇರೆ ದೇಶದವನೊಂದಿಗೆ ವಿವಾಹಿತಳಾದರೆ, ತತ್ಕಾಲವೇ ಅವರ ಆಹ್ವಾನವನ್ನೂ, ಸಹಪಂಕ್ತಿಭೋಜನವನ್ನೂ ಹಾಗೂ ವಿವಾಹ ಮೊದಲಾದುವನ್ನೂ ಅನ್ಯರು ಬಹಿಷ್ಕರಿಸಿಬಿಡುತ್ತಾರೆ. ಇದು ಜಾತಿಭೇಧವಲ್ಲದಿದ್ದರೆ ಇನ್ನೇನು? ಮತ್ತು ಮುಗ್ಧಮಾನವರಾದ ನಿಮ್ಮನ್ನು "ನಮ್ಮಲ್ಲಿ ಜಾತಿಭೇದವಿಲ್ಲ"ವೆಂದು ಹೇಳಿ ದಾರಿತಪ್ಪಿಸುತ್ತಾರೆ. ನಿಮ್ಮ ಮುಗ್ಧತ್ವದಿಂದ ನೀವು ಒಪ್ಪಿಕೊಂಡೂ ಬಿಡುತ್ತೀರಿ. ಆದುದರಿಂದ, ಪುನಃ ಪಶ್ಚಾತ್ತಾಪಪಡಲು ಎಡೆಯಿಲ್ಲದಂತೆ, ಏನನ್ನು ಮಾಡಬೇಕಾದರೂ ಆಲೋಚನೆ ಮಾಡಿಯೇಮಾಡಬೇಕು.

ನೋಡಿರಿ, ವೈದ್ಯರ ಮತ್ತು ಔಷಧಿಯ ಅವಶ್ಯಕತೆಯಿರುವುದು ರೋಗಿಗೆ; ರೋಗರಹಿತನಿಗಲ್ಲ; ವಿದ್ಯಾವಂತನು ರೋಗರಹಿತನೂ, ಮತ್ತು ವಿದ್ಯಾರಹಿತನು ಅವಿದ್ಯಾರೋಗದಿಂದ ಗ್ರಸ್ತನೂ ಆಗಿರುತ್ತಾರೆ. ಆ ರೋಗವನ್ನು ವಾಸಿಮಾಡುವುದಕ್ಕಾಗಿ ಸತ್ಯವಿದ್ಯೆ ಮತ್ತು ಸತ್ಯೋಪದೇಶಗಳಿವೆ. ಅವರಿಗೆ ಅವಿದ್ಯೆಯ ಕಾರಣದಿಂದ, ಭೋಜನ-ಪಾನಗಳಲ್ಲಿಯೇ ಧರ್ಮವಿರುತ್ತದೆ; ಹೋಗುತ್ತದೆ-ಎಂಬ ರೋಗ ಹತ್ತಿರುತ್ತದೆ. ಯಾವಾಗ ಯಾವನಾದರೂ ಭೋಜನಪಾನಗಳಲ್ಲಿ ಅನಾಚಾರ ಮಾಡುತ್ತಿರುವುದನ್ನು ನೋಡುತ್ತಾರೋ, ಆಗ ಅವನು ಧರ್ಮಭ್ರಷ್ಟನಾಗಿ ಹೋದನು-ಎಂದು ಹೇಳುತ್ತಾರೆ ಮತ್ತು ತಿಳಿಯುತ್ತಾರೆ. ಅವನ ಮಾತನ್ನು ಕೇಳುವುದಿಲ್ಲ. ಮತ್ತು ಅವನ ಬಳಿ ಕುಳಿತುಕೊಳ್ಳುವುದೂ ಇಲ್ಲ; ಅವನನ್ನು ತಮ್ಮ ಬಳಿ ಕೂಡಲೂ ಬಿಡುವುದಿಲ್ಲ. ಈಗ, ನಿಮ್ಮ ವಿದ್ಯೆ ಸ್ವಾರ್ಥಕ್ಕಾಗಿ ಇದೆಯೋ ಅಥವಾ ಪರಮಾರ್ಥಕ್ಕಾಗಿಯೋ ಹೇಳಿರಿ. ಯಾವಾಗ ನಿಮ್ಮ ವಿದ್ಯೆಯಿಂದ ಆ ಅಜ್ಞಾನಿಗಳಿಗೆ ಲಾಭವಾಗುವುದೋ, ಆಗಲೇ ಪರಮಾರ್ಥ ಸಿದ್ಧಿಸುವುದು. "ಅವರು ತೆಗೆದುಕೊಳ್ಳುವುದಿಲ್ಲ. ನಾವೇನು ಮಾಡೋಣ?"-ಎಂದು ಹೇಳುವಿರಾದರೆ, ಇದು ನಿಮ್ಮ ದೋಷ; ಅವರದಲ್ಲ. ಏಕೆಂದರೆ ನೀವು ನಿಮ್ಮ ಆಚರಣವನ್ನು ಸರಿಯಾಗಿಟ್ಟುಕೊಂಡಿದ್ದರೆ, ನಿಮ್ಮೊಂದಿಗೆ ಪ್ರೇಮವಿಟ್ಟು, ಅವರು ಉಪಕಾರ ಹೊಂದುತ್ತಿದ್ದರು. ಹೀಗೆ ನೀವು ಸಾವಿರಾರು ಜನರ ಉಪಕಾರವನ್ನು ನಾಶಮಾಡಿ, ನಿಮ್ಮ ಸುಖವನ್ನು ಮಾತ್ರ ಸಾಧಿಸಿಕೊಂಡಿರಿ. ನಿಮಗೆ ಈ ಮಹಾಪರಾಧ ಅಂಟಿಕೊಂಡಿತು. ಏತಕ್ಕೆಂದರೆ-ಪರರ ಉಪಕಾರವೇ ಧರ್ಮ; ಮತ್ತು ಪರರಿಗೆ ಹಾನಿಯನ್ನುಂಟುಮಾಡುವುದೇ ಅಧರ್ಮವೆನಿಸುತ್ತದೆ. ಆದುದರಿಂದ ವಿದ್ವಾಂಸನು ಯಥಾಯೋಗ್ಯವಾದ ವ್ಯವಹಾರಮಾಡಿ, ಅಜ್ಞಾನಿಗಳನ್ನು ದುಃಖಸಾಗರದಿಂದ ಪಾರುಮಾಡುವುದಕ್ಕಾಗಿ ನೌಕಾರೂಪನಾಗಿರಬೇಕು. ಸರ್ವಥಾ ಮೂರ್ಖರು ಮಾಡುವಂತಹ ಕರ್ಮಗಳನ್ನು ಮಾಡಬಾರದು. ಆದರೆ ಯಾವುದರಿಂದ ಅವರ ಮತ್ತು ತನ್ನ ಉನ್ನತಿ ದಿನಪ್ರತಿದಿನವೂ ಆಗುತ್ತಾ ಹೋಗುವುದೋ, ಅಂತಹ ಕರ್ಮಗಳನ್ನೆಸಗುವುದು ಉಚಿತವಾಗಿರುತ್ತದೆ.

**ಪ್ರಶ್ನೆ :-** ನಾವು ಯಾವ ಪುಸ್ತಕವನ್ನೂ ಈಶ್ವರಪ್ರಣೀತವೆಂದು ಅಥವಾ ಸರ್ವಾಂಶಗಳಲ್ಲಿಯೂ ಸತ್ಯವೆಂದು ಒಪ್ಪುವುದಿಲ್ಲ. ಏಕೆಂದರೆ-ಮಾನವರ ಬುದ್ಧಿ ನಿರ್ಭ್ರಾಂತವಾಗಿರುವುದಿಲ್ಲ. ಆದ ಕಾರಣ ಅವರು ರಚಿಸಿದ ಗ್ರಂಥಗಳು ಎಲ್ಲವೂ ಭ್ರಾಂತವಾಗಿರುತ್ತವೆ. ಆದುದರಿಂದ ನಾವು ಎಲ್ಲರಿಂದಲೂ ಸತ್ಯವನ್ನು[೨೩೪] ಗ್ರಹಿಸುತ್ತೇವೆ ಮತ್ತು ಅಸತ್ಯವನ್ನು ಬಿಟ್ಟು ಬಿಡುತ್ತೇವೆ. ಸತ್ಯವು ಬೇಕಾದರೆ ವೇದದಲ್ಲಿರಲಿ, ಬೈಬಲಿನಲ್ಲಿರಲಿ ಅಥವಾ ಕುರಾನಿನಲ್ಲಿರಲಿ; ಮತ್ತು ಬೇರೆ ಯಾವುದೇ ಗ್ರಂಥದಲ್ಲಿರಲಿ, ನಮಗೆ ಗ್ರಾಹ್ಯವಾಗಿರುತ್ತದೆ; ಅಸತ್ಯ ಯಾವುದರಲ್ಲಿದ್ದರೂ ಗ್ರಾಹ್ಯವಲ್ಲ.

**ಉತ್ತರ:-** ಯಾವ ಮಾತಿನಿಂದ ನೀವು ಸತ್ಯಗ್ರಾಹಿಗಳಾಗಬಯಸುತ್ತೀರೋ, ಅದೇ ಮಾತಿನಿಂದ ಅಸತ್ಯಗ್ರಾಹಿಗಳಾಗಿ ಉಳಿಯುತ್ತೀರಿ. ಏಕೆಂದರೆ, ಯಾವಾಗ ಮಾನವರಾರೂ ಭ್ರಾಂತಿರಹಿತರಾಗಲಾರರೋ, ಆಗ ನೀವು ಮಾನವರಾಗಿರುವುದರಿಂದ ಭ್ರಾಂತಿಸಹಿತರಾಗಿರುತ್ತೀರಿ. ಯಾವಾಗ ಭ್ರಾಂತಿಸಹಿತನ ವಚನಗಳು ಸರ್ವಾಂಶದಲ್ಲಿಯೂ ಪ್ರಾಮಾಣಿಕವಾಗಿರುವುದಿಲ್ಲರೋ, ಆಗ ನಿಮ್ಮ ವಚನದ ಮೇಲೆಯೂ ನಂಬಿಕೆ ಮೂಡಲಾರದು. ಮತ್ತೆ, ನಿಮ್ಮ ವಚನದ ಮೇಲೆಯೂ ಸರ್ವಥಾ ನಂಬಿಕೆಯಿಡಬಾರದು. ಹೀಗೆ ಇರುವುದಾದರೆ, ವಿಷಮಿಶ್ರಿತವಾದ ಅನ್ನದಂತೆ (ನಿಮ್ಮ ವಚನವೂ) ತ್ಯಾಗಕ್ಕೆ ಯೋಗ್ಯವಾಗಿರುತ್ತದೆ-ಎಂದ ಮೇಲೆ, ನೀವು ರಚಿಸಿರುವ ಪುಸ್ತಕದ ಪ್ರಮಾಣವನ್ನು ಯಾವನೂ ಸ್ವೀಕರಿಸಬಾರದು. **"ಹೊರಟರು ಚತುರ್ವೇದಿಗಳು ಷಡ್ವೇದಿಗಳಾಗಲು; ಗಂಟನಿಂದ ಎರಡು ಕಳೆದುಕೊಂಡು ಉಳಿದರು ದ್ವಿವೇದಿಗಳಾಗಿ".**[೨೩೫] ಹೇಗೆ ಬೇರೆಯವರು ಸರ್ವಜ್ಞರಲ್ಲವೋ, ಹಾಗೆಯೇ ನೀವೂ ಸರ್ವಜ್ಞರೇನಲ್ಲ. ಒಂದೊಂದು ಸಾರಿ ಭ್ರಮದಿಂದ ಅಸತ್ಯವನ್ನು ಗ್ರಹಿಸಿ, ಸತ್ಯವನ್ನು ಬಿಟ್ಟು ಬಿಡುತ್ತಲೂ ಇರಬಹುದು. ಆದುದರಿಂದ ಸರ್ವಜ್ಞನಾದ ಪರಮಾತ್ಮನ ವಚನದ ಸಹಾಯವು ಅಲ್ಪಜ್ಞರಾದ ನಮಗೆ ಅವಶ್ಯವಾಗಿ ಲಭಿಸಬೇಕು. ವೇದ-ವ್ಯಾಖ್ಯಾನದಲ್ಲಿ ಹೇಗೆ ಬರೆದಿದ್ದೇವೆಯೋ,[೨೩೬] ಹಾಗೆ ನೀವು ಅವಶ್ಯವಾಗಿ ಅಂಗೀಕರಿಸಬೇಕು. ಇಲ್ಲವಾದರೆ, **"ಇತೋ ಭ್ರಷ್ಟಸ್ತತೋ ಭಷ್ಟಃ"** - "ಇಲ್ಲಿಂದಲೂ ಜಾರಿದ; ಅಲ್ಲಿಂದಲೂ ಜಾರಿದ".-ಎಂಬಂತೆ ಆಗ ಬೇಕಾದೀತು. ಯಾವವುಗಳಲ್ಲಿ ಸ್ವಲ್ಪವೂ ಅಸತ್ಯವಿಲ್ಲವೋ, ಆ ವೇದಗಳಿಂದ ಸಮಸ್ತ ಸತ್ಯವೂ ಲಭಿಸುವಾಗ, ಅವುಗಳನ್ನು ಗ್ರಹಿಸುವುದರಲ್ಲಿ ಸಂಶಯ ಪಡುವುದೆಂದರೆ, ತಮ್ಮ ಮತ್ತು ಅನ್ಯರ ಹಾನಿಯನ್ನು ಮಾಡಿಕೊಳ್ಳುವುದೇ ಆಗಿದೆ. ಈ ಕಾರಣದಿಂದಲೇ ನಿಮ್ಮನ್ನು ಆರ್ಯಾವರ್ತೀಯ ಜನರು ತಮ್ಮವರೆಂದು ಅಂಗೀಕರಿಸುವುದಿಲ್ಲ. ಮತ್ತು ನೀವು ಆರ್ಯಾವರ್ತದ ಉನ್ನತಿಗೆ ಕಾರಣರೂಪರೂ ಆಗಲಾರದೇ ಹೋದಿರಿ. ಏಕೆಂದರೆ ನೀವು ಎಲ್ಲ ಮನೆಗಳ ಭಿಕ್ಷುಕರಾಗಿಯೇ ಉಳಿದಿದ್ದೀರಿ.[೨೩೭] **" ಈ ರೀತಿಯಿಂದ ನಾವುಗಳು ನಮ್ಮ ಮತ್ತು ಅನ್ಯರ ಉಪಕಾರವನ್ನು ಮಾಡಬಲ್ಲೆವು".-** ಎಂದು ನೀವು ತಿಳಿದಿದ್ದೀರಿ; ಹಾಗೆ ಎಂದಿಗೂ ಮಾಡಲಾರಿರಿ.

ಹೇಗೆ ಯಾವನೋ ಒಬ್ಬನ ತಂದೆ-ತಾಯಿಗಳಿಬ್ಬರೇ ಪ್ರಪಂಚದ ಮಕ್ಕಳೆಲ್ಲರ ಪಾಲನವನ್ನೂ ಮಾಡಲು ಹೊರಟರೆ, ಪಾಲನೆಮಾಡುವುದಂತೂ ಅಸಂಭವವೇ, ಆದರೆ ಈ ವರ್ತನೆಯಿಂದ ತಮ್ಮ ಮಕ್ಕಳನ್ನೂ ಹಾಳುಮಾಡಿಕೊಳ್ಳುವರೋ, ಹಾಗೆಯೇ ಇದೆ ನಿಮ್ಮಗಳ ಗತಿಯೂ ಕೂಡ. ಭಲೇ, ವೇದಗಳೇ ಮೊದಲಾದ ಸತ್ಯಶಾಸ್ತ್ರಗಳನ್ನು ಅಂಗೀಕರಿಸದೆ, ನೀವು ನಮ್ಮ ವಚನಗಳ ಸತ್ಯತ್ವ-ಅಸತ್ಯತ್ವಗಳ ಪರೀಕ್ಷೆಯನ್ನೂ, ಮತ್ತು ಆರ್ಯಾವರ್ತದ ಉನ್ನತಿಯನ್ನೂ ಎಂದಿಗಾದರೂ ಮಾಡಬಲ್ಲಿರೇನು? ಯಾವ ದೇಶಕ್ಕೆ ರೋಗ ಬಂದಿದೆಯೋ, ಅದರ ಔಷಧಿ ನಿಮ್ಮ ಹತ್ತಿರ ಇಲ್ಲ; ಮತ್ತು ಐರೋಪ್ಯರು ನಿಮ್ಮನ್ನು ಅಪೇಕ್ಷಿಸುವುದಿಲ್ಲ. ಮತ್ತು ಆರ್ಯಾವರ್ತದ ಜನರು ನಿಮ್ಮನ್ನು ಅನ್ಯಮತೀಯರೆಂಬಂತೆ ತಿಳಿಯುತ್ತಾರೆ. ಈಗಲಾದರೂ ತಿಳಿದುಕೊಂಡು, ವೇದಗಳೇ ಮೊದಲಾದವುಗಳ ಮನ್ನಣೆಯಿಂದ ದೇಶೋನ್ನತಿ ಮಾಡತೊಡಗಿದರೆ, ಒಳಿತಾದೀತು. ಸಮಸ್ತ ಸತ್ಯವೂ ಪರಮೇಶ್ವರನಿಂದ ಪ್ರಕಾಶಿತವಾಗುತ್ತದೆ-ಎಂದು ನೀವು ಹೇಳುವಾಗ, ಮತ್ತೆ ಋಷಿಗಳ ಆತ್ಮಗಳಲ್ಲಿ ಈಶ್ವರನಿಂದ ಪ್ರಕಾಶಿತವಾದ,

---

೨೩೪. Fourth principle

"The Brahmo religion is distinct from all other systems of religion; yet it is the essence of all. It is not hostile to other creeds. what is true in them, it accepts, It is based on the constitution of man and is therefore, eternal and Universal {Brahmo samaj and Aryasamaj, by Lillingtom page 77}

೨೩೫. ಹಿಂದಿಯಲ್ಲಿ ಹೀಗೆ ಇದೆ. 'ಚಲೇ ಚೌಬೇಜೀ ಛಬ್ಬೇಜೀ ಬನನೇ ಕೋ; ಗಾಂಠ್ ಕೇ ದೋ ಖೋಕರ್ ದುಬೇಜೀ ಬನ್ ಗಯೇ'

೨೩೬. ಎಂದರೆ, ಈ ಗ್ರಂಥಕರ್ತರು ಸಪ್ತಮ ಸಮುಲ್ಲಾಸದಲ್ಲಿ

೨೩೭. Keshav Chandra Sen, in 1872 said:

"As touching the question asked ' Is Christ your guide?' I revere Christ as a teacher. to chaitanya and other prophets too; and to the ancient scriptures of the Hindus , we are profoundly thankful for our sprititual growth. But we look upon none as our guide in the path of Salvation.

*[Biographical essays- by Maxmuller p.81]*

ಸತ್ಯಾರ್ಥಯುಕ್ತರಾದ ವೇದಗಳನ್ನು ಅಂಗೀಕರಿಸುವುದಿಲ್ಲವೇಕೆ? ಹೌದು, ನೀವುಗಳು ವೇದಗಳನ್ನೋದಲಿಲ್ಲ; ಮತ್ತು ಓದಲು ಇಚ್ಛಿಸುವುದೂ ಇಲ್ಲ–ಇದೇ ಕಾರಣವಾಗಿದೆ. ನಿಮಗೆ ವೇದೋಕ್ತವಾದ ಜ್ಞಾನ ಉಂಟಾಗಬಲ್ಲದಾದರೂ ಹೇಗೆ?

(೬) ಎರಡನೆಯದಾಗಿ, ಜಗತ್ತಿನ ಉಪಾದಾನಕಾರಣವಿಲ್ಲದೆ ಜಗದುತ್ಪತ್ತಿಯನ್ನೂ ಹಾಗೂ ಜೀವನನ್ನೂ ಕೂಡ ಉತ್ಪನ್ನನಾದವನು ಎಂದೂ, ಕ್ರೈಸ್ತರು, ಮುಸಲ್ಮಾನರು–ಮೊದಲಾದವರು ಅಂಗೀಕರಿಸುವಂತೆ ಅಂಗೀಕರಿಸುತ್ತೀರಿ. ಇದರ ಉತ್ತರವನ್ನು ಸೃಷ್ಟ್ಯುತ್ಪತ್ತಿ[೨೩೮] ಮತ್ತು ಜೀವೇಶ್ವರವ್ಯಾಖ್ಯಾಪ್ರಕರಣಗಳಲ್ಲಿ[೨೩೯] ನೋಡಿಕೊಳ್ಳಿರಿ. ಕಾರಣವಿಲ್ಲದೆ ಕಾರ್ಯದ ಆಗುವಿಕೆ ಸರ್ವಥಾ ಅಸಂಭವ; ಮತ್ತು ಉತ್ಪನ್ನವಾದ ವಸ್ತುವಿನ ನಾಶವಾಗದಿರುವಿಕೆಯೂ ಕೂಡ ಹಾಗೆಯೇ ಅಸಂಭವವಾಗಿದೆ.

(೭) ಪಶ್ಚಾತ್ತಾಪ ಮತ್ತು ಪ್ರಾರ್ಥನೆಯಿಂದ ಪಾಪಗಳ ನಿವೃತ್ತಿಯಾಗುವುದೆಂದು ಅಂಗೀಕರಿಸುವುದೂ ಕೂಡ ನಿಮ್ಮದೊಂದು ದೋಷವಾಗಿದೆ. ಇದೇ ಗ್ರಹಿಕೆಯಿಂದ ಜಗತ್ತಿನಲ್ಲಿ ಪಾಪಗಳು ಬಹಳವಾಗಿ ಹೆಚ್ಚಿಹೋಗಿವೆ. ಏಕೆಂದರೆ, ಪೌರಾಣಿಕರು ತೀರ್ಥಯಾತ್ರೆ–ಮೊದಲಾದುವುಗಳಿಂದಲೂ, ಜೈನರೂ ಕೂಡ ನವಕಾರಮಂತ್ರ, ಜಪ ಹಾಗೂ ತೀರ್ಥ–ಮೊದಲಾದುವು ಗಳಿಂದಲೂ, ಕ್ರೈಸ್ತರು ಏಸುವಿನ ಮೇಲೆ ನಂಬಿಕೆಯಿಡುವುದರಿಂದಲೂ, ಮುಸಲ್ಮಾನ ಜನರು "ತೋಬಾ" ಮಾಡುವುದರಿಂದಲೂ, ಫಲಭೋಗವಿಲ್ಲದೆಯೇ ಪಾಪ ನಿವೃತ್ತಿಯಾಗುವುದೆಂದು ಒಪ್ಪಿಕೊಳ್ಳುತ್ತಾರೆ. ಇದರಿಂದ ಪಾಪಗಳಿಂದ ಭಯವಿಲ್ಲದೆ, ಪಾಪಗಳಲ್ಲಿ ಪ್ರವೃತ್ತಿ ಬಹಳವಾಗಿ ಹೋಗಿದೆ. ಈ ವಿಷಯದಲ್ಲಿ ಬ್ರಾಹ್ಮಸಮಾಜಿಗಳೂ ಮತ್ತು ಪ್ರಾರ್ಥನಾಸಮಾಜಿಗಳೂ ಕೂಡ ಪೌರಾಣಿಕರು–ಮೊದಲಾದವರಂತೆ ಇದ್ದಾರೆ. ವೇದಗಳನ್ನು ಅಂಗೀಕರಿಸಿದ್ದಲ್ಲಿ, ಭೋಗವಿಲ್ಲದೆ ಪಾಪ–ಪುಣ್ಯಗಳ ನಿವೃತ್ತಿಯಾಗದು ಎಂದರಿತು, ಪಾಪಗಳಿಗೆ ಅಂಜುತ್ತಿದ್ದರು ಮತ್ತು ಧರ್ಮದಲ್ಲಿ ಸದಾ ಪ್ರವೃತ್ತರಾಗಿರುತ್ತಿದ್ದರು. ಫಲಭೋಗವಿಲ್ಲದೆಯೇ ನಿವೃತ್ತಿಯನ್ನಂಗೀಕರಿಸುವುದಾದರೆ, ಈಶ್ವರನು ಅನ್ಯಾಯಕಾರೀ–ಎಂದೇ ಸಿದ್ಧವಾಗುತ್ತದೆ.

(೮) ಜೀವನಿಗೆ ಅನಂತವಾದ ಉನ್ನತಿಯಾಗುವುದೆಂದು ನೀವು ಅಂಗೀಕರಿಸುವುದು ಎಂದಿಗೂ ಆಗಲಾರದ ಮಾತು. ಏಕೆಂದರೆ ಸೀಮಾಯುಕ್ತ (ದೇಶದ ಅಥವಾ ಪರಿಮಾಣದ ದೃಷ್ಟಿಯಿಂದ) ನಾದ ಜೀವನ ಗುಣ–ಕರ್ಮ–ಸ್ವಭಾವಗಳ ಫಲವೂ ಕೂಡ ಸೀಮಾಯುಕ್ತವೇ ಆಗುವುದು ಅವಶ್ಯವಾಗಿದೆ.

**ಪ್ರಶ್ನೆ:**– ಪರಮೇಶ್ವರನು ದಯಾಳುವು. ಸಸೀಮಕರ್ಮಗಳಿಗೆ ಅನಂತ ಫಲಕೊಟ್ಟುಬಿಡುವನು.

**ಉತ್ತರ:**– ಹೀಗೆ ಮಾಡಿದಲ್ಲಿ ಪರಮೇಶ್ವರನ ನ್ಯಾಯವು ಹಾಳಾಗಿ ಹೋದೀತು ಮತ್ತು ಸತ್ಕರ್ಮಗಳ ಉನ್ನತಿಯನ್ನೂ ಕೂಡ ಯಾವನೂ ಮಾಡುವುದಿಲ್ಲ. ಏಕೆಂದರೆ, ಸ್ವಲ್ಪ ಮಾತ್ರವಾದ ಸತ್ಕರ್ಮಕ್ಕೂ ಕೂಡ ಅನಂತ ಫಲವನ್ನು ಪರಮೇಶ್ವರನು ಕೊಟ್ಟುಬಿಡುವನು! ಮತ್ತು ಪಶ್ಚಾತ್ತಾಪದಿಂದ ಅಥವಾ ಪ್ರಾರ್ಥನೆಯಿಂದ ಪಾಪಗಳು ಎಷ್ಟೇ ಇರಲಿ, ಬಿಟ್ಟು ಹೋಗುವವು–ಎಂಬ ಈ ಬಗೆಯ ಮಾತುಗಳಿಂದ ಧರ್ಮಹಾನಿ ಮತ್ತು ಪಾಪ–ಕರ್ಮ ವೃದ್ಧಿಯಾಗುತ್ತದೆ.

**ಪ್ರಶ್ನೆ:**– ನಾವು ಸ್ವಾಭಾವಿಕ ಜ್ಞಾನವನ್ನು ವೇದಕ್ಕಿಂತ ದೊಡ್ಡದೆಂದು ಒಪ್ಪುತ್ತೇವೆ; ನೈಮಿತ್ತಿಕ ಜ್ಞಾನವನ್ನಲ್ಲ. ಏಕೆಂದರೆ, ಪರಮೇಶ್ವರಪ್ರದತ್ತವಾದ ಸ್ವಾಭಾವಿಕ ಜ್ಞಾನ ನಮ್ಮಲ್ಲಿ ಇಲ್ಲದೇ ಇದ್ದರೆ, ವೇದಗಳನ್ನೂ ಕೂಡ ಓದಲು–ಓದಿಸಲು, ತಿಳಿಯಲು–ತಿಳಿಸಲು ಹೇಗೆ ಶಕ್ತರಾಗುತ್ತಿದ್ದೆವು? ಆದುದರಿಂದ ನಮ್ಮಗಳ ಮತ ಬಹಳ ಉತ್ತಮವಾಗಿದೆ.

**ಉತ್ತರ:**– ಈ ನಿಮ್ಮ ಕಥನ ನಿರರ್ಥಕ. ಏಕೆಂದರೆ, ಯಾವುದು ಯಾವನಿಂದಲಾದರೂ ಕೊಡಲ್ಪಟ್ಟ ಜ್ಞಾನವಾಗಿರುತ್ತದೋ, ಅದು ಸ್ವಾಭಾವಿಕವಾದುದಲ್ಲ. ಯಾವುದು ಸ್ವಾಭಾವಿಕವೋ, ಅದು ಸಹಜಜ್ಞಾನವಾಗಿರುತ್ತದೆ. ಮತ್ತು ಅದು ಹೆಚ್ಚಲಾರದು; ಕಡಿಮೆಯೂ ಆಗಲಾರದು. ಅದರಿಂದ ಯಾವನೂ ಉನ್ನತಿ ಹೊಂದಲಾರನು. ಏಕೆಂದರೆ, ಕಾಡುಮನುಷ್ಯರಲ್ಲಿಯೂ ಸ್ವಾಭಾವಿಕ ಜ್ಞಾನವಿದೆ. ಅವರು ಅದೇಕೆ ತಮ್ಮ ಉನ್ನತಿಯನ್ನು ಸಾಧಿಸಲಾರದವರಾಗಿದ್ದಾರೆ? ಮತ್ತು ಯಾವುದು ನೈಮಿತ್ತಿಕ ಜ್ಞಾನವೋ, ಅದೇ ಉನ್ನತಿಯ ಕಾರಣವಾಗಿದೆ. ನೋಡಿರಿ, ನೀವು ಮತ್ತು ನಾವು ಬಾಲ್ಯಾವಸ್ಥೆಯಲ್ಲಿ ಕರ್ತವ್ಯ–ಅಕರ್ತವ್ಯ, ಮತ್ತು ಧರ್ಮ–ಅಧರ್ಮ–ಯಾವುದನ್ನೂ ಸರಿಸರಿಯಾಗಿ ತಿಳಿದುಕೊಳ್ಳುತ್ತಿರಲಿಲ್ಲ. ಯಾವಾಗ ನಾವು ವಿದ್ವಾಂಸರುಗಳಿಂದ ಓದಿದೆವೋ, ಆಗಲೇ ಕರ್ತವ್ಯಾಕರ್ತವ್ಯ ಮತ್ತು ಧರ್ಮಾಧರ್ಮವನ್ನು ತಿಳಿದುಕೊಳ್ಳಲಾರಂಭಿಸಿದೆವು. ಆದುದರಿಂದ, ಸ್ವಾಭಾವಿಕ ಜ್ಞಾನವನ್ನು ಸರ್ವೋತ್ಕೃಷ್ಟವೆಂದು ಗ್ರಹಿಸುವುದು ಸರಿಯಲ್ಲ.

---

೨೩೮. ಅಷ್ಟಮ ಸಮುಲ್ಲಾಸದಲ್ಲಿ

೨೩೯. ಸಪ್ತಮ ಸಮುಲ್ಲಾಸದಲ್ಲಿ

(೯) ನೀವುಗಳು ಪೂರ್ವಜನ್ಮ-ಪುನರ್ಜನ್ಮಗಳನ್ನು ಅಂಗೀಕರಿಸದಿರುವುದನ್ನು ಕ್ರೈಸ್ತ-ಮುಸಲ್ಮಾನರಿಂದ ತೆಗೆದುಕೊಂಡಿರಬಹುದು. ಇದರ ಉತ್ತರವನ್ನೂ ಕೂಡ ಪುನರ್ಜನ್ಮದ[೨೪೦] ವ್ಯಾಖ್ಯಾನದಲ್ಲಿ ತಿಳಿದುಕೊಳ್ಳಿರಿ. ಆದರೆ, ಜೀವನು ಶಾಶ್ವತನು, ಎಂದರೆ, ನಿತ್ಯನು; ಮತ್ತು ಅವನ ಕರ್ಮಗಳೂ ಕೂಡ ಪ್ರವಾಹರೂಪದಿಂದ ನಿತ್ಯವಾಗಿವೆ. ಕರ್ಮ ಮತ್ತು ಕರ್ಮವಂತನ ಸಂಬಂಧ ನಿತ್ಯವಾಗಿರುತ್ತದೆ-ಎಂದಿಷ್ಟನ್ನಂತೂ ತಿಳಿದುಕೊಳ್ಳಿರಿ. ಆ ಜೀವನು ಎಲ್ಲಿಯಾದರೂ ನಿಷ್ಕರ್ಮನಾಗಿ ಕುಳಿತಿದ್ದನೋ? ಅಥವಾ ಕುಳಿತಿರುವನೋ? ಮತ್ತು ನಿಮ್ಮ ಕಥನದಿಂದ ಪರಮೇಶ್ವರನೂ ನಿಷ್ಕರ್ಮನಾಗುತ್ತಾನೆ. ಪೂರ್ವಾಪರ ಜನ್ಮಗಳನ್ನು ಒಪ್ಪದಿರುವುದರಿಂದ ಕೃತಹಾನಿ[೨೪೧] ಮತ್ತು ಅಕೃತಾಭಾಗ್ಯಮ[೨೪೨], ನೈರ್ಘೃಣ್ಯ[೨೪೩] ಮತ್ತು ವೈಷಮ್ಯ[೨೪೪] ದೋಷಗಳೂ ಕೂಡ ಈಶ್ವರನಲ್ಲಿ ಬರುತ್ತವೆ. ಏಕೆಂದರೆ, ಜನ್ಮವಾಗದೇ ಇದ್ದರೆ, ಪಾಪ-ಪುಣ್ಯಗಳ ಫಲಭೋಗಕ್ಕೆಯೇ ಹಾನಿಯುಂಟಾದೀತು. ಏತಕ್ಕೆಂದರೆ, ಯಾವ ರೀತಿ ಬೇರೆಯವನಿಗೆ ಸುಖ-ದುಃಖಗಳನ್ನೂ, ಹಾನಿ-ಲಾಭಗಳನ್ನೂ ಉಂಟುಮಾಡಿರುತ್ತಾನೋ, ಅದೇ ರೀತಿ ಅದರ ಫಲಗಳನ್ನು ಪಡೆಯಲು ಶರೀರಧಾರಣೆಮಾಡದೇ ಸಾಧ್ಯವಿಲ್ಲ. ಎರಡನೆಯದಾಗಿ, ಪೂರ್ವಜನ್ಮದ ಪಾಪ-ಪುಣ್ಯಗಳಿಲ್ಲದೆ, ಸುಖ-ದುಃಖಗಳ ಪ್ರಾಪ್ತಿ ಈ ಜನ್ಮದಲ್ಲಿ ಹೇಗೆ ತಾನೇ ಆದೀತು? ಪೂರ್ವಜನ್ಮದ ಪಾಪ-ಪುಣ್ಯಗಳಿಗೆ ಅನುಸಾರ ಆಗದೇ ಇದ್ದರೆ, ಪರಮೇಶ್ವರನು ಅನ್ಯಾಯಕಾರಿಯಾದಾನು ಮತ್ತು ಅನುಭವಿಸದೇ ಕರ್ಮಫಲವು ನಾಶವಾದಂತೆಯೇ ಆಗುವುದು. ಆದುದರಿಂದ ನಿಮ್ಮಗಳ ಈ ಮಾತು ಕೂಡ ಒಳ್ಳೆಯದಲ್ಲ.

(೧೦) ಮತ್ತು ಇನ್ನೂ ಒಂದು ವಿಷಯವೆಂದರೆ, ಈಶ್ವರನ ಹೊರತು, ದಿವ್ಯಗುಣಯುಕ್ತವಾದ ಪದಾರ್ಥಗಳನ್ನೂ ಮತ್ತು ವಿದ್ವಜ್ಜನರನ್ನೂ ಕೂಡ 'ದೇವತೆಗಳು, ದೇವಜನರು' - ಎಂದು ಅಂಗೀಕರಿಸದಿರುವುದು ಸರಿಯಲ್ಲ. ಏಕೆಂದರೆ, ಪರಮೇಶ್ವರನು ಮಹಾದೇವನಾಗಿದ್ದಾನೆ; ಮತ್ತು ಬೇರೆ ಯಾವ ದೇವತೆಯೂ ಇಲ್ಲವಾಗಿದ್ದರೆ, ದೇವಜನರ, ದೇವತೆಗಳ ಸ್ವಾಮಿಯಾದ ಕಾರಣ ಮಹಾದೇವನು-ಎನ್ನಿಸಿಕೊಳ್ಳುತ್ತಿದ್ದನಾದರೂ ಏಕೆ?

(೧೧) ಅಗ್ನಿಹೋತ್ರ ಮೊದಲಾದ ಪರೋಪಕಾರಕ ಕರ್ಮಗಳನ್ನು ಕರ್ತವ್ಯವೆಂದು ತಿಳಿಯದಿರುವುದೂ ಒಳಿತಲ್ಲ.

(೧೨) ಋಷಿ-ಮಹರ್ಷಿಗಳು ಮಾಡಿರುವ ಉಪಾಕಾರಗಳನ್ನು ಒಪ್ಪದೆ, ಏಸು ಮೊದಲಾದವರ ಕಡೆಗೆ ಓಲುವುದು ಒಳ್ಳೆಯದಲ್ಲ.[೨೪೫]

(೧೩) ಮತ್ತು ಕಾರಣವಿದ್ಯೆ[೨೪೬]ಯಾದ ವೇದಗಳಿಲ್ಲದೆಯೇ, ಬೇರೆ ಕಾರ್ಯ ವಿದ್ಯೆಗಳ ಪ್ರವೃತ್ತಿಯನ್ನು ಅಂಗೀಕರಿಸುವುದು ಸರ್ವಥಾ ಅಸಂಭವವಾಗಿದೆ.

(೧೪) ಮತ್ತು ಯಾವುದು ವಿದ್ಯೆಯ ಚಿಹ್ನೆಯಾಗಿದೆಯೋ, ಆ ಯಜ್ಞೋ ಪವೀತವನ್ನೂ ಮತ್ತು ಶಿಖೆಯನ್ನೂ ಬಿಟ್ಟು, ಮುಸಲ್ಮಾನ - ಕ್ರೈಸ್ತರಂತೆ ಆಗಿ ಮೆರೆಯುವುದೂ ಕೂಡ ವ್ಯರ್ಥವಾಗಿದೆ. ಷರಾಯಿ - ಮೊದಲಾದ ವಸ್ತ್ರಗಳನ್ನಿಡುವಾಗ ಮತ್ತು 'ಪದಕ'ಗಳಿಗಾಗಿ ಇಚ್ಛಿಸುವಾಗ, ಯಜ್ಞೋಪವೀತ ಮೊದಲಾದುದರ ಭಾರ ಬಹುವಾಗಿದ್ದಿತೇನು?

---

೨೪೦. ಈ ಗ್ರಂಥದ ನವಮ ಸಮುಲ್ಲಾಸವನ್ನು ನೋಡಿ.

೨೪೧. ಮುನ್ನ ಮಾಡಿದುದರ ಫಲ ಸಿಕ್ಕದಿರುವುದು

೨೪೨. ಮಾಡದೇ ಇರುವ ಫಲ ಸಿಕ್ಕಿ ಹೋಗುವುದು

೨೪೩. ನಿರ್ದಯತ್ವ

೨೪೪. ಪಕ್ಷಪಾತ

೨೪೫. In his lectureson " India asks who is christ? delivered on 9th April 1879 ijn Calcutta Town Hall, Keshavchandra sen said,

"India is destined to become Christian and cannot escape her destiny. You, my countrymen, cannot help accepting Christ in the spirit of your national scriptures

In another part of the lecture, we find him using these remarkable words

"Gentlemen! You cannot deny that your hearts have been touched, conqurered, and subjugated by a superior power. That Power need I tell you is Christ. It is Christ who rules British India and not the British Government. England has sent out a tremendous moral force in the life and character of that mighty prophet to conquer and hold his vast empire. None but Jesus, none but jesus ever deserved this bright, his precious diadem India and jesus shall have it"

*Monier williams*

*Religious Thought and Life in India p.514*

೨೪೬. ಕಾರಣ ವಿದ್ಯೆ ಎಂದರೆ, ಬೀಜರೂಪದಲ್ಲಿರುವ ಮೂಲವಿದ್ಯೆ. ಕಾರ್ಯವಿದ್ಯೆ ಎಂದರೆ, ಅದ ಆಧಾರದಿಂದ, ವಿಸ್ತೃತವಾದ ವಿದ್ಯೆ.

(೧೫) ಮತ್ತು ಬ್ರಹ್ಮನಿಂದ ಆರಂಭಿಸಿ, ಪರಂಪರೆಯಾಗಿ ಆರ್ಯಾವರ್ತದಲ್ಲಿ ಬಹುಜನ ವಿದ್ವಾಂಸರು ಉದಿಸಿ, ಹೋಗಿದ್ದಾರೆ. ಅವರ ಪ್ರಶಂಸೆಯನ್ನು ಮಾಡದೆ, ಐರೋಪ್ಯರ ಸ್ತುತಿಯಲ್ಲಿಯೇ ತತ್ಪರರಾಗಿರುವುದು ಪಕ್ಷಪಾತ ಮತ್ತು ಹೊಗಳಿಕೆ – ಎಂದಲ್ಲದೆ ಮತ್ತೇನು ಎನ್ನಲಾದೀತು?

(೧೬) ಮತ್ತು ಬೀಜ–ಮೊಳಕೆಗಳಂತೆ ಜಡ–ಚೇತನಗಳ ಯೋಗದಿಂದ ಜೀವೋತ್ಪತ್ತಿಯನ್ನು ಅಂಗೀಕರಿಸುವುದು, ಉತ್ಪತ್ತಿಗೆ (ಜನ್ಮಕ್ಕೆ) ಮುನ್ನ ಜೀವತತ್ತ್ವದ (ಇರುವಿಕೆ)ಯನ್ನು ಒಪ್ಪದಿರುವುದು ಹಾಗೂ ಉತ್ಪನ್ನನಾದವನ ನಾಶವನ್ನು ಒಪ್ಪದಿರುವುದು ಪೂರ್ವಾಪರ ವಿರುದ್ಧವಾಗಿದೆ. ಉತ್ಪತ್ತಿಗೆ ಮುನ್ನ ಚೇತನ ಮತ್ತು ಜಡವಸ್ತು ಇರಲಿಲ್ಲವಾದರೆ, ಜೀವನು ಎಲ್ಲಿಂದ ಬಂದನು? ಮತ್ತು ಸಂಯೋಗವಾದುದು ಯಾವ ವಸ್ತುಗಳದು? ಇವೆರಡನ್ನೂ ಸನಾತನವೆಂದು ಒಪ್ಪಿಕೊಳ್ಳುವಿರಾದರೆ, ಸರಿ. ಆದರೆ, ಸೃಷ್ಟಿಗೆಮುನ್ನ ಪರಮೇಶ್ವರನನ್ನುಳಿದು ಬೇರೆ ಯಾವ ತತ್ತ್ವದ ಇರುವಿಕೆಯನ್ನೂ ಒಪ್ಪದಿರುವ ನಿಮ್ಮ ಈ ಪಕ್ಷ ವ್ಯರ್ಥವಾಗಿ ಹೋಗುವುದು.

ಆದುದರಿಂದ, ಉನ್ನತಿಯನ್ನು ಹೊಂದಬಯಸುವಿರಾದರೆ, "ಆರ್ಯಸಮಾಜ"ದೊಂದಿಗೆ ಸೇರಿ, ಅದರ ಉದ್ದೇಶ್ಯಾನುಸಾರವಾಗಿ ಆಚರಣಮಾಡುವುದನ್ನು ಸ್ವೀಕರಿಸಿರಿ. ಇಲ್ಲದಿದ್ದರೆ, ಕೈಗೆ ಏನೂ ಸಿಕ್ಕುವುದಿಲ್ಲ. ಏಕೆಂದರೆ, ಯಾವ ದೇಶದ ಪದಾರ್ಥಗಳಿಂದ ನಮ್ಮ ಶರೀರಗಳಾಗಿವೆಯೋ, ಈಗಲೂ ಪಾಲನೆಯಾಗುತ್ತಿದೆಯೋ, ಮುಂದಕ್ಕೂ ಆಗುವುದೋ, ಅದರ ಉನ್ನತಿಯನ್ನು ತನು–ಮನ–ಧನಗಳಿಂದ ಎಲ್ಲರೂ ಒಟ್ಟು ಸೇರಿ, ಪ್ರೀತಿಯಿಂದ ಸಾಧಿಸಬೇಕಾದುದು ನಮಗೂ ಮತ್ತು ನಿಮಗೂ ಅತಿ ಉಚಿತವಾಗಿದೆ. ಆದುದರಿಂದ, ಹೇಗೆ ಆರ್ಯಸಮಾಜವು ಆರ್ಯಾವರ್ತದೇಶದ ಉನ್ನತಿಗೆ ಕಾರಣವಾಗಿದೆಯೋ, ಹಾಗೆ ಬೇರೆ ಯಾವುದೂ ಆಗಲಾರದು. ಈ ಸಮಾಜಕ್ಕೆ ತಕ್ಕಂತೆ ಸಹಾಯ ಕೊಡುವಿರಾದರೆ, ಬಹಳ ಒಳ್ಳೆಯದು. ಏಕೆಂದರೆ, ಸಮಾಜದ ಸೌಭಾಗ್ಯವನ್ನು ಸಂವರ್ಧಿಸುವುದು ಸಮುದಾಯದ ಕಾರ್ಯವಾಗಿದೆ; ಒಬ್ಬನದಲ್ಲ.

**ಪ್ರಶ್ನೆ :–** ತಾವು ಎಲ್ಲರ ಖಂಡನವನ್ನೂ ಮಾಡುತ್ತಲೇ ಹೋಗುತ್ತೀರಿ; ಆದರೆ, ತಮ್ಮ ತಮ್ಮ ಧರ್ಮದಲ್ಲಿ ಎಲ್ಲರೂ ಒಳ್ಳೆಯವರೇ, ಯಾವುದರ ಖಂಡನವನ್ನೂ ಮಾಡಬಾರದು. ಮಾಡುವಿರಾದರೆ, ತಾವು ಇವರಿಗಿಂತ ವಿಶೇಷವಾಗಿ ಏನು ಹೇಳುತ್ತೀರಿ? ಹೇಳುವಿರಾದರೆ, ತಮಗಿಂತ ಅಧಿಕನಾದ, ಅಥವಾ ತಮಗೆ ಸಮನಾದ ಯಾವ ಪುರುಷನೂ ಇರಲಿಲ್ಲವೇನು? ಮತ್ತು ಇಲ್ಲವೇನು? ಹೀಗೆ ಅಭಿಮಾನಪಡುವುದು ತಮಗೆ ಉಚಿತವಲ್ಲ. ಏಕೆಂದರೆ, ಪರಮಾತ್ಮನ ಸೃಷ್ಟಿಯಲ್ಲಿ ಒಬ್ಬರಿಗಿಂತ ಅಧಿಕ ಒಬ್ಬರು, ಸಮನಾದವರು ನ್ಯೂನರು ಬಹಳ ಮಂದಿಗಳಿದ್ದಾರೆ. ಹೆಮ್ಮೆಪಡುವುದು ಯಾರಿಗೂ ಉಚಿತವಲ್ಲ.[೨೪೭]

**ಉತ್ತರ :–** ಧರ್ಮವು ಎಲ್ಲರಿಗೂ ಒಂದೇ ಇರುತ್ತದೋ ಅಥವಾ ಅನೇಕವೋ? ಅನೇಕವಾಗಿರುತ್ತವೆ ಎನ್ನುವಿರಾದರೆ, ಒಂದಕ್ಕೊಂದು ವಿರುದ್ಧವಾಗಿರುತ್ತವೋ ಅಥವಾ ಅವಿರುದ್ಧವಾಗಿಯೋ? ವಿರುದ್ಧವಾಗಿರುತ್ತವೆ–ಎನ್ನುವಿರಾದರೆ, ಒಂದನ್ನು ಬಿಟ್ಟು ಇನ್ನೊಂದು ಧರ್ಮವಾಗಲಾರದು. ಮತ್ತು ಅವಿರುದ್ಧವಾಗಿರುತ್ತವೆ–ಎನ್ನವಿರಾದರೆ, ಬೇರೆ ಬೇರೆಯಿರುವುದು ವ್ಯರ್ಥವಾಗಿದೆ. ಆದುದರಿಂದ ಧರ್ಮ ಮತ್ತು ಅಧರ್ಮ ಒಂದೊಂದೇ ಆಗಿರುತ್ತವೆ; ಅನೇಕವಲ್ಲ. ನಾವು ವಿಶೇಷವಾಗಿ ಹೇಳುವುದೆಂದರೆ ಇದೇ ಆಗಿದೆ. ಸಮಸ್ತ ಸಂಪ್ರದಾಯಗಳ ಉಪದೇಶಗಳನ್ನೂ ಯಾವನಾದರೂ ರಾಜನು ಸಂಚಯ ಮಾಡುವನಾದರೆ, ಒಂದು ಸಾವಿರಕ್ಕಿಂತ ಕಡಿಮೆಯಿರಲಾರದು. ಆದರೆ, ಇವುಗಳ ಮುಖ್ಯಭಾಗಗಳನ್ನು ನೋಡುವಿರಾದರೆ, ಪೌರಾಣಿಕ, ಬೈಬಲ್–ಆಧಾರಿತ, ಜೈನ ಮತ್ತು ಕುರಾನ್–ಆಧಾರಿತ–ಈ ನಾಲ್ಕೇ ಇರುತ್ತವೆ. ಏಕೆಂದರೆ, ಈ ನಾಲ್ಕರಲ್ಲೇ ಸರ್ವ ಸಂಪ್ರದಾಯಗಳೂ ಬಂದು ಹೋಗುತ್ತವೆ.

ಯಾವನಾದರೂ ರಾಜನು ಅವರ[೨೪೮] ಸಭೆಯನ್ನು ಏರ್ಪಡಿಸಿ, ಯಾವನಾದರೂ ಜಿಜ್ಞಾಸುವಾಗಿ, ಮೊದಲು ವಾಮಮಾರ್ಗಿಯನ್ನು–ಮಹಾಶಯರೇ! ನಾನು ಈವರೆಗೆ ಯಾವನನ್ನೂ ಗುರುವಾಗಿ ಮಾಡಿಕೊಳ್ಳಲಿಲ್ಲ; ಮತ್ತು ಯಾವ

---

೨೪೭. ಈ ವಾದ ಸರಣಿಯನ್ನು ಆಧುನಿಕ ಸಂಪ್ರದಾಯವಾದಿಗಳು, ಹೊಸ "ಭಗವಾನರು" ಹೊಸ ಸುಧಾರಕರು, ಆಧುನಿಕ ವಿದ್ಯಾವಂತ ಮಠಾಧೀಶರು, ಗಾಂಧೀವಾದಿಗಳು, ಮೊದಲಾದವರು ಹೂಡಿದ್ದಾರೆ. ಅವರಿಗೆ ಸತ್ಯವನ್ನು ತಿಳಿದು, ಅಂಗೀಕರಿಸುವ ಪ್ರಯತ್ನ ಮಾಡುವುದಕ್ಕೆ ಧೈರ್ಯ ಸಾಲದು! ಜನರ ಹಿಂಡು ಅವರಿಗೆ ಜಯಕಾರ ಹಾಕುತ್ತಲೋ, ಅವರಿಗೆ ಕಾಣಿಕೆ ದಾನಾದಿಗಳನ್ನು ಅರ್ಪಿಸುತ್ತಲೋ, ಅವರ ಆಶ್ರಮಗಳನ್ನು ನವ–ಅಮೆರಿಕನ್ ಶೈಲಿಯಲ್ಲಿ ನಿರ್ಮಿಸುತ್ತಲೋ ಅವರ ಪ್ರವಚನಗಳಿಗೆ ಗುಂಪು–ಗುಂಪಾಗಿ ಬಂದು ನೆರೆಯುತ್ತಲೋ ಇದ್ದರೆ ಸಾಕು !

೨೪೮. ಎಂದರೆ, ಸಂಪ್ರದಾಯವಾದಿಗಳು.

ಧರ್ಮವನ್ನೂ ಗ್ರಹಿಸಿಲ್ಲ. ಹೇಳಿರಿ. ಯಾವುದನ್ನು ನಾನು ಗ್ರಹಿಸಬಹುದೋ ಅಂತಹ, ಎಲ್ಲ ಧರ್ಮಗಳಿಗಿಂತ ಉತ್ತಮವಾದ ಧರ್ಮಯಾರದು?**"** ಎಂದು ಕೇಳಬೇಕು.

**ವಾಮಮಾರ್ಗಿ:–** ನಮ್ಮದು.

**ಜಿಜ್ಞಾಸು:–** ಈ ೯೯ ಹೇಗಿವೆ.

ಎಲ್ಲವೂ ಸುಳ್ಳು ಮತ್ತು ನರಕಕ್ಕೆ ಒಯ್ಯುವಂತಹವು. ಏಕೆಂದರೆ, **"ಕೌಲಾತ್ ಪರತರಂ ನಹಿ"**[೨೪೯] – ಈ ವಚನದ ಪ್ರಮಾಣದಿಂದ, ನಮ್ಮ ಧರ್ಮಕ್ಕಿಂತ ಮಿಗಿಲಾದ ಯಾವ ಧರ್ಮವೂ ಇಲ್ಲ.

**ಜಿಜ್ಞಾಸು:–** ತಮ್ಮ ಧರ್ಮವೇನು?

**ವಾಮಮಾರ್ಗಿ:–** ಭಗವತಿಯನ್ನು ಅಂಗೀಕರಿಸುವುದು, ಮದ್ಯಮಾಂಸಾದಿ ಪಂಚಮಕಾರಗಳ ಸೇವನ, ಮತ್ತು ರುದ್ರಯಾಮಲ ಮೊದಲಾದ ೬೪ ತಂತ್ರಗಳನ್ನು ಒಪ್ಪುವುದು–ಮೊದಲಾದುವುಗಳು. ನೀನು ಮುಕ್ತಿಯನ್ನಿಚ್ಛಿಸುವೆಯಾದರೆ, ನಮ್ಮ ಅನುಯಾಯಿಯಾಗಿಬಿಡು.

**ಜಿಜ್ಞಾಸು:–** ಒಳ್ಳೆಯದು. ಆದರೆ, ಬೇರೆ ಮಹಾತ್ಮರುಗಳ ದರ್ಶನವನ್ನು ಮಾಡಿ ಪ್ರಶ್ನೆ–ವಿಚಾರಣೆಮಾಡಿ ಬರುವೆನು. ಆ ಮೇಲೆ ಯಾವುದರಲ್ಲಿ ನನಗೆ ಶ್ರದ್ಧೆ ಮತ್ತು ಪ್ರೀತಿ ಹುಟ್ಟುವುದೋ, ಅದರ ಅನುಯಾಯಿಯಾಗುವೆನು.

**ವಾಮಮಾರ್ಗಿ:–** ಅಯ್ಯೋ, ಭ್ರಾಂತಿಯಲ್ಲೇಕೆ ಬಿದ್ದಿರುವೆ? ಈ ಜನರು ನಿನ್ನನ್ನು ದಾರಿತಪ್ಪಿಸಿ, ತಮ್ಮ ಬಲೆಯಲ್ಲಿ ಸಿಕ್ಕಿಸಿಕೊಳ್ಳುವರು. ಯಾವನ ಬಳಿಗೂ ಹೋಗದಿರು. ನಮಗೇ ಶರಣಾಗತನಾಗು. ಇಲ್ಲದಿದ್ದರೆ, ಪಶ್ಚಾತ್ತಾಪ ಪಡುವೆ. ನೋಡು, ನಮ್ಮ ಮತದಲ್ಲಿ ಭೋಗ ಮತ್ತು ಮೋಕ್ಷ–ಎರಡೂ ಇವೆ.

**ಜಿಜ್ಞಾಸು:–** ಒಳ್ಳೆಯದು. ನೋಡಿಯಾದರೂ ಬರುವೆನು.

ಮುಂದೆ ನಡೆದು, ಶೈವನ ಬಳಿ ತೆರಳಿ, ಪ್ರಶ್ನಿಸಿದರೆ, ಇಂತಹದೇ ಉತ್ತರವನ್ನು ಅವನೂ ಕೊಟ್ಟನು. **"**ಶಿವ, ರುದ್ರಾಕ್ಷ, ಭಸ್ಮಧಾರಣ ಮತ್ತು ಲಿಂಗಾರ್ಚನೆಯಿಲ್ಲದೆ, ಮುಕ್ತಿ ಎಂದಿಗೂ ಆಗುವುದಿಲ್ಲ**"**.– ಎಂದಿಷ್ಟು ಮಾತ್ರ ವಿಶೇಷವಾಗಿ ಹೇಳಿದನು. ಅವನು ಆತನನ್ನೂ ಬಿಟ್ಟು ನವೀನ ವೇದಾಂತಿಯ ಹತ್ತಿರ ಹೋದನು.

**ಜಿಜ್ಞಾಸು:–** ಹೇಳಿರಿ ಮಹೋದಯರೇ! ತಮ್ಮ ಧರ್ಮವೇನು?

**ವೇದಾಂತಿ:–** ನಾವು ಧರ್ಮ–ಅಧರ್ಮ ಯಾವುದನ್ನೂ ಒಪ್ಪುವುದಿಲ್ಲ. ನಾವು ಸಾಕ್ಷಾತ್ ಬ್ರಹ್ಮವಾಗಿದ್ದೇವೆ. ನಮ್ಮಲ್ಲಿ ಧರ್ಮಾಧರ್ಮವೆಲ್ಲಿದೆ? ಈ ಜಗತ್ತೆಲ್ಲವೂ ಮಿಥ್ಯೆ. ಮತ್ತು ನೀನು ಜ್ಞಾನಿಯೂ, ಶುದ್ಧ ಚೇತನನೂ ಆಗಬಯಸುವೆಯಾದರೆ, ತನ್ನನ್ನೇ ಬಹ್ಮವೆಂದು ಒಪ್ಪಿಕೊಳ್ಳು. ಜೀವಭಾವವನ್ನು ಬಿಟ್ಟು ನಿತ್ಯಮುಕ್ತನಾಗಿ ಹೋಗುವೆ.

**ಜಿಜ್ಞಾಸು:–** ನೀವು ಬ್ರಹ್ಮವಾಗಿದ್ದರೆ, ನಿತ್ಯ ಮುಕ್ತರಾಗಿದ್ದರೆ, ಬ್ರಹ್ಮದ ಗುಣ–ಕರ್ಮ–ಸ್ವಭಾವಗಳು ನಿಮ್ಮಲ್ಲಿ ಇಲ್ಲವೇಕೆ? ಮತ್ತು ಶರೀರದಲ್ಲಿ ಏಕೆ ಕುಳಿತಿದ್ದೀರಿ?

**ವೇದಾಂತಿ:–** ನಿನಗೆ ಶರೀರಗಳು ಕಾಣುತ್ತವೆ. ಆದುದರಿಂದಲೇ ನೀನು ಭ್ರಾಂತನಾಗಿದ್ದೀಯೆ. ನಮಗೆ ಬ್ರಹ್ಮವನ್ನುಳಿದು ಬೇರೆ ಏನೂ ಕಾಣಿಸುವುದಿಲ್ಲ.

**ಜಿಜ್ಞಾಸು:–** ನೋಡುವವರಾದ ನೀವು ಯಾರು? ಮತ್ತು ಏನನ್ನು ನೋಡುತ್ತೀರಿ.

**ವೇದಾಂತಿ:–** ನೋಡುವ ವಸ್ತುವೆಲ್ಲವೂ ಬ್ರಹ್ಮ ಮತ್ತು ಬ್ರಹ್ಮವನ್ನು ಬ್ರಹ್ಮ ನೋಡುತ್ತದೆ.

**ಜಿಜ್ಞಾಸು:–** ಎರಡು ಬ್ರಹ್ಮಗಳಿವೆಯೇ?

---

೨೪೯. ಕುಲಾರ್ಣವ ತಂತ್ರ –ಯು.ಮೀ.

**ವೇದಾಂತಿ:–** ಎಲ್ಲ. ತನ್ನನ್ನು ತಾನೇ ನೋಡಿಕೊಳ್ಳುತ್ತದೆ.

**ಜಿಜ್ಞಾಸು:–** ಯಾವನಾದರೂ ತನ್ನ ಹೆಗಲ ಮೇಲೆ ತಾನೇ ಏರಬಲ್ಲನೇ? ನಿಮ್ಮ ಮಾತಿಗೆ ಅರ್ಥವಿಲ್ಲ. ಕೇವಲ ಹುಚ್ಚಿನ ಮಾತಾಗಿದೆ.

ಅವನು ಮುಂದೆ ನಡೆದು ಜೈನರ ಬಳಿಹೋಗಿ ಕೇಳಿದನು. ಅವರೂ ಹಾಗೆಯೇ ಹೇಳಿದರು. ಆದರೆ "ಜಿನಧರ್ಮ ಒಂದನ್ನು ಬಿಟ್ಟರೆ, ಉಳಿದವೆಲ್ಲಾ ಕೃತ್ರಿಮ. ಜಗತ್ಕರ್ತೃವಾದ ಅನಾದಿ ಈಶ್ವರನಾವನೂ ಇಲ್ಲ. ಜಗತ್ತು ಅನಾದಿಕಾಲದಿಂದ ಇದ್ದುದಿದ್ದಂತೆಯೇ ಇದೆ; ಮತ್ತು ಹಾಗೆಯೇ ಇರುವುದು. ಬಾ. ನೀನು ನಮ್ಮ ಅನಯಾಯಿಯಾಗು. ಏಕೆಂದರೆ ನಾವು ಸಮ್ಯಕ್ತಿ ್ವಗಳು; ಎಂದರೆ ಎಲ್ಲ ರೀತಿಯಿಂದಲೂ ಉತ್ತಮರಾಗಿದ್ದೇವೆ. ಉತ್ತಮವಾದ ಮಾತುಗಳನ್ನೊಪ್ಪುತ್ತೇವೆ. ಜೈನಮಾರ್ಗದಿಂದ ಬೇರೆಯಾದ ಎಲ್ಲರೂ ಮಿಥ್ಯಾತ್ವಿಗಳಾಗಿದ್ದರು".–ಎಂದಿಷ್ಟು ವಿಶೇಷವನ್ನು ಹೇಳಿದರು.

ಮುಂದೆ ನಡೆದು ಕ್ರೈಸ್ತನನ್ನು ಕೇಳಿದನು. ಅವನು ವಾಮಮಾರ್ಗಿಯಂತೆಯೇ ಪ್ರಶ್ನೋತ್ತರಗಳನ್ನು ಮಾಡಿದನು. "ಮನುಷ್ಯರೆಲ್ಲರೂ ಪಾಪಿಗಳು. ತಮ್ಮ ಸಾಮರ್ಥ್ಯದಿಂದ ಪಾಪ ಬಿಟ್ಟು ಹೋಗುವುದಿಲ್ಲ. ಏಸುವಿನ ಮೇಲೆ ನಂಬಿಕೆಯನ್ನಿಡದೆ, ಪವಿತ್ರನಾಗಿ ಮುಕ್ತಿಯನ್ನು ಹೊಂದಲಾರನು. ಏಸುವು ಎಲ್ಲರ ಪ್ರಾಯಶ್ಚಿತ್ತಕ್ಕಾಗಿ ತನ್ನ ಪ್ರಾಣವನ್ನರ್ಪಿಸಿ ದಯೆಯನ್ನು ತೋರಿಸಿದ್ದಾನೆ. ನೀನು ನಮ್ಮ ಶಿಷ್ಯನೇ ಆಗಿಬಿಡು".– ಎಂದಿಷ್ಟು ವಿಶೇಷವನ್ನು ಹೇಳಿದನು.

ಜಿಜ್ಞಾಸುವು ಇದನ್ನು ಕೇಳಿ, ಮೌಲವೀ ಸಾಹೇಬರ ಬಳಿ ಹೋದನು. ಅವರೊಂದಿಗೂ ಇದೇ ರೀತಿ ಪ್ರಶ್ನೋತ್ತರಗಳಾದವು. "ಅದ್ವಿತೀಯನಾದ ಖುದಾ, ಅವನ ಪೈಗಂಬರ್, ಹಾಗೂ ಕುರಾನ್ ಶರೀಫನ್ನು ಅಂಗೀಕರಿಸದೆ ಯಾವನೂ ಮೋಕ್ಷವನ್ನು ಪಡೆಯಲಾರನು. ಯಾವನು ಈ ಮತವನ್ನು ಒಪ್ಪುವುದಿಲ್ಲವೋ ಅವನು ನಾರಕೀಯನು ಮತ್ತು ಕಾಫಿರನಾಗುತ್ತಾನೆ; ವಧಾರ್ಹನಾಗಿರುತ್ತಾನೆ".–ಇದಿಷ್ಟು ವಿಶೇಷವನ್ನು ಹೇಳಿದರು.

ಜಿಜ್ಞಾಸುವು ಇದನ್ನು ಕೇಳಿ, ವೈಷ್ಣವನ ಬಳಿ ಹೋದನು. ಅದೇರೀತಿ ಸಂವಾದ ನಡೆಯಿತು. "ನಮ್ಮ ನಾಮಗಳನ್ನೂ ಮುದ್ರೆಗಳನ್ನೂ ನೋಡಿ, ಯಮರಾಜನು ಹೆದರುತ್ತಾನೆ".– ಎಂಬಿಷ್ಟು ವಿಶೇಷವನ್ನು ಹೇಳಿದನು.

ಜಿಜ್ಞಾಸು ಮನಸ್ಸಿನಲ್ಲಿ "ಸೊಳ್ಳೆಗಳು, ನೊಣಗಳು, ಪೋಲೀಸ್ ಸಿಪಾಯಿಗಳು, ಕಳ್ಳರು, ಡಕಾಯಿತರು ಮತ್ತು ಶತ್ರುಗಳು ಹೆದರದಿರುವಾಗ, ಯಮರಾಜನ ಗಣಗಳು ಹೆದರುವವೇಕೆ?"–ಎಂದು ತಿಳಿದುಕೊಂಡನು.

ಪುನಃ ಮುಂದೆ ಹೊರಟರೆ, ಎಲ್ಲ ಮತದವರೂ ತಮ್ಮ ತಮ್ಮದನ್ನು ಸತ್ಯವೆಂದು ಹೇಳಿದರು. ಯಾವನೋ ಒಬ್ಬನು 'ನಮ್ಮ ಕಬೀರನು ಸತ್ಯ'– ಎಂದನು; ಮತ್ತೊಬ್ಬನು 'ನಾನಕ್', ಮಗದೊಬ್ಬನು 'ದಾದೂ', ಮತ್ತಾವನೋ ಒಬ್ಬನು 'ವಲ್ಲಭ', ಇನ್ನೂ ಒಬ್ಬನು 'ಸಹಜಾನಂದ' ಸತ್ಯ–ಎಂದು ಹೇಳಿದರು. ಮತ್ತೆ ಕೆಲವರು 'ಮದ್ವರೇ' ಮೊದಲಾದವರು ದೊಡ್ಡವರು; ಅವತಾರ–ಎಂದುದು ಕೇಳಿಸಿತು. ಸಾವಿರ ಜನರನ್ನು ಪ್ರಶ್ನಿಸಿ, ಅವರ ಪರಸ್ಪರ ವಿರೋಧವನ್ನು ನೋಡಿ, ವಿಶೇಷವಾಗಿ–ಇವರಲ್ಲಿ ಯಾರೂ ಗುರುಗಳಾಗಿ ಮಾಡಿಕೊಳ್ಳಲು ಯೋಗ್ಯರಾದವರಿಲ್ಲ. ಏಕೆಂದರೆ, ಒಬ್ಬೊಬ್ಬನೂ ಸುಳ್ಳು ಎಂದು ತೋರಿಸಲು ಒಂಬೈನೂರ ತೊಂಬತ್ತೊಂಬತ್ತು ಜನ ಸಾಕ್ಷಿಗಳಾದರು. ಹೇಗೆ ಸುಳ್ಳುಗಾರರಾದ ಅಂಗಡಿಕಾರರು, ಅಥವಾ ವೇಶ್ಯೆಯರು ಮತ್ತು ಹೊಗಳುಭಟ್ಟರೇ ಮೊದಲಾದವರು ತಮ್ಮ ತಮ್ಮ ವಸ್ತುಗಳ ಹೆಗ್ಗಳಿಕೆಯನ್ನೂ, ಬೇರೆಯವರ ವಸ್ತುಗಳ ತೆಗಳಿಕೆಯನ್ನೂ ಮಾಡುತ್ತಾರೋ, ಹಾಗೆಯೇ ಈ ಎಲ್ಲರ ಕಥೆಯೂ ಇದೆ".–ಎಂದು ನಿಶ್ಚಯಮಾಡಿಕೊಂಡನು. ಹೀಗೆ ತಿಳಿದುಕೊಂಡು:–

**ತದ್ವಿಜ್ಞಾನಾರಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥ ೧ ॥**

**ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತಚಿತ್ತಾಯ ಶಮಾನ್ವಿತಾಯ ।**

**ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಂಚ ತಾಂ ತತ್ತ್ವತೋಬ್ರಹ್ಮವಿದ್ಯಾಮ್ ॥ ೨ ॥**

(ಮುಂಡಕ–೧.೨.೧೨–೧೩)

ಆ ಸತ್ಯದ ವಿಜ್ಞಾನಕ್ಕಾಗಿ, ಅವನು ಸಮಿತ್ಪಾಣಿಯಾಗಿ, ಎಂದರೆ, ಕೈಜೋಡಿಸಿ, ತೆರವಲ್ಲದ ಕೈಗಳನ್ನುಳ್ಳವನಾಗಿ[೨೫೦] (ಸಮಿತ್ತನ್ನು ಹಿಡಿದವನಾಗಿ) ವೇದಜ್ಞನೂ, ಬ್ರಹ್ಮನಿಷ್ಠನೂ ಆದ ಗುರುವಿನ ಬಳಿ ಹೋಗಬೇಕು. ಇಂತಹ ಡಾಂಭಿಕರ ಬಲೆಗೆ ಬೀಳಬಾರದು (೧).

ಯಾವಾಗ ಇಂತಹ ಜೀಜ್ಞಾಸುವು ವಿದ್ವಾಂಸರ ಹತ್ತಿರ ಹೋಗುತ್ತಾನೋ, ಆಗ ಆ ಶಾಂತಚಿತ್ತನೂ, ಜಿತೇಂದ್ರಿಯನೂ, ಸಮೀಪಗತನೂ, ಆದ ಜಿಜ್ಞಾಸುವಿಗೆ ಯಥಾರ್ಥವಾದ ಬ್ರಹ್ಮವಿದ್ಯೆಯ ಪರಮಾತ್ಮನ ಗುಣ, ಕರ್ಮ, ಸ್ವಭಾವಗಳ ಉಪದೇಶವನ್ನು ಮಾಡಬೇಕು ಮತ್ತು ಯಾವ ಯಾವ ಸಾಧನಗಳಿಂದ ಆ ಶ್ರೋತೃವು ಧರ್ಮ, ಅರ್ಥ, ಕಾಮ, ಮೋಕ್ಷ ಹಾಗೂ ಪರಮಾತ್ಮನನ್ನು ತಿಳಿದುಕೊಳ್ಳಬಲ್ಲನೋ, ಅಂತಹ ಶಿಕ್ಷಣವನ್ನು ಕೊಡುತ್ತಾಹೋಗಬೇಕು (೨).

ಯಾವಾಗ ಅವನು ಇಂತಹ ಪುರುಷನ ಹತ್ತಿರ ಹೋಗಿ, "ಮಹಾಶಯರೇ! ಈಗ ಈ ಸಂಪ್ರದಾಯಗಳ ಗೊಂದಲಗಳಿಂದ ನನ್ನ ಚಿತ್ತ ಭ್ರಾಂತವಾಗಿಹೋಯಿತು. ಏಕೆಂದರೆ – ನಾನು ಇವರಲ್ಲಿ ಯಾವನಾದರೂ ಒಬ್ಬನ ಅನುಯಾಯಿಯಾದರೆ, ೯೯೯ ಜನರಿಗೆ ವಿರೋಧಿಗಿ ಹೋಗಬೇಕಾಗುವುದು. ಯಾವನಿಗೆ ೯೯೯ ಜನರು ಶತ್ರುಳೂ ಮತ್ತು ಒಬ್ಬ ಮಿತ್ರನೂ ಇರುತ್ತಾರೋ, ಅವನಿಗೆ ಎಂದಿಗೂ ಸುಖಉಂಟಾಗಲಾರದು. ಆದುದರಿಂದ ನಾನು ಯಾವುದನ್ನು ಗ್ರಹಿಸಬಹುದೋ, ಅಂತಹ ಉಪದೇಶವನ್ನು ತಾವು ನನಗೆ ಮಾಡಿರಿ".– ಎಂದು ಹೇಳಿದನು.

**ಆಪ್ತ ವಿದ್ವಾಂಸ :–** ಈ ಸಮಸ್ತ ಮತಗಳೂ ಅವಿದ್ಯಾಜನ್ಯವೂ, ವಿದ್ಯಾವಿರೋಧಿಗಳೂ ಆಗಿವೆ. ಮೂರ್ಖರನ್ನೂ, ಪಾಮರರನ್ನೂ ಮತ್ತು ಕಾಡುಮನುಷ್ಯರನ್ನೂ ದಾರಿತಪ್ಪಿಸಿ, ತಮ್ಮ ಬಲೆಗೆ ಸಿಕ್ಕಿಸಿಕೊಂಡು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾರೆ. ಈ ಬಡಪಾಯಿಗಳು ತಮ್ಮ ಮಾನವಜನ್ಮದ ಫಲದಿಂದ ರಹಿತರಾಗಿ ತಮ್ಮ ಮನುಷ್ಯಜನ್ಮವನ್ನು ವ್ಯರ್ಥವಾಗಿ ಹಾಳುಮಾಡಿಕೊಳ್ಳುತ್ತಾರೆ. ನೋಡು, ಯಾವ ವಿಷಯದಲ್ಲಿ ಈ ಸಾವಿರ ಮತಗಳೂ ಏಕಮತವಾಗತ್ತವೋ ಆ ವೇದಧರ್ಮಮಾತ್ರ ಗ್ರಾಹ್ಯವಾಗಿದೆ. ಮತ್ತು ಯಾವುದರಲ್ಲಿ ಪರಸ್ಪರ ವಿರೋಧವಿರುತ್ತದೋ, ಅದು ಕಲ್ಪಿತವೂ ಅಸತ್ಯವೂ, ಅಧರ್ಮವೂ, ಅಗ್ರಾಹ್ಯವೂ ಆಗಿರುತ್ತದೆ.

**ಜಿಜ್ಞಾಸು:–** ಇದರ ಪರೀಕ್ಷೆ ಹೇಗೆ ಆಗುವುದು?

**ಆಪ್ತ:–** ನೀನು ಹೋಗಿ ಈ ಕೆಳಗಿನ ಮಾತುಗಳನ್ನು ಕೇಳು. ಎಲ್ಲರದೂ ಏಕ ಸಮ್ಮತಿಯಾಗುವುದು.

ಆಗ ಅವನು ಆ ಸಾವಿರ ಜನರ ಮಂಡಲಿಯ ಮಧ್ಯದಲ್ಲಿ ನಿಂತು–"ಆಲಿಸಿರಿ, ಸಮಸ್ತ ಜನರೇ! ಸತ್ಯಭಾಷಣದಲ್ಲಿ ಧರ್ಮವಿದೆಯೋ ಅಥವಾ ಮಿಥ್ಯೆಯಲ್ಲಿಯೋ?"–ಎಂದು ಕೇಳಿದನು. ಎಲ್ಲರೂ ಏಕಸ್ವರರಾಗಿ–"ಸತ್ಯಭಾಷಣದಲ್ಲಿ ಧರ್ಮವಿದೆ ಮತ್ತು ಅಸತ್ಯಭಾಷಣದಲ್ಲಿ ಅಧರ್ಮವಿದೆ".– ಎಂದು ಹೇಳಿದರು. ಹಾಗೆಯೇ "ವಿದ್ಯಾಭ್ಯಾಸ, ಬ್ರಹ್ಮಚರ್ಯಪಾಲನ, ಪೂರ್ಣ ಯುವಾವಸ್ಥೆಯಲ್ಲಿ ವಿವಾಹ ಮಾಡಿಕೊಳ್ಳುವುದು, ಸತ್ಸಂಗ, ಪುರುಷಾರ್ಥ, ಸತ್ಯವ್ಯವಹಾರ ಮೊದಲಾದುದರಲ್ಲಿ ಧರ್ಮವಿದೆಯೋ, ಅಥವಾ ಅವಿದ್ಯಾಗ್ರಸ್ತರಾಗಿರುವುದು, ಬ್ರಹ್ಮಚರ್ಯಪಾಲಿಸದಿರುವುದು, ವ್ಯಭಿಚಾರ ಮಾಡುವುದು, ದುಸ್ಸಂಗ, ಆಲಸ್ಯ, ಅಸತ್ಯವ್ಯವಹಾರ, ಛಲ, ಕಪಟ, ಹಿಂಸೆ, ಪರಹಾನಿಮಾಡುವುದು ಮೊದಲಾದ ಕರ್ಮಗಳಲ್ಲಿಯೋ?"–ಎಂದು ಕೇಳಿದನು. ಎಲ್ಲರೂ ಏಕಮತರಾಗಿ– "ವಿದ್ಯೆ ಮೊದಲಾದುದರ ಗ್ರಹಣದಲ್ಲಿ ಧರ್ಮ ಮತ್ತು ಅವಿದ್ಯೆ–ಮೊದಲಾದುವುಗಳ ಅಂಗೀಕಾರದಲ್ಲಿ ಅಧರ್ಮವಿದೆ".–ಎಂದು ಹೇಳಿದರು.

ಆಗ ಜಿಜ್ಞಾಸುವು –"ನೀವು ಇದೇ ರೀತಿ ಎಲ್ಲರೂ ಏಕಮತರಾಗಿ ಸತ್ಯಧರ್ಮದ ಉನ್ನತಿಯನ್ನೂ ಮತ್ತು ಮಿಥ್ಯಾಮಾರ್ಗದ ನಾಶವನ್ನೂ ಮಾಡುವುದಿಲ್ಲವೇಕೆ?" ಎಂದು ಪ್ರಶ್ನಿಸಿದನು.

ಅವರೆಲ್ಲರೂ – "ನಾವು ಹೀಗೆ ಮಾಡಿದರೆ, ನಮ್ಮನ್ನು ಕೇಳುವವರಾರು? ನಮ್ಮ ಅನುಯಾಯಿಗಳು ನಮ್ಮ ಹಿಡಿತದಲ್ಲಿರುವುದಿಲ್ಲ. ಆಜೀವಿಕೆ ಹಾಳಾಗಿ ಹೋಗುವುದು. ಮತ್ತು ನಾವು ಏನು ಆನಂದವನ್ನು ಅನುಭವಿಸುತ್ತಿದ್ದೇವೋ,

---

೨೫೦. ಎಂದರೆ, ಕೈಯಲ್ಲಿ ಏನನ್ನಾದರೂ ಕಾಣಿಕೆಯನ್ನು ತೆಗೆದುಕೊಂಡು, ಎಂದರ್ಥ. ಉಪನಿಷತ್ಕಾರರು ಎಲ್ಲರಿಗೂ ಸುಲಭವಾಗಿ ಏಕರೂಪತೆ ಯಾಗುವಂತಿರಲು ಕೈಯಲ್ಲಿ ಸಮತ್ತಿನ್ನು ತೆಗೆದುಕೊಂಡು ಹೋಗುವ ವಿಧಾನ ಮಾಡಿದ್ದಾರೆ. –ಯು.ಮೀ

ಉಪನಿಷತ್ತುಗಳ ಉಪದೇಶ ಅರಣ್ಯಗಳಲ್ಲಾಗುತ್ತಿತ್ತು. ಆದುದರಿಂದ, ಸಮಿತ್ ಸುಲಭವಾಗಿ ಸಿಗುತ್ತಿತ್ತು. ಈಗ ಪಟ್ಟಣಗಳಲ್ಲಿ ಪ್ರವಚನ ನಡೆಯುತ್ತದೆ. ಇಲ್ಲಿ ಹಣ್ಣು ಹಂಪಲು ಕಾಯಿಗಳೇ ಸಮಿತ್ !

ಅದೆಲ್ಲವೂ ಕೈಬಿಟ್ಟು ಹೋಗುವುದು, ಆದುದರಿಂದ, ನಮಗೆ ಗೊತ್ತಿದ್ದರೂ ಕೂಡ ತಮ್ಮ ತಮ್ಮ ಮತಗಳ ಉಪದೇಶವನ್ನು ಮತ್ತು ಆಗ್ರಹವನ್ನು ಮಾಡುತ್ತಲೇ ಹೋಗುತ್ತೇವೆ. ಏಕೆಂದರೆ-**"ರೊಟ್ಟಿ ತಿನ್ನಿರಿ ಸಕ್ಕರೆಯೊಂದಿಗೆ; ಮುಳುಗಿಸಿ ಲೋಕವ ವಂಚನೆಯೊಂದಿಗೆ"** [೨೫೧] -ಎಂಬುದೇ ಪಲ್ಲವಿ. ನೋಡಿದೆಯೋ? ಲೋಕದಲ್ಲಿ ಋಜುವೂ, ಸತ್ಯವಂತನೂ ಆದ ಮಾನವನಿಗೆ ಯಾವನೂ ದಾನ ಕೊಡುವುದಿಲ್ಲ ಮತ್ತು ಕೇಳುವುದೂ ಇಲ್ಲ. ಯಾವನು ಏನಾದರೂ ದಂಭವನ್ನು ಧೂರ್ತತನವನ್ನು ಮಾಡುತ್ತಾನೋ, ಅವನೇ ಭೋಗ್ಯ ವಸ್ತುಗಳನ್ನು ಪಡೆಯುತ್ತಾನೆ".-ಎಂದು ಹೇಳಿದರು.

**ಜಿಜ್ಞಾಸು :-** ನೀವು ಹೇಗೆ ಪಾಷಂಡವನ್ನು ಪ್ರಚಲಿತವಾಗಿಮಾಡಿ, ಬೇರೆ ಮಾನವರನ್ನು ಮೋಸಪಡಿಸುತ್ತೀರಿ; ನಿಮಗೆ ರಾಜನು ಶಿಕ್ಷೆಯನ್ನೇಕೆ ವಿಧಿಸುವುದಿಲ್ಲ?

**ಮತೀಯರು :-** ನಾವು ರಾಜನನ್ನೂ ಕೂಡ ನಮ್ಮ ಅನುಯಾಯಿಯಾಗಿ ಮಾಡಿಕೊಂಡಿದ್ದೇವೆ. ನಾವು ದೃಢವಾದ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಅದು ಬಿಟ್ಟುಹೋಗುವುದಿಲ್ಲ.

**ಜಿಜ್ಞಾಸು :-** ನೀವು ಛಲದಿಂದ ಅನ್ಯಮತಸ್ಥರಾದ ಮಾನವರನ್ನು ವಂಚಿಸಿ, ಅವರಿಗೆ ಹಾನಿಯನ್ನುಂಟುಮಾಡುತ್ತೀರಿ! ಪರಮೇಶ್ವರನ ಮುಂದೆ ಏನು ಉತ್ತರಕೊಡುವಿರಿ? ಮತ್ತು ಘೋರನರಕದಲ್ಲಿ ಬೀಳುವಿರಿ. ಅಲ್ಪ ಜೀವನಕ್ಕಾಗಿ ಇಷ್ಟು ದೊಡ್ಡ ಅಪರಾಧಮಾಡುವುದನ್ನು ಬಿಡಲೊಲ್ಲಿರೇಕೆ?

**ಮತೀಯರು :-** ಯಾವಾಗ ಏನು ಆಗುವುದೋ, ಆಗ ಅದ ನೋಡಿಕೊಳ್ಳಲ್ಪಡುವುದು. ನರಕದ ಮತ್ತು ಪರಮೇಶ್ವರನ ಶಿಕ್ಷೆ ಯಾವಾಗ ಆಗುವುದೋ, ಆಗ ಆಗುವುದು. ಈಗಲಂತೂ ಆನಂದ ಅನುಭವಿಸುತ್ತೇವೆ. ನಮಗೆ ಪ್ರಸನ್ನತೆಯಿಂದಲೇ ಧನವೇ ಮೊದಲಾದ ಪದಾರ್ಥಗಳನ್ನು ಕೊಡುತ್ತಾರೆ. ನಾವು ಏನೂ ಬಲಾತ್ಕಾರದಿಂದ ತೆಗೆದುಕೊಳ್ಳುವುದಿಲ್ಲ. ಮತ್ತೆ ರಾಜನು ಶಿಕ್ಷೆಯನ್ನೇಕೆ ವಿಧಿಸುವನು?

**ಜಿಜ್ಞಾಸು:-** ಯಾವನಾದರೂ ಚಿಕ್ಕ ಹುಡುಗನನ್ನು ಹುರಿದುಂಬಿಸಿ, ಹಣವೇ ಮೊದಲಾದ ಪದಾರ್ಥಗಳನ್ನು ಅಪಹರಿಸಿದರೆ, ಅವನಿಗೆ ದಂಡ ಸಿಕ್ಕುವಂತೆ ನಿಮಗೇತಕ್ಕೆ ಸಿಕ್ಕುವುದಿಲ್ಲ? ಏಕೆಂದರೆ-**"ಅಜ್ಞೋ ಭವತಿ ವೈ ಬಾಲಃ ಪಿತಾ ಭವತಿ ಮಂತ್ರದಃ॥"** (ಮನು:- ೨.೫೩) ಯಾವನು ಜ್ಞಾನರಹಿತನಾಗಿರುತ್ತಾನೋ, ಅವನು ಬಾಲಕನಾಗಿರುತ್ತಾನೆ. ಮತ್ತು ಯಾವನು ಜ್ಞಾನವನ್ನು ಕೊಡುವವನಾಗಿರುತ್ತಾನೋ, ಅವನು ಪಿತೃ ಮತ್ತು ವೃದ್ಧನೆನಿಸುತ್ತಾನೆ. ಯಾವನು ಬುದ್ಧಿವಂತನಾದ ವಿದ್ವಾಂಸನಾಗಿರುತ್ತಾನೋ, ಅವನು ನಿಮ್ಮ ಮಾತುಗಳಲ್ಲಿ ಸಿಕ್ಕಿಕೊಳ್ಳುವುದಿಲ್ಲ. ಆದರೆ, ಬಾಲಕರಂತಿರುವ ಅಜ್ಞಾನೀ ಜನರನ್ನು ವಂಚಿಸುವುದರಿಂದ ನಿಮಗೆ ರಾಜದಂಡವು ಅವಶ್ಯವಾಗಿ ಆಗಬೇಕು.

**ಮತೀಯರು:-** ರಾಜರು, ಪ್ರಜೆಗಳು-ಎಲ್ಲರೂ ನಮ್ಮ ಮತದಲ್ಲಿರುವಾಗ, ನಮಗೆ ಶಿಕ್ಷೆಯನ್ನು ಕೊಡವವನು ಯಾವನಿದ್ದಾನೆ? ನೀವು ಹೇಳುವಂತಹ ವ್ಯವಸ್ಥೆಯಾದಾಗ, ಈ ಮಾತುಗಳನ್ನು ಬಿಟ್ಟು, ಬೇರೆ ವ್ಯವಸ್ಥೆಯನ್ನು ಮಾಡಿಕೊಳ್ಳುವೆವು.

**ಜಿಜ್ಞಾಸು : -** ನೀವು ಸುಮ್ಮನೆ ಕುಳಿತು ವ್ಯರ್ಥವಾಗಿ ವಸ್ತುಗಳನ್ನು ದೋಚಿಕೊಳ್ಳುತ್ತೀರಿ! ಅದಕ್ಕೆ ಬದಲು ವಿದ್ಯಾಭ್ಯಾಸಮಾಡಿ ಗೃಹಸ್ಥರ ಪುತ್ರ-ಪುತ್ರಿಯರಿಗೆ ಶಿಕ್ಷಣ ಕೊಡುವಿರಾದರೆ, ನಿಮ್ಮ ಮತ್ತು ಗೃಹಸ್ಥರ ಕಲ್ಯಾಣವಾದೀತು.

**ಮತೀಯರು : -** ನಾವು ಬಾಲ್ಯಾವಸ್ಥೆಯಿಂದ ಹಿಡಿದು ಮರಣದವರೆಗೆ ಸಿಕ್ಕುವ ಸುಖಗಳನ್ನು ವರ್ಜಿಸಿ, ಬಾಲ್ಯಾವಸ್ಥೆಯಿಂದ ಯುವಾವಸ್ಥೆಯವರೆಗೆ ಓದುವುದರಲ್ಲಿಯೂ, ಆ ಮೇಲೆ ಓದಿಸುವುದರಲ್ಲಿಯೂ ಮತ್ತು ಉಪದೇಶಮಾಡುವುದರಲ್ಲಿಯೂ ಜನ್ಮಪೂರ್ತಿ ಪರಿಶ್ರಮವನ್ನು ಮಾಡಿದರೆ, ನಮಗೇನು ಪ್ರಯೋಜನ? ನಮಗೆ ಹೀಗೆಯೇ ಲಕ್ಷಾಂತರ ರೂಪಾಯಿಗಳು ಸಿಕ್ಕಿಹೋಗುತ್ತವೆ. ವಿಲಾಸದಿಂದರುತ್ತೇವೆ. ಅದನ್ನೇತಕ್ಕೆ ಬಿಡೋಣ?

**ಜಿಜ್ಞಾಸು:-** ಇದರ ಪರಿಣಾಮವಂತೂ ಕೆಟ್ಟದೇ. ನೋಡಿರಿ! ನಿಮಗೆ ಮಹಾರೋಗಗಳು ಬರುತ್ತವೆ. ಬೇಗನೇ ಸತ್ತು ಹೋಗುತ್ತೀರಿ. ಬುದ್ಧಿವಂತರ ಮಧ್ಯೆ ನಿಂದಿತರಾಗುತ್ತೀರಿ. ಹಾಗಿದ್ದರೂ ತಿಳಿದುಕೊಳ್ಳುವುದಿಲ್ಲವೇಕೆ?

**ಮತೀರಯರು:-** ಅಯ್ಯೋ ಸೋದರ!

---

೨೫೧. ಹಿಂದೀ ಭಾಷೆಯಲ್ಲಿ **"ರೋಟಿ ಖಾ ಇ ಏ ಶಕ್ಕರ್ ಸೇ' ದುನಿಯಾ ಠಗಿಏ ಮಕ್ಕರ್ ಸೇ"** ಎಂದಿದೆ.

**ಟಕಾ ಧರ್ಮಷ್ಟಕಾ ಕರ್ಮ ಟಕಾ ಹಿ ಪರಮಂ ಪದಮ್ ।**

**ಯಸ್ಯ ಗೃಹೇ ಟಕಾ ನಾಸ್ತಿ ಹಾ ಟಕಾ ಟಕಟಕಾಯತೇ ॥ ೧ ॥**

**ಆನಾ ಅಂಶಕಲಾಃ ಪ್ರೋಕ್ತಾ ರೂಪ್ಯೋಽಸೌ ಭಗವಾನ್ ಸ್ವಯಮ್ ।**

**ಅತಸ್ತಂ ಸರ್ವ ಇಚ್ಛಂತಿ ರೂಪ್ಯಂ ಹಿ ಗುಣಮುತ್ತಮಮ್ ॥ ೨ ॥**

ನೀನು ಹುಡುಗ. ಪ್ರಪಂಚದ ವಿಷಯಗಳನ್ನು ನೀನರಿಯೆ. ನೋಡು! ವರಹವಿಲ್ಲದೆ ಧರ್ಮ, ವರಹವಿಲ್ಲದೆ ಕರ್ಮ, ವರಹವಿಲ್ಲದೆ ಪರಮಪದ ಸಿದ್ಧಿಸುವುದಿಲ್ಲ. ಯಾವನ ಮನೆಯಲ್ಲಿ ವರಹವಿಲ್ಲವೋ, ಅವನು ಹಾ! ವರಹ! ವರಹ!! ಎಂದು ಜಪಿಸುತ್ತಾ, ಉತ್ತಮ ವಸ್ತುಗಳನ್ನು ತೆರೆದಕಣ್ಣುಗಳಿಂದ. 'ಹಾ! ನನ್ನ ಬಳಿ ವರಹವಿದ್ದಿದ್ದರೆ, ಈ ಉತ್ತಮ ಪದಾರ್ಥಗಳನ್ನು ನಾನು ಅನುಭವಿಸುತ್ತಿದ್ದೆನಲ್ಲ-ಎಂದು ಕಣ್ಣು ಕಣ್ಣು ಬಿಡುತ್ತಾನೆ. (೧)

ಏಕೆಂದರೆ,- ಎಲ್ಲರೂ ಕೂಡ ಷೋಡಶಕಲಾಯುಕ್ತನಾದ ಅದೃಶ್ಯ ಭಗವಂತನ ಕಥನ-ಶ್ರವಣಗಳನ್ನು ಮಾಡುತ್ತಾರೆ. ಅವನಂತೂ ಕಾಣಿಸುವುದಿಲ್ಲ; ಆದರೆ ಹದಿನಾರು ಆಣೆಗಳು ಮತ್ತು ಕಾಸು-ಕವಡೆಗಳೆಂಬ ಅಂಶ ಕಲಾಯುಕ್ತವಾದ ಯಾವ ರೂಪಾಯಿ ಇದೆಯೋ, ಅದೇ ಸಾಕ್ಷಾತ್ ಪರಮಾತ್ಮ. ಅದುದರಿಂದಲೇ ಎಲ್ಲರೂ ಕೂಡ ರೂಪಾಯಿಗಳ ಅನ್ವೇಷಣದಲ್ಲಿರುತ್ತಾರೆ. ಏಕೆಂದರೆ-ಸಕಲಕಾರ್ಯಗಳೂ ರೂಪಾಯಿಗಳಿಂದ ಸಿದ್ಧಿಸುತ್ತವೆ. (೨)

**ಜಿಜ್ಞಾಸು:-** ಸರಿ. ನಿಮ್ಮ ಒಳಗಣ ಲೀಲೆ ಹೊರಬಂದಿತು. ನೀವು ಈ ಎಷ್ಟು ಪಾಷಂಡಗಳನ್ನು ಎತ್ತಿ ನಿಲ್ಲಿಸಿದ್ದೀರೋ, ಇದೆಲ್ಲವನ್ನೂ ನಿಮ್ಮ ಸುಖಕ್ಕಾಗಿಯೇ ರಚಿಸಿದ್ದೀರಿ. ಆದರೆ, ಇದರಿಂದ ಜಗತ್ತಿಗೆ ನಾಶ ಉಂಟಾಗುತ್ತದೆ. ಏಕೆಂದರೆ, ಹೇಗೆ ಸತ್ಯೋಪದೇಶದಿಂದ ಜಗತ್ತಿಗೆ ಲಾಭ ಉಂಟಾಗುತ್ತದೋ, ಹಾಗೆಯೇ ಅಸತ್ಯೋಪದೇಶದಿಂದ ಹಾನಿಯುಂಟಾಗುತ್ತದೆ. ನಿಮಗೆ ಧನದ ಅವಶ್ಯಕತೆಯೇ ಇದ್ದಲ್ಲಿ, ನೌಕರಿ ಮತ್ತು ವ್ಯಾಪಾರವೇ ಮೊದಲಾದ ಕಾರ್ಯಗಳನ್ನು ಮಾಡಿ, ಧನವನ್ನೇಕೆ ಕೂಡಿಹಾಕಿಕೊಳ್ಳುವುದಿಲ್ಲ?

**ಮತೀಯರು:-** ಅದರಲ್ಲಿ ಪರಿಶ್ರಮ ಹೆಚ್ಚು ಮತ್ತು ಹಾನಿಯೂ ಆಗಿಬಿಡುವುದುಂಟು. ಆದರೆ, ನಮ್ಮ ಲೀಲೆಯಲ್ಲಿ ಹಾನಿ ಎಂದಿಗೂ ಆಗುವುದಿಲ್ಲ. ಆದರೆ ಸರ್ವಥಾ ಲಾಭವೇ ಲಾಭ ಉಂಟಾಗುತ್ತದೆ. ನೋಡರಿ, ತುಳಸೀದಳವನ್ನು ಹಾಕಿ ಚರಣಾಮೃತವಿತ್ತು, ಕೊರಳಸರವನ್ನು ಹಾಕಿ, ತಲೆ ಬೋಳಿಸಿಬಿಟ್ಟರೆ, ಅನುಯಾಯಿ ಜೀವನಪೂರ್ತ ಪಶುವಿನಂತಾಗಿ ಹೋಗುತ್ತಾನೆ. ಮತ್ತೆ, ಹೇಗೆ ಬೇಕಾದರೂ ನಡೆಯಿಸಿರಿ, ನಡೆಯಬಹುದು.

**ಜಿಜ್ಞಾಸು:-** ಈ ಜನರು ನಿಮಗೆ ಬಹಳ ಹಣವನ್ನು ಏತಕ್ಕಾಗಿಕೊಡುತ್ತಾರೆ?

**ಮತೀಯರು:-** ಧರ್ಮ, ಸ್ವರ್ಗ ಮತ್ತು ಮುಕ್ತಿಗಾಗಿ.

**ಜಿಜ್ಞಾಸು:-** ನೀವೇ ಮುಕ್ತರಾಗಿಲ್ಲ; ಮುಕ್ತಿಯ ಸ್ವರೂಪವನ್ನು ಅಥವಾ ಸಾಧನವನ್ನೂ ತಿಳಿದಿಲ್ಲ. ಎಂದ ಮೇಲೆ, ನಿಮ್ಮ ಸೇವೆಯನ್ನು ಮಾಡುವವರಿಗೆ ಏನು ಸಿಕ್ಕುವುದು?

**ಮತೀಯರು:-** ಈ ಲೋಕದಲ್ಲಿ ಸಿಕ್ಕುವುದೇನೂ ಇಲ್ಲ. ಆದರೆ, ಮೃತರಾದ ಮೇಲೆ ಪರಲೋಕದಲ್ಲಿ ಸಿಕ್ಕುತ್ತದೆ. ಈ ಜನರು ನಮಗೆ ಎಷ್ಟು ಕೊಡುತ್ತಾರೋ ಮತ್ತು ಸೇವೆ ಮಾಡುತ್ತಾರೋ, ಅದೆಲ್ಲವೂ ಈ ಜನರಿಗೆ ಪರಲೋಕದಲ್ಲಿ ಸಿಕ್ಕಿಬಿಡುತ್ತದೆ.

**ಜಿಜ್ಞಾಸು:-** ಇವರಿಗೆ ಅವರು ಕೊಟ್ಟುದು ಸಿಕ್ಕುತ್ತದೋ, ಇಲ್ಲವೋ; ತೆಗೆದುಕೊಳ್ಳುವ ನಿಮಗೆ ಏನು ಸಿಕ್ಕುವುದು? ನರಕವೋ, ಅಥವಾ ಮತ್ತೆ ಇನ್ನೇನಾದರೂ ಉಂಟೋ?

**ಮತೀಯರು:-** ನಾವು ಭಜನೆಮಾಡುತ್ತಾ ಹೋಗುತ್ತೇವೆ. ಇದರ ಸುಖ ನಮಗೆ ಸಿಕ್ಕುವುದು.

**ಜಿಜ್ಞಾಸು:-** ನಿಮ್ಮ ಭಜನೆಯಾದರೂ ದುಡ್ಡಿಗಾಗಿಯೇ ಇದೆ. ಈ ಎಲ್ಲ ಹಣಗಳೂ ಇಲ್ಲಿಯೇ ಬಿದ್ದಿರುವವು. ಮತ್ತು ಯಾವ ಮಾಂಸದ ಮುದ್ದೆಯನ್ನು ಇಲ್ಲಿ ಪಾಲಿಸುತ್ತಿರೋ, ಅದೂ ಕೂಡ ಬೂದಿಯಾಗಿ ಇಲ್ಲಿಯೇ ಉಳಿದುಹೋಗುವುದು. ನೀವು ಪರಮೇಶ್ವರನ ಭಜನೆಯನ್ನು ಮಾಡುತ್ತಾ ಹೋಗಿದ್ದಲ್ಲಿ, ನಿಮ್ಮ ಆತ್ಮನೂ ಪವಿತ್ರನಾಗಿರುತ್ತಿದ್ದನು.

**ಮತೀಯರು:–** ನಾವು ಅಶುದ್ಧರೇನು?

**ಜಿಜ್ಞಾಸು:–** ಆಂತರಿಕವಾಗಿ ಬಹಳ ಕೊಳಕರಾಗಿದ್ದೀರಿ.

**ಮತೀಯರು:–** ನೀವು ಹೇಗೆ ತಿಳಿದುಕೊಂಡಿರಿ?

**ಜಿಜ್ಞಾಸು:–** ನಿಮ್ಮ ನಡೆನುಡಿವ್ಯವಹಾರಗಳಿಂದ.

**ಮತೀಯರು:–** ಮಹಾತ್ಮರುಗಳ ವ್ಯವಹಾರ ಆನೆಯ ಹಲ್ಲಿನಂತಿರುತ್ತದೆ. ಹೇಗೆ ಆನೆಯ ಹಲ್ಲುಗಳು ಜಗಿಯುವುದಕ್ಕೇ ಬೇರೆ, ತೋರಿಸುವುದಕ್ಕೇ ಬೇರೆ ಇರುತ್ತವೋ, ಹಾಗೆಯೇ ಒಳಗಿನಿಂದ ನಾವು ಪವಿತ್ರರಾಗಿದ್ದೇವೆ ಮತ್ತು ಹೊರಗಿನಿಂದ ಲೀಲಾಮಾತ್ರ ಮಾಡತ್ತೇವೆ.

**ಜಿಜ್ಞಾಸು:–** ನೀವು ಒಳಗಿನಿಂದ ಶುದ್ಧರಾಗಿರುತ್ತಿದ್ದರೆ, ನಿಮ್ಮ ಬಾಹ್ಯ ಕರ್ಮಗಳೂ ಶುದ್ಧವಾಗಿಯೇ ಇರುತ್ತಿದ್ದವು. ಆದುದರಿಂದ, ಒಳಗಿನಿಂದಲೂ ಅಶುಚಿಗಳೇ ಆಗಿದ್ದೀರಿ.

**ಮತೀಯರು:–** ನಾವು ಹೇಗಾದರೂ ಇರಲೊಲ್ಲವೇಕೆ? ಆದರೆ ನಮ್ಮ ಅನುಯಾಯಿಗಳಾದರೂ ಒಳ್ಳೆಯವರಾಗಿದ್ದಾರಲ್ಲ?

**ಜಿಜ್ಞಾಸು:–** ಗುರುಗಳಾದ ನೀವು ಹೇಗಿದ್ದೀರೋ, ನಿಮ್ಮ ಅನುಯಾಯಿಗಳೂ ಹಾಗೆಯೇ ಇರಬಹುದು.

**ಮತೀಯರು:–** ಏಕಮತ ಎಂದಿಗೂ ಆಗಲಾರದು. ಏಕೆಂದರೆ–ಮಾನವರ ಗುಣ ಕರ್ಮ–ಸ್ವಭಾವಗಳು ಬೇರೆ ಬೇರೆಯಾಗಿವೆ.

**ಜಿಜ್ಞಾಸು:–** ಬಾಲ್ಯಾವಸ್ಥೆಯಲ್ಲಿ ಒಂದೇ ಬಗೆಯ ಶಿಕ್ಷಣ ಕೊಡಲ್ಪಟ್ಟರೆ, ಸತ್ಯಭಾಷಣ–ಮೊದಲಾದ ಧರ್ಮದ ಸ್ವೀಕಾರವನ್ನು ಮತ್ತು ಮಿಥ್ಯಾಭಾಷಣ–ಮೊದಲಾದ ಅಧರ್ಮದ ಪರಿತ್ಯಾಗವನ್ನು ಮಾಡಿದರೆ, ಏಕಮತವು ಅವಶ್ಯವಾಗಿಯೂ ಆದೀತು. ಮತ್ತು ಎರಡು ಮತಗಳು, ಎಂದರೆ ಧರ್ಮಾತ್ಮರದು ಹಾಗೂ ಅಧರ್ಮಾತ್ಮರದು ಸದಾ ಇರುತ್ತವೆ; ಅವಂತೂ ಇರತಕ್ಕವೇ ಸರಿ. ಆದರೆ, ಧರ್ಮಾತ್ಮರು ಅಧಿಕರಾಗುವುದರಿಂದ ಮತ್ತು ಅಧರ್ಮಿಗಳು ಕಡಿಮೆಯಾಗುವುದರಿಂದ ಜಗತ್ತಿನಲ್ಲಿ ಸುಖ ಹೆಚ್ಚುತ್ತದೆ ಮತ್ತು ಯಾವಾಗ ಅಧರ್ಮಿಗಳು ಹೆಚ್ಚಾಗುತ್ತಾರೋ ಆಗ ದುಃಖ ಹೆಚ್ಚುತ್ತದೆ. ಎಲ್ಲ ವಿದ್ವಾಂಸರೂ ಒಂದೇ ವಿಧದ ಉಪದೇಶ ಮಾಡುವರಾದರೆ, ಏಕಮತವಾಗುವುದರಲ್ಲಿ ಸ್ವಲ್ಪವೂ ವಿಳಂಬವಾಗುದು.

**ಮತೀಯರು:–** ಈ ದಿನಗಳಲ್ಲಿರುವುದು ಕಲಿಯುಗ. ಸತ್ಯಯುಗದ ಮಾತನ್ನು ಇಚ್ಛಿಸಬೇಡಿರಿ.

**ಜಿಜ್ಞಾಸು:–** ಕಲಿಯುಗ ಎಂಬುದು ಕಾಲದ ಹೆಸರು. ಕಾಲವು ನಿಷ್ಕ್ರಿಯವಾಗಿರುವುದರಿಂದ ಧರ್ಮಾಧರ್ಮಗಳ ಆಚರಣದಲ್ಲಿ ಸಾಧಕ–ಬಾಧಕವೇನೂ ಆಗುವುದಿಲ್ಲ. ಆದರೆ, ನೀವೇ ಕಲಿಯುಗದ ವಿಗ್ರಹಗಳಾಗಿದ್ದೀರಿ. ಮನುಷ್ಯನೇ ಸತ್ಯಯುಗ–ಕಲಿಯುಗಗಳಾಗದೆ, ಅವೇ ಧರ್ಮಯುಕ್ತ ಮತ್ತು ಅಧರ್ಮಯುಕ್ತ ಯುಗಗಳಾಗಿದ್ದಲ್ಲಿ, ಆಯಾಯುಗಗಳಲ್ಲಿ ಪ್ರಪಂಚದಲ್ಲಿ ಧರ್ಮಾತ್ಮರೂ, ಅಧರ್ಮಾತ್ಮರೂ ಆಗುತ್ತಲೇ ಇರಲಿಲ್ಲ. ಇವೆಲ್ಲವೂ ಸಂಗದ ಗುಣದೋಷಗಳು ; ಸ್ವಾಭಾವಿಕವಾದುದಲ್ಲ.

ಜಿಜ್ಞಾಸು ಇಷ್ಟನ್ನು ಹೇಳಿ, ಆಪ್ತನ ಹತ್ತಿರ ಹೋದನು. ಅವನು "ಮಹಾಶಯರೇ! ನೀವು ನನ್ನನ್ನು ಉದ್ಧರಿಸಿದಿರಿ. ಇಲ್ಲದಿದ್ದರೆ ನಾನೂ ಕೂಡ ಯಾವನಾದರೊಬ್ಬನ ಬಲೆಯಲ್ಲಿ ಸಿಕ್ಕಿಕೊಂಡು ನಷ್ಟ–ಭ್ರಷ್ಟನಾಗಿ ಹೋಗುತ್ತಿದ್ದೆನು. ಈಗ ನಾನೂ ಕೂಡ ಈ ಪಾಷಂಡಿಗಳ ಖಂಡನವನ್ನೂ, ಮತ್ತು ವೇದೋಕ್ತ ಸತ್ಯಮತದ ಮಂಡನವನ್ನೂ ಮಾಡುತ್ತಾ ಹೋಗುವೆನು.

**ಆಪ್ತ :–** ಸಮಸ್ತ ಮಾನವರಿಗೂ ಸತ್ಯದ ಮಂಡನವನ್ನೂ ಮತ್ತು ಅಸತ್ಯದ ಖಂಡನವನ್ನೂ ಓದಿಸಿ, ಹೇಳಿ, ಸತ್ಯೋಪದೇಶದಿಂದ ಉಪಕಾರವನ್ನು ಮಾಡಬೇಕಾದುದೇ ಸಮಸ್ತಮಾನವರ, ವಿಶೇಷತಃ ವಿದ್ವಾಂಸರ ಮತ್ತು ಸಂನ್ಯಾಸಿಗಳ ಕರ್ತವ್ಯವಾಗಿರುತ್ತದೆ.

**ಪ್ರಶ್ನೆ:–** ಯಾವ ಬ್ರಹ್ಮಚಾರಿಗಳೂ, ಸಂನ್ಯಾಸಿಗಳೂ ಇದ್ದಾರೋ, ಅವರಾದರೂ ಸರಿಯಾಗಿದ್ದಾರೋ?

**ಉತ್ತರ:–** ಈ ಆಶ್ರಮಗಳೇನೋ ಸರಿಯೇ; ಆದರೆ, ಈ ದಿನಗಳಲ್ಲಿ ಇವುಗಳಲ್ಲಿಯೂ ಬಹಳ ಗಲಿಬಲಿಯಿದೆ. ಎಷ್ಟೋ ಜನರು ಬ್ರಹ್ಮಚಾರಿಗಳೆಂದು ಹೆಸರನ್ನು ಇಟ್ಟುಕೊಳ್ಳುತ್ತಾರೆ ಮತ್ತು ನಿರರ್ಥಕವಾಗಿ ಕೂದಲುಗಳನ್ನು ಬೆಳೆಯಿಸಿಕೊಂಡು

(ಜಡೆಗಳನ್ನು ಹೆಣೆದುಕೊಂಡು) ಸಿದ್ಧಿ ಪ್ರಾಪ್ತರೆಂದು ನಟಿಸುತ್ತಾರೆ ಹಾಗೂ ಜಪ-ಪುರಶ್ಚರಣಾದಿಯಲ್ಲಿ ಸಿಕ್ಕಿಕೊಂಡಿರುತ್ತಾರೆ. ಬ್ರಹ್ಮಚಾರೀ-ಎಂಬ ಹೆಸರು ಯಾವ ಕಾರಣದಿಂದ ಬರುತ್ತದೋ, ಆ ವಿದ್ಯೆಯನ್ನು ಕಲಿಯುವ ಹೆಸರನ್ನೂ ಕೂಡ ಎತ್ತುವುದಿಲ್ಲ. ಆ 'ಬ್ರಹ್ಮ' ಎಂದರೆ ವೇದಗಳನ್ನು ಓದುವುದಕ್ಕೆ ಸ್ವಲ್ಪವಾದರೂ ಪರಿಶ್ರಮವನ್ನು ಮಾಡುವುದಿಲ್ಲ. ಈ ಬ್ರಹ್ಮಚಾರಿಗಳು ಆಡಿನ ಕೊರಳಿನ ಸ್ತನಗಳಂತೆ ನಿರರ್ಥಕರಾಗಿರುತ್ತಾರೆ.[೨೫೨] ಮತ್ತು ಆ ಬಗೆಯ ಯಾವ ಸಂನ್ಯಾಸಿಗಳು ವಿದ್ಯಾಹೀನರಾಗಿ, ದಂಡ-ಕಮಂಡಲುಗಳನ್ನು ಹಿಡಿದು, ಕೇವಲ ಭಿಕ್ಷೆಬೇಡುತ್ತಾ ತಿರುಗಾಡುತ್ತಾರೋ, ವೇದಮಾರ್ಗದ ಉನ್ನತಿಯನ್ನು ಸ್ವಲ್ಪವಾದರೂ ಮಾಡುವುದಿಲ್ಲವೋ, ಅಲ್ಪ ವಯಸ್ಸಿನಲ್ಲಿ ಸಂನ್ಯಾಸವನ್ನು ತೆಗೆದುಕೊಂಡು ಪರ್ಯಟನ ಮಾಡುತ್ತಾ ಇರುತ್ತಾರೋ, ಮತ್ತು ವಿದ್ಯಾಭ್ಯಾಸವನ್ನು ಬಿಟ್ಟುಬಿಡುತ್ತಾರೋ, ಇಂತಹ ಬ್ರಹ್ಮಚಾರಿಗಳೂ ಮತ್ತು ಸಂನ್ಯಾಸಿಗಳೂ, ಇಲ್ಲಿ-ಅಲ್ಲಿ, ಜಲ-ಸ್ಥಳ-ಪಾಷಾಣ ಮೊದಲಾದುವುಗಳ ದರ್ಶನವನ್ನೂ, ಪೂಜನವನ್ನೂ ಮಾಡುತ್ತಾ ತಿರುಗಾಡುತ್ತಾರೆ. ವಿದ್ಯೆ ತಿಳಿದಿದ್ದರೂ ಮೌನಧಾರಣ ಮಾಡುತ್ತಾರೆ. ಏಕಾಂತ ಸ್ಥಾನದಲ್ಲಿ ಯಥೇಷ್ಟವಾಗಿ ತಿಂದು ಕುಡಿದು ನಿದ್ರಿಸುತ್ತಾ ಬಿದ್ದಿರುತ್ತಾರೆ. ಮತ್ತು ಈರ್ಷ್ಯಾದ್ವೇಷಗಳಿಗೆ ಸಿಕ್ಕಿಕೊಂಡು ನಿಂದೆಕುಚೇಷ್ಟೆಗಳನ್ನು ಮಾಡಿ ಹೊಟ್ಟೆಹೊರೆದುಕೊಳ್ಳುತ್ತಾರೆ. ಕಾಷಾಯವಸ್ತ್ರ ಹಾಗೂ ದಂಡ-ಧಾರಣಮಾತ್ರದಿಂದ ತಮ್ಮನ್ನು ಕೃತಕೃತ್ಯರೆಂದು ತಿಳಿದುಕೊಳ್ಳುತ್ತಾರೆ. ಮತ್ತು ನಿಷ್ಕ್ರಿಯತ್ವವೇ ಸರ್ವೋತ್ಕೃಷ್ಟವೆಂದರಿತು, ಉತ್ತಮ ಕಾರ್ಯಗಳನ್ನು ಮಾಡುವುದಿಲ್ಲ. ಇಂತಹ ಸಂನ್ಯಾಸಿಗಳೂ ಕೂಡ ಜಗತ್ತಿನಲ್ಲಿ ವ್ಯರ್ಥವಾಗಿ ವಾಸಮಾಡುತ್ತಾರೆ.[೨೫೩] ಮತ್ತು ಯಾರು ಸಮಸ್ತ ಜಗತ್ತಿನ ಹಿತವನ್ನು ಸಾಧಿಸುತ್ತಾರೋ, ಅವರು ಸರಿಯಾಗಿರುತ್ತಾರೆ.

**ಪ್ರಶ್ನೆ :-** ಗಿರಿ, ಪುರಿ, ಭಾರತಿ-ಮೊದಲಾದ ಗೋಸಾಯಿಗಳಾದರೂ ಒಳ್ಳೆಯವರೋ? ಏಕೆಂದರೆ, ಮಂಡಲಿಗಳನ್ನು ರಚಿಸಿಕೊಂಡು ಪರ್ಯಟನ ಮಾಡುತ್ತಾರೆ; ನೂರಾರು ಮಂದಿ ಸಾಧುಗಳಿಗೆ ಆನಂದವನ್ನುಂಟುಮಾಡುತ್ತಾರೆ. ಮತ್ತು ಎಲ್ಲೆಡೆಯೂ ಅದ್ವೈತಮತದ ಉಪದೇಶಗಳನ್ನು ಮಾಡುತ್ತಾರೆ ಮತ್ತು ಅಲ್ಪಸ್ವಲ್ಪ ಅಧ್ಯಯನ-ಅಧ್ಯಾಪನಗಳನ್ನೂ ಮಾಡುತ್ತಾರೆ. ಈ ಕಾರಣದಿಂದ, ಉತ್ತಮರಾಗಿರಬಹುದು.

**ಉತ್ತರ:-** ಈ ಹತ್ತು ಹೆಸರುಗಳೆಲ್ಲವೂ ಹಿಂದಿನಿಂದ ಕಲ್ಪಿಸಲ್ಪಟ್ಟಿವೆ;[೨೫೪] ಸನಾತನವಲ್ಲ. ಅವರ ಮಂಡಲಿಗಳು ಕೇವಲ ಭೋಜನಕ್ಕಾಗಿಯೇ ಇವೆ. ಬಹು ಮಂದಿ ಸಾಧುಗಳು ಭೋಜನಕ್ಕಾಗಿಯೇ ಮಂಡಲಿಗಳಲ್ಲಿರುತ್ತಾರೆ; ದಾಂಭಿಕರೂ ಆಗಿರುತ್ತಾರೆ. ಏಕೆಂದರೆ, ಒಬ್ಬನನ್ನು ಮಹಂತನನ್ನಾಗಿಮಾಡಿಕೊಳ್ಳುತ್ತಾರೆ. ಯಾವನು ಅವರಲ್ಲಿ ಪ್ರಮುಖನಾಗಿರುತ್ತಾನೋ, ಅವನನ್ನು ಮಹಂತನನ್ನಾಗಿಮಾಡಿ, ಸಾಯಂಕಾಲ ಅವನು ಗದ್ದುಗೆಯ ಮೇಲೆ ಕುಳಿತುಕೊಳ್ಳುತ್ತಾನೆ. ಎಲ್ಲ ಬ್ರಾಹ್ಮಣರೂ, ಮತ್ತು ಸಾಧುಗಳೂ ನಿಂತುಕೊಂಡು, ಕೈಯಲ್ಲಿ ಪುಷ್ಪವನ್ನು ತೆಗೆದುಕೊಂಡು:-

---

೨೫೨. ಈ ಕಾಲದಲ್ಲಿ ಸಮಾಜದಲ್ಲಿ ನೈಷ್ಠಿಕ ಬ್ರಹ್ಮಚಾರಿಗಳ ಸಂಖ್ಯೆ ಹೆಚ್ಚುತ್ತಿದೆ. ಬ್ರಹ್ಮಚರ್ಯದ ದೀಕ್ಷೆಯು ಯಾವ ನಿಷ್ಠೆಯ ಪೂರ್ತಿಗಾಗಿ, ಎಂದು ಇವರಿಗೆ ಪ್ರಾಯಶಃ ತಿಳಿದಿರುವುದಿಲ್ಲ. ಇವರು ಸಾಧನಾರೂಪವಾದ ಬ್ರಹ್ಮಚರ್ಯವನ್ನು ಸಾಧ್ಯವೆಂದು ತಿಳಿದಿದ್ದಾರೆ. ಹೌದು! ಇವರಲ್ಲಿ ಹಲವರು ಪತನ-ಪಾತನ, ಉಪದೇಶ ಮೊದಲಾದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಸ್ತುತ್ಯರೇ. -ಯು.ಮೀ.

೨೫೩. ಇಂತಹ ಮಹಾಮೂರ್ಖರಾದ ಸಂನ್ಯಾಸಿಗಳ ಸೈನ್ಯವೂ ಸಮಾಜದಲ್ಲಿ ಎದ್ದು ಬರುತ್ತಿದೆ. ಇವರು ಸಮಾಜದ ಮೇಲೆ ಭಾರರೂಪರಾಗಿದ್ದರೆ. ಕೆಲವು ಸಂನ್ಯಾಸಿಗಳಂತೂ, [ಗೃಹಸ್ಥ ಪುರೋಹಿತರು ಸಂಸ್ಕಾರ ಮಾಡಿಸುವಂತೆ] ಇತರರಿಗೆ ಸಂನ್ಯಾಸ ದೀಕ್ಷೆಯನ್ನು ಕೊಡಿಸುವುದರಲ್ಲೇ ಪರಮ ಪುರುಷಾರ್ಥ ವೆಂದು ತಿಳಿದುಕೊಂಡಿದ್ದಾರೆ. ಮಾಡುವುದಕ್ಕೆ ಕೆಲಸವಿಲ್ಲ! ಮತ್ತೆ ಗೃಹಸ್ಥರ ಪದಾರ್ಥಗಳನ್ನು ಕಬಳಿಸುತ್ತಿರುವುದೇ ಇವರ ಕರ್ಮವಾಗಿ ಬಿಟ್ಟಿದೆ ! ಯು.ಮೀ

೨೫೪. ಅದ್ವೈತವಾದಿ ಸಂನ್ಯಾಸಿಗಳ ಹತ್ತು ಹೆಸರು ೧. ತೀರ್ಥ ೨. ಆಶ್ರಮ ೩. ಸರಸ್ವತಿ ೪. ಪುರೀ ೫. ಭಾರತೀ ೬. ವನ ೭. ಅರಣ್ಯ ೮. ಗಿರಿ. ೯. ಪರ್ವತ. ೧೦. ಸಾಗರ -ಯು.ಮೀ.

ಸತ್ಯಾರ್ಥ ಪ್ರಕಾಶದ ಪ್ರಥಮ ಸಂಸ್ಕರಣದಲ್ಲಿ [೧೮೭೫.ಇಸವಿ] ಹೀಗೆ ಹೇಳಲಾಗಿದೆ.

'ಅದ್ವೈತವಾದಿ ಸಂನ್ಯಾಸಿಗಳ ಹತ್ತು ಹೆಸರುಗಳು ಸಂಪ್ರದಾಯವಾದಿಗಳಿಂದ ಪ್ರಚಲಿತವಾಗಿದೆ. ಇದು ಆರ್ಷ ಪರಂಪರೆಯಲ್ಲ. ಪ್ರಾಚೀನ ಕಾಲದಲ್ಲಿ ಸಂನ್ಯಾಸ ತೆಗೆದುಕೊಳ್ಳುವವರು ತಮ್ಮ ಪೂರ್ವಾಶ್ರಮದ ಹೆಸರನ್ನು ಬದಲಿಸಿಕೊಳ್ಳುತ್ತಿರಲಿಲ್ಲ.

ಪಂಚಶಿಖ, ಯಾಜ್ಞವಲ್ಕ್ಯ, ಗೌತಮ ಮೊದಲಾದವರು ಇದಕ್ಕೆ ಉದಾಹರಣೆ. ಬೃಹದಾರಣ್ಯಕೋಪನಿಷತ್ತಿನ ಆಧಾರದಂತೆ, ಯಾಜ್ಞವಲ್ಕ್ಯರು ಗೃಹಸ್ಥರಾಗಿದ್ದಾಗಲೂ, ಮತ್ತು ಸಂನ್ಯಾಸಿಗಳಾದ ಮೇಲೂ ಅದೇ ಹೆಸರಿನವರಾಗಿರುತ್ತಾರೆ.

**ನಾರಾಯಣಂ ಪದ್ಮಭವಂ ವಸಿಷ್ಠಂ ಶಕ್ತಿಂ ಚ ತತ್ಪುತ್ರಂ ಪರಾಶರಂ ಚ ।**

**ವ್ಯಾಸಂ ಶುಕಂ ಗೌಡಪಾದಂ ಮಹಾಂತಮ್** [೨೫೫] ॥

ಈ ಮೊದಲಾದ ಶಬ್ದಗಳನ್ನು ಉಚ್ಚರಿಸಿ, 'ಹರಹರ' ಎಂದು, ಅವನ ಮೇಲೆ ಹೂಮಳೆಗರೆದು, ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಾರೆ. ಯಾವನಾದರೂ ಹೀಗೆ ಮಾಡದೇ ಇದ್ದಲ್ಲಿ, ಅವನು ಅಲ್ಲಿರುವುದೂ ಕೂಡ ಕಠಿಣವಾಗುತ್ತದೆ. ಯಾವುದರಿಂದ ಪ್ರತಿಷ್ಠೆಯುಂಟಾಗಿ, ಮಾಲು ದಕ್ಕುತ್ತದೋ, ಅಂತಹ ಈ ದಂಭವನ್ನು ಜಗತ್ತಿಗೆ ತೋರಿಸುವುದಕ್ಕಾಗಿ ಮಾಡುತ್ತಾರೆ. ಎಷ್ಟೋ ಜನ ಮಠಾಧೀಶರು ಗೃಹಸ್ಥರಾಗಿದ್ದರೂ ಕೂಡ ಸಂನ್ಯಾಸದ ಅಭಿಮಾನವನ್ನು ಮಾತ್ರ ಮಾಡುತ್ತಾರೆ;[೨೫೬] ಕರ್ಮ ಏನೂ ಇಲ್ಲ. ಪಂಚಮ ಸಮುಲ್ಲಾಸದಲ್ಲಿ ಏನು ಬರೆದಿದ್ದೇವೋ, ಅದೇ ಸಂನ್ಯಾಸದ ಕರ್ಮವಾಗಿದೆ. ಅದನ್ನು ಮಾಡದೆ ವ್ಯರ್ಥವಾಗಿ ಕಾಲವನ್ನು ಕಳೆಯುತ್ತಾರೆ. ಯಾವನಾದರೂ ಒಳ್ಳೆಯ ಉಪದೇಶವನ್ನು ಮಾಡಿದರೆ, ಅವನಿಗೂ ವಿರೋಧಿಗಳಾಗುತ್ತಾರೆ. ಬಹುತೇಕವಾಗಿ ಈ ಜನರು ಭಸ್ಮ-ರುದ್ರಾಕ್ಷಧಾರಣ ಮಾಡುತ್ತಾರೆ ಮತ್ತು ಹಲಕೆಲವರು ಶೈವ ಸಂಪ್ರದಾಯದ ಅಭಿಮಾನವನ್ನಿಟ್ಟುಕೊಂಡಿರುತ್ತಾರೆ. ಮತ್ತು ಯಾವಾಗಾಲಾದರೂ ಶಾಸ್ತ್ರಾರ್ಥಮಾಡುವರಾದರೆ, ತಮ್ಮ ಮತದ, ಎಂದರೆ, ಶಂಕರಾಚಾರ್ಯೋಕ್ತವಾದುದರ ಸ್ಥಾಪನವನ್ನು ಮಾಡುತ್ತಾರೆ ಮತ್ತು ಚಕ್ರಾಂಕಿತರೇ ಮೊದಲಾದವರ ಖಂಡನದಲ್ಲಿ ಪ್ರವೃತ್ತರಾಗಿರುತ್ತಾರೆ. ವೇದಮಾರ್ಗದ ಉನ್ನತಿಯಲ್ಲಿ ಮತ್ತು ಪಾಷಂಡ ಮಾರ್ಗಗಳೆಷ್ಟಿವೆಯೋ, ಆ ಎಲ್ಲ ಮಾರ್ಗಗಳ ಖಂಡನದಲ್ಲಿ ಪ್ರವೃತ್ತರಾಗುವುದಿಲ್ಲ. ಈ ಸಂನ್ಯಾಸೀ ಜನರು-"ನಮಗೆ ಖಂಡನ-ಮಂಡನದಿಂದೇನು ಪ್ರಯೋಜನ? ನಾವಂತೂ ಮಹಾತ್ಮರಾಗಿದ್ದೇವೆ!" ಎಂದು ತಿಳಿದುಕೊಂಡಿರುತ್ತಾರೆ. ಇಂತಹ ಜನರೂ ಕೂಡ ಜಗತ್ತಿನಲ್ಲಿ ಭಾರರೂಪರಾಗಿತ್ತಾರೆ.

ಹೀಗೆ ಇರುವುದರಿಂದಲೇ ವೇದಮಾರ್ಗವಿರೋಧಿಗಳಾದ ವಾಮಮಾರ್ಗಿಗಳೇ ಮೊದಲಾದ ಸಾಂಪ್ರದಾಯಿಕರೂ, ಕ್ರೈಸ್ತರೂ, ಮುಸಲ್ಮಾನರೂ, ಜೈನರೂ ಮೊದಲಾದವರೂ ಹೆಚ್ಚಿಕೊಂಡರು; ಈಗಲೂ ಹೆಚ್ಚುತ್ತಲೇ ಹೋಗುತ್ತಾರೆ. ಮತ್ತು ಈ ಜನರ[೨೫೭] ನಾಶವಾಗುತ್ತಾ ಹೋಗುತ್ತಿದ್ದರೂ ಕೂಡ, ಇವರ ಕಣ್ಣುಗಳು ತೆರೆದುಕೊಳ್ಳುವುದಿಲ್ಲ. ತೆರೆಯುವುದಾದರೂ ಎಲ್ಲಿಂದ? ಅವರ ಮನಸ್ಸಿನಲ್ಲಿ ಸ್ವಲ್ಪವಾದರೂ ಪರೋಪಕಾರ ಬುದ್ಧಿ ಮತ್ತು ಕರ್ತವ್ಯಕರ್ಮಗಳನ್ನು ಮಾಡುವುದರಲ್ಲಿ ಉತ್ಸಾಹವಿದ್ದರಲ್ಲವೇ? ಆದರೆ, ಈ ಮಂದಿ ತಮ್ಮ ಪ್ರತಿಷ್ಠೆ, ಭೋಜನ, ಪಾನಗಳ ಮುಂದೆ ಇನ್ನು ಹೆಚ್ಚಾದುದು ಏನನ್ನೂ ತಿಳಿಯರು ಮತ್ತು ಜಗತ್ತಿನ ನಿಂದೆಗೆ ಬಹಳ ಹೆದರುತ್ತಾರೆ.[೨೫೮] ಮತ್ತು (ಲೋಕೈಷಣಾ) ಲೋಕದಲ್ಲಿ ಪ್ರತಿಷ್ಠೆ, (ವಿತ್ತೈಷಣಾ) ಧನವನ್ನು ಹೆಚ್ಚಿಸುವುದರಲ್ಲಿ ತತ್ಪರರಾಗಿ ವಿಷಯ-ಭೋಗ, (ಪುತ್ರೈಷಣಾ ಪುತ್ರರೋ ಎನ್ನುವಂತೆ ಶಿಷ್ಯರ ಮೇಲೆ ಮೋಹಿತರಾಗುವುದು ಈ ಮೂರು ಬಗೆಯ 'ಏಷಣಾ' ಎಂದರೆ ಇಚ್ಛೆಗಳನ್ನು ತ್ಯಾಗಮಾಡುವುದು ಉಚಿತವಾಗಿರುತ್ತದೆ.) ಏಷಣೆಯೇ ಬಿಟ್ಟುಹೋಗಲಿಲ್ಲವೆಂದಾಗ, ಸಂನ್ಯಾಸ ಉದಿಸಬಲ್ಲದಾದರೂ ಹೇಗೆ? ಎಂದರೆ, ಪಕ್ಷಪಾತ ರಹಿತರಾಗಿ, ವೇದಮಾರ್ಗೋಪದೇಶದಿಂದ ಜಗತ್ತಿನ ಕಲ್ಯಾಣವನ್ನು

---

೨೫೫. ಪೂರ್ತಿ ಶ್ಲೋಕ ಹೀಗಿದೆ :

"ನಾರಾಯಣಮ್ ಪದ್ಮಭವಂ ವಸಿಷ್ಠಂ ಶಕ್ತಿಂ ಚ ಶತ್ರು ಪರಾಶರಂ ಚ ।
ವ್ಯಾಸಂ ಶುಕಂ ಗೌಡಪದಂ ಮಹಾಂತಂ ಚ ಗೋವಿಂದ ಯೋಗೀಂದ್ರ ಮಥಾಸ್ಯ ಶಿಷ್ಯಮ್ ॥
ಶ್ರೀ ಶಂಕರಾಚಾರ್ಯಮಥಾಸ್ಯ ಪದ್ಮಪಾದಂ ಚ ಹಸ್ತಮಲಕಂ ಚ ಶಿಷ್ಯಮ್ ।
ತಂ ತ್ರೋಟಕಂ ವಾರ್ತಿಕಕಾರ ಮನ್ಯಾನಸ್ಮದ್ಗುರೂನ್ ಸಂತತಮಾನತೋಸ್ಮಿ॥ -ಯು.ಮೀ.

೨೫೬. ಹಲವು ಮಠಾಧೀಶರು ವಿವಾಹಿತರಾಗಿರುತ್ತಾರೆ. ಹಲವರು ಸೇವಿಕೆಯ ರೂಪದಲ್ಲಿ ಸ್ತ್ರೀಯರನ್ನು ಇಟ್ಟುಕೊಂಡಿರುತ್ತಾರೆ. ಮತ್ತೆ ಹಲವರು ಗೃಹಸ್ಥರಂತೆ ಸಾಂಸಾರಿಕ ವ್ಯವಹಾರಗಳಲ್ಲಿ ತೊಡಗಿರುತ್ತಾರೆ.

೨೫೭. ಎಂದರೆ, ವೇದಾನುಯಾಯಿ ಭಾರತೀಯರು-ಹಿಂದುಗಳು.

೨೫೮. ಈ ಕಾರಣದಿಂದಲೇ, ಪೌರಾಣಿಕ ವಿದ್ವಾಂಸರು, ಸಂನ್ಯಾಸಿಗಳು, ಅಧಿಕಾರಿಗಳು, ಮೊದಲಾದವರು ಅಸತ್ಯವನ್ನು ಕುರೀತಿಗಳನ್ನು, ದಾಂಭಿಕತೆಯನ್ನು, ಛಲ-ಕಪಟ-ಧೂರ್ತತನ-ವಂಚಕತನ ವನ್ನು ಖಂಡಿಸಲು ಹೆದರಿ, ಅವುಗಳೊಡನೆ ಒಪ್ಪಂದ ಮಾಡಿಕೊಂಡು, ಹಿಂದೀ ಭಾಷೆಯ ಲೋಕೋಕ್ತಿಯಂತೆ,

"ಬಹತೀ ಗಂಗಾ ಮೇ ಹಾತ್ ಧೋನಾ"

ಎಂದರೆ, ಎಲ್ಲರ ಜೊತೆ ತಾವೂ ವಂಚಕರಂತೆ ವರ್ತಿಸಿ, ಅವಿದ್ಯೆಯನ್ನು ವರ್ಧಿಸಿ ಭಾರತದೇಶದ ಅವನತಿಗೆ, ಅಪ್ರತಿಷ್ಠೆಗೆ ಕಾರಣರಾದರು !

ಸ್ವಾಮೀ ದಯಾನಂದರು, ೧೮೬೭ [ಆಗ ಅವರಿಗೆ ೪೮ ವರ್ಷ ವಯಸ್ಸು] ಹರಿದ್ವಾರದ ಕುಂಭಮೇಳದಲ್ಲಿ "ಪಾಖಂಡೀ ಖಂಡನೀ" ಪತಾಕೆಯನ್ನು ತಮ್ಮ ಕುಟೀರದ ಮೇಲೆ ಹಾರಿಸಿ, ಮೂರ್ತಿಪೂಜೆ, ಅವತಾರವಾದ, ಪುರಾಣೋಕ್ತ ಪಾಖಂಡ ಮೊದಲಾದ ಕುರೀತಿಗಳನ್ನು ಖಂಡಿಸಲಾರಂಭಿಸಿದಾಗಲೇ ೪೦೦೦ ವರ್ಷದ ಮಿಥ್ಯಾಯುಗ ಮರಣಾವಸ್ಥೆಯನ್ನು ಹೊಂದಿ ಸತ್ಯಯುಗದ ಪುನರ್ಜನ್ಮವಾಯಿತು.

ಮಾಡುವುದರಲ್ಲಿ ಅಹರ್ನಿಶಿ ಪ್ರವೃತ್ತರಾಗಿರುವುದು ಸಂನ್ಯಾಸಿಗಳ ಮುಖ್ಯ ಕಾರ್ಯವಾಗಿರುತ್ತದೆ. ತಮ್ಮ ತಮ್ಮ ಅಧಿಕಾರದ ಕರ್ಮಗಳನ್ನು ಮಾಡದಿರುವಾಗ, ಮತ್ತೆ ಸಂನ್ಯಾಸ - ಮೊದಲಾದ ಹೆಸರುಗಳನ್ನು ಇಡಿಸಿಕೊಳ್ಳುವುದು ವ್ಯರ್ಥವಾಗಿದೆ. ಇಲ್ಲದಿದ್ದರೆ, ಹೇಗೆ ಗೃಹಸ್ಥರು ವ್ಯವಹಾರ ಹಾಗೂ ಸ್ವಾರ್ಥಕ್ಕಾಗಿ ಪರಿಶ್ರಮವನ್ನು ಮಾಡುತ್ತಾರೋ, ಹಾಗೆ, ಸಂನ್ಯಾಸಿಗಳು ಅದಕ್ಕಿಂತ ಹೆಚ್ಚು ಪರಿಶ್ರಮವನ್ನು ಪರೋಪಕಾರ ಮಾಡುವುದರಲ್ಲಿ ತತ್ಪರರಾಗಿ ಮಾಡಿದಾಗ ಮಾತ್ರ, ಎಲ್ಲಾ ಆಶ್ರಮಗಳೂ ಉನ್ನತಿ ಹೊಂದುತ್ತಾ ಹೋಗುತ್ತವೆ.

ನೋಡಿರಿ, ನಿಮ್ಮ ಮುಂದೆ ಪಾಷಂಡಮತಗಳು ಹೆಚ್ಚುತ್ತಾ ಹೋಗುತ್ತವೆ; ನಿಮ್ಮವರು ಕ್ರೈಸ್ತರು, ಮುಸಲ್ಮಾನರು ಕೂಡ ಆಗುತ್ತಾ ಹೋಗುತ್ತಾರೆ. ನಿಮ್ಮಿಂದ ಕೊಂಚವಾದರೂ ನಿಮ್ಮ ಮನೆಯ ರಕ್ಷಣೆ ಮತ್ತು ಬೇರೆಯವರನ್ನು ಸೇರಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ! ನೀವು ಮಾಡಲು ಬಯಸಿದಾಗ ತಾನೇ ಆಗುವುದು? ಎಂದಿನವರೆಗೆ ವರ್ತಮಾನದಲ್ಲಿ ಮತ್ತು ಭವಿಷ್ಯತ್ತಿನಲ್ಲಿ ನೀವು ಉನ್ನತಿಶೀಲರಾಗುವುದಿಲ್ಲವೋ, ಅಂದಿನವರೆಗೆ ಆರ್ಯಾವರ್ತದ ಮತ್ತು ಅನ್ಯದೇಶಸ್ಥರಾದ ಮಾನವರ ವೃದ್ಧಿಯಾಗುವುದಿಲ್ಲ. ಯಾವಾಗ ವೃದ್ಧಿಗೆ ಕಾರಣಗಳಾದ ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಪಠನ-ಪಾಠನಗಳೂ,[೨೫೯] ಬ್ರಹ್ಮಚರ್ಯವೇ ಮೊದಲಾದ ಆಶ್ರಮಗಳ ಯಥಾವತ್ತಾದ ಅನುಷ್ಠಾನವೂ, ಸತ್ಯೋಪದೇಶಗಳೂ ಆಗುತ್ತವೋ, ಆಗಲೇ ದೇಸದ ಉನ್ನತಿಯಾಗುತ್ತದೆ.

ಎಚ್ಚರಗೊಳ್ಳಿರಿ! ಬಹುಬಗೆಯ ಪಾಷಂಡದ ಘಟನೆಗಳು ನಿಮಗೆ ನಿಜವಾಗಿಯೂ ಕಂಡುಬರುತ್ತವೆ. ಉದಾಹರಣೆಗೆ, ಯಾವನಾದರೂ ಸಾಧುವು. ಅಥವಾ ಅಂಗಡಿಕಾರನು[೨೬೦] ಮಕ್ಕಳು ಮೊದಲಾದುವನ್ನು ಕೊಡುವ ಸಿದ್ಧಿಗಳನ್ನು ತೋರ್ಪಡಿಸಿದಾಗ, ಅವನ ಹತ್ತಿರ ಬಹಳ ಮಂದಿ ನಾರಿಯರು ಹೋಗುತ್ತಾರೆ ಮತ್ತು ಕೈಮುಗಿದು ಪುತ್ರರನ್ನು ಬೇಡಿಕೊಳ್ಳುತ್ತಾರೆ. ಆಗ ಬಾಬಾಜೀ ಎಲ್ಲರಿಗೂ ಪುತ್ರರಾಗಲಿ-ಎಂದು ಆಶೀರ್ವಾದ ಮಾಡುತ್ತಾರೆ. ಅವರಲ್ಲಿ ಯಾವ ಯಾವಳಿಗೆ ಪುತ್ರನು ಹುಟ್ಟುತ್ತಾನೋ, ಆಯಾ ನಾರಿಯು ಬಾಬಾಜೀಯ ವಚನದಿಂದ ಮಗನು ಹುಟ್ಟಿದನು-ಎಂದು ತಿಳಿಯುತ್ತಾಳೆ. ಯಾವಾಗ ಯಾವನಾದರೂ-"ಹೆಣ್ಣು ಹಂದಿ, ಹೆಣ್ಣು ನಾಯಿ, ಹೆಣ್ಣು ಕತ್ತೆ ಮತ್ತು ಕೋಳಿ ಮೊದಲಾದುವಕ್ಕೆ ಮಕ್ಕಳು-ಮರಿಗಳು ಯಾವ ಬಾಬಾಜೀಯ ವಚನದಿಂದ ಆಗುತ್ತವೆ?" ಎಂದು ಅವಳನ್ನು[೨೬೧] ಕೇಳುತ್ತಾನೋ, ಆಗ ಅವಳು[೨೬೨] ಯಾವ ಉತ್ತರವನ್ನೂ ಕೊಡಲಾರಳು. ಯಾವನಾದರೂ "ನಾನು ಬಾಲಕನನ್ನು ಜೀವಿತನಾಗಿಡಬಲ್ಲೆ". ಎಂದು ಹೇಳುವನಾದರೆ ಸ್ವತಃ ಅವನೇ ಸತ್ತುಹೋಗುತ್ತಾನೆ ಏಕೆ?

ಎಷ್ಟೋ ಜನ ಧೂರ್ತರು, ದಾರಿ ಕಾಯುವ ಠಕ್ಕರಂತೆ, ದೊಡ್ಡ ದೊಡ್ಡ ಬುದ್ಧಿವಂತರೂ ಕೂಡ ಮೋಸ ಹೋಗುವ ಹಾಗೆ ಮಾಯೆಯನ್ನು ರಚಿಸುತ್ತಾರೆ. ಈ ಜನರು ಐವರೋ, ಏಳು ಮಂದಿಯೂ ಒಂದಾಗಿ ದೂರ ದೂರದ ದೇಶಗಳಿಗೆ ಹೋಗುತ್ತಾರೆ. ಯಾವನು ಶರೀರದಿಂದ ದಷ್ಟಪುಷ್ಟನಾಗಿ ಭಾರಿಯಾಗಿರುತ್ತಾನೋ, ಅವನನ್ನು 'ಸಿದ್ಧ'ನನ್ನಾಗಿಮಾಡಿಕೊಳ್ಳುತ್ತಾರೆ. ಯಾವ ನಗರದಲ್ಲಿ ಅಥವಾ ಗ್ರಾಮದಲ್ಲಿ ಧನಾಢ್ಯರಿರುತ್ತಾರೋ, ಅದರ ಹತ್ತಿರ ವನದಲ್ಲಿ ಆ ಸಿದ್ಧನನ್ನು ಕೂಡಿಸುತ್ತಾರೆ. ಅವನ ಸಾಧಕರು ನಗರದೊಳಕ್ಕೆ ಹೋಗಿ, ಅಪರಿಚಿತರಂತಾಗಿ, ಸಿಕ್ಕಿದವರು ಯಾರನ್ನಾದರೂ "ನೀವು ಇಂತಹ ಮಹಾತ್ಮನನ್ನು ಇಲ್ಲಿ ಎಲ್ಲಿಯಾದರೂ ನೋಡಿದ್ದೀರೋ ಅಥವಾ ಇಲ್ಲವೋ?" ಎಂದು ಕೇಳುತ್ತಾರೆ. ಅವರು ಇದನ್ನು ಕೇಳಿ - "ಆ ಮಹಾತ್ಮನಾವನು? ಮತ್ತು ಹೇಗಿದ್ದಾನೆ?" ಎಂದು ಕೇಳುತ್ತಾರೆ.

**ಸಾಧಕನು** - "ದೊಡ್ಡ ಸಿದ್ಧಪುರುಷನು. ಮನಸ್ಸಿನ ಮಾತುಗಳನ್ನೂ ಹೇಳಿಬಿಡುತ್ತಾನೆ. ಬಾಯಿನಿಂದ ಏನನ್ನು ಹೇಳುತ್ತಾನೋ, ಅದು ಆಗಿಯೇ ತೀರುತ್ತದೆ. ಮಹಾಯೋಗಿರಾಜನು. ಅವನ ದರ್ಶನಕ್ಕಾಗಿ ನಾವು ಮನೆ-ಬಾಗಿಲು ಬಿಟ್ಟು ಹುಡುಕುತ್ತಾ ತಿರುಗುತ್ತಿದ್ದೇವೆ. ಆ ಮಹಾತ್ಮನು ಈ ಕಡೆ ಬಂದಿದ್ದಾನೆ-ಎಂದು ನಾನು ಕೇಳಿದ್ದೇನೆ". ಎನ್ನುತ್ತಾನೆ.

---

೨೫೯. ಆರ್ಯಸಮಾಜದ ಶಿಕ್ಷಣ ಸಂಸ್ಥೆಗಳಲ್ಲಿ ವೇದಾದಿ ಪಠನ-ಪಾಠನ ಪದ್ಧತಿ ಈಗ ಬಹಳ ಕಡಿಮೆಯಾಗಿ ಬಿಟ್ಟಿದೆ. ಆರ್ಯಸಮಾಜದ ನೇತಾರರು ವೇದಾದಿ ಸತ್ಯ ಶಾಸ್ತ್ರಗಳ ಪಠನ-ಪಾಠನದ ವ್ಯವಸ್ಥೆ ಮಾಡುವ ಬದಲು, ಅವಿದ್ಯಾ ಪ್ರಸಾರಕವೂ, ದಾಸ ಮನೋವೃತ್ತಿ ಉತ್ಪನ್ನಕಾರಕವೂ ಆದ ಸ್ಕೂಲ್, ಕಾಲೇಜುಗಳನ್ನು ನಡೆಸುವುದರಲ್ಲಿ ತಮ್ಮ ಪರಮ ಪುರುಷಾರ್ಥ ವೆಂದು ತಿಳಿದುಕೊಂಡಿದ್ದಾರೆ. ಮತ್ತು ಆರ್ಯಸಮಾಜದ ಉನ್ನತಿ, ಮತ್ತು ದಯಾನಂದರ ಮಂತವ್ಯ ಹೇಗೆ ಸಿದ್ಧಿಸಬೇಕು? ಯು.ಮೀ.

೨೬೦. ಎಂದರೆ, ಅಂಗಡಿಕಾರನ ವೃತ್ತಿಯುಳ್ಳ ಸಾಧು ಎಂದರ್ಥ

೨೬೧. ಸ್ತ್ರೀಯರನ್ನು

೨೬೨. ಸ್ತ್ರೀಯರು.

**ಗೃಹಸ್ಥನು** – "ಯಾವಾಗ ಆ ಮಹಾತ್ಮನು ನಿಮಗೆ ಸಿಕ್ಕುವನೋ, ಆಗ ನಮಗೂ ಹೇಳಿರಿ. ನಾವು ದರ್ಶನಮಾಡುವೆವು ಮತ್ತು ಮನಸ್ಸಿನ ಮಾತುಗಳನ್ನು ಕೇಳುವೆವು" ಎನ್ನುತ್ತಾನೆ. ಇದೇ ರೀತಿ ಹಗಲೆಲ್ಲಾ ನಗರದಲ್ಲಿ ತಿರುಗುತ್ತಾರೆ ಮತ್ತು ಪ್ರತಿಯೊಬ್ಬನಿಗೂ ಆ ಸಿದ್ಧನ ಮಾತುಗಳನ್ನು ಹೇಳಿ, ರಾತ್ರಿಗೆ ಒಂದುಗೂಡಿ ಸಿದ್ಧರು-ಸಾಧಕರು ಆಗಿ ತಿನ್ನುತ್ತಾರೆ, ಕುಡಿಯುತ್ತಾರೆ. ಮತ್ತು ನಿದ್ರಿಸುತ್ತಾರೆ. ಮತ್ತೆಯೂ ಪ್ರಾತಃಕಾಲ ನಗರಕ್ಕೆ ಅಥವಾ ಗ್ರಾಮಕ್ಕೆ ಹೋಗಿ, ಅದೇ ರೀತಿ ಎರಡು-ಮೂರು ದಿನ ಹೇಳಿ, ಮತ್ತು ನಾಲ್ವರು ಸಾಧಕರು ಒಬ್ಬೊಬ್ಬ ಧನಾಢ್ಯನಿಗೂ, "ಆ ಮಹಾತ್ಮರು ಸಿಕ್ಕಿಬಿಟ್ಟರು. ನೀವು ದರುಶನ ಮಾಡಬೇಕಾಗಿದ್ದರೆ, ನಡೆಯಿರಿ" ಎಂದು ಹೇಳುತ್ತಾರೆ. ಅವರು ಯಾವಾಗ ಸನ್ನದ್ಧರಾಗುತ್ತಾರೋ, ಆಗ ಅವರಿಗೆ-"ನೀವು ಯಾವ ಮಾತನ್ನು ಕೇಳಬಯಸುತ್ತೀರಿ? ನಮಗೆ ಹೇಳಿರಿ". ಎಂದು ಹೇಳುತ್ತಾರೆ. ಒಬ್ಬನು ಪುತ್ರನನ್ನು ಬಯಸುತ್ತಾನೆ; ಇನ್ನೊಬ್ಬನು ಧನವನ್ನಿಚ್ಛಿಸುತ್ತಾನೆ; ಮತ್ತೊಬ್ಬನು ರೋಗನಿವಾರಣವನ್ನು ಬಯಸುತ್ತಾನೆ; ಮತ್ತೆ ಮಗದೊಬ್ಬನು ಶತ್ರುವನ್ನು ಜಯಿಸುವ ಇಚ್ಛೆಯನ್ನು ಹೇಳುತ್ತಾನೆ. ಅವರನ್ನು ಆ ಸಾಧಕರು ಕರೆದೊಯ್ಯುತ್ತಾರೆ. ಸಿದ್ಧನೂ, ಸಾಧಕರೂ ಹೇಗೆ ಸಂಕೇತ ಮಾಡಿಕೊಂಡಿರುತ್ತಾರೊ, ಹಾಗೆ, ಎಂದರೆ-ಯಾವನಿಗೆ ಹಣದ ಬಯಕೆಯಿದೆಯೋ, ಅವನನ್ನು ಬಲಗಡೆಗೆ, ಯಾವನಿಗೆ ಪುತ್ರನ ಇಚ್ಛೆಯಿರುತ್ತದೋ ಅವನನ್ನು ಎದುರಿಗೆ, ಯಾವನಿಗೆ ರೋಗ ನಿವಾರಣದ ಇಚ್ಛೆಯಿರುತ್ತದೋ, ಅವನನ್ನು ಎಡಗಡೆಗೆ ಮತ್ತು ಯಾವನಿಗೆ ಶತ್ರುವನ್ನು ಗೆಲ್ಲವು ಇಚ್ಛೆಯಿರುತ್ತದೋ, ಅವನನ್ನು ಹಿಂದಿನಿಂದ ಕರೆದೊಯ್ದು ಎದುರಿನವನ ನಡುವೆ ಕುಳ್ಳಿರಿಸುತ್ತಾರೆ.

ಯಾವಾಗ ನಮಸ್ಕಾರ ಮಾಡುತ್ತಾರೋ, ಅದೇ ಸಮಯದಲ್ಲಿ ಆ ಸಿದ್ಧನು ತನ್ನ ಸಿದ್ಧತ್ವದ ಉಗ್ಗಡಣೆಯಿಂದ, ಉಚ್ಚ ಧ್ವನಿಯಿಂದ -"ನೀನು ಪುತ್ರನ ಬಯಕೆ ಹೊತ್ತು ಇಲ್ಲಿ ಬರಲು, ಇಲ್ಲಿ ನಮ್ಮ ಬಳಿ ಪುತ್ರರನ್ನಿಟ್ಟಿದ್ದಾರೋ?" ಎಂದು ಕೇಳುತ್ತಾನೆ. ಹೀಗೆಯೇ ಧನದ ಇಚ್ಛೆಯನ್ನಿಟ್ಟುಕೊಳ್ಳುವವನನ್ನು-"ನೀನು ಹಣವನ್ನು ಬಯಸಿ ಬರಲು ಇಲ್ಲಿ ಚೀಲಗಳನ್ನಿಟ್ಟಿದ್ದಾರೇನು?- ಫಕೀರರ ಹತ್ತಿರ ಹಣವನ್ನೆಲ್ಲಿಟ್ಟಿದ್ದಾರೆ?"- ಎಂದು ಪ್ರಶ್ನಿಸುತ್ತಾನೆ. ರೋಗವನ್ನುಳ್ಳವನಿಗೆ-"ನೀನು ರೋಗಮುಕ್ತಿ ಬಯಸಿಬರಲು ನಾವು ವೈದ್ಯರೇನು? ನಿನ್ನ ರೋಗವನ್ನು ನಿವಾರಿಸಲು ನಾವು ವೈದ್ಯರಲ್ಲವಲ್ಲ!-ಹೋಗು ಯಾವನಾದರೂ ವೈದ್ಯನ ಬಳಿಗೆ".-ಎಂದು ಹೇಳುತ್ತಾನೆ. ಆದರೆ, ಅವನ ತಂದೆ ರೋಗಿಯಾಗಿದ್ದಾಗ, ಅವನ ಸಾಧಕನು ಹೆಬ್ಬೆರಳನ್ನೂ, ತಾಯಿ ರುಗ್ಣೆಯಾಗಿದ್ದರೆ ತರ್ಜನಿಯನ್ನೂ, ಸೋದರನು ರೋಗಿಯಾಗಿದ್ದರೆ ನಡುಬೆರಳನ್ನೂ, ಪತ್ನಿಯು ರೋಗಯುಕ್ತೆಯಾಗಿದ್ದರೆ ಉಂಗುರದ ಬೆರಳನ್ನೂ, ಮಗಳು ರೋಗಿಣಿಯಾಗಿದ್ದರೆ ಕಿರುಬೆರಳನ್ನೂ ಅಲ್ಲಾಡಿಸಿಬಿಡುತ್ತಾನೆ. ಅದನ್ನು ನೋಡಿ ಆ ಸಿದ್ಧನು "ನಿನ್ನ ತಂದೆ ಖಾಯಿಲೆಬಿದ್ದಿದ್ದಾರೆ. ನಿನ್ನ ತಾಯಿ, ನಿನ್ನ ಸೋದರ, ನಿನ್ನ ಪತ್ನಿ ಮತ್ತು ನಿನ್ನ ಮಗಳು ರೋಗಗ್ರಸ್ತೆಯಾಗಿದ್ದಾರೆ. ಆಗಲಂತೂ ಆ ನಾಲ್ಕಕ್ಕೆ ನಾಲ್ಕೂ ಜನ ಬಹಳ ಮುಗ್ಧರಾಗಿ ಹೋಗುತ್ತಾರೆ. ಸಾಧಕರು-"ನೋಡಿರಿ! ನಾವು ಹೇಗೆ ಹೇಳಿದ್ದೆರೋ, ಹಾಗೆಯೇ ಇದ್ದಾರೋ ಅಥವಾ ಇಲ್ಲವೋ?" ಎನ್ನುತ್ತಾರೆ.

**ಗೃಹಸ್ಥರು:**- ಹೌದು, ಹೇಗೆ ನೀವು ಹೇಳಿದ್ದಿರೋ, ಹಾಗೆ ಇದ್ದಾರೆ. ನೀವು ನಮಗೆ ಬಹಳ ಉಪಕಾರಮಾಡಿದಿರಿ. ಮತ್ತು ಯಾರ ದರ್ಶನಮಾಡಿ ನಾವು ಕೃತಾರ್ಥರಾದೆವೋ, ಅಂತಹ ಮಹಾತ್ಮರು ಸಿಕ್ಕಿದುದು ನಮ್ಮ ಮಹಾಭಾಗ್ಯೋದಯವೇ ಸರಿ.

**ಸಾಧಕರು:**- ನೋಡಿ, ಸೋದರರರೇ! ಈ ಮಹಾತ್ಮರು ಮನೋಗಾಮಿಗಳಾಗಿದ್ದಾರೆ. ಇಲ್ಲಿ ಬಹುದಿನ ಇರುವವರಲ್ಲ. ಇವರ ಅಶೀರ್ವಾದವನ್ನೇನಾದರೂ ತೆಗೆದುಕೊಳ್ಳಬೇಕಾಗಿದ್ದರೆ, ನಿಮ್ಮ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಗಿ, ತನು-ಮನ-ಧನಗಳಿಂದ ಇವರ ಸೇವೆಮಾಡಿರಿ. ಏಕೆಂದರೆ, ಸೇವೆಯಿಂದಲೇ ನಾವೆ ದಡಮುಟ್ಟುವುದು. ಯಾರ ಮೇಲಾದರೂ ಪ್ರಸನ್ನರಾಗಿಹೋದಲ್ಲಿ ಏನು ವರಗಳನ್ನು ಕೊಟ್ಟುಬಿಡುವರೋ ಹೇಳಲಾಗುವುದಿಲ್ಲ. ಸಂತರ ಗತಿ ಅಪಾರವಾಗಿದೆ.

ಗೃಹಸ್ಥರು ಇಂತಹ ಉಪ್ಪು-ಖಾರ ಹಚ್ಚಿದ ಮಾತುಗಳನ್ನು ಕೇಳಿ, ಬಹಳ ಹರ್ಷದಿಂದ ಅವರನ್ನು ಪ್ರಶಂಸಿಸುತ್ತಾ ಮನೆಯ ಕಡೆಗೆ ಹೋಗುತ್ತಾರೆ. ಸಾಧಕರೂ ಕೂಡ ಅವರೊಂದಿಗೇ ಹೊಗುತ್ತಾರೆ. ಏಕೆಂದರೆ, ಯಾರೂ ತಮ್ಮ ಪಾಷಂಡವನ್ನು ಹೊರಗೆಡಹದಿರಲಿ-ಎಂಬ ಭಾವನೆಯಿರುತ್ತದೆ. ಆ ಧನಾಢ್ಯರ ಮಿತ್ರನು ಯಾವನಾದರೂ ನಿಕ್ಕಿದರೆ, ಅವನ ಮುಂದೆಯೂ ಪ್ರಶಂಸೆಮಾಡುತ್ತಾರೆ. ಹೀಗೆಯೇ ಯಾರು ಯಾರು ಸಾಧಕರೊಂದಿಗೆ ಹೋಗುತ್ತಾರೋ, ಅವರವರ ವೃತ್ತಾಂತಗಳನ್ನೆಲ್ಲಾ ಹೇಳಿ ಬಿಡುತ್ತಾರೆ. ಯಾವಾಗ ನಗರದಲ್ಲಿ-"ಇಂತಹ ಕಡೆಗೆ ಒಬ್ಬ ಬಹಳ ಭಾರೀ ಸಿದ್ಧ ಪುರುಷರು ಬಂದಿದ್ದಾರೆ. ನಡೆಯಿರಿ ಅವರ ಬಳಿಗೆ". ಎಂಬ ಕೋಲಾಹಲವೇಳುತ್ತದೋ, ಆಗ ಜಾತ್ರೆಗೆ ಜಾತ್ರೆಯೇ ಬಳಿಹೋಗಿ, ಯಾರಾದರೂ-"ಮಹಾತ್ಮರೇ! ನನ್ನ ಮನಸ್ಸಿನ ಸ್ಥಿತಿಯನ್ನು ಹೇಳಿರಿ" ಎನ್ನುತ್ತಾರೆ. ಆಗಲಂತೂ ವ್ಯವಸ್ಥೆಯೇ ಕೆಟ್ಟುಹೋಗುವುದರಿಂದ ಸಿದ್ಧಪುರುಷನು

ಮೌನಧರಿಸಿಬಿಡುತ್ತಾನೆ. ಮತ್ತು "ನಮ್ಮನ್ನು ತುಂಬಾ ಪೀಡಿಸಬೇಡಿರಿ" ಎನ್ನುತ್ತಾನೆ. ಆ ಕ್ಷಣದಲ್ಲಿಯೇ ಥಟ್ಟನೆ ಅವನ ಸಾಧಕರೂ ಕೂಡ–"ನೀವು ಇವರನ್ನು ಬಹಳ ಪೀಡಿಸುವಿರಾದರೆ, ಇವರು ಹೊರಟುಹೋಗುವರು". ಎಂದು ಹೇಳಲಾರಂಭಿಸುತ್ತಾರೆ. ಮತ್ತು ಯಾವನು ದೊಡ್ಡ ಮನುಷ್ಯನಾಗಿರುತ್ತಾನೋ, ಅವನು ಸಾಧಕನನ್ನು ಬೇರೆಡೆಗೆ ಕರೆದು–ನಮ್ಮ ಮನಸ್ಸಿನ ಮಾತನ್ನು ಹೇಳಿಸಿ ಬಿಡುವಿರಾದರೆ, ನಾವು ಸತ್ಯವೆಂದು ಸ್ವೀಕರಿಸುತ್ತೇವೆ". ಎನ್ನುತ್ತಾರೆ. ಸಾಧಕನು "ವಿಷಯವೇನು?" ಎಂದು ಕೇಳುತ್ತಾನೆ. ಧನಾಢ್ಯನು ಅವನಿಗೆ ಹೇಳಿಬಿಡುತ್ತಾನೆ. ಆಗ ಅವನನ್ನು ಅದೇರೀತಿಯ ಸಂಕೇತದಂತೆ ಕರೆದೊಯ್ದು ಕೂಡಿಸಿಬಿಡುತ್ತಾನೆ. ಆ ಸಿದ್ಧನು ತಿಳಿದುಕೊಂಡು ಸರ್ರನೇ ಹೇಳಿಬಿಡುತ್ತಾನೆ. ಆಗಲಂತೂ ಸಂಪೂರ್ಣ ಜನಜಂಗುಳಿಯೇ "ಓಹೋ! ಬಹುದೊಡ್ಡ ಸಿದ್ಧಪುರುಷರು"– ಎಂಬ ಕೂಗು ಕೇಳುತ್ತದೆ. ಒಬ್ಬನು ಮಿಠಾಯಿಯನ್ನು, ಒಬ್ಬನು ಕಾಸನ್ನೂ, ಒಬ್ಬನು ರೂಪಾಯಿಯನ್ನೂ ಒಬ್ಬನು ಸ್ವರ್ಣಮುದ್ರೆಯನ್ನೂ, ಒಬ್ಬನು ವಸ್ತ್ರವನ್ನೂ, ಮತ್ತಾವನಾದರೂ ಒಬ್ಬನು ಖಾದ್ಯವಸ್ತುಗಳನ್ನೂ ಅರ್ಪಿಸುತ್ತಾರೆ. ಮತ್ತು ಎಲ್ಲಿಯವರೆಗೆ ಮಾನ್ಯತೆ ಬಹಳವಿರುವುದೋ, ಅಲ್ಲಿಯವರೆಗೆ ಯಥೇಷ್ಟವಾಗಿ ಸೂರೆಮಾಡುತ್ತಾರೆ. ಮತ್ತು ಯಾರಾದರೂ ಸತ್ಯದ ಬಗೆಗೆ ಕುರುಡರೂ ದುಡ್ಡಿನ ದೊಡ್ಡಪ್ಪಂದಿರೂ ಆದ ಒಬ್ಬರಿಬ್ಬರಿಗೆ ಪುತ್ರರಾಗಿಲಿ–ಎಂಬ ಆಶೀರ್ವಾದವನ್ನಾಗಲಿ ಬೂದಿಯನ್ನಾಗಲಿ ಎತ್ತಿ ಕೊಡುತ್ತಾನೆ. ಮತ್ತು ಅವರಿಂದ ಸಾವಿರಾರು ರೂಪಾಯಿಗಳನ್ನು ತೆಗೆದುಕೊಂಡು, "ನಿನ್ನ ಭಕ್ತಿ ಸತ್ಯವಾಗಿದ್ದರೆ, ಪುತ್ರನು ಹುಟ್ಟವನು"–ಎಂದು ಬಿಡುತ್ತಾರೆ. ಯಾರನ್ನು ವಿದ್ವಾಂಸರು ಮಾತ್ರ ಪರೀಕ್ಷಿಸಬಲ್ಲರೋ, ಅನ್ಯರಿಗೆ ಸಾಧ್ಯವಿಲ್ಲವೋ, ಅಂತಹ ಈ ಬಗೆಯ ಬಹುಮಂದಿ ಠಕ್ಕರಿರುತ್ತಾರೆ! ಆದುದರಿಂದ, ಯಾವನೂ ಅವನನ್ನು ಠಕ್ಕುತನದಲ್ಲಿ ಸಿಕ್ಕಿಸಲು ಆಗದಂತೆ, ಬೇರೆಯವರನ್ನೂ ಕೂಡ ವಂಚನೆಯಿಂದ ದೂರವಿಡಲಾಗುವಂತೆ ವೇದಗಳೇ ಮೊದಲಾದ ಶಾಸ್ತ್ರಗಳ ಪಠನವೂ, ಸತ್ಸಂಗದ ಮಾಡುವಿಕೆಯೂ ಅಗತ್ಯವಾಗಿರುತ್ತದೆ. ಏಕೆಂದರೆ, ವಿದ್ಯೆಯೇ ಮಾನವನ ನೇತ್ರವಾಗಿರುತ್ತದೆ. ವಿದ್ಯಾ ಶಿಕ್ಷಣಗಳಿಲ್ಲದೆ ಜ್ಞಾನ ಉಂಟಾಗಲಾರದು. ಯಾರು ಬಾಲ್ಯಾವಸ್ಥೆಯಿಂದ ಉತ್ತಮ ಶಿಕ್ಷಣ ಪಡೆಯುತ್ತಾರೋ, ಅವರೇ ಮಾನವರೂ ಮತ್ತು ವಿದ್ವಾಂಸರೂ ಆಗಿರುತ್ತಾರೆ. ಯಾರಿಗೆ ದುಸ್ಸಂಗ ಪ್ರಾಪ್ತವಾಗುತ್ತದೋ, ಅವರು ದುಷ್ಟರೂ, ಪಾಪಿಗಳೂ, ಮಹಾಮೂರ್ಖರೂ ಆಗಿ, ಬಹು ದುಃಖವನ್ನು ಅನುಭವಿಸುತ್ತಾರೆ. ಆದುದರಿಂದ, ಯಾವನು ಬಲ್ಲನೋ ಅವನೇ ಸ್ವೀಕರಿಸುತ್ತಾನೆಯಾದ ಕಾರಣ, ಜ್ಞಾನವನ್ನು ವಿಶೇಷವೆಂದು ಹೇಳಿದ್ದಾರೆ.

**ನ ವೇತ್ತಿ ಯೋ ಯಸ್ಯ ಗುಣಪ್ರಕರ್ಷಂ ಸ ತಸ್ಯ ನಿಂದಾಂ ಸತತಂ ಕರೋತಿ ।**

**ಯಥಾ ಕಿರಾತೀ ಕರಿಕುಂಭಜಾತಾ ಮುಕ್ತಾಃ ಪರಿತ್ಯಜ್ಯ ಬಿಭರ್ತಿ ಗುಂಜಾಃ ॥** (ವೃದ್ಧಚಾಣಕ್ಯ :– ೧೧.೧೨)

ಯಾವನು ಯಾವುದರ ಗುಣವನ್ನು ಅರಿಯನೋ, ಅವನು, ಭಿಲ್ಲನಾರಿಯು ಆನೆಯ ಮುತ್ತುಗಳನ್ನು ತ್ಯಜಿಸಿ, ಗುಲಗಂಜಿಯನ್ನು ಧರಿಸುವಂತೆ, ಅದರ ನಿಂದೆಯನ್ನು ನಿರಂತರವೂ ಮಾಡುತ್ತಾನೆ. ಹಾಗೆಯೇ ಯಾವ ಪುರುಷನು ವಿದ್ವಾಂಸನೂ, ಜ್ಞಾನಿಯೂ, ಧಾರ್ಮಿಕನೂ, ಸತ್ಪುರುಷರ ಸಂಗಿಯೂ, ಯೋಗಿಯೂ, ಪುರುಷಾರ್ಥಿಯೂ, ಜಿತೇಂದ್ರಿಯನೂ, ಸುಶೀಲನೂ ಆಗಿರುತ್ತಾನೋ, ಅವನೇ ಧರ್ಮಾರ್ಥಕಾಮಮೋಕ್ಷಗಳನ್ನು ಗಳಿಸಿ, ಈ ಜನ್ಮದಲ್ಲಿ ಮತ್ತು ಪರಜನ್ಮದಲ್ಲಿ ಸದಾ ಆನಂದದಲ್ಲಿರುತ್ತಾನೆ.

ಹೀಗೆ ಆರ್ಯಾವರ್ತನಿವಾಸೀಜನರ ಮತದ ವಿಷಯದಲ್ಲಿ ಸಂಕ್ಷೇಪವಾಗಿ ಬರೆದೆವು. ಇದರ ನಂತರ, ಆರ್ಯರಾಜರುಗಳ ಯಾವ ಸ್ವಲ್ಪ ಇತಿಹಾಸ ಸಿಕ್ಕಿದೆಯೋ ಅದು, ಸಮಸ್ತ ಸಜ್ಜನರಿಗೂ ತಿಳಿಸುವ ಸಲುವಾಗಿ ಪ್ರಕಾಶಿಸಲ್ಪಡುತ್ತದೆ.

ಯಾವುದರಲ್ಲಿ ಶ್ರೀಮಾನ್ ಮಹಾರಾಜಾ ಯುಧಿಷ್ಠಿರನಿಂದಾರಂಭಿಸಿ, ಮಹಾರಾಜಾ ಯಶಪಾಲನ ಪರ್ಯಂತ ರಾಜರು ಆಗಿಹೋಗಿದ್ದಾರೋ, ಆ ಆರ್ಯಾವರ್ತ ದೇಶೀಯ ರಾಜವಂಶದ ಇತಿಹಾಸವನ್ನು ಈಗ ಸ್ವಲ್ಪ ಬರೆಯುತ್ತೇವೆ. ಮತ್ತು ಶ್ರೀ ಮನ್ಮಹಾರಾಜಾ ಸ್ವಾಯಂಭುವಮನುವಿನಿಂದ ಆರಂಭಿಸಿ, ಮಹಾರಾಜಾ ಯುಧಿಷ್ಠಿರನವರೆಗಿನ ಇತಿಹಾಸವನ್ನು ಮಹಾಭಾರತ ಮೊದಲಾದುವುಗಳಲ್ಲಿ ಬರೆದೇ[೨೬೩] ಇದೆ. ಮತ್ತು ಇದರಿಂದ ಸಜ್ಜನರಿಗೆ ಈಚೆಗಿನ ಇತಿಹಾಸ ಸ್ವಲ್ಪ ವಿದಿತವಾಗುವುದು. ಈ ವಿಷಯವು 'ವಿದ್ಯಾರ್ಥೀ' ಸಮ್ಮಿಳಿತವಾದ, **"ಹರಿಶ್ಚಂದ್ರ ಚಂದ್ರಿಕಾ"**[೨೬೪] ಮತ್ತು **"ಮೋಹನ ಚಂದ್ರಿಕಾ"** ಎಂಬ

---

೨೬೩. ಈ ಬಗ್ಗೆ ಮಹರ್ಷಿ ದಯಾನಂದರು ಪೂನಾದಲ್ಲಿ ಕೊಟ್ಟ ೧೫ ಪ್ರವಚನಗಳಲ್ಲಿ ಇತಿಹಾಸ ವಿಷಯಕ ಆರು ಪ್ರವಚನಗಳು ಮಹತ್ವದ್ದಾಗಿವೆ. ಈ ೧೫ ಪ್ರವಚನಗಳ " ಪೂನಾ ಪ್ರವಚನ" ಈಗಾಗಲೇ ಕನ್ನಡದಲ್ಲಿ ಪ್ರಕಟವಾಗಿದೆ.

೨೬೪. ಈ ಪತ್ರಿಕೆಯನ್ನು ಭಾರತೇಂದು ಹರಿಶ್ಚಂದ್ರರು ಕಾಶಿಯಿಂದ ಪ್ರಕಟಿಸುತ್ತಿದ್ದರು.

ಶ್ರೀನಾಥದ್ವಾರಾದಿಂದ ಹೊರಡುತ್ತಿದ್ದ ಪಾಕ್ಷಿಕ ಪತ್ರಗಳಲ್ಲಿದೆ, ಅದು ರಾಜಪುತ್ರ ಸ್ಥಾನದಲ್ಲಿನ ಮೇವಾಡರಾಜ್ಯದ ಉದಯಪುರ ಚಿತ್ತೌಡಗಢದಲ್ಲಿ ಎಲ್ಲರಿಗೂ ವಿದಿತವಾಗಿದೆ. ನಾವು ಅದರಿಂದ ಈ ಅನುವಾದವನ್ನು ಮಾಡಿದ್ದೇವೆ. ಹೀಗೆಯೇ ನಮ್ಮ ಆರ್ಯಸಜ್ಜನರು ಇತಿಹಾಸ ಮತ್ತು ವಿದ್ಯಾಪುಸ್ತಕಗಳ ಅನ್ವೇಷಣವನ್ನು ಮಾಡಿ ಪ್ರಕಾಶಪಡಿಸಿದರೆ, ದೇಶಕ್ಕೆ ಬಹಳ ಲಾಭವುಂಟಾಗುವುದು.[೨೬೫] ಈ ಪತ್ರಸಂಪಾದಕನು ತನ್ನ ಮಿತ್ರನಿಂದ ವಿಕ್ರಮಸಂವತ್ ೧೭೮೨ರಲ್ಲಿ ಬರೆಯಲ್ಪಟ್ಟ ಒಂದು ಪ್ರಾಚೀನ ಪುಸ್ತಕದಿಂದ ಗ್ರಹಿಸಿ, ಸಂವತ್ ೧೯೩೯ರ ಮಾರ್ಗಶಿರ ಶುಕ್ಲಪಕ್ಷದ ೧೯-೨೦ರ ಕಿರಣಗಳಲ್ಲಿ ಎಂದರೆ, ಪಾಕ್ಷಿಕಪತ್ರಗಳಲ್ಲಿ ಮುದ್ರಿಸಿದ್ದಾನೆ. ಅದು ಕೆಳಗೆ ಬರೆದಿರುವಂತಿದೆ-ಎಂದು ತಿಳಿದುಕೊಳ್ಳಿರಿ :-

## ಆರ್ಯಾವರ್ತದೇಶೀಯ ರಾಜವಂಶಾವಳಿ

ಇಂದ್ರಪ್ರಸ್ಥದಲ್ಲಿ ಆರ್ಯಸಜ್ಜನರು ಶ್ರೀಮನ್ಮಹಾರಾಜಾ ಯಶಪಾಲನವರೆಗೆ ರಾಜ್ಯವಾಳಿದರು. ಅವರಲ್ಲಿ ಶ್ರೀಮನ್ಮಹಾರಾಜಾ ಯುಧಿಷ್ಠರನಿಂದ ಆರಂಭಿಸಿ, ಮಹಾರಾಜಾ ಯಶಪಾಲನವರೆಗೆ ವಂಶ-ಎಂದರೆ ಪೀಳಿಗೆಗಳು ಸುಮಾರು ೧೨೪ ರಾಜರುಗಳು ೪೧೫೭ ವರ್ಷ ಒಂಭತ್ತು ಮಾಸ ೧೪ ದಿವಸಗಳಷ್ಟು ಕಾಲ ಶಾಸನಮಾಡಿದ್ದಾರೆ. ಇವರುಗಳ ವಿವರ ಹೀಗಿದೆ:-

ಶ್ರೀಮನ್ಮಹಾರಾಜಾ ಯುಧಿಷ್ಠಿರನಿಂದ ಹಿಡಿದು, ಅವನ ವಂಶದ ಸುಮಾರು ೩೧ ತಲೆಮಾರಿನವರು ಒಟ್ಟು ಸುಮಾರು ೧೭೭೦ ವರ್ಷ, ೧೧ ತಿಂಗಳು ೧೦ ದಿನಗಳಷ್ಟು ಕಾಲ ಆಳಿದ್ದಾರೆ. ಇವರುಗಳ ವಿಸ್ತಾರ :-

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ರಾಜಾಯುಧಿಷ್ಠಿರ | ೩೬ | ೮ | ೨೫ |
| ೨. | ರಾಜಾ ಪರೀಕ್ಷಿತ್ | ೬೦ | ೦ | ೦ |
| ೩. | ರಾಜಾ ಜನಮೇಜಯ | ೮೪ | ೭ | ೨೩ |
| ೪. | ರಾಜಾ ಅಶ್ವಮೇಧ | ೮೨ | ೮ | ೨೨ |
| ೫. | ದ್ವಿತೀಯ ರಾಮ | ೮೮ | ೨ | ೮ |
| ೬. | ಛತ್ರಮಲ್ಲ | ೮೧ | ೧೧ | ೨೭ |
| ೭. | ಚಿತ್ರರಥ | ೭೫ | ೩ | ೧೮ |
| ೮. | ದುಷ್ಟಶೈಲ್ಯ | ೭೫ | ೧೦ | ೨೪ |
| ೯. | ರಾಜಾ ಉಗ್ರಸೇನ | ೭೮ | ೭ | ೨೧ |
| ೧೦. | ರಾಜಾ ಶೂರಸೇನ | ೨೮ | ೭ | ೨೧ |
| ೧೧. | ಭುವನಪತಿ | ೬೯ | ೫ | ೫ |
| ೧೨. | ರಣಜಿತ್ | ೬೫ | ೧೦ | ೪ |

೨೬೫. ಈ ನಿರ್ದೇಶನವನ್ನು ಪಾಲಿಸಿದವರಲ್ಲಿ ಆರ್ಯಸಮಾಜದ ಪ್ರಸಿದ್ಧ ಇತಿಹಾಸಜ್ಞರಾದ ಪಂ ಭಗವದ್ದತ್ತರು ಅಗ್ರಗಣ್ಯರು. ವೇದಗಳಲ್ಲಿ ಮಾನವರ, ಮತ್ತು ಭಾರತದ ಇತಿಹಾಸವಿದೆಯೆಂದು ಒಪ್ಪುವ, ಮತ್ತು ವಿಕಾಸವಾದದ ಕಲ್ಪಿತ ಸಿದ್ಧಾಂತದ ಆಧಾರದ ಮೇಲೆ ಕೋತಿಯಿಂದ ಮಾನವನ ವಿಕಾಸವಾಗಿದೆಯೆಂದು ತಿಳಿದು, ಕಪಿಚೇಷ್ಟಾರತರಾಗಿ, ಭಾರತದ ಅಯಥಾರ್ಥ ಇತಿಹಾಸವನ್ನು ಬರೆದ ಐರೋಪ್ಯ ಇತಿಹಾಸಜ್ಞರ ಉಚ್ಛಿಷ್ಟಭೋಜಿಗಳಾದ ಭಾರತೀಯ ಇತಿಹಾಸಜ್ಞರ ಎದುರಿಗೆ ಅವರ ದೇಶದ್ರೋಹವನ್ನು ತೀವ್ರವಾಗಿ ಖಂಡಿಸುತ್ತಾ, ಭಾರತೀಯ ಆರ್ಷ - ಸಂಸ್ಕೃತ ಸಾಹಿತ್ಯದ ಸೃಷ್ಟಿಯ, ಈ ಜಗತ್ತಿನ, ಮತ್ತು ಭಾರತದ ಯಥಾರ್ಥ ಇತಿಹಾಸವನ್ನು ಪಂ ಭಗವದ್ದತ್ತರು ಬರೆದು ವಿಖ್ಯಾತರಾದರು. ಅವರ "ಭಾರತ ವರ್ಷ ಕಾ ಇತಿಹಾಸ್, ವೈದಿಕ ವಾಙ್ಮಯ ಕಾ ಇತಿಹಾಸ್, ಭಾಷಾ ಕಾ ಇತಿಹಾಸ್, ಭಾರತೀಯ ಸಂಸ್ಕೃತಿ ಕಾ ಇತಿಹಾಸ್, ವೇದ ವಿದ್ಯಾ ನಿದರ್ಶನ್, ಪಂ ಯುಧೀಷ್ಠರ ಮೀಮಾಂಸಕರ "ಸಂಸ್ಕೃತ ವ್ಯಾಕರಣ ಶಾಸ್ತ್ರ ಕಾ ಇತಿಹಾಸ್, ಪಂ ಉದಯವೀರಶಾಸ್ತ್ರೀಗಳ" ಸಾಂಖ್ಯ ದರ್ಶನ ಕಾ ಇತಿಹಾಸ್, ಮತ್ತು ಪಂ ಸತ್ಯಕೇತು ವಿದ್ಯಾಲಂಕಾರರ "ಆರ್ಯಸಮಾಜ ಕಾ ಇತಿಹಾಸ್" ಉಲ್ಲೇಖನೀಯವಾಗಿದೆ.

ಆರ್ಯ ಸಮಾಜೀ ಇತಿಹಾಸಜ್ಞ ವಿದ್ವಾಂಸರು, ಭಾರತೀಯ ಸಂಸ್ಕೃತಿ ಮತ್ತು ಇತಿಹಾಸದ ಬಗ್ಗೆ ಈಗಲೂ ಮಾರ್ಗದರ್ಶಕರಾಗಿ ಜಗತ್ತಿಗೆ ಬೆಳಕನ್ನು ನೀಡುತ್ತಿದ್ದಾರೆ.

| | | | | |
|---|---|---|---|---|
| ೧೩. | ಋಕ್ಷಕ | ೬೪ | ೭ | ೪ |
| ೧೪. | ಸುಖದೇವ | ೬೨ | ೦ | ೨೪ |
| ೧೫. | ನರಹರಿದೇವ | ೫೧ | ೧೦ | ೨ |
| ೧೬. | ಸುಚಿರಥ | ೪೨ | ೧೧ | ೨ |
| ೧೭. | ಶೂರಸೇನ (ದ್ವಿ) | ೫೮ | ೧೦ | ೮ |
| ೧೮. | ಪರ್ವತಸೇನ | ೫೫ | ೮ | ೧೦ |
| ೧೯. | ಮೇಧಾವೀ | ೫೨ | ೧೦ | ೧೦ |
| ೨೦. | ಸೋನಚೀರ | ೫೦ | ೮ | ೨೧ |
| ೨೧. | ಭೀಮದೇವ | ೪೭ | ೯ | ೨೦ |
| ೨೨. | ನೃಹರಿದೇವ | ೪೫ | ೧೧ | ೨೩ |
| ೨೩. | ಪೂರ್ಣಮಲ್ಲ | ೪೪ | ೮ | ೭ |
| ೨೪. | ಕರದವೀ | ೪೪ | ೧೦ | ೮ |
| ೨೫. | ಅಲಂಬಿಕ | ೫೦ | ೧೧ | ೮ |
| ೨೬. | ಉದಯಪಾಲ | ೩೮ | ೯ | ೦ |
| ೨೭. | ಭವನಮಲ್ಲ | ೪೦ | ೧೦ | ೨೬ |
| ೨೮. | ದಮಾತ | ೩೨ | ೦ | ೦ |
| ೨೯. | ಭೀಮಪಾಲ | ೫೮ | ೫ | ೮ |
| ೩೦. | ಕ್ಷೇಮಕ | ೫೫ | ೧೧ | ೨೧ |

ರಾಜಾ ಕ್ಷೇಮಕನ ಪ್ರಧಾನ ಸಚಿವನಾಗಿದ್ದ ವಿಶ್ರವಾ-ಎಂಬವನು ಕ್ಷೇಮಕ ರಾಜನನ್ನು ಸಂಹರಿಸಿ ರಾಜ್ಯವಾಳಿದನು. ಅವನ ೧೪ ಪೀಳಿಗೆಗಳವರು ೫೦೦ ವರ್ಷಗಳು ಮೂರು ತಿಂಗಳುಗಳು, ೧೭ ದಿನಗಳಷ್ಟು ಕಾಲ ಆಳಿದರು. ಇವರುಗಳ ವಿವರಣೆ:-

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ವಿಶ್ರವಾ | ೧೭ | ೩ | ೨೯ |
| ೨. | ಪುರಸೇನೀ | ೪೨ | ೮ | ೨೧ |
| ೩. | ವೀರಸೇನೀ | ೫೨ | ೧೦ | ೭ |
| ೪. | ಅನಂತಶಾಯೀ | ೪೭ | ೮ | ೨೩ |
| ೫. | ಹರಿಜಿತ್ | ೩೫ | ೯ | ೧೭ |
| ೬. | ಪರಮಸೇನೀ | ೪೪ | ೨ | ೨೩ |
| ೭. | ಸುಖಪಾತಾಲ | ೩೦ | ೨ | ೨೧ |
| ೮. | ಕದ್ರುತ | ೪೨ | ೯ | ೨೪ |
| ೯. | ಸಜ್ಜ | ೩೨ | ೨ | ೧೪ |
| ೧೦. | ಅಮರಚೂಡ | ೨೭ | ೩ | ೧೬ |
| ೧೧. | ಅಮೀಪಾಲ | ೨೨ | ೧೧ | ೨೫ |

| | | | | |
|---|---|---|---|---|
| ೧೨. | ದಶರಥ | ೨೫ | ೪ | ೧೨ |
| ೧೩. | ವೀರಸಾಲ | ೩೧ | ೮ | ೧೧ |
| ೧೪. | ವೀರಸಾಲಸೇನ | ೪೭ | ೦ | ೧೪ |

ರಾಜಾ ವೀರಸಾಲ ಸೇನನ ಪ್ರಧಾನವಾಗಿದ್ದ ವೀರಮಹಾನ್–ಎಂಬವನು ರಾಜನನ್ನು ಕೊಂದು ತಾನೇ ರಾಜ್ಯವಾಳಿದನು. ಅವನ ೧೬ ಪೀಳಿಗೆಗಳವರು ೪೪೫ ವರ್ಷಗಳು, ೫ ಮಾಸಗಳು ಮತ್ತು ಮೂರು ದಿನಗಳಷ್ಟು ಕಾಲ ರಾಜ್ಯವಾಳಿದರು. ಇವರುಗಳ ವಿಸ್ತಾರ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ರಾಜಾವೀರಮಹಾನ್ | ೩೫ | ೧೦ | ೮ |
| ೨. | ಅಜೀತಸಿಂಹ | ೨೭ | ೭ | ೧೯ |
| ೩. | ಸರ್ವದತ್ತ | ೨೮ | ೩ | ೧೦ |
| ೪. | ಭುವನಪತಿ | ೧೫ | ೪ | ೧೦ |
| ೫. | ವೀರಸೇನ | ೨೧ | ೨ | ೩ |
| ೬. | ಮಹೀಪಾಲ | ೪೦ | ೮ | ೭ |
| ೭. | ಶತ್ರುಪಾಲ | ೨೬ | ೪ | ೩ |
| ೮. | ಸಂಘರಾಜ | ೧೭ | ೨ | ೧೦ |
| ೯. | ತೇಜಪಾಲ | ೨೮ | ೧೧ | ೧೦ |
| ೧೦. | ಮಾಣಿಕಚಂದ | ೩೭ | ೭ | ೨೧ |
| ೧೧. | ಕಾಮಸೇನೀ | ೪೨ | ೫ | ೧೦ |
| ೧೨. | ಶತ್ರುಮರ್ಧನ | ೮ | ೧೧ | ೧೩ |
| ೧೩. | ಜೀವನಲೋಕ | ೨೮ | ೯ | ೧೭ |
| ೧೪. | ಹರಿರಾವ | ೨೬ | ೧೦ | ೨೯ |
| ೧೫. | ವೀರಸೇನ (ತೃ.) | ೩೫ | ೨ | ೨೨ |
| ೧೬. | ಆದಿತ್ಯಕೇತು | ೨೩ | ೧೧ | ೧೩ |

ಮಗಧ ದೇಶದ ರಾಜನಾಗಿದ್ದ ಆದಿತ್ಯಕೇತುವನ್ನು ಪ್ರಯಾಗದ ರಾಜನಾದ ಧಂಧರನೆಂಬವನು ಕೊಂದು ರಾಜ್ಯವನ್ನಾಳಿದನು. ಅವನ ಒಂಬತ್ತು ಪೀಳಿಗೆಯವರು ೩೭೪ ವರ್ಷಗಳು, ೧೧ ಮಾಸಗಳು, ೨೬ ದಿನಗಳಷ್ಟು ಕಾಲ ಆಳಿದರು. ಇವರ ವಿಸ್ತಾರ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ರಾಜಾ ಧಂಧರ | ೪೨ | ೭ | ೨೪ |
| ೨. | ಮಹರ್ಷಿ | ೪೧ | ೨ | ೨೯ |
| ೩. | ಸನರಚ್ಚೀ | ೫೦ | ೧೦ | ೧೯ |
| ೪. | ಮಹಾಯುದ್ಧ | ೩೦ | ೩ | ೮ |
| ೫. | ದುರನಾಥ | ೨೮ | ೫ | ೨೫ |

| | | | | |
|---|---|---|---|---|
| ೬. | ಜೀವನರಾಜ | ೪೫ | ೨ | ೫ |
| ೭. | ರುದ್ರಸೇನ | ೪೭ | ೪ | ೨೮ |
| ೮. | ಆರೀಲಕ | ೫೨ | ೧೦ | ೮ |
| ೯. | ರಾಜಪಾಲ | ೨೬ | ೦ | ೦ |

ರಾಜಾ ರಾಜಪಾಲನನ್ನು ಸಾಮಂತನಾಗಿದ್ದ ಮಹಾನ್ ಪಾಲನು ವಧಿಸಿ ರಾಜ್ಯವಾಳಿದನು. ಅವನದೊಂದೇ ಪೀಳಿಗೆ; ೧೪ ವರ್ಷಗಳಷ್ಟು ಕಾಲ ಅವನೇ ಆಳಿದನು. ಇವನ ವಂಶ ವಿಸ್ತಾರವಾಗಲಿಲ್ಲ.

ರಾಜಾ ಮಹಾನ್ ಪಾಲನ ರಾಜ್ಯದ ಮೇಲೆ ರಾಜಾ ವಿಕ್ರಮಾದಿತ್ಯನು ಅವಂತಿಕಾನಗರಿ (ಉಜ್ಜಯಿನಿ)ಯಿಂದ ಮೇಲೇರಿ ಬಂದು, ಮಹಾನ್ ಪಾಲನನ್ನು ಸಂಹರಿಸಿ ರಾಜ್ಯವಾಳಿದನು. ಅವನ ಪೀಳಿಗೆ ಅವನೊಂದಿಗೇ ಕೊನೆಯಾಯಿತು. ೯೩ ವರ್ಷಕಾಲ ಅವನು ಆಳಿದನು. ಅವನ ವಂಶ ವಿಸ್ತಾರವಾಗಲಿಲ್ಲ.

ಶಾಲಿವಾಹನನ ಸಾಮಂತನಾಗಿದ್ದ ಪೈತಣದ ಸಮುದ್ರಪಾಲಯೋಗಿಯು ರಾಜಾ ವಿಕ್ರಮಾದಿತ್ಯನನ್ನು ಸಂಹರಿಸಿ, ರಾಜ್ಯವನ್ನಾಳಿದನು. ಅವನ ೧೬ ಪೀಳಿಗೆಗಳವರು ೩೭೨ ವರ್ಷಗಳು, ನಾಲ್ಕು ಮಾಸಗಳು, ೨೭ ದಿನಗಳಷ್ಟು ಕಾಲ ಆಳಿದರು. ಇವರ ವಿಸ್ತಾರ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ಸಮುದ್ರಪಾಲ | ೫೪ | ೨ | ೨೦ |
| ೨. | ಚಂದ್ರಪಾಲ | ೩೬ | ೫ | ೪ |
| ೩. | ಸಹಾಯಪಾಲ | ೧೧ | ೪ | ೧೧ |
| ೪. | ದೇವಪಾಲ | ೨೭ | ೧ | ೨೮ |
| ೫. | ನರಸಿಂಹಪಾಲ | ೧೮ | ೦ | ೨೦ |
| ೬. | ಸಾಮಪಾಲ | ೨೭ | ೧ | ೧೭ |
| ೭. | ರಘುಪಾಲ | ೨೨ | ೩ | ೨೫ |
| ೮. | ಗೋವಿಂದಪಾಲ | ೨೭ | ೧ | ೧೭ |
| ೯. | ಅಮೃತಪಾಲ | ೩೬ | ೧೦ | ೧೩ |
| ೧೦. | ಬಲೀಪಾಲ | ೧೨ | ೮ | ೪ |
| ೧೧. | ಮಹೀಪಾಲ | ೧೩ | ೮ | ೪ |
| ೧೨. | ಹರೀಪಾಲ | ೧೪ | ೮ | ೪ |
| ೧೩. | ಸೀಸಪಾಲ | ೧೧ | ೧೦ | ೧೯ |
| ೧೪. | ಮದನಪಾಲ | ೧೭ | ೧೦ | ೧೯ |
| ೧೫. | ಕರ್ಮಪಾಲ | ೧೬ | ೨ | ೨ |
| ೧೬. | ವಿಕ್ರಮಪಾಲ | ೨೪ | ೧೧ | ೧೩ |

ರಾಜಾ ವಿಕ್ರಮಪಾಲನು ಪಶ್ಚಿಮ ದಿಕ್ಕಿನ (ದೇಶದ) ರಾಜನಾದ ಮುಲುಖಚಂದ ಬೋಹರಾ–ಎಂಬವನ ಮೇಲೆ ಏರಿಹೋಗಿ, ರಣರಂಗದಲ್ಲಿ ಹೋರಾಡಿದನು. ಈ ಯುದ್ಧದಲ್ಲಿ ಮುಲುಖಚಂದನು ವಿಕ್ರಮಪಾಲನನ್ನು ಸಂಹರಿಸಿ ಇಂದ್ರಪ್ರಸ್ಥದ ರಾಜ್ಯವನ್ನು ಆಳಿದನು. ಅವನ ೧೦ ಪೀಳಿಗೆಗಳವರು ೧೯೧ ವರ್ಷ, ಒಂದು ತಿಂಗಳು ೧೬ ದಿನಗಳಷ್ಟು ಕಾಲ ಆಳಿದರು. ಇವರ ವಿಸ್ತಾರ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ಮಲುಖಚಂದ್ | ೫೪ | ೨ | ೧೦ |
| ೨. | ವಿಕ್ರಮಚಂದ್ | ೧೨ | ೭ | ೧೨ |
| ೩. | ಅಮೀನ್ ಚಂದ್ | ೧೦ | ೦ | ೫ |
| ೪. | ರಾಮಚಂದ್ | ೧೩ | ೧೧ | ೮ |
| ೫. | ಹರೀಚಂದ್ | ೧೪ | ೯ | ೨೪ |
| ೬. | ಕಲ್ಯಾಣ್ ಚಂದ್ | ೧೦ | ೫ | ೪ |
| ೭. | ಭೀಮಚಂದ್ | ೧೬ | ೨ | ೯ |
| ೮. | ಲೋವಚಂದ್ | ೨೬ | ೩ | ೨೨ |
| ೯. | ಗೋವಿಂದಚಂದ್ | ೩೧ | ೭ | ೧೨ |
| ೧೦. | ರಾಣೀ ಪದ್ಮಾವತೀ | ೧ | ೦ | ೦ |

ರಾಣೀ ಪದ್ಮಾವತೀ ಮೃತಳಾದಳು. ಅವಳಿಗೆ ಪುತ್ರನೂ ಕೂಡ ಯಾವನೂ ಇರಲಿಲ್ಲ. ಆದುದರಿಂದ ಎಲ್ಲ ರಾಜ್ಯ ಧುರೀಣರೂ ಪರಸ್ಪರ ಸಮಾಲೋಚನೆಮಾಡಿ, ಹರಿಪ್ರೇಮ ವೈರಾಗಿಯನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಆ ರಾಜ್ಯಧುರೀಣರೇ ರಾಜ್ಯವನ್ನಾಳಲು ಆರಂಭಿಸಿದರು. ಇವರ ನಾಲ್ಕು ಪೀಳಿಗೆಗಳವರು ೫೦ವರ್ಷ, ೨೧ ದಿನಗಳಷ್ಟು ಕಾಲ ಆಳಿದರು. ಹರಿಪ್ರೇಮನ ವಂಶ ವಿಸ್ತಾರ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ಹರಿಪ್ರೇಮ | ೭ | ೫ | ೧೬ |
| ೨. | ಗೋವಿಂದಪ್ರೇಮ | ೨೦ | ೨ | ೮ |
| ೩. | ಗೋಪಾಲಪ್ರೇಮ | ೨೫ | ೭ | ೨೮ |
| ೪. | ಮಹಾಬಾಹು | ೬ | ೮ | ೨೯ |

ರಾಜಾ ಮಹಾಬಾಹುವು ರಾಜ್ಯವನ್ನು ತ್ಯಜಿಸಿ, ವನದಲ್ಲಿ ತಪಶ್ಚರ್ಯೆಯನ್ನು ಮಾಡಲು ಹೋದನು. ಬಂಗಾಳದ ರಾಜನಾದ ಆಧಿಸೇನನು ಇದನ್ನಾಲಿಸಿ, ಇಂದ್ರಪ್ರಸ್ಥಕ್ಕೆ ಬಂದು ತಾನೇ ರಾಜ್ಯವಾಳತೊಡಗಿದನು. ಇವನ ೧೨ ಪೀಳಿಗೆಗಳವರು ೧೫೧ ವರ್ಷಗಳು ೧೧ ತಿಂಗಳುಗಳು ಮತ್ತು ಎರಡು ದಿನಗಳಷ್ಟು ಕಾಲ ರಾಜ್ಯವನ್ನಾಳಿದರು. ಇವರ ವಂಶದ ವಿಸ್ತಾರ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ರಾಜಾ ಆಧಿಸೇನ | ೧೮ | ೫ | ೨೧ |
| ೨. | ವೀಲಾವಲಸೇನ | ೧೨ | ೪ | ೨ |
| ೩. | ಕೇಶವಸೇನ | ೧೫ | ೭ | ೧೨ |
| ೪. | ಮಾಘಸೇನ | ೧೨ | ೪ | ೨ |
| ೫. | ಮಯೂರಸೇನ | ೨೦ | ೧೧ | ೨೭ |
| ೬. | ಭೀಮಸೇನ | ೫ | ೧೦ | ೯ |
| ೭. | ಕಲ್ಯಾಣಸೇನ | ೪ | ೭ | ೨೨ |
| ೮. | ಹರೀಸೇನ | ೧೨ | ೦ | ೨೫ |
| ೯. | ಕ್ಷೇಮಸೇನ | ೮ | ೧೧ | ೧೫ |
| ೧೦. | ನಾರಾಯಣಸೇನ | ೨ | ೨ | ೨೯ |
| ೧೧. | ಲಕ್ಷ್ಮೀಸೇನ | ೨೬ | ೧೦ | ೦ |
| ೧೨. | ದಾಮೋದರಸೇನ | ೧೧ | ೫ | ೧೯ |

ರಾಜಾ ದಾಮೋದರಸೇನನು ತನ್ನ ಸಾಮಂತನಿಗೆ ಬಹಳ ದುಃಖವನ್ನಿತ್ತನು. ಆದುದರಿಂದ (ಮತ್ತೊಬ್ಬಸಾಮಂತ) ದೀಪಸಿಂಹನು, ಸೈನ್ಯವನ್ನೊಟ್ಟುಗೂಡಿಸಿ, ರಾಜನೊಂದಿಗೆ ಯುದ್ಧವನ್ನುಮಾಡಿದನು. ಆ ಯುದ್ಧದಲ್ಲಿ ದೀಪಸಿಂಹನು ರಾಜನನ್ನು ಕೊಂದು ತಾನೇ ರಾಜ್ಯವಾಳತೊಡಗಿದನು. ಅವನ ಆರು ಪೀಳಿಗೆಯವರು ೧೦೭ ವರ್ಷಗಳು, ಆರು ತಿಂಗಳುಗಳು ಮತ್ತು ೨೨ ದಿನ ಆಳಿದರು. ಇವರುಗಳ ವಿವರಣೆ:–

| | ಆರ್ಯರಾಜರು | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ದೀಪಸಿಂಹ | ೧೭ | ೧ | ೨೬ |
| ೨. | ರಾಜಸಿಂಹ | ೧೪ | ೫ | ೦ |
| ೩. | ರಣಸಿಂಹ | ೯ | ೭ | ೧೧ |
| ೪. | ನರಸಿಂಹ | ೪೫ | ೦ | ೧೫ |
| ೫. | ಹರಿಸಿಂಹ | ೧೩ | ೨ | ೨೯ |
| ೬. | ಜೀವನಸಿಂಹ | ೮ | ೦ | ೧ |

ರಾಜಾ ಜೀವನಸಿಂಹನು ಏನೋ ಒಂದು ಕಾರಣದಿಂದ ತನ್ನ ಸೈನ್ಯವನ್ನೆಲ್ಲಾ ಉತ್ತರದಿಕ್ಕಿಗೆ ಕಳುಹಿಸಿಬಿಟ್ಟನು. ವೈರಾಟದ ರಾಜನಾದ ಪೃಥ್ವೀಸಿಂಹ ಚೌಹಾನನು ಈ ಸಮಾಚಾರವನ್ನು ಕೇಳಿ, ಜೀವನಸಿಂಹನ ಮೇಲೆ ಆಕ್ರಮಣವನ್ನು ಮಾಡಿದನು ಮತ್ತು ಯುದ್ಧದಲ್ಲಿ ಜೀವನಸಿಂಹನನ್ನು ವಧಿಸಿ, ಇಂದ್ರಪ್ರಸ್ಥದಲ್ಲಿ ರಾಜ್ಯವನ್ನಾಳಿದನು. ಇವನ ಐದು ತಲೆಮಾರಿನವರು ೮೬ ವರ್ಷಗಳು, ಇಪ್ಪತ್ತುದಿನಗಳಷ್ಟು ಕಾಲ ಆಳಿದರು. ಇವರ ವಿವರಣೆ:–

| ಆರ್ಯರಾಜರು | | ವರ್ಷಗಳು | ಮಾಸಗಳು | ದಿನಗಳು |
|---|---|---|---|---|
| ೧. | ಪೃಥ್ವೀರಾಜ | ೧೨ | ೨ | ೧೯ |
| ೨. | ಅಭಯಪಾಲ | ೧೪ | ೫ | ೧೭ |
| ೩. | ದುರ್ಜನಪಾಲ | ೧೧ | ೪ | ೧೮ |
| ೪. | ಉದಯಪಾಲ | ೧೧ | ೭ | ೩ |
| ೫. | ಯಶಪಾಲ | ೨೬ | ೪ | ೨೭ |

ಗಜನೀಗಢದಿಂದ ಸುಲ್ತಾನ್ ಶಹಾಬುದ್ದೀನ ಗೋರಿ* ರಾಜಾಯಶಪಾಲನ ಮೇಲೆ ದಂಡೆತ್ತಿ ಬಂದನು ಮತ್ತು ರಾಜಾಯಶಪಾಲನನ್ನು ಪ್ರಯಾಗದ ಕೋಟೆಯಲ್ಲಿ, ಸಂವತ್ ೧೨೪೯ರಲ್ಲಿ ಹಿಡಿದು ಬಂಧಿಸಿದನು. ಆ ಮೇಲೆ ಇಂದ್ರಪ್ರಸ್ಥದ, ಎಂದರೆ ಡೆಲ್ಲಿಯ ರಾಜ್ಯಶಾಸನವನ್ನು ತಾನೇ ಮಾಡತೊಡಗಿದನು. ಇವನ ೫೩ ತಲೆಮಾರಿನವರು ೭೫೪ ವರ್ಷಗಳು, ಒಂದು ತಿಂಗಳು ೧೭ ದಿನಗಳಷ್ಟು ಕಾಲ ರಾಜ್ಯವನ್ನಾಳಿದರು. ಈ ವಂಶದವರ ವಿವರಣೆಯನ್ನು ಅನೇಕ ಇತಿಹಾಸ ಗ್ರಂಥದಲ್ಲಿ ಬರೆದಿದ್ದಾರೆ. ಆದುದರಿಂದ ಇಲ್ಲಿ ಬರೆಯಲಿಲ್ಲ.

ಇದರ ನಂತರ ಬೌದ್ಧ–ಜೈನ ಮತಗಳ ವಿಷಯದಲ್ಲಿ ಬರೆಯಲ್ಪಡುವುದು

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮೀ ನಿರ್ಮಿತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತ ಆರ್ಯಾವರ್ತೀಯಮತ ಖಂಡನ–ಮಂಡನ ವಿಷಯೇ**

**ಏಕಾದಶ ಸಮುಲ್ಲಾಸಃ ಸಂಪೂರ್ಣಃ**

* ಎಂದರೆ ೧೧೯೨ನೆಯ ಇಸವಿ, ವಿಕ್ರಮ ಸಂವತ್ಸರವು ಕಲಿಸಂವತ್ಸರ ೩೦೪೪ರ ನಂತರ, ಪ್ರಾರಂಭವಾಯಿತು. –ಸಂ.
ಪ್ರಚಲಿತ ಇತಿಹಾಸಕ್ಕನುಸಾರವಾಗಿ ಸುಲ್ತಾನ್ ಶಹಾಬುದ್ದೀನ ಗೋರಿಯು ಪೃಥ್ವೀರಾಜನ ಮೇಲೆ ಆಕ್ರಮಣ ಮಾಡಿದನು. ಅನೇಕ ಬಾರಿ ಸೋತು, ವಾಪಸು ಹೊರಟುಹೋದನು. ನಂತರ, ವಿಕ್ರಮ ಸಂವತ್ ೧೨೪೯(ಇಸವಿ ೧೧೯೨)ರಲ್ಲಿ ಭಾರತೀಯ ರಾಜರ ಪರಸ್ಪರ ಒಡಕಿನ ಕಾರಣದಿಂದ, ಪೃಥ್ವೀರಾಜನನ್ನು ಸೋಲಿಸಿ, ಅವನ ಕಣ್ಣುಗಳನ್ನು ಕೀಳಿಸಿ, ಅವನನ್ನು ತನ್ನ ದೇಶಕ್ಕೆ ಕರೆದುಕೊಂಡು ಹೋದನು. ನಂತರ, ತಾನೇ ದಿಲ್ಲಿಯಲ್ಲಿ ರಾಜ್ಯವಾಳ ತೊಡಗಿದನು. –ಸಂ.

## ಅನುಭೂಮಿಕಾ (2)

ಆರ್ಯಾವರ್ತ ನಿವಾಸಿಗಳಾದ ಮಾನವರುಗಳಲ್ಲಿ ಸತ್ಯಾಸತ್ಯಗಳನ್ನು ಯಥಾವತ್ತಾಗಿ ನಿರ್ಣಯಮಾಡುವ ವೇದವಿದ್ಯೆ ಬಿಟ್ಟುಹೋಗಿ, ಅವಿದ್ಯೆಯು ಹರಡಿ ಮತಮತಾಂತರಗಳು ತಲೆಯೆತ್ತಿದವು. ಇದೇ ಜೈನರೇ ಮೊದಲಾದವರ ವಿದ್ಯಾ-ವಿರುದ್ಧವಾದ ಮತಗಳ ಪ್ರಚಾರಕ್ಕೆ ನಿಮಿತ್ತವಾಯಿತು.

ವಾಲ್ಮೀಕಿಯ ರಾಮಾಯಣ ಮತ್ತು ಮಹಾಭಾರತ ಮೊದಲಾದುವುಗಳಲ್ಲಿ ಜೈನರ ಹೆಸರೂ ಕೂಡ ಬರೆದಿರಲಿಲ್ಲ. ಮತ್ತು ಜೈನರ ಗ್ರಂಥಗಳಲ್ಲಿ ವಾಲ್ಮೀಕಿಯ ರಾಮಾಯಣದಲ್ಲಿ ಮತ್ತು ಭಾರತದಲ್ಲಿ ಹೇಳಲ್ಪಟ್ಟಿರುವ ರಾಮ, ಕೃಷ್ಣ-ಮೊದಲಾದವರ ಯಶಃ ಕಥನ ಬಹಳ ವಿಸ್ತಾರಪೂರ್ವಕವಾಗಿ ಬರೆಯಲ್ಪಟ್ಟಿದೆ. ಇದರಿಂದ ಈ ಮತ ಇವರ ಕಾಲದ ನಂತರ ಹೊರಟಿತು-ಎಂದು ಸಿದ್ಧವಾಗುತ್ತದೆ. ಏಕೆಂದರೆ, ಜೈನರು ತಮ್ಮ ಮತವನ್ನು ಬಹಳ ಪ್ರಾಚೀನವೆಂದು ಬರೆಯುತ್ತಾರೆ. (ವಸ್ತುಸ್ಥಿತಿ) ಹಾಗೆಯೇ ಇದ್ದಲ್ಲಿ, ವಾಲ್ಮೀಕಿಯ-ಮೊದಲಾದ ಗ್ರಂಥಗಳಲ್ಲಿ ಅವರ ಕಥೆ ಅವಶ್ಯವಾಗಿ ಇರುತ್ತಿದ್ದಿತು. ಆದುದರಿಂದ, ಜೈನಮತ ಈ ಗ್ರಂಥಗಳ ನಂತರವೇ ಹೊರಟಿದೆ-ಎಂದು ಸಿದ್ಧವಾಗುತ್ತದೆ.

ಯಾವನಾದರೂ "ಜೈನರ ಗ್ರಂಥಗಳಿಂದ ಕಥೆಗಳನ್ನು ತೆಗೆದುಕೊಂಡು ವಾಲ್ಮೀಕಿಯ-ಮೊದಲಾದ ಗ್ರಂಥಗಳು ರಚಿತವಾಗಿರಬಹುದು".-ಎನ್ನುವುದಾದರೆ, "ವಾಲ್ಮೀಕಿಯ -ಮೊದಲಾದವುಗಳಲ್ಲಿ ನಿಮ್ಮ ಗ್ರಂಥಗಳ ನಾಮೋಲ್ಲೇಖವೂ ಕೂಡ ಏತಕ್ಕಿಲ್ಲ? ಮತ್ತು ನಿಮ್ಮ ಗ್ರಂಥಗಳಲ್ಲಿ ಏತಕ್ಕಿದೆ? ತಂದೆಯ ಜನನದ ದರ್ಶನವನ್ನು ಮಗನು ಮಾಡಬಲ್ಲನೇ? ಎಂದಿಗೂ ಮಾಡಲಾರದನು"-ಎಂದು ಅವನಿಗೆ ಹೇಳಬೇಕು. ಇದರಿಂದ ಜೈನ, ಬೌದ್ಧಮತಗಳು, ಶೈವ-ಶಾಕ್ತ ಮೊದಲಾದ ಮತಗಳ ನಂತರವೇ ಹೊರಟಿವೆ-ಎಂದೇ ಸಿದ್ಧವಾಗುತ್ತದೆ .

ಈಗ ಈ ಹನ್ನೆರಡನೆಯ ಸಮುಲ್ಲಾಸದಲ್ಲಿ ಜೈನರ ಮತದ ವಿಷಯದಲ್ಲಿ ಏನೇನು ಬರೆಯಲ್ಪಟ್ಟಿದೆಯೋ, ಅದೆಲ್ಲವೂ ಅವರ ಗ್ರಂಥಗಳ ಸಂಕೇತಪೂರ್ವಕವಾಗಿ ಬರೆಯಲ್ಪಟ್ಟಿದೆ. ಈ ವಿಷಯದಲ್ಲಿ ಜೈನರು ಕೆಟ್ಟದನ್ನು ಎಣಿಸಬಾರದು. ಏಕೆಂದರೆ ನಾವು ಇವರ ಮತದ ವಿಷಯದಲ್ಲಿ ಏನೇನು ಬರೆದಿದ್ದೇವೋ, ಅದು ಕೇವಲ ಸತ್ಯಾಸತ್ಯ ನಿರ್ಣಯಕ್ಕಾಗಿ ಇದೆ; ವಿರೋಧವನ್ನಾಗಲಿ, ಹಾನಿಯನ್ನಾಗಲಿ ಉಂಟುಮಾಡುವ ಸಲುವಾಗಿ ಅಲ್ಲ.

ಯಾವಾಗ ಜೈನರು, ಬೌದ್ಧರು ಅಥವಾ ಬೇರೆಯ ಜನರು ಈ ಲೇಖನವನ್ನು ನೋಡವರೋ, ಆಗ ಎಲ್ಲರಿಗೂ ಸತ್ಯಾಸತ್ಯ ನಿರ್ಣಯದಲ್ಲಿ ಆಲೋಚನೆಯನ್ನು ಮಾಡುವ ಮತ್ತು ಲೇಖನವನ್ನು ಬರೆಯುವ ಅವಕಾಶ ಸಿಕ್ಕುವುದು. ಮತ್ತು ಜ್ಞಾನವೂ ಕೂಡ ಲಭಿಸುವುದು. ಯಾವತ್ತಿನವರೆಗೆ ವಾದಿ-ಪ್ರತಿವಾದಿಗಳಾಗಿ ಪ್ರೀತಿಯಿಂದ ವಾದವು ಮಾಡಲ್ಪಡುವುದಿಲ್ಲವೋ, ಅಥವಾ ಲೇಖನವು ಬರೆಯಲ್ಪಡುವುದಿಲ್ಲವೋ, ಆವರೆಗೆ ಸತ್ಯಾಸತ್ಯ ನಿರ್ಣಯವಾಗಲಾರದು. ಯಾವಾಗ ವಿದ್ವಜ್ಜನರಲ್ಲಿ ಸತ್ಯಾಸತ್ಯದ ನಿಶ್ಚಯ ವಾಗವುದಿಲ್ಲವೋ, ಆಗಲೇ ಅವಿದ್ವಾಂಸರು ಮಹಾ ಅಂಧಕಾರದಲ್ಲಿ ಬಿದ್ದು ಬಹಳ ದುಃಖವನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ, ಸತ್ಯದ ಜಯಕ್ಕಾಗಿ ಮತ್ತು ಅಸತ್ಯದ ಕ್ಷಯಕ್ಕಾಗಿ ಮೈತ್ರಿಯಿಂದ ವಾದಮಾಡುವುದು ಅಥವಾ ಲೇಖನವನ್ನು ಬರೆಯುವುದು ನಮ್ಮ ಮಾನವ ಜಾತಿಯ ಮುಖ್ಯ ಕಾರ್ಯವಾಗಿದೆ.

ಹೀಗೆ ಆಗದೇ ಹೋದರೆ, ಮಾನವರ ಉನ್ನತಿ ಎಂದಿಗೂ ಆಗುವುದಿಲ್ಲ. ಮತ್ತು ಈ ಬೌದ್ಧ-ಜೈನರ ಮತದ ವಿಷಯ, ಅವರನ್ನುಳಿದು ಬೇರೆ ಮತದವರಿಗೆ ಅಪೂರ್ವವಾದ ಲಾಭವನ್ನೂ ಮತ್ತು ಬೋಧವನ್ನೂ ಉಂಟುಮಾಡುವಂತಹದಾಗುವುದು. ಏಕೆಂದರೆ, ಈ ಜನರು ತಮ್ಮ ಪುಸ್ತಕಗಳನ್ನು ಯಾವ ಬೇರೆಯ ಮತದವನಿಗೂ ನೋಡಲು, ಓದಲು ಮತ್ತು ಬರೆಯಲೂ ಕೂಡ ಬಿಡುವುದಿಲ್ಲ. ಅತ್ಯಂತ ಪರಿಶ್ರಮದಿಂದ, ನನ್ನ ಮತ್ತು ವಿಶೇಷತಃ ಬೊಂಬಾಯಿ ಆರ್ಯಸಮಾಜದ ಮಂತ್ರಿ ಸೇಠ್ ಸೇವಕಲಾಲ್ ಕೃಷ್ಣದಾಸರ ಪುರುಷಾರ್ಥದಿಂದ ಗ್ರಂಥಗಳು ಪ್ರಾಪ್ತವಾದುವು. ಮತ್ತು ಕಾಶಿಯಲ್ಲಿನ "ಜೈನ ಪ್ರಭಾಕರ ಯಂತ್ರಾಲಯ"ದಲ್ಲಿ

ಮುದ್ರಿತವಾದುದರಿಂದಲೂ ಹಾಗೂ ಬೊಂಬಾಯಿಯಲ್ಲಿ "ಪ್ರಕರಣ ರತ್ನಾಕರ"ವೆಂಬ ಗ್ರಂಥವು ಮುದ್ರಿತವಾದುದರಿಂದಲೂ ಕೂಡ ಎಲ್ಲ ಜನರಿಗೂ ಜೈನರ ಮತವನ್ನು ಅವಲೋಕಿಸುವುದು ಸಹಜವಾಗಿದೆ.

ಒಳ್ಳೆಯದು, ತಮ್ಮ ಮತದ ಪುಸ್ತಕವನ್ನು ತಾವು ಮಾತ್ರ ನೋಡುವುದು ಮತ್ತು ಬೇರೆಯವರಿಗೆ ತೋರಿಸದಿರುವುದು ಯಾವ ವಿದ್ವಾಂಸರ ನಡತೆಯದು? ಇದರಿಂದಲೇ, ಈ ಗ್ರಂಥಗಳನ್ನು ರಚಿಸಿದವರಿಗೆ, ಮೊದಲೇ "ಈ ಗ್ರಂಥಗಳಲ್ಲಿ ಅಸಂಭವವಾದ ಮಾತುಗಳು ತುಂಬಿವೆ; ಅನ್ಯಮತೀಯರು ನೋಡುವರಾದರೆ, ಖಂಡನಮಾಡುವರು. ಮತ್ತು ನಿಮ್ಮ ಮತದವರು ಅನ್ಯರ ಗ್ರಂಥಗಳನ್ನು ಅವಲೋಕಿಸುವರಾದರೆ ಈ ಮತದಲ್ಲಿ ಶ್ರದ್ಧೆಯಿರುವುದಿಲ್ಲ".-ಎಂಬ ಸಂದೇಹವಿದ್ದಿತೆಂದು ವಿದಿತವಾಗುತ್ತದೆ.

ಆಯಿತು, ಹೇಗಾದರೂ ಇರಲಿ. ಆದರೆ, ಯಾರಿಗೆ ತಮ್ಮ ದೋಷಗಳಂತೂ ಕಾಣಿಸುವುದೇ ಇಲ್ಲವೋ, ಬೇರೆಯವರ ದೋಷಗಳನ್ನು ನೋಡಲು ಉದ್ಯುಕ್ತರಾಗಿರುತ್ತಾರೋ, ಅಂತಹ ಮಾನವರೂ ಕೂಡ ಬಹಳ ಜನರಿದ್ದಾರೆ. ಇದು ನ್ಯಾಯದ ಸಂಗತಿಯಲ್ಲ. ಏಕೆಂದರೆ, ಮೊದಲು ತಮ್ಮ ದೋಷಗಳನ್ನು ಕಂಡುಕೊಂಡು ದೂರೀಕರಿಸಬೇಕು; ಆ ಮೇಲೆಯೇ ಅನ್ಯರ ದೋಷಗಳ ಕಡೆ ದೃಷ್ಟಿಬೀರಿ, ಅವುಗಳನ್ನು ನಿವಾರಿಸಬೇಕು. ಈಗ ಈ ಬೌದ್ಧ – ಜೈನಮತದ ವಿಷಯಗಳನ್ನು ಸಮಸ್ತ ಸಜ್ಜನರ ಸಮ್ಮುಖದಲ್ಲಿ ಮಂಡಿಸುತ್ತೇನೆ. ಅದು ಹೇಗೆ ಇದೆಯೋ, ಹಾಗೆಯೇ ಆಲೋಚಿಸಿರಿ.

**ಕಿಮಧಿಕಲೇಖೇನ ಬುದ್ಧಿಮದ್ವರ್ಯೇಷು ।**

# ಅಥ ದ್ವಾದಶಸಮುಲ್ಲಾಸಾರಂಭಃ

**ವಿಷಯಾನ್ ವ್ಯಾಖ್ಯಾಸ್ಯಾಮಃ ॥**

## ಅಥ ನಾಸ್ತಿಕಮತಾಂರ್ಗತ ಚಾರವಾಕ ಬೌದ್ಧಜೈನ-ಮತ[೧] ಖಂಡನ ಮಂಡನ

ಯಾವನು ವೇದಗಳು, ಈಶ್ವರ ಮತ್ತು ಯಜ್ಞವೇ ಮೊದಲಾದ ಉತ್ತಮ ಕರ್ಮಗಳನ್ನೂ ಕೂಡ ಅಂಗೀಕರಿಸುತ್ತಿರಲಿಲ್ಲವೋ, ಅಂತಹ ಯಾವನೋ ಒಬ್ಬ ಬೃಹಸ್ಪತಿ ಎಂಬ ಪುರುಷನು ಜನ್ಮವೆತ್ತಿದ್ದನು. ನೋಡಿರಿ. ಅವನ ಮತವನ್ನು:-

**ಯಾವಜ್ಜೀವೇತ್ ಸುಖಂ ಜೀವೇನ್ನಾಸ್ತಿ ಮೃತ್ಯೋರಗೋಚರಃ ।**

**ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥** (ಸರ್ವದರ್ಶನ ಸಂಗ್ರಹ; ಚಾರವಾಕದರ್ಶನ)

ಮನುಷ್ಯನೇ ಮೊದಲಾದ ಯಾವ ಪ್ರಾಣಿಯೂ ಮೃತ್ಯುವಿಗೆ ಕಣ್ಮರೆಯಾಗಿಲ್ಲ; ಎಂದರೆ-ಎಲ್ಲರೂ ಸಾಯಲೇಬೇಕಾಗಿದೆ. ಆದುದರಿಂದ, ಎಲ್ಲಿಯವರೆಗೆ ಶರೀರದಲ್ಲಿ ಜೀವನಿದ್ದಾನೋ, ಅಲ್ಲಿಯವರೆಗೆ ಸುಖದಿಂದ ಇರಬೇಕು. ಯಾವನಾದರೂ ಅಧರ್ಮಾಚರಣದಿಂದ ಕಷ್ಟ ಉಂಟಾಗುತ್ತದೆ; ಧರ್ಮವನ್ನು ಬಿಟ್ಟು ಬಿಟ್ಟರೆ, ಪುನರ್ಜನ್ಮದಲ್ಲಿ ಮಹಾದುಃಖವನ್ನು ಹೊಂದುವನು-ಎಂದು ಹೇಳಿದರೆ, 'ಚಾರವಾಕ'ನು "ಅಯ್ಯೋಮುಗ್ಧಸೋದರ! ಸತ್ತಮೇಲೆ ಶರೀರ ಭಸ್ಮವಾಗಿ ಹೋಗುತ್ತದೆ; ಯಾವನು ತಿಂದಿದ್ದಾನೋ ಮತ್ತು ಕುಡಿದಿದ್ದಾನೋ, ಅವನು ಪುನಃ ಜಗತ್ತಿಗೆ ಬರುವುದಿಲ್ಲ. ಆದರೆ, ಹೇಗೆ ಶಕ್ಯವೋ ಹಾಗೆ ಆನಂದದಲ್ಲಿ ಇರು. ಲೋಕದಲ್ಲಿ ನೀತಿಯಿಂದ[೨] ನಡೆದುಕೋ. ಐಶ್ವರ್ಯವನ್ನು ಹೆಚ್ಚಿಸಿಕೋ ಮತ್ತು ಅದರಿಂದ ಬೇಕಾದ ಭೋಗವನ್ನು ಅನುಭವಿಸು. ಇರುವುದು ಇದೇ ಲೋಕವೆಂದು ತಿಳಿದುಕೋ; ಪರಲೋಕವಾವುದೂ[೩] ಇಲ್ಲ".-ಎಂದು ಉತ್ತರಕೊಡುತ್ತಾನೆ.

ನೋಡಿರಿ, ಪೃಥಿವೀ, ಜಲ, ಅಗ್ನಿ, ವಾಯು ಈ ನಾಲ್ಕುಭೂತಗಳ ಪರಿಣಾಮದಿಂದ ಈ ಶರೀರ ಉಂಟಾಗಿದೆ. ಇದರಲ್ಲಿ ಅವುಗಳ ಯೋಗದಿಂದ ಚೈತನ್ಯವು ಉತ್ಪನ್ನವಾಗಿದೆ. ಹೇಗೆ ಮಾದಕದ್ರವ್ಯವನ್ನು ಸೇವಿಸುವುದರಿಂದ ಮದವು ಉತ್ಪನ್ನವಾಗುತ್ತದೋ, ಹಾಗೆಯೇ ಜೀವನು ಶರೀರದೊಂದಿಗೆ ಉತ್ಪನ್ನವಾಗಿ, ಶರೀರದ ನಾಶದೊಂದಿಗೆ ತಾನು ಕೂಡ ನಾಶವಾಗಿ ಹೋಗುತ್ತಾನೆ. ಮತ್ತು ಪಾಪ-ಪುಣ್ಯಗಳ ಫಲ ಮತ್ತೆ ಲಭಿಸುವುದು ಯಾವನಿಗೆ?

**ತಚ್ಚೈತನ್ಯವಿಶಿಷ್ಟದೇಹ ಏವ ಆತ್ಮಾ ದೇಹಾತಿರಿಕ್ತ। ಆತ್ಮನಿ ಪ್ರಮಾಣಾಭಾವಾತ್॥**

(ಸರ್ವದರ್ಶನ ಸಂಗ್ರಹ; ಚಾರವಾಕ ದರ್ಶನ)

---

೧. ಈ ಸಮುಲ್ಲಾಸದಲ್ಲಿ ಚಾರವಾಕ ಮತ್ತು ಭೌದ್ಧಮತಗಳ ಸಿದ್ಧಾಂತಗಳ ಉಲ್ಲೇಖನವನ್ನು ಸಾಯಾಣಾಚಾರ್ಯ ವಿರಚಿತ 'ಸರ್ವದರ್ಶನ ಸಂಗ್ರಹ"ದ ಆಧಾರದ ಮೇಲೆ ಮುಖ್ಯವಾಗಿ ಬರೆಯಲಾಗಿದೆ. ಏಕೆಂದರೆ, ಆಗ, ಈ ಮತಗಳ ಗ್ರಂಥಗಳು ಸಿಕ್ಕಿರಲಿಲ್ಲ.

೨. ಇಲ್ಲಿ ನೀತಿ, ಎಂದರೆ, ವ್ಯಾವಹಾರಿಕ ಜ್ಞಾನ, ಎಂದರ್ಥ. ಚತುರತೆ ಎಂದೂ ಅರ್ಥ. Moral ಎಂಬ ಅರ್ಥವಲ್ಲ.

೩. ಪಾಶ್ಚಿಮಾತ್ಯ ಸಂಸ್ಕೃತಿಯ ಧರ್ಮವೂ ಅದೇ ಆಗಿದೆ. ಈಗ ಅವರನ್ನು ಅನುಸರಿಸುತ್ತಿರುವ ಭಾರತೀಯರ ಧರ್ಮವೂ ಇದೇ ಆಗಿದೆ. ಆದರೆ, ವ್ಯತ್ಯಾಸವೇನೆಂದರೆ, ಮಾತು-ಮಾತಿಗೂ, ಹೆಜ್ಜೆ-ಹೆಜ್ಜೆಗೂ, ದೇವರ ಹೆಸರನ್ನು ಹೇಳುತ್ತಿರುವುದು ಭಾರತೀಯರ ವೈಶಿಷ್ಟ್ಯ !

ಈ ಶರೀರದಲ್ಲಿ ನಾಲ್ಕು ಭೂತಗಳ ಸಂಯೋಗದಿಂದ ಜೀವಾತ್ಮನು ಉತ್ಪನ್ನನಾಗಿ, ಅವುಗಳ ವಿಯೋಗದೊಡನೆಯೇ ನಾಶವನ್ನು ಹೊಂದುತ್ತಾನೆ. ಏಕೆಂದರೆ, ಪ್ರತ್ಯಕ್ಷವನ್ನು ಮಾತ್ರ ಅಂಗೀಕರಿಸುತ್ತೇವೆ. ಏಕೆಂದರೆ, ಪ್ರತ್ಯಕ್ಷವಿಲ್ಲದೆ ಅನುಮಾನ-ಮೊದಲಾದವು ಆಗುವುದೇ ಇಲ್ಲ. ಆದುದರಿಂದ, ಮುಖ್ಯವಾದ ಪ್ರತ್ಯಕ್ಷದ ಮುಂದೆ ಅನುಮಾನ ಮೊದಲಾದುವು ಗೌಣವಾಗಿರುವುದರಿಂದ, ಅವುಗಳನ್ನು ನಾವು ಗ್ರಹಿಸುವುದಿಲ್ಲ. ಸುಂದರಿಯಾದ ಸ್ತ್ರೀಯ ಆಲಿಂಗನವನ್ನು ಆನಂದವನ್ನು ಪಡೆದುಕೊಳ್ಳುವುದು ಪುರುಷಾರ್ಥದ ಫಲವಾಗಿರುತ್ತದೆ.[೪]

**ಉತ್ತರ:-** ಪೃಥಿವೀ-ಮೊದಲಾದ ಈ ಭೂತಗಳು ಜಡವಾಗಿವೆ. ಅವುಗಳಿಂದ ಚೇತನನ ಉತ್ಪತ್ತಿ ಎಂದಿಗೂ ಆಗಲಾರದು. ಹೇಗೆ ಈಗ ಮಾತಪಿತೃಗಳ ಸಂಯೋಗದಿಂದ ದೇಹದ ಉತ್ಪತ್ತಿಯಾಗುತ್ತದೋ, ಹಾಗೆಯೇ ಆದಿಸೃಷ್ಟಿಯಲ್ಲಿ ಮನುಷ್ಯನೇ ಮೊದಲಾದವರ ಶರೀರಗಳ ಆಕೃತಿಯ ನಿರ್ಮಾಣ, ಕರ್ತೃವಾದ ಪರಮೇಶ್ವರನಿಲ್ಲದೆ ಎಂದಿಗೂ ಆಗಲಾರದು. ಚೇತನನ ಉತ್ಪತ್ತಿ ಮತ್ತು ವಿನಾಶ ಮದದ ಹಾಗೆ ಆಗುವುದಿಲ್ಲ. ಏಕೆಂದರೆ, ಮದ ಉಂಟಾಗುವುದು ಚೇತನನಿಗೇ ಹೊರತು ಜಡಕ್ಕಲ್ಲ. ವಸ್ತುಗಳು ನಷ್ಟವಾಗುತ್ತವೆ, ಎಂದರೆ ಅದೃಶ್ಯವಾಗುತ್ತವೆ; ಆದರೆ, ಅಭಾವ ಯಾವುದೇ ವಸ್ತುವಿಗೂ ಆಗುವುದಿಲ್ಲ. ಇದೇ ರೀತಿ ಅದೃಶ್ಯನಾಗುವ ಕಾರಣ, ಜೀವನ ಅಭಾವವನ್ನೂ ಅಂಗೀಕರಿಸಬಾರದು. ಜೀವಾತ್ಮನು ಯಾವಾಗ ಸದೇಹನಾಗುತ್ತಾನೋ, ಆಗಲೇ ಅವನ ಪ್ರಕಟಣೆಯಾಗುತ್ತದೆ. ಯಾವಾಗ ಶರೀರವನ್ನು ಬಿಟ್ಟುಬಿಡುತ್ತಾನೋ, ಆಗ, ಯಾವುದು ಸಾವಿಗೆ ಈಡಾಗಿದೆಯೋ ಆ ಶರೀರ, ಮೊದಲು ಹೇಗೆ ಚೈತನ್ಯಯುಕ್ತವಾಗಿತ್ತೋ, ಹಾಗೆ ಇರಲಾರದು.

ಇದೇ ಮಾತನ್ನು ಬೃಹದಾರಣ್ಯಕದಲ್ಲಿ ಹೇಳಿದ್ದಾರೆ:-

**"ನ ವಾ ಅರೇ ಅಹಂ ಮೋಹಂ ಬ್ರವೀಮಿ.(ಅವಿನಾಶೀ ವಾ ಅರೇ) ಅನುಚ್ಛಿತ್ತಿ ಧರ್ಮಾಯಮಾತ್ಮೇತಿ"** (೪. ೫. ೧೪)

ಯಾಜ್ಞವಲ್ಕ್ಯರು - "ಓ ಮೈತ್ರೇಯಿ! ನಾನು ಮೋಹದಿಂದ ಮಾತನ್ನಾಡುವುದಿಲ್ಲ. ಆದರೆ, ಯಾವನ ಸಂಯೋಗದಿಂದ ಶರೀರವು ಕ್ರಿಯೆಯನ್ನು ಮಾಡುತ್ತದೋ, ಆ ಆತ್ಮನು ಅವಿನಾಶಿಯಾಗಿದ್ದಾನೆ".- ಎನ್ನುತ್ತಾರೆ. ಯಾವಾಗ ಜೀವನು ಶರೀರದಿಂದ ಬೇರೆಯಾಗಿ ಹೋಗುತ್ತಾನೋ, ಆಗ ಶರೀರದಲ್ಲಿ ಜ್ಞಾನವು ಸ್ವಲ್ಪವೂ ಇರುವುದಿಲ್ಲ. ದೇಹದಿಂದ ಬೇರೆಯಾದ ಆತ್ಮನು ಇಲ್ಲದೇ ಇದ್ದರೆ, ಯಾವನ ಸಂಯೋಗದಿಂದ ಚೇತನತ್ವವೂ, ಮತ್ತು ವಿಯೋಗದಿಂದ ಜಡತ್ವವೂ ಉಂಟಾಗುತ್ತದೋ, ಅವನು ಯಾವನು? ಅವನು ದೇಹದಿಂದ ಬೇರೆ ಎಂಬುದು ಸ್ಪಷ್ಟವಾಗಿದೆ. ಹೇಗೆ ಕಣ್ಣು ಎಲ್ಲವನ್ನೂ ನೋಡುತ್ತದೋ, ಆದರೆ ತನ್ನನ್ನು ತಾನು ನೋಡಿಕೊಳ್ಳಲಾರದೋ ಹಾಗೆಯೇ ಪ್ರತ್ಯಕ್ಷವಾಗಿ ನೋಡಬಲ್ಲವನು ತನ್ನನ್ನು ತಾನೇ "ಇಂದ್ರಿಯ ಪ್ರತ್ಯಕ್ಷ"ವಾಗಿ ಮಾಡಿಕೊಳ್ಳಲಾರನು. ಹೇಗೆ (ಮಾನವನು) ತನ್ನ ಕಣ್ಣಿನಿಂದ ಮಡಿಕೆ-ಬಟ್ಟೆ ಮೊದಲಾದ ಪದಾರ್ಥಗಳೆಲ್ಲವನ್ನೂ ನೋಡುತ್ತಾನೋ, ಹಾಗೆ ಕಣ್ಣನ್ನು ತನ್ನ ಜ್ಞಾನದಿಂದ ನೋಡುತ್ತಾನೆ. ಯಾವನು ನೋಡುವವನಾಗಿದ್ದಾನೋ ಅವನು ನೋಡುವವನಾಗಿಯೇ ಇರುತ್ತಾನೆ; ಎಂದಿಗೂ ದೃಶ್ಯನಾಗುವುದಿಲ್ಲ. ಹೇಗೆ, ಆಧಾರವಿಲ್ಲದೆ ಆಧೇಯವೂ, ಕಾರಣವಿಲ್ಲದೆ ಕಾರ್ಯವೂ, ಅವಯವಿ ಇಲ್ಲದೆ ಅವಯವಗಳೂ ಮತ್ತು ಕರ್ತೃವಿಲ್ಲದೆ ಕರ್ಮಗಳೂ ಇರಲಾರವೋ, ಹಾಗೆಯೇ (ಪ್ರತ್ಯಕ್ಷದ) ಕರ್ತೃವಿಲ್ಲದೆ ಪ್ರತ್ಯಕ್ಷವಿರುವುದು ಹೇಗೆ ಶಕ್ಯ?

ಸುಂದರಿಯಾದ ನಾರಿಯ ಸಂಗಡ ಸಮಾಗಮ ಮಾಡುವುದನ್ನೇ ಪುರುಷಾರ್ಥದ ಫಲವೆಂದು ಅಂಗೀಕರಿಸುವಿರಾದರೆ, ಕ್ಷಣಿಕವಾದ ಸುಖ ಮತ್ತು ಅದರಿಂದ ದುಃಖವೂ ಕೂಡ ಉಂಟಾಗುತ್ತದೆ. ಅದೂ ಕೂಡ ಪುರುಷಾರ್ಥದ ಫಲವೇ ಆಗಿರಬಹುದೇನೋ? ಹೀಗೆ ಇರುವುದಾದರೆ, ಸ್ವರ್ಗಕ್ಕೂ[೫] ಹಾನಿಯುಂಟಾಗುವುದರಿಂದ, ದುಃಖವನ್ನು ಅನುಭವಿಸ ಬೇಕಾಗುವುದು. ದುಃಖದಿಂದ ಬಿಡುಗಡೆ ಹೊಂದುವುದಕ್ಕಾಗಿ ಮತ್ತು ಸುಖವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಯತ್ನ ಮಾಡಬೇಕು-ಎನ್ನುವಿರಾದರೆ, ಮುಕ್ತಿ-ಸುಖಕ್ಕೆ ಹಾನಿಯುಂಟಾಗುತ್ತದೆ.[೬] ಆದುದರಿಂದ, ಅದು ಪುರುಷಾರ್ಥದ ಫಲವಲ್ಲ.

**ಚಾರವಾಕ :-** ಯಾರು ದುಃಖಯುಕ್ತವಾದ ಸುಖದ ತ್ಯಾಗವನ್ನು ಮಾಡುತ್ತಾರೋ, ಅವರು ಮೂರ್ಖರಾಗಿರುತ್ತಾರೆ. ಹೇಗೆ ಧಾನ್ಯವನ್ನು ಬಯಸುವವನು ಧಾನ್ಯವನ್ನು ಗ್ರಹಿಸಿ, ಹೊಟ್ಟನ್ನು ತ್ಯಜಿಸುತ್ತಾನೋ, ಹಾಗೆ, ಈ ಜಗತ್ತಿನಲ್ಲಿ ಬುದ್ಧಿವಂತರು

೪. ಈ ಈ ಮೇಲಿನ ಸಿದ್ಧಾಂತಗಳು ಚಾರವಾಕ ದರ್ಶನದ್ದೆಂದು ತಿಳಿಯಬೇಕು. ಈವುಗಳ ಟೀಕೆ ಮತ್ತು ಉತ್ತರವನ್ನು ಮುಂದೆ, ಗ್ರಂಥಕರ್ತರು ಕೊಟ್ಟಿದ್ದಾರೆ.

೫. ಎಂದರೆ, ಸುಖಕ್ಕೂ

೬. ಭೌತಿಕ ಸುಖಾಪೇಕ್ಷೆ ಬೆಳೆದಲ್ಲಿ ಭೋಗವೇ ಹೆಚ್ಚಿ, ಆನಂದ ಸಿಕ್ಕದು, ಎಂದು ಭಾವನೆ.

ಸುಖವನ್ನು ಗ್ರಹಿಸಿ, ದುಃಖವನ್ನು ತ್ಯಜಿಸಿಬಿಡಬೇಕು. ಏಕೆಂದರೆ, ಈ ಲೋಕದಲ್ಲಿ ಜನರು ಪ್ರಸ್ತುತವಾಗಿರುವ ಸುಖವನ್ನು ಪರಿತ್ಯಜಿಸಿ ಅನುಪಸ್ಥಿತವಾದ ಸ್ವರ್ಗದ ಸುಖದ ಇಚ್ಛೆಯನ್ನು ಧೂರ್ತರಿಂದ ಕಥಿತವಾದ, ವೇದೋಕ್ತವಾದ ಅಗ್ನಿಹೋತ್ರವೇ ಮೊದಲಾದ ಕರ್ಮದ, ಉಪಾಸನೆಯ ಮತ್ತು ಜ್ಞಾನಕಾಂಡದ ಅನುಷ್ಠಾನವನ್ನು ಪರಲೋಕಕ್ಕಾಗಿ ಮಾಡುತ್ತಾರೆ, ಅವರು ಮೂರ್ಖರು. ಪರಲೋಕವು ಇಲ್ಲವೇ ಇಲ್ಲವಾದುದರಿಂದ, ಅದನ್ನು ಆಶಿಸುವುದು ಮೂರ್ಖತನದ ಕೆಲಸವಾಗಿದೆ. ಏಕೆಂದರೆ:–

**ಅಗ್ನಿಹೋತ್ರಂ ತ್ರಯೋ ವೇದಾಸ್ತ್ರಿದಂಡಂ ಭಸ್ಮಗುಂಠನಮ್ ।**

**ಬುದ್ಧಿಪೌರುಷಹೀನಾನಾಂ ಜೀವಿಕೇತಿ ಬೃಹಸ್ಪತಿಃ ॥** (ಸರ್ವದರ್ಶನ ಸಂಗ್ರಹ:– ಚಾ. ದ.)

ಚಾರವಾಕ ಮತಪ್ರಚಾರಕನಾದ ಬೃಹಸ್ಪತಿಯು – "ಅಗ್ನಿಹೋತ್ರ, ಮೂರುವೇದಗಳು ಮೂರು ದಂಡಗಳು, ಹಾಗೂ ಭಸ್ಮಧಾರಣಮಾಡುವುದು ಇವನ್ನು ಬುದ್ಧಿಪುರುಷಾರ್ಥರಹಿತರಾದ ಪುರುಷರು ಜೀವನನಿರ್ವಾಹಕ್ಕಾಗಿ ಮಾಡಿಕೊಂಡಿದ್ದಾರೆ. ಆದರೆ – ಮುಳ್ಳುಚುಚ್ಚಿಕೊಳ್ಳುವುದು ಮೊದಲಾದುದರಿಂದ ಉತ್ಪನ್ನವಾದ ದುಃಖಕ್ಕೇ ನರಕವೆಂದು ಹೆಸರು. ಲೋಕದಲ್ಲಿ ಸಿದ್ಧನಾಗಿರುವ ರಾಜನೇ ಪರಮೇಶ್ವರ ಮತ್ತು ದೇಹದ ನಾಶವಾಗುವಿಕೆಯೇ ಮೋಕ್ಷ. ಬೇರೆ ಏನೂ ಇಲ್ಲ."– ಎಂದು ಹೇಳುತ್ತಾನೆ. ಅಗ್ನಿಹೋತ್ರ ಮೊದಲಾದ ವೇದೋಕ್ತ ಧರ್ಮ ನಿಂದೆ ಮಾಡುವುದು ಧೂರ್ತ ಕರ್ಮವಾಗಿದೆ.

**ಉತ್ತರ:–** ಕೇವಲ ವಿಷಯವೆಂಬ ಸುಖವನ್ನೇ ಪುರುಷಾರ್ಥದ ಫಲವೆಂದು ಅಂಗೀಕರಿಸಿ, ವಿಷಯ–ದುಃಖನಿವಾರಣ ಮಾತ್ರದಲ್ಲಿ ಕೃತಕೃತ್ಯತೆ ಮತ್ತು ಸ್ವರ್ಗವಿದೆ–ಎಂದು ಒಪ್ಪಿಕೊಳ್ಳುವುದು ಮೂರ್ಖತನವಾಗಿದೆ.[೭] ಅಗ್ನಿಹೋತ್ರವೇ ಮೊದಲಾದ ಯಜ್ಞಗಳಿಂದ ವಾಯುವಿನ, ವೃಷ್ಟಿಯ ಹಾಗೂ ಜಲದ ಶುದ್ಧಿಯ ಮೂಲಕ ಆರೋಗ್ಯ ಪ್ರಾಪ್ತವಾಗುವುದದು; ಅದರಿಂದ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷದ ಸಿದ್ಧಿಯಾಗುವುದು. ಅದನ್ನು ತಿಳಿಯದೆ, ವೇದಗಳ, ಈಶ್ವರನ ಮತ್ತು ವೇದೋಕ್ತ ಧರ್ಮದ ನಿಂದೆಯನ್ನು ಮಾಡುವುದು ಧೂರ್ತರ ಕೆಲಸವಾಗಿದೆ. ತ್ರಿಕದಂಡದ ಮತ್ತು ಭಸ್ಮಧಾರಣದ ಖಂಡನವೇನೋ ಸರಿಯಾಗಿದೆ. ಮುಳ್ಳೇ ಮೊದಲಾದುದರಿಂದ ಉತ್ಪನ್ನವಾಗುವ ದುಃಖದ ಹೆಸರೇ ನರಕವಾದಲ್ಲಿ, ಅದಕ್ಕಿಂತ ಅಧಿಕವಾದ ಮಹಾರೋಗ–ಮೊದಲಾದುವು ನರಕವೇಕಲ್ಲ? ರಾಜನು ಐಶ್ವರ್ಯವಂತನೂ ಮತ್ತು ಪ್ರಜಾಪಾಲನದಲ್ಲಿ ಸಮರ್ಥನೂ ಆಗಿರುವುದರಿಂದ ಶ್ರೇಷ್ಠನು–ಎಂದು ಅಂಗೀಕರಿಸಿದರೆ, ಅದೂ ಸರಿಯೇ. ಆದರೆ, ಯಾವ ರಾಜನು ಅನ್ಯಾಯಕಾರಿಯೂ, ಪಾಪಿಯೂ ಆಗಿರುತ್ತಾನೋ, ಅವನನ್ನೂ ಕೂಡ ಪರಮೇಶ್ವರನಂತೆ–ಎಂದು ಗ್ರಹಿಸುವಿರಾದರೆ, ನಿಮ್ಮಂತಹ ಸತ್ಯ–ವಿಮುಖನು ಬೇರೆ ಯಾವನೂ ಇಲ್ಲ. ಶರೀರದ ವಿಚ್ಛೇದವಾಗುವುದೇ ಮೋಕ್ಷವಾದರೆ, ಕತ್ತೆಗಳು, ನಾಯಿಗಳು ಮೊದಲಾದುವಕ್ಕೂ ಮತ್ತು ನಿಮಗೂ ಇರುವ ವ್ಯತ್ಯಾಸವೇನು? ಅಹುದು; ಆಕೃತಿಯೊಂದು ಮಾತ್ರ ಬೇರೆಯುಳಿಯಿತು.

**ಚಾರವಾಕ :–**

**ಅಗ್ನಿರುಷ್ಣೋ ಜಲಂ ಶೀತಂ ಶೀತಸ್ಪರ್ಶಸ್ತಥಾನಿಲಃ ।**

**ಕೇನೇದಂ ಚಿತ್ರಿತಂ ತಸ್ಮಾತ್ ಸ್ವಭಾವಾತ್ತದ್ವ್ಯವಸ್ಥಿತಿಃ ॥ ೧ ॥**

**ನ ಸ್ವರ್ಗೋ ನಾಪವರ್ಗೋ ವಾ ನೈವಾತ್ಮಾ ಪಾರಲೌಕಿಕಃ ।**

**ನೈವ ವರ್ಣಾಶ್ರಮಾದೀನಾಂ ಕ್ರಿಯಾಶ್ಚ ಫಲದಾಯಿಕಾಃ ॥ ೨ ॥**

**ಪಶುಶ್ಚೇನ್ನಿಹತಃ ಸ್ವರ್ಗಂ ಜ್ಯೋತಿಷ್ಟೋಮೇ ಗಮಿಷ್ಯತಿ ।**

**ಸ್ವಪಿತಾ ಯಜಮಾನೇನ ತತ್ರ ಕಸ್ಮಾನ್ನ ಹಿಂಸ್ಯತೇ ॥ ೩॥**

---

೭. ವೇದ ವಿರುದ್ಧ ಚಾರವಾಕ ಮತ ಖಂಡನೆಯನ್ನು ಅತಿ ತೀವ್ರವಾಗಿ ಮಹರ್ಷಿದಯಾನಂದರು ಮಾಡುತ್ತಿದ್ದಾರೆ. ಪಾಶ್ಚಿಮಾತ್ಯ ಸಂಸ್ಕೃತಿಯ ಈ ಚಾರವಾಕನ ಇಂದ್ರಿಯ ಲೋಲುಪ್ತ ಭೌತಿಕ ಸುಖಾಪೇಕ್ಷಿಯಾದ ಸಂಸ್ಕೃತಿಯಾಗಿದೆ ! ಇದು ಪಶ್ಚಿಮದಿಂದ ಅಮದಾಗುತ್ತಾ, ನಿಧಾನವಾಗಿ ಭಾರತವನ್ನೆಲ್ಲಾ ಆವರಿಸುತ್ತಿದೆ. ಪರಿಣಾಮವಾಗಿ, ಮನುಷ್ಯರು ಪಶುಗಳಿಗಿಂತ ನಿಷ್ಕೃಷ್ಟ ಸ್ಥಿತಿಗಿಳಿಯುವರು. ಇದನ್ನು ತಪ್ಪಿಸಲೆಂದೇ, 'ಸತ್ಯಾರ್ಥ ಪ್ರಕಾಶ' ರೂಪವಾದ ನೌಕೆಯ ರಚನೆಯಾಗಿದೆ. ಈ ನೌಕೆಯನ್ನು ಹತ್ತುವವರು ಪಾರಾಗುವರು. ಬಿಟ್ಟು ಬಿಡುವರು ಮುಳುಗುವರು.

**ಮೃತಾನಾಮಪಿ ಜಂತೂನಾಂ ಶ್ರಾದ್ಧಂ ಚೇತ್ತೃಪ್ತಿಕಾರಣಮ್ ।**

**ಗಚ್ಛತಾಮಿಹ ಜಂತೂನಾಂ ವ್ಯರ್ಥಂ ಪಾಥೇಯಕಲ್ಪನಮ್ ॥ ೪ ॥**

**ಸ್ವರ್ಗಸ್ಥಿತಾ ಯದಾ ತೃಪ್ತಿಂ ಗಚ್ಛೇಯುಸ್ತತ್ರ ದಾನತಃ ।**

**ಪ್ರಾಸಾದಸ್ಯೋಪರಿಸ್ಥಾನಾಮತ್ರ ಕಸ್ಮಾನ್ನ ದೀಯತೇ ॥ ೫ ॥**

**ಯಾವಜ್ಜೀವೇತ್ಸುಖಂ ಜೀವೇದೃಣಂ ಕೃತ್ವಾ ಘೃತಂ ಪಿಬೇತ್ ।**

**ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥ ೬ ॥**

**ಯದಿ ಗಚ್ಛೇತ್ಪರಂ ಲೋಕಂ ದೇಹಾದೇಷ ವಿನಿರ್ಗತಃ ।**

**ಕಸ್ಮಾದ್ಭೂಯೋ ನ ಚಾಯಾತಿ ಬಂಧುಸ್ನೇಹಸಮಾಕುಲಃ ॥ ೭ ॥**

**ತತಶ್ಚ ಜೀವನೋಪಾಯೋ ಬ್ರಾಹ್ಮಣೈರ್ವಿಹಿತಸ್ತ್ವಿಹ।**

**ಮೃತಾನಾಂ ಪ್ರೇತಕಾರ್ಯಾಣಿ ನ ತ್ವನ್ಯದ್ವಿದ್ಯತೇ ಕ್ವಚಿತ್ ॥ ೮ ॥**

**ತ್ರಯೋ ವೇದಸ್ಯ ಕರ್ತಾರೋ ಭಂಡಧೂರ್ತನಿಶಾಚರಾಃ।**

**ಜರ್ಫರೀತುರ್ಫರೀತ್ಯಾದಿ ಪಂಡಿತಾನಾಂ ವಚಃಸ್ಮೃತಮ್ ॥ ೯ ॥**

**ಅಶ್ವಸ್ಯಾತ್ರ ಹಿ ಶಿಶ್ನಂತು ಪತ್ನೀಗ್ರಾಹ್ಯಂ ಪ್ರಕೀರ್ತಿತಮ್ ।**

**ಭಂಡೈಸ್ತದ್ವತ್ಪರಂ ಚೈವ ಗ್ರಾಹ್ಯ ಜಾತಂ ಪ್ರಕೀರ್ತಿತಮ್ ॥ ೧೦॥**

**ಮಾಂಸಾನಾಂ ಖಾದನಂ ತದ್ವನ್ನಿಶಾಚರಸಮೀರಿತಮ್ ॥ ೧೧ ॥** (ಸರ್ವದರ್ಶನಸಂಗ್ರಹ. ಚಾರವಾಕ)

ಚಾರವಾಕರು, ಅಭಾಣಕರು, ಬೌದ್ಧರು ಮತ್ತು ಜೈನರೂ ಕೂಡ ಜಗತ್ತಿನ ಉತ್ಪತ್ತಿಯನ್ನು ಸ್ವಭಾವದಿಂದಾಗುತ್ತದೆಂದು ಅಂಗೀಕರಿಸುತ್ತಾರೆ. ಯಾವ ಯಾವ ಸ್ವಾಭಾವಿಕ ಗುಣಗಳಿವೆಯೋ, ಆಯಾ ಗುಣದಿಂದ ದ್ರವ್ಯಗಳು ಸಂಯುಕ್ತವಾಗಿ, ಸಮಸ್ತ ವಸ್ತುಗಳೂ ಆಗುತ್ತವೆ; ಜಗತ್ತಿನ ಕರ್ತೃವು ಯಾವನೂ[೮] ಇಲ್ಲ. (೧).

ಆದರೆ ಇವರಲ್ಲಿ ಚಾರವಾಕನೊಬ್ಬನು ಮಾತ್ರ ಈ ಸಮಸ್ತವನ್ನೂ[೯] ಒಪ್ಪಿಕೊಳ್ಳುತ್ತಾನೆ; ಆದರೆ, ಬೌದ್ಧರು ಮತ್ತು ಜೈನರು ಪರಲೋಕವನ್ನೂ, ಜೀವಾತ್ಮನನ್ನೂ ಅಂಗೀಕರಿಸುತ್ತಾರೆ; ಚಾರವಾಕನು ಒಪ್ಪುವುದಿಲ್ಲ. ಉಳಿದ ವಿಷಯದಲ್ಲಿ ಒಂದೊಂದು ಮಾತುಗಳನ್ನುಳಿದು ಇವರೆಲ್ಲರ ಮತಗಳೂ ಒಂದೇ ಬಗೆಯದಾಗಿವೆ. ಸ್ವರ್ಗವಾವುದೂ ಇಲ್ಲ; ನರಕವೂ ಯಾವುದೂ ಇಲ್ಲ. ಮತ್ತು ಪರಲೋಕಕ್ಕೆ ತೆರಳುವ ಆತ್ಮನೂ ಕೂಡ ಯಾವನೂ ಇಲ್ಲ. ವರ್ಣಾಶ್ರಮಗಳ ಕ್ರಿಯೆಯೂ ಕೂಡ ಫಲದಾಯಕವಲ್ಲ. (೨)

ಯಜ್ಞದಲ್ಲಿ ಪಶುವನ್ನು ಕೊಂದು ಹೋಮಮಾಡುವುದರಿಂದ, ಅದು ಸ್ವರ್ಗಕ್ಕೆ ಹೋಗುವುದಾದರೆ, ಯಜಮಾನನು ತನ್ನ ತಂದೆ-ಮೊದಲಾದವರನ್ನು ಕೊಂದು, ಹೋಮಮಾಡಿ, ಸ್ವರ್ಗಕ್ಕೆ ಕಳುಹಿಸುವುದಿಲ್ಲವೇಕೆ? (೩)

ಶ್ರಾದ್ಧ ಮತ್ತು ತರ್ಪಣ ಮೃತರಾದ ಜೀವರಿಗೆ ತೃಪ್ತಿಕಾರವಾಗವುದಾದರೆ, ಪರದೇಶಕ್ಕೆ ಹೋಗುವವರು ಮಾರ್ಗದಲ್ಲಿ ನಿರ್ವಾಹಕ್ಕೋಸ್ಕರ ಅನ್ನ, ವಸ್ತ್ರ ಮತ್ತು ಧನ-ಮೊದಲಾದುವನ್ನು ತೆಗೆದುಕೊಂಡು ಹೋಗುತ್ತಾರೆ ಏಕೆ? ಏಕೆಂದರೆ-ಹೇಗೆ ಮೃತನ ಹೆಸರಿನಿಂದ ಅರ್ಪಣಮಾಡಿದ ಪದಾರ್ಥ ಸ್ವರ್ಗಕ್ಕೆ ತಲುಪುವುದೋ, ಹಾಗೆ ಪರದೇಶಕ್ಕೆ ತೆರಳುವವರಿಗೆ, ಅವರ ಸಂಬಂಧಿಕರೂ

---

೮. ಇಲ್ಲಿ ಭಾವ ಮಾತ್ರ ವ್ಯಕ್ತ ಪಡಿಸಲ್ಪಟ್ಟಿದೆ. ಶ್ಲೋಕದ ಶಬ್ದಾರ್ಥ ಹೀಗಿದೆ:-
"ಅಗ್ನಿಯು ಉಷ್ಣವಾಗಿದೆ. ಜಲವು ಶೀತವಾಗಿದೆ. ವಾಯುವು ಶೀತಲ ಸ್ಪರ್ಶವಾಗಿದೆ. ಈ ವೈಚಿತ್ರವನ್ನು ಯಾರು ರಚಿಸಿದ್ದಾರೆ? ಆದ್ದರಿಂದ ಸ್ವಭಾವದಿಂದಲೇ, ಇವುಗಳ ಆಯಾಯ ಗುಣಗಳಿಂದ ಯುಕ್ತವಾದ ಸ್ಥಿತಿಯನ್ನು ತಿಳಿದುಕೊಳ್ಳಬೇಕು -ಯು.ಮೀ."

೯. ಎಂದರೆ, ಮೇಲಿನ ವಾಕ್ಯದಲ್ಲಿ ವ್ಯಕ್ತ ಪಡಿಸಿದ ಅಭಿಪ್ರಾಯವನ್ನು:- ಯು.ಮೀ

ಕೂಡ ಅವರ ಹೆಸರಿನಿಂದ ಅರ್ಪಣಮಾಡಿ ದೇಶಾಂತರಕ್ಕೆ ತಲುಪಿಸಿಬಿಡಬಹುದು! ಇದು ತಲುಪುವುದಿಲ್ಲವಾದರೆ, ಅದು ಹೇಗೆ ತಾನೇ ಸ್ವರ್ಗಕ್ಕೆ, ತಲುಪಬಲ್ಲದು?[೧೦] (೪)

ಮರ್ತ್ಯಲೋಕದಲ್ಲಿ ದಾನಮಾಡುವುದರಿಂದ ಸ್ವರ್ಗವಾಸಿಗಳು ತೃಪ್ತರಾಗುವರಾದರೆ, ಕೆಳಗೆ ಕೊಡುವುದರಿಂದ ಮನೆಯ ಮಾಳಿಗೆಯ ಮೇಲಿರುವ ಪುರುಷ ತೃಪ್ತನಾಗುವುದಿಲ್ಲವೇ? (೫)

ಆದುದರಿಂದ, ಎಂದಿನವರೆಗೆ ಜೀವಿಸುತ್ತಾನೋ, ಅಂದಿನವೆಗೆ ಸುಖದಿಂದ ಜೀವಿಸಬೇಕು. ಮನೆಯಲ್ಲಿ ಪದಾರ್ಥಗಳಿಲ್ಲವಾದರೆ, ಸಾಲವನ್ನು ತೆಗೆದುಕೊಂಡು ಆನಂದವನ್ನು ಅನುಭವಿಸಬೇಕು. ಸಾಲವನ್ನು ಹಿಂದಿರುಗಿಸ ಬೇಕಾಗುವುದಿಲ್ಲ. ಏಕೆಂದರೆ, ಯಾವ ಶರೀರದಲ್ಲಿ ಜೀವನು ತಿಂದಿದ್ದಾನೋ-ಕುಡಿದಿದ್ದಾನೋ, ಅದರ ಹಾಗೂ ಅವರೆಡರ[೧೧] ಪುನರಾಗಮನವಾಗುವುದಿಲ್ಲ. ಮತ್ತೆ ಯಾವನನ್ನು ಯಾವನು ಕೇಳುವನು? ಮತ್ತು ಯಾವನು ಕೊಡುವನು? (೬)

ಜನರು, ಸಾವಿನ ಸಮಯದಲ್ಲಿ ಜೀವನು ಹೊರಟು ಪರಲೋಕಕ್ಕೆ ಹೋಗುತ್ತಾನೆ-ಎಂದು ಏನು ಹೇಳುತ್ತಾರೋ, ಅದು ಸುಳ್ಳಾದ ಮಾತು. ಏಕೆಂದರೆ, ಹೀಗೆ ಆಗಿದ್ದಲ್ಲಿ, ಕುಟುಂಬದ ಮೋಹದಿಂದ ಬದ್ಧನಾಗಿ ಮರಳಿ ಮನೆಗೆ ಬಂದು ಬಿಡುವುದಿಲ್ಲವೇಕೆ? (೭)

ಆದುದರಿಂದ ಈ ಎಲ್ಲವನ್ನೂ ಬ್ರಾಹ್ಮಣರು ತಮ್ಮ ನಿರ್ವಾಹಕ್ಕೆ ಉಪಾಯವಾಗಿ ಮಾಡಿಕೊಂಡಿದ್ದಾರೆ. ದಶಗಾತ್ರ-ಮೊದಲಾದ ಯಾವ ಉತ್ತರಕ್ರಿಯೆಯನ್ನು ಮಾಡುತ್ತಾ ಹೋಗುತ್ತಾರೋ, ಇದೆಲ್ಲವೂ ಅವರ ಅಜೀವಿಕೆಯ ಲೀಲೆಮಾತ್ರ. (೮)

ವೇದದ ನಿರ್ಮಾತೃಗಳು ಭಂಡರು, ಧೂರ್ತರು ಮತ್ತು ನಿಶಾಚರರು, ಎಂದರೆ-ರಾಕ್ಷಸರು[೧೨] – ಈ ಮೂವರು, ಜರ್ಫರೀ, ತುರ್ಫರೀ[೧೨ಎ] ಈ ಮೊದಲಾದುವು ಪಂಡಿತರುಗಳ ಧೂರ್ತತಾಯುಕ್ತವಾದ ವಚನಗಳಾಗಿವೆ. (೯)

ನೋಡಿರಿ, ಧೂರ್ತರ ರಚನೆಯನ್ನು! ಕುದುರೆಯ ಜನನೇಂದ್ರಿಯವನ್ನು ಸ್ತ್ರೀ ಗ್ರಹಿಸಬೇಕ. ಅದರೊಂದಿಗೆ ಯಜಮಾನನ ಸ್ತ್ರೀಯ ಸಮಾಗಮವನ್ನು ಮಾಡಿಸುವುದು, ಕನ್ಯೆಯೊಂದಿಗೆ ಅಶ್ಲೀಲವಾದ ಹಾಸ್ಯಮಾಡುವುದು-ಮೊದಲಾದುವನ್ನು ಬರೆಯುವುದು ಧೂರ್ತರಿಗಲ್ಲದೆ ಅನ್ಯರಿಗೆ ಶಕ್ಯವಲ್ಲ.[೧೩] (೧೦)

ಮತ್ತು ಎಲ್ಲಿ ಮಾಂಸಭಕ್ಷಣವನ್ನು ಬರೆದಿದ್ದಾರೋ, ವೇದದ ಆ ಭಾಗ ರಾಕ್ಷಸನಿಂದ ರಚಿತವಾಗಿದೆ. (೧೧)

**ಉತ್ತರ:-** ಚೇತನನಾದ ಪರಮೇಶ್ವರನು ನಿರ್ಮಾಣಮಾಡದೆ, ಜಡಪದಾರ್ಥಗಳು ಸ್ವತಃ ಪರಸ್ಪರ, ಸ್ವಭಾವದಿಂದ, ನಿಯಮಪೂರ್ವಕವಾಗಿ ಸೇರಿ, ಉತ್ಪನ್ನವಾಗಲಾರವು. ಸ್ವಭಾವದಿಂದಲೇ ಆಗುವುದಾದರೆ, ಎರಡನೆಯ ಸೂರ್ಯ, ಚಂದ್ರ, ಪೃಥಿವೀ ಮತ್ತು ನಕ್ಷತ್ರಗಳೇ ಮೊದಲಾದ ಲೋಕಗಳು ತಮ್ಮಷ್ಟಕ್ಕೇ ತಾವೇ ನಿರ್ಮಿತವಾಗಿ ಹೋಗುವುದಿಲ್ಲವೇಕೆ? (೧)

---

೧೦. ಮೃತಕ ಶ್ರಾದ್ಧ ಮತ್ತು ತರ್ಪಣಗಳ ವಿಧಾನ ವೇದಾದಿ ಸಚ್ಛಾಸ್ತ್ರಗಳಲಿಲ್ಲ. ಯುಕ್ತಿ ಮತ್ತು ತರ್ಕಗಳಿಂದಲೂ ಇವು ಸಿದ್ಧವಾಗುವುದಿಲ್ಲ. ಆದರೂ ಕೂಡ, ಇವುಗಳ ತ್ಯಾಗವನ್ನು ಮಾಡದೇ ಅವುಗಳ ಸಮರ್ಥನೆ ಮಾಡುವ ಸಲುವಾಗಿ ಪೌರಾಣಿಕ ವಿದ್ವಾಂಸರು, ಈಗ ಹೊಸದಾಗಿ ಅವಿಷ್ಕೃತವಾಗುತ್ತಿರುವ ವೈಜ್ಞಾನಿಕ ಹಿನ್ನೆಲೆಯ ಮೇಲೆ ದೃಷ್ಟಾಂತಗಳನ್ನೂ, ಯುಕ್ತಿಗಳನ್ನೂ ಕೊಡಲಾರಂಭಿಸಿದ್ದಾರೆ. ಎಂದರೆ, ಟಿ.ವಿ.-ರಾಡಾರ್-ರಾಕೆಟ್-ಉಪಗ್ರಹ-ಕಂಪ್ಯೂಟರ್ ಯುಗದ ಬಾಲವನ್ನು ಈ ಮೃತಕ ಶ್ರಾದ್ಧ-ತರ್ಪಣಗಳು ಹಿಡಿದುಕೊಂಡು, ಜೀವಿತವಾಗಿರಲು ಬಯಸುತ್ತವೆ.

೧೧. ಎಂದರೆ, ಅದರ ಮತ್ತು ಅವನು

೧೨. ವಾಮಮಾರ್ಗಿಗಳು ಬ್ರಾಹ್ಮಣ ಗ್ರಂಥ, ಶ್ರೌತಸೂತ್ರ ಮೊದಲಾದ ಕೃತಿಗಳಲ್ಲಿ, ಯಜ್ಞಯಾಗಾದಿ ಪಶುವಧೆ, ಸುರಾಪಾನ, ಮೈಥುನಾದಿ ನಿಷಿದ್ಧ ವ್ಯಾಪಾರಗಳನ್ನು ಪ್ರಕ್ಷೇಪ ಮಾಡಿದ್ದಾರೆ. ಪೌರಾಣಿಕ ವಿದ್ವಾಂಸರು ಇದನ್ನು ಒಪ್ಪಿಕೊಂಡು ತದನುಸಾರವಾಗಿಯೇ ವೇದಗಳ ಭಾಷ್ಯ ಬರೆದಿದ್ದಾರೆ. ಅಲ್ಲದೆ, ಅವರು ವೇದ ಸಂಹಿತೆಗೂ, ಬ್ರಾಹ್ಮಣಗಳಿಗೂ 'ವೇದ'ಗಳೆಂದೇ ಹೆಸರಿಟ್ಟಿದ್ದಾರೆ! ಆದ್ದರಿಂದ, ಚಾರವಾಕನು ವಾಮಮಾರ್ಗಿಗಳನ್ನೂ, ಪೌರಾಣಿಕ ವಿದ್ವಾಂಸರನ್ನೂ ನಿಂದಿಸುವ ಬದಲು, ವೇದಗಳನ್ನೂ ವೇದಕರ್ತೃವನ್ನೂ ನಿಂದಿಸುತ್ತಿದ್ದಾನೆ.

೧೨[ಎ] ಈ ಶಬ್ದಗಳು ಅಥರ್ವವೇದದ ಆಯುರ್ವೇದ ಪ್ರಕರಣದಲ್ಲಿದೆ. ಇವುಗಳ ಅರ್ಥಕ್ಕಾಗಿ ಯಾಸ್ಕಾಚಾರ್ಯರ ನಿರುಕ್ತ ವನ್ನು ನೋಡಿ.

೧೩. ಮಹೀಧರನು ತನ್ನ ಯಜುರ್ವೇದದ ಭಾಷ್ಯದಲ್ಲಿ 'ಗಣಾನಾಂ ತ್ವಾ ಗಣಪತಿಗಂ ಹವಾಮಹೇ' ಎಂಬ ಮಂತ್ರದ ಪ್ರಕರಣದಲ್ಲಿ ಈ ರೀತಿ, ಮತ್ತು ಇನ್ನಷ್ಟು ಅಶ್ಲೀಲವಾಗಿ ವ್ಯಾಖ್ಯೆ ಮಾಡಿದ್ದಾನೆ. ಅವನ ಈ ವ್ಯಾಖ್ಯೆಯನ್ನು ಮಹರ್ಷಿ ದಯಾನಂದರು ತಮ್ಮ 'ಋಗ್ವೇದಾದಿ ಭಾಷ್ಯ ಭೂಮಿಕಾ'ದ 'ಭಾಷ್ಯ ಕರಣ ಶಂಕಾಸಮಾಧಾನಾದಿ ವಿಷಯ'ದ ಅಧ್ಯಾಯದಲ್ಲಿ ಖಂಡಿಸಿ, ಮಂತ್ರದ ಸತ್ಯಾರ್ಥವನ್ನು ಶತಪಥ ಬ್ರಾಹ್ಮಣಾನುಸಾರವಾಗಿ ರಾಜಾ-ಪ್ರಜಾ ಧರ್ಮಕ್ಕೆ ಸಂಬಂಧಿಸಿದಂತೆ ಬರೆದಿದ್ದಾರೆ.

ಸ್ವರ್ಗವೆಂಬುದು ಸುಖಭೋಗದ ಮತ್ತು ನರಕವೆಂಬುದು ದುಃಖಭೋಗದ ಹೆಸರು. ಜೀವಾತ್ಮನು ಇಲ್ಲದೇ ಇದ್ದಿದ್ದರೆ, ಸುಖ-ದುಃಖಗಳ ಭೋಕ್ತೃವಾವನು ಆಗಬಲ್ಲನು? ಹೇಗೆ ಈಗ ಸುಖ-ದುಃಖಗಳ ಭೋಕ್ತೃವು ಜೀವನಾಗಿದ್ದಾನೋ, ಹಾಗೆಯೇ ಪರಜನ್ಮದಲ್ಲಿಯೂ ಆಗುತ್ತಾನೆ. ವರ್ಣಾಶ್ರಮಿಗಳ ಸತ್ಯಭಾಷಣ ಮತ್ತು ಪರೋಪಕಾರ-ಮೊದಲಾದ ಕ್ರಿಯೆಗಳೂ ಕೂಡ ನಿಷ್ಫಲವಾಗುವುವೇನು? ಎಂದಿಗೂ ಇಲ್ಲ. (೨).

ಪಶುವನ್ನು ವಧಿಸಿ ಹೋಮಮಾಡಬೇಕೆಂದು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಲ್ಲಿ ಎಲ್ಲಿಯೂ ಬರೆದಿಲ್ಲ. ಮತ್ತು ಮೃತರಾದವರ ಶ್ರಾದ್ಧ-ತರ್ಪಣಗಳನ್ನು ಮಾಡಬೇಕೆನ್ನುವುದು ಕಪೋಲಕಲ್ಪಿತವಾಗಿದೆ. ಏಕೆಂದರೆ, ಇದು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಿಗೆ ವಿರುದ್ಧವಾಗಿರುವುದರಿಂದ, ಭಾಗವತವೇ ಮೊದಲಾದ ಪುರಾಣದ ಮತಗಳವರ ಅಭಿಪ್ರಾಯವಾಗಿದೆ. ಆದ ಕಾರಣ, ಈ ಮಾತಿನ ಖಂಡನ ಅಖಂಡನೀಯವಾಗಿದೆ. (೩.೪.೫)

ಯಾವ ವಸ್ತುವಿದೆಯೋ ಅದರ ಅಭಾವವೆಂದಿಗೂ ಆಗುವುದಿಲ್ಲ, ಅಸ್ತಿತ್ವಯುಕ್ತವಾದ ಜೀವನ ಅಭಾವ ಆಗಬಾರದು. ದೇಹವು ಭಸ್ಮವಾಗಿ ಹೋಗುತ್ತದೆ; ಜೀವನಲ್ಲ. ಜೀವನಾದರೋ ಬೇರೆಯ ಶರೀರದಲ್ಲಿ ಪ್ರವೇಶಿಸುತ್ತಾನೆ. ಆದುದರಿಂದ, ಯಾರೇ ಆಗಿರಲೊಲ್ಲರೇಕೆ? ಸಾಲ-ಮೊದಲಾದ ರೂಪಗಳಲ್ಲಿ ಅನ್ಯರ ಪದಾರ್ಥಗಳನ್ನು ತೆಗೆದುಕೊಂಡು, ಈ ಲೋಕದಲ್ಲಿ ಅನುಭವಿಸಿ, ಹಿಂದಿರುಗಿಸುವುದಿಲ್ಲವೋ. ಅವರು ನಿಶ್ಚಯವಾಗಿ ಪಾಪಿಗಳಾಗಿ, ಬೇರೆ ಜನ್ಮದಲ್ಲಿ ದುಃಖವೆಂಬ ನರಕವನ್ನು ಅನುಭವಿಸುತ್ತಾರೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. (೬)

ದೇಹದಿಂದ ಹೊರಟು ಜೀವನು ಬೇರೆಯ ಸ್ಥಾನಕ್ಕೆ, ಮತ್ತು ಬೇರೆಯ ಶರೀರಕ್ಕೆ ಪ್ರವೇಶಿಸುತ್ತಾನೆ ಮತ್ತು ಅವನಿಗೆ ಪೂರ್ವಜನ್ಮದ ಮತ್ತು ಸಂಸಾರ ಮೊದಲಾದುದರ ಜ್ಞಾನವು ಸ್ವಲ್ಪವೂ ಇರುವುದಿಲ್ಲ. ಆದುದರಿಂದ ಪುನಃ ಕುಟುಂಬಕ್ಕೆ ಬಂದು ಸಿಕ್ಕಿಕೊಳ್ಳುವುದಿಲ್ಲ. (೭)

ಅಹುದು; ಬ್ರಾಹ್ಮಣರು ಪ್ರೇತಕರ್ಮವನ್ನು ತಮ್ಮ ನಿರ್ವಾಹಕ್ಕಾಗಿ ಮಾಡಿಕೊಂಡಿದ್ದಾರೆ; ಆದರೆ, ವೇದೋಕ್ತವಲ್ಲದ ಕಾರಣ ಖಂಡನೀಯವಾಗಿದೆ. (೮)

ಈಗ ಹೇಳಿರಿ. ಚಾರವಾಕ ಮೊದಲಾದವರು ವೇದಗಳೇ ಮೊದಲಾದ ಸತ್ಯಶಾಸ್ತ್ರಗಳನ್ನು ನೋಡಿದ್ದರೆ, ಕೇಳಿದ್ದರೆ ಅಥವಾ ಓದಿದ್ದರೆ, ವೇದಗಳ ನಿಂದೆಯನ್ನು ಎಂದಿಗೂ ಮಾಡುತ್ತಿರಲಿಲ್ಲ. ವೇದಗಳನ್ನು ಭಂಡರು, ಧೂರ್ತರು ಹಾಗೂ ನಿಶಾಚರರಂತಹ ಜನರು ಬರೆದಿದ್ದಾರೆ-ಎಂಬ ವಚನವನ್ನು ಎಂದಿಗೂ ಉಚ್ಚರಿಸುತ್ತಿರಲಿಲ್ಲ. ಹೌದು; ಭಂಡರು, ಧೂರ್ತರು, ನಿಶಾಚರರುಗಳಂತೆ ಮಹೀಧರನೇ ಮೊದಲಾದ ಟೀಕಾಕಾರರು ಆಗಿದ್ದಾರೆ. ಧೂರ್ತತನ ಅವರದು; ವೇದಗಳದಲ್ಲ. ಆದರೆ, ಚಾರವಾಕರು, ಅಭಾಣಕರು, ಬೌದ್ಧರು ಮತ್ತು ಜೈನರುಗಳ ಮೇಲೆ, ಇವರು ನಾಲ್ಕು ಮೂಲ ವೇದ ಸಂಹಿತೆಗಳನ್ನೂ ಕೂಡ ಆಲಿಸಲಿಲ್ಲ; ನೋಡಲೂ ಇಲ್ಲ ಮತ್ತು ಯಾವನಾದರೂ ವಿದ್ವಾಂಸನ ಬಳಿ ಕಲಿಯಲೂ ಇಲ್ಲವಲ್ಲ - ಎಂದು ಮರುಕವುಂಟಾಗುತ್ತದೆ. ಇದೇ ಕಾರಣದಿಂದ ನಷ್ಟ-ಭ್ರಷ್ಟ-ಬುದ್ಧಿಯುಕ್ತರಾಗಿ ಯದ್ವಾತದ್ವಾ ವೇದಗಳ ನಿಂದೆ ಮಾಡಲಾರಂಭಿಸಿಬಿಟ್ಟರು! ದುಷ್ಟ ವಾಮಮಾರ್ಗಿಗಳ ಪ್ರಮಾಣಶೂನ್ಯವೂ, ಕಪೋಲಕಲ್ಪಿತವೂ ಆದ ಭ್ರಷ್ಟ ಟೀಕೆಗಳನ್ನು ನೋಡಿ, ವೇದಗಳಿಗೆ ವಿರೋಧಿಗಳಾಗಿ, ಅವಿದ್ಯೆಯೆಂಬ ಅಗಾಧಸಮುದ್ರದಲ್ಲಿ ಹೋಗಿ ಬಿದ್ದರು (೯).

ಆಯಿತಲ್ಲ; ಅಲೋಚಿಸಬೇಕು. ಸ್ತ್ರೀಯಿಂದ ಕುದುರೆಯ ಜನನೇಂದ್ರಿಯನ್ನು ಹಿಡಿಯಿಸಿ, ಅದರೊಂದಿಗೆ ಸಮಾಗಮ ಮಾಡಿಸುವುದು, ಮತ್ತು ಯಜಮಾನನ ಕನ್ಯೆಯೊಂದಿಗೆ ಅಶ್ಲೀಲವಾದ ಹಾಸ್ಯ ಮೊದಲಾದುವನ್ನು ಮಾಡುವುದು ವಾಮಮಾರ್ಗಿಗಳ ಹೊರತು ಬೇರೆ ಮಾನವರ ಕಾರ್ಯವಲ್ಲ. ಈ ಮಹಾಪಾಪಿಗಳಾದ ವಾಮಮಾರ್ಗಿಗಳ ಹೊರತು, ಭ್ರಷ್ಟವೂ, ವೇದಾರ್ಥಕ್ಕೆ ವಿರುದ್ಧವೂ ಆದ ಅಶುದ್ಧ ವ್ಯಾಖ್ಯಾನವನ್ನು ಮತ್ತಾವನು ಮಾಡುತ್ತಿದ್ದನು?[೧೪] ಅತ್ಯಂತ ಪರಿತಾಪವುಂಟಾಗುವುದು, ಯಾರು ಆಲೋಚನೆ ಮಾಡದೆ ವೇದಗಳ ನಿಂದೆಯನ್ನು ಮಾಡುವುದರಲ್ಲಿ ತತ್ಪರರಾದರೋ, ಅಂತಹ ಚಾರವಾಕ ಮೊದಲಾದವರ ಮೇಲೆಯೇ! ಸ್ವಲ್ಪವಾದರೂ ತಮ್ಮ ಬುದ್ಧಿಯನ್ನು ಉಪಯೋಗಿಸಬಹುದಾಗಿತ್ತು. ಏನು ತಾನೇ ಮಾಡಿಯಾರು

---

೧೪. ಮಹೀಧರನು ತನ್ನ ಯಜುರ್ವೇದ ಭಾಷ್ಯದಲ್ಲಿ 'ಗಣಾನಾಂ ತ್ವಾ ಗಣಪತಿಗಂ ಹವಾಮಹೇ' ಮೊದಲಾದ ಮಂತ್ರಗಳಿಗೆ ಹೀಗೆಯೇ ವ್ಯಾಖ್ಯೆ ಬರೆದಿದ್ದಾನೆ.

ಈ ಬಯಪಾಯಿಗಳು? ಸತ್ಯಾಸತ್ಯ ವಿಚಾರ ಮಾಡಿ, ಸತ್ಯದ ಮಂಡನವನ್ನೂ, ಅಸತ್ಯದ ಖಂಡನವನ್ನೂ ಮಾಡುವುದಕ್ಕೆ ಅವರಲ್ಲಿ ಇಷ್ಟು ವಿದ್ಯೆಯೇ ಇರಲಿಲ್ಲ! (೧೦).

ಮತ್ತು ಮಾಂಸಭಕ್ಷಣದ ವಿಷಯವೂ ಕೂಡ ಅದೇ ವಾಮಮಾರ್ಗೀಯ ಟೀಕಾಕಾರರ ಲೀಲೆಯಾಗಿದೆ. ಆದುದರಿಂದ, ಅವರನ್ನು ರಾಕ್ಷಸರೆನ್ನುವುದು ಉಚಿತವಾಗಿದೆ. ಆದರೆ ವೇದಗಳಲ್ಲಿ ಎಲ್ಲಿಯೂ ಮಾಂಸಭಕ್ಷಣವಿಧಾನವನ್ನು ಬರೆದಿಲ್ಲ. ಆದುದರಿಂದ, ಈ ಮೊದಲಾದ ಸುಳ್ಳು ಮಾತುಗಳ ಪಾಪವು ಆ ಟೀಕಾಕಾರರಿಗೂ ಮತ್ತು ಯಾರು ವೇದಗಳನ್ನು ಓದದೆ-ಕೇಳದೆ ಮನಬಂದಂತೆ ನಿಂದಿಸಿದ್ದಾರೋ, ಅವರಿಗೂ ನಿಃಸಂದೇಹವಾಗಿ ತಟ್ಟುವುದು. ಯಾರು ವೇದಗಳನ್ನು ವಿರೋಧಿಸಿದರೋ, ವಿರೋಧಿಸುತ್ತಾರೋ ಮತ್ತು ವಿರೋಧಿಸುವವರೋ, ಅವರು ಅವಶ್ಯವಾಗಿ ಅವಿದ್ಯೆಯೆಂಬ ಅಂಧಕಾರದಲ್ಲಿ ಬಿದ್ದು, ಸುಖಕ್ಕೆ ಬದಲು ಎಷ್ಟು ದಾರುಣವಾದ ದುಃಖವನ್ನು ಹೊಂದಿದರೂ, ಅಷ್ಟೇ ಕಡಿಮೆ-ಎನ್ನುವುದೇ ಸತ್ಯವಾಗಿದೆ. ಆದುದರಿಂದ, ಮಾನವಮಾತ್ರರು ವೇದಾನುಕೂಲವಾಗಿ ನಡೆದುಕೊಳ್ಳುವುದು ಸಮುಚಿತವಾಗಿದೆ.[೧೫] (೧೧).

ವಾಮಮಾರ್ಗಿಗಳು ಮಿಥ್ಯಾಕಪೋಲಕಲ್ಪನೆಯನ್ನು ಮಾಡಿಕೊಂಡು, ವೇದಗಳ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸುವುದಕ್ಕಾಗಿ, ಎಂದರೆ ಯಥೇಷ್ಟವಾಗಿ ಮದ್ಯಪಾನ, ಮಾಂಸಭಕ್ಷಣ ಹಾಗೂ ಪರಸ್ತ್ರೀಗಮನ ಮೊದಲಾದ ದುಷ್ಕರ್ಮಗಳ ಪ್ರವೃತ್ತಯಾಗುವುದಕ್ಕಾಗಿ ವೇದಗಳಿಗೆ ಕಳಂಕವನ್ನುಂಟು ಮಾಡಿದರು. ಈ ಮಾತುಗಳನ್ನೇ ನೋಡಿ ಚಾರವಾಕರು, ಬೌದ್ಧರು, ಜೈನರು, ವೇದಗಳ ನಿಂದೆಯನ್ನು ಮಾಡತೊಡಗಿದರು. ಮತ್ತು ಬೇರೆಯಾಗಿ ಒಂದು ವೇದವಿರುದ್ಧವೂ, ಅನೀಶ್ವರವಾದಿಯೂ, ನಾಸ್ತಿಕವೂ ಆದ ಮತವನ್ನು ಪ್ರಚಲಿತವಾಗಿ ಮಾಡಿಕೊಂಡರು. ಚಾರವಾಕರೇ ಮೊದಲಾದವರು ವೇದಗಳ ಮೂಲಾರ್ಥವನ್ನು ಆಲೋಚಿಸಿ ನೋಡಿದ್ದರೆ, ಮಿಥ್ಯಾಲೀಲೆಗಳನ್ನು ನೋಡಿ, ಸತ್ಯವಾದ ವೇದೋಕ್ತಮತವನ್ನು ಕೈಯಿಂದ ನುಸುಳಿ ಹೋಗಲು ಬಿಡುತ್ತಿದ್ದರಾದರೂ ಏಕೆ? ಮಾಡುವುದಾದರೂ ಏನು ಬಡಪಾಯಿಗಳು? **"ವಿನಾಶಕಾಲೇ ವಿಪರೀತ ಬುದ್ಧಿಃ"** – ಯಾವಾಗ ನಷ್ಟಭ್ರಷ್ಟನಾಗುವ ಕಾಲ ಬರುತ್ತದೋ, ಆಗ ಮಾನವನ ಬುದ್ಧಿ ತಲೆಕೆಳಗಾಗಿ ಹೋಗುತ್ತದೆ.

ಈಗ ಚಾರವಾಕ ಮೊದಲಾದವರಲ್ಲಿ ಭೇದವೇನಿದೆಯೋ, ಅದನ್ನು ಬರೆಯುತ್ತೇವೆ. ಈ ಚಾರವಾಕರೇ ಮೊದಲಾದವರು ಬಹಳ ವಿಷಯಗಳಲ್ಲಿ ಒಂದೇ ಆಗಿದ್ದಾರೆ. ಆದರೆ ಚಾರವಾಕನು ದೇಹದ ಉತ್ಪತ್ತಿಯೊಂದಿಗೆಯೇ ಜೀವೋತ್ಪತ್ತಿಯನ್ನೂ ಮತ್ತು ಅದರ ನಾಶದೊಂದಿಗೆಯೇ ಜೀವನ ನಾಶವನ್ನು ಕೂಡ ಅಂಗೀಕರಿಸುತ್ತಾನೆ. ಪುನರ್ಜನ್ಮ ಮತ್ತು ಪರಲೋಕವನ್ನು ಒಪ್ಪುವುದಿಲ್ಲ. ಒಂದು ಪ್ರತ್ಯಕ್ಷ ಪ್ರಮಾಣವನ್ನು ಬಿಟ್ಟು, ಅನುಮಾನವೇ ಮೊದಲಾದ ಪ್ರಮಾಣಗಳನ್ನೂ ಕೂಡ ಅಂಗೀಕರಿಸುವುದಿಲ್ಲ. ಚಾರವಾಕ-ಎಂಬ ಶಬ್ದಕ್ಕೆ ಪ್ರಗಲ್ಭನಾದ ವಾಗ್ಮಿಯೆಂದೂ ಮತ್ತು ವಿಶೇಷಾರ್ಥದಲ್ಲಿ ವೈತಂಡಿಕನೆಂದೂ ಅರ್ಥವಿದೆ. ಮತ್ತು ಬೌದ್ಧರೂ, ಜೈನರೂ ಪ್ರತ್ಯಕ್ಷ ಮೊದಲಾದ ನಾಲ್ಕು ಪ್ರಮಾಣಗಳನ್ನೂ, ಅನಾದಿ ಜೀವನನ್ನೂ, ಪುನರ್ಜನ್ಮವನ್ನೂ, ಪರಲೋಕವನ್ನೂ, ಮತ್ತು ಮುಕ್ತಿಯನ್ನೂ ಕೂಡ ಒಪ್ಪಿಕೊಳ್ಳುತ್ತಾರೆ. ಚಾರವಾಕ ಮತ್ತು ಬೌದ್ಧರ-ಜೈನರ ಮಧ್ಯೆಯಿರುವ ಭೇದವು ಇಷ್ಟೇ ಆಗಿದೆ. ಆದರೆ ನಾಸ್ತಿಕತ್ವ, ವೇದ-ಈಶ್ವರನಿಂದೆ, ಪರಮತದ್ವೇಷ, ಆರು ಕರ್ಮಗಳು, ಹಾಗೂ ಜಗತ್ಕರ್ತೃನಿರಾಕಾರಣ-ಈ ಮೊದಲಾದ ವಿಷಯಗಳಲ್ಲಿ ಎಲ್ಲರೂ ಏಕಮತರೇ ಆಗಿದ್ದಾರೆ. ಹೀಗೆ ಸಂಕ್ಷೇಪವಾಗಿ ಚಾರವಾಕ ಮತವನ್ನು ತೋರಿಸಿದ್ದೇವೆ.

## ಈಗ ಬೌದ್ಧ ಮತದ ವಿಷಯದಲ್ಲಿ ಸಂಕ್ಷೇಪವಾಗಿ ಬರೆಯುತ್ತೇವೆ

**ಕಾರ್ಯಾಕರಣಭಾವಾದ್ವಾ ಸ್ವಭಾವಾದ್ವಾ ನಿಯಾಮಕಾತ್ ।**

**ಅವಿನಾಭಾವನಿಯಮೋ ದರ್ಶನಾಂತರದರ್ಶನಾತ್** [೧೬] ॥

ಕಾರ್ಯಕಾರಣಭಾವದಿಂದ, ಎಂದರೆ-ಕಾರ್ಯದ ದರ್ಶನದಿಂದ ಕಾರಣದ ಮತ್ತು ಕಾರಣದ ದರ್ಶನದಿಂದ ಕಾರ್ಯ ಮೊದಲಾದುದರ ಸಾಕ್ಷಾತ್ಕಾರವು ಪ್ರತ್ಯಕ್ಷದಿಂದ ಆಗುತ್ತದೆ; ಉಳಿದುದರ ಬಗೆಗೆ ಅನುಮಾನ ಮಾಡಲ್ಪಡುತ್ತದೆ. ಇದು ಇಲ್ಲದೇ

---

೧೫. "ವೇದಗಳ ಹೆಸರನ್ನು ಹೇಳುತ್ತಾ ಅವುಗಳ ಬಗೆಗೆ ಬಾಯಲ್ಲಿ ಶ್ರದ್ಧೆ ತೋರಿಸುತ್ತಾ ವೇದ ವಿರುದ್ಧವಾದ ಪೌರಾಣಿಕ ಮಾನ್ಯತೆಗಳನ್ನು ಅಂಗೀಕರಿಸಿಕೊಂಡು, ಅವುಗಳನುಸಾರವಾಗಿ ತಮ್ಮ ಜೀವನ ವ್ಯವಹಾರಗಳನ್ನು ನಡೆಸಿಕೊಂಡು ಬರುತ್ತಿರುವವರಿಗೆ ಮಹರ್ಷಿ ದಯಾನಂದರ ಈ ಬುದ್ಧಿವಾದ ಸಾಲದೇ? ಕ್ರೈಸ್ತ-ಮುಸಲ್ಮಾನರಾದ ಮೇಲೆಯೇ ಪೌರಾಣಿಕ ಸಿದ್ಧಾಂತ-ವ್ಯವಹಾರಗಳನ್ನು ಬಿಡಬೇಕೇನು?

೧೬. ಇದೇ, ಮತ್ತು ಮುಂದಿನ ಬೌದ್ಧಸಿದ್ಧಾಂತಗಳನ್ನು ಸಾಯಣಾಚಾರ್ಯರ 'ಸರ್ವದರ್ಶನ ಸಂಗ್ರಹ'ದ ಆಧಾರದ ಮೇಲೆ ಬರೆಯಲಾಗಿದೆ. –ಯು.ಮೀ.

ಹೋದರೆ, ಪ್ರಾಣಧಾರಿಗಳ ಸಂಪೂರ್ಣ ವ್ಯವಹಾರಗಳು ಪೂರ್ಣವಾಗಲಾರವು – ಈ ಮೊದಲಾದ ಲಕ್ಷಣಗಳಿಂದ ಅನುಮಾನವನ್ನು ಅಧಿಕವಾಗಿ ಅಂಗೀಕರಿಸಿ, ಚಾರವಾಕರಿಂದ ಬೌದ್ಧರ ಬೇರೆ ಶಾಖೆ ಹೊರಟಿದೆ.

ನಾಲ್ಕು ವಿಧದ ಬೌದ್ಧರಿದ್ದಾರೆ–ಮೊದಲನೆಯದು 'ಮಾಧ್ಯಮಿಕ'; ಎರಡನೆಯದು 'ಯೋಗಾಚಾರ'; ಮೂರನೆಯದು 'ಸೌತ್ರಾಂತಿಕ' ಮತ್ತು ನಾಲ್ಕನೆಯದು 'ವೈಭಾಷಿಕ' ಎಂಬ ಪಂಗಡಗಳಿವೆ.

**"ಬುದ್ಧ್ಯಾನಿರ್ವರ್ತತೇ ಸ ಬೌದ್ಧಃ"** – ಯಾವುದು ಬುದ್ಧಿಯಿಂದ ಸಿದ್ಧವಾಗುತ್ತದೋ, ಎಂದರೆ ಯಾವ ಯಾವ ಮಾತು ತನ್ನ ಬುದ್ಧಿಗೆ ಅಂದುವುದೋ, ಆಯಾ ಮಾತನ್ನು ಒಪ್ಪಿಕೊಳ್ಳಬೇಕು ಮತ್ತು ಯಾವ ಯಾವದು ಬುದ್ಧಿಗೆ ಅಂದುವುದಿಲ್ಲರೋ, ಆಯಾಮಾತನ್ನು ಒಪ್ಪಿಕೊಳ್ಳಬಾರದು. (ಬುದ್ಧಿಪೂರ್ವಕವಾಗಿ ಸಿದ್ಧವಾದುದನ್ನೊಪ್ಪುವವನೇ ಬೌದ್ಧನು)

ಇವರಲ್ಲಿ ಮೊದಲನೆಯನಾದ ಮಾಧ್ಯಮಿಕನು ಸರ್ವಶೂನ್ಯವನ್ನು ಒಪ್ಪುತ್ತಾನೆ. ಎಂದರೆ, ಎಷ್ಟು ಪದಾರ್ಥಗಳಿವೆಯೋ, ಅವೆಲ್ಲವೂ ಶೂನ್ಯ; ಎಂದರೆ–ಆದಿಯಲ್ಲಿ ಇರುವುದಿಲ್ಲ; ಅಂತದಲ್ಲಿಯೂ ಇರುವುದಿಲ್ಲ. ಮಧ್ಯದಲ್ಲಿ ಯಾವುದು ಪ್ರತೀತವಾಗುತ್ತದೋ, ಅದೂ ಕೂಡ ಪ್ರತೀತವಾಗುವ ಸಮಯದಲ್ಲಿರುತ್ತದೆ; ಅನಂತರ ಶೂನ್ಯದಲ್ಲಿ ಲೀನವಾಗುತ್ತದೆ. ಹೇಗೆ ಗಡಿಗೆ ಉತ್ಪತ್ತಿಗಿಂತ ಮುನ್ನ ಇರುವುದಿಲ್ಲವೋ, ಪ್ರಧ್ವಂಸವಾದ ಮೇಲೆಯೂ ಇರುವುದಿಲ್ಲವೋ ಮತ್ತು ಗಡಿಗೆಯ ಅರಿವಿನ ಸಮಯದಲ್ಲಿ ತೋರುತ್ತದೋ ಮತ್ತು ಬೇರೆ ಒಂದು ಪದಾರ್ಥಕ್ಕೆ ಅರಿವು ಹೊರಳುವುದರಿಂದ ಗಡಿಗೆಯ ಅರಿವು ಇರುವುದಿಲ್ಲವೋ ಹಾಗೆಯೇ ಎಲ್ಲವೂ; ಆದುದರಿಂದ ಶೂನ್ಯವೇ ಏಕಮಾತ್ರ ತತ್ತ್ವವಾಗಿದೆ.

ಎರಡನೆಯ ವಿಧದ 'ಯೋಗಾಚಾರ' ಸಂಪ್ರದಾಯಸ್ಥನು 'ಬಾಹ್ಯಶೂನ್ಯ'ವೆಂದು ಅಂಗೀಕರಿಸುತ್ತಾನೆ. ಎಂದರೆ ಪದಾರ್ಥಗಳು ಒಳಗೆ ಜ್ಞಾನದಲ್ಲಿ ಭಾಸವಾಗುತ್ತವೆ; ಹೊರಗೆ ಅಲ್ಲ. ಉದಾಹರಣೆಗೆ, ಗಡಿಗೆಯ ಜ್ಞಾನ ಆತ್ಮನಲ್ಲಿದೆ; ಆಗಲೇ ಮಾನವನು "ಇದು ಗಡಿಗೆ" ಎನ್ನುತ್ತಾನೆ. ಒಳಗೆ ಜ್ಞಾನವಿಲ್ಲದಿದ್ದರೆ, ಹೇಳಲಾರನು–ಎಂದು ಒಪ್ಪುತ್ತಾನೆ.

ಮೂರನೆಯ ವಿಧದ 'ಸೌತ್ರಾಂತಿಕ' ಸಂಪ್ರದಾಯಸ್ಥನು ಹೊರಗೆ ಪದಾರ್ಥದ ಅನುಮಾನವನ್ನು ಸ್ವೀಕರಿಸುತ್ತಾನೆ. ಏಕೆಂದರೆ, ಹೊರಗೆ ಯಾವ ಪದಾರ್ಥವೂ ಸಾಂಗೋಪಾಂಗವಾಗಿ ಪ್ರತ್ಯಕ್ಷವಾಗುವುದಿಲ್ಲ, ಆದರೆ ಒಂದು ಬಾಗ ಪ್ರತ್ಯಕ್ಷವಾಗವುದರಿಂದ, ಉಳಿದುದರ ಅನುಮಾನ ಮಾಡಿಕೊಳ್ಳಲ್ಪಡುತ್ತದೆ–ಎಂಬುದು ಇವನ ಮತವಾಗಿದೆ.

ನಾಲ್ಕನೆಯ ವಿಧದವನು 'ವೈಭಾಷಿಕ' ಸಂಪ್ರದಾಯಸ್ಥನಾಗಿದ್ದಾನೆ. ಹೊರಗೆ ಪದಾರ್ಥ ಪ್ರತ್ಯಕ್ಷವಾಗುತ್ತದೆ; ಒಳಗೆ ಅಲ್ಲ–ಎನ್ನುವುದು ಅವನ ಮತವಾಗಿದೆ. ಉದಾಹರಣೆಗೆ "ಆಯಂ ನೀಲೋ ಘಟಃ" – ಎಂಬ ಈ ಪ್ರತೀತಿಯಲ್ಲಿ, ನೀಲಿಯ ಬಣ್ಣದ ಗಡಿಗೆಯ ಆಕೃತಿ ಹೊರಗೆ ಕಂಡುಬರುತ್ತದೆ. ಇವನು ಹೀಗೆ ಅಂಗೀಕರಿಸುತ್ತಾನೆ.

ಇವರ ಆಚಾರ್ಯನಾದ ಬುದ್ಧನು ಒಬ್ಬನೇ ಆದರೂ, ಶಿಷ್ಯರಲ್ಲಿ ಬುದ್ಧಿ ಭೇದದಿಂದ ನಾಲ್ಕು ಬಗೆಯ ಶಾಖೆಗಳಾಗಿವೆ. ಸೂರ್ಯಾಸ್ತವಾದಾಗ ಜಾರಪುರುಷನು ಪರನಾರೀಗಮನವನ್ನೂ ಮತ್ತು ವಿದ್ವಾಂಸನು ಸತ್ಯಭಾಷಣ–ಮೊದಲಾದ ಶ್ರೇಷ್ಠಕರ್ಮಗಳನ್ನೂ ಮಾಡುತ್ತಾರೆ. ಸಮಯವೇನೋ ಒಂದೇ; ಆದರೆ, ತಮ್ಮ ತಮ್ಮ ಬುದ್ಧಿಗನುಸಾರ ಬೇರೆ ಬೇರೆ ಚಟುವಟಿಕೆಗಳನ್ನು ನಡೆಯಿಸುತ್ತಾರೆ.[೧೭]

ಈಗ, ಈ ಮೇಲೆ ಹೇಳಿದ ನಾಲ್ವರಲ್ಲಿ ಮಾಧ್ಯಮಿಕನು ಎಲ್ಲವನ್ನೂ ಕ್ಷಣಿಕವೆಂದು ಒಪ್ಪುತ್ತಾನೆ. ಎಂದರೆ, ಕ್ಷಣಕ್ಷಣಕ್ಕೂ ಬುದ್ಧಿಯ ಪರಿಣಾಮಗಳಾಗುತ್ತಿರುವುದರಿಂದ, ಪೂರ್ವಾಕ್ಷಣದಲ್ಲಿ ತಿಳಿಯಲ್ಪಟ್ಟ ಯಾವ ವಸ್ತುವಿದ್ದಿತೋ, ಅದು ಹಾಗೆಯೇ ಎರಡನೆಯ ಕ್ಷಣದಲ್ಲಿರುವುದಿಲ್ಲ. ಆದುದರಿಂದ, ಎಲ್ಲವನ್ನೂ ಕ್ಷಣಿಕವೆಂದು ಒಪ್ಪಬೇಕು ಎಂದು ಅಂಗೀಕರಿಸುತ್ತಾನೆ.

ಎರಡನೆಯ ಪಂಗಡದ ಯೋಗಾಚಾರಸಂಪ್ರದಾಯಸ್ಥನು, ಏನೇನು ಪ್ರವೃತ್ತಿಯಿದೆಯೋ, ಅದೆಲ್ಲವೂ ದುಃಖರೂಪವೇ; ಏಕೆಂದರೆ–ಪ್ರಾಪ್ತಿಯಿಂದ ಸಂತುಷ್ಟನಾಗುವವನು ಯಾವನೂ ಇಲ್ಲ. ಒಂದರ ಪ್ರಾಪ್ತಿಯಾಗುವುದರಲ್ಲಿ, ಇನ್ನೊಂದರ ಇಚ್ಛೆ ಇದ್ದೇ ಇರುತ್ತದೆ–ಎಂದು ಅಂಗೀಕರಿಸುತ್ತಾನೆ.

---

೧೭. ಬೌದ್ಧದರ್ಶನ, ಪುಟ ೧೯ರಲ್ಲಿ ಈ ಉಪಮೆ ಕೊಡಲಾಗಿದೆ.

ಮೂರನೆಯ ಪಂಗಡದ ಸೌತ್ರಾಂತಿಕ ಸಂಪ್ರದಾಯಸ್ಥನು–"ಸಮಸ್ತ ಪದಾರ್ಥಗಳೂ ತಮ್ಮ ತಮ್ಮ ಲಕ್ಷಣಗಳಿಂದ ಗುರುತಿಸಲ್ಪಡುತ್ತವೆ. ಹೇಗೆ ಹಸುವಿನ ಚಿಹ್ನೆಗಳಿಂದ ಹಸುವೂ, ಮತ್ತು ಕುದುರೆಯ ಚಿಹ್ನೆಗಳಿಂದ ಕುದುರೆಯೂ ತಿಳಿದುಬರುತ್ತವೋ, ಹಾಗೆ ಲಕ್ಷಣಗಳು ಲಕ್ಷ್ಯದ (ಲಕ್ಷಣಗಳಿಂದ ತಿಳಿಯಲ್ಪಡುವ) ವಸ್ತುವಿನಲ್ಲಿ ಇರುತ್ತವೆ–ಎಂದು ಹೇಳುತ್ತಾನೆ.

ನಾಲ್ಕನೆಯ ಪಂಗಡದ ವೈಭಾಷಿಕ ಸಂಪ್ರದಾಯಸ್ಥನು ಶೂನ್ಯ ಒಂದೇ ಏಕ ಮಾತ್ರ ಪದಾರ್ಥವೆಂದು ಅಂಗೀಕರಿಸುತ್ತಾನೆ.

ಮೊದಲನೆಯವನಾದ ಮಾಧ್ಯಮಿಕನು ಎಲ್ಲವನ್ನೂ ಶೂನ್ಯವೆಂದು ಅಂಗೀಕರಿಸುತ್ತಿದ್ದನು. ಅವನ ಪಕ್ಷವೇ ವೈಭಾಷಿಕನದೂ ಆಗಿದೆ. ಈ ಮೊದಲಾದ ಬಹಳ ವಿವಾದಗಳೂ, ಪಕ್ಷಗಳೂ ಬೌದ್ಧರಲ್ಲಿವೆ. ಈ ರೀತಿ ನಾಲ್ಕು ಬಗೆಯ ಭಾವನೆಗಳನ್ನು ಅಂಗೀಕರಿಸುತ್ತಾರೆ.

**ಉತ್ತರ:–** ಎಲ್ಲವೂ ಶೂನ್ಯವಾಗಿದ್ದರೆ, ಶೂನ್ಯವನ್ನು ತಿಳಿಯುವವನು ಶೂನ್ಯವಾಗಿರಲಾರನು. ಮತ್ತು ಸರ್ವವೂ ಶೂನ್ಯವೇ ಆಗಿರುವುದಾದರೆ, ಶೂನ್ಯವು ಶೂನ್ಯವನ್ನು ತಿಳಿಯಲಾರದು. ಆದುದರಿಂದ, ಶೂನ್ಯವನ್ನು ತಿಳಿಯುವವನು ಮತ್ತು ತಿಳಿಯಲ್ಪಡುವ ವಸ್ತು ಈ ಎರಡು ಪದಾರ್ಥಗಳು ಸಿದ್ಧವಾಗುತ್ತವೆ. ಮತ್ತು ಯೋಗಾಚಾರ ಸಂಪ್ರದಾಯಸ್ಥನು ಬಾಹ್ಯಶೂನ್ಯತ್ವವನ್ನು ಒಪ್ಪಿಕೊಳ್ಳುತ್ತಾನೆಯಾದರೆ, ಪರ್ವತ ಅವನೊಳಗೆ ಇರಬೇಕು! ಪರ್ವತ ಒಳಗಿದೆ–ಎಂದು ಹೇಳುವನಾದರೆ, ಅವನ ಹೃದಯದಲ್ಲಿ ಪರ್ವತಕ್ಕೆ ಸಮಾನವಾದ ಅವಕಾಶವೆಲ್ಲಿದೆ? ಆದುದರಿಂದ, ಪರ್ವತ ಹೊರಗಿದೆ; ಮತ್ತು ಪರ್ವತದ ಜ್ಞಾನ ಆತ್ಮನಲ್ಲಿರುತ್ತದೆ. ಸೌತ್ರಾಂತಿಕ ಸಂಪ್ರದಾಯಸ್ಥನು ಯಾವ ಪದಾರ್ಥವನ್ನೂ ಪ್ರತ್ಯಕ್ಷವೆಂದು ಒಪ್ಪದಿರುವನಾದರೆ, ಸ್ವತಃ ಅವನೂ ಮತ್ತು ಅವನ ವಚನವೂ ಕೂಡ ಅನುಮಾನದಿಂದ ಗ್ರಾಹ್ಯವಾಗಿರಬೇಕು; ಪ್ರತ್ಯಕ್ಷವಲ್ಲ. ಪ್ರತ್ಯಕ್ಷವಲ್ಲದಿರುವಾಗ– "ಅಯಂ ಘಟಃ"– "ಇದು ಮಡಿಕೆ" ಎಂಬ ಪ್ರಯೋಗವಾಗಬಾರದು; "ಅಯಂ ಘಟೈಕ ದೇಶಃ"–"ಇದು ಗಡಿಗೆಯ ಒಂದು ಭಾಗ"– ಎನ್ನಬೇಕು ಮತ್ತು ಒಂದು ಬಾಗದ ಹೆಸರು ಗಡಿಗೆಯಲ್ಲ; ಆದರೆ ಎಲ್ಲದರ ಸಮುದಾಯದ ಹೆಸರು ಗಡಿಗೆ–ಎಂಬುದು. "ಇದು ಗಡಿಗೆ" ಎನ್ನುವುದು ಪ್ರತ್ಯಕ್ಷ; ಅನುಮಾನದಿಂದ ಗ್ರಾಹ್ಯವಾಗುವುದಿಲ್ಲ. ಏಕೆಂದರೆ ಸಮಸ್ತ ಅವಯವಗಳಲ್ಲಿರುವುದು ಒಂದು ಅವಯವಿಯೇ; ಅದರ ಪ್ರತ್ಯಕ್ಷವಾಗುವುದರಿಂದ ಗಡಿಗೆಯ ಸಮಸ್ತ ಅವಯವಗಳೂ ಕೂಡ ಪ್ರತ್ಯಕ್ಷವಾಗುತ್ತವೆ. ಎಂದರೆ ಅವಯವಸಹಿತವಾದ ಘಟ ಅಥವಾ ಗಡಿಗೆ ಪ್ರತ್ಯಕ್ಷವಾಗುತ್ತದೆ. ನಾಲ್ಕನೆಯವನಾದ ವೈಭಾಷಿಕನು ಬಾಹ್ಯ ಪದಾರ್ಥಗಳನ್ನು ಪ್ರತ್ಯಕ್ಷವೆಂದು ಒಪ್ಪುತ್ತಾನೆ. ಅದೂ ಕೂಡ ಸರಿಯಲ್ಲ. ಏಕೆಂದರೆ, ಎಲ್ಲಿ ಜ್ಞಾತೃವೂ ಇರುತ್ತಾನೋ, ಜ್ಞಾನವೂ ಇರುತ್ತದೋ ಅಲ್ಲಿಯೇ ಪ್ರತ್ಯಕ್ಷವಾಗುತ್ತದೆ. ಪ್ರತ್ಯಕ್ಷದ ವಿಷಯ ಹೊರಗೆ ಇರುತ್ತದಾದರೂ, ಅದೇ ಕಾರಣದ ಜ್ಞಾನ ಆತ್ಮನಿಗಾಗುತ್ತದೆ. ಹಾಗೆಯೇ ಪದಾರ್ಥ ಕ್ಷಣಿಕವಾಗಿದ್ದು, ಅದರ ಜ್ಞಾನವೂ, ಕ್ಷಣಿಕವಾಗಿದ್ದರೆ, "ಪ್ರತ್ಯಭಿಜ್ಞಾ" – ಎಂದರೆ 'ನಾನು ಆ ಮಾತನ್ನಾಡಿದ್ದೆನು' – ಎಂಬ ಸ್ಮರಣ ಆಗಬಾರದು. ಆದರೆ ಮುನ್ನ ನೋಡಿದುದರ–ಆಲಿಸಿದುದರ ಸ್ಮರಣ ಉಂಟಾಗುತ್ತದೆ. ಆದುದರಿಂದ ಕ್ಷಣಿಕವಾದವೂ ಸರಿಯಲ್ಲ. ಏಕೆಂದರೆ, ಎಲ್ಲವೂ ದುಃಖವೇ ಆಗಿದ್ದರೆ ಮತ್ತು ಸುಖವು ಸ್ವಲ್ಪವೂ ಇಲ್ಲದೇ ಹೋಗಿದ್ದರೆ, ಸುಖದ ಅಪೇಕ್ಷೆಯಿಲ್ಲದೆ ದುಃಖವು ಸಿದ್ಧವಾಗುವುದಿಲ್ಲ. ಉದಾಹರಣೆಗೆ–ರಾತ್ರಿಯ ಅಪೇಕ್ಷೆಯಿಂದ ಹಗಲು ಮತ್ತು ಹಗಲಿನ ಅಪೇಕ್ಷೆಯಿಂದ ರಾತ್ರಿಯುಂಟಾಗುತ್ತದೆ. ಆದುದರಿಂದ, ಎಲ್ಲವೂ ದುಃಖವೇ ಎಂದಂಗೀಕರಿಸುವುದು ಸರಿಯಲ್ಲ. ಸ್ವಲಕ್ಷಣವನ್ನು ಮಾತ್ರ ಅಂಗೀಕರಿಸುವಿರಾದರೆ, ನೇತ್ರವು ರೂಪದ ಲಕ್ಷಣವೆಂದಾದೀತು ಮತ್ತು ರೂಪವು ಲಕ್ಷ್ಯವಾದೀತು. ಗಡಿಗೆಯ ರೂಪವು, ಗಡಿಗೆಯ ರೂಪದ ಲಕ್ಷಣವಾದ ಚಕ್ಷುವಿನಿಂದ ಬೇರೆಯಾಗಿದೆ. ಮತ್ತು ಗಂಧವು ಪೃಥ್ವಿಯಿಂದ ಅಭಿನ್ನವಾಗಿದೆ. ಇದೇ ರೀತಿ, ಬೇರೆಯಾದುದೂ, ಬೇರೆಯಲ್ಲದುದೂ ಆದ ಲಕ್ಷ್ಯ– ಲಕ್ಷಣಗಳನ್ನು ಅಂಗೀಕರಿಸಬೇಕು. ಶೂನ್ಯದ ವಿಷಯದಲ್ಲಿ ಮೊದಲು ಯಾವ ಉತ್ತರವನ್ನು ಕೊಟ್ಟಿದ್ದೇವೋ, ಅದು ಎಂದರೆ–ಶೂನ್ಯದ ಜ್ಞಾತೃವು ಶೂನ್ಯದಿಂದ ಭಿನ್ನನಾಗಿರುತ್ತಾನೆ ಎನ್ನುವುದು ಸರಿ.

**ಸರ್ವಸ್ಯ ಸಂಸಾರಸ್ಯ ದುಃಖಾತ್ಮ ಕತ್ವಂ ಸರ್ವತೀರ್ಥಂಕರಸಮ್ಮತಂ ॥** (ಸರ್ವದರ್ಶನ ಸಂಗ್ರಹ)

ಯಾರನ್ನು ಬೌದ್ಧರು ತೀರ್ಥಂಕರರೆಂದು ಅಂಗೀಕರಿಸುತ್ತಾರೋ, ಅವರನ್ನೇ ಜೈನರೂ ಅಂಗೀಕರಿಸುತ್ತಾರೆ. ಅದೇ ಕಾರಣದಿಂದ ಇವರಿಬ್ಬರೂ ಒಂದೇ ಆಗಿದ್ದಾರೆ.[೧೮] ಮತ್ತು ಮೊದಲು ಹೇಳಿದ ಭಾವನಾಚತುಷ್ಟಯದಿಂದ, ಎಂದರೆ ನಾಲ್ಕು ಭಾವನೆಗಳಿಂದ ಸಕಲ ವಾಸನೆಗಳ ನಿವೃತ್ತಿಯಾಗುವುದರಿಂದ ಶೂನ್ಯವಾಗುವುದೇ ನಿರ್ವಾಣ, ಎಂದರೆ ಮುಕ್ತಿಯೆಂದು

---

೧೮. ಇಂತಹ ಅನೇಕ ಸಿದ್ಧಾಂತಗಳ ಐಕ್ಯತೆಯಿಂದ, ಮಹರ್ಷಿದಯಾನಂದರು ಜೈನ–ಬೌದ್ಧ ಮತಗಳನ್ನು ಒಂದೇ ಎಂದು ಎಣಿಸಿದ್ದಾರೆ.

ಅಂಗೀಕರಿಸುತ್ತಾರೆ. ತಮ್ಮ ಶಿಷ್ಯರಿಗೆ ಯೋಗಾಚಾರದ ಉಪದೇಶವನ್ನು ಮಾಡುತ್ತಾರೆ. ಗುರುವಿನ ವಚನವನ್ನು ಪ್ರಮಾಣವೆಂದು ಗ್ರಹಿಸಬೇಕು. ಅನಾದಿಯಾದ ಬುದ್ಧಿಯಲ್ಲಿ ವಾಸನೆಯುಂಟಾಗುವುದರಿಂದ ಬುದ್ಧಿಯೇ ಅನೇಕಾಕಾರವಾಗಿ ತೋರುತ್ತದೆ. ಅವುಗಳಲ್ಲಿ ಪ್ರಥಮ ಸ್ಕಂದ:-

**ರೂಪವಿಜ್ಞಾನವೇದನಾಸಂಜ್ಞಾಸಂಸ್ಕಾರಸಂಜ್ಞಕಃ ॥** (ಸರ್ವದರ್ಶನ ಸಂಗ್ರಹ, ಬೌದ್ಧದರ್ಶನ)

ಮೊದಲನೆಯದು, ಇಂದ್ರಿಯಗಳಿಂದ ಯಾವ ರೂಪವೇ ಮೊದಲಾದ ವಿಷಯಗಳು ಗ್ರಹಿಸಲ್ಪಡುತ್ತವೋ, ಅದು **'ರೂಪಸ್ಕಂಧ'**. ಎರಡನೆಯದು ಆಲಯವಿಜ್ಞಾನ, ಎಂದರೆ ಪ್ರವೃತ್ತವಾದುದನ್ನು ತಿಳಿದುಕೊಳ್ಳುವುದು ಎಂಬ ವ್ಯವಹಾರವನ್ನು **'ವಿಜ್ಞಾನಸ್ಕಂದ'** ಎಂದೂ, ಮೂರನೆಯದು ರೂಪಸ್ಕಂಧ ಮತ್ತು ವಿಜ್ಞಾನಸ್ಕಂಧಗಳಿಂದ ಉತ್ಪನ್ನವಾದ ಸುಖ-ದುಃಖ ಮೊದಲಾದ ಪ್ರತೀತಿ - ಎಂಬ ವ್ಯವಹಾರವನ್ನು **'ವೇದನಾಸ್ಕಂದ'** ಎಂದೂ, ನಾಲ್ಕನೆಯದು ಗೋವು ಮೊದಲಾದ ಸಂಜ್ಞೆಗಳ ಸಂಬಂಧವನ್ನು ಆಯಾ ನಾಮಕಗಳೊಂದಿಗೆ ಅಂಗೀಕರಿಸುವುದೆಂಬ ವ್ಯವಹಾರವನ್ನು **'ಸಂಜ್ಞಾ-ಸ್ಕಂಧ'**ವೆಂದೂ, ಐದನೆಯದು, ವೇದನಾಸ್ಕಂಧದಿಂದ ಉದಿಸುವ ರಾಗ-ದ್ವೇಷ ಮೊದಲಾದ ಕ್ಲೇಶಗಳ, ಹಾಗೂ ಹಸಿವು, ಬಾಯಾರಿಕೆ-ಮೊದಲಾದ ಉಪಕ್ಲೇಶಗಳ, ಮದ, ಪ್ರಮಾದ, ಅಭಿಮಾನ, ಧರ್ಮ ಮತ್ತು ಅಧರ್ಮವೆಂಬ ವ್ಯವಹಾರವನ್ನು ಸಂಸ್ಕಾರ-ಸ್ಕಂಧವೆಂದೂ ಅಂಗೀಕರಿಸುತ್ತಾರೆ. ಬೌದ್ಧರು ಸಮಸ್ತ ಜಗತ್ತೂ ದುಃಖಮಯ; ದುಃಖದ ಮನೆ; ದುಃಖದ ಸಾಧನ. ಈ ಭಾವನೆಯನ್ನು ಮಾಡಿಕೊಂಡು ಜಗತ್ತಿನಿಂದ ಬಿಡುಗಡೆ ಹೊಂದಬೇಕು-ಎಂದು ಭಾವಿಸುತ್ತಾರೆ. ಚಾರವಾಕರಲ್ಲಿ ಈ ಎಲ್ಲವುಗಳೊಂದಿಗೆ "ಮುಕ್ತಿಯಿಲ್ಲ. ಮತ್ತು ಅನುಮಾನಗ್ರಾಹ್ಯವಲ್ಲ; ಹಾಗೂ ಜೀವನಿಲ್ಲ". ಎಂದಿಷ್ಟು ವೈಶಿಷ್ಟ್ಯವಿದೆ.

**ದೇಶನಾ ಲೋಕನಾಥಾನಾಂ ಸತ್ತ್ವಾಶಯವಶಾನುಗಾಃ ।**

**ಭಿದ್ಯಂತೇ ಬಹುಧಾ ಲೋಕೇ ಉಪಾಯೈರ್ಬಹುಭಿಃ ಕಿಲ ॥ ೧ ॥**

**ಗಂಭೀರೋತ್ತಾನಭೇದೇನ ಕ್ವಚಿಚ್ಚೋಭಯಲಕ್ಷಣಾ ।**

**ಭಿನ್ನಾ ಹಿ ದೇಶನಾ ಭಿನ್ನಾ ಶೂನ್ಯತಾದ್ವಯಲಕ್ಷಣಾ ॥ ೨ ॥**

**ಅರ್ಥಾನುಪಾರ್ಜ್ಯ ಬಹುಶೋ ದ್ವಾದಶಾಯತನಾನಿ ವೈ ।**

**ಪರಿತಃ ಪೂಜನೀಯಾನಿ ಕಿಮನ್ಯೈರಿಹ ಪೂಜಿತೈಃ ॥ ೩ ॥**

**ಜ್ಞಾನೇಂದ್ರಿಯಾಣಿ ಪಂಚೈವ ತಥಾ ಕರ್ಮೇಂದ್ರಿಯಾಣಿ ಚ ।**

**ಮನೋ ಬುದ್ಧಿರಿತಿ ಪ್ರೋಕ್ತಂ ದ್ವಾದಶಾಯತನಂ ಬುಧೈಃ ॥ ೪ ॥** (ಸರ್ವದರ್ಶನಸಂಗ್ರಹ)

ಯಾರು ಜ್ಞಾನಿಗಳೂ, ವಿರಕ್ತನೂ, ಜೀವನ್ಮುಕ್ತರೂ, ಲೋಕಗಳಿಗೆ ನಾಥರೂ ಆಗಿರುತ್ತಾರೋ, ಅಂತಹ ಬುದ್ಧನೇ ಮೊದಲಾದ ತೀರ್ಥಂಕರರಿಂದ ಉಕ್ತವಾದ, ಪದಾರ್ಥಗಳ ಸ್ವರೂಪವನ್ನು ತಿಳಿದಿರುವ, ಬೇರೆ ಬೇರೆ ವಸ್ತುಗಳ ಉಪದೇಶಕನು, ಬಹು ವಿಧದ ಭೇದಗಳಿಂದಲೂ ಮತ್ತು ಬಹಳ ಉಪಾಯಗಳಿಂದಲೂ ಉಪದೇಶಿಸಿರುವುದನ್ನು ಅಂಗೀಕರಿಸಬೇಕು. (೧)

ಬಹಳ ಗಂಭೀರವಾಗಿಯೂ, ಮತ್ತು ಪ್ರಸಿದ್ಧವಾದ ಭೇದದೊಂದಿಗೂ, ಒಂದೊಂದೆಡೆ ಗುಪ್ತವಾಗಿಯೂ ಮತ್ತು ಪ್ರಕಟರೂಪದಲ್ಲಿಯೂ, ನಾವು ಈ ಮುನ್ನ ಹೇಳಿಬಂದಿರುವ, ಶೂನ್ಯವನ್ನೇ ಲಕ್ಷಣವಾಗಿ ಹೊಂದಿರುವ ಯಾವ ಉಪದೇಶಗಳು ಬೇರೆ ಬೇರೆ ಗುರುಗಳದು ಇವೆಯೋ, ಅವುಗಳನ್ನು ಅಂಗೀಕರಿಸಬೇಕು. (೨)

ದ್ವಾದಶಾಯತನ ಪೂಜೆ ಯಾವುದಿದೆಯೋ, ಅದೇ ಮೋಕ್ಷವನ್ನು ಸಾಧಿಸಿಕೊಡುವಂತಹುದಾಗಿದೆ. ಆ ಪೂಜೆಗಾಗಿ ಬಹಳ ದ್ರವ್ಯ-ಮೊದಲಾದ ಪದಾರ್ಥಗಳನ್ನು ಸಂಪಾದಿಸಿ, ದ್ವಾದಶಾಯತನಗಳನ್ನು, ಎಂದರೆ ಹನ್ನೆರಡು ಬಗೆಯ ಸ್ಥಾನ-ವಿಶೇಷಗಳನ್ನು ನಿರ್ಮಿಸಿ, ಎಲ್ಲ ರೀತಿಯಿಂದಲೂ ಪೂಜಿಸಬೇಕು. ಬೇರೆಯದರ ಪೂಜೆ ಮಾಡುವುದರಿಂದ ಪ್ರಯೋಜನವೇನು? (೩).

ಇವರ ದ್ವಾದಶಾಯತನ ಪೂಜೆಯಿದು:- ಐದು ಜ್ಞಾನೇಂದ್ರಿಯಗಳು - ಎಂದರೆ, ಶ್ರೋತ್ರ, ತ್ವಚಾ, ಚಕ್ಷು, ಜಿಹ್ವೆ ಮತ್ತು ನಾಸಿಕ; ಪಂಚಕರ್ಮೇಂದ್ರಿಯಗಳು ಎಂದರೆ, ವಾಣಿ, ಕೈ, ಕಾಲು, ಗುದಾ ಮತ್ತು ಉಪಸ್ಥ - ಈ ಹತ್ತು ಇಂದ್ರಿಯಗಳ ಮತ್ತು

ಮನಸ್ಸು ಹಾಗೂ ಬುದ್ಧಿ – ಇವುಗಳನ್ನೇ ಸತ್ಕರಿಸುವುದು, ಅಂದರೆ, ಇವುಗಳನ್ನು ಆನಂದದಲ್ಲಿ ಪ್ರವೃತ್ತವಾಗಿಟ್ಟುಕೊಳ್ಳುವುದು – ಮೊದಲಾದುದು ಬೌದ್ಧಮತವಾಗಿದೆ. (೪)

**ಉತ್ತರ:–** ಸಮಸ್ತ ಜಗತ್ತೂ ದುಃಖರೂಪವೇ ಆಗಿದ್ದರೆ, ಯಾವ ಜೀವನಿಗೂ ಪ್ರವೃತ್ತಿಯೇ ಆಗಬಾರದು. ಜಗತ್ತಿನಲ್ಲಿ ಜೀವನ ಪ್ರವೃತ್ತಿ ಪ್ರತ್ಯಕ್ಷವಾಗಿ ಕಾಣಿಸುತ್ತದೆ. ಆದುದರಿಂದ ಸಮಸ್ತ ಜಗತ್ತೂ ದುಃಖರೂಪವಾಗಿರಲಾರದು. ಆದರೆ, ಇದರಲ್ಲಿ ಸುಖ–ದುಃಖ ಎರಡೂ ಇವೆ. ಮತ್ತು ಬೌದ್ಧರು ಈ ವಿಧದ ಸಿದ್ಧಾಂತವನ್ನೇ ಒಪ್ಪುವರಾದರೆ, ಅನ್ನ–ಪಾನಗಳ ಸೇವನದಲ್ಲಿ ಹಾಗೂ ಪಥ್ಯ ಮತ್ತು ಔಷಧಿಗಳನ್ನು ಸೇವಿಸಿ ಶರೀರರಕ್ಷಣೆ ಮಾಡಿಕೊಳ್ಳುವುದರಲ್ಲಿ ಪ್ರವೃತ್ತರಾಗಿ ಸುಖವನ್ನೇಕೆ ಅಂಗೀಕರಿಸುತ್ತಾರೆ? "ನಾವು ಪ್ರವೃತ್ತರೇನೋ ಆಗುತ್ತೇವೆ; ಆದರೆ, ಇದನ್ನು ದುಃಖವೆಂದೇ ಗ್ರಹಿಸುತ್ತೇವೆ".– ಎನ್ನುವರಾದರೆ, ಈ ಕಥನ ಸಂಭವವೇ ಅಲ್ಲ. ಏಕೆಂದರೆ–ಜೀವನು ಸುಖವೆಂದರಿತು ಪ್ರವೃತ್ತನೂ ದುಃಖವೆಂದರಿತು ನಿವೃತ್ತನೂ ಆಗುತ್ತಾನೆ. ಜಗತ್ತಿನಲ್ಲಿ ಧರ್ಮ, ಕ್ರಿಯೆ, ವಿದ್ಯೆ, ಸತ್ಸಂಗ–ಮೊದಲಾದ ಶ್ರೇಷ್ಠ ವ್ಯವಹಾರಗಳೆಲ್ಲವೂ ಸುಖಕಾರಕವಾಗಿರುತ್ತವೆ. ಬೌದ್ಧರನ್ನು ಬಿಟ್ಟು ಯಾವನೇ ವಿದ್ವಾಂಸನೂ ಇವನ್ನು ದುಃಖದ ಕುರುಹೆಂದು ಒಪ್ಪಲಾರನು. ಯಾವ ಪಂಚಸ್ಕಂಧಗಳಿವೆಯೋ, ಅವೂ ಕೂಡ ಪೂರ್ಣತಃ ಅಪೂರ್ಣವಾಗಿವೆ. ಏಕೆಂದರೆ, ಈ ಬಗೆಯ ಸ್ಕಂದಗಳನ್ನು ಆಲೋಚಿಸತೊಡಗಿದರೆ, ಒಂದೊಂದರಲ್ಲಿಯೂ ಅನೇಕ ಭೇದಗಳು ಆಗಬಲ್ಲವು.

ತೀರ್ಥಂಕರರನ್ನು ಉಪದೇಶಕರು ಹಾಗೂ ಲೋಕನಾಥರು ಎಂದೂ ಅಂಗೀಕರಿಸುತ್ತಾರೆ ಮತ್ತು ಯಾವನು ನಾಥರಿಗೂ ನಾಥನಾಗಿದ್ದಾನೋ, ಆ ಅನಾದಿಯಾದ ಪರಮಾತ್ಮನನ್ನು ಅಂಗೀಕರಿಸುವುದಿಲ್ಲ. ಹಾಗಾದರೆ, ಆ ತೀರ್ಥಂಕರರು ಉಪದೇಶವನ್ನು ಯಾವನಿಂದ ಪಡೆದರು? ಸ್ವತಃ (ಉಪದೇಶ) ಪ್ರಾಪ್ತವಾಯಿತು–ಎನ್ನುವರಾದರೆ, ಇಂತಹ ಕಥನ ಸಂಭವವಲ್ಲ. ಏಕೆಂದರೆ, ಕಾರಣವಿಲ್ಲದೆ ಕಾರ್ಯವಾಗಲಾರದು. ಅಥವಾ,ಅವರ ಹೇಳಿಕೆಗೆ ಅನುಸಾರವಾಗಿ ಹೀಗೆಯೇ ಆಗುವುದಾಗಿದ್ದರೆ, ಈಗಲೂ ಕೂಡ ಅವರಲ್ಲಿ ಓದದೆ–ಓದಿಸದೆ, ಕೇಳದೆ–ಕೇಳಿಸದೆ ಮತ್ತು ಜ್ಞಾನಿಗಳ ಸತ್ಸಂಗವನ್ನು ಮಾಡದೆ, ಜ್ಞಾನಿಗಳಾಗಿ ಹೋಗುವುದಿಲ್ಲವೇಕೆ? ಆಗುವುದಿಲ್ಲವೆಂದಾಗ, ಇಂತಹ ಕಥನ ಸರ್ವಥಾ ನಿರ್ಮೂಲ ಮತ್ತು ಯುಕ್ತಿಶೂನ್ಯ; ಸನ್ನಿಪಾತಜ್ವರಗ್ರಸ್ತನ ಅಸಂಗತ ಪ್ರಲಾಪದಂತಿದೆ.

ಬೌದ್ಧರ ಉಪದೇಶವು ಶೂನ್ಯರೂಪವೇ ಆದ ಅದ್ವೈತವಾಗಿದ್ದರೆ,[೧೯] ಇರುವಂತಹ ವಸ್ತು ಶೂನ್ಯರೂಪವೆಂದಿಗೂ ಆಗಲಾರದು. ಹೌದು; ಸೂಕ್ಷ್ಮವಾದ ಕಾರಣರೂಪವೇನೋ ಆಗುತ್ತದೆ. ಆದುದರಿಂದ ಆ ಕಥನವೂ ಕೂಡ ಭ್ರಮರೂಪವೇ ಆಗಿದೆ. ದ್ರವ್ಯೋಪಾರ್ಜನದಿಂದಲೇ ಮಾಡುವ, ಪೂರ್ವೋಕ್ತದ್ವಾದಶಾಯತನ ಪೂಜೆ ಮೋಕ್ಷದ ಸಾಧನವೆಂದು ಅಂಗೀಕರಿಸುವಿರಾದರೆ, ದಶಪ್ರಾಣಗಳ ಮತ್ತು ಹನ್ನೊಂದನೆಯವನಾದ ಜೀವಾತ್ಮನ ಪೂಜೆಯನ್ನೇಕೆ ಮಾಡುವುದಿಲ್ಲ? ಇಂದ್ರಿಯಗಳ ಮತ್ತು ಅಂತಃಕರಣದ ಪೂಜೆಯೂ ಮೋಕ್ಷವೆನ್ನುವಾಗ, ಈ ಬೌದ್ಧರಿಗೂ, ಬೇರೆ ವಿಷಯಲಂಪಟರಿಗೂ ವ್ಯತ್ಯಾಸವೇನುಳಿಯಿತು? ಅವುಗಳಿಂದ ಈ ಬೌದ್ಧರು ದೂರ ಉಳಿಯಲಾರದೇ ಹೋದರೆ, ಅಲ್ಲಿ ಮುಕ್ತಿಯಾದರೂ ಎಲ್ಲಿ ಉಳಿಯಿತು? ಇಂತಹ ವಿಷಯಗಳಿರುವೆಡೆ ಮುಕ್ತಿಗೇನು ಕೆಲಸ? ಯಾವುದಕ್ಕೆ ಸದೃಶವಾದುದು ಇದೊಂದನ್ನುಳಿದರೆ ಬೇರೆ ಯಾವುದೂ ಇರಲು ಶಕ್ಯವಲ್ಲವೋ, ಅಂತಹ ತಮ್ಮ ಅವಿದ್ಯೆಯ ಉನ್ನತಿಯನ್ನು ಈ ಬೌದ್ಧರು ಎಷ್ಟೊಂದು ಸಾಧಿಸಿದ್ದಾರೆ!

ವೇದಗಳನ್ನೂ, ಈಶ್ವರನನ್ನೂ ವಿರೋಧಿಸಿದುದಕ್ಕೆ ಇದೇ ಫಲ ಇವರಿಗೆ ಸಿಕ್ಕಿದೆ–ಎಂದೇ ನಿಶ್ಚಯವಾಗುತ್ತದೆ. ಮೊದಲೇನೋ ಸಮಸ್ತ ಜಗತ್ತೂ ದುಃಖರೂಪವೆಂದೇ ಭಾವಿಸಿದರು. ಮತ್ತು ನಡುವೆ ದ್ವಾದಶಾಯತನ ಪೂಜೆಯನ್ನು ತೂರಿಸಿಬಿಟ್ಟರು. ಮುಕ್ತಿಪ್ರದವಾಗುವುದಕ್ಕೆ, ಇವರ ದ್ವಾದಶಾಯತನಪೂಜೆ ಜಗತ್ತಿನ ಪದಾರ್ಥಗಳಿಂದ ಹೊರಗಿನದಾಗಿದೆಯೇನು? ಅಲ್ಲ, ಎಂದಾದರೂ ಕಣ್ಣನ್ನು ಮುಚ್ಚಿಕೊಂಡು ಯಾವನಾದರೂ ರತ್ನವನ್ನು ಹುಡುಕಲಿಚ್ಛಿಸಿದರೆ, ಅಥವಾ ಹುಡುಕಿದರೆ,

೧೯. ನವೀನ ವೇದಾಂತದ ಆದ್ಯ ಪ್ರವರ್ತಕರಾದ ಶಂಕರಾಚಾರ್ಯರ ಗುರುಗಳ ಗುರುಗಳಾದ ಗೌಡಪಾದಾಚಾರ್ಯರ ಮೇಲೆ ಬೌದ್ಧ ಮತದ ವಿಶೇಷ ಪ್ರಭಾವವಿತ್ತು. ಬೌದ್ಧರ ಶೂನ್ಯವಾದಕ್ಕೆ ಗೌಡಪಾದಾಚಾರ್ಯರು ವೈದಿಕ ಸ್ವರೂಪವನ್ನಿತ್ತು, ಅದ್ವೈತವಾದವನ್ನು ಸ್ಥಾಪಿಸಿದ್ದರು. ಅವರ 'ಮಾಂಡೂಕ್ಯ ಕಾರಿಕಾ' ಗ್ರಂಥದಲ್ಲಿ ಪಠಿತವಾದ ಅನೇಕ ಕಾರಿಕಾಂಶಗಳು ಬೌದ್ಧ ಗ್ರಂಥಗಳಲ್ಲಿ ಶಬ್ದತಃ ಅಥವಾ ಅರ್ಥತಃ ಉಪಲಬ್ಧವಾಗುತ್ತವೆ. ಇಷ್ಟೇ ಅಲ್ಲ. ಬೌದ್ಧ ಗ್ರಂಥಗಳಲ್ಲಿ ಬುದ್ಧನಿಗಾಗಿ ಪ್ರಯುಕ್ತವಾದ ' ದ್ವಿಪದಾಂವರಃ' 'ತಥಾಗತಃ' ಎಂಬಂತಹ ಶಬ್ದಗಳ ನಿರ್ದೇಶವೂ ಸಿಕ್ಕುತ್ತದೆ.

ಶಂಕರಾಚಾರ್ಯರ ಟೀಕೆಯನ್ನು ಬಿಟ್ಟು ಬಿಟ್ಟರೆ, ಗೌಡಾಪಾದಚಾರ್ಯರಿಗೆ ಬುದ್ಧನ ಮೇಲೆ ವಿಶೇಷ ಭಕ್ತಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ, ವಿಜ್ಞಾನ ಭಿಕ್ಷುವು ತನ್ನ ಸಾಂಖ್ಯ ಪ್ರವಚನ ಭಾಷ್ಯದಲ್ಲಿ ನವೀನ ವೇದಾಂತಿಗಳಿಗೆ ಅನೇಕ ಸಲ 'ಪ್ರಚ್ಛನ್ನ ಬೌದ್ಧ' ಎಂಬ ಶಬ್ದ ಪ್ರಯೋಗ ಮಾಡಿದ್ದಾನೆ. ಆದ್ದರಿಂದಲೇ, ಪದ್ಮ ಪುರಾಣದಲ್ಲಿ "ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ ಮೇವ ಚ" ಎಂಬ ಶ್ಲೋಕಾರ್ಥವನ್ನು ಉದ್ಧರಿಸಿದ್ದಾನೆ.

ಎಂದಿಗಾದರೂ ಲಭಿಸಬಲ್ಲದೇ? ವೇದಗಳನ್ನೂ, ಈಶ್ವರನನ್ನೂ ಒಪ್ಪದುದರಿಂದ ಇವರ ಲೀಲೆ ಇಂತಹುದೇ ಆಗಿದೆ. ಈಗಲೂ ಕೂಡ, ಸುಖವನ್ನು ಅಪೇಕ್ಷಿಸುವರಾದರೆ, ವೇದಗಳ ಮತ್ತು ಈಶ್ವರನ ಆಶ್ರಯವನ್ನು ತೆಗೆದುಕೊಂಡು, ತಮ್ಮ ಜನ್ಮವನ್ನು ಸಫಲಗೊಳಿಸಿಕೊಳ್ಳಲಿ.

"ವಿವೇಕವಿಲಾಸ" ಎಂಬ ಗ್ರಂಥದಲ್ಲಿ ಬೌದ್ಧರ ಮತವನ್ನು ಈ ಪ್ರಕಾರ ಬರೆದಿದ್ದಾರೆ:-

**ಬೌದ್ಧಾನಾಂ ಸುಗತೋ ದೇವೋ ವಿಶ್ವಂ ಚ ಕ್ಷಣಭಂಗುರಮ್ ।**
**ಆರ್ಯಸತ್ತ್ವಾಖ್ಯಯಾ ತತ್ತ್ವಚತುಷ್ಟಯಮಿದಂ ಕ್ರಮಾತ್ ॥ ೧ ॥**
**ದುಃಖಮಾಯತನಂಚೈವ ತತಃ ಸಮುದಯೋ ಮತಃ ।**
**ಮಾರ್ಗಶ್ಚೇತ್ಯಸ್ಯ ಚ ವ್ಯಾಖ್ಯಾ ಕ್ರಮೇಣ ಶ್ರೂಯತಾಮತಃ ॥ ೨ ॥**
**ದುಃಖಸಂಸಾರಿಣಃ ಸ್ಕಂಧಾಸ್ತೇ ಚ ಪಂಚ ಪ್ರಕೀರ್ತಿತಾಃ ।**
**ವಿಜ್ಞಾನಂ ವೇದನಾ ಸಂಜ್ಞಾ ಸಂಸ್ಕಾರೋ ರೂಪಮೇವ ಚ ॥ ೩ ॥**
**ಪಂಚೇಂದ್ರಿಯಾಣಿ ಶಬ್ದಾದ್ಯಾ ವಿಷಯಾ ಪಂಚ ಮಾನಸಮ್ ।**
**ಧರ್ಮಾಯತನಮೇತಾನಿ ದ್ವಾದಶಾಯತನಾನಿ ತು ॥ ೪ ॥**
**ರಾಗಾದೀನಾಂ ಗಣೋಽಯಂ ಸ್ಯಾತ್ಸಮುದೇಶಿ ನೃಣಾಂ ಹೃದಿ ।**
**ಆತ್ಮಾತ್ಮೀಯಸ್ವಭಾವಾಖ್ಯಃ ಸ ಸ್ಯಾತ್ಸಮುದಯಃ ಪುನಃ ॥ ೫ ॥**
**ಕ್ಷಣಿಕಾಃ ಸರ್ವಸಂಸ್ಕಾರಾ ಇತಿ ಯಾ ವಾಸನಾ ಸ್ಥಿರಾ ।**
**ಸ ಮಾರ್ಗ ಇತಿ ವಿಜ್ಞೇಯಃ ಸ ಚ ಮೋಕ್ಷೋಽಭಿ ಧೀಯತೇ ॥ ೬॥**
**ಪ್ರತ್ಯಕ್ಷಂ ಚಾನುಮಾನಂ ಚ ಪ್ರಮಾಣದ್ವಿತಯಂ ತಥಾ।**
**ಚತುಃ ಪ್ರಸ್ಥಾನಿಕಾ ಬೌದ್ಧಾಃ ಖ್ಯಾತಾ ವೈಭಾಷಿಕಾದಯಃ ॥ ೭ ॥**
**ಅರ್ಥೋ ಜ್ಞಾನಾನ್ವಿತೋ ವೈಭಾಷಿಕೇಣ ಬಹು ಮನ್ಯತೇ।**
**ಸೌತ್ರಾಂತಿಕೇನ ಪ್ರತ್ಯಕ್ಷಗ್ರಾಹ್ಯೋಽರ್ಥೋ ನ ಬಹಿರ್ಮತಃ ॥ ೮ ॥**
**ಆಕಾರಸಹಿತಾ ಬುದ್ಧಿ ರ್ಯೋಗಾಚಾರಸ್ಯ ಸಮ್ಮತಾ।**
**ಕೇವಲಾಂ ಸಂವಿದಂ ಸಂಸ್ಥಾಂ ಮನ್ಯಂತೇ ಮಧ್ಯಮಾಃ ಪುನಃ ॥ ೯ ॥**
**ರಾಗಾದಿಜ್ಞಾನಸಂತಾನವಾಸನಾಚ್ಛೇದ ಸಂಭವಾ।**
**ಚತುರ್ಣಾಮಪಿ ಬೌದ್ಧಾನಾಂ ಮುಕ್ತಿರೇಷಾ ಪ್ರಕೀರ್ತಿತಾ ॥ ೧೦ ॥**
**ಕೃತಿಃ ಕಮಂಡಲುರ್ಮೌಂಡ್ಯಂ ಚೀರಂ ಪೂರ್ವಾಹ್ನಭೋಜನಮ್ ।**
**ಸಂಘೋ ರಕ್ತಾಂಬರತ್ವಂ ಚ ಶಿಶ್ರಿಯೇ ಬೌದ್ಧಭಿಕ್ಷುಭಿಃ [೨೦] ॥ ೧೧ ॥**

೧. ಸುಗತದೇವ ಬುದ್ಧಭಗವಾನ್ ಬೌದ್ಧರ ಪೂಜನೀಯ ದೇವನು; ಮತ್ತು ೨. ಜಗತ್ತು ಕ್ಷಣಭಂಗುರ; ೩. ನರನಾರಿಯರು ಆರ್ಯ- ಆರ್ಯೆಯರು; ಹಾಗೂ ೪. ತತ್ವಗಳ ಆಖ್ಯಾನ; ಪ್ರಸಿದ್ಧವಾದ ಸಂಜ್ಞೆ ಮೊದಲಾದುವು - ಈ ನಾಲ್ಕು ತತ್ವಗಳು ಬೌದ್ಧರ ಸ್ವೀಕಾರಯೋಗ್ಯವಾದ ಪದಾರ್ಥಗಳಾಗಿವೆ. (೧)

---

೨೦. ವಿವೇಕ ವಿಲಾಸ [೮/೨೬೫-೨೭೫]

ಈ ವಿಶ್ವವನ್ನು ದುಃಖದ ಮನೆಯೆಂದು ತಿಳಿಯಬೇಕು. ಆ ಮೇಲೆ ಸಮುದಯ ಎಂದರೆ ಉನ್ನತಿಯಾಗುತ್ತದೆ. ಮತ್ತು ಇವುಗಳ ವ್ಯಾಖ್ಯಾನವನ್ನು ಕ್ರಮದಿಂದ ಆಲಿಸಿರಿ. (೨)

ಜಗತ್ತಿನಲ್ಲಿ ದುಃಖವೇ ಇದೆ. ಮೊದಲು ಯಾವ ಪಂಚಸ್ಕಂಧಗಳನ್ನು ಹೇಳಿದ್ದೇವೋ, ಅವುಗಳನ್ನು ತಿಳಿಯಬೇಕು. (೩)

ಪಂಚಜ್ಞಾನೇಂದ್ರಿಯಗಳು, ಅವುಗಳ ಶಬ್ದ ಮೊದಲಾದ ಐದು ವಿಷಯಗಳು; ಮತ್ತು ಮನಸ್ಸು ಬುದ್ಧಿ ಎಂಬ ಅಂತಃಕರಣಗಳು – ಧರ್ಮದ ಸ್ಥಾನಗಳು ಇವು ಹನ್ನೆರಡು ಇವೆ. (೪)

ಮಾನವರ ಹೃದಯದಲ್ಲಿ ಯಾವ ರಾಗ–ದ್ವೇಷ ಮೊದಲಾದುವುಗಳ ಸಮೂಹದ ಉತ್ಪತ್ತಿಯಾಗುವುದೋ, ಅದು ಸಮುದಯ; ಆತ್ಮನಾವನಿದ್ದಾನೋ, ಅವನ ಆತ್ಮೀಯ ಸಂಬಂಧ ಹಾಗೂ ಸ್ವಭಾವವು 'ಆಖ್ಯಾ' ಎನಿಸುತ್ತದೆ; ಇವುಗಳಿಂದಲೇ ಮರಳಿ ಸಮುದಯ ಮೂಡುತ್ತದೆ; (೫)

ಎಲ್ಲ ಸಂಸ್ಕಾರಗಳೂ ಕ್ಷಣಿಕವಾಗಿವೆ. ವಾಸನೆಯ ಸ್ಥಿರವಾಗುವಿಕೆ ಏನಿದೆಯೋ, ಅದು ಬೌದ್ಧರ ಮಾರ್ಗವಾಗಿದೆ. ಮತ್ತು ಅದೇ ಶೂನ್ಯ ತತ್ತ್ವವಾಗವುದು, ಶೂನ್ಯರೂಪವಾಗುವುದು ಮೋಕ್ಷವಾಗಿದೆ. (೬)

ಬೌದ್ಧರು ಪ್ರತ್ಯಕ್ಷ ಮತ್ತು ಅನುಮಾನ–ಈ ಎರಡೇ ಪ್ರಮಾಣಗಳನ್ನು ಅಂಗೀಕರಿಸುತ್ತಾರೆ. ಇವರಲ್ಲಿ ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ ಮತ್ತು ಮಾಧ್ಯಮಿಕ ಈ ನಾಲ್ಕುಬಗೆಯ ಭೇದಗಳಿವೆ. (೭)

ಇವರಲ್ಲಿ ವೈಭಾಷಿಕನು ಜ್ಞಾನದಲ್ಲಿ ಯಾವ ಅರ್ಥ[೨೧] (ವಸ್ತು) ವಿದೆಯೋ ಅದನ್ನು ಇದೆಯೆಂದು ಅಂಗೀಕರಿಸುತ್ತಾನೆ. ಏಕೆಂದರೆ ಯಾವುದು ಜ್ಞಾನದಲ್ಲಿಲ್ಲವೋ, ಅದರ ಅಸ್ತಿತ್ವವನ್ನು ಸಿದ್ಧಪುರುಷನು ಅಂಗೀಕರಿಸಲಾರನು. ಮತ್ತು ಸೌತ್ರಾಂತಿಕನು ಪ್ರತ್ಯಕ್ಷ ಪದಾರ್ಥ ಒಳಗಿದೆ; ಹೊರಗಿಲ್ಲ–ಎಂದು ಅಂಗೀಕರಿಸುತ್ತಾನೆ. (೮)

ಯೋಗಾಚಾರನು ಆಕಾರಸಹಿತವೂ, ವಿಜ್ಞಾನಯುಕ್ತವೂ ಆದ ಬುದ್ಧಿಯನ್ನು ಅಂಗೀಕರಿಸುತ್ತಾನೆ. ಮತ್ತು ಮಾಧ್ಯಮಿಕನು ಕೇವಲ ತನ್ನಲ್ಲಿ ಪದಾರ್ಥಗಳ ಜ್ಞಾನಮಾತ್ರವನ್ನು ಅಂಗೀಕರಿಸುತ್ತಾನೆ; ಪದಾರ್ಥಗಳನ್ನಲ್ಲ. (೯)

ಮತ್ತು ರಾಗವೇ ಮೊದಲಾದ ಜ್ಞಾನದ ಪ್ರವಾಹದ ವಾಸನಾನಾಶದಿಂದ ಉತ್ಪನ್ನವಾದ ಮುಕ್ತಿಯನ್ನು ನಾಲ್ಕು ಸಂಪ್ರದಾಯಗಳ ಬೌದ್ಧರೂ ಅಂಗೀಕರಿಸುತ್ತಾರೆ. (೧೦)

ಜಿಂಕೆ – ಮೊದಲಾದುವುಗಳ ಚರ್ಮ, ಕಮಂಡಲು, ಮುಂಡನ, ವಲ್ಕಲವಸ್ತ್ರ ಪೂರ್ವಾಹ್ನದಲ್ಲಿ ಎಂದರೆ ಒಂಬತ್ತು ಗಂಟೆಗಿಂತ ಮುನ್ನ ಬೆಳಿಗ್ಗೆ ಭೋಜನ, ಏಕಾಕಿಯಾಗಿರದಿರುವುದು. ಕೆಂಪು ಬಟ್ಟೆಯಧಾರಣ–ಇದು ಬೌದ್ಧರ ಸಾಧುಗಳ ವೇಶವಾಗಿದೆ. (೧೧)

**ಉತ್ತರ:–** ಬೌದ್ಧರ ದೇವರು ಸುಗತ ಬುದ್ಧನೇ ಆಗಿದ್ದರೆ, ಅವನ ಗುರು ಯಾವನಾಗಿದ್ದನು? ಮತ್ತು ವಿಶ್ವವು ಕ್ಷಣಭಂಗುರವಾಗಿದ್ದರೆ, "ಇದು ಅದೇ ಆಗಿದೆ". – ಎಂದು ಹಿಂದೆ ಕಂಡ ಪದಾರ್ಥದ ಸ್ಮರಣವಾಗಬಾರದು. ಕ್ಷಣಭಂಗುರವಾಗಿದ್ದಲ್ಲಿ, ಆ ಪದಾರ್ಥವೇ ಇರುವುದಿಲ್ಲ; ಮತ್ತೆ ಸ್ಮರಣವಾವುದರದಾದೀತು? ಕ್ಷಣಿಕವಾದವೇ ಬೌದ್ಧರ ಮಾರ್ಗವಾಗಿದ್ದರೆ, ಇವರ ಮೋಕ್ಷವೂ ಕ್ಷಣಭಂಗುರವೇ ಆದೀತು. ಜ್ಞಾನದಿಂದ ಯುಕ್ತವಾದ[೨೨] ಅರ್ಥವೇ ದ್ರವ್ಯವಾಗಿದ್ದರೆ, ಜಡದ್ರವ್ಯದಲ್ಲಿಯೂ ಜ್ಞಾನವಿರಬೇಕು. ಮತ್ತು ಅದು ಚಾಲನ ಮೊದಲಾದ ಕ್ರಿಯೆಗಳನ್ನು ನಡೆಯಿಸುವುದು ಯಾವುದರ ಮೇಲೆ? ಭಲೇ! ಯಾವುದು ಹೊರಗೆ ಕಾಣಿಸುತ್ತದೋ, ಅದು ಮಿಥ್ಯೆ ಹೇಗಾಗಬಲ್ಲದು? ಬುದ್ಧಿಯು ಆಕಾರಸಹಿತವಾಗಿದ್ದರೆ, ಅದು ದೃಶ್ಯವಾಗಿರಬೇಕು. ಕೇವಲ ಜ್ಞಾನೇವೇ ಹೃದಯದಲ್ಲಿ, ಆತ್ಮ ಸ್ಥವಾಗಿರುವುದಾದರೆ, ಬಾಹ್ಯಪದಾರ್ಥಗಳು ಕೇವಲ ಜ್ಞಾನ (ಎಂದರೆ ಬುದ್ಧಿಯ ಕಲ್ಪನೆ ಮಾತ್ರ)ವೆಂದೇ ಅಂಗೀಕೃತವಾದರೆ, ಜ್ಞೇಯವಸ್ತುವೇ ಇಲ್ಲದೆ, ಜ್ಞಾನವೇ ಉಂಟಾಗದು. ವಾಸನಾವಿಚ್ಛೇದವೇ ಮುಕ್ತಿಯೆಂದಾದರೆ, ಸುಷುಪ್ತಿಯಲ್ಲಿಯೂ ಮುಕ್ತಿಯನ್ನೊಪ್ಪಬೇಕು. ಹೀಗೆ ಗ್ರಹಿಸುವುದು ವಿದ್ಯಾವಿರುದ್ಧ ವಾದ ಕಾರಣ, ತಿರಸ್ಕರಣೀಯವಾಗಿದೆ. ಹೀಗೆ ಸಂಕ್ಷಿಪ್ತವಾಗಿ ಬೌದ್ಧಮತೀಯರ ಸಿದ್ಧಾಂತಗಳನ್ನು ಪ್ರದರ್ಶಿಸಿದ್ದೇವೆ. ಈಗ

---

೨೧. ಎಂದರೆ, ಪ್ರತ್ಯಕ್ಷವಾಗಿರುವ ವಸ್ತು.

೨೨. ಜ್ಞಾನಯುಕ್ತವಾದ ಜ್ಞೇಯವಸ್ತುವೇ ತತ್ತ್ವ, ಎಂಬ ಸಿದ್ಧಾಂತವು ಸರಿಯಲ್ಲ, ಎಂದು ತೋರಿಸಲು ಮಹರ್ಷಿಗಳು ಜ್ಞಾನರಹಿತವಾದ ವಸ್ತುಗಳೂ ಇವೆ, ಎಂದು ತರ್ಕಿಸಿದ್ದಾರೆ. ಅರ್ಥ, ಎಂಬ ಶಬ್ದವು ಪದಾರ್ಥ ಎಂಬರ್ಥದಲ್ಲಿ ಬಂದಿದೆ.

ಬುದ್ಧಿವಂತರೂ, ವಿಚಾರಶೀಲರೂ ಆದ ಪುರುಷರು ಅವಲೋಕಿಸಿ – "ಇವರ ವಿದ್ಯೆ ಎಂತಹುದು? ಮತ್ತು ಮತವೆಂತಹುದು?–ಎಂದು ತಿಳಿದುಕೊಳ್ಳುವರು. ಇದನ್ನು ಜೈನರೂ ಕೂಡ ಅಂಗೀಕರಿಸುತ್ತಾರೆ."

## ಇಲ್ಲಿಂದ ಮುಂದಕ್ಕೆ ಜೈನಮತದ ವರ್ಣನೆಯಿದೆ

"ಪ್ರಕರಣ ರತ್ನಾಕರ"ದ ಪ್ರಥಮ ಭಾಗದ ನಯಚಕ್ರಸಾರದಲ್ಲಿ ಕೆಳಗೆ ಬರೆದಿರುವ ಮಾತುಗಳನ್ನು ಬರೆದಿದ್ದಾರೆ:–

ಬೌದ್ಧರು ಕಾಲಕಾಲಕ್ಕೆ ನವೀನವಾಗುವ (ಪರಿವರ್ತನಶೀಲವಾದ) (೧) ಆಕಾಶ, (೨) ಕಾಲ, (೩) ಜೀವ, (೪) ಪುದ್ಗಲ,–ಈ ನಾಲ್ಕು ದ್ರವ್ಯಗಳನ್ನು ಅಂಗೀಕರಿಸುತ್ತಾರೆ. ಮತ್ತು ಜೈನರು (೧) ಧರ್ಮಾಸ್ತಿಕಾಯ, (೨) ಅಧರ್ಮಾಸ್ತಿಕಾಯ, (೩) ಆಕಾಶಾಸ್ತಿಕಾಯ, (೪) ಪುದ್ಗಲಾಸ್ತಿಕಾಯ, (೫) ಜೀವಾಸ್ತಿಕಾಯ, ಮತ್ತು (೬) ಕಾಲ ಈ ಆರು ದ್ರವ್ಯಗಳನ್ನು ಅಂಗೀಕರಿಸುತ್ತಾರೆ. ಇವುಗಳಲ್ಲಿ ಕಾಲವನ್ನು 'ಅಸ್ತಿಕಾಯ'[೨೩] ವೆಂದು ಒಪ್ಪಿಕೊಳ್ಳುವುದಿಲ್ಲ. ಆದರೆ – "ಕಾಲವು ಉಪಚಾರದಿಂದ ದ್ರವ್ಯವಾಗಿದೆ; ವಸ್ತುತಃ ಅಲ್ಲ".–ಎನ್ನುತ್ತಾರೆ.

ಅವುಗಳಲ್ಲಿ, ಗತಿಯ ಪರಿವರ್ತನಶೀಲತೆಯ ಪರಿಣಾಮವಾಗಿ ಉಂಟಾಗುವ ಸೀಮಾ ಬಂಧಗಳಿಂದ ಬದ್ಧನಾದ, ಪುದ್ಗಲಗಳ ಚಲನೆಯಿಂದಲೂ ಮತ್ತು ಜೀವನ ಚಲನಗಳಿಂದಲೂ ಉದ್ಭವಿಸುವ ಕರ್ಮಗಳನ್ನು ಕ್ರಮಬದ್ಧವಾಗಿ ಮಾಡುವ ತತ್ವವೇ ಮೊದಲನೆಯದಾದ **'ಧರ್ಮಾಸ್ತಿಕಾಯ'**ವಾಗಿರುತ್ತದೆ. ಮತ್ತು ಅಸಂಖ್ಯ ಪ್ರದೇಶಗಳಲ್ಲಿಯೂ, ಪರಿಣಾಮಗಳಲ್ಲಿಯೂ ಮತ್ತು ಲೋಕಗಳಲ್ಲಿಯೂ ವ್ಯಾಪಕವಾಗಿರುತ್ತದೆ. (ಸಂಕ್ಷೇಪತಃ, ಜೀವನ ಮತ್ತು ಪುದ್ಗಲಗಳ ಕರ್ಮಗಳ ಮೇಲೆ ಮಾಡಲ್ಪಡುವ ನಿಯಂತ್ರಣವೇ ಧರ್ಮ ಅಥವಾ ಧರ್ಮಾಸ್ತಿಕಾಯ–ಎನ್ನಬಹುದು.) ನಿರಂತರವಾಗಿ ಸೀಮಾಬದ್ಧವಾಗಿ ಮಾಡಲ್ಪಡುವ ಪುದ್ಗಲಗಳ ಮತ್ತು ಜೀವರ ತತ್ಪರತ್ವದ ಸ್ರೋತಸ್ಸೇ ಎರಡನೆಯದಾದ **'ಅಧರ್ಮಾಸ್ತಿಕಾಯ'**ವಾಗಿರುತ್ತದೆ. (ಸಂಕ್ಷೇಪತಃ, ಪುದ್ಗಲಗಳ ಮತ್ತು ಜೀವರ ಸಂಯೋಗದ ಅಥವಾ ಪುನರ್ಜನ್ಮದ ಮೂಲವು ಅಧರ್ಮಾಸ್ತಿಕಾಯವಾಗಿರುತ್ತದೆ.) ಸಮಸ್ತ ಭಾವಪದಾರ್ಥಗಳ ಅಥವಾ ಇರುವಿಕೆಯ ಭೇದಗಳ ಅಥವಾ ತತ್ತ್ವಗಳ ಆಧಾರ ಅಥವಾ ಆಶ್ರಯವೂ, ತನ್ನಲ್ಲಿಯೇ, ಚೇತನ ಜೀವರ ಮುಳುಗುವಿಕೆ, ಹೊರಡುವಿಕೆ, ಒಳಹೋಗುವಿಕೆ, ಮತ್ತು ಇತರ ಕಾರ್ಯಗಳೂ, ಅದೇ ರೀತಿ ಪುದ್ಗಲಗಳ ಚಲನಗಳಿಗೂ ಎಡೆಯನ್ನೂ ಕೊಡುವಂತಹುದೂ, ಸರ್ವವ್ಯಾಪಕವೂ ಆದ ತತ್ತ್ವವೇ ಮೂರನೆಯದಾದ **'ಆಕಾಶಾಸ್ತಿಕಾಯ'**ವಾಗಿರುತ್ತದೆ. ಸೂಕ್ಷ್ಮವೂ, ನಿತ್ಯವೂ, ಏಕರಸವೂ, ವರ್ಣ–ಗಂಧ–ಸ್ಪರ್ಶ–ಪರಿವರ್ತನಶೀಲತ್ವ–ವಿಭಾಜ್ಯತ್ವವೆಂಬ ಸ್ವಾಭಾವಿಕ ಗುಣಗಳಿಂದ

---

೨೩. 'ಅಸ್ತಿಕಾಯ' ಎಂದರೆ ವೈದಿಕ ಪರಿಭಾಷೆಯಲ್ಲಿ 'ದ್ರವ್ಯ'; ಭಾವ ಪದಾರ್ಥ ಎಂದರ್ಥ.

೧. ಗತಿಯ ಪರಿವರ್ತನ ಶೀಲತೆಯ ಪರಿಣಾಮವಾಗಿ ಉಂಟಾಗುವ ಸೀಮಾಬಂಧನಗಳಿಂದ ಬದ್ಧನಾದ, ಪುದ್ಗಲಗಳ ಚಲನೆಯಿಂದಲೂ ಮತ್ತು ಜೀವನ ಚಲನಗಳಿಂದಲೂ ಉದ್ಭವಿಸುವ ಕರ್ಮಗಳನ್ನು ಕ್ರಮಬದ್ಧವಾಗಿ ಮಾಡುವ ತತ್ವವೇ ಮೊದಲನೆಯಾದ 'ಧರ್ಮಾಸ್ತಿ ಕಾಯ' ವಾಗಿರುತ್ತದೆ. ಮತ್ತು ಅದು ಅಸಂಖ್ಯ ಪ್ರದೇಶಗಳಲ್ಲಿಯೂ, ಪರಿಣಾಮಗಳಲ್ಲಿಯೂ ಮತ್ತು ಲೋಕಗಳಲ್ಲಿಯೂ ವ್ಯಾಪಕವಾಗಿರುತ್ತದೆ.
ಸಂಕ್ಷೇಪತಃ, ಜೀವನ ಮತ್ತು ಪುದ್ಗಲಗಳ ಕರ್ಮಗಳ ಮೇಲೆ ಮಾಡಲ್ಪಡುವ ನಿಯಂತ್ರಣವೇ ಧರ್ಮ ಅಥವಾ ಧರ್ಮಸ್ತಿಕಾಯಿ ಎನ್ನ ಬಹುದು.

೨. ನಿರಂತರವಾಗಿ ಸೀಮಾಬದ್ಧವಾಗಿ, ಮಾಡಲ್ಪಡುವ ಪುದ್ಗಲಗಳ ಮತ್ತು ಜೀವರ ತತ್ಪರತ್ವದ ಸ್ರೋತಸ್ಸೇ ಎರಡನೆಯದಾದ ' ಅಧರ್ಮಸ್ತಿಕಾಯ' ವಾಗಿರುತ್ತದೆ.
ಸಂಕ್ಷೇಪತಃ, ಪುದ್ಗಲಗಳ ಮತ್ತು ಜೀವರ ಸಂಯೋಗದ ಅಥವಾ ಪುನರ್ಜನ್ಮದ ಮೂಲವು 'ಅಧರ್ಮಸ್ತಿಕಾಯ' ವಾಗಿರುತ್ತದೆ

೩. ಸಮಸ್ತ ಭಾವ ಪದಾರ್ಥಗಳ ಅಥವಾ ಇರುವಿಕೆಯ ಭೇದಗಳ ಅಥವಾ ತತ್ತ್ವಗಳ ಆಧಾರ ಅಥವಾ ಆಶ್ರಯವೂ ತನ್ನಲ್ಲಿಯೇ, ಚೇತನ ಜೀವರ ಮುಳುಗುವಿಕೆ, ಪ್ರವೇಶ, ಹೊರಡುವಿಕೆ, ಮತ್ತು ಇತರ ಕಾರ್ಯಗಳಿಗೂ, ಅದೇ ರೀತಿ ಪುದ್ಗಲಗಳ ಚಲನಗಳಿಗೂ, ಎಡೆಯನ್ನು ಕೊಡುವಂತಹುದೂ, ಸರ್ವವ್ಯಾಪಕವೂ ಆದ ತತ್ತ್ವವೇ ಮೂರನೇಯದಾಗಿ 'ಆಕಾಶಾಸ್ತಕಾಯ'ವಾಗಿರುತ್ತದೆ.

೪. ಸೂಕ್ಷ್ಮವೂ, ನಿತ್ಯವೂ, ಎಕರಸವೂ, ವರ್ಣ–ಗಂಧ–ಸ್ಪರ್ಶ ಪರಿವರ್ತನಶೀಲತ್ವ ವಿಭಾಜ್ಯತ್ವವೆಂಬ ಸ್ವಾಭಾವಿಕ ಗುಣಗಳಿಂದ ಯುಕ್ತವೂ, ತುಂಬಿಸುವಂತಹುದೂ, ಕರಗುವಂತಹುದೂ ಆದ ತತ್ತ್ವವು ನಾಲ್ಕನೇಯದಾದ 'ಪುದ್ಗಲಾಸ್ತಿಕಾಯ' ವಾಗಿರುತ್ತದೆ.

೫. ಚೈತನ್ಯ ಲಕ್ಷಣಯುಕ್ತನೂ, ಜ್ಞಾನ–ದರ್ಶನ– ಸಮರ್ಥನೂ ಅನಂತವಾದ ಪರ್ಯಾಯಗಳಿಂದ ಪರಿಣಾಮಗಳಿಗೆ ಸಿಕ್ಕುವವನೂ, ಕರ್ತೃವೂ, ಭೋಕ್ತೃವೂ ಆದ ತತ್ತ್ವವು ಐದನೇಯ 'ಜೀವಾಸ್ತಿಕಾಯ'ವಾಗಿರುತ್ತದೆ.

೬. ಮತ್ತು ಮೇಲೆ ಹೇಳಿದ ಐದು ಅಸ್ತಿಕಾಯಗಳಿಗೆ ಸಂಬಂಧಿಸಿದಂತೆ, ಮೊದಲನೇಯದು, ಆಮೇಲಿನಿದು, ಹೊಸದು, ಹಳೆಯದು, ಎಂದು ಗ್ರಹಿಸಲು ನೆರವಾಗುವಂತಹುದೂ, ಈಗಲೂ ಇರುವಂತಹುದೂ, ಮತ್ತು ಪರಿವರ್ತನೆಗಳಿಗೆ ಗುರಿಯಾಗುವಂತಹುದೂ ಆದ ತತ್ತ್ವವು ಆರನೇಯದಾದ 'ಕಾಲ'ವಾಗಿರುತ್ತದೆ

ಯುಕ್ತವೂ, ತುಂಬಿಸುವಂತಹುದೂ, ಕರಗುವಂತಹುದೂ ಆದ ತತ್ತ್ವವು ನಾಲ್ಕನೆಯದಾದ **'ಪುದ್ಗಲಾಸ್ತಿಕಾಯ'**ವಾಗಿರುತ್ತದೆ. ಚೈತನ್ಯ ಲಕ್ಷಣಯುಕ್ತನೂ, ಜ್ಞಾನ-ದರ್ಶನ-ಸಮರ್ಥನೂ, ಅನಂತವಾದ ಪರ್ಯಾಯಗಳಿಂದ ಪರಿಣಾಮಗಳಿಗೆ ಸಿಕ್ಕುವವನೂ, ಕರ್ತೃವೂ, ಭೋಕ್ತೃವೂ ಆದ ತತ್ತ್ವವು ಐದನೆಯ **"ಜೀವಾಸ್ತಿಕಾಯ"**ವಾಗಿರುತ್ತದೆ. ಮತ್ತು, ಮೇಲೆ ಹೇಳಿದ ಐದು ಅಸ್ತಿಕಾಯಗಳಿಗೆ ಸಂಬಂಧಿಸಿದಂತೆ ಮೊದಲನೆಯದು, ಆಮೇಲಿನದು, ಹೊಸದು, ಹಳೆಯದು-ಎಂದು ಗ್ರಹಿಸಲು ನೆರವಾಗುವಂತಹುದೂ, ಈಗಲೂ ಇರುವಂತಹದೂ ಮತ್ತು ಪರಿವರ್ತನೆಗಳಿಗೆ ಗುರಿಯಾಗುವಂತಹುದೂ ಆದ ತತ್ತ್ವವು ಆರನೆಯದಾದ **'ಕಾಲ'**ವಾಗಿರುತ್ತದೆ.

**ಸಮೀಕ್ಷಕ :-** ಬೌದ್ಧರು ಪ್ರತಿ ಸಮಯದಲ್ಲಿಯೂ ಹೊಸಹೊಸದಾಗುತ್ತಾ ಹೋಗುವ ಯಾವ ನಾಲ್ಕು ದ್ರವ್ಯಗಳನ್ನೂ ಅಂಗೀಕರಿಸಿದ್ದಾರೋ, ಅವಂತೂ ಸುಳ್ಳಾಗಿವೆ. ಏಕೆಂದರೆ, ಆಕಾಶ, ಕಾಲ, ಜೀವ ಮತ್ತು ಪರಮಾಣುಗಳು ನವೀನ ಅಥವಾ ಪುರಾತನವೆಂದಿಗೂ ಆಗಲಾರವು. ಏಕೆಂದರೆ ಅವು ಅನಾದಿಗಳೂ ಮತ್ತು ಕಾರಣರೂಪದಿಂದ ಅವಿನಾಶಿಗಳೂ ಆಗಿವೆ. ಹಾಗಿರುವಲ್ಲಿ, ನವತ್ವ-ಪುರಾಣತ್ವಗಳು ಅನ್ವಯಿಸಬಲ್ಲವಾದರೂ ಹೇಗೆ? ಮತ್ತು ಜೈನರ ಗ್ರಹಿಕೆಯೂ ಕೂಡ ಸರಿಯಲ್ಲ. ಏಕೆಂದರೆ, ಧರ್ಮಾಧರ್ಮಗಳು ದ್ರವ್ಯಗಳಲ್ಲ; ಗುಣಗಳಾಗಿವೆ. ಇವೆರಡೂ ಜೀವಾಸ್ತಿಕಾಯದಲ್ಲಿ ಬಂದುಹೋಗುತ್ತವೆ. ಆದುದರಿಂದ, ಆಕಾಶಪರಮಾಣು, ಜೀವ ಮತ್ತು ಕಾಲವನ್ನು ಅಂಗೀಕರಿಸಿದ್ದರೆ, ಸರಿಯಾಗುತ್ತಿತ್ತು. ಮತ್ತು ಯಾವ ಒಂಬತ್ತು ದ್ರವ್ಯಗಳು ವೈಶೇಷಿಕದಲ್ಲಿ[೨೪] ಅಂಗೀಕರಿಸಲ್ಪಟ್ಟಿವೆಯೋ, ಅವೇ ಸರಿಯಾದುವಾಗಿವೆ. ಏಕೆಂದರೆ, ಪೃಥಿವೀ-ಮೊದಲಾದ ಐದು ತತ್ತ್ವಗಳೂ, ಕಾಲ, ದಿಕ್ಕು, ಆತ್ಮಾ ಮತ್ತು ಮನಸ್ಸು ಈ ಒಂಬತ್ತೂ ನಿಶ್ಚಯವಾಗಿಯೂ ಬೇರೆ ಬೇರೆ ಪದಾರ್ಥಗಳಾಗಿವೆ. ಜೀವನೊಬ್ಬನನ್ನು ಚೇತನನೆಂದೊಪ್ಪಿ, ಈಶ್ವರನನ್ನು ಅಂಗೀಕರಿಸದಿರುವುದು ಜೈನರ ಮತ್ತು ಬೌದ್ಧರ ಮಿಥ್ಯಾಪಕ್ಷಪಾತದ ಮಾತಾಗಿದೆ.

ಈಗ ಬೌದ್ಧರು ಮತ್ತು ಜೈನರು ಸಪ್ತಭಂಗೀ ಮತ್ತು ಸ್ಯಾದ್ವಾದವೆಂದು ಯಾವುದನ್ನು ಅಂಗೀಕರಿಸುತ್ತಾರೋ, ಅದು ಹೀಗೆದೆ:- **"ಸನ್ ಘಟಃ"**- ಇದನ್ನು ಪ್ರಥಮಭಂಗವೆನ್ನುತ್ತಾರೆ. ಏಕೆಂದರೆ ಗಡಿಗೆಯು ತನ್ನ ಅಸ್ತಿತ್ವದಿಂದ ಕೂಡಿದೆ. ಎಂದರೆ, ಗಡಿಗೆಯಿದೆ. ಇದು ಅಭಾವದ ವಿರೋಧವನ್ನು ಮಾಡಿದೆ. ಎರಡನೆಯ ಭಂಗ - **"ಅಸನ್ ಘಟಃ"** - "ಗಡಿಗೆಯಿಲ್ಲ". ಮೊದಲ ಗಡಿಗೆಯ ಭಾವದಿಂದ ಮತ್ತು ಈ ಗಡಿಗೆಯ ಅಸದ್ಭಾವದಿಂದ ಎರಡನೆಯ ಭಂಗವುಂಟಾಗಿದೆ. ಮೂರನೆಯ ಭಂಗವಿದು :- **"ಸನ್ನಸನ್ ಘಟಃ"** ಎಂದರೆ ಇದು ಗಡಿಗೆ ಏನೋ ಅಹುದು; ಆದರೆ ಬಟ್ಟೆಯಲ್ಲ. ಏಕೆಂದರೆ, ಇದು ಅವೆರಡರಿಂದಲೂ ಬೇರೆಯಾಗಿ ಹೋಯಿತು. ನಾಲ್ಕನೆಯ ಭಂಗ:- ಘಟೋಘಟಃ**", ಅಘಟಃ ಪಟಹಃ** - ಎನ್ನುವಂತೆ. ಮತ್ತೊಂದು ಬಟ್ಟೆಯ ಅಭಾವದ ಅಪೇಕ್ಷೆಯಿಂದ, ತನ್ನಲ್ಲಿ ತಾನು ಇರುವುದರಿಂದ ಗಡಿಗೆಯು ಗಡಿಗೆಯಲ್ಲದುದೆನಿಸುತ್ತದೆ. ಏಕಕಾಲದಲ್ಲಿ ಅದಕ್ಕೆ ಎರಡು ಸಂಜ್ಞೆಗಳಾದುವು; ಎಂದರೆ ಅದು ಘಟವೂ ಅಹುದು; ಅಘಟವೂ ಅಹುದು. ಐದನೆಯ ಭಂಗವಿದು:- ಗಡಿಗೆಯನ್ನು ಬಟ್ಟೆ-ಎನ್ನುವುದು ಅಯೋಗ್ಯ; ಎಂದರೆ, ಅದರಲ್ಲಿ ಗಡಿಗೆತನವನ್ನು ಹೇಳಬಹುದು; ಆದರೆ ಬಟ್ಟೆತನವನ್ನು ಹೇಳಲಾಗದು. ಆರನೆಯ ಭಂಗವಿದು:- "ಯಾವುದು ಗಡಿಗೆಯಲ್ಲವೋ, ಅದು ಹೇಳಲು ಯೋಗ್ಯವೂ ಅಲ್ಲ, ಮತ್ತು ಯಾವುದು ಅಹುದೋ, ಆದು ಅಹುದೇ ಅಹುದು ಮತ್ತು ಹೇಳಲು ಯೋಗ್ಯವೂ ಅಹುದು". ಮತ್ತು ಏಳನೆಯ ಭಂಗವಿದು:- "ಯಾವುದನ್ನು ಹೇಳುವುದು ಅಭೀಷ್ಟವಾಗಿದೆಯೋ, ಅದು ಇಲ್ಲವಾಗಿದೆ ಮತ್ತು ಗಡಿಗೆ ಹೇಳಲು ಯೋಗ್ಯವೂ ಆಗಿಲ್ಲ". ಹೀಗೆಯೇ:-

**ಸ್ಯಾದಸ್ತಿ ಜೀವೋಽಯಂ ಪ್ರಥಮೋ ಭಂಗ ಃ॥ ೧ ॥**

**ಸ್ಯಾನ್ನಾಸ್ತಿ ಜೀವೋ ದ್ವಿತೀಯೋ ಭಂಗ ಃ॥ ೨ ॥**

**ಸ್ಯಾದವಕ್ತವ್ಯೋ ಜೀವಸ್ತೃತೀಯೋ ಭಂಗ ಃ॥ ೩ ॥**

**ಸ್ಯಾದಸ್ತಿ ನಾಸ್ತಿರೂಪೋ ಜೀವಶ್ಚತುರ್ಥೋ ಭಂಗ ಃ॥ ೪ ॥**

**ಸ್ಯಾದಸ್ತಿ ಚಾವಕ್ತವ್ಯೋ ಜೀವಃ ಪಂಚಮೋ ಭಂಗ ಃ॥ ೫ ॥**

**ಸ್ಯಾನ್ನಾಸ್ತಿ ಚಾವಕ್ತವ್ಯೋ ಜೀವಃ ಷಷ್ಠೋ ಭಂಗ ಃ॥ ೬ ॥**

**ಸ್ಯಾದಸ್ತಿ ಚ ನಾಸ್ತಿಚಾವಕ್ತವ್ಯೋ ಜೀವ ಇತಿ ಸಪ್ತಮೋ ಭಂಗಃ॥ ೭ ॥**

---

೨೪. ಎಂದರೆ 'ವೈಶೇಷಿಕ'ದಲ್ಲಿ.

**ಅರ್ಥ:**– "ಇದ್ದಾನೆ ಜೀವ" ಎಂದಾಗ ಜೀವನಲ್ಲಿ ಜೀವನ ವಿರೋಧಿಗಳಾದ ಜಡಪದಾರ್ಥಗಳ ಅಭಾವರೂಪವಾದ ಭಂಗ ಮೊದಲನೆಯದೆನಿಸುತ್ತದೆ. ಎರಡನೆಯ ಭಂಗವಿದು:– "ಇಲ್ಲ ಜೀವನು ಜಡದಲ್ಲಿ"– ಎಂಬ ಕಥನವೂ ಕೂಡ ಉಂಟು; ಇದರಿಂದ ಇದು ಎರಡನೆಯ ಭಂಗವೆನಿಸುತ್ತದೆ. "ಜೀವನು ಹೇಳಲು ಯೋಗ್ಯನಲ್ಲ".– ಇದು ಮೂರನೆಯ ಭಂಗ. ಯಾವಾಗ ಜೀವನು ಶರೀರಧಾರಣ ಮಾಡುತ್ತಾನೋ, ಆಗ ಪ್ರಸಿದ್ಧನಾಗಿರುತ್ತಾನೆ; ಮತ್ತು ಯಾವಾಗ ಶರೀರದಿಂದ ಬೇರೆಯಿರುತ್ತಾನೋ, ಆಗ ಅಪ್ರಸಿದ್ಧನಾಗಿರುತ್ತಾನೆ". ಎಂಬ ಕಥನವಾದಾಗ, ಅದನ್ನು ನಾಲ್ಕನೆಯ ಭಂಗವೆನ್ನುತ್ತಾರೆ. "ಜೀವನಿದ್ದಾನೆ; ಆದರೆ, ಹೇಳಲು ಯೋಗ್ಯನಾಗಿಲ್ಲ".– ಎಂಬ ಈ ಕಥನವನ್ನು ಐದನೆಯ ಭಂಗವೆನ್ನುತ್ತಾರೆ. "ಜೀವನು ಪ್ರತ್ಯಕ್ಷಪ್ರಮಾಣದಿಂದ ಕಥನೀಯನಲ್ಲ; ಆದುದರಿಂದ ಚಾಕ್ಷುಷ ಪ್ರತ್ಯಕ್ಷನಲ್ಲ."–ಎಂಬ ವ್ಯವಹಾರವಿದೆ. ಅದನ್ನು ಆರನೆಯ ಭಂಗವೆನ್ನುತ್ತಾರೆ. "ಒಂದು ಕಾಲದಲ್ಲಿ ಅನುಮಾನ ಪ್ರಮಾಣದಿಂದ ಜೀವನ ಇರುವಿಕೆ; ಅದೃಶ್ಯತ್ವದಿಂದಾಗಿ ಇಲ್ಲದಿರುವಿಕೆ. ಮತ್ತು ಒಂದೇ ರೀತಿಯಲ್ಲಿರದಿರುವುದು; ಆದರೆ–ಕ್ಷಣಕ್ಷಣದಲ್ಲಿ ಪರಿಣಾಮಕ್ಕೆ ಈಡಾಗುತ್ತಿರುವುದು. ಇರುವಿಕೆ ಇಲ್ಲದಿರುವಿಕೆಯಾಗದು; ಮತ್ತು ಇಲ್ಲದಿರುವಿಕೆ ಇರುವಿಕೆಯಾಗುವ ವ್ಯವಹಾರವೂ ಆಗದು".– ಇದು ಏಳನೆಯ ಭಂಗವೆನಿಸುತ್ತದೆ.

ಇದೇ ರೀತಿ ನಿತ್ಯತ್ವ ಸಪ್ತಭಂಗೀ; ಮತ್ತು ಅನಿತ್ಯತ್ವ ಸಪ್ತಭಂಗೀ; ಸಾಮಾನ್ಯಧರ್ಮ, ವಿಶೇಷಧರ್ಮ, ಗುಣ ಮತ್ತು ಪರ್ಯಾಯಗಳ ದೃಷ್ಟಿಯಿಂದ ಪ್ರತಿಯೊಂದು ವಸ್ತುವಿಗೂ ಸಪ್ತಭಂಗಿಯು ಅನ್ವಯಿಸುವುದು. ಹಾಗೆ ದ್ರವ್ಯಗಳು, ಗುಣಗಳು, ಸ್ವಭಾವಗಳು ಮತ್ತು ಪರ್ಯಾಯಗಳು (ಪರಿವರ್ತನಗಳು) ಅನಂತವಾಗಿರುವುದರಿಂದ, ಸಪ್ತಭಂಗಿಯೂ ಅನಂತವಾಗಿರುತ್ತೆ. ಈ ರೀತಿ ಬೌದ್ಧರ ಹಾಗೂ ಜೈನರ ಸ್ಯಾದ್ವಾದ ಮತ್ತು ಸಪ್ತಭಂಗೀ ನ್ಯಾಯ ನಿರೂಪಿತವಾಗಿದೆ.

**ಸಮೀಕ್ಷಕ :**– ಈ ಕಥನ ಒಂದು ಅನ್ಯೋನ್ಯಾಭಾವದಲ್ಲಿ, ಸಾಧರ್ಮ್ಯವೈಧರ್ಮ್ಯದಲ್ಲಿ ಪ್ರತಿಪಾದಿತವಾಗಬಲ್ಲದು. ಈ ಸರಳ ಪ್ರಕರಣವನ್ನು[೨೫] ಬಿಟ್ಟು, ಕಠಿನವಾದ ಬಲೆಯನ್ನು ಬೀಸುವುದು ಕೇವಲ ಅಜ್ಞಾನಿಗಳನ್ನು ಸಿಕ್ಕಿಸಿಕೊಳ್ಳುವುದಕ್ಕಾಗಿ ಮಾತ್ರವಾಗಿರುತ್ತದೆ. ನೋಡಿರಿ! ಜೀವನ ಅಭಾವ ಅಜೀವನಲ್ಲಿ. ಅಜೀವನ ಅಭಾವ ಜೀವನಲ್ಲಿ ಇದ್ದೇ ಇರುತ್ತದೆ. ಹೇಗೆ ಜೀವ ಮತ್ತು ಜಡ ಎರಡಕ್ಕೂ ಅಸ್ತಿತ್ವವಿರುವುದರಿಂದ ಸಾಧರ್ಮ್ಯ ಮತ್ತು ಚೇತನ ಹಾಗೂ ಜಡವಾಗಿರುವುದರಿಂದ ವೈಧರ್ಮ್ಯ, ಎಂದರೆ ಜೀವನಲ್ಲಿ ಚೇತನತ್ವ (ಅಸ್ತಿ) ಇದೆ; ಮತ್ತು ಜಡತ್ವ (ನಾಸ್ತಿ) ಇಲ್ಲ. ಇದೇ ರೀತಿ ಜಡದಲ್ಲಿ ಜಡತ್ವವಿದೆ; ಮತ್ತು ಚೇತನತ್ವವಿಲ್ಲ. ಇದರಿಂದ ಗುಣ, ಕರ್ಮ, ಸ್ವಭಾವಗಳ ಸಮಾನಧರ್ಮ ಮತ್ತು ವಿರುದ್ಧಧರ್ಮದ ಸಮಾಲೋಚನೆಯಿಂದ ಇವರ ಸಪ್ತಭಂಗೀ–ಸ್ಯಾದ್ವಾದವೆಲ್ಲವೂ ಸಹಜತ್ವದಿಂದ ಅರಿವಿಗೆ ಬಂದುಬಿಡುತ್ತದೆ. ಮತ್ತು ಇಷ್ಟು ಪ್ರಪಂಚನಾವರ್ಧನ ಯಾವ ಕಾರ್ಯಕ್ಕಾಗಿ? ಈ ವಿಷಯದಲ್ಲಿ ಬೌದ್ಧರ ಮತ್ತು ಜೈನರ ಮತ ಒಂದೇ ಆಗಿದೆ. ಸ್ವಲ್ಪ ಮಾತ್ರ ಬೇರೆಯಾಗುವುದರಿಂದ ಭಿನ್ನಭಾವವೂ ಉಂಟಾಗುತ್ತದೆ.

## ಈಗ, ಇದರ ಮುಂದಕ್ಕೆ ಕೇವಲ ಜೈನಮತದ ವಿಷಯದಲ್ಲಿ ಬರೆಯಲ್ಪಡುತ್ತದೆ

**ಚಿದಚಿದ್ವೇಪರೇ ತತ್ತ್ವೇ ವಿವೇಕಸ್ತದ್ವಿವೇಚನಮ್ ।**

**ಉಪಾದೇಯಮುಪಾದೇಯಂ ಹೇಯಂ ಹೇಯಂ ಚ ಕುರ್ವತಃ ॥ ೧॥**

**ಹೇಯಂ ಹಿ ಕರ್ತೃರಾಗಾದಿ ತತ್ಕಾರ್ಯಮವಿವೇಕಿನಃ ।**

**ಉಪಾದೇಯಂ ಪರಂಜ್ಯೋತಿರುಪಯೋಗೈಕಲಕ್ಷಣಮ್** [೨೫ಎ] ॥ ೨ ॥

ಜೈನರು ಚಿತ್ ಮತ್ತು ಅಚಿತ್, ಎಂದರೆ ಚೇತನ ಮತ್ತು ಜಡ–ಎರಡೇ ಪರತತ್ತ್ವಗಳನ್ನು ಅಂಗೀಕರಿಸುತ್ತಾರೆ. ಅವೆರಡರ ವಿವೇಚನಕ್ಕೇ ವಿವೇಕವೆಂದು ಹೆಸರು. ಯಾವ ಯಾವುದು ಸ್ವೀಕಾರಯೋಗ್ಯವೋ ಅದೆಲ್ಲದರ ಸ್ವೀಕಾರವನ್ನೂ, ಮತ್ತು ಯಾವ ಯಾವುದು ತ್ಯಾಗಯೋಗ್ಯವೋ, ಅದೆಲ್ಲದರ ತ್ಯಾಗವನ್ನೂ ಮಾಡುವವನನ್ನು ವಿವೇಕಿಯೆನ್ನುತ್ತಾರೆ. (೧)

---

೨೫. ೧. ಎಂದರೆ, ಪ್ರಕ್ರಿಯೆ–ಯು.ಮೀ

೨. ಸರ್ವದರ್ಶನ ಸಂಗ್ರಹ; ಅರ್ಹತ ದರ್ಶನ– ಯು.ಮೀ

ಜಗತ್ತಿನ ಕರ್ತೃ, ಮತ್ತು ರಾಗ ಮೊದಲಾದುದು ಮತ್ತು ಈಶ್ವರನು ಜಗತ್ತನ್ನು ರಚಿಸಿದ್ದಾನೆ-ಎಂಬ ಈ ಅವಿವೇಕೀ ಮತದ ತ್ಯಾಗವನ್ನೂ ಮತ್ತು ಯೋಗದಿಂದ ಲಕ್ಷಿತನಾಗುವ ಪರಮ ಜ್ಯೋತಿಃಸ್ವರೂಪನಾದ ಯಾವ ಜೀವನಿದ್ದಾನೋ, ಅವನ ಸ್ವಿಕಾರವನ್ನೂ ಮಾಡುವುದು ಉತ್ತಮವಾಗಿದೆ. (೨)

ಎಂದರೆ, ಜೀವನ ಹೊರತು ಎರಡನೆಯ ಚೇತನತತ್ತ್ವವಾದ ಈಶ್ವರನನ್ನು ಅಂಗೀಕರಿಸುವುದಿಲ್ಲ. ಅನಾದಿಸಿದ್ಧನಾದ ಈಶ್ವರನಾವನೂ ಇಲ್ಲವೆಂದು ಬೌದ್ಧರೂ, ಜೈನರೂ ತಿಳಿಯುತ್ತಾರೆ. ಈ ವಿಷಯದಲ್ಲಿ ರಾಜಾ ಶಿವಪ್ರಸಾದರು 'ಇತಿಹಾಸ ತಿಮಿರನಾಶಕ'ವೆಂಬ ಗ್ರಂಥದಲ್ಲಿ - "ಇವರಿಗೆ ಎರಡು ಹೆಸರುಗಳಿವೆ-ಒಂದು ಜೈನವೆಂದು, ಮತ್ತು ಇನ್ನೊಂದು ಬೌದ್ಧ-ಎಂದು. ಇವು ಪರ್ಯಾಯವಾಚಕ ಶಬ್ದಗಳಾಗಿವೆ." - ಎಂದು ಬರೆಯುತ್ತಾರೆ. ಆದರೆ ಬೌದ್ಧರಲ್ಲಿ ವಾಮಮಾರ್ಗಿ ಮಾಂಸಾಹಾರಿಗಳಿದ್ದಾರೆ. ಅವರೊಂದಿಗೆ ಜೈನರಿಗೆ ವಿರೋಧವಿದೆ. ಆದರೆ ಯಾವ ಮಹಾವೀರ ಮತ್ತು ಗೌತಮ ಗಣಧರರಿದ್ದಾರೋ, ಅವರಿಗೆ ಬೌದ್ಧರು 'ಬುದ್ಧ'ನೆಂದು ಹೆಸರಿಟ್ಟಿದ್ದಾರೆ; ಮತ್ತು ಜೈನರು ಅವರನ್ನೇ ಗಣಧರ ಮತ್ತು ಜಿನವರ-ಎಂದು ಕರೆದಿದ್ದಾರೆ. ಈ ವಿಷಯದಲ್ಲಿ ಯಾರ ಪರಂಪರೆ ಜೈನಮತವಾಗಿದೆಯೋ ಆ ರಾಜಾ ಶಿವಪ್ರಸಾದರು ತಮ್ಮ "ಇತಿಹಾಸತಿಮಿರನಾಶಕ"ವೆಂಬ ಗ್ರಂಥದ ಮೂರನೆಯ ಖಂಡದಲ್ಲಿ-"ಯಾರು ಜನ್ಮವೆತ್ತಿ ಒಟ್ಟು ಸಾವಿರವರ್ಷಗಳು ಕಳೆದಿವೆಯೋ, ಆ ಸ್ವಾಮೀ ಶಂಕರಾಚಾರ್ಯರಿಗಿಂತ ಮೊದಲು ಸಂಪೂರ್ಣ ಭಾರತವರ್ಷದಲ್ಲಿ ಬೌದ್ಧ ಅಥವಾ ಜೈನಧರ್ಮ ಹರಡಿದ್ದಿತು".- ಬರೆದಿದ್ದಾರೆ. ಇದರ ಮೇಲೆ-"ಮಹಾವೀರನ ಗಣಧರ ಗೌತಮ ಸ್ವಾಮಿಯ ಸಮಯದಿಂದ ಶಂಕರಸ್ವಾಮಿಯ ಸಮಯದವರೆಗೆ ಯಾವ ವೇದ ವಿರುದ್ಧವಾದ ಮತವು ಸಮಸ್ತ ಭಾರತ ವರ್ಷದಲ್ಲಿಯೂ ಪ್ರಸರಿಸಿದ್ದಿತೋ, ಮತ್ತು ಯಾವುದನ್ನು ಅಶೋಕನು ಮತ್ತು ಸಂಪ್ರತಿ ಮಹಾರಾಜನು[೨೬] ಅಂಗೀಕರಿಸಿದರೋ, ಅದೇ ಬೌದ್ಧಮತವೆಂದು ನಮ್ಮ ಆಶಯ. ಜೈನರು ಅದರಿಂದ ಯಾವ ರೀತಿಯಿಂದಲೂ ಹೊರ ಬರಲಾರರು. ಯಾರಿಂದ ಜೈನ ಶಬ್ದ ಹೊರಟಿತೋ ಆ ಜಿನ, ಯಾವನಿಂದ ಬೌದ್ಧ ಶಬ್ದ ಹೊರಟಿತೋ ಆ ಬುದ್ಧ ಎರಡೂ ಪರ್ಯಾಯವಾಚಕ ಶಬ್ದಗಳಾಗಿವೆ. ಕೋಶದಲ್ಲಿ[೨೭] ಎರಡಕ್ಕೂ ಒಂದೇ ಅರ್ಥ ಬರೆದಿದ್ದಾರೆ. ಮತ್ತು ಗೌತಮನನ್ನು ಇಬ್ಬರೂ ಒಪ್ಪಿಕೊಳ್ಳುತ್ತಾರೆ. ಅದೇ ಕಾರಣದಿಂದ, ದೀಪವಂಶ-ಈ ಮೊದಲಾದ ಬೌದ್ಧ ಗ್ರಂಥಗಳಲ್ಲಿ ಶಾಕ್ಯ ಮುನಿ ಗೌತಮ ಬುದ್ಧನನ್ನು ಅನೇಕಸಾರಿ ಮಹಾವೀರ ಎಂಬ ಹೆಸರಿನಿಂದಲೇ ನಿರ್ದೇಶಿಸಿದ್ದಾರೆ. ಅವರ ಕಾಲದಲ್ಲಿ ಅವರ ಮತ ಒಂದೇ ಇದ್ದಿರಬಹುದು. ನಾವು 'ಜೈನ' ಎಂದು ಬರೆಯದೆ, ಗೌತಮನ ಮತದವರನ್ನು 'ಬೌದ್ದರು' ಎಂದು ಬರೆದಿರುವುದರ ಉದ್ದೇಶ್ಯ, ಬೇರೆ ದೇಶದವರು 'ಬೌದ್ದರು' ಎಂಬ ಹೆಸರಿನಿಂದ ಬರೆದಿರುವುದೇ ಆಗಿದೆ".- ಎಂದು ಟಿಪ್ಪಣಿಯನ್ನು ಬರೆದಿದ್ದಾರೆ. ಹೀಗೆಯೇ 'ಅಮರಕೋಶ'ದಲ್ಲಿಯೂ ಬರೆದಿದ್ದಾರೆ:-

**ಸರ್ವಜ್ಞಃ ಸುಗತೋ ಬುದ್ಧೋ ಧರ್ಮರಾಜಸ್ತಥಾಗತಃ ।**
**ಸಮಂತ ಭದ್ರೋ ಭಗವಾನ್ ಮಾರಜಿಲ್ಲೋಕಜಿಜ್ಜಿನಃ ॥ ೧ ॥**

**ಷಡಭಿಜ್ಞೋ ದಶಬಲೋಽದ್ವಯವಾದೀ ವಿನಾಯಕಃ ।**
**ಮುನೀಂದ್ರಃ ಶ್ರೀಘನಃ ಶಾಸ್ತಾ ಮುನಿಃ ಶಾಕ್ಯಮುನಿಸ್ತು ಯಃ ॥ ೨ ॥**

**ಸ ಶಾಕ್ಯಸಿಂಹಃ ಸರ್ವಾರ್ಥಃ ಸಿದ್ಧಃ ಶೌದ್ಧೋದನಿಶ್ಚ ಸಃ ।**
**ಗೌತಮಶ್ಚಾರ್ಕಬಂಧುಶ್ಚ ಮಾಯಾದೇವೀಸುತಶ್ಚಸಃ ॥ ೩ ॥** (ಅಮರಕೋಶ: - ೧.೧.೮-೧೦)

ಈಗ ನೋಡಿರಿ! ಬುದ್ಧ-ಜಿನ ಮತ್ತು ಬೌದ್ಧ-ಜೈನ ಒಬ್ಬನದೇ ಹೆಸರು ಅಹುದೋ ಅಲ್ಲವೋ? ಅಮರಸಿಂಹನೂ[೨೮] ಕೂಡ ಬುದ್ಧ-ಜಿನ ಒಬ್ಬನೇ ಎಂದು ಬರೆಯುವಾಗ ಮೈಮರೆತನೇನು? ಯಾವ ಅವಿದ್ವಾಂಸರಾದ ಜೈನರಿದ್ದಾರೋ, ಅವರಂತೂ ತಮ್ಮದನ್ನೂ ಅರಿಯರು; ಬೇರೆಯವರದನ್ನೂ ಅರಿಯರು. ಕೇವಲ ಹಠವನ್ನು ಮಾತ್ರ ಮಾಡುತ್ತಾ ವಾದಿಸುತ್ತಾ ಹೋಗುತ್ತಾರೆ. ಆದರೆ, ಜೈನರಲ್ಲಿ ಯಾರು ವಿದ್ವಾಂಸರಿದ್ದಾರೋ, ಅವರೆಲ್ಲರೂ ಬುದ್ಧ ಮತ್ತು ಜಿನ, ಹಾಗೂ ಬೌದ್ಧ ಮತ್ತು ಜೈನ ಪರ್ಯಾಯವಾಚಕಗಳೆಂದು ಬಲ್ಲರು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಜೈನರು ಜೀವನೇ ಪರಮೇಶ್ವರನಾಗಿ

---

೨೬. ಎಂದರೆ, ಸ್ವಾಮೀ ದಯಾನಂದ ಸರಸ್ವತಿಗಳು.

೨೭. ಎಂದರೆ, ಅಮರಕೋಶ ಅಥವಾ ನಾಮಲಿಂಗಾನುಸಾಸನ ಶಬ್ದಕೋಶ

೨೮. ಅಮರಕೋಶ ದ ರಚಯಿತ್ರು

ಹೋಗುತ್ತಾನೆ-ಎಂದು ಹೇಳುತ್ತಾರೆ. ಅವರು ತಮ್ಮ ತೀರ್ಥಂಕರರನ್ನೇ ಕೇವಲೀ, ಮುಕ್ತಿ ಪ್ರಾಪ್ತರು ಮತ್ತು ಪರಮೇಶ್ವರರು-ಎಂದು ಅಂಗೀಕರಿಸುತ್ತಾರೆ. ಅನಾದಿ ಪರಮೇಶ್ವರ ನಾವನೂ ಇಲ್ಲವೆನ್ನುತ್ತಾರೆ. ಸರ್ವಜ್ಞ, ವೀತರಾಗ, ಅರ್ಹನ್, ಕೇವಲೀ, ತೀರ್ಥಕೃತ್, ಜಿನ-ಈ ಆರೂ ನಾಸ್ತಿಕರ[೨೯] ದೇವತೆಗಳ ಹೆಸರುಗಳಾಗಿವೆ. ಆದಿದೇವನ ಸ್ವರೂಪವನ್ನು ಚಂದ್ರಸೂರಿಯು **"ಆಪ್ತನಿಶ್ಚಯಾಲಂಕಾರ"** ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾನೆ:-

**ಸರ್ವಜ್ಞೋ ವೀತರಾಗಾದಿದೋಷಸ್ತ್ರೈ ಲೋಕ್ಯಪೂಜಿತಃ ।**

**ಯಥಾಸ್ಥಿತಾರ್ಥವಾದೀಚ ದೇವೋಽರ್ಹನ್ ಪರಮೇಶ್ವರಃ ॥ ೧ ॥**

ಹಾಗೆಯೇ ತೌತಾತೀತರೂ[೩೦] ಕೂಡ ಬರೆದಿದ್ದಾರೆ:-

**ಸರ್ವಜ್ಞೋ ದೃಶ್ಯತೇ ತಾವನ್ನೇದಾನೀಮಸ್ಮದಾದಿಭಿಃ ।**

**ದೃಷ್ಟೋನ ಚೈಕದೇಶೋಽಸ್ತಿ ಲಿಂಗಂ ವಾ ಯೋಽನುಮಾಪಯೇತ್ ॥ ೨॥**

**ನ ಚಾಗಮ ವಿಧಿಃ ಕಶ್ಚಿನ್ನಿತ್ಯಸರ್ವಜ್ಞಬೋಧಕಃ ।**

**ನ ಚ ತತ್ರಾರ್ಥವಾದಾನಾಂ ತಾತ್ಪರ್ಯಮಪಿಕಲ್ಪತೇ ॥ ೩॥**

**ನ ಚಾನ್ಯಾರ್ಥಪ್ರಧಾನೈಸ್ತದಸ್ತಿತ್ವಂ ಚ ವಿಧೀಯತೇ ।**

**ನ ಚಾನುವಾದಿತುಂ ಶಕ್ಯಃ ಪೂರ್ವಮನ್ಯೈರಬೋಧಿತಃ ॥ ೪॥** (ಸರ್ವದರ್ಶನಸಂಗ್ರಹ:- ಅರ್ಹತದರ್ಶನ)

ಯಾವನು ರಾಗವೇ ಮೊದಲಾದ ದೋಷಗಳಿಂದರಹಿತನೂ, ತ್ರೈಲೋಕ್ಯ ಪೂಜನೀಯನೂ ಪದಾರ್ಥಗಳನ್ನು ಯಥಾವತ್ತಾಗಿ ಹೇಳುವವನೂ, ಸರ್ವಜ್ಞನೂ ಆದ ಅರ್ಹನ್ ದೇವನಿದ್ದಾನೋ, ಅವನೇ ಪರಮೇಶ್ವರನಾಗಿದ್ದಾನೆ. (೧)

ನಾವು ಈ ಸಮಯದಲ್ಲಿ ಪರಮೇಶ್ವರನನ್ನು ನೋಡದೇ ಇರುವ ಕಾರಣ, ಯಾವ ಸರ್ವಜ್ಞನೂ, ಅನಾದಿಯೂ ಆದ ಪರಮಶ್ವರನೂ ಪ್ರತ್ಯಕ್ಷನಾಗಿಲ್ಲ. ಈಶ್ವರನ (ಇರುವಿಕೆ)ಯಲ್ಲಿ ಪ್ರತ್ಯಕ್ಷ ಪ್ರಮಾಣವಿಲ್ಲದಿರುವಾಗ ಅನುಮಾನವೂ ಅನ್ವಯಿಸಲಾರದು (೨).

ಪ್ರತ್ಯಕ್ಷಾನುಮಾರ್ಗಗಳಿಲ್ಲದ ಮೇಲೆ ಆಗಮ-ಎಂದರೆ ನಿತ್ಯನೂ, ಅನಾದಿಯೂ, ಸರ್ವಜ್ಞನೂ ಆದ ಪರಮಾತ್ಮನ ಬೋಧಕವಾದ ಶಬ್ದಪ್ರಮಾಣವೂ ಕೂಡ ಇರಲಾರದು. ಮೂರು ಪ್ರಮಾಣಗಳೂ ಇಲ್ಲವಾದರೆ, ಅರ್ಥವಾದ-ಎಂದರೆ, ಸ್ತುತಿ, ನಿಂದೆ, ಪರಕೃತಿ-ಎಂದರೆ ಅನ್ಯನ ಚರಿತ್ರದ ವರ್ಣನ, ಮತ್ತು ಪುರಾಕಲ್ಪ-ಎಂದರೆ ಇತಿಹಾಸದ ತಾತ್ಪರ್ಯವೂ ಕೂಡ ಅನ್ವಯಿಸಲಾರದು (೩).

ಮತ್ತು ಅನ್ಯಾರ್ಥ ಪ್ರಧಾನದಂತೆ-ಎಂದರೆ, ಬಳಸಿದ ಶಬ್ದಗಳಿಂದ ಸೂಚಿತವಾಗುವ ವಸ್ತುಗಳನ್ನು ಬಿಟ್ಟು, ಬೇರೆಯದೇ ಆದ ವಸ್ತುಗಳನ್ನು ಸೂಚಿಸುವ, 'ಚತುರ್ಭುಜ', 'ತ್ರಿನೇತ್ರ' ಮೊದಲಾದ ಬಹುವ್ರೀಹಿ ಸಮಾಸದಂತೆ, ಪರೋಕ್ಷವಾಗಿ ಪರಮಾತ್ಮನ ಸಿದ್ಧಿಯೂ ಆಗದು. ಮತ್ತೆ ಉಪದೇಶಕರಿಂದ, ತಾವು ಆಲಿಸದಿರುವ ಈಶ್ವರನಬಗೆಗೆ ಅನುವಾದವಾಗಬಲ್ಲದಾದರೂ ಹೇಗೆ? (೪)

**ಇದರ ಪ್ರತ್ಯಾ ಖ್ಯಾನ ಅಥವಾ ಖಂಡನ :-** ಅನಾದಿಯಾದ ಈಶ್ವರನು ಇಲ್ಲದೇ ಹೋಗಿದ್ದಲ್ಲಿ, 'ಅರ್ಹನ್' ದೇವನ ಮಾತಾಪಿತೃಗಳೇ ಮೊದಲಾದವರ ಶರೀರದ ಆಕೃತಿಯನ್ನು ಯಾವನು ನಿರ್ಮಿಸುತ್ತಿದ್ದನು? ಸಂಯೋಗಕರ್ತೃವಿಲ್ಲದೆ, ಯಥಾಯೋಗ್ಯವಾಗಿ ಸರ್ವಾವಯವ ಸಂಪನ್ನವೂ ಯಥೋಚಿತವಾದ ಕಾರ್ಯವನ್ನು ಮಾಡುವುದರಲ್ಲಿ ಉಪಯುಕ್ತವೂ ಆದ ಶರೀರ ರೂಪುಗೊಳ್ಳಲೇಲಾರದು. ಮತ್ತು ಯಾವ ಪದಾರ್ಥಗಳಿಂದ ಶರೀರವಾಗಿದೆಯೋ, ಅವು ಜಡವಾಗಿರುವುದರಿಂದ, ಸ್ವತಃ ಈ ರೀತಿಯ ಉತ್ತಮ ರಚನಾ ಯುಕ್ತವಾದ ಶರೀರವಾಗಿ ರೂಪಗೊಳ್ಳಲಾರವು; ಏಕೆಂದರೆ, ಅವುಗಳಲ್ಲಿ ಹೇಗೆ ಇರುವುದು

---

೨೯. ಎಂದರೆ, ಜೈನರ. -ಯು.ಮೀ.

೩೦. 'ತುತಾತಿತ' ಎಂಬುದು ಕುಮಾರಿಲಭಟ್ಟರ ಮತ್ತೊಂದು ಹೆಸರು. ಕುಮಾರಿಲನು 'ಮೀಮಾಂಸಾ-ವಾರ್ತಿಕ'ವನ್ನು ಬರೆದ ಪ್ರಸಿದ್ಧ ಮೀಮಾಂಸಕ. ಅವನ ಅನುಯಾಯಿಗಳು 'ತೌತಾತೀತ'ರು.

ಯೋಗ್ಯವೋ, ಹಾಗೆ ರೂಪಗೊಳ್ಳುವ ಜ್ಞಾನವೇ ಇಲ್ಲ. ಮತ್ತು ಯಾವನು ರಾಗಮೊದಲಾದ ದೋಷಗಳಿಂದ ಸಹಿತನಾಗಿದ್ದು, ಆಮೇಲೆ ದೋಷರಹಿತನಾಗುತ್ತಾನೋ ಅವನು ಎಂದಿಗೂ ಈಶ್ವರನಾಗಲಾರನು. ಏಕೆಂದರೆ, ಯಾವ ನಿಮಿತ್ತದಿಂದ ಅವನು ರಾಗ - ಮೊದಲಾದುವುಗಳಿಂದ ಮುಕ್ತನಾಗುತ್ತಾನೋ, ಆ ಮುಕ್ತಿಯೂ ಕೂಡ ಆ ನಿಮಿತ್ತದ ಕಾರ್ಯವಾದ ಮುಕ್ತಿಯಾಗಿರುವುದರಿಂದ, ಈ ನಿಮಿತ್ತವು ಬಿಟ್ಟು ಹೋಗಿರುವುದರಿಂದ, ಅನಿತ್ಯವಾಗಿರುವುದು. ಯಾವನು ಅಲ್ಪನೂ, ಅಲ್ಪಜ್ಞನೂ ಆಗಿದ್ದಾನೋ, ಅವನು ಎಂದಿಗೂ ಸರ್ವವ್ಯಾಪಕನೂ ಮತ್ತು ಸರ್ವಜ್ಞನೂ ಆಗಲಾರನು. ಏಕೆಂದರೆ, ಜೀವನ ಸ್ವರೂಪವು ಏಕದೇಶೀಯವೂ, ಮತ್ತು ಪರಿಮಿತಗುಣಕರ್ಮಸ್ವಭಾವಯುಕ್ತವೂ ಆಗಿದೆ. ಅವನು ಸಮಸ್ತ ವಿದ್ಯೆಗಳಲ್ಲಿಯೂ ಎಲ್ಲ ರೀತಿಯಿಂದಲೂ ಯಥಾರ್ಥವಾದಿಯಾಗಲಾರನು. ಆದುದರಿಂದ ನಿಮ್ಮ ತೀರ್ಥಂಕರನು ಎಂದಿಗೂ ಪರಮೇಶ್ವರನಾಗಲಾರನು. ನೀವು ಯಾವ ಪದಾರ್ಥಗಳು ಪ್ರತ್ಯಕ್ಷವಾಗಿವೆಯೋ, ಅವುಗಳನ್ನು ಮಾತ್ರ ಅಂಗೀಕರಿಸುತ್ತೀರೋ? ಅಪ್ರತ್ಯಕ್ಷವಾಗಿರುವುದನ್ನು ಅಂಗೀಕರಿಸುವುದಿಲ್ಲವೊ? ಹೇಗೆ ಕಿವಿಯಿಂದ ರೂಪದ ಮತ್ತು ಕಣ್ಣಿನಿಂದ ಶಬ್ದದ ಗ್ರಹಿಕೆಯಾಗಲಾರದೋ, ಹಾಗೆಯೇ ಅನಾದಿ ಪರಮಾತ್ಮನನ್ನು (ಈ ಇಂದ್ರಿಯಗಳಿಂದ ನೋಡಲಾಗದು) ಅವನನ್ನು ನೋಡುವ ಸಾಧನ ಶುದ್ಧವಾದ ಅಂತಃಕರಣ; ವಿದ್ಯೆಯಿಂದ ಮತ್ತು ಯೋಗಾಭ್ಯಾಸದಿಂದ ಪವಿತ್ರಾತ್ಮನು ಪರಮಾತ್ಮನನ್ನು ಪ್ರತ್ಯಕ್ಷವಾಗಿ ನೋಡುತ್ತಾನೆ. ಹೇಗೆ ಓದದೇ ಇದ್ದರೆ, ವಿದ್ಯೆಯ ಪ್ರಯೋಜನಗಳ ಪ್ರಾಪ್ತಿಯಾಗುವುದಿಲ್ಲವೋ, ಹಾಗೆಯೇ ಯೋಗಾಭ್ಯಾಸ ಮತ್ತು ಜ್ಞಾನವಿಲ್ಲದೆ ಪರಮಾತ್ಮನೂ ಕಾಣಿಸುವುದಿಲ್ಲ. ಹೇಗೆ ಭೂಮಿಯ ರೂಪವೇ ಮೊದಲಾದ ಗುಣಗಳನ್ನು ಮಾತ್ರವೇ ನೋಡಿ, ತಿಳಿದು, ಗುಣಗಳಿಂದ ಅವ್ಯವಹಿತವಾದ (ಅಡ್ಡಿ ಅಥವಾ ಮರೆಯಿಲ್ಲದೆ) ಸಂಬಂಧದಿಂದ ಪೃಥಿವಿಯು ಪ್ರತ್ಯಕ್ಷವಾಗುತ್ತದೋ, ಹಾಗೆ ಈ ಸೃಷ್ಟಿಯಲ್ಲಿ ಪರಮಾತ್ಮನ ರಚನಾವಿಶೇಷವಾದ ಚಿಹ್ನೆಯನ್ನು ನೋಡಿದಲ್ಲಿ ಪರಮಾತ್ಮನು ಪ್ರತ್ಯಕ್ಷನಾಗುತ್ತಾನೆ. ಮತ್ತು ಪಾಪಾಚರಣದ ಇಚ್ಛೆಯುಂಟಾದ ಸಮಯದಲ್ಲಿ ಯಾವ ಭಯ, ಸಂಶಯ, ಲಜ್ಜೆ ಉತ್ಪನ್ನವಾಗುತ್ತವೋ, ಅವು ಅಂತರ್ಯಾಮಿಯಾದ ಪರಮಾತ್ಮನ ಕಡೆಯಿಂದ ಆಗುತ್ತವೆ. ಇದರಿಂದಲೂ ಪರಮಾತ್ಮನು ಪ್ರತ್ಯಕ್ಷನಾಗಿರುತ್ತಾನೆ. ಮುಕ್ತಿಗೆ ಅನುಮಾನಪ್ರಮಾಣ ಅನ್ವಯಿಸುವುದರಲ್ಲಿ ಸಂದೇಹವೇನು ತಾನೇ ಆದಿತು? (೨)

ಮತ್ತು ಪ್ರತ್ಯಕ್ಷ ಅನುಮಾನಗಳು ಅನ್ವಯಿಸುವುದರಿಂದ ಆಗಮ ಪ್ರಮಾಣವೂ ಕೂಡ ನಿತ್ಯನೂ, ಅನಾದಿಯೂ, ಸರ್ವಜ್ಞನೂ ಆದ ಈಶ್ವರನ ಬೋಧಕವಾಗಿರುತ್ತದೆ. ಆದುದರಿಂದ ಈಶ್ವರನ ವಿಷಯದಲ್ಲಿ ಶಬ್ದ ಪ್ರಮಾಣವೂ ಇದೆ. ಯಾವಾಗ ಮೂರು ಪ್ರಮಾಣಗಳಿಂದಲೂ ಈಶ್ವರನನ್ನು ಜೀವನು ತಿಳಿದುಕೊಳ್ಳಬಲ್ಲನೋ, ಆಗ ಅರ್ಥವಾದ-ಎಂದರೆ ಪರಮೇಶ್ವರನ ಗುಣಗಳ ಪ್ರಶಂಸೆಯನ್ನು ಮಾಡುವುದೂ ಕೂಡ ಯಥಾರ್ಥವಾಗಿ ಅನ್ವಯಿಸುತ್ತದೆ. ಏಕೆಂದರೆ-ಯಾವ ಪದಾರ್ಥಗಳು ನಿತ್ಯವಾಗಿರುತ್ತವೋ, ಅವುಗಳ ಗುಣ-ಕರ್ಮ-ಸ್ವಭಾವಗಳೂ ಕೂಡ ನಿತ್ಯವಾಗಿರುತ್ತವೆ. ಅವುಗಳ ಪ್ರಶಂಸೆಯನ್ನು ಮಾಡುವುದರಲ್ಲಿ ಪ್ರತಿಬಂಧಕವಾವುದೂ ಇಲ್ಲ. (೩)

ಹೇಗೆ ಮಾನವರಲ್ಲಿ (ಜೀವಿತದಲ್ಲಿ) ಕರ್ತೃವಿಲ್ಲದೆ ಯಾವ ಕಾರ್ಯವೂ ಆಗುವುದಿಲ್ಲವೋ, ಹಾಗೆಯೇ ಕರ್ತೃವಿಲ್ಲದೆ ಈ ಮಹತ್ಕಾರ್ಯದ[೩೧] ಆಗುವಿಕೆಯು ಸರ್ವಥಾ ಅಸಂಭವವಾಗಿದೆ. ಸ್ಥಿತಿ ಹೀಗಿರುವಾಗ, ಈಶ್ವರನ ಇರುವಿಕೆಯಲ್ಲಿ ಮೂಢನಿಗೂ ಕೂಡ ಸಂದೇಹ ಉಂಟಾಗಲಾರದು. ಪರಮಾತ್ಮನ ಬಗೆಗೆ ಉಪದೇಶಗಳನ್ನು ಮಾಡುವವರಿಂದ ಯಾವಾಗ ಆಲಿಸುವರೋ, ಆ ನಂತರ ಅದರ ಅನುವಾದವನ್ನು[೩೨] ಮಾಡುವುದು ಕೂಡ ಸರಳವಾಗಿರುತ್ತದೆ (೪).

ಈ ಕಾರಣದಿಂದ ಪ್ರತ್ಯಕ್ಷ ಮೊದಲಾದ ಪ್ರಮಾಣಗಳ (ಅಭಾವದ) ನೆಪದಿಂದ ಈಶ್ವರನ (ಅಸ್ತಿತ್ವದ) ಖಂಡನವನ್ನು ಮಾಡುವುದೇ ಮೊದಲಾದ ಜೈನರ ವ್ಯವಹಾರ ಅನುಚಿತವಾಗಿದೆ.

**ಪ್ರಶ್ನೆ:- ಅನಾದೇರಾಗಮಸ್ಯಾರ್ಥೋ ನ ಚ ಸರ್ವಜ್ಞ ಆದಿಮಾನ್ ।**

**ಕೃತ್ರಿಮೇಣತ್ವಸತ್ಯೇನ ಸ ಕಥಂ ಪ್ರತಿಪದ್ಯತೇ ॥ ೧॥**

**ಅಥ ತದ್ವಚನೇನೈವ ಸರ್ವಜ್ಞೋऽನ್ಯೈಃ ಪ್ರತೀಯತೇ ।**

**ಪ್ರಕಲ್ಪೇತ ಕಥಂ ಸಿದ್ಧಿರನ್ಯೋऽನ್ಯಾಶ್ರಯಯೋಸ್ತಯೋಃ ॥ ೨॥**

---

೩೧. ಎಂದರೆ, ಸೃಷ್ಟಿ ರಚನೆ, ಪಾಲನೆ, ಸಂಹಾರ.

೩೨. ಎಂದರೆ, ಪ್ರವಚನವನ್ನು

**ಸರ್ವಜ್ಞೋಕ್ತತಯಾ ವಾಕ್ಯಂ ಸತ್ಯಂ ತೇನ ತದಸ್ತಿತಾ ।**
**ಕಥಂ ತದುಭಯಂ ಸಿಧ್ಯೇತ್ಸಿದ್ಧಮೂಲಾಂತರಾದೃತೇ ॥ ೩॥** (ಸರ್ವದರ್ಶನಸಂಗ್ರಹ:– ಅರ್ಹತ ದರ್ಶನ)

ಆದಿಯನ್ನುಳ್ಳ ಸರ್ವಜ್ಞನು[೩೩] ಅನಾದಿಯಾದ ಆಗಮಶಾಸ್ತ್ರದ ಪ್ರತಿಪಾದ್ಯ ವಿಷಯವಾಗಲಾರದು; ಏಕೆಂದರೆ, ರಚಿಸಲ್ಪಟ್ಟ ಅಸತ್ಯವಚನದಿಂದ[೩೪] ಅವನ ಪ್ರತಿಪಾದನ ಆಗಬಲ್ಲುದಾದರೂ ಹೇಗೆ? (೧)

ಮತ್ತು ಪರಮೇಶ್ವರನ ವಚನದಿಂದಲೇ ಪರಮೇಶ್ವರನು ಸಿದ್ಧನಾಗುತ್ತಾನೆಯಾದರೆ, ಅನಾದಿ ಈಶ್ವರನಿಂದ ಅನಾದಿ ಶಾಸ್ತ್ರದ ಸಿದ್ಧಿ, ಅನಾದಿ ಶಾಸ್ತ್ರದಿಂದ ಅನಾದಿ ಈಶ್ವರನ ಸಿದ್ಧಿ–ಎಂಬ ಅನ್ಯೋನ್ಯಾಶ್ರಯದದೋಷ ಬರುತ್ತದೆ (೨).

ಏಕೆಂದರೆ, ಸರ್ವಜ್ಞನ ಕಥನವಾದುದರಿಂದ ಆ ವೇದವಾಕ್ಯ ಸತ್ಯವೆಂದು, ಮತ್ತು ಅದೇ ವೇದವಚನದಿಂದ ಈಶ್ವರನ ಸಿದ್ಧಿಯನ್ನು ಮಾಡುತ್ತೀರಿ. ಇದು ಹೇಗೆ ಸಿದ್ಧವಾದೀತು? ಆ ಶಾಸ್ತ್ರದ ಮತ್ತು ಪರಮೇಶ್ವರನ ಸಿದ್ಧಿಗಾಗಿ ಯಾವುದಾದರೂ ಮೂರನೆಯ ಪ್ರಮಾಣಬೇಕು. ಹೀಗೆ ಅಂಗೀಕರಿಸುವಿರಾದರೆ, ಅನವಸ್ಥಾದೋಷ[೩೫] ಬರುವುದು (೩).

**ಉತ್ತರ:–** ನಾವು ಪರಮೇಶ್ವರನನ್ನೂ, ಮತ್ತು ಪರಮೇಶ್ವರನ ಗುಣ–ಕರ್ಮ–ಸ್ವಭಾವಗಳನ್ನೂ ಅನಾದಿಯೆಂದು ಅಂಗೀಕರಿಸುತ್ತೇವೆ. ಅನಾದಿ–ನಿತ್ಯ ಪದಾರ್ಥಗಳಲ್ಲಿ ಅನ್ಯೋನ್ಯಾಶ್ರಯದೋಷ ಬರಲಾರದು. ಹೇಗೆ ಕಾರ್ಯದಿಂದ ಕಾರಣದ ಜ್ಞಾನವೂ ಮತ್ತು ಕಾರಣದಿಂದ ಕಾರ್ಯದ ಬೋಧವೂ ಉಂಟಾಗುತ್ತದೋ, ಹೇಗೆ ಕಾರ್ಯದಲ್ಲಿ ಕಾರಣದ ಸ್ವಭಾವವೂ ಮತ್ತು ಕಾರಣದಲ್ಲಿ ಕಾರ್ಯದ ಸ್ವಭಾವವೂ ನಿತ್ಯವಾಗಿರುತ್ತದೋ, ಹಾಗೆ ಪರಮೇಶ್ವರನೂ ಮತ್ತು ಪರಮೇಶ್ವರನ ಅನಂತ ವಿದ್ಯೆಯೇ ಮೊದಲಾದ ಗುಣಗಳೂ ನಿತ್ಯವಾಗಿರುವುದರಿಂದ, ಈಶ್ವರ ಪ್ರಣೀತವಾದ ವೇದದಲ್ಲಿ ಅನವಸ್ಥಾದೋಷವು ಬರುವುದಿಲ್ಲ. (೧–೩) ಮತ್ತು ನೀವು ತೀರ್ಥಂಕರರನ್ನು ಪರಮೇಶ್ವರರೆಂದು ಅಂಗೀಕರಿಸುತ್ತೀರಿ. ಇದು ಎಂದಿಗೂ ಹೊಂದಿಕೊಳ್ಳಲಾರದು. ಏಕೆಂದರೆ, ಮಾತಾಪಿತೃಗಳಿಲ್ಲದಿದ್ದರೆ, ಅವರಿಗೆ ಶರೀರವೇ ಪ್ರಾಪ್ತವಾಗುವುದಿಲ್ಲ ಎಂದ ಮೇಲೆ ಅವರು ತಪಶ್ಚರ್ಯೆಯ ಜ್ಞಾನವನ್ನೂ ಮತ್ತು ಮುಕ್ತಿಯನ್ನೂ ಹೇಗೆ ತಾನೇ ಪಡೆಯಬಲ್ಲರು? ಹಾಗೆಯೇ ಸಂಯೋಗದ ಆದಿ ಅವಶ್ಯವಾಗಿ ಇರುತ್ತದೆ. ಏಕೆಂದರೆ, ವಿಯೋಗವಿಲ್ಲದೆ ಸಂಯೋಗವು ಆಗಲೇಲಾರದು. ಆದುದರಿಂದ, ಅನಾದಿಯಾದ ಸೃಷ್ಟಿಕರ್ತೃ ಪರಮಾತ್ಮನನ್ನು ಅಂಗೀಕರಿಸಿರಿ.

ನೋಡಿರಿ! ಯಾವನು ಎಷ್ಟೇ ದೊಡ್ಡ ಸಿದ್ಧನೇ ಆಗಿರಲಿ, ಹಾಗಿದ್ದರೂ ಕೂಡ ಶರೀರ–ಮೊದಲಾದುವುಗಳ ರಚನೆಯನ್ನು ಪೂರ್ಣತಃ ತಿಳಿದುಕೊಳ್ಳಲಾರನು. ಯಾವಾಗ ಸಿದ್ಧ ಜೀವನು ಸುಷುಪ್ತಿ ಸ್ಥಿತಿಯಲ್ಲಿರುತ್ತಾನೋ, ಆಗ ಅವನಿಗೆ ಸ್ವಲ್ಪ ಅರಿವೂ ಆಗುವುದಿಲ್ಲ. ಯಾವಾಗ ಜೀವನು ದುಃಖವನ್ನು ಹೊಂದುತ್ತಾನೋ ಆಗ ಅವನ ಜ್ಞಾನವೂ ಕೂಡ ಕಡಿಮೆಯಾಗಿ ಹೋಗುತ್ತದೆ. ಹೀಗೆ ಪರಿಚ್ಛಿನ್ನ ಸಾಮರ್ಥ್ಯವನ್ನುಳ್ಳ ಏಕದೇಶೀಯನನ್ನು ಈಶ್ವರನೆಂದು ಗ್ರಹಿಸುವುದು ಭ್ರಾಂತ ಬುದ್ಧಿಯುಕ್ತರಾದ ಜೈನರನ್ನು ಬಿಟ್ಟರೆ, ಬೇರೆ ಯಾವನಿಗೂ ಶಕ್ಯವಲ್ಲ. ತೀರ್ಥಂಕರರು ತಮ್ಮ ಮಾತಾಪಿತೃಗಳಿಂದ ಉದ್ಭವಿಸಿದರು–ಎಂದು ನೀವು ಹೇಳುವಿರಾದರೆ, ಅವರು[೩೬] ಯಾರಿಂದ ಹುಟ್ಟಿದರು? ಮತ್ತು ಅವರ ಮಾತಾಪಿತೃಗಳು ಯಾರಿಂದ ಜನಿಸಿದರು? ಮತ್ತೆ ಅವರ ಮಾತಾಪಿತೃಗಳೂ ಯಾರಿಂದ ಉತ್ಪನ್ನರಾದರು? ಈ ಮೊದಲಾದ ಅನವಸ್ಥಾದೋಷವು ಬರುವುದು.

## ಆಸ್ತಿಕನ ಮತ್ತು ನಾಸ್ತಿಕನ ಸಂವಾದ

ಇಲ್ಲಿಂದ ಮುಂದಕ್ಕೆ **"**ಪ್ರಕರಣ ರತ್ನಾಕರ**"**ದ ದ್ವಿತೀಯ ಭಾಗದ ಆಸ್ತಿಕ–ನಾಸ್ತಿಕ ಸಂವಾದದ ಪ್ರಶ್ನೋತ್ತರಗಳನ್ನು[೩೭] ಇಲ್ಲಿ ಬರೆಯುತ್ತೇವೆ. ಅದನ್ನು ದೊಡ್ಡ ದೊಡ್ಡ ಜೈನರು ತಮ್ಮ ಸಮ್ಮತಿಯಿಂದ ಅಂಗೀಕರಿಸಿದ್ದಾರೆ ಮತ್ತು ಬೊಂಬಾಯಿಯಲ್ಲಿ ಮುದ್ರಣಮಾಡಿಸಿದ್ದಾರೆ.

---

೩೩. ಮೊದಲು ಸರ್ವಜ್ಞನಾಗಿರದೇ ಸಾಧನಾನಂತರ, ಸರ್ವಜ್ಞನಾದವನು.

೩೪. ಯಾವುದು ಅನಾದಿಯಲ್ಲವೋ, ಅದು ರಚಿತವಾದುದು. ರಚಿತವಾದ ವಚನ ನಿತ್ಯವಲ್ಲದ ಕಾರಣ ಅಸತ್ಯ.

೩೫. ಅದರಿಂದ ಇದೋ, ಇದರಿಂದ ಅದೋ, ಮೂರನೇಯಾದರಿಂದ ಇವೆರಡೋ–ಎಂಬ ಸಂಶಯಾಸ್ಪದ ನಿಲುವು.; ಸಂದಿಗ್ಧ ಸ್ಥಿತಿ.

೩೬. ಎಂದರೆ, ಮಾತಾಪಿತೃಗಳು

೩೭. ಜೈನರು ತಮ್ಮನ್ನು ಆಸ್ತಿಕರೆಂದೂ, ಈಶ್ವರವಾದಿಗಳನ್ನು ನಾಸ್ತಿಕರೆಂದೂ, ಕರೆಯುತ್ತಾರೆ. ಹಾಗೆಯೇ, ಈ ಪ್ರಕರಣ ರತ್ನಾಕರದಲ್ಲಿ [ಪುಟ ೧೭೭–೨೧೧] ಈ ಸಂವಾದ ವಿದೆ. ಆದರೆ, ಋಷಿ ದಯಾನಂದರು 'ಸತ್ಯಾರ್ಥ ಪ್ರಕಾಶ'ದಲ್ಲಿ ಆ ಗ್ರಂಥದ ಉತ್ತರ ಪಕ್ಷ [ಆಸ್ತಿಕ] ಮತ್ತು ಪೂರ್ವ ಪಕ್ಷ [ನಾಸ್ತಿಕ]ವಾಗಿಯೂ; ಮತ್ತು ಪೂರ್ವಪಕ್ಷ [ನಾಸ್ತಿಕ]ವನ್ನು ಉತ್ತರ ಪಕ್ಷ [ಆಸ್ತಿಕ]ವಾಗಿಯೂ ಪರಿವರ್ತಿಸಿ, ಸಂವಾದವನ್ನು ಸಂಕ್ಷೇಪಿಸಿ ಬರೆದಿದ್ದಾರೆ. ಸ್ವಾಮಿ ವೇದಾನಂದ. 'ಸತ್ಯಾರ್ಥ ಪ್ರಕಾಶ' –ಸಂಸ್ಕರಣ.

**ನಾಸ್ತಿಕ:–** ಈಶ್ವರನ ಇಚ್ಛೆಯಿಂದ ಏನೂ ಆಗುವುದಿಲ್ಲ. ಏನೇನೂ ಆಗುತ್ತದೋ, ಅದೆಲ್ಲವೂ ಕರ್ಮದಿಂದ.

**ಆಸ್ತಿಕ:–** ಎಲ್ಲವೂ ಕರ್ಮದಿಂದ ಆಗುವುದಾದರೆ, ಕರ್ಮ ಯಾರಿಂದ ಆಗುತ್ತದೆ? ಜೀವ ಮೊದಲಾದವರಿಂದ ಆಗುತ್ತದೆ–ಎನ್ನುವಿರಾದರೆ, ಯಾವ ಕಿವಿಯೇ ಮೊದಲಾದ ಸಾಧನಗಳಿಂದ ಜೀವನು ಕರ್ಮಮಾಡುತ್ತಾನೋ, ಅವು ಯಾರಿಂದಾದವು? ಅನಾದಿಕಾಲದಿಂದ ಮತ್ತು ಸ್ವಭಾವದಿಂದ ಆಗುತ್ತವೆ–ಎಂದು ಹೇಳುವಿರಾದರೆ, ಅನಾದಿಯಾದುದರ ಬಿಟ್ಟು ಹೋಗುವಿಕೆ ಅಸಂಭವವಾಗಿ, ನಿಮ್ಮ ಮತದಲ್ಲಿ ಮುಕ್ತಿಗೆ ಅಭಾವ ಬರುವುದು. ಪ್ರಾಗಭಾವದ[೩೮] ಹಾಗೆ ಅನಾದಿಗಳೇ ಆದರೂ ಸಾಂತವಾಗಿರುತ್ತವೆ–ಎನ್ನುವಿರಾದರೆ, ಯತ್ನವಿಲ್ಲದೆಯೇ ಸರ್ವರ ಕರ್ಮಗಳೂ ನಿವೃತ್ತವಾಗಿ ಹೋಗುವುವು.[೩೯] ಈಶ್ವರನು ಫಲ ಪ್ರದಾಯಕನಲ್ಲವಾದರೆ, ಪಾಪದ ಫಲವಾದ ದುಃಖವನ್ನು ಜೀವನು ತನ್ನ ಇಚ್ಛೆಯಿಂದ ಎಂದಿಗೂ ಅನಭವಿಸುವುದಿಲ್ಲ. ಉದಾಹರಣೆಗೆ, ಕಳ್ಳರೇ ಮೊದಲಾದವರು ಕಳ್ಳತನದ ಫಲವನ್ನು ತಮ್ಮ ಇಚ್ಛೆಯಿಂದ ಅನುಭವಿಸುವುದಿಲ್ಲ; ಆದರೆ–ರಾಜ್ಯವ್ಯವಸ್ಥೆಯಿಂದಾಗಿ ಅನುಭವಿಸುತ್ತಾರೆ. ಹಾಗೆಯೇ ಪರಮೇಶ್ವರನು ಭೋಗಮಾಡಿಸುವುದರಿಂದ ಪಾಪ–ಪುಣ್ಯಗಳ ಫಲವನ್ನು ಅನುಭವಿಸುತ್ತಾರೆ. ಅನ್ಯಥಾ ಕರ್ಮ–ಸಂಕರವಾಗಿ[೪೦] ಹೋಗುವುದು. ಒಬ್ಬರ ಕರ್ಮವನ್ನು ಮತ್ತೊಬ್ಬರು ಅನುಭವಿಸಬೇಕಾಗಿ ಬಂದೀತು.

**ನಾಸ್ತಿಕ :–** ಈಶ್ವರನು ಅಕ್ರಿಯನು. ಏಕೆಂದರೆ, ಕರ್ಮಗಳನ್ನು ಮಾಡುತ್ತಿದ್ದಲ್ಲಿ ಕರ್ಮಫಲವನ್ನು ಕೂಡ ಅನುಭವಿಸಬೇಕಾಗಿ ಬರುತ್ತಿದ್ದಿತು. ಆದುದರಿಂದ ಹೇಗೆ ನಾವು ಕೇವಲ ಜ್ಞಾನಿಗಳಾಗಿ ಮುಕ್ತರಾದವರನ್ನು ಅಂಗೀಕರಿಸುತ್ತೇವೊ, ಹಾಗೆ ನೀವು ಕೂಡ ಅಂಗೀಕರಿಸಿರಿ.

**ಆಸ್ತಿಕ:–** ಈಶ್ವರನು ಅಕ್ರಿಯನಲ್ಲ; ಸಕ್ರಿಯನು. ಚೇತನನಾಗಿರುವಾಗ ಕರ್ತೃವೇಕಲ್ಲ? ಮತ್ತು ಕರ್ತೃವಾಗಿರುವುದಾದರೆ ಕ್ರಿಯೆಯಿಂದ ಎಂದಿಗೂ ಬೇರೆಯಿರಲಾರನು. ನೀವು ಎಂತಹ ಕೃತ್ರಿಮನೂ, ಕಲ್ಪಿತನೂ ಆದ, ಜೀವನಿಂದ ಆದ ಈಶ್ವರನನ್ನು, ತೀರ್ಥಂಕರನನ್ನು ಅಂಗೀಕರಿಸುತ್ತೀರೋ, ಅಂತಹ ಈಶ್ವರನನ್ನು ವಿದ್ವಾಂಸನಾವನೂ ಅಂಗೀಕರಿಸಲಾರನು. ಏಕೆಂದರೆ, ನಿಮಿತ್ತದಿಂದ ಈಶ್ವರನಾಗುವುದಾದರೆ ಅವನು ಅನಿತ್ಯನೂ, ಪರಾಧೀನನೂ ಆಗಿ ಹೋಗುವನು. ಏಕೆಂದರೆ, ಈಶ್ವರನಾಗುವ ಮುನ್ನ ಜೀವನಾಗಿದ್ದನು. ಆಮೇಲೆ ಯಾವುದೋ ನಿಮಿತ್ತದಿಂದ ಈಶ್ವರನಾದನು; ಹಾಗಾದರೆ ಮತ್ತೂ ಜೀವನಾಗಿ ಹೋಗುವನು ಜೀವತ್ವೆಂಬ ತನ್ನ ಸ್ವಭಾವವನ್ನು ಎಂದಿಗೂ ಬಿಡಲಾರನು. ಏಕೆಂದರೆ, ಅನಾದಿಕಾಲದಿಂದ ಜೀವನಿದ್ದಾನೆ; ಮತ್ತು ಅನಂತ ಕಾಲದವರೆಗೂ ಇರುವನು. ಆದುದರಿಂದ, ಅನಾದಿಯೂ ಸ್ವತಃ ಸಿದ್ಧನೂ ಆದ (ಈ) ಈಶ್ವರನನ್ನು ಅಂಗೀಕರಿಸುವುದು ಯೋಗ್ಯವಾಗಿದೆ. ನೋಡಿರಿ, ಹೇಗೆ ವರ್ತಮಾನದಲ್ಲಿ ಜೀವನು ಪಾಪ–ಪುಣ್ಯಗಳನ್ನು ಮಾಡುತ್ತಾನೋ, ಸುಖ–ದುಃಖಗಳನ್ನು ಅನುಭವಿಸುತ್ತಾನೋ, ಹಾಗೆ ಈಶ್ವರನು ಎಂದಿಗೂ (ಸುಖ–ದುಃಖ ಭಾಗಿ) ಆಗುವುದಿಲ್ಲ. ಈಶ್ವರನು ಕ್ರಿಯಾವಂತನಾಗಿರದಿದ್ದರೆ, ಈ ಜಗತ್ತನ್ನೆಂತು ನಿರ್ಮಿಸಬಲ್ಲವನಾಗುತ್ತಿದ್ದನು? ಕರ್ಮಗಳನ್ನು ಪ್ರಾಗಭಾವದಂತೆ ಅನಾದಿ–ಸಾಂತವೆಂದು ಗ್ರಹಿಸುವಿರಾದರೆ, ಕರ್ಮವು ಸಮವಾಯ ಸಂಬಂಧದಿಂದ ಇರಬಾರದು. ಯಾವುದು ಸಮವಾಯಸಂಬಂಧ[೪೧] ದಿಂದ ಇರುವುದಿಲ್ಲವೋ, ಅದು

೩೮. ವೈದಿಕರೂ ಕೂಡ –ಪ್ರಾಗಭಾವ, ಎಂದರೆ, ಪದಾರ್ಥ ವಾಗುವ ಮುನ್ನ ಇದ್ದ ಅದರ ಅಭಾವ. ಪ್ರಧ್ವಂಸಾಭಾವ, ಎಂದರೆ, ವಸ್ತುವು ನಾಶವಾದ ಮೇಲೆ ಉದ್ಭವಿಸುವ ಅಭಾವ. ಅನ್ಯೋನ್ಯಾ ಭಾವ, ಎಂದರೆ ಗೋವಿನಲ್ಲಿ ಅಶ್ವತ್ವವಿಲ್ಲ. ಅಶ್ವದಲ್ಲಿ ಗೋತ್ವವಿಲ್ಲ. ಎಂಬ ರೀತಿಯ ಅಭಾವ. ಸಂಬಂಧಾಭಾವ, ಎಂದರೆ ಮನೆಯಲ್ಲಿ ಘಟವಿಲ್ಲ, ಎಂಬ ಬಗೆಯ ಅಭಾವ. ಅತ್ಯಂತಾಭಾವ, ಎಂದರೆ, ಸರ್ವದಾ, ಸರ್ವಥಾ, ಸರ್ವತ್ರ ವಸ್ತುವಿನ ಅಭಾವ ಇವನ್ನು ಗ್ರಹಿಸುತ್ತಾರೆ. ಪ್ರಾಗಭಾವ ಅನಾದಿಯಹುದು. ಪದಾರ್ಥ ರಚಿತವಾದ ಮೇಲೆ ಆ ಅಭಾವಕ್ಕೆ ಅಂತ ಬರುವುದು.

೩೯. ಕೊನೆಯಾಗಬೇಕು ಬಂಧನ–ಎಂದ ಮೇಲೆ, ಯತ್ನ ಮಾಡುವುದು –ಮಾಡದಿರುವುದು– ಎರಡೂ ಒಂದೇ

೪೦. ಮಹರ್ಷಿ ದಯಾನಂದರ ತರ್ಕ ಗಾಂಭೀರ್ಯವನ್ನು ಗ್ರಹಿಸುವುದು ಇಷ್ಟಕರ. ಜೈನರು ಕರ್ಮಗಳನ್ನು ಕ್ರಿಯಾರೂಪವೆನ್ನದೆ, ಆತ್ಮನಿಗೆ ಅಂಟಿಕೊಳ್ಳುವ ಅದಾವುದೋ ಅಣುಗಳಂತಹ [ಕರ್ಮ ಪುದ್ಗಲ]ವೆಂದು ತಿಳಿಯುತ್ತಾರೆ. ಆ ಕರ್ಮ ಸ್ವತಃ ಜಡ. ಚೇತನವಾದ ಜೀವನು ಜಡವಾದ ಕರ್ಮಫಲವನ್ನು ಅನುಭವಿಸಬೇಕಾದ ಕಾಲದಲ್ಲಿ ಒಳ್ಳೆಯದನ್ನೇ ಆರಿಸಿಕೊಂಡಾನು. ! ಫಲದಾತೃವಿಲ್ಲ. ಫಲಗ್ರಹೀತೃ ಇದ್ದಾನೆ. ಗ್ರಹೀತೃ ಕೆಟ್ಟದ್ದನ್ನೇಕೆ ಆರಿಸಿಕೊಂಡಾನು? ಕರ್ಮವು ಅಚೇತನ. ಜಡ! ಆದ್ದರಿಂದ, ಫಲಕಾಲದಲ್ಲಿ ತಾವು ಯಾರು ಕರ್ಮಗಳೆಂದು ಅವು ಗುರುತಿಸಬಲ್ಲವು? ಈ ಕಾರಣದಿಂದ, ಯಾರ ಯಾರ ಜೊತೆಗೋ, ಮತ್ತಿನ್ನಾವ ಯಾವುವೋ ಕರ್ಮಗಳ ಸಂಬಂಧವಾಗುವುದರಿಂದ, 'ಕರ್ಮ ಸಂಕರ'ವಾಗುತ್ತದೆ. – ಯು.ಮೀ.

೪೧. 'ಸಮವಾಯ ಸಂಬಂಧ' ಎಂದರೆ, ನಿತ್ಯ ಸಂಬಂಧ; ಶಾಶ್ವತ ಸಂಬಂಧ. ಚೇತನನಾದ ಜೀವ ಮತ್ತು ಚೇತನನಾದ ಈಶ್ವರ ಇವರಿಗೂ, ಕರ್ಮಗಳೊಂದಿಗೂ ಇರುವ ಸಂಬಂಧ ನೈಮಿತ್ತಿಕ ವಾದ ಸಂಬಂಧವಲ್ಲ. ಕಾರಣಾಂತರದಿಂದ ಕರ್ಮ ಗಂಟುಬಿದ್ದು, ಕಾರಣಾಂತರದಿಂದ ಬಿಟ್ಟುಹೋಯಿತು, ಎಂದು ಚೇತನ ಪದಾರ್ಥ, ಹಾಗೂ ಕರ್ಮಗಳ ಸಂಬಂಧವನ್ನು ವರ್ಣಿಸಲಾಗದು. ಚೈತನ್ಯ ಹಾಗೂ ಕ್ರಿಯೆ ಸರ್ವದಾ ಅನ್ಯೋನ್ಯಾಶ್ರಿತವೇ.

ಯೋಗಜ(ಸಂಬಂಧ)ವಾಗಿ ಅನಿತ್ಯವಾಗಿರುತ್ತದೆ. ಮುಕ್ತಿಯಲ್ಲಿ ಕ್ರಿಯೆಯನ್ನೇ ಅಂಗೀಕರಿಸುವುದಿಲ್ಲವಾದರೆ, ಆ ಮುಕ್ತ ಜೀವರು ಜ್ಞಾನಯುಕ್ತರಾಗಿರುತ್ತಾರೋ, ಅಥವಾ ಇಲ್ಲವೋ? ಆಗಿರುತ್ತಾರೆ–ಎನ್ನುತ್ತೀರಾದರೆ, ಆಭ್ಯಂತರಕ್ರಿಯರಾದರು. ಮುಕ್ತಿಯಲ್ಲಿ ಕಲ್ಲಿನಂತೆ ಜಡವಾಗಿರುತ್ತಾರೆಯೇ? ಒಂದೇಕಡೆ ಬಿದ್ದಿರುತ್ತಾರೆಯೇ? ಮತ್ತು ಚಲನವಲನವೇನನ್ನೂ ಮಾಡುವುದಿಲ್ಲವೇ? ಹಾಗಾದರೆ ಮುಕ್ತಿ ಏನಾಯಿತು? ಆದರೆ, ಕತ್ತಲಿನಲ್ಲಿ ಮತ್ತು ಬಂಧನದಲ್ಲಿ ಬಿದ್ದುಹೋದರು, ಅಷ್ಟೇ!

**ನಾಸ್ತಿಕ:–** ಈಶ್ವರನು ವ್ಯಾಪಕನಲ್ಲ. ವ್ಯಾಪಕನಾಗಿರುವುದಾದರೆ, ಸಕಲ ವಸ್ತುಗಳೂ ಚೇತನವಾಗಿರುವುದಿಲ್ಲವೇಕೆ? ಮತ್ತು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದವರ ಸ್ಥಿತಿಗಳು ಉತ್ತಮ ಮಧ್ಯಮ ನಿಕೃಷ್ಟವಾದುವೇಕೆ? ಏಕೆಂದರೆ, ಈಶ್ವರನು ಎಲ್ಲರಲ್ಲಿಯೂ ಒಂದೇ ರೀತಿ ವ್ಯಾಪಕನಾಗಿರುತ್ತಾನಾದರೂ, ಕನಿಷ್ಠತ್ವ–ಜ್ಯೇಷ್ಠತ್ವಗಳಿರಬಾರದು.

**ಆಸ್ತಿಕ:–** ವ್ಯಾಪ್ಯ ಮತ್ತು ವ್ಯಾಪಕ ಒಂದಾಗಿರುವುದಿಲ್ಲ. ಆದರೆ, ವ್ಯಾಪ್ಯವು ಏಕದೇಶೀಯವೂ ಮತ್ತು ವ್ಯಾಪಕವು ಸರ್ವದೇಶೀಯವೂ ಆಗಿರುತ್ತದೆ. ಉದಾಹರಣೆಗೆ, ಆಕಾಶವು ಎಲ್ಲದರಲ್ಲಿಯೂ ವ್ಯಾಪಕವಾಗಿದೆ ಮತ್ತು ಭೂಗೋಳವೂ, ಹಾಗೂ ಗಡಿಗೆ–ಬಟ್ಟೆ ಮೊದಲಾದ ಸಮಸ್ತ ವ್ಯಾಪ್ಯ (ವಸ್ತು) ಗಳೂ ಏಕದೇಶೀಯವಾಗಿವೆ. ಹೇಗೆ ಪೃಥಿವೀ ಅಕಾಶ ಒಂದಲ್ಲವೋ, ಹಾಗೆಯೇ ಈಶ್ವರ ಮತ್ತು ಜಗತ್ತು ಒಂದಲ್ಲ. ಹೇಗೆ ಸಮಸ್ತ ಗಡಿಗೆ–ಅರಿವೆ ಮೊದಲಾದುದರಲ್ಲಿ ಅಕಾಶ ವ್ಯಾಪಕವಾಗಿದೆಯೋ ಮತ್ತು ಗಡಿಗೆ–ಅರಿವೆ ಮೊದಲಾದುವು ಅಕಾಶವಲ್ಲವೋ, ಹಾಗೆ ಚೇತನನಾದ ಪರಮೇಶ್ವರನು ಎಲ್ಲರಲ್ಲಿಯೂ ಇದ್ದಾನೆ ಮತ್ತು ಎಲ್ಲವೂ ಚೇತನವಾಗುವುದಿಲ್ಲ. ಹೇಗೆ ವಿದ್ವಾಂಸರೂ ಅವಿದ್ವಾಂಸರೂ ಮತ್ತು ಧರ್ಮಾತ್ಮರೂ, ಅಧರ್ಮಾತ್ಮರೂ ಸಮಾನರಾಗಿರುವುದಿಲ್ಲವೋ, ಹಾಗೆ ವಿದ್ಯೆಮೊದಲಾದ ಸದ್ಗುಣಗಳೂ, ಮತ್ತು ಸತ್ಯಭಾಷಣ ಮೊದಲಾದ ಕರ್ಮಗಳೂ, ಸುಶೀಲತೆ ಮೊದಲಾದ ಸ್ವಭಾವಗಳೂ ನ್ಯೂನಾಧಿಕವಾಗಿರುವುದರಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ನಿಷಾದರು[೪೨] ಕೇವಲ ಯೋಗ್ಯತಾ ದೃಷ್ಟಿಯಿಂದ, ದೊಡ್ಡವರು–ಚಿಕ್ಕವು–ಎಂದು ಭಾವಿಸಲ್ಪಡುತ್ತಾರೆ, ಅಷ್ಟೇ. ವರ್ಣವ್ಯವಸ್ಥೆಯನ್ನು ಚತುರ್ಥ ಸಮುಲ್ಲಾಸದಲ್ಲಿ ಬರೆದಿದ್ದೇವೆ. ಅಲ್ಲಿ ನೋಡಿಕೊಳ್ಳಿರಿ.

**ನಾಸ್ತಿಕ:–** ಈಶ್ವರನ ರಚನೆಯಿಂದ ಸೃಷ್ಟಿಯಾಗುವುದಾದರೆ, ಮಾತಾಪಿತೃಗಳ ಕೆಲಸವೇನಿದೆ?

**ಆಸ್ತಿಕ:–** ಈಶ್ವರನು ಈಶ್ವರೀಯ ಸೃಷ್ಟಿಯ ಕರ್ತೃವು; ಜೈವೀ ಸೃಷ್ಟಿಯ ಕರ್ತೃವಲ್ಲ. ಜೀವನ ಕರ್ತವ್ಯಕರ್ಮಗಳು ಯಾವವು ಇವೆಯೋ, ಅವುಗಳನ್ನು ಈಶ್ವರನು ಮಾಡುವುದಿಲ್ಲ. ಆದರೆ, ಜೀವನೇ ಮಾಡುತ್ತಾನೆ. ಹೇಗೆ ವೃಕ್ಷಗಳು, ಫಲಗಳು, ಓಷಧಿ, ಅನ್ನ ಮೊದಲಾದುದನ್ನು ಈಶ್ವರನು ಉತ್ಪನ್ನ ಮಾಡಿದ್ದಾನೋ, ಅದನ್ನು ಗ್ರಹಿಸಿ ಮಾನವರು ಹಿಟ್ಟು ಮಾಡದಿದ್ದರೆ, ಕುಟ್ಟದಿದ್ದರೆ, ರೊಟ್ಟಿ–ಮೊದಲಾದ ಪದಾರ್ಥಗಳನ್ನು ಮಾಡದಿದ್ದರೆ ಮತ್ತು ತಿನ್ನದೆಯೂ ಇದ್ದರೆ, ಈಶ್ವರನು ಅವರಿಗೆ ಬದಲು ಈ ಕಾರ್ಯಗಳನ್ನು ಎಂದಾದರೂ ಮಾಡುವನೋ? ಮತ್ತು (ಜೀವರು ಈ ಕಾರ್ಯಗಳನ್ನು) ಮಾಡದೇ ಇದ್ದರೆ, ಜೀವರ ಜೀವನವೂ ಕೂಡ ನಡೆಯಲಾರದು. ಆದುದರಿಂದ, ಆದಿ ಸೃಷ್ಟಿಯಲ್ಲಿ ಜೀವರ ಶರೀರಗಳನ್ನೂ ಮತ್ತು ಅಚ್ಚನ್ನೂ (ಆಕೃತಿ) ರಚಿಸುವುದು ಈಶ್ವರಾಧೀನ; ಆಮೇಲೆ ಅವುಗಳಿಂದ ಸಂತಾನೋತ್ಪಾದನ – ಮೊದಲಾದುವನ್ನು ಮಾಡುವುದು ಜೀವನ ಕರ್ತವ್ಯಕರ್ಮವಾಗಿದೆ.

**ನಾಸ್ತಿಕ:–** ಪರಮಾತ್ಮನು ಶಾಶ್ವತನೂ, ಅನಾದಿಯೂ, ಚಿದಾನಂದ ಜ್ಞಾನಸ್ವರೂಪನೂ ಆಗಿರುವನಾದರೆ, ಜಗತ್ತಿನ ಪ್ರಪಂಚದಲ್ಲಿ[೪೩] ಹಾಗೂ ದುಃಖದಲ್ಲಿ ಬಿದ್ದನೇಕೆ? ಆನಂದವನ್ನುಳಿದು ದುಃಖವನ್ನು ಗ್ರಹಿಸುವಂತಹ ಕಾರ್ಯವನ್ನು ಯಾವ ಸಾಧಾರಣ ಮಾನವನೂ ಕೂಡ ಮಾಡುವುದಿಲ್ಲ. ಈಶ್ವರನೇತಕ್ಕೆ ಮಾಡಿದನು?

**ಆಸ್ತಿಕ:–** ಪರಮಾತ್ಮನು ಯಾವುದೇ ಪ್ರಪಂಚದಲ್ಲಿ ಮತ್ತು ದುಃಖದಲ್ಲಿ ಬೀಳುವುದಿಲ್ಲ; ತನ್ನ ಆನಂದವನ್ನು ಬಿಡುವುದೂ ಇಲ್ಲ. ಏಕೆಂದರೆ, ಯಾವನು ಏಕದೇಶೀಯನಾಗಿದ್ದಾನೋ ಅವನು ಮಾತ್ರ ಪ್ರಪಂಚದಲ್ಲಿ ಮತ್ತು ದುಃಖದಲ್ಲಿ ಬೀಳುವುದು ಶಕ್ಯ; ಸರ್ವದೇಶೀಯನು ಬೀಳುವುದಿಲ್ಲ. ಅನಾದಿಯೂ, ಚಿದಾನಂದನೂ, ಜ್ಞಾನಸ್ವರೂಪನೂ ಆದ ಪರಮಾತ್ಮನು ಜಗತ್ತನ್ನು ರಚಿಸುವುದಿಲ್ಲವಾದರೆ, ಬೇರೆ ಯಾವನು ರಚಿಸಬಲ್ಲನು? ಜೀವನಲ್ಲಿ ಜಗತ್ತನ್ನು ರಚಿಸುವ ಸಾಮರ್ಥ್ಯವಿಲ್ಲ. ಮತ್ತು ಜಡದಲ್ಲಿ ಸ್ವತಃ ರೂಪತಾಳುವ ಸಾಮರ್ಥ್ಯವೂ ಇಲ್ಲ. ಇದರಿಂದ ಪರಮಾತ್ಮನೇ ಜಗತ್ತನ್ನು ರಚಿಸುತ್ತಾನೆ ಮತ್ತು ಸದಾ ಆನಂದದಲ್ಲಿರುತ್ತಾನೆ–

---

೪೨. ಕೇವಲ ಯೋಗ್ಯತಾದೃಷ್ಟಿಯಿಂದ

೪೩. ಎಂದರೆ, ಸೃಷ್ಟಿ ರಚನೆ–ಪಾಲನೆ– ಸಂಹಾರ ಎಂಬ ವ್ಯವಹಾರದಲ್ಲಿ

ಎಂಬುದು ಸಿದ್ಧವಾಯಿತು. ಹೇಗೆ ಪರಮಾತ್ಮನು ಪರಮಾಣುಗಳಿಂದ ಸೃಷ್ಟಿಯನ್ನು ಮಾಡುತ್ತಾನೋ, ಹಾಗೆ ಮಾತಾಪಿತೃಗಳೆಂಬ ನಿಮಿತ್ತಕಾರಣದಿಂದ ಉತ್ಪತ್ತಿಯ ಪ್ರಬಂಧ-ನಿಯಮವನ್ನೂ ಅವನೇ ಮಾಡಿದ್ದಾನೆ.

**ನಾಸ್ತಿಕ:-** ಈಶ್ವರನು ಮುಕ್ತಿರೂಪ ಸುಖವನ್ನು ಬಿಟ್ಟು ಜಗತ್ತಿನ ಸೃಜನ, ಧಾರಣ ಹಾಗೂ ಪ್ರಳಯ ಮಾಡುವ ಗೊಂದಲದಲ್ಲಿ ಅದೇಕೆ ಬಿದ್ದನು?

**ಆಸ್ತಿಕ:-** ಈಶ್ವರನು ಸದಾ ಮುಕ್ತನಾಗಿರುವುದರಿಂದ, ಸಾಧನಗಳಿಂದ ಸಿದ್ಧರಾದ ನಿಮ್ಮ ತೀರ್ಥಂಕರರುಗಳಂತೆ ಏಕದೇಶದಲ್ಲಿರುವ ಬಂಧನಪೂರ್ವಕವಾದ ಮುಕ್ತಿಯಿಂದಯುಕ್ತನಾಗಿಲ್ಲ ಸನಾತನಪರಮಾತ್ಮನು. ಯಾವ ಅನಂತಸ್ವರೂಪ-ಗುಣ-ಕರ್ಮ-ಸ್ವಭಾವಯುಕ್ತನಾದ ಪರಮಾತ್ಮನಿದ್ದಾನೋ, ಅವನು ಈ ಕಿಂಚಿನ್ಮಾತ್ರ ಜಗತ್ತನ್ನು ರಚಿಸುತ್ತಾ, ಧರಿಸುತ್ತಾ, ಪ್ರಳಯಗೊಳಿಸುತ್ತಾ ಇದ್ದರೂ ಕೂಡ ಬಂಧನದಲ್ಲಿ ಬೀಳುವುದಿಲ್ಲ. ಏಕೆಂದರೆ ಬಂಧಮೋಕ್ಷಗಳು ಸಾಪೇಕ್ಷವಾಗಿವೆ. ಉದಾಹರಣೆಗೆ, ಮುಕ್ತಿಯ ಅಪೇಕ್ಷೆ (ಹೋಲಿಕೆ, ದೃಷ್ಟಿ)ಯಿಂದ ಬಂಧವೂ ಮತ್ತು ಬಂಧದ ಅಪೇಕ್ಷೆಯಿಂದ ಮುಕ್ತಿಯೂ ಇರುತ್ತವೆ. ಯಾವನು ಎಂದೂ ಬದ್ಧನಾಗಿರಲೇ ಇಲ್ಲವೋ, ಅವನು ಮುಕ್ತನೆಂದು ಹೇಗೆ ಹೇಳಲ್ಪಡಲು ಸಾಧ್ಯ?[೪೪] ಮತ್ತು ಯಾವ ಏಕದೇಶೀಯರಾದ ಜೀವರಿದ್ದಾರೋ ಅವರೇ ಸದಾ ಬದ್ಧರು ಮತ್ತು ಮುಕ್ತರು ಆಗುತ್ತಾ ಇರುತ್ತಾರೆ. ಅನಂತನೂ, ಸರ್ವದೇಶೀಯನೂ, ಸರ್ವವ್ಯಾಪಕನೂ ಆಗಿರುವ ಈಶ್ವರನು ನಿಮ್ಮ ತೀರ್ಥಂಕರರುಗಳಂತೆ ಬಂಧನದ ಅಥವಾ ನೈಮಿತ್ತಿಕ ಮುಕ್ತಿಯ ಚಕ್ರದಲ್ಲಿ ಎಂದಿಗೂ ಬೀಳುವುದಿಲ್ಲ. ಆದುದರಿಂದ ಪರಮಾತ್ಮನು ಯಾವಾಗಲೂ ಮುಕ್ತನೆನಿಸುತ್ತಾನೆ.

**ನಾಸ್ತಿಕ:-** ಹೇಗೆ ಭಂಗೀಸೇವನದ ಮದವನ್ನು ಮಾನವನು ತಾನೇ ಅನುಭವಿಸುತ್ತಾನೋ, ಹಾಗೆ ಜೀವರು ಕರ್ಮಗಳ ಫಲಗಳನ್ನು ತಾವೇ ಅನುಭವಿಸಬಲ್ಲರು. ಇದರಲ್ಲಿ ಈಶ್ವರನ ಕಾರ್ಯವಿಲ್ಲ.

**ಆಸ್ತಿಕ:-** ಹೇಗೆ ರಾಜನು ಇಲ್ಲದೆ ದರೋಡೆಕೋರರು, ವ್ಯಭಿಚಾರಿಗಳು, ಕಳ್ಳರು ಮೊದಲಾದ ದುಷ್ಟಮಾನವರು ಸ್ವತಃ ಗಲ್ಲಿಗೇರುವುದಿಲ್ಲವೋ, ಅಥವಾ ಕಾರಾಗೃಹಕ್ಕೆ ತೆರಳುವುದಿಲ್ಲವೋ, ಹೋಗಲು ಬಯಸುವುದೂ ಇಲ್ಲವೋ, ಆದರೆ ಹೇಗೆ ರಾಜನು ರಾಜ್ಯದ ನ್ಯಾಯವ್ಯವಸ್ಥೆಗೆ ಅನುಸಾರವಾಗಿ ಬಲವಂತದಿಂದ ಹಿಡಿಸಿ ಯಥೋಚಿತವಾಗಿ ಶಿಕ್ಷೆವಿಧಿಸುತ್ತಾನೋ, ಅದೇ ರೀತಿ ಜೀವರಿಗೂ ಕೂಡ ಈಶ್ವರನು, ತನ್ನ ನ್ಯಾಯವ್ಯವಸ್ಥೆಗೆ ಅನುಗುಣವಾಗಿ, ಅವರವರ ಕರ್ಮಾನುಸಾರ ಯಥಾಯೋಗ್ಯವಾಗಿ ಶಿಕ್ಷೆಯನ್ನು ಕೊಡುತ್ತಾನೆ. ಏಕೆಂದರೆ, ಯಾವ ಜೀವನೂ ಕೂಡ ತನ್ನ ದುಷ್ಟಕರ್ಮಗಳ ಫಲವನ್ನು ಅನುಭವಿಸಲು ಇಚ್ಛಿಸುವುದಿಲ್ಲ. ಆದುದರಿಂದ ಅವಶ್ಯವಾಗಿ ಪರಮಾತ್ಮನು ನ್ಯಾಯಾಧೀಶನಾಗಿರಬೇಕು.

**ನಾಸ್ತಿಕ:-** ಜಗತ್ತಿನಲ್ಲಿ ಒಬ್ಬ ಈಶ್ವರನಿಲ್ಲ; ಆದರೆ, ಎಷ್ಟು ಜನ ಮುಕ್ತಜೀವರಿದ್ದಾರೋ, ಅವರೆಲ್ಲರೂ ಈಶ್ವರರಾಗಿದ್ದಾರೆ.

**ಆಸ್ತಿಕ:-** ಈ ಕಥನ ಸರ್ವಥಾ ವ್ಯರ್ಥವಾಗಿದೆ. ಏಕೆಂದರೆ, ಮೊದಲು ಬದ್ಧನಾಗಿದ್ದು ಮುಕ್ತನಾಗಿದ್ದರೆ, ಪುನಃ ಬಂಧನದಲ್ಲಿ ಅವಶ್ಯವಾಗಿ ಬೀಳುವನು. ಏಕೆಂದರೆ, ಅವರು ಸ್ವಾಭಾವಿಕವಾಗಿ ಸದಾ ಕಾಲದಲ್ಲಿಯೂ ಮುಕ್ತರಾಗಿರುವವರಲ್ಲ. ಹೇಗೆ ನಿಮ್ಮ ಇಪ್ಪತ್ತು ನಾಲ್ಕು ಜನ ತೀರ್ಥಂಕರರು ಮೊದಲು ಬದ್ಧರಾಗಿದ್ದು, ಆಮೇಲೆ ಮುಕ್ತರಾದರೋ, ಹಾಗೆಯೇ ಮತ್ತೆ ಕೂಡ ಬಂಧನದಲ್ಲಿ ಅವಶ್ಯವಾಗಿ ಬೀಳುವರು. ಮತ್ತು ಬಹುಜನ ಈಶ್ವರರು ಇರುವರಾದರೆ, ಹೇಗೆ ಜೀವರು ಅನೇಕರಿರುವುದರಿಂದ ಕಾದಾಡುತ್ತಾ-ಕಿತ್ತಾಡುತ್ತಾ ಅಲೆದಾಡುತ್ತಾರೋ, ಹಾಗೆ ಈಶ್ವರರೂ ಕೂಡ ಕಾದಾಡುತ್ತಾ-ಕಿತ್ತಾಡುತ್ತಾ ಮೆರೆಯುವರು.

**ನಾಸ್ತಿಕ:-** ಓ ಮೂಢ! ಜಗತ್ತಿನ ಕರ್ತೃ ಯಾವನೂ ಇಲ್ಲ; ಆದರೆ, ಜಗತ್ತು ಸ್ವತಃ ಸಿದ್ಧವಾಗಿದೆ.

**ಆಸ್ತಿಕ :-** ಇದು ಜೈನರ ಎಷ್ಟು ದೊಡ್ಡ ಅಪಸಿದ್ಧಾಂತ? ಅಲ್ಲ, ಕರ್ತೃವಿಲ್ಲದೆ ಯಾವುದಾದರೂ ಕರ್ಮ, ಕರ್ಮವಿಲ್ಲದೆ ಯಾವುದಾದರೂ ಕಾರ್ಯ ಆಗುತ್ತಿರುವುದು ಜಗತ್ತಿನಲ್ಲಿ ಕಂಡುಬರುತ್ತದೆಯೇ? ಗೋಧಿಯ ಗದ್ದೆಯಲ್ಲಿ ಸ್ವತಃ ಸಿದ್ಧವಾದ ಹಿಟ್ಟು ಉದ್ಭವಿಸಿ, ತಾನೇ ರೊಟ್ಟಿಯಾಗಿ, ತಾನೇ ಜೈನರ ಉದರದೊಳಕ್ಕೆ ಸೇರಿಹೋಗುವುದು-ಎಂಬಂತಹ ಮಾತು ಇದು. ಹತ್ತಿ, ನೂಲು, ಬಟ್ಟೆ, ಅಂಗವಸ್ತ್ರ, ದುಪಟಿ, ಪಂಚೆ, ಪೇಟ ಮೊದಲಾದವು ತಾವೇ ಸ್ವತಃ ಸಿದ್ಧವಾಗಿ ಎಂದಿಗೂ ಬರುವುದಿಲ್ಲ. ಸ್ಥಿತಿ ಹೀಗೆ ಇರುವಾಗ, ಸ್ವತಃ ಯಾವುದೂ ಉದ್ಭವಿಸದಿರುವಾಗ, ಕರ್ತೃವಾದ ಈಶ್ವರನಿಲ್ಲದೆ ಈ ವಿವಿಧ ಜಗತ್ತು ಹಾಗೂ ನಾನಾ ಪ್ರಕಾರದ ರಚನಾ ವಿಶೇಷಗಳು ಆಗಬಲ್ಲುವಾದರೂ ಹೇಗೆ? ಹಠಧರ್ಮದಿಂದ ಸ್ವತಃ ಸಿದ್ಧವಾದ ಜಗತ್ತನ್ನು ಅಂಗೀಕರಿಸುವಿರಾದರೆ, ಮೇಲೆ

೪೪. ಶುದ್ಧ ದಾರ್ಶನಿಕ ತಥ್ಯವಿದೆ ಆದೂ, ಬದ್ಧ ಜೀವರನ್ನು ದೃಕ್‌ಪಥಲ್ಲಿಟ್ಟುಕೊಂಡು, ಪರಮಾತ್ಮನನ್ನು 'ನಿತ್ಯ ಮುಕ್ತ' ಎಂದು ಔಪಚಾರಿಕವಾಗಿ ಹೇಳುವುದುಂಟು.

ಹೇಳಿದ ಸ್ವತಃ ಸಿದ್ಧವಾದ ವಸ್ತ್ರಗಳು-ಮೊದಲಾದುವು ಕರ್ತೃವಿಲ್ಲದೆ ಆಗುವುದನ್ನು ಪ್ರತ್ಯಕ್ಷವಾಗಿ ತೋರಿಸಿರಿ. ಈ ರೀತಿ ಸಿದ್ಧಪಡಿಸಲು ಆಗದಿರುವಾಗ, ನಿಮ್ಮ ಪ್ರಮಾಣ ಶೂನ್ಯವಾದ ಕಥನವನ್ನು ಯಾವ ಬುದ್ಧಿವಂತನು ತಾನೇ ಅಂಗೀಕರಿಸಲು ಸಾಧ್ಯ?

**ನಾಸ್ತಿಕ:-** ಈಶ್ವರನು ವಿರಕ್ತನೋ ಅಥವಾ ಮೋಹಿತನೋ? ವಿರಕ್ತನಾಗಿರುವುದಾದರೆ ಜಗತ್ತಿನ ಪ್ರಪಂಚದಲ್ಲಿ ಬಿದ್ದನೇಕೆ? ಮೋಹಿತನಾಗಿರುವುದಾದರೆ, ಜಗತ್ತನ್ನು ರಚಿಸಲು ಸಮರ್ಥನಾಗಲಾರನು.

**ಆಸ್ತಿಕ:-** ಪರಮೇಶ್ವರನಲ್ಲಿ ವೈರಾಗ್ಯ ಅಥವಾ ಮೋಹ ಎಂದಿಗೂ ಉದಯಿಸಲಾರದು. ಏಕೆಂದರೆ, ಯಾವನು ಸರ್ವವ್ಯಾಪಕನೋ, ಅವನು ಬಿಡುವುದಾವುದನ್ನು ಮತ್ತು ಗ್ರಹಿಸುವುದಾವುದನ್ನು? ಈಶ್ವರನಿಗಿಂತ ಉತ್ತಮವಾದ, ಅಥವಾ ಅವನಿಗೆ ಪ್ರಾಪ್ತವಾಗದಿರುವ ಯಾವ ಪದಾರ್ಥವೂ ಇಲ್ಲ. ಆದುದರಿಂದ ಯಾವುದರಲ್ಲಿಯಾದರೂ ಅವನಿಗೆ ಮೋಹವೂ ಕೂಡ ಆಗುವುದಿಲ್ಲ. ವೈರಾಗ್ಯದ ಮತ್ತು ಮೋಹದ ಉದ್ಭವ ಜೀವನಲ್ಲಿ ಆಗುತ್ತದೆ; ಈಶ್ವರನಲ್ಲಿ ಅಲ್ಲ.

**ನಾಸ್ತಿಕ:-** ಈಶ್ವರನನ್ನು ಜಗತ್ತಿನ ಕರ್ತೃವೆಂದೂ, ಮತ್ತು ಜೀವರ ಕರ್ಮಗಳ ಫಲಗಳ ದಾತೃವೆಂದೂ ಅಂಗೀಕರಿಸುವಿರಾದರೆ, ಈಶ್ವರನು ಪ್ರಾಪಂಚಿಕವಾಗಿ ದುಃಖಿಯಾಗಿ ಹೋಗುವನು.

**ಆಸ್ತಿಕ:-** ಒಳ್ಳಿತು; ಅನೇಕ ಬಗೆಯ ಕರ್ಮಗಳ ಕರ್ತೃವೂ, ಪ್ರಾಣಿಗಳಿಗೆ ಫಲಗಳ ದಾತೃವೂ, ಧಾರ್ಮಿಕನೂ, ನ್ಯಾಯಾಧೀಶನೂ ಆದ ವಿದ್ವಾಂಸನೂ ಕರ್ಮಗಳಲ್ಲಿ ಸಿಕ್ಕಿಕೊಳ್ಳುವುದಿಲ್ಲ; ಪ್ರಾಪಂಚಿಕನೂ ಆಗುವುದಿಲ್ಲ. ಎಂದ ಮೇಲೆ, ಅನಂತಸಾಮರ್ಥ್ಯಯುಕ್ತನಾದ ಪರಮೇಶ್ವರನು ಪ್ರಾಪಂಚಿಕನೂ ಮತ್ತು ದುಃಖಿಯೂ ಹೇಗೆ ತಾನೇ ಆಗುವನು? ನೀವು ನಿಮ್ಮ ಅಜ್ಞಾನದಿಂದ, ನಿಮ್ಮ ಮತ್ತು ನಿಮ್ಮ ತೀರ್ಥಂಕರರ ಹಾಗೆ ಪರಮೇಶ್ವರನೂ ಕೂಡ ಇದ್ದಾನೆಂದು ತಿಳಿಯುತ್ತೀರಿ. ಅದು ನಿಮ್ಮ ಅವಿದ್ಯೆಯ ಲೀಲೆಯಾಗಿದೆ. ಅವಿದ್ಯೆ ಮೊದಲಾದ ದೋಷಗಳಿಂದ ಬಿಡುಗಡೆ ಹೊಂದಬಯಸುವಿರಾದರೆ, ವೇದಗಳೇ ಮೊದಲಾದ ಸತ್ಯಶಾಸ್ತ್ರಗಳ ಆಶ್ರಯವನ್ನು ತೆಗೆದುಕೊಳ್ಳಿರಿ. ಭ್ರಮದಲ್ಲಿ ಬಿದ್ದುಕೊಂಡು ಮುಗ್ಗರಿಸುತ್ತೀರಿ ಏಕೆ?

ಈಗ ಜೈನರು ಜಗತ್ತನ್ನು ಹೇಗೆ ತಿಳಿದಿರುತ್ತಾರೋ, ಹಾಗೆ, ಇವರುಗಳ ಸೂತ್ರಗಳಿಗೆ ಅನುಸಾರವಾಗಿ ತೋರಿಸುತ್ತೇವೆ ಮತ್ತು ಸಂಕ್ಷೇಪವಾಗಿ ಮೂಲದ ಅರ್ಥವನ್ನು ಮಾಡಿ, ಆ ಮೇಲೆ ಸತ್ಯಾಸತ್ಯಗಳ ಸಮೀಕ್ಷೆಯನ್ನು ಮಾಡಿತೋರಿಸುತ್ತೇವೆ:-

**ಮೂಲ:- ಸಾಮಿ ಅಣಾಇ ಅಣಂತೇ ಚ ನೂಗಇ ಸಂಸಾರಘೋರ ಕಾಂತರೇ ।**

**ಮೋಹಾಇ ಕಮ್ಮ ಗುರು ಠಿಇ ವಿವಾಗವಸನುಮಮಇ ಜೀವರೋ ॥**

(ಪ್ರಕರಣ ರತ್ನಾಕರ:- ಭಾಗ-೨ ಷಷ್ಠೀಶತಕ:-೬೦.೨)

ಇದು ರತ್ನಸಾರಭಾಗವೆಂಬ ಗ್ರಂಥದ ಸಮ್ಯಕ್ತ್ವಪ್ರಕಾಶ ಪ್ರಕರಣದಲ್ಲಿರುವ ಗೌತಮ ಮತ್ತು ಮಹಾವೀರರ ಸಂವಾದವಾಗಿದೆ.

ಸಂಕ್ಷೇಪವಾಗಿ ಇದರ ಉಪಯುಕ್ತವಾದ ಅರ್ಥವೇನೆಂದರೆ - ಈ ಜಗತ್ತು ಅನಾದಿ-ಅನಂತವಾಗಿದೆ. ಎಂದಿಗೂ ಇದರ ಉತ್ಪತ್ತಿಯಾಗಲಿಲ್ಲ. ವಿನಾಶವೂ ಕೂಡ ಎಂದೂ ಆಗುವುದಿಲ್ಲ. ಅಂದರೆ, ಜಗತ್ತು ಯಾವನ ರಚನೆಯೂ ಅಲ್ಲ. ಅದೇ ಆಸ್ತಿಕನಾಸ್ತಿಕ ಸಂವಾದದಲ್ಲಿ- "ಓ ಮೂಢ! ಜಗತ್ತಿನ ಕರ್ತೃವಾವನೂ ಇಲ್ಲ; ಅದೆಂದಿಗೂ ಆಗಲಿಲ್ಲ; ಮತ್ತು ಎಂದಿಗೂ ನಾಶವಾಗುವುದೂ ಇಲ್ಲ" - ಎಂದು ಹೇಳಿದೆ.

**ಸಮೀಕ್ಷಕ :-** ಯಾವುದು ಸಂಯೋಗದಿಂದ ಉತ್ಪನ್ನವಾಗುತ್ತದೋ, ಅದು ಎಂದಿಗೂ ಅನಾದಿ- ಅನಂತವಾಗಲಾರದು. ಮತ್ತು ಕರ್ಮವು ಉತ್ಪತ್ತಿ ಮತ್ತು ವಿನಾಶವಿಲ್ಲದೆ ಇರುವುದಿಲ್ಲ. ಜಗತ್ತಿನಲ್ಲಿ ಎಷ್ಟು ಪದಾರ್ಥಗಳು ಉತ್ಪನ್ನವಾಗುತ್ತವೋ, ಅವೆಲ್ಲವೂ ಸಂಯೋಗದಿಂದ ಉದಿಸುವಂತಹವೂ, ಉತ್ಪತ್ತಿ - ವಿನಾಶಯುಕ್ತವೂ ಆಗಿಯೇ ನೋಡಲ್ಪಡುತ್ತವೆ. ಮತ್ತೆ, ಜಗತ್ತು ಉತ್ಪನ್ನವಾದುದೂ ಮತ್ತು ವಿನಾಶಯುಕ್ತವಾದುದೂ ಏಕಲ್ಲ? ಆದುದರಿಂದ, ನಿಮ್ಮ ತೀರ್ಥಂಕರರುಗಳಿಗೆ ಸಮ್ಯಜ್ಞಾನವಿರಲಿಲ್ಲ. ಅವರಿಗೆ ಸಮ್ಯಕ್ ಜ್ಞಾನವಿದ್ದಿದ್ದರೆ, ಇಂತಹ ಅಸಂಭವವಾದ ಮಾತುಗಳನ್ನೇಕೆ ಬರೆಯುತ್ತಿದ್ದರು? ನಿಮ್ಮ ಗುರುಗಳು ಹೇಗೆ ಇದ್ದಾರೋ, ಹಾಗೆಯೇ ಶಿಷ್ಯರಾದ ನೀವೂ ಕೂಡ ಇದ್ದೀರಿ. ನಿಮ್ಮ ಮಾತುಗಳನ್ನು ಆಲಿಸುವವನಿಗೆ ಪದಾರ್ಥಜ್ಞಾನವೆಂದಿಗೂ ಉಂಟಾಗಲಾರದು. ಆಯಿತಲ್ಲ! ಯಾವ ಸಂಯುಕ್ತ ಪದಾರ್ಥ ಪ್ರತ್ಯಕ್ಷವಾಗಿ ಕಾಣುತ್ತಿದೆಯೋ, ಅದರ ಉತ್ಪತ್ತಿಯನ್ನು ಮತ್ತು ವಿನಾಶವನ್ನು ಹೇಗೆ ಅಂಗೀಕರಿಸುವುದಿಲ್ಲ? ಎಂದರೆ, ಇವರ ಆಚಾರ್ಯರಿಗೆ ಅಥವಾ ಜೈನರಿಗೆ ಭೂಗೋಳ ಖಗೋಳ

ವಿದ್ಯೆಯೂ ಕೂಡ ಬರುತ್ತಿರಲಿಲ್ಲ; ಮತ್ತು ಈಗಲೂ ಆ  ವಿದ್ಯೆ ಇವರಲ್ಲಿಲ್ಲ. ಅನ್ಯಥಾ, ಕೆಳಗೆ ಬರೆದಿರುವಂತಹ ಅಸಂಭವವಾದ ವಿಷಯಗಳನ್ನು ಒಪ್ಪುತ್ತಿದ್ದರೆಂತು? ಮತ್ತು ಹೇಳುತ್ತಿದ್ದರೆಂತು? ನೋಡಿರ! ಈ ಸೃಷ್ಟಿಯಲ್ಲಿ ಪೃಥಿವೀಕಾಯ ಜೀವರನ್ನೂ, ಎಂದರೆ ಪೃಥಿವಿಯನ್ನೇ ಶರೀರವಾಗಿ ಹೊಂದಿರುವ ಜೀವರನ್ನೂ ಮತ್ತು ಜಲಕಾಯರಾದ ಹಾಗೂ ಇನ್ನಿತರ ಕಾಯರಾದ ಜೀವರನ್ನೂ ಕೂಡ ಅಂಗೀಕರಿಸುತ್ತಾರೆ. ಇದನ್ನು ಯಾವನೂ ಒಪ್ಪಲಾರನು. ಮತ್ತೂ ನೋಡಿರಿ ಇವರ ಮಿಥ್ಯಾಕಥನಗಳನ್ನು. ಯಾವ ತೀರ್ಥಂಕರರನ್ನು ಜೈನರುಗಳು ಸಮ್ಯಕ್ ಜ್ಞಾನಿಗಳು ಮತ್ತು ಪರಮೇಶ್ವರರು–ಎಂದು ಅಂಗೀಕರಿಸುತ್ತಾರೋ, ಅವರ ಮಿಥ್ಯಾಕಥನಗಳ ಮಾದರಿಗಳು ಇವಾಗಿವೆ:–

"ರತ್ನಾಸಾರಭಾಗ"ದ ೧೪೫ನೆಯ ಪುಟ. ಈ ಗ್ರಂಥವನ್ನು ಜೈನರು ಅಂಗೀಕರಿಸುತ್ತಾರೆ ಮತ್ತು ಇದು ಇಸವೀ ಸನ್ ೧೮೭೮ರ ಏಪ್ರಿಲ್ ೨೮ನೆಯ ದಿನಾಂಕದಂದು ಬನಾರಸದ "ಜೈನ ಪ್ರಭಾಕರ ಮುದ್ರಣಾಲಯ"ದಲ್ಲಿ ನಾನಕಚಂದ್ ಜತಿಯು ಮುದ್ರಣ ಮಾಡಿಸಿ ಪ್ರಸಿದ್ಧಪಡಿಸಿದ್ದಾರೆ.  ಅದರ, ಮೇಲೆ ಹೇಳಿದ ಪುಟದಲ್ಲಿ ಕಾಲದ ವ್ಯಾಖ್ಯಾನವನ್ನು ಈ ರೀತಿ ಮಾಡಿದ್ದಾರೆ:– ಎಂದರೆ, ಸಮಯದ ಹೆಸರು ಸೂಕ್ಷ್ಮ ಕಾಲವೆಂದಾಗಿದೆ. ಮತ್ತು ಅಸಂಖ್ಯಾತವಾದ ಸಮಯಗಳನ್ನು 'ಆವಲೀ' ಎನ್ನುತ್ತಾರೆ. ಒಂದು ಕೋಟಿ ಅರವತ್ತೇಳು ಲಕ್ಷ ಎಪ್ಪತ್ತು ಸಾವಿರದ ಇನ್ನೂರಾರು ಆವಲಿಗಳಿಂದ ಒಂದು ಮುಹೂರ್ತವಾಗುತ್ತದೆ. ಅಂತಹ ಮೂವತ್ತು ಮುಹೂರ್ತಗಳಿಗೆ ಒಂದು ದಿವಸ; ಅಂತಹ ಹದಿನೈದು ದಿವಸಗಳಿಗೆ ಒಂದು ಪಕ್ಷ; ಅಂತಹ ಎರಡು ಪಕ್ಷಗಳಿಗೆ ಒಂದು ಮಾಸ; ಅಂತಹ ಹನ್ನೆರಡು ಮಾಸಗಳಿಗೆ ಒಂದು ವರ್ಷ. ಅಂತಹ ಎಪ್ಪತ್ತು ಲಕ್ಷ ಕೋಟಿ, ಐವತ್ತಾರು ಸಾವಿರ ಕೋಟಿ ವರ್ಷಗಳಿಗೆ ಒಂದು 'ಪೂರ್ವ'ವಾಗುತ್ತದೆ. ಇಂತಹ ಅಸಂಖ್ಯಾತ ಪೂರ್ವಗಳನ್ನು ಒಂದು ಪಲ್ಯೋಪಮ ಕಾಲವೆನ್ನುತ್ತಾರೆ. 'ಅಸಂಖ್ಯಾತ'ವೆಂದರೆ–ನಾಲ್ಕು ಕೋಶ (ಸುಮಾರು ಎಂಟು ಮೈಲಿ) ಚದರವೂ, ಅಷ್ಟೇ ಆಳವೂ ಆದ ಭಾವಿಯನ್ನು ತೆಗೆದು, ಅದನ್ನು 'ಜಗುಲಿಯಾ ಮನುಷ್ಯನ' ಶರೀರದ, ಕೆಳಗೆ ಉಲ್ಲೇಖಿಸಿರುವ ಕೂದಲುಗಳ ತುಂಡುಗಳಿಂದ ತುಂಬಿಸಬೇಕು. ಎಂದರೆ, ಜಗುಲಿಯಾ ಮನುಷ್ಯನ ಕೂದಲುಗಳು ಆಧುನಿಕ ಮಾನವನ ಕೂದಲುಗಳಿಗಿಂತ ೪೮೯೬ ಭಾಗದಷ್ಟು ಸೂಕ್ಷ್ಮವಾಗಿರುತ್ತೆ. ಜಗುಲಿಯಾ ಮನುಷ್ಯನ ೪೮೯೬ ಕೂದಲುಗಳನ್ನು ಸೇರಿಸಿದರೆ ಆಧುನಿಕ ಮಾನವನ ಒಂದು ಕೂದಲಾಗುತ್ತದೆ. ಇಂತಹ ಜಗುಲಿಯಾಮನುಷ್ಯನ ಒಂದು ಕೂದಲಿನ ಒಂದು ಅಂಗುಲ ಭಾಗವನ್ನು ಏಳುಸಾರಿ ಎಂಟು–ಎಂಟು ಚೂರುಗಳನ್ನು ಮಾಡುವುದರಿಂದ ೨೦,೯೭,೧೫೨ ತುಣುಕುಗಳಾಗುತ್ತವೆ. ಇಂತಹ ತುಣುಕುಗಳಿಂದ ಮೇಲೆ ಹೇಳಿದ ಸುಮಾರು ಎಂಟು ಘನ ಮೈಲುಗಳಷ್ಟಿರುವ ಭಾವಿಯನ್ನು ತುಂಬಿಸಬೇಕು. ಅದರೊಳಗಿನಿಂದ ನೂರು–ನೂರು ವರ್ಷಕ್ಕೆ ಒಂದೊಂದು ತುಣುಕು ತೆಗೆಯುತ್ತಾ ಹೋಗಬೇಕು. ಯಾವಾಗ ಎಲ್ಲ ತುಣುಕಗಳೂ ಹೊರಕ್ಕೆ ಬಂದುಬಿಡುತ್ತವೋ ಮತ್ತು ಭಾವಿಖಾಲಿಯಾಗಿ ಹೋಗುತ್ತದೋ, ಆಗಲೂ ಅದು ಸಂಖ್ಯಾತಕಾಲವೇ. ಮತ್ತು ಯಾವಾಗ ಅವುಗಳಲ್ಲಿನ ಒಂದೊಂದು ತುಣಕನ್ನೂ ಅಸಂಖ್ಯಾತ ತುಣುಕಗಳನ್ನಾಗಿಮಾಡಿ, ಆ ತುಣುಕುಗಳಿಂದ, ಅದರ ಮೇಲೆ ಚಕ್ರವರ್ತಿ ಸಾರ್ವಭೌಮನ ಸೇನೆಯು ಹಾದುಹೋದರೂ ಕುಸಿಯದ ಹಾಗೆ, ಆ ಭಾವಿಯನ್ನು ಅದುಮಿ–ಅದುಮಿ[೪೫] ತುಂಬಿಸಬೇಕು. ಆ ತುಣುಕುಗಳನ್ನು ನೂರುವರ್ಷಕ್ಕೆ ಒಂದರಂತೆ ತೆಗೆಯಬೇಕು. ಯಾವಾಗ ಆ ಭಾವಿ ರಿಕ್ತವಾಗಿ ಹೋಗುವುದೋ, ಆಗ ಅಸಂಖ್ಯಾತಪೂರ್ವವಾಗುವುದು. ಆಗ ಒಂದೊಂದು ಪಲ್ಯೋಪಮಕಾಲವಾಗುತ್ತದೆ. ಆ ಪಲ್ಯೋಪಮ ಕಾಲವನ್ನು ಭಾವಿಯ ದೃಷ್ಟಾಂತದಿಂದ ತಿಳಿದುಕೊಳ್ಳಬೇಕು. ಯಾವಾಗ ಹತ್ತು ಕೋಟ್ಯಾನುಕೋಟಿ ಪಲ್ಯೋಪಮ ಕಾಲಗಳು ತೀರುವವೋ ಆಗ ಒಂದು ಸಾಗರೋಪಮಕಾಲವಾಗುತ್ತದೆ. ಯಾವಾಗ ಹತ್ತು ಕೋಟ್ಯಾನುಕೋಟಿ ಸಾಗರೋಪಮ ಕಾಲಗಳು ಮುಗಿಯುವವೋ, ಆಗ ಒಂದು "ಉತ್ಸರ್ಪಿಣೀ" ಕಾಲವಾಗುತ್ತದೆ. ಮತ್ತು ಯಾವಾಗ ಒಂದು ಉತ್ಸರ್ಪಿಣೀ ಮತ್ತು  ಒಂದು "ಅವಸರ್ಪಿಣೀ"[೪೬] ಕಾಲ ಮುಗಿದು  ಮುಗಿಯುವುದೋ ಆಗ ಒಂದು 'ಕಾಲಚಕ್ರ'ವಾಗುತ್ತದೆ. ಯಾವಾಗ ಅನಂತ ಕಾಲ ಚಕ್ರಗಳು ಉರುಳಿಹೋಗುವವೋ, ಆಗ ಒಂದು 'ಪುದ್ಗಲಪರಾವೃತ್ತ'ವಾಗುತ್ತದೆ. ಈಗ ಅನಂತಕಾಲವೆಂದು ಯಾವುದನ್ನು ಹೇಳುತ್ತಾರೆ? ಸಿದ್ಧಾಂತ ಪುಸ್ತಕಗಳಲ್ಲಿ ಒಂಬತ್ತು ದೃಷ್ಟಾಂತಗಳಿಂದ ಕಾಲದ ಯಾವ ಸಂಖ್ಯೆಯನ್ನು ಗಣಿಸಿದ್ದಾರೋ, ಅದರ ನಂತರ 'ಅನಂತಕಾಲ'ವೆನಿಸುತ್ತದೆ. ಅಂತಹ ಅನಂತ ಪುದ್ಗಲಪರಾವೃತ್ತ ಕಾಲಗಳು ಜೀವನಿಗೆ ಅವಾಗಮನಮಾಡುತ್ತಾ ಕಳೆದಿವೆ. ಈ ಮೊದಲಾಗಿವೆ.

---

೪೫. ಇಂತಿಂತಹ ಬುರುಡೆಯನ್ನು ಹೊಡೆಯುವುದರಲ್ಲಿ ಪೌರಾಣಿಕರು ಮೇಲುಗೈಯೋ, ಅಥವಾ ಜೈನರದೋ? ಈ ಬುರುಡೆಯನ್ನು ನಂಬುವವರು, ಮತ್ತು ಅವರ ಅನುಯಾಯಿಗಳು ಎಷ್ಟು ವೈಜ್ಞಾನಿಕ ಪ್ರಗತಿಯನ್ನು ಸಾಧಿಸಿದರೇನು? ಎಲ್ಲವೂ ಧೂರ್ತ ಸಂನ್ಯಾಸಿ–ಪೂಜಾರಿ–ಮಠಾಧೀಶ–ಪಂಡಾಗಳ ಪಾದಗಳಿಗೆ ಅರ್ಪಣವೇ !

೪೬. ಈ ಶಬ್ದಗಳು ಆಯುರ್ವೇದ ಕಾಶ್ಯಪ ಸಂಹಿತೆಯಲ್ಲೂ ಇದೆ. ಆದರೆ, ಅದರಲ್ಲಿ ಇವುಗಳ ಅರ್ಥವೇ ಬೇರೆಯಾಗಿದೆ. –ಯು.ಮೀ

ಗಣಿತವಿದ್ಯಾಭಿಜ್ಞರಾದ ಸೋದರ ಜನರೇ! ಕೇಳಿರಿ. ಜೈನರ ಗ್ರಂಥಗಳ ಕಾಲಗಣನೆಯನ್ನು ಮಾಡಬಲ್ಲಿರೋ ಅಥವಾ ಇಲ್ಲವೋ? ಮತ್ತು ನೀವು ಇದನ್ನು ಸತ್ಯವೆಂದೂ ಕೂಡ ಒಪ್ಪಬಲ್ಲಿರೋ ಅಥವಾ ಇಲ್ಲವೋ? ನೋಡಿರಿ! ಈ ತೀರ್ಥಂಕರರುಗಳು ಇಂತಹ ಗಣಿತ ವಿದ್ಯೆಯನ್ನು ಕಲಿತಿದ್ದರು! ಇವರ ಮತದಲ್ಲಿ ಇಂತಹ ಗುರುಗಳು ಮತ್ತು ಶಿಷ್ಯರು ಇದ್ದಾರೆ; ಅವರ ಅವಿದ್ಯೆಗೆ ಯಾವದೇ ಇತಿಮಿತಿಯೂ ಇಲ್ಲ. ಇನ್ನೂ ಕೇಳಿರಿ ಇವರ ಅಂಧಲೀಲೆಯನ್ನು. ರತ್ನಸಾರಭಾಗದ ೧೩೩ರ ಪುಟದಿಂದ ಹಿಡಿದು ಏನೇನೋ ನಿರರ್ಥಕವಾದ ಮಾತುಗಳಿವೆ. ಎಂದರೆ ಜೈನರ ಸಿದ್ಧಾಂತಗಳಿವೆ; ಅಂದರೆ ಋಷಭದೇವನಿಂದಾರಂಭಿಸಿ ಮಹಾವೀರನವರೆಗೆ ಯಾವ ೨೪ ಮಂದಿ ಇವರ ತೀರ್ಥಂಕರರಾಗಿದ್ದಾರೋ, ಅವರುಗಳ ವಚನಗಳ ಸಾರಸಂಗ್ರಹವಿದೆ- ಎಂದು ರತ್ನಸಾರಭಾಗದ ೧೪೮ನೆಯ ಪುಟದಲ್ಲಿ ಬರೆದಿದ್ದಾರೆ. ಪೃಥಿವೀಕಾಯ ಜೀವರನ್ನು, ಮಣ್ಣು ಕಲ್ಲು ಮೊದಲಾದ ಪೃಥಿವಿಯ ಭೇದಗಳನ್ನು ತಿಳಿಯಬೇಕು. ಅವುಗಳಲ್ಲಿರುವ ಜೀವರ ಶರೀರದ ಪರಿಮಾಣ ಒಂದು ಅಂಗುಲದ ಅಸಂಖ್ಯಾತ ಭಾಗವೆಂದು ತಿಳಿಯಬೇಕು; ಅಂದರೆ ಅತ್ಯಂತ ಸೂಕ್ಷ್ಮರಾಗಿದ್ದಾರೆ. ಅವರ ಆಯಸ್ಸಿನ ಅವಧಿ, ಎಂದರೆ ಅವರು ಅಧಿಕಕ್ಕಿಂತ ಅಧಿಕ ೨೨ ಸಾವಿರ ವರ್ಷಪರ್ಯಂತ ಜೀವಿಸುತ್ತಾರೆ. (ರತ್ನ-ಪ್ರ-೧೪೯) ವನಸ್ಪತಿಯ ಒಂದು ಶರೀರದಲ್ಲಿ ಅನಂತ ಜೀವರಿರುತ್ತಾರೆ. ಯಾವವು ಕಂದ-ಮೂಲಪ್ರಧಾನವಾಗಿರುತ್ತವೋ ಅವು ಸಾಧಾರಣ ವನಸ್ಪತಿಗಳೆನಿಸುತ್ತವೆ. ಮತ್ತು ಅನಂತಕಾಯ ಪ್ರಧಾನವಾದುವು ಯಾವವು ಇವೆಯೋ, ಅವುಗಳನ್ನು ಸಾಧಾರಣ ವನಸ್ಪತಿಯ ಜೀವರುಗಳೆನ್ನಬೇಕು. ಅವುಗಳ ಆಯಸ್ಸು ಅನಂತಮುಹೂರ್ತವಾಗಿರುತ್ತದೆ. ಆದರೆ, ಇಲ್ಲಿ ಪೂರ್ವೋಕ್ತವಾದ ಇವರುಗಳ ಮುಹೂರ್ತವನ್ನು ಗ್ರಹಿಸಬೇಕು. ಮತ್ತು ಒಂದು ಶರೀರದಲ್ಲಿ ಏಕೇಂದ್ರಿಯ ಎಂದರೆ ಕೇವಲ ಸ್ಪರ್ಶೇಂದ್ರಿಯವು ಇವುಗಳಲ್ಲಿರುತ್ತದೆ. ಮತ್ತು ಅವರಲ್ಲಿ ಒಬ್ಬ ಜೀವನಿರುತ್ತಾನೆ. ಅದನ್ನು ಪ್ರತ್ಯೇಕ ವನಸ್ಪತಿಯೆನ್ನುತ್ತಾರೆ. ಅವನ ದೇಹದ ಅಳತೆ ಒಂದು ಸಾವಿರಯೋಜನಗಳು. ಎಂದರೆ, ಪೌರಾಣಿಕರ ಯೋಜನ ನಾಲ್ಕು ಕೋಶಗಳು; ಆದರೆ ಜೈನರ ಯೋಜನ ೧೦,೦೦೦ ಕೋಶಗಳಷ್ಟು ಇರುತ್ತದೆ. ಇಂತಹ ೪,೦೦೦ ಕೋಶಗಳ ಶರೀರವಿರುತ್ತದೆ. ಅದರ ಆಯಸ್ಸು ಅಧಿಕಾಧಿಕವೆಂದರೆ ಹತ್ತು ಸಾವಿರ ವರ್ಷಗಳಷ್ಟು ಆಗಿರುತ್ತದೆ.

ಈಗ ಎರಡು ಇಂದ್ರಿಯಗಳನ್ನುಳ್ಳ ಜೀವರ ವಿಷಯ. ಎಂದರೆ-ಅವುಗಳ ಶರೀರ ಮತ್ತು ಒಂದು ಮುಖ; ಶಂಖ, ಕವಡೆ ಮತ್ತು ಹೇನು - ಮೊದಲಾದುವು ಇಂತಹವಾಗಿ ಇರುತ್ತವೆ. ಅವುಗಳ ದೇಹದ ಅಳತೆ ಅಧಿಕಾದಿಕವೆಂದರೆ ೪೮ ಕೋಶಗಳ ಸ್ಥೂಲ ಶರೀರವಿರುತ್ತದೆ. ಮತ್ತು ಅವುಗಳ ಆಯಸ್ಸು ಅತ್ಯಂತ ಹೆಚ್ಚೆಂದರೆ ಹನ್ನೆರಡು ವರ್ಷಗಳಷ್ಟಾಗಿರುತ್ತದೆ (ರತ್ನ:-ಪುಟ-೧೫೦)

ಇಲ್ಲಿ ಬಹಳ ಮುಗ್ಗರಿಸಿದ್ದಾರೆ. ಏಕೆಂದರೆ, ಇಷ್ಟು ದೊಡ್ಡ ಶರೀರದ ಆಯಸ್ಸುಗಳನ್ನು ಹೆಚ್ಚಾಗಿ ಬರೆಯಬೇಕಾಗಿದ್ದಿತು. ಮತ್ತು ೪೮ ಕೋಶಗಳ ಸ್ಥೂಲವಾದ ಹೇನು ಜೈನರ ತಲೆಗಳಲ್ಲಿ ಬೀಳುತ್ತಿರಬಹುದು. ಮತ್ತು ಅವರು ನೋಡಿಯೂ ಇರಬಹುದು! ಇಷ್ಟು ದೊಡ್ಡ ಹೇನನ್ನು ನೋಡಲು ಬೇರೆಯವನಿಗೆ ಇಂತಹ ಭಾಗ್ಯವಾದರೂ ಎಲ್ಲಿದೆ?

ಮತ್ತೂ ನೋಡಿರಿ ಇವರ ಗೊತ್ತು-ಗುರಿಯಿಲ್ಲದ ಮಾತನ್ನು. ಇವರ ಚೇಳುಗಳು, ತಿಗಣೆಗಳು, ಚಿಗಟಗಳು ಮತ್ತು ನೊಣಗಳು ಒಂದು ಯೋಜನದಷ್ಟು ದೊಡ್ಡ ಶರೀರದಿಂದ ಯುಕ್ತವಾಗಿವೆ! ಇವುಗಳ ಆಯಸ್ಸು ಅತ್ಯಂತ ಅಧಿಕವೆಂದರೆ ಆರು ತಿಂಗಳಷ್ಟು ಆಗಿರುತ್ತದೆ. ನೋಡಿರಿ, ಸೋದರರೇ! ನಾಲ್ಕು-ನಾಲ್ಕು ಕೋಶದ ಚೇಳನ್ನು ಬೇರೆ ಯಾವನೂ ನೋಡಿರಲಾರನು. ಎಂಟು ಮೈಲಿಗಳವರೆಗಿನ ಶರೀರಗಳನ್ನುಳ್ಳ ಚೇಳುಗಳು ಮತ್ತು ನೊಣಗಳೂ ಕೂಡ ಜೈನರ ಮತದಲ್ಲಿರುತ್ತದೆ. ಇಂತಹ ಚೇಳುಗಳು ಮತ್ತು ನೊಣಗಳು ಅವರ ಮನೆಗಳಲ್ಲಿಯೇ ಇರಬಹುದು. ಮತ್ತು ಅವರೇ ನೋಡಿರಬಹುದು. ಬೇರೆ ಯಾವನೂ ಜಗತ್ತಿನಲ್ಲಿ ನೋಡಿರಲಾರನು. ಯಾವಾಗಲಾದರೂ ಇಂತಹ ಚೇಳುಗಳು ಯಾವನಾದರೂ ಜೈನನನ್ನು ಕುಟುಕಿದರೆ, ಅವನ ಗತಿ ಏನಾಗುತ್ತಿರಬಹುದು?

ಜಲಚರಗಳಾದ ಮೀನು ಮೊದಲಾದುವುಗಳ ಶರೀರದ ಅಳತೆ ಒಂದು ಸಾವಿರ ಯೋಜನ; ಎಂದರೆ - ೧೦,೦೦೦ ಕೋಶಕ್ಕೆ ಒಂದು ಯೋಜನವೆಂದು ಗಣಿಸಿದರೆ, ಒಂದು ಕೋಟಿ ಕೋಶದ ಶರೀರವಾಗುತ್ತದೆ. ಮತ್ತು ಒಂದು ಕೋಟಿ 'ಪೂರ್ವವರ್ಷ'ಗಳ ಆಯಸ್ಸಿರುತ್ತದೆ. ಅಂತಹ ಸ್ಥೂಲವಾದ ಜಲಚರವನ್ನು ಜೈನರ ಹೊರತು ಬೇರೆ ಯಾವನೂ ನೋಡಿರಲಾರನು. ಮತ್ತು ಚತುಷ್ಪಾದವಾದ ಆನೆ ಮೊದಲಾದುದರ ದೇಹದ ಅಳತೆ ಎರಡು ಕೋಶದಿಂದ ಒಂಬತ್ತು ಕೋಶಗಳವರೆಗೆ ಮತ್ತು ಆಯಸ್ಸು ಎಂಬತ್ತುನಾಲ್ಕು ಸಾವಿರ ವರ್ಷಗಳು-ಈ ಮೊದಲಾಗಿದೆ. ಇಂತಹ ದೊಡ್ಡ ದೊಡ್ಡ ಶರೀರಗಳ ಜೀವರನ್ನೂ ಕೂಡ ಜೈನರೇ ನೋಡಿರಬಹುದು ಮತ್ತು ಅಂಗೀಕರಿಸುತ್ತಾರೆ. ಮತ್ತೆ ಯಾವ ಬುದ್ಧಿಶಾಲಿಯೂ ಒಪ್ಪಲಾರನು.

(ರತ್ನ:- ಪುಟ-೧೫೧) ಜಲಚರಗಳಲ್ಲಿ ಗರ್ಭದಿಂದ ಹುಟ್ಟುವ ಜೀವರ ದೇಹಗಳ ಅಳತೆ ಉತ್ಕೃಷ್ಟವಾದುದು ಒಂದು ಸಾವಿರ ಯೋಜನ, ಎಂದರೆ-ಒಂದು ಕೋಟಿ ಕೋಶಗಳಷ್ಟು ಮತ್ತು ಆಯಸ್ಸು ಒಂದು ಕೋಟಿ "ಪೂರ್ವವರ್ಷ"ಗಳಷ್ಟು ಆಗಿರುತ್ತದೆ.

ಇಷ್ಟು ದೊಡ್ಡ ಶರೀರಗಳ ಮತ್ತು ಆಯಸ್ಸಿನ ಜೀವರನ್ನೂ ಕೂಡ ಕೇವಲ ಇವರ ಆಚಾರ್ಯರುಗಳೇ ಸ್ವಪ್ನದಲ್ಲಿ ನೋಡಿರಬಹುದು. ಯಾವುದು ಎಂದಿಗೂ ಸಂಭವವೇ ಆಗಲಾರದೋ, ಅಂತಹ ಮಹಾಮಿಥ್ಯೆಯ ಮಾತಲ್ಲವೇ ಇದು?

ಈಗ ಕೇಳಿರಿ ಭೂಮಿಯ ಪರಿಮಾಣವನ್ನು. (ರತ್ನಸಾರಭಾಗ:- ಪು. ೧೫೨) ಈ ಸೊಟ್ಟು ಲೋಕದಲ್ಲಿ ಅಸಂಖ್ಯಾತ ದ್ವೀಪಗಳೂ, ಮತ್ತು ಅಸಂಖ್ಯಾತ ಸಮುದ್ರಗಳೂ ಇವೆ. ಈ ಅಸಂಖ್ಯಾತದ ಪ್ರಮಾಣವು, ಅಂದರೆ, ಎರಡೂವರೆ ಸಾಗರೋಪಮ ಕಾಲದಲ್ಲಿ ಎಷ್ಟು ಸಮಯವಾಗುವುದೋ, ಅಷ್ಟು ದ್ವೀಪಗಳೂ, ಮತ್ತು ಸಮುದ್ರಗಳೂ ಇವೆ-ಎಂದು ತಿಳಿಯಬೇಕು. ಈಗ ಈ ಪೃಥಿವಿಯಲ್ಲಿ ಜಂಬೂದ್ವೀಪವು ಮೊದಲದು; ಎಲ್ಲ ದ್ವೀಪಗಳ ನಡುವೆಯಿದೆ. ಇದರ ವಿಸ್ತಾರ ಒಂದು ಲಕ್ಷ ಯೋಜನ, ಎಂದರೆ, ಒಂದು ಅರ್ವ ಕೋಶವಾಗಿದೆ, ಮತ್ತು ಇದರ ನಾಲ್ಕು ಕಡೆಯೂ ಲವಣ ಸಮುದ್ರವಿದೆ. ಅದರ ಪ್ರಮಾಣ ಎರಡು ಲಕ್ಷ ಯೋಜನ ಕೋಶ; ಎಂದರೆ ಎರಡು ಅರ್ವಕೋಶದಷ್ಟಿವೆ. ಈ ಜಂಬೂದ್ವೀಪದ ನಾಲ್ಕು ಕಡೆಯೂ "ಘಾತಕೀ ಖಂಡ"-ಎಂಬ ಹೆಸರಿನ ಯಾವ ದ್ವೀಪವಿದೆಯೋ, ಅದರ ವಿಸ್ತಾರ ನಾಲ್ಕು ಲಕ್ಷ ಯೋಜನ, ಎಂದರೆ ನಾಲ್ಕು ಅರ್ವಕೋಶದಷ್ಟಿದೆ. ಮತ್ತು ಅದರ ಹಿಂದೆ 'ಕಾಲೋವಧಿ' ಸಮುದ್ರವಿದೆ. ಅದರ ವಿಸ್ತಾರ ಎಂಟು ಲಕ್ಷ. ಎಂದರೆ ಎಂಟು ಅರ್ವಕೋಶಗಳಷ್ಟಿದೆ. ಅದರ ಹಿಂದೆ "ಪುಷ್ಕರಾವರ್ತ" ದ್ವೀಪವಿದೆ. ಅದರ ವಿಸ್ತಾರ ೧೬ ಕೋಶದಷ್ಟಿದೆ. ಆ ದ್ವೀಪದ ಒಳಭಾಗ ಉಚ್ಚ-ನೀಚವಾಗಿದೆ. ಆ ದ್ವೀಪದ ಅರ್ಧ ಭಾಗದಲ್ಲಿ ಮನುಷ್ಯರು ವಾಸಿಸುತ್ತಾರೆ. ಮತ್ತು ಅದರಿಂದ ಮುಂದಕ್ಕೆ ಅಸಂಖ್ಯಾತ ದ್ವೀಪಗಳೂ-ಸಮುದ್ರಗಳೂ ಇವೆ. ಅದರಲ್ಲಿ ತಿರ್ಯಗ್ಯೋನಿ ಜೀವರಿರುತ್ತಾರೆ. (ರತ್ನಸಾರ ಭಾಗ, ಪೃಷ್ಠ-೧೫೩) ಜಂಬೂದ್ವೀಪದ ಒಂದು ಹಿಮವಂತ, ಒಂದು ಐರಂಡವಂತ, ಒಂದು ಹರಿವರ್ಷ, ಒಂದು ರಮ್ಯಕ, ಒಂದು ದೇವಕುರು, ಒಂದು ಉತ್ತರಕುರು ಈ ಆರು ಕ್ಷೇತ್ರಗಳಿವೆ.[೪೭]

**ಸಮೀಕ್ಷಕ :-** ಕೇಳಿ ಸೋದರರೇ! ಭೂಗೋಳವಿದ್ಯಾಭಿಜ್ಞರಾದ ಜನರೇ! ಭೂಗೋಳದ ಅಳತೆ ಮಾಡುವಲ್ಲಿ ನೀವು ಮುಗ್ಗರಿಸಿದಿರೋ, ಅಥವಾ ಜೈನರೋ? ಜೈನರು ತಪ್ಪು ಮಾಡಿರುವರಾದರೆ, ಅವರಿಗೆ ತಿಳುವಳಿಗೆ ಹೇಳಿರಿ. ಮತ್ತು ನೀವೇ ತಪ್ಪು ಮಾಡಿರುವಿರಾದರೆ, ಅವರಿಂದ ತಿಳುವಳಿಕೆ ಪಡೆದುಕೊಳ್ಳಿರಿ. ಸ್ವಲ್ಪ ಆಲೋಚಿಸಿ ನೋಡುವಿರಾದರೆ, ಜೈನರ ಆಚಾರ್ಯರು ಮತ್ತು ಶಿಷ್ಯರು ಭೂಗೋಳ, ಖಗೋಳ ಮತ್ತು ಗಣಿತ ವಿದ್ಯೆಯನ್ನು ಸ್ವಲ್ಪವೂ ಓದಿರಲಿಲ್ಲವೆಂದೇ ನಿಶ್ಚಯವಾಗುತ್ತದೆ. ಓದಿದ್ದ ಪಕ್ಷದಲ್ಲಿ ಮಹಾ ಅಸಂಭವವಾದ ಬುರುಡೆಗಳನ್ನೇಕೆ ಹೊಡೆಯುತ್ತಿದ್ದರು? ಇಂತಹ ಅವಿದ್ಯಾವಂತರಾದ ಪುರುಷರು ಜಗತ್ತನ್ನು ಅಕರ್ತೃಕವೆಂದರೆ ಮತ್ತು ಈಶ್ವರನನ್ನು ಒಪ್ಪದಿದ್ದರೆ, ಇದರಲ್ಲಿ ಆಶ್ಚರ್ಯವೇನಿರುತ್ತದೆ? ಇದೇ ಕಾರಣದಿಂದ ಜೈನರು ತಮ್ಮ ಪುಸ್ತಕಗಳನ್ನು ಯಾವ ವಿದ್ವಾಂಸರಾದ ಅನ್ಯಮತಸ್ಥರಿಗೂ ಕೊಡುವುದಿಲ್ಲ. ಏಕೆಂದರೆ ಯಾವುವನ್ನು ಈ ಜನರು ಪ್ರಾಮಾಣಿಕವಾದ, ತೀರ್ಥಂಕರರುಗಳಿಂದ ರಚಿತವಾದ ಸಿದ್ಧಾಂತ ಗ್ರಂಥಗಳೆಂದು ಅಂಗೀಕರಿಸುತ್ತಾರೋ, ಅವುಗಳಲ್ಲಿ ಇದೇ ರೀತಿಯ ಅವಿದ್ಯಾಯುಕ್ತವಾದ ಮಾತುಗಳೇ ತುಂಬಿಕೊಂಡಿವೆ. ಆದುದರಿಂದ, ಅವುಗಳನ್ನು ನೋಡಲು ಅವಕಾಶ ಕೊಡುವುದಿಲ್ಲ. ಕೊಟ್ಟರೆ, ಪೊಳ್ಳು ಹೊರಬೀಳುವುದು. ಇವರ ಹೊರತು, ಯಾವನೇ ಮಾನವನು ಸ್ವಲ್ಪವಾದರೂ ಬುದ್ಧಿಯನ್ನು ಹೊಂದಿರುವವನಾದರೆ, ಅವನು ಎಂದಿಗೂ ಈ ಬುರುಡೆ ಕಗ್ಗವನ್ನು ಸತ್ಯವೆಂದು ಅಂಗೀಕರಿಸಲಾರನು. ಈ ಸಮಸ್ತ ಪ್ರಪಂಚವನ್ನೂ ಜೈನರು ಜಗತ್ತನ್ನು ಅನಾದಿಯೆಂದು ಅಂಗೀಕರಿಸುವುದಕ್ಕಾಗಿಯೇ ಹೂಡಿದ್ದಾರೆ. ಆದರೆ, ಇದು ಬರಿಯ ಸುಳ್ಳು. ಅಹುದು, ಜಗತ್ತಿನ ಕಾರಣ ಅನಾದಿಯಾಗಿದೆ. ಏಕೆಂದರೆ, ಆ ಪರಮಾಣು ಮೊದಲಾದ ತತ್ತ್ವಸ್ವರೂಪವು ಅಕರ್ತೃಕವಾಗಿದೆ. ಆದರೆ ಅವುಗಳಲ್ಲಿ, ನಿಯಮಪೂರ್ವಕವಾಗಿ ಆಗುವ ಮತ್ತು ಕೆಡುವ ಸಾಮರ್ಥ್ಯ ಸ್ವಲ್ಪವೂ ಇಲ್ಲ. ಏಕೆಂದರೆ, ಪರಮಾಣು ಎಂಬುದು ಒಂದು ದ್ರವ್ಯದ ಹೆಸರಾಗಿದೆ ಮತ್ತು ಸ್ವಭಾವತಃ ಬೇರೆ ಬೇರೆ ರೂಪವಾಗಿದ್ದು ಜಡವಾಗಿವೆ; ಅವು ತಮ್ಮಷ್ಟಕ್ಕೆ ತಾವೇ ಯಥಾಯೋಗ್ಯವಾಗಿ ರೂಪ ತಾಳಲಾರವು. ಆದುದರಿಂದ ಇವುಗಳಿಂದ ಸೃಷ್ಟಿಯನ್ನು ರಚಿಸುವವನಾದ ಚೇತನನು

---

೪೭. ಜೈನರ ಗ್ರಂಥಗಳಲ್ಲಿನ ಅನೇಕ ಭೌಗೋಳಿಕ ಹೆಸರುಗಳು ಹಿಂದೂಗಳ ಪುರಾಣಗಳಲ್ಲೂ ಇವೆ. ಹಿಂದುಗಳ ಪುರಾಣಗಳು ನವೀನವಾದ್ದರಿಂದ, ಅವುಗಳಲ್ಲಿನ ಕಲ್ಪನಾ ಲೋಕ ಜೈನ ಗ್ರಂಥಗಳಿಂದ ಆಯ್ದುಕೊಂಡಿದ್ದು, ಎಂಬುದರಲ್ಲಿ ಸಂದೇಹವಿಲ್ಲ.
ಪಾತಂಜಲ ಯೋಗದರ್ಶನದ ವ್ಯಾಸಭಾಷ್ಯದಲ್ಲಿ 'ಭುವನ ಜ್ಞಾನಂ ಸೂರ್ಯೇ ಸಂಯಮಾತ್' [೩/೨೬] ಸೂತ್ರದ ಭಾಷ್ಯದಲ್ಲಿ ಕಲ್ಪಿತ ಲೋಕಗಳ ಇಂತಹ ಅಸಂಬದ್ಧ ಪ್ರಲಾಪವಿದೆ. ಭಾಷ್ಯದ ಈ ಭಾಗ ಮತ್ತು ಇದೇ ತರಹದ ಅನೇಕ ಅಂಶಗಳು ಜೈನರಿಂದ ಪ್ರಕ್ಷಿಪ್ತವಾಗಿವೆ. ಪಾತಂಜಲ ಯೋಗದರ್ಶನದ ವಿಭೂತಿ ಪಾದ ಮತ್ತು ಕೈವಲ್ಯ ಪಾದಗಳಲ್ಲಿ ಅನೇಕ ಸೂತ್ರಗಳೇ ಪ್ರಕ್ಷಿಪ್ತವಾಗಿವೆ.

ಅವಶ್ಯವಾಗಿಯೂ ಇದ್ದಾನೆ. ಮತ್ತು ಆ ರಚನಾ ಕರ್ತೃವು ಜ್ಞಾನರೂಪನಾಗಿದ್ದಾನೆ. ನೋಡಿರಿ, ಪೃಥಿವೀ, ಸೂರ್ಯ – ಮೊದಲಾದ ಸಮಸ್ತ ಲೋಕಗಳನ್ನೂ ನಿಯಮದಲ್ಲಿಡುವುದು ಅನಂತನೂ, ಅನಾದಿಯೂ, ಚೇತನನೂ ಆದ ಪರಮಾತ್ಮನ ಕಾರ್ಯವಾಗಿದೆ. ಯಾವುದರಲ್ಲಿ ಸಂಯೋಗವೂ, ರಚನಾವಿಶೇಷವು ಕಾಣಿಸುತ್ತದೋ, ಆ ಸ್ಥೂಲ ಜಗತ್ತು ಅನಾದಿ ಎಂದಿಗೂ ಆಗಲಾರದು. ಕಾರ್ಯಜಗತ್ತನ್ನು ನಿತ್ಯವೆಂದು ಅಂಗೀಕರಿಸುವಿರಾದರೆ, ಅವರ ಕಾರಣವಾವುದೂ ಇರಲಾರದು. ಆದರೆ, ಅದೇ ಕಾರ್ಯ–ಕಾರಣರೂಪವಾಗಿ ಹೋಗುವುದೆಂದು ಹೇಳುವಿರಾದರೆ, ತನ್ನ ಕಾರ್ಯ ಮತ್ತು ಕಾರಣ ತಾನೇ ಆಗುವುದರಿಂದ ಅನ್ಯೋಽನ್ಯಾಶ್ರಯ ಮತ್ತು ಆತ್ಮಾಶ್ರಯ ದೋಷಬರುವುದು. ತನ್ನ ಹೆಗಲಿನ ಮೇಲೆ ತಾನು ಏರುವುದೂ ಮತ್ತು ತನ್ನ ತಂದೆಯೂ ಮಗನೂ ತಾನೇ ಆಗುವುದೂ ಶಕ್ಯವಲ್ಲ. ಆದುದರಿಂದ ಜಗತ್ತಿನ ಕರ್ತೃವನ್ನು ಅವಶ್ಯವಾಗಿಯೇ ಅಂಗೀಕರಿಸಬೇಕಾಗಿದೆ.

**ಪ್ರಶ್ನೆ:**– ಈಶ್ವರನನ್ನು ಜಗತ್ತಿನ ಕರ್ತೃವೆಂದು ಗ್ರಹಿಸುವಿರಾದರೆ, ಈಶ್ವರನ ಕರ್ತೃ ಯಾವನು?

**ಉತ್ತರ:**– ಕರ್ತೃವಿನ ಕರ್ತೃವು ಮತ್ತು ಕಾರಣದ ಕಾರಣ ಯಾವನೂ, ಯಾವುದೂ ಆಗಲಾರದು. ಏಕೆಂದರೆ, ಮೊದಲು ಕರ್ತೃ ಮತ್ತು ಕಾರಣವಿರುವುದರಿಂದಲೇ ಕಾರ್ಯವಾಗುತ್ತದೆ. ಯಾವುದರಲ್ಲಿ ಸಂಯೋಗ–ವಿಯೋಗವಾಗುವುದಿಲ್ಲವೋ, ಯಾವುದು ಪ್ರಥಮ ಸಂಯೋಗ– ವಿಯೋಗದ ಕಾರಣವೋ, ಅದರ ಕರ್ತೃ ಅಥವಾ ಕಾರಣ ಯಾವ ರೀತಿಯಲ್ಲಿಯೂ ಇರಲಾರದು. ಇದರ ವಿಶೇಷ ವ್ಯಾಖ್ಯಾನವನ್ನು ಎಂಟನೆಯ ಸಮುಲ್ಲಾಸದಲ್ಲಿ, ಸೃಷ್ಟಿ ವಿವರಣೆಯಲ್ಲಿ ಮಾಡಿದ್ದೇವೆ. ನೋಡಿಕೊಳ್ಳಿರಿ. ಈ ಜೈನರಿಗೆ ಸ್ಥೂಲವಾದ ವಿಷಯದ ಜ್ಞಾನವೂ ಯಥಾವತ್ತಾಗಿಯಿಲ್ಲ. ಇನ್ನು ಪರಮ ಸೂಕ್ಷ್ಮವಾದ ಸೃಷ್ಟಿ ವಿದ್ಯಾಜ್ಞಾನ ಹೇಗೆ ತಾನೇ ಆಗಲು ಶಕ್ಯ? ಜೈನರು ಸೃಷ್ಟಿಯನ್ನು ಅನಾದಿ–ಅನಂತವೆಂದೂ ಗ್ರಹಿಸುತ್ತಾರೆ. ಹಾಗೂ ಪ್ರತಿಯೊಂದು ಗುಣದಲ್ಲಿಯೂ, ಪ್ರತಿಯೊಂದು ದೇಶದಲ್ಲಿಯೂ, ಪರ್ಯಾಯಗಳನ್ನೂ,[೪೮] ಪ್ರತಿವಸ್ತುವಿನಲ್ಲಿಯೂ ಅನಂತ ಅನಂತ ಪರಿವರ್ತನಗಳನ್ನೂ ಗ್ರಹಿಸುತ್ತಾರೆ".– ಎಂದು ಪ್ರಕರಣರತ್ನಾಕಾರದ ಪ್ರಥಮ ಭಾಗದಲ್ಲಿ ಬರೆದಿದ್ದಾರೆ. ಈ ಮಾತೂ ಕೂಡ ಎಂದಿಗೂ ಅನ್ವಯಿಸಲಾರದು. ಏಕೆಂದರೆ–ಅಂತ, ಎಂದರೆ ಎಲ್ಲೆಯಿರುವ ತತ್ತ್ವಗಳಿಗೆ ಸಂಬಂಧಿಸಿದುದೆಲ್ಲವೂ ಅಂತಯುಕ್ತವೇ ಆಗಿರುತ್ತವೆ. ಅನಂತ – ಎಂಬ ಶಬ್ದಕ್ಕೆ ಅಸಂಖ್ಯವೆಂದು ಅರ್ಥಮಾಡಿದರೂ ಸರಿಹೋಗದು. ಹೌದು; (ಅವನ ಎಣಿಕೆಗೆ ಅಂದದ ಕಾರಣ) ಜೀವನ ದೃಷ್ಟಿಯಿಂದ ಅನಂತ – ಎಂದರೆ ಅಸಂಖ್ಯವೆಂದು ಔಪಚಾರಿಕವಾಗಿ ಒಪ್ಪಬಹುದು; ಈಶ್ವರನ ದೃಷ್ಟಿಯಿಂದಲ್ಲ. ಏಕೆಂದರೆ, ಒಂದೊಂದು ದ್ರವ್ಯದಲ್ಲಿನ ಒಂದೊಂದು ಕಾರ್ಯಕಾರಣ ಸಾಮರ್ಥ್ಯವನ್ನು ಅವಿಭಾಗ ಪರಿವರ್ತನಗಳಿಂದ ಅನಂತ ಸಾಮರ್ಥ್ಯವೆಂದು ಗ್ರಹಿಸುವುದು ಕೇವಲ ಅವಿದ್ಯೆಯ ಮಾತಾಗಿರುತ್ತದೆ. ಒಂದು ಪರಮಾಣು ದ್ರವ್ಯಕ್ಕೆ ಎಲ್ಲೆಯಿರುವಾಗ ಅಂನಂತವಾದ ಭಾಗಗಳಾಗುವ ಪರಿವರ್ತನೆಗಳು ಘಟಿಸಬಲ್ಲವೆಂತು? ಹೀಗೆಯೇ ಒಂದೊಂದು ದ್ರವ್ಯದಲ್ಲಿ ಅನಂತಗುಣಗಳನ್ನೂ, ಒಂದು ಗುಣಪ್ರದೇಶದಲ್ಲಿ ಅವಿಭಾಗರೂಪವಾದ ಅನಂತ ಪರಿವರ್ತನೆಗಳನ್ನೂ ಅನಂತವೆಂದು ಗ್ರಹಿಸುವುದು ಹುಡುಗತನದ ಮಾತಾಗಿದೆ. ಏಕೆಂದರೆ, ಯಾವುದರ ಅಧಿಕರಣ (ನೆಲೆ, ಆಶ್ರಯ)ಕ್ಕೆ ಎಲ್ಲೆಯಿದೆಯೋ, ಅದರಲ್ಲಿರುವ ತತ್ತ್ವಗಳಿಗೆ ಎಲ್ಲೆ ಏಕಿಲ್ಲ? ಇದೇ ರೀತಿಯ ಉದ್ದುದ್ದದ–ಅಗಲಗಲದ ಮಿಥ್ಯಾ ವಿಷಯಗಳನ್ನು ಬರೆದಿದ್ದಾರೆ. ಇನ್ನು ಜೀವ ಮತ್ತು ಅಜೀವ – ಈ ಎರಡು ಪದಾರ್ಥಗಳ ವಿಷಯದಲ್ಲಿ ಜೈನರ ನಿಶ್ಚಯ ಹೀಗಿದೆ:–

**ಚೇತನಾಲಕ್ಷಣೋ ಜೀವಃ ಸ್ಯಾದಜೀವಸ್ತದನ್ಯಕಃ ।**

**ಸತ್ಕರ್ಮಪುದ್ಗಲಾಃ ಪುಣ್ಯಂ ಪಾಪಂ ತಸ್ಯ ವಿಪರ್ಯಯಃ** [೪೯] ॥

ಇದು ಜಿನದತ್ತಸೂರಿಯ ವಚನವಾಗಿದೆ. ಮತ್ತು ಇದೇ "ಪ್ರಕರಣರತ್ನಾಕರದ" ಮೊದಲನೆಯ ಭಾಗದ "ನಯಚಕ್ರಸಾರ"ದಲ್ಲಿಯೂ "ಚೇತನೆಯನ್ನೇ ಲಕ್ಷಣವಾಗಿ ಉಳ್ಳವನು ಜೀವನು ಮತ್ತು ಚೇತನಾರಹಿತನು ಅಜೀವನು. ಎಂದರೆ, ಜಡದ್ರವ್ಯ. ಸತ್ಕರ್ಮವೆಂಬ ಪುದ್ಗಲಗಳೇ ಪುಣ್ಯ; ಮತ್ತು ದುಷ್ಕರ್ಮವೆಂಬ ಪುದ್ಗಲಗಳೇ ಪಾಪಗಳೆನಿಸುತ್ತವೆ".– ಎಂದು ಬರೆದಿದ್ದಾರೆ.

**ಸಮೀಕ್ಷಕ:**– ಜೀವ ಮತ್ತು ಜಡದ ಲಕ್ಷಣವೇನೋ ಸರಿಯಾಗಿದೆ. ಆದರೆ ಜಡರೂಪವಾದ ಯಾವ ಪುದ್ಗಲಗಳಿವೆಯೋ, ಅವು ಎಂದಿಗೂ ಪಾಪ–ಪುಣ್ಯಯುಕ್ತವಾಗಲಾರವು. ಏಕೆಂದರೆ, ಪಾಪ–ಪುಣ್ಯಮಡುವ ಸ್ವಭಾವ ಚೇತನನಲ್ಲಿರುತ್ತದೆ. ನೋಡರಿ,

---

೪೮. ಪರಿವರ್ತನ ಎಂಬುದಕ್ಕೆ ಜೈನರು ಬಳಸುವ ಪಾರಿಭಾಷಿಕ ಶಬ್ದ 'ಪರ್ಯಾಯ' ಎಂಬುದು.

೪೯. ಅರ್ಹತ ದರ್ಶನ.

ಈ ಜಡಪದಾರ್ಥಗಳೆಷ್ಟಿವೆಯೋ, ಅವೆಲ್ಲವೂ ಪಾಪ-ಪುಣ್ಯರಹಿತವಾಗಿವೆ. ಜೀವರನ್ನು ಅನಾದಿಯೆಂದು ಗ್ರಹಿಸುವುದೇನೋ ಸರಿ; ಆದರೆ ಅದೇ ಅಲ್ಪನೂ, ಅಲ್ಪಜ್ಞನೂ ಆದ ಜೀವನನ್ನು ಮುಕ್ತಿಸ್ಥಿತಿಯಲ್ಲಿ ಸರ್ವಜ್ಞನೆಂದು ಗ್ರಹಿಸುವುದು ತಪ್ಪು. ಏಕೆಂದರೆ, ಯಾವನು ಅಲ್ಪನೂ ಮತ್ತು ಅಲ್ಪಜ್ಞನೂ ಆಗಿರುತ್ತಾನೋ, ಅವನ ಸಾಮರ್ಥ್ಯವೂ ಕೂಡ ಅಲ್ಪವೇ ಆಗಿ, ಸದಾ ಒಂದಿಗೇ ಇರುವುದು. ಜೈನರು ಜಗತ್ತು, ಜೀವರು, ಜೀವರ ಕರ್ಮಗಳು ಮತ್ತು ಬಂಧನವನ್ನು ಅನಾದಿಯೆಂದು ಅಂಗೀಕರಿಸುತ್ತಾರೆ. ಇಲ್ಲಿಯೂ ಕೂಡ ಜೈನರ ತೀರ್ಥಂಕರರು ಎಡವಿದ್ದಾರೆ. ಏಕೆಂದರೆ, ಸಂಯುಕ್ತವಾದ ಕಾರ್ಯಜಗತ್ತು ಪ್ರವಾಹರೂಪದಿಂದ ಅನಾದಿಯಾದರೂ, ಸ್ವರೂಪತಃ ಅನಾದಿಯಲ್ಲ. ಕಾರ್ಯರೂಪ ಜಗತ್ತೂ, ಜೀವನ ಕರ್ಮಗಳೂ ಮತ್ತು ಬಂಧನವೂ ಸ್ವರೂಪತಃ ಅನಾದಿಯಾಗಿರಲಾರವು. ಏಕೆಂದರೆ, ಯಾವ ಪದಾರ್ಥ ಅನಾದಿಯಾಗಿರುತ್ತದೋ, ಅದು ಎಂದಿಗೂ ಬಿಟ್ಟು ಹೋಗಲಾರದು. ಅನಾದಿಯಾದುದರ ನಾಶವನ್ನೂ ಕೂಡ ಅಂಗೀಕರಿಸುವಿರಾದರೆ, ನಿಮ್ಮ ಸಮಸ್ತ ಅನಾದಿ ಪದಾರ್ಥಗಳ ನಾಶದ ಪ್ರಸಂಗವೂ ಬರುವುದು. ಮತ್ತು ಸಮಸ್ತ ಕರ್ಮಗಳ ನಾಶದ ಪ್ರಸಂಗವೂ ಬರುವುದು. ಹಾಗೆಯೇ ಅನಾದಿಯಾದುದನ್ನು ನಿತ್ಯವೆಂದು ತಿಳಿಯುವಿರಾದರೆ, ಕರ್ಮವೂ ಮತ್ತು ಕರ್ಮಬಂಧನವೂ ಕೂಡ ನಿತ್ಯವೆಂದಾಗುವುದು. ಮತ್ತು ಸಮಸ್ತ ಕರ್ಮಗಳ ಬಿಟ್ಟು ಹೋಗುವಿಕೆಯಿಂದ ಮುಕ್ತಿಯನ್ನು ಅಂಗೀಕರಿಸುವಿರಾದರೆ, ಸಮಸ್ತ ಕರ್ಮಗಳ ಬಿಟ್ಟು ಹೋಗುವಿಕೆಯೆಂಬುದು ಮುಕ್ತಿಯ ನಿಮಿತ್ತವಾಯಿತು. ಆ ಸ್ಥಿತಿಯಲ್ಲಿ ನೈಮಿತ್ತಿಕೀ ಮುಕ್ತಿ (ನಿಮಿತ್ತದಿಂದ ಲಭಿಸುವ) ಅದಾಯಿತು. ಹಾಗಾದರೆ, ಅದು ಶಾಶ್ವತವಾಗದು. ಹಾಗೂ ಕರ್ಮ-ಕರ್ತೃಗಳ ಸಂಬಂಧ ನಿತ್ಯವಾಗಿರುವುದರಿಂದ, ಕರ್ಮಗಳೂ ಕೂಡ ಎಂದಿಗೂ ಬಿಟ್ಟು ಹೋಗುವುದಿಲ್ಲ. ಮತ್ತೆ, ನಿಮ್ಮ ಮುಕ್ತಿಯನ್ನೂ ಮತ್ತು ನಿಮ್ಮ ತೀರ್ಥಂಕರರ ಮುಕ್ತಿಯನ್ನೂ ನಿತ್ಯವೆಂದು ಅಂಗೀಕರಿಸುವುದು ಯುಕ್ತವಾಗಲಾರದು.

**ಪ್ರಶ್ನೆ :**- ಹೇಗೆ ಧಾನ್ಯದ ಸಿಪ್ಪೆಯನ್ನು (ಹೊಟ್ಟನ್ನು) ತೆಗೆದುಬಿಡುವುದರಿಂದ ಅಥವಾ ಬೆಂಕಿಯನ್ನು ಹೊತ್ತಿಸುವುದರಿಂದ, ಆ ಬೀಜವು ಮತ್ತೆ ಬೆಳೆಯುವುದಿಲ್ಲವೋ, ಹಾಗೆಯೇ ಮುಕ್ತಿಯನ್ನು ಪಡೆದುಕೊಂಡ ಜೀವನು ಪುನಃ ಜನನ-ಮರಣರೂಪ ಜಗತ್ತಿಗೆ ಬರುವುದಿಲ್ಲ.

**ಉತ್ತರ:**- ಜೀವರ ಮತ್ತು ಕರ್ಮಗಳ ಸಂಬಂಧ ಸಿಪ್ಪೆ ಮತ್ತು ಬೀಜದ (ಸಂಬಂಧ) ದಂತೆಯಿಲ್ಲ. ಆದರೆ ಇವರದು ಸಮವಾಯ ಸಂಬಂಧ (ನಿತ್ಯಸಂಬಂಧ)ವಾಗಿದೆ. ಈ ಕಾರಣದಿಂದ ಅನಾದಿಕಾಲದಿಂದ ಜೀವನಿದ್ದಾನೆ; ಮತ್ತು ಅವನಲ್ಲಿ ಕರ್ಮ ಹಾಗೂ ಕರ್ತೃತ್ವ ಶಕ್ತಿಯ ಸಂಬಂಧವಿದೆ. ಅವನಲ್ಲಿ ಕರ್ಮಮಾಡುವ ಶಕ್ತಿಯ ಅಭಾವವನ್ನೂ ಕೂಡ ಅಂಗೀಕರಿಸುವಿರಾದರೆ, ಜೀವರೆಲ್ಲರೂ ಪಾಷಾಣದಂತೆ ಆಗಿಹೋಗುವರು ಹಾಗೂ ಮುಕ್ತಿಯನ್ನನುಭವಿಸುವ ಸಾಮರ್ಥ್ಯವೂ ಇರಲಾರದು. ಅನಾದಿಕಾಲದ ಕರ್ಮಬಂಧನವು ಬಿಟ್ಟುಹೋಗಿ ಹೇಗೆ ಜೀವನು ಮುಕ್ತನಾಗುವನೋ, ಹಾಗೆಯೇ ನಿಮ್ಮ ಮುಕ್ತಿಯಿಂದಲೂ ಹೊರಬಂದು, ಬಂಧನದಲ್ಲಿ ಬೀಳುವನು. ಏಕೆಂದರೆ, ಕರ್ಮವೆಂಬ ಮುಕ್ತಿ ಸಾಧನಗಳಿಂದ ಬಿಡುಗಡೆ ಹೊಂದಿ ಜೀವನ ಮುಕ್ತನಾಗುವಿಕೆಯನ್ನು ಅಂಗೀಕರಿಸುವ ಹಾಗೆಯೇ, ನಿತ್ಯಮುಕ್ತಿಯಿಂದಲೂ ಹೊರಬಂದು ಬಂಧನದಲ್ಲಿ ಬೀಳುವನು (ಎಂದೂ ಒಪ್ಪಿಕೊಳ್ಳಬೇಕಾದೀತು.) ಸಾಧನಗಳಿಂದ ಸಿದ್ಧವಾದ ಪದಾರ್ಥ ಎಂದಿಗೂ ನಿತ್ಯವಾಗಲಾರದು, ಮತ್ತು ಸಾಧನಗಳಿಲ್ಲದಯೇ ಸಿದ್ಧವಾಗುವ ಮುಕ್ತಿಯನ್ನು ಅಂಗೀಕರಿಸುವಿರಾದರೆ, ಕರ್ಮಗಳಿಲ್ಲದೆಯೇ ಬಂಧನವೂ ಪ್ರಾಪ್ತವಾಗಬಲ್ಲದು. ಹೇಗೆ ವಸ್ತ್ರಗಳಿಗೆ ಕೊಳೆ ಹತ್ತಿಕೊಳ್ಳುತ್ತದೋ, ಮತ್ತು ತೊಳೆಯುವುದರಿಂದ ಬಿಟ್ಟೂ ಹೋಗುತ್ತದೋ, ಮತ್ತೆಯೂ ಕೊಳೆ ಅಂಟಿಕೊಳ್ಳುತ್ತದೋ, ಹಾಗೆ, ಮಿಥ್ಯಾತ್ವವೇ ಮೊದಲಾದ ಕಾರಣಗಳಿಂದ, ರಾಗ-ದ್ವೇಷ-ಮೊದಲಾದುದರ ಆಶ್ರಯದಿಂದ ಜೀವನಿಗೆ ಕರ್ಮಫಲ ಹತ್ತಿಕೊಳ್ಳುತ್ತದೆ. ಮತ್ತು ಸಮ್ಯಕ್-ಜ್ಞಾನ, ಸಮ್ಯಗ್ದರ್ಶನ ಮತ್ತು ಸಮ್ಯಕ್ಚಾರಿತ್ರದಿಂದ ನಿರ್ಮಲನಾಗುತ್ತಾನೆ. ಮತ್ತು ಮಲಿನತೆಯಂಟಿಕೊಳ್ಳುವ ಕಾರಣಗಳಿಂದ ಕೊಳೆಹತ್ತಿಕೊಳ್ಳುವುದೆಂದು ಗ್ರಹಿಸುವಿರಾದರೆ, ಮುಕ್ತಜೀವನು ಸಾಂಸಾರಿಕ ನಾಗುವುದನ್ನೂ ಮತ್ತು ಸಾಂಸಾರಿಕ ಜೀವನು ಮುಕ್ತನಾಗುವುದನ್ನೂ ಅವಶ್ಯವಾಗಿ ಒಪ್ಪಿಕೊಳ್ಳಬೇಕಾಗುವುದು. ಏಕೆಂದರೆ - ಹೇಗೆ ನಿಮಿತ್ತಗಳಿಂದ ಮಲಿನತೆ ಬಿಟ್ಟು ಹೋಗುತ್ತದೋ, ಹಾಗೆ, ನಿಮಿತ್ತಗಳಿಂದ ಮಲಿನತೆ ಹತ್ತಿಕೊಳ್ಳುವುದೂ ಉಂಟು. ಆದುದರಿಂದ ಜೀವನಿಗೆ ಬಂಧನವನ್ನೂ ಮತ್ತು ಮುಕ್ತಿಯನ್ನೂ ಪ್ರವಾಹ ರೂಪದಿಂದ ಅನಾದಿಯೆಂದು ಗ್ರಹಿಸಿರಿ; ಅನಾದಿತ್ವ-ಅನಂತತ್ವದ ದೃಷ್ಟಿಯಿಂದ, ಎಂದರೆ ಸ್ವರೂಪತಃ ಅಲ್ಲ.

**ಪ್ರಶ್ನೆ:**- ಜೀವನು ಎಂದೂ ನಿರ್ಮಲನಾಗಿರಲಿಲ್ಲ; ಆದರೆ, ಮಲಸಹಿತನಾಗಿದ್ದಾನೆ.

**ಉತ್ತರ:**- ಎಂದಿಗೂ ನಿರ್ಮಲನಾಗಿರಲಿಲ್ಲವಾದರೆ, ಎಂದೂ ನಿರ್ಮಲನೂ ಕೂಡ ಆಗಲಾರನು. ಹೇಗೆ ಶುದ್ಧವಾಗಿದ್ದ ವಸ್ತ್ರಕ್ಕೆ, ಆ ಮೇಲೆ ಹತ್ತಿಕೊಂಡ ಕೊಳೆಯನ್ನು ತೊಳೆದು ದೂರಿಕರಿಸುತ್ತಾರೋ, ಅದರ ಸ್ವಾಭಾವಿಕವಾದ ಬಿಳಿಯ ಬಣ್ಣವನ್ನು

ಬಿಡಿಸಲಾಗದೋ, ಕೊಳೆಯು ಮತ್ತೂ ಕೂಡ ಬಟ್ಟೆಗೆ ಹತ್ತಿಕೊಳ್ಳುತ್ತದೋ, ಹಾಗೆಯೇ ಮುಕ್ತಿಯಲ್ಲಿಯೂ ಕೂಡ ಹತ್ತಿಕೊಳ್ಳುವದು, (ಜೀವಸಾಧನಾನಿಮಿತ್ತದಿಂದ ಪಡೆದ ಮುಕ್ತಿ, ಪ್ರವಾಹತಃ ಆದಿಯುಕ್ತವಾಗಿರುವುದರಿಂದ, ಪ್ರವಾಹತಃ ಅಂತಯುಕ್ತ; ಸ್ವರೂಪತಃ ಅನಾದಿ-ಅನಂತವಲ್ಲ.)

**ಪ್ರಶ್ನೆ :-** ಜೀವನು ಪೂರ್ವದಲ್ಲಿ ಸಂಪಾದಿಸಿದ ಕರ್ಮದಿಂದಲೇ ಶರೀರದಾರಣ. ಮಾಡುತ್ತಾನೆ. ಈಶ್ವರನನ್ನು ಅಂಗೀಕರಿಸುವುದು ವ್ಯರ್ಥವಾಗಿದೆ.

**ಉತ್ತರ:-** ಕೇವಲ ಕರ್ಮವೇ ಶರೀರಧಾರಣಕ್ಕೆ ನಿಮಿತ್ತವಾಗಿದ್ದರೆ, ಈಶ್ವರನು ಕಾರಣವಲ್ಲವಾಗಿದ್ದರೆ, ಆ ಜೀವನು ಯಾವುದರಲ್ಲಿ ಬಹಳ ದುಃಖವಿರುತ್ತದೋ, ಆ ಕೆಟ್ಟ ಜನ್ಮವನ್ನು ಎಂದಿಗೂ ಧಾರಣಮಾಡುವುದಿಲ್ಲ; ಆದರೆ ಯಾವಾಗಲೂ ಉತ್ತಮೋತ್ತ ಜನ್ಮಗಳನ್ನೇ ಧರಿಸುತ್ತಾ ಹೋಗುವನು. ಕರ್ಮವು ಪ್ರತಿಬಂಧಕವಾಗಿರುವುದೆಂದು ಹೇಳುವಿರಾದರೂ, ಹೇಗೆ ಕಳ್ಳನು ತಾನೇ ಮುಂದೆ ಬಂದು ಕಾರಾಗೃಹಕ್ಕೆ ಹೋಗುವುದಿಲ್ಲವೋ, ಮತ್ತು ಸ್ವತಃ ನೇಣನ್ನೂ ಹಾಕಿಕೊಳ್ಳುವುದಿಲ್ಲವೋ, ಆದರೆ ರಾಜನು (ಅದೆಲ್ಲವನ್ನೂ) ವಿಧಿಸುತ್ತಾನೋ, ಹಾಗೆಯೇ, ಜೀವನಿಗೆ ಶರೀರಧಾರಣವನ್ನು ಮಾಡಿಸುವ ಮತ್ತು ಅವನ ಕರ್ಮಾನುಸಾರ ಫಲಗಳನ್ನು ಕೊಡುವ ಪರಮೇಶ್ವರನನ್ನು ನೀವೂ ಕೂಡ ಅಂಗೀಕರಿಸಿರಿ.

**ಪ್ರಶ್ನೆ:-** ಮದದ ಹಾಗೆ ಕರ್ಮಫಲ ತಾನೇ ಪ್ರಾಪ್ತವಾಗುತ್ತದೆ. ಫಲಕೊಡುವುದಕ್ಕೆ ಬೇರೆಯವನ ಅವಶ್ಯಕತೆಯಿಲ್ಲ.

**ಉತ್ತರ:-** ಹೀಗಿದ್ದಲ್ಲಿ, ಹೇಗೆ (ಅಭ್ಯಾಸಪೂರ್ವಕವಾಗಿ) ಮದ್ಯಪಾನ ಮಾಡುವವರಿಗೆ ಮದವು ಕಡಿಮೆ ಏರುತ್ತದೋ, ಅಭ್ಯಾಸವಿಲ್ಲದವನಿಗೆ ಹೆಚ್ಚಾಗಿ ಏರುತ್ತದೋ, ಹಾಗೆ ದಿನವೂ ಬಹಳವಾಗಿ ಪಾಪ-ಪುಣ್ಯ ಮಾಡುವವರಿಗೆ ಕಡಿಮೆಯಾಗಿಯೂ, ಮತ್ತು ಯಾವಾಗಲೋ ಒಂದೊಂದು ಸಾರಿ ಸ್ವಲ್ಪ ಸ್ವಲ್ಪ ಪುಣ್ಯ-ಪಾಪ ಮಾಡುವವರಿಗೆ ಹೆಚ್ಚಾಗಿಯೂ ಫಲವಾಗಬೇಕು. ಹಾಗೂ ಅಲ್ಪಕರ್ಮ ಮಾಡುವವರಿಗೆ ಅಧಿಕ ಫಲ ಲಭಿಸಬೇಕು.

**ಪ್ರಶ್ನೆ:-** ಯಾವನ ಸ್ವಭಾವ ಹೇಗಿರುವುದೋ, ಅವನಿಗೆ ಅಂತಹದೇ ಫಲ ಸಿಕ್ಕುತ್ತಾ ಹೋಗುವುದು.

**ಉತ್ತರ:-** ಸ್ವಭಾವದಿಂದ ಆಗುವುದಾದರೆ, ಅದರ ಬಿಟ್ಟುಹೋಗುವಿಕೆ ಅಥವಾ ಸಿಕ್ಕುವಿಕೆ ಶಕ್ಯವಲ್ಲ. ಅಹುದು; ಹೇಗೆ ಶುದ್ಧ ವಸ್ತ್ರಕ್ಕೆ ಕಾರಣಾಂತರಗಳಿಂದ ಕೊಳೆ ಹತ್ತಿಕೊಳ್ಳುತ್ತದೋ, ಅದನ್ನು ಬಿಡಿಸುವ ನಿಮಿತ್ತಗಳಿಂದ ಬಿಟ್ಟೂ ಹೋಗುತ್ತದೋ, ಹಾಗೆ ಎಂದು ಒಪ್ಪಿಕೊಳ್ಳುವಿರಾದರೆ, ಅದು ಸರಿ.

**ಪ್ರಶ್ನೆ:-** ಸಂಯೋಗವಿಲ್ಲದೇಹೋದರೆ, ಕರ್ಮವು ಪರಿಣಾಮವನ್ನು ಹೊಂದಲಾರದು. ಹೇಗೆ ಹಾಲು ಮತ್ತು ಹೆಪ್ಪು-ಇವುಗಳ ಸಂಯೋಗವಾಗದೆ ಮೊಸರು ಆಗುವುದಿಲ್ಲವೋ, ಅವುಗಳ ಸೇರುವಿಕೆಯಿಂದಲೇ ಮೊಸರಾಗುತ್ತದೋ, ಹಾಗೆಯೇ ಜೀವನ ಮತ್ತು ಕರ್ಮದ ಯೋಗದಿಂದಲೇ ಕರ್ಮದ ಪರಿಣಾಮವಾಗುತ್ತದೆ.

**ಉತ್ತರ:-** ಹೇಗೆ ಹಾಲು ಹಾಗೂ ಹೆಪ್ಪನ್ನು ಸೇರಿಸುವ ಮೂರನೆಯವನಿರುತ್ತಾನೋ, ಹಾಗೆಯೇ ಜೀವರನ್ನು ಕರ್ಮಫಲಗಳೊಂದಿಗೆ ಕೂಡಿಸುವವನಾದ, ಮೂರನೆಯವನಾದ ಈಶ್ವರನೂ ಇರಬೇಕು. ಏಕೆಂದರೆ, ಜಡಪದಾರ್ಥಗಳು ಸ್ವತಃ ನಿಯಮಪೂರ್ವಕವಾಗಿ ಒಂದುಗೂಡುವುದಿಲ್ಲ ಮತ್ತು ಜೀವರೂ ಕೂಡ ಅಲ್ಪಜ್ಞರಾಗಿರುವುದರಿಂದ ಸ್ವತಃ ತಮ್ಮ ಕರ್ಮಫಲವನ್ನು ಪಡೆದುಕೊಳ್ಳಲಾರರು. ಇದರಿಂದ, ಈಶ್ವರನಿಂದ ಸ್ಥಾಪಿತವಾದ, ಸೃಷ್ಟಿ ಕ್ರಮವಿಲ್ಲದೆ, ಕರ್ಮಫಲದ ವ್ಯವಸ್ಥೆಯಾಗಲಾರದು-ಎಂದು ಸಿದ್ಧವಾಯಿತು.

**ಪ್ರಶ್ನೆ:-** ಯಾವನು ಕರ್ಮದಿಂದ ಮುಕ್ತನಾಗಿರುತ್ತಾನೋ, ಅವನೇ ಈಶ್ವರನೆನಿಸುತ್ತಾನೆ.

**ಉತ್ತರ:-** ಅನಾದಿಕಾಲದಿಂದ ಜೀವರೊಂದಿಗೆ ಕರ್ಮಗಳು ಹೊಂದಿಕೊಂಡಿರುವಾಗ, ಅವುಗಳಿಂದ ಜೀವರು ಸದಾ ಕಾಲಕ್ಕೂ ಎಂದಿಗೂ ಮುಕ್ತರಾಗಲಾರರು.

**ಪ್ರಶ್ನೆ:-** ಕರ್ಮದ ಬಂಧನ ಆದಿಯುಕ್ತವಾಗಿದೆ.

**ಉತ್ತರ:-** ಅದು ಆದಿಯುಕ್ತವಾಗಿರುವುದಾದರೆ, ಕರ್ಮದ ಯೋಗ ಅನಾದಿಯಲ್ಲ. ಮತ್ತು ಸಂಯೋಗದ ಆದಿಯಲ್ಲಿ ಜೀವನು ನಿಷ್ಕರ್ಮನಾಗಿರುವನು ಮತ್ತು ನಿಷ್ಕರ್ಮನಿಗೆ ಕರ್ಮ ಹತ್ತಿಕೊಂಡಿತು-ಎಂದಾದರೆ, ಮುಕ್ತರಿಗೂ ಕೂಡ ಹತ್ತಿಕೊಳ್ಳುವುದು. ಮತ್ತು ಕರ್ಮ ಹಾಗೂ ಕರ್ಮದ ಸಂಬಂಧವು ಸಮವಾಯ - ಎಂದರೆ ನಿತ್ಯಸಂಬಂಧವಾಗಿರುತ್ತದೆ; ಇದು

ಎಂದಿಗೂ ಬಿಟ್ಟು ಹೋಗುವುದಿಲ್ಲ. ಆದಕಾರಣ, ನವಮಸಮುಲ್ಲಾಸದಲ್ಲಿ ಹೇಗೆ ಬರೆದಿದ್ದೇವೋ, ಹಾಗೆಯೇ ಅಂಗೀಕರಿಸುವುದು ಸರಿಯಾಗಿರುತ್ತದೆ. ಜೀವನು ಎಷ್ಟು ಬೇಕೆನಿಸಿದರೆ ಅಷ್ಟೂ ತನ್ನ ಜ್ಞಾನವನ್ನೂ ಮತ್ತು ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳಲಿ; ಹಾಗಿದ್ದರೂ ಅವನಲ್ಲಿ ಪರಿಮಿತ ಜ್ಞಾನ ಹಾಗೂ ಸೀಮೀಯುಕ್ತರಾದ ಸಾಮರ್ಥ್ಯವೇ ಇರುವುದು. ಈಶ್ವರನಿಗೆ ಸಮನಾಗಿ ಎಂದಿಗೂ ಆಗಲಾರನು ಅಹುದು; ಎಷ್ಟು ಸಾಮರ್ಥ್ಯ ವರ್ಧಿಸುವುದು ಉಚಿತವೋ,[೫೦] ಅಷ್ಟನ್ನು ಯೋಗದಿಂದ ಹೆಚ್ಚಿಸಿಕೊಳ್ಳಬಲ್ಲನು. ಮತ್ತು ಜೈನರಲ್ಲಿ ಯಾವ ಅರ್ಹತರು ದೇಹದ ಪರಿಮಾಣಕ್ಕೆ ಸರಿಯಾಗಿ ಜೀವ ಪರಿಮಾಣವನ್ನು ಅಂಗೀಕರಿಸುತ್ತಾರೋ, ಅವರನ್ನು **"**ಸ್ಥಿತಿ ಹೀಗಿದ್ದಲ್ಲಿ ಆನೆಯ ಜೀವ ಇರುವೆಯ ಹಾಗೂ ಇರುವೆಯ ಜೀವ ಆನೆಯ ದೇಹದಲ್ಲಿ ಹೇಗೆ ಹೊಂದಿಕೊಳ್ಳಬಲ್ಲದು?**"** ಎಂದು ಪ್ರಶ್ನಿಸಬೇಕು. ಇದೂ ಒಂದು ಮೌಢ್ಯದ ಮಾತೇ ಆಗಿದೆ. ಏಕೆಂದರೆ, ಜೀವನು ಒಂದು ಸೂಕ್ಷ್ಮ ಪದಾರ್ಥವಾಗಿದ್ದಾನೆ. ಅವನು ಒಂದು ಪರಮಾಣುವಿನಲ್ಲಿಯೂ ಇರಬಲ್ಲನು. ಆದರೆ, ಅವನ ಶಕ್ತಿಗಳು ಶರೀರದಲ್ಲಿ ಪ್ರಾಣ, ವಿದ್ಯುತ್ತು ಮತ್ತು ನಾಡಿಗಳು-ಮೊದಲಾದವುಗಳ ಸಂಗಡ ಸಂಯುಕ್ತವಾಗಿರುತ್ತವೆ. ಅವುಗಳಿಂದ ಸಮಸ್ತ ಶರೀರದ ಸಂಗತಿಗಳನ್ನೂ ತಿಳಿದುಕೊಳ್ಳುತ್ತಾನೆ. ಒಳ್ಳೆಯ ಸಂಗದಿಂದ ಒಳ್ಳೆಯವನೂ, ಮತ್ತು ಕೆಟ್ಟ ಸಂಗದಿಂದ ಕೆಟ್ಟವನೂ ಆಗುತ್ತಾನೆ.

ಇನ್ನು ಜೈನರು ಧರ್ಮವನ್ನು ಈ ರೀತಿ ಅಂಗೀಕರಿಸುತ್ತಾರೆ:-

**ಮೂಲ:- ರೇ ಜೀವ ಭವದುಹಾಇಂ ಇಕ್ಕಂ ಚಿಯ ಹರಇ ಜಿಣಮಯಂ ಧಮ್ಮಮ್ ।**

**ಇಯರಾಣಂ ಪರಮಂತೋ ಸುಹ ಕಯ್ಯೇ ಮೂಡ ಮುಸಿ ಓ ಸಿ ॥**

(ಪ್ರಕರಣರತ್ನಾಕರ:- ಭಾಗ-೨, ಷಷ್ಠೀಶತಕ-೬೧.೩)

ಓ ಜೀವ! ಒಂದೇ ಜಿನಮತ, ಶ್ರೀವೀತರಾಗಭಾಷಿತ ಧರ್ಮ ಜಗತ್ತಿಗೆ ಸಂಬಂಧಪಟ್ಟ ಜನ್ಮ, ಮುಪ್ಪು, ಮರಣ ಮೊದಲಾದ ದುಃಖಗಳ ಹರಣಕಾರಕವಾಗಿದೆ. ಇದೇ ರೀತಿ ಸುದೇವ ಹಾಗೂ ಸುಗುರುವನ್ನೂ ಕೂಡ ಜೈನ ಮತೀಯರು ತಿಳಿದುಕೊಳ್ಳಬೇಕು. ವೀತರಾಗನಾದ ಋಷಭದೇವನೇ ಮೊದಲಾದ ವೀತರಾಗರಾದ ದೇವರುಗಳಿಂದ ಬೇರೆಯಾದ ಹರಿ, ಹರ, ಬ್ರಹ್ಮ - ಮೊದಲಾದ ಕುದೇವರುಗಳನ್ನು ತಮ್ಮ ಕಲ್ಯಾಣಕ್ಕಾಗಿ ಪೂಜಿಸುವ ಯಾವ ಜೀವರಿದ್ದಾರೋ, ಅವರೆಲ್ಲಾ ವಂಚಿತರಾದ ಮಾನವರಾಗಿದ್ದಾರೆ.

ಇದರ ಭಾವಾರ್ಥವೇನೆಂದರೆ, ಜೈನಮತದ ಸುದೇವರು, ಸುಗುರುಗಳು ಹಾಗೂ ಸುಧರ್ಮವನ್ನು ಬಿಟ್ಟು, ಬೇರೆ ಕುದೇವರುಗಳನ್ನೂ, ಕುಗುರುಗಳನ್ನೂ ಮತ್ತು ಕುಧರ್ಮವನ್ನೂ ಸೇವಿಸುವುದರಿಂದ ಸ್ವಲ್ಪವೂ ಕಲ್ಯಾಣವಾಗುವುದಿಲ್ಲ- ಎಂಬುದಾಗಿದೆ.

**ಸಮೀಕ್ಷಕ:-** ಈಗ ಇವರ ಧರ್ಮದ ಪುಸ್ತಕಗಳು ಹೇಗೆ ನಿಂದಾಯುಕ್ತವಾಗಿವೆ ಎಂದು ವಿದ್ವಾಂಸರು ಆಲೋಚಿಸಬೇಕು.

**ಮೂಲ:- ಅರಿಹಂ ದೇವೋ ಸುಗುರು ಸುದ್ಧಂ ಧಮ್ಮಂ ಚ ಪಂಚ ನವಕಾರೋ ।**

**ಧನ್ನಾಣಂ ಕಯಚ್ಚಾಣಂ ನಿರಂತರಂ ವಸಈ ಹಿಯಯಮ್ಮಿ ॥** (ಪ್ರಕ. ಭಾ. ಷಷ್ಠೀ- ೬೧. ಸೂತ್ರ-೧.)

ಯಾವ ಅರಿಹಂತಾ, ದೇವರುಗಳಿಗೂ ದೇವನಿದ್ದಾನೋ, ಅವನಿಗಿಂತ ಉತ್ತಮ ಪದಾರ್ಥವು ಪೂಜೆ-ಮೊದಲಾದುವಕ್ಕೆ ಯೋಗ್ಯವಾದುದು ಎರಡನೆಯದಾವುದೂ ಇಲ್ಲ. ದೇವರ ದೇವನಾಗಿ ಶೋಭಾಯಮಾನನಾಗಿರುವ ಅರಿಹಂತಾ ದೇವನು ಜ್ಞಾನಕ್ರಿಯಾವಂತನೂ, ಶಾಸ್ತ್ರಗಳ ಉಪದೇಶಕನೂ, ಶುದ್ಧನೂ ಕಷಾಯ-ಮಲರಹಿತನೂ, ಸಮ್ಯಕ್ತ್ವ-ವಿನಯ-ದಯೆಗಳ ಮೂಲವೂ ಆಗಿದ್ದಾನೆ. ಆ ಶ್ರೀಜಿನನಿಂದ ಹೇಳಲ್ಪಟ್ಟ ಯಾವ ಧರ್ಮವಿದೆಯೋ, ಅದೇ, ದುರ್ಗತಿಯಲ್ಲಿ ಬೀಳುವ ಪ್ರಾಣಿಗಳ ಉದ್ಧಾರಕಾರಕವಾಗಿದೆ ಮತ್ತು ಹರಿ-ಹರ ಮೊದಲಾದವರ ಧರ್ಮ ಸಂಸಾರದಿಂದ ಉದ್ಧಾರ ಮಾಡುವಂತಹುದಲ್ಲ. ಮತ್ತು ಅರಿಹಂತಾ ಮೊದಲಾದ ಐವರು ಪರಮೇಷ್ಠಿಗಳಿಗೂ, ಅವರ ಸಂಬಂಧಿಕರಿಗೂ ನಮಸ್ಕಾರ. ಈ ನಾಲ್ಕು ಪದಾರ್ಥಗಳು ಧನ್ಯವಾಗಿವೆ. ಎಂದರೆ, ದಯೆ, ಕ್ಷಮೆ, ಸಮ್ಯಕ್ತ್ವಜ್ಞಾನದರ್ಶನ ಮತ್ತು ಚಾರಿತ್ರ-ಇದು ಜೈನರ ಧರ್ಮವಾಗಿದೆ.

---

೫೦. ಎಂದರೆ, ಸಂಭವವೋ? -ಯು.ಮೀ

**ಸಮೀಕ್ಷಕ:-** ಮಾನವಮಾತ್ರರ ಮೇಲೆ ದಯೆಯಿಲ್ಲದಿರುವಾಗ, ಆದಯೆ ದಯೆಯಲ್ಲ; ಕ್ಷಮೆಯೂ ಇಲ್ಲ. ಜ್ಞಾನಕ್ಕೆ ಪ್ರತಿಯಾಗಿ ಅಜ್ಞಾನ; ದರ್ಶನವಂತೂ ಕತ್ತಲೆಯ ಬೀಡು! ಮತ್ತು ಚಾರಿತ್ರಕ್ಕೆ ಬದಲು ಉಪವಾಸ ಸಾಯುವುದು-ಇದಾವ ದೊಡ್ಡ ಉತ್ತಮ ಸಿದ್ಧಾಂತವೋ? ಜೈನಮತದ, ಧರ್ಮದ ಹೊಗಳಿಕೆ:-

**ಮೂಲ:- ಜಇ ನ ಕುಣಸಿ ತವ ಚರಣಂ ನ ಪಢಸಿ ನ ಗುಣೋಸಿ ದೇಸಿ ನೋ ದಾನಮ್ ।**

**ತಾ ಇತ್ತಿಯ ಸಕ್ಕಿಸಿಜಂ ದೇವೋ ಇಕ್ಕ ಅರಿಹಂತೋ ॥** (ಪ್ರಕರಣ ಭಾ.೨. ಷಷ್ಟೀ-೬೧. ಸೂತ್ರ-೨.)

ಓ ಮಾನವ! ನೀನು ತಪಸ್ಸನ್ನೂ, ಚಾರಿತ್ರವನ್ನೂ ನಿರ್ವಹಿಸಲಾಗದಿದ್ದರೂ, ಸೂತ್ರಗಳನ್ನು ಓದಲಾಗದಿದ್ದರೂ, ಪ್ರಕರಣ ಮೊದಲಾದವುಗಳ ವಿವೇಚನೆ ಮಾಡಲಾಗದಿದ್ದರೂ, ಮತ್ತು ಸುಪಾತ್ರರೇ ಮೊದಲಾದವರಿಗೆ ದಾನವನ್ನು ಕೊಡಲಾಗದಿದ್ದರೂ, ಏಕ ಮಾತ್ರ ಅರಿಹಂತಾ ದೇತವನೇ ನಮ್ಮ ಆರಾಧನೆಗೆ ಯೋಗ್ಯನೆಂದು ತಿಳಿಯುವುದು, ಹಾಗೂ ಸದ್ಗುರುವಿನಲ್ಲಿ; ಸದ್ಧರ್ಮವಾದ ಜೈನಮತದಲ್ಲಿ ಶ್ರದ್ಧೆಯನ್ನಿಡುವುದು ಸರ್ವೋತ್ತಮವಾದ ವಿಷಯ ಮತ್ತು ಉದ್ಧಾರದ ಕಾರಣವಾಗಿರುತ್ತದೆ .

**ಸಮೀಕ್ಷಕ :-** ದಯೆ ಮತ್ತು ಕ್ಷಮೆ ಒಳ್ಳೆಯ ತತ್ತ್ವಗಳಾಗಿದ್ದರೂ, ಪಕ್ಷಪಾತದಲ್ಲಿ ಸಿಕ್ಕಿಕೊಂಡಿರವ ಕಾರಣ ದಯೆಯು ಅದಯೆಯೂ, ಮತ್ತು ಕ್ಷಮೆಯು ಅಕ್ಷಮೆಯೂ ಆಗಿ ಹೋಗುತ್ತದೆ. ಇದರ ತಾತ್ಪರ್ಯವೇನೆಂದರೆ, ಯಾವನೇ ಜೀವನಿಗೂ ದುಃಖವನ್ನು ಕೊಡದಿರುವುದು ಸರ್ವಥಾ ಸಂಭವವಾಗಲಾರದು. ಏಕೆಂದರೆ, ದುಷ್ಟರಿಗೆ ಶಿಕ್ಷೆಯನ್ನು ಕೊಡುವುದೂ ಕೂಡ ದಯೆಯಲ್ಲಿಯೇ ಎಣಿಸಲರ್ಹವಾಗಿದೆ. ಒಬ್ಬ ದುಷ್ಟನಿಗೆ ಶಿಕ್ಷೆ ಕೊಡಲ್ಪಡದಿದ್ದರೆ, ಸಾವಿರಾರು ಮಂದಿ ಮಾನವರಿಗೆ ದುಃಖ ಉಂಟಾಗುವುದು. ಆದ ಕಾರಣ, ಆ ದಯೆಯು ಅದಯೆಯೂ, ಮತ್ತು ಆ ಕ್ಷಮೆಯೂ ಅಕ್ಷಮೆಯೂ ಆಗಿ ಹೋಗುವುದು. ಸಕಲ ಪ್ರಾಣಿಗಳ ದುಃಖವನ್ನು ನಾಶಮಾಡುವ ಮತ್ತು ಸುಖದ ಪ್ರಾಪ್ತಿಯನ್ನು ಮಾಡುವ ಉಪಾಯವೇ ದಯೆ-ಎನ್ನಿಸುತ್ತದೆ. ಎಂಬುದೇನೋ ಸರಿಯೇ. ಕೇವಲ ನೀರನ್ನು ಶೋಧಿಸಿ ಕುಡಿಯುವುದು, ಕ್ಷುದ್ರ ಜಂತುಗಳನ್ನು ರಕ್ಷಿಸುವುದು ಮಾತ್ರವೇ ದಯೆ-ಎನ್ನಿಸುವುದಿಲ್ಲ. ಮತ್ತು ಈ ಬಗೆಯ ದಯೆ ಜೈನರ ಕಥನ ಮಾತ್ರವಾಗಿದೆ. ಏಕೆಂದರೆ, ಹಾಗೆ ಅವರು ವರ್ತಿಸುವುದಿಲ್ಲ. ಮಾನವಮಾತ್ರರ ಮೇಲೆ ಅವರು ಯಾವುದೇ ಮತದಲ್ಲಿರಲಿ, ದಯೆ ತೋರಿಸಿ, ಇತರ ಮಾನವೇತರ ಜೀವರಲ್ಲಿಯೂ ಯಥೋಚಿತವಾಗಿ ದಯೆಯಿಟ್ಟು, ಅನ್ನ-ಪಾನ ಮೊದಲಾದವುಗಳಿಂದ ಉಪಚರಿಸುವುದು ಮತ್ತು ಅನ್ಯಮತದ ವಿದ್ವಾಂಸರ ಸಮ್ಮಾನವನ್ನು ಮತ್ತು ಸೇವೆಯನ್ನು ಮಾಡುವುದು ದಯೆಯಲ್ಲವೇನು? ಇವರ ದಯೆ ನಿಜವಾದುದಾಗಿದ್ದರೆ, "ವಿವೇಕಸಾರ"ದ ೨೨೧ನೆಯ ಪುಟದಲ್ಲಿ ಏನು ಬರೆದಿದ್ದಾರೋ, ನೋಡಿರಿ- "ಮೊದಲಾಗಿ ಪರಮತೀಯರನ್ನು ಸ್ತುತಿಸುವುದು, ಎಂದರೆ ಅವರ ಗುಣಕೀರ್ತನ ಎಂದಿಗೂ ಸಲ್ಲದು. ಎರಡನೆಯದಾಗಿ, ಅವರಿಗೆ "ನಮಸ್ಕಾರ" ಎಂದರೆ, ವಂದನೆಯನ್ನೂ ಕೂಡ ಮಾಡಬಾರದು. ಮೂರನೆಯದಾಗಿ 'ಆಲಪನ-ಎಂದರೆ ಅನ್ಯಮತೀಯರೊಂದಿಗೆ ಸ್ವಲ್ಪ ಮಾತನಾಡಬೇಕು. ನಾಲ್ಕನೆಯದಾಗಿ, 'ಸಂಲಪನ' ಎಂದರೆ ಅವರೊಡನೆ ಮತ್ತೆ-ಮತ್ತೆ ಮಾತನಾಡಬಾರದು. ಐದನೆಯದಾಗಿ, ಅವರಿಗೆ ಅನ್ನ - ವಸ್ತ್ರ ಮೊದಲಾದುದರ ದಾನ ಮಾಡಬಾರದು; ಎಂದರೆ-ಖಾದ್ಯ-ಪೇಯ ವಸ್ತುಗಳನ್ನೂ ಕೊಡಬಾರದು. ಆರನೆಯದಾಗಿ, ಅನ್ಯಮತದ ಪ್ರತಿಮಾಪೂಜನಕ್ಕಾಗಿ ಗಂಧ, ಹೂವು-ಮೊದಲಾದುದನ್ನೂ ಕೊಡಬಾರದು. ಈ ಆರು 'ಯತನ'ಗಳನ್ನು, ನಿಂದ್ಯ ಕರ್ಮಗಳನ್ನು ಜೈನರು ಎಂದಿಗೂ ಮಾಡಬಾರದು.

**ಸಮೀಕ್ಷಕ:-** ಈಗ ಬುದ್ಧಿವಂತರು ಅನ್ಯಮತೀಯರಾದ ಮಾನವರ ಮೇಲೆ ಈ ಜೈನರಿಗೆ ಎಷ್ಟು ನಿರ್ದಯತ್ವ, ಕುದೃಷ್ಟಿ ಮತ್ತು ದ್ವೇಷವಿದೆ-ಎಂಬುದನ್ನು ಆಲೋಚಿಸಬೇಕು. ಅನ್ಯಮತಸ್ಥರಾದ ಮಾನವರ ಮೇಲೆ ಇಷ್ಟು ನಿರ್ದಯತ್ವವಿರುವಾಗ, ಜೈನರನ್ನು ದಯಾಹೀನರೆಂದು ಹೇಳುವುದು ಸಂಭವವೇಸರಿ. ಏಕೆಂದರೆ, ತಮ್ಮ ಮನೆಯವರಿಗೆ ಮಾತ್ರವೇ ಸೇವೆಮಾಡುವುದು ವಿಶೇಷ ಧರ್ಮವೆನ್ನಿಸುವುದಿಲ್ಲ. ಅವರ ಮತದ ಮಾನವರು ಅವರ ಮನೆಯವರಿಗೇ ಸಮಾನರಾಗಿದ್ದಾರೆ. ಆದುದರಿಂದ, ಅವರ ಸೇವೆಯನ್ನು ಮಾಡುತ್ತಾರೆ; ಅನ್ಯಮತೀಯರಿಗೆ ಮಾಡುವುದಿಲ್ಲ. ಇನ್ನು ಅವರನ್ನು ದಯಾವಂತರೆಂದು ಯಾವ ಬುದ್ಧಿಶಾಲಿಯು ಹೇಳಬಲ್ಲನು? "ವಿವೇಕಸಾರ"ದ ೧೦೮ನೆಯ ಪುಟದಲ್ಲಿ-"ಮಧುರೆಯ ರಾಜನ ನಮುಚಿ-ಎಂಬ ಹೆಸರಿನ ಮುಖ್ಯ ಸಚಿವನನ್ನು ಜೈನಯತಿಗಳು ತಮ್ಮ ವಿರೋಧಿ ಎಂದು ತಿಳಿದು ಕೊಂದುಹಾಕಿದರು ಮತ್ತು 'ಆಲೋಯಣಾ' ಎಂದರೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಶುದ್ಧರಾದರು"-ಎಂದು ಬರೆದಿದ್ದಾರೆ. ಇದೂ ಕೂಡ ದಯೆಯ ಮತ್ತು ಕ್ಷಮೆಯ ನಾಶಕವಾದ ಕರ್ಮವಲ್ಲವೇನು? ಪ್ರಾಣಾಪಹಾರ ಮಾಡುವ ಪರ್ಯಂತವೂ ಅನ್ಯಮತೀಯರ ಮೇಲೆ ವೈರ ಬುದ್ಧಿಯನ್ನು ಇಟ್ಟುಕೊಂಡಿರುವಾಗ, ಇವರನ್ನು ದಯಾಳುಗಳು-ಎನ್ನುವುದಕ್ಕೆ ಪ್ರತಿಯಾಗಿ ಹಿಂಸಕರೆನ್ನುವುದೇ ಸಾರ್ಥಕವಾಗಿರುತ್ತದೆ.

ಇನ್ನು ಸಮ್ಯಕ್ತ್ವದರ್ಶನವೇ ಮೊದಲಾದುದರ ಲಕ್ಷಣಗಳು "ಅರ್ಹತಪ್ರವಚನ ಸಂಗ್ರಹ ಪರಮಾಗಮನಸಾರ"ದಲ್ಲಿ ಹೇಳಲ್ಪಟ್ಟಿವೆ. ಸಮ್ಯಕ್-ಶ್ರದ್ಧಾನ, ಸಮ್ಯಗ್ದರ್ಶನ, ಜ್ಞಾನ, ಮತ್ತು ಚಾರಿತ್ರ-ಈ ನಾಲ್ಕು ಮೋಕ್ಷಮಾರ್ಗದ[೫೧] ಸಾಧನಗಳಾಗಿವೆ, ಇವುಗಳ ವ್ಯಾಖ್ಯಾನವನ್ನು ಯೋಗದೇವನು ಮಾಡಿದ್ದಾನೆ. ಯಾವರೂಪದಲ್ಲಿ ಜೀವ-ಮೊದಲಾದ ದ್ರವ್ಯಗಳು ಅವಸ್ಥಿತವಾಗಿವೆಯೋ, ಅದೇ ರೂಪದಿಂದ, ಜಿನಪ್ರತಿಪಾದಿತವಾದ ಗ್ರಂಥಗಳಿಗೆ ಅನುಸಾರವಾಗಿ, ಅವಕ್ಕೆ ವಿಪರೀತವಾದ ಅಭಿನಿವೇಶನವೇ ಮೊದಲಾದುವುಗಳಿಂದ ರಹಿತವಾಗಿ ಯಾವ ಶ್ರದ್ಧೆಯಿದೆಯೋ, ಎಂದರೆ-ಜಿನಮತದಲ್ಲಿ ಪ್ರೀತಿಯಿದೆಯೋ, ಅದು ಸಮ್ಯಕ್ ಶ್ರದ್ಧಾನ ಮತ್ತು ಸಮ್ಯಗ್ದರ್ಶನವಾಗಿದೆ.

**ರುಚಿರ್ಜಿನೋಕ್ತ ತತ್ತ್ವೇಷು ಸಮ್ಯಕ್ ಶ್ರದ್ಧಾನಮುಚ್ಯತೇ ॥** (ಸರ್ವದರ್ಶನ ಸಂಗ್ರಹ. ಅರ್ಹತದರ್ಶನ)

ಜಿನನು ಹೇಳಿದ ತತ್ತ್ವಗಳಲ್ಲಿ ಅಭಿರುಚಿ, ಪ್ರೀತಿಯನ್ನಿಡುವುದೇ ಸಮ್ಯಕ್ ಶ್ರದ್ಧಾನವೆನಿಸುತ್ತದೆ. ಬೇರೆಯಾವುದರಲ್ಲಿಯೂ ಇಡಬಾರದು.

**ಯಥಾವಸ್ಥಿತತತ್ತ್ವಾನಾಂ ಸಂಕ್ಷೇಪಾದ್ವಿಸ್ತರೇಣ ವಾ ।**

**ಯೋ ಬೋಧಸ್ತಮಿಹ ಪ್ರಾಹುಃ* ಸಮ್ಯಜ್ಞಾನಂ ಮನೀಷಿಣಃ ॥** (ಸರ್ವದರ್ಶನಸಂಗ್ರಹ. ಅರ್ಹತದರ್ಶನ)

ಜೀವ-ಮೊದಲಾದ ತತ್ತ್ವಗಳು ಹೇಗೆ ಇವೆಯೋ, ಅವುಗಳ ಸಂಕ್ಷಿಪ್ತವಾದ ಅಥವಾ ವಿಸ್ತೃತವಾದಬೋಧ ಎಂದರೆ ಅರಿವನ್ನೇ ಸಮ್ಯಜ್ಞಾನವೆಂದು ಬುದ್ಧಿವಂತರು ಹೇಳುತ್ತಾರೆ.

**ಸರ್ವಥಾಽವದ್ಯಯೋಗಾನಾಂ ತ್ಯಾಗಶ್ಚಾರಿತ್ರಮುಚ್ಯತೇ ।**

**ಕೀರ್ತಿತಂ ತದಹಿಂಸಾದಿ ವ್ರತಭೇದೇನ ಪಂಚಧಾ ॥**

**ಅಹಿಂಸಾ ಸೂನೃತಾಸ್ತೇಯಬ್ರಹ್ಮಚರ್ಯಾಪರಿಗ್ರಹಾಃ ॥** (ಸರ್ವದರ್ಶನ ಸಂಗ್ರಹ. ಅರ್ಹತ ದರ್ಶನ.)

ಎಲ್ಲ ರೀತಿಯಿಂದಲೂ ನಿಂದನೀಯವಾದ ಅನ್ಯಮತ ಸಂಬಂಧದ ತ್ಯಾಗವೇ ಚಾರಿತ್ರವೆನಿಸುತ್ತದೆ. ಮತ್ತು ಅಹಿಂಸೆ ಮೊದಲಾದ ಭೇದಗಳಿಂದ ಐದು ಬಗೆಯ ವ್ರತವಿದೆ.[೫೨] ಒಂದು - **'ಅಹಿಂಸೆ'** - ಪ್ರಾಣಿಮಾತ್ರವಾವುದನ್ನೂ ಕೊಲ್ಲದಿರುವುದು. ಎರಡನೆಯದು **'ಸೂನೃತ'**- ಪ್ರಿಯವಾದ ವಾಣಿಯನ್ನು ಮಾತನಾಡುವದು. ಮೂರನೆಯದು **'ಅಸ್ತೇಯ'** - ಕದಿಯದಿರುವುದು. ನಾಲ್ಕನೆಯದು **'ಬ್ರಹ್ಮಚರ್ಯ'**- ಉಪಸ್ಥೇಂದ್ರಿಯದ ಸಂಯಮ. ಮತ್ತು ಐದನೆಯ **'ಅಪರಿಗ್ರಹ'** - ಸಮಸ್ತ ವಸ್ತುಗಳ ತ್ಯಾಗವನ್ನು ಮಾಡುವುದು. ಇವುಗಳಲ್ಲಿ ಬಹಳ ಮಾತುಗಳು ಒಳ್ಳೆಯವಾಗಿವೆ. ಎಂದರೆ - ಅಹಿಂಸೆ; ಕಳ್ಳತನ ಮೊದಲಾದ ನಿಂದನೀಯ ಕರ್ಮಗಳನ್ನು ತ್ಯಾಗಮಾಡುವುದು ಒಳ್ಳೆಯದಾಗಿದೆ. ಆದರೆ, ಅನ್ಯಮತದ ನಿಂದೆ ಮಾಡುವುದು - ಮೊದಲಾದ ದೋಷಗಳಿಂದ, ಈ ಎಲ್ಲಾ ಒಳ್ಳೆಯ ಮಾತುಗಳೂ ಕೂಡ ದೋಷಯುಕ್ತವಾಗಿ ಹೋಗಿವೆ. ಉದಾಹರಣೆಗೆ, ಬೇರೆಯ ಹರಿ, ಹರ-ಮೊದಲಾದವರ ಧರ್ಮವು ಜಗತ್ತಿನಲ್ಲಿ ಉದ್ಧಾರಮಾಡುವಂತಹುದಾಗಿಲ್ಲ-ಎಂದು ಪ್ರಥಮ ಸೂತ್ರದಲ್ಲಿ ಬರೆದಿದ್ದಾರೆ.

ಯಾರ ಗ್ರಂಥಗಳನ್ನು ಅವಲೋಕಿಸುವುದರಿಂದಲೇ ಪೂರ್ಣ ವಿದ್ಯೆಯೂ, ಮತ್ತು ಧಾರ್ಮಿಕತ್ವವೂ ಗಳಿಸಲ್ಪಡುತ್ತದೋ, ಅವುಗಳನ್ನು ಕೆಟ್ಟದೆನ್ನುವುದು ಮತ್ತು ನಾವು ಮೊದಲೇ ಹೇಳಿರುವಂತೆ ಮಹಾ ಅಸಂಭವವಾದ ಮಾತುಗಳನ್ನು ಹೇಳುವ ತಮ್ಮ ತೀರ್ಥಂಕರರ ಸ್ತುತಿಯನ್ನು ಮಾಡುವುದು-ಇದೇನು ಅಲ್ಪ ನಿಂದೆಯೇ? ಇವು ಕೇವಲ ಹಠದ ಮಾತುಗಳಾಗಿವೆ. ಏನೆನ್ನೋಣ? ಯಾವ ಜೈನನು ಸ್ವಲ್ಪವೂ ಚಾರಿತ್ರ ಪಾಲಿಸಲಾರನೋ, ಓದಲಾರನೋ, ಯಾವನಿಗೆ ದಾನಕೊಡುವ ಸಾಮರ್ಥ್ಯವೂ ಇಲ್ಲವೋ, ಅವನು, ಹಾಗಿದ್ದರೂ ಕೂಡ "ಜೈನಮತವು ಸತ್ಯವಾಗಿದೆ"-ಎಂದಿಷ್ಟು ಮಾತ್ರ ಹೇಳುವುದರಿಂದಲೇ ಉತ್ತಮನಾಗಿ ಹೋಗುವನೇನು? ಮತ್ತು ಅನ್ಯಮತದವರು ಶ್ರೇಷ್ಠರಾಗಿದ್ದರೂ ಅಶ್ರೇಷ್ಠರಾಗಿ ಹೋಗುವರೇನು? ಇಂತಹ ಕಥನಗಳನ್ನು ಮಾಡುವ ಮಾನವರನ್ನು ಭ್ರಾಂತರು ಮತ್ತು ಬಾಲಬುದ್ಧಿಗಳು-ಎಂದು ಹೇಳಲಾಗದಿದ್ದರೆ, ಮತ್ತೇನೆಂದು ಹೇಳೋಣ?

---

೫೧. ಮುಕ್ತಿಯ ವೈದಿಕ ಸಾಧನಗಳ ಬಗ್ಗೆ ನವಮ ಸಮುಲ್ಲಾಸವನ್ನು ನೋಡಿ.

೫೨. ಯೋಗದರ್ಶನದ [೨.೩೦]ದಲ್ಲಿ ಇದಕ್ಕೆ 'ಯಮ' ಎಂದು ಹೆಸರು.

ಇದರಿಂದ, ಇವರ ಆಚಾರ್ಯರು ಸ್ವಾರ್ಥಿಗಳಾಗಿದ್ದರು; ಪೂರ್ಣವಿದ್ವಾಂಸರಾಗಿರಲಿಲ್ಲ-ಎಂದೇ ವಿದಿತವಾಗುತ್ತದೆ. ಏಕೆಂದರೆ, ಸರ್ವರ ನಿಂದೆಯನ್ನೂ ಮಾಡದೇ ಹೋಗಿದ್ದರೆ, ಇಂತಹ ಸುಳ್ಳುಮಾತುಗಳಲ್ಲಿ ಯಾವನೂ ಸಿಕ್ಕಿಕೊಳ್ಳುತ್ತಿರಲಿಲ್ಲ; ಅವರ ಸ್ವಾರ್ಥವೂ ಕೈಗೂಡುತ್ತಿರಲಿಲ್ಲ. ನೋಡಿರಿ, ಜೈನರಮತ ಮುಳುಗಿಸುವಂತಹುದು ಮತ್ತು ವೇದಮತ ಸರ್ವರನ್ನೂ ಉದ್ಧರಿಸುವಂತಹುದು-ಎಂದೇನೋ ಸಿದ್ಧವಾಗುತ್ತದೆ. ಹರಿಹರ ಮೊದಲಾದ ದೇವರು ಮತ್ತು ಇವರ ಋಷಭದೇವ ಮೊದಲಾದ ಎಲ್ಲರೂ ಕುದೇವರು ಎಂದು ಬೇರೆಯ ಜನ ಹೇಳಿದರೆ, ಅದೇ ರೀತಿ ಅವರಿಗೆ ಕೆಟ್ಟದೆನಿಸುವುದಿಲ್ಲವೇ? ಮತ್ತೂ ಕೂಡ ಇವರ ಆಚಾರ್ಯರ ಮತ್ತು ಅನುಯಾಯಿಗಳ ಹುಳುಕನ್ನು ನೋಡಿಕೊಳ್ಳಿರಿ:-

**ಮೂಲ:- ಜಿಣವರ ಆಣಾ ಭಂಗಂ ಉಮಗ್ಗ ಉಸ್ಸುತ್ತಲೇಸದೇಸಣಉಮ್ ।**

**ಅಣಾ ಭಂಗೇ ಪಾವಂತಾ ಜಿಣಮಯ ದುಕ್ಕರಂ ದಮ್ಮಮ್ ॥** (ಪ್ರಕ. ಭಾ.-೨ ಷ-೬೧ ಸೂ-೧೧)

ಉನ್ಮಾರ್ಗ(ವಿರುದ್ಧಮಾರ್ಗ)ದ ಮತ್ತು ಉತ್ಸೂತ್ರ (ವಿರುದ್ಧಸೂತ್ರ)ದ ಲೇಶವನ್ನು ತೋರಿಸುವುದರಿಂದ ಜಿನ ವರರ-ಎಂದರೆ, ವೀತರಾಗ ತೀರ್ಥಂಕರರ ಯಾವ ಆಜ್ಞಾಂಭಂಗವಾಗುತ್ತದೋ, ಅದು ದುಃಖಕ್ಕೆ ಕಾರಣವಾದ ಪಾಪವಾಗಿದೆ. ಜಿನೇಶ್ವರನಿಂದ ಉಕ್ತವಾದ ಸಮ್ಯಕ್ತ್ವ ಮೊದಲಾದ ಧರ್ಮವನ್ನು ಗ್ರಹಿಸುವುದು ಮಹಾ ಕಠಿನವಾಗಿದೆ. ಆದುದರಿಂದ, ಜಿನನ ಆಜ್ಞೆಯ ಭಂಗವಾಗದ ರೀತಿಯಲ್ಲಿ ನಡೆದುಕೊಳ್ಳಬೇಕು.

**ಸಮೀಕ್ಷಕ :-** ತನ್ನ ಬಾಯಿನಿಂದಲೇ ತನ್ನ ಪ್ರಶಂಸೆಯನ್ನು ಮಾಡಿಕೊಳ್ಳುವುದೂ, ತನ್ನ ಧರ್ಮವನ್ನೇ ದೊಡ್ಡದೆಂದು ಸಾರಿಕೊಳ್ಳುವುದೂ ಮತ್ತು ಬೇರೆಯವನದನ್ನು ನಿಂದಿಸುವುದೂ, ಅಜ್ಞಾನದ ಮಾತಾಗಿದೆ. ಏಕೆಂದರೆ, ಯಾವುದರ ಪ್ರಶಂಸೆಯನ್ನು ಅನ್ಯವಿದ್ವಾಂಸರು ಮಾಡುವರೋ, ಅದರ ಪ್ರಶಂಸೆಯೇ ಸರಿಯಾಗಿರುತ್ತದೆ. ತಮ್ಮ ಬಾಯಿನಿಂದ ತಮ್ಮ ಪ್ರಶಂಸೆಯನ್ನೇನೋ ಕಳ್ಳರೂ ಕೂಡ ಮಾಡಿಕೊಳ್ಳುತ್ತಾರೆ. ಅಂದಮಾತ್ರಕ್ಕೆ ಅವರು ಪ್ರಶಂಸನೀಯರಾಗಬಲ್ಲರೇನು? ಈ ರೀತಿಯದೇ ಆಗಿವೆ ಇವರ ಮಾತುಗಳು.

**ಮೂಲ:- ಬಹುಗುಣ ವಿಜ್ಜಾನಿಲಓ ಉಸ್ಸುತ್ತಭಾಸೀ ತಹಾವಿ ಮುತ್ತವ್ವೋ ।**

**ಜಹ ಪರಮಣಿಜುತೋ ವಿಹು ವಿಗ್ಘಕರೋ ವಿಸಹರೋ ಲೋಏ ॥** (ಪ್ರಕ. ಭಾ-೨. ಷ ಸೂ-೧೮)

ಹೇಗೆ ವಿಷಧರ ಸರ್ಪದಲ್ಲಿ ಮಣಿಯು ತ್ಯಜಿಸಲು ಯೋಗ್ಯವಾಗಿರುತ್ತದೋ, ಹಾಗೆ, ಯಾವನು ಜೈನಮತದಲ್ಲಿಲ್ಲವೋ, ಅವನು ಎಷ್ಟು ದೊಡ್ಡ ಧಾರ್ಮಿಕ ಪಂಡಿತನೇ ಆಗಿರಲಿ, ಅವನನ್ನು ತ್ಯಜಿಸಿಬಿಡುವುದೇ ಜೈನರಿಗೆ ಉಚಿತವಾಗಿರುತ್ತದೆ.

**ಸಮೀಕ್ಷಕ :-** ನೋಡಿರಿ, ಇದು ಎಷ್ಟು ದೊಡ್ಡ ಪ್ರಮಾದದ ಮಾತಾಗಿದೆ. ಇವರ ಶಿಷ್ಯರೂ, ಆಚಾರ್ಯರೂ ವಿದ್ವಾಂಸರಾಗಿದ್ದಲ್ಲಿ, ವಿದ್ವಾಂಸರೊಂದಿಗೆ ಪ್ರೇಮದಿಂದ ಇರುತ್ತಿದ್ದರು. ಇವರ ತೀರ್ಥಂಕರರೂ ಕೂಡ ಅವಿದ್ವಾಂಸರಾಗಿರುವಲ್ಲಿ, ವಿದ್ವಾಂಸರ ಸಮ್ಮಾನವನ್ನು ಮಾಡುವರಾದರೂ ಏಕೆ? ಹೊಲಸಿನಲ್ಲಿ ಅಥವಾ ಧೂಳಿನಲ್ಲಿ ಬಿದ್ದಿರುವ ಚಿನ್ನವನ್ನು ಯಾವನಾದರೂ ತ್ಯಜಿಸುತ್ತಾನೆಯೇ? ಜೈನರ ಹೊರತು ಬೇರೆ ಇಂತಹ ಪಕ್ಷಪಾತಿಗಳೂ, ಹಠಮಾರಿಗಳೂ, ದುರಾಗ್ರಹಿಗಳೂ ಮತ್ತು ವಿದ್ಯಾಹೀನರೂ ಯಾರು ತಾನೇ ಇದ್ದಾರು? ಹೀಗೆಂದೇ ಇದರಿಂದ ವ್ಯಕ್ತವಾಯಿತು.

**ಮೂಲ:- ಅಇಸಯ ಪಾವಿಯಪಾವಧಮ್ಮಿ ಅಪಬ್ಬೇಸುತೋ ವಿಪಾವರಯಾ ।**

**ನ ಚಲಂತಿ ಸುದ್ಧ ಧಮ್ಮಾ ಧನ್ನಾ ಕಿವಿಪಾವ ಪವ್ವೇಸು ॥** (ಪ್ರಕ. ಭಾ-೨ ಷ. ಸೂ-೨೯)

ಅನ್ಯದರ್ಶನವನ್ನಂಗೀಕರಿಸುವವರು ಕುಲಿಂಗಿಗಳು; ಎಂದರೆ-ಜೈನಮತ ವಿರೋಧಿಗಳು. ಅವರ ದರ್ಶನವನ್ನೂ ಕೂಡ ಜೈನರುಗಳು ಮಾಡಬಾರದು.

**ಸಮೀಕ್ಷಕ :-** ಇದೆಷ್ಟು ಪಾಮರತನದ ಮಾತೆಂದು ಬುದ್ಧಿವಂತರಾದ ಜನರು ಆಲೋಚಿಸಿಕೊಳ್ಳುವರು. ಯಾವನ ಮತ ಸತ್ಯವಾಗಿರುತ್ತದೋ, ಅವನಿಗೆ ಯಾರಿಂದಲೂ ಭಯವಾಗುವುದಿಲ್ಲ. ಇವರ ಆಚಾರ್ಯರುಗಳು - "ನಮ್ಮ ಮತ ಪೊಳ್ಳು-ಟೊಳ್ಳು, ಬೇರೆಯವರಿಗೆ ತಿಳಿಸುವೆವಾದರೆ, ಖಂಡನವಾಗಿ ಹೋಗುವುದು'.-ಎಂದು ತಿಳಿದುಕೊಂಡಿದ್ದರು. ಆದುದರಿಂದ, ಎಲ್ಲರನ್ನೂ ನಿಂದಿಸಿರಿ; ಹಾಗೂ ಮೂರ್ಖಮಂದಿಗಳನ್ನು ಸಿಕ್ಕಿಸಿಕೊಳ್ಳಿರಿ! ಮುಗಿಯಿತು.

**ಮೂಲ:–　ನಾಮಂ ಪಿತಸ್ಸ ಅಸುಹಂ ಜೇಣ ನಿದಿತಾಯಿ ಮಿಚ್ಛಪವ್ವಾಯಿ ।**

**ಜೇಸಿಂ ಅಣುಸಂಗಾಲು ಧಮೀಣವಿ ಹೋಯೀ ಪಾವ ಮಇ ॥** (ಪ್ರಕ. ಭಾ–೨ ಷ.ಸೂ–೨೯)

ಯಾವ ಧರ್ಮಗಳು ಜೈನಧರ್ಮಕ್ಕೆ ವಿರುದ್ಧವಾಗಿವೆಯೋ, ಅವೆಲ್ಲವೂ ಮಾನವರನ್ನು ಪಾಪಿಗಳನ್ನಾಗಿ ಮಾಡುವಂತಹವಾಗಿವೆ. ಆದುದರಿಂದ, ಯಾವನದೇ ಅನ್ಯ ಧರ್ಮವನ್ನೂ ಅಂಗೀಕರಿಸದೆ, ಜೈನಧರ್ಮವನ್ನು ಮಾತ್ರ ಅಂಗೀಕರಿಸುವುದು ಶ್ರೇಷ್ಠವಾಗಿರುತ್ತದೆ.

**ಸಮೀಕ್ಷಕ:–** ಇದರಿಂದ, ಎಲ್ಲರೊಂದಿಗೂ ವೈರ, ವಿರೋಧ, ನಿಂದೆ, ಈರ್ಷ್ಯೆ ಮೊದಲಾದ ದುಷ್ಕರ್ಮರೂಪವಾದ ಸಾಗರದಲ್ಲಿ ಮುಳುಗಿಸುವಂತಹುದು ಜೈನ ಮಾರ್ಗವಾಗಿದೆ–ಎಂದು ತಿಳಿಯುತ್ತದೆ. ಜೈನರು ಸರ್ವರ ನಿಂದಕರಾಗಿರುವಂತೆ ಬೇರೆ ಯಾವುದೇ ಮತದವನೂ ಮಹಾನಿಂದಕನೂ, ಮತ್ತು ಅಧರ್ಮಿಯೂ ಆಗಿರಲಾರನು. ಒಂದು ಕಡೆಯಿಂದ ಎಲ್ಲರ ನಿಂದೆಯನ್ನೂ ಮತ್ತು ತಮ್ಮ ಅತಿ ಪ್ರಶಂಸೆಯನ್ನೂ ಮಾಡುವುದು ಶಠರಾದ ಮಾನವರ ಮಾತಲ್ಲವೇನು? ವಿವೇಕಿಗಳಾದ ಜನರಾದರೋ, ಅವರು ಯಾವದೇ ಮತದವರು ಬೇಕಾದರೂ ಆಗಿರಲಿ; ಅವರಲ್ಲಿ ಒಳ್ಳೆಯವರನ್ನು ಒಳ್ಳೆಯವರೆಂದೂ, ಕೆಟ್ಟವರನ್ನು ಕೆಟ್ಟವರೆಂದೂ ಹೇಳುತ್ತಾರೆ.

**ಮೂಲ:–　ಹಾ ಹಾ ಗುರುಅ ಅಕಜ್ಜಂ ಸಾಮೀನಹು ಅಚ್ಛಿಕಸ್ಸ ಪುಕ್ಕರಿಮೋ ।**

**ಕಹ ಜಿಣ ವಯಣ ಕಹ ಸುಗುರ ಸಾವಯಾ ಕಹ ಇಯ ಅಕಜ್ಜುಮ್ ॥** (ಪ್ರಕ. ಭಾ–೨. ಷ. ಸೂ–೩೫)

ಸರ್ವಜ್ಞಕಥಿತವಾದ ಜಿನವಚನ, ಜೈನರ ಸುಗುರುಗಳು ಮತ್ತು ಜೈನಧರ್ಮವೆಲ್ಲಿ? ಮತ್ತು ಅದಕ್ಕೆ ವಿರುದ್ಧವಾದ ಕುಗುರುಗಳು, ಅನ್ಯಮಾರ್ಗಗಳ ಉಪದೇಶಕರೆಲ್ಲಿ? ಅಂದರೆ, ನಮ್ಮವರು ಸುಗುರುಗಳು, ಸುದೇವರು, ಸುಧರ್ಮ ಮತ್ತು ಅನ್ಯರ ದೇವತರು ಕುದೇವರು; ಗುರುಗಳು ಕುಗುರುಗಳು ಮತ್ತು ಧರ್ಮ ಕುಧರ್ಮ.

**ಸಮೀಕ್ಷಕ:–** ಈ ಮಾತು ಎಲಚೀ ಹಣ್ಣನ್ನು ಮಾರುವ ಕುಳ್ಳಮ್ಮನ ಮಾತಿನಂತಿದೆ. ಅವಳು ತನ್ನ ಹುಳಿಯ ಎಲಚಿಯನ್ನೂ ಸಿಹಿಯೆಂದೂ ಮತ್ತು ಬೇರೆಯವಳ ಸಿಹಿಯ ಹಣ್ಣುಗಳನ್ನೂ ಕೂಡ ಹುಳಿ ಮತ್ತು ಕೆಲಸಕ್ಕೆ ಬಾರದುದು–ಎಂದೂ ಹೇಳುತ್ತಾಳೆ. ಜೈನರ ಮಾತುಗಳೂ ಈ ರೀತಿಯವೇ ಆಗಿವೆ. ಈ ಜನರು ತಮ್ಮ ಮತದಿಂದ ಬೇರೆಯದಾದ ಮತಗಳವರ ಸೇವೆಯಲ್ಲಿ ಮಹಾ ಅಕಾರ್ಯವನ್ನು, ಎಂದರೆ ಪಾಪವನ್ನು ಎಣಿಸುತ್ತಾರೆ.

**ಮೂಲ:–　ಸಪ್ಪೋ ಇಕ್ಕಂ ಮರಣಂ ಕುಗುರು ಅಣಂತಾಇ ದೇಹ ಮರಣಾಇ ।**

**ತೋ ವರಿಸಪ್ಪಂ ಗಹಿಯುಂ ಮಾ ಕುಗುರು ಸೇವಣಂ ಭದ್ದಂ ॥** (ಪ್ರಕ. ಭಾ–೨. ಷ. ಸೂ–೩೭)

ಈ ಮೊದಲೇ ನಾವು ಬರೆದು ಬಂದಿರುವಂತೆ, ಹೇಗೆ ಸರ್ಪದಲ್ಲಿನ ಮಣಿಯನ್ನೂ ಕೂಡ ತ್ಯಜಿಸುವುದು ಉಚಿತವಾಗಿರುತ್ತದೋ, ಹಾಗೆ ಅನ್ಯಮಾರ್ಗೀಯರಲ್ಲಿರುವ ಶ್ರೇಷ್ಠ ಧಾರ್ಮಿಕ ಪುರುಷರನ್ನೂ ಕೂಡ ತ್ಯಜಿಸಿಬಿಡಬೇಕು ಎಂದರು. ಈಗ ಅದಕ್ಕಿಂತಲೂ ಹೆಚ್ಚು ಅನ್ಯ ಮತೀಯರ ನಿಂದೆಯನ್ನು ಮಾಡುತ್ತಾರೆ. "ಜೈನಮತದಿಂದ ಬೇರೆಯಾದವರೆಲ್ಲರೂ ಕುಗುರುಗಳು; ಎಂದರೆ, ಅವರು ಸರ್ಪಕ್ಕಿಂತಲೂ ಕೂಡ ಹೆಚ್ಚು ಕೆಟ್ಟವರಾಗಿರುತ್ತಾರೆ. ಅವರ ದರ್ಶನವನ್ನು, ಸೇವೆಯನ್ನು, ಸಂಗವನ್ನು ಎಂದಿಗೂ ಮಾಡಬಾರದು. ಏಕೆಂದರೆ, ಸರ್ಪದ ಸಂಗದಿಂದ ಒಂದು ಸಾರಿ ಮರಣ ಉಂಟಾಗುತ್ತದೆ ಮತ್ತು ಅನ್ಯಮಾರ್ಗೀಯರಾದ ಕುಗುರುಗಳ ಸಂಗದಿಂದ ಅನೇಕ ಸಾರಿ ಜನನ–ಮರಣದಲ್ಲಿ ಬೀಳಬೇಕಾಗುತ್ತದೆ. ಆದುದರಿಂದ, ಓ ಭದ್ರ ಪುರುಷ! ಅನ್ಯಮಾರ್ಗೀಯರ ಕುಗುರುಗಳ ಹತ್ತಿರವೂ ಕೂಡ ನಿಲ್ಲಬೇಡ. ಏಕೆಂದರೆ, ನೀನು ಅನ್ಯಮಾರ್ಗಿಯರಿಗೆ ಸ್ವಲ್ಪವಾದರೂ ಸೇವೆಯನ್ನು ಮಾಡುವೆಯಾದಿರೆ, ದುಃಖದಲ್ಲಿ ಬೀಳುವೆ".

**ಸಮೀಕ್ಷಕ:–** ನೋಡಿರಿ, ಜೈನರಿಗೆ ಸಮಾನರಾಗಿ ಕಠೋರರೂ, ಭ್ರಾಂತರೂ, ದ್ವೇಷಿಗಳೂ, ನಿಂದಕರೂ, ಮೈಮರೆತವರೂ ಅನ್ಯಮತೀಯರು ಯಾರೂ ಆಗಿರಲಾರರು. ಇವರು ಮನಸ್ಸಿನಲ್ಲಿ–"ನಾವು ಅನ್ಯರ ನಿಂದೆಯನ್ನೂ, ನಮ್ಮ ಪ್ರಶಂಸೆಯನ್ನೂ ಮಾಡಿಕೊಳ್ಳದಿದ್ದರೆ, ನಮ್ಮ ಸೇವೆ ಮತ್ತು ಪ್ರತಿಷ್ಠೆಯಾಗುವುದಿಲ್ಲ". ಎಂದು ಆಲೋಚಿಸಿದ್ದಾರೆ. ಆದರೆ ಇದು ಅವರ ದುರ್ಭಾಗ್ಯದ ಮಾತು. ಏಕೆಂದರೆ, ಯಾವಾಗಿನವರೆಗೆ ಉತ್ತಮ ವಿದ್ವಾಂಸರ ಸಂಗವನ್ನೂ, ಸೇವೆಯನ್ನೂ ಮಾಡುವುದಿಲ್ಲವೋ, ಆವರೆಗೆ ಇವರಿಗೆ ಯಥಾರ್ಥಜ್ಞಾನವೂ ಹಾಗೂ ಸತ್ಯಧರ್ಮದ ಪ್ರಾಪ್ತಿಯೂ ಎಂದಿಗೂ ಆಗುವುದಿಲ್ಲ. ಆದುದರಿಂದ, ತಮ್ಮ

ವಿದ್ಯಾವಿರುದ್ಧವಾದ ಮಿಥ್ಯಾವಚನಗಳನ್ನು ಬಿಟ್ಟು, ವೇದೋಕ್ತ ಸತ್ಯ ಸಿದ್ಧಾಂತಗಳನ್ನು ಗ್ರಹಿಸುವುದು ಜೈನರಿಗೆ ಉಚಿತವಾಗಿರುತ್ತದೆ. ಇದು ಅವರಿಗೆ ಮಹಾಕಲ್ಯಾಣದ ವಿಷಯವಾಗಿದೆ.

**ಮೂಲ:–  ಕಿಂ ಭಣಿವೋ ಕಿಂ ಕರಿಮೋ ತಾಣ ಹಯಾಸಾಣಧಿಠ ಟುಠಾಣಮ್ ।**

**ಜೇ ದಂಸಿ ಊಣ ಲಿಂಗಂ ಖಿವಂತಿನರ ಯಮ್ಮಿ ಮುದ್ಧ ಜಣಮ್ ॥** (ಪ್ರಕ. ಭಾ.-೨. ಷ.ಸೂ.೪೦.)

ಯಾವನ ಕಲ್ಯಾಣದ ಭರವಸೆಯೇ ನಾಶವಾಗಿದೆಯೋ, ಆ ಗರ್ವಿಯೂ, ದುಷ್ಕರ್ಮ ಮಾಡುವುದರಲ್ಲಿ ಬಹು ಚತುರನೂ, ದುಷ್ಟನೂ, ದೋಷಯುಕ್ತನೂ ಆದವನಿಗೆ ಏನು ಹೇಳುವುದು? ಏನು ಮಾಡುವುದು? ಏಕೆಂದರೆ, ಅವನಿಗೆ ಉಪಕಾರ ಮಾಡುವಿರಾದರೆ, ಪ್ರತಿಯಾಗಿ, ಅವನು ನಾಶವನ್ನೇ ಮಾಡುವನು. ಉದಾಹರಣೆಗೆ, ಯಾವನಾದರೂ ದಯೆತೋರಿಸಿ, ಕುರುಡುಸಿಂಹದ ಕಣ್ಣನ್ನು ತೆರೆಯಲು ಹೋದರೆ, ಅದು ಅವನನ್ನೇ ತಿಂದುಬಿಡುವುದು. ಅದೇ ರೀತಿ ಕುಗುರುಗಳ, ಎಂದರೆ ಅನ್ಯಮಾರ್ಗಿಗಳ ಉಪಕಾರ ಮಾಡುವುದೆಂದರೆ, ತನ್ನ ನಾಶಮಾಡಿಕೊಳ್ಳುವುದೇ ಸರಿ. ಎಂದರೆ, ಅವರಿಂದ ಸದಾ ಬೇರೆಯೇ ಇರಬೇಕು.

**ಸಮೀಕ್ಷಕ:–** ಹೇಗೆ ಜೈನರು ಆಲೋಚಿಸುತ್ತಾರೋ, ಹಾಗೆ ಬೇರೆಯ ಮತದವರೂ ಆಲೋಚಿಸುವರಾದರೆ, ಜೈನರಿಗೆ ಎಷ್ಟು ದುರ್ಗತಿಯುಂಟಾಗುವುದು? ಮತ್ತು ಅವರಿಗೆ ಯಾರೂ ಯಾವುದೇ ಪ್ರಕಾರದ ಉಪಕಾರವನ್ನೂ ಮಾಡದೇ ಹೋದರೆ, ಅವರ ಬಹಳ ಕೆಲಸಗಳು[೫೩] ಹಾಳಾಗಿ, ಎಷ್ಟು ದುಃಖ ಉಂಟಾಗಬಹುದು? ಹಾಗೆ ಅನ್ಯರ ಸಲುವಾಗಿ ಜೈನರು ಏತಕ್ಕೆ ಆಲೋಚಿಸುವುದಿಲ್ಲ?

**ಮೂಲ:–  ಜಹ ಜಹ ತು ಟ್ಟ ಇ ಧಮ್ಮೋ ದುಠಾಣ ಹೋಇ ವಹ ಉದಉಮ್ ।**

**ಸಮದ್ಧಿಟಿ ಜಿಯಾಣಂ ತಹ ತಹ ಉಲ್ಲಸ ಇಸಮತ್ತಮ್ ॥** (ಪ್ರಕ. ಭಾ–೨. ಷ. ಸೂ. ೪೨)

ಹೇಗೆ ಹೇಗೆ ದರ್ಶನ ಭ್ರಷ್ಟರಾದ ನಿಹ್ನವ* ವಾಚ್ಛತ್ತಾ,* ಉಪನ್ನಾ* ಹಾಗೂ ಕುಸೀಲಿಯಾ* ಮೊದಲಾದವರ, ಮತ್ತು ಅನ್ಯತತ್ತ್ವದವರ, ತ್ರಿದಂಡೀ ಪರಿವ್ರಾಜಕರ, ಹಾಗೂ ಬ್ರಾಹ್ಮಣರೇ ಮೊದಲಾದ ದುಷ್ಟ ಜನರ ಅತಿಶಯವಾದ ಬಲ, ಸತ್ಕಾರ, ಪೂಜೆ ಮೊದಲಾದುವು ಆಗುತ್ತಾ ಹೋಗುತ್ತವೋ, ಹಾಗೆ ಹಾಗೆ ಸಮ್ಯಕ್ ದೃಷ್ಟಿಯನ್ನುಳ್ಳ ಜೀವರ ಸಮ್ಯಕ್ತ್ವವು ವಿಶೇಷವಾಗಿ ಪ್ರಕಾಶಿತವಾಗುವುದು ಮಹಾದಾಶ್ಚರ್ಯವಾಗಿದೆ !

ಈಗ ನೋಡಿರಿ! ಈ ಜೈನರಿಗಿಂತ ಅಧಿಕ ಈರ್ಷ್ಯಾ–ದ್ವೇಷ–ವೈರ ಬುದ್ಧಿಯುಕ್ತನಾದವನು ಯಾವನಾದರೂ ಇದ್ದಾನೋ? ಅಹುದು; ಬೇರೆಯ ಮತದಲ್ಲಿಯೂ ಈರ್ಷ್ಯಾದ್ವೇಷಗಳಿವೆ. ಆದರೆ ಎಷ್ಟು ಈ ಜೈನರಲ್ಲಿವೆಯೋ, ಅಷ್ಟು ಯಾವನಲ್ಲಿಯೂ ಇಲ್ಲ. ಮತ್ತು ದ್ವೇಷವೇ ಪಾಪದ ಮೂಲವಾಗಿದೆ. ಆದುದರಿಂದ, ಜೈನರಲ್ಲಿ ಪಾಪಾಚರಣವೇತಕ್ಕಿಲ್ಲವಾದೀತು?

**ಮೂಲ:–  ಸಂಗೋಏವಿ ಜಾಣ ಅಹಿಉತೇ ಸಿಧಮ್ಮಾ ಇ ಜೇ ಪಕುವ್ವಂತಿ ।**

**ಮುತ್ತೂಣ ಚೋರಸಂಗಂ ಕರಂತಿ ತೇ ಚೋರಿಯಂ ಪಾವಾ ॥** (ಪ್ರಕ. ಭಾ–೨.ಷ.ಸೂ–೭೫.)

ಇದರ ಮುಖ್ಯ ತಾತ್ಪರ್ಯವಿಷ್ಟೇ:– "ಹೇಗೆ ಮೂಢ ಜನರು ಕಳ್ಳನ ಸಂಗದಿಂದ ನಾಸಿಕಾಚ್ಛೇದನ ಮೊದಲಾದ ಶಿಕ್ಷೆಗೂ ಭಯಪಡುವುದಿಲ್ಲವೋ, ಹಾಗೆ, ಜೈನಮತದಿಂದ ಬೇರೆಯಾದ ಚೋರ ಧರ್ಮಗಳಲ್ಲಿ ಸ್ಥಿತರಾಗಿರುವ ಜನರು ತಮ್ಮ ಅಕಲ್ಯಾಣಕ್ಕೂ ಕೂಡ ಭಯಪಡುವುದಿಲ್ಲ.

**ಸಮೀಕ್ಷಕ:–** ಯಾವನು ಎಂತಹ ಮನುಷ್ಯನಾಗಿರುತ್ತಾನೋ, ಅವನು ಪ್ರಾಯಶಃ ಬೇರೆಯವರನ್ನೂ ತನ್ನಂತಹವರೆಂದೇ ತಿಳಿದುಕೊಳ್ಳುತ್ತಾನೆ. ಬೇರೆಯವೆಲ್ಲವೂ ಚೋರಮತಗಳು; ಮತ್ತು ಜೈನಮತ ಮಾತ್ರ ಸಾಹುಕಾರನದು–ಎಂಬ ಈ ಮಾತು ಸತ್ಯವಾಗಬಲ್ಲದೇನು? ಯಾವ ಕಾಲದವರೆಗೆ ಮನುಷ್ಯನಲ್ಲಿ ಬಹಳ ಅಜ್ಞಾನ ಮತ್ತು ಕುಸಂಗದಿಂದ ಬುದ್ಧಿಯು

---

೫೩. ಸಾಮಾನ್ಯವಾಗಿ ಜೈನರೆಲ್ಲಾ ವ್ಯಾಪರಸ್ಥರಾಗಿರುತ್ತಾರೆ. ಆದ್ದರಿಂದ, ಅವರಿಗೆ ಜನತೆಯ ಮತ್ತು ಸರ್ಕಾರದ ಸಹಾಯ ಬೇಕೇ ಬೇಕು. ಇದು ಸಿಗದಿದ್ದರೆ, ಅವರ ವ್ಯಾಪಾರದ ನಾಶ ನಿಶ್ಚಿತ.

* ಆ ಕಾಲದಲ್ಲಿ ಪ್ರಚಲಿತವಾಗಿದ್ದ ಬೇರೆ ಮತಗಳ ಜನರು.

ಭ್ರಷ್ಟವಾಗಿರುತ್ತೋ, ಆ ಕಾಲದವರೆಗೆ ಬೇರೆಯವರೊಡನೆ ಬಹಳ ಈರ್ಷ್ಯೆ, ದ್ವೇಷ ದುಷ್ಟತನ, ಮೊದಲಾದುವನ್ನು ಬಿಡುವುದಿಲ್ಲ. ಜೈನಮತ ಹೇಗೆ ಪರಮತ ದ್ವೇಷಿಯಾಗಿದೆಯೋ, ಹಾಗೆ ಬೇರೆ ಯಾವುದೂ ಆಗಿಲ್ಲ.

**ಮೂಲ:- ಜಚ್ಛ ಪಸುಮಹಿಸ ಲರಕಾ ಪವ್ವ ಹೋಮಂತಿ ಪಾವನವಮೀಏ ।**

**ಪೂಶ್ರಂತಿ ತಂಪಿ ಸಡ್ಢಾ ಹಾ ಹೀಲಾ ವೀಯರಾಯಸ್ಸ ॥** (ಪ್ರಕ. ಭಾ-೨. ಷ. ಸೂ. ೭೬)

ಪೂರ್ವ ಸೂತ್ರದಲ್ಲಿ ಯಾವ ಮಿಥ್ಯಾತ್ವಿಗಳ ವಿಷಯವನ್ನು ಹೇಳಿದೆಯೋ, ಎಂದರೆ-ಜೈನಮತದಿಂದ ಬೇರೆಯಿರುವವರೆಲ್ಲರ ಮಿಥ್ಯಾತ್ವಿಗಳು ಮತ್ತು ತಾವು ಸಮ್ಯಕ್ತ್ವಿಗಳು; ಎಂದರೆ-ಬೇರೆ ಎಲ್ಲರೂ ಪಾಪಿಗಳು, ಜೈನಮತೀಯರೆಲ್ಲರೂ ಪುಣ್ಯಾತ್ಮರು. ಆದುದರಿಂದ ಯಾವನಾದರೂ ಆಗಿರಲಿ; ಯಾವನು ಮಿಥ್ಯಾತ್ವಿಯ ಧರ್ಮದ ಸ್ಥಾಪನೆಯನ್ನು ಮಾಡುವವನೋ, ಅವನು ಪಾಪಿಯಾಗಿರುತ್ತಾನೆ-ಎಂದು ತಿಳಿಯಿರಿ.

**ಸಮೀಕ್ಷಕ :-** ಹೇಗೆ ಅನ್ಯಸ್ಥಾನಗಳಲ್ಲಿ ಚಾಮುಂಡಾ, ಕಾಲಿಕಾ, ಜ್ವಾಲಾ ಈ ಪ್ರಮುಖ (ದೇವತೆ) ಗಳಿಗೆ ಅನ್ವಯಿಸುವ ಪಾಪನವಮೀ, ಎಂದರೆ ದುರ್ಗಾನವಮೀ ಮೊದಲಾದ ತಿಥಿ-ಮುಂತಾದುವೆಲ್ಲ ಕೆಟ್ಟವಾಗಿವೆಯೋ, ಹಾಗೆ ನಿಮ್ಮ ಪಜೂಷಣ[೫೪] ಮೊದಲಾದ ಮಹಾಕಷ್ಟದಾಯಕವಾದ ವ್ರತಗಳು ಕೆಟ್ಟವಲ್ಲವೇನು? ಇಲ್ಲಿ ವಾಮಮಾರ್ಗಿಗಳ ಖಂಡನವೇನೋ ಸರಿಯಾಗಿದೆ; ಆದರೆ, ಯಾವ ಶಾಸನದೇವೀ ಮತ್ತು ಮರುತದೇವೀ-ಮೊದಲಾದುವನ್ನು ಅಂಗೀಕರಿಸುತ್ತೀರೋ, ಅವುಗಳ ಖಂಡನವನ್ನೂ ಮಾಡಿ ಬಿಡುತ್ತಿದ್ದಿರಾದರೆ, ಚೆನ್ನಾಗಿರುತ್ತಿತ್ತು. ನಮ್ಮ ದೇವೀ ಹಿಂಸಕಳಲ್ಲ-ಎನ್ನುವಿರಾರದೆ, ಇವರ ಕಥನ ಸುಳ್ಳಾಗಿದೆ. ಏಕೆಂದರೆ, ಶಾಸನದೇವಿಯು ಒಬ್ಬ ಪುರುಷನ ಮತ್ತು ಇನ್ನೊಂದು ಹೋತನ ಕಣ್ಣುಗಳನ್ನು ಕಿತ್ತುಕೊಂಡಿದ್ದಳು. ಮತ್ತೆ ಅವಳು ರಾಕ್ಷಸಿಯು, ಮತ್ತು ದುರ್ಗೆ-ಕಾಳಿಕೆಯ ಸ್ವಂತ ಸೋದರಿ ಏತಕ್ಕಲ್ಲ? ಮತ್ತು ತಮ್ಮ 'ಯಚ್ಚಖಾಣ'- ಮೊದಲಾದ ವ್ರತಗಳನ್ನು ಅತಿ ಶ್ರೇಷ್ಠರೆಂದೂ, ಮತ್ತು ನವಮೀ-ಮೊದಲಾದುವನ್ನು ದುಷ್ಟವೆಂದೂ ಹೇಳುವುದು ಮೌಢ್ಯದ ಮಾತಾಗಿದೆ. ಏಕೆಂದರೆ, ಬೇರೆಯವರ ಉಪವಾಸಗಳ ನಿಂದೆಯನ್ನೂ, ಮತ್ತು ತಮ್ಮ ಉಪವಾಸಗಳ ಸ್ತುತಿಯನ್ನೂ ಮಾಡುವುದು ಮೂರ್ಖತ್ವದ ಮಾತಾಗಿರುತ್ತದೆ. ಅಹುದು; ಯಾವ ಸತ್ಯಭಾಷಣ - ಮೊದಲಾದ ವ್ರತಗಳ ಧಾರಣವನ್ನು ಮಾಡುತ್ತಾರೋ, ಅವೇನೋ ಸರ್ವರಿಗೂ ಉತ್ತಮವಾಗಿವೆ. ಜೈನರ ಮತ್ತು ಬೇರೆ ಇನ್ನಾರ ಉಪವಾಸವೂ ಸತ್ಯಫಲದಾಯಕವಲ್ಲ.

**ಮೂಲ:- ವೇಸಾಣ ವಂದಿಯಾಣಯ ಮಾಹಣ ಡುಂಬಾಣ ಜರಕಸಿರಕಾಣಮ್ ।**

**ಭತ್ತಾ ಭರಕತಾಣಂ ವಿಯಾಣಂ ಜಂತಿ ದೂರೇಣಮ್ ॥** (ಪ್ರಕ. ಭಾ-೨. ಷ. ಸೂ- ೮೨)

ಇದರ ಮುಖ್ಯ ತಾತ್ಪರ್ಯವೇನೆಂದರೆ-"ಯಾರು ವೇಶ್ಯೆರು, ವಂದಿಮಾಗಧರು, ಹೊಗಳುಭಟ್ಟರು - ಮೊದಲಾದವರ, ಬ್ರಾಹ್ಮಣರ, ಯಕ್ಷ-ಗಣೇಶ ಮೊದಲಾದ ಮಿಥ್ಯಾದೃಷ್ಟಿಯುಕ್ತ ದೇವರುಗಳ ಹಾಗೂ ಇತರ ದೇವತೆಗಳ ಭಕ್ತರಾಗಿರುತ್ತಾರೋ, ಯಾರು ಇವುಗಳನ್ನು ಅಂಗೀಕರಿಸುವವರಾಗಿರುತ್ತಾರೋ, ಅವರೆಲ್ಲರೂ ಮುಳುಗಿಸುವವರು ಮತ್ತು ಮುಳುಗುವವರು ಆಗಿರುತ್ತಾರೆ. ಏಕೆಂದರೆ, ಆ ದೇವತೆಗಳ ಬಳಿಯೇ ಎಲ್ಲ ವಸ್ತುಗಳೂ ಇವೆಯೆಂದು ಅಂಗೀಕರಿಸುತ್ತಾರೆ ಮತ್ತು ವೀತರಾಗರಾದ ಪುರುಷರಿಂದ ದೂರವಿರುತ್ತಾರೆ.

**ಸಮೀಕ್ಷಕ:-** ಅನ್ಯಮಾರ್ಗಿಗಳ ದೇವತೆಗಳನ್ನು ಸುಳ್ಳೆನ್ನುವುದು ಮತ್ತು ತಮ್ಮ ದೇವತೆಗಳನ್ನು ಸತ್ಯವೆನ್ನುವುದು ಕೇವಲ ಪಕ್ಷಪಾತದ ಮಾತಾಗಿದೆ. ಮತ್ತು ಅನ್ಯವಾಮಮಾರ್ಗಿಗಳ ದೇವಿಯರು-ಮೊದಲಾದವರನ್ನು ನಿಷೇಧಿಸುತ್ತಾರೆ; ಆದರೆ, **"ಶ್ರಾದ್ಧ ದಿನಕೃತ್ಯ"**ದ ೪೬ನೆಯ ಪುಟದಲ್ಲಿ-**"**ಶಾಸನದೇವಿಯು ರಾತ್ರಿ ಊಟ ಮಾಡಿದನೆಂಬ ಕಾರಣದಿಂದ ಒಬ್ಬ ಪುರುಷನಿಗೆ ಗುದ್ದನ್ನು ಹಾಕಿದಳು; ಅವನ ಕಣ್ಣನ್ನು ಕಿತ್ತು ಹಾಕಿದಳು; ಅದಕ್ಕೆ ಪ್ರತಿಯಾಗಿ ಹೋತನ ಕಣ್ಣನ್ನು ಕಿತ್ತು ಆ ಮನುಷ್ಯನಿಗೆ ಅಳವಡಿಸಿದಳು**"**.- ಎಂದು ಬರೆದಿದೆಯಲ್ಲ! ಈ ದೇವಿಯನ್ನು ಹಿಂಸಕಳೆಂದು ಏಕೆ ಒಪ್ಪಿಕೊಳ್ಳುವುದಿಲ್ಲ? **"ರತ್ನಸಾರ"**ದ ಒಂದನೆಯ ಭಾಗದ ೬೭ನೆಯ ಪುಟದಲ್ಲಿ ಏನು ಬರೆದಿದೆಯೋ ನೋಡಿರಿ. ಮರುತ ದೇವಿಯು ಪಥಿಕರಿಗೆ ಶಿಲಾವಿಗ್ರಹವಾಗಿ ಸಹಾಯ ಮಾಡುತ್ತಿದ್ದಳು. ಇವಳನ್ನೂ ಹಾಗೆಯೇ ಒಪ್ಪಿಕೊಳ್ಳುವುದಿಲ್ಲವೇಕೆ?

---

೫೪. ಪರ್ಯೂಷಣ.

**ಮೂಲ:-** **ಕಿಂ ಸೋಪಿ ಜಣಣಿ ಜಾಓ ಜಾಣಾ ಜಣಣೀ ಇಕಿಂಗಓವಿದ್ಧಿ ।**

**ಜಇ ಮಿಚ್ಛರಓ ಜಾಓ ಗುಣೇ ಸುತಹಮಚ್ಛರ ವಹಇ ॥** (ಪ್ರಕ. ಭಾ.೨. ಷ. ಸೂತ್ರ-೮೧)

ಯಾವ ಜೈನಮತ ವಿರೋಧಿಗಳಾದ ಮಿಥ್ಯಾತ್ವಿಗಳು, ಅಂದರೆ ಮಿಥ್ಯಾಧರ್ಮದವರಿದ್ದಾರೋ, ಅವರು ಹುಟ್ಟಿದರೇಕೆ? ಹುಟ್ಟಿಯೇ ಬಿಟ್ಟರಾದರೆ, ಬೆಳೆದರೇಕೆ? ಅಂದರೆ, ಶೀಘ್ರವೇ ತೀರಿಹೋಗಿದ್ದರೆ, ಚೆನ್ನಾಗಿರುತ್ತಿತ್ತು!

**ಸಮೀಕ್ಷಕ:-** ನೋಡಿರಿ ಇವರ ವೀತರಾಗಭಾಷಿತವಾದ ದಯಾಧರ್ಮವನ್ನು! ಬೇರೆಯ ಮತದವರ ಬಾಳನ್ನೂ ಕೂಡ ಅಪೇಕ್ಷಿಸುವುದಿಲ್ಲ! ಇವರ ದಯಾ ಧರ್ಮ ಕೇವಲ ಕಥನಮಾತ್ರವಾಗಿದೆ. ಮತ್ತು ಏನಾದರೂ ಇರುವುದಾದರೆ, ಅದು ಕ್ಷುದ್ರ ಜೀವರಿಗಾಗಿ ಮತ್ತು ಪಶುಗಳಿಗಾಗಿ; ಜೈನರಿಂದ ಬೇರೆಯಾದ ಮಾನವರಿಗಾಗಿ ಅಲ್ಲ.

**ಮೂಲ:-** **ಸುದ್ಧೇಮಗ್ಗೇ ಜಾಯ ಸುಹೇಣ ಗಚ್ಛತ್ತಿ ಸುದ್ಧಮಗ್ಗಮ್ಮಿ ।**

**ಜೇ ಪುಣ ಅಮಗ್ಗಜಾಯಾ ಮಗ್ಗೇಗಚ್ಛಂತಿ ಯೇ ಚುಯ್ಯಮ್ ॥** (ಪ್ರಕ. ಭಾ.-೨.ಷ. ಸೂತ್ರ-೮೩)

ಇದರ ಮುಖ್ಯ ತಾತ್ಪರ್ಯವೇನೆಂದರೆ - ಯಾರಾದರೂ ಜೈನಕುಲದಲ್ಲಿ ಜನ್ಮತಾಳಿ, ಮುಕ್ತಿಗೆ ಹೋಗುವರಾದರೆ, ಏನೂ ಆಶ್ಚರ್ಯವಿಲ್ಲ; ಆದರೆ-ಜೈನರಿಂದ ಬೇರೆಯಾದ ಕುಲದಲ್ಲಿ ಹುಟ್ಟಿದ ಮಿಥ್ಯಾತ್ವಿಗಳಾದ ಅನ್ಯಮಾರ್ಗೀಯರು ಮುಕ್ತಿಯನ್ನು ಗಳಿಸುವರಾದರೆ, ಇದರಲ್ಲಿ ದೊಡ್ಡ ಆಶ್ಚರ್ಯವಿದೆ. ಜೈನಮತದವರು ಮಾತ್ರ ಮುಕ್ತಿಹೊಂದುತ್ತಾರೆ; ಬೇರೆಯವರಾರೂ ಹೊಂದರು. ಯಾರು ಜೈನಮತವನ್ನು ಗ್ರಹಿಸರೋ, ಅವರು ನರಕಗಾಮಿಗಳಾಗುತ್ತಾರೆ-ಎನ್ನುವುದು ಇದರ ಫಲಿತಾರ್ಥವಾಗಿದೆ.

**ಸಮೀಕ್ಷಕ:-** ಜೈನಮತದಲ್ಲಿ ಯಾವನೂ ದುಷ್ಟನೂ, ಅಥವಾ ನರಕ ಗಾಮಿಯೂ ಆಗುವುದಿಲ್ಲವೇನು? ಅವರೆಲ್ಲರೂ ಮುಕ್ತಿಗೆ ತೆರಳುತ್ತಾರೆ; ಅನ್ಯರಾರೂ ತೆರಳುವುದಿಲ್ಲವೋ? ಇದು ಉನ್ಮತ್ತತನದ ಮಾತಲ್ಲವೇನು? ಮುಗ್ಧಮಾನವರ ಹೊರತು, ಇಂತಹ ಮಾತನ್ನು ಯಾವನು ಒಪ್ಪಬಲ್ಲನು?

**ಮೂಲ:-** **ತಿಚ್ಛಯರಾಣಂ ಪೂಆ ಸಂಮತ್ತ ಗುಣಾಣಕಾರಿಣೀ ಭಣಿಯಾ ।**

**ಸಾವಿಯ ಮಿಚ್ಛತ್ತಯರೀ ಜಿಣ ಸಮಯೇ ದೇಸಿಯಾ ಪೂಅ ॥** (ಪ್ರಕ. ಭಾ-೨. ಷಷ್ಠೀ- ಸೂ-೪೦)

ಜಿನಮೂರ್ತಿಗಳ ಪೂಜೆ ಮಾತ್ರ ಸಸಾರ; ಮತ್ತು ಇವುಗಳಿಂದ ಬೇರೆಯಾದ ಮಾರ್ಗದವರ ಮೂರ್ತಿಪೂಜೆ ಅಸಾರವಾಗಿರುತ್ತದೆ. ಯಾವನು ಜಿನಮಾರ್ಗದ ಆಜ್ಞೆಯನ್ನು ಪಾಲಿಸುತ್ತಾನೋ, ಅವನು ತತ್ತ್ವಜ್ಞಾನಿ; ಯಾವನು ಪಾಲಿಸುವುದಿಲ್ಲವೋ, ಅವನು ತತ್ತ್ವಜ್ಞಾನಿಯಲ್ಲ.

**ಸಮೀಕ್ಷಕ:-** ಭಾಪು! ಭಾಪು!! ಹೇಳುವುದಾದರೂ ಏನು? ಹೇಗೆ ವೈಷ್ಣವರೇ ಮೊದಲಾದವರದು ಆಗಿರುತ್ತದೋ, ಹಾಗೆ ನಿಮ್ಮ ಮೂರ್ತಿಗಳೂ ಕಲ್ಲು- ಮೊದಲಾದ ಜಡ ಪದಾರ್ಥಗಳಲ್ಲದಲ್ಲವೇನು? ಹೇಗೆ ನಿಮ್ಮ ಮೂರ್ತಿಪೂಜೆ ಸುಳ್ಳಾಗಿದೆಯೋ, ಹಾಗೆಯೇ ವೈಷ್ಣವ-ಮೊದಲಾದವರ ಮೂರ್ತಿಪೂಜೆಯೂ ಕೂಡ ಸುಳ್ಳಾಗಿರುತ್ತದೆ. ನೀವು ನಿಮ್ಮನ್ನು ತತ್ತ್ವಜ್ಞಾನಿಗಳೆಂದು ಹೇಳಿಕೊಳ್ಳುವುದರಿಂದ ಮತ್ತು ಬೇರೆಯವರನ್ನು ಅತತ್ತ್ವಜ್ಞಾನಿಗಳೆಂದು ವಾದಿಸುವುದರಿಂದ, ನಿಮ್ಮ ಮತದಲ್ಲಿ ತತ್ತ್ವಜ್ಞಾನವಿಲ್ಲವೆಂದು ವಿದಿತವಾಗುತ್ತಿದೆ.

**ಮೂಲ:-** **ಜಿಣ ಆಣಾಏ ಧಮ್ಮೋ ಆಣಾರಹಿ ಆಣ ಪುಡಂ ಆಹಮುತ್ತಿ ।**

**ಇಯಮುಣಿ ಊಣಯ ತತ್ತಂಜಿಣ ಆಣಾಯೇ ಕುಣಹು ಧಮ್ಮಮ್ ॥** (ಪ್ರಕ. ಭಾ-೨. ಷ. ಸ-೯೨)

ಜಿನದೇವನ ಆಜ್ಞೆ, ದಯಾ-ಕ್ಷಮಾ ಮೊದಲಾದ ರೂಪವಾದುದೇ ಧರ್ಮವಾಗಿದೆ. ಅದರಿಂದ ಬೇರೆಯಾದ ಆಜ್ಞೆ ಎಲ್ಲವೂ ಅಧರ್ಮವಾಗಿದೆ.

**ಸಮೀಕ್ಷಕ:-** ಇದೆಷ್ಟು ದೊಡ್ಡ ಅನ್ಯಾಯದ ಮಾತಾಗಿದೆ? ಜೈನಮತದಿಂದ ಬೇರೆ ಯಾವನೇ ಪುರುಷನೂ ಸತ್ಯವಾದಿಯೂ, ಧರ್ಮಾತ್ಮನೂ ಆಗಿಲ್ಲವೇನು? ಆ ಧಾರ್ಮಿಕ ಪುರುಷನನ್ನು ಅಂಗೀಕರಿಸಬಾರದೇನು? ಅಹುದು; ಜೈನ ಮತಸ್ಥರ ಮುಖ, ನಾಲಗೆ ಚರ್ಮದ್ದು ಆಗಿರದೆ ಮತ್ತು ಅನ್ಯರದು ಚರ್ಮದ್ದು ಆಗಿದ್ದಲ್ಲಿ ಈ ಮಾತು ಅನ್ವಯಿಸಬಹುದಾಗಿತ್ತು. ಜೈನರುಗಳು

ಹೊಗಳುಭಟ್ಟರ ಹಿರಿಯಣ್ಣಂದಿರೇ ಆಗಿದ್ದಾರೋ - ಎನ್ನುವಂತೆ, ಈ ಮೂಲಕ ಕೇವಲ ತಮ್ಮ ಮತದ ಗ್ರಂಥಗಳ, ವಚನಗಳ, ಸಾಧುಗಳೇ ಮೊದಲಾದವರ ಹೆಚ್ಚುಗಾರಿಕೆಯನ್ನು ತೋಡಿಕೊಂಡಿದ್ದಾರೆ.

**ಮೂಲ:-** **ವನ್ನೇಮಿ ನಾರಯಾಉವಿ ಜೇಸಿದುರಕಾಇ ಸಂಭರಂ ತಾಣಮ್ ।**

**ಭವ್ವಾಣ ಜಣಇ ಹರಿಹರ ರಿದ್ಧಿ ಸಮಿದ್ಧೀ ವಿ ಉದ್ಧೋಸಮ್ ॥** (ಪ್ರಕ. ಭಾ-೨. ಷ. ಸೂ-೯೫.)

ಇದರ ಮುಖ್ಯ ತಾತ್ಪರ್ಯವೇನೆಂದರೆ- ಹರಿ, ಹರ ಮೊದಲಾದವರ ಯಾವ ಪ್ರಭಾವವಿದೆಯೋ, ಅದು ನರಕಕ್ಕೆ ಕಾರಣವಾಗಿದೆ. ಅದನ್ನು ನೋಡಿದರೆ, ಜೈನರಿಗೆ ರೋಮಾಂಚ ಉಂಟಾಗುತ್ತದೆ. ಹೇಗೆ ರಾಜಾಜ್ಞೆಯ ಭಂಗವನ್ನು ಮಾಡುವುದರಿಂದ ಮಾನವನು ಮರಣದಂಡನೆಯವರೆಗೂ ದುಃಖ ಹೊಂದುತ್ತಾನೋ, ಹಾಗೆ ಜಿನೇಂದ್ರನ ಆಜ್ಞಾಭಂಗದಿಂದ ಜನನ ಮರಣದ ದುಃಖವನ್ನು ಹೊಂದನೇತಕ್ಕೆ?

**ಸಮೀಕ್ಷಕ:-** ನೋಡಿರಿ! ಜೈನರ ಆಚಾರ್ಯರುಗಳೇ ಮೊದಲಾದವರ ಮಾನಸೀ ವೃತ್ತಿಯನ್ನು. ಎಂದರೆ, ಬಾಹ್ಯಕಪಟವನ್ನು ಹಾಗೂ ಆಡಂಬರದ ಲೀಲೆಯನ್ನು, ಈಗಂತೂ ಇವತರ ಆಂತರಿಕ ಕಪಟವೂ ಕೂಡ ಹೊರಬಿದ್ದಿತು. ಹರಿ, ಹರ-ಮೊದಲಾದವರ ಮತ್ತು ಅವರ ಉಪಾಸಕರ ಐಶ್ವರ್ಯವನ್ನೂ ಮತ್ತು ಅಭಿವೃದ್ಧಿಯನ್ನೂ ನೋಡಲೂ ಕೂಡ ಆಗದು! ಅನ್ಯರ ಅಭಿವೃದ್ಧಿ ಏತಕ್ಕಾಯಿತು-ಎಂದು ಇವರಿಗೆ ರೋಮಾಂಚವಾಗುತ್ತದೆ! ಬಹುಶಃ ಇವರ ಸಮಸ್ತ ಐಶ್ವರ್ಯವೂ ನಮಗೆ ಸಿಕ್ಕುವುದಾದರೆ ಮತ್ತು ಇವರು ದರಿದ್ರರಾಗಿ ಹೋದರೆ ಚೆನ್ನಾಗಿದ್ದೀತು-ಎಂದು ಬಯಸುತ್ತಿರಬಹುದೇನೋ? ಮತ್ತು ರಾಜಾಜ್ಞೆಯ ದೃಷ್ಟಾಂತವನ್ನು ಕೊಡುವ ಕಾರಣವೂ ಕೂಡ ಜೈನರು ರಾಜ್ಯದ ಹೊಗಳುಭಟ್ಟರೂ, ಸುಳ್ಳರೂ ಮತ್ತು ಅಂಜುಬುರುಕರೂ ಆಗಿರುವುದೇ[೫೫] ಆಗಿದೆ. ರಾಜನ ಸುಳ್ಳು ಮಾತುಗಳನ್ನೂ ಒಪ್ಪಿಕೊಂಡುಬಿಡಬೇಕೇನು? ಈರ್ಷ್ಯಾದ್ವೇಷಯುಕ್ತನು ಯಾವನಾದರೂ ಇರುವುದಾದರೆ, ಜೈನರಿಗಿಂತ ಹೆಚ್ಚಾಗಿ ಬೇರೆ ಯಾವನೂ ಇರಲಾರನು.

**ಮೂಲ:-** **ಜೋ ದೇಇ ಸುದ್ಧಧಮ್ಮಂ ಸೋ ಪರಮಪ್ಪಜಯಮ್ಮಿ ನಹು ಅನ್ನೋ ।**

**ಕಿಂ ಕಪ್ಪದ್ದುಮ್ಮ ಸರಿಸೋ ಇಯ ರತರೂ ಹೋಇ ಕಇಯಾವಿ ॥** (ಪ್ರಕ. ಭಾ-೨. ಷ. ಸೂ-೧೦೧.)

ಯಾರು ಜೈನಧರ್ಮಕ್ಕೆ ವಿರುದ್ಧರಾಗಿರುತ್ತಾರೋ, ಆ ಜನರು ಮೂರ್ಖರು. ಮತ್ತು ಯಾರು ಜಿನೇಂದ್ರಭಾಷಿತವಾದ ಧರ್ಮದ ಉಪದೇಶಕರಾದ ಸಾಧುಗಳೂ, ಅಥವಾ ಗೃಹಸ್ಥರೂ ಅಥವಾ ಗ್ರಂಥಕರ್ತೃಗಳೂ ಆಗಿರುತ್ತಾರೋ, ಅವರು ತೀರ್ಥಂಕರರಿಗೆ ಸಮಾನರಾಗಿರುತ್ತಾರೆ. ಅವರಿಗೆ ಸಮಾನರಾದವರೂ ಬೇರೆ ಯಾರೂ ಇಲ್ಲ.

**ಸಮೀಕ್ಷಕ:-** ಅಲ್ಲವೇ ಮತ್ತೆ? ಜೈನರುಗಳು ಬಾಲಬುದ್ಧಿಗಳಾಗಿರದಿದ್ದರೆ, ಇಂತಹ ಮಾತುಗಳನ್ನು ಒಪ್ಪಿಕೊಂಡು ಕುಳ್ಳಿರುತ್ತಿದ್ದರೇಕೆ? ಹೇಗೆ ವೇಶ್ಯೆಯು ತನ್ನ ಹೊರತು ಬೇರೆ ಯಾವಳ ಸ್ತುತಿಯನ್ನೂ ಮಾಡುವುದಿಲ್ಲವೋ, ಹಾಗೆಯೇ ಈ ವರ್ತನೆ ಕಾಣಿಸುತ್ತದೆ.

**ಮೂಲ:-** **ಜೇ ಅಮುಣಿಅ ಗುಣದೋಷಾ ತೇ ಕಹಅ ಬುಹಾಣ ಹುಂತಿಮ ಝುಚ್ಛಾ ।**

**ಅಹತೇ ವಿಹುಮ ಝುಚ್ಛಾ ತಾ ವಿಸ ಅಮಿಆಣ ತುಲ್ಲತ್ತಮ್ ॥** (ಪ್ರಕ. ಭಾ-೨. ಷ. ಸೂ- ೧೦೮)

ಜಿನೇಂದ್ರ ದೇವನನ್ನೂ, ಅವನು ಹೇಳಿದ ಸಿದ್ಧಾಂತಗಳನ್ನೂ, ಮತ್ತು ಜಿನಮತದ ಉಪದೇಶಕರನ್ನೂ ತ್ಯಜಿಸುವುದು ಜೈನರಿಗೆ ಉಚಿತವಲ್ಲ.

**ಸಮೀಕ್ಷಕ:-** ಇದು ಜೈನರುಗಳ ಹಠದ, ಪಕ್ಷಪಾತದ ಮತ್ತು ಅವಿದ್ಯೆಯ ಫಲವಲ್ಲದಿದ್ದರೆ, ಮತ್ತೇನು? ಆದರೆ, ಜೈನರ ಹಲಕೆಲವು ಮಾತುಗಳನ್ನು ಬಿಟ್ಟು, ಬೇರೆ ಎಲ್ಲವೂ ವರ್ಜನೀಯವೇ ಆಗಿವೆ. ಯಾವನಿಗೆ ಸ್ವಲ್ಪವಾದರೂ ಬುದ್ಧಿಯಿರುತ್ತದೋ, ಅವನು ಜೈನರ ದೇವರುಗಳ, ಸಿದ್ಧಾಂತ ಗ್ರಂಥಗಳ ಮತ್ತು ಉಪದೇಶಕರ ವಿಷಯದಲ್ಲಿ ದರ್ಶನ-ಶ್ರವಣ ಆಲೋಚನೆಗಳನ್ನು ಮಾಡುವನಾದರೆ, ಅದೇ ಸಮಯದಲ್ಲಿ ನಿಃಸ್ಸಂದೇಹವಾಗಿ ವರ್ಜಿಸಬಿಡುವನು.

---

೫೫. ಈ ಐತಿಹಾಸಿಕ ತಥ್ಯ ಮಹರ್ಷಿ ದಯಾನಂದರ ರಾಜನೈತಿಕ ಅಧ್ಯಯನದ ದ್ಯೋತಕ! ಜೈನರು ಮುಸ್ಲಿಮರ ಶಾಸನ ಕಾಲದಲ್ಲೂ, ಆಂಗ್ಲರ ಶಾಸನಕಾಲದಲ್ಲೂ, ನಂತರ ಕಾಂಗ್ರೆಸ್ ಶಾಸನ ಕಾಲದಲ್ಲಿಯೂ ಒಂದೇ ತರಹೆ ಇದ್ದಾರೆ.

**ಮೂಲ:–** **ವಯಣೇ ವಿ ಸುಗುರು ಜಿಣವಲ್ಲಹಸ್ಸ ಕೇಸಿಂ ನ ಉಲ್ಲಸಇ ಸಮ್ಮಮ್।**

**ಅಹಕಹ ದಿಣಮಣಿತೇಯಂ ಉಲುಆಣಂ ಹರಇ ಅಂಧತ್ತಮ್ ॥** (ಪ್ರಕ. ಭಾ–೨. ಷ.ಸೂ. ೧೦೮)

ಯಾರು ಜಿನವಚನಕ್ಕೆ ಅನುಕೂಲವಾಗಿ ನಡೆದುಕೊಳ್ಳುತ್ತಾರೋ, ಅವರು ಪೂಜನೀಯರೂ ಮತ್ತು ಯಾರು ವಿರುದ್ಧವಾಗಿ ನಡೆದುಕೊಳ್ಳುತ್ತಾರೋ ಅವರು ಅಪೂಜ್ಯರೂ ಆಗಿರುತ್ತಾರೆ. ಜೈನ ಗುರುಗಳನ್ನು ಅಂಗೀಕರಿಸಬೇಕು; ಎಂದರೆ– ಅನ್ಯಮಾರ್ಗೀಯರನ್ನು ಅಂಗೀಕರಿಸಬಾರದು.

**ಸಮೀಕ್ಷಕ:–** ಆಯಿತು! ಜೈನರುಗಳು ಅನ್ಯ ಅಜ್ಞಾನಿಗಳನ್ನು ಪಶುಗಳಂತೆ ಶಿಷ್ಯರನ್ನಾಗಿ ಮಾಡಿಕೊಂಡು ಕಟ್ಟಿಹಾಕದೇ ಇದ್ದಿದ್ದರೆ, ಅವರ ಬಲೆಯಿಂದ ಹೊರಬಂದು, ತಮ್ಮ ಮುಕ್ತಿಯ ಸಾಧನಗಳನ್ನು ಅವಲಂಬಿಸಿ, ಜನ್ಮವನ್ನು ಸಫಲಗೊಳಿಸಿ ಕೊಳ್ಳುತ್ತಿದ್ದರು. ಯೋಚಿಸಿರಿ, ಯಾವನಾದರೂ ನಿಮ್ಮನ್ನು ಕುಮಾರ್ಗಿಗಳು, ಕುಗುರುಗಳು, ಮಿಥ್ಯಾತ್ವಿಗಳು ಮತ್ತು ದುರುಪದೇಶಕರು – ಎಂದು ಹೇಳಿದರೆ, ನಿಮಗೆಷ್ಟು ದುಃಖವಾಗುವುದು? ಅದೇ ರೀತಿ ನೀವು ಅನ್ಯರಿಗೆ ದುಃಖದಾಯಕರಾಗಿದ್ದೀರಿ; ಆದುದರಿಂದ ನಿಮ್ಮ ಮತದಲ್ಲಿ ನಿಃಸಾರವಾದ ಮಾತುಗಳು ಬಹಳವಾಗಿ ತುಂಬಿಕೊಂಡಿವೆ.

**ಮೂಲ:–** **ತಿಹುಅಣಜಣಂ ಮರಂತಂ ದಠೂಣ ನಿಅಂತಿ ಜೇ ನ ಅಪ್ಪಾಣಮ್ ।**

**ವಿರಮಂತಿನ ಪಾವಾಉ ಧಿದ್ಧೀ ಧಿಠತ್ತಣಂ ತಾಣಮ್ ॥** (ಪ್ರಕ. ಭಾ–೨. ಷ. ಸೂ–೧೦೯)

ಮೃತ್ಯುವಿನವರೆಗೂ ಮುಟ್ಟುವ ದುಃಖವಿದ್ದರೂ ಕೂಡ ಕೃಷಿ, ವ್ಯಾಪಾರ – ಮೊದಲಾದ ಕರ್ಮಗಳನ್ನು ಜೈನರುಗಳು ಮಾಡಬಾರದು. ಏಕೆಂದರೆ– ಈ ಕರ್ಮಗಳು ನರಕಕ್ಕೆ ಕರೆದೊಯ್ಯುವುದಾಗಿದೆ.

**ಸಮೀಕ್ಷಕ:–** ಈಗ ಯಾವನಾದರೂ ಜೈನರನ್ನು "ನೀವು ವ್ಯಾಪಾರ ಮೊದಲಾದ ಕರ್ಮಗಳನ್ನು ಏತಕ್ಕೆ ಮಾಡುತ್ತೀರಿ? ಈ ಕರ್ಮಗಳನ್ನು ಬಿಟ್ಟುಬಿಡುವುದಿಲ್ಲವೇಕೆ?"– ಎಂದು ಕೇಳಬೇಕು. ಮತ್ತು ಬಿಟ್ಟುಬಿಡುವಿರಾದರೆ, ನಿಮ್ಮ ಶರೀರಗಳ ಪಾಲನ–ಪೋಷಣಗಳೂ ಕೂಡ ಆಗಲಾರವು. ಮತ್ತು ನಿಮ್ಮ ಕಥನಕ್ಕನುಸಾರವಾಗಿ ಎಲ್ಲ ಜನರೂ ಬಿಟ್ಟು ಬಿಡುವರಾದರೆ, ನೀವು ಯಾವ ವಸ್ತುಗಳನ್ನು ತಿಂದು ಜೀವಿಸುವಿರಿ? ಇಂತಹ ಸಮಾಜದ್ರೋಹದ ಉಪದೇಶ ಮಾಡುವುದು ಸರ್ವಥಾ ವ್ಯರ್ಥವಾಗಿರುತ್ತದೆ. ಬಡಪಾಯಿಗಳು ಮಾಡುವರಾದರೂ ಏನನ್ನು? ವಿದ್ಯಾ– ಸತ್ಸಂಗವಿಲ್ಲದೆ, ಮನಸ್ಸಿಗೇನು ಬಂದಿತೋ ಅದನ್ನೇ ಹೇಳಿಬಿಟ್ಟರು.

**ಮೂಲ:–** **ತಇಯಾ ಹಮಾಣ ಅಹಮಾ ಕಾರಣ ರಹಿಯಾ ಅನಾಣ ಗವ್ವೇಣ ।**

**ಜೇ ಜಂಪಂತಿ ಉಸ್ಸುತ್ತಂ ತೇಸಂ ದ್ವಿದ್ಧಿಚ್ಛ ಪಂಮಿಚ್ಚಮ್ ॥** (ಪ್ರಕ. ಭಾ–೨. ಷ. ಸೂ–೧೨೧.)

ಯಾರು ಜೈನಾಗಮಕ್ಕೆ ವಿರುದ್ಧವಾದ ಶಾಸ್ತ್ರಗಳನ್ನು ಅಂಗೀಕರಿಸುವವರಾಗಿರುತ್ತಾರೋ, ಅವರು ಅಧಮಾಧಮರಾಗಿರುತ್ತಾರೆ. ಯಾವುದಾದರೂ ಸ್ವಾರ್ಥಸಿದ್ಧಿಸುವುದಾದರೂ ಕೂಡ, ಜೈನಮತಕ್ಕೆ ವಿರುದ್ಧವಾಗ ಮಾತನಾಡಬಾರದು; ಒಪ್ಪಿಕೊಳ್ಳಲೂ ಬಾರದು. ಯಾವುದೇ ಪ್ರಯೋಜನ ಕೈಗೂಡುವುದೇ ಆಗಿದ್ದರೂ ಕೂಡ, ಅನ್ಯಮತದ ತ್ಯಾಗವನ್ನು ಮಾಡಿಬಿಡಬೇಕು.

**ಸಮೀಕ್ಷಕ:–** ನಿಮ್ಮ ಮೂಲಪುರುಷರಿಂದ ಹಿಡಿದು ಇಂದಿನವರೆಗೆ ಎಷ್ಟು ಜನರು ಉದಿಸಿದ್ದಾರೋ, ಉದಿಸುವರೋ, ಅವರು ಅನ್ಯಮತವನ್ನು ಬೈಯುವುದರ ಹೊರತು, ಬೇರೆ ಯಾವುದೇ ಮಾತನ್ನು ಆಡಿಲ್ಲ; ಮತ್ತು ಆಡುವುದೂ ಇಲ್ಲ. ಜೈನರು ಎಲ್ಲಿ ಎಲ್ಲಿ ತಮ್ಮ ಸ್ವಾರ್ಥ ಸಿದ್ಧಿಸುವುದನ್ನು ಕಾಣುತ್ತಾರೋ, ಅಲ್ಲಿ ಶಿಷ್ಯರಿಗೂ ಶಿಷ್ಯರಾಗಿ ಹೋಗುತ್ತಾರೆ. ಇಂತಹ ಸುಳ್ಳಾದ ಉದ್ದುದ್ದ–ಅಗಲಗಲದ ಮಾತುಗಳನ್ನು ಆಡುವುದರಲ್ಲಿ ಸ್ವಲ್ಪವೂ ಸಂಕೋಚವಾಗುವುದಿಲ್ಲ! ಇದು ಮಹಾ ಶೋಚನೀಯವಾದ ವಿಷಯವಾಗಿದೆ.

**ಮೂಲ:–** **ಜಂ ವೀರಜಿಣಸ್ಸ ಜಿಓ ಮಿರಈ ಉಸ್ಸುತ್ತ ಲೇಸದೇಸಣಓ ।**

**ಸಾಗರ ಕೋಡಕೋಡಿಂ ಹಿಂಡಇ ಅಇ ಭೀಮಭವರಣ್ಣೇ ॥** (ಪ್ರಕ. ಭಾ –೨. ಷ. ಸೂ–೧೨೨)

ಯಾವನಾದರೂ –"ಜೈನ ಸಾಧುಗಳಲ್ಲಿ ಧರ್ಮವಿದೆ. ನಮ್ಮವರಲ್ಲಿ ಹಾಗೂ ಬೇರೆಯವರಲ್ಲಿಯೂ ಕೂಡ ಧರ್ಮವಿದೆ".– ಎಂದು ಹೇಳುವನಾದರೆ, ಆ ಮನುಷ್ಯನು ಕೋಟ್ಯಾನುಕೋಟಿ ವರ್ಷಗಳವರೆಗೆ ನರಕದಲ್ಲಿದ್ದು, ಮತ್ತೂ ಕೂಡ ನೀಚ ಜನ್ಮವನ್ನು ಹೊಂದುತ್ತಾನೆ.

**ಸಮೀಕ್ಷಕ:–** ಭಾಪು, ಭಾಪು! ವಿದ್ಯಾಶತ್ರುಗಳೇ! ನೀವು – "ನಮ್ಮ ಮಿಥ್ಯಾವಚನಗಳ ಖಂಡನವನ್ನು ಯಾವನೂ ಮಾಡದಿರಲಿ"–ಎಂದೇ ಯೋಚಿಸಿರಬಹುದು. ಇದೇ ಕಾರಣದಿಂದ ಈ ಭಯಂಕರವಾದ ವಚನವನ್ನು ಬರೆದಿದ್ದೀರಿ. ಹಾಗೆ ಆಗುವುದು ಅಸಂಭವವಾಗಿದೆ. ಈಗ ಎಲ್ಲಿಯವರೆಗೆ ನಿಮಗೆ ಬುದ್ಧಿ ಹೇಳೋಣ? ನೀವಂತೂ ಸುಳ್ಳು, ನಿಂದೆ ಮತ್ತು ಬೇರೆ ಮತಗಳೊಂದಿಗೆ ವೈರ–ವಿರೋಧ ಮಾಡುವುದಕ್ಕಾಗಿಯೇ ಟೊಂಕಕಟ್ಟಿ ನಿಂತು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದನ್ನು ರಸಾಯನಕ್ಕೆ ಸಮವೆಂದು ತಿಳಿದಿದ್ದೀರಿ.

**ಮೂಲ:–** **ದೂರೇ ಕರಣಂ ದೂರಮ್ಮಿ ಸಾಹಣಂ ತಹ ಪಭಾವಣಾ ದೂರೇ ।**

**ಜಿಣಧಮ್ಮ ಸದ್ದಹಾಣಂ ಪಿ ತಿರಿಕದುರಕಾಇ ನಿಠವಇ ॥** (ಪ್ರಕ. ಭಾ–೨ ಷ. ಸೂ–೧೨೭.)

ಯಾವ ಮಾನವನಿಂದ ಜೈನಧರ್ಮದ ಅನುಷ್ಠಾನ ಸ್ವಲ್ಪವೂ ಕೂಡ ಆಗಲಾರದೋ, ಅವನೂ ಕೂಡ–"ಜೈನಧರ್ಮ ಸತ್ಯವಾಗಿದೆ ; ಬೇರೆ ಯಾವುದೂ ಅಲ್ಲ".– ಎಂಬ ಇಷ್ಟು ಶ್ರದ್ಧಾಮಾತ್ರದಿಂದಲೇ, ದುಃಖದಿಂದ ಪಾರಾಗಿ ಹೋಗುತ್ತಾನೆ.

**ಸಮೀಕ್ಷಕ :–** ಆಹಾ! ಮೂರ್ಖರನ್ನು ತಮ್ಮ ಮತಜಾಲದಲ್ಲಿ ಸಿಕ್ಕಿಸಿಕೊಳ್ಳುವುದಕ್ಕೆ ಇದಕ್ಕಿಂತ ಅಧಿಕವಾದ ಬೇರೆ ಮಾತು ಯಾವುದಿದ್ದೀತು? ಏಕೆಂದರೆ–ಯಾವ ಕರ್ಮವನ್ನೂ ಮಾಡಬೇಕಾಗಿಲ್ಲ; ಮತ್ತು ಸಿಕ್ಕಿಹೋಗುವುದು ನೇರ ಮುಕ್ತಿಯೇ! ಇಂತಹ ಮೌಢ್ಯಮಯವಾದ ಮತ ಬೇರೆ ಯಾವುದು ಇದ್ದೀತು?

**ಮೂಲ:–** **ಕಇಯಾ ಹೋಹೀ ದಿವಸೋ ಜಇಯಾ ಸುಗುರೂಣಪಾಯ ಮೂಲಮ್ಮಿ ।**

**ಉಸ್ಸುತ್ತ ಲೇಸವಿಸಲವ ರಹಿಓ ನಿಸುಣೇಸು ಜಿಣಧಮ್ಮಮ್ ॥** (ಪ್ರಕ. ಭಾ–೨. ಷ. ಸೂ–೧೨೮.)

ಯಾವ ಮಾನವನು – "ಜೀನಾಗಮವನ್ನು, ಎಂದರೆ–ಜೈನರ ಶಾಸ್ತ್ರಗಳನ್ನು ಆಲಿಸುವೆನು; ಉತ್ಸೂತ್ರಗಳನ್ನು, ಎಂದರೆ–ಅನ್ಯಮತ ಗ್ರಂಥಗಳನ್ನು ಎಂದಿಗೂ ಆಲಿಸುವುದಿಲ್ಲ".– ಎಂದಿಷ್ಟು ಸಂಕಲ್ಪ ಮಾಡುವನೋ, ಅವನು ಇಷ್ಟು ಇಚ್ಛಾಮಾತ್ರದಿಂದಲೇ ದುಃಖಸಾಗರವನ್ನು ದಾಟಿ ಹೋಗುತ್ತಾನೆ.

**ಸಮೀಕ್ಷಕ :–** ಈ ಮಾತೂ ಕೂಡ ಮುಗ್ಧ ಮಾನವರನ್ನು ಸಿಕ್ಕಿಸಿಕೊಳ್ಳುವುದಕ್ಕಾಗಿಯೇ ಇದೆ. ಏಕೆಂದರೆ, ಈ ಪೂರ್ವೋಕ್ತವಾದ ಸಂಕಲ್ಪದಿಂದ ಇಲ್ಲಿನ ದುಃಖಸಾಗರದಿಂದಲೂ ಪಾರಾಗುವುದಿಲ್ಲ ಮತ್ತು ಪೂರ್ವಜನ್ಮದ ಸಂಚಿತ ಪಾಪಗಳ ದುಃಖವೆಂಬ ಫಲ ಅನುಭವಿಸದೆ ಬಿಟ್ಟುಹೋಗಲಾರದು. ಇಂತಹ ಸುಳ್ಳುಗಳನ್ನು, ಎಂದರೆ–ವಿದ್ಯಾ ವಿರುದ್ಧವಾದ ಮಾತನ್ನು ಬರೆಯದೇ ಇದ್ದಿದ್ದರೆ, ವೇದಗಳೇ ಮೊದಲಾದ ಶಾಸ್ತ್ರಗಳನ್ನು ನೋಡಿ, ಕೇಳಿ, ಸತ್ಯಾಸತ್ಯಗಳನ್ನರಿತು, ಇವರ ಅವಿದ್ಯಾರೂಪವಾದ ಪೊಳ್ಳುಗ್ರಂಥಗಳನ್ನು ವರ್ಜಿಸಿಬಿಡುತ್ತಿದ್ದರು. ಆದರೆ, ಈ ವಿದ್ಯಾಹೀನರನ್ನು ಹೇಗೆ ಬಿಗಿದು ಕಟ್ಟಿಹಾಕಿದ್ದಾರೆ– ಎಂದರೆ, ಇವರ ಈ ಜಾಲದಿಂದ ಯಾವನೋ ಒಬ್ಬ ಬುದ್ಧಿವಂತನಾದ ಸತ್ಸಂಗನಿಷ್ಠನು ಬೇಕಾದರೆ ಬಿಡುಗಡೆ ಹೊಂದುವುದು ಶಕ್ಯ; ಸಂಭವ. ಆದರೆ, ಜಡಬುದ್ಧಿಗಳಾದ ಅನ್ಯರ ಬಿಡುಗಡೆ ಬಹುಕಠಿನವಾಗಿದೆ.

**ಮೂಲ:–** **ಜಹ್ಮಾ ಜೇಣಹಿಂ ಭಣಿಯ ಸುಯವ ವಯಾರಂ ವಿಸೋ ಹಿಯಂ ತಸ್ಸ ।**

**ಜಾಇಯ ವಿಸುದ್ಧ ಬೋಹೀ ಜಿಣ ಆಣಾ ರಾಹ ಗತ್ತಾಓ ॥** (ಪ್ರಕ. ಭಾ–೨. ಷ. ಸೂ–೧೩೮)

ಯಾರು ಜಿನಾಚಾರ್ಯರು ಹೇಳಿದ ಸೂತ್ರಗಳು, ನಿರುಕ್ತ, 'ವ್ಯಕ್ತಿಭಾಷ್ಯ'– ಚೂರ್ಣೀ– ಇವನ್ನು ಅಂಗೀಕರಿಸುತ್ತಾರೋ, ಅವರು ಮಾತ್ರ ಶುಭ ವ್ಯವಹಾರವನ್ನೂ ಮತ್ತು ಕಷ್ಟದಿಂದ ಮಾತ್ರ ನಿರ್ವಹಿಸಲಾಗುವ ವ್ಯವಹಾರವನ್ನೂ ಮಾಡುವುದರಿಂದ ಚಾರಿತ್ರಯುಕ್ತರಾಗಿ, ಸುಖಗಳನ್ನು ಪಡೆದುಕೊಳ್ಳುತ್ತಾರೆ; ಅನ್ಯಮತದ ಗ್ರಂಥಗಳನ್ನು ನೋಡುವುದರಿಂದ ಅಲ್ಲ.

**ಸಮೀಕ್ಷಕ:–** ಅತ್ಯಂತ ಹಸಿವಿನಿಂದ ಸಾಯುವುದೇ ಮೊದಲಾದ ಕಷ್ಟಗಳನ್ನು ಸಹಿಸುವುದನ್ನು ಚಾರಿತ್ರವೆನ್ನುತ್ತಾರೆಯೇ? ಹಸಿದವನಾಗಿ–ಬಾಯಾರಿದವನಾಗಿ ಸಾಯುವುದು–ಮೊದಲಾದುದೇ ಚಾರಿತ್ರವಾಗಿದ್ದರೆ, ಬಹುಮಂದಿ ಮಾನವರು ಕ್ಷಾಮದಲ್ಲಿ ಅಥವಾ ಯಾರಿಗೆ ಆಹಾರ ಮೊದಲಾದುದು ಸಿಕ್ಕುವುದಿಲ್ಲವೋ, ಅವರು ನಿರಾಹಾರರಾಗಿ ಮೃತರಾಗುತ್ತಾರೆ. ಅವರು ಶುದ್ಧರಾಗಿ ಶುಭಫಲಗಳನ್ನು ಪಡೆದುಕೊಳ್ಳಬೇಕು! ಆ ರೀತಿ ಇವರೂ ಶುದ್ಧರಾಗುವುದಿಲ್ಲ; ಮತ್ತು ನೀವೂ ಕೂಡ ಶುದ್ಧರಾಗುವುದಿಲ್ಲ. ಆದರೆ,

ಪಿತ್ತ ಮೊದಲಾದುವುಗಳ ಪ್ರಕೋಪ ಉಂಟಾಗಿ, ರೋಗಗ್ರಸ್ತರಾಗಿ, ಸುಖಕ್ಕೆ ಪ್ರತಿಯಾಗಿ ದುಃಖವನ್ನು ಹೊಂದುತ್ತಾರೆ.[೫೫ಎ] ಧರ್ಮವಾದರೋ, ನ್ಯಾಯಾಚರಣ, ಬ್ರಹ್ಮಚರ್ಯ, ಸತ್ಯಭಾಷಣ ಮೊದಲಾದುದಾಗಿದೆ. ಮತ್ತು ಅಸತ್ಯಭಾಷಣ, ಅನ್ಯಾಯಾಚರಣ- ಮೊದಲಾದುದು ಪಾಪವಾಗಿದೆ. ಮತ್ತು ಎಲ್ಲರೊಂದಿಗೂ, ಪ್ರೀತಿಪೂರ್ವಕವಾಗಿ, ಪರೋಪಕಾರಕ್ಕಾಗಿ ವರ್ತಿಸುವುದು ಶುಭಚಾರಿತ್ರವೆನ್ನಿಸುತ್ತದೆ. ಜೈನಮತಸ್ಥರ ಹಸಿದಿರುವುದು, ಬಾಯಾರಿದವರಾಗಿರುವುದು-ಮೊದಲಾದುದು ಧರ್ಮವಲ್ಲ. ಈ ಸೂತ್ರಗಳು ಮೊದಲಾದುವನ್ನು ಅಂಗೀಕರಿಸುವುದರಿಂದ ಅಲ್ಪಸತ್ಯವನ್ನೂ ಅಧಿಕ ಅಸತ್ಯವನ್ನೂ ಪಡೆದುಕೊಂಡು, ದುಃಖಸಾಗರದಲ್ಲಿ ಮುಳುಗುತ್ತಾರೆ.

**ಮೂಲ:- ಜಇಜಾಣಿಸಿ ಜಿಣನಾಹೋ ಲೋಹಾಯಾರಾ ವಿಪರಕಖ ಭೂಓ ।**

**ತಾ ತಂತಂ ಮನ್ನಂತೋ ಕಹ ಮನ್ನಸಿ ಲೋಅ ಆಯಾರಮ್ ॥** (ಪ್ರಕ. ಭಾ-೨. ಷ. ಸೂ-೧೪೮)

ಯಾರು ಉತ್ತಮ ಪ್ರಾರಬ್ಧವನ್ನು ಹೊಂದಿರುವ. ಮಾನವರಾಗಿರುತ್ತಾರೋ, ಅವರು ಮಾತ್ರ ಜಿನಧರ್ಮವನ್ನು ಗ್ರಹಿಸುತ್ತಾರೆ. ಎಂದರೆ, ಯಾರು ಜಿನಧರ್ಮವನ್ನು ಗ್ರಹಿಸುವುದಿಲ್ಲವೋ, ಅವರ ಪ್ರಾರಬ್ಧ ನಷ್ಟವಾಗಿ ಹೋಗಿದೆ.

**ಸಮೀಕ್ಷಕ:-** ಈ ಮಾತು ಭ್ರಾಂತಿಯದು ಹಾಗೂ ಸುಳ್ಳಾದುದು ಅಲ್ಲವೇನು? ಅನ್ಯಮತಗಳಲ್ಲಿ ಶ್ರೇಷ್ಠಪ್ರಾರಬ್ಧಯುಕ್ತರು ಇಲ್ಲವೇನು? ಮತ್ತು ಸಧರ್ಮೀಯರೊಂದಿಗೆ, ಎಂದರೆ ಜೈನಮತೀಯರೊಂದಿಗೆ ಪರಸ್ಪರ ಕ್ಲೇಶದಾಯಕ ವರ್ತನೆಯನ್ನು ಮಾಡಬಾರದೆಂದು ಹೇಳಿರುವುದರಿಂದ, ಅನ್ಯರೊಂದಿಗೆ ಕಲಹ ಮಾಡುವುದರಲ್ಲಿ ಜೈನರು ಕೇಡನ್ನು ಎಣಿಸರೇನೋ, ಎಂದೇ ತೋರಿಬರುತ್ತದೆ. ಅವರ ಈ ಮಾತೂ ಅಯುಕ್ತವೇ; ಏಕೆಂದರೆ-ಸಜ್ಜನರಾದ ಪುರುಷರು ಸಜ್ಜನರೊಂದಿಗೆ ಪ್ರೇಮವನ್ನಿಟ್ಟುಕೊಳ್ಳುತ್ತಾರೆ ಮತ್ತು ದುಷ್ಟರಿಗೆ ಶಿಕ್ಷಣವನ್ನಿತ್ತು ಸುಶಿಕ್ಷಿತರನ್ನಾಗಿ ಮಾಡುತ್ತಾರೆ. ಮತ್ತು ಬ್ರಾಹ್ಮಣರು, ತ್ರಿದಂಡಿಗಳು, ಪರಿವ್ರಾಜಕಾಚಾರ್ಯರು ಎಂದರೆ ಸಂನ್ಯಾಸಿಗಳು, ತಾಪಸರು-ಮೊದಲಾದವರು, ಎಂದರೆ - ವೈರಾಗಿಗಳೇ ಮೊದಲಾದವರು ಎಲ್ಲರೂ ಜೈನಮತದ ಶತ್ರುಗಳು - ಎಂದು ನೀವು ಬರೆದಿರುವುದರ ಅರ್ಥವೇನು? ಈಗ ನೋಡಿರಿ! ಎಲ್ಲರನ್ನೂ ಶತ್ರುಭಾವನೆಯಿಂದ ನೋಡುತ್ತಾರೆ ಮತ್ತು ನಿಂದಿಸುತ್ತಾರೆ-ಎಂದ ಮೇಲೆ, ಜೈನರ ದೆಯೆ ಹಾಗೂ ಕ್ಷಮೆ-ಎಂಬ ಧರ್ಮ ಉಳಿಯಿತೆಲ್ಲಿ? ಏಕೆಂದರೆ, ಅನ್ಯರ ಮೇಲೆ ದ್ವೇಷವಿಡುವುದೆಂದರೆ ದಯೆಯ, ಕ್ಷಮೆಯ ನಾಶವೇ ಸರಿ. ಮತ್ತು ಇದಕ್ಕೆ ಸಮನಾದ ಬೇರೆ ಯಾವ ಹಿಂಸಾ-ದೋಷವೂ ಇಲ್ಲ. ಹೇಗೆ ಜೈನರು ದ್ವೇಷದ ಪ್ರತಿಮೆಗಳಾಗಿದ್ದಾರೋ, ಹಾಗೆ ಪ್ರಾಯಶಃ ಬೇರೆ ಯಾರೂ ಇರಲಾರರು. ಋಷಭದೇವನಿಂದ ಹಿಡಿದು ಮಹಾವೀರನವರೆಗೆ ೨೪ ಜನ ತೀರ್ಥಂಕರರನ್ನೂ, ರಾಗಿಗಳು, ದ್ವೇಷಿಗಳು, ಮಿಥ್ಯಾತ್ವಿಗಳು - ಎಂದು ಹೇಳುವೆವಾದರೆ ಮತ್ತು ಜೈನಮತವನ್ನು ಅಂಗೀಕರಿಸುವವರನ್ನು ಸಂನಿಪಾತಜ್ವರಕ್ಕೆ ಸಿಕ್ಕಿಕೊಂಡಿರುವವರೆಂದು ತಿಳಿಯುವೆವಾದರೆ, ಮತ್ತು ಅವರ ಧರ್ಮವನ್ನು ನರಕಕ್ಕೆ ಹಾಗೂ ವಿಷಕ್ಕೆ ಸಮಾನವೆಂದು ತಿಳಿಯುವೆವಾದರೆ, ಜೈನರಿಗೆ ಎಷ್ಟು ಕೆಟ್ಟದಾಗಿ ತೋರುವುದು? ಆದುದರಿಂದ ಜೈನರುಗಳು ನಿಂದೆ ಮತ್ತು ಪರಮತದ್ವೇಷವೆಂಬ ನರಕದಲ್ಲಿ ಮುಳುಗಿ ಮಹಾಕ್ಲೇಶವನ್ನು ಅನುಭವಿಸುತ್ತಿದ್ದಾರೆ. ಈ ವಿಷಯವನ್ನು ವರ್ಜಿಸಿ ಬಿಡುವರಾದರೆ, ಬಹಳ ಒಳ್ಳೆಯದಾದೀತು.

**ಮೂಲ:- ಏಗೋ ಅಗುರು ಏಗೋ ವಿಸಾವಗೀ ಚೇಇ ಆಣಿ ವಿವಹಾಣೀ ।**

**ತಚ್ಛಯಜಂ ಜಿಣದಬ್ಬಂ ಪರುಪ್ಪು ರಂತಂ ನ ವಿಚ್ಛಂತಿ ॥** (ಪ್ರಕ. ಬಾ-೨. ಷ. ಸೂತ್ರ-೧೫೦)

ಶ್ರಾವಕರೆಲ್ಲರ ದೇವಗುರುಧರ್ಮ ಒಂದಾಗಿದೆ. ಚೈತ್ಯವಂದನ - ಎಂದರೆ, ಜೈನ - ಪ್ರತಿಬಿಂಬ, ಮೂರ್ತಿ- ದೇಗುಲ ಹಾಗೂ ಜಿನದ್ರವ್ಯದ ರಕ್ಷಣೆಯನ್ನೂ, ಮತ್ತು ಮೂರ್ತಿ ಪೂಜೆಯನ್ನೂ ಮಾಡುವುದು ಧರ್ಮವಾಗಿದೆ.

**ಸಮೀಕ್ಷಕ:-** ಈಗ ನೋಡಿರಿ, ಮೂರ್ತಿಪೂಜೆಯ ಗೊಂದಲವೆಷ್ಟು ಹೊರಟಿದೆಯೋ, ಅದೆಲ್ಲಾ ಜೈನರ ಮನೆಯಿಂದಲೇ; ಮತ್ತು ಪಾಷಂಡಗಳ ಮೂಲವೂ ಕೂಡ ಜೈನಮತವಾಗಿದೆ.

---

೫೫[ಎ] ಹಸಿವೆಯನ್ನು ಬಲವಂತಯಾಗಿಯೋ, ಅಥವಾ ಯಾವುದಾದರೂ ವ್ರತ-ಉಪವಾಸಗಳ ನೆವದಿಂದಲೋ, ತಡೆಯುವವರಿಗೆ ಈ ಸ್ಥಿತಿಯುಂಟಾಗುತ್ತದೆ. ಪೌರಾಣಿಕರು ಈ ಬಗ್ಗೆ ಯೋಚಿಸಿ, ತಮ್ಮ 'ಧರ್ಮ'[?]ವನ್ನು ಉಳಿಸಿಕೊಳ್ಳುವುದರ ಬದಲು, ತಮ್ಮ ಆರೋಗ್ಯವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುವುದು ಒಳಿತು.

“ಶ್ರಾದ್ಧದಿನಕೃತ್ಯ”ದ ಮೊದಲನೆಯ ಪುಟದಲ್ಲಿ ಮೂರ್ತಿಪೂಜೆಯ ಪ್ರಮಾಣಗಳಿವೆ:-

**ನವಕಾರೇಣ ವಿವೋಹೋ (೧) ಅನುಸರಣಂ ಸಾವಉ (೨) ವಯಾಇಂ ಇಮೇ ॥ (೩) ಜೋಗೋ ॥ (೪) ಚಿಯವಂದಣಗೋ ॥ (೫) ಯಚ್ಚರಖಾಣಂ ತು ವಿಹಿ ಪುಚ್ಛಂ ॥ (೬).**

ಈ ಮೊದಲಾಗಿ, ಶ್ರಾವಕರು ಮೊದಲು ದ್ವಾರದಲ್ಲಿ ನವಕಾರದ ಜಪಮಾಡಿ ಪ್ರವೇಶಿಸಬೇಕು. (೧)

ಎರಡನೆಯದಾಗಿ ನವಕಾರವನ್ನು ಜಪಿಸಿದನಂತರ, ‘ನಾನು ಶ್ರಾವಕನು’-ಎಂದು ಸ್ಮರಿಸಿಕೊಳ್ಳಬೇಕು. (೨).

ಮೂರನೆಯದಾಗಿ, ನಮ್ಮ ಅಣುವ್ರತ ಮೊದಲಾದುವು ಎಷ್ಟಿವೆ-ಎಂದು ಯೋಚಿಸಬೇಕು. (೩)

ನಾಲ್ಕನೆಯ ದ್ವಾರದಲ್ಲಿ, ಚತುರ್ವರ್ಗಗಳಲ್ಲಿ ಅಗ್ರಗಾಮಿಯಾದ ಮೋಕ್ಷವಿದೆ; ಅದಕ್ಕೆ ಕಾರಣವಾದ ಜ್ಞಾನ ಮೊದಲಾದುವೂ ಇವೆ. ಅದೇ ಯೋಗವಾಗಿದೆ. ಅದರ ಸಮಸ್ತ ಅನುಷ್ಠಾನವನ್ನೂ ನಿರ್ಮಲ ಹೃದಯನಾಗಿ ಮಾಡಲು ಆರು ಆವಶ್ಯಕ ಕಾರಣಗಳಿವೆ; ಉಪಚಾರದಿಂದ ಅದೂ ಕೂಡ ಯೋಗವೆನಿಸುತ್ತದೆ. ಆ ಯೋಗವನ್ನು ಬಣ್ಣಿಸುವೆವು. (೪).

ಐದನೆಯದಾಗಿ ಚೈತ್ಯವಂದನ, ಎಂದರೆ ಮೂರ್ತಿಗೆ ನಮಸ್ಕಾರವನ್ನು, ದ್ರವ್ಯಭಾವ ಪೂಜೆಯೆಂದು ಹೇಳುವೆವು. (೫).

ಆರನೆಯದಾಗಿ, ನವಕಾರಸೀಪ್ರಮುಖವಾದುದನ್ನು ಪ್ರತ್ಯಾಖ್ಯಾನದ ಮೂಲಕ ವಿಧಿಪೂರ್ವಕವಾಗಿ ಹೇಳುವೆನು-ಈ ಮೊದಲಾದುದಾಗಿದೆ. (೬).

ಮತ್ತು ಇದೇ ಗ್ರಂಥದಲ್ಲಿ ಮುಂದುಮುಂದಕ್ಕೆ ಬಹಳ ವಿಧಿಗಳನ್ನು ಬರೆದಿದ್ದಾರೆ. ಎಂದರೆ, ಸಂಜೆಯ ಊಟದ ಹೊತ್ತಿನಲ್ಲಿ ಜಿನಬಿಂಬವನ್ನು, ಎಂದರೆ-ತೀರ್ಥಂಕರರ ಮೂರ್ತಿಯನ್ನು ಪೂಜಿಸಬೇಕು ಮತ್ತು ದ್ವಾರವನ್ನು ಪೂಜಿಸಬೇಕು. ಮತ್ತು ದ್ವಾರಪೂಜೆಯಲ್ಲಿ ಭಾರಿ-ಭಾರಿ ಗೊಂದಲಗಳಿವೆ. ದೇವಾಲಯಗಳ ನಿರ್ಮಾಣದ ನಿಯಮಗಳಿವೆ. ಪ್ರಾಚೀನ ದೇವಾಲಯಗಳನ್ನು ಜೀರ್ಣೋದ್ಧಾರಮಾಡುವುದರಿಂದ ಹಾಗೂ ಸುಧಾರಣೆಮಾಡುವುದರಿಂದ ಮುಕ್ತಿಯಾಗಿ ಹೋಗುವುದು. ದೇವಾಲಯದಲ್ಲಿ ಹೀಗೆ ಹೋಗಿ ಕಳಿತುಕೊಳ್ಳಬೇಕು; ಬಹಳ ಭಾವನಾಪೂರ್ವಕವಾಗಿ, ಪ್ರೀತಿಯಿದ ಪೂಜಿಸಬೇಕು. **“ನಮೋಜಿನೇಂದ್ರೇಭ್ಯಃ”** - ಈ ಮೊದಲಾದ ಮಂತ್ರಗಳಿಂದ, ಸ್ನಾನ-ಮೊದಲಾದುದನ್ನು ಮಾಡಿಸಬೇಕು. ಮತ್ತು **“ಜಲಚಂದನಪುಷ್ಪಧೂಪದೀಪನೈಃ”** - ಈ ಮೊದಲಾದುದರಿಂದ ಗಂಧಮೊದಲಾದುವನ್ನು ಸಮರ್ಪಿಸಬೇಕು. “ರತ್ನಸಾರಭಾಗ”ದ ೧೨ನೆಯ ಪುಟದಲ್ಲಿ, “ಪೂಜಾರಿಯನ್ನು ರಾಜನಾಗಲಿ ಅಥವಾ ಪ್ರಜೆಯಾಗಲಿ, ಯಾರೂ ಕೂಡ ತಡೆಯಲಾರರು. ಇದು ಮೂರ್ತಿಪೂಜಾಫಲ”ವೆಂದು ಬರೆದಿದ್ದಾರೆ.

**ಸಮೀಕ್ಷಕ:-** ಈ ಮಾತುಗಳೆಲ್ಲವೂ ಕಪೋಲಕಲ್ಪಿತವಾಗಿವೆ. ಏಕೆಂದರೆ, ಬಹಳಮಂದಿ ಜೈನ ಪೂಜಾರಿಗಳನ್ನು ರಾಜರೇ ಮೊದಲಾದವರು ತಡೆಯುತ್ತಾರೆ. “ರತ್ನಸಾರಭಾಗ”ದ ಮೂರನೆಯ ಪುಟದಲ್ಲಿ, ‘ಮೂರ್ತಿಪೂಜೆಯಿಂದ ರೋಗಗಳು, ಪೀಡೆಗಳು ಮತ್ತು ಮಹಾದೋಷಗಳು ದೂರವಾಗುತ್ತವೆ. ಯಾವನೋ ಒಬ್ಬನು ೫ ಕವಡೆಗಳ ಬೆಲೆಯ ಪುಷ್ಪವನ್ನರ್ಪಿಸಿದನು. ಅವನು ೧೮ ದೇಶಗಳ ರಾಜ್ಯವನ್ನು ಪಡೆದುಕೊಂಡನು. ಅವನ ಹೆಸರು ಕುಮಾರಪಾಲನೆಂದಿತ್ತು’. ಎಂದು ಬರೆದಿದ್ದಾರೆ. ಇದೇ ಮೊದಲಾದ ಮಾತುಗಳೆಲ್ಲ ಸುಳ್ಳು ಮತ್ತು ಮೂರ್ಖರನ್ನು ಮುಗ್ಧರನ್ನಾಗಿ ಮಾಡುವಂತಹವಾಗಿವೆ. ಏಕೆಂದರೆ , ಅನೇಕ ಜೈನರು ಪೂಜೆ ಮಾಡುತ್ತಾ ಮಾಡುತ್ತಲೇ ರೋಗಿಗಳಾಗಿರುತ್ತಾರೆ. ಮತ್ತು ಒಂದು ಎಕರೆಯಗಲದ ರಾಜ್ಯವೂ ಕೂಡ ಶಿಲೆಯೇ ಮೊದಲಾದುದರ ಮೂರ್ತಿಯ ಪೂಜೆಯಿಂದ ಸಿಕ್ಕುವುದಿಲ್ಲ ಮತ್ತು ಐದು ಕವಡೆಯ ಬೆಲೆಯ ಹೂವನ್ನು ಅರ್ಪಿಸುವುದರಿಂದ ರಾಜ್ಯ ಸಿಕ್ಕುವುದಾದರೆ, ಐದೈದು ಕವಡೆಯ ಹೂವನ್ನು ಸಮರ್ಪಿಸಿ, ಸಮಸ್ತ ಭೂಮಂಡಲದ ರಾಜ್ಯವನ್ನೂ ಸಂಪಾದಿಸಿಕೊಳ್ಳುವುದಿಲ್ಲವೇಕೆ? ಮತ್ತು ರಾಜದಂಡವನ್ನು ಅನುಭವಿಸುತ್ತೀರಿ ಏಕೆ? ಮತ್ತು ಮೂರ್ತಿಪೂಜೆಯನ್ನು ಮಾಡಿ ಭವಸಾಗರದಿಂದ ಪಾರಾಗಿಹೋಗುವಿರಾದರೆ, ಜ್ಞಾನ, ಸಮ್ಯಗ್ದರ್ಶನ ಮತ್ತು ಚಾರಿತ್ರವನ್ನು ಆಶ್ರಯಿಸುತ್ತೀರಿ ಏಕೆ? ‘ರತ್ನಸಾರಭಾಗ’ದ ೧೩ನೆಯ ಪುಟದಲ್ಲಿ - “ಗೌತಮನ ಹೆಬ್ಬೆರಳಿನಿಂದ ಅಮೃತವನ್ನೂ, ಮತ್ತು ಅವನ ಸ್ಮರಣದಿಂದ ಮನೋವಾಂಛಿತವಾದ ಫಲವನ್ನೂ ಪಡೆದುಕೊಳ್ಳುತ್ತಾನೆ”. ಎಂದು ಬರೆದಿದೆ.

**ಸಮೀಕ್ಷಕ:-** ಹೀಗಿರುವುದಾದರೆ, ಜೈನರೆಲ್ಲರೂ ಅಮರರಾಗಿ ಹೋಗಬೇಕು; ಹಾಗೇನೂ ಆಗುವುದಿಲ್ಲ! ಇದರಿಂದ, ಇದು ಕೇವಲ ಮೂರ್ಖರನ್ನು ವಂಚಿಸುವ ಇವರ ಮಾತು; ಎರಡನೆಯ ಯಾವುದೇ ತತ್ತ್ವವೂ ಇದರಲ್ಲಿಲ್ಲ-ಎಂದು ಸಿದ್ಧವಾಗುತ್ತದೆ. ಇವರ ಪೂಜಾಪ್ರಕರಣದ ಶ್ಲೋಕ “ರತ್ನಸಾರಭಾಗ”ದ ೫೨ನೆಯ ಪುಟದಲ್ಲಿದೆ:-

**ಜಲಚಂದನಧೂಪನೈರಥ ದೀಪಾಕ್ಷತಕೈ ರ್ನೈ ವೇದ್ಯ ವಸ್ತ್ರೈ ಃ ।**

**ಉಪಚಾರವರೈರ್ಜಿನೇಂದ್ರಾನ್ ರುಚಿರೈ ರದ್ಯ ಯಜಾಮಹೇ ॥**

"ನಾವು ಜಲ, ಚಂದನ, ಅಕ್ಷತ, ಪುಷ್ಪ, ಧೂಪ, ದೀಪ, ನೈವೇದ್ಯ, ವಸ್ತ್ರ ಮತ್ತು ಅತಿಶ್ರೇಷ್ಠ ಉಪಚಾರಗಳಿಂದ ಜಿನೇಂದ್ರರ, ಎಂದರೆ ತೀರ್ಥಂಕರರ ಪೂಜೆಯನ್ನು ಮಾಡುತ್ತೇವೆ".- ಎಂದು ಅರ್ಥ. ಇದೇ ಕಾರಣದಿಂದ "ಮೂರ್ತಿಪೂಜೆ ಜೈನರಿಂದ ಪ್ರಚಲಿತವಾಗಿದೆ"- ಎಂದು ಹೇಳುತ್ತೇವೆ. "ವಿವೇಕಸಾರ"ದ ೨೧ನೆಯ ಪುಟದಲ್ಲಿ "ಜಿನಮಂದಿರದಲ್ಲಿ ಮೋಹ ಬಳಿಸಾರದು ಮತ್ತು (ಮಂದಿರ ಅಥವಾ ಮೂರ್ತಿಪೂಜೆ) ಭವಸಾಗರವನ್ನು ದಾಟಿಸುವಂತಹುದಾಗಿದೆ".- ಎಂದೂ, "ವಿವೇಕಸಾರ"ದ ೫೧ನೆ ಮತ್ತು ೫೨ನೆಯ ಪುಟಗಳಲ್ಲಿ "ಮೂರ್ತಿಪೂಜೆಯಿಂದ ಮುಕ್ತಿ ಸಿಕ್ಕುತ್ತದೆ ಮತ್ತು ಜಿನಮಂದಿರದ ಒಳಗೆ ಹೋಗುವುದರಿಂದ ಸದ್ಗುಣಗಳು ಮೂಡುತ್ತವೆ. ಯಾವನು ಜಲ, ಚಂದನ-ಮೊದಲಾದುದರಿಂದ ತೀರ್ಥಂಕರರ ಪೂಜೆಯನ್ನು ಮಾಡುವನೋ, ಅವನು ನರಕದಿಂದ ಹೊರಬಂದು ಸ್ವರ್ಗಕ್ಕೆ ಹೋಗುತ್ತಾನೆ". ಎಂದೂ, "ವಿವೇಕಸಾರ"ದ ೫೫ನೆಯ ಪುಟದಲ್ಲಿ 'ಜಿನಮಂದಿರದಲ್ಲಿ ಋಷಭದೇವ ಮೊದಲಾದವರ ಮೂರ್ತಿಗಳನ್ನು ಪೂಜಿಸುವುದರಿಂದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಿದ್ಧಿಯಾಗುತ್ತದೆ".-ಎಂದೂ, "ವಿವೇಕಸಾರ"ದ ೬೧ನೆಯ ಪುಟದಲ್ಲಿ "ಜಿನಮೂರ್ತಿಗಳ ಪೂಜೆ ಮಾಡಿದರೆ ಸಮಸ್ತ ಜಗತ್ತಿನ ಕ್ಲೇಶಗಳೂ ಬಿಟ್ಟುಹೋಗುವವು".- ಎಂದೂ ಬರೆದಿದೆ.

**ಸಮೀಕ್ಷಕ:-** ಈಗ ಇವರ ಅವಿದ್ಯಾಯುಕ್ತವೂ ಅಸಂಭವವೂ ಆದ ಮಾತುಗಳನ್ನು ನೋಡಿರಿ. ಈ ರೀತಿಯಿಂದ ಪಾಪಗಳೇ ಮೊದಲಾದ ದುಷ್ಕರ್ಮಗಳು ಬಿಟ್ಟುಹೋಗುವವಾದರೆ, ಮೋಹ ಬಾರದಿರುವುದಾದರೆ, ಭವಸಾಗರದಿಂದ ದಾಟಿ ಹೋಗುವುದಾದರೆ, ಸದ್ಗುಣಗಳು ಬರುವವಾದರೆ, ನರಕವನ್ನು ಬಿಟ್ಟು ಸ್ವರ್ಗಕ್ಕೆ ಹೋಗುವರಾದರೆ, ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು ಪಡೆದು ಕೊಳ್ಳುವರಾದರೆ, ಮತ್ತು ಸಮಸ್ತಕ್ಲೇಶಗಳೂ ತೀರಿಹೋಗುವವಾದರೆ, ಸಮಸ್ತಜೈನರೂ ಸುಖಿಗಳೂ ಮತ್ತು ಸಕಲಪದಾರ್ಥಗಳ ಸಿದ್ಧಿಯನ್ನು ಪಡೆದವರೂ ಆಗುವುದಿಲ್ಲವೇತಕ್ಕೆ? ಇದೇ "ವಿವೇಕಸಾರ"ದ ಮೂರನೆಯ ಪುಟದಲ್ಲಿ, "ಯಾರು ಜಿನಮೂರ್ತಿಯ ಸ್ಥಾಪನೆಯನ್ನು ಮಾಡಿದ್ದಾರೋ, ಅವರು ತಮ್ಮ ಹಾಗೂ ತಮ್ಮ ಕುಟುಂಬದ ಜೀವಿಕಾವ್ಯವಸ್ಥೆ ಮಾಡಿಕೊಂಡಿದ್ದಾರೆ". ಎಂದೂ, "ವಿವೇಕಸಾರ"ದ ೨೨೫ನೆಯ ಪುಟದಲ್ಲಿ, "ಶಿವ, ವಿಷ್ಣು ಮೊದಲಾದವರ ಮೂರ್ತಿಗಳ ಪೂಜೆಯನ್ನು ಮಾಡುವುದು ಬಹಳ ಕೆಟ್ಟದಾಗಿದೆ; ಎಂದರೆ-ನರಕದ ಸಾಧನವಾಗಿದೆ".- ಎಂದೂ ಬರೆದಿದೆ.

**ಸಮೀಕ್ಷಕ:-** ಬಾಪು! ಶಿವನೇ ಮೊದಲಾದವರ ಮೂರ್ತಿಗಳು ನರಕದ ಸಾಧನಗಳಾಗಿದ್ದರೆ, ಜೈನರ ಮೂರ್ತಿಗಳು ಹಾಗೆ ಅಲ್ಲವೇತಕ್ಕೆ? "ನಮ್ಮ ಮೂರ್ತಿಗಳು ತ್ಯಾಗಿಗಳೂ, ಶಾಂತವೂ ಮತ್ತು ಶುಭಮುದ್ರಾಯುಕ್ತವೂ ಆಗಿರುವುದರಿಂದ ಒಳ್ಳೆಯವು; ಶಿವ-ಮೊದಲಾದವರ ಮೂರ್ತಿಗಳು ಹಾಗೆಯಿಲ್ಲ; ಆದುದರಿಂದ ಕೆಟ್ಟವು;" - ಎಂದು ಹೇಳುವಿರಾದರೆ, "ನಿಮ್ಮ ಮೂರ್ತಿಗಳಾದರೋ ಲಕ್ಷಾಂತರ ರೂಪಾಯಿಗಳ ಮಂದಿರಗಳಲ್ಲಿರುತ್ತವೆ. ಮತ್ತು ಚಂದನ, ಕೇಸರಿ ಮೊದಲಾದುವು ಅರ್ಪಿತವಾಗುತ್ತವೆ. ಮತ್ತೆ, ತ್ಯಾಗಿಗಳೆಂತು? ಮತ್ತು ಶಿವ-ಮೊದಲಾದವರ ಮೂರ್ತಿಗಳಾದರೋ, ನೆರಳೂ ಕೂಡ ಇಲ್ಲದೆ ಇರುತ್ತವೆ; ಅವು ತ್ಯಾಗಿಗಳಲ್ಲವೇಕೆ? ಮತ್ತು ಶಾಂತವೆನ್ನುವಿರಾದರೆ, ಜಡಪದಾರ್ಥಗಳೆಲ್ಲವೂ ನಿಶ್ಚಲವಾಗಿರುವುದರಿಂದ ಶಾಂತವೇ ಆಗಿರುತ್ತವೆ"- ಎಂದು ಇವರಿಗೆ ಹೇಳಬೇಕು. ಎಲ್ಲ ಮತಗಳ ಮೂರ್ತಿಪೂಜೆಯೂ ವ್ಯರ್ಥವೇ ಆಗಿರುತ್ತದೆ.

**ಪ್ರಶ್ನೆ:-** ನಮ್ಮ ಮೂರ್ತಿಗಳೂ ವಸ್ತ್ರ-ಒಡವೆ ಮೊದಲಾದುವನ್ನು ಧರಿಸುವುದಿಲ್ಲ. ಆದುದರಿಂದ ಒಳ್ಳೆಯವು.

**ಉತ್ತರ:-** ಎಲ್ಲರ ಎದುರಿಗೂ ಬೆತ್ತಲೆಯಾದ ಮೂರ್ತಿಗಳ ಇರುವಿಕೆ ಮತ್ತು ಇಡುವಿಕೆ ಪಶುಗಳದರಂತಹ ಲೀಲೆಯಾಗಿದೆ.

**ಪ್ರಶ್ನೆ:-** ಹೇಗೆ ಸ್ತ್ರೀಯ ಚಿತ್ರವನ್ನು ಅಥವಾ ಮೂರ್ತಿಯನ್ನು ನೋಡುವುದರಿಂದ ಕಾಮೋತ್ಪತ್ತಿಯಾಗುತ್ತದೋ, ಹಾಗೆ ಸಾಧುಗಳ ಮತ್ತು ಯೋಗಿಗಳ ಮೂರ್ತಿಯನ್ನು ನೋಡುವುದರಿಂದ ಶುಭಗುಣಗಳು ಪ್ರಾಪ್ತವಾಗುತ್ತವೆ.

**ಉತ್ತರ:-** ಶಿಲಾಮೂರ್ತಿಗಳನ್ನು ನೋಡುವುದರಿಂದ ಶುಭಪರಿಣಾಮವಾಗುವುದೆಂದು ಅಂಗೀಕರಿಸುವಿರಾದರೆ, ಅವುಗಳ ಜಡತ್ವ ಮೊದಲಾದ ಗುಣಗಳೂ ಕೂಡ ನಿಮ್ಮಲ್ಲಿ ಪ್ರವೇಶಿಸುವವು. ಜಡಬುದ್ಧಿಗಳಾಗುವಿರಾದರೆ, ಸರ್ವಥಾ ನಾಶವಾಗಿ ಹೋಗುವಿರಿ.[೫೬] ಬೇರೆ ಯಾವ ಉತ್ತಮ ವಿದ್ವಾಂಸರು ಇರುತ್ತಾರೋ, ಅವರ ಸಂಗದಿಂದ, ಸೇವೆಯಿಂದ

೫೬. ಭಾರತೀಯರು ಸಹಿಸಿಕೊಂಡ ಅಪಮಾನಕರವೂ, ಲಜ್ಜಾಸ್ಪದವೂ ಆದ ಮುಸಲ್ಮಾನ ರಾಜ್ಯಾಡಳಿತದ ಕಾರಣವಾದ ಮೂರ್ತಿಪೂಜೆಯ ಇತಿಹಾಸದ ಆಧಾರದ ಮೇಲೆ ಮಹರ್ಷಿ ದಯಾನಂದರು ಭಾರತೀಯರಿಗೆ ಭವಿಷ್ಯತ್ತಿನ ಮನ್ನೆಚ್ಚರಿಕೆಯನ್ನು ಕೊಡುತ್ತಿದ್ದಾರೆ.

ಹೊರಗಾಗುವುದರಿಂದ ಮೌಢ್ಯವೂ ಹೆಚ್ಚಾಗುವುದು. ಮತ್ತು ೧೧ನೆಯ ಸಮುಲ್ಲಾಸದಲ್ಲಿ ಯಾವ ಯಾವ ದೋಷಗಳನ್ನು ಬರೆದಿದ್ದೇವೋ, ಅವೆಲ್ಲವೂ ಶಿಲೆಯೇ ಮೊದಲಾದುವುಗಳ ಮೂರ್ತಿಗಳ ಪೂಜೆಯನ್ನು ಮಾಡುವವರಿಗೆ ತಗಲುತ್ತವೆ. ಆದುದರಿಂದ ಹೇಗೆ ಜೈನರು ಮೂರ್ತಿ ಪೂಜೆಯಲ್ಲಿ ಸುಳ್ಳು ಸುಳ್ಳೇ ಕೋಲಾಹಲವನ್ನೆಬ್ಬಿಸಿದ್ದಾರೋ, ಹಾಗೆ ಇವರ ಮಂತ್ರಗಳಲ್ಲಿಯೂ ಬಹಳ ಅಸಂಭವವಾದ ಮಾತುಗಳನ್ನು ಬರೆದಿದ್ದಾರೆ. ಇದು ಇವರ ಮಂತ್ರವಾಗಿದೆ. "ರತ್ನಸಾರಭಾಗ"ದ ಒಂದನೆಯ ಪುಟದಲ್ಲಿ:

**ನಮೋ ಅರಿಹಂತಾಣಂ ನಮೋ ಸಿದ್ಧಾಣಂ ನಮೋ ಆಯರಿಯಾಣಂ ನಮೋ ಉವಜ್ಝಾಯಾಣಂ ನಮೋ ಲೋಯೇ ಸಬ್ಬ ಸಾಹೂಣಂ ಏಸೋ ಪಂಚ ನಮುಕ್ಕಾರೋ ಸಬ್ಬ ಪಾವಪ್ಪಣಾಸಣೋ ಮಂಗಲಾಚರಣಂ ಚ ಸಬ್ಬೇ ಸಿಪಢಮಂ ಹವಇ ಮಂಗಲಂ** ॥ ೧೧ ॥

ಈ ಮಂತ್ರದ ಮಹಾತ್ಮ್ಯವನ್ನು ಅತಿಶಯವಾಗಿ ಬರೆದಿದ್ದಾರೆ. ಮತ್ತು ಇದು ಸಮಸ್ತ ಜೈನರ ಗುರುಮಂತ್ರವಾಗಿದೆ. ತಂತ್ರ, ಪುರಾಣಗಳು, ಹೊಗಳುಭಟ್ಟರನ್ನೂ ಕೂಡ ಪುರಾಜಿತರನ್ನಾಗಿ ಮಾಡುವಷ್ಟು ಇದರ ಮಹಿಮೆಯನ್ನು ಸ್ಥಾಪಿಸಿದ್ದಾರೆ. "ಶ್ರಾದ್ಧದಿನಕೃತ್ಯ"ದ ಮೂರನೆಯ ಪುಟದಲ್ಲಿ:-

**ನಮುಕ್ಕಾರ ತಉಪಢೇ (೯). ಜಉಕಬ್ಬಂ । ಮಂತಾಣಮಂತೋ ಪರಮೋ ಇಮುತ್ತಿ ಧೇಯಾಣಧೇಯಂ ಪರಮಂ ಇಮುತ್ತಿ । ತತ್ತಾಣತತ್ತಂ ಪರಮಂ ಪವಿತ್ತಂ ಸಂಸಾರ ಸತ್ತಾಣ ದುಹಾಇಯಾಣಂ (೧೦). ತಾಣಂ ಅನ್ನಂತು ನೋ ಅತ್ಥಿ ಜೀವಾಣಂ ಭವಸಾಯರೇ । ಬುಡ್ಡಂ ತಾಣಂ ಇಮಂ ಮುತ್ತುಂ ನಮುಕ್ಕಾರಂ ಸುಪೋಯಯಂ (೧೧). ಕಬ್ಬಂ ಅಣೇ ಗಜಂ ಭಂ ತರಸಂ ಚಿಶ್ರಾಣಂ । ದುಹಾಣಂ ಸಾರೀ ರಿಅಮಾಣುಸಾಣು ಸಾಣಂ । ಕತ್ತೋಯ ಭವ್ವಾಣಭಿವಜ್ಜನಾಸೋ ನ ಜಾವಪತ್ತೋ ನವಕಾರ ಮಂತೋ (೧೨).**

ಈ ನವಕಾರ ಮಂತ್ರವು ಪವಿತ್ರ ಹಾಗೂ ಪರಮ ಮಂತ್ರವಾಗಿದೆ. ಇದು ಧ್ಯಾನಕ್ಕೆ ಯೋಗ್ಯವಾದುದರಲ್ಲಿ ಪರಮಧ್ಯೇಯವಾಗಿದೆ. ತತ್ತ್ವಗಳಲ್ಲಿ ಪರಮತತ್ತ್ವವಾಗಿದೆ; ದುಃಖಗಳಿಂದ ಪೀಡಿತರಾದ ಸಂಸಾರೀ ಜೀವರಿಗೆ ನವಕಾರ ಮಂತ್ರವು. ಸಮುದ್ರದಿಂದ ಕಡೆಹಾಯಿಸುವ ನಾವೆಯಿರುವಂತಿದೆ. (೧೦). ಮತ್ತು ಈ ನವಕಾರ ಮಂತ್ರವು ನೌಕೆಗೆ ಸಮಾನವಾಗಿದೆ. ಯಾರು ಇದನ್ನು ವರ್ಜಿಸಿಬಿಡುತ್ತಾರೋ, ಅವರು ಭವಸಾಗರದಲ್ಲಿ ಮುಳುಗುತ್ತಾರೆ. ಮತ್ತು ಯಾರು ಇದನ್ನು ಗ್ರಹಿಸುತ್ತಾರೋ, ಅವರು ದುಃಖಗಳನ್ನು ದಾಟಿ ಹೋಗುತ್ತಾರೆ. ಈ ಮಂತ್ರದ ಹೊರತು ಬೇರೆ ಯಾವ ಮಂತ್ರವೂ ಜೀವರನ್ನು ದುಃಖಗಳಿಂದ ದೂರವಿಡುವಂತಹುದೂ, ಸರ್ವಪಾಪನಾಶಕವೂ, ಮುಕ್ತಿಕಾರಕವೂ ಆಗಿಲ್ಲ. (೧೧) ಅನೇಕ ಜನ್ಮಾಂತರಗಳಿಂದ ಉತ್ಪನ್ನವಾದ ಶರೀರಕ್ಕೆ ಸಂಬಂಧಪಟ್ಟ ದುಃಖಗಳಿಂದ ಪಾರುಮಾಡುವ, ಭವ್ಯ ಜೀವರನ್ನು ಭವಸಾಗರದಿಂದ ಕಡೆಹಾಯಿಸುವ ಮಂತ್ರ ಇದೇ ಆಗಿದೆ. ಎಲ್ಲಿಯವರೆಗೆ ನವಕಾರ ಮಂತ್ರವನ್ನು ಪಡೆದುಕೊಳ್ಳಲಿಲ್ಲವೋ, ಅಲ್ಲಿಯವರೆಗೆ ಜೀವನು ಭವಸಾಗರವನ್ನು ದಾಟಲಾರನು. ಈ ಅರ್ಥವನ್ನು ಸೂತ್ರದಲ್ಲಿ ಹೇಳಿದ್ದಾರೆ ಮತ್ತು ಅಗ್ನಿಪ್ರಮುಖವಾದ ಅಷ್ಟಮಹಾ ಭಯಗಳಲ್ಲಿ ಸಹಾಯಕವಾಗುವಂತಹದು ಈ ಒಂದು ನವಕಾರ ಮಂತ್ರವನ್ನುಳಿದರೆ ಎರಡನೆಯದಾವುದೂ ಇಲ್ಲ. (೧೧) ಮಹಾರತ್ನವಾದ ವೈಡೂರ್ಯವೆಂಬ ಮಣಿಯನ್ನು ಗ್ರಹಿಸಲು ಬರುವಂತೆ, ಅಥವಾ ಶತ್ರುಭಯದಲ್ಲಿ ಅಮೋಘವಾದ ಶಸ್ತ್ರವನ್ನು ಗ್ರಹಿಸಲು ಬರುವಂತೆ ಶ್ರುತಕೇವಲಿಯನ್ನು ಗ್ರಹಿಸಬೇಕು. ಮತ್ತು ಸಮಸ್ತ ದ್ವಾದಶಾಂಗಿಯ ರಹಸ್ಯ ನವಕಾರ ಮಂತ್ರವಾಗಿದೆ.

ಈ ಮಂತ್ರದ ಅರ್ಥ ಇದಾಗಿದೆ:- (ನಮೋ ಅರಿಹಂತಾಣ) ಅರಿಹಂತರಾದ ಸರ್ವ ತೀರ್ಥಂಕರರಿಗೂ ನಮಸ್ಕಾರ. (ನಮೋ ಸಿದ್ಧಾಣಂ) ಜೈನಮತದ ಸಕಲ ಸಿದ್ಧರಿಗೂ ನಮಸ್ಕಾರ. (ನಮೋ ಅಯರಿಯಾಣಂ) ಜೈನಮತದ ಸಮಸ್ತ ಆಚಾರ್ಯರಿಗೂ ನಮಸ್ಕಾರ. (ನಮೋ ಉವಜ್ಝಾಯಾಣಂ) ಜೈನಮತದ ಸಕಲ ಉಪಾಧ್ಯಾಯರಿಗೂ ನಮಸ್ಕಾರ. (ನಮೋ ಲೋಏ ಸುಬ್ಬ ಸಾಹೂಣಂ) ಜೈನಮತದ ಎಷ್ಟು ಜನ ಸಾಧುಗಳು ಈ ಲೋಕದಲ್ಲಿದ್ದಾರೋ, ಅವರೆಲ್ಲರಿಗೂ ನಮಸ್ಕಾರ. ಜೈನ-ಎಂಬ ಪದ ಮಂತ್ರದಲ್ಲಿ ಇಲ್ಲವಾದರೂ, ಜೈನರ ಅನೇಕ ಗ್ರಂಥಗಳಲ್ಲಿ ಜೈನಮತವನ್ನುಳಿದ ಅನ್ಯರಾರಿಗೂ ನಮಸ್ಕಾರವನ್ನೂ ಕೂಡ ಮಾಡಬಾರದೆಂದು ಬರೆದಿದ್ದಾರೆ; ಆದುದರಿಂದು ಈ ಅರ್ಥವೇ ಸರಿಯಾಗಿದೆ. "ತತ್ತ್ವವಿವೇಕ"ದ ೧೪೭ನೆಯ ಪುಟದಲ್ಲಿ, "ಯಾವ ಮಾನವನು ಮರ (ಕಾಷ್ಠ) ಕಲ್ಲುಗಳನ್ನು ಅವುಗಳಲ್ಲಿ 'ದೇವಬುದ್ಧಿ'ಯನ್ನಿಟ್ಟುಕೊಂಡು ಪೂಜಿಸುತ್ತಾನೋ, ಅವನು ಒಳ್ಳೆಯ ಫಲಗಳನ್ನು ಪಡೆದುಕೊಳ್ಳುತ್ತಾನೆ".ಎಂದು ಬರೆದಿದ್ದಾರೆ.

**ಸಮೀಕ್ಷಕ :–** ಹೀಗೆ ಆಗುವುದಾದರೆ, ಎಲ್ಲರೂ ಕೂಡ ದರ್ಶನಮಾಡಿ, ಸುಖವೆಂಬ ಫಲವನ್ನು ಪಡೆದುಕೊಳ್ಳುವುದಿಲ್ಲವೇಕೆ? "ರತ್ನಸಾರಭಾಗ"ದ ಹತ್ತನೆಯ ಪುಟದಲ್ಲಿ, "ಪಾರ್ಶ್ವನಾಥನ ಮೂರ್ತಿಯ ದರ್ಶನದಿಂದ ಪಾಪಗಳು ನಾಶ ಹೊಂದುತ್ತವೆ". ಎಂದು ಬರೆದಿದ್ದಾರೆ. "ಕಲ್ಪಭಾಷ್ಯ"ದ ೫೧ನೆಯ ಪುಟದಲ್ಲಿ "ಒಂದೂಕಾಲು ಲಕ್ಷ ದೇವಾಲಯಗಳ ಜೀರ್ಣೋದ್ಧಾರವನ್ನು ಮಾಡಿದನು". ಎಂದು ಬರೆದಿದ್ದಾರೆ. ಈ ಮೊದಲಾಗಿ ಮೂರ್ತಿ ಪೂಜೆಯ ವಿಷಯದಲ್ಲಿ ಇವರ ಲೇಖನ ಬೃಹದ್ರೂಪವಾಗಿದೆ. ಈ ಕಾರಣದಿಂದಲೇ ಮೂರ್ತಿ ಪೂಜೆಯ ಮೂಲಕಾರಣ ಜೈನಮತವೆಂದು ತಿಳಿಯಲ್ಪಡುತ್ತದೆ.

ಈಗ ಈ ಜೈನರ ಸಾಧುಗಳ ಲೀಲೆಯನ್ನು ನೋಡಿರಿ, "ವಿವೇಕಸಾರ"ದ ೨೨೮ನೆಯ ಪುಟದಲ್ಲಿ "ಜೈನಮತದ ಸಾಧು ಒಬ್ಬನು ಕೋಶಾ–ಎಂಬ ವೇಶ್ಯೆಯೊಂದಿಗೆ ಭೋಗವನ್ನು ಅನುಭವಿಸಿ, ಆ ಮೇಲೆ ತ್ಯಾಗಿಯಾಗಿ, ಸ್ವರ್ಗಲೋಕಕ್ಕೆ ತೆರಳಿದನು"–ಎಂದು ಬರೆದಿದೆ. "ವಿವೇಕಸಾರ"ದ ೧೦ನೆಯ ಪುಟದಲ್ಲಿ, "ಅರ್ಣಕಮುನಿಯು ಚಾರಿತ್ರಭ್ರಷ್ಟನಾಗಿ, ಅನೇಕ ವರ್ಷಗಳವರೆಗೆ ದತ್ತಸೇಠನ ಮನೆಯಲ್ಲಿ ವಿಷಯೋಪಭೋಗವನ್ನು ಮಾಡಿ, ಆ ಮೇಲೆ ದೇವಲೋಕಕ್ಕೆ ಹೋದನು. ಶ್ರೀಕೃಷ್ಣನ[೫೭] ಪುತ್ರನಾದ ಢಂಢಣ ಮುನಿಯನ್ನು ಸ್ಥಾಲಿಯನು[೫೮] ಎತ್ತಿಕೊಂಡು ಹೊದನು. ಆ ಮೇಲೆ ದೇವತೆಯಾದನು". ಎಂದೂ, "ವಿವೇಕಸಾರ"ದ ೧೫೬ನೆಯ ಪುಟದಲ್ಲಿ, ಜೈನಮತದ ಸಾಧುವು ಲಿಂಗಧಾರಿಯಾಗಿ, ಎಂದರೆ ಕೇವಲ ವೇಷಧಾರಿಯಾಗಿದ್ದರೂ, ಅವನ ಸತ್ಕಾರವನ್ನು ಶ್ರಾವಕಜನರು ಮಾಡಬೇಕು. ಸಾಧುಗಳು ಶುದ್ಧಚಾರಿತ್ರರಾದರೂ ಸರಿಯೇ; ಅಶುದ್ಧಚಾರಿತ್ರರಾಗಿರಲಿ; ಎಲ್ಲರೂ ಪೂಜನೀಯರೇ ಆಗಿರುತ್ತಾರೆ".–ಎಂದೂ, "ವಿವೇಕಸಾರ"ದ ೧೬೮ನೆಯ ಪುಟದಲ್ಲಿ, "ಜೈನಮತದ ಸಾಧು ಚಾರಿತ್ರಹೀನನೇ ಆಗಿದ್ದರೂ, ಕೂಡ, ಅನ್ಯಮತದ ಸಾಧುಗಳಿಗಿಂತ ಶ್ರೇಷ್ಠನಾಗಿರುತ್ತಾನೆ".– ಎಂದೂ "ವಿವೇಕಸಾರ"ದ ೨೭೧ನೆಯ ಪುಟದಲ್ಲಿ – "ಶ್ರಾವಕ ಜನರು ಜೈನಮತದ ಸಾಧುಗಳು ಚಾರಿತ್ರರಹಿತರಾದ ಭ್ರಷ್ಟಾಚಾರಿಗಳಾಗಿರುವುದನ್ನು ನೋಡಿದರೂ ಕೂಡ, ಅವರ ಸೇವೆಯನ್ನು ಮಾಡಬೇಕು".– ಎಂದೂ, "ವಿವೇಕಸಾರ"ದ ಇನ್ನೂರ ಹದಿನಾರನೆಯ ಪುಟದಲ್ಲಿ "ಒಬ್ಬ ಕಳ್ಳನು ಐದು ಹಿಡಿ ಕೂದಲನ್ನು ಕಿತ್ತುಹಾಕಿಕೊಂಡು ಚಾರಿತ್ರವನ್ನು ಗ್ರಹಿಸಿದನು; ಬಹಳ ಕಷ್ಟಪಟ್ಟನು ಹಾಗೂ ಪಶ್ಚಾತ್ತಾಪಪಟ್ಟನು; ಆರನೆಯ ತಿಂಗಳಿನಲ್ಲಿ ಕೇವಲಜ್ಞಾನ ಪಡೆದು, ಸಿದ್ಧನಾಗಿ ಹೋದನು". ಎಂದೂ ಬರೆದಿದ್ದಾರೆ.

**ಸಮೀಕ್ಷಕ:–** ಈಗ ನೋಡಿರಿ ಈ ಸಾಧುಗಳ ಮತ್ತು ಗೃಹಸ್ಥರ ಲೀಲೆಯನ್ನು. ಇವರ ಮತದಲ್ಲಿ ಬಹಳ ದುಷ್ಕರ್ಮವನ್ನು ಮಾಡುವ ಸಾಧುವೂ ಕೂಡ ಸದ್ಗತಿಯನ್ನು ಹೊಂದಿದನು ಮತ್ತು "ವಿವೇಕಸಾರ"ದ ೧೦೬ನೆಯ ಪುಟದಲ್ಲಿ "ಶ್ರೀಕೃಷ್ಣನು ಮೂರನೆಯ ನರಕಕ್ಕೆ ಹೋದನು" ಎಂದೂ ಬರೆದಿದ್ದಾರೆ. "ವಿವೇಕಸಾರ"ದ ೧೪೫ನೆಯ ಪುಟದಲ್ಲಿ "ಧನ್ವಂತರಿಯು ನರಕಕ್ಕೆ ಹೋದನು".–ಎಂದು ಬರೆದಿದ್ದಾರೆ. "ವಿವೇಕಸಾರ"ದ ೪೮ನೆಯ ಪುಟದಲ್ಲಿ "ಜೋಗಿಗಳೂ, ಜಂಗಮರೂ, ಕಾಜಿಗಳೂ, ಮುಲ್ಲಾಗಳೂ ಅದೆಷ್ಟೋ ಜನ ಅಜ್ಞಾನದಿಂದ ತಪಸ್ಸನ್ನೂ, ಕಷ್ಟವನ್ನೂ ಮಾಡಿದರೂ ಕೂಡ ದುರ್ಗತಿಯನ್ನೇ ಹೊಂದುತ್ತಾರೆ". ಎಂದೂ, "ರತ್ನಸಾರ ಭಾಗ"ದ ೧೭೧ನೆಯ ಪುಟದಲ್ಲಿ "ನವ ವಾಸುದೇವರು, ಎಂದರೆ – ತ್ರಿಪೃಷ್ಠ ವಾಸುದೇವ, ದ್ವಿಪೃಷ್ಠ ವಾಸುದೇವ, ಸ್ವಯಂಭೂ ವಾಸುದೇವ, ಪುರುಷೋತ್ತಮ ವಾಸುದೇವ, ಸಿಂಹಪುರುಷ ವಾಸುದೇವ, ಪುರುಷ ಪುಂಡರೀಕ ವಾಸುದೇವ, ದತ್ತ ವಾಸುದೇವ ಮತ್ತು ಲಕ್ಷ್ಮಣ ವಾಸುದೇವ, ಶ್ರೀಕೃಷ್ಣ ವಾಸುದೇವ–ಈ ಎಲ್ಲರೂ ಹನ್ನೊಂದನೆಯ, ಹನ್ನೆರಡನೆಯ, ಹದಿನಾಲ್ಕನೆಯ, ಹದಿನೈದನೆಯ, ಹದಿನೆಂಟನೆಯ, ಇಪ್ಪತ್ತನೆಯ ಮತ್ತು ಇಪ್ಪತ್ತೆರಡನೆಯ ತೀರ್ಥಂಕರರ ಕಾಲದಲ್ಲಿ ನರಕಕ್ಕೆ ಹೋದರು ಮತ್ತು ನವಪ್ರತಿವಾಸುದೇವರು, ಎಂದರೆ ಅಶ್ವಗ್ರೀವ ಪ್ರತಿವಾಸುದೇವ, ತಾರಕಪ್ರತಿವಾಸುದೇವ, ಮೋದಕಪ್ರತಿವಾಸುದೇವ, ಮಧುಪ್ರತಿವಾಸುದೇವ, ನಿಶುಂಭಪ್ರತಿವಾಸುದೇವ, ಬಲೀಪ್ರತಿವಾಸುದೇವ, ಪ್ರಹ್ಲಾದಪ್ರತಿ ವಾಸುದೇವ, ರಾವಣಪ್ರತಿವಾಸುದೇವ ಮತ್ತು ಜರಾಸಿಂಧುಪ್ರತಿವಾಸುದೇವ – ಇವರೂ ಕೂಡ ಎಲ್ಲರೂ ನರಕಕ್ಕೆ[೫೯] ಹೋದರು". ಎಂದೂ ಮತ್ತು 'ಕಲ್ಪಭಾಷ್ಯ'ದಲ್ಲಿ 'ಋಷಭದೇವ'ನಿಂದ ಹಿಡಿದು ಮಹಾವೀರನ ಪರ್ಯಂತ ೨೪ ಜನ ತೀರ್ಥಂಕರರು ಎಲ್ಲರೂ ಮೋಕ್ಷವನ್ನು ಪಡೆದುಕೊಂಡರು'.– ಎಂದೂ ಬರೆದಿದ್ದಾರೆ.

---

೫೭. ಈ ಢಂಡಣಮುನಿ ಕೃಷ್ಣನೆಂಬ ಬೇರಾವನೋ ಪುರುಷರ ಮಗನಾಗಿರಬಹುದು. ಯೋಗೇಶ್ವರ ಕೃಷ್ಣನ ಪುತ್ರನು ಪ್ರದ್ಯುಮ್ನ.

೫೮. ನರಿ. –ಯು.ಮೀ.

೫೯. ಶ್ರೀಕೃಷ್ಣ ವಾಸುದೇವ–ಪ್ರತಿವಾಸುದೇವರ ಕಗ್ಗಕ್ಕೂ ಯೋಗೇಶ್ವರ ಶ್ರೀಕೃಷ್ಣನಿಗೂ ಏನೂ ಸಂಬಂಧವಿಲ್ಲ.

**ಸಮೀಕ್ಷಕ:–** ಭಲೇ! ಯಾವನಾದರೂ ಬುದ್ಧಿವಂತನಾದ ಪುರುಷನು ವಿಮರ್ಶಿಸಿ ನೋಡಲಿ! ಯಾರಲ್ಲಿ ಬಹುಮಂದಿ ವೇಶ್ಯಾಗಾಮಿಗಳೂ, ಪರಸ್ತ್ರೀಗಾಮಿಗಳೂ, ಕಳ್ಳರೇ ಮೊದಲಾದವರೂ ಇದ್ದರೋ, ಅಂತಹ ಜೈನಮತಸ್ಥರಾದ ಇವರ ಸಾಧುಗಳೂ, ಗೃಹಸ್ಥರೂ, ತೀರ್ಥಂಕರರೂ–ಎಲ್ಲರೂ ಕೂಡ ಸ್ವರ್ಗಕ್ಕೆ ಮತ್ತು ಮುಕ್ತಿಗೆ ತೆರಳಿದರು ಮತ್ತು ಶ್ರೀಕೃಷ್ಣನೇ ಮೊದಲಾದ ಮಹಾನ್ ಧಾರ್ಮಿಕ ಮಹಾತ್ಮರೆಲ್ಲರೂ ನರಕಕ್ಕೆ ಹೋದರು–ಎನ್ನುವುದು ಎಂಥ ತುಚ್ಛವಾದ ಮಾತು? ಪ್ರತಿಯಾಗಿ ಆಲೋಚಿಸಿ ನೋಡುವುದಾದರೆ, ಸತ್ಪುರುಷರು ಜೈನರ ಸಂಗವನ್ನು ಮಾಡುವುದು ಅಥವಾ ಅವರನ್ನು ನೋಡುವುದೂ ಕೂಡ ಕೆಟ್ಟದಾಗಿರುತ್ತದೆ. ಏಕೆಂದರೆ, ಇವರ ಸಂಗವನ್ನು ಮಾಡಿದರೆ, ಇಂತಹ ಸುಳ್ಳು–ಸುಳ್ಳು ಮಾತುಗಳೇ ಅವನ ಹೃದಯದಲ್ಲಿಯೂ ಕೂಡ ಬೇರೂರಿ ಬಿಡುವುವು. ಏಕೆಂದರೆ, ಈ ಮಹಾಹಠಿಗಳೂ, ದುರಾಗ್ರಹಿಗಳೂ, ಆದ ಮಾನವನ ಸಂಗದಿಂದ ಕೇಡೊಂದನ್ನುಳಿದು ಮತ್ತೇನೂ ಮಡಿಲಿಗೆ ಬೀಳುವುದಿಲ್ಲ. ಅಹುದು; ಜೈನರಲ್ಲಿ ಯಾರು ಸತ್ಪುರುಷರಾಗಿದ್ದಾರೋ,[೬೦] ಅವರೊಂದಿಗೆ ಸತ್ಸಂಗ ಮೊದಲಾದುವುಗಳನ್ನು ಮಾಡುವುದರಲ್ಲಿ ದೋಷವೇನೂ ಇಲ್ಲ. "ವಿವೇಕಸಾರ"ದ ೫೫ನೆಯ ಪುಟದಲ್ಲಿ– "ಗಂಗೆ ಮೊದಲಾದ ತೀರ್ಥಗಳ ಮತ್ತು ಕಾಶೀ ಮೊದಲಾದ ಕ್ಷೇತ್ರಗಳ ಸೇವನದಿಂದ ಪರಮಾರ್ಥ ಸ್ವಲ್ಪವೂ ಸಿದ್ಧಿಸುವುದಿಲ್ಲ".–ಎಂದು ಬರೆದಿದ್ದಾರೆ. ಮತ್ತು ತಮ್ಮ ಗಿರನಾರ್, ಪಾಲೀ ಟಾನಾ ಮತ್ತು ಅಬೂ–ಮೊದಲಾದ ತೀರ್ಥಗಳು ಮತ್ತು ಕ್ಷೇತ್ರಗಳು ಮುಕ್ತಿಯವರೆಗಿನ ಫಲವನ್ನೂ ಕೊಡುವಂತವು–ಎಂದು ಬರೆದಿದ್ದಾರೆ.

**ಸಮೀಕ್ಷಕ:–** ಹೇಗೆ ಶೈವ–ವೈಷ್ಣವ ಮೊದಲಾದವರ ತೀರ್ಥಗಳು ಮತ್ತು ಕ್ಷೇತ್ರಗಳು ಜಲ–ಸ್ಥಳ–ಜಡಸ್ವರೂಪಗಳಾಗಿವೆಯೋ, ಹಾಗೆ ಜೈನರವೂ ಕೂಡ ಆಗಿವೆ. ಇವುಗಳಲ್ಲಿ ಒಂದರ ನಿಂದೆಯನ್ನೂ ಮತ್ತು ಎರಡನೆಯದರ ಸ್ತುತಿಯನ್ನೂ ಮಾಡುವುದು ಮೂರ್ಖತ್ವದ ಕಾರ್ಯವಾಗಿದೆ.

## ಜೈನರ ಮುಕ್ತಿಯ ವರ್ಣನ

"ರತ್ನಸಾರಭಾಗ"ದ ೨೩ನೆಯ ಪುಟದಲ್ಲಿ–ಮಹಾವೀರ ತೀರ್ಥಂಕರರು ಗೌತಮರಿಗೆ ಹೇಳುತ್ತಾರೆ:– "ಊರ್ಧ್ವಲೋಕದಲ್ಲಿ ಸಿದ್ಧಶಿಲೆ ಎಂಬ ಸ್ಥಾನವಿದೆ. ಸ್ವರ್ಗಪುರಿಯ ಮೇಲೆ ೪೫ ಲಕ್ಷ ಯೋಜನ ಉದ್ದವೂ ಮತ್ತು ಅಷ್ಟೇ ಅಗಲವೂ ಇದೆ ಹಾಗೂ ಎಂಟು ಯೋಜನ ದಪ್ಪವಾಗಿದೆ. ಮುತ್ತಿನ ಶ್ವೇತಹಾರದಂತೆ, ಅಥವಾ ಗೋವಿನ ಹಾಲಿನಂತೆ, ಅದಕ್ಕಿಂತಲೂ ಉಜ್ವಲವಾಗಿದೆ. ಚಿನ್ನಕ್ಕೆ ಸಮನಾಗಿ ಪ್ರಕಾಶಮಾನವಾಗಿದೆ. ಮತ್ತು ಸ್ಫಟಿಕಕ್ಕಿಂತಲೂ ನಿರ್ಮಲವಾಗಿದೆ. ಆ ಸಿದ್ಧಶಿಲೆಯ ಮೇಲೆ ಶಿವಪುರಧಾಮವಿದೆ. ಅದರಲ್ಲಿಯೂ ಕೂಡ ಮುಕ್ತಪುರುಷರು ನೆಲಕ್ಕೆ ತಗಲದಂತೆ ಇರುತ್ತಾರೆ. ಅಲ್ಲಿ ಜನನ, ಮರಣ ಮೊದಲಾದ ಯಾವ ದೋಷವೂ ಇಲ್ಲ. ಮತ್ತು ಆನಂದವನ್ನು ಸವಿಯುತ್ತಾ ಇರುತ್ತಾರೆ. ಪುನಃ ಜನ್ಮ–ಮೃತ್ಯುವಿಗೆ ಈಡಾಗುವುದಿಲ್ಲ. ಕರ್ಮಗಳೆಲ್ಲದರಿಂದಲೂ ಬಿಡುಗಡೆ ಹೊಂದುತ್ತಾರೆ. ಇದು ಜೈನರ ಮುಕ್ತಿಯಾಗಿದೆ.

**ಸಮೀಕ್ಷಕ :–** ಹೇಗೆ ಅನ್ಯಮತದಲ್ಲಿ ವೈಕುಂಠ, ಕೈಲಾಸ, ಗೋಲೋಕ, ಶ್ರೀಪುರ ಮೊದಲಾದೆಡೆಗಳಲ್ಲಿ ಪೌರಾಣಿಕರೂ, ನಾಲ್ಕನೆಯ ಆಕಾಶದಲ್ಲಿ ಕ್ರೈಸ್ತರೂ, ಏಳನೆಯ ಆಕಾಶದಲ್ಲಿ ಮುಸಲ್ಮಾನ ಮತಸ್ಥರೂ ಮುಕ್ತಿಯ ಸ್ಥಾನಗಳನ್ನು ಬರೆದಿದ್ದಾರೋ, ಹಾಗೆಯೇ ಜೈನರ ಸಿದ್ಧಶಿಲೆ ಮತ್ತು ಶಿವಪುರವೂ ಕೂಡ ಇದೆ – ಎಂಬುದನ್ನು ವಿಶೇಚಿಸಬೇಕು. ಏಕೆಂದರೆ, ಯಾವುದನ್ನು ಜನರು ಉಚ್ಚವೆಂದು ಗ್ರಹಿಸುತ್ತಾರೋ, ಅದು ಭೂಗೋಳದಲ್ಲಿ ನಮಗಿಂತ ಕೆಳಗೆಯಿರುವವರ[೬೧] ದೃಷ್ಟಿಯಿಂದ, ಕೆಳಗೇ ಇರುತ್ತದೆ. ಉಚ್ಚ – ನೀಚ ಎಂಬುದು ವ್ಯವಸ್ಥಿತವಾದ ಪದಾರ್ಥವಲ್ಲ. ಆರ್ಯಾವರ್ತ ವಾಸಿಗಳಾದ ಜೈನರು ಯಾವುದನ್ನು ಉಚ್ಚವೆಂದು ಗ್ರಹಿಸುತ್ತಾರೋ, ಅದನ್ನೇ ಅಮೇರಿಕಾದವರು ನೀಚವೆಂದು ಗ್ರಹಿಸುತ್ತಾರೆ; ಮತ್ತು ಆರ್ಯಾವರ್ತ ವಾಸಿಗಳು ಯಾವುದನ್ನು ನೀಚವೆಂದು ಗ್ರಹಿಸುತ್ತಾರೋ, ಅದನ್ನು ಅಮೇರಿಕಾದವರು ಉಚ್ಚವೆಂದು[೬೨] ಗ್ರಹಿಸುತ್ತಾರೆ. ಆ ಶಿಲೆ ೪೫ ಲಕ್ಷದ ಎರಡರಷ್ಟು, ತೊಂಬತ್ತು ಲಕ್ಷ ಯೋಜನದಷ್ಟೇ ಇದ್ದರೂ, ಆ ಮುಕ್ತರು ಬಂಧನದಲ್ಲಿರುತ್ತಾರೆ. ಏಕೆಂದರೆ, ಆ ಶಿಲೆಯಿಂದ, ಅಥವಾ ಶಿವಪುರದಿಂದ ಹೊರಗೆ ಬರುವುದರಿಂದ ಅವರ ಮುಕ್ತಿ ಬಿಟ್ಟು ಹೋಗುತ್ತಿರಬಹುದು. ಮತ್ತು ಸದಾ ಅದರಲ್ಲಿರುವುದರ ಬಗೆಗೆ ಪ್ರೀತಿ ಮತ್ತು ಅದರಿಂದ ಹೊರಬರುವುದರ ಬಗೆಗೆ ಅಪ್ರೀತಿಯೂ ಕೂಡ ಇರಬಹುದು. ಎಲ್ಲಿ ಅಡ್ಡಿ, ಪ್ರೀತಿ,

---

೬೦. ಸತ್ಪುರುಷನಾದವನು ಈ ಅಸಾರವಾದ ಜೈನ ಮತದಲ್ಲೆಂದಿಗೂ ಇರಲಾರನು. –ಸಮರ್ಥದಾನ.

೬೧. ಎಂದರೆ, ಅಮೆರಿಕಾ ಮೊದಲಾದ ದೇಶದವರ. –ಯು.ಮೀ

೬೨. ನಮ್ಮ ಧಾರ್ಮಿಕ ಪೌರಾಣಿಕ ಆಚಾರ್ಯರುಗಳಿಗೆ ಭೌಗೋಳಿಕ ಜ್ಞಾನದ ತಿಳಿವು ಕಡಿಮೆಯಿತ್ತು. ಆದ್ದರಿಂದಲೇ, ಅವರು ಪೌರಾಣಿಕ ಕಗ್ಗಗಳ ಸಮರ್ಥಕರಾಗಿದ್ದರು. ಮಹರ್ಷಿ ದಯಾನಂದರು ಈ ಹಿಂಡಿಗೆ ಸೇರಲಿಲ್ಲ.

ಅಪ್ರೀತಿಯಿರುತ್ತದೋ, ಅದನ್ನು ಮುಕ್ತಿಯೆಂದು ಹೇಗೆ ತಾನೇ ಹೇಳಲಾದೀತು? ಮುಕ್ತಿಯನ್ನು ನವಮ ಸಮುಲ್ಲಾಸದಲ್ಲಿ ಹೇಗೆ ವರ್ಣಿಸಿದ್ದೇವೆಯೋ, ಹಾಗೆಯೇ ತಿಳಿಯುವುದು ಸರಿ. ಮತ್ತು ಜೈನರ ಈ ಮುಕ್ತಿಯೂ ಕೂಡ ಒಂದು ರೀತಿಯ ಬಂಧನವಾಗಿದೆ. ಈ ಜೈನರೂ ಕೂಡ ಮುಕ್ತಿ ವಿಷಯದಲ್ಲಿ ಭ್ರಮಕ್ಕೆ ಸಿಕ್ಕಿಕೊಂಡಿದ್ದಾರೆ. ವೇದಗಳ ಯಥಾರ್ಥವಾದ ಅರ್ಥಜ್ಞಾನವಿಲ್ಲದೆ ಮುಕ್ತಿಯ ಸ್ವರೂಪವನ್ನು ಎಂದಿಗೂ ತಿಳಿದುಕೊಳ್ಳಲಾರರು – ಎನ್ನುವುದು ಸತ್ಯವಾಗಿದೆ.

## ಈಗ ಇನ್ನೂ ಸ್ವಲ್ಪ ಇವರ ಅಸಂಭವ ವಿಷಯಗಳನ್ನಾಲಿಸಿರಿ

"ವಿವೇಕಸಾರ"ದ ೭೮ನೆಯ ಪುಟ:– "ಮಹಾವೀರರ ಜನ್ಮ ಸಮಯದಲ್ಲಿ ಒಂದು ಕೋಟಿ ಅರವತ್ತು ಲಕ್ಷ ಕಲಶಗಳಿಂದ ಸ್ನಾನ ಮಾಡಿಸಿದರು". "ವಿವೇಕಸಾರ"ದ "ದಶಾರ್ಣರಾಜನು ಮಹಾವೀರರ ದರ್ಶನಕ್ಕೆ ಹೋದನು. ಅಲ್ಲಿ ಸ್ವಲ್ಪ ಗರ್ವಪಟ್ಟನು. ಅದರ ನಿವಾರಣಕ್ಕಾಗಿ ೧೬,೭೭,೭೨, ೧೬೦೦೦ ಜನ ಇಂದ್ರಸ್ವರೂಪರೂ ೧೩,೩೭,೦೫,೭೨,೮೦,೦೦,೦೦,೦೦೦ ಮಂದಿ ಇಂದ್ರಾಣಿಯರೂ ಅಲ್ಲಿ ಬಂದಿದ್ದರು.[೬೩] ಅವರನ್ನು ನೋಡಿ ರಾಜನು ಆಶ್ಯರ್ಯಚಕಿತನಾದನು".

**ಸಮೀಕ್ಷಕ:–** ಇಷ್ಟು ಜನ ಇಂದ್ರರು ಮತ್ತು ಇಂದ್ರಾಣಿಯರು ನಿಂತು ಕೊಳ್ಳುವುದಕ್ಕೆ ಇಂತಹ ಎಷ್ಟು ಬೋಗೋಳಗಳುಬೇಕು– ಎಂಬುದನ್ನೀಗ ಆಲೋಚಿಸಬೇಕು.

"ಶ್ರಾದ್ಧದಿನಕೃತ್ಯ"ದ ಆತ್ಮನಿಂದಾಭಾವನಾಪ್ರಕರಣದಲ್ಲಿ ೩೧ನೆಯ ಪುಟದಲ್ಲಿ "ಕಲ್ಯಾಣಿಗಳನ್ನೂ, ಭಾವಿಗಳನ್ನೂ, ಮತ್ತು ಕೆರೆಗಳನ್ನೂ ಕಟ್ಟಿಸಬಾರದು". ಎಂದು ಬರೆದಿದ್ದಾರೆ.

**ಸಮೀಕ್ಷಕ:–** ಭಾಪು! ಸಮಸ್ತ ಮಾನವರೂ ಜೈನಮತದಲ್ಲಿ ಸೇರಿಕೊಂಡರೆ ಮತ್ತು ಭಾವಿ, ಕೆರೆ, ಕಲ್ಯಾಣಿ–ಮೊದಲಾದುದಾವುದನ್ನೂ ಕಟ್ಟಿಸದೇ ಹೋದರೆ, ಜನರೆಲ್ಲಾ ನೀರನ್ನು ಎಲ್ಲಿಂದ ಕುಡಿಯಬೇಕು?

**ಪ್ರಶ್ನೆ:–** ಕೆರೆಗಳು ಮೊದಲಾದುವನ್ನು ಕಟ್ಟಿಸುವುದರಲ್ಲಿ ಜೀವರುಗಳು ಬೀಳುತ್ತಾರೆ. ಅವುಗಳಿಂದ ಕಟ್ಟಿಸುವವನಿಗೆ ಪಾಪ ತಗಲುತ್ತದೆ. ಆದುದರಿಂದ ಜೈನರಾದ ನಾವು ಈ ಕೆಲಸವನ್ನು ಮಾಡುವುದಿಲ್ಲ.

**ಉತ್ತರ:–** ನಿಮ್ಮ ಬುದ್ಧಿ ಏತಕ್ಕೆ ನಾಶವಾಗಿ ಹೋಯಿತು? ಏಕೆಂದರೆ, ಹೇಗೆ ಕ್ಷುದ್ರ–ಕ್ಷುದ್ರರಾದ ಜೀವರ ಸಾಯುವಿಕೆಯಿಂದ ಪಾಪವನ್ನೆಣಿಸುತ್ತೀರೋ, ಹಾಗೆ ದೊಡ್ಡ ದೊಡ್ಡ ಹಸುಗಳೇ ಮೊದಲಾದ ಪ್ರಾಣಿಗಳೂ ಮತ್ತು ಮನುಷ್ಯರೇ ಮೊದಲಾದ ದೇಹ ಧಾರಿಗಳೂ ನೀರನ್ನು ಕುಡಿಯುವುದೇ ಮೊದಲಾದುದರಿಂದ ಮಹಾಪುಣ್ಯ ಲಭಿಸುವುದು. ಅದನ್ನೇಕೆ ಎಣಿಸುವುದಿಲ್ಲ?

"ತತ್ತ್ವವಿವೇಕ"ದ ೧೯೬ನೆಯ ಪುಟದಲ್ಲಿ :– "ಒಂದು ನಗರಿಯಲ್ಲಿ ನಂದಮಣಿಕಾರಸೇಠನು ಕಲ್ಯಾಣಿಯನ್ನು ಕಟ್ಟಿಸಿದನು. ಅದರಿಂದ ಧರ್ಮಭ್ರಷ್ಟನಾಗಿ ೧೬ ಮಹಾ ರೋಗಗಳು ಹತ್ತಿಕೊಂಡವು. ಮೃತನಾಗಿ, ಅದೇ ಕಲ್ಯಾಣಿಯಲ್ಲಿ ಕಪ್ಪೆಯಾಗಿ ಹುಟ್ಟಿದನು. ಮಹಾವೀರನ ದರ್ಶನದಿಂದ ಅವನಿಗೆ ಜಾತಿ–ಸ್ಮರಣವುಂಟಾಯಿತು. ಮಹಾವೀರರು 'ನನ್ನ ಆಗಮನವನ್ನಾಲಿಸಿ, ಅವನು ಪೂರ್ವಜನ್ಮದ ಧರ್ಮಾಚಾರ್ಯನೆಂದರಿತು ವಂದಿಸಲು ಬರತೊಡಗಿದನು. ದಾರಿಯಲ್ಲಿ ಶ್ರೇಣಿಕನ ಕುದುರೆಯ ಗೊರಸಿನಿಂದ ಮೃತನಾಗಿ, ಶುಭಧ್ಯಾನದ ಯೋಗದಿಂದ ದರ್ದುರಾಂಕನೆಂಬ ಮಹರ್ದ್ಧಿಕ ದೇವತೆಯಾದನು. ಅವಧಿಜ್ಞಾನದಿಂದ ನಾನು ಇಲ್ಲಿ ಬಂದುದನ್ನು ತಿಳಿದು, ವಂದನಾಪೂರ್ವಕವಾಗಿ ಋದ್ಧಿಯನ್ನು ತೋರಿಸಿ ಹೋದನು–ಎಂದು ಹೇಳುತ್ತಾರೆ.

**ಸಮೀಕ್ಷಕ:–** ಈ ಮೊದಲಾದ ವಿದ್ಯಾವಿರುದ್ಧವೂ, ಅಸಂಭವೂ ಆದ ಸುಳ್ಳು ಮಾತನಾಡುವ ಮಹಾವೀರನನ್ನು ಸರ್ವೋತ್ತಮನೆಂದು ಗ್ರಹಿಸುವುದು ಮಹಾ ಭ್ರಾಂತಿಯ ವಿಷಯವಾಗಿದೆ.

"ಶ್ರಾದ್ಧದಿನಕೃತ್ಯ"ದ ೩೬ನೆಯ ಪುಟದಲ್ಲಿ –"ಮೃತನ ವಸ್ತ್ರಗಳನ್ನು ಸಾಧುಗಳು ತೆಗೆದುಕೊಳ್ಳಬೇಕು.– ಎಂದು ಬರೆದಿದೆ.

---

೬೩. ಓದುಗರು ಇಂದ್ರ–ಇಂದ್ರಾಣಿಯರ ಸಂಖ್ಯೆಯನ್ನು ಭಾಗಿಸಿ ನೋಡಲಿ. ಪ್ರತಿ ಇಂದ್ರನಿಗೂ ೭.೯೬.೯೪೮ ಇಂದ್ರಾಣಿಯರು ಸಿಕ್ಕಮೇಲೂ, ೬,೩೨,೩೨೦೦೦ ಇಂದ್ರಾಣಿಯರು ಉಳಿದು ಹೋಗುತ್ತಾರೆ. ಇವರನ್ನು ಪ್ರತಿ ಇಂದ್ರನಿಗೆ ಹೇಗೆ ಹಂಚಬೇಕು? ಇದು ಜೈನಾಚಾರ್ಯರ ಗಣಿತಜ್ಞಾನದ ನಮೂನೆ. –ಯು.ಮೀ.

**ಸಮೀಕ್ಷಕ:–** ನೋಡಿರಿ, ಇವರ ಸಾಧುಗಳೂ ಕೂಡ ಮಹಾಬ್ರಾಹ್ಮಣನಿಗೆ ಸಮಾನರಾದರು. ವಸ್ತ್ರಗಳನ್ನೇನೋ ಸಾಧುಗಳು ತೆಗೆದುಕೊಳ್ಳುವರು; ಮೃತನ ಒಡವೆಗಳನ್ನು ಯಾರು ತೆಗೆದುಕೊಳ್ಳಬೇಕು? ಬಹುಮೂಲ್ಯವಾದ ಕಾರಣ ಮನೆಯಲ್ಲೇ ಇಟ್ಟು ಕೊಳ್ಳುತ್ತಿರಬಹುದು. ಹಾಗಾದರೆ, ತಾವು ಯಾರಾದಿರಿ?

"ರತ್ನಸಾರ"ದ ೧೦೫ನೆಯ ಪುಟದಲ್ಲಿ ಬರೆದಿದೆ:– "ಹುರಿಯುವುದು, ಕುಟ್ಟುವುದು, ಬೀಸುವುದು, ಆಹಾರವನ್ನು ಬೇಯಿಸುವುದು–ಮೊದಲಾದುದರಿಂದ ಪಾಪ ತಗಲುತ್ತದೆ".

**ಸಮೀಕ್ಷಕ:–** ಈಗ ನೋಡಿರಿ ಇವರ ವಿದ್ಯಾಹೀನತೆಯನ್ನು, ಈ ಕರ್ಮಗಳು ಮಾಡಲ್ಪಡದೇ ಹೋದರೆ, ಮಾನವರೇ ಮೊದಲಾದ ಪ್ರಾಣವಂತರು ಹೇಗೆ ಜೀವಿಸಬಲ್ಲರು? ಮತ್ತು ಜೈನರೂ ಕೂಡ ಪೀಡಿತರಾಗಿ ಮೃತರಾದಾರು!

"ರತ್ನಸಾರ"ದ ೧೦೪ನೆಯ ಪುಟದಲ್ಲಿ:– ತೋಟವನ್ನು ನಿರ್ಮಿಸುವುದರಿಂದ ತೋಟಗಾರನಿಗೆ ಲಕ್ಷಪಾಪಗಳು ತಗಲುತ್ತವೆ".

**ಸಮೀಕ್ಷಕ:–** ತೋಟಗಾರನಿಗೆ ಲಕ್ಷಪಾಪ ತಗಲುವುದಾದರೆ, ಅನೇಕ ಜೀವರು ಪತ್ರ, ಪುಷ್ಪ ಹಾಗೂ ನೆರಳಿನಿಂದ ಆನಂದಿತರಾಗುತ್ತಾರೆ. ಹೀಗೆ ಕೋಟಿಪಟ್ಟು ಪುಣ್ಯವೂ ಲಭಿಸಿಯೇ ತೀರುತ್ತದೆ. ಇದರ ಕಡೆ ಸ್ವಲ್ಪವೂ ಗಮನವನ್ನು ಹರಿಸಲಿಲ್ಲ. ಇದೆಷ್ಟು ಮೊಬ್ಬು?

"ತತ್ತ್ವವಿವೇಕ"ದ ೨೦೨ನೆಯ ಪುಟದಲ್ಲಿ ಬರೆದಿದೆ :– "ಒಂದು ದಿನ ಲಬ್ಧಿ ಸಾಧುವು ತಪ್ಪಿನಿಂದ ವೇಶ್ಯೆಯ ಮನೆಗೆ ಹೋಗಿಬಿಟ್ಟನು. ಮತ್ತು ಧರ್ಮಾನುಸಾರ ಭಿಕ್ಷೆಬೇಡಿದನು. ವೇಶ್ಯೆಯು–'ಇಲ್ಲಿ ಧರ್ಮಕ್ಕೇನೂ ಕೆಲಸವಿಲ್ಲ; ಆದರೆ ಇರುವುದು ಹಣದ ಕೆಲಸ".–ಎಂದಳು. ಆಗ ಆ ಲಬ್ಧಿ ಸಾಧುವು ಹನ್ನೆರಡೂವರೆ ಲಕ್ಷ ಸ್ವರ್ಣಮುದ್ರಿಕೆಗಳ ಮಳೆಯನ್ನು ಅವಳ ಮನೆಯಲ್ಲಿ ಸುರಿಸಿಬಿಟ್ಟನು.

**ಸಮೀಕ್ಷಕ:–** ನಷ್ಟಬುದ್ಧಿಯಾದ ಪುರುಷನನ್ನು ಬಿಟ್ಟು ಈ ಮಾತನ್ನು ಯಾವನು ಸತ್ಯವೆಂದು ಅಂಗೀಕರಿಸುವನು?

"ರತ್ನಸಾರಭಾಗ"ದ ೬೭ನೆಯ ಪುಟದಲ್ಲಿ – "ಒಂದು ಶಿಲಾವಿಗ್ರಹ ಕುದುರೆಯ ಮೇಲೇರಿ, ಎಲ್ಲಿ ಅದರ ಸ್ಮರಣ ಮಾಡಲ್ಪಡುತ್ತದೋ, ಅಲ್ಲಿ ತಲುಪಿ, ರಕ್ಷಣೆಯನ್ನು ಮಾಡುತ್ತದೆ".ಎಂದು ಬರೆದಿದೆ.

**ಸಮೀಕ್ಷಕ:–** ಹೇಳಿರಿ, ಜೈನ ಮಹಾಶಯರೇ! ಈ ದಿನಗಳಲ್ಲಿ ನಿಮ್ಮಲ್ಲಿ ಕಳವು, ದರೋಡೆ ಮೊದಲಾದುವುಗಳಿಂದ ಮತ್ತು ಶತ್ರುವಿನಿಂದ ಭಯ ಉಂಟಾಗುತ್ತಲೇ ಇರುತ್ತದೆ. ಹಾಗಿರುವಾಗ ನೀವು ಅದನ್ನು ಸ್ಮರಿಸಿ ನೀಮ್ಮ ರಕ್ಷಣೆಯನ್ನು ಮಾಡಿಸಿಕೊಳ್ಳುವುದಿಲ್ಲವೇತಕ್ಕೆ? ಅತ್ತ–ಇತ್ತ ಪೋಲೀಸರೇ ಮೊದಲಾದ ರಾಜ್ಯಾಧಿಕಾರಿಗಳ ಸ್ಥಾನಗಳಿಗೆ ಅಲೆಯುತ್ತಾ ತಿರುಗುವಿರೇಕೆ?

## ಈಗ ಇವರ ಸಾಧುಗಳ ಲಕ್ಷಣಗಳು

**ಸರಜೋಹರಣಾ ಭೈಕ್ಷಭುಜೋ ಲುಂಚಿತಮೂರ್ಧಜಾಃ।**

**ಶ್ವೇತಾಂಬರಾಃ ಕ್ಷಮಾಶೀಲಾ ನಿಃಸಂಗಾ ಜೈನಸಾಧವಃ ॥ ೧ ॥**

**ಲುಂಚಿತಾಃ ಪಿಚ್ಛಿಕಾಹಸ್ತಾಃ ಪಾಣಿಪಾತ್ರಾ ದಿಗಂಬರಾಃ।**

**ಊರ್ಧ್ವಾಶಿನೋ ಗೃಹೇ ದಾತುರ್ದ್ವಿತೀಯಾಃ ಸುಜಿನರ್ಷಯಃ ॥ ೨ ॥**

**ಭುಂಕ್ತೇ ನ ಕೇವಲೀ ನ ಸ್ತ್ರೀ ಮೋಕ್ಷಮೇತಿ ದಿಗಂಬರಃ।**

**ಪ್ರಾಹುರೇಷಾಮಯಂ ಭೇದೋ ಮಹಾನ್ ಶ್ವೇತಾಂಬರೈಃ ಸಹ** [೬೪] **॥ ೩॥**

---

೬೪. ಸರ್ವದರ್ಶನ ಸಂಗ್ರಹ– ಅರ್ಹತದರ್ಶನ. –ಯು.ಮೀ

ಜೈನರ ಸಾಧುಗಳ ಲಕ್ಷಣಗಳನ್ನು ಜಿನದತ್ತಸೂರಿಯು ಈ ಶ್ಲೋಕಗಳ ಮೂಲಕ ಹೇಳಿದ್ದಾನೆ:- (ಸರಜೋಹರಣಾಃ) ಚಮರಿಯನ್ನು ಇಟ್ಟುಕೊಳ್ಳುವುದು ಮತ್ತು ಭಿಕ್ಷೆಮಾಡಿತಿನ್ನುವುದು, ತಲೆಗೂದಲುಗಳನ್ನು ಕೈಗಳಿಂದಲೇ ಕಿತ್ತು ಹಾಕಿಕೊಳ್ಳುವುದು. ಬಿಳಿಯ ಬಟ್ಟೆಗಳನ್ನು ಧರಿಸುವುದು, ಕ್ಷಮಾಯುಕ್ತರಾಗಿರುವುದು, ಯಾವನೊಂದಿಗೂ ಸಂಗವನ್ನಿಟ್ಟುಕೊಳ್ಳದಿರುವುದು - ಇಂತಹ ಲಕ್ಷಣಗಳಿಂದ ಯುಕ್ತರಾಗಿರುತ್ತಾರೆ 'ಯತಿಗಳು' ಎಂದು ಕರೆಯಲ್ಪಡುವ ಜೈನಶ್ವೇತಾಂಬರ ಸಾಧುಗಳು. (೧).

ಬೇರೆಯವರು ದಿಗಂಬರರು, ಎಂದರೆ-ವಸ್ತ್ರಧಾರಣ ಮಾಡದೇ ಇರುವುದು, ತಲೆಗೂದಲುಗಳನ್ನು ಕಿತ್ತುಹಾಕಿಕೊಳ್ಳುವುದು, ಪಿಚ್ಛಿಕಾ-ಎಂದರೆ ಉಣ್ಣೆಯ ದಾರಗಳ ಗುಡಿಸುವ ಸಾಧನ ಒಂದನ್ನು ಕಂಕುಳಿನಲ್ಲಿಟ್ಟುಕೊಳ್ಳುವುದು, ಯಾರಾದರೂ ಭಿಕ್ಷೆಯನ್ನು ಕೊಟ್ಟರೆ, ಕೈಯಲ್ಲೇ ತೆಗೆದುಕೊಂಡು ತಿನ್ನುವುದು-ಇವರು ಎರಡನೆಯ ಬಗೆಯ ದಿಗಂಬರ ಸಾಧುಗಳಾಗಿರುತ್ತಾರೆ. (೨)

ಮತ್ತು ಭಿಕ್ಷೆಯನ್ನು ಕೊಡುವ ಗೃಹಸ್ಥನು ಊಟ ಮಾಡಿದ ಮೇಲೆ, ಅನಂತರ ಭೋಜನ ಮಾಡುವವರು 'ಜಿನ ಋಷಿಗಳು' ಎಂದರೆ ಮೂರನೆಯ ವಿಧದ ಸಾಧುಗಳಾಗಿರುತ್ತಾರೆ. ದಿಗಂಬರರಿಗೆ ಶ್ವೇತಾಂಬರರೊಂದಿಗೆ ಇರುವ ಭೇದವು, ದಿಗಂಬರರು ಸ್ತ್ರೀದರ್ಶನ-ಸ್ಪರ್ಶನ ಮೊದಲಾದ ವ್ಯವಹಾರಗಳನ್ನಿಟ್ಟುಕೊಳ್ಳರು; ಶ್ವೇತಾಂಬರರು ಇಟ್ಟುಕೊಳ್ಳುತ್ತಾರೆ. ಭೇದವಿಷ್ಟೇ ಇರುತ್ತದೆ. ಈ ಮೊದಲಾದ ಲಕ್ಷಣಯುಕ್ತವಾದ ಸಾಧುತ್ವದ ನಿರ್ವಹಣದಿಂದ ಮೋಕ್ಷಹೊಂದುವವರು. (೩)

ಇದು ಇವರ ಸಾಧುಗಳ ಭೇದವಾಗಿರುತ್ತದೆ. ಇದರಿಂದ, ಜೈನರ ಕೇಶಲುಂಚನ ಎಲ್ಲೆಡೆಯೂ ಪ್ರಸಿದ್ಧವಾಗಿದೆ. ಮತ್ತು ಐದು ಹಿಡಿಯಷ್ಟು ತಲೆಗೂದಲನ್ನು ಕಿತ್ತುಹಾಕಿಕೊಳ್ಳುವುದು - ಮೊದಲಾದುವನ್ನೂ ಬರೆದಿದ್ದಾರೆ.

"ವಿವೇಕಸಾರಭಾಗ"ದ ೨೧೬ನೆಯ ಪುಟದಲ್ಲಿ-"ಐದು ಹಿಡಿ ಕೂದಲನ್ನು ಕಿತ್ತುಹಾಕಿಕೊಂಡು ಚಾರಿತ್ರವನ್ನು ಗ್ರಹಿಸಿದನು, ಎಂದರೆ-ಐದು ಮುಷ್ಟಿ ಕೇಶಲುಂಚನ ಮಾಡಿಕೊಂಡು ಸಾಧುವಾದನು". ಎಂದು ಬರೆದಿದ್ದಾರೆ. "ಕಲ್ಪಸೂತ್ರಭಾಷ್ಯ"ದ ೧೦೮ನೆಯ ಪುಟದಲ್ಲಿ "ಕೂದಲನ್ನು ಕಿತ್ತುಹಾಕಿಕೊಳ್ಳಬೇಕು. ಗೋವಿನ ಕೂದಲುಗಳಿಗೆ ಸಮನಾಗಿಟ್ಟುಕೊಳ್ಳಬೇಕು". ಎಂದು ಬರೆದಿದೆ.

**ಸಮೀಕ್ಷಕ:-** ಈಗ ಹೇಳಿರಿ ಜೈನ ಸಜ್ಜನರೇ! ನಿಮ್ಮ ದಯಾಧರ್ಮ ಉಳಿಯಿತೆಲ್ಲಿ? ಇದು ಹಿಂಸೆಯಲ್ಲವೇನು? ಎಂದರೆ, ತಾನೇ ಬೇಕಾದರೆ ತನ್ನ ಕೈಯಿನಿಂದಲೇ ಲುಂಚನ ಮಾಡಿಕೊಳ್ಳಲಿ; ಇಲ್ಲವೇ, ಗುರುವೇ ಬೇಕಾದರೆ ಲುಂಚನ ಮಾಡಲಿ, ಅಥವಾ ಬೇರೆ ಯಾರಾದರೂ ಮಾಡಲಿ; ಎಷ್ಟು ದೊಡ್ಡ ಕಷ್ಟ ಆ ಜೀವನಿಗೆ ಆಗುತ್ತಿರಬಹುದು? ಜೀವನಿಗೆ ಕಷ್ಟಕೊಡುವುದೇ ಹಿಂಸೆಯೆನಿಸುತ್ತದೆ.

"ವಿವೇಕಸಾರ"ದಲ್ಲಿ, ಸಂವತ್ ೧೬೩೩ನೆಯ ವರ್ಷದಲ್ಲಿ, ಶ್ವೇತಾಂಬರರ ನಡುವಿನಿಂದ 'ಢೂಂಢಿಯಾ'ಗಳೂ, ಮತ್ತು ಅವರ ಮಧ್ಯದಿಂದಲೇ ತೇರಾಪಂಥಿಗಳೇ ಮೊದಲಾದ ದಾಂಭಿಕರೂ ಹೊರಬಂದಿದ್ದಾರೆ. ಢೂಂಢಿಯಾಗಳು ಶಿಲೆ-ಮೊದಲಾದುದರ ಮೂರ್ತಿಗಳನ್ನು ಅಂಗೀಕರಿಸುವುದಿಲ್ಲ ಮತ್ತು ಅವರು ಸ್ನಾನಮಾಡುವುದಿಲ್ಲ. ಭೋಜನ ಪಾನಗಳ ಕಾಲವನ್ನು ಬಿಟ್ಟು, ಸದಾ ಬಾಯಿಯ ಮೇಲೆ ಪಟ್ಟಿಕಟ್ಟಿಕೊಂಡಿರುತ್ತಾರೆ. ಮತ್ತು 'ಜತಿ' ಮೊದಲಾದವರೂ ಯಾವಾಗ ಪುಸ್ತಕವನ್ನು ಓದುತ್ತಾರೋ, ಆಗಮಾತ್ರ ಬಾಯಿಯ ಮೇಲೆ ಪಟ್ಟಿ ಕಟ್ಟಿಕೊಳ್ಳುತ್ತಾರೆ; ಬೇರೆ ಸಮಯಗಳಲ್ಲಿ ಕಟ್ಟಿಕೊಳ್ಳುವುದಿಲ್ಲ.

**ಪ್ರಶ್ನೆ:-** ಬಾಯಿಯ ಮೇಲೆ ಪಟ್ಟಿಯನ್ನು ಅವಶ್ಯವಾಗಿ ಕಟ್ಟಿಕೊಳ್ಳಬೇಕು. ಏಕೆಂದರೆ, ವಾಯುಕಾಯ ಜೀವರು, ಎಂದರೆ-ವಾಯುವಿನಲ್ಲಿ ಸೂಕ್ಷ್ಮಶರೀರಯುಕ್ತರಾದ ಯಾವ ಜೀವರಿರುತ್ತಾರೋ, ಅವರು ಬಾಯಿಯ ಆವಿಯ ಕಾವಿನಿಂದ ಸಾಯುತ್ತಾರೆ. ಮತ್ತು ಅದರ ಪಾಪ ಬಾಯಿಯ ಮೇಲೆ ಪಟ್ಟಿಯನ್ನು ಕಟ್ಟಿಕೊಳ್ಳದವರಿಗೆ ತಗಲುತ್ತದೆ. ಇದೇ ಕಾರಣದಿಂದ ನಾವುಗಳು ಬಾಯಿಯ ಮೇಲೆ ಪಟ್ಟಿಕಟ್ಟಿಕೊಳ್ಳುವುದನ್ನು ಒಳ್ಳೆಯದೆಂದು ತಿಳಿಯುತ್ತೇವೆ.

**ಉತ್ತರ:-** ಈ ಮಾತು ವಿದ್ಯೆ ಹಾಗೂ ಪ್ರತ್ಯಕ್ಷ ಮೊದಲಾದ ಪ್ರಮಾಣಗಳ ದೃಷ್ಟಿಯಿಂದ ಅಯುಕ್ತವಾಗಿದೆ. ಏಕೆಂದರೆ, ಜೀವರು ಅಜರರು, ಅಮರರು ಆಗಿದ್ದಾರೆ. ಮತ್ತೆ ಅವರು ಬಾಯ ಆವಿಯಿಂದ ಎಂದಿಗೂ ಸಾಯಲಾರರು. ಇವರನ್ನು ನೀವೂ ಕೂಡ ಅಜರರು-ಅಮರರು ಎಂದೇ ಅಂಗೀಕರಿಸುತ್ತೀರಿ.

**ಪ್ರಶ್ನೆ:-** ಜೀವರೇನೋ ಸಾಯುವುದಿಲ್ಲ; ಆದರೆ ಬಾಯಿಯ ಬಿಸಿಗಾಳಿಯಿಂದ ಯಾವ ನೋವು ಅವರಿಗೆ ಆಗುತ್ತದೋ, ಆ ನೋವನ್ನು ಕೊಡುವವನಿಗೆ ಪಾಪ ತಗಲುತ್ತದೆ. ಇದೇ ಕಾರಣದಿಂದ ಬಾಯಿಯ ಮೇಲೆ ಪಟ್ಟಿಕಟ್ಟಿಕೊಳ್ಳುವುದು ಒಳ್ಳೆಯದಾಗಿದೆ.

**ಉತ್ತರ:–** ನಿಮ್ಮ ಈ ಮಾತೂ ಕೂಡ ಸರ್ವಥಾ ಅಸಂಭವವಾಗಿದೆ. ಏಕೆಂದರೆ, ನೋವನ್ನೀಯದೆ, ಯಾವ ಜೀವನ ನಿರ್ವಾಹವೂ ಎಷ್ಟು ಮಾತ್ರಕ್ಕೂ ಸಾಗಲಾರದು. ನಿಮ್ಮ ಮತದಂತೆ, ಬಾಯಿಯ ವಾಯುವಿನಿಂದ ಜೀವರಿಗೆ, ನೋವು ಉಂಟಾಗುತ್ತದೆ–ಎನ್ನುವುದಾದರೆ, ಚಲಿಸುವುದರಿಂದ, ಓಡಾಡುವುದರಿಂದ, ಕುಳಿತುಕೊಳ್ಳುವುದರಿಂದ, ಕೈಯನ್ನೆತ್ತುವುದರಿಂದ, ಮತ್ತು ಕಣ್ಣುಗಳನ್ನು ಮಿಟುಕಿಸುವುದೇ ಮೊದಲಾದುದರಿಂದ, ನೋವು ಅವಶ್ಯವಾಗಿ ಉಂಟಾಗುತ್ತಿರಬಹುದು. ಆದುದರಿದ ನೀವೂ ಕೂಡ ಜೀವರಿಗೆ ನೋವನ್ನು ಕೊಡುವುದರಿಂದ ದೂರವಿರಲಾರಿರಿ.

**ಪ್ರಶ್ನೆ:–** ಅಹುದು; ಎಲ್ಲಿಯವರೆಗೆ ಸಾಧ್ಯವೋ, ಅಲ್ಲಿಯವರೆಗೆ ಜೀವರ ರಕ್ಷಣೆಯನ್ನು ಮಾಡಬೇಕು. ಮತ್ತು ಎಲ್ಲಿ ನಮ್ಮಿಂದ ಆಗದೋ, ಅಲ್ಲಿ ಅಶಕ್ತರಾಗಿದ್ದೇವೆ. ಏಕೆಂದರೆ, ವಾಯು ಮೊದಲಾದ ಪದಾರ್ಥಗಳಲ್ಲೆಲ್ಲಾ ಜೀವರು ತುಂಬಿಕೊಂಡಿದ್ದಾರೆ. ನಾವು ಬಾಯಿಯ ಮೇಲೆ ಬಟ್ಟೆ ಕಟ್ಟಿಕೊಳ್ಳದೇ ಹೋದರೆ, ಬಹಳ ಜೀವರು ಸತ್ತಾರು; ಬಟ್ಟೆ ಕಟ್ಟಿಕೊಳ್ಳುವುದರಿಂದ ಕಡಿಮೆ ಸಾಯುತ್ತಾರೆ.

**ಉತ್ತರ:–** ನಿಮ್ಮ ಈ ಕಥನವೂ ಕೂಡ ಯುಕ್ತಿಶೂನ್ಯರಾಗಿದೆ. ಏಕೆಂದರೆ, ಬಟ್ಟೆ ಕಟ್ಟಿಕೊಳ್ಳುವುದರಿಂದ ಜೀವರಿಗೆ ಹೆಚ್ಚು ದುಃಖ ಉಂಟಾಗುತ್ತದೆ. ಯಾವನಾದರೂ ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವನಾದರೆ, ಅವನ ಬಾಯಿಯ ಗಾಳಿ ತಡೆಯಲ್ಪಟ್ಟು, ಕೆಳಗಿನಿಂದ ಅಥವಾ ಪಕ್ಕದಿಂದ, ಮತ್ತು ಮೌನದ ಕಾಲದಲ್ಲಿ ಮೂಗಿನ ಮೂಲಕ ಒಟ್ಟುಗೂಡಿ ವೇಗದಿಂದ ಹೊರಬೀಳುತ್ತದೆ. ಅದರಿಂದ ಕಾವು ಹೆಚ್ಚಾಗಿ, ನಿಮ್ಮ ಮತಾನುಸಾರ, ಜೀವರಿಗೆ ವಿಶೇಷವಾದ ನೋವು ಉಂಟಾಗುತ್ತಿರಬಹುದು.

ನೋಡಿರಿ, ಹೇಗೆ ಮನೆಯ ಅಥವಾ ಕೊಠಡಿಯ ಬಾಗಿಲುಗಳೆಲ್ಲವೂ ಮುಚ್ಚಲ್ಪಟ್ಟರೆ. ಅಥವಾ ತೆರೆಗಳು ಹಾಕಲ್ಪಟ್ಟರೆ, ಅದರಲ್ಲಿ ಕಾವು ವಿಶೇಷವಾಗಿರುತ್ತದೋ, ತೆರೆದಿಟ್ಟಿದ್ದರೆ ಅಷ್ಟು ಇರುವುದಿಲ್ಲವೋ, ಹಾಗೆ ಬಾಯಿಯ ಮೇಲೆ ಬಟ್ಟೆಯನ್ನು ಕಟ್ಟಿಕೊಳ್ಳುವುದರಿಂದ ಕಾವು ಹೆಚ್ಚಾಗುತ್ತದೆ ಮತ್ತೆ ತೆರೆದಿಟ್ಟಿರುವುದರಿಂದ ಕಡಿಮೆಯಾಗುತ್ತದೆ. ಹಾಗೆ ನೀವು ನಿಮ್ಮ ಮತಾನುಸಾರ ಜೀವರಿಗೆ ಹೆಚ್ಚು ದುಃಖದಾಯಕರಾಗಿದ್ದೀರಿ. ಮತ್ತು ಯಾವಾಗ ಬಾಯಿ ಮುಚ್ಚಲ್ಪಡುತ್ತದೋ, ಆಗ ಮೂಗಿನ ಹೊಳ್ಳೆಗಳಿಂದ ವಾಯುವು ತಡೆಯಲ್ಪಟ್ಟು ಒಟ್ಟಾಗಿ ರಭಸದಿಂದ ಹೊರಬೀಳುತ್ತಾ, ಜೀವರಿಗೆ ಹೆಚ್ಚಾಗಿ 'ಸಂಘರ್ಷ' ಮಾಡಿ, ಅಧಿಕ ನೋವನ್ನು ಕೊಡುತ್ತಿರಬಹುದು.

ನೋಡಿರಿ, ಹೇಗೆ ಯಾವನಾದರೂ ಮಾನವನು ಬೆಂಕಿಯನ್ನು ತನ್ನ ಬಾಯಿನಿಂದಲೂ ಮತ್ತೊಬ್ಬನು ಕೊಳವೆಯಿಂದಲೂ ಊದುತ್ತಾರಾದರೆ, ಬಾಯಿಯ ಗಾಳಿ ಹರಡುವುದರಿಂದ ಅಲ್ಪಬಲದಿಂದಲೂ, ಮತ್ತು ಕೊಳವೆಯ ಗಾಳಿ ಒಟ್ಟಾಗುವುದರಿಂದ ಅಧಿಕ ಬಲದಿಂದಲೂ ಬೆಂಕಿಗೆ ತಗಲುತ್ತದೋ, ಹಾಗೆಯೇ ಬಾಯಿಯ ಮೇಲೆ ಪಟ್ಟಿ ಕಟ್ಟಿ ವಾಯುವನ್ನು ತಡೆಯುವುದರಿಂದ ಮೂಗಿನ ಮೂಲಕ ಅತಿವೇಗದಿಂದ ಹೊರಬಿದ್ದು ಜೀವರಿಗೆ ಹೆಚ್ಚು ದುಃಖವನ್ನು ಕೊಡುತ್ತದೆ. ಆದುದರಿಂದ, ಬಾಯಿಯ ಪಟ್ಟಿಯನ್ನು ಕಟ್ಟಿಕೊಳ್ಳುವವರಿಗಿಂತ, ಕಟ್ಟಿಕೊಳ್ಳದವರು ಧರ್ಮಾತ್ಮರಾಗಿರುತ್ತಾರೆ. ಮತ್ತು ಬಾಯಿಯ ಮೇಲೆ ಪಟ್ಟಿಯನ್ನು ಕಟ್ಟಿಕೊಳ್ಳುವುದರಿಂದ, ಯಥಾಯೋಗ್ಯವಾದ ಸ್ಥಾನಪ್ರಯತ್ನದೊಂದಿಗೆ ಅಕ್ಷರಗಳ ಉಚ್ಚಾರಣವೂ ಕೂಡ ಆಗುವುದಿಲ್ಲ. ನಿರನುನಾಸಿಕವಾದ[೬೫] ಅಕ್ಷರಗಳನ್ನು ಸಾನುನಾಸಿಕವಾಗಿ ಉಚ್ಚರಿಸುವುದರಿಂದ ನಿಮಗೆ ದೋಷ ತಟ್ಟುತ್ತದೆ. ಮತ್ತು ಬಾಯಿಯ ಪಟ್ಟಿಯನ್ನು ಕಟ್ಟಿಕೊಳ್ಳುವುದರಿಂದ, ದುರ್ಗಂಧವೂ ಕೂಡ ಹೆಚ್ಚುತ್ತದೆ. ಏಕೆಂದರೆ, ಶರೀರದೊಳಗೆ ದುರ್ಗಂಧ ತುಂಬಿಕೊಂಡಿದೆ. ಶರೀರದಿಂದ ಎಷ್ಟು ವಾಯು ಹೊರಡುತ್ತದೋ, ಅದು ದುರ್ಗಂಧಯುಕ್ತವೆಂದು ಪ್ರತ್ಯಕ್ಷವಾಗಿದೆ. ಅದು ತಡೆಯಲ್ಪಟ್ಟರೆ ದುರ್ಗಂಧವೂ ಕೂಡ ಅಧಿಕರಾಗಿ ವರ್ಧಿಸುತ್ತದೆ. ಹೇಗೆ ಮುಚ್ಚಲ್ಪಟ್ಟ ಚರಂಡಿಯು ಹೆಚ್ಚು ದುರ್ಗಂಧಯುಕ್ತವೂ ಮತ್ತು ತೆರೆಯಲ್ಪಟ್ಟಿರುವುದು ಕಡಿಮೆ ದುರ್ಗುಂಧಯುಕ್ತವೂ ಆಗಿರುತ್ತದೋ, ಹಾಗೆಯೇ ಬಾಯಿಯ ಪಟ್ಟಿಯನ್ನು ಕಟ್ಟಿಕೊಳ್ಳುವುದರಿಂದ ಹಲ್ಲುಗಳನ್ನುಜ್ಜುವುದು–ಬಾಯಿ–ಮುಖ ತೊಳೆದುಕೊಳ್ಳುವುದು ಮತ್ತು ಮೀಯುವುದನ್ನು ಮಾಡದಿರುವುದರಿಂದ, ಹಾಗೆಯೇ ಬಟ್ಟೆಗಳನ್ನು ಒಗೆಯದಿರುವುದರಿಂದ, ನಿಮ್ಮ ಶರೀರಗಳಿಂದ ಅಧಿಕದುರ್ಗಂಧವು ಉತ್ಪನ್ನವಾಗಿ, ಜಗತ್ತಿನಲ್ಲಿ ಬಹಳ ರೋಗಗಳನ್ನುಂಟುಮಾಡಿ ಜೀವರಿಗೆ ಎಷ್ಟು ನೋವನ್ನು ಕೊಡುತ್ತವೋ, ಅಷ್ಟು ಪಾಪ ನಿಮಗೆ ಹೆಚ್ಚಾಗಿ ತಗಲುತ್ತದೆ. ಜಾತ್ರೆ–ಮೊದಲಾದುದರಲ್ಲಿ ಹೆಚ್ಚು ದುರ್ಗಂಧ ಉಂಟಾಗುವುದರಿಂದ 'ವಿಷೂಟಿಕಾ' ಎಂದರೆ ವಾಂತಿಭೇದಿ ಮೊದಲಾದ ಬಹಳ ವಿಧದ ರೋಗಗಳು ಉತ್ಪನ್ನವಾಗಿ ಜೀವರಿಗೆ ದುಃಖದಾಯಕವಾಗುತ್ತವೆ ಮತ್ತು ದುರ್ಗಂಧ ಕಡಿಮೆಯಾಗುವುದರಿಂದ ರೋಗಗಳೂ ಕಡಿಮೆಯಾಗಿ ಜೀವರಿಗೆ ಬಹಳ ದುಃಖ ಉಂಟಾಗುವುದಿಲ್ಲ. ಈ ಕಾರಣದಿಂದ, ನೀವು ಅಧಿಕದುರ್ಗಂಧವನ್ನು ಹರಡುವುದರಿಂದ, ಅಧಿಕ ಅಪರಾಧಿಗಳಾಗಿರುತ್ತೀರಿ. ಮತ್ತು ಯಾರು ಬಾಯಿಯ ಪಟ್ಟಿಯನ್ನು ಕಟ್ಟಿಕೊಳ್ಳುವುದಿಲ್ಲವೋ, ದಂತ

೬೫. ಙ, ಞ, ಣ, ನ, ಮ ಮತ್ತು ಅನುಸ್ವಾರ ಇವು ಮೂಗಿನ ನೆರವಿನಿಂದ ಉಚ್ಚರಿಸಲ್ಪಡುವುದರಿಂದ ಅನುನಾಸಿಕಗಳು. ಮೂಗಿನ ನೆರವು ಬೇಡದ ಅನ್ಯಾಕ್ಷರಗಳು ನಿರಮನಾಸಿಕಗಳು.

ಧಾವನ-ಮುಖಪ್ರಕ್ಷಾಳನ-ಸ್ನಾನಗಳನ್ನು ಮಾಡುತ್ತಾರೋ, ಬಟ್ಟೆಗಳನ್ನು ಶುದ್ಧವಾಗಿಟ್ಟುಕೊಳ್ಳುತ್ತಾರೋ, ಅವರು ನಿಮಗಿಂತ ಬಹಳ ಉತ್ತಮರಾಗಿರುತ್ತಾರೆ.

ಹೇಗೆ ಕೊಳಕು ಜನರ ದುರ್ಗಂಧಯುಕ್ತ ಸಹವಾಸದಿಂದ ದೂರವಿರುವವರು ಬಹಳ ಉತ್ತಮರಾಗಿರುತ್ತಾರೋ, ಹಾಗೆ ಹೊಲಸು ಜನರ ದುರ್ಗಂಧಯುಕ್ತ ಸಹವಾಸದಿಂದ ಜನರು ಉತ್ತಮ ಬುದ್ಧಿಯುಕ್ತರಾಗಲಾರರು. ಹಾಗೆಯೇ ನಿಮ್ಮ ಹಾಗೂ ನಿಮ್ಮ ಸಂಗಡಿಗರ ಬುದ್ಧಿಯೂ ಕೂಡ ವರ್ಧಿಸುವುದಿಲ್ಲ. ಹೇಗೆ ರೋಗದ ಆಧಿಕ್ಯದಿಂದ ಮತ್ತು ಬುದ್ಧಿಯ ಸ್ವಲ್ಪತ್ವದಿಂದ ಧರ್ಮಾನುಷ್ಠಾನದಲ್ಲಿ ಬಾಧೆಯುಂಟಾಗುತ್ತದೋ, ಹಾಗೆಯೇ ದುರ್ಗಂಧಯುಕ್ತರಾದ ನಿಮ್ಮ ಮತ್ತು ನಿಮ್ಮ ಸಂಗಡಿಗರ ಸ್ಥಿತಿಯೂ ಆಗಿರಬಹುದು.

**ಪ್ರಶ್ನೆ:**- ಹೇಗೆ ಮುಚ್ಚಲ್ಪಟ್ಟ ಮನೆಯಲ್ಲಿ ಹೊತ್ತಿಸಿದ ಬೆಂಕಿಯಜ್ವಾಲೆ ಹೊರ ಹೊರಟು, ಹೊರಗಣ ಜೀವರಿಗೆ ದುಃಖವನ್ನು ಉಂಟುಮಾಡಲಾರದೋ, ಹಾಗೆ ನಾವು ಬಾಯಿಗೆ ಪಟ್ಟಿಕಟ್ಟಿಕೊಂಡು, ವಾಯುವನ್ನು ತಡೆದು, ಹೊರಗಣ ಜೀವರಿಗೆ ಕಡಿಮೆ ದುಃಖವನ್ನು ಕೊಡುವವರಾಗಿದ್ದೇವೆ. ಬಾಯಿಯ ಪಟ್ಟಿಯನ್ನು ಕಟ್ಟುವುದರಿಂದ, ಹೊರಗಣ ವಾಯುವಿನ ಜೀವರಿಗೆ ನೋವು ಉಂಟಾಗುವುದಿಲ್ಲ. ಮತ್ತು ಹೇಗೆ ಎದುರಿಗೆ ಬೆಂಕಿ ಉರಿಯುತ್ತಿದ್ದಾಗ, ಅದಕ್ಕೆ ಕೈಯನ್ನು ಅಡ್ಡಹಿಡಿಯುವುದರಿಂದ, ಕಾವು ಕಡಿಮೆ ತಗಲುತ್ತದೋ, ಹಾಗೆಯೇ ಬಾಯಿಗೆ ಪಟ್ಟಿಕಟ್ಟುವುದರಿಂದ ವಾಯುಕಾಯಜೀವರಿಗೆ ಕಡಿಮೆನೋವಾಗುವುದು-ಎಂದು ತಿಳಿಯಿರಿ. ಮತ್ತು ವಾಯುವಿನ ಜೀವರು ಶರೀರ ಯುಕ್ತರಾಗಿರುವುದರಿಂದ, ಅವರಿಗೆ ನೋವು ಅವಶ್ಯವಾಗಿಯೂ ಆಗುತ್ತದೆ.

**ಉತ್ತರ:**- ಇದು ನಿಮ್ಮ ಹುಡುಗುತನದ ಮಾತಾಗಿದೆ. ಮೊದಲಾಗಿ ನೋಡಿರಿ. ಎಲ್ಲಿ ರಂಧ್ರವಿರುವುದಿಲ್ಲವೋ, ಮತ್ತು ಒಳಗಿನ ಗಾಳಿಯ ಸೇರುವಿಕೆ ಹೊರಗಿನ ಗಾಳಿಯೊಂದಿಗೆ ಆಗುವುದಿಲ್ಲವೋ, ಅಲ್ಲಿ ಬೆಂಕಿ ಉರಿಯಲೇಲಾರದು. ಇದನ್ನು ಪ್ರತ್ಯಕ್ಷವಾಗಿ ನೋಡಬಯಸುವಿರಾದರೆ, ಯಾವುದಾದರೂ ಗೂಡಿನಲ್ಲಿ ದೀಪವನ್ನು ಹೊತ್ತಿಸಿಟ್ಟು, ಎಲ್ಲ ಛಿದ್ರಗಳನ್ನೂ ಮುಚ್ಚಿಬಿಟ್ಟು ನೋಡಿರಿ, ಆಗ ದೀಪ ಅದೇ ಕಾಲಕ್ಕೆ ಆರಿಹೋಗುವುದು. ಹೇಗೆ ಭೂಮಿಯ ಮೇಲೆ ವಾಸಿಸುವ ಮಾನವರೇ ಮೊದಲಾದ ಪ್ರಾಣವಂತರು ಹೊರಗಿನ ವಾಯುವಿನ ಸಂಪರ್ಕವಿಲ್ಲದೆ ಜೀವಿಸಲಾರರೋ, ಹಾಗೆ ಬೆಂಕಿಯೂ ಕೂಡ ಉರಿಯಲಾರದು. ಯಾವಾಗ ಒಂದು ಕಡೆಯಿಂದ ಅಗ್ನಿಯ ವೇಗ ತಡೆಯಲ್ಪಡುವುದೋ, ಆಗ ಇನ್ನೊಂದು ಕಡೆಯಿಂದ ಅಧಿಕವೇಗದಿಂದ ಹೊರನುಗ್ಗುವುದು. ಮತ್ತು ಕೈಯನ್ನು ಅಡ್ಡ ಹಿಡಿಯುವುದರಿಂದ ಮುಖಕ್ಕೆ ಶಾಖ ಕಡಿಮೆ ತಗಲುತ್ತದೆ; ಆದರೆ ಆ ಶಾಖ ಕೈಮೇಲೆ ಹೆಚ್ಚು ತಟ್ಟುತ್ತಲೇ ಇರುತ್ತದೆ. ಆದುದರಿಂದ ನಿಮ್ಮ ಮಾತು ಸರಿಯಲ್ಲ.

**ಪ್ರಶ್ನೆ:**- ಯಾವಾಗ ಯಾವನಾದರೂ ದೊಡ್ಡ ಮನುಷ್ಯನೊಂದಿಗೆ ಚಿಕ್ಕಮನುಷ್ಯನು ಕಿವಿಯಲ್ಲಿ ಆಗಲಿ, ಹತ್ತಿರದಿಂದ ಆಗಲಿ ಮಾತನಾಡುತ್ತಾನೋ, ಆಗ ತನ್ನ ಬಾಯಿಯ ಮೇಲೆ ಬಟ್ಟೆಯ ಸೆರಗನ್ನಾಗಲಿ ಅಥವಾ ಕೈಯನ್ನಾಗಲಿ ಅಡ್ಡವಾಗಿ ಹಿಡಿಯುತ್ತಾನೆಂಬುದನ್ನು ಪ್ರತಿಯೊಬ್ಬನೂ ಬಲ್ಲನು. ಬಾಯಿನಿಂದ ಚಿಮ್ಮಿದ ಉಗುಳಾಗಲಿ ಅಥವಾ ದುರ್ಗಂಧವಾಗಲಿ ಅವನಿಗೆ ತಾಗದಿರಲಿ-ಎಂಬುದೇ ಉದ್ದೇಶ್ಯವಾಗಿರುತ್ತದೆ. ಮತ್ತು ಯಾವಾಗ ಪುಸ್ತಕವನ್ನು ಓದುತ್ತಾನೋ, ಆಗ ಅವಶ್ಯವಾಗಿ ಉಗುಳು ಚಿಮ್ಮಿ ಅದರ ಮೇಲೆ ಬೀಳುವುದರಿಂದ ಎಂಜಲಾಗಿ ಅದು ಹಾಳಾಗಿ ಹೋಗುತ್ತದೆ. ಆದುದರಿಂದ ಬಾಯಿಯ ಮೇಲೆ ಪಟ್ಟಿಕಟ್ಟಿಕೊಳ್ಳುವುದು ಒಳ್ಳೆಯದಾಗುತ್ತದೆ.

**ಉತ್ತರ:**- ಇದರಿಂದ, ಜೀವ-ರಕ್ಷಣೆಗಾಗಿ ಬಾಯಿಗೆ ಪಟ್ಟಿಕಟ್ಟುವುದು ವ್ಯರ್ಥವೆಂಬುದು ಸಿದ್ಧವಾಯಿತು. ಯಾವಾಗ ಯಾವನಾದರೂ ದೊಡ್ಡ ಮನುಷ್ಯನೊಂದಿಗೆ ಮಾತನಾಡುತ್ತಾನೋ, ಆಗ ತನ್ನ ಬಾಯಿಯ ಮೇಲೆ ಕೈಯನ್ನು ಅಥವಾ ವಸ್ತ್ರವನ್ನಿಟ್ಟುಕೊಳ್ಳುವುದು ಆ ಗುಪ್ತವಾದ ಮಾತನ್ನು ಬೇರೆಯನಾವನೂ ಕೇಳದಿರಲಿ-ಎಂಬ ಉದ್ದೇಶ್ಯದಿಂದ ಮಾತ್ರ. ಏಕೆಂದರೆ, ಯಾವಾಗ ಯಾವನಾದರೂ ಪ್ರಕಟವಾದ ಮಾತನ್ನಾಡುತ್ತಾನೋ, ಆಗ ಯಾವನೂ ಬಾಯಿಯ ಮೇಲೆ ಕೈಯನ್ನು ಅಥವಾ ಬಟ್ಟೆಯ ಸೆರಗನ್ನು ಇಟ್ಟುಕೊಳ್ಳುವುದಿಲ್ಲ. ಇದರಿಂದ ಈ ಮಾತು ಗುಪ್ತವಾದ ಮಾತಿಗೆ ಮಾತ್ರ ಅನ್ವಯಿಸುತ್ತದೆ-ಎಂಬುದು ವಿದಿತವಾಗುತ್ತದೆ.

ಹಲ್ಲುಗಳನ್ನು ಉಜ್ಜುವುದು ಮೊದಲಾದುವನ್ನು ಮಾಡದಿರುವುದರಿಂದ ನಿಮ್ಮ ಬಾಯಿಯೇ ಮೊದಲಾದ ಅವಯವಗಳಿಂದ ಬಹಳ ದುರ್ಗಂಧ ಹೊರಡುತ್ತದೆ. ಮತ್ತು ಯಾವಾಗ ನೀವು ಯಾವನ ಹತ್ತಿರವಾದರೂ ಕುಳಿತುಕೊಳ್ಳುತ್ತೀರೋ, ಅಥವಾ ಯಾವನಾದರೂ ನಿಮ್ಮ ಬಳಿ ಕುಳಿತುಕೊಳ್ಳುತ್ತಾನೋ, ಆಗ ದುರ್ಗಂಧ ಒಂದನ್ನುಳಿದು ಮತ್ತೆ ಇನ್ನೇನು ಬರಬಹುದು? ಈ ಮೊದಲಾಗಿ, ಬಾಯಿಗೆ ಅಡ್ಡವಾಗಿ ಕೈಯನ್ನು ಅಥವಾ ಬಟ್ಟೆಯನ್ನು ಇಟ್ಟುಕೊಳ್ಳುವುದರ

ಉದ್ದೇಶ್ಯಗಳು ಬೇರೆ ಬಹಳವಿವೆ. ಉದಾಹರಣೆಗೆ, ಬಹುಜನ ಮಾನವರ ಮುಂದೆ ಗುಪ್ತವಾದ ಮಾತನ್ನು ಹೇಳುವಲ್ಲಿ ಕೈಯನ್ನು ಅಥವಾ ಬಟ್ಟೆಯನ್ನು ಅಡ್ಡಹಿಡಿಯದಿದ್ದರೆ, ಬೇರೆಯವರ ಕಡೆಗೆ ಗಾಳಿ ಹರಡುವುದರಿಂದ, ಮಾತೂ ಕೂಡ ಹರಡಿಹೋಗುವುದು. ಯಾವಾಗ ಅವರಿಬ್ಬರೂ ಏಕಾಂತದಲ್ಲಿ ಮಾತನಾಡುತ್ತಾರೋ, ಆಗ, ಅಲ್ಲಿ ಆಲಿಸುವ ಮೂರನೆಯನು ಯಾವನೂ ಇರದ ಕಾರಣ, ಬಾಯಿಯ ಮೇಲೆ ಕೈಯನ್ನು ಅಥವಾ ಅಡ್ಡವಾಗಿ ಹಿಡಿಯುವುದಿಲ್ಲ. ದೊಡ್ಡವರ ಮೇಲೆ ಮಾತ್ರ ಉಗುಳು ಬೀಳಬಾರದು-ಎಂದರೆ, ಚಿಕ್ಕವರ ಮೇಲೆ ಉಗುಳನ್ನು ಬೀಳಿಸಬೇಕೋ? ಮತ್ತು ಆ ಉಗುಳಿನಿಂದ ಅವನು ದೂರ ಉಳಿಯುವುದೂ ಕೂಡ ಶಕ್ಯವಿಲ್ಲ. ಏಕೆಂದರೆ, ನಾವು ದೂರಸ್ಥರಾಗಿ ಮಾತನಾಡುತ್ತಿದ್ದರೂ, ಗಾಳಿ ನಮ್ಮ ಕಡೆಯಿಂದ ಬೇರೆಯವನ ಕಡೆಗೆ ಬೀಸುತ್ತಿದ್ದರೆ, (ಉಗುಳು) ಸೂಕ್ಷ್ಮವಾಗಿ ಅವನ ಶರೀರದ ಮೇಲೆ ಗಾಳಿಯೊಂದಿಗೆ ತ್ರಸರೇಣುವಾಗಿ ಅವಶ್ಯವಾಗಿ ಬೀಳುವುದು. ಅದರ ದೋಷವನ್ನೆಣಿಸುವುದು ಅವಿದ್ಯೆಯ ಮಾತಾಗಿದೆ. ಏಕೆಂದರೆ, ಬಾಯ ಕಾವಿನಿಂದ ಜೀವರು ಸಾಯುವುದಾದರೆ, ಅಥವಾ ಅವರಿಗೆ ನೋವು ಆಗುವುದಾದರೆ, ವೈಶಾಖದಲ್ಲಿ ಅಥವಾ ಜ್ಯೇಷ್ಠಮಾಸದಲ್ಲಿ ಸೂರ್ಯನ ಮಹದುಷ್ಣತ್ವದಿಂದ ವಾಯುಕಾಯಜೀವರಲ್ಲಿ ಸಾಯದೇ ಒಬ್ಬನೂ ಕೂಡ ಉಳಿಯಲಾರನು. ಆದರೆ, ಆ ಉಷ್ಣತ್ವದಿಂದಲೂ ಆ ಜೀವರು ಸಾಯಲಾರರು. ಆದುದರಿಂದ ಈ ನಿಮ್ಮ ಸಿದ್ಧಾಂತ ಸುಳ್ಳಾಗಿದೆ. ಏಕೆಂದರೆ, ನಿಮ್ಮ ತೀರ್ಥಂಕರರೂ ಕೂಡ ಪೂರ್ಣವಿದ್ವಾಂಸರಾಗಿದ್ದರೆ, ಇಂತಹ ವ್ಯರ್ಥವಾದ ಮಾತುಗಳನ್ನು ಏತಕ್ಕೆ ಆಡುತ್ತಿದ್ದರು? ನೋಡಿರಿ, ಯಾರ ವೃತ್ತಿಯು ಸಮಸ್ತ ಅವಯವಗಳೊಂದಿಗೆ ಸಂನದ್ಧವಾಗಿರುತ್ತದೋ, ಆ ಜೀವರಿಗೆ ಮಾತ್ರ ನೋವು ಉಂಟಾಗುತ್ತದೆ. ಇದಕ್ಕೆ ಪ್ರಮಾಣಃ-

**ಪಂಚಾವಯವಯೋಗಾತ್ ಸುಖಸಂವಿತ್ತಿಃ॥** (ಅಃ- ೫. ಸೂ -೨೭.)

ಇದು ಸಾಂಖ್ಯಶಾಸ್ತ್ರದ ಸೂತ್ರವಾಗಿದೆ. ಯಾವಾಗ ಐದೂ ಇಂದ್ರಿಯಗಳ ಸಂಬಂಧವು ಐದು ವಿಷಯಗಳೊಂದಿಗೆ ಆಗುತ್ತದೋ, ಆಗಲೇ ಸುಖದ ಅಥವಾ ದುಃಖದ ಪ್ರಾಪ್ತಿ ಜೀವನಿಗೆ ಉಂಟಾಗುತ್ತದೆ. ಹೇಗೆ ಕಿವುಡನಿಗೆ ಬೈಗಳಿಂದ, ಕುರುಡನಿಗೆ ರೂಪದಿಂದ ಅಥವಾ ಮುಂದಿನಿಂದ ಸರ್ಪ, ವ್ಯಾಘ್ರ ಮೊದಲಾದ ಭಯಾನಕ ಜೀವರು ಸರಿದು ಹೋಗುವುದರಿಂದ, ಕುಷ್ಠರೋಗಿಗೆ ಸ್ಪರ್ಶದಿಂದ, ಪೀನಸರೋಗಿಗೆ ಗಂಧದಿಂದ ಮತ್ತು ರಸಾಸ್ವಾದಶಕ್ತಿಹೀನನಾಲಗೆಯುಳ್ಳವನಿಗೆ ರಸದಿಂದ ಅನುಭವವಾಗುವುದಿಲ್ಲವೋ, ಹಾಗೆಯೇ ಆ ಜೀವರುಗಳ ವ್ಯವಸ್ಥೆಯೂ ಇದೆ.

ನೋಡಿರಿ, ಯಾವಾಗ ಮಾನವನ ಜೀವನು ಸುಷುಪ್ತಿಯ ಸ್ಥಿತಿಯಲ್ಲಿರುತ್ತಾನೋ, ಆಗ ಅವನಿಗೆ ಸುಖದ ಅಥವಾ ದುಃಖದ ಪ್ರಾಪ್ತಿ ಏನೇನೂ ಆಗುವುದಿಲ್ಲ. ಏಕೆಂದರೆ, ಅವನು ಶರೀರದ ಒಳಗೇನೋ ಇದ್ದಾನೆ; ಆದರೆ ಆ ಕಾಲದಲ್ಲಿ ಹೊರಗಣ ಅವಯವಗಳೊಂದಿಗೆ ಅವನ ಸಂಬಂಧವಿಲ್ಲದಿರುವುದರಿಂದ ಸುಖ-ದುಃಖಗಳ ಪ್ರಾಪ್ತಿಯನ್ನು ಮಾಡಿಕೊಳ್ಳಲಾರನು. ಮತ್ತು ಹೇಗೆ ವೈದ್ಯನು, ಅಥವಾ ಈ ದಿನಗಳ ಡಾಕ್ಟರುಗಳು ಮಾದಕವಸ್ತುಗಳನ್ನು ತಿನ್ನಿಸಿ ಅಥವಾ ಮೂಸಿನೋಡಿಸಿ, ರೋಗಿಯಾದ ಪುರುಷನ ಶರೀರದ ಅವಯವಗಳನ್ನು ಕತ್ತರಿಸುತ್ತಾರೋ, ಅಥವಾ ಸೀಳುತ್ತಾರೋ, ಹೇಗೆ ಅವನಿಗೆ ಆ ಸಮಯದಲ್ಲಿ ಸ್ವಲ್ಪವಾದರೂ ದುಃಖವು ವಿದಿತವಾಗುವುದಿಲ್ಲವೋ, ಹಾಗೆ, ವಾಯುಕಾಯ ಜೀವರಿಗೆ ಅಥವಾ ಬೇರೆ ಸ್ಥಾವರ ಶರೀರಯುಕ್ತರಾದ, ಎಂದರೆ ಗಿಡ-ಮರ-ಬಳ್ಳಿ-ಕಂದಮೂಲಗಳೊಳಗಿನ ಜೀವರಿಗೆ ಸುಖವಾಗಲಿ ಅಥವಾ ದುಃಖವಾಗಲಿ-ಎಂದಿಗೂ ಪ್ರಾಪ್ತವಾಗುವಂತೆಯೇ ಇಲ್ಲ. ಹೇಗೆ ಮೂರ್ಛಿತನಾದ ಪ್ರಾಣವಂತನು ಸುಖ-ದುಃಖಗಳನ್ನು ಹೊಂದಲಾರನೋ, ಹಾಗೆ ಆ ವಾಯುಕಾಯರೇ ಮೊದಲಾದ ಜೀವರೂ ಕೂಡ ಅತ್ಯಂತ ಮೂರ್ಛಿತರಾಗಿರುವುದರಿಂದ ಸುಖ-ದುಃಖಗಳನ್ನು ಅನುಭವಿಸಲಾರರು. ಇನ್ನು ಇವರನ್ನು ನೋವಿನಿಂದ ದೂರವಿಟ್ಟು ರಕ್ಷಿಸುವ ಮಾತು ಹೇಗೆ ಸಿದ್ಧವಾಗಬಲ್ಲದು? ಯಾವಾಗ ಅವರಿಗೆ ಸುಖ-ದುಃಖದ ಪ್ರಾಪ್ತಿಯೇ ಪ್ರತ್ಯಕ್ಷವಾಗಿಲ್ಲವೋ, ಆಗ ಅನುಮಾನ ಮೊದಲಾದುವು ಇಲ್ಲಿ ಹೇಗೆ ಸಂಗತವಾಗಬಲ್ಲವು?

**ಪ್ರಶ್ನೆ:-** ಅವರು ಜೀವರಾಗಿರುವಾಗ, ಅವರಿಗೆ ಸುಖ-ದುಃಖಗಳು ಆಗುವುದಿಲ್ಲವೇಕೆ?

**ಉತ್ತರ:-** ಆಲಿಸಿರಿ ಮುಗ್ಧ ಸೋದರರೇ! ಯಾವಾಗ ನೀವು ಸುಷುಪ್ತಿಯಲ್ಲಿರುತ್ತೀರೋ, ಆಗ ನಿಮಗೆ ಸುಖ-ದುಃಖಗಳು ಪ್ರಾಪ್ತವಾಗುವುದಿಲ್ಲವೇಕೆ? ಸುಖ-ದುಃಖಗಳ ಪ್ರಾಪ್ತಿಯ ಕಾರಣ ಪ್ರಕಟವಾದ ಸಂಬಂಧವಾಗಿರುತ್ತದೆ . ಇದೇ ತಾನೇ ನಾವು, "ಮಾದಕ ದ್ರವ್ಯವನ್ನು ಮೂಸಿನೋಡಿಸಿ, ಡಾಕ್ಟರುಗಳು ಅಂಗಗಳನ್ನು ಸೀಳುತ್ತಾರೆ, ಹರಿಯುತ್ತಾರೆ. ಹಾಗೂ ಕತ್ತರಿಸುತ್ತಾರೆ. ಹೇಗೆ ಆ ರೋಗಿಗಳಿಗೆ ದುಃಖ ಗೊತ್ತಾಗುವುದಿಲ್ಲವೋ, ಹಾಗೆಯೇ ಅತಿ ಮೂರ್ಛಿತರಾದ ಜೀವರಿಗೆ ಸುಖ-ದುಃಖಗಳ ಪ್ರಾಪ್ತಿಯಾಗುವುದಿಲ್ಲ. ಏಕೆಂದರೆ-ಆ ಜೀವರಿಗೆ ಸುಖ-ದುಃಖಗಳ ಪ್ರಾಪ್ತಿಯಾಗಲು ಬೇಕಾದ ಸಾಧನವಾವುದೂ ಇಲ್ಲ.-ಎಂದು ಹೇಳಿಯೇ ಇದ್ದೇವೆ.

**ಪ್ರಶ್ನೆ:**– ನೋಡಿರಿ, ನಿಲೋತಿ–ಎಂದರೆ ಎಷ್ಟು ದಂಟು, ಸೊಪ್ಪು, ಗೆಡ್ಡೆ ಗೆಣಸುಗಳಿವೆಯೋ, ಅವುಗಳನ್ನು ನಾವು ತಿನ್ನುವುದಿಲ್ಲ. ಏಕೆಂದರೆ–ದಂಟು ಸೊಪ್ಪುಗಳಲ್ಲಿ ಬಹಳ ಮತ್ತು ಕಂದ–ಮೂಲಗಳಲ್ಲಿ ಅನಂತಜೀವರಿದ್ದಾರೆ. ನಾವು ಅವುಗಳನ್ನು ತಿನ್ನುವೆವಾದರೆ, ಆ ಜೀವರನ್ನು ಕೊಲ್ಲುವುದರಿಂದ ಮತ್ತು ನೋಯಿಸುವುದರಿಂದ ನಾವು ಪಾಪಿಗಳಾದೇವು.

**ಉತ್ತರ:**– ಇದು ನಿಮ್ಮ ಮಹಾ ಅವಿದ್ಯೆಯ ಮಾತಾಗಿದೆ. ಏಕೆಂದರೆ, ಹಸಿರು ಸೊಪ್ಪುಗಳನ್ನು ತಿನ್ನುವುದರಲ್ಲಿ ಜೀವನ ಸಾಯುವಿಕೆ, ಅವರಿಗೆ ನೋವನ್ನು ಕೊಡುವಿಕೆಗಳನ್ನು ಅಂಗೀಕರಿಸುತ್ತೀರಿ ಹೇಗೆ? ಹೋಗಲಿ. ನೋವಾಗುತ್ತಿರುವುದು ನಿಮಗೆ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ ಮತ್ತು ಕಾಣಿಸುತ್ತದೆಯಾದರೆ, ನಮಗೂ ತೋರಿಸಿರಿ. ನೀವು ಎಂದಿಗೂ ಪ್ರತ್ಯಕ್ಷವಾಗಿ ನೋಡಲಾರಿರಿ ಅಥವಾ ನಮಗೆ ತೋರಿಸಲಾರಿರಿ. ಪ್ರತ್ಯಕ್ಷವಿಲ್ಲದಿರುವಾಗ, ಅನುಮಾನ, ಉಪಮಾನ ಹಾಗೂ ಶಬ್ದ ಪ್ರಮಾಣವೂ ಕೂಡ ಎಂದಿಗೂ ಅನ್ವಯಿಸಲಾರದು. ಮತ್ತೆ, ನಾವು ಮೇಲೆ ಯಾವ ಉತ್ತರವನ್ನು ಕೊಟ್ಟಿದ್ದೇವೋ, ಅದು ಆ ಮಾತಿಗೂ ಉತ್ತರವಾಗಿದೆ. ಏಕೆಂದರೆ, ಅತ್ಯಂತ ಅಂಧಕಾರದಲ್ಲಿಯೂ, ಮಹಾಸುಷುಪ್ತಿಯಲ್ಲಿಯೂ ಮತ್ತು ಮಹಾಮದದಲ್ಲಿಯೂ ಯಾವ ಜೀವರಿದ್ದಾರೋ, ಅವರಿಗೆ ಸುಖ–ದುಃಖಗಳ ಪ್ರಾಪ್ತಿಯನ್ನು ಅಂಗೀಕರಿಸುವುದು, ಯಾರು ನಿಮಗೆ ಇಂತಹ ಯುಕ್ತಿಗೂ ಮತ್ತು ವಿದ್ಯೆಗೂ ವಿರುದ್ಧವಾದ ಉಪದೇಶವನ್ನು ಮಾಡಿದ್ದಾರೋ, ಆ ನಿಮ್ಮ ತೀರ್ಥಂಕರರ ತಪ್ಪೆಂದು ವಿದಿತವಾಗುತ್ತದೆ. ಒಳ್ಳೆಯದು, ಮನೆಗೆ ವಿಸ್ತಾರದ ದೃಷ್ಟಿಯಿಂದ 'ಮಿತಿ'ಯಿರುವಾಗ, ಅದರಲ್ಲಿರುವ ಜೀವರು ಸಂಖ್ಯಾದೃಷ್ಟಿಯಿಂದ 'ಅನಂತ'ರು ಎಂದರೆ ಕೊನೆಯಿಲ್ಲದವರು ಹೇಗೆ ಆಗಲು ಶಕ್ಯವಿದೆ? ಕಂದದ (ಗೆಡ್ಡೆ) ಅಂತವನ್ನು ನಾವು ನೋಡುತ್ತಿರುವಾಗ, ಅದರಲ್ಲಿರುವ ಜೀವರಿಗೆ ಅಂತವೇಕಿಲ್ಲ? ಆದುದರಿಂದ ಈ ನಿಮ್ಮ ಮಾತು ಬಹಳ ತಪ್ಪಾದುದೇ ಆಗಿದೆ.

**ಪ್ರಶ್ನೆ:**– ನೋಡಿರಿ! ನೀವು ಕಾಯಿಸದೆ ತಣ್ಣೀರನ್ನು ಕುಡಿಯುತ್ತೀರಿ. ಹೀಗೆ ಮಹಾಪಾಪವನ್ನು ಮಾಡುತ್ತೀರಿ. ಹೇಗೆ ನಾವು ಬಿಸಿನೀರನ್ನು ಕುಡಿಯುತ್ತೇವೋ, ಹಾಗೆ ನೀವುಗಳೂ ಕುಡಿಯುವ ರೂಢಿಯನ್ನಿಟ್ಟುಕೊಳ್ಳಿರಿ.

**ಉತ್ತರ:**– ಈ ನಿಮ್ಮ ಮಾತೂ ಕೂಡ ಭ್ರಮಜಾಲದ್ದೇ ಆಗಿದೆ. ಏಕೆಂದರೆ, ಯಾವಾಗ ನೀವು ನೀರನ್ನು ಕಾಯಿಸುತ್ತೀರೋ, ಆಗ ನೀರಿನ ಜೀವರೆಲ್ಲರೂ ಸಾಯುತ್ತಿರಬಹುದು! ಮತ್ತು ಅವರ ಶರೀರಗಳೂ ಕೂಡ ನೀರಿನಲ್ಲಿ ಏಕರಸವಾಗಿ, ಆ ನೀರು ಸೋಬಿನ ಅರ್ಕದ ಹಾಗೆ ಆಗಿಹೋಗಿರುವುದರಿಂದ, ನೀವು ಅವರ ಶರೀರಗಳ ದ್ರಾವಕವನ್ನೇ ಕುಡಿಯುತ್ತೀರಿ–ಎಂದೇ ತಿಳಿಯಿರಿ. ಈ ವಿಷಯದಲ್ಲಿ ನೀವು ಮಹಾಪಾಪಿಗಳಾಗಿರುತ್ತೀರಿ; ಮತ್ತು ಯಾರು ತಣ್ಣೀರನ್ನು ಕುಡಿಯುತ್ತಾರೋ, ಅವರು (ಮಹಾಪಾಪಿಗಳು) ಅಲ್ಲ. ಏಕೆಂದರೆ, ಯಾವಾಗ ತಣ್ಣೀರನ್ನು ಕುಡಿಯುತ್ತಾರೋ, ಆಗ ಉದರಕ್ಕೆ ಹೋಗುವುದರಿಂದ ಸ್ವಲ್ಪ ಕಾವನ್ನು ಹೊಂದಿ, ಶ್ವಾಸದೊಂದಿಗೆ ಆ ಜೀವರು ಹೊರಕ್ಕೆ ಹೊರಟುಬಿಡುವರು. ನಾವು ಮೊದಲೇ ಹೇಳಿರುವಂತೆ ಜಲಕಾಯರಾದ ಜೀವರಿಗೆ ಸುಖ–ದುಃಖಗಳು ಪ್ರಾಪ್ತವಾಗಲಾರವು. ಎಂದಮೇಲೆ, ಈ ವಿಷಯದಲ್ಲಿ ಪಾಪ ಯಾರಿಗೂ ತಗಲುವುದಿಲ್ಲ.

**ಪ್ರಶ್ನೆ:**– ಜಾಠರಾಗ್ನಿಯಿಂದ ಹೇಗೋ, ಹಾಗೆ ಕಾವನ್ನು ಹೊಂದಿ ನೀರಿನಿಂದ ಹೊರಕ್ಕೆ ಜೀವರು ಹೊರಟುಹೋಗರೇತಕ್ಕೆ?

**ಉತ್ತರ:**– ಹೌದು; ಹೊರಟೇನೋ ಹೋಗುತ್ತಿದ್ದರು. ಆದರೆ, ನೀವು ಬಾಯಿಯ ಗಾಳಿಯ ಕಾವಿನಿಂದಲೂ ಜೀವನ ಸಾವನ್ನು ಅಂಗೀಕರಿಸುತ್ತೀರಾದರೆ, ನೀರನ್ನು ಕಾಯಿಸುವುದರಿಂದ ನಿಮ್ಮ ಮತಾನುಸಾರ ಜೀವರು ಸತ್ತು ಹೋಗುವರು ಅಥವಾ ಹೆಚ್ಚು ನೋವನ್ನು ಅನುಭವಿಸಿ ಹೊರಡುವರು ಮತ್ತು ಅವರ ಶರೀರಗಳು ಆ ನೀರಿನಲ್ಲಿ ಏಕರಸವಾಗಿ ಹೋಗುವುವು. ಇದರಿಂದ ನೀವು ಹೆಚ್ಚು ಪಾಪಿಗಳಾಗುವಿರೋ ಅಥವಾ ಇಲ್ಲವೋ?

**ಪ್ರಶ್ನೆ:**– ನಾವು ನಮ್ಮ ಕೈಯಿನಿಂದ ನೀರನ್ನು ಬಿಸಿಮಾಡುವುದಿಲ್ಲ ಮತ್ತು ಯಾವನೇ ಗೃಹಸ್ಥನಿಗೂ ನೀರನ್ನು ಕಾಯಿಸಬೇಕೆಂದು ಆಜ್ಞೆಯನ್ನೂ ಕೊಡುವುದಿಲ್ಲ. ಆದುದರಿಂದ, ನಮಗೆ ಪಾಪವಿಲ್ಲ.

**ಉತ್ತರ:**– ನೀವು ಬಿಸಿನೀರನ್ನು ತೆಗೆದುಕೊಳ್ಳದಿದ್ದರೆ, ಕುಡಿಯದೇ ಇದ್ದರೆ, ಗೃಹಸ್ಥರು ಕಾಯಿಸುತ್ತಿದ್ದರೇಕೆ? ಆದುದರಿಂದ, ಆ ಪಾಪಕ್ಕೆ ನೀವೇ ಭಾಗಿಗಳಾಗಿದ್ದೀರಿ. ಅಷ್ಟೇ ಅಲ್ಲ; ಹೆಚ್ಚು ಪಾಪಿಗಳಾಗಿದ್ದೀರಿ. ಏಕೆಂದರೆ, ನೀವು ಯಾವನಾದರೂ ಒಬ್ಬ ಗೃಹಸ್ಥನಿಗೆ ಕಾಯಿಸಲು ಹೇಳಿದ್ದಲ್ಲಿ, ಒಂದೇ ಕಡೆ ಕಾಯಿಸಲ್ಪಡುತ್ತಿತ್ತು. ಆ ಗೃಹಸ್ಥರು – "ಸಾಧು ಮಹಾರಾಜರು ಯಾವನ ಮನೆಗೆ ಬರುವರೋ, ತಿಳಿಯದು".–ಎಂಬ ಭ್ರಮದಲ್ಲಿರುತ್ತಾರಾದುದರಿಂದ, ಪ್ರತಿಯೊಬ್ಬ ಗೃಹಸ್ಥನೂ ತನ್ನ ಮನೆಯಲ್ಲಿ ನೀರನ್ನು ಕಾಯಿಸಿಡುತ್ತಾನೆ. ಇದರ ಪಾಪಕ್ಕೆ ಮುಖ್ಯವಾದ ಭಾಗಿಗಳು ನೀವೇ ಆಗಿರತ್ತೀರಿ. ಎರಡನೆಯದಾಗಿ, ಹೆಚ್ಚಾಗಿ ಸೌದೆಯನ್ನು ಮತ್ತು

ಬೆಂಕಿಯನ್ನು ಉರಿಸುವುದರಿಂದ, ಕಾಯಿಸುವುದರಿಂದಲೂ ಕೂಡ ಮೇಲೆ ಹೇಳಿರುವ ಪ್ರಕಾರ ಅಡಿಗೆ, ಬೇಸಾಯ, ಮತ್ತು ವ್ಯಾಪರ-ಮೊದಲಾದುವುಗಳಲ್ಲಿ ಹೆಚ್ಚು ಪಾಪಿಗಳೂ ಹಾಗೂ ನರಕಗಾಮಿಗಳೂ ಆಗುತ್ತೀರಿ. ಪುನಃ ನೀವು ನೀರನ್ನು ಕಾಯಿಸುವ ಮುಖ್ಯ ನಿಮಿತ್ತವಾಗಿರುವುದರಿಂದ, ಮತ್ತು ನೀವು ಬಿಸಿ ನೀರನ್ನು ಕುಡಿಯಬೇಕೆಂಬ ಮತ್ತು ತಣ್ಣೀರನ್ನು ಕುಡಿಯಬಾರದೆಂಬ ಉಪದೇಶಗಳನ್ನು ಮಾಡುವುದರಿಂದ, ನೀವೇ ಪಾಪದ ಮುಖ್ಯ ಭಾಗಿಗಳಾಗಿರುತ್ತೀರಿ. ಮತ್ತು ಯಾರು ನಿಮ್ಮ ಉಪದೇಶವನ್ನೊಪ್ಪಿಕೊಂಡು ಇಂತಹ ಆಚರಣಗಳನ್ನು ಮಾಡುತ್ತಾರೋ, ಅವರೂ ಕೂಡ ಪಾಪಿಗಳಾಗಿದ್ದಾರೆ.

ಈ ರೀತಿಯ ನಂಬಿಕೆಯನ್ನುಳ್ಳ ನೀವು ಮಹಾ ಅವಿದ್ಯೆಯಲ್ಲಿದ್ದೀರೋ ಅಥವಾ ಇಲ್ಲವೋ, ನೋಡಿಕೊಳ್ಳಿರಿ. ಚಿಕ್ಕ ಚಿಕ್ಕ ಜೀವರ ಮೇಲೆ ದಯೆಯನ್ನಿಡುವುದು ಮತ್ತು ಅನ್ಯಮತೀಯರ ನಿಂದೆಯನ್ನೂ, ಅನುಪಕಾರವನ್ನೂ ಮಾಡುವುದು ಚಿಕ್ಕ ಪಾಪವೇನು? ಮತ್ತು ನಿಮ್ಮ ತೀರ್ಥಂಕರರ ಮತವು ಸತ್ಯವಾಗಿದ್ದಲ್ಲಿ, ಸೃಷ್ಟಿಯಲ್ಲಿಷ್ಟು ಮಳೆಯನ್ನೂ, ನದಿಗಳ ಪ್ರವಾಹವನ್ನೂ ಮತ್ತು ಇಷ್ಟು ಜಲವನ್ನೂ ಈಶ್ವರನೇತಕ್ಕೆ ಉತ್ಪನ್ನ ಮಾಡಿದನು? ಮತ್ತು ಸೂರ್ಯನನ್ನೂ ಕೂಡ ಸೃಜಿಸಬಾರದಿತ್ತು. ಏಕೆಂದರೆ, ಇದರಲ್ಲಿ ನಿಮ್ಮ ಮತಾನುಸಾರ ಕೋಟ್ಯಾನುಕೋಟಿ ಜೀವರು ಸಾಯುತ್ತಲೇ ಇರಬಹುದು. ಈ ಎಲ್ಲವೂ ಇದ್ದುವು-ಎಂದ ಮೇಲೆ, ಯಾರನ್ನು ನೀವು ಈಶ್ವರರೆಂದು ಅಂಗೀಕರಿಸುತ್ತೀರೋ, ಅವರು ದಯೆಯನ್ನು ಮಾಡಿ, ಸೂರ್ಯನ ತಾಪವನ್ನೂ, ಮತ್ತು ಮೇಘವನ್ನೂ ಕೊನೆಗಾಣಿಸಲಿಲ್ಲವೇಕೆ? ನಾವು ಹೇಳಿರುವಂತೆ, ಸುಖ-ದುಃಖಾನುಭವದ ಸಾಧನಗಳನ್ನು ಹೊಂದಿರುವ ಪ್ರಾಣಿಗಳನ್ನು ಬಿಟ್ಟು, ಕಂದಗಳಲ್ಲಿ, ಮೂಲಗಳೇ ಮೊದಲಾದುವುಗಳಲ್ಲಿರುವ ಜೀವರಿಗೆ ಸುಖ-ದುಃಖ ಪ್ರಾಪ್ತಿಯಾಗುವುದಿಲ್ಲ. ಸರ್ವಥಾ ಸರ್ವಜೀವರ ಮೇಲೆಯೂ ದಯೆಯನ್ನು ಮಾಡುವುದೂ ಕೂಡ ದುಃಖದ ಕಾರಣರಾಗುತ್ತದೆ. ಏಕೆಂದರೆ, ಮಾನವರೆಲ್ಲರೂ ನಿಮ್ಮ ಮತಕ್ಕನುಸಾರವಾಗಿಯೇ ಆಗಿಹೋದರೆ, ಚೋರರಿಗೂ, ದರೋಡೆಕಾರರಿಗೂ ಯಾವನೂ ಶಿಕ್ಷೆಯನ್ನು ವಿಧಿಸದೇ ಇದ್ದರೆ, ಎಷ್ಟು ದೊಡ್ಡ ಪಾಪ ತಲೆಯೆತ್ತಿ ನಿಂತೀತು? ಆದುದರಿಂದ, ದುಷ್ಟರಿಗೆ ತಕ್ಕ ರೀತಿಯಲ್ಲಿ ಶಿಕ್ಷೆಯನ್ನು ವಿಧಿಸುವುದರಲ್ಲಿ ಮತ್ತು ಶ್ರೇಷ್ಠರಾದವರ ಪಾಲನ ಮಾಡುವುದರಲ್ಲಿ ದಯೆ  ಮತ್ತು ಇದಕ್ಕೆ ವಿರುದ್ಧವಾಗಿ ಮಾಡುವುದರಲ್ಲಿ ದಯೆ-ಕ್ಷಮೆ ಎಂಬ ಧರ್ಮದ ನಾಶವಿದೆ.

ಅದೆಷ್ಟೋ ಮಂದಿ ಜೈನರು ಅಂಗಡಿಗಳನ್ನಿಡುತ್ತಾರೆ; ಆ ವ್ಯವಹಾರಗಳಲ್ಲಿ ಸುಳ್ಳನ್ನು ಹೇಳುತ್ತಾರೆ; ಪರಧನವನ್ನು ಕಸಿದುಕೊಳ್ಳುತ್ತಾರೆ ಮತ್ತು ದೀನರನ್ನು ವಂಚಿಸುವುದೇ ಮೊದಲಾದ ದುಷ್ಕರ್ಮಗಳನ್ನು ಮಾಡುತ್ತಾರೆ. ಅವುಗಳ ನಿವಾರಣೆಗಾಗಿ ವಿಶೇಷವಾದ ಉಪದೇಶಗಳನ್ನೇಕೆ ಮಾಡುವುದಿಲ್ಲ? ಮತ್ತು ಬಾಯಿಗೆ ಪಟ್ಟಿ ಕಟ್ಟಿಕೊಳ್ಳುವುದೇ ಮೊದಲಾದ ದಂಭಗಳಲ್ಲಿ ಏತಕ್ಕಿರುತ್ತೀರಿ?

ಯಾವಾಗ ನೀವು ಶಿಷ್ಯರನ್ನೂ, ಶಿಷ್ಯೆಯರನ್ನೂ ಮಾಡಿಕೊಳ್ಳುತ್ತೀರೋ, ಆಗ ಕೂದಲುಗಳನ್ನು ಕೀಳುವುದರಿಂದ ಮತ್ತು ಬಹಳ ದಿನ ಉಪವಾಸ ಮಾಡುವುದರಿಂದ ಬೇರೆಯವರ ಅಥವಾ ತಮ್ಮ ಆತ್ಮನಿಗೆ ನೋವನ್ನಿತ್ತು ಮತ್ತು ಸ್ವತಃ ನೊಂದು ಬೇರೆಯವರಿಗೂ ದುಃಖವನ್ನು ಕೊಡುತ್ತೀರಿ ಮತ್ತು ಆತ್ಮಹತ್ಯೆ-ಎಂದರೆ ಆತ್ಮನಿಗೆ ದುಃಖದಾಯಕರಾಗಿ, ಹಿಂಸಕರಾಗುತ್ತೀರಿ ಏತಕ್ಕೆ? ಆನೆ, ಕುದುರೆ, ಎತ್ತು, ಒಂಟೆ ಇವುಗಳ ಮೇಲೆ ಏರುವುದರಲ್ಲಿ ಮತ್ತು ಮಾನವರಿಂದ ಪರಿಶ್ರಮವನ್ನು ಮಾಡಿಸುವುದರಲ್ಲಿ ಜೈನರು ಪಾಪವನ್ನು ಎಣಿಸುವುದಿಲ್ಲವೇಕೆ? ನಿಮ್ಮ ಶಿಷ್ಯರು ಅಡ್ಡಾದಿಡ್ಡಿಯ ಮಾತುಗಳನ್ನು ಸತ್ಯವಾಗಿ ಮಾಡಲಾರದೇ ಇರುವಾಗ, ನಿಮ್ಮ ತೀರ್ಥಂಕರರೂ ಸತ್ಯವಾಗಿ ಮಾಡಲಾರರು. ನೀವು ಯಾವಾಗ ಕಥಾವಾಚನ ಮಾಡುತ್ತೀರೋ, ಆಗ ನಿಮ್ಮ ಮತಾನುಸಾರ, ಶ್ರೋತೃಗಳ ಮಾರ್ಗದಲ್ಲಿ ಜೀವರು ಸಾಯುತ್ತಲೇ ಇರಬಹುದು. ಆದುದರಿಂದ ನೀವು ಈ ಪಾಪದ ಮುಖ್ಯ ಕಾರಣವಾಗುತ್ತೀರಿ ಏಕೆ? ಈ ಅಲ್ಪಕಥನದಿಂದಲೇ ಆ ನೀರು, ಸ್ಥಳ, ಗಾಳಿಯ ಸ್ಥಾವರ ಶರೀರಯುಕ್ತರಾದ ಅತ್ಯಂತ ಮೂರ್ಛಿತರಾದ ಜೀವರಿಗೆ ದುಃಖ ಅಥವಾ ಸುಖ ಎಂದಿಗೂ ಲಭಿಸಲಾರದು-ಎಂದು ವಿಸ್ತೃತವಾಗಿ ತಿಳಿದುಕೊಳ್ಳಬೇಕು.

ಈಗ ಜೈನರ ಇನ್ನೂ ಸ್ವಲ್ಪ ಅಸಂಭವವಾದ ಕಥೆಗಳನ್ನು ಬರೆಯುತ್ತೇವೆ. ಆಲಿಸಬೇಕು ಮತ್ತು ತನ್ನ ಕೈಯಿಯ ಮೂರೂವರೆಯಷ್ಟು ಉದ್ದವು ಒಂದು ಧನುಷ್-ಎಂದೂ, ಮತ್ತು ಮೊದಲು ಹೇಗೆ ಬರೆದಿದ್ದೇವೆಯೋ, ಹಾಗೆಯೇ ಕಾಲದ ಸಂಖ್ಯೆಯೆಂದೂ ತಿಳಿದುಕೊಳ್ಳುವುದರ  ಕಡೆಗೆ ಗಮನ ಕೊಡಬೇಕು.

"ರತ್ನಸಾರ" ಭಾಗ ೧ರಲ್ಲಿ, ೧೬೬-೧೬೭ನೆಯ ಪುಟದವರೆಗೆ ಹೀಗೆ ಬರೆದಿದ್ದಾರೆ:- (೧) ಋಷಭದೇವನ ಶರೀರ ೫೦೦ ಧನುಷ್ಯ ಉದ್ದವಿದ್ದಿತು ಮತ್ತು ೮೪ ಲಕ್ಷ 'ಪೂರ್ವ'[೬೬] ವರ್ಷದಷ್ಟು ಆಯಸ್ಸಿದ್ದಿತು. (೨) ಅಜಿತನಾಥನ ಶರೀರ ೪೫೦ ಧನುಷ್ಯಿನ

೬೬. 'ಪೂರ್ವ' ಎಂದರೆ ಹಿಂದೆ ತಿಳಿಸಿದಂತೆ ಎಪ್ಪತ್ತುಲಕ್ಷ ಕೋಟಿ, ಐವತ್ತಾರು ಸಾವಿರ ಕೋಟಿ ವರ್ಷಗಳಾಗುತ್ತವೆ.

ಪರಿಮಾಣವಿದ್ದಿತು ಮತ್ತು ೭೨ ಲಕ್ಷ ಪೂರ್ವ ವರ್ಷದಷ್ಟು ಆಯಸ್ಸಿದ್ದಿತು. (೩) ಸಂಭವನಾಥನ ಶರೀರ ೪೦೦ ಧನುಷ್ಷಿನ ಪರಿಮಾಣವುಳ್ಳದಾಗಿದ್ದಿತು ಮತ್ತು ೬೦ ಲಕ್ಷ ಪೂರ್ವ ವರ್ಷದ ಆಯಸ್ಸಿದ್ದಿತು. (೪) ಅಭಿನಂದನನ ಶರೀರದ ಪರಿಮಾಣ ೩೫೦ ಧನುಷ್ಷಿನಷ್ಟಿದ್ದಿತು ಮತ್ತು ೫೦ ಲಕ್ಷ ಪೂರ್ವವರ್ಷಗಳ ಆಯಸ್ಸಿದ್ದಿತು. (೫) ಸುಮತಿನಾಥನ ಶರೀರದ ಪರಿಮಾಣ ೩೦೦ ಧನುಷ್ಷಿನಷ್ಟಿದ್ದಿತು ಮತ್ತು ೪೦ ಲಕ್ಷ ಪೂರ್ವ ವರ್ಷಗಳ ಆಯಸ್ಸಿದ್ದಿತು. (೬) ಪದ್ಮಪ್ರಭನ ಶರೀರ ೨೪೦ ಧನುಷ್ಷಿನಷ್ಟಿದ್ದಿತು ಮತ್ತು ೩೦ ಲಕ್ಷ ಪೂರ್ವವರ್ಷಗಳ ಆಯಸ್ಸಿನಷ್ಟಿದ್ದಿತು. (೭) ಪಾರ್ಶ್ವನಾಥನ ಶರೀರ ೨೦೦ ಧನುಷ್ಷಿನಷ್ಟಿದ್ದಿತು ಮತ್ತು ೨೦ ಲಕ್ಷ ಪೂರ್ವ ವರ್ಷಗಳ ಆಯಸ್ಸಿದ್ದಿತು. (೮) ಚಂದ್ರಪ್ರಭನ ಶರೀರ ೧೫೦ ಧನುಷ್ಷಿನ ಪರಿಮಾಣವನ್ನುಳ್ಳದಾಗಿತ್ತು ಮತ್ತು ೧೦ ಲಕ್ಷ ಪೂರ್ವ ವರ್ಷಗಳ ಆಯಸ್ಸಿದ್ದಿತು. (೯) ಸುವಿಧಿನಾಥನ ಶರೀರ ೧೦೦ ಧನುಷ್ಷಿನದಾಗಿತ್ತು ಮತ್ತು ಎರಡು ಲಕ್ಷ ಪೂರ್ವ ವರ್ಷಗಳ ಆಯಸ್ಸಿದ್ದಿತು. (೧೦) ಶೀತಲನಾಥನ ಶರೀರ ೯೦ ಧನುಷ್ಷಿನಷ್ಟಿದ್ದಿತು ಮತ್ತು ಒಂದು ಲಕ್ಷ ಪೂರ್ವ ವರ್ಷಗಳ ಆಯಸ್ಸಿದ್ದಿತು. (೧೧) ಶ್ರೇಯಾಂಸನಾಥನ ಶರೀರ ೮೦ ಧನುಷ್ಷಿನಷ್ಟಿದ್ದಿತು ಮತ್ತು ೮೪ ಲಕ್ಷ ವರ್ಷದ ಆಯಸ್ಸಿದ್ದಿತು. (೧೨) ವಾಸುಪೂಜ್ಯಸ್ವಾಮಿಯ ಶರೀರ ೭೦ ಧನುಷ್ಷಿನಷ್ಟಿದ್ದಿತು ಮತ್ತು ೭೨ ಲಕ್ಷ ವರ್ಷಗಳ ಆಯಸ್ಸಿದ್ದಿತು. (೧೩) ವಿಮಲನಾಥನ ಶತರೀರ ೬೦ ಧನುಷ್ಷಿನಷ್ಟಿದ್ದಿತು ಮತ್ತು ೬೦ ಲಕ್ಷ ವರ್ಷಗಳ ಆಯಸ್ಸಿದ್ದಿತು. (೧೪) ಅನಂತನಾಥನ ಶರೀರ ೫೦ ಧನುಷ್ಷಿನಷ್ಟಿದ್ದಿತು ಮತ್ತು ೩೦ ಲಕ್ಷ ವರ್ಷಗಳ ಆಯಸ್ಸಿದ್ದಿತು. (೧೫) ಧರ್ಮನಾಥನ ಶರೀರ ೪೫ ಧನುಷ್ಷಿನಷ್ಟಿದ್ದಿತು ಮತ್ತು ೧೦ ಲಕ್ಷ ವರ್ಷಗಳ ಆಯಸ್ಸಿದ್ದಿತು. (೧೬) ಶಾಂತಿನಾಥನ ಶರೀರ ೪೦ ಧನುಷ್ಷಿನಷ್ಟಿದ್ದಿತು ಮತ್ತು ಒಂದು ಲಕ್ಷ ವರ್ಷಗಳ ಆಯಸ್ಸಿನಷ್ಟಿದ್ದಿತು. (೧೭) ಕುಂಥುನಾಥನ ಶರೀರ ೩೫ ಧನುಷ್ಷಿನಷ್ಟಿದ್ದಿತು ಮತ್ತು ೯೫ ಸಾವಿರ ವರ್ಷಗಳ ಆಯಸ್ಸಿದ್ದಿತು. (೧೮) ಅಮನನಾಥನ ಶರೀರ ೩೦ ಧನುಷ್ಷಿನಷ್ಟಿದ್ದಿತು ಮತ್ತು ೮೪ ಸಾವಿರ ವರ್ಷಗಳ ಆಯಸ್ಸಿದ್ದಿತು. (೧೯) ಮಲ್ಲಿನಾಥನ ಶರೀರ ೨೫ ಧನುಷ್ಷಿನಷ್ಟಿದ್ದಿತು ಮತ್ತು ೫೫ ಸಾವಿರ ವರ್ಷಗಳ ಆಯಸ್ಸಿದ್ದಿತು. (೨೦) ಮುನಿಸುವ್ರತನ ಶರೀರ ೨೦ ಧನುಷ್ಷಿನಷ್ಟಿದ್ದಿತು ಮತ್ತು ೩೦ ಸಾವಿರ ವರ್ಷಗಳ ಆಯಸ್ಸಿದ್ದಿತು. (೨೧) ನಮಿನಾಥನ ಶರೀರ ೧೪ ಧನುಷ್ಷಿನಷ್ಟಿದ್ದಿತು ಮತ್ತು ೧೦ ಸಾವಿರ ವರ್ಷಗಳ ಆಯಸ್ಸಿದ್ದಿತು. (೨೨) ನೇಮಿನಾಥನ ಶರೀರ ೧೦ ಧನುಷ್ಷಿನಷ್ಟಿದ್ದಿತು ಮತ್ತು ಒಂದು ಸಾವಿರ ವರ್ಷಗಳ ಆಯಸ್ಸಿದ್ದಿತು. (೨೩) ಪಾರ್ಶ್ವನಾಥನ ಶರೀರ ಒಂಬತ್ತು ಮೊಳಗಳಷ್ಟಿದ್ದಿತು ಮತ್ತು ನೂರು ವರ್ಷಗಳ ಆಯಸ್ಸಿದ್ದಿತು. (೨೪) ಮಹಾವೀರಸ್ವಾಮಿಯ ಶರೀರ ಏಳು ಮೊಳಗಳಷ್ಟಿದ್ದಿತು ಮತ್ತು ೭೨ ವರ್ಷಗಳ ಆಯಸ್ಸಿದ್ದಿತು.

ಈ ೨೪ ಜನ ತೀರ್ಥಂಕರರು ಜೈನರ ಮತದ ಪ್ರತಿಷ್ಠಾಪಕರೂ ಮತ್ತು ಗುರುಗಳೂ ಆಗಿದ್ದಾರೆ. ಇವರನ್ನೇ ಜೈನರು ಪರಮೇಶ್ವರರೆಂದು ಅಂಗೀಕರಿಸುತ್ತಾರೆ ಮತ್ತು ಇವರೆಲ್ಲಾ ಮೋಕ್ಷಕ್ಕೆ ಹೋಗಿದ್ದಾರೆ–(ಎಂದು ನಂಬುತ್ತಾರೆ). ಈ ವಿಷಯದಲ್ಲಿ ಬುದ್ಧಿಶಾಲಿಗಳಾದ ಜನರು "ಮಾನವನ ಶರೀರಗಳು ಇಷ್ಟು ದೊಡ್ಡವಾಗಿರಬಲ್ಲವೇ? ಮತ್ತು ಮಾನವ ದೇಹಕ್ಕೆ ಇಷ್ಟು ಆಯಸ್ಸಿರುವುದು ಎಂದಿಗಾದರೂ ಸಾಧ್ಯವೇ?" ಎಂದು ಆಲೋಚಿಸಲಿ. ಈ ಭೂಗೋಳದಲ್ಲಿ (ಇಂತಹವರು) ಬಹಳ ಕಡಿಮೆ ಮನುಷ್ಯರು ವಾಸಮಾಡಲಾದೀತು. ಇದೇ ಜೈನರುಗಳ ಬುರುಡೆಗಳನ್ನು ಗ್ರಹಿಸಿ, ಪೌರಾಣಿಕರು ಒಂದು ಲಕ್ಷ, ಹತ್ತು ಸಾವಿರ ಮತ್ತು ಒಂದು ಸಾವಿರ ವರ್ಷಗಳ ಆಯಸ್ಸುಗಳ ಬಗೆಗೆ ಬರೆದಿರುವುದೂ ಕೂಡ ಸಂಭವವಾಗಲಾರದು. ಇನ್ನು ಜೈನರ ಕಥನವಾದರೂ ಹೇಗೆ ಸಂಭವವಾಗಬಲ್ಲದು?

ಈಗ ಇನ್ನೂ ಕೇಳಿರಿ. "ಕಲ್ಪಭಾಷ್ಯ"ದ ನಾಲ್ಕನೆಯ ಪುಟದಲ್ಲಿ–"ನಾಗಕೇತನು ಗ್ರಾಮಕ್ಕೆ ಸಮನಾದಷ್ಟು ಒಂದು ದೊಡ್ಡ ಶಿಲೆಯನ್ನು ಬೆರಳಿನ ಮೇಲೆ ಎತ್ತಿಕೊಂಡನು".–ಎಂದು ಬರೆದಿದೆ. ೩೫ನೆಯ ಪುಟದಲ್ಲಿ–"ಮಹಾವೀರನು ಹೆಬ್ಬೆರಳಿನಿಂದ ಭೂಮಿಯನ್ನು ಅದುಮಿದನು; ಅದರಿಂದ ಶೇಷನಾಗನು ನಡುಗಿಹೋದನು!"–ಎಂದೂ, ೪೬ನೆಯ ಪುಟದಲ್ಲಿ–ಮಹಾವೀರನನ್ನು ಸರ್ಪವು ಕಚ್ಚಿತು; ರಕ್ತಕ್ಕೆ ಪ್ರತಿಯಾಗಿ ಹಾಲು ಹೊರಟಿತು! ಮತ್ತು ಆ ಸರ್ಪ ಎಂಟನೆಯ ಸ್ವರ್ಗಕ್ಕೆ ಹೋಯಿತು!–ಎಂದೂ, ೪೭ನೆಯ ಪುಟದಲ್ಲಿ – "ಮಹಾವೀರನ ಪಾದಗಳ ಮೇಲೆ ಪಾಯಸವನ್ನು ಕಾಯಿಸಿದರು; ಮತ್ತು ಪಾದಗಳು ಸುಟ್ಟುಹೋಗಲಿಲ್ಲ!"–ಎಂದೂ, ೧೬ನೆಯ ಪುಟದಲ್ಲಿ – "ಚಿಕ್ಕ ಪಾತ್ರೆಯಲ್ಲಿ ಒಂಟೆಯನ್ನು ಬರಮಾಡಿದನು!"–ಎಂದೂ ಬರೆದಿದೆ.

"ರತ್ನಸಾರ ಭಾಗ–೧"ರ ೧೫ನೆಯ ಪುಟದಲ್ಲಿ–"ಶರೀರದ ಕೊಳೆಯನ್ನು ತೆಗೆಯಬಾರದು; ಕೆರೆಯಲೂ ಬಾರದು"–ಎಂದಿದೆ. "ವಿವೇಕಸಾರ ಭಾಗ–೧"ರ ೧೫ನೆಯ ಪುಟದಲ್ಲಿ–"ದಮನಸಾರನೆಂಬ ಜೈನ ಸಾಧು ಒಬ್ಬನು ಕನಲಿ, ಉದ್ವೇಗಕರ ಸೂತ್ರ ಒಂದನ್ನುಚ್ಚರಿಸಿ, ಒಂದು ಊರಿಗೆ ಬೆಂಕಿ ಹಾಕಿಬಿಟ್ಟನು ಮತ್ತು ಅವನು ಮಹಾವೀರ ತೀರ್ಥಂಕರರಿಗೆ ಅತಿಪ್ರಿಯನಾಗಿದ್ದನು".– ಎಂದು ಬರೆದಿದೆ. ಅದೇ ಗ್ರಂಥದ ೧೨೭ನೆಯ ಪುಟದಲ್ಲಿ "ರಾಜನ ಆಜ್ಞೆಯನ್ನು ಅವಶ್ಯವಾಗಿ

ಪಾಲಿಸಬೇಕು".- ಎಂದು ಬರೆದಿದೆ. ಅದರ ೨೪೭ನೆಯ ಪುಟದಲ್ಲಿ-"ಕೋಶಾ ಎಂಬ ಒಬ್ಬಳು ವೇಶ್ಯೆಯು, ತಟ್ಟೆಯಲ್ಲಿ ಸಾಸಿವೆಯ ರಾಶಿಯನ್ನು ಹಾಕಿ, ಅದರ ಮೇಲೆ ಹೂಗಳಿಂದ ಮುಚ್ಚಲ್ಪಟ್ಟ ಸೂಜಿಯನ್ನು ನಿಲ್ಲಿಸಿ, ಅದರ ಮೇಲೆ ಒಳಿತಾಗಿ ನರ್ತಿಸಿದಳು. ಆದರೆ ಸೂಜಿ ಕಾಲಿಗೆ ಚುಚ್ಚಿಕೊಳ್ಳಲಿಲ್ಲ ಮತ್ತು ಸಾಸಿವೆಯ ರಾಶಿ ಚದುರಲೂ ಇಲ್ಲ".- ಎಂದು ಬರೆದಿದೆ. "ತತ್ತ್ವವಿವೇಕ"ದ ೨೨೮ನೆಯ ಪುಟದಲ್ಲಿ - ಇದೇ ಕೋಶಾ ವೇಶ್ಯೆಯೊಂದಿಗೆ ಸ್ಥೂಲಮುನಿಯೆಂಬ ಒಬ್ಬನು ೧೨ ವರ್ಷಗಳವರೆಗೆ ವಿಷಯ ಸುಖ ಹೊಂದಿದನು. ಅಮೇಲೆ ದೀಕ್ಷೆಯನ್ನು ತೆಗೆದುಕೊಂಡು ಸದ್ಗತಿ ಹೊಂದಿದನು. ಮತ್ತು ಕೋಶಾ ವೇಶ್ಯೆಯೂ ಕೂಡ ಜೈನಧರ್ಮವನ್ನು ಪಾಲಿಸುತ್ತಾ ಸದ್ಗತಿ ಹೊಂದಿದಳು".- ಎಂದು ಬರೆದಿದೆ. "ವಿವೇಕಸಾರ ಭಾಗ-೧"ರ ೧೮೫ನೆಯ ಪುಟದಲ್ಲಿ-ಕೊರಳಿಗೆ ಹಾಕಿ ಕೊಳ್ಳಲ್ಪಡುವ ಸಿದ್ಧಪುರುಷನೊಬ್ಬನ 'ವಸ್ತ್ರ', ಒಬ್ಬ ವೈಶ್ಯನಿಗೆ ಪ್ರತಿದಿನವೂ ೫೦೦ ಸ್ವರ್ಣ ಮುದ್ರಿಕೆಗಳನ್ನು ಕೊಡುತ್ತಿದ್ದಿತು".-ಎಂದೂ ಬರೆದಿದೆ. ಅದೇ ಗ್ರಂಥದ ೨೨೮ನೆಯ ಪುಟದಲ್ಲಿ, "ಬಲಶಾಲಿಯಾದ ಪುರುಷನ ಆಜ್ಞೆ, ದೇವನ ಆಜ್ಞೆ, ಘೋರವನದಲ್ಲಿ ಕಷ್ಟದಿಂದ ನಿರ್ವಾಹ, ಗುರುವಿನ ನಿರೋಧ, ತಾಯಿ, ತಂದೆ, ಕುಲದ ಆಚಾರ್ಯ, ಜ್ಞಾತಿಗಳು ಹಾಗೂ ಧರ್ಮೋಪದೇಶಕ-ಈ ಆರು ಜನರ ತಡೆಯುವಿಕೆಯಿಂದ ಧರ್ಮದಲ್ಲಿ ನ್ಯೂನತೆಯುಂಟಾದರೆ, ಧರ್ಮಹಾನಿಯುಂಟಾಗುವುದಿಲ್ಲ".- ಎಂದು ಬರೆದಿದೆ.

**ಸಮೀಕ್ಷಕ :-** ಈಗ ನೋಡಿರಿ ಇವರ ಮಿಥ್ಯಾಕಥನಗಳನ್ನು. ಒಬ್ಬ ಮಾನವನು ಗ್ರಾಮದಷ್ಟು ದೊಡ್ಡದಾದ ಪಾಷಾಣ-ಖಂಡವನ್ನು ಬೆರಳಿನ ಮೇಲೆ ಎಂದಿಗಾದರೂ ಇಟ್ಟುಕೊಳ್ಳಬಲ್ಲನೇ? ಮತ್ತು ಪೃಥಿವಿಯ ಮೇಲೆ ಹೆಬ್ಬೆರಳಿನಿಂದ ಒತ್ತುವುದರಿಂದ, ಪೃಥಿವಿ ಎಂದಿಗಾದರೂ ಕುಸಿಯಬಲ್ಲದೇ? ಮತ್ತು ಶೇಷನಾಗನೇ ಇಲ್ಲದಿರುವಾಗ, ಕಂಪಿಸುತ್ತಾನೆ ಯಾವನು? ಭಾಪು! ಶರೀರವನ್ನು ಕತ್ತರಿಸುವುದರಿಂದ ಹಾಲು ಹೊರಡುವುದನ್ನು ಯಾವನೂ ನೋಡಲಿಲ್ಲ. ಇಂದ್ರಜಾಲದ ಹೊರತು ಇದು ಮತ್ತೇನೂ ಅಲ್ಲ. ಅವನನ್ನು ಕಚ್ಚುವ ಸರ್ಪವೇನೋ ಸ್ವರ್ಗಕ್ಕೆ ತೆರಳಿತು ಮತ್ತು ಮಹಾತ್ಮಾ ಶ್ರೀಕೃಷ್ಣ-ಮೊದಲಾದವರು ಮೂರನೆಯ ನರಕಕ್ಕೆ ತೆರಳಿದರು - ಎನ್ನುವ ಈ ಮಾತು ಎಷ್ಟು ಸುಳ್ಳು? ಯಾವಾಗ ಮಹಾವೀರನ ಪಾದಗಳ ಮೇಲೆ ಪಾಯಸವನ್ನು ಕಾಯಿಸಿದರೋ, ಆಗ ಅವನ ಪಾದಗಳು ಸುಟ್ಟು ಹೋಗಲಿಲ್ಲವೇಕೆ? ಓಹೋ! ಚಿಕ್ಕದಾದ ಪಾತ್ರೆಯಲ್ಲಿ ಯಾವಾಗಲಾದರೂ ಒಂಟೆ ಹಿಡಿಸಬಲ್ಲದೇ? ಯಾರು ಶರೀರದ ಕೊಳೆಯನ್ನು ತೆಗೆಯದೆಯೂ ಮತ್ತು ಕೆರೆಯದೆಯೂ ಇರಬಹುದೋ, ಅವರು ದುರ್ಗಂಧವೆಂಬ ಮಹಾನರಕವನ್ನು ಅನುಭವಿಸುತ್ತಿರಬಹುದು. ಯಾವ ಸಾಧುವು ನಗರವನ್ನು ಸುಟ್ಟುಹಾಕಿದನೋ, ಅವನ ದಯೆ ಮತ್ತು ಕ್ಷಮೆ ಎಲ್ಲಿ ಹೋಯಿತು? ಮಹಾವೀರನ ಸಂಗದಿಂದಲೂ ಕೂಡ ಅವನ ಆತ್ಮನು ಪವಿತ್ರನಾಗಲಿಲ್ಲವೆಂದರೆ, ಈಗ, ಮಹಾವೀರನ ಮರಣಾನಂತರ, ಅವನ ಆಶ್ರಯದಿಂದ ಜೈನರು ಎಂದಿಗೂ ಪವಿತ್ರರಾಗಲಾರರು. ರಾಜನ ಆಜ್ಞೆಯನ್ನು ಅದು ಧರ್ಮಾನುಕೂಲವಾಗಿದ್ದರೆ, ಪಾಲಿಸಬೇಕು; ಆದರೆ ಜೈನರುಗಳು ವ್ಯಾಪಾರಿಗಳಾಗಿದ್ದಾರೆ. ಆದುದರಂದ, ರಾಜನಿಗೆ ಹೆದರಿ ಈ ಮಾತನ್ನು ಬರೆದಿರಬಹುದು. ಕೋಶಾ ವೇಶ್ಯೆ, ಅವಳ ಶರೀರ ಎಷ್ಟೇ ಹಗುರವಾಗಿರಲೊಲ್ಲದೇಕೆ? ಹಾಗಿದ್ದರೂ, ಸಾಸಿವೆಯ ರಾಶಿಯ ಮೇಲೆ ಸೂಜಿಯನ್ನು ನಿಲ್ಲಿಸಿ ಅದರ ಮೇಲೆ ನರ್ತಿಸುವುದು, ಸೂಜಿ ಚುಚ್ಚಿಕೊಳ್ಳದಿರುವುದು ಮತ್ತು ಸಾಸಿವೆಯ ರಾಶಿ ಚದುರದಿರುವುದು-ಭಾರೀ ಸುಳ್ಳಲ್ಲದಿದ್ದರೆ ಮತ್ತೇನು? ಏನೇ ಬೇಕಾದರೂ ಆಗಿಹೋಗಲಿ, ಧರ್ಮವನ್ನು ಯಾವನೂ ಯಾವುದೇ ಸ್ಥಿತಿಯಲ್ಲಿಯೂ ಬಿಡಬಾರದು. ಆಯಿತು; ಕೊರಳಸುತ್ತು ಬಟ್ಟೆಯಾಗಿರುತ್ತದೆ. ಅದು ಪ್ರತಿ ದಿನವೂ ೫೦೦ ಸ್ವರ್ಣ ಮುದ್ರಿಕೆಗಳನ್ನು ಹೇಗೆ ಕೊಡಬಲ್ಲದು? ಇನ್ನೂ ಈ ಬಗೆಯ ಇವರ ಅಸಂಭವವಾದ ಕಗ್ಗಗಳನ್ನು ಬರೆಯುವೆವಾದರೆ, ಜೈನರ ಪೊಳ್ಳು ಪುಸ್ತಕಗಳ ಹಾಗೆ ಈ ಗ್ರಂಥವೂ ಬಹಳ ದೊಡ್ಡದಾಗುವುದು. ಆದುದರಿಂದ, ಹೆಚ್ಚಾಗಿ ಬರೆಯುವುದಿಲ್ಲ. ಎಂದರೆ ಈ ಜೈನರ ಗ್ರಂಥಗಳಲ್ಲಿ ಸ್ವಲ್ಪ ವಿಷಯಗಳನ್ನುಳಿದು, ಮಿಕ್ಕುದೆಲ್ಲಾ ಮಿಥ್ಯಾಜಾಲವೇ ತುಂಬಿಕೊಂಡಿದೆ. ನೋಡಿರಿ:-

**ದೋ ಸಸಿ ದೋ ರವಿ ಪಢಮೇ । ದುಗುಣಾ ಲವಣಂ ಮಿಧಾಯ ಈಸಂ ಮೇ ।**

**ವಾರಸ ಸಸಿ ವಾರಸ ರವಿ । ತಪ್ಪಭಿ ಇನಿದಿಠಸಸಿ ರವಿಣೋ ॥** (ಪ್ರಕ. ಭಾ-೪. ಸಂಗ್ರಹಣೇ ಸೂ-೭೭)

ಲಕ್ಷ ಯೋಜನೆ, ಎಂದರೆ ನಾಲ್ಕು ಲಕ್ಷ ಕೋಶದಷ್ಟಿದೆ - ಎಂದು ಬರೆಯಲ್ಪಟ್ಟಿರುವ ಜಂಬೂದ್ವೀಪದಲ್ಲಿ ಇದು ಮೊದಲ ದ್ವೀಪವೆನಿಸುತ್ತದೆ. ಇದರಲ್ಲಿ ಇಬ್ಬರು ಚಂದ್ರರೂ, ಮತ್ತು ಇಬ್ಬರೂ ಸೂರ್ಯರೂ ಇದ್ದಾರೆ. ಮತ್ತು, ಹಾಗೆಯೇ ಲವಣ ಸಮುದ್ರದಲ್ಲಿ ಅದರ ಎರಡರಷ್ಟು, ಎಂದರೆ ನಾಲ್ವರು ಚಂದ್ರರು ಮತ್ತು ನಾಲ್ವರು ಸೂರ್ಯರಿದ್ದಾರೆ. ಮತ್ತು ಧಾತಕೀ ಖಂಡದಲ್ಲಿ ಹನ್ನೆರಡು ಚಂದ್ರರೂ, ಮತ್ತು ಹನ್ನೆರಡು ಸೂರ್ಯರೂ ಇದ್ದಾರೆ. ಮತ್ತು ಇವರನ್ನು ತ್ರಿಗುಣೀಕರಿಸುವುದರಿಂದ ಮೂವತ್ತಾರು

ಆಗುತ್ತಾರೆ. ಅವರುಗಳೊಂದಿಗೆ ಜಂಬೂದ್ವೀಪದ ಇಬ್ಬರನ್ನೂ, ಮತ್ತು ಲವಣ ಸಮುದ್ರದ ನಾಲ್ವರನ್ನೂ ಸೇರಿಸಿ, ೪೨ ಚಂದ್ರರೂ ಮತ್ತು ೪೨ ಸೂರ್ಯರೂ ಕಾಲೋದಧಿ ಸಮುದ್ರದಲ್ಲಿದ್ದಾರೆ. ಹೀಗೆಯೇ ಮುಂದಣ ಮುಂದಣ ದ್ವೀಪ ಹಾಗೂ ಸಮುದ್ರಗಳಲ್ಲಿ ಮೇಲೆ ಹೇಳಿದ ೪೨ನ್ನು ತ್ರಿಗುಣೀಕರಿಸಿದರೆ, ೧೨೬ ಆಗುತ್ತಾರೆ. ಅವರಲ್ಲಿ ಧಾತಕೀ ಖಂಡದ ಹನ್ನೆರಡು, ಲವಣ ಸಮುದ್ರದ ನಾಲ್ಕು ಮತ್ತು ಜಂಬೂದ್ವೀಪದ ಎರಡೆರಡು-ಇದೇ ರೀತಿಯಿಂದ ತೆಗೆದರೆ ೧೪೪ ಚಂದ್ರರು ಮತ್ತು ೧೪೪ ಸೂರ್ಯರು ಪುಷ್ಕರ ದ್ವೀಪದಲ್ಲಿದ್ದಾರೆ. ಇದೂ ಕೂಡ ಅರ್ಧ ಮನುಷ್ಯ, ಕ್ಷೇತ್ರದ ಗಣನೆಯಾಗಿದೆ. ಆದರೆ, ಎಲ್ಲಿಯವರೆಗೆ ಮನುಷ್ಯರು ಇರುವುದಿಲ್ಲವೋ, ಅಲ್ಲಿ ಬಹುಸಂಖ್ಯಕರಾದ ಸೂರ್ಯರೂ ಮತ್ತು ಬಹುಸಂಖ್ಯಕ ಚಂದ್ರರೂ ಇದ್ದಾರೆ. ಮತ್ತು ಪುಷ್ಕರ ದ್ವೀಪದ ಪೂರ್ವಾರ್ಧದಲ್ಲಿರುವ ಬಹು ಸಂಖ್ಯಕ ಚಂದ್ರರು ಮತ್ತು ಸೂರ್ಯರೂ ಸ್ಥಿರರಾಗಿದ್ದಾರೆ. ಮೊದಲು ಹೇಳಿದ ೧೪೪ನ್ನು ತ್ರಿಗುಣೀಕರಿಸುವುದರಿಂದ ೪೩೨ ಮತ್ತು ಅವುಗಳಲ್ಲಿ ಮೊದಲು ಹೇಳಿದ ಜಂಬೂದ್ವೀಪದ ಇಬ್ಬರು ಚಂದ್ರರು, ಇಬ್ಬರು ಸೂರ್ಯರು, ಲವಣ ಸಮುದ್ರದ ನಾಲ್ವರು-ನಾಲ್ವರು ಮತ್ತು ಧಾತಕೀ ಖಂಡದ ಹನ್ನೆರಡು-ಹನ್ನೆರಡು ಮತ್ತು ಕಾಲೋದಧಿಯ ೪೨-ಇವರನ್ನು ಸೇರಿಸುವುದರಿಂದ ೪೯೨ ಚಂದ್ರರೂ ಮತ್ತು ೪೯೨ ಸೂರ್ಯರೂ ಪುಷ್ಕರ ಸಮುದ್ರದಲ್ಲಿದ್ದಾರೆ. ಈ ಎಲ್ಲ ಮಾತುಗಳನ್ನೂ ಶ್ರೀ ಜಿನಭದ್ರಗಣೀಕ್ಷಮಾ ಶ್ರವಣನು ದೊಡ್ಡ 'ಸಂಘಯಣಿ'ಯಲ್ಲಿಯೂ, "ಯೋತೀಸಕರಂಡಕಪಯನ್ನಾ"ದಲ್ಲಿಯೂ, ಮತ್ತು 'ಚಂದ್ರಪನ್ನತಿ' ಹಾಗೂ 'ಸೂರಪನ್ನತಿ' ಪ್ರಮುಖ ಸಿದ್ಧಾಂತ ಗ್ರಂಥಗಳಲ್ಲಿಯೂ ಹೀಗೆಯೇ ಹೇಳಿದ್ದಾನೆ.

**ಸಮೀಕ್ಷಕ:-** ಈಗ ಕೇಳಿರಿ, ಭೂಗೋಳ-ಖಗೋಳಾಭಿಜ್ಞರೇ! ಈ ಒಂದು ಭೂಗೋಳದಲ್ಲಿ ಒಂದು ರೀತಿಯಿಂದ ೪೯೨ ಮತ್ತು ಇನ್ನೊಂದು ರೀತಿಯಿಂದ ಅಸಂಖ್ಯರಾದ ಚಂದ್ರ-ಸೂರ್ಯರನ್ನು ಜೈನರು ಅಂಗೀಕರಿಸುತ್ತಾರೆ. ವೇದಮತಾನುಯಾಯಿಗಳಾದ ನಿಮಗೆ ಸೂರ್ಯ ಸಿದ್ಧಾಂತ ಮೊದಲಾದ ಜ್ಯೋತಿಷ ಗ್ರಂಥಗಳ ಅಧ್ಯಯನದಿಂದ ಸರಿಸರಿಯಾಗಿ ಭೂಗೋಳ-ಖಗೋಳ ವಿದ್ಯೆಗಳು ಗೊತ್ತಿರುವುದು ನಿಮ್ಮ ಮಹಾಭಾಗ್ಯವೇ ಸರಿ. ಎಲ್ಲಿಯಾದರೂ ಜೈನರ ಮಹಾಮೊಬ್ಬಿನಲ್ಲಿ ಬಿದ್ದಿದ್ದರೆ, ಇಂದು ಜೈನರು ಬಿದ್ದಿರುವಂತೆಯೇ ಜೀವನಪೂರ್ತ ಮೊಬ್ಬಿನಲ್ಲೇ ಇರುತ್ತಿದ್ದಿರಿ. ಈ ಮುಗ್ಧರಿಗೆ-"ಜಂಬೂದ್ವೀಪದಲ್ಲಿ ಒಬ್ಬ ಸೂರ್ಯ, ಒಬ್ಬ ಚಂದ್ರನಿಂದ ಕೆಲಸಸಾಗದು. ಇಷ್ಟು ದೊಡ್ಡ ಪೃಥಿವಿಗಳನ್ನು ೩೦ ಘಟಿಕೆಗಳಲ್ಲಿ ಮುಟ್ಟುವರೆಂತು? ಎಂಬ ಸಂಶಯ ಬಂದಿತು. ಏಕೆಂದರೆ ಪೃಥಿವಿಯನ್ನು ಸೂರ್ಯ ಮೊದಲಾದುವಕ್ಕಿಂತ ದೊಡ್ಡವೆಂದು ತಿಳಿಯುತ್ತಾರೆ; ಅವರ ದೊಡ್ಡ ತಪ್ಪು ಇದೇ ಆಗಿದೆ.

**ದೋ ಸಸಿ ದೋ ರವಿ ಸಂತೀ ಏಗಂತರಿಯಾ ಛ ಸಕಿಸಂಖಾಯಾ ।**

**ಮೇರುಂ ಪಯಾಹಿಣತಾ ಮಾಣುಸಖಿತ್ತೇ ಪರಿ ಅಡಂತಿ ।** (ಪ್ರಕ. ಭಾ-೪. ಸಂಗ್ರಹ ಸೂ-೭೯)

ಮಾನವಲೋಕದಲ್ಲಿ ಚಂದ್ರರ ಮತ್ತು ಸೂರ್ಯರ ಪಂಕ್ತಿಯ ಸಂಖ್ಯೆಯನ್ನು ಹೇಳುತ್ತೇವೆ. ಎರಡು ಚಂದ್ರರ ಮತ್ತು ಎರಡು ಸೂರ್ಯರ ಶ್ರೇಣಿಗಳಿವೆ. ಅವರು ಒಂದು ಲಕ್ಷಯೋಜನಗಳ, ಎಂದರೆ ಎಂಟು ಲಕ್ಷ ಮೈಲಿಗಳ ಅಂತರದಿಂದ ಸಂಚರಿಸುತ್ತಾರೆ. ಹೇಗೆ ಸೂರ್ಯ-ಪಂಕ್ತಿಯ ಅಂತರದಿಂದ ಒಂದು ಚಂದ್ರ-ಪಂಕ್ತಿಯಿದೆಯೋ, ಹಾಗೆಯೇ ಚಂದ್ರ-ಪಂಕ್ತಿಯ ಅಂತರದಿಂದ ಸೂರ್ಯ-ಪಂಕ್ತಿಯಿದೆ. ೬೬ ಚಂದ್ರರೂ, ಮತ್ತು ಒಂದೊಂದು ಸೂರ್ಯ-ಪಂಕ್ತಿಯಲ್ಲಿ ೬೬ ಸೂರ್ಯರೂ ಇದ್ದಾರೆ. ಆ ನಾಲ್ಕು ಪಂಕ್ತಿಗಳಿವೆ. ಆ ನಾಲ್ಕು ಪಂಕ್ತಿಗಳೂ ಜಂಬೂದ್ವೀಪದ ಮೇರು ಪರ್ವತದ ಪ್ರದಕ್ಷಿಣೆಯನ್ನು ಮಾಡುತ್ತಾ, ಮಾನವಕ್ಷೇತ್ರದಲ್ಲಿ ಪರಿಭ್ರಮಣ ಮಾಡುತ್ತಿವೆ. ಎಂದರೆ, ಯಾವಾಗ ಬಂಜೂದ್ವೀಪದ ಮೇರುವಿನಿಂದ ಒಬ್ಬ ಸೂರ್ಯನು ದಕ್ಷಿಣ ದಿಕ್ಕಿನಲ್ಲಿ ವಿಹರಿಸುತ್ತಾನೋ, ಆಗ ಎರಡನೆಯ ಸೂರ್ಯನು ಉತ್ತರ ದಿಕ್ಕಿನಲ್ಲಿ ತಿರುಗುತ್ತಾನೆ. ಹಾಗೆಯೇ ಲವಣ ಸಮುದ್ರದ ಒಂದೊಂದು ದಿಕ್ಕಿನಲ್ಲಿ ಇಬ್ಬರು-ಇಬ್ಬರು ಚಲಿಸುತ್ತಾರೆ-ತಿರುಗುತ್ತಾರೆ. ಧಾತಕೀ ಖಂಡದಲ್ಲಿ ಆರು, ಕಾಲೋದಧಿಯಲ್ಲಿ ೨೧, ಪುಷ್ಕರಾರ್ಧದಲ್ಲಿ ೩೬, ಈ ರೀತಿ ಎಲ್ಲರೂ ಸೇರಿ ೬೬ ಸೂರ್ಯರು ದಕ್ಷಿಣ ದಿಕ್ಕಿನಲ್ಲಿಯೂ, ೬೬ ಸೂರ್ಯರು ಉತ್ತರ ದಿಕ್ಕಿನಲ್ಲಿಯೂ ತಮ್ಮ ತಮ್ಮ ಕ್ರಮದಿಂದ ತಿರುಗುತ್ತಾರೆ. ಮತ್ತು ಈ ಎರಡೂ ದಿಕ್ಕುಗಳ ಸಮಸ್ತ ಸೂರ್ಯರೂ ಸೇರಿಸಲ್ಪಟ್ಟರೆ ೧೩೨ ಸೂರ್ಯರೂ ಮತ್ತು ಹೀಗೆಯೇ ೬೬-೬೬ರಂತೆ ಚಂದ್ರನ ಎರಡೂ ದಿಕ್ಕುಗಳ ಪಂಕ್ತಿಗಳೂ ಸೇರಿಸಲ್ಪಟ್ಟರೆ ೧೩೨ ಚಂದ್ರರೂ ಮನುಷ್ಯ ಲೋಕದಲ್ಲಿ ಸಂಚಾರ ಮಾಡುತ್ತಾರೆ. ಇದೇ ರೀತಿ ಚಂದ್ರನೊಂದಿಗೆ ನಕ್ಷತ್ರ ಮೊದಲಾದುವುಗಳ ಪಂಕ್ತಿಗಳೂ ಬಹಳವಿದೆ-ಎಂದು ತಿಳಿದುಕೊಳ್ಳಬೇಕು.

**ಸಮೀಕ್ಷಕ :-** ಈಗ ನೋಡಿರಿ, ಸೋದರರೇ! ಈ ಭೂಗೋಳದಲ್ಲಿ ೧೩೨ ಸೂರ್ಯರೂ, ಮತ್ತು ೧೩೨ ಚಂದ್ರರೂ ಜೈನರ ಮನೆಗಳ ಮೇಲೆ ಉರಿಯುತ್ತಿರುಬೇಕು. ಒಳ್ಳೆಯದು, ಹಾಗೆ ಉರಿಯುತ್ತಿರಬಹುದಾದರೆ, ಅವರು ಹೇಗೆ ಜೀವಿಸುತ್ತಾರೆ? ಮತ್ತು

ರಾತ್ರಿಯಲ್ಲಿಯೂ ಕೂಡ ಶೀತದ ಪ್ರಹಾರದಿಂದ ಜೈನರು ಸೆಡೆತುಕೊಳ್ಳುತ್ತಿರಬಹುದೇನು? ಇಂತಹ ಅಸಂಭವವಾದ ಮಾತಿನಲ್ಲಿ ಭೂಗೋಳ-ಖಗೋಳಗಳನ್ನು ತಿಳಿಯದವರು ಸಿಕ್ಕಿಕೊಳ್ಳುತ್ತಾರೆ; ಬೇರೆಯವರು ಸಿಕ್ಕಿಕೊಳ್ಳರು. ಯಾವಾಗ ಒಬ್ಬ ಸೂರ್ಯನು ಈ ಭೂಗೋಳದಂತಹ ಬೇರೆ ಅನೇಕ ಭೂಗೋಳಗಳನ್ನು ಬೆಳಗಿಸುತ್ತಾನೋ, ಆಗ ಈ ಚಿಕ್ಕ ಭೂಗೋಳದ ಕಥೆಯನ್ನೇನು ಹೇಳುವುದು? ಮತ್ತು ಭೂಮಿಯು ತಿರುಗದೆ, ಸೂರ್ಯನು ಭೂಮಿಯ ಸುತ್ತಲೂ ಸುತ್ತುವನಾದರೆ ಅನೇಕ ವರ್ಷಗಳದೊಂದು ದಿನ ಮತ್ತು ರಾತ್ರಿ ಆದೀತು. ಮತ್ತು ಸುಮೇರುವು ಹಿಮಾಲಯದ ಹೊರತು ಬೇರೆ ಯಾವುದೂ ಇಲ್ಲ. ಈ ಪೃಥಿವೀ ಸೂರ್ಯನ ಮುಂದೆ, ಗಡಿಗೆಯ ಮುಂದೆ ಸಾಸಿವೆಯ ಕಾಳಿನಷ್ಟೂ ಕೂಡ ಇಲ್ಲ. ಎಂದಿನವರೆಗೆ ಆ ಮತದಲ್ಲಿಯೇ ಇರುವರೋ, ಅಂದಿನವರೆಗೆ ಜೈನರು ಈ ಮಾತುಗಳನ್ನು ತಿಳಿಯಲಾರರು; ಆದರೆ ಸದಾ ಮೊಬ್ಬಿನಲ್ಲಿಯೇ ಇರುವರು.

**ಸಮತ್ತ ಚರಣ ಸಹಿಯಾ ಸಬ್ಬಂ ಲೋಗಂ ಫುಸೇ ನಿರವಸೇಸಮ್ ।**

**ಸತ್ತಯ ಚಉದಸ ಭಾಏ ಪಂಚಯ ಸುಪದೇಸವಿರಈಏ ॥** (ಪ್ರಕ. ಭಾ-೪. ಸಂಗ್ರಹ ಸೂ-೧೩೫)

ಸಮ್ಯಕ್ ಚಾರಿತ್ರಸಹಿತರಾಗಿ ಯಾರು ಕೇವಲಿಗಳಾಗುತ್ತಾರೋ, ಅವರು ಕೇವಲ ಮೇಲಕ್ಕೇರಬಲ್ಲ ಆತ್ಮ ಸ್ಥಿತಿಯಿಂದ ೧೪ ರಾಜ್ಯ ಲೋಕ ಸಮಸ್ತವನ್ನೂ ತಮ್ಮ ಆತ್ಮ ಪ್ರದೇಶವಾಗಿ ಮಾಡಿಕೊಂಡು ಸಂಚರಿಸುವರು.

**ಸಮೀಕ್ಷಕ:-** ಜೈನರು ಹದಿನಾಲ್ಕು ರಾಜ್ಯಗಳನ್ನು ಅಂಗೀಕರಿಸುತ್ತಾರೆ. ಅವುಗಳಲ್ಲಿ ಹದಿನಾಲ್ಕನೆಯದರ ಶೃಂಗದಲ್ಲಿ, ಸರ್ವಾರ್ಥಸಿದ್ಧಿ ವಿಮಾನದ ಧ್ವಜದಿಂದ ಮೇಲಕ್ಕೆ, ಸ್ವಲ್ಪ ದೂರದಲ್ಲಿರುವ ಸಿದ್ಧ ಶಿಲೆ ಹಾಗೂ ದಿವ್ಯ ಆಕಾಶವನ್ನು ಶಿವಪುರವೆನ್ನುತ್ತಾರೆ. ಅದರಲ್ಲಿ ಕೇವಲಿಗಳು, ಎಂದರೆ-ಯಾರಿಗೆ ಕೇವಲ ಜ್ಞಾನ, ಸರ್ವಜ್ಞತ್ವ ಮತ್ತು ಪೂರ್ಣ ಪವಿತ್ರತೆ ಪ್ರಾಪ್ತವಾಗಿದೆಯೋ, ಅವರು ಆ ಲೋಕಕ್ಕೆ ಹೋಗುತ್ತಾರೆ. ಮತ್ತು ತಮ್ಮ ಆತ್ಮ ಪ್ರದೇಶದಿಂದ ಸರ್ವಜ್ಞರಾಗಿರುತ್ತಾರೆ. 'ಪ್ರದೇಶ'ವಿರುವವನು ವಿಭುವಾಗಿರುವುದಿಲ್ಲ. ವಿಭುವಿಲ್ಲದವನು (ವ್ಯಾಪಕನಲ್ಲದವನು) ಸರ್ವಜ್ಞನು, ಕೇವಲ ಜ್ಞಾನಿಯು ಎಂದಿಗೂ ಆಗಲಾರನು. ಏಕೆಂದರೆ, ಯಾವನ ಆತ್ಮನು ಏಕದೇಶೀಯನಾಗಿರುತ್ತಾನೋ, ಅವನು ಹೋಗುತ್ತಾನೆ, ಬರುತ್ತಾನೆ; ಹಾಗೂ ಬದ್ಧನೂ, ಮುಕ್ತನೂ, ಜ್ಞಾನಿಯೂ, ಅಜ್ಞಾನಿಯೂ ಆಗುತ್ತಾನೆ. ಸರ್ವವ್ಯಾಪಕನೂ, ಸರ್ವಜ್ಞನೂ ಹಾಗೆ ಎಂದಿಗೂ ಆಗಲಾರನು. ಜೈನರ ಯಾವ ತೀರ್ಥಂಕರರು ಜೀವರೂಪರೂ, ಅಲ್ಪರೂ, ಅಲ್ಪಜ್ಞರೂ ಆಗಿದ್ದು ಸ್ಥಿತರಾಗಿದ್ದರೋ, ಅವರು ಸರ್ವವ್ಯಾಪಕರೂ, ಸರ್ವಜ್ಞರೂ ಎಂದಿಗೂ ಆಗಲಾರರು. ಆದರೆ, ಯಾವ ಪರಮಾತ್ಮನು ಅನಾದಿ-ಅನಂತನೂ, ಸರ್ವವ್ಯಾಪಕನೂ, ಸರ್ವಜ್ಞನೂ, ಪವಿತ್ರನೂ, ಜ್ಞಾನಸ್ವರೂಪನೂ ಆಗಿದ್ದಾನೋ, ಯಾವನಿಗೆ ಸರ್ವಜ್ಞತ್ವ ಮೊದಲಾದ ಗುಣಗಳು ವಾಸ್ತವಿಕವಾಗಿಯೂ ಅನ್ವಯಿಸುತ್ತವೋ, ಅವನನ್ನು ಜೈನರು ಅಂಗೀಕರಿಸುವುದಿಲ್ಲ.

**ಗಬ್ಭನರತಿ ಪಲಿಯಾಊ । ತಿಗಾಊ ಉಕ್ಕೋಸ ತೇ ಜಹನ್ನೇಣಮ್ ।**

**ಮುಚ್ಛಿಮ ದುಹಾನಿ ಅಂತಮುಹು । ಅಂಗುಲ ಅಸಂಖ ಭಾಗತಣೂ ॥** (ಪ್ರಕ. ಭಾ-೪. ಸೂ-೨೪೧)

**ಅರ್ಥ:-** ಮೊದಲಾಗಿ ಗರ್ಭಜರು, ಎರಡನೆಯದಾಗಿ ಗರ್ಭವಿಲ್ಲದೆ ಉತ್ಪನ್ನರಾದವರು, ಎಂದು ಇಲ್ಲಿ ಎರಡು ಬಗೆಯ ಮಾನವರಿದ್ದಾರೆ. ಅವರಲ್ಲಿ, ಗರ್ಭಜರಾದ ಮಾನವರ ಉತ್ಕೃಷ್ಟವಾದ ಆಯಸ್ಸು ಮೂರು ಪಲ್ಯೋಪಮದಷ್ಟು[೬೭] ಎಂದೂ, ಶರೀರ ಮೂರು ಕೋಶಗಳಷ್ಟು ಎಂದೂ ತಿಳಿದುಕೊಳ್ಳಬೇಕು.

**ಸಮೀಕ್ಷಕ:-** ಭಾಪು! ಮೂರು ಪಲ್ಯೋಪಮದ ಆಯಸ್ಸು ಮತ್ತು ಮೂರು ಕೋಶದ (ಆರು ಮೈಲಿ) ಶರೀರವನ್ನುಳ್ಳ ಮಾನವರು ಈ ಭೂಗೋಳದಲ್ಲಿ ಬಹಳ ಕಡಿಮೆ ಜನರು ಹಿಡಿಸಬಲ್ಲರು. ಮತ್ತು, ನಾವು ಮೊದಲು ಹೇಗೆ ಬರೆದಿದ್ದೇವೋ ಹಾಗೆ, ಮೂರು ಪಲ್ಯೋಪಮದಷ್ಟು ಸಮಯ ಜೀವಿಸುವರಾದರೆ, ಹಾಗೆಯೇ ಅವರ ಸಂತತಿಯವರೂ ಕೂಡ ಮೂರು ಕೋಶದ ಶರೀರಗಳನ್ನುಳ್ಳವರಾಗಬೇಕು. ಅಂತಹವರು ಬೊಂಬಾಯಿಯಂತಹ ನಗರದಲ್ಲಿ ಇಬ್ಬರು ಮತ್ತು ಕಲ್ಕತ್ತೆಯಂತಹ ನಗರದಲ್ಲಿ ಮೂವರು ಅಥವಾ ನಾಲ್ವರು ಮನುಷ್ಯರು ನಿವಾಸಮಾಡಬಲ್ಲರು. ಸ್ಥಿತಿ ಹೀಗಿರುವುದಾದರೆ, ಜೈನರು ನಗರ ಒಂದರಲ್ಲಿ ಲಕ್ಷಾಂತರ ಜನರಿದ್ದರೆಂದು ಬರೆದಿದ್ದಾರೆ. ಹಾಗಾದರೆ, ಅವರು ನೆಲೆಸುವ ನಗರಗಳೂ ಕೂಡ ಲಕ್ಷಾಂತರ ಕೋಶಗಳದೇ ಆಗಿರಬೇಕು. ಆ ಸ್ಥಿತಿಯಲ್ಲಿ, ಸಮಸ್ತ ಭೂಮಂಡಲದಲ್ಲಿ ಅಂತಹ ಒಂದು ನಗರವೂ ಕೂಡ ನೆಲೆಗೊಳ್ಳಲಾರದು.

---

೬೭. ಪಲ್ಯೋಪಮ ಕಾಲದ ಗಣನೆ ಹಿಂದಿನ ಪುಟದಲ್ಲಿ ಕೊಟ್ಟಿದೆ.

**ಪಣ್ಯಾಲ ಲರಕಯೋಯಣ । ವಿರಕಂಭಾ ಸಿದ್ಧಿ ಸಿಲ ಫಲಿಹವಿಮಲಾ ।**

**ತದುವರಿ ಗಜೋಯಣತೇ ಲೋಗಂತೋ ತಚ್ಛ ಸಿದ್ಧಠಿಈ ॥ ೨೫೮ ॥**

ಸರ್ವಾರ್ಥಸಿದ್ಧಿವಿಮಾನದ ಧ್ವಜದ ಮೇಲೆ ಯಾವ ೧೨ ಯೋಜನದ ಸಿದ್ಧ ಶಿಲೆಯಿದೆಯೋ, ಅದು ಪೊಳ್ಳಾಗಿದೆ ಮತ್ತು ಉದ್ದ ಹಾಗೂ ಪೊಳ್ಳಿನಲ್ಲಿ ೪೫ ಲಕ್ಷ ಯೋಜನ ಪ್ರಮಾಣವುಳ್ಳುದಾಗಿದೆ. ಅದೆಲ್ಲಾ ಧಾರಾಳವಾಗಿ, ಸ್ವಚ್ಛವಾಗಿ ಸುವರ್ಣಮಯ ಸ್ಫಟಿಕಕ್ಕೆ ಸಮಾನವಾಗಿ, ನಿರ್ಮಲವಾದ ಸಿದ್ಧಶಿಲೆಯ ಸಿದ್ಧಭೂಮಿಯಿದೆ. ಇದಕ್ಕೆ ಕೆಲವರು 'ಈಶತ', 'ಪ್ರಾಗ್ಭರಾ'-ಎಂಬ ಹೆಸರನ್ನೂ ಹೇಳುತ್ತಾರೆ. ಈ ಸರ್ವಾರ್ಥ ಸಿದ್ಧ ಶಿಲೆ ವಿಮಾನದಿಂದ ೧೨ ಯೋಜನ ಅಲೋಕವೂ ಇದೆ. ಈ ಪರಮಾರ್ಥವನ್ನು ಕೇವಲೀಶ್ರುತನು ತಿಳಿದುಕೊಳ್ಳುತ್ತಾನೆ. ಈ ಸಿದ್ಧಶಿಲೆ ಸರ್ವಾರ್ಥ ಮಧ್ಯಭಾಗದಲ್ಲಿ ಎಂಟು ಯೋಜನ ಸ್ಥೂಲವಾಗಿದೆ. ಅಲ್ಲಿಂದ ನಾಲ್ಕು ದಿಕ್ಕುಗಳಲ್ಲಿಯೂ, ನಾಲ್ಕು ಉಪದಿಕ್ಕುಗಳಲ್ಲಿಯೂ ಕುಗ್ಗು-ಕುಗ್ಗುತ್ತಾ, ನೊಣದ ರೆಕ್ಕೆಗೆ ಸಮನಾಗಿ ತೆಳ್ಳಗಾಗುತ್ತಾ, ಬಿಚ್ಚಿದ ಕೊಡೆಯ ಆಕಾರವನ್ನುಳ್ಳದಾಗಿ ಈ ಸಿದ್ಧಶಿಲೆಯ ಸ್ಥಾಪನೆಯಿದೆ. ಆ ಶಿಲೆಯ ಮೇಲುಗಡೆ ಒಂದು ಯೋಜನದ ಅಂತರದಲ್ಲಿ ಲೋಕಾಂತರವಿದೆ. ಅಲ್ಲಿ ಸಿದ್ಧರ ನೆಲೆಯಿದೆ.

**ಸಮೀಕ್ಷಕ:-** ಈಗ ಪರ್ಯಾಲೋಚಿಸಬೇಕು. ಜೈನರ ಮುಕ್ತಿಯ ಸ್ಥಾನವು ಸರ್ವಾರ್ಥಸಿದ್ಧಿವಿಮಾನದ ಧ್ವಜದ ಮೇಲುಗಡೆ ೪೫ ಲಕ್ಷ ಯೋಜನದ ಶಿಲೆಯಾಗಿದೆ ಎಂದರೆ, ಬೇಕಾದಷ್ಟು ಒಳ್ಳೆಯದೂ ಮತ್ತು ನಿರ್ಮಲವೂ ಆಗಿರಲಿ; ಹಾಗಿದ್ದರೂ ಕೂಡ ಅದರಲ್ಲಿರುವ ಮುಕ್ತಜೀವರು ಒಂದು ರೀತಿಯಿಂದ ಬದ್ಧರೇ ಆಗಿರುತ್ತಾರೆ. ಏಕೆಂದರೆ, ಆ ಶಿಲೆಯಿಂದ ಹೊರಕ್ಕೆ ಬಂದಲ್ಲಿ, ಮುಕ್ತಿಯ ಸುಖದಿಂದ ಹೊರಗಾಗುತ್ತಿರಬಹುದು. ಮತ್ತು, ಒಳಗೆ ಇರುವವರಾದರೆ, ಅವರಿಗೆ ವಾಯುವೂ ಕೂಡ ತಗಲದಿರಬಹುದು. ಇದು ಕೇವಲ ಕಲ್ಪನೆ ಮಾತ್ರ; ಅವಿದ್ವಾಂಸರನ್ನು ಸಿಕ್ಕಿಸಿಕೊಳ್ಳಲು ಭ್ರಮಜಾಲವಾಗಿದೆ.

**ವಿತಿಚಉರಿಂ ವಿಸಸರೀಯಂ । ವಾರ ಸಂಜೋಯಣಂ ತಿಕೋಸ ಚಉಕೋಸಂ**

**ಜೋಯಣಸಹಸ ಪಣಿಂದಿಯ । ಉಹೇ ಬುಚ್ಛಂತಿ ಬಿಸೇಸಂತು ॥** (ಪ್ರಕ. ಭಾ-೪. ಸಂಗ್ರಹ ಸೂತ್ರ-೨೬೭.)

ಸಾಮಾನ್ಯತಃ ಏಕೇಂದ್ರಿಯದ ಶರೀರ, ಉತ್ಕೃಷ್ಟವಾದ ಶರೀರವನ್ನುಳ್ಳುದಾದರೆ ಒಂದು ಸಾವಿರ ಯೋಜನದ್ದಿರುವುದೆಂದು ತಿಳಿಯಬೇಕು. ಶಂಖವೇ ಮೊದಲಾದ ಎರಡು ಇಂದ್ರಿಯಗಳನ್ನುಳ್ಳ ಜೀವರ ಶರೀರ ೧೨ ಯೋಜನದಷ್ಟೆಂದು ತಿಳಿಯಬೇಕು. ಮತ್ತು ಭ್ರಮರ ಮೊದಲಾದ ಚತುರಿಂದ್ರಿಯ ಜೀವರ ಶರೀರ ನಾಲ್ಕು ಕೋಶದಷ್ಟು ಮತ್ತು ಪಂಚೇದ್ರೇಯಯುಕ್ತರದು ಒಂದು ಸಾವಿರ ಯೋಜನಗಳಷ್ಟು ಎಂದರೆ ನಾಲ್ಕು ಸಾವಿರ ಕೋಶದ (೮,೦೦೦ ಮೈಲಿ) ಶರೀರವು ಅವರದೆಂದು ತಿಳಿಯಬೇಕು.

**ಸಮೀಕ್ಷಕ:-** ನಾಲ್ಕು-ನಾಲ್ಕು ಸಾವಿರ ಕೋಶದ ಪರಿಮಾಣವನ್ನುಳ್ಳ ಶರೀರಧಾರಿಗಳು ಇರುವವರಾದರೆ, ಭೂಗೋಳದಲ್ಲಿ ಅತಿ ಸ್ವಲ್ಪ ಜನ ಮಾನವರಿರಲಾದೀತು. ಎಂದರೆ-ನೂರಾರು ಮಾನವರಿಂದಲೇ ಭೂಗೋಳ ಎಳ್ಳಿನಷ್ಟೂ ಎಡೆಯಿರದಂತೆ ತುಂಬಿ ಹೋದೀತು. ಯಾರಿಗೂ ಓಡಾಡಲೂ ಕೂಡ ಸ್ಥಳವಿರುವುದಿಲ್ಲ. ಮತ್ತು ಅವರು ಜೈನರನ್ನೇ ಇರುವ ನೆಲೆ ಮತ್ತು ದಾರಿಯನ್ನು ಕೇಳಬೇಕಾದೀತು. ಮತ್ತು ಇವರು ಬರೆದಿರುವ ಕಾರಣ (ಅಂತಹ ಬೃಹತ್ಕಾಯರನ್ನು) ತಮ್ಮ ಮನೆಯಲ್ಲಿಟ್ಟುಕೊಳ್ಳಲಿ. ಆದರೆ, ನಾಲ್ಕು ಸಾವಿರ ಕೋಸದ ಶರೀರವನ್ನುಳ್ಳವನಿಗೆ, ಕೇವಲ ಒಬ್ಬನ ನಿವಾಸಕ್ಕೇ ೩೨ ಸಾವಿರಕೋಶದ ಮನೆಯಾದರೂ ಬೇಕಾದೀತು. ಇಂತಹ ಒಂದು ಮನೆಯನ್ನು ಕಟ್ಟಿಸುವುದರಲ್ಲಿ ಜೈನರ ಹಣವೆಲ್ಲವೂ ಮುಗಿದು ಹೋದರೂ ಕೂಡ ಮನೆ ನಿರ್ಮಿತವಾಗಲಾರದು. ಇಷ್ಟು ದೊಡ್ಡ ಎಂಟು ಸಾವಿರ ಕೋಶದ ಚಾವಣಿಯನ್ನು ನಿರ್ಮಿಸಲು ದಿಮ್ಮಿಗಳನ್ನು ಎಲ್ಲಿಂದ ತರುವರು? ಮತ್ತು ಅದರಲ್ಲಿ ಕಂಬಗಳನ್ನು ನಿಲ್ಲಿಸುವರಾದರೆ, ಅವನು ಒಳಗೆ ಪ್ರವೇಶವನ್ನೂ ಮಾಡಲಾರದು. ಆದುದರಿಂದ, ಇಂತಹ ಮಾತುಗಳು ಸುಳ್ಳೇ ಆಗಿರುತ್ತವೆ.

**ತೇ ಥೂಲಾ ಪಲ್ಲೇ ಬಿಹುಸಂಖಿಜ್ಜಾಚೇ ವಹುಂತಿ ಸವ್ವೇವಿ ।**

**ತೇ ಇಕ್ಕಿಕ್ಕ ಅಸಂಖೇ । ಸುಹುಮೇ ಖಮ್ಮೇ ಪಕಪ್ಪೇಹ ॥** (ಪ್ರಕ. ಭಾ-೪. ಲಘುಕ್ಷೇತ್ರಸಮಾಸ ಪ್ರಕರಣ-೪.)

ಮೊದಲು ಹೇಳಿರುವಂತೆ ಒಂದು ಅಂಗುಲ ರೋಮದ ಖಂಡಗಳಿದ, ನಾಲ್ಕು ಕೋಶ ಚದರವೂ, ಅಷ್ಟೇ ಆಳವೂ ಆದ ಭಾವಿಯನ್ನು ತುಂಬಿಸಬೇಕು. ಅಂಗುಲ ಪ್ರಮಾಣದ ರೋಮದ ಖಂಡಗಳೆಲ್ಲವೂ ಸೇರಿ ೨೦,೫೭,೧೫೨ ಆಗುತ್ತದೆ. ಮತ್ತು ಅತ್ಯಂತ ಅಧಿಕವಾದರೆ (೩೩,೦೭,೬೨,೧೦೪; "೨೪,೬೫,೬೨೫"; ೪೨,೧೯,೯೬೦; "೯೭,೫೩,೬೦೦" ೦೦,೦೦,೦೦೦)

ಮೂವತ್ತಮೂರು ಕೋಟ್ಯಾನುಕೋಟಿ, "ಏಳು ಲಕ್ಷ ಅರವತ್ತೆರಡು ಸಾವಿರ, ಒಂದು ನೂರು ನಾಲ್ಕು ಕೋಟ್ಯಾನುಕೋಟಿ "ಇಪ್ಪತ್ತನಾಲ್ಕು ಲಕ್ಷ ಅರವತ್ತೈದು ಸಾವಿರ ಆರುನೂರ ಇಪ್ಪತ್ತೈದು ಕೋಟ್ಯಾನುಕೋಟಿ" ಹಾಗೂ ನಲವತ್ತೆರಡು ಲಕ್ಷ, ಹತ್ತೊಂಬತ್ತು ಸಾವಿರ, ಒಂಬೈನೂರ ಅರವತ್ತು ಕೋಟ್ಯಾನುಕೋಟಿ ಹಾಗೂ ತೊಂಬತ್ತೇಳು ಲಕ್ಷ, ಐವತ್ತು ಮೂರು ಸಾವಿರ ಮತ್ತು ಆರುನೂರು ಕೋಟ್ಯಾನುಕೋಟಿ–ಇಷ್ಟು ವಿಸ್ತಾರದ ಪೊಳ್ಳಿನ ಘನಯೋಜನ ಪಲ್ಯೋಪಮದಲ್ಲಿ ಸಮಸ್ತ ಸ್ಥೂಲ ರೋಮ ಖಂಡಗಳ ಸಂಖ್ಯೆಯಾಗುವುದು. ಇದೂ ಕೂಡ ಸಂಖ್ಯಾತಕಾಲವಾಗಿರುತ್ತದೆ. ಪೂರ್ವೋಕ್ತವಾದ ಒಂದು ಲೋಮ ಖಂಡದ ಅಸಂಖ್ಯಾತ ಖಂಡಗಳನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳುವಿರಾದರೆ, ಅಸಂಖ್ಯಾತ ಸೂಕ್ಷ್ಮ ರೋಮಾಣುಗಳಾಗುವುವು.

**ಸಮೀಕ್ಷಕ:–** ಈಗ ನೋಡಿರಿ–ಇವರ ಗಣನಾ ರೀತಿಯನ್ನು ಒಂದು ಅಂಗುಲ ಪ್ರಮಾಣದ ರೋಮದ ಎಷ್ಟು ಖಂಡಗಳನ್ನು ಮಾಡಿದರು? ಇವು ಎಂದಿಗಾದರೂ ಯಾರ ಗಣನೆಗಾದರೂ ಬರಬಲ್ಲವೋ? ಮತ್ತು ಅದಾದ ನಂತರ ಮನಸ್ಸಿನಿಂದ ಅಸಂಖ್ಯ ಖಂಡಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಇದರಿಂದ, ಪೂರ್ವೋಕ್ತ ಖಂಡಗಳನ್ನು ಕೈಯಿನಿಂದ ಮಾಡಿರಬಹುದೆಂದು ಸಿದ್ಧವಾಗುತ್ತದೆ. ಯಾವಾಗ ಕೈಯಿನಿಂದ ಸಾಧ್ಯವಾಗಲಿಲ್ಲವೋ, ಆಗ ಮನಸ್ಸಿನಿಂದ ಮಾಡಿದರು. ಒಂದು ಅಂಗುಲ ರೋಮದ ಅಸಂಖ್ಯ ಖಂಡಗಳಾಗಬಲ್ಲವೆಂಬುದು ಎಂದಿಗಾದರೂ ಸಂಭವವೇ?

**ಜಂಬೂದ್ವೀಪಪಮಾಣಂ ಗುಣಜೋಯಾಣಲರಕ ವಟ್ಟವಿರಕಂಭೋ ।**

**ಲವಣಾಈ ಯಾಸೇಸಾ. ಬಲಯಾಮಾ ದುಗುಣದುಗುಣಾಯ ॥** (ಪ್ರಕ. ಭಾ–೪. ಲಘುಕ್ಷೇತ್ರ ಸೂ–೧೨.)

ಮೊದಲನೆಯದಾದ ಜಂಬೂದ್ವೀಪದ ಪ್ರಮಾಣ ಲಕ್ಷಯೋಜನವಿದೆ ಮತ್ತು ಪೊಳ್ಳಾಗಿವೆ. ಹಾಗೂ ಉಳಿದ ಲವಣ–ಮೊದಲಾದ ಸಪ್ತ ಸಮುದ್ರಗಳು, ಸಪ್ತ ದ್ವೀಪಗಳು ಜಂಬೂದ್ವೀಪದ ಪ್ರಮಾಣದ ಎರಡರಷ್ಟು ಇವೆ. ಈ ಒಂದು ಪೃಥಿವಿಯಲ್ಲಿ, ಮೊದಲು ಬರೆದಿರುವಂತೆ ಜಂಬೂದ್ವೀಪ–ಮೊದಲಾದ ಸಪ್ತ ದ್ವೀಪಗಳು ಮತ್ತು ಸಪ್ತ ಸಮುದ್ರಗಳು ಇವೆ.

**ಸಮೀಕ್ಷಕ :–** ಈಗ, ಜಂಬೂದ್ವೀಪದ ಅನಂತರ ಎರಡನೆಯ ದ್ವೀಪ ಎರಡು ಲಕ್ಷ ಯೋಜನಗಳು, ಮೂರನೆಯದು ನಾಲ್ಕು ಲಕ್ಷ ಯೋಜನಗಳು, ನಾಲ್ಕನೆಯದು ಎಂಟು ಲಕ್ಷ ಯೋಜನಗಳು, ಐದನೆಯದು ಹದಿನಾರು ಲಕ್ಷ ಯೋಜನಗಳು, ಆರನೆಯದು ಮೂವತ್ತೆರಡು ಲಕ್ಷ ಯೋಜನಗಳು, ಮತ್ತು ಏಳನೆಯದು ಅರವತ್ತುನಾಲ್ಕು ಲಕ್ಷ ಯೋಜನಗಳು, ಮತ್ತು ಅಷ್ಟು ಪ್ರಮಾಣದ, ಅಥವಾ ಅವುಗಳಿಗಿಂತ ಹೆಚ್ಚು ಪ್ರಮಾಣದ ಸಮುದ್ರಗಳು ಈ ಐದು ಸಾವಿರ ಪರಿಧಿಯನ್ನುಳ್ಳ[೬೮] ಭೂಗೋಳದಲ್ಲಿ ಇರಬಲ್ಲವಾದರೂ ಹೇಗೆ? ಆದಕಾರಣ ಈ ಮಾತು ಕೇವಲ ಮಿಥ್ಯೆಯಾಗಿರುತ್ತದೆ.

**ಕರುನಇ ಚುಲಸೀ ಸಹಸಾ । ಛಚ್ಛೇವಂತರನಈ ಉ ಪಇ ವಿಜಯಂ ।**

**ದೋದೋ ಮಹಾನಈಉ । ಚನುದಸ ಸಹಸಾ ಉಪತ್ತೇಯಂ ॥** (ಪ್ರಕ. ಬಾ–೪. ಲಘುಕ್ಷೇತ್ರ ಸೂ–೬೩.)

ಕುರುಕ್ಷೇತ್ರದಲ್ಲಿ ಎಂಬತ್ತುನಾಲ್ಕು ಸಾವಿರ ನದಿಗಳಿವೆ.

**ಸಮೀಕ್ಷಕ:–** ಓಹೋ! ಕುರುಕ್ಷೇತ್ರ ಬಹಳ ಚಿಕ್ಕದಾದ ಪ್ರದೇಶ. ಅದನ್ನು ನೋಡದೆ ಒಂದು ಸುಳ್ಳುಮಾತನ್ನು ಬರೆಯುವಲ್ಲಿ ಇವರಿಗೆ ಲಜ್ಜೆಯೂ ಆಗಲಿಲ್ಲ!

**ಯಾಮುತ್ತರಾಉ ತಾಉ ಇಗೇಗ ಸಿಂಹಾಸಣಾಉ ಅಇ ಪುಬ್ಬಂ ।**

**ಚಉಸು ವಿತಾಸು ನಿಯಾಸಣ ದಿಸಿ ಭವಜಿಣ ಮಜಣ ಹೋಇ ॥** (ಪ್ರಕಾ. ಭಾ–೪. ಲಘುಕ್ಷೇತ್ರ ಸೂ–೧೧೯.)

ಆ ಶಿಲೆಯ ದಕ್ಷಿಣ ಮತ್ತು ಉತ್ತರ ದಿಕ್ಕಿನಲ್ಲಿ, ವಿಶೇಷವಾಗಿ ಒಂದೊಂದು ಸಿಂಹಾಸನವಿದೆಯೆಂದು ತಿಳಿಯಬೇಕು. ಆ ಶಿಲೆಗಳಿಗೆ ದಕ್ಷಿಣ ದಿಕ್ಕಿನಲ್ಲಿ ಅತಿಪಾಂಡು ಕಂಬಲಾ ಎಂದೂ, ಉತ್ತರ ದಿಕ್ಕಿನಲ್ಲಿ ಅತಿರಿಕ್ತ ಕಂಬಲಾ ಶಿಲೆಯೆಂದೂ ಹೆಸರುಗಳಿವೆ. ಆ ಶಿಲೆಗಳ ಮೇಲೆ ತೀರ್ಥಂಕರರು ಕುಳಿತುಕೊಳ್ಳುತ್ತಾರೆ.

**ಸಮೀಕ್ಷಕ:–** ನೋಡಿರಿ ಇವರ ತೀರ್ಥಂಕರರ ಜನ್ಮೋತ್ಸವ ಮೊದಲಾದುವನ್ನು ಮಾಡುವ ಶಿಲೆಗಳನ್ನು! ಮುಕ್ತಿಯ ಸಿದ್ಧಿಶಿಲೆಯೂ ಹೀಗೆಯೇ ಇದೆ. ಹೀಗೆ ಇವರ ಬಹಳ ಮಾತುಗಳು ತಳಮೇಲಿಲ್ಲದವಾಗಿವೆ. ಎಲ್ಲಿಯವರೆಗೆ ಬರೆಯೋಣ?

೬೮. ಆಧುನಿಕ ಭೂಗೋಳವೇತ್ತರ ಅನುಸಾರವಾಗಿ ಈ ಪೃಥ್ವಿಯ ಪರಿಧಿ ೨೪,೦೦೦ ಮೈಲಿಗಳು.

ಆದರೆ, ನೀರನ್ನು ಶೋಧಿಸಿ ಕುಡಿಯುವುದು, ಮತ್ತು ಸೂಕ್ಷ್ಮ ಜೀವದ ಮೇಲೆ ದಯೆತೋರುವುದು ಅವ್ಯವಹಾರವಾದರೂ ದಯಾಭಾವನೆ, ರಾತ್ರಿಭೋಜನ ಮಾಡದಿರುವುದು–ಈ ಮೂರು ಒಳ್ಳೆಯದಾಗಿವೆ. ಇವರ ಇನ್ನುಳಿದ ಕಥನಗಳು ಎಷ್ಟಿವೆಯೋ, ಅವೆಲ್ಲವೂ ಅಸಂಭವತ್ವದಿಂದ ಗ್ರಸ್ತವಾಗಿವೆ. ನಾವು ಇಷ್ಟು ಮಾತ್ರ ಹೇಳಿರುವುದರಿಂದಲೇ ಬುದ್ಧಿವಂತರು ಬಹಳ ವಿಷಯಗಳನ್ನು ತಿಳಿದುಕೊಳ್ಳುವರು. ಉದಾಹರಣೆಗಾಗಿ ಮಾತ್ರ ಈ ಸ್ವಲ್ಪ ಬರೆದಿದ್ದೇವೆ. ಇವರ ಅಸಂಭವವಾದ ಮಾತುಗಳನ್ನೆಲ್ಲಾ ಬರೆಯುವೆವಾದರೆ, ಒಬ್ಬ ಮಾನವನು ತನ್ನ ಸಂಪೂರ್ಣ ಜೀವನದಲ್ಲಿ ಓದಲಾರದಷ್ಟು ಪುಸ್ತಕಗಳಾದಾವು! ಆದುದಿಂದ, ಅಕ್ಕಿಯನ್ನು ಬೇಯಿಸುತ್ತಿರುವ ಪಾತ್ರೆಯಿಂದ ಒಂದೆರಡು ಅಗಳನ್ನು ಪರೀಕ್ಷಿಸಿ, ಅಕ್ಕಿಯೆಲ್ಲರೂ ಹಸಿಯಾಗಿದೆಯೋ ಅಥವಾ ಬೆಂದಿದೆಯೇ–ಎಂದು ತಿಳಿದುಕೊಳ್ಳುವ ಹಾಗೆ, ಈ ಅಲ್ಪ ಲೇಖನದಿಂದಲೇ ಸಜ್ಜನರು ಬಹಳ ವಿಷಯಗಳನ್ನು ತಿಳಿದುಕೊಳ್ಳವರು. ಬುದ್ಧಿವಂತರ ಮುಂದೆ ವಿಸ್ತಾರವಾಗಿ ಬರೆಯುವುದು ಅವಶ್ಯಕವಲ್ಲ. ಏಕೆಂದರೆ, ಕೇವಲ ದಿಗ್ದರ್ಶನದಿಂದ ಸಂಪೂರ್ಣ ಆಶಯವನ್ನು ಬುದ್ಧಿಶಾಲಿಗಳು ತಿಳಿದುಕೊಂಡೇಬಿಡುತ್ತಾರೆ.

**ಇದರ ನಂತರ ಕ್ರೈಸ್ತರ ಮತದ ವಿಷಯದಲ್ಲಿ ಬರೆಯಲ್ಪಡುವುದು**

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮೀಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ನಾಸ್ತಿಕಮತಾಂತರರ್ಗತಚಾರ್ವಾಕ**

**ಬೌದ್ಧಜೈನಮತ ಖಂಡನಮಂಡನವಿಷಯೇ**

**ದ್ವಾದಶಃ ಸಮುಲ್ಲಾಸಃ ಸಂಪೂರ್ಣಃ**

# ಅನುಭೂಮಿಕೆ (3)

(೧) ಬೈಬಲಿನ ಈ ಮತ ಕೇವಲ ಕ್ರೈಸ್ತರದೆಂದು ತಿಳಿಬಾರದು, ಇದರಲ್ಲಿ ಯಹೂದ್ಯರೇ ಮೊದಲಾದವರೂ ಗ್ರಹಿಸಲ್ಪಡುತ್ತಾರೆ. ಇಲ್ಲಿ, ಈ ೧೩ನೆಯ ಸಮುಲ್ಲಾಸದಲ್ಲಿ, ಕ್ರೈಸ್ತ-ಮತದ ವಿಷಯದಲ್ಲಿ ನಾವು ಬರೆದಿರುವುದರ ಅಭಿಪ್ರಾಯ, ಆಧುನಿಕ ಕಾಲದಲ್ಲಿ ಬೈಬಲಿನ ಅನುಯಾಯಿಗಳಲ್ಲಿ ಕ್ರೈಸ್ತರೇ ಮುಖ್ಯರಾಗಿದ್ದಾರೆ; ಯಹೂದ್ಯರೇ ಮೊದಲಾದವರು ಗೌಣರು, ಎಂದರೆ ಅಮುಖ್ಯರಾಗಿದ್ದಾರೆ-ಎಂಬುದೇ ಆಗಿದೆ. ಮುಖ್ಯರಾದವರನ್ನು ಗ್ರಹಿಸಿದರೆ, ಮುಖ್ಯರಲ್ಲದವರ ಗ್ರಹಿಕೆಯು ಆಗಿ ಹೋಗುತ್ತದೆ. ಹೀಗೆ, ಯಹೂದ್ಯರೇ ಮೊದಲಾದವರೂ ಗ್ರಹಿಸಲ್ಪಡುತ್ತಾರೆ – ಎಂದು ತಿಳಿಯಿರಿ. ಕ್ರೈಸ್ತರೂ, ಯಹೂದ್ಯರೇ ಮೊದಲಾದವರೆಲ್ಲವರೂ ಪ್ರಾಮಾಣಿಕವೆಂದು ಅಂಗೀಕರಿಸುವ ಮತ್ತು ತಮ್ಮ ಧರ್ಮದ ಮೂಲವೆಂದು ಭಾವಿಸುವ ಪುಸ್ತಕವಾದ ಬೈಬಲಿನಿಂದಲೇ ಉದ್ಧರಿಸಿ, ಇವರ ವಿಷಯಗಳನ್ನು ಇಲ್ಲಿ ಬರೆದಿದ್ದೇವೆ.

(೨) ಈ ಪುಸ್ತಕದ ಭಾಷಾಂತರಗಳು ಅನೇಕವಾಗಿವೆ. ಇವರ ಮತದ ದೊಡ್ಡ ದೊಡ್ಡ ಪಾದರಿಗಳು ಆ ಭಾಷಾಂತರಗಳನ್ನು ಮಾಡಿದ್ದಾರೆ. ಅವುಗಳಲ್ಲಿ ದೇವನಾಗರೀ ಲಿಪಿಯಲ್ಲಿದ್ದ ಸಂಸ್ಕೃತದ ಭಾಷಾಂತರವನ್ನು ನೋಡಿ, ನನಗೆ ಬೈಬಲಿನ ಬಗೆಗೆ ಬಹಳ ಸಂದೇಹಗಳು ಬಂದವು. ಅವುಗಳಲ್ಲಿ ಸ್ವಲ್ಪವನ್ನು ಈ ೧೩ನೆಯ ಸಮುಲ್ಲಾಸದಲ್ಲಿ ಸರ್ವರೂ ವಿಶ್ಲೇಷಣ ಮಾಡುವುದಕ್ಕೆ ನೆರವಾಗಲಿ-ಎಂದು ಬರೆದಿದ್ದೇನೆ. ಈ ಲೇಖನ ಕೇವಲ ಸತ್ಯ-ಸಂವರ್ಧನಕ್ಕಾಗಿ ಮತ್ತು ಅಸತ್ಯದ ಹ್ರಾಸಕ್ಕಾಗಿ ಮಾಡಲ್ಪಟ್ಟಿದೆ; ಯಾರಿಗಾದರೂ ದುಃಖವನ್ನು ಅಥವಾ ಹಾನಿಯನ್ನುಂಟುಮಾಡುವ, ಇಲ್ಲವೇ ಮಿಥ್ಯಾದೋಷದ ಆರೋಪಣೆಯನ್ನು ಮಾಡುವ ಉದ್ದೇಶ್ಯದಿಂದಲ್ಲ. ಮುಂದಣ ಲೇಖನದಿಂದ ಎಲ್ಲರೂ ಇದರ ಅಭಿಪ್ರಾಯವನ್ನೂ, ಈ ಪುಸ್ತಕ ಹಾಗೂ ಇದರ ಮತವೂ ಕೂಡ ಹೇಗಿದೆ-ಎಂದು ತಿಳಿದುಕೊಳ್ಳುವರು.

(೩) ಮನುಷ್ಯ ಮಾತ್ರರಿಗೆ ದರ್ಶನ, ಶ್ರವಣ, ಲೇಖನ-ಮೊದಲಾದುವನ್ನು ನಿರ್ವಹಿಸುವುದು ಸಹಜವಾಗಿ, ಪಕ್ಷ-ಪ್ರತಿಪಕ್ಷಗಳ ಪ್ರತಿಪಾದಕರಾಗಿ, ಪರ್ಯಾಲೋಚನೆಮಾಡಿ, ಕ್ರೈಸ್ತ ಮತದ ವಿವೇಚನೆಯನ್ನು ಮಾಡುವುದು ಸಹಜವಾಗುವುದು – ಎನ್ನುವುದೇ ಈ ಲೇಖನದ ಉದ್ದೇಶ್ಯವಾಗಿದೆ. ಇದರಿಂದ, ಮಾನವರಿಗೆ ಧರ್ಮವಿಷಯಕವಾದ ಜ್ಞಾನ ಹೆಚ್ಚಿ, ಯಥಾಯೋಗ್ಯವಾಗಿ ಸತ್ಯಾಸತ್ಯ ಮತದ ಮತ್ತು ಕರ್ತವ್ಯಾಕರ್ತವ್ಯ ಕರ್ಮಗಳ ಸಂಬಂಧದ ವಿಷಯವಿದಿತವಾಗಿ, ಸತ್ಯದ ಮತ್ತು ಕರ್ತವ್ಯಕರ್ಮದ ಸ್ವೀಕಾರವನ್ನೂ, ಅಸತ್ಯದ ಮತ್ತು ಅಕರ್ತವ್ಯವಾದ ಕರ್ಮದ ಪರಿತ್ಯಾಗವನ್ನೂ ಮಾಡುವುದು ಸಹಜವಾಗಿ ಆಗಬಲ್ಲದು-ಎಂಬ ಧ್ಯೇಯವೂ ಸಿದ್ಧಿಸುವುದು.

(೪) ಸರ್ವರ ಮತಗಳ ವಿಷಯಕವಾದ ಪುಸ್ತಕಗಳನ್ನೂ ನೋಡಿ, ತಿಳಿದುಕೊಂಡು, ಏನಾದರೂ ಸಮ್ಮತಿಯನ್ನು ಅಥವಾ ಅಸಮ್ಮತಿಯನ್ನು ಕೊಡುವುದು, ಅಥವಾ ಬರೆಯುವುದು, ಇಲ್ಲವೇ ಆಲಿಸುವುದು ಮಾನವರೆಲ್ಲರಿಗೂ ಉಚಿತವಾಗಿರುತ್ತದೆ. ಏಕೆಂದರೆ, ಓದುವುದರಿಂದ ಪಂಡಿತನಾಗುವಂತೆ ಆಲಿಸುವುದರಿಂದ ಬಹುಶ್ರುತನಾಗುತ್ತಾನೆ. ಶ್ರೋತೃವು ಬೇರೆಯವನಿಗೆ ತಿಳಿಯ ಹೇಳಲು ಸಮರ್ಥನಾಗದಿದ್ದರೂ, ಸ್ವತಃ ತಾನಂತನೂ ತಿಳಿದುಕೊಂಡೇ ತೀರುತ್ತಾನೆ. ಯಾರಾದರೂ ಪಕ್ಷಪಾತವೆಂಬ ವಾಹನವನ್ನೇರಿ ನೋಡುತ್ತಾರೆಯಾದರೆ, ಅವರಿಗೆ ತಮ್ಮ ಗುಣ-ದೋಷಗಳೂ ವಿದಿತವಾಗಲಾರವು; ಅನ್ಯರ ಗುಣದೋಷಗಳೂ ತಿಳಿದುಬರಲಾರವು.

(೫) ಮಾನವನ ಆತ್ಮನು ಯಥಾಯೋಗ್ಯವಾಗಿ ಸತ್ಯಾಸತ್ಯ ನಿರ್ಣಯವನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ತನ್ನ ಪಠಿತವಾದ ಅಥವಾ ಶ್ರುತವಾದ ಜ್ಞಾನ ಎಷ್ಟಿದೆಯೋ, ಅಷ್ಟು ನಿಶ್ಚಯಮಾಡಬಲ್ಲವನಾಗಿದ್ದಾನೆ. ಒಂದು ಮತದವರು ಮತ್ತೊಂದು ಮತದವರ ವಿಷಯಗಳನ್ನು ತಿಳಿದಿದ್ದು, ಆ ಮತ್ತೊಂದು ಮತದವರು ತಿಳಿಯದವರಾಗಿದ್ದರೆ, ಯೋಗ್ಯಕ್ರಮದಲ್ಲಿ ಸಂವಾದ ನಡೆಯಲಾರದು. ಆದರೆ, ಅಜ್ಞಾನಿಗಳು ಯಾವುದಾದರೂ ಭ್ರಮವೆಂಬ ಆವರಣದಲ್ಲಿ ಸಿಲುಕಿಕೊಂಡುಬಿಡುತ್ತಾರೆ.

ಹೀಗೆ ಆಗದೇ ಇರಲಿ–ಎಂದು ಈ ಗ್ರಂಥದಲ್ಲಿ ಪ್ರಚರಿತವಾಗಿರುವ ಮತಗಳೆಲ್ಲದರ ವಿಷಯವನ್ನೂ ಸ್ವಲ್ಪ ಸ್ವಲ್ಪ ಬರೆದಿದ್ದೇವೆ. ಇಷ್ಟರಿಂದಲೇ ಉಳಿದ ವಿಷಯಗಳಲ್ಲಿ ಅವು ಸತ್ಯವೋ ಅಥವಾ ಸುಳ್ಳೋ–ಎಂದು ಊಹಿಸಬಹುದಾಗಿದೆ. ಯಾವ ಯಾವ ಸರ್ವಮಾನ್ಯ ಸತ್ಯವಿಷಯಗಳಿವೆಯೋ, ಅವಂತೂ ಎಲ್ಲವುಗಳಲ್ಲಿಯೂ ಒಂದೇ ಬಗೆಯಾಗಿವೆ. ಜಗಳವಾಗುವುದು ಸುಳ್ಳು ವಿಷಯಗಳಲ್ಲಿ ಮಾತ್ರ. ಅಥವಾ, ಒಂದು ಸತ್ಯವೂ ಎರಡನೆಯದು ಸುಳ್ಳೂ ಆಗಿದ್ದರೂ ಕೂಡ ಸ್ವಲ್ಪ ವಿವಾದ ನಡೆಯುತ್ತದೆ. ವಾದಿ–ಪ್ರತಿವಾದಿಗಳು ಸತ್ಯಾಸತ್ಯ ನಿಶ್ಚಯಕ್ಕಾಗಿ ವಾದ–ಪ್ರತಿವಾದ ಮಾಡುವರಾದರೆ, ಅವಶ್ಯವಾಗಿ ನಿರ್ಣಯವಾಗುತ್ತದೆ. ಈಗ ನಾನು ಈ ಹದಿಮೂರನೆಯ ಸಮುಲ್ಲಾಸದಲ್ಲಿ ಕ್ರೈಸ್ತಮತ ವಿಷಯಕವಾದುದನ್ನು ಸ್ವಲ್ಪ ಬರೆದು ಎಲ್ಲರ ಮುಂದೆ ಮಂಡಿಸುತ್ತೇನೆ. ಹೇಗೆ ಇದೆ–ಎಂದು ಆಲೋಚಿಸಿರಿ.

**ಅಲಮತಿಲೇಖೇನ ವಿಚಕ್ಷಣವರೇಷು**

# ಅಥ ತ್ರಯೋದಶಸಮುಲ್ಲಾಸಾರಂಭಃ

## ಅಥ ಕೃಶ್ಚೀನಮತವಿಷಯಂ

**ವ್ಯಾಖ್ಯಾಸ್ಯಾಮಃ ।**

ಈಗ ಇದರಿಂದ ಮುಂದಕ್ಕೆ ಕ್ರೈಸ್ತರ ಮತ ವಿಷಯದಲ್ಲಿ ಬರೆಯುತ್ತೇವೆ. ಅದರಿಂದ ಎಲ್ಲರಿಗೂ ಇವರ ಮತ ನಿರ್ದೋಷವಾಗಿದೆಯೋ– ಇಲ್ಲವೋ ಮತ್ತು ಇವರ ಬೈಬಲ್ ಎಂಬ ಪುಸ್ತಕ ಈಶ್ವರಕೃತವಾದುದು ಅಹುದೋ ಅಥವಾ ಅಲ್ಲವೋ– ಎಂಬುದು ವಿದಿತವಾಗುವುದು.

### ಮೊದಲು ಬೈಬಲಿನ ತೌರೇತಿನ[೧] ವಿಷಯ ಬರೆಯಲ್ಪಡುತ್ತದೆ.

*ಆರಂಭದಲ್ಲಿ ಈಶ್ವರನು ಆಕಾಶವನ್ನು ಮತ್ತು ಪೃಥಿವಿಯನ್ನು ಸೃಜಿಸಿದನು ಮತ್ತು ಪೃಥಿವಿಯು ವಿರೂಪವೂ ಹಾಗೂ ಶೂನ್ಯವೂ ಆಗಿದ್ದಿತು. ಮತ್ತು ಆಳದಲ್ಲಿ ಕತ್ತಲೆಯಿದ್ದಿತು ಮತ್ತು ಈಶ್ವರನ ಆತ್ಮನು ನೀರಿನ ಮೇಲೆ ಚಲಿಸುತ್ತಾ ಇದ್ದನು.*[೨] *(ಪರ್ವ:–೧, ಆಯಾ–೧.೨)*

**ಸಮೀಕ್ಷಕ :–** ಆರಂಭವೆಂದು ಯಾವುದನ್ನು ಹೇಳುತ್ತೀರಿ?

**ಕ್ರೈಸ್ತ :–** ಸೃಷ್ಟಿಯ ಪ್ರಥಮ ಉತ್ಪತ್ತಿಯನ್ನು.

**ಸಮೀಕ್ಷಕ:–** ಇದೇ ಸೃಷ್ಟಿ ಮೊದಲಾಯಿತೇನು? ಇದಕ್ಕೆ ಮೊದಲು ಎಂದೂ ಆಗಿರಲಿಲ್ಲವೇನು?

**ಕ್ರೈಸ್ತ :–** ಆಗಿದ್ದಿತೋ– ಇಲ್ಲವೋ ನಾವು ಅರಿಯೆವು. ಈಶ್ವರನು ಬಲ್ಲನು.

**ಸಮೀಕ್ಷಕ:–** ನಿಮಗೆ ಗೊತ್ತಿಲ್ಲದಿರುವಾಗ, ಸಂದೇಹದ ನಿವಾರಣೆಮಾಡಲಾರದ ಈ ಪುಸ್ತಕವನ್ನು ನಂಬಿದಿರಿ ಏತಕ್ಕೆ? ಮತ್ತು ಇದರ ಮೇಲಣ ಭರವಸೆಯಿಂದಲೇ ಜನರಿಗೆ ಉಪದೇಶವನ್ನು ಮಾಡಿ, ಈ ಸಂದೇಹಭರಿತವಾದ ಮತದಲ್ಲಿ ಏತಕ್ಕೆ ಸಿಕ್ಕಿಸಿ ಹಾಕುತ್ತೀರಿ? ಮತ್ತು ನಿಃಸಂದೇಹವೂ, ಸರ್ವಸಂಶಯನಿವಾರಕವೂ ಆದ ವೇದಮತವನ್ನು ಸ್ವೀಕರಿಸುವುದಿಲ್ಲವೇತಕ್ಕೆ? ನೀವು ಈಶ್ವರನ ಸೃಷ್ಟಿಯ ವಿಷಯವನ್ನು ತಿಳಿಯದಿರುವಾಗ, ಈಶ್ವರನನ್ನು ತಿಳಿದುಕೊಳ್ಳುವಿರಾದರೂ[೩] ಎಂತು? ಆಕಾಶವೆಂದು ಯಾವುದನ್ನು ಗ್ರಹಿಸುತ್ತೀರಿ?

**ಕ್ರೈಸ್ತ :–** ಪೊಳ್ಳನ್ನು, ಮತ್ತು ಊರ್ಧ್ವವನ್ನು,

---

೧. ಬೈಬಲ್– ತೌರೇತ್= ಹಳೆಯ ನಿಯಮಗಳ ಧರ್ಮಗ್ರಂಥ [ Old Testament]

೨. ಈಜಿಪ್ಟ್‌ನಲ್ಲಿ ಮೊದಲು ವೇದದ ಪ್ರಚಾರವಿತ್ತು. ಹಿರಣ್ಯಗರ್ಭ ಅಥವಾ ಮಹದಂಡವು "ಆಪ"ದಲ್ಲಿ ಗತಿಶೀಲವಾಗಿತ್ತು. [ಶತಪಥ ಬ್ರಾಹ್ಮಣ ೧೧.೧.೬.೧.೨] ಈ ರಹಸ್ಯವನ್ನರಿಯದೇ ಹಿರಣ್ಯಾಂಡವನ್ನು ಈಶ್ವರನೆಂದು ತಿಳಿದು, ಬೈಬಲ್ಲಿನಲ್ಲಿ ಜಗತ್ತನ್ನು ಅಜ್ಞಾನ ಸಾಗರಕ್ಕೆ ತಳ್ಳಲಾಗಿದೆ. ಬೈಬಲ್ಲಿನಲ್ಲಿ ಪ್ರಾಯಃ ಮೂಲವೈದಿಕ ವಿಚಾರಗಳು ವಿಕೃತ ರೂಪದಲ್ಲಿ ತೋರಿಸಲ್ಪಟ್ಟಿವೆ. –ಯು.ಮೀ.

೩. ಈಶ್ವರನನ್ನು ತಿಳಿಯುವ ಮೊದಲು, ಅವನಿಂದಾದ ಸೃಷ್ಟಿ ರಚನೆಯ ಜ್ಞಾನವನ್ನು ತಿಳಿಯುವುದು ಅವಶ್ಯಕ. ಇದು ವೈದಿಕ ಸಿದ್ಧಾಂತ ! ಸೃಷ್ಟಿಯ ಜ್ಞಾನವಿಲ್ಲದೆ, ಅಥವಾ ಅದನ್ನು ಕಡೆಗಣಿಸಿ, ಕೇವಲ 'ಬ್ರಹ್ಮಜ್ಞಾನ'ದ ಬಗ್ಗೆ ಕೂಗು ಹಾಕುವುದು ಆಚಾರ್ಯ ತ್ರಯರ ಸಿದ್ಧಾಂತವಾಗಿತ್ತು. ವೇದಾನುಯಾಯಿಯಾದ ಮಹರ್ಷಿ ದಯಾನಂದ ಸರಸ್ವತಿಯವರಿಗೂ, ಪುರಾಣ–ಉಪನಿಷತ್ತುಗಳ ಅನುಯಾಯಿಗಳಾದ ಆಚಾರ್ಯರಿಗೂ ಇರುವ ವ್ಯತ್ಯಾಸ ಇದೇ.

**ಸಮೀಕ್ಷಕ :–** ಪೊಳ್ಳಿನ ಉತ್ಪತ್ತಿ ಹೇಗೆ ಆಯಿತು? ಏಕೆಂದರೆ, ಇದು ವ್ಯಾಪಕವಾದ ಪದಾರ್ಥ ಮತ್ತು ಅತಿಸೂಕ್ಷ್ಮವಾಗಿದೆ. ಮತ್ತು ಮೇಲೆ–ಕೆಳಗೆ ಒಂದೇ ಬಗೆಯಾಗಿದೆ. ಯಾವಾಗ ಆಕಾಶವನ್ನು ಸೃಜಿಸಿರಲಿಲ್ಲವೋ ಆಗ ಪೊಳ್ಳು ಮತ್ತು ಆಕಾಶ ಇದ್ದಿತೋ ಅಥವಾ ಇಲ್ಲವೋ? ಇರಲಿಲ್ಲವೆಂದರೆ, ಈಶ್ವರನೂ, ಜಗತ್ತಿನ ಕಾರಣವೂ ಮತ್ತು ಜೀವರೂ ಎಲ್ಲಿರುತ್ತಿದ್ದರು? ಆಕಾಶವಿಲ್ಲದೆ, ಯಾವ ಪದಾರ್ಥವೂ ಸ್ಥಿತವಾಗಿರಲಾರದು. ಆದುದರಿಂದ, ನಿಮ್ಮ ಬೈಬಲಿನ ಕಥನ ಯುಕ್ತವಾದುದಲ್ಲ. ಈಶ್ವರನು ವಿರೂಪನೂ, ಅವನ ಜ್ಞಾನ–ಕರ್ಮಗಳೂ ವಿರೂಪವೂ ಆಗಿರುತ್ತವೋ ಅಥವಾ ಎಲ್ಲವೂ ಸುರೂಪವಾಗಿರುತ್ತವೋ?

**ಕ್ರೈಸ್ತ :–** ಸುರೂಪವಾಗಿರುತ್ತವೆ.

**ಸಮೀಕ್ಷಕ :–** ಹಾಗಾದರೆ ಅಲ್ಲಿ ಈಶ್ವರರಚಿತವಾದ ಪೃಥಿವೀ ವಿರೂಪವಾಗಿದ್ದಿತು– ಎಂದೇಕೆ ಬರೆದರು?

**ಕ್ರೈಸ್ತ :–** ವಿರೂಪವೆಂದರೆ ಏರು– ಇಳಿತಗಳಿಂದ ಕೂಡಿದುದಾಗಿತ್ತು; ಸಮತಲವಾಗಿರಲಿಲ್ಲ– ಎಂದು ಅರ್ಥ

**ಸಮೀಕ್ಷಕ:–** ಮತ್ತೆ ಸಮತಲವಾಗಿ ಯಾವನು ಮಾಡಿದನು? ಈಗಲೂ ಎತ್ತರವಾಗಿ– ತಗ್ಗಾಗಿ ಇಲ್ಲವೇನು? ಆದುದರಿಂದ, ಈಶ್ವರನ ಕಾರ್ಯ ವಿರೂಪವಾಗಲಾರದು. ಏಕೆಂದರೆ, ಅವನು ಸರ್ವಜ್ಞನಾಗಿದ್ದಾನೆ. ಅವನ ಕೆಲಸದಲ್ಲಿ ಮರೆವಾಗಲಿ, ತ್ರುಟಿಯಾಗಲಿ, ಎಂದಿಗೂ ಆಗಲಾರದು. ಮತ್ತು ಬೈಬಲಿನಲ್ಲಿ ಈಶ್ವರನ ಸೃಷ್ಟಿ ವಿರೂಪವಾಗಿದ್ದಿತೆಂದು ಬರೆದಿದೆ. ಆದುದರಿಂದ ಈ ಪುಸ್ತಕ ಈಶ್ವರಕೃತವಾಗಲಾರದು. ಮೊದಲಾಗಿ, ಈಶ್ವರನ ಆತ್ಮನು ಯಾವ ಪದಾರ್ಥ?

**ಕ್ರೈಸ್ತ :–** ಚೇತನ ಪದಾರ್ಥವಾಗಿರುತ್ತದೆ.

**ಸಮೀಕ್ಷಕ:–** ಅವನು ಸಾಕಾರನೋ ಅಥವಾ ನಿರಾಕಾರನೋ? ಮತ್ತು ವ್ಯಾಪಕನೋ ಅಥವಾ ಏಕದೇಶೀಯನೋ?

**ಕ್ರೈಸ್ತ :–** ನಿರಾಕಾರನಾಗಿದ್ದಾನೆ; ಚೇತನನೂ ಮತ್ತು ವ್ಯಾಪಕನೂ ಆಗಿದ್ದಾನೆ. ಆದರೆ, ಯಾವುದೋ ಒಂದು ಸನಾಯೀ ಪರ್ವತ, ನಾಲ್ಕನೆಯ ಆಕಾಶ ಮೊದಲಾದ ಸ್ಥಾನಗಳಲ್ಲಿ ವಿಶೇಷವಾಗಿರುತ್ತಾನೆ.

**ಸಮೀಕ್ಷಕ:–** ನಿರಾಕಾರನಾಗಿರುವುದಾದರೆ, ಅವನನ್ನು ಯಾವನು ನೋಡಿದನು? ಮತ್ತು ವ್ಯಾಪಕನು ನೀರಿನ ಮೇಲೆ ತೇಲುವುದು ಎಂದಿಗೂ ಸಂಭವವಲ್ಲ. ಒಳ್ಳೆಯದು, ಈಶ್ವರನ ಆತ್ಮನು ಯಾವಾಗ ನೀರಿನ ಮೇಲೆ ತೇಲುತ್ತಿದ್ದನೋ, ಆಗ ಈಶ್ವರನೆಲ್ಲಿದ್ದನು? ಇದರಿಂದ, ಈಶ್ವರನ ಶರೀರ ಬೇರೆ ಎಲ್ಲಿಯೋ ಸ್ಥಿತವಾಗಿದ್ದಿತು – ಎಂದೇ ಸಿದ್ಧವಾಗುತ್ತದೆ. ಅಥವಾ ತನ್ನ ಆತ್ಮನ ಒಂದು ಚೂರನ್ನು ನೀರಿನ ಮೇಲೆ ತೇಲಿಸಿರಬಹುದು. ಹೀಗೆ ಆದಲ್ಲಿ ವಿಭು ಮತ್ತು ಸರ್ವಜ್ಞನೆಂದಿಗೂ ಆಗಲಾರನು. ವಿಭುವಲ್ಲದಿದ್ದರೆ, ಜಗತ್ತಿನ ರಚನೆ, ಧಾರಣ, ಪಾಲನ, ಮತ್ತು ಜೀವರ ಕರ್ಮಗಳ ವ್ಯವಸ್ಥೆ ಅಥವಾ ಪ್ರಳಯವನ್ನು ಎಂದಿಗೂ ಮಾಡಲಾರನು. ಏಕೆಂದರೆ, ಯಾವ ಪದಾರ್ಥದ ಸ್ವರೂಪವು ಏಕದೇಶೀಯವಾಗಿರುತ್ತದೋ ಅದರ ಗುಣ–ಕರ್ಮ–ಸ್ವಭಾವಗಳೂ ಕೂಡ ಏಕದೇಶೀಯವಾಗಿರುತ್ತವೆ. ಹೀಗಿರುವುದಾದರೆ, ಅವನು ಈಶ್ವರನಾಗಿರಲಾರನು. ಏಕೆಂದರೆ, ಈಶ್ವರನು ಸರ್ವವ್ಯಾಪಕನೂ, ಅನಂತಗುಣಕರ್ಮಸ್ವಭಾವಯುಕ್ತನೂ, ಸಚ್ಚಿದಾನಂದಸ್ವರೂಪನೂ, ನಿತ್ಯಶುದ್ಧ ಬುದ್ಧಮುಕ್ತಸ್ವಭಾವನೂ, ಅನಾದಿಯೂ, ಅನಂತತ್ವ ಮೊದಲಾದ ಲಕ್ಷಣಯುಕ್ತನೂ ಅಗಿದ್ದಾನೆ– ಎಂದು ವೇದಗಳಲ್ಲಿ ಹೇಳಿದೆ. ಅವನನ್ನೇ ಅಂಗೀಕರಿಸಿರಿ. ಆಗ ಮಾತ್ರ ನಿಮ್ಮ ಕಲ್ಯಾಣವಾಗುವುದು ; ಅನ್ಯಥಾ ಆಗಲಾರದು. (೧)

*ಮತ್ತು ಈಶ್ವರನು 'ಬೆಳಕಾಗಲಿ' ಎಂದು ಹೇಳಿದನು ಮತ್ತು ಬೆಳಕು ಆಗಿ ಹೋಯಿತು. ಮತ್ತು ಈಶ್ವರನು ಬೆಳಕು ಚೆನ್ನಾಗಿದೆ– ಎಂಬುದನ್ನು ನೋಡಿದನು. (ಪರ್ವ:– ೧. ಆ;– ೩– ೪.)*

**ಸಮೀಕ್ಷಕ :–** ಈಶ್ವರನ ಮಾತನ್ನು ಜಡವಾದ ಬೆಳಕು ಆಲಿಸಿತೇನು? ಆಲಿಸಿರುವುದೇ ಆದರೆ, ಈಗಲೂ ಸೂರ್ಯನ, ದೀಪದ ಹಾಗೂ ಬೆಂಕಿಯ ಬೆಳಕು ನಮ್ಮ–ನಿಮ್ಮ ಮಾತುಗಳನ್ನು ಆಲಿಸುವುದಿಲ್ಲವೇಕೆ? ಬೆಳಕು ಜಡವಾಗಿರುತ್ತದೆ. ಅದು ಎಂದಿಗೂ, ಯಾವನ ಮಾತನ್ನೂ ಆಲಿಸಲಾರದು. ಮತ್ತು ಯಾವಾಗ ಈಶ್ವರನು ಬೆಳಕನ್ನು ನೋಡಿದನೋ, ಆಗಲೇ ಬೆಳಕು ಚೆನ್ನಾಗಿದೆ – ಎಂದು ಕಂಡುಕೊಂಡನೋ? ಮೊದಲು ತಿಳಿದಿರಲಿಲ್ಲವೋ? ತಿಳಿದಿದ್ದ ಪಕ್ಷದಲ್ಲಿ, ನೋಡಿ, ಚೆನ್ನಾಗಿದೆ ಎಂದೇಕೆ ಹೇಳುತ್ತಿದ್ದನು? ತಿಳಿಯದೇ ಇದ್ದ ಪಕ್ಷದಲ್ಲಿ, ಅವನು ಈಶ್ವರನೇ ಅಲ್ಲ. ಆದುದರಿಂದ, ನಿಮ್ಮ ಬೈಬಲ್ ಈಶ್ವರೋಕ್ತವಲ್ಲ ಮತ್ತು ಅದರಲ್ಲಿ ಹೇಳಲ್ಪಟ್ಟಿರುವ ಈಶ್ವರನು ಸರ್ವಜ್ಞನಲ್ಲ. (೨)

*ಮತ್ತು ಈಶ್ವರನು "ಜಲಗಳ ನಡುವೆ ಆಕಾಶ ಉಂಟಾಗಲಿ - ಮತ್ತು ಜಲಗಳಿಂದ ಜಲಗಳನ್ನು ವಿಭಾಗಮಾಡಲಿ".- ಎಂದನು. ಆಗ ಈಶ್ವರನು ಆಕಾಶವನ್ನು ರಚಿಸಿದನು. ಮತ್ತು ಆಕಾಶದಿಂದ ಕೆಳಗಿನ ಜಲಗಳನ್ನು, ಆಕಾಶದ ಮೇಲಿನ ನೀರುಗಳಿಂದ ವಿಭಾಗ ಮಾಡಿದನು. ಮತ್ತು ಹೀಗೆ ಆಗಿಹೋಯಿತು. ಮತ್ತು ಈಶ್ವರನು ಆಕಾಶವನ್ನು ಸ್ವರ್ಗವೆಂದು ಕರೆದನು ಮತ್ತು ಸಂಜೆ ಹಾಗೂ ಬೆಳಗಾಗಿ ಎರಡನೆಯ ದಿನವಾಯಿತು. (ಪರ್ವ:- ೧. ಆ:- ೬ - ೮)*

**ಸಮೀಕ್ಷಕ:-** ಆಕಾಶ ಮತ್ತು ಜಲಗಳೂ ಕೂಡ ಈಶ್ವರನ ಮಾತನ್ನು ಆಲಿಸಿದುವೇನು? ಮತ್ತು ಜಲದ ನಡುವೆ ಆಕಾಶವಿಲ್ಲದಿದ್ದರೆ, ಜಲವಿರುತ್ತಿದ್ದಿತಾದರೂ ಎಲ್ಲಿ? ಮೊದಲನೆಯ ಆಯತ್ತಿನಲ್ಲಿ 'ಆಕಾಶವನ್ನು ಸೃಜಿಸಿದನು.'- ಎಂದಿದೆ. ಪುನಃ ಆಕಾಶದ ನಿರ್ಮಾಣವನ್ನು ಹೇಳುವುದು ವ್ಯರ್ಥವಾಯಿತು. ಆಕಾಶವನ್ನು ಸ್ವರ್ಗ ವೆಂದು ಹೇಳಿದನಾದರೆ, ಅದು ಸರ್ವವ್ಯಾಪಕವಾಗಿದೆ; ಆದುದರಿಂದ ಎಲ್ಲೆಡೆಯೂ ಸ್ವರ್ಗವಿದೆಯೆಂದಾಯಿತು. ಮತ್ತು ಊರ್ಧ್ವವನ್ನು ಸ್ವರ್ಗವಾಗಿದೆ- ಎಂದು ಹೇಳುವುದು ವ್ಯರ್ಥವಾಯಿತು. ಸೂರ್ಯನು ಉತ್ಪನ್ನನೇ ಆಗಿರಲಿಲ್ಲವೆಂದಾಗ, ಹಗಲು ಮತ್ತು ಇರಳು ಆಯಿತೆಲ್ಲಿಂದ? ಇಂತಹ ಅಸಂಭವವಾದ ಮಾತುಗಳು ಮುಂದಿನ ಆಯತ್ತುಗಳಲ್ಲಿ ತುಂಬಿಕೊಂಡಿವೆ.

ಆಗ ಈಶ್ವರನು - "ನಾವು ಆದಮನನ್ನು ನಮ್ಮ ಸ್ವರೂಪದಲ್ಲಿ, ನಮಗೆ ಸಮಾನನಾಗಿ ಸೃಜಿಸುವೆವು"- ಎಂದನು. ಆಗ ಈಶ್ವರನು ಆದಮನನ್ನು ತನ್ನ ಸ್ವರೂಪದಲ್ಲಿ ಉತ್ಪನ್ನಮಾಡಿದನು. ಅವನು ಅವನನ್ನು ಈಶ್ವರನ ಸ್ವರೂಪದಲ್ಲಿ ಉತ್ಪನ್ನಮಾಡಿದನು. ಅವನು ಅವರನ್ನು ನರನಾಗಿ ಮತ್ತು ನಾರಿಯಾಗಿ ನಿರ್ಮಿಸಿದನು ಮತ್ತು ಈಶ್ವರನು ಅವರಿಗೆ ಅಶೀರ್ವಾದವನ್ನು ಕೊಟ್ಟನು. (ಪರ್ವ:-೧,ಆ-೨೬ ರಿಂದ ೨೮)

**ಸಮೀಕ್ಷಕ:-** ಆದಮನನ್ನು ಈಶ್ವರನು ತನ್ನ ಸ್ವರೂಪದಲ್ಲಿ ಸೃಜಿಸಿದನಾದರೆ, ಈಶ್ವರನ ಸ್ವರೂಪವು ಪವಿತ್ರತ್ವ, ಜ್ಞಾನಸ್ವರೂಪತ್ವ, ಆನಂದಮಯತ್ವ ಮೊದಲಾದ ಲಕ್ಷಣಗಳನ್ನುಳ್ಳದ್ದಾಗಿದೆ. ಅವನಂತೆ ಆದಮನು ಆಗಲಿಲ್ಲವೇಕೆ? ಅಗಲಿಲ್ಲವೆಂದರೆ, ಅವನ ಸ್ವರೂಪದಲ್ಲಿ ನಿರ್ಮಿತನಾಗಲಿಲ್ಲ. ಮತ್ತು ಆದಮನನ್ನು ಸೃಜಿಸಿದನಾದರೆ, ಈಶ್ವರನು (ಆದಮನನ್ನು ತನ್ನ ಸ್ವರೂಪದಲ್ಲಿ ಸೃಜಿಸಿದನು - ಎಂದರೆ ಈಶ್ವರನ ಸ್ವರೂಪವೂ ಸೃಜನಯುಕ್ತವೇ ಆದುದರಿಂದ) ತನ್ನ ಸ್ವರೂಪವನ್ನೇ ಉತ್ಪತ್ತಿಶೀಲವನ್ನಾಗಿ ಮಾಡಿದನು; ಮತ್ತೆ ಅವನು ಅನಿತ್ಯನಲ್ಲವೇಕೆ? ಮತ್ತು ಆದಮನನ್ನು ಎಲ್ಲಿಂದ ಸೃಜಿಸಿದನು?

**ಕ್ರೈಸ್ತ :-** ಮಣ್ಣಿನಿಂದ ಉತ್ಪನ್ನಮಾಡಿದನು.

**ಸಮೀಕ್ಷಕ :-** ಮಣ್ಣನ್ನು ಎಲ್ಲಿಂದ ಸೃಜಿಸಿದನು?

**ಕ್ರೈಸ್ತ :-** ತನ್ನ ಪ್ರಕೃತಿಯಿಂದ, ಎಂದರೆ ಸಾಮರ್ಥ್ಯದಿಂದ.

**ಸಮೀಕ್ಷಕ :-** ಈಶ್ವರನ ಸಾಮರ್ಥ್ಯ ಅನಾದಿಯೋ ಅಥವಾ ನವೀನವೋ?

**ಕ್ರೈಸ್ತ :-** ಅನಾದಿಯಾಗಿದೆ.

**ಸಮೀಕ್ಷಕ :-** ಅನಾದಿಯಾಗಿದ್ದರೆ, ಜಗತ್ತಿನ ಕಾರಣ ಸನಾತನವಾಯಿತು. ಮತ್ತೆ, ಅಭಾವದಿಂದ ಭಾವವನ್ನೇಕೆ ಗ್ರಹಿಸುತ್ತೀರಿ?

**ಕ್ರೈಸ್ತ :-** ಸೃಷ್ಟಿಗೆ ಮುನ್ನ ಈಶ್ವರನ ಹೊರತು ಯಾವ ವಸ್ತುವೂ ಇರಲಿಲ್ಲ.

**ಸಮೀಕ್ಷಕ :-** ಇರಲಿಲ್ಲವಾದರೆ, ಈ ಜಗತ್ತು ಎಲ್ಲಿಂದ ಆಯಿತು? ಮತ್ತು ಈಶ್ವರನ ಸಾಮರ್ಥ್ಯವು ದ್ರವ್ಯವಾಗಿದೆಯೋ ಅಥವಾ ಗುಣವಾಗಿದೆಯೋ? ದ್ರವ್ಯವಾಗಿದ್ದರೆ, ಈಶ್ವರನಿಂದ ಬೇರೆಯಾದ ಎರಡನೆಯ ಪದಾರ್ಥವಿದ್ದಿತು. ಮತ್ತು ಗುಣವಾಗಿದ್ದರೆ. ಗುಣದಿಂದ ದ್ರವ್ಯವೆಂದಿಗೂ ನಿರ್ಮಿತವಾಗಲಾರದು. ಉದಾಹರಣೆಗೆ, ರೂಪದಿಂದ ಅಗ್ನಿಯೂ, ರಸದಿಂದ ನೀರೂ, ಉತ್ಪನ್ನವಾಗಲಾರದು. ಮತ್ತು ಈಶ್ವರನಿಂದ ಜಗತ್ತು ನಿರ್ಮಿತವಾಗಿ ಇದ್ದಲ್ಲಿ, ಈಶ್ವರನದರಂತಹ ಗುಣ-ಕರ್ಮ-ಸ್ವಭಾವಗಳಿಂದ ಯುಕ್ತವಾಗಿರುತ್ತಿದ್ದಿತು. ಅವನ ಗುಣ, ಕರ್ಮ, ಸ್ವಭಾವಕ್ಕೆ ಅನುಗುಣವಾಗಿಲ್ಲದಿರುವುದರಿಂದ, ಈಶ್ವರನಿಂದ ಜಗತ್ತು ನಿರ್ಮಿತವಾಗಲಿಲ್ಲ- ಎಂಬುದೇ ನಿಶ್ಚಯವಾಗುತ್ತದೆ. (ಎಂದರೆ, ಈಶ್ವರನು ಜಗತ್ತಿನ ಉಪಾದಾನ ಕಾರಣವಲ್ಲ ) ಆದರೆ ಜಗತ್ತಿನ ಉಪಾದಾನ ಕಾರಣ- ಎಂದರೆ ಪರಮಾಣು ಮೊದಲಾದ ಹೆಸರನ್ನುಳ್ಳ ಜಡದಿಂದ ನಿರ್ಮಿತವಾಗಿದೆ. ವೇದಗಳೇ ಮೊದಲಾದ ಶಾಸ್ತ್ರಗಳಲ್ಲಿ ಜಗತ್ತಿನ ಉತ್ಪತ್ತಿಯನ್ನು ಹೇಗೆ ಬರೆದಿದೆಯೋ, ಹಾಗೆಯೇ, ಈಶ್ವರನು ಜಗತ್ತನ್ನು ನಿರ್ಮಿಸುತ್ತಾನೆ- ಎಂದು

ಅಂಗೀಕರಿಸಿ. ಆದಮನ ಅಂತರಿಕಸ್ವರೂಪವು ಜೀವನೂ ಮತ್ತು ಬಾಹ್ಯವು ಮನುಷ್ಯನಿಗೆ ಸದೃಶವಾಗಿಯೂ ಇದೆ- ಎನ್ನುವುದಾದರೆ, ಹಾಗೆಯೇ ಈಶ್ವರನ ಸ್ವರೂಪವೂ ಏತಕ್ಕಿಲ್ಲ? ಏಕೆಂದರೆ, ಆದಮನು ಈಶ್ವರನಂತೆ ಉತ್ಪನ್ನನಾದನು - ಎಂದರೆ, ಈಶ್ವರನು ಆದಮನಂತೆ ಅವಶ್ಯವಾಗಿಯೂ ಇರಬೇಕು. (೪)

*ಆಗ ಪರಮೇಶ್ವರ ಈಶ್ವರನು ಮಣ್ಣಿನಿಂದ ಆದಮನನ್ನು ಸೃಜಿಸಿದನು. ಮತ್ತು ಅವನ ಹೊಳ್ಳೆಗಳಲ್ಲಿ ಜೀವನದ ಶ್ವಾಸವನ್ನೂದಿದನು ಮತ್ತು ಆದಮನು ಜೀವಂತಪ್ರಾಣನಾದನು. ಮತ್ತು ಪರಮೇಶ್ವರ ಈಶ್ವರನು ಏಡನ್ನಿನ ಪೂರ್ವದ ಕಡೆಗೆ ಒಂದು ಉದ್ಯಾನವನ್ನು ನಿರ್ಮಿಸಿದನು. ಮತ್ತು ತಾನು ಸೃಜಿಸಿದ್ದ ಆದಮನನ್ನು ಅದರಲ್ಲಿ ನೆಲೆಗೊಳಿಸಿದನು. ಮತ್ತು ಆ ಉದ್ಯಾನದ ಮಧ್ಯದಲ್ಲಿ ಜೀವನದ ವೃಕ್ಷವನ್ನೂ ಮತ್ತು ಒಳಿತು-ಕೆಡಕುಗಳ ಜ್ಞಾನದ ವೃಕ್ಷವನ್ನೂ ಭೂಮಿಯಿಂದ ಮೊಳೆಯಿಸಿದನು. (ಪರ್ವ:-೧. ಆ:- ೭ ರಿಂದ೯.)*

**ಸಮೀಕ್ಷಕ :-** ಯಾವಾಗ ಈಶ್ವರನು ಏಡನ್ನಿನಲ್ಲಿ ಉದ್ಯಾನವನ್ನು ನಿರ್ಮಿಸಿ, ಅದರಲ್ಲಿ ಆದಮನನ್ನು ಇಟ್ಟನೋ,ಆಗ ಅವನನ್ನು ಪುನಃ ಅಲ್ಲಿಂದ ಹೊರದೂಡಬೇಕಾಗುವುದೆಂದು ಈಶ್ವರನು ತಿಳಿದಿರಲಿಲ್ಲವೇನು? ಮತ್ತು ಈಶ್ವರನು ಆದಮನನ್ನು ಮಣ್ಣಿನಿಂದ ಸೃಜಿಸಿದನಾದರೆ, ಈಶ್ವರನ ಸ್ವರೂಪವಾಗಲಿಲ್ಲ. ಮತ್ತು ಅಹುದು - ಎನ್ನುವಿರಾದರೆ, ಈಶ್ವರನೂ ಮಣ್ಣಿನಿಂದಲೇ ಆಗಿರಬಹುದೇನೋ? ಅವನ ಹೊಳ್ಳೆಗಳಲ್ಲಿ ಈಶ್ವರನು ಶ್ವಾಸವನ್ನು ಊದಿದನೆಂದಾದರೆ, ಆ ಶ್ವಾಸವು ಈಶ್ವರನ ಸ್ವರೂಪವಾಗಿದ್ದಿತೋ ಅಥವಾ ಬೇರೆಯದಾಗಿದ್ದಿತೋ? ಬೇರೆಯಾಗಿದ್ದಿತಾದರೆ, ಆದಮನು ಈಶ್ವರನ ಸ್ವರೂಪದಲ್ಲಿ ಉದ್ಭವಿಸಲಿಲ್ಲ. ಒಂದೇ ಆಗಿದ್ದರೆ, ಆದಮನು ಮತ್ತು ಈಶ್ವರನು ಒಂದೇ ವಿಧದವರಾದರು. ಮತ್ತು ಒಂದೇ ವಿಧದವರಾಗಿದ್ದರೆ, ಆದಮನಿಗೆ ಸದೃಶವಾಗಿ ಜನನ, ಮರಣ,ವೃದ್ಧಿ, ಕ್ಷಯ, ಹಸಿವು, ಬಾಯಾರಿಕೆ ಮೊದಲಾದ ದೋಷಗಳು ಈಶ್ವರನಲ್ಲಿ ಬಂದವು. ಮತ್ತೆ ಅವನು ಈಶ್ವರನು ಹೇಗಾಗಬಲ್ಲನು? ಆದುದರಿಂದ, ತೌರೇತಿನ ಮಾತು ಸರಿಯೆಂದು ತಿಳಿದುಬರುವುದಿಲ್ಲ. ಮತ್ತು ಈ ಪುಸ್ತಕವೂ ಈಶ್ವರಕೃತವಾಗಿಲ್ಲ. (೫)

*ಮತ್ತು ಪರಮೇಶ್ವರ ಈಶ್ವರನು ಆದಮನನ್ನು ಗಾಢ ನಿದ್ರೆಯಲ್ಲಿ ಒರಗಿಸಿದನು. ಮತ್ತು ಅವನು ನಿದ್ರಿಸಿಬಿಟ್ಟನು. ಆಗ ಅವನು ಅವನ ಪಕ್ಕೆಲುಬುಗಳಿಂದ ಒಂದು ಎಲುಬನ್ನು ತೆಗೆದುಕೊಂಡನು ಮತ್ತು ಆ ಎಡೆಯಲ್ಲಿ ಮಾಂಸವನ್ನು ತುಂಬಿಸಿದನು. ಮತ್ತು ಪರಮೇಶ್ವರ ಈಶ್ವರನು ಆದಮನ ಆ ಪಕ್ಕೆಲಬಿನಿಂದ ಒಬ್ಬಳು ಹೆಂಗಸನ್ನು ಸೃಜಿಸಿದನು ಮತ್ತು ಅವಳನ್ನು ಆದಮನ ಬಳಿಗೆ ಕರೆತಂದನು. (ಪರ್ವ:-೨. ಆ :-೨೧,೨೨)*

**ಸಮೀಕ್ಷಕ :-** ಈಶ್ವರನು ಆದಮನನ್ನು ಮಣ್ಣಿನಿಂದ ಸೃಜಿಸಿದನಾದರೆ, ಅವನ ಸ್ತ್ರೀಯನ್ನು ಮಣ್ಣಿನಿಂದೇಕೆ ಸೃಜಿಸಲಿಲ್ಲ? ಮತ್ತು ಸ್ತ್ರೀಯನ್ನು ಮೂಳೆಯಿಂದ ಸೃಜಿಸಿದನಾದರೆ, ಆದಮನನ್ನು ಮೂಳೆಯಿಂದೇಕೆ ಸೃಜಿಸಲಿಲ್ಲ? ಮತ್ತು, ಹೇಗೆ ನರನಿಂದ ಉದ್ಭವಿಸಿದುದುದರಿಂದ 'ನಾರಿ' ಎಂಬ ಹೆಸರು ಬಳಕೆಗೆ ಬಂದಿತೋ, ನಾರಿಯಿಂದ ಉದ್ಭವಿಸಿದುದರಿಂದ 'ನರ' ಎಂಬ ಹೆಸರೂ ಕೂಡ ಆಗಬೇಕು. ಮತ್ತು ಅವರಲ್ಲಿ ಪರಸ್ಪರ ಪ್ರೇಮವೂ ಇರಬೇಕು. ಹೇಗೆ ಸ್ತ್ರೀಯಲ್ಲಿ ಪುರುಷನು ಪ್ರೇಮವಿಡಬೇಕೋ, ಹಾಗೆ ಪುರುಷನಲ್ಲಿ ಸ್ತ್ರೀಯೂ ಪ್ರೇಮವಿಡಬೇಕು. ನೋಡಿರಿ, ವಿದ್ವಜ್ಜನರೇ! ಈಶ್ವರನ ಪದಾರ್ಥವಿದ್ಯೆ , ಎಂದರೆ 'ಫಿಲಾಸಫಿ' ಸ್ಫುಟವಾಗಿ ಮೂಡುತ್ತಿದೆ? ಆದಮನ ಪೆಕ್ಕೆಲುಬೊಂದನ್ನು ತೆಗೆದುಕೊಂಡು ನಾರಿಯನ್ನು ನಿರ್ಮಿಸಿದನಾದರೆ, ಮಾನವರೆಲ್ಲರಲ್ಲಿಯೂ ಒಂದೊಂದು ಪೆಕ್ಕೆಲುಬು ಕಡಿಮೆ ಏಕಿರುವುದಿಲ್ಲ? ಮತ್ತು ಸ್ತ್ರೀಯ ಶರೀರದಲ್ಲಿ ಒಂದು ಪಕ್ಕೆಲುಬಿರಬೇಕು; ಏಕೆಂದರೆ, ಅವಳು ಒಂದು ಪಕ್ಕೆಲುಬಿನಿಂದ ನಿರ್ಮಿತಳಾಗಿದ್ದಾಳೆ. ಯಾವ ಸಾಮಾಗ್ರಿಯಿಂದ ಸಮಸ್ತ ಜಗತ್ತನ್ನೂ ಸೃಜಿಸಿದನೋ, ಆ ಸಾಮಾಗ್ರಿಯಿಂದ ಸ್ತ್ರೀಯ ಶರೀರ ನಿರ್ಮಿತವಾಗಲು ಶಕ್ಯವಿದ್ದಿಲ್ಲವೇ? ಆದುದರಿಂದ ಈ ಬೈಬಲಿನ ಸೃಷ್ಟಿಕ್ರಮ ಸೃಷ್ಟಿವಿದ್ಯೆಗೆ ವಿರುದ್ಧವಾಗಿದೆ. (೬)

*ಈಗ, ಯಾವುದನ್ನು ಪರಮೇಶ್ವರ ಈಶ್ವರನು ನಿರ್ಮಿಸಿದ್ದನೋ, ಆ ಪ್ರಾಣಿಗಳೆಲ್ಲಕ್ಕಿಂತಲೂ ಸರ್ಪವು ಧೂರ್ತವಾಗಿದ್ದಿತು. ಮತ್ತು ಅದು ಸ್ತ್ರೀಯನ್ನು "ನಿಜವಾಗಿ ಈಶ್ವರನು ನೀನು ಉದ್ಯಾನದ ಪ್ರತಿಯೊಂದು ವೃಕ್ಷದಿಂದಲೂ ತಿನ್ನಬೇಡವೆಂದು ಹೇಳಿದ್ದಾನೋ?" ಎಂದು ಕೇಳಿತು. ಮತ್ತು ಸ್ತ್ರೀಯು ಸರ್ಪಕ್ಕೆ "ನಾವೇನೋ ಈ ಉದ್ಯಾನದ ವೃಕ್ಷಗಳ ಹಣ್ಣನ್ನು ತಿನ್ನುತ್ತೇವೆ. ಆದರೆ, ಯಾವುದು ಉದ್ಯಾನದ ನಡುವೆಯಿದೆಯೋ, ಆ ವೃಕ್ಷದ ಫಲವನ್ನು ನೀನು ತಿನ್ನಬೇಡ; ಮತ್ತು ಮುಟ್ಟಬೇಡ; ಎಲ್ಲಿಯಾದರೂ ಸತ್ತು ಹೋದೀಯೆ - ಎಂದು ಈಶ್ವರನು ಹೇಳಿದ್ದಾನೆ". ಎಂದು ಹೇಳಿದಳು. ಆಗ ಸರ್ಪವು -"ನಿಶ್ಚಯವಾಗಿಯೂ ನೀನು ಸಾಯುವುದಿಲ್ಲ. ಏಕೆಂದರೆ, ಯಾವ ದಿನ ನೀನು ಅದನ್ನು ತಿನ್ನುವೆಯೋ,*

*ಅಂದು ನಿನ್ನ ಕಣ್ಣುಗಳು ತೆರೆದುಕೊಳ್ಳುವುವು ಮತ್ತು ಒಳಿತು- ಕೆಡಕುಗಳನ್ನು ಗುರುತಿಸುವುದರಲ್ಲಿ ಈಶ್ವರನಿಗೆ ಸಮಾನಳಾಗಿ ಹೋಗುವೆ - ಎಂದು ಈಶ್ವರನು ತಿಳಿಸಿದ್ದಾನೆ". ಎಂದು ಹೇಳಿತು. ಮತ್ತು ಯಾವಾಗ ಸ್ತ್ರೀಯಳು ಆ ವೃಕ್ಷದ ಫಲ ತಿನ್ನುವುದಕ್ಕೆ ಸುರುಚಿಕರವೂ ಮತ್ತು ನೋಡುವುದಕ್ಕೆ ಸುಂದರವೂ ಮತ್ತು ಬುದ್ಧಿಯನ್ನು ಕೊಡಲು ಶಕ್ತವೂ ಆಗಿದೆ- ಎಂಬುದನ್ನು ಕಂಡಳೋ, ಆಗ ಅದರ ಹಣ್ಣುಗಳಿಂದ (ಹಲವನ್ನು) ತೆಗೆದುಕೊಂಡಳು ಮತ್ತು ತಿಂದಳು ಮತ್ತು ತನ್ನ ಪತಿಗೂ ಕೊಟ್ಟಳು ಮತ್ತು ಅವನೂ ತಿಂದನು. ಆಗ ಅವರಿಬ್ಬರ ಕಣ್ಣುಗಳೂ ತೆರೆಯಲ್ಪಟ್ಟವು. ಮತ್ತು ಅವರು 'ನಾವು ನಗ್ನರಾಗಿದ್ದೇವೆ' ಎಂದು ಕಂಡುಕೊಂಡರು. ಆಗ ಅವರು ಅತ್ತಿಯ ಮರದ ಎಲೆಗಳನ್ನು ಸೇರಿಸಿ ಹೊಲಿದರು ಮತ್ತು ತಮಗಾಗಿ ಹೊದಿಕೆಗಳನ್ನು ಮಾಡಿಕೊಂಡರು. ಆಗ ಪರಮೇಶ್ವರ ಈಶ್ವರನು- "ನೀನು ಈ ಕೆಲಸ ಮಾಡಿರುವೆಯಾದ ಕಾರಣ ಸಮಸ್ತ ಮೃಗಗಳಲ್ಲಿಯೂ ಮತ್ತು ಪ್ರತಿಯೊಂದು ಕಾಡಿನ ಪಶುವಿಗಿಂತಲೂ ಹೆಚ್ಚು ಶಾಪಗ್ರಸ್ತನಾಗುವೆ; ನೀನು ನಿನ್ನ ಹೊಟ್ಟೆಯ ಮೇಲೆ ತೆವಳಿಕೊಂಡು ನಡೆಯುವೆ. ಮತ್ತು ನಿನ್ನ ಜೀವನಪೂರ್ತ ಧೂಳನ್ನು ತಿನ್ನುತ್ತಾ ಸಾಗುವೆ. ಮತ್ತು ನಾನು ನಿನ್ನ ಮತ್ತು ಸ್ತ್ರೀಯ ನಡುವೆ, ಮತ್ತು ನಿನ್ನ ವಂಶದ ಹಾಗೂ ಅವಳ ವಂಶದ ನಡುವೆ ವೈರವನ್ನುಂಟು ಮಾಡುವೆನು. ಅವಳ ವಂಶ ನಿನ್ನ ತಲೆಯನ್ನು ತುಳಿಯುವುದು ಮತ್ತು ನೀನು ಅದರ ಹಿಮ್ಮಡಿಯನ್ನು ಕಚ್ಚುವೆ"- ಎಂದು ಸರ್ಪಕ್ಕೆ ಹೇಳಿದನು ಮತ್ತು ಅವನು ಸ್ತ್ರೀಯಳಿಗೆ - "ನಾನು ನಿನಗೆ ನೋವನ್ನು, ಗರ್ಭಧಾರಣ (ಶ್ರಮ ) ವನ್ನೂ ಬಹಳ ಹೆಚ್ಚಿಸುವೆನು. ನೀನು ನೋವಿನಿಂದ ಮಗುವನ್ನು ಹೆರುವೆ ಮತ್ತು ನಿನ್ನ ಬಯಕೆ ನಿನ್ನ ಪತಿಯ ಮೇಲೆ ಆಗುವುದು ಮತ್ತು ಅವನು ನಿನ್ನ ಮೇಲೆ ಅಧಿಕಾರ ನಡೆಯಿಸುವನು". ಎಂದು ಹೇಳಿದನು. ಮತ್ತು ಅವನು ಆದಮನಿಗೆ -"ನೀನು ನಿನ್ನ ಪತ್ನಿಯ ಮಾತನ್ನು ಒಪ್ಪಿದ್ದೀಯೆ ಮತ್ತು ಯಾವ ಮರದ ಫಲವನ್ನು ತಿನ್ನಬಾರದೆಂದು ನಿನ್ನನ್ನು ನಿಷೇಧಿಸಿದ್ದೆನೋ, ಅದನ್ನು ತಿಂದಿದ್ದೀಯೆ. ಈ ಕಾರಣದಿಂದ ಭೂಮಿ ನಿನ್ನ ಪಾಲಿಗೆ ಅಭಿಶಪ್ತವಾಗಿದೆ. ನಿನ್ನ ಇಡೀ ಜೀವನದಲ್ಲಿ ನೀನು ಶ್ರಮದಿಂದಲೇ ಅದರಿಂದ ಭೋಗಪಡೆದುಕೊಳ್ಳುವೆ. ಮತ್ತು ಅದು ನಿನಗಾಗಿ ಮುಳ್ಳುಗಳನ್ನೂ, ಕಳೆಗಳನ್ನೂ ಚಿಗುರಿಸುವುದು. ಮತ್ತು ನೀನು ಹೊಲದ ಪೈರು-ಪಚ್ಚೆಗಳನ್ನು ತಿನ್ನುವೆ." - ಎಂದು ಹೇಳಿದನು. (ತೌರೇತ್. ಉತ್ಪತ್ತಿಪರ್ವ:-೩ ಆ:- ೧-೭; ೧೪ - ೧೯).*

**ಸಮೀಕ್ಷಕ:-** ಕ್ರೈಸ್ತರ ಈಶ್ವರನು ಸರ್ವಜ್ಞನಾಗಿದ್ದಿದ್ದರೆ, ಈ ಧೂರ್ತ ಸರ್ಪವನ್ನು, ಎಂದರೆ ಶೈತಾನನನ್ನು ಹುಟ್ಟಿಸುತ್ತಿದ್ದನೇಕೆ? ಮತ್ತು ಹುಟ್ಟಿಸಿದನಾದರೆ, ಆ ಈಶ್ವರನೇ ಅಪರಾಧಕ್ಕೆ ಭಾಗಿಯಾಗಿದ್ದಾನೆ. ಏಕೆಂದರೆ, ಅವನು ಅದನ್ನು ದುಷ್ಟವಾಗಿ ಸೃಜಿಸದೇ ಇದ್ದರೆ, ಅದು ದುಷ್ಟತ್ವವನ್ನೇಕೆ ಮಾಡುತ್ತಿದ್ದಿತು? ಮತ್ತು ಅವನು ಪೂರ್ವಜನ್ಮವನ್ನು ಒಪ್ಪುವುದಿಲ್ಲವಾದರೆ, ಅಪರಾಧವಿಲ್ಲದೆಯೇ ಅದನ್ನು ಪಾಪಿಯಾಗಿ ಏತಕ್ಕೆ ಸೃಜಿಸಿದನು? ಮತ್ತು, ಸತ್ಯವನ್ನು ಕೇಳುವಿರಾದರೆ, ಅದು ಸರ್ಪವಾಗಿರಲಿಲ್ಲ; ಮನುಷ್ಯನಾಗಿತ್ತು. ಏಕೆಂದರೆ, ಮನುಷ್ಯನಾಗಿರದಿದ್ದರೆ, ಮನುಷ್ಯನ ಭಾಷೆಯನ್ನು ಹೇಗೆ ಮಾತನಾಡಲು ಸಮರ್ಥವಾಗುತ್ತಿತ್ತು? ಮತ್ತು ಯಾವನು ತಾನೇ ಸುಳ್ಳುಗಾರನಾಗಿದ್ದು ಬೇರೆಯವನನ್ನು ಸುಳ್ಳುದಾರಿಯಲ್ಲಿ ನಡೆಯಿಸುವನೋ, ಅವನನ್ನು ಶೈತಾನನೆನ್ನಬೇಕು. ಹೀಗೆ ಈ ಸ್ಥಳದಲ್ಲಿ ಶೈತಾನನು ಸತ್ಯವಾದಿಯಾಗಿದ್ದನು; ಇದೇ ಕಾರಣದಿಂದ ಅವನು ಸ್ತ್ರೀಯನ್ನು ದುಷ್ಪ್ರೇರಣೆಗೆ ಈಡಾಗಿಸಲಿಲ್ಲ; ಆದರೆ, ಸತ್ಯವನ್ನು ಹೇಳಿದನು. ಮತ್ತು ಈಶ್ವರನು ಆದಮನಿಗೂ ಮತ್ತು ಹವ್ವಾಳಿಗೂ "ಇದನ್ನು ತಿನ್ನುವುದರಿಂದ ನೀವು ಸತ್ತು ಹೋಗುವಿರಿ". - ಎಂದು ಸುಳ್ಳು ಹೇಳಿದನು. ಆ ವೃಕ್ಷವು ಜ್ಞಾನದಾಯಕವೂ ಮತ್ತು ಅಮರರನ್ನಾಗಿ ಮಾಡುವಂತಹದೂ ಆಗಿದ್ದಿತು - ಎನ್ನುವಾಗ, ಅದರ ಫಲಗಳನ್ನು ತಿನ್ನುವುದನ್ನು ನಿಷೇಧಿಸಿದನೇಕೆ? ಮತ್ತು ನಿಷೇಧಿಸಿದನಾದರೆ, ಆ ಈಶ್ವರನು ಸುಳ್ಳುಗಾರನೂ, ಹಾದಿತಪ್ಪಿಸುವವನೂ ಆಗಿ ಉಳಿದನು. ಏಕೆಂದರೆ, ಆ ವೃಕ್ಷದ ಫಲಗಳು ಮಾನವರಿಗೆ ಜ್ಞಾನದಾಯಕ ಮತ್ತು ಸುಖಕಾರಕವಾಗಿದ್ದವು; ಅಜ್ಞಾನಪ್ರದ ಮತ್ತು ಮೃತ್ಯುಕಾರಕವಾಗಿರಲಿಲ್ಲ. ಈಶ್ವರನು ಹಣ್ಣುಗಳನ್ನು ತಿನ್ನುವುದನ್ನು ನಿಷೇಧಿಸಿನಾದರೆ, ಆ ವೃಕ್ಷದ ಉತ್ಪತ್ತಿಯನ್ನೇತಕ್ಕಾಗಿ ಮಾಡಿದ್ದನು? ತನ್ನ ಸಲುವಾಗಿ ಮಾಡಿಕೊಂಡಿದ್ದನಾದರೆ, ತಾನು ಅಜ್ಞಾನಿಯೂ, ಮೃತ್ಯುಧರ್ಮಯುಕ್ತನೂ ಆಗಿದ್ದನೇನು? ಮತ್ತು ಬೇರೆಯವರಿಗಾಗಿ ಮಾಡಿದ್ದನಾದರೆ, ಫಲಗಳನ್ನು ತಿನ್ನುವುದರಲ್ಲಿ ಅಪರಾಧವೇನೇನೂ ಆಗಲಿಲ್ಲ. ಮತ್ತು ಈ ದಿನಗಳಲ್ಲಿ ಯಾವ ವೃಕ್ಷವೂ ಕೂಡ ಜ್ಞಾನಕಾರಕವೂ ಮತ್ತು ಮೃತ್ಯುನಿವಾರಕವೂ ಆಗಿರುವುದು ಕಂಡು ಬರುತ್ತಿಲ್ಲ. ಈಶ್ವರನು ಅದರ ಬೀಜವನ್ನೂ ನಾಶಮಾಡಿಬಿಟ್ಟನೇನು? ಇಂತಹ ನಡೆಗಳಿಂದ ಮಾನವನೂ ಕೂಡ ಛಲಿ, ಕಪಟಿಯಾಗಿಹೋಗುತ್ತಾನೆ; ಮತ್ತೆ ಈಶ್ವರನು ಹಾಗೆ ಏಕಾಗಲಿಲ್ಲ? ಏಕೆಂದರೆ, ಯಾವನೊಬ್ಬನು ಬೇರೆಯವನಿಗೆ ಛಲ-ಕಪಟಗಳನ್ನು ಮಾಡುತ್ತಾನೋ, ಅವನು ಛಲಿ, ಕಪಟಿ ಆಗದಿರುವನೆಂತು? ಮತ್ತು ಈ ಮೂವರಿಗೂ ಈಶ್ವರನು ಕೊಟ್ಟ ಶಾಪವು, ಅಪರಾಧವಿಲ್ಲದೆಯೇ ಕೊಟ್ಟುದಾಗಿದೆ. ಮತ್ತೆ ಆ ಈಶ್ವರನು ಅನ್ಯಾಯಕಾರಿಯೂ ಆದನು. ಮತ್ತು ಈ ಶಾಪ ಈಶ್ವರನಿಗೇ ತಾಕಬೇಕು; ಏಕೆಂದರೆ, ಅವನು ಸುಳ್ಳನ್ನಾಡಿದನು. ಮತ್ತು ಅವರನ್ನು ದುಷ್ಪ್ರೇರಣೆಗೆ

ಈಡುಮಾಡಿದನು. ನೋಡಿರಿ ಈ 'ಫಿಲಾಸಫಿ' ಯನ್ನು! ನೋವಿಲ್ಲದೆ ಗರ್ಭಧಾರಣ ಮತ್ತು ಸಂತತಿಯ ಜನನ ಎಂದಾದರೂ ಆಗಬಲ್ಲದಾಗಿದ್ದಿತೋ? ಮತ್ತು, ಶ್ರಮವಿಲ್ಲದೆ ಯಾವನಾದರೂ ತನ್ನ ಜೀವನ- ನಿರ್ವಾಹವನ್ನು ಮಾಡಬಲ್ಲನೇನು? ಮೊದಲು ಮುಳ್ಳು ಮೊದಲಾದ ವೃಕ್ಷಗಳಿರಲಿಲ್ಲವೇಕೆ? ಮತ್ತು ಶಾಕ-ಪತ್ರಗಳ ಭಕ್ಷಣವು ಈಶ್ವರನ ಹೇಳಿಕೆಯಿಂದ ಮಾನವರೆಲ್ಲರಿಗೂ ಉಚಿತವಾಯಿತೆಂದ ಮೇಲೆ, ಮುಂದೆ ನಡೆದು ಮಾಂಸಭಕ್ಷಣವನ್ನು ಬೈಬಲಿನಲ್ಲಿ ಬರೆದಿರುವುದು ಸ್ವಪಕ್ಷ ವಿರೋಧವೇಕಲ್ಲ?[೪] ಮತ್ತು ಅದು ಅಸತ್ಯವಾಗಿರುವುದಾದರೆ, ಇದು[೫] ಸುಳ್ಳಾಗಿದೆ. ಆದಮನ ಅಪರಾಧ ಎಷ್ಟುಮಟ್ಟಿಗೂ ಸಿದ್ಧವಾಗದಿರುವಾಗ, ಕ್ರೈಸ್ತರು ಆದಮನ ಅಪರಾಧದಿಂದ ಅವನ ಸಂತತಿಯಾದ ಕಾರಣ ಮಾನವರೆಲ್ಲರನ್ನೂ ಅಪರಾಧಿಗಳೆಂದು ಹೇಳುತ್ತಾರೆ ಏತಕ್ಕೆ? ಆಹಾ! ಇಂತಹ ಪುಸ್ತಕ ಮತ್ತು ಇಂತಹ ಈಶ್ವರನು ಎಂದಿಗಾದರೂ ಬುದ್ಧಿವಂತರ ಮುಂದೆ 'ಯೋಗ್ಯ' ವೆನಿಸುವುದು ಶಕ್ಯವೇ? (೭).

> *ಮತ್ತು ಪರಮೇಶ್ವರ ಈಶ್ವರನು – "ನೋಡಿರಿ, ಆದಮನು ಒಳಿತು – ಕೆಡುಕುಗಳನ್ನು ತಿಳಿದುಕೊಳ್ಳುವುದರಲ್ಲಿ ನಮ್ಮಗಳಲ್ಲಿ ಒಬ್ಬನಿಗೆ ಸಮನಾಗಿ ಹೋದನು ಮತ್ತು ಈಗ ಅವನು ತನ್ನ ಕೈಯನ್ನು ಚಾಚಿ, ಜೀವನದ ವೃಕ್ಷದಿಂದಲೂ ತೆಗೆದುಕೊಂಡು, ತಿಂದು ಅಮರನಾಗಿ ಹೋಗುವಂತೆ ಆಗದಿರಲಿ!" ಎಂದನು. ಆದಕಾರಣ ಅವನು ಆದಮನನ್ನು ಹೊರಹಾಕಿದನು. ಮತ್ತು ಏಡನ್ನಿನ ಉದ್ಯಾನದ ಪೂರ್ವದ ಕಡೆಗೆ ಥಳಿಥಳಿಸುತ್ತಾ ನಾಲ್ಕು ಕಡೆಗೂ ತಿರುಗುತ್ತಿದ್ದ ಖಡ್ಗವನ್ನು ಹಿಡಿದು ಕರೋಬೀಮರನ್ನು[೬] (ಒಂದು ಜನಾಂಗ) ಜೀವನ ವೃಕ್ಷದ ಮಾರ್ಗದ ರಕ್ಷಣೆ ಮಾಡುವಂತೆ ನಿಲ್ಲಿಸಿದನು. (ಪರ್ವ- ೩. ಆ -೨೨, ೨೪)*

**ಸಮೀಕ್ಷಕ:-** ಜ್ಞಾನದಲ್ಲಿ ನಮಗೆ ಸಮಾನನಾದನು – ಎಂಬ ಈರ್ಷ್ಯೆ ಮತ್ತು ಭ್ರಾಂತಿ ಈಶ್ವರನಿಗೆ ಏತಕ್ಕಾಯಿತು? ಇದೇನಾದರೂ ಕೆಟ್ಟ ವಿಷಯವಾಯಿತೇ? ಈ ಸಂದೇಹತಾನೇ ಏತಕ್ಕೆ ಉಂಟಾಯಿತು? ಏಕೆಂದರೆ, ಈಶ್ವರನಿಗೆ ಸಮನಾಗಿ ಎಂದಿಗೂ, ಯಾವನೂ ಆಗಲಾರನು. ಮತ್ತು ಈ ಲೇಖನದಿಂದ, ಅವನು ಈಶ್ವರನಾಗಿರಲಿಲ್ಲ; ಆದರೆ, ಯಾವನೋ ನಿರ್ದಿಷ್ಟ ಮಾನವನಾಗಿದ್ದನು- ಎಂದೂ ಕೂಡ ಸಿದ್ಧವಾಗುತ್ತದೆ. ಬೈಬಲಿನಲ್ಲಿ ಎಲ್ಲಿ- ಎಲ್ಲಿ ಈಶ್ವರನ ವಿಷಯ ಬರುತ್ತದೋ, ಅಲ್ಲಿ ಮನುಷ್ಯನಿಗೆ ಸಮನಾಗಿಯೇ ಬರೆದಿರುವುದು ಕಂಡು ಬರುತ್ತದೆ. ಈಗ ನೋಡಿರಿ, ಆದಮನ ಜ್ಞಾನದ ವೃದ್ಧಿಯಿಂದ ಈಶ್ವರನು ಎಷ್ಟು ದುಃಖಿತನಾದನು? ಮತ್ತು ಪುನಃ ಅಮರ-ವೃಕ್ಷದ ಫಲಗಳನ್ನು ತಿನ್ನುವುದರಲ್ಲಿ ಎಷ್ಟು ಈರ್ಷ್ಯೆಪಟ್ಟನು? ಮತ್ತು, ಮೊದಲು, ಆದಮನನ್ನು ಉದ್ಯಾನದಲ್ಲಿರಿಸಿದಾಗ, ಅವನಿಗೆ 'ಇವನನ್ನು ಮರಳಿ ಹೊರಹಾಕಬೇಕಾಗುವುದು' – ಎಂಬ ಭವಿಷ್ಯತ್ತಿನ ಜ್ಞಾನವಿರಲಿಲ್ಲ. ಆದುದರಿಂದ ಕ್ರೈಸ್ತರ ದೇವರು ಸರ್ವಜ್ಞನಾಗಿರಲಲ್ಲ. ಮತ್ತು ಹೊಳೆಯುವ ಖಡ್ಗದ ಪಹರೆಯನ್ನಿಟ್ಟನು – ಇದು ಕೂಡ ಮನುಷ್ಯನ ಕಾರ್ಯವೇ; ಈಶ್ವರನದಲ್ಲ. (೮)

ಅದೆಷ್ಟೋ ದಿನಗಳು ಆದಮೇಲೆ, ಹೀಗೆ ಆಯಿತು; ಕೈನನು[೭] ಭೂಮಿಯ ಫಲಗಳಿಂದ ಪರಮೇಶ್ವರನಿಗಾಗಿ ಕಾಣಿಕೆಯನ್ನು ತಂದನು. ಮತ್ತು ಹಾಬೀಲನೂ[೮] ಕೂಡ ತನ್ನ ಹಿಂಡಿನಿಂದ ಚೊಚ್ಚಲ ಹಾಗೂ ದಪ್ಪದಪ್ಪವಾದ ಕುರಿಯನ್ನು ತಂದನು. ಮತ್ತು ಪರಮೇಶ್ವರನು ಹಾಬೀಲನನ್ನು ಹಾಗೂ ಅವನ ಕಾಣಿಕೆಯನ್ನು ಆದರಿಸಿದನು. ಆದರೆ, ಕೈನನನ್ನೂ ಮತ್ತು ಅವನ ಕಾಣಿಕೆಯನ್ನೂ ಆದರಿಸಲಿಲ್ಲ. ಆದುದರಿಂದ ಕೈನನು ಅತಿಕುಪಿತನಾದನು ಮತ್ತು ತನ್ನ ಮೋರೆಯನ್ನು ಊದಿಸಿಕೊಂಡನು. ಆಗ ಪರಮೇಶ್ವರನು ಕೈನನನ್ನು – "ನೀನೇಕೆ ಕ್ರುದ್ಧನಾಗಿದ್ದೇಯೇ? ಮತ್ತು ನಿನ್ನ ಮೋರೆ ಏಕೆ ಊದಿಸಿಕೊಂಡಿತು?" – ಎಂದು ಕೇಳಿದನು. (ತೌರೇತ್:- ಪರ್ವ- ೧, ಆ. ೩-೬)

**ಸಮೀಕ್ಷಕ :-** ಈಶ್ವರನು ಮಾಂಸಾಹಾರಿಯಾಗಿರದಿದ್ದರೆ, ಕುರಿಯ ಕಾಣಿಕೆಯ ಮತ್ತು ಹಾಬೀಲನ ಸತ್ಕಾರವನ್ನೂ, ಮತ್ತು ಕೈನನ ಹಾಗೂ ಅವನ ಕಾಣಿಕೆಯ ತಿರಸ್ಕಾರವನ್ನೂ ಮಾಡುತ್ತಿದ್ದನೇತಕ್ಕೆ? ಮತ್ತು ಈ ಜಗಳವನ್ನು ಕೆಣಕುವ ಮತ್ತು ಹಾಬೀಲನ ಸಾವಿನ ಕಾರಣವೂ ಕೂಡ ಈಶ್ವರನೇ ಆದನು. ಮಾನವರು ಪರಸ್ಪರ ಒಬ್ಬರೊಡನೊಬ್ಬರು ಮಾತನಾಡಿಕೊಳ್ಳುವ ಹಾಗೆ ಕ್ರೈಸ್ತರ ಈಶ್ವರನ ಮಾತುಗಳೂ ಇವೆ. ಉದ್ಯಾನಕ್ಕೆ ಬರುವುದು – ಹೋಗುವುದು, ಅದನ್ನು ನಿರ್ಮಿಸುವುದೂ ಕೂಡ ಮಾನವರ ಕಾರ್ಯವಾಗಿದೆ. ಇದರಿಂದ ಈ ಬೈಬಲ್ ಮಾನವರಚಿತವಾಗಿದೆ; ಈಶ್ವರನದಲ್ಲದೆಂದು ಸಿದ್ಧವಾಗುತ್ತದೆ. (೯)

---

೪. ಎಂದರೆ, ಶಾಕಾಹಾರ.

೫. ಎಂದರೆ, ಮಾಂಸಾಹಾರ.

೬. ಒಂದು ಜನಾಂಗ –ವಿಶೇಷ. [cherubems]

೭. Cain    ೮. Abel.

*ಪರಮೇಶ್ವರನು ಕೈನನನ್ನು - "ನಿನ್ನ ಸೋದರ ಹಾಬೀಲನೆಲ್ಲಿದ್ದಾನೆ?" ಎಂದು ಕೇಳಿದಾಗ ಅವನು -" ನಾನು ತಿಳಿಯೆನು; ನಾನು ನನ್ನ ಸೋದರನ ರಕ್ಷಕನೇನು?" ಎಂದನು. ಆಗ ಅವನು -"ನೀನೇನು ಮಾಡಿದೆ? ನಿನ್ನ ಸೋದರನ ರಕ್ತದ ಕರೆ ಭೂಮಿಯಿಂದ ನನ್ನನ್ನು ಕರೆಯುತ್ತಿದೆ. ಮತ್ತು ಈಗ ನೀನು ಪೃಥಿವಿಯಿಂದ ಶಪ್ತನಾಗಿದ್ದೀಯೆ". ಎಂದನು. (ತೌ. ಪ.೪, ಆ,೯- ೧೧)*

**ಸಮೀಕ್ಷಕ:-** ಈಶ್ವರನು ಕೈನನನ್ನು ಕೇಳದೆಯೇ ಹಾಬೀಲನ ಸ್ಥಿತಿಯನ್ನು ತಿಳಿದಿರಲಿಲ್ಲವೇ? ಮತ್ತು ರಕ್ತದ ಕರೆ ಭೂಮಿಯಿಂದ ಎಂದಿಗಾದರೂ, ಯಾರನ್ನಾದರೂ ಕೂಗಬಲ್ಲದೇ? ಈ ಮಾತುಗಳೆಲ್ಲವೂ ಅವಿದ್ವಾಂಸರದಾಗಿವೆ. ಆದುದರಿಂದ ಈ ಪುಸ್ತಕವೂ ಈಶ್ವರನ ರಚನೆಯಾಗಲಿ, ವಿದ್ವಾಂಸನ ರಚನೆಯಾಗಲಿ ಆಗಿರಲಾರದು. (೧೦).

*ಮತ್ತು ಹನೂಕ್,[೯] ಮತೂಸಿಲಹನ[೧೦] ಉತ್ಪತ್ತಿಯ ನಂತರ ೩೦೦ ವರ್ಷಗಳವರೆಗೆ ಈಶ್ವರನ ಜೊತೆಜೊತೆಯಲ್ಲಿ ಓಡಾಡುತ್ತಿದ್ದನು (ತೌರೇತ್ . ಪ-೫ ಆ-೨೨)*

**ಸಮೀಕ್ಷಕ :-** ಒಳಿತು, ಕ್ರೈಸ್ತರ ಈಶ್ವರನು ಮನುಷ್ಯನಲ್ಲವಾಗಿದ್ದರೆ, ಹನೂಕನ ಜೊತೆ ಜೊತೆಯಾಗಿ , ಹೇಗೆ ಓಡಾಡುತ್ತಿದ್ದನು? ಇವನಿಗಿಂತ ವೇದೋಕ್ತನಾದ ನಿರಾಕಾರ ಈಶ್ವರನನ್ನೇ ಕ್ರೈಸ್ತರು ಅಂಗೀಕರಿಸುವರಾದರೆ, ಅವರ ಕಲ್ಯಾಣವಾಗುವುದು. (೧೧).

*ಮತ್ತು ಅವರಿಂದ ಹೆಣ್ಣು ಮಕ್ಕಳು ಹುಟ್ಟಿದರು. ಆಗ ಈಶ್ವರನ ಪುತ್ರರು ಆದಮನ ಪುತ್ರಿಯರು ಸುಂದರಿಯರಾಗಿರುವುದನ್ನು ನೋಡಿದರು. ಮತ್ತು ಅವರಲ್ಲಿ ಯಾರನ್ನು ಅವರು ಬಯಸಿದರೋ, ಅವರೊಂದಿಗೆ ವಿವಾಹ ಮಾಡಿಕೊಂಡರು. ಮತ್ತು ಆ ದಿನಗಳಲ್ಲಿ ಪೃಥಿವಿಯಲ್ಲಿ ದಾನವರಿದ್ದರು. ಮತ್ತು ಅಮೇಲೆ ಕೂಡ ಈಶ್ವರನ ಪುತ್ರರು ಆದಮನ ಪುತ್ರಿಯರನ್ನು ಸಂಧಿಸಿದರು. ಅವರಿಂದ, ಬಲಶಾಲಿಗಳೂ, ಆನಂತರ ಯಶಸ್ವಿಗಳೂ ಆದ ಮಕ್ಕಳು ಜನಿಸಿದರು. ಮತ್ತು ಈಶ್ವರನು ಆದಮನ ದುಷ್ಟತನ ಭೂಮಿಯ ಮೇಲೆ ಬಹಳವಾಯಿತು ಮತ್ತು ಅವರ ಮನಸ್ಸಿನ ಯೋಚನೆ ಮತ್ತು ಭಾವನೆ ಪ್ರತಿದಿನವೂ ಕೇವಲ ಕೆಟ್ಟದೇ ಆಗುತ್ತದೆ - ಎಂಬುದನ್ನು ನೋಡಿದನು. ಆಗ ಪೃಥಿವಿಯ ಮೇಲೆ ಮನುಷ್ಯನನ್ನು ಉತ್ಪನ್ನ ಮಾಡಿದುದಕ್ಕಾಗಿ, ಪರಮೇಶ್ವರನು, ಪಶ್ಚಾತ್ತಾಪಟ್ಟನು ಮತ್ತು ಅವನಿಗೆ ಬಹಳ ಶೋಕವಾಯಿತು. ಆಗ ಪರಮೇಶ್ವರನು - "ನಾನು ಸೃಜಿಸಿರುವ ಮನುಷ್ಯನನ್ನೂ, ಮನುಷ್ಯನಿಂದ ಹಿಡಿದು ಪಶುಗಳವರೆಗೆ ಮತ್ತು ತೆವಳಿಕೊಂಡು ಓಡಾಡುವ ಸರೀಸೃಪಗಳನ್ನೂ ಮತ್ತು ಆಕಾಶದ ಪಕ್ಷಿಗಳನ್ನೂ ಪೃಥಿವಿಯ ಮೇಲಿನಿಂದ ನಾಶಮಾಡಿಬಿಡುವೆನು; ಏಕೆಂದರೆ- ಅವುಗಳನ್ನು ನಿರ್ಮಿಸಿದುದಕ್ಕಾಗಿ ನಾನು ಪಶ್ಚಾತ್ತಾಪಪಡುತ್ತೇನೆ". - ಎಂದನು. (ತೌರೇತ್, ಪರ್ವ- ೬ ಆ-೧,೨,೪-೭)*

**ಸಮೀಕ್ಷಕ:-** "ಈಶ್ವರನ ಮಕ್ಕಳು ಯಾರು? ಮತ್ತು ಈಶ್ವರನ ಹೆಂಡತಿ, ಅತ್ತೆ, ಮಾವ, ಮೈದುನ ಮತ್ತು ಸಂಬಂಧಿಕರು ಯಾರು?" ಎಂದು ಕ್ರೈಸ್ತರನ್ನು ಕೇಳಬೇಕು. ಏಕೆಂದರೆ, ಈಗಲಂತೂ ಮಾನವನ ಪುತ್ರಿಯರೊಂದಿಗೆ ವಿವಾಹವಾದುದರಿಂದ, ಈಶ್ವರನು ಇವರ ಬೀಗರಾದನು. ಮತ್ತು ಅವರಿಂದ ಉತ್ಪನ್ನರಾಗುವವರು ಅವನ ಪೌತ್ರರೂ, ಪ್ರಪೌತ್ರರೂ ಆಗುವರು, ಇಂತಹ ಮಾತುಗಳು ಈಶ್ವರನವು ಮತ್ತು ಈಶ್ವರನ ಪುಸ್ತಕದವು ಆಗಬಲ್ಲವೇನು? ಆದರೆ, ಆ ಕಾಡುಮನುಷ್ಯರು ಈ ಪುಸ್ತಕವನ್ನು ಬರೆದಿದ್ದಾರೆ. ಸರ್ವಜ್ಞನಲ್ಲದವನು, ಭವಿಷ್ಯದ ಮಾತನ್ನು ಅರಿಯಲಾರದವನು ಈಶ್ವರನೇ ಅಲ್ಲ; ಅವನು ಜೀವನಾಗಿರುತ್ತಾನೆ. ಸೃಷ್ಟಿಯನ್ನು ರಚಿಸಿದಾಗ, ಮುಂದಕ್ಕೆ ಮಾನವರು ದುಷ್ಟರಾಗುವರು - ಎಂದು ತಿಳಿದಿರಲಿಲ್ಲವೋ? ಮತ್ತು ಪಶ್ಚಾತ್ತಾಪ ಪಡುವುದು, ಅತಿಶೋಕಗ್ರಸ್ತನೇ ಮೊದಲಾಗಿ ವಿಕೃತನಾಗುವುದು, ಮರೆವಿನಿಂದ ಕೆಲಸಮಾಡಿ ಹಿಂದಿನಿಂದ ಪರಿತಪಿಸುವುದು - ಮೊದಲಾದುದು ಕ್ರೈಸ್ತರ ಈಶ್ವರನಿಗೆ ಅನ್ವಯಿಸಬಲ್ಲದು. ಕ್ರೈಸ್ತರ ಈಶ್ವರನು ಪೂರ್ಣ ವಿದ್ವಾಂಸನಾದ ಯೋಗಿಯೂ ಕೂಡ ಆಗಿರಲಿಲ್ಲ. ಇಲ್ಲದಿದ್ದರೆ, ಶಾಂತಿ ಮತ್ತು ವಿಜ್ಞಾನದಿಂದ ಅತಿಶೋಕ - ಮೊದಲಾದುದರಿಂದ ದೂರವಿರಲು ಶಕ್ತನಾಗುತ್ತಿದ್ದನು. ಓಹೋ! ಪಶು-ಪಕ್ಷಿಗಳೂ ಕೂಡ ದುಷ್ಟವಾಗಿ ಹೋದುವೇನು? ಆ ಈಶ್ವರನು ಸರ್ವಜ್ಞನಾಗಿದ್ದರೆ, ಹೀಗೆ ವಿಷಾದಗ್ರಸ್ತನಾಗುತ್ತಿದ್ದನೇಕೆ? ಆದುದರಿಂದ ಇವನು ಈಶ್ವರನೂ ಅಲ್ಲ; ಇದು ಈಶ್ವರಕೃತವಾದ ಪುಸ್ತಕವೂ ಆಗಲಾರದು. ವೇದೋಕ್ತನಾದ ಪರಮೇಶ್ವರನು ಸಮಸ್ತ ಪಾಪ, ಕ್ಲೇಶ, ದುಃಖ, ಶೋಕ ಮೊದಲಾದುದರಿಂದ ರಹಿತನೂ, ಸಚ್ಚಿದಾನಂದಸ್ವರೂಪನೂ ಆಗಿದ್ದಾನೆ; ಹಾಗೆಯೇ

---

೯. Henoch.

೧೦. ಈ ದಾನವರನ್ನು ಸೃಜಿಸಿದವನಾವನು? ಇತರರಿಗಿಂತ ಮೊದಲೇ ಅವರನ್ನು ಸೃಜಿಸಲಾಗಿತ್ತೋ? ಒಂದೂ ತಿಳಿಯದು.

ಅವನನ್ನು ಕ್ರೈಸ್ತರು ಅಂಗೀಕರಿಸಿದ್ದರೆ, ಅಥವಾ ಈಗಲಾದರೂ ಒಪ್ಪುವರಾದರೆ, ತಮ್ಮ ಮಾನವಜನ್ಮವನ್ನು ಸಫಲವಾಗಿ ಮಾಡಿಕೊಳ್ಳಲು ಶಕ್ತರಾದಾರು. (೧೨).

*ಆ ನಾವೆಯ ಉದ್ದ ಮುನ್ನೂರು ಮೊಳ, ಅಗಲ ಐವತ್ತು ಮೊಳ ಮತ್ತು ಎತ್ತರ ಮೂವತ್ತು ಮೊಳವಿರಲಿ. ನೀನು ನಾವೆಯಲ್ಲಿ ಹೋಗಬೇಕು; ನೀನು ಮತ್ತು ನಿನ್ನ ಪುತ್ರರು ಮತ್ತು ನಿನ್ನ ಪತ್ನಿ ಮತ್ತು ನಿನ್ನ ಪುತ್ರರ ಪತ್ನಿಯರು ಮತ್ತು ಸಮಸ್ತ ಯೋನಿಗಳಿಂದಲೂ ಎರಡೆರಡು ಜೀವಂತ ಜಂತುಗಳು, ನಿನ್ನ ಜೊತೆಯಲ್ಲಿ ಜೀವಿಸಿರುವಂತೆ, ನಿನ್ನೊಂದಿಗೆ ನಾವೆಯಲ್ಲಿ ಕರೆದುಕೋ; ಅವು ಗಂಡು ಹಾಗೂ ಹೆಣ್ಣುಗಳಾಗಿರಲಿ. ಪಕ್ಷಿಗಳಿಂದ ಅವುಗಳ ವಿಧವಿಧದ ಪಶುಗಳಿಂದ, ಮತ್ತು ಭೂಮಿಯ ಪ್ರತಿಯೊಂದು ತೆವಳಿಕೊಂಡು ಹೋಗುವ ಜಂತುಗಳಿಂದ ವಿಧವಿಧದ, ಪ್ರತಿಯೊಂದರಿಂದಲೂ ಎರಡೆರಡು, ಜೀವಂತವಾಗಿರುವಂತೆ ನಿನ್ನ ಬಳಿ ಬರಲಿ. ಮತ್ತು ನೀನು ನಿನಗೋಸ್ಕರ ತಿನ್ನಲು ಎಲ್ಲ ಸಾಮಾಗ್ರಿಗಳನ್ನೂ, ನಿನ್ನ ಹತ್ತಿರ ಸಂಗ್ರಹಿಸು. ಅದು ನಿನಗೂ ಮತ್ತು ಅವುಗಳಿಗೂ ಭೋಜನವಾಗುವುದು. ಹಾಗೆಯೇ, ಈಶ್ವರನ ಸಮಸ್ತ ಅಜ್ಞೆಗಳಿಗೆ ಅನುಗುಣವಾಗಿ ನೂಹನು*[೧೧] *ಮಾಡಿದನು. (ತೌರೇತ್. ಪರ್ವ-೬ ಆ-೧೫, ೧೮ -೨೨)*

**ಸಮೀಕ್ಷಕ :-** ಭಲೇ! ಯಾವನೇ ವಿದ್ವಾಂಸನಾದರೂ ಇಂತಹ ವಿದ್ಯಾವಿರುದ್ಧವಾದ ಮತ್ತು ಅಸಂಭವವಾದ ಮಾತುಗಳನ್ನಾಡುವವನನ್ನು ಈಶ್ವರನೆಂದು ಒಪ್ಪಿಕೊಳ್ಳಬಲ್ಲನೇ? ಏಕೆಂದರೆ, ಇಷ್ಟು ಉದ್ದ-ಅಗಲ-ಎತ್ತರವಾದ ನಾವೆಯಲ್ಲಿ ಗಂಡಾನೆ- ಹೆಣ್ಣಾನೆ, ಗಂಡು ಒಂಟೆ ಹೆಣ್ಣು ಒಂಟೆ - ಮೊದಲಾದ ಕೋಟ್ಯಂತರ ಪ್ರಾಣಿಗಳು ಮತ್ತು ಅವುಗಳು ತಿನ್ನುವ-ಕುಡಿಯವ ವಸ್ತುಗಳು, ಅವು ಎಲ್ಲವೂ, ಎಲ್ಲ ಕುಟುಂಬಗಳವರೂ ಹಿಡಿಸಬಲ್ಲರೇನು? ಆದುದರಿಂದ ಇದು ಮಾನವಕೃತವಾದ ಪುಸ್ತಕವಾಗಿದೆ. ಇವನ್ನು ಬರೆದವನು ವಿದ್ವಾಂಸನೂ ಕೂಡ ಆಗಿರಲಿಲ್ಲ. (೧೩).

*ಮತ್ತು ನೂಹನು ಪರಮೇಶ್ವರನಿಗಾಗಿ ಒಂದೊಂದು ವೇದಿಯನ್ನು ನಿರ್ಮಿಸಿದನು ಮತ್ತು ಸಮಸ್ತ ಪವಿತ್ರ ಪಶುಗಳಿಂದಲೂ, ಮತ್ತು ಪ್ರತ್ಯೇಕ ಪವಿತ್ರ ಪಕ್ಷಿಗಳಿಂದಲೂ ಒಂದೊಂದನ್ನು ತೆಗೆದುಕೊಂಡನು ಮತ್ತು ಹೋಮದ ಆಹುತಿಯನ್ನು ಆ ವೇದಿಯಲ್ಲಿ ಸಮರ್ಪಿಸಿದನು. ಮತ್ತು ಪರಮೇಶ್ವರನು ಸುಗಂಧವನ್ನು ಮೂಸಿನೋಡಿದನು ಮತ್ತು ಪರಮೇಶ್ವರನು ತನ್ನ ಮನಸ್ಸಿನಲ್ಲಿಯೇ "ಮಾನವನಿಗಾಗಿ ನಾನು ಭೂಮಿಗೆ ಮತ್ತೆ ಎಂದಿಗೂ ಶಾಪವನ್ನು ಕೊಡುವುದಿಲ್ಲ. ಮಾನವನ ಮನಸ್ಸಿನ ಭಾವನೆ ಅವನ ಬಾಲತನದಿಂದಾಗಿ ಕೆಟ್ಟದಾಗಿರುತ್ತದೆ. ಮತ್ತು ನಾನು ಸಮಸ್ತ ಜೀವಧಾರಿಗಳನ್ನೂ ಮುನ್ನ ಸಂಹರಿಸಿದ ಹಾಗೆ ಮತ್ತೆ ಎಂದೂ ಸಂಹರಿಸುವುದಿಲ್ಲ". - ಎಂದು ಹೇಳಿಕೊಂಡನು. (ತೌರೇತ್ . ಪರ್ವ:-೧. ಆಯತ್:-೨೦, ೨೧)*

**ಸಮೀಕ್ಷಕ :-** ವೇದಿಯನ್ನು ರಚಿಸುವ, ಹೋಮಮಾಡುವುದರ ಲೇಖನದಿಂದ, ಈ ವಿಷಯಗಳು ವೇದಗಳಿಂದ ಬೈಬಲ್‌ಗೆ ಹೋಗಿವೆ- ಎಂದೇ ಸಿದ್ಧವಾಗುತ್ತದೆ. ಸುಗಂಧ ಮೂಸಿ ನೋಡುವ ಮೂಗು ಕೂಡ ಪರಮೇಶ್ವರನಿಗೆ ಇದೆಯೋ? ಕ್ರೈಸ್ತರ ಈ ಈಶ್ವರನು ಮನುಷ್ಯನಂತೆ ಅಲ್ಪಜ್ಞನಲ್ಲವೇ? ಒಂದು ಸಾರಿ ಶಾಪಹಾಕುತ್ತಾನೆ; ಮತ್ತೆ ಇನ್ನೊಮ್ಮೆ 'ನಾನು ಎಂದಿಗೂ ಶಾಪಕೊಡುವುದಿಲ್ಲ'. ಎನ್ನುತ್ತಾನೆ. ಮೊದಲು ಶಾಪವನ್ನು ಕೊಟ್ಟಿದ್ದನು. ಮತ್ತು ಮರಳಿಯೂ ಕೊಡುವನು. ಮೊದಲು ಎಲ್ಲರನ್ನೂ ಸಂಹರಿಸಿಬಿಟ್ಟನು ಮತ್ತು ಈಗ- "ಎಂದಿಗೂ ಸಂಹರಿಸುವುದಿಲ್ಲ!" ಎನ್ನುತ್ತಾನೆ. ಈ ಮಾತುಗಳೆಲ್ಲಾ ಹುಡುಗುತನದವಾಗಿವೆ ; ಈಶ್ವರನದಲ್ಲ. ಮತ್ತು ಯಾವ ವಿದ್ವಾಂಸನದೂ ಕೂಡ ಅಲ್ಲ. ಏಕೆಂದರೆ, ವಿದ್ವಾಂಸನ ಮಾತು ಮತ್ತು ಪ್ರತಿಜ್ಞೆಯಾದರೂ ಸ್ಥಿರವಾಗಿರುತ್ತವೆ. (೧೪).

*ಮತ್ತು ಈಶ್ವರನು ನೂಹನಿಗೆ ಮತ್ತು ಅವನ ಸಂತತಿಗೆ ಆಶೀರ್ವಾದ ಕೊಟ್ಟನು ಮತ್ತು ಅವರಿಗೆ- "ಪ್ರತಿಯೊಂದು ಜೀವಂತವೂ, ನಡೆಯುವಂತಹದೂ ಆದ ಜಂತುವು ನಿಮ್ಮ ಭೋಜನಕ್ಕಾಗಿ ಇರುವುದು. ನಾನು ಹಸಿರು ಕಾಯಿ- ಪಲ್ಲೆಗೆ ಸಮಾನವಾಗಿ ಎಲ್ಲವನ್ನೂ ನಿಮಗೆ ಕೊಟ್ಟಿದ್ದೇನೆ. ಕೇವಲ ಮಾಂಸವನ್ನು ಅದರ ಜೀವದೊಂದಿಗೆ, ಅಂದರೆ ರಕ್ತದೊಂದಿಗೆ ತಿನ್ನಬಾರದು". ಎಂದು ಹೇಳಿದನು. (ತೌರೇತ್, ಪರ್ವ-೯, ಆ-೧,೩-೪.)*

**ಸಮೀಕ್ಷಕ :-** ಒಂದರ ಪ್ರಾಣಕ್ಕೆ ಕ್ಲೇಶವನ್ನಿತ್ತು ಬೇರೆಯವರಿಗೆ ಆನಂದವನ್ನುಂಟು ಮಾಡುವುದರಿಂದ ಕ್ರೈಸ್ತರ ಈಶ್ವರನು ದಯಾಹೀನನಾಗನೇ? ತಾಯಿ-ತಂದೆಗಳು ಒಬ್ಬ ಮಗನನ್ನು ಸಾಯಿಸಿ, ಬೇರೆ ಮಕ್ಕಳಿಗೆ ತಿನ್ನಿಸಿದರೆ ಮಹಾಪಾಪಿ

---

೧೧. Noe.

ಗಳಾಗುವುದಿಲ್ಲವೇನು? ಈ ಮಾತು ಇದೇ ರೀತಿಯದಾಗಿದೆ. ಏಕೆಂದರೆ, ಈಶ್ವರನಿಗೆ ಸರ್ವಪ್ರಾಣಿಗಳೂ ಮಕ್ಕಳಂತೆ ಇವೆ. ಈ ರೀತಿ ವರ್ತಿಸದಿರುವುದರಿಂದ ಇವರ ಈಶ್ವರನು ಕಟುಕನಂತೆ ಕೆಲಸ ಮಾಡುತ್ತಾನೆ. ಮತ್ತು ಎಲ್ಲ ಮನುಷ್ಯರನ್ನೂ ಹಿಂಸಕರನ್ನಾಗಿಯೂ ಇವನೇ ಮಾಡಿದ್ದಾನೆ. ಆದುದರಿಂದ, ಕ್ರೈಸ್ತರ ಈಶ್ವರನು ನಿರ್ದಯನಾಗಿರುವುದರಿಂದ ಪಾಪಿ ಏತಕ್ಕಲ್ಲ? (೧೫).

*ಮತ್ತು ಸಮಸ್ತ ಪೃಥಿವಿಯಲ್ಲಿ ಒಂದೇ ನುಡಿ ಮತ್ತು ಒಂದೇ ಭಾಷೆಯಿದ್ದಿತು. ಮತ್ತು ಅವರು –"ಬನ್ನಿರಿ, ನಾವು ಒಂದು ನಗರವನ್ನು ಮತ್ತು ಸ್ವರ್ಗದವರೆಗೆ ಏರುವಂತಹ ಶೃಂಗವನ್ನುಳ್ಳ ಒಂದು ಗೋಪುರವನ್ನು ನಮ್ಮ ಸಲುವಾಗಿ ಕಟ್ಟಿಕೊಳ್ಳೋಣ ಮತ್ತು ಹೆಸರನ್ನು[೧೨] ಗಳಿಸೋಣ; ನಾವು ಸಮಸ್ತ ಭೂಮಿಯ ಮೇಲೆ ಭಿನ್ನ-ಭಿನ್ನರಾಗದಂತಿರಲಿ". ಎಂದರು. ಆಗ ಈಶ್ವರನು ಆ ನಗರವನ್ನು ಮತ್ತು ಆದಮನ ಸಂತತಿಯವರು ಕಟ್ಟುತ್ತಿದ್ದ ಆ ಗೋಪುರವನ್ನು ನೋಡಲು ಇಳಿಸಿದನು. ಆಗ ಪರಮೇಶ್ವರನು–"ನೋಡಿರಿ, ಈ ಜನರು ಒಂದೇ ಆಗಿದ್ದಾರೆ ಮತ್ತು ಅವರೆಲ್ಲರ ಭಾಷೆಯೂ ಒಂದೇ ಆಗಿದೆ. ಈಗ ಅವರು ಈ ಈ ಬಗೆಯದೇನನ್ನಾದರೂ ಮಾಡಲಾರಂಭಿಸಿದರೆ, ಅವರು ಯಾವುದರ ಮೇಲೆ ಮನಸ್ಸನ್ನು ನಿಲ್ಲಿಸುವರೋ, ಅದರಿಂದ ಅವರನ್ನು ದೂರವಿಡಲಾಗದು. ಬನ್ನಿರಿ, ನಾವು ಇಳಿಯೋಣ; ಮತ್ತು ಅಲ್ಲಿ ಅವರ ಭಾಷೆಯನ್ನು, ಒಬ್ಬರು ಇನ್ನೊಬ್ಬರ ನುಡಿಯನ್ನು ತಿಳಿದುಕೊಳ್ಳಲು ಆಗದ ಹಾಗೆ ಕಲಬೆರಕೆ ಮಾಡಿಬಿಡೋಣ"– ಎಂದು ಹೇಳಿದನು. ಆಗ ಪರಮೇಶ್ವರನು ಅವರನ್ನು ಅಲ್ಲಿಂದ ಸಮಸ್ತ ಭೂಮಂಡಲದಲ್ಲಿ ಚದುರಿಸಿ ಬಿಟ್ಟನು. ಮತ್ತು ಅವರು ಆ ನಗರವನ್ನು ನಿರ್ಮಿಸುವುದರಿಂದ ದೂರ ಉಳಿದರು. (ತೌರೇತ್. ಪರ್ವ:–೧೧, ಆ:–೧,೪–೮)*

**ಸಮೀಕ್ಷಕ :–** ಸಮಸ್ತ ಭೂಮಂಡಲದಲ್ಲಿ ಒಂದೇ ಭಾಷೆ ಮತ್ತು ನುಡಿಯಿದ್ದಿರ ಬಹುದಾದ ಕಾಲದಲ್ಲಿ ಮಾನವರೆಲ್ಲರಿಗೂ ಪರಸ್ಪರ ಅತ್ಯಂತ ಆನಂದವು ಪ್ರಾಪ್ತವಾಗಿದ್ದಿರಬಹುದು. ಆದರೆ, ಮಾಡುವುದಾದರೂ ಏನು? ಕ್ರೈಸ್ತರ ಈ ಈರ್ಷ್ಯಾಳುವಾದ ಈಶ್ವರನು ಎಲ್ಲರ ಭಾಷೆಯನ್ನೂ ಕಲಬೆರಕೆಮಾಡಿ, ಸರ್ವರ ಸತ್ಯಾನಾಶವನ್ನು ಮಾಡಿಬಿಟ್ಟನು. ಅವನು ಈ ಮಹಾಪರಾಧವನ್ನು ಮಾಡಿದನು. ಇದು ಶೈತಾನನ ಕೆಲಸಕ್ಕಿಂತ ಕೆಟ್ಟ ಕೆಲಸವಲ್ಲವೇನು? ಮತ್ತು ಇದರಿಂದ ಕ್ರೈಸ್ತರ ಈಶ್ವರನು ಸನಾಯೀ ಪರ್ವತ ಮೊದಲಾದೆಡೆ ಇರುತ್ತಿದ್ದನು ಮತ್ತು ಜೀವರ ಉನ್ನತಿಯನ್ನೂ ಬಯಸುತ್ತಿರಲಿಲ್ಲವೆಂದೂ ಕೂಡ ವಿದಿತವಾಗುತ್ತದೆ. ಇದು ಒಬ್ಬ ಅವಿದ್ವಾಂಸನ ಹೊರತು ಈಶ್ವರನ ಮಾತು ಮತ್ತು ಇದು ಈಶ್ವರೋಕ್ತವಾದ ಪುಸ್ತಕ ಹೇಗಾದರೂ ಆಗಬಲ್ಲದು? (೧೬).

*ಆಗ ಅವನು ತನ್ನ ಪತ್ನಿ ಸಾರಾಳಿಗೆ[೧೩] – "ನೋಡು, ನೀನು ನೋಡುವುದಕ್ಕೆ ಸುಂದರಿಯಾದ ಸ್ತ್ರೀಯಾಗಿದ್ದೀಯೆ – ಎಂದು ನಾನು ಬಲ್ಲೆನು. ಆದುದರಿಂದ, ಹೀಗೆ ಆಗಬಹುದು. ಮಿಶ್ರದೇಶೀಯರು ನಿನ್ನನ್ನು ನೋಡುವಾಗ ಅವರು – "ಇವಳು ಅವನ ಪತ್ನಿಯಾಗಿದ್ದಾಳೆ" – ಎನ್ನುವರು. ಮತ್ತು ನನ್ನನ್ನು ಕೊಂದುಬಿಡುವರು ; ಆದರೆ, ನಿನ್ನನ್ನು ಜೀವಿತಳನ್ನಾಗಿ ಇಡುವರು. ನೀನು, ನಿನ್ನ ಕಾರಣದಿಂದ ನನಗೆ ಒಳಿತಾಗುವಂತೆ ಮತ್ತು ನನ್ನ ಪ್ರಾಣ ನಿನ್ನ ಕಾರಣದಿಂದ ಜೀವಿತವಾಗಿ ಉಳಿದುಕೊಳ್ಳುವಂತೆ, 'ನಾನು ಅವನ ಸೋದರಿ', ಎಂದು ಹೇಳು." – ಎಂದು ಹೇಳಿದನು. (ತೌರೇತ್, ಪರ್ವ:–೧೨, ಆ : – ೧೧–೧೨.)*

**ಸಮೀಕ್ಷಕ :–** ಈಗ ನೋಡಿರಿ, ಅಬ್ರಹಾಮನು[೧೪] ಕ್ರೈಸ್ತರ ಮತ್ತು ಮುಸಲ್ಮಾನರ ಮಹಾಪ್ರವಾದಿಯೆಂದು ಪ್ರಸಿದ್ಧನಾಗಿದ್ದಾನೆ. ಮತ್ತು ಮಿಥ್ಯಾಭಾಷಣ ಮೊದಲಾದ ಅವನ ಕರ್ಮಗಳು ಕೆಟ್ಟವಾಗಿವೆ. ಭಲೇ! ಯಾರ ಪ್ರವಾದಿಗಳು ಇಂತಹವರಾಗಿರುತ್ತಾರೋ, ಅವರಿಗೆ ವಿದ್ಯೆಯ ಮತ್ತು ಕಲ್ಯಾಣದ ಮಾರ್ಗ ಸಿಕ್ಕಬಲ್ಲದೆಂತು? (೧೭)

*ಮತ್ತು ಈಶ್ವರನು ಅಬ್ರಹಾಮನಿಗೆ – "ನೀನು ಮತ್ತು ನಿನ್ನ ನಂತರ ನಿನ್ನ ವಂಶ, ಅವರ ಪೀಳಿಗೆಗಳಲ್ಲಿ ನನ್ನ ನಿಯಮವನ್ನು ಅಂಗೀಕರಿಸಲಿ. ನನ್ನ– ನಿನ್ನ ನಡುವೆ ಮತ್ತು ನಿನ್ನ ನಂತರ ನಿನ್ನ ವಂಶದ ನಡುವೆ ಪ್ರಚಲಿತವಾಗಿರುವ ಮತ್ತು ನೀನು ಅಂಗೀಕರಿಸಿರುವ ನನ್ನ ನಿಯಮ ನಿಮ್ಮಲ್ಲಿ ಪ್ರತಿಯೊಬ್ಬ ಪುರುಷನ ಗುಹ್ಯೇಂದ್ರಿಯದ ಮೇಲುಚರ್ಮವನ್ನು ತೆಗೆದುಹಾಕಬೇಕೆಂಬುದೇ ಆಗಿದೆ. ಮತ್ತು ನೀನು ನಿನ್ನ ಶಿಶ್ನದ ತುದಿಯ ಹೊರಚರ್ಮವನ್ನು ಕತ್ತರಿಸಿಹಾಕು ಮತ್ತು ಅದು ನನ್ನ ಮತ್ತು ನಿನ್ನ ನಡುವಣ ಚಿಹ್ನೆಯಾಗಿರುವುದು. ಮತ್ತು ನಿಮ್ಮ ವಂಶದಲ್ಲಿರುವ ಒಂದು ಎಂಟು ದಿನಗಳ ಗಂಡು*

---

೧೨. ಎಂದರೆ, ಹೆಸರಿನಿಂದ ಪ್ರಸಿದ್ಧರಾಗೋಣ.

೧೩. Sarai.

೧೪. Abraham.

*ಮಗುವಿನ ಶಿಶ್ನದ ತುದಿಯ ಹೊರಚರ್ಮ ತೆಗೆಯಲ್ಪಡಲಿ. ನಿನ್ನ ಮನೆಯಲ್ಲಿ ಹುಟ್ಟುವವನ, ಅಥವಾ, ನಿನ್ನ ವಂಶದವನಲ್ಲದ ಮತ್ತು ನಿನ್ನಿಂದ ರೂಪಾಯಿಗಳನ್ನಿತ್ತು ತೆಗೆದುಕೊಳ್ಳಲ್ಪಡುವ ಯಾವನಾದರೂ ಪರದೇಶೀಯನ ಶಿಶ್ನದ ತುದಿಯ ಹೊರಚರ್ಮ ಅವಶ್ಯವಾಗಿ ತೆಗೆಯಲ್ಪಡಬೇಕು. ಮತ್ತು ನನ್ನ ನಿಯಮ ನಿನ್ನ ಮಾಂಸದಲ್ಲಿ ಸರ್ವದಾ ನಿಯಮಕ್ಕೋಸ್ಕರ ಇರುವುದು. ಮತ್ತು ಶಿಶ್ನದ ತುದಿಯಲ್ಲಿ ಅಖಂಡವಾದ ಚರ್ಮವನ್ನುಳ್ಳ, ಶಿಶ್ನದ ಅಗ್ರಭಾಗದ ಚರ್ಮ ತೆಗೆಯಲ್ಪಡದ ಬಾಲಕನು, ಪ್ರಾಣಧಾರಿಯು ತನ್ನ ಜನರಿಂದ ಬಹಿಷ್ಕೃತನಾಗಲಿ. ಏಕೆಂದರೆ, ಅವನು ನನ್ನ ನಿಯಮವನ್ನು ಮುರಿದಿದ್ದಾನೆ"– ಎಂದು ಹೇಳಿದನು. (ತೌರೇತ್. ಪರ್ವ:–೧೭. ಆ:–೯–೧೪)*

**ಸಮೀಕ್ಷಕ:–** ಈಗ ನೋಡಿರಿ. ಈಶ್ವರನ ಅನ್ಯಥಾ ಆಜ್ಞೆಯನ್ನು! ಶಿಶ್ನದ ಹೊರಚರ್ಮವನ್ನು ತೆಗೆಯುವುದೇ ಈಶ್ವರನಿಗೆ ಇಷ್ಟವಾಗಿದ್ದಲ್ಲಿ, ಆದಿಸೃಷ್ಟಿಯಲ್ಲಿ ಆ ಚರ್ಮವನ್ನು ನಿರ್ಮಿಸುತ್ತಲೇ ಇರಲಿಲ್ಲ! ಮತ್ತು ಹೇಗೆ ಕಣ್ಣಿನ ಮೇಲಣ ರೆಪ್ಪೆಯ ಚರ್ಮವಿದೆಯೋ, ಹಾಗೆ ಶಿಶ್ನದ ಮೇಲಣ ಚರ್ಮವನ್ನು ರಚಿಸಿರುವುದು ರಕ್ಷಣೆಯ ಸಲುವಾಗಿ. ಏಕೆಂದರೆ, ಆ ಗುಪ್ತ ಸ್ಥಾನ ಅತಿಕೋಮಲವಾಗಿದೆ. ಅದರ ಮೇಲೆ ಚರ್ಮವಿಲ್ಲದೆ ಹೋದರೆ, ಒಂದು ಇರುವೆಯು ಕಚ್ಚುವುದರಿಂದಲೂ ಮತ್ತು ಸ್ವಲ್ಪ ಏಟು ತಗಲುವುದರಿಂದಲೂ ಬಹಳ ನೋವಾಗುವುದು. ಮತ್ತು ಮೂತ್ರವಿಸರ್ಜನೆಯಾದ ನಂತರ ಉಳಿದಿರಬಹುದಾದ ಮೂತ್ರದ ಅಂಶ ಬಟ್ಟೆಗೆ ಹತ್ತಿಕೊಳ್ಳದಿರಲಿ ಎಂಬ ಈ ಮೊದಲಾದ ಕಾರಣಗಳಿಂದಲೂ ಇದನ್ನು ಕತ್ತರಿಸುವುದು ಅನುಚಿತವಾಗಿರುತ್ತದೆ. ಮತ್ತು ಈಗ ಕ್ರೈಸ್ತರು ಈ ಆಜ್ಞೆಯನ್ನು ಪಾಲಿಸುವುದಿಲ್ಲವೇಕೆ? ಈ ಆಜ್ಞೆ ಸರ್ವಕಾಲಕ್ಕೂ ಅನ್ವಯಿಸುತ್ತದೆ. ಇದನ್ನು ಮಾಡದೇ ಇರುವುದರಿಂದ, ವ್ಯವಸ್ಥಾ ಪುಸ್ತಕದ ಒಂದು ಬಿಂದುವೂ ಕೂಡ ಸುಳ್ಳಲ್ಲ– ಎಂಬ ಏಸುವಿನ ಸಾಕ್ಷ್ಯ ಸುಳ್ಳಾಗಿ ಹೋಯಿತು. ಇದರ ಸಮಾಲೋಚನೆಯನ್ನು ಕ್ರೈಸ್ತರು ಸ್ವಲ್ಪವೂ ಮಾಡುವುದಿಲ್ಲ. (೧೮)

*ಆಗ ಅವರೊಂದಿಗೆ ಮಾತನಾಡುವುದು ಮುಗಿಯಿತು. ಮತ್ತು ಅಬ್ರಹಾಮನ ಹತ್ತಿರದಿಂದ ಈಶ್ವರನು ಮೇಲಕ್ಕೆ ಹೊರಟುಹೋದನು. (ತೌರೇತ್. ಪರ್ವ:–೧೭. ಆ:–೨೨)*

**ಸಮೀಕ್ಷಕ :–** ಇದರಿಂದ ಈಶ್ವರನು ಮೇಲಿಂದ ಕೆಳಕ್ಕೆ ಮತ್ತು ಕೆಳಗಿನಿಂದ ಮೇಲಕ್ಕೆ ಬರುತ್ತಾ–ಹೋಗುತ್ತಾ ಇರುತ್ತಿದ್ದ ಮನುಷ್ಯನಂತೆ ಇದ್ದನು ಅಥವಾ ಪಕ್ಷಿಯಂತೆಯಿದ್ದನು – ಎಂದು ಸಿದ್ಧವಾಗುತ್ತದೆ. ಇವನು ಯಾವನೋ ಇಂದ್ರಜಾಲ ಮಾಡುವ ಪುರುಷನಂತೆ ತೋರುತ್ತಾನೆ. (೧೯)

*ಮತ್ತೆ ಈಶ್ವರನು ಅವನಿಗೆ ಕಾಡುತುಳಸಿಯ ಹಾಗೂ ವೃಕ್ಷಗಳ ನಡುವೆ ಕಾಣಿಸಿಕೊಂಡನು. ಮತ್ತು ಅವನು ಹಗಲು ಬಿಸಿಲಿನ ಹೊತ್ತಿನಲ್ಲಿ ತನ್ನ ಗುಡಾರದ ಬಾಗಿಲನಲ್ಲಿ ಕುಳಿತಿದ್ದನು. ಮತ್ತು ಅವನು ತನ್ನ ಕಣ್ಣುಗಳನ್ನೆತ್ತಿದನು ಮತ್ತು ಮೂವರು ಮಾನವರು ತನ್ನ ಬಳಿ ನಿಂತಿರುವುದನ್ನು ನೋಡಿದನು. ಮತ್ತು ಅವರನ್ನು ನೋಡಿ, ಅವನು ಗುಡಾರದ ಬಾಗಿಲಿನಿಂದ ಅವರ ಭೇಟಿಗಾಗಿ ಓಡಿದನು ಮತ್ತು ಭೂಮಿಗೆರಗಿ ದಂಡವತ್ ಪ್ರಣಾಮವನ್ನು ಮಾಡಿದನು. ಮತ್ತು – "ಓ ನನ್ನ ಸ್ವಾಮಿ! ನಾನು ಈಗ ತಮ್ಮ ದೃಷ್ಟಿಯಲ್ಲಿ ಅನುಗ್ರಹಕ್ಕೆ ಪಾತ್ರನಾಗಿದ್ದೇನೆಯಾದರೆ, ತಮ್ಮ ಈ ದಾಸನ ಹತ್ತಿರದಿಂದ ಹೊರಟುಹೋಗಬೇಡಿರಿ. ಇಚ್ಛೆಯಿದ್ದಲ್ಲಿ, ಸ್ವಲ್ಪ ನೀರು ತರಲ್ಪಡಲಿ ಮತ್ತು ತಮ್ಮ ಪಾದಗಳನ್ನು ತೊಳೆದುಕೊಳ್ಳಿರಿ ಮತ್ತು ವೃಕ್ಷದ ಕೆಳಗೆ ವಿಶ್ರಮಿಸಿಕೊಳ್ಳಿರಿ. ಮತ್ತು ನಾನು ಒಂದು ಗ್ರಾಸ ರೊಟ್ಟಿಯನ್ನು ತರುವೆನು. ಮತ್ತು ತಾವು ತೃಪ್ತರಾಗಿರಿ. ಅದಾದಮೇಲೆ ಮುನ್ನಡೆಯಿರಿ. ಏಕೆಂದರೆ ತಾವು ಇದಕ್ಕಾಗಿಯೇ ತಮ್ಮ ದಾಸನ ಬಳಿ ಬಂದಿದ್ದೀರಿ" – ಎಂದು ತಮ್ಮಲ್ಲಿ ಬಿನ್ನಹಮಾಡಿಕೊಳ್ಳುತ್ತೇನೆ."– ಎಂದು ಹೇಳಿದನು. ಆಗ ಅವರು – 'ನೀನು ಹೇಳಿದ ಹಾಗೆ ಮಾಡು' – ಎಂದರು. ಮತ್ತು ಅಬ್ರಹಾಮನು ಗುಡಾರಕ್ಕೆ ಸಾರಾಳ*[೧೫] *ಬಳಿಗೆ ಸಡಗರದಿಂದ ಹೋದನು. ಮತ್ತು ಅವಳಿಗೆ – "ತ್ವರೆಮಾಡು. ಮತ್ತು ಮೂರು ಸೇರು ಚೊಕ್ಕವಾದ ಹಿಟ್ಟನ್ನು ತೆಗೆದುಕೊಂಡು ಮಿದಿ ಮತ್ತು ಅದರ ರೊಟ್ಟಿಗಳನ್ನು ಮಾಡು" ಎಂದು ಹೇಳಿದನು. ಮತ್ತು ಅಬ್ರಹಾಮನು ಹಿಂಡಿನ ಕಡೆಗೆ ಓಡುತ್ತಾ ಹೋದನು ಮತ್ತು ಒಂದು ಒಳ್ಳೆಯ ಕೋಮಲವಾದ ಕರುವನ್ನು ತೆಗೆದುಕೊಂಡು, ಸೇವಕನಿಗೆ ಕೊಟ್ಟನು. ಮತ್ತು ಅವನೂ ಕೂಡ ಅದನ್ನು ಸಿದ್ಧಪಡಿಸುವುದರಲ್ಲಿ ಚುರುಕಾಗಿಯೇ ಕೆಲಸ*[೧೬] *ಮಾಡಿದನು. ಮತ್ತು ಅವನು ಬೆಣ್ಣೆಯನ್ನು ಮತ್ತು ಹಾಲನ್ನು ಮತ್ತು ಬೇಯಿಸಿದ್ದ ಆ ಕರುವನ್ನು*

---

೧೫. Sara..

೧೬. ಯದು. ಎಂದರೆ, ಮಾಂಸದ ಅಡಿಗೆ ಮಾಡುವ, ಬಡಿಸುವ ಕ್ರಿಯೆಗಳು. ಇಂಗ್ಲೀಷ್‌ನಲ್ಲಿ ಇದಕ್ಕೆ Dressing ಎಂಬ ಪ್ರಯೋಗವಿದೆ.

*ತೆಗೆದುಕೊಂಡನು ಮತ್ತು ಅವರ ಮುಂದೆ ಇಟ್ಟನು ಮತ್ತು ತಾನು ಅವರ ಹತ್ತಿರ ವೃಕ್ಷದ ಕೆಳಗೆ ನಿಂತುಕೊಂಡಿದ್ದನು. ಮತ್ತು ಅವರು ತಿಂದರು. (ತೌರೇತ್, ಪರ್ವ:-೧೮, ಆ;- ೧-೮)*

**ಸಮೀಕ್ಷಕ :–** ಈಗ ನೋಡಿರಿ! ಸಜ್ಜನರುಗಳೇ! ಯಾರ ಈಶ್ವರನು ಕರುವಿನ ಮಾಂಸವನ್ನು ತಿನ್ನುವನೋ, ಅವನ ಉಪಾಸಕರು ಹಸು-ಕರು ಮೊದಲಾದ ಪ್ರಾಣಿಗಳನ್ನು ಏತಕ್ಕೆ ಬಿಟ್ಟಾರು? ಯಾವನಿಗೆ ಸ್ವಲ್ಪವೂ ದಯೆಯಿಲ್ಲವೋ, ಮತ್ತು ಮಾಂಸ ತಿನ್ನಲು ಚಡಪಡಿಸುವನೋ, ಅವನು ಹಿಂಸಕನಾದ ಮಾನವನೇ ಹೊರತು ಈಶ್ವರನೆಂದಿಗಾದರೂ ಅಗಬಲ್ಲನೇ? ಮತ್ತು ಈಶ್ವರನ ಜೊತೆಯಲ್ಲಿ ಇಬ್ಬರು ಮನುಷ್ಯರು ಅದಾರಿದ್ದರೋ ತಿಳಿಯದು. ಇದರಿಂದ, ಕಾಡು ಜನರ ಒಂದು ಗುಂಪು ಇದ್ದಿತು. ಅವರ ಪ್ರಧಾನನಾಗಿದ್ದ ಮನುಷ್ಯನಿಗೆ ಬೈಬಲಿನಲ್ಲಿ 'ಈಶ್ವರ' ನೆಂಬ ಹೆಸರನ್ನು ಇಟ್ಟಿರಬಹುದು – ಎಂದು ವಿದಿತವಾಗುತ್ತದೆ. ಇಂತಹ ಮಾತುಗಳ ಇರುವಿಕೆಯಿಂದಲೇ ಬುದ್ಧಿಶಾಲೀ ಜನರು ಇವರ ಪುಸ್ತಕವನ್ನು ಈಶ್ವರಕೃತವೆಂದು ಅಂಗೀಕರಿಸಲಾರರು; ಮತ್ತು ಇಂತಹವನನ್ನು ಈಶ್ವರನೆಂದು ತಿಳಿಯುವುದೂ ಇಲ್ಲ. (೨೦).

*ಮತ್ತು ಪರಮೇಶ್ವರನು ಅಬ್ರಹಾಮನಿಗೆ-" ಮುದುಕಿಯಾದ ನಾನು ನಿಜವಾಗಿಯೂ ಬಾಲಕನನ್ನು ಹೆರುವೆನೇ?' – ಎಂದು ಹೇಳಿ. ಸಾರಾ ಮುಗಳ್ನಗೆ ನಕ್ಕಳೇಕೆ? ಪರಮೇಶ್ವರನಿಗೆ ಯಾವುದಾದರೂ ವಿಷಯ ಅಸಾಧ್ಯವೇ?" ಎಂದು ಪ್ರಶ್ನೆಹಾಕಿದನು.*

*(ತೌರೇತ್. ಪರ್ವ:- ೧೮. ಆ:- ೧೩, ೧೪.)*

**ಸಮೀಕ್ಷಕ :–** ಈಗ ನೋಡಿರಿ! ಹುಡುಗರಂತೆ ಅಥವಾ ಹೆಂಗಸರಂತೆ ರೇಗುವ ಮತ್ತು ಭರ್ತ್ಸನೆ (ಬೈಗಳನ್ನು) ಯನ್ನೆಸಗುವ ಕ್ರೈಸ್ತರ ಈಶ್ವರನ ಲೀಲೆ ಏನೆಂಬುದನ್ನು ! (೨೧)

*ಆಗ ಪರಮೇಶ್ವರನು ಸಮೂದ*[೧೭] *ಮತ್ತು ಅಮೂರಗಳ*[೧೮] *ಮೇಲೆ ಗಂಧಕದ ಮತ್ತು ಬೆಂಕಿಯ ಮಳೆಯನ್ನು ತನ್ನ ಕಡೆಯಿಂದ ಸುರಿಸಿದನು. ಮತ್ತು ಆ ನಗರಗಳನ್ನೂ ನಾಲ್ಕೆಡೆಯ ಬಯಲನ್ನೂ, ಮತ್ತು ನಗರಗಳ ಎಲ್ಲ ನಿವಾಸಿಗಳನ್ನೂ ಮತ್ತು ಭೂಮಿಯ ಮೇಲೆ ಮೊಳೆಯುತ್ತಿದ್ದುದೆಲ್ಲವನ್ನೂ, ಮಗುಚಿ ಹಾಕಿದರು. (ತೌರೇತ್, ಪರ್ವ:- ೧೯, ಆ:- ೨೪, ೨೫)*

**ಸಮೀಕ್ಷಕ :–** ಈಗ ಬೈಬಲಿನ ಈಶ್ವರನ ಈ ಲೀಲೆಯನ್ನೂ ಕೂಡ ನೋಡಿರಿ! ಅವನಿಗೆ ಬಾಲಕರೇ ಮೊದಲಾದವರ ಮೇಲೆಯೂ ದಯೆ ಬರಲಿಲ್ಲ. ಭೂಮಿಯನ್ನು ಮಗುಚಿಹಾಕಿ ಎಲ್ಲರನ್ನೂ ಹೂಳಿ ಸಾಯಿಸಲು ಅವರೆಲ್ಲರೂ ಅಪರಾಧಿಗಳಾಗಿದ್ದರೇನು? ಈ ನಡೆ ನ್ಯಾಯ, ದಯೆ ಮತ್ತು ವಿವೇಕಕ್ಕೆ ವಿರುದ್ಧವಾಗಿದೆ. ಯಾರ ಈಶ್ವರನು ಇಂತಹ ಕೆಲಸವನ್ನು ಮಾಡುವನೋ, ಅವನ ಉಪಾಸಕರು ಹಾಗೆಯೇ ಮಾಡದೇ ಇರುವರೇಕೆ?[೧೯] (೨೨)

*ಬನ್ನಿರಿ, ನಾವು ನಮ್ಮ ತಂದೆಗೆ ದ್ರಾಕ್ಷಾರಸವನ್ನು ಕುಡಿಸೋಣ. ಮತ್ತು ನಾವು ಅವನೊಂದಿಗೆ ಮಲಗೋಣ. ಹೀಗೆ ನಮ್ಮ ತಂದೆಯಿಂದ ವಂಶವನ್ನು ನಡೆಯಿಸೋಣ. ಆಗ ಅವರು ಆ ರಾತ್ರಿ ತಮ್ಮ ತಂದೆಗೆ ದ್ರಾಕ್ಷಾರಸವನ್ನು ಕುಡಿಸಿದರು. ಮತ್ತು ದೊಡ್ಡ ಮಗಳು ಹೋದಳು ಮತ್ತು ತನ್ನ ತಂದೆಯೊಂದಿಗೆ ಮಲಗಿದಳು. ನಾವು ಅವನಿಗೆ ಇಂದು ರಾತ್ರಿಯೂ ಕೂಡ ದ್ರಾಕ್ಷಾರಸವನ್ನು ಕುಡಿಸೋಣ. ನೀನು ಹೋಗಿ ಮಲಗು. ಹೀಗೆ ಲೂತನ*[೨೦] *ಇಬ್ಬರು ಹೆಣ್ಣು ಮಕ್ಕಳೂ ತಮ್ಮ ತಂದೆಯಿಂದ ಗರ್ಭಿಣಿಯರಾದರು. (ತೌರೇತ್, ಉತ್ಪತ್ತಿ ಪರ್ವ:-೧೯. ಆ:- ೩೨, ೩೪, ೩೬)*

**ಸಮೀಕ್ಷಕ :–** ನೋಡಿರಿ. ಪಿತಾ-ಪುತ್ರಿಯರೂ ಕೂಡ ಯಾವ ಮದ್ಯಪಾನದ ಮತ್ತಿನಲ್ಲಿ ಕುಕರ್ಮ ಮಾಡುವುದರಿಂದ ದೂರ ಉಳಿಯಲಾರದೇ ಹೋದರೋ, ಅಂತಹ ದುಷ್ಟ ಮದ್ಯವನ್ನು ಕುಡಿಯವ ಕ್ರೈಸ್ತರೇ ಮೊದಲಾದವರ ಕೇಡಿಗೆ ಇತಿ-ಮಿತಿಯಾದರೂ ಏನಿದ್ದೀತು? ಆದುದರಿಂದ ಸಜ್ಜನರುಗಳು ಮದ್ಯದ ಪಾನಮಾಡುವ ಹೆಸರನ್ನೂ ಕೂಡ ಎತ್ತಬಾರದು. (೨೩)

---

೧೭. ng Sodom

೧೮. Gomorrha.

೧೯. ೧೯೪೫ ನೆಯ ಇಸವಿಯಲ್ಲಿ ಅಮೇರಿಕನರು ಜಪಾನ್ ಮೇಲೆ ೨ ಆಟಂ ಬಾಂಬಗಳನ್ನು ಹಾಕಿ ಇದೇ ರೀತಿ ಅನ್ಯಾಯ ಮಾಡಿದ್ದರು. ಪುನಃ ವಿಯತ್ ನಾಮ್ ನಲ್ಲೂ ೨೧ ವರ್ಷ ತಾಂಡವವಾಡಿದರು–ಯು.ಮೀ.

೨೦. Lot.

*ಮತ್ತು ತನ್ನ ಹೇಳಿಕೆಗೆ ಸಮವಾಗಿ ಪರಮೇಶ್ವರನು ಸಾರಾಳನ್ನು ಭೇಟಿ ಮಾಡಿದನು ಮತ್ತು ತನ್ನ ವಚನಕ್ಕೆ ಸಮವಾಗಿ ಪರಮೇಶ್ವರನು ಸಾರಾಳ ವಿಷಯದಲ್ಲಿ ವರ್ತಿಸಿದನು. ಮತ್ತು ಸಾರಾ ಗರ್ಭಿಣಿಯಾದಳು. (ತೌರೇತ್. ಉತ್ಪತ್ತಿ ಪರ್ವ:- ೨೧, ಆ:- ೧ -೨)*

**ಸಮೀಕ್ಷಕ :-** ಈಗ ಆಲೋಚಿಸಿರಿ. ಸಾರಾಳನ್ನು ಭೇಟಿಮಾಡಿ, ಗರ್ಭವತಿಯನ್ನಾಗಿ ಮಾಡಿದನು. ಈ ಕೆಲಸ ಎಂತಹದಾಯಿತು? ಪರಮೇಶ್ವರನ ಮತ್ತು ಸಾರಾಳ ಹೊರತು ಮೂರನೆಯವನು ಯಾವನಾದರೂ ಗರ್ಭಸ್ಥಾನಕ್ಕೆ ಕಾರಣವಾಗಿ ಕಾಣಿಸುತ್ತಾನೇನು? ಸಾರಾಳು ಪರಮೇಶ್ವರನ ಕೃಪೆಯಿಂದ ಗರ್ಭವತಿಯಾದಳೆಂದು ವಿದಿತವಾಗುತ್ತದೆ. (೨೪)

*ಆಗ ಅಬ್ರಹಾಮನು ಬಹಳ ಮುಂಜಾನೆಯೇ ಎದ್ದು, ರೊಟ್ಟಿಯನ್ನು ಮತ್ತು ಒಂದು ಚರ್ಮದ ಚೀಲದಲ್ಲಿ ನೀರನ್ನು ತೆಗೆದುಕೊಂಡನು ಮತ್ತು ಹಾಜಿರಾಳ[೨೧] ಹೆಗಲಿನ ಮೇಲೆ ಹೊರಿಸಿದನು ಮತ್ತು ಬಾಲಕನನ್ನೂ ಕೂಡ ಅವಳಿಗೆ ಒಪ್ಪಿಸಿ, ಅವಳನ್ನು ಬೀಳ್ಕೊಟ್ಟನು ಅವಳು ಆ ಬಾಲಕನನ್ನು ಒಂದು ಪೊದರಿನ ಕೆಳಗೆ ಇಟ್ಟುಬಿಟ್ಟಳು ಮತ್ತು ಅವಳು ಅವನ ಮುಂದೆ ಕುಳಿತು ದನಿದೆಗೆದು ಅತ್ತಳು. ಆಗ ಈಶ್ವರನು ಆ ಬಾಲಕನ ಶಬ್ದವನ್ನು ಕೇಳಿದನು. (ತೌರೇತ್. ಉತ್ಪತ್ತಿ ಪರ್ವ:- ೨೧. ಆ :- ೧೪-೧೭)*

**ಸಮೀಕ್ಷಕ:-** ಈಗ ನೋಡಿರಿ. ಕ್ರೈಸ್ತರ ಈಶ್ವರನ ಲೀಲೆಯನ್ನು. ಮೊದಲಂತೂ ಸಾರಾಳ ಕಡೆ ಪಕ್ಷಪಾತ ಮಾಡಿ, ಹಾಜಿರಾಳನ್ನು ಅಲ್ಲಿಂದ ಹೊರದೂಡಿಸಿದನು ಮತ್ತು ದನಿ ತೆಗೆದು ರೋದಿಸಿದಳು ಹಾಜಿರಾ ಮತ್ತು ಅಲಿಸಿದುದು ಬಾಲಕನ ಶಬ್ದವನ್ನು! ಇದು ಎಂತಹ ಅದ್ಭುತವಾದ ಮಾತು? ವಿಷಯ ಹೀಗೆ ನಡೆದಿರಬಹುದು; ಬಾಲಕನೇ ರೋದಿಸುತ್ತಾನೆ - ಎಂದು ಈಶ್ವರನಿಗೆ ಭ್ರಮವಾಗಿರಬಹುದು. ಭಾಪು! ಇವನು ಈಶ್ವರನಾಗಬಲ್ಲನೋ ಮತ್ತು ಇದು ಸಾಧಾರಣ ಮಾನವನ ವಚನವಲ್ಲದೆ, ಈಶ್ವರನ ಪುಸ್ತಕದ್ದು ಎಂದಾದರೂ ಆಗಬಲ್ಲದೇ? ಈ ಪುಸ್ತಕದಲ್ಲಿ ಸ್ವಲ್ಪ ಮಾತುಗಳು ಸತ್ಯವಿದ್ದು. ಎಲ್ಲ ಅಸಾರವಾದುದೇ ತುಂಬಿಕೊಂಡಿದೆ. (೨೫)

*ಮತ್ತು ಈ ಘಟನೆಗಳ ನಂತರ ಹೀಗೆ ಆಯಿತು; ಈಶ್ವರನು ಅಬ್ರಹಾಮನ ಪರೀಕ್ಷೆಯನ್ನು ಮಾಡಿದನು. ಮತ್ತು ಅವನಿಗೆ- "ಓ ಅಬ್ರಹಾಮ್! ನೀನು ನಿನ್ನ ಮಗನನ್ನು ನೀನು ಪ್ರೀತಿಸುವ ಆ ನಿನ್ನ ಏಕಮಾತ್ರ ಪುತ್ರ ಇಜಾಕನನ್ನು[೨೨] ತೆಗೆದುಕೋ, ಅವನನ್ನು ಹೋಮದ ಅಹುತಿಯಾಗಿ ಅರ್ಪಿಸಿಬಿಡು" - ಎಂದನು. "ಮತ್ತು ತನ್ನ ಮಗನಾದ ಇಜಾಕನನ್ನು ಬಂಧಿಸಿ, ಅವನನ್ನು ವೇದಿಯಲ್ಲಿ ಕಾಷ್ಠಗಳ ಮೇಲಿಟ್ಟನು. ಮತ್ತು ಅಬ್ರಹಾಮನು ಚೂರಿಯನ್ನು ತೆಗೆದುಕೊಂಡು ತನ್ನ ಮಗನನ್ನು ಕತ್ತರಿಸಲು ಕೈಯನ್ನು ನೀಡಿದನು. ಆಗ ಪರಮೇಶ್ವರನ ದೂತನು ಸ್ವರ್ಗದ ಮೇಲಿನಿಂದ ಅವನನ್ನು -"ಅಬ್ರಹಾಮ್! ಅಬ್ರಹಾಮ್!! ನಿನ್ನ ಕೈಯನ್ನು ಹುಡುಗನ ಮೇಲೆ ಚಾಚಬೇಡ. ಅವನಿಗೆ ಏನನ್ನೂ ಮಾಡಬೇಡ. ಏಕೆಂದರೆ, ನೀನು ಈಶ್ವರನಿಗೆ ಹೆದರುವೆ- ಎಂದು ಈಗ ನಾನು ತಿಳಿದಿದ್ದೇನೆ" - ಎಂದು ಕೂಗಿದನು. (ತೌರೇತ್. ಉತ್ಪತ್ತಿ ಪರ್ವ:-೨೨. ಆ:-೧,೨,೯,೧೨).*

**ಸಮೀಕ್ಷಕ:-** ಈ ಬೈಬಲಿನ ಈಶ್ವರನು ಅಲ್ಪಜ್ಞನಾಗಿದ್ದಾನೆ; ಸರ್ವಜ್ಞನಲ್ಲ- ಎಂಬುದೀಗ ಸ್ಪಷ್ಟವಾಗಿ ಹೋಯಿತು. ಮತ್ತು ಅಬ್ರಹಾಮನೂ ಕೂಡ ಒಬ್ಬ ಮುಗ್ಧ ಮನುಷ್ಯನಾಗಿದ್ದನು. ಇಲ್ಲದಿದ್ದರೆ, ಇಂತಹ ಉದ್ಯಮಕ್ಕೇಕೆ ಇಳಿಯುತ್ತಿದ್ದನು? ಮತ್ತು ಬೈಬಲಿನ ಈಶ್ವರನು ಸರ್ವಜ್ಞನಾಗಿದ್ದಿದ್ದರೆ, ಅವನ ಭಾವೀ ಶ್ರದ್ಧೆಯನ್ನೂ ಕೂಡ ಸರ್ವಜ್ಞತ್ವದಿಂದ ತಿಳಿದುಕೊಳ್ಳುತ್ತಿದ್ದನು. ಇದರಿಂದ, ಕ್ರೈಸ್ತರ ಈಶ್ವರನು ಸರ್ವಜ್ಞನಲ್ಲವೆಂದು ನಿಶ್ಚಿತವಾಗುತ್ತದೆ. (೨೬)

*ಹೀಗೆ ತಾವು ನಮ್ಮ ಸಮಾಧಿಗಳಿಂದ ಆರಿಸಿಕೊಂಡು, ತಾವು ತಮ್ಮ ಮೃತಕನನ್ನು ಹೂಳಲು ಶಕ್ತರಾಗುವಂತೆ ತಮ್ಮ ಮೃತಕನನ್ನು ಹೂಳಿರಿ. (ತೌರೇತ್. ಉತ್ಪತ್ತಿಪರ್ವ:- ೨೩, ಆ;-೬)*

**ಸಮೀಕ್ಷಕ:-** ಶವಗಳನ್ನು ಹೂಳುವುದರಿಂದ ಜಗತ್ತಿಗೆ ಬಹಳ ಹಾನಿಯುಂಟಾಗುತ್ತದೆ ಏಕೆಂದರೆ, ಅದು ಕೊಳೆತು, ವಾಯುವನ್ನು ದುರ್ಗಂಧಮಯವನ್ನಾಗಿ ಮಾಡಿ ರೋಗವನ್ನು ಹರಡಿಸಿಬಿಡುತ್ತದೆ. (ನೆಲದಲ್ಲಿ ಹುಳಗಳು ಬೀಳುತ್ತವೆ).

---

೨೧. Agar

೨೨. Issac.

**ಪ್ರಶ್ನೆ:–** ನೋಡಿರಿ! ಯಾವನ ಮೇಲೆ ಪ್ರೀತಿಯಿರುವುದೋ, ಅವನನ್ನು ಸುಡುವುದು ಒಳ್ಳೆಯ ನಡೆಯಲ್ಲ. ಮತ್ತು ಹೂಳುವುದು, ಅವನನ್ನು ನಿದ್ರೆಹೋಗಿಸುವಂತೆ ಇರುತ್ತದೆ. ಆದುದರಿಂದ, ಹೂಳುವುದು ಒಳ್ಳೆಯದಾಗಿರುತ್ತದೆ.

**ಉತ್ತರ:–** ಮೃತನಾದವನನ್ನು ಪ್ರೀತಿಸುತ್ತೀರಿ – ಎಂದಾದರೆ, ನಿಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುವುದಿಲ್ಲವೇಕೆ? ಮತ್ತು ಹೂಳುತ್ತೀರಿಯಾದರೂ ಏತಕ್ಕೆ? ಯಾವ ಜೀವಾತ್ಮನ ಮೇಲೆ ಪ್ರೀತಿಯಿದ್ದಿತೋ, ಅವನು ಹೊರಟು ಹೋದನು. ಇನ್ನು ದುರ್ಗಂಧಮಯವಾದ ಮಣ್ಣಿನೊಂದಿಗೆ ಪ್ರೀತಿ ಏನು? ಮತ್ತು, ಪ್ರೀತಿಸುತ್ತೀರಾದರೆ, ಅವನನ್ನು ಭೂಮಿಯಲ್ಲಿ ಹೂಳುತ್ತೀರಿ ಏಕೆ? ಏಕೆಂದರೆ, ಯಾವನಾದರೊಬ್ಬನು ಮತ್ತೊಬ್ಬನಿಗೆ – "ನಿನ್ನನ್ನು ಭೂಮಿಯಲ್ಲಿ ಹೂಳುವೆವು". ಎಂದರೆ, ಅವನು ಅದನ್ನು ಕೇಳಿ ಪ್ರಸನ್ನನೆಂದಿಗೂ ಆಗುವುದಿಲ್ಲ. ಅವನ ಮುಖ, ಕಣ್ಣು ಮತ್ತು ಶರೀರದ ಮೇಲೆ ಧೂಳು, ಕಲ್ಲು, ಇಟ್ಟಿಗೆ, ಸುಣ್ಣ – ಇವನ್ನು ಹಾಕುವುದು, ಎದೆಯ ಮೇಲೆ ಕಲ್ಲನ್ನು ಇಡುವುದು ಯಾವ ಪ್ರೀತಿಯ ಕೆಲಸವಾಗಿದೆ? ಮತ್ತು ಪೆಟ್ಟಿಗೆಯಲ್ಲಿಟ್ಟು ಹೂಳುವುದರಿಂದ, ಬಹಳ ದುರ್ಗಂಧವುಂಟಾಗಿ, ಪೃಥಿವಿಯಿಂದ ಹೊರಟು, ವಾಯುವನ್ನು ಕೆಡಿಸಿ, ದಾರುಣವಾದ ರೋಗೋತ್ಪತ್ತಿಯನ್ನುಂಟುಮಾಡುತ್ತದೆ. ಎರಡನೆಯದಾಗಿ, ಒಂದು ಶವಕ್ಕೆ ಕನಿಷ್ಠ ಪಕ್ಷ ಆರು ಮೊಳ ಉದ್ದ, ನಾಲ್ಕು ಮೊಳ ಆಗಲ ಭೂಮಿಯುಬೇಕು. ಇದೇ ಲೆಕ್ಕದಂತೆ, ನೂರು, ಸಾವಿರ, ಅಥವಾ ಲಕ್ಷ , ಇಲ್ಲವೇ ಕೋಟ್ಯಂತರ ಮಾನವರಿಗೆ ಎಷ್ಟು ಭೂಮಿ ವ್ಯರ್ಥವಾಗಿ ಕಟ್ಟುಬೀಳುತ್ತದೆ? ಅದು ಹೊಲದ ಕೆಲಸಕ್ಕೂ ಸಲ್ಲದು; ತೋಟಕ್ಕೂ ಸಲ್ಲದು; ಮತ್ತು ನಿವಾಸದ ಕಾರ್ಯಕ್ಕಂತೂ ಬರುವಂತೆಯೇ ಇಲ್ಲ. ಆದುದರಿಂದ, ಹೂಳುವುದು ಎಲ್ಲಕ್ಕಿಂತ ಕೆಟ್ಟದಾಗಿರುತ್ತದೆ. ಅದಕ್ಕಿಂತ ಸ್ವಲ್ಪ ಕಡಿಮೆ ಕೆಟ್ಟದು ನೀರಿನಲ್ಲಿ ಹಾಕುವುದು. ಏಕೆಂದರೆ, ಜಲಜಂತುಗಳು ಅದನ್ನು ಅದೇ ಸಮಯದಲ್ಲಿ ಸೀಳಿ– ಹರಿದು ತಿಂದುಬಿಡುತ್ತವೆ. ಆದರೆ ಯಾವ ಸ್ವಲ್ಪ ಮೂಳೆ, ಮಲ ಜಲದಲ್ಲಿ ಉಳಿಯುವುದೋ, ಅದು ಕೊಳೆತು, ಜಗತ್ತಿಗೆ ದುಃಖದಾಯಕವಾಗುವುದು. ಅದಕ್ಕಿಂತ ಮತ್ತೂ ಸ್ವಲ್ಪ ಕಡಿಮೆ ಕೆಟ್ಟದು ಕಾಡಿನಲ್ಲಿ ಬಿಡುವುದಾಗಿದೆ. ಏಕೆಂದರೆ, ಅದನ್ನು ಮಾಂಸಾಹಾರೀ ಪಶುಗಳು, ಪಕ್ಷಿಗಳು ಕಿತ್ತು ತಿನ್ನುವುವು. ಹಾಗಿದ್ದರೂ ಅದರ ಮೂಳೆ, ಮಜ್ಜೆ ಮತ್ತು ಮಲಗಳು ಕೊಳೆತು ದುರ್ಗಂಧವನ್ನುಂಟುಮಾಡುವುವು; ಅಷ್ಟು ಮಟ್ಟಿಗೆ ಜಗತ್ತಿಗೆ ಅನುಪಕಾರವಾಗುವುದು. ಮತ್ತು ಸರ್ವೋತ್ತಮವಾದುದೆಂದರೆ ದಹನಮಾಡುವುದೇ ಆಗಿದೆ. ಏಕೆಂದರೆ, ಅದರ ಭೌತಿಕ ತತ್ತ್ವಗಳೆಲ್ಲಾ ಅಣುಗಳಾಗಿ ಹೋಗಿ, ವಾಯುವಿನಲ್ಲಿ ಹಾರಿ ಹೋಗುವುವು.

**ಪ್ರಶ್ನೆ:–** ಸುಡುವುದರಿಂದಲೂ ದುರ್ಗಂಧ ಬರುತ್ತದೆ.

**ಉತ್ತರ:–** ವಿಧಿವಿರುದ್ಧವಾಗಿ ಸುಡುವರಾದರೆ, ಸ್ವಲ್ಪ ದುರ್ಗಂಧ ಉಂಟಾಗುತ್ತದೆ. ಆದರೆ, ಹೂಳುವುದು ಮೊದಲಾದುದಕ್ಕಿಂತ ಬಹಳ ಕಡಿಮೆ ಉಂಟಾಗುವುದು. ಮತ್ತು ವೇದದಲ್ಲಿ ಹೇಳಿರುವಂತೆ, ವಿಧಿಪೂರ್ವಕವಾಗಿ, ಶವಕ್ಕಾಗಿ ಮೂರು ಮೊಳ ಆಳವೂ, ಮೂರುವರೆ ಮೊಳ ಅಗಲವೂ, ಐದುಮೊಳ ಉದ್ದವೂ, ತಳದಲ್ಲಿ ಒಂದೂವರೆ ಗೇಣು ಇಳಿಜಾರಾದ[೨೩] ವೇದಿಯನ್ನು ಅಗೆದು, ಶರೀರದ ಭಾರಕ್ಕೆ ಸರಿತೂಗುವಂತೆ ತುಪ್ಪವನ್ನೂ, ಅದರಲ್ಲಿ ಸೇರಿಗೆ ಗುಲಗಂಜಿಯಷ್ಟು ಕಸ್ತೂರಿಯನ್ನೂ, ಅರ್ಧ ತೊಲೆಯಷ್ಟು ಕೇಸರಿಯನ್ನೂ, ಬೆರೆಸಿಟ್ಟುಕೊಂಡು, ಕನಿಷ್ಠ ಪಕ್ಷ ಅರ್ಧಮಣ ಚಂದನ, ಹೆಚ್ಚಿಗೆ ಎಷ್ಟು ಬೇಕಾದರೂ ಹಾಕಿರಿ, ಅಗರು, ತಗರು, ಕರ್ಪೂರ ಮೊದಲಾದುವನ್ನೂ ಮತ್ತು ಮುತ್ತುಗ – ಮೊದಲಾದುವುಗಳ ಕಟ್ಟಿಗೆಯನ್ನು ವೇದಿಯಲ್ಲಿ ಜೋಡಿಸಿ, ಅದರ ಮೇಲೆ ಶವವನ್ನು ಇಟ್ಟು, ಮತ್ತೆ ನಾಲ್ಕು ಕಡೆಯಿಂದಲೂ ಮೇಲೆ, ವೇದಿಯ ಸ್ತರದಿಂದ ಒಂದೊಂದು ಗೇಣಿನವರೆಗೆ ತುಂಬಿಸಿ, ಆ ತುಪ್ಪದ ಅಹುತಿಗಳನ್ನಿತ್ತು ದಹನ[೨೪] ಮಾಡಬೇಕು. ಈ ರೀತಿಯಿಂದ ದಹಿಸಿದರೆ, ಸ್ವಲ್ಪವೂ ದುರ್ಗಂಧ ಹರಡುವುದಿಲ್ಲ. ಆದರೆ ಇದಕ್ಕೇ ಅಂತ್ಯೇಷ್ಟಿ, ನರಮೇಧ, ಪುರುಷಮೇಧಯಜ್ಞ– ಎಂದು ಹೆಸರಿದೆ. ಮತ್ತು ದರಿದ್ರನಾಗಿದ್ದರೆ, ೨೦ ಸೇರಿಗಿಂತ ಕಡಿಮೆ ತುಪ್ಪವನ್ನು ಚಿತೆಯಲ್ಲಿ ಹಾಕಬಾರದು. ಬೇಕಾದರೆ ಭಿಕ್ಷೆಬೇಡುವುದರಿಂದ, ಅಥವಾ ಸಾಮಾಜಿಕರ ದಾನದಿಂದ, ಅಥವಾ ರಾಜ್ಯ ಪ್ರಶಾಸನದಿಂದ ಅದು ಸಿಕ್ಕಲಿ; ದಹನವನ್ನು ಅದೇ ಪ್ರಕಾರಮಾಡಬೇಕು. ಮತ್ತು ತುಪ್ಪ ಮೊದಲಾದುವು ಯಾವುದೇ ರೀತಿಯಿಂದಲೂ ಸಿಕ್ಕದೇ ಹೋದರೂ, ಹೂಳುವುದೇ ಮೊದಲಾದುದಕ್ಕಿಂತ ಕೇವಲ ಸೌದೆಯಿಂದಲೇ ಆದರೂ ಶವವನ್ನು ದಹನಮಾಡುವುದು ಉತ್ತಮವಾಗಿರುತ್ತದೆ. ಏಕೆಂದರೆ, ಮೂರು–ನಾಲ್ಕು ಮೊಳದಷ್ಟು ಭೂಮಿಯಲ್ಲಿ ಅಥವಾ ಒಂದು ವೇದಿಯಲ್ಲಿ ಲಕ್ಷಾಂತರ – ಕೋಟ್ಯಂತರ ಮೃತರು ದಹಿಸಲ್ಪಡಬಲ್ಲರು. ಭೂಮಿಯೂ ಕೂಡ, ಹೂಳುವುದರಿಂದ ಆಗುವಂತೆ, ಹೆಚ್ಚಾಗಿ ಕೆಡುವುದಿಲ್ಲ. ಮತ್ತು ಗೋರಿಯನ್ನು ನೋಡುವುದರಿಂದ ಭಯವೂ ಉಂಟಾಗುತ್ತದೆ. ಆದುದರಿಂದ, ಹೂಳುವುದು ಮೊದಲಾದುದು ಸರ್ವಥಾ ನಿಷಿದ್ಧವಾಗಿರುತ್ತದೆ. (೨೭).

---

೨೩. ಮೀ ಎಂದರೆ, ತಲೆಯ ಕಡೆ, ಸ್ವಲ್ಪ ಎತ್ತರ; ಮತ್ತು ಕಾಲಿನ ಕಡೆ ಇಳಿಜಾರಾಗಿ. –ಯು.ಮೀ.

೨೪. ಈ ಬಗ್ಗೆ ಸ್ವಾಮೀ ದಯಾನಂದರು ರಚಿಸಿರುವ 'ಸಂಸ್ಕಾರವಿಧಿ'ಯ ಅಂತ್ಯೇಷ್ಟಿ ಸಂಸ್ಕಾರವನ್ನು ನೋಡಿ. ಈ ಗ್ರಂಥ ಕನ್ನಡದಲ್ಲಿ ಪ್ರಕಟವಾಗಿದೆ.

*ನನ್ನ ಒಡೆಯನನ್ನು ತನ್ನ ದಯೆಯಿಂದ ಮತ್ತು ತನ್ನ ಸತ್ಯದಿಂದ ವಂಚಿತನನ್ನಾಗಿಮಾಡದ ಪರಮೇಶ್ವರನು, ನನ್ನ ಒಡೆಯನಾದ ಅಬ್ರಹಾಮನ ಈಶ್ವರನು ಧನ್ಯನಾಗಿದ್ದಾನೆ. ಮಾರ್ಗದಲ್ಲಿ ಪರಮೇಶ್ವರನು ತನ್ನ ಒಡೆಯನ ಸೋದರರ ಮನೆಯ ಕಡೆಗೆ, ನನಗೆ ಪಥಪ್ರದರ್ಶನ ಮಾಡಿದನು (ತೌರೇತ್. ಉತ್ಪತ್ತಿಪರ್ವ:– ೨೪. ಆ:–೨೭)*

**ಸಮೀಕ್ಷಕ:–** ಅವನು ಅಬ್ರಹಾಮನಿಗೆ ಮಾತ್ರ ಈಶ್ವರನಾಗಿದ್ದನೋ? ಮತ್ತು ಈ ದಿನಗಳಲ್ಲಿ ಪಥಪ್ರದರ್ಶಕರು ಅಥವಾ ಮುಂದಾಳುಗಳು ಮುಂದೆ ಮುಂದೆ ನಡೆದು ದಾರಿ ತೋರಿಸುತ್ತಾ ಹೋಗುವ ಹಾಗೆ, ಈಶ್ವರನೂ ಕೂಡ ಮಾಡಿದನಾದರೆ, ಆಧುನಿಕ ಕಾಲದಲ್ಲಿ ಮಾರ್ಗವನ್ನೇಕೆ ತೋರಿಸುವುದಿಲ್ಲ. ಮತ್ತು ಮಾನವರೊಂದಿಗೆ ಮಾತನ್ನೇಕೆ ಆಡುವುದಿಲ್ಲ? ಆದುದರಿಂದ, ಇಂತಹ ಮಾತುಗಳು ಈಶ್ವರನವಾಗಲಿ, ಈಶ್ವರನ ಪುಸ್ತಕದವಾಗಲಿ ಎಂದಿಗೂ ಆಗಲಾರವು; ಆದರೆ, ಕಾಡು ಮನುಷ್ಯರದಾಗಿವೆ. (೨೮).

ಇಸ್ಮಯೇಲನ[೨೫] ಮಕ್ಕಳ ಹೆಸರುಗಳು ಇದಾಗಿವೆ. ಇಸ್ಮಯೇಲನ ಮೊದಲನೆಯ ಮಗ ನಬೀತ[೨೬] ಮತ್ತು ಕೀದಾರ.[೨೭] ಮತ್ತು ಅದಬಿಯೇಲ್[೨೮] ಮತ್ತು ಮಿವಸಾಮ್[೨೯] ಮತ್ತು ಮಿಸಮಾಲಿ[೩೦] ಮತ್ತು ದೂಮಃ[೩೧] ಮತ್ತು ಮಸ್ಸಾ,[೩೨] ಹದರ[೩೩] ಮತ್ತು ತೈಮಾಇತೂರ,[೩೪] ನಫೀಸ್[೩೫] ಮತ್ತು ಕಿದಮಃ[೩೬] । (ತೌರೇತ್. ಉತ್ಪತ್ತಿಪರ್ವ:–೨೫ ಆ:–೧೩–೧೫)

**ಸಮೀಕ್ಷಕ:–** ಈ ಇಸ್ಮಯೇಲನು ಅಬ್ರಹಾಮನಿಂದ ಅವನ ದಾಸಿಯಾದ ಹಾಜಿರಾಳಿಗೆ ಹುಟ್ಟಿದ ಮಗನಾಗಿದ್ದನು. (೨೯)

*ನಾನು ನಿನ್ನ ತಂದೆಯ ರುಚಿಗೆ ಸರಿಯಾಗಿ ರುಚಿಕರವಾದ ಭೋಜನವನ್ನು ತಯಾರಿಸುವೆನು. ಮತ್ತು ಅವನು ತಿನ್ನಲು ಮತ್ತು ತಾನು ಸಾಯುವ ಮುನ್ನ ನಿನಗೆ ಆಶೀರ್ವಾದಮಾಡಲು ಸಾಧ್ಯವಾಗುವಂತೆ, ನೀನು ನಿನ್ನ ತಂದೆಯ ಬಳಿಗೆ ತೆಗೆದುಕೊಂಡು ಹೋಗು. ಮತ್ತು ರಿವಕಃಳು ತನ್ನ ಮನೆಯಿಂದ ತನ್ನ ಜ್ಯೇಷ್ಠ ಪುತ್ರ ಏಸೌನ ಉತ್ತಮ ಪೋಷಾಕನ್ನು ತೆಗೆದುಕೊಂಡಳು ಮತ್ತು ಮೇಕೆಯ ಮರಿಗಳ ಚರ್ಮವನ್ನು ಅವನ ಕೈಗಳ ಮತ್ತು ಕೊರಳಿನ ನುಣ್ಣಿನ ಮೇಲೆ ಸುತ್ತಿದಳು. ಆಗ ಯಾಕೂಬನು ತನ್ನ ತಂದೆಗೆ – "ನಾನು ನಿಮ್ಮ ಜ್ಯೇಷ್ಠ ಪುತ್ರನಾದ ಏಸೌ ಆಗಿದ್ದೇನೆ. ತಾವು ಹೇಳಿದಂತೆ ನಾನು ಮಾಡಿದ್ದೇನೆ. ಎದ್ದು ಕುಳಿತುಕೊಳ್ಳಿರಿ. ತಮ್ಮ ಪ್ರಾಣವು ನನಗೆ ಆಶೀರ್ವಾದ ಕೊಡುವಂತೆ ಮೇಕೆಯ ಮಾಂಸದಿಂದ ಭೋಜನಮಾಡಿರಿ".* ಎಂದನು. *(ತೌರೇತ್. ಉತ್ಪತ್ತಿಪರ್ವ:–೨೭, ಆ:– ೯–೧೦, ೧೬–೧೯)*

**ಸಮೀಕ್ಷಕ :–** ನೋಡಿರಿ, ಇಂತಹ ಸುಳ್ಳು – ಕಪಟದಿಂದ ಆಶೀರ್ವಾದ ಪಡೆದುಕೊಂಡು, ಆಮೇಲೆ ಸಿದ್ಧರೂ, ಪ್ರವಾದಿಗಳೂ ಆಗುತ್ತಾರೆ. ಇದು ಆಶ್ಚರ್ಯದ ವಿಷಯವಲ್ಲವೇನು? ಮತ್ತು ಇಂತಹವರು ಕ್ರೈಸ್ತರ ಮುಂದಾಳುಗಳಾಗಿ ಹೋಗಿದ್ದಾರೆ. ಮತ್ತೆ ಇವರ ಮತದ ಗಲಿಬಿಲಿಯಲ್ಲಿ ಕಡಿಮೆ ಏನು? (೩೦)

*ಮತ್ತು ಯಾಕೂಬನು ಬೆಳಿಗ್ಗೆ ಮುಂಚೆಯೇ ಎದ್ದನು. ಮತ್ತು ತನ್ನ ತಲೆ ದಿಂಬಾಗಿ ಇಟ್ಟುಕೊಂಡಿದ್ದ ಕಲ್ಲನ್ನು ಸ್ತಂಭವಾಗಿ ನಿಲ್ಲಿಸಿದನು ಮತ್ತು ಅದರ ಮೇಲೆ ಎಣ್ಣೆಯನ್ನು ಹಾಕಿದನು. ಮತ್ತು ಸ್ಥಳಕ್ಕೆ ಬೈತಯೇಲ್*[೪೧] ಎಂದು ಹೆಸರಿಟ್ಟನು. ಮತ್ತು *'ನಾನು ಕಂಭವಾಗಿ ನಿಲ್ಲಿಸಿರುವ ಕಲ್ಲು ಈಶ್ವರನ ಮನೆಯಾಗುವುದು'–* ಎಂದನು. *(ತೌರೇತ್. ಉತ್ಪತ್ತಿಪರ್ವ:–೨೮,ಆ:–೧೮,೧೯,೨೨)*

**ಸಮೀಕ್ಷಕ:–** ಕಾಡಾಡಿಗಳ ಕಾರ್ಯಗಳನ್ನು ಈಗ ನೋಡಿರಿ. ಇವರೇ ಕಲ್ಲುಗಳನ್ನು ಪೂಜಿಸಿದರು ಮತ್ತು ಪೂಜೆಮಾಡಿಸಿದರು. ಮತ್ತು ಇದನ್ನು ಮುಸಲ್ಮಾನರು 'ಬಯತಲ್ ಮುಕದ್ದಸ್' ಎನ್ನುತ್ತಾರೆ! ಈ ಕಲ್ಲೊಂದೇ ಈಶ್ವರನ ಮನೆಯೋ? ಮತ್ತು ಆ ಕಲ್ಲಿನಲ್ಲಿ ಮಾತ್ರ ಈಶ್ವರನಿರುತ್ತಿದ್ದನೋ? ಭಾಪು, ಭಾಪು!! ಏನು ಹೇಳಬೇಕು ಕ್ರೈಸ್ತರೇ! ಮಹಾ ಮೂರ್ತಿ ಪೂಜಕರಂತೂ ನೀವೇ ಆಗಿದ್ದೀರಿ. (೩೧).

*ಮತ್ತು ಈಶ್ವರನು ರಾಖಿಲಳನ್ನು*[೪೨] *ಸ್ಮರಿಸಿದನು ಮತ್ತು ಈಶ್ವರನು ಅವಳ (ಅರಿಕೆಯನ್ನು) ಕೇಳಿದನು ಮತ್ತು ಅವಳ ಗರ್ಭಕೋಶವನ್ನು ಬಿಚ್ಚಿದನು ಮತ್ತು ಅವಳು ಗರ್ಭಿಣಿಯಾದಳು ಮತ್ತು ಮಗನನ್ನು ಹೆತ್ತಳು ಮತ್ತು 'ಈಶ್ವರನು ತನ್ನ ನಿಂದೆಯನ್ನು ದೂರಮಾಡಿದನು'.* – ಎಂದನು. *(ತೌರೇತ್. ಉತ್ಪತ್ತಿಪರ್ವ:–೨೦. ಆ:– ೨೨–೨೩)*

---

೨೫. Issac. Ismeal. 26. Nabajoth 27. Cedar 28. Adbeel. 29. Mabsam 30. Masma 31. Duma. 32. Massa 33. Hadar 34. Thema 35. Jethur. 36. Naphis 37. Cedma 38. Rebecca 39. Esau 40. Jacob.

೪೧. Bethel ೪೨. Rachel

**ಸಮೀಕ್ಷಕ:–** ಭಲೇ ಕ್ರೈಸ್ತರುಗಳ ಈಶ್ವರನೇ! ಎಂತಹ ದೊಡ್ಡ ಡಾಕ್ಟರನಾಗಿದ್ದೀಯೇ? ಸ್ತ್ರೀಯರ ಗರ್ಭಕೋಶವನ್ನು ಬಿಚ್ಚಲು ಎಂತಹ ಶಸ್ತ್ರಗಳು ಅಥವಾ ಔಷಧಗಳಿದ್ದುವು? ಯಾವುದರಿಂದ ಬಿಚ್ಚಿದೆ? ಇವೆಲ್ಲವೂ ತಲೆಹಿಡುಕತನದ ಮೊಬ್ಬಿನ ಮಾತುಗಳು ಅಷ್ಟೇ. (೩೨)

*ಆದರೆ ಈಶ್ವರನು ಲಾವನನ*[೪೩] *ಬಳಿ ಸ್ವಪ್ನದಲ್ಲಿ ರಾತ್ರಿಗೆ ಬಂದನು ಮತ್ತು ಅವನಿಗೆ –"ಸಾವಧಾನನಾಗಿರು. ನೀನು (ಈಶ್ವರ) ಯಾಕೂಬನಿಗೆ ಒಳ್ಳೆಯದು– ಕೆಟ್ಟದು ಯಾವುದನ್ನೂ ಹೇಳಬೇಡ. ಏಕೆಂದರೆ ನೀನು ನಿನ್ನ ತಂದೆಯ ಮನೆಯ ಬಗೆಗೆ ಅತ್ಯಂತ ಅಭಿಲಾಷಿಯಾಗಿದ್ದೀಯೆ. ನೀನು ಏತಕ್ಕೆ ನನ್ನ ದೇವರುಗಳನ್ನು ಅಪಹರಿಸಿದ್ದೀಯೆ?" ಎಂದು ಕೇಳಿದನು. (ತೌರೇತ್. ಉತ್ಪತ್ತಿಪರ್ವ:–೩೩. ಆ:–೨೪,೩೦)*

**ಸಮೀಕ್ಷಕ:–** ನಾವು ಮಾದರಿಗಾಗಿ ಇದನ್ನು ಬರೆಯುತ್ತೇವೆ. ಸಾವಿರಾರು ಜನರಿಗೆ ಕನಸಿನಲ್ಲಿ ಬಂದನು; ಮಾತನಾಡಿದನು, ಜಾಗೃತನಾಗಿ, ಸಾಕ್ಷಾತ್ತಾಗಿ ಸಂಧಿಸಿದನು. ತಿಂದನು, ಕುಡಿದನು; ಬಂದನು, ಹೋದನು– ಎಂದು ಮೊದಲಾಗಿ ಬೈಬಲಿನಲ್ಲಿ ಬರೆದಿದೆ. ಆದರೆ, ಈಗ ಅವನು ಇದ್ದಾನೋ, ಅಥವಾ ಇಲ್ಲವೋ, ತಿಳಿಯದು. ಏಕೆಂದರೆ, ಈಗ ಯಾವನಿಗೂ ಸ್ವಪ್ನದಲ್ಲಿ ಅಥವಾ ಜಾಗೃದವಸ್ಥೆಯಲ್ಲಿಯೂ ಕೂಡ ಈಶ್ವರನು ಸಿಕ್ಕುವುದಿಲ್ಲ. ಮತ್ತು ಈ ಕಾಡುಜನರು ಶಿಲೆ– ಮೊದಲಾದುವುಗಳ ಮೂರ್ತಿಗಳನ್ನು ದೇವರೆಂದು ಅಂಗೀಕರಿಸಿ ಪೂಜಿಸುತ್ತಿದ್ದರು – ಎಂಬುದೂ ಕೂಡ ವಿದಿತವಾಯಿತು. ಆದರೆ, ಕ್ರೈಸ್ತರ ಈಶ್ವರನೂ ಕೂಡ ಕಲ್ಲನ್ನೇ ದೇವರೆಂದು ಗ್ರಹಿಸುತ್ತಾನೆ. ಇಲ್ಲದಿದ್ದರೆ, 'ದೇವರುಗಳ ಕಳವು' ಎನ್ನುವುದು ಹೇಗೆ ಅನ್ವಯಿಸೀತು? (೩೩).

*ಮತ್ತು ಯಾಕೂಬನು ತನ್ನ ಮಾರ್ಗದಲ್ಲಿ ನಡೆದುಹೋದನು. ಮತ್ತು ಈಶ್ವರನ ದೂತರು ಅವನನ್ನು ಮತ್ತೆ ಸಂಧಿಸಿದರು. ಮತ್ತು ಯಾಕೂಬನು ಅವರನ್ನು ನೋಡಿ, 'ಇದು ಈಶ್ವರನ ಸೇನೆಯಾಗಿದೆ'. – ಎಂದನು. (ತೌರೇತ್. ಉತ್ಪತ್ತಿಪರ್ವ:– ೩೨. ಆ:–೧,೨)*

**ಸಮೀಕ್ಷಕ:–** ಈಗ ಕ್ರೈಸ್ತರ ಈಶ್ವರನು ಮನುಷ್ಯನೆಂಬುದರಲ್ಲಿ ಸಂದಿಗ್ಧವಾದುದು ಏನೂ ಉಳಿಯಲಿಲ್ಲ. ಏಕೆಂದರೆ, ಸೈನ್ಯವನ್ನೂ ಕೂಡ ಇಟ್ಟುಕೊಂಡಿದ್ದಾನೆ. ಸೈನ್ಯವಿರುವಾಗ ಶಸ್ತ್ರಗಳೂ ಇರಬಹುದು. ಮತ್ತು ಅತ್ತ–ಇತ್ತ ಏರಿಹೋಗಿ, ಯುದ್ಧವನ್ನೂ ಕೂಡ ಮಾಡುತ್ತಿರಬಹುದು. ಇಲ್ಲವಾದರೆ, ಸೈನ್ಯವನ್ನಿಡುವುದರ ಪ್ರಯೋಜನವೇನು?(೩೪).

*ಮತ್ತು ಯಾಕೂಬನು ಒಂಟಿಯಾಗಿ ಉಳಿದುಹೋದನು ಮತ್ತು ಅಲ್ಲಿ ಬೆಳಕು ಹರಿಯುವವರೆಗೆ ಒಬ್ಬನು ಅವನೊಂದಿಗೆ ಮಲ್ಲಯುದ್ಧವನ್ನು ಮಾಡುತ್ತಾ ಇದ್ದನು. ಮತ್ತು ತಾನು ಅವನಿಗಿಂತ ಪ್ರಬಲನಾಗಲಿಲ್ಲವೆಂದು ಕಂಡು ಬಂದಾಗ ಅವನು ಅವನ ಜಂಘೆಯನ್ನು ಒಳಗಿನಿಂದ ಸ್ಪರ್ಶಿಸಿದನು. ಆಗ ಯಾಕೂಬನ ಜಂಘೆಯ ನರವು ಅವನೊಂದಿಗೆ ಮಲ್ಲಯುದ್ಧಮಾಡುವಲ್ಲಿ ಸೆಟೆತುಕೊಂಡಿತು. ಆಗ ಅವನು – "ನನಗೆ ಹೋಗಗೊಡು. ಏಕೆಂದರೆ, ಬೆಳಕು ಹರಿಯುತ್ತಿದೆ." ಎಂದನು. ಮತ್ತು ಅವನು – "ಎಲ್ಲಿಯವರೆಗೆ ನೀನು ನನಗೆ ಆಶೀರ್ವಾದವನ್ನು ಕೊಡುವುದಿಲ್ಲವೋ, ಆವರೆಗೆ ನಾನು ನಿನ್ನನ್ನು ಹೋಗಲು ಬಿಡುವುದಿಲ್ಲ" ಎಂದನು. ಆಗ ಅವನು ಅವನನ್ನು 'ನಿನ್ನ ಹೆಸರೇನು?' ಎಂದು ಕೇಳಿದನು. ಮತ್ತು ಅವನು –'ಯಾಕೂಬ್' ಎಂದನು. ಆಗ ಅವನು–'ನಿನ್ನ ಹೆಸರು ಇನ್ನು ಮುಂದೆ ಯಾಕೂಬನೆಂದು ಇರುವುದಿಲ್ಲ; ಆದರೆ ಇಸ್ರಾಯೇಲ್*[೪೪] *– ಎಂದಾಗುವುದು. ಏಕೆಂದರೆ, ನೀನು ಈಶ್ವರನ ಮುಂದೆ ಮತ್ತು ಮಾನವರ ಮುಂದೆ ರಾಜನಂತೆ ಮಲ್ಲಯುದ್ಧವನ್ನು ಮಾಡಿದೆ ಮತ್ತು ಗೆದ್ದೆ. ಆಗ ಯಾಕೂಬನು ಇದನ್ನು ಹೇಳಿ, "ತಮ್ಮ ಹೆಸರನ್ನು ಹೇಳಿರಿ" ಎಂದು ಕೇಳಿದನು. ಮತ್ತು ಅವನು – "ನನ್ನ ಹೆಸರನ್ನು ಏಕೆ ಕೇಳುತ್ತೀಯೆ?" – ಎಂದು ಕೇಳಿದನು ಮತ್ತು ಅವನು ಅವನಿಗೆ ಅಲ್ಲಿ ಆಶೀರ್ವಾದವನ್ನು ಕೊಟ್ಟನು. ಮತ್ತು ಯಾಕೂಬನು ಆ ಸ್ಥಳಕ್ಕೆ 'ಫನೂಯೇಲ್'*[೪೫] *ಎಂದು ಹೆಸರಿಟ್ಟನು. ಏಕೆಂದರೆ, ನಾನು ಈಶ್ವರನನ್ನು ಪ್ರತ್ಯಕ್ಷವಾಗಿ ನೋಡಿದೆನು ಮತ್ತು ನನ್ನ ಪ್ರಾಣ ಉಳಿದಿದೆ. ಮತ್ತು ಅವನು ಫನೂಯೇಲದಿಂದ ಮುಂದೆ ನಡೆದಾಗ, ಸೂರ್ಯನ ಜ್ಯೋತಿ ಅವನ ಮೇಲೆ ಬಿದ್ದಿತು ಮತ್ತು ಅವನು ತನ್ನ ಜಂಘೆಯಿಂದ ಕುಂಟುತ್ತಾ ಇದ್ದನು. ಆದುದರಿಂದ, ಇಸ್ರಾಯೇಲನ ವಂಶದವರು, ಯಾವುದರ ನರ ಸಿಕ್ಕುಗಟ್ಟಿದ್ದಿತೋ, ಆ ಜಂಘೆಯ ನಾಡಿಯನ್ನು ಇಂದಿನವರೆಗೂ ತಿನ್ನುವುದಿಲ್ಲ. ಏಕೆಂದರೆ, ಅವನು ಯಾಕೂಬನ ಯಾವ ನಾಡಿ ಏರಿ ಹೋಗಿದ್ದಿತೋ ಅದನ್ನು ಮುಟ್ಟಿದ್ದನು. (ತೌರೇತ್. ಉತ್ಪತ್ತಿಪರ್ವ:–೨೩, ಆ:– ೨೪–೩೨)*

---

೪೩. Laban, ೪೪. Israel, ೪೫. Phanuel

**ಸಮೀಕ್ಷಕ:-** ಕ್ರೈಸ್ತರ ಈಶ್ವರನು ಕುಸ್ತಿಯ ಜಟ್ಟಿಯಾಗಿರುವವನಾದುದರಿಂದಲೇ ಸಾರಾ ಮತ್ತು ರಾಖೇಲರ ಮೇಲೆ 'ಪುತ್ರರು ಹುಟ್ಟುವ' ಕರುಣೆಯನ್ನು ಕರೆದನು. ಭಲೇ, ಇವನೆಂದಾದರೂ ಈಶ್ವರನಾಗಿರಬಲ್ಲನೇ? ಮತ್ತು, ನೋಡಿರಿ ಲೀಲೆಯನ್ನು, ಒಬ್ಬನು ಹೆಸರನ್ನು ಕೇಳಿದರೆ, ಎರಡನೆಯವನು ತನ್ನ ಹೆಸರನ್ನೇ ಹೇಳುವುದಿಲ್ಲ! ಮತ್ತು ಈಶ್ವರನು ಅವನ ನಾಡಿಯನ್ನು ಸೆಟೆಯಿಸಿಬಿಟ್ಟನು ಮತ್ತು ಜೀವಂತ ಉಳಿದುಕೊಂಡನು. ಆದರೆ, ಡಾಕ್ಟರನಾಗಿದ್ದರೆ, ಜಂಘಾ ನಾಡಿಯನ್ನು ಸರಿಪಡಿಸುತ್ತಲೂ ಇದ್ದನು. ಮತ್ತು ಇಂತಹ ಈಶ್ವರನ ಭಕ್ತಿಯಿಂದ ಯಾಕೂಬನು ಕುಂಟುತ್ತಲೇ ಬಾಳಿದನೆಂದರೆ, ಅನ್ಯಭಕ್ತರೂ ಕುಂಟುತ್ತಲೇ ಇರುವರೇನೋ? ಈಶ್ವರನನ್ನು ಪ್ರತ್ಯಕ್ಷವಾಗಿ ನೋಡಿದನು; ಮತ್ತು ಮಲ್ಲಯುದ್ಧವನ್ನೂ ಮಾಡಿದನು - ಎಂಬ ಈ ಮಾತು. ಈಶ್ವರನು ಶರೀರಯುಕ್ತನಲ್ಲದಿದ್ದಲ್ಲಿ ಹೇಗೆ ತಾನೇ ಅನ್ವಯಿಸೀತು? ಇದು ಕೇವಲ ಬಾಲಕತನದ ಲೀಲೆಯಾಗಿದೆ. (೩೫).

ಮತ್ತು ಯಹೂದಾನ[೪೫a] ಜ್ಯೇಷ್ಠ ಪುತ್ರನಾದ ಏರನು[೪೬] ಪರಮೇಶ್ವರನ ದೃಷ್ಟಿಯಲ್ಲಿ ದುಷ್ಟನಾಗಿದ್ದನು. ಆದುದರಿಂದ ಪರಮೇಶ್ವರನು ಅವನನ್ನು ಸಂಹರಿಸಿಬಿಟ್ಟನು. ಆಗ ಯಹೂದಾ ಓನಾನನಿಗೆ[೪೭] - "ನಿನ್ನ ಸೋದರನ ಪತ್ನಿಯ ಬಳಿ ತೆರಳು ಮತ್ತು ಅವಳನ್ನು ಮದುವೆಮಾಡಿಕೊಂಡು, ನಿನ್ನ ಸೋದರನಿಗಾಗಿ ವಂಶವನ್ನು ಮುನ್ನೆಡೆಯಿಸು".- ಎಂದು ಹೇಳಿದನು. ಮತ್ತು ಓನಾನನು-"ಇದು ನನ್ನ ವಂಶವಾಗದು." ಎಂದು ಕಂಡುಕೊಂಡನು. ಮತ್ತು ಹೀಗೆ ಸಂಭವಿಸಿತು:- ಅವನು ತನ್ನ ಸೋದರನ ಪತ್ನಿಯ ಬಳಿ ಹೋದಾಗ. ವೀರ್ಯವನ್ನು ನೆಲದ ಮೇಲೆ ಬೀಳಿಸಿಬಿಟ್ಟನು. ಮತ್ತು ಅವನ ಆ ಕಾರ್ಯ ಪರಮೇಶ್ವರನ ದೃಷ್ಟಿಯಲ್ಲಿ ಕೆಟ್ಟದಾಗಿದ್ದಿತು. ಆದುದರಿಂದ ಅವನು ಅವನನ್ನೂ ಸಂಹರಿಸಿಬಿಟ್ಟನು. (ತೌರೇತ್. ಉತ್ಪತ್ತಿ ಪರ್ವ:-೩೮. ಆ: - ೭- ೧೦).

**ಸಮೀಕ್ಷಕ:-** ಈಗ ನೋಡಿಕೊಳ್ಳಿರಿ. ಇವು ಮಾನವನ ಕಾರ್ಯಗಳೋ ಅಥವಾ ಈಶ್ವರನವೋ? ಅವಳೊಂದಿಗೆ ನಿಯೋಗವಾಯಿತು - ಎಂದಾಗ, ಅವನನ್ನು ಸಾಯಿಸಿದನೇಕೆ? ಅವನ ಬುದ್ಧಿಯನ್ನು ಶುದ್ಧವಾಗಿ ಮಾಡಲಿಲ್ಲವೇತಕ್ಕೆ? ಮತ್ತು ವೇದೋಕ್ತವಾದ ನಿಯೋಗವು ಕೂಡ ಮೊದಲು ಸರ್ವತ್ರ ಪ್ರಚಲಿತವಾಗಿದ್ದಿತು. ನಿಯೋಗಪದ್ಧತಿಯು ಮೊದಲು ಸರ್ವದೇಶಗಳಲ್ಲಿಯೂ ಪ್ರಚಲಿತವಾಗಿದ್ದಿತೆಂಬುದು ನಿಶ್ಚಯವಾಯಿತು. (೩೬)

## ತೌರೇತ್ ಯಾತ್ರಾಪುಸ್ತಕ[೪೮]

*ಮೂಸಾ[೪೯] ವಿಚಾರಸಮರ್ಥನಾದಾಗ, ತನ್ನ ಸೋದರರ ನಡುವಣ ಒಬ್ಬ ಇಬ್ರಾನಿ[೫೦]ಯನ್ನು ಒಬ್ಬ ಐಗುಪ್ತದೇಶೀಯನು[೫೧] ಪ್ರಹರಿಸುತ್ತಿರುವುದನ್ನು ನೋಡಿದನು. ಮತ್ತೆ ಅವನು ಅತ್ತ ಇತ್ತ ದೃಷ್ಟಿ ಹರಿಸಿ, ಯಾವನೂ ಇಲ್ಲವೆಂಬುದನ್ನು ಕಂಡನು. ಆಗ ಅವನು ಆ ಐಗುಪ್ತದೇಶೀಯನನ್ನು ಸಾಯಿಸಿಬಿಟ್ಟನು ಮತ್ತು ಮರಳಿನಲ್ಲಿ ಅವನನ್ನು ಬಚ್ಚಿಟ್ಟನು. ಅವನು ಮರುದಿನ ಹೊರಗೆ ಹೋದಾಗ, ಇಬ್ಬರು ಇಬ್ರಾನಿಗಳು ಪರಸ್ಪರ ಜಗಳವಾಡುತ್ತಿರುವುದನ್ನು ನೋಡಿದನು. ಆಗ ಅವನು ಆ ಅಜ್ಞಾನಿಯನ್ನು -"ನೀನು ನಿನ್ನ ನೆರೆಹೊರೆಯವನನ್ನು ಏಕೆ ಹೊಡೆಯುತ್ತೀಯೆ?" - ಎಂದು ಕೇಳಿದನು. ಆಗ ಅವನು - "ಯಾವನು ನಿನ್ನನ್ನು ನಮ್ಮ ಅಧ್ಯಕ್ಷನನ್ನಾಗಿ, ಅಥವಾ ನ್ಯಾಯಾಧೀಶನನ್ನಾಗಿ ನೇಮಿಸಿದ್ದಾನೆ? ಯಾವ ರೀತಿಯಿಂದ ನೀನು ಐಗುಪ್ತದೇಶೀಯನನ್ನು ಕೊಂದು ಹಾಕಿದ್ದೀಯೋ, ಹಾಗೆ ನನ್ನನ್ನೂ ಕೊಂದುಹಾಕಬಯಸುವೆಯೋ?" ಎಂದು ಪ್ರಶ್ನಿಸಿದನು. ಆಗ ಮೂಸಾ ಹೆದರಿದನು ಮತ್ತು ಓಡಿಹೋದನು. (ತೌರೇತ್. ಯಾ.ಪರ್ವ:- ೨ ಆ:-೧೧-೧೫)*

**ಸಮೀಕ್ಷಕ:-** ಈಗ ನೋಡಿರಿ! ಯಾವನು ಬೈಬಲಿನ ಮುಖ್ಯ ಸಿದ್ಧಿಕರ್ತೃವೂ ಅಗಿದ್ದಾನೋ, ಯಾವನ ಚಾರಿತ್ರ ಕ್ರೋಧ ಮೊದಲಾದ ದುರ್ಗುಣಗಳಿಂದ ಯುಕ್ತವಾಗಿದೆಯೋ, ಯಾವನು ಮನುಷ್ಯಹತ್ಯೆ ಮಾಡುವವನೂ, ಮತ್ತು ಕಳ್ಳನಂತೆ

೪೫a. Juda
೪೬. Her
೪೭. Onan
೪೮. The exodus
೪೯. Moses
೫೦. Hebrew
೫೧. Egyptian

ರಾಜದಂಡದಿಂದ ನುಣುಚಿ ಕೊಳ್ಳುವವನೂ ಆಗಿದ್ದಾನೋ, ಎಂದರೆ, ಯಾವಾಗ ವಾಸ್ತವವಾದುದನ್ನು ಮುಚ್ಚಿಡುತ್ತಿದ್ದನೋ, ಆಗ ಸುಳ್ಳಗಾರನೂ ಅವಶ್ಯವಾಗಿ ಆಗಿರಬೇಕಲ್ಲವೇ- ಆ ಮೂಸಾ ಮತಾಚಾರ್ಯನಾಗಿದ್ದಾನೆ! ಇಂತಹವನಿಗೂ ಈಶ್ವರನು ಸಿಕ್ಕಿದನು! ಮತ್ತೆ ಅವನು ಪ್ರವಾದಿಯೂ ಆದನು! ಅವನು ಯಹೂದ್ಯರೇ ಮೊದಲಾದವರ ಸಂಪ್ರದಾಯವನ್ನು ಪ್ರತಿಷ್ಠಾಪಿಸಿದನು! ಈಶ್ವರನೂ ಕೂಡ ಮೂಸಾನ ಹಾಗೆಯೇ ಆದನು. ಆದುದರಿಂದ, ಯಾರು ಕ್ರೈಸ್ತರ ಮೂಲಪುರುಷ ರಾಗಿದ್ದರೋ, ಅವರೆಲ್ಲರೂ ಮೂಸಾನಿಂದಲೇ ಆರಂಭಿಸಿ ವನ್ಯ ಸ್ಥಿತಿಯಲ್ಲಿದ್ದರು; ವಿದ್ಯಾವಸ್ಥೆಯಲ್ಲಿರಲಿಲ್ಲ. ಹೀಗೆ ಆದೆಷ್ಟೋ ಇದೆ. (೩೭)

> *ಒಂದು ಸೊಗಸಾದ ಮೇಕೆಯ ಮರಿಯನ್ನು ಕೊಲ್ಲು. ಮತ್ತು ಒಂದು ಹಿಡಿ ಹಸ್ಸೋಪ್[೫೨] ಗಿಡದ ಪೊರಕೆಯನ್ನು ಮಾಡಿಕೊಳ್ಳು. ಮತ್ತು ಅದನ್ನು ಬೇಸಿನ್ನಿನಲ್ಲಿರುವ ರಕ್ತದಲ್ಲಿ ಅದ್ದು; ಹೆಬ್ಬಾಗಿಲ ಚೌಕಟ್ಟಿನ ಮೇಲೆ ಮತ್ತು ಬಾಗಿಲಿನ ಎರಡೂ ಪಕ್ಕೆಗಳಿಗೆ ಅದರಿಂದ ಮುದ್ರೆಯೊತ್ತು. ಮತ್ತು ನಿಮ್ಮ ನಡುವಣ ಕಡೆಯಿಂದ ಬೆಳಕು ಹರಿಯುವವರೆಗೆ ಯಾವನೂ ಮನೆಯ ಬಾಗಿಲಿನಿಂದ ಹೊರಗೆ ಹೋಗದಿರಲಿ. ಏಕೆಂದರೆ- ಪರಮೇಶ್ವರನು ಐಗುಪ್ತದೇಶವನ್ನು ನೆಲಸಮಮಾಡಿಹಾಕಲು ನಿಮ್ಮ ಹಾದಿಯನ್ನು ದಾಟಿ ಹೋಗುವನು. ಮತ್ತು ಯಾವಾಗ ಪರಮೇಶ್ವರನು ಮೇಲಿನ ಚೌಕಟ್ಟಿನ ಮೇಲೆ ಮತ್ತು ದ್ವಾರದ ಎರಡೂ ಕಡೆ ರಕ್ತವನ್ನು ನೋಡುವನೋ, ಆಗ ಅವನು ನಿಮ್ಮ ಬಾಗಿಲಿನ ಮುಂದೆ ಹಾದು ಹೋಗುವನು; ಮತ್ತು ಚಂಡಾಲರನ್ನು ನಿಮ್ಮ ಮನೆಗಳೊಳಕ್ಕೆ ಸಂಹಾರಮಾಡಲು ಬಿಡುವುದಿಲ್ಲ. (ತೌರೇತ್. ಯಾ. ಪಾ:-೧೨.ಆ:-೨೧-೨೩)*

**ಸಮೀಕ್ಷಕ:-** ಭೇಷ್! ಮಾಟ-ಮಂತ್ರ ಮಾಡುವವರ ಹಾಗೆ ಇರುವ ಇವನು ಸರ್ವಜ್ಞನಾದ ಈಶ್ವರನಾಗಿ ಎಂದಿಗಾದರೂ ಆಗಬಲ್ಲನೇನು? ರಕ್ತದ ಮುದ್ರೆಯನ್ನು ಕಂಡಾಗ ಮಾತ್ರವೇ ಇಸ್ರಯೇಲ್ ಕುಲದ ಮನೆ- ಎಂದು ತಿಳಿದುಕೊಳ್ಳುತ್ತಾನೆ; ಇಲ್ಲದಿದ್ದರೆ, ಇಲ್ಲ! ಈ ಕೆಲಸ ಕ್ಷುದ್ರಬುದ್ಧಿಯುಳ್ಳ ಮಾನವರದರಂತಿದೆ. ಇದರಿಂದ, ಈ ಎಲ್ಲ ಮಾತುಗಳೂ ಯಾವನೋ ಕಾಡು ಮನುಷ್ಯ ಬರೆದುದಾಗಿದೆ- ಎಂದು ವಿದಿತವಾಗುತ್ತದೆ. (೩೮)

> *ಮತ್ತು ಹೀಗೆ ನಡೆಯಿತು; ಪರಮೇಶ್ವರನು ನಡುರಾತ್ರಿಯಲ್ಲಿ ಐಗುಪ್ತ ದೇಶದಲ್ಲಿ, ತನ್ನ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಿದ್ದ ಫಿರಾವೂನನ[೫೩] ಚೊಚ್ಚಲು ಮಗನಿಂದ ಹಿಡಿದು, ಕಾರಾಗೃಹದಲ್ಲಿದ್ದ ಬದ್ಧನ ಚೊಚ್ಚಲು ಮಗನವರೆಗೆ, ಪಶುಗಳ ಚೊಚ್ಚಲು ಸಂತತಿಯ ಸಂಗಡ, ಸಮಸ್ತ ಚೊಚ್ಚಲು ಮಕ್ಕಳು- ಮರಿಗಳನ್ನೂ ನಾಶಮಾಡಿದನು. ಮತ್ತು ರಾತ್ರಿ ಫಿರಾವೂನನೆದ್ದನು. ಅವನು, ಮತ್ತು ಅವನ ಸೇವಕರು ಮತ್ತು ಸಮಸ್ತ ಐಗುಪ್ತ ದೇಶೀಯರೂ ಎದ್ದರು. ಮತ್ತು ಐಗುಪ್ತ ದೇಶದಲ್ಲಿ ಮಹಾವಿಲಾಪವೆದ್ದಿತು. ಏಕೆಂದರೆ, ಒಬ್ಬನೂ ಸಾಯದ ಯಾವುದೇ ಒಂದು ಮನೆಯೂ ಇರಲಿಲ್ಲ. (ತೌರೇತ್. ಯಾ. ಪ:-೧೨. ಆ :-೨೯-೩೦)*

**ಸಮೀಕ್ಷಕ :-** ಧನ್ಯ ಧನ್ಯ! ಕ್ರೈಸ್ತರ ಈಶ್ವರನು ಅರ್ಧರಾತ್ರಿಯಲ್ಲಿ, ದರೋಡೆಕೋರನಂತೆ ನಿರ್ದಯನಾಗಿ, ಮಕ್ಕಳು- ಮರಿಗಳು, ವೃದ್ಧರು ಮತ್ತು ಪಶುಗಳವರೆಗೂ ಕೂಡ, ಅಪರಾಧವಿಲ್ಲದೆ ಸಾಯಿಸಿಬಿಟ್ಟನು; ಸ್ವಲ್ಪವೂ ದಯೆ ಬಾರಲಿಲ್ಲ. ಮತ್ತು ಐಗುಪ್ತದೇಶದಲ್ಲಿ ಮಹಾವಿಲಾಪ ವಾಗುತ್ತಿದ್ದರೂ ಕೂಡ, ಕ್ರೈಸ್ತರ ಈಶ್ವರನ ಚಿತ್ತದಲ್ಲಿನ ನಿಷ್ಠುರತೆ ನಾಶವಾಗಲಿಲ್ಲ! ಇಂತಹ ಕೆಲಸ ಈಶ್ವರನದಾಗುವುದು ಅಂತಿರಲಿ; ಆದರೆ ಯಾವನೇ ಸಾಧಾರಣನಾದ ಮನುಷ್ಯನೂ ಕೂಡ ಮಾಡುವಂತಹುದಲ್ಲ. ಇದು ಆಶ್ಚರ್ಯವಲ್ಲ. ಏಕೆಂದರೆ, **"ಮಾಂಸಾಹಾರಿಣಃ ಕುತೋ ದಯಾ?"** ಕ್ರೈಸ್ತರ ಈಶ್ವರನು ಮಾಂಸಾಹಾರಿಯಾಗಿರುವಾಗ, ಅವನಿಗೆ ದಯೆ ತೋರಿಸುವುದರ ಕೆಲಸವಾದರೂ ಏನಿದೆ? (೩೯)

> *"ಪರಮೇಶ್ವರನು ನಿಮಗಾಗಿ ಯುದ್ಧಮಾಡುವನು. ಅವರು ಮುನ್ನಡೆಯಲಿ" – ಎಂದು ಇಸ್ರಾಯೇಲನ ಸಂತತಿಗೆ ಹೇಳು. ಆದರೆ, ನೀನು ನಿನ್ನ ಕೋಲನ್ನು ಎತ್ತು ಮತ್ತು ಸಮುದ್ರದ ಮೇಲೆ ನಿನ್ನ ಕೈಯನ್ನು ಚಾಚು ಮತ್ತು ಅದನ್ನು[೫೪] ಎರಡು ಭಾಗಗಳನ್ನು ಮಾಡು. ಮತ್ತು ಇಸ್ರಾಯೇಲನ ಸಂತತಿಗಳು ಸಮುದ್ರದ ನಟ್ಟ ನಡುವಿನಲ್ಲಿ, ಒಣಗಿದ ಭೂಮಿಯ ಮೇಲೆ ಹಾದು ಹೋಗುವವು. (ತೌರೇತ್. ಯಾ. ಪರ್ವ:- ೧೪. ಆ: – ೧೪ – ೧೬)*

---

೫೨. Hysoop

೫೩. pharaon

೫೪. ಎಂದರೆ, ಸಮುದ್ರವನ್ನು –ಯು.ಮೀ. ನಲ್ಲಿನ ಮಾತುಗಳು.

**ಸಮೀಕ್ಷಕ:-** ಏಕೆ ಸ್ವಾಮೀ? ಮೊದಲಾದರೋ ಈಶ್ವರನು ಹಿಂಡುಗಳ ಹಿಂದೆ ಕುರುಬನು ನಡೆಯುವಂತೆ, ಇಸ್ರಾಯೇಲನ ಕುಲದ ಹಿಂದೆ ಹಿಂದೆ ತೆರಳುತ್ತಿದ್ದನು. ಈಗ ಎಲ್ಲಿ ಅಂತರ್ಧಾನನಾಗಿ ಹೋದನೋ ತಿಳಿಯದು. ಇಲ್ಲದಿದ್ದರೆ, ಸಮಸ್ತ ಜಗತ್ತಿಗೂ ಉಪಕಾರವಾಗುವಂತೆ ಮತ್ತು ನಾವೆಯೇ ಮೊದಲಾದುವುಗಳನ್ನು ನಿರ್ಮಿಸುವ ಶ್ರಮವು ತಪ್ಪಿ ಹೋಗುವಂತೆ, ಸಮುದ್ರದ ನಡುವಿನಿಂದ ನಾಲ್ಕು ಕಡೆಗೂ ರೈಲುಗಾಡಿಗಳ ಮಾರ್ಗಗಳನ್ನು ಮಾಡಿಸಿಕೊಳ್ಳಬಹುದಾಗಿತ್ತು. ಆದರೆ, ಏನು ತಾನೇ ಮಾಡಲಾದೀತು? ಕ್ರೈಸ್ತರ ಈಶ್ವರನು ಎಲ್ಲಿ ಬಚ್ಚಿಟ್ಟುಕೊಂಡಿದ್ದಾನೋ ಗೊತ್ತಾಗದು. ಈ ಪರಿಯ ಬಹಳ ಅಸಂಭವವಾದ ಲೀಲೆಗಳನ್ನು ಬೈಬಲಿನ ಈಶ್ವರನು ಮೂಸಾನೊಂದಿಗೆ ಮಾಡಿದ್ದಾನೆ. ಮತ್ತು ಕ್ರೈಸ್ತರ ಈಶ್ವರನು ಇರುವ ಹಾಗೆಯೇ ಅವನ ಸೇವಕರೂ ಇದ್ದಾರೆ ಮತ್ತು ಅವನಿಂದ ರಚಿತವಾದ ಪುಸ್ತಕವೂ ಹಾಗೆಯೇ ಇದೆ - ಎಂಬುದು ವಿದಿತವಾಯಿತು. ಇಂತಹ ಪುಸ್ತಕ ಮತ್ತು ಇಂತಹ ಈಶ್ವರನು ನಮ್ಮಗಳಿಂದ ದೂರವೇ ಇದ್ದರೆ ಒಳ್ಳೆಯದು. (೪೦)

*ಏಕೆಂದರೆ, ನಿನ್ನ ಈಶ್ವರನಾದ, ಪರಮೇಶ್ವರನಾದ ನಾನು ಜ್ವಲಂತವಾಗಿ ಸರ್ವಶಕ್ತನಾಗಿದ್ದೇನೆ. ಪಿತೃಗಳ ಅಪರಾಧದ ಶಿಕ್ಷೆಯನ್ನು, ನನ್ನ ಬಗೆಗೆ ವೈರಭಾವವನ್ನಿಡುವ ಅವರ ಮಕ್ಕಳಿಗೆ, ಅವರ ಮೂರನೆಯ ಮತ್ತು ನಾಲ್ಕನೆಯ ಪೀಳಿಗೆಯವರೆಗೂ ಕೊಡುವವನಾಗಿದ್ದೇನೆ ( ತೌರೇತ್. ಯಾ. ಪ:-೨೦ ಆ:- ೫)*

**ಸಮೀಕ್ಷಕ :-** ಅಯ್ಯೋ! ತಂದೆಯ ಅಪರಾಧಕ್ಕಾಗಿ ನಾಲ್ಕು ಪೀಳಿಗೆಯವರೆಗೆ ಶಿಕ್ಷೆ ಕೊಡುವುದನ್ನು ಒಳ್ಳೆಯದೆಂದು ತಿಳಿಯುವುದು, ಇದಾರ ಮನೆಯ ನ್ಯಾಯ? ಒಳ್ಳೆಯ ತಂದೆಗೆ ದುಷ್ಟ ಸಂತತಿಯೂ, ಮತ್ತು ದುಷ್ಟನಾದ ತಂದೆಗೆ ಒಳ್ಳೆಯ ಸಂತತಿಯೂ ಆಗುವುದಿಲ್ಲವೇನು? ಹೀಗೆ ಆಗುವುದಾದಲ್ಲಿ ನಾಲ್ಕನೆಯ ಪೀಳಿಗೆಯವರೆಗೆ ಶಿಕ್ಷೆಯನ್ನು ಹೇಗೆ ಕೊಡಬಲ್ಲನು? ಮತ್ತು ಐದನೆಯ ಪೀಳಿಗೆಯ ನಂತರ ದುಷ್ಟನು ಹುಟ್ಟುವನಾದರೆ, ಅವನಿಗೂ ಶಿಕ್ಷೆಯನ್ನು ಕೊಡುವುದಿಲ್ಲವೇ? ಅಪರಾಧವಿಲ್ಲದೆ ಶಿಕ್ಷೆಯನ್ನು ಕೊಡುವುದು ಹಾಗೂ ಅಪರಾಧಿಗೆ ಕೊಡದಿರುವುದು ಅನ್ಯಾಯಕಾರಿಯ ವ್ಯವಹಾರ. (೪೧)

*ಅದನ್ನು ಪವಿತ್ರವಾಗಿಡುವುದಕ್ಕಾಗಿ ವಿಶ್ರಾಂತಿಯ ದಿನವನ್ನು ಸ್ಮರಿಸು. ಆರು ದಿನಗಳವರೆಗೆ ನೀನು ಪರಿಶ್ರಮವನ್ನು ಮಾಡು. ಮತ್ತು ಏಳನೆಯ ದಿನ ನಿನ್ನ ಈಶ್ವರನಾದ ಪರಮೇಶ್ವರನ ವಿಶ್ರಾಂತಿದಿವಸವಾಗಿದೆ. ಪರಮೇಶ್ವರನು ವಿಶ್ರಾಂತಿಯ ದಿವಸಕ್ಕೆ ಆಶೀರ್ವಾದವಿತ್ತನು. (ತೌರೇತ್. ಯಾ. ಪ:-೨೦. ಆ:-೮-೧೧)*

**ಸಮೀಕ್ಷಕ :-** ಭಾನುವಾರ ಒಂದು ಮಾತ್ರ ಪವಿತ್ರ ಹಾಗೂ ಆರು ದಿನಗಳು ಅಪವಿತ್ರವಾಗಿರುತ್ತವೆಯೇ? ಆಯಾಸಪಟ್ಟು ಏಳನೆಯ ದಿನ ನಿದ್ರೆ ಮಾಡಿಬಿಟ್ಟನು - ಎನ್ನಲು, ಪರಮೇಶ್ವರನು ಆರು ದಿನಗಳವರೆಗೆ ಮಹಾಪರಿಶ್ರಮ ಮಾಡಿದ್ದನೇನು? ಮತ್ತು ಭಾನುವಾರಕ್ಕೆ ಆಶೀರ್ವಾದವನ್ನ ಕೊಟ್ಟನಾದರೆ, ಸೋಮವಾರವೇ ಮೊದಲಾದ ಆರು ದಿನಗಳಿಗೆ ಏನು ಕೊಟ್ಟನು? ಎಂದರೆ, ಶಾಪವನ್ನು ಕೊಟ್ಟಿರಬಹುದೇ? ಇಂತಹ ಕಾರ್ಯ ವಿದ್ವಾಂಸನದೂ ಅಲ್ಲವಾಗಿದೆ - ಎಂದಾಗ, ಈಶ್ವರನದಾಗಲು ಹೇಗೆ ಶಕ್ಯ? ಭಲೇ. ಭಾನುವಾರದಲ್ಲಿರುವ ಗುಣವಾದರೂ ಏನು? ಮತ್ತು, ಒಂದನ್ನು ಪವಿತ್ರಗೊಳಿಸಲು ಮತ್ತು ವರವನ್ನು ಕೊಡಲು, ಸೋಮವಾರ ಮೊದಲಾದುವು ಏನು ತಪ್ಪನ್ನು ಮಾಡಿದ್ದುವು? ಮತ್ತು ಬೇರೆಯ ದಿನಗಳನ್ನು ಹೀಗೆಯೇ ಅಪವಿತ್ರವಾಗಿ ಮಾಡಿಬಿಟ್ಟನೇ? (೪೨)

*ನಿನ್ನ ನೆರೆಹೊರೆಯವನ ಮೇಲೆ ಸುಳ್ಳು ಸಾಕ್ಷ್ಯ ಕೊಡಬೇಡ. ನಿನ್ನ ನೆರೆಹೊರೆಯವನ ಹೆಂಡತಿಯ ಬಗೆಗೆ, ಅವನ ದಾಸರ, ಅವನ ದಾಸಿಯರ ಬಗೆಗೆ, ಮತ್ತು ಅವನ ಎತ್ತಿನ ಬಗೆಗೆ, ಮತ್ತು ಅವನ ಕತ್ತೆಯ ಬಗೆಗೆ ಹಾಗೂ ನಿನ್ನ ನೆರೆಹೊರೆಯವನದಾಗಿರುವ ಯಾವದೇ ವಸ್ತುವಿನ ಬಗೆಗೂ ಹೊಟ್ಟೆಯ ಕಿಚ್ಚನ್ನು ಪಡಬೇಡ.*[೫೫] *(ತೌರೇತ್. ಯಾ.ಪರ್ವ:-೨೦.ಆ:-೧೬,೧೭)*

**ಸಮೀಕ್ಷಕ:-** ಓಹೋ! ಅದಕ್ಕೇ ಇರಬೇಕು ಈ ಕ್ರೈಸ್ತರು ವಿದೇಶೀಯರ ಸ್ವತ್ತಿನ ಮೇಲೆ, **"ಬಾಯಾರಿದವನು ನೀರಿನ ಮೇಲೆ, ಹಸಿದವನು ಅನ್ನದ ಮೇಲೆ ಎರಗುವಂತೆ"** ಎರಗಿ ಬೀಳುವುದು! ಈ ಸಂಗತಿ ಸ್ವಾರ್ಥಪೂರ್ತಿಯದೂ, ಮತ್ತು ಪಕ್ಷಪಾತಭಾವನೆಯದೂ ಆಗಿರುವ ಹಾಗೆಯೇ ಕ್ರೈಸ್ತರ ಈಶ್ವರನೂ ಅವಶ್ಯವಾಗಿ ಇದ್ದಾನು. ಯಾವನಾದರೂ "ನಾವು ಸಂಪೂರ್ಣ ಮಾನವಮಾತ್ರರನ್ನು ನೆರೆಹೊರೆಯೆಂದು ಗ್ರಹಿಸುತ್ತೇವೆ". ಎನ್ನುವನಾದರೆ, ನೀವು ನೆರೆಹೊರೆಯಲ್ಲವೆಂದು

---

೫೫. ಇವು The Ten commandments. ನಲ್ಲಿನ ಮಾತುಗಳು.

ಎಣಿಸಬಹುದಾದ ಸ್ತ್ರೀಯುಕ್ತರೂ ಮತ್ತು ದಾಸೀಯುಕ್ತರೂ ಬೇರೆ ಯಾರಿದ್ದಾರೆ? ಆದುದರಿಂದ ಈ ಮಾತುಗಳು ಸ್ವಾರ್ಥೀಮನುಷ್ಯರವಾಗಿವೆ; ಈಶ್ವರನವಲ್ಲ, (೪೩)

*ಹೀಗೆ ಈಗ ಬಾಲಕರಲ್ಲಿ ಪ್ರತಿಯೊಬ್ಬ ಮಗನನ್ನೂ, ಮತ್ತು ಪುರುಷನೊಂದಿಗೆ ದೇಹಸುಖವನ್ನು ಪಡೆದಿರುವಂತಹ ಪ್ರತಿಯೊಬ್ಬಳು ಹೆಂಗಸನ್ನೂ ಪ್ರಾಣಸಹಿತ ಹೊಡೆದು ಹಾಕು. ಮತ್ತು ಪುರುಷರೊಂದಿಗೆ ದೇಹ-ಸಂಗವನ್ನು ಮಾಡದೇಯಿರುವ ಹೆಣ್ಣು ಮಕ್ಕಳನ್ನು ನಿನ್ನ ಸಲುವಾಗಿ ಜೀವಂತವಾಗಿ ಉಳಿಸಿ ಇಟ್ಟುಕೋ. (ತೌರೇತ್. ಸಂಖ್ಯಾಪರ್ವ:-೩೧.ಆ:-೧೭.೧೮)*

**ಸಮೀಕ್ಷಕ:-** ಭೇಷ್, ಶ್ರೀಮಾನ್! ಪ್ರವಾದಿ ಮೂಸಾ ಮತ್ತು ನಿಮ್ಮ ಈಶ್ವರ ಧನ್ಯರಾಗಿದ್ದಾರೆ. ಸ್ತ್ರೀಯರು, ಬಾಲಕರು, ವೃದ್ಧರು ಮತ್ತು ಪಶುಗಳು ಮೊದಲಾದುವನ್ನೂ ಕೂಡ ಕೊಲ್ಲುವುದರಿಂದ ದೂರ ಉಳಿಯಲಿಲ್ಲವಲ್ಲ! ಮತ್ತು ಇದರಿಂದ ಮೂಸಾ ವಿಷಯಾಸಕ್ತನಾಗಿದ್ದನೆಂದು ಸ್ಪಷ್ಟವಾಗಿ ನಿಶ್ಚಿತವಾಗುತ್ತದೆ. ಏಕೆಂದರೆ, ವಿಷಯಾಸಕ್ತನಾಗಿರದಿದ್ದರೆ ಅಕ್ಷತಯೋನಿಯರನ್ನು, ಎಂದರೆ ಪುರುಷಸಂಗ ಮಾಡದ ಕನ್ಯೆಯರನ್ನು ತನ್ನ ಸಲುವಾಗಿ ತರಿಸಿಕೊಳ್ಳುತ್ತಿದ್ದನೇ? ಅಥವಾ ಅವರಿಗೆ ಇಂತಹ ದಯಾಹೀನತೆಯು ಅಥವಾ ವಿಷಯ ಲಂಪಟತನದ ಆಜ್ಞೆಯನ್ನೇತಕ್ಕೆ ಮಾಡುತ್ತಿದ್ದನು? (೪೪).

*ಯಾವನಾದರೂ ಯಾವನೇ ಒಬ್ಬ ಮನುಷ್ಯನನ್ನು ಹೊಡೆದು. ಅವನು ಮೃತನಾದರೆ. ನಿಜವಾಗಿ ಅವನ ವಧೆ ಮಾಡಲ್ಪಡಬೇಕು. ಮತ್ತು ಹೊಡೆಯುವ ಮಾನವನು ಹೊಂಚುಹಾಕದೇ ಇದ್ದು, ಈಶ್ವರನೇ ಘಾತಕನ ಕೈಗೆ ಒಪ್ಪಿಸಿಬಿಟ್ಟಿದ್ದಲ್ಲಿ, ಆಗ ನಾನು ನಿನಗೆ ಪಲಾಯನದ ಸ್ಥಳವನ್ನು ತೋರಿಸುವೆನು. (ತೌರೇತ್. ಯಾ. ಪರ್ವ:-೨೧.ಆ: – ೧೨,೧೩)*

**ಸಮೀಕ್ಷಕ:-** ಈಶ್ವರನ ಈ ನ್ಯಾಯ ಸತ್ಯವಾಗಿರುವುದಾದರೆ, ಮೂಸಾ ಮನುಷ್ಯನೊಬ್ಬನನ್ನು ಕೊಂದು, ಹೂಳಿ, ಓಡಿಹೋಗಿದ್ದನು; ಅವನಿಗೆ ಈ ಶಿಕ್ಷೆ ಸಿಕ್ಕಲಿಲ್ಲವೇತಕ್ಕೇ? ಈಶ್ವರನು ಕೊಲ್ಲಲ್ಪಟ್ಟವನನ್ನು ಕೊಲ್ಲುವುದಕ್ಕಾಗಿ ಮೂಸಾನಿಗೆ ಒಪ್ಪಿಸಿದ್ದನು – ಎನ್ನುವಿರಾದರೆ, ಈಶ್ವರನು ಪಕ್ಷಪಾತಿಯಾದನು. ಏಕೆಂದರೆ, ರಾಜನ ಕಡೆಯಿಂದ ಮೂಸಾನ ನ್ಯಾಯ ವಿಚಾರಣೆಯಾಗಲು ಬಿಡಲಿಲ್ಲವೇಕೆ? (೪೫).

*ಮತ್ತು ಕ್ಷೇಮಕ್ಕಾಗಿ ಎತ್ತುಗಳ ಬಲಿದಾನವನ್ನು ಅರ್ಪಿಸಿದನು. ಮತ್ತು ಮೂಸಾ ರಕ್ತದ ಅರ್ಧಭಾಗವನ್ನು ತೆಗೆದುಕೊಂಡು ಪಾತ್ರೆಗಳಲ್ಲಿಟ್ಟನು ಮತ್ತು ಅರ್ಧ ಭಾಗ ರಕ್ತವನ್ನು ತೆಗೆದುಕೊಂಡು ಜನರ ಮೇಲೆರಚಿದನು ಮತ್ತು 'ಈ ರಕ್ತವು ಪರಮೇಶ್ವರನು ಈ ಉದ್ದೇಶ್ಯಗಳಿಗಾಗಿ ನಿಮ್ಮ ಸಂಗಡ ಮಾಡಿಕೊಂಡಿರುವ, ನಿಯಮಕ್ಕೆ ಸಂಬಂಧಿಸಿದುದಾಗಿದೆ – ಎಂದು ಹೇಳಿದನು. ಮತ್ತು ಪರಮೇಶ್ವರನು ಮೂಸಾನಿಗೆ – "ಪರ್ವತದ ಮೇಲೆ ನನ್ನ ಹತ್ತಿರ ಬಾ. ಮತ್ತು ಅಲ್ಲಿ ಇರು. ಮತ್ತು ನಾನು ನಿನಗೆ ಸ್ವತಃ ನಾನೇ ಬರೆದಿರುವ ಶಿಲಾಪಟಲಗಳನ್ನೂ ಮತ್ತು ವ್ಯವಸ್ಥೆಯನ್ನೂ ಮತ್ತು ಆಜ್ಞೆಯನ್ನೂ ಕೊಡುವೆನು."* ಎಂದು ಹೇಳಿದನು *(ತೌರೇತ್. ಯಾ. ಪರ್ವ:-೨೪. ಆ:-೫,೬,೮,೧೮)*

**ಸಮೀಕ್ಷಕ :-** ಈಗ ನೋಡಿರಿ! ಇವೆಲ್ಲವೂ ಕಾಡುಜನಗಳ ಮಾತುಗಳು ಅಹುದೋ ಅಥವಾ ಅಲ್ಲವೋ? ಮತ್ತು ಪರಮೇಶ್ವರನು ಎತ್ತುಗಳ ಬಲಿದಾನವನ್ನು ತೆಗೆದುಕೊಳ್ಳುತ್ತಾನೆ ಮತ್ತು ವೇದಿಯ ಮೇಲೆ ರಕ್ತವನ್ನು ಪ್ರೋಕ್ಷಿಸುತ್ತಾನೆ! ಇದೆಂತಹ ಕಾಡಾಡಿತನದ ಮತ್ತು ಅಸಭ್ಯತೆಯ ಸಂಗತಿಯಾಗಿದೆ? ಕ್ರೈಸ್ತರ ದೇವರೂ ಕೂಡ ಎತ್ತುಗಳ ಬಲಿದಾನವನ್ನು ತೆಗೆದುಕೊಳ್ಳುವಾಗ, ಅವನ ಭಕ್ತರು ಎತ್ತು-ಹಸುಗಳ ಬಲಿದಾನದ ಪ್ರಸಾದದಿಂದ ಹೊಟ್ಟೆಯನ್ನೇಕೆ ತುಂಬಿಸಿಕೊಳ್ಳದೇ ಇದ್ದಾರು? ಮತ್ತು ಜಗತ್ತಿಗೆ ಹಾನಿಯನ್ನು ತಾರದೇ ಇರುವರೇಕೆ? ಇಂತಹ ಕೆಟ್ಟ ಮಾತು ಬೈಬಲಿನಲ್ಲಿ ತುಂಬಿಕೊಂಡಿವೆ. ಇದರದೇ ಆದ ದುಷ್ಟ ಸಂಸ್ಕಾರದಿಂದ ವೇದಗಳಲ್ಲಿಯೂ ಇಂತಹ ದೋಷವನ್ನು ಆರೋಪಿಸಬಯಸುತ್ತಾರೆ. ಆದರೆ – ವೇದಗಳಲ್ಲಿ ಇಂತಹ ಮಾತುಗಳು ಹೆಸರೂ ಕೂಡ ಇಲ್ಲ. ಮತ್ತು "ಕ್ರೈಸ್ತರ ದೇವರು ಒಬ್ಬ ಪಾರ್ವತ್ಯ ಮನುಷ್ಯನಾಗಿದ್ದನು. ಪರ್ವತದ ಮೇಲೆ ಇರುತ್ತಿದ್ದನು". ಎಂಬುದೂ ಕೂಡ ನಿಶ್ಚಯವಾಯಿತು. ಮತ್ತು ಆ ದೇವರು ಮಸಿ, ಲೇಖನಿ ಮತ್ತು ಕಾಗದಗಳನ್ನು ನಿರ್ಮಿಸಲು ತಿಳಿಯದಿದ್ದ ಕಾರಣ ಮತ್ತು ಅವನಿಗೆ ಸಿಕ್ಕದೇ ಇದ್ದ ಕಾರಣ, ಶಿಲಾಪಟಲಗಳ ಮೇಲೆ ಬರೆದು ಬರೆದು ಕೊಡುತ್ತಿದ್ದನು ಮತ್ತು ಈ ಕಾಡುಮನುಷ್ಯರ ಮುಂದೆ ಈಶ್ವರನೂ ಆಗಿ ಕುಳಿತಿದ್ದನು! (೪೬)

*ಮತ್ತು, "ನೀನು ನನ್ನ ರೂಪವನ್ನು ನೋಡಲಾರೆ; ಏಕೆಂದರೆ, ನನ್ನನ್ನು ನೋಡಿ ಯಾವ ಮಾನವನೂ ಬದಕುವುದಿಲ್ಲ"- ಎಂದು ಹೇಳಿದನು. ಮತ್ತು ಪರಮೇಶ್ವರನು- "ನೋಡು, ಒಂದು ಸ್ಥಳ ನನ್ನ ಬಳಿಯಿದೆ. ಮತ್ತು ನೀನು ಈ ಗುಡ್ಡದ*

*ಮೇಲೆ ನಿಂತಿರು. ಮತ್ತು ಹೀಗೆ ಸಂಭವಿಸುವುದು:- ನನ್ನ ವೈಭವದ ಥಳಕು ಮೆರೆಯುವಾಗ, ನಾನು ನಿನ್ನನ್ನು ಪರ್ವತದ ಗವಿಯಲ್ಲಿಡುವೆನು ಮತ್ತು ನಾನು ಹಾದು ಹೋಗುವವರೆಗೆ, ನಿನ್ನನ್ನು ನನ್ನ ಕೈಯಿಂದ ಮರೆಮಾಡುವೆನು. ಮತ್ತು ನನ್ನ ಕೈಯನ್ನು ಸರಿಸಿಕೊಳ್ಳುವೆನು ಮತ್ತು ನೀನು ನನ್ನ ಬೆನ್ನನ್ನು ನೋಡುವೆ. ಆದರೆ, ನನ್ನ ರೂಪ ಕಾಣಿಸುವುದಿಲ್ಲ"- ಎಂದು ಹೇಳಿದನು. (ತೌರೇತ್. ಯಾ. ಪರ್ವ:-೩೩. ಅಯತ್ತು:-೨೦-೨೩)*

**ಸಮೀಕ್ಷಕ :-** ಈಗ ನೋಡಿರಿ! ಕ್ರೈಸ್ತರ ದೇವರು ಕೇವಲ ಮಾನವರಂತೆ ಶರೀರಧಾರಿಯಾಗಿದ್ದಾನೆ! ಮತ್ತು ಮೂಸಾನೊಂದಿಗೆ ಎಂತಹ ಕಪಟವಾಡಿ ತಾನು ಸ್ವತಃ ಈಶ್ವರನಾಗಿ ಹೋದನು? ಬೆನ್ನನ್ನು ನೋಡುವನು: ರೂಪವನ್ನು ನೋಡುವುದಿಲ್ಲ- ಎಂದಾಗಿದ್ದರೆ, ಕೈಯಿಂದ ಅವನನ್ನು ಮರೆಮಾಡಿಯೂ ಇರಲಾರನು. ದೇವರು ತನ್ನ ಕೈಯಿಂದ ಮೂಸಾನನ್ನು ಮರೆಮಾಡಿಟ್ಟಿದ್ದಾಗ ಅವನ ಕೈಯಿನ ರೂಪವನ್ನು ಅವನು ನೋಡಿರುವುದಿಲ್ಲವೇ? (೪೭)

## ಲಯವ್ಯವಸ್ಥೆಯ[೫೬] ಪುಸ್ತಕ ತೌರೇತ್

*ಮತ್ತು ಪರಮೇಶ್ವರನು ಮೂಸಾನನ್ನು ಕರೆದನು ಮತ್ತು ಮಂಡಲಿಯಲ್ಲಿ, ಗುಡಾರದೊಳಗಿನಿಂದ ಅವನಿಗೆ ಈ ಮಾತನ್ನು ಹೇಳಿದನು:- "ಇಸ್ರಾಏಲನ ಸಂತತಿಯವರೊಂದಿಗೆ ಮಾತನಾಡು ಮತ್ತು ಅವರಿಗೆ-'ನಿಮ್ಮಲ್ಲಿ ಯಾವನಾದರೂ ಪರಮೇಶ್ವರನಿಗೆ ಕಾಣಿಕೆಯನ್ನರ್ಪಿಸುವುದಾದರೆ, ನೀವು ದನಗಳ ನಡುವಣಿಂದ, ಎಂದರೆ- ಹಸು, ಎತ್ತು, ಮತ್ತು ಕುರಿ-ಮೇಕೆಗಳ ಮಧ್ಯದಿಂದ ನಿಮ್ಮ ಕಾಣಿಕೆಯನ್ನು ತನ್ನಿರಿ.'- ಎಂದು ಹೇಳು". (ತೌರೇತ್. ಲಯವ್ಯವಸ್ಥಾ ಪುಸ್ತಕ :- ೧.ಆ:-೧,೨)*

**ಸಮೀಕ್ಷಕ:-** ಈಗ ಆಲೋಚಿಸಿರಿ. ತನ್ನ ಸಲುವಾಗಿ ಬಲಿದಾನಸಮರ್ಪಣಕ್ಕಾಗಿ ಉಪದೇಶಗಳನ್ನು ಕೊಡುವ ಪರಮೇಶ್ವರನು ಹಸು, ಎತ್ತು ಮೊದಲಾದುವುಗಳ ಕಾಣಿಕೆಯನ್ನು ತೆಗೆದುಕೊಳ್ಳುವವನಾಗಿದ್ದಾನೆ. ಅವನು ಎತ್ತು, ಹಸು ಮೊದಲಾದ ಪಶುಗಳ ರಕ್ತ-ಮಾಂಸಗಳ ದಾಹವುಳ್ಳವನೂ, ಹಸಿವೆಯುಳ್ಳವನೂ ಆಗಿದ್ದಾನೋ ಅಥವಾ ಇಲ್ಲವೋ? ಇದರಿಂದಲೇ ಅವನು ಅಹಿಂಸಕರ ಹಾಗೂ ಈಶ್ವರರ ಶ್ರೇಣಿಯಲ್ಲಿ ಎಂದೆಂದಿಗೂ ಎಣಿಸಲ್ಪಡಲಾರನು. ಆದರೆ- ಮಾಂಸಾಹಾರಿಯಾದ ಲೌಕಿಕ ಮನುಷ್ಯನ ಹಾಗೆ ಇದ್ದಾನೆ. (೪೮)

*ಮತ್ತು ಅವನು ಆ ಎತ್ತನ್ನು ಪರಮೇಶ್ವರನ ಮುಂದೆ ಬಲಿಯಾಗಿ ಅರ್ಪಿಸಲಿ. ಮತ್ತು ಹಾರೂನನ[೫೭] ಮಕ್ಕಳಾದ ಯಾಜಕರು[೫೮] ರಕ್ತವನ್ನು ಹತ್ತಿರ ತರಲಿ.[೫೯] ಮತ್ತು ಮಂಡಲಿಯ ಗುಡಾರದ ಬಾಗಿಲನಲ್ಲಿರುವ ಯಜ್ಞವೇದಿಯ ನಾಲ್ಕೂಕಡೆ ಆ ರಕ್ತವನ್ನು ಪ್ರೋಕ್ಷಿಸಲಿ. ಆಗ ಅವನು ಆ ಕಾಣಿಕೆಯ ಬಲಿದಾನದ ಚರ್ಮವನ್ನು ಬೇರ್ಪಡಿಸಲಿ ಮತ್ತು ಅದನ್ನು ಚೂರು ಚೂರಾಗಿ ಮಾಡಲಿ. ಮತ್ತು ಹಾರೂನನ ಮಕ್ಕಳಾದ ಯಾಜಕರು ಯಜ್ಞವೇದಿಯಲ್ಲಿ ಬೆಂಕಿಯನ್ನಿಡಲಿ ಮತ್ತು ಅದರ ಮೇಲೆ ಸಮಿಧಾಚಯನವನ್ನು ಮಾಡಲಿ. ಮತ್ತು ಹಾರೂನನ ಮಕ್ಕಳಾದ ಯಾಜಕರು ಅದರ ಚೂರುಗಳನ್ನು ಮತ್ತು ಅದರ ತಲೆ ಹಾಗೂ ಕೊಬ್ಬನ್ನು ಯಜ್ಞವೇದಿಯ ಬೆಂಕಿಯ ಮೇಲೆ ಇರುವ ಸಮಿತ್ತುಗಳ ಮೇಲೆ ವಿಧಿಪೂರ್ವಕವಾಗಿಡಲಿ. ಪರಮೇಶ್ವರನಿಗೆ ಸುಗಂಧಕ್ಕಾಗಿ ಸಮರ್ಪಿತವಾದ ಬಲಿದಾನದ ಕಾಣಿಕೆ ಹೀಗೆ ಸಿದ್ಧವಾಗಲಿ. (ತೌರೇತ್. ಲಯವ್ಯವಸ್ಥಾ ಪುಸ್ತಕ ಪರ್ವ:-೧, ಆ:- ೫ - ೯)*

---

೫೬. The Book of Leviticus.

೫೭. Aaron ೫೮. Priests.

೫೯. ಈ ಭಾರತದಲ್ಲಿ ಸೋಮಯಾಗ ಮೊದಲಾದ ಯಾಗಗಳನ್ನು ಮಾಡುವ ಬ್ರಾಹ್ಮಣ ಯಾಜಕರು ಈಗಲೂ ಮೇಲೆ ಹೇಳಿದ ವಿಧಿಯನ್ನೇ ಪಶುಯಜ್ಞದಲ್ಲಿ ಆಚರಿಸುತ್ತಾರೆ. ವಾಮಮಾರ್ಗಿಗಳು ಮತ್ತು ಕಾಡಾಡಿಗಳಾದ ಯಹೂದ್ಯರಿಗೇನೋ ಈ ವಿಧಿ ಸಮರ್ಪಕವಾಗಿದೆ. ಆದರೆ, ಶಾಕಾಹಾರಿಗಳಾದ ಬ್ರಾಹ್ಮಣ ಯಾಜಕರು ಈ ದುಷ್ಟ ವಿಧಿಯನ್ನು ಏಕೆ ಕೊರಳಿಗೆ ಸುತ್ತಿಕೊಂಡಿದ್ದಾರೆ?

ಈ ಪಶುಯಾಗಗಳ ಕಾರಣದಿಂದ, ಬ್ರಾಹ್ಮಣರಿಗೆ ವಿರುದ್ಧವಾಗಿ, ಭಾರತದಲ್ಲಿ ಚಾರವಾಕ, ಬುದ್ಧ ಮೊದಲಾದವರು ಹೇಗೆ ವಿದ್ರೋಹವನ್ನು ಕಟ್ಟಿದರೋ, ಹಾಗೆಯೇ ಪಾಲಸ್ಟೈನ್‌ನಲ್ಲಿ ಯಹೂದ್ಯರಿಗೆ ವಿರುದ್ಧವಾಗಿ ಏಸುಕ್ರಿಸ್ತನು ವಿರೋಧವನ್ನು ಮಾಡಿದನು ಆದರೆ, ಅವನ ಪ್ರಯತ್ನದಿಂದ ಪಶುಯಾಗಗಳು ನಿಂತವೇ ಹೊರತು, ಕ್ರೈಸ್ತರು ಶಾಖಾಹಾರಿಗಳಾಗಲಿಲ್ಲ.

ವೈಷ್ಣವ ಬ್ರಾಹ್ಮಣರಲ್ಲಿ ಈ ದುಷ್ಟ ವಿಧಿಯ ಪ್ರಚಲನೆ ಇಲ್ಲದಿರುವುದು ಸಂತೋಷದ ಸಂಗತಿ. ಆದಿ ಶಂಕರಾಚಾರ್ಯರಿಂದ ಈ ಕುರೀತಿಯನ್ನು ಮೆಟ್ಟಲಾಗಲಿಲ್ಲ. ಆದರೆ, ಮಧ್ವಾಚಾರ್ಯರು ಇದನ್ನು ಬಹುಮಟ್ಟಿಗೆ ತಡೆದರು. ಈ ಕಾರಣದಿಂದ, ಅವರು ಯಜ್ಞಯಾಗಾದಿಗಳನ್ನು ಮಾಡಲು ತಮ್ಮ ಅನುಯಾಯಿಗಳಿಗೆ ಪ್ರೋತ್ಸಾಹವನ್ನೀಯಲಿಲ್ಲ. ಆದ್ದರಿಂದಲೇ, ಮಾಧ್ವರು ಶುದ್ಧ ಶಾಖಾಹಾರಿಗಳೂ, ಸಾತ್ವಿಕ ವ್ರತಾಚರಣೆಯನ್ನುಳ್ಳವರೂ ಆಗಿದ್ದಾರೆ.

**ಸಮೀಕ್ಷಕ :–** ಸ್ವಲ್ಪ ವಿಮರ್ಶಿಸಿರಿ, ಎತ್ತನ್ನು ಪರಮೇಶ್ವರನ ಮುಂದೆ ಅವನ ಭಕ್ತರು ಕತ್ತರಿಸುವರು ಮತ್ತು ಅವನು ಕೊಲೆ ಮಾಡಿಸುವನು! ಮತ್ತು ರಕ್ತವನ್ನು ನಾಲ್ಕೂ ಕಡೆ ಎರಚುವರು; ಬೆಂಕಿಯಲ್ಲಿ ಆಹುತಿಕೊಡುವರು; ಈಶ್ವರನು ಪರಿಮಳವನ್ನು ಮೂಸುವನು ! ಭಲೇ! ಇದು ಕಟುಕನ ಮನೆಯ ಲೀಲೆಗಿಂತ ಕಡಿಮೆ ಏನಾದರೂ ಆಗಿದೆಯೇ? ಇದರಿಂದಲೇ ಬೈಬಲ್ ಈಶ್ವರಕೃತವೂ ಅಲ್ಲ; ಮತ್ತು ಆ ಕಾದಾಡಿಯಾದ ಮನುಷ್ಯನಂತೆ ಲೀಲೆ ಮಾಡುವವನು ಈಶ್ವರನೂ ಆಗಿರಲಾರನು– ಎಂದು ಸಿದ್ಧವಾಗುತ್ತದೆ. (೪೯) .

*ಮತ್ತೆ ಪರಮೇಶ್ವರನು ಮೂಸಾನಿಗೆ ಹೀಗೆಂದು ಹೇಳಿದನು –"ಅಭಿಷಿಕ್ತನಾದ ಯಾಜಕನು ಸಾಧಾರಣ ಪಾಪಕ್ಕೆ ಸಮನಾದ ಪಾಪವನ್ನು ಮಾಡುವನಾದರೆ, ತಾನು ಮಾಡಿದ ತನ್ನ ಪಾಪದ (ಪ್ರಾಯಶ್ಚಿತ್ತದ) ಕಾಣಿಕೆಗಾಗಿ ಒಂದು ನಿರ್ದೋಷವಾದ ಕರುವನ್ನು ಪರಮೇಶ್ವರನ ಸಲುವಾಗಿ ತರಬೇಕು. ಮತ್ತು ಕರುವಿನ ತಲೆಯ ಮೇಲೆ ತನ್ನ ಕೈಯನ್ನಿಡಬೇಕು. ಮತ್ತು ಕರುವನ್ನು ಪರಮೇಶ್ವರನ ಮುಂದೆ ಬಲಿಯಾಗಿ ಅರ್ಪಿಸಬೇಕು" (ತೌರೇತ್. ಲ.ವ್ಯ.ಪು:– ೪. ಆ: – ೧,೩,೪)*

**ಸಮೀಕ್ಷಕ:–** ಪಾಪವನ್ನು ನಿವಾರಿಸುವ ಪ್ರಾಯಶ್ಚಿತ್ತವನ್ನು ಈಗ ನೋಡಿರಿ. ಸ್ವತಃ ಪಾಪಮಾಡುವುದು; ಹಸು ಮೊದಲಾದ ಉತ್ತಮ ಪಶುಗಳನ್ನು ಕೊಲ್ಲುವುದು ಮತ್ತು ಪರಮೇಶ್ವರನು ಮಾಡಿಸುವುದು! ಇಂತಹ ಕೃತ್ಯಗಳನ್ನು ಮಾಡುವವನೂ, ಮಾಡಿಸುವವನೂ ಆದವನನ್ನೂ ಕೂಡ ಈಶ್ವರನೆಂದು ಗ್ರಹಿಸಿ, ತಮಗೆ ಮುಕ್ತಿ– ಮೊದಲಾದುದರ ನಿರೀಕ್ಷಣೆಯನ್ನಿಟ್ಟು ಕೊಂಡಿರುತ್ತಾರಲ್ಲ, ಅಂತಹ ಕ್ರೈಸ್ತ ಜನರು ಧನ್ಯರಾಗಿದ್ದಾರೆ!!! (೫೦)

*ಯಾವಾಗ ಯಾವನಾದರೂ ಅಧ್ಯಕ್ಷನು ಪಾಪಮಾಡುತ್ತಾನೋ, ಆಗ ಅವನು ಮೇಕೆಯ ನಿರ್ದೋಷವಾದ ಗಂಡು ಮರಿಯೊಂದನ್ನು ತನ್ನ ಕಾಣಿಕೆಗಾಗಿ ತರಬೇಕು. ಮತ್ತು ಅದನ್ನು ಪರಮೇಶ್ವರನ ಮುಂದೆ ಬಲಿಕೊಡಬೇಕು. ಇದು ಪಾಪದ ಕಾಣಿಕೆಯಾಗಿದೆ. (ತೌರೇತ್. ಲ.ಪ:–೪. ಆ:–೨೨–೨೪)*

**ಸಮೀಕ್ಷಕ :–** ಭಾಪು! ಭಾಪು!! ಹೀಗೆ ಇರುವುದಾದರೆ, ಇವರ ಅಧ್ಯಕ್ಷರು, ಎಂದರೆ ನ್ಯಾಯಾಧೀಶರು ಮತ್ತು ಸೇನಾಪತಿ– ಮೊದಲಾದವರು ಪಾಪಮಾಡುವುದಕ್ಕೆ ಹೆದರುವವರಾದರೂ ಏಕೆ? ತಾವೇನೋ ಯಥೇಚ್ಛವಾಗಿ ಪಾಪಮಾಡುವುದು ಮತ್ತು ಪ್ರಾಯಶ್ಚಿತ್ತದ ಸಲುವಾಗಿ ಹಸು, ಕರು, ಆಡು ಮೊದಲಾದುವುಗಳ ಪ್ರಾಣಾಪಹಾರ ಮಾಡುವುದು! ಇದರಿಂದಲೇ ಇರಬೇಕು, ಕ್ರೈಸ್ತರುಗಳು ಯಾವುದಾದರೂ ಪಶುವಿನ ಅಥವಾ ಪಕ್ಷಿಯ ಪ್ರಾಣಗಳನ್ನು ತೆಗೆಯುವಲ್ಲಿ ಹಿಂದೆ–ಮುಂದೆ ನೋಡುವುದಿಲ್ಲ. ಆಲಿಸಿರಿ ಕ್ರೈಸ್ತರುಗಳೇ! ಈಗಲಾದರೂ ಈ ಕಾಡುಮತವನ್ನು ವರ್ಜಿಸಿ, ನಿಮಗೆ ಶುಭವನ್ನುಂಟುಮಾಡುವ ಸುಸಭ್ಯ ಧರ್ಮಮಯವಾದ ವೇದಮತವನ್ನು ಸ್ವೀಕರಿಸಿರಿ. (೫೧)

*ಮತ್ತು ಅವನ ಬಳಿ ಕುರಿಯನ್ನು ತರಲು ಬಂಡವಾಳವಿಲ್ಲದಿದ್ದರೆ ಅವನು ತನ್ನಿಂದಾದ ಅಪರಾಧಕ್ಕಾಗಿ ಎರಡು ಹಿಟ್ಟಿನ ಪಿಂಡಿಕೆಗಳನ್ನೂ ಮತ್ತು ಪಾರಿವಾಳದ ಎರಡು ಮರಿಗಳನ್ನೂ ಪರಮೇಶ್ವರನ ಸಲುವಾಗಿ ತರಬೇಕು. ಮತ್ತು ಅದರ ತಲೆಯನ್ನು ಅದರ ಕೊರಳಿನ ಬಳಿ ತಿರುಚಿಬಿಡಬೇಕು; ಆದರೆ ಬೇರೆ ಮಾಡಬಾರದು. ತಾನು ಮಾಡಿದ ಪಾಪದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಮತ್ತು ಅವನಿಗೆ ಕ್ಷಮೆ ಕೊಡಲ್ಪಡುವುದು. ಮತ್ತು ಅವನ ಬಳಿ ಕಲಸಿದ ಹಿಟ್ಟಿನ ಎರಡು ಉಂಡೆಗಳನ್ನೂ ಮತ್ತು ಪಾರಿವಾಳದ ಎರಡು ಮರಿಗಳನ್ನೂ ತರುವುದಕ್ಕೆ ಬಂಡವಾಳವಿಲ್ಲವಾದರೆ, ಸೇರುತುಂಬ ಚೊಕ್ಕವಾದ ಹಿಟ್ಟಿನ ಹತ್ತನೆಯ ಒಂದು ಭಾಗವನ್ನು ಪಾಪದ ಕಾಣಿಕೆಗಾಗಿ ತರಬೇಕು. ಅದರ ಮೇಲೆ ಎಣ್ಣೆಯನ್ನು ಹಾಕಬಾರದು. ಮತ್ತು ಅವನು ಕ್ಷಮಿಸಲ್ಪಡುವನು. (ತೌರೇತ್. ಲ.ಪು.ಪ:–೫, ಆ:– ೭, ೮,೧೦–೧೩)*

**ಸಮೀಕ್ಷಕ:–** ಯಾವನು ಕರು, ಕುರಿ ಮತ್ತು ಮೇಕೆಯ ಮರಿ. ಪಾರಿವಾಳ ಮತ್ತು ಹಿಟ್ಟನ್ನೂ ಕೂಡ ತೆಗೆದುಕೊಳ್ಳುವ ವಿಧಾನ ಮಾಡಿದ್ದಾನೋ, ಆ ಈಶ್ವರನಿಗೆ ಧನ್ಯವಾದಗಳಿರಲಿ. ಅದ್ಭುತವಾದ ಸಂಗತಿಯೆಂದರೆ– ಪಾರಿವಾಳದ ಮರಿಗಳನ್ನು ಕೊರಳನ್ನು ತಿರುಚಿಸಿ ತೆಗೆದುಕೊಳ್ಳುತ್ತಿದ್ದನು – ಎಂಬುದೇ ಆಗಿದೆ. ಎಂದರೆ, ಕೊರಳನ್ನು ಮುರಿಯುವುದಕ್ಕೂ ಪರಿಶ್ರಮವನ್ನು ಮಾಡಬೇಕಾಗಿ ಬಾರದಿರಲಿ– ಎಂದು. ಈ ಎಲ್ಲಾ ಸಂಗತಿಗಳನ್ನೂ ನೋಡುವುದರಿಂದ,"ಕಾಡಾಡಿಗಳ ನಡುವೆ ಯಾವನೋ ಒಬ್ಬ ಚತುರ ಪುರುಷನಿದ್ದನು. ಅವನು ಪರ್ವತದ ಮೇಲೆ ಹೋಗಿ ಕುಳಿತನು. ಮತ್ತು ತನ್ನನ್ನು ಈಶ್ವರನೆಂದು ಸಾರಿದನು. ಕಾದಾಡಿಗಳು ಅಜ್ಞಾನಿಗಳಾಗಿದ್ದರು. ಅವರು ಅವನನ್ನೇ ಈಶ್ವರನೆಂದು ಒಪ್ಪಿಕೊಂಡು ಬಿಟ್ಟರು. ತನ್ನ ಉಪಾಯಗಳಿಂದ ಅವನು ಪರ್ವತದ ಮೇಲೆಯೇ ತಿನ್ನಲು ಪಶು–ಪಕ್ಷಿಗಳನ್ನೂ ಮತ್ತು ಅನ್ನ ಮೊದಲಾದುವನ್ನೂ ತರಿಸಿಕೊಳ್ಳುವ ಪರಿಪಾಟಿಯನ್ನಿಟ್ಟು

ಕೊಂಡಿದ್ದನು ಮತ್ತು ಉಲಿಯುತ್ತಾ-ನಲಿಯುತ್ತಾ ಇದ್ದನು. ಅವನ ದೂತರು-ದೇವತೆಗಳು ಕೆಲಸ ಮಾಡುತ್ತಿದ್ದರು". - ಎಂದು ವಿದಿತವಾಗುತ್ತದೆ. ಸಜ್ಜನರುಗಳು, ಬೈಬಲಿನಲ್ಲಿ (ಹೇಳಿರುವ) ಕರುವನ್ನೂ, ಕುರಿಯನ್ನೂ, ಆಡಿನ ಮರಿಯನ್ನೂ, ಪಾರಿವಾಳವನ್ನೂ ಮತ್ತು 'ಒಳ್ಳೆಯ' ಹಿಟ್ಟನ್ನೂ ತಿನ್ನುವ ಈಶ್ವರನೆಲ್ಲಿ ; ಸರ್ವವ್ಯಾಪಕ, ಸರ್ವಜ್ಞ , ಅಜ, ನಿರಾಕಾರ, ಸರ್ವಶಕ್ತಿವಂತ ಮತ್ತು ನ್ಯಾಯಕಾರಿ ಈ ಮೊದಲಾದ ಉತ್ತಮ ಗುಣವಾಚಕಗಳಿಂದ ನಿರ್ದಿಷ್ಟನೂ, ವೇದೋಕ್ತನೂ ಆದ ಈಶ್ವರನೆಲ್ಲಿ - ಎಂದು ಆಲೋಚಿಸಿಲಿ. ಈಗ ಕೇಳಿರಿ. ಕ್ರೈಸ್ತರಲ್ಲಿ ಪಾಪ ಮಾಡುವುದಕ್ಕೆ ಯಾವ ಧನಾಢ್ಯನೂ ಹೆದರದಿರಬಹುದು; ಮತ್ತು ಯಾವ ದರಿದ್ರನೂ ಅಂಜದಿರಬಹುದು. ಏಕೆಂದರೆ, ಇವರ ಈಶ್ವರನು ಪ್ರಾಯಶ್ಚಿತ್ತ ಮಾಡುವುದನ್ನು ಸುಗಮವಾಗಿ ಮಾಡಿಟ್ಟಿದ್ದಾನೆ. ಕಷ್ಟವನ್ನು ಅನುಭವಿಸದೆ ಪಾಪವು ಬಿಟ್ಟುಹೋಗುವುದೆಂಬುದು ಬೈಬಲಿನಲ್ಲಿ ಮಹದದ್ಭುತವಾದ ಮಾತಾಗಿದೆ. ಏಕೆಂದರೆ, ಮೊದಲಾಗಿ ಪಾಪವನ್ನು ಮಾಡಿದನು; ಮತ್ತು ಎರಡನೆಯದಾಗಿ ಜೀವರ ಹಿಂಸೆಯನ್ನು ಮಾಡಿದನು ಮತ್ತು ಚೆನ್ನಾಗಿ ಸಂತಸದಿಂದ ಮಾಂಸವನ್ನು ತಿಂದನು ಮತ್ತು ಪಾಪವೂ ಬಿಟ್ಟುಹೋಯಿತು. ಭಲೇ! ಪಾರಿವಾಳದ ಮರಿಯ ಕೊರಳನ್ನು ತಿರುಚುವುದರಿಂದ ಅದು ಬಹಳ ಹೊತ್ತು ಚಡಪಡಿಸುತ್ತಿರಬಹುದು. ಆಗಲೂ ಕ್ರೈಸ್ತರಿಗೆ ದಯೆ ಬರುವುದಿಲ್ಲ. ದಯೆ ಬಂದೀತಾದರೂ ಹೇಗೆ? ಇವರ ಈಶ್ವರನ ಉಪದೇಶವೇ ಹಿಂಸಾಪರಕವಾಗಿದೆ. ಮತ್ತು ಸಮಸ್ತ ಪಾಪಗಳಿಗೂ ಇಂತಹ ಪ್ರಾಯಶ್ಚಿತ್ತವಿರುವುದಾದರೆ, ಏಸುವಿನಲ್ಲಿ ನಂಬಿಕೆಯಿಡುವುದರಿಂದ ಪಾಪವು ಬಿಟ್ಟು ಹೋಗುತ್ತದೆ - ಎಂಬ ಈ ಮಹದಾಡಂಬರವನ್ನು ಏಕೆ ರಚಿಸುತ್ತಾರೆ? (೫೨)

*ಹೀಗೆ, ಅದೇ ಬಲಿದಾನದ ಚರ್ಮ ಯಾವನು ಅದನ್ನು ಅರ್ಪಿಸಿದ್ದಾನೋ, ಅದೇ ಯಾಜಕನದಾಗುವುದು. ಮತ್ತು ಯಾವುದು ಭಟ್ಟಿಯಲ್ಲಿ ಬೇಯಿಸಲ್ಪಡುತ್ತದೋ, ಆ ಸಮಸ್ತ ಭೋಜನದ ಕಾಣಿಕೆಯೂ, ಮತ್ತು ಯಾವುದು ಬಾಣಲೆಯಲ್ಲಿ ಅಥವಾ ಕಾವಲಿಯ ಮೇಲೆ ಕರಿಯಲ್ಪಡುತ್ತದೋ, ಬೇಯಿಸಲ್ಪಡುತ್ತದೋ, ಅದೆಲ್ಲವೂ ಅದೇ ಯಾಜಕನದಾಗುವುದು. (ತೌರೇತ್. ಲ.ಪು.ಪರ್ವ:-೭. ಆ:-೮,೯)*

**ಸಮೀಕ್ಷಕ:-** ಇಲ್ಲಿ ದೇವಿಯ ಅರ್ಚಕರ ಮತ್ತು ದೇವಾಲಯದ ಪೂಜಾರಿಗಳ ಪೋಪ ಲೀಲೆ ವಿಚಿತ್ರವಾಗಿದೆ - ಎಂದು ತಿಳಿಯುತ್ತಿದ್ದೆವು; ಆದರೆ ಕ್ರೈಸ್ತರ ಈಶ್ವರನ ಮತ್ತು ಅವರ ಪೂಜಾರಿಗಳ ಪೋಪಲೀಲೆ ಅದಕ್ಕಿಂತ ಸಾವಿರಪಟ್ಟು ಹೆಚ್ಚಾಗಿದೆ. ಏಕೆಂದರೆ, ಚರ್ಮದ ಬೆಲೆಯೂ ಸಿಕ್ಕುವುದು; ಭೋಜನದ ಪದಾರ್ಥಗಳೂ ತಿನ್ನುವುದಕ್ಕೆ ಲಭಿಸುವವು. ಮತ್ತೆ ಕ್ರೈಸ್ತರು ಚೆನ್ನಾಗಿ ಸುಖಿಸಿರಬೇಕು; ಈಗಲೂ ಉಲಿಯುತ್ತಿರಬಹುದು. ಭಲೇ! ಯಾವನಾದರೂ ಮಾನವನು ಒಬ್ಬ ಹುಡುಗ (ಮಗ) ನನ್ನು ಕೊಲ್ಲಿಸಿ, ಎರಡನೆಯ ಮಗನಿಗೆ ಅವನ ಮಾಂಸವನ್ನು ತಿನ್ನಿಸುವುದು ಎಂದಿಗಾದರೂ ಶಕ್ಯವೇ? ಹಾಗೆಯೇ ಈಶ್ವರನಿಗೆ ಸಮಸ್ತ ಮಾನವರೂ, ಮತ್ತು ಪಶು-ಪಕ್ಷಿಗಳು ಮೊದಲಾದ ಜೀವರೆಲ್ಲರೂ ಮಕ್ಕಳಂತೆ ಇದ್ದಾರೆ. ಪರಮೇಶ್ವರನು ಇಂತಹ ಕಾರ್ಯವನ್ನು ಎಂದಿಗೂ ಮಾಡಲಾರನು. ಈ ಕಾರಣದಿಂದಲೇ ಈ ಬೈಬಲ್ ಈಶ್ವರಕೃತವಲ್ಲ. ಮತ್ತು ಇದರಲ್ಲಿ ಬರೆದಿರುವ ಈಶ್ವರನು ಮತ್ತು ಇದನ್ನು ಅಂಗೀಕರಿಸುವವರು ಧರ್ಮಜ್ಞರು ಎಂದಿಗೂ ಆಗಲಾರರು. ಇಂತಹುದೇ ಆದ ಸಮಸ್ತ ಲೀಲೆಗಳೂ ಲಯವ್ಯವಸ್ಥೆ ಮೊದಲಾದ ಪುಸ್ತಕಗಳಲ್ಲಿ ತುಂಬಿಕೊಂಡಿವೆ. ಎಲ್ಲಿಯವರೆಗೆ ಎಣಿಸೋಣ? (೫೩)

## ಸಂಖ್ಯಾ ಪುಸ್ತಕ[೬೧]

*ಮತ್ತು ಹೆಣ್ಣುಕತ್ತೆಯು ಪರಮೇಶ್ವರನ ದೂತನು ತನ್ನ ಕೈಯಲ್ಲಿ ಖಡ್ಗವನ್ನು ಸೆಳೆದು ದಾರಿಯಲ್ಲಿ ನಿಂತಿರುವುದನ್ನು ನೋಡಿತು. ಆಗ ಹೆಣ್ಣು ಕತ್ತೆ ಮಾರ್ಗದಿಂದ ಬೇರೆಯಾಗಿ ಹೊಲದೊಳಗೆ ತಿರುಗಿತು. ಅದು ಮಾರ್ಗಕ್ಕೆ ಮತ್ತೆ ತಿರುಗಲೋಸ್ಕರ ಬಲ ಆಮನು[೬೨] ಕತ್ತೆಯನ್ನು ಕೋಲಿನಿಂದ ಹೊಡೆದನು. ಆಗ ಪರಮೇಶ್ವರನು ಹೆಣ್ಣು ಕತ್ತೆಯ ಬಾಯನ್ನು ತೆರೆದನು. ಮತ್ತೆ ಅದು ಬಲಆಮನನ್ನು - "ನೀನು ನನ್ನನ್ನು ಮೂರು ಸಾರಿ ಹೊಡೆಯಲು ನಾನು ನಿನಗೆ ಏನು ಮಾಡಿದ್ದೇನೆ?" ಎಂದು ಕೇಳಿತು.*

---

೬೦. ಟಿಪ್ಪಣಿಯಿಲ್ಲ.

೬೧. The Book of Numbers.

೬೨. Balaam.

**ಸಮೀಕ್ಷಕ:–** ಮೊದಲ ಕಾಲದಲ್ಲಿಯಂತೂ ಕತ್ತೆಗಳೂ ಕೂಡ ಈಶ್ವರನ ದೂತರನ್ನು ನೋಡುತ್ತಿದ್ದವು ; ಮತ್ತು ಈ ದಿನಗಳಲ್ಲಿ ಬಿಷಪ್ ಗಳು, ಪಾದರಿಗಳೇ ಮೊದಲಾದ ಶ್ರೇಷ್ಠರಾದ ಅಥವಾ ಅಶ್ರೇಷ್ಠರಾದ ಮಾನವರಿಗೂ ಕೂಡ ದೇವರು ಅಥವಾ ಅವನ ದೂತರೂ ಕಾಣಿಸುವುದಿಲ್ಲ. ಆಧುನಿಕ ಕಾಲದಲ್ಲಿ ಪರಮೇಶ್ವರನೂ, ಮತ್ತು ಅವನ ದೂತರೂ ಇದ್ದಾರೋ ಅಥವಾ ಇಲ್ಲವೋ? ಇರುವರಾದರೆ, ಗಾಢ ನಿದ್ರೆಯಲ್ಲಿ ಒರಗಿರುತ್ತಾರೋ? ಇಲ್ಲವೇ ರೋಗಗ್ರಸ್ತರಾಗಿದ್ದಾರೋ? ಅಥವಾ ಬೇರೆ ಭೂಗೋಳಕ್ಕೆ ಹೊರಟುಹೋದರೋ? ಇಲ್ಲವೇ ಯಾವುದಾದರೂ ಬೇರೆ ವೃತ್ತಿಯಲ್ಲಿ ತೊಡಗಿಬಿಟ್ಟಿದ್ದಾರೋ? ಇಲ್ಲವಾದರೆ, ಸತ್ತು ಹೋದರೋ? ಏನಾಯಿತೆಂದು ಗೊತ್ತಾಗುವುದಿಲ್ಲ. ಈಗ ಇಲ್ಲ; ಕಾಣಿಸುವುದಿಲ್ಲ – ಎಂದರೆ ಆಗಲೂ ಇರಲಿಲ್ಲ; ಕಾಣಿಸುತ್ತಲೂ ಇರಲಿಲ್ಲವೇನೋ; ಆದರೆ, ಕೇವಲ ಮನಬಂದಂತೆ, ಈ ಬರುಡೆಗಳನ್ನೇ ಹೊಡೆದಿದ್ದಾರೆ – ಎಂದೇ ಊಹಿಸಬಹುದಾಗಿದೆ. (೫೪).

## ಸ್ಯಾಮುಯೆಲ್ಲನ ದ್ವಿತೀಯ ಪುಸ್ತಕ[೬೩]

*ಮತ್ತು ಅದೇ ರಾತ್ರಿ ಹೀಗೆ ಸಂಭವಿಸಿತು:– ನಾತನ್‌ನ[೬೩ಎ] ಬಳಿಗೆ –"ಹೋಗು ಮತ್ತು ನನ್ನ ಸೇವಕನಾದ ದಾವೀದನಿಗೆ"[೬೩ಬಿ] – ಪರಮೇಶ್ವರನು 'ನನ್ನ ನಿವಾಸಕ್ಕಾಗಿ ನೀನೊಂದು ಮನೆಯನ್ನು ಕಟ್ಟಿಸು. ಏಕೆಂದರೆ ಯಾವಾಗಿನಿಂದ ಇಸ್ರಯೇಲನ ಸಂತತಿಯನ್ನು ಮಿಶ್ರದೇಶದಿಂದ[೬೩ಸಿ] ಹೊರಡಿಸಿ ಕರೆತಂದನೋ, ಆಗಿನಿಂದ ಇಂದಿನವರೆಗೆ ಮನೆಯಲ್ಲಿ ನಾನಂತೂ ವಾಸಮಾಡಲಿಲ್ಲ; ಆದರೆ ಗೂಡಾರದಲ್ಲಿಯೂ, ಡೇರಾದಲ್ಲಿಯೂ ಅಲೆದಾಡುತ್ತಿದ್ದೇನೆ'– ಎಂದು ಪರಮೇಶ್ವರನು ಹೇಳುತ್ತಾನೆ"– ಎಂದು ಹೇಳು" ಎಂದು ಪರಮೇಶ್ವರನ ವಚನ ಮುಟ್ಟಿತು. (ತೌರೇತ್.ದ್ವಿ.ಪು.ಪ:–೭ .ಆ :– ೪,೬)*

**ಸಮೀಕ್ಷಕ :–** ಕ್ರೈಸ್ತರ ಈಶ್ವರನು ಮನುಷ್ಯರಂತೆ ದೇಹಧಾರಿಯಾಗಿಲ್ಲ – ಎಂಬ ಸಂದೇಹ ಈಗ ಸ್ವಲ್ಪವೂ ಉಳಿಯಲಿಲ್ಲ. ಮತ್ತು ಅವನು–"ನಾನು ಬಹಳ ಪರಿಶ್ರಮ ಪಟ್ಟೆನು. ಅತ್ತ–ಇತ್ತ ಅಲೆಯುತ್ತಾ ತಿರುಗಾಡಿದೆ. ಈಗ ದಾವೀದನು ಮನೆ ಕಟ್ಟಿಸುವವನಾದರೆ, ಅದರಲ್ಲಿ ವಿಶ್ರಾಂತಿ ಪಡೆದೇನು." – ಎಂದು ಹಂಬಲಿಸುತ್ತಾನೆ. ಕ್ರೈಸ್ತರಿಗೆ ಇಂತಹ ಈಶ್ವರನನ್ನೂ ಮತ್ತು ಇಂತಹ ಪುಸ್ತಕವನ್ನೂ ಅಂಗೀಕರಿಸಲು ಸಂಕೋಚ ಉಂಟಾಗುವುದಿಲ್ಲವೇ? ಆದರೆ, ಮಾಡುವರಾದರೂ ಏನನ್ನು? ಬಡಪಾಯಿಗಳು ಸಿಲುಕಿಕೊಂಡೇಬಿಟ್ಟರು. ಈಗ ಹೊರಬರಲು ಬಹಳ ಪುರುಷಾರ್ಥ ಮಾಡುವುದು ಉಚಿತವಾಗಿದೆ. (೫೫).

## ರಾಜರುಗಳ ಪುಸ್ತಕ

*ಮತ್ತು ಬಾಬುಲದ[೬೪] ರಾಜನಾದ ನಬೂಖುದ್[೬೫] ನಜರನ ರಾಜ್ಯದಲ್ಲಿ ೧೯ ನೆಯ ವರ್ಷದ ಐದನೆಯ ತಿಂಗಳ ಆರನೆಯ ದಿನಾಂಕದಂದು, ಬಾಬುಲದ ರಾಜನ ಒಬ್ಬ ಸೇವಕನೂ ಸ್ವಸೈನ್ಯದ ಪ್ರಧಾನಾಧ್ಯಕ್ಷನೂ ಆಗಿದ್ದ ನಬೂಸರ್[೬೬] ಅದ್ದಾನನು ಜೆರೂಸಲೇಮ್‌ಗೆ[೬೭] ಬಂದನು. ಮತ್ತು ಅವನು ಪರಮೇಶ್ವರನ ದೇವಾಲಯವನ್ನೂ ಮತ್ತು ರಾಜನ ಅರಮನೆಯನ್ನೂ ಮತ್ತು ಜೆರೂಸಲೇಮಿನ ಎಲ್ಲ ಮನೆಗಳನ್ನೂ ಮತ್ತು ಪ್ರತಿಯೊಂದು ದೊಡ್ಡ ಮನೆಯನ್ನೂ ಸುಟ್ಟುಹಾಕಿದನು. ಮತ್ತು ಆ ಸ್ವಸೇನೆಯ ಅಧ್ಯಕ್ಷನೊಂದಿಗೆ ಇದ್ದ ಕಸದಿಯರ[೬೮] ಸಮಸ್ತ ಸೇನೆಯೂ ಜೆರೂಸಲೇಮಿನ ಗೋಡೆಗಳನ್ನು ನಾಲ್ಕು ಕಡೆಯಿಂದಲೂ ಕೆಡಹಿಬಿಟ್ಟಿತು. (ತೌರೇತ್.ರಾ.ಪು. ಪ:– ೭. ಆ :– ೪,೬)*

**ಸಮೀಕ್ಷಕ:–** ಮಾಡಲ್ಪಡುವುದಾದರೂ ಏನು? ಕ್ರೈಸ್ತರ ಈಶ್ವರನೇನೋ ದಾವೀದ – ಮೊದಲಾದವರಿಂದ ಮನೆ ಕಟ್ಟಿಸಿಕೊಂಡಿದ್ದನು. ಅದರಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಾ ಇದ್ದನೇನೋ? ಆದರೆ ನಬೂಸದ್ ಅದ್ದಾನನು ಈಶ್ವರನ ಮನೆಯನ್ನು ಧ್ವಂಸ–ಪ್ರಧ್ವಂಸ ಮಾಡಿಬಿಟ್ಟನು. ಮತ್ತು ಈಶ್ವರನು ಅಥವಾ ಅವನ ದೂತರ ಸೈನ್ಯ ಏನನ್ನು ಮಾಡಲೂ ಶಕ್ತವಾಗಲಿಲ್ಲ. ಮೊದಲೇನೋ ಇವರ ಈಶ್ವರನು ದೊಡ್ಡ ಯುದ್ಧಗಳನ್ನು ಮಾಡುತ್ತಿದ್ದನು ಮತ್ತು ಜಯಶಾಲಿಯೂ ಆಗುತ್ತಿದ್ದನು. ಆದರೆ ಈಗ ತನ್ನ ಮನೆಯನ್ನು ಸುಡಿಸಿಕೊಂಡು–ಮುರಿಸಿಕೊಂಡು ಕುಳಿತನು. ಸುಮ್ಮನೆ ಮೌನತಾಳಿ ಅದೇಕೆ ಕುಳಿತುಕೊಂಡಿದ್ದನೋ ತಿಳಿಯದು. ಮತ್ತು ಅವನ ದೂತರು ಎಲ್ಲಿ ಓಡಿಹೋದರೋ? ಅದೂ ಕೂಡ ಗೊತ್ತಿಲ್ಲ. ಇಂತಹ

---

೬೩. Samuel. ೬೩a. Nathan. ೬೩b David. ೬೩c Egypt.

೬೪. Babylon, ೬೫. Nabuchodonosor, ೬೬. Nabuzardan, ೬೭. Jerusalem, ೬೮ Chaldees.

ಸಮಯದಲ್ಲಿ ಯಾವನೂ ಕೆಲಸಕ್ಕೆ ಬಾರಲಿಲ್ಲ. ಮತ್ತು ಈಶ್ವರನ ಪರಾಕ್ರಮವೂ ಎಲ್ಲಿ ಹಾರಿಹೋಯಿತೋ ತಿಳಿಯದು. ಈ ಮಾತು ಸತ್ಯವಾಗಿರುವುದಾದರೆ, ಯಾವ ಯಾವ ವಿಜಯದ ಮಾತುಗಳನ್ನು ಮೊದಲು ಬರೆದರೋ, ಅವೆಲ್ಲವೂ ಈಗ ವ್ಯರ್ಥವಾಗಿ ಹೋದುವು. ಐಗುಪ್ತ ದೇಶದ ಹುಡುಗರು ಹುಡುಗಿಯರನ್ನು ಸಾಯಿಸುವುದರಲ್ಲಿ ಮಾತ್ರ ಶೂರ-ವೀರನಾಗಿದ್ದನೋ? ಈಗ ಶೂರ-ವೀರರ ಮುಂದೆ ಮಾತನಾಡದೆ ಕುಳಿತನು! ಕ್ರೈಸ್ತರ ಈಶ್ವರನು ಈ ರೀತಿ ತನಗೆ ನಿಂದೆಯನ್ನೂ, ಅವಮಾರ್ಯದೆಯನ್ನೂ ಮಾಡಿಸಿಕೊಂಡನು. ಈ ಪುಸ್ತಕದಲ್ಲಿ ಇದೇ ರೀತಿ ಸಾವಿರಾರು ನಿಷ್ಪ್ರಯೋಜಕವಾದ ಕತೆಗಳು ತುಂಬಿವೆ.

## ಜಬೂರಿನ ದ್ವಿತೀಯ ಭಾಗ

## ಕಾಲ ವೃತ್ತಾಂತದ ಪ್ರಥಮ ಪುಸ್ತಕ [೬೮ಎ]

*ಹೀಗೆ ನನ್ನ ಈಶ್ವರನಾದ ಪರಮೇಶ್ವರನು ಇಸ್ರಯೇಲ್‌ನ ಮೇಲೆ ಮಾರಿಯನ್ನು ಕಳುಹಿಸಿದನು. ಮತ್ತು ಇಸ್ರಾಯೇಲರೊಳಗಿನಿಂದ ೭೦,೦೦೦ ಪುರುಷರು ಬಿದ್ದು ಹೋದರು. (ಕಾಲ. ದೂ:– ೨ ಪ:– ೨೧. ಆ:– ೧೪)*

**ಸಮೀಕ್ಷಕ:–** ಈಗ ನೋಡಿರಿ. ಇಸ್ರಯೇಲನ ಕ್ರೈಸ್ತರ ಈಶ್ವರನ ಲೀಲೆಯನ್ನು! ಯಾವ ಇಸ್ರಯೇಲ ಕುಲಕ್ಕೆ ಬಹಳ ವರಗಳನ್ನು ಕೊಟ್ಟಿದ್ದನೋ, ಮತ್ತು ಹಗಲಿರುಳೂ ಯಾವ ಪಾಲನೆಯಲ್ಲಿ ಅಡ್ಡಾಡುತ್ತಿದ್ದನೋ, ಈಗ ಅದರ ಮೇಲೆಯೇ ಕ್ಷುದ್ರನಾಗಿ, ಮಾರಿಯನ್ನು ಕಳುಹಿಸಿ ೭೦,೦೦೦ ಜನರನ್ನು ಸಾಯಿಸಿಬಿಟ್ಟನು. ಯಾವನೋ ಕವಿಯು ಬರೆದಿರುವ ಈ ಕೆಳಗಿನ ಮಾತು ಸತ್ಯವಾಗಿದೆ:–

**ಕ್ಷಣೇ ರುಷ್ಟಃ ಕ್ಷಣೇ ತುಷ್ಟೋ ರುಷ್ಟಸ್ತುಷ್ಟಃ ಕ್ಷಣೇ ಕ್ಷಣೇ ।**

**ಅವ್ಯವಸ್ಥಿತಚಿತ್ತಸ್ಯ ಪ್ರಸಾದೋಽಪಿ ಭಯಂಕರಃ** [೬೯] ।

ಯಾವನು ಕ್ಷಣದಲ್ಲಿ ಕ್ಷುದ್ರನೂ, ಕ್ಷಣದಲ್ಲಿ ಪ್ರಸನ್ನನೂ ಆಗುತ್ತಾನೋ, ಎಂದರೆ ಕ್ಷಣ ಕ್ಷಣದಲ್ಲಿ ಪ್ರಸನ್ನನೂ - ಅಪ್ರಸನ್ನನೂ ಆಗುತ್ತಾನೋ, ಅವನ ಪ್ರಸನ್ನತೆಯೂ ಕೂಡ ಭಯದಾಯಕವಾಗಿರುತ್ತದೆ. ಅಂತಹುದೇ ಲೀಲೆ ಕ್ರೈಸ್ತರ ಈಶ್ವರನದಾಗಿದೆ.

## ಅಯ್ಯೂಬನ ಪುಸ್ತಕ [೭೦]

*ಮತ್ತು ಒಂದು ದಿನ ಹೀಗೆ ನಡೆಯಿತು:– ಪರಮೇಶ್ವರನ ಮುಂದೆ ಈಶ್ವರನ ಮಕ್ಕಳು ಬಂದು ನಿಂತರು ಮತ್ತು ಸೈತಾನನೂ ಕೂಡ ಅವರ ನಡುವೆ ಪರಮೇಶ್ವರನ ಮುಂದೆ ಬಂದು ನಿಂತನು. ಮತ್ತು ಪರಮೇಶ್ವರನು ಸೈತಾನನ್ನು -"ನೀನು ಎಲ್ಲಿಂದ ಬರುತ್ತಿದ್ದೀಯೆ?" - ಎಂದು ಕೇಳಿದನು. ಆಗ ಸೈತಾನನು ಉತ್ತರವಿತ್ತು, ಪರಮೇಶ್ವರನಿಗೆ -"ಪೃಥಿವಿಯ ಮೇಲೆ ತಿರುಗಾಡುತ್ತಾ ಮತ್ತು ಅತ್ತಣಿಂದ ಇತ್ತಣಿಂದ ಸುತ್ತಾಡುತ್ತಾ ಹೊರಟು ಬರುತ್ತಿದ್ದೇನೆ". ಎಂದು ಹೇಳಿದನು. ಆಗ ಪರಮೇಶ್ವರನು ಶೈತಾನನಿಗೆ - "ನೀನು ನನ್ನ ದಾಸನಾದ ಅಯ್ಯೂಬನನ್ನು ಪರೀಕ್ಷಿಸಿ, 'ಅವನಿಗೆ ಸಮಾನನು ಪೃಥಿವಿಯಲ್ಲಿ ಯಾವನೂ ಇಲ್ಲ' - ಎಂದು ತಿಳಿದಿದ್ದೀಯೆ ಏನು? ಅವನು ಸಿದ್ಧನು ಮತ್ತು ಚೊಕ್ಕ ಮನುಷ್ಯನು. ಈಶ್ವರನಿಗೆ ಅಂಜುತ್ತಾನೆ ಮತ್ತು ಪಾಪದಿಂದ ದೂರವಿರುತ್ತಾನೆ ಮತ್ತು ಈವರೆಗೆ ತನ್ನ ಪ್ರಾಮಾಣಿಕತ್ವವನ್ನು ಕಾಪಾಡಿಕೊಂಡಿದ್ದಾನೆ. ಮತ್ತು ನೀನು ನನ್ನನ್ನು ನಿಷ್ಕಾರಣವಾಗಿ ಅವನನ್ನು ನಾಶಪಡಿಸಲು ಉದ್ರೇಕಿಸುತ್ತಿದ್ದೀಯೆ". ಎಂದು ಹೇಳಿದನು. ಆಗ ಸೈತಾನನು ಉತ್ತರವಿತ್ತು ಪರಮೇಶ್ವರನಿಗೆ-"ಚರ್ಮಕ್ಕೆ ಚರ್ಮ. ಅಹುದು; ಮನುಷ್ಯನದಾಗಿದ್ದರೆ, ಅದನ್ನು ತನ್ನ ಪ್ರಾಣಕ್ಕಾಗಿ ಕೊಡುವನು. ಆದರೆ ಈಗ ನಿನ್ನ ಕೈಯನ್ನು ನೀಡು ಮತ್ತು ಅವನ ಮೂಳೆ-ಮಾಂಸಗಳನ್ನು ಸ್ಪರ್ಶಿಸು. ಆಗ ಅವನು ನಿಸ್ಸಂದೇಹವಾಗಿ ನಿನ್ನನ್ನು ನಿನ್ನ ಮುಂದೆಯೇ ತ್ಯಜಿಸುವನು" ಎಂದು ಹೇಳಿದನು. ಆಗ ಪರಮೇಶ್ವರನು ಸೈತಾನನಿಗೆ - "ನೋಡು ಅವನು ನಿನ್ನ ಕೈಯಲ್ಲಿದ್ದಾನೆ. ಕೇವಲ ಅವನ ಪ್ರಾಣವನ್ನು*

---

೬೮a. The first book of paralipomenon

೬೯. 'ಸುಭಾಷಿತ ರತ್ನ ಭಾಂಡಾಗಾರಮ್' ಸಾಮಾನ್ಯ ನೀತಿ. ಶ್ಲೋಕ ೧೬೪. ಯು.ಮೀ.

೭೦. The Book of Job.

*ರಕ್ಷಿಸು" ಎಂದನು. ಆಗ ಸೈತಾನನು ಪರಮೇಶ್ವರನ ಮುಂದಿನಿಂದ ಹೊರಟು ಹೋದನು ಮತ್ತು ಅಯ್ಯೂಬನನ್ನು, ತಲೆಯಿಂದ ಕಾಲಿನತಳದವರೆಗೆ ಕೆಟ್ಟ ಕುರುಗಳನ್ನುಂಟುಮಾಡಿ ಸಾಯಿಸಿದನು. (ಜ.ಪ:-೨ ಆ:-೧-೭)*

**ಸಮೀಕ್ಷಕ:-** ಈಗ ನೋಡಿರಿ ಕ್ರೈಸ್ತರ ಈಶ್ವರನ ಸಾಮರ್ಥ್ಯವನ್ನು! ಸೈತಾನನು ಅವನ ಮುಂದೆ ಅವನ ಭಕ್ತರಿಗೆ ದುಃಖವನ್ನುಂಟುಮಾಡುತ್ತಾನೆ. ಸೈತಾನನಿಗೆ ಶಿಕ್ಷೆಯನ್ನೂ ಕೊಡುವುದಿಲ್ಲ; ತನ್ನ ಭಕ್ತರನ್ನು ರಕ್ಷಿಸಲೂ ಶಕ್ತನಾಗಿಲ್ಲ. ಮತ್ತು ದೂತರಲ್ಲಿಯೂ ಕೂಡ ಯಾವನೂ ಅವನನ್ನು ಎದುರಿಸಲಾರನು! ಒಬ್ಬ ಸೈತಾನ ಎಲ್ಲರನ್ನೂ ಭಯಭೀತರನ್ನಾಗಿ ಮಾಡಿಟ್ಟಿದ್ದಾನೆ. ಮತ್ತು ಕ್ರೈಸ್ತರ ಈಶ್ವರನೂ ಕೂಡ ಸರ್ವಜ್ಞನಾಗಿಲ್ಲ. ಮತ್ತು ಸರ್ವಜ್ಞನಾಗಿದ್ದರೆ, ಅಯ್ಯೂಬನ ಪರೀಕ್ಷೆಯನ್ನು ಸೈತಾನನಿಂದ ಏಕೆ ಮಾಡಿಸುತ್ತಿದ್ದನು?

## ಉಪದೇಶದ ಪುಸ್ತಕ

*ಅಹುದು; ನನ್ನ ಅಂತಃಕರಣವು ಬುದ್ಧಿ ಮತ್ತು ಉನ್ಮಾದ ಮತ್ತು ಮೂಢತನವನ್ನು ತಿಳಿಯಲು ಮನಸ್ಸನ್ನು ನಿಯೋಜಿಸಿತು. ನಾನು - "ಇದೂ ಕೂಡ ಮನಸ್ಸಿನ ಜಂಜಾಟ" ವೆಂಬುದನ್ನು ಅರಿತುಕೊಂಡೆನು. ಏಕೆಂದರೆ ಅಧಿಕಬುದ್ಧಿಯಲ್ಲಿ ಮಹಾದುಃಖವಿದೆ. ಮತ್ತು ಯಾವನು ಜ್ಞಾನದಲ್ಲಿ ವೃದ್ಧಿ ಹೊಂದುತ್ತಾನೋ, ಅವನು ದುಃಖದಲ್ಲಿಯೂ ವೃದ್ಧಿ ಹೊಂದುತ್ತಾನೆ. (ಜ. ಉ.ಪ:-೧. ಆ:-೧೬-೧೮)*

**ಸಮೀಕ್ಷಕ:-** ಈಗ ನೋಡಿರಿ! ಬುದ್ಧಿ ಮತ್ತು ಜ್ಞಾನ ಪರ್ಯಾಯವಾಚಕಗಳಾಗಿವೆ. ಅವನ್ನು ಎರಡೆಂದು ತಿಳಿದಿದ್ದಾರೆ. ಮತ್ತು ಬುದ್ಧಿವೃದ್ಧಿಯಲ್ಲಿ ಶೋಕ ಹಾಗೂ ದುಃಖವಿದೆ ಎಂದು ಗ್ರಹಿಸುವುದು ಅವಿದ್ವಾಂಸರ ಹೊರತು ಬೇರೆ ಯಾವನಿಗೆ ಶಕ್ಯ? ಇಂತಹ ಲೇಖನವನ್ನು ಬೇರೆ ಯಾವನು ರಚಿಸಬಲ್ಲನು? ಆದ್ದರಿಂದ ಈ ಬೈಬಲ್ ಈಶ್ವರನು ರಚಿಸಿದುದು- ಎನ್ನುವುದೇನು? ಯಾವನಾದರೂ ವಿದ್ವಾಂಸನು ರಚಿಸಿದುದೂ ಕೂಡ ಅಲ್ಲ. (೫೯)

ಹೀಗೆ ಸ್ವಲ್ಪ ತೌರೇತ್ [೭೧] – ಜಬೂರ್‌ಗಳ ಬಗೆಗೆ ಬರೆದಿದ್ದೇವೆ. ಇದರಿಂದ ಮುಂದಕ್ಕೆ ಮ್ಯಾಥ್ಯೂ ರಚಿತವೇ ಮೊದಲಾದ ಇಂಜೀಲಿನ [೭೨] ವಿಷಯದಲ್ಲಿ ಬರೆಯಲ್ಪಡುತ್ತದೆ. ಅದನ್ನು ಕ್ರೈಸ್ತರು ಬಹಳ ಪ್ರಮಾಣಭೂತವೆಂದು ಅಂಗೀಕರಿಸುತ್ತಾರೆ. ಯಾವುದರ ಹೆಸರನ್ನು "ಇಂಜೀಲ್" ಎಂದಿಟ್ಟಿದ್ದಾರೋ ಅದು ಹೇಗಿದೆ – ಎಂದು ಅದರ ಪರೀಕ್ಷೆಯನ್ನು ಸ್ವಲ್ಪ ಬರೆಯುತ್ತೇವೆ.

## ಮ್ಯಾಥ್ಯೂ [೭೩] ರಚಿತ ಇಂಜೀಲ್

ಏಸುಕ್ರಿಸ್ತನ [೭೪] ಜನ್ಮ ಹೀಗೆ ಆಯಿತು – ಅವನ ತಾಯಿ ಮೇರಿಯ [೭೫] ನಿಶ್ಚಿತಾರ್ಥ ಜೋಸೆಫ಼[೭೬]ನೊಂದಿಗೆ ಆಗಿದ್ದಿತು. ಆದರೆ, ಅವರು ಒಂದುಗೂಡುವ ಮುನ್ನವೇ ಪವಿತ್ರಾತ್ಮನಿಂದ ಅವಳು ಗರ್ಭವತಿಯಾಗಿ ಕಂಡುಬಂದಳು. ನೋಡಿರಿ, ಪರಮೇಶ್ವರನ ದೂತನೊಬ್ಬನು ಸ್ವಪ್ನದಲ್ಲಿ ಅವನಿಗೆ ದರ್ಶನವಿತ್ತು – "ಓ ದಾವೀದನ ಸಂತತಿಯಾದ ಜೋಸೆಫನೇ! ನೀನು ನಿನ್ನ ಹೆಂಡತಿಯಾದ ಮೇರಿಯನ್ನು ಇಲ್ಲಿ ಕರೆತರಲು ಹೆದರಬೇಡ. ಏಕೆಂದರೆ- ಅವಳಲ್ಲಿ ಯಾವ ಗರ್ಭ ನಿಂತಿದೆಯೋ, ಅದು ಪವಿತ್ರಾತ್ಮನಿಂದ ಆಗಿದೆ"- ಎಂದು ಹೇಳಿದನು. (ಇಂ. ಪ:-೧. ಆ;- ೧೮-೨೦)

**ಸಮೀಕ್ಷಕ:-** ಯಾವವು ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಗೆ ಮತ್ತು ಸೃಷ್ಟಿ ಕ್ರಮಕ್ಕೆ ವಿರುದ್ಧವಾಗಿವೆಯೋ, ಅಂತಹ ಈ ಮಾತುಗಳನ್ನು ಯಾವ ವಿದ್ವಾಂಸನೂ ಅಂಗೀಕರಿಸಲಾರನು. ಈ ಮಾತುಗಳನ್ನು ಅಂಗೀಕರಿಸುವುದು ಮೂರ್ಖ ಮಾನವರಾದ ಕಾಡಾಡಿಗಳ ಕೆಲಸ; ಸಭ್ಯ ವಿದ್ವಾಂಸರದಲ್ಲ. ಭಲೇ! ಪರಮೇಶ್ವರನ ನಿಯಮವಾವುದಿದೆಯೋ ಅದನ್ನು ಯಾವನಾದರೂ ಮರಿಯಬಲ್ಲನೇ? ಪರಮೇಶ್ವರನೂ ಕೂಡ ನಿಯಮವನ್ನು ತಲೆಕೆಳಗುಮಾಡುವನಾದರೆ, ಅವನ ಆಜ್ಞೆಯನ್ನು ಯಾವನೂ ಅಂಗೀಕರಿಸನು. ಅಲ್ಲದೆ, ಅವನು ಸರ್ವಜ್ಞನು ಮತ್ತು ನಿರ್ಭ್ರಮನು ಕೂಡ. ಹೀಗೆ ಒಪ್ಪುವುದಾದರೆ, ಯಾವ ಯಾವ ಕುಮಾರಿಯ ಗರ್ಭ ನಿಲ್ಲುವುದೋ, ಆಗ ಎಲ್ಲರೂ ಕೂಡ – 'ಇವಳಲ್ಲಿ ಗರ್ಭನಿಂತುದು ಈಶ್ವರನ ಕಡೆಯಿಂದ'. ಎಂದು ಹೇಳಬಹುದು. ಮತ್ತು

೭೧. "ತೌರೇತ್", ಎಂದರೆ ಬೈಬಲ್ಲಿನ ಹಳೇ ನಿಯಮ [Old Testament] ಇದರ ಸಂಬಂಧ ಯಹೂದ್ಯರೊಂದಿಗಿದೆ.

೭೨. "ಇಂಜೀಲ' ಎಂದರೆ, ಬೈಬಲ್ಲಿನ 'ಹೊಸ ನಿಯಮ [New Testament]. ಮಿ.ಯಹೂದ್ಯರು' ಹೊಸ ನಿಯಮವನ್ನು ಒಪ್ಪುವುದಿಲ್ಲ. ಕ್ರೈಸ್ತರು ಒಪ್ಪುತ್ತಾರೆ.

೭೩. Mathew, ೭೪. Jesus Christ ೭೫. Mary ೭೬. Joseph.

ಸುಳ್ಳು ಸುಳ್ಳಾಗಿಯೇ – "ಪರಮೇಶ್ವರನ ದೂತನು ನನಗೆ ಸ್ವಪ್ನದಲ್ಲಿ 'ಈ ಗರ್ಭ ಪರಮಾತ್ಮನ ಕಡೆಯಿಂದ ಆಗಿದೆ' – ಎಂದು ಹೇಳಿಬಿಟ್ಟಿದ್ದಾನೆ" ಎಂದು ಹೇಳಬಹುದು. ಈ ಅಸಂಭವವಾದ ಪ್ರಪಂಚವನ್ನು ರಚಿಸಿರುವ ಹಾಗೆಯೇ, ಸೂರ್ಯನಿಂದ ಕುಂತೀ ಗರ್ಭವತಿಯಾಗುವ ಅಸಂಭವವಾದ ಮಾತನ್ನು ಪುರಾಣಗಳಲ್ಲಿ ಬರೆದಿದ್ದಾರೆ. ಇಂತಹ ಮಾತುಗಳನ್ನು ಕಣ್ಣಿದ್ದೂ ನೋಡಲಾರದ ದುಡ್ಡಿನ ದೊಡ್ಡಪ್ಪಂದಿರು ಒಪ್ಪಿಕೊಂಡು ಭ್ರಮಜಾಲದಲ್ಲಿ ಬೀಳುತ್ತಾರೆ. ಘಟನೆ ಹೀಗೆ ನಡೆದಿರಬಹುದು:– ಯಾವನೋ ಪುರುಷನೊಂದಿಗೆ ಸಮಾಗಮವಾದುದರಿಂದ ಮೇರಿಯು ಗರ್ಭವತಿಯಾಗಿರಬಹುದು. ಅವಳು ಅಥವಾ ಬೇರೆ ಯಾವನಾದರೊಬ್ಬನು – "ಇವಳಲ್ಲಿ ಗರ್ಭ ಈಶ್ವರನ ಕಡೆಯಿಂದ ಆಗಿದೆ".[೭೭] – ಎಂದು ಅಸಂಭವವಾದ ಸುದ್ದಿಯನ್ನು ಹಾರಿಸಿಬಿಟ್ಟಿರಬಹುದು. (೬೦)

> *ಆಗ ಆತ್ಮನು ಏಸುವನ್ನು, ಸೈತಾನನಿಂದ ಅವನ ಪರೀಕ್ಷೆಯಾಗಲಿ – ಎಂದು ಕಾಡಿಗೆ ಕರೆದೊಯ್ದನು. ಅವನು ನಾಲ್ವತ್ತು ಹಗಲು ಮತ್ತು ನಾಲ್ವತ್ತು ರಾತ್ರಿ ಉಪವಾಸ ಮಾಡಿ ಆಮೇಲೆ ಹಸಿದನು. ಆಗ ಪರೀಕ್ಷಕನು–"ನೀನು ಈಶ್ವರನ ಪುತ್ರನಾಗಿದ್ದರೆ, 'ಈ ಕಲ್ಲುಗಳು ರೊಟ್ಟಿಗಳಾಗಿ ಹೋಗಲಿ'. ಎಂದು ಹೇಳಿಬಿಡು". ಎಂದು ಹೇಳಿದನು. (ಇಂ. ಪ:–೪.ಆ:–೧–೩)*

**ಸಮೀಕ್ಷಕ:–** ಕ್ರೈಸ್ತರ ಈಶ್ವರನು ಸರ್ವಜ್ಞನಲ್ಲವೆಂದು ಇದರಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಏಕೆಂದರೆ ಸರ್ವಜ್ಞನಾಗಿದ್ದರೆ, ಅವನ ಪರೀಕ್ಷೆಯನ್ನು ಸೈತಾನನಿಂದ ಏಕೆ ಮಾಡಿಸುತ್ತಿದ್ದನು? ಸ್ವತಃ ತಿಳಿದುಕೊಂಡುಬಿಡುತ್ತಿದ್ದನು. ಆಗಲಿ; ಯಾವನಾದರೂ ಕ್ರೈಸ್ತನನ್ನು ಈ ದಿನಗಳಲ್ಲಿ ನಾಲ್ವತ್ತು ರಾತ್ರಿ ನಾಲ್ವತ್ತು ಹಗಲು ಉಪವಾಸವಿಟ್ಟರೆ, ಅವನು ಎಂದಿಗಾದರೂ ಉಳಿಯಬಲ್ಲನೇ? ಮತ್ತು ಇದರಿಂದ"ಅವನು ಈಶ್ವರನ ಮಗನೂ ಅಲ್ಲ; ಮತ್ತು ಅವನಲ್ಲಿ ಯಾವ ಚಮತ್ಕಾರವೂ, ಎಂದರೆ ಸಿದ್ಧಿಯೂ ಇರಲಿಲ್ಲ".– ಎಂದು ಸಿದ್ಧವಾಯಿತು. ಹಾಗಲ್ಲದಿದ್ದರೆ, ಸೈತಾನನ ಸಮ್ಮುಖದಲ್ಲಿ ಕಲ್ಲುಗಳನ್ನು ರೊಟ್ಟಿಗಳಾಗಿ ಮಾರ್ಪಡಿಸದೆ, ಅದೇಕೆ ಸುಮ್ಮನಿರುತ್ತಿದ್ದನು? ಮತ್ತು ತಾನೇಕೆ ಹಸಿದಿರುತ್ತಿದ್ದನು? ಮತ್ತು ಪರಮೇಶ್ವರನು ಯಾವ ಕಲ್ಲುಗಳನ್ನು ಸೃಜಿಸಿದ್ದಾನೋ, ಅವುಗಳನ್ನು ಯಾವನೂ ರೊಟ್ಟಿಗಳನ್ನಾಗಿ ಮಾಡಲಾರನು– ಎಂಬುದೇ ಸಿದ್ಧಾಂತವಾಗಿದೆ. ಮತ್ತು ಈಶ್ವರನೂ ಕೂಡ ಪೂರ್ವಕೃತ ನಿಯಮವನ್ನು ತಲೆಕೆಳಗೆ ಮಾಡಲಾರನು. ಏಕೆಂದರೆ, ಅವನು ಸರ್ವಜ್ಞನು ಮತ್ತು ಅವನ ಕೆಲಸಗಳೆಲ್ಲವೂ ಲೋಪದೋಷಗಳಿಲ್ಲದವಾಗಿವೆ. (೬೧)

> *ಅವನು ಅವರಿಗೆ – "ನನ್ನ ಹಿಂದೆ ಬನ್ನಿರಿ. ನಾನು ನಿಮ್ಮನ್ನು ಮಾನವರ ಬೆಸ್ತರನ್ನಾಗಿ ಮಾಡುತ್ತೇನೆ". – ಎಂದು ಹೇಳಿದನು. ಅವರು ತತ್‌ಕ್ಷಣ ಬಲೆಗಳನ್ನು ಬಿಟ್ಟು ಅವನ ಹಿಂದೆ ನಡೆದರು. (ಇಂ. ಪ:–೪. ಆ:–೧೯,೨೦)*

**ಸಮೀಕ್ಷಕ:–** ಇದರಿಂದ, ತೌರೇತಿನಲ್ಲಿ ದಶ ಆಜ್ಞೆಗಳ[೭೮] ಪ್ರಸಂಗದಲ್ಲಿ (ಮಕ್ಕಳು ತಮ್ಮ ಆಯಸ್ಸು ವರ್ಧಿಸುವಂತೆ ಮಾತಾಪಿತೃಗಳ ಸೇವೆಯನ್ನೂ, ಸಮ್ಮಾನವನ್ನೂ ಮಾಡಬೇಕು.) ಎಂದು ಬರೆದಿರುವುದಕ್ಕೆ ವಿರುದ್ಧವಾಗಿ, ಅದೇ ಪಾಪವನ್ನು ಏಸು ಮಾಡಿದನೆಂದು ಗೊತ್ತಾಗುತ್ತದೆ. ಏಸುವು ತನ್ನ ತಾಯಿತಂದೆಗಳಿಗೆ ಸೇವೆಯನ್ನು ತಾನೂ ಮಾಡಲಿಲ್ಲ; ಅನ್ಯರನ್ನು ಮಾತಾಪಿತೃಗಳ ಸೇವೆಯಿಂದ ಬಿಡುಗಡೆಮಾಡಿದನು. ಇದೇ ಅಪರಾಧದಿಂದ ಏಸು ಚಿರಂಜೀವಿಯಾಗಲಿಲ್ಲ. ಮತ್ತು, ಏಸುವು ಮಾನವರನ್ನು ಸಿಕ್ಕಿಸಿಕೊಳ್ಳುವುದಕ್ಕಾಗಿ ಒಂದು ಮತವನ್ನು ಪ್ರತಿಷ್ಠಾಪಿಸಿದ್ದಾನೆ; ಜಾಲದಲ್ಲಿ ಮೀನುಗಳನ್ನು ಸಿಕ್ಕಿಸಿಕೊಳ್ಳುವಂತೆ ಮಾನವರನ್ನು ತನ್ನ ಮತದಲ್ಲಿ ಸಿಕ್ಕಿಸಿಕೊಂಡು, ತನ್ನ ಸ್ವಾರ್ಥವು ಸಿದ್ಧಿಸುವಂತೆ ಮಾಡಿದ್ದಾನೆ– ಎಂಬುದೂ ಕೂಡ ವಿದಿತವಾಯಿತು. ಏಸುವೇ ಹೀಗಿದ್ದನೆಂದಾಗ, ಆಧುನಿಕ ಪಾದರಿಗಳು ತಮ್ಮ ಬಲೆಯಲ್ಲಿ ಮಾನವರನ್ನು ಸಿಕ್ಕಿಸಿಕೊಂಡರೆ ಆಶ್ಚರ್ಯವೇನು? ಏಕೆಂದರೆ, ಹೇಗೆ ದೊಡ್ಡ ದೊಡ್ಡ ಮತ್ತು ಬಹಳ ಮೀನುಗಳನ್ನು ಬಲೆಯಲ್ಲಿ ಸಿಕ್ಕಿಸಿಕೊಳ್ಳುವವನ ಪ್ರತಿಷ್ಠೆ ಮತ್ತು

---

೭೭. ಮೀ. ಪಾಶ್ಚಿಮಾತ್ಯರಲ್ಲಿ, ವಿಶೇಷವಾಗಿ ಅಮೆರಿಕಾದಲ್ಲಿ, ಅವಿವಾಹಿತ ಸ್ತ್ರೀಯರ ಆಧಿಕ್ಯಕ್ಕೆ ಇದೂ ಒಂದು ಕಾರಣ. ಅಂತೆಯೇ, ಗರ್ಭಸ್ರಾವ ಮಾಡಿಸಿಕೊಳ್ಳುವ ಕುಮಾರೀ ಹೆಂಗಳೆಯರ ಅಧಿಕೃತೆ ಅಲ್ಲಿ ಪ್ರಬಲ.

ಇಂಗ್ಲೆಂಡಿನ ಬಾಲ–ಬಾಲಿಕಾ ಅನಾಥಾಲಯದ ವ್ಯವಸ್ಥಾಪಕನೊಬ್ಬನು ಭಾರತೀಯ ಅನಾಥಾಲಯಗಳ ನಿರೀಕ್ಷಣೆ ಮಾಡುತ್ತಾ' ನಮ್ಮ ದೇಶದಲ್ಲಿ ಅನಾಥಾಲಯಗಳು ಉತ್ತಮ ಸ್ಥಿತಿಯಲ್ಲಿವೆ. ಅವುಗಳ ಸಂಖ್ಯೆಯೂ ಹೆಚ್ಚಾಗಿವೆ. ನಿಮ್ಮ ಭಾರತದಲ್ಲಿ ಹಾಗಿಲ್ಲ' ಎಂದು ಆಕ್ಷೇಪಿಸಿದನು.

ಭಾರತೀಯ ಅನಾಥಾಲಯದ ವ್ಯವಸ್ಥಾಪಕನು ತನ್ನ ಸರಳವಾದ ಬುದ್ಧಿಯಿಂದ– 'ನಮ್ಮ ದೇಶದಲ್ಲಿ ತಂದೆಯ ಹೆಸರನ್ನರಿಯದ ಹಸುಳೆಗಳು ಹುಟ್ಟುವುದೇ ಕಡಿಮೆ. ಹಾಗೆ ಹಲವು ಹುಟ್ಟಿದರೂ, ಕೂಡ ಅವುಗಳನ್ನು ಕೂಡಲೇ ನಮ್ಮ ಜನರು ಸಾಯಿಸಿಬಿಡುತ್ತಾರೆ, ಎಂದು ಆಕ್ಷೇಪಣೆಗೆ ಉತ್ತರ ಕೊಟ್ಟನು.

೭೮. The Ten commandments

ಜೀವನನಿರ್ವಾಹ ಒಳಿತಾಗಿ ಆಗುತ್ತದೋ, ಹಾಗೆಯೇ ಯಾವನು ಬಹುಜನರನ್ನು ತನ್ನ ಮತದಲ್ಲಿ ಸಿಕ್ಕಿಸಿಕೊಳ್ಳುವನೋ, ಅವನಿಗೆ ಅಧಿಕ ಪ್ರತಿಷ್ಠೆ ಹಾಗೂ ಜೀವನ- ನಿರ್ವಾಹಗಳು ಲಭಿಸುತ್ತವೆ. ಇದೇ ಕಾರಣದಿಂದ ಈ ಜನರು, ವೇದಗಳನ್ನು ಮತ್ತು ಶಾಸ್ತ್ರಗಳನ್ನು ಓದಿಲ್ಲದಂತಹ ಬಡಪಾಯಿಗಳಾದ ಮುಗ್ಧ ಜನರನ್ನು ತಮ್ಮ ಜಾಲಕ್ಕೆ ಸಿಕ್ಕಿಸಿಕೊಂಡು, ಅವರ ತಾಯಿ, ತಂದೆ, ಕುಟುಂಬ- ಮೊದಲಾದವರಿಂದ ಬೇರ್ಪಡಿಸಿಬಿಡುತ್ತಾರೆ. ಆದುದರಿಂದ ವಿದ್ವಾಂಸರಾದ ಆರ್ಯರೆಲ್ಲರೂ ಸ್ವತಃ ಇವರ ಜಾಲದಿಂದ ಉಳಿದು, ತಮ್ಮ ಬೇರೆಯ ಮುಗ್ಧಪಾಮರ ಬಂಧುಗಳನ್ನೂ ರಕ್ಷಿಸುವುದರಲ್ಲಿ ತತ್ಪರರಾಗಿರಬೇಕಾದುದು ಉಚಿತವಾಗಿರುತ್ತದೆ. (೬೨).

*ಆಗ ಏಸುವು ಸಮಗ್ರ ಗೆಲೀಲೀ[೭೯] ದೇಶದಲ್ಲಿ, ಅವರ ಸಭೆಗಳಲ್ಲಿ ಉಪದೇಶ ಮಾಡುತ್ತಾ ಮತ್ತು ರಾಜ್ಯದ ಸುಸಮಾಚಾರದ ಪ್ರಚಾರ ಮಾಡುತ್ತಾ, ಮತ್ತು ಜನರಲ್ಲಿ ಪ್ರತಿಯೊಂದು ರೋಗವನ್ನೂ ಮತ್ತು ಪ್ರತಿಯೊಂದು ಮನೋವಿಕಾರವನ್ನೂ ವಾಸಿ ಮಾಡುತ್ತಾ, ಸಂಚರಿಸುತ್ತಾ ನಡೆದನು. ನಾನಾ ಪ್ರಕಾರದ ರೋಗಗಳಿಂದಲೂ ಮತ್ತು ನೋವುಗಳಿಂದಲೂ ದುಃಖಿತರಾಗಿದ್ದ ಸಮಸ್ತ ಅಸ್ವಸ್ಥರನ್ನೂ, ಮತ್ತು ಭೂತಗ್ರಸ್ತರನ್ನೂ ಮತ್ತು ಮೂರ್ಛಾರೋಗತ್ರಸ್ತರನ್ನೂ ಮತ್ತು ಪಾರ್ಶ್ವಘಾತಕ್ಕೆ ಸಿಲುಕಿದವರನ್ನೂ ಅವನ ಬಳಿಗೆ ಕರೆತಂದರು ಮತ್ತು ಅವನು ಅವರನ್ನು ಗುಣಪಡಿಸಿದನು. (ಇಂ. ಮ್ಯಾಥ್ಯೂ ಪ:-೪ ಆ:-೨೩-೨೪)*

**ಸಮೀಕ್ಷಕ :-** ಈ ದಿನಗಳ ಪೋಪಲೀಲೆಯ ಆಡಂಬರಗಳೂ, ಮಂತ್ರಪುರಶ್ಚರಣ ಆಶೀರ್ವಾದ, ತಾಬೀಜ ಮತ್ತು ಭಸ್ಮದ ಚಿಟಿಕೆಗಳನ್ನು ಕೊಡುವುದರಿಂದ ಭೂತಗಳನ್ನು ಹೊರದೂಡುವುದೂ, ರೋಗಗಳನ್ನು ವಾಸಿಮಾಡುವುದೂ ಸತ್ಯವಾಗಿದ್ದರೆ, ಈ ಇಂಜೀಲಿನ ಮಾತೂ ಕೂಡ ಸತ್ಯವಾದೀತು. ಆದುದರಿಂದ ಮುಗ್ಧಮಾನವರನ್ನು ಜಾಲಕ್ಕೆ ಸಿಕ್ಕಿಸಿಕೊಳ್ಳುವ ಸಲುವಾಗಿ ಈ ಮಾತುಗಳಿವೆ. ಕ್ರೈಸ್ತರು ಏಸುವಿನ ಮಾತನ್ನು ಅಂಗೀಕರಿಸುತ್ತಾರಾದರೆ, ಇಲ್ಲಿನ ದೇವೀ-ಉಪಾಸಕರ ಮಾತುಗಳನ್ನೇಕೆ ಅಂಗೀಕರಿಸುವುದಿಲ್ಲ? ಏಕೆಂದರೆ- ಆ ಮಾತುಗಳು ಈ ಉಪಾಸಕರದರ ಹಾಗೆಯೇ ಇವೆ. (೬೩)

*ಯಾರು ಮನದಲ್ಲಿ ದೀನರಾಗಿದ್ದಾರೋ, ಅವರು ಧನ್ಯರು ; ಏಕೆಂದರೆ, ಸ್ವರ್ಗದ ರಾಜ್ಯ ಅವರದೇ ಆಗಿದೆ. ಏಕೆಂದರೆ, "ಎಂದಿನವರೆಗೆ ಆಕಾಶ ಮತ್ತು ಪೃಥಿವೀ ಕದಲಿ ಹೋಗುವುದಿಲ್ಲವೋ, ಅಂದಿನವರೆಗೆ ವ್ಯವಸ್ಥೆಯಿಂದ ಒಂದೇ ಒಂದು ಗುಣಿಸು ಅಥವಾ ಒಂದು ಬಿಂದು ಪೂರ್ಣವಾಗದೇ ನಾಶವಾಗುವುದಿಲ್ಲ ; ತಪ್ಪಿಹೋಗುವುದಿಲ್ಲ". - ಎಂದು ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ. ಆದುದರಿಂದ; ಈ ಅತಿ ಚಿಕ್ಕ ಆಜ್ಞೆಗಳಲ್ಲಿ ಒಂದನ್ನು ಭಂಗಿಸಿ, ಯಾವನು ಅನ್ಯಜನರಿಗೂ ಹಾಗೆಯೇ ಕಲಿಸುವನೋ, ಅವನು ಸ್ವರ್ಗರಾಜ್ಯದಲ್ಲಿ ಎಲ್ಲರಿಗಿಂತಲೂ ಚಿಕ್ಕವನೆನಿಸುವನು. (ಇಂ. ಮ್ಯಾಥ್ಯೂ ಪ:-೫. ಆ:- ೩,೪, ೧೮, ೧೯)*

**ಸಮೀಕ್ಷಕ:-** ಸ್ವರ್ಗ ಒಂದೇ ಇರುವುದಾದಲ್ಲಿ, ರಾಜನೂ ಒಬ್ಬನೇ ಆಗಬೇಕು. ಆದುದರಿಂದ ಎಷ್ಟು ಜನ ದೀನರಿದ್ದಾರೋ, ಅವರೆಲ್ಲರೂ ಸ್ವರ್ಗಕ್ಕೆ ಹೋಗುವರಾದರೆ, ಸ್ವರ್ಗದಲ್ಲಿ ರಾಜ್ಯದ ಆಧಿಕಾರ ಯಾವನಿಗೆ ದಕ್ಕುವುದು? ಎಂದರೆ, ಪರಸ್ಪರ ಜಗಳ-ಕದನಗಳನ್ನು ಮಾಡುವರು ಮತ್ತು ರಾಜ್ಯದ ವ್ಯವಸ್ಥೆ ದಿಕ್ಕು-ದಿಸೆಯಿಲ್ಲದೇ ಹೋಗುವುದು. ಮತ್ತು ದೀನರು - ಎಂದರೆ ದರಿದ್ರರು - ಎಂಬ ಪಕ್ಷದಲ್ಲಿ ಅದೂ ಸರಿಯಲ್ಲ; ನಿರಭಿಮಾನರೆಂದು ಗ್ರಹಿಸುವಿರಾದರೆ, ಆಗಲೂ ಸರಿಹೋಗದು ಏಕೆಂದರೆ, ದೈನ್ಯ ಹಾಗೂ ಅಭಿಮಾನಗಳ ಅರ್ಥ ಒಂದೇ ಅಲ್ಲ. ಆದರೆ, ಯಾವನು ಮನಸ್ಸಿನಲ್ಲಿ ದೀನನಾಗಿರುತ್ತಾನೋ ಅವನಿಗೆ ಸಂತೋಷವೆಂದಿಗೂ ಉಂಟಾಗದು.[೮೦] ಆದುದರಿಂದ, ಈ ಮಾತು ಸರಿಯಲ್ಲ. ಯಾವಾಗ ಆಕಾಶ ಪೃಥಿವಿಗಳು ಕದಲಿ ಹೋಗುವವೋ, ಆಗ ವ್ಯವಸ್ಥೆಯೂ ಕದಲಿ ಹೋಗುವುದು! ಇಂತಹ ಅನಿತ್ಯವಾದ ವ್ಯವಸ್ಥೆ ಮಾನವರದಾಗಿರುತ್ತದೆ; ಸರ್ವಜ್ಞನಾದ ಈಶ್ವರನದಲ್ಲ. ಮತ್ತು ಈ ಆಜ್ಞೆಗಳನ್ನು ಒಪ್ಪಿಕೊಳ್ಳದವನು ಸ್ವರ್ಗದಲ್ಲಿ ಎಲ್ಲರಿಗಿಂತ ಅಲ್ಪನೆಂದು ಎಣಿಸಲ್ಪಡುವನು - ಎಂದು ಒಂದು ಪ್ರಲೋಭವನ್ನು ಮತ್ತು ಭಯವನ್ನು ಮಾತ್ರ ತೋರಿಸಿದ್ದಾರೆ. (೬೪)

*ನಮ್ಮ ದಿವಸಪೂರ್ತಿಯ ರೊಟ್ಟಿಯನ್ನು ನಮಗೆ ಇಂದು ಕೊಟ್ಟುಬಿಡು. ತನಗಾಗಿ ಪೃಥ್ವಿಯಲ್ಲಿ ಧನಸಂಚಯ ಮಾಡಬೇಡ (ಇಂ. ಮ್ಯಾ. ಪ:-೬ ಆ:-೧೧-೧೯)*

---

೭೯. Galilee.

೮೦. "ಅದೀನಾಃ ಸ್ಯಾಮ ಶರದಃ ಶತಮ್" [ಯಜು ೩೬.೨೪]

**ಸಮೀಕ್ಷಕ :-** ಇದರಿಂದ, ಯಾವ ಕಾಲದಲ್ಲಿ ಏಸುವಿನ ಜನನವಾಗಿದೆಯೋ, ಆ ಕಾಲದಲ್ಲಿ ಜನರು ಕಾಡಾಡಿಗಳು ಮತ್ತು ದರಿದ್ರರು ಆಗಿದ್ದರು ಮತ್ತು ಏಸುವೂ ಕೂಡ ದರಿದ್ರ ನಾಗಿದ್ದನು- ಎಂದು ತಿಳಿದುಬರುತ್ತದೆ. ಈ ಕಾರಣದಿಂದಲೇ ತಾನೇ ದಿನಪೂರ್ತಿಯ ರೊಟ್ಟಿಯ ಪ್ರಾಪ್ತಿಗಾಗಿ ಈಶ್ವರನಲ್ಲಿ ಪ್ರಾರ್ಥಿಸುತ್ತಾನೆ. ಹಾಗೆಯೇ ಮಾಡಲು ಕಲಿಸುತ್ತಾನೆ, ಮತ್ತು, ಹೀಗೆ ಇರುವುದಾದರೆ, ಕ್ರೈಸ್ತರು ಧನ-ಸಂಚಯವನ್ನೇಕೆ ಮಾಡುತ್ತಾರೆ? ಅವರು ಏಸುವಿನ ವಚನಕ್ಕೆ ವಿರುದ್ಧವಾಗಿ ನಡೆಯದೆ, ಎಲ್ಲವನ್ನೂ ದಾನ-ಪುಣ್ಯ ಮಾಡಿ, ದೀನರಾಗಿ ಹೋಗಬೇಕು. (೬೫)

*ನನ್ನನ್ನು 'ಪ್ರಭು! ಪ್ರಭು!!' ಎಂದು ಕರೆಯುವ ಪ್ರತಿಯೊಬ್ಬನೂ ಸ್ವರ್ಗದ ರಾಜ್ಯದಲ್ಲಿ ಪ್ರವೇಶಮಾಡುವುದಿಲ್ಲ. (ಇಂ.ಮ್ಯಾ. ಪ:-೭. ಆ:-೨೧)*

**ಸಮೀಕ್ಷಕ:-** ಈಗ ಆಲೋಚಿಸಿರಿ. ದೊಡ್ಡ ದೊಡ್ಡ ಪಾದರಿಗಳೂ, ಬಿಶಪ್ ಮಹೋದಯರೂ, ಮತ್ತು ಕ್ರೈಸ್ತರೂ, ಏಸುವಿನ ಈ ವಾಕ್ಯವನ್ನು ಸತ್ಯವೆಂದು ತಿಳಿಯುವರಾದರೆ, ಏಸುವನ್ನು ಪ್ರಭು- ಎಂದರೆ ಈಶ್ವರನೆಂದು ಎಂದಿಗೂ ಹೇಳಬಾರದು. ಈ ಮಾತನ್ನು ಒಪ್ಪುವುದಿಲ್ಲವಾದರೆ, ಪಾಪದಿಂದ ಎಂದಿಗೂ ಬಿಡುಗಡೆ ಹೊಂದಲಾರರು. (೬೬).

*ಆ ದಿನದಂದು ಬಹುಮಂದಿ ನನ್ನನ್ನು ಬೇಡುವರು. ಆಗ ನಾನು ತೆರೆ ನುಡಿಯಲ್ಲಿ-'ನಾನು ನಿಮ್ಮನ್ನು ತಿಳಿದಿಲ್ಲ. ದುಷ್ಕರ್ಮಮಾಡುವವರು ನನ್ನಿಂದ ದೂರಹೋಗಿ' ಎಂದು ಹೇಳುವೆನು. (ಇಂ. ಮ್ಯಾ. ಪ:- ೭. ಆ:- ೨೨-೨೩)*

**ಸಮೀಕ್ಷಕ:-** ನೋಡಿರಿ, ಏಸುವು ಕಾಡಾಡಿ ಮನುಷ್ಯರಿಗೆ ಭರವಸೆ ಕೊಡುವುದಕ್ಕಾಗಿ. ಸ್ವರ್ಗದಲ್ಲಿ ನ್ಯಾಯಾಧೀಶನಾಗಲು ಇಚ್ಛಿಸುತ್ತಿದ್ದನು. ಇದು ಕೇವಲ ಮುಗ್ಧ ಮಾನವರಿಗೆ ಪ್ರಲೋಭನ ಒಡ್ಡುವ ಸಂಗತಿಯಾಗಿದೆ. (೬೭).

*ಮತ್ತು ನೋಡಿರಿ; ಒಬ್ಬ ಕುಷ್ಠರೋಗಿಯು ಬಂದು, ಪ್ರಣಾಮಮಾಡಿ- "ಓ ಪ್ರಭೋ! ತಾವು ಇಚ್ಛಿಸುವಿರಾದರೆ, ನನ್ನನ್ನು ಶುದ್ಧೀಕರಿಸಬಲ್ಲಿರಿ." ಎಂದನು. ಏಸುವು ಕೈಚಾಚಿ, ಅವನನ್ನು ಸ್ಪರ್ಶಿಸಿ - 'ನಾನಂತೂ ನೀನು ರೋಗರಹಿತನಾಗ ಬೇಕೆಂದು ಆಶಿಸುತ್ತೇನೆ." ಎಂದನು. ಮತ್ತು ಅವನ ಕುಷ್ಠ ತತ್ಕ್ಷಣ ವಾಸಿಯಾಗಿಹೋಯಿತು. (ಇಂ.ಮ್ಯಾ. ಪ:-೮. ಆ:-೨,೩)*

**ಸಮೀಕ್ಷಕ:-** ಈ ಮಾತುಗಳೆಲ್ಲವೂ ಮುಗ್ಧ ಮಾನವರನ್ನು ಸಿಕ್ಕಿಸಿಕೊಳ್ಳುವವಾಗಿವೆ. ಏಕೆಂದರೆ, ಕ್ರೈಸ್ತರು ಈ ವಿದ್ಯಾಸೃಷ್ಟಿಕ್ರಮಕ್ಕೆ ವಿರುದ್ಧವಾದ ಮಾತುಗಳನ್ನು ಸತ್ಯವೆಂದು ಒಪ್ಪಿಕೊಳ್ಳುತ್ತಾರೆ - ಎಂದಾಗ, ಶುಕ್ರಾಚಾರ್ಯರು, ಧನ್ವಂತರಿ, ಕಶ್ಯಪ ಮೊದಲಾದವರ ವಿಷಯದಲ್ಲಿ ಪುರಾಣಗಳಲ್ಲಿ ಮತ್ತು ಭಾರತದಲ್ಲಿ "ಅನೇಕ ದೈತ್ಯರ ಮೃತಸೈನ್ಯವನ್ನು ಬದುಕಿಸಿಬಿಟ್ಟರು. ಬೃಹಸ್ಪತಿಯ ಮಗ ಕಚನನ್ನು ಚೂರು ಚೂರು ಮಾಡಿ, ಪ್ರಾಣಿಗಳಿಗೂ ಮತ್ತು ಮೀನುಗಳಿಗೂ ತಿನ್ನಿಸಿಬಿಟ್ಟರು. ಮತ್ತೂ ಕೂಡ ಶುಕ್ರಾಚಾರ್ಯರು ಅವನನ್ನು ಜೀವಂತನಾಗಿ ಮಾಡಿದರು. ಆಮೇಲೆ ಕಚನನ್ನು ಕೊಂದು, ಶುಕ್ರಾಚಾರ್ಯರಿಗೆ ತಿನ್ನಿಸಿದರು. ಆದರೂ ಕೂಡ, ಅವನನ್ನು ಹೊಟ್ಟೆಯಲ್ಲಿ ಜೀವಂತನನ್ನಾಗಿ ಮಾಡಿ, ಹೊರತೆಗೆದರು; ತಾವೇ ಸತ್ತು ಹೋದರು. ಕಚನು ಅವರನ್ನು ಬದುಕಿಸಿದನು. ಕಶ್ಯಪ ಋಷಿಯು ಮನುಷ್ಯ ಸಹಿತವಾದ ವೃಕ್ಷವು. ತಕ್ಷಕನಿಂದ ಭಸ್ಮವಾದ ಮೇಲೆ, ಪುನಃ ವೃಕ್ಷವನ್ನು ಮತ್ತು ಮನುಷ್ಯನನ್ನು ಬದುಕಿಸಿದರು. ಧನ್ವಂತರಿಯು ಲಕ್ಷಾಂತರ ಶವಗಳನ್ನು ಸಜೀವಗೊಳಿಸಿದನು. ಲಕ್ಷಾಂತರ ಜನರ ಕುಷ್ಠರೋಗಿಗಳೇ ಮೊದಲಾದ ಅಸ್ವಸ್ಥರನ್ನು ಗುಣಪಡಿಸಿದನು. ಲಕ್ಷಾಂತರ ಕುರುಡರಿಗೆ ಮತ್ತು ಕಿವುಡರಿಗೆ ಕಣ್ಣುಗಳನ್ನೂ, ಹಾಗೂ ಕಿವಿಗಳನ್ನೂ ಕೊಟ್ಟನು"- ಎಂದು ಮೊದಲಾಗಿ ಹೇಳಿರುವ ಕಥೆಯನ್ನು ಸುಳ್ಳೆಂದು ಹೇಳುತ್ತೀರಿ ಏಕೆ? ಮೇಲೆ ಹೇಳಿದ ಮಾತುಗಳು ಸುಳ್ಳಾಗಿದ್ದರೆ, ಏಸುವಿನ ಮಾತೇಕೆ ಸುಳ್ಳಲ್ಲ? ಅನ್ಯರ ಮಾತನ್ನು ಸುಳ್ಳೆಂದೂ ಮತ್ತು ತಮ್ಮ ಸುಳ್ಳುಮಾತನ್ನೂ ಕೂಡ ಸತ್ಯವೆಂದು ಹೇಳುವುದಾದರೆ, ಹಠಮಾರಿಗಳಲ್ಲದೆ ಮತ್ತೇನು? ಆದುದರಿಂದ ಕ್ರೈಸ್ತರ ಮಾತುಗಳು ಹಠಮಾರಿತನದ ಹಾಗೂ ಬಾಲಭಾಷಿತದಂತಹವಾಗಿವೆ. (೬೮).

*ಆವರೆಗೆ ಆ ಮಾರ್ಗದಿಂದ ಯಾವನೂ ಹೋಗಲೂ ಕೂಡ ಶಕ್ಯವಿಲ್ಲದಂತೆ ಅತಿ ಪ್ರಚಂಡರಾಗಿದ್ದ ಭೂತಗ್ರಸ್ತಮಾನವರು ಆಗ ಸ್ಮಶಾನದಿಂದ ಹೊರಟುಬಂದು, ಅವನನ್ನು ಸಂಧಿಸಿದರು. ಮತ್ತು ನೋಡಿರಿ, ಅವರು ಗಟ್ಟಿಯಾಗಿ -"ಓ ಏಸು! ಈಶ್ವರ ಪುತ್ರ! ತಮಗೆ ನಮ್ಮ ಬಳಿ ಕೆಲಸವೇನಿದೆ? ಅವಧಿಗೆ ಮುನ್ನವೇ ತಾವು ನಮಗೆ ನೋವನ್ನು ಕೊಡಲು ಇಲ್ಲಿಗೆ ಬಂದಿದ್ದೀರೇನು?" ಎಂದು ಕೇಳಿದರು. ಅವರಲ್ಲಿನ ಭೂತಗಳು "ತಾವು ನಮ್ಮನ್ನು ಉಚ್ಚಾಟಿಸುವಿರಾದರೆ, ಹಂದಿಗಳ ಗುಂಪಿನಲ್ಲಿ ನಮ್ಮನ್ನು ಸೇರಿಕೊಳ್ಳಲುಬಿಡಿರಿ". ಎಂದು ವಿನಂತಿ ಮಾಡಿಕೊಂಡುವು. ಅವನು ಅವಕ್ಕೆ - "ಹೋಗಿರಿ".*

*ಎಂದು ಹೇಳಿದನು. ಮತ್ತು ಅವು ತೆರಳಿ ಹಂದಿಗಳ ಗುಂಪಿನಲ್ಲಿ ಸೇರಿಕೊಂಡವು. ಮತ್ತು ನೋಡಿರಿ, ಹಂದಿಗಳ ಸಮಸ್ತ ಗುಂಪೂ ಕಡಿದಾದ ಸ್ಥಳದಿಂದ ಸಮುದ್ರಕ್ಕೆ ಓಡಿಹೋಯಿತು ಮತ್ತು ನೀರಿನಲ್ಲಿ ಮುಳುಗಿ ಮುಳುಗಿ ಸತ್ತಿತು. (ಇಂ. ಮ್ಯಾ. ಪ:–೮, ಆ:–೨೮–೩೩)*

**ಸಮೀಕ್ಷಕ:–** ಓಹೋ! ಈ ಸ್ಥಳದಲ್ಲಿ ಸ್ವಲ್ಪ ಆಲೋಚಿಸುವುದಾದರೆ, ಈ ಮಾತುಗಳೆಲ್ಲಾ ಸುಳ್ಳಾಗಿವೆ. ಏಕೆಂದರೆ, ಮೃತನಾದ ಮನುಷ್ಯ ರುದ್ರಭೂಮಿಯಿಂದ ಎಂದಿಗೂ ಹೊರಟು ಬರಲಾರನು. ಅವರು ಯಾವನ ಮೈಮೇಲೆಯೂ ಬರುವುದಿಲ್ಲ; ಸಂವಾದವನ್ನೂ ಮಾಡುವುದಿಲ್ಲ. ಈ ಮಾತುಗಳೆಲ್ಲವೂ ಅಜ್ಞಾನಿಗಳವು. ಯಾರು ಮಹಾಕಾಡಾಡಿಗಳಾಗಿರುತ್ತಾರೋ, ಅವರು ಇಂತಹ ಮಾತುಗಳ ಮೇಲೆ ನಂಬಿಕೆಯಿಡುತ್ತಾರೆ. ಮತ್ತು ಏಸುವು ಆ ಹಂದಿಗಳ ಕೊಲೆ ಮಾಡಿಸಿದನು. ಹಂದಿಯವರಿಗೆ ನಷ್ಟವನ್ನುಂಟುಮಾಡುವ ಪಾಪ ಏಸುವಿಗೆ ತಗಲಿರಬಹುದು. ಮತ್ತು ಕೈಸ್ತರು ಏಸುವನ್ನು " ಪಾಪವನ್ನು ಕ್ಷಮಿಸುವವನು ಮತ್ತು ಪವಿತ್ರಗೊಳಿಸುವವನು"– ಎಂದು ಅಂಗೀಕರಿಸುತ್ತಾರೆ. ಹಾಗಾದರೆ– ಆ ಭೂತಗಳನ್ನು ಪವಿತ್ರಗೊಳಿಸಲಾರದೇ ಹೋದನೇಕೆ? ಮತ್ತು ಹಂದಿಯವರ ನಷ್ಟವನ್ನು ತುಂಬಿಕೊಡಲಿಲ್ಲವೇಕೆ? ಆಧುನಿಕ ಕಾಲದ ಸುಶಿಕ್ಷಿತರಾದ ಕ್ರೈಸ್ತ ಅಂಗ್ಲ ಜನರು ಈ ಬರುಡೆಗಳನ್ನೂ ಒಪ್ಪಿಕೊಳ್ಳುತ್ತಿರಬಹುದೇನು? ಒಪ್ಪಿಕೊಳ್ಳುವರಾದರೆ, ಭ್ರಮಜಾಲದಲ್ಲಿ ಬಿದ್ದಿದ್ದಾರೆ. (೧೯)

*ನೋಡಿರಿ, ಮಂಚದ ಮೇಲೆ ಒರಗಿದ್ದ ಪಾರ್ಶ್ವಘಾತದ ಒಬ್ಬ ರೋಗಿಯನ್ನು ಜನರು ಅವನ ಬಳಿ ಕರೆತಂದರು . ಮತ್ತು ಏಸುವು ಅವರ ನಂಬಿಕೆಯನ್ನು ನೋಡಿ ಆ ಪಾರ್ಶ್ವಘಾತದ ರೋಗಿಗೆ – "ಓ ಮಗನೇ! ಧೈರ್ಯಧರಿಸು. ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ. ನಾನು ಧಾರ್ಮಿಕರನ್ನಲ್ಲ; ಆದರೆ ಪಾಪಿಗಳನ್ನು ಪಶ್ಚಾತ್ತಾಪಪಡಲು ಕರೆಯುವುದಕ್ಕಾಗಿ ಬಂದಿದ್ದೇನೆ". ಎಂದು ಹೇಳಿದನು. (ಇಂ.ಮ್ಯಾ. ಪ:– ೯. ಆ:–೨, ೧೩)*

**ಸಮೀಕ್ಷಕ :–** ಹಿಂದೆ ನಾವು ಬರೆದಿರುವುದು ಹೇಗೆ ಅಸಂಭವವೋ, ಈ ಮಾತೂ ಕೂಡ ಹಾಗೆಯೇ ಅಸಂಭವವಾಗಿದೆ, ಮತ್ತು, ಪಾಪವನ್ನು ಕ್ಷಮಿಸುವ ಮಾತಂತೂ ಕೇವಲ ಮುಗ್ಧಮಾನವರಿಗೆ ಪ್ರಲೋಭನವನ್ನೊಡ್ಡಿ , ಸಿಕ್ಕಿಸಿಕೊಳ್ಳುವಂತಹುದೇ ಆಗಿದೆ. ಹೇಗೆ ಒಬ್ಬನು ಸೇವಿಸಿದ ಮದಿರಾ, ಭಂಗಿ ಹಾಗೂ ಅಫೀಮುಗಳಿಂದ ಬೇರೆಯವನಿಗೆ ಮದವೇರುವುದಿಲ್ಲವೋ, ಹಾಗೆಯೇ ಯಾವನೋ ಮಾಡಿದ ಪಾಪ ಮತ್ತಾವನೋ ಒಬ್ಬನ ಬಳಿಗೆ ಹೋಗುವುದಿಲ್ಲ. ಆದರೆ, ಯಾವನು ಮಾಡುತ್ತಾನೋ, ಅವನೇ ಅನುಭವಿಸುತ್ತಾನೆ. ಇದೇ ಈಶ್ವರನ ನ್ಯಾಯವಾಗಿದೆ. ಒಬ್ಬನು ಮಾಡಿದ ಪಾಪ–ಪುಣ್ಯಗಳು ಮತ್ತೊಬ್ಬನಿಗೆ ತಗಲುವುವಾದರೆ, ಇಲ್ಲವೇ ನ್ಯಾಯಾಧೀಶನು ಸ್ವತಃ ಅಪರಾಧಿಗೆ ಸಿಕ್ಕಬೇಕಾದ ಶಿಕ್ಷೆಯನ್ನು ಗ್ರಹಿಸುವ ಹಾಗೆ, ಈಶ್ವರನು ಕರ್ತೃಗಳಿಗೆಯೇ ಸಿಕ್ಕಬೇಕಾದ ಫಲಗಳನ್ನು ಅವರಿಗೆ ಕೊಡದೆ, ತಾನೇ ತೆಗೆದುಕೊಳ್ಳುವನಾದರೆ, ಅವನು ಅನ್ಯಾಯಕಾರಿಯಾಗಿ ಹೋದಾನು. ನೋಡಿರಿ, ಧರ್ಮವೇ ಕಲ್ಯಾಣಕಾರಕವಾಗಿದೆ ; ಏಸು ಅಥವಾ ಬೇರೆ ಯಾರೂ ಅಲ್ಲ. ಮತ್ತು ಧರ್ಮಾತ್ಮರಿಗೆ ಏಸು ಮೊದಲಾದವರ ಅವಶ್ಯಕತೆಯೂ ಕೂಡ ಇಲ್ಲ; ಪಾಪಿಗಳಿಗೂ ಇಲ್ಲ. ಏಕೆಂದರೆ, ಯಾವನ ಪಾಪವೂ ಕೂಡ (ಫಲಭೋಗವಿಲ್ಲದೆ) ಬಿಟ್ಟು ಹೋಗಲಾರದು. (೨೦)

*ಏಸುವು ತನ್ನ ೧೨ ಮಂದಿ ಶಿಷ್ಯರನ್ನು ತನ್ನ ಬಳಿಗೆ ಕರೆಯಿಸಿಕೊಂಡು, ಅವುಗಳನ್ನು ಉಚ್ಚಾಟಿಸುವುದಕ್ಕಾಗಿಯೂ, ಹಾಗೂ ಪ್ರತಿಯೊಂದು (ದೈಹಿಕ) ರೋಗವನ್ನೂ, ಪ್ರತಿಯೊಂದು (ಮಾನಸಿಕ) ವ್ಯಾಧಿಯನ್ನೂ ವಾಸಿಮಾಡುವ ಸಲುವಾಗಿಯೂ, ಅವರಿಗೆ ಅಪವಿತ್ರವಾದ ಭೂತಗಳ ಮೇಲೆ ಅಧಿಕಾರವನ್ನಿತ್ತನು. ಮಾತನಾಡುವವರು ನೀವೇನೂ ಅಲ್ಲ; ಆದರೆ, ನಿಮ್ಮ ತಂದೆಯ ಆತ್ಮ ನಿಮ್ಮೊಳಗಿನಿಂದ ಮಾತನಾಡುತ್ತಾನೆ. ನಾನು ಪೃಥಿವಿಯ ಮೇಲೆ ಒಂದುಗೂಡಿಸಲು ಬಂದಿದ್ದೇನೆಂದು ತಿಳಿಯಬೇಡಿ; ಆದರೆ, ಖಡ್ಗವನ್ನು ಪ್ರಯೋಗಿಸಲು ಬಂದಿದ್ದೇನೆ. ನಾನು ಮಗನನ್ನು ಅವನ ತಂದೆಯಿಂದ, ಮತ್ತು ಮಗಳನ್ನು ಅವಳ ತಾಯಿಯಿಂದ, ಮತ್ತು ಸೊಸೆಯನ್ನು ಅವಳ ಅತ್ತೆಯಿಂದ ಬೇರೆಮಾಡಲು ಬಂದಿದ್ದೇನೆ. ಮಾನವನ ಮನೆಯ ಜನರೇ ಅವನ ವೈರಿಗಳಾಗುವರು. (ಇಂ.ಮ್ಯಾ.ಪ:–೩೦ ಆ:– ೩೩,೩೪–೩೬)*

**ಸಮೀಕ್ಷಕ :–** ಯಾರಲ್ಲಿ ಒಬ್ಬನು ೩೦ ರೂಪಾಯಿಗಳ ಲೋಭದಿಂದ ಏಸುವನ್ನು ಹಿಡಿಯಿಸುವನೋ, ಮತ್ತು ಅನ್ಯರು ಪರಿವರ್ತಿತರಾಗಿ ಬೇರೆ ಬೇರೆ ಓಡಿಹೋಗುವರೋ, ಆ ಶಿಷ್ಯರೇ ಇವರಾಗಿದ್ದಾರೆ. ಇನ್ನು, ಭೂತಗಳ ಆಗಮನ ಅಥವಾ ನಿರ್ವಾಸನ. ಔಷಧವಿಲ್ಲದೆ ಅಥವಾ ಪಥ್ಯವಿಲ್ಲದೆ ವ್ಯಾಧಿಗಳು ದೂರವಾಗುವುದು ಎಂಬ ಮಾತು ವಿದ್ಯೆಗೇ ವಿರುದ್ಧವಾಗಿದೆ; ಸೃಷ್ಟಿಕ್ರಮದ ದೃಷ್ಟಿಯಿಂದ ಅಸಂಭವವಾಗಿದೆ. ಆದುದರಿಂದ, ಇಂತಹ ಮಾತುಗಳನ್ನಂಗೀಕರಿಸುವುದು ಅಜ್ಞಾನಿಗಳ ಕೆಲಸವಾಗಿದೆ. ಜೀವರು ಮಾತನಾಡುವವರಲ್ಲವಾದರೆ, ಈಶ್ವರನು ಮಾತನಾಡುವವನಾದರೆ, ಜೀವರೇನು ಕೆಲಸಮಾಡುತ್ತಾರೆ?

ಮತ್ತು ಸತ್ಯದ ಅಥವಾ ಮಿಥ್ಯಾಭಾಷಣದ ಫಲವಾದ ಸುಖವನ್ನು ಅಥವಾ ದುಃಖವನ್ನು ಈಶ್ವರನೇ ಅನುಭವಿಸುತ್ತಿರಬಹುದು! ಇದೂ ಕೂಡ ಒಂದು ಅನುಚಿತವಾದ ಕಥನವೇ ಸರಿ. ಮತ್ತು ಏಸು ಒಡಕು ಹುಟ್ಟಿಸಲು ಮತ್ತು ಹೋರಾಡಿಸಲು ಬಂದಿದ್ದನು – ಎಂಬ ಹೇಳಿಕೆಯಂತೆಯೇ ಈ ದಿನಗಳಲ್ಲಿ ಜನರಲ್ಲಿ ಜಗಳ ನಡೆಯುತ್ತಿದೆ. ಒಡಕು ಹುಟ್ಟಿಸುವುದರಿಂದ ಸರ್ವದಾ ಮಾನವರಿಗೆ ದುಃಖವಾಗುತ್ತದೆ. ಇದೆಂತಹ ಮಹಾಪ್ರಮಾದದ ವಿಷಯ? ಮತ್ತು ಕ್ರೈಸ್ತರು ಇದನ್ನೇ ಗುರುಮಂತ್ರವೆಂದು[೮೧] ತಿಳಿದುಕೊಂಡಿದ್ದಾರೇನೋ? ಏಕೆಂದರೆ, ಒಬ್ಬರಿಂದ ಇನ್ನೊಬ್ಬರನ್ನು ಒಡೆಯುವುದನ್ನು ಏಸುವೇ ಒಳ್ಳೆಯದೆಂದು ತಿಳಿಯುತ್ತಿದ್ದಾಗ, ಇವರು ಏತಕ್ಕೆ ಒಪ್ಪಿಕೊಳ್ಳದೇ ಇದ್ದಾರು? ಮನೆಯ ಜನರನ್ನೇ ಮನೆಯವರ ಶತ್ರುಗಳನ್ನಾಗಿ ಮಾಡುವುದು ಏಸುವಿನದೇ ಕಾರ್ಯವಿದ್ದೀತು.[೮೨] ಇದು ಶ್ರೇಷ್ಠ ಪುರುಷರ ಕೆಲಸವಲ್ಲ. (೭೧)

*ಆಗ ಏಸುವು – "ನಿಮ್ಮ ಬಳಿ ಎಷ್ಟು ರೊಟ್ಟಿಗಳಿವೆ?" ಎಂದು ಕೇಳಿದನು. ಆಗ ಅವರು "ಏಳು ಇವೆ. ಮತ್ತು ಚಿಕ್ಕ ಮೀನುಗಳಿವೆ." ಎಂದರು. ಆಗ ಅವನು ಜನರಿಗೆ ನೆಲದ ಮೇಲೆ ಕುಳಿತುಕೊಳ್ಳಲು ಆಜ್ಞೆಮಾಡಿದನು. ಆಗ ಅವನು ಏಳು ರೊಟ್ಟಿಗಳನ್ನು ಮತ್ತು ಮೀನುಗಳನ್ನು ಧನ್ಯವೆಂದು ಭಾವಿಸಿ ಮುರಿದನು ಮತ್ತು ತನ್ನ ಶಿಷ್ಯರಿಗೆ ಕೊಟ್ಟನು. ಮತ್ತು ಶಿಷ್ಯರು ಜನರಿಗೆ ಕೊಟ್ಟರು. ಹೀಗೆ ಎಲ್ಲರೂ ಉಂಡು ತೃಪ್ತರಾದರು. ಮತ್ತು ಯಾವ ತುಣುಕುಗಳು ಉಳಿದವೋ, ಅವುಗಳಿಂದ ಏಳು ಬುಟ್ಟಿಗಳನ್ನು ತುಂಬಿಸಿ ಎತ್ತಿದರು. ಊಟಮಾಡಿದವರು ಹೆಂಗಸರು–ಮಕ್ಕಳನ್ನುಳಿದು ನಾಲ್ಕು ಸಾವಿರ ಜನರಿದ್ದರು. (ಇಂ.ಮ್ಯಾ.ಪ:– ೩೫.ಆ:–೩೪–೩೮)*

**ಸಮೀಕ್ಷಕ :–** ಅವಲೋಕಿಸಿರಿ ಈಗ! ಇದು ಆಧುನಿಕ ಆಷಾಢಭೂತಿಸಿದ್ಧರು ಮತ್ತು ಇಂದ್ರಜಾಲಮಾಡುವವರು ಮೊದಲಾದವರ ಮಾತಿಗೆ ಸಮನಾದ ಛಲದ ಮಾತಲ್ಲವೇನು? ಆ ರೊಟ್ಟಿಗಳಲ್ಲಿ ಬೇರೆ ರೊಟ್ಟಿಗಳು ಎಲ್ಲಿಂದ ಬಂದವು? ಏಸುವಿನಲ್ಲಿ ಇಂತಹ ಸಿದ್ಧಿಗಳಿದ್ದಲ್ಲಿ, ತಾನು ಹಸಿದವನಾಗಿ ಅತ್ತಿಯ ಹಣ್ಣುಗಳನ್ನು ತಿನ್ನಲು ಅಲೆದಾಡುತ್ತಿದ್ದನಾದರೂ ಏಕೆ? ತನ್ನ ಸಲುವಾಗಿ ಮಣ್ಣು, ನೀರು ಮತ್ತು ಕಲ್ಲು– ಮೊದಲಾದುದರಿಂದ ಮೋಹನ್ ಭೋಗ್[೮೩] ರೊಟ್ಟಿಗಳನ್ನು ಏಕೆ ಮಾಡಿಕೊಳ್ಳಲಿಲ್ಲ? ಈ ಮಾತುಗಳೆಲ್ಲವೂ ಬಾಲಕರ ಎಳೆಯಾಟದವಾಗಿವೆ. ಎಷ್ಟೋ ಮಂದಿ ಸಾಧು–ವೈರಾಗಿಗಳು ಇಂತಹದೇ ಛಲದ ವ್ಯವಹಾರ ಮಾಡಿ, ಮುಗ್ಧ ಮಾನವರನ್ನು ವಂಚಿಸುತ್ತಾರಷ್ಟೇ? ಅವರ ಮಾತುಗಳಂತೆಯೇ ಈ ಮಾತುಗಳೂ ಕೂಡ ವಂಚನೆಯಿಂದ ಕೂಡಿದವಾಗಿವೆ. (೭೨)

*ಮತ್ತು ಆಗ ಅವನು ಪ್ರತಿಯೊಬ್ಬ ಮಾನವನಿಗೂ ಅವನ ಕಾರ್ಯಕ್ಕೆ ಅನುಸಾರವಾಗಿ ಫಲವನ್ನು ಕೊಡುವನು . (ಇಂ.ಮ್ಯಾ.ಪ:–೧೬. ಆ:–೨೭).*

**ಸಮೀಕ್ಷಕ :–** ಕರ್ಮಾನುಸಾರ ಫಲ ಕೊಡಲ್ಪಡುವುದು – ಎಂದಾಗ, ಕ್ರೈಸ್ತರು ಪಾಪ ಕ್ಷಮಿಸಲ್ಪಡುವುದೆಂದೂ ಉಪದೇಶಿಸುವುದು ವ್ಯರ್ಥವಾಗಿದೆ, ಮತ್ತು, ಅದು ಸತ್ಯವಾದರೆ, ಇದು ಸುಳ್ಳಾಗುವುದು. ಯಾವನಾದರೂ ಕ್ಷಮಿಸಲು ಯೋಗ್ಯವಾದುವು ಕ್ಷಮಿಸಲ್ಪಡುತ್ತವೆ ಮತ್ತು ಕ್ಷಮಿಸಲು ಯೋಗ್ಯವಲ್ಲದುವು ಕ್ಷಮಿಸಲ್ಪಡುವುದಿಲ್ಲವೆಂದು ಹೇಳುವನಾದರೆ, ಇದೂ ಕೂಡ ಸರಿಯಲ್ಲ. ಏಕೆಂದರೆ, ಎಲ್ಲ ಕರ್ಮಗಳ ಫಲಗಳನ್ನೂ ಯಥಾಯೋಗ್ಯವಾಗಿ ಕೊಡುವುದರಿಂದಲೇ ನ್ಯಾಯ ಮತ್ತು ಪೂರ್ಣ ದಯೆ ಸಿದ್ಧಿಸುವುದು. (೭೩).

---

೮೧. ಯಾವ ಜನಾಂಗದರ ಸ್ವಭಾವ ಹೇಗಿರುತ್ತದೆ ಎಂದರಿಯಬೇಕಾದರೆ, ಅವರು ಅಂಗೀಕರಿಸಿರುವ ಧರ್ಮ[?] ಗ್ರಂಥಗಳ 'ತಪ್ಪು–ಒಪ್ಪು'ಗಳಿಂದ ಕೂಡಿರುವ ಉಪದೇಶವನ್ನು ಅಧ್ಯಯನ ಮಾಡಬೇಕು. ಉದಾಹರಣೆಗೆ, ಹಿಂದೂಗಳ ಸ್ವಭಾವ ಪುರಾಣದಿಂದ; ಕ್ರೈಸ್ತರ ಸ್ವಭಾವ ಬೈಬಲ್ಲಿನಿಂದ ಮತ್ತು ಮುಸಲ್ಮಾನರ ಸ್ವಭಾವ ಕುರಾನಿನಿಂದ ಅರಿವಾಗುತ್ತದೆ.

೮೨. ಈ ಕಾರಣದಿಂದಲೇ, ಆಂಗ್ಲರು ಮೊದಲಾದ ಪಶ್ಚಿಮದೇಶೀಯ ಕ್ರೈಸ್ತರು ಜಗತ್ತಿನಲ್ಲಿ ಎಲ್ಲಿ ಎಲ್ಲಿಗೆ ಹೋದರೋ ಅಲ್ಲಿ ಅಲ್ಲಿ ವಾಸ ಮಾಡುತ್ತಿದ್ದ ವಿಭಿನ್ನ ಜಾತಿಗಳ ಮತ್ತು ಜನಾಂಗಗಳ ನಡುವೆ ಪರಸ್ಪರ ದ್ವೇಷ ಹುಟ್ಟಿಸಿ, ಕಾದಾಡಿಸಿ, ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಂಡರು. –ಯು.ಮೀ.

ಆದ್ದರಿಂದಲೇ, ಮಹರ್ಷಿ ದಯಾನಂದರು ಭಾರತದ ಅವನತಿಗೆ, ಪರಾಧೀನತೆಗೆ ಪರಸ್ಪರ ಒಡಕೇ ಕಾರಣವೆಂದು ಘೋಷಿಸಿ, ಅದನ್ನು ಹೋಗಲಾಡಿಸಲು ಅದರ ಉಪಾಯಗಳನ್ನು "ಸತ್ಯಾರ್ಥಪ್ರಕಾಶ"ದ ಗ್ರಂಥದಲ್ಲಿ ಬಿತ್ತರಿಸಿದ್ದಾರೆ. ಆದರೆ, ಸಂಘಟನೆಗೆ ಶತೃಗಳಾದ ಮತ್ತು ವೈಯುಕ್ತಿಕ ಪ್ರಧಾನತೆಗಾಗಿ ಹೋರಾಡುವ ಭಾರತೀಯ ಹಿಂದೂಗಳು ಅವರ ಮಾತನ್ನೇಕೆ ಕೇಳುವರು? ಯಾವನು ಸಂಘಟನೆಗಾಗಿ ವೈಯುಕ್ತಿಕ ಮತ್ತು ಸಾಂಪ್ರದಾಯಿಕ ಚಿಹ್ನೆಗಳನ್ನು ಅಳಿಸಲು ಯಾವನು ಹೇಳುವನೋ ಅವನೇ ಇವರಿಗೆ ಶತ್ರುವಾಗಿ ಕಾಣಿಸುತ್ತಾನೆ.

೮೩. ಎಂದರೆ, ತುಪ್ಪದ ಸಿಹಿ ಸಜ್ಜಿಗೆ.

*ಓ ನಂಬಿಕೆಯಿಲ್ಲದ ಮತ್ತು ಹಠವಾದಿಗಳಾದ ಜನರೇ! ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ. ನಿಮಗೆ ಸಾಸಿವೆಯ ಒಂದು ಕಾಳಿನಷ್ಟು ನಂಬಿಕೆಯಿದ್ದರೆ, ನೀವು ಈ ಪರ್ವತಕ್ಕೆ 'ಇಲ್ಲಿಂದ ಅಲ್ಲಿಗೆ ಹೊರಟು ಹೋಗು' ಎಂದು ಹೇಳುವಿರಾದರೆ, ಅದು ಹೊರಟು ಹೋಗುವುದು ಮತ್ತು ಯಾವ ಕೆಲಸವೂ ನಿಮಗೆ ಅಸಾಧ್ಯವಾಗುವುದಿಲ್ಲ. (ಇಂ. ಮ್ಯಾ.ಪ:-೧೭. ಆ:-೧೭ ,೨೦)*

**ಸಮೀಕ್ಷಕ :-** ಈಗ ಕ್ರೈಸ್ತರು, 'ಬನ್ನಿರಿ. ನಮ್ಮ ಮತದಲ್ಲಿ ಪಾಪಗಳನ್ನು ಕ್ಷಮೆಮಾಡಿಸಿ ಕೊಳ್ಳಿರಿ. ಮುಕ್ತಿಯನ್ನು ಗಳಿಸಿರಿ' ಎಂದು ಮೊದಲಾಗಿ, ಉಪದೇಶಿಸುತ್ತಾ ತಿರುಗುತ್ತಾರಲ್ಲ; ಅದೆಲ್ಲವೂ ಮಿಥ್ಯೆಯೇ ಆಗಿದೆ. ಏಕೆಂದರೆ, ಏಸುವಿನಲ್ಲಿ ಪಾಪವನ್ನು ಬಿಡಿಸುವ, ನಂಬಿಕೆಯನ್ನು ಮೂಡಿಸುವ ಮತ್ತು ಪವಿತ್ರಗೊಳಿಸುವ ಸಾಮರ್ಥ್ಯವಿದ್ದಿದ್ದರೆ, ತನ್ನ ಶಿಷ್ಯರ ಆತ್ಮಗಳನ್ನು ನಿಷ್ಪಾಪಗಳನ್ನಾಗಿಯೂ, ಶ್ರದ್ಧಾಳುಗಳನ್ನಾಗಿಯೂ, ಪವಿತ್ರವಾದುವುಗಳನ್ನಾಗಿಯೂ ಮಾಡುತ್ತಿರಲಿಲ್ಲವೇಕೆ? ಯಾರು ಏಸುವಿನ ಜೊತೆ-ಜೊತೆಯಲ್ಲಿಯೇ ತಿರುಗಾಡುತ್ತಿದ್ದರೋ, ಅವರನ್ನೂ ಕೂಡ ಶುದ್ಧರನ್ನಾಗಿಯೂ ನಂಬಿಕೆಯುಳ್ಳವರನ್ನಾಗಿಯೂ, ಕಲ್ಯಾಣಕಾರಿಗಳನ್ನಾಗಿಯೂ ಮಾಡಲಾರದೇ ಹೋದನು; ಅವನು ಮೃತನಾದ ಮೇಲೆ ಎಲ್ಲಿದ್ದಾನೋ ತಿಳಿಯದು. ಈ ಕಾಲದಲ್ಲಿ ಯಾವನನ್ನೂ ಪವಿತ್ರಗೊಳಿಸಲಾರನು. ಏಸುವಿನ ಅನುಯಾಯಿಗಳು ಸಾಸಿವೆಯಷ್ಟು ನಂಬಿಕೆಯನ್ನೂ ಹೊಂದಿರದವರಾಗಿದ್ದರು; ಮತ್ತು ಅವರೇ ಈ ಇಂಜೀಲ್ ಪುಸ್ತಕವನ್ನು ರಚಿಸಿದ್ದಾರೆ. ಈ ಸ್ಥಿತಿಯಲ್ಲಿ, ಇದರ ಪ್ರಾಮಾಣ್ಯವಾದರೂ ಹೇಗಾದೀತು? ಏಕೆಂದರೆ, ನಂಬಿಕೆಯಿಲ್ಲದವರೂ, ಅಪವಿತ್ರಾತ್ಮರೂ, ಅಧರ್ಮಿಗಳೂ ಆದ ಮಾನವರ ಲೇಖನದ ಮೇಲೆ ನಂಬಿಕೆಯಿಡುವುದು ಆತ್ಮಕಲ್ಯಾಣವನ್ನಿಚ್ಛಿಸುವ ಮಾನವರ ಕಾರ್ಯವಲ್ಲ. ಮತ್ತು ಇದರಿಂದಲೇ ಏಸುವಿನ ಈ ಮಾತು ಸತ್ಯವಾಗಿರುವುದಾದರೆ, ಯಾವ ಕ್ರೈಸ್ತನಲ್ಲಿಯೂ ಒಂದು ಸಾಸಿವೆಯ ಕಾಳಿನಷ್ಟೂ ವಿಶ್ವಾಸವು, ಎಂದರೆ ನಂಬಿಕೆಯು ಇಲ್ಲವೆಂದೂ ಕೂಡ ಸಿದ್ಧವಾಗಬಲ್ಲದು. ಯಾವನೇ ಅದರೂ ಒಬ್ಬನು- 'ನಮ್ಮಲ್ಲಿ ಪೂರ್ಣ ಅಥವಾ ಸ್ವಲ್ಪ ನಂಬಿಕೆಯಿದೆ' ಎನ್ನುವನಾದರೆ, ಅವನಿಗೆ- 'ಈ ಪರ್ವತವನ್ನು ಮಾರ್ಗದಿಂದ ಜರುಗಿಸು'.- ಎಂದು ಹೇಳಬೇಕು. ಅವನು ಜರುಗಿಸುವುದರಿಂದ (ಪರ್ವತವು) ಜರುಗಿ ಹೋದರೂ ಕೂಡ ಅದು ಪೂರ್ಣವಾದ ನಂಬಿಕೆಯಲ್ಲ; ಆದರೆ, ಒಂದು ಸಾಸಿವೆಯ ಕಾಳಿಗೆ ಸಮನಾದಷ್ಟು ಮಾತ್ರ. ಮತ್ತು ಜರುಗಿಸಲಾರದೇ ಹೋದರೆ, ಒಂದು ತುಣುಕಿನಷ್ಟೂ ಕೂಡ ನಂಬಿಕೆ, ವಿಶ್ವಾಸ- ಎಂದರೆ, ಧರ್ಮ ಕ್ರೈಸ್ತರಲ್ಲಿಲ್ಲ. ಯಾವನಾದರೂ "ಈ ಸ್ಥಳದಲ್ಲಿ ಅಭಿಮಾನ ಮೊದಲಾದ ದೋಷಗಳ ಹೆಸರು ಪರ್ವತ."[೮೪] ಎಂದು ಹೇಳುವನಾದರೆ. ಅದೂ ಕೂಡ ಸರಿಯಲ್ಲ. ಏಕೆಂದರೆ, ಹೀಗೆ ಒಪ್ಪಿಕೊಂಡಲ್ಲಿ, ಕುರುಡರು, ಕುಷ್ಠರೋಗಿಗಳು, ಭೂತಗ್ರಸ್ತರು – ಇವರನ್ನು ಸ್ವಸ್ಥರನ್ನಾಗಿಮಾಡಿದನೆಂದರೂ, ಸೋಮಾರಿಗಳಿಗೂ, ಕುರುಡರಿಗೂ, ಕುಷ್ಠರೋಗಿಗಳಿಗೂ, ವಿಷಯಾಸಕ್ತರಿಗೂ ಮತ್ತು ಭ್ರಾಂತರಿಗೂ ಜ್ಞಾನವನ್ನುಂಟುಮಾಡಿ, ಜಾಗ್ರತರನ್ನಾಗಿಯೂ, ಕುಶಲರನ್ನಾಗಿಯೂ ಮಾಡಿರಬಹುದು – ಎನ್ನಬಹುದು ಅಷ್ಟೇ. ಹೀಗೆ ಒಪ್ಪಿದರೂ ಕೂಡ ಸರಿಯಲ್ಲ. ಏಕೆಂದರೆ, ಸತ್ಯ ಹೀಗೆಯೇ ಇದ್ದಲ್ಲಿ, ತನ್ನ ಸ್ವಂತ ಶಿಷ್ಯರನ್ನೂ ಕೂಡ ತಿದ್ದಲು ಶಕ್ತನಾಗಲಿಲ್ಲವೇಕೆ? ಆದುದರಿಂದ, ಅಸಂಭವವಾದ ಮಾತನ್ನಾಡುವುದು ಏಸುವಿನ ಅಜ್ಞಾನಿತ್ವವನ್ನು ಪ್ರಕಾಶಪಡಿಸುತ್ತದೆ ಏನೇ ಆಗಲಿ; ಸ್ವಲ್ಪವಾದರೂ ವಿದ್ಯೆ ಏಸುವಿನಲ್ಲಿ ಇದ್ದರೆ, ಇಂತಹ ತಲೆಬಾಲಗಳಿಲ್ಲದ ಕಾಡಾಡಿತನದ ಮಾತುಗಳನ್ನು ಹೇಳತ್ತಿದ್ದನೇತಕ್ಕೆ? ಆದರೂ, **'ಯತ್ರದೇಶೇ ದ್ರುಮೋ ನಾಸ್ತಿ ಏರಂಡೋಽಪಿ ದ್ರುಮಾಯತೇ'**. – ಯಾವ ದೇಶದಲ್ಲಿ ಯಾವುದೇ ವೃಕ್ಷವೂ ಇಲ್ಲವೋ, ಆ ದೇಶದಲ್ಲಿ ಹರಳಿನ ಗಿಡವೇ ಎಲ್ಲಕ್ಕಿಂತ ದೊಡ್ಡದು ಮತ್ತು ಒಳ್ಳೆಯದೆಂದು ಎಣಿಸಲ್ಪಡುವ ಹಾಗೆ, ಮಹಾ ಕಾಡಾಡಿಗಳ ದೇಶದಲ್ಲಿ ಏಸುವಿನ ಇರುವಿಕೆಯೂ ಮಹತ್ವಪೂರ್ಣವಾಗಿದ್ದಿತು. ಆದರೆ, ಈಗ ಏಸುವಿನ ಗಣನೆಯಾದರೂ ಏನಾಗಬಲ್ಲದು? (೭೪)

*ನಾನು ನಿಮಗೆ – "ನೀವು ಮನಸ್ಸನ್ನು ಬದಲಾಯಿಸದೇ ಇದ್ದರೆ ಮತ್ತು ಬಾಲಕರಿಗೆ ಸಮಾನರಾಗಿ ಆಗದೇ ಇದ್ದರೆ, ಸ್ವರ್ಗದ ರಾಜ್ಯದಲ್ಲಿ ಪ್ರವೇಶಿಸಲಾರಿರಿ". – ಎಂದು ಸತ್ಯವನ್ನು ಹೇಳುತ್ತೇನೆ. (ಇಂ.ಮ್ಯಾ.ಪ:- ೧೮.ಆ:-೩)*

---

೮೪. ಮಹರ್ಷಿ ದಯಾನಂದರಿಂದ ತಂತ್ರಗಳು, ಜೈನ-ಬೌದ್ಧಗ್ರಂಥಗಳು, ಬೈಬಲ್, ಕುರಾನ್ ಮೊದಲಾದ ಮತೀಯರ ಗ್ರಂಥಗಳಲ್ಲಿನ ಜ್ಞಾನ ವಿರುದ್ಧ ಮಾತುಗಳ ಖಂಡನೀಯನ್ನೂ ತಮ್ಮ ಪ್ರವಚನಗಳಲ್ಲೂ, ಶಾಸ್ತ್ರಾರ್ಥಗಳಲ್ಲೂ, ಮಾಡಲಾರಂಭಿಸಿದ ಮೇಲೆ, ಅದರಿಂದ ಸಂಕೋಚಕ್ಕೀಡಾದ ಮತೀಯ ವಿದ್ವಾಂಸರು ತಮ್ಮ ಗ್ರಂಥಗಳಲ್ಲಿನ ಅವೈಜ್ಞಾನಿಕ, ಅಯಥಾರ್ಥ ಮಾತುಗಳ ಪರಂಪರಾಗತ ಸರಳ ಅರ್ಥಗಳನ್ನು ಬದಲಿಸಿ ಯೌಗಿಕ, ಹಾಗೂ ಪಾರಿಭಾಷಿಕ ಅರ್ಥಗಳನ್ನು ಕಲ್ಪಿಸಿಕೊಂಡು, ತಮ್ಮ ಗ್ರಂಥಸ್ಥ ವಾಕ್ಯಗಳನ್ನೂ, ಘಟನೆಗಳನ್ನೂ ಸಮರ್ಥಿಸತೊಡಗಿದರು.

ವಾಮಮಾರ್ಗಿಗಳು ಇಂತಹ ಪ್ರಯತ್ನವನ್ನು ಮೊದಲು ಮಾಡಿದರು. ನಂತರ, ಕ್ರೈಸ್ತರು, ಮತ್ತು ಮುಸಲ್ಮಾನರು ! 'ಸತ್ಯಾರ್ಥ ಪ್ರಕಾಶ'ವು ಪ್ರಕಟವಾದ ಮೇಲೆ ಕ್ರೈಸ್ತ ಮತ್ತು ಮುಸಲ್ಮಾನ ವಿದ್ವಾಂಸರು ತಮ್ಮ ಗ್ರಂಥಗಳಿಗೆ ಹೊಸ ಭಾಷ್ಯಗಳನ್ನೇ ಬರೆದು ಬಿಟ್ಟರು. ಈಗ, ಈ ಕೆಲಸವನ್ನು ಪೌರಾಣಿಕ ವಿದ್ವಾಂಸರು ತಮ್ಮ ಗ್ರಂಥಗಳ ಬಗೆಗೆ ಮಾಡುತ್ತಿದ್ದಾರೆ.

**ಸಮೀಕ್ಷಕ :–** ತನ್ನ ಇಚ್ಛೆಯಿಂದಲೇ ಮನಸ್ಸನ್ನು ತಿರುಗಿಸುವುದು ಸ್ವರ್ಗದ ಕಾರಣವೂ ಮತ್ತು ತಿರುಗಿಸದಿರುವುದು ನರಕದ ಕಾರಣವೂ ಆಗಿರುವುದಾದರೆ, ಯಾವನೂ ಯಾವನ ಪಾಪ– ಪುಣ್ಯಗಳನ್ನೂ ಯಾವ ಕಾಲಕ್ಕೂ ತೆಗೆದುಕೊಳ್ಳಲಾರನೆಂದು ಸಿದ್ಧವಾಗುತ್ತದೆ. ಮತ್ತು ಬಾಲಕನ ಸಮಾನವಾಗುವುದೆಂಬ ಬರೆಹದಿಂದ, ಏಸುವಿನ ಮಾತುಗಳು ವಿದ್ಯೆ ಮತ್ತು ಸೃಷ್ಟಿ ಕ್ರಮಕ್ಕೆ ಬಹಳ ವಿರುದ್ಧವಾಗಿದ್ದವೆಂದು ವಿದಿತವಾಗುತ್ತದೆ. ಮತ್ತು ಅವನ ಮನಸ್ಸಿನಲ್ಲಿ "ಜನರು ನನ್ನ ಮಾತುಗಳನ್ನು ಬಾಲಕರಂತೆ ಒಪ್ಪಿಕೊಂಡುಬಿಡಲಿ." ಎಂದೂ ಕೂಡ ಇದ್ದಿತು. ಬಹುಮಂದಿ ಕ್ರೈಸ್ತರ ನಡೆವಳಿಕೆ ಬಾಲಬುದ್ಧಿಗೆ ತಕ್ಕಂತೆಯಿದೆ. ಇಲ್ಲದಿದ್ದರೆ, ಇಂತಹ ಯುಕ್ತಿ–ವಿದ್ಯೆಗೆ ವಿರುದ್ಧವಾದ ಮಾತುಗಳನ್ನು ಒಪ್ಪುತ್ತಿದ್ದರೇಕೆ? ಮತ್ತು ಏಸುವು, ತಾನೇ ವಿದ್ಯಾಹೀನನೂ, ಬಾಲಬುದ್ಧಿಯೂ ಆಗಿರದಿದ್ದರೆ, ಬೇರೆಯವರಿಗೆ ಬಾಲಕರಂತೆ ಆಗುವ ಉಪದೇಶವನ್ನು ಏಕೆ ಮಾಡುತ್ತಿದ್ದನು? ಏಕೆಂದರೆ, ಯಾವನು ಹೇಗೆಯಿರುತ್ತಾನೋ, ಅವನು ಬೇರೆಯವನನ್ನೂ ಕೂಡ ತನ್ನ ಹಾಗೆಯೇ ಮಾಡಲು ಅಪೇಕ್ಷಿಸಿಯೇ ತೀರುತ್ತಾನೆ.[೮೫] (೭೫)

*ನಾನು ನಿಮಗೆ 'ಧನವಂತರು ಸ್ವರ್ಗದ ರಾಜ್ಯದಲ್ಲಿ ಪ್ರವೇಶಿಸುವುದು ಕಠಿಣವಾಗುವುದು'– ಎಂದು ಸತ್ಯವನ್ನು ಹೇಳುತ್ತೇನೆ. ಮತ್ತೂ ಕೂಡ ನಾನು ನಿಮಗೆ 'ಈಶ್ವರನ ರಾಜ್ಯದಲ್ಲಿ ಧನವಂತನು ಪ್ರವೇಶಿಸುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಿಂದ ತೂರಿ ಹೋಗುವುದು ಸಹಜ'– ಎಂದು ಹೇಳುತ್ತೇನೆ. (ಇಂ.ಮ್ಯಾ.ಪ:–೧೯. ಆ:–೨೩, ೨೪)*

**ಸಮೀಕ್ಷಕ:–** ಇದರಿಂದ ಏಸು ದರಿದ್ರನಾಗಿದ್ದನೆಂದು ಸಿದ್ಧವಾಗುತ್ತದೆ. ಧನವಂತರಾದ ಜನರು ಅವನನ್ನು ಗೌರವಿಸದೇ ಇರಬಹುದು. ಆದುದರಿಂದ, ಇದನ್ನು ಬರೆದಿರಬಹುದು. ಆದರೆ, ಈ ಮಾತು ಸತ್ಯವಲ್ಲ. ಏಕೆಂದರೆ, ಧನಾಢ್ಯರಲ್ಲಿಯೂ, ಮತ್ತು ದರಿದ್ರರಲ್ಲಿಯೂ, ಒಳ್ಳೆಯವರೂ, ಕೆಟ್ಟವರೂ ಇರುತ್ತಾರೆ. ಯಾವ ಯಾವನು ಒಳ್ಳೆಯ ಕೆಲಸ ಮಾಡುತ್ತಾನೋ, ಅವನು ಒಳ್ಳೆಯ ಮತ್ತು ಯಾವನು ಕೆಟ್ಟ ಕೆಲಸವನ್ನು ಮಾಡುವನೋ ಅವನು ಕೆಟ್ಟ ಫಲವನ್ನು ಪಡೆದುಕೊಳ್ಳುತ್ತಾನೆ. ಮತ್ತು ಇದರಿಂದ, ಏಸುವು ಈಶ್ವರನ ರಾಜ್ಯವನ್ನು ಯಾವದೋ ಒಂದು ದೇಶದಲ್ಲಿದೆ – ಎಂದು ತಿಳಿಯುತ್ತಿದ್ದನು; ಸರ್ವತ್ರವಲ್ಲ – ಎಂದೂ ಕೂಡ ಸಿದ್ಧವಾಗುತ್ತದೆ. ಹೀಗೆಯಿರುವುದಾದರೆ, ಅವನು ಈಶ್ವರನೇ ಅಲ್ಲ. ಯಾವನು ಈಶ್ವರನಾಗಿದ್ದಾನೋ , ಅವನ ರಾಜ್ಯ ಎಲ್ಲೆಡೆಯೂ ಇದೆ. ಎಂದ ಮೇಲೆ ಅದರಲ್ಲಿ ಪ್ರವೇಶಿಸುವನು, ಅಥವಾ ಪ್ರವೇಶಿಸುವುದಿಲ್ಲ – ಎಂದು ಹೇಳುವುದು ಕೇವಲ ಅವಿದ್ಯೆಯ ಮಾತಾಗಿರುತ್ತದೆ. ಮತ್ತು ಇದರಿಂದ, ಎಷ್ಟು ಜನ ಕ್ರೈಸ್ತರು ಧನಾಢ್ಯರಾಗಿದ್ದಾರೋ, ಅವರೆಲ್ಲರೂ ನರಕಕ್ಕೆಯೇ ಹೋಗುವರೇನು? ಎಂಬ ಪ್ರಶ್ನೆಯೂ ಕೂಡ ಏಳುತ್ತದೆ. ಭಾಪು! ಭಾಪು!! ಏಸು ಪ್ರವಾದಿಯೂ, ಧನಾಢ್ಯರ ಬಳಿ ಎಷ್ಟು ಸಾಮಾಗ್ರಿಗಳಿರುತ್ತವೋ, ಅಷ್ಟು ದರಿದ್ರರಬಳಿಯಿರುವುದಿಲ್ಲ. "ಧನಾಢ್ಯರಾದ ಜನರು ವಿವೇಕದಿಂದ ಧರ್ಮಮಾರ್ಗದಲ್ಲಿ ವ್ಯಯಿಸುವರಾದರೆ, ದರಿದ್ರರು ನೀಚಗತಿಯಲ್ಲೇ ಉಳಿದು ಹೋಗುವರು. ಮತ್ತು ಧನಾಢ್ಯರು ಉತ್ತಮಗತಿಯನ್ನು ಹೊಂದಬಲ್ಲರು" – ಎಂದು ಸ್ವಲ್ಪವಾದರೂ ಯೋಜಿಸಬಹುದಿತ್ತು. (೭೬)

*ಏಸುವು ಅವರಿಗೆ "ಹೊಸಸೃಷ್ಟಿಯಲ್ಲಿ ಯಾವಾಗ ಮಾನವನ ಪುತ್ರನು ತನ್ನ ಐಶ್ವರ್ಯದ ಸಿಂಹಾಸನದ ಮೇಲೆ ಕುಳಿತುಕೊಳ್ಳುವನೋ, ಆಗ ನನ್ನನ್ನು ಹಿಂಬಾಲಿಸಿ ಬಂದಿರುವ ನೀವೂ ಕೂಡ ೧೨ ಸಿಂಹಾಸನಗಳ ಮೇಲೆ ಕುಳಿತು, ಇಸ್ರಾಏಲದ ೧೨ ಕುಲಗಳ ಮೇಲೆ ನ್ಯಾಯಮಾಡುವಿರಿ. ಯಾವಯಾವನು ತನ್ನ ಹೆಸರಿಗಾಗಿ ಮನೆಗಳನ್ನು, ಅಥವಾ ಸೋದರನನ್ನು, ಅಥವಾ ಸೋದರಿಯರನ್ನು, ಅಥವಾ ತಾಯಿ–ತಂದೆಗಳನ್ನು, ಅಥವಾ ಹೆಂಡತಿಯರನ್ನು, ಅಥವಾ ಮಕ್ಕಳನ್ನು, ಅಥವಾ ಭೂಮಿಯನ್ನು ತ್ಯಜಿಸಿದ್ದಾನೋ, ಅವನು ನೂರರಷ್ಟು ಪಡೆದುಕೊಳ್ಳುವನು ಮತ್ತು ಅನಂತಜೀವನದ ಅಧಿಕಾರಿಯಾಗುವನು[೮೬] – ಎಂದು ನಿಮಗೆ ಸತ್ಯವನ್ನು ಹೇಳುತ್ತೇನೆ." – ಎಂದು ಹೇಳಿದನು. (ಇಂ. ಮ್ಯಾ. ಪ:–೧೯,ಅ:–೨೮. ೨೯)*

**ಸಮೀಕ್ಷಕ:–** ಈಗ ನೋಡಿರಿ ಏಸುವಿನ ಆಂತರಿಕ ಲೀಲೆಯನ್ನು! ತನ್ನ ಜಾಲದಿಂದ ಸತ್ತಮೇಲೆಯೂ ಕೂಡ ಜನರು ಹೊರಬೀಳಬಾರದು! ಮತ್ತು ಯಾವನು ೩೦ ರೂಪಾಯಿಗಳ ಲೋಭದಿಂದ ತನ್ನ ಗುರುವನ್ನು ಹಿಡಿಸಿ ಸಾಯಿಸಿದನೋ, ಅವನಂತಹ ಪಾಪಿಗಳೂ ಕೂಡ ಇವನ ಹತ್ತಿರ ಸಿಂಹಾಸನದ ಮೇಲೆ ಕುಳಿತುಕೊಳ್ಳುವರು ಮತ್ತು ಇಸ್ರಾಏಲ್ ಕುಲದ ನ್ಯಾಯವು

---

೮೫. ಸಂಪ್ರದಾಯ ಪ್ರವರ್ತನೆ, ಮಠಗಳು, ಮಠಾಧಿಪತಿಗಳು, ಮತ್ತು ಅವರ ಹಿಂಬಾಲಕರು ಹೀಗೆಯೇ ಆದವರು ! ಆದ್ದರಿಂದಲೇ, ಮಹರ್ಷಿ ದಯಾನಂದರು ಯಾವ ಸಂಪ್ರದಾಯವನ್ನೂ ಪ್ರವರ್ತಿಸಲಿಲ್ಲ. ಯಾವ ಮಠವನ್ನೂ ಕಟ್ಟಲಿಲ್ಲ !

೮೬. ಸಂಪ್ರದಾಯ–ಪ್ರವರ್ತಕರು, ಮಠಾಧೀಶರೆಲ್ಲ ಹೀಗೆ ಹೇಳಿಯೇ, ಅನುಯಾಯಿಗಳ ಹಿಂಡನ್ನು ಒದಗಿಸಿಕೊಂಡಿರುವುದು.

ಪಕ್ಷಪಾತದ ಕಾರಣದಿಂದಾಗಿ ಮಾಡಲ್ಪಡುವುದೇ ಇಲ್ಲ; ಮತ್ತು ಅವರ ಅಪರಾಧಗಳೆಲ್ಲಾ ಕ್ಷಮಿಸಲ್ಪಡುವವು ಮತ್ತು ಬೇರೆ ಕುಲಗಳ ನ್ಯಾಯವನ್ನು ಮಾಡುವರು. ಇದೇ ಕಾರಣದಿಂದ ಕ್ರೈಸ್ತರು ಕ್ರೈಸ್ತರುಗಳ ಬಗೆಗೆ ಬಹಳ ಪಕ್ಷಪಾತಮಾಡಿ, ಯಾವನಾದರೂ ಬಿಳಿಯನು[೮೭] ಕರಿಯವನನ್ನು[೮೮] ಸಂಹರಿಸಿಯೇ ಬಿಟ್ಟಿದ್ದರೂ ಕೂಡ, ಬಹುತೇಕವಾಗಿ ಪಕ್ಷಪಾತದಿಂದ ನಿರಪರಾಧನೆಂದು ತೀರ್ಮಾನಿಸಿ ಬಿಟ್ಟುಬಿಡುತ್ತಾರೆ – ಎಂದು ಊಹಿಸಬಹುದಾಗಿದೆ.[೮೯] ಹೀಗೆಯೇ ಏಸುವಿನ ಸ್ವರ್ಗದ ನ್ಯಾಯವೂ ಇರಬಹುದು. ಮತ್ತು ಇದರಿಂದ ಮಹಾ ದೋಷ ಉಂಟಾಗುತ್ತದೆ. ಏಕೆಂದರೆ, ಒಬ್ಬನು ಸೃಷ್ಟಿಯ ಆದಿಯಲ್ಲಿ ಸತ್ತನು; ಮತ್ತೊಬ್ಬನು ಪ್ರಳಯದ ರಾತ್ರಿಯ ಹತ್ತಿರದ ದಿನ ಸತ್ತನು. ಒಬ್ಬನಂತೂ ಆದಿಯಿಂದ ಅಂತದವರೆಗೆ 'ಎಂದಿಗೆ ನ್ಯಾಯವಾಗುವುದೋ' ಎಂದು ನಿರೀಕ್ಷಣೆಯಲ್ಲಿಯೇ ಬಿದ್ದಿದ್ದನು. ಮತ್ತು ಇನ್ನೊಬ್ಬನ ನ್ಯಾಯ ಆ ಸಮಯದಲ್ಲಿಯೇ ಆಗಿಹೋಯಿತು! ಇದೆಷ್ಟು ದೊಡ್ಡ ಅನ್ಯಾಯ? ಮತ್ತು ಯಾವನು ನರಕಕ್ಕೆ ಹೋಗುವನೋ, ಅವನು ಅನಂತಕಾಲದವರೆಗೆ ನರಕವನ್ನು ಅನುಭವಿಸುವನು. ಮತ್ತು ಯಾವನು ಸ್ವರ್ಗಕ್ಕೆ ಹೋಗುವನೋ, ಅವನು ಸದಾ ಸ್ವರ್ಗವನ್ನು ಅನುಭವಿಸುವನು. ಇದೂ ಕೂಡ ದೊಡ್ಡ ಅನ್ಯಾಯವಾಗಿದೆ. ಏಕೆಂದರೆ, ಕೊನೆಯುಳ್ಳ ಸಾಧನದ ಮತ್ತು ಕರ್ಮಗಳ ಫಲವು ಕೊನೆಯನ್ನುಳ್ಳದ್ದೇ ಆಗಿರಬೇಕು. ಮತ್ತು ಯಾವುದೇ ಎರಡು ಆತ್ಮಗಳ (ಜೀವರ) ಪಾಪ ಮತ್ತು ಪುಣ್ಯ ಸಮಾನವಾಗಿರಲಾರದು. ಆದಕಾರಣ, ತಾರತಮ್ಯಾನುಸಾರ ಹೆಚ್ಚು ಅಥವಾ ಕಡಿಮೆ ಸುಖ-ದುಃಖ ಸಹಿತವಾದ ಅನೇಕ ಸ್ವರ್ಗಗಳು ಮತ್ತು ನರಕಗಳು ಇರಬೇಕು; ಆಗಮಾತ್ರ ಸುಖ-ದುಃಖಗಳನ್ನು ಅನುಭವಿಸಲಾದೀತು. ಹೀಗೆ ಕ್ರೈಸ್ತರ ಪುಸ್ತಕದಲ್ಲಿ ಎಲ್ಲಿಯೂ ವ್ಯವಸ್ಥೆಯಿಲ್ಲ. ಆದುದರಿಂದ ಈ ಪುಸ್ತಕ ಈಶ್ವರಕೃತವಲ್ಲ ; ಅಥವಾ ಏಸುವು ಈಶ್ವರನ ಮಗನೆಂದಿಗೂ ಆಗಲಾರನು. ಇದು ಮಹಾನ್ ಅನರ್ಥದ ಸಂಗತಿಯಾಗಿದೆ. ಎಂದಿಗೂ ಯಾವನಿಗೂ ತಾಯಿ-ತಂದೆಗಳು ನೂರು-ನೂರು ಮಂದಿಯಿರಲಾರರು. ಆದರೆ, ಒಬ್ಬನಿಗೆ ಒಬ್ಬಳೇ ತಾಯಿ ಇರುತ್ತಾಳೆ ಮತ್ತು ಒಬ್ಬನೇ ತಂದೆಯಿರುತ್ತಾನೆ. ಮುಸಲ್ಮಾನರು ಒಬ್ಬನಿಗೆ ೭೨ ಮಂದಿ ನಾರಿಯರು ಸ್ವರ್ಗದಲ್ಲಿ ಸಿಕ್ಕುತ್ತಾರೆ – ಎಂದು ಬರೆದಿರುವುದು, ಇದರಿಂದಲೇ ತೆಗೆದುಕೊಂಡುದಿರಬಹುದು– ಎಂದು ತೋರುತ್ತದೆ . (೭೭)

*ಮುಂಬೆಳಗು ಅವನು ನಗರಕ್ಕೆ ತಿರುಗಿ ಹೋಗುತ್ತಿದ್ದಾಗ, ಅವನಿಗೆ ಹಸಿವಾಯಿತು ಮತ್ತು ಮಾರ್ಗದಲ್ಲಿ ಒಂದು ಅತ್ತಿಯ ಮರವನ್ನು ನೋಡಿ, ಅವನು ಅದರ ಬಳಿ ಹೋದನು. ಆದರೆ, ಅದರಲ್ಲಿ ಮತ್ತೇನನ್ನೂ ಪಡೆಯಲಿಲ್ಲ. ಕೇವಲ ಎಲೆಗಳು ಮಾತ್ರ ಇದ್ದವು. ಮತ್ತು ಅದಕ್ಕೆ –"ನಿನ್ನಲ್ಲಿ ಮತ್ತೆಂದಿಗೂ ಹಣ್ಣುಗಳು ಬಿಡುವುದಿಲ್ಲ." ಎಂದು ಹೇಳಿದನು. ಇದರ ಫಲವಾಗಿ ಅತ್ತಿಯ ಮರ ಕೂಡಲೇ ಒಣಗಿ ಹೋಯಿತು. (ಇಂ. ಮ್ಯಾ.ಪ:-೨೧. ಆ:-೧೮,೧೯)*

**ಸಮೀಕ್ಷಕ :–** ಸಮಸ್ತ ಪಾದರಿಗಳೂ, ಕ್ರೈಸ್ತರೂ ಅವನು[೯೦] ಬಹಳ ಶಾಂತನೂ ಶಮಾನ್ವಿತನೂ ಮತ್ತು ಕ್ರೋಧವೇ ಮೊದಲಾದ ದೋಷಗಳಿಂದ ರಹಿತನೂ ಆಗಿದ್ದನೆಂದು ಹೇಳುತ್ತಾರೆ. ಆದರೆ, ಈ ವಿಷಯವನ್ನು ನೋಡಿದರೆ, ಅವನು

---

೮೭. ಎಂದರೆ, ಆಂಗ್ಲರು,

೮೮. ಎಂದರೆ, ಭಾರತೀಯರು

೮೯. ಆಂಗ್ಲರ ಆಡಳಿತದ ಬ್ರಿಟಿಷ್ ಪ್ರಾಂತಗಳಲ್ಲಿ ಪರಿಸ್ಥಿತಿ ಹೀಗೆಯೇ ಇದ್ದಿತು. ಈ ಮಾತನ್ನು ಜಾಲಂಧರದ ಒಂದು ಸಭೆಯಲ್ಲಿ ಆಂಗ್ಲರೆದುರಿಗೇ ಮಹರ್ಷಿ ದಯಾನಂದರು ಹೇಳಿ ಛೀಮಾರಿ ಹಾಕುವಷ್ಟು ನಿರ್ಭೀಕತೆ ತೋರಿಸಿದ್ದರು. ೧೮೫೭ ನೇ ಇಸವಿಯ ಸ್ವಾತಂತ್ರ್ಯ ಸಮರಕ್ಕೆ ಇದೂ ಒಂದು ಕಾರಣವಾಗಿದ್ದಿತು. ಈ ತರಹದ ಅನ್ಯ ಪ್ರಸಂಗಗಳಿಗೆ ಪಂ ಲೇಖಾರಾಮ್ ಬರೆದ ' ಮಹರ್ಷಿ ದಯಾನಂದ ಸರಸ್ವತಿ ಕಾ ಜೀವನ ಚರಿತ್ರ' ವನ್ನು ಓದಿ. ಕೆಳಗೆ ಒಂದು ಘಟನೆಯನ್ನು ಮಾತ್ರ ಕೊಡಲಾಗಿದೆ.

ದಿನಾಂಕ ೧೮.೯.೧೮೭೭ ರಂದು ಜಾಲಂಧರ್ ನಲ್ಲಿ ಪ್ರವಚನ ನೀಡುತ್ತಾ ಮಹರ್ಷಿ ದಯಾನಂದರು ಹೀಗೆಂದರು.

"ಈ ಕಾಲದಲ್ಲಿ ನಮ್ಮ ದೇಶದ ರಾಜರ ಸ್ಥಿತಿ ಏನಾಗಿದೆ? ಆಂಗ್ಲರು ತಮ್ಮ ಜಾತಿಯ ಮನುಷ್ಯರ ಬಗ್ಗೆ ಬಹಳ ದಯೆ ತೋರುತ್ತಾರೆ. ಯಾವನಾದರೂ ಬಿಳಿ ಮನುಷ್ಯನು ಅಥವಾ "ಫಿರಂಗಿ"ಯು ಭಾರತವಾಸಿಯನ್ನು ಕೊಲೆಮಾಡಿ, ನ್ಯಾಯಾಲಯದಲ್ಲಿ – 'ನಾನು ಕೊಲೆ ಮಾಡುವ ಸಮಯದಲ್ಲಿ ಮಧ್ಯಪಾನ ಮಾಡಿದ್ದೆ' ಎಂದು ಹೇಳಿಕೆ ಕೊಟ್ಟು ಬಿಟ್ಟರೆ, ಅವನನ್ನು ಬಿಡುಗಡೆ ಮಾಡುತ್ತಾರೆ ! ಇದು ಮಹಾ ಅನ್ಯಾಯ !

"ದುರ್ಯೋಧನನ ಸ್ಥಿತಿಯೂ ಹೀಗೇಯೇ ಇದ್ದಿತು. ಅವನ ಕಣ್ಣುಗಳು ತನ್ನ ಸ್ಥಾನದಿಂದ ಮೇಲೇರಿ, ಹಣೆಯ ಮೇಲೆ ಹೋದಾಗ, ಅವನ ರಾಜ್ಯ ನಾಶವಾಯಿತು.

ಲಕ್ನೋದಲ್ಲಿ ಸಿಪಾಯಿ ವಿದ್ರೋಹದ ಸಂದರ್ಭದಲ್ಲಿ ಜನರು ಸ್ವಲ್ಪ ಆಂಗ್ಲರನ್ನು ಕೊಂದಾಗ, ಅದಕ್ಕೆ ಮುಯ್ಯಿ ತೀರಿಸುವ ಸಲುವಾಗಿ, ಬಹಳ ಮಂದಿ ಅಜ್ಞಾನೀ ಮತ್ತು ಅನಾಥ ಭಾರತೀಯರನ್ನು ಇಂಗ್ಲೀಷರು ಕೊಂದು ಹಾಕಿದರು. ಈ ರೀತ, ಈ ಶಾಸಕರು ಅನ್ಯಾಯ ಮಾಡುತ್ತಾ ಹೋದರೆ, ಅವರ ರಾಜ್ಯವೂ ಕೂಡ, ಹೆಚ್ಚು ದಿನ ನಡೆಯುವುದಿಲ್ಲ.

["ಮಹರ್ಷಿ ದಯಾನಂದ ಕಾ ಜೀವನ ಚರಿತ್ರ" –ಪಂ ಲೇಖಾರಾಮ್ ಪುಟ ೩೫೫]

೯೦. ಎಂದರೆ, ಏಸುವು.

ಕ್ರೋಧಿಯೂ, ಮತ್ತು ಋತುವಿನ ಜ್ಞಾನವಿಲ್ಲದವನೂ ಆಗಿದ್ದನು ಮತ್ತು ಅವನು ಕಾಡುಮನುಷ್ಯತನದ ಸ್ವಭಾವದಿಂದ ಯುಕ್ತನಾಗಿ ವರ್ತಿಸುತ್ತಿದ್ದನು- ಎಂದು ತಿಳಿದುಬರುತ್ತದೆ. ಭಲೇ, ಅದಕ್ಕೆ ಶಾಪವನ್ನಿತ್ತನು ಮತ್ತು ಅದು ಒಣಗಿಹೋಯಿತು – ಎನ್ನಲು, ಜಡ ಪದಾರ್ಥವಾಗಿದ್ದ ಆ ವೃಕ್ಷದ ಅಪರಾಧವೇನಿದ್ದಿತು? ಇವನ ಶಾಪದಿಂದಲಂತೂ ಒಣಗಿಹೋಗಿರಲಾರದು; ಆದರೆ, ಯಾವುದಾದರೂ ಘಾತಕವಾದ ಔಷಧಿ ಹಾಕುವುದರಿಂದ ಒಣಗಿ ಹೋಗಿದ್ದರೆ, ಆಶ್ಚರ್ಯವೇನೂ ಇಲ್ಲ. (೭೮)

*ಆ ದಿನಗಳಲ್ಲಿ ಕ್ಲೇಶದ ನಂತರ ಸೂರ್ಯನು ಕಾರ್ಗಪ್ಪಾಗಿ ಹೋಗುವನು . ಮತ್ತು ಚಂದ್ರ ತನ್ನ ಜ್ಯೋತಿಯನ್ನು ಎರಚುವುದಿಲ್ಲ. ನಕ್ಷತ್ರಗಳು ಆಕಾಶದಿಂದ ಬಿದ್ದು ಹೋಗುವುವು ಮತ್ತು ಆಕಾಶದ ಸೇನೆ ಕದಡಿಹೋಗುವುದು. ( ಇಂ.ಮ್ಯಾ. ಪ:–೨೪.ಆ:–೨೯)*

**ಸಮೀಕ್ಷಕ :–** ಭೇಷ್ ಏಸು ಮಹೋದಯ! ಯಾವ ವಿದ್ಯೆಯಿಂದ ನಕ್ಷತ್ರಗಳು ಬಿದ್ದು ಹೋಗುವುದನ್ನು ತಿಳಿದಿರಿ? ಮತ್ತು ಕದಡಿಹೋಗುವಂತಹ ಆ ಆಕಾಶದ ಸೇನೆ ಯಾವುದು? ಎಂದಾದರೂ ಸ್ವಲ್ಪವಾದರೂ ವಿದ್ಯೆಯನ್ನು ಏಸು ಕಲಿತಿದ್ದರೆ "ಈ ನಕ್ಷತ್ರಗಳೆಲ್ಲವೂ ಭೂಮಿಯಂತಹ ಭೌತಿಕ ಸೃಷ್ಟಿಗಳಾಗಿವೆ ಬೀಳುವವಾದರೂ ಹೇಗೆ?" ಎಂದು ಆಲೋಚಿಸುತ್ತಿದ್ದನು. ಏಸುವು ಬಡಗಿಯ ಕುಲದಲ್ಲಿ ಹುಟ್ಟಿದ್ದನು. ಸದಾ ತೊಲೆಗಳನ್ನು ಸೀಳುವುದು ತೊಗಟೆ ತೆಗೆಯುವುದು, ಕತ್ತರಿಸುವುದು ಮತ್ತು ಕೂಡಿಸುವುದು- ಇವನ್ನು ಮಾಡುತ್ತಾ ಇದ್ದಿರಬಹುದು. "ನಾನು ಈ ಕಾಡುಜನರ ದೇಶದಲ್ಲಿ ಪ್ರವಾದಿಯಾಗಬಲ್ಲೆನು" – ಎಂಬ ಹುರುಪು ಮೂಡಿದಾಗ ಮಾತನಾಡತೊಡಗಿದನು. ಎಷ್ಟೋ ಮಾತುಗಳು ಅವನ ಬಾಯಿನಿಂದ ಒಳ್ಳೆಯವೂ ಹೊರಟವು; ಮತ್ತು ಬಹಳವಾಗಿ ತಪ್ಪಾದವೂ ಕೂಡ. ಅಲ್ಲಿನ ಜನರು ಅನಾಗರಿಕರಾಗಿದ್ದರು; ಒಪ್ಪಿಕೊಂಡುಬಿಟ್ಟರು. ಈ ದಿನಗಳಲ್ಲಿ ಯುರೋಪ್ ದೇಶ ಉನ್ನತಿಯುಕ್ತವಾಗಿರುವ ಹಾಗೆ ಮೂದಲೂ ಇದ್ದಿದ್ದರೆ, ಇವನ ಸಿದ್ಧತ್ವ ಏನೇನೂ ನಡೆಯುತ್ತಿರಲಿಲ್ಲ. ಈಗ ಸ್ವಲ್ಪ ವಿದ್ಯೆ ಪ್ರಸರಿತವಾದ ಮೇಲೆಯೂ,ವ್ಯಾವಹಾರಿಕ ನಿರ್ಬಂಧ ಮತ್ತು ಹಠದಿಂದ ಈ ಪೊಳ್ಳು ಮತಕ್ಕೆಯೇ ಅಂಟಿಕೊಂಡಿದ್ದಾರೆ, ಸರ್ವಥಾ ಸತ್ಯವಾದ ವೇದಮಾರ್ಗದೆಡೆಗೆ ಓಲುವುದಿಲ್ಲ; ಇದೇ ಇದರಲ್ಲಿರುವ ನ್ಯೂನತೆಯಾಗಿದೆ (೭೯).

*ಆಕಾಶ ಮತ್ತು ಪೃಥಿವೀ ಕದಲಿಹೋಗುವುವು; ಆದರೆ, ನನ್ನ ಮಾತುಗಳು ಎಂದಿಗೂ ತಪ್ಪಾಗುವುದಿಲ್ಲ. (ಇಂ.ಮ್ಯಾ.ಪ:– ೨೪, ಆ :– ೨೫)*

**ಸಮೀಕ್ಷಕ :–** ಈ ಮಾತೂ ಕೂಡ ಅವಿದ್ಯೆಯದು ಮತ್ತು ಮೂರ್ಖತೆಯದು. ಅಲ್ಲ, ಆಕಾಶವು ಕದಲಿ ಎಲ್ಲಿಗೆ ಹೋಗುವುದು? ಆಕಾಶ ಅತಿಸೂಕ್ಷ್ಮವಾಗಿರುವುದರಿಂದ ನೇತ್ರಕ್ಕೆ ಕಾಣದಿರುವಾಗ, ಇದರ ಕದಲುವಿಕೆಯನ್ನು ಯಾವನು ನೋಡಬಲ್ಲನು? ಮತ್ತು ತನ್ನ ಬಾಯಿನಿಂದ ತನ್ನ ಹಿರಿಮೆಯನ್ನು ತೋಡಿಕೊಳ್ಳುವುದು ಮನುಷ್ಯರ ಕೆಲಸವಲ್ಲ. (೮೦)

*ಆಗ ಅವನು ಎಡಗಡೆಗೆ ಇರುವವರಿಗೆ – "ಓ ಅಭಿಶಪ್ತ ಜನರೇ! ಸೈತಾನನ ಮತ್ತು ಅವನ ದೂತರ ಸಲುವಾಗಿ ಸಿದ್ಧಗೊಳಿಸಲ್ಪಟ್ಟಿರುವ ಅನಂತ ಅಗ್ನಿಗೆ ನನ್ನ ಹತ್ತಿರದಿಂದ ಹೋಗಿರಿ" – ಎಂದು ಹೇಳುವನು. (ಇಂ.ಮ್ಯಾ. ಪ:–೨೫ ಆ:– ೪೧)*

**ಸಮೀಕ್ಷಕ :–** ಓಹೋ! ತನ್ನ ಶಿಷ್ಯರಾಗಿರುವವರನ್ನು ಸ್ವರ್ಗಕ್ಕೆ (ಕಳುಹಿಸುವುದು) ಮತ್ತು ಬೇರೆಯವರಾಗಿರುವವರನ್ನು ಅನಂತ ಅಗ್ನಿಯಲ್ಲಿ ಕೆಡಹುವುದು! ಇದೆಷ್ಟು ದೊಡ್ಡ ಪಕ್ಷಪಾತದ ಮಾತಾಗಿದೆ? ಆದರೆ, ಆಕಾಶವೇ ಇರುವುದಿಲ್ಲವೆಂದು ಬರೆದಿರುವಾಗ, ಅನಂತ ಅಗ್ನಿ, ನರಕ, ಸ್ವರ್ಗ ಎಲ್ಲಿರುವವು? ಸೈತಾನನನ್ನೂ, ಮತ್ತು ಅವನ ದೂತರನ್ನು ಈಶ್ವರನು ಸೃಜಿಸದೇ ಇದ್ದರೆ, ಇಷ್ಟೊಂದು ನರಕದ ಸನ್ನಾಹವನ್ನೂ ಏಕೆ ಮಾಡಬೇಕಾಗಿರುತ್ತಿದ್ದಿತು? ಮತ್ತು ಒಬ್ಬ ಸೈತಾನನೇ ಈಶ್ವರನ ಭಯದಿಂದ ಭೀತನಾಗಲಿಲ್ಲವಾದರೆ, ಅವನು ಈಶ್ವರನಾಗುವುದಾದರೂ ಹೇಗೆ? ಏಕೆಂದರೆ, (ಸೈತಾನನು) ಅವನ ದೂತನೇ ಆದರೂ, ದಂಗೆ ಕೋರನಾಗಿ ಹೋದನು ಮತ್ತು ಈಶ್ವರನು ಅವನನ್ನು ಮೊದಲೇ ಹಿಡಿದು, ಕಾರಾಗಾರದಲ್ಲಿ ಹಾಕಲೂ ಶಕ್ತನಾಗಲಿಲ್ಲ; ಕೊಲ್ಲಲೂ ಶಕ್ತನಾಗಲಿಲ್ಲ. ಮತ್ತೆ ಅವನ ಈಶ್ವರತ್ವವಾದರೂ ಏನು? ಅವನು ಏಸುವಿಗೂ ಕೂಡ ನಾಲ್ವತ್ತು ದಿನ ದುಃಖವಿತ್ತನು; ಏಸುವೂ ಅವನಿಗೆ ಏನನ್ನೂ ಮಾಡಲಾರದೇ ಹೋದನು. ಎಂದರೆ, ಈಶ್ವರನ ಪುತ್ರನಾದುದು ವ್ಯರ್ಥವಾಯಿತು. ಆದುದರಿಂದ, ಏಸು ಈಶ್ವರನ ಮಗನೂ ಅಲ್ಲ; ಮತ್ತು ಬೈಬಲಿನಲ್ಲಿನ ಈಶ್ವರನು ಈಶ್ವರನೂ ಅಲ್ಲ – ಎಂದೇ ಸಿದ್ಧವಾಗುತ್ತದೆ. (೮೧)

ಆಗ ೧೨ ಜನ ಶಿಷ್ಯರಲ್ಲಿ ಒಬ್ಬನಾದ ಯಹೂದಾ ಇಸ್ಕರಿಯೋತೀ[೯೧] ಎಂಬ ಹೆಸರಿನ ಪುರುಷನು ಪ್ರಧಾನ ಯಾಜಕರ

೯೧. Judas Iscariot.

ಬಳಿಹೋದನು ಮತ್ತು – “ನಾನು ಏಸುವನ್ನು ತಮ್ಮಗಳ ಕೈಗೆ ಹಿಡಿಸಿಕೊಟ್ಟರೆ, ತಾವುಗಳು ನನಗೆ ಏನು ಕೊಡುವಿರಿ?” – ಎಂದು ಕೇಳಿದನು. ಅವರು ಅವನಿಗೆ ಮೂವತ್ತು ರೂಪಾಯಿಗಳನ್ನು ಕೊಡಲು ನಿರ್ಧರಿಸಿದರು. (ಇಂ. ಮ್ಯಾ.ಪ:–೨೬. ಆ:–೧೪,೧೫).

**ಸಮೀಕ್ಷಕ** :– ಈಗ ನೋಡಿರಿ. ಏಸುವಿನ ಸಮಸ್ತ ಚಮತ್ಕಾರಗಳೂ ಹಾಗೂ ಈಶ್ವರತ್ವವೂ ಇಲ್ಲಿ ಬಯಲಾಯಿತು. ಏಕೆಂದರೆ, ಯಾವನು ಅವನ ಪ್ರಧಾನ ಶಿಷ್ಯನಾಗಿದ್ದನೋ, ಅವನೂ ಕೂಡ ಅವನ ಸಾಕ್ಷಾತ್ ಸಂಗದಿಂದ ಪವಿತ್ರಾತ್ಮನಾಗಲಿಲ್ಲ ಎಂದ ಮೇಲೆ ಅನ್ಯರನ್ನು ಅವನು ಮೃತನಾದ ಮೇಲೆ ಪವಿತ್ರಾತ್ಮರನ್ನಾಗಿ ಮಾಡುವುದೆಲ್ಲಿ ಬಂದಿತು? ಮತ್ತು ಅವನಲ್ಲಿ ನಂಬಿಕೆಯುಳ್ಳ ಜನರು ಅವನ ಭರವಸೆಯಿಂದ ಎಷ್ಟು ವಂಚಿಸಲ್ಪಡುತ್ತಾರೆ? ಏಕೆಂದರೆ, ಯಾವನು ಸಾಕ್ಷಾತ್ ಸಂಬಂಧದಲ್ಲಿಯೂ ಶಿಷ್ಯನಿಗೆ ಏನು ಹಿತವನ್ನೂ ಮಾಡಲಿಲ್ಲವೋ ಅವನು ಮೃತನಾದ ಮೇಲೆ, ಯಾವನಿಗಾದರೂ ಏನು ಕಲ್ಯಾಣವನ್ನು ತಾನೇ ಮಾಡಬಲ್ಲನು? (೮೨)

*ಯಾವಾಗ ಅವರು ಭುಂಜಿಸುತ್ತಿದ್ದರೋ, ಆಗ ಏಸುವು ರೊಟ್ಟಿಯನ್ನು ತೆಗೆದುಕೊಂಡು ಆಶೀರ್ವದಿಸಿದನು ಮತ್ತು ಅದನ್ನು ಮುರಿದು ಶಿಷ್ಯರಿಗೆ ಕೊಟ್ಟನು ಮತ್ತು “ತೆಗೆದುಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹವಾಗಿದೆ” – ಎಂದನು. ಮತ್ತು ಅವನು ಬಟ್ಟಲಗಳನ್ನು ತೆಗೆದುಕೊಂಡು ವಂದಿಸಿದನು ಮತ್ತು ಅವರಿಗೆ ಕೊಟ್ಟು, “ನೀವೆಲ್ಲರೂ ಇದರಲ್ಲಿನಿಂದ ಕುಡಿಯಿರಿ, ಏಕೆಂದರೆ, ಇದು ನನ್ನ ರಕ್ತವಾಗಿದೆ. ಎಂದರೆ, ನೂತನ ನಿಯಮದ್ದಾಗಿದೆ”– ಎಂದು ಹೇಳಿದನು. (ಇಂ.ಮ್ಯಾ. ಪ:–೨೬. ಆ:– ೨೬–೨೮)*

**ಸಮೀಕ್ಷಕ** :– ಭಲೇ! ಯಾವನಾದರೂ ಸಭ್ಯನು ಇಂತಹ ಮಾತನ್ನಾಡುವನೇನು? ಅವಿದ್ವಾಂಸನೂ, ಕಾಡಾಡಿಯೂ ಆದ ಮನುಷ್ಯನ ಹೊರತು, ಬೇರೆ ಯಾವನೂ ತನ್ನ ಶಿಷ್ಯರಿಗೆ ಅವರು ತಿನ್ನುವ ವಸ್ತು ತನ್ನ ಮಾಂಸ; ಹಾಗೂ ಕುಡಿಯುವ ವಸ್ತುಗಳು ತನ್ನ ರಕ್ತ– ಎಂದು ಹೇಳಲಾರನು. ಮತ್ತು ಇದೇ ಮಾತನ್ನು ಆಧುನಿಕ ಕಾಲದ ಕ್ರೈಸ್ತರುಗಳು ‘ಪ್ರಭು ಭೋಜನ’ ಎನ್ನುತ್ತಾರೆ. ಎಂದರೆ, ತಿನ್ನುವ– ಕುಡಿಯುವ ವಸ್ತುಗಳಲ್ಲಿ ಏಸುವಿನ ಮಾಂಸದ ಮತ್ತು ರಕ್ತದ ಭಾವನೆ ಮಾಡಿಕೊಂಡು ತಿನ್ನುತ್ತಾರೆ – ಕುಡಿಯುತ್ತಾರೆ. ಇದು ಎಷ್ಟು ಹೊಲಸು ವಿಷಯ? ಯಾರು ತಮ್ಮ ಗುರುವಿನ ಮಾಂಸ–ರಕ್ತವನ್ನೂ ಕೂಡ ತಿನ್ನುವ – ಕುಡಿಯುವ ಭಾವನೆಯನ್ನು ಬಿಡಲಿಲ್ಲವೋ, ಅವರು ಅನ್ಯರನ್ನು ಹೇಗೆ ಬಿಡಬಲ್ಲರು? (೮೩)

*ಮತ್ತು ಅವನು ಪೀಟರ್‌ನನ್ನೂ ಮತ್ತು ಪಬದೋನ[೯೨] ಇಬ್ಬರೂ ಮಕ್ಕಳನ್ನೂ ತನ್ನ ಸಂಗಡ ಯಾವಾಗ ಕರೆದೊಯ್ದನೋ ಮತ್ತು ಶೋಕಿಸಲೂ ಮತ್ತು ಅತ್ಯಂತ ನಿರುತ್ಸಾಹನಾಗಲೂ ತೊಡಗಿದನೋ, ಆಗ ಅವನು ಅವರಿಗೆ – “ನನ್ನ ಮನಸ್ಸು ನಾನು ಸಾಯುವಷ್ಟು ಮಟ್ಟಿಗೆ, ಅತಿಹತೋತ್ಸಾಹವಾಗಿದೆ,” ಎಂದು ಹೇಳಿದನು. ಮತ್ತು ಸ್ವಲ್ಪ ಮುಂದುವರಿದು ಅವನು ಮುಖ ಕೆಳಗಾಗಿ ಬಿದ್ದನು ಮತ್ತು –“ಓ ನನ್ನ ತಂದೆ! ಸಾಧ್ಯವಾದಲ್ಲಿ, ಈ ಬಟ್ಟಲು ನನ್ನಿಂದ ಸರಿದುಹೋಗಲಿ”. ಎಂದು ಪ್ರಾರ್ಥನೆಮಾಡಿದನು. (ಇಂ. ಮ್ಯಾ. ಪ:– ೩೬. ಆ:– ೩೭– ೩೯)*

**ಸಮೀಕ್ಷಕ** :– ನೋಡಿರಿ. ಅವನು ಕೇವಲ ಮನುಷ್ಯನಾಗಿರದಿದ್ದರೆ, ಈಶ್ವರನ ಪುತ್ರನೂ, ಮತ್ತು ತ್ರಿಕಾಲದರ್ಶಿಯೂ ಹಾಗೂ ವಿದ್ವಾಂಸನೂ ಆಗಿದ್ದರೆ, ಇಂತಹ ಅಯೋಗ್ಯವಾದ ವರ್ತನೆಯನ್ನು ಮಾಡುತ್ತಿರಲಿಲ್ಲ. ಇದರಿಂದ ಸ್ಪಷ್ಟವಾಗಿ, ಏಸುವು ಅಥವಾ ಅವನ ಅನುಯಾಯಿಗಳು “ ಅವನು ಈಶ್ವರನ ಮಗನಾಗಿದ್ದಾನೆ. ಭೂತ ಭವಿಷ್ಯದ್ವರ್ತಮಾನಗಳನ್ನು ತಿಳಿದವನೂ ಮತ್ತು ಪಾಪವನ್ನು ಕ್ಷಮಿಸುವವನೂ ಆಗಿದ್ದಾನೆ,”– ಎಂಬ ಮಿಥ್ಯಾ ಪ್ರಪಂಚವನ್ನು ಸುಳ್ಳು– ಸುಳ್ಳೇ ರಚಿಸಿದ್ದಾರೆ.” ಎಂದು ಗೊತ್ತಾಗುತ್ತದೆ. ಅಲ್ಲದೆ, ಅವನು ಕೇವಲ ಸಾಧಾರಣನೂ, ಮುಗ್ಧನೂ, ವಸ್ತುತಃ ಅವಿದ್ವಾಂಸನೂ ಆಗಿದ್ದನು – ಎಂದು ತಿಳಿದುಕೊಳ್ಳಬೇಕು. ಅವನು ವಿದ್ವಾಂಸನೂ ಆಗಿರಲಿಲ್ಲ; ಯೋಗಿಯೂ ಆಗಿರಲಿಲ್ಲ; ಸಿದ್ಧನೂ ಆಗಿರಲಿಲ್ಲ. (೮೪)

*ಅವನು ಮಾತನಾಡುತ್ತಲೇ ಇದ್ದನು. ನೋಡಿರಿ, ಅಷ್ಟರಲ್ಲಿ ೧೨ ಜನ ಶಿಷ್ಯರಲ್ಲಿ ಒಬ್ಬನಾಗಿದ್ದ ಯಹೂದಾ[೯೩] ಬಂದು ಸೇರಿದನು. ಮತ್ತು ಜನರ ಪ್ರಧಾನ ಯಾಜಕರ ಮತ್ತು ಪ್ರಾಚೀನರ ಕಡೆಯಿಂದ ಬಹುಮಂದಿ ಖಡ್ಗಗಳನ್ನು ಮತ್ತು ದಂಡಗಳನ್ನು ಹಿಡಿದು ಅವನೊಂದಿಗೆ ಇದ್ದರು. ಏಸುವನ್ನು ಸೆರೆಹಿಡಿಸುವವನು– “ಯಾವನಿಗೆ ನಾನು ಮುತ್ತಿಡುವೆನೋ, ಅವನನ್ನು ಹಿಡಿಯಿರಿ”– ಎಂದು ಸಂಕೇತವನ್ನು ಮಾಡಿದ್ದನು. ಮತ್ತು ಅವನು ಕೂಡಲೇ ಏಸುವಿನ*

---

೯೨. Peter, zabedee

೯೩. Judas.

*ಹತ್ತಿರ ಬಂದು – “ಹೇ ಗುರು! ಪ್ರಣಾಮ!” ಎಂದನು ಮತ್ತು ಅವನಿಗೆ ಮುತ್ತನ್ನು ಕೊಟ್ಟನು. ಆಗ ಅವರು ಏಸುವಿನ ಮೇಲೆ ಕೈ ಹಾಕಿ ಅವನನ್ನು ಹಿಡಿದರು; ಆಗ ಎಲ್ಲ ಶಿಷ್ಯರೂ ಅವನನ್ನು ಬಿಟ್ಟು ಓಡಿದರು. ಕೊನೆಗೆ ಇಬ್ಬರು ಸುಳ್ಳು ಸಾಕ್ಷಿಗಳು ಬಂದು, ‘ಇವನು ಈಶ್ವರನ ಮಂದಿರವನ್ನು ಕೆಡಹಬಲ್ಲೆನು, ಮತ್ತೆ ಅದನ್ನು ಮೂರು ದಿನಗಳಲ್ಲಿ ನಿರ್ಮಿಸಬಲ್ಲೆನು’. ಎಂದು ಹೇಳಿದನು – ಎಂದು ನುಡಿದರು. ಆಗ ಮಹಾ ಯಾಜಕನು ಎದ್ದುನಿಂತು ಏಸುವಿಗೆ– “ನೀನು ಏನೂ ಉತ್ತರವನ್ನು ಕೊಡುವುದಿಲ್ಲವೇ? ಈ ಜನರು ನಿನಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಾರೆ!” ಎಂದು ಪ್ರಶ್ನೆಹಾಕಿದನು. ಆದರೆ, ಏಸುವು ಸುಮ್ಮನೇ ಇದ್ದನು. ಇದಾದನಂತರ ಮಹಾಯಾಜಕನು ಅವನಿಗೆ– “ ನಾನು ನಿನ್ನನ್ನು ಜೀವಂತ ಈಶ್ವರನ ಮೇಲೆ ಅಣೆಯಿಟ್ಟು ಆರೋಪಿಸುತ್ತೇನೆ. ನೀನು ಈಶ್ವರನ ಮಗನಾದ ಕ್ರಿಸ್ತನಹುದೋ, ಅಲ್ಲವೋ, ಎಂಬುದನ್ನು ಹೇಳು”. ಎಂದು ಹೇಳಿದನು. ಏಸುವು ಅವನಿಗೆ –“ ನೀನು ಹೇಳಿಯೇ ಬಿಟ್ಟೆಯಲ್ಲ !” ಎಂದನು. ಆಗ ಮಹಾಯಾಜಕನು ತನ್ನ ವಸ್ತ್ರಗಳನ್ನು ಹರಿದು“ ಇವನು ಈಶ್ವರನ ನಿಂದೆಯನ್ನು ಮಾಡಿದ್ದಾಗಿದೆ. ಈಗ ನಮಗೆ ಸಾಕ್ಷಿಗಳ ಉಪಯೋಗ ಇನ್ನೇನಿದೆ? ನೋಡಿರಿ, ನೀವು ಈಗತಾನೇ ಅವನ ಬಾಯಿನಿಂದ ಈಶ್ವರನ ನಿಂದೆಯನ್ನು ಆಲಿಸಿದ್ದೀರಿ. ಈಗ ಏನು ಆಲೋಚಿಸುತ್ತೀರಿ?” ಎಂದು ಪ್ರಶ್ನಿಸಿದನು. ಆಗ ಅವರು “ಅವನು ವಧಾರ್ಹನಾಗಿದ್ದಾನೆ.” ಎಂದು ಉತ್ತರವಿತ್ತರು. ಆಗ ಅವರು ಅವನ ಮುಖದ ಮೇಲೆ ಉಗುಳಿದರು ಮತ್ತು ಅವನಿಗೆ ಗುದ್ದುಗಳನ್ನು ಹಾಕಿದರು. ಬೇರೆಯವರು ಪೆಟ್ಟುಗಳನ್ನು ಬಿಗಿದು,“ಓ ಕ್ರಿಸ್ತ! ನಮಗೆ ಭವಿಷ್ಯವಾಣಿಯನ್ನು ಹೇಳು. ಯಾವನು ನಿನ್ನನ್ನು ಹೊಡೆದನು?” ಎಂದು ಕೇಳಿದರು. ಪೀಟರನು[೯೪] ಹೊರಗೆ ಅಂಗಳದಲ್ಲಿ ಕುಳಿತಿದ್ದನು. ಮತ್ತು ಒಬ್ಬಳು ದಾಸಿಯು ಅವನ ಬಳಿ ಬಂದು, “ನೀನೂ ಕೂಡಿ ಗಾಲೀಲಿಯ ಏಸುವಿನ ಜೊತೆಯಲ್ಲಿದ್ದೆ.” ಎಂದಳು. ಅವನು ಎಲ್ಲರ ಮುಂದೆಯೂ ಮರೆಯಾಚಿ, ‘ನೀನು ಏನೆನ್ನುತ್ತೀಯೋ ನನಗೆ ತಿಳಿಯದು’ ಎಂದನು. ಅವನು ಹೊರಗೆ ತೊಟ್ಟಿಗೆ ಹೋದಾಗ, ಮತ್ತೊಬ್ಬಳು ದಾಸಿಯು ಅವನನ್ನು ನೋಡಿ, ಅಲ್ಲಿದ್ದ ಜನರಿಗೆ “ಇವನೂ ಕೂಡ ನಜರೇತಿನ[೯೫] ಏಸುವಿನ ಸಂಗಡ ಇದ್ದನು”. ಎಂದಳು. ಅವನು ಆಣೆಯಿಟ್ಟು ಪುನಃ – “ಆ ಮನುಷ್ಯನನ್ನು ನಾನು ಅರಿಯೆನು” – ಎಂದು ಮರೆಮಾಚಿದನು. ಆಗ ಅವನು “ನಾನು ಆ ಮನುಷ್ಯನನ್ನು ತಿಳಿಯೆನು”. – ಎಂದು ಧಿಕ್ಕರಿಸಲು ಮತ್ತು ಆಣೆಯಿಡಲು ಆರಂಭಿಸಿದನು. (ಇಂ.ಮ್ಯಾ. ಪ:-೨೬, ಆ:-೪೯-೫೦,೭೨,೭೪)*

**ಸಮೀಕ್ಷಕ :–** ಈಗ ನೋಡಿರಿ. ಅವನಿಗೆ ತನ್ನ ಶಿಷ್ಯರಿಗೆ ದೃಢವಾದ ನಂಬಿಕೆ ಹುಟ್ಟಿಸಬಲ್ಲಷ್ಟು ಸಾಮರ್ಥ್ಯವೂ ಅಥವಾ ಪ್ರತಾಪವೂ ಇರಲಿಲ್ಲ. ಮತ್ತು ಆ ಶಿಷ್ಯರು, ಪ್ರಾಣವೇ ಬೇಕಾದರೂ ಹೊರಟುಹೋಗಲೊಲ್ಲದೇಕೆ? ಆಗಲೂ ತಮ್ಮ ಗುರುವನ್ನು ಲೋಭದಿಂದ ಹಿಡಿಸಬಾರದಾಗಿತ್ತು; ಕೈಬಿಡಬಾರದಾಗಿತ್ತು; ಸುಳ್ಳು ಮಾತನ್ನಾಡಬಾರದಾಗಿತ್ತು. ಸುಳ್ಳು ಆಣೆಗಳನ್ನಿಡಬಾರದಾಗಿತ್ತು. ಮತ್ತು ಏಸುವೂ ಕೂಡ, “ಲೂತನ ಮನೆಗೆ ಅತಿಥಿಗಳನ್ನು ಕೊಲ್ಲಲು ಬಹುಮಂದಿ ಏರಿಬಂದಿದ್ದರು. ಅಲ್ಲಿ ಈಶ್ವರನ ದೂತರಿಬ್ಬರಿದ್ದರು. ಅವರು ಆಕ್ರಮಣಕಾರಿಗಳನ್ನು ಕುರುಡರನ್ನಾಗಿ ಮಾಡಿಬಿಟ್ಟರು”. ಎಂದು ತೌರೇತಿನಲ್ಲಿ[೯೬] ಬರೆದಿರುವಂತೆ ಚಾಮತ್ಕಾರಿಕನೂ ಆಗಿರಲಿಲ್ಲ. ಈ ಮೇಲಿನ ಮಾತೂ ಕೂಡ ಅಸಂಭವೇ ಆಗಿದ್ದರೂ, ಏಸುವಿನ (ಆ ಈಶ್ವರನ ದೂತರಿಗೆ ಇದ್ದಷ್ಟು) ಸಾಮರ್ಥ್ಯವು ಕೂಡ ಇರಲಿಲ್ಲ. ಮತ್ತು ಈ ದಿನಗಳಲ್ಲಿ ಅವನ ಹೆಸರಿನ ಮೇಲೆ ಕ್ರೈಸ್ತರು ಅದೆಷ್ಟು ಹಿರಿಮೆಯನ್ನು ಹರಡಿದ್ದಾರೆ! ಛೀ! ಛೀ!! ಇಂತಹ ದುರವಸ್ಥೆಯಲ್ಲಿ ಸಾಯುವುದಕ್ಕಿಂತ, ಹೋರಾಡುತ್ತಾ, ಅಥವಾ ಸಮಾಧಿಸ್ಥನಾಗಿ, ಇಲ್ಲವೇ ಬೇರೆ ಯಾವುದಾದರೂ ತೆರನಾಗಿ ಪ್ರಾಣತ್ಯಾಗ ಮಾಡಿದ್ದರೆ, ಚೆನ್ನಾಗಿರುತ್ತಿದ್ದಿತು. ಆದರೆ, ಆ ಬುದ್ಧಿ ವಿದ್ಯೆಯಿಲ್ಲದೆ ಬರುವುದಾದರೂ ಎಲ್ಲಿನಿಂದ?[೯೭] (೮೫)

---

೯೪. Peter

೯೫. Nazareth

೯೬. ಹೋದರೆ, ಬೈಬಲ್ಲಿನ ‘ಹಳೆಯ ನಿಯಮ’ದ ಪುಸ್ತಕ.

೯೭. ಶತೃವಿನ ಕೈಯಿನಿಂದ ದೊರಕುವ ಅಪಮಾನಕರವಾದ ಮೃತ್ಯುವನ್ನು ನಿರುಪಾಯನಾಗಿ ವರಿಸುವ ಬದಲು, ಸಂಘರ್ಷದಿಂದ ಹೋರಾಡುತ್ತಾ, ಅಥವಾ ಸಮಾಧಿಸ್ಥನಾಗಿ ಪ್ರಾಣವನ್ನು ನಿರೋಧಿಸಿ, ಅಥವಾ ಇನ್ನಾವುದಾದರೂ ಸಮ್ಮಾನ ಜನಕ ರೀತಿಯಿಂದ, ತಾನೇ ಮೃತ್ಯುವನ್ನು ಆಲಂಗಿಸುವುದು ಧೀರರಿಗೆ ಉಚಿತವಾದುದೆಂದು ಮಹರ್ಷಿ ದಯಾನಂದರು ಇಲ್ಲಿ ಸಲಹೆ ಕೊಟ್ಟಿದ್ದಾರೆ. ಭಾರತದ ಇತಿಹಾಸದಲ್ಲಿ ಕ್ಷತ್ರಿಯರು ಈ ರೀತಿಯ ಮೃತ್ಯುವನ್ನು ಬಯಸುತ್ತಿದ್ದರು ಮತ್ತು ಹೊಂದುತ್ತಿದ್ದರು. ಈ ತರಹದ ಮೃತ್ಯುವನ್ನೇ ಸರ್ವ ವರ್ಣಸ್ಥರೂ ಅನುಭವಿಸಬೇಕೆಂದು ಮಹರ್ಷಿ ದಯಾನಂದರು ನಿರ್ದೇಶಿಸುತ್ತಾರೆ. ಸೃಷ್ಟಿಕರ್ತನಾದ ನಿರಾಕಾರ ಪರಮೇಶ್ವರನ ಮತ್ತು ಅವನ ಕೃತಿಯಾದ ವೇದಗಳ ಮೇಲೆ ವಿಶ್ವಾಸವಿಟ್ಟವರಿಗೆ ಮಾತ್ರ ಈ ಪೌರುಷ ಬರುತ್ತದೆ. ! ಅನ್ಯರಿಗೆ– ಅವರು ವಿಶ್ವಾಸವಿಡುವ ‘ಇಷ್ಟದೈವ’ ದ ಮತ್ತು ಅವರು ಒಪ್ಪುವ ‘ಧರ್ಮಗ್ರಂಥ’ ದ ಮೇರೆಗೆ ಅವರ ಭಾವನೆ ಮತ್ತು ವರ್ತನೆ ಉಂಟಾಗುತ್ತದೆ.

*ಆ ಏಸುವು – "ನಾನು ಈಗಲೇ ನನ್ನ ತಂದೆಯಲ್ಲಿ ವಿನಂತಿ ಮಾಡಿಕೊಳ್ಳುವುದಿಲ್ಲ. ಮತ್ತು ಅವನು ನನ್ನ ಬಳಿಗೆ ಹನ್ನೆರಡಕ್ಕಿಂತ ಹೆಚ್ಚು ಸ್ವರ್ಗದ ದೂತರುಗಳ ಸೈನ್ಯಗಳನ್ನು ತಲುಪಿಸಿ ಬಿಡುವನು" ಎಂದು ಬೇರೆ ಹೇಳುತ್ತಾನೆ. (ಇಂ.ಮ್ಯಾ.ಪ–೨೬ ಆ:– ೫೩)*

**ಸಮೀಕ್ಷಕ :–** ಹೆದರಿಸುತ್ತಲೂ ಹೋಗುತ್ತಾನೆ; ತನ್ನ ಮತ್ತು ತನ್ನ ತಂದೆಯ ಹಿರಿಮೆಯನ್ನು ಕೊಚ್ಚಿಕೊಳ್ಳುತ್ತಲೂ ಹೋಗುತ್ತಾನೆ; ಆದರೆ, ಏನನ್ನೂ ಮಾಡಲಾರದವನೂ ಆಗಿದ್ದಾನೆ! ಆಶ್ಚರ್ಯದ ಮಾತನ್ನು ನೋಡಿರಿ. ಮಹಾಯಾಜಕನು–"ಈ ಜನರು ನಿನಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಾರೆ. ಇದಕ್ಕೆ ಉತ್ತರವನ್ನು ಕೊಡು". ಎಂದು ಹೇಳುವಾಗಲೂ ಏಸು ಸುಮ್ಮನೆ ಇದ್ದನು. ಏಸುವು ಮಾಡಿದ ಈ ಮೌನಧಾರಣೆಯೂ ಉಚಿತವಲ್ಲ. ಏಕೆಂದರೆ, ಸತ್ಯವಾಗಿದ್ದುದನ್ನು ಅಲ್ಲಿ ಅವಶ್ಯಕವಾಗಿಯೂ ಹೇಳಿ ಬಿಡುತ್ತಿದ್ದರೆ, ಆಗಲೂ ಕೂಡ ಒಳ್ಳೆಯದಾಗುತ್ತಿದ್ದಿತು. ಇಂತಹ ಬಹುವಾದ ತನ್ನ ಜಂಬದ ಮಾತುಗಳನ್ನು ಆಡುವುದು ಉಚಿತವಾಗಿರಲಿಲ್ಲ. ಮತ್ತು ಯಾರು ಏಸುವಿನ ಮೇಲೆ ಸುಳ್ಳು ದೋಷಗಳನ್ನಾರೋಪಿಸಿ ಕೊಂದರೋ, ಅವರಿಗೆ ಅದು ತಕ್ಕುದಾಗಿರಲಿಲ್ಲ. ಏಕೆಂದರೆ, ಅವರು ಅವನ ಬಗೆಗೆ ಎಂತಹದನ್ನು ಆರೋಪಿಸಿದರೋ, ಅಂತಹ ಅಪರಾಧ ಏಸುವಿನದಾಗಿರಲಿಲ್ಲ. ಆದರೆ, ಅವರೂ ಕೂಡ ಕಾಡಾಡಿಗಳೇ ಆಗಿದ್ದರು. ನ್ಯಾಯದ ಮಾತುಗಳನ್ನು ಏನು ಬಲ್ಲರು? ಏಸುವು ಸುಳ್ಳುಸುಳ್ಳೇ ಈಶ್ವರನ ಮಗನೆಂದು ಕೊಚ್ಚಿಕೊಳ್ಳದಿದ್ದರೆ, ಮತ್ತು ಅವರು ಅವನೊಂದಿಗೆ ಇಂತಹ ಕೆಟ್ಟ ವರ್ತನೆಯನ್ನು ಮಾಡದೇ ಇದ್ದಿದ್ದರೆ, ಇಬ್ಬರಿಗೂ ಉತ್ತಮವಾದ ಪರಿಣಾಮವೇ ಆಗುತ್ತಿತ್ತು. ಆದರೆ ಇಷ್ಟು ವಿದ್ಯೆ, ಧರ್ಮಾತ್ಮ ತ್ವ ಮತ್ತು ನ್ಯಾಯಶೀಲತ್ವವನ್ನು ಎಲ್ಲಿಂದ ತಂದಾರು? (೮೬)

*ಏಸುವು ಅಧ್ಯಕ್ಷನ ಮುಂದೆ ನಿಂತನು ಮತ್ತು ಅಧ್ಯಕ್ಷನು ಅವನನ್ನು – "ನೀನು ಯಹೂದ್ಯರ ರಾಜನಾಗಿದ್ದಿಯೋ?" ಎಂದು ಕೇಳಿದನು. ಏಸುವು ಅವನಿಗೆ "ತಾವೇ ಹೇಳುತ್ತಿದ್ದೀರಿ," ಎಂದು ಹೇಳಿದನು. ಯಾವಾಗ ಪ್ರಧಾನ ಯಾಜಕನು ಮತ್ತು ಪ್ರಾಚೀನರು ಅವನ ಮೇಲೆ ದೋಷಾರೋಷಣೆ ಮಾಡುತ್ತಿದ್ದರೋ, ಆಗ ಅವನು ಏನೂ ಉತ್ತರವನ್ನು ಕೊಡಲಿಲ್ಲ. ಆಗ ಪಿಲಾತನು – "ಈ ಜನರು ನಿನಗೆ ವಿರುದ್ಧವಾಗಿ ಎಷ್ಟು ಸಾಕ್ಷ್ಯವನ್ನು ಕೊಡುತ್ತಾರೆ – ಎಂಬುದನ್ನು ನೀನು ಆಲಿಸುವುದಿಲ್ಲವೇನು?" ಎಂದು ಅವನನ್ನು ಕೇಳಿದನು. ಆದರೆ ಅವನು ಅಧ್ಯಕ್ಷನು ಅಶ್ಚರ್ಯಚಕಿತ ನಾಗುವವರೆಗೂ ಒಂದು ಮಾತಿಗೂ ಸಹ ಅವನಿಗೆ ಉತ್ತರವನ್ನು ಕೊಡಲಿಲ್ಲ. ಪಿಲಾತನು[೯೮] ಅವರನ್ನು "ತನ್ನನ್ನು ಕ್ರಿಸ್ತನೆಂದು ಹೇಳಿಕೊಳ್ಳುವ ಏಸುವಿಗೆ ನಾನು ಏನು ಶಿಕ್ಷೆ ವಿಧಿಸಲಿ?" ಎಂದು ಕೇಳಿದನು. ಎಲ್ಲರೂ ಅವನಿಗೆ–" "ಅವನು ಶಿಲುಬೆಯ ಮೇಲೆ ಏರಿಸಲ್ಪಡಲಿ". ಎಂದು ಹೇಳಿದರು. ಮತ್ತು ಏಸುವಿಗೆ ಛಡಿ ಏಟುಗಳನ್ನು ಹಾಕಿ, ಶಿಲುಬೆಯ ಮೇಲೆ ಏರಿಸಲ್ಪಡುವುದಕ್ಕಾಗಿ ಒಪ್ಪಿಸಿಬಿಟ್ಟನು. ಆಗ ಅಧ್ಯಕ್ಷನ ಸೈನಿಕರು ಏಸುವನ್ನು ಅಧ್ಯಕ್ಷನ ಗೃಹಕ್ಕೆ ಕರೆದೊಯ್ದು, ಸಮಸ್ತ ಸೈನ್ಯವನ್ನೂ ಅವನ ಬಳಿ ಒಟ್ಟುಗೂಡಿಸಿದರು. ಆಗ ಅವರು ಅವನ ವಸ್ತ್ರಗಳನ್ನು ಕಳಚಿಹಾಕಿ, ಅವನಿಗೆ ಕೆಂಪು ನೀಲವಂಗಿಯನ್ನು ತೊಡಿಸಿದರು ಮತ್ತು ಮುಳ್ಳುಗಳ ಕಿರೀಟವನ್ನು ಹೆಣೆದು ಅವನ ತಲೆಯ ಮೇಲೆ ಇಟ್ಟರು ಮತ್ತು ಅವನ ಬಲಗೈಯಿಗೆ ಒಂದು ಕೊಂಬೆಯನ್ನು ಕೊಟ್ಟರು ಮತ್ತು ಅವನ ಮುಂದೆ ಮೊಳಕಾಲೂರಿ ಕುಳಿತು "ಓ ಯಹೂದ್ಯರ ರಾಜನೇ! ಪ್ರಣಾಮ!! ಎಂದು ಹೇಳಿ ಅಪಹಾಸ್ಯಮಾಡಿದರು ಮತ್ತು ಅವರು ಅವನ ಮೇಲೆ ಉಗುಳಿದರು ಮತ್ತು ಆ ಕೊಂಬೆಯನ್ನು ತೆಗೆದುಕೊಂಡು ಅವನ ತಲೆಯ ಮೇಲೆ ಹೊಡೆದರು. ಅವರು ಅವನ ಅಪಹಾಸ್ಯಮಾಡಿ ಮುಗಿಸಿದ ಮೇಲೆ ಆ ನೀಲವಂಗಿಯನ್ನು ಕಳಚಿಹಾಕಿ, ಅವನ ಬಟ್ಟೆಗಳನ್ನೇ ತೊಡಿಸಿ, ಅವನನ್ನು ಶಿಲುಬೆಯ ಮೇಲೆ ಏರಿಸುವುದಕ್ಕಾಗಿ ಕರೆದುಕೊಂಡು ಹೋದರು. ಅವರು ಗೋಲ್ಗೋಥಾ,[೯೯] ಎಂದರೆ ಕಪಾಲಕ್ಷೇತ್ರವೆಂದು ಕರೆಯಲ್ಪಡುವ ಸ್ಥಾನವೊಂದಕ್ಕೆ ಸೇರಿದ ಮೇಲೆ ಅವರು ಹುಳಿಮದ್ಯಕ್ಕೆ ಕಹಿದ್ರವವನ್ನು ಸೇರಿಸಿ, ಅವನಿಗೆ ಕುಡಿಯಲು ಕೊಟ್ಟರು. ಆದರೆ ಅವನು ಕಿರುಚಿಕೊಂಡನು; ಕುಡಿಯಲು ಬಯಸಲಿಲ್ಲ. ಆಗ ಅವರು ಅವನನ್ನು ಶಿಲುಬೆಯ ಮೇಲೆ ಏರಿಸಿದರು. ಮತ್ತು ಅವರು ಅವನ ಅಪರಾಧಪತ್ರವನ್ನು ಅವನ ತಲೆಯ ಮೇಲೆ ಹಚ್ಚಿದರು. ಆಗ ಇಬ್ಬರು ದರೋಡೆಕೋರರು, ಒಬ್ಬನು ಬಲಗಡೆಗೂ ಮತ್ತು ಎರಡನೆಯವನು ಎಡಗಡೆಗೂ ಅವನೊಂದಿಗೆ ಶಿಲುಬೆಗಳ ಮೇಲೆ ಏರಿಸಲ್ಪಟ್ಟರು. ಆ ಎಡೆಯಿಂದ ಬರುತ್ತಾ – ಹೋಗುತ್ತಾ ಇದ್ದ ಜನರು ತಮ್ಮ ತಲೆಗಳನ್ನು ಅಲ್ಲಾಡಿಸಿ ಮತ್ತು – "ಓ ದೇಗುಲವನ್ನು ಕೆಡಹುವವನೇ! ನಿನ್ನನ್ನು ನೀನೇ ರಕ್ಷಿಸಿಕೋ. ನೀನು ಈಶ್ವರನ ಪುತ್ರನಾಗಿರುವೆಯಾದರೆ, ಶಿಲುಬೆಯಿಂದ ಇಳಿದುಬಾ". ಎಂದು ಹೇಳಿ*

---

೯೮. Pilate.

೯೯. Golgotha.

*ಅವನನ್ನು ನಿಂದಿಸಿದರು. ಇದೇ ರೀತಿಯಲ್ಲಿ ಪ್ರಧಾನ ಯಾಜಕರೂ, ಉಪದೇಶಿಗಳು ಮತ್ತು ಪ್ರಾಚೀನರ ಸಂಗಾತಿಗಳೂ ಕೂಡ ಅಪಹಾಸ್ಯ ಮಾಡಿ, "ಅವನು ಅನ್ಯರನ್ನು ರಕ್ಷಿಸಿದನು; ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರದೇ ಹೋದನು. ಅವನು ಇಸ್ರಾಏಲದ ರಾಜನಾಗಿದ್ದರೆ, ಶಿಲುಬೆಯಿಂದ ಈಗ ಇಳಿದುಬರಲಿ. ಮತ್ತು ನಾವು ಅವನಲ್ಲಿ ನಂಬಿಕೆಯಿಡುವೆವು. ಅವನು ಈಶ್ವರ ಮೇಲೆ ಭರವಸೆಯಿಟ್ಟುಕೊಂಡಿದ್ದಾನೆ. ಈಶ್ವರನು ಅವನನ್ನು ಬಯಸುವವನಾದರೆ, ಅವನನ್ನು ಈಗ ರಕ್ಷಿಸಲಿ. ಏಕೆಂದರೆ, ಅವನು 'ನಾನು ಈಶ್ವರನ ಮಗನಾಗಿದ್ದೇನೆ' - ಎಂದು ಹೇಳಿದನು" - ಎಂದು ನುಡಿದರು. ಅವನ ಸಂಗಡ ಶಿಲುಬೆಗೆ ಏರಿಸಲ್ಪಟ್ಟಿದ್ದ ದರೋಡೆಕೋರರೂ ಕೂಡ ಹೀಗೆಯೇ ಅವನ ನಿಂದೆಯನ್ನು ಮಾಡಿದರು. ಎರಡನೆಯ ಪ್ರಹರದಿಂದ ಮೂರನೆಯ ಪ್ರಹರದವರೆಗೆ ಸಮಸ್ತ ದೇಶದಲ್ಲಿ ಅಂಧಕಾರ ಉಂಟಾಯಿತು. ಮೂರನೆಯ ಪ್ರಹರದ ಸುಮಾರಿಗೆ ಏಸುವು ಉಚ್ಚ ಸ್ವರದಿಂದ ಕೂಗಿ* ***"ಏಲೀ ಏಲೀ ಲಾಮಾ ಸಬತಕ್ನೀಹೂ"*** [೧೦೦] *- ಎಂದರೆ, "ಓ ನನ್ನ ಈಶ್ವರ! ಓ ನನ್ನ ಈಶ್ವರ!! ನೀನು ಏಕೆ ನನ್ನ ಕೈಬಿಟ್ಟಿದ್ದೀಯೆ?" ಎಂದು ಮೊರೆಯಿಟ್ಟನು. ಅಲ್ಲಿ ನಿಂತಿದ್ದವರಲ್ಲಿ ಎಷ್ಟೋ ಜನರು ಇದನ್ನು ಆಲಿಸಿ, "ಅವನು ಎಲಿಯಾಹನನ್ನು[೧೦೦a] ಕರೆಯುತ್ತಾನೆ" ಎಂದರು. ಅವರಲ್ಲಿ ಒಬ್ಬನು ತಕ್ಷಣ ಓಡಿಹೋಗಿ, ಸ್ಪಂಜನ್ನು ತೆಗೆದುಕೊಂಡು ಹುಳಿಮದ್ಯದಲ್ಲಿ ನೆನೆಯಿಸಿದನು ಮತ್ತು ನಳಿಗೆಯ ಮೇಲಿಟ್ಟು ಅವನಿಗೆ ಕುಡಿಯಲು ಕೊಟ್ಟನು. ಆಗ ಏಸುವು ಪುನಃ ಉಚ್ಚ ಸ್ವರದಿಂದ ಕೂಗಿ, ಪ್ರಾಣ ತ್ಯಾಗಮಾಡಿದರು. (ಇಂ. ಮ್ಯಾ.ಪ:-೨೭. ಆ:-೧೧-೧೪, ೨೨-೨೪, ೨೬,೩೧,೩೩,೩೪, ೩೭-೫೦)*

**ಸಮೀಕ್ಷಕ :-** ಆ ದುಷ್ಟರು ಏಸುವಿನೊಂದಿಗೆ ಸರ್ವಥಾ ದುರ್ವ್ಯವಹಾರವನ್ನು ಮಾಡಿದರು. ಆದರೆ, ಏಸುವಿನದೂ ದೋಷವಿದ್ದಿತು. ಏಕೆಂದರೆ- ಈಶ್ವರನಿಗೆ ಯಾವ ಮಗನೂ[೧೦೧] ಇಲ್ಲ. ಅವನು ಯಾರಿಗೂ ತಂದೆಯೂ ಅಲ್ಲ. ಅವನು ಯಾವನಿಗಾದರೂ ತಂದೆಯಾದರೆ, ಮತ್ತಾವನಿಗಾದರೂ ಮಾವನೋ, ಮೈದುನನೋ,ಬೀಗನೋ, ಮತ್ತಾವದೇ ಬಗೆಯ ನಂಟನೋ ಆಗಬೇಕಾದೀತು. ಅಧ್ಯಕ್ಷನು ಪ್ರಶ್ನಿಸಿದಾಗ, ಸತ್ಯಕ್ಕೆ ಅನುಸಾರ ಉತ್ತರವನ್ನು ಕೊಡಬೇಕಾಗಿದ್ದಿತು. ಮತ್ತು ಯಾವಾವುದೋ ಚಮತ್ಕಾರಗಳನ್ನು ಮೊದಲು ಮಾಡಿದ್ದುದು ಸತ್ಯವಾಗಿದ್ದಲ್ಲಿ, ಆಗಲೂ ಶಿಲುಬೆಯಿಂದ ಇಳಿದು ಬಂದು, ಎಲ್ಲರನ್ನೂ ತನ್ನ ಶಿಷ್ಯರನ್ನಾಗಿ ಮಾಡಿಕೊಳ್ಳುತ್ತಿದ್ದನು. ಮತ್ತು ಅವನು ತ್ರಿಕಾಲದರ್ಶಿಯಾಗಿದ್ದರೆ. ಹುಳಿಮದ್ಯದಲ್ಲಿ ಪಿತ್ತ ಬೆರೆತ ಮಿಶ್ರಣವನ್ನು ಕಿರುಚಿಕೊಂಡು ತ್ಯಜಿಸುತ್ತಿದ್ದನೇಕೆ? ಅವನು ಮೊದಲಿನಿಂದಲೇ ತಿಳಿದಿರಬೇಕಾದ್ದಿತು. ಮತ್ತು ಅವನು ಚಮತ್ಕಾರಿಕನಾಗಿದ್ದಲ್ಲಿ, ಕೂಗಿ-ಕೂಗಿ ಪ್ರಾಣವನ್ನೇಕೆ ಬಿಡುತ್ತಿದ್ದನು? ಎಷ್ಟೇ ಚಾತುರ್ಯ ಬೇಕಾದರೂ, ಮಾಡಲಿ; ಆದರೆ, ಕೊನೆಗೆ ಸತ್ಯವು ಸತ್ಯವೆಂದೇ ಮತ್ತು ಅಸತ್ಯ ಅಸತ್ಯವೆಂದೇ ಸಿದ್ಧವಾಗುತ್ತದೆ. ಇದರಿಂದ, ಏಸುವು ಆ ಕಾಲದ ಕಾಡು ಮನುಷ್ಯರಲ್ಲಿ ಸ್ವಲ್ಪ ಒಳ್ಳೆಯವನಾಗಿದ್ದನು; ಅವನು ಚಮತ್ಕಾರಿಕನೂ ಆಗಿರಲಿಲ್ಲ; ಈಶ್ವರನ ಪುತ್ರನೂ ಆಗಿರಲಿಲ್ಲ ಮತ್ತು ವಿದ್ವಾಂಸನೂ ಕೂಡ ಆಗಿರಲಿಲ್ಲ- ಎಂದು ಸಿದ್ಧವಾಯಿತು. ಏಕೆಂದರೆ, ಹಾಗೆ ಆಗಿದ್ದಲ್ಲಿ, ಇಂತಹ ದುಃಖವನ್ನು ಅವನೇಕೆ ಅನುಭವಿಸುತ್ತಿದ್ದನು? (೮೭).

*ಮತ್ತು ನೋಡಿರಿ! ಮಹಾ ಭೂಕಂಪವಾಯಿತು; ಪರಮೇಶ್ವರನ ಒಬ್ಬ ದೂತನು ಇಳಿದನು ಮತ್ತು ಒಂದು, ಸಮಾಧಿಯ ಬಾಗಿಲಿನಿಂದ ಕಲ್ಲನ್ನು ಉರುಳಿಸಿ, ಅದರ ಮೇಲೆ ಕುಳಿತನು. ಅವನು ಇಲ್ಲಿ ಇಲ್ಲ! ಅವನು ಹೇಳಿದ ಹಾಗೆಯೇ ಜೀವಂತನಾಗಿ ಎದ್ದಿದ್ದಾನೆ! ನೋಡಿರಿ, ಅವನ ಶಿಷ್ಯರಿಗೆ ಸಂದೇಶ ಹೋಗುತ್ತಿದ್ದಾಗ, ಏಸುವು ಅವರ ಬಳಿ ಬಂದು ಸಂಧಿಸಿದನು; 'ಕಲ್ಯಾಣವಾಗಲಿ,' - ಎಂದನು ಮತ್ತು ಅವರು ಹತ್ತಿರ ಬಂದು, ಅವನ ಪಾದಗಳನ್ನು ಹಿಡಿದುಕೊಂಡು, ಅವನಿಗೆ ಪ್ರಣಾಮವನ್ನು ಮಾಡಿದರು. ಆಗ ಏಸುವು- ಹೆದರಬೇಡಿ. ಹೋಗಿ, ನನ್ನ ಸೋದರರಿಗೆ 'ಅವರು ಗಾಲೀಲೀ ದೇಶಕ್ಕೆ ಹೋಗಬೇಕು ; ಮತ್ತು ಅಲ್ಲಿ ಅವರು ನನ್ನನ್ನು ನೋಡುವರು.' ಎಂದು ಹೇಳಿಬಿಡಿರಿ." ಎಂದು ಹೇಳಿದನು. ಹನ್ನೊಂದು ಮಂದಿ ಶಿಷ್ಯರು ಗಾಲೀಲೀ ದೇಶಕ್ಕೆ, ಏಸುವು ಹೇಳಿದ್ದ ಆ ಪರ್ವತದ ಮೇಲಕ್ಕೆ ಹೋದರು. ಮತ್ತು ಅವರು ಅವನನ್ನು ನೋಡಿ, ಅವನಿಗೆ ಪ್ರಣಾಮವನ್ನು ಮಾಡಿದರು. ಆದರೆ ಎಷ್ಟೋ ಜನರಿಗೆ ಸಂದೇಹವಾಯಿತು. ಏಸುವು ಅವರ ಬಳಿ ಬಂದು, ಅವರಿಗೆ -"ಸ್ವರ್ಗದಲ್ಲಿ ಮತ್ತು ಭೂಮಿಯ ಮೇಲೆ ಸಮಸ್ತ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ ಮತ್ತು ನೋಡಿರಿ, ನಾನು ಜಗತ್ತಿನ ಕೊನೆಯವರೆಗೆ ಎಲ್ಲ ದಿನಗಳಲ್ಲಿಯೂ ನಿಮ್ಮೊಂದಿಗಿದ್ದೇನೆ". ಎಂದು ಹೇಳಿದನು. (ಇಂ. ಮ್ಯಾ.ಪ:- ೨೮,ಆ:- ೨,೬,೯,೧೦,೧೬-೧೮,೨೦)*

---

೧೦೦. Eli, Eli, lama Sabachthani

೧೦೦a. Elias.

೧೦೧. ವೇದೋಕ್ತ ಆಧ್ಯಾತ್ಮಿಕ ದೃಷ್ಟಿಯಿಂದ ಜೀವರೆಲ್ಲರೂ ಈಶ್ವರ-ಪುತ್ರರೇ ! ಆದರೆ, ವ್ಯಾವಹಾರಿಕವಾಗಿ ಹಾಗಲ್ಲವೆಂದು ಇಲ್ಲಿ ವಿವೇಚನೆ.

**ಸಮೀಕ್ಷಕ :–** ಈ ಮಾತು ಕೂಡ, ಒಪ್ಪಲರ್ಹವಾದುದಲ್ಲ. ಏಕೆಂದರೆ, ಸೃಷ್ಟಿಕ್ರಮಕ್ಕೆ ವಿದ್ಯೆಗೆ ವಿರುದ್ಧವಾಗಿದೆ. ಮೊದಲಾಗಿ ಈಶ್ವರನ ಬಳಿ ದೂತರುಗಳಿರುವುದು, ಅವರನ್ನು ಅತ್ತ–ಇತ್ತ ಕಳುಹುವುದು, ಮೇಲಿನಿಂದ ಇಳಿಯುವುದು, ಇದೆಲ್ಲಾ ಏನು? ಈಶ್ವರತ್ವವೆಂದರೆ ತಹಸೀಲ್ ದಾರಿಯೋ? ಕಲೆಕ್ಟರಿಯೋ? ಅದೇ ಶರೀರದೊಂದಿಗೆ ಸ್ವರ್ಗಕ್ಕೆ ಹೋದನೋ ಮತ್ತು ಜೀವಂತನಾಗಿ ಎದ್ದನೋ? ಆ ಸ್ತ್ರೀಯರು ಅವನ ಪಾದಗಳನ್ನು ಹಿಡಿದು ಪ್ರಣಾಮವನ್ನು ಮಾಡಿದರು – ಎನ್ನಲು, ಅದೇ ಶರೀರವಿದ್ದಿತೇನು? ಮತ್ತು ತನ್ನ ಬಾಯಿನಿಂದಲೇ ತಾನು ಸರ್ವಾಧಿಕಾರಿಯೆಂದುಕೊಳ್ಳುವುದು ಕೇವಲ ಜಂಬದಮಾತಾಗಿದೆ. ಶಿಷ್ಯರನ್ನು ತನ್ನ ಮರಣಾನಂತರ ಸಂಧಿಸುವುದು ಮತ್ತು ಅವರೊಂದಿಗೆ ಮಾತುಗಳನ್ನಾಡುವುದು ಅಸಂಭವವಾಗಿದೆ. ಏಕೆಂದರೆ, ಈ ಮಾತು ಸತ್ಯವಾಗಿರುವುದಾದರೆ, ಈ ದಿನಗಳಲ್ಲಿಯೂ ಕೂಡ ಯಾರೂ ಏಕೆ ಜೀವಂತರಾಗಿ ಏಳುವುದಿಲ್ಲ? ಮತ್ತು ಅದೇ ಶರೀರದೊಂದಿಗೆ ಸ್ವರ್ಗಕ್ಕೇಕೆ ಹೋಗುವುದಿಲ್ಲ?

ಹೀಗೆ ಮ್ಯಾಥ್ಯೂರಚಿತ ಇಂಜೀಲಿನ ವಿಷಯವಾಯಿತು. ಈಗ ಮಾರ್ಕ್‌ರಚಿತ ವಿಷಯದಲ್ಲಿ ಬರೆಯಲ್ಪಡುತ್ತದೆ. (೮೮)

## ಮಾರ್ಕ್‌ರಚಿತ ಇಂಜೀಲ್ [೧೦೨]

*ಇವನು ಬಡಗಿಯಲ್ಲವೇನು ? (ಇಂ. ಮಾ.ಪ:–೬. ಆ:–೩)*

**ಸಮೀಕ್ಷಕ :–** ವಸ್ತುತಃ ಜೋಸೆಫ್[೧೦೨a] ಬಡಗಿಯಾಗಿದ್ದನು.[೧೦೩] ಆದುದರಿಂದ, ಏಸುವೂ ಕೂಡ ಬಡಗಿಯಾಗಿದ್ದನು. ಎಷ್ಟೋ ವರ್ಷಗಳವರೆಗೆ ಬಡಗಿಯ ಕೆಲಸವನ್ನು ಮಾಡುತ್ತಿದ್ದನು. ಆಮೇಲೆ, ಪ್ರವಾದಿಯಾಗುತ್ತಾ – ಆಗುತ್ತಾ ಈಶ್ವರನ ಮಗನೇ ಅಗಿ ಕುಳಿತನು. ಮತ್ತು ಕಾಡುಜನರು (ಈಶ್ವರ ಪುತ್ರನನ್ನಾಗಿ) ಮಾಡಿಟ್ಟರು. ಆಗಲೇ ಭಾರೀ ಚಾತುರ್ಯಗಳನ್ನು ನಡೆಯಿಸಿದನು. ಕುಡಿಯುವುದು–ಕುಟ್ಟುವುದು, ಸೀಳುವುದು– ಬೀಳಿಸುವುದು ಅವನ ಕೆಲಸವಾಗಿದೆ. (೮೯)

## ಲೂಕ್‌ರಚಿತ ಇಂಜೀಲ್ [೧೦೪]

*ಏಸುವು ಅವನಿಗೆ – "ನೀನು ನನ್ನನ್ನು ಉತ್ತಮನೆಂದೇಕೆ ಹೇಳುತ್ತೀಯೇ? ಕೇವಲ ಒಬ್ಬನ, ಎಂದರೆ ಈಶ್ವರನ ಹೊರತು ಯಾವನೂ ಉತ್ತಮನಲ್ಲ."– ಎಂದು ಹೇಳಿದನು. (ಲೂ. ಪ:–೧೯, ಆ:–೧೦)*

**ಸಮೀಕ್ಷಕ:–** ಏಸುವೇ ಒಬ್ಬ ಅದ್ವಿತೀಯ ಈಶ್ವರನ ಬಗೆಗೆ ಹೇಳುತ್ತಿರುವಾಗ, ಕ್ರೈಸ್ತರು ಪವಿತ್ರಾತ್ಮ , ಪಿತಾ ಹಾಗೂ ಪುತ್ರ – ಈ ಮೂವರನ್ನು ಎಲ್ಲಿಂದ ನಿರ್ಮಿಸಿಕೊಂಡರು? (೯೦)

*ಆಗ ಅವನನ್ನು ಹೆರಾದನ [೧೦೫] ಬಳಿ ಕಳುಹಿದರು. ಹೆರಾದನು ಏಸುವನ್ನು ಕಂಡು ಬಹಳ ಆನಂದಿತನಾದನು. ಏಕೆಂದರೆ, ಅವನು ಏಸುವನ್ನು ಬಹು ದಿನಗಳಿಂದ ನೋಡಬಯಸುತ್ತಿದ್ದನು. ಕಾರಣವೇನೆಂದರೆ. ಅವನ ಬಗೆಗೆ ಬಹಳ ಸಂಗತಿಗಳನ್ನು ಆಲಿಸಿದ್ದನು. ಮತ್ತು ಅವನ ಕೆಲವು ಚಮತ್ಕಾರಗಳನ್ನು ನೋಡುವ ಆಸೆ ಹೆರಾದನಿಗಾಯಿತು. ಅವನು ಏಸುವನ್ನು ಬಹಳ ವಿಷಯಗಳ ಬಗೆಗೆ ಪ್ರಶ್ನಿಸಿದನು. ಆದರೆ, ಏಸುವು ಹೆರಾದನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. (ಲೂ. ಪ:– ೨೩, ಆ:–೮,೯)*

**ಸಮೀಕ್ಷಕ :–** ಈ ಮಾತು ಮ್ಯಾಥ್ಯೂವಿನ ಕೃತಿಯಲ್ಲಿಲ್ಲ. ಆದುದರಿಂದ, ಈ ಸಾಕ್ಷಿಗಳು ಪ್ರತಿಕೂಲರಾದರು. ಏಕೆಂದರೆ– ಸಾಕ್ಷಿಗಳು ಏಕಪ್ರಕಾರವಾಗಿರಬೇಕು. ಮತ್ತು ಏಸುವು ಚತುರನೂ, ಚಾಮತ್ಕಾರಿಕನೂ ಆಗಿದ್ದಲ್ಲಿ, ಉತ್ತರವನ್ನು ಕೊಡುತ್ತಿದ್ದನು ಮತ್ತು ಚಮತ್ಕಾರಗಳನ್ನೂ ತೋರಿಸುತ್ತಿದ್ದನು. ಇದರಿಂದ ಏಸುವಿನಲ್ಲಿ ವಿದ್ಯೆ ಮತ್ತು ಚಮತ್ಕಾರ ಸ್ವಲ್ಪವೂ ಇರಲಿಲ್ಲವೆಂದು ವಿದಿತವಾಗುತ್ತದೆ. (೯೧)

---

೧೦೨. Gospel according to Mark.  ೧೦೨a. Joseph

೧೦೩. ಇದು ಬಡಗಿಯು ಕೆಲಸವೂ ಹೌದು! ಬಡಗಿಯಾದ ಏಸುವಿನ ಕೆಲಸವೂ ಹೌದು. ಮತ್ತು ಏಸುವಿನ ಅನುಯಾಯಿಗಳಾದ ಕ್ರೈಸ್ತರ ಕೂಡ. ಅನ್ಯಮತೀಯರ ನಿಗ್ರಹ ಮಾಡಲು ಇದೇ ಕೆಲಸವನ್ನು ಮಾಡುತ್ತಾರೆ, ಎಂದು ಇಲ್ಲಿ ಅಭಿಪ್ರಾಯ. ಈ ಎಚ್ಚರಿಕೆಯನ್ನು ಮಹರ್ಷಿ ದಯಾನಂದರು ಏಕೆ ಕೊಟ್ಟರು?

೧೦೪. Gospel according to Luke.

೧೦೫. Herod

## ಯೋಹನನ[೧೦೬] ಸುಸಮಾಚಾರ

*ಆದಿಯಲ್ಲಿ ವಚನವಿತ್ತು ಮತ್ತು ವಚನ ಈಶ್ವರನ ಜೊತೆಯಲ್ಲಿತ್ತು ಮತ್ತು ವಚನ ಈಶ್ವರನಾಗಿತ್ತು. ಅದು ಆದಿಯಲ್ಲಿ ಈಶ್ವರನೊಂದಿಗಿತ್ತು. ಎಲ್ಲವೂ ಅದರ ಮೂಲಕ ಸೃಜಿಸಲ್ಪಟ್ಟಿತು.[೧೦೭] ಮತ್ತು ಯಾವುದು ಸೃಜಿಸಲ್ಪಟ್ಟಿದೆಯೋ ಅದರಲ್ಲಿ ಯಾವುದೂ ಕೂಡ ಅದರ ಹೊರತು ಸೃಜಿಸಲ್ಪಡಲಿಲ್ಲ. ಅದರಲ್ಲಿ ಜೀವನವಿತ್ತು ಮತ್ತು ಆ ಜೀವನ ಮಾನವರ ಬೆಳಕಾಗಿದ್ದಿತು. (ಜೋ. ಪ:-೧, ಆ:- ೧-೪)*

**ಸಮೀಕ್ಷಕ:-** ಆದಿಯಲ್ಲಿ ವಚನವು ವಕ್ತೃವಿಲ್ಲದೆ ಇರಲಾರದು. ಮತ್ತು ವಚನವು ಈಶ್ವರನೊಂದಿಗೆ ಇದ್ದಿತಾದರೆ, ಈ ಕಥನ ವ್ಯರ್ಥವಾಯಿತು. ಮತ್ತು ವಚನವೆಂದಿಗೂ ಈಶ್ವರನಾಗಲಾರದು. ಏಕೆಂದರೆ, ಅದು ಆದಿಯಲ್ಲಿ ಈಶ್ವರನೊಂದಿಗೆ ಇದ್ದಿತಾದರೆ, ಮೊದಲು ವಚನ ಅಥವಾ ಈಶ್ವರನಿದ್ದನು - ಎನ್ನುವುದು ಸಂಗತವಾಗಲಾರದು. ಎಂದಿನವರೆಗೆ ಅದಕ್ಕೆ ಕಾರಣವಿರುವುದಿಲ್ಲವೋ, ಅಂದಿನವರೆಗೆ ವಚನ ಮೂಲಕ ಸೃಷ್ಟಿಯು ಎಂದಿಗೂ ಆಗಲಾರದು. ಮತ್ತು ವಚನವಿಲ್ಲದೇ ಹೋದರೂ ಮೌನದಿಂದಿದ್ದು ಕರ್ತೃವು ಸೃಷ್ಟಿಯನ್ನು ಮಾಡಬಲ್ಲನು. ಜೀವನ ಯಾವುದರಲ್ಲಿತ್ತು ಅಥವಾ ಏನಾಗಿತ್ತು - ಎಂಬೀ ಮಾತಿನಿಂದ, ಜೀವನು ಅನಾದಿಯೆಂದು ಒಪ್ಪಿಕೊಳ್ಳುವಿರಿ. ಅನಾದಿಯಾಗಿರುವನಾದರೆ, ಆದಮನ ಹೊಳ್ಳೆಗಳಲ್ಲಿ ಉಸಿರನ್ನೂದುವುದು ಸುಳ್ಳಾಯಿತು. ಮತ್ತು ಜೀವನ ಮಾನವರಿಗೆ ಮಾತ್ರ ಬೆಳಕೋ? ಪಶು - ಮೊದಲಾದುವಕ್ಕೆ ಅಲ್ಲವೋ? (೯೨)

*ಮತ್ತು ರಾತ್ರಿ ಭೋಜನದ[೧೦೮] ವೇಳೆಯಲ್ಲಿ, ಸೈತಾನನು ಶಿಮೋನನ[೧೦೯] ಪುತ್ರನಾದ ಯಹೂದಾ ಇಸ್ಕರಿಯೋತಿಯ ಮನದಲ್ಲಿ ಅವನನ್ನು ಹಿಡಿಯಿಸುವ ಅಭಿಪ್ರಾಯವನ್ನು ಮೂಡಿಸಿಯೇ ಬಿಟ್ಟಿದ್ದನು. (ಜೋ. ಪ:-೧೩. ಆ:-೨)*

**ಸಮೀಕ್ಷಕ:-** ಈ ಮಾತು ಸತ್ಯವಲ್ಲ. ಏಕೆಂದರೆ, ಯಾವನಾದರೂ ಕ್ರೈಸ್ತರನ್ನು "ಸೈತಾನನು ಎಲ್ಲರನ್ನೂ ಪಥಭ್ರಷ್ಟರನ್ನಾಗಿ ಮಾಡುತ್ತಾನೆಯಾದರೆ, ಸೈತಾನನ್ನು ಯಾವನು ಪಥಭ್ರಷ್ಟನನ್ನಾಗಿ ಮಾಡುತ್ತಾನೆ?" ಎಂದು ಕೇಳಬೇಕು. "ಸೈತಾನನು ತನ್ನಷ್ಟಕ್ಕೇ ತಾನೇ ಪಥಭ್ರಷ್ಟನಾಗುತ್ತಾನೆ". - ಎನ್ನುವುದಾದರೆ, ಮಾನವರೂ ಕೂಡ ತಮ್ಮಷ್ಟಕ್ಕೆ ತಾವೇ ಪಥಭ್ರಷ್ಟರಾಗಬಲ್ಲರು ; ಇನ್ನು ಸೈತಾನನಿಗೆ ಕೆಲಸವೇನಿದೆ? ಮತ್ತು ಸೈತಾನನ್ನು ಸೃಜಿಸುವವನೂ ಮತ್ತು ದಾರಿತಪ್ಪಿಸುವವನೂ ಪರಮೇಶ್ವರನಾದರೆ, ಕ್ರೈಸ್ತರ ಅದೇ ಈಶ್ವರನು ಸೈತಾನನಿಗೂ ಸೈತಾನನಾಗಿ ಕುಳಿತನು. ಪರಮೇಶ್ವರನೇ ಎಲ್ಲರನ್ನೂ ಅವನ ಮೂಲಕ ಪಥಭ್ರಷ್ಟರನ್ನಾಗಿ ಮಾಡಿದನು. ಆಹಾ! ಇಂತಹ ಕೆಲಸಗಳು ಈಶ್ವರನವಾಗಬಲ್ಲವೇ? ಕ್ರೈಸ್ತರ ಈ ಪುಸ್ತಕವನ್ನು ಈಶ್ವರೀಯವೆಂದೂ, ಮತ್ತು ಏಸುವನ್ನು ಈಶ್ವರನ ಮಗನೆಂದೂ ಮಾಡಿಟ್ಟ ಮಂದಿಗಳು ಸೈತಾನರಾಗಿದ್ದರೆ ಆಗಿರಬಹುದು ಆದರೆ ಇದು ಈಶ್ವರಕೃತವಾದ ಪುಸ್ತಕವೂ ಅಲ್ಲ ; ಇದರಲ್ಲಿ ಹೇಳಲ್ಪಟ್ಟಿರುವವನು ಈಶ್ವರನೂ ಅಲ್ಲ; ಮತ್ತು ಏಸುವು ಈಶ್ವರನ ಮಗನಂತೂ ಅಲ್ಲವೇ ಅಲ್ಲ. (೯೩).

*ನಿಮ್ಮ ಮನಸ್ಸು ವ್ಯಾಕುಲವಾಗದಿರಲಿ; ಈಶ್ವರನ ಮೇಲೆ ನಂಬಿಕೆಯನ್ನಿಡಿರಿ. ಮತ್ತು ನನ್ನ ಮೇಲೆ ನಂಬಿಕೆಯನ್ನಿಡಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ನಿವಾಸಸ್ಥಾನಗಳಿವೆ. ಇಲ್ಲದೇ ಇದ್ದಲ್ಲಿ, ನಾನು ನಿಮಗೆ - 'ನಾನು ನಿಮಗಾಗಿ ಸ್ಥಳವನ್ನು ಸಿದ್ಧಗೊಳಿಸಲು ಹೋಗುತ್ತೇನೆ.' - ಎಂದು ಹೇಳುತ್ತಿದ್ದೆನು. ಮತ್ತು ನಾನು ಹೋಗಿ ನಿಮಗಾಗಿ ಸ್ಥಳವನ್ನು ಮಾಡುವೆನಾದರೆ, ಮರಳಿ ಬಂದು ನಾನು ಇರುವಲ್ಲಿಯೇ ನೀವೂ ಇರಲಾಗುವಂತೆ ನಿಮ್ಮನ್ನು ನನ್ನೆಡೆಗೆ ಕರೆದೊಯ್ಯುವೆನು. ಏಸುವು ಅವನಿಗೆ -"ನಾನೇ ಮಾರ್ಗ; ಮತ್ತು ಸತ್ಯ ಮತ್ತು ಜೀವನವಾಗಿದ್ದೇನೆ. ನನ್ನ ಮೂಲಕವಲ್ಲದೆ ಯಾವನೂ ತಂದೆಯ ಬಳಿ ಸೇರಲಾರನು. ನೀವು ನನ್ನನ್ನು ತಿಳಿಯುವಿರಾದರೆ, ತನ್ನ ತಂದೆಯನ್ನೂ ತಿಳಿಯುವಿರಿ". ಎಂದು ಹೇಳಿದನು. (ಜೋ.ಪ:-೧೪. ಆ:- ೧-೬)*

**ಸಮೀಕ್ಷಕ:-** ಈಗ ನೋಡಿರಿ. ಏಸುವಿನ ಈ ವಚನಗಳು ಪೋಪ- ಲೀಲೆಗಿಂತ ಕಡಿಮೆಯೇನು? ಇಂತಹ ಬಲೆಯನ್ನು ಬೀಸದೆ ಇದ್ದರೆ, ಅವನ ಮತದಲ್ಲಿ ಯಾವನು ತಾನೇ ಸಿಕ್ಕಿಕೊಳ್ಳುತ್ತಿದ್ದನು? ಏಸುವು ತನ್ನ ತಂದೆಯನ್ನು ಗುತ್ತಿಗೆಗೆ

---

೧೦೬. John.

೧೦೭. ಕೊಟ್ಟರು? ಭಾರತದಲ್ಲಿ ಮೊದಲು 'ಶಬ್ದಬ್ರಹ್ಮನಾದ' ಎಂಬ ಮತವಿತ್ತು. ಭರ್ತೃಹರಿಯು ತನ್ನ 'ವಾಕ್ಯ ಪದೀಯ'ದ ಪ್ರಥಮ ಶ್ಲೋಕದಲ್ಲಿ ಇದರ ಸ್ಪಷ್ಟ ವರ್ಣನೆಯನ್ನು ಮಾಡಿದ್ದಾನೆ. ಈ ಮತವು ಭರ್ತೃಹರಿಗೆ ಮೊದಲಿಗಿಂತಲೂ ಪ್ರಚಲಿತವಾಗಿತ್ತು. ಇದರ ಅತಿ ಭ್ರಷ್ಟ ರೂಪವೇ ಈ ಆಯತ್ತುಗಳಲ್ಲಿದೆ. –ಯು.ಮೀ.

೧೦೮. Supper

೧೦೯. Simon.

ತೆಗೆದುಕೊಂಡಿದ್ದಾನೆಯೋ? ಮತ್ತು ಅವನು ಏಸುವಿಗೆ ವಶೀಭೂತನಾಗಿರುವನಾದರೆ, ಪರಾಧೀನನಾದುದರಿಂದ, ಅವನು ಈಶ್ವರನೇ ಅಲ್ಲ. ಏಕೆಂದರೆ, ಈಶ್ವರನು ಯಾವನ ಒತ್ತಾಸೆಗೂ ಕಿವಿಗೊಡನು. ಏಸುವಿಗಿಂತ ಮುನ್ನ ಯಾವನೂ ಈಶ್ವರನನ್ನು ಕಂಡುಕೊಂಡಿರಲಾರನೇ? ಇಂತಹ ಸ್ಥಾನಗಳೇ ಮೊದಲಾದುದರ ಪ್ರಲೋಭನವನ್ನೊಡ್ಡುವವನು, ತನ್ನ ಬಾಯಿನಿಂದಲೇ ತಾನೇ ಮಾರ್ಗ, ಸತ್ಯ ಮತ್ತು ಜೀವನವಾಗಿದ್ದೇನೆಂದು ತೋಡಿಕೊಳ್ಳುವವನು ಎಲ್ಲ ರೀತಿಯಿಂದಲೂ ದಾಂಭಿಕನೆನಿಸುತ್ತಾನೆ. ಆದುದರಿಂದ, ಈ ಮಾತು ಎಂದಿಗೂ ಸತ್ಯವಾಗಲಾರದು. (೯೪)

*ನಾನು ನಿಮಗೆ ಸತ್ಯ-ಸತ್ಯವನ್ನೇ ಹೇಳುತ್ತೇನೆ. ನನ್ನ ಮೇಲೆ ನಂಬಿಕೆಯನ್ನಿಡುವವನು ನಾನು ಮಾಡುವ ಕೆಲಸಗಳನ್ನು ಮಾಡುವನು. ಅವಕ್ಕಿಂತ ದೊಡ್ಡ ಕಾರ್ಯಗಳನ್ನು ಮಾಡುವನು. (ಜೋ. ಪ:- ೧೪, ಆ :- ೧೨)*

**ಸಮೀಕ್ಷಕ :-** ಈಗ ನೋಡಿರಿ. ಏಸುವಿನ ಮೇಲೆ ನಂಬಿಕೆಯನ್ನಿಡುವ ಕ್ರೈಸ್ತರು ಹೆಣಗಳನ್ನು ಜೀವಂತಗೊಳಿಸುವುದೇ ಮೊದಲಾದ ಅಂತಹದೇ ಕೆಲಸಗಳನ್ನು ಮಾಡಲಾರರೇತಕ್ಕೆ? ಮತ್ತು ನಂಬಿಕೆಯಿಂದಲೂ ಕೂಡ ಆಶ್ಚರ್ಯಕರ ಕರ್ಮಗಳನ್ನು ಮಾಡಿರಲಿಲ್ಲವೆಂದಾದರೆ, ಏಸುವೂ ಕೂಡಾ ಆಶ್ಚರ್ಯಯುಕ್ತವಾದ ಕರ್ಮಗಳನ್ನು ಮಾಡಿರಲಿಲ್ಲವೆಂದೇ ನಿಶ್ಚಿತವಾಗಿ ತಿಳಿದುಕೊಳ್ಳಬೇಕು. ಏಕೆಂದರೆ, ಸ್ವತಃ ಏಸುವೇ ನೀವೂ ಕೂಡ ಆಶ್ಚರ್ಯಕರ ಕರ್ಮಗಳನ್ನು ಮಾಡುವಿರಿ – ಎಂದು ಹೇಳುತ್ತಾನೆ. ಇನ್ನು ಏಸುವನ್ನು, ಶವಗಳನ್ನು ಸಜೀವಗೊಳಿಸುವುದೇ ಮೊದಲಾದ ಕಾರ್ಯಗಳನ್ನು ಮಾಡುವವನೆಂದು ಒಪ್ಪಿಕೊಳ್ಳಲು ಯಾವನ ಹೃದಯದ ಕಣ್ಣು ಒಡೆದು ಹೋಗಿದೆ? (೯೫)

*ಯಾವ ಅದ್ವೈತ ಸತ್ಯ ಈಶ್ವರನಿದ್ದಾನೋ.... (ಜೋ.ಪ:-೧೭, ಆ:- ೩)*

**ಸಮೀಕ್ಷಕ :-** ಅದ್ವೈತನಾದ ಏಕಮಾತ್ರ ಈಶ್ವರನಿರುವುದಾದರೆ, ಕ್ರೈಸ್ತರು ಮೂವರನ್ನು (ತಂದೆ, ಮಗ ಮತ್ತು ಪವಿತ್ರಾತ್ಮ) ವರ್ಣಿಸುವುದು ಸರ್ವಥಾ ಅರ್ಥಹೀನ.

ಇದೇ ರೀತಿ ಬಹಳ ಕಡೆ ಇಂಜೀಲಿನಲ್ಲಿ ನಿರರ್ಥಕ ಸಂಗತಿಗಳು ತುಂಬಿವೆ.

**ಯೋಹನನ ಪ್ರಕಾಶಿತ ವಾಕ್ಯಗಳು**

**ಈಗ ಯೋಹಾನನ ಅದ್ಭುತ ವಚನಗಳು**

*ಮತ್ತು ತಮ್ಮ ತಮ್ಮ ತಲೆಗಳ ಮೇಲೆ ಚಿನ್ನದ ಕಿರೀಟಗಳನ್ನು ಇಟ್ಟುಕೊಂಡಿದ್ದರು. ಮತ್ತು ಏಳು ಅಗ್ನಿದೀಪಗಳು ಸಿಂಹಾಸನದ ಮುಂದೆ ಉರಿಯುತ್ತಿದ್ದವು; ಅವು ಈಶ್ವರನ ಏಳು ಆತ್ಮಗಳಾಗಿವೆ. ಮತ್ತು ಸಿಂಹಾಸನದ ಮುಂದೆ ಗಾಜಿನ ಸಮುದ್ರ ಮತ್ತು ಅಕ್ಕ-ಪಕ್ಕಗಳಲ್ಲಿ, ಹಿಂದೆ- ಮುಂದೆ ಕಣ್ಣುಗಳನ್ನುಳ್ಳ ನಾಲ್ಕು ಪ್ರಾಣಿಗಳಿವೆ. (ಯೋ. ಪ:-೪ ಆ:- ೪-೬)*

**ಸಮೀಕ್ಷಕ :-** ಈಗ ನೋಡಿರಿ. ಕ್ರೈಸ್ತರ ಸ್ವರ್ಗ ಒಂದು ನಗರಕ್ಕೆ ಸಮನಾಗಿದೆ. ಮತ್ತು ಇವರ ಈಶ್ವರನೂ ಕೂಡ ದೀಪಕ್ಕೆ ಸಮಾನವಾದ ಅಗ್ನಿಯಾಗಿದ್ದಾನೆ. ಮತ್ತು ಚಿನ್ನದ ಕಿರೀಟ ಮೊದಲಾದ ಒಡವೆಗಳನ್ನು ಧಾರಣಮಾಡುವುದು ಮತ್ತು ಮುಂದೆ-ಹಿಂದೆ ಕಣ್ಣುಗಳಿರುವುದು ಅಸಂಭವವಾಗಿದೆ. ಈ ಮಾತುಗಳನ್ನು ಯಾವನು ಒಪ್ಪಬಲ್ಲನು? ಮತ್ತು ಅಲ್ಲಿ ಸಿಂಹವೇ ಮೊದಲಾದ ನಾಲ್ಕು ಪಶುಗಳು (ಇರುತ್ತವೆ – ಎಂದು) ಬರೆಯಲ್ಪಟ್ಟಿದೆ. (೯೬)

*ಮತ್ತು ನಾನು ಸಿಂಹಾಸನದ ಮೇಲೆ ಕುಳಿತವನ ಬಲಗೈಯಲ್ಲಿ ಒಳಗಿನಿಂದ ಮತ್ತು ಹಿಂಬದಿಯಲ್ಲಿ ಬರೆಯಲ್ಪಟ್ಟಿದ್ದ ಒಂದು ಪುಸ್ತಕವನ್ನು ನೋಡಿದೆನು. ಮತ್ತು ಏಳು ಮುದ್ರಿಕೆಗಳಿಂದ ಅದರ ಮೇಲೆ ಮುದ್ರೆಯೊತ್ತಿದ್ದಿತು. ಈ ಪುಸ್ತಕವನ್ನು ತೆರೆಯಲೂ ಮತ್ತು ಅದರ ಮುದ್ರೆಗಳನ್ನು ಒಡೆಯಲೂ ಯೋಗ್ಯನಾದವನು ಯಾವನು? ಮತ್ತು ಆ ಪುಸ್ತಕವನ್ನು ತೆರೆಯಲು ಅಥವಾ ಅದನ್ನು ನೋಡಲು ಸಮರ್ಥನಾದವನು ಸ್ವರ್ಗದಲ್ಲಿಯೂ ಇಲ್ಲ; ಪೃಥ್ವಿಯ ಮೇಲೆಯೂ ಇಲ್ಲ ; ಪೃಥ್ವಿಯಿಂದ ಕೆಳಗೆಯೂ ಯಾವನೂ ಇಲ್ಲ. ಮತ್ತು ನಾನು ಆ ಪುಸ್ತಕವನ್ನು ತೆರೆಯಲು, ಅಥವಾ ಓದಲು ಅಥವಾ ಅದನ್ನು ನೋಡಲು ಯೋಗ್ಯನಾದವನು ಯಾವನೂ ಸಿಕ್ಕಲಿಲ್ಲವೆಂದು ಬಹಳ ಅಳತೊಡಗಿದೆನು. (ಯೋ.ಪ:-೫ ಆ:-೧-೪).*

**ಸಮೀಕ್ಷಕ :-** ಈಗ ನೋಡಿರಿ! ಕ್ರೈಸ್ತರ ಸ್ವರ್ಗದಲ್ಲಿ ಸಿಂಹಾಸನಗಳ ಮತ್ತು ಮನುಷ್ಯರ ವೈಭವ! ಯಾವುದನ್ನು ತೆರೆಯುವುದೇ ಮೊದಲಾದ ಕೆಲಸ ಮಾಡುವವನು ಸ್ವರ್ಗದಲ್ಲಿ ಮತ್ತು ಪೃಥ್ವಿಯ ಮೇಲೆ ಯಾವನೂ ಸಿಕ್ಕಲಿಲ್ಲವೋ, ಅಂತಹ

ಅನೇಕ ಮುದ್ರಿಕೆಗಳಿಂದ ಮುಚ್ಚಲ್ಪಟ್ಟ ಪುಸ್ತಕ!! ಜೋನನ ರೋದನ! ಮತ್ತು ಆ ಮೇಲೆ ಪ್ರಾಚೀನನೊಬ್ಬನು ಆ ಏಸುವೇ ತೆರೆಯುವವನಾಗಿದ್ದಾನೆ – ಎಂದು ಹೇಳಿದನು. ಯಾವನ ಮದುವೆಯೋ ಅವನದೇ ಹಾಡು! – ಎಂಬುದೇ ತಾತ್ಪರ್ಯ. ನೋಡಿರಿ, ಏಸುವಿನ ಮೇಲೆಯೇ ಎಲ್ಲ ಹಿರಿಮೆಗಳೂ ವಾಲಿಸಲ್ಪಡುತ್ತವೆ. ಆದರೆ, ಈ ಮಾತುಗಳು ಕೇವಲ ಕಥನಮಾತ್ರವಾಗಿವೆ. (೯೮)

*ಮತ್ತು ನಾನು ದೃಷ್ಟಿ ಬೀರಿದೆನು. ಮತ್ತು ನೋಡಿರಿ! ಸಿಂಹಾಸನದ ಮತ್ತು ನಾಲ್ಕೂ ಕಡೆಯ ಪ್ರಾಣಿಗಳ ಮಧ್ಯೆ ಮತ್ತು ಪ್ರಾಚೀನರ ನಡುವೆ, ಸಮಸ್ತ ಭೂಮಿಯ ಮೇಲಕ್ಕೆ ಕಳುಹಿಸಲ್ಪಟ್ಟ, ಈಶ್ವರನ ಏಳು ಆತ್ಮಗಳಾದ, ಏಳು ಕೊಂಬುಗಳನ್ನೂ ಮತ್ತು ನೇತ್ರಗಳನ್ನೂ, ಹೊಂದಿರುವ ಮೇಕೆಯ ಮರಿಯೊಂದು ವಧಿಸಲ್ಪಟ್ಟುದೋ ಎಂಬಂತೆ ನಿಂತಿದೆ. (ಯೋ. ಪ್ರ. ಪ:–೫ಆ:–೬)*

**ಸಮೀಕ್ಷಕ :–** ಈಗ ನೋಡಿರಿ! ಇದು ಜೋನನ ಸ್ವಪ್ನದ ಮನೋವ್ಯಾಪಾರ. ಆ ಸ್ವರ್ಗದ ನಡುವೆ ಎಲ್ಲ ಕ್ರೈಸ್ತರೂ ಹಾಗೂ ನಾಲ್ಕು ಪಶುಗಳೂ ಮತ್ತು ಏಸುವೂ ಕೂಡ ಇದ್ದಾರೆ; ಮತ್ತೆ ಯಾರೂ ಇಲ್ಲ. ಇಲ್ಲಿಯಂತೂ ಏಸುವಿಗೆ ಎರಡು ಕಣ್ಣುಗಳಿದ್ದುವು ಮತ್ತು ಕೊಂಬಿನ ಹೆಸರೂ ಕೂಡ ಇರಲಿಲ್ಲ; ಮತ್ತು ಸ್ವರ್ಗದಲ್ಲಿ ಹೋಗಿ ಏಳು ಕೊಂಬುಗಳನ್ನುಳ್ಳವನೂ ಮತ್ತು ಏಳು ಕಣ್ಣುಗಳನ್ನುಳ್ಳವನೂ ಆದನೆಂಬುದು ಮಹದದ್ಭುತವಾದ ಸಂಗತಿಯಾಯಿತು. ಮತ್ತು ಈಶ್ವರನ ಆ ಏಳು ಆತ್ಮಗಳೂ ಏಸುವಿನ ಕೊಂಬುಗಳು ಮತ್ತು ನೇತ್ರಗಳಾಗಿ ಹೋಗಿದ್ದವು! ಅಯ್ಯೋ! ಇಂತಹ ಮಾತುಗಳನ್ನು ಕ್ರೈಸ್ತರು ಏತಕ್ಕೆ ಒಪ್ಪಿಕೊಂಡುಬಿಟ್ಟರು? ಪಾಪ! ಸ್ವಲ್ಪವಾದರೂ ಬುದ್ಧಿಯನ್ನು ಬಳಸಬಹುದಾಗಿತ್ತು. (೯೯)

*ಮತ್ತು ಅವನು ಪುಸ್ತಕವನ್ನು ತೆಗೆದುಕೊಂಡಾಗ ನಾಲ್ವರು ಪ್ರಾಣಿಗಳೂ ಮತ್ತು ೨೪ ಜನ ಪ್ರಾಚೀನರೂ ಮೇಕೆಯ ಮರಿಯ ಮುಂದೆ ಬಿದ್ದುಬಿಟ್ಟರು ಮತ್ತು ಪ್ರತಿಯೊಬ್ಬನ ಬಳಿಯೂ ಪುಂಗಿಯಿದ್ದಿತು ಮತ್ತು ಪವಿತ್ರರಾದವರ ಪ್ರಾರ್ಥನಾ ರೂಪವಾದ ಧೂಪದಿಂದ ತುಂಬಿದ ಚಿನ್ನದ ಬಟ್ಟಲುಗಳಿದ್ದವು. (ಯೋ.ಪ್ರ. ಪ:–೫ ಆ:– ೮)*

**ಸಮೀಕ್ಷಕ:–** ಭಲೇ! ಏಸುವು ಸ್ವರ್ಗದಲ್ಲಿ ಇಲ್ಲದಿರುವಾಗ ಈ ಬಡಪಾಯಿಗಳು ಧೂಪ–ದೀಪ ನೈವೇದ್ಯ – ಅರತೀ ಮೊದಲಾದ ಪೂಜೆಗಳನ್ನು ಯಾರಿಗೆ ಮಾಡುತ್ತಿರಬಹುದು? ಮತ್ತು ಇಲ್ಲಿ ಪ್ರಾಟೆಸ್ಟೆಂಟ್ ಕ್ರೈಸ್ತರುಗಳು ಮೂರ್ತಿ ಪೂಜೆಯನ್ನೇನೋ ಖಂಡಿಸುತ್ತಾರೆ; ಆದರೆ, ಇವರ ಸ್ವರ್ಗ ಮೂರ್ತಿಪೂಜೆಯ ಮನೆಯಾಗಿ ಕುಳಿತಿದೆ. (೧೦೦)

*ಮತ್ತು ಮೇಕೆಯ ಮರಿಯ ಮುದ್ರಿಕೆಯಲ್ಲೊಂದನ್ನು ತೆರೆದಾಗ ನಾನು ದೃಷ್ಟಿ ಬೀರಿದೆನು. ನಾಲ್ಕು ಪ್ರಾಣಿಗಳಲ್ಲೊಂದು ಮೇಘಗರ್ಜನದಂತಹ ಧ್ವನಿಯಿಂದ 'ಬಾ ಮತ್ತು ನೋಡು'– ಎಂದು ಹೇಳುತ್ತಿದ್ದುದನ್ನು ಕೇಳಿದೆನು. ಮತ್ತು ನಾನು ನಿಟ್ಟಿಸಿದೆನು. ಮತ್ತು ನೋಡಿರಿ! ಬಿಳಿಯದೊಂದು ಕುದುರೆಯಿದೆ! ಮತ್ತು ಅದರ ಮೇಲೆ ಕುಳಿತಿದ್ದವನ ಬಳಿ ಬಿಲ್ಲು ಇದೆ. ಮತ್ತು ಅವನಿಗೆ ಕಿರೀಟ ಕೊಡಲ್ಪಟ್ಟಿತು. ಮತ್ತು ಅವನು ಜಯಕಾರ ಮಾಡುತ್ತಾ, ಜಯವನ್ನು ಸಾಧಿಸಲು ಹೊರಟನು. ಮತ್ತು ಅದು ಎರಡನೆಯ ಮುದ್ರಿಕೆಯನ್ನು ತೆರೆದಾಗ, ಕೆಂಪು ಬಣ್ಣದ ಎರಡನೆಯ ಕುದುರೆ ಹೊರಟಿತು. ಪೃಥಿವಿಯ ಮೇಲಿನ ಒಗ್ಗಟ್ಟನ್ನು ತೊಡೆದು ಹಾಕುವ ಕಾರ್ಯಕೊಡಲ್ಪಟ್ಟಿತು. ಮತ್ತು ಅದು ಮೂರನೆಯ ಮುದ್ರಿಕೆಯನ್ನು ತೆರೆದಾಗ, ನೋಡಿರಿ, ಒಂದು ಕರಿಯ ಕುದುರೆಯಿದೆ! ಮತ್ತು ಅದು ನಾಲ್ಕನೆಯ ಮುದ್ರಿಕೆಯನ್ನು ತೆರೆದಾಗ, ಈಕ್ಷಿಸಿರಿ! ಹಳದಿಯ ಕುದುರೆಯೊಂದಿದೆ; ಮತ್ತು ಅದರ ಮೇಲೆ ಕುಳಿತಿದ್ದವನ ಹೆಸರು ಮೃತ್ಯುವೆಂದಾಗಿದೆ. ಇತ್ಯಾದಿ . (ಯೋ.ಪ್ರ. ಪ:–೬,ಆ:–೧,೫,೭,೮)*

**ಸಮೀಕ್ಷಕ :–** ಈಗ ನೋಡಿರಿ. ಇದು ಪುರಾಣಗಳಿಗಿಂತಲೂ ಹೆಚ್ಚು ಸುಳ್ಳು ಲೀಲೆಯಾಗಿದೆಯೋ, ಇಲ್ಲವೋ? ಭಲೇ! ಪುಸ್ತಕಗಳ ಬಂಧನಗಳ ಮುದ್ರಿಕೆಗಳೊಳಗೆ ಕುದುರೆ ಸವಾರರು ಹೇಗೆ ಇರಬಲ್ಲವರಾಗಿದ್ದರು? ಇದು ಕನಸಿನ ಒದರಾಟವಷ್ಟೇ! ಯಾರು ಇದನ್ನೂ ಕೂಡ ಸತ್ಯವೆಂದು ಒಪ್ಪಿದ್ದಾರೋ, ಅವರಲ್ಲಿ ಅವಿದ್ಯೆ ಎಷ್ಟಿದೆ ಎಂದರೂ ಕಡಿಮೆಯೇ! (೧೦೧).

*ಮತ್ತು ಅವರು ಉಚ್ಚ ಸ್ವರದಿಂದ–"ಓ ಸ್ವಾಮಿ! ಪವಿತ್ರ! (ದೇವ) ಮತ್ತು ಸತ್ಯ ಸ್ವರೂಪ! ಎಂದಿನವರೆಗೆ ನೀನು ನ್ಯಾಯಮಾಡುವುದಿಲ್ಲ? ಮತ್ತು ಪೃಥಿವಿಯ ನಿವಾಸಿಗಳಿಂದ ನಮ್ಮ ರಕ್ತದ ಮುಯ್ಯಿ ತೀರಿಸಿಕೊಳ್ಳುವುದಿಲ್ಲ?" ಎಂದು ಕೂಗುತ್ತಿದ್ದರು. ಮತ್ತು ಪ್ರತಿಯೊಬ್ಬನಿಗೂ ಸ್ವಚ್ಛ ವಸ್ತುಗಳು ಕೊಡಲ್ಪಟ್ಟುವು. ಮತ್ತು ಅವರಿಗೆ " ನಿಮ್ಮ ಸಂಗಾತಿಗಳೂ, ದಾಸರೂ, ಮತ್ತು ನಿಮ್ಮಂತೆಯೇ ವಧಿಸಲ್ಪಡಲಿರುವ ನಿಮ್ಮ ಸೋದರರೂ ಬಂದು ಒಂದಾಗುವವರೆಗೆ ಮತ್ತೂ ಸ್ವಲ್ಪ ವಿಶ್ರಮಿಸಿಕೊಳ್ಳಿರಿ".– ಎಂದು ಹೇಳಲ್ಪಟ್ಟಿತು. (ಯೋ. ಪ್ರ. ಪ:– ೬ ಆ:– ೧೦,೧೧)*

**ಸಮೀಕ್ಷಕ :-** ಯಾರಾರು ಕ್ರೈಸ್ತರಾಗುವರೋ, ಅವರು ವಿಚಾರಾಧೀನರಾಗಿ, ಹೀಗೆ, ನ್ಯಾಯಮಾಡಿಸಿಕೊಳ್ಳುವುದಕ್ಕಾಗಿ ರೋದಿಸುತ್ತಾ ಹೋಗುವರು. ಯಾವನು ವೇದಮಾರ್ಗವನ್ನು ಸ್ವೀಕರಿಸುವನೋ, ಅವನ ನ್ಯಾಯ ತೀರ್ಮಾನವಾಗುವುದರಲ್ಲಿ ಸ್ವಲ್ಪವೂ ತಡವಾಗುವುದಿಲ್ಲ. ಕ್ರೈಸ್ತರನ್ನು -"ಈಶ್ವರನ ನ್ಯಾಯಾಲಯ ಈ ದಿನಗಳಲ್ಲಿ ಮುಚ್ಚಿದೆಯೇ? ಮತ್ತು ನ್ಯಾಯದ ಕಾರ್ಯವೂ ಆಗುವುದಿಲ್ಲ; ನ್ಯಾಯಾಧೀಶರು ನಿಷ್ಕರ್ಮರಾಗಿ ಕುಳಿತಿದ್ದಾರೋ?" - ಎಂದು ಕೇಳಬೇಕು. ಆಗ ಸ್ವಲ್ಪವೂ ಸಮಂಜಸವಾದ ಉತ್ತರವನ್ನು ಕೊಡಲಾರರು. ಮತ್ತು ಇವರ ಈಶ್ವರನು ದಾರಿತಪ್ಪಿಯೂ ಹೋಗುತ್ತಾನೆ. ಏಕೆಂದರೆ, ಇವರ ಹೇಳಿಕೆಯಿಂದ ತಕ್ಷಣ ಇವರ ಶತ್ರುವಿನಿಂದ ಮುಯ್ಯಿ ತೀರಿಸಿಕೊಳ್ಳತೊಡಗುತ್ತಾನೆ. ಮತ್ತು ಕುಟುಕುವ ಸ್ವಭಾವದವರಾಗಿರುತ್ತಾರೆ; ಸತ್ತಮೇಲೆಯೂ ತಮ್ಮ ಹಗೆತನ ತೀರಿಸಿಕೊಳ್ಳುತ್ತಾರೆ; ಶಾಂತಿ ಸ್ವಲ್ಪವೂ ಇಲ್ಲ. ಮತ್ತು ಎಲ್ಲಿ ಶಾಂತಿಯಿಲ್ಲವೋ, ಅಲ್ಲಿ ದುಃಖದ ಇತಿಮಿತಿಯಾದರೂ ಏನಿದ್ದಿತು? (೧೦೨).

*ಮತ್ತು ಬಿರುಗಾಳಿಯಿಂದ ಅಲುಗಾಡಿಸಲ್ಪಟ್ಟ ಅತ್ತಿಯ ಮರದಿಂದ ಅದರ ಕಸುಗಾಯಿಗಳು ಉದುರಿಹೋಗುವ ಹಾಗೆ, ಆಕಾಶದ ನಕ್ಷತ್ರಗಳು ಭೂಮಿಯ ಮೇಲೆ ಬಿದ್ದು ಹೋದುವು ಮತ್ತು ಸುರುಳಿಯಂತೆ ಸುತ್ತಲ್ಪಡುವ ಆಕಾಶ ಬೇರೆಯಾಗಿ ಹೋಯಿತು. (ಯೋ. ಪ್ರ. ಪ:-೬,ಆ :- ೧೩,೧೪)*

**ಸಮೀಕ್ಷಕ :-** ಈಗ ನೋಡಿರಿ. ಭವಿಷ್ಯದ್ವಕ್ತೃವಾದ ಯೋಹನನು ವಿದ್ಯೆಯಿಲ್ಲದುದರಿಂದಲೇ ಇಂತಹ ತಲೆಬಾಲಗಳಿಲ್ಲದ ಕಥೆಯನ್ನು ಹಾಡಿದನು. ಭಲೇ! ನಕ್ಷತ್ರಗಳೆಲ್ಲವೂ ಭೂಮಿಯಂತಹ ಗೋಳಗಳಾಗಿವೆ; ಒಂದು ಪೃಥಿವಿಯ ಮೇಲೆ ಬೀಳಬಲ್ಲವಾದರೂ ಹೇಗೆ? ಮತ್ತು ಸೂರ್ಯ ಮೊದಲಾದುವುಗಳ ಆಕರ್ಷಣ ಅವುಗಳನ್ನು ಅತ್ತ-ಇತ್ತ ಬರಲು-ಹೋಗಲು ಅವಕಾಶವನ್ನೆಂತು ಕೊಡುವುದು? ಮತ್ತು ಆಕಾಶವನ್ನು ಚಾಪೆಯ ಹಾಗೆಂದು ತಿಳಿದಿರುತ್ತಾನೇನು? ಯಾವನಾದರೂ ಸುರುಳಿ ಸುತ್ತಲು ಅಥವಾ ರಾಶಿಹಾಕಲು ಶಕ್ತನಾಗುವಂತಹ ಸಾಕಾರ ಪದಾರ್ಥವಲ್ಲ ಈ ಆಕಾಶ. ಆದಕಾರಣ ಯೋಹನ ಮೊದಲಾದವರೆಲ್ಲರೂ ಕಾಡುಮನುಷ್ಯರಾಗಿದ್ದರು. ಅವರಿಗೆ ಈ ವಿಷಯಗಳ ಅರಿವು ತಾನೇ ಏನಿದ್ದೀತು? (೧೦೩)

*ನಾನು ಅವರ ಸಂಖ್ಯೆಯನ್ನು ಆಲಿಸಿದ್ದೇನೆ. ಇಸ್ರಾಯೇಲನ ಸಂತತಿಯ ಸಮಸ್ತ ಕುಲಗಳಲ್ಲಿ ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಜನರ ಮೇಲೆ ಮುದ್ರೆಯೊತ್ತಲ್ಪಟ್ಟಿದೆ. ಯಹೂದಾನ ಕುಲದಲ್ಲಿ ಹನ್ನೆರಡು ಸಾವಿರ ಜನರ ಮೇಲೆ ಮೊಹರು ಹಾಕಲ್ಪಟ್ಟಿದೆ. (ಯೋ. ಪ್ರ. ಪ:-೭. ಆ:- ೪,೫)*

**ಸಮೀಕ್ಷಕ :-** ಬೈಬಲಿನಲ್ಲಿ ವರ್ಣಿತನಾಗಿರುವ ಈಶ್ವರನು ಕೇವಲ ಇಸ್ರಾಯೇಲ್ ಮೊದಲಾದ ಕುಲಗಳಿಗೆ ಮಾತ್ರ ಸ್ವಾಮಿಯೋ ಅಥವಾ ಸಮಸ್ತ ಜಗತ್ತಿನ ಸ್ವಾಮಿಯೋ? ಹಾಗೆ ಇಲ್ಲವಾಗಿದ್ದಲ್ಲಿ. ಅದೇ ಕಾಡಾಡಿಗಳಿಗೇಕೆ ನೆರವು ನೀಡುತ್ತಿದ್ದನು? ಮತ್ತು, ಅವರಿಗೆ ಮಾತ್ರವೇ ಸಹಾಯ ಮಾಡುತ್ತಿದ್ದನು; ಅನ್ಯರ ನಾಮ-ಸಂಕೇತಗಳನ್ನೂ ಕೂಡ ಎತ್ತುತ್ತಿರಲಿಲ್ಲ! ಇದರಿಂದ, ಅವನು ಈಶ್ವರನೇ ಅಲ್ಲವೆಂದು ಸಿದ್ಧವಾಗುತ್ತದೆ. ಮತ್ತು ಇಸ್ರಾಯೇಲ್ ಮೊದಲಾದ ಕುಲಗಳ ಮಾನವರ ಮೇಲೆ ಮುದ್ರೆಯೊತ್ತುವುದು ಅಲ್ಪಜ್ಞತ್ವದ ಕುರುಹಷ್ಟೇ ಅಥವಾ ಇದು ಯೋಹನನ ಮಿಥ್ಯಾ- ಕಲ್ಪನೆ ಮಾತ್ರವಾಗಿದೆ. (೧೦೪)

*ಈ ಕಾರಣದಿಂದ ಅವರು ಈಶ್ವರನ ಸಿಂಹಾಸನದ ಮುಂದೆಯಿದ್ದಾರೆ. ಮತ್ತು ಅವನ ಮಂದಿರದಲ್ಲಿ ರಾತ್ರಿ ಮತ್ತು ಹಗಲು ಅವನ ಸೇವೆಯನ್ನು ಮಾಡುತ್ತಾರೆ. (ಯೋ. ಪ್ರ.ಪ:- ೭ ಆ:- ೧೫)*

**ಸಮೀಕ್ಷಕ :-** ಇದು ಮಹತ್ಪ್ರತಿಮಾ ಪೂಜೆಯಲ್ಲವೇನು? ಅಥವಾ ಅವರ ಈಶ್ವರನು ದೇಹಧಾರಿಯಾದ ಮಾನವನಂತೆ ಏಕದೇಶೀಯನಲ್ಲವೇನು? ಮತ್ತು ಕ್ರೈಸ್ತರ ಈಶ್ವರ, ರಾತ್ರಿಯಲ್ಲಿ ನಿದ್ರಿಸುವುದೂ ಇಲ್ಲ. ನಿದ್ರಿಸುತ್ತಾನಾದರೆ, ರಾತ್ರಿಯಲ್ಲಿ ಪೂಜೆಯನ್ನು ಹೇಗೆ ಮಾಡುತ್ತಿರಬಹುದು? ಮತ್ತು ಅವನ ನಿದ್ರೆಯೂ ಹಾರಿಹೋಗುತ್ತಿರಬಹುದು. ಮತ್ತು ರಾತ್ರಿ - ಹಗಲು ಎಚ್ಚರವಾಗಿರುವನಾದರೆ, ವಿಕ್ಷಿಪ್ತ ಅಥವಾ ಅತಿ ರೋಗಿಯಾಗಿರಬಹುದು. (೧೦೫)

*ಮತ್ತು, ಚಿನ್ನದ ಧೂಪ-ಪಾತ್ರವನ್ನು ತನ್ನ ಬಳಿ ಹೊಂದಿದ್ದ ಎರಡನೆಯ ದೂತನು ಬಂದು ವೇದಿಯ ಹತ್ತಿರ ನಿಂತನು ಮತ್ತು ಅವನಿಗೆ ಬಹಳ ಧೂಪ ಕೊಡಲ್ಪಟ್ಟಿತು ಮತ್ತು ಧೂಪದ ಹೊಗೆ ಪವಿತ್ರರಾದ ಜನರ ಪ್ರಾರ್ಥನೆಗಳೊಂದಿಗೆ ದೂತನ ಹಸ್ತದಿಂದ ಈಶ್ವರನ ಮುಂದೆ ಏರಿತು ಮತ್ತು ದೂತನು ಧೂಪಪಾತ್ರವನ್ನು ತೆಗೆದುಕೊಂಡು, ಅದರಲ್ಲಿ ವೇದಿಯ ಬೆಂಕಿಯನ್ನು ತುಂಬಿಸಿ, ಅದನ್ನು ಪೃಥಿವಿಯ ಮೇಲೆ ಹಾಕಿದನು ಮತ್ತು ಶಬ್ದ ಮತ್ತು ಗರ್ಜನೆ ಮತ್ತು ಮಿಂಚುಗಳು ಮತ್ತು ಭೂಕಂಪ ಉಂಟಾದವು. (ಯೋ. ಪ್ರ. ಪ:-೮.ಆ:-೩-೫)*

**ಸಮೀಕ್ಷಕ :–** ಈಗ ನೋಡಿರಿ! ಸ್ವರ್ಗದವರೆಗೂ ವೇದಿ, ಧೂಪ, ದೀಪ, ನೈವೇದ್ಯ, ತುತ್ತೂರಿಯ ಶಬ್ದ ಆಗುತ್ತವೆ. ಬೈರಾಗಿಗಳ ಮಂದಿರಕ್ಕಿಂತ ಕ್ರೈಸ್ತರ ಸ್ವರ್ಗ ಕಡಿಮೆಯಾಗಿದೆಯೇನು? ವಿಜೃಂಭಣೆ ಸ್ವಲ್ಪ ಹೆಚ್ಚೇ ಆಗಿದೆ. (೧೦೬)

*ಮೊದಲನೆಯ ದೂತನು ತುತ್ತೂರಿಯನ್ನು ಊದಿದನು. ಮತ್ತು ರಕ್ತ ಮಿಶ್ರಿತವಾದ ಆನೆಕಲ್ಲುಗಳು ಮತ್ತು ಬೆಂಕಿ ಸುರಿದವು. ಮತ್ತು ಅವು ಪೃಥಿವಿಯ ಮೇಲೆ ಹಾಕಲ್ಪಟ್ಟವು ಮತ್ತು ಪೃಥಿವಿಯ ಮೂರನೆಯ ಒಂದು ಭಾಗ ಸುಟ್ಟುಹೋಯಿತು. (ಯೋ.ಪ್ರ. ಪ:–೮.ಆ :– ೭)*

**ಸಮೀಕ್ಷಕ :–** ಭೇಷ್ ಕ್ರೈಸ್ತರ ಭವಿಷ್ಯದ್ವಕ್ತೃವೇ! ಈಶ್ವರ, ಈಶ್ವರನ ದೂತರು, ತುತ್ತೂರಿಯ ಕೂಗು ಮತ್ತು ಪ್ರಳಯದ ಲೀಲೆ ಕೇವಲ ಬಾಲಕರ ಆಟದಂತೆಯೇ ಕಾಣುತ್ತವೆ. (೧೦೭)

*ಮತ್ತು ಐದನೆಯ ದೂತನು ತುತ್ತೂರಿಯನ್ನು ಊದಿದನು. ಮತ್ತು ಸ್ವರ್ಗದಲ್ಲಿಂದ ಪೃಥಿವಿಯ ಮೇಲೆ ಬಿದ್ದಿದ್ದ ನಕ್ಷತ್ರ ಒಂದನ್ನು ನಾನು ನೋಡಿದೆನು. ಮತ್ತು ತಳವಿಲ್ಲದ ಕುಂಡದ ಭಾವಿಯ ಕೀಲಿಯು ಅವನಿಗೆ ಕೊಡಲ್ಪಟ್ಟಿತು ಮತ್ತು ಅವನು ತಳವಿಲ್ಲದ ಕುಂಡದ ಭಾವಿಯನ್ನು ತೆರೆದನು ಮತ್ತು ಕೂಪದ ಒಳಗಿನಿಂದ ದೊಡ್ಡ ಕುಲುಮೆಯ ಹೊಗೆಯಂತೆ ಹೊಗೆ ಎದ್ದಿತು ಮತ್ತು ಆ ಹೊಗೆಯಿಂದ ಮಿಡಿತೆಗಳು ಪೃಥಿವಿಯ ಮೇಲೆ ಪಸರಿಸಿದವು. ಮತ್ತು ಹೇಗೆ ಪೃಥಿವಿಯ ಚೇಳುಗಳಿಗೆ ಅಧಿಕಾರವಿರುತ್ತದೋ, ಹಾಗೆ ಅವಕ್ಕೆ ಅಧಿಕಾರ ಕೊಡಲ್ಪಟ್ಟಿತು. ಮತ್ತು ಅವಕ್ಕೆ "ಯಾರ ಹಣೆಯ ಮೇಲೆ ಈಶ್ವರನ ಮುದ್ರೆಯಿಲ್ಲವೋ, ಆ ಮಾನವರಿಗೆ ಐದು ತಿಂಗಳು ನೋವು ಕೊಡಲ್ಪಡಲಿ."– ಎಂದು ಹೇಳಲ್ಪಟ್ಟಿತು.*

**ಸಮೀಕ್ಷಕ:–** ತುತ್ತೂರಿಯ ಶಬ್ದ ಕೇಳಿ, ನಕ್ಷತ್ರಗಳು ಆ ದೂತರ ಮೇಲೆಯೇ ಆ ಸ್ವರ್ಗದಲ್ಲಿಯೇ ಬಿದ್ದಿರಬಹುದೇನೋ? ಇಲ್ಲಿ ಏನೂ ಬೀಳಲಿಲ್ಲ. ಭಲೇ! ಈ ಕೂಪವನ್ನೂ ಅಥವಾ ಮಿಡತೆಗಳನ್ನೂ ಕೂಡ, ಪ್ರಳಯಕ್ಕಾಗಿ ಈಶ್ವರನು ಪಾಲಿಸಿಟ್ಟುಕೊಂಡಿರಬಹುದೇ? ಆ ಮಿಡಿತೆಗಳು ಮುದ್ರೆಯನ್ನು ನೋಡಿ, ಮುದ್ರಾಂಕಿತರನ್ನು ಕಚ್ಚಬಾರದೆಂಬ ಆದೇಶವನ್ನೂ ಓದಿಕೊಂಡು (ಅಂತಹವರನ್ನು) ಕಚ್ಚದೇ ಬಿಟ್ಟುಬಿಡುತ್ತಿರಬಹುದು. ಇದು ಕೇವಲ ಮುಗ್ಧ ಜನರನ್ನು 'ನೀವು ಕ್ರೈಸ್ತರಾಗದಿದ್ದರೆ, ಮಿಡತೆಗಳು ನಿಮ್ಮನ್ನು ಕಚ್ಚುವವು!' – ಎಂದು ಹೆದರಿಸಿ, ಕ್ರೈಸ್ತರನ್ನಾಗಿಮಾಡಿಕೊಳ್ಳುವ ವಂಚನೆಯ ಕಾರ್ಯಮಾತ್ರವಷ್ಟೇ. ಇಂತಹ ಕಾರ್ಯಗಳು ವಿದ್ಯಾಹೀನವಾದ ದೇಶಗಳಲ್ಲಿ ನಡೆಯಲು ಶಕ್ಯವಾಗಿದೆ ; ಆರ್ಯಾವರ್ತದಲ್ಲಿ ಶಕ್ಯವಲ್ಲ. ಇದು ಪ್ರಳಯದ ವಿಷಯವಾಗಿರಲು ಸಾಧ್ಯವೇ? (೧೦೮)

*ಮತ್ತು ಅಶ್ವಾರೋಹಿಗಳ ಸೈನ್ಯಗಳ ಸಂಖ್ಯೆ ಇಪ್ಪತ್ತು ಕೋಟಿಯಿದ್ದಿತು. (ಯೋ. ಪ್ರ. ಪ:–೯ ಆ:– ೧೬)*

**ಸಮೀಕ್ಷಕ :–** ಅಹಾ! ಇಷ್ಟು ಕುದುರೆಗಳು ಸ್ವರ್ಗದಲ್ಲಿ ಎಲ್ಲಿ ಬೀಡುಬಿಟ್ಟಿದ್ದುವು? ಎಲ್ಲಿ ಮೇಯುತ್ತಿದ್ದುವು? ಎಲ್ಲಿ ತಂಗುತ್ತಿದ್ದವು? ಮತ್ತು ಎಷ್ಟು ಲದ್ದಿ ಹಾಕುತ್ತಿದ್ದವು? ಮತ್ತು ಅದರ ದುರ್ಗಂಧವೂ ಸ್ವರ್ಗದಲ್ಲಿ ಎಷ್ಟು ಹರಡುತ್ತಿರಬಹುದು? ಸಾಕು, ಸಾಕು ಇಂತಹ ಸ್ವರ್ಗಕ್ಕೂ, ಇಂತಹ ಈಶ್ವರನಿಗೂ ಮತ್ತು ಇಂತಹ ಮತಕ್ಕೂ ಆರ್ಯರಾದ ನಾವೆಲ್ಲರೂ ತಿಲಾಂಜಲಿಕೊಟ್ಟುಬಿಟ್ಟಿದ್ದೇವೆ.[೧೧೦] ಸರ್ವಶಕ್ತಿಮಾನ್ ಪರಮಾತ್ಮನ ಕೃಪೆಯಿಂದ ಕ್ರೈಸ್ತರ ತಲೆಗಳ ಮೇಲಿನಿಂದಲೂ ಈ ನಿರರ್ಥಕವಾದ ಹೊರೆ ಇಳಿದು ಹೋಗುವುದಾದರೆ ಬಹಳ ಒಳ್ಳೆಯದಾದೀತು. (೧೦೯)

*ಮತ್ತು ನಾನು, ಮೇಘವನ್ನು ಹೊದೆದಿದ್ದ ಆ ಎರಡನೆಯ ಪರಾಕ್ರಮೀ ದೂತನನ್ನು ಸ್ವರ್ಗದಿಂದ ಇಳಿಯುತ್ತಿರುವಾಗ ನೋಡಿದೆನು. ಮತ್ತು ಅವನ ತಲೆಯ ಮೇಲೆ ಕಾಮನಬಿಲ್ಲು ಇದ್ದಿತು. ಮತ್ತು ಅವನ ಮುಖ ಸೂರ್ಯನ ಹಾಗೆಯೂ ಮತ್ತು ಅವನ ಕಾಲುಗಳು ಬೆಂಕಿಯ ಕಂಬಗಳ ಹಾಗೆಯೂ ಇದ್ದವು. ಮತ್ತು ಅವನು ತನ್ನ ಬಲ ಪಾದವನ್ನು ಸಮುದ್ರದ ಮೇಲೆ ಮತ್ತು ಎಡಪಾದವನ್ನು ಪೃಥಿವಿಯ ಮೇಲೆ ಇಟ್ಟನು. (ಯೋ. ಪ್ರ.ಪ:–೧೦.ಆ:– ೧–೩)*

**ಸಮೀಕ್ಷಕ :–** ಪುರಾಣಗಳ ಅಥವಾ ಹೊಗಳು ಭಟ್ಟರ ಕಥೆಗಳನ್ನೂ ಮೀರಿಸುವಂತಹ ಈ ದೂತರ ಕತೆಯನ್ನು ಈಗ ನೋಡಿರಿ. (೧೧೦)

---

೧೧೦. ಇದು ಲೋಕೋಕ್ತಿ ! ಇದರ ಅರ್ಥ ಕ್ರೈಸ್ತಮತವನ್ನು ಮೃತವೆಂದು ಘೋಷಿಸಿದ್ದೇವೆ ಎಂದು.

*ಮತ್ತು ದೋಟಿಯಂತಹ ಒಂದು ಕೊಂಬೆ ನನಗೆ ಕೊಡಲ್ಪಟ್ಟಿತು ಮತ್ತು, "ಏಳು; ಈಶ್ವರನ ಮಂದಿರವನ್ನೂ ಮತ್ತು ವೇದಿಯನ್ನೂ ಮತ್ತು ಅದರಲ್ಲಿನ ಭಜನೀಕರನ್ನೂ ಅಳತೆಮಾಡು". ಎಂದು ಹೇಳಲ್ಪಟ್ಟಿತು. (ಯೋ. ಪ್ರ.ಪ :-೧೧.ಆ:-೧).*

**ಸಮೀಕ್ಷಕ :-** ಇಲ್ಲಿಯೇ ಏನು? ಆದರೆ, ಕ್ರೈಸ್ತರ ಸ್ವರ್ಗದಲ್ಲಿಯೂ ಕೂಡ ಮಂದಿರಗಳು ಕಟ್ಟಲ್ಪಡುತ್ತವೆ ಮತ್ತು ಅಳೆಯಲ್ಪಡುತ್ತವೆ. ಒಳ್ಳೆಯದಾಗಿದೆ, ಅವರ ಸ್ವರ್ಗ ಎಂತಹುದೋ, ಮಾತುಗಳು ಅಂತಹವೇ ಆಗಿವೆ. ಆದುದರಿಂದ, ಇಲ್ಲಿ ಪ್ರಭುಭೋಜನದಲ್ಲಿ ಏಸುವಿನ ಶರೀರಾವಯವದ ಮಾಂಸ-ರಕ್ತಗಳ ಭಾವನೆಯನ್ನು ಮಾಡಿಕೊಂಡು ತಿನ್ನುತ್ತಾರೆ. ಕುಡಿಯುತ್ತಾರೆ. ಮತ್ತು ಚರ್ಚುಗಳಲ್ಲಿಯೂ ಕೂಡ ಶಿಲುಬೆ - ಮೊದಲಾದುದರ ಆಕಾರಗಳನ್ನು ನಿರ್ಮಿಸುವುದು ಮೊದಲಾದುದೂ ಕೂಡ ಮೂರ್ತಿ-ಪೂಜೆಯೇ ಆಗಿದೆ. (೧೧೧)

*ಮತ್ತು ಸ್ವರ್ಗದಲ್ಲಿ ಈಶ್ವರನ ಮಂದಿರ ತೆರೆಯಲ್ಪಟ್ಟಿತು ಮತ್ತು ಅವನ ನಿಯಮದ ಪೆಟ್ಟಿಗೆ ಅವನ ಮಂದಿರದಲ್ಲಿ ಕಾಣಿಸಿತು. (ಯೋ. ಪ್ರ. ಪ:-೧೧ಆ:-೧೯).*

**ಸಮೀಕ್ಷಕ :-** ಸ್ವರ್ಗದಲ್ಲಿರುವ ಮಂದಿರವು ಎಲ್ಲ ಕಾಲಗಳಲ್ಲಿಯೂ ಮುಚ್ಚಲ್ಪಟ್ಟಿರಬಹುದು. ಒಂದೊಂದು ಸಾರಿ ತೆರೆಯಲ್ಪಡುತ್ತಿರಬಹುದು. ಪರಮೇಶ್ವರನಿಗೂ ಯಾವುದಾದರೂ ಮಂದಿರವಿರಬಲ್ಲುದೇ? ವೇದೋಕ್ತನಾದ ಸರ್ವವ್ಯಾಪಕ ಪರಮಾತ್ಮನ ಯಾವುದೇ ಮಂದಿರವೂ ಇರಲಾರದು. ಅಹುದು; ಕ್ರೈಸ್ತರ ಸಾಕಾರನಾದ ಪರಮೇಶ್ವರನ ಮಂದಿರ ಸ್ವರ್ಗದಲ್ಲಿಯೂ ಇರಬಹುದು; ಭೂಮಿಯ ಮೇಲೂ ಇರಬಹುದು. ಮತ್ತು ಹೇಗೆ ಇಲ್ಲಿ ಘಂಟೆ- ಜಾಗಟೆಗಳ ಲೀಲೆ ನಡೆಯುತ್ತದೋ, ಹಾಗೆಯೇ ಕ್ರೈಸ್ತರ ಸ್ವರ್ಗದಲ್ಲಿಯೂ ನಡೆಯಬಹುದು; ನಿಯಮದ ಪೆಟ್ಟಿಗೆಯನ್ನೂ ಕೂಡ ಒಂದೊಂದು ಸಾರಿ ಕ್ರೈಸ್ತರು ನೋಡುತ್ತಿರಬಹುದು. ಅದರಿಂದ ಏನು ಉಪಯೋಗ ಪಡೆದುಕೊಳ್ಳುತ್ತಿರಬಹುದೋ ತಿಳಿಯದು. ಈ ಎಲ್ಲ ಮಾತುಗಳೂ ಮಾನವರನ್ನು ದಾರಿತಪ್ಪಿಸುವಂತಹವಾಗಿವೆ- ಎನ್ನುವುದು ಮಾತ್ರ ಸತ್ಯ. (೧೧೨)

*ಮತ್ತೊಂದು ದೊಡ್ಡ ಆಶ್ಚರ್ಯ ಸ್ವರ್ಗದಲ್ಲಿ ಕಾಣಿಸಿತು. ಎಂದರೆ, ಸೂರ್ಯನನ್ನು ಧರಿಸುವ ಮತ್ತು ತನ್ನ ಕಾಲುಗಳ ಕೆಳಗೆ ಚಂದ್ರನನ್ನಿಟ್ಟುಕೊಂಡಿರುವ ನಾರಿಯೊಬ್ಬಳಿದ್ದಾಳೆ. ಮತ್ತು ಅವಳ ತಲೆಯ ಮೇಲೆ ೧೨ ನಕ್ಷತ್ರಗಳ ಕಿರೀಟವಿದೆ. ಮತ್ತು ಅವಳು ಗರ್ಭವತಿಯಾಗಿ ಒರಲುತ್ತಾಳೆ. ಏಕೆಂದರೆ, ಅವಳಿಗೆ ಪ್ರಸವವೇದನೆ ಪ್ರಾರಂಭವಾಗಿದೆ . ಮತ್ತು ಅವಳು ಹೆರಲು ನೋವನ್ನನುಭವಿಸುತ್ತಿದ್ದಾಳೆ. ಮತ್ತು, ಸ್ವರ್ಗದಲ್ಲಿ ಎರಡನೆಯ ಆಶ್ಚರ್ಯ ಕಾಣಿಸಿತು. ಮತ್ತು ನೋಡಿರಿ! ಏಳು ತಲೆಗಳನ್ನೂ ಮತ್ತು ಹತ್ತು ಕೊಂಬುಗಳನ್ನೂ ಹೊಂದಿರುವ ಒಂದು ದೊಡ್ಡ ಕೆಂಪು ಹೆಬ್ಬಾವಿದೆ. ಮತ್ತು ಅದರ ತಲೆಗಳ ಮೇಲೆ ಏಳು ರಾಜ- ಮುಕುಟಗಳಿವೆ. ಮತ್ತು ಅದರ ಬಾಲವು ಆಕಾಶದ ನಕ್ಷತ್ರಗಳ ಮೂರನೆಯ ಒಂದು ಭಾಗವನ್ನು ಎಳೆದು ಅವುಗಳನ್ನು ಪೃಥಿವಿಯ ಮೇಲೆ ಹಾಕಿತು. (ಯೋ. ಪ್ರ. ಪ:-೧೨. ಆ:- ೧-೪)*

**ಸಮೀಕ್ಷಕ :-** ಈಗ ನೋಡಿರಿ ಉದ್ದ-ಅಗಲಗಳ ಹರಟೆಗಳನ್ನು! ಇವರ ಸ್ವರ್ಗದಲ್ಲಿಯೂ ಬಡಪಾಯಿ ನಾರಿ ಕೂಗಿಕೊಳ್ಳುತ್ತಾಳೆ! ಅವಳ ದುಃಖವನ್ನು ಯಾವನೂ ಆಲಿಸುವುದಿಲ್ಲ; ದೂರೀಕರಿಸಲೂ ಶಕ್ತನಲ್ಲ. ಮತ್ತು ನಕ್ಷತ್ರಗಳ ಮೂರನೆಯ ಒಂದು ಭಾಗವನ್ನು ಪೃಥಿವಿಯ ಮೇಲೇ ಹಾಕಿದ ಆ ಹೆಬ್ಬಾವಿನ ಬಾಲ ಎಷ್ಟು ದೊಡ್ಡದಾಗಿತ್ತು? ಭಲೇ, ಪೃಥಿವಿಯಂತೂ ಚಿಕ್ಕದು. ಮತ್ತು ನಕ್ಷತ್ರಗಳೂ ಕೂಡ ದೊಡ್ಡ ದೊಡ್ಡ ಲೋಕಗಳಾಗಿವೆ. ಈ ಪೃಥಿವಿಯ ಮೇಲೆ ಒಂದೂ ಕೂಡ ಹಿಡಿಸಲಾರದು. ಆದರೆ, ಈ ಸ್ಥಳದಲ್ಲಿ ಈ ನಕ್ಷತ್ರಗಳ ಮೂರನೆಯ ಒಂದು ಭಾಗ ಈ ಮಾತನ್ನು ಬರೆಯುವವನ ಮೇಲೆ ಬಿದ್ದಿರಬಹುದೆಂದೇ ಊಹಿಸಬೇಕು! ಮತ್ತು ಸಮಸ್ತ ನಕ್ಷತ್ರಗಳ ಮೂರನೆಯ ಒಂದು ಭಾಗವನ್ನು ಸುತ್ತಿ ಭೂಮಿಯ ಮೇಲೆ ಬೀಳಿಸಿಬಿಡುವಷ್ಟು ದೊಡ್ಡದಾದ ಬಾಲವನ್ನು ಹೊಂದಿದ್ದ ಆ ಹೆಬ್ಬಾವೂ ಕೂಡ ಅವನ ಮನೆಯಲ್ಲೇ ಬೀಡುಬಿಟ್ಟಿರಬಹುದೇನೋ? (೧೧೩)

*ಮತ್ತು ಸ್ವರ್ಗದಲ್ಲಿ ಯುದ್ಧವಾಯಿತು. ಮೈಕೇಲ್*[೧೧೧] ಮತ್ತು ಅವನ ದೂತರು ಹೆಬ್ಬಾವಿನೊಂದಿಗೆ ಕಾದಾಡಿದರು. ಮತ್ತು ಹೆಬ್ಬಾವೂ ಮತ್ತು ಅದರ ದೂತರೂ ಕಾದಾಡಿದರು. *(ಯೋ. ಪ್ರ. ಪ:-೧೨, ಆ :- ೯)*

---

೧೧೧. Michael

**ಸಮೀಕ್ಷಕ :–** ಯಾವ ಯಾವನು ಕ್ರೈಸ್ತರ ಸ್ವರ್ಗಕ್ಕೆ ಹೋಗುತ್ತಿರಬಹುದೋ, ಆಯಾ ವ್ಯಕ್ತಿಯೂ ಯುದ್ಧದಲ್ಲಿ ದುಃಖಪಡುತ್ತಿರಬಹುದು. ಇಲ್ಲಿ ಇಂತಹ ಸ್ವರ್ಗದ ಆಸೆಯನ್ನು ಬಿಟ್ಟು, ಕೈಕಟ್ಟಿ ಕುಳಿತುಕೊಳ್ಳಿರಿ. ಎಲ್ಲಿ ಶಾಂತಿಭಂಗ ಮತ್ತು ಉಪದ್ರವ ಆಗುತ್ತಿರುವುದೋ, ಆ ಸ್ಥಳ ಕ್ರೈಸ್ತರಿಗೆ ಯೋಗ್ಯವಾಗಿದೆ. (೧೧೪)

> *ಮತ್ತು ಆ ದೊಡ್ಡ ಹೆಬ್ಬಾವು ಬೀಳಿಸಲ್ಪಟ್ಟಿತು. ಅಹುದು; ಯಾವುದು ದೆವ್ವ*[೧೧೨] *ಮತ್ತು ಸೈತಾನ*[೧೧೩] *ಎನ್ನಿಸಿಕೊಳ್ಳುತ್ತದೋ, ಯಾವುದು ಸಮಸ್ತ ಜಗತ್ತನ್ನೂ ಭ್ರಾಂತಗೊಳಿಸವಂತಹದಾಗಿದೆಯೋ, ಆ ಪ್ರಾಚೀನ ಸರ್ಪ. (ಯೋ. ಪ್ರ. ಪ:–೧೨. ಆ:–೯)*

**ಸಮೀಕ್ಷಕ :–** ಆ ಸೈತಾನ ಸ್ವರ್ಗದಲ್ಲಿದ್ದಾಗ ಜನರನ್ನು ಭ್ರಾಂತಗೊಳಿಸುತ್ತಿರಲಿಲ್ಲವೋ? ಮತ್ತು ಅವನನ್ನು ಜನ್ಮಪೂರ್ತ ಹಿಡಿದು ಬಂಧಿಸಲಿಲ್ಲವೇಕೆ? ಅಥವಾ ಕೊಂದು ಬಿಡಲಿಲ್ಲವೇಕೆ? ಅವನನ್ನು ಪೃಥಿವಿಯ ಮೇಲೆ ಏಕೆ ಹಾಕಿಬಿಟ್ಟರು? ಸಮಸ್ತ ಜಗತ್ತನ್ನೂ ಭ್ರಾಂತಗೊಳಿಸುವವನು ಸೈತಾನನಾದರೆ, ಸೈತಾನನನ್ನು ಭ್ರಾಂತಗೊಳಿಸುವವನು ಯಾವನು? ಸೈತಾನ ಸ್ವತಃ ಭ್ರಾಂತನಾಗಿದ್ದಾನಾದರೆ, ಸೈತಾನನಿಲ್ಲದೆಯೇ ಭ್ರಾಂತರಾಗುವವರು ಮತ್ತು ಅವನನ್ನು ಭ್ರಾಂತಗೊಳಿಸುವವನು ಪರಮೇಶ್ವರನಾದರೆ, ಅವನು ಈಶ್ವರನೇ ಆಗಿ ಉಳಿಯಲಿಲ್ಲ. ಕ್ರೈಸ್ತರ ಈಶ್ವರನೂ ಕೂಡ ಸೈತಾನನಿಗೆ ಹೆದರುತ್ತಾ ಇರಬಹುದೆಂದು ವಿದಿತವಾಗುತ್ತದೆ. ಏಕೆಂದರೆ, ಸೈತಾನನಿಗಿಂತ ಪ್ರಬಲನಾಗಿದ್ದರೆ, ಈಶ್ವರನು ಅಪರಾಧವನ್ನು ಮಾಡುವ ಕಾಲದಲ್ಲಿಯೇ ಅವನಿಗೆ ಶಿಕ್ಷೆಯನ್ನೇಕೆ ಕೊಡಲಿಲ್ಲ? ಜಗತ್ತಿನಲ್ಲಿ ಸೈತಾನನ ರಾಜ್ಯವೆಷ್ಟಿದೆಯೋ, ಅದರ ಸಹಸ್ರಾಂಶದಷ್ಟು ಕೂಡ ಕ್ರೈಸ್ತರ ಈಶ್ವರನ ರಾಜ್ಯವಿಲ್ಲ. ಆದುದರಿಂದ, ಕ್ರೈಸ್ತರ ಈಶ್ವರನು ಅವನನ್ನು ಸರಿಸಲಾರದೇ ಹೋಗಿರಬಹುದು. ಇದರಿಂದ, ಹೇಗೆ ಈ ಕಾಲದ ರಾಜ್ಯಾಧಿಕಾರಿಗಳಾದ ಕ್ರೈಸ್ತರು ಡಕಾಯಿತರು, ಕಳ್ಳರು – ಮೊದಲಾದವರಿಗೆ ಶೀಘ್ರವಾಗಿ ಶಿಕ್ಷೆಕೊಡುತ್ತಾರೋ, ಹಾಗೆಯೂ ಕೂಡ ಕ್ರೈಸ್ತರ ಈಶ್ವರನು (ಮಾಡುವುದು) ಇಲ್ಲವೆಂದು ಸಿದ್ಧವಾಯಿತು. ಮತ್ತೆ, ವೈದಿಕ ಮತವನ್ನು ತ್ಯಜಿಸಿ, ಈ ಟೊಳ್ಳಾದ ಕ್ರೈಸ್ತಮತವನ್ನು ಸ್ವೀಕರಿಸುವ ಬುದ್ಧಿಹೀನನಾದ ಮನುಷ್ಯನು ಯಾವನಿದ್ದಾನೆ? (೧೧೫)

> *ಅಯ್ಯೋ! ಪೃಥಿವಿಯ ಮತ್ತು ಸಮುದ್ರದ ನಿವಾಸಿಗಳೇ! ಏಕೆಂದರೆ ಸೈತಾನನು ನಿಮ್ಮ ಬಳಿ ಇಳಿದಿದ್ದಾನೆ. (ಯೋ. ಪ್ರ.ಪ:–೧೨ ಆ:–೧೨)*

**ಸಮೀಕ್ಷಕ :–** ಆ ಈಶ್ವರನು ಕೇವಲ ಅಲ್ಲಿನ ರಕ್ಷಕ ಹಾಗೂ ಸ್ವಾಮಿ ಅಗಿದ್ದಾನೇನು? ಪೃಥಿವೀ, ಮನುಷ್ಯರು ಮೊದಲಾದ ಪ್ರಾಣಿಗಳ ರಕ್ಷಕನೂ ಮತ್ತು ಸ್ವಾಮಿಯೂ ಅಲ್ಲವೇನು? ಭೂಮಿಗೂ ಕೂಡ ರಾಜನಾಗಿದ್ದರೆ, ಸೈತಾನನನ್ನು ಸಾಯಿಲಾರದೇ ಹೋದನೇಕೆ? ಈಶ್ವರನು ನೋಡುತ್ತಾ ಇರುತ್ತಾನೆ ಮತ್ತು ಸೈತಾನನು ಭ್ರಾಂತರನ್ನಾಗಿ ಮಾಡುತ್ತಾ ತಿರುಗುತ್ತಾನೆ; ಆದರೂ ಅವನನ್ನು ನಿಷೇಧಿಸುವುದಿಲ್ಲ. ಒಬ್ಬನು ಒಳ್ಳೆಯ ಈಶ್ವರ ಮತ್ತು ಇನ್ನೊಬ್ಬನು ಸಮರ್ಥನೂ ಹಾಗೂ ದುಷ್ಟನೂ ಆದ ಎರಡನೆಯ ಈಶ್ವರ ಹೀಗೆ ಇಬ್ಬರು ಇದ್ದಾರೆಂದೇ ವಿದಿತವಾಗುತ್ತದೆ. (೧೧೬)

> *ಮತ್ತು ೪೨ ದಿನಗಳವರೆಗೆ ಯುದ್ಧಮಾಡುವ ಅಧಿಕಾರ ಅವನಿಗೆ ಕೊಡಲ್ಪಟ್ಟಿತು. ಮತ್ತು ಅವನು ಈಶ್ವರನಿಗೆ ವಿರುದ್ಧವಾಗಿ ನಿಂದೆಮಾಡಲು, ಅವನ ಹೆಸರನ್ನೂ, ಮತ್ತು ಅವನ ಗುಡಾರವನ್ನೂ ಮತ್ತು ಸ್ವರ್ಗದಲ್ಲಿ ವಾಸಿಸುವವರನ್ನೂ ನಿಂದಿಸಲು ತನ್ನ ಬಾಯನ್ನು ತೆರೆದನು. ಮತ್ತು ಅವನಿಗೆ ಪವಿತ್ರ ಪುರುಷರ ಮೇಲೆ ಹೋರಾಡುವ, ಅವರನ್ನು ಗೆಲ್ಲುವ ಹಾಗೂ ಪ್ರತಿಯೊಂದು ಕುಲದ, ಮತ್ತು ಭಾಷೆಯ ಹಾಗೂ ದೇಶದ ಮೇಲೆ ಅಧಿಕಾರ ಕೊಡಲ್ಪಟ್ಟಿತು. (ಯೋ. ಪ್ರ. ಪ:–೧೩. ಆ:–೫–೭)*

**ಸಮೀಕ್ಷಕ : –** ಭಲೇ, ಪೃಥಿವಿಯ ಜನರನ್ನು ಭ್ರಾಂತಗೊಳಿಸುವುದಕ್ಕಾಗಿ ಸೈತಾನನ್ನು ಮತ್ತು ಪಶು – ಮೊದಲಾದುವನ್ನು ಕಳುಹಿಸಿದನು. ಮತ್ತು ಪವಿತ್ರರಾದ ಮಾನವರೊಂದಿಗೆ ಯುದ್ಧಮಾಡಿಸುವ ಈ ಕೆಲಸ ಡಕಾಯಿತರ ಸರದಾರನ (ಕೆಲಸಕ್ಕೆ) ಸಮಾನವಾಗಿದೆಯೋ ಅಥವಾ ಇಲ್ಲವೋ? ಇಂತಹ ಕೆಲಸ ಈಶ್ವರನದು ಅಥವಾ ಈಶ್ವರನ ಭಕ್ತರದು ಎಂದಿಗೂ ಆಗಲಾರದು. (೧೧೭)

---

೧೧೨. Devil

೧೧೩. Satan.

*ಮತ್ತು ನಾನು ದೃಷ್ಟಿಬೀರಿದೆನು. ಮತ್ತು ನೋಡಿರಿ, ಮೇಕೆಯ ಮರಿ ಸಿಯೋನ್ ಪರ್ವತದ ಮೇಲೆ ನಿಂತಿದೆ. ಮತ್ತು ಅದರೊಂದಿಗೆ ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಜನರಿದ್ದರು; ಅವರ ಹಣೆಗಳ ಮೇಲೆ ಅದರ ಹೆಸರನ್ನು ಮತ್ತು ಅದರ ತಂದೆಯ ಹೆಸರನ್ನು ಬರೆದಿದ್ದಾರೆ. (ಯೋ. ಪ್ರ. ಪ:-೧೪ ಆ:-೧)*

**ಸಮೀಕ್ಷಕ :-** ಈಗ ನೋಡಿರಿ! ಎಲ್ಲಿ ಏಸುವಿನ ತಂದೆ ಇರುತ್ತಿದ್ದನೋ, ಅಲ್ಲಿಯೇ, ಅದೇ ಸಿಯೋನ್ ಪರ್ವತದ ಮೇಲೆ ಅವನ ಮಗನು ಕೂಡ ಇರುತ್ತಿದ್ದನು. ಆದರೆ, ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಜನರ ಗಣನೆಯನ್ನು ಹೇಗೆ ಮಾಡಿದಿರಿ? ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಮಾತ್ರವೇ ಸ್ವರ್ಗದ ವಾಸಿಗಳಾದರು. ಉಳಿದ ಕೋಟ್ಯಂತರ ಕ್ರೈಸ್ತರ ತಲೆಯ ಮೇಲೆ ಮುದ್ರೆ ಬೀಳಲಿಲ್ಲವೇ? ಇವರೆಲ್ಲರೂ ನರಕಕ್ಕೆ ಹೋದರೇನು? ಕ್ರೈಸ್ತರು ಸಿಯೋನ್ ಪರ್ವತದ ಮೇಲೆ ಹೋಗಿ, ಏಸುವಿನ ತಂದೆ ಮತ್ತು ಅವರ ಸೈನ್ಯ ಅಲ್ಲಿದೆಯೋ ಅಥವಾ ಇಲ್ಲವೋ ನೋಡಬೇಕು. ಇರುವರಾದರೆ ಈ ಬರಹ ಸರಿ; ಇಲ್ಲವಾದರೆ ಸುಳ್ಳು. ಎಲ್ಲಿಂದಲಾದರೂ ಅಲ್ಲಿಗೆ ಬಂದನಾದರೆ, ಎಲ್ಲಿಂದ ಬಂದನು? "ಸ್ವರ್ಗದಿಂದ" - ಎನ್ನುವಿರಾದರೆ, ಇಷ್ಟು ದೊಡ್ಡ ಸೈನ್ಯ ಮತ್ತು ತಾನು ಮೇಲೆ-ಕೆಳಗೆ ಹಾರಿ, ಬಂದು-ಹೋಗಿ ಮಾಡಲು ಅವರು ಪಕ್ಷಿಗಳೇನು? ಅವನು ಬಂದು ಹೋಗಿ ಮಾಡುತ್ತಾನೆಯಾದರೆ, ಒಂದು ಜಿಲ್ಲೆಯ ನ್ಯಾಯಾಧೀಶನಿಗೆ ಸಮಾನನಾದನು. ಮತ್ತು ಅವನು ಒಬ್ಬನು, ಇಬ್ಬರು ಅಥವಾ ಮೂವರಾದರೆ, ಸಾಧ್ಯವಾಗುವುದಿಲ್ಲ. ಆದರೆ, ಕನಿಷ್ಠ ಪಕ್ಷ ಒಂದೊಂದು ಭೂಗೋಳಕ್ಕೆ ಒಬ್ಬೊಬ್ಬ ಈಶ್ವರನಿರಬೇಕು. ಏಕೆಂದರೆ, ಒಬ್ಬನು ಇಬ್ಬರು, ಮೂವರು ಅನೇಕ ಬ್ರಹ್ಮಾಂಡಗಳಿಗೆ ನ್ಯಾಯವನ್ನು ಮಾಡಲು ಮತ್ತು ಎಲ್ಲೆಡೆಯೂ ಒಂದೇ ಕಾಲದಲ್ಲಿ ತಿರುಗಾಡಲು ಎಂದಿಗೂ ಸಮರ್ಥರಾಗಲಾರರು. (೧೧೮)

*ಆತ್ಮನು, "ಅಹುದು. ಅವರು ತಮ್ಮ ಪರಿಶ್ರಮದಿಂದ ವಿಶ್ರಾಮ ಹೊಂದುವರು; ಆದರೆ, ಅವರ ಕಾರ್ಯಗಳು ಅವರೊಂದಿಗೆ ಹೋಗುತ್ತದೆ" - ಎಂದು ಹೇಳುತ್ತಾನೆ. (ಯೋ. ಪ್ರ.ಪ:-೧೪ ಆ:- ೧೩)*

**ಸಮೀಕ್ಷಕ :-** ನೋಡಿರಿ. ಕ್ರೈಸ್ತರ ಈಶ್ವರನಾದರೋ - "ಅವರ ಕರ್ಮಗಳು ಅವರೊಂದಿಗೆ ಇರುವವು; ಎಂದರೆ, ಕರ್ಮಾನುಸಾರವಾಗಿ ಫಲಗಳು ಎಲ್ಲರಿಗೂ ಕೊಡಲ್ಪಡುವವು".- ಎಂದು ಹೇಳುತ್ತಾನೆ. ಮತ್ತು ಈ ಜನರು "ಏಸುವು ಪಾಪಗಳನ್ನು ತೆಗೆದುಕೊಳ್ಳುವನು. ಮತ್ತು ಕ್ಷಮಿಸಲ್ಪಡುವುದೂ ಕೂಡ". ಎನ್ನುತ್ತಾರೆ. ಇಲ್ಲಿ ಬುದ್ಧಿವಂತರು 'ಈಶ್ವರನ ವಚನ ಸತ್ಯವೋ ಅಥವಾ ಕ್ರೈಸ್ತರದೋ? ' ಎಂದು ಅಲೋಚಿಸಬೇಕು. ಒಂದು ಮಾತಿನಲ್ಲಿ ಇಬ್ಬರೂ ಸತ್ಯವಂತರಾಗಿರಲು ಶಕ್ಯವಿಲ್ಲ; ಇಬ್ಬರಲ್ಲಿ ಒಬ್ಬನು ಸುಳ್ಳಾಗಿರುವನು. ಕ್ರೈಸ್ತರ ಈಶ್ವರನಾದರೂ ಸುಳ್ಳಾಗಿರಲಿ; ಅಥವಾ ಕ್ರೈಸ್ತರೇ ಸುಳ್ಳಾಗಿರಲಿ. ಅದರಿಂದ ನಮಗಾಗಬೇಕಾದುದೇನು? (೧೧೯)

*ಮತ್ತು ಈಶ್ವರನ ಕೋಪದ ಮಹಾರಸದ ಕುಂಡದಲ್ಲಿ*[೧೧೪] *ಹಾಕಿದರು. ಮತ್ತು ರಸದ ಕುಂಡ ನಗರದ ಹೊರಗೆ ಕದಡಲಾಯಿತು. ಮತ್ತು ರಸದ ಕುಂಡದೊಳಗಿನಿಂದ ಕುದುರೆಯ ಲಗಾಮಿನವರೆಗೆ, ರಕ್ತವು ಒಂದು ನೂರು ಕೋಶಗಳವರೆಗೆ (೨೦೦ ಮೈಲಿ) ಹರಿದು ಹೊರಟಿತು. (ಯೋ. ಪ್ರ. ಪ:-೧೪, ಆ :- ೧೯-೨೦)*

**ಸಮೀಕ್ಷಕ :-** ಈಗ ಇವರ ಬುರುಡೆಗಳು ಪುರಾಣಗಳ (ಬುರುಡೆಗಳಿಗಿಂತ) ಹೆಚ್ಚಾಗಿವೆಯೋ ಮತ್ತು ಇಲ್ಲವೋ ನೋಡಿರಿ. ಕ್ರೈಸ್ತರ ಈಶ್ವರನು ಕೋಪಮಾಡಿಕೊಳ್ಳುವಾಗ ಬಹಳ ದುಃಖಿತನಾಗುತ್ತಿರಬಹುದು. ಮತ್ತು ಅವನ ಕೋಪ-ಕುಂಡಗಳು ತುಂಬಿವೆ ಎನ್ನಲು ಅವನ ಕೋಪವು ಜಲವೇನು? ಅಥವಾ ಕುಂಡಗಳಲ್ಲಿ ತುಂಬಿಕೊಳ್ಳುವಂತಹ ಇನ್ನೇನಾದರೂ ದ್ರವಿತ ಪದಾರ್ಥವೋ? ಮತ್ತು ನೂರು ಕ್ರೋಶಗಳವರೆಗೆ ರಕ್ತವು ಹರಿಯುವುದು ಅಸಂಭವವಾಗಿದೆ. ಏಕೆಂದರೆ, ರಕ್ತವು ಗಾಳಿ ತಗಲುವುದರಿಂದ ಕೂಡಲೇ ಹೆಪ್ಪುಗಟ್ಟುತ್ತದೆ. ಇನ್ನು ಹರಿಯಬಲ್ಲುದೆಂತು? ಆದುದರಿಂದ, ಇಂತಹ ಮಾತುಗಳು ಸುಳ್ಳಾಗಿರುತ್ತವೆ. (೧೨೦)

*ಮತ್ತು ನೋಡಿರಿ, ಸ್ವರ್ಗದಲ್ಲಿ ಸಾಕ್ಷಿಗಳ ಗುಡಾರದ ಮಂದಿರ ತೆರೆಯಲ್ಪಟ್ಟಿತು. (ಯೋ. ಪ್ರ. ಪ:- ೧೫ ಆ:-೫)*

**ಸಮೀಕ್ಷಕ :-** ಕ್ರೈಸ್ತರ ಈಶ್ವರನು ಸರ್ವಜ್ಞನಾಗಿದ್ದಿದ್ದರೆ, ಸಾಕ್ಷಿಗಳ ಕೆಲಸವೇನು? ಏಕೆಂದರೆ, ಅವನು ಸ್ವತಃ ಎಲ್ಲವನ್ನೂ ತಿಳಿದಿರುತ್ತಿದ್ದನು. ಇದರಿಂದ ಸರ್ವಥಾ 'ಇವರ ಈಶ್ವರನು ಸರ್ವಜ್ಞನಲ್ಲ'- ಎಂದೇ ನಿಶ್ಚಯವಾಗುತ್ತದೆ. ಏಕೆಂದರೆ, ಮನುಷ್ಯನಂತೆ ಅಲ್ಪಜ್ಞನಾಗಿದ್ದಾನೆ. ಅವನು ಈಶ್ವರತ್ವದ ಯಾವ ಕೆಲಸವನ್ನು ತಾನೇ ಮಾಡಬಲ್ಲನು? ಇಲ್ಲ. ಇಲ್ಲ. ಇಲ್ಲ! ಮತ್ತು

---

೧೧೪. The Great Wine press.

ಇದೇ ಪ್ರಕರಣದಲ್ಲಿ ದೂತರ ದೊಡ್ಡ ದೊಡ್ಡ ಅಸಂಭವವಾದ ವಾರ್ತೆಗಳನ್ನು ಬರೆದಿದ್ದಾರೆ. ಅವುಗಳನ್ನು ಸತ್ಯವೆಂದು ಯಾವನೂ ಅಂಗೀಕರಿಸಲಾರನು. ಎಲ್ಲಿಯವರೆಗೆ ಬರೆಯೋಣ! ಈ ಪ್ರಕರಣದಲ್ಲಿ ಸರ್ವಥಾ ಇಂತಹ ಮಾತುಗಳೇ ತುಂಬಿವೆ. (೧೨೧)

*ಮತ್ತು ಈಶ್ವರನು ಅವನ ಕುಕರ್ಮಗಳನ್ನು ಸ್ಮರಿಸಿದ್ದಾನೆ. ಹೇಗೆ ಅವನು ನಿಮಗೆ ಕೊಟ್ಟಿದ್ದಾನೋ, ಹಾಗೆ ಅವನಿಗೆ ತುಂಬಿಸಿಕೊಡಿ. ಮತ್ತು ಅವನ ಕರ್ಮಾನುಸಾರ ಎರಡರಷ್ಟನ್ನು ಅವನಿಗೆ ಕೊಟ್ಟು ಬಿಡಿರಿ . (ಯೋ. ಪ್ರ.ಪ:-೧೮ ಆ:-೫-೬)*

**ಸಮೀಕ್ಷಕ:-** ನೋಡಿರಿ, ಪ್ರತ್ಯಕ್ಷವಾಗಿಯೇ ಕ್ರೈಸ್ತರ ದೇವರು ಅನ್ಯಾಯಕಾರಿಯಾಗಿದ್ದಾನೆ. ಏಕೆಂದರೆ, ಯಾವನು ಎಂತಹ ಅಥವಾ ಎಷ್ಟು ಕರ್ಮವನ್ನು ಮಾಡಿದ್ದಾನೋ ಅವನಿಗೆ ಅಂತಹ ಮತ್ತು ಅಷ್ಟೇ ಫಲವನ್ನು ಕೊಡುವುದನ್ನೇ ನ್ಯಾಯವೆನ್ನುತ್ತಾರೆ. ಅದಕ್ಕಿಂತ ಹೆಚ್ಚಾಗಿ, ಕಡಿಮೆಯಾಗಿ ಕೊಡುವುದು ಅನ್ಯಾಯವಾಗಿರುತ್ತದೆ. ಯಾರು ಅನ್ಯಾಯಕಾರಿಯ ಉಪಾಸನೆಯನ್ನು ಮಾಡುತ್ತಾರೋ, ಅವರು ಅನ್ಯಾಯಕಾರಿಗಳೇತಕ್ಕೆ ಅಲ್ಲ? (೧೨೨)

*ಏಕೆಂದರೆ, ಮೇಕೆಯ ಮರಿಯ ವಿವಾಹ ಹತ್ತಿರ ಬಂದಿದೆ ಮತ್ತು ಅದರ ಪತ್ನಿಯು ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ. (ಯೋ. ಪ್ರ. ಪ:-೧೯ ಆ :- ೭)*

**ಸಮೀಕ್ಷಕ :-** ಈಗ ಆಲಿಸಿರಿ. ಕ್ರೈಸ್ತರ ಸ್ವರ್ಗದಲ್ಲಿ ವಿವಾಹಗಳೂ ಕೂಡ ಆಗುತ್ತವೆ! ಏಕೆಂದರೆ, ಏಸುವಿನ ವಿವಾಹವನ್ನು ಈಶ್ವರನು ಅಲ್ಲಿಯೇ ಮಾಡಿದನು. ಅವನ ಮಾವ, ಅತ್ತೆ, ಮೈದುನ ಮೊದಲಾದವರು ಯಾರಾಗಿದ್ದರು ಮತ್ತು ಮಕ್ಕಳು-ಮರಿಗಳು ಎಷ್ಟಾದರು- ಎಂದು ಕೇಳಬೇಕು. ಮತ್ತು ವೀರ್ಯದ ನಾಶವಾಗುವುದರಿಂದ ಬಲ, ಬುದ್ಧಿ, ಪರಾಕ್ರಮ, ಆಯಸ್ಸು-ಮೊದಲಾದುವುಗಳೂ ಕಡಿಮೆಯಾಗುವುದರಿಂದ, ಈವರೆಗೆ ಏಸುವು ಅಲ್ಲಿ ಶರೀರ ತ್ಯಾಗವನ್ನು ಮಾಡಿರಬಹುದು. ಏಕೆಂದರೆ, ಸಂಯೋಗ ಜನ್ಯವಾದ ಪದಾರ್ಥದ ವಿಯೋಗ ಅವಶ್ಯವಾಗಿ ಆಗುತ್ತದೆ. ಈ ವರೆಗೆ ಕ್ರೈಸ್ತರು ಅವನ ನಂಬಿಕೆಯಲ್ಲಿ ಮೋಸಹೋದರು. ಮತ್ತು ಎಲ್ಲಿಯವರೆಗೆ ಮೋಸದಲ್ಲಿಯೇ ಇರುವರೋ ತಿಳಿಯದು. (೧೨೩)

*ಮತ್ತು ಅವನು ಹೆಬ್ಬಾವನ್ನೂ, ಎಂದರೆ ದೆವ್ವ ಮತ್ತು ಸೈತಾನನಾಗಿರುವ ಆ ಪ್ರಾಚೀನ ಸರ್ಪವನ್ನು ಹಿಡಿದು, ಅದನ್ನು ಸಾವಿರ ವರ್ಷಗಳವರೆಗೆ ಕಟ್ಟಿಟ್ಟನು. ಮತ್ತು ಅದನ್ನು ತಳವಿಲ್ಲದ ಕುಂಡದಲ್ಲಿ ಹಾಕಿದನು. ಮತ್ತು ಮುಚ್ಚಿಟ್ಟು, ಎಂದಿನವರೆಗೆ ಸಾವಿರ ವರ್ಷಗಳು ಪೂರ್ಣವಾಗುವುದಿಲ್ಲವೋ, ಆವರೆಗೆ ಪುನಃ ದೇಶಗಳ ಜನ ರುಗಳನ್ನು ಭ್ರಾಂತಗೊಳಿಸದೆ ಅದಕ್ಕೆ ಮುದ್ರೆಯೊತ್ತಿದನು. (ಯೋ. ಪ್ರ.ಪ:- ೨೦, ಆ:-೨,೩).*

**ಸಮೀಕ್ಷಕ :-** ನೋಡಿರಿ! 'ಸತ್ತೆ, ಸತ್ತೆ' ಎಂದುಕೊಂಡು ಸೈತಾನನನ್ನು ಹಿಡಿದನು. ಮತ್ತು ಸಾವಿರ ವರ್ಷಗಳವರೆಗೆ ಬಂಧಿಸಿಟ್ಟನು. ಮತ್ತೆಯೂ ಹೊರಬರುವನು. ಮತ್ತೆ ಭ್ರಾಂತಗೊಳಿಸುವುದಿಲ್ಲವೇ? ಇಂತಹ ದುಷ್ಟನನ್ನಂತೂ ಕಾರಾಗಾರದಲ್ಲಿಯೇ ಇಡಬೇಕು. ಅಥವಾ ಸಾಯಿಸದೇ ಬಿಡಲೇಬಾರದು. ಆದರೆ, ಈ ಸೈತಾನನ ಇರುವಿಕೆ ಕ್ರೈಸ್ತರ ಭ್ರಾಂತಿ ಮಾತ್ರ; ವಸ್ತುತಃ ಏನೂ ಇಲ್ಲ. ಕೇವಲ ಜನರನ್ನು ಹೆದರಿಸಿ, ತಮ್ಮ ಜಾಲದಲ್ಲಿ ಕೆಡಹಿಕೊಳ್ಳುವ ಉಪಾಯವನ್ನು ಮಾಡಿದ್ದಾರೆ, ಉದಾಹರಣೆಗೆ, ಯಾವನೋ ಧೂರ್ತನೊಬ್ಬನು ಯಾರೋ ಮುಗ್ಧರಾದ ಮಾನವರಿಗೆ - "ನಡೆಯಿರಿ, ನಿಮಗೆ ದೇವತಾ ದರ್ಶನಮಾಡಿಸುವೆನು" ಎಂದು ಹೇಳಿದನು. ಯಾವುದೋ ಏಕಾಂತ ಸ್ಥಾನಕ್ಕೆ ಕರೆದೊಯ್ದು, ಒಬ್ಬ ಮನುಷ್ಯನನ್ನು ಚತುರ್ಭುಜನಾಗಿ ಮಾಡಿದನು. ಪೊದೆಯಲ್ಲಿ ನಿಲ್ಲಿಸಿ, "ಕಣ್ಣು ಮುಚ್ಚಿಕೊಳ್ಳಿರಿ, ಯಾವಾಗ ನಾನು ಹೇಳುವೆನೋ, ಆಗ ತೆರೆಯಬೇಕು. ಮತ್ತು ಪುನಃ ಯಾವಾಗ ಹೇಳುವೆನೋ, ಆಗಲೇ ಮುಚ್ಚಿಕೊಳ್ಳಬೇಕು. ಯಾವನು ಮುಚ್ಚಿಕೊಳ್ಳುವುದಿಲ್ಲವೋ, ಅವನು ಕುರುಡನಾಗಿ ಹೋಗುವನು" ಎಂದನು. ಯಾವಾಗ ಅವನು ಮುಂದೆ ಬಂದನೋ, ಆಗ- "ನೋಡಿ" ಎಂದನು, ಮತ್ತು ಪುನಃ ಬೇಗನೆ - "ಮುಚ್ಚಿಕೊಳ್ಳಿರಿ" ಎಂದನು. ಯಾವಾಗ ಮತ್ತೆ ಪೊದೆಯಲ್ಲಿ ಹುದುಗಿಕೊಂಡನೋ, ಆಗ -"ತೆರೆಯಿರಿ, ನೋಡಿದಿರಾ ನಾರಾಯಣನನ್ನು?[೧೧೫] ಎಲ್ಲರೂ ದರ್ಶನಮಾಡಿದರು".- ಎಂದನು. ನಮ್ಮ ಮತವನ್ನು ಒಪ್ಪದವನು ಸೈತಾನನಿಂದ ಭ್ರಾಂತಗೊಳಿಸಲ್ಪಟ್ಟಿದ್ದಾನೆ.- ಈ ಮತವಾದಿಗಳ ಮಾತೂ ಹಾಗೆಯೇ ಸರಿ. ಇಂತಹ ಲೀಲೆ ಈ ಮತವಾದಿಗಳದು. ಆದುದರಿಂದ, ಇವರ ಮಾಯೆಯಲ್ಲಿ ಯಾವನೂ ಸಿಕ್ಕಿಕೊಳ್ಳಬಾರದು. (೧೨೪)

---

೧೧೫. ಇದು ಸ್ವಾಮಿ ನಾರಾಯಣ ಮತದ ಬಗ್ಗೆ ಕೊಟ್ಟಿರುವ ದೃಷ್ಟಾಂತ. ಈ ಗ್ರಂಥದ ಏಕಾದಶ ಸಮುಲ್ಲಾಸದಲ್ಲಿ ಈ ಮತದ ವಿಶ್ಲೇಷಣೆ ಮಾಡಲಾಗಿದೆ.

*ಯಾವನ ಎದುರಿನಿಂದ ಪೃಥಿವೀ ಮತ್ತು ಆಕಾಶ ಓಡಿಹೋದುವೋ, (ಅವನೇ ಈಶ್ವರನು) ಮತ್ತು ಅವುಗಳಿಗೆ ಸ್ಥಳ ಸಿಕ್ಕಲಿಲ್ಲ. ಮತ್ತು ನಾನು; ಚಿಕ್ಕವರೇನು, ದೊಡ್ಡವರೇನು, ಎಲ್ಲ ಮೃತರೂ ಈಶ್ವರನ ಮುಂದೆ ನಿಂತಿರುವುದನ್ನು ನೋಡಿದೆನು. ಮತ್ತು ಪುಸ್ತಕಗಳು ತೆರೆಯಲ್ಪಟ್ಟವು ಮತ್ತು ಪುಸ್ತಕಗಳಲ್ಲಿ ಬರೆಯಲ್ಪಟ್ಟ ಮಾತುಗಳಿಂದ ಮೃತರ ವಿಚಾರಣೆ ಅವರ ಕರ್ಮಗಳಿಗೆ ಅನುಸಾರ ಮಾಡಲ್ಪಟ್ಟಿತು. (ಯೋ. ಪ್ರ. ಪ:-೨೦ ಆ:- ೧೧,೧೨)*

**ಸಮೀಕ್ಷಕ :-** ಬಾಲತನದ ಈ ಮಾತನ್ನು ನೋಡಿರಿ. ಭಲೇ! ಪೃಥಿವೀ ಮತ್ತು ಆಕಾಶ ಹೇಗೆ ಓಡಬಲ್ಲವು? ಮತ್ತು ಅವು ಯಾವುದರ ಮೇಲೆ ನಿಲ್ಲುವವು? ಯಾವನ ಮುಂದಿನಿಂದ ಓಡಿದವೋ ಅವನ ಸಿಂಹಾಸನ ಎಲ್ಲಿ ನಿಂತಿತು? ಮತ್ತು ಅವನು ಎಲ್ಲಿ ನಿಂತನು? ಮತ್ತು ಶವಗಳು ಪರಮೇಶ್ವರನ ಮುಂದೆ ನಿಲ್ಲಿಸಲ್ಪಟ್ಟವಾದರೆ, ಪರಮೇಶ್ವರನೂ ಕೂಡ ಕುಳಿತೋ ಅಥವಾ ನಿಂತೋ ಇರಬಹುದು. ಪುಸ್ತಕದಲ್ಲಿನ ಲೇಖನಕ್ಕನುಸಾರ ನಡೆಯುತ್ತದೆ- ಎನ್ನಲು ಈಶ್ವರನ ವ್ಯವಹಾರವು ಇಲ್ಲಿನ ನ್ಯಾಯಾಲಯ ಮತ್ತು ಅಂಗಡಿಗಳಿಗೆ ಸಮಾನವಾಗಿರುವುದೇನು? ಮತ್ತು ಸಮಸ್ತ ಜೀವರ ವೃತ್ತಾಂತವನ್ನೂ ಈಶ್ವರನು ಬರೆದನೋ, ಅಥವಾ ಅವನ ಗುಮಾಸ್ತರೋ? ಇಂತಹ ಮಾತುಗಳಿಂದ ಕ್ರೈಸ್ತರೇ ಮೊದಲಾದ ಮತವಾದಿಗಳು ಅನೀಶ್ವರನನ್ನು ಈಶ್ವರನನ್ನಾಗಿಯೂ ಮತ್ತು ಈಶ್ವರನನ್ನು ಅನೀಶ್ವರನನ್ನಾಗಿಯೂ ಮಾಡಿಬಿಟ್ಟಿದ್ದಾರೆ. (೧೨೫)

*ಅವರಲ್ಲಿ ಒಬ್ಬನು ನನ್ನ ಬಳಿ ಬಂದನು ಮತ್ತು ನನಗೆ - "ಬಾ. ನಾನು ಮದುಮಗಳನ್ನು, ಎಂದರೆ - ಮೇಕೆಯ ಮರಿಯ ಪತ್ನಿಯನ್ನು ನಿನಗೆ ತೋರಿಸುವೆನು" ಎಂದು ಹೇಳಿದನು. (ಯೋ. ಪ್ರ. ಪ :-೨೧, ಆ:-೯)*

**ಸಮೀಕ್ಷಕ :-** ಒಳ್ಳೆಯದೇ ಆಯಿತು. ಏಸು ಸ್ವರ್ಗದಲ್ಲಿ ಮದುಮಗಳನ್ನು ಎಂದರೆ ಪತ್ನಿಯನ್ನು ಸೊಗಸಾಗಿ ಗಳಿಸಿಕೊಂಡನು! ಅಲ್ಲಿ ಸರಸ-ಸಲ್ಲಾಪ ಮಾಡುತ್ತಿರಬಹುದು. ಅಲ್ಲಿಗೆ ತೆರಳುವ ಕ್ರೈಸ್ತರೆಲ್ಲರಿಗೂ ನಾರಿಯರು ಸಿಕ್ಕುತ್ತಿರಬಹುದೋ? ಮತ್ತು ಮಕ್ಕಳು - ಮರಿಗಳೂ ಆಗುತ್ತಿರಬಹುದು. ಹಾಗೂ ಬಹಳ ಗುಂಪು ಕೂಡುವುದರಿಂದ ರೋಗೋತ್ಪತ್ತಿಯಾಗಿ ಸಾಯುತ್ತಲೂ ಇರಬಹುದು. ಇಂತಹ ಸ್ವರ್ಗಕ್ಕೆ ದೂರದಿಂದಲೇ ಕೈಮುಗಿಯುವುದು ಒಳ್ಳೆಯದು. (೧೨೬)

*ಮತ್ತು ಅವನು ಆ ನಳಿಗೆಯಿಂದ ನಗರವನ್ನಳೆದನು. ಅದು ಏಳೂವರೆ ನೂರು ಕ್ರೋಶದ್ದಾಗಿದೆ. ಅದರ ಉದ್ದ- ಅಗಲ-ಎತ್ತರ - ಒಂದೇ ಸಮನಾಗಿದೆ - ಎಂದರಿತನು. ಮತ್ತು ಅವನು ಅದರ ಗೋಡೆಯನ್ನು ನರನ - ಎಂದರೆ ದೂತನ ಅಳತೆಯಿಂದ, ೧೪೪ ಮೊಳವಿದೆ - ಎಂದು ತಿಳಿದನು. ಮತ್ತು ಅದರ ಗೋಡೆಯ ಜೋಡಣೆ ಸೂರ್ಯಕಾಂತ ಶಿಲೆಯದಾಗಿದ್ದಿತು. ಮತ್ತು ಶುದ್ಧ ಸ್ವರ್ಣದ್ದಾಗಿದ್ದಿತು. ನಿರ್ಮಲವಾದ ಗಾಜಿಗೆ ಸಮಾನವಾಗಿತ್ತು. ಮತ್ತು ನಗರದ ಗೋಡೆಯ ತಳಪಾಯಗಳು ಒಂದೊಂದು ಕೂಡ ಬಹುಮೂಲ್ಯವಾದ ಕಲ್ಲಿನಿಂದ ಸಿಂಗರಿಸಲ್ಪಟ್ಟಿದ್ದುವು. ತಳಹದಿ ಸೂರ್ಯಕಾಂತ ಶಿಲೆಯದೂ, ಎರಡನೆಯದು ನೀಲಮಣಿಯದೂ ಮೂರನೆಯದು ಕೆಂಪು ಕಲ್ಲಿನದೂ, ನಾಲ್ಕನೆಯದು ಮರಕಶಿಲೆಯದೂ, ಐದನೆಯದು ಗೋಮೇಧಿಕಶಿಲೆಯದೂ, ಆರನೆಯದು ಮಾಣಿಕ್ಯದ್ದೂ, ಏಳನೆಯದು ಪೀತಮಣಿಯದೂ, ಎಂಟನೆಯದು ಪಚ್ಚೆಯದೂ, ಒಂಬತ್ತನೆಯದು ಪುಷ್ಪರಾಗಶಿಲೆಯದೂ, ಹತ್ತನೆಯದು ಬೂದುಶಿಲೆಯದೂ, ಹನ್ನೊಂದನೆಯದು ಧೂಮ್ರಕಾಂತಶಿಲೆಯದೂ, ಹನ್ನೆರಡನೆಯದು ನೀಲಸ್ಫಟಿಕಮಣಿಯದೂ ಮತ್ತು ಹನ್ನೆರಡು ಹೆಬ್ಬಾಗಿಲಗಳು ಹನ್ನೆರಡು ಮುತ್ತುಗಳದೂ ಆಗಿದ್ದುವು. ಒಂದೊಂದು ಮುತ್ತಿನಿಂದ ಒಂದೊಂದು ಹೆಬ್ಬಾಗಿಲು ಆಗಿದ್ದಿತು. ಮತ್ತು ನಗರದ ಬೀದಿಗಳು ಸ್ವಚ್ಛವಾದ ಗಾಜಿನಂತಹ, ನಿರ್ಮಲವಾದ ಚಿನ್ನದವಾಗಿದ್ದುವು. (ಯೋ. ಪ. ಪ:- ೨೧. ಆ: ೧೬-೨೧)*

**ಸಮೀಕ್ಷಕ :** - ಕೇಳಿರಿ ಕ್ರೈಸ್ತರ ಸ್ವರ್ಗದ ವರ್ಣನೆಯನ್ನು ಕ್ರೈಸ್ತರು ಸಾಯುತ್ತಾ ಹೋಗುತ್ತಾರೆಯಾದರೆ ಮತ್ತು ಜನಿಸುತ್ತಾ ಹೋಗುತ್ತಾರೆಯಾದರೆ, ಇಷ್ಟು ವಿಸ್ತಾರದ ನಗರದಲ್ಲಿ ಹೇಗೆ ಹಿಡಿಸಬಲ್ಲರು? ಏಕೆಂದರೆ, ಅದರಲ್ಲಿ ಮಾನವರ ಆಗಮನವೇನೋ ಆಗುತ್ತದೆ; ಆದರೆ, ಅದರಿಂದ ನಿರ್ಗಮನವಿಲ್ಲ. ಮತ್ತು ಅದು ಬಹುಮೂಲ್ಯರತ್ನಗಳಿಂದ ಜಟಿತವಾದ ನಗರಿ- ಎಂದೊಪ್ಪಿ, ಅದೆಲ್ಲವೂ ಚಿನ್ನದ್ದು-ಎಂದು ಮೊದಲಾಗಿ ಬರೆದಿರುವುದು ಕೇವಲ ಮುಗ್ಧಮಾನವರನ್ನು ಭ್ರಾಂತಗೊಳಿಸಿ, ಸಿಕ್ಕಿಸಿಕೊಳ್ಳುವ ಲೀಲೆಯಾಗಿದೆ. ಒಳ್ಳೆಯದು ಆ ನಗರದ ಉದ್ದ-ಅಗಲಗಳೇನೋ ಬರೆದಂತಿರುವುದು ಶಕ್ಯ; ಆದರೆ-ಎತ್ತರ ೭೫೦ ಕ್ರೋಶ ಹೇಗೆ ತಾನೇ ಆಗಬಲ್ಲದು? ಇದು ಸರ್ವಥಾ ಮಿಥ್ಯಾ ಕಪೋಲ ಕಲ್ಪನೆ. ಮತ್ತು ಇಷ್ಟು ದೊಡ್ಡ ಮುತ್ತುಗಳು ಎಲ್ಲಿಂದ ಬಂದಿರಬಹುದು? ಈ ಲೇಖನವನ್ನು ಬರೆಯುವವನ ಮನೆಯ ಗಡಿಗೆಯೊಳಗಿನಿಂದಲೋ? ಈ ಹರಟೆ ಪುರಾಣಕ್ಕೂ ಅಪ್ಪನಾಗಿದೆ (೧೨೭)

*ಮತ್ತು ಯಾವುದಾದರೂ ಅಪವಿತ್ರ ವಸ್ತುವನ್ನು ಅಥವಾ ಘೃಣಿತಕರ್ಮವನ್ನು ಮಾಡುವವನು, ಇಲ್ಲವೇ ಅಸತ್ಯವ್ಯವಹಾರ ಮಾಡುವವನು ಅದರಲ್ಲಿ ಯಾವುದೇ ರೀತಿಯಿಂದ ಪ್ರವೇಶಿಸಲಾರನು. (ಯೋ. ಪ್ರ.ಪ:-೨೦ ಆ:-೨೭)*

**ಸಮೀಕ್ಷಕ :-** ವಿಷಯ ಹೀಗಿರುವುದಾದರೆ, ಕ್ರೈಸ್ತರುಗಳು- **"**ಪಾಪಿ ಜನರೂ ಕೂಡ ಕ್ರೈಸ್ತರಾಗುವುದರಿಂದ ಸ್ವರ್ಗಕ್ಕೆ ಹೋಗಬಲ್ಲರು?**"** - ಎಂದೇಕೆ ಹೇಳುತ್ತಾರೆ? ಈ ಮಾತು ಸರಿಯಾದುದಲ್ಲ. ಹೀಗಿರುವುದಾದರೆ, ಸ್ವಪ್ನದ ಸುಳ್ಳು ಮಾತುಗಳನ್ನಾಡುವವನಾದ ಜೋನನು ಸ್ವರ್ಗದಲ್ಲಿ ಪ್ರವೇಶಮಾಡಲು ಎಂದಿಗೂ ಶಕ್ತನಾಗಿರಲಾರನು. ಮತ್ತು ಏಸುವು ಕೂಡ ಸ್ವರ್ಗಕ್ಕೆ ಹೋಗಿರಲಾರನು. ಏಕೆಂದರೆ ಒಬ್ಬನೇ ಪಾಪಿಯೂ ಸ್ವರ್ಗಕ್ಕೆ ಹೋಗಲಾರನು ಎಂದಮೇಲೆ, ಅನೇಕ ಪಾಪಿಗಳ ಪಾಪದ ಭಾರದಿಂದ ಯುಕ್ತನಾಗಿರುವವನು ಹೇಗೆ ತಾನೇ ಸ್ವರ್ಗವಾಸಿಯಾಗಬಲ್ಲನು? (೧೨೮)

*ಮತ್ತು ಈಗ ಯಾವ ಶಾಪವೂ ಇರುವುದಿಲ್ಲ ಮತ್ತು ಈಶ್ವರನ ಮತ್ತು ಮೇಕೆಯ ಮರಿಯ ಸಿಂಹಾಸನ ಅದರಲ್ಲಿರುವುದು ಮತ್ತು ಅವನ ದಾಸರು ಅವನಿಗೆ ಸೇವೆ ಮಾಡುವರು ಮತ್ತು ಅವನ*[೧೧೬] *ಮುಖವನ್ನು ನೋಡುವರು ಮತ್ತು ಅವನ ಹೆಸರು ಅವನ ಹಣೆಯ ಮೇಲೆ ಇರುವುದು ಮತ್ತು ಅಲ್ಲಿ ರಾತ್ರಿಯಾಗುವುದಿಲ್ಲ ಮತ್ತು ಅವರಿಗೆ ದೀಪದ ಅಥವಾ ಸೂರ್ಯನ ಜ್ಯೋತಿಯ ಅವಶ್ಯಕತೆಯಿಲ್ಲ. ಏಕೆಂದರೆ, ಪರಮೇಶ್ವರ ಈಶ್ವರನು ಅವರಿಗೆ ಬೆಳಕನ್ನು ಕೊಡುವನು. ಅವರು ಸದಾ- ಸರ್ವದಾ ರಾಜ್ಯವನ್ನಾಳುವರು. (ಯೋ. ಪ್ರ.ಪ:-೨೨ ಆ:-೩-೫)*

**ಸಮೀಕ್ಷಕ :-** ನೋಡಿರಿ, ಇದೇ ಕ್ರೈಸ್ತರ ಸ್ವರ್ಗವಾಸ! ಈಶ್ವರನು ಮತ್ತು ಏಸುವು ಸಿಂಹಾಸನದ ಮೇಲೆ ನಿರಂತರವಾಗಿ ಕುಳಿತಿರುವರೇನು? ಮತ್ತು ಅವರ ದಾಸರು ಅವರ ಮುಂದೆ ಸದಾ ಮುಖವನ್ನು ನೋಡುತ್ತಾ ಇರುವರೇ? ಆಗ ಇದನ್ನಾದರೂ ಹೇಳಿರಿ. ನಿಮ್ಮ ಈಶ್ವರನ ಮುಖ ಐರೋಪ್ಯರದರಂತೆ ಬೆಳ್ಳಗಾಗಿದೆಯೋ? ಅಥವಾ ಆಫ್ರಿಕನ್ನರದರ ಹಾಗೆ ಕಪ್ಪಾಗಿದೆಯೋ? ಇಲ್ಲವೇ ಬೇರೆಯ ದೇಶದವರದಂತೆಯಿದೆಯೋ? ನಿಮ್ಮ ಈ ಸ್ವರ್ಗವೂ ಬಂಧನವೇ! ಕಿರಿಮೆ-ಹಿರಿಮೆಗಳಲ್ಲಿರುವಲ್ಲಿ ಹಾಗೂ ಅದೊಂದೇ ನಗರದಲ್ಲಿರಬೇಕಾದ ಆವಶ್ಯಕತೆ ಇರುವಲ್ಲಿ ದುಃಖವಾಗದೇ ಇರುವುದಾದರೂ ಹೇಗೆ? ಮತ್ತು ಮುಖವುಳ್ಳವನು (ಸಾಕಾರನು) ಈಶ್ವರನೂ, ಸರ್ವಜ್ಞನೂ, ಪರಮೇಶ್ವರನೂ ಎಂದಿಗೂ ಆಗಲಾರನು. (೧೨೯)

*ನೋಡು, ನಾನು ಬೇಗ ಬರುತ್ತೇನೆ. ಪ್ರತಿಯೊಬ್ಬನಿಗೂ ಅವನ ಕಾರ್ಯಕ್ಕೆ ಅನುರೂಪವಾಗಿ ಫಲಗಳನ್ನು ಕೊಡುವ ಸಲುವಾಗಿ ನನ್ನ (ಹತ್ತಿರ) ಪ್ರತಿಫಲಗಳು ನನ್ನ ಸಂಗಡವೇ ಇವೆ. ( ಯೋ. ಪ್ರ. ಪ:-೨೨ ಆ:-೧೨)*

**ಸಮೀಕ್ಷಕ :-** ಕರ್ಮಾನುಸಾರವಾಗಿ ಫಲಗಳನ್ನು ಪಡೆಯುತ್ತಾರೆ - ಎನ್ನುವುದೇ ಸಿದ್ಧಾಂತವಾಗಿರುವಾಗ, ಪಾಪಗಳ ಕ್ಷಮೆ ಎಂದಿಗೂ ಆಗುವುದಿಲ್ಲ. ಮತ್ತು ಕ್ಷಮೆಯಾಗುವುದಾದರೆ, ಇಂಜೀಲಿನ ಮಾತುಗಳು ಸುಳ್ಳು. ಯಾವನಾದರೂ - **"**ಕ್ಷಮೆ ಮಾಡುವುದನ್ನೂ ಇಂಜೀಲಿನಲ್ಲಿ ಬರೆದಿದೆ**"** ಎಂದು ಹೇಳುವನಾದರೆ, ಪೂರ್ವಾಪರ ವಿರುದ್ಧ ಎಂದರೆ ಪದತೋವ್ಯಾಘಾತವಾಯಿತು; ಸುಳ್ಳೂ ಆಯಿತು. ಇದನ್ನು ಒಪ್ಪುವುದನ್ನು ಬಿಟ್ಟು ಬಿಡಿರಿ.

ಇನ್ನು ಇಲ್ಲಿಯವರೆಗೆ ಬರೆಯೋಣ? ಇವರ ಬೈಬಲ್‌ನಲ್ಲಿ ಲಕ್ಷಾಂತರ ಖಂಡನೀಯವಾದ ಮಾತುಗಳಿವೆ. ಹೀಗೆ ಏನೋ ಸ್ವಲ್ಪ ಸಂಕೇತಮಾತ್ರವಾಗಿ, ಕ್ರೈಸ್ತರ ಬೈಬಲ್ ಗ್ರಂಥವನ್ನು ತೋರಿಸಿದ್ದೇವೆ. ಇಷ್ಟರಿಂದಲೇ ಬುದ್ಧಿವಂತರಾದ ಜನರು ಬಹಳ ತಿಳಿದುಕೊಳ್ಳುವರು. ಸ್ವಲ್ಪ ಮಾತುಗಳನ್ನುಳಿದು, ಉಳಿದುದೆಲ್ಲಾ ಸುಳ್ಳೇ ತುಂಬಿಕೊಂಡಿದೆ. **ಅಸತ್ಯದ ಸಂಗದಿಂದ ಸತ್ಯವೂ ಕೂಡ ಶುದ್ಧವಾಗಿ ಉಳಿಯದು**. ಹಾಗೆಯೇ ಬೈಬಲ್ ಗ್ರಂಥವೂ ಕೂಡ ಮಾನನೀಯವಾಗಲಾರದು. ಆದರೆ - (ಬೈಬಲಿನಲ್ಲಿರುವ) ಸತ್ಯ, ವೇದಗಳ ಸ್ವೀಕೃತಿಯಲ್ಲಿ ಗೃಹೀತವಾಗಿಯೇ ಆಗುತ್ತದೆ. (೧೩೦)

**ಇತಿ ಶ್ರೀಮದ್ದಯಾನಂದ ಸರಸ್ವತೀ ಸ್ವಾಮಿನಿರ್ಮಿತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ಕೃಶ್ಚೀನಮತವಿಷಯೇ**

**ತ್ರಯೋದಶ ಸಮುಲ್ಲಾಸಃ ಸಂಪೂರ್ಣಃ**

---

೧೧೬. ಎಂದರೆ, ಈಶ್ವರನ. -ಯು.ಮೀ.

# ಅನುಭೂಮಿಕಾ (೪)

ಮುಸಲ್ಮಾನರ ಮತದ ವಿಷಯದಲ್ಲಿ ಬರೆದಿರುವ ಹದಿನಾಲ್ಕನೆಯ ಸಮುಲ್ಲಾಸವನ್ನು ಕೇವಲ ಕುರಾನಿನ[೧] ಅಭಿಪ್ರಾಯಕ್ಕೆ ಅನುಸಾರವಾಗಿ ಬರೆದಿದ್ದೇವೆ; ಬೇರೆ ಯಾವುದೇ ಗ್ರಂಥದ ಮತಕ್ಕೆ ಅನುಸಾರವಾಗಿ ಅಲ್ಲ. ಏಕೆಂದರೆ, ಮುಸಲ್ಮಾನರು ಕುರಾನಿನ ಮೇಲೆಯೇ ಪೂರ್ಣವಾಗಿ ನಂಬಿಕೆಯನ್ನಿಟ್ಟಿದ್ದಾರೆ. ಸಂಪ್ರದಾಯಗಳ ಅಸ್ತಿತ್ವದಿಂದಾಗಿ ಯಾವುದಾದರೂ ಶಬ್ದದ ಅರ್ಥ ಮೊದಲಾದುದರ ಬಗೆಗೆ ಪರಸ್ಪರ ವಿರುದ್ಧವಾದ ವಚನವಿದ್ದರೂ, ಕುರಾನಿನ ಮೇಲೆ ಎಲ್ಲರೂ ಏಕಮತರಾಗಿದ್ದಾರೆ. ಅರಬ್ಬೀ ಭಾಷೆಯಲ್ಲಿರುವ ಕುರಾನಿಗೆ ಮೌಲವಿಗಳು ಉರ್ದುವಿನಲ್ಲಿ ಅರ್ಥ ಬರೆದಿದ್ದಾರೆ. ಅದನ್ನು ದೇವನಾಗರೀ ಲಿಪಿಯಲ್ಲಿ ಮತ್ತು ಆರ್ಯ (ಹಿಂದಿ) ಭಾಷೆಯಲ್ಲಿ ಭಾಷಾಂತರಮಾಡಿಸಿ,[೨] ಆಮೇಲೆ ಅರಬ್ಬಿಯ ದೊಡ್ಡ ದೊಡ್ಡ ವಿದ್ವಾಂಸರಿಂದ ಸಂಶೋಧನ ಮಾಡಿಸಿ, ಅದರ ಆಧಾರದ ಮೇಲೆ ಇದನ್ನು ಬರೆದಿದ್ದೇವೆ. ಯಾರಾದರೂ ಈ ಅರ್ಥ ಸರಿಯಲ್ಲ- ಎನ್ನುವುದಾದರೆ, ಮೌಲವೀ ಸಾಹೇಬರುಗಳ ಭಾಷಾಂತರಗಳನ್ನು ಮೊದಲು ಖಂಡಿಸುವುದು ಅವರಿಗೆ ಉಚಿತವಾಗಿರುತ್ತದೆ. ಆ ಮೇಲೆ ಈ ವಿಷಯದಲ್ಲಿ ಬರೆಯಲಿ

ಏಕೆಂದರೆ, ಈ ಲೇಖನವು ಕೇವಲ ಮಾನವರ ಉನ್ನತಿ ಮತ್ತು ಸತ್ಯಾಸತ್ಯದ ನಿರ್ಣಯಕ್ಕಾಗಿ, ಎಲ್ಲ ಮತಗಳ ವಿಷಯಗಳ ಜ್ಞಾನವು ಸ್ವಲ್ಪ ಸ್ವಲ್ಪವಾಗಲಿ; ಇದರಿಂದ ಮಾನವರಿಗೆ ಪರಸ್ಪರ ಸಮಾಲೋಚನೆ ಮಾಡುವ ಸಮಯ ಸಿಕ್ಕಲಿ ಮತ್ತು ಒಬ್ಬರು ಇನ್ನೊಬ್ಬರ ದೋಷಗಳ ಖಂಡನವನ್ನು ಮಾಡಿ, ಗುಣಗಳನ್ನು ಗ್ರಹಿಸಲಿ- ಎಂಬ ಉದ್ದೇಶ್ಯದಿಂದ ಕೂಡಿದೆ. ಯಾವುದೇ ಬೇರೆಯ ಮತದ ಮೇಲೆಯಾಗಲಿ, ಈ ಮತದ ಮೇಲೆಯೇ ಆಗಲಿ, ಸುಳ್ಳು ಸುಳ್ಳೇ ದೋಷವನ್ನೋ, ಸ್ತುತಿಯನ್ನೋ ಸೂಸುವುದು ಉದ್ದೇಶ್ಯವಲ್ಲ. ಆದರೆ, ಒಳಿತಾದುದೆಲ್ಲವನ್ನೂ ಒಳಿತೇ ಎಂದೂ, ಮತ್ತು ಕೆಡುಕನ್ನು ಕೆಡುಕೇ – ಎಂದೂ ಎಲ್ಲರೂ ತಿಳಿದುಕೊಳ್ಳಬೇಕು. ಹಾಗಲ್ಲದೆ, ಯಾವನೂ ಯಾವನ ಮೇಲೆಯೂ ಸುಳ್ಳು ವ್ಯವಹಾರ ನಡೆಸಲು ಶಕ್ಯವಾಗಬಾರದು; ಮತ್ತು ಸತ್ಯವನ್ನು ನಿರೋಧಿಸಲೂ ಶಕ್ಯವಾಗಬಾರದು. ಮತ್ತು, ಸತ್ಯಾಸತ್ಯ ವಿಷಯವನ್ನು ಪ್ರಕಾಶಪಡಿಸಿದ ಮೇಲೆಯೂ, ಯಾವನಿಗೆ ಇಚ್ಛೆಯಿದೆಯೋ ಅವನು ಒಪ್ಪದಿರಲಿ, ಅಥವಾ ಒಪ್ಪಲಿ,[೩] ಯಾರ ಮೇಲೆ ಬಲಾತ್ಕಾರ ಮಾಡಲ್ಪಡುವುದಿಲ್ಲ. ಮತ್ತು ತಮ್ಮ ಮತ್ತು ಅನ್ಯರ ದೋಷಗಳನ್ನು ದೋಷಗಳೆಂದೂ ಮತ್ತು ಗುಣಗಳನ್ನು ಗುಣಗಳೆಂದೂ, ತಿಳಿದು, ಗುಣಗಳ ಸ್ವೀಕಾರವನ್ನೂ, ದೋಷಗಳ ತ್ಯಾಗವನ್ನೂ ಮಾಡುವುದೇ ಸಜ್ಜನರ ರೀತಿಯಾಗಿದೆ. ಮತ್ತು ಹಠಮಾರಿಗಳ ಹಠವನ್ನೂ, ದುರಾಗ್ರಹವನ್ನೂ ಕಡಿಮೆ ಮಾಡಬೇಕು; ಮಾಡಿಸಬೇಕು. ಏಕೆಂದರೆ, ಪಕ್ಷಪಾತದಿಂದ ಎಂತೆಂತಹ ಅನರ್ಥಗಳು ಜಗತ್ತಿನಲ್ಲಿ ಅಗಿಲ್ಲ? ಮತ್ತು ಆಗುವುದಿಲ್ಲ?

ಈ ಅನಿಶ್ಚಿತವೂ, ಕ್ಷಣಭಂಗುರವೂ ಆದ ಜೀವನದಲ್ಲಿ, ಅನ್ಯರಿಗೆ ಹಾನಿಯನ್ನುಂಟುಮಾಡಿ, ತಾವೂ ಲಾಭರಹಿತರಾಗಿರುವುದು ಮತ್ತು ಅನ್ಯರನ್ನೂ ಲಾಭರಹಿತರನ್ನಾಗಿಡುವುದು ಮಾನವೀಯತೆಯಿಂದ ಹೊರಗಣ ನಡೆಯೆಂಬುದೇ ಸತ್ಯ. ಇದರಲ್ಲಿ ಏನಾದರೂ ವಿರುದ್ಧವಾಗಿ ಬರೆಯಲ್ಪಟ್ಟಿದ್ದರೆ, ಅದನ್ನು ಸಜ್ಜನರು ತಿಳುಹಿಸಲಿ, ಆ ಮೇಲೆ ಉಚಿತವಾಗಿರುವುದಾದರೆ, ಒಪ್ಪಿಕೊಳ್ಳಲ್ಪಡುವುದು. ಏಕೆಂದರೆ, ಈ ಲೇಖನವು ಹಠ, ದುರಾಗ್ರಹ, ಈರ್ಷ್ಯೆ, ದ್ವೇಷ, ವಾದ-ವಿವಾದ ಮತ್ತು ವಿರೋಧವನ್ನು ಕಡಿಮೆಮಾಡುವುದಕ್ಕಾಗಿ ಬರೆಯಲ್ಪಟ್ಟಿದೆಯೇ ಹೊರತು, ಇವುಗಳನ್ನು ಹೆಚ್ಚಿಸುವುದಕ್ಕಾಗಿಯಲ್ಲ. ಏಕೆಂದರೆ, ಒಬ್ಬರು ಇನ್ನೊಬ್ಬರಿಗೆ ಹಾನಿಯೊಡ್ಡುವುದರಿಂದ ದೂರವಿದ್ದು, ಪರಸ್ಪರರಿಗೆ ಲಾಭವನ್ನುಂಟುಮಾಡುವುದು ನಮ್ಮ ಮುಖ್ಯ ಕರ್ಮವಾಗಿದೆ. ಈಗ ೧೪ ನೆಯ ಸಮುಲ್ಲಾಸದಲ್ಲಿ ಮುಸಲ್ಮಾನರ ಮತದ ವಿಷಯವನ್ನು ಸಕಲ ಸಜ್ಜನರ ಸಮ್ಮುಖದಲ್ಲಿ ನಿವೇದಿಸಿಕೊಳ್ಳುತ್ತೇನೆ, ವಿಮರ್ಶಿಸಿ, ಇಷ್ಟವಾದುದರ ಸ್ವೀಕಾರವನ್ನೂ, ಅನಿಷ್ಟವಾದುದರ ಪರಿತ್ಯಾಗವನ್ನೂ ಮಾಡಿರಿ.

**ಅಲಮತಿ ವಿಸ್ತರೇಣ ಬುದ್ಧಿಮದ್ವರ್ಯೇಷು**
**ಇತ್ಯನುಭೂಮಿಕಾ**

---

೧. ವಾಸ್ತವವಾಗಿ, ಈ ಶಬ್ದ 'ಕುರ್ ಆನ್' ಎಂದಿದೆ. ಬಳಕೆಯಲ್ಲಿ 'ಕುರಾನ್' ಆಗಿದೆ.

೨. ಈ ದೇವನಾಗರೀ ಲಿಪಿಯ ಕುರಾನ್ ಗ್ರಂಥವು ಪರೋಪಕಾರಿಣಿ ಸಭಾ, ಅಜಮೇರಿನವರ ಅಧೀನದಲ್ಲಿ ಸುರಕ್ಷಿತವಾಗಿದೆ.

೩. ಕುರಾನಿನ ಮೇಲೆ ಮಹರ್ಷಿ ದಯಾನಂದರ ಈ ಸಮೀಕ್ಷೆ ಪ್ರಕಟವಾದ ಮೇಲೆ ಮೌಲವಿಗಳು ಕುರಾನಿಗೆ ಹೊಸ ಭಾಷ್ಯವನ್ನು ರಚಿಸಿ, ಆರೋಪಿತ ದೋಷಗಳನ್ನು ದೂರಮಾಡಲಾರಂಭಿಸಿದರು. ಮಹರ್ಷಿ ದಯಾನಂದರ ಮತ್ತು ಕೃತಿಗಳು ಸಾರ್ಥಕ, ಎಂಬುದಕ್ಕೆ ಬೇರೆ ಪ್ರಮಾಣ ಬೇಕಿಲ್ಲ!

# ಅಥ ಚತುರ್ದಶ ಸಮುಲ್ಲಾಸಾರಂಭಃ

## ಅಥ ಯವನಮತ ವಿಷಯಂ

### ವ್ಯಾಖ್ಯಾಸ್ಯಾಮಃ

### ಇದರ ಮುಂದೆ ಮುಸಲ್ಮಾನರ ಮತವಿಷಯದಲ್ಲಿ ಬರೆಯುವೆವು.

*ಆರಂಭ ಕ್ಷಮೆಮಾಡುವ ದಯಾಳು ಅಲ್ಲಾಹನ ಹೆಸರಿನೊಂದಿಗೆ. (ಮಂ-೧, ಸಿ-೧.ಸೂ.- ೧)*

**ಸಮೀಕ್ಷಕ:-** ಮುಸಲ್ಮಾನರು ಈ ಕುರಾನ್ ಖುದಾ ಹೇಳಿದುದು-ಎಂದು ಹೇಳುತ್ತಾರೆ. ಆದರೆ, ಈ ವಚನದಿಂದ ಇದನ್ನು ರಚಿಸುವವನು ಯಾವನೋ ಬೇರೆಯವನೆಂದು ವಿದಿತವಾಗುತ್ತದೆ. ಏಕೆಂದರೆ, ಪರಮೇಶ್ವರನು ರಚಿಸಿದುದಾಗಿದ್ದರೆ-'ಆರಂಭ ಅಲ್ಲಾಹನ ಹೆಸರಿನೊಂದಿಗೆ' - ಎಂದು ಹೇಳುತ್ತಿರಲಿಲ್ಲ; ಆದರೆ 'ಆರಂಭ ಮಾನವರ ಉಪದೇಶಕ್ಕಾಗಿ'[೪]- ಎಂದು ಹೇಳುತ್ತಿದ್ದನು. 'ನೀವು ಹೀಗೆ ಹೇಳಿರಿ'-ಎಂದು ಮಾನವರಿಗೆ ಶಿಕ್ಷಣವನ್ನು ಕೊಡುತ್ತಾನೆಯೆಂದು ನೀವು ಹೇಳುವಿರಾದರೆ, ಅದೂ ಕೂಡ ಸರಿಯಲ್ಲ. ಏಕೆಂದರೆ, ಇದರಿಂದ ಪಾಪದ ಆರಂಭವೂ ಕೂಡ ಖುದಾನ ಹೆಸರಿನಿಂದ ಆಗಿ, ಅವನ ಹೆಸರು ಕೂಡ ದೂಷಿತವಾಗಿ ಹೋಗುವುದು. ಅವನು ಕ್ಷಮೆಯನ್ನು ಮಾಡುವವನೂ, ದಯೆಯನ್ನು ಮಾಡುವವನೂ ಆಗಿರುವನಾದರೆ, ಅವನು ತನ್ನ ಸೃಷ್ಟಿಯಲ್ಲಿ ಮಾನವರ ಸುಖದ ಸಲುವಾಗಿ ಬೇರೆಯ ಪ್ರಾಣಿಗಳನ್ನು ಕೊಂದು, ದಾರುಣವಾದ ವೇದನೆಯನ್ನಿತ್ತು, ಸಾಯಿಸಿ, ಮಾಂಸವನ್ನು ತಿನ್ನುವ ಅನುಮತಿಯನ್ನು ಕೊಟ್ಟನೇತಕ್ಕೆ? ಆ ಪ್ರಾಣಿಗಳು ನಿರಪರಾಧವೂ ಪರಮೇಶ್ವರನಿಂದ ಸೃಜಿಸಲ್ಪಟ್ಟವೂ ಅಲ್ಲವೇನು? ಮತ್ತು-ಪರಮೇಶ್ವರನ ಹೆಸರಿನ ಮೇಲೆ ಒಳ್ಳೆಯ ಕಾರ್ಯಗಳ ಆರಂಭ; ಕೆಟ್ಟ ಕಾರ್ಯಗಳದಲ್ಲ". ಎಂದೂ ಕೂಡ ಹೇಳಬೇಕಾಗಿತ್ತು. ಈ ಮಾತಿನಲ್ಲಿ ತಿರುಗು ಮುರುಗಿದೆ. ಕಳವು, ವ್ಯಭಿಚಾರ, ಮಿಥ್ಯಾಭಾಷಣ ಮೊದಲಾದ ಅಧರ್ಮದ ಆರಂಭವನ್ನು ಕೂಡ ಪರಮೇಶ್ವರನ ಹೆಸರಿನ ಮೇಲೆ ಮಾಡಬೇಕೇನು? ಇದೇ ಕಾರಣದಿಂದ, ನೋಡಿರಿ, ಕಟುಕರೇ ಮೊದಲಾದ ಮುಸಲ್ಮಾನರು ಹಸು ಮೊದಲಾದುವುಗಳ ಕೊರಳನ್ನು ಕತ್ತರಿಸುವಲ್ಲಿಯೂ "ಬಿಸ್ಮಿಲ್ಲಾಹ್" ಎಂಬ ವಚನವನ್ನು ಉಚ್ಚರಿಸುತ್ತಾರೆ, ಇದೇ ಇದರ ಪೂರ್ವೋಕ್ತವಾದ ಅರ್ಥವಾದರೆ, ಕೆಡಕುಗಳ ಆರಂಭವನ್ನು ಕೂಡ ಪರಮೇಶ್ವರನ ಹೆಸರಿನ ಮೇಲೆ ಮಾಡುತ್ತಾರೆ. ಮತ್ತು ಮುಸಲ್ಮಾನರ 'ಖುದಾ' ದಯಾಳುವೂ ಕೂಡ ಆಗಿರುವುದಿಲ್ಲ! ಏಕೆಂದರೆ ಅವನ ದಯೆ - ಆ ಪಶುಗಳ ಮೇಲೆ ಉಳಿಯಲಿಲ್ಲ! ಮತ್ತು ಮುಸಲ್ಮಾನರುಗಳು ಇದರ ಅರ್ಥವನ್ನು ತಿಳಿಯುವುದಿಲ್ಲವಾದರೆ ಈ ವಚನದ ಪ್ರಕಟನ ವ್ಯರ್ಥವಾಗಿದೆ. ಮುಸಲ್ಮಾನರು ಇದರ ಅರ್ಥವನ್ನು ಬೇರೆ ರೀತಿಯಲ್ಲಿ ಮಾಡುತ್ತಾರೆಯಾದರೆ, ನೇರವಾದ ಅರ್ಥವೇನು? ಇತ್ಯಾದಿ. (೧)

*ಸ್ತುತಿಗಳೆಲ್ಲವೂ ಸರ್ವರಕ್ಷಕನ, ಎಂದರೆ ಸಮಸ್ತ ಜಗತ್ತಿನ ಪಾಲನೆಯನ್ನು ಪರಮೇಶ್ವರನ ಸಲುವಾಗಿಯೇ ಇವೆ. ಕ್ಷಮೆಯನ್ನು ಮಾಡುವ ದಯಾಳುವಾಗಿದ್ದಾನೆ. (ಮಂ-೧, ಸಿ-೧, ಸೂರತ್ ಉಲ್ ಫಾತಿಹಾ ಆ-೧, ೨.)*

**ಸಮೀಕ್ಷಕ:-** ಕುರಾನಿನ ಖುದಾ ಜಗತ್ತಿತ ಪಾಲನ ಮಾಡುವವನಾಗಿದ್ದರೆ ಮತ್ತು ಎಲ್ಲರ ಮೇಲೆಯೂ ಕ್ಷಮೆಯನ್ನು ಮತ್ತು ದಯೆಯನ್ನು ಮಾಡುತ್ತಾ ಇದ್ದಿದ್ದರೆ, ಅನ್ಯಮತೀಯರನ್ನು ಮತ್ತು ಪಶುವೇ ಮೊದಲಾದುವನ್ನು ಮುಸಲ್ಮಾನರ ಕೈಯಿಂದ

೪. ಮಹರ್ಷಿ ದಯಾನಂದರ ಈ ಟೀಕೆ ಪ್ರಕಟವಾದ ಮೇಲೆ, ಯಾರಾದರೂ ಕಾರ್ಯಾರಂಭವನ್ನೇ ತಪ್ಪಾಗಿ ಮಾಡಿದಾಗ, ಅದನ್ನು ಸೂಚಿಸಲು, ಉತ್ತರ ಭಾರತದಲ್ಲಿ "ಬಿಸ್ಮಿಲ್ಲಾಹ ಹೀ ಗಲತ್" ಎಂಬ ವಾಗ್ಧೋರಣೆ ಪ್ರಚಲಿತವಾಯಿತು. ಈ ಗಾದೆಯನ್ನು ಮುಸಲ್ಮಾನರೂ ಕೂಡ, ಬಳಸುತ್ತಾರೆ.

ಸಾಯಿಸುವ ಆಜ್ಞೆಯನ್ನು ಮಾಡುತ್ತಿರಲಿಲ್ಲ. ಕ್ಷಮೆಮಾಡುವವನಾಗಿದ್ದರೆ, ಪಾಪಿಗಳನ್ನು ಕೂಡ ಕ್ಷಮಿಸುವನೇನು? ಮತ್ತು ಹಾಗೆ ಇರುವನಾದರೆ, ನಾವು ಮುಂದೆ ಬರೆಯಲಿರುವಂತೆ, "ಕಾಫಿರನನ್ನು ಕೊಂದು ಹಾಕಿರಿ". – ಎಂದರೆ, ಯಾರು ಕುರಾನನ್ನು ಮತ್ತು ಪೈಗಂಬರರನ್ನು ಒಪ್ಪುವುದಿಲ್ಲವೋ, ಅವರು ಕಾಫಿರರು–ಎಂದೇಕೆ ಹೇಳುತ್ತಿದ್ದನು? ಆದುದರಿಂದ, ಕುರಾನ್ ಈಶ್ವರಕೃತವೆಂದು ಕಾಣುವುದಿಲ್ಲ. (೨)

*ನ್ಯಾಯ-ದಿನದ ಸ್ವಾಮಿಯು. ನಿನ್ನಲ್ಲಿಯೇ ನಾವು ಭಕ್ತಿಯನ್ನಿಡುತ್ತೇವೆ. ಮತ್ತು ನಿನ್ನಿಂದಲೇ ಸಹಾಯವನ್ನು ಬಯಸುತ್ತೇವೆ. ತೋರಿಸು ನಮಗೆ ನೇರವಾದ ಮಾರ್ಗವನ್ನು. (ಮಂ-೧, ಸಿ-೧, ಸೂ-೧, ಆ-೩-೫)*

**ಸಮೀಕ್ಷಕ:–** ಖುದಾ, ನಿತ್ಯವೂ ನ್ಯಾಯಮಾಡುವುದಿಲ್ಲವೇನು? ಯಾವುದೋ ಒಂದು ದಿನ ನ್ಯಾಯಮಾಡುತ್ತಾನೆ! ಇದರಿಂದಲಂತೂ ಗೊಂದಲವೇ ಕಂಡುಬರುತ್ತದೆ. ಅವನಲ್ಲಿಯೇ ಭಕ್ತಿಯನ್ನಿಡುವುದು ಮತ್ತು ಅವನಿಂದಲೇ ಸಹಾಯ ಬಯಸುವುದೇನೋ ಸರಿಯೇ. ಆದರೆ, ಕೆಟ್ಟ ಕೆಲಸಕ್ಕೂ ಸಹಾಯ ಬಯಸಬೇಕೇನು? ಮತ್ತು ನೇರವಾದ ಮಾರ್ಗ ಮುಸಲ್ಮಾನರದೊಂದೆಯೇ ಅಥವಾ ಬೇರೆಯವರದೂ ಇದೆಯೋ? ನೇರವಾದ ಮಾರ್ಗವನ್ನು ಮುಸಲ್ಮಾನರೇಕೆ ಗ್ರಹಿಸುವುದಿಲ್ಲ? ಕೇಡಿನ ಕಡೆಯ ನೇರವಾದ ಮಾರ್ಗವನ್ನು ಅಪೇಕ್ಷಿಸುವುದಿಲ್ಲತಾನೇ? ಒಳಿತು ಎಲ್ಲರದೂ ಒಂದೇ ಆಗಿರುವುದಾದರೆ, ಮತ್ತೆ ಮುಸಲ್ಮಾನರದೇ ಆದ ವಿಶೇಷವೇನೂ ಉಳಿಯಲಿಲ್ಲ. ಮತ್ತು ಬೇರೆಯವರ ಒಳಿತನ್ನು ಅಂಗೀಕರಸುವುದಿಲ್ಲವಾದರೆ, ಪಕ್ಷಪಾತಿಗಳಾಗಿರುತ್ತಾರೆ. (೩)

*ಯಾರ ಮೇಲೆ ನೀನು ಕರುಣೆಯನ್ನು ಮಾಡಿದೆಯೋ, ಆ ಜನರ ಮಾರ್ಗವನ್ನು (ತೋರಿಸು). ಮತ್ತು ಯಾರ ಮೇಲೆ ನೀನು ಭಯಾನಕ ಕೋಪವನ್ನು, ಎಂದರೆ ಅತ್ಯಂತ ಕ್ರೋಧದ ದೃಷ್ಟಿಯನ್ನು ಬೀರಿದ್ದಿಯೋ, ಅವರ ಮಾರ್ಗವನ್ನು ತೋರಿಸಬೇಡ ಮತ್ತು ಪಥಭ್ರಷ್ಟರ ಮಾರ್ಗವನ್ನು ನಮಗೆ ತೋರಿಸಬೇಡ. (ಮಂ-೧, ಸಿ-೧, ಸೂ-೧, ಆ-೬)*

**ಸಮೀಕ್ಷಕ :–** ಮುಸಲ್ಮಾನರು ಪೂರ್ವಜನ್ಮವನ್ನು ಮತ್ತು ಪೂರ್ವಕೃತ ಪಾಪ–ಪುಣ್ಯಗಳನ್ನು ಒಪ್ಪದಿರುವಾಗ, ಯಾರ ಮೇಲಾದರೂ ಮಹಾಪ್ರಸಾದವನ್ನು, ಎಂದರೆ ಅನುಕಂಪವನ್ನು ಅಥವಾ ದಯೆಯನ್ನು ಮಾಡುವುದರಿಂದ ಮತ್ತು ಇತರರ ಮೇಲೆ ಮಾಡದಿರುವುದರಿಂದ ಖುದಾ ಪಕ್ಷಪಾತಿಯಾಗಿ ಹೋಗುವನು. ಏಕೆಂದರೆ; ಪಾಪ–ಪುಣ್ಯಗಳಿಲ್ಲದೆ ದುಃಖ–ಸುಖಗಳನ್ನು ಕೊಡುವುದು ಕೇವಲ ಅನ್ಯಾಯದ ಸಂಗತಿಯಾಗಿದೆ. ಮತ್ತು ಕಾರಣವಿಲ್ಲದೆ ಯಾವನ ಮೇಲೆ ದಯೆಯನ್ನೂ ಮತ್ತು ಯಾವನ ಮೇಲಾದರೂ ಕ್ರೋಧ ದೃಷ್ಟಿಯನ್ನೂ ಮಾಡುವುದೂ ಕೂಡ ಸ್ವಭಾಕ್ಕೆ ಬಾಹಿರವಾಗುತ್ತದೆ. ಅವನು ದಯೆಯನ್ನು ಅಥವಾ ಕ್ರೋಧವನ್ನು ಮಾಡಲಾರನು. ಮತ್ತು ಪೂರ್ವಸಂಚಿತ ಪುಣ್ಯ– ಪಾಪಗಳೇ ಇಲ್ಲದಿರುವಾಗ ಯಾವನ ಮೇಲಾದರೂ ದಯೆಯನ್ನೂ ಮತ್ತು ಯಾವನ ಮೇಲಾದರೂ ಕ್ರೋಧವನ್ನೂ ಮಾಡುವುದು ಶಕ್ಯವಾಗಿರುವುದಿಲ್ಲ. ಮತ್ತು ಈ ಸೂರತ್ತಿನ ಟಿಪ್ಪಣಿಯಲ್ಲಿ "ಈ ಸುರಃವನ್ನು[೫] ಅಲ್ಲಾಹ್ ಸಾಹೇಬರು ಮಾನವರ ಮುಖದಿಂದ 'ಸದಾ ಈ ರೀತಿ ಹೇಳುತ್ತಾ ಹೋಗು'. ಎಂದು ಹೇಳಿಸಿದರು". ಎಂದು ಬರೆದಿದೆ. ಈ ಮಾತು ಸರಿಯಾದರೆ, "ಆಲಿಫ್ ಬೇ" ಮೊದಲಾದ ಅಕ್ಷರಗಳನ್ನೂ ಕೂಡ ಖುದಾನೇ ಓದಿಸಿರಬಹುದು. ಅಕ್ಷರ ಜ್ಞಾನವಿಲ್ಲದೆ ಈ ಸುರಃವನ್ನು ಹೇಗೆ ಓದಬಲ್ಲವರಾದರು? ಕೇವಲ ಕಂಠದಿಂದಲೇ ಹೇಳಿಸಿದರೇ? ಮತ್ತು ಹೇಳುತ್ತಾ ಹೋದರೇ? ವಸ್ತುಸ್ಥಿತಿ ಹೀಗೆಯೇ ಇದ್ದರೆ, ಸಮಸ್ತ ಕುರಾನನ್ನೂ ಕಂಠಪಾಠದ ಮೂಲಕವೇ ಓದಿಸಿರಬಹುದು?[೬] ಇದರಿಂದ, ಪಕ್ಷಪಾತದ ಮಾತುಗಳು ಕಂಡುಬರುವಂತಹ ಪುಸ್ತಕವು ಈಶ್ವರಕೃತವಾಗಲಾರದು–ಎಂದು ತಿಳಿದುಕೊಳ್ಳಬೇಕು. ಉದಾಹರಣೆಗೆ, ಅರಬ್ಬೀ ಭಾಷೆಯಲ್ಲಿ ಇಳಿಸಿರುವುದರಿಂದ, ಅರಬರಿಗೆ ಇದನ್ನು ಓದುವುದು ಸುಗಮವೂ, ಅನ್ಯಭಾಷಾಭಾಷಿಗಳಿಗೆ ಕಠಿಣವೂ ಆಗುತ್ತದೆ. ಇದರಿಂದ ಖುದಾನಲ್ಲಿ ಪಕ್ಷಪಾತ ಉಂಟಾಗುತ್ತದೆ. ಮತ್ತು ಹೇಗೆ ಪರಮೇಶ್ವರನು ಸೃಷ್ಟಿಯಲ್ಲಿರುವ ಸಮಸ್ತ ದೇಶೀಯ ಮಾನವರ ಮೇಲೆಯೂ ನ್ಯಾಯ ದೃಷ್ಟಿಯಿಂದ, ಎಲ್ಲ ದೇಶಭಾಷೆಗಳಿಂದಲೂ ವಿಲಕ್ಷಣವಾದ, ಮತ್ತು ಎಲ್ಲ ದೇಶದವರಿಗೂ ಒಂದೇ ಸಮನಾದ ಪರಿಶ್ರಮದಿಂದ ಗೊತ್ತಾಗುವ ವೈದಿಕ ಭಾಷೆ[೭]ಯಲ್ಲಿಯೇ ವೇದಗಳ ಪ್ರಕಾಶವನ್ನು ಮಾಡಿದ್ದಾನೋ, ಹಾಗೆ ಮಾಡಿದ್ದರೆ, ಯಾವ ದೋಷವೂ ಇರುತ್ತಿರಲಿಲ್ಲ. (೪).

---

೫. ಎಂದರೆ, ಶ್ಲೋಕವನ್ನು

೬. ಈ ದೋಷವು ವೇದಗಳ ಪ್ರಾದುರ್ಭಾವದ ಬಗೆಗೆ ಬರುವುದಿಲ್ಲ. ಏಕೆಂದರೆ, ಪರಮೇಶ್ವರನು ವೇದಗಳ ಜ್ಞಾನವನ್ನು ಆದಿ ಋಷಿಗಳ ಅಂತಃಕರಣದಲ್ಲಿ ಅಥವಾ ಜ್ಞಾನದಲ್ಲಿ ಪ್ರೇರೇಪಿಸಿದನು. ಋಗ್ವೇದದ ಮಂತ್ರ [೧.೭೧.೧] ವನ್ನು ನೋಡಿ. ಸಪ್ತಮ ಸಮುಲ್ಲಾಸದಲ್ಲಿ ಈ ವಿಷಯದ ಬಗ್ಗೆ ವಿವರಣೆ ಇದೆ.

೭. ವೈದಿಕ ಸಂಸ್ಕೃತ ಭಾಷೆ.

*ಸಂದೇಹವಿಲ್ಲದಂತಹ ಈ ಪುಸ್ತಕವು ನಿಷ್ಠಾವಂತರಿಗೆ ಮಾರ್ಗ- ತೋರಿಸುತ್ತದೆ. ಯಾರು ಪರೋಕ್ಷದ ಮೇಲೆ ನಂಬಿಕೆಯಿಡುತ್ತಾರೋ, ನಮಾಜನ್ನು ಮಾಡುತ್ತಾರೋ ಮತ್ತು ನಾವು ಕೊಟ್ಟಿರುವ ವಸ್ತುವಿನಿಂದ ವ್ಯಯಮಾಡುತ್ತಾರೋ, ಮತ್ತು ಯಾರು ನಿನ್ನ ಮೇಲೆ ಇಳಿದ ಪುಸ್ತಕದ ಮೇಲೆ ನಂಬಿಕೆಯಿಡುತ್ತಾರೋ ಮತ್ತು, ನಿನಗಿಂತ ಮೊದಲು ಇಳಿಸಿದುದರ ಮೇಲೆಯೂ, ಮತ್ತು ಕಯಾಮತ್ತಿನ[೭೨] ಮೇಲೆಯೂ ನಂಬಿಕೆಯಿಡುತ್ತಾರೋ, ಅಂತಹ ಈ ಜನರು ಸ್ವಾಮಿಯ ಶಾಸನದ ಅಧೀನದಲ್ಲಿದ್ದಾರೆ. ಮತ್ತು ಇವರೇ ಮುಕ್ತಿ ಪಡೆಯುವವರಾಗಿದ್ದಾರೆ. ನಿಜವಾಗಿಯು ಯಾರು ಕಾಫಿರರಾದರೋ, ಅವರನ್ನು ಹೆದರಿಸುವುದು ಹೆದರಿಸದಿರುವುದು ಸಮಾನವಾಗಿರುತ್ತದೆ. ಅವರು ನಂಬಿಕೆಯನ್ನು ಹೊಂದುವುದಿಲ್ಲ. ಅಲ್ಲಾಹನು ಅವರ ಹೃದಯಗಳ-ಕಿವಿಗಳ ಮೇಲೆ ಮುದ್ರೆಯೊತ್ತಿಬಿಟ್ಟಿದ್ದಾನೆ. ಮತ್ತು ಅವರ ಕಣ್ಣುಗಳ ಮೇಲೆ ತೆರೆಯಿದೆ. ಮತ್ತು ಅವರ ಸಲುವಾಗಿ ಮಹದಭಿಶಾಪವಿದೆ. (ಮಂ-೧ ಸಿ-೧ ಸೂ-೨ ಆ-೨-೬).*

**ಸಮೀಕ್ಷಕ:-** ತನ್ನ ಬಾಯಿನಿಂದಲೇ ತನ್ನ ಪುಸ್ತಕದ ಪ್ರಶಂಸೆಯನ್ನು ಮಾಡುವುದು ಖುದಾನ ದಂಭದಮಾತಲ್ಲವೇನು? ನಿಷ್ಠಾವಂತರು ಎಂದರೆ ಧಾರ್ಮಿಕರಾದ ಜನರುಗಳಂತೂ ಸ್ವತಃ ಸತ್ಯದ ಮಾರ್ಗದಲ್ಲಿದ್ದಾರೆ. ಮತ್ತು ಯಾರು ಅಸತ್ಯದ ಮಾರ್ಗದಲ್ಲಿದ್ದಾರೋ, ಅವರಿಗೆ ಈ ಕುರಾನ್ ಮಾರ್ಗವನ್ನೇ ತೋರಿಸಲಾರದು. ಮತ್ತೆ ಯಾವ ಕೆಲಸಕ್ಕೆಬೇಕು ಅದು? ಪಾಪ-ಪುಣ್ಯಗಳೂ ಮತ್ತು ಪುರುಷಾರ್ಥವೂ ಇಲ್ಲದೆ, ಖುದಾ ತನ್ನ ಖಜಾನೆಯಿಂದಲೇ ವ್ಯಯಮಾಡಲು ಕೊಡುತ್ತಾನೆಯಾದರೆ, ಎಲ್ಲರಿಗೂ ಕೊಡುವುದಿಲ್ಲವೇಕೆ? ಮತ್ತು ಮುಸಲ್ಮಾನರು ಪರಿಶ್ರಮವನ್ನೇಕೆಮಾಡುತ್ತಾರೆ? ಮತ್ತು ಬೈಬಲ್ ಇಂಜೀಲ್ ಮೊದಲಾದುದರ ಮೇಲೆ ನಂಬಿಕೆಯಿಡುವುದು ಯೋಗ್ಯವಾದರೆ, ಮುಸಲ್ಮಾನರು ಹೇಗೆ ಕುರಾನಿನ ಮೇಲೆ ಇಡುತ್ತಾರೋ, ಹಾಗೆ ಇಂಜೀಲ್ ಮೊದಲಾದವುಗಳ ಮೇಲೆ ನಂಬಿಕೆಯನ್ನಿಡುವುದಿಲ್ಲವೇಕೆ? ಮತ್ತು ಇಡುತ್ತಾರೆಯಾದರೆ, ಕುರಾನಿನ ಇರುವಿಕೆ ಏತಕ್ಕಾಗಿ? ಕುರಾನಿನಲ್ಲಿ ಹೆಚ್ಚು ವಿಷಯಗಳಿವೆ-ಎನ್ನುವರಾದರೆ, ಮೊದಲಿನ ಪುಸ್ತಕದಲ್ಲಿ ಬರೆಯುವುದನ್ನು ಖುದಾ ಮರೆತು ಹೋಗಿರಬಹುದು! ಮತ್ತು, ಮರೆತಿಲ್ಲವಾದರೆ ಕುರಾನನ್ನು ರಚಿಸುವುದು ನಿಷ್ಪ್ರಯೋಜನವಾಗಿದೆ. ಮತ್ತು ನಾವು ನೋಡುವುದಾದರೆ, ಬೈಬಲ್ ಮತ್ತು ಕುರಾನ್ ನ ಮಾತುಗಳಲ್ಲಿ ಎಲ್ಲಿಯೂ ಒಂದೊಂದು ಬೇರೆ ಬೇರೆಯಾಗಿರಬಹುದು. ಅನ್ಯಥಾ ಎಲ್ಲವೂ ಹೊಂದಿಕೊಂಡೇ ಇವೆ. ವೇದವಿರುವಂತೆ ಒಂದೇ ಪುಸ್ತಕವನ್ನು ಏಕೆ ರಚಿಸಲಿಲ್ಲ? ಕಯಾಮತ್ತಿನ ಮೇಲೆಯೇ ನಂಬಿಕೆಯಿಡಬೇಕೇ? ಬೇರೆಯದರ ಮೇಲೆ ಕೊಡದೇ? (೧-೩). ಕ್ರೈಸ್ತರು ಮತ್ತು ಮುಸಲ್ಮಾನರು ಮಾತ್ರ ಖುದಾನ ಪ್ರಶಾಸನದಲ್ಲಿದ್ದಾರೆಯೇ? ಅವರಲ್ಲಿ ಯಾರೂ ಪಾಪಿಗಳಿಲ್ಲವೇ? ಯಾವ ಕ್ರೈಸ್ತರು ಮತ್ತು ಮುಸಲ್ಮಾನರು ಅಧರ್ಮಿಗಳಾಗಿದ್ದಾರೋ, ಅವರೂ ಕೂಡ ಬಿಡುಗಡೆ ಹೊಂದುವರಾದರೆ ಮತ್ತು ಅನ್ಯಧರ್ಮಾತ್ಮರೂ ಕೂಡ ಹೊಂದದೇ ಹೋದರೆ, ಮಹಾ ಅನ್ಯಾಯದ ಮತ್ತು ಗೊಂದಲದ ಮಾತಲ್ಲವೇ ಅದು? (೪). ಮತ್ತು ಯಾವ ಜನರು ಮುಸಲ್ಮಾನೀ ಮತವನ್ನು ಅಂಗೀಕರಿಸುವುದಿಲ್ಲವೋ, ಅವರನ್ನು ಮಾತ್ರ ಕಾಫಿರರೆನ್ನುವುದು ಏಕಪಕ್ಷೀಯ ತೀರ್ಮಾನವಲ್ಲವೇ? (೫). ಪರಮೇಶ್ವರನೇ ಅವರ ಅಂತಃಕರಣದ ಮತ್ತು ಕಿವಿಗಳಮೇಲೆ ಮುದ್ರೆಯನ್ನೊತ್ತಿದರೆ ಮತ್ತು ಅದೇ ಕಾರಣದಿಂದ ಅವರು ಪಾಪ ಮಾಡುತ್ತಾರೆಯಾದರೆ, ಅವರ ದೋಷವು ಸ್ವಲ್ಪವೂ ಇಲ್ಲ; ಈ ದೋಷ ಖುದಾನದೇ ಆಗಿದೆ. ಮತ್ತೆ ಅವರಿಗೆ ಸುಖ-ದುಃಖಗಳು ಅಥವಾ ಪಾಪ-ಪುಣ್ಯಗಳು ತಗಲಲಾರವು. ಇನ್ನು ಅವರಿಗೆ ಶಿಕ್ಷೆ- ಭಿಕ್ಷೆಗಳನ್ನು ಕೊಡುತ್ತಾನೇತಕ್ಕೆ? ಏಕೆಂದರೆ, ಅವರು ಪಾಪವನ್ನು ಅಥವಾ ಪುಣ್ಯವನ್ನು ಸ್ವಾತಂತ್ರ್ಯದಿಂದ ಮಾಡಲಿಲ್ಲ. (೫).

*ಅವರ ಹೃದಯಗಳಲ್ಲಿ ರೋಗವಿದೆ. ಅಲ್ಲಾಹನು ಅವರ ರೋಗವನ್ನು ಹೆಚ್ಚಿಸಿಬಿಟ್ಟನು. (ಮಂ-೧. ಸಿ-೧. ಸೂ-೨. ಆ-೧೦).*

**ಸಮೀಕ್ಷಕ:-** ಭೇಷ್! ಅಪಾರಾಧವಿಲ್ಲದೆ ಖುದಾ ಅವರ ರೋಗವನ್ನು ಹೆಚ್ಚಿಸಿದನು. ದಯೆ ಬಾರಲಿಲ್ಲ. ಆ ಬಡಪಾಯಿಗಳಿಗೆ ಬಹಳ ದುಃಖವಾಗಿರಬಹುದು, ಇದು ಸೈತಾನನನ್ನೂ ಮೀರಿಸುವ ಸೈತಾನತನದ ಕೆಲಸವಲ್ಲವೇ? ಯಾವನಾದರೂ ಒಬ್ಬನ ಮನಸ್ಸಿನ ಮೇಲೆ ಮುದ್ರೆಯೊತ್ತುವುದು, ಯಾವನೋ ಒಬ್ಬನ ರೋಗವನ್ನು ಹೆಚ್ಚಿಸುವುದು ಖುದಾನ ಕೆಲಸವಾಗಿರಲಾರದು; ಏಕೆಂದರೆ, ರೋಗ ಹೆಚ್ಚುವುದು ತನ್ನ ಪಾಪಗಳಿಂದ. (೬)

---

೭೨. ಪ್ರಳಯ, ನ್ಯಾಯಮಾಡಲು, ಸೃಷ್ಟಿಯ ಕೊನೆಯ ದಿನ.

*ಯಾವನು ನಿಮ್ಮ ಸಲುವಾಗಿ ಪೃಥಿವಿಯೆಂಬ ಹಾಸಿಗೆಯನ್ನೂ ಮತ್ತು ಆಕಾಶದ ಚಾವಣಿಯನ್ನೂ ನಿರ್ಮಿಸಿದನೋ.... (ಮಂ-೧. ಸಿ-೧. ಸೂ-೨. ಆ-೨೨)*

**ಸಮೀಕ್ಷಕ:-** ಭಲೇ! ಆಕಾಶ ಯಾವನಿಗಾದರೂ ಚಾವಣಿಯಾಗಬಲ್ಲದೇ ? ಇದು ಅವಿದ್ಯೆಯ ಮಾತು. ಆಕಾಶವನ್ನು ಚಾವಣಿಗೆ ಸಮಾನವೆಂದು ಅಂಗೀಕರಿಸುವುದು ನಗೆಯಾಟದ ಮಾತು. ಯಾವುದಾದರೂ ಪ್ರಕಾರದ ಪೃಥಿವಿಯನ್ನು ಆಕಾಶವೆಂದು ಗ್ರಹಿಸುತ್ತಾರೆಯಾದರೆ, ಅದು ಅವರ ಮನೆಯ ಮಾತು ಮಾತ್ರ. (೭)

*ನಾವು ಯಾವುದನ್ನು ನಮ್ಮ ಪೈಗಂಬರನ ಮೇಲೆ ಇಳಿಸಿದ್ದೇವೋ, ಆ ವಸ್ತುವಿನ ಬಗೆಗೆ ನೀವು ಸಂದೇಹದಲ್ಲಿರುವಿರಾದರೆ, ಅದರಂತಹ ಒಂದು ಸೂರತನ್ನು ತೆಗೆದುಕೊಂಡು ಬನ್ನಿರಿ ಮತ್ತು ಅಲ್ಲಾಹನ ಹೊರತು ನೀವು ಸತ್ಯವಂತರಾಗಿರುವಿರಾದರೆ, ನಿಮ್ಮ ಸಾಕ್ಷಿಗಳನ್ನು ಕರೆಯಿರಿ. ಮತ್ತು ಎಂದಿಗೂ ಮಾಡುವುದಿಲ್ಲವಾದರೆ, ಯಾವುದರ ಕಾಷ್ಠ ಮನುಷ್ಯನೋ, ಆ ಬೆಂಕಿಗೆ ಹೆದರಿರಿ. ಮತ್ತು ಕಾಫಿರರ ಸಲುವಾಗಿ ಕಲ್ಲುಗಳು ಸಿದ್ಧಗೊಳಿಸಲ್ಪಟ್ಟಿವೆ. (ಮಂ-೧. ಸಿ-೧. ಸೂ-೨. ಆ-೨೩, ೨೪)*

**ಸಮೀಕ್ಷಕ:-** ಭಲೇ! ಅದರಂತಹ ಯಾವ ಸೂರತವೂ ಆಗದು - ಎನ್ನುವುದೂ ಕೂಡ ಯಾವುದಾದರೂ ಸಮಸ್ಯೆಯೇ? ಅಕ್ಬರ್ ಬಾದಶಾಹನ ಕಾಲದಲ್ಲಿ ಮೌಲವೀ ಫೈಜೀ ಬಿಂದುವೇ ಇಲ್ಲದ ಕುರಾನನ್ನು ನಿರ್ಮಿಸಿರಲಿಲ್ಲವೇ? ಅದು ಯಾವ ನರಕದ ಬೆಂಕಿ? ಈ ಬೆಂಕಿಗೆ ಹೆದರಬಾರದೇನು? ಇದಕ್ಕೂ ಕೂಡ ಯಾವುದು ಬಿದ್ದರೂ ಅದೆಲ್ಲವೂ ಕಾಷ್ಠವೇ. ಹೇಗೆ ಕುರಾನಿನಲ್ಲಿ ಕಾಫಿರರ ಸಲುವಾಗಿ ಕಲ್ಲುಗಳು ಸಿದ್ಧಪಡಿಸಲ್ಪಟ್ಟಿವೆ-ಎಂದು ಬರೆದಿದೆಯೋ, ಹಾಗೆ ಪುರಾಣಗಳಲ್ಲಿ ಮ್ಲೇಚ್ಛರಿಗಾಗಿ ಘೋರವಾದ ನರಕವಿದೆಯೆಂದು ಬರೆದಿದೆ. ಈಗ ಹೇಳಿರಿ, ಯಾವನ ಮಾತು ಸತ್ಯವೆಂದು ಒಪ್ಪಲ್ಪಡಬೇಕು? ತಮ್ಮ ತಮ್ಮ ವಚನದಿಂದ ಇಬ್ಬರೂ ಸ್ವರ್ಗಗಾಮಿಗಳು; ಮತ್ತು ಅನ್ಯರ ಮತದಿಂದ ಇಬ್ಬರೂ ನರಕಗಾಮಿಗಳಾಗುತ್ತಾರೆ. ಆದುದರಿಂದ, ಇವರೆಲ್ಲರ ಜಗಳವೂ ಸುಳ್ಳಾಗಿದೆ. ಆದರೆ ಯಾರು ಧಾರ್ಮಿಕರಾಗಿದ್ದಾರೋ, ಅವರು ಸುಖವನ್ನೂ, ಮತ್ತು ಯಾರು ಪಾಪಿಗಳಾಗಿದ್ದಾರೋ ಅವರು ಎಲ್ಲ ಮತಗಳಲ್ಲಿಯೂ ದುಃಖವನ್ನೂ ಹೊಂದುವರು. (೮).

*ಮತ್ತು ನಂಬಿಕೆಯನ್ನಿಡುವಂತಹ ಜನರಿಗೆ ಆನಂದದ ಸಂದೇಶವನ್ನು ಕೊಡು ಮತ್ತು ಉತ್ತಮ ಕರ್ಮಮಾಡಿದವರಿಗೆ, ಯಾವುದರ ಕೆಳಗೆ ನಾಲೆಗಳು ಹರಿಯುತ್ತವೋ ಅಂತಹ ಸ್ವರ್ಗಗಳಿವೆ. ಯಾವಾಗ ಅದರೊಳಗಿನಿಂದ ಒಣಹಣ್ಣುಗಳ ಭೋಜನ ಕೊಡಲ್ಪಡುವವೋ, ಆಗ, "ಯಾವವು ನಮಗೆ ಇದಕ್ಕಿಂತ ಮೊದಲು ಕೊಡಲ್ಪಟ್ಟಿದ್ದುವೋ, ಆ ವಸ್ತುಗಳು ಇವು" ಎನ್ನುವರು. ಮತ್ತು ಅವರಿಗಾಗಿ ಪವಿತ್ರರಾದ ನಾರಿಯರು ಸದಾ ಅಲ್ಲಿ ಇರುವವರಾಗಿದ್ದಾರೆ. (ಮಂ-೨. ಸಿ-೧. ಸೂ-೨. ಆ-೨೫).*

**ಸಮೀಕ್ಷಕ :-** ಭಲೇ! ಕುರಾನಿನ ಈ ಸ್ವರ್ಗ ಜಗತ್ತಿಗಿಂತ ಯಾವ ಉತ್ತಮ ವಸ್ತುಯುಕ್ತವಾಗಿದೆ? ಏಕೆಂದರೆ, ಯಾವ ಪದಾರ್ಥಗಳು ಜಗತ್ತನಲ್ಲಿವೆಯೋ, ಅವೇ ಮುಸಲ್ಮಾನರ ಸ್ವರ್ಗದಲ್ಲಿವೆ. ಮತ್ತು ಇಲ್ಲಿ ಹೇಗೆ ಪುರುಷರು ಹುಟ್ಟುತ್ತಾರೋ-ಸಾಯುತ್ತಾರೋ ಮತ್ತು ಬರುತ್ತಾರೋ-ಹೋಗುತ್ತಾರೋ, ಅದೇ ರೀತಿ ಸ್ವರ್ಗದಲ್ಲಿಲ್ಲ - ಎನ್ನುವುದಿಷ್ಟೇ ವಿಶೇಷವಾಗಿದೆ. ಆದರೆ, ಇಲ್ಲಿನ ಸ್ತ್ರೀಯರು ಸದಾ ಇರುವುದಿಲ್ಲ ಮತ್ತು ಅಲ್ಲಿ ಹೆಂಡಿರು, ಎಂದರೆ ಉತ್ತಮ ಸ್ತ್ರೀಯರು ಸದಾ ಕಾಲವೂ ಇರುತ್ತಾರೆ. ಅಂದರೆ, ಎಂದಿನವರೆಗೆ ಕಯಾಮತ್ತಿನ ರಾತ್ರಿ ಬಾರದೋ, ಅವರೆಗೆ ಆ ಬಡಪಾಯಿನಿಯರ ದಿನಗಳು ಹೇಗೆ ಕಳೆಯುತ್ತಿರಬಹುದು? ಅಹುದು; ಖುದಾನ ಕೃಪೆ ಅವತರ ಮೇಲೆ ಆಗುತ್ತಿರಬಹುದೇನೋ? ಮತ್ತು ಖುದಾನ ಆಶ್ರಯದಲ್ಲಿಯೇ ಕಾಲ ಕಳೆಯುತ್ತಿರುವರಾದರೆ ಸರಿ. ಏಕೆಂದರೆ, ಮುಸಲ್ಮಾನರ ಈ ಸ್ವರ್ಗ ಗೋಕುಲೀಯ ಗೋಸಾಯಿಗಳ ಗೋಲೋಕದ ಮತ್ತು ಮಂದಿರದ ಹಾಗೆ ಕಾಣಿಸುತ್ತದೆ. ಏಕೆಂದರೆ, ಅಲ್ಲಿ ಸ್ತ್ರೀಯಿಗೆ ಮಾನ್ಯತೆ ಬಹಳ; ಪುರುಷರಿಗಲ್ಲ. ಹಾಗೆಯೇ ಖುದಾನ ಮನೆಯಲ್ಲಿ ಸ್ತ್ರೀಯರಿಗೆ ಮಾನ್ಯತೆ ಹೆಚ್ಚು ಮತ್ತು ಅವರ ಮೇಲೆ ಖುದಾನ ಪ್ರೇಮವೂ ಕೂಡ ಬಹಳವಾಗಿದೆ; ಪುರುಷರ ಮೇಲೆ ಇಲ್ಲ. ಏಕೆಂದರೆ, ಬೀಬಿಯರನ್ನು ಖುದಾ ಸದಾ ಸ್ವರ್ಗದಲ್ಲಿಟ್ಟಿದ್ದಾನೆ; ಮತ್ತು ಪುರುಷರನ್ನಲ್ಲ! ಆ ಬೇಬಿಯರು ಖುದಾನ ಇಚ್ಛೆಯಿಲ್ಲದ ಸ್ವರ್ಗದಲ್ಲಿ ಹೇಗೆ ಇರಬಲ್ಲರಾಗಿದ್ದರು? ಸಂಗತಿ ಹೀಗೆಯೇ ಇರುವುದಾದರೆ ಖುದಾ ಸ್ತ್ರೀಯರಲ್ಲಿ ಸಿಕ್ಕಿ ಹಾಕಿಕೊಂಡಾನು. (೯).

*ಆದಮನಿಗೆ ಹೆಸರುಗಳನ್ನೆಲ್ಲಾ ಕಲಿಸಿದನು. ಮತ್ತೆ ದೇವತೆಗಳ ಮುಂದೆ ಪ್ರಸ್ತುತಗೊಳಿಸಿ, "ನೀನು ಸತ್ಯವಂತನಾಗಿರುವೆಯಾದರೆ, ನನಗೆ ಅವರ ಹೆಸರುಗಳನ್ನು ಹೇಳು".- ಎಂದನು. "ಓ ಆದಮ್! ಅವರ ಹೆಸರುಗಳನ್ನು ಹೇಳಿಬಿಡು".-ಎಂದನು. ಆಗ ಅವನು ಹೇಳಿಬಿಟ್ಟನು. (ಆಗ ಖುದಾ ದೇವತೆಗಳನ್ನು) "ನಾನು ನಿಮಗೆ*

*ನಿಶ್ಚಯವಾಗಿಯೂ ನಾನು ಪೃಥಿವಿಯ ಮತ್ತು ಆಕಾಶದ ಗುಪ್ತ ವಸ್ತುಗಳನ್ನೂ ಮತ್ತು ಪ್ರಕಟವಾದ ಹಾಗೂ ಗುಪ್ತವಾದ ಕರ್ಮಗಳನ್ನೂ ತಿಳಿಯುತ್ತೇನೆ-ಎಂದು ಹೇಳಲಿಲ್ಲವೋ?"ಎಂದು ಕೇಳಿದನು. (ಮಂ.೧. ಸಿ-೧. ಸೂ-೨. ಆ-೩೧, ೩೩).*

**ಸಮೀಕ್ಷಕ:-** ಓಹೋ! ಹೀಗೆ ದೇವತೆಗಳಿಗೆ ಮೋಸಮಾಡಿ, ತನ್ನ ಹಿರಿಮೆಯನ್ನು ತೋಡಿಕೊಳ್ಳುವುದು ಖುದಾನ ಕೆಲಸವಾಗಬಲ್ಲದೇ? ಇದಂತೂ ಒಂದು ದಂಭದಮಾತು. ಇದನ್ನು ಯಾವ ವಿದ್ವಾಂಸನೂ ಒಪ್ಪಿಕೊಳ್ಳಲಾರನು; ಮತ್ತು ಹೀಗೆ ಅಭಿಮಾನವನ್ನೂ ಪಡುವುದಿಲ್ಲ. ಇಂತಹ ಮಾತುಗಳಿಂದಲೇ ಖುದಾ ತನ್ನ ಸಿದ್ಧಿಯನ್ನು ಬೇರೂರಿಸಲು ಬಯಸುತ್ತಾನೇನು? ಅಹುದು; ಕಾಡುಜನರಲ್ಲಿ ಯಾವನು ಎಂತಹ ಪಾಷಂಡವನ್ನು ಪ್ರಚಲಿತಗೊಳಿಸಿದರೂ ಪ್ರಚಲಿತವಾಗಬಲ್ಲದು; ಸಭ್ಯಜನರಲ್ಲಿ ಅಲ್ಲ. (೧೦)

*ಯಾವಾಗ ನಾವು ದೇವತೆಗಳಿಗೆ "ಬಾಬಾ ಆಮನಿಗೆ ದಂಡವತ್ ಪ್ರಣಾಮ ಮಾಡಿರಿ". ಎಂದು ಹೇಳಿದವೋ, ಆಗ ನೋಡಿದೆ; ಎಲ್ಲರೂ ದಂಡವತ್ ಮಾಡಿದರು. ಆದರೆ, ಸೈತಾನನು ಒಪ್ಪಲಿಲ್ಲ ಮತ್ತು ಅಭಿಮಾನಪಟ್ಟನು. ಏಕೆಂದರೆ, ಅವನೂ ಒಬ್ಬ ಕಾಫಿರನಾಗಿದ್ದನು. (ಮು-೧. ಸಿ-೧. ಸೂ-೨. ಆ-೩೨)*

**ಸಮೀಕ್ಷಕ:-** ಇದರಿಂದ, ಖುದಾ ಸರ್ವಜ್ಞನಲ್ಲ. ಎಂದರೆ, ಭೂತ, ಭವಿಷ್ಯತ್ ಮತ್ತು ವರ್ತಮಾನದ ಪೂರ್ಣ ವಿಷಯಗಳನ್ನು ತಿಳಿದುಕೊಂಡಿಲ್ಲ-ಎಂದು ಗೊತ್ತಾಗುತ್ತದೆ. ತಿಳಿದಿದ್ದರೆ, ಸೈತಾನನ್ನು ಸೃಜಿಸಿದನಾದರೂ ಏತಕ್ಕೆ? ಮತ್ತು ಖುದಾನದಲ್ಲಿ ಸ್ವಲ್ಪ ತೇಜಸ್ಸೂ ಕೂಡ ಇಲ್ಲ. ಏಕೆಂದರೆ, ಸೈತಾನನು ಖುದಾನ ಆಜ್ಞೆಯನ್ನೇ ಪಾಲಿಸಲಿಲ್ಲ ಮತ್ತು ಖುದಾ ಅವನಿಗೆ ಏನನ್ನು ಮಾಡಲೂ ಶಕ್ತನಾಗಲಿಲ್ಲ. ಮತ್ತು ನೋಡಿರಿ! ಒಬ್ಬ ಸೈತಾನ ಕಾಫಿರನು ಖುದಾನ ಮದವನ್ನೂ ಇಳಿಸಿಬಿಟ್ಟನು! ಎಂದ ಮೇಲೆ ಮುಸಲ್ಮಾನರ ಕಥನಾನುಸಾರವಾಗಿ ಬೇರೆ ಕೋಟ್ಯಂತರ ಕಾಫಿರರು ಎಲ್ಲಿದ್ದಾರೋ, ಅಲ್ಲಿ ಮುಸಲ್ಮಾನರ ಖುದಾನ ಮತ್ತು ಮುಸಲ್ಮಾನರ ಗತ್ತು ಏನು ನಡೆದೀತು?[೮] ಒಂದೊಂದು ಸಾರಿ ಖುದಾ ಕೂಡ ಯಾವನದಾದರೂ ರೋಗವನ್ನು ಹೆಚ್ಚಿಸಿಬಿಡುತ್ತಾನೆ; ಯಾವನನ್ನಾದರೂ ಪಥಭ್ರಷ್ಟನನ್ನಾಗಿ ಮಾಡಿಬಿಡುತ್ತಾನೆ. ಖುದಾ ಈ ವಿಷಯವನ್ನು ಸೈತಾನನಿಂದ ಕಲಿತಿರಬಹುದು ಮತ್ತು ಸೈತಾನನು ಖುದಾನಿಂದ. ಏಕೆಂದರೆ, ಖುದಾನ ಹೊರತು ಸೈತಾನನ ಉಪಾಧ್ಯಾಯನು ಮತ್ತಾವನೂ ಆಗಲಾರನು. (೧೧).

ನಾವು - "*ಓ ಆದಮ್! ನೀನು ಮತ್ತು ನಿನ್ನ ಹೆಂಡತಿ ಸ್ವರ್ಗದಲ್ಲಿದ್ದು, ಆನಂದದಿಂದ ಎಲ್ಲಿ ಬೇಕೋ ಅಲ್ಲಿ ತಿನ್ನಿರಿ. ಆದರೆ, ಹೋಗಬೇಡಿರಿ ಆ ವೃಕ್ಷದ ಬಳಿಗೆ; ಪಾಪಿಗಳಾಗಿ ಹೋದೀರಿ!*" ಎಂದೆವು. *ಸೈತಾನನು ಅವರನ್ನು ಚಂಚಲಗೊಳಿಸಿದನು* ಮತ್ತು ಅವರನ್ನು *ಸ್ವರ್ಗದ ಆನಂದದಿಂದ ವಂಚಿಸಿದನು. ಆಗ ನಾವು* - "ಇಳಿಯರಿ, ನಿಮ್ಮ ಮಧ್ಯೆ ಯಾರೋ ಪರಸ್ಪರ ಶತ್ರುಗಳಿದ್ದಾರೆ. ನಿಮ್ಮ ನೆಲೆ ಪೃಥಿವಿಯಾಗಿದೆ ಮತ್ತು ಒಂದು ಅವಧಿಯವರೆಗೆ ಲಾಭವಿದೆ" - ಎಂದೆವು. ಆದಮನು ತನ್ನ ಸ್ವಾಮಿಯಿಂದ ಹಲಮಾತುಗಳನ್ನು ಕಲಿತು, ಪೃಥಿವಿಗೆ ಬಂದು ಬಿಟ್ಟನು. *(ಮಂ-೧, ಸಿ-೧, ಸೂ-೨, ಆ:- ೩೫, ೩೭)*

**ಸಮೀಕ್ಷಕ:-** ಈಗ ನೋಡಿರಿ ಖುದಾನ ಅಲ್ಪಜ್ಞತ್ವವನ್ನು. ಈಗ ತಾನೇ ಸ್ವರ್ಗದಲ್ಲಿರುವಂತೆ ಆಶೀರ್ವಾದವಿತ್ತನು. ಮತ್ತು ಪುನಃ ಸ್ವಲ್ಪ ಹೊತ್ತಿನಲ್ಲಿ **"ಹೊರಡು"** ಎಂದನು. ಭವಿಷ್ಯತ್ತಿನ ಮಾತುಗಳನ್ನು ತಿಳಿದವನಾಗಿದ್ದರೆ, ವರವನ್ನು ತಾನೇ ಏಕೆ ಕೊಡುತ್ತಿದ್ದನು? ಮತ್ತು ಪಥಭ್ರಷ್ಟಗೊಳಿಸುವ ಸೈತಾನನಿಗೆ ಶಿಕ್ಷೆಕೊಡುವುದರಲ್ಲಿ ಅಸಮರ್ಥನಾಗಿಯೂ ಕಾಣಿಸುತ್ತಾನೆ. ಮತ್ತು ಆ ವೃಕ್ಷವನ್ನು ಏತಕ್ಕಾಗಿ ಉತ್ಪನ್ನಮಾಡಿದ್ದನು? ತನಗಾಗಿಯೋ ಅಥವಾ ಅನ್ಯರಿಗಾಗಿಯೋ? ಬೇರೆಯವರಿಗಾಗಿ ಇದ್ದರೆ, ನಿರೋಧಿಸಿದನೇತಕ್ಕೆ? ಆದಕಾರಣ, ಇಂತಹ ಮಾತುಗಳು ಖುದಾನದಾಗಿರಲಾರವು; ಮತ್ತು ಅವನು ರಚಿಸಿದ ಪುಸ್ತಕದಲ್ಲಿ ಇರಲಾರವು. ಆದಮ್ ಸಾಹೇಬರು ಖುದಾನಿಂದ ಎಷ್ಟು ಮಾತುಗಳನ್ನು ಕಲಿತುಕೊಂಡು ಬಂದರು? ಮತ್ತು ಪೃಥಿವಿಗೆ ಹೇಗೆ ಬಂದರು? ಆ ಸ್ವರ್ಗ

೮. ಸಂಘಟನಾ ರಹಿತರಾದ ಮತ್ತು ಪರಕೀಯರ ತೇಜೋವಧೆಗೀಡಾದ ಹಿಂದುಗಳನ್ನು ಹುರಿದುಂಬಿಸಲು ಮುಸಲ್ಮಾನರ ಕುರಾನಿನ ಆಧಾರವನ್ನು ತೆಗೆದುಕೊಂಡೇ ಮಹರ್ಷಿ ದಯಾನಂದರು ಎಂತಹ ತೇಜಸ್ವೀ ದೃಷ್ಟಾಂತವನ್ನು ಇಲ್ಲಿ ಕೊಟ್ಟಿದ್ದಾರೆಂಬುದನ್ನು ಗಮನಿಸಿರಿ. ಸ್ವಾತಂತ್ರ್ಯ ಯೋಧರಾದ ಬಿಪಿನ್ ಚಂದ್ರ ಪಾಲರು ವಿರಾಟ್ ಸಭೆಯೊಂದರಲ್ಲಿ ಮಾತನಾಡುತ್ತಾ- "ಬ್ರಿಟಿಷರಿಗೆ ಏಕೆ ಹೆದರುತ್ತೀರಿ? ನಮ್ಮ ಮುಂದೆ ಅವರೇನು? ನಲ್ವತ್ತುಕೋಟಿ ಜನ ಭಾರತೀಯರು ಒಮ್ಮೆಲೆ ಬ್ರಿಟಿಷ್ ದ್ವೀಪಗಳ ಮೇಲೆ ಉಗುಳಲಾರಂಭಿಸಿದರೆ, ಆ ದ್ವೀಪಗಳು ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿಹೋಗುವವು" ಎಂದು ಹೇಳಿದ್ದರು.

ಪರ್ವತದ ಮೇಲಿದೆಯೋ ಅಥವಾ ಆಕಾಶದ ಮೇಲೆಯೋ? ಅದರಿಂದ ಹೇಗೆ ಇಳಿದು ಬಂದರು? ಪಕ್ಷಿಯಂತೆ ಹಾರಿ ಬಂದರೋ? ಅಥವಾ ಮೇಲಿನಿಂದ ಜಾರಿದ ಕಲ್ಲಿಂತೆ ಬಿದ್ದರೋ ಅಲ್ಲದೆ, ಆದಮ್ ಸಾಹೇಬರು ಮಣ್ಣಿನಿಂದ ನಿರ್ಮಿಸಲ್ಪಟ್ಟರು ಎಂದಾಗ, ಇವರ ಸ್ವರ್ಗದಲ್ಲಿಯೂ ಮಣ್ಣು ಇರಬೇಕು–ಎಂದು ವಿದಿತವಾಗುತ್ತದೆ. ಮತ್ತು ಎಷ್ಟು ಜನ ಅಲ್ಲಿ ಇನ್ನೂ ಇದ್ದಾರೋ, ಆ ದೇವತೆಗಳು ಮೊದಲಾದವರೂ ಮಣ್ಣಿನಿಂದಲೇ ಆಗಿದ್ದಾರು. ಏಕಂದರೆ, ಮಣ್ಣಿನ ಶರೀರವಿಲ್ಲದೆ, ಇಂದ್ರಿಯಭೋಗ ಆಗಲಾರದು. ಪಾರ್ಥಿವ ಶರೀರವಿರುವಾಗ, ಮೃತ್ಯುವೂ ಅವಶ್ಯವಾಗಿ ಇರಬೇಕು. ಮೃತ್ಯವಾಗುವುದಿಲ್ಲವಾದರೆ, ಅವರು ಅಲ್ಲಿಂದ ಎಲ್ಲಿಗೆ ಹೋಗುತ್ತಾರೆ. ಮತ್ತು ಮೃತ್ಯುವಾಗುವುದಿಲ್ಲವಾದರೆ, ಅವರ ಜನ್ಮವೂ ಕೂಡ ಆಗಲಿಲ್ಲ. ಜನ್ಮವಿರುವಾಗ, ಮೃತ್ಯವೂ ಅವಶ್ಯವಾಗಿ ಇದೆ. ಹೀಗಿರುವುದಾದರೆ, ಬೀಬಿಯರು ಸರ್ವದಾ ಸ್ವರ್ಗದಲ್ಲಿದ್ದಾರೆ–ಎಂದು ಕುರಾನ್ ನಲ್ಲಿ ಬರೆದಿದೆ. ಅದು ಸುಳ್ಳಾಗಿ ಹೋಗುವುದು. ಏಕೆಂದರೆ, ಅವರ ಮೃತ್ಯವೂ ಅವಶ್ಯವಾಗಿ ಆಗುವುದು. ಹೀಗಿರುವಾಗ, ಸ್ವರ್ಗಕ್ಕೆ ಹೋಗುವವರ ಮೃತ್ಯವೂ ಅವಶ್ಯವಾಗಿ ಆಗುವುದು. (೧೨)

*ಎಂದು ಯಾವ ಜೀವನೂ ಯಾವ ಜೀವನ ಮೇಲೆಯೂ ಭರವಸೆಯನ್ನಿಡನೋ, ಅವನ ಪರವಾಗಿ ನುಡಿದ ಒತ್ತಾಸೆಯ ಮಾತೂ ಸ್ವೀಕರಿಸಲ್ಪಡುವುದಿಲ್ಲವೋ, ಮತ್ತು ಮುಯ್ಯಿಯೂ ತೀರಿಸಿಕೊಳ್ಳಲ್ಪಡುವುದಿಲ್ಲವೋ, ಮತ್ತು ಸಹಾಯವನ್ನೂ ಪಡೆದುಕೊಳ್ಳರೋ, ಆ ದಿವಸಕ್ಕೆ ಅಂಜಿರಿ. (ಮಂ–೧, ಸಿ–೧, ಸೂ–೨. ಆ–೪೮)*

**ಸಮೀಕ್ಷಕ:–** ಈಗಿನ ದಿನಗಳಿಗೆ ಹೆದರಬಾರದೇನು? ಕೇಡನ್ನು ಮಾಡಲು ಎಲ್ಲ ದಿನಗಳಲ್ಲಿಯೂ ಹೆದರಬೇಕು. ಯಾವಾಗ ಒತ್ತಾಸೆ ಅಂಗೀಕರಿಸಲ್ಪಡುವುದಿಲ್ಲವೋ, ಆಗ ಮತ್ತೆ, ಪೈಗಂಬರರ ಸಾಕ್ಷ್ಯದಿಂದ ಅಥವಾ ಒತ್ತಾಸೆಯಿಂದ ಖುದಾ ಸ್ವರ್ಗವನ್ನು ಕೊಡುವನು ಎಂಬ ಮಾತು ಹೇಗೆ ಸತ್ಯವಾಗಬಲ್ಲದು? ಖುದಾ ಸ್ವರ್ಗದವರಿಗೆ ಮಾತ್ರವೇ ಸಹಾಯಕನೇನು? ನರಕದವರಿಗೆ ಅಲ್ಲವೇನು? ಹೀಗಿರುವುದಾದರೆ, ಖುದಾ ಪಕ್ಷಪಾತಿಯಾಗಿದ್ದಾನೆ. (೧೩)

*ನಾವು ಮೋಸೆಸನಿಗೆ ಪುಸ್ತಕವನ್ನೂ, ಚಮತ್ಕಾರಗಳನ್ನೂ ಕೊಟ್ಟೆವು. ನಾವು ಅವರಿಗೆ –"ನೀವು ನಿಂದಿತರಾದ ಕಪಿಗಳಾಗಿ ಹೋಗಿರಿ".–ಎಂದು ಹೇಳಿದೆವು. ಯಾರು ಅವರ ಮುಂದೆ ಮತ್ತು ಹಿಂದೆಯಿದ್ದರೋ, ಅವರಿಗೆ ಇದೊಂದು ಭಯವನ್ನು ಹುಟ್ಟಿಸಿದೆವು ಮತ್ತು ನಂಬಿಕೆಯನ್ನುಳ್ಳವರಿಗೆ ಶಿಕ್ಷಣವನ್ನಿತ್ತೆವು. (ಮಂ–೧, ಸಿ–೧, ಸೂ–೨, ಆ–೫೩, ೬೫,೬೬)*

**ಸಮೀಕ್ಷಕ :–** ಮೋಸೆಸನಿಗೆ ಪುಸ್ತಕಗಳನ್ನು ಕೊಟ್ಟನಾದರೆ, ಕುರಾನಿನ ಇರುವಿಕೆ ನಿರರ್ಥಕವಾಗಿದೆ. ಮತ್ತು ಅವನಿಗೆ ಆಶ್ಚರ್ಯಕರ ಶಕ್ತಿಯನ್ನು ಕೊಟ್ಟನೆಂದು ಬೈಬಲ್ ಮತ್ತು ಕುರಾನ್ ನಲ್ಲಿಯೂ ಬರೆದಿದೆ. ಆದರೆ–ಈ ಮಾತು ಒಪ್ಪಲು ಯೋಗ್ಯವಾಗಿಲ್ಲ. ಏಕೆಂದರೆ, ಹಾಗೆ ಆಗಿದ್ದ ಪಕ್ಷದಲ್ಲಿ, ಈಗಲೂ ಆಗುತ್ತಿತ್ತು. ಈಗ ಆಗುವುದಿಲ್ಲವಾದುದರಿಂದ ಮೊದಲೂ ಕೂಡ ಆಗಿರಲಿಲ್ಲ. ಸ್ವಾರ್ಥಿ ಜನರು ಈ ದಿನಗಳಲ್ಲಿಯೂ ಕೂಡ ಅವಿದ್ವಾಂಸರ ಮುಂದೆ ವಿದ್ವಾಂಸರಾಗಿ ತೋರಿಸಿಕೊಳ್ಳುವಂತೆ, ಆ ಕಾಲದಲ್ಲಿಯೂ ಕಪಟಗಳನ್ನು ಮಾಡಿರಬಹುದು. ಏಕೆಂದರೆ, ಖುದಾ ಮತ್ತು ಅವನ ಸೇವಕರು ಈಗಲೂ ವಿದ್ಯಮಾನರಾಗಿದ್ದಾರೆ. ಮತ್ತೆ ಈಗ ಖುದಾ ಆಶ್ಚರ್ಯಶಕ್ತಿಯನ್ನೇಕೆ ಕೊಡುವುದಿಲ್ಲ? ಮತ್ತು (ಆಶ್ಚರ್ಯ ಕರ್ಮಗಳನ್ನು) ಮಾಡಲಾರರೇಕೆ? ಮೋಸೆಸನಿಗೆ ಪುಸ್ತಕವನ್ನು ಕೊಟ್ಟಿದ್ದನಾದರೆ ಮತ್ತೆ ಕುರಾನನ್ನು ಕೊಡುವುದು ಆವಶ್ಯಕವಾಗಿತ್ತೇ? ಏಕೆಂದರೆ, ಒಳಿತುಗಳನ್ನು ಮಾಡಬೇಕು; ಕೆಡಕುಗಳನ್ನು ಮಾಡಬಾರದು–ಎಂಬ ಉಪದೇಶಗಳು ಎಲ್ಲೆಡೆಯೂ ಒಂದೇ ಬಗೆಯದಿರುವುದಾದರೆ, ಪುನಃ ಬೇರೆ ಬೇರೆ ಪುಸ್ತಕಗಳನ್ನು ರಚಿಸುವುದರಿಂದ ಪುನರುಕ್ತದೋಷ ಉಂಟಾಗುತ್ತದೆ. ಮೋಸೆಸ್ ಮೊದಲಾದವರಿಗೆ ಕೊಟ್ಟ ಪುಸ್ತಕದಲ್ಲಿ ಖುದಾ(ಏನನ್ನಾದರೂ) ಮರೆತುಬಿಟ್ಟಿದ್ದನೇನು? ಖುದಾ ಕೇವಲ ಭಯವನ್ನು ಹುಟ್ಟಿಸುವುದಕ್ಕಾಗಿ ನಿಂದಿತ ಮಂಗಗಳಾಗುವ ಮಾತನ್ನು ಹೇಳಿದ್ದನಾದರೆ, ಅವನ ಹೇಳಿಕೆ ಸುಳ್ಳಾಯಿತು ಅಥವಾ ಛಲವನ್ನು ಮಾಡಿದನು. ಇಂತಹ ಮಾತುಗಳನ್ನಾಡುವವನು ದೇವರೂ ಅಲ್ಲ; ಇಂತಹ ಮಾತುಗಳನ್ನುಳ್ಳ ಪುಸ್ತಕ ಖುದಾ ರಚಿಸಿದುದೂ ಆಗಿರಲಾರದು. (೧೪).

*ಈ ರೀತಿ ಖುದಾ ಶವಗಳನ್ನು ಸಜೀವಗೊಳಿಸುತ್ತಾನೆ ಮತ್ತು ನಿಮಗೆ, ನೀವು ತಿಳಿದುಕೊಳ್ಳಲಿ–ಎಂದು ತನ್ನ ಚಿಹ್ನೆಗಳನ್ನು ತೋರಿಸುತ್ತಾನೆ. (ಮಂ–೧, ಸಿ–೧, ಸೂ–೨ ಆ–೭೩)*

**ಸಮೀಕ್ಷಕ:–** ಖುದಾ ಶವಗಳನ್ನು ಸಜೀವಗೊಳಿಸುತ್ತಿದ್ದನಾದರೆ, ಈಗ ಏತಕ್ಕೆ ಸಜೀವಗೊಳಿಸುವುದಿಲ್ಲ? ಕಯಾಮತ್ತಿನ ರಾತ್ರಿಯವರೆಗೆ ಗೋರಿಗಳಲ್ಲಿ ಬಿದ್ದಿರುವರೇನು? ಈ ದಿನಗಳಲ್ಲಿ 'ವಿಚಾರಾಧೀನ ಸ್ಥಿತಿ'ಯೋ? ಈಶ್ವರನ ಚಿಹ್ನೆಗಳು ಇಷ್ಟು

ಮಾತ್ರವೇ ಏನು? ಪೃಥಿವೀ, ಸೂರ್ಯ, ಚಂದ್ರ-ಮೊದಲಾದವು ಚಿಹ್ನೆಗಳಲ್ಲವೇನು? ಜಗತ್ತಿನಲ್ಲಿ ಯಾವ ವಿಧದ ರಚನಾವಿಶೇಷಗಳು ಪ್ರತ್ಯಕ್ಷವಾಗಿ ಕಾಣಿಸುತ್ತಿವೆಯೋ, ಈ ಚಿಹ್ನೆಗಳು ಕಡಿಮೆಯಾಗಿವೆ ಏನು ? (೧೫)

*ಅವರು ಸದಾ ಕಾಲಕ್ಕೂ ಸ್ವರ್ಗದಲ್ಲಿ, ಎಂದರೆ ವೈಕುಂಠದಲ್ಲಿ ವಾಸಮಾಡುವವರಾಗಿದ್ದಾರೆ. (ಮಂ-೧, ಸಿ-೧, ಸೂ-೨, ಆ-೮೨)*

**ಸಮೀಕ್ಷಕ:-** ಯಾವ ಜೀವನೂ ಅನಂತವಾದ ಪಾಪ-ಪುಣ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದುದರಿಂದ, ಸರ್ವದಾ ಸ್ವರ್ಗದಲ್ಲಿ ಅಥವಾ ನರಕದಲ್ಲಿ ಇರಲಾರರು. ಮತ್ತು ಖುದಾ ಹೀಗೆ ಮಾಡುವುದಾದರೆ, ಅವನು ಅನ್ಯಾಯಕಾರಿಯೂ ಮತ್ತು ಅವಿದ್ವಾಂಸನೂ ಆಗಿ ಹೋಗುವನು. ಕಯಾಮತ್ತಿನ ರಾತ್ರಿ ನ್ಯಾಯ ತೀರ್ಮಾನವಾಗುವುದಾದರೆ, ಮಾನವರ ಪಾಪ-ಪುಣ್ಯಗಳು ಸಮವಾಗಿಯೇ ಇರಬೇಕಾದುದು ಉಚಿತವಾಗಿರುತ್ತದೆ. ಅನಂತವಲ್ಲದುದರ ಫಲ ಅನಂತವಾಗಬಲ್ಲದಾದರೂ ಹೇಗೆ? ಮತ್ತು, ಸೃಷ್ಟಿಯಾಗಿ ಏಳೆಂಟು ಸಾವಿರ ವರ್ಷಗಳ ಈಚೆಗೇ ಆಗಿದೆಯೆಂದು ಹೇಳುತ್ತಾರೆ. ಇದಕ್ಕೆ ಮೊದಲು ಖುದಾ ನಿಷ್ಕರ್ಮನಾಗಿ ಕುಳಿತಿದ್ದನೇ? ಮತ್ತು ಕಯಾಮತ್ತಿನ ನಂತರವೂ ಕೂಡ ನಿಷ್ಕರ್ಮನಾಗಿರುವನೇ? ಈ ಮಾತುಗಳೆಲ್ಲವೂ ಬಾಲಕರದರಹಾಗೆ ಇವೆ. ಏಕೆಂದರೆ, ಪರಮೇಶ್ವರನ ಕಾರ್ಯಗಳು ಸರ್ವದಾ ಪ್ರಚಲಿತವಾಗಿರುತ್ತವೆ. ಮತ್ತು ಯಾವನ ಪಾಪಪುಣ್ಯಗಳು ಎಷ್ಟಿರುತ್ತವೋ, ಅಷ್ಟೇ ಫಲವನ್ನು ಕೊಡುತ್ತಾನೆ. ಆದುದರಿಂದ, ಕುರಾನಿನ ಈ ಮಾತು ಸತ್ಯವಲ್ಲ. (೧೬).

*ನಾವು ನಿಮ್ಮಿಂದ "ಪರಸ್ಪರ ರಕ್ತವನ್ನು ಹರಿಸಬಾರದು; ಮತ್ತು ಪರಸ್ಪರ ನಿಮ್ಮವನಾವನನ್ನೂ ಮನೆಯಿಂದ ಹೊರಹೊರಡಿಸಬಾರದು".- ಎಂದು ಪ್ರತಿಜ್ಞೆ ಮಾಡಿಸಿದೆವು; ಆಗ ಪ್ರತಿಜ್ಞೆಯನ್ನು ಮಾಡಿದಿರಿ ನೀವು; ಇದಕ್ಕೆ ನೀವೇ ಸಾಕ್ಷಿಗಳಾಗಿದ್ದೀರಿ. ಆದರೂ, ಪರಸ್ಪರ ತಮ್ಮವರನ್ನೇ ಸಾಯಿಸುವ ಜನರು ನೀವಾಗಿದ್ದೀರಿ; ನಿಮ್ಮಲ್ಲಿಯೇ ಒಂದು ಗುಂಪಿನವರನ್ನು ಅವರ ಮನೆಯಿಂದ ಓಡಿಸಿ[೯] ಬಿಡುತ್ತೀರಿ. (ಮಂ-೧, ಸಿ-೧, ಸೂ-೨, ಆ-೮೪-೮೫)*

**ಸಮೀಕ್ಷಕ :-** ಭೇಷ್! ಪ್ರತಿಜ್ಞೆಯನ್ನು ಮಾಡಿಸುವುದು ಮತ್ತು ಮಾಡುವುದು ಅಲ್ಪಜ್ಞರ ವಿಷಯವೋ ಅಥವಾ ಪರಮಾತ್ಮನದೋ? ಪರಮೇಶ್ವರನು ಸರ್ವಜ್ಞನಾಗಿರುವಾಗ, ಕೇವಲ ವ್ಯಾವಹಾರಿಕ ಸಂಸಾರೀ ಮನುಷ್ಯನಿಗೆ ಸಮನಾಗಿ ಹೀಗೇಕೆ ವರ್ತಿಸುವನು? ಭಲೇ! ತಮ್ಮ ತಮ್ಮಲ್ಲಿ ರಕ್ತಪಾತ ಮಾಡಬಾರದು. ತಮ್ಮ ಮತದವರನ್ನು ಮನೆಯಿಂದ ಹೊರದೂಡಬಾರದು- ಎನ್ನುವುದು ಯಾವ ಮಹಾ ಒಳ್ಳೆಯ ಮಾತು? ಎಂದರೆ, ಬೇರೆಯ ಮತದವರ ರಕ್ತವನ್ನು ಹರಿಸಬಹುದೇ? ಮತ್ತು ಮನೆಯಿಂದ ದೂಡಿಬಿಡಬಹುದೇ? ಇದು ಮಿಥ್ಯೆ ; ಮೂರ್ಖತ್ವದ ಮತ್ತು ಪಕ್ಷಪಾತದ ಮಾತು. ಪರಮೇಶ್ವರನು ಮೊದಲೇ "ಇವರು ಪ್ರತಿಜ್ಞೆಗೆ ವಿರುದ್ಧವಾಗಿ ನಡೆಯುವವರು"ಎಂದು ತಿಳಿದುಕೊಂಡಿರಲಿಲ್ಲವೇ? ಇದರಿಂದ, ಮುಸಲ್ಮಾನರ ಖುದಾ ಕೂಡ ಕ್ರೈಸ್ತರ ಸಂಗಡ ಬಹಳ ಸಾಧರ್ಮ್ಯಹೊಂದಿದ್ದಾನೆಂದು ವಿದಿತವಾಗುತ್ತದೆ. ಮತ್ತು ಈ ಕುರಾನ್ ಸ್ವತಂತ್ರವಾಗಿರಲಾರದು; ಏಕೆಂದರೆ, ಇದರಲ್ಲಿ ಸ್ವಲ್ಪ ಮಾತುಗಳನ್ನು ಬಿಟ್ಟು, ಉಳಿದ ಮಾತುಗಳೆಲ್ಲವೂ ಬೈಬಲಿನವೇ[೧೦] ಆಗಿವೆ. (೧೭).

*ಪರಲೋಕಕ್ಕೆ ಪ್ರತಿಯಾಗಿ ಈ ಲೋಕದ ಜೀವನವನ್ನು ಕೊಂಡುಕೊಂಡ ಜನರು ಇವರು. ಅವರೊಂದಿಗೆ ಪಾಪವೆಂದಿಗೂ ಹಗುರವಾಗಿ ಮಾಡಲ್ಪಡುವುದಿಲ್ಲ; ಮತ್ತು ಅವರಿಗೆ ಸಹಾಯವೂ ಕೊಡಲ್ಪಡುವುದಿಲ್ಲ. (ಮಂ-೧. ಸಿ-೧. ಸೂ-೨. ಆ-೮೬).*

**ಸಮೀಕ್ಷಕ :-** ಆಹಾ! ಇಂತಹ ಈರ್ಷ್ಯಾದ್ವೇಷದ ಮಾತುಗಳು ಎಂದಿಗಾದರೂ ಈಶ್ವರನ ಕಡೆಯಿಂದ ಬರಬಲ್ಲವೇ? ಯಾವ ಜನರ ಪಾಪಗಳು ಹಗುರವಾಗಿ ಮಾಡಲ್ಪಡುವುವೋ ಅಥವಾ ಯಾರಿಗೆ ಸಹಾಯ ಕೊಡಲ್ಪಡುವುದೋ, ಅವರು ಯಾರು? ಅವರು ಪಾಪಿಗಳಾಗಿರುವರಾದರೆ ಮತ್ತು ಪಾಪಗಳಿಗಾಗಿ ಶಿಕ್ಷೆಯನ್ನು ಕೊಡದೆಯೇ ಅವು ಹಗುರ ಮಾಡಲ್ಪಡುವವಾದರೆ, ಅನ್ಯಾಯವಾಗುವುದು. ಶಿಕ್ಷೆಯನ್ನಿತ್ತು ಹಗುರಮಾಡಲ್ಪಡುವವಾದರೆ, ಯಾರ ವರ್ಣನೆ ಈ ಆಯತ್ತಿನಲ್ಲಿದೆಯೋ, ಅವರೂ ಕೂಡ ಶಿಕ್ಷೆಯನ್ನು ಪಡೆದು ಹಗುರವಾಗಬಲ್ಲರು. ಮತ್ತು ಶಿಕ್ಷೆಯನ್ನು ಕೊಟ್ಟೂ ಕೂಡ

---

೯. ಈ ಆಯತ್ತು ಮುಹಮದ್ ಸಾಹೇಬರ ಜೀವನದ ಘಟನೆಯ ಸಂಕೇತ ಮಾಡುತ್ತಿದೆ. ಮುಂದೆ ಈ ತರಹದ ಆಯತ್ತುಗಳನ್ನು ಎಲ್ಲರೂ ಗಮನಿಸಬಹುದು. ಇವಕ್ಕೆ ಖುದಾನ ಪ್ರೇರಣೆ ಅನಾವಶ್ಯಕ.

೧೦. ಇದು ಕ್ರೈಸ್ತರೂ, ಮುಸಲ್ಮಾನರೂ ಮತ್ತು ಹಿಂದೂಗಳು ಗಮನಿಸಬೇಕಾದ ವಿಷಯ...

ಹಗುರವಾಗಿ ಮಾಡಲ್ಪಡರಾದರೆ, ಆಗಲೂ ಕೂಡ ಅನ್ಯಾಯವಾಗುವುದು. ಪಾಪಗಳಿಂದ ಹಗುರಮಾಡಲ್ಪಡುವವರು– ಎಂಬುದರ ತಾತ್ಪರ್ಯ ಧರ್ಮಾತ್ಮರು – ಎಂದಾದರೆ, ಅವರ ಪಾಪಗಳಂತೂ ಸ್ವತಃ ಹಗುರವಾಗಿರುತ್ತವೆ; ಖುದಾ ಏನು ಮಾಡುವನು? ಆದುದರಿಂದ, ಈ ಬರೆಹ ವಿದ್ವಾಂಸನದಲ್ಲ. ಮತ್ತು ವಾಸ್ತವವಾಗಿ ಧಾರ್ಮಿಕರಿಗೆ ಸುಖವೂ ಮತ್ತು ಅಧಾರ್ಮಿಕರಿಗೆ ದುಃಖವೂ ಅವರ ಕರ್ಮಗಳಿಗನುಸಾರ ಸರ್ವದಾ ಲಭಿಸಬೇಕು. (೧೮)

*ನಿಶ್ಚಯವಾಗಿ ನಾವು ಮೋಸೆಸನಿಗೆ ಪುಸ್ತಕವನ್ನು ಕೊಟ್ಟೆವು ಮತ್ತು ಅವನ ನಂತರ ನಾವು ಪೈಗಂಬರನನ್ನು ತಂದೆವು. ಮತ್ತು ಮೇರಿಯ ಪುತ್ರನಾದ ಏಸುವಿಗೆ ಸ್ಪಷ್ಟವಾಗಿ ಚಮತ್ಕಾರಗಳನ್ನು, ಎಂದರೆ ದೈವೀಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ಕೊಟ್ಟೆವು. ರೂಹ್–ಉಲ್–ಕುದ್ಸ್*[೧೧] *(ಗೇಬ್ರಿಯಲ್)ನ ಸಂಗಡ, ತನ್ನೊಂದಿಗೆ ನಿಮ್ಮ ಹೃದಯವು ಅಪೇಕ್ಷಿಸದ ವಸ್ತು ಸಹಿತ ಪೈಗಂಬರನು ಬಂದಾಗ, ನೀವು ಮತ್ತೆ ದುರಭಿಮಾನವನ್ನು ತೋರಿಸಿದಿರಿ. ಒಂದು ಮತವನ್ನು ಸುಳ್ಳಾಗಿಸಿದರಿ; ಮತ್ತು ಒಂದನ್ನು ನಾಶಮಾಡಿಬಿಡುತ್ತೀರಿ. (ಮಂ–೧. ಸಿ–೧. ಸೂ–೨. ಆ–೮೭).*

**ಸಮೀಕ್ಷಕ :–** ಕುರಾನಿನಲ್ಲಿ ಮೋಸೆಸನಿಗೆ ಪುಸ್ತಕವನ್ನ ಕೊಟ್ಟೆವು – ಎಂದು ಸಾಕ್ಷ್ಯವಿರುವಾಗ, ಅದನ್ನು ಅಂಗೀಕರಿಸುವುದು ಮುಸಲ್ಮಾನರಿಗೆ ಆವಶ್ಯಕವಾಯಿತು. ಮತ್ತು ಆ ಪುಸ್ತಕದಲ್ಲಿ ಯಾವ ಯಾವ ದೋಷಗಳಿವೆಯೋ, ಅವೆಲ್ಲವೂ ಮುಸಲ್ಮಾನರ ಮತಕ್ಕೆ ಬಂದು ಬಿದ್ದವು. ಮತ್ತು ಚಮತ್ಕಾರಗಳು, ಎಂದರೆ ದೈವೀಶಕ್ತಿಯ ಮಾತುಗಳು ಎಲ್ಲವೂ ತೋರಿಕೆಗಳಾಗಿವೆ; ಮುಗ್ಧ ಮಾನವರನ್ನು ಪಥಬ್ರಷ್ಟರನ್ನಾಗಿ ಮಾಡಲು ಸುಳ್ಳು ಸುಳ್ಳೇ ಪ್ರಚಲಿತಗೊಳಿಸಿಕೊಂಡಿದ್ದಾರೆ. ಆ ಸಮಯದಲ್ಲಿ ಚಮತ್ಕಾರಗಳು ಇದ್ದುವಾದರೆ, ಈ ಸಮಯದಲ್ಲಿ ಏಕಿಲ್ಲ? ಈ ಸಮಯದಲ್ಲಿ ಇಲ್ಲವಾಗಿರುವಾಗ, ಆ ಸಮಯದಲ್ಲಿಯೂ ಇರಲಿಲ್ಲ. ಇದರಲ್ಲೇನೂ ಸಂದೇಹವಿಲ್ಲ. (೧೯).

*ಮತ್ತು ಇದಕ್ಕಿಂತ ಮೊದಲು ಕಾಫಿರರ ಮೇಲೆ ವಿಜಯವನ್ನು ಬಯಸುತ್ತಿದ್ದೆವು. ಅವರು ಕಂಡುಕೊಂಡಿದ್ದುದು ಅವರ ಬಳಿ ಬಂದಾಗ, ಕೂಡಲೇ ಅವರು 'ಕಾಫಿರ'ರಾಗಿ ಹೋದರು. ಕಾಫಿರರ ಮೇಲೆ ಅಲ್ಲಾಹನ ಅಭಿಶಾಪವಿದೆ. (ಮ–೧. ಸಿ–೧. ಸೂ–೨. ಆ–೮೯)*

**ಸಮೀಕ್ಷಕ:–** ಹೇಗೆ ನೀವು ಅನ್ಯಮತೀಯರನ್ನು ಕಾಫಿರರೆನ್ನುತ್ತೀರೋ, ಹಾಗೆ ಅವರು ನಿಮ್ಮನ್ನು ಕಾಫಿರರೆನ್ನುವುದಿಲ್ಲವೇ?[೧೨] ಮತ್ತು ಅವರು ತಮ್ಮ ಮತದ ದೇವರ ಕಡೆಯಿಂದ ಧಿಕ್ಕಾರವನ್ನು ಕೊಡುತ್ತಾರೆ. ಮತ್ತೆ ಹೇಳಿರಿ, ಯಾವನು ಸತ್ಯವಂತ, ಯಾವನು ಸುಳ್ಳುಗಾರ? ಪರ್ಯಾಯಲೋಚನೆಮಾಡಿ ನೋಡುತ್ತೇವೆಯಾದರೆ, ಎಲ್ಲ ಮತದವರಲ್ಲಿಯೂ ಸುಳ್ಳು ಕಂಡುಬರುತ್ತದೆ. ಮತ್ತು ಯಾವುದು ಸತ್ಯವಾಗಿರುತ್ತದೋ, ಅದು ಎಲ್ಲದರಲ್ಲಿಯೂ ಒಂದೇ ಬಗೆಯಾಗಿದೆ. ಈ ಎಲ್ಲ ಕಾದಾಟಗಳೂ ಮೂಢತ್ವದವಾಗಿವೆ. (೨೦)

ಅನಂದದ ಸಂದೇಶ ನಂಬಿಕೆಯುಳ್ಳವರಿಗೆ. ಯಾವನು ಅಲ್ಲಾಹನ, ದೇವತೆಗಳ, ಪೈಗಂಬರರ, ಗೇಬ್ರಿಯಲ್ಲನ[೧೩] ಮತ್ತು ಮೈಕೇಲನ[೧೪] ಶತ್ರುವೋ ಅವನಂತಹ ಕಾಫಿರರಿಗೆ ಅಲ್ಲಾಹನೂ ಕೂಡ ಶತ್ರುವಾಗಿದ್ದಾನೆ. (ಮಂ–೧. ಸಿ–೧. ಸೂ–೨. ಆ–೯೭, ೯೮).

---

೧೧. 'ರೂಹ್–ಉಲ್ಲ–ಕುದ್ಸ್', ಎಂದು ಗೇಬ್ರಿಯಲ್ ಗೆ ಹೇಳುತ್ತಾರೆ. ಇವನು ಯಾವಾಗಲೂ ಏಸುವಿನ ಜೊತೆಗಿರುತ್ತಿದ್ದನು.

೧೨. 'ಹಿಂದುಗಳು ಕ್ರೈಸ್ತರನ್ನೂ, ಮುಸಲ್ಮಾನರನ್ನೂ 'ಮ್ಲೇಚ್ಛರು' ಎಂದು ಕರೆಯುತ್ತಾರೆ. 'ಹೀನರು ಮದ್ಯ ಮಾಂಸಗಳ ಸೇವನೆ ಮಾಡುತ್ತಾರೆ' ಎಂದು. ಆದರೆ, ಇದು ತಪ್ಪು ತಿಳುವಳಿಕೆ. ಆಚಾರ ಹೀನತೆ, ಮದ್ಯ ಮಾಂಸ ಸೇವನೆ ಹಿಂದೂಗಳಲ್ಲೂ ಇವೆ. ಸರಿಯಾದ ಕಾರಣವೇನೆಂದರೆ,

"ಮ್ಲೇಚ್ಛ ಅವ್ಯಕ್ತೇ ಶಬ್ದೇ; ಅವ್ಯಕ್ತಾಯಂ ವಾಚಿ ವಾ" [ಧಾತು ಪಾಠ ೧.೧೨೧]

ಎಂದರೆ, ಅಸ್ಪಷ್ಟ ಶಬ್ದೋಚ್ಚಾರಣೆ ಮಾಡುವವನಿಗೆ 'ಮ್ಲೇಚ್ಛ' ಎಂದು ಹೆಸರು.ಇಂಗ್ಲಿಷ್ ಮೊದಲಾದ ಐರೋಪ್ಯ ಭಾಷೆಗಳಲ್ಲೂ, ಅರಬ್ಬಿ, ಉರ್ದು ಮೊದಲಾದ ಮುಸಲ್ಮಾನರ ಪ್ರಿಯ ಭಾಷೆಗಳಲ್ಲೂ, ದೇವನಾಗರೀ ಲಿಪಿಯಲ್ಲಿರುವಂತಹ ಸ್ಫುಟ, ಸಂಪೂರ್ಣ, ಸಮರ್ಪಕ ವರ್ಣಮಾಲೆ ಇಲ್ಲದಿರುವುದರಿಂದ, ಅವರ ಉಚ್ಚಾರಣೆ ಭ್ರಷ್ಟ, ಎಂಬುದು ಜಗದ್ವಿಖ್ಯಾತವಾಗಿದೆ. ಇದೇ ಕಳಂಕವು ಮಹಾಪ್ರಾಣದ ಅಕ್ಷರಗಳಿಲ್ಲದ ಮತ್ತು 'ಕ.ಗ' ಭೇದಗಳಿಲ್ಲದ ತಮಿಳು ಮತ್ತು ಪಂಜಾಬಿ ಭಾಷೆಗಳಿಗೂ ಹತ್ತುತ್ತದೆ.

೧೩. Gabriel

೧೪. Michael

**ಸಮೀಕ್ಷಕ :–** ಮುಸಲ್ಮಾನರು ಖುದಾ "ಲಾಶರೀಕ್"[೧೫] ಎಂದರೆ 'ಅದ್ವಿತೀಯನು' (ಅಥವಾ ಕೇವಲನು; ಮಿಶ್ರರಹಿತನು) ಎನ್ನುತ್ತಾರೆ. ಮತ್ತೆ ಈ ಸೈನ್ಯಕ್ಕೆ ಸೈನ್ಯವನ್ನೇ ತಂದಿಟ್ಟರಲ್ಲ! ಅನ್ಯರಿಗೆ ಶತ್ರುವಾಗಿರುವವನು ಖುದಾನಿಗೂ ಶತ್ರುವಾಗಿರುತ್ತಾನೆ ಏನು? ಸ್ಥಿತಿಯು ಹೀಗೆ ಇರುವುದಾದರೆ, ಅದು ಸರಿಯಲ್ಲ. ಏಕೆಂದರೆ, ಈಶ್ವರನು ಯಾರ ಶತ್ರುವೂ ಆಗಿರಲಾರನು. (೨೧)

*ಮತ್ತು 'ಕ್ಷಮೆ ಬೇಡುತ್ತೇವೆ'. ಎನ್ನಿರಿ. ನಿಮ್ಮ ಪಾಪಗಳನ್ನೂ, ಹಾಗೂ ಅಧಿಕ ಹಿತಕಾರಿಗಳ ಪಾಪಗಳನ್ನೂ ಕ್ಷಮಿಸುವೆವು. (ಮಂ-೧. ಸಿ-೧. ಸೂ-೨. ಆ-೬೦)*

**ಸಮೀಕ್ಷಕ :–** ಭಲೇ! ಖುದಾನ ಈ ಉಪದೇಶ ಎಲ್ಲರನ್ನೂ ಪಾಪಿಗಳನ್ನಾಗಿ ಮಾಡುವಂತಹುದು ಅಹುದೋ ಅಥವಾ ಅಲ್ಲವೋ? ಏಕೆಂದರೆ, ಯಾವಾಗ ಪಾಪಗಳನ್ನು ಕ್ಷಮೆಮಾಡುವ ಆಶ್ರಯ ಸಿಕ್ಕುತ್ತದೋ, ಆಗ ಪಾಪಗಳಿಂದ ಯಾವನೂ ಕೂಡ ಹೆದರುವುದಿಲ್ಲ. ಆದುದರಿಂದ, ಹೀಗೆ ಹೇಳುವವನು ಖುದಾ ಆಗಲಾರನು ಮತ್ತು ಇದು ಖುದಾ ರಚಿಸಿದ ಪುಸ್ತಕವೂ ಆಗಲಾರದು. ಏಕೆಂದರೆ, ಅವನು ನ್ಯಾಯಕಾರಿಯಾಗಿದ್ದನೆ; ಅನ್ಯಾಯವನ್ನು ಎಂದಿಗೂ ಮಾಡುವುದಿಲ್ಲ. ಮತ್ತು ಪಾಪಗಳನ್ನು ಕ್ಷಮಿಸುವುದರಲ್ಲಿ ಅನ್ಯಾಯಕಾರಿಯಾಗಿ ಹೋಗುತ್ತಾನೆ. ಆದರೆ, ಅಪರಾಧಕ್ಕೆ ಅನುಸಾರವಾಗಿ ಶಿಕ್ಷೆಯನ್ನು ಕೊಡುವುದರಿಂದಲೆ ನ್ಯಾಯಕಾರಿಯಾಗಬಲ್ಲನು. (೨೨)

*ಮೋಸೆಸನು ತನ್ನ ಜನಾಂಗಕ್ಕಾಗಿ ನೀರನ್ನು ಬೇಡಿದಾಗ ನಾವು "ನಿನ್ನ ಕೋಲನ್ನು ಕಲ್ಲಿನ ಮೇಲೆ ಹೊಡೆ".-ಎಂದೆವು. ಅದರಿಂದ ಹನ್ನೆರಡು ಬುಗ್ಗೆಗಳು ಹರಿದು ಬಂದವು. (ಮಂ-೧. ಸಿ-೧. ಸೂ-೨. ಆ-೧೦೫).*

**ಸಮೀಕ್ಷಕ:–** ಈಗ ನೋಡಿರಿ! ಈ ಅಸಂಭವವಾದ ಮಾತುಗಳಿಗೆ ಸಮನಾಗಿ ಬೇರೆ ಯಾವನಾದರೂ ಹೇಳುವನೇನು? ಒಂದು ಕಲ್ಲಿನ ಬಂಡೆಯ ಮೇಲೆ ಕೋಲನ್ನು ಬಡಿಯುವುದರಿಂದ ಹನ್ನೆರಡು ಚಿಲುಮೆಗಳನ್ನು ಹೊರಡಿಸುವುದು ಸರ್ವಥಾ ಅಸಂಭವವಾಗಿದೆ. ಅಹುದು; ಆ ಕಲ್ಲನ್ನು ಒಳಗಿನಿಂದ ಟೊಳ್ಳಾಗಿ ಮಾಡಿ, ಅದರಲ್ಲಿ ನೀರನ್ನು ತುಂಬಿಸಿ, ೧೨ ಛಿದ್ರಗಳನ್ನು ಮಾಡುವುದರಿಂದ ಸಂಭವವಾದೀತು. ಬೇರೆಯ ರೀತಿ ಸಾಧ್ಯವಲ್ಲ. (೨೩)

*ಮತ್ತು ಅಲ್ಲಾಹನು ತನಗೆ ಬೇಕಾದವನನ್ನು ತನ್ನ ದಯೆಯಿಂದ ವಿಶಿಷ್ಟನನ್ನಾಗಿ ಮಾಡುತ್ತಾನೆ. (ಮಂ-೧. ಸಿ-೧, ಸೂ-೨. ಆ-೧೦೫)*

**ಸಮೀಕ್ಷಕ :–** ಮುಖ್ಯನಾಗಲೂ, ದಯೆಗೆ ಪಾತ್ರನಲ್ಲದವನೂ ಆದವನನ್ನೂ ಕೂಡ ಪ್ರಧಾನನನ್ನಾಗಿ ಮಾಡುತ್ತಾನೋ? ಮತ್ತು ಅವನ ಮೇಲೆ ದಯೆಯನ್ನು ಮಾಡುತ್ತಾನೋ? ಹೀಗೆ ವರ್ತಿಸುವವನಾದರೆ, ಖುದಾ ಮಹಾಕೋಲಾಹಲಕಾರಿ ಯಾಗಿರುತ್ತಾನೆ. ಈ ಸ್ಥಿತಿಯಲ್ಲಿ ಮತ್ತೆ ಒಳ್ಳೆಯ ಕಾರ್ಯವನ್ನು ಯಾವನು ತಾನೇ ಮಾಡುವನು? ಮತ್ತು ದುಷ್ಕರ್ಮಗಳನ್ನು ಯಾವನು ತಾನೇ ಬಿಟ್ಟಾನು? ಏಕೆಂದರೆ, ಎಲ್ಲರೂ ಖುದಾನ ಪ್ರಸನ್ನತೆಯನ್ನು ಮಾತ್ರ ಅವಲಂಬಿಸಿರುತ್ತಾರೆ; ಕರ್ಮಫಲವನ್ನಲ್ಲ. ಇದರಿಂದ ಎಲ್ಲರಿಗೂ ನಂಬಿಕೆ ತಪ್ಪಿಹೋಗಿ ಕರ್ಮೋಚ್ಛೇದದ ಪ್ರಸಂಗ ಬರುವುದು. (೨೪)

*ಕಾಫಿರ ಜನರು ಈರ್ಷ್ಯೆಮಾಡಿ ನಿಮ್ಮನ್ನು ನಂಬಿಕೆಯಿಂದ ಕದಲಿಸಿ ಬಿಡುವಂತೆ ಆಗದಿರಲಿ. ಏಕೆಂದರೆ, ಅವರುಗಳಲ್ಲಿ ನಂಬಿಕೆಯುಳ್ಳವರ ಮಿತ್ರರುಗಳು ಬಹುಮಂದಿ ಇದ್ದಾರೆ. (ಮಂ-೧, ಸಿ-೧, ಸೂ-೨ ಆ-೧೦೯)*

**ಸಮೀಕ್ಷಕ :–** ಈಗ ನೋಡರಿ; ಖುದಾನೇ-"ನಿಮ್ಮ ನಂಬಿಕೆಯನ್ನು ಕಾಫಿರರು ಕದಲಿಸದಿರಲಿ" ಎಂದು ಅವರನ್ನು ಎಚ್ಚರಿಸುತ್ತಾನೆ. ಅವನು ಸರ್ವಜ್ಞನಲ್ಲವೇನು? ಇಂತಹ ಮಾತುಗಳು ಖುದಾನದಾಗಿರಲಾರವು. (೨೫)

*ನೀವು ಯಾವ ಕಡೆಗೆ ಮುಖ ತಿರುಗಿಸುತ್ತೀರೋ, ಆ ಕಡೆಗೆ ಖುದಾನ ಮುಖವಿದೆ. (ಮಂ-೧. ಸಿ-೧. ಸೂ-೨. ಆ-೧೧೫)*

**ಸಮೀಕ್ಷಕ :–** ಈ ಮಾತು ಸತ್ಯವಾಗಿರುವುದಾದರೆ, ಮುಸಲ್ಮಾನರು ಕಿಬಲೆಯ[೧೬] ಕಡೆಗೇ ಮುಖವನ್ನೇಕೆ ತಿರುಗಿಸುತ್ತಾರೆ? ನಮಗೆ ಕಿಬಲೆಯ ಕಡೆಗೆ ಮುಖವನ್ನು ತಿರುಹಬೇಕೆಂಬ ಆಜ್ಞೆಯಿದೆ ಎನ್ನುವಿರಾದರೆ, ಯಾವ ಕಡೆಗೆ ಬೇಕಾದರೂ ಮುಖ ತಿರುಗಿಸಿರಿ-ಎಂಬ ಆಜ್ಞೆಯೂ ಕೂಡ ಇದೆ. ಒಂದು ಮಾತು ಸತ್ಯ ಮತ್ತು ಎರಡನೆಯದು ಸುಳ್ಳು ಆಗಿರುವುದೇ? ಮತ್ತು

೧೫. ಎಂದರೆ, 'ಅದ್ವಿತೀಯನು', ಅಥವಾ ಕೇವಲನು, ಮಿಶ್ರರಹಿತನು.

೧೬. 'ಕಿಬಲಾ' ಎಂದರೆ ಪಶ್ಚಿಮ ದಿಕ್ಕು; ಕುತುಬ್ ಎಂದರೆ ಉತ್ತರ ದಿಕ್ಕು.

ಅಲ್ಲಾಹನಿಗೆ ಮುಖವಿರುವುದಾದರೆ, ಅದು ಎಲ್ಲ ಕಡೆಗೂ ಇರಲೇಲಾರದು.[೧೭] ಏಕೆಂದರೆ, ಒಂದು ಮುಖ ಒಂದು ಕಡೆಗೆ ಇರುವುದು; ಎಲ್ಲೆಡೆಗೂ ಹೇಗೆ ತಾನೇ ಇರಬಲ್ಲದು? ಆದುದರಿಂದ, ಇದು ಸಂಗತವಲ್ಲ. (೨೬)

*ಆಕಾಶದ ಮತ್ತು ಭೂಮಿಯ ಉತ್ಪತ್ತಿಮಾಡುವವನಾಗಿರುವವನು ಏನನ್ನಾದರೂ ಮಾಡಲು ಬಯಸುವಾಗ, ಅವನು ಅದನ್ನು ಮಾಡಬೇಕಾಗುವುದಿಲ್ಲ. ಆದರೆ, ಅದಕ್ಕೆ "ಆಗಿಹೋಗು"ಎನ್ನುತ್ತಾನೆ ಅಷ್ಟೇ; ಆಗಿ ಹೋಗುತ್ತದೆ.[೧೮] (ಮಂ-೧. ಸಿ-೧. ಸೂ-೨. ಆ-೧೧೭)*

**ಸಮೀಕ್ಷಕ :**- ಭಲೇ, ಖುದಾ 'ಆಗಿಹೋಗು' ಎಂದು ಅಪ್ಪಣೆ ಮಾಡಿದನಾದರೆ, ಅಪ್ಪಣೆಯನ್ನು ಆಲಿಸಿದುದು ಯಾವುದು? ಮತ್ತು ಯಾವುದಕ್ಕೆ ಶ್ರವಣಮಾಡಿಸಿದನು? ಮತ್ತು ಯಾವುದು ಆಗಿಹೋಯಿತು? ಯಾವ ಕಾರಣದಿಂದ ಮಾಡಿದನು? "ಸೃಷ್ಟಿಗೆ ಮುನ್ನ ಖುದಾನ ಹೊರತು ಯಾವುದೇ ಎರಡನೆಯ ವಸ್ತುವೂ ಇರಲಿಲ್ಲ". ಎಂದು ಬರೆಯುತ್ತಾರೆ-ಎಂದಾಗ, ಈ ಜಗತ್ತು ಎಲ್ಲಿಂದ ಬಂದಿತು? ಕಾರಣವಿಲ್ಲದೆ ಯಾವುದೇ ಕಾರ್ಯವೂ ಆಗುವುದಿಲ್ಲವೆಂದಾಗ, ಇಷ್ಟು ದೊಡ್ಡ ಜಗತ್ತು ಕಾರಣವಿಲ್ಲದೆ ಎಲ್ಲಿಂದ ಆಯಿತು? ಈ ಮಾತು ಕೇವಲ ಹುಡುಗುತನದ್ದಾಗಿದೆ.

**ಪೂರ್ವಪಕ್ಷೀಯ:**[೧೯] ಇಲ್ಲ. ಇಲ್ಲ; ಖುದಾನ ಇಚ್ಛೆಯಿಂದ ಆಯಿತು.

**ಉತ್ತರಪಕ್ಷೀಯ :**- ನಿಮ್ಮ ಇಚ್ಛೆಯಿಂದ ಒಂದು ನೊಣದ ಕಾಲಾದರೂ ಕೂಡ ನಿರ್ಮಿತವಾಗಬಲ್ಲದೇ? ಖುದಾನ ಇಚ್ಛೆಯಿಂದ ಈ ಸಮಸ್ತ ಜಗತ್ತೂ ಆಗಿ ಹೋಯಿತು ಎಂದು ಹೇಳುತ್ತೀರಲ್ಲ!

**ಪೂರ್ವಪಕ್ಷೀಯ:**- ಖುದಾ ಸರ್ವಶಕ್ತಿವಂತನಾಗಿದ್ದಾನೆ. ಆದುದರಿಂದ, ಏನು ಬಯಸುತ್ತಾನೋ, ಅದನ್ನು ಮಾಡಿಕೊಳ್ಳುತ್ತಾನೆ.

**ಉತ್ತರಪಕ್ಷೀಯ:**- ಸರ್ವಶಕ್ತಿವಂತನೆಂಬುದರ ಅರ್ಥವೇನು?

**ಪೂರ್ವಪಕ್ಷೀಯ:**- ಏನನ್ನು ಬಯಸುತ್ತಾನೋ, ಅದನ್ನು ಮಾಡಬಲ್ಲವನು-ಎಂದು ಅರ್ಥ.

**ಉತ್ತರಪಕ್ಷೀಯ :**- ಖುದಾ ಎರಡನೆಯ ಖುದಾನನ್ನು ಕೂಡ ನಿರ್ಮಿಸಬಲ್ಲನೇ? ತನ್ನಷ್ಟಕ್ಕೆ ತಾನು ಸಾಯಬಲ್ಲನೇ? ಮೂರ್ಖನೂ, ರೋಗಿಯೂ ಮತ್ತು ಅಜ್ಞಾನಿಯೂ ಆಗಬಲ್ಲನೇ?[೨೦]

**ಪೂರ್ವಪಕ್ಷೀಯ:**- ಹೀಗೆ ಎಂದಿಗೂ ಆಗಲಾರನು.

**ಉತ್ತರಪಕ್ಷೀಯ:**- ಆದುದರಿಂದ ಪರಮೇಶ್ವರನು ತನ್ನ ಮತ್ತು ಅನ್ಯರ ಗುಣಕರ್ಮ-ಸ್ವಭಾವಗಳಿಗೆ ವಿರುದ್ಧವಾಗಿ ಏನನ್ನೂ ಮಾಡಲಾರನು. ಜಗತ್ತಿನಲ್ಲಿ ಯಾವುದಾದರೂ ವಸ್ತುವಿನ ಆಗುವಿಕೆ-ಮಾಡುವಿಕೆಗಳಲ್ಲಿ ಮೊದಲು ಮೂರು ಪದಾರ್ಥಗಳು ಅವಶ್ಯವಾಗಿರುತ್ತವೆ. ಒಂದನೆಯದಾಗಿ, ಕುಂಬಾರನಂತೆ ನಿರ್ಮಾಣಮಾಡುವವನು (ಕರ್ತೃವು). ಎರಡನೆಯದಾಗಿ ಘಟವನ್ನು ನಿರ್ಮಿಸಲು ಬೇಕಾದ ಮಣ್ಣು-ಎಂದರೆ ಉಪಾದಾನ ಕಾರಣ; ಮೂರನೆಯದಾಗಿ ಘಟದ ನಿರ್ಮಾಣಕ್ಕೆ ಸಹಾಯಕವಾಗುವ ಬೇರೆಯ ಸಲಕರಣೆಗಳು. ಕುಂಬಾರ, ಮಣ್ಣು ಮತ್ತು ಸಲಕರಣೆಗಳಿಂದ ಘಟವಾಗುವ ಹಾಗೆ ಮತ್ತು ಕುಂಬಾರ, ಮಣ್ಣು ಮತ್ತು ಸಲಕರಣೆಗಳು ಘಟಕ್ಕಿಂತ ಮುನ್ನವಿರುವ ಹಾಗೆಯೇ, ಜಗದ್ರಚನೆಗೆ ಮುನ್ನ ಜಗತ್ತಿನ (ಉಪಾದಾನ) ಕಾರಣವಾದ ಪ್ರಕೃತಿ,

---

೧೭. ಪೌರಾಣಿಕರು ಪೈಗಂಬರರಿಗಿಂತ ಬುದ್ಧಿವಂತರು! ಅವರು ಶ್ರೀಶಿರನಿಗೆ ಮೂರು; ದತ್ತಾತ್ರೇಯನಿಗೆ ಮೂರು; ಬ್ರಹ್ಮನಿಗೆ ನಾಲ್ಕು; ಹನುಮಂತನಿಗೆ ಐದು; ಷಣ್ಮುಖನಿಗೆ ಆರು; ರಾವಣನಿಗೆ ಹತ್ತು; ಮತ್ತು ಶ್ರೀಕೃಷ್ಣನ ವಿಶ್ವರೂಪಕ್ಕೆ ಸಾವಿರ ಮುಖಗಳನ್ನು ಅಳವಡಿಸಿದ್ದಾರೆ! ಇದು ಮನುಷ್ಯನ ಮುಖಗಳ ಮಾತಾಯಿತು! ಇನ್ನು ಮನುಷ್ಯ ದೇಹಕ್ಕೆ ಪ್ರಾಣಿ-ಪಶುಗಳ ಮುಖಗಳನ್ನು ಹಚ್ಚುವ, ಎಂದರೆ ಕುದುರೆ, ಮತ್ತು ಕೋತಿ, ಸಿಂಹ, ಹಂದಿ, ಆನೆ, ಮೊದಲಾದುವುಗಳ ರಚನಾ ಕೌಶಲ್ಯಕ್ಕೇನು ಹೇಳುವಿರಿ? ಎರಡು, ನಾಲ್ಕು, ಆರು, ಎಂಟು ಹತ್ತು, ಇಪ್ಪತ್ತು ಮತ್ತು ಸಾವಿರ ಕೈಗಳ ನಿರ್ಮಾಣ ಅವುಗಳಿಗೆ ಅವಶ್ಯಕವಾದ ಆಯುಧಾದಿಗಳ ವ್ಯವಸ್ಥೆ ಸಾಮಾನ್ಯವಾದ ಮಾತೇನು? ಪೌರಾಣಿಕರ ಈ ಬುದ್ಧಿವಂತಿಕೆ[?] ಕಾರಣದಿಂದಲೇ ಎಲ್ಲರೂ ಸಾವಿರಾರು ವರ್ಷಗಳಿಂದ ಪುರಾಣಗಳ ಅನುಯಾಯಿಗಳಾಗಿದ್ದಾರೆ.

೧೮. ಇದೇ ಭಾವನೆ ಬೈಬಲ್ಲಿನಲ್ಲೂ ಇದೆ.-ಯು.ಮೀ.

೧೯. ಎಂದರೆ, ಮುಸಲ್ಮಾನ ಅಥವಾ ಮೌಲವಿ

೨೦. ಈ ಬಗ್ಗೆ ಸಪ್ತಮ ಮತ್ತು ಅಷ್ಟಮ ಸಮುಲ್ಲಾಸಗಳಲ್ಲಿ ಮೊದಲೇ ವಿವೇಚನೆ ಮಾಡಲಾಗಿದೆ.

ಪರಮಾತ್ಮ ಮತ್ತು ಅವನ ಗುಣ-ಕರ್ಮ-ಸ್ವಭಾವಗಳು ಅನಾದಿಯಾಗಿ ಇರುತ್ತವೆ. ಆದಕಾರಣ ಕುರಾನಿನ ಈ ಮಾತು ಅಸಂಭವ ವಾಗಿರುತ್ತದೆ. (೨೭).

*ನಾವು ಜನರ ಸಲುವಾಗಿ ಕಾಬಾದ[೨೧] ಸುಖದಾಯಕವಾದ ಪವಿತ್ರಸ್ಥಾನವನ್ನು ನಿರ್ಮಿಸಿದ್ದೇವೆ. ಆದುದರಿಂದ ನೀವು ನಮಾಜಿಗಾಗಿ ಇಬ್ರಾಹೀಮನ ಸ್ಥಾನವನ್ನು ಗ್ರಹಿಸಿರಿ.(ಮಂ-೧. ಸಿ-೧. ಸೂ-೨. ಆ-೧೨೫)*

**ಸಮೀಕ್ಷಕ:-** ಕಾಬಾಕ್ಕಿಂತ ಮುನ್ನ ಪವಿತ್ರ ಸ್ಥಾನವಾವುದನ್ನೂ ಖುದಾ ನಿರ್ಮಿಸಿರಲಿಲ್ಲವೇ? ನಿರ್ಮಿಸಿದ್ದನಾದರೆ, ಕಾಬಾವನ್ನು ನಿರ್ಮಿಸುವ ಅವಶ್ಯಕತೆ ಏನೇನೂ ಇರಲಿಲ್ಲ. ನಿರ್ಮಿಸಿರಲಿಲ್ಲವಾದರೆ, ಬಡಪಾಯಿಗಳಾದ ಪೂರ್ವಜರನ್ನು ಪವಿತ್ರಸ್ಥಾನವಿಲ್ಲದೇ ಇಟ್ಟಿದ್ದನೇನು? ಮೊದಲು ಈಶ್ವರನಿಗೆ ಪವಿತ್ರಸ್ಥಾನವನ್ನು ನಿರ್ಮಿಸಿರಬೇಕೆಂಬುದರ ನೆನಪೇ ಬಾರದೇ ಹೋಗಿರಬಹುದು! (೨೮)

*ಇಬ್ರಾಹೀಮನ ಧರ್ಮದಿಂದ ವಿಮುಖರಾಗುವ ಮಾನವರಾದರೂ ಯಾರಿದ್ದಾರು? ಕೇವಲ ತನ್ನ ಆತ್ಮನನ್ನು (ಪ್ರಾಣವನ್ನು) ಮೌಢ್ಯಕ್ಕೆ ಈಡಾಗಿಸಿಕೊಂಡವನು ಮಾತ್ರ ವಿಮುಖನಾದಾನು ಮತ್ತು ನಾವು ನಿಶ್ಚಯವಾಗಿಯೂ ಪ್ರಪಂಚದಲ್ಲಿ ಅವನನ್ನೇ ಅಂಗೀಕರಿಸಿದೆವು. ಮತ್ತು ನಿಶ್ಚಯವಾಗಿ ಪರಲೋಕದಲ್ಲಿ ಅವನೇ ಪುಣ್ಯಶಾಲಿಯಾಗಿದ್ದಾನೆ. (ಮಂ-೧. ಸಿ-೧. ಸೂ-೨. ಆ-೧೩೦)*

**ಸಮೀಕ್ಷಕ:-** ಯಾರು ಇಬ್ರಾಹೀಮನ ಧರ್ಮವನ್ನು ಅಂಗೀಕರಿಸುವುದಿಲ್ಲವೋ, ಅವರೆಲ್ಲರೂ ಮೂರ್ಖರೆನ್ನುವುದು ಹೇಗೆ ಸಂಭವವಾದೀತು? ಇಬ್ರಾಹೀಮನನ್ನೇ ಖುದಾ ಅಂಗೀಕರಿಸಿದನು-ಇದಕ್ಕೆ ಕಾರಣವೇನು? ಧರ್ಮಾತ್ಮನಾಗಿದ್ದಕಾರಣ ಅಂಗೀಕರಿಸಿದನೆಂದರೆ, ಧರ್ಮಾತ್ಮರು ಇನ್ನೂ ಬಹುಮಂದಿ ಆಗಬಲ್ಲರು. ಧರ್ಮಾತ್ಮನಾಗದೇ ಇದ್ದರೂ ಅಂಗೀಕರಿಸಿದನಾದರೆ, ಅನ್ಯಾಯವಾದೀತು. ಹೌದು; ಯಾವನು ಧರ್ಮಾತ್ಮನಾಗಿರುತ್ತಾನೋ ಅವನೇ ಈಶ್ವರನಿಗೆ ಪ್ರಿಯನಾಗುತ್ತಾನೆ; ಅಧರ್ಮಿಯಲ್ಲ- ಎನ್ನುವುದೇನೋ ಸರಿಯಾಗಿದೆ. (೨೯)

*ನಿಶ್ಚಯವಾಗಿ ನಾವು ನಿನ್ನ ಮುಖವೂ ಆಕಾಶದತ್ತ ತಿರುಗುವುದನ್ನು ನೋಡುತ್ತೇವೆ. ಅವಶ್ಯವಾಗಿ ನಾವು ನಿನ್ನನ್ನು, ನೀನು ಅದನ್ನು ಅಂಗೀಕರಿಸುವಂತಾಗಲಿ - ಎಂದು, ಆ ಕಿಬಲೆಯ ಕಡೆಗೆ ತಿರುಗಿಸುತ್ತೇವೆ. ಆಯಿತು, ನಿನ್ನ ಮುಖವನ್ನು 'ಮಸ್ ಜಿದ್ ಉಲ್-ಹರಾಮ್'ನ ಕಡೆಗೆ ತಿರುಗಿಸು. ನೀನು ಎಲ್ಲಿ ಬೇಕಾದರೂ ಇರು; ನಿನ್ನ ಮುಖವನ್ನು ಅದರ ಕಡೆಗೆ ತಿರುಗಿಸು. (ಮಂ-೧. ಸಿ-೨, ಸೂ-೨, ಆ-೧೪೪)*

**ಸಮೀಕ್ಷಕ:-** ಇದು ಚಿಕ್ಕ ವಿಗ್ರಹಾರಾಧನೆಯೇನು? ಅಲ್ಲ; ದೊಡ್ಡದು.

**ಪೂರ್ವಪಕ್ಷೀಯ:-** ಮುಸಲ್ಮಾನರಾದ ನಾವು ಮೂರ್ತಿಪೂಜಕರಲ್ಲ. ಆದರೆ **"ಬುತ್‌ಶಿಕನ್"** ಎಂದರೆ ಮೂರ್ತಿಭಂಜಕ ರಾಗಿದ್ದೇವೆ. ಏಕೆಂದರೆ-ನಾವು ಕಿಬಲೆಯನ್ನು ಖುದಾ ಎಂದು ತಿಳಿಯುವುದಿಲ್ಲ.

**ಉತ್ತರಪಕ್ಷೀಯ:-** ಯಾರನ್ನು ನೀವು ಮೂರ್ತಿಪೂಜಕರೆಂದು ತಿಳಿಯುತ್ತೀರೋ, ಅವರು ಕೂಡ ಮೂರ್ತಿಗಳನ್ನು ಈಶ್ವರನೆಂದು ತಿಳಿಯುವುದಿಲ್ಲ. ಆದರೆ, ಅದರ ಮುಂದೆ ಈಶ್ವರನಿಗೆ ಭಕ್ತಿಯನ್ನು ಸಲ್ಲಿಸುತ್ತಾರೆ. ನೀವು ಮೂರ್ತಿಗಳನ್ನು ಭಂಜಿಸುವಿರಾದರೆ, ಆ ಮಸೀದಿ, ಕಿಬಲೆಯೆಂಬ ಮಹಾಮೂರ್ತಿಯನ್ನ ಮುರಿಯಲಿಲ್ಲವೇಕೆ?

**ಪೂರ್ವಪಕ್ಷೀಯ:-** ಸರಿಯಾಯಿತು ಸ್ವಾಮಿ! ನಮಗಂತೂ ಕಿಬಲೆಯ ಕಡೆಗೆ ಮುಖ ತಿರುಗಿಸಬೇಕೆಂಬ ಅಪ್ಪಣೆ ಕುರಾನಿನಲ್ಲಿದೆ. ಮತ್ತು ಇವರಿಗೆ[೨೨] ವೇದದಲ್ಲಿಲ್ಲ. ಮತ್ತೆ ಅವರು ಮೂರ್ತಿಪೂಜಕರೇಕೆ ಅಲ್ಲ? ಮತ್ತು ನಾವೇಕೆ (ಮೂರ್ತಿಪೂಜಕರು)? ಏಕೆಂದರೆ ನಾವು ಖುದಾನ ಆಜ್ಞೆಯನ್ನು ಪಾಲಿಸುವುದು ಅವಶ್ಯವಾಗಿದೆ.

**ಉತ್ತರಪಕ್ಷೀಯ:-** ಹೇಗೆ ನಿಮಗೆ ಕುರಾನಿನಲ್ಲಿ ಆಜ್ಞೆಯಿದೆಯೋ, ಹಾಗೆ ಇವರಿಗೆ ಪುರಾಣಗಳಲ್ಲಿ ಆಜ್ಞೆಯಿದೆ. ಹೇಗೆ ನೀವು ಕುರಾನನ್ನು ಖುದಾನ ಕೃತಿಯೆಂದು ತಿಳಿಯುತ್ತೀರೋ, ಹಾಗೆ ಪೌರಾಣಿಕರು ಪುರಾಣಗಳನ್ನು ಖುದಾನ ಅವತಾರವಾದ ವ್ಯಾಸರ ವಚನವೆಂದು ತಿಳಿಯುತ್ತಾರೆ. ನಿಮ್ಮ ಮತ್ತು ಇವರ ನಡುವೆ ಮೂರ್ತಿಪೂಜೆಯ ಬಗೆಗೆ ಭಿನ್ನಭಾವವಿಲ್ಲ. ಆದರೆ, ನೀವು ಮಹಾವಿಗ್ರಹಾರಾಧಕರು; ಮತ್ತು ಇವರು ಚಿಕ್ಕ ವಿಗ್ರಹಾರಾಧಕರು. ಏನಾಯಿತು ಈ ವ್ಯವಹಾರ! ಏಕೆಂದರೆ-ಯಾವನೋ ಒಬ್ಬನು

೨೧. 'ಮಕ್ಕಾ ಪಟ್ಟಣದ ಪವಿತ್ರ ದೇಗುಲ'

೨೨. ಎಂದರೆ, ಹಿಂದುಗಳಿಗೆ

ತನ್ನ ಮನೆಗೆ ನುಗ್ಗಿದ ಬೆಕ್ಕನ್ನು ಹೊರದೂಡತೊಡಗಿದಾಗ, ಅವನ ಮನೆಗೆ ಒಂದು ಒಂಟೆಯೇ ನುಗ್ಗಿ ಬಂದಂತಾಯಿತು! ಮುಹಮ್ಮದ್ ಸಾಹೇಬರು ಚಿಕ್ಕ ವಿಗ್ರಹವನ್ನು ಇಸ್ಲಾಮಿನಿಂದ ಹೊರಹಾಕಿದರು; ಆದರೆ-ಪರ್ವತದಂತಿರುವ ಮಕ್ಕಾ ಮಸೀದಿಯೆಲ್ಲವನ್ನೂ ಮುಸಲ್ಮಾನ ಮತದಲ್ಲಿ ತೂರಿಸಿಯೇ ಬಿಟ್ಟರು. ಇದೇನು ಚಿಕ್ಕ ವಿಗ್ರಹಾರಾಧನೆಯೇ? ಅಹುದು; ಅವಶ್ಯವಾಗಿ ನಾವುಗಳು ವೈದಿಕರು[೨೩] ಆಗಿರುವ ಹಾಗೆಯೇ, ನೀವುಗಳು ಕೂಡ, ವೈದಿಕರಾಗಿ ಹೋಗುವಿರಾದರೆ, ಮೂರ್ತಿಪೂಜೆ- ಮೊದಲಾದ ಕೆಡಕುಗಳಿಂದ ದೂರ ಉಳಿಯಬಲ್ಲಿರಿ. ಹಾಗಲ್ಲದೆ ಸಾಧ್ಯವಿಲ್ಲ. ನೀವು ಈ ಮಹಾವಿಗ್ರಹಾರಾಧನೆಯನ್ನು ಹೊರದೂಡುವವರೆಗೆ, ಬೇರೆಯ ಅಲ್ಪವಾದ ವಿಗ್ರಹಗಳ ಪೂಜಕರನ್ನು ಖಂಡಿಸುವಲ್ಲಿ ಸಂಕೋಚಪಡುತ್ತಾ ನಿವೃತ್ತರಾಗುವುದೇ[೨೪] ಲೇಸು. ಮತ್ತು ತಮ್ಮನ್ನು ತಾವು ಮೂರ್ತಿಪೂಜೆಯಿಂದ ದೂರವಿಟ್ಟುಕೊಂಡೇ ಪವಿತ್ರರಾಗಿ ಮಾಡಿಕೊಳ್ಳಬೇಕು. (೩೦)

*ಅಲ್ಲಾಹನ ಮಾರ್ಗದಲ್ಲಿ ಹತರಾಗುವವರ ಬಗೆಗೆ – "ಇವರು ಮೃತರಾಗಿದ್ದಾರೆ".-ಎನ್ನಬೇಡಿರಿ, ಏಕೆಂದರೆ, ಅವರು ಜೀವಂತರಾಗಿದ್ದಾರೆ. (ಮಂ-೧, ಸಿ-೨, ಸೂ-೨, ಆ-೧೫೪)*

**ಸಮೀಕ್ಷಕ :-** ಭಲೇ! ಈಶ್ವರನ ಮಾರ್ಗದಲ್ಲಿ ಸಾಯುವ-ಸಾಯಿಸುವ ಅವಶ್ಯಕತೆಯಾದರೂ ಏನಿದೆ? "ಈ ಲೋಭವನ್ನೊಡ್ಡುವುದರಿಂದ ಜನರು ಚೆನ್ನಾಗಿ ಹೋರಾಡುವರು; ತಮಗೆ ಜಯವಾಗುವುದು. ಕೊಲ್ಲುವುದಕ್ಕೆ ಹೆದರುವುದಿಲ್ಲ. ಕೊಳ್ಳೆಹೊಡೆಯುವುದರಿಂದ ಐಶ್ವರ್ಯ ಲಭಿಸುವುದು. ಆಮೇಲೆ ಐಶ್ವರ್ಯ-ಸುಖ ಅನುಭವಿಸುವೆವು"- ಎಂಬ ಭಾವನೆಯ ಈ ಮಾತು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವುದಕ್ಕಾಗಿಯೇ ಇದೆ".- ಎಂದು ಹೇಳಿಬಿಡಬಾರದೇಕೆ? ಈ ವಿಧದ ತಮ್ಮ ಸ್ವಾರ್ಥಕ್ಕಾಗಿ ಈ ವಿಪರೀತ ವ್ಯವಹಾರವನ್ನು ನಡೆಯಿಸಿದ್ದಾರೆ. (೩೧)

*ಅಲ್ಲಾಹನು ಕಠೋರವಾದ ದುಃಖವನ್ನು ಕೊಡುವ ಪರಿಸ್ಥಿತಿಯೂ ಇದೆ. ಸೈತಾನನ ಹಿಂದೆ ನಡೆಯಬೇಡಿ. ನಿಶ್ಚಯವಾಗಿ ಅವನು ನಿಮ್ಮ ಶತ್ರುವಾಗಿದ್ದಾನೆ. ಅವನು ಕೇಡಿನ ಮತ್ತು ನಾಚಿಕೆಗೇಡಿನ ಆಜ್ಞೆಯನ್ನು ಕೊಡುವುದನ್ನು ಬಿಟ್ಟರೆ ಮತ್ತು ಅಲ್ಲಾಹನ ಬಗೆಗೆ ನಿಮಗೆ ಗೊತ್ತಿಲ್ಲದುದನ್ನು ಆಡಿಸುವದನ್ನುಳಿದರೆ, ಮತ್ತೆ ಏನನ್ನೂ ಮಾಡುವುದಿಲ್ಲ. (ಮಂ-೧, ಸಿ-೨, ಸೂ-೨, ಆ-೧೬೫, ೧೬೮,೧೬೯)*

**ಸಮೀಕ್ಷಕ:-** ಕಠೋರವಾದ ದುಃಖವನ್ನು ಕೊಡುವ ದಯಾಳುವಾದ ಖುದಾ ಪಾಪಿಗಳ ಹಾಗೂ ಪುಣ್ಯಾತ್ಮರುಗಳ ವಿಷಯದಲ್ಲಿ ಹಾಗಿದ್ದಾನೋ ಅಥವಾ ಮುಸಲ್ಮಾನರ ಮೇಲೆ ದಯಾಳುವೂ ಮತ್ತು ಅನ್ಯರ ಮೇಲೆ ದಯಾಹೀನನೂ ಆಗಿದ್ದಾನೋ? ಹೀಗೆ ಇರುವನಾದರೆ ಅವನು ಈಶ್ವರನೇ ಆಗಲಾರನು. ಮತ್ತು ಪಕ್ಷಪಾತಿಯಾಗಿರುವುದಿಲ್ಲವಾದರೆ ಯಾವ ಮನುಷ್ಯನು ಎಲ್ಲಿಯಾದರೂ ಧರ್ಮವನ್ನಾಚರಿಸುವನೋ, ಅವನ ಬಗೆಗೆ ಈಶ್ವರನು ದಯಾಳುವೂ ಮತ್ತು ಯಾವನು ಅಧರ್ಮವನ್ನು ಮಾಡುವನೋ, ಅವನನ್ನು ದಂಡಿಸುವವನೂ ಆಗಿರುವನು. ಎಂದ ಮೇಲೆ, ಮತ್ತೆ, ನಡುವೆ ಮುಹಮ್ಮದ್ ಸಾಹೇಬರನ್ನೂ ಮತ್ತು ಕುರಾನನ್ನೂ ಒಪ್ಪಿಕೊಳ್ಳುವುದು ಅವಶ್ಯವಾಗಿ ಉಳಿಯಲಿಲ್ಲ. ಮತ್ತು ಎಲ್ಲರಿಗೂ ಕೆಡಕನ್ನು ಮಾಡುವ, ಮಾನವಮಾತ್ರರ ಶತ್ರುವಾದ ಸೈತಾನನನ್ನು ಖುದಾ ಉತ್ಪನ್ನಮಾಡಿದನಾದರೂ ಏಕೆ? ಅವನು ಭವಿಷ್ಯದ ಮಾತನ್ನು ತಿಳಿದಿರಲಿಲ್ಲವೇನು? "ತಿಳಿಯುತ್ತಲೇನೋ ಇದ್ದನು. ಆದರೆ, ಪರೀಕ್ಷೆಗಾಗಿ ಸೃಜಿಸಿದನು". ಎನ್ನುವಿರಾದರೆ, ಅದೂ ಕೂಡ ಸರಿಯಾಗಲಾರದು. ಏಕೆಂದರೆ, ಪರೀಕ್ಷಿಸುವುದು ಅಲ್ಪಜ್ಞನ ಕಾರ್ಯವಾಗಿದೆ. ಸರ್ವಜ್ಞನಾದರೋ ಸರ್ವಜೀವರ ಶುಭಾಶುಭಕರ್ಮವನ್ನು ಸದಾ ಸರಿಸರಿಯಾಗಿ ತಿಳಿಯುತ್ತಾನೆ. ಮತ್ತು ಸೈತಾನನು ಸರ್ವರನ್ನೂ ಪಥಭ್ರಷ್ಟರನ್ನಾಗಿ ಮಾಡುತ್ತಾನೆಯಾದರೆ, ಸೈತಾನನನ್ನು ಯಾವನು ಪಥಭ್ರಷ್ಟನನ್ನಾಗಿ ಮಾಡಿದನು? ಸೈತಾನನು ತನ್ನಷ್ಟಕ್ಕೆ ತಾನೇ ಪಥಭ್ರಷ್ಟನಾಗುತ್ತಾನೆಯಾದರೆ, ಅನ್ಯರೂ ತಮ್ಮಷ್ಟಕ್ಕೆ ತಾವೇ ಪಥಭ್ರಷ್ಟರಾಗಬಲ್ಲರು. ನಡುವೆ ಸೈತಾನನಿಗೆ ಏನು ಕೆಲಸವಿದೆ? ಮತ್ತು ಖುದಾ ಸ್ವತಃ ಸೈತಾನನನ್ನು ಪಥಭ್ರಷ್ಟನಾಗಿಮಾಡಿದನಾದರೆ, ಖುದಾ ಸೈತಾನನಿಗೂ ಸೈತಾನನಾಗಿ ಉಳಿಯುವನು! ಇಂತಹ

---

೨೩. ವೈದಿಕರು, ಎಂದರೆ ವೇದದ ಧರ್ಮವನ್ನು ಪಾಲಿಸುವವರು ಎಂದರ್ಥ! ಪುರಾಣಗಳು ತಂತ್ರಗಳ ಅನುಯಾಯಿಗಳಾದ ವಿಗ್ರಹಾರಾಧಕರೂ, ಪೂಜಾ-ಪಾಠಮಾಡುವವರೂ, ಮೃತಕ ಶ್ರಾದ್ಧದ ಕೂಳು ತಿನ್ನುವವರೂ ಆದ ಬ್ರಾಹ್ಮಣರಿಗೆ ವೈದಿಕರು ಎಂಬ ಮನ್ನಣೆಯನ್ನು ದಕ್ಷಿಣ ಭಾರತದಲ್ಲಿ ಕೊಟ್ಟಿರುವುದು ಎಂತಹ ಅಸಂಬದ್ಧ ಬಿರುದು?

೨೪. ಎಂದರೆ, ಮೂರ್ತಿಗಳನ್ನು ಒಡೆದು ಹಾಕುವ ಕರ್ಮದಿಂದ ದೂರ ಇರಬೇಕು, ಎಂದು ಅಭಿಪ್ರಾಯ

ಮಾತು ಈಶ್ವರನದಾಗಲಾರದು. ಮತ್ತು ಯಾವನೇ ಆಗಲಿ, ಪಥಭ್ರಷ್ಟನಾಗುತ್ತಾನೆಯಾದರೆ, ಅವನು ದುಃಸಂಗ ಮತ್ತು ಅವಿದ್ಯೆಯಿಂದ ಭ್ರಾಂತನಾಗಿ ಹಾಗೆ ಆಗುತ್ತಾನೆ, ಅಷ್ಟೆ. (೩೨)

*ಶವ, ರಕ್ತ ಮತ್ತು ಹಂದಿಯ ಮಾಂಸ ಮತ್ತು ಯಾವದರ ಮೇಲೆ ಅಲ್ಲಾಹನ ಹೊರತು ಬೇರೇನಾದರೂ ಉಚ್ಚರಿಸಿರುತ್ತಾರೋ, ಆ ವಸ್ತು ನಿಮ್ಮ ಪಾಲಿಗೆ ವರ್ಜ್ಯ*[೨೫] *(ಅಪವಿತ್ರ)ವಾಗಿದೆ. (ಮಂ-೧, ಸಿ-೨, ಸೂ-೨, ಆ-೧೭೩)*

**ಸಮೀಕ್ಷಕ:-** ಈ ಸ್ಥಳದಲ್ಲಿ, ಯಾವುದಾದರೂ ಪ್ರಾಣಿ ತಾನೇ ಸತ್ತಿರಲಿ; ಅಥವಾ ಅನ್ಯರ ಕೊಲೆಯಿಂದ ಸತ್ತಿರಲಿ; ಎರಡು ಸ್ಥಿತಿಯಲ್ಲಿಯೂ ಶವ ಶವವೇ-ಎಂದು ನಿರ್ಧರಿಸಬೇಕು. ಅಹುದು; (ಕೊಳೆಯುವುದೇ ಮೊದಲಾದುದರಿಂದ) ಸ್ವಲ್ಪ ಭೇದವೂ ಇರುತ್ತದೆ. ಆದರೆ ಮೃತತ್ವದಲ್ಲಿ ವ್ಯತ್ಯಾಸವೇನೂ ಇಲ್ಲ. ಮತ್ತು ಒಂದೆಡೆ ಹಂದಿಯ ಮಾಂಸವನ್ನು ನಿಷೇಧಿಸಿರುವುದರಿಂದ ಮನುಷ್ಯನ ಮಾಂಸಭಕ್ಷಣ ಉಚಿತವಾಗಿರುವುದೇನು? ಪರಮೇಶ್ವರನ ಹೆಸರಿನಲ್ಲಿ, ಶತ್ರುಗಳೆನಿಸಿದವರೇ ಮೊದಲಾದವರಿಗೆ, ಅತಿ ದುಃಖವಿತ್ತು ಪ್ರಾಣಹತ್ಯೆ ಮಾಡುವುದು ಒಳ್ಳೆಯ ವಿಷಯವಾಗಲು ಶಕ್ಯವೇ? ಇದರಿಂದ ಈಶ್ವರನ ಹೆಸರ ಕಳಂಕಿತವಾಗಿ ಹೋಗುತ್ತದೆ. ಹೌದು. ಈಶ್ವರನು ಪೂರ್ವಜನ್ಮದ ಅಪರಾಧವಿಲ್ಲದೆ, ಮುಸಲ್ಮಾನರ ಕೈಯಿನಿಂದ ದಾರುಣ ದುಃಖವನ್ನೇಕೆ ಕೊಡಿಸಿದನು? ಅವುಗಳ ಪಾಲಿಗೆ ದಯಾಳುವಲ್ಲವೇನು? ಅವನ್ನು ಮಕ್ಕಳಂತೆ ತಿಳಿದುಕೊಳ್ಳುವುದಿಲ್ಲವೇ? ಯಾವ ವಸ್ತುಗಳಿಂದ ಅಧಿಕ ಉಪಕಾರವಾಗುವುದೋ, ಅಂತಹ ಹಸುಗಳು ಮೊದಲಾದುವುಗಳ ಕೊಲೆಯ ನಿಷೇಧವನ್ನು ಮಾಡದಿರುವುದೆಂದರೆ, ಕೊಲೆಯನ್ನು ಮಾಡಿಸಿ ಖುದಾ ಜಗತ್ತಿಗೆ ಹಾನಿಕಾರಕನಾಗಿದ್ದಾನೆಂದೇ ತಿಳಿಯಿರಿ. ಅವನು ಹಿಂಸೆಯೆಂಬ ಪಾಪದಿಂದ ಕಳಂಕಿತನೂ ಆಗಿ ಹೋಗುತ್ತಾನೆ. ಇಂತಹ ಮಾತುಗಳು ಖುದಾನವು ಮತ್ತು ಖುದಾನ ಪುಸ್ತಕದವು ಎಂದಿಗೂ ಆಗಲಾರವು. (೩೩)

*ರೋಜಾದ*[೨೬] *ರಾತ್ರಿ ನಿಮಗಾಗಿ ಪವಿತ್ರೀಕರಿಸಲ್ಪಟ್ಟಿದೆ.*[೨೭] *ನಿಮ್ಮ ಪತ್ನಿಯರೊಂದಿಗೆ ಮದನೋತ್ಸವವನ್ನಾಚರಿಸಿರಿ. ಅವರು ನಿಮಗೆ ಆಚ್ಛಾದನವಾಗಿದ್ದಾರೆ; ಮತ್ತು ನೀವು ಅವರಿಗೆ ಆಚ್ಛಾದನವಾಗಿದ್ದೀರಿ. ಅಲ್ಲಾಹನು ನೀವು ಕಳ್ಳತನವನ್ನು ಎಂದರೆ ವ್ಯಭಿಚಾರವನ್ನು ಮಾಡುತ್ತೀರಿ-ಎಂದು ತಿಳಿದನು. ಆಯಿತು; ಅಲ್ಲಾಹನು ಕ್ಷಮಿಸಿದನು. ನೀವಂತೂ, ಅವರೊಂದಿಗೆ ಸೇರಿರಿ, ಸಾಕು; ಮತ್ತು ಯಾವುದನ್ನು ನಿಮಗಾಗಿ ಬರೆದಿದ್ದಾನೋ, ಅದನ್ನು ಎಂದರೆ ಸಂತತಿಯನ್ನು ಹುಡುಕಿರಿ. ನಿಮಗೆ ಕರಿಯ ದಾರದಿಂದ ಬಿಳಿಯ ದಾರ ಬೇರೆ-ಎಂದು ಕಾಣುವವರೆಗೆ, ಅಥವಾ ಮುಂಬೆಳಗು ಸ್ಫುಟವಾಗಿ ಗೋಚರಿಸುವವರೆಗೆ ತಿನ್ನಿರಿ; ಕುಡಿಯಿರಿ. (ಮ-೧, ಸಿ-೨, ಸೂ-೨, ಆ-೧೮೭)*

**ಸಮೀಕ್ಷಕ:-** ಯಾವಾಗ ಮುಸಲ್ಮಾನರ ಮತ ಹೊರಟಿತೋ, ಆಗ, ಅಥವಾ ಅದಕ್ಕಿಂತ ಮೊದಲು ಯಾವನೋ ಒಬ್ಬನು ಯಾವನೋ ಪೌರಾಣಿಕನನ್ನು, **"**ಮಾಸ ಪೂರ್ತ ನಡೆಯುವ ಚಾಂದ್ರಾಯಾಣವ್ರತದ ವಿಧಿ ಏನು?**"** ಎಂದು ಕೇಳಿರಬಹುದು. ಅವನು ಮಧ್ಯಾಹ್ನದಲ್ಲಿ ಚಂದ್ರಕಲೆಯು ಹ್ರಾಸ-ವಿಕಾಸವಾಗುವುದಕ್ಕನುಸಾರ ತುತ್ತನ್ನು ಕುಗ್ಗಿಸುತ್ತಾ-ಹಿಗ್ಗಿಸುತ್ತಾ ನಡುಹಗಲು ಊಟ ಮಾಡುವ ವಿಧಾನವನ್ನು ಹೇಳಿರಬಹುದು. ಈ ಶಾಸ್ತ್ರವನ್ನು ತಿಳಿದುಕೊಳ್ಳಲಾರದೆ, 'ಚಂದ್ರದರ್ಶನಮಾಡಿ ಭುಂಜಿಸಬೇಕೆಂದು ಹೇಳಿರಬಹುದು. ಅದನ್ನು ಈ ಮುಸಲ್ಮಾನರು ಹೀಗೆ ಮಾಡಿಕೊಂಡರು. ಆದರೆ, ವ್ರತದಲ್ಲಿ ಸ್ತ್ರೀ ಸಮಾಗಮದ ತ್ಯಾಗವಿರುತ್ತದೆ. ಅದೊಂದು ಮಾತನ್ನು ಹೆಚ್ಚಿಸಿ, ಖುದಾ **"**ನೀವು ಸ್ತ್ರೀ-ಸಮಾಗಮವನ್ನೂ ಕೂಡ ಮಾಡುತ್ತಾ ಹೋಗಿರಿ. ಮತ್ತು ರಾತ್ರಿಯಲ್ಲಿ ಬೇಕಾದರೆ ಅನೇಕಸಾರಿ ತಿನ್ನಿರಿ**"**.- ಎಂದು ಹೇಳಿಬಿಟ್ಟನು. ಈ ವ್ರತ ಆಯಿತಾದರೂ ಏನು? ಹಗಲಿನಲ್ಲಿ ತಿನ್ನಲ್ಲಿಲ್ಲ; ರಾತ್ರಿ ತಿನ್ನುತ್ತಾ ಹೋದರು. ಹಗಲಿನಲ್ಲಿ ತಿನ್ನದಿರುವುದು ಮತ್ತು ರಾತ್ರಿಯಲ್ಲಿ ತಿನ್ನುವುದು ಸೃಷ್ಟಿಕ್ರಮಕ್ಕೆ ವಿರುದ್ಧವಾಗಿರುತ್ತದೆ. (೩೪).

---

೨೫. ಇಲ್ಲಿ 'ಹರಾಮ್' ಎಂಬ ಪ್ರಯೋಗವಿದೆ. ಎಂದರೆ, ಅಪವಿತ್ರ ಎಂದರ್ಥ.

೨೬. ಉಪಾಸನೆ.

೨೭. ಇಲ್ಲಿ 'ಹಲಾಲ್' ಎಂಬ ಪ್ರಯೋಗವಿದೆ. ಎಂದರೆ ಪವಿತ್ರ ಎಂದಥ್.

*ಯಾರು ನಿಮ್ಮೊಡನೆ ಹೋರಾಡುತ್ತಾರೋ, ಅವರೊಂದಿಗೆ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ. ಎಲ್ಲಿ ಸಿಕ್ಕುವರೋ, ಅಲ್ಲಿ ನೀವು ಅವರನ್ನು ಸಾಯಿಸಿರಿ. ಕೊಲೆಗಿಂತ ಕಾಫಿರತನ ಕೆಟ್ಟದು.*[೨೮] *ಕಾಫಿರತನ ಧ್ವಂಸವಾಗುವವರೆಗೆ, ಮತ್ತು ಅಲ್ಲಾಹನ ಧರ್ಮ ನೆಲೆಗೊಳ್ಳುವವರೆಗೆ ಅವರೊಂದಿಗೆ ಕಾದಾಡಿರಿ. ಅವರು ನಿಮ್ಮ ಮೇಲೆಷ್ಟು ದುಷ್ಟತನಮಾಡಿದರೋ, ಅವರ ಮೇಲೆ ನೀವು ಅಷ್ಟೇ ದುಷ್ಟತನ ಮಾಡಿರಿ. (ಮಂ-೧, ಸಿ-೨, ಸೂ-೨, ಆ-೧೯೦- ೧೯೪)*

**ಸಮೀಕ್ಷಕ:–** ಕುರಾನಿನಲ್ಲಿ ಇಂತಹ ಮಾತುಗಳಿಲ್ಲದಿದ್ದರೆ, ಮುಸಲ್ಮಾನರು ಅನ್ಯಮತೀಯರ ಮೇಲೆ ಹಿಂದೆ ಮಾಡಿರುವಷ್ಟು ದೊಡ್ಡ ಅಪರಾಧಗಳನ್ನು ಮಾಡುತ್ತಿರಲಿಲ್ಲ. ಮತ್ತು ನಿರಪರಾಧರನ್ನು ಕೊಲ್ಲುವುದು ಅವರ ದೊಡ್ಡ ಪಾಪವಾಗಿದೆ. ಮುಸಲ್ಮಾನರ ಮತವನ್ನು ಗ್ರಹಿಸದಿರುವುದನ್ನು 'ಕುಫ್ರ್' (ಕಾಫಿರತನ) ಎನ್ನುತಾರೆ, ಎಂದರೆ ಮುಸಲ್ಮಾನರು ಕಾಫಿರತನಕ್ಕಿಂತ ಕೊಲೆಯನ್ನು ಒಳ್ಳೆಯದೆಂದು ಅಂಗೀಕರಿಸುತ್ತಾರೆ. "ನಮ್ಮ ಮತವನ್ನು ಒಪ್ಪಿಕೊಳ್ಳದವನನ್ನು ನಾವು ಕೊಲ್ಲುವೆವು".- ಎನ್ನುತ್ತಾರೆ. ಹಾಗೆಯೇ ಮಾಡುತ್ತಲೂ ಬಂದಿದ್ದಾರೆ. ಮತಕ್ಕಾಗಿ ಕಾದಾಡುತ್ತಾ-ಕಾದಾಡುತ್ತಾ ತಾವೇ ರಾಜ್ಯ ಮೊದಲಾದುವುಗಳಿಂದ ಚ್ಯುತರಾಗಿ ಹೋದರು. ಮತ್ತು ಅವರ ಮತ ಅನ್ಯ ಮತೀಯರ ಬಗೆಗೆ ಅತಿ ಕಠೋರವಾಗಿರುತ್ತದೆ. ಕಳುವಿಗೆ ಮುಯ್ಯಿ ಕಳುವೇ? ನಮಗೆ ಕಳ್ಳರೇ ಮೊದಲಾದವರು ಎಷ್ಟು ಅಪರಾಧಗಳನ್ನು ಕಳುವನ್ನು ಮಾಡುವರೋ, ನಾವೂ ಕೂಡ (ಅಷ್ಟೇ) ಕಳುವನ್ನು ಮಾಡೋಣವೇ? ಇದು ಸರ್ವಥಾ ಅನ್ಯಾಯದ ವರ್ತನೆಯಾಗಿದೆ. ಯಾವನಾರೂ ಅಜ್ಞಾನಿಯು ನಮ್ಮನ್ನು ಬೈದರೆ, ನಾವೂ ಅವನನ್ನು ಬೈಯೋಣವೇ? ಈ ವಚನ ಈಶ್ವರನದಲ್ಲ; ಮತ್ತು ಈಶ್ವರ ಭಕ್ತನಾದ ವಿದ್ವಾಂಸನದೂ ಅಲ್ಲ. ಹಾಗೂ ಈಶ್ವರೋಕ್ತವಾದ ಪುಸ್ತಕದ್ದಂತೂ ಆಗಲು ಶಕ್ಯವೇ ಇಲ್ಲ. ಇದು ಕೇವಲ ಸ್ವಾರ್ಥಿಗಳೂ, ಅಜ್ಞಾನಿಗಳೂ ಆದ ಮಾನವರದಾಗಿವೆ. (೩೫)

*ಅಲ್ಲಾಹನು ಕಲಹವನ್ನು ಸಖನಾಗಿಟ್ಟುಕೊಳ್ಳನು. ನಂಬಿಕೆ ಹೊಂದಿರುವಿರಾದರೆ, ಓ ಮಾನವರೇ! ಇಸ್ಲಾಮಿನಲ್ಲಿ ಪ್ರವೇಶಿಸಿರಿ. (ಮಂ-೧, ಸಿ-೨, ಸೂ-೨, ಆ-೨೦೫, ೨೦೮)*

**ಸಮೀಕ್ಷಕ:–** ಖುದಾ ಕಲಹವನ್ನು ಸಖ್ಯಭಾವದಿಂದ ನೋಡನಾದರೆ, ಮುಸಲ್ಮಾನರಿಗೆ ಜಗಳವಾಡಲು ಅದೇಕೆ ತಾನೇ ಪ್ರೇರಣೆ ಕೊಡುತ್ತಾನೆ? ಮತ್ತು ಜಗಳಗಂಟೀ ಮುಸಲ್ಮಾನರೊಂದಿಗೆ ಮೈತ್ರಿಯನ್ನೇಕೆ ಮಾಡಿಕೊಳ್ಳುತ್ತಾನೆ? ಮುಸಲ್ಮಾನ ಮತದಲ್ಲಿ ಸೇರುವುದರಿಂದಲೇ ಖುದಾ ಪ್ರಸನ್ನನಾಗುತ್ತಾನೆಯಾದರೆ, ಅವನು ಕೇವಲ ಮುಸಲ್ಮಾನರ ಪಕ್ಷಪಾತಿಯಾಗಿದ್ದಾನೆ; ಅವನು ಸಮಸ್ತ ಜಗತ್ತಿನ ಈಶ್ವರನಲ್ಲ. ಈ ಕಾರಣದಿಂದ ಇಲ್ಲಿ ಕುರಾನ್ ಈಶ್ವರಕೃತವಲ್ಲ. ಮತ್ತು ಇದರಲ್ಲಿ ಹೇಳಲ್ಪಟ್ಟಿರುವವನು ಈಶ್ವರನೂ ಆಗಿರಲಾರನು ಎಂದೇ ಸಿದ್ಧವಾಗುತ್ತದೆ. (೩೬)

*ಖುದಾ ಯಾವನನ್ನು ಬಯಸುವನೋ ಅವನಿಗೆ ಅನಂತ ಜೀವಿಕೆಯನ್ನು ಕೊಡುವನು. (ಮಂ-೧, ಸಿ-೨, ಸೂ-೨, ಆ-೨೧೨)*

**ಸಮೀಕ್ಷಕ:–** ಪಾಪ-ಪುಣ್ಯಗಳಿಲ್ಲದೆ ಖುದಾ ಹೀಗೆಯೇ ಅನಂತ ಜೀವಿಕೆಯನ್ನು ಕೊಡುತ್ತಾನೆಯೇ? ಹೀಗೆ ಆದಲ್ಲಿ, ಒಳಿತು ಕೆಡಕುಗಳನ್ನು ಮಾಡುವುದು ಒಂದೇ ಸಮವಾಯಿತು. ಏಕೆಂದರೆ, ಸುಖ-ದುಃಖಗಳ ಪ್ರಾಪ್ತಿಯಾಗುವುದು ಅವನ ಇಚ್ಛೆಯಿಂದಲೇ. ಇದರಿಂದ ಧರ್ಮಕ್ಕೆ ವಿಮುಖರಾಗಿ ಮುಸಲ್ಮಾನರು ತಮಗೆ ಬೇಕಾದಂತಹ ಆಚರಣವನ್ನು ಮಾಡುತ್ತಾರೆ. ಮತ್ತು ಎಲ್ಲಿಯೋ ಅಲ್ಲೊಬ್ಬರು-ಇಲ್ಲೊಬ್ಬರು ವಿರಳವಾಗಿ ಕುರಾನಿನ ಈ ವಚನದ ಮೇಲೆ ನಂಬಿಕೆಯಿಡದೆ ಧರ್ಮಾತ್ಮರೂ ಆಗಿರುತ್ತಾರೆ (೩೭)

*ಪ್ರಶ್ನಿಸುತ್ತೇವೆ ನಿನ್ನನ್ನು. ರಜಸ್ವಲೆಗೆ ಆಕೆ ಅಪವಿತ್ರಳಾಗಿದ್ದಾಳೆ – ಎಂದು ಹೇಳು. ದೂರವಿರಿ ಋತುಕಾಲದಲ್ಲಿ. ಎಂದಿನವರೆಗೆ ಅವರು ಪವಿತ್ರರಾಗುವುದಿಲ್ಲವೋ ಅಂದಿನವರೆಗೆ ಅವರ ಹತ್ತಿರ ಹೋಗಬೇಡಿರಿ. ಅವರು ಮಿಂದು, ಮೈಲಿಗೆ ಕಳೆದುಕೊಂಡಾಗ ಅವರ ಬಳಿ ಆ ಎಡೆಯಿಂದ ಹೋಗಿರಿ. ಖುದಾ ಅಪ್ಪಣೆಕೊಟ್ಟಿದ್ದಾನೆ. ನಿಮ್ಮ ಪತ್ನಿಯರು ನಿಮಗೆ ಕ್ಷೇತ್ರಗಳಾಗಿದ್ದಾರೆ. ಸರಿ; ಹೋಗಿರಿ ಹೇಗೆ ಬೇಕೋ ಹಾಗೆ ನಿಮ್ಮ ಹೊಲಕ್ಕೆ. ನಿಮ್ಮನ್ನು ಅಲ್ಲಾಹನು ವ್ಯರ್ಥವಾದ ಶಪಥಗಳಿಗೆ ಸಿಕ್ಕಿಸುವುದಿಲ್ಲ. (ಮಂ-೧, ಸಿ-೨, ಸೂ-೨, ಆ-೨೨೨. ೨೨೪)*

---

೨೮. ಇಲ್ಲಿ ' ಕತ್ಲ್ ಸೇ ಕುಫ್ರ್ ಬುರಾ ಹೈ' ಎಂಬ ಪ್ರಯೋಗವಿದೆ.

**ಸಮೀಕ್ಷಕ:–** ರಜಸ್ವಲೆಯ ಸ್ಪರ್ಶದ, ಸಂಗದ ನಿಷೇಧದ ಉಲ್ಲೇಖ ಒಳ್ಳೆಯ ವಿಷಯವಾಗಿದೆ. ಆದರೆ, ಸ್ತ್ರೀಯರನ್ನು ಹೊಲಗಳಿಗೆ ಎಣೆಯೆಂದು ಬರೆದಿರುವುದೂ, ಮತ್ತು ಯಾವ ರೀತಿಯಿಂದ ಬೇಕಾದರೂ ಹೋಗಿರಿ–ಎಂದು ಹೇಳಿರುವುದೂ ಮಾನವರನ್ನು ವಿಷಯಿಗಳನ್ನಾಗಿ ಮಾಡುವ ಪ್ರಚೋದನೆಯಾಗಿದೆ. ಖುದಾ ವ್ಯರ್ಥವಾದ ಪ್ರತಿಜ್ಞೆಗಳಿಂದ ಬದ್ಧರನ್ನಾಗಿ ಮಾಡನು–ಎಂದರೆ, ಎಲ್ಲರೂ ಸುಳ್ಳನ್ನಾಡುವರು. ಶಪಥಗಳನ್ನು ಮುರಿಯುವರು. ಇದರಿಂದ ಖುದಾ ಸುಳ್ಳಿನ ಪ್ರವರ್ತಕನಾಗುವನು. (೩೮)

*ಅಲ್ಲಾಹನಿಗೆ ಸಾಲಕೊಡುವ ಮಾನವನು ಅದಾವನಿದ್ದಾನೆ? ಹೇಳುವುದಾದರೂ ಏನು? ದಿಟವಾಗಿ ಅಲ್ಲಾಹನು ಅದನ್ನು ದ್ವಿಗುಣಗೊಳಿಸುವನು ಅವನ ಸಲುವಾಗಿ. (ಮಂ–೧. ಸಿ–೨, ಸೂ–೨, ಆ–೨೪೫)*

**ಸಮೀಕ್ಷಕ:–** ಚೆನ್ನಾಯಿತು! ಖುದಾನಿಗೆ ಕಡತೆಗೆದುಕೊಳ್ಳುವ[೨೯] ಒತ್ತಡವಾದರೂ ಏನಿದೆ? ಸಮಸ್ತ ಜಗತ್ತನ್ನೂ ಸೃಜಿಸಿದ ಆ ಭಗವಂತ ಮಾನವನಿಂದ ಸಾಲ ತೆಗೆದುಕೊಳ್ಳುತ್ತಾನೆಯೇ? ಎಂದಿಗೂ ಇಲ್ಲ. ತಿಳುವಳಿಕೆ ಇಲ್ಲದೆ ಹೀಗೆ ಏನೇನೋ ಹೇಳಲ್ಪಡಬಹುದು. ಅವನ ಧನಾಗಾರ ತೆರವಾಗಿ ಹೋಗಿದ್ದಿತೇನು? ಸಾಲವೆತ್ತ ಹತ್ತಲು ಅವನು ಹುಂಡಿ–ಸಟ್ಟಾ–ವ್ಯಾಪಾರ ಮೊದಲಾದುವುದಕ್ಕೇನಾದರೂ ಕೈಹಾಕಿ ನಷ್ಟಕ್ಕೀಡಾದನೇನು? ಸಾಲದೆಂದು, ಎರಡು ಪಟ್ಟು ಕೊಡಲು ಬೇರೆ ಒಪ್ಪಿಕೊಳ್ಳುತ್ತಾನೆ! ಇದು ದಣಿಯ ಕೆಲಸವೇ? ಆದರೆ, ದಿವಾಳಿಯೆದ್ದವರು, ಅಥವಾ ದುಂದುಗಾರಿಕೆಯವರು ಹಾಗೂ ಆದಾಯ ಕಡಿಮೆಯಿರುವವರು ಹೀಗೆ ಮಾಡಬೇಕಾಗುತ್ತದೆ. ಆ ಸ್ಥಿತಿ ಈಶ್ವರಿನಿಗೆಂದೂಬಾರದು. (೩೯)

*ಅವರಲ್ಲಿ ಯಾವನೂ ನಂಬಿಕೆಯನ್ನಿಡಲಿಲ್ಲ. ಮತ್ತು ಯಾವನೋ ಕಾಫಿರನಾದನು. ಅಲ್ಲಾಹನು ಬಯಸದಿದ್ದಲ್ಲಿ, ಹೋರಾಡುತ್ತಿರಲಿಲ್ಲ. ಅಲ್ಲಾಹನು ತನಗೆ ಬೇಕಾದುದನ್ನು ಮಾಡುತ್ತಾನೆ. (ಮಂ–೧, ಸಿ–೩, ಸೂ–೨, ಆ–೨೫೩)*

**ಸಮೀಕ್ಷಕ :–** ನಡೆಯುವ ಯುದ್ಧಗಳಷ್ಟೂ ಈಶ್ವರೇಚ್ಛೆಯಿಂದಲೇ ಆಗುತ್ತವೆ ಏನು? ಅವನು ಅಧರ್ಮ ಮಾಡಬಯಸುತ್ತಾನಾದರೆ, ಮಾಡಬಲ್ಲನೇನು? ಸ್ಥಿತಿ ಹೀಗಿದ್ದಲ್ಲಿ ಅವನು ಖುದಾನೇ ಅಲ್ಲ. ಏಕೆಂದರೆ, ಶಾಂತಿಭಂಗಮಾಡಿ, ಯುದ್ಧ ಮಾಡಿಸುವುದು, ಉತ್ತಮವಾದ ಮಾನವನ ಕರ್ಮವೂ ಅಲ್ಲ; ಎಂದ ಮೇಲೆ, ಈ ಕುರಾನ್ ಈಶ್ವರರಚಿತವೂ ಅಲ್ಲ. ಯಾವ ಧಾರ್ಮಿಕನಾದ ಪುರುಷನ ರಚನೆಯೂ ಅಲ್ಲವೆಂದೇ ವಿದಿತವಾಗುತ್ತದೆ. (೪೦)

*ಆಕಾಶದಲ್ಲಿ ಮತ್ತು ಪೃಥಿವಿಯ ಮೇಲೆ ಏನೇನಿದೆಯೋ, ಅದೆಲ್ಲವೂ ಅವನಿಗಾಗಿಯೇ ಇದೆ. ಅವನ ಬಯಕೆಯಂತೆ, ಅವನ ಆಸನ ಆಕಾಶ ಮತ್ತು ಪೃಥಿವಿಯನ್ನು ವ್ಯಾಪಿಸಿಕೊಂಡಿದೆ. (ಮಂ–೧, ಸಿ–೩, ಸೂ–೨, ಆ–೨೫೫)*

ಆಕಾಶದಲ್ಲಿ ಹಾಗೂ ಭೂಮಿಯ ಮೇಲೆ ಇರುವ ಪದಾರ್ಥಗಳನ್ನೆಲ್ಲವನ್ನೂ, ಜೀವರಿಗಾಗಿ ಪರಮಾತ್ಮನು ಉತ್ಪನ್ನಮಾಡಿದ್ದಾನೆ; ತನಗಾಗಿಯಲ್ಲ. ಏಕೆಂದರೆ, ಅವನು ಪೂರ್ಣಕಾಮನಾಗಿದ್ದಾನೆ. ಅವನಿಗೆ ಯಾವುದೇ ಪದಾರ್ಥದ ಅಪೇಕ್ಷೆಯೂ ಇಲ್ಲ. ಅವನಿಗೆ ಕುರ್ಚಿಯಿರುವುದಾದರೆ, ಅವನು ಏಕದೇಶೀಯನಾಗಿರಬೇಕಾದೀತು. ಯಾವನು ಏಕದೇಶೀಯ ನಾಗಿರುತ್ತಾನೋ, ಅವನು ಈಶ್ವರನೆನಿಸಿಕೊಳ್ಳುವುದಿಲ್ಲ. ಏಕೆಂದರೆ ಈಶ್ವರನಾದರೋ ವ್ಯಾಪಕನಾಗಿದ್ದಾನೆ. (೪೧)

*ಅಲ್ಲಾಹನು ಸೂರ್ಯನನ್ನು ಪೂರ್ವದಿಂದ ತರುತ್ತಾನೆ. ನೀನು ಪಶ್ಚಿಮದಿಂದ ಕರೆದು ತಾ, ನೋಡೋಣ. ಕಾಫಿರನಾಗಿದ್ದವನು ದಿಗ್ಭ್ರಾಂತನಾದನು. ನಿಶ್ಚಯವಾಗಿ ಅಲ್ಲಾಹನು ಪಾಪಿಗಳಿಗೆ ಮಾರ್ಗವನ್ನು ತೋರಿಸುವುದಿಲ್ಲ. (ಮಂ–೧, ಸಿ–೩, ಸೂ–೨, ಆ–೨೫೮).*

**ಸಮೀಕ್ಷಕ :–** ಈಗ ನೋಡಿರಿ ಈ ಅವಿದ್ಯೆಯ ಮಾತನ್ನು. ಸೂರ್ಯನು ಪೂರ್ವದಿಂದ ಪಶ್ಚಿಮಕ್ಕೂ ಹೋಗುವುದಿಲ್ಲ; ಪಶ್ಚಿಮದಿಂದ ಪೂರ್ವಕ್ಕೂ ಎಂದಿಗೂ ಬರುವುದಿಲ್ಲ; ಹೋಗುವುದಿಲ್ಲ. ಅವನಂತೂ ತನ್ನ ಪರಿಧಿಯಲ್ಲಿ ತಿರುಗುತ್ತಾ ಇರುತ್ತಾನೆ.

---

೨೯. ಇದೇ ಆಯತ್ತಿನ ಭಾಷ್ಯದಲ್ಲಿ 'ತಫಸೀರ್ ಹುಸೇನೀ' ಯಲ್ಲಿ ಬರೆಯಲಾಗಿದೆಯೇನೆಂದರೆ,
"ಒಬ್ಬ ಮನುಷ್ಯನು ಮಹಮ್ಮದ ಸಾಹೇಬರ ಬಳಿಗೆ ಬಂದನು. ಅನು–' ಓ ರಸೂಲಲ್ಲಾಹ ! ಖುದಾ ಸಾಲವನ್ನೇತಕ್ಕೆ ಕೇಳುತ್ತಾನೆ" ಎಂದು ಕೇಳಿದನು.
ಅವರು ಉತ್ತರ ಕೊಟ್ಟರು– 'ನಿನ್ನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವುದಕ್ಕಾಗಿ' ಎಂದು.
ಅವನು –'ನೀವು ಜಾಮೀನು ತೆಗೆದುಕೊಂಡರೆ, ನಾನು ಕೊಡುತ್ತೇನೆ' ಎಂದು ಹೇಳಿದನು.
ಮಹಮ್ಮದ ಸಾಹೇಬರು ಅವನ ಜಾಮೀನನ್ನು ತೆಗೆದುಕೊಂಡು ಬಿಟ್ಟರು.
ಖುದಾನ ಮೇಲೆ ಭರವಸೆ ಬರಲಿಲ್ಲ; ಅವನ ದೂತನ ಮೇಲೆ ಬಂದಿತು. –ದಯಾನಂದ ಸರಸ್ವತಿ.

ಇದರಿಂದ ಕುರಾನಿನ ಲೇಖಕನಿಗೆ ಖಗೋಳ ವಿದ್ಯೆಯೂ ಬರುತ್ತಿರಲಿಲ್ಲ; ಭೂಗೋಳ ವಿದ್ಯೆಯೂ ಬರುತ್ತಿರಲಿಲ್ಲವೆಂದು ನಿಶ್ಚಯವಾಗಿ ತಿಳಿಯಲ್ಪಡುತ್ತದೆ. ಪಾಪಿಗಳಿಗೆ ಮಾರ್ಗವನ್ನು ತೋರಿಸುವುದಿಲ್ಲವಾದರೆ, ಪುಣ್ಯಾತ್ಮರುಗಳಿಗೂ ಕೂಡ ಮುಸಲ್ಮಾನರ ಖುದಾನ ಅವಶ್ಯಕತೆಯಿಲ್ಲ. ಏಕೆಂದರೆ, ಧರ್ಮಾತ್ಮರಂತೂ ಧರ್ಮಮಾರ್ಗದಲ್ಲಿಯೇ ಇರುತ್ತಾರೆ. ಮಾರ್ಗವನ್ನು ತೋರಿಸುವುದಾದರೂ ಧರ್ಮದಿಂದ ಭ್ರಷ್ಟರಾದ ಮನುಷ್ಯರಿಗಾಗಿಯೇ ತಾನೇ? ಆ ಕರ್ತವ್ಯವನ್ನು ಮಾಡದಿರುವುದರಿಂದ, ಕುರಾನಿನ ಕರ್ತೃವಿಗೆ ದೊಡ್ಡ ಮರೆಗುಳಿತನ ದೋಷತಟ್ಟುತ್ತದೆ. (೪೨)

*ನಾಲ್ಕು ಪ್ರಾಣಿಗಳಿಂದ ಆರಿಸಿಕೋ. ಅವುಗಳ ಲಕ್ಷಣವನ್ನು ಗುರುತಿಟ್ಟುಕೋ, ಮತ್ತು ಪ್ರತಿಯೊಂದು ಪರ್ವತದ ಮೇಲಯೂ ಅವುಗಳಲ್ಲಿಂದ ಒಂದೊಂದು ತುಂಡನ್ನು ಇಟ್ಟುಬಿಡು. ಮತ್ತೆ ಅವುಗಳನ್ನು ಕರೆ. ಓಡುತ್ತಾ ನಿನ್ನ ಹತ್ತಿರ ಹೊರಟು ಬರುವುವು. (ಮಂ-೧, ಸಿ-೩, ಸೂ-೨, ಆ-೨೬೦)*

**ಸಮೀಕ್ಷಕ:-** ಭೇಷ್! ಭೇಷ್!! ನೋಡಿರಿ. ಮುಸಲ್ಮಾನರ ಖುದಾ ಐಂದ್ರಜಾಲಿಕನಂತೆ ಆಟವಾಡುತ್ತಿದ್ದಾನೆ. ಇಂತಹ ಮಾತುಗಳಿಂದಲೇ ಖುದಾನ ಖುದಾತನ ಸಿದ್ಧಿಸುತ್ತದೆಯೇ? ಬುದ್ಧಿಶಾಲಿಗಳಾದ ಜನರು ಇಂತಹ ಖುದಾನಿಗೆ ತಿಲಾಂಜಲಿಯಿತ್ತು, ದೂರವಿರುವರು. ಮತ್ತು ಮೂರ್ಖಜನರು ಸಿಕ್ಕಿಹಾಕಿಕೊಳ್ಳುವರು. ಇದರಿಂದ ಖುದಾನ ಹಿರಿಮೆ ವ್ಯಕ್ತವಾಗುವ ಬದಲು, ಕಿರಿಮೆಯೇ ಗಂಟು ಬೀಳುತ್ತದೆ. (೪೩).

*ಯಾವನನ್ನು ಬಯಸುತ್ತಾನೋ, ಅವನಿಗೆ ನೀತಿಯನ್ನು ಕೊಡುತ್ತಾನೆ. (ಮಂ-೧, ಸಿ-೩, ಸೂ-೨, ಆ-೨೬೯)*

**ಸಮೀಕ್ಷಕ:-** ಯಾವನನ್ನು ಬಯಸುತ್ತಾನೋ, ಅವನಿಗೆ ನೀತಿಯನ್ನು ಕೊಡುತ್ತಾನೆಯಾದರೆ, ಯಾವನನ್ನು ಬಯಸುವುದಿಲ್ಲವೋ, ಅವನಿಗೆ ಅನೀತಿಯನ್ನು ಕೊಡುತ್ತಿರಬಹುದು. ಈ ವಿಷಯ ಈಶ್ವರತೆಯದಲ್ಲ. ಆದರೆ, ಯಾವನು ಪಕ್ಷಪಾತವನ್ನುಳಿದು, ಎಲ್ಲರಿಗೂ ನೀತಿಯ ಉಪದೇಶವನ್ನು ಮಾಡುತ್ತಾನೋ, ಅವನೇ ಈಶ್ವರನೂ ಮತ್ತು ಆಪ್ತನೂ ಆಗಬಲ್ಲನು; ಬೇರೆಯವನಲ್ಲ. (೪೪).

*ಯಾವನನ್ನು ಇಚ್ಛಿಸುವನೋ, ಅವನನ್ನು ಕ್ಷಮಿಸುವನು; ಯಾವನನ್ನು ದಂಡಿಸುವನೋ, ಅವನಿಗೆ ಶಿಕ್ಷೆಯನ್ನು ಕೊಡುವನು. ಏಕೆಂದರೆ, ಅವನು ಎಲ್ಲ ವಸ್ತುಗಳಿಗಿಂತ ಬಲಶಾಲಿಯಾಗಿದ್ದಾನೆ. (ಮಂ-೧, ಸಿ-೩, ಸೂ-೨, ಆ-೨೮೪).*

**ಸಮೀಕ್ಷಕ:-** ಕ್ಷಮಾಯೋಗ್ಯನಾದವನನ್ನು ಕ್ಷಮಿಸದಿರುವುದು, ಅಯೋಗ್ಯವನ್ನು ಕ್ಷಮಿಸುವುದು ಐಲುದೊರೆ[೨೯ಎ]ಯದ ರಂತಹ ಕರ್ಮವಲ್ಲವೇನು? ಈಶ್ವರನು ಯಾವನನ್ನು ಅಪೇಕ್ಷಿಸುತ್ತಾನೋ ಅವನನ್ನು ಪಾಪಿಯನ್ನಾಗಿ ಅಥವಾ ಪುಣ್ಯಾತ್ಮನನ್ನಾಗಿ ಮಾಡುತ್ತಾನೆಯಾದರೆ, ಜೀವನಿಗೆ ಪಾಪ-ಪುಣ್ಯ ತಗಲಲೇಬಾರದು. ಈಶ್ವರನು ಅವನನ್ನು ಹಾಗೆಯೇ ಮಾಡಿದನಾದರೆ, ಜೀವನಿಗೆ ಸುಖ-ದುಃಖಗಳೂ ಉಂಟಾಗಬಾರದು. ಹೇಗೆ ಸೇನಾಪತಿಯ ಆಜ್ಞೆಯಂತೆ ಯಾವನಾದರೂ ಭೃತ್ಯನು ಯಾವನನ್ನಾದರೂ ಸಂಹರಿಸಿದರೆ ಅಥವಾ ರಕ್ಷಿಸಿದರೆ, ಅದಕ್ಕೆ ಅವನು ಹೊಣೆಗಾರನಾಗುವುದಿಲ್ಲವೋ, ಹಾಗೆಯೇ ಆ ಜೀವರೂ ಕೂಡ (ಫಲಭೋಕ್ತೃಗಳು) ಆಗುವುದಿಲ್ಲ. (೪೫).

*ಯಾವವುಗಳಲ್ಲಿ ನಾಲೆಗಳು ಹರಿಯುತ್ತವೋ, ಅಂತಹ ಸ್ವರ್ಗಗಳು ಅಲ್ಲಾಹನ ಕಡೆಯಿಂದ ಸಿಕ್ಕುತ್ತವೆ; ಅವುಗಳಲ್ಲಿಯೇ ಸರ್ವದಾ ಇರುವ ಶುದ್ಧವಾದ (ಬೀಬಿ) ಅಪ್ಸರೆಯರು ಅಲ್ಲಾಹನ ಪ್ರಸನ್ನತೆಯಿಂದ ಇರುವರು; ಅಲ್ಲಹಾನು ಅವರನ್ನು ಸೇವಕರೊಂದಿಗೆ ನೋಡುವವನಾಗಿದ್ದಾನೆ-ಎನ್ನುವುದಕ್ಕಿಂತ ಒಳ್ಳೆಯ ಯಾವ ಸಮಾಚಾರವನ್ನು ನಿಷ್ಠಾವಂತರಿಗೆ ಕೊಡಲಿ? ಹೇಳು. (ಮಂ-೧, ಸಿ-೩, ಸೂ-೩, ಆ-೧೫)*

**ಸಮೀಕ್ಷಕ:-** ಭಾಪು! ಬಾಪು!! ಇದು ಸ್ವರ್ಗವೋ ಅಥವಾ ವೇಶ್ಯಾವಾಟಿಕೆಯೋ? ಇವನನ್ನು ಈಶ್ವರನೆನ್ನಬೇಕೋ ಅಥವಾ ಸ್ತ್ರೈಣನೆನ್ನಬೇಕೋ? ಯಾವುದರಲ್ಲಿ ಇಂತಹ ಮಾತುಗಳಿರುತ್ತವೋ, ಅದನ್ನು ಈಶ್ವರರಚಿತವಾದುದೆಂದು ಯಾವನಾದರೂ ಬುದ್ಧಿಶಾಲಿಯು ಅಂಗೀಕರಿಸಬಲ್ಲನೇನು? ಈ ಪಕ್ಷಪಾತವನ್ನೇಕೆ ಮಾಡುತ್ತಾನೆ? ಯಾವ ಅಪ್ಸರೆಯರು ಸದಾ ಸ್ವರ್ಗದಲ್ಲಿರುತ್ತಾರೋ, ಅವರು ಇಲ್ಲಿ ಜನ್ಮವೆತ್ತಿ ಅಲ್ಲಿ ಹೋಗಿದ್ದಾರೋ ಅಥವಾ ಅಲ್ಲಿಯೇ ಉತ್ಪನ್ನರಾಗಿದ್ದಾರೋ? ಇಲ್ಲಿ ಜನ್ಮವೆತ್ತಿ ಅಲ್ಲಿಗೆ ಹೋಗಿರುವರೆಂದರೆ ಮತ್ತು ಕಯಾಮತ್ತಿನ ರಾತ್ರಿಗೆ ಮೊದಲೇ ಅಲ್ಲಿಗೆ ಅಪ್ಸರೆಯರನ್ನು ಕರೆಯಿಸಿಕೊಂಡು ಬಿಟ್ಟಿದ್ದರೆ,

---

೨೯ಎ. ಐಲುದೊರೆಯ ಕಥೆಯನ್ನು ಗ್ರಂಥಕರ್ತರು ತಮ್ಮ 'ವ್ಯವಹಾರಭಾನು' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ.-ಯು.ಮೀ.

ಅವರುಗಳ ಗಂಡಂದಿರನ್ನೇಕೆ ಕರೆಯಿಸಿಕೊಳ್ಳಲಿಲ್ಲ? ಮತ್ತು ಕಯಾಮತ್ತಿನ ರಾತ್ರಿಯಲ್ಲಿ ಎಲ್ಲರ ನ್ಯಾಯವೂ ತೀರ್ಮಾನಿಸಲ್ಪಡುವುದು-ಎಂಬ ನಿಯಮವನ್ನೇಕೆ ಮುರಿದನು? ಅಲ್ಲಿಯೇ ಹುಟ್ಟಿದವರಾಗಿದ್ದರೆ, ಕಯಾಮತ್ತಿನವರೆಗೆ ಅವರು ಹೇಗೆ ನಿರ್ವಾಹ ಮಾಡುತ್ತಾರೆ? ಅವರುಗಳಿಗೆ ಪುರುಷರುಗಳೂ ಇದ್ದಾರೆಯಾದರೆ, ಇಲ್ಲಿಂದ ಸ್ವರ್ಗಕ್ಕೆ ಕರೆದೊಯ್ಯಲ್ಪಡುವ ಮುಸಲ್ಮಾನರಿಗೆ ಖುದಾ ಅಪ್ಸರೆಯರನ್ನು ಎಲ್ಲಿನಿಂದ ಒದಗಿಸುವನು? ಮತ್ತು ಸ್ವರ್ಗದಲ್ಲಿ ಸದಾ ಇರುವ ಅಪ್ಸರೆಯರನ್ನು ಸೃಜಿಸಿರುವಂತೆ, ಸದಾ ಅಲ್ಲಿಯೇ ಇರುವ ಪುರುಷರನ್ನೇಕೆ ಸೃಜಿಸಲಿಲ್ಲ? ಆದುದರಿಂದ, ಮುಸಲ್ಮಾನರ ಖುದಾ ಅನ್ಯಾಯಕಾರಿ ಮತ್ತು ತಿಳಿಗೇಡಿಯಾಗಿದ್ದಾನೆ. (೪೬)

*ನಿಶ್ಚಯವಾಗಿ ಅಲ್ಲಾಹನ ಕಡೆಯಿಂದ ಇಸ್ಲಾಂ ಧರ್ಮವಿದೆ. (ಮಂ-೧, ಸಿ-೩, ಸೂ-೩, ಆ-೧೮)*

**ಸಮೀಕ್ಷಕ:-** ಅಲ್ಲಾಹನು ಮುಸಲ್ಮಾನರಿಗೆ ಮಾತ್ರವಿದ್ದಾನೆಯೇ? ಬೇರೆಯವರಿಗೆ ಇಲ್ಲವೇ? ೧,೩೦೦ ವರ್ಷಗಳಿಗಿಂತ ಮುಂಚೆ ಈಶ್ವರೀಯ ಮತವು ಇದ್ದಿತೋ, ಅಥವಾ ಇಲ್ಲವೋ? ಅದೇ ಕಾರಣದಿಂದ ಈ ಕುರಾನ್ ಈಶ್ವರನು ರಚಿಸಿದುದಂತೂ ಅಲ್ಲ. ಆದರೆ, ಯಾವನೋ ಪಕ್ಷಪಾತಿ ರಚಿಸಿದುದಾಗಿದೆ-ಎಂದು ತೋರುತ್ತದೆ. (೪೭).

*ಯಾವ ಯಾವ ಜೀವನು ಏನೇನನ್ನು ಸಂಪಾದಿಸಿದನೋ ಅವನವನಿಗೆ ಅದು ಪೂರ್ತಿಯಾಗಿ ಕೊಡಲ್ಪಡುವುದು. ಮತ್ತು ಅವರಿಗೆ ಅನ್ಯಾಯ ಮಾಡಲ್ಪಡುವುದಿಲ್ಲ. 'ಓ ಅಲ್ಲಾಹ್! ನೀನೇ ದೇಶದ ಸ್ವಾಮಿಯಾಗಿದ್ದೀಯೆ. ಯಾವನನ್ನು ಬಯಸುವೆಯೋ, ಅವನಿಗೆ ಕೊಡುತ್ತೀಯೆ. ಯಾವನಿಂದ (ಕಿತ್ತುಕೊಳ್ಳಬೇಕೆನ್ನಿಸುವುದೋ) ಅವನಿಂದ ಕಿತ್ತುಕೊಳ್ಳುವೆ. ನಿನಗೆ ಬೇಕಾದವನಿಗೆ ಪ್ರತಿಷ್ಠೆಯನ್ನು ಕೊಡುತ್ತೀಯೆ. ಯಾವನಿಗೆ(ಹಾಗೆ ಮಾಡಬೇಕೆಂದು ತೋರುವುದೋ) ಅವನಿಗೆ ಅಗೌರವವನ್ನೂ ಉಂಟುಮಾಡುವೆ. ಎಲ್ಲವೂ ನಿನ ಕೈಯಲ್ಲಿಯೇ ಇದೆ. ಸರ್ವವಸ್ತುಗಳಿಗಿಂತಲೂ ನೀನೇ ಬಲಶಾಲಿಯಾಗಿರುವೆ. ರಾತ್ರಿಯಲ್ಲಿ ಹಗಲನ್ನೂ, ಹಗಲಿನಲ್ಲಿ ರಾತ್ರಿಯನ್ನೂ ಅಳವಡಿಸುತ್ತೀಯೆ. ಮತ್ತು ಸತ್ತವನನ್ನು ಜೀವಿತನಿಂದಲೂ, ಜೀವಿತನನ್ನು ಸತ್ತವನಿಂದಲೂ ಹೊರತರುತ್ತೀಯೆ. ಮತ್ತು ಯಾವನಿಗೆ (ಕೊಡ)ಬೇಕೆನಿಸಿದರೆ, ಅವನಿಗೆ ನೀನು ಅನಂತ ಭೋಜನವನ್ನು ಕೊಡುತ್ತೀಯೆ'. ಎಂದು ಹೇಳು. ಮುಸಲ್ಮಾನರ ಹೊರತು, ಕಾಫಿರನನ್ನು ಮಿತ್ರನನ್ನಾಗಿ ಮಾಡಿಕೊಳ್ಳದಿರುವುದು ಮುಸಲ್ಮಾನರಿಗೆ ಉಚಿತವಾಗಿರುತ್ತದೆ. ಯಾವನಾದರೂ ಹೀಗೆ ಮಾಡಿದನಾದರೆ, ತೀರಿತು; ಅವನು ಅಲ್ಲಾಹನ ಕಡೆಯವನಲ್ಲ. ನಿನಗೆ ಬೇಕಾದುದನ್ನು ಹೇಳಿಕೋ ಅಲ್ಲಾಹನಲ್ಲಿ. ಅವನ ಪಕ್ಷವನ್ನು ವಹಿಸು. ನನ್ನ ಅಲ್ಲಾಹನು ಬಯಸುವನಾದರೆ, ನಿಮ್ಮನ್ನೂ ಮತ್ತು ನಿಮ್ಮ ಪಾಪವನ್ನೂ ಕ್ಷಮಿಸುವನು. ನಿಜವಾಗಿ ಕರುಣಾಮಯನಾಗಿದ್ದಾನೆ. (ಮಂ-೧, ಸಿ-೩, ಸೂ-೩, ಆ-೨೪-೨೭,೩೦)*

**ಸಮೀಕ್ಷಕ:-** ಪ್ರತಿಯೊಬ್ಬ ಜೀವನಿಗೂ ಕರ್ಮಗಳ ಪೂರ್ಣ-ಪೂರ್ಣ ಫಲ ಕೊಡಲ್ಪಡುವುದಾದರೆ, ಕ್ಷಮೆ ಮಾಡಲ್ಪಡುವುದಿಲ್ಲ. ಮತ್ತು ಕ್ಷಮೆ ಮಾಡಲ್ಪಡುವುದಾದರೆ, ಪೂರ್ಣ ಫಲ ಕೊಡಲ್ಪಡುವುದಿಲ್ಲ. ಮತ್ತು ಅನ್ಯಾಯವಾಗುವುದು. ಉತ್ತಮ ಕರ್ಮಗಳಿಲ್ಲದೆ ರಾಜ್ಯವನ್ನು ಕೊಡುವನಾದರೂ, ಅನ್ಯಾಯಕಾರಿಯಾಗಿ ಹೋಗುವನು. ಭಲೇ! ಜೀವಿತನಿಂದ ಮೃತನೂ, ಮತ್ತು ಮೃತನಿಂದ ಜೀವಿತನೂ ಎಂದಾದರೂ ಆಗಬಲ್ಲನೇ? ಏಕೆಂದರೆ, ಈಶ್ವರನ ವ್ಯವಸ್ಥೆ ತುಂಡರಿಸಲು ಮತ್ತು ಮುರಿಯಲು ಆಗುವುದಾಗಿದೆ. ಎಂದಿಗೂ ವಿನಿಮಯವೂ ಕೂಡ ಆಗಲಾರದು. ಮುಸಲ್ಮಾನರ ಮತದಲ್ಲಿಲ್ಲದವರನ್ನು ಕಾಫಿರರೆಂದು ನಿರ್ಧರಿಸುವ ಪಕ್ಷಪಾತದ ಮಾತುಗಳನ್ನೀಗ ನೋಡಿರಿ. ಅವರಲ್ಲಿ ಶ್ರೇಷ್ಠರಾದವರೊಂದಿಗೂ ಮೈತ್ರಿಯನ್ನಿಟು ಕೊಳ್ಳಬಾರದು. ಮತ್ತು ಮುಸಲ್ಮಾನರಲ್ಲಿ ದುಷ್ಟರೊಂದಿಗೂ ಕೂಡ ಮೈತ್ರಿಯನ್ನಿಟ್ಟುಕೊಳ್ಳಬೇಕು-ಎಂದು ಉಪದೇಶಿಸುವುದು ಈಶ್ವರನನ್ನು ಈಶ್ವರತ್ವದಿಂದ ಹೊರದೂಡುತ್ತದೆ. ಆದುದರಿಂದ, ಈ ಕುರಾನ್, ಕುರಾನಿನ ಖುದಾ ಮತ್ತು ಮುಸಲ್ಮಾನರುಗಳು ಕೇವಲ ಪಕ್ಷಪಾತದಿಂದ, ಅವಿದ್ಯೆಯಿಂದ ಪರಿಪೂರ್ಣರಾಗಿದ್ದಾರೆ. ಇದೇ ಕಾರಣದಿಂದ ಮುಸಲ್ಮಾನರು ಅಂಧಕಾರದಲ್ಲಿದ್ದಾರೆ. ಮತ್ತು "ನೀವು ನನ್ನ ಪಕ್ಷಕ್ಕೆ ಸೇರುವಿರಾದರೆ, ಖುದಾ ನಿಮ್ಮ ಪಕ್ಷ ವಹಿಸುವನು". ಎಂಬ ಮುಹಮ್ಮದ್ ಸಾಹೇಬರ ಲೀಲೆಯನ್ನು ನೋಡಿರಿ. ಮತ್ತು ನೀವು ಪಕ್ಷಪಾತವೆಂಬ ಪಾಪವನ್ನು ಮಾಡುವಿರಾದರೆ, ಅದನ್ನೂ ಕೂಡ ಕ್ಷಮಿಸುವನು! ಇದರಿಂದ ಮುಹಮ್ಮದ್ ಸಾಹೇಬರ ಅಂತಃಕರಣ ಶುದ್ಧವಾಗಿರಲಿಲ್ಲವೆಂದು ಸಿದ್ಧವಾಗುತ್ತದೆ. ಅದೇ ಕಾರಣ, ತಮ್ಮ ಸ್ವಾರ್ಥಸಾಧನೆಗಾಗಿ ಮುಹಮ್ಮದ್ ಸಾಹೇಬರು ಕುರಾನನ್ನು ರಚಿಸಿದರು; ಅಥವಾ ಬರೆಯಿಸಿದರು ಎಂದೂ ವಿದಿತವಾಗುತ್ತದೆ. (೪೮)

*ದೇವತೆಗಳು -"ಓ ಮೇರೀ! ನಿನ್ನನ್ನು ಅಲ್ಲಾಹನು ಬಯಸಿದನು. ಮತ್ತು ಜಗತ್ತಿನ ನಾರಿಯರೆಲ್ಲರಿಗಿಂತ ನಿನ್ನನ್ನು ಹೆಚ್ಚು ಪವಿತ್ರಳನ್ನಾಗಿ ಮಾಡಿದನು".-ಎಂದಾಗ....(ಮಂ-೧, ಸಿ-೩, ಸೂ-೩, ಆ-೪೧)*

**ಸಮೀಕ್ಷಕ:-** ಭಲೇ! ಈ ದಿನಗಳಲ್ಲಿ ಖುದಾನ ದೇವತೆಗಳು ಮತ್ತು ಖುದಾ ಯಾರಸಂಗಡವೂ ಮಾತನಾಡಲು ಬರುವುದಿಲ್ಲವಾದರೆ, ಮುನ್ನ ಹೇಗೆ ಬಂದಿರಬಹುದು? ಮೊದಲಿನ ಮಾನವರು ಪುಣ್ಯಾತ್ಮರಾಗಿದ್ದರು; ಇಂದಿನವರು (ಪವಿತ್ರ)ರಾಗಿಲ್ಲ-ಎನ್ನುವಿರಾದರೆ, ಈ ಮಾತು ಸುಳ್ಳು. ಆದರೆ, ಯಾವಾಗ ಕ್ರೈಸ್ತರ ಮತ್ತು ಮುಸಲ್ಮಾನರ ಮತಪ್ರಚಲಿತವಾಗಿದ್ದಿತೋ, ಆ ಕಾಲದಲ್ಲಿ ಆ ದೇಶದಲ್ಲಿ ಕಾಡಾಡಿಗಳೂ, ಮತ್ತು ವಿದ್ಯಾಹೀನರೂ ಆದ ಮಾನವರು ಹೆಚ್ಚಾಗಿದ್ದರು. ಇದೇ ಕಾರಣದಿಂದ ಇಂತಹ ವಿದ್ಯಾವಿರುದ್ಧವಾದ ಮತಗಳು ಪ್ರಚಲಿತವಾಗಿ ಹೋದುವು. ಈಗ ವಿದ್ವಾಂಸರು ಅಧಿಕವಾಗಿದ್ದಾರೆ. ಅದುದರಿಂದಲೇ ಪ್ರಚಲಿತವಾಗಲಾರದು. ಅಲ್ಲದೆ, ಪ್ರಚಲಿತವಾಗಿರುವ ಇಂತಹ ಪೊಳ್ಳು ಸಂಪ್ರದಾಯಗಳೆಲ್ಲವೂ ಕೂಡ ಅಸ್ತವಾಗುತ್ತಾ ಹೋಗುತ್ತವೆ. ವೃದ್ಧಿಯ ಕಥೆಯಾದರೂ ಏನು? (೪೯)

> *ಅದಕ್ಕೆ - "ಆಗು" ಎನ್ನುತ್ತಾನೆ; ಸರಿ, ಅದು ಆಗಿಹೋಗುತ್ತದೆ . ಕಾಫಿರರು ಮೋಸಮಾಡಿದರು. ಈಶ್ವರನೂ ಮೋಸಮಾಡಿದನು. ಮಹಾವಂಚಕನಾಗಿದ್ದಾನೆ ಈಶ್ವರನು. (ಮಂ-೧, ಸಿ-೩, ಸೂ-೩, ಆ-೪೬, ೫೩)*

**ಸಮೀಕ್ಷಕ:-** ಮುಸಲ್ಮಾನರು ಖುದಾನ ಹೊರತು ಅನ್ಯವಸ್ತುವನ್ನು ಒಪ್ಪರು. ಹಾಗಿರುವಾಗ ಖುದಾ ಯಾವುದಕ್ಕೆ ಹೇಳಿದನು? ಮತ್ತು ಅವನ ಹೇಳುವಿಕೆಯಿಂದ ಆಗಿ ಹೋದುದು ಯಾವದು? ಇದರ ಉತ್ತರವನ್ನು ಮುಸಲ್ಮಾನರು ಏಳು ಜನ್ಮಗಳಲ್ಲಿಯೂ ಕೊಡಲಾರರು. ಏಕೆಂದರೆ ಉಪಾದಾನ ಕಾರಣವಿಲ್ಲದೆ ಕಾರ್ಯವೆಂದಿಗೂ ಆಗಲಾರದು. ಕಾರಣವಿಲ್ಲದೆ ಕಾರ್ಯವಾಗುತ್ತದೆ- ಎನ್ನುವುದು "ನನ್ನ ತಂದೆ-ತಾಯಿಗಳಿಲ್ಲದೆಯೇ ನನ್ನ ಶರೀರವಾಗಿ ಹೋಯಿತು".- ಎನ್ನುವಂತಹ ಮಾತೇ ಆಗಿದೆ. ಸ್ವತಃ ಮೋಸಹೋಗುವವನು, ಮೋಸಮಾಡುವವನು ಹಾಗೂ ಛಲವನ್ನು ಮತ್ತು ದಂಭವನ್ನು ಮಾಡುವವನು ಈಶ್ವರನಂತೂ ಎಂದಿಗೂ ಆಗಲಾರನು. ಮಾತ್ರವಲ್ಲ; ಉತ್ತಮನಾದ ಮಾನವನೂ ಕೂಡ ಇಂತಹ ವ್ಯವಹಾರವನ್ನು ಮಾಡುವುದಿಲ್ಲ . (೫೦)

> *ಅಲ್ಲಾಹನು ನಿಮಗೆ ಮೂರು ಸಾವಿರ ದೇವತೆಗಳೊಂದಿಗೆ ಸಹಾಯ ಕೊಡುವನು-ಎನ್ನುವುದು ನಿಮಗೆ ದೊಡ್ಡ ವಿಷಯವೆಂದು ತೋರುವುದಿಲ್ಲವೋ? (ಮಂ-೧, ಸಿ-೪, ಸೂ-೩, ಆ-೧೨೩)*

**ಸಮೀಕ್ಷಕ:-** ಮುಸಲ್ಮಾನರಿಗೆ ಮೂರು ಸಾವಿರ ದೇವತೆಗಳೊಂದಿಗೆ ಸಹಾಯವನ್ನು ಕೊಡುತ್ತಿದ್ದನಾದರೆ, ಈಗ ಮುಸಲ್ಮಾನರ ಸಾಮ್ರಾಜ್ಯ ಬಹಳ ನಾಶವಾಗಿ ಹೋಗಿದೆ; ನಾಶವಾಗಿ ಹೋಗುತ್ತಲೂ ಇದೆ. ಸಹಾಯವನ್ನೇಕೆ ಕೊಡುವುದಿಲ್ಲ? ಆದುದರಿಂದ, ಇದು ಕೇವಲ ಲೋಭವನ್ನೊಡ್ಡಿ, ಮೂರ್ಖರನ್ನು ಸಿಕ್ಕಿಸಿಕೊಳ್ಳುವುದಕ್ಕಾಗಿ (ಬರೆದ) ಮಹಾ ಅನ್ಯಾಯದ ಮಾತಾಗಿದೆ. (೫೧).

> *ಮತ್ತು ಕಾಫಿರರ ವಿರುದ್ಧ ನಮಗೆ ಸಹಾಯಮಾಡು. ಅಲ್ಲಾಹನು ನಿಮ್ಮ ಉತ್ತಮ ಸಹಾಯಕನು ಮತ್ತು ನಿಯಾಮಕನು ಆಗಿದ್ದಾನೆ. ನೀವು ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟರೆ, ಅಥವಾ ಮೃತರಾದರೆ, ಅಲ್ಲಾಹನ ದಯೆ ಬಹಳವಾಗಿ ಸಿಕ್ಕುತ್ತದೆ. (ಮಂ-೧, ಸಿ-೪, ಸೂ-೩, ಆ-೧೪೬, ೧೫೯, ೧೫೬).*

**ಸಮೀಕ್ಷಕ:-** ಈಗ ಮುಸಲ್ಮಾನರ ಲೋಪವನ್ನಾದರೂ ನೋಡಿರಿ. ತಮ್ಮ ಮತದಿಂದ ಬೇರೆಯಾಗಿರುವವರನ್ನು ಕೊಲ್ಲುವುದಕ್ಕಾಗಿ ಖುದಾನ ಪ್ರಾರ್ಥನೆಯನ್ನು ಮಾಡುತ್ತಾರೆ. ಇವರ ಮಾತುಗಳನ್ನೊಪ್ಪಿಕೊಳ್ಳಲು ಪರಮೇಶ್ವರನು ಮುಗ್ಧನಾಗಿದ್ದಾನೆಯೇ? ಮುಸಲ್ಮಾನರ ನಿಯಮಾಕನು ಅಲ್ಲಾಹನೇ ಆಗಿರುವನಾದರೆ, ಮತ್ತೆ ಮುಸಲ್ಮಾನರ ಕಾರ್ಯಗಳು ಕೆಟ್ಟುಹೋಗುವವೇತಕ್ಕೆ? ಮತ್ತು ಖುದಾ ಕೂಡ ಮುಸಲ್ಮಾನರ ಮೋಹಕ್ಕೆ ಸಿಕ್ಕಿಕೊಂಡಿರುವಂತೆ ಕಾಣಿಸುತ್ತಾನೆ. ಖುದಾ ಇಂತಹ ಪಕ್ಷಪಾತಿಯಾಗಿರುವನಾದರೆ, ಧರ್ಮಾತ್ಮರಾದವರಿಗೆ ಎಂದೂ ಉಪಾಸನೀಯನಾಗಲಾರನು. (೫೨)

> *ಮತ್ತು ಅಲ್ಲಾಹನು ನಿಮ್ಮನ್ನು ಪರೋಕ್ಷಜ್ಞರನ್ನಾಗಿ (ಅತೀಂದ್ರಿಯ ತತ್ತ್ವಗಳ ಜ್ಞಾನವನ್ನುಳ್ಳವರು) ಮಾಡುವುದಿಲ್ಲ. ಆದರೆ, ತನ್ನ ಪೈಗಂಬರರಲ್ಲಿ ತನಗೆ ಬೇಕಾದವರನ್ನು ಅಂಗೀಕರಿಸುತ್ತಾನೆ, ಸಾಕು. ನಂಬಿರಿ ಅಲ್ಲಾಹನನ್ನು ಮತ್ತು ಅವನ ರಸೂಲನನ್ನು.[೩೦] (ಮಂ-೧, ಸಿ-೪, ಸೂ-೩, ಆ-೧೭೯).*

**ಸಮೀಕ್ಷಕ:-** ಮುಸಲ್ಮಾನರು ಖುದಾನ ಹೊರತು ಯಾವನ ಮೇಲೆಯೂ ನಂಬಿಕೆಯನ್ನಿಡದಿರುವಾಗ, ಮತ್ತು ಯಾವನನ್ನೂ ಖುದಾನ 'ಭಾಗೀದಾರ' ನೆಂದೂ ಒಪ್ಪದಿರುವಾಗ, ಪೈಗಂಬರ ಸಾಹೇಬರನ್ನು ನಂಬಿಕೆಯಲ್ಲಿ ಖುದಾನೊಂದಿಗೆ ಸೇರಿಸಿದರೇಕೆ?

---

೩೦. ದೇವರ ಸಂದೇಶವಾಹಕ.

ಅಲ್ಲಾಹನು ಪೈಗಂಬರರ ಮೇಲೆ ನಂಬಿಕೆಯಿಡಬೇಕೆಂದು ಬರೆದರು. ಇದರಿಂದಲೇ ಪೈಗಂಬರರೂ ಭಾಗೀದಾರರಾಗಿ ಹೋದರು. ಮತ್ತೆ, 'ಲಾಶರೀಕ್' ಎಂದರೆ-'ಭಾಗೀದಾರರರಹಿತ' ಎನ್ನುವುದು ಯುಕ್ತವಾಗುವುದಿಲ್ಲ. ಮುಹಮ್ಮದ್ ಸಾಹೇಬರು ಪೈಗಂಬರರೆಂದು ನಂಬಬೇಕೆಂದಿಷ್ಟೇ ಇದರ ಅರ್ಥವೆಂದು ತಿಳಿಯಲ್ಪಟ್ಟರೂ ಕೂಡ, ಮುಹಮ್ಮದ್ ಸಾಹೇಬರ ಇರುವಿಕೆಯ ಅವಶ್ಯಕತೆ ಏನೆಂಬ ಪ್ರಶ್ನೆ ಉದ್ಭವಿಸುತ್ತದೆ. ಖುದಾ ಅವರನ್ನು ಪೈಗಂಬರರನ್ನಾಗಿ ಮಾಡದೇ ತನ್ನ ಅಭೀಷ್ಟವಾದ ಕಾರ್ಯವನ್ನು ಮಾಡಲಾರನಾದರೆ, ಅವಶ್ಯವಾಗಿಯೂ ಅಸಮರ್ಥನಾದನು. (೫೩)

*ಓ ನಂಬಿಕೆಯುಳ್ಳವರೇ! ಸಂತೋಷಪಡಿರಿ. ಪರಸ್ಪರ ಒತ್ತಾಸೆಯಾಗಿರಿ. ಮತ್ತು ಯುದ್ಧದಲ್ಲಿ ನಿರತರಾಗಿರಿ. ನೀವು ಮುಕ್ತರಾಗಲು ಸಾಧ್ಯವಾಗುವಂತೆ ಅಲ್ಲಾಹನಿಗೆ ಹೆದರಿ ನಡೆಯಿರಿ. (ಮಂ-೧, ಸಿ-೪, ಸೂ-೩, ಆ-೨೦೦)*

**ಸಮೀಕ್ಷಕ:-** ಈ ಕುರಾನಿನ ಖುದಾ ಮತ್ತು ಪೈಗಂಬರರಿಬ್ಬರೂ ಯುದ್ಧಾಪೇಕ್ಷಿಗಳಾಗಿದ್ದರು. ಯುದ್ಧಮಾಡಲು ಆಜ್ಞೆಮಾಡುವವನು ಶಾಂತಿಭಂಗದ ಕರ್ತೃವಾಗಿರುತ್ತಾನೆ. ನಾಮಮಾತ್ರಕ್ಕೆ ಖುದಾನಿಂದ ಹೆದರುವುದರಿಂದ ಮೋಕ್ಷ ಪಡೆಯಲಾದೀತೇನು? ಅಥವಾ ಅಧರ್ಮಯುಕ್ತವಾದ ಯುದ್ಧ ಮೊದಲಾದುದಕ್ಕೆ ಅಂಜುವುದರಿಂದಲೋ? ಮೊದಲ ಪಕ್ಷವಾದರೆ, ಹೆದರುವುದು-ಹೆದರದಿರುವುದು ಒಂದೇ ಸಮ; ಎರಡನೆಯ ಪಕ್ಷವಾದರೆ, ಸರಿ. (೫೪)

*ಅಲ್ಲಾಹನ ಮತ್ತು ಅವನ ರಸೂಲನ ಕಥನವನ್ನೊಪ್ಪಿಕೊಳ್ಳುವವನು, ಎಲ್ಲಿ ನಾಲೆಗಳು ಹರಿಯುವವೋ, ಅಂತಹ ಸ್ವರ್ಗವನ್ನು ಸೇರುವನು-ಎನ್ನುವುದು ಅಲ್ಲಾಹನ ಆಶ್ವಾಸನದ ಪರಿಮಿತಿಯಾಗಿದೆ. ಮತ್ತು ಇದೇ ಪರಮ ಲಕ್ಷ್ಯವಾಗಿದೆ. ಅಲ್ಲಾಹನ ಮತ್ತು ಅವನ ರಸೂಲನ ಆಜ್ಞೆಗಳನ್ನು ಮುರಿಯುವವನು ಹಾಗೂ ಮಿತಿಗಳನ್ನು ದಾಟುವವನು ಸದಾ ಧಗಧಗಿಸುತ್ತಿರುವ ಬೆಂಕಿಯಲ್ಲಿ ದಹಿಸಲ್ಪಡುವನು. ಮತ್ತು ಅವನ ಪಾಲಿಗೆ ಹಾನಿಕರವಾದ ದುಃಖವಿದೆ. (ಮಂ-೧, ಸಿ-೪, ಸೂ-೪, ಆ-೧೨, ೧೫)*

**ಸಮೀಕ್ಷಕ :-** ಖುದಾ ಸ್ವತಃ ಪೈಗಂಬರ್ ಮುಹಮ್ಮದ್ ಸಾಹೇಬರನ್ನು ತನ್ನ ಸಹಭಾಗಿಯನ್ನಾಗಿ ಮಾಡಿಕೊಂಡಿದ್ದಾನೆ. ಮತ್ತು ಸ್ವತಃ ಕುರಾನಿನಲ್ಲಿಯೇ ಬರೆದಿದೆ. ಖುದಾ ಪೈಗಂಬರರಿಗೆ ಹೇಗೆ ಗಂಟು ಬಿದ್ದಿದ್ದಾನೆಂದರೆ, ನೋಡಿರಿ, ಅವನು ಸ್ವರ್ಗದಲ್ಲಿಯೂ ರಸೂಲರ ಸಹಭಾಗಿತ್ವಕ್ಕೆ ಕಟ್ಟುಬಿದ್ದಿದ್ದಾನೆ. ಯಾವ ಒಂದು ವಿಷಯದಲ್ಲಿಯೂ ಮುಸ್ಲಿಮರ ಖುದಾ ಸ್ವತಂತ್ರನಾಗಿಲ್ಲದಿರುವಾಗ 'ಲಾ-ಶರೀಕ್' (ಸಹಭಾಗಿರಹಿತ) ಎನ್ನುವುದು ಪೂರ್ಣತಃ ವ್ಯರ್ಥವಾಗಿದೆ. ಇಂತಹ ಮಾತುಗಳು ಈಶ್ವರೋಕ್ತವಾದ ಪುಸ್ತಕದಲ್ಲಿರಲಾರವು. (೫೫)

*ಮತ್ತು ಅಲ್ಲಾಹನು ಒಂದು ತ್ರಸರೇಣುವಿನಷ್ಟೂ ಕೂಡ ಅನ್ಯಾಯ ಮಾಡುವುದಿಲ್ಲ. ಮತ್ತು ಒಳಿತನ್ನು ದ್ವಿಗುಣಗೊಳಿಸುವನು. (ಮಂ-೧, ಸಿ-೫, ಸೂ-೪, ಆ-೪೯).*

**ಸಮೀಕ್ಷಕ:-** ಒಂದು ತ್ರಸರೇಣುವಿನಷ್ಟೂ ಕೂಡ ಖುದಾ ಅನ್ಯಾಯವನ್ನು ಮಾಡುವುದಿಲ್ಲವಾದರೆ, ಪುಣ್ಯಕ್ಕೆ ಎರಡರಷ್ಟನ್ನೇತಕ್ಕೆ ಕೊಡುತ್ತಾನೆ? ಮತ್ತು ಮುಸಲ್ಮಾನರ ಬಗೆಗೆ ಪಕ್ಷಪಾತವನ್ನೇತಕ್ಕೆ ಮಾಡುತ್ತಾನೆ? ವಾಸ್ತವವಾಗಿ ಎರಡರಷ್ಟು ಅಥವಾ ಕಡಿಮೆ ಫಲವನ್ನು ಕರ್ಮಗಳಿಗೆ ಕೊಡುವನಾದರೆ, ಖುದಾ ಅನ್ಯಾಯಕಾರಿಯಾಗಿ ಹೋಗುವನು. (೫೬)

*ನಿನ್ನ ಬಳಿಯಿಂದ ಹೊರ ಹೊರಟ ಮೇಲೆ, ಜನರು ನಿನ್ನ ಕಥನಕ್ಕೆ ವಿಪರೀತವಾಗಿ ಆಲೋಚಿಸುತ್ತಾರೆ. ಅಲ್ಲಾಹನು ಅವರು ಸಂಪಾದಿಸಿದ ವಸ್ತುವಿನ ಕಾರಣದಿಂದ, ಅವರನ್ನು ಮಗುಚಿಹಾಕಿದನು. ನೀವು ಅಲ್ಲಾಹನು ಪಥಭ್ರಷ್ಟರನ್ನಾಗಿ ಮಾಡಿದವರನ್ನು ಮಾರ್ಗಕ್ಕೆ ತರಲು ಅಪೇಕ್ಷಿಸುತ್ತೀರೇನು? ಖುದಾ ಯಾವನಿಗೆ ದಾರಿತಪ್ಪಿಸುವನೋ, ಅವನಿಗೆ ಎಂದಿಗೂ ಮಾರ್ಗ ಸಿಕ್ಕುವುದಿಲ್ಲವೆಂಬುದು ನಿಖರವಾಗಿದೆ. (ಮಂ-೧, ಸಿ-೫, ಸೂ-೪. ಆ-೮೧-೮೮)*

**ಸಮೀಕ್ಷಕ:-** ಅಲ್ಲಾಹನು ಮಾತುಗಳ್ನು ಬರೆದು ಲೆಕ್ಕ-ಪತ್ರಗಳನ್ನು ನಿರ್ಮಿಸುತ್ತಾ ಹೋಗುವನಾದರೆ, ಅವನು ಸರ್ವಜ್ಞನಲ್ಲ. ಸರ್ವಜ್ಞನಾಗಿರುವಲ್ಲಿ, ಬರೆಹದ ಕೆಲಸವಾದರೂ ಏನು? ಮತ್ತು ಮುಸಲ್ಮಾನರು ಶೈತಾನನೇ ಎಲ್ಲರಿಗೂ ದುಷ್ಪ್ರೇರಣೆ ಮಾಡುವುದರಿಂದ, ದುಷ್ಟನಾಗಿದ್ದಾನೆ-ಎನ್ನುತ್ತಾರಷ್ಟೆ? ಖುದಾ ಸ್ವತಃ ಜೀವರಿಗೆ ದಾರಿತಪ್ಪಿಸುತ್ತಾನಾದರೆ, ಖುದಾ ಮತ್ತು ಶೈತಾನರ ಮಧ್ಯೆ ವ್ಯತ್ಯಾಸವೇನುಳಿಯಿತು? ಅಹುದು; ಖುದಾ ದೊಡ್ಡ ಶೈತಾನನು ಮತ್ತು ಶೈತಾನನು ಚಿಕ್ಕ ಶೈತಾನನೆಂದು ಇಷ್ಟು ವ್ಯತ್ಯಾಸವನ್ನು ಹೇಳಬಹುದು. ದಾರಿ ತಪ್ಪಿಸುವವನೇ ಶೈತಾನನೆಂದು ಮುಸಲ್ಮಾನರ ಸಿದ್ಧಾಂತವೇ ಇರುವಾಗ, ಈ ಘೋಷಣೆಯಿಂದ ಖುದಾನನ್ನು ಶೈತಾನನ್ನಾಗಿ ಮಾಡಿಬಿಟ್ಟರು. (೫೭)

*ಮತ್ತು ಆಕ್ರಮಣಕಾರರು ಕೈಗಳನ್ನು ಹಿಂದೆಗೆದುಕೊಳ್ಳರಾದರೆ, ಅವರನ್ನು ಹಿಡಿದುಕೊಳ್ಳಿರಿ ಮತ್ತು ಎಲ್ಲಿ ಸಿಕ್ಕುವರೋ, ಅಲ್ಲಿಯೇ ಸಾಯಿಸಿಬಿಡಿರಿ. ಮುಸಲ್ಮಾನನನ್ನು ಮುಸಲ್ಮಾನನು ಕೊಲ್ಲುವುದು ಯೋಗ್ಯವಲ್ಲ. ಅಪರಿಚಿತರ ನಡುವೆ ಯಾವನಾದರೂ ಮುಸಲ್ಮಾನನ್ನು ಕೊಂದುಬಿಟ್ಟರೆ, ಒಬ್ಬ ಮುಸಲ್ಮಾನನ ಕೊರಳನ್ನು ಮತ್ತು ರಕ್ತವನ್ನು ಸಂರಕ್ಷಿಸಬೇಕು,*[೩೧] *ಬೇರೆಯವರ ಕೋಮಿನವರ ಕಡೆಯಿಂದ ರಕ್ತಪಾತವಾಗಿದ್ದು, ಶತ್ರುವಿನ ಕೋಮಿನವರು ನಿಮಗೆ ದಾನವಾಗಿ ಕೊಡಲ್ಪಟ್ಟರೆ, ಅವರನ್ನೂ ರಕ್ಷಿಸಬೇಕು. ಇಷ್ಟೇ ಅಲ್ಲ; ಮತ್ತು ಯಾವನಾದರೂ ಮುಸಲ್ಮಾನನನ್ನು ತಿಳಿದೂ-ತಿಳಿದೂ ಸಂಹರಿಸಿದರೆ, ಆ ಸಂಹಾರಕನು ಸದಾಕಾಲಕ್ಕೂ ನರಕದಲ್ಲಿರುವನು. ಅವನ ಮೇಲೆ ಅಲ್ಲಾಹನ ಕ್ರೋಧ ಮತ್ತು ಅಭಿಶಾಪವಿದೆ. (ಮಂ-೧, ಸಿ-೫, ಸೂ-೪, ಆ-೯೧-೯೩)*

**ಸಮೀಕ್ಷಕ :-** ಈಗ ನೋಡಿರಿ ಮಹಾ ಪಕ್ಷಪಾತದ ಮಾತನ್ನು! ಯಾವನು ಮುಸಲ್ಮಾನನಲ್ಲವೋ, ಅವನನ್ನು ಎಲ್ಲಿ ಕಂಡರೂ ಕೊಂದು ಹಾಕಿರಿ ಮತ್ತು ಮುಸಲ್ಮಾನರನ್ನು ಕೊಲ್ಲಬಾರದು! ಅರಿವಿಲ್ಲದೆ ಮುಸಲ್ಮಾನರನ್ನು ಕೊಂದಲ್ಲಿ, ಪ್ರಾಯಶ್ಚಿತ್ತ; ಬೇರೆಯವರನ್ನು ಕೊಂದರೆ ಸ್ವರ್ಗ ಸಿಕ್ಕುವುದು! ಇಂತಹ ಉಪದೇಶವನ್ನು ರಸಾತಳಕ್ಕೆ ಎಸೆಯಬೇಕು. ಇಂತಹ ಪುಸ್ತಕಗಳು,-ಇಂತಹ ಪೈಗಂಬರರು,-ಇಂತಹ ಖುದಾಗಳು ಮತ್ತು ಇಂತಹ ಮತಗಳಿಂದ ಹಾನಿಯೇ ಹೊರತು ಲಾಭವು ಸ್ವಲ್ಪವೂ ಇಲ್ಲ. ಇಂತಹವರು, ಇಂತಹವು ಇಲ್ಲದಿರುವುದೇ ಒಳ್ಳೆಯದು ಮತ್ತು ಇಂತಹ ಪ್ರಮಾದ ಜನಿತ ಮತಗಳಿಂದ ಬುದ್ಧಿವಂತರು ದೂರವಿದ್ದು, ವೇದೋಕ್ತವಾದ ತತ್ತ್ವಗಳನ್ನೆಲ್ಲಾ ಅಂಗೀಕರಿಸಬೇಕು. ಏಕೆಂದರೆ, ಅದರಲ್ಲಿ ಅಸತ್ಯವು ಕಿಂಚಿನ್ಮಾತ್ರವೂ ಇಲ್ಲ. ಮತ್ತು "ಯಾವನು ಮುಸಲ್ಮಾನನನ್ನು ಕೊಲ್ಲುವನೋ ಅವನಿಗೆ ನರಕ ಸಿಕ್ಕುವುದು".-ಎಂದು ಹೇಳುತ್ತಾರೆ. ಮತ್ತು ಅನ್ಯಮತೀಯರು ಅದಕ್ಕೆ ಪ್ರತಿಯಾಗಿ 'ಮುಸಲ್ಮಾನನನ್ನು ಕೊಂದರೆ ಸ್ವರ್ಗಸಿಕ್ಕುವುದು'.- ಎಂದು ಹೇಳುತ್ತಾರೆ. ಈ ಎರಡು ಮತಗಳಲ್ಲಿ ಯಾವುದನ್ನು ಅಂಗೀಕರಿಸೋಣ, ಯಾವುದನ್ನು ವರ್ಜಿಸೋಣ-ನೀವೇ ಹೇಳಿರಿ, ಮೂಢರಿಂದ ಕಲ್ಪಿತವಾದ ಮತಗಳನ್ನು ಬಿಟ್ಟು, ವೇದೋಕ್ತವಾದ ಧರ್ಮಮಾತ್ರ ಸರ್ವಮಾನವರಿಗೂ ಸ್ವೀಕರಣೀಯವಾಗಿದೆ. ಅಲ್ಲಿ ಆರ್ಯಮಾರ್ಗದಲ್ಲಿ,[೩೨] ಎಂದರೆ ಶ್ರೇಷ್ಠಪುರುಷರ ಮಾರ್ಗದಲ್ಲಿ ನಡೆಯಬೇಕು. ಮತ್ತು ದಸ್ಯು-ಎಂದರೆ ದುಷ್ಟರ ಮಾರ್ಗದಿಂದ ದೂರವಿರಬೇಕು-ಎಂಬ ಆದೇಶವಿದೆ. ಆ ವೇದೋಕ್ತ ಧರ್ಮಮಾತ್ರ ಸರ್ವೋತ್ತಮವಾಗಿದೆ. (೫೮)

*ಮತ್ತು ಕುರಾನ್ ಶಾಸ್ತ್ರ ಪ್ರಕಟರಾದ ಮೇಲೆ ರಸೂಲನನ್ನು ವಿರೋಧಿಸಿದವನನ್ನು ಮತ್ತು ಮುಸಲ್ಮಾನರಿಗೆ ವಿರುದ್ಧವಾದ ಪಕ್ಷಗ್ರಹಿಸಿದವನನ್ನು ನಾವು ಅವಶ್ಯವಾಗಿ ನರಕಕ್ಕೆ ಕಳುಹಿಸುವೆವು. (ಮಂ-೧, ಸಿ-೫, ಸೂ-೪. ಆ-೧೧೫)*

**ಸಮೀಕ್ಷಕ:-** ಖುದಾನ ಮತ್ತು ರಸೂಲನ ಪಕ್ಷಪಾತದ ಮಾತುಗಳನ್ನೀಗ ನೋಡಿರಿ. ಮುಹಮ್ಮದ್ ಸಾಹೇಬರೇ ಮೊದಲಾದವರು "ಖುದಾನ ಹೆಸರಿನಿಂದ ನಾವು ಹೀಗೆ ಬರೆಯದಿದ್ದರೆ, ನಮ್ಮ ಮತ ಹರಡುವುದಿಲ್ಲ". ಮತ್ತು ಭೋಗ್ಯ ವಸ್ತುಗಳು ಸಿಕ್ಕುವುದಿಲ್ಲ ಆನಂದ ಭೋಗ ಪ್ರಾಪ್ತವಾಗುವುದಿಲ್ಲ - ಎಂದು ತಿಳಿದಿದ್ದರು. ಆದುದರಿಂದಲೇ ಅವರು ತಮ್ಮ ಸ್ವಾರ್ಥಸಾಧನೆಯಲ್ಲಿ ಮತ್ತು ಅನ್ಯರ ಹಿತವನ್ನು ನಾಶಮಾಡುವುದರಲ್ಲಿ ಪೂರ್ಣ ನಿಪುಣರಾಗಿದ್ದರೆಂದು ವಿದಿತವಾಗುತ್ತದೆ. ಈ ಕಾರಣದಿಂದ ಅವರು ಅನಾಪ್ತರು (ಎಂದರೆ ಪಕ್ಷಪಾತಿಗಳು) ಆಗಿದ್ದರು. ವಿದ್ವಾಂಸರ ದೃಷ್ಟಿಯಲ್ಲಿ ಇವರ ವಚನಗಳಿಗೆ ಪ್ರಾಮಾಣ್ಯವೆಂದಿಗೂ ಸಲ್ಲದು. (೫೯)

*ಅಲ್ಲಾಹ್, ದೇವತೆಗಳು, ಪುಸ್ತಕಗಳು, ರಸೂಲ್ ಮತ್ತು ಕಯಾಮತ್ತಿನ ಬಗೆಗೆ ಅವಿಶ್ವಾಸವನ್ನಿಡುವವನು ನಿಶ್ಚಯವಾಗಿಯೂ ಪಥಭ್ರಷ್ಟನಾಗಿದ್ದಾನೆ. ನಿಜವಾಗಿ, ಯಾರು ನಂಬಿಕೆಯಿಟ್ಟರೋ, ಮತ್ತು ಕಾಫಿರರಾದರೋ, ಮರಳಿ ನಂಬಿಕೆಯಿಟ್ಟರೋ, ಪುನಃ ವಿಮುಖರಾದರೋ, ಮತ್ತು ಕಾಫಿರತನದಲ್ಲಿ ಬಹಳ ಮುಂದುವರಿದರೋ, ಅವರನ್ನು ಅಲ್ಲಾಹನೆಂದಿಗೂ ಕ್ಷಮಿಸುವುದಿಲ್ಲ. ಮತ್ತು ಮಾರ್ಗವನ್ನೂ ತೋರಿಸುವುದಿಲ್ಲ. (ಮಂ-೧, ಸಿ-೫, ಸೂ-೪, ಆ- ೧೩೬- ೧೩೭)*

---

೩೧. ಎಂದರೆ, ಒಬ್ಬ ಮುಸಲ್ಮಾನನನ್ನು ದಾಸತ್ವದಿಂದ ಮುಕ್ತ ಮಾಡಬೇಕು-ಯು.ಮೀ.

೩೨. "ವಿಜಾನೀಹ್ಯಾರ್ಯಾನ್ ಯೇ ಚ ದಸ್ಯವೋ ಬಹಿಷ್ಮತೇ ರಂದಯ ಶಾಸದವ್ರತಾನ್" [ ಋಗ್ವೇದ ೧.೫೧.೮]- ಎಂದರೆ, ಹೇ ಜಗದ್ರಕ್ಷಕ ರಾಜನೇ! ನೀನು ಶ್ರೇಷ್ಠಮಾರ್ಗಿಗಳಾದವರ ಮತ್ತು ದುಷ್ಟ ಮಾರ್ಗಿಗಳಾದವರ ನಡುವಣ ಭೇದವನ್ನು ತಿಳಿ. ಮತ್ತು ದುಷ್ಟ ಮಾರ್ಗದಲ್ಲಿ ನಡೆಯುವವರನ್ನು ದಂಡಿಸು, ಎಂದು ಬರೆದಿದೆ. ಕುರಾನಿನಲ್ಲಿ ಸ್ವಮತಕ್ಕೆ ವಿರುದ್ಧವಾಗಿರುವವರನ್ನು ಕೊಲ್ಲಬೇಕು ಎಂದಲ್ಲ!- ಯು.ಮೀ

**ಸಮೀಕ್ಷಕ:–** ಈಗಲೂ ಖುದಾ **'ಲಾಶರೀಕ್'** ಎಂದರೆ ಸಹಭಾಗಿರಹಿತನಾಗಿ ಉಳಿಯಬಲ್ಲನೇ? ಭಾಗೀದಾರರಹಿತನೆನ್ನುತ್ತಾ ಹೋಗುವುದು ಮತ್ತು ಅವನೊಂದಿಗೆ ಬಹುಮಂದಿ ಭಾಗೀದಾರರನ್ನು ಒಪ್ಪಿಕೊಳ್ಳುತ್ತಾ ಹೋಗುವುದು ಪರಸ್ಪರ ವಿರುದ್ಧವಾದ ಮಾತಲ್ಲವೇ? ಮೂರು ಸಾರಿ ಕ್ಷಮೆ ಮಾಡಿದ ಮೇಲೆ ಖುದಾ ಕ್ಷಮೆಯನ್ನು ಮಾಡುವುದಿಲ್ಲವೇ? ಮತ್ತು ಮೂರು ಸಾರಿ ಕಾಫಿರತನವನ್ನು ಮಾಡಿದ ಮೇಲೆ ಮಾರ್ಗ ತೋರಿಸುತ್ತಾನೆಯೇ? ಅಥವಾ ನಾಲ್ಕನೆಯ ಸಾರಿಯಿಂದ ಮುಂದಕ್ಕೆ ತೋರಿಸುವುದಿಲ್ಲವೇ? ನಾಲ್ಕು–ನಾಲ್ಕು ಸಾರಿಯೂ ಜನರೆಲ್ಲಾ 'ಕಾಫಿರತನ' ಮಾಡಿದರೂ ಕೂಡ, ಕಾಫಿರತನ ಬಹಳ ಹೆಚ್ಚಿ ಹೋದೀತು. (೬೦)

*ನಿಶ್ಚಯವಾಗಿ ಅಲ್ಲಾಹನು ಕೆಟ್ಟ ಜನರನ್ನು ಮತ್ತು ಕಾಫಿರರನ್ನು ಕೂಡಿ ಹಾಕುವನು ನರಕದಲ್ಲಿ . ನಿಶ್ಚಯವಾಗಿ, ಕೆಟ್ಟ ಜನರು ಮೋಸ ಮಾಡುತ್ತಾರೆ ಅಲ್ಲಾಹನಿಗೆ ಮತ್ತು ಅವರಿಗೆ ಅವನು ಮೋಸಮಾಡುತ್ತಾನೆ. ಓ ನಂಬಿಕೆಯುಳ್ಳವರೇ! ಮುಸಲ್ಮಾನರನ್ನು ಬಿಟ್ಟು, ಕಾಫಿರರನ್ನು, ಮಿತ್ರರರನ್ನಾಗಿಮಾಡಿಕೊಳ್ಳಬೇಡಿರಿ. (ಮಂ–೧, ಸಿ–೫, ಸ–೪, ಆ–೧೪೦, ೧೪೨, ೧೪೪).*

**ಸಮೀಕ್ಷಕ:–** ಮುಸಲ್ಮಾನರು ಸ್ವರ್ಗಕ್ಕೂ ಮತ್ತು ಅನ್ಯಜನರು ನರಕಕ್ಕೂ ಹೋಗುವರೆನ್ನಲು ಪ್ರಮಾಣವೇನಿದೆ? ಭಾಪು, ಮಹಾಶಯ, ಭಾಪು!! ಯಾವನು ಕೆಟ್ಟಜನರ ಮೋಸಕ್ಕೆ ಸಿಕ್ಕಿಕೊಳ್ಳುತ್ತಾನೋ ಮತ್ತು ಅನ್ಯರಿಗೆ ಮೋಸಮಾಡುತ್ತಾನೋ, ಅಂತಹ ಖುದಾ ನಮ್ಮಿಂದ ದೂರವೇ ಇರಲಿ. ಆದರೆ, ಯಾರು ಮೋಸಗಾರರಿದ್ದಾರೋ, ಅವರೊಂದಿಗೆ ಕೂಡಿಕೊಳ್ಳಲಿ ಮತ್ತು ಅವರು ಅವನೊಂದಿಗೆ ಸೇರಿಕೊಳ್ಳಲಿ. ಏಕೆಂದರೆ – **"ಯಾದೃಶೀ ಶೀತಲಾದೇವೀ ತಾದೃಶೋ**[೩೩] **ವಾಹನಃ ಖರಃ"** ಯಾವನು ಎಂತಹವನೋ, ಅವನಿಗೆ ಅಂತಹವನೇ ಗಂಟುಬಿದ್ದರೆ, ನಂಟಸ್ತನ ಕೂಡಿಬರುತ್ತದೆ. ಮೋಸಗಾರನಾದ ಖುದಾನ ಉಪಾಸಕರು ಮೋಸಗಾರರಾಗಬಾರದೇಕೆ? ದುಷ್ಟನಾದ ಮುಸಲ್ಮಾನರೊಂದಿಗೆ ಮೈತ್ರಿಯನ್ನೂ ಮತ್ತು ಮುಸಲ್ಮಾನರಿಂದ ಬೇರೆಯಾದ ಅನ್ಯಶ್ರೇಷ್ಠರೊಂದಿಗೆ ಶತ್ರುತ್ವವನ್ನೂ ಇಟ್ಟುಕೊಳ್ಳುವುದು ಯಾವನಿಗಾದರೂ ಯುಕ್ತವಾಗಬಲ್ಲದೇ? (೬೧)

*ಓ ಜನರೇ! ನಿಶ್ಚಯವಾಗಿಯೂ ನಿಮ್ಮ ಬಳಿಗೆ ಸತ್ಯದೊಂದಿಗೆ ಖುದಾನ ಕಡೆಯಿಂದ ಪೈಗಂಬರನು ಬಂದನು. ಸಾಕು; ನೀವು ಅವನ ಮೇಲೆ ನಂಬಿಕೆಯನ್ನಿಡಿರಿ. ಅಲ್ಲಾಹನು ಏಕಮಾತ್ರ ಉಪಾಸನೀಯನಾಗಿದ್ದಾನೆ. (ಮಂ–೧, ಸಿ–೬, ಸೂ–೪, ಆ–೧೭೦–೧೭೧)*

**ಸಮೀಕ್ಷಕ :–** ಪೈಗಂಬರನಲ್ಲಿ ನಂಬಿಕೆಯಿಡಬೇಕೆಂದು ಬರೆದಿರುವಾಗ, ನಂಬಿಕೆಯಲ್ಲಿ ಪೈಗಂಬರನು ಖುದಾನ ಸಹಭಾಗಿ–ಎಂದರೆ, ಸಂಯುಕ್ತನಾದನೋ, ಇಲ್ಲವೋ? ಅಲ್ಲಾಹನು ವ್ಯಾಪಕನಾಗಿರದೆ, ಏಕದೇಶೀಯನಾಗಿರುವುದರಿಂದ ತಾನೇ ಅವನ ಬಳಿಯಿಂದ ಪೈಗಂಬರರು ಬಂದು–ಹೋಗಿ ಮಾಡುತ್ತಾರೆ? ಈ ಕಾರಣದಿಂದ ಅವನು ಈಶ್ವರನೂ ಆಗಿರಲಾರನು. ಒಂದೆಡೆ ಸರ್ವದೇಶೀಯನೆಂದೂ, ಮತ್ತೊಂದೆಡೆ ಏಕದೇಶೀಯನೆಂದೂ ಬರೆಯುತ್ತಾರೆ. ಇದರಿಂದ ಕುರಾನ್ ಒಬ್ಬನಿಂದ ರಚಿತವಾದುದಲ್ಲ; ಆದರೆ, ಬಹುಜನರು ಬರೆದಿದ್ದಾರೆ–ಎಂದು ವಿದಿತವಾಗುತ್ತದೆ. (೬೨)

*ಶವ, ರಕ್ತ, ಹಂದಿಯ ಮಾಂಸ, ಅಲ್ಲಾಹನ ಹೊರತು ಬೇರೆಯವನ ಹೆಸರನ್ನುಚ್ಚರಿಸಿ ಕೊಲ್ಲಲ್ಪಟ್ಟ ಪ್ರಾಣಿ, ಕೊರಳು ಮುರಿಯಲ್ಪಟ್ಟುದು, ದೊಣ್ಣೆಯಿಂದ ಹೊಡೆಯಲ್ಪಟ್ಟುದು, ಮೇಲನಿಂದ ಬಿದ್ದುದು, ಕೊಂಬಿನಿಂದ ತಿವಿಯಲ್ಪಟ್ಟುದು ಮತ್ತು ನೋವಿನಿಂದ ಸತ್ತುದು – ಇವು ನಿಮಗೆ ವರ್ಜ್ಯವಾಗಿ ಮಾಡಲ್ಪಟ್ಟಿರೆ. (ಮಂ–೨, ಸಿ–೬, ಸೂ–೫, ಆ–೩).*

**ಸಮೀಕ್ಷಕ:–** ಇಷ್ಟೇ ಪದಾರ್ಥಗಳು ವರ್ಜ್ಯವೇ? ಬೇರೆ ಬಹಳ ಪಶುಗಳು, ಮತ್ತು ತಿರ್ಯಗ್ಜಂತುಗಳು, ಇರುವೆಯೇ ಮೊದಲಾದುವು ಮುಸಲ್ಮಾನರುಗಳಿಗೆ ಗ್ರಾಹ್ಯವಾಗಿರುವವೇನು? ಈ ದೋಷದಿಂದಾಗಿ ಇದು ಮನುಷ್ಯರ ಕಲ್ಪನೆಯಾಗಿದೆ; ಈಶ್ವರನದಲ್ಲ. ಆದಕಾರಣ, ಇದು ಪ್ರಮಾಣವೂ ಅಲ್ಲ. (೬೩)

*ಮತ್ತು ಅಲ್ಲಾಹನಿಗೆ ಅವಶ್ಯವಾಗಿ ಒಳ್ಳೆಯ ಸಾಲವನ್ನು ಕೊಡಿರಿ. ನಾನು ಕೆಡಕನ್ನು ದೂರೀಕರಿಸುವೆನು ಮತ್ತು ನಿಮ್ಮನ್ನು ಸ್ವರ್ಗಗಳಿಗೆ ಕಳುಹಿಸುವೆನು. (ಮಂ–೨, ಸಿ–೬, ಸೂ–೫, ಆ–೧೨)*

---

೩೩. ಮೂಲ ಗ್ರಂಥದಲ್ಲಿ " ತಾ ದೃಶಂ ಖರವಾಹನಃ"

**ಸಮೀಕ್ಷಕ :** – ಭೇಷ್ ಮಹಾಶಯ! ಭೇಷ್! ಮುಸಲ್ಮಾನರ ಖುದಾನ ಮನೆಯಲ್ಲಿ ಸ್ವಲ್ಪವೂ ಧನವಿಶೇಷವಿಲ್ಲದಿರಬಹುದು. ವಿಶೇಷವಾಗಿದ್ದಿದ್ದರೆ, ಸಾಲವನ್ನೇಕೆಬೇಡುತ್ತಿದ್ದನು? ಮತ್ತು ನಿಮ್ಮ ಕೆಡುಕನ್ನು ದೂರೀಕರಿಸಿ ನಿಮ್ಮನ್ನು ಸ್ವರ್ಗಕ್ಕೆ ಕಳುಹಿಸುವೆನೆಂದು ದಾರಿತಪ್ಪಿಸುತ್ತಿದ್ದನೇಕೆ? ಇಲ್ಲಿ ಖುದಾನ ಹೆಸರಿನಿಂದ ಮುಹಮ್ಮದ್ ಸಾಹೇಬರು ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡಿರಬೇಕೆಂದು ವಿದಿತವಾಗುತ್ತದೆ. (೬೪)

*ಯಾವನನ್ನು ಅಪೇಕ್ಷಿಸುತ್ತಾನೋ, ಕ್ಷಮಿಸುತ್ತಾನೆ; ಯಾವನಿಗೆ ಬೇಕೋ ಅವನಿಗೆ ದುಃಖವನ್ನು ಕೊಡುತ್ತಾನೆ. ಯಾವುದನ್ನು ಯಾವನಿಗೂ ಕೊಡಲೇ ಇಲ್ಲವೋ, ಅದನ್ನು ನಿಮಗೆ ಕೊಟ್ಟನು. (ಮಂ–೨, ಸಿ–೬, ಸೂ–೫, ಆ–೧೮, ೨೦).*

**ಸಮೀಕ್ಷಕ:**– ಹೇಗೆ ಸೈತಾನನು ತನಗೆ ಬೇಕೆನಿಸಿದವನನ್ನು ಪಾಪಿಯನ್ನಾಗಿ ಮಾಡುತ್ತಾನೋ, ಹಾಗೆಯೇ ಮುಸಲ್ಮಾನರ ಖುದಾ ಕೂಡ ಸೈತಾನನ ಕೆಲಸವನ್ನೇ ಮಾಡುತ್ತಾನೆ. ಹೀಗೆಯಿರುವುದಾದರೆ, ಮತ್ತೆ ಸ್ವರ್ಗಕ್ಕೆ ಮತ್ತು ನರಕಕ್ಕೆ ಖುದಾ ಸ್ವತಃ ಹೋಗಲಿ. ಏಕೆಂದರೆ, ಅವನು ಪಾಪ–ಪುಣ್ಯಗಳನ್ನು ಮಾಡುವವನಾದನು. ಜೀವನು ಪರಾಧೀನನಾಗಿದ್ದಾನೆ. ಸೈನ್ಯವು ಸೇನಾಪತಿಯ ಅಧೀನವಾಗಿ ರಕ್ಷಿಸುತ್ತದೆ. ಮತ್ತು ಯಾವನನ್ನಾದರೂ ಕೊಲ್ಲುತ್ತದೆ. (ಹಾಗೆಯೇ ಈ ಸ್ಥಿತಿಯಿದೆ). ಅದರ ಒಳಿತು–ಕೆಡುಕು ಸೇನಾಪತಿಗೆ ಸಲ್ಲುತ್ತದೆ; ಸೈನ್ಯಕ್ಕಲ್ಲ. (೬೫).

*ಅಲ್ಲಾಹನ ಆಜ್ಞೆಯನ್ನು ಅಂಗೀಕರಿಸಿರಿ. ಮತ್ತು ರಸೂಲನ ಆಜ್ಞೆಯನ್ನು ಅಂಗೀಕರಿಸಿರಿ. (ಮಂ–೨, ಸಿ–೭, ಸೂ–೫, ಆ–೯೨).*

**ಸಮೀಕ್ಷಕ:**– ನೋಡಿರಿ, ಇದು ಖುದಾ ಭಾಗೀದಾರಸಹಿತನಾಗುವ ಮಾತಾಗಿದೆ. ಮತ್ತೆ ಖುದಾನನ್ನು ಭಾಗಿದಾರರಹಿತನೆನ್ನುವುದು ವ್ಯರ್ಥವಾಗಿದೆ. (೬೬).

*ಏನು ನಡೆದು ಹೋಯಿತೋ, ಅದನ್ನು ಅಲ್ಲಾಹನು ಕ್ಷಮಿಸಿದ್ದಾನೆ. ಮತ್ತು ಯಾವನಾದರೂ ಪುನಃ ಮಾಡುವನಾದರೆ, ಅಲ್ಲಾಹನು ಅವನಿಂದ ಮುಯ್ಯಿ ತೀರಿಸಿಕೊಳ್ಳುವನು. (ಮಂ–೨, ಸಿ–೭, ಸೂ–೫, ಆ೯೫).*

**ಸಮೀಕ್ಷಕ :** – ಮಾಡಿದ ಪಾಪಗಳನ್ನು ಕ್ಷಮಿಸುವುದೆಂದರೆ, ಪಾಪಗಳನ್ನು ಮಾಡುವ ಅಪ್ಪಣೆಯಿತ್ತು (ಅದನ್ನು) ಹೆಚ್ಚಿಸುವುದೇ ಆಗಿದೆ. ಪಾಪವನ್ನು ಕ್ಷಮಿಸುವ ಮಾತು ಯಾವ ಪುಸ್ತಕದಲ್ಲಿರುವುದೋ, ಅದು ಈಶ್ವರನು ರಚಿಸಿದುದೂ ಅಲ್ಲ ಮತ್ತು ಯಾವ ವಿದ್ವಾಂಸನು ರಚಿಸಿದುದೂ ಅಲ್ಲ; ಆದರೆ–ಪಾಪವರ್ಧಕವಾಗಿದೆ. ಅಹುದು; ಮುಂದೆ ಆಗಬಹುದಾದ ಪಾಪಗಳನ್ನು ಬಿಡಿಸುವುದಕ್ಕಾಗಿ ಯಾರನ್ನಾದರೂ ಪ್ರಾರ್ಥಿಸುವುದು ಮತ್ತು ಸ್ವತಃ ಅವನ್ನು ಬಿಡುವುದಕ್ಕಾಗಿ ಪುರುಷಾರ್ಥವನ್ನೂ, ಪಶ್ಚಾತ್ತಾಪವನ್ನೂ ಮಾಡುವುದು ಉಚಿತವಾಗಿರುತ್ತದೆ. ಆದರೆ, ಕೇವಲ ಪಶ್ಚಾತ್ತಾಪವನ್ನು ಮಾತ್ರ ಮಾಡುತ್ತಿರುವುದು; (ಪಾಪವನ್ನು) ಬಿಡದೇ ಇರುವುದು–ಇದರಿಂದ ಹಿತವೇನೂ ಆಗಲಾರದು. (೬೭)

*ಯಾವನು ತನ್ನ ಮೇಲೆ ಈಶ್ವರೀಯ ಜ್ಞಾನ ಇಳಿಯದಿರುವಾಗ, 'ನನ್ನ ಮೇಲೆ ಪುಸ್ತಕವಿಳಿಸಲ್ಪಟ್ಟಿದೆ' – ಎಂದು ಅಲ್ಲಾಹನ ಬಗೆಗೆ ಮಿಥ್ಯಾರೋಪವನ್ನು ಹೊರಿಸುತ್ತಾನೋ, ಮತ್ತು ಯಾವನು 'ಹೇಗೆ ಅಲ್ಲಾಹನು ಇಳಿಸುತ್ತಾನೋ, ಹಾಗೆ ನಾನೂ ಕೂಡ ಇಳಿಸುವೆನು'.–ಎಂದು ಹೇಳುತ್ತಾನೋ, ಆ ಮನುಷ್ಯನಿಗಿಂತ ಅಧಿಕಪಾಪಿ ಯಾವನಿದ್ದಾನೆ? (ಮಂ–೨, ಸಿ–೭, ಸೂ–೬, ಆ–೯೩)*

**ಸಮೀಕ್ಷಕ:**– ಈ ಮಾತಿನಿಂದ, ಯಾವಾಗ ಮುಹಮ್ಮದ್ ಸಾಹೇಬರು–"ನನ್ನ ಬಳಿ ಖುದಾನ ಕಡೆಯಿಂದ ಆಯತ್ತುಗಳು ಬರುತ್ತವೆ".– ಎಂದು ಹೇಳುತ್ತಿದ್ದರೋ, ಆಗ ಯಾವನೋ ಬೇರೆಯವನೂ ಕೂಡ ಮುಹಮ್ಮದ್ ಸಾಹೇಬರಂತೆ, "ನನ್ನ ಬಳಿಗೂ ಆಯತ್ತುಗಳು ಇಳಿಯುತ್ತವೆ; ನನ್ನನ್ನೂ ಪೈಗಂಬರನೆಂದು ಒಪ್ಪಿಕೊಳ್ಳಿರಿ". ಎಂಬ ಪ್ರಪಂಚವನ್ನು ರಚಿಸಿರಬಹುದು. ಇದನ್ನು ನಿವಾರಿಸಲು ಮತ್ತು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಮುಹಮ್ಮದ್ ಸಾಹೇಬರು ಈ ಉಪಾಯವನ್ನು ಮಾಡಿರಬಹುದು ಎಂದು ಸಿದ್ಧವಾಗುತ್ತದೆ. (೬೮)

---

೩೪. ಇದರ ಐತಿಹಾಸಿಕತೆಯ ಅನುಸಂಧಾನವಾಗಬೇಕು.

*ಅವಶ್ಯವಾಗಿ ನಾವು ನಿಮ್ಮನ್ನು ಉತ್ಪನ್ನಮಾಡಿದೆವು. ಮತ್ತು ನಿಮ್ಮ ಆಕೃತಿಗಳನ್ನು ರಚಿಸಿದೆವು. ಮತ್ತೆ ನಾವು ದೇವತೆಗಳಿಗೆ-"ಆದಮನಿಗೆ ಪ್ರಣಾಮ ಮಾಡಿರಿ" ಎಂದೆವು. ಆಯಿತು; ಅವರು ಪ್ರಣಾಮಮಾಡಿದರು. ಆದರೆ ಸೈತಾನನು ಪ್ರಣಾಮಮಾಡುವವರಲ್ಲಿ ಸೇರಲಿಲ್ಲ. "ಯಾವಾಗ ನಾನು ನಿಗೆ ಆಜ್ಞೆ ಮಾಡಿದೆನೋ, ಆಗ ನೀನು ಪ್ರಣಾಮ ಮಾಡದಿರಲು ನಿನ್ನನ್ನಾವನು ತಡೆದನು?"- ಎಂದು ಕೇಳಿದೆವು. ಅವನು-"ನಾನು ಅವನಿಗಿಂತ ಉತ್ತಮನಾಗಿದ್ದೇನೆ. ನೀನು ನನ್ನನ್ನು ಬೆಂಕಿಯಿಂದ ಮತ್ತು ಅವನನ್ನು ಮಣ್ಣಿನಿಂದ ಉತ್ಪನ್ನಮಾಡಿದೆ".- ಎಂದನು. ನಾವು-ಸಾಕು; ಅದರಿಂದ[೩೫] ಇಳಿ. ನೀನು ಆ ಬಗೆಗೆ ಅಭಿಮಾನ ಪಡುವುದು ನಿನಗೆ ಯೋಗ್ಯವಲ್ಲ" ಎಂದೆವು. "ಗೋರಿಗಳಿಂದ ಮೃತರು ಎಬ್ಬಿಸಲ್ಪಡುವ ದಿನದವರೆಗೆ ಸಡಿಲವಾಗಿ ಬಿಡು".- ಎಂದು ಹೇಳಿದನು". "ನಿಶ್ಚಯವಾಗಿ ಸಡಿಲ ಬಿಡಲ್ಪಟ್ಟವರಲ್ಲಿದ್ದೀಯೆ".-ಎಂದೆವು.*

*ಅವನು 'ಆಯಿತು'. ನೀನು ನನ್ನನ್ನು ಅವಶ್ಯಕವಾಗಿ ಪಥಭ್ರಷ್ಟನನ್ನಾಗಿಮಾಡಿದೆ- ಎಂಬುದಕ್ಕೆ ಇದೇ ಪ್ರಮಾಣವಾಗಿದೆ. ನಾನು ಅವರಿಗಾಗಿ, ನಿನ್ನ ನೇರವಾದ ಮಾರ್ಗದ ಮೇಲೆ ಕುಳಿತುಕೊಳ್ಳುವೆನು. ಮತ್ತು "ಪ್ರಾಯಶಃ ನೀನು ಅವರನ್ನು ಧನ್ಯವಾದ ಸಮರ್ಪಿಸುವವರನ್ನಾಗಿ ಹೊಂದುವುದಿಲ್ಲ". ಎಂದನು. ಅವನಿಗೆ-"ದುಃಸ್ಥಿತಿಯೊಂದಿಗೆ ಅವಶ್ಯವಾಗಿ ಹೊರಡು. ಇವರುಗಳಲ್ಲಿ ಯಾವನಾದರೂ ನಿನ್ನ ಪಕ್ಷವನ್ನು ಅವಲಂಬಿಸಿದರೆ, ನಿಮ್ಮೆಲ್ಲರಿಂದ ನರಕವನ್ನು ತುಂಬಿಸುವೆನು".- ಎಂದು ಹೇಳಿದೆವು. (ಮಂ-೨, ಸಿ-೮, ಸೂ-೭ ಆ-೧೧-೧೮)*

**ಸಮೀಕ್ಷಕ:-** ಈಗ ಗಮನವಿತ್ತು ಕೇಳಿರಿ ಖುದಾ ಮತ್ತು ಸೈತಾನರ ಜಗಳವನ್ನು, ಕೇವಲ ಭೃತ್ಯನಂತಿರುವ ಒಬ್ಬ ದೇವತೆಯಿದ್ದನು. ಅವನೂ ಕೂಡ ಖುದಾನ ಮುಂದೆ ಬಾಗಲಿಲ್ಲ ಮತ್ತು ಖುದಾ ಅವನ ಆತ್ಮನನ್ನು ಪವಿತ್ರವಾಗಿಯೂ ಮಾಡಲಾರದೇ ಹೋದನು. ಮತ್ತೆ ಪಾಪಿಯಾಗಿ ದಂಗೆ ಮಾಡುವವ ನಾಗಿದ್ದ ಆ ದಂಗೆಕೋರನನ್ನು ಖುದಾ ಬಿಟ್ಟು ಬಿಟ್ಟನು. ಇದು ಖುದಾನ ದೊಡ್ಡ ಕುಂದಾಗಿದೆ. ಸೈತಾನನಂತೂ ಎಲ್ಲರನ್ನೂ ಪಥಭ್ರಷ್ಟರನ್ನಾಗಿ ಮಾಡುವವನಾಗಿದ್ದಾನೆ. ಮತ್ತು ಖುದಾ ಸೈತಾನನನ್ನು ಪಥಭ್ರಷ್ಟನನ್ನಾಗಿ ಮಾಡುವವನಾಗಿರುವುದರಿಂದ, ಸೈತಾನನಿಗೂ ಸೈತಾನನಾಗಿದ್ದಾನೆ ಎಂಬುದು ಸಿದ್ಧವಾಗುತ್ತದೆ. ಏಕೆಂದರೆ, ಸೈತಾನನು ಪ್ರತ್ಯಕ್ಷವಾಗಿ - "ನೀನು ನನ್ನನ್ನು ಪಥಭ್ರಷ್ಟನನ್ನಾಗಿ ಮಾಡಿದೆ." ಎಂದು ಹೇಳುತ್ತಾನೆ. ಇದರಿಂದ ಖುದಾನಲ್ಲಿ ಪವಿತ್ರತೆಯೂ ಕಂಡು ಬರುವುದಿಲ್ಲ. ಮತ್ತು ಸಮಸ್ತ ಕೆಡುಕುಗಳ ಪ್ರವರ್ತಕನಾದ ಮೂಲಕಾರಣ ಖುದಾನೇ ಆದಾನು. ಇಂತಹ ಖುದಾ ಮುಸಲ್ಮಾನರವನು ಮಾತ್ರ ಆಗಬಲ್ಲನು; ಬೇರೆಯ ಶ್ರೇಷ್ಠ ವಿದ್ವಾಂಸರುಗಳಿಗೆ ಅಲ್ಲ. ಮತ್ತು, ದೇವತೆಗಳೊಂದಿಗೆ ಮನುಷ್ಯರಂತೆ ವಾರ್ತಾಲಾಪ ಮಾಡುವುದರಿಂದ, ಮುಸಲ್ಮಾನರ ಖುದಾ ದೇಹಧಾರಿಯೂ, ಅಲ್ಪಜ್ಞನೂ ನ್ಯಾಯರಹಿತನೂ ಆಗಿದ್ದನೆಂದೇ ತೋರುತ್ತದೆ. ಆದುದರಿಂದಲೇ ವಿದ್ವಜ್ಜನರು ಇಸ್ಲಾಮ್ ಮತವನ್ನು ಅಪೇಕ್ಷಿಸುವುದಿಲ್ಲ. (೬೯)

*ಆಕಾಶಗಳನ್ನೂ, ಪೃಥಿವಿಯನ್ನೂ ಆರು ದಿನಗಳಲ್ಲಿ ಉತ್ಪನ್ನಮಾಡಿದ ಮತ್ತು ವಾಯುಮಂಡಲದಲ್ಲಿ ತನ್ನನ್ನು ತಾನೇ ನೆಲೆಗೊಳಿಸಿಕೊಂಡ ಆ ನಿಮ್ಮ ಒಡೆಯನನ್ನು ದೈನ್ಯದಿಂದ ಕರೆಯಿರಿ; ಆಹ್ವಾನಿಸಿರಿ. (ಮಂ-೨, ಸಿ-೮, ಸೂ-೭, ಆ-೫೪,೫೫)*

**ಸಮೀಕ್ಷಕ:-** ಭಲೇ! ಆರು ದಿನಗಳಲ್ಲಿ ಜಗತ್ತನ್ನು ರಚಿಸುವ, 'ಅರ್ಶ್' ಎಂದರೆ ಊರ್ಧ್ವಾಕಾಶದಲ್ಲಿ ಸಿಂಹಾಸನದ ಮೇಲೆ ವಿಶ್ರಾಂತಿಯನ್ನು ಹೊಂದುವ, ಅವನ ಈಶ್ವರನೂ ಸರ್ವಶಕ್ತಿವಂತನೂ ಮತ್ತು ವ್ಯಾಪಕನೂ ಎಂದಿಗಾದರೂ ಆಗಬಲ್ಲನೇ? ಈ ಸ್ಥಿತಿಯಿಲ್ಲದಿರುವುದರಿಂದ, ಅವನು ಖುದಾ ಎಂದು ಹೇಳಿಸಿಕೊಳ್ಳಲಾರನು. ಕೂಗುವುದರಿಂದ ಆಲಿಸುತ್ತಾನೆ - ಎನ್ನಲು ನಿಮ್ಮ ಖುದಾ ಕಿವುಡನಾಗಿದ್ದಾನೇನು? ಈ ಮಾತುಗಳೆಲ್ಲವೂ ಅನೀಶ್ವರಕೃತವಾಗಿವೆ. ಈ ಕಾರಣದಿಂದ ಕುರಾನ್ ಈಶ್ವರಕೃತವಾಗ ಲಾರದು, ಆರು ದಿನಗಳಲ್ಲಿ ಜಗತ್ತನ್ನು ಸೃಜಿಸಿದನು; ಏಳನೆಯ ದಿನ ಊರ್ಧ್ವಾಕಾಶದಲ್ಲಿ ವಿಶ್ರಾಂತಿಯನ್ನು ಪಡೆದನಾದರೆ, ಆಯಾಸಪಟ್ಟೂ ಇರಬಹುದು. ಮತ್ತು ಈವರೆಗೆ ನಿದ್ರಿಸುತ್ತಾನೋ ಅಥವಾ ಎಚ್ಚರವಾಗಿದ್ದಾನೆಯೋ? ಜಾಗ್ರತನಾಗಿದ್ದಾನೆ ಯಾದರೆ, ಈಗ ಏನಾದರೂ ಕೆಲಸ ಮಾಡುತ್ತಾನೋ ಅಥವಾ ನಿಷ್ಕರ್ಮನಾಗಿ ಅಡ್ಡಾಡುತ್ತಾ ಮತ್ತು ಭೋಗಗಳನ್ನು ಅನುಭವಿಸುತ್ತಾ ತಿರುಗಾಡುತ್ತಿದ್ದಾನೋ? (೭೦)

*ತಿರುಗಾಡಬೇಡಿ ಪೃಥಿವಿಯಲ್ಲಿ ಜಗಳವಾಡುತ್ತಾ. (ಮಂ-೨, ಸಿ-೮, ಸೂ-೭, ಆ-೭೪)*

---

೩೫. ಎಂದರೆ, ಸ್ವರ್ಗದಲ್ಲಿಂದ- ಯು.ಮೀ.

**ಸಮೀಕ್ಷಕ:–** ಈ ಮಾತೇನೋ ಚೆನ್ನಾಗಿದೆ. ಆದರೆ, ಇದಕ್ಕೆ ವಿರುದ್ಧವಾಗಿ ಬೇರೆಯ ಸ್ಥಾನದಲ್ಲಿ 'ಧರ್ಮಯುದ್ಧ' ಮಾಡುವುದು ಮತ್ತು ಕಾಫಿರರನ್ನು ಕೊಲ್ಲುವುದು ಕೂಡ ಕರ್ತವ್ಯವೆಂದು ಬರೆದಿದ್ದಾರೆ. ಈಗ ಹೇಳಿರಿ, ಪೂರ್ವಾಪರ ವಿರುದ್ಧವಾಗಿಲ್ಲವೇ? ಇದರಿಂದ, ಮುಹಮ್ಮದ್ ಸಾಹೇಬರು ನಿರ್ಬಲರಾಗಿದ್ದಿರಬಹುದಾದಾಗ ಅವರು ಈ ಉಪಾಯವನ್ನು ರಚಿಸಿರಬಹುದೆಂದು ವಿದಿತವಾಗುತ್ತದೆ. ಮತ್ತು ಸಬಲರಾಗಿದ್ದಿರಬಹುದಾದಾಗ ಜಗಳ ತೆಗೆದಿರಬಹುದು. ಇದೇ ಕಾರಣದಿಂದ, ಈ ಮಾತುಗಳು ಪರಸ್ಪರ ವಿರುದ್ಧವಾಗಿರುವುದರಿಂದ, ಎರಡರಲ್ಲಿ ಯಾವುದೂ ಸತ್ಯವಾಗಿಲ್ಲ. (೭೧)

*ಆಯಿತು. ಒಂದೇ ಸಾರಿ ತನ್ನ ಕೋಲನ್ನು ಎಸೆದನು ಮತ್ತು ಆ ಹೆಬ್ಬಾವು ಪ್ರತ್ಯಕ್ಷವಾಗಿತ್ತು (ಮಂ–೨, ಸಿ–೯, ಸೂ–೭,ಆ–೧೦೭)*

**ಸಮೀಕ್ಷಕ:–** ಈಗ ಇದನ್ನು ಬರೆಯುವುದರಿಂದ, ಇಂತಹ ಸುಳ್ಳು ಮಾತುಗಳನ್ನು ಖುದಾ ಮತ್ತು ಮುಹಮ್ಮದ್ ಸಾಹೇಬರೂ ಕೂಡ ಅಂಗೀಕರಿಸುತ್ತಿದ್ದರೆಂದು ವಿದಿತವಾಗುತ್ತದೆ. ಸ್ಥಿತಿಯಿದಾಗಿದ್ದಲ್ಲಿ, ಇವರಿಬ್ಬರೂ ವಿದ್ವಾಂಸರಾಗಿರಲಿಲ್ಲ. ಏಕೆಂದರೆ, ಹೇಗೆ ಕಣ್ಣಿನಿಂದ ನೋಡುವುದನ್ನೂ, ಕಿವಿಯಿಂದ ಕೇಳುವುದನ್ನೂ, ಯಾವನೂ ಅನ್ಯಥಾ ಮಾಡಲಾರನೋ, ಹಾಗೆಯೇ ಇದೂ ಅಸಂಭವವಾಗಿ, ಇಂದ್ರಜಾಲದ ಮಾತಾಗಿದೆ. (೭೨)

*ಸರಿ; ನಾವು ಅವನ ಮೇಲೆ ಬಿರುಗಾಳಿಯನ್ನೂ, ಪಾತರಗಿತ್ತಿಯಂತಹ ಹುಳುಗಳನ್ನೂ, ಹೇನುಗಳನ್ನೂ, ಕಪ್ಪೆಗಳನ್ನೂ ಮತ್ತು ರಕ್ತವನ್ನೂ ಸುರಿಸಿದೆವು. ಅಹುದು; ನಾವು ಅವರಿಂದ ಮುಯ್ಯಿ ತೀರಿಸಿಕೊಂಡೆವು. ಮತ್ತು ಅವರನ್ನು ನದಿಯಲ್ಲಿ ಮುಳುಗಿಸಿಬಿಟ್ಟೆವು. ಮತ್ತು ನಾವು ಇಸ್ರಾಯೇಲಿಗಳನ್ನು ನದೀತೀರಕ್ಕೆ ದಾಟಿಸಿದೆವು. ನಿಶ್ಚಯವಾಗಿ ಅವರು ಅನುಷ್ಠಾನ ಮಾಡುತ್ತಿರುವ ಆ ಮತ ಸುಳ್ಳಾಗಿದೆ. ಮತ್ತು ಅವರ ಕಾರ್ಯವೂ ಕೂಡ ಸುಳ್ಳಾಗಿದೆ. (ಮಂ–೨, ಸಿ–೯, ಸೂ–೭, ಆ–೧೩೩,೧೩೬,೧೩೮,೧೩೯)*

**ಸಮೀಕ್ಷಕ:–** ಈಗ ನೋಡಿರಿ, ಯಾವನಾದರೂ ಪಾಷಂಡಿಯು ಯಾವನಾದರೂ ಮುಗ್ಧನನ್ನು – "ನಾವು ನಿಮ್ಮ ಮೇಲೆ ಸರ್ಪಗಳನ್ನು (ನಿಮ್ಮನ್ನು) ಕೊಲ್ಲಲಿಕ್ಕಾಗಿ ಕಳುಹಿಸುವೆವು." ಎಂದು ಹೆದರಿಸುವ ಮಾತಿನಂತೆಯೇ ಈ ಮಾತೂ ಇದೆ . ಒಂದು ಜಾತಿಯನ್ನು ಮುಳುಗಿಸಿಬಿಡುವಷ್ಟೂ ಮತ್ತು ಇನ್ನೊಂದನ್ನೂ ಕಡೆಹಾಯಿಸುವಷ್ಟೂ ಪಕ್ಷಪಾತಿಯಾಗಿರುವ ಖುದಾ ಅಧರ್ಮಿ ಏತಕ್ಕಲ್ಲ? ಅದಲ್ಲದೆ ಸಾವಿರಾರು ಜನರು, ಕೋಟ್ಯಂತರ ಜನರು ಪಾಲಿಸುವ ಬೇರೆಯ ಮತಗಳನ್ನು ಸುಳ್ಳೆಂದು ಹೇಳುವ ಮತ್ತು ತನ್ನನ್ನು ತಾನೇ ಸತ್ಯವಂತನೆಂದು ಹೇಳಿಕೊಳ್ಳುವವನ ಮತಕ್ಕಿಂತಧಿಕವಾದ ಮಿಥ್ಯಾಮತ ಮತ್ತಾವುದು ಇರಬಲ್ಲದು? ಏಕೆಂದರೆ, ಯಾವುದೇ ಒಂದು ಮತದಲ್ಲಿಯೂ ಮಾನವರೆಲ್ಲರೂ ಕೆಟ್ಟವರು ಅಥವಾ ಒಳ್ಳೆಯವರು ಆಗಿರಲಾರರು. ಈ ರೀತಿಯಲ್ಲಿ ಏಕಪಕ್ಷೀಯವಾದ ನಿರ್ಣಯವನ್ನು ಮಾಡುವುದು ಅತ್ಯಂತ ಅಜ್ಞಾನಗ್ರಸ್ತರಾದವರ ಒಪ್ಪಿಗೆಗೆ ಮಾತ್ರ ಯೋಗ್ಯವಾಗಿದೆ. ಅವರದೇ ಆಗಿದ್ದ ತೌರೇತ್– ಜಬೂರ್‌ಗಳ ಮತ ಸುಳ್ಳಾಗಿ ಹೋಯಿತೇನು? ಅಥವಾ ಸುಳ್ಳೆಂದು ಸಾರುವ ಆ ಸಂಪ್ರದಾಯ ಬೇರೆ ಯಾವುದಾದರೂ ಇದ್ದಿತೋ? ಮತ್ತು, ಅನ್ಯಮತವಿದ್ದಿತಾದರೆ, ಅದಾವುದಾಗಿದ್ದಿತು? ಕುರಾನಿನಲ್ಲಿ ಅದರ ಹೆಸರೇನಾದರೂ ಇರಬಹುದಾದರೆ, ಅದನ್ನು ಹೇಳಿರಿ. (೭೩)

*ಯಾವಾಗ ಅದರ ಸ್ವಾಮಿಯು ಪರ್ವತದ ಕಡೆಗೆ ಬೆಳಕನ್ನು ಬೀರಿದನೋ, ಮತ್ತು ಅದನ್ನು ಪರಮಾಣು – ಪರಮಾಣುವಾಗಿ ಮಾಡಿದನೋ, ಆಗ ಮೋಸೆಸ್ಸನು ವಿಸಂಜ್ಞನಾಗಿ ಬಿದ್ದುಹೋದನು. ಸಾಕು, ನಿನ್ನನ್ನಂತೂ ಅವನು ನೋಡಬಲ್ಲನು. (ಮಂ–೧, ಸಿ–೯, ಸೂ–೭ ಆ–೧೪೩)*

**ಸಮೀಕ್ಷಕ:–** ಯಾವನು ದೃಷ್ಟಿಗೋಚರನಾಗುತ್ತಾನೋ, ಅವನು ವ್ಯಾಪಕನಾಗಲಾರನು. ಮತ್ತು ಇಂತಹ ಚಮತ್ಕಾರಗಳನ್ನು ಮಾಡುತ್ತಾ ತಿರುಗಾಡುತ್ತಿದ್ದನಾದರೆ, ಖುದಾ ಈ ಕಾಲದಲ್ಲಿ ಇಂತಹ ಚಮತ್ಕಾರವನ್ನು ಯಾವನಿಗೂ ತೋರಿಸುವುದಿಲ್ಲವೇಕೆ? ಸರ್ವಥಾ ವಿರುದ್ಧವಾಗಿರುವುದರಿಂದ, ಈ ಮಾತು ಒಪ್ಪಿಕೊಳ್ಳಲರ್ಹವಾಗಿರುವುದಿಲ್ಲ. (೭೪)

*ಮತ್ತು ನಿನ್ನ ಸ್ವಾಮಿಯನ್ನು ದೈನ್ಯದಿಂದ ಮತ್ತು ಭಯದಿಂದ ಮನಸ್ಸಿನಲ್ಲಿ ಇಳಿದನಿಯಿಂದ ಬೆಳಿಗ್ಗೆ ಮತ್ತು ಸಂಜೆ ಸ್ಮರಿಸು. (ಮಂ–೨, ಸಿ–೯ , ಸೂ–೭, ಆ–೨೦೫)*

**ಸಮೀಕ್ಷಕ:–** ಒಂದೊಂದು ಕಡೆ ಕುರಾನಿನಲ್ಲಿ "ಉಚ್ಚಸ್ವರದಲ್ಲಿ ನಿನ್ನ ಸ್ವಾಮಿಯನ್ನು ಕರೆ". ಎಂದು ಬರೆದಿದ್ದಾರೆ ಮತ್ತು ಒಂದೊಂದು ಕಡೆ ಮೆಲಮೆಲನೆ ಈಶ್ವರನನ್ನು ಸ್ಮರಿಸು." ಎಂದು ಬರೆದಿದ್ದಾರೆ. ಈಗ ಹೇಳಿರಿ, ಯಾವ ಮಾತು ಸತ್ಯವಾಗಿದೆ ಮತ್ತು

ಯಾವ ಮಾತು ಸುಳ್ಳಾಗಿದೆ? ಒಂದು ಮಾತು ಮತ್ತೊಂದು ಮಾತನ್ನು ವಿರೋಧಿಸುತ್ತದೆಯಾದರೆ, ಆ ಮಾತು ಪ್ರಮತ್ತನ ಹಾಡಿಗೆ ಸಮಾನವಾಗಿರುತ್ತದೆ. ಯಾವುದಾದರೂ ಮಾತು ಭ್ರಮದಿಂದ ವಿರುದ್ಧವಾಗಿ ಹೊರಟುಬಿಟ್ಟರೆ, ಮತ್ತು ಅದನ್ನು ಒಪ್ಪಿಕೊಂಡುಬಿಡುವುದಾದರೆ, ಏನೂ ಚಿಂತೆಯಿಲ್ಲ.[೩೬] (೭೫)

*ಪ್ರಶ್ನಿಸುತ್ತೇವೆ ನಿನ್ನನ್ನು, ಸೂರೆಕೋರರಿಗೆ ಅಲ್ಲಾಹನ ಸಲುವಾಗಿ ಮತ್ತು ರಸೂಲನ ಸಲುವಾಗಿ ಲೂಟಿಮಾಡಿರಿ– ಎಂದು ಹೇಳಿರಿ. ಮತ್ತು ಹೆದರಿರಿ ಅಲ್ಲಾಹನಿಗೆ (ಮಂ–೨, ಸಿ–೯, ಸೂ–೮, ಆ–೧)*

**ಸಮೀಕ್ಷಕ:–** ಸೂರೆಯನ್ನೂ ಮಾಡುತ್ತಾರೆ; ಕೊಳ್ಳೆಗಾರರ ಕೃತ್ಯವನ್ನೂ ಮಾಡುತ್ತಾರೆ ಹಾಗೂ ಮಾಡಿಸುತ್ತಾರೆ; ಸಾಲದೆಂದು ಪೈಗಂಬರರೂ, ನಂಬಿಕಸ್ತರೂ ಆಗಿ ಬೇರೆ ಮೆರೆಯುತ್ತಾರೆ– ಎಂಬುದು ಮಹದಾಶ್ಚರ್ಯದ ಸಂಗತಿಯಾಗಿದೆ. ಮತ್ತು ಅಲ್ಲಾಹನ ಭೀತಿಯನ್ನೂ ಬಿತ್ತುತ್ತಾರೆ. ಮತ್ತು ದರೋಡೆ ಮೊದಲಾದ ದುಷ್ಕ ೃತ್ಯಗಳನ್ನೂ ಕೂಡ ಮಾಡುತ್ತಾ ಹೋಗುತ್ತಾರೆ! ಹಾಗೂ 'ಉತ್ತಮ ಮತ ನಮ್ಮದು' – ಎನ್ನುವಾಗ ಸಂಕೋಚವೂ ಆಗುವುದಿಲ್ಲ. ಹಠವನ್ನು ಬಿಟ್ಟು, ಸತ್ಯವಾದ ವೇದಮತವನ್ನು ಗ್ರಹಿಸದಿರುವುದಕ್ಕಿಂತ ಅಧಿಕವಾದ ಕೇಡು ಮತ್ತಾವುದು ಇದ್ದೀತು? (೭೬)

*ಮತ್ತು ಕಾಫಿರರ ಬೇರನ್ನು ಕತ್ತರಿಸಿ ಹಾಕಲಿ. ನಾನು ನಿನಗೆ, ಹಿಂದೆ–ಹಿಂದೆಯೇ ಬರುವ ಸಾವಿರ ದೇವತೆಗಳೊಂದಿಗೆ ಸಹಾಯ ಕೊಡುವೆನು. ಅವಶ್ಯವಾಗಿ ನಾನು ಕಾಫಿರರ ಹೃದಯಗಳಲ್ಲಿ ಭಯವನ್ನು ಉಂಟುಮಾಡುವೆನು. ಸರಿ; ಹೊಡೆಯಿರಿ ಕೊರಳುಗಳ ಮೇಲೆ;ಹೊಡೆಯಿರಿ ಅವರ ಪ್ರತಿಯೊಂದು ಗಂಟಿನ ಮೇಲೆಯೂ. (ಮಂ–೨, ಸಿ–೯, ಸೂ–೮, ಆ–೭, ೯, ೧೨)*

**ಸಮೀಕ್ಷಕ :–** ಭಾಪು, ಮಹೋದಯ! ಭಾಪು!! ಮುಸಲ್ಮಾನೀ ಮತದಿಂದ ಬೇರೆಯಾದ ಕಾಫಿರರ ಬೇರನ್ನು ಕತ್ತರಿಸಿ ಹಾಕಿಸುವ, ಆ ಖುದಾ ಎಂತಹವನು? ಮತ್ತು ಆ ಪೈಗಂಬರ್ ಎಂತಹ ನಿರ್ದಯರು? ಖುದಾ – "ಅವರ ಕುತ್ತಿಗೆಗೆ ಹೊಡೆಯಿರಿ". ಎಂದು ಆಜ್ಞಾಪಿಸುತ್ತಾನೆ! ಮತ್ತು ಕೈ ಕಾಲುಗಳನ್ನು ಕಡೆಯಲು ಸಹಾಯವನ್ನೂ, ಸಮ್ಮತಿಯನ್ನೂ ಕೊಡುತ್ತಾನೆ. ಇಂತಹ ಖುದಾ ಲಂಕಾಧೀಶ್ವರನಿಗಿಂತ[೩೭] ಏನಾದರೂ ಕಡಿಮೆಯಿದ್ದಾನೆಯೇ? ಈ ಎಲ್ಲ ಪ್ರಪಂಚವೂ ಕುರಾನಿನ ಕರ್ತೃವಿನದು;[೩೮] ಖುದಾನದಲ್ಲ. ಖುದಾನದಾಗಿರುವುದಾದರೆ, ಇಂತಹ ಖುದಾ ನಮ್ಮಿಂದ ದೂರವಿರಲಿ; ಮತ್ತು ನಾವು ದೂರವಿರುವೆವು. (೭೭)

*ಅಲ್ಲಾಹನು ಮುಸಲ್ಮಾನರೊಂದಿಗಿದ್ದಾನೆ. ಓ ಜನರೇ! ನಂಬಿಕೆಯಿಟ್ಟಿರುವಿರಿ. ಅಲ್ಲಾಹನ ಸಲುವಾಗಿ, ಮತ್ತು ರಸೂಲನ ಸಲುವಾಗಿ ಕರೆಯುವುದನ್ನು ಸ್ವೀಕರಿಸಿರಿ. ಓ ಜನರೇ! ನಂಬಿಕೆಯಿಟ್ಟಿರುವಿರಾದರೆ, ಅಲ್ಲಾಹನದನ್ನು ಕದಿಯಬೇಡಿರಿ; ರಸೂಲನದನ್ನೂ ಮತ್ತು ನಿಮ್ಮ ಬಳಿ ನಂಬಿಕೆಯಿಟ್ಟಿರುವುದನ್ನೂ ಕದಿಯಬೇಡಿರಿ. ಮತ್ತು ವಂಚಿಸುತ್ತಿದ್ದನು ಅಲ್ಲಾಹನು ಮತ್ತು ಅಲ್ಲಾಹನು ಒಳಿತಾಗಿ ವಂಚಿಸುವವರವನಾಗಿದ್ದಾನೆ. (ಮಂ–೨, ಸಿ–೯, ಸೂ–೮, ಆ–೧೯, ೨೪, ೨೭,೩೦)*

**ಸಮೀಕ್ಷಕ:–** ಅಲ್ಲಾಹನು ಮುಸಲ್ಮಾನರ ಪಕ್ಷಪಾತಿಯೇನು? ಇಂತಹವನಾಗಿದ್ದರೆ, ಅಧರ್ಮವನ್ನಾಚರಿಸುತ್ತಾನೆ. ಇಲ್ಲವಾದರೆ, ಅಲ್ಲಾಹನು ಸಂಪೂರ್ಣ ಸೃಷ್ಟಿಗೂ ಸೇರಿದವನಾಗಿದ್ದಾನೆ. ಖುದಾ ಕರೆಯದೇ ಇದ್ದರೆ, ಆಲಿಸಲಾರನೇನು? ಕಿವುಡನಾಗಿದ್ದಾನೇನು? ಮತ್ತು ಅವನೊಂದಿಗೆ ರಸೂಲನನ್ನು ಭಾಗೀದಾರನನ್ನಾಗಿ ಮಾಡುವುದು ಬಹಳ ಕೆಟ್ಟ ಸಂಗತಿಯಲ್ಲವೇ? ಕದಿಯುವುದಕ್ಕೆ, ಅಲ್ಲಾಹನ ಯಾವ ಧನಾಗಾರ ತುಂಬಿಕೊಂಡಿದೆ? ರಸೂಲನ ಮತ್ತು ತನ್ನ ಬಳಿ ಒತ್ತೆಯಿಟ್ಟುದರ ಕಳುವನ್ನು ಬಿಟ್ಟು, ಬೇರೆ ಎಲ್ಲದರ ಕಳುವನ್ನೂ ಮಾಡುತ್ತಾ ಹೋಗಬಹುದೇನು? ಇಂತಹ ಉಪದೇಶ

---

೩೬. ಇದು ಮಹರ್ಷಿ ದಯಾನಂದರ ವೈಶಿಷ್ಟ್ಯ! ಗ್ವಾಲಿಯರ್ ನಲ್ಲಿ ಅವರು ಪ್ರವಚನ ನೀಡುತ್ತಿದ್ದಾಗ, ಹೀಗೆ ತಪ್ಪನ್ನು ಒಪ್ಪಿಕೊಂಡು ಬಿಟ್ಟರು. ಪೂನಾ ಪ್ರವಚನದಲ್ಲೂ ಇಂತಹ ಒಂದು ಪ್ರಸಂಗವಿದೆ. ಅಲ್ಲಿ ದಯಾನಂದರು ಪೌರಾಣಿಕ ಜನವೃಂದದೆದುರು ಪ್ರವಚನ ಕೊಡುತ್ತಾ

"ನಾವೆಲ್ಲ ಹಿಂದುಗಳು–; ಇಲ್ಲ ನಾನು ತಪ್ಪು ಮಾಡಿದೆ ! ನಾವೆಲ್ಲ ಆರ್ಯರು ಎಂದು ತಿದ್ದಿಕೊಳ್ಳುತ್ತಾರೆ.

ಸಾಧಾರಣ ಪಂಡಿತರಲ್ಲಿ–ವಿದ್ವಾಂಸರಲ್ಲಿ ಈ ಘನತೆ ಇರುವುದಿಲ್ಲ. ಪೌರಾಣಿಕ ವಿದ್ವಾಂಸರು ತಮ್ಮ ತಿಳುವಳಿಕೆಯನ್ನು ಸರಿ ಎಂದು ಸಾಧಿಸುವುದರಲ್ಲಿ ನಿಸ್ಸೀಮರು! ಸಾರಸ್ವತ ವ್ಯಾಕರಣದ ರಚನಾಕಾರನು 'ಪುಂಸು' ಎಂಬ ಸ್ಥಾನದಲ್ಲಿ 'ಪುಂಕ್ಷು' ಎಂಬ ರಚನೆ ಮಡಿ ಇದಕ್ಕೆ ಒಂದು ಉದಾಹರಣೆಯನ್ನೇ ಸ್ಥಾಪಿಸಿದ್ದಾನೆ.

೩೭. ಎಂದರೆ ರಾಕ್ಷಸನಿಗಿಂತ.

೩೮. ಕುರಾನಿನ ಕರ್ತೃ ಯಾರು? ಯೋಚಿಸಿ ಹೇಳಿ

ಅವಿದ್ವಾಂಸರದು ಮತ್ತು ಅಧರ್ಮಿಗಳದು ಆಗಬಲ್ಲದು. ಭಲೇ! ಮತ್ತು ಯಾವನು ವಂಚಿಸುತ್ತಾನೋ ಮತ್ತು ಯಾವನು ವಂಚಿಸುವವರ ಸಂಗಾತಿಯಾಗಿದ್ದಾನೋ, ಆ ಖುದಾ ಕಪಟಿಯೂ, ಛಲಿಯೂ ಮತ್ತು ಅಧರ್ಮಿಯೂ ಏತಕ್ಕಲ್ಲ? ಆದುದರಿಂದ ಈ ಕುರಾನ್ ಖುದಾ ರಚಿಸಿದುದಲ್ಲ. ಯಾವನೋ ಕಪಟಿಯೂ ಛಲಿಯೂ ಆದವನು ರಚಿಸಿದುದಾಗಿರಬಹುದು. ಇಲ್ಲದಿದ್ದರೆ, ಇಂತಹ ಪ್ರತಿಕೂಲವಾದ ಮಾತುಗಳು ಬರೆಯಲ್ಪಡುತ್ತಿದ್ದವೇತಕ್ಕೆ? (೭೮)

*ಮತ್ತು ದಂಗೆಕೋರತನ, ಎಂದರೆ ಕಾಫಿರರ ಬಲ ಧ್ವಂಸವಾಗುವವರೆಗೆ ಮತ್ತು ಸಮಸ್ತ ಧರ್ಮಗಳೂ ಅಲ್ಲಾಹನ ಸಲುವಾಗಿ ಆಗಿಹೋಗುವವರೆಗೆ ಕಾದಾಡಿರಿ ಅವರೊಂದಿಗೆ, ಮತ್ತು ಯಾವುದೇ ವಸ್ತುವಿನಿಂದ ನೀವೇನು ಕೊಳ್ಳೆ ಹೊಡೆಯುವಿರೋ, ಅದರ ಐದನೆಯ ಒಂದು ಭಾಗ ಅಲ್ಲಾಹನ ಸಲುವಾಗಿ ಮತ್ತು ರಸೂಲನ ಸಲುವಾಗಿ ನಿಶ್ಚಯವಾಗಿಯೂ ಇರುತ್ತದೆ- ಎಂಬುದನ್ನು ನೀವು ತಿಳಿದುಕೊಳ್ಳಿರಿ. (ಮಂ-೨, ಸಿ-೯, ಸೂ-೮, ಆ-೩೯,೪೧)*

**ಸಮೀಕ್ಷಕ :-** ಇಂತಹ ಅನ್ಯಾಯದೊಂದಿಗೆ ಹೋರಾಡುವ, ಹೋರಾಡಿಸುವ, ಮುಸಲ್ಮಾನರ ಖುದಾನಿಗಿಂತ ಬೇರೆ ಶಾಂತಿಭಂಗಮಾಡುವ ಮತ್ತೊಬ್ಬನು ಯಾವನಿರಬಹುದು? ಈಗ ನೋಡಿರಿ ಈ ಮತವನ್ನು; ಅಲ್ಲಾಹನಿಗಾಗಿ ಮತ್ತು ರಸೂಲನಿಗಾಗಿ ಸಮಸ್ತ ಜಗತ್ತನ್ನೂ ಕೊಳ್ಳೆಹೊಡೆಯುವುದು - ಹೊಡೆಯಿಸುವುದು ದರೋಡೆಕೋರರ[೩೯] ಕೆಲಸವಲ್ಲವೇ? ಮತ್ತು ಸೂರೆಯ ವಸ್ತುವಿನಲ್ಲಿ ಖುದಾ ಭಾಗೀದಾರನಾಗುವುದು, ದರೋಡೆಕೋರನಾಗುವಂತೆಯೇ ಸರಿ. ಮತ್ತು ಇಂತಹ ಸೂರೆ ಹೊಡೆಯುವವರ ಪಕ್ಷಪಾತಿಯಾಗಿರುವುದರಿಂದ ಖುದಾ ತನ್ನ ಖುದಾತನಕ್ಕೆಯೇ ಕಳಂಕ ತಂದುಕೊಳ್ಳುತ್ತಾನೆ. ಇಂತಹ ಪುಸ್ತಕ, ಇಂತಹ ಖುದಾ ಮತ್ತು ಇಂತಹ ಪೈಗಂಬರರು ಜಗತ್ತಿನಲ್ಲಿ ಇಂತಹ ಉಪದ್ರವವನ್ನು ಸೃಜಿಸಿ, ಮತ್ತು ಶಾಂತಿಭಂಗಮಾಡಿ ಮಾನವರಿಗೆ ದುಃಖವನ್ನೀಯಲು ಎಲ್ಲಿಂದ ಬಂದರೆಂಬುದೇ ದೊಡ್ಡ ಆಶ್ಚರ್ಯದ ಸಂಗತಿಯಾಗಿದೆ. ಇಂತಹ ಮತಗಳು ಜಗತ್ತಿನಲ್ಲಿ ಪ್ರಚಲಿತವಾಗದೇ ಇದ್ದಿದ್ದರೆ, ಸಮಸ್ತ ಜಗತ್ತೂ ಆನಂದದಿಂದ[೪೦] ಇರುತ್ತಿದ್ದಿತು. (೭೯)

*ಮತ್ತು ದೇವತೆಗಳು ಕಾಫಿರರನ್ನು ವಶಪಡಿಸಿಕೊಳ್ಳುವುದನ್ನೂ, ಅವರ ಮುಖಗಳಿಗೆ ಮತ್ತು ಅವರ ಬೆನ್ನುಗಳಿಗೆ ಹೊಡೆಯುವುದನ್ನೂ ಮತ್ತು 'ಸವಿಯಿರಿ ಸುಡುವ ಶಿಕ್ಷೆಯನ್ನು' - ಎಂದು ಹೇಳುವುದನ್ನೂ ಎಂದಾದರೂ ನೋಡಲಿ. ನಾವು ಅವರ ಬಳಿಯಿಂದ ಅವರನ್ನು ಸಾಯಿಸಿದೆವು ಮತ್ತು ನಾವು ಫಿರಾಓನನ[೪೧] ಜಾತಿಯನ್ನು ಮುಳುಗಿಸಿಬಿಟ್ಟೆವು. ಮತ್ತು ನಿಮಗೆ ಎಷ್ಟು ಸಾಧ್ಯವೋ, ಅಷ್ಟು ಸನ್ನಾಹವನ್ನು ಮಾಡಿರಿ ಅವರ ಸಲುವಾಗಿ. (ಮಂ-೨, ಸಿ-೯, ಸೂ-೮, ಆ-೫೦, ೫೪-೬೦)*

**ಸಮೀಕ್ಷಕ :-** ಏನು ಸ್ವಾಮಿ? ಈ ದಿನಗಳಲ್ಲಿ ರಷ್ಯಾ, ರೋಮ್ ಮೊದಲಾದುವನ್ನೂ ಇಂಗ್ಲೆಂಡ್ ಈಜಿಪ್ತನ್ನೂ ದುರ್ದಶಾಗ್ರಸ್ತವಾಗಿ ಮಾಡಿಬಿಟ್ಟೆವು. ದೇವತೆಗಳು ಎಲ್ಲಿ ನಿದ್ರಿಸಿದ್ದನು? ಮತ್ತು ತನ್ನ ಸೇವಕರ ಶತ್ರುಗಳನ್ನು ಖುದಾ ಮೊದಲು ಸಾಯಿಸುತ್ತಾ - ಮುಳುಗಿಸುತ್ತಾ ಇದ್ದನು. ಈ ಮಾತು ಸತ್ಯವಾಗಿದ್ದರೆ, ಈ ದಿನಗಳಲ್ಲಿಯೂ ಹಾಗೆ ಮಾಡಲಿ. ಹೀಗೆ ಅಗದೇ ಇರುವುದರಿಂದ, ಈ ಮಾತು ನಂಬಲರ್ಹವಾಗಿಲ್ಲ. ನೀವು ಏನೇನು ಮಾಡಬಲ್ಲಿರೋ, ಆ ದುಃಖಪ್ರದವಾದ ಕರ್ಮಗಳನ್ನು ಅನ್ಯಮತೀಯರಿಗಾಗಿ ಮಾಡಿರಿ-ಎನ್ನುವುದು ಎಷ್ಟು ಕೆಟ್ಟ ಆಜ್ಞೆಯಾಗಿದೆ? ಇಂತಹ ಆಜ್ಞೆ ವಿದ್ವಾಂಸನದೂ, ಮತ್ತು ಧಾರ್ಮಿಕನಾದ ದಯಾಳುವಿನದೂ ಆಗಲಾರದು. ಮತ್ತೆ 'ಖುದಾ ದಯಾಳು; ನ್ಯಾಯಕಾರಿ' - ಎಂದು ಬರೆಯುತ್ತಾರೆ. ಇಂತಹ ಮಾತುಗಳಿಂದ ಮುಸಲ್ಮಾನರ ಖುದಾನಿಂದ ನ್ಯಾಯ ಮತ್ತು ದಯೆ-ಮೊದಲಾದ ಸದ್ಗುಣಗಳು ದೂರವೇ ಉಳಿಯುತ್ತವೆ. (೮೦)

*ಓ ನಬೀ![೪೨] ಅಲ್ಲಾಹನು ನಿನ್ನ ಮತ್ತು ಮುಸಲ್ಮಾನರಲ್ಲಿ ನಿನ್ನ ಪಕ್ಷವಹಿಸಿದವರ ಪಾಲಿಗೆ ಸಾಕಾಗಿದ್ದಾನೆ. ಓ ನಬೀ! ಯುದ್ಧಕ್ಕಾಗಿ ಮುಸಲ್ಮಾನರನ್ನು ಹುರಿದುಂಬಿಸು. ನಿಮ್ಮಲ್ಲಿ ೨೦ ಮಂದಿ ಸಂತುಷ್ಟರಾದವರಿದ್ದರೆ,[೪೩] ೨೦೦ ಜನರನ್ನು*

---

೩೯. ಮಹಮದ್ ಪೈಗಂಬರರ ಜೀವನ ಮತ್ತು ಇಸ್ಲಾಂ ಪ್ರಚಾರದ ಪರಿಣಾಮವಾಗಿ ಯುರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಆದ ಶಾಂತಿ ಭಂಗ, ನರಸಂಹಾರ, ರಾಜ್ಯನಾಶ ಸಂಬಂಧದ ಐತಿಹಾಸಿಕ ಘಟನಾ ಚಕ್ರದ ಸಂಕೇತವನ್ನು ಪರಿಶಿಷ್ಟ-೬ ರಲ್ಲಿ ತೋರಿಸಲಾಗಿದೆ.

೪೦. ಹಿಂದಿನ ಟಿಪ್ಪಣಿಯನ್ನು ನೋಡಿ.

೪೧. Pharaon.

೪೨. ಪೈಗಂಬರ್.

೪೩. ಎಂದರೆ, ಯುದ್ಧದಲ್ಲಿ ದೃಡವಾಗಿ ನಿಂತಿದ್ದರೆ,

*ಸೋಲಿಸಬಲ್ಲರು. ನೀನು ನ್ಯಾಯಾನುಕೂಲವೂ, ಪವಿತ್ರವೂ ಆದ ಯಾವುದನ್ನು ಕೊಳ್ಳೆ ಹೊಡೆದಿದ್ದೀಯೋ, ಅದರಿಂದ ಭಕ್ಷಿಸು ಮತ್ತು ಹೆದರು ಅಲ್ಲಾಹನಿಗೆ. ಅವನು ಕ್ಷಮೆಮಾಡುವ ದಯಾಳುವಾಗಿದ್ದಾನೆ. (ಮಂ-೨, ಸಿ-೧೦, ಸೂ-೮, ಆ-೬೪, ೬೫, ೬೯)*

**ಸಮೀಕ್ಷಕ :-** ತನ್ನ ಪಕ್ಷವನ್ನೇ ವಹಿಸುವುದು ಮತ್ತು ಅನ್ಯಾಯವನ್ನೇ ಮಾಡಿದರೂ ಕೂಡ ಅವನ ಪಕ್ಷವನ್ನೇ ಗ್ರಹಿಸುವುದು ಹಾಗೂ ಲಾಭವನ್ನೊದಗಿಸುವುದು ಯಾವ ನ್ಯಾಯ? ಅದು ವಿದ್ವತ್ತ್ವದ ಮತ್ತು ಧರ್ಮದ ವಿಷಯವೋ? ಮತ್ತು ಜನರಲ್ಲಿ ಶಾಂತಿಭಂಗವನ್ನಸಗಿ, ಯುದ್ಧ ಮಾಡುವವನೂ, ಮಾಡಿಸುವವನೂ, ಮತ್ತು ಕೊಳ್ಳೆಹೊಡೆದ - ಸೂರೆಗೈದ ಪದಾರ್ಥಗಳನ್ನು ಪವಿತ್ರವೆನ್ನುವವನೂ ಆದಮನನ್ನೇ ಕ್ಷಮಾಶೀಲ, ದಯಾಳು - ಎಂದು ಹೆಸರಿಸಿ ವರ್ಣಿಸುವುದು ಖುದಾನ ಮಾತೆನ್ನುವುದಿರಲಿ; ಯಾವನೇ ಮುಗ್ಧನಾದ ಮಾನವನ ಮಾತೂ ಕೂಡ ಆಗಲಾರದು. ಇಂತಹ ಮಾತುಗಳ ಇರುವಿಕೆಯಿಂದ ಕುರಾನ್ ಎಂದಿಗೂ ಈಶ್ವರ-ವಾಕ್ಯವೆಂದು ಸಿದ್ಧವಾಗಲಾರದು. (೮೧).

*ಸದಾ ಇರುವರು ಅದರ ನಡುವೆ. ಅಲ್ಲಾಹನಿರುತ್ತಾನೆ ಅವನೊಂದಿಗೆ. ಮಹಾಭಾಗ್ಯ ಅವನದು. ಓ ಜನರೇ! ನಂಬಿಕೆಯಿಟ್ಟಿರುವಿರಾದರೆ, ನಂಬಿಕೆಗಿಂತ ಕಾಫಿರತನ ಶ್ರೇಷ್ಠವೆನ್ನುವವರನ್ನೂ, ಅಂತಹ ನಿಮ್ಮ ಪಿತೃಗಳನ್ನೂ ಮತ್ತು ನಿಮ್ಮ ಸೋದರರನ್ನೂ, ಕಾಫಿರತನವನ್ನು ನಂಬಿಕೆಗಿಂತ ಮೇಲೆಂದು ಗ್ರಹಿಸಿ, ಅದರೊಂದಿಗೆ ಸಖ್ಯಭಾವದಿಂದಿರುವ ಮಿತ್ರರನ್ನೂ ನಿಮ್ಮ ಜೊತೆಗೆಂದೂ ಸೇರಿಸಿಕೊಳ್ಳಬೇಡಿರಿ. ಅಲ್ಲಾಹನು ತನ್ನ ರಸೂಲನ ಮೇಲೆ ಮತ್ತು ಮುಸಲ್ಮಾನರ ಮೇಲೆ ತನ್ನ ಸಾಂತ್ವನಾಕೃತಿಯನ್ನು (ಭರವಸೆಯ ಪುಸ್ತಕ) ಇಳಿಸಿದನು. ಮತ್ತು ಇಳಿಸಿದನು ಸೇನೆಯನ್ನು. ನೋಡಲಿಲ್ಲವೇ ನೀವು ಅದನ್ನು? ಮತ್ತು ದಂಡವಿತ್ತನು ಆ ಮಂದಿಗೆ. ಮತ್ತು ಇದೇ ಶಿಕ್ಷೆಯಾಗಿದೆ ಕಾಫಿರರಿಗೆ, ಮತ್ತೆ ಮತ್ತೆ ಬರುವನು ಅಲ್ಲಾಹನು ಆ ಮೇಲೆ ಅವನ ಮೇಲೆ. ಮತ್ತು ನಂಬಿಕೆಯನ್ನಿಡದವರೊಂದಿಗೆ ಯುದ್ಧವನ್ನು ಮಾಡಿರಿ. (ಮಂ-೨, ಸಿ-೧೦, ಸೂ-೯, ಆ :- ೨೨,೨೩, ೨೬, ೨೭,೨೯)*

**ಸಮೀಕ್ಷಕ :-** ಭಲೇ! ಸ್ವರ್ಗದವರ ಸಮೀಪದಲ್ಲಿ ಅಲ್ಲಾಹನು ಇರುತ್ತಾನೆಯಾದರೆ ಸರ್ವವ್ಯಾಪಕನೆಂತಾಗಬಲ್ಲನು? ಸರ್ವವ್ಯಾಪಕನಲ್ಲವಾದರೆ ಸೃಷ್ಟಿ-ಕರ್ತೃವೂ, ಮತ್ತು ನ್ಯಾಯಾಧೀಶನೂ ಆಗಲಾರನು. ಮತ್ತು ತಾಯಿ, ತಂದೆ ಸೋದರರು ಮತ್ತು ಮಿತ್ರನನ್ನು ದೂರಮಾಡಿಸುವುದು ಕೇವಲ ಅನ್ಯಾಯದ ಮಾತಾಗಿದೆ. ಅಹುದು; ದುರುಪದೇಶ ಮಾಡುವರಾದರೆ, ಒಪ್ಪಿಕೊಳ್ಳಬಾರದು. ಆದರೆ, ಅವರ ಸೇವೆಯನ್ನು ಸದಾ ಮಾಡಬೇಕು. ಮೊದಲು ಖುದಾ ಮುಸಲ್ಮಾನರ ಮೇಲೆ ಬಹಳ ಸಂತುಷ್ಟನಾಗಿದ್ದನು ಮತ್ತು ಅವರ ಸಹಾಯಕ್ಕಾಗಿ ಸೇನೆಯನ್ನು ಇಳಿಸುತ್ತಿದ್ದನೆಂಬುದು ಸತ್ಯವಾಗಿದ್ದರೆ, ಈಗ ಏಕೆ ಹೀಗೆ ಮಾಡುವುದಿಲ್ಲ? ಮತ್ತು ಮೊದಲು ಕಾಫಿರರಿಗೆ ಶಿಕ್ಷೆಯನ್ನು ಕೊಡುತ್ತಿದ್ದನು ಮತ್ತು ಅವನ ಮೇಲೆ ಬರುತ್ತಿದ್ದನಾದರೆ, ಈಗ ಎಲ್ಲಿಗೆ ಹೋದನು? ಯುದ್ಧವಿಲ್ಲದೆ ಖುದಾ ನಂಬಿಕೆಯನ್ನುಂಟುಮಾಡಲಾರನೇ? ಇಂತಹ ಖುದಾನಿಗೆ ನಮ್ಮ ಕಡೆಯಿಂದ ಸದಾ ತಿಲಾಂಜಲಿಯಿದೆ. ಖುದಾ ಏನು? ಒಬ್ಬ ಆಟಗಾರಮಾತ್ರನಾಗಿದ್ದಾನೆ. (೮೨)

*ಅಲ್ಲಾಹನು ತನ್ನ ಬಳಿಯಿಂದ ಅಥವಾ ನಮ್ಮ ಕೈಗಳಿಂದ, ನಿಮ್ಮ ಸಲುವಾಗಿ ನಿಮಗೆ ಶಿಕ್ಷೆ ವಿಧಿಸುವ ಮಾರ್ಗವನ್ನು ನಾವು ನೋಡುವವರಾಗಿದ್ದೇವೆ. (ಮಂ-೨, ಸಿ-೧೦, ಸೂ-೯, ಆ-೫೨)*

**ಸಮೀಕ್ಷಕ:-** ತನ್ನ ಅಥವಾ ಮುಸಲ್ಮಾನರ ಕೈಯಿಂದ, ಬೇರೆ ಯಾವುದಾದರೂ ಮತದವರನ್ನು ಹಿಡಿಯಿಸುತ್ತಾನೆ - ಎನ್ನಲು, ಮುಸಲ್ಮಾನರೇ ಅಲ್ಲಾಹನ ಪೋಲೀಸರಾಗಿದ್ದಾರೇನು? ಮುಸಲ್ಮಾನರಲ್ಲಿ ಪಾಪಿಗಳೂ ಕೂಡ ಪ್ರಿಯರಾಗಿರುತ್ತಾರೇನು? ಹೀಗಿರುವುದಾದಲ್ಲಿ "ಮೊಬ್ಬಿನ ನಗರಿ; ರಾಜ"[೪೪] - ಎಂಬಂತಹ ವ್ಯವಸ್ಥೆ ಕಂಡುಬರುತ್ತದೆ. ಬುದ್ಧಿವಂತರಾದ ಮುಸಲ್ಮಾನರೂ[೪೫] ಕೂಡ ಈ ನಿರ್ಮೂಲವು ಯುಕ್ತಿಹೀನವೂ ಆದ ಮತವನ್ನು ಒಪ್ಪಿಕೊಳ್ಳುತ್ತಾರೆ ಎಂಬುದೇ ಆಶ್ಚರ್ಯಕರವಾದ ವಿಷಯವಾಗಿದೆ. (೮೩)

---

೪೪. ಹಿಂದಿಯಲ್ಲಿ "ಚಿನ್ನಕ್ಕೂ ಅಷ್ಟೇ ಬೆಲೆ; ಮಣ್ಣಿಗೂ ಅಷ್ಟೇ ಬೆಲೆ' ಎಂದು ಸಾರಿದ ಮೂರ್ಖರಾಜನ ಕಟ್ಟು ಕಥೆಯೊಂದಿದೆ. ಮಹರ್ಷಿ ಅದರ ಕಡೆ ನಿರ್ದೇಶಿಸಿದ್ದಾರೆ. ಈ ಕಥೆ ಗ್ರಂಥಕರ್ತರ 'ವ್ಯವಹಾರಭಾನು' ಎಂಬ, ಗ್ರಂಥದಲ್ಲಿದೆ.

೪೫. ಸರ್ ಸೈಯದ್ ಅಹಮದ್ ಖಾನ್‌ರಂತಹ ಅನೇಕ ಮುಸಲ್ಮಾನ ವಿದ್ವಾಂಸರು ಮಹರ್ಷಿ ದಯಾನಂದರ ಜೊತೆ ಮೈತ್ರಿಯನ್ನಿಟ್ಟಿದ್ದರು. ಅವರ ಕಡೆಗೆ ಈ ಸಂಕೇತ.

*ಅಲ್ಲಾಹನ ಕಡೆಯಿಂದ ನಂಬಿಕೆಯನ್ನುಳ್ಳ ಪುರುಷರಿಗೆ ಮತ್ತು ಸ್ತ್ರೀಯರಿಗೆ ಸ್ವರ್ಗಗಳಿವೆ. ಅವುಗಳ ಕೆಳಗಿನಿಂದ ಸದಾ ಹರಿಯುತ್ತಿರುವ ನಾಲೆಗಳಿವೆ. ಮತ್ತು ಏಡನ್ನಿನ ಸ್ವರ್ಗಗಳ ಮಧ್ಯೆ ಪವಿತ್ರವಾದ ಗೃಹಗಳಿವೆ. ಮತ್ತು ಅಲ್ಲಾಹನ ಪ್ರಸನ್ನತೆ ಮಹಾವಿಶಾಲವಾಗಿದೆ. ಮತ್ತು ಮನಸ್ಸಿನ ಆಕಾಂಕ್ಷೆಯನ್ನು ಪೂರೈಸಿಕೊಳ್ಳುವುದು ಅತ್ಯಂತ ಶ್ರೇಷ್ಠ ವಿಷಯವಾಗಿದೆ. ಸರಿ; ನಗೆಯಾಟವಾಡುತ್ತಾರೆ, ಅಲ್ಲಾಹನು ಅವರೊಂದಿಗೆ ನಗೆಯಾಟವಾಡಿದನು. (ಮಂ-೨, ಸಿ-೨೦, ಸೂ-೯, ಆ-೭೨, ೭೯)*

**ಸಮೀಕ್ಷಕ :-** ಇದು ಖುದಾನ ಹೆಸರಿನಿಂದ ನರ-ನಾರಿಯರಿಗೆ ತಮ್ಮ ಸ್ವಾರ್ಥಕ್ಕಾಗಿ ಪ್ರಲೋಭನವನ್ನು ಒಡ್ಡುವ ಕೆಲಸವಾಗಿದೆ. ಏಕೆಂದರೆ, ಇಂತಹ ಪ್ರಲೋಭನವನ್ನು ಕೊಡದೇ ಇದ್ದರೆ, ಯಾವನೂ ಮುಹಮ್ಮದ್ ಸಾಹೇಬರ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಿರಲಿಲ್ಲ. ಹೀಗೆಯೇ ಅನ್ಯಮತೀಯರೂ ಮಾಡುತ್ತಾ ಹೋಗುತ್ತಾರೆ. ಮಾನವರಂತೂ ಪರಸ್ಪರ ನಗೆಯಾಟವಾಡಿಯೇ ಆಡುತ್ತಾರೆ; ಆದರೆ ಖುದಾ ಯಾವನೊಂದಿಗೂ ನಗೆಯಾಟವಾಡುವುದು ಉಚಿತವಲ್ಲ. ಈ ಕುರಾನ್ ಏನು, ದೊಡ್ಡ ಆಟವಾಗಿದೆ! (೮೪)

*ಆದರೆ ರಸೂಲನು ಮತ್ತು ಅವನೊಂದಿಗೆ ನಂಬಿಕೆಯನ್ನಿಟ್ಟ ಮಾನವರು ತಮ್ಮ ಧನದೊಂದಿಗೆ ಮತ್ತು ತಮ್ಮ ಪ್ರಾಣದೊಂದಿಗೆ ಧರ್ಮಯುದ್ಧವನ್ನು*[೪೬] *ಮಾಡಿದರು. ಮತ್ತು ಈ ಜನರಿಗೆಯೇ ಒಳಿತಿದೆ. ಮತ್ತು ಅಲ್ಲಾಹನು ಅವರ ಹೃದಯಗಳ ಮೇಲೆ ಮುದ್ರೆಯೊತ್ತಿದನು. ತೀರಿತು; ಅವರು ಅರಿತುಕೊಳ್ಳುವುದಿಲ್ಲ. (ಮಂ-೨, ಸಿ-೧೦, ಸೂ-೯, ಆ-೮೮, ೯೩)*

**ಸಮೀಕ್ಷಕ :-** ಮುಹಮ್ಮದ್ ಸಾಹೇಬರೊಂದಿಗೆ ನಂಬಿಕೆಯಿಟ್ಟ ಮಂದಿಗಳೇ ಒಳ್ಳೆಯವರು - ಎಂಬ ಅನುಕೂಲಸಿಂಧುವಿನ ಮಾತನ್ನೀಗ ನೋಡಿರಿ. ಮತ್ತು ನಂಬಿಕೆಯಿಡದವರೆಲ್ಲಾ ಕೆಟ್ಟವರು! ಈ ಮಾತು ಪಕ್ಷಪಾತದಿಂದ ಮತ್ತು ಅವಿದ್ಯೆಯಿಂದ ತುಂಬಿದುದಲ್ಲವೇ? ಖುದಾ ಸ್ವಯಂ ಮುದ್ರೆಯನ್ನೊತ್ತಿಬಿಟ್ಟನೆಂದ ಮೇಲೆ ಪಾಪಮಾಡುವುದರಲ್ಲಿ ಅವರ ಅಪರಾಧವಾವುದೂ ಇಲ್ಲ. ಆದರೆ, ಅಪರಾಧ ಖುದಾನದೇ ಆಗಿದೆ. ಏಕೆಂದರೆ, ಹೃದಯಗಳ ಮೇಲೆ ಮುದ್ರೆಯನ್ನೊತ್ತಿ ಆ ಬಡಪಾಯಿಗಳನ್ನು ಒಳಿತಿನಿಂದ ತಡೆದಿಟ್ಟನು. ಎಷ್ಟು ದೊಡ್ಡ ಅನ್ಯಾಯವಿದು? (೮೫)

*ಅವರನ್ನು ನೀನು ಪವಿತ್ರಗೊಳಿಸಲಾಗುವಂತೆ, ಅವರ ವಸ್ತುವಿನಿಂದ ದಾನ ಸ್ವೀಕರಿಸು; ಎಂದರೆ, ಬಾಹ್ಯತಃ ಅವರನ್ನು ಆ ವಸ್ತುಗಳಿಂದ ಪವಿತ್ರಗೊಳಿಸು. ಎಂದರೆ, ಗೂಢವಾಗಿ, ನಿಶ್ಚಯವಾಗಿಯೇ ಅಲ್ಲಾಹನು ಮುಸಲ್ಮಾನರಿಂದ ಅವರ ಪ್ರಾಣಗಳನ್ನು ಮತ್ತು ವಸ್ತುಗಳನ್ನು ಕೊಂಡುಕೊಂಡಿದ್ದಾನೆ. ಅವಕ್ಕೆ ಪ್ರತಿಯಾಗಿ ಅವರಿಗೆ ಸ್ವರ್ಗಗಳಿವೆ. ಅಲ್ಲಾಹನ ಮಾರ್ಗದ ಮಧ್ಯೆ ಯುದ್ಧ ಮಾಡುವರು. ಮತ್ತೇನು? ಸಂಹರಿಸುವರು ಮತ್ತು ಹತರೂ ಆಗುವರು. (ಮಂ-೨, ಸಿ-೧೧, ಸೂ-೯, ಆ-೧೦೩,೧೧೧)*

**ಸಮೀಕ್ಷಕ :-** ಭಾಪು ಮುಹಮ್ಮದ್ ಸಾಹೇಬರೇ! ಭಾಪು!! ತಾವಂತೂ ಗೋಕುಲೀಯ ಗೋಸಾಯಿಗಳಿಗೇ ಸಮವಾದಿರಿ. ಏಕೆಂದರೆ, ಅನ್ಯರ ವಸ್ತುಗಳನ್ನು ಗ್ರಹಿಸುವುದು ಮತ್ತು ಅವರನ್ನು ಪವಿತ್ರಗೊಳಿಸುವುದು - ಇದೇ ತಾನೇ ಗೋಸಾಯಿಗಳ ವರ್ತನೆ? ಭೇಷ್, ಖುದಾ ಸಾಹೇಬರೇ! ಮುಸಲ್ಮಾನರ ಕೈಯಿನಿಂದ ಬೇರೆ ಬಡವರ ಪ್ರಾಣಗಳನ್ನು ತೆಗೆದುಕೊಳ್ಳುವುದನ್ನೇ ಲಾಭವೆಂದರಿತಿರಿ. ತಾವು ಒಳ್ಳೆಯ ವ್ಯಾಪಾರವನ್ನೇ ಹೂಡಿದ್ದೀರಿ! ಮತ್ತು ಆ ಅನಾಥರನ್ನು ಸಾಯಿಸಿ, ಆ ನಿರ್ದಯರಾದ ಮಾನವರಿಗೆ ಸ್ವರ್ಗವನ್ನೀಯುವುದರಿಂದ ದಯೆ ಮತ್ತು ನ್ಯಾಯಗಳಿಗೆ ನಮಸ್ಕಾರ ಹೊಡೆದು ಕುಳಿತನು ಮುಸಲ್ಮಾನರ ಖುದಾ, ಹಾಗೂ ತನ್ನ ಖುದಾತನಕ್ಕೂ ಕಳಂಕ ಹಚ್ಚಿ, ಬುದ್ಧಿವಂತರಾದ ಧಾರ್ಮಿಕರ ದೃಷ್ಟಿಯಲ್ಲಿ ತಿರಸ್ಕಾರಯೋಗ್ಯನಾಗಿ ಹೋದನು. (೮೬)

*ಓ ಜನರೇ! ನಂಬಿಕೆಯಿಟ್ಟಿರುವಿರಾದರೆ, ನಿಮ್ಮ ಬಳಿಯಿರುವವರಲ್ಲಿ ಕಾಫಿರರಾದವರೊಂದಿಗೆ ಯುದ್ಧಮಾಡಿರಿ. ಮತ್ತು ನಿಮ್ಮಲ್ಲಿ ದೃಢತೆಯಿರಲಿ. ಪ್ರತಿ ವರ್ಷವೂ ಒಂದು ಸಾರಿ, ಅಥವಾ ಎರಡು ಸಾರಿ ವಿಪತ್ತುಗಳಿಗೆ ಅವರು ಈಡುಮಾಡಲ್ಪಡುತ್ತಾರೆ. ಅದರೂ ಅವರು ತೋಬಾ ಪಶ್ಚಾತ್ತಾಪಪಡುವುದಿಲ್ಲ. ಮತ್ತು ಅವರು ಶಿಕ್ಷಣವನ್ನೂ ಗ್ರಹಿಸುವುದಿಲ್ಲ. ಎಂಬುದನ್ನು ನೀವು ನೋಡುವುದಿಲ್ಲವೇ? (ಮಂ-೨, ಸಿ-೧೧, ಸೂ-೯. ಆ-೧೨೩,೧೨೬)*

---

೪೬. ಮೂಲ ಗ್ರಂಥದಲ್ಲಿ '**ಜಿಹಾದ್**' ಎಂಬ ಶಬ್ದವಿದೆ.

**ಸಮೀಕ್ಷಕ:–** ನೋಡಿರಿ, ವಿಶ್ವಾಸಘಾತದ ಈ ಒಂದು ಮಾತನ್ನು ಮುಸಲ್ಮಾನರುಗಳಿಗೆ ಖುದಾ ಕಲಿಸುತ್ತಾನೆ! ನೆರೆಯವನೇ ಆಗಿರಲಿ, ಯಾವನ ಸೇವಕನಾದರೂ ಆಗಿರಲಿ, ಅವಕಾಶ ಸಿಕ್ಕಿದಾಗಲೇ ಯುದ್ಧವನ್ನು ಮಾಡಬೇಕು; ಅಥವಾ ಪ್ರಹರಿಸಬೇಕು – ಎಂದು! ಇಂತಹ ಘಟನೆಗಳು ಮುಸಲ್ಮಾನರಿಂದ ಬಹಳ ನಡೆದೂ ಇವೆ – ಇದೇ ಕುರಾನಿನ ಉಪದೇಶದಿಂದಾಗಿ. ಈಗಲಾದರೂ ಮುಸಲ್ಮಾನರು ತಿಳುವಳಿಕೆ ಪಡೆದು, ಕುರಾನಿನಲ್ಲಿ ಹೇಳಲ್ಪಟ್ಟಿರುವ ಈ ಕೇಡುಗಳನ್ನು ಬಿಟ್ಟುಬಿಡುವರಾದರೆ, ಬಹಳ ಒಳ್ಳೆಯದಾದೀತು. (೮೭)

*ಯಾವನು ಆಕಾಶಗಳನ್ನೂ, ಮತ್ತು ಪೃಥಿವಿಯನ್ನೂ ಆರುದಿನಗಳೊಳಗೆ ಉತ್ಪನ್ನಮಾಡಿದನೋ, ಮತ್ತೆ ಊರ್ಧ್ವಾಕಾಶದಲ್ಲಿ ವಿಶ್ರಾಂತಿಪಡೆದನೋ, ಆ ನಿಮ್ಮ ಅಲ್ಲಾಹನು ನಿಶ್ಚಯವಾಗಿ ಸರ್ವರಕ್ಷಕನಾಗಿದ್ದಾನೆ. ಅವನು ಕಾರ್ಯದ ವ್ಯವಸ್ಥೆಯನ್ನು ಮಾಡುತ್ತಾನೆ. (ಮಂ–೩, ಸಿ–೧೧, ಸೂ– ೧೦, ಆ– ೩)*

**ಸಮೀಕ್ಷಕ :–** ಆಕಾಶವಿರುವುದು ಒಂದು ಮತ್ತು ರಚಿತವಲ್ಲದ ಅನಾದಿವಸ್ತು. ಅದರ ರಚನೆಯ ಬಗೆಗೆ ಬರೆದುದರಿಂದ ಆ ಕುರಾನ್– ಲೇಖಕನು ಪದಾರ್ಥವಿದ್ಯೆಯನ್ನು ತಿಳಿದವನಾಗಿರಲಿಲ್ಲವೆಂದು ನಿಶ್ಚಯವಾಯಿತು. ಪರಮೇಶ್ವರನ ಮುಂದೆ ಆರುದಿನಗಳವರೆಗೆ ರಚಿಸಬೇಕಾದ ಸಮಸ್ಯೆಯಿರುತ್ತದೆಯೇ? ಹಾಗಾದರೆ – "ಆಗು ನನ್ನ ಆಜ್ಞೆಯಿಂದ, ಎಂದಾಗ ಆಗಿಹೋಯಿತು." – ಎಂದು ಕುರಾನ್‌ನಲ್ಲಿ ಬರೆದಿರುವಾಗ, ಆರುದಿನಗಳು ಎಂದಿಗೂ ತಗಲಲಾರವು. ಇದರಿಂದ ಆರುದಿನಗಳ ತಗಲುವಿಕೆ ಸುಳ್ಳಾಗಿದೆ. ಅವನು ವ್ಯಾಪಕನಾಗಿ ಇದ್ದಿದ್ದರೆ, ಆಕಾಶದ[೪೬.ಅ] ಮೇಲೆ ಉಳಿಯುತ್ತಿದ್ದನೇಕೆ? ಮತ್ತು ಕೆಲಸದ ವ್ಯವಸ್ಥೆಯನ್ನು ಮಾಡುತ್ತಾನೆಯಾದರೆ, ಸರಿಯಾಗಿ ನಿಮ್ಮ ಖುದಾ ಮನುಷ್ಯನಿಗೆ ಸಮಾನನಾಗಿದ್ದಾನೆ. ಏಕೆಂದರೆ, ಯಾವನು ಸರ್ವಜ್ಞನಾಗಿದ್ದಾನೋ, ಅವನು ಕುಳಿತು – ಕುಳಿತು ವ್ಯವಸ್ಥೆಯೇನನ್ನು ಮಾಡುವನು? ಇದರಿಂದ, ಈಶ್ವರನನ್ನು ತಿಳಿಯದ ಕಾಡು ಜನರು ಈ ಪುಸ್ತಕವನ್ನು ರಚಿಸಿರಬಹುದೆಂದು ವಿದಿತವಾಗುತ್ತದೆ. (೮೮)

*ಶಿಕ್ಷಣ ಮತ್ತು ದಯೆ ಮುಸಲ್ಮಾನರ ಸಲುವಾಗಿ (ಮಂ–೩, ಸಿ–೧೧, ಸೂ–೧೧, ಆ–೫೭)*

**ಸಮೀಕ್ಷಕ:–** ಈ ಖುದಾ ಮುಸಲ್ಮಾನರಿಗೆ ಮಾತ್ರವೋ? ಬೇರೆಯವರಿಗೆ ಅಲ್ಲವೋ? ಮುಸಲ್ಮಾನರ ಮೇಲೆ ಮಾತ್ರ ದಯೆಮಾಡುವನಾದರೆ, ಅನ್ಯ ಮಾನವರ ಮೇಲೆ ಮಾಡನಾದರೆ, ಪಕ್ಷಪಾತಿಯಾಗಿದ್ದಾನೆ. ನಂಬಿಕೆಯುಳ್ಳವರನ್ನು ಮುಸಲ್ಮಾನರೆಂದು ಹೇಳುವಿರಾದರೆ, ಅವರಿಗೆ ಶಿಕ್ಷಣದ ಅವಶ್ಯಕತೆಯೇ ಇಲ್ಲ. ಮತ್ತು ಮುಸಲ್ಮಾನರಿಂದ ಬೇರೆಯಾದವರಿಗೆ ಉಪದೇಶಿಸುವುದಿಲ್ಲವಾದರೆ, ಖುದಾನ ವಿದ್ಯೆಯೇ ವ್ಯರ್ಥವಾಗಿದೆ. (೮೯)

*ಕರ್ಮಗಳಲ್ಲಿ ನಿಮ್ಮಲ್ಲಿ ಒಳ್ಳೆಯವರಾರೆಂದು ನಿಮ್ಮನ್ನು ಪರೀಕ್ಷಿಸುವನು. ನೀನು ಹೇಳುವೆಯಾದರೆ, ಅವಶ್ಯವಾಗಿ ನೀವು ಎಬ್ಬಿಸಲ್ಪಡುವಿರಿ ಮೃತ್ಯುವಿನ ನಂತರ. (ಮಂ–೩, ಸಿ–೧೧, ಸೂ–೧೧, ಆ–೭)*

**ಸಮೀಕ್ಷಕ :–** ಕರ್ಮಗಳ ಪರೀಕ್ಷೆಯನ್ನು ಮಾಡುತ್ತಾನೆಯಾದರೆ, ಅವನು ಸರ್ವಜ್ಞನೇ ಅಲ್ಲ. ಮತ್ತು ಸಾವಿನ ನಂತರ ಎಬ್ಬಿಸುವನಾದರೆ, ವಿಚಾರಾಧೀನವಾಗಿಡುತ್ತಾನೆ ಮತ್ತು, ಸತ್ತವರು ಬದುಕುವುದಿಲ್ಲವೆಂಬ ತನ್ನ ನಿಯಮವನ್ನು ಮುರಿಯುತ್ತಾನೆ. ಇದು ಖುದಾನಿಗೆ ಕಳಂಕಪ್ರಾಯವಾಗಿದೆ. (೯೦)

*ಮತ್ತು – ಓ ಪೃಥಿವಿ! ನಿನ್ನ ನೀರನ್ನು ನುಂಗಿಕೊಂಡು ಬಿಡು. ಮತ್ತು ಓ ಆಕಾಶ! ಮುಗಿದು ಹೋಗು. ಎಂದು ಹೇಳಲ್ಪಟ್ಟಿತು. ಮತ್ತು ನೀರು ಬತ್ತಿಹೋಯಿತು. ಮತ್ತು, ಓ ಜಾತಿ! ಈ ಹೆಣ್ಣು ಒಂಟೆ ಅಲ್ಲಾಹನ ಕುರುಹಾಗಿದೆ ನಿಮ್ಮ ಸಲುವಾಗಿ. ಸಾಕು. ಬಿಟ್ಟು ಬಿಡಿರಿ ಅದನ್ನು ಅಲ್ಲಾಹನ ಪೃಥಿವಿಯ ನಡುವೆ. ತಿಂದು ತಿರುಗಾಡಲಿ. (ಮಂ–೩, ಸಿ–೧೧, ಸೂ–೧೧, ಆ–೪೪, ೬೪)*

**ಸಮೀಕ್ಷಕ:–** ಏನು ಹುಡುಗುತನದ ಮಾತು? ಪೃಥಿವೀ ಮತ್ತು ಆಕಾಶ ಎಂದಿಗಾದರೂ ಮಾತನ್ನು ಆಲಿಸಬಲ್ಲವೇ? ಭಾಪು!ಭಾಪು!!ಖುದಾನ ಬಳಿ ಹೆಣ್ಣು ಒಂಟೆ ಇರುವುದಾದರೆ, ಗಂಡು ಒಂಟೆಯೂ ಇರಬಹುದೇನೋ? ಹಾಗಾದರೆ, ಆನೆಗಳು ಕುದುರೆಗಳು, ಕತ್ತೆಗಳು – ಮೊದಲಾದುವೂ ಕೂಡ ಇರಬಹುದು. ಮತ್ತು ಖುದಾ ಹೆಣ್ಣು ಒಂಟೆಯಿಂದ ಹೊಲವನ್ನು

---

೪೬.ಅ ಎಂದರೆ, ಸಿಂಹಾಸನದ ಮೇಲೆ–ಯು.ಮೀ.

ಮೇಯಿಸುವುದು ಒಳ್ಳೆಯ ವ್ಯವಹಾರವೇ? ಹೆಣ್ಣು ಒಂಟೆಯ ಮೇಲೆ ಏರುವುದು ಉಂಟೋ? ಸ್ಥಿತಿಗಳು ಹೀಗೆ ಇರುವದಾದರೆ, ನವಾಬೀ ಠಕ್ಕು ಠೌಳಿಯೇ ಖುದಾನ ಮನೆಯಲ್ಲಿಯೂ ನಡೆಯುತ್ತಿರಬಹುದು. (೯೧)

*ಆಕಾಶ ಮತ್ತು ಭೂಮಿ ಇರುವವರೆಗೂ ಅದರ ನಡುವೆ, ಸದಾ ಇರುವವರಾದ ಜನರು ಭಾಗ್ಯಶಾಲಿಗಳೇ ಸರಿ. ನಿಶ್ಚಯವಾಗಿಯೂ ಆಕಾಶ-ಭೂಮಿಗಳಿರುವವರೆಗೆ ಸ್ವರ್ಗದಲ್ಲಿ ಸದಾ ಇರುವವರಾಗಿದ್ದಾರೆ. (ಮಂ-೩, ಸಿ-೧೨, ಸೂ-೧೧, ಆ-೧೦೮-೧೦೯)*

**ಸಮೀಕ್ಷಕ :-** ನರಕಕ್ಕೆ ಮತ್ತು ಸ್ವರ್ಗಕ್ಕೆ ಕಯಾಮತ್ತಿನ ನಂತರ ಎಲ್ಲ ಜನರೂ ಹೋಗುವವರಾದರೆ, ಮತ್ತೆ ಆಕಾಶ ಮತ್ತು ಪೃಥಿವೀ ಏತಕ್ಕಾಗಿ ಇರುವುದು? ಮತ್ತು ನರಕ ಮತ್ತು ಸ್ವರ್ಗಗಳ ಇರುವಿಕೆಯ ಅವಧಿ ಆಕಾಶ ಮತ್ತು ಪೃಥಿವಿಯ ಇರುವಿಕೆಯ ಅವಧಿಯಷ್ಟೇ ಆದರೆ, 'ಸದಾ ಇರುವರು ಸ್ವರ್ಗದಲ್ಲಿ' ಅಥವಾ ನರಕದಲ್ಲಿ ಎಂಬ ಮಾತು ಸುಳ್ಳಾಯಿತು. ಇಂತಹ ಕಥನ ಅವಿದ್ವಾಂಸರದಾಗಿರುತ್ತದೆ; ಈಶ್ವರನದು ಅಥವಾ ವಿದ್ವಾಂಸರದಲ್ಲ. (೯೨)

*ಯಾವಾಗ ಯೂಸುಫನು [೪೭] ತನ್ನ ತಂದೆಗೆ -"ಓ ನನ್ನ ತಂದೆ! ನಾನು ಒಂದು ಸ್ವಪ್ನದಲ್ಲಿ ನೋಡಿದೆನು.... (ಮಂ-೩, ಸಿ-೧೨, ೧೩, ಸೂ-೧೨, ೧೩, ಆ-೪-೧೦೧)*

**ಸಮೀಕ್ಷಕ:-** ಈ ಪ್ರಕರಣದಲ್ಲಿ ಪಿತೃ-ಪುತ್ರರ ಸಂವಾದ ರೂಪದ ಕಥೆ- ಕಗ್ಗ ತುಂಬಿಕೊಂಡಿದೆ. ಆದುದರಿಂದ ಕುರಾನ್ ಈಶ್ವರನು ರಚಿಸಿದುದಲ್ಲ; ಯಾವನೋ ಮನುಷ್ಯನು ಮನುಷ್ಯರ ಇತಿಹಾಸವನ್ನು ಬರೆದುಬಿಟ್ಟಿದ್ದಾನೆ. (೯೩)

*ಯಾವನು ಆಕಾಶವನ್ನು ಕಂಭವಿಲ್ಲದೆ ನಿಲ್ಲಿಸಿದನೋ, ಅವನು ಅಲ್ಲಾಹನು ಆಗಿದ್ದಾನೆ. ನೀವು ಅದನ್ನು ನೋಡಿತ್ತೀರಿ. ಮತ್ತೆ ಊರ್ಧ್ವಾಕಾಶದ ಮೇಲೆ ಉಳಿದನು. ಸೂರ್ಯನನ್ನು ಮತ್ತು ಚಂದ್ರನನ್ನು ಆಜ್ಞಾನುವರ್ತಿಗಳನ್ನಾಗಿ ಮಾಡಿದನು. ಮತ್ತು ಯಾವನು ಪೃಥಿವಿಯನ್ನು ಹಾಸಿದನೋ ಅವನೇ(ಅಲ್ಲಾಹ್) ಆಗಿದ್ದಾನೆ. ಇಳಿಸಿದನು ಆಕಾಶದಿಂದ ನೀರನ್ನು . ಸರಿ; ಹರಿದವು ನಾಲೆಗಳು ತಮ್ಮದೇ ಆದ ರೀವಿಯೊಂದಿಗೆ. ಅಲ್ಲಾಹನು ತನಗೆ ಬೇಕಾದವನ ಸಲುವಾಗಿ ಭೋಜನವನ್ನು ತೆರೆದಿಡುತ್ತಾನೆ. ಮತ್ತು ಯಾವನಿಗೆ ಹಾಗೆ ಮಾಡಬಯಸುತ್ತಾನೋ, ಅವನನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾನೆ. (ಮಂ-೩, ಸಿ-೧೩, ಸೂ-೧೩, ಆ-೨,೩,೧೭, ೨೯)*

**ಸಮೀಕ್ಷಕ :-** ಮುಸಲ್ಮಾನರ ಖುದಾ ಪದಾರ್ಥವಿದ್ಯೆಯನ್ನು ಏನೇನೂ ತಿಳಿದಿರಲಿಲ್ಲ. ತಿಳಿದಿದ್ದಲ್ಲಿ, ಗುರುತ್ವವಿಲ್ಲದ ಆಕಾಶಕ್ಕೆ ಕಂಬವನ್ನು ನಿಲ್ಲಿಸುವ ಕತೆ-ಕಗ್ಗವೇನನ್ನೂ ಬರೆಯುತ್ತಿರಲಿಲ್ಲ. ಖುದಾ ಊರ್ಧ್ವಾಕಾಶವೆಂಬ ಒಂದು ಸ್ಥಾನದಲ್ಲಿರುತ್ತಾನೆಯಾದರೆ, ಅವನು ಸರ್ವಶಕ್ತಿವಂತನೂ, ಸರ್ವವ್ಯಾಪಕನೂ ಆಗಲಾರನು. ಮತ್ತು ಖುದಾ ಮೇಘ - ವಿದ್ಯೆಯನ್ನು ತಿಳಿದವನಾಗಿದ್ದು 'ಆಕಾಶದಿಂದ ನೀರನ್ನು ಇಳಿಸಿದೆವು' - ಎಂದು ಬರೆದನಾದರೆ, ಪೃಥಿವಿಯಿಂದ ನೀರನ್ನು ಮೇಲಕ್ಕೇರಿಸಿದೆವು', ಎಂದೇಕೆ ಬರೆಯಲಿಲ್ಲ? ಇದರಿಂದ, ಕುರಾನನ್ನು ರಚಿಸಿದವನು ಮೇಘವಿದ್ಯೆಯನ್ನೂ ಕೂಡ ತಿಳಿದರಲಿಲ್ಲವೆಂದು ನಿಶ್ಚಯವಾಯಿತು. ಮತ್ತು ಒಳ್ಳೆಯ - ಕೆಟ್ಟ ಕರ್ಮಗಳಿಲ್ಲದೆ ಸುಖ-ದುಃಖಗಳನ್ನು ಕೊಡುತ್ತಾನೆಯಾದರೆ ಪಕ್ಷಪಾತಿಯೂ, ಅನ್ಯಾಯಕಾರಿಯೂ, ನಿರಕ್ಷರ ಭಟ್ಟನೂ ಆಗಿದ್ದಾನೆ . (೯೪)

*ನಿಶ್ಚಯವಾಗಿ ಅಲ್ಲಾಹನು ಯಾವನನ್ನು (ಜಾರಿಸ) ಬಯಸುತ್ತಾನೋ, ಅವನನ್ನು ಪಥಭ್ರಷ್ಟನನ್ನಾಗಿ ಮಾಡುತ್ತಾನೆ. ಮತ್ತು ಯಾವನು ತನ್ನ ಕಡೆಗೆ ತಿರುಗುತ್ತಾನೋ, ಆ ಮನುಷ್ಯನಿಗೆ ತನ್ನ ಕಡೆಯ ಮಾರ್ಗವನ್ನು ತೋರಿಸುತ್ತಾನೆ. (ಮಂ-೩, ಸಿ-೧೩, ಸೂ-೧೩, ಆ-೨೭)*

**ಸಮೀಕ್ಷಕ:-** ಅಲ್ಲಾಹನು ದಾರಿತಪ್ಪಿಸುತ್ತಾನೆಯಾದರೆ, ಖುದಾನ ಮತ್ತು ಶೈತಾನನ ನಡುವೆ ವ್ಯತ್ಯಾಸವೇನುಳಿಯಿತು? ಶೈತಾನನು ಅನ್ಯರನ್ನು ಪಥಭ್ರಷ್ಟರನ್ನಾಗಿ, ಎಂದರೆ- ದಿಗ್ಭ್ರಾಂತರನ್ನಾಗಿ ಮಾಡುವುದರಿಂದ ದುಷ್ಟನೆನ್ನಿಸಿಕೊಳ್ಳುತ್ತಾನೆಯಾದರೆ, ಖುದಾ ಕೂಡ ಅಂತಹ ಕೆಲಸವನ್ನೇ ಮಾಡುವುದರಿಂದ ದುಷ್ಟ ಶೈತಾನನೇತಕ್ಕೆ ಅಲ್ಲ? ಮತ್ತು ದಾರಿ ತಪ್ಪಿಸುವ ಪಾಪದಿಂದ, ಅಲ್ಲಾಹನಿಗೆ ನರಕ ಸಿಕ್ಕದೇಕೆ? (೯೫)

---

೪೭. Joseph.

*ಹೀಗೆಯೇ ಇಳಿಸಿದೆವು ನಾವು ಈ ಕುರಾನನ್ನು ಅರಬ್ಬಿಯಲ್ಲಿ. ವಿದ್ಯೆಯ ಮೂಲಕ ನಿನ್ನ ಬಳಿಗೆ ಅದು ಬಂದ ಮೇಲೆ, ಅವರ ಇಚ್ಛೆಯ ಪಕ್ಷ ವಹಿಸುವೆಯಾದರೆ, ತೀರಿತು! ಸಂದೇಶವನ್ನು ತಲುಪಿಸುವುದರ ಹೊರತು, ನಿನ್ನ ಮೇಲೆ ಮತ್ತಾವ ಹೊಣೆಯೂ ಇಲ್ಲ. ಮತ್ತು ಲೆಕ್ಕ ತೆಗೆದುಕೊಳ್ಳುವುದು ನಮ್ಮ ಹೊಣೆಗಾರಿಕೆಯಾಗಿದೆ. (ಮಂ-೩, ಸಿ-೧೩, ಸೂ-೧೩, ಆ-೩೭, ೪೦)*

**ಸಮೀಕ್ಷಕ :-** ಕುರಾನ್ ಯಾವ ಕಡೆಯಿಂದ ಇಳಿಯಿತು? ಖುದಾ ಮೇಲೆ ಇರುತ್ತಾನೆಯೇ? ಈ ಮಾತು ಸತ್ಯವಾಗಿರುವುದಾರೆ, ಅವನು ಏಕದೇಶೀಯನಾಗಿರುವುದರಿಂದ ಈಶ್ವರನೇ ಆಗಲಾರನು. ಏಕೆಂದರೆ, ಈಶ್ವರನು ಎಲ್ಲೆಡೆಯೂ ಏಕರಸನಾಗಿ ವ್ಯಾಪಕನಾಗಿದ್ದಾನೆ. ಸಂದೇಶವನ್ನು ತಲುಪಿಸುವುದು ಸಂದೇಶವಾಹಕನ ಕೆಲಸವಾಗಿದೆ . ಮತ್ತು ಯಾವನು ಮನುಷ್ಯನಂತೆ ಏಕದೇಶೀಯನಾಗಿರುತ್ತಾನೋ, ಅವನಿಗೆ ಮಾತ್ರ ಸಂದೇಶವಾಹಕನ ಆವಶ್ಯಕತೆ ಇರುತ್ತದೆ. ಮತ್ತು ಲೆಕ್ಕ ತೆಗೆದುಕೊಳ್ಳುವುದೂ-ಕೊಡುವುದೂ ಕೂಡ ಮನುಷ್ಯನ ಕೆಲಸವಾಗಿದೆ; ಈಶ್ವರನದಲ್ಲ. ಏಕೆಂದರೆ, ಅವನು ಸರ್ವಜ್ಞನಾಗಿದ್ದಾನೆ. ಯಾವನೋ ಅಲ್ಪಜ್ಞನಾದ ಮಾನವನು ರಚಿಸಿದುದಾಗಿದೆ ಕುರಾನ್ - ಎಂದು ನಿಶ್ಚಯವಾಗುತ್ತದೆ. (೯೬)

*ಮತ್ತು ಸೂರ್ಯ-ಚಂದ್ರರನ್ನು ನಾವು ಸದಾ ತಿರುಗುವವರನ್ನಾಗಿ ಮಾಡಿದೆವು. ನಿಶ್ಚಯವಾಗಿ ಮಾನವನು ಅವಶ್ಯಕವಾಗಿ ಅನ್ಯಾಯವನ್ನೂ, ಪಾಪವನ್ನೂ, ಮಾಡುವವನಾಗಿದ್ದಾನೆ. (ಮಂ-೩, ಸಿ-೧೩, ಸೂ-೧೪, ಆ-೩೩,೩೪)*

**ಸಮೀಕ್ಷಕ:-** ಚಂದ್ರ-ಸೂರ್ಯರು ಸದಾ ತಿರುಗುತ್ತಾರೆ ಮತ್ತು ಪೃಥಿವೀ ತಿರುಗುವುದಿಲ್ಲವೇನು? ಪೃಥಿವಿಯು ತಿರುಗದಿದ್ದರೆ, ಅನೇಕ ವರ್ಷಗಳ ಹಗಲು - ಇರಳುಗಳಾಗುವುವು. ಮತ್ತು ಮಾನವನು ನಿಶ್ಚಯವಾಗಿ ಅನ್ಯಾಯವನ್ನು ಮತ್ತು ಪಾಪವನ್ನು ಮಾಡುವವನಾಗಿದ್ದರೆ, ಕುರಾನಿನಿಂದ ಶಿಕ್ಷಣವನ್ನು ಕೊಡುವುದು ವ್ಯರ್ಥವಾಗಿರುತ್ತದೆ. ಏಕೆಂದರೆ, ಯಾರ ಸ್ವಭಾವ ಪಾಪವನ್ನೇ ಮಾಡುವಂತಹುದಾಗಿದೆಯೋ, ಅವರಲ್ಲಿ (ಯಾವನೂ) ಪುಣ್ಯಾತ್ಮನೆಂದಿಗೂ ಆಗಲಾರನು. ಮತ್ತು ಜಗತ್ತಿನಲ್ಲಿ ಸದಾ ಪುಣ್ಯಾತ್ಮರು ಮತ್ತು ಪಾಪತ್ಮರು ಕಂಡುಬರುತ್ತಾರೆ. ಆದುದರಿಂದ ಇಂತಹ ಮಾತು ಈಶ್ವರಕೃತವಾದ ಪುಸ್ತಕದ್ದೆಂದಿಗೂ ಆಗಲಾರದು. (೯೭)

*ಆಯಿತು. ಸರಿಪಡಿಸುವೆನು ನಾನು ಅವನನ್ನು ಮತ್ತು ಅವನೊಳಕ್ಕೆ ಊದಿಬಿಡುವೆನು ನನ್ನ ಆತ್ಮನ ಅಂಶವನ್ನು. ಸರಿ; ನೆಲಕ್ಕೊರಗಿರಿ ಅವನಿಗಾಗಿ ಪ್ರಣಾಮವನ್ನು ಮಾಡುತ್ತಾ. "ಓ ನನ್ನ ರಬ್! (ನನ್ನ ಒಡೆಯನೇ!) ನೀನು ನನಗೆ ದಾರಿತಪ್ಪಿಸಿರುವೆಯಾದ ಕಾರಣ, ನಾನು ಅವಶ್ಯಕವಾಗಿ ಪೃಥಿವಿಯ ನಡುವೆ ಅವರಿಗೆ ಪ್ರಲೋಭನವನ್ನು ಒಡ್ಡುವೆನು ಮತ್ತು ಪಥಭ್ರಷ್ಟರನ್ನಾಗಿ ಮಾಡುವೆನು".- ಎಂದನು. (ಮಂ-೩, ಸಿ-೧೪, ಸೂ-೧೫, ಆ-೨೯,೪೬)*

**ಸಮೀಕ್ಷಕ :-** ಖುದಾ ತನ್ನ ಆತ್ಮನನ್ನು ಆದಮ್ ಸಾಹೇಬರಲ್ಲಿ ಊದಿದನಾದರೆ, ಅವನೂ ಖುದಾನೇ ಆದನು. ಅವನು ಖುದಾ ಆಗಿರಲಿಲ್ಲವಾದರೆ, ಪ್ರಣಾಮ[೪೮] ಎಂದರೆ ನಮಸ್ಕಾರ - ಮೊದಲಾದುವುಗಳಿಂದ ಭಕ್ತಿಯನ್ನು ತೋರಿಸುವಲ್ಲಿ ತನ್ನ ಭಾಗೀದಾರನನ್ನಾಗಿ ಏಕೆ ಮಾಡಿಕೊಂಡನು? ಸೈತಾನನ್ನು ಪಥಭ್ರಷ್ಟನನ್ನಾಗಿ ಮಾಡುವವನು ಖುದಾನೇ ಆಗಿರುವಾಗ, ಅವನು ಸೈತಾನನಿಗೂ ಸೈತಾನನು, ಅಣ್ಣನು ಮತ್ತು ಗುರುವು ಏತಕ್ಕಲ್ಲ? ಏಕೆಂದರೆ, ನೀವು ದಾರಿತಪ್ಪಿಸುವವನನ್ನು ಸೈತಾನನೆಂದು ಅಂಗೀಕರಿಸುತ್ತೀರಿ. ಖುದಾ ಕೂಡ ಸೈತಾನನನ್ನು ಪಥಭ್ರಷ್ಟನನ್ನಾಗಿ ಮಾಡಿದನು. ಮತ್ತು ಪ್ರತ್ಯಕ್ಷವಾಗಿ ಸೈತಾನನು "ನಾನು ದಾರಿ ತಪ್ಪಿಸುವೆನು." - ಎಂದು ಹೇಳಿದನು. ಅದರೂ, ಅವನನ್ನು ಶಿಕ್ಷಿಸಿ, ಬಂಧಿಸಿಲ್ಲವೇಕೆ? ಮತ್ತು ಸಂಹರಿಸಿಲ್ಲವೇಕೆ? (೯೮)

*ಮತ್ತು ನಿಶ್ಚಯವಾಗಿ ನಾವು ಪ್ರತಿಯೊಂದು ಜನಾಂಗದ ನಡುವೆಯೂ ಪೈಗಂಬರರನ್ನು[೪೯] ಕಳುಹಿಸಿದೆವು. ನಾವು ಯಾವಾಗ ಇಚ್ಛಿಸುತ್ತೇವೋ, ಆಗ ಅದಕ್ಕೆ "ಆಗಿಹೋಗು"-ಎಂದು ಹೇಳುತ್ತೇವೆ. ಸರಿ ಅದು ಆಗಿ ಹೋಗುತ್ತದೆ. (ಮಂ-೩, ಸಿ-೧೪, ಸೂ-೧೬, ಆ-೭೬, ೪೦)*

**ಸಮೀಕ್ಷಕ:-** ಎಲ್ಲ ಜನಾಂಗಗಳ ನಡುವೆಯೂ ಪೈಗಂಬರರನ್ನು ಕಳುಹಿಸಿರುವುದಾದರೆ, ಯಾರು ಪೈಗಂಬರನ ಸಲಹೆಯಂತೆ ವರ್ತಿಸುತ್ತಾರೋ, ಆ ಸಮಸ್ತ ಜನರೂ ಕಾಫಿರರಾದರೇಕೆ? ನಿಮ್ಮ ಪೈಗಂಬರರ ಹೊರತು ಅನ್ಯ ಪೈಗಂಬರರಿಗೆ ಮಾನ್ಯತೆಯಿಲ್ಲವೇ? ಇದು ಸರ್ವಥಾ ಪಕ್ಷಪಾತದ ಮಾತಾಗಿದೆ. ಎಲ್ಲ ದೇಶಗಳಿಗೂ ಪೈಗಂಬರರನ್ನು ಕಳುಹಿಸಿರುವುದಾದರೆ, ಆರ್ಯಾವರ್ತಕ್ಕೆ ಯಾವನನ್ನು ಕಳುಹಿಸಿದನು? ಅದು ತಿಳಿಯದುದರಿಂದ, ಈ ಮಾತು ಅಂಗೀಕರಿಸಲು ಯೋಗ್ಯವಲ್ಲ. ಖುದಾ

---

೪೮. ಇದಕ್ಕೆ ' ಸಿಜದಾ' ಎಂದು ಹೆಸರು.

೪೯. ಪೈಗಂಬರರು ಎಂದರೆ, ಭಗವಂತನ ಸಂದೇಶವಾಹಕರು.

ಅಪೇಕ್ಷಿಸಿದಾಗ ಮತ್ತು "ಪೃಥಿವೀ! ಆಗಿ ಹೋಗು" - ಎಂದು ಹೇಳಿದಾಗ, ಅದು ಜಡವಾಗಿರುವುದರಿಂದ ಎಂದಿಗೂ ಆಲಿಸಲಾರದು; ಖುದಾನ ಆಜ್ಞೆ ಯಾವರೀತಿ ಪೂರ್ಣವಾಗಬಲ್ಲದು? ಮತ್ತು ಖುದಾನ ಹೊರತು ಎರಡನೆಯ ವಸ್ತುವನ್ನು ಅಂಗೀಕರಿಸುವುದಿಲ್ಲವಾದರೆ, ಆಲಿಸಿದವನು ಯಾವನು? ಮತ್ತು ಆಗಿಹೋದುದಾದರೂ ಯಾವುದು? ಇವೆಲ್ಲವೂ ಅವಿದ್ಯೆಯ ಮಾತುಗಳು. ಇಂತಹ ಮಾತುಗಳನ್ನು ಅಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ. (೯೯)

*ಮತ್ತು ಗೊತ್ತು ಮಾಡುತ್ತೇವೆ ಅಲ್ಲಾಹನ ಸಲುವಾಗಿ ಪುತ್ರಿಯರನ್ನು. ಪವಿತ್ರತೆಯಿದೆ ಅವನಿಗೆ. ಮತ್ತು ಏನೆಲ್ಲವನ್ನೂ ಇಚ್ಛಿಸುತ್ತಾರೋ, ಅವೆಲ್ಲವೂ ಅವರ ಸಲುವಾಗಿವೆ. ಅಲ್ಲಾಹನ ಆಣೆ; ಅವಶ್ಯವಾಗಿ ಕಳುಹಿಸಿದೆವು ನಾವು ಪೈಗಂಬರರನ್ನು. (ಮಂ-೩, ಸಿ-೧೪, ಸೂ-೧೬, ಆ-೫೭, ೬೩)*

**ಸಮೀಕ್ಷಕ:-** ಅಲ್ಲಾಹನು ಪುತ್ರಿಯರನ್ನು ಕಟ್ಟಿಕೊಂಡು ಮಾಡುವನೇನು? ಪುತ್ರಿಯರಾದರೋ ಯಾವನಾದರೂ ಮಾನವನಿಗೆ ಬೇಕು. ಏತಕ್ಕೆ ಪುತ್ರರು ಗೊತ್ತು ಮಾಡಲ್ಪಡುವುದಿಲ್ಲ? ಮತ್ತು ಪುತ್ರಿಯರೇಕೆ ಗೊತ್ತು ಮಾಡಲ್ಪಡುತ್ತಾರೆ? ಇದಕ್ಕೆ ಕಾರಣವೇನು, ಹೇಳಿರಿ. ಆಣೆಯಿಡುವುದು ಸುಳ್ಳುಗಾರರ ಕಾರ್ಯ; ಖುದಾನ ವರ್ತನೆಯಲ್ಲ; ಏಕೆಂದರೆ, ಬಹುತೇಕವಾಗಿ ಪ್ರಪಂಚದಲ್ಲಿ ಸುಳ್ಳುಗಾರನಾಗಿರುವವನೇ ಆಣೆಯನ್ನಿಡುವುದು ಕಾಣುತ್ತದೆ. ಸತ್ಯವಂತನೇಕೆ ಆಣೆಯಿಟ್ಟಾನು? (೧೦೦)

*ಯಾರ ಹೃದಯಗಳ ಮೇಲೆ, ಮತ್ತು ಕಿವಿಗಳ ಮೇಲೆ ಮತ್ತು ಕಣ್ಣುಗಳ ಮೇಲೆ ಅಲ್ಲಾಹನು ಮುದ್ರೆಯೊತ್ತಿದನೋ ಅವರು ಈ ಜನರು, ಮತ್ತು ಈ ಜನರು ಅದೇ ಅಲಕ್ಷ್ಯಮಾಡುವ ಮಂದಿಗಳಾಗಿದ್ದಾರೆ. ಮತ್ತು ಅವನು ಏನೇನು ಮಾಡಿದ್ದಾನೋ ಅದಕ್ಕೆ ಅನುಸಾರ ಪ್ರತಿಯೊಬ್ಬ ಜೀವನಿಗೂ ಪೂರ್ತಿಯಾಗಿ ಕೊಡಲ್ಪಡುವುದು ಮತ್ತು ಅವರಿಗೆ ಅನ್ಯಾಯ ಮಾಡಲ್ಪಡುವುದಿಲ್ಲ. (ಮಂ-೩, ಸಿ-೧೪, ಸೂ-೧೬, ಆ-೧೦೮, ೧೧೧)*

**ಸಮೀಕ್ಷಕ:-** ಖುದಾನೇ ಸ್ವತಃ ಮುದ್ರೆಯೊತ್ತಿಬಿಟ್ಟನಾದರೆ, ಆ ಬಡಪಾಯಿಗಳು ಅಪರಾಧವಿಲ್ಲದೆಯೇ ಕೊಲ್ಲಲ್ಪಟ್ಟರು. ಏಕೆಂದರೆ, ಅವರನ್ನು ಪರಾಧೀನರನ್ನಾಗಿ ಮಾಡಿಬಿಟ್ಟನು. ಇದು ಎಷ್ಟು ದೊಡ್ಡ ಅಪರಾಧವಾಗಿದೆ? ಮತ್ತು ಪುನಃ "ಯಾವನು ಎಷ್ಟು ಮಾಡಿದ್ದಾನೋ, ಅಷ್ಟೇ ಅವನಿಗೆ ಕೊಡಲ್ಪಡುವುದು; ನ್ಯೂನಾಧಿಕವಲ್ಲ", ಎನ್ನುತ್ತಾರೆ ಕೂಡ! ನೋಡಿರಿ, ಅವರು ಸ್ವತಂತ್ರತೆಯಿಂದ ಪಾಪಗಳನ್ನು ಮಾಡಲೇ ಇಲ್ಲ; ಆದರೆ, ಖುದಾ ಮಾಡಿಸಿದುದರಿಂದ ಮಾಡಿದರು. ಮತ್ತೆ ಅವರಿಂದ ಅಪರಾಧವೇ ಆಗಲಿಲ್ಲ. ಅವರಿಗೆ ಫಲ ಸಿಕ್ಕಬಾರದು. ಇದರ ಫಲ ಖುದಾನಿಗೆ ಸಿಕ್ಕುವುದು ಉಚಿತವಾಗಿದೆ. ಮತ್ತು ಪೂರ್ತಿ ಕೊಡಲ್ಪಟ್ಟಿರುವುದಾದರೆ, ಕ್ಷಮೆ ಯಾವ ವರ್ತನೆಯದು ಮಾಡಲ್ಪಡುತ್ತದೆ? ಮತ್ತು ಕ್ಷಮೆ ಮಾಡಲ್ಪಡುವುದಾದರೆ, ನ್ಯಾಯ ಹಾರಿಹೋಗುವುದು, ಇಂತಹ ಕಿರಿಕಿರಿಯ ಪ್ರಕರಣ ಈಶ್ವರನದೆಂದಿಗೂ ಆಗಲಾರದು; ಆದರೆ, ಬುದ್ಧಿಹೀನರಾದ ಹುಡುಗರದಾಗಿರುತ್ತದೆ. (೧೦೧)

*ಮತ್ತು ನಾವು ಕಾಫಿರರಿಗಾಗಿ ಆವರಣ ಸ್ಥಾನವಾದ ನರಕವನ್ನು ನಿರ್ಮಿಸಿದೆವು. ಮತ್ತು ಪ್ರತಿಯೊಬ್ಬ ಮಾನವನ ಭಾಗ್ಯಪತ್ರವನ್ನು ಅವನ-ಅವನ ಕೊರಳಿಗೆ ಹಚ್ಚಿಬಿಟ್ಟೆವು. ಮತ್ತು ನಾವು ಅವನ ಸಲುವಾಗಿ ಕಯಾಮತ್ತಿನ ದಿವಸ ಅವನು ತೆರೆದಿಟ್ಟ ಅದನ್ನು ನೋಡಲಿ-ಎಂದು ಒಂದು ಪುಸ್ತಕವನ್ನು ಹೊರತೆಗೆಯುವೆವು. ಮತ್ತು ನೂಹನ [೫೦] ನಂತರ ನಾವು ಬಹಳ ಪೀಳಿಗೆಗಳನ್ನು ನಿರ್ನಾಮಮಾಡಿದೆವು. (ಮಂ-೪, ಸಿ- ೭೫, ಸೂ- ೧೭, ಆ - ೮, ೧೩, ೧೭)*

**ಸಮೀಕ್ಷಕ:-** ಯಾರು ಕುರಾನ್, ಪೈಗಂಬರ್ ಮತ್ತು ಕುರಾನಿನಲ್ಲಿ ಹೇಳಲ್ಪಟ್ಟಿರುವ ಖುದಾ, ಏಳನೆಯ ಆಕಾಶ ಹಾಗೂ ನಮಾಜ್ ಮೊದಲಾದುವನ್ನು ಒಪ್ಪುವುದಿಲ್ಲವೋ, ಅವರೇ ಕಾಫಿರರಾಗಿದ್ದರೆ ಮತ್ತು ಅವರಿಗಾಗಿಯೇ ನರಕವಿರುವುದಾದರೆ, ಈ ಮಾತು ಕೇವಲ ಪಕ್ಷಪಾತದ್ದಾಗಿ ಉಳಿಯುವುದು. ಏಕೆಂದರೆ, ಕೇವಲ ಕುರಾನನ್ನು ಒಪ್ಪಿಕೊಳ್ಳುವವರೆಲ್ಲರೂ ಒಳ್ಳೆಯವರು ಮತ್ತು ಬೇರೆಯದನ್ನು ಒಪ್ಪುವವರೆಲ್ಲರೂ ಕೆಟ್ಟವರು ಎಂದಿಗಾದರೂ ಆಗಬಲ್ಲರೇ? ಪ್ರತಿಯೊಬ್ಬನ ಕೊರಳಿನಲ್ಲಿಯೂ ಭಾಗ್ಯಪತ್ರವಿರುವುದೆಂಬುದು ಅತಿ ಬಾಲಕತನದ ಮಾತಾಗಿದೆ. ನಮಗಂತೂ ಯಾವನೇ ಒಬ್ಬನ ಕೊರಳಿನಲ್ಲಿಯೂ ಭಾಗ್ಯಪತ್ರ ಕಾಣಿಸದು. ಇದರ ಉದ್ದೇಶ್ಯ ಕರ್ಮಫಲಗಳನನು ಕೊಡುವುದಾದರೆ, ಮತ್ತೆ ಮಾನವರ ಹೃದಯಗಳ, ನೇತ್ರಗಳೇ ಮೊದಲಾದುವುಗಳ ಮೇಲೆ ಮುದ್ರೆಯನ್ನೊತ್ತುವುದು ಮತ್ತು ಪಾಪಗಳನ್ನು ಕ್ಷಮಿಸುವುದು-ಇದಾವ ಆಟವನ್ನು ಹೂಡಿದ್ದಾರೆ? ಖುದಾ ಕಯಾಮತ್ತಿನ ರಾತ್ರಿ ಪುಸ್ತಕವನ್ನು ಹೊರತೆಗೆಯುವನಾದರೆ, ಈ ದಿನಗಳಲ್ಲಿ ಆ ಪುಸ್ತಕ ಎಲ್ಲಿದೆ? ಸಾಹುಕಾರನ ಲೆಕ್ಕದ ಪುಸ್ತಕದ ಹಾಗೆ ಬರೆಯುತ್ತಾ

---

೫೦. ಎಂದರೆ, ಇಸ್ರೇಲಿನ ಸಂತತಿಗಳಿಂದ ಕೂಡಿದ. ಜೀವರನ್ನು- ಯು.ಮೀ.

ಇರುತ್ತಾರೇನು? ಈ ಸ್ಥಳದಲ್ಲಿ, ಪೂರ್ವಜನ್ಮವಿಲ್ಲವಾದರೆ, ಜೀವರ ಕರ್ಮಗಳೇ ಇರಲಾರವು. ಮತ್ತೆ ಕರ್ಮದ ರೇಖೆಯನ್ನು ಹೇಗೆ ಬರೆದಿರಿ? ಎಂದು ಆಲೋಚಿಸಬೇಕಾಗಿದೆ. ಕರ್ಮವಿಲ್ಲದೆಯೇ ಬರೆದಿರಾದರೆ, ಅವರಿಗೆ ಅನ್ಯಾಯವನ್ನು ಮಾಡಿದಿರಿ. ಏಕೆಂದರೆ ಒಳ್ಳೆಯ-ಕೆಟ್ಟ ಕರ್ಮಗಳಿಲ್ಲದೆ ಅವರಿಗೆ ಸುಖ-ದುಃಖಗಳನ್ನೇತಕ್ಕೆ ಕೊಟ್ಟಿರಿ? "ಖುದಾನ ಇಚ್ಛೆ" - ಎನ್ನುವಿರಾದರೆ, ಅವನೂ ಅನ್ಯಾಯವನ್ನೇ ಮಾಡಿದನು. ಕೆಟ್ಟ-ಒಳ್ಳೆಯ ಕರ್ಮಗಳನ್ನು ಮಾಡದಿದ್ದರೂ, ಸುಖ-ದುಃಖಗಳೆಂಬ ಫಲಗಳನ್ನು ಕಡಿಮೆಯಾಗಿಯೋ, ಹೆಚ್ಚಾಗಿಯೋ ಕೊಡುವುದನ್ನು ಅನ್ಯಾಯವೆನ್ನುತ್ತಾರೆ. ಮತ್ತು ಆ ಸಯಮದಲ್ಲಿ ಖುದಾನೇ ಪುಸ್ತಕವನ್ನು ಓದುವನೋ, ಅಥವಾ ಯಾವನಾದರೂ ಸರಿಶ್ತೇದಾರನು ಓದಿ ಹೇಳುವನೋ? ಸ್ವತಃ ಖುದಾನೇ ದೀರ್ಘಕಾಲ ಸಂಬಂಧೀ ಜನರನ್ನು೫೦ಎ ಅಪರಾಧವಿಲ್ಲದೇ ಸಾಯಿಸಿದನಾದರೆ, ಅವನು ಅನ್ಯಾಯಕಾರಿಯಾಗಿ ಹೋದನು. ಯಾವನು ಅನ್ಯಾಯಕಾರಿಯಾಗಿರುತ್ತಾನೋ, ಅವನು ಖುದಾನೇ ಆಗಲಾರನು. (೧೦೨)

*ಮತ್ತು ನಾವು ಸಮೂದನಿಗೆ ಹೆಣ್ಣು ಒಂಟೆಯನ್ನು ಪ್ರಮಾಣವಾಗಿಕೊಟ್ಟೆವು. ಮತ್ತೂ ಯಾರನ್ನು ಪಥಭ್ರಷ್ಟರನ್ನಾಗಿ ಮಾಡಬಲ್ಲೆಯೋ, ಪಥಭ್ರಷ್ಟರನ್ನಾಗಿಮಾಡು. ಯಾವ ದಿನ ನಾವು ಕರೆಯುವೆವೋ ಜನರೆಲ್ಲರನ್ನೂ ಅವರವರ ಮುಖಂಡರೊಂದಿಗೆ... ತೀರಿತು. ಯಾವ ಯಾವನ ಬಲಗೈಯಲ್ಲಿ ಅವನವನ ಭಾಗ್ಯಪತ್ರ ಕೊಡಲ್ಪಟ್ಟಿತೋ.... (ಮಂ-೪, ಸಿ-೧೫, ಸೂ-೧೭, ಆ-೫೯, ೬೪, ೭೧)*

**ಸಮೀಕ್ಷಕ:-** ಭಾಪು! ಭಾಪು!! ಖುದಾನ ಅಶ್ಚರ್ಯಭರಿತ ಚಿಹ್ನೆಗಳು ಎಷ್ಟಿವೆಯೋ, ಅವುಗಳಲ್ಲಿ ಒಂದು ಹೆಣ್ಣು ಒಂಟೆಯೂ ಖುದಾನ ಇರುವಿಕೆಗೆ ಪ್ರಮಾಣ ಅಥವಾ ಪರೀಕ್ಷಾ- ಸಾಧನವಾಗಿದೆ! ಖುದಾ ಸೈತಾನನಿಗೆ ದಾರಿತಪ್ಪಿಸುವ ಅಪ್ಪಣೆಯನ್ನು ಕೊಟ್ಟನಾದರೆ, ಖುದಾನೇ ಸೈತಾನನ ಸರದಾರನೂ ಮತ್ತು ಎಲ್ಲ ಪಾಪಗಳನ್ನೂ ಮಾಡುವವನೂ ಆಗಿ ಉಳಿದನು. ಇಂತಹವನ್ನು ಖುದಾ- ಎನ್ನುವುದು ಕೇವಲ ಅಲ್ಪ ತಿಳುವಳಿಕೆಯ ಮಾತಾಗಿದೆ. ಕಯಾಮತ್ತಿನಂದು, ಎಂದರೆ ಪ್ರಳಯ ಕಾಲದಲ್ಲಿಯೇ ನ್ಯಾಯವನ್ನು ಮಾಡುವುದಕ್ಕೂ - ಮಾಡಿಸುವುದಕ್ಕೂ ಪೈಗಂಬರರನ್ನೂ, ಅವರ ಉಪದೇಶಗಳನ್ನು ಅಂಗೀಕರಿಸುವವರನ್ನೂ ಖುದಾ ಕರೆಯುವನಾದರೆ, ಎಂದಿನವರೆಗೆ ಪ್ರಳಯವಾಗುವುದಿಲ್ಲವೋ, ಅಂದಿನವರೆಗೆ ಎಲ್ಲರೂ ವಿಚಾರಧೀನಕೈದಿಗಳಾಗಿರುವರು. ಮತ್ತು ಎಂದಿನವರೆಗೆ ನ್ಯಾಯ ಮಾಡುವುದಿಲ್ಲವೋ, ಅಂದಿನವರೆಗೆ ವಿಚಾರಧೀನ ಬಂಧನ ಎಲ್ಲರಿಗೂ ದುಃಖದಾಯಕ ವಾಗಿರುವುದು. ಆದುದರಿಂದ, ಶೀಘ್ರವಾಗಿ ನ್ಯಾಯಮಾಡುವುದು ನ್ಯಾಯಾಧೀಶನ ಉತ್ತಮ ಕರ್ಮವಾಗಿರುವುದು. ಇದು 'ನಾನು ಮಾಡಿದುದೇ ನ್ಯಾಯ: ಅನ್ಯಾಯವೇ ಅದರೂ ನಾನು ಮಾಡಿದುದರಿಂದ ನ್ಯಾಯವೇ'- ಎಂಬ ಹಠಮಾರಿತನದ ಮಾತಾಯಿತು. ಯಾವನಾದರೂ ನ್ಯಾಯಧೀಶನು, "ಎಂದಿನವರೆಗೆ ೫೦ ವರ್ಷಗಳವರೆಗೆ ಕಳ್ಳರೂ ಮತ್ತು ಪ್ರಾಮಾಣಿಕರೂ ಒಟ್ಟಾಗಿ ಸೇರರೋ, ಅಂದಿನವರೆಗೆ ಅವರೆಲ್ಲರಿಗೂ ಶಿಕ್ಷೆಯನ್ನಾಗಲಿ, ಗೌರವವನ್ನಾಗಲಿ ಸಲ್ಲಿಸಬಾರದು" - ಎಂದು ಹೇಳಿದರೆ ಹೇಗಿರುವುದೋ ಹಾಗೆಯೇ ಇದೆ ಈ ನ್ಯಾಯವ್ಯವಸ್ಥೆ! ಒಬ್ಬನು ೫೦ ವರ್ಷಗಳವರೆಗೆ ವಿಚಾರಾಧೀನ ಬಂದಿಯಾಗಿ ಬಿದ್ದಿದ್ದನು; ಇನ್ನೊಬ್ಬನು ಇಂದೇ ಹಿಡಿಯಲ್ಪಟ್ಟನು. ನ್ಯಾಯ ನಿರ್ಣಯದ ಕಾರ್ಯ ಹೀಗೆ ನಡೆಯಲಾರದು. ನ್ಯಾಯ ಬೇಕಾಗಿದ್ದರೆ, ವೇದಗಳನ್ನು ಮತ್ತು ಮನುಸ್ಮೃತಿಯನ್ನು ನೋಡಿರಿ. ಅವುಗಳ ಪ್ರಕಾರ ಕ್ಷಣಮಾತ್ರವೂ ವಿಳಂಬವಾಗುವುದಿಲ್ಲ. ಜೀವರು ತಮ್ಮ ತಮ್ಮ ಕರ್ಮಾನುಸಾರವಾಗಿ ಶಿಕ್ಷೆಯನ್ನು ಅಥವಾ ಮಾನ್ಯತೆಯನ್ನು ಸದಾ ಹೊಂದುತ್ತಿರುತ್ತಾರೆ. ಎರಡನೆಯದಾಗಿ, ಪೈಗಂಬರರನ್ನು ಸಾಕ್ಷಿಗಳಾಗಿಟ್ಟುಕೊಳ್ಳುವುದರಿಂದ, ಈಶ್ವರನ ಸರ್ವಜ್ಞತ್ವಕ್ಕೆ ಹಾನಿತಟ್ಟುತ್ತದೆ. ಆಹಾ! ಇಂತಹ ಪುಸ್ತಕ ಈಶ್ವರೀಯವೂ ಮತ್ತು ಇಂತಹ ಪುಸ್ತಕದ ಉಪದೇಶವನ್ನು ಮಾಡುವವನು ಈಶ್ವರನೂ ಎಂದಿಗಾದರೂ ಆಗಿರಲು ಶಕ್ಯವೇ? ಎಂದಿಗೂ ಇಲ್ಲ. (೧೦೩)

*ಈ ಜನರು ಅವರ ಸಲುವಾಗಿದ್ದಾರೆ. ಉದ್ಯಾನಗಳು ಸದಾ ಇರುವವಾಗಿದೆ. ಅವುಗಳ ಕೆಳಗಿನಿಂದ ನಾಲೆಗಳು ಪ್ರವಹಿಸುತ್ತವೆ. ಆ ಮಧ್ಯದಲ್ಲಿ ಒಡವೆಗಳು ತೊಡಿಸಲ್ಪಡುವುವು; ಸ್ವರ್ಣದಂತಹ ಬಳೆಗಳು ಮತ್ತು ಹಸಿರು ಬಣ್ಣದ ಜರತಾರಿಯ ವಸ್ತ್ರಗಳನ್ನು ತೊಡುವರು. ಅದರ ನಡುವೆ ಮಂಚಗಳ ಮೇಲೆ ಮೃದುವಾದ ಒರಗು ದಿಂಬುಗಳನ್ನಿಟ್ಟುಕೊಳ್ಳುವರು. ಒಳ್ಳೆಯದು, ಆ ಪುಣ್ಯ ಮತ್ತು ಲಾಭಪಡೆದುಕೊಳ್ಳಲು ಒಳ್ಳೆಯದಾಗಿದೆ ಸ್ವರ್ಗ. (ಮಂ-೪, ಸಿ-೧೫, ಸೂ-೧೮, ಆ-೩೧)*

**ಸಮೀಕ್ಷಕ :-** ಭಾಪು ಮಹಾಶಯ! ಭಾಪು!! ಯಾವುದರಲ್ಲಿ ಉದ್ಯಾನಗಳು, ಒಡವೆಗಳು, ಬಟ್ಟೆಗಳು, ಮೆತ್ತೆಗಳು, ದಿಂಬುಗಳು ಆನಂದಕ್ಕಾಗಿ ಇವೆಯೋ ಆ ಕುರಾನಿನ ಸ್ವರ್ಗವಾದರೂ ಏನು? ಭಲೇ! ಯಾವನಾದರೂ ಬುದ್ಧಿವಂತನು ಈ ಸ್ಥಳದಲ್ಲಿ ಆಲೋಚಿಸುವನಾದರೆ, ಅಲ್ಲಿ, ಮುಸಲ್ಮಾನರ ಸ್ವರ್ಗದಲ್ಲಿ, ಅನ್ಯಾಯದ ಹೊರತು, ಇಲ್ಲಿಗಿಂತ ಹೆಚ್ಚಿನದು ಏನೂ ಇಲ್ಲ.

ಅವರುಗಳ ಕರ್ಮಗಳು ಕೊನೆಯುಳ್ಳವು. ಮತ್ತೆ ಅವುಗಳ ಫಲಗಳು ಅನಂತವೆನ್ನುವುದೇ ನ್ಯಾಯ ಸಂಗತವಲ್ಲ. ಮತ್ತು ನಿತ್ಯವೂ ಸಿಹಿಯನ್ನು ಸವಿಯುವುದಾದರೆ ಕೆಲವು ದಿನಗಳಲ್ಲಿ ಅದು ವಿಷಕ್ಕೆ ಸಮಾನವಾಗಿ ತೋರುತ್ತದೆ. ಅವರು ಸದಾ ಸುಖವನ್ನು ಅನುಭವಿಸುವರಾದರೆ, ಅವರ ಪಾಲಿಗೆ ಸುಖವೇ ದುಃಖರೂಪವಾಗಿ ಹೋಗುವುದು. ಇದೇ ಕಾರಣದಿಂದ, ಮಹಾಕಲ್ಪಪರ್ಯಂತ ಮುಕ್ತಿಸುಖವನ್ನನುಭವಿಸಿ, ಪುನರ್ಜನ್ಮವನ್ನು ಹೊಂದುವರೆಂಬುದೇ ಸತ್ಯಸಿದ್ಧಾಂತವಾಗಿರುತ್ತದೆ- ಎಂದು ಗ್ರಹಿಸಬೇಕು. (೧೦೪)

> *ಮತ್ತು, ಅವರು ಅನ್ಯಾಯವನ್ನು ಮಾಡಿದಾಗ, ನಾವು ಅವರನ್ನು ಸಂಹರಿಸಿದ ನೆಲೆಗಳು ಇವೇ ಆಗಿವೆ. ಅವರನ್ನು ಸಂಹರಿಸುವ ಪ್ರತಿಜ್ಞೆಯ ಅವಧಿಯನ್ನು ನಾವು ನಿರ್ಧರಿಸಿದೆವು. (ಮಂ-೪, ಸಿ-೧೫, ಸೂ-೧೮, ಆ-೫೯)*

**ಸಮೀಕ್ಷಕ :-** ಆಹಾ! ಸಮಸ್ತ ನಗರಿಯೇ ಪಾಪಿಯಾಗಬಲ್ಲದೇ? ಮತ್ತು ಹಿಂದಿನಿಂದ ಪ್ರತಿಜ್ಞೆಮಾಡುವುದರಿಂದ, ಈಶ್ವರನು ಸರ್ವಜ್ಞನಾಗಿ ಉಳಿಯಲಿಲ್ಲ. ಏಕೆಂದರೆ, ಯಾವಾಗ ಅವರ ಅನ್ಯಾಯವನ್ನು ನೋಡಿದನೋ, ಆಗ ಪ್ರತಿಜ್ಞೆಮಾಡಿದನು. ಮೊದಲು ತಿಳಿದಿರಲಿಲ್ಲ. ಇದರಿಂದ ದಯಾಹೀನನೂ ಆಗಿ ಕುಳಿತನು. (೧೦೫)

> *ಮತ್ತು ಆ ಹುಡುಗನ ತಾಯಿತಂದೆಗಳು ನಂಬಿಕೆಯನ್ನುಳ್ಳವರಾಗಿದ್ದರು. ಆಯಿತು; ನಾವು ಅವರನ್ನು ದಂಗೆಗೆ ಮತ್ತು ಕಾಫಿರತನಕ್ಕೆ ಎಳೆದಾನೋ- ಎಂದು ಹೆದರಿದೆವು. ಸೂರ್ಯನು ಮುಳುಗುವ ಸ್ಥಾನದವರೆಗೆ ಹೋಗಿ ಸೇರಿದನು. ಅವನು ಕೆಸರಿನ ಬುಗ್ಗೆಯ ನಡುವೆ ಮುಳುಗುತ್ತಿರುವುದನ್ನು ಕಂಡನು. ಅವರು- "ಓ ಜುಲ್ ಕರ್ ನೈನ್![೫೧] ಪೃಥ್ವಿಯ ನಡುವೆ ನಿಶ್ಚಯವಾಗಿ ಯಾಜೂಜ-ಮಾಜೂಜರು[೫೨] ಕಲಹವನ್ನುಂಟುಮಾಡುವವರಾಗಿದ್ದಾರೆ". - ಎಂದು ಹೇಳಿದರು. (ಮಂ-೪, ಸಿ-೧೬, ಸೂ-೧೮, ಆ-೮೦,೮೮, ೯೪)*

**ಸಮೀಕ್ಷಕ:-** ಭಲೇ ಇದು ಖುದಾನ ಎಷ್ಟು ತಿಳುವಳಿಕೆಹೀನತೆಯಾಗಿದೆ? ಹುಡುಗರ ತಾಯಿ-ತಂದೆಗಳು ಎಲ್ಲಿಯಾದರೂ ನನ್ನ ಮಾರ್ಗದಿಂದ ದೂರೀಕರಿಸಲ್ಪಟ್ಟು, ವಿರುದ್ಧರಾಗಿ ಮಾಡಲ್ಪಡದಿರಲಿ-ಎಂದು ಸಂದೇಹದಿಂದ ಹೆದರಿದನು. ಇದು ಎಂದಿಗೂ ಈಶ್ವರನ ವರ್ತನೆಯಾಗಲಾರದು. ಈಗ ಮುಂದಿನ ಅವಿದ್ಯೆಯ ಮಾತನ್ನು ನೋಡಿರಿ. ಈ ಪುಸ್ತಕವನ್ನು ರಚಿಸಿದವನು ಸೂರ್ಯನು ರಾತ್ರಿಯಲ್ಲಿ ಒಂದು ಸರೋವರದಲ್ಲಿ ಮುಳುಗಿದನೆಂದು ತಿಳಿಯುತ್ತಾನೆ. ಮತ್ತೆ ಪ್ರಾತಃಕಾಲ ಹೊರಡುತ್ತಾನಂತೆ! ಅಲ್ಲ ಸೂರ್ಯನಾದರೋ ಪೃಥಿವಿಗಿಂತ ಬಹಳ ದೊಡ್ಡವನಾಗಿದ್ದಾನೆ. ಅವನು ನದಿಯಲ್ಲಿ ಅಥವಾ ಕೊಳದಲ್ಲಿ, ಅಥವಾ ಸಮುದ್ರದಲ್ಲಿ ಹೇಗೆ ಮುಳುಗಬಲ್ಲನು? ಇದರಿಂದ ಕುರಾನನ್ನು ರಚಿಸಿದವನಿಗೆ ಭೂಗೋಳ ಖಗೋಳದ ವಿದ್ಯೆಯಿರಲಿಲ್ಲವೆಂದು ವಿದಿತವಾಯಿತು. ಇದ್ದಿದ್ದ ಪಕ್ಷದಲ್ಲಿ, ಇಂತಹ ವಿದ್ಯಾ ವಿರುದ್ಧವಾದ ಮಾತನ್ನು ಏಕೆ ಬರೆಯುತ್ತಿದ್ದರು? ಮತ್ತು ಈ ಪುಸ್ತಕವನ್ನು ಒಪ್ಪಿಕೊಳ್ಳುವವರಿಗೂ ಕೂಡ ವಿದ್ಯೆಯಿಲ್ಲ. ಇದ್ದಿದ್ದರೆ, ಇಂತಹ ಸುಳ್ಳು ಮಾತುಗಳಿಂದ ಯುಕ್ತವಾದ ಪುಸ್ತಕವನ್ನು ಏಕೆ ಅಂಗೀಕರಿಸುತ್ತಿದ್ದರು? ಈಗ ನೋಡಿರಿ ಖುದಾನ ಅನ್ಯಾಯವನ್ನು ತಾನೇ ಪೃಥಿವಿಯನ್ನು ರಚಿಸುವವನೂ, ರಾಜನೂ, ನ್ಯಾಯಾಧೀಶನೂ ಆಗಿದ್ದಾನೆ. ಮತ್ತು ಯಜೂಜ-ಮಾಜೂಜರಿಗೆ[೫೨] ಪೃಥಿವಿಯಲ್ಲಿ ಕಲಹವನ್ನು ಮಾಡಲು ಎಡೆಯನ್ನೂ ಕೊಡುತ್ತಾನೆ. ಅದು ಈಶ್ವರತ್ವದ ಸ್ಥಿತಿಗೆ ವಿರುದ್ಧವಾಗಿದೆ. ಆದುದರಿಂದ, ಇಂತಹ ಪುಸ್ತಕವನ್ನು ಕಾಡುಜನರು ಅಂಗೀಕರಿಸುತ್ತಾರೆ; ವಿದ್ವಾಂಸರಲ್ಲ. (೧೦೬)

> *ಮತ್ತು ಪುಸ್ತಕದ ನಡುವೆ, ಮೇರಿ ತನ್ನ ಜನರಿಂದ ಬೇರೆಯಾಗಿ, ಪೂರ್ವದಿಕ್ಕಿನ ಮನೆಗೆ ಹೊರಟುಹೋದ ಕಾಲವನ್ನು ಸ್ಮರಿಸಿರಿ. ಆಯಿತು; ಪರದೆ ಬಿದ್ದಿತು ಅವರಿಂದ ಈ ಕಡೆಗೆ; ಕಳುಹಿಸಿದೆವು ನಾವು ನಮ್ಮ ಆತ್ಮನನ್ನು, ಎಂದರೆ-ದೇವತೆಯನ್ನು. ಅವಳ ಸಲುವಾಗಿ ಅವನು ಪುಷ್ಟನಾದ ಪುರುಷನ ಆಕೃತಿಯನ್ನು ತಳೆದನು. ಅವಳು "ನಿಶ್ಚಯವಾಗಿ ನಾನು ಕರುಣಾಳುವಿನ ಶರಣನ್ನು, ನೀನು ಭಕ್ತಿವಂತನಾದ ಪಕ್ಷದಲ್ಲಿ, ನಿನ್ನ ಮೂಲಕ ಹಿಡಿಯುತ್ತೇನೆ".- ಎಂದು ಹೇಳಲಾರಂಭಿಸಿದಳು. ಅವನು - "ನಿನಗೆ ಪವಿತ್ರನಾದ ಪುತ್ರನನ್ನು ಕೊಡುವ ಸಲುವಾಗಿ ನಿನ್ನ ಸ್ವಾಮಿಯ ಕಡೆಯಿಂದ ಕಳುಹಿಸಲ್ಪಟ್ಟವನಾಗಿದ್ದೇನೆ - ಎಂಬ ಹೊರತು ಬೇರೆನೂ ಇಲ್ಲ." - ಎಂದು ಹೇಳತೊಡಗಿದನು. ಅವಳು - "ನನ್ನ ಸಲುವಾಗಿ ಪುತ್ರನು ಹೇಗೆ ಆದಾನು? ನನ್ನ ಮೇಲೆ ಪುರುಷನು ಕೈಹಾಕಲಿಲ್ಲ. ನಾನು ಕೆಟ್ಟ*

---

೫೧. ಜುಲ್ಕರ್ ನೈನ್, ಎಂದರೆ, ಎರಡು ಕೊಂಬುಗಳನ್ನುಳ್ಳ ಪ್ರಾಣಿ. ಇಲ್ಲಿ ಒಬ್ಬ ಸಾಮ್ರಾಟನ ಹೆಸರು.

೫೨. 'ಯಾಜೂಜ್-ಮಾಜೂಜ" ಎಂಬ ಎರಡು ಅಸಭ್ಯ ಜಾತಿಗಳಿದ್ದವು. ಇವು ದರೋಡೆ ಮಾಡುತ್ತಿದ್ದವು.

*ಕೆಲಸಮಾಡುವವಳಲ್ಲ".- ಎಂದು ಹೇಳಿದಳು. ಆಯಿತು; ಅವನಿಂದ ಗರ್ಭವತಿಯಾಗಿ ಹೋದಳು ಮತ್ತು ಅವನೊಂದಿಗೆ ದೂರ ಮನೆಗೆ ಹೋಗಿ ನೆಲೆಸಿದಳು-ಎಂದರೆ, ಅರಣ್ಯದಲ್ಲಿ. (ಮಂ-೪, ಸಿ-೧೬, ಸೂ-೧೯, ಆ-೧೬-೨೦,೨೨)*

**ಸಮೀಕ್ಷಕ:-** ಈಗ ಬುದ್ಧಿವಂತರು ಆಲೋಚಿಸಿಕೊಳ್ಳಲಿ. ದೇವತೆಗಳೆಲ್ಲರೂ ಖುದಾನ ಆತ್ಮವಾದರೆ, ಖುದಾನಿಂದ ಬೇರೆಯಾದ ಪದಾರ್ಥಗಳಾಗಿರಲಾರರು. ಎರಡನೆಯ ಅನ್ಯಾಯ-ಕುಮಾರಿ ಮೇರಿಗೆ ಪುತ್ರನಾಗುವುದು. ಯಾವನ ಸಂಗವನ್ನೂ ಮಾಡಲು ಬಯಸುತ್ತಿರಲಿಲ್ಲ; ಆದರೆ, ಖುದಾನ ಆಜ್ಞೆಯಿಂದ, ದೇವತೆಯು ಅವಳನ್ನು ಗರ್ಭವತಿಯನ್ನಾಗಿ ಮಾಡಿದನು. ಇದು ನ್ಯಾಯಕ್ಕೆ ವಿರುದ್ಧವಾದ ಮಾತಾಗಿದೆ. ಇಲ್ಲಿ ಅಸಭ್ಯತೆಯ ಬೇರೆಯ ಮಾತುಗಳನ್ನೂ ಬಹಳ ಬರೆದಿದ್ದಾರೆ. ಅವುಗಳನ್ನು ಬರೆಯುವುದು ಉಚಿತವೆಂದು ತಿಳಿಯಲಿಲ್ಲ. (೧೦೭).

*ನಾವು ಸೈತಾನರನ್ನು ಕಾಫಿರರ ಮೇಲೆರಗಲು ಕಳುಹಿದೆವು. ಇದನ್ನು ನೀನು ನೋಡಲಿಲ್ಲವೇ? ಅವರ ದಾರಿತಪ್ಪಿಸುವಲ್ಲಿ, ಅವರಿಗೇ ದಾರಿತಪ್ಪಿಸುತ್ತಾರೆ. (ಮಂ-೪, ಸಿ-೧೬, ಸೂ-೧೯, ಆ-೮೩).*

**ಸಮೀಕ್ಷಕ:-** ಖುದಾನೇ ಸ್ವತಃ ಸೈತಾನರನ್ನು ಪಥಭ್ರಷ್ಟರನ್ನಾಗಿ ಮಾಡಲು ಕಳುಹಿಸುತ್ತಾನೆಯಾದರೆ, ಪಥಭ್ರಷ್ಟರನ್ನಾಗಿ ಮಾಡುವವರ ದೋಷ ಏನೇನೂ ಇರಲಾರದು. ಮತ್ತು ಅವರಿಗೂ ಶಿಕ್ಷೆ ವಿಧಿಸಲಾಗುವುದಿಲ್ಲ; ಮತ್ತು ಸೈತಾನರಿಗೂ ಕೂಡ ವಿಧಿಸಲಾಗುವುದಿಲ್ಲ. ಖುದಾನ ಅಪ್ಪಣೆಯಿಂದ ಇದೆಲ್ಲವೂ ಆಗುತ್ತದೆ. ಇದರ ಫಲ ಖುದಾನಿಗೆಯೇ ಸಿಕ್ಕಬೇಕು. ಅವನು ಸತ್ಯವಂತನಾದ ನ್ಯಾಯಕಾರಿಯಾಗಿರುವನಾದರೆ, ಅದರ ಫಲವಾದ ನರಕವನ್ನು ಅವನೇ ಅನುಭವಿಸಬೇಕು. ಮತ್ತು ನ್ಯಾಯವನ್ನು ಬಿಟ್ಟು ಅನ್ಯಾಯವನ್ನು ಮಾಡುವನಾದರೆ, ಅನ್ಯಾಯಕಾರಿಯಾದನು. ಅನ್ಯಾಯಕಾರಿಯೇ ಪಾಪಿಯೆನಿಸುತ್ತಾನೆ. (೧೦೮)

*ಯಾವನು ಪಶ್ಚಾತ್ತಾಪಪಟ್ಟನೋ, ಮತ್ತು ನಂಬಿಕೆಯಿಟ್ಟನೋ, ಒಳ್ಳೆಯ ಕರ್ಮಗಳನ್ನು ಮಾಡಿದನೋ, ಪುನಃ ಮಾರ್ಗವನ್ನು ಕಂಡುಕೊಂಡನೋ, ಆ ಮಾನವನ ಸಲುವಾಗಿ, ನಿಶ್ಚಯವಾಗಿಯೂ ಕ್ಷಮೆ ಮಾಡುವವನಾಗಿದ್ದೇನೆ. (ಮಂ-೪, ಸಿ-೧೬, ಸೂ-೨೦, ಆ-೮೨).*

**ಸಮೀಕ್ಷಕ:-** **'ತೋಬಾಹ್'** ಎಂದರೆ ಪಶ್ಚಾತ್ತಾಪಪಡುವುದರಿಂದ ಪಾಪವನ್ನು ಕ್ಷಮಿಸುವನು-ಎಂದು ಕುರಾನಿನಲ್ಲಿರುವ ಮಾತು ಎಲ್ಲರನ್ನೂ ಪಾಪಿಗಳನ್ನಾಗಿ ಮಾಡುವಂತಹುದಾಗಿದೆ. ಏಕೆಂದರೆ, ಪಾಪಿಗಳಿಗೆ ಇದರಿಂದ ಪಾಪವನ್ನು ಮಾಡುವ ಸಾಹಸ ಬಹಳವಾಗಿ ಹೆಚ್ಚಿಹೋಗುತ್ತದೆ. ಆದುದರಿಂದ, ಈ ಪುಸ್ತಕವು ಮತ್ತು ಇದನ್ನು ರಚಿಸುವವನು ಪಾಪಮಾಡುವುದರಲ್ಲಿ ಸಾಹಸವನ್ನು ಹೆಚ್ಚಿಸುವವನಾಗಿದ್ದಾನೆ. ಆದುದರಿಂದ ಈ ಪುಸ್ತಕ ಪರಮೇಶ್ವರಕೃತವೂ ಆಗಲಾರದು ; ಮತ್ತು ಇದರಲ್ಲಿ ಹೇಳಲ್ಪಟ್ಟಿರುವವನು ಪರಮೇಶ್ವರನೂ ಆಗಿರಲಾನು. (೧೦೯).

*ಮತ್ತು ಅಲ್ಲಾಡಿಹೋಗುವ ಪ್ರಸಂಗ ಬಾರದಿರಲಿ-ಎಂದು ನಾವು ಪೃಥಿವಿಯ ನಡುವೆ ಪರ್ವತಗಳನ್ನು ನಿರ್ಮಿಸಿದೆವು. (ಮಂ-೪, ಸಿ-೧೭, ಸೂ-೨೧, ಆ-೩೧).*

**ಸಮೀಕ್ಷಕ :-** ಕುರಾನನ್ನು ರಚಿಸುವವನು ಪೃಥಿವಿಯ ತಿರುಗುವಿಕೆ ಮೊದಲಾದುವನ್ನು ತಿಳಿದಿದ್ದರೆ, ಪರ್ವತಗಳನ್ನು ಇಡುವುದರಿಂದ ಪೃಥಿವೀ ಅಲ್ಲಾಡುವುದಿಲ್ಲ ಎಂಬ ಈ ಮಾತನ್ನು ಎಂದಿಗೂ ಹೇಳುತ್ತಿರಲಿಲ್ಲ. ಪರ್ವತವನ್ನು ಇಡದಿದ್ದರೆ ಪೃಥಿವೀ ಅಲ್ಲಾಡಿಹೋಗುವುದೆಂಬ ಸಂದೇಹ ಮೂಡಿತು! ಇಷ್ಟು ಹೇಳಿದ ಮೇಲೆಯೂ ಭೂಕಂಪದಲ್ಲಿ ಏತಕ್ಕೆ ಅದುರಿ ಹೋಗುತ್ತದೆ? (೧೧೦)

*ಮತ್ತು ನಾವು ಶಿಕ್ಷಣವನ್ನಿತ್ತೆವು ಆ ನಾರಿಗೆ ಮತ್ತು ಅವಳು ತನ್ನ ಗುಹ್ಯ ಅಂಗಗಳನ್ನು ರಕ್ಷಿಸಿಕೊಂಡಳು. ಆಯಿತು; ಊದಿಬಿಟ್ಟೆವು ಅದರೊಳಕ್ಕೆ ನಮ್ಮ ಆತ್ಮನನ್ನು. (ಮಂ-೪, ಸಿ-೧೭, ಸೂ-೨೧, ಆ-೯೧)*

**ಸಮೀಕ್ಷಕ:-** ಇಂತಹ ಅಶ್ಲೀಲವಾದ ಮಾತುಗಳು ಖುದಾನ ಪುಸ್ತಕದಲ್ಲಿ, ಖುದಾನದೇ ಏನು, ಒಬ್ಬ ಸಭ್ಯ ಮನುಷ್ಯನೂ ಕೂಡ ಆಗಿರಲಾರವು. ಮಾನವರ ನಡುವೆಯೇ ಇಂತಹ ಮಾತುಗಳನ್ನು ಬರೆಯುವುದು ಉಚಿತವಲ್ಲವೆಂದ ಮೇಲೆ, ಪರಮೇಶ್ವರನ ಕಡೆಯಿಂದ ಹೇಗೆ ತಾನೇ ಉಚಿತವೆನ್ನಿಸಲು ಶಕ್ಯ? ಇಂತಹ ಮಾತುಗಳಿಂದ ಕುರಾನ್ ದೂಷಿತವಾಗುತ್ತದೆ. ಒಳ್ಳೆಯ ವಚನಗಳಿದ್ದಲ್ಲಿ ವೇದಗಳ ಪ್ರಶಂಸೆಯಾಗುವಂತೆ ಕುರಾನಿನ ಪ್ರಶಂಸೆಯೂ ಬಹುವಾಗಿ ಆಗುತ್ತಿದ್ದಿತು. (೧೧೧)

*ಆಕಾಶಗಳ ಮತ್ತು ಪೃಥಿವಿಯ ಮಧ್ಯೆ ಏನು ಇವೆಯೋ, ಯಾರಾರು ಇದ್ದಾರೋ, ಆ ಸೂರ್ಯ ಮತ್ತು ಚಂದ್ರ-ನಕ್ಷತ್ರಗಳು ಮತ್ತು ಪರ್ವತ್ರಗಳು, ವೃಕ್ಷಗಳು ಮತ್ತು ಪ್ರಾಣಿಗಳು-ಎಲ್ಲವೂ ಅಲ್ಲಾಹನಿಗೆ ಪ್ರಣಾಮ ಮಾಡುತ್ತವೆ-ಇದನ್ನು ನೀನು ನೋಡಲಿಲ್ಲವೋ? ಸ್ವರ್ಗದಲ್ಲಿ ಚಿನ್ನದ ಬಳೆಗಳು ತೊಡಿಸಲ್ಪಡುವವು. ಮತ್ತು ಮುತ್ತು ಹಾಗೂ ಅದರ ನಡುವೆ ರೇಷ್ಮೆಯ ಉಡುಪಿದೆ. ಮತ್ತು ಸುತ್ತಲೂ ತಿರುಗಾಡವವರ ಮತ್ತು ನಿಂತುಕೊಳ್ಳುವವರ ಸಲುವಾಗಿ ನನ್ನ ಮನೆಯನ್ನು ಪವಿತ್ರವಾಗಿಡು. ಪುನಃ, ತಮ್ಮ ಕಲ್ಮಷಗಳನ್ನು ದೂರಮಾಡಬೇಕು ಮತ್ತು ಪ್ರಾಚೀನ ಗೃಹದ ಪ್ರದಕ್ಷಿಣೆಯನ್ನು ಮಾಡಬೇಕು. ಏಕೆಂದರೆ, ಅಲ್ಲಾಹನ ಹೆಸರನ್ನು ಸ್ಮರಿಸಬೇಕು. (ಮಂ-೪. ಸಿ-೧೭, ಸೂ-೨, ಆ-೧೮, ೨೩, ೨೬, ೨೯).*

**ಸಮೀಕ್ಷಕ:-** ಓಹೋ! ಜಡವಾದ ವಸ್ತುಗಳು ಪರಮೇಶ್ವರನನ್ನು ಎಂದಿಗೂ ತಿಳಿದುಕೊಳ್ಳಲಾರವು. ಮತ್ತೆ ಅವು ಅವನಲ್ಲಿ ಭಕ್ತಿಯನ್ನಿಡಬಲ್ಲವಾದರೂ ಎಂತು? ಆದುದರಿಂದ ಈ ಪಸ್ತಕ ಈಶ್ವರಕೃತವಂತೂ ಎಂದಿಗೂ ಆಗಲಾರದು. ಆದರೆ, ಯಾವನೋ ಭ್ರಾಂತನಾದವನು ನಿರ್ಮಿಸಿದಂತೆ ಕಾಣುತ್ತದೆ. ಭೇಷ್! ಎಲ್ಲಿ ಚಿನ್ನ ಮುತ್ತುಗಳ ಒಡವೆಗಳೂ, ರೇಷ್ಮೆಯ ವಸ್ತ್ರಗಳೂ ತೊಡಲು ಸಿಕ್ಕುತ್ತವೋ ಆ ಸ್ವರ್ಗ ತುಂಬಾ ಒಳ್ಳೆಯದಾಗಿದೆ! ಈ ಸ್ವರ್ಗ ಇಲ್ಲಿನ ರಾಜರುಗಳ ಮನೆಗಿಂತ ಹೆಚ್ಚಾಗಿ ಏನೂ ಕಾಣಿಸುವುದಿಲ್ಲ. ಮತ್ತು ಪರಮೇಶ್ವರನ ಮನೆಯಾಗಿರುವಾಗ, ಅವನು ಅದೇ ಮನೆಯಲ್ಲಿ ಇರುತ್ತಲೂ ಇರಬಹು. ಮತ್ತೆ ಮೂರ್ತಿಪೂಜೆ ಆಗಲಿಲ್ಲವೇಕೆ? ಮತ್ತು ಬೇರೆಯ ಮೂರ್ತಿಪೂಜಕರ ಖಂಡನವನ್ನೇಕೆ ಮಾಡುತ್ತೀರಿ? ಖುದಾ ಕಾಣಿಕೆಯನ್ನು ತೆಗೆದುಕೊಳ್ಳುವಾಗ, ತನ್ನ ಮನೆಯ ಪ್ರದಕ್ಷಿಣೆಯನ್ನು ಮಾಡುವ ಅಪ್ಪಣೆಯನ್ನು ಮಾಡುವಾಗ ಮತ್ತು ಪಶುಗಳನ್ನು ಕೊಲ್ಲಿಸಿ ತಿನ್ನಿಸುವಾಗ, ಈ ಖುದಾ ದೇವಾಲಯಗಳವರಂತೆ, ಮತ್ತು ಭೈರವ ಹಾಗೂ ದುರ್ಗೆಯರ ಹಾಗೆಯೇ ಆದನು. ಮತ್ತು ಮಹಾಮೂರ್ತಿಪೂಜೆಯ ಪ್ರವರ್ತಕನಾದನು. ಏಕೆಂದರೆ, ಮೂರ್ತಿಗಳಿಗಿಂತ ಮಸೀದಿ ದೊಡ್ಡ ಮೂರ್ತಿಯಾಗಿದೆ. ಇದರಿಂದ ಖುದಾ ಮತ್ತು ಮುಸಲ್ಮಾನರು ದೊಡ್ಡ ಮೂರ್ತಿಪೂಜಕರೂ ಮತ್ತು ಪೌರಾಣಿಕರು ಹಾಗೂ ಜೈನರು ಚಿಕ್ಕ ಮೂರ್ತಿಪೂಜಕರೂ ಆಗಿದ್ದಾರೆ. (೧೧೨)

*ಮತ್ತೆ ನಿಶ್ಚಯವಾಗಿ ನೀವು ಕಯಾಮತ್ತಿನ ದಿನ ಎಬ್ಬಿಸಲ್ಪಡುವಿರಿ. (ಮಂ-೪, ಸಿ-೧೮, ಸೂ-೨೩, ಆ-೧೬).*

**ಸಮೀಕ್ಷಕ:-** ಕಯಾಮತ್ತಿನವರೆಗೆ ಶವಗಳು ಗೋರಿಯಲ್ಲಿಯೇ ಇರುತ್ತವೋ ಅಥವಾ ಬೇರೆ ಯಾವುದಾದರೂ ಎಡೆಯಲ್ಲಿಯೋ? ಅವುಗಳಲ್ಲಿಯೇ ಇರುವುದಾದರೆ, ಕೊಳೆತಿರುವ ದುರ್ಗಂಧಮಯ ಶರೀರದಲ್ಲಿದ್ದು, ಪುಣ್ಯಾತ್ಮರುಗಳು ಕೂಡ ದುಃಖವನ್ನು ಅನುಭವಿಸುವರೇ? ಇದು ಅನ್ಯಾಯವಾಗಿದೆ. ಮತ್ತು ದುರ್ಗಂಧ ಅಧಿಕವಾಗಿ ರೋಗ ಉತ್ಪತ್ತಿಮಾಡುವುದರಿಂದ ಖುದಾ ಮತ್ತು ಮುಸಲ್ಮಾನರು ಪಾಪಭಾಗಿಗಳಾಗುವರು. (೧೧೩)

*ಆ ದಿವಸಕ್ಕೆ, ಅವರ ನಾಲಿಗೆಗಳು, ಮತ್ತು ಅವರ ಕೈಗಳು ಮತ್ತು ಅವರ ಕಾಲುಗಳು, ತಾವು ಏನನ್ನು ಮಾಡುತ್ತಿದ್ದವೋ, ಅದರೊಂದಿಗೆ, ಅವರ ಮೇಲೆ ಸಾಕ್ಷ್ಯವನ್ನು ಕೊಡುವವು. ಅಲ್ಲಾಹನು ಆಕಾಶಗಳ ಪ್ರಕಾಶವಾಗಿದ್ದಾನೆ; ಮತ್ತು ಪೃಥಿವಿಯ ಪ್ರಕಾಶವಾಗಿದ್ದಾನೆ. ಅವನ ಜ್ಯೋತಿ(ಗೋಡೆಯಲ್ಲಿನ) ಗೂಡಿನಂತಿದೆ; ಅದರ ನಡುವೆ ದೀಪವಿದ್ದು ಮತ್ತು ನಡುವಣ ದೀಪ ಗಾಜಿನದಾಗಿದೆ; ಆ ದೀಪ ನಕ್ಷತ್ರವೋ ಎಂಬಂತೆ ಥಳಥಳಿಸುತ್ತಿದೆ. ಆ ದೀಪವು ಆಶೀರ್ವದಿಸಲ್ಪಟ್ಟ ಆಲಿವ್ ವೃಕ್ಷದ ತೈಲದಿಂದ ಉರಿಯುವಂತಹುದಾಗಿದೆ. ಅದರ ತೈಲ ಪೂರ್ವದ ಕಡೆಯಿಂದಲೂ ಸಿಕ್ಕದು; ಪಶ್ಚಿಮದ ಹತ್ತಿರವೂ ಸಿಕ್ಕದು. ಮತ್ತೆ ಅದಕ್ಕೆ ಯಾವ ಅಗ್ನಿಯನ್ನೂ ಸ್ಪರ್ಶಮಾಡಿಸಬೇಕಾಗಿಲ್ಲ. ಅಲ್ಲಾಹನು ಯಾವನನ್ನು ಬಯಸುತ್ತಾನೋ ಅವನಿಗೆ, ಮೇಲೆ ವರ್ಣಿಸಿರುವ ತನ್ನ ಜ್ಯೋತಿಯ ಮಾರ್ಗಗಳನ್ನು ತೋರಿಸುತ್ತಾನೆ. (ಮಂ-೪, ಸಿ-೧೮, ಸೂ-೨೪, ಆ-೨೩, ೩೫).*

**ಸಮೀಕ್ಷಕ :-** ಕೈಗಳು, ಕಾಲುಗಳು ಮೊದಲಾದುವು ಜಡವಾಗಿರುವುದರಿಂದ. ಸಾಕ್ಷ್ಯವನ್ನೆಂದಿಗೂ ಕೊಡಲಾರವು. ಈ ಮಾತು ಸೃಷ್ಟಿಕ್ರಮಕ್ಕೆ ವಿರುದ್ಧವಾಗಿರುವುದರಿಂದ ಸುಳ್ಳಾಗಿದೆ. ಖುದಾ ಬೆಂಕಿ ಏನು? ವಿದ್ಯುತ್ತೇನು? ಎಂತಹ ದೃಷ್ಟಾಂತವನ್ನು ಕೊಡುತ್ತಾರೋ, ಅಂತಹ ದೃಷ್ಟಾಂತ ಈಶ್ವರನಿಗೆ ಅನ್ವಯಿಸಲಾರದು. ಅಹುದು; ಯಾವುದಾದರೂ ಸಾಕಾರವಸ್ತುವಿಗೆ ಅನ್ವಯಿಸಬಲ್ಲದು. (೧೧೪)

*ಮತ್ತು ಅಲ್ಲಾಹನು ಪ್ರತಿಯೊಂದು ಪ್ರಾಣಿಯನ್ನೂ ನೀರಿನಿಂದ ಉತ್ಪನ್ನಮಾಡಿದನು. ಆಯಿತು; ಅವುಗಳಲ್ಲಿ ಕೆಲವು ತಮ್ಮ ಹೊಟ್ಟೆಯ ಮೇಲೆ ತೆವಳಿಕೊಂಡು ಹೋಗುವಂತಹವಿವೆ. ಮತ್ತು ಯಾವನೇ ಆಗಲಿ; ಅಲ್ಲಾಹನ ಮತ್ತು ಅವನ*

*ರಸೂಲನ ಆಜ್ಞೆಯನ್ನು ಪಾಲಿಸುತ್ತಾನೋ.... ಖುದಾನ ಮತ್ತು ಅವನ ರಸೂಲನ ಆಜ್ಞೆಯನ್ನು ಪಾಲಿಸಬೇಕೆಂದು ಹೇಳು. ಮತ್ತು ನಿಮಗೆ ದಯೆ ತೋರಿಸಲ್ಪಡುವಂತೆ, ರಸೂಲನ ಆಜ್ಞೆಯನ್ನು ಪಾಲಿಸಿರಿ (ಮಂ-೧, ಸಿ-೧೮, ಸೂ-೨೪, ಆ-೪೫, ೫೨, ೫೪, ೫೭)*

**ಸಮೀಕ್ಷಕ :-** ಯಾವ ಪ್ರಾಣಿಗಳ ಶರೀರದಲ್ಲಿ ಎಲ್ಲ ತತ್ತ್ವಗಳೂ[೫೩] ಕಂಡು ಬರುತ್ತವೋ, ಅವುಗಳ ವಿಷಯದಲ್ಲಿ ಕೇವಲ ಜಲದಿಂದ ಉತ್ಪನ್ನಮಾಡಿದನು-ಎನ್ನುವುದು ಯಾವ ಫಿಲಾಸಫಿ (ದರ್ಶನಶಾಸ್ತ್ರ)ಯಾಗಿದೆ? ಇದು ಕೇವಲ ಅವಿದ್ಯೆಯ ಮಾತು. ಅಲ್ಲಾಹನೊಂದಿಗೆ ಪೈಗಂಬರನ ಆಜ್ಞೆಯನ್ನೂ ಪಾಲಿಸಬೇಕಾಗಿರುವುದಾದರೆ, (ರಸೂಲನು) ಖುದಾನ ಭಾಗೀದಾರನಾಗಿ ಹೋದಲೋ ಅಥವಾ ಇಲ್ಲವೋ? ಹೀಗೆ ಇರುವುದಾದರೆ ಕುರಾನಿನಲ್ಲಿ ಖುದಾನನ್ನು ಭಾಗೀದಾರರಹಿತನೆಂದು ಅದೇಕೆ ಬರೆದಿದ್ದಾರೆ? ಮತ್ತು ಅದೇಕೆ (ಹಾಗೆ) ಹೇಳತ್ತೀರಿ? (೧೧೫).

*ಮತ್ತು ಯಾವ ದಿನ ಆಕಾಶವು ಮೋಡದೊಂದಿಗೆ ಹರಿದು ಹೋಗುವುದೋ ಮತ್ತು ದೇವತೆಗಳು ಇಳುಹಿಸಲ್ಪಡುವರೋ.... ಸಾಕು; ಕಾಫಿರರು ಹೇಳಿದುದನ್ನು ಒಪ್ಪಿಕೊಳ್ಳಬೇಡ. ಮತ್ತು ಜಗಳವಾಡು ಅವರೊಂದಿಗೆ, ದೊಡ್ಡ ಜಗಳವನ್ನು. ಮತ್ತು ಅಲ್ಲಾಹನು ಅವರುಗಳ ಕೆಡಕುಗಳನ್ನು ಒಳಿತಾಗಿ ಪರಿವರ್ತಿಸಿಬಿಡುತ್ತಾನೆ. ಮತ್ತು ಯಾವನು 'ಪಶ್ಚಾತ್ತಾಪ' ಪಡುವನೋ ಮತ್ತು ಸತ್ಕರ್ಮಗಳನ್ನು ಮಾಡುವನೋ, ಅವನು ನಿಶ್ಚಯವಾಗಿಯೂ ಅಲ್ಲಾಹನ ಕಡೆಗೆ ಬರುತ್ತಾನೆ. (ಮಂ-೪, ಸಿ-೧೯, ಸೂ-೨೫, ಆ-೨೫, ೫೨, ೭೦, ೭೧).*

**ಸಮೀಕ್ಷಕ :-** ಆಕಾಶವು ಮೋಡಗಳೊಂದಿಗೆ ಹರಿದುಹೋಗುವುದು-ಎಂಬ ಈ ಮಾತು ಎಂದಿಗೂ ಸತ್ಯವಾಗಲಾರದು. ಆಕಾಶವು ಯಾವುದಾದರೂ ಮೂರ್ತಿಮಂತವಾದ ಪದಾರ್ಥವಾಗಿದ್ದರೆ, ಹರಿಯಬಲ್ಲದು. ಮುಸಲ್ಮಾನರ ಈ ಕುರಾನು ಶಾಂತಿ-ಭಂಗವನ್ನು ಮಾಡಿ, ದಂಗೆ-ಕಲಹಗಳನ್ನು ಉಂಟುಮಾಡುವಂತಹುದಾಗಿದೆ. ಇದೇ ಕಾರಣದಿಂದ, ಧಾರ್ಮಿಕರಾದ ವಿದ್ವಾಂಸರುಗಳು ಇದನ್ನು ಅಂಗೀಕರಿಸುವುದಿಲ್ಲ. ಪಾಪ ಮತ್ತು ಪುಣ್ಯಗಳನ್ನು ಪರಸ್ಪರ ಪರಿವರ್ತಿಸುವ ಈ ನ್ಯಾಯವೂ ಕೂಡ ವಿಚಿತ್ರವೇ ಆಗಿದೆ. ಪರಿವರ್ತಿತವಾಗಿ ಹೋಗಲು ಇದು ಎಳ್ಳು-ಉದ್ದಿನಂತಹ ಮಾತೇನು?[೫೪] ಪಶ್ಚಾತ್ತಾಪ ಪಡುವುದರಿಂದ ಪಾಪವು ಬಿಟ್ಟು ಹೋಗುವುದಾದರೆ ಮತ್ತು ಈಶ್ವರನು ಸಿಕ್ಕುವನಾದರೆ, ಯಾವನೂ ಪಾಪಮಾಡಲು ಹೆದರುವುದಿಲ್ಲ. ಆದುದರಿಂದ, ಈ ಮಾತುಗಳೆಲ್ಲವೂ ವಿದ್ಯೆಗೆ ವಿರುದ್ಧವಾಗಿವೆ. (೧೧೬).

*ರಾತ್ರಿಗೆ ಕರೆದುಕೊಂಡು ಹೋಗು ನನ್ನ ಸೇವಕನನ್ನು; ನಿಶ್ಚಯವಾಗಿಯೂ ನೀನು ಹಿಂಬಾಲಿಸಲ್ಪಡುವೆ - ಎಂದು ಹೇಳಿ ನಾವು ಪುಸ್ತಕವನ್ನು ಮೋಸೆಸನಿಗೆ ತಿರುಗಿಸಿದೆವು. ಸರಿ, ಫಿರೋನನು ನಗರಗಳ ಮಧ್ಯಕ್ಕೆ ಒಂದುಗೂಡಿಸುವ ಜನರನ್ನು ಕಳುಹಿಸಿದನು. ಮತ್ತು ಯಾವನು ನನ್ನನ್ನು ಉತ್ಪನ್ನಮಾಡಿದನೋ, ಸತ್ಯವಾಗಿ, ಅದೇ ಪುರುಷನು ಮಾರ್ಗ ತೋರಿಸುತ್ತಾನೆ. ಮತ್ತು ಯಾವನು ನನಗೆ ತಿನ್ನಿಸುತ್ತಾನೋ, ನನಗೆ ಕುಡಿಸುತ್ತಾನೋ, ಅವನೇ ಆ ಪುರುಷನು ನನಗಾಗಿ ನನ್ನ ಅಪರಾಧವನ್ನು ಕಯಾಮತ್ತಿನ ದಿನ ಕ್ಷಮಿಸುವನೆಂದು ನಾನು ಆಸೆಯಿಟ್ಟುಕೊಂಡಿದ್ದೇನೆ. (ಮಂ-೫, ಸಿ-೧೯, ಸೂ-೨೬, ಆ-೫೨, ೫೩, ೭೪, ೭೯, ೮೨).*

**ಸಮೀಕ್ಷಕ:-** ಖುದಾ ಮೋಸೆಸನ ಕಡೆಗೆ ಪುಸ್ತಕವನ್ನು ಕಳುಹಿಸಿದನಾದರೆ, ಮತ್ತೆ ದಾವೂದ್, ಏಸು ಮತ್ತು ಮುಹಮ್ಮದ್ ಸಾಹೇಬರ ಕಡೆಗೆ ಪುಸ್ತಕವನ್ನೇಕೆ ಕಳುಹಿಸಿದನು? ಏಕೆಂದರೆ, ಪರಮೇಶ್ವರನ ಮಾತು ಸದಾ ಒಂದೇ ಬಗೆಯದೂ, ದೋಷರಹಿತವೂ ಆಗಿರುತ್ತದೆ. ಮತ್ತು ಅದರ ನಂತರ ಕುರಾನಿನವರೆಗೆ ಪುಸ್ತಕಗಳನ್ನು ಕಳುಹಿಸಿರುವುದರಿಂದ, ಮೊದಲನೆಯ ಪುಸ್ತಕ ಅಪೂರ್ಣವೂ, ದೋಷಯುಕ್ತವೂ, ಆಗಿದ್ದಿತೆಂದು ಗ್ರಹಿಸಲ್ಪಡುವುದು. ಈ ಮೂರು ಪುಸ್ತಕಗಳು ಸತ್ಯವಾಗಿದ್ದರೆ, ಈ ಕುರಾನ್ ಸುಳ್ಳಾಗುವುದು. ಪರಸ್ಪರ ಪ್ರಾಯಶಃ ವಿರೋಧವನ್ನು ಹೊಂದಿರುವುದರಿಂದ, ಆ ಮೂರೂ[೫೫] ಪುಸ್ತಕಗಳೂ ಸರ್ವಥಾ ಸತ್ಯವಾಗಿರುವುದು ಶಕ್ಯವೇ ಅಲ್ಲ. ಖುದಾ ರೂಹ್ ಎಂದರೆ ಜೀವರನ್ನು ಉತ್ಪನ್ನಮಾಡಿದ್ದಾನಾದರೆ, ಅವರು ಮೃತರೂ ಆಗುವರು. ಎಂದರೆ, ಎಂದಾದರೂ ಅವರುಗಳ ನಾಶವೂ ಯಾವಾಗಲಾದರೂ ಅಭಾವವೂ ಕೂಡ ಆಗುವುದು. ಪರಮೇಶ್ವರನೇ

---

೫೩. ಎಂದರೆ, ಪೃಥವೀ, ಆಪಃ, ತೇಜ, ವಾಯು, ಮತ್ತು ಆಕಾಶ

೫೪. 'ಮಾಷಾನಸ್ಮೈತಿಲೇಭ್ಯಃ ಪ್ರತಿಯಚ್ಛತಿ'- ಅಷ್ಟಾಧ್ಯಾಯೀ [೧.೪.೯೨] ಮತ್ತು [೨.೮.೧೧]ಸೂತ್ರಗಳಿಗೆ ಉದಾಹರಣೆ! ಪ್ರಾಚೀನ ಕಾಲದಲ್ಲಿ [ ಮತ್ತು ಹಲವು ವರ್ಷ ಮೊದಲಿನ ತನಕ ಗ್ರಾಮಗಳಲ್ಲಿಯೂ] ವಸ್ತುಗಳ ವಿನಿಮಯ ಆಗುತ್ತಿತ್ತು.

೫೫. ಎಂದರೆ, ಮೂಸಾ, ದಾವೂದ್, ಮತ್ತು ಏಸುವಿನ ಕಡೆಗೆ ಕಳುಹಿಸಿದ ಮೂರು ಪುಸ್ತಕಗಳು, ಅಂದರೆ, ಬೈಬಲ್

ಮಾನವರೇ ಮೊದಲಾದ ಪ್ರಾಣಿಗಳಿಗೆ-ಕುಡಿಸುತ್ತಾನೆಯಾದರೆ, ಯಾವನಿಗೂ ರೋಗವು ಬರಬಾರದು. ಮತ್ತು ಎಲ್ಲರಿಗೂ ಸಮಾನವಾದ ಭೋಜನವನ್ನು ಕೊಡಬೇಕು. ಪಕ್ಷಪಾತದಿಂದ, ರಾಜನಿಗೆ ಮತ್ತು ದರಿದ್ರನಿಗೆ ಶ್ರೇಷ್ಠವಾದ – ನಿಕೃಷ್ಟವಾದ ಭೋಜನ ಸಿಕ್ಕುವಂತೆ ಒಬ್ಬನಿಗೆ ಉತ್ತಮವೂ ಮತ್ತು ಇನ್ನೊಬ್ಬನಿಗೆ ನಿಕೃಷ್ಟವೂ ಆದುದು ಸಿಕ್ಕಬಾರದು. ಪರಮೇಶ್ವರನೇ ತಿನ್ನಿಸುವವನೂ, ಕುಡಿಸುವವನೂ ಮತ್ತು ಪಥ್ಯವನ್ನು ಇಡಿಸುವವನೂ ಆಗಿರುವನಾದರೆ, ರೋಗವೇ ಉಂಟಾಗಬಾರದು. ಆದರೆ, ಮುಸಲ್ಮಾನರು-ಮೊದಲಾದವರಿಗೂ ರೋಗಗಳು ಉಂಟಾಗುತ್ತವೆ. ಸ್ವತಃ ಖುದಾನೇ ರೋಗಗಳನ್ನು ನಿವಾರಿಸಿ, ಆರಾಮವನ್ನುಂಟು ಮಾಡುವವನಾಗಿದ್ದರೆ, ಮುಸಲ್ಮಾನರ ಶರೀರಗಳಲ್ಲಿ ರೋಗವಿರಬಾರದು. ಇರುವುದಾದರೆ, ಖುದಾ ಪೂರ್ಣವೈದ್ಯನಲ್ಲ. ಪೂರ್ಣವೈದ್ಯನಾಗಿರುವುದಾದರೆ, ಮುಸಲ್ಮಾನರ ಶರೀರದಲ್ಲಿ ರೋಗಗಳು ಏತಕ್ಕಿರುತ್ತವೆ? ಅವನೇ ಸಾಯಿಸುತ್ತಾನೆ ಮತ್ತು ಬದುಕಿಸುತ್ತಾನೆಯಾದರೆ, ಅದೇ ಖುದಾನಿಗೆ ಪಾಪ-ಪುಣ್ಯಗಳು ತಗಲುತ್ತಿರುತ್ತಿರಬಹುದು. ಜನ್ಮಜನ್ಮಾಂತರದ ಕರ್ಮಾನುಸಾರ ವ್ಯವಸ್ಥೆಯನ್ನು ಮಾಡುತ್ತಾನೆಯಾದರೆ, ಅವನದೇನೂ ಅಪರಾಧವಿಲ್ಲ. ಅವನು ಪಾಪಗಳನ್ನು ಕ್ಷಮಿಸುತ್ತಾನೆ; ಮತ್ತು ನ್ಯಾಯವನ್ನು ಕಯಾಮತ್ತಿನ ರಾತ್ರಿಗೆ ಮಾಡುತ್ತಾನೆ ಎನ್ನುವುದಾದರೆ, ಖುದಾ ಪಾಪಗಳನ್ನು ಹೆಚ್ಚಿಸುವವನಾಗಿ ಪಾಪಯುಕ್ತನಾಗುವನು. ಕ್ಷಮಿಸುವುದಿಲ್ಲವಾದರೆ, ಕುರಾನಿನ ಈ ಮಾತು ಸುಳ್ಳಾಗದೇ ಇರಲು ಶಕ್ಯವಲ್ಲ. (೧೧೭)

*ನೀನು ಮಾನವನಲ್ಲ ನಮ್ಮ ಹಾಗೆ. ಹೋಗಲಿ, ನೀನು ಈ ರೀತಿ ಮಾಡು. ನೀನು ಸತ್ಯವಂತರ ನಡುವೆ ಒಬ್ಬನಾದರೆ, ಏನಾದರೂ ಚಿಹ್ನೆಯನ್ನು ತೆಗೆದುಕೊಂಡು ಬಾ, "ಅದಕ್ಕಾಗಿ ಈ ಹೆಣ್ಣು ಒಂಟೆಯಿದೆ. ಒಂದು ಸಾರಿ ನೀರನ್ನು ಕುಡಿಯಬೇಕಾಗಿದೆ".[೫೬] -ಎಂದು ಹೇಳಿದನು. (ಮಂ-೫, ಸಿ-೧೯, ಸೂ-೨೬, ಆ-೧೫೪-೧೫೫).*

**ಸಮೀಕ್ಷಕ:–** ಆಹಾ, ಯಾವನಾದರೂ ಕಲ್ಲಿನಿಂದ ಒಂಟೆ ಹೊರಬರುತ್ತದೆ-ಎಂಬ ಮಾತನ್ನು ಒಪ್ಪಿಕೊಳ್ಳಬಲ್ಲನೇ? ಯಾರು ಈ ಮಾತನ್ನು ಒಪ್ಪಿಕೊಂಡುಬಿಟ್ಟರೋ, ಅವರು ಕಾಡುಮನುಷ್ಯರಾಗಿದ್ದರು. ಮತ್ತು ಹೆಣ್ಣು ಒಂಟೆಯ ಚಿಹ್ನೆಯನ್ನು ಕೊಡುವುದು ಕೇವಲ ಕಾಡುಜನರ ವ್ಯವಹಾರವಾಗಿದೆ; ಈಶ್ವರಕೃತವಲ್ಲ. ಈ ಪುಸ್ತಕ ಈಶ್ವರಕೃತವಾಗಿದ್ದರೆ, ಇಂತಹ ವ್ಯರ್ಥವಾದ ಮಾತುಗಳು ಇದರಲ್ಲಿ ಇರುತ್ತಿರಲಿಲ್ಲ. (೧೧೮)

*ಓ ಮೋಸೆಸ್! ನಿಶ್ಚಯವಾಗಿಯೂ ನಾನು ಶಕ್ತಿಮಾನ್ ಅಲ್ಲಾಹನಾಗಿದ್ದೇನೆ-ಎನ್ನುವುದು ತಥ್ಯ. ಮತ್ತು ಕೆಳಕ್ಕೆಸೆದುಬಿಡು ನಿನ್ನ ಕೋಲನ್ನು. ಆಯಿತು, ಯಾವಾಗ ಅದನ್ನು ನೋಡಿದನೋ, ಆಗ ಅದು ಸರ್ಪವೋ ಎನ್ನುವಂತೆ ಅಲ್ಲಾಡುತ್ತಿದ್ದಿತು. ಓ ಮೋಸೆಸ್! ಹೆದರಬೇಡ. ನಿಶ್ಚಯವಾಗಿಯೂ ಪೈಗಂಬರರು ನನ್ನ ಸಮೀಪದಲ್ಲಿ ಹೆದರುವುದಿಲ್ಲ. ಅಲ್ಲಾಹನ ಹೊರತು ಬೇರೆ ಯಾರೂ ದೇವರಲ್ಲ. ಆದರೆ ಅವನು ದೊಡ್ಡ ಸಿಂಹಾಸನದ (ಏಳನೆಯ ಆಕಾಶದ) ಸ್ವಾಮಿಯಾಗಿದ್ದಾನೆ. ನನಗಿಂತ ಮೇಲೆ ಎಂದು ಆತ್ಮಸ್ತುತಿ ಮಾಡಿಕೊಳ್ಳಬೇಡಿ. ಮತ್ತು ಹೊರಟುಬನ್ನಿರಿ ನನ್ನ ಹತ್ತಿರ ಮುಸಲ್ಮಾನರಾಗಿ. (ಮಂ-೫, ಸಿ-೧೯, ಸೂ-೨೭, ಆ-೯, ೧೦, ೨೬, ೩೧)*

**ಸಮೀಕ್ಷಕ :–** ಮತ್ತೂ ಕೂಡ ನೋಡಿರಿ, ತನ್ನ ಬಾಯಿನಿಂದ ತಾನೇ ಅಲ್ಲಾಹನು ಮಹಾಪ್ರಚಂಡನಾಗುತ್ತಾನೆ. ತನ್ನ ನಾಲಗೆಯಿಂದ ತನ್ನ ಪ್ರಶಂಸೆಮಾಡಿಕೊಳ್ಳುವುದು ಶ್ರೇಷ್ಠ ಪುರುಷನ ಕೆಲಸವೂ ಕೂಡ ಅಲ್ಲ; ಇನ್ನು ಖುದಾನ ಕೆಲಸ ಹೇಗೆ ತಾನೇ ಆದೀತು? ಹೀಗೆಯೇ ಇಂದ್ರಜಾಲದ ದೊಂಬರಾಟವನ್ನು ತೋರಿಸಿ, ಕಾಡು ಜನರನ್ನು ವಶಪಡಿಸಿಕೊಂಡು, ತಾನು ವನವಾಸೀ ಖುದಾ ಆಗಿ ಕುಳಿತನು. ಇಂತಹ ಮಾತು ಈಶ್ವರನ ಪುಸ್ತಕದಲ್ಲಿ ಎಂದಿಗೂ ಇರಲಾರದು. ಅವರು 'ಮಹಾನ್ ಆಸನ', ಎಂದರೆ ಏಳನೆಯ ಆಕಾಶದ ಸ್ವಾಮಿಯಾಗಿದ್ದರೆ, ಅವನು ಏಕದೇಶೀಯನಾದುದರಿಂದ ಈಶ್ವರನಾಗಲಾರನು. ಆತ್ಮಸ್ತುತಿ ಮಾಡುವುದು ಕೆಟ್ಟದಾಗಿದ್ದರೆ, ಖುದಾ ಮತ್ತು ಮುಹಮ್ಮದ್ ಸಾಹೇಬರು ತಮ್ಮ ಸ್ತುತಿಯಿಂದ ಪುಸ್ತಕವನ್ನು ತುಂಬಿಸಿಬಿಟ್ಟರೇಕೆ? ಮುಹಮ್ಮದ್ ಸಾಹೇಬರು ಅನೇಕರನ್ನು ಕೊಂದರು. ಇದರಿಂದ ಆತ್ಮಸ್ತುತಿಯಾಯಿತೋ ಅಥವಾ ಇಲ್ಲವೋ? ಈ ಕುರಾನ್ ಪುನರುಕ್ತವಾದ ಮತ್ತು ಪೂರ್ವಾಪರ ವಿರುದ್ಧವಾದ ಮಾತುಗಳಿಂದ ತುಂಬಿಹೋಗಿದೆ. (೧೧೯).

*ಮತ್ತು ನೋಡುವೆ ನೀನು ಪರ್ವತಗಳನ್ನು; ಅವು ಸ್ಥಿರವಾಗಿವೆಯೆಂದು ನೀನು ಊಹಿಸುತ್ತೀಯೆ; ಮತ್ತು ಅವು ಹೊರಟು ಹೋಗುತ್ತವೆ ಸಂಚರಿಸುವ ಮೋಡಗಳಂತೆ. ಯಾವನು ಪ್ರತಿಯೊಂದು ವಸ್ತುವನ್ನೂ ದೃಢವಾಗಿ ಮಾಡಿದ್ದನೋ, ಆ*

---

೫೬. ಏಳನೇಯ ಆಕಾಶದ.

*ಅಲ್ಲಾಹನ ಕಾರ್ಯಕೌಶಲವದು. ನಿಶ್ಚಯವಾಗಿಯೂ ನೀವು ಏನನ್ನು ಮಾಡುತ್ತೀರೋ ಆ ವಸ್ತುವಿನ ಪರಿಜ್ಞಾನವುಳ್ಳವನಾಗಿದ್ದಾನೆ. (ಮಂ-೫, ಸಿ-೨೦, ಸೂ-೨೭, ಆ-೮೮)*

**ಸಮೀಕ್ಷಕ :-** ಮೋಡಗಳ ಹಾಗೆ ಪರ್ವತಗಳ ಚಲನೆ ಕುರಾನನ್ನು ಬರೆದವರ ದೇಶದಲ್ಲಿ[೫೭] ನಡೆಯುತ್ತಿರಬಹುದು, ಬೇರೆ ಕಡೆಗಳಲ್ಲಿ ಅಲ್ಲ. ಮತ್ತು ಖುದಾನ ಸರ್ವಜ್ಞತ್ವ ಮತ್ತು ಜಾಗರೂಕತೆ ದಂಗೆಕೋರ ಸೈತಾನನನ್ನು ಹಿಡಿಯದೆ ಮತ್ತು ಶಿಕ್ಷಿಸದೇ ಇರುವುದರಿಂದಲೇ ವಿದಿತವಾಗುತ್ತದೆ. ಅವನು ಒಬ್ಬ ದಂಗೆಕೋರನನ್ನೂ ಹಿಡಿಯಲಾರದೇ ಹೋದನು; ಶಿಕ್ಷೆಯನ್ನು ಕೊಡಲಿಲ್ಲ! ಇದಕ್ಕಿಂತ ಹೆಚ್ಚು ಅಜಾಗರೂಕತೆ ಏನಿರಬಲ್ಲದು? (೧೨೦)

*ಆಯಿತು; ಗುದ್ದಿದನು ಮೋಸೆಸ್ಸನು ಅವನಿಗೆ. ತೀರಿತು; ಪೂರ್ತಿಮಾಡಿದನು ಅವನ ಆಯಸ್ಸನ್ನು. ಅವನು – "ಓ ರಬ್ ನನ್ನವನೇ! ನಿಶ್ಚಯವಾಗಿ ನಾನು ನನ್ನ ಜೀವಕ್ಕೆ ಅನ್ಯಾಯಮಾಡಿದೆನು. ಆಯಿತು; ಕ್ಷಮಿಸು ನನ್ನನ್ನು". ಸರಿ; ಕ್ಷಮಿಸಿ ಬಿಟ್ಟನು ಅವನನ್ನು. ನಿಶ್ಚಯವಾಗಿ ಅವನು ಕ್ಷಮೆ ಮಾಡುವ ದಯಾಳುವಾಗಿದ್ದಾನೆ. ಮತ್ತು ನಿನ್ನ ಪ್ರಭುವು, ಯಾವುದನ್ನು ಅಪೇಕ್ಷಿಸುತ್ತಾನೋ ಮತ್ತು ಚುನಾಯಿಸುತ್ತಾನೋ, ಅದನ್ನು ಉತ್ಪನ್ನಮಾಡುತ್ತಾನೆ. (ಮಂ-೫, ಸಿ-೨೦, ಸೂ-೨೮, ಆ-೧೫, ೧೬, ೬೮)*

**ಸಮೀಕ್ಷಕ:-** ಈಗ ಮತ್ತೂ ನೋಡಿರಿ, ಮುಸಲ್ಮಾನರ ಮತ್ತು ಕ್ರೈಸ್ತರ ಪೈಗಂಬರರನ್ನು ಮತ್ತು ಖುದಾನನ್ನು, ಪೈಗಂಬರ್ ಮೋಸೆಸ್ಸನು ನರಹತ್ಯೆಮಾಡುತ್ತಾ ಹೋಗುತ್ತಾನೆ, ಮತ್ತು ಖುದಾ ಕ್ಷಮಿಸುತ್ತಾ ಹೋಗುತ್ತಾನೆ! ಇವರಿಬ್ಬರೂ ಅನ್ಯಾಯಕಾರಿಗಳು ಅಹುದೋ ಅಥವಾ ಅಲ್ಲವೋ? ತನ್ನ ಇಚ್ಛೆಯಿಂದಲೇ, ಹೇಗೆ ಅಪೇಕ್ಷಿಸುತ್ತಾನೋ ಹಾಗೆ ಉತ್ಪತ್ತಿಮಾಡುತ್ತಾನೆಯೇ? ಅವನು ತನ್ನ ಇಚ್ಛೆಯಿಂದಲೇ ಒಬ್ಬನನ್ನು ರಾಜನನ್ನಾಗಿಯೂ, ಇನ್ನೊಬ್ಬನನ್ನು ದರಿದ್ರನನ್ನಾಗಿಯೂ, ಮತ್ತು ಒಬ್ಬನನ್ನು ವಿದ್ವಾಂಸನನ್ನಾಗಿಯೂ ಹಾಗೂ ಇನ್ನೊಬ್ಬನನ್ನು ಮೂರ್ಖನನ್ನೇ ಮೊದಲಾಗಿಯೂ ಸೃಜಿಸಿದ್ದಾನೇನು? ಹೀಗೆಯಿರುವುದಾದರೆ ಕುರಾನೂ ಸತ್ಯವಲ್ಲ; ಮತ್ತು ನ್ಯಾಯಕಾರಿಯಲ್ಲದುದರಿಂದ ಇವನು ಖುದಾನೂ ಆಗಲಾರನು. (೧೨೧)

*ನಾವು ತಾಯಿ-ತಂದೆಗಳೊಂದಿಗೆ ಸದ್ವ್ಯವಹಾರ ಮಾಡಬೇಕೆಂದು ಆಜ್ಞಾಪಿಸಿದೆವು. ಮತ್ತು ನನಗೆ ಸಲ್ಲದ ಮತ್ತು ನಿನ್ನ ಅರಿವಿಗೆ ಅಂದದ ವಸ್ತುವನ್ನು ನನ್ನ ಸಹಭಾಗಿಯನ್ನಾಗಿ ಮಾಡುವ ಸಲುವಾಗಿ ಅವರು ನಿನ್ನೊಂದಿಗೆ ಜಗಳವಾಡಿದರೆ, ನೀನು ಅವರಿಬ್ಬರ ಕಥನವನ್ನೂ ಒಪ್ಪಿಕೊಳ್ಳಬೇಡ; ನನ್ನ ಪಕ್ಷವನ್ನು ಸ್ವೀಕರಿಸು ಮತ್ತು ಅವಶ್ಯವಾಗಿ ನಾವು ನೂಹನನ್ನು ಅವನ ಜಾತಿಯೆಡೆಗೆ ಕಳುಹಿಸಿದೆವು. ಅಹುದು; ಅದರ ನಡುವೆ ಸಾವಿರ ವರ್ಷ ಕಾಲ ಇದ್ದನು; ಆದರೆ ಐವತ್ತು ವರ್ಷ ಕಡಿಮೆ. (ಮಂ-೫, ಸಿ-೨೦, ಸೂ-೨೯, ಆ-೭, ೧೪.)*

**ಸಮೀಕ್ಷಕ:-** ತಾಯಿ-ತಂದೆಗಳ ಸೇವೆಮಾಡುವುದೇನೋ ಒಳ್ಳೆಯದೇ ಸರಿ. ಮತ್ತು ಖುದಾನೊಂದಿಗೆ (ಬೇರೆ ಯಾವನನ್ನಾದರೂ ಸಹಭಾಗಿಯನ್ನಾಗಿ ಮಾಡಲು) ಅವರು ಹೇಳಿದುದನ್ನು ಒಪ್ಪಬಾರದೆನ್ನುವುದೂ ಕೂಡ ಸರಿಯಾಗಿದೆ. ಆದರೆ, ಮಾತಾಪಿತೃಗಳು, ಮಿಥ್ಯಾಭಾಷಣ ಮೊದಲಾದುದನ್ನು ಮಾಡಲು ಆಜ್ಞಾಪಿಸಿದರೆ, ಒಪ್ಪಿಕೊಂಡು ಬಿಡಬೇಕೇನು? ಆದುದರಿಂದ ಈ ಮಾತು ಅರ್ಧ ಒಳ್ಳೆಯದು; ಅರ್ಧ ಕೆಟ್ಟದ್ದಾಗಿದೆ. ನೂಹ್ ಮೊದಲಾದ ಪೈಗಂಬರರನ್ನು ಮಾತ್ರ ಖುದಾ ಜಗತ್ತಿಗೆ ಕಳುಹಿಸುತ್ತಾನೇನು? ಹಾಗಾದರೆ, ಬೇರೆಯ ಜೀವರನ್ನು ಯಾವನು ಕಳುಹಿಸುತ್ತಾನೆ? ಎಲ್ಲರನ್ನೂ ಅವನೇ ಕಳುಹಿಸುತ್ತಾನೆಯಾದರೆ, ಎಲ್ಲರೂ ಪೈಗಂಬರರೇ ಅಲ್ಲವೇಕೆ? ಮತ್ತು ಮೊದಲು ಮಾನವರ ಆಯಸ್ಸು ಸಾವಿರವರ್ಷದ್ದಾಗಿರುತ್ತಿದ್ದರೆ, ಈಗ ಏತಕ್ಕೆ ಆಗುವುದಿಲ್ಲ? ಆದುದರಿಂದ ಈ ಮಾತು ಸರಿಯಾದುದಲ್ಲ. (೧೨೨)

*ಅಲ್ಲಾಹನು ಮೊದಲನೆಯ ಸಾರಿ ಉತ್ಪತ್ತಿಮಾಡುತ್ತಾನೆ. ಮತ್ತು ಎರಡನೆಯ ಸಾರಿ ಮಾಡುವನು. ಮತ್ತು ಅವನ ಕಡೆಗೆಯೇ ತಿರುಗುವಿರಿ. ಮತ್ತು ಎಂದು ಮಳೆ ಧಾರಾಕಾರವಾಗಿ ಬೀಳುವುದೋ, ಎಂದರೆ ಕಯಾಮತ್ ನಿರ್ಧಾರಿತವಾಗುವುದೋ, ಆಗ ಪಾಪಿಗಳಾದವರು ನಿರಾಶರಾಗುವರು. ಅಹುದು, ಅಹುದು; ನಂಬಿಕೆಯನ್ನಿಟ್ಟ ಮತ್ತು ಸತ್ಕರ್ಮಗಳನ್ನು ಮಾಡಿದ ಮಂದಿಗಳು, ವಸ್ತುತಃ ಉದ್ಯಾನದ ನಡುವೆ ಸಿಂಗರಿಸಲ್ಪಡುವರು. ನಾವು ಒಂದು ಗಾಳಿಯನ್ನು ಕಳುಹಿದರೆ, ಸಾಕು; ಆ ಹೊಲ ಹಳದಿಯಾಗಿ ಹೋಗುವುದನ್ನು ನೋಡುವಿರಿ. ಹೀಗೆಯೇ ಅಲ್ಲಾಹನು ಆ*

---

೫೭. ಅರೇಬಿಯಾ ಮರುಭೂಮಿಯು ಕುರಾನ್ ಬರೆದವರ ದೇಶ. ಇಲ್ಲಿ ಪರ್ವತಗಳಿಲ್ಲ. ಮೋಡಗಳೂ ಇಲ್ಲ ~ ಆದರೆ, ಕಡಿವಾಣ ಇಲ್ಲದೆ, 'ಗಾಳಿ ಕುದುರೆ'ಯನ್ನು ಓಡಿಸುವುದು ಏನು ಮಹಾಕಷ್ಟ!

*ಜನರ ಹೃದಯಗಳ ಮೇಲೆ ಅವರು ತಿಳಿದುಕೊಳ್ಳದಂತೆ ಮುದ್ರೆಯನ್ನೊತ್ತುತ್ತಾನೆ. (ಮಂ-೫, ಸಿ-೨೧, ಸೂ-೩೦, ಆ-೧೧, ೧೨, ೧೫, ೫೧, ೫೯)*

**ಸಮೀಕ್ಷಕ :-** ಅಲ್ಲಾಹನು ಎರಡು ಸಾರಿ ಉತ್ಪತ್ತಿಮಾಡುತ್ತಾನೆ; ಮೂರನೆಯ ಸಾರಿ ಇಲ್ಲ-ಎಂದಾದರೆ, ಉತ್ಪತ್ತಿಯ ಮುನ್ನ ಮತ್ತು ಎರಡನೆಯ ಸಾರಿಯ (ಉತ್ಪತ್ತಿಯ) ನಂತರ ನಿಷ್ಕರ್ಮನಾಗಿ ಕುಳಿತುಕೊಂಡಿರಬಹುದೇನೋ? ಮತ್ತು ಒಂದು ಹಾಗೂ ಎರಡನೆಯ ಸಾರಿ ಉತ್ಪತ್ತಿಯ ನಂತರ ಅವನ ಸಾಮರ್ಥ್ಯವು ಕರ್ಮಹೀನವೂ, ವ್ಯರ್ಥವೂ ಆಗಿಹೋಗುವುದು. ನ್ಯಾಯಮಾಡುವ ದಿನ ಪಾಪೀ ಜನರು ನಿರಾಶರಾಗುವರಾದರೆ, ಒಳ್ಳೆಯ ಸಂಗತಿಯಾಗಿದೆ. ಆದರೆ, ಮುಸಲ್ಮಾನರ ಹೊರತು ಎಲ್ಲರೂ ಪಾಪಿಗಳೆಂದರಿತು ನಿರಾಶರಾಗಿ ಮಾಡುವುದು ಈ ಮಾತಿನ ತಾತ್ಪರ್ಯವೇನೂ ಅಲ್ಲವಷ್ಟೇ? ಏಕೆಂದರೆ, ಕುರಾನಿನಲ್ಲಿ ಅನೇಕ ಸ್ಥಳಗಳಲ್ಲಿ ಪಾಪಿಗಳು ಏನ್ನುವುದಕ್ಕೆ ಬೇರೆಯದೇ ಅರ್ಥವಿದೆ. ಉದ್ಯಾನದಲ್ಲಿ ಇಡಲ್ಪಡುವುದು ಮತ್ತು ಅಲಂಕಾರಗಳನ್ನು ಮಾಡುವುದೇ ಮುಸಲ್ಮಾನರ ಸ್ವರ್ಗವಾಗಿರುವುದಾದರೆ, ಈ ಜಗತ್ತಿನ ಹಾಗೆಯೇ ಆಯಿತು. ಮತ್ತು ಅಲ್ಲಿ ತೋಟಗಾರರೂ, ಅಕ್ಕಸಾಲಿಗರೂ ಕೂಡ ಇರಬಹುದು. ಅಥವಾ ಖುದಾನೇ ತೋಟಗಾರನ ಮತ್ತು ಅಕ್ಕಸಾಲಿಗ ಮೊದಲಾದವರ ಕೆಲಸವನ್ನು ಮಾಡುತ್ತಿರಬಹುದು. ಯಾವನಿಗಾದರೂ ಒಡವೆ ಕಡಿಮೆ ಸಿಕ್ಕಬಹುದಾದರೆ, ಕಳುವೂ ಆಗುತ್ತಿರಬಹುದು. ಮತ್ತು ಕಳ್ಳತನ ಮಾಡುವವರನ್ನು ಸ್ವರ್ಗದಿಂದ ನರಕಕ್ಕೂ ತಳ್ಳುತ್ತಿರಬಹುದು. ಹೀಗೆ ಆಗುತ್ತಿರಬಹುದಾದರೆ, ಸದಾ ಸ್ವರ್ಗದಲ್ಲಿರುವವರು-ಎಂಬ ಮಾತು ಸುಳ್ಳಾಗಿ ಹೋಗುವುದು. ಬೇಸಾಯಗಾರರ ಬೇಸಾಯದ ಮೇಲೆಯೂ ಖುದಾನ ದೃಷ್ಟಿಯಿರುತ್ತದೆಯಾದರೆ, ಈ ವಿದ್ಯೆ ಬೇಸಾಯ ಮಾಡುವ ಅನುಭವದಿಂದಲೇ ಉಂಟಾಗುತ್ತದೆ. ಖುದಾ ತನ್ನ ವಿದ್ಯೆಯಿಂದ ಎಲ್ಲ ಮಾತುಗಳನ್ನೂ ತಿಳಿದುಕೊಂಡಿದ್ದಾನೆ - ಎಂದು ಅಂಗೀಕರಿಸಲ್ಪಡುವುದಾದರೆ, ಹೀಗೆ ಭಯವನ್ನೊಡ್ಡುವುದರಿಂದ ತನ್ನ ಗರ್ವವನ್ನು ಪ್ರದರ್ಶಿಸುವುದಾಗಿದೆ. ಅಲ್ಲಾಹನು ಜೀವರುಗಳ ಹೃದಯಗಳ ಮೇಲೆ ಮುದ್ರೆಯನ್ನೊತ್ತಿ ಪಾಪಗಳನ್ನು ಮಾಡಿಸಿದನಾದರೆ, ಆ ಪಾಪದ ಭಾಗಿಯು ಅವನೇ ಆಗುವನು; ಜೀವರು (ಭಾಗಿಗಳು) ಆಗಲಾರರು. ಹೇಗೆ ಜಯ-ಪರಾಜಯಗಳು ಸೇನಾಧೀಶನಿಗೆ ಆಗುತ್ತವೋ, ಹಾಗೆ ಈ ಪಾಪಗಳೆಲ್ಲವೂ ಖುದಾನಿಗೆಯೇ ತಗಲುವವು. (೧೨೩)

*ಈ ಆಯತುಗಳು ಬುದ್ಧಿಮಾನ್ (ಅಲ್ಲಾಹ)ನ ಪುಸ್ತಕ (ದವು) ಆಗಿವೆ. ಸ್ತಂಭವಿಲ್ಲದೆ ಆಕಾಶವನ್ನು ಉತ್ಪನ್ನಮಾಡಿದನು. ನೋಡುತ್ತೀರಿ ನೀವು ಅದನ್ನು. ಮತ್ತು ಅಲ್ಲಾಡಿ ಹೋಗದಿರಲಿ-ಎಂದು ಪೃಥಿವಿಯ ನಡುವೆ ಪರ್ವತಗಳನ್ನು ಸೃಜಿಸಿದನು. ಅಲ್ಲಾಹನು ರಾತ್ರಿಯನ್ನು ಹಗಲಿನ ನಡುವೆ ಪ್ರವೇಶಗೊಳಿಸುತ್ತಾನೆ; ಮತ್ತು ಪ್ರವೇಶಗೊಳಿಸುತ್ತಾನೆ ಹಗಲನ್ನು ರಾತ್ರಿಯ ನಡುವೆ-ನೀನು ಇದನ್ನೇಕೆ ನೋಡಲಿಲ್ಲ? ಸಮುದ್ರದ ನಡುವೆ, ಅಲ್ಲಾಹನ ಅನುಗ್ರಹದಿಂದ ನಿಮಗೆ ಅವನ ಚಿಹ್ನೆಗಳನ್ನು ನೋಡಿಸಬೇಕೆಂದು ದೋಣಿಗಳು ನಡೆಯುವುದನ್ನು ನೀವು ನೋಡಲಿಲ್ಲರೇ? (ಮಂ-೫, ಸಿ-೨೧, ಸೂ-೩೧, ಆ-೨, ೧೦, ೨೯, ೩೧).*

**ಸಮೀಕ್ಷಕ :-** ಧನ್ಯ ಧನ್ಯ ಮಹಾಶಯ! ವಿದ್ಯೆಗೆ ಸರ್ವಥಾ ವಿರುದ್ಧವಾಗಿ ಆಕಾಶದ ಉತ್ಪತ್ತಿ. ಅದಕ್ಕೆ ಸ್ತಂಭಗಳನ್ನು ಒತ್ತುಕೊಡಬೇಕೇನೋ-ಎಂಬ ಸಂಶಯ ಮತ್ತು ಪೃಥಿವಿಯನ್ನು ದೃಢೀಕರಿಸುವುದಕ್ಕಾಗಿ ಪರ್ವತಗಳ ಸ್ಥಾಪನೆ-ಮೊದಲಾದ ವಿಷಯಗಳ್ನು ಬರೆದಿರುವ ಮಹಾ ಬುದ್ಧಿಶಾಲಿಯ ಪುಸ್ತಕವಿದು! ಅಲ್ಪ-ಸ್ವಲ್ಪ ವಿದ್ಯೆಯನ್ನು ಕಲಿತವನೂ ಕೂಡ ಇಂತಹ ಲೇಖನವನ್ನು ಎಂದಿಗೂ ಬರೆಯುವುದಿಲ್ಲ. ಮತ್ತು ಒಪ್ಪಿಕೊಳ್ಳುವುದೂ ಕೂಡ ಇಲ್ಲ. ಮತ್ತು ಬುದ್ಧಿವಂತಿಕೆಯನ್ನಾದರೂ ನೋಡಿರಿ. ಹಗಲಿರುವೆಡೆ ರಾತ್ರಿಯಿರುವುದಿಲ್ಲ; ಮತ್ತು ರಾತ್ರಿಯಿರುವೆಡೆ ಹಗಲೂ ಇರುವುದಿಲ್ಲ. ಮತ್ತೆ ಅವುಗಳಲ್ಲಿ ಒಂದನ್ನು ಮತ್ತೊಂದರಲ್ಲಿ ಪ್ರವೇಶಮಾಡಿಸುತ್ತಾನೆ-ಎಂದು ಬರೆದಿದೆಯಲ್ಲ! ಇದು ಮಹಾನ್ ಅವಿದ್ವಾಂಸರ ಕಥನವಾಗಿದೆ. ಆದುದರಿಂದ ಈ ಕುರಾನ್ ವಿದ್ಯಾ-ಪುಸ್ತಕವಾಗಿರಲಾರದು. ಹಡಗುಗಳು ಮಾನವರಿಂದ ಮತ್ತು ಕ್ರಿಯಾಕೌಶಲ - ಮೊದಲಾದುವುಗಳಿಂದ ಚಲಿಸುತ್ತವೋ ಅಥವಾ ಖುದಾನ ಕೃಪೆಯಿಂದಲೋ? ಇದು ವಿದ್ಯಾವಿರುದ್ಧವಾದ ಮಾತಲ್ಲವೋ? ಕಬ್ಬಿಣದ ಅಥವಾ ಕಲ್ಲುಗಳ ಹಡಗುಗಳನ್ನು ನಿರ್ಮಿಸಿ, ಸಮುದ್ರದಲ್ಲಿ ನಡೆಸಿದರೆ, ಖುದಾನ ಚಿಹ್ನೆ ಮುಳುಗುವುದೋ ಅಥವಾ ಇಲ್ಲವೋ? ಆದುದರಿಂದ ಈ ಪುಸ್ತಕ ವಿದ್ವಾಂಸನು ಬರೆದುದೂ ಆಗಿರಲಾರದು; ಮತ್ತು ಈಶ್ವರನು ಬರೆದುದೂ ಆಗಿರಲಾರದು. (೧೨೪)

*ಆಕಾಶದಿಂದ ಪೃಥಿವಿಯ ಕಡೆಗೆ ಕಾರ್ಯದ ವ್ಯವಸ್ಥೆಯನ್ನು ಮಾಡುತ್ತಾನೆ. ಅದರ ಕಡೆಗೆ ಒಂದು ದಿವಸದ ನಡುವೆ ಪುನಃ ಏರಿಹೋಗುತ್ತಾನೆ, ಅದರ ಅವಧಿ ನೀವು ಎಣಿಸುವಂತಹ ವರ್ಷಗಳ ಸಾವಿರಪಟ್ಟಾಗಿದೆ. ಇವನು ಭವಿಷ್ಯವನ್ನೂ, ವರ್ತಮಾನವನ್ನೂ ತಿಳಿಯುವವನಾಗಿದ್ದಾನೆ. ಮಹಾಶಕ್ತನೂ, ದಯಾಳುವೂ ಆಗಿದ್ದಾನೆ, ಮತ್ತು ಅವನನ್ನು ನಿರ್ಮಿಸಿದನು ಮತ್ತು ಅವನೊಳಕ್ಕೆ ತನ್ನ ಆತ್ಮವನ್ನು (ಪ್ರಾಣವನ್ನು) ಊದಿದನು. ನಿಮ್ಮೊಂದಿಗೆಯೇ*

*ನಿರ್ಧಾರಿತವಾಗಿರುವ ಮೃತ್ಯುದೇವತೆಯು ನಿಮ್ಮನ್ನು ವಶಪಡಿಸಿಕೊಳ್ಳುವನೆಂದು ಹೇಳು. ಮತ್ತು ನಾವು ಬಯಸುತ್ತಿದ್ದಲ್ಲಿ, ಅವಶ್ಯವಾಗಿ ನಾವು ಪ್ರತಿಯೊಬ್ಬ ಜೀವನಿಗೂ ಅವನಿಗೆ ಯುಕ್ತವಾದ ಶಿಕ್ಷಣವನ್ನು ಕೊಡುತ್ತಿದ್ದೆವು. ಆದರೆ, ನನ್ನ ಕಡೆಯಿಂದ ಹೊರಟ–"ಅವಶ್ಯವಾಗಿ ತುಂಬುವೆನು ನಾನು ನರಕವನ್ನು ಭೂತಗಳಿಂದ ಮತ್ತು ಮಾನವರಿಂದ ಒಟ್ಟಾಗಿ".– ಎಂಬ ವಚನ ಸತ್ಯವಾಗಿ ಮಾಡಲ್ಪಡಬೇಕಾಗಿದ್ದಿತು. (ಮಂ–೫, ಸಿ–೨೧, ಸೂ–೩೨, ಆ–೫, ೬, ೯, ೧೧, ೧೩)*

**ಸಮೀಕ್ಷಕ :–** ಈಗ ಸರಿಯಾಗಿ ಮುಸಲ್ಮಾನರ ಖುದಾ ಮನುಷ್ಯರಂತೆ ಏಕದೇಶೀಯನಾಗಿದ್ದಾನೆ – ಎನ್ನವುದು ಸಿದ್ಧವಾಗಿ ಹೋಯಿತು. ಏಕೆಂದರೆ, ವ್ಯಾಪಕನಾಗಿರುವುದಾದರೆ ಒಂದು ಸ್ಥಾನದಿಂದ ವ್ಯವಸ್ಥೆಮಾಡುವುದು ಮತ್ತು ಇಳಿಯುವುದು–ಹತ್ತುವುದು ಆಗಲಾರದು. ಖುದಾ ದೇವತೆಯನ್ನು ಕಳುಹಿಸುತ್ತಾನೆ–ಎಂದರೂ ತಾನು ಏಕದೇಶೀಯನಾದನು. ತಾನು ಆಕಾಶದ ಮೇಲೆ ಜೋಲಾಡುತ್ತಾ ಕುಳಿತಿದ್ದಾನೆ ಮತ್ತು ದೇವತೆಗಳನ್ನು ಓಡಾಡಿಸುತ್ತಾನೆ! ದೇವತೆಗಳು ಲಂಚತೆಗೆದುಕೊಂಡು ಯಾವುದಾದರೂ ಕಾರ್ಯವನ್ನು ಕೆಡಿಸಿಬಿಡುವರಾದರೆ, ಅಥವಾ ಯಾವುದಾದರೂ ಶವವನ್ನು ಬಿಟ್ಟುಬಿಡುವರಾದರೆ, ಖುದಾನಿಗೆ ಏನು ಗೊತ್ತಾದೀತು? ಗೊತ್ತಾಗುವುದಾದರೂ ಸರ್ವಜ್ಞನೂ, ಸರ್ವವ್ಯಾಪಕನೂ ಆಗಿರುವವನಿಗೆ ಮಾತ್ರವೇ. ಈ ಖುದಾ ಹಾಗಂತೂ ಇಲ್ಲವೇ ಇಲ್ಲ. ಹಾಗಿದ್ದ ಪಕ್ಷದಲ್ಲಿ ದೇವತೆಗಳನ್ನು ಕಳುಹಿಸುವ ಹಾಗೂ ಅನೇಕರನ್ನು ಅನೇಕ ರೀತಿ ಪರೀಕ್ಷಿಸುವ ಕೆಲಸವೇನಿದ್ದಿತು? ಮತ್ತು ಒಂದು ಸಾವಿರ ವರ್ಷಗಳ (ಆಯಸ್ಸಿನ) ಮತ್ತು ಬರುವ–ಹೋಗುವ ಪ್ರಬಂಧವನ್ನು ಮಾಡುವ ಉಲ್ಲೇಖವಿರುವುದರಿಂದ ಸರ್ವಶಕ್ತಿವಂತನೂ ಕೂಡ ಅಲ್ಲ. ಮೃತ್ಯು–ದೇವತೆಯೂ ಇರುವುದಾದರೆ, ಆ ದೇವತೆಯನ್ನು ಸಂಹರಿಸುವ ಮೃತ್ಯುವು ಯಾವುದು? ಅವನು ನಿತ್ಯನಾಗಿರುವುದಾದರೆ, ಅಮರತ್ವದಲ್ಲಿ ಖುದಾನಿಗೆ ಸಮನಾಗಿ ಭಾಗೀದಾರನಾದನು. ಒಬ್ಬ ದೇವತೆ ಏಕಕಾಲದಲ್ಲಿ ನರಕವನ್ನು ತುಂಬುವುದಕ್ಕಾಗಿ ಪಥಪ್ರದರ್ಶನ ಮಾಡಲಾರನು. ಮತ್ತು ಪಾಪವನ್ನು ಮಾಡದೆಯೇ ಅವರನ್ನು ತನ್ನ ಇಚ್ಛೆಯಿಂದ ನರಕದಲ್ಲಿ ತುಂಬಿಸಿ, ಅವರಿಗೆ ದುಃಖವನ್ನಿತ್ತು, ವಿನೋದವನ್ನು ನೋಡುತ್ತಾನೆಯಾದರೆ, ಆ ಖುದಾ ಪಾಪಿಯೂ ಅನ್ಯಾಯಕಾರಿಯೂ ಮತ್ತು ದಯಾಹೀನನೂ ಆಗಿರುತ್ತಾನೆ. ಇಂತಹ ಮಾತುಗಳು ಯಾವ ಪುಸ್ತಕದಲ್ಲಿರುತ್ತವೋ, ಅದು ವಿದ್ವಾಂಸನು ರಚಿಸಿದುದೂ ಅಲ್ಲ; ಮತ್ತು ಈಶ್ವರಕೃತವೂ ಅಲ್ಲ. ಮತ್ತು ಯಾವನು ದಯಾ–ನ್ಯಾಯಹೀನನಾಗಿರುತ್ತಾನೋ, ಅವನು ಈಶ್ವರನೂ ಕೂಡ ಎಂದಿಗೂ ಆಗಲಾರನು. (೧೨೫).

*ಸಾವಿನಿಂದ ಅಥವಾ ಕೊಲೆಯಿಂದ ಓಡಿಹೋಗುವಿರಾದರೆ, ಪಲಾಯನ ನಿಮಗೆಂದಿಗೂ ಲಾಭದಾಯಕವಾಗುವುದಿಲ್ಲ. ಪತ್ನಿಯರೇ! ನಿಮ್ಮಲ್ಲಿ ಯಾರು ಪ್ರವಾದಿಯ ಪತ್ನಿಯರಾಗಿದ್ದು, ನಿರ್ಲಜ್ಜರಾಗಿ ವರ್ತಿಸುವಿರೋ, ಅವರಿಗೆ ಪ್ರತ್ಯಕ್ಷವಾಗಿ ದ್ವಿಗುಣವಾದ ಶಿಕ್ಷೆ ಕೊಡಲ್ಪಡುವುದು ಮತ್ತು ಇದು ಅಲ್ಲಾಹನಿಗೆ ಬಹಳ ಸುಲಭವಾಗಿದೆ. (ಮಂ–೫, ಸಿ–೨೧, ಸೂ–೩೩, ಆ–೧೬, ೩೦)*

**ಸಮೀಕ್ಷಕ :–** ಮುಹಮ್ಮದ್ ಸಾಹೇಬರು ಇದನ್ನು ಯುದ್ಧದಲ್ಲಿ ಯಾವನೂ ಓಡಿಹೋಗದಿರಲಿ; ನಮಗೆ ವಿಜಯವಾಗಲಿ; ಸಾವಿನಿಂದಲೂ ಹೆದರದಿರಲಿ; ಐಶ್ವರ್ಯ ಹೆಚ್ಚಲಿ; ಮತವನ್ನು ಹೆಚ್ಚು ಪ್ರಸರಿತವಾಗಿ ಮಾಡಿಕೊಳ್ಳಲಿ–ಎಂಬ ಅಭಿಪ್ರಾಯದಿಂದ ಬರೆದಿರಬಹುದು; ಬರೆಯಿಸಿರಬಹುದು. ಮತ್ತು ಪತ್ನಿಯು ಲಜ್ಜಾರಹಿತೆಯಾಗಿ ಬಾರದಿದ್ದರೆ, ಪೈಗಂಬರ್ ಸಾಹೇಬರು ನಿರ್ಲಜ್ಜರಾಗಿ ಬರಬೇಕೇ? ಪತ್ನಿಯರಿಗೆ ಶಿಕ್ಷೆಯಾಗಬೇಕು; ಮತ್ತು ಪೈಗಂಬರ್ ಸಾಹೇಬರಿಗೆ ಶಿಕ್ಷೆಯಾಗಬಾರದು! ಇದಾವ ಮನೆಯ ನ್ಯಾಯವಾಗಿದೆ? (೧೨೬)

*ಮತ್ತು ನಿಮ್ಮ ಮನೆಯೊಳಗೆ ದೃಢವಾಗಿ ಇದ್ದುಬಿಡಿರಿ. ಅಲ್ಲಾಹನ ಮತ್ತ ರಸೂಲನ ಆಜ್ಞೆಯನ್ನು ಪಾಲಿಸಿರಿ. ಇದರ ಹೊರತು ಮತ್ತೇನೂ ಇಲ್ಲ. ಸರಿ; ಜೈದನು ಅವಳೊಂದಿಗೆ ತನ್ನ ವ್ಯವಹಾರನ್ನು ಮಾಡಿ ಮುಗಿಸಿದಾಗ, ನಾವು ದತ್ತು ಪುತ್ರರ ಪತ್ನಿಯರ ಬಗೆಗೆ ನಿಜವಾದ ನಂಬಿಕೆಯನ್ನುಳ್ಳವರಿಗೆ ಯಾವುದೇ ಕಷ್ಟವೂ ಆಗದಿರಲಿ–ಎಂದು, ಅವಳನ್ನು ನಿನ್ನೊಡನೆ ವಿವಾಹಿತಳಾಗಿ ಮಾಡಿದೆವು. ಮತ್ತು ಖುದಾನ ಆಜ್ಞೆ ಮಾಡಲ್ಪಟ್ಟಿದೆ.[೫೮] ಆ ವಸ್ತುವಿನ ವಿಷಯದಲ್ಲಿ ನಬಿಗೆ ಯಾವುದೇ ಅಡ್ಡಿಯೂ ಇಲ್ಲ. ಮುಹಮ್ಮದನು ಯಾವನೇ ಪುರುಷನ ತಂದೆಯೂ ಅಲ್ಲ. ಯಾವುದೇ ವರದಕ್ಷಿಣೆಯ[೫೯] ಇಲ್ಲದೆ, ಯಾವ ನಂಬಿಕೆಯನ್ನುಳ್ಳ ಸ್ತ್ರೀಯು ತನ್ನ ಪ್ರಾಣವನ್ನು ನಬಿಗಾಗಿ ಕೊಡುವಳೋ, ಅವಳನ್ನು*

೫೮. ಈ ಮೊದಲು ಅರೇಬಿಯಾದಲ್ಲಿ ತನ್ನ ಮಾನಸ ಪುತ್ರನಿಂದ ವಿವಾಹ ವಿಚ್ಛೇದನ ಪಡೆದ ಅವನ ಪತ್ನಿಯೊಡನೆ ವಿವಾಹ ಮಾಡಿಕೊಳ್ಳುವ ಪದ್ಧತಿ ಇರಲಿಲ್ಲ. ಯು.ಮೀ

೫೯. ಇದಕ್ಕೆ 'ಮೆಹರ್' ಎನ್ನುತ್ತಾರೆ. ವಿವಾಹದ ಸಮಯದಲ್ಲಿ ವರನು ವಧುವಿಗೆ ಕೊಡುವ ಹಣ ಅಥವಾ ವಸ್ತು.

*ಸ್ವೀಕರಿಣೀಯಳನ್ನಾಗಿ ಮಾಡಿದ್ದೇವೆ. ಅವರಲ್ಲಿ ಯಾರಿಗೆ ಬೇಕಾದರೂ ನೀನು ಅವಕಾಶ ಕೊಡಬಹುದು ಮತ್ತು ಯಾವಳನ್ನು ಬಯಸುತ್ತೀಯೋ, ಅವಳಿಗೆ ನಿನ್ನ ಕಡೆ ಬರಲು ಎಡೆಕೊಡು; ನಿನ್ನ ಮೇಲೆ ಪಾಪವಿಲ್ಲ. ಜನರೇ! ನಂಬಿಕೆಯುಳ್ಳವರಾಗಿರುವಿರಾದರೆ, ಪೈಗಂಬರನ ಮನೆಯೊಳಗೆ ಪ್ರವೇಶಿಸಬೇಡಿರಿ. (ಮಂ-೫, ಸಿ -೨೨, ಸೂ-೩೩, ಆ-೩೭, ೩೮, ೪೦, ೫೦, ೫೧, ೫೩)*

**ಸಮೀಕ್ಷಕ:–** ಸ್ತ್ರೀಯು ಮನೆಯಲ್ಲಿ ಕೈದಿಯ ಹಾಗೆ ಇರುವುದು ಮತ್ತು ಪುರುಷರು ಹೊರಗೆಯಿರುವುದು ಮಹಾ ಅನ್ಯಾಯದ ಮಾತಾಗಿದೆ. ಸ್ತ್ರೀಯರ ಚಿತ್ತವು ಶುದ್ಧವಾಯುವನ್ನೂ, ಶುದ್ಧ ಸ್ಥಾನದಲ್ಲಿ ತಿರುಗಾಡುವುದನ್ನೂ, ಸೃಷ್ಟಿಯ ಅನೇಕ ಪದಾರ್ಥಗಳನ್ನು ನೋಡಲೂ ಬಯಸದೇ ಇರಬಹುದೇ? ಇದೇ ಕಾರಣದಿಂದ ಮುಸಲ್ಮಾನರ ಹುಡುಗರು ವಿಶೇಷವಾಗಿ ಉಚ್ಛ ೃಂಖಲರೂ. ವಿಷಯಾಸಕ್ತರೂ ಆಗಿರುತ್ತಾರೆ. ಅಲ್ಲಾಹನ ಮತ್ತು ರಸೂಲನ ಆಜ್ಞೆಗಳು ಒಂದೂ ಮತ್ತು ಅವಿರುದ್ಧವೂ ಆಗಿರುತ್ತವೋ ಅಥವಾ ಬೇರೆ ಬೇರೆಯವೂ, ವಿರುದ್ಧವೂ ಆಗಿರುತ್ತವೋ? ಒಂದೇ ಆಗಿದ್ದರೆ, ಇಬ್ಬರ ಆಜ್ಞೆಯನ್ನೂ ಪಾಲಿಸಿರಿ–ಎಂದು ಹೇಳುವುದು ವ್ಯರ್ಥವಾಗಿರುತ್ತದೆ. ಮತ್ತು ಬೇರೆ ಬೇರೆಯೂ, ವಿರುದ್ಧವೂ ಆಗಿರುವುದಾದರೆ, ಒಂದು ಸತ್ಯ ಮತ್ತು ಇನ್ನೊಂದು ಸುಳ್ಳು; ಒಬ್ಬನು ಖುದಾ ಮತ್ತೊಬ್ಬನು ಸೈತಾನ್ ಆಗಿ ಹೋಗುವನು. ಮತ್ತು ಭಾಗೀದಾರನೂ ಕೂಡ ಇದ್ದಾನೆ ಎಂಬುದು ಸಿದ್ಧವಾಗುವುದು. ಧನ್ಯವಾದ ಕುರಾನಿನ ಖುದಾನಿಗೆ, ಪೈಗಂಬರನಿಗೆ ಹಾಗೂ ಕುರಾನಿಗೆ! ಬೇರೆಯವರ ಸ್ವಾರ್ಥವನ್ನು ಹಾಳುಮಾಡಿ, ತನ್ನ ಸ್ವಾರ್ಥವನ್ನು ಸಾಧಿಸಲು ಇಚ್ಛೆಪಡುವವನು ಮಾತ್ರ ಇಂತಹ ಲೀಲೆಯನ್ನು ಅವಶ್ಯವಾಗಿ ರಚಿಸುತ್ತಾನೆ. ಇದರಿಂದ ಮುಹಮ್ಮದ್ ಸಾಹೇಬರು ಮಹಾ ವಿಷಯಾಸಕ್ತರಾಗಿದ್ದರು–ಎನ್ನುವುದೂ ಕೂಡ ಸಿದ್ಧವಾಯಿತು. ಹಾಗೆ ಅಲ್ಲವಾಗಿದ್ದರೆ, ಯಾವಳು ಪುತ್ರವಧುವಾಗಿದ್ದಳೋ, ಆ ದತ್ತು–ಪುತ್ರನ ಪತ್ನಿಯನ್ನು ತನ್ನ ಪತ್ನಿಯನ್ನಾಗಿ ಏಕೆ ಮಾಡಿಕೊಳ್ಳುತ್ತಿದ್ದರು? ಮತ್ತು ಇಂತಹ ವ್ಯವಹಾರಗಳನ್ನು ಮಾಡುವವನ ಖುದಾನು ಕೂಡ ಪಕ್ಷಪಾತಿಯಾದನು ಮತ್ತು ಅನ್ಯಾಯವನ್ನು ನ್ಯಾಯವೆಂದು ತೀರ್ಪುಕೊಟ್ಟನು. ಮಾನವರಲ್ಲಿ ಯಾವನು ಕಾಡುಮನುಷ್ಯನಾಗಿರುತ್ತಾನೋ, ಅವನು ಕೂಡ ಮಗನ ಪತ್ನಿಯ ಮೇಲೆ ಕೈಹಾಕುವುದಿಲ್ಲ. ಮತ್ತು ನಬೀಗೆ[೬೦] ವಿಷಯಾಸಕ್ತಿಯ ಲೀಲೆ ಮಾಡುವಲ್ಲಿ ಯಾವದೇ ಅಡ್ಡಿಯೂ ಇರಬಾರದೆನ್ನುವುದು ಎಷ್ಟು ದೊಡ್ಡ ಅನ್ಯಾಯದ ವಿಷಯವಾಗಿದೆ! ಈ ನಬೀ ಯಾವನ ತಂದೆಯೂ ಆಗಿರದಿದ್ದರೆ, ಜೈದನು ಯಾರ ಮಗನಾಗಿದ್ದನು? ಮತ್ತು (ಹಾಗೆ) ಬರೆದರೇಕೆ? ಮಗನ ಹೆಂಡತಿಯನ್ನೂ ಕೂಡ ಮನೆತುಂಬಿಸಿಕೊಳ್ಳಲು ಪೈಗಂಬರ್ ಮುಹಮ್ಮದ್ ಸಾಹೇಬರು ಹೇಸದೇ ಹೋದ ಸ್ವಾರ್ಥದ ಮಾತಾಗಿದೆ ಇದು. ಇನ್ನು ಬೇರೆಯವರಿಂದ ಹೇಗೆ ತಾನೇ ದೂರ ಉಳಿದಿದ್ದಾರು? ಇಂತಹ ಚಾತುರ್ಯದಿಂದಲೂ ಕೂಡ, ದುರ್ವ್ಯವಹಾದಿಂದ ನಿಂದೆ ತಟ್ಟುವುದು ಎಂದಿಗೂ ತಪ್ಪದು. ಬೇರೆಯಾವಳಾದರೂ ಪರನಾರಿಯೂ ಕೂಡ ನಬಿಗೆ ಪ್ರಸನ್ನಳಾಗಿ 'ನಿಕಾಹ್'[೬೧] ಮಾಡಿಕೊಳ್ಳಲಿಚ್ಛಿಸಿದರೆ, ಅವಳೂ ಸ್ವೀಕರಣೀಯಳೇ? ನಬೀ ಮಾತ್ರ ಯಾವಳನ್ನು ಬೇಕಾದರೂ ತ್ಯಜಿಸಬಹುದು. ಮತ್ತು ಪೈಗಂಬರರ ಹೆಂಡಿರು ಪೈಗಂಬರರು ಅಪರಾಧಿಗಳೇ ಆಗಿದ್ದರೂ, ಎಂದಿಗೂ ಅವರನ್ನು ಬಿಡಲಾರರೆನ್ನುವುದು ಮಹಾನ್ ಅಧರ್ಮದ ಸಂಗತಿಯಾಗಿದೆ. ಹೇಗೆ ಪೈಗಂಬರರ ಮನೆಗಳಿಗೆ ಬೇರೆ ಯಾರೂ ಕೂಡ ವ್ಯಭಿಚಾರ ಮಾಡುವ ಉದ್ದೇಶ್ಯದಿಂದ ಪ್ರವೇಶಿಸಬಾರದೋ ಹಾಗೆಯೇ ಪೈಗಂಬರ್ ಸಾಹೇಬರೂ ಕೂಡ ಯಾರ ಮನೆಗೂ ಪ್ರವೇಶಿಸಬಾರದು. ನಬೀ ಮಾತ್ರ ಯಾರದೇ ಮನೆಗೆ ಬೇಕಾದರೂ ನಿಃಶಂಕರಾಗಿ ಪ್ರವೇಶಿಸಬಹುದು ಮತ್ತು ಮಾನ್ಯರೂ ಆಗಿರಬಹುದು! ಭಲೆ! ಈ ಕುರಾನನ್ನು ಈಶ್ವರಕೃತವೆಂದೂ, ಮುಹಮ್ಮದ್ ಸಾಹೇಬರನ್ನು ಪೈಗಂಬರರೆಂದೂ ಮತ್ತು ಈ ಕುರಾನಿನಲ್ಲಿ ಹೇಳಲ್ಪಟ್ಟಿರುವ ಈಶ್ವರನನ್ನು ಪರಮೇಶ್ವರನೆಂದೂ ಒಪ್ಪಿಕೊಳ್ಳಬಲ್ಲ 'ಹೃದಯಾಂಧ'ನಾದರೂ ಯಾವನಿದ್ದಾನು? ಇಂತಹ ಯುಕ್ತಿಶೂನ್ಯವೂ, ಧರ್ಮವಿರುದ್ಧವೂ ಆದ ಮಾತುಗಳಿಂದ ಯುಕ್ತವಾದ ಈ ಮತವನ್ನು ಅರಬ್ ದೇಶನಿವಾಸಿಗಳೇ ಮೊದಲಾದ ಮಾನವರು ಒಪ್ಪಿಕೊಂಡರೆನ್ನುವುದು ಮಹದಾಶ್ಚರ್ಯದ ಮಾತಾಗಿದೆ. (೧೨೭)

*ರಸೂಲನಿಗೆ[೬೨] ದುಃಖತವನ್ನುಂಟುಮಾಡುವುದು, ಅವನ ನಂತರ ಅವನ ಪತ್ನಿಯರನ್ನು ಎಂದಿಗಾದರೂ ಮದುವೆ ಯಾಗುವುದು ಯೋಗ್ಯವಲ್ಲ. ಖುದಾನ ಬಳಿ ಅದು ಮಹಾ ಪಾಪವೆನ್ನುವುದು ನಿಶ್ಚಯವಾಗಿದೆ. ನಿಶ್ಚಯವಾಗಿಯೂ ಯಾರು ಅಲ್ಲಾಹನಿಗೆ ಮತ್ತು ಅವನ ರಸೂಲನಿಗೆ ದುಃಖವನ್ನುಂಟುಮಾಡುತ್ತಾರೋ, ಅವರಿಗೆ ಅಲ್ಲಾಹನು ಶಾಪವನ್ನು*

---

೬೦. ಪೈಗಂಬರ್.

೬೧. ವಿವಾಹ

೬೨. ಪೈಗಂಬರ್, ನಬೀ, ರಸೂಲ್ ಇವೆಲ್ಲಾ ಸಂದೇಶವಾಹಕ ಅರ್ಥದಲ್ಲಿ ಪರ್ಯಾಯ ಶಬ್ದಗಳು.

*ಕೊಟ್ಟಿದ್ದಾನೆ. ಮತ್ತು ಯಾರು ಮುಸಲ್ಮಾನರಿಗೂ ಮತ್ತು ಮುಸಲ್ಮಾನ ಸ್ತ್ರೀಯರಿಗೂ, ಅವರು ತಪ್ಪೇನನ್ನೂ ಮಾಡಿದಿದ್ದರೂ ದುಃಖವನ್ನು ಕೊಡುತ್ತಾರೋ, ಅವರು ನಿಃಸಂದೇಹವಾಗಿ, ನಿಶ್ಚಯವಾಗಿಯೂ ನಿಂದೆಯನ್ನು, ಎಂದರೆ ಸುಳ್ಳನ್ನು ಮತ್ತು ಪ್ರತ್ಯಕ್ಷ ಪಾಪವನ್ನು ಹೊತ್ತು ಕೊಂಡಿದ್ದಾರೆ, ಅವರು ಅಭಿಶಪ್ತರಾಗಿದ್ದಾರೆ. ಎಲ್ಲಿ ಕಂಡುಬರುವರೋ ಅಲ್ಲಿಯೇ ಹಿಡಿಯಲ್ಪಡಲಿ; ಕೊಲ್ಲಲ್ಪಡಲಿ. ಒಳಿತಿಗಾಗಿ ಸಂಹಾರವಾಗಲಿ. ಓ ರಬ್! (ಸ್ವಾಮೀ!) ನಮ್ಮದರ ದ್ವಿಗುಣ ಶಿಕ್ಷೆಯನ್ನು ಕೊಡು. ಮತ್ತು ಮಹಾಶಾಪದಿಂದ ಶಪಿಸು. (ಮಂ-೫, ಸಿ-೨೨, ಸೂ-೩೩, ಆ-೫೩, ೫೭, ೫೮, ೬೧, ೬೮)*

**ಸಮೀಕ್ಷಕ:-** ಓಹೋ! ಖುದಾ ತನ್ನ ಖುದಾತನವನ್ನು ಧರ್ಮದೊಂದಿಗೆ ಹೇಗೆ ಪ್ರಕಟಪಡಿಸುತ್ತಿದ್ದಾನೆ! ರಸೂಲನಿಗೆ ದುಃಖಕೊಡುವುದನ್ನು ನಿಷೇಧಿಸುವುದೇನೋ ಸರಿಯಾಗಿದೆ. ಆದರೆ, ಅನ್ಯರಿಗೆ ದುಃಖಕೊಡುವುದರಲ್ಲಿ ರಸೂಲನ್ನು ತಡೆಗಟ್ಟುವುದು ಯೋಗ್ಯವಾಗಿತ್ತು. ಅದನ್ನೇತಕ್ಕೆ ತಡೆಯಲಿಲ್ಲ? ಯಾವನಿಗಾದರೂ ದುಃಖವನ್ನು ಕೊಡುವುದರಿಂದ ಅಲ್ಲಾಹ ಕೂಡ ದುಃಖಿತನಾಗಿ ಹೋಗುತ್ತಾನೇಯೇ? ಹೀಗಿರುವುದಾದರೆ, ಅವನು ಈಶ್ವರನೇ ಆಗಲಾರನು. ಅಲ್ಲಾಹನಿಗೆ ಮತ್ತು ರಸೂಲನಿಗೆ ದುಃಖಕೊಡುವುದರ ನಿಷೇಧವನ್ನು ಮಾಡಿರುವುದರಿದ, ಅಲ್ಲಾಹನು ಮತ್ತು ರಸೂಲನು ಯಾವನಿಗೆ ಬೇಕಾದರೂ ದುಃಖ ಕೊಡಬಹುದು-ಎನ್ನವುದು ಸಿದ್ಧವಾಗುವುದಿಲ್ಲವೇನು? ಅನ್ಯರೆಲ್ಲರಿಗೂ ದುಃಖವನ್ನು ಕೊಡಬೇಕೇ? ಮುಸಲ್ಮಾನರಿಗೂ, ಮುಸಲ್ಮಾನ ಸ್ತ್ರೀಯರಿಗೂ ದುಃಖವನ್ನೀಯುವುದು ಕೆಟ್ಟದಾಗಿರುವಂತೆ ಮುಸ್ಲಿಮರಿಂದ ಬೇರೆಯಾದ ಮಾನವರಿಗೆ ದುಃಖವನ್ನುಂಟುಮಾಡುವುದೂ ಕೂಡ ಅವಶ್ಯವಾಗಿ ಕೆಟ್ಟದಾಗಿದೆ. ಹೀಗೆ ಒಪ್ಪುವುದಿಲ್ಲವಾದರೆ, ಅವನ ಈ ಚರ್ಯೆಯೂ ಪಕ್ಷಪಾತಯುಕ್ತವೇ ಆಗಿರುತ್ತದೆ. ಭೇಷ್! ಕೂಟ-ಕಲಹವನ್ನೆಬ್ಬಿಸುವ ಖುದಾ ಮತ್ತು ನಬೀಗಳಷ್ಟು ನಿರ್ದಯರಾಗಿರುವವರು ಜಗತ್ತಿನಲ್ಲಿ ಬಹಳ ಕಡಿಮೆಯಾಗಿರಬಹುದು. ಬೇರೆಯ ಜನರು 'ಎಲ್ಲಿ ಸಿಕ್ಕುವರೋ ಅಲ್ಲಿ ಕೊಲ್ಲಲ್ಪಡಲಿ; ಹಿಡಿಯಲ್ಪಡಲಿ'- ಎಂದು ಬರೆದಿರುವಂತೆಯೇ ಮುಸಲ್ಮಾನರ ಬಗೆಗೆ ಯಾರಾದರೂ ಆಜ್ಞೆಯನ್ನಿತ್ತು ಪ್ರಕಟಿಸಿದರೆ, ಮುಸಲ್ಮಾನರಿಗೆ ಇಂತಹ ಆಜ್ಞೆ ಕೆಟ್ಟದಾಗಿ ತೋರುವುದೋ ಅಥವಾ ಇಲ್ಲವೋ? ಭಾಪು! ಈ ಪೈಗಂಬರ ಮೊದಲಾದವರು ಎಂತಹ ಹಿಂಸಕರಾಗಿದ್ದಾರೆ? ಪರಮೇಶ್ವರನನ್ನು ಪ್ರಾರ್ಥಿಸಿ, ಅನ್ಯರಿಗೆ ತಮಗಿಂತ ಎರಡರಷ್ಟು ಶಿಕ್ಷೆಯನ್ನು ವಿಧಿಸಬೇಕೆಂದು ಕೋರಬೇಕೆಂದು ಬರೆದಿದ್ದಾರೆ. ಇದೂ ಕೂಡ ಪಕ್ಷಪಾತದ, ಸ್ವಾರ್ಥಸಾಧನೆಯ ಮತ್ತು ಮಹಾನ್ ಅಧರ್ಮದ ವಿಷಯವೇ ಆಗಿದೆ. ಇದರಿಂದಾಗಿ ಈಗಿನವರೆಗೂ ಕೂಡ ಮುಸಲ್ಮಾನರಲ್ಲಿ ಬಹು ಮಂದಿ ಶಠರು, ಇದೇ ಬಗೆಯ ಕಾರ್ಯಮಾಡಲು ಹೆದರುವುದಿಲ್ಲ. ಶಿಕ್ಷಣವಿಲ್ಲದಿದ್ದರೆ, ಮಾನವರು ಪಶುಗಳಿಗೆ ಸಮಾನರಾಗಿರುತ್ತಾರೆ-ಎನ್ನುವುದು ಸರಿಯಾಗಿದೆ.[೬೩] (೧೨೮)

*ಮತ್ತು ಗಾಳಿಯನ್ನು ಕಳುಹಿಸುವ ಪುರುಷನಾಗಿದ್ದಾನೆ ಅಲ್ಲಾಹನು. ಆಯಿತು; (ಆ ಗಾಳಿ) ಎಬ್ಬಿಸುತ್ತದೆ ಮೋಡಗಳನ್ನು. ನಾವು ಅದನ್ನು ಪ್ರಾಣರಹಿತ ನಗರದ ಕಡೆಗೆ ಓಡಿಸಿಬಿಡುತ್ತೇವೆ. ನಾವು ಅದರಿಂದ ಪೃಥಿವಿಯನ್ನು ಸಜೀವಗೊಳಿಸಿದೆವು, ಅದರ ಸಾವಿನ ನಂತರ. ಹೀಗೆಯೇ, ಗೋರಿಗಳಿಂದ ಹೊರಡಿಸಬೇಕಾಗಿದೆ. ತನ್ನ ದಯೆಯಿಂದ ಸದಾಕಾಲಕ್ಕೂ ಇರುವಂತಹ ಮನೆಯನ್ನು ನಿರ್ಮಿಸಿದವನೇ ಅಲ್ಲಾಹನಾಗಿದ್ದಾನೆ. ಅದರ ಮಧ್ಯೆ ನಮಗೆ ಪರಿಶ್ರಮವಿಲ್ಲ; ಮತ್ತು ಅದರಲ್ಲಿ ಆಯಾಸವೂ ಆಗುವುದಿಲ್ಲ. (ಮಂ-೫, ಸೀ೨೨, ಸೂ-೩೫, ಆ-೯, ೩೫.)*

**ಸಮೀಕ್ಷಕ:-** ಓಹೋ! ಎಂತಹ ಫಿಲಾಸಫೀ (ತತ್ತ್ವಶಾಸ್ತ್ರ) ಖುದಾನದು! ಕಳುಹುತ್ತಾನೆ ವಾಯುವನ್ನು; ಅದು ಮೋಡಗಳನ್ನು ಎಬ್ಬಿಸುತ್ತಾ ತಿರುಗಾಡುತ್ತದೆ. ಮತ್ತು ಖುದಾ ಅದರಿಂದ ಶವಗಳನ್ನು ಸಜೀವಗೊಳಿಸುತ್ತಾ ಅಲೆಯುತ್ತಾನೆ. ಈ ಮಾತು ಎಂದಿಗೂ ಈಶ್ವರನಿಗೆ ಸಂಬಂಧಪಟ್ಟುದು ಆಗಲಾರದು. ಏಕೆಂದರೆ, ಈಶ್ವರನ ಕಾರ್ಯ ನಿರಂತರವೂ ಏಕಪ್ರಕಾರವಾಗಿ ನಡೆಯುತ್ತಾ ಹೋಗುತ್ತದೆ. ಮನೆಗಳು ಇರುವವಾದರೆ, (ಯಾರೂ) ನಿರ್ಮಿಸದೆ ಆಗಲಾರವು. ಮತ್ತು ಯಾವುದು ನಿರ್ಮಿತವಾಗಿರುವುದೋ, ಅದು ಸದಾ ಇರಲಾರದು. ಶರೀರವನ್ನುಳ್ಳವನು ಪರಿಶ್ರಮವಿಲ್ಲದಿದ್ದರೆ, (ನಿಷ್ಕ್ರಿಯನಾಗಿ) ದುಃಖಿತನಾಗುತ್ತಾನೆ. ಮತ್ತು ಶರೀರಧಾರಿಯು ರೋಗಿಯಾಗದೆ ಎಂದಿಗೂ ಉಳಿಯಲಾರನು. ಒಬ್ಬಳು ನಾರಿಯೊಂದಿಗೆ ಸಮಾಗಮಮಾಡುವವನು ಕೂಡ ರೋಗಿಯಾಗದೆ ಇರಲಾನು-ಎಂದ ಮೇಲೆ, ಬಹುಮಂದಿ ನಾರಿಯರೊಂದಿಗೆ ವಿಷಯೋಪಭೋಗ ಮಾಡುವವನ ದುರವಸ್ಥೆ ಮತ್ತೆ ಇನ್ನೆಷ್ಟು ಆಗುತ್ತಿರಬಹುದು? ಆದುದರಿಂದ ಮುಸಲ್ಮಾನರ ಸ್ವರ್ಗದಲ್ಲಿನ ಇರುವಿಕೆಯೂ ಸದಾ ಸುಖದಾಯಕವಾಗಿರಲಾರದು. (೧೨೯)

---

೬೩. ಈ ಮಾತು ಮುಸಲ್ಮಾನರಿಗೆ ಸದಾ ಕಾಲಕ್ಕೂ ಅನ್ವಯಿಸುತ್ತದೆ.. ಏಕೆಂದರೆ, ಕೇವಲ ಕುರಾನಿನ ಅಧ್ಯಯನಮಾತ್ರವೇ ಶಿಕ್ಷಣವೆಂದು ಅವರು ಅಂಗೀಕರಿಸುತ್ತಾರೆ.

*ದೃಢವಾದ ಕುರಾನಿನ ಆಣೆಯಿದೆ. ನಿಜವಾಗಿಯೂ ನೀನು ಕಳುಹಿಸಲ್ಪಟ್ಟವರಲ್ಲಿ ಒಬ್ಬನಾಗಿರುತ್ತೀಯೆ ಸನ್ಮಾರ್ಗಕ್ಕಾಗಿ. ದಯಾಳುವಾದ ಮಹಾಶಕ್ತಿ ಪ್ರಭುವು ಇಳಿಸಿದ್ದಾನೆ. (ಮಂ೫, ಸಿ೨೨, ಸೂ- ೩೬, ಆ-೨, ೫).*

**ಸಮೀಕ್ಷಕ:-** ಈಗ ನೋಡಿರಿ! ಈ ಕುರಾನ್ ಖುದಾ ರಚಿಸಿದುದಾಗಿದ್ದರೆ, ಅವನು ಇದರ ಮೇಲೇತಕ್ಕೆ ಆಣೆಯಿಡುತ್ತಿದ್ದನು? ನಬೀ ಖುದಾನಿಂದ ಕಳುಹಲ್ಪಟ್ಟವನಾಗಿದ್ದರೆ, ತನ್ನ ಸಾಕು-ಮಗನ ಹೆಂಡತಿಯ ಮೇಲೇಕೆ ಮೋಹಿತನಾಗುತ್ತಿದ್ದನು? "ಕುರಾನನ್ನು ಅಂಗೀಕರಿಸುವವರು ನೇರವಾದ ಮಾರ್ಗದಲ್ಲಿದ್ದಾರೆ".- ಎನ್ನುವುದು ಕಥನಮಾತ್ರ. ಏಕೆಂದರೆ- ಎಲ್ಲಿ ಸತ್ಯದ ಅಂಗೀಕಾರ, ಸತ್ಯಭಾಷಣ, ಸತ್ಯಾಚರಣ, ಪಕ್ಷಪಾತರಹಿತವಾದ ನ್ಯಾಯ - ಧರ್ಮದ ಅನುಷ್ಠಾನ-ಮೊದಲಾದ ವಿಧಿಗಳೂ ಮತ್ತು ಅವುಗಳಿಗೆ ಪ್ರತಿಕೂಲವಾದುದರ ಪರಿತ್ಯಾಗದ ಶಿಕ್ಷಣವೂ ಲಭಿಸುತ್ತವೋ, ಅದೇ ನೇರವಾದ ಮಾರ್ಗವಾಗಿರುತ್ತದೆ. ಈ ವಿಧದ ವಿಧಿ-ನಿಷೇಧಗಳು ಕುರಾನಿನಲ್ಲಿಯೂ ಇಲ್ಲ; ಮುಸಲ್ಮಾನರಲ್ಲಿಯೂ ಇಲ್ಲ ಮತ್ತು ಇವರ ಖುದಾನಲ್ಲಿಯೂ ಇಲ್ಲ. ಮುಹಮ್ಮದ್ ಸಾಹೇಬರು ಎಲ್ಲರಿಗಿಂತಲೂ ಪ್ರಬಲರಾದ ಪೈಗಂಬರರಾಗಿದ್ದರೆ, ಎಲ್ಲರಿಗಿಂತ ಅಧಿಕ ವಿದ್ಯಾವಂತರೂ ಮತ್ತು ಶುಭಗುಣಯುಕ್ತರೂ ಆಗಿರಲಿಲ್ಲವೇತಕ್ಕೆ? ಆದುದರಿಂದ, ಕುಳ್ಳಕ್ಕ ತನ್ನ ಎಲಚೀ ಹಣ್ಣುಗಳನ್ನು (ಅವು ಹುಳಿಯೇ ಆಗಿದ್ದರೂ) ಎಂದಿಗೂ ಹುಳಿ-ಎಂದು ಹೇಳದೇ ಇರುವಂತೆಯೇ ಈ ಕಥನವೂ ಆಗಿದೆ. (೧೩೦)

*ಮತ್ತು ತುತ್ತೂರಿಯ ಸ್ವರ ಆ ನಡುವೆ ಮೊಳಗುವುದು. ಸರಿ; ಇದ್ದಕ್ಕಿದ್ದಂತೆಯೇ ಅವರು ತಮ್ಮ ತಮ್ಮದಾದ ಗೋರಿಗಳಿಂದ ಎದ್ದು, ತಮ್ಮ ಪ್ರಭುವಿನ ಕಡೆಗೆ ಓಡುವರು. ಅವರ ಪಾದಗಳು ಅವರು ಸಂಪಾದಿಸುತ್ತಿದ್ದ ವಸ್ತುವಿನೊಡನೆ ಸಾಕ್ಷ್ಯವನ್ನು ಕೊಡುವವು. ಯಾವುದಾದರೂ ವಸ್ತುವನ್ನು ಖುದಾ ನಿರ್ಮಿಸಲಪೇಕ್ಷಿಸುವಾಗ - "ಅವರುಗಳ ಸಲುವಾಗಿ ಆಗಿಹೋಗು".- ಎನ್ನುತ್ತಾನೆ. ತೀರಿತು. ಅದು ಆಗಿಹೋಗುತ್ತದೆ. (ಮಂ-೫, ಸಿ-೨೩, ಸೂ-೩೬, ಆ-೫೧,೬೫,೮೨)*

**ಸಮೀಕ್ಷಕ :-** ಈಗ ಆಲಿಸಿರಿ ತಲೆ-ಬಾಲಗಳಿಲ್ಲದ ಮಾತುಗಳನ್ನು. ಪಾದಗಳು ಎಂದಾದರೂ ಸಾಕ್ಷ್ಯಕೊಡಬಲ್ಲವೇ? ಖುದಾ ಅಲ್ಲದೆ, ಅವನಿಂದ ಆಜ್ಞಾಪಿತವಾದ ತತ್ತ್ವವಾವುದಿತ್ತು? ಆಲಿಸಿದುದು ಆವುದು? ಮತ್ತು ಆಗಿಹೋದುದು ಯಾವದು? (ಯಾವುದೂ) ಇರಲಿಲ್ಲವೆಂಬ ಪಕ್ಷದಲ್ಲಿ, ಈ ವಚನವೇ ಸುಳ್ಳು. ಮತ್ತು, 'ಇದ್ದಿತು'.- ಎಂಬ ಪಕ್ಷದಲ್ಲಿ "ಖುದಾನ ಹೊರತು ಯಾವುದೇ ವಸ್ತುವೂ ಇರಲಿಲ್ಲ. ಮತ್ತು ಖುದಾ ಎಲ್ಲವನ್ನೂ ಸೃಜಿಸಿದನು". - ಎಂಬ ಪ್ರತಿಜ್ಞಾವಚನ ಸುಳ್ಳಾಗಿಹೋಗುತ್ತದೆ. (೧೩೧)

*ಅದರ ನಂತರ ಶುದ್ಧವಾದ ಮದ್ಯದ ಪಾತ್ರೆ ಸುತ್ತಾಡಿಸಲ್ಪಡುವುದು. ಕುಡಿಯುವವರಿಗೆ ಸರ್ವದಾ ಹರ್ಷ ಕೊಡುವಂತಹುದು. ಅವರ ಸಮೀಪದಲ್ಲಿ, ಕಣ್ಣುಗಳನ್ನು ನೆಲದೆಡೆಗೆ ಬಾಗಿಸಿರುವ, ಸುಂದರವಾದ ಕಣ್ಣುಗಳನ್ನುಳ್ಳ ದೇವಕನ್ಯೆಯರು ಕುಳಿತಿರುವರು. ಬಚ್ಚಿಡಲ್ಪಟ್ಟ ಮೊಟ್ಟೆಗಳಂತಿರುವ ಕಣ್ಣುಗಳನ್ನುಳ್ಳವರು. ಆಯಿತು; ನಾವು ಸಾಯುವುದಿಲ್ಲವೇ? ಮತ್ತು ಲೂತನು ಅವಶ್ಯವಾಗಿ ಪೈಗಂಬರರಲ್ಲಿ ನಿಶ್ಚಯವಾಗಿ ಒಬ್ಬನಾಗಿದ್ದನು. ಯಾವಾಗ ನಾವು ಅವನಿಗೆ ಮತ್ತು ಅವನ ಜನರೆಲ್ಲರಿಗೆ ಮುಕ್ತಿಯಿತ್ತೆವೋ, ಆಗ..... ಆದರೆ, ವೃದ್ಧೆಯೊಬ್ಬಳು ಹಿಂದೆ ಉಳಿದವರಲ್ಲಿದ್ದಾಳೆ. ಮತ್ತು ಸಂಹರಿಸಿದೆವು ನಾವು ಬೇರೆಯವರನ್ನು. (ಮಂ-೬, ಸಿ-೨೩, ಸೂ-೩೭, ಆ-೪೫, ೪೬, ೪೮, ೪೯, ೫೮, ೧೩೩-೧೩೬).*

**ಸಮೀಕ್ಷಕ :-** ಏನು ಮಹಾಶಯರೇ! ಇಲ್ಲಿ ಏನೋ ಮುಸಲ್ಮಾನರುಗಳು ಮದ್ಯವನ್ನು ಕೆಟ್ಟದೆನ್ನುತ್ತಾರೆ. ಆದರೆ, ಅವರ ಸ್ವರ್ಗದಲ್ಲಿಯಾದರೋ (ಮದ್ಯದ ) ನದಿಗಳಿಗೆ ನದಿಗಳೇ ಹರಿಯುತ್ತವೆ. ಇಲ್ಲಿ ಏನೋ ಯಾವುದೋ ಬಗೆಯ ಮದ್ಯ ಕುಡಿಯುವುದನ್ನು ಬಿಡಿಸಿದರು; ಇಷ್ಟೇನೋ ಒಳ್ಳೆಯದೇ ಆಗಿದೆ. ಆದರೆ, ಇಲ್ಲಿಗೆ ಪ್ರತಿಯಾಗಿ ಅಲ್ಲಿ, ಅವರ ಸ್ವರ್ಗದಲ್ಲಿ ದೊಡ್ಡ ಕೇಡಿದೆ. ಸ್ತ್ರೀಯರ ಕಾರಣದಿಂದ, ಅಲ್ಲಿ ಯಾವನ ಚಿತ್ತವೂ ಸ್ಥಿರವಾಗಿರಲಾರದೇನೋ? ಮತ್ತು ದೊಡ್ಡ-ದೊಡ್ಡ ರೋಗಗಳೂ ಉಂಟಾಗುತ್ತಿರಬಹುದು! ಶರೀರಯುಕ್ತರಾಗಿರುವರಾದರೆ ಅವಶ್ಯವಾಗಿ ಸಾಯುವರು. ಮತ್ತು ಶರೀರಯುಕ್ತರಾಗಿರುವುದಿಲ್ಲವಾದರೆ, ಭೋಗವಿಲಾಸಗಳನ್ನೇ ಅನುಭವಿಸಲಾರರು. ಮತ್ತೆ, ಅವರ ಸ್ವರ್ಗಕ್ಕೆ ಹೋಗುವಿಕೆ ವ್ಯರ್ಥವಾಗಿದೆ. ಲೂತನನ್ನು ಪೈಗಂಬರನೆಂದು ಅಂಗೀಕರಿಸುತ್ತೀರಿಯಾದರೆ, ಅವನೊಂದಿಗೆ ಅವನ ಹೆಣ್ಣು ಮಕ್ಕಳು ಸಮಾಗಮವನ್ನು ಮಾಡಿ ಇಬ್ಬರು ಪುತ್ರರನ್ನು ಉತ್ಪನ್ನಮಾಡಿದರು-ಎಂದು ಬೈಬಲಿನಲ್ಲಿ ಬರೆದಿರುವ ಮಾತನ್ನೂ ಕೂಡ ಒಪ್ಪಿಕೊಳ್ಳುತ್ತೀರೋ ಅಥವಾ ಇಲ್ಲವೋ? ಒಪ್ಪಿಕೊಳ್ಳುವಿರಾದರೆ, ಇಂತಹವನನ್ನು ಪೈಗಂಬರನೆಂದು ಅಂಗೀಕರಿಸುವುದು ವ್ಯರ್ಥವಾಗಿರುತ್ತದೆ. ಇಂತಹವರಿಗೂ ಮತ್ತು ಇಂತಹವರ ಸಂಗಾತಿಗಳಿಗೂ ಖುದಾ ಮುಕ್ತಿಯನ್ನು ಕೊಡುತ್ತಾನೆಯಾದರೆ, ಆ ಖುದಾ ಕೂಡ ಅಂತಹವನೇ ಆಗಿರುತ್ತಾನೆ.

ಏಕಂದರೆ, ಮುದುಕಿಯ ಕತೆಯನ್ನು ಹೇಳುವವನೂ ಮತ್ತು ಪಕ್ಷಪಾತದಿಂದ ಬೇರೆಯವರನ್ನು ಕೊಲ್ಲುವವನೂ ಎಂದಿಗೂ ಖುದಾ ಆಗಲಾರನು. ಇಂತಹ ಖುದಾ ಮುಸಲ್ಮಾನರ ಮನೆಗಳಲ್ಲಿ ಮಾತ್ರ ಇರಬಲ್ಲನು; ಬೇರೆಡೆಗೆ ಸಲ್ಲನು. (೧೩೨)

*ಸ್ವರ್ಗಗಳಿವೆ ಸದಾ ಇರುವಂತಹವು; ಅವುಗಳ ಬಾಗಿಲುಗಳು ತೆರೆಯಲ್ಪಟ್ಟಿವೆ ಅವರ ಸಲುವಾಗಿ. ಅವುಗಳ ನಡುವೆ ಒರಗು ದಿಂಬುಗಳು ಮಾಡಲ್ಪಟ್ಟಿವೆ. ಇದರ ನಡುವೆ ತರಿಸಿಕೊಳ್ಳುವರು ಒಣ ಹಣ್ಣುಗಳನ್ನು ಮತ್ತು ಕುಡಿಯುವ ವಸ್ತುವನ್ನು. ಮತ್ತು ಅವರ ಸಮೀಪದಲ್ಲಿ ದೃಷ್ಟಿಯನ್ನು ಕೆಳಕ್ಕೆ ಇಟ್ಟುಕೊಂಡಿರುವ, ಸಮವಯಸ್ಕರಾದ ಕನ್ನಿಕೆಯರಿರುವರು. ಆಯಿತು; ದೇವತೆಗಳೆಲ್ಲರೂ ಪ್ರಣಾಮವನ್ನು ಮಾಡಿದರು. ಆದರೆ, ಸೈತಾನನು ಒಪ್ಪಿಲಿಲ್ಲ; ದುರಭಿಮಾನಪಟ್ಟನು ಮತ್ತು ಕಾಫಿರರ ಗುಂಪಿನವನಾಗಿದ್ದನು. "ಓ ಸೈತಾನ್! ಯಾವುದನ್ನು ನಾನು ನನ್ನ ಎರಡು ಕೈಗಳಿಂದಲೂ ಮಾಡಿದ್ದೆನೋ, ಆ ವಸ್ತುವಿಗೆ ನಮಿಸಬೇಕೆಂದು ಆಜ್ಞಾಪಿಸಿದಾಗ, ನಿನ್ನನ್ನು ತಡೆದ ವಸ್ತುವಾವುದು? ನೀನು ಗರ್ವಪಟ್ಟೆಯಾ? ಅಥವಾ ದೊಡ್ಡ ಅಧಿಕಾರಯುಕ್ತರ ಕಡೆಯವನಾಗಿದ್ದೆಯೋ? "- ಎಂದಾಗ ಅವನು - "ನಾನು ಆ ವಸ್ತುವಿಗಿಂತ ಉತ್ತಮನಾಗಿದ್ದೇನೆ. ನೀನು ನನ್ನನ್ನು ಅಗ್ನಿಯಿಂದ ಸೃಜಿಸಿದೆ; ಅವನನ್ನು ಮಣ್ಣಿನಿಂದ". ಎಂದನು. "ಸಾಕು; ನಡೆ ಈ ಆಕಾಶಗಳಿಂದ; ನಿಜವಾಗಿಯೂ ನೀನು ಹೊರಡಿಸಲ್ಪಟ್ಟಿದ್ದೀಯೆ. ನಿಶ್ಚಯವಾಗಿ ನಿನ್ನ ಮೇಲೆ ನನ್ನ ಧಿಕ್ಕಾರವಿದೆ ನ್ಯಾಯತೀರ್ಮಾನದ ದಿನದವರೆಗೆ".-ಎಂದೆವು. ಅವನು, "ಓ ನನ್ನ ಸ್ವಾಮಿ! ಶವಗಳು ಎಬ್ಬಿಸಲ್ಪಡುವ ದಿನದವರೆಗೆ ಅವಕಾಶಕೊಡು".- ಎಂದನು. ಆಯಿತು; ನಿಜವಾಗಿ ನೀನು ಅವಕಾಶ ಕೊಡಲ್ಪಟ್ಟವರಲ್ಲಿ ಇದ್ದೀಯೆ, ಆ ದಿನದ ಗೊತ್ತಾದ ಸಮಯದವರೆಗೆ".-ಎಂದೆವು. "ನಿನ್ನ ಪ್ರತಿಷ್ಠೆಯ ಆಣೆ. ಅವಶ್ಯವಾಗಿ ನಾನು ಅವರನ್ನು ಒಟ್ಟಾಗಿ ಪಥಭ್ರಷ್ಟರನ್ನಾಗಿ ಮಾಡುವೆನು". ಎಂದನು. (ಮಂ-೬, ಸಿ-೨೩, ಸೂ-೩೮, ಆ-೫೦, ೫೨, ೭೩-೮೨).*

**ಸಮೀಕ್ಷಕ :-** ಅಲ್ಲಿ, ಕುರಾನಿನಲ್ಲಿ ಬರೆದಿರುವಂತೆ ತೋಟ-ತುಡಿಕೆ, ನಾಲೆ-ಮನೆ ಮೊದಲಾದುವು ಇರುವುದಾದರೆ, ಅವು ಸದಾ ಇರಲಿಲ್ಲ; ಸದಾ ಇರಲೂ ಶಕ್ಯವಲ್ಲ. ಏಕೆಂದರೆ, ಯಾವ ಪದಾರ್ಥ ಸಂಯೋಗದಿಂದ ಆಗುತ್ತದೋ, ಅದು ಸಂಯೋಗಕ್ಕೆ ಮೊದಲು ಇರಲಿಲ್ಲ. ಅವಶ್ಯವಾಗಿ, ಆಗಲಿರುವ ವಿಯೋಗದ ಅಂತದಲ್ಲಿ ಇರುವುದೂ ಇಲ್ಲ. ಸ್ವರ್ಗವೇ ಇರುವುದಿಲ್ಲವಾದರೆ, ಅದರಲ್ಲಿರುವವರು ಸದಾ ಹೇಗೆ ತಾನೇ ಇರಬಲ್ಲರು? ಏಕೆಂದರೆ, ಹಾಸಿಗೆ, ದಿಂಬುಗಳು, ಒಣ ಹಣ್ಣುಗಳು ಮತ್ತು ಕುಡಿಯುವ ಪದಾರ್ಥಗಳು ಅಲ್ಲಿ ಸಿಕ್ಕುವುವು ಎಂದು ಬರೆದಿದೆ. ಇದರಿಂದ, "ಯಾವ ಕಾಲದಲ್ಲಿ ಮುಸಲ್ಮಾನರ ಮತ ಪ್ರಚಲಿತವಾಯಿತೋ, ಆ ಕಾಲದಲ್ಲಿ ಅರಬ್ ದೇಶ ವಿಶೇಷ ಧನಾಢ್ಯವಾಗಿರಲಿಲ್ಲ. ಆದುದರಿಂದ, ಮುಹಮ್ಮದ್ ಸಾಹೇಬರು ದಿಂಬು-ಮೊದಲಾದುವುಗಳ ಕಥೆಯನ್ನು ಹೇಳಿ, ಬಡವರನ್ನು ತಮ್ಮ ಮತದಲ್ಲಿ ಸಿಕ್ಕಿಸಿಕೊಂಡರು"-ಎಂದು ಸಿದ್ಧವಾಗುತ್ತದೆ. ಮತ್ತು ಎಲ್ಲಿ ಸ್ತ್ರೀಯರಿರುತ್ತಾರೋ, ಅಲ್ಲಿ ನಿರಂತರವಾದ ಸುಖವೆಲ್ಲಿ?[೬೩ಅ] ಆ ಸ್ತ್ರೀಯರು ಅಲ್ಲಿಗೆ ಎಲ್ಲಿಂದ ಬಂದಿದ್ದಾರೆ? ಅಥವಾ ಸ್ವರ್ಗದ ನಿವಾಸಿನಿಯರೇನು? ಬಂದಿರುವರಾದರೆ, ಹೋಗುವರು. ಮತ್ತು ಅಲ್ಲಿನ ನಿವಾಸಿನಿಯರೇ ಆಗಿದ್ದರೆ, ಕಯಾಮತ್ತಿಗೆ ಮುನ್ನ ಏನು ಮಾಡುತ್ತಿದ್ದರು? ನಿಷ್ಕರ್ಮರಾಗಿ ತಮ್ಮ ಆಯಸ್ಸನ್ನು ತಳ್ಳುತ್ತಿದ್ದರೇನು? ಯಾವನ ಆಜ್ಞೆಯನ್ನು ಬೇರೆ ಎಲ್ಲಾ ದೇವತಗಳೂ ಒಪ್ಪಿಕೊಂಡರೋ, ಮತ್ತು, ಆದಮ್ ಸಾಹೇಬರಿಗೆ ಪ್ರಣಾಮಮಾಡಿದರೋ, ಅವನ ಆಜ್ಞೆಯನ್ನು ಸೈತಾನನು ಒಪ್ಪಲಿಲ್ಲ. ಈಗ ನೋಡಿರಿ ಖುದಾನ ತೇಜಸ್ಸನ್ನು! ಖುದಾ ಸೈತಾನನಿಗೆ - "ನಾನು ಅವನನ್ನು ನನ್ನ ಎರಡು ಕೈಗಳಿಂದಲೂ ಸೃಜಿಸಿದೆನು. ನೀನು ಅಭಿಮಾನಪಡಬೇಡ".-ಎಂದು ಹೇಳಿದನು. ಇದರಿಂದ, ಕುರಾನಿನ ಖುದಾ ಎರಡು ಕೈಗಳ ಮನುಷ್ಯನಾಗಿದ್ದನು-ಎಂದು

---

೬೩ಅ. ಎಂದರೆ, ಸ್ತ್ರೀಯರ ಕಡೆಯಿಂದ ಮೊದಲು ಸುಖವೂ; ನಂತರ ಅವರ ಅನವರತ ಬೇಡಿಕೆಗಳನ್ನು ಪೂರೈಸುವುದರಲ್ಲಿ ದುಃಖವೂ ಉಂಟಾಗುವುದರಿಂದ, ಸ್ತ್ರೀಯರ ಸಾನ್ನಿಧ್ಯ-ಮಾತ್ರದಿಂದ ಸುಖವೇ ಸುಖವಿರುವುದಿಲ್ಲ ಎಂದು ಇಲ್ಲಿ ಅಭಿಪ್ರಾಯ. ಇಷ್ಟೇ ಅಲ್ಲದೆ, ಅವರ ಕಾರಣದಿಂದ, ಸಂಭಾವ್ಯ ಸಾಮಾಜಿಕ ಹಾಗೂ ರಾಜನೈತಿಕ ಸಂಕಟಗಳ ಹೇತುವಿನಿಂದಲೂ ಕೂಡ ದುಃಖದ ಸಂದರ್ಭ ಒದಗಿ ಬರುತ್ತದೆ. ಉದಾಹರಣೆಗೆ ರಾಮಾಯಣದಲ್ಲಿ ಸೀತೆ ಮತ್ತು ಚಿತ್ತೌಡ್ ಗಡದ ರಾಣಿ ಪದ್ಮಿನಿ ತಮ್ಮ ರೂಪಾತಿಯಶಯದಿಂದ; ಮಹಾಭಾರತದ ದ್ರೌಪದಿ ತನ್ನ ರೂಪ, ಹಠ ಮತ್ತು ಕ್ಷಾತ್ರ ವೃತ್ತಿಯಿಂದ; ಜಯಚಂದ್ರನ ಮಗಳು ಸಂಯುಕ್ತಾ ತನ್ನ ತಂದೆಯ ಶತ್ರುವಾದ ಪೃಥ್ವೀರಾಜನನ್ನು ವರಿಸಿದ್ದರಿಂದ; ಮತ್ತು ರಾಮಾಯಣದ ಕೈಕೇಯಿ ತನ್ನ ಸ್ವಾರ್ಥಸಿದ್ಧಿಗಾಗಿ, ತಮ್ಮ-ತಮ್ಮ ಪತಿಗಳನ್ನು ವಿಪತ್ತಿಗೀಡು ಮಾಡಿದರು.

ಈ ಮೊದಲಾದ ಉದಾಹರಣೆಗಳು ವಿಶಿಷ್ಟ, ಹಾಗೂ ಇತಿಹಾಸ ಪ್ರಸಿದ್ಧ; ಸಾಮಾನ್ಯವಲ್ಲ' ದಾರ್ಶನಿಕ ದೃಷ್ಟಿಯಿಂದ ಆಲೋಚಿಸಿದಾಗ, ಸ್ತ್ರೀ-ಪುರುಷರ ಯೋಗದಿಂದ, ಸುಖವೂ ಇದೆ. ಆದರೆ, ದುಃಖವೂ ಬರಬಹುದಾದ್ದರಿಂದ, ಅದಕ್ಕೂ ತಯಾರಿರಬೇಕು, ಎಂದರ್ಥ. ಹೀಗೆಯೇ ಪುರುಷನ ಕಡೆಯಿಂದಲೂ, ಸ್ತ್ರೀಯರಿಗೆ ಸುಖ, ನಂತರ, ದುಃಖ ಒದಗಿ ಬರುವ ಸಂಭವವಿರುತ್ತದೆಂದು ತಿಳಿದುಕೊಳ್ಳಬೇಕು.

೬೪. ಮೆಕ್ಕಾದಲ್ಲಿರುವ ಮುಸಲ್ಮಾನರ ದೇಗುಲ – ಇದರಲ್ಲಿ ವಿಶಾಲವಾದ ಸಮಾಧಿಯಂತಹ ಜಗುಲಿ ಇದೆ. ಇಲ್ಲಿ ಇರುವ ' ಸಂಗೇ ಅಸವದ್' ಎಂಬ ಕಲ್ಲನ್ನು ಹಜ್ ಯಾತ್ರೆಗಾಗಿ ಬಂದ ಮುಸಲ್ಮಾನರು ಚುಂಬಿಸುತ್ತಾರೆ.

ಸಿದ್ಧವಾಗುತ್ತದೆ . ಆದುದರಿಂದ ಅವನು ವ್ಯಾಪಕನು ಅಥವಾ ಸರ್ವಶಕ್ತಿವಂತನು ಎಂದಿಗೂ ಆಗಲಾರನು. ಮತ್ತು ಸೈತಾನನು "ನಾನು ಆದಮನಿಗಿಂತ ಉತ್ತಮನಾಗಿದ್ದೇನೆ". ಎಂದು ಸತ್ಯವನ್ನೇ ಹೇಳಿದನು. ಇದರ ಮೇಲೆ ಖುದಾ ಕೋಪಿಸಿಕೊಂಡನೇಕೆ? ಆಕಾಶದಲ್ಲಿಯೇ ಖುದಾನ ಮನೆಯಿದೆಯೋ? ಭೂಮಿಯ ಮೇಲೆ ಇಲ್ಲವೋ? ಹಾಗೆ ಇದ್ದರೆ, ಕಾಬಾವನ್ನು[೬೪] ಖುದಾನ ಮನೆಯೆಂದು ಮೊದಲೇಕೆ ಬರೆದರು? ಭಲೇ! ಪರಮೇಶ್ವರನು ತನ್ನೊಳಗಿನಿಂದ ಅಥವಾ ಸೃಷ್ಟಿಯೊಳಗಿನಿಂದ ಹೊರಕ್ಕೆ ಹೇಗೆ ಕಳುಹಿಸಬಲ್ಲನು? ಮತ್ತು ಆ ಸೃಷ್ಟಿಯೆಲ್ಲಾ ಪರಮೇಶ್ವರನದಾಗಿದೆ. ಇದರಿಂದ, ಕುರಾನಿನ ಖುದಾ ಸ್ವರ್ಗದ ಉತ್ತರ ದಾತೃರಾಗಿದ್ದನು – ಎಂದು ವಿದಿತವಾಯಿತು. ಖುದಾನು ಅವನಿಗೆ ಶಾಪವಿತ್ತನು; ಧಿಕ್ಕರಿಸಿದನು ಮತ್ತು ಸೆರೆಹಿಡಿದನು. ಮತ್ತು ಸೈತಾನನು–"ಓ ಪ್ರಭೋ! ನನ್ನನ್ನು ಕಯಾಮತ್ತಿನವರೆಗೆ ಬಿಟ್ಟುಬಿಡು". ಎಂದು ಹೇಳಿದನು. ಖುದಾ ಹೊಗಳಿಕೆಯಿಂದಾಗಿ ಕಯಾಮತ್ತಿನ ದಿನದವರೆಗೆ ಬಿಟ್ಟುಬಿಟ್ಟನು. ಸೈತಾನನು ಬಿಡುಗಡೆ ಹೊಂದಿ, ಖುದಾನಿಗೆ–"ಈಗ ನಾನು ಚೆನ್ನಾಗಿ ದಾರಿತಪ್ಪಿಸುವೆನು. ಮತ್ತು ದಂಗೆ ಎಬ್ಬಿಸುವೆನು"– ಎಂದು ಹೇಳುತ್ತಾನೆ. ಆಗ ಖುದಾ –"ನೀನು ಎಷ್ಟು ಮಂದಿಗೆ ದಾರಿ ತಪ್ಪಿಸುವೆಯೋ, ಅವರನ್ನು ನರಕಕ್ಕೆ ಹಾಕಿಬಿಡುವೆನು. ಮತ್ತು ನಿನ್ನನ್ನೂ ಕೂಡ".– ಎಂದನು. ಸಜ್ಜನರೇ! ಸೈತಾನನನ್ನು ಪಥಭ್ರಷ್ಟನನ್ನಾಗಿ ಮಾಡಿದವನು ಖುದಾನೋ, ಅಥವಾ ತಾನೇ ದಾರಿತಪ್ಪಿದನೋ? –ಎಂದು ಈಗ ಆಲೋಚಿಸಿರಿ. ಖುದಾ ದಾರಿತಪ್ಪಿಸಿದನಾದರೆ, ಅವನು ಸೈತಾನನಿಗೂ ಸೈತಾನನಾಗಿ ಕುಳಿತನು. ಸೈತಾನನು ಸ್ವತಃ ದಾರಿತಪ್ಪಿದನಾದರೆ, ಬೇರೆಯ ಜೀವರೂ ಕೂಡ ಸ್ವತಃ ದಾರಿತಪ್ಪುವರು. ಸೈತಾನನ ಅವಶ್ಯಕತೆಯಿಲ್ಲ. ಮತ್ತು ದಂಗೆಕೋರನಾದ ಈ ಸೈತಾನನನ್ನು ಖುದಾ ಸ್ವತಂತ್ರನಾಗಿ ಬಿಟ್ಟುಬಿಟ್ಟನಾದ ಕಾರಣ, ಅವನೂ ಕೂಡ ಸೈತಾನನ ಭಾಗೀದಾರನಾದನು ಅಧರ್ಮವನ್ನು ಮಾಡುವುದರಲ್ಲಿ –ಎಂದು ವಿದಿತವಾಯಿತು. ಸ್ವತಃ ಕಳ್ಳತನಮಾಡಿಸಿ, ಶಿಕ್ಷೆಯನ್ನು ಕೊಡುವವನಾದರೆ, ಅವನ ಅನ್ಯಾಯಕ್ಕೆ ಸ್ವಲ್ಪವಾದರೂ ಪಾರಾವಾರವಿಲ್ಲ[೬೫] – ಎನ್ನಲೇ ಬೇಕಾದೀತು. (೧೩೩)

*ಅಲ್ಲಾಹನು ಸಮಸ್ತ ಪಾಪಗಳನ್ನೂ ಕ್ಷಮಿಸುತ್ತಾನೆ. ನಿಶ್ಚಯವಾಗಿಯೂ ಅವನು ಕ್ಷಮಿಸುವ ದಯಾಳುವಾಗಿದ್ದಾನೆ. ಮತ್ತು ಸಂಪೂರ್ಣ ಪೃಥಿವಿಯು ಅವನ ಮುಷ್ಟಿಯಲ್ಲಿರುವುದೂ ಕಯಾಮತ್ತಿನ ದಿನ. ಮತ್ತು ಆಕಾಶ ಅವನ ಬಲಗೈಯಿನ ಸುತ್ತ ಸುತ್ತಿಕೊಂಡಿದೆ. ಮತ್ತು ಪೃಥಿವೀ ತನ್ನೊಡೆಯನ ಪ್ರಕಾಶದಿಂದ ಥಳಥಳಿಸುವುದು ಮತ್ತು ಇಡಲ್ಪಡುವುವು ಕರ್ಮಪತ್ರಗಳು (ಭಾಗ್ಯಪತ್ರಗಳು) ಮತ್ತು ಪೈಗಂಬರರನ್ನೂ, ಹಾಗೂ ಸಾಕ್ಷಿಗಳನ್ನೂ ತರಲಾಗುವುದು ಮತ್ತು ತೀರ್ಮಾನ ಮಾಡಲ್ಪಡುವುದು. (ಮಂ–೬, ಸಿ–೨೪, ಸೂ–೩೯, ಆ–೫೩, ೬೭, ೬೯)*

**ಸಮೀಕ್ಷಕ:–** ಸಮಗ್ರಪಾಪಗಳನ್ನೂ ಖುದಾ ಕ್ಷಮಿಸುತ್ತಾನೆ–ಎಂದರೆ, ಸಮಸ್ತ ಜಗತ್ತನ್ನೂ ಪಾಪಿಯನ್ನಾಗಿ ಮಾಡುತ್ತಾನೆ ಮತ್ತು ದಯಾಹೀನನಾಗುತ್ತಾನೆ. ಏಕೆಂದರೆ, ಒಬ್ಬ ದುಷ್ಟನ ಮೇಲೆ ದಯೆಯನ್ನು ಮಾಡಿ ಮತ್ತು ಕ್ಷಮೆಯನ್ನು ನೀಡುವುದರಿಂದ, ಅವನು ಹೆಚ್ಚು ದುಷ್ಟತನವನ್ನು ಮಾಡುವನು ಮತ್ತು ಬೇರೆ ಅನೇಕ ಧರ್ಮಾತ್ಮರಿಗೆ ದುಃಖವನ್ನುಂಟುಮಾಡುವನು. ಕಿಂಚಿತ್ತಾದರೂ ಅಪರಾಧವನ್ನು ಕ್ಷಮಿಸುವುದಾದರೆ, ಅಪರಾಧವೇ ಜಗತ್ತಿನಲ್ಲಿ ಹರಡಿಹೋಗುವುದು. ಪರಮೇಶ್ವರನು ಅಗ್ನಿಯಂತೆ ಪ್ರಕಾಶಯುಕ್ತನಾಗಿದ್ದಾನೆಯೇ? ಮತ್ತು ಕರ್ಮ–ಪತ್ರಗಳು ಎಲ್ಲಿ ರಾಶಿ ಬಿದ್ದಿರುತ್ತವೆ? ಮತ್ತು ಯಾವನು ಬರೆಯುತ್ತಾನೆ? ಪೈಗಂಬರರ ಮತ್ತು ಸಾಕ್ಷಿಗಳ ಭರವಸೆಯ ಮೇಲೆ ಖುದಾ ನ್ಯಾಯಮಾಡುತ್ತಾನೆಯಾದರೆ, ಅವನು ಅಸರ್ವಜ್ಞ ಮತ್ತು ಅಸಮರ್ಥನಾಗುತ್ತಾನೆ. ಅವನು ಅನ್ಯಾಯವನ್ನು ಮಾಡುವುದಿಲ್ಲ; ನ್ಯಾಯವನ್ನೇ ಮಾಡುತ್ತಾನೆ–ಎನ್ನುವುದಾದರೆ, ಕರ್ಮಗಳಿಗೆ ಅನುಸಾರವಾಗಿ ಮಾಡುತ್ತಿರಬಹುದು. ಆ ಕರ್ಮಗಳು ಪೂರ್ವಾಪರ ವರ್ತಮಾನ ಜನ್ಮಗಳದಾಗಬಹುದು. ಹಾಗಾದರೆ, ಮತ್ತೆ ಕ್ಷಮಿಸುವುದು, ಹೃದಯಗಳ ಮೇಲೆ ಬೀಗ ಬಡೆಯುವುದು ಮತ್ತು ಶಿಕ್ಷಣವನ್ನು ಕೊಡದಿರುವುದು, ಸೈತಾನನಿಂದ ದಾರಿತಪ್ಪಿಸುವುದು, ವಿಚಾರಾಧೀನವಾಗಿಡುವುದು – ಕೇವಲ ಅನ್ಯಾಯವಾಗಿರುತ್ತದೆ (೧೩೪)

*ಪುಸ್ತಕವನ್ನಿಳಿಸುವುದು ಶಕ್ತಿಮಾನ್ ಹಾಗೂ ಜ್ಞಾನವಾನ್ ಅಲ್ಲಾಹನ ಕಡೆಯಿಂದಾಗಿರುತ್ತದೆ. (ಮಂ–೬, ಸಿ–೨೪, ಸೂ–೪೦, ಆ–೨, ೩)*

**ಸಮೀಕ್ಷಕ:–** ಮುಗ್ಧರಾದ ಜನರು ಅಲ್ಲಾಹನ ಹೆಸರಿನಿಂದ, ಸ್ವಲ್ಪ ಸತ್ಯವನ್ನುಳಿದು ಅಸತ್ಯ ತುಂಬಿರುವ, ಈ ಪುಸ್ತಕವನ್ನು ಒಪ್ಪಿಕೊಳ್ಳಲಿ–ಎಂಬುದಕ್ಕಾಗಿ ಈ ಮಾತು ಬರೆಯಲ್ಪಟ್ಟಿದೆ. ಮತ್ತು ಆ ಸತ್ಯವೂ ಕೂಡ ಅಸತ್ಯದೊಂದಿದೆ ಸೇರಿ ಕೆಟ್ಟುಹೋಗಿರುವಂತೆ ಇದೆ. ಆದುದರಿಂದ ಕುರಾನ್ ಮತ್ತು ಕುರಾನಿನ ದೇವರು ಮತ್ತು ಇದನ್ನು ಒಪ್ಪಿಕೊಳ್ಳುವ ಜನರು

೬೫. ಎಂದರೆ, ಮೇರೆ ಇಲ್ಲ, ಎಂದರ್ಥ.

ಪಾಪವನ್ನು ಹೆಚ್ಚಿಸುವವರು ಮತ್ತು ಪಾಪವನ್ನು ಮಾಡುವವರು - ಮಾಡಿಸುವವರು ಆಗಿದ್ದಾರೆ. ಏಕೆಂದರೆ, ಪಾಪವನ್ನು ಕ್ಷಮಿಸುವುದು ಅತ್ಯಂತ ಅಧರ್ಮವಾಗಿರುತ್ತದೆ. ಪ್ರಾಯಶಃ ಇದರಿಂದಲೇ ಮುಸಲ್ಮಾನರುಗಳು ಪಾಪಗಳನ್ನು ಮತ್ತು ಉಪದ್ರವಗಳನ್ನು ಮಾಡುವುದರಲ್ಲಿ ಕಡಿಮೆ ಹೆದರುತ್ತಾರೆ. (೧೩೫)

> *ಆಯಿತು; ಎರಡು ದಿನಗಳಲ್ಲಿ ಏಳು ಆಕಾಶಗಳನ್ನು ಸೃಜಿಸಿದೆವು ಮತ್ತು ನಾವು ಅವುಗಳ ಕೆಲಸವನ್ನು ಅವಕ್ಕೆ ಗೊತ್ತುಮಾಡಿದೆವು. ಎಲ್ಲಿಯವರೆಗೆ-ಎಂದರೆ, ಯಾವಾಗ ಹೋಗುವವರೋ ಅವನ ಬಳಿಗೆ, ಅವರುಗಳ ಮೇಲೆ ಅವರ ಕಿವಿಗಳು ಮತ್ತು ಅವರ ಕಣ್ಣುಗಳು ಮತ್ತು ಚರ್ಮಗಳು ತಮ್ಮ ತಮ್ಮ ಕೆಲಸಗಳೊಂದಿಗೆ ಸಾಕ್ಷ್ಯವನ್ನು ಕೊಡುವುವು. ಮತ್ತು ತಮ್ಮ ಚರ್ಮಗಳ ಬಗೆಗೆ, 'ನಮ್ಮ ಮೇಲೆ ನೀನೇಕೆ ಸಾಕ್ಷ್ಯವನ್ನಿತ್ತೆ?' ಎಂದು ಕೇಳುವರು; ಅವು-"ಯಾವನು ಎಲ್ಲ ವಸ್ತುಗಳನ್ನೂ ಕರೆಯುತ್ತಾನೋ, ಆ ಅಲ್ಲಾಹನು ನಮ್ಮನ್ನು ಕರೆದಿದ್ದಾನೆ". - ಎನ್ನುವವು. ಅವಶ್ಯವಾಗಿ ಶವಗಳನ್ನು ಸಜೀವಗೊಳಿಸುವವನಾಗಿದ್ದಾನೆ. (ಮಂ-೬, ಸಿ-೨೪, ಸೂ-೪೧, ಆ-೧೨, ೨೦, ೨೧, ೩೯).*

**ಸಮೀಕ್ಷಕ :-** ಭೇಷ್, ಮುಸಲ್ಮಾನರೇ! ಭೇಷ್! ಯಾವನನ್ನು ನೀವು ಸರ್ವಶಕ್ತಿವಂತನೆಂದು ಅಂಗೀಕರಿಸುತ್ತೀರೋ, ಅವನು ಏಳು ಆಕಾಶಗಳನ್ನು ಎರಡು ದಿನಗಳಲ್ಲಿ ನಿರ್ಮಿಸಲು ಶಕ್ತನಾದನು! ಮತ್ತು ಯಾವನು ಸರ್ವಶಕ್ತಿವಂತನಾಗಿರುತ್ತಾನೋ, ಅವನು ಕ್ಷಣಮಾತ್ರದಲ್ಲಿ ಎಲ್ಲವನ್ನೂ ನಿರ್ಮಿಸಬಲ್ಲನು. ಭಾಪು! ಕಿವಿಗಳು . ಕಣ್ಣುಗಳು ಮತ್ತು ಚರ್ಮ ಇವನ್ನು ಈಶ್ವರನು ಜಡದಿಂದ ನಿರ್ಮಿಸಿದ್ದಾನೆ; ಅವು ಹೇಗೆ ಸಾಕ್ಷ್ಯ ಕೊಟ್ಟಾವು? ಸಾಕ್ಷ್ಯವನ್ನು ಕೊಡಿಸುವವನಾದರೆ, ಅವನು ಮೊದಲು ಜಡವನ್ನಾಗಿ ಸೃಜಿಸಿದನೇಕೆ? ಮತ್ತು ತನ್ನ ಪೂರ್ವಾಪರ ನಿಯಮಗಳಿಗೆ ವಿರುದ್ಧವಾಗಿ ಮಾಡಿದನೇಕೆ? ಇದಕ್ಕಿಂತಲೂ ಹೆಚ್ಚಾದ ಒಂದು ಸುಳ್ಳುಮಾತೆಂದರೆ, ಯಾವಾಗ ಜೀವರುಗಳ ಮೇಲೆ ಸಾಕ್ಷ್ಯವನ್ನು ಕೊಟ್ಟವೋ, ಆಗ ಆ ಜೀವಾತ್ಮರು ತಮ್ಮ ತಮ್ಮ ಚರ್ಮವನ್ನು "ನೀನು ನಮ್ಮ ಮೇಲೆ ಸಾಕ್ಷ್ಯವನ್ನೇಕೆ ಕೊಟ್ಟೆ?"-ಎಂದು ಕೇಳತೊಡಗಿದರು. ಚರ್ಮವು-"ಖುದಾ ಕೊಡಿಸಿದನು. ನಾನೇನು ಮಾಡಲಿ"-ಎನ್ನುವುದು! ಆಹಾ!! ಈ ಮಾತು ಎಂದಾದರೂ ಆಗಬಲ್ಲದೇ? ಯಾವನಾದರೂ "ನಾನು ಬಂಜೆಯ ಮಗನ ಮುಖವನ್ನು ನೋಡಿದೆನು."- ಎಂದು ಹೇಳಿದಂತೆ ಇದೆ ಇದು. ಪುತ್ರನಿರುವುದಾದರೆ, ಬಂಜೆ ಏಕೆ? ಬಂಜೆಯಾಗಿರುವುದಾದರೆ, ಅವಳಿಗೆ ಮಗನಾಗುವುದು ಅಸಂಭವವಾಗಿದೆ. ಇದೇ ರೀತಿಯ ಈ ಮಾತು ಕೂಡ ಸುಳ್ಳಾಗಿದೆ. ಅವನು ಶವಗಳನ್ನು ಸಜೀವಗೊಳಿಸುತ್ತಾನೆಯಾದರೆ, ಮೊದಲು ಸಾಯಿಸಿದನಾದರೂ ಏತಕ್ಕೆ? ತಾನೂ ಕೂಡ ಶವವಾಗಬಲ್ಲನೋ, ಅಥವಾ ಇಲ್ಲವೋ? ಆಗಲಾರನಾದರೆ, ಶವತ್ವವನ್ನು (ನಿರ್ಜೀವತ್ವವನ್ನು) ಕೆಟ್ಟದೆಂದೇಕೆ ತಿಳಿಯುತ್ತಾನೆ? ಮತ್ತು ಕಯಾಮತ್ತಿನ ರಾತ್ರಿಯವರೆಗೆ ಮೃತರಾದ ಜೀವರು ಯಾವನ ಮನೆಯಲ್ಲಿರುವರು? ಮತ್ತು ಅಪರಾಧವಿಲ್ಲದೆಯೇ ಖುದಾ ಅವರನ್ನು ವಿಚಾರಾಧೀನ ಕೈದಿಗಳನ್ನಾಗಿ ಇಟ್ಟನೇತಕ್ಕೆ? ಶೀಘ್ರವಾಗಿ ನ್ಯಾಯವನ್ನೇಕೆ ಮಾಡಲಿಲ್ಲ? ಇಂತಹ ಮಾತುಗಳಿಂದ ಈಶ್ವರತ್ವಕ್ಕೆ ಕಳಂಕ ಬರುತ್ತದೆ. (೧೩೬)

> *ಅವನ ಸಲುವಾಗಿ, ಆಕಾಶಗಳ ಮತ್ತು ಪೃಥ್ವಿಯ ಬೀಗದ ಕೈಗಳಿವೆ. ಯಾವನನ್ನು ಬಯಸುತ್ತಾನೋ, ಅವನಿಗಾಗಿ ಭೋಜನವನ್ನು ದಯಪಾಲಿಸುತ್ತಾನೆ. ಮತ್ತು ಬೇಕಾದವರನ್ನು ಇಕ್ಕಟ್ಟಿಗೆ ಸಿಕ್ಕಿಸುತ್ತಾನೆ. ತಾನು ಬಯಸಿದುದೆಲ್ಲವನ್ನೂ ಉತ್ಪನ್ನ ಮಾಡುತ್ತಾನೆ. ಮತ್ತು ಯಾವನನ್ನು ಇಚ್ಛಿಸುತ್ತಾನೋ, ಅವನಿಗೆ ಪುತ್ರಿಯರನ್ನು ಕರುಣಿಸುತ್ತಾನೆ. ಮತ್ತು ಯಾವನನ್ನು ಬಯಸುತ್ತಾನೋ, ಅವನಿಗೆ ಪುತ್ರರನ್ನು ಕೊಡುತ್ತಾನೆ. ಅಥವಾ, ಅವನಿಗೆ, (ಅವಳಿಗೆ) ಪುತ್ರ-ಪುತ್ರಿಯರ ನಂಟಸ್ತನವನ್ನೂ ಕಲ್ಪಿಸುತ್ತಾನೆ. ಮತ್ತು ಯಾವಳನ್ನು ಬಂಜೆಯನ್ನಾಗಿಸ ಬಯಸುತ್ತಾನೋ, ಅವಳನ್ನು ಬಂಜೆಯನ್ನಾಗಿ ಮಾಡುತ್ತಾನೆ. ಮತ್ತು ಅವನೊಂದಿಗೆ ಮಾತನಾಡಲು ಯಾವ ಮನುಷ್ಯನಿಗೂ ಶಕ್ತಿಯಿಲ್ಲ. (ಆದುದರಿಂದ) ಅಲ್ಲಾಹನು ಹೃದಯದಲ್ಲಿ ಸ್ಪಂದನವನ್ನುಂಟುಮಾಡಿ, ಅಥವಾ ತೆರೆಯ ಹಿಂದಿನಿಂದ[೬೬] (ಮಾತನಾಡುತ್ತಾನೆ.) ಅಥವಾ ಸಂದೇಶವಾಹಕರಾದ ದೇವತೆಗಳನ್ನು ಕಳುಹಿಸುವನು. (ಮಂ-೬, ಸಿ-೨೫, ಸೂ-೪೨, ಆ-೧೨, ೫೦, ೫೧)*

---

೬೬. ಈ ಆಯತ್ತಿನ ಭಾಷ್ಯವಾದ 'ತಫ್ ಸೀರ್ ಹುಸೈನೀ'ಯಲ್ಲಿ ಹೀಗೆ ಬರೆಯಲಾಗಿದೆ.

"ಮುಹಮ್ಮದ್ ಸಾಹೇಬರು ಎರಡು ಪರದೆಗಳ ಹಿಂದೆ ಇದ್ದರು. ಮತ್ತು ಖುದಾನ ಶಬ್ದವನ್ನು ಆಲಿಸಿದರು. ಒಂದು ಪರದೆ ಜರತಾರಿಯವಾಗಿತ್ತು ; ಇನ್ನೊಂದು ಬಿಳಿಯ ಮುತ್ತುಗಳದು. ಮತ್ತು ಎರಡೂ ಪರದೆಗಳ ನಡುವೆ ಎಪ್ಪತ್ತು ವರ್ಷಗಳ ತನಕ ನಡೆಯಲು ಯೋಗ್ಯವಾದ ಮಾರ್ಗವಿತ್ತು" ಇವನು ಖುದಾನೋ, ಅಥವಾ ಪರದೆಯ ಮರೆಯಿಂದ ಮಾತನಾಡುವ ಸ್ತ್ರೀಯೋ ಎಂದು ಬುದ್ಧಿವಂತ ಜನರು ಈ ಮಾತಿನ ಮೇಲೆ ವಿಚಾರ ಮಾಡಲಿ! ಈ ಜನರಂತೂ ಈಶ್ವರನ ದುರ್ಗತಿಯನ್ನೇ ಮಾಡಿಬಿಟ್ಟರು! ವೇದ ಮತ್ತು ಉಪನಿಷತ್ ಮೊದಲಾದ ಸದ್ ಗ್ರಂಥಗಳಲ್ಲಿ ಪ್ರತಿಪಾದಿತವಾದ ಪರಮಾತ್ಮನೆಲ್ಲಿ? ಮತ್ತು ಕುರಾನಿನಲ್ಲಿ ಹೇಳಿರುವಂತಹ ತೆರೆಯ ಮರೆಯಿಂದ ಮಾತನಾಡುವ ಖುದಾ ಎಲ್ಲಿ? ನಿಜವಾದುದೇನೆಂದರೆ, ಅರಬ್ ದೇಶದವರು ತಿಳುವಳಿಕೆ ಇಲ್ಲದ ಜನರಾಗಿದ್ದರು! ಉತ್ತಮ ಮಾತುಗಳನ್ನು ಯಾರ ಮನೆಯಿಂದ ತಂದಾರು? [ ಪಾಪ]- ದಯಾನಂದ ಸರಸ್ವತಿ.

**ಸಮೀಕ್ಷಕ:–** ಖುದಾನ ಬಳಿ ಬೀಗದ ಕೈಗಳ ಭಂಡಾರ ತುಂಬಿರಬಹುದು. ಏಕೆಂದರೆ, ಎಲ್ಲೆಡೆಯ ಬೀಗಗಳನ್ನು ತೆಗೆಯಬೇಕಾಗುತ್ತಿರಬಹುದು. ಇದು ಹುಡುಗುತನದ ಮಾತಾಗಿದೆ. ಯಾವನನ್ನು ಬಯಸುತ್ತಾನೋ, ಅವನಿಗೆ ಪುಣ್ಯಕರ್ಮವಿಲ್ಲದೆಯೇ ಐಶ್ವರ್ಯವನ್ನು ಕೊಡುತ್ತಾನೆಯೇ? ಮತ್ತು ಇಕ್ಕಟ್ಟಿಗೆ ಸಿಕ್ಕಿಸುತ್ತಾನೆಯೇ? ಹೀಗೆ ಆಗುವುದಾದರೆ, ಅವನು ದೊಡ್ಡ ಅನ್ಯಾಯಕಾರಿಯಾಗಿರುತ್ತಾನೆ. ನಾರಿಯರೂ ಕೂಡ ಮೋಹಿತರಾಗಿ, ಸಿಕ್ಕಿಹಾಕಿಕೊಳ್ಳುವಂತಹ, ಕುರಾನ್–ಲೇಖಕನ ಆ ಚಾತುರ್ಯವನ್ನಾದರೂ ಈಗ ನೋಡಿರಿ. ತಾನು ಬಯಸಿದುದನ್ನು ಉತ್ಪಾದಿಸುತ್ತಾನೆ–ಎನ್ನುವುದಾದರೆ, ಎರಡನೆಯ 'ಖುದಾ'ನನ್ನು ಉತ್ಪನ್ನಮಾಡಬಲ್ಲನೋ, ಅಥವಾ ಇಲ್ಲವೋ? ಮಾಡಲಾರನಾದರೆ, ಸರ್ವಶಕ್ತಿಮತ್ತ್ವ ಇಲ್ಲಿ ಬಂದು ಸಮಾಪ್ತವಾಯಿತು. ಆಯಿತು; ಮಾನವರ ಮಧ್ಯೆ ಏನೋ ಖುದಾ ತನಗೆ ಬೇಕಾದವನಿಗೆ ಪುತ್ರರನ್ನೂ, ಪುತ್ರಿಯರನ್ನೂ ಕೊಡುತ್ತಾನೆ. ಆದರೆ, ಬಹಳ ಅಧಿಕ ಹೆಣ್ಣುಮರಿ–ಗಂಡು ಮರಿಗಳನ್ನು ಪಡೆದುಕೊಳ್ಳುವ ಹುಂಜಗಳು, ಮೀನುಗಳು, ಹಂದಿಗಳು – ಮೊದಲಾದ ಜೀವಧಾರಿಗಳಿಗೆ ಸಂತತಿಯನ್ನಾವನು ಕೊಡುತ್ತಾನೆ ? ಮತ್ತು ಸ್ತ್ರೀ–ಪುರುಷರ ಸಮಾಗಮವಿಲ್ಲದೆ (ಸಂತತಿಯನ್ನು) ಕೊಡುವುದಿಲ್ಲವೇಕೆ? ತನ್ನ ಇಚ್ಛೆಯಂತೆ ಯಾವಳನ್ನೋ ಬಂಜೆಯನ್ನಾಗಿ ಮಾಡಿ ದುಃಖವನ್ನೇತಕ್ಕೆ ಕೊಡುತ್ತಾನೆ? ಏನೆನ್ನೋಣ? ಅವನ ಸಮ್ಮುಖದಲ್ಲಿ ನಿಂತು ಯಾವನೂ ಮಾತನ್ನೇ ಆಡಲಾರನೆನ್ನುವಷ್ಟು ತೇಜಸ್ವಿಯಾಗಿದ್ದಾನೆ ಖುದಾ! ಆದರೆ, ಅವನು ಮೊದಲು 'ತೆರೆಯ ಮರೆಯಿಂದ ಮಾತನಾಡಬಲ್ಲನು. ಅಥವಾ ದೇವತೆಗಳು ಖುದಾನೊಂದಿಗೆ ಮಾತನಾಡುತ್ತಾರೆ. ಅಥವಾ ಪೈಗಂಬರರು (ಮಾತನಾಡುತ್ತಾರೆ)" ಎಂದು ಹೇಳಿದ್ದಾರೆ. ವಿಷಯ ಹೀಗೆ ಇರುವುದಾದರೆ ದೇವತೆಗಳು ಮತ್ತು ಪೈಗಂಬರರು ಚೆನ್ನಾಗಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿರಬಹುದು. ಯಾವನಾದರೂ 'ಖುದಾ ಸರ್ವಜ್ಞನು ಮತ್ತು ಸರ್ವವ್ಯಾಪಕನು '.–ಎಂದು ಹೇಳಿದರೆ, ತೆರೆಯ ಹಿಂದಿನಿಂದ ಮಾತನಾಡುವುದು ಅಥವಾ ಅಂಚೆಯಂತೆ ಸಮಾಚಾರಗಳನ್ನು ತರಿಸಿ ತಿಳಿದುಕೊಳ್ಳುವುದು–ಎಂಬುದನ್ನು ಬರೆಯುವುದು ವ್ಯರ್ಥವಾಗಿದೆ. ಮತ್ತು, ಹೀಗೆಯಿರುವುದಾದರೆ ಅವನು ಖುದಾನೇ ಅಲ್ಲ; ಯಾವನಾದರೂ ಚತುರನಾದ ಮನುಷ್ಯನಿರಬಹುದು. ಆದುದರಿಂದ ಈ ಕುರಾನ್ ಈಶ್ವರಕೃತವೆಂದಿಗೂ ಆಗಲಾರದು. (೧೩೭)

*ಮತ್ತು ಯಾವಾಗ ಏಸುವು ಪ್ರತ್ಯಕ್ಷ ಪ್ರಮಾಣದೊಂದಿಗೆ ಬಂದನೋ.... (ಮಂ–೬, ಸಿ–೨೫, ಸೂ–೪೩, ಆ–೬೩).*

**ಸಮೀಕ್ಷಕ :–** ಏಸುವೂ ಕೂಡ ಖುದಾನಿಂದ ಕಳುಹಿಸಲ್ಪಟ್ಟವನಾಗಿದ್ದರೆ, ಅವನ ಉಪದೇಶಕ್ಕೆ ವಿರುದ್ಧವಾಗಿ ಖುದಾ ಕುರಾನನ್ನೇತಕ್ಕೆ ರಚಿಸಿದನು? ಮತ್ತು ಕುರಾನಿಗೆ ವಿರುದ್ಧವಾಗಿ ಇಂಜೀಲ್ ಇದೆ. ಆದುದರಿಂದಲೇ ಈ ಪುಸ್ತಕಗಳು ಈಶ್ವರಕೃತವಾಗಿರುವುದಿಲ್ಲ–ಎಂಬುದು ಸಿದ್ಧವಾಗಿದೆ .

*ಹಿಡಿಯಿರಿ ಅವನನ್ನು, ತೀರಿತು; ಎಳೆಯಿರಿ ಅವನನ್ನು ನರಕದ ನಡು ಮಧ್ಯದಲ್ಲಿ. ಇದೇ ರೀತಿ ಇರುವರು. ಮತ್ತು ಅವರಿಗೆ ಬಿಳಿಯ ಬಣ್ಣದವರೂ, ಮುದ್ದಾದ ಕಣ್ಣುಗಳನ್ನುಳ್ಳವರೂ ಆದ ನಾರಿಯೊಂದಿಗೆ ಮದುವೆ ಮಾಡಿಸುವೆವು. (ಮಂ–೬, ಸಿ–೨೫, ಸೂ–೪೪ ಅ–೪೭, ೫೪)*

ಸಮೀಕ್ಷಕ:– ಭಲೇ! ಖುದಾ ನ್ಯಾಯಕಾರಿಯಾಗಿ ಪ್ರಾಣಿಗಳನ್ನು ಹಿಡಿಸುತ್ತಾನೆಯೇ ಮತ್ತು ಎಳೆದಾಡಿಸುತ್ತಾನೆಯೇ? ಮುಸಲ್ಮಾನರ ಖುದಾನೇ ಹೀಗೆ ಇರುವಾಗ, ಅವನ ಉಪಾಸಕರಾದ ಮುಸಲ್ಮಾನರು, ಅನಾಥರನ್ನೂ, ದುರ್ಬಲರನ್ನೂ ಹಿಡಿದರೆ– ಎಳೆದಾಡಿದರೆ ಇದರಲ್ಲಿ ಆಶ್ಚರ್ಯವೇನಿದೆ? ಮತ್ತು ಅವನು ಸಾಂಸರಿಕರಾದ ಮನುಷ್ಯರ ಹಾಗೆ ವಿವಾಹವನ್ನೂ ಮಾಡಿಸುತ್ತಾನೆ– ಮುಸಲ್ಮಾನರ ಪುರೋಹಿತನೇ ಆಗಿದ್ದಾನೋ– ಎನ್ನುವಂತೆ. (೧೩೯)

*ಆಯಿತು; ಕಾಫಿರರಾದ ಜನರನ್ನು ನೀವು ಸಂಧಿಸುವಾಗ, ಅವರನ್ನು ಚೂರು– ಚೂರಾಗಿ ಮಾಡಿ ಬಿಡುವವರೆಗೆ, ಅವರ ಕೊರಳಿನ ಮೇಲೆ ಒಳಿತಾಗಿ ಥಳಿಸಿರಿ; ಸರಿ. ಸೆರೆಹಿಡಿಯುವುದನ್ನು ದೃಢಪಡಿಸಿರಿ. ಮತ್ತು, ಎಲ್ಲಿನಿಂದ ನಿನ್ನನ್ನು ಓಡಿಸಿಬಿಟ್ಟರೋ, ನಿನ್ನ ಆ ಊರಿಗಿಂತ ರಕ್ಷಣಶಕ್ತಿಯ ದೃಷ್ಟಿಯಿಂದ ಮಹಾದುರ್ಗಮವಾದ ನೆಲೆಗಳು ಬಹಳವಾಗಿವೆ. ನಾವು ಅವನ್ನು ಧ್ವಂಸಮಾಡಿಬಿಟ್ಟೆವು. ಮುಗಿಯಿತು. ಅವರಿಗೆ ಸಹಾಯಕನಾವನೂ ಉಳಿಯಲಿಲ್ಲ. ಭಕ್ತಿಯನ್ನುಳ್ಳವರಿಗೆ (ಲಭಿಸುವವೆಂದು) ಆಶ್ವಾಸನೆ ಕೊಡಲ್ಪಟ್ಟ ಆ ಸ್ವರ್ಗದ ಪ್ರಶಂಸೆಯಾದರೂ ಅದೆಷ್ಟು? ಕೊಳೆಯದ ಜಲದ ನಾಲೆಗಳು ಅದರ ನಡುವೆಯಿವೆ. ಮತ್ತು ಹಾಲಿನ ನಾಲೆಗಳೂ ಕೂಡ ಇವೆ. ಅವುಗಳಿಗೆ ಸರಿತೂಗುವ ಆನಂದವೇ ಇಲ್ಲ. ಮತ್ತು, ಕುಡಿಯುವವರ ಸಲುವಾಗಿ ಮದ್ಯದ ಸುಖಕಾರಕವಾದ ನಾಲೆಗಳೂ ಇವೆ. ಮತ್ತು ಶುದ್ಧೀಕರಿಸಲ್ಪಟ್ಟ ಜೇನುತುಪ್ಪದ ನಾಲೆಗಳೂ ಅವರ ಸಲುವಾಗಿವೆ. ಅದರ ಮಧ್ಯೆ ಪ್ರತಿಯೊಂದು ರೀತಿಯ ಹಣ್ಣುಗಳೂ ಇವೆ, ಅವರಿಗಾಗಿ ಪ್ರಭುವಿನ ದಾನದಲ್ಲಿ. (ಮಂ–೬, ಸಿ–೨೬, ಸೂ–೪೭, ಆ–೪,೧೩, ೧೫)*

**ಸಮೀಕ್ಷಕ :–** ಇದೇ ಕಾರಣದಿಂದ ಈ ಕುರಾನ್, ಖುದಾ ಮತ್ತು ಮುಸಲ್ಮಾನರು ವಿಪ್ಲವ ಮಾಡುವವರೂ, ಎಲ್ಲರಿಗೂ ದುಃಖವನ್ನು ಕೊಡುವವರೂ ಮತ್ತು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ನಿರ್ದಯರೂ ಆಗಿದ್ದಾರೆ. ಇಲ್ಲಿ ಬರೆದಿರುವ ಹಾಗೆಯೇ, ಬೇರೆ ಯಾವುದಾದರೂ ಮತದವನು ಮುಸಲ್ಮಾನರ ಮೇಲೆ ಕೈಮಾಡುವನಾದರೆ, ಮುಸಲ್ಮಾನರು ಅನ್ಯರಿಗೆ ಕೊಡುವಂತಹ ದುಃಖವನ್ನೇ ಮುಸಲ್ಮಾನರಿಗೆ ಕೊಡುವನಾದರೆ, ಅದು ಮುಸಲ್ಮಾನರಿಗೆ ತಾಗುವುದೋ,ಇಲ್ಲವೋ? ಮುಹಮ್ಮದ್ ಸಾಹೇಬರನ್ನು ಹೊರದೂಡಿದವರನ್ನು[೬೭] ಖುದಾ ಸಾಯಿಸಿದನು; ಆದುದರಿಂದ, ಖುದಾ ಮಹಾಪಕ್ಷಪಾತಿಯಾಗಿದ್ದಾನೆ. ಅಹಾ!! ನಿರ್ಮಲವಾದ ನೀರು, ಹಾಲು, ಮದ್ಯ ಮತ್ತು ಜೇನುತುಪ್ಪ- ಇವುಗಳ ನಾಲೆಗಳಿರುವ ಸ್ಥಳ, ಈ ಜಗತ್ತಿಗಿಂತ ಉತ್ತಮವೆನಿಸಲು ಶಕ್ಯವೇ? ಮತ್ತು, ಹಾಲಿನ ನಾಲೆಗಳು ಎಂದಾದರೂ ಇರಬಲ್ಲವೇ? ಏಕೆಂದರೆ ಹಾಲು ಸ್ವಲ್ಪ ಹೊತ್ತಿನಲ್ಲಿಯೇ ಒಡೆದುಹೋಗುತ್ತದೆ. ಆದುದರಿಂದ, ಬುದ್ಧಿಶಾಲಿಗಳಾದ ಜನರು ಕುರಾನಿನ ಮತವನ್ನು ಅಂಗೀಕರಿಸುವುದಿಲ್ಲ. (೧೪೦)

*ಯಾವಾಗ ಅಲ್ಲಾಡಿಸಲ್ಪಡುವುದೋ ಪೃಥಿವಿ, ಅಲ್ಲಾಡಿಸಲ್ಪಟ್ಟ ಮೇಲೆ, ಮತ್ತು ಹಾರಿಸಲ್ಪಡುವವೋ ಪರ್ವತಗಳು ಹಾರಾಡಿಸಲ್ಪಟ್ಟಮೇಲೆ, ಆಯಿತು. ಕೃಮಿಗಳಂತೆ ಚೂರು-ಚೂರಾಗಿ ಆಯಿತು; ಬಲಗಡೆಗಿರುವ ಭದ್ರಪುರುಷರೇನು? ಬಲಗಡೆಯ ಭದ್ರಪುರುಷರೇ. ಮತ್ತು ಎಡಗಡೆಯವರೇನು? ಎಡಗಡೆಯವರೇ, ಮೇಲೆ ಮಂಚಗಳು ಚಿನ್ನದ ಎಳೆಗಳಿಂದ ಹೆಣೆಯಲ್ಪಟ್ಟಿವೆ. ಅವುಗಳ ಮೇಲೆ ಎದುರು-ಬದುರಾಗಿ ದಿಂಬುಗಳು ಇಡಲ್ಪಟ್ಟಿವೆ. ಮತ್ತು ತಿರುಗಾಡತ್ತಿರುವವರು ಮೇಲೆ ಸದಾ ಇರುವ ಹುಡುಗರು, ಹಿಡಿಯಿಲ್ಲದ ಮದ್ಯ-ಪಾತ್ರಗಳೊಂದಿಗೆ, ಹಿಡಿಯುಳ್ಳ ದೊಡ್ಡ ಬಟ್ಟಲುಗಳೊಂದಿಗೆ ಮತ್ತು ಶುಭ್ರವಾದ ಮದಿರೆ ತುಂಬಿದ ಪಾತ್ರೆಗಳೊಂದಿಗೆ. ಅದರಿಂದ ತಲೆನೋವುಗಳು ಉಂಟಾಗುವುದಿಲ್ಲ ಮತ್ತು ಅಪಶಬ್ದಗಳನ್ನು ಆಡುವುದೂ ಇಲ್ಲ. ಮತ್ತು ಹಣ್ಣುಗಳು ಮನಸ್ಸಿಗೆ ಒಪ್ಪುವಂತಹ ಜಾತಿಯವು, ಮತ್ತು ಮನಸ್ಸಿಗೆ ಒಪ್ಪುವಂತಹ ಜಾತಿಯ ಪಶು-ಪಕ್ಷಿಗಳ ಮಾಂಸ. ಮತ್ತು ಅವರ ಸಲುವಾಗಿ ಚಂದವಾದ ಕಣ್ಣುಗಳನ್ನುಳ್ಳ ನಾರಿಯರು ಇರುತ್ತಾರೆ; (ಕಣ್ಣುಗಳು) ಮರೆಯಲ್ಲಿಡಲ್ಪಟ್ಟ ಮುತ್ತುಗಳಂತೆ ಇರುತ್ತವೆ. ಮತ್ತು ಹಾಸಿಗೆಗಳು ದೊಡ್ಡವು. ನಿಶ್ಚಯವಾಗಿ ನಾವು ಉತ್ಪನ್ನಮಾಡಿದ್ದೇವೆ ನಾರಿಯರನ್ನು, ಮಾಡಬೇಕಾದ ವಿಶಿಷ್ಟ ಕ್ರಮದಿಂದ.[೬೮] ಆಯಿತು; ನಾವು ಅವರನ್ನು ಕುಮಾರಿಯರನ್ನಾಗಿ ಉತ್ಪನ್ನ ಮಾಡಿದ್ದೇವೆ. ಸೌಭಾಗ್ಯವತಿಯರು, ಸಮಸಮವಾದ ವಯಸ್ಸಿನವರು. ತೀರಿತು; ಅದರಿಂದ ಹೊಟ್ಟೆ ತುಂಬಿಸಿಕೊಳ್ಳುವವರಾಗಿದ್ದೀರಿ. ಅಹುದು; ಅಸ್ತವಾಗುವ ನಕ್ಷತ್ರಗಳ ಆಣೆಯಿಡುತ್ತೇನೆ ನಾನು. (ಮಂ-೭, ಸಿ-೨೭,ಸೂ-೫೬, ಆ-೪-೬,೮,೯ ೧೫-೨೪, ೩೫-೩೭, ೫೩, ೭೫).*

**ಸಮೀಕ್ಷಕ :–** ಈಗ ನೋಡಿರಿ ಕುರಾನನ್ನು ರಚಿಸುವವನ ಲೀಲೆಯನ್ನು. ಅಹುದು; ಪೃಥಿವಿಯಂತೂ ಅಲುಗಾಡುತ್ತಲೇ ಇರುತ್ತದೆ. ಆಗಲೂ ಅಲುಗಾಡುತ್ತಲೇ ಇರುವುದು. ಇದರಿಂದ, ಕುರಾನನ್ನು ರಚಿಸಿದವನು ಪೃಥಿವಿಯನ್ನು ಸ್ಥಿರವಾಗಿರುವುದೆಂದು ತಿಳಿದಿದ್ದನೆಂದು ಸಿದ್ಧವಾಗುತ್ತದೆ. ಭಲೇ! ಪರ್ವತಗಳನ್ನು ಪಕ್ಷಿಗಳಂತೆ ಹಾರಿಸಿಬಿಡುವನೇ? ಹುಳಗಳಾಗಿ ಹೋಗುವವಾದರೂ, ಸೂಕ್ಷ್ಮ ಶರೀರಧಾರಿಗಳಾಗಿರುವರು. ಮತ್ತೆ, ಅವರಿಗೆ ಎರಡನೆಯ ಜನ್ಮವೇತಕ್ಕಿಲ್ಲ? ಭಾಪು, ಮಹೋದಯ! ಖುದಾ ಶರೀರಧಾರಿಯಾಗಿರದಿದ್ದರೆ ಅವನ ಬಲಗಡೆಗೆ ಮತ್ತು ಎಡಗಡೆಗೆ ಹೇಗೆ ನಿಲ್ಲಲು ಸಾಧ್ಯವಿತ್ತು? ಅಲ್ಲಿ ಮಂಚಗಳು ಚಿನ್ನದ ಎಳೆಗಳಿಂದ ಹೆಣೆಯಲ್ಪಟ್ಟಿರುವವಾದರೆ, ಬಡಗಿಗಳೂ, ಅಕ್ಕಸಾಲಿಗರೂ ಕೂಡ ಅಲ್ಲಿರಬಹುದು. ಅವರನ್ನು ರಾತ್ರಿಯಲ್ಲಿ ನಿದ್ರಿಸಲೂ ಕೂಡ ಬಿಡದಿರಬಹುದಾದ ತಿಗಣೆಗಳು ಕಚ್ಚುತ್ತಿರಬಹುದು. ಅವರು ದಿಂಬುಗಳನ್ನಿಟ್ಟುಕೊಂಡು ನಿಷ್ಕರ್ಮರಾಗಿ ಸ್ವರ್ಗದಲ್ಲಿ ಕುಳಿತೇ ಇರುತ್ತಾರೋ, ಅಥವಾ ಏನಾದರೂ ಕೆಲಸವನ್ನೂ ಮಾಡುತ್ತಾರೋ? ಕುಳಿತೇ ಇರುತ್ತಾರೆಯಾದರೆ, ಅವರಿಗೆ ಅನ್ನ ಜೀರ್ಣವಾಗದೆ, ಅವರು ರೋಗಿಗಳಾಗಿ, ಬೇಗ ಸತ್ತೂಹೋಗುತ್ತಿರಬಹುದು. ಮತ್ತು ಕೆಲಸವನ್ನೇನಾದರೂ ಮಾಡುತ್ತಿರಬಹುದಾದರೆ, ಹೇಗೆ ಇಲ್ಲಿ ಶ್ರಮ-ಕೂಲಿಗಾರಿಕೆ ಮಾಡುತ್ತಾರೋ, ಹಾಗೆಯೇ ಅಲ್ಲಿಯೂ ಪರಿಶ್ರಮಮಾಡಿ ನಿರ್ವಾಹಮಾಡುತ್ತಿರಬಹುದು. ಮತ್ತೆ, ಇಲ್ಲಿಗಿಂತ ಅಲ್ಲಿ, ಸ್ವರ್ಗದಲ್ಲಿ ವಿಶೇಷವೇನಿದೆ? ಏನೇನೂ ಇಲ್ಲ. ಅಲ್ಲಿ ಹುಡುಗರು ಸದಾ ಇರುತ್ತಾರೆಯಾದರೆ, ಅವರ ತಾಯಿ-ತಂದೆಗಳೂ ಕೂಡ ಇರುತ್ತಿರಬಹುದು. ಮತ್ತು ಅತ್ತೆ-ಮಾವಂದಿರೂ ಕೂಡ ಇರಬಹುದು. ಅಗಲಂತೂ ಬಹುದೊಡ್ಡ ನಗರವೇ ನೆಲೆಗೊಳ್ಳುತ್ತಿರಬಹುದು. ಮತ್ತೆ, ಮಲ-ಮೂತ್ರಾದಿಗಳು ಹೆಚ್ಚುವುದರಿಂದ, ರೋಗಗಳೂ ಬಹಳವಾಗಿ ಉದ್ಭವಿಸುತ್ತಿರಬಹುದು. ಏಕೆಂದರೆ ಹಣ್ಣುಗಳನ್ನು ತಿನ್ನುವರು; ಗ್ಲಾಸುಗಳಲ್ಲಿ ನೀರನ್ನು ಕುಡಿಯುವರು ಮತ್ತು ಬಟ್ಟಲುಗಳಲ್ಲಿ ಮದ್ಯವನ್ನು ಕುಡಿಯುವರು; ಅವರಿಗೆ ತಲೆನೋವೂ ಬಾರದು; ಮತ್ತು ಯಾವನೂ ಅಪಶಬ್ದಗಳನ್ನಾಡುವುದಿಲ್ಲ.

---

೬೭. ಶತೃಗಳು ಮಹಮದ್ ಸಾಹೇಬರನ್ನು ಮೆಕ್ಕಾದಿಂದ ಹೊರದೂಡಿದ್ದರು. –ಯು.ಮೀ.

೬೮. ಎಂದರೆ, ಶರೀರದ ಏರು-ತಗ್ಗುಗಳು ವಿಶೇಷ ಪ್ರಕಾರವಾಗಿರುವಂತೆ ಉತ್ಪನ್ನ ಮಾಡಿದ್ದೇವೆ.

ಯಥೇಷ್ಟವಾಗಿ ಫಲಗಳನ್ನು ಭಕ್ಷಿಸುವರು ಮತ್ತು ಪಶುಗಳ ಹಾಗೂ ಪಕ್ಷಿಗಳ ಮಾಂಸಗಳನ್ನೂ ಕೂಡ ತಿನ್ನುವರು. ಎಂದಮೇಲೆ, ಅನೇಕ ಪ್ರಕಾರದ ದುಃಖಗಳೂ, ಪಕ್ಷಿಗಳೂ, ಪ್ರಾಣಿಗಳೂ ಅಲ್ಲಿರುವುವು. ಹತ್ಯೆಯಾಗುವುದು ಮತ್ತು ಮೂಳೆಗಳು ಅಲ್ಲಿ – ಇಲ್ಲಿ ಹರಡಿರುವುವು. ಮತ್ತು ಕಟುಕರ ಅಂಗಡಿಗಳೂ ಅಲ್ಲಿರಬಹುದು. ಓಹೋ! ಏನೆಂದು ಹೇಳುವುದು ಇವರ ಸ್ವರ್ಗದ ಪ್ರಶಸ್ತಿಯನ್ನು? ಅದು ಅರಬ್ ದೇಶವನ್ನೂ ಮೀರಿಸಿದಂತೆ ಕಾಣುತ್ತದೆ!!! ಮತ್ತು ಮದ್ಯಮಾಂಸಗಳನ್ನು ಕುಡಿದು – ತಿಂದು ಉನ್ಮತ್ತರಾಗುತ್ತಾರೆ;[೧೯] ಆದುದರಿಂದ ಒಳ್ಳೆ ಒಳ್ಳೆಯ ನಾರಿಯರೂ ಮತ್ತು ಹುಡುಗರೂ ಕೂಡ ಅಲ್ಲಿ ಅವಶ್ಯವಾಗಿರಬೇಕು. ಇಲ್ಲವಾದರೆ ಈ ಮದೋನ್ಮತ್ತರ ತಲೆಗೆ ಕಾವು ಏರಿ ಪ್ರಮತ್ತರಾಗಿ ಹೋದಾರು! ಬಹುಮಂದಿ ಸ್ತ್ರೀ–ಪುರುಷರು ಕುಳಿತುಕೊಳ್ಳಲು ಮತ್ತು ಮಲಗಲು ಅವಶ್ಯಕವಾಗಿ ದೊಡ್ಡ ದೊಡ್ಡ ಹಾಸಿಗೆಗಳಿರಬೇಕು. ಖುದಾ ಕುಮಾರಿಯರನ್ನು ಸ್ವರ್ಗದಲ್ಲಿ ಉತ್ಪನ್ನಮಾಡುತ್ತಾನೆ. ಆಯಿತು; ಕುಮಾರಿಯರ ವಿವಾಹದ ನಿರ್ವಾಹವನ್ನೇನೋ ಖುದಾ ಇಲ್ಲಿಂದ ಅಭ್ಯರ್ಥಿಗಳಾಗಿ ಹೋಗುವವರೊಂದಿಗೆ ಆಗುವುದೆಂದು ಬರೆದನು. ಆದರೆ, ಅಲ್ಲಿ ಸದಾ ಇರುವ ಬಾಲಕರ ವಿವಾಹಗಳು ಯಾರಾದರೂ ಕುಮಾರಿಯರೊಂದಿಗೆ, (ಆಗುವುವು) ಎಂದು ಬರೆಯಲಿಲ್ಲ! ಹಾಗಾದರೆ, ಅವರೂ ಕೂಡ, ಅದೇ ಅಭ್ಯರ್ಥಿಗಳಿಗೆಯೇ ಕುಮಾರಿಯಂತೆ ಕೊಟ್ಟು ಬಿಡಲ್ಪಡುವರೇನು? ಇದರ ವ್ಯವಸ್ಥೆಯನ್ನೇನೂ ಸ್ವಲ್ಪವೂ ಬರೆಯಲಿಲ್ಲ! ಈ ದೊಡ್ಡ ಮರೆವು ಅದೇತಕ್ಕೆ ಖುದಾಗೆ ಉಂಟಾಯಿತು? ಸಮವಯಸ್ಕರಾದ ಸುಮಂಗಲೀ ಸ್ತ್ರೀಯರು ಪತಿಗಳನ್ನು ಪಡೆದುಕೊಂಡು ಸ್ವರ್ಗದಲ್ಲಿರುತ್ತಾರೆಯಾದರೆ, ಸರಿಹೋಗಲಿಲ್ಲ. ಏಕೆಂದರೆ ಸ್ತ್ರೀಯರಿಗಿಂತ ಪುರುಷರ ವಯಸ್ಸು ಎರಡರಷ್ಟು – ಎರಡೂವರೆಯಷ್ಟು[೨೦] ಇರಬೇಕು. ಇದೇನೋ ಮುಸಲ್ಮಾನರ ಸ್ವರ್ಗದ ಕಥೆಯಾಗಿದೆ. ಇನ್ನು ನರಕದವರು ಮೂರು ಮೂಲೆಯ ಮುಳ್ಳು ಹಣ್ಣುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುವರಾದರೆ, ಆ ಮುಳ್ಳು ಮರಗಳೂ ನರಕದಲ್ಲಿದ್ದಾವು. ಆಗ, ಮುಳ್ಳುಗಳೂ ಚುಚ್ಚುತ್ತಿರಬಹುದು. ಮತ್ತು ಬಿಸಿ ನೀರನ್ನು ಕುಡಿಯುವುದು ಮೊದಲಾದ ದುಃಖಗಳನ್ನು ನರಕದಲ್ಲಿ ಅನುಭವಿಸುವರು. ಅಣೆಯನ್ನಿಡುವುದು ಪ್ರಾಯಶಃ ಅಸತ್ಯವಾದಿಗಳ ಕಾರ್ಯವಾಗಿದೆ; ಸತ್ಯವಾದಿಗಳದಲ್ಲ. ಖುದಾ ಕೂಡ ಅಣೆಯನ್ನಿಡುತ್ತಾನೆ–ಎಂದಾದರೆ, ಅವನೂ ಕೂಡ ಸುಳ್ಳಿನಿಂದ ದೂರವಿರಲಾರನು (೧೪೧).

> *ಅಲ್ಲಾಹನು ನಿಶ್ಚಯವಾಗಿ, ತನ್ನ ಮಾರ್ಗದಲ್ಲಿ ಹೋರಾಡುವ ಜನರನ್ನು ತನ್ನ ಮಿತ್ರರನ್ನಾಗಿ ಇಟ್ಟುಕೊಳ್ಳುತ್ತಾನೆ; (ಮಂ–೭, ಸಿ–೨೮, ಸೂ–೬೧, ಆ–೪)*

**ಸಮೀಕ್ಷಕ:–** ಆಹಾ! ಇಂತಹ ಮಾತುಗಳನ್ನುಪದೇಶಿಸಿ, ಬಡಪಾಯಿಗಳಾದ ಅರಬ್ ದೇಶವಾಸಿಗಳನ್ನು ಎಲ್ಲರೊಂದಿಗೂ ಕಾದಾಡಿಸಿ, ಶತ್ರುಗಳನ್ನಾಗಿ ಮಾಡಿ ಪರಸ್ಪರ ದುಃಖವನ್ನು ಕೊಡಿಸಿದನು; ಸರಿಹೋಯಿತು! ಮತ್ತು ಸಂಪ್ರದಾಯದ ಧ್ವಜವನ್ನೇರಿಸಿ, ಯುದ್ಧವನ್ನು ಪ್ರಸರಿಸುವ ಇಂತಹವನನ್ನು ಯಾವ ವಿದ್ವಾಂಸರೂ ಈಶ್ವರನೆಂದು ಎಂದಿಗೂ ಅಂಗೀಕರಿಸಲಾರರು. ಯಾವನು ಜನಾಂಗದಲ್ಲಿ ವಿರೋಧವನ್ನು ಹೆಚ್ಚಿಸುವನೋ, ಅವನೇ ಎಲ್ಲರಿಗೂ ದುಃಖದಾಯಕನಾಗಿರುತ್ತಾನೆ. (೧೪೨).

> *ಓ ನಬೀ! ಖುದಾ ನಿನ್ನ ಸಲುವಾಗಿ ಸ್ವೀಕರಣೀಯವಾಗಿ ಮಾಡಿರುವ ವಸ್ತುವನ್ನು ನೀನೇಕೆ ಹೇಯವನ್ನಾಗಿ ಮಾಡುತ್ತೀಯೆ? ನೀನು ನಿನ್ನ ಪತ್ನಿಯರ ಪ್ರಸನ್ನತೆಯನ್ನು ಬಯಸುತ್ತೀಯೆ ಮತ್ತು ಅಲ್ಲಾಹನು ಕ್ಷಮೆಯನ್ನು ಮಾಡುವ ದಯಾಳುವಾಗಿದ್ದಾನೆ. ಅವಳು ನಿನ್ನನ್ನು ಬಿಟ್ಟುಬಿಡುವಳಾದರೆ, ಶೀಘ್ರವಾಗಿ ಸ್ವಾಮಿಯು (ಅಲ್ಲಾಹನು) ಅವಳಿಗೆ ಪ್ರತಿಯಾಗಿ, ನಿನಗೆ ಉತ್ತಮ ಮುಸ್ಲಿಮರೂ ಆದ ಮತ್ತು ನಂಬಿಕೆಯನ್ನುಳ್ಳವರೂ ಆದ ಪತ್ನಿಯರನ್ನು, ಸೇವಾತತ್ಪರರೂ, ಪಶ್ಚಾತ್ತಾಪಪಡುವವರೂ, ಭಕ್ತಿಯುಕ್ತೆಯರೂ, ಉಪವಾಸವ್ರತನಿಷ್ಠೆಯರೂ, ಪುರುಷರನ್ನು ನೋಡಿರುವವರೂ, ನೋಡಿರದವರೂ ಆದವರನ್ನು ಕರುಣಿಸುವನು; (ಮಂ–೭,ಸಿ–೨೮, ಸೂ–೬೬, ಆ–೧,೫)*

---

೧೯. ಇಲ್ಲಿ 'ಲೌಂಡಾ' ಎಂಬ ಶಬ್ದ ಪ್ರಯೋಗವಿದೆ. ಎಂದರೆ, ವಿಕೃತ ಕಾಮ ತೃಪ್ತಿಗಾಗಿ ಪ್ರಯುಕ್ತವಾಗುವ ಅಬೋಧ ಬಾಲಕರು. ಈ ದುಶ್ಚಟವು ಅರಬ್‌ನಿಂದ ಮುಸಲ್ಮಾನರ ಮೂಲಕ ಭಾರತದ ನವಾಬರಲ್ಲೂ; ನಂತರ ಹಿಂದೂ ರಾಜರಲ್ಲೂ, ಧನಿಕರಲ್ಲೂ ಪ್ರವೇಶ ಪಡೆಯಿತು. ಅತಿಸ್ತ್ರೀ ಪ್ರಸಂಗದಿಂದ, ಪೌರುಷತ್ವ ಕಳೆದುಕೊಂಡ ಇಂತಹ ನಪುಂಸಕರು ಹಲವು ದುಶ್ಚಟಗಳಿಗೀಡಾಗುತ್ತಾರೆ. ಮುಸಲ್ಮಾನರ ಸ್ವರ್ಗದಲ್ಲಿ 'ಒಂದಕ್ಕೆ' ಸದವಕಾಶವಿರುವುದರಿಂದ ' ಇನ್ನೊಂದರ' ವ್ಯವಸ್ಥೆಯನ್ನೂ ಸಹ ಖುದಾ ಮಾಡಲೇ ಬೇಕಲ್ಲ! ದುಶ್ಚಟಗಳಿಗೀಡಾಗುವ ಪೌರುಷ ಹೀನರು ನಾಲ್ಕು ವಿಧದವರಿರುತ್ತಾರೆ. ' ಅಸೇಕ್ಯ', 'ಸೌಗಂಧಿಕ,' 'ಕುಂಭಿಕ' ಹಾಗೂ 'ಈರ್ಷ್ಯಕ' ಮತ್ತು ಕೊನೆಯದಾಗಿ, ನಪುಂಸಕನಾದ ಷಂಡಕ. ಕುರಾನಿನಲ್ಲಿ ಮಾಡಿರುವ ಉಲ್ಲೇಖವು 'ಕುಂಭಿಕ' ನಿಗೆ ಸಂಬಂಧಿಸಿದೆ. ಹೆಚ್ಚಿನ ವಿವರಗಳಿಗೆ ಸುಶ್ರುತ[ಆಯುರ್ವೇದ], ಶಾರೀರ ಸ್ಥಾನ, ೨/೩೮–೪೫ ನ್ನು ನೋಡಿ.

೨೦. ಇಲ್ಲಿ ಪಾಠ ಭ್ರಷ್ಟವಾಗಿದೆ. ಗ್ರಂಥಕಾರರು ಇದೇ ಗ್ರಂಥದಲ್ಲಿ ಮತ್ತು 'ಸಂಸ್ಕಾರ ವಿಧಿ'ಯಲ್ಲಿ ವರನ ವಯಸ್ಸು ಕನ್ಯೆಯ ವಯಸ್ಸಿಗಿಂತ ಒಂದೂವರೆ–ಎರಡರಷ್ಟು ಇರಬೇಕೆಂದು ಬರೆದಿದ್ದಾರೆ. –ಯು.ಮೀ.

**ಸಮೀಕ್ಷಕ :–** ಗಮನವಿತ್ತು ನೋಡಬೇಕು. ಖುದಾ ಆದನಾದರೂ ಏನು? ಮುಹಮ್ಮದ್ ಸಾಹೇಬರ ಮನೆಯೊಳಗಿನ ಹಾಗೂ ಹೊರಗಿನ ವ್ಯವಸ್ಥೆಯನ್ನು ಮಾಡುವ ಪರಿಚಾರಕ ಮಾತ್ರ! ಮೊದಲ ಆಯತ್ತಿನ ಮೇಲೆ ಎರಡು ಕಥೆಗಳಿವೆ. ಒಂದನೆಯ ಕಥೆ ಇದು:– ಮುಹಮ್ಮದ್ ಸಾಹೇಬರಿಗೆ ಜೇನುತುಪ್ಪ ಶರಬತ್ತು ಪ್ರಿಯವಾಗಿತ್ತು. ಅವರಿಗೆ ಅನೇಕ ಜನ ಪತ್ನಿಯರಿದ್ದರು.[೭೧] ಅವರಲ್ಲಿ ಒಬ್ಬಳ ಮನೆಯಲ್ಲಿ ಕುಡಿಯುವುದರಲ್ಲಿ ತಡವಾದುದರಿಂದ, ಅನ್ಯರಿಗೆ (ಸವತಿಯರಿಗೆ) ಸಹಿಸಲಾಗದಂತೆ ತೋರಿತು. ಅವರೊಂದಿಗೆ ಮಾತು–ಕತೆಯಾದ ಮೇಲೆ ಮುಹಮ್ಮದ್ ಸಾಹೇಬರು "ನಾನು ಕುಡಿಯುವುದಿಲ್ಲ" – ಎಂದು ಆಣೆಯಿಟ್ಟರು. ಎರಡನೆಯದು ಹೀಗಿದೆ:– ಅವರ ಅನೇಕ ಪತ್ನಿಯರಲ್ಲಿ ಒಬ್ಬಳ ಸರದಿ ಬಂದಿದ್ದಿತು. ಅವಳ ನೆಲೆಗೆ ರಾತ್ರಿಗೆ ಹೋದರೆ, ಅವಳು ಇರಲಿಲ್ಲ. ತನ್ನ ತಂದೆಯ ಮನೆಗೆ ಹೋಗಿದ್ದಳು. ಮುಹಮ್ಮದ್ ಸಾಹೇಬರು ಒಬ್ಬಳು ದಾಸಿಯನ್ನು ಕರೆದು, ಪಾವನಗೊಳಿಸಿದರು. ಪತ್ನಿಗೆ ಈ ಸಮಾಚಾರ ಸಿಕ್ಕಿದಾಗ ಅಪ್ರಸನ್ನಳಾದಳು. ಆಗ ಮುಹಮ್ಮದ್ ಸಾಹೇಬರು –"ನಾನು ಹೀಗೆ ಮಾಡುವುದಿಲ್ಲ"– ಎಂದು ಅಣೆಯಿಟ್ಟರು. ಮತ್ತು ಪತ್ನಿಗೂ 'ನೀನು ಯಾರಿಗೂ ಈ ಮಾತನ್ನು ಹೇಳಬಾರದು' ಎಂದು ಹೇಳಿದರು. ಪತ್ನಿಯು 'ಹೇಳುವುದಿಲ್ಲ' – ಎಂದು ಒಪ್ಪಿಕೊಂಡಳು. ಮತ್ತು ಇನ್ನೊಬ್ಬಳು ಪತ್ನಿಯ ಹತ್ತಿರ ಹೋಗಿ ಹೇಳಿದರು. ಇದರ ಮೇಲೆ ಖುದಾ" ಯಾವ ವಸ್ತುವನ್ನು ನಾವು ನಿನ್ನ ಸಲುವಾಗಿ ಪವಿತ್ರಗೊಳಿಸಿದ್ದೇವೋ, ಅದನ್ನು ನೀನೇತಕ್ಕೆ ಹೇಯವಾಗಿ ಮಾಡುತ್ತೀಯೆ?" ಎಂಬ ಆಯತ್ತನ್ನು ಇಳಿಸಿದನು. ಬುದ್ಧಿಶಾಲಿಗಳಾದ ಜನರು–"ಖುದಾ ಕೂಡ ಎಲ್ಲಿಯಾದರೂ, ಯಾವನಾದರೂ ಒಬ್ಬನ ಮನೆಯ ಒಡಕನ್ನು ಸರಿಪಡಿಸುತ್ತಾ ತಿರುಗಾಡುತ್ತಾನೋ?" – ಎಂದು ಆಲೋಚಿಸಿ ನೋಡಲಿ. ಮತ್ತು ಈ ಮಾತುಗಳಿಂದ ಮುಹಮ್ಮದ್ ಸಾಹೇಬರ ಆಚರಣವಂತೂ ಪ್ರಕಟವಾಗಿಯೇ ಇದೆ. ಏಕೆಂದರೆ, ಅನೇಕ ಜನ ಹೆಂಡಿರನ್ನು ಹೊಂದಿರುವ ಪುರುಷನು ಈಶ್ವರನ ಭಕ್ತನು ಅಥವಾ ಪೈಗಂಬರನು ಹೇಗೆ ಆಗಬಲ್ಲನು? ಮತ್ತು ಯಾವನು ಪಕ್ಷಪಾತದಿಂದ ಒಬ್ಬ ಸ್ತ್ರೀಯಳಿಗೆ ಅಪಮಾನವನ್ನೂ, ಮತ್ತೊಬ್ಬಳಿಗೆ ಗೌರವವನ್ನೂ ಸಲ್ಲಿಸುವನೋ, ಅವನು ಪಕ್ಷಪಾತಿಯಾಗಿ, ಅಧಾರ್ಮಿಕನಾಗನೇತಕ್ಕೆ? ಮತ್ತು ಯಾವನು ಬಹುಮಂದಿ ಪತ್ನಿಯರಿಂದಲೂ ಸಂತುಷ್ಟನಾಗದೆ, ದಾಸಿಯರ ನಡುವೆಯೂ ಸಿಕ್ಕಿಕೊಳ್ಳುವನೋ, ಅವನಿಗೆ ಲಜ್ಜೆ, ಭಯ ಮತ್ತು ಧರ್ಮ ಅನ್ವಯಿಸುವುದಾದರೂ ಎಲ್ಲಿನಿಂದ? ಯಾವನೋ ಒಬ್ಬನು **–"ಕಾಮಾತುರಾಣಾಂ ನ ಭಯಂ ನ ಲಜ್ಜಾ"** – ಕಾಮೀ ಮಾನವರಿಗೆ ಅಧರ್ಮದಿಂದ ಭಯ ಅಥವಾ ಲಜ್ಜೆ ಉಂಟಾಗುವುದಿಲ್ಲ." ಎಂದು ಹೇಳಿದ್ದಾನೆ. ಮತ್ತು ಇವರ ಖುದಾ ಕೂಡ ಮಹಮ್ಮದ್ ಸಾಹೇಬರ ಸ್ತ್ರೀಯರ ಮತ್ತು ಪೈಗಂಬರರ ಜಗಳವನ್ನು ತೀರ್ಮಾನಿಸುವಲ್ಲಿ, ಮುಖ್ಯ ಪಂಚಾಯತದಾರನಾಗಿರುವಂತೆ ಕಾಣುತ್ತಾನೆ! ಈಗ ಬುದ್ಧಿವಂತರಾದ ಜನರು ಈ ಕುರಾನ್ ವಿದ್ವಾಂಸನು ಅಥವಾ ಈಶ್ವರನು ರಚಿಸಿದುದೋ, ಅಥವಾ ಯಾವನಾದರೂ ಅವಿದ್ವಾಂಸನಾದ ಸ್ವಾರ್ಥಿಯು ರಚಿಸಿದುದೋ– ಎಂದು ಪರ್ಯಾಲೋಚಿಸಬೇಕು. ಸ್ಪಷ್ಟವಾಗಿ ವಿದಿತವಾಗಿ ಹೋಗುವುದು. ಮತ್ತು ಎರಡನೆಯ ಆಯತ್ತಿನಿಂದ, "ಮುಹಮ್ಮದ್ ಸಾಹೇಬರ ಮೇಲೆ, ಅವರ ಯಾವಳೋ ಪತ್ನಿಯೂ ಕೋಪಿಸಿಕೊಂಡಿರಬಹುದು,

> *ಅದರ ಮೇಲೆ ಖುದಾ ಈ ಆಯತ್ತನ್ನು ಇಳಿಸಿ, 'ನೀನು ಗಲಿಬಿಲಿಮಾಡುವೆಯಾದರೆ, ಮತ್ತು ಮುಹಮ್ಮದ್ ಸಾಹೇಬರು ನಿನ್ನನ್ನು ಬಿಟ್ಟುಬಿಡುವರಾದರೆ, ಅವರಿಗೆ ಅವರ ಖುದಾ ಪುರುಷರ ಸಂಪರ್ಕವನ್ನೇ ಮಾಡದಿರುವ ನಿನಗಿಂತ ಉತ್ತಮರಾದ ಪತ್ನಿಯರನ್ನು ಕೊಡುವನು'. – ಎಂದು ಬೆದರಿಸಿರಬಹುದು".– ಎಂದು ಪ್ರತೀತವಾಗುತ್ತದೆ. ಕಿಂಚಿನ್ಮಾತ್ರವಾದರೂ ಬುದ್ಧಿಯನ್ನುಳ್ಳ ಮಾನವನು– "ಇದು ದೇವದ ದಿಂಡರ ಕೆಲಸವೋ ಅಥವಾ ತನ್ನ ಸ್ವಾರ್ಥಸಾಧನೆಯದೋ" – ಎಂದು ಆಲೋಚಿಸಿಕೊಳ್ಳಬಲ್ಲನು. ಇಂತಹ ಮಾತುಗಳಿಂದ 'ಖುದಾ ಏನನ್ನೂ ಹೇಳುತ್ತಿರಲಿಲ್ಲ. ಕೇವಲ ದೇಶ–ಕಾಲಗಳನ್ನು ನೋಡಿ. ತಮ್ಮ ಸ್ವಾರ್ಥ ಸಿದ್ಧವಾಗುವುದಕ್ಕಾಗಿ, ಖುದಾನ ಕಡೆಯಿಂದ ಮುಹಮ್ಮದ್ ಸಾಹೇಬರು ಹೇಳಿಬಿಡುತ್ತಿದ್ದರು', ಎಂಬುದು ಸರಿಯಾಗಿ ಸಿದ್ಧವಾಗಿದೆ ಯಾವ ಜನರು (ಈ ಮಾತುಗಳನ್ನೆಲ್ಲಾ) ಖುದಾನ ಕಡೆಯದೆಂದೇ ಗ್ರಹಿಸುತ್ತಾರೋ, ಅವರಿಗೆ ನಾವೇ ಏನು? ಬುದ್ಧಿವಂತರೆಲ್ಲರೂ –*

---

೭೧. ಮಹಮದ್ ಸಾಹೇಬರಿಗೆ ಪ್ರಥಮ ಪತ್ನಿಯಾದ ಖದೀಜಾ ಬೇಗಂ ಅಲ್ಲದೇ, ಇದರ ಪತ್ನಿಯರೂ ಇದ್ದರು. ಈ ಕೌಟುಂಬಿಕ ರಸದಲ್ಲಿ ವಿರಸವಾಗದಂತೆ ಮಹಮ್ಮದರು ತಮ್ಮ ಜಾಣತನದಿಂದ ಕುರಾನನ್ನು ಉಪಯೋಗಿಸಿಕೊಂಡಿದ್ದರು. ಆದರೂ, ಒಮ್ಮೊಮ್ಮೆ ಕಹಿ ಪ್ರಸಂಗ ಬಂದೇ ಬರುತ್ತಿತ್ತು. ಈ ಕೌಟುಂಬಿಕ ಘಟನೆಗಳು ಅವರ ಜೀವನ ಚರಿತ್ರೆಯಲ್ಲಿದ್ದು ಅರಬ್ ದೇಶದಲ್ಲಿ ವಿದಿತವಾಗಿದ್ದವು. ಆದರೆ, ಭಾರತದಲ್ಲಿ ಆರ್ಯಸಮಾಜಿಗಳಾದ ಮಹಾಶಯ ರಾಜಪಾಲರು 'ರಂಗೀಲಾ ರಸೂಲ್' ಎಂಬ ಪುಸ್ತಕದಲ್ಲಿ ಇದನ್ನು ಉರ್ದುವಿನಲ್ಲಿ ಬರೆದು ಪ್ರಕಟಿಸಿದರು. ಇದರಿಂದ ರೊಚ್ಚಿಗೆದ್ದ ಭಾರತೀಯ ಮುಸಲ್ಮಾನರು ಅವರನ್ನು ಕೊಲೆ ಮಾಡಿಸಿದರು.

*"ಖುದಾ ಉಳಿದನೇನಾಗಿ? ಮುಹಮ್ಮದ್ ಸಾಹೇಬರಿಗಾಗಿ ಪತ್ನಿಯರನ್ನು ಒದಗಿಸುವ ನಾಯಿಂದ[೨೨] ಮಾತ್ರನಾಗಿ ಉಳಿದನು." – ಎಂದೇ ಹೇಳುವರು. (೧೪೩)*

*ಓ ನಬೀ! ಜಗಳವಾಡು ಕಾಫಿರರೊಂದಿಗೆ ಮತ್ತು ಗುಪ್ತ ಶತ್ರುಗಳೊಂದಿಗೆ ಮತ್ತು ಕಠೋರನಾಗಿ ವರ್ತಿಸು ಅವರ ಮೇಲೆ. (ಮಂ–೭, ಸಿ–೨೮, ಸೂ–೬೬, ಆ–೯).*

**ಸಮೀಕ್ಷಕ:–** ನೋಡಿರಿ, ಮುಸಲ್ಮಾನರ ಖುದಾನ ಲೀಲೆಯನ್ನು, ಅನ್ಯಮತೀಯರೊಂದಿಗೆ ಹೋರಾಡಲು ಪೈಗಂಬರರನ್ನೂ ಮತ್ತು ಮುಸಲ್ಮಾನರನ್ನೂ ಉದ್ರೇಕಗೊಳಿಸುತ್ತಾನೆ. ಇದೇ ಕಾರಣದಿಂದ ಮುಸಲ್ಮಾನರು ಉಪದ್ರವ ಮಾಡುವುದರಲ್ಲಿ ಪ್ರವೃತ್ತರಾಗಿರುತ್ತಾರೆ. ಈ ಜನರು ಉಪದ್ರವ ಮಾಡುವುದನ್ನು ಬಿಟ್ಟು, ಎಲ್ಲರೊಂದಿಗೂ ಮೈತ್ರಿಯಿಂದ ವರ್ತಿಸುವಂತೆ ಪರಮಾತ್ಮನು ಮುಸಲ್ಮಾನರ ಮೇಲೆ ಕೃಪಾದೃಷ್ಟಿಯನ್ನು ಬೀರಲಿ. (೧೪೪)

*ಹರಿದು ಹೋಗುವುದು ಆಕಾಶ; ಆಯಿತು, ಅವನು ಅಂದು ಆಲಸ್ಯಯುಕ್ತನಾಗಿರುವನು. ಮತ್ತು ದೇವತೆಗಳು ಅದರ ಅಂಚುಗಳು ಮೇಲೆ ಇರುವವರು ಮತ್ತು ಆ ದಿನ ನಿನ್ನ ಪ್ರಭುವಿನ ಆಸನವನ್ನು ಎಂಟು ಜನರು ತಮ್ಮ ಹೆಗಲುಗಳ ಮೇಲೆ ಎತ್ತುವರು. ಆ ದಿನ ಎದುರಿಗೆ ತರಲ್ಪಡುವೆ ನೀನು; ಮುಚ್ಚಿಟ್ಟ ಯಾವ ಮಾತೂ ಗುಪ್ತವಾಗಿರುವುದಿಲ್ಲ. ಆಯಿತು; ಯಾವನಿಗೆ ಕರ್ಮಪತ್ರವು ಅವನ ಬಲಗೈಯಲ್ಲಿ ಕೊಡಲ್ಪಡುವುದೋ ಆಗಲೇ ಅವನು 'ತೆಗೆದುಕೋ, ಓದು ನನ್ನ ಕರ್ಮಪತ್ರವನ್ನು' – ಎನ್ನುವನು. ಮತ್ತು ಯಾವನಿಗೆ ಕರ್ಮಪತ್ರವು ಎಡಗೈಯಲ್ಲಿ ಕೊಡಲ್ಪಡುವುದೋ, ಅವನು– "ಅಯ್ಯೋ! ನನಗೆ ನನ್ನ ಕರ್ಮಪತ್ರ ಕೊಡಲ್ಪಡದೇ ಇರಬೇಕಾಗಿತ್ತು!" – ಎಂದು ಹೇಳುವನು. (ಮಂ–೭, ಸಿ–೨೯, ಸೂ– ೬೯, ಆ–೧೬,೧೯, ೨೫)*

**ಸಮೀಕ್ಷಕ :–** ಭಲೇ! ಎಂತಹ ಫಿಲಾಸಫೀ ಮತ್ತು ನ್ಯಾಯದ ಮಾತಾಗಿದೆ? ಅಲ್ಲ; ಆಕಾಶವೂ ಎಂದಾದರೂ ಹರಿದುಹೋಗಬಲ್ಲದೇ? ಅದು ಹರಿದು ಹೋಗುವುದಕ್ಕೆ ಬಟ್ಟೆಯ ಹಾಗಿದೆಯೇನು? ಮೇಲಿನ ಲೋಕವನ್ನು ಆಕಾಶವೆಂದು ಹೇಳುವರಾದರೆ, ಈ ಕಥನ ವಿದ್ಯಾ ವಿರುದ್ಧವಾಗಿರುತ್ತದೆ. ಈಗ ಕುರಾನಿನ ಖುದಾ ಶರೀರಧಾರಿಯಾಗಿವುದರಲ್ಲಿ ಸಂಶಯಾಸ್ಪದವಾದುದೇನೂ ಉಳಿಯಲಿಲ್ಲ. ಏಕೆಂದರೆ, ಆಸನದ ಮೇಲೆ ಕುಳಿತುಕೊಳ್ಳುತ್ತಾನೆ. ಎಂಟು ಜನ ಬೋಯಿಗಳಿಂದ ಎತ್ತಿಸಲ್ಪಡುವುದು – ಮೂರ್ತಿಮಂತನ ಹೊರತು ಮತ್ತಾರಿಗೂ ಅನ್ವಯಿಸದು. ಮತ್ತು ಮುಂದೆ ಅಥವಾ ಹಿಂದೆ ಆಗಮನ – ನಿರ್ಗಮನ ಮಾಡುವುದು ಮೂರ್ತಿಮಂತನಿಗೆ ಮಾತ್ರವೇ ಶಕ್ಯವಾಗಿರುತ್ತದೆ. ಅವನು ಮೂರ್ತಿಮಂತನಾಗಿರುವಾಗ, ಏಕದೇಶೀಯನಾಗಿರುವುದರಿಂದ, ಸರ್ವಜ್ಞನೂ, ಸರ್ವವ್ಯಾಪಕನೂ, ಸರ್ವಶಕ್ತಿವಂತನೂ ಆಗಿರಲಾರನು. ಮತ್ತು (ಏಕದೇಶೀಯನಾಗಿರುವ ಪಕ್ಷದಲ್ಲಿ) ಸಮಸ್ತ ಜೀವರ ಸರ್ವಕರ್ಮಗಳನ್ನೂ ಎಂದಿಗೂ ತಿಳಿದುಕೊಳ್ಳಲಾರನು. ಪುಣ್ಯಾತ್ಮರುಗಳ ಬಲಗೈಯಲ್ಲಿ ಪತ್ರಗಳನ್ನು ಕೊಡುವುದು, ಓದಿಸುವುದು, ಸ್ವರ್ಗಕ್ಕೆ ಕಳುಹಿಸುವುದು, ಮತ್ತು ಪಾಪಾತ್ಮರುಗಳ ಎಡಗೈಯಲ್ಲಿ ಕರ್ಮ–ಪತ್ರಗಳನ್ನು ಕೊಡುವುದು, ನರಕಕ್ಕೆ ಕಳುಹಿಸುವುದು, ಕರ್ಮಪತ್ರನ್ನೋದಿ ನ್ಯಾಯ ತೀರ್ಮಾನಮಾಡುವುದು– ಇದು ಮಹದಾಶ್ಚರ್ಯದ ವಿಷಯವಾಗಿದೆ. ಭಲೇ! ಈ ವ್ಯವಹಾರ ಸರ್ವಜ್ಞನದಾಗಬಲ್ಲದೇ? ಎಂದಿಗೂ ಇಲ್ಲ. ಇದೆಲ್ಲವೂ ಹುಡುಗುತನದ ಲೀಲೆಯಾಗಿದೆ. (೧೪೫)

*ಅವನ ಆತ್ಮನ ಕಡೆಗೆ ದೇವತೆಗಳು – "ಆ ದಿವಸದಂದು ಮಹಾವಿಪತ್ತು ಆಗುವುದು ಮತ್ತು ಅದರ ಅವಧಿ ೫೦,೦೦೦ ವರ್ಷಗಳಷ್ಟಾಗಿದೆ," – ಎನ್ನುವರು. ಯಾವಾಗ ಸಮಾಧಿಗಳಿಂದ, ವಿಗ್ರಹಗಳ ಆಲಯಗಳ ಕಡೆಗೆ ಓಡುವಂತೆ, ಓಡುತ್ತಾ ಹೊರಡುತ್ತಾರೋ, (ಮಂ–೭, ಸಿ–೨೯, ಸೂ–೭೦, ಆ–೪, ೪೩)*

**ಸಮೀಕ್ಷಕ:–** ೫೦,೦೦೦ ವರ್ಷಗಳು ದಿನದ ಪರಿಮಾಣವಾಗಿದ್ದರೆ, ೫೦,೦೦೦ ವರ್ಷದ ರಾತ್ರಿ ಏತಕ್ಕಿಲ್ಲ? ಅಷ್ಟು ದೊಡ್ಡ ರಾತ್ರಿಯಿಲ್ಲವಾದರೆ, ಅಷ್ಟು ದೊಡ್ಡ ಹಗಲು ಎಂದಿಗೂ ಇರಲಾರದು. ೫೦,೦೦೦ ವರ್ಷಗಳವರೆಗೆ, ಖುದಾ ದೇವತೆಗಳು ಮತ್ತು ಕರ್ಮಪತ್ರಗಳವರು ನಿಂತುಕೊಂಡು, ಅಥವಾ ಕುಳಿತುಕೊಂಡು ಅಥವಾ ಎಚ್ಚರದ ಸ್ಥಿತಿಯಲ್ಲಿಯೇ ಇರುವರೇನು? ಹೀಗೆ

---

೨೨. ಮೊದಲು ಉತ್ತರ ಭಾರತದಲ್ಲಿ ವರ–ಕನ್ಯಾನ್ವೇಷಣದಲ್ಲಿ ನಾಯಿಂದನ ಪಾತ್ರ ಬಹಳವಾಗಿತ್ತು. ಇದು ಮುಸ್ಲಿಮರಲ್ಲಿನ ವ್ಯವಸ್ಥೆ. ಇದನ್ನು ಹಿಂದೂ ಕಾಯಸ್ಥರು ಅನುಕರಣೆ ಮಾಡಿ ತಮ್ಮಲ್ಲಿಗೂ ಜಾರಿಗೆ ತಂದರು. ಹಳ್ಳಿಗಳಲ್ಲಿ ಈಗಲೂ ಪ್ರಚಲಿತವಾಗಿದೆ.

ಇರುವರಾದರೆ, ಸರ್ವರೂ ರೋಗಿಗಳಾಗಿ, ಮತ್ತೆ ಸತ್ತೇ ಹೋಗುವರು. ಸಮಾಧಿಗಳಿಂದ ಎದ್ದು ಖುದಾನ ನ್ಯಾಯಾಲಯದ ಕಡೆಗೆ ಓಡುವರೇನು? ಸಮ್ಮನ್ಸ್- ಎಂದರೆ ನ್ಯಾಯಾಲಯದ ಕರೆಯೋಲೆ ಸಮಾಧಿಗಳಿಗೆ ಹೇಗೆ ತಲುಪುವವು? ಮತ್ತು ಯಾರು ಪುಣ್ಯಾತ್ಮರೋ, ಅಥವಾ ಪಾಪಾತ್ಮರೋ ಆಗಿದ್ದಾರೋ, ಆ ಬಡಪಾಯಿಗಳೆಲ್ಲರನ್ನೂ ಇಷ್ಟು ಕಾಲದ ವರೆಗೆ ಸಮಾಧಿಗಳಲ್ಲಿಯೇ ವಿಚಾರಾಧೀನರನ್ನಾಗಿ ಇಟ್ಟರೇತಕ್ಕೆ? ಮತ್ತು ಈ ದಿನಗಳಲ್ಲಿ ಖುದಾನ ನ್ಯಾಯಾಲಯ ಮುಚ್ಚಿ ಹೋಗಿರಬಹುದು ಮತ್ತು ಖುದಾ ಹಾಗೂ ದೇವತೆಗಳು ನಿಷ್ಕರ್ಮರಾಗಿ ಕುಳಿತಿರಬಹುದೇ? ಅಥವಾ ಯಾವ ಕೆಲಸವನ್ನು ಮಾಡುತ್ತಿರಬಹುದು? ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತು, ಅತ್ತ-ಇತ್ತ ತಿರುಗುತ್ತಾ, ನಿದ್ರಿಸುತ್ತಾ, ನೃತ್ಯ - ವಿನೋದಗಳನ್ನು ನೋಡುತ್ತಾ ಅಥವಾ ಭೋಗ ವಿಲಾಸಗಳಲ್ಲಿ ನಿರತರಾಗಿ ಇರಬಹುದೇನು? ಇಂತಹ ಮೊಬ್ಬು ಯಾವನ ರಾಜ್ಯದಲ್ಲಿಯೂ ಇರಲಾರದು. ಇಂತಹ ಮಾತುಗಳನ್ನು ಕಾಡು ಜನರ ಹೊರತು ಬೇರೆ ಯಾವನು ಒಪ್ಪಿಕೊಳ್ಳುವನು? (೧೪೬)

*ನಿಶ್ಚಯವಾಗಿ ಉತ್ಪನ್ನ ಮಾಡಿದೆವು ನಿಮ್ಮನ್ನು ಅನೇಕ ಪ್ರಕಾರಗಳಿಂದ ಅಲ್ಲಾಹನು ಏಳು ಆಕಾಶಗಳನ್ನು ಪದರ-ಪದರವಾಗಿ ಹೇಗೆ ಸೃಜಿಸಿದ್ದಾನೆ- ಎಂದು ನೀವು ನೋಡಲಿಲ್ಲವೇನು? ಮತ್ತು ಚಂದ್ರನನ್ನು ಅದರ ನಡುವೆ ಪ್ರಕಾಶಕನನ್ನಾಗಿ ಮಾಡಿದನು ಮತ್ತು ಸೂರ್ಯನನ್ನು ದೀಪವನ್ನಾಗಿ ಮಾಡಿದನು. (ಮಂ-೭,ಸಿ-೨೯, ಸೂ-೭೧, ಆ-೧೪,೧೬)*

**ಸಮೀಕ್ಷಕ:-** ಜೀವರನ್ನು ಖುದಾ ಉತ್ಪನ್ನಮಾಡಿದ್ದಾನೆಯಾದರೆ, ಅವರು ಎಂದಿಗೂ ನಿತ್ಯರೂ, ಅಮರರೂ, ಆಗಿರಲಾರರು. ಮತ್ತೆ ಸ್ವರ್ಗದಲ್ಲಿ ಸರ್ವದಾ ಹೇಗೆ ತಾನೇ ಇರಬಲ್ಲರು? ಯಾವುದು ಉತ್ಪನ್ನವಾಗುತ್ತದೋ ಆ ವಸ್ತು ಅವಶ್ಯವಾಗಿ ನಾಶವಾಗಿ ಹೋಗುತ್ತದೆ, ಆಕಾಶವನ್ನು ಮೇಲೆ ತಳಕ್ಕೆ ಹೇಗೆ ಮಾಡಬಲ್ಲನು? ಏಕೆಂದರೆ, ಅದು ನಿರಾಕಾರವೂ ಮತ್ತು ವ್ಯಾಪಕವೂ ಆದ ಪದಾರ್ಥವಾಗಿದೆ. ಬೇರೆ ವಸ್ತುವಿನ ಹೆಸರನ್ನು ಆಕಾಶವೆಂದು ಇಡುವಿರಾದರೆ, ಆಗಲೂ ಕೂಡ ಅದರ ಹೆಸರನ್ನು ಆಕಾಶವೆಂದಿರಿಸುವುದು ವ್ಯರ್ಥವಾಗಿದೆ. ಮೇಲೆ-ಕೆಳಗೆ ಆಕಾಶಗಳನ್ನು ಸೃಜಿಸಿರುವನಾದರೆ, ಅವೆಲ್ಲವುಗಳ ನಡುವೆ ಚಂದ್ರ-ಸೂರ್ಯರು ಎಂದಿಗೂ ಇರಲಾರರು. ಮಧ್ಯದಲ್ಲಿ ಇಡಲ್ಪಡುವುದಾದರೆ, ಮೇಲಿನದೊಂದು ಮತ್ತು ಕೆಳಗಿನದೊಂದು ಪದಾರ್ಥ ಪ್ರಕಾಶಿತವಾಗುತ್ತದೆ. ಎರಡನೆಯದರಿಂದ ಆರಂಭಿಸಿ, ಎಲ್ಲದರಲ್ಲಿಯೂ ಕತ್ತಲೆಯಿರಬೇಕು. ಹಾಗೇನೂ ಕಾಣುವುದಿಲ್ಲ. ಆದುದರಿಂದ, ಈ ಮಾತು ಸರ್ವಥಾ ಸುಳ್ಳಾಗಿದೆ. (೧೪೭)

*ತಥ್ಯವೆಂದರೆ, ಮಸೀದಿಗಳಿರುವುದು ಅಲ್ಲಾಹನ ಸಲುವಾಗಿ, ಸರಿ; ಕರೆಯ ಬೇಡಿ ಮತ್ತೆ ಯಾವನನ್ನೂ ಅಲ್ಲಾಹನೊಂದಿಗೆ. (ಮಂ-೭,ಸಿ-೨೯, ಸೂ- ೭೨, ಆ-೧೮)*

**ಸಮೀಕ್ಷಕ :-** ಈ ಮಾತು ಸತ್ಯವಾಗಿದೆಯಾದರೆ, ಮುಸಲ್ಮಾನರು- **"ಲಾ ಇಲಾಹ್ ಇಲ್ಲಿಲ್ಲಾಃ ಮುಹಮ್ಮದುರ್ರಸೂಲಲ್ಲಾಃ" -** ಈ ಕಲಮಾದಲ್ಲಿ[೭೩] ಖುದಾನ ಸಂಗಾತಿಯಾಗಿ ಮುಹಮ್ಮದ್ ಸಾಹೇಬರನ್ನು ಏತಕ್ಕೆ ಕರೆಯುತ್ತಾರೆ? ಈ ಮಾತು ಕುರಾನಿಗೆ ವಿರುದ್ಧವಾಗಿದೆ ಮತ್ತು (ಹಾಗೆ ಕರೆಯುವಾಗ) ವಿರುದ್ಧವಾದುದನ್ನು ಮಾಡುವುದಿಲ್ಲವೆಂದರೆ, ಕುರಾನಿನ ಈ ಮಾತನ್ನು ಸುಳ್ಳಾಗಿಸುತ್ತಾರೆ. ಮಸೀದಿಗಳು ಖುದಾನ ಮನೆಗಳಾದರೆ, ಮುಸಲ್ಮಾನರು ಮಹಾಮೂರ್ತಿಪೂಜಕರಾದರು. ಏಕೆಂದರೆ, ಪೌರಾಣಿಕರು ಮತ್ತು ಜೈನರು ಚಿಕ್ಕ ವಿಗ್ರಹವನ್ನು ಈಶ್ವರನ ಮನೆಯೆಂದು ಒಪ್ಪುವುದರಿಂದ ಮೂರ್ತಿಪೂಜಕರೆಂದು ನಿರ್ಧರಿಸಲ್ಪಡುವಂತೆಯೇ, ಈ ಜನರು ಏತಕ್ಕಾಗಿ ಮಹಾಮೂರ್ತಿಪೂಜಕರೆಂದು ನಿರ್ಧರಿಸಲ್ಪಡಲಾರರು? (೧೪೮)

*ಒಂದುಗೂಡಿಸಲ್ಪಡುವರು ಸೂರ್ಯನು ಮತ್ತು ಚಂದ್ರನು. (ಮಂ-೭, ಸಿ-೨೯,ಸೂ-೭೫, ಆ-೯)*

**ಸಮೀಕ್ಷಕ :-** ಆಹಾ! ಸೂರ್ಯನು ಮತ್ತು ಚಂದ್ರನು ಎಂದಿಗಾದರೂ ಒಂದಾಗ ಬಲ್ಲರೇ? ನೋಡಿರಿ, ಇದೆಷ್ಟು ತಿಳುವಳಿಕೆಯಿಲ್ಲದ ಮಾತಾಗಿದೆ? ಮತ್ತು ಸೂರ್ಯ-ಚಂದ್ರರನ್ನು ಮಾತ್ರ ಒಂದುಗೂಡಿಸುವುದರಲ್ಲಿ ಯುಕ್ತಿ ಏನಿದೆ? ಇಂತಹ-ಇಂತಹ ಅಸಂಭವವಾದ ಮಾತುಗಳು ಎಂದಿಗಾದರೂ ಪರಮೇಶ್ವರಕೃತವಾಗಬಲ್ಲವೇನು? ಅವಿದ್ವಾಂಸರ ಹೊರತು ಬೇರೆ ಯಾವ ವಿದ್ವಾಂಸನ ಮಾತುಗಳೂ ಕೂಡ ಆಗಿರಲಾರವು. (೧೪೯)

---

೭೩. ಇಸ್ಲಾಂ ಧರ್ಮದ ಮೂಲ ಮಂತ್ರ.

*ಮತ್ತು ತಿರುಗಾಡುವವರು ಅವುಗಳ ಮೇಲೆ ಸದಾ ಇರುವ ಬಾಲಕರುಗಳು. ಯಾವಾಗ ನೀನು ಅವರನ್ನು ನೋಡುವೆಯೋ, ಆಗ ನೀನು ಅವರುಗಳನ್ನು ಚದರಿದ ಮುತ್ತಗಳೆಂದು ಊಹಿಸುವೆ. ಮತ್ತು ಬೆಳ್ಳಿಯ ಕಡಗಗಳು ತೊಡಿಸಲ್ಪಡುವುವು ಮತ್ತು ಪ್ರಭುವು ಪವಿತ್ರವಾದ ಮದ್ಯವನ್ನು ಅವರಿಗೆ ಕುಡಿಸುವನು. (ಮಂ-೭, ಸಿ-೨೯, ಸೂ-೭೬, ಆ-೧೯, ೨೧)*

**ಸಮೀಕ್ಷಕ:-** ಏನು ಮಹಾಶಯರೇ! ಮುತ್ತಿನ ಬಣ್ಣದ ಹುಡುಗರು ಅಲ್ಲಿ ಏತಕ್ಕಾಗಿರುತ್ತಾರೆ? ಯುವಕರು ಸೇವೆಯನ್ನು ಮಾಡಲಾರರೇ? ಅಥವಾ ನಾರಿಯರು ಅವರನ್ನು ತೃಪ್ತರನ್ನಾಗಿ ಮಾಡಲಾರರೇ? ದುಷ್ಟ ಜನರು ಬಾಲಕರೊಂದಿಗೆ ಮಾಡುವ ಈ ಮಹಾಪಾಪಕಾರ್ಯದ ಮೂಲ ಕುರಾನಿನ ಈ ವಚನವೇ ಆಗಿದ್ದರೆ, ಅದರಲ್ಲಿ ಆಶ್ಚರ್ಯವಾದರೂ[೭೪] ಏನು? ಮತ್ತು ಸ್ವರ್ಗದಲ್ಲಿ ಸ್ವಾಮಿ-ಸೇವಕಭಾವವಿರುವುದರಿಂದ, ಸ್ವಾಮಿಗೆ ಆನಂದ ಮತ್ತು ಸೇವಕನಿಗೆ ಪರಿಶ್ರಮವಾಗುವುದರಿಂದ ದುಃಖವಾಗುವುದು. ಮತ್ತು ಪಕ್ಷಪಾತವೇತಕ್ಕಿದೆ? ಮತ್ತು ಸ್ವತಃ ಖುದಾ ಮದ್ಯವನ್ನು ಕುಡಿಸುವನಾದರೆ, ಅವನು ಅವರಿಗೆ ಸೇವಕನಂತಾಗುವನು, ಮತ್ತು ಖುದಾನ ಹಿರಿಮೆ ಹೇಗೆ ತಾನೇ ಉಳಿದೀತು? ಮತ್ತು ಅಲ್ಲಿ, ಸ್ವರ್ಗದಲ್ಲಿ ಸ್ತ್ರೀ-ಪುರುಷರ ಸಮಾಗಮ ಮತ್ತು ಗರ್ಭಸ್ಥಿತಿ ಹಾಗೂ ಮಕ್ಕಳು- ಮರಿಗಳೂ ಕೂಡ ಆಗುತ್ತಾರೋ ಅಥವಾ ಇಲ್ಲವೋ? ಆಗುವುದಿಲ್ಲವಾದರೆ, ಅವರ ವಿಷಯ ಸೇವನ ಮಾಡುವಿಕೆ ವ್ಯರ್ಥವಾಯಿತು. ಮತ್ತು ಆಗುವರಾದರೆ, ಆ ಜೀವರು ಎಲ್ಲಿಂದ ಬಂದರು? ಮತ್ತು ಖುದಾನ ಸೇವೆಯನ್ನು ಮಾಡದೆಯೇ ಸ್ವರ್ಗದಲ್ಲಿ ಏಕೆ ಜನಿಸಿದರು? ಜನಿಸಿದ ಪಕ್ಷದಲ್ಲಿ, ನಂಬಿಕೆಯನ್ನಿಡದೆಯೇ ಮತ್ತು ಖುದಾನ ಭಕ್ತಿಯನ್ನು ಮಾಡದೆಯೇ ಬಿಟ್ಟಿಯಾಗಿ ಸ್ವರ್ಗ ಸಿಕ್ಕಿಹೋಯಿತು! ಯಾರಾರೋ ಬಡಪಾಯಿಗಳಿಗೆ ನಂಬಿಕೆಯಿಡುವುದರಿಂದ ಮತ್ತು ಇನ್ನು ಯಾರಾರಿಗೋ ಧರ್ಮವಿಲ್ಲದೆಯೇ ಸುಖ ಸಿಕ್ಕಿಬಿಡುವುದು- ಇದಕ್ಕಿಂತ ಬೇರೆ ದೊಡ್ಡ ಅನ್ಯಾಯ ಯಾವುದಿದ್ದೀತು? (೧೫೦)

*ಕರ್ಮಾನುಸಾರವಾಗಿ ಪ್ರತಿಫಲಗಳು ಕೊಡಲ್ಪಡುವುವು. ಮತ್ತು ಬಟ್ಟಲುಗಳಿವೆ ತುಂಬಿರುವಂತಹವು. ಯಾವದಿನ ರೂಹ್ (ಆತ್ಮ) ಮತ್ತು ದೇವತೆಗಳು ಸಾಲು ಕಟ್ಟಿನಿಲ್ಲುವರೋ..... (ಮಂ-೭, ಸಿ-೩೦, ಸೂ-೭೮, ಆ-೨೬,೩೪,೩೮)*

**ಸಮೀಕ್ಷಕ:-** ಕರ್ಮಾನುಸಾರವಾಗಿ ಫಲಗಳು ಕೊಡಲ್ಪಡುವವಾದರೆ, ಸದಾ ಸ್ವರ್ಗದಲ್ಲಿರುವ ಅಪ್ಸರೆಯರು, ದೇವತೆಗಳು ಮತ್ತು ಮುತ್ತಿನಂತಿರುವ ಹುಡುಗರು - ಇವರಿಗೆ ಯಾವ ಕರ್ಮಕ್ಕನುಸಾರವಾಗಿ ಸದಾಕಾಲಕ್ಕೂ ಸ್ವರ್ಗ ಸಿಕ್ಕಿತು? ಬಟ್ಟಲುಗಳಲ್ಲಿ ತುಂಬಿ - ತುಂಬಿ ಮದ್ಯವನ್ನು ಕುಡಿಯುವರಾದರೆ, ಮತ್ತರಾಗಿ ಕಾದಾಡದೆಯಿರುವರೆಂತು? ಈ ಸ್ಥಳದಲ್ಲಿ 'ರೂಹ್'[೭೫] ಎನ್ನುವುದು ಎಲ್ಲ ದೇವತೆಗಳಿಗಿಂತಲೂ ದೊಡ್ಡವನಾಗಿರುವ ಒಬ್ಬ ದೇವತೆಯ ಹೆಸರಾಗಿದೆ. ಖುದಾ ರೂಹ್ ಮತ್ತು ಬೇರೆ ದೇವತೆಗಳನ್ನು ಪಂಕ್ತಿಬದ್ಧರಾಗಿ ನಿಲ್ಲಿಸಿ, ಸೇನಾವ್ಯೂಹ ರಚಿಸುವನೇನು? ಸೇನೆಯಿಂದ ಸರ್ವಜೀವರಿಗೂ ಶಿಕ್ಷೆಯನ್ನು ಕೊಡಿಸುವನೇನು? ಮತ್ತು ಖುದಾ ಆಗ ನಿಂತಿರುವನೋ ಅಥವಾ ಕುಳಿತಿರುವನೋ? ಕಯಾಮತ್ತಿನ ವರೆಗೆ ಖುದಾ ತನ್ನ ಸೇನೆಯನ್ನೆಲ್ಲಾ ಒಟ್ಟುಗೂಡಿಸಿ, ಸೈತಾನನನ್ನು ಹಿಡಿದುಕೊಳ್ಳುವನಾದರೆ, ಅವನ ರಾಜ್ಯ ನಿಷ್ಕಂಟಕವಾಗುವುದು. ಈಶ್ವರತ್ವವೆಂಬ ಹೆಸರು ಇದರದೇ ಆಗಿದೆ. (೧೫೧)

*ಯಾವಾಗ ಸೂರ್ಯನು ಸುತ್ತಲ್ಪಡುವನೋ, ಮತ್ತು ಯಾವಾಗ ನಕ್ಷತ್ರಗಳು ಮಸಕು - ಮಸಕಾಗಿ ಹೋಗುವವೋ, ಮತ್ತು ಯಾವಾಗ ಪರ್ವತಗಳು ನಡೆಯಿಸಲ್ಪಡುವವೋ ಮತ್ತು ಯಾವಾಗ ಆಕಾಶದ ಚರ್ಮ ಸುಲಿಯಲ್ಪಡುವುದೋ... (ಮಂ-೭, ಸಿ-೩೦, ಸೂ- ೮೧, ಆ-೧-೩, ೧೧)*

**ಸಮೀಕ್ಷಕ:-** ಗೋಳಾಕೃತಿಯ ಸೂರ್ಯ ಚಾಪೆಯಂತೆ ಸುತ್ತಲ್ಪಡುವನೆಂಬುದು ಅತ್ಯಂತ ಅಜ್ಞಾನದ ವಿಷಯವಾಗಿದೆ. ನಕ್ಷತ್ರಗಳು ಅದು ಹೇಗೆ ಮಸುಕಾಗಬಲ್ಲವು? ಮತ್ತು ಪರ್ವತಗಳು ಜಡವಾಗಿರುವುದರಿಂದ, ನಡೆಯುವವೆಂತು? ಮತ್ತು ಆಕಾಶದ ಚರ್ಮ ಸುಲಿಯಲ್ಪಡುವುದೆನ್ನಲು ಅದನ್ನು ಪಶುವೆಂದು ತಿಳಿದರೇನು? ಇದು ಅತ್ಯಂತ ವಿವೇಕರಹಿತವಾದ ಮಾತಾಗಿದೆ. (೧೫೨)

---

೭೪. ಪಾದ ಟಿಪ್ಪಣಿ ೬ನ್ನು ನೋಡಿ.

೭೫. ಎಂದರೆ, ಹಜರತ್ ಜಿಬ್ರಾಈಲ್. -ಯು.ಮೀ.

*ಮತ್ತು ಯಾವಾಗ ಆಕಾಶ ಹರಿದುಹೋಗುವುದೋ, ಮತ್ತು ಯಾವಾಗ ನಕ್ಷತ್ರಗಳು ಉದುರಿಹೋಗುವವೋ, ಮತ್ತು ಯಾವಾಗ ಸಮುದ್ರಗಳು ಸೀಳಲ್ಪಡುವವೋ, ಮತ್ತು ಯಾವಾಗ ಗೋರಿಗಳು ಸಜೀವಗೊಳಿಸಲ್ಪಟ್ಟು ಎಬ್ಬಿಸಲ್ಪಡುವವೋ..... (ಮಂ-೭, ಸಿ-೩೦, ಸೂ-೮೨, ಆ-೧-೪)*

**ಸಮೀಕ್ಷಕ:-** ಧನ್ಯ ಧನ್ಯ ಕುರಾನ್ ಕರ್ತೃವಾದ ಫಿಲಾಸಫರ್ ಮಹಾಶಯ! ಆಕಾಶವನ್ನು ಯಾವನಾದರೂ ಹೇಗೆ ತಾನೇ ಹರಿಯಬಲ್ಲನು? ಮತ್ತು ನಕ್ಷತ್ರಗಳನ್ನು ಹೇಗೆ ತಾನೇ ಉದುರಿಸಬಲ್ಲನು? ಮತ್ತು ಸೀಳಿಹಾಕಲು ಸಮುದ್ರಗಳು ಮರಗಳಾಗಿವೆಯೇ? ಮತ್ತು ಸಜೀವಗೊಳಿಸಲು ಆದೀತೆನ್ನಲು ಗೋರಿಗಳು ಶವಗಳೇನು? ಈ ಮಾತುಗಳೂ ಕೂಡ ಹುಡುಗರದರ ಹಾಗೆ ಇವೆ. (೧೫೩)

*ಗೋಪುರಗಳನ್ನುಳ್ಳ ಆಕಾಶದ ಆಣೆಯಿದೆ. ಆದರೆ, ಆ ಕುರಾನ್ ದೊಡ್ಡದಿದೆ. ಸುರಕ್ಷಿತ ಲೋಹದ ಪೆಟ್ಟಿಗೆಯಲ್ಲಿದೆ. (ಮಂ-೭, ಸಿ-೩೦, ಸೂ-೮೫, ಆ-೧, ೨೧, ೨೨)*

**ಸಮೀಕ್ಷಕ:-** ಈ ಕುರಾನನ್ನು ರಚಿಸಿದವನು ಭೂಗೋಳ-ಖಗೋಳಗಳನ್ನು ಸ್ವಲ್ಪವೂ ಓದಿರಲಿಲ್ಲ. ಇಲ್ಲವಾದರೆ, ಆಕಾಶವನ್ನು ಕೋಟೆಯಂತೆ ಗೋಪುರಗಳನ್ನುಳ್ಳದ್ದೆಂದು ಹೇಳುತ್ತಿದ್ದನೇಕೆ? ಮೇಷ ಮೊದಲಾದ ರಾಶಿಗಳನ್ನು "ಗೋಪುರ" ವೆನ್ನುತ್ತಾರೆ- ಎನ್ನುವುದಾದರೆ, ಬೇರೆಯವು ಗೋಪುರಗಳೇತಕ್ಕಲ್ಲ? ಆದಕಾರಣ, ಇವು ಗೋಪುರಗಳಲ್ಲ; ಆದರೆ ಎಲ್ಲ ನಕ್ಷತ್ರಗಳೂ ಲೋಕಗಳಾಗಿವೆ. ಈ ಕುರಾನ್ ಖುದಾನ ಬಳಿಯಿದೆಯೇನು? ಈ ಕುರಾನ್ ಅವನು ಬರೆದುದಾರೆ, ಅದು ಕೂಡ ವಿದ್ಯೆ ಮತ್ತು ಯುಕ್ತಿಗೆ ವಿರುದ್ಧವಾಗಿ, ಅವಿದ್ಯೆಯಿಂದ ಹೆಚ್ಚು ತುಂಬಿರಬಹುದು. (೧೫೪)

*ನಿಶ್ಚಯವಾಗಿ ಅವರು ವಂಚನೆ[೭೬] ಮಾಡುತ್ತಾರೆ, ಒಂದು ವಂಚನೆಯನ್ನು ಮತ್ತು ನಾನೂ ವಂಚನೆಯನ್ನು ಮಾಡುತ್ತೇನೆ, ಒಂದು ವಂಚನೆಯನ್ನು. (ಮಂ-೭, ಸಿ-೩೦, ಸೂ-೮೬, ಆ-೧೫,೧೬)*

**ಸಮೀಕ್ಷಕ :-** ಮೋಸಗಾರಿಕೆಯನ್ನು 'ಮಕರ್' ಎನ್ನುತ್ತಾರೆ. ಖುದಾ ಕೂಡ ಮೋಸಗಾರನೇನು? ಮತ್ತು ಕಳುವಿಗೆ ಕಳುವೇ ಉತ್ತರ ಮತ್ತು ಸುಳ್ಳಿಗೆ ಸುಳ್ಳೇ ಉತ್ತರವೇನು? ಯಾವನಾದರೂ ಕಳ್ಳನು ಸತ್ಪುರುಷನ ಮನೆಯಲ್ಲಿ ಕಳ್ಳತನವನ್ನು ಮಾಡಿದರೆ, ಅವನ ಮನೆಗೆ ಹೋಗಿ ಕಳ್ಳತನ ಮಾಡಬೇಕೇನು? ಧನ್ಯ, ಧನ್ಯ, ಕುರಾನ್ ಕರ್ತೃವೇ! ಧನ್ಯ ಧನ್ಯ!! (೧೫೫)

*ಮತ್ತು ಯಾವಾಗ ಬರುವನೋ ನಿನ್ನ ಪ್ರಭು ಮತ್ತು ದೇವತೆಗಳು ಪಂಕ್ತಿ ಬದ್ಧರಾಗಿ ಬರುವರೋ....... ಮತ್ತು ಆ ದಿನ ತರಲ್ಪಡುವುದು ನರಕ. (ಮಂ-೭, ಸಿ-೩೦, ಸೂ-೮೯, ಆ-೨೨,೨೩)*

**ಸಮೀಕ್ಷಕ :-** ಹೇಳಿರಿ ಮಹೋದಯರೇ! ಹೇಗೆ ಕೋಟಪಾಲನು ಅಥವಾ ಸೇನಾಧ್ಯಕ್ಷನು ತನ್ನ ಸೈನಿಕರನ್ನು ಸಾಲಾಗಿ ನಿಲ್ಲಿಸಿ, ಸುತ್ತಾಡುತ್ತಾನೋ, ಹಾಗೆಯೇ ಇವರ ಖುದಾ (ವರ್ತಿಸುತ್ತಾನೆಯೇ?) ಎತ್ತಿಕೊಂಡು ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಲು ನರಕ ಗುಡಾಣದಂತಿದೆ- ಎಂದು ತಿಳಿದಿದ್ದಾರೆಯೇ? ಇಷ್ಟು ಚಿಕ್ಕದಾಗಿರುವುದಾದರೆ ಅಸಂಖ್ಯ ಕೈದಿಗಳು ಅದರಲ್ಲಿ ಹೇಗೆ ಹಿಡಿಸಬಲ್ಲರು? (೧೫೬)

ಆಯಿತು. ಖುದಾನ ಪೈಗಂಬರನು ಅವರ ಸಲುವಾಗಿ **'ಖುದಾನ ಹೆಣ್ಣು ಒಂಟೆಯನ್ನು ರಕ್ಷಿಸಿರಿ ಮತ್ತು ಅದಕ್ಕೆ ನೀರನ್ನು ಕುಡಿಸಬೇಕು'.** - ಎಂದು ಹೇಳಿದ್ದನು. ತೀರಿತು; ಸುಳ್ಳಾಗಿಸಿದರು ಅದನ್ನು. ಸರಿ; ಅವರ ಕಾಲುಗಳನ್ನು ಕತ್ತರಿಸಿದನು ಮತ್ತು ಅವರುಗಳ ಪ್ರಭುವು ಅವರ ಮೇಲೆ ಮಾರೀ ಬೇನೆಯನ್ನು ಕಳುಹಿಸಿದನು. (ಮಂ-೭, ಸಿ-೩೦, ಸೂ-೯೧, ಆ-೧೩,೧೪)

**ಸಮೀಕ್ಷಕ :-** ಖುದಾ ಕೂಡ ಹೆಣ್ಣು ಒಂಟೆಯ ಮೇಲೆ ಕುಳಿತು ಪರ್ಯಟನವನ್ನು ಮಾಡುತ್ತಾರೇನು? ಇಲ್ಲವಾದರೆ, ಇಟ್ಟುಕೊಂಡನೇತಕ್ಕೆ ಮತ್ತು ಕಯಾಮತ್ತು ಬಾರದೆ, ತನ್ನ ನಿಯಮವನ್ನು ಮುರಿದು, ಅವರುಗಳ ಮೇಲೆ ಮಾರೀ ಬೇನೆಯನ್ನು ಕಳುಹಿಸಿದನೇ? ಕಳುಹಿಸಿದನಾದರೆ, ಅವರಿಗೆ ಶಿಕ್ಷೆಯನ್ನಿತ್ತನು. ಮತ್ತು ಕಯಾಮತ್ತಿನ ರಾತ್ರಿ ನ್ಯಾಯದ ತೀರ್ಪು ಮತ್ತು ಆ ರಾತ್ರಿಯ ಇರುವಿಕೆ ಸುಳ್ಳೆಂದು ತಿಳಿಯಲ್ಪಡುವುದು. ಹೆಣ್ಣು ಒಂಟೆಯ ಈ ಉಲ್ಲೇಖನದಿಂದ, ಅರಬ್ ದೇಶದಲ್ಲಿ ಗಂಡು ಒಂಟೆ-ಹೆಣ್ಣು ಒಂಟೆಗಳನ್ನುಳಿದರೆ ಬೇರೆ ವಾಹನಗಳು ಕಡಿಮೆಯಿರುತ್ತವೆ- ಎಂಬ ಊಹೆ ತಲೆಯನ್ನೆತ್ತುತ್ತದೆ. ಇದರಿಂದ, ಯಾವನೋ ಅರಬ್ ದೇಶೀಯನು ಕುರಾನನ್ನು ರಚಿಸಿದ್ದಾನೆ - ಎಂಬುದು ಸಿದ್ಧವಾಗುತ್ತದೆ. (೧೫೭)

---

೭೬. ಕುರಾನಿನಲ್ಲಿ ಇದಕ್ಕೆ 'ಮಕರ್' ಎಂಬ ಶಬ್ದವಿದೆ.

*ಈ ರೀತಿ ಅವನು ನಿಲ್ಲನಾದರೆ, ನಾವು ಅವಶ್ಯಕವಾಗಿ ಅವನನ್ನು ಅವನ ಮುಂಗುರುಳುಗಳನ್ನು ಹಿಡಿದು ಎಳೆಯುವೆವು. ಆ ತಲೆ ಸುಳ್ಳುಗಾರ ಹಾಗೂ ಅಪರಾಧಿಯಾಗಿದೆ. ನಾವು ಕರೆಯುವೆವು ನರಕದ ದೇವತೆಯನ್ನು. (ಮಂ-೭, ಸಿ-೩೦, ಸೂ-೬೬, ಆ-೧೫,೧೬,೧೮)*

**ಸಮೀಕ್ಷಕ :–** ನೀಚ ಕಾರ್ಯವಾದ ಈ ಭೃತ್ಯರುಗಳದಾದ, ಎಳೆದಾಟದಿಂದಲೂ ಕೂಡ ಖುದಾ ದೂರ ಉಳಿಯಲಿಲ್ಲ! ಓಹೋ ತಲೆ ಎಂದಿಗಾದರೂ ಸುಳ್ಳುಗಾರ ಹಾಗೂ ಅಪರಾಧಿಯಾಗಬಲ್ಲದೇ? ಕಾರಾಗಾರದ ಅಧಿಕಾರಿಯನ್ನು ಕರೆಕಳುಹಿಸುವಂತೆ ವರ್ತಿಸುವ ಇವನು ಜೀವನಲ್ಲದೆ ಎಂದಾದರೂ ಖುದಾ ಆಗಬಲ್ಲನೇ? (೧೫೮).

*ನಿಶ್ಚಯವಾಗಿ ಇಳಿಸಿದೆವು ನಾವು ಕುರಾನನ್ನು ಪ್ರಾರ್ಥನೆಯ ರಾತ್ರಿಯ ನಡುವೆ, ಮತ್ತು ಪ್ರಾರ್ಥನಾ ರಾತ್ರಿ ಏನೆಂದು ನೀನೇನು ಬಲ್ಲೆ? ಅದರ ನಡುವೆ ದೇವತೆಗಳೂ ಮತ್ತು ಪವಿತ್ರಾತ್ಮನೂ ಪ್ರತಿಯೊಂದು ಕಾರ್ಯಕ್ಕಾಗಿಯೂ ತಮ್ಮ ಪ್ರಭುವಿನ ಆಜ್ಞೆಯೊಂದಿಗೆ ಇಳಿಯುತ್ತಾರೆ. (ಮಂ-೭, ಸಿ-೩೦, ಸೂ-೯೭, ಆ-೧,೨,೪)*

**ಸಮೀಕ್ಷಕ:–** ಒಂದೇ ರಾತ್ರಿಯಲ್ಲಿ ಕುರಾನ್ ಇಳಿಯಿತಾದರೆ, "ಆ ಆಯತ್ತು ಆ ಸಮಯದಲ್ಲಿಳಿಯಿತು ಮತ್ತು ನಿಧಾನ-ನಿಧಾನವಾಗಿ ಇಳಿಸಿದನು". – ಎಂಬ ಈ ಮಾತು ಹೇಗೆ ತಾನೇ ಶಕ್ಯವಾಗಬಲ್ಲದು? ಮತ್ತು ರಾತ್ರಿ ಅಂಧಕಾರಮಯವಾಗಿದೆ. ಈ ಬಗೆಗೆ ಕೇಳುವುದಾದರೂ ಏನಿದೆ? ಮೇಲೆ- ಕೆಳಗೆ – ಎಂಬುದೇನೂ ಸಿದ್ಧಿಸದು – ಎಂದು ನಾವು ಬರೆದೇ ಇದ್ದೇವೆ. ಮತ್ತು ಇಲ್ಲಿ "ದೇವತೆಗಳು ಮತ್ತು ಪವಿತ್ರಾತ್ಮಾ ಖುದಾನ ಅಪ್ಪಣೆಯಿಂದ ಜಗದ್ವ್ಯವಸ್ಥೆಮಾಡಲು ಬರುತ್ತಾರೆ – ಎಂದ ಕಾರಣ ಖುದಾ ಮಾನವರಂತೆ ಏಕದೇಶೀಯನಾಗಿದ್ದಾನೆ- ಎಂದು ಸ್ಪಷ್ಟವಾಯಿತು." – ಎಂದು ಬರೆಯುತ್ತೇವೆ. ಇಲ್ಲಿಯವರೆಗೆ ಖುದಾ ದೇವತೆಗಳು ಮತ್ತು ಪೈಗಂಬರ್- ಈ ಮೂವರ ಕತೆಯಿದೆಯೆಂದು ನೋಡಿದ್ದೆವು. ಈಗ ಒಬ್ಬ ಪವಿತ್ರಾತ್ಮಾ ನಾಲ್ಕನೆಯವನಾಗಿ ಹೊರಟುಬಂದನು! ಈಗ ಈ ಪವಿತ್ರಾತ್ಮಾ ಏನಾಗಿದ್ದಾನೋ- ತಿಳಿಯದು. ಇದೇನೋ ಕ್ರೈಸ್ತರ ಮತದಂತೆ, ಎಂದರೆ – ಪಿತಾ, ಪುತ್ರ ಹಾಗೂ ಪವಿತ್ರಾತ್ಮಾ – ಈ ಮೂವರನ್ನು ಒಪ್ಪುವುದಕ್ಕಿಂತ ಹೆಚ್ಚಾಗಿ, ನಾಲ್ಕನೆಯವನೂ ಕೂಡ ಬಂದಿಳಿದನು! ನಾವು ಈ ಮೂವರನ್ನೂ "ಖುದಾ" ಎಂದು ಒಪ್ಪೆವು- ಎನ್ನುವಿರಾದರೆ, ಹಾಗೂ ಆಗಲಿ; ಆದರೆ ಪವಿತ್ರಾತ್ಮನು ಬೇರೆಯಿರುವಾಗ, ಖುದಾ, ದೇವತೆಗಳು ಮತ್ತು ಪೈಗಂಬರರನ್ನು ಪವಿತ್ರಾತ್ಮರೆನ್ನಬೇಕೋ ಅಥವಾ ಬೇಡವೋ? ಪವಿತ್ರಾತ್ಮರಾಗಿದ್ದಾರೆ ಎಂದಾದರೆ, ಕೇವಲ ಒಬ್ಬನ ಹೆಸರು "ಪವಿತ್ರಾತ್ಮ" ನೆಂದೇಕೆ? ಮತ್ತು ಕುದುರೆಗಳೇ ಮೊದಲಾದ ಪ್ರಾಣಿಗಳು, ರಾತ್ರಿ-ಹಗಲು ಮತ್ತು ಕುರಾನ್-ಮೊದಲಾದುವುಗಳ ಮೇಲೆ ಖುದಾ ಅಣೆಯಿಡುತ್ತಾನೆ. ಆಣೆಯಿಡುವುದು ಸತ್ಪುರುಷರ ಕಾರ್ಯವಲ್ಲ (೧೫೯)

*ಹೀಗೆ ಈ ಕುರಾನಿನ ವಿಷಯವನ್ನು ಸಂಕ್ಷಿಪ್ತವಾಗಿ ಬರೆದು, ಬುದ್ಧಿವಂತರ ಸಮ್ಮುಖದಲ್ಲಿ" ಈ ಪುಸ್ತಕ ಹೇಗಿದೆ? ಎಂದು ವಿಮರ್ಶಿಸಲಿ" – ಎಂದು ಮಂಡಿಸುತ್ತೇನೆ. ನನ್ನನ್ನು ಕೇಳುವಿರಾದರೆ, ಈ ಪುಸ್ತಕ ಈಶ್ವರನಿಂದ ಅಥವಾ ವಿದ್ವಾಂಸನಿಂದ ರಚಿತವಾದುದಲ್ಲ; ಮತ್ತು ವಿದ್ಯಾಪುಸ್ತಕವೂ ಆಗಲಾರದು. ಜನರು ವಂಚನೆಗೆ ಸಿಕ್ಕಿ ತಮ್ಮ ಜನ್ಮವನ್ನು ವ್ಯರ್ಥವಾಗಿ ಕಳೆದುಕೊಳ್ಳದಿರಲಿ- ಎಂಬ ಉದ್ದೇಶ್ಯದಿಂದ, ಈ ರೀತಿ ಅಲ್ಪ-ಸ್ವಲ್ಪ ದೋಷಗಳನ್ನು ಪ್ರಕಟಪಡಿಸಿದ್ದೇನೆ. ಇದರಲ್ಲಿರುವ ಸ್ವಲ್ಪ ಸತ್ಯ, ವೇದಗಳೇ ಮೊದಲಾದ ವಿದ್ಯಾ ಪುಸ್ತಕಗಳಿಗೆ ಅನುಕೂಲವಾಗಿರುವುದರಿಂದ, ನನಗೆ ಹೇಗೋ ಹಾಗೆಯೇ ಹಠ ಮತ್ತು ಪಕ್ಷಪಾತಗಳಿಂದ ರಹಿತರಾದ, ವಿದ್ವಾಂಸರೂ, ಬುದ್ಧಿಶಾಲಿಗಳೂ ಆದ ಅನ್ಯಮತೀಯರಿಗೂ ಗ್ರಾಹ್ಯವಾಗಿದೆ. ಇದನ್ನು ಬಿಟ್ಟರೆ ಇದರಲ್ಲಿರುವ ಬೇರೆ ವಿಷಯಗಳೆಲ್ಲಾ ಅವಿದ್ಯೆ, ಭ್ರಾಂತಿ ಜಾಲ ಮತ್ತು ಮಾನವನ ಆತ್ಮನನ್ನು ಪಾಶವಿಕವಾಗಿ ಮಾಡಿ. ಶಾಂತಿಭಂಗವನ್ನುಂಟುಮಾಡಿ, ಉಪದ್ರವಗಳನ್ನು ಹರಡಿ, ಮಾನವರಲ್ಲಿ ವಿದ್ರೋಹದ ಬೀಜಬಿತ್ತಿ, ಪರಸ್ಪರ ದುಃಖವನ್ನು ಅಭಿವೃದ್ಧಿಗೊಳಿಸುವ ವಚನಗಳೇ ಆಗಿವೆ. ಮತ್ತು ಪುನರುಕ್ತದೋಷಕ್ಕಂತೂ ಕುರಾನ್ ಭಂಡಾರವೇ ಆಗಿದೆ- ಎಂದು ತಿಳಿಯಿರಿ. ಎಲ್ಲರೂ ಎಲ್ಲರ ಮೇಲೆಯೂ ಪ್ರೀತಿಯಿಡುವಂತೆ ಪರಸ್ಪರ ಐಕ್ಯವನ್ನು ಬೆಳೆಯಿಸುವಂತೆ ಮತ್ತು ಒಬ್ಬರು ಇನ್ನೊಬ್ಬರ ಸುಖದ ಉನ್ನತಿಯನ್ನು ಮಾಡುವುದರಲ್ಲಿ ಪ್ರವರ್ತರಾಗುವಂತೆ ಪರಮಾತ್ಮನು ಮಾನವರೆಲ್ಲರ ಮೇಲೆಯೂ ಕೃಪೆಯನ್ನು ಮಾಡಲಿ. ನಾನು ನನ್ನ ಮತ್ತು ಅನ್ಯರ ಮತಮತಾಂತರಗಳ ದೋಷಗಳನ್ನು ಪಕ್ಷಪಾತರಹಿತನಾಗಿ ಪ್ರಕಾಶಪಡಿಸುವಂತೆಯೇ ಸಮಸ್ತ ವಿದ್ವಾಂಸರೂ ಮಾಡುವರಾದರೆ ಪರಸ್ಪರವಿರೋಧ ಕೊನೆಗೊಂಡು, ಒಗ್ಗಟ್ಟು ಕೈಗೂಡಿ, ಆನಂದದಲ್ಲಿ ಏಕಮತರಾಗಿ, ಸತ್ಯದ ಪ್ರಾಪ್ತಿ ಸಿದ್ಧಿಸುವುದರಲ್ಲಿ ಅಡ್ಡಿಯಾದರೂ ಏನಿದೆ?*

ಹೀಗೆ ಸ್ವಲ್ಪ ಕುರಾನಿನ ವಿಷಯದಲ್ಲಿ ಬರೆದೆವು. ಬುದ್ಧಿವಂತರಾದ ಧಾರ್ಮಿಕ ಜನರು ಗ್ರಂಥಕಾರನ ಅಭಿಪ್ರಾಯವನ್ನು ತಿಳಿದು, ಇದರಿಂದ ಲಾಭ ಪಡೆಯಲಿ. ಎಲ್ಲಿಯಾದರೂ ಭ್ರಮದಿಂದ ಆಯುಕ್ತವಾಗಿ ಏನಾದರೂ ಬರೆಯಲ್ಪಟ್ಟಿದ್ದರೆ, ಅದನ್ನು ಸರಿಪಡಿಸಿಕೊಳ್ಳಲಿ. ಈಗ[೭೭] ಇನ್ನೊಂದು ಮಾತು ಉಳಿದುಕೊಂಡಿದೆ. ಅದೇನೆಂದರೆ, ಅನೇಕ ಮಂದಿ ಮುಸಲ್ಮಾನರು " ನಮ್ಮ ಸಂಪ್ರದಾಯದ ವಿಷಯ ಅಥರ್ವವೇದದಲ್ಲಿ ಬರೆಯಲ್ಪಟ್ಟಿದೆ". - ಎಂದು ಹೇಳುತ್ತಾ ಬರೆಯುತ್ತಾ ಅಥವಾ ಮುದ್ರಿಸುತ್ತಾ ಇರುತ್ತಾರೆ. ಅಥರ್ವವೇದದಲ್ಲಿ ಈ ಮಾತಿನ ಅಸ್ಪಷ್ಟವಾದ ನೆರಳೂ ಕೂಡ ಇಲ್ಲವೆಂಬುದೇ ಇದಕ್ಕೆ ಉತ್ತರವಾಗಿದೆ.

**ಪ್ರಶ್ನೆ:-** ನೀವು ಸಮಸ್ತ ಅಥರ್ವವೇದವನ್ನೂ ನೋಡಿದ್ದೀರೋ? ನೋಡಿರುವಿರಾದರೆ ಅಲ್ಲೋಪನಿಷತ್ತನ್ನು ನೋಡಿರಬಹುದು. ಇದು ಸಾಕ್ಷತ್ತಾಗಿ ಅದರಲ್ಲಿ ಬರೆಯಲ್ಪಟ್ಟಿದೆ. ಮತ್ತೆ ಅಥರ್ವವೇದದಲ್ಲಿ ಮುಸಲ್ಮಾನರ ನಾಮ-ಸಂಕೇತ ಕೂಡ ಇಲ್ಲವೆಂದು, ಅದೇಕೆ ಹೇಳುತ್ತೀರಿ?

### ಅಥಾಽಲ್ಲೋಪನಿಷದ್ವ್ಯಾಖ್ಯಾಸ್ಯಾಮಃ ॥

**ಅಸ್ಮಾಲ್ಲಾಂ ಇಲ್ಲೇ ಮಿತ್ರಾವರುಣಾ ದಿವ್ಯಾನಿ ಧತ್ತೇ ॥ ಇಲ್ಲಲ್ಲೇ ವರಣೋ ರಾಜಾ ಪುನರ್ದದುಃ ॥ ಹಯಾ ಮಿತ್ರೋ ಇಲ್ಲಾಂ ಇಲ್ಲಲ್ಲೇ ಇಲ್ಲಾಂ ವರುಣೋ ಮಿತ್ರಸ್ತೇಜಸ್ಕಾಮಃ ॥೧॥ ಹೋತಾರಮಿಂದ್ರ ಮಹಾಸುರಿಂದ್ರಾಃ । ಅಲ್ಲೋ ಜ್ಯೇಷ್ಠಂ ಶ್ರೇಷ್ಠಂ ಪರಮಂ ಪೂರ್ಣಂ ಬ್ರಹ್ಮಾಣಂ ಅಲ್ಲಾಂ ॥೨॥ ಅಲ್ಲೋ ರಸೂಲ ಮಹಾಮದರಕಬರಸ್ಯ ಅಲ್ಲೋ ಅಲ್ಲಾಂ ॥೩॥ ಆದಲ್ಲಾ ಬೂಕಮೇಕಕ್ರಂ ॥ ಅಲ್ಲಾಬೂಕನಿಖಾತಕಂ ॥೪॥ ಅಲ್ಲೋ ಯಜ್ಞೇನ ಹುತಹುತ್ವಾ ಅಲ್ಲಾ ಸೂರ್ಯಚಂದ್ರ ಸರ್ವನಕ್ಷತ್ರಾಃ ॥೫॥ ಅಲ್ಲಾ ಋಷೀಣಾಂ ಸರ್ವದಿವ್ಯಾಂ ಇಂದ್ರಾಯ ಪೂರ್ವಂ ಮಾಯಾಪರಮಂತರಿಕ್ಷಾಃ ॥೬॥ ಅಲ್ಲಃ ಪೃಥಿವ್ಯಾ ಅಂತರಿಕ್ಷಂ ವಿಶ್ವರೂಪಂ ॥೭॥ ಇಲ್ಲಾಂ ಕಬರಇಲ್ಲಾಂ ಕಬರಇಲ್ಲಾಂ ಇಲ್ಲಲ್ಲೇತಿ ಇಲ್ಲಲ್ಲಾಃ ॥೮॥ ಓಂ ಅಲ್ಲಾ ಇಲ್ಲಲ್ಲಾ ಅನಾದಿಸ್ವರೂಪಾಯ ಅಥರ್ವಣಾಶ್ಯಾಮಾ ಹುಂ ಹ್ರೀಂ ಜನಾನಪಶೂನ ಸಿದ್ಧಾನ್ ಜಲಾಚರಾನ್ ಅದೃಷ್ಟಂ ಕುರುಕುರು ಫಟ್ ॥೯॥ ಅಸುರಸಂಹಾರಿಣೇ ಹುಂ ಹ್ರೀಂ ಅಲ್ಲೋ ರಸೂಲಮಹಮದರಕಬರಸ್ಯ ಅಲ್ಲೋ ಅಲ್ಲಾಂ ಇಲ್ಲಲ್ಲೇತಿ ಇಲ್ಲಲ್ಲಾಃ ॥ ೧೦॥**

### ಇತ್ಯಲ್ಲೋಪನಿಷತ್ಸಮಾಪ್ತಾ ॥

ಇದರಲ್ಲಿ ಪ್ರತ್ಯಕ್ಷವಾಗಿ ಮುಹಮ್ಮದ್ ಸಾಹೇಬರನ್ನು ರಸೂಲರೆಂದು ಬರೆದಿರುವ ಕಾರಣದಿಂದ, ಮುಸಲ್ಮಾನರ ಮತ ವೇದಮೂಲಕವಾಗಿದೆ- ಎಂದು ಸಿದ್ಧವಾಗುತ್ತದೆ.

**ಉತ್ತರ:-** ನೀವು ಅಥರ್ವವೇದವನ್ನು ನೋಡಿಲ್ಲವಾದರೆ, ನಮ್ಮ ಹತ್ತಿರ ಬನ್ನಿರಿ. ಆದಿಯಿಂದ ಸಮಾಪ್ತಿಯವರೆಗೆ ನೋಡಿರಿ. ಅಥವಾ ಯಾವನಾದರೂ ಅಥರ್ವವೇದಿಯ ಬಳಿ ೨೦ ಕಾಂಡಗಳನ್ನುಳ್ಳ ಮಂತ್ರಸಂಹಿತಾ ಅಥರ್ವವೇದವನ್ನು ನೋಡಿಕೊಳ್ಳಿರಿ. ಎಲ್ಲಿಯೂ ನಿಮ್ಮ ಪೈಗಂಬರ ಸಾಹೇಬರ ಹೆಸರಿನ ಅಥವಾ ಮತದ ಚಿಹ್ನೆಯನ್ನು ನೀವು ಕಾಣುವುದಿಲ್ಲ. ಮತ್ತು ಈ ಅಲ್ಲೋಪನಿಷತ್ತು ಅಥರ್ವವೇದದಲ್ಲಿಯೂ ಇಲ್ಲ; ಅದರ ಗೋಪಥಬ್ರಾಹ್ಮಣದಲ್ಲಿ ಅಥವಾ ಯಾವುದೇ ಶಾಖೆಯಲ್ಲಿಯೂ ಇಲ್ಲ; ಇದನ್ನಾದರೋ ಅಕ್ಬರ್ ಬಾದಶಾಹನ ಕಾಲದಲ್ಲಿ ಯಾವನೋ ರಚಿಸಿದ್ದಾನೆ - ಎಂದು ತೋರುತ್ತದೆ. ಇದರ ಲೇಖಕನು ಸ್ವಲ್ಪ ಅರಬ್ಬಿಯನ್ನೂ ಮತ್ತು ಸ್ವಲ್ಪ ಸಂಸ್ಕೃತವನ್ನೂ ಓದಿದ್ದನೆಂದು ಕಾಣುತ್ತದೆ. ಏಕೆಂದರೆ ಇದರಲ್ಲಿ ಅರಬ್ಬಿಯ ಮತ್ತು ಸಂಸ್ಕೃತದ ಪದಗಳು ಲಿಖಿತವಾಗಿರುವುದು ಕಂಡುಬರುತ್ತದೆ. ನೋಡಿರಿ, **"ಅಸ್ಮಾಲ್ಲಾಂ ಇಲ್ಲೇ ಮಿತ್ರಾವರುಣಾ ದಿವ್ಯಾನಿ ಧತ್ತೇ"** - ಈ ಮೊದಲಾಗಿ ಹತ್ತನೆಯ ಅಂಕದಲ್ಲಿ ಏನು ಬರೆದಿದೆಯೋ, ಇದರಲ್ಲಿ **"ಅಸ್ಮಾಲ್ಲಾಂ ಮತ್ತು ಇಲ್ಲೇ"** ಈ ಅರಬ್ಬಿಯ ಮತ್ತು **"ಮಿತ್ರಾವರುಣಾ ದಿವ್ಯಾನಿ ಧತ್ತೇ"** ಈ ಸಂಸ್ಕೃತದ ಪದಗಳನ್ನು ಬರೆದಿದ್ದಾರೆ. ಹಾಗೆಯೇ ಎಲ್ಲೆಡೆಯೂ ಕಂಡು ಬರುವುದರಿಂದ, ಯಾವನೋ ಸಂಸ್ಕೃತವನ್ನು ಮತ್ತು ಅರಬ್ಬಿಯನ್ನು ಓದಿರುವವನು ರಚಿಸಿದ್ದಾನೆ. ಇದರ ಅರ್ಥ ನೋಡಲ್ಪಟ್ಟರೆ, ಇದು ಕೃತ್ರಿಮವೂ, ಅಯುಕ್ತವೂ, ವೇದಗಳಿಗೆ ಮತ್ತು ವ್ಯಾಕರಣದ ರೀತಿಗೆ ವಿರುದ್ಧವೂ ಆಗಿದೆ. ಹೇಗೆ ಈ ಉಪನಿಷತ್ತನ್ನು

---

೭೭. ಕಲ್ಕತ್ತೆಯ 'ಭಾರತ ಮಿತ್ರ'ದ ವಿಕ್ರಮ್ ಸಂವತ್ ೧೯೪೦[ ಇಸವಿ೧೮೮೮ ] ಶ್ರಾವಣ ಶುಕ್ಲಪಕ್ಷ ಷಷ್ಠೀ ಗುರುವಾರದ ಅಂಕದಲ್ಲಿ – 'ಮುಸಲ್ಮಾನರ ಮತದ ಮೂಲವು ಅಥರ್ವವೇದದಲ್ಲಿದೆ' ಎಂಬ ಸಮಾಚಾರದೊಡನೆ ಅಲ್ಲೋಪನಿಷತ್ತಿನ ಉಲ್ಲೇಖ ಮಾಡಲಾಗಿತ್ತು. ಈ ಸಂಬಂಧದಲ್ಲಿ ಗ್ರಂಥಕರ್ತರು 'ಭಾರತ ಮಿತ್ರ'ದ ಸಂಪಾದಕನಿಗೆ ಪತ್ರ ಬರೆದಿದ್ದರು. ಈ ಪತ್ರವು 'ಋಷಿ ದಯಾನಂದ ಕೇ ಪತ್ರ ವ್ಯವಹಾರ್' ಗ್ರಂಥದ ಪುಟ ೪೪೭,೪೪೮ರಲ್ಲಿ ಮುದ್ರಿತವಾಗಿದೆ. ಅಲ್ಲೋಪನಿಷತ್ತಿನ ಈ ಸಮೀಕ್ಷಾಂಶವು ಈ ಸಂದರ್ಭದಲ್ಲಿ ಈ ಗ್ರಂಥದಲ್ಲಿ ಸಮ್ಮಿಳಿತವಾಗಿದೆ ಎಂಬುದು ಸ್ಪಷ್ಟವಾಗಿದೆ. ಯು.ಮೀ.

ಬರೆದಿದ್ದಾರೋ, ಹಾಗೆಯೇ ಅನೇಕ ಉಪನಿಷತ್ತುಗಳನ್ನು ಮತಮತಾಂತರವಾದಿಗಳಾದ ಪಕ್ಷಪಾತಿಗಳು, ಸ್ವರೋಪನಿಷತ್, ನೃಸಿಂಹತಾಪನೀ, ರಾಮತಾಪನೀ, ಗೋಪಾಲತಾಪನೀ – ಮೊದಲಾದುವುಗಳಂತೆ ಬಹಳವಾಗಿ ರಚಿಸಿಕೊಂಡಿದ್ದಾರೆ.

**ಪ್ರಶ್ನೆ:**– ಇಂದಿನವರೆಗೆ ಯಾವನೂ ಹೀಗೆ ಹೇಳಲಿಲ್ಲ. ಈಗ ನೀವು ಹೇಳುತ್ತೀರಿ. ನಾವು ನಿಮ್ಮ ಮಾತನ್ನು ಹೇಗೆ ಒಪ್ಪಿಕೊಳ್ಳೋಣ?

**ಉತ್ತರ :**– ನಿಮ್ಮ ಒಪ್ಪುವಿಕೆ ಅಥವಾ ಒಪ್ಪದಿರುವಿಕೆಯಿಂದ ನಮ್ಮ ಮಾತು ಸುಳ್ಳಾಗಲಾರದು. ಹೇಗೆ ನಾನು ಇದನ್ನು ಅಯುಕ್ತವೆಂದು ಪ್ರತಿಪಾದಿಸಿದ್ದೇನೆಯೋ, ಹಾಗೆಯೇ ನೀವು ಅಥರ್ವವೇದ, ಗೋಪಥ ಅಥವಾ ಇದರ ಶಾಖೆಗಳಿಂದ, ಪ್ರಾಚೀನ ಲಿಖಿತ ಪುಸ್ತಕಗಳಲ್ಲಿ ಯಥಾವತ್ತಾದ ಉಲ್ಲೇಖನವನ್ನು ತೋರಿಸುವಿರಾದರೆ, ಮತ್ತು ಅರ್ಥ ಸಂಗತಿಯ ದೃಷ್ಟಿಯಿಂದಲೂ ಶುದ್ಧವೆಂದು ಸಿದ್ಧಪಡಿಸುವಿರಾದರೆ, ಆಗ ಸಪ್ರಮಾಣವಾಲಬಲ್ಲದು.

**ಪ್ರಶ್ನೆ:**– ಯಾವುದರಲ್ಲಿ ಸರ್ವವಿಧದ ಸುಖವೂ ಮತ್ತು ಕೊನೆಯಲ್ಲಿ ಮುಕ್ತಿ ಪ್ರಾಪ್ತಿಯೂ ಆಗುತ್ತದೋ, ಆ ನಮ್ಮ ಮತ ಎಷ್ಟು ಒಳ್ಳೆಯದಾಗಿದೆ, ನೋಡಿರಿ.

**ಉತ್ತರ:**– ಸರ್ವಮತೀಯರೂ ಹೀಗೆಯೇ – "ನಮ್ಮ ಮತ ಮಾತ್ರ ಒಳ್ಳೆಯದಾಗಿದೆ. ಉಳಿದುದೆಲ್ಲವೂ ಕೆಟ್ಟವಾಗಿವೆ. ನಮ್ಮ ಮತದ ಹೊರತು, ಅನ್ಯ ಮತದಲ್ಲಿ ಮುಕ್ತಿ ಲಭಿಸಲಾರದು."– ಎಂದೇ ಹೇಳುತ್ತಾರೆ. ಈಗ ನಾವು ನಿಮ್ಮ ಮಾತನ್ನು ಸತ್ಯವೆಂದು ಒಪ್ಪಿಕೊಳ್ಳೋಣವೋ ಅಥವಾ ಅವರದನ್ನೋ? ನಾವೇನೋ "ಸತ್ಯಭಾಷಣ, ಅಹಿಂಸೆ, ದಯೆ– ಮೊದಲಾದ ಶುಭಗುಣಗಳು ಎಲ್ಲ ಮತಗಳಲ್ಲಿಯೂ ಒಳ್ಳೆಯವಾಗಿವೆ. ಉಳಿದವಾದ – ವಿವಾದಗಳು, ಈರ್ಷ್ಯೆ, ದ್ವೇಷ, ಮಿಥ್ಯಾಭಾಷಣ ಮೊದಲಾದ ಕರ್ಮಗಳು ಎಲ್ಲ ಮತಗಳಲ್ಲಿಯೂ ಕೆಟ್ಟವಾಗಿವೆ".– ಎಂದು ಅಂಗೀಕರಿಸುತ್ತೇವೆ. ನಿಮಗೆ ಸತ್ಯಮತವನ್ನು ಗ್ರಹಿಸುವ ಇಚ್ಛೆಯಿರುವುದಾದರೆ, ವೈದಿಕ ಮತವನ್ನು ಗ್ರಹಿಸಿರಿ.

**ಇದರಿಂದ ಮುಂದೆ ಸ್ವಮಂತವ್ಯ– ಅಮಂತವ್ಯದ ಪ್ರಕಾಶವು ಸಂಕ್ಷೇಪವಾಗಿ ಬರೆಯಲ್ಪಡುವುದು.**

**ಇತಿ ಶ್ರೀಮದ್ದಯಾನಂದಸರಸ್ವತೀ ಸ್ವಾಮಿಕೃತೇ ಸತ್ಯಾರ್ಥಪ್ರಕಾಶೇ**

**ಸುಭಾಷಾವಿಭೂಷಿತೇ ಯವನಮತ ವಿಷಯೇ**

**ಚತುರ್ದಶಃ ಸಮುಲ್ಲಾಸಃ ಸಂಪೂರ್ಣಃ**

॥ ಓಂ ॥

# ಸ್ವಮಂತವ್ಯಾಮಂತವ್ಯಪ್ರಕಾಶಃ

ಸರ್ವರೂ, ಸದಾಕಾಲದಿಂದಲೂ ಅನುಸರಿಸುತ್ತಾ ಬಂದಿರುವ, ಈಗ ಅಂಗೀಕರಿಸುತ್ತಿರುವ ಮತ್ತು ಮುಂದಕ್ಕೂ ಅಂಗೀಕರಿಸುತ್ತಾ ಹೋಗುವ, ಯಾವನಿಂದಲೂ ವಿರೋಧಿಸಲು ಶಕ್ಯವಾಗದ ತತ್ತ್ವ ಸರ್ವತಂತ್ರ ಸಿದ್ಧಾಂತ – ಎಂದರೆ, ಸಾರ್ವಭೌಮ ಸಾರ್ವಜನಿಕ[೧] ಧರ್ಮವಾಗಿದೆ. ಅದನ್ನು ಸನಾತನ ನಿತ್ಯ ಧರ್ಮವೆನ್ನುತ್ತಾರೆ. ಅವಿದ್ಯಾಯುಕ್ತವಾದ ಮಾನವನು ಅಥವಾ ಯಾವನಾದರೂ ಮತೀಯನಿಂದ ಭ್ರಾಂತಿಗೀಡು ಮಾಡಲ್ಪಟ್ಟ ಮಾನವನು ಅದನ್ನು ಅನ್ಯಥಾ ತಿಳಿಯುವನಾದರೆ, ಅಥವಾ ಅಂಗೀಕರಿಸುವನಾದರೆ, ಅದನ್ನು ಯಾವ ಬುದ್ಧಿವಂತರೂ ಕೂಡ ಸ್ವೀಕರಿಸಲಾರರು. ಆದರೆ, ಅಪ್ತರು– ಎಂದರೆ ಸತ್ಯವನ್ನು ಅಂಗೀಕರಿಸುವವರೂ, ಸತ್ಯವಾದಿಗಳೂ, ಸತ್ಯಾನುಷ್ಠಾನವನ್ನು ಮಾಡುವವರೂ, ಪರೋಪಕಾರಿಗಳೂ, ಪಕ್ಷಪಾತರಹಿತರೂ ಆದ ವಿದ್ವಾಂಸರು ಒಪ್ಪಿಕೊಳ್ಳುವ (ತತ್ತ್ವ)ವೇ ಎಲ್ಲರಿಗೂ ಮಂತವ್ಯ– ಎಂದರೆ ಮಾನನೀಯವೂ, ಮತ್ತು ಅವರು ಒಪ್ಪಿಕೊಳ್ಳದಿರುವ ತತ್ತ್ವವೇ ಅಮಾನನೀಯವೂ ಆಗಿರುವ ಕಾರಣ, ಪ್ರಮಾಣ ಯೋಗ್ಯವಾಗಿರುವುದಿಲ್ಲ. ಈಗ ವೇದಗಳೇ ಮೊದಲಾದ ಸತ್ಯಶಾಸ್ತ್ರಗಳಿಂದಲೂ ಮತ್ತು ಬ್ರಹ್ಮನಿಂದಾರಂಭಿಸಿ, ಜೈಮಿನಿ ಮುನಿಯವರೆಗಿನವರು ಅಂಗೀಕರಿಸಿರುವ ಮತ್ತು ನಾನೂ ಕೂಡ ಅಂಗೀಕರಿಸುವ ಈಶ್ವರನೇ ಮೊದಲಾದ ಪದಾರ್ಥಗಳನ್ನು ಸಮಸ್ತ ಸಜ್ಜನ ಮಹಾಶಯರುಗಳ ಸಮ್ಮುಖದಲ್ಲಿ ಪ್ರಕಾಶಪಡಿಸುತ್ತೇನೆ. ಮೂರು ಕಾಲಗಳಲ್ಲಿಯೂ, ಸರ್ವರಿಗೂ ಏಕಪ್ರಕಾರವಾಗಿ ಸ್ವೀಕಾರ ಯೋಗ್ಯವಾಗಿರುವುದನ್ನೇ ನನ್ನ ಮಂತವ್ಯವೆಂದು, ಎಂದರೆ, ಮಾನನೀಯವಾದುದೆಂದು ನಾನು ತಿಳಿಯುತ್ತೇನೆ. ಯಾವುದೇ ನವೀನ ಕಲ್ಪನೆಯನ್ನು ಅಥವಾ ಮತ–ಮತಾಂತರವನ್ನು ಪ್ರತಿಷ್ಠಾಪಿಸುವ ಅಭಿಪ್ರಾಯ ನನಗೆ ಲೇಶಮಾತ್ರವೂ ಇಲ್ಲ. ಆದರೆ, ಸತ್ಯವಾದುದನ್ನು ಒಪ್ಪುವುದು ಮತ್ತು ಒಪ್ಪಿಸುವುದು ಮತ್ತು ಅಸತ್ಯವಾದುದನ್ನು ಬಿಡುವುದು ಮತ್ತು ಬಿಡಿಸುವುದು ನನಗೆ ಅಭೀಷ್ಟವಾಗಿದೆ. ನಾನು ಪಕ್ಷಪಾತ ಮಾಡುತ್ತಿದ್ದ ಪಕ್ಷದಲ್ಲಿ, ಆರ್ಯಾವರ್ತದಲ್ಲಿ ಪ್ರಚಲಿತವಾಗಿರುವ ಮತಗಳಲ್ಲಿ ಯಾವುದಾದರೂ ಒಂದು ಮತದ ಅಗ್ರಹಿಯಾಗಿರುತ್ತಿದ್ದೆನು. ಆದರೆ, ಆರ್ಯಾವರ್ತದಲ್ಲಿ ಅಥವಾ ಅನ್ಯ ದೇಶಗಳಲ್ಲಿ ಪ್ರಚಲಿತವಾಗಿರುವ ಅಧರ್ಮಯುಕ್ತವಾದ ನಡವಳಿಕೆಗಳ ಸ್ವೀಕಾರವನ್ನೂ, ಮತ್ತು ಧರ್ಮಯುಕ್ತವಾದ ವಿಷಯಗಳ ತ್ಯಾಗವನ್ನೂ ಮಾಡುವುದಿಲ್ಲ. ಮಾಡಲಪೇಕ್ಷಿಸುವುದೂ ಇಲ್ಲ. ಏಕೆಂದರೆ, ಹೀಗೆ ಮಾಡುವುದು ಮಾನವ ಧರ್ಮಕ್ಕೆಯೇ ಹೊರತಾದುದಾಗಿದೆ. ಮನನಶೀಲನಾಗಿ, ತನ್ನ ಆತ್ಮನಂತೆಯೇ ಅನ್ಯರ (ಆತ್ಮಗಳಿಗೂ) ಸುಖ ದುಃಖಗಳೂ, ಹಾನಿ–ಲಾಭಗಳೂ ಇವೆಯೆಂದು ತಿಳಿಯುತ್ತಾ ಹೋಗುವವನನ್ನೇ ಮನುಷ್ಯನೆಂದು ಹೇಳಬೇಕು. ಅನ್ಯಾಯಕಾರಿಯಾದ ಬಲಶಾಲಿಗೂ ಹೆದರಬಾರದು. ಮತ್ತು ಧರ್ಮಾತ್ಮನಾದ ನಿರ್ಬಲನಿಗೂ ಕೂಡ ಹೆದರುತ್ತಿರಬೇಕು. ಇಷ್ಟೇ ಅಲ್ಲ; ತನ್ನ ಸಮಸ್ತ ಸಾಮರ್ಥ್ಯದಿಂದಲೂ, ಧರ್ಮಾತ್ಮರುಗಳು ಇಷ್ಟೇ ದೊಡ್ಡ ಅನಾಥರೂ, ನಿರ್ಬಲರೂ ಮತ್ತು ಪದವಿ, ಅಧಿಕಾರ– ಮೊದಲಾದ (ಅನ್ಯರ ಮೇಲೆ ವರ್ಚಸ್ಸನ್ನು ಬೀರುವ) ಗುಣಗಳಿಂದ ರಹಿತರೂ ಆಗಿರಲಿ; ಅವರ ರಕ್ಷಣೆಯನ್ನೂ, ಉನ್ನತಿಯನ್ನೂ, ಪ್ರಿಯಾಚರಣವನ್ನೂ ಹಾಗೂ ಅಧರ್ಮಿಯು ಬೇಕಾದರೆ ಚಕ್ರವರ್ತಿಯೂ, ಸನಾತನೂ, ಮಹಾಬಲಶಾಲಿಯೂ ಮತ್ತು (ಅನ್ಯರ ಮೇಲೆ ವರ್ಚಸ್ಸನ್ನೆರಚುವ) ದರ್ಪಾದಿಗುಣಗಳಿಂದ ಯುಕ್ತನೂ ಆಗಿರಲಿ; ಅವನ ಧ್ವಂಸವನ್ನೂ, ಪತನವನ್ನೂ ಸಾಧಿಸಬೇಕು. ಸದಾ ಅವನ ಬಗೆಗೆ ಅಪ್ರಿಯಾಚರಣವನ್ನು ಮಾಡುತ್ತಾ ಹೋಗಬೇಕು. ಎಂದರೆ, ಶಕ್ಯವಿದ್ದಷ್ಟೂ ಅನ್ಯಾಯಕಾರಿಗಳ ಬಲಕ್ಕೆ ಹಾನಿಯನ್ನೂ, ಮತ್ತು ನ್ಯಾಯಕಾರಿಗಳ ಬಲದ ಉನ್ನತಿಯನ್ನೂ ಸರ್ವಥಾ ಸಾಧಿಸುತ್ತಾ ಹೋಗಬೇಕು. ಈ ಕಾರ್ಯದಲ್ಲಿ ಅವನಿಗೆ ಎಷ್ಟೇ ದಾರುಣವಾದ ದುಃಖ ಪ್ರಾಪ್ತಿವಾಗಲಿ; ಪ್ರಾಣಗಳೇ ಬೇಕಾದರೂ ಹೊರಟುಹೋಗಲಿ; ಆದರೆ, ಮನುಷ್ಯತ್ವವೆಂಬ ಧರ್ಮದಿಂದ

---

೧. ಮೂಲಗ್ರಂಥದಲ್ಲಿ 'ಸಾಮ್ರಾಜ್ಯ' ಎಂಬ ಶಬ್ದವಿದೆ.

ಎಂದಿಗೂ ದೂರಸರಿಯಬಾರದು. ಈ ವಿಷಯದಲ್ಲಿ ಶ್ರೀಮನ್ಮಹಾರಾಜಾ ಭರ್ತೃಹರಿ - ಮೊದಲಾದವರು ಶ್ಲೋಕಗಳನ್ನು ರಚಿಸಿದ್ದಾರೆ. ಅವುಗಳನ್ನು ಬರೆಯುವುದು ಉಪಯುಕ್ತವೆಂದು ತಿಳಿದು ಉದ್ಧರಿಸುತ್ತೇನೆ:-

**ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್ ।**

**ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥**

(ನೀತಿಶತಕ:- ೮೪)

**ನ ಜಾತು ಕಾಮಾನ್ನ ಭಯಾನ್ನ ಲೋಭಾತ್ ಧರ್ಮಂ ತ್ಯಜೇಜ್ಜೀವಿತಸ್ಯಾಪಿ ಹೇತೋಃ ।**

**ಧರ್ಮೋ ನಿತ್ಯಃ ಸುಖದುಃಖೇ ತ್ವನಿತ್ಯೇ ಜೀವೋ ನಿತ್ಯೋ ಹೇತುರಸ್ಯ ತ್ವ ನಿತ್ಯಃ ॥ ೨ ॥**

(ಮಹಾಭಾರತ, ಉದ್ಯೋಗ:- ೪೦-೧೨)

**ಏಕ ಏವ ಸುಹೃದ್ಧರ್ಮೋ ನಿಧನೇಽಪ್ಯ ನುಯಾತಿ ಯಃ ।**

**ಶರೀರೇಣ ಸಮಂ ನಾಶಂ ಸರ್ವಮನ್ಯದ್ಧಿ ಗಚ್ಛತಿ ॥ ೩॥** (ಮನು:- ೮.೧೭)

**ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ ।**

**ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾಃ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್ ॥ ೪॥** (ಮುಂಡಕ :- ೩.೧.೬)

**ನಹಿ ಸತ್ಯಾತ್ಪರೋ ಧರ್ಮೋ ನಾನೃತಾತ್ಪಾತಕಂ ಪರಮ್ ।**

**ನಹಿ ಸತ್ಯಾತ್ಪರಂ ಜ್ಞಾನಂ ತಸ್ಮಾತ್ಸತ್ಯಂ ಸಮಾಚರೇತ್ ॥ ೫ ॥** (ಪೂರ್ವಾರ್ಧ- ಮನು:- ೮.೮೩)

ಈ ಮಹಾಶಯರುಗಳು ಶ್ಲೋಕಗಳ ಅಭಿಪ್ರಾಯಕ್ಕೆ ಅನುಕೂಲವಾಗಿಯೇ ಎಲ್ಲರೂ ನಿಶ್ಚಯವನ್ನು ತಾಳುವುದು ಯೋಗ್ಯವಾಗಿದೆ.

ಈಗ ನಾನು ಯಾವ ಯಾವ ಪದಾರ್ಥಗಳನ್ನು (ತತ್ತ್ವಗಳನ್ನು) ಹೇಗೆ ಹೇಗೆ ಅಂಗೀಕರಿಸುತ್ತೇನೋ, ಯಾವಯಾವವುಗಳ ವಿಶೇಷ ವ್ಯಾಖ್ಯಾನವನ್ನು ಈ ಗ್ರಂಥದಲ್ಲಿ ಆಯಾ ಪ್ರಕರಣದಲ್ಲಿ ಮಾಡಿದ್ದೇನೋ,[2] ಅವುಗಳ ವರ್ಣನೆಯನ್ನು ಇಲ್ಲಿ ಸಂಕ್ಷೇಪವಾಗಿ ಮಾಡುತ್ತೇನೆ. ಅವುಗಳಲ್ಲಿ :-

**೧. ಈಶ್ವರ :-** ಯಾವನಿಗೆ ಬ್ರಹ್ಮ, ಪರಮಾತ್ಮ - ಮೊದಲಾದ ಹೆಸರುಗಳಿವೆಯೋ, ಯಾವನು ಸತ್ತ್ವ, ಚಿತ್ತ್ವ, ಆನಂದ- ಮೊದಲಾದ ಲಕ್ಷಣಗಳಿಂದ ಯುಕ್ತನಾಗಿದ್ದಾನೋ, ಯಾವನ ಗುಣ-ಕರ್ಮ-ಸ್ವಭಾವಗಳು ಪವಿತ್ರವಾಗಿವೆಯೋ, ಯಾವನು ಸರ್ವಜ್ಞತ್ವ, ನಿರಾಕಾರತ್ವ, ಸರ್ವವ್ಯಾಪಕತ್ವ, ಜನ್ಮರಹಿತತ್ವ, ಅನಂತತ್ವ, ಸರ್ವಶಕ್ತಿಮತ್ತ್ವ, ದಯಾಳುತ್ವ, ನ್ಯಾಯಕಾರಿತ್ವ, ಸರ್ವಸೃಷ್ಟಿಕರ್ತೃತ್ವ, ಧರ್ತೃತ್ವ, ಹರ್ತೃತ್ವ (ಧಾರಕತ್ವ, ಸಂಹಾರಕತ್ವ), ಸಮಸ್ತ ಜೀವರಿಗೂ ಅವರವರ ಕರ್ಮಗಳಿಗನುಸಾರವಾಗಿ, ಸತ್ಯ-ನ್ಯಾಯಾನುಕೂಲವಾಗಿ ಫಲವನ್ನು ಕೊಡುವಿಕೆಯೇ ಮೊದಲಾದ ಲಕ್ಷಣಗಳಿಂದ ಯುಕ್ತನಾಗಿದ್ದಾನೋ, ಅವನನ್ನೇ ನಾನು ಪರಮೇಶ್ವರನೆಂದು ಒಪ್ಪಿಕೊಳ್ಳುತ್ತೇನೆ.

**೨. ಸ್ವತಃ ಪ್ರಮಾಣಗಳು:-** (ವಿದ್ಯಾಧರ್ಮಯುಕ್ತವೂ, ಈಶ್ವರ ಪ್ರಣೀತವೂ ಆದ ಸಂಹಿತಾ ಮಂತ್ರಭಾಗರೂಪವಾದ) ನಾಲ್ಕು ವೇದಗಳನ್ನೂ ನಿರ್ಭ್ರಾಂತವಾದ ಸ್ವತಃ ಪ್ರಮಾಣವೆಂದು ಅಂಗೀಕರಿಸುತ್ತೇನೆ. ಯಾವವುಗಳ ಪ್ರಮಾಣವಾಗಿರುವಿಕೆಗೆ ಬೇರೆ ಯಾವ ಗ್ರಂಥಗಳ ಆಧಾರವೂ ಆವಶ್ಯವಲ್ಲವೋ, ಅಂತಹ ಸ್ವತಃ ಪ್ರಮಾಣರೂಪವಾದ ಶಾಸ್ತ್ರಗಳಾಗಿವೆ. ಆ ವೇದಗಳು. ಸೂರ್ಯನು ಅಥವಾ ಪ್ರದೀಪವು ತಮ್ಮ ಸ್ವರೂಪದಿಂದಲೇ ಸ್ವತಃ ಪ್ರಕಾಶಮಯವೂ, ಮತ್ತು ಪೃಥಿವೀ ಮೊದಲಾದುವುಗಳ

---

೨. ಈ ಮಂತವ್ಯಗಳು ಗ್ರಂಥಕರ್ತರ ಬೇರೆಲ್ಲಾ ಕೃತಿಗಳಲ್ಲಿ ವರ್ಣಿಸಲ್ಪಟ್ಟಿವೆ. ಅಲ್ಲದೇ, ಇದಕ್ಕನುರೂಪವಾಗಿ, 'ಆರ್ಯೋದ್ದೇಶ್ಯ ರತ್ನಮಾಲಾ' ಎಂಬ ಪುಸ್ತಿಕೆಯನ್ನೂ ಗ್ರಂಥಕರ್ತರು ರಚಿಸಿದ್ದಾರೆ. ಇದರಲ್ಲಿ ನೂರು ಮಂತವ್ಯಗಳಿವೆ. ಇದರ ಭಾಷ್ಯರೂಪವಾಗಿ ಪಂ ಸತ್ಯಪಾಲಶರ್ಮ ಅವರಿಂದ ರಚಿತವಾದ 'ವೈದಿಕ ಸಿದ್ಧಾಂತ ರತ್ನಾವಳಿ' ಎಂಬ ಗ್ರಂಥದ ಕನ್ನಡ ಅನುವಾದವೂ ಪ್ರಕಾಶಿತವಾಗಿದೆ.

೩. ತೃತೀಯ ಸಮುಲ್ಲಾಸದ ಸ್ವತಃ ಪ್ರಮಾಣಗಳು ಮತ್ತು ಪರತಃ ಪ್ರಮಾಣಗಳು ಪ್ರಕರಣದ ತುಲನೆ ಮಾಡಿ.

ಪ್ರಕಾಶವೂ ಆಗಿರುವ ಹಾಗೆಯೇ ನಾಲ್ಕೂ ವೇದಗಳೂ (ಸ್ವಯಂಪ್ರಕಾಶಮಯವು) ಆಗಿರುತ್ತವೆ. ಮತ್ತು ನಾಲ್ಕು ವೇದಗಳ ಬ್ರಾಹ್ಮಣಗಳು, ಆರು ಅಂಗಗಳು, ಆರು ಉಪಾಂಗಗಳು, ನಾಲ್ಕು ಉಪವೇದಗಳು ಮತ್ತು ವೇದಗಳ ವ್ಯಾಖ್ಯಾನ ರೂಪವಾದ, ಬ್ರಹ್ಮನೇ ಮೊದಲಾದ ಮಹರ್ಷಿಗಳಿಂದ ರಚಿತವಾದ ಗ್ರಂಥಗಳಾಗಿರುವ ೧, ೧೨೭ (ವೇದಗಳ) ಶಾಖೆಗಳು[೩] – ಇವನ್ನು ಪರತಃ ಪ್ರಮಾಣವೆಂದು ಗ್ರಹಿಸುತ್ತೇನೆ. ಮತ್ತು ಇವುಗಳಲ್ಲಿರುವ ವೇದವಿರುದ್ಧವಾದ ವಚನಗಳನ್ನು ಅಪ್ರಮಾಣವೆಂದು ತಿಳಿಯುತ್ತೇನೆ.

೩. **ಧರ್ಮ:**– ಪಕ್ಷಪಾತ ರಹಿತವಾದ ನ್ಯಾಯಾಚರಣ, ಸತ್ಯಭಾಷಣ – ಮೊದಲಾದುದರಿಂದ ಯುಕ್ತವಾದ ಈಶ್ವರಾಜ್ಞೆಯನ್ನು, ವೇದಗಳಿಗೆ ಅವಿರುದ್ಧವಾಗಿರುವ ಜೀವನಕ್ರಮಗಳನ್ನು **'ಧರ್ಮ'**ವೆಂದೂ, ಮತ್ತು ಪಕ್ಷಪಾತ ಸಹಿತವಾದ ಅನ್ಯಾಯಚರಣ, ಮಿಥ್ಯಾಭಾಷಣ ಮೊದಲಾದ ಈಶ್ವರಾಜ್ಞಾಭಂಗವನ್ನು ಮತ್ತು ವೇದವಿರುದ್ಧವಾಗಿರುವುದನ್ನು **'ಅಧರ್ಮ'** ವೆಂದೂ ಅಂಗೀಕರಿಸುತ್ತೇನೆ.

೪. **ಜೀವ:**– ಇಚ್ಛಾ, ದ್ವೇಷ, ಪ್ರಯತ್ನ, ಸುಖ,ದುಃಖ ಮತ್ತು ಜ್ಞಾನ – ಮೊದಲಾದ ಗುಣಗಳಿಂದ ಯುಕ್ತನೂ, ಅಲ್ಪಜ್ಞನೂ, ನಿತ್ಯನೂ ಆದ (ಅಣುಚೇತನ)ನನ್ನೇ **'ಜೀವ'**ನೆಂದು ಅಂಗೀಕರಿಸುತ್ತೇನೆ.

೫. **ಜೀವೇಶ್ವರಭೇದ:**– ಜೀವನು ಮತ್ತು ಈಶ್ವರನು ಸ್ವರೂಪದಿಂದ ಮತ್ತು ವೈಧರ್ಮ್ಯದಿಂದ ಭಿನ್ನರೂ, ಹಾಗೂ ವ್ಯಾಪ್ಯ-ವ್ಯಾಪಕ ಭಾವದಿಂದ ಮತ್ತು ಸಾಧರ್ಮ್ಯದಿಂದ ಅಭಿನ್ನರೂ ಆಗಿದ್ದಾರೆ. ಎಂದರೆ, ಹೇಗೆ ಆಕಾಶದಿಂದ ಮೂರ್ತಿಮಾನ್ ಪದಾರ್ಥವು ಎಂದೂ ಭಿನ್ನವಾಗಿರಲಿಲ್ಲವೋ, ಇಲ್ಲವೋ, ಆಗುವುದೂ ಇಲ್ಲವೋ ಮತ್ತು ಹೇಗೆ ಎಂದೂ ಒಂದಾಗಿರಲಿಲ್ಲವೋ, ಇಲ್ಲವೋ, ಇರುವುದೂ ಇಲ್ಲವೋ, ಇದೇ ಪ್ರಕಾರ ಪರಮೇಶ್ವರ ಹಾಗೂ ಜೀವರನ್ನು ವ್ಯಾಪ್ಯ-ವ್ಯಾಪಕ, ಉಪಾಸ್ಯ-ಉಪಾಸಕ ಮತ್ತು ಪಿತೃ-ಪುತ್ರ ಮೊದಲಾದ ಸಂಬಂಧಗಳಿಂದ ಯುಕ್ತರೆಂದು ಅಂಗೀಕರಿಸುತ್ತೇನೆ.

೬. **ಅನಾದಿಪದಾರ್ಥಗಳು:**– ಮೂರು ಇವೆ. ಒಬ್ಬನು ಈಶ್ವರ, ಎರಡನೆಯವನು ಜೀವ, ಮೂರನೆಯದು ಪ್ರಕೃತಿ ಎಂದರೆ, ಜಗತ್ತಿನ (ಉಪಾದಾನ) ಕಾರಣ. ಇವುಗಳನ್ನೇ ನಿತ್ಯವೆಂದೂ ಕೂಡ ಹೇಳುತ್ತಾರೆ. ಯಾವವು ನಿತ್ಯಪದಾರ್ಥಗಳೋ, ಅವುಗಳ ಗುಣ- ಕರ್ಮ-ಸ್ವಭಾವಗಳೂ ಕೂಡ ನಿತ್ಯವಾಗಿರುತ್ತವೆ.

೭. **ಪ್ರವಾಹದಿಂದ ಅನಾದಿ:**– ಯಾವ ದ್ರವ್ಯಗಳು, ಗುಣಗಳು ಮತ್ತು ಕರ್ಮಗಳು ಸಂಯೋಗದಿಂದ ಉತ್ಪನ್ನವಾಗುತ್ತವೋ, ಅವು ವಿಯೋಗದಿಂದ ಇರುವುದಿಲ್ಲ. ಆದರೆ, ಯಾವುದರಿಂದ ಮೊದಲು ಸಂಯೋಗವಾಗುತ್ತದೋ, ಆ ಸಾಮರ್ಥ್ಯ ಅವುಗಳಲ್ಲಿ ಅನಾದಿಯಾಗಿರುತ್ತದೆ. ಮತ್ತು ಅದರಿಂದ ಮತ್ತೆಯೂ ಸಂಯೋಗವಾಗುವುದು ; ಹಾಗೆಯೇ ವಿಯೋಗವೂ ಕೂಡ. ಈ ಮೂರನ್ನೂ[೪] ಪ್ರವಾಹದಿಂದ ಅನಾದಿಯೆಂದು ಅಂಗೀಕರಿಸುತ್ತೇನೆ.

೮ . **ಸೃಷ್ಟಿ :**– ಬೇರೆ ಬೇರೆ (ಸೂಕ್ಷ್ಮ ಪರಮಾಣುಗಳು, ಪೃಥಿವೀ- ಮೊದಲಾದುವು) ದ್ರವ್ಯಗಳ ಸಂಯೋಜನವು ಜ್ಞಾನ-ಯುಕ್ತಿಪೂರ್ವಕವಾಗಿ ಆಗಿ, ನಾನಾ ರೂಪವಾಗುವುದನ್ನು **'ಸೃಷ್ಟಿ'** ಎನ್ನುತ್ತಾರೆ.

೯. **ಸೃಷ್ಟಿಯ ಉದ್ದೇಶ್ಯ :**– ಈಶ್ವರನ ಸೃಷ್ಟಿಗೆ ನಿಮಿತ್ತವಾದ ಗುಣ-ಕರ್ಮ-ಸ್ವಭಾವಗಳ ಸಾಫಲ್ಯ – ಸಿದ್ಧಿಯೇ ಸೃಷ್ಟಿಯ ಉದ್ದೇಶ್ಯವಾಗಿದೆ. ಉದಾಹರಣೆಗೆ, ಒಬ್ಬನು ಇನ್ನೊಬ್ಬನನ್ನು'ಕಣ್ಣುಗಳು ಏಕಿವೆ?' – ಎಂದು ಪ್ರಶ್ನಿಸುತ್ತಾನೆ; ಆ ಇನ್ನೊಬ್ಬನು **'ನೋಡುವುದಕ್ಕೆ'** ಎನ್ನುತ್ತಾನೆ. ಹಾಗೆಯೇ ಈಶ್ವರನ ಸೃಜನಸಾಮರ್ಥ್ಯದ ಸಾಫಲ್ಯ ಸೃಷ್ಟಿಸುವುದರಲ್ಲಿಯೇ ಇದೆ. ಆದರೆ, ಇದೊಂದೇ ಅಲ್ಲ; ಜೀವರುಗಳು (ಪೂರ್ವಕೃತ) ಕರ್ಮಗಳ ಫಲ- ಭೋಗವನ್ನು ಯಥಾವತ್ತಾಗಿ ಪಡೆದುಕೊಳ್ಳುವುದು ಹಾಗೂ ಭವಿಷ್ಯ ದ್ವಿಕಾಸಕ್ಕಾಗಿ ಪುರುಷಾರ್ಥವನ್ನು ಮಾಡುವುದು- ಮೊದಲಾದ (ಉದ್ದೇಶ್ಯಗಳೂ ಕೂಡ) ವೂ ಇದ್ದೇ ಇವೆ.

೧೦. **"ಸೃಷ್ಟಿ ಕರ್ತೃಯುಕ್ತ"**ವಾಗಿದೆ. ಪೂರ್ವೋಕ್ತ ಈಶ್ವರನೇ ಇದರ ಕರ್ತೃವಾಗಿದ್ದಾನೆ. ಏಕೆಂದರೆ, ಸೃಷ್ಟಿರಚನೆಯನ್ನು ನೋಡುವುದರಿಂದ ಮತ್ತು ಜಡಪದಾರ್ಥಗಳಲ್ಲಿ ತನ್ನಷ್ಟಕ್ಕೆ ತಾನೇ ಯಥಾಯೋಗ್ಯವಾಗಿ ಬೀಜವೇ ಮೊದಲಾದ ಸ್ವರೂಪ ತಾಳುವ ಸಾಮರ್ಥ್ಯವಿಲ್ಲದಿರುವುದರಿಂದ ಸೃಷ್ಟಿಯ ಕರ್ತೃವು ಅವಶ್ಯವಾಗಿಯೂ ಇದ್ದಾನೆ.

---

೪. ಎಂದರೆ, ಈಶ್ವರ, ಜೀವ ಮತ್ತು ಪ್ರಕೃತಿ.

೧೧. **ಬಂಧ:**– ಇದು ನೈಮಿತ್ತಿಕ, ಎಂದರೆ– ಅವಿದ್ಯಾನಿಮಿತ್ತದಿಂದಾಗುತ್ತದೆ. ಈಶ್ವರನಿಂದ ಬೇರೆಯಾದುದರ ಉಪಾಸನೆ,ಅಜ್ಞಾನ– ಮೊದಲಾದುದರಿಂದಾಗುವ ಪಾಪ ಕರ್ಮಗಳೆಲ್ಲವೂ ದುಃಖವೆಂಬ ಫಲವನ್ನುಂಟುಮಾಡು ವಂತಹವಾಗಿವೆ. (ಬಂಧದ, ದುಃಖದ) ಇಚ್ಛೆ ಏನೋ ಇಲ್ಲ; ಅದರೂ ಅನುಭವಿಸಬೇಕಾಗುತ್ತದೆ. ಆದುದರಿಂದಲೇ ಅದು **'ಬಂಧ'**ವೆನಿಸುತ್ತದೆ.

೧೨. **ಮುಕ್ತಿ:**– ಎಂದರೆ ಎಲ್ಲ ದುಃಖಗಳಿಂದಲೂ ಬಿಡುಗಡೆ ಹೊಂದಿ, ಬಂಧರಹಿತನಾಗಿ, ಸರ್ವವ್ಯಾಪಕನಾದ ಈಶ್ವರನಲ್ಲಿಯೂ ಮತ್ತು ಅವನ ಸೃಷ್ಟಿಯಲ್ಲಿಯೂ ಸ್ವೇಚ್ಛೆಯಿಂದ ವಿಚರಣ ಮಾಡುವುದು **'ಮುಕ್ತಿ'** ; ನಿಯತ ಸಮಯದವರೆಗೆ ಮುಕ್ತಿಯ ಆನಂದವನ್ನು ಸವಿದು, ಪುನಃ ಜಗತ್ತಿಗೆ ಬರುವುದು ವೇದೋಕ್ತವಾದ ಸಹಜಧರ್ಮವಾಗಿದೆ.

೧೩. **ಮುಕ್ತಿಸಾಧನಗಳು :**– ಈಶ್ವರೋಪಾಸನೆ, ಎಂದರೆ – ಯೋಗಾಭ್ಯಾಸ, ಧರ್ಮಾನುಷ್ಠಾನ, ಬ್ರಹ್ಮಚರ್ಯಪೂರ್ವಕವಾದ ವಿದ್ಯಾ–ಪ್ರಾಪ್ತಿ, ಅಪ್ತ ವಿದ್ವಾಂಸರ ಸಂಗ, ಸತ್ಯವಿದ್ಯಾ, ಸದ್ವಿಚಾರ, ಮತ್ತು ಪುರುಷಾರ್ಥ ಮಾಡುವುದು ಮೊದಲಾದುವು ಮುಕ್ತಿ–ಸಾಧನಗಳಾಗಿವೆ.

೧೪. **ಅರ್ಥ:**– ಕೇವಲ ಧರ್ಮದಿಂದ ಗಳಿಸಲ್ಪಡುವ ಸಂಪತ್ತೇ **"ಅರ್ಥ"** ಮತ್ತು ಅಧರ್ಮದಿಂದ ಲಬ್ಧವಾಗುವುದನ್ನು 'ಅನರ್ಥ' ವೆನ್ನುತ್ತಾರೆ.

೧೫. **ಕಾಮ:**– ಧರ್ಮದಿಂದ ಮತ್ತು (ತದನುಕೂಲವಾದ) ಅರ್ಥದಿಂದ ಸಾಧಿಸಲ್ಪಡುವುದು 'ಕಾಮ'ವೆನಿಸುತ್ತದೆ.

೧೬. **ವರ್ಣಾಶ್ರಮಗಳು:**– ಗುಣ–ಕರ್ಮ–(ಸ್ವಭಾವ)ಗಳ ಯೋಗ್ಯತೆಯ ತಳಹದಿಯ ಮೇಲೆ ನಾನು ಇವನ್ನು ಅಂಗೀಕರಿಸುತ್ತೇನೆ. (ಕೇವಲ ಹುಟ್ಟಿನ ಆಧಾರದಿಂದಲ್ಲ)

೧೭. **ರಾಜ:**– ಶುಭಗುಣ–ಕರ್ಮ–ಸ್ವಭಾವಗಳಿಂದ ಪ್ರಕಾಶಿಸುವವನೂ, ಪಕ್ಷಪಾತ ರಹಿತನೂ, ನ್ಯಾಯ– ಧರ್ಮದ ಅನುಷ್ಠಾನ ಮಾಡುವವನೂ, ಪ್ರಜೆಗಳ ಬಗೆಗೆ ತಂದೆಯಂತೆ ವರ್ತಿಸುವವನೂ ಮತ್ತು ಅವರನ್ನು ಮಕ್ಕಳಂತೆಯೇ ತಿಳಿದು, ಅವರ ಉನ್ನತಿಯನ್ನು ಮತ್ತು ಸುಖವನ್ನು ಸಂವರ್ಧಿಸುವುದರಲ್ಲಿ ಸದಾ ಯತ್ನಿಸುತ್ತಿರುವವನೂ ಆದಮನನ್ನು **'ರಾಜ'** ನೆನ್ನುತ್ತಾರೆ.

೧೮. **ಪ್ರಜೆ:**– ಪವಿತ್ರ ಗುಣ–ಕರ್ಮ– ಸ್ವಭಾವಗಳನ್ನು ರೂಢಿಸಿಕೊಂಡು, ಪಕ್ಷಪಾತ ರಹಿತವಾದ ನ್ಯಾಯ– ಧರ್ಮವನ್ನು ಅವಲಂಬಿಸುವುದರಿಂದ ರಾಜವರ್ಗ– ಪ್ರಜಾವರ್ಗಗಳ ಉನ್ನತಿಯನ್ನು ಬಯಸುತ್ತಾ, ರಾಜದ್ರೋಹರಹಿತರಾಗಿ,[೫] ರಾಜನೊಂದಿಗೆ ಮಕ್ಕಳಂತೆ ವರ್ತಿಸುವವರನ್ನು **'ಪ್ರಜೆ'**ಯೆನ್ನುತ್ತಾರೆ.

೧೯. **ನ್ಯಾಯಕಾರಿ:**– ಸದಾ ವಿವೇಕವಂತರಾಗಿ, ಅಸತ್ಯವನ್ನು ವರ್ಜಿಸಿ, ಸತ್ಯವನ್ನು ಗ್ರಹಿಸುವವನೂ, ಅನ್ಯಾಯಕಾರಿಗಳನ್ನು ದೂರೀಕರಿಸುವವನೂ, ಮತ್ತು ನ್ಯಾಯಕಾರಿಗಳಿಗೆ ವೃದ್ಧಿಯನ್ನುಂಟುಮಾಡುವವನೂ, ತನ್ನ ಆತ್ಮನ (ಸುಖದ) ಹಾಗೆಯೇ ಎಲ್ಲರ ಸುಖವನ್ನೂ ಬಯಸುವವನೂ **'ನ್ಯಾಯಕಾರಿ'**[೬] ಯಾಗಿರುತ್ತಾನೆ. ಅವನನ್ನು ನಾನೂ ಕೂಡ 'ಸರಿಯಾದವನು' ಎಂದು ಒಪ್ಪುತ್ತೇನೆ.

೨೦. **ದೇವ :**– ವಿದ್ವಾಂಸರನ್ನು ದೇವಜನರೆಂದೂ, ಮತ್ತು ಅವಿದ್ವಾಂಸರನ್ನು **'ಅಸುರ'**ರೆಂದೂ, ಪಾಪಿಗಳನ್ನು **'ರಾಕ್ಷಸ'** ರೆಂದೂ, ಅನಾಚಾರಿಗಳನ್ನು **'ಪಿಶಾಚ'**ರೆಂದೂ ಅಂಗೀಕರಿಸುತ್ತೇನೆ.

---

೫. ಮೇಲೆ ಕೊಟ್ಟಿರುವ ಯೋಗ್ಯತೆಗಳನ್ನುಳ್ಳ 'ರಾಜ'ನಿಗೆ ವಿದ್ರೋಹ ಮಾಡುವ ಅವಕಾಶವಿಲ್ಲ. ಇದನ್ನರಿಯದೇ, ಹಲವು ವಿದ್ವಾಂಸರು ಸ್ವಾಮೀ ದಯಾನಂದರ ಮೇಲೆ 'ರಾಜವ್ಯವಸ್ಥೆಯ ಸಮರ್ಥಕ'ರೆಂದೂ ಆರೋಪ ಹೊರೆಸುತ್ತಾರೆ. ಪ್ರಶಾಸಕನಿಗೆ, ಶಾಸನ–ಪ್ರಮುಖನಿಗೆ 'ರಾಜಾ' ಎಂದು ಹೆಸರಷ್ಟೇ!

೬. ಎಂದರೆ, ನ್ಯಾಯಾಧೀಶ.–ಯು.ಮೀ.

**೨೧. ದೇವಪೂಜಾ:–** ಅದೇ ರೀತಿ ವಿದ್ವಾಂಸರುಗಳು, ತಾಯಿ, ತಂದೆ, ಆಚಾರ್ಯ, ಅತಿಥಿ, ನ್ಯಾಯಕಾರಿಯಾದ ರಾಜ, ಹಾಗೂ ಧರ್ಮಾತ್ಮರಾದ ಜನರು, ಪತಿವ್ರತೆಯಾದ[೭] ನಾರಿ ಮತ್ತು ಪತ್ನೀವ್ರತನಾದ ಪತಿ– ಇವರ ಸತ್ಕಾರಮಾಡುವುದು 'ದೇವರಪೂಜೆ'–ಎನಿಸುತ್ತದೆ. ಇದಕ್ಕೆ ಪ್ರತಿಕೂಲವಾದುದು 'ಅದೇವಪೂಜೆ' . ಮೂರ್ತಿಮಂತರು (ದೇಹಯುಕ್ತರು) ಗಳಾದ ಇವರು ಪೂಜ್ಯರೆಂದು, ಶಿಲೆಯೇ ಮೊದಲಾದ ಜಡಮೂರ್ತಿಗಳು ಸರ್ವಥಾ ಅಪೂಜ್ಯವೆಂದೂ ತಿಳಿಯುತ್ತೇನೆ.

**೨೨. ಶಿಕ್ಷಣ:–** ವಿದ್ಯೆ, ಸಭ್ಯತೆ, ಧರ್ಮಾತ್ಮತ್ವ, ಜಿತೇಂದ್ರಿಯತ್ವ – ಮೊದಲಾದುದರ ವೃದ್ಧಿಯೂ ಮತ್ತು ಅವಿದ್ಯೆ – ಮೊದಲಾದ ದೋಷಗಳ ದೂರೀಕರಣವೂ ಯಾವುದರಿಂದ ಆಗುವುವೋ, ಅದನ್ನು **'ಶಿಕ್ಷಣ'**ವೆನ್ನುತ್ತಾರೆ.

**೨೩. ಪುರಾಣ:–** ಬ್ರಹ್ಮನೇ ಮೊದಲಾದವರಿಂದ ನಿರ್ಮಿತವಾದ ಐತರೇಯವೇ ಮೊದಲಾದ ಬ್ರಾಹ್ಮಣ ಗ್ರಂಥಗಳಿಗೆಯೇ ಪುರಾಣ, ಇತಿಹಾಸ, ಕಲ್ಪ, ಗಾಥಾ, ನಾರಾಶಂಸೀ– ಎಂಬ ಹೆಸರುಗಳಿವೆ; ಭಾಗವತವೇ ಮೊದಲಾದ ಬೇರೆಯ ಗ್ರಂಥಗಳು ಪುರಾಣಗಳಲ್ಲ– ಎಂದು ನಾನು ಗ್ರಹಿಸುತ್ತೇನೆ.

**೨೪. ತೀರ್ಥ:–** ಸತ್ಯಭಾಷಣ, ವಿದ್ಯೆ, ಸತ್ಸಂಗ, ಯಮ – ನಿಯಮ ಮೊದಲಾದ ಯೋಗಾಂಗಗಳ ಅಭ್ಯಾಸ, ಪುರುಷಾರ್ಥ (ಪುರುಷ ಪ್ರಯತ್ನ), ವಿದ್ಯಾದಾನ – ಮೊದಲಾದ ಮಾನವರನ್ನು ದುಃಖಸಾಗರದಿಂದ ಪಾರುಗಾಣಿಸುವ ಶುಭಕರ್ಮಗಳನ್ನೇ **'ತೀರ್ಥ'** ವೆಂದು ತಿಳಿಯುತ್ತೇನೆ; ಬೇರೆ ಜಲ–ಸ್ಥಳ ಮೊದಲಾದುವನ್ನಲ್ಲ.

**೨೫. ಪುರುಷಾರ್ಥ ಪ್ರಾರಬ್ಧಕ್ಕಿಂತ ಶ್ರೇಷ್ಠ :–** ಪುರಾಷರ್ಥದಿಂದಲೇ ಸಂಚಿತ ಕರ್ಮಗಳೂ, ಪ್ರಾರಬ್ಧಕರ್ಮಗಳೂ ಉದ್ಭವಿಸುತ್ತವೆ. ಅದರ ಸುಧಾರಣೆಯಿಂದಲೇ ಸರ್ವವೂ ಸುಧಾರಿಸುತ್ತದೆ; ಅದರ ವಿಕೃತಿಯಿಂದಲೇ ಸರ್ವವೂ ವಿಕೃತವಾಗುತ್ತದೆ. ಆದುದರಿಂದ ಪುರುಷಾರ್ಥವೇ ಶ್ರೇಷ್ಠ. ಇದೇ ಕಾರಣದಿಂದ ಪ್ರಾರಬ್ಧಕ್ಕಿಂತ ಪುರುಷಾರ್ಥವೇ ಶ್ರೇಷ್ಠವೆಂದು ಗ್ರಹಿಸುತ್ತೇನೆ.

**೨೬. " ಮನುಷ್ಯ"** ನಾದವನಿಗೆ ಸರ್ವರೊಂದಿಗೂ ಯಥಾಯೋಗ್ಯವಾಗಿ ಸುಖ–ದುಃಖಗಳಲ್ಲಿ ಮತ್ತು ಲಾಭ–ಹಾನಿಗಳಲ್ಲಿ ತನ್ನ ಆತ್ಮನಂತೆಯೇ ಎಲ್ಲರೂ ಎಂದರಿತು ವರ್ತಿಸುವುದು ಶ್ರೇಷ್ಠವೆಂದೂ, ಅನ್ಯಥಾ ವರ್ತಿಸುವುದು ನೀಚವೆಂದೂ ತಿಳಿಯುತ್ತೇನೆ.

**೨೭. ಸಂಸ್ಕಾರ:–** ಶರೀರ, ಮನಸ್ಸು, ಆತ್ಮ– ಇವನ್ನು ಉತ್ತಮಗೊಳಿಸುವ ಶಾಸ್ತ್ರ – ವಿಧಿಯನ್ನೇ ಸಂಸ್ಕಾರವೆನ್ನುತ್ತಾರೆ. ಅದು ನಿಷೇಕದಿಂದಾರಂಭಿಸಿ ಅಂತ್ಯೇಷ್ಟಿಯವರೆಗೆ ಹದಿನಾರು ಬಗೆಯದಿದೆ. ಅದು ಮಾಡಬೇಕಾದುದೆಂದು ತಿಳಿಯುತ್ತೇನೆ, ಮತ್ತು ಶವದಹನವಾದ ಮೇಲೆ ಮೃತನಿಗಾಗಿ ಮಾಡಬೇಕಾದುದು ಏನೂ ಇಲ್ಲ.

**೨೮. ಯಜ್ಞ:–** ವಿದ್ವಾಂಸರ ಸತ್ಕಾರವೂ, ಯಥಾಯೋಗ್ಯವಾಗಿ ಶಿಲ್ಪವಿದ್ಯೆಯೂ, ರಾಸಾಯನಿಕ – ಎಂದರೆ, ಪದಾರ್ಥವಿದ್ಯೆಯ ಉಪಯೋಗವೂ, ಮತ್ತು ವಿದ್ಯೆ – ಮೊದಲಾದ ಶುಭತತ್ತ್ವಗಳ ದಾನವೂ, ವಾಯು, ಜಲ, ಮಳೆ, ಓಷಧಿಗಳು – ಇವೆಲ್ಲದರ ಪವಿತ್ರೀಕರಣದಿಂದ ಸರ್ವಜೀವರ ಸುಖ–ಸಂಪಾದನೆಯೂ ಆಗುವಂತೆ ಮಾಡುವ ಶಾಸ್ತ್ರೀಯ ಕ್ರಿಯೆಯನ್ನು **'ಯಜ್ಞ'** ವೆನ್ನುತ್ತಾರೆ. ಅದನ್ನು ಉತ್ತಮವೆಂದು ತಿಳಿಯುತ್ತೇನೆ.

**೨೯. ಆರ್ಯರು:–** ಎಂದರೆ ಶ್ರೇಷ್ಠರು; **"ದಸ್ಯುಗಳು"** – ಎಂದರೆ ದುಷ್ಟರಾದ ಮಾನವರೆಂದು ಜನರು ಹೇಳುವ ರೀತಿಯಲ್ಲಿಯೇ ನಾನೂ ಕೂಡ ತಿಳಿಯುತ್ತೇನೆ.

---

೭. ಪತಿವ್ರತೆ ಎಂಬ ಶಬ್ದಕ್ಕೆ ಇಲ್ಲಿ
ಪತ್ಯುರನುವ್ರತಾಭೂತ್ವಾಸಂನ್ನಹ್ಯಸ್ವಾಮೃತಾಯಕಮ್॥ ಅಥರ್ವವೇದ೧೪.೧.೪೨]
ಎಂದರೆ, ಪತಿಯ ಎಲ್ಲ ಸದ್ ವ್ಯವಹಾರಗಳಲ್ಲೂ, ಸದಾಕಾಲದಲ್ಲೂ ಪತಿಗೆ ಅನುಕೂಲಳಾಗಿ, ಅನುವ್ರತಳಾಗಿ ವರ್ತಿಸುವವಳು ಎಂದರ್ಥ. ಪೌರಾಣಿಕ ಮಾನ್ಯತೆಯಂತೆ, ಪುರ ಪುರಷ ಸಂಗ ಮಾತ್ರ ಮಾಡದೇ ಇದ್ದು, ಪತಿಗೆ ವಿರುದ್ಧವಾಗಿ ವರ್ತಿಸುತ್ತಾ, ಅವನೊಡನೆ ಹೋರಾಡುತ್ತಾ ಅವನನ್ನು ತಿರಸ್ಕರಿಸುತ್ತಾ ನಡೆದರೂ ಕೂಡ, ಕಾಲ–ಕಾಲಕ್ಕೆ ತಕ್ಕಂತೆ ಗೌರೀ ಪೂಜೆ, ತುಳಸೀ ಪೂಜೆ, ಅರಿಶಿನ–ಕುಂಕುಮ, ವ್ರತ–ಉಪವಾಸ, ಪೂಜಾ–ಪಾಠ, ಉದ್ಯಾಪನೆ, ದೇವಾಲಯಗಳ ಮೂರ್ತಿದರ್ಶನ, "ಸೇವೆ' ಪುರಾಣ ಶ್ರವಣ, ತೀರ್ಥಯಾತ್ರೆ ಮೊದಲಾದ ಧೂರ್ತ ಪ್ರಚೋದಿತ ವ್ಯವಹಾರಗಳಲ್ಲಿ ತೊಡಗಿರುವ ಸ್ತ್ರೀ, ಪತಿವ್ರತೆಯೆಂಬ ಯೋಗ್ಯತೆಯನ್ನು ಪಡೆಯಲಾರಳು. ಇನ್ನು ಪಾಶ್ಚಾತ್ಯ ಸಂಸ್ಕೃತಿಯಿಂದ ಪ್ರಭಾವಿತಳಾಗಿ ಅದನ್ನನುಕರಿಸುತ್ತಿರುವ ಸ್ತ್ರೀಯರ ಬಗ್ಗೆ ಮಾತನಾಡದಿರುವುದೇ ಒಳಿತು! ಹೀಗೇಯೇ ಪತ್ನೀವ್ರತ ನ ಬಗ್ಗೆಯೂ ತಿಳಿಯಿರಿ.

**೩೦. ಆರ್ಯಾವರ್ತ ದೇಶ:**– ಸೃಷ್ಟಿಯ ಆದಿಕಾಲದಿಂದ ಈ ದೇಶದಲ್ಲಿ ಆರ್ಯರು ವಾಸಿಸುತ್ತಾ ಬಂದಿರುವುದರಿಂದ ಈ ಭೂಮಿಖಂಡದ ಹೆಸರು ಆರ್ಯಾವರ್ತವೆಂದಾಗಿದೆ. ಆದರೆ, ಇದರ ಎಲ್ಲೆಗಳು ಉತ್ತರದಲ್ಲಿ ಹಿಮಾಲಯ, ದಕ್ಷಿಣದಲ್ಲಿ ಪೂರ್ವಘಟ್ಟ– ಪಶ್ಚಿಮ ಘಟ್ಟಗಳೆಂಬ ಉತ್ತರ–ದಕ್ಷಿಣ ದಿಕ್ಕಿಗೆ ಹಬ್ಬಿರುವ ವಿಂಧ್ಯಾಚಲ ಮತ್ತು ಬ್ರಹ್ಮಪುತ್ರಾನದಿ–ಇವೇ ಆಗಿರುತ್ತವೆ. ಈ ನಾಲ್ವರ ಮಧ್ಯೆ ಎಷ್ಟು ದೇಶವಿದೆಯೋ ಅದನ್ನು ಆರ್ಯಾವರ್ತವೆನ್ನುತ್ತಾರೆ. ಮತ್ತು ಇದರಲ್ಲಿ ಯಾರು ಸದಾಯಿರುತ್ತಾರೋ, ಅವರನ್ನೂ ಕೂಡ ಆರ್ಯರೆನ್ನುತ್ತಾರೆ. (ದೇಶ ಸಂಬಂಧದ ಈ ಪರಿಭಾಷೆಯಲ್ಲದೆ, ಶ್ರೇಷ್ಠರನ್ನೂ **"ಆರ್ಯ"**ರೆಂದು ಮಹರ್ಷಿಗಳು ತಮ್ಮ ಮಂತವ್ಯ–೨೯ ರಲ್ಲಿ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದು)

**೩೧. ಆಚಾರ್ಯ:**– ಸಾಂಗೋಪಾಂಗವಾಗಿ ವೇದವಿದ್ಯೆಗಳನ್ನು ಕಲಿಸುವವನು, ಸತ್ಯಾಚಾರದ ಸ್ವೀಕಾರವನ್ನೂ, ಮತ್ತು ಮಿಥ್ಯಾಚಾರದ ತ್ಯಾಗವನ್ನೂ ಮಾಡಿಸುವವನು **'ಆಚಾರ್ಯ'**ನೆನಿಸುತ್ತಾನೆ.

**೩೨. ಶಿಷ್ಯ:**– ಸತ್ಯಶಿಕ್ಷಣವನ್ನು ಮತ್ತು ವಿದ್ಯೆಯನ್ನು ಗ್ರಹಿಸಲು ಅರ್ಹನೂ, ಧರ್ಮಾತ್ಮನೂ, ವಿದ್ಯಾಸ್ವೀಕೃತಿಯ ಇಚ್ಛುಕನೂ ಮತ್ತು ಆಚಾರ್ಯನಿಗೆ ಪ್ರಿಯವಾದುದನ್ನು ಮಾಡುವವನೂ ಆದವನನ್ನು **'ಶಿಷ್ಯ'**ನೆನ್ನುತ್ತಾರೆ.

**೩೩. ಗುರು:**– ತಾಯಿ, ತಂದೆ, ಮತ್ತು ಸತ್ಯವನ್ನು ಸ್ವೀಕಾರಮಾಡಿಸುವವರೂ, ಅಸತ್ಯವನ್ನು ಪರಿತ್ಯಾಗಮಾಡಿಸುವವರೂ, **"ಗುರುಗಳು"**– ಎನಿಸುತ್ತಾರೆ.

**೩೪. ಪುರೋಹಿತ:**– ಯಜಮಾನರುಗಳಿಗೆ (ಯಜ್ಞಕರ್ತೃಗಳಿಗೆ) ಹಿತಕಾರಿಯೂ, ಸತ್ಯೋಪದೇಶಕನೂ ಆಗಿರುವವನು **ಪುರೋಹಿತ**ನೆನಿಸುತ್ತಾನೆ.

**೩೫. ಉಪಾಧ್ಯಾಯ:**– ವೇದಗಳ ಒಂದು ಭಾಗವನ್ನು ಅಥವಾ ಅಂಗಗಳನ್ನು ಓದಿಸುವವನು **ಉಪಾಧ್ಯಾಯ**ನೆನಿಸುತ್ತಾನೆ.

**೩೬. ಶಿಷ್ಟಾಚಾರ:**– ಧರ್ಮಾಚರಣಪೂರ್ವಕವಾಗಿ, ಬ್ರಹ್ಮಚರ್ಯಾನುಷ್ಠಾನ ಮಾಡುತ್ತಾ, ವಿದ್ಯೆಯನ್ನು ಗ್ರಹಿಸಿ, ಪ್ರತ್ಯಕ್ಷವೇ ಮೊದಲಾದ ಪ್ರಮಾಣಗಳಿಂದ ಸತ್ಯಾಸತ್ಯ ನಿರ್ಣಯವನ್ನು ಮಾಡಿ, ಸತ್ಯದ ಸ್ವೀಕಾರವನ್ನೂ, ಅಸತ್ಯದ ಪರಿತ್ಯಾಗವನ್ನೂ ಮಾಡುವುದೇ ಶಿಷ್ಟಾಚಾರ;[೮] ಇದನ್ನನುಸರಿಸುವವನೇ ಶಿಷ್ಟನೆನಿಸುತ್ತಾನೆ.

**೩೭. ಪ್ರಮಾಣಗಳು:**– ಪ್ರತ್ಯಕ್ಷವೇ ಮೊದಲಾದ ಎಂಟು ಪ್ರಮಾಣಗಳನ್ನು ನಾನು ಅಂಗೀಕರಿಸುತ್ತೇನೆ.

**೩೮. ಅಪ್ತ:**– ಯಥಾರ್ಥವಾದುದನ್ನು ಹೇಳುವವನೂ, ಧರ್ಮಾತ್ಮನೂ, ಸರ್ವರ ಸುಖಕ್ಕಾಗಿ ಪ್ರಯತ್ನಿಸುವವನೂ ಆಗಿರುವವನನ್ನೇ **'ಅಪ್ತ'**ನೆಂದು ಗ್ರಹಿಸುತ್ತೇನೆ.

**೩೯. ಪರೀಕ್ಷೆ:**– ಐದು ವಿಧವಾಗಿರುತ್ತದೆ. ಇವುಗಳಲ್ಲಿ, ಮೊದಲನೆಯದು ಈಶ್ವರನ ಗುಣ–ಕರ್ಮ–ಸ್ವಭಾವಗಳು ಮತ್ತು ವೇದವಿದ್ಯೆ; ಎರಡನೆಯದು ಪ್ರತ್ಯಕ್ಷ– ಮೊದಲಾದ ಎಂಟು ಪ್ರಮಾಣಗಳು, ಮೂರನೆಯದು ಸೃಷ್ಟಿಕ್ರಮ; ನಾಲ್ಕನೆಯದು ಆಪ್ತರ ವ್ಯವಹಾರ ಮತ್ತು ಐದನೆಯದು ತನ್ನ ಆತ್ಮನ ಪವಿತ್ರತೆ ಹಾಗೂ ವಿದ್ಯೆ . ಈ ಐದು ಪರೀಕ್ಷೆಗಳಿಂದ ಸತ್ಯಾಸತ್ಯ ನಿರ್ಣಯವನ್ನು ಮಾಡಿ, ಸತ್ಯದ ಸ್ವೀಕಾರವನ್ನೂ, ಅಸತ್ಯದ ಪರಿತ್ಯಾಗವನ್ನೂ ಮಾಡಬೇಕು.

**೪೦. ಪರೋಪಕಾರ:**– ಮಾನವರೆಲ್ಲರ ದುರಾಚಾರ– ದುಃಖಗಳು ದೂರವಾಗಿ. ಶ್ರೇಷ್ಠಚಾರ ಮತ್ತು ಸುಖಗಳು ಹೆಚ್ಚುವಂತಹ ಕಾರ್ಯಮಾಡುವುದನ್ನೇ **ಪರೋಪಕಾರ**ವೆಂದು ಭಾವಿಸುತ್ತೇನೆ.

**೪೧. ಸ್ವತಂತ್ರ – ಪರತಂತ್ರ:**– ಜೀವನು ತನ್ನ ಕರ್ಮಗಳನ್ನು ಮಾಡುವುದರಲ್ಲಿ **ಸ್ವತಂತ್ರನೂ,** ಮತ್ತು ಕರ್ಮಫಲಾನುಭವ ಮಾಡುವಲ್ಲಿ ಈಶ್ವರನ ವ್ಯವಸ್ಥೆಯಿಂದ **ಪರತಂತ್ರನೂ** ಆಗಿದ್ದಾನೆ. ಹಾಗೆಯೇ ಸತ್ಯಾಚಾರ ಮೊದಲಾದ ಕರ್ಮಗಳನ್ನು ಮಾಡುವುದರಲ್ಲಿ ಈಶ್ವರನೂ ಕೂಡ ತನ್ನ ಪವಿತ್ರ ಗುಣ–ಕರ್ಮ– ಸ್ವಭಾವಾನುಗುಣವಾಗಿ **ಸ್ವತಂತ್ರ**ನಾಗಿದ್ದಾನೆ.

**೪೨. ಸ್ವರ್ಗ:**– ಸುಖ ವಿಶೇಷದ ಭೋಗದ ಮತ್ತು ಅದರ ಸಾಧನಗಳ ಸಂಪಾದನೆಯ ಹೆಸರು **'ಸ್ವರ್ಗ'**ವೆಂದಾಗಿದೆ.

---

೮. ಊಟ, ಉಡಿಗೆ–ತೊಡಿಗೆ, ಸ್ವಾಗತ–ಸತ್ಕಾರ ಮೊದಲಾದ ವ್ಯವಹಾರ ಸಂಬಂಧದ ವಿಷಯಗಳಿಗೆ [etiquette] ಎಂಬುದು ಆಧುನಿಕ ಕಾಲದ ಪರಿಭಾಷೆ. ಇದನ್ನು ಮೇಲಿನ ವೈದಿಕ ಸಂಸ್ಕೃತಿಯ ಶಿಷ್ಟಾಚಾರದೊಂದಿಗ ಹೋಲಿಸಿ ನೋಡಿ.

**೪೩. ನರಕ:–** ದುಃಖ ವಿಶೇಷದ ಭೋಗದ ಮತ್ತು ಅದರ ಸಾಧನಗಳ ಸಂಪಾದನೆಯ ಹೆಸರು **'ನರಕ'** ವೆಂದಾಗಿದೆ.

**೪೪. ಜನ್ಮ :–** ಶರೀರಧಾರಣ ಮಾಡಿ ಜೀವನು ಪ್ರಕಟನಾಗುವುದೇ ಜನ್ಮವಾಗಿದೆ. ಪೂರ್ವಜನ್ಮ, ಆಗಾಮಿ ಜನ್ಮ ಹಾಗೂ ವರ್ತಮಾನ ಜನ್ಮ– ಎಂಬ ಭೇದದಿಂದ ಮೂರು ಬಗೆಯದನ್ನೂ ಒಪ್ಪಿಕೊಳ್ಳುತ್ತೇನೆ.

**೪೫. ಜನನ–ಮರಣ:–** ಜೀವನೊಂದಿಗೆ ದೇಹದ ಸಂಯೋಗವಾಗುವುದರ ಹೆಸರು **ಜನನ** ಮತ್ತು ಜೀವನಿಂದ ದೇಹದ ವಿಯೋಗವಾಗುವುದರ ಹೆಸರು **ಮರಣ** – ಎಂದು ಹೇಳುತ್ತಾರೆ.

**೪೬. ವಿವಾಹ:–** ಶಾಸ್ತ್ರೀಯ ನಿಯಮಪೂರ್ವಕವಾಗಿ, ಪ್ರಕ ಟರೂಪದಲ್ಲಿ ಪರಸ್ಪರರ ಸ್ವಂತ ಇಚ್ಛೆಯಿಂದ ವರನು ವಧುವಿನ ಪಾಣಿಗ್ರಹಣಮಾಡುವುದು ವಿವಾಹವೆನಿಸುತ್ತದೆ.

**೪೭. ನಿಯೋಗ :–** ವಿವಾಹಾನಂತರ ಪತಿ ಅಥವಾ ಪತ್ನಿ ಮೃತರಾಗುವುದು, ಇಬ್ಬರೂ ಜೀವಂತರಾಗಿದ್ದರೂ ಸಂತತಿಯಾಗದಿರುವುದು, ಪತಿಯ ನಪುಂಸಕತ್ವ ಪತ್ನಿಯ ಬಂಜೆತನ, ಯಾವುದಾದರೂ ಅಸಾಧ್ಯ ರೋಗದಿಂದ ಗ್ರಸ್ತರಾಗಿರುವುದು – ಈ ಮೊದಲಾದ ಆಪತ್ಕಾಲಗಳಲ್ಲಿ, ಗುರು–ಹಿರಿಯರ ಮುಂದೆ ಪ್ರಕಟಪಡಿಸಿ, ಕೇವಲ ಸಂತಾನ ಪ್ರಾಪ್ತಿಗಾಗಿ ಸ್ವವರ್ಣದ ಅಥವಾ ತನ್ನದಕ್ಕಿಂತ ಉತ್ಕೃಷ್ಟ ವರ್ಣದ ಸ್ತ್ರೀಯರೊಂದಿಗೆ ಅಥವಾ ಪುರುಷನೊಂದಿಗೆ ದೇಹಸಂಗ ಮಾಡುವುದು ನಿಯೋಗವೆನಿಸುತ್ತದೆ.

**೪೮. ಸ್ತುತಿ:–** ಎಂದರೆ, ಗುಣಕೀರ್ತನ, ಶ್ರವಣ ಮತ್ತು ಜ್ಞಾನದ ಲಭಿಸುವಿಕೆ, ಇದರ ಫಲ ಪ್ರೀತಿ – ಮೊದಲಾದುದಾಗಿದೆ.

**೪೯. ಪ್ರಾರ್ಥನೆ:–** ತನ್ನ ಸಾಮರ್ಥ್ಯದ ಪ್ರಯೋಗದ ನಂತರ, (ಆಥವಾ ಪ್ರಯೋಗದೊಂದಿಗೆ) ಈಶ್ವರನಿಗೆ ಸಂಬಂಧಿಸಿದಂತಹ ವಿಜ್ಞಾನ – ಮೊದಲಾದುವಕ್ಕಾಗಿ ಈಶ್ವರನಲ್ಲಿಯೇ ಯಾಚನೆಯನ್ನು ಮಾಡುವುದು ಪ್ರಾರ್ಥನೆಯೆನಿಸುತ್ತದೆ. ನಿರಭಿಮಾನತ್ವ (ಗರ್ವನಾಶ, ನಮ್ರತಾವರ್ಧನ) ಮೊದಲಾದುವು ಇದರ ಫಲವಾಗಿರುತ್ತವೆ.

**೫೦. ಉಪಾಸನೆ:–** ಈಶ್ವರನ ಗುಣ–ಕರ್ಮ– ಸ್ವಭಾವಗಳು ಪವಿತ್ರವಾಗಿರುವಂತೆ ತಮ್ಮನ್ನೂ ನಿರ್ಮಲೀಕರಿಸಿಕೊಳ್ಳುವುದು, ಈಶ್ವರನು ಸರ್ವವ್ಯಾಪಕನು ಮತ್ತು ತಾವು ವ್ಯಾಪ್ಯರು– ಎಂದು ತಿಳಿದು, 'ಈಶ್ವರನ ಬಳಿ ನಾವಿದ್ದೇವೆ; ನಮ್ಮ ಬಳಿ ಈಶ್ವರನಿದ್ದಾನೆ'– ಎಂಬ ನಿರ್ಧಾರವನ್ನು ಯೋಗಾಭ್ಯಾಸದಿಂದ ಸಾಕ್ಷಾತ್ತಾಗಿ ಮಾಡಿಕೊಳ್ಳುವುದು **ಉಪಾಸನೆ**ಯೆನಿಸುತ್ತದೆ. ಇದರ ಫಲ ಜ್ಞಾನೋನ್ನತಿ ಮೊದಲಾದುದಾಗಿದೆ.

**೫೧. ಸಗುಣ–ನಿರ್ಗುಣ ಸ್ತುತಿ ಪ್ರಾರ್ಥನೋಪಾಸನಾ:–** ಪರಮೇಶ್ವರನಲ್ಲಿರುವ ಗುಣಗಳಿಂದ ಅವನು ಯುಕ್ತನು; ಮತ್ತು ಅವನಲ್ಲಿ ಇಲ್ಲದ ಗುಣಗಳಿಂದ ಅವನು ರಹಿತನು– ಎಂದು ಗ್ರಹಿಸಿ, ಅವನ ಗುಣಗಾನ ಮಾಡುವುದು **'ಸಗುಣ – ನಿರ್ಗುಣ ಸ್ತುತಿ'**[೯] ಈಶ್ವರನಿಂದ ಶುಭಗುಣಗಳನ್ನು ಪಡೆದುಕೊಳ್ಳಲು ಇಚ್ಛಿಸುವುದು ಮತ್ತು ದೋಷ ವಿಮೋಚನಕ್ಕಾಗಿ ಪರಮಾತ್ಮನ ಸಹಾಯವನ್ನು ಬಯಸುವುದು **"ಸಗುಣ–ನಿರ್ಗುಣ ಪ್ರಾರ್ಥನೆ"**;[೧೦] ಮತ್ತು ಪರಮೇಶ್ವರನ ಬಗೆಗೆ, ಅವನು ಸಮಸ್ತ ಸದ್ಗುಣಸಹಿತನು ಹಾಗೂ ಸರ್ವದೋಷರಹಿತನು– ಎಂದು ಗ್ರಹಿಸಿ, ತನ್ನ ಆತ್ಮನನ್ನು ಅವನ[೧೧] ಹಾಗೂ ಅವನ ಅಜ್ಞೆಯ (ಪರಿಪಾಲನದ) ಸಲುವಾಗಿ ಸಮರ್ಪಣ ಮಾಡಿಬಿಡುವುದು **'ಸಗುಣ–ನಿರ್ಗುಣೋಪಾಸನೆ'** ಎನಿಸುತ್ತದೆ. (ಸಾಧಾರಣತಃ ಪಾಮರರು ಗ್ರಹಿಸುವಂತೆ, 'ಸಗುಣ – ಎಂದರೆ ಸಾಕಾರ; ನಿರ್ಗುಣನೆಂದರೆ ನಿರಾಕಾರ' – ಎಂದು ತಿಳಿಯುವುದು ಪ್ರಮಾಣ – ಯುಕ್ತಿಯೆರಡಕ್ಕೂ ವಿರುದ್ಧವಾಗಿರುತ್ತದೆ).

ಹೀಗೆ ಸಂಕ್ಷೇಪವಾಗಿ ಸ್ವಸಿದ್ಧಾಂತಗಳನ್ನು ತೋರಿಸಿದ್ದೇವೆ. ಇವುಗಳ ವಿಶೇಷ ವ್ಯಾಖ್ಯಾನ ಇದೇ "ಸತ್ಯಾರ್ಥಪ್ರಕಾಶ"ದ ದ್ವಿತೀಯ ಪ್ರಕರಣದಲ್ಲಿದೆ. ಮತ್ತು "ಋಗ್ವೇದಾದಿ ಭಾಷ್ಯಭೂಮಿಕಾ" ಮೊದಲಾದ ಗ್ರಂಥಗಳಲ್ಲಿಯೂ ಕೂಡ ಬರೆದಿದ್ದೇವೆ. ಎಂದರೆ, ಸರ್ವರಿಗೂ ಮಾನನೀಯವಾಗಿರುವ ತತ್ತ್ವಗಳನ್ನು ಒಪ್ಪುತ್ತೇನೆ. ಉದಾಹರಣೆಗೆ, ಸತ್ಯ ಭಾಷಣ ಸರ್ವರ

---

೯. ಈ ಬಗೆಯ ಸ್ತುತಿಗೆ ಕೇವಲ ಈಶ್ವರೋಕ್ತ ನಾಲ್ಕು ವೇದಗಳೇ ಆಧಾರ ! ಇತರ ಮನುಷ್ಯಕೃತ ಗ್ರಂಥಗಳಲ್ಲಿ ಈಶ್ವರನ ಅಯಥಾರ್ಥ ಸ್ತುತಿ ಇರುತ್ತದೆ.

೧೦. ಈ ಬಗೆಯ ಪ್ರಾರ್ಥನೆಗೂ ನಾಲ್ಕು ವೇದಗಳೇ ಆಧಾರ. ಮನುಷ್ಯಕೃತ ಗ್ರಂಥಗಳಲ್ಲಿ ಈಶ್ವರನ ಅಯಥಾರ್ಥ ಸ್ತುತಿ ಇರುತ್ತದೆ.

೧೧. ಅವನ ಸಲುವಾಗಿ, ಎಂದರೆ ಅವನ ಸಾಕ್ಷಾತ್ಕಾರದ ಸಲುವಾಗಿ! 'ಅವನಿಗೆ ನಮ್ಮಿಂದ ಏನೋ ಬೇಕಾಗಿದೆ; ಅದಕ್ಕಾಗಿ' ಎಂಬ ಭಾವನೆ ವೇದಾನುಕೂಲವಲ್ಲ.

ದೃಷ್ಟಿಯಲ್ಲಿಯೂ ಒಳ್ಳೆಯದು ಮತ್ತು ಮಿಥ್ಯಾಭಾಷಣ ಕೆಟ್ಟದು, ಇಂತಹ ಸರ್ವಸಾಮಾನ್ಯ ಸಿದ್ಧಾಂತಗಳನ್ನು ಅಂಗೀಕರಿಸುತ್ತೇನೆ. ಮತ್ತು ಮತ-ಮತಾಂತರಗಳಲ್ಲಿನ ಪರಸ್ಪರ ವಿರುದ್ಧವಾದ ಕಲಹಗಳನ್ನು ನಾನು ಅಪೇಕ್ಷಿಸುವುದಿಲ್ಲ.[೧೨] ಏಕೆಂದರೆ – ಈ ಮತವಾದಿಗಳೇ ತಮ್ಮ ಮತಗಳನ್ನು ಪ್ರಸರಿಸಿ, ಮಾನವರನ್ನು ಜಾಲಕ್ಕೆ ಸಿಕ್ಕಿಸಿಕೊಂಡು, ಪರಸ್ಪರ ಶತ್ರುಗಳನ್ನಾಗಿ ಮಾಡಿಟ್ಟಿದ್ದಾರೆ. ಈ ಮತೀಯ ವಿವಾದವನ್ನು ಖಂಡಿಸಿ, ಸರ್ವಸತ್ಯವನ್ನು ಪ್ರಚುರಗೊಳಿಸಿ, ಸರ್ವರನ್ನೂ ಐಕ್ಯಮತ್ಯದ ಆಶ್ರಯಕ್ಕೆ ತಂದು, ದ್ವೇಷವನ್ನು ದೂರೀಕರಿಸಿ, ಪರಸ್ಪರ ದೃಢ ಪ್ರೀತಿಯುಕ್ತರನ್ನಾಗಿ ಮಾಡಿ, ಎಲ್ಲರಿಂದಲೂ, ಎಲ್ಲರಿಗೂ ಸುಖಲಾಭವನ್ನುಂಟು ಮಾಡುವ ಸಲುವಾಗಿಯೇ ನನ್ನ ಪ್ರಯತ್ನ ನಡೆದಿದೆ. ನನ್ನ ಅಭಿಪ್ರಾಯವೂ ಅದೇ ಆಗಿದೆ. ಸರ್ವಶಕ್ತಿಮಾನ್ ಪರಮಾತ್ಮನ ಕೃಪೆಯಿಂದ ಮತ್ತು ಸಹಾಯದಿಂದ, ಹಾಗೂ ಆಪ್ತ ಜನರ ಸಹಾನುಭೂತಿಯಿಂದ ಈ ಸಿದ್ಧಾಂತವು ಸರ್ವತ್ರ ಭೂಮಂಡಲದಲ್ಲಿ ಶೀಘ್ರವೇ ಪ್ರವರ್ತಿತವಾಗಲಿ. ಅದರಿಂದ ಸಮಸ್ತಜನರೂ ಸಹಜವಾಗಿ ಧರ್ಮಾರ್ಥ ಕಾಮಮೋಕ್ಷಗಳ ಸಿದ್ಧಿಯನ್ನು ಪಡೆದುಕೊಂಡು ಸದಾ ಸಮುನ್ನತರೂ, ಆನಂದ ಸಮನ್ವಿತರೂ ಆಗುತ್ತಾ ಮುನ್ನಡೆಯಲಿ, ಇದೇ ನನ್ನ ಮುಖ್ಯ ಆದರ್ಶವಾಗಿರುತ್ತದೆ.

**ಅಲಮತಿವಿಸ್ತರೇಣ ಬುದ್ಧಿಮದ್ವರ್ಯೇಷು ।**

(ಬುದ್ಧಿವಂತರಾದ ಶ್ರೇಷ್ಠರ ಮುಂದೆ ಅತಿ ವಿಸ್ತಾರವೇಕೆ?)

**ಓಂ ಶಂ ನೋ ಮಿತ್ರಃ ಶಂ ವರುಣಃ ಶನ್ನೋ ಭವತ್ವರ್ಯಮಾ ।**

**ಶನ್ನ ಇಂದ್ರೋ ಬೃಹಸ್ಪತಿಃ ಶನ್ನೋ ವಿಷ್ಣುರುರುಕ್ರಮಃ ॥**

**ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ।**

**ತ್ವಾಮೇವ ಪ್ರತ್ಯಕ್ಷಂ ಬ್ರಹ್ಮಾವಾದಿಷಂ । ಋತಮವಾದಿಷಂ। ಸತ್ಯಮವಾದಿಷಂ। ತನ್ಮಾಮಾವೀತ್।**

**ತದ್ವಕ್ತಾರಮಾವೀತ್। ಆವೀನ್ಮಾಮ್ । ಆವೀದ್ವಕ್ತಾರಮ್॥**

**ಓಂ ಶಾಂತಿಃ ಶಾಂತಿಃ ಶಾಂತಿಃ ।**

(**"ಓಂ ಮಿತ್ರಃ**) ಸರ್ವರಕ್ಷಕನೂ ಸರ್ವಸ್ನೇಹಿಯೂ ಆದ ಭಗವಂತನು, (**ನಃ**) ನಮಗೆ (**ಶಂ**) ಶಾಂತಿದಾಯಕನಾಗಲಿ. (**ವರುಣಃ**) ಸರ್ವತಾಪ ನಿವಾರಕನೂ, ಸರ್ವವರಣೀಯನೂ ಆದ ಈಶ್ವರನು, (**ಶಂ**) ಶಾಂತಿಪ್ರದನಾಗಲಿ. (**ಅರ್ಯಮಾ**) ಆತ್ಮಾಧಿಪತ್ಯ ಪಡೆದವರನ್ನು ಮಾನಿಸುವ, ಆತ್ಮಾಧಿಪತ್ಯಪಡೆದವರಿಂದಲೇ ತಿಳಿಯಲ್ಪಡುವ ಪರಮಾತ್ಮನು, (**ನಃ**) ನಮಗೆ, (**ಶಂ ಭವತು**) ಶಾಂತಿದಾಯಕನಾಗಲಿ. (**ಇಂದ್ರಃ**) ಪರಮೈಶ್ವರ್ಯಸಂಪನ್ನನೂ, ಸರ್ವೇಶ್ವರನೂ, ಜೀವಮಾತ್ರರಿಗೆ ದಯೆ ತೋರುವ ಕರುಣಾನಿಧಿಯೂ, (**ಬೃಹಸ್ಪತಿಃ**) ಬೃಹದ್ವಿಶ್ವದ, ಬೃಹತೀ ವೇದವಾಣಿಯ ಸ್ವಾಮಿಯೂ, ರಕ್ಷಕನೂ ಆದ ಪರಮಾತ್ಮನು (**ನಃ**) ನಮಗೆ, (**ಶಂ**) ಶಾಂತಿ ಪ್ರದಾತೃವಾಗಲಿ. (**ವಿಷ್ಣುಃ**) ಸರ್ವವ್ಯಾಪಕನೂ, (**ಉರುಕ್ರಮಃ**) ಮಹಾನ್ ಶಕ್ತಿಶಾಲಿಯೂ ಆದ ಭಗವಂತನು (**ನಃ**) ನಮಗೆ, (**ಶಂ**) ಶಾಂತಿದಾಯಕನಾಗಲಿ, (**ಬ್ರಹ್ಮಣೇ**) ಸರ್ವಶ್ರೇಷ್ಠ, ಸರ್ವಜ್ಯೇಷ್ಠ ಪ್ರಜ್ಞಾನಮಯನಿಗೆ, (**ನಮಃ**)

---

೧೨. ವೈದಿಕ ಸಿದ್ಧಾಂತಗಳ ಮಂಡನೆಗಾಗಿ ಮಹರ್ಷಿ ದಯಾನಂದರು ಎಷ್ಟು ಅಧ್ಯಯನ ಮಾಡಿದ್ದಾರೋ, ಹಾಗೆಯೇ ವೇದ ವಿರುದ್ಧವಾದ ಮತಗಳ ಸಮೀಕ್ಷೆಗಾಗಿಯೂ ಅಷ್ಟೇ ವಿಸ್ತೃತ ಅಧ್ಯಯನ ಮಾಡಿದ್ದರು. 'ಸತ್ಯಾರ್ಥ ಪ್ರಕಾಶ'ದ ಉದ್ಧೃತವಾದ ಅಧಿಕಾಂಶ ಗ್ರಂಥಗಳ ಸೂಚಿಯನ್ನು ಪರಿಶಿಷ್ಟ – ೭ರಲ್ಲಿ ಕೊಡಲಾಗಿದೆ.

ನಮಸ್ಕಾರ, **(ವಾಯೋ)** ಪ್ರಾಣಗಳಿಗೂ ಪ್ರಾಣನಾದ ಸರ್ವಜೀವನ ಪ್ರದನೇ! **(ತೇ ನಮಃ)** ನಿನಗೆ ಸಮಸ್ಕಾರ. **(ತ್ವಂಏವ)** ಸರ್ವಜೀವನಾಧಾರನಾದ ನೀನೇ, **(ಪ್ರತ್ಯಕ್ಷಂ)** ಜ್ಞಾನಗೋಚರವಾದ, **(ಬ್ರಹ್ಮ ಅಸಿ)** ಸರ್ವೋತ್ತಮತತ್ತ್ವವಾಗಿದ್ದೀಯೆ, **(ತ್ವಾಂ ಏವ)** ಆ ನಿನ್ನನ್ನೇ, (ಪ್ರತ್ಯಕ್ಷಂ ಬ್ರಹ್ಮ)ಅನುಭವಗಮ್ಯವಾದ ಮಹಾತತ್ತ್ವವೆಂದು, **(ಅವಾದಿಷಂ)** ಹೇಳುತ್ತಾ ಬಂದಿದ್ದೇನೆ. **(ಋತಂ)** ಸತ್ಯಜ್ಞಾನಸ್ವರೂಪನೆಂದು, **(ಅವಾದಿಷಂ)** ಹೇಳುತ್ತಾ ಬಂದಿದ್ದೇನೆ. (ಅಥವಾ, ನಿನ್ನನ್ನು ಪ್ರತ್ಯಕ್ಷಬ್ರಹ್ಮವೆನ್ನುವಾಗ ಸತ್ಯವನ್ನೇ ಹೇಳಿದ್ದೇನೆ.) **(ಸತ್ಯಂ ಅವಾದಿಷಂ)** ನಿನ್ನನ್ನು ಸತ್ಯಸ್ವರೂಪನೆಂದೇ, ಸತ್ಯವನ್ನೇ ಹೇಳಿದ್ದೇನೆ. **(ತತ್)** ಅದು (ಮಾಂ ಆವೀತ್) ನನ್ನನ್ನು ಕಾಪಾಡಿಕೊಂಡು ಬಂದಿದೆ. **(ತತ್)** ಅದೇ. **(ವಕ್ತಾರಂ)** ನನಗೆ ಉಪದೇಶಕನಾದ ಗುರುವನ್ನು, **(ಆವೀತ್)** ರಕ್ಷಿಸಿಕೊಂಡು ಬಂದಿದೆ. **(ಆವೀತ್ ಮಾಂ)** ರಕ್ಷಿಸುತ್ತಾ ಬಂದಿದೆ ನನ್ನನ್ನು. **(ಆವೀತ್ ವಕ್ತಾರಂ)** ರಕ್ಷಿಸುತ್ತಾ ಬಂದಿದೆ ಪ್ರವಚನಕರ್ತೃವಾದ ಗುರುವನ್ನು. **(ಓಂ ಶಾಂತಿಃ ಶಾಂತಿಃ ಶಾಂತಿಃ)** ಸರ್ವರಕ್ಷಕನು ಆಧಿದೈವಿಕೀ ಶಾಂತಿಯನ್ನೂ ಆಧಿಭೌತಿಕೀ ಶಾಂತಿಯನ್ನೂ, ಆಧ್ಯಾತ್ಮಿಕಾ ಶಾಂತಿಯನ್ನೂ ಕರುಣಿಸಲಿ.

**ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಾಣಾಂ ಪರಮ**

**ವಿದುಷಾಂ ಶ್ರೀವಿರಜಾನಂದ ಸರಸ್ವತೀ ಸ್ವಾಮಿನಾಂ ಶಿಷ್ಯೇಣ**

**ಶ್ರೀ ಮದ್ದಯಾನಂದ ಸರಸ್ವತೀ ಸ್ವಾಮಿನಾ ವಿರಚಿತಃ**

**ಸ್ವಮಂತವ್ಯಾಮಂತವ್ಯ ಸಿದ್ಧಾಂತ ಸಮನ್ವಿತಃ**

**ಸುಪ್ರಮಾಣಯುಕ್ತಃ ಸುಭಾಷಾವಿಭೂಷಿತಃ**

**ಸತ್ಯಾರ್ಥಪ್ರಕಾಶೋಽಯಂ ಗ್ರಂಥಃ**

**ಸಂಪೂರ್ತಿಮಗಮತ್**

---

೧೩. ಬುದ್ಧಿವಂತರಾದ ಶ್ರೇಷ್ಠರ ಮುಂದೆ ಅತಿ ವಿಸ್ತಾರವೇಕೆ?

# ಪರಿಶಿಷ್ಟ–೧

## ಸೃಷ್ಟಿ ಸಂವತ್ಸರ

### ವೇದ ಮೂಲಕ

ಸೃಷ್ಟಿಸಂವತ್ಸರದ ಮೂಲವನ್ನು ಅಥರ್ವವೇದದ–

**ಶತಂ ತೇಽಯುತಂ ಹಾಯನಾನ್ ದ್ವೇ ಯುಗೇ ತ್ರೀಣಿ ಚತ್ವಾರಿ ಕೃಣ್ಮಃ।**

**ಇಂದ್ರಾಗ್ನೀ ವಿಶ್ವೇ ದೇವಾಸ್ತೇಽನು ಮನ್ಯಂತಾಮಹೃಣೀಯಮಾನಾಃ॥** (೮.೨.೨೧)

ಎಂಬ ಮಂತ್ರದ ಆಧಾರದ ಮೇಲೆ ಗ್ರಹಿಸಲಾಗಿದೆ.

ಎಂದರೆ, ಕ್ರಮವಾಗಿ –

ನಾಲ್ಕು, ಮೂರು, ಎರಡು, ಯುಗ; ಹ+ಅಯನ=ವರ್ಷ; ಅಯುತ=ಹತ್ತು ಸಾವಿರ; ಶತ=ನೂರು,

ಸೃಷ್ಟಿ ಸಂವತ್ಸರದ ಗಣನೆ **ಮನುಸ್ಮೃತಿ** (೧/೬೮–೭೩, ೭೯, ೮೦)ಯಲ್ಲೂ ಮತ್ತು **ಸೂರ್ಯಸಿದ್ಧಾಂತ**ದಲ್ಲೂ ವರ್ಣಿತವಾಗಿದೆ. ಆದರೆ, ಸೂರ್ಯಸಿದ್ಧಾಂತದ ಗಣನೆಯೇ ಪ್ರಚಲಿತವಾಗಿದೆ. ಏಕೆಂದರೆ, ಮನುಸ್ಮೃತಿಯಲ್ಲಿ ದೇವವರ್ಷಗಳ ಗಣನೆ ಕೊಟ್ಟಿದೆ; ಮಾನವ ವರ್ಷಗಳದ್ದಲ್ಲ.

ಮನುಸ್ಮೃತಿ

**ಮನುಸ್ಮೃತಿಯ** ಗಣನೆಯ ರೀತಿ ಹೀಗಿದೆ:–

| | | |
|---|---|---|
| ಕೃತಯುಗ | ೪,೮೦೦ | ವರ್ಷ |
| ದ್ವಾಪರಯುತ | ೩,೬೦೦ | ವರ್ಷ |
| ತ್ರೇತಾಯುಗ | ೨,೪೦೦ | ವರ್ಷ |
| ಕಲಿಯುಗ | ೧,೨೦೦ | ವರ್ಷ |
| ೧ ಚತುರ್ಯುಗೀ | ೧೨,೦೦೦ | ವರ್ಷ(೧ ದೇವಯುಗ) |

೧ ಬ್ರಾಹ್ಮದಿನ ೧೦೦೦ ದೇವಯುಗಗಳಿಗೆ ಸಮಾನವಾಗಿರುತ್ತದೆ.
ಎಂದರೆ, ೧೨,೦೦೦ x ೧೦೦೦ = ೧,೨೦,೦೦,೦೦೦ ದೇವ ವರ್ಷಗಳು.
(ಎಂದರೆ, ೧ ಕೋಟಿ, ೨೦ ಲಕ್ಷ ದೇವ ವರ್ಷಗಳು)

## ಸೂರ್ಯ ಸಿದ್ಧಾಂತ

**ಸೂರ್ಯ ಸಿದ್ಧಾಂತ**ದ ಗಣನೆ ಈ ರೀತಿ ಇದೆ.

೧ ದೇವದಿನಕ್ಕೆ ಮಾನವರ ೧ ವರ್ಷ ಸಮ; ಎಂದರೆ, ೩೬೦ ದಿನಗಳು. ಇದನ್ನು ಮಾನವ ವರ್ಷಗಳಿಗೆ ಹೊಂದಾಣಿಸಿದಾಗ–

= ೧,೨೦,೦೦,೦೦೦ x ೩೬೦

= ೪೩೨,೦೦,೦೦,೦೦೦ ವರ್ಷಗಳಾಗುತ್ತವೆ.

(ಎಂದರೆ, ನಾಲ್ಕುನೂರ ಮೂವತ್ತೆರಡು ಕೋಟಿ ವರ್ಷಗಳು)

ಇದೇ ರೀತಿ, ದೇವಯುಗಗಳ ಅವಧಿಯನ್ನು ಮಾನವಯುಗಗಳಿಗೆ ಹೊಂದಿಸಿಕೊಳ್ಳಬಹುದು. ಎಂದರೆ, ದೇವವರ್ಷಗಳನ್ನು ೩೬೦ರಿಂದ ಗುಣಿಸಿದಾಗ–

| | **ದೇವವರ್ಷ** | **ಮಾನವ ವರ್ಷ** |
|---|---|---|
| ಕಲಿಯುವ | ೧,೨೦೦ | ೪,೩೨,೦೦೦ |
| ತ್ರೇತಾಯುಗ | ೨,೪೦೦ | ೮,೬೪,೦೦೦ |
| ದ್ವಾಪರಯುಗ | ೩,೬೦೦ | ೧೨,೯೬,೦೦ |
| ಕೃತಯುಗ | ೪,೮೦೦ | ೧೭,೨೮,೦೦೦ |
| ೧ ಚತುರ್ಯುಗೀ | ೧೨,೦೦೦ | ೪೩,೨೦,೦೦೦ |


ಮನುಸ್ಮೃತಿಯಲ್ಲಿ ೭೧ ಚತುರ್ಯುಗಿಗಳಿಗೆ ೧ 'ಮನ್ವಂತರ'ವೆಂದು ಪರಿಗಣಿಸಲಾಗಿದೆ. ಮತ್ತು ೧೪ ಮನ್ವಂತರಗಳಿಗೆ ೧ ಬ್ರಾಹ್ಮದಿನ.

ಇದನ್ನು ಸ್ವೀಕರಿಸಿದರೆ, ೧ ಬ್ರಾಹ್ಮದಿನದಲ್ಲಿ ೭೧ x ೧೪ = ೯೯೪ ಚತುರ್ಯುಗಗಳಾಗಿ, ೬ ಚತುರ್ಯುಗಗಳ ಅವಧಿ ಉಳಿಯುತ್ತದೆ.

ಈ ೬ ಚತುರ್ಯುಗಗಳ ಅವಧಿಯನ್ನು ಮನ್ವಂತರಗಳ ಮಧ್ಯೆಯ ಖಂಡಪ್ರಲಯದ ಸಂಧಿಕಾಲವೆಂದು ಗಣಿಸಲಾಗಿದೆ. ಎಂದರೆ, ಸಂಧಿಕಾಲದ ಒಟ್ಟು ಅವಧಿ:

= ೪೩,೨೦,೦೦೦ x ೬

= ೨,೫೯,೨೦,೦೦೦ ಮಾನವ ವರ್ಷ
(ಎಂದರೆ, ೨ ಕೋಟಿ, ೫೯ ಲಕ್ಷ, ೨೦ ಸಾವಿರ ವರ್ಷಗಳು)
೧೪ ಮನ್ವಂತರಗಳ ನಡುವೆ ೧೫ ಸಂಧಿಗಳಿವೆಯೆಂದು ಪರಿಗಣಿಸಲಾಗಿದೆ.
ಇದನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ:




[ಟಿಪ್ಪಣಿ: 1, 2, 3 ಇತ್ಯಾದಿ = ಮನ್ವಂತರ
೧, ೨, ೩ ಇತ್ಯಾದಿ = ಸಂಧಿಕಾಲ]

ಒಟ್ಟು ಸಂಧಿಕಾಲದ ಅವಧಿಯನ್ನು ೧೫ರಿಂದ ಭಾಗಿಸಿದಾಗ, ೧ ಸಂಧಿಕಾಲದ ಅವಧಿ ಬರುತ್ತದೆ. ಎಂದರೆ–

= ೨,೫೯,೨೦,೦೦೦ ÷ ೧೫

= ೧೭,೨೮,೦೦೦ ವರ್ಷ

ಇದು ಒಂದು ಕೃತಯುಗದ ಅವಧಿಗೆ ಸಮಾನವಾಗಿದೆ.

## ಸೃಷ್ಟಿ ಸಂವತ್ಸರವನ್ನು ಸ್ಮರಣೆಯಲ್ಲಿಟ್ಟುಕೊಳ್ಳುವ ವಿಧಿ

ಸೃಷ್ಟಿ ಸಂವತ್ಸರವನ್ನು ಸ್ಮರಣೆಯಲ್ಲಿಟ್ಟುಕೊಳ್ಳುವುದಕ್ಕಾಗಿ ನಮ್ಮ ಪೂರ್ವಜರು ಯಾವ ವ್ಯವಸ್ಥೆಯನ್ನು ರೂಢಿಯಲ್ಲಿಟ್ಟು ಕೊಂಡಿದ್ದರೆಂಬುದಕ್ಕೆ **"ಋಗ್ವೇದಾದಿಭಾಷ್ಯ ಭೂಮಿಕಾ"**ದ ವೇದೋತ್ಪತ್ತಿ ವಿಷಯದ ಉದ್ಧರಣೆಯನ್ನು ಕೆಳಗೆ ತೋರಿಸಲಾಗಿದೆ:

**"ಆರ್ಯೈರ್ನಿತ್ಯಮ್ –**
**"ಓಂ ತತ್ ಸತ್ ಶ್ರೀ ಬ್ರಹ್ಮಣೋ ದ್ವಿತೀಯಪ್ರಹರಾರ್ದ್ಧೇ**
**ವೈವಸ್ವತಮನ್ವಂತರೇಽಷ್ಟಾವಿಂಶತಿತಮೇ ಕಲಿಯುಗೇ**
**ಕಲಿಪ್ರಥಮಚರಣೇಽಮುಕಸಂವತ್ಸರಾಯನರ್ತುಮಾಸ–**
**ಪಕ್ಷದಿನನಕ್ಷತ್ರಲಗ್ನ ಮುಹೂರ್ತೇಽತ್ರೇದಂ ಕೃತಂ ಕ್ರಿಯತೇ ಚ"**

ಎಂದರೆ, ಇದು ವೈವಸ್ವತ ಮನುವಿನ (ಮನ್ವಂತರ ನಡೆಯುತ್ತಿದೆ.) ಇದರ ಅವಧಿಯಲ್ಲಿ ಈ ಇಪ್ಪತ್ತೆಂಟನೆಯ ಕಲಿಯುಗವಾಗಿದೆ. ಕಲಿಯುಗದಲ್ಲಿ ಪ್ರಥಮ ಚರಣ ನಡೆಯುತ್ತಿದೆ. ಇಂತಹ ವರ್ಷ, ಋತು, ಅಯನ, ಮಾಸ, ಪಕ್ಷ, ದಿನ, ನಕ್ಷತ್ರ, ಮುಹೂರ್ತ, ಲಗ್ನ ಮತ್ತು ಕ್ಷಣ ಮೊದಲಾದ ಸಮಯದಲ್ಲಿ ನಾವು ಇಂತಹ ಕೆಲಸವನ್ನು ಮಾಡಿದ್ದೆವು ಅಥವಾ ಮಾಡುತ್ತೇವೆ; ಅಥವಾ ಇಷ್ಟು ಗಂಟೆಗೆ ಈ ಮಾತನ್ನು ಬರೆದಿದ್ದೆವು – ಈ ರೀತಿಯ ಎಲ್ಲ ವ್ಯವಹಾರಗಳನ್ನೂ ಆರ್ಯಜನರು, ಬಾಲಕನಿಂದ ಹಿಡಿದು ವೃದ್ಧನ ತನಕ, ಮಾಡುತ್ತಾ–ತಿಳಿಯುತ್ತಾ ಇದ್ದರು.

"ಹೇಗೆ ಲೆಕ್ಕದ ಕಡತಗಳಲ್ಲಿ ತಿಥಿಯನ್ನು ಬರೆಯುತ್ತಿದ್ದರೂ, ಹಾಗೆಯೇ ಮಾಸ ಮತ್ತು ವರ್ಷವನ್ನು ಹೆಚ್ಚಿಸುತ್ತಾ–ಕಳೆಯುತ್ತಾ ಬಂದರು.

"ಮತ್ತು ಇದೇ ಇತಿಹಾಸವೇ ಇಂದಿನ ತನಕ ಆರ್ಯಾವರ್ತದೇಶದಲ್ಲೆಲ್ಲಾ ಒಂದೇ ಸಮನಾಗಿ ನಡೆಯುತ್ತಾ ಬಂದಿದೆ. ಅಲ್ಲದೇ, ಎಲ್ಲ ಪುಸ್ತಕಗಳಲ್ಲಿಯೂ ಈ ವಿಷಯದಲ್ಲಿ ಒಂದೇ ರೀತಿಯ ಲೇಖನ ಕಂಡುಬರುತ್ತದೆ. ಈ ವಿಷಯದಲ್ಲಿ ಯಾವ ರೀತಿಯ ವಿರೋಧವೂ ಇಲ್ಲ. ಆದ್ದರಿಂದಲೇ, ಇದನ್ನು ಬದಲಿಸುವ ಸಾಮರ್ಥ್ಯ ಯಾವನಲ್ಲೂ ಇಲ್ಲ. ಏಕೆಂದರೆ, ಸೃಷ್ಟಿಯ ಉತ್ಪತ್ತಿಯಿಂದಾರಂಭಿಸಿ, ಒಂದೇ ಸಮನಾಗಿ ತಿಥಿಯನ್ನು ಬರೆಯದೇ ಬರುತ್ತಿದ್ದಲ್ಲಿ, ಈ ಎಣಿಕೆಯ ಲೆಕ್ಕವನ್ನು ಸರಿ–ಸರಿಯಾಗಿ ತಿಳಿಯಲು ಆರ್ಯಜನರಿಗೂ ಕೂಡ ಕಠಿಣವಾಗುತ್ತಿತ್ತು! ಎಂದ ಮೇಲೆ, ಇತರ (ಮತಗಳ) ಮನುಷ್ಯರ ಮಾತನ್ನೇನು ಹೇಳೋಣ?

"ಮತ್ತು ಇದರಿಂದ ಸಿದ್ಧವಾಗುವುದೇನೆಂದರೆ, ಸೃಷ್ಟಿಯ ಆರಂಭದಿಂದ ಹಿಡಿದು, ಇವತ್ತಿನವರೆಗೂ ಆರ್ಯ ಜನರೇ ದೊಡ್ಡ ದೊಡ್ಡ ವಿದ್ವಾಂಸರಾಗಿಯೂ ಹಾಗೂ ಸಭ್ಯರಾಗಿಯೂ, ನಡೆಯುತ್ತಾ ಬಂದಿದ್ದಾರೆ, ಎಂದು."

## ಸೃಷ್ಟಿ ಸಂವತ್ಸರದ ಎಣಿಕೆಯಕ್ರಮ

ಈಗ, ೨೦೧೨ನೆಯ ಇಸವಿಯವರೆಗೆ ಆರು ಮನ್ವಂತರಗಳು ವ್ಯತೀತವಾಗಿ, ಏಳನೆಯ ವೈವಸ್ವತ ಮನ್ವಂತರದ, ೨೮ನೆಯ ಕಲಿಯುಗದ ೫೧೧೨ನೆಯ ವರ್ಷ ನಡೆಯುತ್ತಿದೆ.

**ಪರಿಶಿಷ್ಟ–1 (ಸೃಷ್ಟಿಸಂವತ್ಸರ)**

೧) ೧ ಚತುರ್ಯುಗದಕಾಲ = ೪೩,೨೦,೦೦೦ ವರ್ಷ

೨) ೧ ಮನ್ವಂತರದ ಕಾಲ = ೭೧ ಚತುರ್ಯುಗ
= ೪೩,೨೦,೦೦೦ x ೭೧
= ೩೦,೬೭,೨೦,೦೦೦ ವರ್ಷ

(ಎಂದರೆ, ೩೦ ಕೋಟಿ, ೬೭ ಲಕ್ಷ, ೨೦ ಸಾವಿರ ವರ್ಷಗಳು)

೩) ೬ ಮನ್ವಂತರಗಳ ಕಾಲ = ೩೦,೬೭,೨೦,೦೦೦ x ೬
= ೧೮೪,೦೩,೨೦,೦೦೦ ವರ್ಷ

(ಎಂದರೆ, ೧೮೪ ಕೋಟಿ, ೩ ಲಕ್ಷ, ೨೦ ಸಾವಿರ ವರ್ಷಗಳು)

೪) ೨೭ ಚತುರ್ಯುಗದ ಕಾಲ = ೪೩,೨೦,೦೦೦ x ೨೭
= ೧೧,೬೬,೪೦,೦೦೦ ವರ್ಷ

(ಎಂದರೆ, ೧೧ ಕೋಟಿ, ೬೬ ಲಕ್ಷ, ೪೦ ಸಾವಿರ ವರ್ಷಗಳು)

೫) ೨೮ನೆಯ ಚತುರ್ಯುಗದಲ್ಲಿ :

(ವ್ಯತೀತ) ಕೃತಯುಗದ ಕಾಲ = ೧೭,೨೮,೦೦೦ ವರ್ಷ
–"– ತ್ರೇತಾಯುಗದ ಕಾಲ = ೧೨,೯೬,೦೦೦ ವರ್ಷ
–"– ದ್ವಾಪರಯುಗದ ಕಾಲ = ೮,೬೪,೦೦೦ ವರ್ಷ
(ವರ್ತಮಾನ) ಕಲಿಯುಗದ ಕಾಲ= ೫,೧೧೨ ವರ್ಷ

ಒಟ್ಟು ೩೮,೯೩,೧೧೨ ವರ್ಷ

(ಎಂದರೆ, ೩೮ ಲಕ್ಷ, ೯೩ ಸಾವಿರದ ೧೧೨ ವರ್ಷಗಳು)

೬) ೧ ಸಂಧಿಕಾಲ = ೧೭,೨೮,೦೦೦ ವರ್ಷ
೭ ಸಂಧಿಕಾಲ = ೧೭,೨೮,೦೦೦ x ೭
ಸಂಧಿಕಾಲ = ೧,೨೦,೯೬,೦೦೦ ವರ್ಷ

(ಎಂದರೆ, ೧ ಕೋಟಿ, ೨೦ ಲಕ್ಷ, ೯೬ ಸಾವಿರ ವರ್ಷಗಳು)

೭) ಈಗ, ೨೦೧೨ನೆಯ ಇಸವಿಗನುಸಾರ, ಸೃಷ್ಟಿ ಸಂವತ್ಸರದ ವರ್ಷ ಹೀಗೆ ಬರುತ್ತದೆ :

೬ ಮನ್ವಂತರ = ೧೮೪,೦೩,೨೦,೦೦೦ ವರ್ಷ (೩)
೨೭ ಚತುರ್ಯುಗ = ೧೧,೬೬,೪೦,೦೦೦ ವರ್ಷ (೪)
೨೮ನೆಯ ಚತುರ್ಯುಗ = ೩೮,೯೩,೧೧೨ ವರ್ಷ (೫)

ಒಟ್ಟು ೧೯೬,೦೮,೫೩,೧೧೨ ವರ್ಷ


ಎಂದರೆ, ೧೯೬ ಕೋಟಿ, ೮ ಲಕ್ಷ, ೫೩ ಸಾವಿರದ ೧೧೨ನೆಯ ವರ್ಷ. ಅಥವಾ ೧ ಅರ್ಬುದ = ೧೦೦ ಕೋಟಿ; ಆದ್ದರಿಂದ :

(೧ ಅರ್ಬುದ, ೯೬ ಕೋಟಿ, ೮ ಲಕ್ಷ, ೫೩ ಸಾವಿರದ ೧೧೨ನೆಯ ವರ್ಷ)
ಸಂಧಿಕಾಲ ಜೋಡಿಸಿ = ೧,೨೦,೯೬,೦೦೦ ವರ್ಷ (೬)

ಒಟ್ಟು ೧೯೭,೨೯,೪೯,೧೧೨ ವರ್ಷ

(ಎಂದರೆ, ೧೯೭ ಕೋಟಿ, ೨೯ ಲಕ್ಷ, ೪೯ ಸಾವಿರದ ೧೧೨ನೆಯ ವರ್ಷ; ಅಥವಾ ೧ ಅರ್ಬುದ, ೯೭ ಕೋಟಿ, ೨೯ ಲಕ್ಷ, ೪೯ ಸಾವಿರದ ೧೧೨ನೆಯ ವರ್ಷ)

# ಪರಿಶಿಷ್ಟ–೨



# ಪರಿಶಿಷ್ಟ–೩

## ಜೈನರ ಐತಿಹಾಸಿಕ ಹಿನ್ನೆಲೆ ಮತ್ತು ಮೂರ್ತಿಪೂಜೆ

**'ಸತ್ಯಾರ್ಥ ಪ್ರಕಾಶ'** ಪ್ರಥಮ ಸಂಸ್ಕರಣ [೧೮೭೫] ಪುಟ ೩೧೧–೩೧೨ದಲ್ಲಿ ಸ್ವಾಮೀ ದಯಾನಂದರು ಜೈನರ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಹೊಸ ಬೆಳಕನ್ನು ಬೀರಿದ್ದಾರೆ. ಅದರಂತೆ, ಜೈನರು ಚೀನಾ ಮುಂತಾದ ದೇಶಗಳ ನಿವಾಸಿಗಳಾಗಿ ಅಲ್ಲಿ ವ್ಯಾಪಾರಸ್ಥರಾಗಿದ್ದರು. ಭಾರತದಲ್ಲಿನ ಶಾಸನಗಳು ನಿರ್ಬಲವಾದಾಗ ಜೈನರು ಭಾರತಕ್ಕೆ ಬಂದರು. ಆದ್ದರಿಂದ, ಅವರು ಭಾರತದಲ್ಲಿ ರಾಜ್ಯಗಳನ್ನು ಸ್ಥಾಪಿಸಲು ಸಮರ್ಥರಾಗಿ ಭಾರತೀಯರ ಮೇಲೆ ಆಳ್ವಿಕೆಯನ್ನಾರಂಭಿಸಿದರು. ಜೈನರೇ ಭಾರತದಲ್ಲಿ ಮೂರ್ತಿಪೂಜೆಯನ್ನು ಜಾರಿಗೆ ತಂದರು. ಅದಕ್ಕೆ ಮೊದಲು, ಭಾರತದಲ್ಲಿ ಮೂರ್ತಿಪೂಜೆಯ ಗಂಧವೂ ಇರಲಿಲ್ಲ.! ಸ್ವಾಮೀ ದಯಾನಂದರು ಹೀಗೆ ಬರೆಯುತ್ತಾರೆ–

ಅತ್ಯಂತ ಪ್ರಮಾದ ಮತ್ತು ಕಾಮುಕತೆಯ ಪರಿಣಾಮವಾಗಿ, ಆರ್ಯಾವರ್ತದ ಜನರು ವಿದ್ಯೆ, ಬುದ್ಧಿಗಳಿಂದ ರಹಿತರಾದ ಕಾರಣದಿಂದ, ಶಕ್ತಿ, ಸಾಹಸ ಮತ್ತು ಶೌರ್ಯಗಳನ್ನು ಕಳೆದುಕೊಂಡರು. ಪಾರಸ್ಪರಿಕ ವ್ಯವಹಾರಗಳಲ್ಲಿ ಅತ್ಯಧಿಕ ಈರ್ಷ್ಯೆ ಕಂಡುಬರತೊಡಗಿತು. ಒಬ್ಬರು ಇನ್ನೊಬ್ಬರ ಇರುವನ್ನು ಸಹಿಸಲಾರದವರಾಗಿ ಹೋದರು; ಮತ್ತು ಪರಸ್ಪರ ಕಾದಾಡಲಾರಂಭಿಸಿದರು. ಆರ್ಯಾವರ್ತದ ಈ ಪರಿಸ್ಥಿತಿಯು ಚೀನಾದಲ್ಲಿದ್ದ ಜೈನರಿಗೆ ಮತ್ತು ಇತರೇ ದೇಶಗಳಲ್ಲಿದ್ದ ಜನರಿಗೆ ಅರಿವಾಯಿತು. ವ್ಯಾಪಾರಕ್ಕಾಗಿ ಈ ದೇಶಕ್ಕೆ ಬರುತ್ತಿದ್ದ ವಿದೇಶಿಯರು ಕೂಡ, ಈ ಪರಿಸ್ಥಿತಿಯನ್ನು ತಮ್ಮ ಕಣ್ಣಿಟ್ಟು ನೋಡಿದರು.

ಆಗ ಜೈನರು, ಈ ಸಮಯವು ಆರ್ಯಾವರ್ತದಲ್ಲಿ ಸುಲಭವಾಗಿ ರಾಜ್ಯವನ್ನು ಸ್ಥಾಪಿಸಲು ಅನುಕೂಲವಾಗಿದೆ ಎಂಬುದಾಗಿ ಯೋಚಿಸಿದರು. ನಂತರ, ಅವರು ಆರ್ಯಾವರ್ತಕ್ಕೆ ಬಂದು, ರಾಜ್ಯವಾಳಲಾರಂಭಿಸಿದರು. ಕ್ರಮವಾಗಿ, ಅವರು ಬೋದಗಯಾದಲ್ಲಿ ತಮ್ಮ ಬಿಗಿಯನ್ನು ಭದ್ರಮಾಡಿಕೊಳ್ಳುತ್ತಾ, ವಿದೇಶಗಳಲ್ಲೂ, ದ್ವೀಪ–ದ್ವೀಪಾಂತರಗಳಲ್ಲೂ ತಮ್ಮ ರಾಜ್ಯವನ್ನು ವಿಸ್ತರಿಸತೊಡಗಿದರು.

ಅವರು ವೈದಿಕ ಮತ್ತು ಸಂಸ್ಕೃತ ಗ್ರಂಥಗಳ ನಿಂದೆಯನ್ನು ಮಾಡುತ್ತಾ ತಮ್ಮ ಮತಗ್ರಂಥಗಳ ಅಧ್ಯಯನವನ್ನು ಹರಡಲಾರಂಭಿಸಿದರು. ತಮ್ಮ ಮತೀಯ ಸಿದ್ಧಾಂತಗಳ ಉಪದೇಶಗಳನ್ನು ಬಿತ್ತಲಾರಂಭಿಸಿದರು. ಆಗ, ಈ ದೇಶದಲ್ಲಿ ವಿದ್ಯೆ ಲುಪ್ತವಾಗಿದ್ದುದರಿಂದ, ಬಹಳ ಜನರು ಅವರ ಮತವನ್ನಂಗೀಕರಿಸಲಾರಂಭಿಸಿದರು. ಆದರೆ, ಕನ್ಯಾಕುಬ್ಜ, ಕಾಶೀ, ಮತ್ತು ಪರ್ವತ, ದಕ್ಷಿಣ ಹಾಗೂ ಪಶ್ಚಿಮ ಪ್ರದೇಶಗಳ ಜನರು ಈ ಹೊಸ ಮತವನ್ನು ಅಂಗೀಕರಿಸಲಿಲ್ಲ. ಆದರೆ, ಇವರು ಅಲ್ಪ ಸಂಖ್ಯೆಯಲ್ಲಿದ್ದರು. ಇವರಂತಹವರು ಮಾತ್ರವೇ ವೇದಾದಿ ಶಾಸ್ತ್ರಗಳ ಅಧ್ಯಯನ–ಅಧ್ಯಾಪನಗಳಲ್ಲಿ ನಿರತರಾಗಿದ್ದರು.

ಆಗ, ಜೈನರು ವರ್ಣಾಶ್ರಮ ಧರ್ಮ ಮತ್ತು ವೈದಿಕ ಸಂಸ್ಕಾರಗಳ ಮೇಲೆ ಸುಳ್ಳು ಆಪಾದನೆಗಳನ್ನು ಹೊರಿಸಿ, ಜನರಿಗೆ ಅವುಗಳಲ್ಲಿದ್ದ ವಿಶ್ವಾಸವನ್ನು ಸಡಿಲಮಾಡಿದರು. ಪರಿಣಾಮಸ್ವರೂಪವಾಗಿ, ಜನರು ತಮ್ಮ ಕರ್ತವ್ಯ–ಕರ್ಮಗಳಲ್ಲಿ ಉದಾಸೀನರಾದರು. ನಂತರ, ಯಜ್ಞೋಪವೀತಾದಿ ಇತರ ಸಂಸ್ಕಾರಗಳೂ ಅಂತ್ಯಗೊಂಡವು.

ಆಮೇಲೆ, ಜೈನರು ವೇದಕ್ಕೆ ಸಂಬಂಧಿಸಿದ ಮತ್ತು ವೈದಿಕ ಸಿದ್ಧಾಂತಗಳಿಗೆ ಸಂಬಂಧಿಸಿದ, ಹಾಗೂ ಈ ದೇಶದ ಇತಿಹಾಸಕ್ಕೆ ಸಂಬಂಧಪಟ್ಟ, ಮತ್ತು ತಮ್ಮ ಕೈಗೆ ಸಿಕ್ಕಿದ ಗ್ರಂಥಗಳೆಲ್ಲವನ್ನೂ ನಾಶಮಾಡಿದರು. ಇದರಿಂದ ಜನರು ತಮ್ಮ ಇತಿಹಾಸದಲ್ಲಿ ತಮ್ಮ ಪ್ರಾಚೀನ ಗೌರವದ ಗುರುತನ್ನೂ ಕೂಡ ಹುಡುಕಲಾರದೇ, ಎಲ್ಲವನ್ನೂ ಮರೆತು ಬಿಟ್ಟರು.

ಆಗ, ಜೈನರ ಆಡಳಿತವು ಈ ದೇಶದಲ್ಲಿ ಬಹಳ ದೃಢವಾಗಿ ಸ್ಥಾಪಿತವಾಯಿತು. ಆದ್ದರಿಂದ, ಜೈನರು ಬಹಳ ಗರ್ವಿಷ್ಠರೂ, ಮತ್ತು ಧೃಷ್ಟರೂ ಆಗಿ ಹೋಗಿ, ಅನ್ಯಾಯ ಮತ್ತು ದುರಾಚರಣೆಗಳನ್ನು ಮಾಡತೊಡಗಿದರು. ಏಕೆಂದರೆ, ದೇಶಿಯ ರಾಜ–ಪ್ರಜೆಗಳೆಲ್ಲರೂ ಅವರ ಮತವನ್ನಂಗೀಕರಿಸಿಬಿಟ್ಟಿದ್ದರು. ಆಗ, ಅವರಿಗ ಯಾವ ಭಯವೂ ಇಲ್ಲವಾಯಿತು; ಯಾವುದರ ಬಗ್ಗೆ ಸಂದೇಹವೂ ಇಲ್ಲವಾಯಿತು.

ಜೈನಮತಾನುಯಾಯಿಗಳಾದವರಿಗೆ ದೊಡ್ಡ ಹುದ್ದೆಗಳನ್ನೂ, ದೊಡ್ಡ ಅಧಿಕಾರಗಳನ್ನೂ ಪುರಸ್ಕಾರ ರೂಪದಲಲ್ಲಿ ಕೊಡಲಾರಂಭಿಸಿದರು. ವೈದಿಕ ಗ್ರಂಥಗಳ ಅಧ್ಯಯನ ಮಾಡುತ್ತಿದ್ದವರಿಗೆ ಮತ್ತು ವೈದಿಕ ಸಿದ್ಧಾಂತಗಳಿಗನುಸಾರವಾಗಿ ನಡೆಯುತ್ತದ್ದವರಿಗೆ ಅಪಮಾನ ಮಾಡಲಾರಂಭಿಸಿದರು.

ಜೈನರು ಅನೇಕ ದೇವಸ್ಥಾನಗಳನ್ನು ನಿರ್ಮಿಸಿ, ಅವುಗಳಲ್ಲಿ ತಮ್ಮ ಆಚಾರ್ಯರುಗಳ ಮೂರ್ತಿಗಳನ್ನು ಸ್ಥಾಪಿಸಿ, ಅವುಗಳ ಪೂಜೆಯನ್ನಾರಂಭಿಸಿದರು.

ಈ ರೀತಿಯಾಗಿ ಮೂರ್ತಿಪೂಜೆಯು ಜೈನರ ರಾಜ್ಯಗಳಿಂದ ಪ್ರಾರಂಭವಾಗಿ ಹರಡಲಾರಂಭಿಸಿತು; ಇದಕ್ಕೆ ಮೊದಲಿರಲಿಲ್ಲ. ಏಕೆಂದರೆ, ಮಹಾಭಾರತ ಯುದ್ಧಕ್ಕೆ ಮೊದಲು ರಚಿತವಾದ ಋಷಿ–ಮುನಿಗಳ ಯಾವ ಗ್ರಂಥದಲ್ಲೂ ಮೂರ್ತಿಪೂಜೆಯ ಉಲ್ಲೇಖ ಕೂಡ ಇಲ್ಲ*

ಇದರಿಂದ ಸಿದ್ಧವಾಗುವುದೇನೆಂದರೆ, ಈ ದೇಶದಲ್ಲಿ ಜೈನರಿಂದಲೇ ಮೂರ್ತಿಪೂಜೆಯು ಪ್ರಚಲಿತವಾಗಿದೆಯೇ ಹೊರತು, ಇದಕ್ಕೆ ಮೊದಲಿಲರಲಿಲ್ಲ ಎಂದು

***–'ಸತ್ಯಾರ್ಥ ಪ್ರಕಾಶ'ದ ದ್ವಾದಶ ಸಮುಲ್ಲಾಸದ ಅನುಭೂಮಿಕೆ[೨] ನ್ನು ನೋಡಿ. ಪುಟ***

## ಕಾಮ ಜ್ವರವನ್ನು ದೂರೀಕರಿಸುವ ಉಪಾಯ

ಪಂ ಗಂಗಾರಾಮಜೀ – ಕಾಮದೇವನು ಎಲ್ಲರನ್ನೂ ಹಾಳು ಮಾಡುತ್ತಿದ್ದಾನೆ. ನೀವು ಹೇಗೆ ಉಳಿದುಕೊಂಡಿರಿ?

ಸ್ವಾಮೀಜಿ– ಇದರ ವಿಧಿ ಹೀಗಿದೆ:–

೧. ಒಂದು ಸ್ಥಾನದಲ್ಲಿರಬೇಡಿ. ೨. ನೃತ್ಯ, ನಾಟಕಗಳನ್ನು ನೋಡಲು ಹೋಗಬೇಡಿ. ೩. ಸ್ತ್ರೀಯರ ಕಡೆ ನೋಡಬೇಡಿ. ನಿರಂತರ ಅಭ್ಯಾಸ ಮಾಡುವುದರಿಂದ ಇದರ ಸ್ವಭಾವವಾಗಿ ಹೋಗುತ್ತದೆ. ೪. ಓಂಕಾರದ ಜಪವನ್ನು ಹಗಲು ರಾತ್ರಿ ಮಾಡುತ್ತಿರಿ.

೫. ಬಹಳ ಅಲಸ್ಯವಾಗಿದ್ದರೆ, ನಿದ್ರೆ ಮಾಡಿ. ಇದು ಸುಷುಪ್ತಿಯ ನಿದ್ರೆಯಾಗಿರುತ್ತದೆ. ಅತ್ಯಂತ ಪರಿಶ್ರಮಮಾಡಿದ ನಿದ್ರೆಯು ಸುಷುಪ್ತಿಯ ನಿದ್ರೆಯಾಗಿರುತ್ತದೆ. ಇದು ಕೇವಲ ಅಲ್ಪಕಾಲದಷ್ಟು ಅವಧಿಯುಕ್ತವಾಗಿರುತ್ತದೆ. ಹೆಚ್ಚು ನಿದ್ರಿಸುವುದರಿಂದ ಭ್ರಾಂತಿ ಉಂಟಾಗುತ್ತದೆ.

೬. ಎರಡು ಗಂಟೆಯ ನಂತರ, ಎದ್ದು ಈಶ್ವರ –ಭಜನ ಮಾಡಬೇಕು.

೭. ಮಾಲಕಂಗನಿಯ ಐದು ಕಾಳುಗಳನ್ನು [ಒಂದು ಮಾಶೆಯಷ್ಟು] ಪ್ರಾತಃ ಕಾಲ ಶೌಚದಿಂದ ನಿವೃತ್ತನಾದ ಮೇಲೆ ಪ್ರತಿನಿತ್ಯ ತಿನ್ನಬೇಕು.

೮. ಕೆಟ್ಟದ್ದನ್ನು ನೋಡಬಾರದು. ಕೆಟ್ಟದನ್ನು ಆಲಿಸಬಾರದು. ಮತ್ತು ಕೆಟ್ಟದ್ದನ್ನು ಯೋಚಿಸಬಾರದು.

೯. ಕೇವಲ ಬ್ರಹ್ಮ ಧ್ಯಾನದಲ್ಲಿರಬೇಕು.

**'ಮಹರ್ಷಿ ದಯಾನಂದ ಸರಸ್ವತೀ ಕಾ ಜೀವನ ಚರಿತ್ರ**
**ಪಂ ಲೇಖಾರಾಮ್:** ಪುಟ ೭೧

# ಪರಿಶಿಷ್ಟ –೪

## ಮೂರ್ತಿ ಪೂಜೆಯ ದೋಷದಿಂದ ಭಾರತ ಸ್ವಾತಂತ್ರ್ಯ ನಾಶ

*ಭಾರತವು ವಿದೇಶಿ [ಮುಸಲ್ಮಾನರ] ಆಕ್ರಮಕೀಡಾಗಿ, ತತ್ಪರಿಣಾಮ ಸ್ವರೂಪವಾಗಿ, ಸುಮಾರು ಒಂದು ಸಾವಿರವರ್ಷಗಳ ತನಕ ಈ ದೇಶವು ಅವರ ಅಧೀನತೆಗೆ ಒಳಗಾಗಿತ್ತು. ಈ ಐತಿಹಾಸಿಕ ಮೂಲವಾದ ಘಟನೆಗಳ ಸಂಕ್ಷಿಪ್ತ ಕಥಾನಕವನ್ನು ಕೆಳಗೆ ಕೊಡಲಾಗಿದೆ.*

ಏಳನೇಯ ಶತಮಾನದ ಮಧ್ಯದ ಹೊತ್ತಿಗೆ ಅರೇಬಿಯಾ, ಮತ್ತು ಅದರ ನೆರೆಹೊರೆಯ ರಾಷ್ಟ್ರಗಳು ಇಸ್ಲಾಮಿನ ಪ್ರಭಾವಕ್ಕಾಗಲೇ ಒಳಗಾಗಿದ್ದವು. ಅರೇಬಿಯಾ, ತುರ್ಕಿಸ್ತಾನ, ಈಜಿಪ್ಟ್ ಮತ್ತು ಇತರೇ ದೇಶಗಳೊಡನೆ ಭಾರತವು ಬಹಳ ಪ್ರಾಚೀನ ಕಾಲದಿಂದಲೂ ಧಾರ್ಮಿಕ, ಸಾಂಸ್ಕೃತಿಕ ಮತ್ತು ವ್ಯಾಪಾರಿಕ ಸಂಬಂಧಗಳನ್ನು ಇಟ್ಟು ಕೊಂಡಿದ್ದ ಕಾರಣದಿಂದ, ಈ ದೇಶಗಳು ಹೊಸಮತವನ್ನು ಸ್ವೀಕರಿಸಿದೊಡನೆಯೇ, ಈ ದೇಶಕ್ಕೂ ಕೂಡ, ಇಸ್ಲಾಮಿನ ಒತ್ತಡವನ್ನು ತಡೆಯುವುದು ಅಸಾಧ್ಯವಾಯಿತು. ಈ ಒತ್ತಡದ ಪರಿಣಾಮವಾಗಿ, ಈ ದೇಶಗಳ ಜನರು ಒಬ್ಬ ಈಶ್ವರ [ಅಲ್ಲಾ] ಒಂದು ಧರ್ಮ [ಇಸ್ಲಾಂ] ಮತ್ತು ಒಂದು ಧಾರ್ಮಿಕ ಗ್ರಂಥ [ಕುರಾನ್]ದ ಅಡಿಯಲ್ಲಿ ಒಟ್ಟುಕೂಡಿದಾಗ, ಭಾರತದ ಜನರು ಮೂರ್ತಿಪೂಜೆಯ ಮೂಲಕ ವಿಭಿನ್ನ ದೇವೀ–ದೇವತೆಗಳ ಉಪಾಸನೆಯಲ್ಲಿ ನಿರತರಾಗಿ, ವಿಭಿನ್ನ ಮತ–ಮತಾಂತರಗಳಲ್ಲಿ ತಮ್ಮನ್ನು ವಿಭಜಿಸಿಕೊಂಡರು. ಅನೇಕ ಸಣ್ಣ–ಸಣ್ಣ ಪ್ರಾಂತಗಳು ಸ್ವತಂತ್ರ ರಾಜ್ಯಗಳ ರೂಪದಲ್ಲಿ ಸ್ಥಾಪಿಸಿಕೊಂಡು, ಯಾವುದಾದರೂ ಸಣ್ಣ ನೆವ ಸಿಕ್ಕಿದೊಡನೆಯೇ ತಮ್ಮ–ತಮ್ಮಲ್ಲೇ ಕಾದಾಡಲು ಸಿದ್ಧರಾಗಿದ್ದರು.

ಕ್ರಿಸ್ತ ಶಕ ೭೧೨ರಲ್ಲಿ ಈರಾನ್, ಮಕರಾನ್, ಮತ್ತು ಬಲೂಚಿಸ್ಥಾನದ ಆಡಳಿತಗಾರನದ **ಹಜ್ಜಾಜನು** ಸಿಂಧು ಪ್ರದೇಶದ ಹಿಂದೂ ರಾಜನಾದ ದಾಹಿರ ಮೇಲೆ ದಾಳಿ ಮಾಡಲು ಕೇವಲ ೨೦ ವರ್ಷ ವಯಸ್ಸಿನ ಯುವಕನಾದ **ಮಹಮದ್ ಬಿನ್ ಕಾಸೀಮ್** ನನ್ನು ಕಳುಹಿಸಿದನು. ಕಾಸೀಂ ನ ಕೇವಲ ೬೦೦೦ ಸೈನಿಕರು ರಾಜಾ ದಾಹಿರನ ೫೦,೦೦೦ ಸೈನಿಕರೊಂದಿಗೆ ಯುದ್ಧ ಮಾಡಬೇಕಾದ ಈ ಪ್ರಸಂಗದಲ್ಲಿ ಕಾಸೀಂನ ಸತ್ತಾನಾಶವೇ ಫಲಿತಾಂಶವಾಗಿತ್ತು. ಆದರೆ, **ಕಾಕಾ** ಎಂಬ ಬ್ರಾಹ್ಮಣನೊಬ್ಬನು ವಿಶ್ವಾಸಘಾತಮಾಡಿ, ಗುಪ್ತವಾಗಿ ಕಾಸೀಂನ್ನು ಸೇರಿ ಹೋದುದರಿಂದ ಪರಿಸ್ಥಿತಿಯೇ ಬದಲಾಯಿಸಿಬಿಟ್ಟಿತು.

ಪ್ರಪಥಮವಾಗಿ ಹಿಂದುಗಳು ಪರಾಜಯದ ರುಚಿಯನ್ನು ಸವಿಯಬೇಕಾಯಿತು. ಕಾಕಾ ಕೊಟ್ಟ ಸಲಹೆಯ ಮೇರೆಗೆ ಕಾಸೀಮನು ದಾಹಿರನ ಧ್ವಜವನ್ನು ಹಾರಿಸಿಬಿಟ್ಟನು! ಇನ್ನೇನು! ಹಿಂದೂ ಸೈನಿಕರು ಚೆಲ್ಲಾಪಿಲ್ಲಿಯಾಗಿ ಅತ್ತ–ಇತ್ತ ಪಲಾಯನ ಮಾಡತೊಡಗಿದರು. ಏಕೆಂದರೆ, ಅವರಿಗೆ ತಿಳಿಸಿಕೊಟ್ಟ ನಂಬಿಕೆಯ ಮೇರೆಗೆ ಧ್ವಜವು ಕೆಳಗೆ ಬಿದ್ದೊಡನೆಯೇ ಜಯವು ಅಸಂಭವ! ಮತ್ತು ಸೋಲು ನಿಶ್ಚಿತ !

(ಇದಕ್ಕೆ ಮೊದಲು ಕಾಕಾ ರಾಜಾ ದಾಹಿರನಿಗೆ ಏನು ಮನದಟ್ಟು ಮಾಡಿಸಿದ್ದನೆಂದರೆ, ಫಲಿತ **ಜ್ಯೋತಿಷ್ಯದ ಭವಿಷ್ಯ ವಾಣಿಯಂತೆ, ಅವನ ದೇಶವು ಇಸ್ಲಾಮೀ ಶಕ್ತಿಗಳಿಂದ ಪರಾಜಿತವಾಗಬೇಕಾಗುವುದು ನಿಶ್ಚಯವಾದುದರಿಂದ, ವಿದೇಶಿ ಆಕ್ರಮಣವನ್ನು ತಡೆಯಲು ಹೋರಾಡುವುದು ವ್ಯರ್ಥ, ಎಂದು)**

ದಾಹಿರನ ಶರೀರದಿಂದ ಅವನ ತಲೆಯನ್ನು ಕತ್ತರಿಸಿ, ಈಟಿಯ ತುದಿಗೆ ಅದನ್ನು ತಗುಲಿಸಿ ಪ್ರದರ್ಶಿಸಲಾಯಿತು. ಅವನ ಸೈನಿಕರೆಲ್ಲಾ ಪಲಾಯನ ಮಾಡಿದರು. ಕಾಸೀಮನು ದೇವಾಲಯಗಳನ್ನೆಲ್ಲಾ ಕೆಡಹಿ ಹಾಕಿದನು. ಚಿನ್ನ ಮತ್ತು ಆಭರಣಗಳಿಂದೊಡಗೂಡಿದ ಸಂಪತ್ತನ್ನೆಲ್ಲಾ ಲೂಟಿ ಮಾಡಿದನು. ಮತ್ತು ಇಸ್ಲಾಮನ್ನು ಅಂಗೀಕರಿಸಲು ಸಿದ್ಧರಾಗದ ಸಾವಿರಾರು ಸ್ತ್ರೀ–ಪುರುಷರ ಕೊಲೆ ಮಾಡಿದನು. ದಾಹಿರನ ಜೊತೆ ವಿದ್ರೋಹ ಮತ್ತು ವಿಶ್ವಾಸಘಾತ ಮಾಡಿದ್ದಕ್ಕೆ ಪುರಸ್ಕಾರ ರೂಪವಾಗಿ ಕಾಕಾ ಕೂಡ, ಕೌರ್ಯದಿಂದ ಕೊಲ್ಲಲ್ಪಟ್ಟನು.

ಹಿಂದೂಗಳ ಪರಾಜಯಕ್ಕೆ ಯಾವ ರಾಜನೈತಿಕ ದುರ್ಬಲತೆ, ಅಥವಾ ಸೈನಿಕ ಶಕ್ತಿಯ ಕೊರತೆ ಮತ್ತು ಅಥವಾ ಶೌರ್ಯಹೀನತೆ ಕಾರಣವಾಗಿರಲಿಲ್ಲ. ಅದರೆ, ಅವರ ಧಾರ್ಮಿಕ ಮತ್ತು ಮನೋವೈಜ್ಞಾನಿಕ ಅಂಧ–ವಿಶ್ವಾಸಗಳೇ ಪೂರ್ಣತಃ

ಕಾರಣವಾಗಿದ್ದವು. ಯಾವ ಜಾತಿಯ ಜನ ಕಲ್ಲಿನ ಎದುರಿಗೆ ಭಯದಿಂದ ನಡುಗಲಾರಂಭಿಸುತ್ತದೋ, ಅದು, ಅಡಿಯಿಚಿದ ಮುಡಿಯ ತನಕ ಶೌರ್ಯದಿಂದ ಯುಕ್ತವಾಗಿದ್ದು ಮತ್ತು ಒಬ್ಬ ಈಶ್ವರನ ವಿಶ್ವಾಸದ ಮೇಲೆ ಒಟ್ಟುಗೂಡಿದ ಇನ್ನೊಂದು ಜಾತಿಯ ಎದುರಿಗೆ ಎಷ್ಟು ಕಾಲ ತಾನೇ ಸೆಟೆದು ನಿಂತೀತು?

ಕಾಸೀಮನು ಮುಲ್ತಾನನ್ನು ವಶಪಡಿಸಿಕೊಂಡಮೇಲೆ, ಅಲ್ಲಿದ್ದ ಅತ್ಯಂತ ಸಂಪತ್ತಿಶಾಲಿಯಾದ ದೇವಸ್ಥಾನವನ್ನು ಕೆಡಹಿಸಲಿಲ್ಲ. ಆದರೆ ಬದಲು, ರಾಜನೈತಿಕ ಮತ್ತು ಭೌತಿಕ ಲಾಭಗಳನ್ನು ಅರ್ಜಿಸುವ ಉದ್ದೇಶ್ಯದಿಂದ, ಆ ದೇವಸ್ಥಾನದ ಐಶ್ವರ್ಯಕ್ಕೂ, ಅಸ್ತಿ–ಪಾಸ್ತಿಗಳಿಗೂ, ಅದಕ್ಕೆ ಸಲ್ಲಿಸುತ್ತಿದ್ದ ಪ್ರಜಾ–ಕಾಣಿಕೆಗಳಿಗೂ ತಾನೇ ಸ್ವತಃ ಒಡೆಯನಾದನು. ಹಿಂದೂರಾಜರು, ಕಾಸೀಮನೊಡನೆ ಹೊರಾಡಿದರೆ, ಅವನು ದೇವಾಲಯವನ್ನು ಕೆಡಹಿ ಬಿಟ್ಟಾನೇನೋ, ಎಂಬ ಭಯದಿಂದ ಪ್ರತಿಭಟನಾತ್ಮಕ ಯುದ್ಧ ಮಾಡಲಿಲ್ಲ.

ಅಸೀಮ ಸಂಪತ್ತುಳ್ಳ ದೇವಾಲಯಗಳಿಂದ ಕೂಡಿದ ಕಾರಣದಿಂದ ಗುಜರಾತ್ ಪ್ರದೇಶವು ಮುಸ್ಲಿಂ ಆಕ್ರಮಣಕಾರಿಗಳ ಧಾಳಿಗಳನ್ನು ಬಹಳ ಸಲ ಅನುಭವಿಸಬೇಕಾಯಿತು.

ಮಹಮದ್ ಬಿನ್ ಕಾಸೀಮನ ಆಕ್ರಮಣದ ೩೦೦ ವರ್ಷಗಳ ತರುವಾಯ ಗಜನೀ ಮೊಹಮದನು ಭಾರತವನ್ನು ೩೦ ವರ್ಷಗಳಲ್ಲಿ ೧೭ ಸಲ ಮುತ್ತಿಗೆ ಹಾಕಿ, ಲೂಟಿ ಮಾಡಿದನು. ಅವನು ಭಾರತದ ಪಶ್ಚಿಮೋತ್ತರ ಭಾಗವನ್ನು ಧೂಳು–ದೂಸರಿತವನ್ನಾಗಿ ಮಾರ್ಪಡಿಸಿದನು. ನಗರಕೋಟದ ದೇವಸ್ಥಾನವನ್ನು ನೆಲಸಮಮಾಡಿ, ೭೦೦ ಮಣ ಚಿನ್ನದ ಮತ್ತು ಬೆಳ್ಳಿಯ ಪಾತ್ರೆಗಳು, ೭೦೦ ಮಣ ಚಿನ್ನ, ೨೦೦೦ ಮಣ ಬೆಳ್ಳಿ ಮತ್ತು ೨೦ ಮಣ ವಜ್ರ, ಹಾಗೂ ಮುತ್ತುಗಳಿಂದೊಡಗೂಡಿದ ಅಪಾರ ಐಶ್ವರ್ಯವನ್ನು ಲೂಟೀ ಮಾಡಿದ್ದೇ ಅಲ್ಲದೇ, ೨ ಲಕ್ಷ ಹಿಂದುಗಳನ್ನು ಸೆರೆಹಿಡಿದು, ಗಜನಿಗೆ ಕೊಂಡೊಯ್ದು, ಅಲ್ಲಿ, ಅವರನ್ನು ೨ ರೂಪಾಯಿಗೊಬ್ಬರಂತೆ ಗುಲಾಮರನ್ನಾಗಿ ಮಾರಾಟ ಮಾಡಿದನು'

ಮತ್ತೆ, ಐಶ್ವರ್ಯಶಾಲೀ ದೇವಸ್ಥಾನಗಳಿಂದ ಕೂಡಿದ ಕಾರಣದಿಂದ ದಕ್ಷಿಣ ಭಾರತದ ಮದುರೈ ಕೂಡ, ಅವನ ಆಕ್ರಮಣ ಮತ್ತು ಲೂಟಿಗೆ ಒಳಗಾಗ ಬೇಕಾಯಿತು.

**ಉತ್ತರ ಭಾರತದಲ್ಲಿ ನಗರದೊಳಗೆ ದೇವಾಲಯವಿದ್ದರೆ, ದಕ್ಷಿಣ ಭಾರತದ ತಮಿಳು ನಾಡಿನಲ್ಲಿ ದೇವಾಲಯದಲ್ಲಿ ನಗರವಿರುತ್ತದೆ !**

ಅನಂತರ, ಗಜನೀ ಮೊಹಮೂದನು ಗುಜರಾತಿನ ಜಗತ್ಪ್ರಸಿದ್ಧ ಸೋಮನಾಥ ದೇವಾಲಯವನ್ನು ಆಕ್ರಮಿಸಿದನು. ಈ ದೇವಾಲಯದ ಕೊಳ್ಳೆ, ಮತ್ತು ಅವನು ಅಲ್ಲಿ ಕೈಗೊಂಡ ವಿನಾಶಕೃತ್ಯಗಳು ಇತಿಹಾಸದಲ್ಲಿ ಕಪ್ಪು ಪುಟಗಳನ್ನೇ ಸೃಜಿಸಿದವು.

ತದನಂತರ, ಮಾಡಲ್ಪಟ್ಟ ದೇವಾಲಯಗಳ ವಿನಾಶ, ಮತ್ತು ಅವುಗಳ ಸ್ಥಾನದಲ್ಲಿ ಕಟ್ಟಿದ ಮಸೀದಿಗಳು, ಮತ್ತು ಹಿಂದುಗಳ 'ಪವಿತ್ರ' ದೇವಾಲಯಗಳು ಹಾಗೂ 'ಪವಿತ್ರ' ತೀರ್ಥಸ್ಥಾನಗಳಾದ ಕಾಶೀ, ಅಯೋಧ್ಯೆ, ಮಥುರಾ, ಮತ್ತು ಉಜ್ಜಯಿನಿ ಮೊದಲಾದ ಕೇಂದ್ರಗಳಲ್ಲಿ ದೇವಸ್ಥಾನಗಳಿಗೇ ಅಂಟಿಕೊಂಡೇ ಕಟ್ಟಿದ ಹಾಗೂ ಈವರೆಗೆ ವಿದ್ಯಮಾನವಾಗಿರುವ ಮಸೀದಿಗಳು ಮೂರ್ತಿಪೂಜೆಯ ಪರವಾಗಿ ಕೊಡುವ ವಿವಿಧ ದ್ರಾವಿಡ ಪ್ರಾಣಾಯಾಮರೂಪದ ಸಮರ್ಥನೆಗಳು, ಎಷ್ಟು ಪೊಳ್ಳು ಎಂಬುದನ್ನು ಸಾಬೀತು ಪಡಿಸಿವೆ. !

ನಂತರ, ಸುಮಾರು, ೧೫೦ ವರ್ಷಗಳಾದ ಮೇಲೆ, ಹನ್ನೆರಡೆಯ ಶತಮಾನದಲ್ಲಿ, **ಮಹಮ್ಮದ್ ಗೋರಿಯು** ಭಾರತದ ಮೇಲೆ ಆಕ್ರಮಣ ಮಾಡಿದನು. ಪೃಥ್ವಿರಾಜನು ಅವನನ್ನು ಆರು ಸಲ ಹೊಡೆದೋಡಿಸಿದನು. ಆದರೆ, ಏಳನೆಯ ಪ್ರಯತ್ನದಲ್ಲಿ, ಗೋರಿಯು ಭಾರತದಲ್ಲಿ ಮುಸ್ಲಿಂ ತಳಪಾಯವನ್ನು ಭದ್ರವಾಗಿ ಹಾಕಿ, ಭಾರತೀಯ ರಾಜರ ಮತ್ತು ಭಾರತದ ಭಾಗ್ಯ ಭವನಕ್ಕೆ ಬೀಗಹಾಕಿದನು.

ಹೀಗೆ ಭಾರತವು ತಾನು ಸ್ವತಂತ್ರವಾಗಿರಬೇಕಾದ ಇಚ್ಛೆಯನ್ನು ಕೂಡ, ಚಿರಕಾಲದ ತನಕ ಕಳೆದುಕೊಂಡು, ಮುಸ್ಲಿಂ ಶಾಸನದ ನಿವಾರಣೆಯನ್ನು, ತಾನು ಮಾಡದೇ, ಐರೋಪ್ಯರ ಮೂಲಕ ಮಾಡಲು ಆಸ್ಪದ ಕೊಟ್ಟು, ಮತ್ತೆ ಸ್ವತಃ ಆಂಗ್ಲರಿಗಧೀನವಾಯಿತು.

[ಸ್ರೋತ: ಪಂಡಿತ ರಾಜೇಂದ್ರ ಅವರಿಂದ ರಚಿತವಾದ "ಭಾರತ ಮೇ ಮೂರ್ತಿಪೂಜಾ" ಎಂಬ ಗ್ರಂಥದ ಆಧಾರ, [ಪುಟ ೧೧೮–೧೩೯]. ಪ್ರಕಾಶಕರು: ವೇದಮಂದಿರ ಪ್ರಕಾಶನ, ಅತರೌಲಿ, ಆಲೀಗಡ [೧೯೬೩]

# ಪರಿಶಿಷ್ಟ–೫

## ಮೂರ್ತಿಪೂಜೆಯ ವಂಚಕತನದ ಔದ್ಯೋಗಿಕ ಸಾಮ್ರಾಜ್ಯ

ಭಾರತದಲ್ಲಿ ಮೂರ್ತಿಪೂಜೆಯು ತನ್ನ ವಿವಿಧ ರೂಪಗಳನ್ನು ಪ್ರದರ್ಶನ ಮಾಡುತ್ತಿರುವ ಔದ್ಯೋಗಿಕ ಸಾಮ್ರಾಜ್ಯವಾಗಿದೆ. ಈ ಸಾಮ್ರಾಜ್ಯದ ಹಲವು ರೂಪಗಳನ್ನು "Dayananda, the Great patriot and Nation Builder" ಎಂಬ ಗ್ರಂಥದಲ್ಲಿ ಕೊಡಲಾಗಿದೆ. ಅವಿಕಲವಾಗಿ ಅವುಗಳನ್ನು ಕೆಳಗೆ ಉದ್ಧರಿಸಲಾಗಿದೆ.

What is meant by " Pakhanda"? [or Pashanda]? It is a concise form of " Pashana Khanda" i.e, Pashana= Stone and Khanda= a piece . A piece of stone! Idol worship originated with the worship of stones i.e Stony statues of revered people. When statues became the representatives of Gods and Godessess, idolatry became a source of income. This led to the institution of priests.

The priestcraft, with an eye on money and enjoyment rendered idol worship to be associated with:

Idolism, demonism, fire worship, devil worship, self-immolation, 'sati' [burning the widow on the funeral pyre her dead husband] holocaust, human sacrifice, mactation[ slaying of the sacrifificial animal], infanticide, hypocrisy jugglery, trickery, falsehood, deception, fraud, legerdemain[ slieght of hand], hocus-pocus, coggery, imposture, chicanery, complicity, guile quackery, fortune-telling, charlatanry, humbug, bluff, mummery [masquerading], camouflage, ruse, man oeuvre, hoax, canard, fetch, catch swindle, plant, sell, dodge, bite, forgery, counterfeit, sham, delusion, stalking horse [ to pursue under cover], snake-charming, necromancy[ worship of the dead], snare, trap. Net, hook, bait, trapdoor, darkness, slipperiness, false-bottom, ambush, mask mine, mystery, fiddling, sycophancy, nudity, debauchery, abduction, mesmerism, hypnotism, robbery, murder, and what not!

All these vile traits, and many more, are available in all places of pilgrimage in India, and in the Hindu temples.

Swami Dayananda based on his eye-witness account has descrbed more than three dozens of them in the eleventh chapter of his 'Satyarth Prakash'. Thus, ' pashanda'=' pakhanda'= pashana khanda= idolatry i.e, worshipping of stone pieces resulted in the attribution of the above mentioned vile traits.

**Manusmrithi** also quotes vile traits:

*"Pashandino vikarmasthan vaidala vritttikan shathan* |
*Haitukan bakavrttinshcha vangmatrenapi narchayet* || *[೪/೮೦]*

# ಪರಿಶಿಷ್ಟ–೬

## ಏಷ್ಯಾ ಮತ್ತು ಯುರೋಪ್ ಖಂಡಗಳಲ್ಲಿ ಮುಸಲ್ಮಾನರಿಂದ ಧಾಳಿ ಮತ್ತು ವಿನಾಶ

ಮೊಹಮದ್ ಪೈಗಂಬರರ ಜನನ, ಮತ್ತು ಆ ಮೇಲೆ, ಆದ ಇಸ್ಲಾಮಿನ ಪ್ರಸಾರವು, ನಂತರ ೧೨೦೦ವರ್ಷಗಳವರೆಗೆ ಏಷ್ಯಾ ಮತ್ತು ಯುರೋಪ್ ಖಂಡಗಳಲ್ಲಿ ವಿಶಾಲ ಪ್ರಮಾಣದಲ್ಲಿ ನಡೆಸಿದ ಯುದ್ಧ, ರಕ್ತಪಾತ, ರಾಜ್ಯಾಧಿಕಾರ ಮತ್ತು ವಿಸ್ತೃತ ನಾಶಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳನ್ನು ಕೆಳಗೆ ಕೊಡಲಾಗಿದೆ.

೫೭೦. ಮೊಹಮದ್‌ರ ಜನನ.

೬೨೨. ಹಿಜರಿ, ಅಥವಾ **ಮೆಕ್ಕಾ**ದಿಂದ ಮದೀನಾಕ್ಕೆ ಮೊಹಮದ್ದರ ಪಲಾಯನ; ಮುಸಲ್ಮಾನರ ಸಂವತ್ಸರಾರಾಂಭ.

೬೩೨. ಮೊಹಮದ್ ರ ಮರಣ, ಪ್ರಥಮ ಖಲೀಫನಾಗಿ ಅಬೂ ಬೇಕರನ ರಾಜ್ಯಾರೋಹಣ.

೬೩೬. ಮುಸಲ್ಮಾನರಿಂದ **ಡಮಾಸ್ಕಸ್**–ಅಧಿಕಾರವಶ.

೬೩೮. ಮುಸಲ್ಮಾನರಿಂದ **ಜರೂಸಲೇಮ್** ವಶ.

೬೪೧. ಮುಸಲ್ಮಾನರಿಂದ **ಈರಾನ್** ಜಯ.

೬೯೮. ಮುಸಲ್ಮಾನರಿಂದ **ಕಾರ್ಥೇಜಿ**ನ ಮೇಲೆ ಆಕ್ರಮಣ.

೭೧೧. ಸ್ಪೇನಿನಲ್ಲಿ ಮುಸಲ್ಮಾನರ ಹರಡುವಿಕೆ.

೭೧೨. **ಸಿಂಧೂದೇಶದ** ಮೇಲೆ ಅರಬರ ಪ್ರಥಮ ಆಕ್ರಮಣ.

೭೧೮. **ಕಾನ್ಸಂಟಿನೋಪಲ್** ಮೇಲೆ ಮುಸಲ್ಮಾನರ ಅತಿ ದೊಡ್ಡ ಧಾಳಿಯ ವಿಫಲತೆ.

೭೩೨. **ಸ್ಪೇನಿನಲ್ಲಿ** ಮುಸಲ್ಮಾನರ ವಿಸ್ತಾರವನ್ನು ಚಾರ್ಲ್ಸ್ ಮಾರ್ಟೆಲ್ ನು ತಡೆದನು.

೭೫೦. ಒಮ್ಮಯ್ಯಾಡರನ್ನು ತಳ್ಳಿಹಾಕಿ, ಅಬ್ಬಾಸಯೀದ ಖಲೀಫನ ರಾಜ್ಯಾರಂಭ.

೭೮೬. **ಬಾಗ್ದಾದ್** ನಲ್ಲಿ ಹಾರೂನ್–ಅಲ್–ರಶೀದನ ರಾಜ್ಯಾರೋಹಣ.

೮೨೭. **ಸಿಸಿಲಿಯ** ಮೇಲೆ ಮುಸಲ್ಮಾನರ ಆಕ್ರಮಣ.

೮೪೦. ಮುಸಲ್ಮಾನರಿಂದ **ಬಾರಿಯ**ನ್ನು ವಶಪಡಿಸಿಕೊಂಡು**,** **ದಕ್ಷಿಣ ಇಟಲಿ**ಯ ಮೇಲೆ ಅಕ್ರಮಣ.

೯೧೨. ಅಬ್ದುರ್ ರಹಮಾನ್ [ತೃತೀಯ]ನ ರಾಜ್ಯಾರೋಹಣ. **ಕಾರ್ಡೋವಾ**[ಸ್ಪೇನ್]ದ ಒಮ್ಮಯ್ಯಾಡ್ ಖಲೀಫನ ವೈಭವ ಯುಗ.

೯೯೮. ಸುಲ್ತಾನ್ ಮಹಮೂದನ ರಾಜ್ಯಾರೋಹಣ.

೧೦೦೧. ಗಜನೀ ಮಹಮೂದನ **ಭಾರತದ** ಮೇಲೆ ಪ್ರಥಮ ಆಕ್ರಮಣ.

೧೦೨೫. ಗಜನೀ ಮೊಹಮದನಿಂದ **ಸೋಮನಾಥ ದೇವಾಲಯದ ನಾಶ**.

೧೦೭೫. ಸೇಲ್ಜುಕ್ ತುರ್ಕರಿಂದ **ಜರೂಸಲೇಮ್** ವಶ.

೧೦೯೫. ಕ್ಲೇರ್ ಮಾಂಟ್‌ನ ಸಮಿತಿ. ಪೋಪ್ [ಅರ್ಬನ್] ದ್ವಿತೀಯನು **ಪ್ರಥಮ ಕ್ರುಸೇಡ್**[ಧರ್ಮಯುದ್ಧ]ವನ್ನು ಉಪದೇಶಿಸಿದನು.

೧೦೯೯. ಗೋಡ್ ಪ್ರೇ ಬೂಯಿಲನ್ ನ ನಾಯಕತ್ವದಲ್ಲಿ **ಪ್ರಥಮ ಕ್ರುಸೇಡ್** ಯುದ್ಧ; ಜರೂಸಲೇಮ್ ವಶ.

೧೧೪೪. ಕ್ರೈಸ್ತರ ಶಕ್ತಿಶಾಲಿ ಪಟ್ಟಣವಾದ **ಎಡೆಸ್ಸಾ** ಮುಸಲ್ಮಾನರ ವಶಕ್ಕೆ.

೧೧೪೮. **ದ್ವಿತೀಯ ಕ್ರುಸೇಡ್** ಯುದ್ಧವು ಡಮಾಸ್ಕಸ್‌ನನ್ನು ವಶಪಡಿಸಿಕೊಳ್ಳಲು ವಿಫಲವಾಯಿತು.

೧೧೮೯. ಫ್ರೆಡರಿಕ್ ಬಾರ್ಬರೋಸಾ, ಫ್ರಾನ್ಸಿನ ಫಿಲಿಪ್ ಅಗಸ್ಟಸ್ ಮತ್ತು ಇಂಗ್ಲಂಡ್ನ 'ಸಿಂಹ ಹೃದಯ' ರಿಚರ್ಡರ ನಾಯಕತ್ವದಲ್ಲಿ **ತೃತೀಯ ಕ್ರುಸೇಡ್** ಯುದ್ಧ.

೧೧೯೧. **ಅಕ್ರಾ,** ಕ್ರುಸೇಡರ ವಶಕ್ಕೆ. ಭಾರತದಲ್ಲಿ ತರಾಯಿನ್ ನ ಪ್ರಥಮ ಸಂಗ್ರಾಮ.

೧೧೯೨. ಜರೂಸಲೇಮ್ ಅನ್ನು ವಶಪಡಿಸಿಕೊಳ್ಳಲಾಗದೆ **ತೃತೀಯ ಕ್ರುಸೇಡ್** ಯುದ್ದದ ಸಮಾಪ್ತಿ. ಭಾರತದಲ್ಲಿ **ತರಾಯಿನ್**‌ನ ದ್ವಿತೀಯ ಸಂಗ್ರಾಮ.

೧೨೦೪. **ಚತುರ್ಥ ಕ್ರುಸೇಡ್** ಯುದ್ಧದಲ್ಲಿ ಕಾಂಸ್ಟಾಂಟಿನೋಪಲ್ ವಶ.

೧೨೦೬. ಚಂಗೇಜ್ ಖಾನ್ ಮಂಗೋಲರ ರಾಜನಾಗಿ, ಮಧ್ಯ ಏಷ್ಯಾದಲ್ಲಿ ಧಾಳಿಯಿಟ್ಟನು. ದೆಹಲಿಯಲ್ಲಿ ಕುತುಬ್–ಉದ್–ದೀನನ ಸಿಂಹಾಸನಾರೋಹಣ.

೧೨೧೦. ಕುತುಬ್–ಉದ್–ದೀನನ ಮರಣ.

೧೨೧೨. **ಲಾಸ್ ನವಾಸ್ ಡಿ ಟೋಲಾಸಾ**ದ ಯುದ್ಧ. ಮುಸ್ಲಿಂ ಮೂರ್ ರ ಮೇಲೆ ಸ್ಪೇನಿನವರ ನಿರ್ಣಾಯಕ ವಿಜಯ.

೧೨೨೧. ಚಂಗೇಜ್ ಖಾನ್ ನ ನೇತೃತ್ವದಲ್ಲಿ **ಭಾರತದ** ಮೇಲೆ ಮಂಗೋಲರ ಅಕ್ರಮಣ.

೧೨೩೬. **ದೆಹಲಿಯ** ಸಿಂಹಾಸನದ ಮೇಲೆ ರಜಿಯಾ ಸುಲ್ತಾನಳ ರಾಜ್ಯಾರೋಹಣ.

೧೨೩೭. ಮಂಗೋಲರಿಂದ ರಷ್ಯಾ ಮೇಲೆ ಅಕ್ರಮಣ.

೧೨೪೦. ರಜಿಯ ಸುಲ್ತಾನಳ ಮರಣ.

೧೨೪೧. **ಮಧ್ಯ ಯುರೋಪಿನಲ್ಲಿ** ಮಂಗೋಲರ ಮುನ್ನುಗ್ಗುವಿಕೆ.

೧೨೬೦. ಚೀಣಾದ ಮೇಲೆ ಕುಬಲಾಯೀ ಖಾನ್ ನ ಅಡಳಿತ.

೧೨೯೧. ಮುಸಲ್ಮಾನರಿಂದ **ಆಕ್ರಾ**–ವಶ. ಕ್ರುಸೇಡ್ ನ ಅಂತ್ಯ.

೧೨೯೬. **ದೆಹಲಿ** ಸಿಂಹಾಸನದ ಮೇಲೆ ಅಲ್ಲಾವುದೀನ್ ಖಿಲ್ಜಿಯ ರಾಜ್ಯಾರೋಹಣ.

೧೩೧೬. ಅಲ್ಲಾವುದೀನ್ ಖಿಲ್ಜಿಯ ಮರಣ.

೧೩೨೫. ಮಹಮದ್ ಬಿನ್ ತೊಗಲಕ್ ನ ರಾಜ್ಯಾರೋಹಣ.

೧೩೫೧. ಫಿರೋಜಶಾಹನ ರಾಜ್ಯಾರೋಹಣ.

೧೩೬೩. ಏಷ್ಯಾದ ವಿಜಯಕ್ಕಾಗಿ ತೈಮೂರ್ ಲಂಗನ ಉದ್ಯಮದ ಆರಂಭ.

೧೩೯೬. ತೈಮೂರ್ ನಿಂದ **ಉತ್ತರ ಭಾರತದ** ಮೇಲೆ ಆಕ್ರಮಣ.

೧೪೯೨. **ಸ್ಪೇನಿನವರಿಂದ** ಯುರೋಪ್ ನಲ್ಲಿ ಮುಸಲ್ಮಾನರ ಅಂತಿಮ ರಾಜ್ಯದ ವಶ.

೧೪೯೪. **ಫರಘನಾ** ದಲ್ಲಿ ಬಾಬರನ ರಾಜ್ಯಾರೋಹಣ.

೧೫೧೭. **ಈಜಿಪ್ಟ್ ತುರ್ಕಿ**ಗಳ ವಶ.

೧೫೨೦. **ತುರ್ಕಿಯ** ಸುಲ್ತಾನನಾಗಿ ಸುಲೇಮಾನ್. ತುರ್ಕ ಶಕ್ತಿಯ ಉಚ್ಛ್ರಾಯ ಸ್ಥಿತಿ.

೧೫೨೬. **ಪಾನಿಪತ್ ನ** ಪ್ರಥಮ ಯುದ್ಧ. ಉತ್ತರ ಭಾರತದಲ್ಲಿ ಮೊಗಲ ಸಾಮ್ರಾಜ್ಯದ ತಳಹದಿ.

೧೫೨೭. **ಖನುಆ** ಯುದ್ಧ

೧೫೪೦. **ಕನ್ಯಾಕುಬ್ಜ** ಯುದ್ಧ

೧೫೪೫.	ಶೇರ್ ಶಾಷನ ಮರಣ.

೧೫೫೬.	**ಪಾನೀಪತ್ ನ ದ್ವಿತೀಯ ಯುದ್ಧ**. ಅಕ್ಬರನಿಂದ ರಾಣಾಪ್ರತಾಪನ ಸೋಲು.

೧೬೦೫.	ಅಕ್ಬರನ ಮರಣ.

೧೬೨೮.	ಮೊಗಲ್ ಸಾಮ್ರಾಟನಾಗಿ ಷಹಜಹಾನ್.

೧೬೩೪.	**ಬಂಗಾಲದಲ್ಲಿ** ವ್ಯಾಪಾರ ಮಾಡಲು ಆಂಗ್ಲರಿಗೆ ಅನುಮತಿ–ಪ್ರದಾನ.

೧೬೪೯.	ಪರ್ಷಿಯನರಿಂದ **ಕಾಂದಾಹಾರ್** ಪುನಃ ವಶ.

೧೬೫೭.	ಷಹಜಹಾನ್ ಪುತ್ರರಿಂದ ರಾಜ್ಯಕ್ಕಾಗಿ ಯುದ್ಧ.

೧೬೫೮.	**ಧರ್ಮಟ್** ಯುದ್ಧ.

೧೬೫೯.	**ಸಾಮುಗಢ್** ಯುದ್ಧ. ಔರಂಗಜೇಬನ ರಾಜ್ಯಾರೋಹಣ.

೧೬೬೬.	ಮೊಗಲ್ ಆಸ್ಥಾನದಲ್ಲಿ ಶಿವಾಜಿ; ಅವನ ಬಂಧನ ಮತ್ತು ಪಲಾಯನ.

೧೬೭೫.	ಸಿಕ್ಕರ ಒಂಬತ್ತನೆಯ ಗುರು ತೇಗ್ ಬಹದೂರನಿಗೆ ಮರಣದಂಡನೆ.

೧೭೦೭.	ಔರಂಗಜೇಬನ ಮರಣ.

೧೭೩೯.	ಈರಾನಿನ ನಾದಿರ್ ಷಹಾನಿಂದ ದೆಹಲಿಯ ಲೂಟಿ.

೧೭೬೧.	**ಪಾನೀಪತ್ತಿನ ತೃತೀಯ ಯುದ್ಧ,** ಮರಾಠರಿಗೆ ಸೋಲು.

೧೮೫೮.	**ಸಂಪೂರ್ಣ ಭಾರತ** ಆಂಗ್ಲರ ವಶಕ್ಕೆ.

[**‘**ಮನೋರಮಾ ಇಯರ್ ಬುಕ್**’** [೧೯೭೭]; ಮತ್ತು **‘**ಕಾಂಪಿಟೀಶನ್ ಸಕ್ಸಸ್ ರಿವ್ಯೂ ಇಯರ್ ಬುಕ್**’**[೧೯೮೬] ಗಳ ಆಧಾರದ ಮೇಲೆ.]

## “ಈಗ ಔರಂಗ ಜೇಬನ ರಾಜ್ಯ ನಡೆಯುತ್ತಿಲ್ಲ”

ಎಷ್ಟೇ ದೊಡ್ಡ ಮನುಷ್ಯನು ಬೇಕಾದರೇ ಆಗಿರಲೀ, ಅವನು ಯಾವುದಾದರೂ ಒತ್ತಾಯದ ಅಥವಾ ಗದರಿಸುವ ಮಾತನ್ನಾಡಿದರೆ, ಸ್ವಾಮಿಗಳು ತತ್ ಕ್ಷಣ ತಕ್ಕಂತಹ ಉತ್ತರಕೊಟ್ಟು, ಅವನ ಬಾಯಿಯನ್ನು ಮುಚ್ಚುವಂತೆ ಮಾಡುತ್ತಿದ್ದರು. ಒಂದು ದಿನ, ಡೆಪ್ಯುಟಿ ಕಲೆಕ್ಟರ್ ಆದ ಅಲೀಜಾನ್ ಮಹಾಶಯನು ಸ್ವಾಮೀಜಿಯವರು ವ್ಯಾಖ್ಯಾನ ಕೊಡುತ್ತಿದ್ದ ಸ್ಥಾನದ ಕಡೆಗೆ ಬಂದನು. ಅವನು–

**“**ಪಂಡಿತ್ ಜೀ ! ನೀವು ವ್ಯಾಖ್ಯಾನ ಕೊಡುವಾಗ ಸ್ವಲ್ಪ ಎಚ್ಚರ ವಹಿಸಿ, ಮಾತನ್ನಾಡಿರಿ**”** ಎಂದು ಹೇಳಿದನು.

ಸ್ವಾಮೀಜಿಗಳು– **“**ಭಯದ ಮಾತೇನೂ ಇಲ್ಲ. ಈಗ ಆಂಗ್ಲರ ರಾಜ್ಯ ನಡೆಯುತ್ತಿದೆ. ಔರಂಗಜೇಬನದಲ್ಲ!**”** ಎಂದು ತತ್ಕಾಲ ಉತ್ತರ ಕೊಟ್ಟರು

[**‘ಶ್ರೀಮದ್ದಯಾನಂದ ಪ್ರಕಾಶ’**]
*ಸ್ವಾಮೀ ಸತ್ಯಾನಂದ; ಸಂಗಠನಾಕಾಂಡ, ಪುಟ ೮೮೦*

## ಪರಿಶಿಷ್ಟ–೭

### 'ಸತ್ಯಾರ್ಥ ಪ್ರಕಾಶ' ದಲ್ಲಿ ಉದ್ಧೃತ ಮತ್ತು ಸ್ಮೃತ ಗ್ರಂಥಾವಳಿ.

೧. ಅಥರ್ವ ವೇದ
೨. ಅಮರಕೋಶ.
೩. ಅಲ್ಲೋಪನಿಷತ್
೪. ಅಷ್ಟಾಧ್ಯಾಯೀ
೫. ಅಷ್ಟಾವಕ್ರಗೀತಾ
೬. ಆದಿತ್ಯ ಪುರಾಣ
೭. ಆಪಸ್ತಂಭ ಧರ್ಮಸೂತ್ರ.
೮. ಅಶ್ವಲಾಯನ ಗೃಹ್ಯಸೂತ್ರ
೯. ಅಶ್ವಲಾಯನ ಶ್ರೌತಸೂತ್ರ
೧೦. ಇಂಜೀಲ್ [ಬೈಬಲ್]
೧೧. ಇತಿಹಾಸ ತಿಮಿರನಾಶಕ
೧೨. ಈಶೋಪನಿಷತ್
೧೩. ಉಡ್ಡೀ ಸತಂತ್ರ
೧೪. ಉಣಾದಿಕೋಶ
೧೫. ಋಗ್ವೇದ
೧೬. ಋಗ್ವೇದಾದಿ ಭಾಷ್ಯಭೂಮಿಕಾ
೧೭. ಐತರೇಯ ಬ್ರಾಹ್ಮಣ
೧೮. ಐತರೇಯೋಪನಿಷತ್
೧೯. ಕಠೋಪನಿಷತ್
೨೦. ಕಲ್ಪಭಾಷ್ಯ
೨೧. ಕಲ್ಪಸೂತ್ರ
೨೨. ಕಾತಂತ್ರ
೨೩. ಕಾತ್ಯಾಯನ ಪ್ರತಿಜ್ಞಾಪರಿಶಿಷ್ಟ
೨೪. ಕಾಮರತ್ನ ತಂತ್ರ
೨೫. ಕಾಲಾಗ್ನಿ ರುದ್ರೋಪನಿಷತ್
೨೬. ಕಾಲೀತಂತ್ರ
೨೭. ಕಿರಾತಾರ್ಜುನೀಯ
೨೮. ಕುರಾನ್
೨೯. ಕುಲಾರ್ಣವತಂತ್ರ
೩೦. ಕುವಲಯಾನಂದ
೩೧. ಕೇನೋಪನಿಷತ್
೩೨. ಕೈವಲ್ಯೋಪನಿಷತ್
೩೩. ಗಣೇಶ ಪುರಾಣ
೩೪. ಗರುಡ ಪುರಾಣ
೩೫. ಗಾಂಧರ್ವವೇದ
೩೬. ಗೀತಗೋವಿಂದ
೩೭. ಗುರುಗೀತಾ.
೩೮. ಗುರುಗ್ರಂಥ ಸಾಹೀಬ್
೩೯. ಗೋಪಥ ಬ್ರಾಹ್ಮಣ
೪೦. ಗೋಪಾಲತಾಪಿನೀ ಉಪನಿಷತ್
೪೧. ಗೋಪಾಲ ಸಹಸ್ರನಾಮ
೪೨. ಗೌಡಪಾದೀ ಯಕಾರಿಕಾ
೪೩. ಗ್ರಹಲಾಘವ
೪೪. ಚರಕ[ಆಯುರ್ವೇದ]
೪೫. ಚಾಣಕ್ಯನೀತಿ.
೪೬. ಛಾಂದಗ್ಯೋಪನಿಷತ್
೪೭. ಜನ್ಮಸಾಖೀ
೪೮. ಜಾಗದಶೀ [ನ್ಯಾಯ]
೪೯. ಜಾಬಾಲೋಪನಿಷತ್
೫೦. ಜಿನದತ್ತ ಸೂರಿಕೃತಶ್ಲೋಕ

೫೧. ಜ್ಞಾನ ಸಂಕಲಿನೀ ತಂತ್ರ
೫೨. ಜ್ಯೋತಿಷ
೫೩. ತರ್ಕಸಂಗ್ರಹ.
೫೪. ತತ್ವವಿವೇಕ[ಜೈನಗ್ರಂಥ]
೫೫. ತೈತ್ತರೀಯಾರಣ್ಯಕ
೫೬. ತೈತ್ತಿರೀಯೋಪನಿಷತ್
೫೭. ತೌರೇತ್ [ಬೈಬಲ್]
೫೮. ದಿವ್ಯ ಸೂರಿಚರಿತ
೫೯. ದೇವೀ ಭಾಗವತ
೬೦. ಧರ್ಮಸಿಂಧು
೬೧. ಧಾತು ಪಾಠ [ಪಾಣಿನೀಯ]
೬೨. ನಾನಕಚಂದ್ರೋದಯ
೬೩. ನಾಮ ಪ್ರತಾಪ
೬೪. ನಾರದ ಪರಿವ್ರಾಜಕೋಪನಿಷತ್
೬೫. ನಾರದ ಸಂಹಿತಾ
೬೬. ನಾಯಿಕಾ ಭೇದ
೬೭. ನಿಘಂಟು
೬೮. ನಿರುಕ್ತ
೬೯. ನಿರ್ಣಯ ಸಿಂಧು
೭೦. ನೀತಿಶತಕ
೭೧. ನೃಸಿಂಹತಾಪಿನೀ ಉಪನಿಷತ್
೭೨. ನ್ಯಾಯದರ್ಶನ
೭೩. ಪಂಚತಂತ್ರ
೭೪. ಪದ್ಮಪುರಾಣ
೭೫. ಪಂಚದಶೀ
೭೬. ಪಾಂಡವಗೀತಾ
೭೭. ಪಾಣಿನೀಯ ಶಿಕ್ಷಾ
೭೮. ಪಾರಸ್ಕರ ಪರಿಶಿಷ್ಟ
೭೯. ಪಾರಾಶರ ಸ್ಮೃತಿ
೮೦. ಪಾರಾಶರಿ
೮೧. ಪಿಂಗಲ ಛಂದೋಗ್ರಂಥ
೮೨. ಪುಷ್ಪಾಂಜಲೀ [ಸಂನ್ಯಾಸಿಗಳದ್ದು]
೮೩. ಪೂರ್ವಮೀಮಾಂಸಾ
೮೪. ಪೋಪಪುರಾಣ.
೮೫. ಪ್ರಕರಣ ರತ್ನಾಕರ
೮೬. ಪ್ರಪನ್ನಾಮೃತ.
೮೭. ಪ್ರಶ್ನೋಪನಿಷತ್
೮೮. ಬೃಹದಾರಣ್ಯಕೋಪನಿಷತ್
೮೯. ಬ್ರಹ್ಮಪುರಾಣ
೯೦. ಬ್ರಹ್ಮವೈವರ್ತಪುರಾಣ
೯೧. ಭಕ್ತಮಾಲ
೯೨. ಭಗವದ್ಗೀತಾ
೯೩. ಭವಿಷ್ಯಪುರಾಣ
೯೪. ಭಾಗವತ ಪುರಾಣ.
೯೫. ಭೋಜಪ್ರಬಂಧ
೯೬. ಮನುಸ್ಮೃತಿ
೯೭. ಮನೋರಮಾ [ವ್ಯಾಕರಣ]
೯೮. ಮಹಾಭಾರತ
೯೯. ಮಹಾಭಾಷ್ಯ [ವ್ಯಾಕರಣ]
೧೦೦. ಮಾಂಡಕ್ಯೋಪನಿಷತ್
೧೦೧. ಮಾರ್ಕಂಡೇಯ ಪುರಾಣ
೧೦೨. ಮೀಮಾಂಸಾ ನ್ಯಾಯಪ್ರಕಾಶ
೧೦೩. ಮುಂಡಕೋಪನಿಷತ್
೧೦೪. ಮುಗ್ಧಬೋಧ[ ವ್ಯಾಕರಣ]
೧೦೫. ಮಹೂರ್ತ ಚಿಂತಾಮಣಿ
೧೦೬. ಮೈತ್ರಾಯಣ್ಯುಪನಿಷತ್
೧೦೭. ಮೋಹನ ಚಂದ್ರಿಕಾ [ಪಾಕ್ಷಿಕ ಪತ್ರ]
೧೦೮. ಯಜುರ್ವೇದ
೧೦೯. ಯೋಗದರ್ಶನ [ವ್ಯಾಸಭಾಷ]
೧೧೦. ಯೋಗವಾಸಿಷ್ಠ
೧೧೧. ರಘುವಂಶ
೧೧೨. ರತ್ನಸಾರಭಾಗ
೧೧೩. ರಾಮತಾಪಿನೀ ಉಪನಿಷತ್
೧೧೪. ರಾಮದಾಸ ಸಾಖೀ
೧೧೫. ರಾಮಸನೇಹ ಧರ್ಮಪ್ರಕಾಶ
೧೧೬. ರಾಮಾನುಜಪಟಲ ಪದ್ಧತಿ
೧೧೭. ರುಕ್ಮಿಣಿ ಮಂಗಲ
೧೧೮. ರಾಮಾಯಣ[ವಾಲ್ಮೀಕೀಯ]
೧೧೯. ರುದ್ರಯಾಮಲತಂತ್ರ
೧೨೦. ವಾಯುಪುರಾಣ
೧೨೧. ವಿದುರನೀತಿ
೧೨೨. ವಿವೇಕವಿಲಾಸ

೧೨೩. ವಿವೇಕಸಾರ
೧೨೪. ವಿಷ್ಣು ಪುರಾಣ
೧೨೫. ವೃತ್ತ ರತ್ನಾಕರ
೧೨೬. ವೃತ್ತಿ ಪ್ರಭಾಕರ
೧೨೭. ವೃದ್ಧಚಾಣಕ್ಯ
೧೨೮. ವೇದಾಂತ ದರ್ಶನ.
೧೨೯. ವೈರಾಗ್ಯ ಶತಕ[ಭರ್ತೃಹರಿ]
೧೩೦. ವೈಶೇಷಿಕ ದರ್ಶನ
೧೩೧. ಶತಪಥ ಬ್ರಾಹ್ಮಣ
೧೩೨. ಶಾಂಖಾಯನ ಶೌತಸೂತ್ರ
೧೩೩. ಶಾರೀರಿಕ ಸೂತ್ರ
೧೩೪. ಶಾರ್ಙ್ಗಧರ ಸಂಹಿತಾ
೧೩೫. ಶಿವಪುರಾಣ
೧೩೬. ಶುಕ್ರನೀತಿ
೧೩೭. ಶೀಘ್ರಬೋಧ
೧೩೮. ಶೇಖರ[ ವ್ಯಾಕರಣ]
೧೩೯. ಶ್ರಾದ್ಧದಿನಕೃತ್ಯ
೧೪೦. ಶ್ವೇತಾಶ್ವೇತೋಪನಿಷತ
೧೪೧. ಷಡ್ವಿಂಶಬ್ರಾಹ್ಮಣ
೧೪೨. ಸಂಕ್ಷೇಪಶಾರೀರಕ
೧೪೩. 'ಸಂಜೀವನೀ'[ಭೋಜಕೃತ]
೧೪೪. ಸಂಸ್ಕಾರವಿಧಿ
೧೪೫. ಸರ್ವದರ್ಶನ ಸಂಗ್ರಹ
೧೪೬. ಸಾಂಖ್ಯತತ್ವ ಕೌಮುದಿ
೧೪೭. ಸಾಂಖ್ಯದರ್ಶನ
೧೪೮. ಸಾಮವೇದ
೧೪೯. ಸಾರಸ್ವತ ಚಂದ್ರಿಕಾ
೧೫೦. ಸಿದ್ಧಾಂತರಹಸ್ಯ
೧೫೧. ಸುಖಮನೀ ಅಷ್ಟಪದಿ
೧೫೨. ಸುಮರಣ ಕೋ ಅಂಗ
೧೫೩. ಸುಶ್ರುತ [ಆಯುರ್ವೇದ]
೧೫೪. ಸೂರ್ಯಪುರಾಣ
೧೫೫. ಸೂರ್ಯಸಿದ್ಧಾಂತ
೧೫೬. ಸ್ವರೋಪನಿಷತ್
೧೫೭. ಹಠಪ್ರದೀಪಿಕಾ
೧೫೮. ಹರಿಶ್ಚಂದ್ರ ಚಂದ್ರಿಕಾ [ಪಾಕ್ಷಿಕ ಪತ್ರ]
೧೫೯. ಹರಿವಂಶ
೧೬೦. ಹಿಮಾದ್ರಿ
೧೬೧. ಬೈಬಲ್ ಇನ್ ಇಂಡಿಯಾ
[ಜಾಕೋಲಿಟ್ ಕೃತ, ಇಂಗ್ಲಿಷ್ ಪುಸ್ತಕ]*

* ಇಷ್ಟೇ ಅಲ್ಲದೇ ಮತ್ತೆಷ್ಟೋ ಗ್ರಂಥಗಳ ವಾಕ್ಯಗಳೂ, ಶ್ಲೋಕಗಳೂ ಗ್ರಂಥಕರ್ತರಿಂದ ಉದ್ಧರಿಸಲ್ಪಟ್ಟಿದೆ. ಆದರೆ, ಅವುಗಳ ಸಂದರ್ಭಗ್ರಂಥಗಳೂ, ಅಜ್ಞಾತಗ್ರಂಥಗಳ ಹೆಸರುಗಳೂ ಈವರೆಗೆ ದೊರೆತಿಲ್ಲ.

–ಸಂ.

## ವೇದದ ಪ್ರಮಾಣ ಎಲ್ಲಿಂದ ಕೊಡಲಿ?

ಒಂದು ಸಲ ಲಕ್ಷ್ಮಣ ಶಾಸ್ತ್ರಿಗಳು ಸ್ವಾಮೀಜಿಯವರ ಬಳಿ ಬಂದು, ಶಾಸ್ತ್ರಾರ್ಥ ಮಾಡತೊಡಗಿದರು. ಶಾಸ್ತ್ರಾರ್ಥವಿಷಯ ಮೂರ್ತಿಪ್ರಜೆ ಆಗಿತ್ತು. ಸ್ವಾಮೀಜಿ ಯವರು – "ನಿಮ್ಮ ಪಕ್ಷದ ಪುಷ್ಟಿಗಾಗಿ ವೇದದ ಯಾವುದಾದರೂ ಪ್ರಮಾಣವನ್ನು ಕೊಡಿರಿ" ಎಂದು ಶಾಸ್ತ್ರಿಗಳನ್ನು ಕೇಳಿದರು. ಶಾಸ್ತ್ರೀ ಮಹಾಶಯರು–

"ವೇದದ ಪ್ರಮಾಣ ಎಲ್ಲಿಂದ ಕೊಡಲಿ? ವೇದವನ್ನಂತೂ ಶಂಖಾಸುರನು ಅಪಹರಿಸಿ ಕೊಂಡು ಹೋಗಿಬಿಟ್ಟಿದ್ದಾನಲ್ಲ" ಎಂದು ಉತ್ತರ ಕೊಟ್ಟರು.

ಸ್ವಾಮ್ಮಿಜಿಯವರು ತತ್ಕಾಲ ವೇದವನ್ನು ಕೈಯಲ್ಲಿ ಎತ್ತಿ ಹಿಡಿದುಕೊಂಡು– "ಪಂಡಿತ್ ಜೀ! ನಿಮ್ಮ ಆಲಸ್ಯ ಮತ್ತು ಪ್ರಮಾದರೂಪದ ಶಂಖಾಸುರನನ್ನು ವಧೆ ಮಾಡಿ, ಈ ವೇದವನ್ನು ನಾನು ಜರ್ಮನಿಯಿಂದ ತರಿಸಿದ್ದೇನೆ. ತೆಗೆದುಕೊಳ್ಳಿ! ಇದರಲ್ಲಿ ಹುಡುಕಿ, ಯಾವುದಾದರೂ ಪ್ರಮಾಣವನ್ನು ತೆಗೆಯಿರಿ" ಎಂದು ಹೇಳಿದರು.

**['ಶ್ರೀಮದ್ದಯಾನಂದ ಪ್ರಕಾಶ']**
*ಸ್ವಾಮೀ ಸತ್ಯಾನಂದ; ಸಂಗಠನ ಕಾಂಡ ಪುಟ ೮೨೮*

# ಗ್ರಂಥ ಸಂಕೇತ ಸೂಚೀ

ಅಥರ್ವ = ಅಥರ್ವ ವೇದ
ಉ= ಉಪನಿಷತ್
ಉಣಾದಿ= ಉಣಾದಿಕೋಶ
ಋ= ಋಗ್ವೇದ
ಋ.ಭಾ.ಭೂ= ಋಗ್ವೇದಾದಿ ಭಾಷ್ಯ ಭೂಮಿಕಾ
ಐತರೇಯ = ಐತರೇಯೋಪನಿಷತ್
ಕಠ= ಕಠೋಪನಿಷತ್
ಕಾಂ= ಕಾಂಡ
ಖಂ= ಖಂಡ
ಛಾಂದೋಗ್ಯ = ಛಾಂದೋಗ್ಯಪನಿಷತ್
ತೈತ್ತರೀಯ; ತೈತ್ತಿ = ತೈತ್ತಿರೀಯೋಪನಿಷತ್
ತೈ.ಅ = ತೈತ್ತಿರೀಯ ಅರಣ್ಯಕ
ತೈ.ಸಂ = ತೈತ್ತರೀಯ ಸಂಹಿತಾ
ನ್ಯಾಯ= ನ್ಯಾಯ ದರ್ಶನ
ಪಾಣಿನೀಯ ವ್ಯಾಕರಣ= ಅಷ್ಟಾಧ್ಯಾಯೀ
ಪ್ರ. ಪಾ =ಪ್ರಪಾಠಕ
ಬೃಹದಾರಣ್ಯಕ = ಬೃಹದಾರಣ್ಯಕೋಪನಿಷತ್
ಬ್ರಹ್ಮ = ಬ್ರಹ್ಮಾನಂದವಲ್ಲೀ
ಮಂ= ಮಂತ್ರ; ಮಂಡಲ.
ಮನು= ಮನುಸ್ಮೃತಿ
ಮಾಂಡೂಕ್ಯ = ಮಾಂಡೂಕ್ಯೋಪನಿಷತ್
ಮುಂಡಕ = ಮುಂಡಕೋಪನಿಷತ್
ಯಜು =ಯುಜುರ್ವೇದ
ವೇದಾಂತ = ವೇದಾಂತ ದರ್ಶನ
ವೈಶೇಷಿಕ = ವೈಶೇಷಿಕ ದರ್ಶನ
ಶತಪಥ; ಶ.ಬ್ರಾ = ಶತಪಥ ಬ್ರಾಹ್ಮಣ
ಶ್ವೇತಾಶ್ವತರ =ಶ್ವೇತಾಶ್ವರೋಪನಿಷತ್
ಸಮಾಧಿ = ಸಮಾಧಿ ಪಾದ
ಸಾಂಖ್ಯ = ಸಾಂಖ್ಯ ದರ್ಶನ
ಸಾಧನ = ಸಾಧನಪಾದ
ಸೂ = ಸೂಕ್ತ, ಸೂತ್ರ
ಅನು = ಅನುವಾದಕ
ಸಂ = ಸಂಪಾದಕ
ಯು.ಮೀ = ಯುಧಿಷ್ಠಿರ ಮೀಮಾಂಸಕ

# ಆರ್ಯಸಮಾಜದ ದಶನಿಯಮಗಳು

೧. ಸಮಸ್ತ ಸತ್ಯವಿದ್ಯೆಗಳ ಮತ್ತು ಆ ವಿದ್ಯೆಗಳಿಂದ ಯಾವ ಪದಾರ್ಥಗಳು ತಿಳಿಯಲ್ಪಡುತ್ತದೋ, ಅವೆಲ್ಲದರ ಆದಿ ಮೂಲನು ಪರಮೇಶ್ವರನು.

೨. ಈಶ್ವರನು ಸಚ್ಚಿದಾನಂದ ಸ್ವರೂಪನೂ, ನಿರಾಕಾರನೂ, ಸರ್ವಶಕ್ತಿವಂತನೂ, ನ್ಯಾಯಕಾರಿಯೂ, ದಯಾಳುವೂ, ಅಜನ್ಮನೂ, ಅನಂತನೂ, ನಿರ್ವಿಕಾರನೂ, ಅನಾದಿಯೂ, ಅನುಪಮನೂ, ಸರ್ವಾಧಾರನೂ, ಸರ್ವೇಶ್ವರನೂ, ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ, ಅಜರನೂ, ಅಮರನೂ, ಅಭಯನೂ, ನಿತ್ಯನೂ, ಪವಿತ್ರನೂ ಮತ್ತು ಸೃಷ್ಟಿಕರ್ತನೂ ಆಗಿದ್ದಾನೆ. ಕೇವಲ ಅವನ ಉಪಾಸನೆಯನ್ನು ಮಾಡುವುದು ಯೋಗ್ಯವಾಗಿದೆ.

೩. ವೇದವು ಸಮಸ್ತ ಸತ್ಯವಿದ್ಯೆಗಳ ಪುಸ್ತಕವಾಗಿದೆ. ವೇದಗಳನ್ನು ಓದುವುದೂ– ಓದಿಸುವುದೂ, ಮತ್ತು ಶ್ರವಣಮಾಡುವುದೂ–ಮಾಡಿಸುವುದೂ ಸಮಸ್ತ ಆರ್ಯರ ಪರಮ ಧರ್ಮವಾಗಿದೆ.

೪. ಸತ್ಯವನ್ನು ಗ್ರಹಿಸಲು ಮತ್ತು ಅಸತ್ಯವನ್ನು ವರ್ಜಿಸಲು ಸರ್ವದಾ ಸನ್ನದ್ಧರಾಗಿರಬೇಕು.

೫. ಸಮಸ್ತ ಕಾರ್ಯಗಳನ್ನೂ ಧರ್ಮಾನುಸಾರವಾಗಿ, ಎಂದರೆ ಸತ್ಯದ ಮತ್ತು ಅಸತ್ಯದ ವಿಮರ್ಶೆಯನ್ನು ಮಾಡಿ, ಮಾಡಬೇಕು.

೬. ಜಗತ್ತಿಗೆ ಉಪಕಾರವನ್ನು ಮಾಡುವುದು, ಎಂದರೆ ಸರ್ವರ ಶಾರೀರಿಕ, ಆತ್ಮಿಕ, ಮತ್ತು ಸಾಮಾಜಿಕ ಉನ್ನತಿಯನ್ನು ಸಾಧಿಸುವುದು ಈ ಸಮಾಜದ ಮುಖ್ಯ ಉದ್ದೇಶ್ಯವಾಗಿದೆ.

೭. ಎಲ್ಲರೊಂದಿಗೂ ಪ್ರೀತಿಪೂರ್ವಕವಾಗಿ, ಧರ್ಮಾನುಸಾರವಾಗಿ ಯೋಗ್ಯತಾನುಗುಣವಾಗಿ ವ್ಯವಹರಿಸಬೇಕು.

೮. ಅವಿದ್ಯೆಯ ನಾಶವನ್ನೂ ಮತ್ತು ವಿದ್ಯೆಯ ಅಭಿವೃದ್ಧಿಯನ್ನೂ ಸಾಧಿಸಬೇಕು.

೯. ಯಾವನೊಬ್ಬನೂ ತನ್ನ ಉನ್ನತಿಯಿಂದಲೇ ಸಂತುಷ್ಟನಾಗಿರಬಾರದು; ಆದರೆ ಸರ್ವರ ಉನ್ನತಿಯಲ್ಲಿ ತನ್ನ ಉನ್ನತಿಯು ನಿಹಿತವಾಗಿದೆ ಎಂದು ತಿಳಿದುಕೊಳ್ಳಬೇಕು.

೧೦. ಸಾಮಾಜಿಕ ಸರ್ವಹಿತಕಾರೀ ನಿಯಮಗಳನ್ನು ಪಾಲಿಸುವಲ್ಲಿ ಸರ್ವರೂ ಸ್ವತಂತ್ರರಾಗಿರಬೇಕು. ಮತ್ತು ವಯುಕ್ತಿಕ ಹಿತಕಾರೀ ನಿಯಮದಲ್ಲಿ ಸರ್ವರೂ ಸ್ವತಂತ್ರರಾಗಿರಬೇಕು.